ಸಾಹಿತ್ಯ **ಸ್ವದೇಶಾಭಿಮಾನಿ** ಸಂಚಿಕೆ.

ಸಂಪುಟ ೨ ಜನವರಿ ೧೨—೧—೧೯೩೪. ಸಂಚಿಕೆ ೧೧

— ಅನುಕ್ರಮಣಿಕೆ —

	ಪುಟ
ಕಾವ್ಯವು ಜೀವನಕ್ಕೆ ಅಗತ್ಯವೇ?	1
ಸಾಹಿತ್ಯ ವಿಚಾರ . .	2
ಶ್ರೀ. ತಾರಾನಾಥರು. . .	4
ವರ್ತಮಾನ ಪತ್ರಿಕೆಗಳನ್ನೇಕೆ ಓದಬೇಕು? .	5
ಸುಸ್ವಾಗತಮ್—ಪಥಿಕ—ಯುವಕ	6
ಚಕ್ರದೊಳಗೆ—ಇದೆ . . .	7
ಸ್ವೀಕಾರ	8

ಜನವರಿ ತಾರೀಕು ೧೨ನೇ ಶುಕ್ರವಾರ ೧೯೩೪.

ಕಾವ್ಯವು ಜೀವನಕ್ಕೆ ಅಗತ್ಯವೆ?

ಜೀವನವೆಂಬುದೇ ಒಂದು ಕಾವ್ಯವೆನ್ನುವರು; ಹೀಗಿರುವಾಗ, ಕಾವ್ಯವು ಜೀವನಕ್ಕೆ ಅಗತ್ಯವೆ? ಎಂಬ ಪ್ರಶ್ನೆಯನ್ನು ಕೇಳುವುದರಲ್ಲಿ ಏನೋ ಚಮತ್ಕಾರವೊ, ಸಂದೇಹವೊ ವ್ಯಕ್ತವಾಗುವುದು.

ಕವಿ—ಕಾವ್ಯ ಎಂಬ ಪದಗಳ ಅರ್ಥವನ್ನು ಸರಿಯಾಗಿ ತಿಳಿಯದೆ ಇರುವ ಲಕ್ಷಗಟ್ಟಲೆ ಜನರೊಳಗೆ ನಾನೂ ಒಬ್ಬನು. ಇವುಗಳ ಅರ್ಥವೇ ತಿಳಿದಿಲ್ಲವಾದರೂ, ಕಾವ್ಯವನ್ನು ಓದುತ್ತ, ಕಾವ್ಯವೆಂಬುದರ ಮತ್ತು ಕವಿ ಎಂಬುದರ ಛಾಯೆಗಳಾದರೂ ನನ್ನ ಕಣ್ಣಿಗೆ ಹೊಳೆಯದೆ ಇಲ್ಲ. 'ಶಾಂತಿಯಲ್ಲಿ ರೂಪುಗೊಂಡ ಭಾವನೆ'ಯನ್ನು ಕಾವ್ಯವೆಂದೊಬ್ಬರು; 'ಸುಖಚಿತ್ತರೂ, ಉತ್ತಮ ಚಿತ್ತರೂ ಆದವರ ಸುಖತಮ ಉತ್ತಮ ಹೇಳಿಕೆ'ಯೇ ಕಾವ್ಯವೆಂದು ಮತ್ತೊಬ್ಬರು; 'ಕವಿಯು ಅತ್ಯುಲ್ಲಾಸದಿಂದ ಬರೆದುದೇ ಕಾವ್ಯ'ವೆಂದು ಇನ್ನೊಬ್ಬರು ಹೇಳಿರುವರು. ಆದರೆ 'ಕವಿ' ಎಂದರೆ ಯಾರೋ! ಯಾವುದೊಂದು ವಸ್ತುವನ್ನು ಅಥವಾ ವಿಷಯವನ್ನು ಹಾಡಿನ ರೂಪವಾಗಿ ಕಾಣತಕ್ಕವನಾವನೊ! ಅವನೂ ಬೇಕೇ ಈ ಸಂಸಾರದಲ್ಲಿ? ಹಾಗಿದ್ದರೆ, ಅದೇಕೆ?

ಎಲ್ಲಿ ನೋಡಿದರೂ ವಿಜ್ಞಾನ ಶಾಸ್ತ್ರವು ಮುಂದುವರಿದುದೇ ಕಾಣುತ್ತಿದೆ; ಆದರೂ ಜಗತ್ತು ತೃಪ್ತಿ ಹೊಂದಿಲ್ಲ. ಬೇಕಾದಷ್ಟು ತತ್ವಜ್ಞಾನವನ್ನೂ ಇದಕ್ಕೆ ಕೂಡಿಸಿ, ಸಪ್ಪೆಯಾದ ವಿಜ್ಞಾನಕ್ಕೆ ಸ್ವಲ್ಪ ಉಪ್ಪುಕಾರ ಸೇರಿಸಿದಂತೆ ಮಾಡುತ್ತಾರೆ. ಆದರೂ, ಅದರಿಂದಲೂ ತೃಪ್ತಿಯಿಲ್ಲ. ಇನ್ನಷ್ಟು ಗಂಭೀರವಾಗಿ ಅಂತರಂಗವು ಆಡಿ ಕುಣಿಯ ಬೇಡವೆ? ಇಂತಹ ಆಟ ಕುಣಿತಗಳಿಗಾಗಿ ಕಾವ್ಯವು ಅಗತ್ಯವಿದೆ; ಎಂದಿನಿಂದಲೂ ಮನುಷ್ಯನಾದವನಿಗೆ ಅಗತ್ಯವಾಗಿಯೆ ಬಂದಿದೆ. ಆದರೆ, ಕಾವ್ಯವು ಅಗತ್ಯವಿದೆ ಎಂದು, ನೈತಿಕ ತಾತ್ವಿಕ ಮಹಾ ರಗಳೆಗಳನ್ನು ಬೋಧಿಸಲು ಕಾವ್ಯವು ಬೇಕಾಗಿಲ್ಲ. ಪ್ರಕೃತಿ—ಪುರುಷರಿಗೆ ಇರುವ ಸಂಬಂಧದಷ್ಟೆ ಜಗತ್ತಿನ ಮಾನವ ಜೀವನಕ್ಕೂ ಕಾವ್ಯಕ್ಕೂ ಸಂಬಂಧವಿದ್ದರೆ ಸಾಕು. ಜಗತ್ತು ಹಾಳಾಗಿದೆ, ವ್ಯರ್ಥವಾಗಿ ಕುಂದುತ್ತ, ಕುಂದಿ ವ್ಯರ್ಥವಾಗಿ ಬರುತ್ತಿದೆ ಎನ್ನುವವರು ಹೆಚ್ಚುತ್ತಾರೆ. ಜನರೇ ಜಗತ್ತನ್ನು ದೂರುತ್ತಿರುವಾಗ, ಜಗತ್ತು ನಿಜವಾಗಿಯೂ ಹಾಳಾಗುತ್ತಿರಬೇಕು.

"ಗಂಭೀರ ಗೌರವವುಳ್ಳದು ಮಾಯವಾಗುತ್ತಿದೆ; ಲೋಕಾತೀತವಾದ ಸ್ವರ್ಣವಾಕ್ಯಗಳು ಮಾಯವಾಗುತ್ತಿವೆ; ಹಿಂದಣವರ ದಿವ್ಯವಾಣಿಗೆ ಇಂದಿನವರ ಕಿವಿಯು ಅರ್ಥ ಮಾಡುವುದಿಲ್ಲ; ಅದೆಲ್ಲವೂ ಕೌತುಕ, ಹಾಸ್ಯಾಸ್ಪದವಾಗಿದೆ. ಅದಕ್ಕಾಗಿ ಕಲೆಯೇ ತನ್ನ ಬಹು ಪರಿಶ್ರಮದ ರಂಗಸ್ಥಳವನ್ನು ಸಿದ್ಧಗೊಳಿಸಿ, ಅಸಂಗತ ಭಾವನೆಗಳ ಗೊಂಬೆಗಳನ್ನು ಆಡಿಸಿ, ನೂತನವಾದುದೆಂದು ಅದೇನನ್ನೊ ನಾವು ನಿರೀಕ್ಷಿಸುವಂತೆ ಮಾಡುತ್ತಿದೆ. ನಮ್ಮ ಸುಧಾರಣೆ ಎಂಬುದು ಲೆಕ್ಕ ಹಾಕಿದರೆ ಸಂಪೂರ್ಣತೆ ಹೊಂದಿರುವುದು; ಆದರೆ, ನೈತಿಕ ಅಥವಾ ಆತ್ಮಜೀವನದ ದೃಷ್ಟಿಯಲ್ಲಿ ಬರೀ ಸೊನ್ನೆ." ಎಂಬ ಉದ್ಗಾರಗಳು ಹೊರಡುತ್ತಿವೆ. ಜಗತ್ತು ತನ್ನನ್ನೆ ಕುರಿತು ಹೀಗೆ ವಿಮರ್ಶಿಸುತ್ತಿದೆ! ವಿಜ್ಞಾನದ ಒಂದೊಂದು ಶಾಖೆಯು ಮತ್ತೊಂದು ಶಾಖೆಯಿಂದ ಜಗತ್ತಿಗೆ ಸುಖ ಹೆಚ್ಚಿಲ್ಲ ಎಂದೇ ದೂರುತ್ತಿದೆ. ಲೋಕದ ಸ್ಥಿತಿಯೋ, ಪ್ರತಿ ಶತಮಾನದಲ್ಲೂ, ಹೀಗೆಯೆ. ಈ ದೂರು ಇಂದಿಗೆ ಹೇಗೆ ಸರಿಹೋಗುವುದೋ ಯಾವುದೊಂದು ಕಾಲದಲ್ಲೂ ಆ ಕಾಲದ ವಿದ್ಯಮಾನಗಳ ಮಟ್ಟಿಗೆ ಸರಿಹೋಗುವುದೂ, ತನ್ನ ಊನನ್ಯೂನಾದಿಗಳನ್ನು ತಿಳಿದುಕೊಳ್ಳುವುದೂ, ಪ್ರಗತಿ ಸಾಧನೆಯ ಒಂದು ಪೂರ್ವ ಸೂಚನೆಯಲ್ಲವೆ?

ಮನುಷ್ಯನಲ್ಲಿಯ ಸ್ವಾಭಾವಿಕ ಗುಣಗಳಿಗೂ ವಸ್ತು ಸ್ಥಿತಿಗೂ ಕಾದಾಟವು ಇದ್ದೇ ಇದೆ. ಈ ಕಾದಾಟವು ಸಾಗದಂತೆ ಸಮಾಧಾನ ಮಾಡತಕ್ಕುದೇ ಕಲೆಯ (ಕಾವ್ಯದ) ಕರ್ತವ್ಯ. ಭಾವದಿಂದ ಬೋಧೆಗೂ ಥಟ್ಟನೆ ಉಂಟಾಗುವ ಭಾವೋದ್ರೇಕದಿಂದ, ನೈತಿಕ ಸ್ವಾತಂತ್ರ್ಯದ

ಕಡೆಗೂ ಕಲೆಯು ನಮ್ಮನ್ನು ಕೊಂಡೊಯ್ಯುವುದು. ಕಲೆಯು ಮನಸ್ಸಿನ ಹಾಗೂ ಆತ್ಮದ ಕಲ್ಮಶಗಳನ್ನು ತೊಳೆಯುವುದು; ಮಂಗಲಕರ ವಿಷಯಗಳ ಕಡೆಗೆ ಮನಸ್ಸನ್ನು ಸೆಳೆವುದು; ದೃಷ್ಟಿಯನ್ನು ವಿಶಾಲ ಮಾಡುವುದು. ಹೀಗಾಗಿ ಕಲೆಯಲ್ಲಿ,—ವಿಜ್ಞಾನ ತತ್ವಜ್ಞಾನ, ನ್ಯಾಯ ಶಾಸ್ತ್ರ ಮೊದಲಾದುವು ಸೇರಿಯೆ ಇವೆ. ಹಾಗೆಂದು ಕಾವ್ಯವು ಅಥವಾ ಕಲೆಯು ಭಾಷಣ ಮಾಡತೊಡಗುವುದು ಸರಿಯಲ್ಲ; ಧರ್ಮ ಬೋಧೆ ಮಾಡುತ್ತಲಿರುವುದೂ ಕಾವ್ಯದ ಲಕ್ಷಣವಲ್ಲ; ಅತಿಗೋಪನ ಗಹನ ಮಾರ್ಮಿಕ ರಹಸ್ಯಗಳೆಂದು, ಅರ್ಥವು ಅಸಾಧ್ಯವಾದ, ಚಿತ್ರವು ಅವ್ಯಕ್ತವಾದ, ಅದಾವುದನ್ನು ಕಾವ್ಯವು ನಿರೂಪಿಸ ತೊಡಗುವುದು ಅನ್ಯಾಯ, ಪಾಪ, ಅಪರಾಧ. ಧ್ವನಿಯ ಕಡೆಗೇ ಒಲಿದು, ಅರ್ಥವಿಲ್ಲದ ಧ್ವನಿಗಳನ್ನು ಹೊರಡಿಸಿ, ಏನೇನೋ ಅಭಿಪ್ರಾಯ ಹುಟ್ಟಿಸುವ ಶಬ್ದ ರಚನೆಯು ಕಾವ್ಯವಲ್ಲ. ಕವಿಯ ಮನಸ್ಸಿಗೆ ಅಥವಾ ಮನೋವೃತ್ತಿಗೆ ಶುದ್ಧ ಪರಕೀಯವಾದ ಕೆಲ ವಿಷಯಗಳು ಕಾವ್ಯವನ್ನು ಹೊದ್ದು ಮುಸುಕುವುದುಂಟು; ಅವು ಇದ್ದರೂ ಇಲ್ಲದಿದ್ದರೂ ಅಷ್ಟು ಬೇಸರವಿಲ್ಲ. ಆದರೆ, ಕಿವಿಯ ತಂಬಟೆಯ ಮೇಲೆ ದಡಬಡ ಬಡೆವ ಶಬ್ದೋಚ್ಚಾರವು, ಮೆದುಳಿನಲ್ಲಿ ಕೂಡಲೆ ತೀಕ್ಷ್ಣವಾಗಿ ಅಭಿಪ್ರಾಯವನ್ನು ಉಂಟು ಮಾಡಲಾರದಾದರೆ, ಅದು ಕೇವಲ ಆಡಂಬರವಾಗುವುದು. ತಲೆಸಿಡಿತವೂ ಒಂದು ಕಾವ್ಯವೆ?

ಸ್ವಾಭಾವಿಕವಾದ ಭಾವನೆಗಳಿಗೂ ಅವುಗಳ ವಿಮರ್ಶೆ ವಿಚಾರಗಳಿಗೂ ನಡುವೆ ಸೇತುವೇ ಕಾವ್ಯ. ಅದರಿಂದಾಗಿ, ಭಾವನೆ—ವಿದ್ಯಮಾನಗಳೊಳಗಣ ಕಾದಾಟವು ದೂರವಾಗಿ, ಶಾಂತಿಯು ಉಂಟಾಗುವುದು. ಸಾಮಾನ್ಯಮತಿಗಳೂ ಈ ಸೇತುವನ್ನು ರಚಿಸ ತೊಡಗಿ, ತಮ್ಮಲ್ಲಿನ ಭಾವನೆಗಳು ವಿಮರ್ಶೆ ಹೊಂದುತ್ತಿರುವಾಗಲೆ, ಧ್ವನಿ ಹೊರಡಿಸಿ ಕವಿತೆ ಕಟ್ಟಿ, ಅದೇ ಈ ಸೇತುವೆನ್ನುವರು. ಇಂತಹ ಕಾವ್ಯವು ಉತ್ಸಾಹದಿಂದ ಹುಟ್ಟಿದರೂ ಅಂಗಾಂಗನ್ಯೂನತೆ ಇರುವ, ಹಾಗೂ ರೋಗಿಷ್ಟವಾದ (ಕುಂಬಾದ) ಸೇತುವಾಗುವುದರಲ್ಲಿ ವೈಚಿತ್ರ್ಯವೇನೂ ಇಲ್ಲ; ಉತ್ಸಾಹವಿಲ್ಲದೆ ಹುಟ್ಟಿದರೆ, ತಿಳಿವು ಬೆಳೆಯದ ಬಾಲಬುದ್ಧಿಯ ಪ್ರಮಾದ ಸಹಿತವಾಗಿಯೆ ದುರ್ಬಲವಾದ ಸೇತುವಾಗುವುದು. ಕೆಲವೇ ಆತ್ಮಗಳು ಜನ್ಮತಃ ಇಂತಹ ಶಾಂತಿ ಸೇತುಗಳನ್ನು ನಿರ್ಮಾಣ ಮಾಡಬಲ್ಲವು; ಉದಾರರಾದ ವಿದುಷಿಯರು ಇವನ್ನು ರಚಿಸಬಲ್ಲರು.

ಕಾವ್ಯವು ನವಚೇತನವನ್ನು ಕೊಟ್ಟು, ನವಜೀವನವನ್ನು ಹೊರಡಿಸಬೇಕು. ಇತರ ಯಾವ ಕಲೆಗಳೊಡನೆಯೂ ಅದು ಸ್ಪರ್ಧಿಸಬಾರದು. ಕಳೆದ ೨೦ ವರ್ಷಗಳಿಂದ ಕಾವ್ಯದ ಕಡೆಗೆ ಜನತೆಯ ಮನಸ್ಸು ಹರಿಯುತ್ತಿಲ್ಲ; ಹಾಗೆಂದು ಕಾವ್ಯದ ಪ್ರವಾಹವು ಅತಿ ಅನಿರೀಕ್ಷಿತವಾದ ಬಿರುಕುಗಳಿಂದ ಸುತ್ತಲೂ ಹರಿಯುತ್ತಿರುವುದೂ ವಿಶೇಷವಾಗಿದೆ. “ಈ ಕಾವ್ಯವು ತಪ್ಪಾಗಿ ನಮ್ಮ ದೇಶದಲ್ಲಿ ಹುಟ್ಟಿದೆ; ಅದನ್ನು ಓದುವವರೂ ಈ ದೇಶದವರಲ್ಲ” ಎಂಬ ವಿಮರ್ಶೆಯು ಬಲವಾಗಿ ಕೇಳಿಸುತ್ತಲಿದೆ. ಆದರೆ, ನಿಜವಾದ ಕಾವ್ಯವು ಇಡೀ ಜಗತ್ತನ್ನು ಒಂದುಗೂಡಿಸಬಲ್ಲುದು. ಜನಾಂಗ ಸಂಘದ ಕಾರ್ಯಕ್ಕಿಂತಲೂ, ಒಂದು ಕವಿತೆಯ ಕಾರ್ಯವು ಅಧಿಕ ಪರಿಣಾಮವನ್ನು ಉಂಟುಮಾಡುವುದು.

ಸೌಂದರ್ಯಮಯವಾದ ಪ್ರಪಂಚವನ್ನು ನೋಡುತ್ತ ಬಾಂಧವ್ಯವು ಬೆಳೆಯುವುದಲ್ಲವೆ?

ಸಾಹಿತ್ಯ ವಿಚಾರ.

ಪೌರ್ವಾತ್ಯ ಪರಿಷತ್ತಿನ ಅಧಿವೇಶನವು ಈ ಸಲ ಬರೋದೆಯಲ್ಲಿ ಜರುಗಿದಾಗ ಅಲ್ಲಿ ಸ್ವಸ್ತಿ ವಾಚನವನ್ನು ಶ್ರೀಮನ್ಮಹಾರಾಜ ಗಾಯಕವಾಡರವರೇ ಹೇಳಿದರು. ಶ್ರೀಯುತರು ಜನ್ಮತಃ ಸುಧಾರಕರು; ವಿಮರ್ಶಕ ವಿದ್ವಾಂಸರುಗಳಿಗೆಲ್ಲ ತಮ್ಮ ಸುಧಾರಕ ತತ್ವವನ್ನು ಕುರಿತಾಗಿಯೆ ಸೂಚಿಸಿದರು. ಶತಮಾನಗಳನ್ನು ಕಳೆಯುತ್ತಿರುವಾಗಲೂ, ಈ ದೇಶವು ತನ್ನ ಸಂಸ್ಕೃತಿಯನ್ನು ತ್ಯಜಿಸಿಲ್ಲ. ಪುರಾಣೇತಿಹಾಸಗಳೂ ಶಿಲ್ಪವೂ, ಇದನ್ನು ಸಾರುತ್ತಿವೆ. ಈ ಸಂಸ್ಕೃತಿ ಧನವು ಜನತೆಗೆ ಪ್ರಯೋಜನಕ್ಕೆ ಬರುವಂತಾಗಬೇಕಾದರೆ, ಎರಡು ಮುಖ್ಯ ಸಂಗತಿಗಳನ್ನು ನಾವು ಮರೆಯಬಾರದೆಂದೇ ಅವರ ಸೂಚನೆ. ಅಂದಿನಿಂದಲೂ ಇಂದಿನ ವರೆಗೂ, ಒಂದೇ ಧ್ವನಿಯಾಗಿ ಹಳೆಯ ರಾಗಗಳನ್ನು ಎತ್ತಿ, ಪ್ರಾಚೀನ ಮಹತ್ವವನ್ನು ಕೊಂಡಾಡಿ ನಮ್ಮನ್ನು ಎಲ್ಲರೂ ಹೊಗಳಿಕೆಂದು ಸಂತೃಪ್ತಿ ಸೂಚಿಸುವುದು ವಿಹಿತವಾಗಿಲ್ಲ; ಯಾವುದಕ್ಕೆ ಎಷ್ಟೆಷ್ಟರ ಬೆಲೆ ಬರುವುದೋ ಅದನ್ನು ಗೊತ್ತು ಹಚ್ಚಿಯೆ ಅವವನ್ನು ಕೊಂಡಾಡಬೇಕೆನ್ನುವುದು ಮೊದಲನೆ ವಿಷಯ. ಸಂಸ್ಕೃತಿ ಎಂದು ಶ್ರೀಮಂತರುಗಳೂ ವಿದ್ವಾಂಸರೂ ಮಾತ್ರ ಹೆಗ್ಗಳಿಸಿಕೊಂಡು ಅದನ್ನು ಅನುಭವಿಸುವುದು ಸಾಲದು, ಹಿತವಲ್ಲ; ಪಾಮರರಿಗೂ ಬಡವರಿಗೂ ಅವರ ಜೀವನದಲ್ಲಿ ಸಂಸ್ಕೃತಿಯು ಸಂಜೀವನದಷ್ಟು ಪ್ರಯೋಜನವಾಗುವಂತೆ ಮಾಡಿ ಕೊಡಬೇಕೆನ್ನುವುದು ಎರಡನೆ ವಿಷಯ.

\+ + + × +

“ನಮ್ಮಲ್ಲಿನ ವಿದ್ಯಾನಿಧಿಗಳು ಮಹಾ ಮಹಾ ಗ್ರಂಥಗಳನ್ನು ಅನುವಾದಿಸಿ ಪ್ರಕಟಿಸಿ ಮಹೋಪಕಾರ ಮಾಡುತ್ತಿರುವರು. ಆದರೆ, ಅಲ್ಪಜ್ಞರ ಸಲುವಾಗಿ, ವಿದ್ವಾಂಸರೂ ವಿಮರ್ಶಕರೂ ತಿಳುವಳಿಕೆ ಹುಟ್ಟಿಸಿ ಹೆಚ್ಚಿಸಿ ಹಬ್ಬಿಸುವ ರೀತಿಯ ಗ್ರಂಥಗಳನ್ನು ಬಹಳವಾಗಿ ರಚಿಸಿ ಪ್ರಕಟಿಸಲಾರರಾದರೆ, ನಮಗೆ ತೃಪ್ತಿಯಿಲ್ಲ. ಅಂತಹ ಗ್ರಂಥಗಳು ದೇಶ ಭಾಷೆಗಳಲ್ಲಿ ಹೊರಡಬೇಕು. ಪ್ರಾಚೀನ ಅಥವಾ ಅಧುನಿಕ ಮಹಾ ಗ್ರಂಥಗಳ ಅಕ್ಷರಶಃ ಭಾಷಾಂತರಗಳನ್ನು ಪ್ರಕಟಿಸುವುದಕ್ಕಿಂತಲೂ, ಸಾಮಾನ್ಯ ಜನರಿಗೆ ಓದಿದರೆ ಅರ್ಥವಾಗುವ ರೀತಿಯ ಪುಸ್ತಕಗಳನ್ನು ಸುಲಭವಾಗಿ ಬರೆದು ಅಗ್ಗವಾಗಿ ಓದ ಸಿಗುವ ಹಾಗೆ ಮಾಡುವುದು ವಿದ್ವಾಂಸರುಗಳ ಕರ್ತವ್ಯವಾದಷ್ಟು ಚೆಂದವೇ. ‘ಉಮ್ಮಾರ ಖಯ್ಯಾಮ’ವನ್ನು ಭಾಷಾಂತರಿಸಿದ ಫಿಟ್ಸ್ ಗೆರಲ್ಡನಂತಹ ಒಬ್ಬ ವ್ಯಕ್ತಿಯಾದರೂ ನಮ್ಮ ದೇಶದಲ್ಲಿ ಹಲವು ಶತಮಾನಗಳಿಂದಲೂ ಹುಟ್ಟಿಲ್ಲವೆಂಬುದು ದುಃಖಕರವಲ್ಲವೇ. ಕವಿಯ ಭಾವಾರ್ಥವನ್ನೂ ಅವನ ಕಾವ್ಯದ ಆತ್ಮವನ್ನೂ ದೇಶಭಾಷೆಗೆ ತರಬಲ್ಲ ಭಾಷಾಂತರಕಾರರು ಎಷ್ಟು ಮಂದಿ ಇರುವರು? ಪ್ರಾಚೀನ ಸಾಹಿತ್ಯದ ಸವಿಯು ಈಗಿನ ಹಳ್ಳಿಗಳಲ್ಲೂ ರುಚಿಸ ಸಿಗಬೇಕಾದರೂ ಇಂತಹ ಹೊಸ ಬಗೆಯ ಸಾಹಿತ್ಯವು ಹುಟ್ಟುವ ಹಾಗೆ ವಿದ್ಯಾರ್ಣವರು ಪ್ರಯತ್ನಿಸಬೇಕು” ಎಂಬುದು ಅವರ ಟೀಕೆ.

\+ + + + +

ಇನ್ನೊಂದು ವಿಷಯವಿದೆ. ಜಾನಪದಸಾಹಿತ್ಯವನ್ನು ಕೂಡಿಸಿ ಸಂಪಾದಿಸಿ ಪ್ರಕಟಿಸುವ ವ್ಯವಸ್ಥೆಯೂ ಬೇಗನೆ ನಡೆದಷ್ಟು ಉತ್ತಮ. ಹಳ್ಳಿಗಳಲ್ಲಿಂದ ಕೆಲವೇ ಆದರೂ, ಈ ಗ್ರಾಮಪದಗಳನ್ನು ಕೇಳಿದರೆ, ಅವುಗಳಲ್ಲಿ ಗ್ರಾಮ ಜೀವನದ ಸೊಬಗು ಹೇಗೆ ರಂಜಿಸುತ್ತಿದೆ ಎಂಬುದನ್ನು ಸವಿದವರೇ ಬಲ್ಲರು. ಅಂತಹ ಪದ್ಯಗಳಲ್ಲಿನ ವ್ಯಾಕರಣ ರೀತಿ, ರಚನಾ ಕೌಶಲ, ಪದ ಪ್ರಮಾಣ ಮೊದಲಾದುವುಗಳಿಂದ ಭಾಷಾ ವಿಷಯಕವಾಗಿ ಎಷ್ಟೋ ಅಮೂಲ್ಯ ವಿಷಯಗಳು ಹೊರ ಬೀಳುವುದನ್ನು ನೋಡಿ ವಿದ್ವಾಂಸರೂ ತಲೆದೂಗಬೇಕಾಗುವಂತಿದೆ. ವೇದ, ಪುರಾಣಗಳನ್ನೇನೂ ಅರಿಯದವರು ಸಹ, ಅತಿ ಕಠಿನವಾದ ಅವುಗಳೊಳಗಣ ತತ್ವಗಳನ್ನು ತುಂಡು ಪದ್ಯಗಳ ಮೂಲಕ ಹಳ್ಳಿಗರ ಬಾಯಿಯಲ್ಲಾಡಿಸಿರುವುದು ಎಷ್ಟು ವಿಚಿತ್ರವಾಗಿದೆ! ಹೊಸ ರೀತಿಯ ವಿದ್ಯಾಭ್ಯಾಸವೂ ವಿಶ್ವವಿದ್ಯಾಲಯಗಳೂ, ನಮ್ಮಲ್ಲಿ ನೆಲೆ ನಿಂತು ಮುಕ್ಕಾಲಂಶ ಶತಮಾನವಾದರೂ, ಈ ಜಾನಪದ ಸಾಹಿತ್ಯದ ಕಡೆಗೆ ವಿದ್ವಾಂಸರ ದೃಷ್ಟಿಯು ಹರಿಯದಿದ್ದುದು ಯಾವ ಅಭಾವವನ್ನು ಸೂಚಿಸುತ್ತಲಿದೆ? ಇದುವರೆಗೆ ಮರೆತಿದ್ದ ಇದೊಂದು ಕರ್ತವ್ಯವನ್ನು ಇನ್ನಾದರೂ ತ್ವರೆಯಿಂದ ಮಾಡದಿದ್ದರೆ, ಆ ಸಾಹಿತ್ಯವನ್ನಾಡುವ ಬಾಯುಗಳು

ಮಲಿನವಾಗುವ ದಿನಗಳು ಬರುವ ಕಾರಣ, ಅದರಿಂದಾಗುವ ಲೋಪ ದೋಷಗಳನ್ನು ಮುಂದೆ ಎಂದಿಗೂ ನಿವಾರಿಸಿ ಪ್ರಾಯಶ್ಚಿತ್ತ ಮಾಡಲು ಸಾಧ್ಯವಾಗದು.

\+ \+ \+ \+ \+

ಜಾನಪದ ಸಾಹಿತ್ಯದ ಮಾದರಿಗಳನ್ನು ಗ್ರಾಮೊಫೋನ್ ರಿಕಾರ್ಡುಗಳ ಮೂಲಕ ಕಾದಿಡಬೇಕಾಗಿ ಗಾಯಕವಾಡರು ಸೂಚಿಸಿರುವರು. ಭಾಷಾ ಶಾಸ್ತ್ರಕ್ಕೆ ಇದರಿಂದಾಗಿ ಮುಂದೆ ಅಮೋಘವಾದ ಸಹಾಯವಾಗುವುದು. ನಮ್ಮ ಕಾಲದಲ್ಲಿ ಭಾಷೆಯು ಯಾವ್ಯಾವ ಅಲಂಕಾರಗಳನ್ನು ಧರಿಸಿ ಮೆರೆಯುತ್ತಿದ್ದಿತೆಂದು ಮುಂದಣವರು ತಿಳಿದರೆ, ನಾವೀಗ ಹಳೆಗನ್ನಡದಲ್ಲಿ ಉತ್ತಮವಾದ ಪದ ಸಂಗ್ರಹದ ಲಾಲಿತ್ಯ ಸಾಮಂಜಸ್ಯಗಳನ್ನು ಕಂಡು, ಹಿಗ್ಗಿ ಬೆಚ್ಚರ ಪಡುವಂತೆಯೆ, ಮುಂದಣವರೂ ಕೌತುಕ ಪಡುವರು. ಇದೊಂದು ಬಗೆಯ ಸಂಗ್ರಹವಿಲ್ಲದೆ, ದೀಕ್ಷನರಿಗಳಿಗೆ ಪದವಾಕ್ಯ ಪ್ರಮಾಣಗಳಾದ ಅಧಾರಂಟಿಗಳು ಸುಲಭವಾಗಿ ಸಿಗವು. ಧಾತುರೂಪಗಳೇ ಸಿಗದೆ, ಸಿಕ್ಕಿದರೂ ತಪ್ಪಾದ, ಎಷ್ಟು ಪದಗಳು ಇವೆಯೊ ವಿಚಾರಿಸಿದರೆ ತಿಳಿಯುವುದು. ಭಾಷಾಕೋಶಗಳಲ್ಲಿನ ಇದೊಂದು ಮಹಾ ಕೊರತೆಯನ್ನು ಹೋಗಲಾಡಿಸಲು ಜಾನಪದ ಸಾಹಿತ್ಯದ ಸಂಗ್ರಹವೂ ವಿಮರ್ಶೆಯೂ ಅಗತ್ಯವಾಗಿದೆ.

\+ \+ \+ \+ \+

ಇಂಗ್ಲೆಂಡಿನ ಪರಿಚಯವನ್ನು ಮಾಡಿ ಕೊಡುವುದಕ್ಕಾಗಿ, ಒಂದು ಹೊಸ ರೀತಿಯ ಸಾಹಿತ್ಯವು ಪ್ರಕಟವಾಗುತ್ತಿದೆ. ಒಂದಾನೊಂದು ವಾರ ಪತ್ರಿಕೆಯಲ್ಲಿ ಪ್ರತೀ ಸಂಚಿಕೆಯಲ್ಲೂ ಇತರ ಯಾವತ್ತು ಪತ್ರಿಕೆಗಳಿಂದ,—ಇಂಗ್ಲಿಷ ಜನರ ಆಚಾರ ವಿಚಾರಗಳನ್ನು ಕುರಿತಾಗಿ ಬರುವ ವಿಶೇಷ ವಾರ್ತೆಗಳೂ ಟೀಕೆಗಳೂ ಅಭಿಪ್ರಾಯಗಳೂ ಕೆಲವೇ ಮಾತುಗಳಲ್ಲಿ ಪ್ರಕಟಗೊಳ್ಳುತ್ತಿವೆ. ಇಡೀ ವರ್ಷದಲ್ಲಿ ಹೀಗೆ ಪ್ರಕಟವಾಗುವ ಎಲ್ಲ ಸಂಕಲಿತ ವಿಷಯಗಳನ್ನು ಎತ್ತಿಕೊಂಡು ಅವುಗಳಿಂದ ಚೊಕ್ಕವಾದುವನ್ನು ಹೆಕ್ಕಿ ಕೂಡಿಸಿ, ಪ್ರತಿ ವರ್ಷವೂ ಒಂದೊಂದು ಸಂಪುಟವು ಪ್ರಕಟಗೊಳ್ಳುತ್ತಿದೆ. ಹೀಗಾಗಿ ಈ ಸಂಪುಟಕ್ಕೆ ಲೇಖಕರೆಂದರೆ, ಸಮಸ್ತ ಪತ್ರಿಕೆಗಳು; ಸಮಸ್ತ ಲೇಖಕರು; ಸಮಸ್ತ ವಾಚಕರು ಎಂಬಂತಾಗಿದೆ. ಈ ಸಂಪುಟವನ್ನು ಓದುತ್ತ, ಇಡೀ ಇಂಗ್ಲೆಂಡಿನ ಈ ವರ್ಷದ ಸಾಮಾಜಿಕ ರಾಜಕೀಯ ಸಾಂಪತ್ತಿಕವೇ ಮೊದಲಾದ ಸಮಸ್ತ ವಿಷಯಗಳ ಸಂಪತ್ತು ಲೆಕ್ಕಪ್ರಕಾರ ನಮೂನೆಗಳಾಗಿ ಕೂಡಿಸ ಬರುತ್ತಿದೆ. ಕಳ್ಳಗೆ ನೃಪಗೆ ಎಂಬ ಭೇದವೇನೂ ಇಲ್ಲದೆ ಸರ್ವರಿಗೆ ಸಂಬಂಧವುಳ್ಳ ವಿಷಯಗಳು ಅವರವರ ಮಾತುಗಳಲ್ಲೇ ಮುದ್ರಣವಾಗಿ ಶಾಸನರೂಪವಾಗಿ ಉಳಿಯುತ್ತಿವೆ. ಇಂತಹದೊಂದು 'ತುಂಡುಗಳ ಸಂಗ್ರಹ'ವನ್ನು ಕನ್ನಡ ಪತ್ರಿಕೆಗಳಿಂದ ಕೂಡಿಸಿ ಅಂತೆಯೆ ಪ್ರಕಟಿಸುವ ಕರ್ತವ್ಯವು ಕನ್ನಡ ಗ್ರಂಥ ಪ್ರಕಟನಾಲಯಗಳ ಪಾಲಿಗೆ ಸೇರಿದುದಲ್ಲವೆ?

\+ \+ \+ \+ \+

ಯೂರೋಪು ಅಮೇರಿಕಗಳಲ್ಲಿನ ಸಾಹಿತ್ಯವಿಚಾರಿಗಳು ಹೊಸದೊಂದು ಉದ್ಯಮವನ್ನು ಪ್ರಾರಂಭಿಸಿರುವರು. ಈ ಉದ್ಯಮಕ್ಕೆ 'ಪುನರ್ಲೇಖನ'ವೆನ್ನಬಹುದು. ಸುಮಾರು ೧೦೦ ಅಥವಾ ೫೦ ವರ್ಷಗಳ ಹಿಂದೆ ಪ್ರಕಟವಾದ ಗ್ರಂಥಗಳನ್ನು ಪುನಃ ಬರೆದು ಮುದ್ರಿಸುವರು. ಗ್ರಂಥವೆಲ್ಲ ಅದೇ, —ಭಾಷೆ ಬೇರೆ ಶೈಲಿ ಬೇರೆ, ಅದರ ವಿಸ್ತಾರವೂ ಬೇರೆ. ಆ ಪ್ರಖ್ಯಾತ ಗ್ರಂಥದ ಸುವಿಖ್ಯಾತ ಲೇಖಕರು ಇಂದು ಬದುಕಿದ್ದರೆ ಹೇಗೆ ತಾನೆ ಬರೆಯಬೇಕಾಗಿದ್ದಿತೋ, ಅದನ್ನು ಪುನಃ ರಚಿಸುವ ಗ್ರಂಥಕರ್ತನು ಭಾವಿಸಿ ಬರೆವನು: ಕೀರ್ತಿಯೆಲ್ಲ ಹಿಂದಣ ಲೇಖಕನಿಗೆ; ಅಂದವೆಲ್ಲ ಆಧುನಿಕ ಭಾಷೆಗೆ, ವಾಚಕನಿಗೆ. "ಹೀಗೆ ಮಾಡುವುದು ಸರಿಯೆ?" ಎಂಬ ಪ್ರಶ್ನೆಯನ್ನು ನೂರಾರು ವಿದ್ವಾಂಸರು ಈಗ ಚರ್ಚಿಸುತ್ತಿರುವರು. ಕಾಲಚಕ್ರವೇ ಉರುಳುತ್ತಿರುವಾಗ, ಪ್ರಗತಿಯ ಕಡೆಗೆ ಕಣ್ಣಿಟ್ಟು, ಒಂದು ಗ್ರಂಥವು ಶಾಸನವಾಗಿಯೇ ಹೋಗಿದೆ ಎನ್ನಬಾರದೆಂದೂ, ಪುಸ್ತಕವು ಛಾಪೆಯಾಗುವಾಗ ಹೇಗೆ ಮುದ್ರಾಲಯದಿಂದ ಬರುವ ಕರಿಹಾಳೆಗಳನ್ನು ತಿದ್ದುವರೋ, ಹಾಗೆಯೆ, ಪ್ರತಿಯೊಂದು ಪುನಃ ಮುದ್ರಣ ಹೊಂದುವ ವೇಳೆ, ತಿದ್ದಿದ್ದೇ ಹೊರಬೀಳುವುದುತ್ತಮವೆಂದೂ, ಹಾಗೆ ಮಾಡಿದರೆ ಮಾತ್ರ ಯಾವುದೊಂದು ಗ್ರಂಥವು ಚಿರನವೀನವಾಗುವುದೆಂದೂ ಅಭಿಪ್ರಾಯವಾಗಿದೆ. ಅತಿ ಪ್ರಮುಖ ಲೇಖಕರು ಸಹ ಗೌಣ ವಿಷಯಗಳಲ್ಲೆಲ್ಲ ತಿದ್ದುಪಡಿಯಿರಲೇ ಬೇಕೆಂದು ನಿರ್ಧರಿಸಿರುವರು. ಕೆಲವರು ತಮ್ಮ ಅತಿ ಪ್ರಸಿದ್ಧಿ ಹೊಂದಿದ ಮೊದಲನೆ ಕಾದಂಬರಿಯನ್ನು ತೀರ ಬದಲಾಯಿಸಿಯೇ ಬರೆದಿರುವರು. ಪ್ರತಿ ಸಲ ಬರೆವಾಗ, ಪುಸ್ತಕವು ಹೊಸದಾಗುತ್ತ ಬರಬೇಕೆಂದೇ ಇತರರ ತೀರ್ಮಾನವಾಗಿದೆ. 'ಹಳೆಯ ಫೋಟೋ ಚಿತ್ರವನ್ನು ಈಗ ತಿದ್ದಿದರೆ ಅದೆಷ್ಟು ಭೀಭತ್ಸವಾಗುವುದು!' ಎಂದು ಕೆಲವರು ಮಾತ್ರ, ತಾವು ಬಾಲ್ಯದಲ್ಲಿ ಬರೆದ ಪುಸ್ತಕಗಳನ್ನು ಹಾಗೆಯೆ ಪುನರ್ಮುದ್ರಣ ಮಾಡಲೊಪ್ಪಿರುವರು.

\+ \+ \+ \+ \+

ಆಂಧ್ರ ವಿಶ್ವವಿದ್ಯಾಲಯದ ಅಧಿಕಾರಿಗಳು ತೆಲುಗು ಭಾಷೆಯಲ್ಲಿ ಸಿದ್ಧವಾಗುವ ಕೆಳಗಣ ಮೂರು ಗ್ರಂಥಗಳಿಗೆ ಒಂದೊಂದಕ್ಕೆ ರೂ ೭೫೦ರಂತೆ ಬಹುಮಾನ ಕೊಡಲು ನಿರ್ಧರಿಸಿರುವರು. (೧) ದೈನಿಕ ವಿಜ್ಞಾನ (೨) ಸ್ವಾಸ್ಥ್ಯ ರಕ್ಷಣೆ (೩) ಆಧುನಿಕ ಜನಜೀವನ ಚಿತ್ರಿಸುವ ಕಾದಂಬರಿ. ಅದಲ್ಲದೆ, —ಮೆಟ್ರಿಕ್ ಪರೀಕ್ಷೆಗೆ ವಿದ್ಯಾರ್ಥಿಗಳು ಇಂಗ್ಲೀಷ ಭಾಷಾ ಸಾಹಿತ್ಯ ವಿಷಯದಲ್ಲಲ್ಲದೆ, ಇತರ ಯಾವತ್ತು ವಿಷಯಗಳಲ್ಲಿ ಅಗತ್ಯವಾಗಿಯೂ ತೆಲುಗಿನಲ್ಲಾಗಲಿ ಅವರ ಊರ ಭಾಷೆಗಳಲ್ಲಾಗಲಿ ಉತ್ತರಗಳನ್ನು ಬರೆಯಬೇಕೆಂದೂ ಇನ್ನೂ ಇಂಟರ್‌ಮಿಡಿಯಟ್ ಪರೀಕ್ಷೆಗೆ ಸಹಾ ಅದೇ ರೀತಿ ಉತ್ತರ ಬರೆವುದು ಕಡ್ಡಾಯವಾಗಿರುವಂತೆ ವಿಧಿಸುವುದು ಯುಕ್ತವೊ ಎಂಬ ವಿಷಯ ತಜ್ಞರ ವಿಮರ್ಶೆಯಾತಕ್ಕದೆಂದೂ ಶಿಫಾರಸು ಮಾಡಿರುವರು. ಈ ವಿಷಯವು ಪುನಃ ನಾಳಿನ ಮಾರ್ಚಿ ತಿಂಗಳಲ್ಲಿ ಆಲೋಚನೆಗೆ ಬಂದು, ಅದನ್ನು ಕುರಿತಾಗಿ ನಿರ್ಣಯಿಸಬೇಕೆಂದೂ ನಿಶ್ಚಿತವಾಗಿದೆ. ಕನ್ನಡದ ವಿಷಯ ಮದ್ರಾಸು ಯೂನಿವರ್ಸಿಟಿಯು ಏನಂತೆ?

\+ \+ \+ \+ \+

ತಮಿಳು ಪ್ರಿಯರ ಪರಿಷದವೂ ಜರುಗಿತು. ತಮಿಳು ಸಾಹಿತ್ಯವು ಅತ್ಯುಜ್ವಲವಾದುದು, ಆದು ಆಧುನಿಕರ ದೃಷ್ಟಿಯಲ್ಲಿ ಹಿಂದುಳಿದು ಬಂದಿದೆ, ಮಾತ್ರವಲ್ಲದೆ, ಬೆಳೆದುದಿಲ್ಲ. ಬೆಳೆದರೂ, ಬೇಕಾದಂತೆ ಬೆಳೆದಿಲ್ಲ ಎಂಬುದೇ ಈ ಪರಿಷದವು ನೋಡಲು ಕಾರಣವಾಗಿದೆ. ಪಾಶ್ಚಾತ್ಯ ಭಾಷೆಗಳೂ ಶಿಕ್ಷಣ ಪದ್ಧತಿಯೂ ರೂಢಿಗೆ ಬಂದುದರಿಂದ, ಇಂಗ್ಲಿಷೇ ಅರೂಢವಾಗಿದ್ದು, ತಮಿಳು ಬಡ ಸೇರಿ ಬಡವಾಗಿದೆ. (ಇತರ ದೇಶಭಾಷೆಗಳೆಲ್ಲವೂ ಹೀಗೆಯೆ) ದೇಶಭಾಷೆಗಳಲ್ಲಿ ವಿದ್ಯಾವಂತನಾಗಿ ಜೀವನ ಮಾಡುವುದು ಕಷ್ಟವೆಂದೂ, ಇಂಗ್ಲೀಷಿನ ಅಲ್ಪಸ್ವಲ್ಪ ಜ್ಞಾನವಿದ್ದರೆ ಹುದ್ದೆ ದೊರೆವುದೆಂದೂ ಈ ದುಸ್ಥಿತಿಗೆ ಮೂಲಕಾರಣವಾಯಿತೆಂದು ಪರಿಷದದಲ್ಲಿ ವಿವರಿಸಲಾಗಿದೆ. 'ಇಂಗ್ಲೀಷಿಗೆ ಪೇಟೆಯಲ್ಲಿ ಧಾರಣೆ ಬಹಳ; ಅದರಲ್ಲೂ ಅದು ಫೆಶನಿನ ಭಾಷೆ, ದೇಶಭಾಷೆಗಳು ಹೆಚ್ಚೆಂದರೆ ಪ್ರಾಚೀನದೊಡನೆ ಆಲಾಪಸಲ್ಲಾಪಗಳಿಗೆ ಮಾತ್ರವಿಷ್ಟೆ. ಹಳ್ಳಿಗಳಲ್ಲಿ ಸಹ ಒಂದೆರಡು ಇಂಗ್ಲೀಷ ಮಾತು ಬಲ್ಲವನೆಂದರೆ ದೊಡ್ಡಾಳು. ದೇಶಭಾಷೆಗಳಿಗೆ ಪ್ರೋತ್ಸಾಹ ಕೊಡಿರೆನ್ನುವುದೂ ಅವನ್ನು ವಿಶೇಷ ಪ್ರಚಾರಕ್ಕೆ ತರಬೇಕೆನ್ನುವುದೂ, ನಿಜವಾದರೂ, ದೇಶಭಾಷೆ ಚೆನ್ನಾಗಿ ಬಲ್ಲ ಯುವಕನಿಗೆ ಊಟಕ್ಕೆ ಬಗೆ ಏನು? ವಿದ್ವಾಂಸನಿರಲಿ ಇಲ್ಲದಿರಲಿ, ಇಂಗ್ಲೀಷ ಬಲ್ಲವನು ಬದುಕ್ಯಾನು ಎಂಬಂತಹ ನಂಬಿಕೆಯು ರೂಢಿಯಲ್ಲಿದೆ. ಒಟ್ಟಾರೆ ದೇಶಭಾಷೆಗಳಿಗೆ ಆಹಾರ ಸಂಪಾದಿಸುವ ಚೈತನ್ಯವಿಲ್ಲ ಎಂಬುದರಿಂದಲೇ ಅವು ಮಹಾಜನಗಳ ಪ್ರೋತ್ಸಾಹ ಹೊಂದಿಲ್ಲ. ಶಾಲೆಗಳಲ್ಲಾದರೂ ಅವುಗಳು ಬರೇ ವಿಷಯಗಳಾಗಿ ನಿಂತಿವೆ; ಅದೂ ಇತ್ತೀಚೆಗೆ. ಇಂಗ್ಲೀಷ ಅರಿಯದ ವಿದ್ವಾನ್, ಶಿರೋಮಣಿಗಳೊ, ಅವರು ಭಾಷಾ ಜ್ಞಾನದ ಗಣಿಗಳೇ ಆಗಿರುವರಾದರೂ, ಅವರ ಮನಸ್ಸಿನ ಅಳಕ್ಕೆ ನಿಲುಕದ ಸಂಬಳವನ್ನೆ ಪಡೆದು ಜೀವಿಸಬೇಕಾಗಿದೆ. ಅಧಿಕಾರಿಗಳಿಗೇ ದೇಶಭಾಷೆಗಳು ಬೇಡವಾದ ಬಳಿಕ, ವಿದ್ಯಾರ್ಥಿಗಳಿಗೆ ಅವು ಬೇಕಾಗುವುವೆ? ಹೀಗಾಗಿ, ಆಧುನಿಕ ಶಾಸ್ತ್ರಗಳೆಲ್ಲ ಮುನ್ನಡೆದುವು, ಭಾಷೆಗಳು ಅಲ್ಲಲ್ಲೇ ಉಳಿದು ಕೊಳೆತುವು. ಮನೆಯಲ್ಲಿ ಕಲಿತಷ್ಟು ಮಾತೃಭಾಷೆ ಮಾತ್ರ ಉಳಿದು ಬೆಳೆದವರೇ ಬಹಳ. ಶಾಲೆಗಳಲ್ಲಿ ನಾಲ್ಕಕ್ಷರ ಕಲಿತವರು ಇಂತಹರನ್ನು ದೂರವಿಡುವರು. ಇದರಿಂದ ದೇಶಭಾಷೆಗಳು ಉಳಿಯ ಬೇಕಾದರೂ ಬೆಳೆಯಬೇಕಾದರೂ ಅವನ್ನು ಅಗತ್ಯ ವಿಷಯಗಳೆಂದು ವಿದ್ಯಾಧಿಕಾರಿಗಳು ನಿರ್ಧರಿಸದೆ ಅನ್ಯಥಾ ಆಗಲಾರದು. ಇದೊಂದಲ್ಲದೆ, ಸಾವಿರಾರು ಪರಿಷತ್ತುಗಳು ಅಧಿವೇಶನಗಳಲ್ಲಿ ಲಕ್ಷಗಟ್ಟಲೆ ನಿರ್ಧಾರಗಳನ್ನು ಮಾಡಿಯೂ ಫಲವಿಲ್ಲ" ಎಂಬುದಿಷ್ಟು ಈ ಪರಿಷದದಲ್ಲಿ ನಡೆದ ಚರ್ಚೆಗಳಿಂದ ಮೂಡಿರುವ ತತ್ವ.

ನಾಡಿನ ಪ್ರಸಿದ್ಧ ಪುರುಷರು. ೩.

ಶ್ರೀ. ತಾರಾನಾಥರು.

(ಲೇಖಕರು:—ಶ್ರೀ. ಕೊ. ಶಿ. ಕಾರಂತರು.)

ಶ್ರೀ. ತಾರಾನಾಥರ ವಿಷಯವನ್ನು ಬರೆಯಲು ತುಸು ಅಧೈರ್ಯವೇ ನನಗೆ. ಈ ಮೊದಲು ಬರೆದ ಲೇಖಗಳಂತೆ ನಿಕಟ ಪರಿಚಯದಿಂದ ನಾನು ಈ ಬರೆಹ ಬರೆಯಲು ಅನುಕೂಲವಾಗಿಲ್ಲ. ಅವರ ವಿಷಯ ನಾನು ತಿಳಿಯಲಿಚ್ಛಿಸಿದವರಲ್ಲೊಬ್ಬ—ಎಂಬುದೇ ನನ್ನ ಧೈರ್ಯ; ಅಲ್ಲದೆ ಶ್ರೀಯುತರು ಕರ್ಣಾಟಕದಲ್ಲಿ ಹೆಸರಾದ ವ್ಯಕ್ತಿಗಳಲ್ಲೊಬ್ಬರು. ಅವರ ವಿಚಾರಗಳಿಂದಾಗಿ, ಪರಿಚಯದಿಂದಾಗಿ ಕರ್ಣಾಟಕದ ಹಲವು ವ್ಯಕ್ತಿಗಳಲ್ಲಿ ಹಲವು ಬಗೆಯ ಪರಿಣಾಮವುಂಟಾಗಿದೆ. ಕೆಲವರ ಕಣ್ಣಿಗೆ ಅವರು ವೈಜ್ಞಾನಿಕರಾಗಿ ಕಾಣುವರು. ಎಷ್ಟೋ ಜನರ ಪಾಲಿಗೆ ಅವರು ಅಭಿನವ ವಿವೇಕಾನಂದರು, ನವೀನ ವಿಚಾರಗಳಿಗೆ ಬರ್ಟ್ರೆಂಡ್ ರಸ್‌ಲರು—ಎಷ್ಟೆಷ್ಟು ಜನರ ಪಾಲಿಗೆ ಅವರು ಏನೇನು ಆಗಿ ಕಾಣಿಸುವರು. ಅವರನ್ನು ನಾವೆಲ್ಲ ಕಾಣುವುದಾದರೆ—ಅವರನ್ನು ಶ್ರೀಯುತ ತಾರಾನಾಥರೆಂದರೆ ಸಾಲದು. ಶ್ರೀ. ಪಂಡಿತ, ಯೋಗಿ, ವೈದ್ಯ ಮಾಸ್ತರ್ ತಾರಾನಾಥರಾಯರು - ಎನ್ನಬೇಕು. ಅವರು ವೈದ್ಯರೆಂದು ಅವರ "ಪ್ರೇಮ"ದ ಜಾಹೀರಾತುಗಳು ಸಾರುತ್ತವೆ. ಅತಿಯಾಗಿ ನರಳುವ ಜನರಿಗೇನೆ ಅವರ ರಾಮಬಾಣದಂತಿರುವ ಮದ್ದುಗಳು ನಾಟುವುವು. ಅವರದೊಂದು ಆಶ್ರಮವಿದೆ. ತುಂಗಭದ್ರೆಯಲ್ಲಿರುವ ಆ ಆಶ್ರಮವನ್ನು 'ಪ್ರೇಮಾಯತನ' ಅನ್ನುತ್ತಾರೆ ಕೆಲವರು. 'ಪ್ರೇಮಾಯಾತನ' ಅನ್ನುವವರು ಹಲರು ಅವರನ್ನು ಬಣ್ಣಿಸುವುದು ಕಷ್ಟ. ತೀರ ಸಮಸ್ಯಾ ಪುರುಷರವರು.

ಶ್ರೀಯುತರೆಂದು ನಾನೀ ಲೇಖದ ಮಟ್ಟಿಗೆ ಅವರನ್ನು ಸಂಬೋಧಿಸುತ್ತೇನೆ. ಕಾರಣ ನಾನಿನ್ನೂ 'ಮಾಸ್ತರ'ರ ಶಿಷ್ಯನಾಗಿಲ್ಲ. ಅಲ್ಲದೆ ಅವರೀಗ ವಿಸ್ಮರರಾಗಿದ್ದಾರೆ. ಅವರು ನಮ್ಮ ಜಿಲ್ಲೆಯವರು ಮಂಗಳೂರು ಅವರನ್ನು ಹೆತ್ತ ಊರು ಅವರು ಈಗ ಮರೆತ ಊರೂ ಆಗಿರುತ್ತದೆ. ತಮ್ಮ ಪ್ರಬುದ್ಧ ವಯಸ್ಸನ್ನು ಅವರು ಹೈದ್ರಾಬಾದಿನಲ್ಲಿ ಕಳೆದರು ಅನಂತರ ಅಲ್ಲಿನ ಸರಕಾರದ ವಕ್ರಗೋಷ್ಟಿಯು ಬಿದ್ದು—ಅವರು ಬಳ್ಳಾರಿ ಜಿಲ್ಲೆಯನ್ನು ಸೇರಿಕೊಂಡರು. ಈಗ ಅವರಿರುವುದು ತುಂಗಭದ್ರೆಯಲ್ಲಿ. ಇಲ್ಲದಿರುವುದೂ ಅಲ್ಲಿ. ಬೆಂಗಳೂರಿನಿಂದ ಧಾರವಾಡದ ತನಕ ಅವರ ವ್ಯವಹಾರ ಕ್ಷೇತ್ರವಿದೆ ನೋಟಕ್ಕೆ ದೀರ್ಘಕಾಯ. ಗೌರ ಬಣ್ಣ, ಬಿಡಿಸಿದ ಬೈತಲೆ, ನಾಲ್ವತ್ತು ವಯಸ್ಸಿನ ತರುಣರು. ಅವರ ಮುಖದಿಂದ ಹೊಳೆದು ಕಾಣುವ ಎರಡು ಕಣ್ಣುಗಳು ತಮ್ಮ ಕಥೆಯನ್ನು ತಾವೇ ಹೇಳುವಂತಿವೆ. ಇನ್ನೂ ಹತ್ತು ವಯಸ್ಸು ಕಡಿಮೆಯಾಗಿದ್ದರೆ, ಅವರನ್ನು ಕಾಲೇಜಿನ 'ಶೋಕಿ ಜನರ ಸಾಲಿಗೆ' ಸೇರಿಸ ಬಹುದು. ಯೋಗಿಗಳಾದುದರಿಂದ ಹಾಗೆ ಹೇಳಲಾಗದು.

ಅವರು ಹೋದಲ್ಲಿ ಅವರ ಹಿಂದೆ ವಿದ್ಯಾವಂತರೆನಿಸುವವರ ಪರಿವಾರ ತುಂಬಾ ಕಲೆಯುವುದು. ಅವರು ತುಂಬ ಮೇಧಾವಿಗಳು. ತಮ್ಮ ಮಿದುಳಿನ ಬಲದಿಂದ ಸಾಮಾನ್ಯರನ್ನು ಬೆರಗುಗೊಳಿಸಬಲ್ಲರು. ಅವರ ಕಣ್ಣು ರೂಪುಗಳಿಗೆ ತುಂಬಾ ಆಕರ್ಷಣ ಶಕ್ತಿಯಿದೆಯಂತೆ, ಅವರ ಪರಿವಾರವು ವಿದ್ಯಾವಂತರದ್ದೆ. ನಟರು, ಕಲಾವಿದರು, ವಕೀಲರು, ಅವರಂತೆ ಪಂಡಿತರು—ಅವರ ಗೆಳೆಯರಾಗುವುದರಲ್ಲಿ ಅಚ್ಚರಿಯಿಲ್ಲ. ಗೆಳೆಯರಲ್ಲಿ ಅಷ್ಟು ಮಹಿಮೆಯಿಲ್ಲದಿದ್ದರೂ, ಸಂಶಯಾಸ್ಪದವಾದ ನಡತೆಗೆ ಧಾರಾಳ ಅವಕಾಶವಿದೆ. ಜನತೆಯು ಸಂಶಯಪಟ್ಟೀತೆಂದು—ತಾರಾನಾಥ ಮಂಡಲದವರು ಅಂಜಿ ನಡೆಯುವವರಲ್ಲ, ಎಷ್ಟೋ ಜನರು ಆ ಸ್ಥಿತಿಯನ್ನು ಮೀರಿದ್ದಾರೆ. ಶ್ರೀಯುತ ತಾರಾನಾಥರು—ತಮ್ಮ "ಧರ್ಮನೀತಿ"ಗಳ ವಿಚಾರವನ್ನು ಪ್ರತಿಪಾದಿಸಿದ್ದಾರೆ. ಅದಷ್ಟು ಮಟ್ಟಿಗೆ ತಮ್ಮ ನಡೆಗೆ ಒಪ್ಪುವಂತೆ ಅವರು ಬರೆಯಲಿಚ್ಛಿಸಿರಬೇಕು. ಅವರ ದೃಷ್ಟಿಪಥವು ಉದಾರವಾದದು ಆನೆಗಳೂ ಅಲೆಯ ಬಹುದಾದಷ್ಟು ಹೆಬ್ಬಾಗಿಲು ಅವರದು. ಹಿಂದೆ ಅವರು ಬೆಂಗಳೂರಿನಲ್ಲೇ ಬೇರೂರಿದಾಗ—ಅವರ ನಡೆನುಡಿಯ ರಾಜ್ಯಗಳೊಳಗೆ ಆನೆಗಳೇಕೆ—ಐರಾವತಗಳಿಗೂ ಸಂಚಾರದ ಅವಕಾಶವಿತ್ತು. ಈಗಿಲ್ಲವೆಂದಲ್ಲ. ಒಂದು ವಿಚಾರದಲ್ಲಿ ಮಾತ್ರ ಕೊರತೆ ಬಂದಿದೆ ಅವರು ವಿವಾಹವಾಗುವ ತನಕ ಎಲ್ಲರೂ ಅವರನ್ನು ತಾಜಾ ಯೋಗಿಗಳೆಂದೇ ತಿಳಿದಿದ್ದರು ಅದಕ್ಕೆನೆ ಮಾಸ್ತರರೆಂದರು. ಅವರ ಕೃಪಾ ಚತ್ರದಲ್ಲಿ ಹಲವು ಸ್ತ್ರೀಪುರುಷರು ಆಶ್ರಯವನ್ನು ಗಳಿಸುತ್ತಿದ್ದರು ಆದರೆ ಈಗೇಕೋ ತಿಳಿಯದು—ಮದುವೆಯಾದ ಮಹಾ ತಪ್ಪಿಗಾಗಿಯೋ ಏನು—ಅವರನ್ನು ಯೋಗಿಗಳಾಗಿ ತಿಳಿಯುವವರು ಕಡಿಮೆ

ನಾನು ಅವರ ಪರಿಚಯವನ್ನು ಮಾಡಿಕೊಂಡ ಪ್ರಸಂಗಗಳೂ ಬಲು ವಿಚಿತ್ರವಾದುವು ಒಮ್ಮೆ ನಾನು ಬಳ್ಳಾರಿಯಲ್ಲಿ ಸಂಚಾರ ಮಾಡುತ್ತಿದ್ದೆ—೭ ವರುಷಗಳ ಹಿಂದೆ ಆಗ ಅವರ ಹೆಸರಿನ ಪರಿಚಯವು ಅಲ್ಲಿ ಉಂಟಾಯಿತು ಪರಿಚಯದ ಪ್ರಸಂಗವೇನು ರಸವತ್ತಾಗಿದ್ದಿಲ್ಲವಾದರೂ ಅವರು "ದೊಡ್ಡ ಮನುಷ್ಯ"ರೆಂದು ಯಾರೋ ಹೇಳಿದ್ದರು ನಂಬಿ ಅವರದೊಂದು ಉಪನ್ಯಾಸ ಕೇಳ ಹೋದೆ. ಆಗ ಅವರು ಯೋಗಿಗಳಂತೆ, ಪತಿತರಾಗಿ ನರಳುತ್ತಿರುವ ಜನರನ್ನು ಉದ್ಧರಿಸುವ ಸಲುವಾಗಿ ಎತ್ತರವಾದ ವೇದಿಕೆಯ ಮೇಲೆ, ಎತ್ತರವಾದ ಮೇಜನ್ನಿರಿಸಿ ಕುಳಿತುಕೊಂಡು ತಮ್ಮ ಉಪದೇಶಾಮೃತವನ್ನು ಜನರಿಗೆ ಪಾನ ಮಾಡಿಸುತ್ತಿದ್ದರು. ಅಷ್ಟು ಮೇಲೆ ನನ್ನ ಕತ್ತನ್ನೆತ್ತಲಾರದೆ ಮರಳಿ ಮನೆಗೆ ಬಂದೆನು. ಇದಾದ ಕೆಲವು ಸಮಯದ ಬಳಿಕ—ಒಂದು ಕಾರ್ಯದ ಸಲುವಾಗಿ, ಅವರ ಮಿತ್ರರಿಂದ ಪರಿಚಯ ಪತ್ರವೊಂದನ್ನು ಪಡೆದು ಭೇಟಿಗೆಂದು ಹೊರಟಿದ್ದೆ. 'ಯೋಗಿ' ದರ್ಶನವು ಸಾಧ್ಯವೇ ಎಂಬ ಅಂಜಿಕೆ! ಆದರೆ ಪರಿಚಯ ಪತ್ರವಿತ್ತೆಂಬ ಧೈರ್ಯ. ಬೆಂಗಳೂರಿನಲ್ಲಿ ಅವರು ತವರು ಮನೆ ಮಾಡಿಕೊಂಡಿದ್ದಾಗಲೇ—ನಾನು ಅವರ ದರ್ಶನಗಾಮಿಯಾಗಿ ಹೋದುದು. ಒಂದೆರಡು ಕಡೆಗಳಲ್ಲಿ ಅವರಿಗಾಗಿ ಹುಡುಕಾಡಿ-ಶಂಕರಪುರದೊಂದು ಮನೆಯಲ್ಲಿ—ಅಲ್ಲಿ ಮಂದಿರದಲ್ಲಿ ಅವರ ದರ್ಶನ ಲಾಭವಾಯಿತು. ಲೀಲಾ ವನಗಳ ನಡುವೆ ಹಾದು, ಯೋಗಿಗಳಿರುವ ಮಂಟಪವನ್ನು ಸೇರಿದೆ. ಬರಲು ಅನುಜ್ಞೆಯಾಯಿತು. ರಂಜಿತ ಕೊಠಡಿಯೊಂದರಲ್ಲಿ, ಮೃದುವಾದ ಪಲ್ಲಂಗದ

ಮೇಲೆ ಕುಳಿತು ದರ್ಶನವಿತ್ತರು. ಸುತ್ತಮುತ್ತ, ಆಸನಗಳಿದ್ದರೂ, ಬಡವನಾದ ಪತಿತನು ತಮ್ಮ ಪಾದ ಸನ್ನಿಧಿಯಲ್ಲಿ ನೆಲದ ಮೇಲೆ ಕುಳ್ಳಿರಲು ಕೈ ಸನ್ನೆಯಾಯಿತು. ಒಂದೆರಡು ಉಪದೇಶದ ಮಾತುಗಳಾದ ಮೇಲೆ, ನಾನು ಅಲ್ಲಿಂದೆದ್ದು ಹೊರಟೆ. ಇನ್ನು ಮುಂದೆ ಯೋಗಿವರರ ದರ್ಶನಕ್ಕೆ ಬರುವುದಾದರೆ—ಹಣ್ಣುಕಾಯಿ ವಿನಹ ಬರಬಾರದೆಂದು ಯೋಚಿಸಿದೆ.

ಎಷ್ಟೋ ಸಮಯ ಆ ಮೇಲೆ ಸರಿಯಿತು. ಅಲ್ಲಲ್ಲಿ ದೂರದಿಂದ ಕೆಲವು ಬಾರಿ ಪಂಡಿತರ, ಕೆಲವು ಬಾರಿ ಯೋಗಿಗಳ ಭೇಟಿಯಾಯಿತು. ಬರೇ ಒಂದು ವರುಷದ ಹಿಂದೆ—ಮೂರನೆ ಬಾರಿಗೆ ಅವರ ಪಾದ ಸನ್ನಿಧಿಯನ್ನು ಸೇರುವ ಅವಕಾಶ ಮಾಡಿಕೊಂಡೆ. ಅವರ ಮನೆಗೆ ಬಂದ ಒಬ್ಬ ಹಾಡುಗಾರರನ್ನು ಕೇಳುವ ಸಲುವಾಗಿ ಹೋಗಿದ್ದೆ. ಈ ಬಾರಿ ಪ್ರವೇಶಕ್ಕೆ, ತೊಡಕಿದ್ದಿಲ್ಲ. ನನ್ನನ್ನು ಒಯ್ಯುವವರು ಅವರ ಸನ್ಮಿತ್ರರು. ನಾನು ತಾರಾನಾಥರ ಅತಿಥಿಯಾಗಿ ಯೋಗಿಗಳಲ್ಲ—'ಸೋಫಾ'ದ ಮೇಲೆ ಕುಳಿತಿರುವಷ್ಟು ಭಾಗ್ಯಶಾಲಿಯಾದೆ. ಪ್ರಾಯಶಃ ನನ್ನ ಯೋಗ್ಯತೆಗಿಂತ, ನಾನು ಹೋದ ಸಮಯ ಅಮೃತ ಘಳಿಗೆಯಾಗಿದ್ದಿರಬೇಕು, ಕಾರಣ—ಅವರಿಗೆ ಪುತ್ರೋತ್ಸವವಾದ ಸಮಯವದು.

ಇಷ್ಟೇ ನನ್ನ ಅವರ ಪರಿಚಯ. ಅವರ ನೆನವು ನನಗೆ ಚೆನ್ನಾಗಿ ಇದೆ ಆದರೆ ನನ್ನ ನೆನಪು, ಅವರ ಶಿಷ್ಯ ಸಾಗರದೆಡೆಯಲ್ಲಿ ತೇಲಿ ಹೋಗಿರಬಹುದು. ಈ ಲೇಖನವೆಂದರೆ ಚುಟುಕುತನ, ದೂರದ ಪರಿಚಯದ ಮಾತುಗಳು. ತಾರಾನಾಥರಂಥ ಸಮರ್ಥ ಪುರುಷರ ವಿಷಯದಲ್ಲಿ ಅದು ಬರೇ ಒಂದು ಹನಿ. ಅವರ ಬರಹಗಳಿಂದಾಗಿ ಅವರ ವಿಚಾರವು ಇಂದು ಕನ್ನಡ ನಾಡಿಗೇ ತಿಳಿದು ಬಂದಿದೆ ಧೈರ್ಯವಾಗಿ ಮಾತನಾಡುವ ಸ್ವಭಾವ ಅವರದು. ಆದರೆ ತಮ್ಮ ಜನ್ಮಭೂಮಿಯ ಸಂಬಂಧದಲ್ಲಿ ಧೈರ್ಯ ಮರೆತುದರಿಂದಲೋ, ಇಲ್ಲವೆ ಅದು ಕ್ಷುದ್ರ ಪ್ರದೇಶವೆಂಬುದರಿಂದಲೋ—ಮೌನವಾಗಿಯೇ ಇರುವರು. ಮುನಿಗಳೂ, ಪಂಡಿತರೂ ಆದುದರಿಂದ ಹೀಗೆ ತೊಡಕು ಬಂದಿರಬಹುದು.

ಶ್ರೀ. ತಾರಾನಾಥರ ಪರಿಚಯವು, ಪ್ರೇಮವು ದೊರೆಯಲು ನನ್ನಂಥವನಿಗಾಗದೆ ಹೋದರೂ, ಬನ್ನೆಲುಬು ಸಾಕಷ್ಟು ಬಗ್ಗ ಬಲ್ಲ ವ್ಯಕ್ತಿಗೆ ಅದು ಆಗುವುದು ಕಷ್ಟವಲ್ಲ. ಅವರ ಆಶ್ರಯ ಕ್ಷೇತ್ರದಲ್ಲಿ ಕಾಲಿರಿಸಿದವನು ಭಾಗ್ಯಶಾಲಿಯೆಂಬುದು ನಿಶ್ಚಯ. ಅಂಥ ಭಾಗ್ಯ ಮಂಗಳೂರವರಿಗೆ ಮಾತ್ರ ದೊರೆಯದೇಕೋ ತಿಳಿಯೆ.

ವರ್ತಮಾನ ಪತ್ರಿಕೆಗಳನ್ನೇಕೆ ಓದಬೇಕು?

೨.

ಕರ್ಣಾಟಕ ಏಕೀಕರಣವು ಸಾಧ್ಯವಾಗಬೇಕೊ?—ಕನ್ನಡ ಭಾಷೆಯು ಬೆಳೆಯಬೇಕು!—ಕನ್ನಡ ಭಾಷೆಯು ಬೆಳೆಯಬೇಕೋ ಕನ್ನಡಿಗರಿಗೆ ಕನ್ನಡ ಭಾಷೆಯೆಂದರೇನೆಂದು ತಿಳಿಯಬೇಕು. ಅವರಿಗೆ ಈ ಭಾಷೆಯು ತಿಳಿಯಬೇಕಾದರೆ ಪಾಮರರಿಗೆ ಯೋಗ್ಯವಾದ ಕನ್ನಡ ಸಾಹಿತ್ಯಗಳು ಹೊರಬರಬೇಕು. ಅಂತಹ ಸುಲಭ ಸಾಹಿತ್ಯದಿಂದಾಗಿ ಜನರಿಗೆ ಭಾಷೆಯ ಮಾಧುರ್ಯದ ರುಚಿಯುಂಟಾಗಬೇಕು. ಆ ರುಚಿಯೇ ಎಲ್ಲಾ ಏಳ್ಗೆಗೂ ಕಾರಣವಾಗಬೇಕು.

ಒಮ್ಮೆ ನಾವು ನಮ್ಮ ಮಾಸಿಕ ಪತ್ರಿಕೆಯ ಪ್ರಚಾರಕ್ಕಾಗಿ ದಕ್ಷಿಣ ಕನ್ನಡದಲ್ಲಿ ಹೊರಟಿದ್ದೆವು—"ಏನು ನಿಮ್ಮ ಪತ್ರಿಕೆಯಲ್ಲಿ ಗೋವಿಂದ ಪೈಗಳ ಪಂಪ ಭಾರತ, ರನ್ನನ ಕಾಲವಿಚಾರಗಳು ಫುಟ್‌ನೋಟ್ಸ್ ಟೀಕೆಟಿಪ್ಪಣಿಗಳಿಂದೊಡಗೂಡಿ ಬರುತ್ತವೋ!" ಎಂದು ಪ್ರಥಮ ಭೇಟಿಯಾದ ಸುಪ್ರಸಿದ್ಧ ವಕೀಲರೊಬ್ಬರ ಪತ್ನಿಯವರು ಹಾಸ್ಯ ಪ್ರದರ್ಶನ ಮಾಡುತ್ತ ಸಹಜ ಭಯವನ್ನು ಸೂಚಿಸಿದರು. ಶ್ರೀ. ಗೋವಿಂದ ಪೈಗಳಂತಹವರ ಲೇಖನದ ಅಪ್ರಾಶಸ್ತ್ಯವನ್ನವರು ಈ ಮಾತಿನಲ್ಲಿ ಅಡಕಗೊಳಿಸುದುದಲ್ಲ-ತಮ್ಮಂತಹ ಪಾಮರ ಸ್ತ್ರೀಯರಿಗೆ ಅದು ರುಚಿಸುವುದಿಲ್ಲವೆಂದೇ ಅವರ ಭಾವನೆ. ಇದೇ ರೀತಿ ಒಬ್ಬೊಬ್ಬರು ಒಂದೊಂದು ಸೂಚನೆಯನ್ನು ಮುಂದಿಟ್ಟರು. "ಹಾಸ್ಯವೇನಾದರೂ ಇದೆಯೋ—ಬರಲಿ ಆ ಪತ್ರಿಕೆ" ಎಂದು ಒಬ್ಬರು. "ಕಥೆಗಳಿವೆಯೋ ಆ ಪತ್ರಿಕೆ ನನಗೆ ಬೇಕು" ಎಂದು ಇನ್ನೊಬ್ಬರು, "ಲೋಕ ಸಮಾಚಾರಗಳಿದ್ದರೆ ಅಂತಹ ಪತ್ರಿಕೆಯಲ್ಲಿ ನನಗೆ ರುಚಿ ಹೆಚ್ಚು" ಎಂದು ಮಗದೊಬ್ಬರು. ಅಂತೂ, ತನಗೆ ಅರ್ಥವಾಗದ, ತುದಿ ಮೊದಲು ತಿಳಿಯದ 'ಸಾಹಿತ್ಯ'ಗಳು ತಮಗೆ ಬೇಡವೆಂದೇ ಹೆಚ್ಚಿನವರ ಅಭಿಪ್ರಾಯ.

ಇದಕ್ಕಾಗಿ ಏನು ಮಾಡಬೇಕು? ತಮ್ಮ ಪತ್ರಿಕೆಯು ಬಹುಮತದವರ ರುಚಿಗೆ ಪಾತ್ರವಾಗಬೇಕಾದರೆ ಪತ್ರಿಕಾ ಸಂಪಾದಕರು ಏನು ಮಾಡಬೇಕು? ಭಿನ್ನರುಚಿಯರಿತು ತಮ್ಮ ಪತ್ರಿಕೆಗಳಲ್ಲಿ ಲೇಖನಗಳನ್ನು ಸೇರಿಸಬೇಕು. ಪತ್ರಿಕೆಯಲ್ಲಿ ೫೦ ಪುಟಗಳಿದ್ದರೆ, ಅವುಗಳಲ್ಲಿ ೨ ಪುಟಗಳಾದರೂ ಒಬ್ಬನ ಮೆಚ್ಚುಗೆಗೆ ಪಾತ್ರವಾಗಿರಬೇಕು. ಕಾಲಕ್ಕೆ ತಕ್ಕ ಲೇಖನಗಳನ್ನು ಪತ್ರಿಕೆಗಳಲ್ಲಿ ಸೇರಿಸುವುದರಲ್ಲಿ ಹಿಂಜರಿಯಬಾರದು. ವಾರಪತ್ರಿಕೆ ಪಕ್ಷಪತ್ರಿಕೆಗಳಾದರೆ, ಕಡಿಮೆಯೆಂದರೆ, ತಮ್ಮ ಜಿಲ್ಲೆಯೊಳಗಿನ ವಾರ್ತಾವಳಿಗಳನ್ನು ಕಷ್ಟಪಟ್ಟು ಪ್ರಕಟಿಸಬೇಕು. ಮಾಸ ಪತ್ರಿಕೆಗಳಾದರೆ, ತಮ್ಮ ಜಿಲ್ಲೆಯ ಆಚಾರವಿಚಾರ ಸುತ್ತಮುತ್ತಲಿನ ಸಮಾಜ, ಸರಕಾರಗಳ ವಾತಾವರಣಗಳಿಗೆ ಸಂಬಂಧಿಸಿದ ಕಥೆ ವಾರ್ತೆಗಳನ್ನು ಕೊಡಬೇಕು. ಚಂದಾದಾರರ ಪ್ರಾಂತ್ಯ, ಅವರಿರುವ ಸ್ಥಿತಿಗತಿಗಳಿಗನುಗುಣವಾಗಿ ಪತ್ರಿಕೆಗಳಲ್ಲಿ ಲೇಖನಗಳಿರಬೇಕು. ಆ ಲೇಖನಗಳನ್ನು ಸಂಬಂಧಪಟ್ಟವರು ಕುತೂಹಲದಿಂದ ಓದುವಂತೆ ಮನಾಕರ್ಷಕವಾದ ಶಿರೋನಾಮಗಳಿಂದಲೋ (ಸಾಧ್ಯವಿದ್ದರೆ-ಚಿತ್ರಪಟಗಳಿಂದಲೋ) ಚಂದಗಾಣಿಸಬೇಕು. ಒಂದೇ ಮಾತಿನಿಂದ ಹೇಳುವುದಾದರೆ—ತಮ್ಮ ರುಚಿಯು ಏನಿದ್ದರೂ, ಚಂದಾದಾರರ ರುಚಿಯ ದೃಷ್ಟಿಯಿಂದ ಲೇಖನಗಳನ್ನು ಪ್ರಕಟಿಸಬೇಕು. ಚಿತ್ರಪಟಗಳನ್ನು ಕನ್ನಡ ಪತ್ರಿಕೆಗಳಲ್ಲಿ ಸೇರಿಸಿದರೆ ಉತ್ತಮವೇ ಆಗುವುದು. ಆದರೆ ನಮ್ಮಿಂದ ಇದು ಫಕ್ಕನೆ ಆಗುವ ಕೆಲಸವಲ್ಲ. ಇಂಗ್ಲಿಷ ದೈನಿಕ, ಸಾಪ್ತಾಹಿಕ, ಮಾಸಿಕ ಪತ್ರಿಕೆಗಳು ಚಿತ್ರಪಟಗಳಿಂದ ಪತ್ರಿಕೆಗಳನ್ನು ಮುಚ್ಚುತ್ತವೆಂದು, ನಾವೂ ಆ ಯತ್ನಕ್ಕೆ ಕೈಹಾಕಿದ್ದಲ್ಲಿ, ಎಂದಿಗೂ ಯಶಸ್ವಿಯಾಗ

ವೆಂದು ಎಲ್ಲರೂ ಬಲ್ಲರು. ಕನ್ನಡ ಪತ್ರಿಕಾ ಸಂಪಾದಕರ ಕರ್ತವ್ಯವು ಇಲ್ಲಿಯೇ ಅಂತ್ಯವಾಗಲಿಲ್ಲ. ಕನ್ನಡದ ದುರವಸ್ಥೆಗೆ ತಾವು ಕಾರಣರಲ್ಲವೆಂದು ತೃಪ್ತಿಪಡಿಸಬೇಕಾದರೆ ಪತ್ರಿಕಾ ಸಂಪಾದಕರು ಇನ್ನೂ ಅನೇಕಾನೇಕ ವಿಷಯಗಳನ್ನು ತಿಳಿದುಕೊಳ್ಳಬೇಕಾಗಿದೆ. ಪತ್ರಿಕಾ ಸಂಪಾದಕರು ತಮ್ಮ ಪತ್ರಿಕೆಗಳ ಮೂಲಕ ತಮ್ಮ ವಿದ್ವತ್ತೆಯನ್ನು ತೋರಿಸಬಾರದು. ಸಂಪಾದಕರು ಪಂಡಿತರಿದ್ದರೂ ಅವರನ್ನೆತ್ತಿ ಹಿಡಿಯುವ ವಾಚಕರು ಪಾಮರರೆ ಆಗಿರುವರು. ಸಂಪಾದಕರ ವಿದ್ವತ್ತೆಯನ್ನರಿಯಲು ಸಮರ್ಥರಿರುವುದಾದರೆ, ವಾಚಕರೆಲ್ಲ ಒಬ್ಬೊಬ್ಬನಿಗೊಂದು ಪತ್ರಿಕೆಯನ್ನು ಹೊರಡಿಸುತಿದ್ದರು! ಲೇಖನಗಳಲ್ಲಿ ಸಂಸ್ಕೃತ ಶಬ್ದಗಳನ್ನು ಆದಷ್ಟು ಕಡಿಮೆ ಮಾಡಬೇಕು. ಭಾಷೆಯು ಚಿಕ್ಕ ಕೂಸಿಗೂ ತಿಳಿಯುವಂತಾಗಬೇಕು. ಪಾಮರರಿಗೆ ತಿಳಿಯದ ವಿದೇಶ ವಿಚಾರಗಳನ್ನೆತ್ತಿ ಮೇರೆ ಮೀರಿ ಲೇಖನಗಳನ್ನು ಪ್ರಕಟಿಸಬಾರದು. ಉದ್ದುದ್ದ ಲೇಖನಗಳನ್ನು ಪ್ರಕಟಿಸಲೇ ಬಾರದು. ಜಾಹೀರಾತುಗಳಿಂದ ಪತ್ರಿಕೆಯನ್ನು ಮಿತಿಮೀರಿ ತುಂಬಿಸಿ ಚಂದಾದಾರರಲ್ಲಿ ಜುಗುಪ್ಸೆಯನ್ನು ಹುಟ್ಟಿಸಬಾರದು. ಈಗಿನ ದಿನಗಳಿಗನುಗುಣವಾಗಿ, ಹೆಚ್ಚಾಗಿ ರಾಜಕೀಯ ವಿಚಾರಗಳನ್ನೆತ್ತಿ ಕೊಟ್ಟರೆ ಬಹುವಂಶ ಜನರಿಗೆ ಪತ್ರಿಕೆಯು ರುಚಿಗೊಂಡೀತು. ವಾರಪತ್ರಿಕೆಗಳಾದರೆ—ದೊಡ್ಡ ದೊಡ್ಡ ಶಿರೋನಾಮೆಗಳನ್ನು ಕೊಡಲು ಹಿಂಜರಿಯಬಾರದು. ಪ್ರತಿ ಸಂಚಿಕೆಯು ನವೀನತೆ (Variety) ಯಿಂದ ರೂಪಗೊಂಡು ಹೊರಬರಬೇಕು. ಮೊದಲಿನ ವಾರ ಏನು ಬರುವುದೆಂದು ಈ ವಾರ ಸ್ಫೂರ್ತಿಪೂರ್ವಕ ನುಡಿಗಳಿಂದ ಜನರು ನಿಜವಾಗಿಯೂ ಅದನ್ನೋದಲು ಕುತೂಹಲಿಗಳಾಗಿರುವಂತೆ ಮಾಡಬೇಕು. ವಿಶೇಷ ವಾರ್ತೆಗಳಿದ್ದರೆ ಅವುಗಳನ್ನು ಅಲ್ಲಗಳೆಯದೆ ಪತ್ರಿಕೆಯಲ್ಲಿ ಹೇಗಾದರೂ ಆಕರ್ಷಿತವಾಗುವಂತೆ ಸೇರಿಸಬೇಕು. ಜಾಹೀರಾತುಗಳು ಹೆಚ್ಚಿದಂತೆ ಪುಟಗಳನ್ನು ಹೆಚ್ಚಿಸಬೇಕು. ಪತ್ರಿಕೆಯು ಪ್ರಕಟವಾಗುವುದೆಂದರೆ ಒಂದು ವಿಶೇಷ ಸಂಭ್ರಮವೆಂದೇ ಜನರು ತಿಳಿದುಕೊಳ್ಳುವಂತಾಗಬೇಕು. ಸ್ಪರ್ಧೆಗಳನ್ನೋ ಒಗಟುಗಳನ್ನೋ ಪದೇ ಪದೇ ಪ್ರಕಟಿಸಿ ಆದಷ್ಟು ವಾಚಕರ ಹೆಸರುಗಳು ಪತ್ರಿಕೆಯಲ್ಲಿ ಆಗಾಗ್ಗೆ ಪ್ರಕಟವಾಗುವಂತೆ ಯೋಜಿಸಬೇಕು. ಪತ್ರಿಕೆಯ ಆರ್ಥಿಕಸ್ಥಿತಿಯನ್ನು ಬಯಲುಗೊಳಿಸಿ ವಾಚಕರಲ್ಲಿ ಪತ್ರಿಕೆಯ ಮೇಲಿನ ವಿಶ್ವಾಸವು ತಪ್ಪುವಂತೆ ಮಾಡಬಾರದು. ಚಂದಾದಾರರ ಪ್ರೋತ್ಸಾಹವು ಕಡಿಮೆಯಾಗಿದೆ ಎಂಬ ವಿಚಾರವನ್ನು ಬಯಲಿಗೆ ತರಬಾರದು. ಸಂಪಾದಕರು ಎಷ್ಟು ಧೈರ್ಯವಂತರೋ, ಪತ್ರಿಕೆಯ ಚಂದಾದಾರರ ಸಂಖ್ಯೆಯೂ ಅಷ್ಟೇ ಏರುತ್ತದೆಂಬುದನ್ನೂ, ಸಂಪಾದಕರು ನಿರಾಶಾವಾದಿಗಳಾದರೆ ಚಂದಾದಾರರೂ ಹಾಗೆಯೇ ಆಗುವರೆಂಬುದನ್ನೂ ಮರೆಯಲೇ ಬಾರದು. ಒಬ್ಬನು ಒಳ್ಳೇ ಸ್ಥಿತಿಯಲ್ಲಿದ್ದರೆ ಜನರು ಅವನನ್ನು ಗೌರವಿಸುವುದೂ ಕೆಟ್ಟ ಸ್ಥಿತಿಯಲ್ಲಿದ್ದರೆ ಅವರು ಅವನನ್ನು ಕಂಡು ಕನಿಕರಗೊಂಡು ಅವನಿಂದ ದೂರವಾಗುವುದೂ ಸ್ವಾಭಾವಿಕವಿರುತ್ತದೆ. ಆದುದರಿಂದ ಈ ವಿಷಯವಾಗಿ ಪತ್ರಿಕೆಯ ಸಂಪಾದಕರು ಎಚ್ಚರವಿರಬೇಕಾಗಿದೆ.

ಸುಸ್ವಾಗತಮ್.

ರಾಷ್ಟ್ರ ಹಿತಚಿಂತಕಗೆ; ರಾಷ್ಟ್ರಯೋದ್ಧಾರನಿಗೆ;
ರಾಷ್ಟ್ರನುತ ಸಂತನಿಗೆ; ರಾಷ್ಟ್ರದುದ್ಧಾರನಿಗೆ;
ರಾಷ್ಟ್ರದ ಮಹಾಂತನಿಗೆ; ರಾಷ್ಟ್ರವನೆ ಗೆದ್ದವಗೆ;
ಸುಸ್ವಾಗತಮ್. ಸುಸ್ವಾಗತಮ್.

ನವಯುಗದನವ್ಯತೆಯ ಸಾರಲು **ರಾಷ್ಟ್ರಬಂಧುವು** ಬರುವನು;
ಅವನ ಕಾಂಬಿರಿ ನೀವು **ಬಡವರ ಬಂಧು**ವಿಂದ್ಯೈತರವನು;
ತನ್ನ ದೇಶದ ವಸ್ತುಗಳ ಸಂಪನ್ನತೆಯನು **ಪ್ರಚಾರಿಸಿ;**
ಉನ್ನತಿಯ **ದೇಶಾಭಿಮಾನಿ**ಯು ಬರುವನದನು ವಿಚಾರಿಸಿ.
ಜನರು ಜಗ **ಕಂಠೀರವ**ಗೆ ಅರ್ಪಿಸುವುದೇ ತನುಮನ ಧನ,
ಅನಿಶವಾತನು ನೆನೆಸುತಿರಲ್ಕೆ ತುಳುವ ನಾಡಿನ ಗೆಳೆತನ.
ಬಡವರುದ್ಧಾರಕನು ದೀನರ ಪೊರೆವ ಭಾರದೊಳಿರುವನು,
ಪೊಡವಿಯೊಡೆಯನು ಉಡುಪಿ ಕೃಷ್ಣನು ಕೊಡುವನ್ಯೆ ಸ್ವಾಗತವನು.
ಮಂಗಳೂರಿನ ಮಂಗಳಾಂಬೆಯು ಮಂಗಳವನವಗೀಯಲಿ!
ಮಂಗಳಾಂಗನು ಮಂಗಳಾಪುರ ರಂಗದಲಿ ಕಂಗೊಳಿಸಲಿ!

ಪಥಿಕ—ಯುವಕ.

ಕತ್ತನೆತ್ತಿ ನಡೆಯುತಿರಲು,
ಸುತ್ತುಮುತ್ತು ನೋಡದಿರಲು;
ಎಡವಿ ಬಿದ್ದರೇನದೊಮ್ಮೆ?
ಅಡಗದಂದು ನಡೆವ ಹೆಮ್ಮೆ.
ಪಥಿಕ! ದಾರಿ ಬಿಡದೆಯೆ,
ಮೊದಲ ಬಾರಿ ಕೆಡದೆಯೇ?

(ಅಪ್ಪುದೆಂದು ತಪ್ಪದು,
ತಪ್ಪದಂದು ಒಪ್ಪದು).

* * *

ಬಾಳ ಬೆಳಕು ಬೆಳಗಲೆಂದು;
ಮನದಿ ಹುಚ್ಚು ಹೆಚ್ಚಿದಂದು,
ಊದ ಹೋಗಿ—ಮುಖಕೆ ಸಿಡಿದ
ಬೆಂಕಿ ಕಿಡಿಗೆ ಬೆಂಕೆವಡೆದ
ಯುವಕ! ನಿನ್ನ ಸಾಹಸವನು,
ನೆನೆವ ದಿನವ ಮೋಹಿಸುವೆನು.

(ಜನತೆಗಿಂತು ಹುಚ್ಚಿದೆ
ಅದರೊಳೆನೆಗೆ ನಚ್ಚಿದೆ)

ದುರ್ಗಾದಾಸ.

ಚಕ್ರದೊಳಗೆ—ಇದೆ.

ಜಗದ ಶಕ್ತಿ ಹರಿಯುತಿದೆ,
ಹಗೆಯ ಯುಕ್ತಿ ಮುರಿಯುತಿದೆ,
ನಗೆಯ ಕಡಲು ಸರಿಯುತಿದೆ
    ನಿರಾಕಾರನೋ,—
        ದೇವ,
    ನಿತ್ಯರಂಜನೋ.

ಸತ್ಯಚಂದ್ರ ಮೂಡುತಿದೆ,
ಮಿಥ್ಯ ರಾಹು ಬಾಡುತಿದೆ,
ಪೃಥ್ವಿ ತಾನು ಹಾಡುತಿದೆ,
    ಸತ್ಯಸಂಧನೋ,—
        ದೇವ
    ಮಹಾನಂದನೋ.

ಮೋಡವೆದ್ದು ಹಾರುತಿದೆ,
ಜಾಡ್ಯವೆದ್ದು ಜಾರುತಿದೆ,
ಕಾಡು ನಾಡು ಆಗುತಿದೆ,
    ಸೃಷ್ಟಿ ಕರ್ತನೋ—
        ದೇವ
    ದೃಷ್ಟಿ ದೂರನೋ.

ಚಕ್ರವದುವು ತಿರುಗುತಿದೆ,
ಉಗ್ರವಾಗಿ ಬೆಳಗುತಿದೆ,
ವಕ್ರವಾಗಿ ನೋಡುತಿದೆ,
    ಸಾರಭರಿತನೋ—
        ದೇವ
    ಸುಗುಣಚರಿತನೋ.

ಅಲ್ಲಿ ಇಲ್ಲಿ ಕಾಣುತಿದೆ,
ಸುಳ್ಳನೆಲ್ಲ ಕಡಿಯುತಿದೆ,
ಮುಳ್ಳು ಬೇಲಿ ಮುರಿಯುತಿದೆ,
    ಸೂತ್ರಧಾರಿಯೋ—
        ದೇವ
    ಚಕ್ರಧಾರಿಯೋ.

ಶಕ್ತಿ ತಾನು ಕರಗುತಿದೆ,
ಯುಕ್ತಿ ತಾನು ಮಿರುಗುತಿದೆ,
ಭಕ್ತಿ ತಾನು ಮರುಗುತಿದೆ,
    ನೋಡಲಾರನೋ—
        ದೇವ
    ಆಡಲಾರನೋ.

ಧರ್ಮದೈವ ಬಿದ್ದು ಇದೆ,
ಕರ್ಮದೈವ ಎದ್ದು ಇದೆ,
ಹೆಮ್ಮೆದೈವ ಏರುತಿದೆ,
    ಎಲ್ಲಿ ಇರುವನೋ—
        ದೇವ
    ಬಲ್ಲನಾವನೋ!

ಸಿರಿಯು ಬಿಡದೆ ಓಡುತಿದೆ,
ಕುರಿಯು ಹಿಂಡು ಕಾಡುತಿದೆ,
ಬರಿಯ ಮಾತು ಬಳಲುತಿದೆ,
    ದೇವ ಕಾಣನೋ—
        ಅವನು
    ದೃಷ್ಟಿ ಬೀರನೋ.

ಬಡತನವದು ನಗುತಲಿದೆ,
ಜಡತನವದು ಬಿಗಿಯುತಿದೆ,
ಕಡಲು ಸ್ವಾರ್ಥ ನೆಗೆಯುತಿದೆ,
    ಎಂದು ಬರುವನೋ—
        ದೇವ
    ಹೇಗೆ ಮಾಳ್ಪನೋ.

'ನಾನು' ತಾನು ಬಾಳುತಿದೆ,
'ನೀನು' ತಾನು ಕೇಳುತಿದೆ,
'ನಾನು' 'ನೀನು' ಸೀಳುತಿದೆ,
    ದೃಷ್ಟಿರಹಿತನೋ—
        ದೇವ
    ಸೃಷ್ಟಿ ಕರ್ತನೋ.

ಕಣ್ಣಿನೊಳಗೆ ಚಕ್ರವಿದೆ,
ಹೊನ್ನಿನೊಳಗೆ ಚಕ್ರವಿದೆ,
ಕಣ್ಣು ಹೊನ್ನು ಮುಕ್ಕುತಿದೆ

ದೇವನಿರುವನು
ಇದ್ದು
ಎಲ್ಲ ಕಾಂಬನು,

ಡಂಭ ತಾನು ಮೆರೆಯುತಿದೆ
ಕಂಭ ಕೂಡ ಮರುಗುತಿದೆ
ಜಂಭ ಕೂಡಿ ಕರಗುತಿದೆ
ಏಕೆ ತಿಳಿಯನೋ
ದೇವ
ನೇಕೆ ನಲಿಯನೋ!

ಅಡಿಯು ತಲೆಗೆ ಏರುತಿದೆ
ಸುಡುವ ಹೊಟ್ಟೆ ಕಾರುತಿದೆ
ಬಿಡದೆ ಶಕ್ತಿ ಹೀರುತಿದೆ
ಬಾರೊ ದೇವನೆ
ಬಂದು
ತೋರೊ ಕಾವನೆ!

ಮ. ಜಾ.

ಸ್ವೀಕಾರ.

(Picturesque South Kanara) ಚಿತ್ರಮಯ ದಕ್ಷಿಣ ಕನ್ನಡ—ರಚಯಿತರು ಶ್ರೀ ಕೆ. ಎಸ್. ಕಾರಂತರು. ಇದು ೯೬ ಭಾವಚಿತ್ರಗಳನ್ನೊಳಗೊಂಡ ಚಿತ್ರ ಪುಸ್ತಕ. ದಕ್ಷಿಣ ಕನ್ನಡದ ಸೊಬಗಿನ ಕುರುಹುಗಳನ್ನೆಲ್ಲ ಆಯ್ದು ಭಾವಚಿತ್ರ ತೆಗೆದು ಇದನ್ನು ಮನೋರಂಜಕವಾಗಿಸಿದ್ದಾರೆ. ಚಿತ್ರಗಳ ಸೌಂದರ್ಯವು ನಿಜವಾಗಿಯೂ ಅತಿಶಯವಾಗಿದೆ. ಅತ್ಯಂತ ಶ್ಲಾಘನೀಯವಿದೆ. ಕಲಾಸಂಪನ್ನರಾದ ಶ್ರೀ ಕಾರಂತರು ಈ ಮೂಲಕ ದಕ್ಷಿಣ ಕನ್ನಡದ ಮಹತ್ಸೇವೆಯನ್ನು ಮಾಡಿದಂತಿದೆ. ಪ್ರಕಾಶಕರು:—ಬಾಸೆಲ್ ಮಿಶ್ಯನ್ ಬುಕ್ ಎಂಡ್ ಟ್ರೆಕ್ಟ್ ಡಿಪೊಜಿಟರಿ ಮಂಗಳೂರು.

ತ್ರಿಪುರದಹನ—ಪ್ರಕಾಶಕರು ಮನೋಹರ ಗ್ರಂಥಪ್ರಕಾಶನ ಸಮಿತಿ ಧಾರವಾಡ. ಲೇಖಕರು—ಮು. ಅ. ದೊರೆಸ್ವಾಮಿ ಅಯ್ಯಂಗಾರ್ಯರು ಎಂ. ಎ. ಬಿ. ಎಲ್. ಮೈಸೂರು. ಬೆಲೆ ೧೨ ಆಣೆಗಳು. ಇದು ಈ ಗ್ರಂಥಮಾಲೆಯ ತೃತೀಯ ಕುಸುಮ. ಸಂಪಾದಕರೆನ್ನುವಂತೆ ಇದು ಕನ್ನಡ ಸಾಹಿತ್ಯದಲ್ಲಿ ತೀರ ಹೊಸ ಮಾದರಿಯ ಗ್ರಂಥವು. ಈ ಗ್ರಂಥವು ನಾಟಕವಲ್ಲ! ಕಥೆಯಲ್ಲ! ಪ್ರಬಂಧವಲ್ಲ! ಹಳೆಯ ಪುರಾಣ ಕಥೆಯಲ್ಲಿ ಹೊಸ ಅಭಿಪ್ರಾಯಗಳನ್ನು ಸಂವಾದ ರೂಪದಿಂದ ಉದ್ಧರಿಸಬೇಕೆಂಬ ಪ್ರಯತ್ನ. ಶೈಲಿಯು ಉತ್ಕೃಷ್ಟವಿದೆ. ಎಲ್ಲರೂ ಓದುವಂತಹದ್ದೇ.

ಎಸ್. ಯು. ನಾರಾಯಣಾಚಾರ್ಯ ಮತ್ತು ಕಂಪೆನಿ, ಕೌಂಬಾ, ಕಾಶಿ ಇವರು ನಮಗೊಂದು ಕೆಲಂಡರನ್ನು ಕಳುಹಿಸಿರುತ್ತಾರೆ. ಆದರದಿಂದ ಸ್ವೀಕರಿಸಿದ್ದೇವೆ. ಈ ಕಂಪೆನಿಯು ಸಿಲ್ಕು, ಜರಿ ಶೀರೆ ಮೊದಲಾದ ಎಲ್ಲಾ ಬಗೆಯ ಅಮೂಲ್ಯ ಉಡಿಗೆ ತೊಡಿಗೆಗಳನ್ನು ವಿಕ್ರಯಿಸುತ್ತದೆ. ಈ ಕೆಲಂಡರು ಬೇಕೆಂಬಿಚ್ಛಿಸುವವರು ಒಂದೂವರೆ ಆಣೆಯ ಅಂಚೆ ಚೀಟನ್ನು ಅವರಿಗೆ ರವಾನಿಸಬೇಕು.

ಮಾವಿನತೋಪು, ಜಯ ಕರ್ಣಾಟಕ ಗ್ರಂಥ ಮಾಲೆಯ ೧೪ನೆಯ ಪುಷ್ಪ! ಲೇಖಕರು ಶ್ರೀ ಹಣಮಂತ ಪೀತಾಂಬರ ಜೋಶಿ ಬಿ. ಎ. ಬೆಲೆ ೧೦ ಆಣೆಗಳು ಸ್ತ್ರೀಪುರುಷರ ಸಂಬಂಧದಲ್ಲಿಯದೊಂದು ಅತಿ ಸೂಕ್ಷ್ಮ ಸಮಸ್ಯೆಯ ಚಿತ್ರ. ಮಧುರ ಕಥೆ, ಎಲ್ಲರೂ ಓದಲೇಬೇಕಾದುದು.

೧೯೩೪ರ ಪಂಚಾಂಗ—ಉಳಿಯಾರು ಶ್ರೀನಿವಾಸಾಚಾರ್ಯರಿಂದ ವಿಮರ್ಶಿಸಲ್ಪಟ್ಟುದು. ಉಡುಪಿಯ ಶ್ರೀ ಮನ್ಮಧ್ವಸಿದ್ಧಾಂತ ಗ್ರಂಥಾಲಯದಲ್ಲಿ ದೊರೆಯುತ್ತದೆ.

ಕತೆಗಾರ—ಮಾಸಿಕ ಪತ್ರಿಕೆ, ಬೆಂಗಳೂರು. ವಾರ್ಷಿಕ ಚಂದಾ ರೂ ೧—೧೪—೦ ಮಾತ್ರ. ವಾಚನೀಯ ಕಥೆಗಳು ಪ್ರಕಟವಾಗುತ್ತವೆ. ಎಲ್ಲರೂ ಪ್ರೋತ್ಸಾಹಿಸಲಿ!

ಜನಮರ್ಲ್—ಲೇಖಕರು ಶ್ರೀ ಮಾಧವ ತಿಂಗಳಾಯ—ಬೆಲೆ. ೬ ಆಣೆಗಳು. ನವರಸಭರಿತ ತುಳು ನಾಟಕ. ತುಳುವರೆಲ್ಲರೂ ಬಿಡದೆ ಓದಲಿ. ಉಡುಪಿಯ ತುಳುನಾಡ್ ಛಾಪಖಾನೆಯಲ್ಲಿ ದೊರೆಯುತ್ತದೆ.

ಜ್ಞಾನಾಮೃತ—ಲೇಖಕರು ಹರಿದಾಸ ಕುಕ್ಕಜೆ ಐತಪ್ಪಯಾನೆ ರಾಮಯ್ಯ ನ್ಯಾಕ. ಬೆಲೆ ಬರೇ ೧೨ ಆಣೆಗಳು ೩೩೬ ಪುಟಗಳಲ್ಲಿ ಭಾಮಿನೀ ಷಟ್ಪದ ಪದ್ಯಗಳು ತುಂಬಿವೆ ಸಾಹಸಪೂರ್ವಕ ಯತ್ನ. ಶ್ಲಾಘನೀಯ ಶೈಲಿ.

ಬೆಲೆಯ ನಿಶ್ಚಯ.

ಕಾಗಿ ಅಂದಿತು ಕೋಗಿಲೆಗೆ ಕಾದು, ನಿಂದು,
ಉಭಯರ ನಿಜ ಬೆಲೆ ನಿಶ್ಚಯವಾಗಲಂದು
ನಾನು ಹಿರಿದೇಹಿ, ಬಲಶಾಲಿ ನಿನಗಿಂತ
ಲೋಕದೊಳ್ಳು ಮಾನ ನಿನಗೇಕೆ ನನಗಿಂತ?

ಮಿಡುಕಿ ಕೋಗಿಲೆ ಹೇಳಿತು ಕಾಗೆಗೆ: ಅಣ್ಣ,
ಬಲ್ಲವರು ಮಾರರು ಬಲ ಬಣ್ಣಕೆ ಮಾನ!
ಹಿಡಿಯೊಳಗೆ ಪರಿಪೂರ್ಣತೆಗೆ ನೋಡುವರು
ಅಣುರೇಣುವಿನೊಳು ಪಾವನತೆ ಬೇಡುವರು!

—ಕನ್ನಡಕಂದ.
ಪ್ರೇಮಾಯತನ.

ಸಾಹಿತ್ಯ **ಸ್ವದೇಶಾಭಿಮಾನಿ** ಸಂಚಿಕೆ.

ಸಂಪುಟ ೨ ಫೆಬ್ರವರಿ ೨೩—೨—೧೯೩೪. ಸಂಚಿಕೆ ೧೨

— ಅನುಕ್ರಮಣಿಕೆ —

	ಪುಟ
ಶಿಕ್ಷಣದ ಭಾಷೆ	1
ಜನಜೀವನವೂ ನಾಟ್ಯಕಲೆಯೂ	2
ಶ್ರೀ ಡಾ। ನಾ. ಸು. ಹಾರ್ಡಿಕರ	3
ವ.ರೆತ ಬಾಳು	4
ಸೃಷ್ಟಿ ಲೀಲೆ	4
ಧನಿಕ—ಬಡವ	5
ಪ್ರೇಮಾಂಜಲಿ	[illegible]
ಕವಿ	7

ಫೆಬ್ರವರಿ, ತಾರೀಕು ೨೩ನೇ ಶುಕ್ರವಾರ ೧೯೩೪.

ಶಿಕ್ಷಣದ ಭಾಷೆ.

ಮಾತೃಭಾಷೆಯು ಇಂಗ್ಲಿಷಾಗಿಲ್ಲದ ಉಪಾಧ್ಯಾಯರುಗಳು, ~~ಇಂಗ್ಲಿಷ ಮಾತೃಭಾಷೆಯಿಲ್ಲದ ವಿದ್ಯಾರ್ಥಿಗಳಿಗೆ~~ ಇಂಗ್ಲಿಷಿನಲ್ಲಿಯೆ ಯಾವತ್ತು ವಿಷಯಗಳಲ್ಲಿ ಶಿಕ್ಷಣ ಕೊಡುತ್ತಿರುವ ಮಹಾ ಅಪಹಾಸ್ಯವೊಂದು ನಮ್ಮ ದೇಶದಲ್ಲಿ ರೂಢಿಯಾಗಿಯೆ ನಿಂತಿದೆ. ಇದು ನ್ಯಾಯವಾದುದಲ್ಲ, ವಿಹಿತವಾದುದಲ್ಲ ಎಂದು ಉಪಾಧ್ಯಾಯರು ಬಲ್ಲರು, ಆದರೆ ದೇಶ ಭಾಷೆಗಳಲ್ಲಿ ಶಿಕ್ಷಣ ಸಾಗಿಸಿದರಾಗದೆ ಎಂದು ವಿಶೇಷ ತರ್ಕಿಸುವುದೂ ಇಲ್ಲ, ನಿರ್ಧರಿಸುವುದೂ ಇಲ್ಲ. ವಿದ್ಯಾಭ್ಯಾಸವೆಂಬುದೆಲ್ಲ ಇಂಗ್ಲಿಷಿನಲ್ಲೇ ಸಾಗದಿದ್ದರೆ ಅದರ ಹೆಸರೇ ಕೆಡುವುದೆಂದು ನಂಬುವವರೂ ಇರುವರು. ಜನಾಂಗ ರಚನೆಗಾಗಿ ಏರ್ಪಟ್ಟ ಇಲಾಖೆಗಳಲ್ಲಿ ಶಿಕ್ಷಣದ ಇಲಾಖೆಯೂ ಒಂದು; ಶಿಕ್ಷಣವನ್ನು ಜನಾಂಗದ ರೀತಿಯನ್ನು ತ್ಯಜಿಸಿಯೆ ಕೊಡುವುದರಿಂದ ಜನಾಂಗವು ಯಾವ ರೀತಿಯಲ್ಲಿ ರಚನೆ ಹೊಂದುವುದೊ ತಿಳಿಯದು. ಎಲ್ಲ ಶಿಕ್ಷಣ ವಿಷಯಗಳೂ ಜನಾಂಗರಚನೆಗೆ ಸಹಾಯಕವಾಗಬೇಕಿದ್ದಿತು; ಹಾಗೇನೂ ಇಲ್ಲ, ಅದರ ತಿದ್ದುಪಾಟು ಇನ್ನೂ ಉಳಿದಿರುತ್ತಾ, ಜನಾಂಗ ರಚನೆಗೆ ಸಲ್ಲದ ವಿಷಯಗಳನ್ನು ಪುನಃ ಜನಾಂಗದ ಆಯಾ ಮಾತೃಭಾಷೆಯಲ್ಲಿ ಸಹ ಕೊಡಲಾರದಿರುವಾಗ, ಜನಾಂಗವು ತನ್ನ ದೇಶದಲ್ಲೇ ಅನ್ಯ ಜನಾಂಗವಾಗಿ ಮಾರ್ಪಡುವುದು. ಸಾವಿರದಲ್ಲೊಂದು ಅಂಶದಷ್ಟು ಶಿಕ್ಷಣದ ಪ್ರಚಾರವು ಸಾಧ್ಯವಾಗುವುದು. ಶಿಕ್ಷಿತರಿಗೂ ಅಶಿಕ್ಷಿತರಿಗೂ ಭೇದವು ಹೆಚ್ಚುವುದು. ದೇಶದಲ್ಲಿ ಒಕ್ಕಟ್ಟು ಕುಂದುವುದು. ತಿಳುವಳಿಕೆ ಹರಡಲು ಆತಂಕವುಂಟಾಗುವುದು. ನಾಗರಿಕತೆ ಕುಂದುವುದು. ಇಂತಹ ನೂರಾರು ದೋಷಗಳು ಇದೊಂದು ಕಾರಣದಿಂದ ತಲೆದೋರುವುವು ಎಂದು ಚರ್ಚಿಸುವಾಗ ಅಥವಾ ಭಾಷಣ ಮಾಡುವಾಗ ಮಹೋಪಾಧ್ಯಾಯರೇ ಸೂಚಿಸುವರು; ಆದರೂ ಅವರ ಬೋಧನೆಯ ಭಾಷೆ ಅನುದಿನವೂ ಇಂಗ್ಲಿಷೇ.

ಪ್ರಪಂಚದ ಇತರ ಯಾವ ದೇಶದಲ್ಲಾದರೂ ಇಂತಹ ವಿಶೇಷ ಸ್ಥಿತಿಯು ಕಂಡು ಬರುವುದಿಲ್ಲ. ಇದೊಂದು ದೊಡ್ಡ ಕುಂದು ಎಂದು ಇತ್ಯರ್ಥಿಸಿ ಅಥವಾ ಸ್ಪಷ್ಟೀಕರಿಸಿ ಹೇಳಬೇಕಾದರೆ, ನಮ್ಮಲ್ಲಿಯೇ ಮಾತ್ರ ಬಹಳವಾದ ಪ್ರಯಾಸಕ್ಕೆಡೆಯುಂಟು ಹೊರತು, ಇತರ ಯಾವ ದೇಶದಲ್ಲಾದರೂ ಇದು ಸ್ವತಃ ಸಿದ್ಧವಾಗಿರುವ ವಿಷಯ. ದಿನ ದಿನಕ್ಕೆ ಇಂಗ್ಲಿಷು ಭಾಷಾಜ್ಞಾನವು ನಮ್ಮ ಹಿರೇ ವಿದ್ಯಾರ್ಥಿಗಳಲ್ಲಿ ಕಡಿಮೆಯಾಗುತ್ತ ಬರುತ್ತಿರುವುದು ಎಂದು ಮಹಾ ವಿದ್ಯಾಧರರು ದೂರುತ್ತಿರುವರು; ನಮ್ಮ ದೇಶ ಭಾಷೆಗಳು ಸಂಪೂರ್ಣವಾಗಿ ಕುಂದುತ್ತ ಬರುತ್ತಿವೆ, ಬಂದಾಗಿದೆ, ಎಂಬ ವಿಷಯದ ಕಡೆಗೆ ಮಾತ್ರ ಅವರ ದೃಷ್ಟಿಯು ಹರಿದುದಿಲ್ಲ. ಸ್ಕೂಲ್ ಫೈನಲ್ ಅಥವಾ ಮೆಟ್ರಿಕ್ಯುಲೇಶನ್ ತರಗತಿಯ ವಿದ್ಯಾರ್ಥಿಯಲ್ಲಿ ತುಂಬಿಸಿರುವ ವಿಷಯಜ್ಞಾನವು ಕಡಿಮೆಯದಲ್ಲ; ಆ ವಿದ್ಯಾರ್ಥಿಗಳಲ್ಲಿ ಅಂತಹ ವಿಷಯಗಳನ್ನು ಗ್ರಹಿಸಿಕೊಳ್ಳಲು ಬೇಕಾಗುವ ಶಕ್ತಿಯೂ ಕಡಿಮೆಯಾಗಿರುವುದಿಲ್ಲ. ಆದರೆ, ವಿದೇಶೀಯ ಹಾಗೂ ವಿಜಾತೀಯವಾದ ಅದೊಂದು ಭಾಷೆಯಲ್ಲಿ ಅದನ್ನು ತಿಳಿಯಲೂ ಗ್ರಹಿಸಿದುದನ್ನು ತಿಳಿಯ ಹೇಳಲೂ ಮಾತ್ರ ಸುಲಭವಲ್ಲ. ತಿಳಿದುಕೊಳ್ಳಲು ಸುಲಭವಾದೊಂದು ವಿಚಾರವನ್ನು ತಿಳಿಯ ಹೇಳುವ ಭಾಷೆಯು ಮಾತ್ರ ಸುಲಭವಾಗಿ ತಿಳಿಯಲಾರದುದಾದರೆ, ಅವನು ಗ್ರಹಿಸಲೇನು? ವಿವರಿಸಲೇನು? ಸ್ವಾಭಾವಿಕವಾಗಿ ನೆಲದ ಮೇಲೆ ಕಾಲಿನಿಂದ ನಡೆವಾತನಿಗೆ, ತಲೆಯಿಂದಲೇ ಸರಿಗೆಯ ಮೇಲೆ ನಡೆಯಬೇಕೆಂದರೆ ಹೇಗೆಯೋ ಅಷ್ಟೆ ಈ ಅನ್ಯ ಭಾಷೆ ಮೂಲಕವಾಗಿ ಶಿಕ್ಷಣ ಕಾರ್ಯವು ಸಾಗುವುದರ ಪರಿಣಾಮವಾಗಿದೆ.

ಹತ್ತು ವರ್ಷ ಶಾಲಾ ಕೊಠಡಿಗಳಲ್ಲಿ ಶಿಕ್ಷಣ ಮುಗಿಸಿದ ಬಳಿಕ, ತನ್ನವರಿಗೆ ತಾನು ಅರಿತುಕೊಂಡಷ್ಟಾದರೂ ವಿಷಯವನ್ನು ತಿಳಿಯ ಹೇಳಬೇಕಾದರೆ, ಅದೊಂದು ಕಷ್ಟ ಸಾಧ್ಯವಾದ ಕೆಲಸವೆಂದೇ ನಮ್ಮ ವಿದ್ಯಾರ್ಥಿಗಳು ತಿಳಿಯುವರು. ತಿಳಿದ ಇಂಗ್ಲಿಷು, ವ್ಯವಹಾರಕ್ಕೆ ಸಾಕಷ್ಟು ಆಗಿಲ್ಲ; ತಿಳಿಯದ ಮಾತೃ ಭಾಷೆಯು ವ್ಯವಹಾರಕ್ಕೆ ಅಗತ್ಯವಲ್ಲದೆ ಬೇರೆಯಿಲ್ಲ. ಹೀಗಾಗಿ, ವಿದ್ಯಾಭ್ಯಾಸವು ದೇಶಭಾಷೆಯಿಂದ ಅಗಲಿ, ವಿದ್ಯಾರ್ಥಿಯಿಂದ ದೇಶವೂ ದೇಶದಿಂದ ವಿದ್ಯಾರ್ಥಿಯೂ ಅಗಲಿರುವಂತೆ ಪರಿಣಾಮ ಫಲವುಂಟಾಗಿದೆ.

ಸಲ್ಲಕ್ಷಣವುಳ್ಳ ಬಾಲಕರು ವಿದ್ಯಾ ಶಾಲೆಯಲ್ಲಿ ಇಂಗ್ಲಿಷು ಭಾಷೆಯಿಂದ ಪಾಠ ಪ್ರವಚನೆಗಳನ್ನು ಕೇಳಿ ಬಾಡಿದ ಮುಖ ಮಾಡಿ ಮನೆಗೆ ಹಿಂತೆರಳುವ ನಿರಾಶೆಯು ಅವರ ಜೀವನವೇ ವಿದ್ಯಾರ್ಜನೆಯ ಕಾಲವಾಗಿದೆಯಲ್ಲ' ಇಂತಹ ದುಷ್ಟ ಅತ್ಯಾಚಾರವನ್ನು ಒತ್ತಾಯದಿಂದಾದರೂ ಅನುಭವಿಸಬೇಕಾದುದಕ್ಕೆ ಅವರೆಷ್ಟು ಕೊರಗುತ್ತಿರುವರೊ ಅವರೇ ಬಲ್ಲರು. ಇದೂ ಕಾಲದೆಂಬಂತೆ,—ಕಲ್ಲನ್ನು ನುಂಗಿ ಜೀರ್ಣಿಸಲಾರದವರೆಂದು,—ಅವರು ಹೀನತೇಜರೆಂದೂ ಅವರ ಮೇಲೆ ಟೀಕೆಗಳು, ಉಪಾಧ್ಯಾಯರ ಮೇಲೆ ಶರಾ—ಹಲವು ತಲಾಂತರಗಳಿಂದಲೂ 'ದೇಶದ ಯುವಕರ ವಿದ್ಯಾಭ್ಯಾಸವೆಂದು ಈ ರೀತಿ ಅವರು ಕೃತಕೃತ್ಯರಾಗದಂತೆ ಸಾಧಿಸಿಯೂ ವಿದ್ಯಾಧಿಕಾರಿಗಳು ಇನ್ನೂ ಈ ದುಸ್ಥಿತಿಯನ್ನು ಹೋಗಲೊಳಿಸಲು ಕಡ್ಡಾಯವಾದ ವಿಧಿನಿಯಮಗಳನ್ನೇನೂ ಮಾಡಿಲ್ಲವಲ್ಲ ಎಂಬುದೇ ದೇಶ ಹಿತೈಷಿಗಳ ದುಃಖ

ಜನಜೀವನವೂ ನಾಟ್ಯಕಲೆಯೂ.

ಲೇಖಕರು:—ಶ್ರೀ ತಿರುಮಲೆ ಗೋಪಾಲಾಚಾರ್ಯ 'ಶರ್ಮನ್',
ಸಂಪಾದಕ, ವಿನೋದ ಪ್ರಪಂಚ, ಬೆಂಗಳೂರು.

ನಾಟಕ ಕಲೆಯು ಜನಜೀವನದ ಪ್ರತಿಬಿಂಬ, ಹಾಗೂ ಆದರ್ಶದರ್ಶಕ; ಬಹಿರಂಗದಲ್ಲಿ ಉಲ್ಲಾಸಿನಿ; ಅಂತರಂಗದಲ್ಲಿ ಆತ್ಮಜ್ಯೋತಿಯ ಶಕ್ತಿ. ಇವೆರಡರ ಸಮ್ಮಿಳಿತವೇ ಸಮಾಜದೇಳ್ಗೆಯ ನಿಜಸೂತ್ರ. ಇವೆರಡರಲ್ಲಿ ಯಾವುದೊಂದರ ಕಡೆಗಾದರೂ ಸಮಾಜ ದೃಷ್ಟಿಯು ಸಂಕುಚಿತವಾದರೆ, ತತ್ಫಲವಾದ ಪಾಪ ತಾಪಗಳು ತಮ್ಮ ಭಾವ, ರೀತಿ, ನೀತಿಗಳನ್ನು ನಾನಾ ವಿಧವಾಗಿ ಪ್ರತಿಬಿಂಬಿಸಿ, ಜೀವನದ ಆದರ್ಶವನ್ನೇ ಮೂಲೆಗೊತ್ತಿಡುವಂತೆ ಪ್ರೇರೇಪಿಸುವುದಲ್ಲದೆ, ಸಮಾಜದೇಳ್ಗೆಗೂ ಅಡಚಣೆಯನ್ನುಂಟು ಮಾಡುವುದು.

ಇಂತಹ ಅನರ್ಘ್ಯವಾದ ಕಲೆಗೆ ಇಂದಿನ ನಾಟಕ ಸಂಸ್ಥೆಗಳವರು ಯಾವ ಸ್ಥಾನವನ್ನು ಕೊಟ್ಟಿರುವರು? ಯಾವ ಸನ್ಮಾನವನ್ನು ಮಾಡಿರುವರು? ಅಲ್ಲದೆ ಈ ಜೀವನಾದರ್ಶಕವಾದ ಕಲೆಯ ಸುಸಂಸ್ಕೃತಿಯ ಕಡೆಗೆ ಎಷ್ಟರ ಮಟ್ಟಿನ ಲಕ್ಷ್ಯವನ್ನು ಧಾರೆಯೆರೆದಿರುವರು?—ಈ ವಿಷಯಗಳನ್ನು ಪರಿಶೀಲಿಸಿದ್ದಲ್ಲಿ, ಈ ಕಲೆಯ ಕಡೆಗೆ ಇಂದು ನಾಟಕ ಸಂಸ್ಥೆಗಳ ದೃಷ್ಟಿಯು ಯಾವ ಭಾವದಿಂದೊಡಗೂಡಿರುವುದೆಂದು ಸ್ಪಷ್ಟವಾಗುವುದಲ್ಲದೆ, ನಾಟಕ ಸಂಸ್ಥೆಗಳ ಅನೇಕಾನೇಕ ಸ್ವಾಭಾವಿಕ ರಹಸ್ಯಗಳನ್ನೂ ನಿರ್ದಾಕ್ಷಿಣ್ಯವಾಗಿ ಹೊರಗೆಡಹಿ, ಸುಸೂತ್ರವಾಗಿ ಕಲಾಭಿವೃದ್ಧಿಯ ಮಾರ್ಗವನ್ನು ಅನುಸರಿಸಲು ಸಮರ್ಥವಾಗುವುದು.

ನಾಟಕ ಸಂಸ್ಥೆಗಳೆಂದರೆ, ಮ್ಹಾಲೀಕರು ಮತ್ತು ನಟರು—ಇವರು ಮಾತ್ರವೇ ಎಂದು ತಿಳಿಯಬಾರದು. ನಾಟಕಕಾರರೂ ಈ ಪಂಗಡಕ್ಕೆ ಸೇರಲೇ ಬೇಕು. ನಾಟಕಕಾರನ ಮನೋ ಪರಿಸ್ಥಿತಿಯ ಪ್ರತಿಬಿಂಬವೇ ಅವರ ಕೃತಿ; ಈ ಬಿಂಬವನ್ನು ಅವಲಂಬನ ಮಾಡುವವರೇ ನಟರು. ಒಟ್ಟಿನಲ್ಲಿ, ನಟರು ನಾಟಕಕಾರರ ಮನೋವೃತ್ತಿಯ ಬಿಂಬಗಳೆಂದೆನ್ನಬಹುದು.

ನಾಟಕ ಸಂಸ್ಥೆಗಳಲ್ಲಿ (1) ನಾಟಕ ಕಲೆಯನ್ನೇ ಜೀವನೋಪಾಯದ ಸೂತ್ರವನ್ನಾಗಿ ಮಾಡಿಕೊಂಡಿರುವವರು ಮತ್ತು (2) ಕಲಾಭಿವೃದ್ಧಿಯ ದೃಷ್ಟಿಯಿಂದಲೇ ಸಂಸ್ಥೆಗಳನ್ನು ಏರ್ಪಡಿಸಿಕೊಂಡಿರುವವರು ಎಂದು ಎರಡು ವಿಧ. ಅಂತೆಯೇ ನಟರಲ್ಲಿಯೂ, ಹಾಗೂ ನಾಟಕಕಾರರಲ್ಲಿಯೂ ಸಹ ಎಂದು ತಿಳಿಯಬೇಕು ಈ ಸಂಸ್ಥೆಗಳ ದೃಷ್ಟಿಯು ಇಂತಹ ಜೀವನಾದರ್ಶಕ ಕಲೆಯ ಕಡೆಗೆ ಇಂದು ಯಾವ ರೀತಿ ಪ್ರಸರಿಸಿದೆ ಎಂಬುದನ್ನು ನೋಡಿದ್ದಲ್ಲಿ, ವಾಸ್ತವವಾಗಿಯೂ ಬಹುಪಾಗಿ ಜೀವನೋಪಾಯ ದೃಷ್ಟಿಯೊಂದೇ ಅಚಲಿತವಾಗಿರುವುದನ್ನು ಕಾಣಬಹುದು. ಅಂದರೆ, ಇದನ್ನುಳಿದು ಬೇರೆ ಯಾವ ದೃಷ್ಟಿಯೂ ಇಲ್ಲವೆ ಇಲ್ಲವೆಂದು ಹೇಳಿದಂತಲ್ಲ, ಬೇರೆ ಬೇರೆ ದೃಷ್ಟಿಗಳಿದ್ದರೂ, ಅವುಗಳೆಲ್ಲವೂ ತಾತ್ಕಾಲಿಕ ಸಂತೃಪ್ತಿ ದೃಷ್ಟಿ ಮಾತ್ರ. ಮೊದಲನೆಯ ಪಂಗಡಕ್ಕೆ ಸೇರಿದ—ನಾಟಕಕಾರರು, ನಟರು, ಮ್ಹಾಲೀಕರು ಇವರುಗಳಿಂದೊಡಗೂಡಿದ—ಇಂದಿನ ಸಂಸ್ಥೆಗಳು ಕಲಾಭಿವೃದ್ಧಿಯ ಮಾರ್ಗಾನುಸರಣ ಕಾರ್ಯದಲ್ಲಿ ಮುಂದುವರಿಯುತ್ತಿವೆಯೋ, ಇಲ್ಲವೇ ಹಿಂಜರಿಯುತ್ತಿವೆಯೋ ಎಂಬುದನ್ನು ಜನಜೀವನ ದೃಷ್ಟಿಯಿಂದ ನೋಡತಕ್ಕದ್ದಾಗಿರುತ್ತದೆ.

ನಾಟಕಕಾರರು; ನಟರು.

ಸಾಧಾರಣವಾಗಿ ಈ ಪಂಗಡದ ನಾಟಕಕಾರರ ಕೃತಿಗಳು ಜನಸಾಮಾನ್ಯದ ಹೊರ ಮೆಚ್ಚುಗೆಗೆ ಪಾತ್ರವಾದುವುಗಳೆಂದೆನಿಸಿದ್ದರೂ, ಸಮಾಜದ ಮತ್ತು ಕಲಾ ದೃಷ್ಟಿಯಿಂದ ಹೆಚ್ಚಿನ ದೋಷಗಳಿಂದ ಕೂಡಿದ್ದಾಗಿರುತ್ತದೆ. ಇದಕ್ಕೆ ಅವರ ಧ್ಯೇಯವೇ ಎಂದರೆ ಜೀವನೋಪಾಯ ಮಾರ್ಗಾದರಣೆಯೇ ಮುಖ್ಯ ಕಾರಣವಾಗಿರುತ್ತದೆ. ಸಮಾಜದೇಳ್ಗೆಗೆ ತನ್ಮೂಲಕ ಕಲಾಭಿವೃದ್ಧಿಗೆ ಸಾಧಕಗಳಾದ ಮಾರ್ಗಗಳನ್ನು ಬಿಟ್ಟು, ನಿಸ್ಸಾರವಾದ ಜನಮೆಚ್ಚುಗೆಯೊಂದನ್ನೇ ಗುರಿಯಿಟ್ಟುಕೊಂಡು ಬರೆದ ನಾಟಕಗಳು ನೀರ್ಗುಳ್ಳೆಯಂತೆ ಕ್ಷಣಿಕವಾದುವು; ತಾತ್ಕಾಲಿಕ ಮನೋಹರವಾಗಿರುವುವಾದರೂ, ಸಮಾಜದ ನೀತಿಯ ಅಂತಸ್ತನ್ನೇ ಬದಲಾಯಿಸುವುವು. ನೀತಿಯ ಬದಲಾವಣೆಯು ರೀತಿಯ ಬದಲಾವಣೆಯನ್ನೂ ಒಳಗೊಂಡಿರುತ್ತದೆಂದು ಬೇರೆ ಹೇಳಬೇಕಾಗಿಲ್ಲ. ಸಮಾಜೋನ್ನತಿಗೆ ವಿರುದ್ಧವಾದ ಬದಲಾವಣೆಗಳಿಗೊಳಪಟ್ಟ ರೀತಿ ನೀತಿಗಳನ್ನು ಬಿಂಬಿಸುವಂತಿರುವ ಪಾತ್ರಗಳನ್ನು ನಟರು ಅವಲಂಬಿಸಿ, ಪ್ರದರ್ಶಿಸುವುದರಿಂದ, ಇದರ ಘೋರ ಪರಿಣಾಮವು ನಟರ ಮೇಲೂ ಹಾಗೂ, ಅಸಂಖ್ಯಾತ ಪ್ರೇಕ್ಷಕರ ಮೇಲೂ ಕಠಿಣತರವಾಗಿ ತೋರಿಬರುವುದು. ಇಂತಹ ದರ್ಶನ ಮೂಲವಿಲ್ಲದ ಕೃತಿಗಳು ಜಳ್ಳು ಭತ್ತದಂತೆ; ಜೀವನಾಧಾರವಾದ ಅಕ್ಕಿ ಕಾಳನ್ನೊಳಗೊಂಡ ಭತ್ತವಲ್ಲ; ಮೇಲ್ಮುಸುಕಿರುವುದರಿಂದ ಮಾತ್ರ ಭತ್ತವೆಂದೆನ್ನಬೇಕು, ಅಷ್ಟೆ. ಜೀವನಾಧಾರವಾದ ಅಕ್ಕಿ ಕಾಳುಗಳು ಮನುಷ್ಯನ ದೇಹವನ್ನು ಪುಷ್ಟಿ

ಗೊಳಿಸಿ, ಆತ್ಮಜ್ಯೋತಿಯ ಪ್ರಕಾಶಕ್ಕೆ ನೆರವಾಗುವುದು; ಆದರೆ ಜಳ್ಳು ಭತ್ತವು ಅಕ್ಕಸಾಲಿಗನ ಅಗ್ಗಿಷ್ಟಿಕೆಯಲ್ಲಿ ಸುಟ್ಟು ಬೂದಿಯಾಗುವುದು.

ಆದುದರಿಂದ ನಾಟಕಕಾರರು ಪ್ರತಿಭೆಯುಳ್ಳವರೂ, ಅನುಭವವುಳ್ಳವರೂ ಆಗಿರಬೇಕು. ತಾವು ಬರೆಯಲಿರುವ ನಾಟಕದ ಸನ್ನಿವೇಶಗಳು ತತ್ಕಾಲದ ಸಮಾಜ ಸುಧಾರಣೆಗೂ ಮತ್ತು ಕಲಾಧರ್ಮಕ್ಕೂ ಕಿಂಚಿತ್ತಾದರೂ ಲೋಪ ತಾರದಂತಿರಬೇಕು. ಜೀವನಸಾರದ ಸವಿಯನ್ನು ನಿಷ್ಪಕ್ಷವಾದ ಬುದ್ಧಿಯಿಂದ ಧಾರೆಯೆರೆಯುವಂತಿರಬೇಕು. ಸಮಾಜದ ರೀತಿ ನೀತಿಗಳ ಅಂತಸ್ತನ್ನು ಮನಗಂಡು ದೂಷಣ ಭೂಷಣಗಳೆಡೆಗೆ ಮನಗೊಡದಂತೆ, ಸ್ವಾನುಭವದಿಂದಲೂ ವಿಶಾಲ ಹೃದಯದಿಂದಲೂ ದೇಶ ಕಾಲಸ್ಥಿತಿಗಳನ್ನು ತನ್ನ ದೃಷ್ಟಿಯಲ್ಲಿಟ್ಟುಕೊಂಡು ಸನ್ನಿವೇಶಗಳನ್ನು ಕಲ್ಪಿಸಬೇಕು. ಅವುಗಳಲ್ಲಿ ಜನಜೀವನದ ಸುಖದುಃಖಗಳ ಸ್ಥೂಲ ಸೂಕ್ಷ್ಮ ವಿಚಾರಗಳು ಅಡಗಿರಬೇಕು; ನಗೆಯು ನದಿಯೂ ಸ್ವಭಾವಜನ್ಯವಾದ ಪ್ರತಿಭಾ ಪ್ರಕಾಶದಿಂದ ಬೆಳಗುತ್ತಿರಬೇಕು. ಅಂತೆಯೇ ಪಾತ್ರಗಳನ್ನೂ ಇದೇ ರೀತಿಯಿಂದ ಸಮರ್ಥಿಸಬೇಕು. ನಾಟಕಕಾರರ ಭಾವನೆಗಳಿಗೆ ರೂಪನ್ನು ಕೊಡುವವರು ನಟರು, ಜೀವಕಳೆಯನ್ನು ತುಂಬುವವರು ಇವರು; ಸಹಸ್ರಾರು ಮಂದಿ ಪ್ರೇಕ್ಷಕರ ಮನಸ್ಸನ್ನು ಏಕಕಾಲದಲ್ಲಿ ಸೆರೆ ಹಿಡಿಯ ಬಲ್ಲವರಿವರು. ಒಟ್ಟಿನಲ್ಲಿ ನಾಟಕಕಾರರ ಆಶಯಗಳ ಪರಮಾವಧಿಯೂ, ಸಮಾಜ ರೀತಿ ನೀತಿಗಳ ಸೂತ್ರವೂ, ನಟರಲ್ಲಿ ಅಡಗಿದೆಯೆಂದು ಹೇಳಬಹುದು. ಆದಕಾರಣ ಪಾತ್ರ ಸೃಷ್ಟಿಗೂ ಕೂಡ ಸನ್ನಿವೇಶಗಳ ಸೃಷ್ಟಿಗೆ ಸಾಕಷ್ಟೇ ನಿಷ್ಪಕ್ಷಪಾತ ಮಾರ್ಗವನ್ನೂ ಅನುಸರಿಸಲೇ ಬೇಕು. ಇಷ್ಟೇ ಅಲ್ಲ, ಪಾತ್ರ ಸಿದ್ಧತೆಯೂ ಮತ್ತು ಪಾತ್ರಗಳ ಬಾಯಿಂದ ಹೊರ ಹೊರಡಿಸುವ ಭಾಷೆಯೂ ಭಾವಭರಿತವಾದುವುಗಳಾಗಿರಬೇಕು; ರಸಾನುಭವ ಹಾಗೂ ಪ್ರದರ್ಶನಗಳಿಗೆ ನೆರವಾಗುವಂತಿರಬೇಕು. ಇವೆಲ್ಲಕ್ಕಿಂತಲೂ ಹೆಚ್ಚಿನದೆಂದರೆ, ಸಮಾಜದ ಬುದ್ಧಿಯೂ, ಭಾವನಾ ಶಕ್ತಿಯೂ ವೃದ್ಧಿ ಹೊಂದಿ ವಿಕಸಿತವಾಗುವಂತಿರಬೇಕು, ಜನರ ಬುದ್ಧಿ ಪ್ರಗತಿಗಳಿಗೆ ಅನುಸಾರವಾಗಿರಬೇಕು. ಆಗಲೇ ನಾಟಕಕಾರರ ಭಾವನಾ ಸಂಪತ್ತಿಯ ತೇಜಸ್ಸು ಪೂರ್ಣತೆಯನ್ನು ಪಡೆಯುವುದು.

ಮೇಲೆ ಹೇಳಿದಂತೆಯೇ ಸನ್ನಿವೇಶಗಳನ್ನು ಕಲ್ಪಿಸಿ ಪಾತ್ರಗಳನ್ನು ಸೃಷ್ಟಿಸಿದ ಮಾತ್ರಕ್ಕೇ ನಟರು ಇವುಗಳನ್ನು ಅವಲಂಬನ ಮಾಡಲು ಸಮರ್ಥರೇ ಇರುವರೆಂದೂ ಒಮ್ಮೆಯೇ ಹೇಳಲಾಗುವುದಿಲ್ಲ. ನಟರು ನಿಜವಾಗಿಯೂ 'ನಟ'ರಾದರೆ ಮಾತ್ರ ಹೀಗೆ ಹೇಳಲು ಸಾಧ್ಯವಾಗುವುದು. ನಟರ ದೃಷ್ಟಿಯೂ ಸಹ ನಾಟಕಕಾರರ ಆಶಯಗಳ ಕಡೆಗೂ ಮತ್ತು ಪಾತ್ರಾವಲಂಬನದ ಕಡೆಗೂ ಅಚಲಿತವಾಗಿರಬೇಕು. ಅದೇ ದೃಷ್ಟಿಯಿಂದ ಪಾತ್ರ ಸಿದ್ಧತೆಯ ಕಡೆಗೂ ಲಕ್ಷ್ಯವಿಟ್ಟು ಸಮಾಜದ ಭಾವ, ರೀತಿ, ನೀತಿಗಳ ಪ್ರತಿಬಿಂಬಗಳ ಬೆಳಗನ್ನು ಇಮ್ಮಡಿಯಾಗಿ ಬೆಳಗಲೆತ್ನಿಸಬೇಕು. ತಮ್ಮ ಪಾತ್ರ ಸಿದ್ಧತೆಯ ಮತ್ತು ಪಾತ್ರಾವಲಂಬನದ ಪರಿಣಾಮವು ಸಹಸ್ರಾರು ಪ್ರೇಕ್ಷಕ ಮಂಡಲಿಯ ಮನಸ್ಸಿನ ಮೇಲೆ ಏಕ ಕಾಲದಲ್ಲೂ ನಾನಾ ವಿಧವಾಗಿಯೂ ಉಂಟಾಗುವುದೆಂಬುದನ್ನು ಅವರು ಲಕ್ಷ್ಯದಲ್ಲಿಟ್ಟು ತಮ್ಮ ಕಾರ್ಯದಲ್ಲಿ ತೊಡಗಬೇಕು. ಪ್ರೇಕ್ಷಕ ಮಂಡಲಿಯೆಂದರೆ ಎಲ್ಲ ಅಂತಸ್ತಿನ ಜನರೂ ನೆರೆದಿರುವವರು; ಇವರಲ್ಲಿ ಯಾವ ಒಂದು ಅಂತಸ್ತಿನವರ ಮೇಲಾದರೂ ಕೆಟ್ಟ ಪರಿಣಾಮವುಂಟಾದಲ್ಲಿ ಅದರ ದೋಷವು ನಟರಿಗೇ ಸೇರಿರತಕ್ಕುದಾಗಿರುತ್ತದೆಂದು ಅವರು ತಿಳಿದಿರಬೇಕು. ತಾವು ಸಮಾಜದ ನೀತಿಯ ಪೋಷಕರೆಂದು ತಿಳಿದು ವಿಶಾಲಹೃದಯರಾಗಿರಬೇಕಲ್ಲದೆ, ಬಹಳ ಸಹನಶೀಲರಾಗಿಯೂ ಇರಬೇಕು. ಈ ಸಂಸ್ಥೆಗಳ ಏಳಿಳಿತವು ಮ್ಹಾಲೀಕರ ಜಾಣ್ಮೆ, ನಟರ ಸೌಹಾರ್ದತೆ ಮತ್ತು ಆರ್ಥಿಕ ಸಂಪತ್ತು—ಇವುಗಳನ್ನು ಅನುಸರಿಸಿರುತ್ತವೆಯಾಗಿ, ಇವುಗಳಲ್ಲಿ ಯಾವುದೊಂದಕ್ಕೆ ಸ್ವಲ್ಪ ಕುಂದುಂಟಾದರೂ ಸಂಸ್ಥೆಯು ವಿಚ್ಛಿನ್ನವಾಗತೊಡಗುವುದು. ಆ ಸಮಯದಲ್ಲಿ ಎಲ್ಲದಕ್ಕಿಂತಲೂ ಹೆಚ್ಚಾಗಿ ನಟರ ಸೌಹಾರ್ದತೆಯೊಂದಿದ್ದರೆ, ಇತರ ಎರಡು ಕಡೆಯ ಕುಂದುಗಳನ್ನು ಪರಿಹರಿಸಿಕೊಳ್ಳುವುದು ಸುಲಭಸಾಧ್ಯವೆನ್ನುವುದು ಇಂದಿನ ಎಲ್ಲ ಸಂಸ್ಥೆಗಳ ಅನುಭವಸಿದ್ಧವಾದ ಮಾತು. ಅಂದ ಮೇಲೆ ನಟರು ಹೇಗೆ ಸಮಾಜದ ನೀತಿಯ ಪೋಷಕರಾಗಿರುವರೋ ಹಾಗೆಯೇ ಈ ಸಂಸ್ಥೆಗಳ ಏಳಿಳಿತಗಳಿಗೂ ಕಾರಣಭೂತರಾಗಿರುವರು. ನಾಟಕ ಕಲೆಯ ಉನ್ನತಿಗೂ, ಅವನತಿಗೂ ಇವರೇ ಬಾಧ್ಯರು. ನಟರು ತಮ್ಮ ಮೇಲಿರುವ ಈ ಮಹತ್ವದ ಜವಾಬ್ದಾರಿಯನ್ನು ಮನಗಂಡು ನಾಟಕಕಾರರೂ ಮ್ಹಾಲೀಕರೂ ಇವರೊಡನೆ ಪರಸ್ಪರ ಸೌಹಾರ್ದದಿಂದ ವ್ಯವಹರಿಸುವುದು ಅತ್ಯಾವಶ್ಯಕವಾದುದು. ತಮ್ಮ ತಮ್ಮಲ್ಲಿಯೇ ಸಂಘಗಳನ್ನೇರ್ಪಡಿಸಿಕೊಂಡು, ನಿರ್ದಿಷ್ಟ ಕಾಲಕ್ಕೊಮ್ಮೆ ಎಲ್ಲರೂ ಒಟ್ಟುಗೂಡಿ, ತಾವು ಅನುಸರಿಸುತ್ತಿರುವ ನಿಯಮಗಳ ಪರಿಣಾಮವು ಸಮಾಜದಲ್ಲಿ ಹೇಗೆ ಕಂಡು ಬರುತ್ತಿವೆಯೆಂಬುದನ್ನು ವಿಮರ್ಶಿಸಿ, ತತ್ಕಾಲೋಚಿತವಾದ ಏರ್ಪಾಟುಗಳನ್ನು ಮಾಡಿಕೊಳ್ಳುತ್ತಿರಬೇಕು. ಹಾಗಲ್ಲದೆ ಸಂಘಗಳನ್ನು ಮಾತ್ರ ಏರ್ಪಡಿಸಿಕೊಂಡು ಇತರ ಸಂಸ್ಥೆಗಳನ್ನು ಅವಹೇಳನ ಮಾಡುವ ಕಾರ್ಯದಲ್ಲಿಯಾಗಲೀ ಅಥವಾ ಸಂಸ್ಥೆಗಳನ್ನೆ ವಿಚ್ಛಿನ್ನ ಮಾಡುವ ಕಾರ್ಯದಲ್ಲಿಯಾಗಲೀ ತೊಡಗಬಾರದು; ಇದರಿಂದ ಕಲೆಯು ಕೊಲೆಯಾಗುವುದೆಂಬುದನ್ನು ಲಕ್ಷ್ಯದಲ್ಲಿಡಬೇಕು.

ಇನ್ನು ಮ್ಹಾಲೀಕರ ಕರ್ತವ್ಯವಾದರೂ ಇವರೆಲ್ಲರಿಗಿಂತಲೂ ಬಹಳ ಜವಾಬ್ದಾರಿಯುಳ್ಳದ್ದಾಗಿರುವುದು. ಹತ್ತಾರು ಸಂಸಾರಗಳ ಭಾರವನ್ನು ಹೊತ್ತು ಆರ್ಥಿಕ ಮತ್ತು ಕಲಾ ದೃಷ್ಟಿಯಲ್ಲಿ ಮೇರೆ ಮೀರದಂತೆ ವ್ಯವಹರಿಸುವುದೆಂದರೆ ಸಾಮಾನ್ಯವಾದುದಲ್ಲ. ಕಲಾಪ್ರವೀಣರನ್ನು ಒಟ್ಟುಗೂಡಿಸಲು ಶಕ್ತರಾಗಿರಬೇಕು; ಅಂದರೆ ಇತರ ಸಂಸ್ಥೆಗಳಲ್ಲಿರಬಹುದಾದ ಕಲಾ ಪ್ರವೀಣರನ್ನು ಧನಲೋಭದಿಂದಾಗಲೀ ಅಥವಾ ಧರ್ಮ ವಿರುದ್ಧವಾದ ಇತರ ಆಚರಣೆಗಳಿಂದಾಗಲೀ ಒಟ್ಟುಗೂಡಿಸುವುದೆಂದಲ್ಲ. ಕಲಾಭಿಮಾನದ ಕಿರಣವು ಉತ್ತೇಜನಾಭಾವದಿಂದ ಯಾರಲ್ಲಿ ತೇಜೋಹೀನವಾಗಿರುತ್ತದೆಂದು ಕಂಡು ಹಿಡಿದು ಅಂಥವರಿಗೆ ಆಶ್ರಯ ಕೊಟ್ಟು ಆ ಕಿರಣ ಜ್ಯೋತಿಯ ಬೆಳಕು ಇಮ್ಮಡಿಯಾಗಿ ಪ್ರಸರಿಸುವಂತೆ ಮಾಡಲು ಶಕ್ತಿಯುಳ್ಳವರಾಗಿರಬೇಕು. ಜನಜೀವನ ತತ್ವಸಾರವನ್ನು ಮನಗಂಡವರಾಗಿರಬೇಕು. ನಾಟಕಕಾರರ ಆಶಯಗಳಿಗೆ ಆಧಾರಭೂತರಾಗಿರುವ ನಟವರ್ಗದ ಪಾತ್ರ ಸಿದ್ಧತೆಯ ಕಾರ್ಯದ ಕಡೆಗೆ ಹೆಚ್ಚು ಗಮನ ಕೊಡುವವರಾಗಿರಬೇಕು.

“ನಾಟಕ ಸಂಸ್ಥೆಯವರು” ಎಂದರೆ ಜನಸಾಮಾನ್ಯರಲ್ಲಿ ಈ ಉತ್ಪನ್ನವಾಗುತ್ತಲಿರುವ ಒಂದು ವಿಧವಾದ ಅಲೌಕಿಕ (?) ಭಾವನೆಯನ್ನು ನಿರ್ಮೂಲ ಮಾಡಿ, ನಾಟಕ ಕಲೆಯ ಪವಿತ್ರತಮ ಧ್ಯೇಯ

ಗಳನ್ನು ಎಲ್ಲರ ಮನಮುಟ್ಟುವಂತೆ ಪ್ರದರ್ಶನ ಮೂಲಕ ಬೋಧಿಸಲು ಶಕ್ತಿಯುಳ್ಳವರಾಗಿರಬೇಕು. ನಾಟಕ ಸಂಸ್ಥೆಯವರೆಂದರೆ, ಆದರ್ಶ ಪ್ರದರ್ಶಕರೆಂಬ ಭಾವನೆಯನ್ನು ಬೇರೂರುವಂತೆ ಮಾಡಿ, ತಾವೂ ಕೀರ್ತಿಯನ್ನು ಪಡೆದು ಮಾತೃಭೂಮಿಯ ಕೀರ್ತಿ ಜ್ಯೋತಿಯು ಚಿರಸ್ಥಾಯಿಯಾಗಿ, ಇಮ್ಮಡಿಯಾಗಿ ಪ್ರಕಾಶಿಸುವಂತೆ ಮಾಡುವ ಸಾಹಸಿಗಳಾಗಿರಬೇಕು.

ನಮ್ಮ ಸುಸಂಸ್ಕೃತ ಕರ್ಣಾಟಕ ಸಂಸ್ಥೆಗಳೆಲ್ಲಕ್ಕೂ ಈ ದಿವ್ಯ ಶಕ್ತಿಯನ್ನು ಭಗವಂತನು ಕರುಣಿಸಿ, ಕರ್ಣಾಟಕ ರಂಗಭೂಮಿಯ ಕೀರ್ತಿಯು ದಶ ದಿಕ್ಕುಗಳಲ್ಲಿಯೂ ವ್ಯಾಪಿಸುವಂತೆ ಅನುಗ್ರಹಿಸಲೆಂಬುದೇ ಹೃತ್ಪೂರ್ವಕ ಪ್ರಾರ್ಥನೆ.

ಮರೆತ ಬಾಳು.

೧

ಸಿರಿಯರ ಮನೆಯಲಿ ಬಳೆದವಳಲ್ಲ;
ಬಣ್ಣದ ಬೆಡಗಿನ ಅರಿವಿಲ್ಲ;
ನಗರದ ಜೀವನ ಬಗೆದವಳಲ್ಲ;
ನೂತನ ಚೇತನಕೆಡೆಯಿಲ್ಲ.

೨

ಗೊಲ್ಲರ ಹಳ್ಳಿಯ ಸಿಂಗರ ಗುಹೆಯೊಳು
ಬೆಳೆದಿಹ ಕಂಪಿನ ಅಲರಿವಳು;
ದುಡಿಯುತ ಹಗಲಿರುಳೆಗಲದೆ ಬನದೊಳು
ಬಾಳುವ ಜನತೆಯ ಮಗಳಿವಳು!

೩

ಮರೆತೀ ಬಾಳನು ಹಾಡುವರಾರು?—
ಒಲುಮೆಯ ಸೂಸುವ ಸಖರಾರು?
ಇತ್ತಿಹನಲ್ಲವೆ ಕಿರಣಗಳಿವಳಿಗು
ವಿಶ್ವದ ಶಕ್ತಿಯು—ಸೃಷ್ಟಿಯೊಳು?

೪

ಏದೊಡು ಕೊರತೆಯೇ? ಕಾಣದ ಬಾಳಿಗೆ!
ಪ್ರಕೃತಿಯ ಮಡಿಲಿನಲುಳಿದಿರಲು!
ಬನದೊಳು ತರುಗಳು, ಲತೆಗಳು ಮಗಳ
ನೇಹದ ನೇವವು ಸೊಗಯಿಸಲು!

೫

ವಿಶ್ವದ ತನ್ಮಯನಾಗಿಹ ಶಕ್ತಿಯು
ಸುತ್ತಲು ಕಾಪನು ನೀಡಿಹನು
ಬಾಳಿಗೆ ಸರಳತೆ ಭಾಗ್ಯವ ಸಲಿಸಿಹ
ಮನವೊಲಿದಲ್ಲಿಯು ಅಡಗಿಹನು!

೬

ಹರಿಯುವ ಗಿರಿಝರಿಯೊಡೆಯೊಳಗುಳಿವಳು
ಗೊಲ್ಲರ ಕನ್ನಿಕೆ ಪ್ರೇಮದಲಿ;
ಸಂತಸ ನೋಟದ ತನಿರಸದುಣಿಸೊಳು
ವೈ ಮರೆವಳು ಬನದಿಂಪಿನಲಿ!

೭

ಹೊನಲೊಳು ಹೊಮ್ಮುವ ಬಿಳಿದೆರೆ ಸೊಗಸೇ
ಹುಡುಗಿಯ ಜೀವಕು ತಾಕುವುದು;
ಅಲೆಗಳು ಬರಿಸುವ ಸಪ್ಪಳ ಹಾಡೇ
ಬಡವೆಯ ಬಗೆಯನು ನಲಿಸುವುದು!

೮

ಹಸುರೆಲೆ ಬಳ್ಳಿಯ ತಣ್ಣೆಳಲಲ್ಲಿ
ಗರಿಕೆಯ ಸೆಜ್ಜೆಯ ಹೂಡುವಳು
ತೆರೆದಿಹ ಸುಮಗಳ ನೋಡುತಲಲ್ಲಿ
ಎಲರಲಿ ಕಂಪನು ಹೀರುವಳು!

೯

ಸುಮಗಳ ಸುಂದರ ರೂಪವೆ ಹೆಣ್ಣಿಗೆ
ಸಿಂಗರದೊಡವೆಯ ತೊಡಿಸುವುದು;
ಕಂಪಿನ ಇಂಪೇ ತನ್ಮಯ ಮನಸಿಗೆ
ಜೀವನ ಸೊಗಸನು ತೋರುವುದು!

೧೦

ತರುಗಳ ಕೆಂದಳಿರೇರುತ ಉಷೆಯೊಳು
ಇಂಚರವೆರಚುವ ಹಕ್ಕಿಗಳ
ನೋಡುತ ತಣಿವಳು, ನೀರವ ಮನದೊಳು
ಹಾಡುತ ಬಣ್ಣದ ರೆಕ್ಕೆಗಳ

೧೧

ಬನಮಣಿಯುದರದ ಹಕ್ಕಿಯ ನೋಟವೆ
ತರಳೆಗೆ ಬಿನದವ ನೀಡುವುದು;
ಬಗೆ ಬಗೆ ನುಣ್ಚರ ಕೇಳುವ ಕರಣಕೆ
ಶಾಂತಿಯ ಕಾಂತಿಯು ಸಿಲುಕುವುದು

೧೨

ಇಂತಿಹ ಬಾಳಿಗೆ ಸಿಂಗರ ಕಡಿಮೆಯೆ?
ಕಡೆಗಾಣಲದೆಮಗಾದರವೇ?
ಸೃಷ್ಟಿಯ ಸಮತೆಯ ಬಲೆ ಹರಿಯದೆಯೆ
ಸೋದರವೆಳಸಲು ಬಾ ಮನವೆ!

'ಚಂದಿರದೇವ'!
ತರುಣರ ತಂಡ, ಸಾತನೂರು.

ಸೃಷ್ಟಿ ಲೀಲೆ.

ಕಾಳಗಗನದನಂತ
ದಿಕ್ತಟದಿ ಬಿರಿದೆದ್ದು
ಕೇಳಿದೋ, ಮೊಳಗುತಿದೆ-
ಮೃತ್ಯು ಗಾನದ ಸದ್ದು!-
ಭೇರಿ ರವ ಭೋರ್ಗರೆದು ಸುತ್ತ ಹೊಮ್ಮುತ್ತಿದೆ!
ಕೋಟಿ ಕಲ್ಪಗಳಿಂದ
ನಶ್ವರದೆ ನಗುತಿದ್ದು
ವಿಭವವೈಸಿರಿಯಿಂದ

ನಾದ ನಲ್ಮೆಯು ಮೆದ್ದು
ನುಗ್ಗಿ ಬರುತಿದೆ, ನೋಡು, ಚಿಗಿದು ಚಿಮ್ಮುತಿದೆ!
ಭೇರಿ ಸಾಮ್ರಾಟ್ ರವವು
ಮತ್ತ ಹರ್ಷದಿ ಸುಯ್ದು
ತನ್ಮಯಾಕಾಶದೀ
ವೈತಾನದೊಳು ಹಾಯ್ದು
ಚೇತನದ ಕಣಗಣದ ಝೇಂಕೃತಿಯ ಬೀರುತಿದೆ!
ಸೀಮೆಯುರಿಯುದ ವಿಶ್ವ
ಗಾನ ಮಂದಿರದಲ್ಲಿ
ಸ್ವಾತಂತ್ರ್ಯ ಸೋಪಾನ-
ಗದ್ದುಗೆಯ ಮುಡಿಯಲ್ಲಿ
ಕಾಲಚಕ್ರವು ಚಲಿಸಿ ಹಿಮ್ಮೇಳವೆರಚುತಿದೆ;
ಪ್ರಕೃತಿ ದೇವಿಯು ನಾದ-
ನುಡಿಯಧರ ಚುಂಬಿಸುತ
ಅಮರ ನರ್ತನ ಗೈದು
ಭೇರಿ ರವ ಕಡಿಯಿಡುತ
ಮುಂದರಿಯುತಿರೆ, ಸೃಷ್ಟಿ ಕೇಳಿ ಸಾಗುತಿದೆ'

'ಚಂದಿರದೇವ'
ತರುಣರ ತಂಡ ಸಾತನೂರು.

ಧನಿಕ—ಬಡವ.

ಧನಿಕನು ಹೊರಗಾಲ ತೊಳೆಯುವಲ್ಲಿ
ಬಡವನ ತೀರ್ಥದ ಮಡುವಿಹುದು.
ಧನಿಕನಡಿಯು ನಾಚುವ ಎಡೆಯಲ್ಲಿ
ಬಡವನ ನಲ್ಮೆಯು ಮನೆಯಿಹುದು.
ಧನಿಕನ ಗಂಟಲೊಳಿಳಿಯದ ಅಡಿಗೆ
ಬಡವನ ಮನೆದೇವರ ಎಡೆಗೆ
ಧನಿಕನ ಸತಿ-ಮುಚ್ಚಿ ನಾಚುವ ಬಟ್ಟೆ
ಬಡವನ ಮನೆಯೊಳು ಚಲುಬಟ್ಟೆ
ಗಾಳಿಯು ಹಾಕಲು ಕೂಲಿಯು ಅಲ್ಲಿ
ಗಾಳಿಯೆ ಬಡವರ ಕೊಲ್ಲುವುದು.
ತಿಂದೂ ತಿಂದೂ ತೇಗುವದಲ್ಲಿ
ಹಸಿವೆಯೆ ಬಡವರ ಮೆಲ್ಲುವುದು
ಇದ್ದೂ ಉಣ್ಣಲಿಕಾಗದು ಅಲ್ಲಿ
ಕಾಣದೆ ಸಾಯುವರಿಲ್ಲ
ಧನಿಕಗೆ ಹಸಿವೆಯು ಬೆಳೆಸುವ ಚಿಂತೆ'
ಬಡವಗೆ ದನಳಿಸುವ ಕಡು ಚಿಂತೆ!!

ಕನ್ನಡಕಂದ,
ಪ್ರೇಮಾಯತನ.

ಪ್ರೇಮಾಂಜಲಿ.

೧

ಸಂಜೆಯಾಯಿತು, ರಾಗವಾಗಸವನಾವರಿಸಿ
ರಂಜಿಸಿದ ತೆರದಲ್ಲಿ, ನನ್ನೆದೆಯಲಿ
ಅನುರಾಗವಿಡಿದಿಹುದು. ತಿಳಿಯಲಾರೆಯ ನೀನು
ಮನವು ತವಕಿಸುತಿಹುದು. ಬರಲಾರೆಯಾ?

೨

ನಿಮಿಷಗಳು ನಿಮಿಷಗಳು ಕಾಲನಾಳದೊಳಿಳಿದು
ನಮುವಾಗಿ ಸರಿಯುತಿವೆ. ನಿನ್ನ ಸೇರುವೆಯ
ನಮನಿಸದೆ, ಸಮಯುವದು ಶೂನ್ಯತೆಯನಾನುವುದು
ಪ್ರೇಮಕನಿಕಾದರೂ ತಾಳ್ಮೆಯಿಹುದೇ?

೩

ಕಾಳಿಂದಿ ಸವಿಸೊರದಿ ಸಂಜೆ ಗಾಯನವನ್ನು
ಹೇಳುತ್ತ, ಹೊತ್ತನ್ನು ವ್ಯರ್ಥವಾಗಿ
ಹಾಳು ಮಾಡದೆ, ಮೆಲ್ಲಮೆಲ್ಲನೇ ಹರಿಯುವಳು
ಹೇಳು; ನೀನೇಕಿಂತು ಕಾಲ ಕಳೆವೆ?

೪

ಕೆಲವು ಸುಮಗಳ ಕೋದು, ಸರವ ಸುರಿದಿಹೆ ಸಿಂದು
ಗೆಲವಿನೊಳವಿನ ಕಾಣ್ಕೆಯಿದನು ನೀನು.
ಕೊಳ್ಳು ಬೇಗನೆ ಬಂದು; ಕೊಳ್ಳದಿರಲಾ ಮೂಲೆ
ಕಳೆ ಗುಂದಿ, ಮರುಮರುಗಿ, ಸೊರಗದೇನು?

೫

ನಿನ್ನ ಸವಿಗೊಳಲಿನಾ ಗೀತೆಯನ್ನಾಲಿಸಲು
ನನ್ನ ಈ ಕಿವಿಯಿಂದು ತವಕಿಸುವುದು.
ನಯನ ಮೋಹನ ದೇಹ ಶೋಭೆಯನು ಸವಿಯಲ್ಕೆ
ಬಯಸುವುವು ಕಣ್ಣುಗಳು ಬರಲಾರೆಯಾ?

೬

ಬಗೆಯ ನಲ್ಮೆಯ ನಿಧಿಯೆ! ನನ್ನ ಬಾಳಿನ ಬೆಳಕೆ!
ಸೊಗದ ಸನ್ಮೂರ್ತಿಯೆ! ಬಾರೆಯೇನು?
ಹೇ ಪವಿತ್ರಪ್ರೇಮಮಯನೆ! ಕರುಣಾಳುವೆ!
ತಾಪವನು ತಿಳಿಯೆಯಾ? ಹೆಂಗರುಳಿನ.

೭

ಹೇ ನಲ್ಲ! ನೀನಾವ ತಾಣದೊಳಗಿದ್ದರೂ
ನನ್ನೆದೆಯು ನಿನ್ನೆದೆಯೊಳೈಕ್ಯವಾಗಿಹುದು!
ಬೇಡುವೆನು ನಿನ್ನ ವಿಮಲ ಪ್ರೇಮ ನನ್ನಲ್ಲಿ
ಕೂಡಿರಲಿ! ನಿನಗಿದೋ ಪ್ರೇಮಾಂಜಲಿ!!

ಶಂಕರ ನಾರಾಯಣ.

ನಾಡಿನ ಪ್ರಸಿದ್ಧ ಪುರುಷರು: ೯.

ಶ್ರೀ ಡಾ. ನಾ. ಸು. ಹಾರ್ಡಿಕರರು.

(ಲೇಖಕರು—ಶ್ರೀ. ಶಿವರಾಮ ಕಾರಂತರು).

ಶ್ರೀ. ಹಾರ್ಡಿಕರರ ಕಾರ್ಯಕ್ಷೇತ್ರವು ರಾಜಕೀಯ. ಆದುದರಿಂದ ಅವರು ಕರ್ಣಾಟಕದ ಒಂದು ವ್ಯಕ್ತಿಗಳು ಎನ್ನುವ ಬದಲು, ಭರತ ಖಂಡದ ಒಬ್ಬರು ಮಹಾನುಭಾವರು—ಎನ್ನುವುದು ಉಚಿತ. ಮೊದಲು ಮೊದಲು ಅವರು ಕರ್ಣಾಟಕವೊಂದನ್ನು ಕಾರ್ಯ ಭೂಮಿಯನ್ನಾಗಿ ಆರಿಸಿದ್ದರು. ಕೆಲವು ವರ್ಷಗಳಿಂದೀಚೆ ಇತರ ಪ್ರಾಂತಗಳಿಗೂ ತಮ್ಮ ಚಳವಳವನ್ನು ಬೆಳೆಸಿಕೊಂಡಿದ್ದಾರೆ. ನಿತ್ಯ ಜೀವನದಲ್ಲಿ ಅವರದೇ ಒಂದು ವಿಚಕ್ಷಣವಾದ ಸರಳತೆಯಿರುವುದರಿಂದ, ಅವರು ತೀರ ಸಾಮಾನ್ಯ ಜನರೊಡನೆಯೂ ಬೆರಸುತ್ತಾರೆ. ಮಜ್ಜಿಗೆಯಲ್ಲಿ ನೀರು ಸೇರಿದಂತೆ ಸೇರ ಬಲ್ಲರು. ಹಾಗೆ ಬೆರತಾಗ—ಹಾರ್ಡಿಕರರ ವ್ಯಕ್ತಿತ್ವ—ವೆಂಬೊಂದು ವಸ್ತು—ಹೊಡೆದು ಕಾಣುವುದಿಲ್ಲ. ಅವರ ಉಡುಗೆ ಊಟಗಳನ್ನು ಕಾಣುವಾಗ, ಕಿಸೆಯಲ್ಲಿ—ಎಂಟಾಣೆಯಿರುವವನು—'ಆರು ತಿಂಗಳ ತನಕ ಅವರನ್ನು ಸಾಕಿಯೇನು'—ಎಂದು ಹೆಮ್ಮೆ ತರಬಹುದು. ಬಲು ತೆಳ್ಳಗಿನ, ಕುಳ್ಳಗಿನ ಕಾಯ. ಸಾಕಣೆಯ ಖರ್ಚು ಕಡಿಮೆ. ವಸ್ತುತಃ ಅವರನ್ನೇ ಸಾಕಲು ಹೋದರೆ—ಸೋಲಲೂ ಬಹುದು. ಅನ್ನ ಉಡುಗೆ ತೊಡಿಗೆಯಿಂದಾಗಿ ಅಲ್ಲ. ಒಂದು ಕಾಕಿ ಅಂಗಿ, ಒಂದು ಕಾಕಿ ಶರ್ಟು—ಇದ್ದರೆ ಮುಗಿಯಿತು ಅವರ ಉಡುಗೆ ತಲೆಯ ಮೇಲೆ "ಟೊಪ್ಪಿಗೆ" ಬೇಕಾಗಿಯೂ ಇಲ್ಲ. ಊಟವೂ ಅಂತೆಯೇ. ಆದರೆ ಅವರು ಧೂಮ್ರಹಾರಿಗಳು; ಕಷಾಯ ಪಾನಿಗಳು. ಅವರನ್ನು ಸಾಕುವುದರಿಂದ ಹೆಚ್ಚಿನ ಲಾಭವು—ಲಿಪ್ಟನ್ ಕಂಪೆನಿಗೂ, ಆರ್ಕೇಡಿಯನ್ ಟೊಬೆಕೊ ಕಂಪೆನಿಗೂ ಇದೆ.

ಅವರೇನೋ ತೀರ ತೆಳ್ಳಗೆ. ಬಿರುಗಾಳಿ ಬಂದರೆ ಯೋಜನಕ್ಕೆ ಅವರನ್ನು ಹಾರಿಸೀತು. 'ಅವರ ಮನಸ್ಸಿನ ವೇಗ, ಕಾರ್ಯತತ್ಪರತೆಯು—ವಾಯುವಿನಷ್ಟೆ ಓಟದ ಹಾದಿ ಹಿಡಿಯುವಂಥದು. ಗಾಂಧಿಯವರು ತಮ್ಮ ಟೋಪಿಯನ್ನು ಊರಿಗೇನೇ ತೊಡಿಸಿ ತಾವು ಕಳೆಚಿನಕ್ಕಂತೆ—ಇವರಾದರೂ—ಶರೀರ ವ್ಯಾಯಾಮವನ್ನು ಊರಿಗೇನೇ ತೊಡಿಸಿ—ತಾವೇ ಕಳಚಿಕೊಂಡಿದ್ದಾರೆ. ಬಾಗಿಲ ಕೋಟೆಯ ಭದ್ರವಾದ ನೆಲೆಗಟ್ಟಿನ "Acadamy of Physical Culture"ನ್ನು ನೋಡಿ ಹಾರ್ಡಿಕರವರ ಶರೀರ ಪ್ರಮಾಣ ಎಣಿಸಬೇಡಿ. ಪರ್ವತ ಪ್ರಸವವಾದೀತು.

ಹಾರ್ಡಿಕರರು ಅರ್ಧ ವೈದ್ಯರಾಗಿದ್ದಿರಬೇಕು. ಈಗ, ನನಗೆ ಗೊತ್ತಿರುವಷ್ಟೆ ವೈದ್ಯ ಅವರಿಗೂ ತಿಳಿದಿರಬಹುದು. ಅವರು ತಮ್ಮ ಪ್ರೌಢ ಶಿಕ್ಷಣವನ್ನು ಪಡೆಯಲು ಅಮೇರಿಕಕ್ಕೆ ಹೋದರು. ಆಗಲೇ ಕೈ| ಲಾಲಾ ಲಜಪತರಾಯರು ಅಮೇರಿಕದಲ್ಲಿ ತಮ್ಮ ಗಡಿಪಾರಿನ ಕಾಲ ಕಳೆದ ಸಮಯ. ಅವರ ಸಖ್ಯವೂ ಹಾರ್ಡಿಕರರಿಗೆ ದೊರೆಯಿತು. ದೇಶಪ್ರೇಮ, ಸಾಹಸ ಮೊದಲಾದ ಹಲವು ಬಯಸಬೇಕಾದ ಗುಣಗಳನ್ನು ಅವರು ಕಲಿತುಕೊಂಡರು. ಅಮೇರಿಕನರ ಜೀವನದ ಕಾರ್ಯತತ್ಪರತೆಯು ಹಿಂದುಸ್ಥಾನದ ಎತ್ತಿನ ಹಾಲನ್ನು ತೆಳ್ಳಗೆ ಮಾಡಿದಂತಾಯಿತು. ಅಸಹಕಾರದ ಚಳವಳವನ್ನು ತೊಡಗುವ ಕಾಲದಲ್ಲಿ ಅವರು ಸ್ವದೇಶಕ್ಕೆ ಮರಳಿ ಬಂದಿದ್ದರು. ಅಂದೇ ತಮ್ಮ ಜೀವನವನ್ನು ನಾಡಿನ ಸಲುವಾಗಿ "ಖಟಪಟ್" ಮಾಡಲು ನಿಶ್ಚಯಿಸಿದರು. ನಿಶ್ಚಯವಾದುದೇ ತಡ—"ತಾಬರ ತೋಬ್" ತಮ್ಮ "ಶಿಸ್ತಿ"ನ ನಿಶಾನಿ "ತ್ರೊಂಡು ಹೊಂಟರ್ರ".

ನನ್ನ ಅವರ ಪರಿಚಯದ ಕೆಲವು ಮಾತುಗಳು ಅವರ ಜೀವನ ಚಿತ್ರವನ್ನು ಸ್ಪಷ್ಟೀಕರಿಸುವುದಕ್ಕೆ ಸಹಾಯವಾಗಬಹುದು. ನನ್ನ ಅವರ ಪರಿಚಯಕ್ಕೆ 10ಕ್ಕೂ ಮೀರಿದ ವಯಸ್ಸು. ಅವಧಿ ಮೀರಿತೆಂದರೂ ಅನ್ನಬಹುದು. ಮೊದಲಿಗೆ ಡಾಕ್ಟರರ ಹೆಸರನ್ನು ನಾವೆಲ್ಲ ಕೇಳಿದುದು—1922ರ ಅಸಹಕಾರ ಚಳವಳದ ಪ್ರಳಯದಲ್ಲಿ. ನಾನಾಗ ವಿದ್ಯಾರ್ಥಿಯಾಗಿ ಹೋಗಿದ್ದೆನಷ್ಟೆ. ಮಂಗಳೂರಿನಲ್ಲಿ ಕರ್ಣಾಟಕ ರಾಷ್ಟ್ರೀಯ ಪರಿಷತ್ತಿನ ಪ್ರಥಮ ಅಧಿವೇಶನದ ಸಿದ್ಧತೆಯಾಗಿತ್ತು. ಶ್ರೀಮತಿ ಸರೋಜಿನಿ ದೇವಿಯವರು ಅಧ್ಯಕ್ಷರಾಗಿ ಬಂದಿದ್ದರು. ಡಾಕ್ಟರರೂ ಬಂದಿದ್ದರು. ಅಧ್ಯಕ್ಷರ ಸ್ವಾಗತದ ಸಮಯ. ಡಾಕ್ಟರರಿಗೆ ಬೇ"ಶಿಸ್ತು" ಎಂದರೆ ಜೀವ. ಸಂತೆಯಲ್ಲಿ ಶಿಸ್ತನ್ನು ಕಾಣಲಾರದೆ ಅವರು ಸಿಟ್ಟಿಗೆದ್ದರು. ಬೆತ್ತವನ್ನೆತ್ತಿ 'ಮಿಲಿಟರಿ'ಯಾಗಿ ಜನರನ್ನು ಚೆದರಿಸಿದರೆ ಆಗ ಅವರಿಗೆ ದಳನಾಯಕತನವೂ ಇತ್ತು. ಇದರಲ್ಲಿ ನನಗೆ ಚಂದವೆನಿಸಿದ ಭಾಗವಿಷ್ಟೆ.—ಅಹಿಂಸಾತ್ಮಕ ಅಸಹಕಾರ ಚಳವಳ ಶಿಸ್ತು—'ದಂಡವನ್ನೆತ್ತಿ' ಉಂಟು ಮಾಡಲು ಬಂದೀತೆಂಬ ಹೊಸ ಶೋಧ.

'ಇನ್ನೊಂದು ಪ್ರಸಂಗ ಕರ್ಣಾಟಕವು ಪ್ರಥಮ ಬಾರಿಗೆ—ಕಾಯಿದೆಭಂಗದ ಚಳವಳ ಯೋಚನೆ ಮಾಡಿತ್ತು. ಡಾ| ಹಾರ್ಡಿಕರರವರು ಶಿಸ್ತಿನ ಜನರನ್ನು ಜಮಾಯಿಸುತ್ತಿದ್ದರು. "ಜೀವದ" ಹಂಗು ತೊರೆದ ಭಟರನ್ನು ಹುಡುಕುತ್ತಿದ್ದರು. ಈಗಿನಂತೆ ಬರೀ ಜೈಲಿನ "ಹಂಗಲ್ಲ". ನಾನೂ ಸ್ವಯಂಸೇವಕನಾದೆ. ಪರರು ಸಾಕಿದ ಈ ಜೀವದ ಹಂಗು ತೊರೆಯಲು ನನಗೇನು ವೆಚ್ಚವಿಲ್ಲವೆಂದು ಧೈರ್ಯ. ಒಂದು ದಿನ ಹಾರ್ಡಿಕರರ ತಾರು ನನಗೆ ಬಂತು. 'ತಾಬರ ತೋಬ್'—ಗದಗಿನಲ್ಲಿ ಸ್ವಯಂಸೇವಕರು ಜಮಾಯಿಸಬೇಕೆಂದರು. ನಾನೂ ತಾಬರ್ ತೋಬ್ ತಂತಿಯ ಬೆನ್ನ ಮೇಲೆಯೇ ಹೋದೆ. ಹುಬ್ಬಳ್ಳಿಯಲ್ಲಿ ಅವರ ಕಾರ್ಯಾಲಯವಿತ್ತು. ಅಲ್ಲಿ ಮೊದಲನೇಯವನಾದೆ.—ಈ ಶರ್ಟು, ವೇಷ್ಟಿ ಶಿಸ್ತಿಗೆ ಚೆನ್ನಾಗಿಲ್ಲವೆಂದರು. ಉಪಾಯವಿದೆಯೇ! ಅವರು ಮೊಣಕಾಲ ಇಜಾರು ಮಾಡಿದರೆ ನಾನು ಅದರ ಅರ್ಧದ ಡ್ರೆಸ್ಸು ಮಾಡಿದೆ. ನನಗೀಗ ಶಿಸ್ತಿನಲ್ಲಿ ಅರ್ಧವಾದರೂ ಬಂತೆಂದು ತಿಳಿದೆ. ಇತರ ಭಾಗದಿಂದಲೂ ಸ್ವಯಂಸೇವಕರು ಬಂದಿದ್ದರು. ಬರೀ ಚಿಲ್ಲರೆ ಜನರಲ್ಲ. ನಾವಾಗಲೇ—ದೇಶಭಕ್ತರ ಸಾಲಿನಲ್ಲಿ ಸೇರಿದ—ಆರಿಸಿದ ರತ್ನಗಳು. ಹುಬ್ಬಳ್ಳಿಯಿಂದ ಗದಗಿನ ತನಕ ರೈಲು ಬಂಡಿಯಲ್ಲಿ—ಬರೀ ಶಿಸ್ತು—ಶಿಸ್ತಿನ ಜನರು. "ಆ ಮಾತೆ ಕೀ ಜೈ—ಈ ಮಾತೆ ಕೀ ಜೈ"—ಎಂಬ ಕೋಲಾಹಲ. ಈ ಗದ್ದಲ, ಸ್ಟೆಷನ್ ನಿಲ್ದಾಣಗಳು ಹತ್ತಿರ ಬಂದೊಡನೆ ಒಮ್ಮೆಗೇ ಮೊಳಗುವುದು. ಉಳಿದ ಸಮಯ—ಇಲ್ಲ. ಜನರಲ್ಲಿ ಹುರುಪನ್ನೆಬ್ಬಿಸಲು ಜೈ—ಕಾರವಲ್ಲವೆ!

ಗದಗಿನಲ್ಲಿ ಇಳಿದೊಡನೆ ನಮ್ಮ ನರಾಲನು ಅನ್ನ ಸತ್ರವೊಂದರ ಕಡೆಗೆ ಹೊರಳಿತು. ನನ್ನ ಸುತ್ತಮುತ್ತ—ಮುಖಮೂತಿ,ಅಂಗಿ—ಬಿಂಗಿ—ಗಳ ಮೇಲೆ ಜಾಹಿರಾತನ್ನು ಹೊತ್ತು ಸಂಚರಿಸುವ ಜನರು ಕಾಣಿಸಿದರು. ಇದೇನು ಸರ್ಕಸ ಕಂಪನಿ ಜಾಹಿರಾತೇ-ಇಲ್ಲವೇ—ಚಾಕ್ಲೇಟು ಕಂಪೆನಿಯ ಪ್ರಕಟಣೆಯೋ—ಎಂದು ದಿಗಿಲು ಹಾರಿತು ನನಗೆ. ನೋಡುವಾಗ-ಅವರೆಲ್ಲ ಬಿಳಿ ಟೊಪ್ಪಿ ಜನರು. ಅವೆಲ್ಲ—ದೇಶಭಕ್ತಿಯ ಪ್ರಕಟಣೆಗಳು.

ಈಗ ಗದಗಿನ ಆ ಮೀಟಿಂಗಿನ ವಿಚಾರ. ಹಾರ್ಡಿಕರು—ನಮ್ಮ ನಮ್ಮ ಪರಿಚಯವನ್ನು ಆ ಸಮುದಾಯಕ್ಕೆ ನಾವು ನಾವೇ ಮಾಡಿಕೊಡಬೇಕೆಂದರು. ತೀರ ಸರಳವಾಯಿತು. "ನಾನೂ ಒಬ್ಬ ಭಾರಿ ಜನ"ವೆಂದೆ. ಈಗ ವಿಷಯದ ಪ್ರಸ್ತಾಪ. ಕಾಯಿದೆಭಂಗ ಬೇಕೇ, ಬೇಡವೇ—ಎಂದು. ಅವರ ಅಧ್ಯಕ್ಷತೆಯಲ್ಲಿ ಚರ್ಚೆ ತೊಡಗಿ—ಅಧ್ಯಕ್ಷರಿಲ್ಲದಾಗ ಮುಗಿಸಿದೆವು ಈ ಭಾರಿ ಚರ್ಚೆಯನ್ನು. ಎಲ್ಲರೂ—ಜೈಲಿನ ಬಾಗಿಲು ಎಷ್ಟು ಅಗಲವಿದೆಯೆಂದು—ನೋಡಿಯೇ ನೋಡುವ ಎಂದು ನಿರ್ಧರಿಸಿದೆವು. ನಿರ್ಧರಿಸುವ ಮೊದಲೇ ದಳನಾಯಕರು ನಮ್ಮ ಸಭೆ ಬಿಟ್ಟು ಹೋಗಿದ್ದರು. ನಿರ್ಧಾರ ಮಾಡಿ ನಮಗೆ ನಿದ್ದೆ ಬಂದಿತು. ಕತ್ತಲು ಮೀರಲು ಡಾಕ್ಟರರು ಬಂದರು. "ಏನು ನಿರ್ಧಾರ"—ಎಂದು ಕೇಳಲೂ ಇಲ್ಲ. "ವರ್ಕಿಂಗ್ಸ ಕಮಿಟಿಯವರು"—ಬೇಡವೆಂದು ನಿರ್ಧಾರಿಸಿದ್ದಾರೆ ಎಂದು ತಿಳಿಸಿದರು. ನನ್ನ ದೇಶಭಕ್ತಿಯನ್ನು ಹೊತ್ತುಕೊಂಡು ಮರುದಿನದ ಟಪ್ಪಾಲಿಗೇ ಊರಿಗೆ ಬಂದೆ! ಅಬ್ಬಾ! ದೇಶಭಕ್ತಿ ಬಲು ಕಷ್ಟ. ಅದೊಂದರ ಪ್ರದರ್ಶನಕ್ಕೆ =100 ಸ್ವಯಂಸೇವಕರು×2 ರೈಲು ಚಾರ್ಜು ವ್ಯಯವಾದರೆ—ಸ್ವರಾಜ್ಯ ಸಂಪಾದನೆಗೆಷ್ಟು ಬೇಕು—ಎಂದು ಯೋಚಿಸಿದೆ. ಡಾಕ್ಟರರಿಗೆ ನನ್ನ ಗಣಿತವನ್ನು ತಿಳಿಸಿದೆ. ಬಲು ಸಮಯ ನಾವು ತಿರುಗಿ ಕೂಡಲಿಲ್ಲ.

ಅನಂತರ ಕೆಲವು ಕಾಲದ ನಂತರ ತಿರುಗಿ ಭೇಟಿಯಾದೆವು. ನನ್ನ ದೇಶಭಕ್ತಿ ಬಲು ಕಡಿಮೆಯಾಗಿತ್ತು. ಅವರು ನನ್ನನ್ನು ಕರೆಯುತ್ತಿದ್ದರು. ನಾನೂ ಹೋಗದಿರುತ್ತಿದ್ದೆ. ಅವರ ಸೇವಾ ದಳದ ಸಂಸ್ಥೆಯು ಬೆಳವಣಿಗೆಯ ನಂತರ ತಿರುಗಿ ಅವರ ಬಳಿಗೆ ಬರುವಲ್ಲಾಯಿತು. ನಾಲ್ಕೆಂಟು ತರುಣ ವೀರರನ್ನು ಜತೆಗೆ ಸೇರಿಸಿಕೊಂಡರು. ಅವರಿಗೆ—ವ್ಯಾಯಾಮ ಶಿಕ್ಷಣವನ್ನು ಕೊಡಿಸಿದರು. ಅವರಿಂದ ದಳಗಳನ್ನು ಹೊರಡಿಸ ತೊಡಗಿದರು. ದಳಗಳು ಬೆಳೆದಂತೆ ಸರಕಾರದ ಕೋಪ—ಏರಿತು. ಜೈಲಿಗೂ ಅವರನ್ನು ತುರುಕಿಸಿದರು. ಎಷ್ಟು ತುರುಕಿಸಿದರೂ ಅವರು ಈಗಿಗಿಂತ ತೆಳ್ಳಗಾದರೇ?

ಅನುಭವ ಬೆಳೆದಂತೆ ಅವರ ವ್ಯವಸ್ಥೆಯೂ ಬೆಳೆಯಿತು. ಕೆಲಸವೂ ನಡೆಯಿತು. ಬಾಗಿಲಕೋಟೆಯ ಅಕೇಡಮಿಯಂಥ-ಸಂಸ್ಥೆಯ ನಿರ್ಮಾಣವಾಯಿತು. ಕರ್ನಾಟಕದಲ್ಲಿ 1,00,00 ಲಕ್ಷ ಕಾಂಗ್ರೆಸು ಸದಸ್ಯರಾದರು! ಇದನ್ನು ಕಂಡು—ಇತರ ಪ್ರಾಂತಗಳಿಗೆ ಸ್ವರಾಜ್ಯ ಸಿಗದೆ ಹೋದರೂನಮ್ಮ ಪ್ರಾಂತಕ್ಕಾದರೂ ಸಿಗಬೇಕೆಂದು ಧೈರ್ಯ ಮಾಡಿದ್ದೆ. ಆದರೆ ಕೊಡುವವರ ಯೋಚನೆ ಬೇರೆಯೇ ಆಯಿತು.

ಈಗ ಸೇವಾದಲವು ಅಖಿಳ ಹಿಂದುಸ್ಥಾನದ ಸಂಸ್ಥೆ. ದೊಡ್ಡ ಮನುಷ್ಯರು ಬಹಳ ಸೇರಿದ್ದಾರೆ. ಸ್ವತಃ ಜವಾಹರಲಾಲರಿಗೆ ಹಾರ್ಡಿಕರರಲ್ಲಿ ತುಂಬಾ ಮಮತೆ. ಅವರು ಕೆಲಸಗಾರರು! ಹಟವಾದಿಗಳು. ನಾಳೆ ಸಂಜೆಯೊಳಗೆ ರೂಪಾಯಿ 10,000 ಕೂಡಿಸಿಯೇ ಕೂಡಿಸುವೆನೆಂದರೆ—ಕೂಡಿಸಿಯೇ ಕೂಡಿಸುತ್ತಾರೆ. "ಹೇಗೆ?" ಕೂಡಿಸಿದರೆಂದು ಅವರನ್ನು ಕೇಳಬೇಡಿ. ಅಮೇರಿಕದ ಜೀವನದಿಂದ ಅವರು ಕಲಿತ ಪಾಠವದು. ತಮ್ಮ ಕೆಲಸವಾಗುವುದಾದರೆ ಎಂಥವರ ಕಾಲನ್ನೂ ಅವರು ಕಟ್ಟಬಲ್ಲರು. "ಮುಂದಾಳು"ತನ ಅವರಲ್ಲಿ ತುಂಬಿ ಚೆಲ್ಲುತ್ತಿದೆ-ಶ್ರದ್ಧೆಯ ಬೆಟ್ಟ ಅವರು. ಹಟಮಾರಿಗಳಲ್ಲಿ ಹಟಮಾರಿ. ಆದರೆ ತೋರಿಕೆಯು ಬಹಳ ಹೆಚ್ಚು. ಉಡುಗೆಯಲ್ಲಿಲ್ಲ. ಬಣ್ಣ ಹೋದರೂ ಅವರ ಕಾಕಿ ಶರ್ಟು ಬದಲಾಗದು—ಆದರೆ ರೀತಿಯಲ್ಲಿ. "ಪ್ರಾಪಗಾಂಡಾ"-ಬೆಲೆಯ ಮೇಲೆ ಅಖಂಡ ವಿಶ್ವಾಸ ಅವರಿಗೆ. ಎಷ್ಟೋ ಸಾರಿ ಹೀಗಿರದಿದ್ದರೂ ಅದೂ ಅವಶ್ಯವೆಂದು ಅನುಭವಕ್ಕೆ ಬಂದಿದೆ. ಆದರೆ ಮಿದುಳಿನ ಸಾಮ್ರಾಜ್ಯದಲ್ಲಿ ಬಲು ಮುಂದರಿದಂತೆ ಕಾಣದು. ಮನುಷ್ಯನ ಶಿಸ್ತಿನ ವಿಧೇಯತೆಯ ಮೇಲೆ ಅವರ ವಿಶ್ವಾಸ.

ಕೆಲಸವಾಗಲು ಊರನ್ನು ಬೇಡುವರೆಂದೆನಲ್ಲ. ಹಟ ಸಾಧಿಸಲೂ ಯಾರನ್ನೂ ಕಾಡುವವರು. ರಾ। ಶ್ರೀನಿವಾಸರಾವ ಕೌಜಲಗಿ ಶ್ರೀ। ಗಂಗಾಧರರಾವ ದೇಶಪಾಂಡೆಯರಂಥ ಕರ್ನಾಟಕದ ಮುದಿ ಹುಲಿ ಸಿಂಹಗಳೊಡನೆ ಹಾಗೂ ಹೀಗೂ ಮುಷ್ಟಿ ಮುಷ್ಟಿ ಕುಸ್ತಿ ಮಾಡಿದವರು ಅವರು. ಬೆನ್ನು ಬಗ್ಗಿದ್ದರೂ, ಬೆನ್ನೆಲುಬು ನೆಟ್ಟಗಿದೆ.

ಹಟಮಾರಿಯವರು—ಸೋಮಾರಿಯವರಲ್ಲ. ಕಾರ್ಯದಲ್ಲಿ ವೈರಬದ್ಧರೂ, ಅಂತರ್ಯದಲ್ಲಿ ಪ್ರೇಮ ತೋರಬಲ್ಲರು. ಹೆಮ್ಮೆಯಿದೆ-ಸರಳತೆಯೂ ಇದೆ. ಡಾಕ್ಟರು ಕನ್ನಡ ನಾಡಿನ ಒಂದು ಸಂಪತ್ತು.

ಕವಿ.

ಮೈಸೂರು ಸಂಸ್ಕೃತ ಕಾಲೇಜು ವಿದ್ಯಾರ್ಥಿ ಸಂಘದಿಂದ

ಅನುವಾದಕ:—"ವಸಂತ"

ಕವಿಯು ಸರ್ವತಂತ್ರ ಸ್ವತಂತ್ರನು. ನಿರಂತರ ಸತ್ಕಾವ್ಯ ಪರಿಶೀಲನ ಪರಿಪಕ್ವ ಬುದ್ಧಿಶಾಲಿಯು. ಸಹೃದಯಗಣದ ನವನೀತ ಕೋಮಲ ಸರಸ ಹೃದಯಗಳನ್ನು ಆನಂದಾಮೃತದಿಂದ ಪರಿಪ್ಲಾವಿತಗೈವ ಆನಂದಮಯನು. ಚೈತನ್ಯೋತ್ಪಾದನೆಯನ್ನುಂಟು ಮಾಡುವ ವಿಚಕ್ಷಣತಮಕಾವ್ಯ ಸೃಷ್ಟಿಯ ಅಪ್ರತಿಮ ವಿಧಾತನು.

ಕಾವ್ಯದ ರಚನೆಯ ಕಾಲದಲ್ಲಿ ಕವಿಯ ಸ್ಫಟಿಕ ನಿರ್ಮಲ ಹೃದಯವು ರಜೋಗುಣ ತಮೋಗುಣಗಳ ವಾಸನೆಯಿಂದ ಮುಕ್ತವಾಗಿಯೂ, ಸತ್ವೋದ್ರೇಕ ಯುಕ್ತವಾಗಿಯೂ, ಪ್ರಸನ್ನವಾಗಿಯೂ ಇರುತ್ತದೆ.

ಕವಿಯು ಯೋಗಿರಾಜನು, ಅವನು ಸಾಂಸಾರಿಕ—ಅವಿದ್ಯಾ, ರಾಗ, ದ್ವೇಷ ಮೊದಲಾದ ದುಸ್ಸಹಕ್ಲೇಶಗಳಿಂದ ರಹಿತನು. ಕಾವ್ಯ ಪರಿಶೀಲನ ರಸಾಸ್ವಾದನ ಕಾಲದೇ ಅವನ ಸಮಾಧಿಕಾಲ. ಅವಾಙ್ಮನಸಗೋಚರವೂ ಆತ್ಮಾನಂದಾನುಭವವೂ ಆ ಯೋಗಿರಾಜನ

ಸಮದರ್ಶಿಯ ಅತೀವ ಉದ್ದೇಶವು. ಮುಕ್ತಯೋಗಿಯಂತೆ ಕವಿಯೂ ತ್ರಿಕಾಲಜ್ಞನಾದ ವಿಶ್ವದರ್ಶಿಯು, ಆದುದರಿಂದಲೇ ಜನ್ಮಾಂಧತಾ ಆದಿ ದೋಷವು ಅವನ ಕಾವ್ಯ ನಿರ್ಮಾಣ ಕಾರ್ಯದಲ್ಲಿ ಬಾಧಕವಾಗುವುದಿಲ್ಲ.

ಕವಿಯು ಕಾವ್ಯಸಂಸಾರದ ಸಂರಾಜನು. ಕಾವ್ಯದ ಪ್ರತಿಯೊಂದು ಪಾತ್ರವೂ ಅವನ ಪ್ರೇಮದ ಪ್ರಜೆಯು; ಅವನ ರಾಮರಾಜ್ಯದಲ್ಲಿ ನ್ಯಾಯದ ಕಟ್ಟುಗಳು ಪ್ರತಿಯೊಂದು ನಿಮಿಷದಲ್ಲಿಯೂ ಪರಿಪಾಲಿಸಲ್ಪಡುವವು. ಅನ್ಯಾಯಕ್ಕೆ ಅಲ್ಲಿ ಅಲ್ಪಸ್ಥಾನವೂ ಇಲ್ಲ. ನವನವೋನ್ಮೇಷಶಾಲಿಯಾದ ಪ್ರತಿಭೆಯೇ ಕಾವ್ಯ ಸಂಸಾರದಲ್ಲಿ ಕವಿಯ ಅಪ್ರತಿಮವಾದ ಕಟ್ಟಪ್ಪಣೆಯನ್ನು ಯಾವಾಗಲೂ ರಕ್ಷಿಸಿಕೊಂಡಿರುವುದಕ್ಕಾಗಿ ಮಂತ್ರಿಯ ಸ್ಥಾನದಲ್ಲಿ ಕೆಲಸ ಮಾಡುತ್ತಿರುತ್ತದೆ. ಪ್ರತಿಭಾಶಾಲಿಯಾದ ಮಂತ್ರಿಯ ಜವಾಬ್ದಾರಿಯ ಮೇಲೆ ತನ್ನ ಸಂಪೂರ್ಣ ಕಾರ್ಯಭಾರವನ್ನಿಟ್ಟು ಈ ಕವಿ ಸಮ್ರಾಜನು ಧೀರ ಲಲಿತ ನಾಯಕನಂತೆ ನಿಶ್ಚಿಂತೆಯಿಂದಿದ್ದು ಕಾವ್ಯಾಮೃತದ ಸವಿಯನ್ನು ಸವಿಯುತ್ತ ಕಾಲ ಕಳೆಯುವನು.

ಕವಿಯ ಯಶಶ್ಚಂದ್ರನು ಸರ್ವಕಾಲೀನನು. ಅವನು ಅಸ್ತನಾಗುವ ಭಯವೇಯಿಲ್ಲ. ಆವಾಗಲೂ ವೃದ್ಧಿಯನ್ನೇ ಹೊಂದುತ್ತಿರುವನು. ಅವನು ಶರತ್ಪೂರ್ಣಿಮೆಯ ಕಣ್ಗೆಂಪಾದ ಚಕೋರಹರ್ಷಿಣಿ ಚಂದ್ರಿಕೆಯಂತೆ ತನ್ನ ಉಜ್ವಲವೂ ಆಕರ್ಷಕವೂ ಆದ ಮಧುರ ಪ್ರಕಾಶವನ್ನು ಕಾವ್ಯಸಂಸಾರದ ನಭೋಮಂಡಲದಲ್ಲಿ ಸರ್ವದಾ ಹೊಳೆಯುತ್ತಿರುವಂತೆ ಮಾಡುತ್ತಾನೆ.

ಕವಿಯು ಸ್ವರ್ಗದ ದೂತ. ಕಾವ್ಯಮಯವೂ ರಸಪ್ರಚುರವೂ ಕರ್ಣಮಧುರವೂ ಆದ ಅವನ ಲಲಿತವಾಣಿಯು ಸ್ವರ್ಗೀಯ ಆನಂದವನ್ನೀಯುವ ಶುಭಸಂದೇಶ.

ಕವಿಯು "ವಿಶ್ವ"ವಿದ್ಯಾಲಯದ ವಿದ್ಯಾರ್ಥಿಯು. ಸುರಮ್ಯ ನಿರ್ಮಲ ಜಲಪ್ರವಾಹದಿಂದ ವಿಭೂಷಿತವಾದ ನಿರ್ಝರಿಣಿಯಿಂದ ಕೂಡಿ, ವಿಚಿತ್ರವಾದ ನಾನಾ ಬಗೆಯ ಗೈರಿಕಾದಿ ಧಾತುಗಳಿಂದ ಮಂಡಿತವಾಗಿ ಹೂವು ಹಣ್ಣು ಕಾಯಿಗಳಿಂದ ಒಪ್ಪುವ ಸಣ್ಣ ದೊಡ್ಡ ವೃಕ್ಷಗಳಿಂದ ಅಲಂಕೃತವಾಗಿ ಮನೋಹರವಾದ ಸಣ್ಣ ದೊಡ್ಡ ಬಂಡೆಗಳಿಂದ ಪೂರ್ಣವಾಗಿ—ಮೆರೆಯುವ ಪರ್ವತ ಶ್ರೇಣಿಗಳೂ, ಭಯಂಕರವಾದ ಜಲಜಂತುಗಳಿಂದಲೂ, ಭೀಷಣವಾದ ತರಂಗಗಳಿಂದಲೂ, ನೋಡಲು ಸುಂದರವಾಗಿರುವ ಸಮುದ್ರಗಳೂ ಪ್ರಸನ್ನ ಪುಣ್ಯ ಸಲಿಲೆಯಾದ ಗಂಗೆಯಂತಹ ಮಹಾ ಮಹಿಮಾಶಾಲಿನಿಗಳಾದ ಮಹಾನದಿಗಳೂ, ಕೃತ್ರಿಮ-ಅಕೃತ್ರಿಮ ಸರೋವರ, ಉಪವನ, ಅರಣ್ಯಗಳೂ, ಸೂರ್ಯಚಂದ್ರ ತಾರೆಗಳೂ, ಬೆಳಗು ಬೈಗುಗಳೂ, ಜೀವನ ಮರಣಗಳೂ ಇವೇ ಮೊದಲಾದ ಪ್ರಕೃತಿಯ ವಿಲಕ್ಷಣ ಕಾರ್ಯವೇ ಅವನ ನಿಜವಾದ ಗುರು. ಕವಿಯು ಪ್ರತಿಭಾಶಾಲಿಯಾದ ವಿದ್ಯಾರ್ಥಿಯಾದುದರಿಂದ ಅಧ್ಯಾಪಕನನ್ನು ನೋಡುತ್ತಲೇ ಅವನು ಸ್ವಯಂ ಓದತೊಡಗುವನು.

ಕವಿಯು ಸಹೃದಯನು, ಅವನ ಹೃದಯವು ಮಾಧುರ್ಯಪೂರ್ಣವಾದುದು, ದರ್ಪಣದಂತೆ ನಿರ್ಮಲವು. ಅದರಲ್ಲಿ ಸುಖದುಃಖಗಳ ಅನುಭವದ ಪ್ರತಿಬಿಂಬವು ಸ್ಪಷ್ಟವಾಗಿ ಅಂಕಿತವಾಗಿರುತ್ತದೆ. ಅವನ ಹೃತ್ತಂತ್ರಿಯ ಮಧುರಾಲಾಪನೆಯು ಅತ್ಯಂತ ಆಹ್ಲಾದಕರವಾಗಿರುತ್ತದೆ. ಅವನ ಸೂಚಿಸುವ ಮಾತು-ಜೀವನ್ಮೃತರ ಜೀವನವನ್ನೆತ್ತಿ ಅವರನ್ನು ಕರ್ತವ್ಯ ಪಥದ ಪಥಿಕರನ್ನಾಗಿ ಮಾಡುವುದೇ ತನ್ನ ಮುಖ್ಯ ಕರ್ತವ್ಯವೆಂದು ತಿಳಿದಿರುತ್ತದೆ.

ಕವಿಯು ಕಲಾವಂತನು, ಅವನ ಕಲೆಯು ಆಕರ್ಷಕವೂ ಚಮತ್ಕಾರಪೂರ್ಣವೂ ಆಗಿರುತ್ತದೆ. ಕಾವ್ಯದಲ್ಲಿರುವ ಪಾತ್ರಗಳ ಪಾಂಡಿತ್ಯಪೂರ್ಣವಾದ ವಿಚಿತ್ರ ಚರಿತ್ರ ಚಿತ್ರಣದ ಅಪೂರ್ವ ಚಾತುರ್ಯವನ್ನು ಗುಣಿಗಳಾದ ಸಹೃದಯ ಪ್ರೇಕ್ಷಕರ ಅಂತಃಕರಣವನ್ನು ದ್ರವಿಸುವಂತೆ ಮಾಡುವುದಕ್ಕೆ ತೋರಿಸುತ್ತಿರುವ ಕವಿಯು ಸಂಸಾರದ ಸಮ್ಮುಖ ಚಿತ್ರಕಾರಿಯ ಪರಿಚಯವನ್ನು ಸ್ಪಷ್ಟವಾಗಿ ಮಾಡಿ ಕೊಡುತ್ತಾನೆ. ಲಲಿತವಾದ ಪದ್ಯ ಕುಸುಮಾವಳಿಯನ್ನು ಹಾಡುವುದರಲ್ಲಿ ಕವಿಯು ತಾನು ಪ್ರವೀಣ ಮಾಲಾಕಾರನಂತೆ ಆಚರಿಸುವನು. ಅವನು ತನ್ನ ನವರಸ ಮಧುರಳೂ ಸಗುಣಳೂ ಸಾಲಂಕಾರಳೂ ಆದ ಕವಿತಾ ಕಾಮಿನಿಯನ್ನು ನೃತ್ಯಕಲೆಯ ನೈಜ ಮರ್ಮಜ್ಞಳನ್ನಾಗಿ ಮಾಡುವನು.

ಕವಿಯು ಪ್ರಪಂಚವನ್ನು ತನ್ನಲ್ಲಿಯೂ ತನ್ನನ್ನು ಪ್ರಪಂಚದಲ್ಲಿಯೂ ಕಾಣುವನು. ಅವನ ಮಾಧುರ್ಯಮಯವೂ ಓಜಪೂರ್ಣವೂ ಆದ ಪ್ರಸಾದಿಕ ರಚನೆಗಳು ಶ್ರವಣ ಮಾತ್ರದಿಂದಲೇ ಆನಂದವನ್ನೀಯುವವು. ಈ ವಿಷಯದಲ್ಲಿ ಕವಿವರ ಸುಬಂಧುವಿನ ಮತ್ತು ಬಗದ್ಧ ಕವಿಯ ಲಲಿತ ಪದ್ಯಗಳನ್ನು ನೋಡಿರಿ.

> ಅವಿದಿತ ಗುಣಾಪಿ ಸತ್ಕವಿಭಣಿತಿಃ ಕರ್ಣೇಷು ವಮತಿ ಮಧುಧಾರಾಮ್
> ಅನಧಿಗತ ಪರಿಮಳಾಪಿಹಿ ಹರತಿದೃಶಂ ಮಾಲತೀ ಮಾಲಾ ॥
> ಶಬ್ದಾರ್ಥಮಾತ್ರಮಪಿ ಯೇನವಿದಂತಿ ತೇಪಿ ।
> ಯಾಂಮೂರ್ಛನಾಮಿವ ಮೃಗಾಃ ಶ್ರವಣೈಃಪಿಬಂತಿ ॥
> ಸಂರುದ್ಧ ಸರ್ವ ಕರಣಪ್ರಸರಾಭವಂತಿ ।
> ಚಿತ್ರಸ್ಥಿತಾ ಇವ ಕವೀಂದ್ರಗಿರಂ ನುಮಸ್ತಾತ್ ॥

ಕವಿಯ ಧ್ಯೇಯವು ಸತ್ಯ, ಸುಂದರ, ಮಂಗಳರೂಪವನ್ನು ಧಾರಣ ಮಾಡಿರುವುದು.

ಸಂಸ್ಕೃತ ಸಾಹಿತ್ಯದಲ್ಲಿ—ವಾಲ್ಮೀಕಿ, ವ್ಯಾಸ, ಗುಣಾಢ್ಯ, ಕಾಳಿದಾಸ, ಭಾಸ, ಭವಭೂತಿ, ಶ್ರೀಹರ್ಷ ಮಾಘ, ಬಾಣ, ಭಾರವಿ, ಜಗನ್ನಾಥ, ಜಯದೇವ ಮುಂತಾದವರೂ; ಇಂಗ್ಲಿಷ್ ಸಾಹಿತ್ಯದಲ್ಲಿ ಷೇಕ್ಸ್‌ಪಿಯರ್, ಶೆಲೆ, ಬ್ರೌನಿಂಗ್, ಕೀಟ್ಸ್, ಮಿಲ್ಟನ್, ಬೈರನ್, ಟೆನಿಸನ್, ಮುಂತಾದವರೂ; ಫಾರಸಿ ಸಾಹಿತ್ಯದಲ್ಲಿ—ಉಮರಖಯ್ಯಾಮ, ಷೇಕ್‌ಸಾದಿ, ಹಾಫಿಜ್ ಮುಂತಾದವರೂ; ಉರ್ದು ಸಾಹಿತ್ಯದಲ್ಲಿ ದಾಗ್, ಜಾಕ್, ಅಕ್ಬರ್ ಮೊದಲಾದವರೂ; ಬಂಗಾಳಿಯಲ್ಲಿ ಕವೀಂದ್ರ ರವೀಂದ್ರರಂಥವರೂ; ಕನ್ನಡದಲ್ಲಿ ರನ್ನ ಪಂಪರಂಥವರೂ, ಮರಾಠಿಯಲ್ಲಿ ಸಮರ್ಥ ರಾಮ ದಾಸಸ್ವಾಮಿ, ಸಂತ ತುಕಾರಾಮ್ ಮುಂತಾದವರೂ, ಹಿಂದಿಯಲ್ಲಿ ಸೂರದಾಸ, ತುಳಸೀದಾಸ, ದೇವ, ಬಿಹಾರಿ, ಪದ್ಮಾಕರ, ಕೇಶವ, ಮತಿರಾಮ ಭೂಷಣ—ಇಂತಹ ಅಮರ ಕೀರ್ತಿಶಾಲಿಗಳಾದ ಕವಿವರರ ಕವಿತೆಗಳು ಕಲ್ಪಾಂತದ ವರೆಗೂ ನಮ್ಮನ್ನು ಗುಣಜ್ಞರನ್ನಾಗಿಯೂ, ಆನಂದಾಭಿಭೂತರನ್ನಾಗಿಯೂ ಮಾಡಿಟ್ಟಿರಲು ಸಮರ್ಥವಾಗಿರುವುದು.

1934

1934

(5 – 1 – 34) ಸಂಚಿಕೆ ೧

THE CANARA BANKING CORPORATION, UDIPI, LTD.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office—UDIPI. Branches:—Goondapoor, Mangalore, Shimoga & Madras

ಶಾಖೆ—ಕುಂದಾಪುರ, ಮಂಗಳೂರು, ಶಿವಮೊಗ್ಗ ಮತ್ತು ಮದ್ರಾಸು

Authorised Capital Rs. 3,50,000. Paid up Capital Rs. 2,25,000.

ರೂ 3,50,000. ರೂ. 2,25,000.

STATEMENT OF ASSETS & LIABILITIES AS ON 31ST OCTOBER, 1933.

Capital and Liabilities.			Property and Assets	
1 Paid up Capital	Rs. 2,25,000-0-0	1	Bank Premises, Buildings, Furniture etc Rs	66 920 0 4
2 Reserve and other funds	„ 2,35,000-0-0	2	Investment on Gvt securities	„ 3,00,560 8 6
3 Deposits	„ 21,91 744-5-8	3	Authorised Investments	„ 23,02,701- 4
4 Due to Bankers	„ 21,649- 2-3	4	Bills per contra	10,547 3 9
5 Sundries	„ 84,330- 2-6	5	Sundries	„ 28,997 6 1
6 Bills per contra	10,547-3 9	6	Cash on hand & with bankers.	„ 58 544. 7 3
Total	27,68,270-14 2		Total	27,68,270-14 2

Udipi, 6–11–33.

N. ANANDA RAO,
Secretary & Manager

ಅಮೃತಾಂಜನ.

ಅಮೃತಾಂಜನ ಡಿಪೋ.

ಮದರಾಸು ಮತ್ತು ಬೊಂಬಾಯಿ.

ದೊಂಗರೆ

ಅವರ

ಬಾಲಾಮೃತ



ಪ್ರಕೃತಿಸಿದ್ಧವಾಗಿ ನಿಮ್ಮ ಮಗುವನ್ನು ಸಾಕಿರಿ.

ಪ್ರಕೃತಿಯು ಒದಗಿಸಿಟ್ಟಿರುವ ಪೋಷಣೆಯನ್ನು ಪಡೆಯಲು ನಿಮ್ಮ ಮಗುವಿಗೆ ಹಕ್ಕಿರುತ್ತದೆ. ಎದೆಹಾಲನ್ನು ಕೊಡುವುದು ತಾಯಿಯ ಕರ್ತವ್ಯ ಮಗುವಿನ ಹಕ್ಕು. ಮಗುವಿಗೆ ಆರೋಗ್ಯ ಮತ್ತು ದೃಢತೆಯ ಭಂಡಾರಗವನ್ನೊದಗಿಸ ಕೊಡ ಪುನಸ್ಸ ತಾಯಿಯ ಹಾಲಿನಂತೆ ಬೇರೊಂದಿಲ್ಲ. ಆದರೆ ಹಳ್ಳಿನ ತಾಯಂದಿಯರಿಗೆ ಮಗುವಿಗೆ ಎದೆ ಹಾಲು ಕೊಡಲು ಕಷ್ಟವೆಂದು ಭಾಸವಾಗುತ್ತದೆ. ತಾಯಿಯ ಎದೆ ಹಾಲಿಲ್ಲದಿರುವುದರಿಂದಲೂ, ಇದ್ದರೂ ಕಡಿಮೆ ಯಾದುದರಿಂದ ಹಳ್ಳಿನ ತಾಯಂದಿರಿಗೆ ಮಗುವಿಗೆ ಮೊಲೆಯುಣ್ಣಿಸಲಾಗುವುದಿಲ್ಲ.

ಮಗುವು ಜನಿಸುವ ಮೊದಲೂ, ಮೇಲೂ ಓವಲ್ಟಿನ್ ಕುಡಿದು ತಮ್ಮ ಶಕ್ತಿಯನ್ನು ರಕ್ಷಿಸಿಕೊಳ್ಳಬೇಕು. ಇದನ್ನು ಪುಷ್ಟಿದಾಯಕವಾದ ಟೋನಿಕ್ ಆಹಾರಗಳಿಂದಲೂ, ಬೆಳೆದ ಬಾರ್ಲಿ ಸಾರದಿಂದಲೂ, ಹಸಿದ ಕೆನೆ ಹಾಲಿನಿಂದಲೂ, ಮತ್ತು ವಿಶಿಷ್ಟವಾಗಿ ತಯಾರಿಸಿದ ಕೊಕ್ಕೋವಿನ ಸಾರದಿಂದಲೂ ತಯಾರಿಸಲ್ಪಡಲಾಗಿದೆ. ಇದು ಹಾಲನ್ನು ಹೆಚ್ಚಿಸುತ್ತದೆ. ಅಲ್ಲದೆ ತಾಯಿಯ ಬಲವನ್ನು ಕುಂದಲು ಬಿಡದೆ, ಆರೋಗ್ಯವು ಶೀಘ್ರವಾಗಿ ವೃದ್ಧಿಗೊಳ್ಳುವಂತೆ ಮಾಡುತ್ತದೆ.

OVALTINE

ಮಗುವಿಗೆ ಎದೆಹಾಲು ಕೊಡಲು ಸಹಕಾರಿಯಾಗಿದೆ.

ತಯಾರಿಯಲ್ಲಿ ಕೈಯಿಂದ ಸ್ಪರ್ಶಿತವಾಗಿಲ್ಲ   ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ದೊರೆಯುತ್ತದೆ

ಏಜಂಟ್ಸ್-ಜೇಮ್ಸ್ ರೈಟ 8೯ ಎ ಕ್ಲೈವ್ ಸ್ಟ್ರೀಟ್ ಕಲ್ಕತ್ತಾ ಮತ್ತು ಬೊಂಬಾಯಿ ಮದ್ರಾಸ್

OV/301

ಗರ್ಭಧಾರಣ ಮಾಡಲು ಭಯಗೊಳ್ಳುವ ಸ್ತ್ರೀಯರಿಗಾಗಿ

ಮೆನೆಸ್ಟ್ರಿನ್ ಕೆಪ್‌ಸಲ್ಸ್ (Menestrin Capsules) ಗಳನ್ನು

ಬಾಯಿಯ ಮೂಲಕ ಸೇವಿಸುವುದರಿಂದ ಗರ್ಭವೇ ನಿಲ್ಲುವುದಿಲ್ಲ.

ಬಾಟ್ಲಿ ಒಂದಕ್ಕೆ ರೂ 1–8–0 ಮಾತ್ರ.

ದಿ ಓರಿಯಂಟಲ್ ರಿಸರ್ಚ್ ಲೆಬೊರೆಟರಿ, ವೆಪೆರಿ ಮದ್ರಾಸು.

The Oriental Research Laboratory.
Vepery, Madras.

[illegible]

ಗಣ್ಯರ [illegible] ರತ್ನ, [illegible] [illegible] ಹೋದಂತೆ ಹೋಯಿತು!

× × × ×

ಹುಡುಗಿಗೆ ೧ ಎಂದರೆ ಮಹಾಮಹಿಮ ಸೊನ್ನೆ! ಮೂರು ಸಲ ಮೂರರಷ್ಟು ಪ್ರೊಫೆಸರಂಥವರುಗಳು ಮುಖ್ಯನಿಗೆ—ಮೂಲೆಗಳಲ್ಲಿ ತ್ರಿಕೋಣಗಳು! ನಾಡುಗಳಲ್ಲಿ ತ್ರಿನಾಡು! ದೇವರುಗಳಲ್ಲಿ ತ್ರಿಮೂರ್ತಿ! ಟಿಪ್ಪದಲ್ಲಿ ಒನ್, ಟು, ತ್ರೀ!—ಅಂಕುಗಳಲ್ಲಿ ತ್ರೀ ಎಂದರೆ ತ್ರಿಅಂಕು! ಇತ್ಯಾದಿ ಇತ್ಯಾದಿ. ಅಂತೂ ೩೩ರ ಹೊಸಾಲೆಸ್ ವರ್ಷವು ಹೇಗೂ ಕಲಾಸ್ ಹುವಾ!

× × × ×

ಬೇಡವಾದ ಆರ್ಡಿನೆನ್ಸುಗಳು ಬೇಕೆಂದು ಬಂದುದು ಈ ವರ್ಷದಲ್ಲಿಯೆ! ಬೇಡವಾದ ವೈಟ್‌ಪೇಪರ ಕೊರೆಯನ್ನು ಬೇಕೆಂದು ಮಾಡಿದುದು ಈ ವರ್ಷದಲ್ಲಿಯೆ! ಬೇಡವಾದ ಕೃಮಿಗಳು ಬೇಕೆಂದು ಹುಟ್ಟಿದುದು ಈ ವರ್ಷದಲ್ಲಿಯೆ! ಬೇಡವಾದ ಲಾಠಿಗಳು ಬೇಕೆಂದು ಹಾರಿದುದು ಈ ವರ್ಷದಲ್ಲಿಯೆ! ಬೇಡವಾದ ಶ್ವೇತಪತ್ರವನ್ನು ಬೇಕೆಂದು ತಂದ ಪುಣ್ಯವು ಬಿಟಿಶರಿಗೆ ದೊರಕಿದುದು ಈ ವರ್ಷದಲ್ಲಿಯೆ! ಬೇಕಾದ ವೈಸರಾಯರು ಬೇಕಾದ ಗಾಂಧಿಯ ಉಪವಾಸಕ್ಕೆ ಬಿಡಲು ಅವರನ್ನು ಬಿಟ್ಟುಬಿಟ್ಟುದೂ ಈ ವರ್ಷದಲ್ಲಿಯೆ!—ಜೈ ೧೯೩೩ಕೇ!

× × × ×

ಮೂರರ ಮುಕ್ತಿಗೆ ಹೋಯಿತು—ಇನ್ನು ನಾಲ್ಕರ ನಾಟಕವನ್ನು ನೋಡಬೇಕಾಗಿದೆ. ಸ್ಥಿತಿಗತಿಗಳನ್ನು ನೋಡುವಾಗ ೧೯೩೪ರ ಹಣೆಬರಹವು ಒಳ್ಳೆಯದಿದೆಯೆಂದು ಕಾಣುತ್ತೆ. ಇನ್ನು ಆ ಮಹಾತ್ಮರ ಆಟ ಹೇಗೋ ಅವನೇ ಬಲ್ಲ!

× × × ×

೧೯೩೪ರ ಆಗೋಸ್ತು ೧ನೇ ತಾರೀಕಿನ ವರೆಗೆ ತಾನು ಯಾವ ರಾಜಕೀಯ ಕೆಲಸಕ್ಕೂ ಕೈಯಿಕ್ಕಲಾರೆನೆಂದು ಗಾಂಧೀಜೀಯವರು ನಿರ್ಧಾರ ಮಾಡಿರುವರು. ಅಷ್ಟರ ತನಕ ಎಲ್ಲಾ ಸಪ್ಪೆಯೇ ಆಗುವುದು! ೧೯೩೪ರ ಪ್ರತಾಪವನ್ನು ಆ ಮೇಲೆ ನೋಡಲಿದೆ!

× × × ×

ನಾಯ್ಡುನ ಭವಿಷ್ಯ ಪ್ರಕಾರ ಆಗೋಸ್ಟಿನ ಅಂಕಗಳು ಹೀಗಾಗಬಹುದು—(೧) ಮೇ ತಿಂಗಳಲ್ಲಿ ವೈಸರಾಯರಾದ ಲೋರ್ಡ್ ವಿಲ್ಲಿಂಗ್ಡನ್ನರು ಇಂಡಿಯಾ ಸರಕಾರದ ಕಪ್ಪಾದ ತನ್ನ ಹಳೆ ಮುಖವನ್ನು ಬಿಳಿ ಮಾಡುವುದಕ್ಕಾಗಿ ಇಂಗ್ಲಾಂಡಿಗೆ ರಜೆಯ ಮೇಲೆ ಹೋಗಬಹುದು. (೨) ಅವರ ಬದಲಿಗೆ ವೈಸರಾಯರಾಗಿ ಪದವಿಗೇರುವ ಮದ್ರಾಸ್ ಗವರ್ನರರು ಒಂದು ಕಡೆಯಿಂದ ಗಾಂಧಿಯ ನಡವಳಿಕೆಯನ್ನೂ ಒಂದು ಕಡೆಯಿಂದ ವೈಸರಾಯರ ಆಗಮನವನ್ನೂ ನಿರೀಕ್ಷಿಸುತ್ತಿರಬಹುದು. (೩) ಅತ್ತ ಕಡೆಯಿಂದ ಗಾಂಧಿಯವರ ಅಜ್ಞಾತವಾಸವು ಆಗೋಸ್ತು ತಿಂಗಳಲ್ಲಿ ಗೊಳ್ಳುವಾಗ ಅತ್ತಲಾಗಿನಿಂದ ವೈಸರಾಯರ ಹೊಯಿಗಾಸು ಪತ್ರಿಕೆ ಮೂಡಿ ಮುಂಬಾಯಿಗೆ ಕಳಿಸಬಹುದು.

× × × ×

ಆ ಮೇಲೆ (೪) ಗಾಂಧಿಯವರು ಕೊಂಗ್ರೆಸ್ಸಿನವರೊಡಗೂಡಿ ಪ್ರತಿಜ್ಞೆಯನ್ನು ಬದಲಾಯಿಸಿ ವೈಸರಾಯರ ಮುಖ ಭೇಟಿಯನ್ನು ಕೇಳಿಕೊಳ್ಳಬಹುದು. (೫) ಇದಕ್ಕೆ ವೈಸರಾಯರು "ಮುಖ ಅಳಿದಾಗಿದೆ—ತೋರಿಸಲಾರೆ" ಎಂದುತ್ತರ ಕೊಡಬಹುದು. (೬) ಸತ್ಯಾಗ್ರಹವನ್ನು ಗಾಂಧೀಜೀಯವರು ಪುನಃ ಮತ್ತೆ ಉಪವಾಸವನ್ನಾರಂಭಿಸಬಹುದು. ಗುಲ್ಲೇಳುವುದು! ಎಲ್ಲರ ಗುಲ್ಲಿನೊಡನೆ ನಾಯ್ಡುನ ಗುಲ್ಲೂ ಏಳುವುದು!

× × × ×

೧೯೩೪ರ ಪ್ರತಾಪವು ಇಷ್ಟೇ ಅಲ್ಲ—ಶ್ವೇತ ಪತ್ರದ ಪ್ರತಾಪವು ಹಿಂದೂಸ್ಥಾನದಲ್ಲಿ ಹರಡುವುದು. ಹಾಗೂ ಹೀಗೂ ಬಹಳ ಕಷ್ಟವಾಗುವುದು!

× × × ×

[illegible]

× × × ×

[illegible]

[illegible]

For neat and nice Printing

Please call at

THE SHARADA PRESS,

Car Street, MANGALORE.

Canara Bank, Limited.

Established 1906.

Authorised Capital	10,000 0-0-0
Subscribed capital	6,00,000—0—0
Paid up Capital	3,10,000—0—0
Reserves	4,31,0[illegible]-0—0

Head Office—**Bunder Mangalore** Local Offices—**City & Bunder**

BRANCHES— Bombay, Cochin, Calicut, Ernakulam, Alleppey, Chikmagalur, Ganguli, Coondapoor, Udipi, Karkal, Puttur, Kasaragod, & Buntwal Out agency.

Interest is allowed on Current Fixed and Saving Banks Accounts, rates of which may be ascertained on application. Advances made on approved securities at easy rates. All kinds of Banking business transacted. Rules of business on application.

The Bangalore Branch Office of the Bank at No 1 Albert Victor Road, Bangalore City will be opened on 8-1-34

Mangalore 22-12-33

A Madhava Pai,
Secretary

East & West Insurance Company Ltd.,

(Incorporated in India 1913)

Head Office—EAST & WEST BUILDINGS, FORT, BOMBAY.

Eastern Company with striking features
Attractive plans,
Sympathetic & Liberal
Treatment to Policy Holders,
&
Wide popularity,
Economic Management
Sound investment
That is why you should select "East & West"
Ere you invest in the rest

Interim Bonus Declared Rs 15 Per 1000 On whole life & Endowment Policies

For particulars and Agency terms apply to—
H S Nayak, *Organiser, Secretary* for West Coast, Coorg & Mysore,
"Harbour View" Mangalore.

ನಮ್ಮ ಟೊಯಿಲೆಟ್ ಮತ್ತು ವಾಶಿಂಗ್ ಸಾಬೂನುಗಳ ತಯಾರಿಯಲ್ಲಿ ಚರ್ಬಿ
ಉಪಯೋಗಿಸಲ್ಪಡುವುದಾಗಿ ರುಜುಪಡಿಸುವವರಿಗೆ ರೂಪಾ
1000 ಬಹುಮಾನ.

ಸಾಬೂನು ಪಡೆಯುವಾಗ ' ' ಅದರಲ್ಲಿ ಚರ್ಬಿ ಇರಕೂಡದೆಂದು

ನಿಮ್ಮ ಆಶೆ.

ಪ್ರಾಣಿಗಳ ಚರ್ಬಿ ಮಿಶ್ರಿತವಾದ ಸಾಬೂನುಗಳು ಹಿತಕ್ಕಿಂತಲೂ ಅಹಿತವನ್ನೇ ಹೆಚ್ಚಾಗಿ ಉಂಟುಮಾಡುತ್ತವೆ. ಕಾರಣ ಅವುಗಳಲ್ಲಿನ ಚರ್ಬಿ ಚರ್ಮರಂಧ್ರಗಳೊಳಗೆ ಹೋಗಿ ಬೆವರನ್ನು ತಡೆಯುತ್ತದೆ. ಸೋಪನ್ನು ಪಡೆಯುವಾಗ ನೀವು ಪರಿಮಳಭರಿತ ಚರ್ಬಿನ ಮುದ್ದೆಗೆ ಬೆಲೆ ಕೊಟ್ಟು ಶುದ್ಧತೆಯ ಬದಲು ಅಶುದ್ಧತೆಯನ್ನು ಸ್ವೀಕರಿಸಬೇಕೆಂದಿರುವಿರಾ?

ಮಲಬಾರು ಸಾಬೂನುಗಳು ಜನನಕ್ಕೆ ಬಂದ ಆರು ತಿಂಗಳುಗಳ ಅಲ್ಪಾವಧಿಯಲ್ಲೇ ಸಾರ್ವಜನಿಕ ಬೆಂಬಲವನ್ನು ಪಡೆದಿವೆ. ಕೊಚ್ಚಿಯ ಮಹಾರಾಜರ ದಯಾಪೂರ್ಣ ಪ್ರಶಸ್ತಿ ಮತ್ತು ಪ್ರೋತ್ಸಾಹನದಿಂದಾಗಿಯೂ, ಪ್ರಖ್ಯಾತ ವೈದಕೀಯ ಅಧಿಕಾರಿಗಳ ಶಿಫಾರಸಿನಿಂದಾಗಿಯೂ, ಅನೇಕ ವಸ್ತುಪ್ರದರ್ಶನಗಳಲ್ಲಿ ದೊರೆತ ಸುವರ್ಣಪದಕ ಮತ್ತು ಪ್ರಶಸ್ತಿ ಪತ್ರಿಕೆಗಳಿಂದಾಗಿಯೂ ಮಲಬಾರ್ ಸಾಬೂನುಗಳ ಪ್ರಾಪಂಚಿಕ ಖ್ಯಾತಿಯು ಎಷ್ಟೆಂದು ತಿಳಿಯುವುದು.

ಮಲಬಾರ್ ಸಾಬೂನು ಎಲ್ಲಾ ವಿಧದಿಂದಲೂ ಶ್ರೇಯಸ್ಕರವೇ ಆಗಿರುತ್ತದೆ. ನಿಮ್ಮ ಚರ್ಮಕ್ಕೆ ಬಾಧಕವನ್ನುಂಟು ಮಾಡುವಂತಹ ಪ್ರಾಣಿಗಳ ಚರ್ಬಿ ಅಥವಾ ಹಾನಿಕರವಾದ ಮಿಶ್ರಿತವೇನೂ ಅದರಲ್ಲಿರದು. ಮಲಬಾರ್ ಸಾಬೂನನ್ನು ಶಾಸ್ತ್ರೀಯ ರೀತಿಯಿಂದಲೂ, ಆರೋಗ್ಯ ದೃಷ್ಟಿಯಿಂದಲೂ ತಯಾರಿಸುವುದರಿಂದ ಎಷ್ಟು ಕೋಮಲವಾದ ಚರ್ಮವೂ ಬಾಧಕ ಹೊಂದುವುದಿಲ್ಲ. ಈ ಸಾಬೂನು ದೇಶಿಯ ಅಮೂಲ್ಯ ಗಂಧಯುಕ್ತ ಸಾಮಗ್ರಿಗಳಿಂದ ಎಲ್ಲರಿಗೂ ಅನುಕೂಲವಾಗುವಂತೆ ಅಗ್ಗವಾಗಿದೆಯೆಂದು ಅದರ ಉಪಯೋಗದಿಂದ ನಿಮಗೆ ತಿಳಿದುಬರುವುದು.

ನಿಮ್ಮ ವ್ಯಾಪಾರಸ್ಥರು

ಮಲಬಾರ್ ಸಾಬೂನುಗಳನ್ನು

ವಿಕ್ರಯಿಸಲು ಸಂತೋಷಪಡುವರು

ಇದರಲ್ಲಿ ಪ್ರಾಣಿಗಳ ಕೊಬ್ಬು ಇರುವುದಿಲ್ಲ.

ದಿ ವೆಜಿಟೆಬಲ್ ಸೋಪ್ ವರ್ಕ್ಸ್, ಕಲ್ಲಿಕೋಟೆ.

ಪ್ರೊಪ್ರೈಟರ್:—ಸನ್ ಬ್ರೆಂಡ್ ಕೊಡೆಯ ಖ್ಯಾತಿಯ ಸೇಟ್ ನಾಗಜೀ ಪುರುಷೋತ್ತಮ ಮತ್ತು ಕಂಪೆನಿ, ಕಲ್ಲಿಕೋಟೆ.

ಈ ಜಿಲ್ಲೆಗೆ ಪ್ರವರ್ತಕರು:—

ರಾಘವೇಂದ್ರ ರಂಗ ಪೈ ರಥಬೀದಿ, ಮಂಗಳೂರು.

S. U. N. & CO.

Choukhamba, Benares City

ಮೂರು ಇನಾಮುಗಳು

ನಮ್ಮಲ್ಲಿ ಕಾಶ್ಮೀರ್ ಶಾಲುಗಳಿಗಿಂತಲೂ ಅತ್ಯುತ್ತಮವಾದ ಕಸೂತಿಗೆಳಿಂದೊಪ್ಪುವ ಶುದ್ಧ ಸ್ವದೇಶೀ ಖದ್ದರ್ ಸಿಲ್ಕು ಶಾಲುಗಳು ತಯಾರಾಗುತ್ತವೆ. ಬೇಕಾದವರು ತ್ವರೆಮಾಡಿ ಬರೆದರೆ ಈ ಕೆಳಗಿನ ದರದಲ್ಲಿ ಕಳುಹಿಸಲಾಗುತ್ತದೆ. 5 ಮೊಳ ಉದ್ದ 2½ ಅಗಲ ದರ ಒಂದಕ್ಕೆ ರೂ 2—8—0ಯಿಂದ 3-12-0 5½ ಮೊಳ ಉದ್ದ 2½ ಮೊಳ ಅಗಲ ದರ 1ಕ್ಕೆ 8-8-0, 4—8-0 6 ಮೊಳ ಉದ್ದ 3 ಅಗಲ ದರ 1ಕ್ಕೆ ರೂ 4—8-0, ರೂ. 5. ಅಲ್ಲದೆ ಸ್ವದೇಶೀ ಖದ್ದರ್ ಮಡಿಗಳೂ, ಸೀರೆಗಳೂ ಅಂಚುಗಳಿಲ್ಲದೆ ಎಲ್ಲಾ ರಂಗುಗಳಲ್ಲಿರುತ್ತವೆ ಮತ್ತು ಜರೀಕಾರೀ ಸೀರೆಗಳೂ ಪೀತಾಂಬರಗಳೂ ರವಿಕೆಗಳೂ, ರುದ್ರಾಕ್ಷೀ—ಬಾಣಲಿಂಗ—ಪಂಚಾಯತನ ಸುದರ್ಶನ ಸಾಲಿಗ್ರಾಮ ಕಾಶ್ಮೀರಿ ಮಿಶ್ರನ್, ಮಡಿ ಧಾವಳಿ ಶಾಲು, ಜಗನ್ನಾಥ ಗಂಜಿಗಳೂ ಕೂಡಾ ಸರಿಯಾದ ದರಕ್ಕೆ ಕಳುಹಿಸಲಾಗುತ್ತದೆ. ವಿವರಕ್ಕೆ ಕೆಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ. 1 ಆಣೆ ಸ್ಟೇಂಪು ಕಳುಹಿಸಿದರೆ 1 ವಿಶ್ವೇಶ್ವರ ಪಟ, 1 ಕಾಶೀನಕ್ಷೆ, 1 ಕೆಟಲಾಗಿನೊಡನೆ 3 ಇನಾಮುಗಳು.

ವಿಳಾಸ:—

ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪೆನಿ, ಚೌಖಾಂಬಾ ಬೆನಾರಿಸ್ (ಕಾಶೀ)

ಸಿದ್ಧವಾಗಿವೆ! ತ್ವರೆ ಮಾಡಿರಿ!!

೧೯೩೪ನೇ

ಸ್ವರಾಜ್ಯ ಡೈರಿಗಳು!

ಇದರಲ್ಲಿ ಹಿಂದೂ ಮುಸಲ್ಮಾನ, ಕ್ರೈಸ್ತರಿಗೆ ಅನುಕೂಲವಾಗುವಂತೆ ಸರಿಯಾದ ತಿಥಿ, ನಕ್ಷತ್ರ ವಗೈರೆ ಮಾಹಿತಿಯೂ ಪ್ರತಿಯೊಂದು ಪುಟದಲ್ಲಿ ಉತ್ತಮವಾದ ನೀತಿವಾಕ್ಯಗಳೂ ಸಂಗ್ರಹಿಸಲ್ಪಟ್ಟಿವೆ!

ಸಮಸ್ತ ಹಿಂದುಸ್ಥಾನದ ರಾಜಕೀಯ ಸಾಂಪತ್ತಿಕ ವಿದ್ಯೆ ವೈಗಾರಿಕ ಮೊದಲಾದ ಅನೇಕ ಮಹತ್ವವಿಷಯಗಳಲ್ಲಿ ನೀವು ತಿಳಿಯಬೇಕಾದ ವಿಷಯಗಳ ಹೊಸ ವರದಿಯನ್ನು ಸಂಗ್ರಹಿಸಿದೆ!

ಸೈಜು,	ದೊಡ್ಡದು,	ಮಧ್ಯಮದ್ದು,	ಮಧ್ಯಮದ್ದು,	ಮಧ್ಯಮದ್ದು
ಬೆಲೆ	೦-೧೦-೦,	೦-[illegible]-೦	೦-೮-೦,	೦-೧೦-೦

ಕರ್ನಾಟಕ ಡೈರಿಗಳು.

ಇದರಲ್ಲಿ ವ್ಯವಹಾರಕ್ಕೆ ಬೇಕಾದ ಸ್ಟಾಂಪು ಆಕ್ಟಿನ ಸಾರಾಂಶ, ರಿಜಿಸ್ಟ್ರಿ ಫೀಸುಗಳು, ಕೋರ್ಟು ಫೀಸುಗಳ ದರ ಟಪಾಲು ಮಾಹಿತಿ ವಗೈರೆ ವಿಷಯಗಳಿದ್ದು ವಕೀಲರಿಗೂ ಗುಮಾಸ್ತರಿಗೂ ಉಪಯೋಗವುಳ್ಳದ್ದು. ಈ ಡೈರಿಗಳಲ್ಲಿ ಮುಂಬಯಿ ಪ್ರಾಂತದವರಿಗೆ ಬೇಕಾಗುವ ವ್ಯವಹಾರದ ಮಾಹಿತಿಯನ್ನು ಸಂಗ್ರಹಿಸಿದೆ.

ದೊಡ್ಡದು,	ಮಧ್ಯಮದ್ದು	ಚಿಕ್ಕದ್ದು,	ಮಧ್ಯಮದ್ದು
೦-೧೦-೦,	೦-೧೨-೦	೦-೬-೦,	೦-೮-೦

ಪುಸ್ತಕ ವ್ಯಾಪಾರಿಗಳಲ್ಲೆಲ್ಲಾ ಮಾರಲ್ಪಡುವುದು
ಪಿ ಎ ಪೈ ಬ್ರದರ್ಸ್, ಪ್ರಕಾಶಕರು, ಉಡುಪಿ

1934

Sharada Diaries

Ready! Ready!

SMALL SIZE—BIG SIZE.

'ಶಾರದಾ ಡೈರಿಗಳು

ಸಿದ್ಧವಾಗಿವೆ!

ಸಣ್ಣ ಸೈಜು— —ದೊಡ್ಡ ಸೈಜು

Sharada Press, Mangalore.

LOOK HERE!

We have got for sale all kinds of freshly prepared Exercise books Note books and Diaries etc.,

SHARADA PRESS,
Car Street, Mangalore.

ಸ್ಫುಟವಿಚಾರಗಳು:— ೧೯೩೩, ೧೯೩೪, ವಿಜ್ಞಾನದ ಪ್ರಯೋಗ, ಕಾಸಿಲ್ಲದವನ ಮೀಸೆ ನೋಡಬಾರದೆ?, ಎಂಗ್ಲೋ ಇಂಡಿಯನರು, ಯುಗಾದಿಯ ಬಿರುದುಗಳು, ಹೊಸ ವರ್ಷದ ಬಹುಮಾನ, ಹೋರರಿಗೆ ಜಿ. ಸಿ. ಎಸ್. ಐ.

೧೯೩೪

ಹೊಸ ವರ್ಷವು ಪ್ರಾರಂಭವಾಯಿತೆಂದು ವಾಚಕರಲ್ಲಿ ಅವರನ್ನು ಸಸಂತೋಷಪೂರ್ವಕವಾಗಿ ಅಭಿನಂದಿಸುವಾಗ, ಜಗತ್ತಿನ ಸ್ಥಿತಿಯಲ್ಲಿ ಬೇಗನೆ ತಿದ್ದುಪಡಿಯುಂಟಾಗಿ, ಭಗವಂತನ ಕರುಣೆಯಿಂದ ಸರ್ವತ್ರವೂ ಶಾಂತಿಯೂ ಸೌಖ್ಯವೂ ನೆಲೆಗೊಂಡಿರಲೆಂದೂ, ವಾಚಕ—ಗ್ರಾಹಕ—ಲೇಖಕ ವೃಂದವೂ ಇನ್ನಷ್ಟು ಅತಿಶಯವಾಗಿ ಬೆಂಬಲಕ್ಕೆ ನಿಂತುದರಿಂದ ಸ್ವದೇಶಾಭಿಮಾನಿಯ ಸೇವೆಯು ಮತ್ತಷ್ಟು ಚೆನ್ನಾಗಿ ಸಾಗಲೆಂದೂ ಆಶಿಸಿ ನಮ್ಮ ಅಭಿವಂದನೆಗಳನ್ನು ಸಲ್ಲಿಸುತ್ತೇವೆ. ಭಾಷಾಸೇವೆ, ದೇಶಸೇವೆ ಎಂಬಿಷ್ಟು ಮಹಾ ವಿಚಾರಗಳನ್ನು ಲೆಕ್ಕ ಹಾಕಿ ಹೇಳದೆ, ಎಂದಿನಿಂದ ತನಗೆ ತಿಳಿದಷ್ಟು, ತನಗೆ ತೋರಿದಷ್ಟು, ತನ್ನ ಕೈಗೆ ನಿಲುಕಿದಷ್ಟು ಕಾರ್ಯವನ್ನು ಪೂರಯಿಸುತ್ತ ಬಂದಿರುವಂತೆ, ಸ್ವದೇಶಾಭಿಮಾನಿಯು ಮುಂದೆಯೂ ಕಾರ್ಯ ನಿರ್ವಾಹದಲ್ಲಿ ಆಸಕ್ತಿಯನ್ನಿಡುವುದು ಎಂದೇ ವಿಶ್ವಾಸದಿಂದ ಹೇಳಿಕೊಳ್ಳುವೆವು.

೧೯೩೩

ಜಗತ್ತಿನಲ್ಲಿ ಹಲವು ಉದ್ಯಮಗಳು ಇಡೀ ಮಾನವ ಕೋಟಿಯ ಉದ್ಧಾರಕ್ಕಾಗಿ ಎಂದು ನಡೆದ ಕಾಲವಿದು. ಅವುಗಳಲ್ಲಿ ಒಂದೂ ಮಾತ್ರ ಸಂಪೂರ್ಣವಾಗಿ ನೆರವೇರಿದುದಿಲ್ಲ— ಸಧ್ಯಕ್ಕೆ ತಕ್ಕಂತೆ ಮಾತ್ರ, 'ಪ್ರಯತ್ನಗಳು ಇನ್ನೂ ಮುಂದರಿಯುತ್ತಿವೆ' ಎಂದು ಆರ್ಥಿಕ ಮತ್ತು ಯುದ್ಧತ್ಯಾಗ ವಿಷಯಕ ಪರಿಷತ್ತುಗಳ ಕಮಿಟಿಗಳು ಸೂಚಿಸಿಕೊಂಡಿವೆಯೇ ವಿನಾ, ವಾಸ್ತವವಾಗಿಯೂ, ಪ್ರಯತ್ನಗಳಿಗಿಂತ ವಿಘ್ನಮಾನಗಳೇ ಮುಂದರಿದಿವೆ ಎನ್ನಬಹುದು. ಜನಾಂಗ ಸಂಘದ ದಿಗ್ವಿಜಯಕ್ಕಿಂತ, ಸಾಮ್ರಾಜ್ಯ ಪ್ರಿಯರ ದಿಗ್ವಿಜಯಗಳೇ ಯಶಸ್ವಿಯಾಗಿರುವಾಗ, ದುಡ್ಡೇ ದೇವರೆಂದೂ ಬಲವೇ ಸರ್ವೋತ್ಕೃಷ್ಟವಾದುದೆಂದೂ ಎನ್ನುವವರ ಪಂಗಡಗಳು ಬೆಳೆದು ಬರುವಾಗ,—ಸಂಪನ್ನತೆ, ಶಾಂತಿ, ಕ್ಷೇಮ ಮೊದಲಾದುವುಗಳಿಗೆ ದಾರಿಯೆಲ್ಲಿದೆ?

ವಿಜ್ಞಾನದ ಪ್ರಯೋಗ

ಇದಕ್ಕೆ ಉತ್ಕೃಷ್ಟವಾದ ಉದಾಹರಣೆಗಳೂ ದೊರೆಯದೆ ಇಲ್ಲ. ಕೆಲವೇ ದಿನಗಳ ಹಿಂದೆ, ಯಾವುದೊಂದು ಪ್ರದೇಶದಲ್ಲಿ ಒಂದೇ ಒಂದು ಪ್ರಾಣಿಯಾದರೂ ಎರಡೇ ನಿಮಿಷಗಳಲ್ಲಿ ಮಡಿದು ಹೋಗುವ ಹಾಗೆ ಮಾಡಬಲ್ಲ ತೀಕ್ಷ್ಣ ವಾಯುವನ್ನು ಫ್ರೆಂಚರೊಬ್ಬರು ಕಂಡು ಹಿಡಿದ ವಾರ್ತೆ ಹರಡಿತು. ಉಕ್ಕಿನ ಕಗದವನ್ನಾದರೂ ಗಾಳಿಯಂತೆ ತೂರಿಸಬಲ್ಲ ಒಂದು ಹೊಸ ಲೋಹವನ್ನು ಇಂಗ್ಲಿಷರು ಕಂಡು ಹಿಡಿದಿರುವರು. ಎಂತಹ ಗುಂಡಿನೇಟನ್ನೂ ತಡೆಯಬಲ್ಲ ರೀತಿಯಲ್ಲಿ ಉಕ್ಕನ್ನು ಘನೀಕರಿಸಲು ಜಪಾನಿನವರು ಈಗ ಶಕ್ತರಾಗಿರುವರು. ಹೀಗಾದರೆ, ಯಾರ ಕೈ ಮೇಲೆಯಾಗುವುದೋ ಎಂಬ ಆಕಾಂಕ್ಷೆ ಪಣಗಳಂಗಳೇ ವಿಜ್ಞಾನ ಶಾಸ್ತ್ರವನ್ನು ಲೋಕಧ್ವಂಸಕ್ಕಾಗಿಯೇ ವಿನಿಯೋಗಿಸಬೇಕೆಂಬ ಆತುರವು ಜನಾಂಗಗಳಲ್ಲಿ ಬೆಳೆಯದೆ ಇರುವುದೆಂತು? ಇದರಿಂದ, ಸರ್ವಾಂಗ ಸಿದ್ಧರಾದವರು ಒಂದಲ್ಲ ಮತ್ತೊಂದು ದಿನ ಯುದ್ಧಕ್ಕೆ ಕೈಯಿಕ್ಕದೆ ಇರುವರೆ? ಯುದ್ಧಕ್ಕಿಳಿವರೆಂದ ಬಳಿಕ, ಶಾಂತಿಯಿಂದ ನ್ಯಾಯವಾಗಿ ಬಾಳಬೇಕೆಂಬ ಸಹಜ ಬುದ್ಧಿಯು ಅವರಿಗೆ ಸಾಧ್ಯವೆ?—ನಮ್ಮ ಶ್ರೀಮಾನ್ ಚಕ್ರವರ್ತಿಯವರು 'ಪ್ರಜೆಗಳು ವಿಜ್ಞಾನ ಪ್ರಯೋಜನವನ್ನು ಅತಿಶಯವಾಗಿ ಹೊಂದುತ್ತ ಸುಖವಾಗಿರಲಿ' ಎಂದು ನವವರ್ಷದ ಸುಮುಹೂರ್ತದಲ್ಲಿ ಸಾರಿದ ರಾಯಸಕ್ಕೆ ಸರ್ವರೂ ಸಮ್ಮತರಾಗಿ ಬಾಳಲು ಕಲಿತರೆ ಮಾತ್ರ ಜಗತ್ತಿಗೆ ಸುಖವಲ್ಲವೆ? ಭಗವಂತನ ಆ ಕಡೆಗೆ ಮುಖಂಡರ ದೃಷ್ಟಿಯನ್ನು ತಿರುಗಿಸಬೇಕು.

ಕಾಸಿಲ್ಲದವನ ಮೀಸೆ ನೋಡಬಾರದೆ?

ನಮ್ಮ ದೇಶದಲ್ಲಿ ಉಂಟಾಗಲಿರುವ ಹೊಸ ಪ್ರಾಂತ್ಯಗಳಲ್ಲಿ ಒರಿಸ್ಸಾ ಪ್ರಾಂತ್ಯವೊಂದು. ಉತ್ಕಲೋದ್ಯಮದ ಫಲವಾಗಿ, ಮದ್ರಾಸು ಆಧಿಪತ್ಯದ ಹಲವು ತುಂಡುಗಳೂ ಇದರಲ್ಲಿ ಸೇರಿ ಇದು ಹೊಸ ಪ್ರಾಂತ್ಯವಾಗುವುದು. ಆದರೆ, ಆರಂಭದಲ್ಲಿಯೆ ಕ್ಷಯವೆಂಬಂತೆ, ಬೊಕ್ಕಸ ಬರಿದಾಗಿದೆ; ಇಂಡಿಯಾ ಸರಕಾರವು ಇತರ ಪ್ರಾಂತ್ಯಗಳಿಂದ ಕೂಡಿಸಿದ ಕಂದಾಯದ ಅಂಶವೊಂದನ್ನು ಪ್ರತಿ ವರ್ಷವೂ ಈ ಪ್ರಾಂತ್ಯಕ್ಕೆ ಖರ್ಚಿಗೆ ಕೊಡಬೇಕಾಗಿದೆ. ಆದರೆ, ಅದರಿಂದೇನು? 'ಕಟಕ'ವು ರಾಜಧಾನಿಯಾಗಲಿ; 'ಪುರಿ' ಬೇಸಗೆಯಲ್ಲಿ ಪ್ರಧಾನ ಪುರವಾಗಲಿ; 'ಮಹೇಂದ್ರಗಿರಿ'ಯು ಗವರ್ನರರ ಗ್ರೀಷ್ಮ ಕಾಲದ ವಸತಿಯಾಗಲಿ; 'ಗೋಪಾಲಪುರ'ದಲ್ಲಿ ೫೦,೦೦೦ ರೂಪಾಯಿ ವ್ಯಯಿಸಿ, ಹೀಗೇ ಸರ್ಕಿಟು ಮನೆಯೊಂದನ್ನು ಕಟ್ಟಿಸಿರಿ— ಎಂದು ನಾಲ್ಕು ರಾಜಧಾನಿಗಳನ್ನು ಇಷ್ಟರಲ್ಲೇ ಏರ್ಪಡಿಸಿದ್ದಾಗಿದೆ. ಹೊಸ ಪ್ರಾಂತ್ಯವಾಗುವುದಕ್ಕೆ ಪ್ರತಿ ವರ್ಷದ ಸಾಲ ಪಡೆದು ಜೀವಿಸಬೇಕಾಗಿರುವಾಗ, ನಾಲ್ಕು ರಾಜಧಾನಿಗಳ ಶಿಫಾರಸು ಎಷ್ಟು ಸಂಗತವಾದುದು?

ಎಂಗ್ಲೋ ಇಂಡಿಯನರು

"ಇವರು ನಮ್ಮ ಸರಕಾರದ ಬಹಳ ಆದರಕ್ಕೆ ಅನ್ಯತ ಬಾಧ್ಯರಾದವರು. ಹಾಗೆಂದು "ನಾವು ಸರಕಾರದಲ್ಲಿ ವಿಶೇಷ ಭಕ್ತಿಯುಳ್ಳವರೆಂದೇ ನಮ್ಮನ್ನು ಹಿಂದೀಯರು ಮೈತ್ರಿಯಿಂದ ಕಾಣುತ್ತಿಲ್ಲ" ಎಂದು ಇವರ ಮುಖಂಡರಾಗಿರುವ ಸರ್ ಹೆನ್ರಿ ಗಿಡ್ನಿಯವರು ಇಂಗ್ಲೆಂಡಿನಲ್ಲಿ ಹೇಳಬೇಕಿತ್ತೇ? ಆದರಿಂದ, ಭಾರತವಾಸಿಗಳ ಆಕಾಂಕ್ಷೆಗಳಿಗೆ ವಿರುದ್ಧರಾಗಿರುವ ಟೋರಿ ಕೂಟದಲ್ಲಿ ತಮಗೆ ಇನ್ನಷ್ಟು ಹೆಚ್ಚಿನ ಆದರ ದೊರೆಯಬಹುದಾಗಿ ಇವರು ಭಾವಿಸಿದ್ದಿರಬೇಕು. ಆದರೆ, ಲಂಡನಿನಲ್ಲೇ ಇವರಿಗೆ ಪ್ರತ್ಯುತ್ತರ ಕೊಡುವ ವಿವೇಕವುಳ್ಳ ತರುಣರೂ ದೊರೆತರು. "ಯುದ್ಧ ಕಾಲದಲ್ಲಿ ಸಾವಿರಗಟ್ಟಲೆಯಾಗಿ ಹಿಂದೀಯರು ರಣರಂಗದಲ್ಲಿ ರಾಜಭಕ್ತಿ ಪ್ರದರ್ಶಿಸಿ ಆತ್ಮಬಲಿಯನ್ನಿತ್ತುದಿಲ್ಲವೆ? ಅವರನ್ನು ಯಾರೂ ದೂರವಿರಿಸಿರುವರೆ? ಹಾಗಿರುತ್ತ, ಎಂಗ್ಲೋ ಇಂಡಿಯನರನ್ನು ಮಾತ್ರ ಹಾಗೆ ದೂರವಿರಿಸುವರೆಂದರೆ ಅರ್ಥವೇನು?—ಗಿಡ್ನಿಯವರ ವಂಶವು, ಕೇವಲವಾಗಿ ತಮ್ಮ 'ತಂದೆಯ ದೇಶ'ದ ಕಡೆಗೆ ವಿಶೇಷ ವಾತ್ಸಲ್ಯವನ್ನಿಟ್ಟು, ತಮ್ಮ 'ಮಾತೃ ಭೂಮಿ'ಯಾಗಿರುವ ಭಾರತ ವರ್ಷವನ್ನು ದುರ್ಲಕ್ಷಿಸಿಯದೆ" ಎಂದೇ ಉತ್ತರ ತಾಯಿಯನ್ನು ಅಲಕ್ಷಿಸಿದವರ ಗತಿಯೆ ಇದು.

ಯುಗಾದಿಯ ಬಿರುದುಗಳು

ಜನವರಿ ೩ನೇ ೧೯೩೪ರಲ್ಲಿ ಪ್ರಕಟವಾದ ಬಿರುದುಗಳಲ್ಲಿ ನಮ್ಮ ಜಿಲ್ಲೆಯ ಮೂವರು ಬಹುಮಾನಿತರಾಗಿರುವರೆಂದು ತಿಳಿಸಲು ತುಂಬಾ ಸಂತೋಷವೆ. ರಾವ್ ಬಹದ್ದೂರ್ ಬಿರುದು ಶ್ರೀಮಾನ್ ಬಂಟ್ವಾಳ ವೆಂಕಟ್ರಾವ್, ರಿಟಾಯರ್ಡ್ ಸೆಷನ್ಸ್ ಜಡ್ಜರು ಮತ್ತು ಶ್ರೀಮಾನ್ ಡಾ| ವಡೇರ ಪಟ್ಟ ಪದ್ಮನಾಭ ಕಾಮತ್, ಜಿಲ್ಲಾ ಸರ್ಜನರು ಇವರಿಗೆ ದೊರೆತಿದೆ. ನಮ್ಮ ಜಿಲ್ಲೆಯವರಾಗಿ ಬೊಂಬಾಯಿಯ ಸೆಕ್ರೆಟೆರಿಯಟಿನಲ್ಲಿ ಜೂನಿಯರ್ ಸುಪರಿಂಟೆಂಡೆಂಟರಾಗಿರುವ ಶ್ರೀಮಾನ್ ಕಾಸರಗೋಡು ಭುಜಂಗ ಕಾಮತ್ ಇವರು "ರಾವ್ ಸಾಹೇಬ್" ಬಿರುದು ಪಡೆದಿರುವರು. ಬಿರುದುಗಳು, ಉತ್ತಮ ರೀತಿಯಲ್ಲಿ ಕೆಲಸ ನಡಸಿ, ಸಂತೃಪ್ತಿಯನ್ನು ಉಂಟು ಮಾಡಿದ ಕಾರಣಗಳಿಂದ ಬಳಿಕ, ನಮ್ಮ ಜಿಲ್ಲೆಯ ಮೂವರು ಗೌಡ ಸಾರಸ್ವತ ಸದ್ಗೃಹಸ್ಥರು ಸಂತೃಪ್ತಿಕರವಾಗಿ ತಮ್ಮ ಕರ್ತವ್ಯವನ್ನು ನೆರವೇರಿಸಿ ಜಿಲ್ಲೆಗೆ ಕೀರ್ತಿ ತಂದವರೆಂದು, ಜಿಲ್ಲೆಯನ್ನು ಅಭಿನಂದಿಸುವುದರಲ್ಲಿ ಹಿಂತೆಗೆಯ ಬರುವುದೆ?

ಹೊಸ ವರ್ಷದ ಬಹುಮಾನ

ಹೊಸ ವರ್ಷದ ಗೌರವಾರ್ಥವಾಗಿ ಚಕ್ರವರ್ತಿಯವರು ಸರ್ ತೇಜ ಬಹದ್ದೂರ್ ಸಪ್ರೂರವರನ್ನೂ ಆಗಾಖಾನರನ್ನೂ ಪ್ರಿವಿ ಕೌನ್ಸಿಲರನ್ನಾಗಿ ಆರಿಸಿರುವರು. ಕಳೆದ ಮೂರು ರೌಂಡ್‌ಟೇಬಲ್ ಪರಿಷತ್ತುಗಳಲ್ಲೂ, ಜೊಯಿಂಟ್ ಸಿಲೆಕ್ಟ್ ಕಮಿಟಿಯಲ್ಲೂ ದುಡಿದ ಪರಿಣಾಮವಾಗಿ ಇವರಿಬ್ಬರಿಗೂ ದೊರೆತ ಬಹುಮಾನಗಳು ಸಾಕಲ್ಲವೇ? ಇವರೊಡನಿದ್ದ ಜಯಕರರಿಗೆ ಮಾತ್ರ ಏನೂ ದೊರೆಯದಿದ್ದುದು ದುಃಖಕರ. ಸಪ್ರೂರವರ ದುಡಿಮೆಗಾಗಿ ಈ ವರ್ಷ ಏನಾದರೂ ಲಭಿಸೀತೆಂದು ಹೆಚ್ಚಿನವರು ತಿಳಿದಿದ್ದರು. ಅದು ಸಿಕ್ಕಿತು.— ಇನ್ನಾದರೂ ಸಪ್ರೂಗಳು ಶ್ವೇತಪತ್ರದ ವಿರೋಧವಾಗಿ ಏನನ್ನೂ ಹೇಳರಿರಲಿ.

ಹೋರರಿಗೆ ಜಿ. ಸಿ. ಎಸ್. ಐ.

ರೌಂಡ್‌ಟೇಬಲ್ ಪರಿಷತ್ತುಗಳಲ್ಲಿ ಸರ್ ಸಾಮುವೇಲ್ ಹೋರರು ಮಾಡಿದ ಪ್ರಚಂಡ ಕೆಲಸಕ್ಕಾಗಿಯೂ ಸಾಧನೆಗಾಗಿಯೂ, ಪ್ರಧಾನ ಸಚಿವರ ಶಿಫಾರಸು ಮೇರೆಗೆ ಸರ್ ಸಾಮುವೇಲ್ ಹೋರರಿಗೆ ಜಿ. ಸಿ. ಎಸ್. ಐ. ಪದವಿಯು ದೊರೆಯಿತು. ಹಿಂದೂಸ್ಥಾನ ಬವರ್ಗಗಳ ಪ್ರತಿನಿಧಿಗಳೊಡನೆ ಸಮ್ಮಿಳಿತರಾಗಿ ಅವರು ಮಾಡಿದ ಸಾಧನೆಯು ಒಂದು ನಿಯಮಿತ ಸ್ಥಿತಿಗೆ ಬಂದು ಮುಟ್ಟಿರುವುದರಿಂದಲೂ ಅವರ ಉದ್ಯಮವು ಸರ್ವ ಶ್ಲಾಘ್ಯವಾಗಿರುವುದರಿಂದಲೂ ಈ ಸಂದರ್ಭವನ್ನು ಕಳಕೊಳ್ಳದೆ, ಅವರಿಗೆ ಅಂತಹ ಪದವಿ ದಾನ ಮಾಡುವುದು ವಿಹಿತವೆಂದು ಬ್ರಿಟಿಷ ಸರಕಾರವು ತಿಳಿದುದಾಗಿ ರೂಟರನು ತಿಳಿಸಿರುವನು.

ಪರಂಪರೆಯಾಗಿ ಬಂದ ೧೪೦, ೧೫೦ ಇತರರು, ೨೦ ಅಧಿಕರು ಅಂತು ೩೨೦ ಮಂದಿ ಮಾತ್ರ ಈ ಮಂದಿರದ ಅಲಂಕಾರಕ್ಕೆ ಇನ್ನು ಸಾಕೆಂದು ಸೂಚಿಸಿ ಒಂದು ಮಸೂದೆ ಮುಂದೆ ಬಂದಿದೆ.

* * * *

ನಾವೂ ದೇಶದ ಸೇವಕರು ಹೊಂತು ಹೆಕ್ಕಿನಿಂದ ಬಾಧಿಸುವವರಲ್ಲ ಎಂದು ಉಳಿದ ೩೫೦ರ ದೂರು! ಹೊರಗೆ ಹೋಗೆಂದರೆ,—ಸೇವಕರು, ಒಳಗೆ ಉಳಿದರೆ, ಪಕ್ಕಿನವರು ಎಂದೇ ಇವರನ್ನು ಟೀಕಿಸುವವರೂ ಪತ್ರಿಕೆಗಳಲ್ಲಿ ಬರೆವರು.

NOTES.

ನೋಟಗಳು.

ಮದ್ರಾಸಿನವರು ಕಾದಾಡಲರಿಯರು, ಮರಾಠೆರೇ ಮುಖ್ಯರು ಎಂಬೊಂದು ಸರ್ವಜ್ಞರ ಮಾತಿದ್ದಿತು. ಡೆಹರಾಡೂನಿನಲ್ಲಿ ವರ್ಷಕ್ಕೊಮ್ಮೆ ಆಫಿಸರರಾಗಲು ಚುನಾಯಿಸುವ ವಿದ್ಯಾರ್ಥಿಗಳಲ್ಲಿ ಮರಾಠರೊಬ್ಬರೂ ಇಲ್ಲ. ದಂಡಿನ ಆಫಿಸರರಾಗಲು ತರಬೇತಿನ ಶಾಲೆ ತೆರೆದರೆ, ವಿದ್ಯಾರ್ಥಿಗಳು ಕಡಿಮೆಯಾಗರು ಎಂದವರು ಈಗೆಲ್ಲಿರುವರು?

* * * *

ನಿರುದ್ಯೋಗಿಗಳಾಗಿ ಅಹಿಂಸಾವಾದಿಗಳಾಗಿ ಬಾಳುವುದು ವುದು ಕೀರ್ತಿಕರವೆಂದೇ ಇದು ಸಾರುತ್ತಿದೆಯೆ?

* * * *

ಬರ್ಮದ ಜನಸಂಖ್ಯೆಯಲ್ಲಿ, ನೂರರಲ್ಲಿ ಆರು ಮಂದಿ ಹಿಂದೀಯರು ಬರ್ಮವನ್ನು ಪ್ರತ್ಯೇಕಿಸುವ ಗಡಿಬಿಡಿಯಲ್ಲಿ ಇನ್ನು ಅತ್ತ ಲೆಕ್ಕ ಪ್ರಕಾರ ಹಿಂದೀಯರನ್ನು ಒಳಕ್ಕೆ ಬಿಡಬೇಕು, ಇದ್ದವರನ್ನು ಬೇಗನೆ ಹಿಂದಿರುಗಿಸಬೇಕು ಎಂದೂ ಕಟಾಪಟಿ ನಡೆಯುತ್ತದೆ.

* * * *

ಬಾಲ ಕಡಿದ ಮೇಲೂ, ನಾಯಿಯ ಮೈಮೇಲಿಂದ ಬಾಲಕ್ಕಿಳಿದ ಹೇನುಗಳ ಗೋತ್ರ ವಿಚ್ಛೇದವಾಗದೆ ಹೇಗಿರಬಹುದು?

* * * *

ಈ ನಡುವೆ, ಅಲ್ಲಿಗೆ ಹಣ ಸುರಿದ ಚೆಟ್ಟಿಯಾರರ ಗತಿಯು ಹೇಗಾಗುವುದೋ ಎಂದೂ, ಫ್ರೆಂಚ ವಸಾಹತುಗಳಿಂದ ಬುದ್ಧಿ ಕಲಿತ ಚೆಟ್ಟಿಯಾರರು ಮದ್ರಾಸಿನಲ್ಲಿ ಕೇಳುತ್ತಿರುವರು. ಬರ್ಮಿಯ ಸ್ತ್ರೀಯರನ್ನು ವಿವಾಹವಾಗಿರುವ ಹಿಂದೀಯರ ಅವಸ್ಥೆ ಹೇಗಾಗುವುದು?

* * * *

ಅಮೇರಿಕವು ಮದ್ಯಪಾನ ತ್ಯಾಗ ಮಾಡಿತು. ಕೆಲವೇ ವರ್ಷಗಳಲ್ಲಿ ಮದ್ಯಪಾನವನ್ನೀಗ ಪ್ರಾರಂಭಿಸಬಹುದೆಂದಾಯಿತು. ಅವರಿಗೆ ಮದ್ಯ ಒದಗಿಸುವ ವ್ಯವಸ್ಥೆ ಮಾಡಿ ಸಿದ್ಧರಾದ ಬ್ರಿಟಿಷ ವ್ಯಾಪಾರಿಗಳು ಹೊಸ ಖಜಾನೆಗಳನ್ನು ಕ್ರಿಯಕ್ಕೆ ಕೊಂಡು ಇಟ್ಟರು.

* * * *

ಆದರೆ, ಅಮೆರಿಕದವರು ಸ್ವದೇಶೀ ವ್ರತ ಹಿಡಿದು, ಬ್ರಿಟಿಷರಿಂದ ಆರು ಲಕ್ಷ ಗೆಲನ್ ಮದ್ಯ ಮಾತ್ರ ಮಾರ್ಚಿಯ ತನಕ ತರಿಸಿದರೆ ಸಾಕೆಂದರು. ಈಗ, ಅಮೇರಿಕದ ಬಹಿಯಾರಿಕೆ ಎಷ್ಟಾಗಿದೆ ಎಂದರೆ, ಆರು ಲಕ್ಷ ಗೆಲನ್ ಇಷ್ಟರಲ್ಲೇ ಕುಡಿದೂ ಆಯಿತಂತೆ! ಮೊದಲು ವರ್ಷಕ್ಕೆ ೨೦ ಮಿಲ್ಲಿಯ ಗೆಲನ್ ಬ್ರಿಟಿಷ ಸರಾಯಿ ಬೇಕಾದವರಿಗೆ, ಯುದ್ಧದ ಸಾಲದ ಹಣವು ವಾಪತಿಯಾಗದ ದುಃಖದಿಂದ ೪೦ ಲಕ್ಷ ಗೆಲನ್ ಆದರೂ ಕುಡಿಯದೆ ಬಾಯಾರುವುದು ಮಾಯವಾಗುವುದುಂಟೆ?

* * * *

ಪೊಂಡಿಚೆರಿಯೆಂದರೆ ಅಮರಾವತಿ, ಬ್ರಿಟಿಷ ಹಿಂದೂದೇಶದಿಂದ ತಪ್ಪಿಸಿರಲು ಅದೇ ಯೋಗ್ಯಸ್ಥಳ. ದೇವಾಸ ಮಹಾರಾಜರು ಅಲ್ಲಿರುವರು. ದೇವಾಸರಿಗೆ ದೇಶಭಕ್ತಿ ಬಹಳ ಖಜಾನೆಯಲ್ಲಿ ಹಣವಿಲ್ಲ, ರಾಜ್ಯ ಏನೋ ಆದಿದೆ. ವೈಸರಾಯರು ವ್ಯವಸ್ಥೆ ಮಾಡುವಂತಾಗಿ ತಿಳಿಸಿದರು. ಮಹಾರಾಜರು ಉಪವಾಸ ಮಾಡುವುದಾಗಿ ಹೇಳಿರುವರು.

* * * *

ಸರ್ವದರ್ಶನ ತೀರ್ಥ ಆಸ್ಥಾನ ವಿದ್ವಾನ್ ಶ್ರೀಮಾನ್ ನಾಗೇಶ ಶಾಸ್ತ್ರಿಯವರು (ಬಳ್ಳಾರಿ) ಹುಬ್ಬಳ್ಳಿಯಲ್ಲಿ ಸೇರಿದ ಕರ್ನಾಟಕ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು. ಕನ್ನಡ ಸಾಹಿತ್ಯವು ದ್ರಾವಿಡ ಸಾಹಿತ್ಯದಿಂದ ಹುಟ್ಟಿತೆಂದು ಖಂಡಿತ ಸಾರಿದರು. ಇತರ ಸಾಹಿತ್ಯಗಳ ಮಾದರಿಯನ್ನು ಅನುಸರಿಸುವಾಗ, ಕನ್ನಡವು ತನ್ನ ವೈಯುಕ್ತಿಕತೆಯನ್ನು ತೊರೆಯಬಾರದೆಂದರು, ಹಾಗೂ ವಿದ್ಯಮಾನಗಳಿಗೆ ತಕ್ಕಂತೆ ಬದಲಾಗಬೇಕೆಂದರು. ಹೊಸ ವ್ಯಾಕರಣವಾಗಬೇಕೆಂದೂ ಅವರ ಸೂಚನೆ.

* * * *

ಮೈಸೂರು ವಿಶ್ವ ವಿದ್ಯಾಲಯವು ಈ ಕೆಲಸವನ್ನು ಮಾಡುವುದಕ್ಕೆ ಸಮರ್ಥವಾಗಿದೆ; ಸರಕಾರವು ೫ ವರ್ಷಗಳನ್ನೂ ೫೦೦೦೦ ರೂಪಾಯಿಗಳನ್ನೂ ಮೈಸೂರು ವಿದ್ಯಾಲಯದ ಪಂಡಿತರುಗಳಿಗೆ ಕೊಟ್ಟಲ್ಲಿ, 'ಅಥಾರಿಟಿ'ಯ ವ್ಯಾಕರಣವೊಂದು, ಪರಕೀಯರ ಕೈಗೇನೂ ಒಪ್ಪಿಸದೆ, ಸಕಾಲದಲ್ಲಿ ಸಿದ್ಧವಾದೀತು.

* * * *

ಇಂಗ್ಲಿಷ ಪಾರ್ಲಿಮೆಂಟಿನ ಪ್ರಭುಮಂದಿರದಲ್ಲಿ ೬೭೦ ಮಂದಿ ಶ್ರೀಮಂತರು ನಿರಾತಂಕವಾಗಿ, ಜನತೆಯ ಪಕ್ಷದ ಮಸೂದೆಗಳನ್ನು ಆತಂಕಿಸಬಹುದು. ಒಹುಮಟ್ಟಿಗೆ ಇವರಲ್ಲಿ ೧೦–೨೦ ಮಂದಿ ಮಾತ್ರ ಹಾಜರಿರುವರು. ಗೋತ್ರ

FRESH CONSIGNMENT ARRIVED.

UNEQUAL QUALITY——————EXCEPTIONAL PRICE

A TIRE THAT SAVES YOU REPUTATION AND MONEY.

The Canara Public Conveyance Co., Ltd.

MANGALORE.

ಅಲ್ಲಿಲ್ಲಿಯ ತಂತಿ ವಾರ್ತೆ:— ರುಮೇನಿಯಾ, ವಾಶಿಂಗ್ಟನ್, ಮುಂಬಾಯಿ, ಬರ್ಲಿನ್, ಪೂಂಡಿಚೆರಿ, ಲಕ್ನೋ, ಲಂಡನ್, ಅಲ್ಲಹಾಬಾದ್, ಕೊಲೊಂಬೊ, ಮದುರಾ, ನೆಂಕಿಂಗ್, ಕಲ್ಕತ್ತ, ಮೊಸ್ಕೊ, ಕಡಲೂರು, ಅಹ್ಮದಾಬಾದ್, ಕೌಲಾಲಂಪುರ, ಲಂಡನ್.

ರುಮೇನಿಯಾ

ಇಲ್ಲಿ ತಾ. ೨೯ನೇ ದಿನ ಪ್ರಧಾನ ಮಂತ್ರಿಯವರಾದ ಡುಕಾ ಎಂಬವರು ಇಲ್ಲಿಯ ಅರಸನೊಡನೆ ಮಾತನಾಡಿ ನಡೆಸಿ ರೈಲ್ವೆ ಸ್ಟೇಶನಿನಲ್ಲಿ ಬಂದಿಳಿಯುತ್ತಲೇ, ಒಬ್ಬ ವಿದ್ಯಾರ್ಥಿಯು ಅವರಿಗೆ ಮೂರು ಗುಂಡುಗಳನ್ನೆಸೆದನು. ಅವರು ಅಲ್ಲಿಯೇ ಬಿದ್ದು ಮೃತರಾದರು. ಮೃತರ ಹಣೆಯಲ್ಲಿ ಮೂರು ಬುಲ್ಲೆಟುಗಳಿದ್ದುವು. ವಿದ್ಯಾರ್ಥಿಯನ್ನು ಸೆರೆ ಹಿಡಿದಿರುವರು.

ವಾಶಿಂಗ್ಟನ್

ಇಲ್ಲಿ ತಾ. ೨೮ರಿಂದ ೩೦ರ ವರೆಗೆ ವಿಪರೀತ ಚಳಿ. ೧೮೭೫ನೇ ಇಸವಿಯಿಂದ ಇಷ್ಟರ ತನಕ ಇಂತಹ ಚಳಿಯು ಉಂಟಾಗಿರುವುದಿಲ್ಲ. ಹವಾಮಾಪಕ ಯಂತ್ರವು ಸೊನ್ನೆಯಿಂದ ೫೩ ಡಿಗ್ರಿ ಕೆಳಗಿಳಿಯಿತು. ಹಡ್ಸನ್ ನದಿಯು ಸಂಪೂರ್ಣ ಗಟ್ಟಿಯಾಗಿದೆ. ವಾಹನಗಳು ನಿಂತಲ್ಲಿಯೇ ನಿಂತಿವೆ. ಟ್ವೆಂಟಿಯತ್ ಸೆಂಚುರಿ ಎಂಬ ಹಡಗವು ೫೦ ಮಿನಿಟು ತಡವಾಗಿ ಬಂದಿತು. ಹಿಂದೆ ಯಾವಾಗಲೂ ಹೀಗಾದುದಿಲ್ಲ. ಸಮುದ್ರದಲ್ಲಿರುವ ಸ್ಟೀಮರುಗಳು ಮುಂದರಿಯಲಾರದೆ ಬಂದರಕ್ಕೆ ಹಿಂತಿರುಗಿರುವು. ಅನೇಕ ಸಾವಿರ ಡಾಲರುಗಳು ನಷ್ಟವಾಗಿವೆ.

ಮುಂಬಾಯಿ

ಅಖಿಲ ಭಾರತ ವರ್ಣಾಶ್ರಮ ಸ್ವರಾಜ್ಯ ಸಂಘದ ಆರನೇ ಅಧಿವೇಶನವು ತಾ ೨೯ನೇ ದಿನ ಮುಂಬಾಯಿಯಲ್ಲಿ ಸದಾಯಾತನ ಪಾಂಡೆ ಎಂಬವರ ಅಧ್ಯಕ್ಷತೆಯಲ್ಲಿ ಜರಗಿತು. ಸರ್ ಮನಮೋಹನದಾಸ್ ರಾಮ್ಜಿಯವರು ಸ್ವಾಗತ ಸಮಿತಿಯ ಚೆಯರ್‌ಮೆನರಾಗಿ, ಗಾಂಧಿಜೀಯವರ ಹರಿಜನೋದ್ಧಾರ ಚಳವಳವು ಕೇವಲ ರಾಜಕೀಯ ಸಿ.ತೂರಿಯೆಂದೂ ಅದರಿಂದ ದೇಶಕ್ಕೆ ಹಾನಿಯಿದೆಯೆಂದೂ ಚೆನ್ನಾಗಿ ವಾದಿಸಿ ಹೇಳಿಬಿಟ್ಟರು. ಹಿಂದೂ ಸನಾತನಿಗಳು ಒಕ್ಕಟ್ಟಾಗಿ ಗಾಂಧಿಜೀಯವರ ಎದುರಾಗಿ ಕೆಲಸ ಮಾಡಬೇಕೆಂದೂ ಧೈರ್ಯದಿಂದ ಹೇಳಿದರು. ಹರಿಜನರಿಗೂ ಹಿಂದೂಗಳಿಗೂ ಒಂದಾಗಲು ಎಂದೂ ಸಾಧ್ಯವಿಲ್ಲವೆಂದು ಅವರು ಸಂಪೂರ್ಣ ಮನಸ್ಸಿನಿಂದ ಹೇಳಿದರು. ಅಲ್ಲದೆ ಈ ಮಹನೀಯರು ಸರಕಾರವನ್ನು ನಿಂದಿಸುತ್ತಾ, ಸರಕಾರವು ರಾಣಿ ವಿಕ್ಟೋರಿಯಾರವರ ಹೇಳಿಕೆಗೆ ವಿರೋಧವಾಗಿ ದೇವಸ್ಥಾನ ಪ್ರವೇಶ ಮಸೂದೆಗೆ ಸಮ್ಮತಿಸಿರುವುದು ದುರದೃಷ್ಟ! ಎಂದರು. ಸನಾತನವಾದಿಗಳೂ, ಶಾಸ್ತ್ರವನ್ನು ಮಥಿಸಿದವರೂ ಅದ ಎಲ್ಲಾ ವರ್ಣಾಶ್ರಮ ಧರ್ಮಿಯರು ಗಾಂಧೀ ಮೂವ್ಮೆಂಟನ್ನು ಮುರಿದಿಕ್ಕಬೇಕೆಂದು ಎದೆ ತಟ್ಟಿ ಹೇಳಿದರು.

ಬರ್ಲಿನ್

ಜರ್ಮನಿಯಲ್ಲಿ ನಿರ್ಬಲ ಮಕ್ಕಳು ಜನಿಸಬಾರದೆಂಬ ಯೋಜನೆಯನ್ನು ಸರಕಾರವು ಮಾಡಿದ್ದು ಈ ತಿಂಗಳಿನಿಂದ ೪೦೦೦೦ ನಿರ್ಬಲ ಮಾತಾ ಪಿತೃಗಳಿಗೆ ಅಸ್ತ್ರಗಳ ಮದ್ದು ಕೊಟ್ಟು ಅವರಲ್ಲಿ ಸಂತತಿಯು ಹುಟ್ಟದಂತೆ ಯತ್ನ ನಡೆಸುವರು. ಅನೇಕರಿಗೆ ವಂಶ ಪಾರಂಪರ್ಯದ ರೋಗಗಳಿವೆ. ಅವರಿಗೂ ಸಂತಾನ ಹುಟ್ಟದಂತೆ ಔಷಧಿ ಕೊಡಲಾಗುವುದು. ಮುಂದಕ್ಕೆ ವಿದ್ಯಾರ್ಥಿಗಳ ಸಂಖ್ಯೆಯನ್ನು ನಿರ್ಬಂಧಿಸುವರು. ಯುನಿವರ್ಸಿಟಿಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ಬೆಳೆಯುತ್ತಿರುವುದರಿಂದ ಈ ಅತಿರೇಕವನ್ನು ನಿಲ್ಲಿಸುವುದಕ್ಕಾಗಿ ವಿದ್ಯಾರ್ಥಿಗಳ ಮಾನಸಿಕ, ದೈಹಿಕ, ವಿಚಾರಗಳ ಮೇಲೂ ಅವರ ಗುಣ ನಡತೆ ಮತ್ತು ರಾಷ್ಟ್ರೀಯ ಭಾವನೆಗಳ ಮೇಲೂ ತನಿಖೆ ನಡೆಸಿ ವಿದ್ಯಾರ್ಥಿಗಳನ್ನು ನಾನಾ ದರ್ಜೆಗಳನ್ನಾಗಿ ಮಾರ್ಪಡಿಸಿ ಯುನಿವರ್ಸಿಟಿಗಳಿಗೆ ಪ್ರವೇಶಿಸ ಬಿಡುವರು. ಬರುವ ವರ್ಷ ಅಲ್ಲಿಯ ಯುನಿವರ್ಸಿಟಿಗೆ ೧೫೦೦೦ ವಿದ್ಯಾರ್ಥಿಗಳನ್ನು ಮಾತ್ರ ಸ್ವೀಕರಿಸಲಾಗುವುದು. ೧೯೩೨ರ ತನಕದ ಸರಾಸರಿ ಸಂಖ್ಯೆಯನ್ನು ತೆಗೆದಾಗ ಒಟ್ಟು ವರ್ಷಕ್ಕೆ ೩೬೦೦೦ ವಿದ್ಯಾರ್ಥಿಗಳು ವಿಶ್ವವಿದ್ಯಾಲಯದಲ್ಲಿ ಪ್ರವೇಶ ಪಡೆಯುತ್ತಿದ್ದರು ಎಂದು ಗೊತ್ತಾಗಿದೆ.

ಪೂಂಡಿಚೆರಿ

ದೇವಾಸ್ ಸಂಸ್ಥಾನದ ಮಹಾರಾಜರ ಆಡಳಿತೆಯ ಕುರಿತು ಬಹು ಸಮಯದಿಂದ ಸರಕಾರವು ವಿಚಾರ ಮಾಡುತ್ತಿತ್ತು. ಮೊನ್ನೆ ವೈಸರಾಯರು, ಅಲ್ಲಿಯ ಮಹಾರಾಜರು ಧಾರ್ಮಿಕ ವಿಷಯಗಳಿಗೆ ದಾನ ಮಾಡಿರುವ ಉಂಬಳಿ ಮೊದಲಾದುವುಗಳನ್ನು ಕಡಿಮೆ ಮಾಡಿ ಸಂಸ್ಥಾನದ ಆರ್ಥಿಕ ಸ್ಥಿತಿಯನ್ನು ಸಮತೂಕಗೊಳಿಸಬೇಕೆಂದು ಯೋಚಿಸಿದರು. ಇದು ತಿಳಿದು ಬಂದೊಡನೆ ದೇವಾಸ್ ಮಹಾರಾಜರು ದುಃಖಗೊಂಡು ಸರಕಾರವು ತನ್ನ ನಿರ್ಧಾರವನ್ನು ಹಿಂತೆಗೆಯುವ ತನಕ ತಾನು ಅಲ್ಪ ಆಹಾರವನ್ನು ಸೇರಿಸಿ ವ್ರತವನ್ನು ಮಾಡುವೆನೆಂದು ನಿರ್ಧರಿಸಿರುವರು. ಅವರು ತಂತಿ ಮೂಲಕ ವೈಸರಾಯರಿಗೆ ತನ್ನ ನಿರ್ಧಾರವನ್ನು ತಿಳಿಸುತ್ತಾ, ತಾನು ಹಿಂದೂವಾಗಿರುವುದರಿಂದ ಅಂತಹ ಧಾರ್ಮಿಕ ವಿಷಯಗಳಲ್ಲಿ ಕಡಿತವನ್ನು ಮಾಡುವುದು ಪ್ರಸಕ್ತವಲ್ಲವೆಂದು ತಿಳಿದಿರುವೆನಾಗಿಯೂ, ಸಂಸ್ಥಾನದಲ್ಲಿ ವಿಶೇಷ ಸಂಬಳ ಪಡೆಯುವ ನೌಕರರಿರುವಾಗ, ಅವರ ಸಂಬಳವನ್ನು ಕಡಿಮೆ ಮಾಡದೆ ಈ ರೀತಿ ಧಾರ್ಮಿಕ ಸಂಗತಿಗಳಿಗೆ ವಿಘ್ನವನ್ನು ತಂದೊಡ್ಡುವುದು ನ್ಯಾಯವಲ್ಲವೆಂದೂ ಹೇಳಿರುವರು. ಈ ವಿಚಾರವಾಗಿ ಯಾವ ಬಾಧಕವನ್ನೂ ಮಾಡಲಾಗುವುದಿಲ್ಲವೆಂದು ತಿಳಿಸುವ ತನಕ ತಾನು ವ್ರತಾಚರಣೆಯಲ್ಲೇ ಇರುವೆನೆಂದೂ ಹೇಳಿರುವರು. ವೈಸರಾಯರು ಮಹಾರಾಜರ ಈ ಹೇಳಿಕೆಗೆ ಒಪ್ಪದಿದ್ದರೆ ಸಂಸ್ಥಾನದಲ್ಲಿ ತನ್ನಲ್ಲಿರುವ ವಿಗ್ರಹಗಳನ್ನು ತಾನು ಪೊಂಡಿಚೇರಿಗೆ ತರಿಸಿ ಪೂಜಿಸುತ್ತಿರುವೆನೆಂದು ಮಹಾರಾಜರ ಹೇಳಿಕೆ.

ಲಕ್ನೋ

ಇಲ್ಲಿಯ ಜವಾಲಾಪುರಿಶಾಸ್ತ್ರಿ ಮತ್ತು ಅಚಲಕೇರ ಎಂಬಲ್ಲಿಯ ಜನರ ನಡತೆಯು ಅಧಿಕಾರಿಗಳಿಗೆ ಒಪ್ಪುವುದಿಲ್ಲವಾದುದರಿಂದ ಈ ಪ್ರಾಂತ್ಯಗಳಲ್ಲಿ ಪೋಲೀಸರ ಸಂಖ್ಯೆಯನ್ನು ಹೆಚ್ಚಿಸಬೇಕಾಗಿ ಸರಕಾರದವರ ಆಲೋಚನೆ. ಜನರನ್ನು ಸಾರ್ವತ್ರಿಕವಾಗಿ ತಿಳಿಯಬೇಕಾದರೆ ಅಧಿಕಾರಿಗಳು ಎಷ್ಟು ಜಾಣರಿರಬೇಕು!

ಲಂಡನ್

ಗ್ರೇಟ್ ಬ್ರಿಟನಿನಲ್ಲಿ ದುಡ್ಡು ಹೆಚ್ಚುತ್ತಿದೆ. ಜನರಲ್ ಪೋಸ್ಟಾಫೀಸಿನಲ್ಲಿಯ ಲೆಕ್ಕದಿಂದ ತಿಳಿದು ಬರುವಂತೆ ಸೇವಿಂಗ್ಸ್ ಬೇಂಕಿನಲ್ಲಿ ೧೯೩೩ರಲ್ಲಿ ಒಟ್ಟು ೩೨೦,೦೦೦೦೦೦ ಪೌಂಡುಗಳಿದ್ದದಾಗಿ ಗೊತ್ತಾಗಿದೆ. ೧೯೩೨ಕ್ಕಿಂತ ೩೩ರಲ್ಲಿ ೫೬,೦೦೦,೦೦೦ ಪೌಂಡುಗಳು ಹೆಚ್ಚಾದುವು. ಈ ಹಣವು ಇಂಗ್ಲಾಂಡಿನ ಬಡಬಗ್ಗರಿಂದಲೂ ಶೇಖರಿಸಿದುದಾಗಿದೆ. ೧೯೩೩ರಲ್ಲಿ ಶೇಖರಿಸಿಟ್ಟಷ್ಟು ಹಣವನ್ನು ಬ್ರಿಟನರು ಯಾವಾಗಲೂ ಶೇಖರಿಸಿದ್ದಿಲ್ಲ. ೧೯೩೧ರಲ್ಲಿ ೧೧,೦೦೦,೦೦೦ ಪೌಂಡುಗಳನ್ನು ಮಾತ್ರ ಹೆಚ್ಚನ್ನು ಶೇಖರಿಸಿಟ್ಟರು. ಹಿಂದೂಸ್ಥಾನದವರು ಬೇಂಕುಗಳಿಂದ ಬರಿದು ಮಾಡಿ ತೆಗೆಯುವಾಗ ಇಂಗ್ಲಾಂಡಿನವರು ಬೇಂಕುಗಳನ್ನು ತುಂಬಿಸುವುದು ಅಸ್ವಾಭಾವಿಕವೇ?

ಕಲ್ಕತ್ತ

ಡಾ| ಬಿ ಸಿ ರೋಯ್ (ಮಾಜಿ ಮೇಯರರು) ತಾ ೩೧ನೇ ದಿನ ತನ್ನ ಕಾರಿನಲ್ಲಿ ಹೋಗುತ್ತಿರುವಾಗ, ಟ್ರೇಂ ಕಾರಿಗೆ ಢಕ್ಕೆ ಹೊಡೆದು ಕಾರು ಹುಡಿ ಹುಡಿಯಾಯಿತು. ಡ್ರೈವರನಿಗೆ ವಿಶೇಷ ಜಖಂ ಉಂಟಾಗಿದೆ. ರೋಯ್‌ರವರ ಕಾಲು ಕೈಗಳಿಗೂ ಘಾಯಗಳಾಗಿವೆ.

ಮೊಸ್ಕೊ

ದಶಂಬರ ಮೂರನೇ ತಾರೀಕಿನ ದಿನ ರೈಡ್ ಸೈನಿಕರ ಮೇಲೆ ತನ್ನ ಮೋಟರ್ ಕಾರನ್ನು ಓಡಿಸಿ ೪ ಜನರನ್ನು ಕೊಂದು ಕೆಲವರನ್ನು ಜಖಂಗೊಳಿಸಿದ ವೆಲಂಟೈನ್ ಎವಾನೊ ಎಂಬವನಿಗೆ ಇಲ್ಲಿಯ ಸಿಟಿ ಕೋರ್ಟಿನವರು ಮರಣ ದಂಡನೆಯನ್ನು ವಿಧಿಸಿರುವರು. ಮನಸ್ವೀ ಮೋಟರ್ ಡ್ರೈವ್ ಮಾಡಿ ಜನರನ್ನು ಜಖಂಗೊಳಿಸುವವರಿಗೆ ಇಲ್ಲಿಯ ಕಾನೂನು ಪ್ರಕಾರ ೧೦ ವರ್ಷಗಳ ಶಿಕ್ಷೆಯಿದೆ. ಆದರೆ ವೆಲಂಟೈನನು ಸರಕಾರ ವಿರೋಧವಾಗಿರುವುದರಿಂದಲೂ, ಅವನು ಸೈನಿಕರನ್ನು ಕೊಂದುದರಿಂದಲೂ ಅವನನ್ನು ಗುಂಡಿನಿಂದ ಕೊಂದಿಕ್ಕಬೇಕೆಂದೂ, ಇಂತಹ ಶಿಕ್ಷೆಯು ಇನ್ನಿತರ ಮೋಟರ್ ಡ್ರೈವರಿಗೂ ಎಚ್ಚರಿಕೆಯಾಗಬೇಕೆಂದೂ ಸರಕಾರವು ಹೇಳಿರುತ್ತದೆ.

ಕಡಲೂರು

ದಕ್ಷಿಣ ಆರ್ಕಾಟಿನ ಕಡಲೂರಿನಲ್ಲಿ ಭಯಂಕರ ಬಿರುಗಾಳಿಯೆದ್ದು ಮನೆಮಂದಿರಗಳು ಹಲವು ಬಿದ್ದಿವೆ. ತಂತಿ ಟೆಲಿಫೋನುಗಳ ಸರಿಗೆಗಳು ಬಿದ್ದು ಹೋದುದರಿಂದ ವ್ಯವಹಾರವು ನಿಂತು ಹೋಗಿ ಸಮುದ್ರವು ಉಕ್ಕೇರಿ ಬಹುಭಾಗವು ಜಲಮಯವಾಯಿತು. ದಡದಲ್ಲಿನ ಅನೇಕ ಮನೆಗಳು ನೀರುಪಾಲಾದುವು.

ಅಹ್ಮದಾಬಾದ್

೧೬ ವರ್ಷದ ಪ್ರಾಯದವನೊಬ್ಬ ೬ ವರ್ಷ ಪ್ರಾಯದ ಬಾಲಿಕೆಯನ್ನು ವಿವಾಹವಾದುದಕ್ಕಾಗಿ ಅಹ್ಮದಾಬಾದಿನಲ್ಲಿ ಖಟ್ಲೆ ನಡೆಯಿತು. ಶಾರದಾ ಶಾಸನವನ್ನುಲ್ಲಂಘಿಸಿದುದಕ್ಕಾಗಿ ಮದುಮಗನ ತಂದೆ, ಪುರೋಹಿತ ಮತ್ತು ವರನಿಗೂ ವಿವಿಧ ಜುಲ್ಮಾನೆಯಾಯಿತು.

ಕೌಲಾಲಂಪೂರ್

ಫೆಡರೇಟೆಡ್ ಮಲೆಯಾ ಸ್ಟೇಟ್ಸ್‌ನಲ್ಲಿಯ ಕೌಲಾಲಂಪೂರ್ ಎಂಬಲ್ಲಿ ಸುಬ್ಬಯ್ಯ ಎಂಬವನು, ತಮಿಳು ನಾಟಕವೊಂದು ನಡೆಯುತ್ತಿದ್ದಾಗ ಟಿಕೇಟು ಕಲೆಕ್ಟರನ ಅಪ್ಪಣೆಯನ್ನುಲ್ಲಂಘಿಸಿ ಒಳಗೆ ಉಳಿತು, ಟಿಕೇಟನ್ನು ಕೇಳಿದಾಗ ಹೊರಗೆ ಹೋಗಿ ಹದಿನೈದು ಜನರನ್ನು ಕರೆಕೊಂಡು ಬಂದು ಟಿಕೇಟು ಕಲೆಕ್ಟರನಿಗೂ ಅವರಿಗೂ ಮಾರಾಮಾರಿ ನಡೆಯಿತು. ಸುಬ್ಬಯ್ಯನು ತಿವಿಯಲ್ಪಟ್ಟು ಆಸ್ಪತ್ರೆಯಲ್ಲಿ ಮರಣ ಪಟ್ಟನು. ಕೆಲವರು ದಸ್ತಗಿರಿಯಾಗಿದೆ. ನಾಟಕಕ್ಕೆ ಬಂದ ಜನರು ಹಿಂದೆ ಹೋಗಬೇಕಾಯಿತು.

ಲಂಡನ್

ಬ್ರಿಟನಿನ ಹೆಸರಾಂತ ಮತ್ತು ಗೌರವಸ್ಥರಾಗಿರುವ ಬಿಷಪ್ ಒಫ್ ಎಲಿ ಇವರು ತಾ. ೧೯ನೇ ದಿನ ಮೃತರಾದರು. ಕಳೆದ ಆಗೋಸ್ತು ತಿಂಗಳಲ್ಲಿ ಅಲ್ಪ ಪರ್ವತವನ್ನು ಹತ್ತುವಾಗ ಇವರ ನಾಲ್ಕನೇ ಪುತ್ರನಾದ ವ್ಹಿಟ್ ಹೋವ್ಸನ್ ಎಂಬವರು ಜಖಂಗೊಂಡು ತೀರಿಹೋದರು. ಪುತ್ರ ಶೋಕದಿಂದಲೇ ಬಿಷಪರು ಕಾಲವಾದರು.

ಅಲ್ಲಹಾಬಾದ್

ಇಲ್ಲಿಯ "ಪಯನಿಯರ್" ಪತ್ರಿಕೆಗೆ ಗೊತ್ತಾಗಿರುವಂತೆ ವೈಸರಾಯರು ಆದಷ್ಟು ಬೇಗನೇ ಇಂಗ್ಲಾಂಡಿಗೆ ತೆರಳುವರು. ಲೋರ್ಡ್ ವಿಲ್ಲಿಂಗ್ಡನ್ನರು ಮೇ ತಿಂಗಳಲ್ಲಿ ಹೊರಡಬೇಕೆಂದಿದ್ದರೂ, ಜೋಯಿಂಟ್ ಸಿಲೆಕ್ಟ್ ಕಮಿಟಿಯು ಶ್ವೇತಪತ್ರವನ್ನು ಕೊನೆಯದಾಗಿ ವಿಮರ್ಶಿಸುವ ಮೊದಲು ವಿಲ್ಲಿಂಗ್ಡನ್ನರು ಅತ್ತ ತೆರಳುವರೆಂದು ಪ್ರಕಟವಾಗಿರುತ್ತದೆ. ಮಾರ್ಚ ತಿಂಗಳಲ್ಲೇ ಅವರು ಹೊರಡಬಹುದು.

ಕೊಲೊಂಬೊ

ಸೀಲೋನಿನ ಪೋಲೀಸ ಫೌಜಿನಲ್ಲಿ ೫೭ ಯುರೋಪಿಯಾನರಿರುವರು. ಇವರ ಸಂಖ್ಯೆಯನ್ನು ಕಡಿಮೆ ಮಾಡಿ ಇವರ ಸ್ಥಾನದಲ್ಲಿ ಸಿಲೋನಿನ ಯುವಕರನ್ನು ಆರಿಸಬೇಕೆಂದು ಸಿಲೊನ್ ಅಧಿಕಾರಿಗಳು ಕೇಳಿಕೊಂಡುದಕ್ಕೆ ಸೆಕ್ರೆಟರಿ ಒಫ್ ಸ್ಟೇಟ್‌ರವರು "ಇದು ಸದ್ಯಕ್ಕೆ ಸಾಧ್ಯವಿಲ್ಲ. ಯುರೋಪಿಯಾನರು ಸಾರ್ವಕಾಲಿಕವಾಗಿ ಇರಬೇಕಾಗಿ ಬಂದು. ತಹಾ ಇದೆ" ಎಂದು ಉತ್ತರಕೊಟ್ಟರು.

ಮದುರಾ

ಇಲ್ಲಿ ಕಳೆದ ಗುರುವಾರ ರಾತ್ರಿ ವೆದರ್ ಪುತ್ತಿ ಅಂಗುಲಂ ಎಂಬಲ್ಲಿ ಒಂದು ಮನೆಗೆ ಬೆಂಕಿ ಬಿತ್ತು. ಹೊರಗಿದ್ದವರೆಲ್ಲರೂ ದೂರ ಓಡಿದರು. ಆದರೆ ಇನ್ನೊಂದು ಕೋಣೆಯಲ್ಲಿದ್ದ ಒಬ್ಬಳು ತಾಯಿಯೂ ಅವಳ ಮೂರು ಮಂದಿ ಮಕ್ಕಳೂ ಹೊರಗೆ ಓಡಲಾರದೆ ಬೆಂಕಿಯಿಂದಾವೃತರಾಗಿ ಬೊಬ್ಬಿಡುತ್ತಾ ಮೃತರಾದರು. ಹೊರಗಿನವರು ಅವರ ರಕ್ಷಣೆಗಾಗಿ ಎಷ್ಟು ಯತ್ನಿಸಿದರೂ ಸಾಧ್ಯವಾಗಲಿಲ್ಲ. ಪೋಲೀಸರು ತನಿಖೆ ನಡೆಸಿ ಆಕಸ್ಮಿಕವಾಗಿ ಬೆಂಕಿ ಎದ್ದು ಮರಣಗಳಾದುವೆಂದು ತೀರ್ಮಾನಿಸಿದರು.

ನೆಂಕಿಂಗ್

ಚೀನಾ ಭಂಡಾಯಗಾರರನ್ನು ಹಿಡಿದು ಸಾರ್ವಜನಿಕರೆದುರು ಗುಂಡಿಕ್ಕಿ ಕೊಲ್ಲುವ ಏರ್ಪಾಡನ್ನು ಸರಕಾರವು ಮಾಡಿರುತ್ತದೆ. ಫುಕಿನ್ ಎಂಬಲ್ಲಿ ಭಂಡಾಯಗಾರರು ಹೆಚ್ಚಿರುವುದರಿಂದ ಅಲ್ಲಿರುವ ಬ್ರಿಟಿಷರು ಅಲ್ಲಿಂದ ದೂರ ಹೋಗುವಂತೆ ಆಜ್ಞಾಪಿಸಬೇಕೆಂದು ಚೀನಾ ಸರಕಾರವು ಬ್ರಿಟಿಷ ಸರಕಾರಕ್ಕೆ ಕಾಗದ ಕಳುಹಿಸಿರುತ್ತದೆ.

++ ++

In the Court of the District Judge of South Kanara.

O. P. No. 160/1933

Between —

P. Ramakrishnaya—Petitioner

The above named Petitioner has put in the above petition for his being appointed guardian of the property of the minor Jalajaxiammma that the said property relates to the amount of Rs. 812-6-0 now in Court deposit in O. P. 96/1933 on the file of the Karkal District Munsiff's Court to the credit of the minor Jalajaxiamma. That the Petitioner now seeks to withdraw the amount which is in Court deposit and invest it on good secruity and utilise the interest due on the said amount for the benefit and well-fare of the minor. That this application will come on for hearing on 16-1-1934 and if any one interested in opposing this application may come forward on that day and oppose the same in the above Court.

Mangalore
16-12-1933.

Kasargod P. Vasudeva Rao,
Advocate for Petitioner.

ಗೊಡ್ರೇಜ್ ಸಾಬೂನುಗಳಿಗೆ

ಅಮೂಲ್ಯವೂ ಹೊಸತೂ ಆದ ಪ್ರಾಶಸ್ತಿ

ಡಾ॥ ಎಂ. ಎ. ಅನ್ಸಾರಿ. ಎಂ. ಡಿ

(ಅಖಿಲ ಭಾರತ ಕಾಂಗ್ರೆಸ್ಸಿನ ಮಾಜಿ ಅಧ್ಯಕ್ಷರು)

ಗೊಡ್ರೇಜ್ ಸಾಬೂನುಗಳ ಉತ್ಕೃಷ್ಟ ಗುಣಗಳನ್ನು ಕಂಡು ನಾನು ಸಂತೋಷದಿಂದ ಮೆಚ್ಚಿದವನಾಗಿರುತ್ತೇನೆ. ಕಳೆದ ಹತ್ತು ವರ್ಷಗಳಿಂದ ನಾನವುಗಳನ್ನು ಉಪಯೋಗಿಸುತ್ತಿರುವೆನು. ಯುರೋಪಿನಲ್ಲಾಗಲೀ ಇನ್ನಿತರ ಯಾವ ದೇಶದಲ್ಲಾಗಲೀ ತಯಾರಿಸಲ್ಪಟ್ಟ ಸಾಬೂನುಗಳಿಗಿಂತ ಇವು ಅತ್ಯುತ್ಕೃಷ್ಟವೆಂದೇ ನನ್ನ ಅನುಭವದ ಮಾತು. ಅವುಗಳ ಉತ್ಕರ್ಷತೆಯ ದೃಷ್ಟಿಯಿಂದಲೂ, ಅಲ್ಲದೆ ಅವು ಹಿಂದೂದೇಶದಲ್ಲೇ ಸಿದ್ಧಗೊಳಿಸಲ್ಪಟ್ಟವೆಂಬ ದೃಷ್ಟಿಯಿಂದಲೂ ನಾನವುಗಳನ್ನು ಹಿಂದೀಯ ಜನತೆಗೆ ಶಿಫಾರಸು ಮಾಡುತ್ತೇನೆ"

ಪ್ರಮುಖ ಡಾಕ್ಟರರೂ ಮತ್ತು ಪ್ರಮುಖ ರಾಷ್ಟ್ರೀಯ ಧುರೀಣರೂ ಆದ ಡಾ॥ ಅನ್ಸಾರಿಯವರ ಹೇಳಿಕೆಯು ಪ್ರತಿಯೊಬ್ಬ ವ್ಯಕ್ತಿಯ ಮತ್ತು ಪ್ರತಿಯೊಂದು ರಾಷ್ಟ್ರದ ದೈಹಿಕ ದೃಷ್ಟಿ ಮತ್ತು ರಾಷ್ಟ್ರೀಯ ದೃಷ್ಟಿಯಿಂದ ಸಹಾಯಕರವಾಗಬೇಕು.

Jaya Bharatham Co., P B No 83 Madras

ಜಯ ಭಾರತಂ ಕೋ, ಪೆ ಬ ೮೩, ಮದ್ರಾಸು

ದ. ಕ. ಜಿಲ್ಲೆಗೆ ಏಜಂಟರು:–ಎಸ್ ಬ ಂಗೇರಾ ಮಿಶ್ಯನ್ ಕಂಪೌಂಡು, ಕಾಸರಗೋಡು

ಡಿಲ್ಲಿ ಬಿಸ್ಕೂಟಿನ ಕುರಿತು

ಇಂಡಿಯಾದ ಘನ ಕೈಗಾರಿಕಾ ಸಂಸ್ಥೆಯ

ಸರ್ ದೋರಾಬ್ ತಾತಾರವರು

"ಈ ಬಿಸ್ಕುಟುಗಳನ್ನು ಹಿಂದೀಯ ಜನತೆಯು ಹೆಚ್ಚಿನ ಅವಗಾಹನೆಗೆ ತಂದಲ್ಲಿ ಸಹಜವಾಗಿ ಇವುಗಳು ಹೆಚ್ಚಿನ ವಿಕ್ರಯವಾಗುವುದರಲ್ಲಿ ಸಂದೇಹವಿರುವುದಿಲ್ಲ"

"ಇಂಗ್ಲಾಂಡಿನಲ್ಲಿ ತಯಾರಿಸಲ್ಪಟ್ಟವುಗಳಿಗಿಂತಲೂ ನಾನು ಈ ಬಿಸ್ಕುಟುಗಳನ್ನೇ ಪ್ರಶಸ್ತವೆನ್ನುತ್ತೇನೆ" — "ಇಂಗ್ಲಾಂಡಿನಲ್ಲಿ ನಿಮ್ಮ ಬಿಸ್ಕುಟುಗಳು ಬಹಳ ಮೆಚ್ಚುಗೆಗೆ ಪಾತ್ರವಾಗಿವೆ"–ಎಂಬುದೇ ಕೆಲವು ಯೂರೋಪಿಯನರ ಹೇಳಿಕೆ

ಮದ್ರಾಸು ಪ್ರಾಂತ್ಯಕ್ಕೆ ಏಜಂಟರು:–

Jaya Bharatham Co, P, B No 88 Madras

ಜಯ ಭಾರತಮ್ ಕೋ, ಪೆ ಬ ೮೩ ಮದ್ರಾಸು

ಸ್ಟೋಕಿಸ್ಟರು –ಮೆಸರ್ಸ್ ಕಾಮತ್ ಎಂಡ್ ಕೋ, ಮಂಗಳೂರು.

ದ. ಕ. ಜಿಲ್ಲಾ ಏಜಂಟರು:–ಎಸ್ ಬ ಬಂಗೇರಾ, ಮಿಶ್ಯನ್ ಕಂಪೌಂಡು, ಕಾಸರಗೋಡು

ಗುಣಬಾರದಿದ್ದರೆ] ಸುಪ್ರಸಿದ್ಧ ವೈದ್ಯರಾದ ಎಮ್ ಕೆ ರಜಪೂತ ಇವರ **[ಹಣ ವಾಪಾಸು**

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆರೋಗ್ಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ ಮೊದಲೇ ಪೂರಾ ವಿಚಾರ ಮಾಡಿ ಔಷಧ ಬೇಡಿರಿ ಮುಖ್ಯ ಸರ್ಟಿಫಿಕೇಟು ಡಾಕ್ಟರ ಬಿ ಎ. ವೈದ್ಯ, ಎಲ್ ಸಿ ಪಿ. ಎಸ್, ಕೆಳಬಾಪಟಿಮ ಇವನು ಈ ಚೂರ್ಣದಿಂದ ಯಾವ ತರದ ಅಪಾಯವಾಗದು ಗರ್ಭಧಾರಣವೂ ಆಗುವುದಿಲ್ಲ ಪೂರ್ಣ ಗುಣಕಾರಿ ಡಬ್ಬಿ ಕಿಮ್ಮತ್ತು ರೂ ೪, ವಿ ಪಿ ಆಣೆ ೮.

ವಿಳಾಸ:–ಸಂಜೀವಿನೀ ಔಷಧಾಲಯ ಮು ಪೊ ಮಿರಜ, S M C

ಬಹು ಕಾಲದ ಆವಶ್ಯಕತೆಗೆ



ಸಣ್ಣ ಕಬ್ಬಿನ ತೋಟದವರು ಸಣ್ಣ ರೀತಿಯಿಂದ ಸಕ್ಕರೆ ತಯಾರಿಸಲು ಯೋಗ್ಯ ರೀತಿಯ ಯಂತ್ರವು ಬೇಕೆಂದು ಬಹು ಕಾಲದ ಆವಶ್ಯಕತೆಯಲ್ಲಿದ್ದರು. ನಿಮಗೆ ಬೇಕಾದುದು ಇಲ್ಲೇ ಇದೆ

ಕಿರ್ಲೋಸ್ಕರ ಶುಗರ್ ಸೆಂಟ್ರಿಫ್ಯುಗಲ್

ಎಂಬುದು ಆಧುನಿಕ ಮತ್ತು ಅತ್ಯುತ್ಕೃಷ್ಟ ಸಾಧನಗಳಿಂದೊಡಗೂಡಿ ಸಕ್ಕರೆ ತಯಾರಿಸಲು ಸುಲಭ ಯಂತ್ರವಾಗಿದೆ. ಸಣ್ಣ ಭಂಡವಾಳದಲ್ಲಿ ಹೆಚ್ಚಿನ ಲಾಭವನ್ನು ಕೊಡುತ್ತದೆ. ವಿವರಗಳಿಗೆ:–ಕಿರ್ಲೋಸ್ಕರ್ ಬ್ರದರ್ಸ್ ಲಿಮಿಟೆಡ್ ಕಿರ್ಲೋಸ್ಕರ್‌ವಾಡಿ (ಸತಾರ ಜಿಲ್ಲೆ) ಇಲ್ಲಿಗೆ ಬರೆಯಿರಿ.

ಸ್ಟೋಕಿಸ್ಟ್ಸ್:–ಬಾಸೆಲ್ ಮಿಶನ್ ಬುಕ್ ಡಿಪೊ ಎಂಡ್ ಟ್ರೇಡ್ಸ್ ಡಿಪೋಸಿಟರಿ ಕೊ., ಮಂಗಳೂರು.

ಕರ್ನಾಟಕ ವರ್ತಮಾನ

ದೊಡ್ಡ ಬಳ್ಳಾಪುರದ ಪೌರ ಸಭೆಯ ಉಪಾಧ್ಯಕ್ಷರಾದ ಲೋಕ ಸೇವ ನಿರತ ಶ್ರೀ ಕೆಂಗಲ್ ಹನುಮಂತಯ್ಯನವರು ತಮ್ಮ ಕೆಲಸಕ್ಕೆ ರಾಜಿನಾಮೆಯನ್ನು ಕೊಟ್ಟಿರು

ತಾ. ೨೮ನೇ ದಿನ ಬೆಂಗಳೂರು ಕೋಟೆ ಹೈಸ್ಕೂಲಿನ ವಾರ್ಷಿಕೋತ್ಸವವು ರಾವ್ ಬಹದ್ದೂರು ವೆಂಕಟೇಶಾಚಾರ್ಯರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ನೆರವೇರಿತು ಇದರ ಸಂಬಂಧವಾಗಿ ವಿಜ್ಞಾನ ಪ್ರಯೋಗಗಳೂ ವ್ಯಾಯಾಮ ಪ್ರದರ್ಶನಗಳೂ ನಡೆದುವು. ರಾತ್ರಿ ಜಯಲಕ್ಷ್ಮಿ ನಾಟಕ ಭವನದಲ್ಲಿ ಪ್ರಹ್ಲಾದ, ಜೂಲಿಯಸ್ ಸೀಸರ್, ಭೋಜರಾಜ ನಾಟಕಗಳನ್ನಾಡಿದರು

ಅರಣ್ಯ ಶಾಖಾಧಿಕಾರಿಗಳಾದ ಶ್ರೀ ಬಿ ವಿ ರಾಮಯ್ಯಂಗಾರ್ಯರಿಗೆ ಜನವರಿ ತಾ. ೨೦ರಿಂದ ೪ ತಿಂಗಳು ರಜೆ ಶಿವಮೊಗ್ಗೆಯಲ್ಲಿರುವ 'ಕನ್ಸರ್ವೇಟರ್' ಶ್ರೀ ಮಾಚಯ್ಯನವರು ಅರಣ್ಯ ಶಾಖಾಧಿಕಾರಿಗಳಾಗುವರು ಶ್ರೀ ಎಚ್. ಎಸ್. ನಾರಾಯಣ ರಾಯರು ಶಿವಮೊಗ್ಗೆಕ್ಕೆ ಹೋಗುವರು

ದೆಹಲಿಯಲ್ಲಿ ಮಾರ್ಚಿ ತಿಂಗಳಲ್ಲಿ ವಿಶ್ವ ವಿದ್ಯಾನಿಲಯಗಳ ಸಮ್ಮೇಳನವು ನಡೆಯುವುದು. ಅದಕ್ಕೆ ಸರ್ ಸಿ. ವಿ ರಾಮನ್ ರವರೂ ಒಬ್ಬ ಪ್ರತಿನಿಧಿಗಳು.

ಬೆಂಗಳೂರು ವಾಣಿಜ್ಯ ಸಂಘದವರು ಇಂಡಿಯಾ ಸರಕಾರದ ವಾಣಿಜ್ಯ ಮತ್ತು ಕೈಗಾರಿಕೆ ಸೂತ್ರಗಳನ್ನು ಹಿಡಿದಿರುವ ಸಚಿವರಿಗೆ ತಂತಿ ಕಳುಹಿಸಿ, ಹೊಸದಾಗಿ ಸುಂಕವೇರಿಸಿರುವ ಸಾಮಾನುಗಳ ಪಟ್ಟಿಯಲ್ಲಿ ರೇಷ್ಮೆ ಒಪ್ಪೆ ಒರೆಗಳು ಸೇರಿಲ್ಲವೆಂದೂ ಇವುಗಳಿಗೆ ರಕ್ಷಣೆಯು ಅವಶ್ಯಕವೆಂದೂ ತಿಳಿಸಿರುವರು

ಈ ಸಲ ಬೆಂಗಳೂರು ಪೌರ ಸಭೆಯ ಅಧ್ಯಕ್ಷ ಸ್ಥಾನದಲ್ಲಿ ಕೂರಲು ಉಮೇದುವಾರರ ಹೋರಾಟವು ಬಹಳವಾಗಿರುವಂತಿದೆ ಶ್ರೀಯುತರುಗಳಾದ ಬಿ ಕೆ ಗರುಡಾಚಾರ್, ಪಿ ಸುಬ್ರಾಮ ಚೆಟ್ಟಿ, ರಾವ್ ಸಾಹೇಬ್ ಸಿ ಹಯವದನ ರಾವ್ ಮತ್ತು ಬೇಲೂರು ಶ್ರೀನಿವಾಸ ಅಯ್ಯಂಗಾರ್ ಇವರುಗಳು ಉಮೇದುವಾರರಾಗಿ ನಿಂತಿರುವರು

ಕೀರ್ತಿಶೇಷ ಕೆ. ಎಚ್ ರಾಮಯ್ಯನವರ ಸ್ಮರಣಾರ್ಥವಾಗಿ ಒಂದು ಫುಟ್‌ಬೋಲ್ ಪಂದ್ಯವನ್ನು ಏರ್ಪಡಿಸಿದ್ದಾರೆ. ಕೊನೆಯ ಆಟವು ಮೈಸೂರು ಮಹಾರಾಜರ ಹೈಸ್ಕೂಲಿನವರಿಗೂ, ಬೆಂಗಳೂರು ಸೆಂಟ್ರಲ್ ಕಾಲೇಜಿನವರಿಗೂ ನಡೆದು ಮರಿಮಲ್ಲಪ್ಪ ಹೈಸ್ಕೂಲಿನವರು ಜಯಶಾಲಿಗಳಾದರು

ಮೈಸೂರಿನ ಪ್ರಸಿದ್ಧ ವ್ಯಾಯಾಮ ಪ್ರದರ್ಶಕರಾಗಿದ್ದ ಪ್ರೊ ವಿ ಟಿ. ಎಸ್ ನಾಯ್ಡುರವರು ತಾ. ೨೬ನೇ ದಿನ ಆಸ್ಪತ್ರೆಯಲ್ಲಿ ಕಾಲವಾದರು. ನಾಯುಡುರವರು ಅಭ್ಯಾಸ ಮಾಡುತ್ತಿದ್ದ ಒಂದು ಅಸಾಧ್ಯವಾದ ಕಸರತ್ತೆ ಇವರ ಸಾವಿಗೆ ಕಾರಣವಾಯಿತು. ೧೨೦ ಪೌಂಡುಗಳಷ್ಟು ಒಬ್ಬ ಯುವಕನನ್ನು ೧೩ ಅಡಿ ಎತ್ತರದಿಂದ ತಮ್ಮ ಎದೆಯ ಮೇಲೆ ಧುಮುಕಿಸಿಕೊಳ್ಳುತ್ತಿದ್ದರಂತೆ ತಾ ೨೪ನೇ ದಿನ ಹೀಗೆ ಧುಮುಕಿಸಿಕೊಳ್ಳುವಾಗ ಸ್ವಲ್ಪ ಗುರಿ ತಪ್ಪಿ ಹೃದಯಕ್ಕೆ ಆಘಾತವಾಯಿತು ಅನಂತರ ಆಸ್ಪತ್ರೆಗೆ ಸಾಗಿಸಲ್ಪಟ್ಟು ಅಲ್ಲಿಯೇ ಕಾಲವಾದರು ನಾಯುಡುರವರು ಶ್ರೀ ಜಯಚಾಮರಾಜ ಒಡೆಯರಿಗೆ ಅಂಗಸಾಧನಾ ಶಿಕ್ಷಕರಾಗಿದ್ದರಂತೆ.

ಮೈಸೂರು ಪೌರಸಭಾ ಚುನಾವಣೆಗಳಾದುವು ಆಗ ನಾಮಕರಣ ಸ್ಥಾನಗಳಿಗಾಗಿ ಅನೇಕ ಹೋರಾಟಗಳಾದುವಂತೆ.

ಹಿಂದೀ ಪರೀಕ್ಷಾ ಪದವೀದಾನ ಸಮಾರಂಭವು ೨೭–೧೨–೩೩ನೇ ಸಾಯಂಕಾಲ ನಗರ ಭವನದಲ್ಲಿ ನಡೆಯಿತು ಇದರ ಸಂಬಂಧವಾಗಿ ಹಿಂದೀ ನಾಟಕ ಪ್ರದರ್ಶನ, ಗೀತಾ ಪಠನಗಳೂ ಆದವು

ರಾಜಧಾನಿಯ ಶ್ರೀ ಎ. ಎ. ರಂಗಸ್ವಾಮಿಯಂಗಾರ್ಯರು ಕೃಷ್ಣ ರಾಜಮ್ಮಣಿಯವರ ಕ್ಷಯ ರೋಗದ ಆಸ್ಪತ್ರೆಗೆ ಎರಡು ವಾರ್ಡುಗಳನ್ನು ಕಟ್ಟಿಸಿ ಕೊಡಲು ೩೦೦೦ ರೂಪಾಯಿಗಳನ್ನು ದಾನ ಮಾಡಿರುವರಂತೆ.

—ಶ್ರೀ ಮಹಾರಾಜರು ಸ್ಯಾಂಟ್ ಫಿಲೋಮಿನಾ ಅಮ್ಮನವರ ದೇವಾಲಯಕ್ಕೆ ಶಂಕುಸ್ಥಾಪನೆ ಮಾಡಿದ್ದಕ್ಕಾಗಿ ಇಟಲಿಯ ಪೋಪರು ಮಹಾರಾಜರನ್ನು ಅಭಿನಂದಿಸಿ ಈ ಪವಿತ್ರ ವರ್ಷದ ಸ್ಮರಣಾರ್ಥವಾಗಿ ಬೆಳ್ಳಿ ಚಿನ್ನದ ಪದಕವನ್ನು ಕಳುಹಿಸಿಕೊಡುತ್ತೇವೆಂದು ಕೇಬಲ್ ಮೂಲಕ ತಿಳಿಸಿದರು. ಮಹಾರಾಜರು ಇದಕ್ಕೆ ಕೇಬಲ್ ಮೂಲಕ ಜವಾಬು ಕೊಡುತ್ತ ಪೋಪರಿಗೆ ವಂದನೆಗಳನ್ನರ್ಪಿಸಿ ನೀವು ಕಳುಹಿಸತಕ್ಕ ಪದಕವು ನಮ್ಮಲ್ಲಿ ಮತ್ತು ನಮ್ಮ ಕುಟುಂಬದಲ್ಲಿ ನಿಮಗಿರುವ ವಿಶ್ವಾಸವನ್ನು ಜ್ಞಾಪಕಕ್ಕೆ ತರುತ್ತದೆಂದು ತಿಳಿಸಿದರು.

+++

ಅನುಕ್ರಮಣಿಕೆ.

ಅಗ್ರಲೇಖ

ಜಪಾನಿನ ವ್ಯಾಪಾರ . . . ೧

ಸ್ಫುಟವಿಚಾರಗಳು . . . ೪

ಸೂಚನೆಗಳು . . . ,,

ವರ್ತಮಾನ ಸಂಗ್ರಹಗಳು ,,

೧೯೩೪ರ ನಮಸ್ಕಾರ . . . ೨

ಸ್ವದೇಶೀಯ ವರ್ತಮಾನ ವಿದೇಶ ವರ್ತಮಾನ, . . . ೬

ವಿವಿಧ ಸಮಾಚಾರಗಳು . . . ೧೧

ದಕ್ಷಿಣ ಕನ್ನಡ—ಮಂಗಳೂರು, ಉಡುಪಿ, ಅಜೆಕಾರು . . . ೯

ಅಲ್ಲಲ್ಲಿಯ ತಂತಿ ವಾರ್ತೆ . . . ೬

ಪತ್ರವ್ಯವಹಾರ . . . ೧೩

ಕರ್ನಾಟಕ ವರ್ತಮಾನ . . . ೧೫

ಸ್ವದೇಶಾಭಿಮಾನಿ.

೨೬ನೇ ಶುಕ್ರವಾರ ಜನವರಿ ೧೯೩೪.

ಜಪಾನಿನ ವ್ಯಾಪಾರ

ಲೋಕವೆಲ್ಲಾ ವ್ಯಾಪಾರದ ಅಡಚಣೆಯಿಂದ ಬಹಳವಾಗಿ ಕಷ್ಟ ಪಡುತ್ತಿರುವುದಾದರೂ, ಎಲ್ಲೆಲ್ಲಿಯೂ ನಿರುದ್ಯೋಗದ ಸಮಸ್ಯೆಯು ಸರಕಾರಗಳನ್ನು ಬಾಧಿಸುತ್ತಿರುವುದಾದರೂ, ಜಪಾನು ದಿನದಿಂದ ದಿನಕ್ಕೆ ವ್ಯಾಪಾರದ ಅಭಿವೃದ್ಧಿಯನ್ನೇ ತೋರಿಸುತ್ತಿರುವುದು ಈಗಿನ ಲೋಕದ ಪರಿಸ್ಥಿತಿಯಲ್ಲಿ ಆಶ್ಚರ್ಯಕರವಾದ ಸಂಗತಿಯಾಗಿರುತ್ತದೆ. ಇಂಗ್ಲೆಂಡಿನ ಸಾಂಪತ್ತಿಕ ಸ್ಥಿತಿಯು ಬಹಳವಾಗಿ ಕದಲಿ ಹೋಯಿತು, ನಿರುದ್ಯೋಗಿಗಳ ಸಂಖ್ಯೆಯು ಬಹಳವಾಗಿ ಬೆಳೆಯಿತು, ಅಮೇರಿಕದಲ್ಲಿ ದೊಡ್ಡದೊಂದು ಸಾಂಪತ್ತಿಕ ಕ್ರಾಂತಿಯೇ ಉಪಸ್ಥಿತವಾಯಿತು. ಫ್ರಾನ್ಸು ತನ್ನ ಆರ್ಥಿಕ ಕಷ್ಟಗಳಿಂದ ಇನ್ನೂ ಮುಕ್ತವಾಗಿಲ್ಲ, ಎಲ್ಲೆಲ್ಲಿಯೂ ದುಡ್ಡಿನ ಅಡಚಣೆಯೂ, ನಿರುದ್ಯೋಗದ ಸಮಸ್ಯೆಯೂ ಪ್ರಬಲವಾಗಿರುತ್ತದೆ. ಆದರೆ ಜಪಾನು ಮಾತ್ರ ತನ್ನ ವ್ಯಾಪಾರದಲ್ಲಿ ಯಾವುದೊಂದು ತರದ ಬಾಧೆಯನ್ನನುಭವಿಸುವ ಬದಲು ಹೊಸ ಹೊಸ ಹುರುಪಿನಿಂದ ಅದನ್ನು ಅಭಿವೃದ್ಧಿಗೆ ತರುತ್ತಿದೆ. ನಿರಾಶೆಯಲ್ಲಿಯೂ ನಿಶ್ಶಕ್ತಿಯಲ್ಲಿಯೂ ದಿನೇ ದಿನೇ ಕುಗ್ಗುತ್ತಿರುವ ಹಿಂದೂಸ್ಥಾನಕ್ಕೆ ಇದೊಂದು ಉತ್ತಮ ನಿದರ್ಶನವಾಗಿರತಕ್ಕದು.

ಈ ಮೊದಲು ಜಪಾನು ತನ್ನ ಅತೀ ಸಾಮಾನ್ಯವಾದ ವಸ್ತುಗಳಿಂದ ಚೀನದಲ್ಲಿಯೂ, ಹಿಂದೂಸ್ಥಾನದಲ್ಲಿಯೂ ಕೂಡಿದ ಮಟ್ಟಿಗೆ ವ್ಯಾಪಾರವನ್ನು ಬೆಳೆಸುತ್ತಿದ್ದಿತು. ಆದರೆ ಈಗ ಅದರ ಕ್ಷೇತ್ರವು ವಿಶಾಲವಾಗಿರುತ್ತದೆ. ಹಿಂದೂಸ್ಥಾನದಿಂದ ಹತ್ತಿಯನ್ನು ಕೊಂಡು ಹೋಗಿ, ಅದರಿಂದ ಬಟ್ಟೆ ನೇದು, ಹಿಂದೂಸ್ಥಾನಕ್ಕೆ ಕಳುಹಿಸಿ, ಹಿಂದೀ ಗಿರಣಿಗಳೊಡನೆಯೇ ಮೇಲಾಟ ಎಡುತ್ತಿದೆ. ಹಿಂದೂಸ್ಥಾನದಿಂದ ಕಬ್ಬಿಣವನ್ನು ಕೊಂಡು ಹೋಗಿ, ಅದರಿಂದ ನಳಿಗೆಗಳನ್ನು ತಯಾರಿಸಿ ಕಲ್ಪಿಸಲಾಗದ ಕಡಿಮೆ ಬೆಲೆಗೆ ಇಲ್ಲಿ ಕಳುಹಿಸುತ್ತಿದೆ, ಹಲವು ಅತ್ಯಂತ ಉತ್ತಮವೂ ಉಪಯುಕ್ತವೂ ಆದ ಸಾಮಾನುಗಳನ್ನು ಎಲ್ಲಿಯೂ ಸಾಧ್ಯವಾಗದಂತಹ ಬೆಲೆಗೆ ಇಲ್ಲಿ ತಂದು ಮಾರುತ್ತಿದೆ. ಯಾವ ಅಂಗಡಿಗೆ ಹೋದರೂ ಜಪಾನಿನ ಮಾಲೇ. ಅದರಲ್ಲಿಯೂ ಜಪಾನ ವಸ್ತುಗಳಿಗೆ ಶೇಕಡಾ ೫೦ಕ್ಕಿಂತ ಮೇಲ್ಪಟ್ಟ ಸುಂಕವು ಹೊರಿಸಲ್ಪಡುತ್ತಿದೆ ಎಂಬುದನ್ನು ಕಂಡರೆ ಜಪಾನಿನ ಮೂಲ ಧಾರಣೆಯು ಎಷ್ಟರ ಮಟ್ಟಿಗೆ ಕಡಿಮೆಯಾಗಿರಬೇಕೆಂದು ತಿಳಿಯಬಹುದು.

ಜಪಾನು ತನ್ನ ವ್ಯಾಪಾರದ ಕ್ಷೇತ್ರವನ್ನು ಎಷ್ಟರ ಮಟ್ಟಿಗೆ ವಿಶಾಲ ಮಾಡಿಯದೆಂಬುದನ್ನು ಅಲ್ಲಿಂದ ಆಮದಾಗುವ ಸಾಮಾನುಗಳನ್ನು ನೋಡಿದರೆ ತಿಳಿಯುವುದು. ಯಂತ್ರ ಸಾಮಗ್ರಿಗಳು ಬಹಳ ಮಟ್ಟಿಗೆ ಬರಲಾರಂಭಿಸಿಯವೆ. ಮೋಟರ್ ಕಾರು ಈ ವರೆಗೆ ಬಂದುದು ಕಾಣುವುದಿಲ್ಲವಾದರೂ, ಅದರ ಭಾಗಗಳು ಬರುತ್ತಿವೆ, ಟಾಯರುಗಳು ಬರುತ್ತಿವೆ, ಇಲೆಕ್ಟ್ರಿಕ್ ಸಾಮಾನುಗಳೆಲ್ಲಾ ಅಲ್ಲಿಂದ ಆಮದಾಗುತ್ತಿವೆ; ಸೈಕಲುಗಳು, ಗ್ರೇಮಫೋನುಗಳು, ಮುಂತಾದ ಯಾವತ್ತೂ, ವಿಲಾಯತಿಯಿಂದಲೇ ಬರತಕ್ಕವುಗಳೆನ್ನಿಸಿದ ಸಾಮಾನುಗಳು ಅಲ್ಲಿಂದ ಬರುತ್ತಿವೆ. ಆದರಲ್ಲಿ ಈ ನೂತನ ಸಾಮಗ್ರಿಗಳು, ವಿಲಾಯತಿ ಸಾಮಾನುಗಳ ಬೆಲೆಯ ಅರ್ಧಕ್ಕಿಂತಲೂ ಕಡಿಮೆ ಬೆಲೆಗೆ ಬರುತ್ತಿವೆ.

ಜಪಾನಿನ ವ್ಯಾಪಾರದ ಬೆಳವಣಿಗೆಯನ್ನು ನೋಡಿ ಇಡೀ ಲೋಕದ ಇತರ ಜನಾಂಗಗಳೂ ಎಚ್ಚತ್ತಿವೆ. ಏಕೆಂದರೆ ಜಪಾನಿನ ವ್ಯಾಪಾರದ ಪ್ರಾಬಲ್ಯವು ಕೇವಲ ಹಿಂದೂಸ್ಥಾನದಲ್ಲಿಯೇ ಆದದ್ದಾದರೆ ಯಾರೂ ಅಷ್ಟೊಂದು ಮನಸ್ಸಿಗೆ ತರುತ್ತಿರಲಿಲ್ಲ. ಆದರೆ ಜಪಾನು ತನ್ನ ವ್ಯಾಪಾರದ ಕ್ಷೇತ್ರವನ್ನು ಹಿಂದೂಸ್ಥಾನ ಮತ್ತು ಚೀನಾ ದೇಶಗಳ ಹೊರಗೂ ಪ್ರಸರಿಸಿರುತ್ತದೆ. ಇಂಗ್ಲೆಂಡಿಗೂ ಜಪಾನಿನ ಸಾಮಾನುಗಳೂ ಹೋಗಲಾರಂಭಿಸಿಯವೆ. ಇಡೀ ಲೋಕಕ್ಕೇನೇ ವಸ್ತ್ರದ ಸಾಮಾನುಗಳನ್ನು ರಫ್ತು ಮಾಡುವ ಲಂಕಶಯರಿನಲ್ಲಿಯೇ ಜಪಾನಿನ ವಸ್ತ್ರಗಳೂ ಸಿಲ್ಕುಗಳೂ ಬರಲಾರಂಭಿಸಿವೆಯೆಂದರೆ ಜಪಾನಿನ ಪ್ರಾಬಲ್ಯವು ಎಷ್ಟರ ಮಟ್ಟಿಗೆ ಬೆಳೆದಿದೆ ಎಂಬುದು ಕಂಡು ಬರುವುದು. ಮಾತ್ರವಲ್ಲ ಬ್ರಿಟಿಷ ವ್ಯಾಪಾರಿಗಳು ಜಪಾನಿನ ಸಾಮಾನುಗಳನ್ನು ಇಂಗ್ಲೆಂಡಿಗೆ ತರಿಸಿ, ಬ್ರಿಟಿಷ ಮೊಹರು ಹಾಕಿ ಹೆಚ್ಚಿನ ಬೆಲೆಗೆ ಪುನಹ ಹೊರ ದೇಶಗಳಿಗೆ ಕಳುಹಿಸಿ ತುಂಬಾ ಲಾಭ ಮಾಡಿಕೊಳ್ಳುತ್ತಿರುವರೆಂದೂ ವರ್ತಮಾನವಿದೆ.

ಜಪಾನಿನ ಸಾಮಾನುಗಳು ಜರ್ಮನಿಯಲ್ಲಿ ಕೂಡ ಹೋಗಲಾರಂಭಿಸಿವೆ. ದಕ್ಷಿಣ ಆಫ್ರಿಕಾ, ಆಸ್ಟ್ರೇಲಿಯಾ, ಐಗುಪ್ತ ಮೊದಲಾದ ದೇಶಗಳಿಗೂ ಅವು ತುಂಬಾ ಹೋಗುತ್ತಿವೆ, ಹೀಗಾಗಿ ಜಪಾನು ವಿಲಾಯತಿಯ ರಾಷ್ಟ್ರಗಳಿಗ ವ್ಯಾಪಾರದಲ್ಲಿ ಪ್ರಬಲವಾದ ಪ್ರತಿಸ್ಪರ್ಧಿಯಾಗಿ ಬೆಳೆದಿರುತ್ತದೆ. ಅದುದರಿಂದ ಬ್ರಿಟಿಷರು ಈ ವಿಷಯದಲ್ಲಿ ಈಗ ಕಣ್ಣು ತೆರೆದು ಜಪಾನಿನ ಈ ವ್ಯಾಪಾರದ ಹಾವಳಿಯಿಂದ ಹೇಗೆ ತಮ್ಮನ್ನು ರಕ್ಷಿಸಿಕೊಳ್ಳಬಹುದೆಂದು ಆಲೋಚಿಸುತ್ತಿದ್ದಾರೆ. ಢಿಲ್ಲಿಯಲ್ಲಿ ಹಿಂದೀ ಸರಕಾರಕ್ಕೂ ಜಪಾನಿನ ವ್ಯಾಪಾರ ಮಂಡಲಕ್ಕೂ ನಡೆಯುವ ವಿವಾದದ ಮೂಲ ಹೇತುವೂ ಇದೇ ಆಗಿರುತ್ತದೆನ್ನಬಹುದು. ಹಾಗೂ, ಜಪಾನಿನ ವಸ್ತುಗಳ ಮೇಲೆ ಶೇಕಡಾ ೫೦ರಿಂದ ೧೫೦ರ ವರೆಗೆ ಸುಂಕವನ್ನು ಹೊರಿಸಿ ಅವುಗಳ ಬೆಲೆಯನ್ನು ಹೆಚ್ಚಿಸಿ ಅವರ ಮೇಲಾಟವನ್ನು ಕಡಿಮೆ ಮಾಡುವ ಸಾಧನೆಯನ್ನು ಸರಕಾರವು ಮಾಡುತ್ತಿದೆ.

ಜಪಾನಿನ ಈ ಸಾಂಪತ್ತಿಕ ಅಭಿವೃದ್ಧಿಯನ್ನು ಹಿಂದೂಸ್ಥಾನವು ಅನುಕರಿಸಲು ಸಾಧ್ಯವಿರುತ್ತದೆ. ಹಿಂದೂಸ್ಥಾನದಲ್ಲಿ ಕೈಗಾರಿಕೆಗಳಿಗೆ ಬೇಕಾದ ಸಕಲ ಮೂಲ ಸಾಮಗ್ರಿಗಳೂ ದೊರೆಯುತ್ತವೆ. ಅಲ್ಲದೆ ಈಗ ಪ್ರಚಲಿತವಿರುವ ಸರಕಾರದ ಆಮದು ಸುಂಕಗಳು ಹೊರದೇಶಗಳ ಮೇಲಾಟವನ್ನು ಎದುರಿಸಲು ತುಂಬಾ ಸಹಾಯ ಮಾಡುವಂತಹವುಗಳಾಗಿವೆ. ಕೈಗಾರಿಕ ಸಾಮಾನುಗಳ ಮೇಲೆ ಶೇಕಡಾ ೩೦ಕ್ಕಿಂತ ಕಡಿಮೆ ಸುಂಕವು ಅಪರೂಪವಿದೆ. ಹಲವು ವಸ್ತುಗಳಿಗೆ ಶೇಕಡಾ ೪೦ರಿಂದ ೫೦ರ ವರೆಗೂ ಸುಂಕವಿರುತ್ತದೆ. ಈ ಸುಂಕದಿಂದ ಬಾದರೂ ದೇಶದಲ್ಲಿ ಹೊಸ ಹೊಸ ಕೈಗಾರಿಕೆಗಳು ಸೃಷ್ಟಿಸಲ್ಪಡಬೇಕಿತ್ತು. ಆದರೆ ಇಂತಹ ಸಂದರ್ಭಗಳ ಸದುಪಯೋಗವು ದೇಶಕ್ಕೆ ದೊರಕದಿರುವುದು ದೇಶದ ದುರ್ಭಾಗ್ಯವೆನ್ನಬೇಕು. ಹಿಂದೂಸ್ಥಾನದ ಹತ್ತಿ ತೆಗೆದು ಕೊಂಡುಹೋಗಿ ತಾವು ಬೆಳಸಿದ ಹತ್ತಿಯನ್ನು ಅದರೊಡನೆ ಬೆರೆಸಿ, ಅವುಗಳಿಂದ ವಸ್ತ್ರ ನೇದು, ಆ ಮೇಲೆ ಶೇಕಡಾ ೫೦ರಷ್ಟು ಸುಂಕ ಕೊಟ್ಟು, ಆ ಮೇಲೂ ನಮ್ಮ ಗಿರಣಿಗಳಿಗೆ ಅದರೊಡನೆ ಮೇಲಾಟ ಮಾಡಲು ಸಾಧ್ಯವಿಲ್ಲವೆನ್ನುವಾಗ, ನಮ್ಮ ಕೈಗಾರಿಕೆ ಕ್ರಮದಲ್ಲಿ ಏನೋ ದೋಷವಿದೆಯೆನ್ನಬೇಕಾಗುತ್ತದೆ. ಕೈಗಾರಿಕೆಗಳ ಧುರೀಣರು ಇದನ್ನು ಚೆನ್ನಾಗಿ ಆಲೋಚಿಸುವುದು ಅಗತ್ಯವಿದೆ.

+ + + +

Stop Press

ಶ್ರೀ ದೇವದಾಸ ಗಾಂಧಿಯವರನ್ನು ಮುಲ್ತಾನಿನ ಸೆಂಟ್ರಲ್ ಸೆರೆಮನೆಯಿಂದ ೨೨ನೇ ದಿನ ಬಿಡುಗಡೆ ಮಾಡಿದರು. ಅವರು ಅಹ್ಮದಾಬಾದಿಗೆ ತೆರಳಿರುವರು.

ಇಂಗ್ಲೆಂಡಿನಲ್ಲಿ ಕಳೆದ ವಾರ ದೇಶದಲ್ಲೆಲ್ಲಾ ಹಿಮ ಬಿದ್ದು ವಾಹನಗಳು ತಡೆಯಲ್ಪಟ್ಟು ಅನೇಕರು ಜಖಂಗೊಂಡು ವ್ಯಾಕರಾಗಿರುವರು.

ಕೊಲೊಂಬೊದ ಮುಸ್ಲಿಮರಿಗೂ ಸಿಂಹಾಲೀಸ್ ಜನರಿಗೂ ಕೆಟ್ಟ್ಯಾಗಿ ಪೋಲೀಸರು ತನ್ನಕ್ಕೆ ಬಂದಾಗ, ಜನರು ಅವರಿಗೆ ಕಲ್ಲೆಸೆದರು. ೪೦ ಮಂದಿ ಮುಸ್ಲಿಮರು ಸೆರೆಯಾಗಿರುವರು.

ಇಂಗ್ಲಾಂಡಿನಲ್ಲಿ ಇದ್ದ ಮಿ। ಜಿನ್ನಾ ಸಾಹೇಬರು ೨೨. ೪ನೇ ದಿನ ಮುಂಬಾಯಿಗೆ ತಲಪಿದರು.

ಕೊಲೆ ಮಾಡಲ್ಪಟ್ಟ ರುಮೇನಿಯಾ ಮಂತ್ರಿಯವರ ಶವಸಂಸ್ಕಾರವು ಇಡೀ ದೇಶದ ದುಃಖಸೂಚನೆಯಿಂದ ಜರಗಿತು.

ಮುಂಬಾಯಿಯ ಗವರ್ನರರಾದ ಲೋರ್ಡ್ ಬ್ರಬೋರ್ನರನ್ನು ಸ್ಯಾಂಟ್ ಜೋನ್ ಒಫ್ ಜೆರುಸಲೇಮಿನ ನೈಟ್ ಒಫ್ ಗ್ರೇಸರನ್ನಾಗಿ ಮಾಡಲಾಗಿದೆಯೆಂದು ಲಂಡನ್ ಗಜೆಟ್ ಹೇಳುತ್ತದೆ.

ಸ್ವದೇಶೀ ವರ್ತಮಾನ.

ಮಹಾತ್ಮಾ ಗಾಂಧಿಯವರು ಗುಂಟೂರಿನಲ್ಲಿ ಶ್ರೀರಾಮದೇವಸ್ಥಾನವನ್ನು ಹರಿಜನರಿಗಾಗಿ ತೆರೆದರು. ಇದಕ್ಕೆ ಕೆಲವು ಅರ್ಚಕರು ಹೇಳದೆ ಕಾಲಿಗೆ ಬುದ್ಧಿ ಹೇಳಿದರು. ಕೊಂಗ್ರೆಸ್ಸಿನವರು ಪೂಜಾದಿಗಳನ್ನು ನಡೆಸಿದರು.

ರಂಗೂನಿನಲ್ಲಿ ರೈಲ್ವೆ ಅಧಿಕಾರಿಯಾದ ಬೆಂಟಲ್ ಎಂಬವರ ಮನೆ ನುಗ್ಗಿ ಥಂಡಾಯಗಾರರು ಅವರನ್ನು ಕೊಂದು ಪ್ರವ್ಯದೊಡನೆ ಪರಾರಿಯಾದರು.

ಅಖಿಲ ಭಾರತ ವೈದ್ಯಕೀಯ ಪರಿಷತ್ತಿನ ೧೦ನೇ ಅಧಿವೇಶನವು ೨೩. ೨೪ರಲ್ಲಿ ಡಾ। ಅನ್ಸಾರಿಯವರ ಅಧ್ಯಕ್ಷತೆಯಲ್ಲಿ ಮುಂಬಾಯಿಯಲ್ಲಿ ಜರಗಿತು.

ಪೊಂಡಿಚೆರಿಯ ಫ್ರೆಂಚ್ ಇಂಡಿಯಾದಲ್ಲಿ ರೈತರ ದುರವಸ್ಥೆಯು ಬಹಳವಾಗಿರುವುದರಿಂದ ಶೇಕಡಾ ೨೫ರಷ್ಟು ಕಂದಾಯವನ್ನು ಬಿಡಲಾಗಿದೆ.

ಬರಾಲಾದಲ್ಲಿ ಹುಚ್ಚನೊಬ್ಬನು ಆಸ್ಪತ್ರೆಗೆ ಬೆಂಕಿ ಕೊಟ್ಟು ಕೆಲವು ಸಾಮಾನುಗಳು ಸುಟ್ಟು ಹೋದುವು.

ಪಾಟ್ನಾ ಡಿಸ್ಟ್ರಿಕ್ಟ್ ಜಡ್ಜರ ಕೋರ್ಟಿನಲ್ಲಿ ೨೮ ವರ್ಷಗಳಿಂದ ಹಿಂದಕ್ಕಿರಿಸಲ್ಪಡುತಿದ್ದ ಒಂದು ಖೂನಿ ಮೊಕದ್ದಮೆಯು, ಕಳೆದ ವಾರ ತೀರ್ಮಾನಿಸಲ್ಪಟ್ಟು ಅಪರಾಧಿತನಿಗೆ ಮರಣ ದಂಡನೆಯು ವಿಧಿಸಲ್ಪಟ್ಟಿದೆ.

'ಇಲ್ಲಿ ಅಸ್ಪೃಶ್ಯತೆಯಿಲ್ಲ. ಇಲ್ಲಿಗೆ ನೀವು ಬಂದರೆ ಕ್ಷೋಭೆ ಎದ್ದೀತು' ಎಂದು ಮಹಾತ್ಮರಿಗೆ ಬಂಗಾಳದ ಸನಾತನಿಗಳ ಸ್ಫುಟ ಮಾತು!

ತೇಜಬಹದ್ದೂರ್ ಸಪ್ರೂರವರ ಮಗನಾದ ಷಾಜಾನ್‌ಪುರದ ಕಲೆಕ್ಟರ್ ಶ್ರೀ ಎ. ಎನ್. ಸಪ್ರೂರವರು ಅಲ್ಲಿಯ ಗ್ರಾಮೋದ್ಧಾರ ಕೆಲಸಕ್ಕೆ ತೊಡಗಿರುವರು.

ರೇವ ಸಂಸ್ಥಾನದಲ್ಲಿನ ಮಹಾರಾಜರು ಕೆಲ ಸಮಯದ ಹಿಂದೆ ಬಡವರಂತೆ ತಾನು ಗದ್ದೆ ಉತ್ತರು. ಮೊನ್ನೆ ಕೀಳ್ಜಾತಿಯವರಿಂದ ಊಳಿಗವನ್ನು ಮಾಡಿಸುತ್ತಿರುವ ಮೇಲ್ಜಾತಿಯವರ ಕ್ರಮವು ಕೂಡದೆಂದು ಅಪ್ಪಣೆ ಕೊಟ್ಟಿರುವರು.

ಮೌಲಾನಾ ಶೌಕತಾಲಿಯವರು ೧೯೧೮ರಿಂದ ಸರಕಾರಿ ಪೆನ್ಶನನ್ನು ಪಡೆಯುತ್ತಿದ್ದಿಲ್ಲ. ಈಗ ಆ ಹಣವು ಬೇಕೆಂದಿರುವರು. ೧೯೨೦ರಿಂದ ಅವರಿಗೆ ಪೆನ್ಶನ್ ಕೊಡಲ್ಪಡುತ್ತದೆ.

ಬರ್ಮಾದಲ್ಲಿ ಮಿಸ್ ಸಿಕೋಲ ಜೋನ್ಸ ಎಂಬ ತರುಣಿಗೆ ಪೋಲೀಸ್ ಸಬ್ ಇನ್ಸ್‌ಪೆಕ್ಟರರ ಕೆಲಸ ಸಿಕ್ಕಿದೆ. ದುರ್ಮಾರ್ಗಿಗಳಾದ ಸ್ತ್ರೀಯರನ್ನು ಕಂಡು ಹಿಡಿದು ಶಿಕ್ಷೆಗೆ ಗುರಿಪಡಿಸುವಂತೆ ಮಾಡುವುದು ಇವಳ ಕೆಲಸ.

ಬಿಹಾರ್ ಜಿಲ್ಲೆಯಲ್ಲಿ ಒಂದು ಮಗು ಹುಟ್ಟಿತು. ಬಾಯೊಳಗೆ ತುಂಬಾ ಹಲ್ಲುಗಳು!

ತಿನ್ನೆವಲ್ಲಿಯ ಕೊಂಗರಾಯ ಕುರಿಚಿ ಎಂಬ ಹಳ್ಳಿಯಲ್ಲಿ ಒಬ್ಬ ಮುಸಲ್ಮಾನನ ಮನೆಯಿಂದ ೧೫ ೦೦೦ ರೂಪಾಯಿಗಳು ಕಾಣೆ!

ಮದ್ರಾಸಿನಲ್ಲಿ ಜರಗಿದ ಅಖಿಲ ಭಾರತ ಕ್ರೈಸ್ತ ಸಭೆಯಲ್ಲಿ ಮಿತ ಸಂತಾನ ತತ್ವವು ನಮಗೆ ಬೇಡವೆಂಬ ಠರಾವಾಯಿತು.

ಅಲ್ವಾರ್ ಮಹಾರಾಜರು ೨೨ ನೇ ದಿನ ಮುಂಬಾಯಿಗೆ ತಲಪಿ ಅಲ್ಲಿಂದ ಬನಾರಸ್‌ಗೆ ಹೋಗುವರು.

ಅಲ್ಲಹಾಬಾದಿನಲ್ಲಿ ಕಂದಾಯ ಕೊಡಬೇಡಿರೆಂದು ಬೋಧಿಸಿದರೆಂಬ ಆರೋಪದ ಮೇಲೆ ರೂಪ ನಾರಾಯಣ ಎಂಬ ಒಬ್ಬ ಮುಂದಾಳುವನ್ನು ಸಂಗಾತಿಗಳ ಸಮೇತ ಪೋಲೀಸರು ಸೆರೆಹಿಡಿದಿರುವರು.

ಕೊಲೊಂಬೊವಿನಲ್ಲಿ ಕಳೆದ ವಾರದಲ್ಲಿ ಒಂದೇ ಇಗರ್ಜಿಯಲ್ಲಿ ಒಂದೇ ದಿನ ಒಟ್ಟು ೧೪ ವಿವಾಹಗಳಾದುವು. ಹೀಗೆ ಇಷ್ಟರ ತನಕ ನಡೆದಿಲ್ಲ.

ಕಾನ್‌ಪುರದ ಸಬ್ ಇನ್ಸ್‌ಪೆಕ್ಟರ್ ಮಾನ ಸಿಂಗರೆಂಬವರ ಮನೆಯಿಂದ ೩೦೦೦ ರೂಪಾಯಿಗಳ ನಗನಾಣ್ಯಗಳು ಕಾಣೆ! ವಸ್ತುಗಳು ಕೆಲವು ಕೆಲಸದ ಹುಡುಗನ ಕೈಯಲ್ಲಿ ಸಿಕ್ಕಿವೆ.

ಆರು ವಾರಗಳ ಔಷಧವನ್ನು ಲಂಡನಿನಲ್ಲಿ ಸೇವಿಸಿ ದೇಹ ನೆಟ್ಟಗೆ ಮಾಡಿ ಶ್ರೀ ಜಯಕರರು ೨೨ ೩೦ನೇ ದಿನ ಇಂಡಿಯಾಕ್ಕೆ ಹೊರಟರು.

ಅಖಿಲ ಆಯುರ್ವೇದಿಕ ಕೊಂಗ್ರೆಸ್ ಒಂದು ಕೊಲೊಂಬೊವಿನಲ್ಲಿ ಜರಗಿ ತಮ್ಮ ಔಷಧಿಗಳ ಶುದ್ಧತೆಗಾಗಿ ಸರಕಾರದ ಸಹಾಯವನ್ನು ಬೇಡಬೇಕೆಂದು ಠರಾವಾಯಿತು.

ಗುಲಾಂ ನಬಿ ಎಂಬವನನ್ನು ಫಾಶಿಗೆ ಕೊಟ್ಟುದಕ್ಕಾಗಿ ಅವನ ಸಹೋದರನ ಪತ್ನಿಯು ತನ್ನನ್ನು ಪ್ರೋತ್ಸಾಹಿಸಿ, ಆ ಮೇಲೆ ತಾನು ನಾಧಿರ ಷಹರ ಕೊಲೆಮಾಡಬೇಕೆಂದು ಒತ್ತಾಯ ಮಾಡಿದುದರಿಂದ ತಾನು ಅಂತಹ ಕೃತ್ಯವನ್ನು ಮಾಡಿದೆನೆಂದು ದಶಂಬರ ೧೫ರಲ್ಲಿ ಗುಂಡಿನ ಬಾಯಿಗೆ ಬಿದ್ದ ಅಬ್ದುಲ್ ಖಾಲಿಕನ ಹೃದಯ ನಿವೇದನೆ.

ಸಾಹಿತ್ಯ ಸಂಚಿಕೆಯು
ತಾ 12-1-34ನೇ ಸಂಚಿಕೆಯೊಡನೆ
ಹೊರಡುವುದು—ಮೆನೇಜರ್ ಸ್ವ

ದಕ್ಷಿಣ ಕನ್ನಡ.

ಮಂಗಳೂರು: ಮಂಗಳೂರು ಸ್ವದೇಶೀ ಸ್ಟೋರ್ಸಿನಿಂದ ನಡೆಸಲ್ಪಡುವ ಖಾದಿ ಪ್ರೈಜ್ ಚಿಟ್ಟಿ ಫಂಡಿನ ಸೋಡ್ತಿಯು ತೆಗೆಯಲಾಗಿ ಈ ತಿಂಗಳ ಬಹುಮಾನವು ಶ್ರೀ ಆನಂದರಾಯಪ್ರಭು ಇವರಿಗೆ ಸಿಕ್ಕಿರುತ್ತದೆ

ಕಳೆದ ೧೯೩೩ನೇ ಇಸವಿ ದಸಂಬರ ೩೧ರ ವರೆಗೆ ಮುಸ್ಲಿಂ ಬಡ ವಿದ್ಯಾರ್ಥಿಗಳ ವಿದ್ಯೆ ಮತ್ತು ಕೈಗಾರಿಕೆಯ ಅಭಿವೃದ್ಧಿಗೋಸ್ಕರ ಸಹಾಯದ ಬಗ್ಗೆ ಕೆ ಎಚ್ ಸೇಕ್ ಫರೀದ್ ಸಾಹೇಬ್ ಮತ್ತು ಅವರ ಮಿತ್ರರು ಕೂಡ ಜಮೆ ಮಾಡಿ ಬ್ಯಾಂಕಿನಲ್ಲಿಟ್ಟ ಹಣವು ೨೬೮-೮-೨ ಆಗಿರುತ್ತದೆ ಇದೇ ಪ್ರಕಾರ ಪ್ರತಿ ತಿಂಗಳ ಪ್ರಥಮದ ವಾರದ ಪತ್ರಿಕೆಗಳಲ್ಲಿ ಲೆಕ್ಕವು ಪ್ರಕಟವಾಗುವುದು ದೇಶಾಭಿಮಾನಿಗಳೂ ಸ್ವದೇಶ ಭಕ್ತರೂ ಇದನ್ನು ಹೆಚ್ಚಿಗೆ ಪ್ರೋತ್ಸಾಹಿಸಿ ಬಡವರನ್ನುದ್ಧರಿಸುವ ಪುಣ್ಯಗಳಲ್ಲಿ ಭಾಗಿಗಳಾಗಬೇಕಾಗಿ ಕಾರ್ಯದರ್ಶಿಯವರು ವಿನಂತಿ ಮಾಡಿಕೊಳ್ಳುತ್ತಾರೆ

ಕುದ್ರೋಳಿ ಶ್ರೀ ಗೋಕರ್ಣನಾಥ ಕ್ಷೇತ್ರದಲ್ಲಿ ಮಹಾಶಿವರಾತ್ರಿ ಉತ್ಸವವು ಫೆಬ್ರವರಿ ತಾ. ೬ನೇ ದಿನ ಪ್ರಾರಂಭವಾಗುವುದು. ತಾರೀಕು ೨ನೇ ದಿನ ಮಹಾಶಿವರಾತ್ರಿ ಪೂಜೋತ್ಸವವೂ, ಮರುದಿನ ಸಹಸ್ರ ಭೋಜನವೂ ಯಥಾ ಪ್ರಕಾರವಾಗಿ ಅತಿ ವಿಜೃಂಭಣೆಯಿಂದ ಜರಗುವುವು ಭಕ್ತ ವೃಂದವು ಸದ್ರಿ ದಿನಗಳಲ್ಲಿ ದೇವಸ್ಥಾನಕ್ಕೆ ಚಿತ್ತೈಸಿ ಶ್ರೀ ದೇವರ ಗಂಧಮುಡಿ ಪ್ರಸಾದಗಳನ್ನು ಸ್ವೀಕರಿಸಬೇಕಾಗಿ ದೇವಸ್ಥಾನದ ಸೆಕ್ರಿಟರಿಯವರು ಅರಿಕೆ ಮಾಡಿಕೊಂಡಿರುತ್ತಾರೆ

ಇಲ್ಲಿಯ ಮಂಗಳೂರು ಕೋಪರೇಟಿವ್ ಟೌನ್ ಬ್ಯಾಂಕ್ ಲಿಮಿಟೆಡ್ ನಂ ೨೮೭೬ ಇದರ ೧೯೩೩ರ ವರದಿಯು ಹಸ್ತಗತವಾಗಿದ್ದು ೨೫೦೦-೧೫-೦ ಲಾಭವು ದೊರೆತಿದೆಯಾಗಿ ಕಂಡುಬರುತ್ತದೆ ಇದು ಇನ್ನೂ ವೃದ್ಧಿಯನ್ನು ಹೊಂದಲೆಂದು ಹಾರೈಸುವೆವು.

ಇಲ್ಲಿಯ ಗವರ್ನ್‌ಮೆಂಟ್ ಸೆಕೆಂಡರಿ ಟ್ರೈನಿಂಗ್ ಸ್ಕೂಲ್ ಫೋರ್ ಮೆನ್ ಗವರ್ನಮೆಂಟ್ ಕೊಲೇಜ್ ಮಂಗಳೂರು ಇದು ೧೯೩೪ರಲ್ಲಿ ತನ್ನ ೨೫ನೇ ವರ್ಷವನ್ನು ಕೊನೆಗಾಣಿಸುವುದು ತಾ ೧೬ನೇ ಫೆಬ್ರವರಿಯಲ್ಲಿ ಇದರ ರಜತೋತ್ಸವವು ಜರಗಲಿರುವುದರಿಂದ ಎಲ್ಲಾ ಹಳೆ ಮತ್ತು ಈಗಿನ ವಿದ್ಯಾರ್ಥಿಗಳೂ ವಿದ್ಯಾಪ್ರೇಮಿಗಳೂ ಉದಾರ ಧನಸಹಾಯವನ್ನು ಮಾಡಬೇಕಾಗಿ ಜುಬಿಲಿ ಕಮಿಟಿಯವರು ಅರಿಕೆ ಮಾಡಿಕೊಂಡಿರುವರ

ಇಲ್ಲಿಯ ಜನರಲ್ ಇನ್ಶೂರೆನ್ಸ್ ಬ್ಯಾಂಕ್ ಒಫ್ ಇಂಡಿಯಾ ಲಿಮಿಟೆಡ್ ಇದು ಪ್ರಥಮವಾಗಿ ರೂ ೫ ಕಟ್ಟಿ ಸ್ಥಾಪಕರಾದ ಪ್ರೀಗೆ ರೂ ೫೦೦೦ ಬರಬೇಕಾಯಿತು ಅವರು ಕಟ್ಟಿದ ವಂತಿಗೆ ರೂ ೧೧-೮ ನ್ನು ಕ್ಲೈಮ್ ಆಗಿ ಕೊಟ್ಟಿರುತ್ತವೆ

ಸ್ಥಳೀಕ ಶ್ರೀಕೃಷ್ಣ ಸಿನೆಮಾದಲ್ಲಿ ತಾ ೩೦ರಿಂದ ಬೊಂಬಾಯಿ ಮೂವಿಟೋನ್ ಕಂಪೆನಿಯವರ ಅತ್ಯುಜ್ವಲ ಚಿತ್ರವಾದ ಹಾತಿಮ್ ತಾಯಿ ೨೫ ರೀಲುಗಳುಳ್ಳ (ಸೀರಿಯಲ್ ಹಿಂದೀ ಮಾತಾಡುವ ಚಲಚ್ಚಿತ್ರವನ್ನು ಪ್ರದರ್ಶಿಸಲಾಗುವುದು ತಾ ೯ರಿಂದ ೨ನೇ ಖಂಡ ತಾ ೧೩ರಿಂದ ೩ನೇ ಖಂಡ ತಾ ೧೫ರಿಂದ ೪ನೇ ಖಂಡವು ಪ್ರದರ್ಶಿಸಲ್ಪಡುವುದು ಮಿ ಮೂರುತಿ, ಬದ್ರಿ ಪ್ರಸಾದ್ ಹೈದರ್ ಕಮಲ ಮೊದಲಾದವರು ಅಭಿನಯಿಸಿರುವರು ಬಹು ಇಂಪಾದ ಗಾನದಿಂದಲೂ ನವರಸದಿಂದಲೂ ತುಂಬಿದೆ.

ದಕ್ಷಿಣ ಕನ್ನಡದಲ್ಲಿ
ಗಾಂಧಿಜಿಯವರ ಸಂಚಾರ ಕಾರ್ಯಕ್ರಮ.

ತಾ ೧೪-೧-೧೯೩೪.

ಬೆಳಿಗ್ಗೆ ಗಂಟೆ ೯-೩೦ ಕಯ್ಯೂರಿನಿಂದ ಟ್ರೈನ್ ಮೂಲಕ ಮಂಗಳೂರಿಗೆ ಆಗಮನ. ೯ ೪೦ ನೆಟ್ಟಗೆ ಮೈದಾನಿಗೆ ತೆರಳುವುದು. ೯-೪೦—೧೦ ಮೈದಾನಿನಲ್ಲಿ ಸಾರ್ವಜನಿಕ ಸಭೆ, ಮಾನಪತ್ರ ಮತ್ತು ನಿಧಿಗಳನ್ನೊಪ್ಪಿಸುವುದು ೧೦—೧೦ ೧೫ ಸಾರ್ವಜನಿಕ ಪ್ರಾರ್ಥನಾ ಮಂದಿರದ ಶಂಕುಸ್ಥಾಪನೆಗಾಗಿ ಕೆನರಾ ಹೈಸ್ಕೂಲಿಗೆ ಸಂದರ್ಶನ ಮಾನಪತ್ರ ಮತ್ತು ನಿಧಿಪ್ರಧಾನ ೧೦-೧೫—೧೦ ೪೦ ಡಿಪ್ರೆಸ್ಡ್ ಕ್ಲಾಸಸ ಮಿಶನ ಶಾಲೆಗೆ ಸಂದರ್ಶನ ೧೦-೪೦—೩-೪೦ ಪೆಂಟ್ಲೆಂಡ್ ಪೇಟೆಯ ಶ್ರೀ ಆರ್ ಎಸ್ ನಗರ್ಕರ ಸರಸ್ವತಿ ನಿವಾಸದಲ್ಲಿ ಭೋಜನ ಮತ್ತು ವಿಶ್ರಾಂತಿ

ಅಪರಾಹ್ನ ಗಂಟೆ ೩ ೪೦—೪ ೧೫ ಭೇಟಿ ಮತ್ತು ಪೆಂಟ್ಲೆಂಡ್ ಪೇಟೆಯ ಹರಿಜನ ನಿವಾಸ ಸಂದರ್ಶನ ೪ ೧೫ ೪ ೪೦ ಗುರುಪುರ ಬಜ್ಪೆ ಕಿನ್ನಿಗೋಳಿ ಮಾರ್ಗವಾಗಿ ಮೂಲ್ಕಿಗೆ ಪ್ರಯಾಣ ೪ ೪೦—೫ ೪೦ ಮೂಲ್ಕಿಯಲ್ಲಿ ಫಲಹಾರ ಮತ್ತು ವಿಶ್ರಾಂತಿ ೫-೪೦ ೬-೪೫ ಜಮಾ ಮಾಡಿ ಪಡುಬಿದ್ರಿ, ಕಾಪು ಮತ್ತು ಕಟಪಾಡಿ ಮಾರ್ಗವಾಗಿ ಉಡುಪಿಗೆ ಪ್ರಯಾಣ ೬ ೪೫—೭ ೫ ಉಡುಪಿಯಲ್ಲಿ ಸಾರ್ವಜನಿಕ ಸಭೆ ಮಾನಪತ್ರ, ನಿಧಿಗಳ ಅರ್ಪಣೆ ೭ ೧೫—೮ ಭೇಟಿ

ತಾ ೧೫-೧-೩೪ ಉಡುಪಿಯಲ್ಲಿ ವಿಶ್ರಾಂತಿ ಮೌನದಿನಾಚರಣೆ

ತಾ ೧೬-೧-'೩೪

ಉಡುಪಿಯಿಂದ ಬೆಳಗ್ಗೆ ಹೊರಟು ಕಾರ್ಕಳ ಪಡುಬಿದ್ರಿ ಬಂಟ್ವಾಳ ಮಾರ್ಗವಾಗಿ ಮಂಗಳೂರಿಗೆ ಚಿತ್ತೈಸಿ ಬೆಳಗ್ಗೆ ೯ ೫೫ಕ್ಕೆ ಮೈಲ್ ಟ್ರೈನಿನಲ್ಲಿ ತೆರಳುವುದು

ಜನತೆಯೂ, ಸ್ವಾಗತಸತ್ಕಾರ ವ್ಯವಸ್ಥಾಪಕರೂ ಈ ಕೆಳಗಣ ಸಂಗತಿಗಳನ್ನು ಗಮನಿಸಿಕೊಳ್ಳಬೇಕಾಗಿ

ವಿನಂತಿ

ಸಮಯವನ್ನುಳಿಸುವುದಕ್ಕಾಗಿ ಎಲ್ಲಾ ಮಾನಪತ್ರಗಳನ್ನು ಓದಲ್ಪಟ್ಟವಾಗಿ ಪರಿಗಣಿಸಲಾಗುವುದು

ನಿಧಿಗಳನ್ನೊಪ್ಪಿಸುವ ವ್ಯಕ್ತಿಗಳೂ ಸಂಸ್ಥೆಗಳೂ ಅವನ್ನು ಸುಲಭವಾಗಿ ಲೆಕ್ಕಮಾಡಿ ಸುರಕ್ಷಿತವಾಗಿರಿಸಿ ಚಿಲ್ಲರೆ ಕರೆನ್ಸಿ ನೋಟುಗಳ ಮೂಲಕ ಒಪ್ಪಿಸುವಂತೆ ನೋಡಬೇಕು ರೈಲ್ವೇ ಸ್ಟೇಶನು ಮೊದಲಾದ ಸ್ಥಳಗಳಲ್ಲೆಲ್ಲಾ ಜನರು ಗುಂಪುಗಟ್ಟಿ ಮಹಾತ್ಮರ ನಿಯಮಿತ ಕಾರ್ಯಕ್ರಮದ ನಿರ್ವಾಹಕ್ಕೆ ತಡೆ ಮಾಡಬಾರದೆಂದು ಜನರೊಡನೆ ಪ್ರತ್ಯೇಕ ವಿನಂತಿಯಿದೆ ಗಾಂಧೀಜಿಯವರನ್ನು ಅತಿ ಹೆಚ್ಚಿನ ಜನರ್ಸ್ತೋಮವು ನೋಡಿ ಭಾಷಣಗಳನ್ನು ಕೇಳಲನುಕೂಲವಾಗುವಂತೆ ಸಾರ್ವಜನಿಕ ಸಮಾರಂಭಗಳಲ್ಲಿ ಸಂಪೂರ್ಣ ವ್ಯವಸ್ಥೆ ಮತ್ತು ಶಾಂತತೆಯನ್ನು ಕಾಪಾಡುವ ಸ್ವಯಂಸೇವಕರ ಯತ್ನದಲ್ಲಿ ಜನರು ಸಹಕರಿಸಬೇಕಾಗಿ ಪ್ರತ್ಯೇಕವಾಗಿ ಕೇಳಿಕೊಳ್ಳಲಾಗುತ್ತದೆ

ಉಡುಪಿಗೆ ಹೋಗುವಾಗ ಅಲ್ಲಿಂದ ಹಿಂತಿರುವಾಗ ಮುಖ್ಯ ಸ್ಥಳಗಳಲ್ಲೆಲ್ಲಾ ಜನರು ಗಾಂಧೀಜಿಯವರಿಗೊಪ್ಪಿಸಲು ನಿಧಿಯನ್ನೆಷ್ಟು ಕೂಡಿಸಿ ಆಯಾಯ ಸ್ಥಳಗಳಲ್ಲಿ ನಿಶ್ಚಿತ ಸಮಯಕ್ಕಿಂತ ಅರ್ಧ ಗಂಟೆ ಮೊದಲೇ ಸಿದ್ಧರಾಗಿರಬೇಕಾಗಿ ವಿನಂತಿ ಅಂತಹ ಸ್ಥಳಗಳಲ್ಲಿ ಮಹಾತ್ಮರ ಮೋಟಾರ್ ಕಾರನ್ನು ನಿಲ್ಲಿಸಿ ನಿಧಿ ಮೊದಲಾದುವುಗಳನ್ನು ಸ್ವೀಕರಿಸಲು ಅನುಕೂಲವಾಗುವ ಕೆ ಮೊದಲೇ ಸ್ವಾಗತ ಕಮಿಟಿಗೆ ತಿಳಿಸಬೇಕಾಗಿ ಅಪೇಕ್ಷಿಸೋಣಾಗುತ್ತದೆ

ಗಾಂಧೀಜಿಯವರ ಮೋಟರ ಕಾರು ನಿರಾತಂಕವಾಗಿ ಚಲಿಸಲಾಗುವಂತೆ ಜನರು ರಸ್ತೆಯಲ್ಲಿ ಗುಂಪು ಕಟ್ಟಿ ನಿಲ್ಲದಂತೆ ಜಾಗ್ರತೆ ತೆಗೆದುಕೊಳ್ಳತಕ್ಕದೆಂದು ಸ್ವಾಗತ ಕಮಿಟಿಯ ಕಾರ್ಯದರ್ಶಿಗಳ ವಿನಂತಿ ಇದೆ

ಉಡುಪಿ – ಮಹಾತ್ಮಾ ಗಾಂಧಿಯವರು ಇಲ್ಲಿಗೆ ತಾರೀಕು ೧೪ನೇ ಆದಿತ್ಯವಾರ ಸಾಯಂಕಾಲ ೬ ೧೫ಕ್ಕೆ ಸರಿಯಾಗಿ ಮೂಲ್ಕಿ ಮಾರ್ಗವಾಗಿ ಚಲಿಸುವರು ಬಡವರ ಬಂಧುವಾದ ಮಹಾತ್ಮರನ್ನು ಉಡುಪಿ ತಾಲೂಕಿನ ಪರವಾಗಿ ಸ್ವಾಗತ ಮಾಡಿ ಅವರು ಸದ್ಯಕ್ಕೆ ಕೈಕೊಂಡಿರುವ ಹರಿಜನ ಸೇವೆಯಲ್ಲಿ ಕೂಡಿದಷ್ಟು ಸಹಾಯ ಮಾಡುವರೆ ಶ್ರೀ ಬೈಲೂರು ವಾಸುದೇವರಾವ್ ಬಿ ಎ ಬಿ ಎಲ್ ಎಡ್ವೊಕೇಟ ಇವರ ಅಧ್ಯಕ್ಷತೆಯಲ್ಲಿ ಪ್ರಮುಖರ ಸಮಿತಿಯು ಏರ್ಪಟ್ಟಿರುವುದು ಮಹಾತ್ಮರನ್ನು ಬಂದೊಡನೆ ಅಜ್ಜರಕಾಡು ಮೈದಾನಿಗೆ ಕರೆದೊಯ್ದು ನೆರೆಯಲಾಗುವ ಮಹಾ ಸಭೆಯೆದುರು ತಾಲೂಕಿನ ಪರವಾದ ಮಾನಪತ್ರ ಮತ್ತು ಹಣ ನಿಧಿಗಳು ಅರ್ಪಿಸಲಾಗುವುವು ಆಗಲೆ ಮಹಾತ್ಮರ ಭಾಷಣವಾಗುವುದು ಅನಂತರ ದುರುಸ್ತಿಗೊಳಿಸಲ್ಪಟ್ಟಿರುವ ಅಜ್ಜರಕಾಡಿನಲ್ಲಿರುವ ಸಾಹುಕಾರ ಶ್ರೀ ನಗರ ಸಿ ರಾಮರಾಯರ ಶ್ರೀ ರಾಮಭವನಕ್ಕೆ ಇವರು ತೆರಳಿ ನುಸುಕಿಂಡರೊಡನೆ ಮಾತು ಸಂಭಾಷಣೆಗಳನ್ನು ಮುಗಿಸಿಕೊಂಡು ರಾತ್ರಿ ಗಂಟೆ ೮ರಿಂದ ಮೌನವನ್ನು ಧರಿಸಿ ಮರುದಿನ ಸೋಮವಾರ ರಾತ್ರಿ ಗಂಟೆ ೮ಕ್ಕೆ ಮೌನವ್ರತವನ್ನು ಸಂಪೂರ್ಣಗೊಳಿಸುವರಾದರೂ ಪ್ರತಿ ಮಂಗಳವಾರವೂ ಕೂಡ ಪ್ರತಿ ವಾರದ ವಿಶ್ರಾಂತಿ ದಿನವಾದುದರಿಂದ ಯಾವುದೇ ಬಗೆಯ ಸಾರ್ವಜನಿಕ ವ್ಯವಹಾರಗಳಲ್ಲಿ ಭಾಗವಹಿಸುವುದಿಲ್ಲ ಅಂತೂ ತಾ ೧೬ನೇ ಮಂಗಳವಾರ ಪ್ರಾತಃ ೬ ಗಂಟೆಗೆ ಇಲ್ಲಿಂದ ಹೊರಟು ಕಾರ್ಕಳ ಮಾರ್ಗವಾಗಿ ಮಂಗಳೂರನ್ನು ಸೇರಿ ಅದೇ ಬೆಳಗಿನ ಮೈಲು ಬಂಡಿಯಿಂದ ಕಲ್ಲಿಕೋಟೆಗೆ ತೆರಳುವರ

ಅಜೆಕಾರು — ಸಾರ್ವಜನಿಕವಾಗಿ ಇಲ್ಲಿ ತೆರೆಯಲ್ಪಟ್ಟ ಬೆಡ್‌ಮಿಂಟನ ಪಂದ್ಯಾಟವು ಇದೇ ಕಳೆದ ತಾ ೨೪ ೧೯೩೩ರಿಂದ ಪ್ರಾರಂಭಿಸಿ ತಾ ೩೦ ೧೨ ೩೩ರ ವರೆಗೆ ಅತಿ ಸಂಭ್ರಮದಿಂದ ಜರಗಿತು ಜಿಲ್ಲೆಯ ಎಲ್ಲಾ ಕಡೆಗಳಿಂದಲೂ ಬೆಡ್‌ಮಿಂಟನ ಪಂಗಡಗಳು ಬಂದು ಈ ಪಂದ್ಯಾಟಕ್ಕೆ ಸ್ಪರ್ಧಿಸಿ ತಮ್ಮ ಚಲೋ ಆಟವನ್ನು ಪ್ರದರ್ಶಿಸಿದರು ಈ ಸಂದರ್ಭದಲ್ಲಿ ರಾತ್ರಿ ಸಮಯ ಕಾರ್ಕಳ ವಿಜಯ ಬಾಲಿಕೆ ದಳದ ಶಿಬಿರಾಗ್ನಿ ಹರಿಕಥೆ ಯಕ್ಷಗಾನ ಗಾಯನ ಇತ್ಯಾದಿ ವಿನೋದ ಕಾರ್ಯಕ್ರಮಗಳನ್ನು ಏರ್ಪಡಿಸಿತ್ತು ಪಾರಿತೋಷಕಗಳನ್ನು ಹಂಚುವ ಸಮಾರಂಭವು ಮಾನ್ಯ ಜಿಲ್ಲಾ ಬೋರ್ಡ್ ಪ್ರಸಿಡೆಂಟರಾದ ಶ್ರೀ ಎ ಬಿ ಶೆಟ್ಟಿ ಎಮ ಎಲ್ ಸಿ ಯವರ ಅಧ್ಯಕ್ಷತೆಯಲ್ಲಿ "ನಾರಾಯಣ ಮನಮೋಹಿನೀ ವಿಲಾಸ"ದಲ್ಲಿ ಬಹು ವಿಜೃಂಭಣೆಯಿಂದ ಜರಗಿತು ಫೈನಲಿನಲ್ಲಿ ವಿಜಯಶಾಲಿಗಳಾದ ೨ ಮೂಲ್ಕಿ ಟಿ ಮಿ ಗೆ ೫ ಬೆಳ್ಳಿಯ ಕಪ್ಪುಗಳನ್ನೂ ಉಡುಪಿಯ ಸಂಜಾಬ್ ಪ್ಲೇರ್ಗೆ ೫ ರಜತ ಪದಕಗಳನ್ನೂ ಡಬ್ಬಲ್ಸಿನಲ್ಲಿ ಶ್ರೀಗಳು ದ ಸುಂದರರಾಮ ಶೆಟ್ಟಿ ಮತ್ತು ಸೀತಾರಾಮ ಶೆಟ್ಟಿ ಇವರಿಗೆ ೨ ಸುವರ್ಣಪದಕಗಳನ್ನೂ ೦೦ ಗಳಾದ ಪೂವಪ್ಪ ಭಂಡಾರರು ಮತ್ತು ಎಸ ಆರ್ ಬ್ರಹ್ಮಾವರ ಇವರಿಗೆ ಸುವರ್ಣಕೇಂದ್ರದ ೨ ರಜತ ಪದಕಗಳನ್ನು ಪುರಸ್ಕಾರವಾಗಿ ಕೊಡಲಾಯಿತು ಮಾತ್ರವಲ್ಲದೆ ನೀಲೇಶ್ವರ ಕೃಷ್ಣನ್ ನಂಬಿಯಾರ್ ಟಿ ಪದ್ಮನಾಭ ಶೆಟ್ಟಿ ಮತ್ತು ಮೂಡಬಿದ್ರೆ ಶ್ರೀಧರ ಪೈಗಳಿಗೆ ಅಜೆಕಾರ ಪಟೇಲ್ ಅನಂತರಾಜ ಹೆಗ್ಗಡೆ ಮತ್ತು ಕಾರ್ಯದರ್ಶಿ ಕೆ ನಾರಾಯಣ ಆಚಾರ್ಯರವರಿಂದ ಸುವರ್ಣಕೇಂದ್ರದ ೩ ರಜತ ಪದಕಗಳನ್ನು ಸ್ಪೆಷಲ್ Special prize ಆಗಿ ಕೊಡಲಾಯಿತು ತದನಂತರ ಅಧ್ಯಕ್ಷರ ಬೋಧಪ್ರದ ಭಾಷಣವಾಯಿತು ಧನ್ಯವಾದಗಳನ್ನರ್ಪಿಸಿದ ಮೇಲೆ ಸಭೆಯು ಜಯಘೋಷಗಳಿಂದ ಮುಕ್ತಾಯವಾಯಿತು

ಇದೇ ಬರುವ ತಾ ೬-೧ ೧೯೩೪ರಲ್ಲು ಎಣ್ಣೆಹೊಳೆಯಲ್ಲಿ ಏಟಿನ ಕೋಣಗಳ ಪಂದ್ಯಾಟವು ಜರಗಲಿಕ್ಕಿರುವುದು ತತ್ಸಂಬಂಧ ಮೇಲೆಣಿಸಿದ ಕೋಣಗಳಿಗೆ ಬೆಳ್ಳಿಯ ಕಪ್ಪನ್ನು ಬಹುಮಾನವಾಗಿ ಕೊಡಲಾಗುವುದರಿಂದ ಸಕಲರೂ ತಮ್ಮ ಕೋಣಗಳ ಸಮೇತ ದಯವಾಡಿ ಚಿತ್ತೈಸಿ ಸದರಿ ಕಾರ್ಯವನ್ನು ಸಾಂಗಗೊಳಿಸಬೇಕಾಗಿಯೂ ಸಹಾ ಶ್ರೀ ನಡಿಮಾರು ದೇವರಾಜ ಹೆಗ್ಗಡೇರು ಈ ಮೂಲಕ ವಿನಂತಿ ಮಾಡಿಕೊಂಡಿರುವರು

Karnataka Chemical and Pharmaceutical Works Ltd , Udipi (South India)

ಕುಂಭಕೋಣದಲ್ಲಿಯೂ ಮಧುರೆಯಲ್ಲಿಯೂ ಮೈಸೂರಿನಲ್ಲಿಯೂ ಸುವರ್ಣ ಪದಕಗಳನ್ನು ಪಡೆದಿರುವ

ಕರ್ಣಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದಕ್ಷಿಣ ಹಿಂದೂಸ್ಥಾನ)

ನಮ್ಮಲ್ಲಿ ಟಿಂಕ್ಚರ್ಸ್ ವಗೈರೆ ಎಲ್ಲಾ ಎಲ್ಲೋಪೆತಿಕ್ ಔಷಧ ದ್ರವ್ಯಗಳೂ, ಆಯುರ್ವೇದಿಯ ಔಷಧಿಗಳೂ, ಟ್ವೈಲೆಟ್ ಸ್ನಾನ ಸೋಪುಗಳೂ ಸಾಬೂನುಗಳೂ, ಫೌಂಟನ್ ಪೆನ್ ಶಾಯಿಗಳೂ ತಯಾರಿಸಲ್ಪಡುತ್ತವೆ

ದ್ರಾಕ್ಷಾಸವ, ಪ್ರಸೂತಿ ಸಂಜೀವನ, ಸಿಯೋವಿಗರ್, ಸ್ನೋ,
ಕ್ಷೀರಬಲಾ, ಕಾರ್ಪೂರ್‌ಫ್ಲೋಜಿಸ್ಟಿನ್, ಯುಟೆರೀನಾ, ಇಂಕ್ಸ್

ಮೆನೆಜಿಂಗ್ ಡೈರೆಕ್ಟರ್—ವೆಂಕಟ್ರಾಯ ಅಣ್ಣಪ್ಪ ಬಾಳಿಗ

ಹೆಡ್ ಆಫೀಸು
ಉಡುಪಿ (ದಕ್ಷಿಣ ಹಿಂದೂಸ್ಥಾನ)

ಬ್ರೇಂಚ್ ಆಫೀಸು
ದೇವಕರಣ ಮೆನ್ಶನ್ಸ್ 45 ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ ನಂ 2

ಪಶ್ಚಿಮ ಕರಾವಳಿ ಮತ್ತು ಮೈಸೂರು ಪ್ರಾಂತ್ಯಗಳ ಪ್ರಾಮುಖ್ಯ ಏಜಂಟರು —
ಕರ್ಣಾಟಕ ಪ್ರೊಡಕ್ಟ್ಸ್ ಡಿಸ್ಟ್ರಿಬ್ಯೂಟಿಂಗ್ ಕಂಪೆನಿ, ಮಂಗಳೂರು

Jubilee year! *Jubilee year!*

The Bombay Life Assurance Co., Ltd.,

Bombay—Established 1908.

Chairman:—**Sir Lalubhai Samaldas**, Kt., C. I. E., J. P.

Wanted

ONE LADY ORGANISOR FOR EACH OF THE DISTRICTS OF SOUTH KANARA, COORG, BELLARY AND TWO FOR MYSORE STATE.

Either on pay or commission or both with reasonable Travelling Allowance. Only educated ladies need apply. Right opportunity to those who desire independant and respectable vocation.

Applications can be made to the undersigned giving full qualifications and whether they can guarantee business.

Apply to:— **KOCHIKAR BROTHERS,** **Madras Branch Secretaries.**

Vishveshwarapuram Circle, *Bangalore City.* *or* Udipi, *South India.* *or* Post Box No. 337, *Mount Road, Madras.*

N. B. Intending candidates may interview by previous appointment with our Organizing Secretary (now in Bombay) who will be touring.

(25—8—33.)

ಶ್ರೀಮಧ್ವಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು! **ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!**

ಕಸ್ತೂರಿ ಮಿಶ್ರಿತ ದಶಮೂಲಾರಿಷ್ಟ ೧೬ ಔನ್ಸ್ ಬಾಟ್ಲಿ ೧ಕ್ಕೆ ರೂ. 1-8-0. ದ್ರಾಕ್ಷಾಸವ ೧೬ ಔನ್ಸ್ ಬಾಟ್ಲಿ 1ಕ್ಕೆ ರೂ. 1. ಅಶ್ವಗಂಧಾರಿಷ್ಟ ೧೬ಂ. ಔನ್ಸ್ ಬಾಟ್ಲಿ ಒಂದಕ್ಕೆ ರೂ. 1—4—0. ಅಬಲಾಮೃತ ೧೬ ಔನ್ಸ್ ಬಾಟ್ಲಿ ೧ಕ್ಕೆ ರೂ 2. ಅಶೋಕಾರಿಷ್ಟ ೧೬ ಔನ್ಸ್ ಬಾಟ್ಲಿ ೧ಕ್ಕೆ ರೂ. 1-4-0. ಚವನಪ್ರಾಶಲೇಹ ೧ ರಾತಲಿಗೆ ರೂ. 2-8-0. ಅಭಯಾಮಲಕಿ ೧ ರಾತ್ಲಿಗೆ ರೂ. 2. ಚಂದ್ರಮುಖ್ (ವಿಶೂಚಿಕೆಗೆ ರಾಮಬಾಣ) ಕಾಲು ಔನ್ಸಿಗೆ ರೂ. 0—5—0. ದಂತಧಾವನ ಚೂರ್ಣ ತೊಲೆ ೧ಕ್ಕೆ 0-1-0. ಕ್ರಿಮಿಘಾತಿನಿ (ದದ್ರು, ಕಜ್ಜಿಗೆ) ಡಬ್ಬಿ ೧ಕ್ಕೆ ರೂ. 0-4-0. ಕೃಷ್ಮಾಂಡ ೧ ಔನ್ಸಿಗೆ ರೂ. 0-6-0 ಚಿತ್ರಕ (ಮಕ್ಕಳ ಗ್ರಹಣೀ ರೋಗಕ್ಕೆ ದಿವ್ಯೌಷಧ) ತೊಲೆ ೧ಕ್ಕೆ ರೂ. 0-8-0. ಮಹಾ ಚಿತ್ರಕ ತೊಲೆ ೧ಕ್ಕೆ ರೂ. 1-0-0. ಪಿಂಡ ತೈಲ ೫ ಔನ್ಸ್ ಬಾಟ ೧ಕ್ಕೆ ರೂ. 0-10-0. ಬಲಾಶ್ವಗಂಧಾದಿ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ 0-12-0. ಹಿಮಸಾಗರ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ ರೂ. 1-8-0. ಮಹಾಚಂದನಾದಿ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ ರೂ. 1—0—0. ಶ್ರೀ ಗೋಪಾಲ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ ರೂ. 3—8-0.

ನಮ್ಮ ಔಷಧಗಳು ದೊರೆಯುವ ಸ್ಥಳ:—ಮಂಗಳೂರು—ರಾಘವೇಂದ್ರ ರಂಗ ಪೈ ರಥವೀದಿ, ಕೆನರಾ ಡಿಸ್ಪೆನ್ಸರಿ ಕೊಡಿಯಾಲಬೈಲ್. ಬೈಂದೂರು—ಕೆ. ಪುತ್ತು ಕಾಸನುಧಾರ. ಗಂಗೊಳ್ಳಿ—ಜಿ. ಸುರೇಂದ್ರ ನಾಯಕ್ಕ. ಕುಂದಾಪುರ—ಕೆ. ರಾಮ ಭಟ್. ಡಾಕ್ಟರ್ ಕೆ. ಆರ್. ಕಾಮತ್. ಉಡುಪಿ—ಪಿ ಜನಾರ್ಧನ ನಾಯಕ್ ಎಂಡ್ ಕೊ., ಪೈ ಫಾರ್ಮಸಿ, ಆರ್. ಎಸ್. ಶೆಟ್ಟಿ, ರಥಬೀದಿ. ಕಾರ್ಕಳ—ವಿ. ಪಿ. ಶೆಟ್ಟಿ. ಕಾಪು—ಡಾಕ್ಟರ್ ಬಿ ಕೆ. ಬೇಕಲ ಡಿಸ್ಪೆನ್ಸರಿ. ಬಟ್ಕಳ—ಬಿಳಿಮನ ನರಸಿಂಹ ನಾಯಕ್. ಬಾರ್ಕೂರು—ಬಿ. ಭಗವಂತ ಮಲ್ಯ, ಆರ್. ಪಿ. ಔಷಧಾಲಯ. ಬ್ರಹ್ಮಾವರ ಕೆ. ವೈಕುಂಠ ಪೈ ಎಂಡ್ ಸನ್ಸ್, ಕೆ. ಶೇಷಗಿರಿ ನಾಗಪ್ಪ ಎಂಡ್ ಸನ್ಸ್. ಎಲ್ಲೆಲ್ಲಿಯೂ ಏಜಂಟರು ಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಬಹುದು.

ನಾಯಕ್ ಬ್ರದರ್ಸ್, ಶ್ರೀಮಧ್ವವನೇಂದ್ರ ಮಹೌಷಧಾಲಯ, ಕೋಟೆ ಕಟಪಾಡಿ, ದ. ಕ.

The Canara Industrial & Banking Syndicate Limited.,

Established in 1925. **Head Office:—Mukunda Nivas, UDIPI.**

Branches: Mangalore, Payyanur, Brahmavar, Kumta, Karwar, Hubli, Honnavar, Bangalore & Cannanore.

Authorised Capital Rs. 5,00,000. Subscribed Capital Rs. 1,06,300. Paid up Capital Rs. 26,300 Issued Capital Rs. 2,00,000.

STATEMENT OF AFFAIRS OF THE SYNDICATE AS ON 30TH November 1933.

LIABILITIES.			ASSETS.		
Paid up Capital	Rs.	26,300—0—0.	Loans on Land mortgage	Rs.	2,71,186—9—2
Reserve & other funds	,,	20,250—0—0.	Loans on Valuable Securities	,,	2,29,690—7—9.
Deposits	,,	10,64,121—4—10.	Loans on Bills of Exchange, Hundis and Promissory Notes		6,73,634—4—0.
Due to Bankers	,,	1,19,606—0—6.	Investment on Shares of other Companies	,,	43,575—0—0.
			Investments on Government of Mysore Conversion Loan	,,	50,000—0—0.
			On Deposits with other Bankers	,,	1,11,000—0—0.
Bills for Collection	,,	29,283—1—3.	Bills for collection (per contra)	,,	29,283—1—3.
Sundries	,,	1,19,281—3—11.	Sundries	,,	1,40,794—4—10.
			Cash in hand & with Bankers	,,	29,677—15—6.
Total	Rs.	13,78,841-10-6	Total	Rs.	13,78,841-10-6.

Long and Short term Loans on attractive Schemes are granted.

ALL KINDS OF BANKING BUSINESS UNDERTAKEN.

Udipi, 7-12-1933.

P. A. Pai Bros.,
Managing Agents.

ವಿಚಿತ್ರ, ಆದರೆ ಸತ್ಯ:— ಮಂಗಳೂರಲ್ಲಿ ಪೋಸ್ಟಲ್ ವೈಚಿತ್ರ್ಯ!

ಮಂಗಳೂರಿನ ಪ್ರಸಿದ್ಧ ವ್ಯಾಪಾರಿಗಳಾದ ಮೆಸರ್ಸ್ ಬ್ರಿಜಾರ್ ಎಂಡ್ ಬ್ರದರ್ಸ್ ಕಿದೆಸ್ಸ್ ರಿಜಿಸ್ಟರಿ ಆದರು ತಾ ೪—೪—೧೯೭೪ ರಲ್ಲಿ ೨೦೦/- ರೂಪಾಯಿಗಳನ್ನು ಮುಂಬಾಯಿಯ ಎ. ಎಂ. ಥರ್ಸನ್, ಶಾ ಬಿಲ್ಡಿಂಗ್, ೧೩೩ ಪ್ರಿನ್ಸೆಸ್ ಸ್ಟ್ರೀಟ್, ಇವರಿಗೆ ಇನ್ಶೂರ್ ಮೂಲಕ (Aknowledgement due) ರವಾನಿಸಿದರು. ವಿಳಾಸದಾರರಿಗೆ ಹಣವು ಅದೇ ತಾ ೫ನೇ ದಿನ ತಲಪಿತು. ಅದರ ಹಣ ತಲಪಿದ ಬಗ್ಗೆ ಎಕ್ನೋಲೆಜ್‌ಮೆಂಟ್ ಮಾತ್ರ ಹಣ ಕಳುಹಿಸಿದ ಬ್ರಿಜಾರ್ ಕಂಪೆನಿಗೆ ತಲಪಲಿಲ್ಲ. ಈ ಎಕ್ನೋಲೆಜ್‌ಮೆಂಟ್ ಅದೇ ತಾ ೧೩ನೇ ಆಗೋಸ್ತು ವಲ್ಲಿ ಮಂಗಳೂರು ಪೋಸ್ಟಾಫೀಸಿಗೆ ತಲಪಿತು. ಆದರೆ ಅದು ವಿಳಾಸದಾರರಿಗೆ ಮುಟ್ಟಲಿಲ್ಲ. ೧೯೩೩ರ ದಶಂಬರ ತಾ ೨೮ಕ್ಕೆ ಈ ಎಕ್ನೋಲೆಜ್‌ಮೆಂಟು ಬ್ರಿಜಾರ್ ಕಂಪೆನಿಗೆ ತಲಪಿತು. ೧೯೧೬ರಲ್ಲಿ ಹೋದ ನಂಬ್ರ ೨೩ನೇ ಎಕ್ನೋಲೆಜ್‌ಮೆಂಟು ೧೯೩೩ರಲ್ಲಿ ಅಂದರೆ ೧೬ ವರುಷಗಳ ಅವಧಿಯ ಮೇಲೆ ತಲಪುವುದೆಂದರೆ ಪೋಸ್ಟಲ್ ವೈಚಿತ್ರ್ಯ ವಲ್ಲವೇ? ಈ ಎಕ್ನೋಲೆಜ್‌ಮೆಂಟ್ ಸ್ವದೇಶಾಭಿಮಾನಿ ಆಫೀಸಿನಲ್ಲಿದೆ.

ಪತ್ರಿಕೆ ಓದುವ ಯಂತ್ರ ಬಂತು!

ಮುದ್ರಿತ ಅಕ್ಷರಗಳನ್ನು ಮನುಷ್ಯನಂತೆ ಓದುವ ಒಂದು ಬಹು ವಿಚಿತ್ರ ಯಂತ್ರವನ್ನು ಜೋರ್ಜ್ ಬುಟ್‌ಕೊವಿಸ್ಕಿ ಎಂಬವನು ಕಂಡು ಹಿಡಿದಿರುತ್ತಾನೆ. ಇಲೆಕ್ಟ್ರಿಕ್ ಬಿಸ್ಟಿಕ್ ಮೂಲಕ ಶೋಧೆ ನಡೆಯಿತು. ಫ್ಲ್ಯಾಶ್ ಕೊಂಗ್ರುಯೆನ್ಸ್ ಎಂಬ ವಿದ್ಯುತ್ ಸೂತ್ರವೇ ಈ ಬಯಕೆ ಪೂರಣವು. ಟೈಫ್‌ರೈಟರ್ ಯಂತ್ರಕ್ಕೆ ನಾವು ಕಾಗದವನ್ನು ಸಿಕ್ಕಿಸುವಂತೆ ಯಾವ ಮುದ್ರಿತ ಕಾಗದವನ್ನಾದರೂ ಈ ಯಂತ್ರಕ್ಕೆ ಸಿಕ್ಕಿಸಿ ದೂರ ಕುಳಿತರೆ ಸರಿ—ಅದರಲ್ಲಿರುವ ಎಲ್ಲಾ ಶಬ್ದಗಳನ್ನು ಮನುಷ್ಯ ಭಾಷೆಯಿಂದ ಈ ಯಂತ್ರವು ಹೇಳುತ್ತದೆ. ಇದರಿಂದ ವಾರ್ತಾಪತ್ರ ವಾಚಕರಿಗೂ, ವಿದ್ಯಾರ್ಥಿಗಳಿಗೂ, ದಣ್ಣರಿಗೂ, ಮುದುಕರಿಗೂ ಬಹಳ ಪ್ರಯೋಜನವಾದೀತೆಂದು ಊಹಿಸಲ್ಪಟ್ಟಿದೆ. ಇದು ಆದಷ್ಟು ಬೇಗನೇ ಹಿಂದೂಸ್ಥಾನಕ್ಕೆ ಕಾಲಿಟ್ಟು ಪುಸ್ತಕ ದ್ವೇಷವನ್ನು ಹುಟ್ಟಿಸಲಿ!

ಹೆಂಗಳೆಯರ ಮಾನಭಂಗವು

ಸಾಹೇಬ ಷಾಥಬೇಗಮ್ ಎಂಬ ಹೆಸರಿನ ೧೮ ವರ್ಷದ ತರುಣಿಯು ತನ್ನ ಶತ್ರುವಾದ ಸಾಯ್ಬನ ಬದ್ರುದ್ದೀನ ಎಂಬವನನ್ನು ಕಾಣಲಿಕ್ಕೆಂದು ಹೈದರಾಬಾದಿಗೆ ಪರವೂರಿನಿಂದ ಹೋಗಿದ್ದಳು. ಆ ಮನುಷ್ಯನು ಇರುವ ಸ್ಥಾನವು ಅವಳಿಗೆ ಗೊತ್ತಿಲ್ಲವಾದುದರಿಂದ ಅವಳು ಪೋಲೀಸ ಚಾವಡಿಗೆ ಹೋಗಿ ವಿಚಾರಿಸಿದಳು. ಆ ಕಾಲಕ್ಕೆ ಪೋಲೀಸ ಚಾವಡಿಯಲ್ಲಿ ಒಬ್ಬ ಜಮಾದಾರನೂ ಮತ್ತಿಬ್ಬರು ಪೋಲೀಸರೂ ಇದ್ದರು. ಅವರಲ್ಲಿಯ ಸಯ್ಯದ್, ಜಾಫರ್ ಎಂಬಿಬ್ಬರು ಪೋಲೀಸರು ಅವಳಿಗೆ ಮನೆ ತೋರಿಸುವುದಕ್ಕಾಗಿ ಹೊರಟು ಅವರು ಅವಳನ್ನು ಒಂದು ಟಾಂಗಾದಲ್ಲಿ ಕೂಡ್ರಿಸಿ ಒಂದು ಮನೆಯ ಸಮೀಪ ಇಳಿಸಿದರು. ಒಳಗೆ ಕರೆದುಕೊಂಡು ಹೋಗಿ ಇಬ್ಬರೂ ಅವಳ ಮೇಲೆ ಬಲಾತ್ಕಾರ ಮಾಡಿದರು. ಈ ಸುದ್ದಿಯು ಪೋಲೀಸ ಅಧಿಕಾರಿಗಳಿಗೆ ತಿಳಿದು ಆ ಇಬ್ಬರನ್ನು ಬಂಧಿಸಿದರು. ಅವರನ್ನು ಕೆಲಸದಿಂದ ತೆಗೆದುಹಾಕಲಾಯಿತು. ಅವರ ಮೇಲೆ ವ್ಯಾಜ್ಯ ನಡೆದಿದೆ. ಜಮಾದಾರನ ದುರ್ಲಕ್ಷ್ಯದಿಂದ ಈ ಘಟನೆಯು ನಡೆಯಿತೆಂದು ಅವನನ್ನು ಕೆಲಸದಿಂದ ಡಿಗ್ರೇಡ್ ಮಾಡಲಾಗಿದೆ.

ಹಿಂದೀಯ ಸಕ್ಕರೆಯ ವೈಚಿತ್ರ್ಯ ಪ್ರಗತಿ!

ಹಿಂದೂಸ್ಥಾನದಲ್ಲಿ ೧೯೩೧—೩೨ರಲ್ಲು ೪೪ ಸಕ್ಕರೆ ಕಾರ್ಖಾನೆಗಳಿದ್ದುವು. ೧೯೩೩ರಲ್ಲಿ ಇವುಗಳ ಸಂಖ್ಯೆಯು ೬೨ಕ್ಕೆ ಏರಿತು. ಈಗ ಒಟ್ಟು ೧೩೬ ಸಕ್ಕರೆ ಕಾರ್ಖಾನೆಗಳಿವೆ. ೧೯೩೦—೩೧ನೇ ವರ್ಷದಲ್ಲಿ ಸರಾಸರಿ ೧೦ ಲಕ್ಷ ಟನ್ ಸಕ್ಕರೆಯು ಪರದೇಶದಿಂದ ಹಿಂದೂಸ್ಥಾನಕ್ಕೆ ಬಂದಿತು. ೩೧—೩೨ರಲ್ಲಿ ಇದು ಶೇಕಡಾ ೩೦ರಷ್ಟು ಬಿದ್ದುಹೋಗಿ ೩೨—೩೩ರಲ್ಲಿ ೪ ಲಕ್ಷ ಟನ್‌ಗಳಿಗೆ ಇಳಿಯಿತು. ಈ ಸಲ ಏಳು ತಿಂಗಳುಗಳಲ್ಲಿ ೨೫ ಲಕ್ಷ ಟನ್ ಸಕ್ಕರೆ ಮಾತ್ರ ನಮಗೆ ಬಂದಿವೆ. ಲೆಕ್ಕಪ್ರಕಾರ ೧ ಲಕ್ಷ ಟನ್‌ಗಳಿಗಿಂತ ಹೆಚ್ಚಿನ ಸಕ್ಕರೆಯು ಹಿಂದೂಸ್ಥಾನಕ್ಕೆ ಕಾಲಿಡಲು ಸಾಧ್ಯವಿಲ್ಲವೆಂದು ಗೊತ್ತಾಗಿದೆ. ೩೬—೩೭ರಲ್ಲಿ ಇಂಡಿಯಕ್ಕೆ ಪರದೇಶೀ ಸಕ್ಕರೆಯು ಬರಲಾರದೆಂದು ಊಹಿಸಲಾಗಿದೆ. ಸಕ್ಕರೆಗಾಗಿ ವರ್ಷಂಪ್ರತಿ ನಾವು ೧೫ ಕೋಟಿ ರೂಪಾಯಿಗಳನ್ನು ಪರದೇಶಗಳಿಗೆ ಕಳುಹಿಸುತ್ತಿದ್ದೆವು. ಈಗ ಆರೇಳು ವರ್ಷಗಳಿಂದ ಈ ಹಣವು ನಮ್ಮಲ್ಲೇ ಉಳಿಯಿತು. ಹಿಂದೂಸ್ಥಾನದವರು ಇದೇ ರೀತಿ ಎಲ್ಲಾ ಮುಖಗಳಲ್ಲೂ ವಿಚಿತ್ರ ಪ್ರಗತಿ ಹೊಂದಬೇಕಾಗಿದೆ.

ವಿಚಿತ್ರ ಕೈದಿ!

ಕಲ್ಕತ್ತೆಯ ಟೊ ಬಜಾರಿನಲ್ಲಿ ನಿರುದ್ಯೋಗಿಯಾಗಿ ಕಾಲಹರಣ ಮಾಡುತ್ತಿದ್ದ ರಜಾಕ್ ಎಂಬವನನ್ನು ಅಲ್ಲಿಯ ಪೋಲೀಸರು ದಸ್ತಗಿರಿ ಮಾಡಿ ಎಡಿಶನಲ್ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರಲ್ಲಿ ವಿಚಾರಣೆಗೆ ಗುರಿಪಡಿಸಿದರು. ವಿಚಾರಣೆ ನಡೆಯುತ್ತಿರುವಾಗ ರಜಾಕನು ಯಾರಿಗೂ ತಿಳಿಯದಂತೆ, ಹಕ್ಕದಲ್ಲಿ ನಿಂತಿದ್ದ ಮತ್ತೊಬ್ಬ ಅಪರಾಧಿಯ ಜೇಬಿನಿಂದ ಎಂಟು ರೂಪಾಯಿಗಳನ್ನು ಕದ್ದನು. ಈ ಸಂಗತಿಯು ಒಡನೆ ಹೊರಬಿತ್ತು. ಮೆಜಿಸ್ಟ್ರೇಟರು ರಜಾಕ್‌ನ ಮೊದಲನೆಯ ಅಪರಾಧಕ್ಕೆ ಅವನನ್ನು ಮೂರು ತಿಂಗಳುಗಳ ಎರಡನೇ ಅಪರಾಧಕ್ಕೆ ಆರು ತಿಂಗಳುಗಳ ಶಿಕ್ಷೆಗೆ ಗುರಿಪಡಿಸಿದರು. ಅಷ್ಟಾಗಿ ಕೋರ್ಟಿನ ಹೊರಬರುತ್ತಲೇ ರಜಾಕನು ಮೆಜಿಸ್ಟ್ರೇಟರಿಗೆ ಮುಸಿಮುಸಿ ಬೈಯುತೊಡಗಿದನು. ಈ ಮೂರನೆ ಅಪರಾಧಕ್ಕೆ ಅವನಿಗೆ ಆರು ತಿಂಗಳುಗಳ ಶಿಕ್ಷೆಯನ್ನು ವಿಧಿಸಿದರು. ಅದಾದ ಮೇಲೂ ಅವನು ಬೈದನು. ಮೆಜಿಸ್ಟ್ರೇಟರು ಸುಮ್ಮನಾದರು!

ವಿಚಿತ್ರ ಪುಣ್ಯಾತ್ಮ!

ಆಯರ್ಲೆಂಡಿಗೆ ಡಿಕ್ ಹೆರ್ಮ್ಸ್ ಎಂಬವನು ಬಂದೊಡನೆ ಅವನನ್ನು ಕಾಣಲು ಸಾವಿರಗಟ್ಟಲೆ ಜನರು ಮುತ್ತಿದರು. ಕಾರಣವೇನು? ಇವನ ಭಾರವು ಕಾಲು ಟನ್! ಒಂದು ಲೋರಿಯು ೧ ಟನ್ ಭಾರವಿರುತ್ತದೆ. ಈ ಮಹಾತ್ಮನು ಆಶ್ಚರ್ಯಕರವಾಗಿ ಅದರ ಕಾಲಂಶದಷ್ಟಿರುವನು. ಭೂಲೋಕದ ಎಲ್ಲಾ ಮನುಷ್ಯರಿಗಿಂತಲೂ ಇವನು ಬಹು ಭಾರಿ! ಪ್ರಾಯ ಮಾತ್ರ ಬರೀ ೩೩ ವರ್ಷ! ಇವನ ಎದೆಯು ೭೭ ಇಂಚು ಅಗಲವಿದೆ. ಕುತ್ತಿಗೆಯ ಸುತ್ತಳತೆಯು ೨೬ ಇಂಚು. ಶರ್ಟಿನ ಕೈಯ ಸುತ್ತಳತೆಯು ೧೮ ಇಂಚು. ಒಂದು ಶರ್ಟು ಹೊಲಿಯಬೇಕಾದರೆ ಇವನಿಗೆ ೯ ಗಜ ವಸ್ತ್ರವು ಅಗತ್ಯ. ಕಡಿಮೆಯಿಂದ ಪ್ರಯೋಜನವಿಲ್ಲ. ಈ ೯ ಗಜ ವಸ್ತ್ರದಿಂದ ನಮಗಾದರೆ ೪ ಶರ್ಟುಗಳು ಹೇಗೂ ಆಗುವುವು. ಇವನು ರೈಲಿನಲ್ಲಿ ಪ್ರಯಾಣ ಬೆಳೆಸಲು ಬಹಳ ಕಷ್ಟ ಕೆಲಸ. ಇವನಿಗಾಗುವ ಸೀಟುಗಳು ಅದರಲ್ಲಿಲ್ಲ. ಇದಕ್ಕಾಗಿ ಇವನನ್ನು ಗಾರ್ಡನ ಕೋಣೆಯಲ್ಲಿಯೇ ಕುಳ್ಳಿರಿಸುತ್ತಾರೆ. ಯಾವ ರೈಲೇ ಆಗಲಿ, ಆದರೆ ಗಾರ್ಡನು ಇವನ ಬಹುಮಿತ್ರ. ಎಲ್ಲಿ ಹೋದರೂ ಇವನಿಗೆ ಸ್ಪೆಶಲ್ ಮರ್ಯಾದೆ. ಇವನು ಹೀಗೆ ಬೆಳೆಯಲು ಕಾರಣವೇನೆಂದು ಕೇಳಿದರೆ “ಚೆನ್ನಾಗಿ ಊಟಮಾಡಿರಿ ನಗಿರಿ—ಸಂತೋಷದಿಂದಿರಿ” ಎನ್ನುತ್ತಾನೆ.

ಕೋಳಿಮೊಟ್ಟೆಗಳ ಪರವೂರು ಸಂಚಾರ

ಕೋಳಿಮೊಟ್ಟೆಯ ವ್ಯಾಪಾರವೆಂದರೆ ನಮಗೆ ನಾಚಿಕೆಗೇಡು ವ್ಯಾಪಾರ! ನಮಗೆ ಬೇಕಾದುದು ಗುಮಾಸ್ತಗಿರಿ! ಸರಕಾರೀ ನೌಕರಿ! ಆಫೀಸರ್‌ಶಿಪ್! ಆದರೆ ಅನ್ಯದೇಶಿಗರು ಅದನ್ನು ಬಯಸುವುದಿಲ್ಲ. ಹಣವೇ ಅವರ ಬಯಕೆ. ೧೯೩೩ರಲ್ಲಿ ಆಸ್ಟ್ರೇಲಿಯಾ ದೇಶದಿಂದ ಪರದೇಶಗಳಿಗೆ ೧೩೫ ಲಕ್ಷ ಕೋಳಿಮೊಟ್ಟೆಗಳು ಕಳುಹಿಸಲ್ಪಟ್ಟುವು. ಕಳೆದ ವರ್ಷಕ್ಕಿಂತ ೬೫ ಲಕ್ಷ ಮೊಟ್ಟೆಗಳು ಹೆಚ್ಚಿಗೆ ಹೋದವು. ಎಷ್ಟು ಸಮಯ ಕಳೆದರೂ ಮೊಟ್ಟೆಗಳು ಹಾಳಾಗದಂತೆ ವಿಚಿತ್ರ ಯೋಜನೆಗಳನ್ನು ಮಾಡಿ ಈ ವ್ಯಾಪಾರವನ್ನು ನಡೆಸಿ, ಮಿಲಿಯ ಪವನುಗಳನ್ನು ಸಂಪಾದಿಸುತ್ತಿರುವರು! ಈ ವ್ಯಾಪಾರವನ್ನು ನಾವು ಮಾಡಿದರೆ ನಮ್ಮನ್ನು ‘ಕೋಳಿಮೊಟ್ಟೆ ರಾಜ’ ಎಂದು ಕರೆಯುವ ಮಹನೀಯರು ಕಡಿಮೆಯಾಗರು!

ಮಹಾತ್ಮಾ ಗಾಂಧಿಯವರ ಹರಿಜನೋದ್ಧಾರ ಪ್ರವಾಸ.

ಮಹಾತ್ಮಾ ಗಾಂಧಿಯವರ ಹರಿಜನೋದ್ಧಾರ ಪ್ರವಾಸವು ಪ್ರಾರಂಭವಾಗಿ, ಇಂದಿಗೆ ಕೆಲವು ಸಪ್ತಾಹಗಳು ಕಳೆದು ಹೋದುವು. ಇಷ್ಟು ಅವಧಿಯಲ್ಲೇ ಅವರು ಹಲವು ದೇಶ ಪ್ರವಾಸವನ್ನು ಮುಗಿಸಿ, ಇದೇ ತಿಂಗಳ ತಾ ೧೪ಕ್ಕೆ ಮಂಗಳೂರಿಗೆ ಬರಲಿಕ್ಕಿರುವರು. ಇವರ ಈ ಪ್ರವಾಸದಲ್ಲಿ ಐತಿಹಾಸಿಕ ಸ್ಮೃತಿಯು ಆಗದೆ ಇರಲಾರದು. ಅಂದರೆ ಭವಿಷ್ಯ ಕಾಲದಲ್ಲಿ ಬರೆಯಲ್ಪಡುವ ಇತಿಹಾಸದಲ್ಲಿ ಇದರ ಉಲ್ಲೇಖವು ಆಗದೆ ಇರಲಾರದೆಂಬುದರಲ್ಲಿ ಸಂಶಯವಿಲ್ಲ. ಇವರು ಹೋದ ಹೋದಲ್ಲಿ ಲಕ್ಷೋಪಲಕ್ಷ ಜನರು ಕೂಡಿ ಇವರ ಸಂದೇಶವನ್ನು ಹಾರೈಸುವ ಸಂದರ್ಭದಲ್ಲಿ ಇವರೊಡನೆ ಇವರು ‘ಪೈ, ದುಗ್ಗಾಣಿ’ ಕೇಳುವರಲ್ಲದೆ ಈ ರೀತಿಯಿಂದ ಸಾವಿರಗಟ್ಟಲೆಗೆ ಮಿಕ್ಕಿ ಹಣವು ಶೇಖರಿಸಲ್ಪಟ್ಟಿರುತ್ತದೆ. ಹೀಗೆ ಹಣ ಶೇಖರಿಸುವ ಕಾರಣವಾದರೂ ಏನಿರುವುದು? ಹರಿಜನೋದ್ಧಾರದ ಕಾರ್ಯಕ್ಕಾಗಿ ಅವರ ಮಿತ್ರರಲ್ಲಿ ಒಬ್ಬನೇ ಒಬ್ಬನು ಧನ ಸಹಾಯ ಮಾಡಲು ಸಮರ್ಥನಿರುವನು. ಆದರೆ ಅಂಥ ಹಣದಿಂದ ಅವರಿಗೆ ಪ್ರಯೋಜನವಾಗಲಾರದು. ಕಾರಣವೇನೆಂದರೆ, ಒಬ್ಬನಿಂದಲೇ ಕೊಡಲ್ಪಡುವ ಧನ ಸಹಾಯದಿಂದ ಎಲ್ಲರ ಸಮಾನ ಭೂತಿಯು ದೊರಕಿದಂತಾಗುವುದಿಲ್ಲ.

ಆದುದರಿಂದ ಪ್ರತಿ ಕಡೆಯಲ್ಲೂ ಇವರು ಜನರೊಡನೆ ಕೇಳುವುದೇನೆಂದರೆ ನೀವು ಹರಿಜನೋದ್ಧಾರದ ಕಾರ್ಯ ಸಮ್ಮತಿಸುವುದರಿಂದಲೇ ಇಲ್ಲಿ ಕೂಡಿರುವಿರಲ್ಲ? ಜನರು ಪ್ರಚಂಡವಾದ ಧ್ವನಿಯಿಂದ ‘ಹೌದು’ ಎಂದು ಹೇಳುವುದು ಕೇಳಿ ಬರುವುದು.

ಮಹಾತ್ಮಾ ಗಾಂಧಿಯವರು ‘ಪೈ, ದುಗ್ಗಾಣಿ’ಯನ್ನು ಬೇಡುತ್ತಾ, ಹೇಳುವುದೇನೆಂದರೆ —ನನ್ನ ಮೊದಲಿನ ರಾಜಕೀಯ ಅಥವಾ ಸಾಮಾಜಿಕ ಸೇವೆಯ ಸಂಬಂಧ ಪ್ರಸನ್ನರಾಗಿ ಬಂದು ನನಗೇನಾದರೂ ಕೊಡಬಹುದಾದರೆ ಅದನ್ನು ನಾನು ಸ್ವೀಕರಿಸಲಾರೆ.

ಹೀಗಾಗಿ ಸರ್ವ ಜನರೂ ತಮ್ಮ ಯಥಾನುಶಕ್ತಿ ಸಹಾಯವನ್ನು ಮಾಡುವರು. ಅಂದರೆ ಈ ಅಸ್ಪೃಶ್ಯತಾ ಕಳಂಕವನ್ನು ನಿವಾರಿಸುವ ಕಾರ್ಯಕರ್ತರು ನಿರ್ಮಾಣವಾಗುವ ಶುಭ ಸೂಚಕವಲ್ಲದೆ, ಹರಿಜನರ ಉಜ್ವಲ ಭವಿಷ್ಯದ ಮಂಗಳ ಪ್ರಭಾತವೆಂದು ಹೇಳಿದರೆ ವರ್ಣನಾತೀತ ಆಗಲಾರದು.

++ ++

ನೋಟೀಸು

೧೯೩೩ನೇ ಇಸವಿ ದಶಂಬರ ತಾರೀಕು ೮ನೇ ಸ್ವದೇಶಾಭಿಮಾನಿಯಲ್ಲಿ ಪ್ರಕಟಣೆ ಮಾಡಿದ ಪ್ರಕಾರ ಈ ಕೆಳಗೆ ಕಾಣಿಸಿದ ಅಸಾಮಿಯವರ ಬಾಬ್ತು ಆಭರಣಗಳು ಪಕೀರ್ ಗಣೇಶ ಪೈಗಳ ಆಫೀಸಿನ ಎದುರು ದಶಂಬರ ತಾರೀಕು ೩೧ನೇ ದಿವಸ ಬಹಿರಂಗವಾಗಿ ಏಲಂ ಮಾಡಿ ಮುಟ್ಟಿ ಬಂದ ಐವಜಿನಲ್ಲಿ ಈ ಕೆಳಗೆ ಹೆಸರು ಕಾಣಿಸಿದ ಅಸಾಮಿಯವರ ಬಾಬ್ತು ಅಸಲು ಬಡ್ಡಿ ಇತರ ಖರ್ಚು ಸಹಾ ಕಳೆದು ಕಳ್ಳಿ ಬಿದ್ದ ಐವಜಿನ ವಿವರವು ಈ ಕೆಳಗೆ ಕಾಣಿಸಿದ ಪ್ರಕಾರ ಆಯಾಯ ಅಸಾಮಿಯವರು ಕಳ್ಳಿ ಬಿದ್ದ ಐವೇಜು ಈ ವಿಷಯದಲ್ಲಿ ಬಿಟ್ಟ ನೋಟೀಸಿನಲ್ಲಿ ಕಾಣಿಸಿದ ಪ್ರಕಾರ ನೋಟೀಸು ತಲ್ಪಿದ ೧ನೇ ವಾರದೊಳಗೆ ಯಾವ ವಿಧದಿಂದಲೂ ಹಣ ಪಾವತಿ ಮಾಡುವರೆ ತಪ್ಪಿದರೆ ಆ ವಿಷಯದಲ್ಲಿ ನಾನು ಮಾಡುವ ಸಕಲ ದಾವೆಯ ಖರ್ಚಿಗೆ ಆಯಾಯ ಅಸಾಮಿಯವರು ಬಾಧ್ಯಸ್ಥರಾಗುತ್ತಾರೆ.

ಗುರ್ಪೂರ ಪೇಟೆಯಲ್ಲಿರುವ ಮುದ್ದ ರಾಘವೇಂದ್ರ ಪ್ರಭುಗಳ ಮಗ ವಾಮನ ಪ್ರಭು ಅಸಲು ಬಡ್ಡಿ ಇತರ ಖರ್ಚು ೧೩೮—೧೨—೦ ಏಲಂನಿಂದ ಹುಟ್ಟಿಬಂದ ಮೊಬಲಗು ೧೦೧—೦—೦ ಬಾಕಿ ಬರತಕ್ಕ ಮೊಬಲಗು ೩೭—೧೨—೦

ಸಾಲೆ ಉಳ್ಳಾಟಿಟ್ಟು ಗ್ರಾಮದಲ್ಲಿರುವ ಚಯ್ಯಬ ಬ್ಯಾರಿ ಮಗ ಮಾಸ್ತರ್ ಸುಲೆಮಾನ ಬ್ಯಾರಿಯ ಲೈಟಿನ್ ೩೮ ಅಸಲು ಬಡ್ಡಿ ಇತರ ಖರ್ಚು ೨೬೦—೦ ೦ ಏಲಂನಿಂದ ಹುಟ್ಟಿಬಂದ ಮೊಬಲಗು ೨೬೪—೦—೦ ಬಾಕಿ ಬರತಕ್ಕ ಮೊಬಲಗು ೨—೦—೦

ಗೋಳಿಕಟ್ಟೆ ಬಜಾರದಲ್ಲಿ ಇದ್ದ ಬ್ಯಾರಿ ಮಗ ಪಲ್ಲಿ ಅಬ್ಬು ಬ್ಯಾರಿ ಅಸಲು ಬಡ್ಡಿ ಇತರ ಖರ್ಚು ೮೦ ೨—೦ ಏಲಂನಿಂದ ಹುಟ್ಟಿಬಂದ ಮೊಬಲಗು ೫೬—೦—೦ ಬಾಕಿ ಬರತಕ್ಕ ಮೊಬಲಗು ೨೪—೨—೦.

ಬೈಲಕೊಳಂಟೆ ಕಲೆಕಳ ರಾಮ ರೈ ಅಳಿಯ ಜಾರುಕ್ಕಯ್ಯ ಎಂಬ ಮೃತನಪ್ಪ ಅಸಾಮಿ ಬಾಬ್ತು ಅಸಲುಬಡ್ಡಿ ಇತರ ಖರ್ಚು ೧೦೪—೦ ೦ ಏಲಂನಿಂದ ಹುಟ್ಟಿಬಂದ ಮೊಬಲಗು ೨೦೦ ೧೩—೦ ಬಾಕಿ ಬರತಕ್ಕ ಮೊಬಲಗು ೬—೩ ೦.

ಗೋಳಿಕಟ್ಟೆ ಬಜಾರ ಕುಂಬಾರಕಣ ಮನೆಯಲ್ಲಿರುವ ಈ ಮೊದಲು ಮೃತನಪ್ಪ ಹಮ್ಮಬ್ಯಾರಿ ಯಾನೆ ಉಂಞಾ ಬ್ಯಾರಿಯ ವಿಧವೆ ಬಯ್ಯಮ್ಮ ೧ ಇವರ ಮಗ ಸಯ್ಯದ ಬ್ಯಾರಿ ೧ ಸಹಾ ೩ ಜನರು ಗಿರವಾಗಿ ರಶೀದಿ ಕೊಟ್ಟು ಪಟ್ಟಿಯಲ್ಲಿ ತೋರುವ ಆಭರಣಗಳನ್ನು ಪೂರಾ ಬಿಡಿಸಿಕೊಂಡು ಹೋಗಿರುತ್ತಾರೆ. ಅಸಲು ರೂ. ೧೯೬, ಬಡ್ಡಿ ರೂ. ೬೪ ಬಂದದೆ

ವಿಜಾರ ತಿಂಮ ಪೈ ರಾಜು

ನೋಟೀಸು.

ಮಂಗಳೂರು ತಾಲೂಕು ಬಂಟ್ವಾಳ ಗ್ರಾಮದ ಪೇಟೆಯಲ್ಲಿ ಕಾಸಿಂಜೀ ಅಬ್ಬುಬಕರ ಸಾಹೇಬ್ ಎಂಡ್ ಸನ್ಸ್ ಎಂಬ ಹೆಸರಿನಿಂದ ನಡೆಯುತ್ತಿದ್ದ ನಮ್ಮ ವ್ಯಾಪಾರ ಅಂಗಡಿಯಲ್ಲಿ ಈ ವರೆಗೆ ಕೆಲಸ ಮಾಡುತ್ತಿದ್ದ ಯಂ. ಎ. ಹಸನಬ್ಬ ಸಾಹೇಬರು ಕೆಲಸದಿಂದ ನಿವೃತ್ತಿಹೊಂದಿರುತ್ತಾರೆ. ಇನ್ನು ಮುಂದೆ ಸದ್ರಿಯವರು ಮಾಡಬಹುದಾದ ಯಾವತ್ತು ಲೇವಾದೇವಿಗಳಲ್ಲಿ ಮೇಲೆ ಹೆಸರು ಕಾಣಿಸಿದ ವ್ಯಾಪಾರಿಗೆ ಏನೊಂದೂ ಹಕ್ಕು ಯಾ ಬಾಧ್ಯತೆಯುಂಟಾಗುವುದಿಲ್ಲ ಎಂಬ ಸಂಗತಿ ಸರ್ವ ಜನರಿಗೆ ತಿಳಿಸಲಾಗಿದೆ.

ಕಾಸಿಂಜೀ ಅಬ್ಬುಬಕರ್ ಸಾಹೇಬ್ ಎಂಡ್ ಸನ್ಸ್,
3—1—'34. ಭಟ್ಕಳ.

ನೋಟೀಸು.

ಉಡುಪಿ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ
O. S. 348/33 R. S. A. 1159/33 R. I. A. 1160/33.

ಬಿಚ್ಚುತಾಯಿ ಆಚಾರ್ಯ—ವಾದಿ

ಮತ್ತು

ಅನಂತ ಪದ್ಮನಾಭ ತಂತ್ರಿ ಸಹಾ—ಪ್ರತಿವಾದಿರು.

ವಾಸುದೇವಯ್ಯ, ಹಿರಿಯಡ್ಕ ಶೀತಾರಾಮಯ್ಯನ ಮಗ, ಉಡುಪಿ ತಾಲೂಕು ಶಿವಳ್ಳಿ ಸ್ವಬಾ ಕುಂಜಿಬೆಟ್ಟು—ಸಪ್ಲಿಮೆಂಟ 8ನೇ ಪ್ರತಿವಾದಿ.

ವಾದಿಯು 1ನೇ ಪ್ರತಿವಾದಿಯಿಂದ ಬರತಕ್ಕ ಚಿಟ್ಟು ಫಂಡಿನ ರೂ. 623—7—0ಕ್ಕೆ ಮಾಡಿದ ದಾವೆಯು ಮ ಸದರಿ ವಾಸುದೇವಯ್ಯನನ್ನು ಸಪ್ಲಿಮೆಂಟು 3ನೇ ಪ್ರತಿವಾದಿಯಾಗಿ ಸೇರಿಸಬೇಕಾಗಿ ವಗ್ಯೆರೆ ಮಾಡಿದ ಮೇಲ್ಕಂಡ ಅರ್ಜಿಗಳು ತಾ. 11—1—34ಕ್ಕೆ ತನ್ಖಿಗೆ ಇಟ್ಟಿರುತ್ತದೆ. ಅದಕ್ಕೆ ಸದ್ರಿ 8ನೇ ಪ್ರತಿವಾದಿಗೆ ಆಕ್ಷೇಪವಿದ್ದರೆ ಸದ್ರಿ ತಾರೀಕಿನ ದಿನ ಸದ್ರಿ ಕೋರ್ಟಿನಲ್ಲಿ ಹಾಜರಾಗಿ ಮಾಡಿಕೊಳ್ಳತಕ್ಕದ್ದು.

ಉಡುಪಿ } B. Srinivasa Rao,
೨—೧—೩೪. } Advocate for Plaintiff.

[illegible] ಪಂಚಾಂಗ [illegible]

(ಇಂಗ್ಲಿಷ್ ತಾರೀಖು — [illegible])

ತಾರೀಖು	ವಾರ	ತಿ.	ಘಳಿಗೆ	ನಕ್ಷತ್ರ	ಘಳಿಗೆ	[illegible]	ಸೂರ್ಯ. ಉ	ಅಸ್ತ
6	ಶನಿ	೪	೧೧.೧೪	ಹುಬ್ಬಾ	೩೧-೪೨	೨೨	6.43	6. 2
7	ರವಿ	೫	೧೧.೪೫	ಉತ್ತರಾ	೪೪.೨	೨೩	6 44	6. 3
8	ಸೋಮ	೬	೧೧.೦	ಹಸ್ತಾ	೪೪.೧೪	೨೪	6.44	6. 3
9	ಕುಜ	೭	೯.೦	ಚಿತ್ತಾ	೪೫.೧	೨೫	6.44	6. 3
10	ಬುಧ	೮	೩.೨	ಸ್ವಾತಿ	೪೭.೪೪	೨೬	6.45	6. 4
11	ಗುರು	೧೦	೧.೫೦	ವಿಶಾಖಾ	೫೦. ೨	೨೭	6.45	6. 4
12	ಶುಕ್ರ	೧೧	೫೨.೧	ಅನುರಾಧ	೨೪.೪೩	೨೮	6 6	6 0

ಮಂಗಳೂರಿನ ವಾಯುಸ್ಥಿತಿ.

Date ತಾರೀಖು	Temperature. ಉಷ್ಣ (ಕಾವು) Maximum ಹೆಚ್ಚಾದದ್ದು		Minimum ಕಡಿಮೆ		Rainfall. ಮಳೆ ದಿನದ ಮಳೆ	ಒಟ್ಟು ಮಳೆ.
21	84—	7	74—	2	—	—
22	85—	9	73—	7	—	—
23	86—	7	73—	9	—	—
24	85—	7	70—	8	0—09	—
25	85—	7	72—	1	6—08	—
26	85—	0	74—	6	0—08	—
27	85—	6	70—	3	—	166—45

ಮಂಗಳೂರಿನ ಪೇಟೆ ಧಾರಣೆ.

ಜಿನಸು		ಇಂದ ರೂ. ಆ.	ವರೆಗೆ ರೂ. ಆ.
ಹೊಸ ರಾಶಿ ಅಕ್ಕಿ	...	3— 6	3—12
ಹೊಸ ಮುಸ್ಕಿ	...	4— 4	4—10
ಹೊಸ ಗುಡ್ಡು	...	3—12	4— 2
	...	—	—
ಊರ ಅಚ್ಚುಲ್ ಬೆಳ್ತಿಗೆ	...	4— 4	5— 4
ರಂಗೂನು ಬೆಳ್ತಿಗೆ ಗೋಣಿ ೧ಕ್ಕೆ	...	5— 6	6— 0
ಎಣ್ಣೂರು ಬೆಳ್ತಿಗೆ ಮುಡಿ ೧ಕ್ಕೆ	...	4— 0	4— 2
ಗೋದಿ ಗೋಣಿ ೧ಕ್ಕೆ	...	10— 8	12— 8
ತೊಗರಿ ಗೋಣಿ ೧ಕ್ಕೆ	...	9— 0	10— 8
ಹುರುಳಿ ಗೋಣಿ ೧ಕ್ಕೆ	...	5— 4	6— 0
ಕಡಲೆ ಗೋಣಿ ೧ಕ್ಕೆ	...	9— 8	12— 8
ತೊಗರಿಬೇಳೆ ಗೋಣಿ ೧ಕ್ಕೆ	...	10— 8	18— 0
ಉದ್ದು ಗೋಣಿ ೧ಕ್ಕೆ	...	7— 8	9— 0
ಹೆಸರು ಗೋಣಿ ೧ಕ್ಕೆ	...	8— 0	9— 0
ಊರುಬೆಲ್ಲ ಖಂಡಿ ೧ಕ್ಕೆ	...	30— 0	35— 0
ಉಪ್ಪು ಗೋಣಿ ೧ಕ್ಕೆ	...	4—14	5— 4
ಕೊಬ್ಬರಿ ಖಂಡಿ ೧ಕ್ಕೆ	...	45— 0	55— 0
ಕೊಬ್ಬರಿ ಹಿಂಡಿ ಖಂಡಿ ೧ಕ್ಕೆ	...	17— 8	18— 0
ಎಳ್ಳಿಂಡಿ ಖಂಡಿ ೧ಕ್ಕೆ	...	23—12	25— 0
ಕೊಬ್ಬರಿ ಎಣ್ಣೆ ಮಣ ೧ಕ್ಕೆ	...	3— 2	4— 2
ಎಳ್ಳೆಣ್ಣೆ ಮಣ ೧ಕ್ಕೆ	...	5— 0	6— 0
ಚಿಮಿಣಿಎಣ್ಣೆ ಪೆಟ್ಟಿಗೆ ೧ಕ್ಕೆ	...	7— 0	8—12
ದೋಣಿಯ ಸಕ್ಕರೆ ಮಣ ೧ಕ್ಕೆ	...	3—11	3—12
ಹೊಸ ಮೆಣಸು	...	8— 0	9— 4
ಸಾಸಿವೆ ಮುಡಿ ೧ಕ್ಕೆ	...	4— 8	4—12
ಕಾಳುಮೆಣಸು ಖಂಡಿ ೧ಕ್ಕೆ	...	120— 0	125— 0
ಮೆಂತ್ಯ ಮಣ ೧ಕ್ಕೆ	...	20— 0	23— 0
ಗೇರುಬೀಜ ಮುಡಿ ೧ಕ್ಕೆ	...	2— 8	2—10
ಶುಂಠಿ ಖಂಡಿ ೧ಕ್ಕೆ	...	42— 0	44— 0
ತಾಂಬ್ರ ತಗಡು ಮಣ ೧ಕ್ಕೆ	...	10— 0	10— 2
ತಾಂಬ್ರ ಪಾತ್ರಗಳು ಮಣ ೧ಕ್ಕೆ	...	13— 0	14— 8
[illegible] ಸೇರು ೧ಕ್ಕೆ	...	14—12	15— 0
ಹಿತ್ತಾಳೆ ತಗಡು ಮಣ ೧ಕ್ಕೆ	...	9— 0	9— 8
ಸವಣು ೧ಕ್ಕೆ	...	20— 0	20— 8
ಹುಣಿಸೆ ಹುಳಿ ಖಂಡಿ ೧ಕ್ಕೆ	...	45— 0	47— 0
ಪೀಬೆರ್ ಕಾಫಿ ಖಂಡಿ ೧ಕ್ಕೆ	...	180— 0	230— 0
ಪ್ಲಾಂಟೇಶನ್ ಕಾಫಿ ಖಂಡಿ ೧ಕ್ಕೆ	...	250— 0	260— 0
ಹಳೆ ಅಡಕೆ	...	105— 0	125— 0
ಹೊಸ ಅಡಕೆ	...	65— 0	85— 0

THE CANARA PUBLIC CONVEYANCE CO., LTD, MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯ ಕ್ಷೇತ್ರಗಳಿಗೆ ಹೋಗುತ್ತವೆ. ಮೈಸೂರು, ಕೊಡಗು ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನ್ ಕೂಡಾ ಇರುವುದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ, ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ ಹನ್ನೆರಡು ಸಾರಿ ಕಲ್ಯಾಣಪುರ ಮಾರ್ಗವಾಗಿಯೂ, 4 ಸಾರಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲಪಿರಿ. ಒಂದೇ ಶಿಲೆಯಲ್ಲಿಂದ ರಚಿತವಾಗಿ, 3 , ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ, ಕಾರ್ಕಳ ಗೋಮಟೇಶ್ವರನ ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು 4 ಸಲ ಹೊರಟು ಎರಡೂವರೆ ತಾಸುಗಳ ಸಮಯದಲಿ ಕಾರ್ಕಳಕ್ಕೆ ತಲಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ, ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ತಲ್ಪಬಹುದು.

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಬೆಳಿಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಪ್ರಾಚೀನ ಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಬೇಲೂರಿನ ಸೋಮನಾಥ ದೇವಾಲಯವನ್ನು ನೋಡಲು, ನೋಡಲಿಚ್ಛಿಸುವವರು, ಬೆಳಿಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ, ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದೂಸ್ಥಾನ, ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣ ಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ, ಮಂಗಳೂರಿನಿಂದ ಮಡಿಕೇರಿಗೆ 7 ಘಂಟೆಗಳೊಳಗೂ, ಕಡೂರಿಗೆ 12 ಘಂಟೆಗಳೊಳಗೂ, ಮೈಸೂರಿಗೆ 12 ಗಂಟೆಗಳೊಳಗೂ, ಸಕಲೇಶಪುರಕ್ಕೆ 8 ಗಂಟೆಗಳೊಳಗೂ, ಹಾಸನಕ್ಕೆ 10 ಗಂಟೆಗಳೊಳಗೂ, ಚಿಕ್ಕಮಗಳೂರಿಗೆ 8 ಗಂಟೆಗಳೊಳಗೂ, ಕೊಲ್ಲೂರಿಗೆ ಮತ್ತು ಗೋಕರ್ಣಕ್ಕೆ ೧॥ ದಿವಸದೊಳಗೂ ಶಿವಮೊಗ್ಗಕ್ಕೆ 12 ಗಂಟೆ ತಲಪಬಹುದು. ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,

The Canara Public Conveyance Company Ltd., Mangalore

Chikmagalur Public Conveyance Motor Service.

CHIKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,

ಚಿಕ್ಕಮಗಳೂರು.

ಮುಂಬಾಯಿಯಿಂದ — ಮಂಗಳೂರಿಗೆ.

ಮಂಗಳೂರಿನಿಂದ — ಮುಂಬಾಯಿಗೆ.

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ.

ಮಂಗಳೂರು—ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು — ಅನುಕೂಲ ಪ್ರಯಾಣ ಸೌಕರ್ಯಗಳು.

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ

ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ

ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ.

ಚಿಕ್ಕಮಗಳೂರಿನಿಂದ— ಶಿವಮೊಗ್ಗಕ್ಕೆ, ಬೇಲೂರಿಗೆ, ಕಡೂರಿಗೆ.
— ಮೂಡಗೆರೆಗೆ, ಸಕಲೇಶಪುರಕ್ಕೆ.
— ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
— ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ನಿರಾಯಾಸದ ಪ್ರಯಾಣ! ಉತ್ಸಾಹಕರ ಸೌಕರ್ಯ!

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

ಸಂಪಾದಕರ ಟಪ್ಪಾಲು ಪೆಟ್ಟಿಗೆ.

ಪತ್ರದಾತರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಎಲ್ಲಾ ಲೇಖಕರು ತಮ್ಮ ಸಂಪೂರ್ಣ ಹೆಸರು ವಿಳಾಸಗಳನ್ನು ಕೊಡತಕ್ಕದು. ದೀರ್ಘ ಲೇಖನಗಳಿಗೆ ಎಡೆ ಕೊಡಲಾಗುವುದಿಲ್ಲ. ಲೇಖನಗಳು ಸಾರ್ವಜನಿಕ ಹಿತದೃಷ್ಟಿಯಿಂದಿದ್ದು ಯುಕ್ತ ಶೈಲಿ ಯಲ್ಲಿರತಕ್ಕದು (ಸಂ. ಸ್ವ.)

ಉಡುಪಿಯಿಂದ ಬರುವಾಗ ಬಂಟ್ವಾಳ ದಾರಿಯಾಗಿ ಮಹಾತ್ಮಾ ಗಾಂಧಿಯವರನ್ನು ತರಲು ಮುಂದಾಳುಗಳು ಮರೆತರೇ?

ಕಾಂಗ್ರೆಸ್ ಕೆಲಸವು ಭರದಿಂದ ನಡೆಯುತ್ತಿರುವಾಗ ಮಂಗಳೂರಿನ ಮುಂದಾಳುಗಳಲ್ಲಿ ಪ್ರಮುಖರಾದ ಶ್ರೀಗಳವರಾದ ಕಾರ್ನಾಡು ಸದಾಶಿವರಾಯರು, ಕಲಬೇರಿ ರಂಗರಾಯರು, ಉಮೇಶರಾಯರು ಬಂಟ್ವಾಳಕ್ಕೆ ಬಂದು ಭಾಷಣ ಕೊಟ್ಟು, ಇಲ್ಲಿಯ ಮಹನೀಯರನ್ನೂ ಮಹಿಳೆಯರನ್ನೂ ಹುರಿದುಂಬಿಸಿದರು. ತಾಲೂಕು ಕಾಂಗ್ರೆಸ್ ಅಧ್ಯಕ್ಷರನ್ನಾಗಿ ಇಲ್ಲಿಯ ಒಬ್ಬ ಮರ್ಯಾದಸ್ಥ ಮನೆತನದ ಪುರಸ್ಕೃತ ಮಹಿಳೆಯರೊಬ್ಬರನ್ನು ಚುನಾಯಿಸಿದರು. ಕಾಂಗ್ರೆಸ್ ಫಂಡಿಗೆ ಆಗಾಗ್ಗೆ ಬಂದು ಹಣ ತೆಗೆದುಕೊಂಡು ಹೋದರು. ಈಗ ಮಹಾತ್ಮಾ ಗಾಂಧಿಯವರು ಈ ಜಿಲ್ಲೆಗೆ ಬರುವಾಗ ಆಗಿನ ಮುಂದಾಳುಗಳೆಲ್ಲಾ ಎಲ್ಲಿ ಹೋದರು? ಬಂಟ್ವಾಳದ ಹೆಸರು ಅವರಿಗೆ ಮರೆತುಹೋಯಿತೇ? ಈಗ ಅವರಿಗೆ ಮುಂದಾಳುತನವಿಲ್ಲವೆ? ಈಗ ಸ್ವಾರ್ಥ ಬಿಟ್ಟು ಬೇರೆ ಸಮಯವಾದ್ದರಿಂದ ಹೊಸ ಮುಂದಾಳುಗಳು ಮುಂದೆ ಬಂದಿರುವರೆಂದು ತೋರುತ್ತದೆ. ಅವರಿಗೆ ಬಂಟ್ವಾಳದ ನೆನಪಿಲ್ಲ. ಮಂಗಳೂರು, ಬಂಟ್ವಾಳ, ಮೂಡಬಿದ್ರೆ ಮಾರ್ಗದ ಜನರೂ ಮಹಾತ್ಮರನ್ನು ನೋಡಬೇಕೆಂದು ಆಸೆಯಿಂದಿರುವರು. ಆದುದರಿಂದ ಮುಂದಾಳುಗಳು ಇನ್ನೊಮ್ಮೆ ಆಲೋಚಿಸಿ ಬಂಟ್ವಾಳ ದಾರಿಯಾಗಿ ಮಹಾತ್ಮಾ ಗಾಂಧಿಯವರನ್ನು ಕೊಂಡುಹೋಗುವ ಹಾಗೆ ಅನುಕೂಲಿಸಲಿ!!!

ಬಂಟ್ವಾಳ ನಿವಾಸಿ

(ಕೆಲವು ಪತ್ರಿಕೆಗಳಲ್ಲೂ ಅಲ್ಲದೆ, ದ. ಕ. ಜಿಲ್ಲಾ ಹರಿಜನ ಸೇವಾ ಸಂಘದ ಅಧ್ಯಕ್ಷರು ಪ್ರಕಟಿಸಿರುವ ವಿನಂತಿಪತ್ರದಲ್ಲೂ ಗಾಂಧೀಜೀಯವರು ಬಂಟ್ವಾಳಕ್ಕೆ ಹೋಗುವರೆಂದು ತಿಳಿಸಿದ್ದಾರೆ—ಸಂಪಾದಕ)

ಹಿರಿಯಡ್ಕ ಹಾಯರ್ ಎಲಿಮೆಂಟರಿ ಶಾಲೆ

ಇಲ್ಲಿ ೨೫ ಕೆಲವರಿಗೆ ಈ ಶಾಲೆಯು ಹಾಯರ್ ಎಲಿಮೆಂಟರಿಯಾಗಿ ಮಾರ್ಪಡಲು ಮೊದಲು ಇದ್ದ ದ್ವೇಷವು ಈಗೆಷ್ಟೋ ಸಮಯ ಕಳೆದ ನಂತರವೂ, ತಾ ೨೪—೧೨—೩೩ನೇ ಸಮಯುಗದ ಸಂಚಿಕೆಯಲ್ಲಿ ಪ್ರಕಟವಾದ ಟಿಪ್ಪಣಿಯು, ಮಕ್ಕಳ ರಕ್ಷಕರ ತರ್ಕದ ನೋಟಿಸಿಯು ಇದೇ ಸಮಯದಲ್ಲಿ ಟಿಗುರುವದನ್ನು ಪರಿಶೀಲಿಸುವಲ್ಲಿ ನಾವು ತುಂಬಾ ವಿಷಾದಪಡುತ್ತೇವೆ. ಅಲ್ಲದೆ, ವ್ಯಕ್ತಿಗತ ಅಧ್ಯಾಪಕರೊಬ್ಬರ ಮೇಲಿದ್ದ ಖಾಸಗಿ ದ್ವೇಷವನ್ನು ಸಾಧಿಸಲಿಕ್ಕೆ ಮೇಲಧಿಕಾರಿಗಳಿಗೆ, ಅಲ್ಲಸಲ್ಲದ ವಿಷಯಗಳನ್ನು ಕಲ್ಪಿಸಿ, ಮನವಿಮಾಡಿಕೊಂಡುದರಿಂದ ಫಲಿಸಲಿಲ್ಲವಾದ ಕಾರಣ, ಪತ್ರಿಕೆಯ ಮೂಲಕವಾದರೂ ನಿರಪರಾಧಿ ಅಧ್ಯಾಪಕರ ವೃಂದದ ಮೇಲೆ ಈ ರೀತಿ ಪ್ರಕಟಿಸಿ ಸುಶಿಕ್ಷಿತ ಹಾಗೂ ಯೋಗ್ಯ ಉಪಾಧ್ಯಾಯರ ವೃಂದವನ್ನು ನೋಯಿಸಿ ಸಂತೋಷಪಡುವುದು ಯುಕ್ತವಲ್ಲ. ಶಾಲಾ ಶಿಸ್ತು ಮತ್ತು ವಿದ್ಯಾಭ್ಯಾಸವು ಕ್ರಮದಿಂದ ಜರಗುವುದೆಂದು ನಮಗೆಲ್ಲರಿಗೂ ಸಂಪೂರ್ಣ ಸಮಾಧಾನವಿದೆ. ಆದುದರಿಂದ ಅಸಮಾಧಾನಿಯು, ಮಕ್ಕಳ ರಕ್ಷಕರಾಗಿರುವ ಶ್ರೀಯುತ ರಾಯರೇ! ನಿಮ್ಮ ನಾಮವೆಂಬ ನೋಟೀಸನ್ನು ಪ್ರಕಾಂಡವಾದ ವೃಕ್ಷವಾಗಿ ಹಬ್ಬಗೊಡಿಸಿ, ವಿಘ್ನಕಾರಿಗಳಾಗುವ ಬದಲಿಗೆ ಆ ನೋಟೀಸನ್ನು ಶೀಘ್ರದಲ್ಲಿಯೇ ಕಿತ್ತೊಗೆದು ದೇಶಭಕ್ತರಾಗುವುದು ಎಷ್ಟು ಸುಖವಲ್ಲವೇ? ಯೋಚಿಸಿರಿ!

ಶಿಷ್ಯಕ್ಷಪಾತಿ

ಪಾಂಗಾಳ ಗ್ರಾಮಸ್ಥರ ಬಡ ರೈತರ ಗೋಳು

ಅಯ್ಯಾ ಸ್ವದೇಶಾಭಿಮಾನಿಯೇ,

ನಮ್ಮ ಪಾಂಗಾಳ ಗ್ರಾಮಕ್ಕೆ ಮುಂಚೆ ಗುಡ್ಡೆ ಆರವಾಡಿ, ಪಾಂಗಾಳ, ಸದಾವತಿ ಈ ನಾಲ್ಕು ರೆವಿನ್ಯೂ ಗ್ರಾಮಗಳಾಗಿದ್ದುವು. ಈಗ ಸೆಟ್ಲ್‌ಮೆಂಟಿನಲ್ಲಿ ಪಾಂಗಾಳ ಒಂದೇ ಗ್ರಾಮ ಮಾಡಿದ್ದಾರೆ. ಪಾಂಗಾಳ ಗ್ರಾಮವೆಂಬುದು ಉಡುಪಿಯಿಂದ ಮಂಗಳೂರಿಗೆ ಹೋಗುವ ರಾಜರಸ್ತೆಯ ಮಧ್ಯಭಾಗದಲ್ಲಿ ಇರುತ್ತದೆ. ಮೂಡಬೆಟ್ಟು ಗ್ರಾಮ ಸದರಿ ಪಾಂಗಾಳ ಗ್ರಾಮದ ಉತ್ತರ ಪೂರ್ವಕ್ಕೆ ಇರುತ್ತದೆ. ಈ ಮೊದಲು ನಮ್ಮ ಪಾಂಗಾಳ ಗ್ರಾಮಕ್ಕೆ ಕಟಪಾಡಿ ಪೋಸ್ಟು ಆಫೀಸಿನಿಂದಲೇ ಪೇಟೆಯ ಮೂಲಕ ಕಾಗದ ಪತ್ರ ಮನಿಯಾರ್ಡರು ಜಗ್ತೆರ ಬಟವಾಡೆಯಾಗುತ್ತಿದ್ದುವು. ಆದರೆ ಕಳೆದ ದಶಂಬರ ತಿಂಗಳ ತಾ ೧ರಿಂದ ಮೂಡಬೆಟ್ಟು ಗ್ರಾಮದ ಶಂಕರಪ್ಪ ಎಂಬ ಇಗರ್ಜಿಯಲ್ಲಿ ಪಾಂಗಾಳ ಪೋಸ್ಟು ಆಫೀಸು ಎಂತ ಆಗಿಯದೆ. ಸದರಿ ಮೂಡಬೆಟ್ಟು ಗ್ರಾಮದಲ್ಲಿಯೇ ಈಗ ಇರುವ ಕಟಪಾಡಿ ಪೋಸ್ಟು ಆಫೀಸು ಇರುತ್ತದೆ. ಈ ರೀತಿ ಒಂದು ಗ್ರಾಮದಲ್ಲಿ ೨ ಪೋಸ್ಟು ಆಫೀಸು ಇಟ್ಟದ್ದು ನೋಡಿದರೆ ನಮ್ಮ ಬಡ ರೈತರ ದುರಾದೃಷ್ಟವೆನ್ನಬೇಕು. ಏಕೆಂದರೆ ನಮ್ಮ ಪಾಂಗಾಳ ಗ್ರಾಮಕ್ಕೆ ಈಗಿನ ಹೊಸ ಪೋಸ್ಟು ಆಫೀಸು ಇರುವ ಇಗರ್ಜಿಗೂ ಸುಮಾರು ೩ ಮೈಲು ದೂರ ಇರುವುದರಿಂದ ದಾರಿಯಿಂದ ಹೋಗಬೇಕು. ಕಾಗದ ಪತ್ರ ಮನಿಯಾರ್ಡರು ಜಗ್ತೆರಗೆ ನಮಗೆ ಬಟವಾಡೆ ಬಗ್ಗೆ ಪೇಟೆ ಇಲ್ಲದೆ ಬಹಳ ನಷ್ಟ ಕಷ್ಟಗಳಿಗೆ ಗುರಿಯಾಗಿದ್ದೇವೆ. ಅದ್ದರಿಂದ ಟಪ್ಪಾಲು ಮೇಲಾಧಿಕಾರಿಗಳು ಒಂದು ಗ್ರಾಮದಲ್ಲಿ ಎರಡು ಪೋಸ್ಟು ಆಫೀಸು ಇಟ್ಟದ್ದು ಕೇವಲ ತಪ್ಪು. ಹಾಗೆ ಹೊಸ ಪೋಸ್ಟು ಆಫೀಸು ತೆರೆಯುವುದಾದರೆ ಪಾಂಗಾಳ ಹಿಂದೂ ಎಲಿಮೆಂಟರಿ ಶಾಲೆಯ ಹತ್ತಿರ ತೆರೆದರೆ ಎಲ್ಲಾ ಜನರಿಗೂ ಬಹಳ ಅನುಕೂಲವಾದೀತು. ಸದರಿ ಶಾಲೆಯು ರಾಜರಸ್ತೆಯ ಬದಿಯಲ್ಲಿಯೇ ಇರುತ್ತದೆ. ಅದೂ ಸಾಧ್ಯವಿಲ್ಲವಾದರೆ ಮುಂಚೆ ಇದ್ದ ಕಟಪಾಡಿ ಪೋಸ್ಟು ಮೂಲಕವೇ ನಮ್ಮ ಗ್ರಾಮಕ್ಕೆ ಬಟವಾಡೆಯಾಗುವಂತೆ ಮಾಡಬೇಕಾಗಿ ಪ್ರಾರ್ಥಿಸುತ್ತೇವೆ. ಈ ವಿಷಯದಲ್ಲಿ ಗ್ರಾಮಸ್ಥರು ಟಪ್ಪಾಲು ಮೇಲಾಧಿಕಾರಿಗಳಿಗೆ ಮನವಿ ಮಾಡುವುದರಲ್ಲಿದ್ದಾರೆ.

ಇಂತಿ ಗ್ರಾಮಸ್ಥ

ತೀರ್ಥಹಳ್ಳಿ.

ಈ ಸಾರಿ ಎಳ್ಳಮವಾಸ್ಯೆ ಜಾತ್ರೆಯು ಸುಲಲಿತವಾಗಿ ನಡೆಯಿತು. ಕಾಹಿಲೆಕಸಾಲೆಗಳು ಇಲ್ಲ, ವ್ಯಾಪಾರವು ಬಹಳ ಮಂದವಾಗಿದೆ ಎನ್ನಬಹುದು. ಬಹಳ ರೂಢಿಜಾತ್ರೆಯೆಂದರೆ ಕಣ್ಣುಮನಗಳ ಹಬ್ಬವೆನ್ನಬೇಕಾಗಿದೆ. ಈ ಸಾರಿಯೂ ಸರ್ಕಸ್ ಕಂಪೆನಿಯೊಂದು ಮತ್ತು ಚಂದ್ರಕಲಾ ನಾಟಕ ಮಂಡಳಿಯೊಂದು ಇವೆರಡು ಭಾಗಿಗಳಾಗಿದ್ದುವು. ಸರ್ಕಸಿನವರು ತಮ್ಮ ಕೆಲವು ಪ್ರಯೋಗಗಳನ್ನು ಮಾಡಿ ತೋರಿಸಿದರು. ಜನಗಳ ಮೆಚ್ಚುಗೆಯೇನೂ ಹೊಂದಿದ ಹಾಗೆ ತೋರಲಿಲ್ಲ. ಕರ್ನಾಟಕ ನಾಟಕ ಮಂಡಳಿಯ ಪರಂಪರೆಯೂ ಇನ್ನೂ ನಾಟಕಗಳನ್ನು ಆಡುತ್ತಲೇ ಇದ್ದಾರೆ. ಹಣವೇನೋ ತಕ್ಕಮಟ್ಟಿಗೆ ಉತ್ಪನ್ನವಾಗಿದೆ. ನೇತ್ರಾನಂದಕರವಾದ ಎಲೆಕ್ಟ್ರಿಕ್ ದೀಪಗಳನ್ನ, ಕೆಲವು ಗ್ರ್ಯಾಜುವೇಟರ್‌ಗಳೂ (ಪದವೀಧರರು) ಸಹ ಇರುತ್ತಾರಾಗಿ ತಿಳಿಯುತ್ತೇವೆ. ಆದರೆ ನಾಟಕಗಳು ಸಂಗೀತ ಪ್ರೇಸ್, ಏಕ್ಟ ಇವುಗಳಿಂದ ಕೂಡಿವೆ ಎನ್ನಬಹುದು. ವಿದ್ಯಾವಂತರು ಪ್ರೇಸ್ ಒಂದನ್ನೇ ಧ್ಯೇಯವನ್ನಾಗಿಟ್ಟುಕೊಂಡು ಸಾಮಾಜಿಕ ಚಾರಿತ್ರಿಕ ಕಲ್ಪನಾ ನಾಟಕಗಳನ್ನೇ ಆಡುವುದಾದರೆ ಇವುಗಳು ಪಂಡಿತರಿಗೆ ಮಾತ್ರವೇ ರುಚಿಸಬಹುದು. ಮಲೆನಾಡಿನಲ್ಲಿ ವಿದ್ಯಾವಂತರ ಸಂಖ್ಯೆಯು ಅತಿ ವಿರಳ. ಎಂದಮೇಲೆ ಜನಸಾಮಾನ್ಯಕ್ಕೆ ಈ ನಾಟಕಗಳು ಅಷ್ಟು ರುಚಿಸಲಿಕ್ಕಿಲ್ಲ. ನಾಡಿನ ಜನಗಳೆಂದರೆ ಹೂವು ಹೆಚ್ಚುಹೆಚ್ಚಾಗಿ ಸೇರುವುದರಿಂದ ಅವರಿಗೆ ತಿಳಿಯುವಂತೆ ಪೌರಾಣಿಕ ನಾಟಕಗಳನ್ನು ಯೋಗ್ಯ ರೀತಿಯಿಂದ ಆಡುವುದೇ ಲೇಸು. ಹಾಗೆಂದು ಕೆಲವರು ನಾಟಕಗಳಿಗೆ ಪ್ರೇಸ್, ಏಕ್ಟ ಇವುಗಳೇ ಮುಖ್ಯವೆಂತಲೂ ಕೆಲವರು ಸಂಗೀತವಾದ್ಯಗಳು ಡ್ರೆಸ್ಸು, ಸೀನರಿಗಳು ಇವುಗಳು ಇದೇ ಇರಬೇಕೆಂತಲೂ ಮತ್ತೆ ಕೆಲವರು ದಕ್ಷಿಣಾದೀ ಸಂಗೀತವೇ ನಮ್ಮ ಕರ್ನಾಟಕಕ್ಕೆ ಭೂಷಣವೆಂತಲೂ ಇನ್ನೂ ಕೆಲವರು ಉತ್ತರಾದಿ ಸಂಗೀತವೇ ಪ್ರಾಮುಖ್ಯವೆಂತಲೂ ಸಹ ಅಭಿಪ್ರಾಯಪಟ್ಟಿರುತ್ತಾರೆ. ಇದು ವಿಮರ್ಶಕರಿಗೆ ಮಾತ್ರ ಆಗತಕ್ಕವುಳ್ಳ ಪ್ರಶ್ನೆ. ಹಟ್ಟಿನ ಪ್ರೇಕ್ಷಕವೃಂದವು ವಿಮರ್ಶೆಗೆ ಅತೀತರೆಂತಲೇ ಹೇಳಬೇಕು. ಈ ನಾಟಕ ಸಂಘದಲ್ಲಿ ಮುಖ್ಯ ಪಾತ್ರ ವಹಿಸುವ ಶ್ರೀ. ಸುಬ್ರಹ್ಮಣ್ಯ ಶಾಸ್ತ್ರಿಗಳು ಮಾತ್ರ ಸುಶ್ರಾವ್ಯವಾಗಿ ಹಾಡುತ್ತಾರೆ. ಇವರು ಇನ್ನೂ ಹೆಚ್ಚಿನ ಅಭಿವೃದ್ಧಿಯನ್ನು ಹೊಂದಿ ಜಿ. ಎಸ್. ನಾಗೇಶರಾಯರಂತೆ ಜನಗಳ ಮೆಚ್ಚುಗೆಗೆ ಪಾತ್ರರಾಗುತ್ತಾರಾಗಿ ನಂಬಿ ನಿರೀಕ್ಷಿಸುತ್ತೇವೆ. ಕಂಪೆನಿಯ ವಾದ್ಯವಾದ್ಯಗಳು ಉತ್ತಮ ತರಗತಿಯನ್ನು ಹೊಂದಿರುವುದು ಸಂತೋಷದ ಸಂಗತಿ. ಇವರು ದಕ್ಷಿಣ ಕನ್ನಡಾ ಜಿಲ್ಲೆಗೆ ಪ್ರಯಾಣ ಬೆಳೆಸುವವರಿದ್ದಾರೆ. ಅಲ್ಲಿಯೂ ಸಂಗೀತ ಕಲಾಭಿಮಾನಿಗಳು ಇದ್ದೇ ಇರುತ್ತಾರೆ. ಕಂಪೆನಿಯು ಸರಿಯಾದ ನಟವರ್ಗದವರಿಂದ ಉಡುಪಿಯನ್ನು ಸಂದರ್ಶಿಸಿ ಯಶಸ್ವಿಯಾಗಲೆಂದು ಹಾರೈಸುತ್ತೇನೆ.

ಟಿ. ಹಾಲಪ್ಪ.

ದ. ಕ. ಜಿಲ್ಲಾ ಹರಿಜನ ಸೇವಾ ಸಂಘ,

ಮಂಗಳೂರು

ಹರಿಜನ ಸೇವಾ ಸಂಘದ ಆಗ್ರಹ ಪೂರ್ವಕ ವಿನಂತಿ. ಮೇರೆಗೆ ಮಹಾತ್ಮಾ ಗಾಂಧಿಯವರು ಇದೇ ಜನವರಿ ತಾ ೧೪ಕ್ಕೆ ನಮ್ಮ ಜಿಲ್ಲೆಯನ್ನು ಸಂದರ್ಶಿಸುವರು. ಈ ಸಂದರ್ಭದಲ್ಲಿ ಅವರು ಮಂಗಳೂರು, ಮೂಲ್ಕಿ, ಉಡುಪಿ, ಕಾರ್ಕಳ, ಬಂಟ್ವಾಳ ಮೊದಲಾದ ಸ್ಥಳಗಳಿಗೆ ಹೋಗಲಿರುವರು. ಗಾಂಧೀಜೀಯವರ ಈ ಪ್ರವಾಸದ ಉದ್ದೇಶವು ಹರಿಜನೋದ್ಧಾರ ಮತ್ತು ಅಸ್ಪೃಶ್ಯತಾ ನಿವಾರಣ ಕಾರ್ಯವಾಗಿದೆ ಎಂಬುದು ಎಲ್ಲರಿಗೂ ತಿಳಿದೇ ಇದೆ. ಈ ಕಾರ್ಯಕ್ಕಾಗಿ ಧನ ಸಂಗ್ರಹವು ಅತೀ ಅಗತ್ಯ. ಅವರು ಸಂದರ್ಶಿಸುವ ಎಲ್ಲಾ ಸ್ಥಳಗಳಲ್ಲಿ ಮಹಾಜನರು ಅವರವರ ಶಕ್ತ್ಯಾನುಸಾರ ಹಣವನ್ನು ಸಂಗ್ರಹಿಸಿ ಅವರಿಗೆ ಅರ್ಪಿಸಿ ಯೋಗ್ಯ ಸತ್ಕಾರವನ್ನೀಯಬೇಕಾಗಿ ವಿನಂತಿ.

ಎಂ. ಆರ್. ಪೂಂಜ

ಅಧ್ಯಕ್ಷ, ದ. ಕ. ಜಿಲ್ಲಾ ಹರಿಜನ ಸೇವಾ ಸಂಘ

ಅರ್ಧ ಕಲಮು.

ಮಹಾತ್ಮಾ ಗಾಂಧಿಯವರು ಮಂಗಳೂರಿಗೆ ಬರುವರೆಂದು ಸುದ್ದಿಯಾದೊಡನೆ ಮಂಗಳೂರವರು, ಏಕೆ, ದಕ್ಷಿಣ ಕನ್ನಡ ಜಿಲ್ಲೆಯವರು ಸಂತೋಷದಿಂದ ದಿಗಿಲು ಬಿದ್ದಿರುವರು!

× × × ×

ಈ ಸಂತೋಷದ ಪರಿಣಾಮವಾಗಿ ಯಾರ್‍ಯಾರು ಎಷ್ಟೆಷ್ಟು ಹಣವನ್ನು ಗಾಂಧೀಜೀಯವರ ಚೀಲಕ್ಕೆ ಹಾಕುವರೆಂದು ಅವರು ಬಂದ ಮೇಲೆ ನೋಡಬೇಕಾಗಿದೆ!

× × × ×

ಮಹಾತ್ಮರನ್ನು ಕಾಣುವುದರಲ್ಲೇ ಮಂಗಳೂರವರು ಆತುರಪಟ್ಟರೆ ಸಾಲದು, ಮಹಾತ್ಮರ ಧ್ಯೇಯಕ್ಕನುಸಾರವಾಗಿ ಸಹಾಯ ಮಾಡಬೇಕು, ಹರಿಜನರನ್ನು ಆದರಿಸಬೇಕು, ದೇವಸ್ಥಾನಗಳು ಹರಿಜನರಿಗಾಗಿ ತೆರೆಯಲ್ಪಡಬೇಕೆಂದು ಚಳವಳಿಸಬೇಕು!

× × × ×

ಹರಿಜನರನ್ನು ಆದರಿಸಲಾರದ ಮತ್ತು ಅವರ ಚೀಲಕ್ಕೆ ಕಾಣಿಕೆಗಳನ್ನರ್ಪಿಸಲು ಆಗದವರು ಅವರ ದರ್ಶನಕ್ಕೆ ಕುತೂಹಲಿಗಳಾಗಲು ಅಧಿಕಾರವಿರುವುದಿಲ್ಲ. "ಸ್ವಲ್ಪವಾದರೂ ಸರಿಯೆ, ಹರಿಜನರ ಸೇವೆಗಾಗಿ ನನಗೆ ಕೊಡಿರಿ" ಎಂಬುದೇ ಅವರ ಆರಿಕೆಯಾಗಿರುವಾಗ, ಮಂಗಳೂರವರೂ, ದಕ್ಷಿಣ ಕನ್ನಡದವರೂ ಅವರಿಗೆ ಸಹಾಯವನ್ನೀಯುವುದು ಅಗತ್ಯವಲ್ಲವೇ?

× × × ×

ನಮ್ಮಲ್ಲಿ ಎಷ್ಟು ಐಶ್ವರ್ಯವಂತರಿಲ್ಲ! ಫನ್ ಫೇರ್, ಗನ್ ಬೋಟ್‌ಗೆ ಹೋಗಿ ಸಿನೇಮಾದಿ ಹಣ ವೆಚ್ಚ ಮಾಡಿದ ಎಷ್ಟು ಮಂದಿ ಇಲ್ಲ! ಅಂತಹವರು ಗಾಂಧೀಜೀಯವರಿಗೆ ತಮ್ಮ ಸಾಮರ್ಥ್ಯಾನುಸಾರವಾಗಿ ಕಾಣಿಕೆ ಕೊಡಲು ಅಸಮರ್ಥರಾಗುವರೆಂದರೆ, ನಿಜವಾಗಿಯೂ ದುಃಖ ಸಂಗತಿಯಲ್ಲವೇ?

× × × ×

ದುಡ್ಡಿನ ಗತಿಯೇ ಹಾಗೆನ್ನಿ! ಒಳ್ಳೆ ಕೆಲಸಕ್ಕಾದರೆ ಅದು ಕೂತಲ್ಲಿಂದ ಏಳದು, ಬೇಡವಾದ ವಿಷಯಗಳಿಗಾದರೆ ಅದು ಸಧ್ಯವಾದ ಖಜಾನೆಯೊಳಗಿಂದಲೂ, "ಕಿಣ ಕಿಣ" ಎಂದು ಹಾರಾಡತೊಡಗುತ್ತದೆ. ಇದು ಹಿಂದೀಯರಿಗೆ ದೊರೆತ ವರ!

× × × ×

ಗಾಂಧೀಜೀಯವರ ಅತ್ಯಪೂರ್ವ ಆಗಮನವೂ, ಉಡುಪಿ ಪರ್ಯಾಯವೂ ಏಕಕಾಲಕ್ಕೆ ಬಿದ್ದಿರುತ್ತದೆ. ಪರ್ಯಾಯಕ್ಕೆ ಬಂದು ಗಾಂಧೀಜೀಯವರಿಗೆ ಸಹಾಯ ಮಾಡಿ ದೇವರ ಮೆಚ್ಚುಗೆಗೆ ಪಾತ್ರರಾಗಲು ಹಚ್ಚಿನವರ ಯೋಗ್ಯತೆಯಲ್ಲಿದೆಯೆನ್ನಬೇಡವೇ?

× × × ×

ಗಾಂಧೀಜೀಯವರು ಉಡುಪಿಗೆ ಇಳಿದ ಬಳಿಕ ಸನಾತನಿಗಳ ವಾದಗಳೂ, ಶಪ್ಪ ಪತಾಕೆಗಳೂ ಕೆಲಸಕ್ಕಾರಂಭವಾಗುವುವೆಂದು ದಿವ್ಯದೃಷ್ಟಿಯ ಭವಿಷ್ಯ ವಾಕು ಹಾಗಾಗದಿರಲಿ!

"ದಿವ್ಯದೃಷ್ಟಿ"

ಆದರ್ಶ ವಿವಾಹ.

ಶ್ರೀ ಗೋಕರ್ಣನಾಥ ಕ್ಷೇತ್ರದಲ್ಲಿ ತಾ ೨೪—೧೨—೩೩ರಲ್ಲು ಬಡವರ ಬಂಧುವಿನ ಉಪಸಂಪಾದಕ ಶ್ರೀ ಬಿ. ನರಸಪ್ಪನವರ ಮದುವೆಯು ಜರಗಿತು. ಸ್ವಜಾತಿ ಬಂಧುಬಾಂಧವರೂ ಗೆಳೆಯರೂ ಅಲ್ಲದೆ ಶಾರದಾ ಪ್ರೆಸ್ಸಿನ ಮೆನೇಜರರೂ, ಶ್ರೀ ಕೆ. ಎ. ಪುತ್ರನರೂ, ಶ್ರೀ ಲಕ್ಷ್ಮೀನಾರಾಯಣ ಪುಣಿಂಚತ್ತಾಯರೂ ಮೊದಲಾದ ಅನೇಕ ಪ್ರಮುಖ ಸದಸ್ಯ ಗೃಹಸ್ಥರೂ ದಯಮಾಡಿಸಿದ್ದರು. ವರದಕ್ಷಿಣೆ ಕೊಂಡು ಕೊಂಡು ಕನ್ನೆಯನ್ನು ಮಾರಿಸಿಕೊಳ್ಳುವ ಮೂರಾಟದ ಮದುವೆಯು ಅದಾಗಿರದೆ ಶ್ರೀಯುತರ ಮದುವೆಯು ಮದುವೆಯೇ ಆಗಿತ್ತು. ಇಲ್ಲದ ಶೃಂಗಾರಕ್ಕೆ ಅಂದರೆ ಸಾಲಸೋಲಗಳನ್ನು ಮಾಡಿಯೇ—ಪರದಿಂದ ಬೇಡಿಯೇ ತಂದ ಚಿನ್ನದೊಡವೆಗಳನ್ನೂ, ಬೆಲೆಯುಳ್ಳ ಬಟ್ಟೆಬರೆಗಳನ್ನೂ ವಧೂವರರು ತೊಟ್ಟಿರಲಿಲ್ಲ. ಅತೀ ಕಡಿಮೆ ಕ್ರಯದ ಸ್ವದೇಶಿ ಬಟ್ಟೆಗಳಿಂದ ವರವಧುಗಳು ಅಲಂಕೃತರಾಗಿದ್ದರು. ವಾದ್ಯವಾಲಗಗಳ ಸಂಭ್ರಮ ಸಂಭ್ರಮತೆಯಿದ್ದಿಲ್ಲ. ಅನಾವಶ್ಯಕ ಖರ್ಚುಗಳಿಗೆಡೆಗೊಡುವ ಪಾಯಸ ಪರಮಾನ್ನಗಳೇನೂ ಇದ್ದಿಲ್ಲ. ಹಣ ಅಥವಾ ಉಡುಗೊರೆಗಳನ್ನು ಸ್ವೀಕರಿಸುವ ಪದ್ಧತಿಯನ್ನವರು ಕೈಕೊಂಡಿರಲಿಲ್ಲ. ಮದುವೆಯು ಅತೀ ಸುಲಭ ಹಾಗೂ ಸರಳ ರೀತಿಯಿಂದ ಸಾಗಿ ವೈದಿಕ ವಿಧಿಯಂತೆ ಜರಗಿತು. ಶ್ರೀ ಪುಣಿಂಚತ್ತಾಯರು ಮದುವೆಯ ಹಿಂದು ಮುಂದಿನ ಸ್ಥಿತಿಗತಿಗಳ ಕುರಿತು ಚಿಕ್ಕದೊಂದು ಭಾಷಣವನ್ನು ಮಾಡಿ ಈ ಮದುವೆಯು ಆದರ್ಶಪ್ರಾಯವಾಗಲೆಂದೂ—ವರವಧುಗಳು ಸೀತಾರಾಮರಂತೆ ತೋರ್ಪಡಲೆಂದೂ ಪ್ರಾರ್ಥಿಸಿ—ಆಶೀರ್ವದಿಸಿ ಕುಳಿತರು. ಶ್ರೀ ಮಂಗಳೂರ ಜಾರಪ್ಪನವರು "ಬಡವರಿಗೆ ಆದರ್ಶವಾಗಲೆಂದೇ ಸಾಹಿ ರೀತಿ ಮಾಡಿದೆವು. ನಮ್ಮೂರಲ್ಲಿ ಬಡವರು ಬಹಳ. ಬಡವರ ಬಡಬಾಳಿನ ಹಾಳುಗೋಳನ್ನು ಹೇಳಲಳವಲ್ಲ. ಆದರೂ ಅವರು ಹಿರಿಯರ ಹಿರಿತನದ ಸೊಕ್ಕಿಗೆ ಬಲಿಬೀಳಲು ಹಾಯುವುದು ಬಹಳ ದುಃಖಕರ" ಎಂದೆಲ್ಲ ಅಂದು ತನ್ನ ಹೃದಯನಿವೇದನೆಯನ್ನು ಮಾಡಿಕೊಂಡರು. ಮದುವೆಯಾಂತ್ಯದಲ್ಲಿ ಚಿಕ್ಕ ಉಪಹಾರವೊಂದಾಯಿತು. ಶ್ರೀಯುತರ ಮದುವೆಯ ಅರಿವನ್ನು ಸಿರಿವಂತರು ಅರಿತುಕೊಂಡರೆ ಬಡವರಿಗೆ ಬಹಳ ಸುಖವಾದೀತು. ಬಡವರೂ ಶ್ರೀಯುತರ ಮದುವೆಯನ್ನು ಆದರ್ಶವಾಗಿಟ್ಟುಕೊಂಡರೆ ಬಹಳ ಪ್ರಯೋಜನ (ಸುಖ) ವಾಗದಿರದು. ಶ್ರೀಯುತರ ಮದುವೆಯು ಎಲ್ಲರಿಗೂ ಆದರ್ಶಪ್ರಾಯವಾಗಲೆಂದೇ ಬೇಡುವ—ನಂಬುವ,

ಗಂಗಾಧರದಾಸ್, ಬಿ. ಎ.

RAJULU & Co.,

Are pleased to announce that in view the increasing popularity of Morris, Dodge and Crysler Cars in South Kanara and for the convenience of present and prospective clients, a Sales and Service Station has been opened at Cantonment Road, Maidan View, Mangalore.

RAJULU & Co.,
Authorized District Dealers for
West Coast for Addison & Co. Ltd., Madras.

ಮೋರಿಸ್, ಡೋಜ್ ಮತ್ತು ಕ್ರೈಸ್ಲರ್—ಈ ಕಾರುಗಳ ಮೇಲಿನ ಜನತೆಯ ಅಭಿಮಾನವು ದಿನೇ ದಿನೇ ಹೆಚ್ಚುತ್ತಿರುವುದರಿಂದಲೂ, ಈಗಿನ ಮತ್ತು ಮುಂದಿನ ಗಿರಾಕಿಗಳಿಗೆ ಸೌಕರ್ಯವನ್ನು ಒದಗಿಸಿಕೊಡಬೇಕೆಂಬುದರಿಂದಲೂ ಮಂಗಳೂರಿನ ಮೈದಾನು ಬಳಿಯ ಕಂಟೋನ್ಮೆಂಟ್ ರಸ್ತೆಯಲ್ಲಿ, 'ಮಾರಾಟದ ಮತ್ತು 'ಸರ್ವೀಸಿನ' ಒಂದು ಹೊಸದಾದ ಸ್ಟೇಶನನ್ನು' ಈಗ ತೆರೆದಿದೆ ಎಂದು ಪ್ರಕಟಿಸಲು ಸಂತೋಷ ಪಡುತ್ತೇವೆ.

ರಾಜುಲು ಅಂಡ್ ಕೋ.

ಎಡಿಸನ್ ಮತ್ತು ಕಂಪೆನಿ, ಮದ್ರಾಸ್ (ಇದರ ಪರವಾಗಿ ಪಶ್ಚಿಮ ಕರಾವಳಿಗೆಲ್ಲ ಅಧಿಕಾರ ಹೊಂದಿದ ಜಿಲ್ಲಾ ವ್ಯಾಪಾರಿಗಳು)

2 /12

ನೋಟೀಸು.

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

O P No 151/33

ಶ್ರೀಧರ ಕೊಣ್ಣೂರಾಯ ಸಹಾ 8 ಜನರು—ಅರ್ಜಿದಾರರು

ಮತ್ತು

ತ್ರಿವಿಕ್ರಮ ಕೊಣ್ಣೂರಾಯ—ರೆಸ್ಪಾಂಡೆಂಟ.

ಇವರೊಳಗೆ

ಕಾಸರಗೋಡು ತಾಲೂಕು ಕೈಯ್ಯೂರು ಗ್ರಾಮದ ಮಯ್ಯಿಲ್ ಎಂಬಲ್ಲಿರುವ ಶ್ರೀಧರ ಕೊಣ್ಣೂರಾಯರ ಮಗ ಶ್ರೀಧರ ಕೊಣ್ಣೂರಾಯ 1, ಇವರ ತಮ್ಮಂದಿರು ಮುಂತಾದವರು ವಿಷ್ಣು ಕೊಣ್ಣೂರಾಯ, ತ್ರಿವಿಕ್ರಮ ಕೊಣ್ಣೂರಾಯ ಕೂಡಾ ಅರ್ಜಿದಾರರಾಗಿ ಸದ್ರಿ ಗ್ರಾಮದಲ್ಲಿದ್ದು ಮೃತವಾದ ಸದ್ರಿಯವರ ತಂದೆ ಶ್ರೀಧರ ಕೊಣ್ಣೂರಾಯಗೆ ಬರಬೇಕಾದ ಸಾಲ ವಗೈರೆಗಳನ್ನು ವಸೂಲು ಮಾಡುವರೆ ಅರ್ಜಿದಾರರು ಬಾಧ್ಯಸ್ತರೆಂತ 1889ನೇ ಇಸವಿ 7ನೇ ಆಕ್ಟ ವ 1925ನೇ ಇಸವಿ 39ನೇ ಆಕ್ಟ 372ನೇ ಸೆಕ್ಷನ್ ಪ್ರಕಾರವೂ ಸರ್ಟಿಫಿಕೇಟು ಕೊಡಬೇಕೆಂತ ಸದ್ರಿ ಕೋರ್ಟಿನಲ್ಲಿ ಅರ್ಜಿ ಕೊಟ್ಟಿರುವುದರಿಂದ ಆ ಕುರಿತು ಆಕ್ಷೇಪವುಳ್ಳವರು 1934ನೇ ಇಸವಿ ಜನವರಿ 22ನೇ ತಾರೀಕಿನ ಒಳಗೆ ಖುದ್ದನಿಂದಾಗಲೀ, ವಕೀಲ್ ದ್ವಾರವಾಗಲೀ ಹಾಜರಾಗಿ ಅವರವರಿಗಿರುವ ಆಕ್ಷೇಪಗಳನ್ನು ತಿಳಿಯಪಡಿಸತಕ್ಕದ್ದು. ತಪ್ಪಿದರೆ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದೆಂದು ಇದರಿಂದ ಸಕಲ ಜನರಿಗೆ ತಿಳಿಸೋಣಾಗಿರುತ್ತದೆ

ಕಾಸರಗೋಡು, ೧—೧—೩೪. | ಎ. ವಿ. ನಾರಾಯಣ ಮೆನೋನ್, ಅರ್ಜಿದಾರರ ಕಡೆ ವಕೀಲ್

→←→+

ವಾಲ್ಪ

ಇಲ್ಲಿ 'ವಾಲ್ಪ' ಎಂಬ ಪತ್ರಿಕೆಯ ಸಂಪಾದಕರಾದ ಡಾ| ಎನ್ರಿಕೊ ಎಂಜೆ ಎಂಬವರು ಬ್ರಿಟಿಷರಿಗೆ ವಿರೋಧವಾಗಿರುವ ಲೇಖನಗಳನ್ನು ಪದೇ ಪದೇ ಪ್ರಕಟಿಸಿರುವುದನ್ನು ನೋಡಿ ಸರಕಾರವು ಆ ಪತ್ರಿಕೆಗೆ ೨ ತಿಂಗಳುಗಳ ತನಕ ಮುಟ್ಟುಗೋಲು ಹಾಕಿತು. ಇಟೆಲಿಯ ಪತ್ರಿಕೆಗಳಲ್ಲಿ ಬ್ರಿಟಿಷ ವಿರೋಧವಾಗಿರುವ ಲೇಖನಗಳನ್ನೆಲ್ಲಾ ಈ ಸಂಪಾದಕರು ಪ್ರಕಟಿಸುತ್ತಿದ್ದುದೇ ಮಹಾಪರಾಧ ಈ ಪತ್ರಿಕೆಯನ್ನು ನಿಲ್ಲಿಸಿರುವರಾದರೂ, ಸಂಪಾದಕರು ಸುಮ್ಮನಿರದೆ, ಅದನ್ನು ಇನ್ನೊಂದು ಹೆಸರಿನಿಂದ ಮರುದಿನವೇ ಹೊರಡಿಸಿದರು

ನ್ಯೂಡಿಲ್ಲಿ

ಜನವರಿ ೮ನೇ ತಾರೀಕಿನಿಂದ ಮದ್ರಾಸ್ ಹೈಕೋರ್ಟಿನಲ್ಲಿ ಎಡಿಶನಲ್ ಜಡ್ಜರಾಗಿ ಮೂರು ತಿಂಗಳುಗಳ ತನಕ ಕೆಲಸ ನೋಡುವುದಕ್ಕಾಗಿ ಗವರ್ನರ್ ಜನರಲ್ ಇನ್ ಕೌನ್ಸಿಲ್ ಇವರು ದಿವಾನ್ ಬಹದೂರ್ ಕೆ. ಪಿ. ಲಕ್ಷ್ಮಣರಾಯರನ್ನು ನೇಮಿಸಿರುತ್ತಾರೆ.

→→++

ಒಂದು ಸುಂದರ ಕೂಸು

ಸೆನಿಟರಿ ಇನ್ಸ್‌ಪೆಕ್ಟರರು

"ನಾನು ನಿಮ್ಮ ಹೆಸರುವಾಸಿ

ಲೋಧ್ರವನ್ನು

ನನ್ನ ಪತ್ನಿಗೆ ಉಪಯೋಗಿಸಿದೆನು. ಆದರಿಂದಾಗಿ ನನಗೆ ಸುಂದರವಾದ ಗಂಡು ಕೂಸು ಹುಟ್ಟಿತು. ನಿಮಗೆ ನನ್ನ ನಮಸ್ಕಾರಗಳು."

ಎಸ್. ನಟರಾಜ ಮುದಲಿಯಾರ್,
ಸೆನಿಟರಿ ಇನ್ಸ್‌ಪೆಕ್ಟರ್,
ಮಾಲೂರು, ಮದುರಾ.

ನಿಮ್ಮ ಕೆಮಿಸ್ಟರರ ಹತ್ತಿರ ಕೇಳಿರಿ.

ಅಥವಾ

ಕೇಸರಿ ಕುಟೀರಂ,
ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

Sole Agents for South Kanara

ಪೋಪ್ಯುಲರ್ ಸ್ಟೋರ್ಸ್,
ರಥಬೀದಿ ಮಂಗಳೂರು.

ಸ್ತ್ರೀ ಪುರುಷರ ಸಲುವಾಗಿ ಶಕ್ತಿ ವ ಸ್ಫೂರ್ತಿ ಕೊಡುವಂತಹ	ಸ್ತ್ರೀಯರ ಸಲುವಾಗಿ ಆರೋಗ್ಯ ವ ಶಕ್ತಿವರ್ಧಕ.
ಸುಮಧುರ **ಝಂಡು ದ್ರಾಕ್ಷಾಸವ** ಜರೂರು ಉಪಯೋಗಿಸಿರಿ.	ಪ್ರದರಾದಿ ರೋಗಗಳ ಮೇಲೆ ರಾಮಬಾಣ ಉಪಾಯ. **ಝಂಡು ಅಶೋಕಾರಿಷ್ಟ** ಬೇಗನೇ ಉಪಯೋಗಿಸಿರಿ

'ZANDU'

ಝಂಡು ಫಾರ್ಮಾಸ್ಯುಟಿಕಲ್ ವರ್ಕ್ಸ ಲಿ: ಮುಂಬ್ಯಾಗ್ಳ.

ಮದ್ರಾಸು ಸಂಸ್ಥಾನದ ಏಜಂಟ್:—ದಾಮೋದರ ಮತ್ತು ಕಂಪೆನಿ, 78 ಜೈನ ಬಜಾರ ರೋಡ್, ಮದ್ರಾಸು
ಮೈಸೂರು ಪ್ರೊವಿನ್ಸ್ ಏಜಂಟ್:—ಬಿ. ಪ್ರೊಷಟ್ ಲಾಲ ಕಂಪೆನಿ, ೫೧ ಅರ್ಕಟ ಶ್ರೀನಿವಾಸಾಚಾರ ಸ್ಟ್ರೀಟ್.
ಮಂಗಳೂರು ಏಜಂಟ್,—ಶಾಹಾ ಕಂಪೆನಿ ಡಾಯ್ಮಂಡ್ ಬಿಲ್ಡಿಂಗ್, ಮಂಗಳೂರು
ಧಾರ್ವಾಡ ಏಜಂಟ್—ದಿ ಧಾರ್ವಾಡ ಫಾರ್ಮಸಿ, ಧಾರವಾಡ.

ಬೇರೆ ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತದೆ

ಆಯುರ್ವೇದ ಔಷಧಿಗಳ ಸೂಚೀಪತ್ರವನ್ನು ಮುಖ್ಯ ಏಜಂಟರಿಂದ ಪಡೆಕೊಳ್ಳಿರಿ

ನಮ್ಮ ಸಲಹೆಯೇ ಪ್ರಾಧಾನ್ಯವಾದದ್ದೆಂದು ತಿಳಿಯಬೇಡಿ.

ಕಲ್ಲಿಕೋಟೆ ಅಶೋಕ ಆಸ್ಪತ್ರೆಯ ಚೀಫ್ ಮೆಡಿಕಲ್ ಆಫೀಸರರಾದ ಡಾ। ವಿ. ಬಿ. ರಾಮನ್, ಎಂ. ಆರ್., ಸಿ ಎಸ್ ರವರು ಬರೆದಿರುವುದನ್ನು ಓದಿ ನೋಡಿ—"ನಾನು ನಿಮ್ಮ ಆಶ್ಚರ್ಯಕರವಾದ ಜೀವಾಮೃತಂ ಟಾನಿಕನ್ನು ನರಗಳಲ್ಲಿ ಉಂಟಾಗುವ ಹಸಿವು ಕಡಿಮೆಯಾಗಿರುವುದು, ತೂಕವು ಕಡಿಮೆಯಾಗಿರುವುದು, ಇವು ಪ್ರಾಪ್ತವಾಗಿರುವ ಅನೇಕ ರೋಗಿಗಳಿಗೆ ಕೊಟ್ಟಿರುತ್ತೇನೆ, ಅದರ ಫಲಿತಾಂಶಗಳು ಬಹು ತೃಪ್ತಿಕರವಾಗಿದೆ. ಜೀವಾಮೃತವನ್ನು ದೇಹಶಕ್ತಿ ಕುಗ್ಗಿರುವ ಎಲ್ಲಾ ಸಂದರ್ಭಗಳಲ್ಲೂ ಸರ್ವಸಾಮಾನ್ಯವಾಗಿ ಉಪಯೋಗಿಸಬಹುದೆಂದು ನಾನು ಮನಃಪೂರ್ವಕವಾಗಿ ಶಿಫಾರಸು ಮಾಡುತ್ತೇನೆ"

ಜೀವಾಮೃತವು

ನರಗಳಿಗೆ ಶಕ್ತಿ ಕೊಡುತ್ತದೆ ವೀರ್ಯ ವೃದ್ಧಿಮಾಡುತ್ತದೆ. ಹಸಿವು ಹೆಚ್ಚಿಸುತ್ತದೆ ರಕ್ತ ವೃದ್ಧಿಮಾಡುತ್ತದೆ.

ಪಂಡಿತ ಡಿ. ಗೋಪಾಲಾಚಾರ್ಲುರವರ **ಜೀವಾಮೃತವು**

ಎಲ್ಲಾ ಔಷಧ ಮಾರುವವರಲ್ಲೂ, ಸ್ಟೋರುಗಳಲ್ಲೂ ದೊರೆಯುತ್ತದೆ. (ಸಂಪೂರ್ಣ ವಿವರಗಳಿಗೆ ಇವತ್ತೇ ಬರೆಯಿರಿ)

ಆಯುರ್ವೇದಾಶ್ರಮಂ, ಪೋ. ಬಾಕ್ಸು ನಂ. ೨೧೭, ಮದ್ರಾಸು.

ಸೋಲ್ ಏಜಂಟರು:—ಸಿಟಿ ಮೆಡಿಕಲ್ ಮತ್ತು ಜನರಲ್ ಏಜನ್ಸಿ, ೯೨ ಚಿಕ್ಕಪೇಟೆ ಬೆಂಗಳೂರು. (ಉಪ್ಪಾರ ಪೋಲೀಸ್ ಹತ್ತಿರ)
ದಕ್ಷಿಣ ಕನ್ನಡದ ಏಜಂಟರು—ಪೋಪ್ಯುಲರ್ ಸ್ಟೋರ್ಸ್, ಮಂಗಳೂರು. P. No 104

ಥ ಎಂದು ಅದು ಪಟ್ಟಣಿಯುಟ್ಟಿತ್ತು ಅದರಲ್ಲಿ ಸಿಕ್ಕಿದ ಹಣವನ್ನು ... ಸುವ ರೋಗಿಗಳ ಉಪಾಹಾರಕ್ಕೆ ವೆಚ್ಚ ಮಾಡಬೇಕೆಂದು ... ಬರೆದ ಸೂಚನೆಯು ಮಂಜೂರಾಯಿತು. ... ವಿದ್ಯಾರ್ಥಿಗಳಿಗೆ ಈ ವರ್ಷದ (ಉಳಿದ ಸಮಯ)ಲ್ಲಿಯೂ ಹಾಸ್ಟೆಲ್ ರಿಯಾಯಿತಿ ಮಾಡಲಾಗಿದೆಯೆಂದು ಪ್ರೆಸಿಡೆಂಟರು ಕೊಟ್ಟ ಸೂಚನೆಯು ಮಾನಿಸಲ್ಪಟ್ಟಿತು ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರು ಈ ತಾಲೂಕಿನ ರಸ್ತೆ ಮತ್ತು ಬಾವಿ ಕರೆಗಳನ್ನು ಜನರ ಉಪಯೋಗಕ್ಕಾಗಿ ಸರಿ ಪಡಿಸುವುದಕ್ಕೆ ಕೊಟ್ಟ ... ಗಳನ್ನು ಅವರ ಸೂಚನೆಯಂತೆ ವಿಲೇಜ್ ಡೆವಲಪ್‌ಮೆಂಟ್ ಫಂಡಿಗೆ ಕೊಡುವುದೆಂದು ತೀರ್ಮಾನವಾಯಿತು.

ಅಳಿಕೆ, ಪೆರುವಾಯಿ, ಮಾಣಿಲ—ಈ ಗ್ರಾಮಗಳ ಗ್ರಾಮಸ್ಥರ ಸಭೆಯು ಕಳೆದ ತಾ ೨೫ಕ್ಕೆ ಸಂಜೆ ೭ ಘಂಟೆಗೆ ಮುಚ್ಚಿರ ಪದವು ಶಾಲೆಯಲ್ಲಿ ಪುತ್ತೂರು ಎಡ್ವೊಕೇಟ್ ಕುಂಡಕ್ಕ ಉಗ್ಗಪ್ಪ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು ಗ್ರಾಮಗಳಲ್ಲಿ ಕೆಲಂ ವ್ಯವ್ಯಸದಿಂದ ಹೊಂದುವ ನಷ್ಟದ ಬಗ್ಗೆ ಜಿಲ್ಲಾ ಕಲೆಕ್ಟರ್ ದೊರೆಗಳು ಸ್ಥಳ ತನಿಖೆ ಮಾಡಿ ಉತ್ತರವೆಂದು ನಿರ್ಣಯವಾಯಿತು ಅಲ್ಲದೆ ಅಧ್ಯಕ್ಷರು ವರ್ಗದಾರರ ಕಷ್ಟ ನಿವಾರಣೆಗಾಗಿ ತನ್ನ ಕೈಲಾದಷ್ಟು ಪ್ರಯತ್ನಿಸುತ್ತೇನೆಂದ ಭರವಸೆ ಕೊಟ್ಟರು

ವಿಟ್ಲದಲ್ಲಿ ಇದೇ ಜನವರಿ ತಾ ೭ರಲ್ಲಿ ಅಪರಾಹ್ನ ಘಂಟೆ ೩ಕ್ಕೆ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ವಿಟ್ಲ ಪಡ್ನೂರು, ಕೊಲನಾಡು ಸಾಲೆತ್ತೂರು, ಕೇಪು, ಮುಂಡ್ಕೂರು, ಇರಾಕಂಬ, ಬೊಳಂತೂರು ಮೊದಲಾದ ಗ್ರಾಮಗಳ ವರ್ಗದಾರ ಸಭೆಯು ಜರಗಲಿದೆ

ಮಹಾತ್ಮಾಜೀಯವರು ಜನವರಿ ತಾ ೧೫ನೆಯ ಆದಿತ್ಯವಾರ ದಿನ ಸಂಜೆ ಮಂಗಳೂರಿನಿಂದ ಕಾರ್ಕಳ ಮಾರ್ಗವಾಗಿ ಉಡುಪಿಗೆ ಚಿತ್ತೈಸುವರೆಂದು ಈಗ ತಾನೆ ಗೊತ್ತಾಗಿದೆ ತತ್ಸಂಬಂಧ ಡಿಸೆಂಬರ ತಾ ೨೮ನೆಯ ಗುರುವಾರ ದಿನ ವಿಕ್ಟೋರಿಯಾ ಜ್ಯುಬಿಲಿ ಯೂನಿಯನ್ ಕ್ಲಬ್ಬಿನಲ್ಲಿ ಪುರಜನರ ಮಹಾ ಸಭೆಯೊಂದು ಡಾಕ್ಟರ್ ಪಿ ಬಿ ಆಚಾರ್ಯರ ನೇತೃತ್ವದಲ್ಲಿ ಸೇರಿ ಸ್ವಾಗತ ಕಮಿಟಿಯು ನಿರ್ಮಾಣವಾಯಿತು ದಿವಾನ್ ಬಹದ್ದೂರ್ ಶ್ರೀವರ್ಮನ್ ಬಂಗೇರ ನಾಗಪ್ಪ ಸ್ವಾಮಿಯವರನ್ನು ಸ್ವಾಗತ ಕಮಿಟಿಯ ಅಧ್ಯಕ್ಷರನ್ನಾಗಿ ಚುನಾಯಿಸಲಾಯಿತು ಬಿ ಕೃಷ್ಣಯ್ಯ ಶೆಟ್ಟಿ, ಪಿ ಮಂಜುನಾಥ ನಾಯಕ್, ಕೆ ಶ್ರೀನಿವಾಸ ಪೈಗಳವರು ಕಮಿಟಿಯ ಜತೆ ಕಾರ್ಯದರ್ಶಿಗಳಾಗಿಯೂ ಎಸ್ ಯು ಪಣಿಯಾಡಿ ಮತ್ತು ಮಂಜುನಾಥ ನಾಯಕ್ ಜತೆ ಕೋಶಾಧಿಕಾರಿಗಳಾಗಿಯೂ ಆರಿಸಲ್ಪಟ್ಟಿರುವರು ಮಹಾತ್ಮರ ಆಗಮನದ ನಿಮಿತ್ತವಾಗಿ ಇನ್ನೂರು ಸ್ವಯಂಸೇವಕರ ದಳವೊಂದು ತಯಾರಾಗುತ್ತಲಿದೆ ಮಹಾತ್ಮರ ಹರಿಜನ ಸೇವಾನಿಧಿಗೆ ಹಮ್ಮಿಣಿಯನ್ನು ಕೂಡ ಬಹು ರಭಸದಿಂದ ಸಾಗುತ್ತದೆ ಮಹಾಜನರು ಉದಾರ ಹಸ್ತದಿಂದ ಧನ ಸಹಾಯವನ್ನಿತ್ತು ಮಹಾತ್ಮರ ಕೃಪೆಗೆ ಪಾತ್ರರಾಗುವರೆಂದೇ ನಿರೀಕ್ಷೆ

ಇದೇ ತಾ. ೮ರಿಂದ ಉಡುಪಿ ಶ್ರೀಕೃಷ್ಣನ ಸನ್ನಿಧಿಯಲ್ಲಿ ಉತ್ಸವಾದಿ ಜಾತ್ರೆಗಳು ಪ್ರಾರಂಭವಾಗಿ ತಾ. ೧೪ರಲ್ಲಿ ಮಕರ ಸಂಕ್ರಮಣ, ಮರುದಿನ ಚೂರ್ಣೋತ್ಸವ, ಅವಭೃಥ ತಾ ೧೬ಕ್ಕೆ ಪರ್ಯಾಯ ಪೀಠಸ್ಥ ಶ್ರೀ ಸೋದೆ ಸ್ವಾಮಿಯವರ ಕೊನೆಯ ಉತ್ಸವ ತಾ ೧೮ಕ್ಕೆ ಶ್ರೀ ಕಾಣಿಯೂರು ಸ್ವಾಮಿಯವರ ಪರ್ಯಾಯ ಸ್ವೀಕಾರೋತ್ಸವವು ಜರಗಲಿವೆ.

ಡಾಕ್ಟರ್ ಕೆ. ಲಕ್ಷ್ಮೀನಾರಾಯಣ ಐಗಳ್ ಎಂ. ಬಿ. ಬಿ. ಎಸ್, ಇವರು ಉಡುಪಿಯಲ್ಲಿ ನಲಸಿ ತೆಂಕಪೇಟೆಯಲ್ಲಿ ರಿಟಾಯರ್ಡ್ ಇಂಜಿನೀಯರ್ ಮು. ವೆಂಕಟರಾಯರ ಮನೆಯಲ್ಲಿ, ತನ್ನ ಡಿಸ್ಪೆನ್ಸರಿಯನ್ನು ಈಗ ತಾನೇ ತೆರೆದಿರುವರು ಪಾಶ್ಚಾತ್ಯ ವೈದ್ಯ ವಿದ್ಯೆಯಲ್ಲಿ ಉಚ್ಚ ಶಿಕ್ಷಣವನ್ನು ಪಡೆದಿರುವ ಈ ಯುವಕ ಡಾಕ್ಟರರು ತಮ್ಮ ವೃತ್ತಿಯಲ್ಲಿ ಜಯಶೀಲರಾಗಲೆಂದು ನಾವು ಹಾರೈಸುವೆವು

ಕಟಪಾಡಿಯಲ್ಲಿ ಪ್ರತಿ ವರ್ಷದಂತೆ ನಡೆಯುವ ಕಂಬಳವು ಮೊನ್ನೆ ಜರಗಿತು

ಕಳೆದ ತಾ ೨೯—೧೨—೩೩ನೆಯ ಶುಕ್ರವಾರ ಇಲ್ಲಿಯ ಸಾರ್ವಜನಿಕ ಹಿಂದೀ ಶಾಲೆಯ ಕೊನ್ವೊಕೇಶನ್ ಸಮಾರಂಭವು ಶ್ರೀಯುತ ಕಾರ್ಕೂರು ನಾರಾಯಣ ಕಿಲ್ಲೆಯವರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ಜರಗಿತು ಸ್ವಾಗತ ಗೀತೆ ಶಾಲಾ ವರದಿ, ವಿದ್ಯಾರ್ಥಿಗಳ ಭಾಷಣ, ಸರ್ಟಿಫಿಕೇಟು ಹಂಚುವಿಕೆ ಮುಂತಾದುವುಗಳ ತರುವಾಯ ರಾ| ಕಿಲ್ಲೆರು ತಮ್ಮ ಅಮೋಘವಾದ ಭಾಷಣವನ್ನು ತುಳು ಭಾಷೆಯಲ್ಲಿ ಮಾಡಿದರು ಹಿಂದೀಯ ಆವಶ್ಯಕತೆ, ಹಳ್ಳಿಯ ಸುಸಂಘಟನೆ ಇತ್ಯಾದಿ ವಿಷಯಗಳ ಕುರಿತು ಹಳ್ಳಿಗರಿಗೆಲ್ಲಾ ಮಂದಟ್ಟಾಗುವಂತೆ ಮಾತನಾಡಿದರು ಹಿಂದೀ ಪ್ರಚಾರಕರಾದ ಶ್ರೀಯುತ ರಾಘವ ಆಚಾರ್ಯರು ಕೂಡ ಈ ಸಭೆಯಲ್ಲಿ ಹಾಜರಿದ್ದು ತಮ್ಮ ಪ್ರಚಾರ ಕಾರ್ಯವನ್ನು ಕೈಕೊಂಡಿದ್ದರು

ಶಂಕರನಾರಾಯಣ ದೇವಸ್ಥಾನದಲ್ಲಿ ಇದೇ ತಾ ೪ರಿಂದ ೧೫ರ ವರೆಗೆ ಧ್ವಜಾರೋಹಣಾದಿ ರಥೋತ್ಸವವು ಜರಗಲಿದೆ ಎಂದು ತಿಳಿದಿದೆ

ಕಾರ್ಕಳದ ಶ್ರೀ ವೆಂಕಟ್ರಮಣ ಸ್ವಾಮಿ ಥಿಯೆಟ್ರಿಕಲ್ ಕಂಪೆನಿಯವರು ಕಳೆದ ತಿಂಗಳಲ್ಲಿ ಕುಂದಾಪುರಕ್ಕೆ ಬಂದು ಸಾಮಾಜಿಕ ಮತ್ತು ಪೌರಾಣಿಕ ನಾಟಕಗಳನ್ನು ಯಶಸ್ವಿಯಾಗಿ ಆಡಿತೋರಿಸಿದರು

ಮುತ್ತೂರಿನ ಶಾಲಾ ಹೊಸ ಕಟ್ಟೋಣದ ಕೆಲಸವು ಸಾಧಾರಣ ಅರ್ಧಾಂಶ ಮುಗಿಯುತ್ತಾ ಬಂತು ಇನ್ನಾದರೂ ವಾಗ್ದತ್ತ ಮಾಡಿದ ಮಹನೀಯರೆಲ್ಲಾ ಉದಾರ ಮನಸ್ಸಿನಿಂದ ತಮ್ಮ ಬಾಬ್ತಿನ ಹಣವನ್ನು ವಸೂಲು ಕೊಡಬೇಕಾಗಿ ಈ ಮೂಲಕ ಸರ್ವರಲ್ಲಿಯೂ ಕಾರ್ಯದರ್ಶಿಯವರು ವಿಜ್ಞಾಪಿಸಿಕೊಳ್ಳುತ್ತಾರೆ

+ + + +

ಪಂಡಿತ ಜವಾಹಿರಲಾಲ ನೆಹರೂ ಬಂದಾಗ್ಗೆ ಹುಬ್ಬಳ್ಳಿ ಪ್ರದರ್ಶನದಲ್ಲಿ ಸುವರ್ಣ ಪದಕ ದೊರೆತ

ಒಂದೇ ಸಮನಾಗಿ ೩೫ ವರ್ಷದ ಅನುಭವದಿಂದ

ಹಿಂದೂಸ್ಥಾನದ ಸಾವಿರಾರು ಜನದಿಂದ ವರ್ಣಿಸಲ್ಪಟ್ಟ ಆಯುರ್ವೇದೋಕ್ತ

ದ್ರಾಕ್ಷಾ ಮತ್ತು ಶಾಸ್ತ್ರೀಯ ವನಸ್ಪತಿಗಳಿಂದ ತಯಾರಿಸಿರುವ ಮತ್ತು ಇದರ ಗುಣಕ್ಕಾಗಿ ಅನೇಕ ಸರ್ಟಿಫಿಕೇಟುಗಳು ಮತ್ತು ಬಂಗಾರದ ಪದಕ ದೊರೆತಿರುವ ಪರದೇಶದಲ್ಲಿ ... ಶಕ್ತಿಯ ... ಟಾನಿಕ

ದ್ರಾಕ್ಷಾಮೃತ

ಈ ದ್ರಾಕ್ಷಾಮೃತವು ಸಹ್ಯಾದ್ರಿ ಪರ್ವತದಲ್ಲಿರುವ ಅನೇಕ ವನಸ್ಪತಿಗಳ ರಸಾರ್ಕಗಳೊಂದಿಗೆ ದ್ರಾಕ್ಷಾರಸವನ್ನು ವಿ... ಸ್ವದೇಶೀ ಯಂತ್ರದಿಂದ ಶಾಸ್ತ್ರೋಕ್ತ ಪದ್ಧತಿ ಪ್ರಕಾರ ತಯಾರ ಮಾಡಿರುವುದರಿಂದ ಸ್ವಾದಿಷ್ಟವು ಮತ್ತು ಮಧುರವು ಆಗಿದೆ

ಇದರ ಸೇವನೆಯಿಂದ ಶರೀರದೊಳಗಿನ ಹಳೇ ಕಫ (ಗರಮಿ) ಸಂಪೂರ್ಣ ನಾಶವಾಗುತ್ತದೆ ಮತ್ತು ಧಾತುಸಾವ ಸ್ವಪ್ನದೋಷದಿಂದ ಅಥವಾ ಬೇರೆ ಯಾವುದೇ ವಿಕಾರದಿಂದ ಬಂದ ಅಶಕ್ತತೆಯಿಂದ ಕೈಕಾಲು, ... ಉರುವು ... ಯಾವಾಗಲೂ ಎಲುಬಿನಲ್ಲಿ ಜ್ವರ ಇರೋಣ, ಸದಾ ನೋಯೋಣ, ಪಿತ್ತದಿಂದ ಕಣ್ಣಿಗೆ ಕತ್ತಲೆ ಬಂದು ಭೋಳಿ ಬರೋಣ ... ಆಗದೇ ಇರೋಣ, ... ಎಲ್ಲಾ ವಿಕಾರಗಳು ನಷ್ಟವಾಗಿ ಕ್ಷುಧಾಗ್ನಿಯು ಬೆಳೆಯುತ್ತದೆ. ಮತ್ತು ಅನ್ನ ಚೆನ್ನಾಗಿ ಪಚನವಾಗಿ ... ಸಾಫವಾಗುತ್ತದೆ. ಇದರ ಸೇವನೆಯಿಂದ ತರುಣರಿಗೆ ವ್ಯಭಿಚಾರದಿಂದ ಅಥವಾ ಬೇರೆ ಕಾರಣದಿಂದ ಬಂದ ಧಾತು ಕ್ಷೀಣತೆ, ನಪುಂಸಕತ್ವ ಇದ್ದರೆ ಅದು ಹೋಗಿ ಪುನಃ ಯವನವಂತರಾಗಿ ಶರೀರ ಬಲವಾಗಿ ಮಕ್ಕಳು ಪುತ್ರವಂತರಾಗುವರು. ಹೆಂಗಸರಿಗೂ ಮತ್ತು ಮಕ್ಕಳಿಗೂ ಈ ಔಷಧವು ಗುಣಕಾರಿ ಇದೆ ... ಮತ್ತು ಉಷ್ಣದ ಗರ್ಭ ಸಂಬಂಧವಾದ ರೋಗಗಳಿದ್ದರೂ ಅವುಗಳೆಲ್ಲ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವುದು. ಅಶಕ್ತ ಮುದುಕರು ಬಲಶಾಲಿಗಳಾಗುವರು ಈ ಔಷಧದ ೩ ಬಾಟ್ಲಿಗಳನ್ನು ಸೇವನೆ ಮಾಡಿದರೆ ಪೂರ್ಣ ಗುಣ ಬರುತ್ತದೆ ಇದರ ಅನುಭವ ... ಸೇವನೆಮಾಡಿದ ನಂತರ ತಿಳಿದೀತು ... ಕೊಳ್ಳತಕ್ಕದ್ದು

ಬಾಟ್ಲಿ ಬೆಲೆ ೧—೪—೦, ೩ ಬಾಟ್ಲಿಗೆ ೩—೮—೦, ಹಪ್ಪುನ ಬಾಟ್ಲಿಗೆ ... ಟಪಾಲು ಖರ್ಚು ಬೇರೆ

ಪ್ರಸಿದ್ಧ ಕೆಮಿಸ್ಟ ಮತ್ತು ಸ್ಟೋರ್ಸದೊಳಗೆ ಮತ್ತು ... ಅಂಗಡಿಯಲ್ಲಿ ... ಬೆಲ್ಲಾ, (ಬೆಳಗಾಂವಿ)

ಮ್ಯಾನೇಜರ—ದ್ರಾಕ್ಷಾಮೃತ ಕಾರ್ಯಾಲಯ, ... ಬ್ರದರ್ಸ, ...

ವಿಕ್ರಯದ ಸ್ಥಳ:— ಮಂಗಳೂರು—ಗಜಾನನ ಮೆಡಿಕಲ್ ಹಾಲ್ ... ಕೆ. ಶೇಷಗಿರಿ ಪೈ ಕಾರ್ಕಳ— ಕುಂದಾಪುರ—ಕೆ. ಆರ್. ಭಟ್ಟ, ಉಡುಪಿ—... ಫಾರ್ಮಸಿ, ... ಸಂಗೋಡು— ಎ. ಎ ... —ಗೋವಾಲ ... ವಾಸುದೇವ ಪೈ.

೨—೬—೩೩ ಕೆ ರಾಮ ... ಕೋರ್ಟ್ ರೋ...

See Indian
Buy Indian
Be Indian
By Using
L
Vegetable Toilet and Washing Soaps
FREE FROM ANIMAL FAT
Bath Soap, Glycerine Transparent Soap, Bar Soap
Cubes, Cakes.

Agents for South Kanara, Malabar & Coorg—
PAI PHARMACY,
Car Street, MANGALORE.

Stockists—
JAYAVANT SHANTARAM & BROS. *Merchants,*
Bunder, Mangalore, S K

1-9-33

'ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ'

WANTED.

Four Organisers to organise the work of the South Indian General Assurance Society Ltd, in the following places noted below Capable organisers can expect to have attractive and encouraging terms with sound footing for their future

(1) South Canara, (2) Mysore, Hassan and Coorg, (3) Kadur Shimoga, Chitaldroog and Tumkur (4) Mangalore, Kolar.

For terms and other particulars please apply to—

The Divisional Manager
The South Indian General Assurance Co Ltd
64, 3rd Cross Road Srirampur Extn
Malleswaram Post, BANGALORE.
OR
The Managing Agents,
The S I G A Co Ltd
33 Poonamallee High Road Kilpauk MADRAS

ಮಾರಾಟಕ್ಕಿವೆ ಮಾರಾಟಕ್ಕಿವೆ!!
ಕಾಫಿ ಪ್ಲಾಂಟರರಿಗೂ, ತೋಟದವರಿಗೂ
ಬೇಕಾಗುವಂತಹ
ಚಕ್ ರೋಲ್‌ಗಳು
ಮೂರು ಸ್ಸಾಜಿನಲ್ಲಿ ತಯಾರಿಸಲ್ಪಟ್ಟು
ಮಾರಾಟಕ್ಕೆ ಸಿದ್ಧವಿವೆ.
ಕೊಳ್ಳುವವರಿಗೆ ರಿಯಾಯಿತಿ ದರವಿದೆ
ಸೌನೇಕರ್,

ಕ್ಷಯಕ್ಷೀಣಾದಿಗಳಿಗೆ
ಚ್ಯವನಪ್ರಾಶಾನ ಲೇಹ.
ಪ್ರಸೂತಿ ರೋಗಾದಿಗೆ
ದಶಮೂಲಾರಿಷ್ಟ.
(ಕಸ್ತೂರಿ ಮಿಶ್ರಿತ)
ಸಮಸ್ತ ವಾತರೋಗಗಳಿಗೆ
ಮಹಾನಾರಾಯಣ ತೈಲ.
ಶ್ರೀ ರಾಮಕೃಷ್ಣ ಧನ್ವಂತ್ರಿ ವೈದ್ಯಾಶ್ರಮ ಸಂಘ,
ಡೊಂಗರಕೇರಿ ರಸ್ತೆ, ಮಂಗಳೂರು.

ಕರ್ಪೂರ ಗೋವಿಂದರಾವ್ ಕೇಶವ ಅಂಡ್ ಸನ್ಸ್,

ಕೊ-ಓಪರೇಟಿವ್ ಸೊಸೈಟಿಗಳಿಗೆ
ಬೇಕಾದ ನಮೂನೆಯ ಎಲ್ಲಾ ವಿಧದ
ಫಾರಂಗಳು, ರಿಜಿಸ್ಟರುಗಳು, ರಶೀದಿ ಪುಸ್ತಕಗಳು,
ಮತ್ತು ಇತರ ಫಾರ್ಮುಗಳೂ ಮಾರಾಟಕ್ಕಿವೆ.
ದಿ ಮಂಗಳೂರು ಪ್ರಿಂಟಿಂಗ್ ವರ್ಕ್ಸ್
ರಥಬೀದಿ, ಮಂ

ಶಹಾ ಶಿವಾಜಿ ಹಿಂದೂ ರೆಸ್ಟೋರೆಂಟ್
ಗಣಪತಿ ಹೈಸ್ಕೂಲ್ ರಸ್ತೆ, ಮಂಗಳೂರು (ದ. ಕ.)
ಮಂಗಳೂರಿನ ಉತ್ತಮ ಉಪಹಾರ ಗೃಹ
ಅನುಭವಸ್ಥರಿಂದ ತಯಾರಿಸಲ್ಪಡುವುವು
ಒಮ್ಮೆ ದಯಮಾಡಿಸಿ, ಪರೀಕ್ಷಿಸಿ
ತೃಪ್ತಿ ಪಡೆಯಿರಿ.

Seventyseven Years

Two generations of app... enables us to pick and what is cheap lasting & good to suit the pockets & the tastes of our longstanding wide circle of

CUSTOMERS
who know our
Premier House for Swadeshi
Mill Yarns—Handloom Cloths
Dhoties—Saries—Cintz sh etc
Shrinivas Ranga Pai,
Sawkar Mahal
Car Street, MANGALORE

ದೇಶಾಭಿಮಾನಿ.

(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)

ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ದುರ್ವಾಸನಸ್ಸು ಕುರ್ವನ ದೇವಾ । ನ ಭೇಜರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥

ದೊರೆಯಲನುಪಮರತ್ನಗಳು ಸಾ । ಗರದ ಮಥಿಸಲು ಸುರರಿಗದರಿಂ । ಹರುಷವಾಯಿತ್ ಮತ್ತೆ ವಿಕ್ಷವ ಸುಡುಕ ಬರುತಿರುವ ॥

ಗರಲಕೆವರಂಜದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ತೊಳಕರೆ । ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

(Oldest Kanarese Weekly in South Kanara)

ಪುಸ್ತಕ ೨೮. ಮಂಗಳೂರು ತಾ ೧೨ನೇ ಶುಕ್ರವಾರ ಜನವರಿ ೧೯೩೪ (12 – 1 – '34) ಸಂಚಿಕೆ ೨

THE CANARA BANKING CORPORATION, UDIPI, LTD.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI. **Branches:—Coondapoor, Mangalore, Shimoga & Madras**

ಹೆಡ್ ಆಫೀಸು — ಉಡುಪಿ. ಶಾಖೆ — ಕುಂದಾಪುರ, ಮಂಗಳೂರು, ಶಿವಮೊಗ್ಗ ಮತ್ತು ಮದ್ರಾಸು

Authorised Capital Rs. 3,50,000. Paid up Capital Rs. 2,25,000.

ನಿಯಮಿತ ಮೂಲಧನ ರೂ 3,50,000- ಶೇರು ಹಾಕಲಿಕ್ಕೆ ಅರ್ಪಿಸಿದ ವ ವಸೂಲಾದ ಮೂಲಧನ ರೂ. 2,25,000-

STATEMENT OF ASSETS & LIABILITIES AS ON 31ST OCTOBER, 1933.

	Capital and Liabilities.				Property and Assets	
1	Paid up Capital	Rs 2,25,000-0 0		1	Bank Premises Buildings, Furniture etc Rs	66 920-0 4
2	Reserve and other funds	,, 2,35,000-0-0		2	Investment on Gvt securities	,, 3,00,560 ? 6
3	Deposits	21 91,744 5-8		3	Authorised Investments	,, 23 02,701- 4
4	Due to Bankers	,, 21,649 2 3		4	Bills per contra	10 547 3 9
5	Sundries	,, 84 330 2 6		5	Sundries	,, 28 997 6 1
6	Bills per contra	10,547 3 9		6	Cash on hand & with bankers.	,, 50 544 7
		Total 27,68,270 14 2				Total 27 68 270 4

Udipi, 6 – 11 – '33.

N. ANANDA RAO,
Secretary & Manager

(Regd.)

ಅಮೃತಾಂಜನ.

ಇದು ಕೆಟ್ಟ ಶಿರೋವೇದನೆ, ಕಣ್ಣುಕೆಂಪಾಗುವ ವಾತ, ಛಾತಿ ನೋವು, ವಿಶೇಷ ಉಳುಕು, ಅಸಹನೀಯ ಹಲ್ಲುನೋವು, ವಿಪರೀತ ಛಳಿಯ ಜಡ ಶೀತ, ಸಹಿಸಲಸದಳವಾದ ಚಳಿ, ಕೈಕಾಲು ಮರಗಟ್ಟುವುದು, ಲುಂಬಾಗೊ ಮೊದಲಾದ ಎಲ್ಲಾ ತರದ ಬೇನೆಗಳನ್ನೂ ಅತೀ ತ್ವರೆಯಲ್ಲೇ ಗುಣ ಪಡಿಸುತ್ತದೆ ಎಲ್ಲೆಲಿಯೂ ಮಾರಲ್ಪಡುತ್ತಿದೆ.

ರಿಂಗ್‌ವರ್ಮ್ ಮುಲಾಮು— ಇದು ರಿಂಗ್‌ವರ್ಮನ್ನೂ ಕಜ್ಜಿಯನ್ನೂ ಇನ್ನಿತರ ಚರ್ಮರೋಗಗಳನ್ನೂ, ಬೂದಿ ಸಲಮುಟ್ಟಿಸ ವುದರೊಳಗೆ ಗುಣಪಡಿಸುತ್ತದೆ.

ಡಬ್ಬಿ 1ಕ್ಕೆ 6 ಆಣೆ ಡಜನಿಗೆ ರೂ. 3–8–0 ಅಂಚೆವೆಚ್ಚ ಪ್ರತ್ಯೇಕ

ಅಮೃತಾಂಜನ ಡಿಪೋ.

ಮದರಾಸು ಮತ್ತು ಬೊಂಬಾಯಿ.

ಸಣ್ಣ ಹುಡುಗರ ಸಲುವಾಗಿ,

ಡೊಂಗರೆ

ಇವರ

ಬಾಲಾಮೃತ

ಇದನ್ನು
ಕೊಡುವುದರಿಂದ ಮಕ್ಕಳು
ಸಶಕ್ತರೂ ಪುಷ್ಟರೂ ಮತ್ತು
ಸಂತೋಷ ಚಿತ್ತರೂ ಆಗುವರು.

ಕೇ. ಟಿ. ಡೊಂಗರೆ ಕಂಪೆನಿ.
ಗಿರ್ಗಾಂವ್, ಮುಂಬಯಿ
ಏಜಂಟರು — ಕಂಪೆನಿ,

This Space

To Let.

ಅಸ್ವಸ್ಥದ ನಂತರ
ನಿಮ್ಮ ಶಕ್ತಿಯನ್ನು ವೃದ್ಧಿಸುತ್ತದೆ.

ಅಸ್ವಸ್ಥರಾದ ನಂತರ ನಿಮ್ಮ ದೇಹವು ನಿರ್ಬಲಗೊಳ್ಳುತ್ತದೆ. ನಿಮ್ಮ ದೇಹಪ್ರಕೃತಿಯು ಅವಿಶ್ರಯಕರವಿರುತ್ತದೆ. ನಿಮಗೆ ಶಕ್ತಿ ಚೈತನ್ಯವಿಲ್ಲ. ನಿಮ್ಮ ಬಲವೆಲ್ಲಾ ಹೋಗಿದೆ. ನಿಮ್ಮ ಬಲವನ್ನು ಪುನಃ ತರುವುದು ಒಂದು ಮಹಾ ಕೆಲಸ. ಹೊಸ ಶಕ್ತಿಯು ಸರಿಯಾದ ಪೋಷಣೆಯಲ್ಲಿದೆ. ನಿತ್ಯದ ಆಹಾರದಲ್ಲಿ ಜೀವಸಾರವಿರುವುದಿಲ್ಲ. ಆದುದರಿಂದ ಅಸ್ವಸ್ಥಗೊಂಡವನು ಸಂಪೂರ್ಣ ಸರಿಯಾದ ಮತ್ತು ಸಮತೂಕ ಆಹಾರವಾದ 'ಓವಲ್ಟಿನ್'ನ್ನು ಸೇವಿಸಬೇಕು.

ಓವಲ್ಟಿನ್ ಎಂಬುದು ಪ್ರಕೃತಿಸಿದ್ಧ ಆಹಾರ. ಬೆಳೆದ ಬಾರ್ಲಿ, ದನದ ಕೆನೆ ಹಾಲು, ವಿಶೇಷವಾದ ಕೊಕ್ಕೊಗಳಿಂದ ತಯಾರಿಸಲ್ಪಟ್ಟಿದ್ದು, ಅಸ್ವಸ್ಥದ ನಂತರ ಬೇಕಾದ ಶಕ್ತಿಯನ್ನೊದಗಿಸುತ್ತದೆ. ಆರೋಗ್ಯ, ಬಲಗಳು ಉಂಟಾಗುತ್ತವೆ.

OVALTINE

ಮೆದುಳು, ನರ ಮತ್ತು ದೇಹವನ್ನು ವೃದ್ಧಿಸುತ್ತದೆ.

ತಯಾರಿಯಲ್ಲಿ ಕೈಯಿಂದ ಸ್ಪರ್ಶಿತವಾಗಿಲ್ಲ. ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ದೊರೆಯುತ್ತದೆ

ಏಜೆಂಟ್–ಜೇವರ್ಸ್ ಸ್ಮಿತ್, 85ಎ. ರಿಪನ್ ಸ್ಟ್ರೀಟ್, ಕಲ್ಕತ್ತಾ ಮತ್ತು ಬೊಂಬಾಯಿ, ಮದ್ರಾಸ್.

OV/196

ಗರ್ಭಧಾರಣ ಮಾಡಲು ಭಯಗೊಳ್ಳುವ ಸ್ತ್ರೀಯರಿಗಾಗಿ

ಮೆನೆಸ್ಟ್ರಿನ್ ಕೆಪ್‌ಸಲ್ಸ್ (Menestrin Capsules) ಗಳನ್ನು
ಬಾಯಿಯ ಮೂಲಕ ಸೇವಿಸುವುದರಿಂದ
ಗರ್ಭವೇ ನಿಲ್ಲುವುದಿಲ್ಲ.

ಬಾಟ್ಲಿ ಒಂದಕ್ಕೆ ರೂ॥ –8–0 ಮಾತ್ರ.

ದಿ ಓರಿಯಂಟಲ್ ರಿಸರ್ಚ್ ಲೆಬೊರೆಟರಿ, ವೆಪೆರಿ ಮದ್ರಾಸು.

The Oriental Research Laboratory, Vepery, Madras.

[illegible]

× × × ×

[illegible]

× × × ×

[illegible] ಗಾಂಧಿ [illegible]

× × × ×

ಅಂತೂ, ಸ್ವಯಂಸೇವಕರ [illegible] ಮಹಾತ್ಮರನ್ನು ಅಂಧರಾಗಿಯೂ, ತಾವು [illegible] ಎಂಬುದು ಸಾಧ್ಯಕ ಭಾವನೆ.

× × × ×

ಈ ಸಲ ಗಾಂಧೀಜಿಯವರಿಗೆ ನಾವು ಕೊಡುವ ಸುಸ್ವಾಗತವು ವೈಸರಾಯರನ್ನು, ಸರ್. ಸಾಮ್ಯುಯೆಲ್ ಹೋರರನ್ನು ಬೆರಗುಗೊಳಿಸಬೇಕು! ಅಂದರೆ ಗಲಾಟೆಯಾಗಬೇಕೆಂದಲ್ಲ! ಶಾಂತರೀತಿಯುಂಟಾಗಬೇಕೆಂದು!

× × × ×

ಗಾಂಧೀಜಿಯವರು ಉಡುಪಿಗೆ ಹೋಗುವುದಿಲ್ಲವೆಂದು ಒಂದು ಗುರು ಗುರು ವಾರ್ತೆ! ಮಠಾಧಿಪತಿಗಳು ಶ್ರೀ ಕೃಷ್ಣನಿಗೆ ಹರಕೆ ಹೇಳಿದರೋ!

× × × ×

ಮಹಾತ್ಮರನ್ನು ಕಾಣಲು ಶ್ರೀ ಕೃಷ್ಣ-ಮೂರ್ತಿಗೆ ಆತುರವಿದ್ದಿರಬಹುದು. ಮಹಾತ್ಮರು ದೇವಸ್ಥಾನದ ಬಾಗಿಲು ಸೇರಿದೊಡನೆ "ಕಮ್ ಇನ್ ಗಾಂಧಿ" ಎಂದು ಶ್ರೀ ಕೃಷ್ಣನ ಪ್ರತಿಮೆಯು ಪೂರ್ವಕ್ಕೆ ಮುಖ ತಿರುಗಿಸುವ ಒಂದು ಸಂದರ್ಭವು ಹೋಯಿತು!

× × × ×

ಗಾಂಧಿಯು ಮಂಗಳೂರಿಗೆ ಕಾಲಿಡೊಡನೆ, ಉಡುಪಿಯ ಕೃಷ್ಣರಾಯರು ಥಟ್ಟನೆ ದಕ್ಷಿಣಕ್ಕೆ ಮುಖ ಮಾಡುವರೋ ಏನೋ! ಯಾರು ಬಲ್ಲ?

× × × ×

ಅಯ್ಯಾ ಕೃಷ್ಣರಾಯರೇ, ದೇವ ದೇವ! ನೀವು ಹಾಗೆ ಉತ್ತರಕ್ಕೆ ಕಂಡೆ ಮಾಡಿ ನಿಂತರೆ ಉಡುಪಿಯವರಿಗೆ ಕೋಪ ಬಂದು ನೀವು ಇಲ್ಲ, ನಿಮ್ಮ ಆಸ್ತಿಯೂ ಇಲ್ಲದಂತಾಗುವುದು. ಆದುದರಿಂದ ಒಂದು ವೇಳೆ ನಿಮಗೆ ಗಾಂಧಿಯ ಮೇಲೆ ಪ್ರೀತಿ ಇದ್ದರೂ ಕೂಡಾ ಅದನ್ನು ನಿಮ್ಮ ಕಲ್ಲೆದೆಯ ಗೂಡಿನೊಳಗೇ ಇರಿಸಿ, ಸುಮ್ಮಗೆ ಪಶ್ಚಿಮಕ್ಕೆ ಮುಖ ಮಾಡಿ, ನಿಶ್ಚಲರಾಗಿ ನಿಂತು, ಹರಿಜನ-ವಿರೋಧಿಗಳಾದ ಸನಾತನಿಗಳಿಗೆ ವರ ಕೊಡಿರಿ!!! ಹಹ!

× × × ×

ಸ್ವಾಮಿಗಳಿಗೆ ನಿಮ್ಮ ಮೇಲೆ ವಿಶ್ವಾಸವಿಲ್ಲವೆಂದು [illegible] ನೀವು ಬೊಂಬೆಯಂತೆ ಬಿಟ್ಟಿ ಕಲ್ಲಾಗಿಲ್ಲವೆಂದು ನನಗೆ ಗೊತ್ತು. ನಿಮ್ಮ ಮೇಲೆ ಭೋಜನ ಪ್ರಿಯರ ಭಕ್ತಿಗಿಂತಲೂ ಮಿಗಿಲಾದ ಭಕ್ತಿ ಇಷ್ಟೇ ಇದೆ ನನಗೆ! [illegible] ಹೋಗಲಿ!

× × × ×

ಗಾಂಧೀಜಿಯವರು ಉಡುಪಿಗೆ ಹೋದಾಗ ಹೋಟೆಲಿನ ಸಂಖ್ಯೆಯೂ ಅವರ ಹಿಂದೆ ಹೋಗಬಹುದು. ಗಾಂಧಿಯವರು [illegible] ಲಾಭ ಜಾಸ್ತಿ ಆಗಬಹುದು! ಕೃಷ್ಣಯ್ಯಾ, ನೀನು ಮಾತ್ರ ಹೊರಗೆ ಬರಬೇಡ! [illegible]

× × × ×

[illegible]

× × × ×

[illegible]

Canara Bank, Limited.

Established 1906.

Authorised Capital	10,00000—0—0
Subscribed capital	6,00,000—0—0
Paid up Capital	3,30,000—0—0
Reserves	4,31,00?—0—0

Head Office —**Bunder, Mangalore** Local Offices —**City & Bunder**

BRANCHES — Bombay, Cochin, Calicut, Ernakulam, Alleppey, Chikmagalur, Ganguli, Coondapoor Udipi, Karkal, Puttur, Kasaragod, & Buntwal Out-agency.

Interest is allowed on Current, Fixed and Saving Banks Accounts, rates of which may be ascertained on application Advances made on approved securities at easy rates All kinds of Banking business transacted. Rules of business on application

The Bangalore Branch Office of the Bank at No 1 Albert Victor Road, Bangalore City will be opened on 8 1-34.

Mangalore 22-12-33

A. Madhava Pai,
Secretary

East & West Insurance Company Ltd.,

(Incorporated in India 1913)

Head Office —EAST & WEST BUILDINGS, FORT, BOMBAY.

Eastern Company with striking features
Attractive plans
Sympathetic & Liberal
Treatment to Policy Holders,
&
Wide popularity,
Economic Management
Sound investment
That is why you should select "East & West
Ere you invest in the rest

Interim Bonus
Declared
Rs 15 Per 1000
On whole life &
Endowment Policies

For particulars and Agency terms apply to —
B S Nayak, *Organiser Secretary* for West Coast, Coorg & Mysore,
"Harbour View" Mangalore.

ನಮ್ಮ ಟೊಯಿಲೆಟ್ ಮತ್ತು ವಾಶಿಂಗ್ ಸಾಬೂನುಗಳ ತಯಾರಿಯಲ್ಲಿ ಚರ್ಬಿ
ಉಪಯೋಗಿಸಲ್ಪಡುವುದಾಗಿ ರುಜುಪಡಿಸುವವರಿಗೆ ರೂಪಾ
1000 ಬಹುಮಾನ.

ಸಾಬೂನು ಪಡೆಯುವಾಗ " " ಅದರಲ್ಲಿ ಚರ್ಬಿ ಇರಕೂಡದೆಂದು ನಿಮ್ಮ ಆಶೆ.

ಪ್ರಾಣಿಗಳ ಚರ್ಬಿ ಮಿಶ್ರಿತವಾದ ಸಾಬೂನುಗಳು ಹಿತಕ್ಕಿಂತಲೂ ಅಹಿತವನ್ನೇ ಹೆಚ್ಚಾಗಿ ಉಂಟುಮಾಡುತ್ತವೆ ಕಾರಣ ಅವುಗಳಲ್ಲಿನ ಚರ್ಬಿ ಚರ್ಮರಂಧ್ರಗಳೊಳಗೆ ಹೋಗಿ ಬೆವರನ್ನು ತಡೆಯುತ್ತದೆ ಸೋಪನ್ನು ಪಡೆಯುವಾಗ ನೀವು ಪರಿಮಳಭರಿತ ಚರ್ಬಿನ ಮುದ್ದೆಗೆ ಬೆಲೆ ಕೊಟ್ಟು ಶುದ್ಧತೆಯ ಬದಲು ಅಶುದ್ಧತೆಯನ್ನು ಸ್ವೀಕರಿಸಬೇಕೆಂದಿರುವಿರಾ?

ಮಲಬಾರು ಸಾಬೂನುಗಳು ಜನನಕ್ಕೆ ಬಂದ ಆರು ತಿಂಗಳುಗಳ ಅಲ್ಪಾವಧಿಯಲ್ಲೇ ಸಾರ್ವಜನಿಕ ಬೆಂಬಲವು ಪಡೆದಿವೆ ಕೊಚ್ಚಿಯ ಮಹಾ ರಾಜರ ದಯಾಪೂರ್ಣ ಪ್ರಶಸ್ತಿ ಮತ್ತು ಪ್ರೋತ್ಸಾಹನದಿಂದಾಗಿಯೂ, ಪ್ರಖ್ಯಾತ ವೈದಕೀಯ ಅಧಿಕಾರಿಗಳ ಶಿಫಾರಸಿನಿಂದಾಗಿಯೂ, ಅನೇಕ ವಸ್ತುಪ್ರದರ್ಶನಗಳಲ್ಲಿ ದೊರೆತ ಸುವರ್ಣಪದಕ ಮತ್ತು ಪ್ರಶಸ್ತಿ ಪತ್ರಿಕೆಗಳಿಂದಾಗಿಯೂ ಮಲಬಾರ್ ಸಾಬೂನುಗಳ ಪ್ರಾಮುಖ್ಯತೆಯು ಎಷ್ಟೆಂದು ತಿಳಿಯುವುದು.

ಮಲಬಾರ್ ಸಾಬೂನು ಎಲ್ಲಾ ವಿಧದಿಂದಲೂ ಶ್ರೇಯಸ್ಕರವೇ ಆಗಿರುತ್ತದೆ ನಿಮ್ಮ ಚರ್ಮಕ್ಕೆ ಬಾಧಕವನ್ನುಂಟು ಮಾಡುವಂತಹ ಪ್ರಾಣಿಗಳ ಚರ್ಬಿ ಅಥವಾ ಹಾನಿಕರವಾದ ಮಿಶ್ರಿತವೇನೂ ಅದರಲ್ಲಿರದು. ಮಲಬಾರ್ ಸಾಬೂನನ್ನು ಶಾಸ್ತ್ರೀಯ ರೀತಿಯಿಂದಲೂ, ಆರೋಗ್ಯ ದೃಷ್ಟಿಯಿಂದಲೂ ತಯಾರಿಸುವುದರಿಂದ ಎಷ್ಟು ಕೋಮಲವಾದ ಚರ್ಮವೂ ಬಾಧಕ ಹೊಂದುವುದಿಲ್ಲ ಈ ಸಾಬೂನು ದೇಶಿಯ ಅಮೂಲ್ಯ ಗಂಧಯುಕ್ತ ಸಾಮಾಗ್ರಿಗಳಿಂದ ಎಲ್ಲರಿಗೂ ಅನುಕೂಲವಾಗುವಂತೆ ಅಗ್ಗವಾಗಿದೆಯೆಂದು ಅದರ ಉಪಯೋಗದಿಂದ ನಿಮಗೆ ತಿಳಿದುಬರುವುದು.

ನಿಮ್ಮ ವ್ಯಾಪಾರಸ್ಥರು

ಮಲಬಾರ್ ಸಾಬೂನುಗಳನ್ನು

ವಿಕ್ರಯಿಸಲು ಸಂತೋಷಪಡುವರು

ಇದರಲ್ಲಿ ಪ್ರಾಣಿಗಳ ಕೊಬ್ಬು ಇರುವುದಿಲ್ಲ.

ದಿ ವೆಜಿಟೇಬಲ್ ಸೋಪ್ ವರ್ಕ್ಸ್, ಕಲ್ಲಿಕೋಟೆ.

ಪ್ರೊಪ್ರೈಟರ್:—ಸನ್ ಬ್ರೆಂಡ್ ಕೊಡೆಯ ಖ್ಯಾತಿಯ ಸೇಟ್ ನಾಗಜೀ ಪುರುಷೋತ್ತಮ ಮತ್ತು ಕಂಪೆನಿ, ಕಲ್ಲಿಕೋಟೆ.

ಈ ಜಿಲ್ಲೆಗೆ ಪ್ರವರ್ತಕರು:—

ರಾಘವೇಂದ್ರ ರಂಗ ಪೈ ರಥಬೀದಿ, ಮಂಗಳೂರು.

S. U. N. & CO.

Chowkhamba, Benares City

ಮೂರು ಇನಾಮುಗಳು.

ನಮ್ಮಲ್ಲಿ ಕಾಶ್ಮೀರ್ ಶಾಲುಗಳಿಗಿಂತಲೂ ಅತ್ಯುತ್ತಮವಾದ ಕಸೂತಿಗೆಲಸವುಳ್ಳ ಶುದ್ಧ ಸ್ವದೇಶೀ ಖದ್ದರ್ ಶಿಲ್ಕು ಶಾಲುಗಳು ತಯಾರಾಗುತ್ತವೆ. ಬೇಕಾದವರು ತ್ವರಿತವಾಗಿ ಬರೆದರೆ ಈ ಕೆಳಗಿನ ದರದಲ್ಲಿ ಕಳುಹಿಸಲಾಗುತ್ತವೆ 5 ಮೊಳ ಉದ್ದ 2½ ಅಗಲ ದರ ಒಂದಕ್ಕೆ ರೂ. 2—8—0ಯಿಂದ 3—12—0. 5½ ಮೊಳ ಉದ್ದ 2¾ ಮೊಳ ಅಗಲ ದರ 1ಕ್ಕೆ 3—8—0, 4—8—0. 6 ಮೊಳ ಉದ್ದ 3 ಅಗಲ ದರ 1ಕ್ಕೆ ರೂ 4—8—0, ರೂ. 5. ಅಲ್ಲದೆ ಸ್ವದೇಶೀ ಖದ್ದರ್ ಮುಂಡುಗಳೂ, ಶೀರೆಗಳೂ ಅಂಚುಗಳಿಲ್ಲದೆ ಎಲ್ಲಾ ರಂಗುಗಳಲ್ಲಿರುತ್ತವೆ ಮತ್ತು ಜರೀಕಾರೀ ಶೀರೆಗಳೂ ಪೀತಾಂಬರಗಳೂ ರವಕೆಗಳೂ, ರುದ್ರಾಕ್ಷೀ—ಬಾಣಲಿಂಗ—ಪಂಚಾಯತನ ಸುದರ್ಶನ ಹಿತ್ತಾಳೆ ಕ್ಯಾಮಿಗೆ ಮಿಶ್ಯನ್, ಮಡಿ ಧಾವಳಿ ಶಾಲು, ಜಗನ್ನಾಥ ಗಂಟೆಗಳೂ ಕೂಡಾ ಸರಿಯಾದ ದರಕ್ಕೆ ಕಳುಹಿಸಲಾಗುತ್ತದೆ. ವಿವರಕ್ಕೆ ಕೆಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ 1 ಆಣೆ ಸ್ಟ್ಯಾಂಪು ಕಳುಹಿಸಿದರೆ 1 ವಿಶ್ವೇಶ್ವರ ಪಟ, 1 ಕಾಶೀನಕ್ಷೆ, 1 ಇಟಲಿಂಗನೊಡನೆ 3 ಇನಾಮುಗಳು

ವಿಳಾಸ:—
ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪೆನಿ, ಚೌಖಾಂಬಾ ಬನಾರಸ್ (ಕಾಶೀ)

ಸಿದ್ಧವಾಗಿವೆ! ತ್ವರೆ ಮಾಡಿರಿ!!

೧೯೩೪ನೇ

ಸ್ವರಾಜ್ಯ ಡೈರಿಗಳು!

ಇದರಲ್ಲಿ ಹಿಂದೂ ಮಹಮ್ಮದಿ, ಕ್ರೈಸ್ತರಿಗೆ ಅನುಕೂಲವಾಗುವಂತೆ ಸರಿಯಾದ ತಿಥಿ ನಕ್ಷತ್ರ ವಗೈರೆ ಮಾಹಿತಿಯೂ ಪ್ರತಿಯೊಂದು ಪುಟದಲ್ಲಿ ಉತ್ತಮವಾದ ನೀತಿವಾಕ್ಯಗಳೂ ಸಂಗ್ರಹಿಸಲ್ಪಟ್ಟಿವೆ!

ಪ ಶ್ಚಿಮ ಹಿಂದುಸ್ಥಾನದ ರಾಜಕೀಯ ಸಾಂಪತ್ತಿಕ ವಿದ್ಯೆ ವ್ಯಾಪಾರಿಕ ಮೊದಲಾದ ಅನೇಕ ಮಹತ್ವವಿಷಯಗಳಲ್ಲಿ ನೀವು ತಿಳಿಯಬೇಕಾದ ವಿಷಯಗಳ ಹೊಸ ವರದಿಯನ್ನೂ ಸಂಗ್ರಹಿಸಿದೆ!

ಡೈರಿ,	ದೊಡ್ಡದು,	ಮಧ್ಯಮದ್ದು	ಮಧ್ಯಮದ್ದು,	ಸಣ್ಣದು
ಬೆಲೆ	೦—೧೦—೦;	೦—೧೨—೦	೦—೮—೦,	೦ ೧೦ ೦

ಕರ್ನಾಟಕ ಡೈರಿಗಳು.

ಇದರಲ್ಲಿ ವ್ಯವಹಾರಕ್ಕೆ ಬೇಕಾದ ಸ್ಟ್ಯಾಂಪು ಆಕ್ಟಿನ ಸಾರಾಂಶ ರಿಜಿಸ್ಟ್ರೇಶನು ಕೋರ್ಟು ಫೀಸುಗಳ ದರ ಟಪ್ಪಾಲು ಮಾಹಿತಿ ವಗೈರೆ ವಿಷಯಗಳಿದ್ದು ವಕೀಲರಿಗೂ ಗುಮಾಸ್ತರಿಗೂ ಉಪಯೋಗವುಳ್ಳದ್ದು ಈ ಡೈರಿಗಳಲ್ಲಿ ಮುಂಬಯಿ ಪ್ರಾಂತದವರಿಗೆ ಬೇಕಾಗುವ ವ್ಯವಹಾರದ ಮಾಹಿತಿಯನ್ನು ಸಂಗ್ರಹಿಸಿದೆ

ದೊಡ್ಡದು,	ಮಧ್ಯಮದ್ದು	ಚಿಕ್ಕದ್ದು,	ಪಾಕೆಟ್ಟಿನದ್ದು.
೦—೧೦—೦,	೦—೧೨—೦	೦—೬—೦,	೦—೪ ೦

ಪುಸ್ತಕ ವ್ಯಾಪಾರಿಗಳಲ್ಲೆಲ್ಲಾ ಮಾರಲ್ಪಡುವುದು
ಟಿ ಎ ಪೈ ಬ್ರದರ್ಸ್, ಪ್ರಕಾಶಕರು, ಉಡುಪಿ

1934

Sharada Diaries

Ready! Ready!

SMALL SIZE—BIG SIZE.

ಶಾರದಾ ಡೈರಿಗಳು ಸಿದ್ಧವಾಗಿವೆ!

ಸಣ್ಣ ಸೈಜು— —ದೊಡ್ಡ ಸೈಜು

Sharada Press, Mangalore.

LOOK HERE!

We have got for sale all kinds of freshly prepared Exercise books, Note books and Diaries etc.,

SHARADA PRESS,
Car Street, Mangalore.

ಬೋಹೆಮಿಯಾದಲ್ಲಿ 160 ಮಂದಿ ಹೂಳಲ್ಪಟ್ಟರು!!!

ರಂಗೂನ್

ಇಲ್ಲಿಯ ಬೆಸಿನ್ ಜಿಲ್ಲೆಯಲ್ಲಿನ ನಗರೊ ಎಂಬಲ್ಲಿಂದ ...ದ ವಾರ್ತೆಯಿಂದ ತಿಳಿದಂತೆ ೯ ಜನರಿರುವ ಒಂದು ಕುಟುಂಬ...ಲ್ಲಿ ರಾತ್ರಿ ಭೋಜನವು ನಡೆಯಿತು. ಕೆಲವು ತಾಸುಗಳಲ್ಲಿ ...ಬ್ಬರು ತೀರಿಕೊಂಡರು ಉಳಿದವರು ಚಿಕಿತ್ಸೆಗೊಳಪಡಿಸಿಕೊಳ್ಳು...ಾಗ ಆಹಾರದಲ್ಲಿ ವಿಷ ಮಿಶ್ರಿತವಾಗಿದ್ದಿತೆಂದು ತಿಳಿದು ಬಂತು. ...ಾರು ವಿಷವಿಟ್ಟರೆಂದು ತಿಳಿಯದಾಗಿದೆ.

ಮೈಸೂರು

ಮಹಾತ್ಮಾ ಗಾಂಧಿಯವರು ತಾ. ೬ನೇ ದಿನ ಮೈಸೂರಿ...ಲ್ಲಿ ಸಂಚರಿಸಿದರು. ಅನೇಕ ಕಡೆಗಳಲ್ಲಿ ಅವರಿಗೆ ಮಾನ...ತ್ರಗಳೂ ನಿಧಿಗಳೂ ಅರ್ಪಿಸಲ್ಪಟ್ಟುವು. ಮಹಾತ್ಮರು ದಿವಂಗತ ...ಮ್. ವೆಂಕಟಕೃಷ್ಣಯ್ಯನವರ ತೈಲ ಚಿತ್ರವನ್ನು ಅನಾವರಣ ...ಾಡಿ ಭಾಷಣವಿತ್ತರು.

ಲಂಡನ್

ಇಲ್ಲಿ ಜನವರಿ ೫ನೇ ದಿನ ಎವೆಲಿನ್ ಫ್ರೊಸ್ಟ್ ಎಂಬವಳು ...ಡ್ಲೆ ಎಂಬವನೊಡನೆ ಹಾರ್‍ಯಾಡುತ್ತಿದ್ದ ವಿಮಾನವು ಒಂದು ...ರಿಗೆಗೆ ತಗಲಿ ಆಕಾಶದಲ್ಲಿ ಬೆಂಕಿಗಾಹುತಿಯಾಗಿ ಉರಿದು ...ದ್ದು ಇಬ್ಬರೂ ಬಿದ್ದರು ಎವೆಲಿನಳು ಮೃತಳಾದಳು. ...ಡ್ಲೆನು ಜಖಂಗೊಂಡಿರುವನು ವಿಮಾನವು ಒಡೆದಿಯಾಯಿತು

ಪೆರಿಸ್

ಪೆರಿಸ್‌ನ ಪೆಲೆಸ್ ಜಸ್ಟಿಸ್ ನ್ಯಾಯಸ್ಥಾನದೆದುರು ೨೫೦ ...ನ ವಕೀಲರು ಕೂಡಿಕೊಂಡು ಪಾರ್ಲಿಮೆಂಟ್ ಮೆಂಬರರಾದ ...ಯರು ಆ ಸ್ಥಾನದಲ್ಲಿರುವ ತನಕ ವಕಾಲತ್ತು ನಡೆ...ಲು ನಿರ್ಬಂಧಿಸಬೇಕೆಂದು ಬೊಬ್ಬಿಟ್ಟರು ಒಂದು ಅರ್ಜಿ...ಯನ್ನು ಮಾಡಿ ನ್ಯಾಯಾಧೀಶರಿಗೆ ಒಪ್ಪಿಸಿದರು

ಲಂಡನ್

ಇಂಗ್ಲಾಂಡಿನಲ್ಲಿನ ಡೆವೊನ್ ಎಂಬಲ್ಲಿನ ಸೀಲ್ ಹೈನ್ ...ಕೃಷಿ ಕೋಲೋಜಿಗೆ ೬೫೦ ಎಕ್ರೆ ವಿಸ್ತೀರ್ಣದ ಭೂಮಿಯಿದೆ. ಇನ್ನೂರ ತನಕ ಅದನ್ನುಪಯೋಗಿಸಿರುವುದಿಲ್ಲ ಈಗ ಪ್ರಿನ್ಸ್ ...ಆಫ್ ವೇಲ್ಸರು ವಿದ್ಯಾರ್ಥಿಗಳಿಗೆ ಕೃಷಿ ವ್ಯವಸಾಯವನ್ನು ಕಲಿಸಬೇಕೆಂದೂ, ಅದಕ್ಕೆ ತಾನು ಧಾರಾಳ ವಿದ್ಯಾವೇತನವನ್ನು ಕೊಡುವೆನೆಂದೂ ಹೇಳಿರುವರು ಕೃಷಿ ಕೆಲಸವು ಭರದಿಂದ ...ನಡೆಯುತ್ತಿದೆ.

ಒಟ್ಟಾವಾ

ಇಲ್ಲಿಂದ ತಾ ೨೦ನೇ ದಶಂಬರದಲ್ಲಿ ವಿಮಾನ ಮೂಲಕ ಹೊರಟ ನಾಲ್ವರು ಇನ್ನೂರ ತನಕ ಎಲ್ಲಿಯೂ ಇಳಿದಿಲ್ಲ ಇವರು ಹೋದ ದಿಕ್ಕಿನಲ್ಲಿ ಚಳಿಯು ವಿಪರೀತವಿದೆ ನೀರು ಗಡ್ಡೆ ಕಟ್ಟಿದೆ ಈ ಪ್ರಯಾಣಿಕರಲ್ಲಿ ಇಬ್ಬರು ಮೊನ್ನೆ ಮೊನ್ನೆ ವಿವಾಹವಾದ ಗಂಡ ಹೆಂಡಿರು

ನೆಂಕಿಂಗ್

ಚೀನಾ ಭಂಡಾಯಗಾರರನ್ನು ಸೆರೆ ಹಿಡಿಯುವುದಕ್ಕಾಗಿ ಅಲ್ಲಿಯ ಪ್ರಸಿದ್ಧ ಜನರಲ್ ಚಿಯಾಂಗ್ ಕೈಶೇಕ್ ಎಂಬವರು ಸೈನ್ಯ ಸಮೇತ ಹೋದರು. ಇವರು ಬರುವುದನ್ನು ಕಂಡು ಸಾವಿರಗಟ್ಟಲೆ ಭಂಡಾಯಗಾರರು ತಮ್ಮ ಕುಟುಂಬಗಳ ಸಮೇತ ಸರಕಾರದ ವಶವಾದರು.

ಪೂನಾ

ಮುಂಬಾಯಿಯಿಂದ ಮದ್ರಾಸಿಗೆ ತೆರಳಿ ಪೂನೆಗೆ ತಲಪಿದ ಮೈಲ್ ಟ್ರೈನಿನಲ್ಲಿದ್ದ ಮೈಲ್ ಚೀಲಗಳು ಎರಡು ಕಾಣೆಯಾಗಿವೆ. ಬಾಗಿಲು ತೆರೆದಿತ್ತು. ಚೀಲಗಳಲ್ಲಿ ದ್ರವ್ಯವಿತ್ತು

ಕಲ್ಕತ್ತ

ತಾ. ೬ನೇ ದಿನ ಇಲ್ಲಿಯ ಜೆ. ಸ್ಟೋನ್ ಎಂಡ್ ಕಂಪೆನಿ ಲಿಮಿಟೆಡ್ ಇದರ ಯುರೋಪಿಯನ್ ಅಸಿಸ್ಟೆಂಟರಾದ ಮಿ. ಸಿ ಪಿ. ಹವರ್ಡ್ ಎಂಬವರು ಆಫೀಸಿನಲ್ಲಿ ಕೆಲಸ ಮಾಡುತ್ತಿದ್ದಾಗ, ಕಿಟಕಿಯ ಬಳಿ ಏಕೋ ಹೋಗಿ ಥಕ್ಕನೆ ಕೆಳಗೆ, ೪೦ ಅಡಿಗಳ ಕೆಳಗೆ ಬಿದ್ದು ಮೃತರಾದರು ಇವರು ಮೂರು ತಿಂಗಳುಗಳ ಹಿಂದೆ ವಿವಾಹವಾದರು

ಫ್ರಾನ್ಸ್

ಪೆರಿಸ್‌ನಲ್ಲಿ ಗೆರಾಟ್ ಎಂಬ ಡಿಪ್ಯುಟಿ ಮೇಯರರು ಫೋರ್ಜರಿ ಮಾಡಿದರೆಂದೂ ಕಳ್ಳ ಸಾಮಾನುಗಳನ್ನು ಪಡೆದರೆಂದೂ ಮೋಸಗಾರಿಕೆಯ ಬೋಂಡ್‌ಗಳನ್ನು ಮಾರಿ ಹಣ ಶೇಖರಿಸಿದರೆಂದೂ ಆರೋಪಿಸಲ್ಪಟ್ಟು ಸೆರೆ ಹಿಡಿಯಲ್ಪಟ್ಟಿರುವರು

ಮದ್ರಾಸು

ಲೋರ್ಡ್ ವಿಲ್ಲಿಂಗ್ಡನ್ನರು ರಜೆಯ ಮೇಲೆ ಇಂಗ್ಲಾಂಡಿಗೆ ಹೋಗುವ ನಿಮಿತ್ತವಾಗಿ ಮದ್ರಾಸಿನ ಗವರ್ನರರಾದ ಸರ್. ಜೋರ್ಜ್ ಸ್ಟೆನ್ಲಿಯವರನ್ನು ವೈಸರಾಯರನ್ನಾಗಿ ನೇಮಕ ಮಾಡಿರುವರಷ್ಟೆ. ಮದ್ರಾಸ್ ಗವರ್ನರರ ಬದಲಿ ನೋಡುವುದಕ್ಕಾಗಿ ಸರ್ ಮಹಮ್ಮದ್ ಉಸ್ಮಾನ್‌ರವರನ್ನು ಚುನಾಯಿಸಿರುವರೆಂದು ತಿಳಿಸಲು ತುಂಬಾ ಸಂತೋಷಗೊಳ್ಳಬೇಕಾಗುತ್ತದೆ.

ಬೊಹೆಮಿಯಾ

ಇಲ್ಲಿ ತಾ. ೩ನೇ ದಿನ ೨೦೦ಕ್ಕೆ ಮಿಕ್ಕಿ ಗಣಿಗಳ ಕೆಲಸಗಾರರು ಒಂದು ಗಣಿಯೊಳಗೆ ಕೆಲಸ ಮಾಡುತ್ತಿದ್ದಾಗ ಮದ್ದು ಸ್ಫೋಟನವಾಗಿ ಎರಡು ಫರ್ಲಾಂಗ್ ಆಡಿಯಲ್ಲಿದ್ದ ೧೬೦ ಮಂದಿ ಕೆಲಸಗಾರರು ಜೀವ ಸಹಿತ ಹೂಳಲ್ಪಟ್ಟರು. ಇಡೀ ಪಟ್ಟಣವೆ ಒಮ್ಮೆ ನಡುಗಿತು. ಕಂಪನದಿಂದ ಕೆಲವು ಕಟ್ಟಡಗಳು ಬಿದ್ದು ಅನೇಕರು ಜಖಂಗೊಂಡರು. ರಕ್ಷಕರಾಗಿ ಹೋದ ಕೆಲವರು ಸಿಡಿತದ ಬೆಂಕಿಯ ತಾಕದಿಂದ ಮೈ ಕೈಗಳನ್ನು ಸುಟ್ಟುಕೊಂಡಿರುವರು ನಾಲ್ಕು ಮಂದಿಗಳ ಹೆಣಗಳನ್ನು ಮಾತ್ರ ಅರ್ಧ ದಿನದ ನಂತರ ಹೊರಗೆ ತೆಗೆದರು

ಕಲ್ಕತ್ತ

ಕಲ್ಕತ್ತದಲ್ಲಿ ಸುರೇಂದ್ರನಾಥ ಸರ್ಕಾರ್ ಎಂಬವನನ್ನು ಅಲ್ಲಿಯ ಮೆಡಿಕಲ್ ಕೋಲೇಜ್ ಆಸ್ಪತ್ರೆಗೆ ತಂದರು ಮೊದಲಿನ ದಿನ ರಾತ್ರಿ ತಾನು ಗದ್ದೆಯ ಬಳಿಯಲ್ಲಿರುವಾಗ ದೂರದಿಂದ ಮೂವರು ಒಂದು ಪೆಟ್ಟಿಗೆಯ ಸಮೇತ ಪಲಾಯನ ಮಾಡುತ್ತಿದ್ದುದನ್ನು ತಾನು ನೋಡಿ, ಅವರನ್ನು ಹಿಂಬಾಲಿಸಿಕೊಂಡು ಹೋದೆ, ಒಡನೆ ಅವರಲ್ಲೊಬ್ಬನು ನನಗೆ ಗುಂಡಿನಿಂದ ಹೊಡೆದನು ಗುಂಡು ಹೊಟ್ಟೆಗೆ ಬಿದ್ದು ನಾನು ಬಿದ್ದು ಬಿಟ್ಟೆ ಎಂದು ಸರ್ಕಾರನ ಅಂತ್ಯ ಹೇಳಿಕೆ ಕೆಲವು ದಿನಗಳಲ್ಲಿ ಆ ಪೆಟ್ಟಿಗೆ ಸಮೇತ ಓಡಿದವರಲ್ಲಿ ಒಬ್ಬನನ್ನು ಸೆರೆ ಹಿಡಿದು ವಿಚಾರಿಸಲಾಗಿ ಅವನ ಹೇಳಿಕೆಯು ಹೀಗಾಯಿತು — ನಾನೂ ಮೃತನಾದ ಸರ್ಕಾರನೂ ಇಬ್ಬರೊಡಗೂಡಿ ಪರೇಶನಾಥ್ ಎಂಬಲ್ಲಿನ ದೇವಸ್ಥಾನದಲ್ಲಿ ಕಳವು ಮಾಡಬೇಕೆಂದು ಕತ್ತಲೆಯಲ್ಲಿ ಅಡಗಿ ಕೂತಿದ್ದೆವು ಅಷ್ಟರಲ್ಲಿ ಸರ್ಕಾರನು ಗುಂಡು ಬಂದರಿಂದ ಯಾರಿಂದಲೋ ಹೊಡೆಯಲ್ಪಟ್ಟು ಬಿದ್ದನು ಎಂದನು ಈ ಕಥೆಯಿಂದ ಎಲ್ಲರೂ ಆಶ್ಚರ್ಯಗೊಂಡಿರುವರು

ಮುಂಬಾಯಿ

ಮುಂಬಾಯಿಯ ದಕ್ಷಿಣ ಪ್ರಾಂತ್ಯದಲ್ಲಿನ ಪರ್ವತ ಪ್ರದೇಶದಲ್ಲಿ ಎಣ್ಣೆಯು ಕಾಣಸಿಕ್ಕಿದೆಯೆಂದು ಸುದ್ದಿ ಹರಡಿದೆ ಈ ವಿಷಯವು ನಿಜವೆಂದಾದರೆ ಮುಂಬಾಯಿಯಲ್ಲಿ ಹೊಸ ಕೈಗಾರಿಕೆಯು ಪ್ರಾರಂಭವಾಗುವ ಅರುಣೋದಯವಾಗಿದೆ ಮಿ| ಸುಲ್ತಾನ ಚಿನೊಯಿ ಎಂಬವರನ್ನು ಈ ವಿಚಾರವಾಗಿ ಪ್ರಶ್ನಿಸಿದ್ದಲ್ಲಿ ತನಗೇನೂ ತಿಳಿಯದೆಂದರು

ಮುಂಬಾಯಿ

ಶ್ರೀ ಜಯಕರರು ಇಂಗ್ಲಾಂಡಿನಿಂದ ಹಿಂದೂಸ್ಥಾನಕ್ಕೆ ಬಂದು ತಾ ೬ನೇ ದಿನ ತಲಪಿದರು ಅವರ ಭೇಟಿ ಮಾಡುವುದಕ್ಕಾಗಿ ಅನೇಕ ಪತ್ರಿಕಾ ಪ್ರತಿನಿಧಿಗಳು ಹೋಗಿದ್ದರು ಇವರನ್ನು ಕಂಡೊಡನೆ ಜಯಕರರು "ಮಹಾತ್ಮಾಜೀಯವರು ಸೌಖ್ಯವೇ" ಎಂದು ಕೇಳಿದರು ಕೊಂಗ್ರೆಸ್ಸಿನವರು ಅದರಲ್ಲೂ ಗಾಂಧಿಜೀಯವರ ಬೆಂಬಲವಿಲ್ಲದೆ ಶ್ವೇತಪತ್ರವು ಬಳಕೆಗೆ ಬರಲು ಕಷ್ಟವಿದೆಯೆಂದೂ ಅವರು ಹೇಳಿರುವರು

ಮಿಮಿನ್‌ಸಿಂಗ್

ಮಿಮಿನ್‌ಸಿಂಗಿನ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರಾದ ಮಿ| ಹೆರೊಲ್ಡ್ ಗ್ರಹಾಂ ಎಂಬವರು ಅಲ್ಲಿಯ ಕೊಂಗ್ರೆಸ್‌ವಾಲರ ಚಟುವಟಿಕೆಗಳನ್ನೆಲ್ಲ ಬಹಳ ಶ್ರದ್ಧೆಯಿಂದ ತಡೆದು ನಿಲ್ಲಿಸಿದರು ಎಂತೆಂತಹ ರಹಸ್ಯಕೂಟಗಳನ್ನು ಜರಗಿಸಿದರೂ ಗ್ರಹಾಂರು ಕಂಡು ಹಿಡಿದು, ಸಂಬಂಧ ಪಟ್ಟವರಿಗೆ ಶಿಕ್ಷೆಯನ್ನು ವಿಧಿಸುತ್ತಿದ್ದರು. ಇದರಿಂದಾಗಿ ಕೆಲವು ಕ್ರಾಂತಿಕಾರರಿಗೆ ಅವರ ಮೇಲೆ ದ್ವೇಷ ಹುಟ್ಟಿ, ಅವರು ಗಾಳಿಪಟಿಲ್ಲೆ ನೆಟ್ರಕೋನ ಎಂಬಲ್ಲಿಗೆ ಹೋದಾಗ ಅವರನ್ನು ಸಂಹರಿಸಬೇಕೆಂದು ಜನರು ಅವರ ಹಿಂದೆಯೇ ಹೋದರು. ಇದನ್ನು ಕೂಡಾ ಗ್ರಹಾಮರು ಕಂಡು ಹಿಡಿದು ತನ್ನನ್ನು ಕೊಲ್ಲಲು ಬಂದ ಮೂವರನ್ನು ಹಿಡಿದು ವಿಚಾರಿಸಿ ಈ ವರ್ಷದ ಆದಿಯಲ್ಲಿ ಅವರಿಗೆ ೬ ವರ್ಷಗಳ ವಿವಿಧ ಶಿಕ್ಷೆಗಳನ್ನು ಕೊಟ್ಟರು. ಒಬ್ಬನು ತಲೆ ತಪ್ಪಿಸಿಕೊಂಡಿರುವನು.

ಲಂಡನ್

ಸಾರ್ವಭೌಮರಾದ ಐದನೇ ಜೋರ್ಜರೂ ಅವರ ಪತ್ನಿಯವರೂ ತಾ ೧೫ನೇ ದಿನ ಯುರೋಪು ಪ್ರಯಾಣ ಬೆಳೆಸಲು 'ಮೆಯೊನೆಯಾ' ಸ್ಟೀಮರನ್ನು ಹತ್ತುವರು.

ಕೆಲಿಫೋರ್ನಿಯಾ

ಇಲ್ಲಿ ಒಬ್ಬ ಐಶ್ವರ್ಯವಂತ ವರ್ತಕನೊಬ್ಬನ ೨೨ ವರ್ಷದ ಮಗನನ್ನು ತೋಮಸ್ ಎಂಬವನು ಕೆಲವರೊಡಗೂಡಿ ೪೦೦೦೦ ಪೌಂಡುಗಳಿಗಾಗಿ ಹಿಡಿದು ಕೊಂದನು. ಅವನನ್ನು ಸೆರೆ ಹಿಡಿದು ವಿಚಾರಣೆಗಾಗಿ ಸೆರೆಯೊಳಗಿಟ್ಟಿದ್ದರು ಕೋಪಾವಿಷ್ಟರಾದ ಜನಸ್ತೋಮವು ಸೆರೆಮನೆಗೆ ನುಗ್ಗಿ ಅಪರಾಧಿಯನ್ನು ಹಿಡಿದು ಅವರನ್ನು ಹೊಡೆದು, ಮಾರ್ಗದ ಮೇಲೆ ನಾಯಿಗಳಂತೆ ಎಳೆದುಕೊಂಡರು. ಜನರನ್ನು ಚದರಿಸುವುದಕ್ಕಾಗಿ ಗವರ್ನರರೊಡನೆ ಪೋಲೀಸ ಫೌಜನ್ನು ಕೇಳಿದಾಗ ಅವರು "ಏಕೆ ಕೊಡಲಿ? ಅಂತಹ ಜನರು ಹಾಗೆಯೇ ಸಾಯಬೇಕು" ಎಂದು ಹೇಳಿದರು.

ಕಲ್ಲಿಕೋಟೆ

ಇಲ್ಲಿ ಕೆಲವು ದಿನಗಳಿಂದ ನಡೆಯುತ್ತಿರುವ ಬಸ್ ಮಾಲಿಕರ ಮುಷ್ಕರವು ಇನ್ನೂ ಮುಂದರಿಯುತ್ತದೆ. ಬಸ್‌ಗಳು ಚಲಿಸದಿದ್ದುದು ಸಾರ್ವಜನಿಕರಿಗೆ ಬಹಳ ಬಾಧಕವುಂಟಾಗಿದೆ. ತಾ ೮ರೊಳಗೆ ಬಸ್‌ಗಳನ್ನು ನಡೆಸದಿದ್ದರೆ 'ಬಿ' ಪರ್ಮಿಟು ಗಳನ್ನು ಕೊಡಲಾಗುವುದಿಲ್ಲವೆಂದು ಡಿ. ಮೆಜಿಸ್ಟ್ರೇಟರು ಪ್ರಕಟಿಸಿರುವರು. ಡಿಸ್ಟ್ರಿಕ್ಟ್ ಬೋರ್ಡ್ ಅಧ್ಯಕ್ಷರು ಒಂದು ಪ್ರಕಟಣೆಯನ್ನು ಹೊರಡಿಸಿ ಟೇಕ್ಸ್ ಏರಿಸಲು ಕಾರಣವೇನೆಂದು ತಿಳಿಸಿರುವರು

ಟೌಂಗೂವಾ

ಇಲ್ಲಿ ಕಾರೆನ್ ಜಾತಿಯವನೊಬ್ಬನ ಮನೆಯಲ್ಲಿದ್ದ ಒಂದು ಸಾಧು ಆನೆಯು ಮೊನ್ನೆ ಸಂಪೂರ್ಣ ಬಿಳಿ ಬಣ್ಣದ ಮರಿಯನ್ನು ಹಾಕಿತು ಇದನ್ನು ಕಂಡು ಯಜಮಾನನು ಆನಂದಪಟ್ಟು, ತನಗೆ ದೊರೆತ ಈ ಅಲಭ್ಯ ಲಾಭದ ಸುದ್ದಿಯು ಊರವರಿಗಾಗದಂತೆ ರಾತ್ರಾರಾತ್ರಿ ಆ ಆನೆಯನ್ನೂ ಮರಿಯನ್ನೂ ದೂರದ ಊರಿಗೆ ಕೊಂಡೊಯ್ದನು. ಇದೇ ಜಿಲ್ಲೆಯಲ್ಲಿ ಒಂದು ಬಿಳಿ ಆನೆಯನ್ನು ಕೆಲವು ವರ್ಷಗಳ ಹಿಂದೆ ಕಾಡಿನಲ್ಲಿ ಹಿಡಿದು ಅದನ್ನು ಅಮೇರಿಕಾ, ಇಂಗ್ಲೆಂಡಿನಲ್ಲಿ ತಿರುಗಾಡಿಸಿ ಹೇರಳ ಹಣವನ್ನು ಸಂಪಾದಿಸಿದ್ದರು.

ಅಫ್ಘಾನ್

ನಾದಿರ್‌ಷಹರ ಕೊಲೆಯ ಸಂಬಂಧವಾಗಿ ೧೪ ಜನರನ್ನು ಮರಣ ದಂಡನೆಗೆ ಗುರಿಪಡಿಸಿದರು.

ಕಲ್ಕತ್ತ

ಚಿತ್ತರಂಜನ ಆಸ್ಪತ್ರೆಗೆ ಅಲ್ಲಿಯ ಡಾಕ್ಟರರಾಗಿದ್ದ ಸ್ತ್ರೀಯೊಬ್ಬರು ೨ ಲಕ್ಷ ರೂಪಾಯಿ ಬೆಲೆಯ ತನ್ನ ಆಸ್ತಿಯನ್ನು ಬಿಟ್ಟು ಕೊಟ್ಟಿರುವರು

ಅಲ್ಲಾಹಬಾದ್

ಪಂಡಿತ ಜವಾಹರ್‌ಲಾಲರಿಗೆ ಪೋಸ್ಟಲ್ ಖಾತೆಯವರು ಸಲ್ಲಿಸಬೇಕಾಗಿದ್ದ ಟೆಲಿಫೋನ್ ಕಟ್ಟೋಣದ ಬಾಡಿಗೆಯನ್ನು ಇನ್‌ಕಮ್‌ಟೇಕ್ಸ್ ಖಾತೆಯವರು ವಶೀಕರಿಸಿರುವರು

ಸಿಲೋನ್

ಹಿಂದೂಸ್ಥಾನ ಮತ್ತು ಸಿಲೋನುಗಳ ಮಧ್ಯೆ ಸಮುದ್ರದಲ್ಲಿ ಕೇಬಲ್‌ಗಳನ್ನು ಹಾಕುವ ಕೆಲಸವು ಜೂನ್ ತಿಂಗಳಲ್ಲಿ ಆರಂಭವಾಗಲಿದೆ

ಕರಾಚಿ

ಕರಾಚಿಯಲ್ಲಿ ತಾ ೮ನೇ ದಿನ ರಾತ್ರಿ ಹೊಳೆಯಲ್ಲಿ ನಿಂತಿದ್ದ ಒಂದು ದೊಡ್ಡ ಮಂಜಿಗೆ ಕಳ್ಳರ ಗುಂಪು ಬಂದು ಹತ್ತಿ, ಮಂಜಿಯಲ್ಲಿದ್ದ ವಸ್ತ್ರ ಮೂಟೆಗಳನ್ನೂ ಹಣವನ್ನೂ ಬಲಾತ್ಕಾರದಿಂದ ದೋಚಿಕೊಂಡು ಹೊರಟರು

ಮುಂಬಾಯಿ

ಟಂಕಸಾಲೆಯಲ್ಲಿನ ಗೊನ್ಸಾಲ್ವಿಸ್ ಎಂಬವನು ೧೨೦೦ ತೊಲೆ ಬೆಳ್ಳಿಯನ್ನು ಲಪಟಾಯಿಸಿ ಹೊರಗಿನವರಿಗೆ ವಿಕ್ರಯಿಸುತ್ತಿದ್ದಾಗ ಸಿಕ್ಕಿ ಬಿದ್ದಿರುವನು

ಕಲ್ಕತ್ತ

ಗೋಡೆ, ಮರ, ಮನೆ, ಮರಗಳಿಗೆ ಜಾಹೀರು ನೋಟೀಸುಗಳನ್ನು ಅಂಟಿಸಬಾರದಾಗಿಯೂ, ಅದಕ್ಕೆ ಸ್ಪೆಶಲ್ ಹುಕ್ಕುಮನ್ನು ಪಡೆಯಬೇಕಾಗಿಯೂ ಅಧಿಕಾರಿಗಳ ಆಜ್ಞೆ!

ಮುಂಬಾ

ಸೆಕ್ಷನ್ ೧೪ನ್ನು ಇನ್ನೂ ಎರಡು ವಾರಗಳಿಗೆ ಮುಂದರಿಸಿದ್ದಾರೆ.

++ + +

WANTED.

ಕಲ್ಕತ್ತದಲ್ಲಿರುವ "ಪರಗೋನ್ ಬೇಂಕಿಂಗ್ ಮತ್ತು ಟ್ರೇಡಿಂಗ್ ಕಂಪೆನಿ"ಯವರ ಬಾಟ್ಲು ಸೈಕಲ್‌ಗಳು, ಪೆಟ್ರೊಮೆಕ್ಸ್ ದೀಪಗಳು, ಗ್ರಮೋಫೋನ್ ರಿಕಾರ್ಡುಗಳು ಮತ್ತು ಪೆಟ್ಟಿಗೆಗಳು, ಹೊಲಿಯುವ ಮೆಶಿನ್‌ಗಳು ಇತ್ಯಾದಿ ಸಾಮಾನುಗಳನ್ನು ಈ ಪ್ರಾಂತ್ಯದಲ್ಲಿ ವಿಕ್ರಯಿಸುವರೆ ಏಜಂಟರು ಅಗತ್ಯ ಉಂಟು. ಏಜಂಟರಿಗೆ ತಿಂಗಳು ಒಂದಕ್ಕೆ ರೂ. 50—0-0 ಸಂಬಳವು ಕಂಪೆನಿಯಿಂದ ಕೊಡಲಾಗುವುದು ಹೆಚ್ಚಿನ ತಪಶೀಲು ಈ ಕೆಳಗೆ ದಸ್ಕತು ಮಾಡಿದವರಿಂದ ತಿಳಕೊಳ್ಳಬಹುದು:—

ಕುದ್ರೋಳಿ, ಮಂಗಳೂರು.
11-1-1934.

ಯಂ. ಯೂಸುಫ್ ಖಾನ್,
ಜನರಲ್ ಏಜೆಂಟ್, ಪರಗೋನ್
ಬೇಂಕಿಂಗ್ ಮತ್ತು ಟ್ರೇಡಿಂಗ್ ಕಂಪೆನಿ ೦,

FRESH CONSIGNMENT ARRIVED.

UNEQUAL QUALITY——————EXCEPTIONAL PRICE

A TIRE THAT SAVES YOU REPUTATION AND MONEY.

The Canara Public Conveyance Co., Ltd.

MANGALORE.

[illegible]:— ಹರಿಜನರು ದೇವಾಲಯಗಳಲ್ಲಿ ಏಕೆ, ಮುಂದಣ ವರ್ಷದ ಕಂದಾಯ ಫಲ, ಅಖಿಲಭಾರತ ಶಿಕ್ಷಣ ಪರಿಷತ್ತು, ನೋಟಗಳು.

ಇಬ್ಬರು ರಾಜಪುರೋಹಿತರು

ಯುಗಾದಿಯಂದು ಅನುಪಮಾನದ ಬಿರುದಾವಳಿಗಳನ್ನು ಪಡೆದ ಮಹಾಮಾನ್ಯ ಆಗಾಖಾನರೂ ಸರ್ ಸಪ್ರೂರವರೂ 'ಪ್ರಿವಿ ಕೌನ್ಸಿಲರ್' ಪದವಿ ಪಡೆದುದರಲ್ಲಿ ಯಾರೂ ಆಕ್ಷೇಪವೆತ್ತುವಂತಿಲ್ಲ. ಈ ಪೌರೋಹಿತ್ಯ ಪದವಿ ಪಡೆದ ಬಳಿಕ, ಹಿಂದಿಗಿಂತ ಹೆಚ್ಚಿನ ಉಪಯೋಗವಾಗಲಿ ಇನ್ನಷ್ಟು ಔದಾರ್ಯವಾಗಲಿ, ಇವರಿಂದಂತೂ ನಿರೀಕ್ಷಿಸುವವರು ಯಾರೂ ಇಲ್ಲ. ಏಕೆ, ಅವರೇ ಅಲ್ಲ. ಲೋರ್ಡ ಮಿಂಟೋರವರ ದಿನಗಳಿಂದಲೂ ಆಗಾಖಾನರವರು, ಅವರ ಜನ್ಮಭೂಮಿಯಾದ ಈ ದೇಶಕ್ಕೆ ಆಗಾಗ ಅಲ್ಪ ಸ್ವಲ್ಪ ನಿಗಾ ಕೊಡುತ್ತ ಬಂದಿರುವರು, ಅದೂ, ಸಭೆಯಿಂದ ಸಭೆಗೆ, ಜೂಜಿನ ಕುದುರೆಗಳ ಲಾಯದಿಂದ ಲಾಯಕ್ಕೆ ಸಂದರ್ಶಿಸ ಹೋಗುವ ಅತಿ ಜರೂರಿನ ಕಾರ್ಯಗಳನ್ನು ಮುಗಿಸಿ ಕಿಂಚಿತ್ತು ಅವಕಾಶವು ದೊರೆತರೆ, ಇಂಡಿಯದ ಸುದ್ದಿಯೇ ಅವರ ತಲೆಯನ್ನು ಬೇಸರಿಸುವುದು. ಮುಸ್ಲಿಮರು ಒಂದು ಬೇರೆ ಜನಾಂಗ ಹೊರತು, ಹಿಂದೀ ಜನಾಂಗದಲ್ಲಿ ಸೇರಿದವರೇ ಅಲ್ಲ ಎಂದು ಒಂದು ಯುರೋಪೀಯ ಮಹಾಸಭೆಯಲ್ಲಿ ಅವರು ಹೇಳಿದುದುಂಟು. ಸುಹ್ರಾವರ್ದಿಯವರೂ ಘಜ್ನವಿಯವರೂ ಅನಂತರ ಇದೇ ಪಲ್ಲವಿ ಹಾಡುತ್ತಿರುವರು. ಈ ತಾಜಾ ಅಭಿಪ್ರಾಯವನ್ನು ಸರಕಾರವು ಮನ್ನಿಸಿ ಅವರಿಗೆ ಪ್ರಭು ಪದವಿಯನ್ನು ಎಷ್ಟೋ ವರ್ಷಗಳ ಹಿಂದೆ ಕೊಡಬೇಕಾಗಿತ್ತು, ಆದರೆ ಅವರು ಇನ್ನು ಲಂಡನ ಮೆಟ್ಟಿಲನ್ನು ಮೆಟ್ಟಿಲ್ಲದಿರುವ ಕಾರಣ, ಸದ್ಯದಲ್ಲಿ ಒಂದು ಲೋರ್ಡ ಪದವಿ ಅವರಿಗೆ ದೊರೆಯಬಾರದೆಂದೇನೂ ಇಲ್ಲ. ಅದನ್ನು ಹಿಂದುಗಳೂ ಮುಸ್ಲಿಮರೂ ಕಾಯುತ್ತಿರುವರು

ರಾಜಕೀಯದಲ್ಲಿ ಅನಾಥರು

ಎಂದು 'Political Orphan' ಬಿರುದನ್ನು ತಾವೇ ಹಚ್ಚಿಕೊಂಡ ಸಪ್ರೂ ಮಹಾಶಯರು, ಈಗಲಾದರೂ ಒಂದು ಬಗೆಯಾಗಿ ಸನಾಥರಾಗಲಿಲ್ಲವೆ? ಭಾರತವರ್ಷದ ರಾಜಕೀಯ ಘಟನೆಗಳನ್ನು ಹೊಡಿಸಿ ತರುವುದರಲ್ಲಿ ಇವರ ಸಹಾಯವು ಸಾಮಾನ್ಯವಾದುದೆ? ಇನ್ನು ನಿವೃತ್ತಿ ಮಾರ್ಗವನ್ನು ಅವಲಂಬಿಸುವುದಾಗಿ ಅವರು ಬೆದರಿಕೆ ತೋರಿಸಿದ್ದುದು ಮಾತ್ರ ಇಂದಿನ ತನಕ ಕಾರ್ಯತಃ ಕಂಡುಬರುತ್ತಿಲ್ಲ. ಲಂಡನ ಪರಿಷತ್ತು ತನಗಿನ್ನು ಬೇಡವೆಂದು ಅವರು ಪ್ರಿಯ ಮಿತ್ರ ಜೋರರನ್ನು ಅಲ್ಲೇ ಬಿಟ್ಟು (ಜಯಕರರೊತನೆ) ಇತ್ತ ಬಂದರು, ಪ್ರಿಯರೂ ಮಿತ್ರರೂ ಹೊಸವರ್ಷದ ನವಸುಪ್ರಭಾತೋತ್ಸವದಲ್ಲಿ ಇವರನ್ನು ಮರೆಯಲಿಲ್ಲ. ಇಷ್ಟು ಮೇಧಾವಿಯಾದ ಮತ್ತು ವ್ಯವಹಾರದಲ್ಲಿ ನಿಪುಣನಾದ ಮತ್ತೊಬ್ಬ ಹಿಂದೀಯನು ಸರಕಾರದ ಮತ್ತು ಜನತೆಯ ಸೇವೆಗೆ ಇದುವರೆಗೆ ದೊರೆತುದಿಲ್ಲ. ಇವರು ಪ್ರಿವಿಕೌನ್ಸಿಲರ ಹುದ್ದೆಯನ್ನು ಅಂಗೀಕರಿಸಿರುವುದರಿಂದ ಶ್ವೇತಪತ್ರವು ಇನ್ನು ಬದಲಾಗುವ ಕುರುಹುಗಳು ತೋರವು. ಚಕ್ರವರ್ತಿಯವರಿಗೆ ದೇಶಸ್ಥಿತಿಯನ್ನು ಕುರಿತಾಗಿ ಇವರು ಯಥಾರ್ಥ ಅಭಿಪ್ರಾಯವನ್ನು ಬಿನ್ನವಿಸುವರಾಗಿ, ಸರ್ವರೂ ನಂಬಲೇ ಬೇಕಾಗಿದೆ

ಗಿರಾಕಿಯಾಗಿರುವ ಜಾಪಾನು

ನಮ್ಮಲ್ಲಿಂದ ಹತ್ತಿಯನ್ನೇನೂ ಕ್ರಯಕ್ಕೆ ಕೊಂಡು ಕೊಳ್ಳದೆ ಜಾಪಾನು ವರ್ಷಕ್ಕೆ ೧೫೦೦ ಮಿಲಿಯ ಯಾರ್ಡು ಬಟ್ಟೆಯನ್ನು ನಮಗೆ ಮಾರಬಹುದು, ನಮ್ಮಿಂದ ಒಂದು ಮಿಲ್ಲಿಯ ಬೇಲ್‌ಗಂಟು ಹತ್ತಿ ತೆಕ್ಕೊಂಡರೆ ಜಾಪಾನು ೩೨೫ ಮಿಲ್ಲಿಯ ಯಾರ್ಡು ಬಟ್ಟೆಯನ್ನು, ಒಂದೂವರೆ ಮಿಲ್ಲಿಯ ಗಂಟು ಹತ್ತಿ ಕೊಂಡರೆ, ೪೦೦ ಮಿಲ್ಲಿಯ ಯಾರ್ಡು ಬಟ್ಟೆಯನ್ನೂ ನಮಗೆ ಮಾರಬಹುದು. ಈ ಕರಾರು ಮೂರು ವರ್ಷಗಳ ತನಕ ಊರ್ಜಿತವಿರುವುದು. ಇತರರಿಗೆ ಇರುವಷ್ಟು ಮಾತ್ರ ಸುಂಕವನ್ನು ಇವರು ತೆರಬೇಕಾಗುವುದು. ಹೀಗೆ ಎಲ್ಲ ವಿಧದಲ್ಲೂ ಜಾಪಾನಿಗೇ ಅನುಕೂಲವಾದಂತಹ ಶರ್ತಗಳುಳ್ಳ ಕರಾರು ಈಗ ಮಂಜೂರಾಗಿದೆ. ನಮ್ಮ ಹತ್ತಿಯನ್ನು ಬಹಿಷ್ಕರಿಸುವುದಾಗಿ ನಿನ್ನೆ ಬೆದರಿಕೆ ತೋರಿಸಿದವರೂ ಜಾಪಾನೀಯರೇ. ಆದರೆ, ಈಗ ನಮ್ಮ ಗಿರಣಿಗಳಲ್ಲಿ ತಯಾರಾಗುವ ಬಟ್ಟೆಯು ನಮಗೆ ಸಾಲದು, ಇಲ್ಲಿ ಉತ್ಪನ್ನವಾಗುವ ಎಲ್ಲ ಹತ್ತಿಯನ್ನೂ ನಮ್ಮ ಗಿರಣಿಗಳು ಉಪಯೋಗಿಸಿಕೊಳ್ಳಲಾರವು. ಹೀಗಾಗಿ, ಇಲ್ಲಿನ ಹತ್ತಿಯು ಅತ್ತ ಸರಿದು ಅಲ್ಲಿಂದ ಬಟ್ಟೆ ಇತ್ತ ಹರಿದು ಬರುವಂತಾದುದು ಅಭಿನಂದನೀಯ! ಇಂಡಿಯದೊಡನೆ ಮುಖತಃ ಮಾತಾಡಿ ಒಂದು ಕರಾರು ಮಾಡುವುದು ತನ್ನ ಗೌರವಕ್ಕೆ ಕುಂದಲ್ಲವೆಂದು ಜಾಪಾನು ತಿಳಿದುದೂ ಇದೇ ಮೊದಲು, ಇದೂ ಅಭಿನಂದನೀಯವೆ! ಹತ್ತಿ ಬೆಳೆಸುವವರಿಗೂ ಗಿರಾಕಿಗಳು ಎಲ್ಲಿ ಹೇಗೆ ದೊರೆವರೋ ಎಂಬ ಚಿಂತೆ ಹುಟ್ಟಿದಾಗ, ಅವರಿಗೆ ಅನುಕೂಲವಾಗಿ ಶರ್ತ ಮಾಡಲೊಪ್ಪಿದ ಜಾಪಾನು ಗೌರವಕ್ಕೆ ಪಾತ್ರವಾಗಿದೆ,—ಆದರೆ, ಕರಾರು ಮುಗಿವ ಮೂರು ವರ್ಷಗಳ ತರುವಾಯದಲ್ಲಿ ಅವರಿಗೆ ಅಭಿನಂದನೆ ಒಪ್ಪಿಸುವ.

ಹರಿಜನರು ದೇವಾಲಯಗಳಲ್ಲಿ ಹೊಕ್ಕರೆ

ಮತ ಹಾಳಾಗುವುದು, ದೇವಾಲಯಗಳ ಪವಿತ್ರತೆಯೂ ಅಳಿದು ಹೋಗುವುದು; ಏಕೆಂದರೆ, ಕೆಲವು ಆಗಮಗಳ ಆಧಾರದಿಂದಲೆ ದೇವರ ಕಲೆ ದೇವಾಲಯಗಳಲ್ಲಿರುವುದು, ಅದನ್ನೆಲ್ಲ ವಿವರಿಸಲಾಗುವುದಿಲ್ಲ. ಆದರೂ, ಅದು ಗಹನ ವಿಷಯ,—ಎಂಬುದು ಸನಾತನಿಗಳ ಆಕ್ಷೇಪ. ಹೀಗಿರುವಾಗ, ಬ್ರಿಟಿಷರು ನಮಗೆ ಸ್ವರಾಜ್ಯ ಕೊಡಬೇಕೆಂದು ವಾದಿಸುವ ಸನಾತನಿಗಳು ಮತ್ತೊಂದು ಸಮಸ್ಯೆಗೇನೆನ್ನುವರು? ಆಳುವ ಶಾಸ್ತ್ರ ಬೇರೆ, ಅದರ ಗಹನವಾದ ಆಗಮಗಳ ಪ್ರಕಾರವಾಗಿ ಬ್ರಿಟಿಷರು ಇಲ್ಲಿ ಆಳುವರೆಂದೂ, ಅದನ್ನು ಹಿಂದೀಯರ ಕೈಗೊಪ್ಪಿಸಿದರೆ, ಆಳುವಿಕೆಯ ಪಾವಿತ್ರ್ಯವು ಅಳಿದು ಹೋಗುವುದೆಂದೂ, ಅದು ಕಾರಣ, ಹಿಂದೀಯರಿಗೆ ರಾಜ್ಯದ ಆಡಳಿತವನ್ನು ಒಪ್ಪಿಸಲಾಗದೆಂದೂ ಡಾಯ್‌ಹಾರ್ಡರು ಹೇಳಿದರೆ ಉತ್ತರವೇನು? ದಕ್ಷಿಣಾಫ್ರಿಕದಲ್ಲೂ ಕೆನಿಯದಲ್ಲೂ ಹಿಂದೀಯರೆಲ್ಲರನ್ನು ಹೀನವಾಗಿ ನಡೆಸುತ್ತಿರುವರೆಂದು ನಾವು ದೂರುವಾಗ, ನಮ್ಮೊಳಗೆ ನಮ್ಮವರನ್ನು ಹೀನವಾಗಿ ನೋಡುವ ನಮ್ಮ ಚಾಳಿಗೆ ಆಧಾರವಿದೆಯೆ? ಇದೆಲ್ಲ ಮೂಢತನ. ಆದರೆ ದಿನದಿನಕ್ಕೆ ಈ ಮೂಢತನದ ಮಬ್ಬು ಕಡಿಮೆಯಾಗುತ್ತ ಬರುವುದೊಂದು ಸಲ್ಲಕ್ಷಣ, ಕೆಲವರ್ಷಗಳೊಳಗೆ ಈ ಮೂಢತನವೇ ಮಾಯವಾಗಿ, ದೇವಾಲಯಗಳ ಪವಿತ್ರತೆ ಕೆಡದ ರೀತಿಯಲ್ಲಿ ಹರಿಜನರಿಗೆ ನಿರಾತಂಕವಾಗಿ ಪ್ರವೇಶ ದೊರೆಯದಿರದು.

ಮುಂದಣ ವರ್ಷದ ಕಂದಾಯ ಫಲ

ಹಲವು ಜಿಲ್ಲಾ ಕಲೆಕ್ಟರರು ರೆವಿನ್ಯೂ ಬೋರ್ಡಿಗೆ ಬರೆದು ಕೊಂಡಿರುವ ರಿಪೋರ್ಟನ್ನು ಸರಕಾರವು ಗಮನಿಸಿದರೆ, ನಮ್ಮ ರೈತರ ದುಃಸ್ಥಿತಿಯು ಮತ್ತು ಅದನ್ನು ಹೋಗಲಾಡಿಸಲು ಸರಕಾರವು ಕೈಕೊಳ್ಳಬಹುದಾದ ಸಮಸ್ತ ಸೂಚನೆಗಳು ಚಿತ್ತಕ್ಕೆ ವೇದ್ಯವಾದಾವು. ಮದ್ರಾಸಿನಲ್ಲಿ ಸೇರಿರುವ ರೈತರ ಪರಿಷತ್ತು ಸರಕಾರವು ಯಾವ್ಯಾವ ಬಗೆಯಲ್ಲಿ ಖರ್ಚನ್ನು ಇಳಿಸಿ ರೈತರನ್ನು ಉಳಿಸಬಹುದೆಂಬ ಉಪಾಯಗಳನ್ನು ಸೂಚಿಸಿಯದೆ. ನಮ್ಮ ಕೌನ್ಸಿಲು ಮೆಂಬರರು ಈ ಉಪಾಯಗಳನ್ನು ತಾವೂ ಪರ್ಯಾಲೋಚಿಸಿ, ಕೌನ್ಸಿಲು ಅಧಿವೇಶನಕ್ಕೆ ಮದ್ರಾಸಿಗೆ ತೆರಳಿದರೆ,—ಹಾಗೆ ಹೀಗೆ ಮಾಡಲಾದೀತೆಂಬ ಸರಕಾರದ ಅಸ್ಪಷ್ಟ ನಂಬಿಕೆಗೆ ಎಡೆ ಸಿಗದಂತೆ ಅವರು ಸಾಧಿಸಬಹುದು. ಕೌನ್ಸಿಲು ಮೆಂಬರರ ಭತ್ತೆಗಳೂ, ಕೌನ್ಸಿಲು ಸೆಕ್ರೆಟರಿಯವರ ಸಂಬಳಗಳೂ ಕತ್ತರಿ ಕಡಿತಕ್ಕೆ ಒಳಪಡಬಹುದು. ಆದರೆ, ಸದ್ಯಲ್ಲೇ ಪ್ರಕಟವಾದ ವರ್ಗಾವರ್ಗಿಯ ಹುಕುಂಗಳನ್ನು ನೋಡಿರಿ. ಸಂಸ್ಥಾನದ ಒಂದು ಮೂಲೆಯಿಂದ ಅತಿ ದೂರವಾದ ಮತ್ತೊಂದು ಮೂಲೆಗೆ ಜಿಲ್ಲಾ ಜಡ್ಜರುಗಳನ್ನೆಷ್ಟೋ ವರ್ಗಾಯಿಸಿರುವರು! ಈ ಕೋರ್ಟಿನಿಂದ ಹೊರಟು ಆ ಕೋರ್ಟಿಗೆ ಸೇರುವುದರ ಭತ್ತೆಯೇ ಬಹಳವಾಗುವುದಲ್ಲ! ವರ್ಷದಲ್ಲಿ ಹಲವು ವೇಳೆ ಹೀಗಾಗುವುದುಂಟು. ಎಷ್ಟು ಹಣ, ದಾರೀಖರ್ಚಿಗೆ ದೂಳಾಗಿ ಹಾರುವುದು!

ಅಖಿಲ ಭಾರತ ಶಿಕ್ಷಣ ಪರಿಷತ್ತು

ಸೇರಿದಾಗ, ಸರ್ ರೋಸ್ ಮಸೂದರವರು ಅಧ್ಯಕ್ಷರಾಗಿ ಹೇಳಿದ ಅಭಿಪ್ರಾಯವು ತೀಕ್ಷ್ಣವಾಗಿದೆ. 'ನಮ್ಮ ಶಾಲೆಗಳ ಹಾಗೆಯೇ ವಿಶ್ವವಿದ್ಯಾಲಯಗಳೂ ಹೊರತಳುಕಿನಿಂದಲೇ ಕಣ್ಣು ಕುಕ್ಕುತ್ತಿವೆ. ಇವುಗಳ ಉದ್ದೇಶವೇನು, ಉಪಯೋಗವೇನು ಎಂಬುದರ ಗೊತ್ತು ಗುರಿಯಿಲ್ಲ. ಇವು ಇರುವ ಪ್ರಾಂತ್ಯದ ಸಂಸ್ಕೃತಿಯ ಪ್ರತಿಬಿಂಬವಾದರೂ ಇವುಗಳಲ್ಲಿ ಕಾಣುತ್ತಿಲ್ಲ. ಮೂರು ವಿಶ್ವ ವಿದ್ಯಾಲಯಗಳ ವಿನಾ, ಇತರ ಸಂಸ್ಥೆಗಳ ಆದರ್ಶವೇನೂ ಅವುಗಳ ವಿದ್ಯಾರ್ಥಿಗಳ ಮನಸ್ಸಿಗೆ ನಾಟುವಂತಿಲ್ಲ. ಸುತ್ತಲಿನ ಜೀವಂತ ಸೃಷ್ಟಿಯಲ್ಲಿನ ಚೇತನವು ಈ ವಿದ್ಯಾರ್ಥಿಗಳನ್ನು ಸೋಂಕಿಲ್ಲ. ಇದರಿಂದ ನಮ್ಮ ಜನಾಂಗಕ್ಕೆ ಇಂದು ತಪ್ಪಿರುವ ಸಾವಿರಾರು ಸಮಸ್ಯೆಗಳೂ ಸ್ಫುಟವಾಗದೆ ಉಳಿದೇ ಇವೆ. ಯಾವುದೊಂದು ವಿದೇಶೀಯ ವಿದ್ಯಾಸಂಸ್ಥೆಯ ನಕಲಿ ಸ್ವರೂಪವನ್ನೆ ಇವೂ ತಳೆದಿವೆ, ಟೊಳ್ಳೆಂದೂ ಅಲ್ಪ ಸ್ವಲ್ಪವಾಗಿ ತಮ್ಮಲ್ಲೇ ತಿಳಿದುಕೊಂಡಿವೆ. ವಿದ್ಯಾ ಪೀಠಗಳೆಂಬವು ರೈಲ್ವೆ ಆಫೀಸಿನಲ್ಲಿ ತೋರುವ ಕಿಟಕಿಗಳಂತೆ ವಿದ್ಯಾರ್ಥಿಗಳಿಗೆ ತೋರುವವು. ಹಣ ಕೊಟ್ಟು ಪರೀಕ್ಷೆ ಪದವಿಗಳನ್ನು ಟಿಕೇಟು ಪಡೆವಂತೆ ಇವುಗಳಿಂದ ಪಡೆದು ಹೊರಡುವರು. ಅನ್ನ ಶೋಧನದ ಇವರ ಪ್ರಯಾಣದಲ್ಲಿ, ಈ ಟಿಕೇಟುಗಳೇನೂ, ಅನ್ನ ದೊರೆವಲ್ಲಿಗೆ ಇವರನ್ನೊಯ್ಯುವುದಿಲ್ಲವಲ್ಲ!''

NOTES...
ನೋಟಗಳು.

ಬರೋಡಾದಲ್ಲಿ ತಿಂಡಿ ತಿನಸುಗಳ ಪ್ರದರ್ಶನವಾಯಿತು. ಮಹಾರಾಜರೇ ಪ್ರದರ್ಶನವನ್ನು ಪ್ರಾರಂಭಿಸಿದರು. ಪ್ರೇಕ್ಷಕರ ಸಂಖ್ಯೆ ಬಹಳವಿದ್ದಿರಬೇಕು. 'ಸಂಪಲ್'ಗಳನ್ನು ಹಂಚಿಲ್ಲವೆಂಬುದು ದುಃಖ. ಬಾಯಿ ನೀರೊಸರಿತು.

* * * *

ಸೋಯಾ ಅವರೆ ಕಾಳುಗಳನ್ನು ಸರ್ವರೂ ಉಪಯೋಗಿಸುವಂತಾಗಬೇಕೆಂದು ಈ ಪ್ರದರ್ಶನದ ಸಾರ. ಅದರಿಂದಲೇ, ೧೦೦ ಬಗೆಯ ಖಾದ್ಯಗಳನ್ನು ಪದಾರ್ಥಗಳನ್ನು ಮಾಡಿಟ್ಟಿದ್ದರು. ಚೀನಾ—ಅಮೇರಿಕಾಗಳಲ್ಲಿ ಈ ಅವರೆಗೆ ಬಹಳ ಗಿರಾಕಿಗಳು. ಅಷ್ಟು ಸಂಪೂರ್ಣವಾದ ಆಹಾರವು ಬೇರೊಂದಿಲ್ಲ

* * * *

ಮಾಂಸವನ್ನು ಮುಟ್ಟದೆ, ಮಾಂಸ ತಿಂದಷ್ಟೆ ಬಲವು ಈ ಕಾಳುಗಳಿಂದ ದೊರೆವುದು. ಈಗ ಗಾಯಕವಾಡ ಮಹಾರಾಜರು ಎಷ್ಟೋ ಯುವಕರನ್ನು ಅಮೇರಿಕಾ—ಯುರೋಪುಗಳಿಗೆ ಕಳುಹಿಸಿ, ಹೊಸ ಹೊಟೆಲ್ ತಿಂಡಿಗಳನ್ನು ಮಾಡುವರೆ ಕಲಿತು ಬರ ಹೇಳಿರುವರು. ಅಮೇರಿಕದ ಯುವತಿಯೊಬ್ಬಳು ಬಾಲಿಕಾ ಶಾಲೆಗಳಲ್ಲಿ ಅಡಿಗೆಯ ಪಾಠ ಕಲಿಸುತ್ತಿರುವವರಿಗೆಲ್ಲ ಪಾಠ ಕಲಿಸುವಳು. ಗೃಹಲಕ್ಷ್ಮಿಯರು ಅನ್ನಪೂರ್ಣೆಯರಾಗಲು ಇನ್ನು ಹೆಚ್ಚಿನ ಸಮಯಬೇಕಾಗಿಲ್ಲ

* * * *

ಬನಾರಿಸ್ ಯುನಿವರ್ಸಿಟಿಗೆ ಈಗ ೫ ಕೋಟಿ ರೂಪಾಯಿ ಬೇಕಾಗಿದೆ. ಅದನ್ನು ಕೂಡಿಸಲು ೭೩ ವಯಸ್ಸಿನಲ್ಲಿರುವ ಮಾಲವೀಯವರೇ ಹೊರಟಿರುವರು. ಶಾಂತಿ ನಿಕೇತನಕ್ಕೆ ಹಣವಿಲ್ಲವಾಗಿ ರವೀಂದ್ರರೇ ಹೊರಟು ನಾಟಕವಾಡುವರು. ಆಡಿಸುವರು. ಕನ್ಯಾ ಮಹಾ ವಿದ್ಯಾಲಯಕ್ಕೆ ಹಣವಿಲ್ಲವೆಂದು ಪ್ರೊಫೆಸರ್ ಕರ್ವೇಯವರು ಸ್ವತಃ ಹೊಂದುವುದರಲ್ಲಿದ್ದಾರೆ—ಎಪ್ಪತ್ತರ ಹಣ್ಣು ಮುದುಕರು! ಲೋಕಲ್ ಬೋರ್ಡು ಶಾಲೆಗಳ ಮಾಸ್ತರರಿಗೆ ಸಂಬಳ ಸಿಗುವುದು ಬಾಕಿಯಾಗಿರುವಾಗ ಅಧಿಕಾರಿಗಳು ಹೀಗೆ ಮಾಡದಿರಾಗದೇ? ದೇಶಭಾಷೆಗಳಿಗೆ ತಕ್ಕ ಸ್ಥಾನ ಸಿಗದೆ, ತನ್ನದೆಂದೂ ಆಗದ ಪರಭಾಷೆಯಲ್ಲಿ ವಿದ್ಯಾಭ್ಯಾಸ ಸಾಗುವುದು ಮುಗಿಯದೆ, ಸ್ವರಾಜ್ಯ ಸಿಗುವುದೆಂಬುದೂ ಸುಳ್ಳು—ಎಂದು ಆಲಿಘರ ವಿಶ್ವ ವಿದ್ಯಾಲಯದ ಸರ್ ರೊಸ್ ಮಸೂದರ ಅಭಿಪ್ರಾಯ. ವಿದ್ಯಾಭ್ಯಾಸದ ಆದರ್ಶವು ತಪ್ಪಿ ಅದಲ್ಲಿ ದೇಶಭಾಷೆಯಲ್ಲೇ ಕಲಿಸಿದ್ದರೂ, 'ಸ್ವರಾಜ್ಯ' ಉಚ್ಚರಿಸುವ ಬಲ ಹುಟ್ಟೀತೆ?

* * * *

ಜಿಲ್ಲಾ ಕೋರ್ಟುಗಳಲ್ಲಿ ನಡೆವ ವ್ಯಾಜ್ಯಗಳು ೧೯೩೦ರಲ್ಲಿ ಸರಾಸರಿ, ೪೭೧ ದಿನ, ೧೯೩೧ರಲ್ಲಿ ೩೯೮ ದಿನ, ೧೯೩೨ರಲ್ಲಿ ೫೪೪ ದಿನ ವಿಚಾರಣೆಯಾಗಿ ತೀರ್ಮಾನ ಹೊಂದುತಿದ್ದುವೆಂದು ಸರಕಾರದ ಲೆಕ್ಕ. 'ಜಿಲ್ಲಾ ಜಡ್ಜರು ವ್ಯಾಜ್ಯ ತೀರ್ಮಾನಗಳನ್ನು ಬೇಗ ಬೇಗನೆ ಮಾಡಲೆ'ಂದು ಶಿಫಾರಸು

* * * *

ಮುನ್ಸಫ ಕೋರ್ಟುಗಳಲ್ಲಿ ದಾಖಲಾದ ವ್ಯಾಜ್ಯಗಳು ಕಡಿಮೆ; ಫಲಿಜಾ ಅದವುಗಳ ಸಂಖ್ಯೆಯೂ ಕಡಿಮೆ,—ಅತೃಪ್ತಿಕರ. ಸಬ್ ಕೋರ್ಟುಗಳಲ್ಲಿ ತೀರ್ಮಾನ ಹೊಂದಿದ ವ್ಯಾಜ್ಯಗಳು ತೀರ ಕಡಿಮೆ,—ಅತೃಪ್ತಿಕರ." ೧೯೩೦ರಲ್ಲಿ ೪೭೩ ದಿನ, ೧೯೩೧ರಲ್ಲಿ ೫೫೫ ದಿನ, ೧೯೩೨ರಲ್ಲಿ ೪೭೪ ದಿನ ಈ ವ್ಯಾಜ್ಯಗಳು ಸರಾಸರಿ ಈ ಕೋರ್ಟುಗಳಲ್ಲಿ ಬಾಳಿವೆ

* * * *

ಹೀಗೆಲ್ಲ ವಿಳಂಬವಾಗುವುದಕ್ಕೆ ಕಾರಣವೇನು? ವರ್ಗಾವರ್ಗಿಗಳೆ, ಆರ್ಥಿಕ ದುರವಸ್ಥೆಯೆ, ಅಥವಾ ಅಸಹಕಾರ ಚಳವಳಿ? ಜಗತ್ತಿನಲ್ಲಿ ಯುದ್ಧ ಶಾಂತಿಗಾಗಿ ನಡೆದ ಪ್ರಯತ್ನಗಳು ಸಫಲವಾಗಿಲ್ಲವೆಂದೆ?

* * * *

ಜಯಕಾರರ ಸವಾರಿಯು ವಿಜಯ ಯಾತ್ರೆ ಬೆಳಸಿ ಮರಳಿತು. 'ನಾವು ಪ್ರತಿನಿಧಿಗಳಾಗಿ ಹೋದವರಲ್ಲವಾದರೂ, ಪ್ರತಿನಿಧಿಗಳು ಮಾಡುವಷ್ಟೆ ಬಲವಾಗಿ ವ್ಯವಹರಿಸಿ ಬಂದಿದ್ದೇವೆ. ಮುಂದೆಲ್ಲ ದೇವರ ಚಿತ್ತ. ಅದು ತಿಳಿದ ಬಳಿಕ ತಾನೆ ಪುನಃ ಅಭಿಪ್ರಾಯ ಕೊಡುವೆನು. ಮಹಾತ್ಮಾಜೀಯವರನ್ನು ಇಲ್ಲಿ ಕೆಲವರು ದೂರುತ್ತಾರೆ. ಅದನ್ನೆಲ್ಲ ಭಾರತ ವಿರೋಧಿಗಳು ಎದುರುವಾದಿಗಳಾಗಿ ಬಳಸುತ್ತಾರೆ'' ಎಂದರು

* * * *

ಭಾರತ ಪ್ರಿಯರೇ ಅದನ್ನು ಬಳಸುವಾಗ, ವಿರೋಧಿಗಳು

ಗೊಡ್ರೆಜ್ ಸಾಬೂನುಗಳಿಗೆ

ಅಮೂಲ್ಯವೂ ಹೊಸತೂ ಆದ ಪ್ರಾಶಸ್ತಿ

ಡಾ! ಎಂ. ಎ. ಅನ್ಸಾರಿ. ಎಂ. ಡಿ

(ಅಖಿಳ ಭಾರತ ಕೊಂಗ್ರೆಸ್ಸಿನ ಮಾಜಿ ಅಧ್ಯಕ್ಷರು)

ಗೊಡ್ರೆಜ್ ಸಾಬೂನುಗಳ ಉತ್ಕೃಷ್ಟ ಗುಣಗಳನ್ನು ಕಂಡು ನಾನು ಸಂತೋಷದಿಂದ ಮೆಚ್ಚಿದವನಾಗಿರುತ್ತೇನೆ ಕಳೆದ ಹತ್ತು ವರ್ಷಗಳಿಂದ ನಾನವುಗಳನ್ನು ಉಪಯೋಗಿಸುತ್ತಿರುವೆನು ಯುರೋಪುದಲ್ಲಾಗಲೀ ಇನ್ನಿತರ ಯಾವ ದೇಶದಲ್ಲಾಗಲೀ ತಯಾರಿಸಲ್ಪಟ್ಟ ಸಾಬೂನುಗಳಿಗಿಂತ ಇವು ಅತ್ಯುತ್ಕೃಷ್ಟವೆಂದೇ ನನ್ನ ಅನುಭವದ ಮಾತು ಅವುಗಳ ಉತ್ಕರ್ಷತೆಯ ದೃಷ್ಟಿಯಿಂದಲೂ, ಅಲ್ಲದೆ ಅವು ಹಿಂದೂದೇಶದಲ್ಲೇ ಸಿದ್ಧಗೊಳಿಸಲ್ಪಟ್ಟುವೆಂಬ ದೃಷ್ಟಿಯಿಂದಲೂ ನಾನವುಗಳನ್ನು ಹಿಂದೀಯ ಜನತೆಗೆ ಶಿಫಾರಸು ಮಾಡುತ್ತೇನೆ"

ಪ್ರಮುಖ ಡಾಕ್ಟರರೂ ಮತ್ತು ಪ್ರಮುಖ ರಾಷ್ಟ್ರೀಯ ಧುರೀಣರೂ ಆದ ಡಾ| ಅನ್ಸಾರಿಯವರ ಹೇಳಿಕೆಯು ಪ್ರತಿಯೊಬ್ಬ ವ್ಯಕ್ತಿಯ ಮತ್ತು ಪ್ರತಿಯೊಂದು ರಾಷ್ಟ್ರದ ದೈಹಿಕ ದೃಷ್ಟಿ ಮತ್ತು ರಾಷ್ಟ್ರೀಯ ದೃಷ್ಟಿಯಿಂದ ಸಹಾಯಕರವಾಗಬೇಕು

Jaya Bharatham Co, P B No 83 MADRAS

ಜಯ ಭಾರತಂ ಕೋ, ಬಿ ಪೆ 83 ಮದ್ರಾಸು

ದ ಕ ಜಿಲ್ಲೆಗೆ ಏಜಂಟರು:-ಎಸ್ ಇ ಬಂಗೇರಾ ಮಿಶ್ಶನ್ ಕಂಪೌಂಡ, ಕಾಸರಗೋಡು

ಡಿಲ್ಲಿ ಬಿಸ್ಕೂಟಿನ ಕುರಿತು

ಇಂಡಿಯಾದ ಘನ ಕೈಗಾರಿಕಾ ಸಂಸ್ಥೆಯ

ಸರ್ ದೋರಾಬ್ ಟಾಟಾರವರು

"ಈ ಬಿಸ್ಕೂಟುಗಳನ್ನು ಹಿಂದೀಯ ಜನತೆಯು ಹೆಚ್ಚಿನ ಅವಗಾಹನೆಗೆ ತಂದಲ್ಲಿ ಸಹಜವಾಗಿ ಇವುಗಳು ಹೆಚ್ಚಿನ ವಿಕ್ರಯವಾಗುವುದರಲ್ಲಿ ಸಂದೇಹವಿರುವುದಿಲ್ಲ

"ಇಂಗ್ಲಾಂಡಿನಲ್ಲಿ ತಯಾರಿಸಲ್ಪಟ್ಟವುಗಳಿಗಿಂತಲೂ ನಾನು ಈ ಬಿಸ್ಕೂಟುಗಳನ್ನೇ ಪ್ರಶಸ್ತವೆನ್ನುತ್ತೇನೆ' — "ಇಂಗ್ಲಾಂಡಿನಲ್ಲಿ ನಿಮ್ಮ ಬಿಸ್ಕೂಟುಗಳು ಬಹಳ ಮೆಚ್ಚುಗೆಗೆ ಪಾತ್ರವಾಗಿವೆ —ಎಂಬುದೇ ಕೆಲವು ಯುರೋಪಿಯನರ ಹೇಳಿಕೆ.

ಮದ್ರಾಸು ಪ್ರಾಂತ್ಯಕ್ಕೆ ಏಜಂಟರು —

Jaya Bharatham Co, P, B No 88 MADRAS

ಜಯ ಭಾರತಮ್ ಕೋ, ಬಿ ಪೆ 83 ಮದ್ರಾಸು

ಸ್ಟೋಕಿಸ್ಟರು —ಮೆಸರ್ಸ್ ಕಾಮತ್ ಎಂಡ್ ಕೋ, ಮಂಗಳೂರು

ದ. ಕ. ಜಿಲ್ಲಾ ಏಜಂಟರು.—ಎಸ್ ಇ ಬಂಗೇರಾ, ಮಿಶ್ಶನ್ ಕಂಪೌಂಡು, ಕಾಸರಗೋಡು

ಗುಣಬಾರದಿದ್ದರೆ] ಸುಪ್ರಸಿದ್ಧ ವೈದ್ಯರಾದ ಎಮ್ ಕೆ ರಜಪೂತ ಇವರ **[ಹಣ ವಾಪಾಸು**

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆಶಯು ಅಶಕ್ತಿಯಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ಮುಟ್ಟಾಗ ವಿಳೆಯ ನೇಮದಂತೆ ಸುರುವಿಡುವುದು ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ ಮೊದಲೇ ಪೂರಾ ವಿಚಾರ ಮಾಡಿ ಔಷಧ ಬೇಡಿರಿ ಮುಖ್ಯ ಸರ್ಟಿಫಿಕೇಟು ಡಾಕ್ಟರ ಬಿ ಎ ವೈದ್ಯ, ಎಲ್ ಸಿ ಪಿ ಎಸ್ ಕೆಳವಾದೂಹಿದು. ಖಾನೇ ಈ ಚೂರ್ಣದಿಂದ ಯಾವ ತರದ ಅಪಾಯವಾಗದು ಗರ್ಭಧಾರಣವೂ ಆಗುವುದಿಲ್ಲ ಪೂರ್ಣ ಗುಣಕಾರಿ ಡಬ್ಬಿ ಕಿಮ್ಮತ್ತು ರೂ ೪ ವಿ ಪಿ ,ಆಣೆ ೮

ವಿಳಾಸ —ಸಂಜೀವಿನೀ ಔಷಧಾಲಯ ಮು ಪೊ ಮಿರಜ, S M C

ಇನ್ನೊಂದು ವೈಶಿಷ್ಟ

ನೀವು ಚಟ್ಟಿನ ಗಾಣವನ್ನು ಪಡೆಯುವಾಗ ನೀವು ಸ್ವಾಭಾವಿಕವಾಗಿ ಅದರ ಗಟ್ಟಿ ಮುಟ್ಟು, ಬಾಳ್ವಿಕೆ ಮತ್ತು ಪ್ರಾಶಸ್ತಿಯ ಕಡೆ ಗಮನವನ್ನೀಯುತ್ತೀರಿ ನೀವು

ಕಿರ್ಲೋಸ್ಕರ

ವಸಂತ ಪವರ್ ಕ್ರಶರ್ ಗಾಣವನ್ನು ನಿಮ್ಮ ಕೆಲಸಕ್ಕೆ ಯೋಗ್ಯವೆಂದು ತಿಳಿಯುವಿರಿ ಬಸವು ಒಳಗೆ ಸೇರಿ ಹಾಳಾಗದ ಹಾಗೆ ಅದರ ಬೇರಿಂಗುಗಳನ್ನು ಮುಚ್ಚಿರುತ್ತದೆ ಇದರಿಂದಾಗಿ ಎಣ್ಣೆಯು ನಷ್ಟವಾಗುವುದಿಲ್ಲ—ಗಾಣವು ದೀರ್ಘ ಕಾಲ ಸಂತೃಪ್ತಿಕರವಾಗಿ ನಡೆಯುತ್ತದೆ. ಇದರವಿಲ್ಲಾ ಭಾಗಗಳೂ ದೀರ್ಘವಾಗಿ ಬಾಳುವಂತೆ ಮಾಡಲಾಗಿದೆ

ಎಲ್ಲಾ ವಿವರಗಳಿಗೆ ಇಲ್ಲಿಗೆ ಬರೆಯಿರಿ —

ಕಿರ್ಲೋಸ್ಕರ ಬ್ರದರ್ಸ್ ಲಿಮಿಟೆಡ್, ಕಿರ್ಲೋಸ್ಕರವಾಡಿ (ಜಿ ಸತಾರಾ)

ಸ್ಟೋಕಿಸ್ಟ್ಸ್:—ಬಾಸೆಲ್ ಮಿಶನ್ ಬುಕ್ ಡಿಪೊ ಎಂಡ್ ಟ್ರೇಡ್ ಡಿಪೊಜಿಟರಿ ಕೊ ಮಂಗಳೂರು ದ ಕ.

ಜನವರಿ ಹಬ್ಬದ ಸೇಲ್

ಫೌಂಟನ್ ಪೆನ್.

ಬ್ರಿಟಿಷ್ ಮೇಡ್, 14 ಕ್ಯಾರೆಟ್ ಭಂಗಾರದ ಮುಳ್ಳು ಹಾಕಿದೆ ಅಕ್ಷರಗಳು ಮುತ್ತುಗಳ ಹಾಗೆ ಬರೆಯುವದು.

ಕ್ರಯ ಪೆನಾ ರೂ. 2—12—0.

ಬೆಸ್ಟ್ ಪಾಕೆಟ್ ವಾಚ್

ಚಿಕ್ಕ ಸೈಜ್, ಸರಿಯಾಗಿ ಕಾಲವನ್ನು ತೋರಿಸುವುದು ನಿಕ್ಕಲ್ ಕೇಸ್, ಸರಪಣಿ ಸಹಿತ

ಕ್ರಯ ರೂ. 3—4 0

ಜರ್ಮನ್ ಟೇಬಲ್ ಟಯಿಂಪೀಸ್

ಬಾಳಿಕೆ ಬರುವುದು, ಗ್ಯಾರಂಟಿ, ಅಂಗಡಿಗಳಲ್ಲಿ ಇಡಲು ಚೆನ್ನಾಗಿದೆ. ಒಂದನ್ನು ತರಿಸಿ ನೋಡಿರಿ

ಕ್ರಯ ರೂ 3—0—0.

ಜಂಟ್ಸ್ ರಿಸ್ಟ್ ವಾಚ್.

ಕೈಯಲ್ಲಿ ಕಟ್ಟಲು ಅಂದವಾಗಿದೆ ಬಾಳಿಕೆ ಬರುವುದು ಸರಿಯಾದ ಕಾಲವನ್ನು ತೋರಿಸುವುದು ನಿಕ್ಕಲ್ ಕೇಸ್, ಕ್ರಯ ರೂ. 5—0 0.

ಸೂಚನೆ —ಒಂದೇ ಸಲ ಈ ಮೇಲ್ಕಂಡ 4 ಸಾಮಾನುಗಳನ್ನು ತರಿಸಿಕೊಂಡರೆ ಕ್ರಯ ರೂ. 13-0-0

ಗ್ಯಾರಂಟಿಯಾದ ಮಾಲು ಒಂದು ಸಲ ತರಿಸಿ ನೋಡಿರಿ. ಪರಸ್ಥಳದ ಆರ್ಡರುಗಳನ್ನು ಪರೀಕ್ಷೆ ಮಾಡಿ, ಕಳುಹಿಸಲ್ಪಡುತ್ತೆ

ವಿಳಾಸ.—

ಟಿ ಸಿ. ನಾಗಲಿಂಗಪ್ಪಾ, ಮತ್ತು ಕಂಪೆನಿ,

೨೮೦ ವಾಲ್‌ಟ್ಯಾಕ್ಸ್ ರೋಡ್, ಪೋ ಬೋ ನಂ ೫೫,

ಪಾರ್ಕ ಟೌನ್, ಮದರಾಸು

ಇನಾಂ! ಕ್ಯಾಲೆಂಡರ್, ಡೈರಿ! ಇನಾಂ!!

ನಮ್ಮ ಕಂಪೆನಿಯ ಹೆಸರು ಪ್ರಖ್ಯಾತಿಯಾಗ ಪುದಕ್ಕೆ ೮ ಆಣೆ ಸ್ಟ್ಯಾಂಪು ಕಳುಹಿಸುವವರಿಗೆ ೧೯೩೪ ವರ್ಷದ ಸೊಗಸಾದ ಫ್ರೆಂಚ್ ದೇಶದ ಲೇಡಿಸ್ ಕಲ್ಲರ್ ಕ್ಯಾಲೆಂಡರ್ ೩, ಮತ್ತು ಪೋಕೆಟ್ ಡೈರಿ ೩, ಬಹುಮಾನವಾಗಿ ಕೊಡಲ್ಪಡುತ್ತವೆ ಬೇಕಾದವರು ೮ ಆಣೆ ಪೋಸ್ಟು ಸ್ಟ್ಯಾಂಪು ಕಳುಹಿಸುವವರಿಗೆ ಈ ಮೇಲ್ಕಂಡ ೩ ಕ್ಯಾಲೆಂಡರ್, ೩ ಡೈರಿ ಪೋಸ್ಟು ಮೂಲಕ ಬಹುಮಾನವಾಗಿ ಕಳುಹಿಸಲ್ಪಡುತ್ತದೆ. ಬೇಗನೆ ತರಿಸಿಕೊಳ್ಳುವವರಿಗೆ ಮಾತ್ರ ದೊರೆಯುವುದು.



T. R. Royal & Co.,

3. Krishnappa Nayakan,

Tank Street, Sowcarpet MADRAS,

ಅನುಕ್ರಮಣಿಕೆ.

ಅಗ್ರಲೇಖ:
ಉಡುಪಿ ಪರ್ಯಾಯ . . . ೮
ಸ್ಫುಟವಿಚಾರಗಳು . . . ೩
ಸೋಟಿಗಳು, . . . ,,
ವರ್ತಮಾನ ಸಂಗ್ರಹಗಳು . . . ,,
ಸುಸ್ವಾಗತಂ! . . . ೩
ಒಳದೇಶ ವರ್ತಮಾನ ವಿದೇಶ ವರ್ತಮಾನ, . . . ೮
ವಿವಿಧ ಸಮಾಚಾರಗಳು . . . ೧೧
ಪತ್ರಿಕಾ ಕಚೇರಿ—ಮಂಗಳೂರು, ಉಡುಪಿ. . . . ೯
ಅಲ್ಲಲ್ಲಿಯ ತಂತಿ ವಾರ್ತೆ. . . . ೪
ಪತ್ರವ್ಯವಹಾರ . . . ೧೬
ಮೂಲೆ ಮೂಲೆಗಳಿಂದ . . . ೧೩

ಸ್ವದೇಶಾಭಿಮಾನಿ.

ತಾ. ೧೨ನೇ ಶುಕ್ರವಾರ ಜನವರಿ ೧೯೩೪.

ಉಡುಪಿ ಪರ್ಯಾಯ.

ಪರ್ಯಾಯವು ಉಡುಪಿಯಲ್ಲಾದರೂ, ಮಂಗಳೂರು ಪತ್ರಿಕೆಗಳು ಅದರ ಪ್ರಾಮುಖ್ಯತೆಯನ್ನು ಈ ಬಾರಿ ಗೌರವಿಸಿವೆ. ಇದೇ ತಾ. ೮ರ 'ರಾಷ್ಟ್ರಬಂಧು'ವು ಒಂದು ಪರ್ಯಾಯ ಸಂಚಿಕೆಯನ್ನು ತನ್ನ ನಿತ್ಯ ಸಂಚಿಕೆಯೊಡನೆ ಕೊಟ್ಟಿದೆ. ತಾ. ೧೧ಕ್ಕೆ 'ನವಯುಗ'ವು ಒಂದು ಪರ್ಯಾಯ ಸಂಚಿಕೆಯನ್ನೇ ಹೊರಡಿಸಿದೆ. ಈ ಮೂಲಕ ನಮ್ಮ ಜಿಲ್ಲೆಯವರ ದೃಷ್ಟಿಯು ಈ ಬಾರಿ ಉಡುಪಿಯ ಪರ್ಯಾಯೋತ್ಸವದ ಕಡೆಗೆ ಕೇಂದ್ರೀಕೃತವಾಗದಿರಲಾರದು. ಹಾಗೂ, ಸಮಗ್ರ ಕರ್ನಾಟಕಕ್ಕೂ ವಿಚಾರಣೀಯವಾದ ಹಲವು ವಿಷಯಗಳು ದೊರಕದೆ ಇರಲಾರವು. ಮುಖ್ಯವಾಗಿ, ಒಂದು ಕಡೆಯಿಂದ ರಾಷ್ಟ್ರಬಂಧುವೂ, ಇನ್ನೊಂದು ಕಡೆಯಿಂದ ನವಯುಗವೂ ಒಂದೇ ವಿಷಯದ ಮೇಲೆ ವಿಶೇಷ ಸಂಚಿಕೆಗಳನ್ನು ಹೊರಡಿಸುವಾಗ ಅವುಗಳನ್ನು ಜತೆಯಾಗಿ ಓದುವಲ್ಲಿ ಹೆಚ್ಚಿನ ಗಣನೀಯ ವಿಷಯಗಳು ಹೊರಕ್ಕೆ ಬಾರದೆ ಇರಲಾರವು.

ಸಹಜವಾಗಿ 'ರಾಷ್ಟ್ರಬಂಧು'ವಿನ ಸಂಚಿಕೆಯು ಉಡುಪಿಯ ಪೌರೋಹಿತ್ಯ ವಿಚಾರಗಳನ್ನೊಳಗೊಂಡಿರುತ್ತದೆ. ಈ ಸಂಚಿಕೆಯು ಉಡುಪಿಯ ಪೌರಾಣಿಕ ಇತಿಹಾಸದೊಡನೆ ಆರಂಭವಾಗಿರುತ್ತದೆ. ಆ ಮೇಲೆ ಸಾಹಿತ್ಯ ಶಿರೋಮಣಿ ಬಿ. ಶ್ರೀನಿವಾಸ ಭಟ್ಟರ ಶ್ರೀ ಮಧ್ವಾಚಾರ್ಯರ ಜೀವನ ಚರಿತ್ರೆಯು ಇದೆ. ಅದೇ ಲೇಖಕರ ಮಧ್ವಮತಸಾರವೆಂಬ ಇನ್ನೊಂದು ಲೇಖವಿದೆ. ಶ್ರೀ. ಮುಳಿಯ ತಿಮ್ಮಪ್ಪಯ್ಯನವರು ಶ್ರೀ ಕೃಷ್ಣ ಚರಿತ್ರೆಯನ್ನೂ ಶ್ರೀ. ಆತ್ಮಾರಾಮ ಶಾಸ್ತ್ರಿಯವರು ಅದರ ರಹಸ್ಯವನ್ನೂ ಬರೆದಿದ್ದಾರೆ. ಪತ್ರಿಕೆಯಲ್ಲಿ ದೇವಸ್ಥಾನ ಸಂಬಂಧವಾದ, ಅಷ್ಟ ಮಠದ ಸನ್ಯಾಸಿಗಳ, ಶ್ರೀಮನ್ಮಧ್ವಾಚಾರ್ಯರ ಇತ್ಯಾದಿ ಚಿತ್ರಗಳಿವೆ. ಆದರೆ ಇಡೀ ಸಂಚಿಕೆಯಲ್ಲಿ ಎಲ್ಲಿಯೂ ಇತಿಹಾಸಕ್ಕೆ ಸ್ಥಳ ದೊರೆತಿಲ್ಲ. ಪುರಾಣದ ಮೇಲಿನ ಅಖಂಡ ಭಕ್ತಿಯನ್ನು ಪ್ರೇರಿಸುವುದೇ ಸಂಚಿಕೆಯ ಪರಿಣಾಮವಾಗಿರುತ್ತದೆ.

ಇದರ ಪ್ರತಿಯಾಗಿ "ನವಯುಗ"ವು ನೂತನ ಭಾವದ ನೂತನ ಸಂಚಿಕೆಯನ್ನು ಹೊರಡಿಸಿಯದೆ. ಶ್ರೀ. ಪಣಿಯಾಡಿಯವರ ಕ್ಷೇತ್ರ ಇತಿಹಾಸದಲ್ಲಿ ಇತಿಹಾಸ ಗರ್ಭಿತ ಚರಿತ್ರೆ ಇರುತ್ತದೆ. ಹಾಗೂ ಶ್ರೀ ಕೃಷ್ಣ ಸಂದೇಶ, ಮತ್ತಿತರ ಮಠ ಸುಧಾರಣೆಗಳ ಮೇಲಿನ ಲೇಖಗಳು ಹಿಂದೂ ಸಮಾಜದ ಇಂದಿನ ಹೀನಸ್ಥಿತಿಯ ಕಡೆಗೆ ಹಿಂದೂಗಳನ್ನು ಎಚ್ಚರಿಸುತ್ತಿವೆ. ಅಲ್ಲದೆ ಶ್ರೀ ರಾಮಕೃಷ್ಣ ಪರಮಹಂಸರು, ಸ್ವಾಮಿ ರಾಮದಾಸರು, ಶ್ರೀರಮಣ ಮಹರ್ಷಿಗಳು, ಶ್ರೀ ಆನಂದಾಶ್ರಮ ಸ್ವಾಮಿಗಳು, ಬ್ರಹ್ಮ ಶ್ರೀ ನಾರಾಯಣ ಗುರುಸ್ವಾಮಿ, ಇತ್ಯಾದಿ ನಿಜವಾಗಿ ಐಹಿಕ ಬಂಧನಗಳನ್ನೊಡೆದು ಸಮಾಜಕ್ಕೆ ಬೋಧಕರಾಗಿಯೂ ಉತ್ತೇಜಕರಾಗಿಯೂ ಇರುವ ಸನ್ಯಾಸಿಗಳ ಚರಿತ್ರೆಗಳನ್ನು ಕೊಟ್ಟು ವ್ಯವಸ್ಥಿತ ಸನ್ಯಾಸವನ್ನು ಎಷ್ಟರ ಮಟ್ಟಿಗೆ ಸುಧಾರಿಸಬಹುದೆಂಬುದನ್ನು ಇವುಗಳ ಮೂಲಕ ತೋರಿಸಲು ಯತ್ನಿಸುತ್ತಿದೆ. ಪಂಡಿತ ತಾರಾನಾಥರವರ ಹಿಂದೂ ಸಮಾಜದ ಸ್ಥಿತಿಗತಿಯ ಪರಿಶೀಲನವೂ, ಮಠಗಳ ಮುಖ್ಯ ವಿಮರ್ಶೆಯೆಂಬ ಶ್ರೀ. ಶಿವರಾಮ ಕಾರಂತರ ಮಠಗಳ ಮೇಲಿನ ಅಷ್ಟು ಟೀಕೆಯೂ ಇಂದು ಹೀನ ಸ್ಥಿತಿಯನ್ನು ಬಲವಾಗಿಯೇ ನಮ್ಮ ಮುಂದಿಡುತ್ತವೆ.

ಹಿಂದೂ ಸಮಾಜವನ್ನು ವ್ಯವಸ್ಥೆಗೊಳಿಸಲು ಏರ್ಪಟ್ಟ ಈ ಮಠಗಳೂ ದೇವಸ್ಥಾನಗಳೂ ಎಷ್ಟರ ಮಟ್ಟಿಗೆ ಹಿಂದೂ ಸಮಾಜಕ್ಕೇನೇ ಘಾತುಕವಾಗಿ ನಿಂತಿವೆ ಎಂಬ ವಿಷಯವನ್ನು ನಾವು ಅಂದಿನಿಂದಲೂ ಬರೆಯುತ್ತಲೇ ಇದ್ದೇವೆ. ಸಮಾಜವನ್ನು ಈ ಮಠಗಳು ಭೇದಗಳಿಂದ ತುಂಡರಿಸಿ ಬಿಟ್ಟಿದ್ದಾವೆ. ಜನತೆಯ ಅಜ್ಞಾನದ ಮೂಲಕ ಮಠಗಳಿಗೆ ಐಹಿಕ ಲಾಭವನ್ನು ಹೆಚ್ಚಾಗಿ ಗಳಿಸಬಹುದೆಂಬ ದುರಭಿಲಾಷೆಯಿಂದ, ಜನತೆಯಲ್ಲಿ ಜ್ಞಾನವನ್ನೂ ಮತವನ್ನೂ ಪ್ರಸರಿಸುವ ಬದಲು ಅವರೊಳಗೆ ಇದ್ದ ಜ್ಞಾನವನ್ನೂ ನಿರ್ಮೂಲಿಸಿ, ನಿಜವಾದ ಆತ್ಮಕ್ಕೆ ಬಲ ಕೊಡಬಲ್ಲ ಮತವನ್ನು ಉಪದೇಶಿಸುವ ಬದಲು, ಮನಸ್ಸಿನಲ್ಲಿ ಭಯವನ್ನು ಹೆಚ್ಚಿಸಿ ಸುಳ್ಳು ಭಕ್ತಿಯನ್ನು ಪ್ರೇರಿಸುತ್ತಿದ್ದಾರೆ. ಹಿಂದೂಮತವು ಈ ರೂಪದಲ್ಲಿ ಕ್ಷಯಿಸುತ್ತಿರಲೂ, ಅದನ್ನು ಉದ್ಧರಿಸಲು ಯಾರಾದರೂ ಬಂದರೆಂದರೆ ಈ ಮಠಗಳು ಅಂತಹ ಪ್ರಯತ್ನಗಳಿಗೆ ಪ್ರಬಲ ವಿಘ್ನಕಾರಿಗಳಾಗಿ ಎದುರು ಬರುತ್ತಿವೆ.

"ರಾಷ್ಟ್ರ ಬಂಧು"ವಿನ ಪರ್ಯಾಯ ಸಂಚಿಕೆಯು ಈಗಿನ ಈ ತರದ ಪರಿಸ್ಥಿತಿಗೆ ತೀರಾ ಕಣ್ಣು ಮುಚ್ಚಿದುದನ್ನು ನೋಡಿದರೆ ನಮಗೆ ಬಹಳ ವಿಷಾದವಾಗುತ್ತಿದೆ. ಹಿಂದೂ ಸಮಾಜದಲ್ಲಿ ಮತ ವಿಷಯಕವಾದ ಪ್ರಚಂಡ ಉತ್ಕ್ರಾಂತಿಯು ಅವಶ್ಯವಿರುತ್ತದೆಂಬ ಭಾವನೆಯನ್ನು "ನವಯುಗ"ವಾದರೂ ಉಂಟು ಮಾಡಿದುದಕ್ಕಾಗಿ ನಾವು ಋಣಿಗಳಾಗಿದ್ದೇವೆ. ಮತ್ತು ಈ ತರದ ನೂತನ ಭಾವವನ್ನು ಹರಡಿಸಲಿಕ್ಕೆ ಪರ್ಯಾಯಕ್ಕಿಂತ ಉತ್ತಮ ಸಂದರ್ಭವು ಇನ್ನೊಂದಿಲ್ಲ.

ಪ್ರಕೃತ ಮಠಗಳು ಮಾತ್ರವೇ ಈಗಿನ ಅಧೋಗತಿಯಲ್ಲಿರುವಂತಹವು ಎನ್ನಲಾಗುವುದಿಲ್ಲ. ಗೃಹಸ್ಥರಿಂದ ನಡೆಸಲ್ಪಡುವ ದೇವಸ್ಥಾನಗಳೂ ಈ ಮಠಗಳಿಗಿಂತ ಉತ್ತಮ ಸ್ಥಿತಿಯಲ್ಲಿಲ್ಲ. ದೇವಸ್ಥಾನದ ಆಡಳಿತವು ಆಗಾಗ ಹೊಸ ಹೊಸ ಸಮಾಜದ ಮುಖಂಡರ ಕೈಯಲ್ಲಿ ಬರುತ್ತಿರುವುದಾದರೂ, ಅನಾದಿ ಕಾಲದಿಂದಲೂ ಅವುಗಳ ಅವ್ಯವಸ್ಥೆಯೂ ಅವನತಿಯೂ, ಬಾಳಿಯೇ ಬಂದಿವೆಯೆಂಬುದು ಅತ್ಯಂತ ಆಶ್ಚರ್ಯಕರವಾದ ಸಂಗತಿಯು. ಹಿಂದೂಗಳು ಎಂದಿನ ವರೆಗೆ ಈ ಸಂಸ್ಥೆಗಳ ಉದ್ಧಾರಕ್ಕಾಗಿ ಮುಂದೆ ಬರುವುದಿಲ್ಲವೋ, ಅಂದಿನ ವರೆಗೆ ಹಿಂದೂ ಸಮಾಜವು ಸವೆಯುತ್ತಾ ಹೋಗುವುದರಲ್ಲಿ ಸಂದೇಹವಿಲ್ಲ.

\+ + + +

Stop Press.

ಪೆರುಸಿನಲ್ಲಿ ಡಿಕ್ಟೇಟರ್ ಮೇಯರರಾದ ಗೆಟ್ಟೋ ಎಂಬವರನ್ನು ಮೋಸದ, ಕಳ್ಳಾಟಕೆಯ ಆರೋಪದ ಮೇಲೆ ಸೆರೆ ಹಿಡಿದ ಮರುದಿನವೇ ದೇಶದಲ್ಲೆಲ್ಲಾ ಭಯಂಕರ ಕ್ರೋಧ ಎದ್ದಿದೆ.

ಅಮೇರಿಕದಲ್ಲಿ ೩೮,೪,೦೦೦,೦೦೦ ಡಾಲರುಗಳನ್ನು ವೆಚ್ಚ ಮಾಡಿ ೧೯೩೯ರೊಳಗೆ ೧೦೧ ಯುದ್ಧನಾವೆಗಳನ್ನು ಕಟ್ಟಬೇಕೆಂದು ನಿರ್ಧಾರ!

ರಾಜಕೀಯ ಕಚೇರಿಗೆ ಒಳಗಾಗಿ ಮೂರು ತಿಂಗಳುಗಳಿಂದ ಸೆರೆಯಲ್ಲಿದ್ದ ಅನೇಕ ಜರ್ಮನ್ ಯುವಕರಿಗೆ ಪಾರಿ ಶಿಕ್ಷೆಯಾಯಿತು. ಗಲ್ಲಿಗೇರಿಸುವ ಸಮಯದಲ್ಲಿ ೩೪ ಮಂದಿ ಕಾಣೆ!

ಶ್ರೀಮತಿ ಮೋತಿಲಾಲ ನೆಹರೂರವರು ಪುನಃ ಉದರ ಬೇನೆ ಯಿಂದಿರುತ್ತಿರುವರು. ಶ್ರೀಮತಿ ಕಮಲಾ ನೆಹರುರವರೂ ಅಸೌಖ್ಯದಿಂದಿರುತ್ತಾರೆ.

ಪರಾಗುವಾ ಮತ್ತು ಬೊಲಿವಿಯಾ ದೇಶಗಳೊಳಗೆ ಯುದ್ಧವೆದ್ದಿದೆ. ಕ್ರಿಸ್‌ಮಸ್ ವೇಳೆ ರಾಜಿಯಾಗಿದ್ದರು. ಎರಡನೆಯವರು ಅನೇಕ ಪ್ರಾಂತ್ಯಗಳನ್ನು ಕೈವಶಪಡಿಸಿರುವರು.

ದೇವಸ್ಥಾನಕ್ಕೆ ತಾಗಿ ಇರುವ ಮನೆಯನ್ನು ಬಾಡಿಗೆಗೆ ಪಡೆದುಕೊಂಡು, ಮನೆಯೊಳಗಿನಿಂದ ಒಂದು ದಾರಿ ಕೊರೆದು, ದೇವಸ್ಥಾನಕ್ಕೆ ಹೊಕ್ಕು, ೫೦,೦೦೦ ರೂಪಾಯಿಗಳ ನಗಗಳನ್ನು ಕದ್ದ ಇಬ್ಬರು ಪುರುಷರಿಗೂ ಒಬ್ಬಳು ಸ್ತ್ರೀಗೂ ಕಲ್ಕತ್ತದಲ್ಲಿ ವಿವಿಧ ಶಿಕ್ಷೆಯಾಗಿದೆ.

ಚಿತ್ತಗಾಂಗಿನಲ್ಲಿ ಬೇಂಟೆಗೆ ಪೋಲೀಸರ ಗುಂಡಿನಿಂದ ಬಿದ್ದ ಒಬ್ಬ ಯುವಕನು ಆಸ್ಪತ್ರೆಯಲ್ಲಿ ತೀರಿಕೊಂಡನು.

ಮದ್ರಾಸಿನ ಸರಸ್ವತೀ ಸ್ಟೋರ್ಸ್‌ನವರಿಂದ ಮಾರಲ್ಪಡುವ ಓಡಿಯನ್ ಗ್ರಾಮೊಫೋನ್ ರಿಕಾರ್ಡಿನಲ್ಲಿ ಚಳ್ಳಿಯ ಕುರಿತಾಗಿ ನಿಷಿದ್ಧ ಗೀತೆಯಿರುವುದರಿಂದ ಅದನ್ನು ಕಂಡ ಕಂಡಲ್ಲಿ ಅಧಿಕಾರಿಗಳು ವಶೀಕರಿಸಬಹುದೆಂದು ಮದ್ರಾಸು ಸರಕಾರವು ಪ್ರಕಟಿಸಿರುತ್ತದೆ.

ಶೀಲನಾಗಿಣಿ ದೇವಿಯು ಭ್ರಾಂತಳಲ್ಲವೆಂದು ನಿರ್ಧರಿಸಿ ಅವಳನ್ನು ಅಮೇರಿಕಕ್ಕೆ ಕಳುಹಿಸಬೇಕೆಂದಿರುವರು.

ನಾದಿರ ಶಹಾರನ್ನು ಕೊಂದ ಸಂಬಂಧವಾಗಿ ೧೪ ಮಂದಿಗಳನ್ನು ಶಾಮಹಮ್ಮದ್ (ಯುದ್ಧ ಮಂತ್ರಿ) ಇವರೆದುರು ಪಾರಿಗೇರಿಸಿದರು.

\+ + + +

ಒಳದೇಶ ವರ್ತಮಾನ.

ಬೆಳಗಾವಿನ ಪಚೋರ್ ಎಂಬಲ್ಲಿ ಐದು ಮಂದಿ ಸೇರಿ ರೈಲು ಕಂಬಿಗಳ ನೊಳ ತಪ್ಪಿಸುತ್ತಿದ್ದಾಗ ಕೆಲವರು ಕಂಡು ಪೋಲೀಸ್ ಠಾಣೆಗೆ ಹೋಗಿ ಓಡಿದರು.

ಮದ್ರಾಸಿನ ಗವರ್ನರರಾಗಿದ್ದ ಸರ್ ಸ್ಟ್ಯಾನ್ಲಿಯವರು ವೈಸರಾಯರಾಗಿ ನೇಮಕ ಹೊಂದಿದೊಡನೆ ಮದ್ರಾಸ್ ಗವರ್ನರರಾಗಿ ಸರ್ ಮಹಮ್ಮದ್ ಉಸ್ಮಾನರು ಚುನಾಯಿತರಾಗಬಹುದೆಂದು ಅಭ್ಯಸ.

ಉತ್ತರ ಮಲಬಾರಿನ ಡಿಸ್ಟ್ರಿಕ್ಟ್ ಬೋರ್ಡಿನ ಅಡ್ಮಿನಿಸ್ಟ್ರೇಷನ್‌ನಲ್ಲಿ ಬಸ್ಸು ವ್ಯವಹಾರವು ನಿಂತಿದೆ. ಡಿ. ಬೋರ್ಡು ಸರ್ವೀಸು ಬಸ್ಸುಗಳಿಂದ ವಿಪರೀತ ತೆರಿಗೆಯನ್ನು ವಸೂಲು ಮಾಡಿರುವುದೇ ಈ ಮುಷ್ಕರದ ಕಾರಣವೆಂದು ತಿಳಿಯಲಾಗಿದೆ.

ಲಾಹೋರಿನ ಕಂಟೋನ್‌ಮೆಂಟಿನಲ್ಲಿ ಮಿಸೆಸ್ ಸ್ಮಿತ್ ಮತ್ತು ಒಸ್‌ಬೋರ್ನ್ ಎಂಬವರು ಬಿದ್ದಿದ್ದರು. ಹತ್ತಿರ ಹೋಗಿ ನೋಡುವಾಗ ಅವರ ಬಳಿ ಒಂದು ಬಂದೂಕು ಇದ್ದಿತು. ಪರೀಕ್ಷಿಸಲು ಇಬ್ಬರೂ ಆ ಲೋಕದಲ್ಲಿದ್ದುದು ಕಂಡು ಬಂತು. ಕೊಲೆ ಮತ್ತು ಆತ್ಮಹತ್ಯವೆಂದು ಊಹೆ

ನ್ಯೂಡಿಲ್ಲಿಯ ಸರ್ ಅಬ್ದುಲ್ ರಹಮಾನರವರಿಗೆ ನೈಟ್ ಬಿರುದು ಸಿಕ್ಕಿದುದಕ್ಕೆ ಡಿಲ್ಲಿಯ ಬಾರ್ ಎಸೋಸಿಯೇಶನಿನವರು ಒಂದು ಎಮರ್ಜೆಂಟ್ ಸಭೆ ಜರಗಿಸಿ ಅವರನ್ನು ಅಭಿನಂದಿಸಿದರು. ಇದನ್ನು ಕಂಡು ಫರ್ದಿಲ್ ಹಕ್ ಎಂಬವರು ನೋಟೀಸು ವಿನಹ ಈ ಸಭೆಯು ಜರಗಿದುದು ತಪ್ಪೆಂದರು. ಗಲಾಟೆಯಾಯಿತು. ಕುರ್ಚಿ ಮೇಜುಗಳು ಹಾರಿದುವು. ಅಧ್ಯಕ್ಷರು ಏನನ್ನೂ ಹೇಳದೆ ಹೊರಗೆ ಎಲ್ಲಿಗೋ ನಡೆದುಬಿಟ್ಟರು. ಅಭಿವಂದನೆಯಾಯಿತು!

ಕರಾಚಿಯ ಕೆಮ್ಹಾನ್ ಎಂಬಲ್ಲಿ ೩೧ನೇ ದಿನ ಭಯಂಕರ ಭೂಕಂಪವುಂಟಾಯಿತು. ಹಳ್ಳಿಗರು ದೂರದಿಂದ ಮಹಾ ಶಬ್ದವನ್ನೂ ಬೆಂಕಿಯನ್ನೂ ಕಂಡರು. ಮರುದಿನ ಹೋಗಿ ನೋಡಲು ಒಂದು ಸ್ಥಳದಲ್ಲಿ ವಿಸ್ತಾರವಾದ ಹೊಂಡವು ಬಿದ್ದಿದ್ದು, ಅದರೊಳಗಿಂದ ಗೇಸ್ ಹೊರಬರುತ್ತಿತ್ತು.

ನಂದಿದುರ್ಗದ ಬಂಗಾರದ ಗಣಿಯಲ್ಲಿ ಕೆಲಸಕ್ಕಿದ್ದ ಮುನಿಸ್ವಾಮಿ ಎಂಬವನು ೧೫೦ ಅಡಿಗಳ ಕೆಳಕ್ಕೆ ಬಿದ್ದು ಮೃತನಾದನು.

ಮೈಸೂರಿನ ಶ್ರೀ ಎಂ. ನರಸಿಂಹ ಮೂರ್ತಿ ಎಂಬವರು ತಯಾರಿಸಿದ ಕನ್ನಡ ಟೈಪ್‌ರೈಟರ್ ಯಂತ್ರವನ್ನು ಅವರು ಬಳ್ಳಾರಿ ಪ್ರದರ್ಶನದಲ್ಲಿ ಉಪಯೋಗಿಸಿ ಸಾರ್ವಜನಿಕರಿಗೆ ತೋರಿಸಿದರು.

ಮಹಾತ್ಮಾ ಗಾಂಧಿಯವರು ತನ್ನ ಕೇರಿಗೆ ಬರಲಿಲ್ಲವೆಂಬ ದುಃಖದಿಂದ ಬೆಂಗಳೂರಿನ ಪಂಡಿತನಾಥ್ ಪೇಟೆಯ ಮುತ್ತುಸ್ವಾಮಿ ಎಂಬ ಹರಿಜನ ಸೇವಕರೊಬ್ಬರು ದಿಶಂಬರ ೨೫ರಿಂದ ನಿರಶನವ್ರತವನ್ನು ಕೊಟ್ಟಿರುವರು.

ಮೈಸೂರಿನ ಮಾಜಿ ದಿವಾನರಾದ ದಿವಾನ್ ಬಹದ್ದೂರ್ ಎಂ. ಎನ್. ಕೃಷ್ಣರಾಯರಿಗೆ 'ಸರ್' ಬಿರುದು ದೊರೆತಿದೆ.

ಬೆಂಗಳೂರಿನ ರಾವ್ ಬಹದ್ದೂರ್ ಪ್ರಾಕ್ತನ ವಿಮರ್ಶ ವಿಚಕ್ಷಣ ಆರ್. ನರಸಿಂಹಾಚಾರ್‌ರವರಿಗೆ "ಮಹಾ ಮಹೋಪಾಧ್ಯಾಯ" ಬಿರುದು ದೊರೆತಿದೆ.

ತಾ. ೯ನೇ ದಿನ ಮದ್ರಾಸಿನ ಸುಪ್ರಸಿದ್ಧ ಕ್ರಿಕೆಟ್ ಆಟಗಾರರಾದ ಶ್ರೀ. ಪಿ. ಆರ್. ಮುಗೇಶನ್‌ರವರು ಕಾಲವಾದರು.

ಮುಂಬಾಯಿ ಪಿ.ಲ್ ಮ್ಯಾಕೆರ ಸಂಘದ ಚೆಯರ್‌ಮೆನರಾಗಿ ಶ್ರೀ. ಎಚ್. ಪಿ. ಮೋದಿಯವರು ಚುನಾಯಿತರಾಗಿರುವರು.

ಮುಂಬಾಯಿ ಕ್ರಾನಿಕಲಿನ ಮುದ್ರಕರಾದ ಶ್ರೀ ಕೆ. ಆರ್. ಗಂಧ್ರೆ ಎಂಬವರು, ಸೆರೆಯಲ್ಲಿದ್ದ ಡಾ। ಪಟ್ಟಾಭಿಯವರ ಅಭಿವಚನವನ್ನು ಪ್ರಕಟಿಸಿದುದಕ್ಕಾಗಿ ೯ ತಿಂಗಳ ಕಠಿಣ ಸಜೆಗೆ ಗುರಿಯಾಗಿರುವರು.

ನಾಗಪುರದ ಮೂರನೆ ಡಿಕ್ಟೇಟರಾದ ಶ್ರೀ ಹಿರಾಜಿ ಬೌಸಾರ ಎಂಬವರನ್ನು ದಸ್ತಗಿರಿ ಮಾಡಿ ೬ ತಿಂಗಳ ಕಠಿಣ ಶಿಕ್ಷೆ ವಿಧಿಸಿರುವರು.

ಜಯಕರ್ನಾಟಕ ಕಚೇರಿಯಲ್ಲಿ ಜೀವನ ಸಂಗೀತವು.

ಹಲಸಂಗಿಯ ಹಾಡುಗಾರರಿಗೆ ಬಳ್ಳಾರಿಯಿಂದ ಹುಬ್ಬಳ್ಳಿ ಸಾಹಿತ್ಯ ಸಮ್ಮೇಲನಕ್ಕೆ ಸರಿಯಾಗಿ ಬರುವುದಾಗಲಿಲ್ಲ. ಯಾವತ್ತೂ ಕಾರ್ಯಕ್ರಮವು ಮುಗಿಯುವ ಸಮಯದಲ್ಲಿ ಬಂದುದರಿಂದ ಸ್ಥಳಕ್ಕೆ ನಿಲ್ಲಲು ಅವಕಾಶವಿರಲಿಲ್ಲ. ಕೆಲವು ಜನರ ಆಗ್ರಹದ ಮೂಲಕ ಪಂಡಿತನ್ನಂದಿರದಲ್ಲಿ ಪ್ರವೇಶ ಮಾಡಿ ಒಂದೇ ಒಂದು ಹಾಡನ್ನು ಹೇಳಿದರು. ಒಂದೇ ಸವನೇ ೩—೪ ಗಂಟೆಗಳ ವರೆಗೆ ಕುಳಿತ ಪ್ರೇಕ್ಷಕರು ಅವಸರ ಮಾಡಿದ್ದರಿಂದ ಸಭೆಯು ಮುಕ್ತಾಯವಾಯಿತು. ವೇಳೆಯ ಅನಾನುಕೂಲತೆಯಿಂದ ಇವರ ಸ್ವಾರಸ್ಯಮಯ ಲಾವಣಿಗಳು ಸಭಿಕರಿಗೆ ಕೇಳಸಿಕ್ಕಲಿಲ್ಲ. ವಿದ್ವನ್ಮಣಿಗಳೆಲ್ಲರಿಗೂ ಕೇಳಬೇಕೆಂಬ ಕುತೂಹಲವು ಹೆಚ್ಚಾಗಿದ್ದರಿಂದ ಜಯಕರ್ನಾಟಕ ಸಂಪಾದಕರು ತಮ್ಮ ಕಚೇರಿಯಲ್ಲಿ ಯಾವತ್ತೂ ಕಾರ್ಯಕ್ರಮವನ್ನಿಟ್ಟು ಜನಪದ ಸಾಹಿತ್ಯ—ಜೀವನ ಸಂಗೀತದ ಸವಿಯನ್ನುಣಿಸಿದರು. ಸಾಹಿತ್ಯ ಸಮ್ಮೇಲನದ ಅತಿಥಿಗಳಾದ ಬೆಂಗಳೂರು ಮೈಸೂರು ಕೊಡಗು ಮಂಗಳೂರು ಕಡೆಯ ಎಲ್ಲ ಸಾಹಿತಿಗಳೂ ಧಾರವಾಡದ ಪ್ರಮುಖ ಸಾಹಿತಿಗಳೂ ಕಾಲೇಜು ವಿದ್ಯಾರ್ಥಿಗಳೂ, ಸದ್ಗೃಹಸ್ಥರೂ ಸಭೆಗೆ ದಯಮಾಡಿಸಿದ್ದರು. ಜನಪದ ಸಾಹಿತ್ಯಗಮಿತಿಗಳಾದ ಹಾಡುಗಾರರು ಸ್ವಾರಸ್ಯಪೂರ್ಣ ವೈಖರಿಯಲ್ಲಿ ಜೀವನ ಸಂಗೀತಗಳನ್ನು ಹೇಳಿ ಎಲ್ಲ ಜನರನ್ನು ಆನಂದಗೊಳಿಸಿದರು.

ಮುಂಬಾಯಿಯ ಸೆಸ್ಸೂನ್ ಸ್ಪಿನ್ನಿಂಗ್ ಮತ್ತು ವೀವಿಂಗ್ ಮಿಲ್‌ಗಳಲ್ಲಿ ಹೊಸಬರಾಗಿ ಕೆಲಸಕ್ಕೆ ಸೇರಿದವರ ಮೇಲೆ ಮುಷ್ಕರಗಾರರಾದ ೬೦೦ ಹಳೆ ಕೆಲಸಗಾರರು ಬಿದ್ದು ಮಾರಾಮಾರಿ ನಡೆದು, ಪೋಲೀಸರು ಗುಂಡು ಹಾರಿಸುವಂತಾಗಿ, ಕೆಲವರು ಪೆಟ್ಟುಗೊಂಡು ಆಸ್ಪತ್ರೆ ಸೇರಿದರು.

ಅಲ್ಲಹಾಬಾದಿನ ಕಾಂಗ್ರೆಸ್ ಮುಖಂಡರಾದ ಮಿ। ರಫೀಕ್ ಅಹಮ್ಮದ್ ಕಿದ್ವಾಯಿಯವರನ್ನು ದಸ್ತಗಿರಿ ಮಾಡಿರುವರು ಮುಂದಕ್ಕೆ ತಾವೇನು ಮಾಡಲೆಂದು ಆಲೋಚಿಸಲು ಆನಂದಭವನದಲ್ಲಿ ಸಭೆ ಸೇರಿ ಆಲೋಚಿಸಿಕೊಳ್ಳುತ್ತಿರುವರು

ಜಪಾನೀಯ ಗಿರಣಿ ಪ್ರತಿನಿಧಿಗಳಾದ ಮಿ। ಕುರಾಕರವರು ಹಿಂದುಸ್ಥಾನದೊಡನೆ ಮಾಡಿ, ಜಯಗೊಂಡ ಕರಾರನ್ನು ನೆನೆನೆನೆದು ಸಂತೋಷದಿಂದ ಇಲ್ಲಿಯಿಂದ ಕಲ್ಕತ್ತೆಗೆ ತೆರಳಿದರು

ತಾ. ೬ನೇ ದಿನ ಹಿಂದುಸ್ಥಾನದಲ್ಲೆಲ್ಲಾ ಮಹಮ್ಮದಾಲಿಯವರ ತೃತೀಯ ವಾರ್ಷಿಕೋತ್ಸವವು ಜರಗಿತು

ನಾಗಪುರದ ಮೂರನೇ ಡಿಕ್ಟೇಟರರಾದ ಶ್ರೀ। ಹಿರಂಜಿ ಚೌಸಾರ ಎಂಬವರನ್ನು ದಸ್ತಗಿರಿ ಮಾಡಿ ಆರು ತಿಂಗಳ ಕಠಿಣ ಶಿಕ್ಷೆ ವಿಧಿಸಿರುವರು.

ಚಿತ್ತಗಾಂಗಿನಲ್ಲಿ ನಾಲ್ವರು ಯುವಕರು ಯೂರೋಪಿಯನರ ಮೇಲೆ ಬಾಂಬೆಸೆದ ಸಂಬಂಧವಾಗಿ ಪಟ್ಟಣದಲ್ಲಿ ಅನೇಕ ಕೈದುಗಳಾದುವು

ಹೊಸ ಸ್ಪೀಕರರಾಗಿ ಚುನಾಯಿತರಾದವರನ್ನು ಅಭಿವಂದಿಸುವ ಪ್ರದೇಶದಲ್ಲಿ ಟೋಕಿಯೋ ರೈಲ್ವೇ ಸ್ಟೇಶನಿನಲ್ಲಿ ೭೧ ಜನರು ರೈಲಿನಡಿಗೆ ಸಿಕ್ಕಿ ಮೃತರಾದರೆಂದೂ, ೫೦ ಜನರು ಪೆಟ್ಟುಗೊಂಡರೆಂದೂ ತಿಳಿದು ಬಂದಿದೆ

ಪಂಡಿತ ಜವಾಹರಲಾಲರು ಒಂದು ಪ್ರಕಟಣೆಯನ್ನು ಹೊರಡಿಸಿ, ಹಿಂದುಸ್ಥಾನಕ್ಕೆ ಅದರ ಜನರಿಂದಲೇ ಒಂದು ಪಾರ್ಲಿಮೆಂಟು ಅಥವಾ ಎಸೆಂಬ್ಲಿಯು ಬೇಕೆಂದು ಹೇಳಿರುವರು

ಅಲಹಾಬಾದಲ್ಲಿ ಹಿಂದೂ ಮಹಾ ಸಮ್ಮೇಳನವು ಜರಗಿ ಹರಿಜನರ ಉದ್ಧಾರವಾಗಬೇಕೆಂದೇ ಠರಾವುಗಳಾದುವು

ನ್ಯೂಡಿಲ್ಲಿಯಲ್ಲಿ ವಿಷವು ಆಕಸ್ಮಿಕವಾಗಿ ರಾತ್ರಿ ಮಲಗಿದ್ದ ಒಂದು ಕುಟುಂಬವೂ, ಒಬ್ಬ ರಾಜರ ನೌಕರನ ಸೇವಕನೂ ಕೋಣೆಯೊಳಗಿನ ಕಾರ್ಬನ್ ಮೊನೊಕ್ಸೈಡ್ ಎಂಬ ವಿಷಗಾಳಿಯಿಂದಾಗಿ ಮೃತರಾದರು

ಮದ್ರಾಸಿನ ಟೆಲಿಫೋನು ಚಂದಾದಾರರಿಗೆ, ಅವರಿಗೆ ಬರುವ ತಂತಿಗಳನ್ನು ತಂತಿ ಆಫೀಸಿನಿಂದ ಟೆಲಿಫೋನು ಮೂಲಕ ರವಾನಿಸಬಹುದೋ ಎಂದು ಅಧಿಕಾರಿಗಳು ಪ್ರಶ್ನಿಸುತ್ತಿದ್ದಾರೆ

ಮದ್ರಾಸಿನ ಕೆನ್ ಕೊಪ್ಪದ ಜನತೆಯು ಒಟ್ಟು ಸೇರಿ ಪ್ರಸಿದ್ಧ ಗಾಯಕರಾದ ದಿವಂಗತ ಎಸ್ ಜಿ ಕಿಟ್ಟಪ್ಪನವರ ಒಂದು ಪ್ರತಿಮೆಯನ್ನು ನಿಲ್ಲಿಸಬೇಕಾಗಿ ನಿರ್ಧರಿಸಿರುವರು.

ಪುರಿಯ ಶಂಕರಾಚಾರ್ಯ ಸ್ವಾಮಿಯವರು ಮಠದಲ್ಲಿ ಭಾಷಣ ಮಾಡುತ್ತ ಈಗಿನ ಜನರಿಗೆ ಪಾಶ್ಚಾತ್ಯರ ಗಂಧಗಾಳಿ ಸರಿಯಾಗಿ ತಗಲಿ ಅವರು ಧರ್ಮವನ್ನು ಮರೆತು ನಡೆಯುತ್ತಾರೆಂದೂ ಸನ್ಯಾಸವೇ ಮಹಾತ್ಮ್ಯೆಯೆಂದೂ ಹೇಳಿದರು

ಸ್ವೀಕಾರ.

ಮಂಗಳೂರಿನ ನವಯುಗದ ಸಂಕ್ರಾಂತಿ ಸಂಚಿಕೆಯೊಂದು ಹಸ್ತಗತವಾಗಿದೆ ಪ್ರಮುಖರ ಲೇಖನಗಳಿವೆ. ಸ್ವಾಭಿಮಾನಿಯ ಸಾಹಸ ಮಹಿಳೆಯರು ಓದಲೇ ಬೇಕಾದುದು

ದಕ್ಷಿಣ ಕನ್ನಡ.

ಮಂಗಳೂರು: ಇದೇ ತಾ. ೧೪ರಲ್ಲು ಮಂಗಳೂರಿಗೆ ಬರುವ ಮಹಾತ್ಮಾ ಗಾಂಧಿಯವರಿಗೆ ಕಾಸರಗೋಡು ತಾಲೂಕು ಬೋರ್ಡಿನ ಪರವಾಗಿ ಒಂದು ಮಾನಪತ್ರವನ್ನು ಕಾಸರಗೋಡು ರೈಲ್ವೇ ಸ್ಟೇಶನಿನಲ್ಲಿ ಕೊಡುವ ಬಗ್ಗೆ ಇದೇ ತಾ. ೧೧ನೇ ಬೆಳಿಗ್ಗೆ ಕೂಡುವ ಸದರಿ ಬೋರ್ಡಿನ ಜನರಲ್ ಮೀಟಿಂಗಿನಲ್ಲಿ ತೀರ್ಮಾನಿಸುವ ಬಗ್ಗೆ ಒಂದು ನಿರ್ಣಯವನ್ನು ಬರೆದು ಸದರಿ ಬೋರ್ಡಿನ ಪ್ರೆಸಿಡೆಂಟರಿಗೆ ರಾ। ಎಂ. ಸಿ ಮುದ್ದಿಯವರು ಕಳುಹಿಸಿ ಆ ಕುರಿತು ಗಾಂಧೀ ಸ್ವಾಗತ ಸಮಿತಿ ಸೆಕ್ರೆಟರಿಗಳಾದ ಮಂಗಳೂರಿನ ರಾ। ಎಂ ಆರ್ ಪೊಂಜರರವರೊಡನೆ ಪತ್ರವ್ಯವಹಾರ ನಡೆಸಿದ್ದಾರೆಂದು ತಿಳಿದು ಬರುತ್ತದೆ

ಇದೇ ತಿಂಗಳ ತಾ. ೯ರಲ್ಲು ರಾತ್ರಿ ಗಂಟೆ ೯ಕ್ಕೆ ಮುಂಬಾಯಿಯ ರಾ। ಶಿವರಾಮ ಶ್ಯಾನುಭೋಗರ ಮರಾಠಿ ಭಾಷೆಯ "ಚಂದ್ರಹಾಸ ಆಖ್ಯಾನ" ಎಂಬ ಹರಿಕೀರ್ತನೆಯು "ಶ್ರೀ ಚಾಮುಂಡೇಶ್ವರೀ ಸಂಗೀತ ಸಭೆ"ಯವರ ಮಾಳಿಗೆಯಲ್ಲಿ ಚಲೋ ರೀತಿಯಿಂದ ನಡೆಯಿತು ಶ್ರೀ ಕೂಳೂರು ಬಾಬುರಾಯರ ಹಾರ್ಮೋನಿಯಂ ವಾದನವೂ ಬಂಟ್ವಾಳ ಶ್ರೀನಿವಾಸ ಕಾಮತರ ತಬ್ಲೆ ಬಾರಿಸುವಿಕೆಯೂ ಚಲೋದಾಗಿತ್ತು ಕೊನೆಗೆ ಇಲ್ಲಿಯ ಟ್ರೈನಿಂಗ್ ಶಾಲೆಯ ಉಪಾಧ್ಯಾಯರಾದ ಕೆ ಶ್ರೀನಿವಾಸ ಕಾಮತರು ಹರಿದಾಸರನ್ನು ಹೊಗಳಿ ಕೆಲವು ಮಾತುಗಳನ್ನು ಆಡಿದರು

ನಮ್ಮ ಜಿಲ್ಲೆಯವರಾದ ದಕ್ಷಿಣ ಆರ್ಕಾಡಿನ ಡಿ ಮೆಡಿಕಲ್ ಆಫೀಸರರಾಗಿರುವ ಡಾ ಬಿ ಟಿ ಕಾಮತರವರಿಗೆ ರಾವ್ ಸಾಹೇಬ್ ಎಂಬ ಬಿರುದು ದೊರೆತಿದೆ

ಶ್ರೀ ಗೋಕರ್ಣನಾಥ ದೇವಸ್ಥಾನ ಸಂಬಂಧದ ಕೆಲಸಗಳಿಗಾಗಿ ಮುಂಬಾಯಿಗೆ ತೆರಳಿದ್ದ ರಾವ್ ಬಹದ್ದೂರ್ ಎನ್ ಎಸ್ ಸುವರ್ಣರವರು ಕಳೆದ ವಾರ ಊರಿಗೆ ಬಂದಿದ್ದು ಅಲ್ಲಿ ತನ್ನನ್ನು ಆದರಿಸಿ ಸತ್ಕರಿಸಿದ ಎಲ್ಲಾ ಸಮಾಜ ಸಂಸ್ಥೆಗಳಿಗೂ ಮಹನೀಯರುಗಳಿಗೂ ಅಭಿನಂದನೆ ಇತ್ತಿದೆಯೆಂದು ತಿಳಿಸಿರುವರು

"ವಿರಾಟಬಾಯಿ" ಎಂಬ ನಾಟಕವನ್ನು ಬಡವರ ಬಂಧುವಿನ ಸಹಾಯಾರ್ಥವಾಗಿ ತಾ ೨೦ನೇ ದಿನ ಗಣಪತಿ ಹೈಸ್ಕೂಲಿನಲ್ಲಿ ಆಡಬೇಕೆಂದು ಪ್ರಕಟವಾಗಿರುವುದಾದರೂ ಇದೇ ನಾಟಕವನ್ನು ಮೈದಾನಿನಲ್ಲಿ ಕಟ್ಟಿಸಿದ ಚಂದ್ರಕಲಾ ನಾಟಕ ಮಂದಿರದಲ್ಲಿ ಆಡಬಹುದೆಂದು ಅದರ ಮೆನೇಜರರು ಒಪ್ಪಿರುವುದರಿಂದ ನಾಟಕವನ್ನು ಮುಂದರಿಸಲಾಗಿದೆಯೆಂದು ಬಂಧುವಿನ ಸಂಪಾದಕರು ತಿಳಿಸುತ್ತಾರೆ

ಪೋಲೀಸ್ ಇನ್ಸ್‌ಪೆಕ್ಟರ್ ಜನರಲರವರು ಮಂಗಳೂರಿಗೆ ಬರುವ ವಾರ ಬರಲಿರುವರು

ಮಂಗಳೂರು ಮುನಿಸಿಪಾಲಿಟಿಗೆ ಒಬ್ಬ ಕಮಿಶನರರನ್ನು ನೇಮಕ ಮಾಡುವರಾಗಿ ತಿಳಿದು ಬಂದಿದೆ

ಇಲ್ಲಿಯ ಮುನಿಸಿಪಲ್ ಆಫೀಸಿನಲ್ಲಿ ಕಳೆದ ೩೦ ವರ್ಷಗಳಿಂದಲೂ ಕೆಲಸದಲ್ಲಿದ್ದ ರೆವೆನ್ಯೂ ಆಫೀಸರರಾದ ರಾ। ಎಮ್ ರಾಮಪ್ಪನವರು ತನ್ನ ಉದ್ಯೋಗದ ಅವಧಿ ಮುಗಿಯುತ್ತಲೇ ನಿವೃತ್ತರಾಗುವರೆಂದೂ ಮುಂದಕ್ಕೆ ಈ ಸ್ಥಾನವು ತೆಗೆದು ಹಾಕಲ್ಪಡುವುದೆಂದೂ ತಿಳಿಯಲಾಗಿದೆ

ಮಹಾತ್ಮರು ತಾ. ೧೪ಕ್ಕೆ ಪಯ್ಯನೂರಿನಿಂದ ಬೆಳಿಗ್ಗೆ ೯ ೩೦ರ ರೈಲಿನಲ್ಲಿ ಇಲ್ಲಿಗೆ ಬರುವರು

ತಾ ೬-೧-೩೪ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯೊಳಗೆ ಒಟ್ಟು ೨೪ ಮರಣಗಳೂ ೫೫ ಜನನಗಳೂ ಆಗಿರುತ್ತವೆ

ಹೊಸ ವರ್ಷದ ಗೌರವಾರ್ಥವಾಗಿ ಮಾಜಿ ಡಿಸ್ಟ್ರಿಕ್ಟ್ ಜಡ್ಜರಾದ ಶ್ರೀ ಬಂಟ್ವಾಳ ವೆಂಕಟರಾಯರಿಗೆ ರಾವ್ ಸಾಹೇಬ್ ಬಿರುದು ಬಂದಿದೆ

ಮಹಾತ್ಮಾ ಗಾಂಧಿಯವರು ಮಂಗಳೂರಿಗೆ ಬಂದ ವೇಳೆ ಇಲ್ಲಿಯ ಕೆನರಾ ಹೈಸ್ಕೂಲಿನ ಒಂದು ಉಪಕಟ್ಟಡಕ್ಕೆ ಅವರಿಂದ ಪಂಚಾಂಗ ಹಾಕಿಸುವಂತೆ ಏರ್ಪಾಡು ಮಾಡಲಾಗಿದೆಯೆಂದೂ, ಅವರಿಗೆ ಆ ಸಮಯ ಒಂದು ಥೈಲಿಯನ್ನು ಕೊಡಬೇಕೆಂದು ನಿರ್ಧಾರವಾಗಿದೆಯೆಂದೂ ತಿಳಿಯಲಾಗಿದೆ. ಈ ಥೈಲಿಗೆ ವಿದ್ಯಾಪ್ರೇಮಿಗಳೂ ಸಮಾಜದವರೂ ಉದಾರ ಮನಸ್ಕರಾಗಿ ಸಹಾಯ ಮಾಡುವರೆಂದು ಹಾರೈಸಲಾಗಿದೆ

ಉಡುಪಿ ಮಹಾತ್ಮರು ನಮ್ಮ ಜಿಲ್ಲೆಗೆ ಇದು ಮೂರನೆ ಬಾರಿ ಸಂದರ್ಶಿಸುವರಾದ್ದರೂ ಉಡುಪಿಗೆ ಮಾತ್ರ ಇದು ಪ್ರಥಮವಾದ್ದಾಗಿಯೂ ಮಕರ ಸಂಕ್ರಮಣ ಹಾಗೂ ಪರ್ಯಾಯ ಜಾತ್ರೆಯ ಕಾಲಕ್ಕೆ ವಿಶೇಷತಃ ಹಿಂದೂಗಳ ವಿಶೇಷ ಹಬ್ಬವೂ ಉತ್ತರಾಯಣ ಕಾಲದ ಪ್ರಥಮದ ದಿನವಾಗಿಯೂ ಇರುವ ಶ್ರೀ ಕೃಷ್ಣಸನ್ನಿಧಿಯಲ್ಲಿ ಅವಭೃತ ಹಾಗೂ ಹಗಲುತ್ಸವದ ಸುದಿನ ಇಲ್ಲಿಗೆ ಚಿತ್ತೈಸುವುದು ಇಲ್ಲಿನವರ ಮಹಾ ಭಾಗ್ಯವೆನ್ನಬೇಕು ಈ ಸಂತೋಷದ ಕಾಲದಲ್ಲಿ ಮಹಾತ್ಮರನ್ನು ಪ್ರತ್ಯಕ್ಷ ಕಂಡು ಆನಂದಗೊಂಡು ಪ್ರಫುಲ್ಲಿತ ಹೃದಯ ಮನಸ್ಸುಗಳಿಂದ ಸರ್ವರೂ ತನುಮನಧನಗಳಿಂದ ಮಹಾತ್ಮರು ಕೈಕೊಂಡಿರುವ ಸತ್ಕಾರ್ಯಕ್ಕೆ ನೆರವಾಗಬೇಡವೇ? ಶ್ರೀ ರಾಮನು ಲಂಕಾಪುರಿಗೆ ಸೀತಾನ್ವೇಷಣಕ್ಕಾಗಿ ಸೇತುಬಂಧನಕ್ಕೆ ತೊಡಗಿದಾಗ ಯಥಾನುಶಕ್ತಿ ಸಹಕರಿಸಲಿಲ್ಲವೇ? ಮುಕ್ತಹಸ್ತಗಳಿಂದ ಆತ್ಮಸಂತೋಷದಿಂದಲೇ [illegible] ನಿಧಿಗೆ ಸಹಾಯವಿತ್ತು ಅವರು ಬರುತ್ತ ದಾರಿಯಲ್ಲಿ ಪ್ರಯಾಣಕ್ಕೆ ತೊಡಕಾಗದಂತೆ ಇಕ್ಕೆಲಗಳಲ್ಲಿ ನಿಂತುಕೊಂಡು, ಮಹಾಸಭೆಯಲ್ಲಿ ಗಲ್ಲು ಮಾಡದೆ, ಗದ್ದಲವೆಬ್ಬಿಸದೆ ವ್ಯವಸ್ಥಾಪಕರು ಮಾಡಿದ ಏರ್ಪಾಟಿಗನುಸಾರವಾಗಿ ವರ್ತಿಸಿ ಮಹಾತ್ಮರ ದರ್ಶನ ಭಾಷಣ ಲಾಭಗಳನ್ನು ಪಡೆಯಲು ಪ್ರಯತ್ನಪಟ್ಟು ಬಂದಿರುವವರ್ಯಾರಿಗೂ ಅಡ್ಡಿಯಾಗದ ರೀತಿ ತಮ್ಮಂತೆಯೇ ಇತರರೂ ಎಂದು ಭಾವಿಸಿ ಶಿಸ್ತನ್ನು ಪಾಲಿಸಿದರೆ ಪರಮಾತ್ಮನಿಗೂ ಸಂತೋಷಕರವಲ್ಲದೆ, ಪಟ್ಟ ಎಲ್ಲಾ ಶ್ರಮಗಳು ಸಾರ್ಥಕವಾಗುವುವು, ಅಲ್ಲದೆ ಮಹಾತ್ಮರ ಅಂತಃಕರಣವು ಉಡುಪಿಗಾಗಿ ಎಂದೆಂದಿಗೂ ಒಡಮೂಡುವುದು ಅದುದರಿಂದ ಮಹಾತ್ಮರ ಆಗಮನದ ಈ ಪರಮ ಯೋಗವನ್ನು ಸರ್ವರೂ ಎಚ್ಚರದಿಂದ ಕಾದು ಉಪಯೋಗ ಮಾಡಿಕೊಂಡು ಕೃತಕೃತ್ಯ ಭಾಗಿಗಳಾಗಬೇಕೆಂದು ಗಾಂಧಿ ಸ್ವಾಗತ ಸಮಿತಿ ಉಡುಪಿ ಇವರು ವಿನಯ ಪ್ರಾರ್ಥಿಸಿಕೊಳ್ಳುತ್ತಾರೆ ಸೂಚನೆ — ಈ ಬಗ್ಗೆ ೨೦೦ಕ್ಕೆ ಕಡಿಮೆಯಾಗದ ತರುಣರು ಖಾದೀ ದುಸ್ತನ್ನು ಧರಿಸಿದವರಾಗಿ ಸ್ವಯಂಸೇವಕರಾಗಬೇಕೆಂದು ಅಂದಾಜು ಮಾಡಲಾಗಿದೆ ಉಮೇದ್ವಾರರು ತೀವ್ರ ತಮ್ಮ ಹೆಸರು ವಿಳಾಸಗಳನ್ನು ಸದರಿ ಸಮಿತಿಯ ಕಾರ್ಯದರ್ಶಿಗಳಿಗೆ ತಿಳಿಸಬಹುದಾಗಿದೆ

ತಾ ೮ರಿಂದ ಶ್ರೀ ಕೃಷ್ಣದೇವರ ಸನ್ನಿಧಿಯಲ್ಲಿ ಕಾಲಾವಧಿ ಸಂಕ್ರಮಣ ಸಂಬಂಧವಾದ ರಥೋತ್ಸವಗಳು ಪ್ರಾರಂಭವಾಗಿವೆ ಪರವೂರ ಯಾತ್ರಿಕರ ಸಂದಣಿಯೂ ಸ್ವಲ್ಪವಿದೆ ಪಟ್ಟಣದ ಆರೋಗ್ಯವು ಚೆನ್ನಾಗಿದೆ ಮಿ ಎಮ್ ಓರ್ ಸಾಹೇಬರ ಚಂದ್ರಕಲಾ ಕರ್ನಾಟಕ ಸಂಗೀತ ನಾಟಕ ಮಂಡಳಿ ಮೈಸೂರು ಇವರು ಸಂತೆಕಟ್ಟೆ ಬಳಿಯ [illegible]ಯಲ್ಲಿ ಚಂದ್ರಕಲಾ ಥಿಯೇಟರಿನಲ್ಲಿ ತಾ ೬ನೆಗೆ ದಿನ ತಮ್ಮ ಅತ್ಯಮೋಘವಾದ ಸಂಸಾರ ನೌಕವೆಂಬ ನಾಟಕವನ್ನೂ ಅನಂತರ ಸದಾರಮೆ ಮಹಾತ್ಮ್ಯ ಕಬೀರ ತಾ ೧೦ಕ್ಕೆ ತಮ್ಮ ಇನ್ನೊಂದು ಅತ್ಯಮೋಘ ನಾಟಕವಾದ ಕಂಸ ವಧಾ ಎಂಬವನ್ನು ಆಡಿರುವರು ತಾ ೧೦ನೆ ದಿನ ಶ್ರೀ ಗರುಡ ಸದಾಶಿವರಾಯರ ನಾಟಕ ಮಂಡಳಿಯವರೂ ತಮ್ಮ ಪ್ರಥಮ ದೃಶ್ಯವಾಗಿ ಸತ್ಯಸಂಕಲ್ಪವೆಂಬ ಅಸ್ಪೃಶ್ಯತಾ ನಿವಾರಣ ಹಾಗೂ ವಿಧವಾ ವಿವಾಹ ಸಂಬಂಧವಾದ ಹೊಸ ಸಾಮಾಜಿಕ ನಾಟಕವನ್ನೂ ಅಭಿನಯಿಸಿರುವರು ಈಚೆಗೆ ಹೊಸತಾಗಿ ತೆರೆಯಲ್ಪಟ್ಟಿರುವ ಮದನಮೋಹನ ಥಿಯೇಟರಿನವರು ಸತಿ ಸಾವಿತ್ರಿ ಚಲಚಿತ್ರವನ್ನು ಪ್ರದರ್ಶಿಸುತ್ತಲಿರುವರು ಆದರೆ ಫಸ್ಟ್ ಫೇಯರ್ ಕಾರ್ನಿವಲ್‌ನವರ ದುಡ್ಡು ಸೆಳೆಯೋಣದ ವಿಚಿತ್ರ ತಗಡು ಬೇರೆ ಅದಾಗ್ಯೂ ಇವರಿಲ್ಲರಿಗೆ ದೊರೆತಾಗ ಪ್ರೋತ್ಸಾಹವು ಇದರವರ ಆಶೆಗೆ ತೀರ ಕಡಿಮೆಯಾಗಿದೆ

Karnataka Chemical and Pharmaceutical Works, Ltd, Udipi (South India)
ಕುಂಭಕೋಣದಲ್ಲಿಯೂ ಮಧುರೆಯಲ್ಲಿಯೂ ಮೈಸೂರಿನಲ್ಲಿಯೂ ಸುವರ್ಣ ಪದಕಗಳನ್ನು ಪಡೆದಿರುವ
ಕರ್ಣಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದಕ್ಷಿಣ ಹಿಂದೂಸ್ಥಾನ).

ನಮ್ಮಲ್ಲಿ ಟಿಂಕ್ಚರ್ಸ್ ವಗೈರೆ ಎಲ್ಲಾ ಎಲ್ಲೋಪೆತಿಕ್ ಔಷಧ ದ್ರವ್ಯಗಳೂ, ಆಯುರ್ವೇದಿಯ ಔಷಧಿಗಳೂ, ಟೈಲೆಟ್ ಸಾಮಗ್ರಿಗಳೂ, ಸಾಬೂನುಗಳೂ, ಫೌಂಟನ್ ಪೆನ್ ಶಾಯಿಗಳೂ ತಯಾರಿಸಲ್ಪಡುತ್ತವೆ

ದ್ರಾಕ್ಷಾಸವ, ಪ್ರಸೂತಿ ಸಂಜೀವನ, ಸಿಯೋವಿಗರ್, ಸ್ನೋ,
ಕ್ಷೀರಬಲಾ, ಕಾಪ್ರೂ ಫ್ಲೋಜಿಸ್ಟಿನ್, ಯುಟೆರೀನಾ, ಇಂಕ್ಸ್

ಮೆನೆಜಿಂಗ್ ಡೈರೆಕ್ಟರ್—ವೆಂಕಟ್ರಾಯ ಅಪ್ಪಪ್ಪ ಬಾಳಿಗ

ಹೆಡ್ ಆಫೀಸು,
ಉಡುಪಿ (ದಕ್ಷಿಣ ಹಿಂದೂಸ್ಥಾನ)

ಬ್ರೇಂಚ್ ಆಫೀಸು
ದೇವಕರಣ ಮೆನ್ಶನ್ಸ್, 45 ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ ನಂ 2.

ಪಶ್ಚಿಮ ಕರಾವಳಿ ಮತ್ತು ಮೈಸೂರು ಪ್ರಾಂತ್ಯಗಳ ಪ್ರಾಮುಖ್ಯ ಏಜಂಟರು:—
ಕರ್ಣಾಟಕ ಪ್ರೊಡಕ್ಟ್ಸ್ ಡಿಸ್ಟ್ರಿಬ್ಯೂಟಿಂಗ್ ಕಂಪೆನಿ, ಮಂಗಳೂರು.

Jubilee year! *Jubilee year!*

The Bombay Life Assurance Co., Ltd.,

Bombay—Established 1908.

Chairman:—**Sir Lalubhai Samaldas,** Kt., C. I. E., J. P.

Wanted

ONE LADY ORGANISOR FOR EACH OF THE DISTRICTS OF SOUTH KANARA, COORG, BELLARY AND TWO FOR MYSORE STATE

Either on pay or commission or both with reasonable Travelling Allowance. Only educated ladies need apply. Right opportunity to those who desire independant and respectable vocation.

Applications can be made to the undersigned giving full qualifications and whether they can guarantee business.

Apply to:—

KOCHIKAR BROTHERS,
Madras Branch Secretaries.

Vishveshwarapuram Circle, *Bangalore City.* *or* Udipi, *South India.* *or* Post Box No. 337, *Mount Road, Madras.*

N. B. Intending candidates may interview by previous appointment with our Organizing Secretary (now in Bombay) who will be touring.

(25-8-33)

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು! **ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!**

ಕಸ್ತೂರಿ ಮಿಶ್ರಿತ ದಶಮೂಲಾರಿಷ್ಟ ೧೬ ಔನ್ಸ್ ಬಾಟ್ಲಿ ೧ಕ್ಕೆ ರೂ. 1-8-0 ದ್ರಾಕ್ಷಾಸವ ೧೬ ಔನ್ಸ್ ಬಾಟ್ಲಿ 1ಕ್ಕೆ ರೂ 1 ಅಶ್ವಗಂಧಾರಿಷ್ಟ ೧೬ ಔನ್ಸ್ ಬಾಟ್ಲಿ ಒಂದಕ್ಕೆ ರೂ 1-4-0. ಬಲಾಮೃತ ೧೬ ಔನ್ಸ್ ಬಾಟ್ಲಿ ೧ಕ್ಕೆ ರೂ 2 ಅಶೋಕಾರಿಷ್ಟ ೧೬ ಔನ್ಸ್ ಬಾಟ್ಲಿ ೧ಕ್ಕೆ ರೂ 1-4-0 ಚ್ಯವನಪ್ರಾಶಲೇಹ ೧ ರಾತಲಿಗೆ ರೂ. 2-8-0 ಅಭಯಾಮಲಕಿ ೧ ರಾತ್ಲಿಗೆ ರೂ 2 ಚಂದ್ರಮುಖ (ವಿಷಮಜ್ವರಕ್ಕೆ ರಾಮಬಾಣ) ೫೦ ಟಬ್ಲೆಟ್ಸಿಗೆ ರೂ 0-5-0 ದಂತಧಾವನ ಚೂರ್ಣ ತೊಲೆ ೧ಕ್ಕೆ 0-1-0. ಕ್ರಿಮಿಘಾತಿನಿ (ದದ್ರು, ಕಜ್ಜಿಗೆ) ಡಬ್ಬಿ ೧ಕ್ಕೆ ರೂ 0-4-0 ಕೃಷ್ಣಾದಿ ೧ ಡಬ್ಬಿಗೆ ರೂ 0-6-0 ಚಿತ್ರಕ (ಮಕ್ಕಳ ಗೃಹಣೀ ರೋಗಕ್ಕೆ ದಿವ್ಯೌಷಧ) ತೊಲೆ ೧ಕ್ಕೆ ರೂ. 0-8-0 ಮಹಾ ಚಿತ್ರಕ ತೊಲೆ ೧ಕ್ಕೆ ರೂ 1-0-0 ಪಿಂಡ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ ರೂ 0-10-0. ಬಲಾಶ್ವಗಂಧಾದಿ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ 0-12-0 ಹಿಮಸಾಗರ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ ರೂ 1-8 0 ಮಹಾಚಂದನಾದಿ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ ರೂ 1-0-0 ಶ್ರೀ ಗೋಪಾಲ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ ರೂ 3-8 0

ನಮ್ಮ ಔಷಧಗಳು ದೊರೆಯುವ ಸ್ಥಳಃ—ಮಂಗಳೂರು—ರಾಘವೇಂದ್ರ ರಂಗ ಪೈ ರಥಬೀದಿ, ಶೆಣೈ ದಿಸ್ಪೆನ್ಸರಿ ಕೊಡಿಯಾಲ್ಬೈಲ್ ಬೈಂದೂರು—ಕೆ ಪುತ್ತು ಕಾನುಭಾಗ ಗಂಗೊಳ್ಳಿ—ಜಿ ಸುರೇಂದ್ರ ನಾಯ್ಕ ಕುಂದಾಪುರ—ಕೆ ರಾಮ ಭಟ್ ಡಾಕ್ಟರ್ ಕೆ ಆರ್ ಕಾಮತ್ ಉಡುಪಿ—ಪಿ ಜನಾರ್ದನ ನಾಯಕ್ ಎಂಡ್ ಕೊ, ಪೈ ಫಾರ್ಮೆಸಿ, ಆರ್ ಎಸ್ ಶೆಟ್ಟಿ, ರಥಬೀದಿ ಕಾರ್ಕಳ—ವಿ ಪಿ ಶೆಟ್ಟಿ ಕಾಪು—ಡಾಕ್ಟರ್ ಬಿ ಕೆ ಬೇಕಲ ದಿಸ್ಪೆನ್ಸರಿ ಬಟ್ಕಳ—ವಾಮನ ನರಸಿಂಹ ನಾಯಕ್ ಬಾರ್ಕೂರು—ಬಿ ಭಗವಂತ ಮಲ್ಯ, ಆರ್ ಪಿ ಔಷಧಾಲಯ ಬ್ರಹ್ಮಾವರ ಕೆ ವೈಕುಂಠ ಪೈ ಎಂಡ್ ಸನ್ಸ್, ಕೆ ಶೇಷಗಿರಿ ನಾಗಪ್ಪ ಎಂಡ್ ಸನ್ಸ್

ಎಲ್ಲೆಲ್ಲಿಯೂ ಏಜಂಟರು ಬೇಕಾಗಿದ್ದಾರೆ ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು

ನಾಯಕ್ ಬ್ರದರ್ಸ್, ಶ್ರೀಮದ್ಭುವನೇಂದ್ರ ಮಹೌಷಧಾಲಯ, ಪೋಸ್ಟು ಕಟಪಾಡಿ ದ. ಕ.

The Canara Industrial & Banking Syndicate Limited.,

Established in 1925. **Head Office:—Mukunda Nivas, UDIPI.**

Branches Mangalore, Payyanur, Brahmavar, Kumta, Karwar, Hubli, Honnavar, Bangalore & Cannanore

Authorised Capital Rs 5,00,000. Subscribed Capital Rs 1,06,300 Paid up Capital Rs 26,300 Issued Capital Rs. 2,00,000

STATEMENT OF AFFAIRS OF THE SYNDICATE AS ON 30TH November 1933

LIABILITIES.			ASSETS.		
Paid up Capital	Rs	26,300-0-0.	Loans on Land mortgage	Rs.	2,71,186—9—2
Reserve & other funds	,,	20,250—0—0.	Loans on Valuable Securities	,	2,29,690— 7—9.
Deposits	,,	10,64,121—4—10.	Loans on Bills of Exchange, Hundis and Promissory Notes		4,73,634— 4—0
Due to Bankers	,,	1,19,606—0—6	Investment on Shares of other Companies	,,	43,575— 0—0
			Investments on Government of Mysore Conversion Loan	,,	50,000—0—0
			On Deposits with other Bankers	,,	1,11,000— 0—0
Bills for Collection	,,	29,283—1—3	Bills for collection (per contra)	,,	29,283— 1—3
Sundries	,,	1,19,281—3—11.	Sundries	,,	1,40,794—4—10.
			Cash in hand & with Bankers	,,	29,677—15—6.
Total Rs.		13,78,841-10-6	Total Rs.		13,78,841 10-6.

Long and Short term Loans on attractive Schemes are granted.
ALL KINDS OF BANKING BUSINESS UNDERTAKEN.

Udipi, 7-12-1933.

P. A. Pai Bros.,
Managing Agents.

ಕ್ರಿಕೆಟ್ ಮೈದಾನಿನಲ್ಲಿ ಬೊಂಬು ಎಸೆದರು!

ಪೋಲೀಸ್ ಸುಪರಿಂಟೆಂಡೆಂಟರು ಜಖಂಗೊಂಡರು!

ಚಿತ್ತಗಾಂಗಿನ ಕ್ರಿಕೆಟ್ ಮೈದಾನಿನಲ್ಲಿ ಪಂದ್ಯಾಟವು ನಡೆಯುತ್ತಿತ್ತು. ಸರಕಾರೀ ಅಧಿಕಾರಿಗಳೂ, ಯೂರೋಪಿಯಾನರೂ ಒಂದು ಡೇರೆಯಲ್ಲಿ ಕುಳಿತಿದ್ದರು. ಅಷ್ಟರಲ್ಲಿ ಸಂಜೆ ೪.೩೦ ಘಂಟೆಯ ಸುಮಾರಿಗೆ ನಾಲ್ವರು ಯುವಕರು ಅಲ್ಲಿಗೆ ಬಂದು, ಒಂದರ ಹಿಂದೆ ಒಂದರಂತೆ ಮೂರು ಬೊಂಬುಗಳನ್ನೆಸೆದರು. ಅವುಗಳಲ್ಲಿ ಎರಡು ಒಡೆಯಲಿಲ್ಲ. ಒಂದು ಒಡೆದು ಪೋಲೀಸ್ ಸುಪರಿಂಟೆಂಡೆಂಟರಾದ ಮಿ. ಎಂ. ಎಫ್. ಜೆ. ಯುರಿಯವರ ಕೈಯನ್ನು ಜಖಂಗೊಳಿಸಿತು. ಬೊಂಬೆಸೆದ ಒಬ್ಬನನ್ನು ಯೂರೋಪಿಯಾನರು ಅಲ್ಲಿಯೇ ಕೊಂದಿಕ್ಕಿದರು. ಇಬ್ಬರನ್ನು ಜಖಂಗೊಳಿಸಿ ಬಂಧಿಸಲಾಯಿತು. ನಾಲ್ಕನೆಯವನನ್ನು ಹಿಡಿದು ಶೋಧಿಸಿದಾಗ ಮತ್ತೂ ಅನೇಕ ಬೊಂಬುಗಳು ದೊರಕಿದುವು. ಸತ್ತವರಲ್ಲಿ ಒಬ್ಬನು ಜೈಲು ತಪ್ಪಿಸಿದ್ದ ಕ್ರಾಂತಿಕಾರ ಕೃಷ್ಣಚೌಧುರಿ ಎಂಬವನೆಂದು ತಿಳಿಯಲಾಗಿದೆ.

ಬೇಡವೆಂಬುದರಲ್ಲಿದೆ ಐಶ್ವರ್ಯ!

ಹಳೆ ಅಂಗಿವಸ್ತ್ರಗಳು, ಹಣ್ಣುಹಂಪಲುಗಳ ಬೀಜ ಸಿಪ್ಪೆಗಳು ಹಳೆ ಕಾಗದ ಚೂರುಗಳು, ಎಲುಬು ಚೂರುಗಳೇ ಮೊದಲಾದುವುಗಳು ನಿಷ್ಪ್ರಯೋಜಕವೆಂದು (ಅವುಗಳ ಉಪಯೋಗವಾದ ನಂತರ) ನಮ್ಮ ಭಾವನೆ. ಆದರೆ ಈ ಲೋಕದಲ್ಲಿ ಯಾವ ವಸ್ತುವೂ ನಿಷ್ಪ್ರಯೋಜಕವಲ್ಲವೆಂದು ಕಂಡುಹಿಡಿಯಲಾಗಿದೆ. ಆಧುನಿಕ ವಿಜ್ಞಾನದಿಂದ ಅಣುರೇಣುಗಳು ಕೂಡಾ ನಿಷ್ಪ್ರಯೋಜಕವೆಂದು ತೀರ್ಮಾನಿಸಲು ಸಾಧ್ಯವಾಗುವುದಿಲ್ಲ. ಮನೆಯಲ್ಲಿ, ನಾವು ಕಸವೆಂದು ಭಾವಿಸಿ ಎಸೆದು ಬಿಡುವ ಎಲ್ಲಾ ವಸ್ತುಗಳಿಂದಲೂ ಒಂದಲ್ಲ ಒಂದು ಮಹತ್ತರ ಪ್ರಯೋಜನವಿದೆ. ನಾವು ತೆಗೆದು ಎಸೆದು ಬಿಡುವ ಹಣ್ಣುಗಳ ಕೊಳೆತ ಭಾಗ ಸಿಪ್ಪೆ ಬೀಜಗಳಲ್ಲಿ ಒಂದು ಬಗೆಯ (Pectin ಎಂಬ) ರಸವಿದೆ. ಈ ರಸವನ್ನೇ ತಯಾರಿಸಿ ಅಮೇರಿಕಾದಲ್ಲಿ ಒಂದು ದೊಡ್ಡ ಜನಾಂಗವೇ ಕಾಲಕಳೆಯುತ್ತಿದೆ. ಮಾಂಸಾಹಾರಿಗಳಿಗೆ ಎಲುಬು ಎಂದರೆ ಕಲ್ಲಿ ನೋಟಾದಿ. ಅದನ್ನು ದೂರ ಬಿಸಾಡುವವರು ಸಾವಿರ ಜನರು. ಆದರೆ ಆ ಎಲುಬಿನಿಂದ ಸಾವಿರ ಪ್ರಯೋಜನಗಳಿವೆಯೆಂದು ಯಾರಿಗೂ ತಿಳಿದಿಲ್ಲ. ಎಲುಬನ್ನು ನೀರಲ್ಲಿ ಹಾಕಿ ಕುದಿಸಿದರೆ ಅದರಿಂದ Gelatine ಎಂಬ ರಸವು ದೊರೆದಾಗುತ್ತದೆ. ಈ ರಸವನ್ನು ಶುದ್ಧೀಕರಿಸಿದರೆ ಚೊಕೊಲೇಟು ಪಾಯಸ, ಬಿಸ್ಕಿಗಳಂತಹ ಒಂದು ಪದಾರ್ಥವಾಗುವುದು, ಅಥವಾ ಈ ಪದಾರ್ಥವನ್ನು ಕೆಮಿಕಲ್ ಕೆಲಸಕ್ಕೆ ಉಪಯೋಗಿಸಬಹುದು. ರಸ ತೆಗೆದ ಎಲುಬು ಹುಡಿಗಳು ಗಿಡ ಮರಗಳಿಗೆ ಅತ್ಯಮೂಲ್ಯ ಗೊಬ್ಬರವಾಗುತ್ತದೆ. ಇವುಗಳಲ್ಲಿರುವ ಫೋಸ್ಫರಸಿನಿಂದ ಸತ್ತ ಗಿಡಗಳನ್ನು ಬದುಕಿಸುತ್ತಾರೆ. ಇನ್ನು ಹರಕು ವಸ್ತ್ರಗಳು—ಇವುಗಳ ಪ್ರಯೋಜನವು ಅತಿಶಯ. ಇವುಗಳನ್ನು ಪುನಃ ಕೊಳೆಯ ಹಾಕಿ ಇವುಗಳಿಂದ ಪುನಃ ನೂಲನ್ನು ಮಾಡಿ ಪುನಃ ವಸ್ತ್ರ ಮಾಡುವರು. ಅದರಲ್ಲೂ ಉಲನ್, ಸಿಲ್ಕ್ ವಸ್ತ್ರಗಳಾದರೆ ಏನೂ ಕಷ್ಟವಿಲ್ಲ. ಯೋರ್ಕಶಯರಿನಲ್ಲಿ ೫೦,೦೦೦ ಜನರು ಇದೇ ಕೆಲಸದಿಂದ ಐಶ್ವರ್ಯವಂತರಾಗಿರುವರು.

ಬಾಳ್ವೆ ಬೇಕು

ಪ್ರಪಂಚವನ್ನೇ ನಡೆ ಬಡೆದಿರುವ ನಿರುದ್ಯೋಗಿತೆಯಿಂದಾಗಿ ಎಷ್ಟು ಜನರು ಕಷ್ಟಪಡಬೇಕಾಗುತ್ತದೆಂದು ದಿನದಿನ ಬರುವ ವಾರ್ತೆಗಳಿಂದ ತಿಳಿದುಬರುತ್ತದೆ. ಪೆನಿಸಿಲ್ವೇನಿಯಾ ಎಂಬಲ್ಲಿ ನಿರುದ್ಯೋಗಿಗಳ ಸಂಖ್ಯೆಯು ಹೆಚ್ಚಿ, ಅವರಲ್ಲಿ ಅನೇಕರು ಗತಿಗಾಣದೆ ಆಧುನಿಕ ಪ್ರಪಂಚದ ಗೊಡವೆಯೇ ಬೇಡವೆಂದು ನಿರ್ಧರಿಸಿ ಕಾಡಿಗೆ ತೆರಳಿರುವರು. ಅಲ್ಲಿ ಹಣ್ಣುಹಂಪಲುಗಳನ್ನು ತಿಂದು ಎಲೆಗಳ ಮನೆಗಳಲ್ಲಿ ಉಳಿದು ಜೀವನ ನಡೆಸುತ್ತಿರುವರು.

ನೊಣವು ರೋಗಗಳ್ಗೆ ಕಾರಣ.

ವಿಷಮಜ್ವರ ಮೊದಲಾದ ರೋಗಗಳಿಗೆ ಕ್ರಿಮಿಗಳೇ ಕಾರಣವೆಂದು ಈಗ ಗೊತ್ತಾಗಿದೆ. ನೊಣಗಳು ಕೂಡಾ ಈ ಕ್ರಿಮಿಗಳಂತೆಯೇ ಭಯಂಕರವಾಗಿವೆ. ಒಂದು ಜಾತಿಯ ನೊಣವು ಒಮ್ಮೆ ಕಡಿಯಿತೆಂದರೆ ೩೦ ಬಗೆಯ ರೋಗಗಳನ್ನು ಹರಡುತ್ತದೆ. ಈ ನೊಣವು ತನ್ನ ಜೀವಮಾನದಲ್ಲಿ ಒಟ್ಟು ೫೦ ಮಿಲಿಯನ್ ಮರಿಗಳನ್ನಿಡುತ್ತದೆ.

ಹೊಸ ರೀತಿಯ ಪ್ರಯಾಣ

ಕಳೆದ ಎಪ್ರಿಲ್ ತಿಂಗಳಲ್ಲಿ ವೆಸ್ಟ್‌ಮಿನಿಸ್ಟರ್‌ನಿಂದ ಒಬ್ಬ ತರುಣನು ಕಾಲ್ನಡೆಯ ಸಂಚಾರದಿಂದ ಹಲಿಫೆಕ್ಸ್ ಎಂಬಲ್ಲಿಗೆ ತೆರಳಿದನು. ಸಾವಿರಾರು ಮೈಲುಗಳನ್ನು ತಾನು ನಡೆದೇ ತೀರಿಸುವೆನೆಂದು ಅವನ ಹೇಳಿಕೆ. ಈ ಹೇಳಿಕೆಯ ಸತ್ಯಾಂಶವು ತಿಳಿಯಬೇಕೆಂದು ಅವನು, ದೊಡ್ಡದೂ ಚಕ್ರವೂ ಇರುವ ಒಂದು ತಗಡಿನ ರೋಲರನ್ನು ಮಾರ್ಗದಿಂದ ಎಳೆದುಕೊಂಡು ಹೋಗುವನು. ರಾತ್ರಿಯಲ್ಲಿ ಈ ರೋಲರಿನ ಬಾಗಿಲು ತೆಗೆದು ಅದರೊಳಗೆ ಮಲಗುವನು. ತನ್ನ ವಸ್ತ್ರ ಸಾಮಾನುಗಳನ್ನು ಅದರೊಳಗೆಯೇ ಇಡುವನು. ಈ ತಿಂಗಳಲ್ಲಿ ಅವನು ತನ್ನ ನಿಶ್ಚಿತ ಸ್ಥಳಕ್ಕೆ ತಲುಪುವನೆಂದು ಅಂದಾಜು ಮಾಡಲಾಗಿದೆ.

ದೇವಾಸ್ ಮಹಾರಾಜರ ಉಪವಾಸ

ದೇವಾಸ್ ಸಂಸ್ಥಾನದ ಮಹಾರಾಜರು ಸರಕಾರದ ವರ್ತನೆಯ ಬಗ್ಗೆ ಸಂತಾಪ ಸೂಚಿಸಿ ಉಪವಾಸವನ್ನಾರಂಭಿಸಿ ಬಹು ದಿನಗಳಾದುವು! ಅವರ ಗೃಹವೈದ್ಯರಾದ ಡಾ| ಜೋಶಿಯವರೆನ್ನುವಂತೆ, ಮಹಾರಾಜರು ಬಹು ಕ್ಷೀಣರಾಗಿರುವರೆಂದು ತಿಳಿದು ಬರುತ್ತದೆ. ಎಲ್ಲಾ ಜಹಗೀರುದಾರರೂ ಬಾಪುಸಾಹೇಬ್ ಮಹಾರಾಜ ಕುವರರೂ, ಮಹಾರಾಣಿಯವರೂ ಮತ್ತು ಮಕ್ಕಳುಮರಿಗಳೂ ತಮ್ಮ ಆಸ್ತಿಗಳ ಕಂದಾಯವನ್ನು ಸ್ಟೇಟ್ ಟ್ರೆಜರಿಯಲ್ಲಿ ಭದ್ರಪಡಿಸಬೇಕೆಂದು ೩೧ನೇ ಡಿಸೆಂಬರದಲ್ಲಿ ಸರಕಾರವು ಅಪ್ಪಣೆ ಕೊಟ್ಟುದರಿಂದ ಮಹಾರಾಜರು ಮತ್ತಷ್ಟು ವ್ಯಸನಾಕ್ರಾಂತರಾಗಿರುವರೆಂದು ತಿಳಿದು ಬಂದಿದೆ. ಸಂಸ್ಥಾನದ ಆರ್ಥಿಕ ಸ್ಥಿತಿಯನ್ನು ಸುಧಾರಿಸುವುದಕ್ಕಾಗಿ ಸರಕಾರವು ಹೀಗೆ ಮಾಡುವುದು ಸರಿಯಲ್ಲವೆಂದು ಡಾಕ್ಟರರ ಹೇಳಿಕೆ.

ರೈಲುಕಂಬಿಗಳಲ್ಲಿ ಎಡೆಗಳೇಕೆ?

ರೈಲು ಪ್ರಯಾಣ ಮಾಡಿದವರು ಎಲ್ಲಕ್ಕಿಂತಲೂ ಒಂದು ವಿಷಯವನ್ನು ಕಂಡುಹಿಡಿದಿರಬೇಕು. ಪ್ರತಿಯೊಂದು ಸೆಕುಂದಿಗೆ ರೈಲಿನ ಚಕ್ರಗಳು ಡ—ಡಿ—ಡ—ಡ—ಡಿ ಎಂಬ ಶಬ್ದವನ್ನು ಮಾಡುತ್ತವೆ. ಇದಕ್ಕೆ ಕಾರಣವೇನು? ರೈಲು ಕಂಬಿಗಳಲ್ಲಿರುವ ಎಡೆಯೇ ಇದಕ್ಕೆ ಕಾರಣ. ಪ್ರತಿಯೊಂದು ಇಡೀ ಕಂಬಿಯು ಮುಗಿದೊಡನೆ ಅದರ ಇನ್ನೊಂದು ತುದಿಯಲ್ಲಿ ಒಂದು ಎಡೆಯಿದೆ. ಈ ಎಡೆಯನ್ನು ಏಕೆ ಬಿಟ್ಟರು? ಡ—ಡಿ ರಾಗವಾಗಲೇ ಬೇಕೆಂದೋ! ಅಲ್ಲ! —ಪಟ್ಟಿಗಳು ಬಿಸಿಲಿನ ತಾಪದಿಂದಲೂ ರೈಲುಗಳ ಓಟದಿಂದಲೂ ಬಿಸಿಯೇರಿದಾಗ ಉದ್ದ ಬೆಳೆಯುತ್ತವೆ. ಉದ್ದ ಬೆಳೆದಾಗ ಅವು ಸ್ಥಳವನ್ನು ಹುಡುಕುತ್ತವೆ. ಈ ಎಡೆಯಿಲ್ಲದಿರುತ್ತಿದ್ದರೆ ಕಂಬಿಯು ಬಗ್ಗಿ ಹೋಗಿ ಎಲ್ಲೆಲ್ಲೂ ರೈಲಿನ ಅಪಘಾತಗಳು ನಡೆಯುತ್ತಿದ್ದುವು. ಮಧ್ಯಾಹ್ನ ೧ ಗಂಟೆಗೆ ಹೋಗಿ ರೈಲಿನ ಕಂಬಿಗಳ ಎಡೆಯ ಅಳತೆಯನ್ನೂ ಮತ್ತು ರಾತ್ರಿ ೧೨ ಗಂಟೆಗೆ ಹೋಗಿ ಅದರ ಅಳತೆಯನ್ನೂ ತೆಗೆದು ಪರೀಕ್ಷಿಸಿದರೆ ಮಧ್ಯಾಹ್ನದಲ್ಲಿ ಆ ಎಡೆಯು ಬಹು ಸಣ್ಣದಾಗಿರುವುದು ಕಂಡು ಬರುವುದು. ರೈಲಿನಲ್ಲಿ ಪ್ರಯಾಣ ಮಾಡಿರುವವರಲ್ಲಿ ಎಷ್ಟು ಜನರಿಗೆ ಇದು ತಿಳಿದಿದೆ?

ಮುಖವು ಚಳಿಯನ್ನನುಭವಿಸುವುದಿಲ್ಲ—ಏಕೆ?

ಎಷ್ಟೇ ಚಳಿಯಿರಲಿ ನಾವು ಅಂಗಿಗಳನ್ನು ಹಾಕಿಕೊಳ್ಳುತ್ತೇವೆ. ದೇಹವನ್ನು ಅದಷ್ಟು ಮುಚ್ಚಿಗಟ್ಟುತ್ತೇವೆ. ಅಲ್ಲದೆ ಮುಖವನ್ನು ಚಳಿಯಿಂದ ತಪ್ಪಿಸುವುದಿಲ್ಲ. ಕುತ್ತಿಗೆಯು ಚಳಿಯನ್ನನುಭವಿಸುವುದು ನಮಗೆ ಭಾಸವಾಗುತ್ತದೆ. ಕಾಲುಗಳು ಚಳಿಯನ್ನನುಭವಿಸುವುದು ನಮಗೆ ತಿಳಿಯುತ್ತದೆ. ಆದರೆ ಮೋರೆಯು ಚಳಿಯನ್ನನುಭವಿಸಿ ಅದು ಅದರಿಂದ ತಪ್ಪಿಸಿಕೊಳ್ಳುವಂತಹ ಸಂದರ್ಭವು ಬಂದಿದೆಯೆಂದು ಮನುಷ್ಯ ಮಾತ್ರರಲ್ಲಿ ಯಾರೂ ಹೇಳಲಾರರು! ಇದಕ್ಕೆ ಕಾರಣವೇನು? ನಾವು ಮರಿಗಗಳಂತೆ ಇದ್ದ ಕಾಲದಲ್ಲಿ ನಮ್ಮ ಮೈಯಲ್ಲೆಲ್ಲಾ ತುಂಬಾ ರೋಮವಿದ್ದಿತು. ಚಳಿಯು ಎಷ್ಟು ವಿಪರೀತವಾಯಿತೋ ಅಷ್ಟು ರೋಮಗಳು ನಮಗೆ ಬೇಕಾದುವು. ನಮ್ಮ ಮೈ ತುಂಬಾ ರೋಮವು ಬೆಳೆದರೂ ಮೋರೆಯಲ್ಲಿ ಬೆಳೆಯಲಿಲ್ಲ. ಹೀಗಾಗಿ ಬಿಸಿಲಿಗೂ ಮಳೆಗೂ ನಮ್ಮ ಮೋರೆಯು ಬಲಿಯಾಯಿತು. ಆದುದರಿಂದ ಯಾವ ಚಳಿಯನ್ನೂ ಅದು ಅನುಭವಿಸಲು ಈಗ ಸಾಧ್ಯವಿಲ್ಲ. ನಮ್ಮ ದೇಹವನ್ನೂ ಕೂಡಾ ನಾವು ಧಿಕ್ಕರಿಸಿ ಸನ್ಯಾಸಿಗಳಂತೆಯೇ ಚಳಿ, ಮಳೆ, ಬಿಸಿಲುಗಾಳಿಗೆ ಆಹುತಿಯಾಗಿಟ್ಟರೆ, ಕ್ರಮೇಣ ಅದಕ್ಕೆ ಯಾವುದರ ಬಾಧೆಯೂ ತಟ್ಟಲಾರದು!

ನಡೆಯುತ್ತಾ ಇದೆ

ಯುದ್ಧವನ್ನು ನಿಲ್ಲಿಸಬೇಕೆಂದು ಹಲವು ಬಗೆಯ ಚಳುವಳಿಗಳು ಹಲವು ಜನಾಂಗದವರಿಂದ ನಡೆಯುತ್ತಿದೆಯಾದರೂ ಯುದ್ಧೋಪಕರಣಗಳ ಸೃಷ್ಟಿಯ ಕೆಲಸವು ಮಾತ್ರ ಯಥಾ ಯೋಗ್ಯವಾಗಿ ಸಾಂಗವಾಗಿ ನಡೆಯುತ್ತಾ ಇದೆ. ಎಂತಹ ಗಟ್ಟಿ ಉಕ್ಕಿನ ತಗಡನ್ನೂ ಕೂಡಾ ಕೊರೆದು ಅದನ್ನು ಧಾರಣೆ ಮಾಡಿದವನನ್ನು ಮಲಗಿಸುವಂತೆ ಮಾಡುವ ಗುಂಡುಗಳನ್ನು ಬ್ರಿಟಿಷರು ತಯಾರಿಸಿರುವರೆಂದು ಗೊತ್ತಾಗಿದೆ. ಬ್ರಿಟಿಷರು ಈ ರೀತಿ ಹೇಳಿಕೊಳ್ಳುತ್ತಿರುವಾಗ ಇತ್ತಲಾಗಿನಿಂದ ಜರ್ಮನರು ಎಂತಹ ಗುಂಡಿಗೂ ಒಡೆಯದ ಒಂದು ವಿಚಿತ್ರವಾದ ತಗಡನ್ನು ತಾವು ಕಂಡು ಹಿಡಿದಿರುತ್ತೇವೆಂದು ಹೇಳಿಕೊಳ್ಳುತ್ತಿರುವರು.

ಮಹಾರಾಜರ ಪರಾಜಯ

ಜಯಪುರದ ಮಹಾರಾಜರಿಗೆ ಅಹ್ಮದಾಬಾದಿನಲ್ಲಿ ಸ್ವಲ್ಪ ಭೂಮಿ ಇದೆ. ಅಲ್ಲಿಯ ಒಬ್ಬ ವರ್ತಕನು ಒಂದು ದೊಡ್ಡ ಮಾಳಿಗೆ ಮನೆಯನ್ನು ಕಟ್ಟಿಸಿದನು. ಅದರ ಮಾಡು ಮಹಾರಾಜರ ಆಸ್ತಿಯ ಮೇಲೆ ಅಡ್ಡವಾಗಿ ಬಂತು. ಮಹಾರಾಜರು ಹೈಕೋರ್ಟಿನಲ್ಲಿ ದಾವೆ ಹೂಡಿ ಅವನು ಮಾಡನ್ನು ತೆಗೆದುಬಿಡಬೇಕೆಂದು ಕೇಳಿಕೊಂಡರು. ನ್ಯಾಯಾಧೀಶರು ಸ್ಥಳ ತನಿಖೆ ಮಾಡಿದ ನಂತರ "ಜಮೀನ್ದಾರನಿಗೆ ಭೂಮಿಯ ಮೇಲೆ ಮಾತ್ರ ಅಧಿಕಾರವಲ್ಲದೆ ಆಕಾಶದ ಮೇಲೆ ಅಧಿಕಾರವಿಲ್ಲ"ವೆಂದು ತಿಳಿಸಿದರು.

ನೋಟೀಸು

ದಿ ಕೆನರಾ ಬ್ಯಾಂಕ್, ಲಿಮಿಟೆಡ್, ಪುತ್ತೂರು

ಕಳೆದ 1933ನೇ ಇಸವಿ ಡಿಸೆಂಬರ ತಿಂಗಳ ತಾ 8ನೇ ಶುಕ್ರವಾರದ ಸ್ವದೇಶಾಭಿಮಾನಿಯ ಸಂಚಿಕೆಯಲ್ಲಿ ಪ್ರಕಟಿಸಿದಂತೆ ಈ ಕೆಳಗೆ ಹೆಸರು ಕಾಣಿಸಿದವರ ಅಡವಿಟ್ಟ ನಗಗಳನ್ನು ತಾ 15ನೇ ಡಿಸೆಂಬರ 1933ರಲ್ಲಿ ಬ್ಯಾಂಕಿನ ಆಫೀಸಿನಲ್ಲಿ ಗಂಟೆ ೪ಕ್ಕೆ ಬಹಿರಂಗವಾಗಿ ಏಲಂ ಮಾಡಿ ಹುಟ್ಟಿ ಬಂದ ಐವೇಜುಗಳನ್ನು ಬ್ಯಾಂಕಿಗೆ ಬರಬೇಕಾದ ಅಸಲು ಬಡ್ಡಿ ವಗೈರೆ ವಜಾ ಮಾಡಿ ಉಳಿದ ಐವೇಜನ್ನು ಸದ್ರಿಯವರ ಲೆಕ್ಕಕ್ಕೆ ಅಮಾನತ್ತು ಇಟ್ಟಿದ್ದು ಕ್ರಯದಲ್ಲೇ ಕೊಂಡುಹೋಗಬೇಕಾಗಿಯೂ ಅದಕ್ಕೆ ಬಡ್ಡಿ ಸಿಕ್ಕಲಿಕ್ಕಿಲ್ಲವಾಗಿಯೂ ಈ ಮೂಲಕ ತಿಳಿಸಲಾಗುತ್ತದೆ

ಸಾಲದ ನಂಬ್ರ 219/32 ಕಲ್ಲ ಪೂವನ ಹೆಗ್ಡೆ \ ೧ ಅಮ್ಮು ಹೆಗ್ಡೆ ಕಬಕ ಗ್ರಾಮ ಪೋಸ್ಟ್ ಪುತ್ತೂರು. ಏಲಂ ಮಾಡಿ ಹುಟ್ಟಿ ಬಂದ ಹಣ ರೂ 50/ ಬ್ಯಾಂಕಿಗೆ ಬರಬೇಕಾದ ಅಸಲು ಬಡ್ಡಿ ವಗೈರೆ ವಜಾ ಮಾಡಿದ್ದು ರೂ 46—14—11ಕ್ಕೆ ಅಮಾನತು ಲೆಕ್ಕಕ್ಕೆ ಇಟ್ಟ ಉಳಿದ ಹಣ ರೂ 3—1—1

ಐವೇಜು ಕೊಂಡುಹೋಗುವಾಗ ಈ ನೋಟೀಸಿನ ಪೇಪರ್ ಕೂಡಾ ಕೊಡತಕ್ಕದ್ದು

Office of the Bank Puttur 8—1—1934 } M Krishnaraya Kamath, Agent

ನೋಟೀಸು.

ಮಂಗಳೂರು ತಾಲೂಕು ಮರೋಳಿಯಲ್ಲಿರುವ ಗುತ್ತು ಪೂಜಾರಿಗಳ ಮಗಳು ರಾಮು ಹೆಂಗಸು ಆದ ನಾನು ಈ ಮೂಲಕ ಸರ್ವಜನರಿಗೆ ತಿಳಿಸುವುದೇನೆಂದರೆ ನನ್ನ ಚಿಕ್ಕತಾಯಿ ಪರಮೇಶ್ರಿ ಹೆಂಗಸು ನಮ್ಮಿಬ್ಬರ ಹೆಸರಲ್ಲಿ ಪಟ್ಟೆಯಾಗಿದ್ದ ಪಡುಂಬೂರು ಗ್ರಾಮದ ಸರ್ವೆ ನಂಬ್ರ 29/8ನೇ ನಮ್ಮ ಕುಟುಂಬದ ಆಸ್ತಿಯನ್ನು ತನ್ನ ಸ್ವಂತ ಪ್ರಯೋಜನಾರ್ಥವಾಗಿ ಕುಟುಂಬದವರ ಅನುಮತಿ ಮತ್ತು ತಿಳುವಳಿಕೆ ಕೂಡಾ ಇಲ್ಲದೇನೇ ಪರಾಧೀನ ಮಾಡಲುದ್ಯುಕ್ತಳಾಗಿರುತ್ತಾಳೆಂದು ಕೇಳುತ್ತೇನೆ. ಆಕೆಯು ಆ ರೀತಿ ಮಾಡಿದ್ದಲ್ಲಿ ಅದು ನನಗಾಗಲೀ ಇತರ ಕುಟುಂಬದವರಿಗಾಗಲಿ ಬಾಧಿಸತಕ್ಕದ್ದಲ್ಲ. ಆದ್ದರಿಂದ ಸದ್ರಿ ಆಸ್ತಿಗಳನ್ನು ಆಕೆಯಿಂದ ಯಾರೂ ಅಡವು ಕ್ರಯ ಹೊಣೆ ಮುಂತಾದ ಯಾವ ವಿಧದ ಸಾಧನೆಗಳಿಂದಲಾದರೂ ತೆಗೆದುಕೊಳ್ಳಬಾರದಾಗಿ ಈ ಮೂಲಕ ಎಚ್ಚರಿಸುತ್ತೇನೆ

1 10 1934 ಮಂಗಳೂರು. — ಈ ಹೆಬ್ಬೆಟ್ಟಿನ ಗುರುತು ರಾಮು ಹೆಂಗಸಿನದ್ದಾಗಿರುತ್ತದೆ

ಶಾಲಿವಾಹನಶಕ ೧[illegible] ಶ್ರೀಮುಖಿ ಸಂವತ್ಸರದ ಪುಷ್ಯ ಬ ೧೩ ಶನಿವಾರದಿಂದ ಶ್ರೀಮುಖಿ ಸಂವತ್ಸರದ ಮಾಘ ಶು ೪ ಶುಕ್ರವಾರದ ವರೆಗಿನ ಪಂಚಾಂಗ

(ರವಿ ಧನು—ಮಕರ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]	ಸೂರ್ಯ ಉ	ಸೂರ್ಯ ಅಸ್ತ
13	ಶನಿ	[illegible]	[illegible]	ಜ್ಯೇಷ್ಠಾ	[illegible]	[illegible]	6 59	6.21
14	ರವಿ	[illegible]	[illegible]	ಮೂಲಾ	[illegible]	[illegible]	6 59	6.21
15	ಸೋಮ	●	[illegible]	ಪೂ ಷಾ	[illegible]	[illegible]	6 59	6 21
16	ಕುಜ	[illegible]	[illegible]	ಉ ಷಾ	[illegible]	[illegible]	6 59	6 22
17	ಬುಧ	[illegible]	[illegible]	ಶ್ರವಣಾ	[illegible]	[illegible]	6 59	6 22
18	ಗುರು	[illegible]	[illegible]	ಧನಿಷ್ಠಾ	[illegible]	[illegible]	7 0	6.23
19	ಶುಕ್ರ	[illegible]	[illegible]	ಪೂ ಭಾ	[illegible]	[illegible]	7 0	6 24

ಮಂಗಳೂರಿನ ವಾಯುಸ್ಥಿತಿ.

Date ತಾರೀಖು	Temperature ಉಷ್ಣ (ಶಾಖ) Maximum ಹೆಚ್ಚು	Minimum ಕಡಿಮೆ	Rainfall. ಮಳೆ ದಿನದ ಮಳೆ	ಒಟ್ಟು ಮಳೆ.
4	88— 5	68 – 7	—	—
5	88— 1	69 – 4	—	—
6	85— 5	71— 6	—	—
7	85— 5	74— 1	—	—
8	86— [illegible]	74— 4	—	—
9	85— 8	73 9	—	—
10	88 – 5	74— 2	0—22	166-67

ಮಂಗಳೂರಿನ ಪೇಟೆ ಧಾರಣೆ.

ಜೀನಸ	ಇಂದ ರೂ. ಆ	ವರೆಗೆ ರೂ. ಆ
ಹೊಸ ರಾಶಿ ಅಕ್ಕಿ	3— 6	3—12
ಹೊಸ ಮುಕ್ತಿ	4— 4	4—10
ಹೊಸ ಗುಡ್ಡು	3—12	4— 2
ಊರ ಅವ್ವಲ್ ಬೆಳ್ತಿಗೆ	4— 4	5— 4
ರಂಗೂನು ಬೆಳ್ತಿಗೆ ಗೋಣಿ ೧ಕ್ಕೆ	5— 6	6— 0
ಎಲ್ಲೂರು ಬೆಳ್ತಿಗೆ ಮುಡಿ ೧ಕ್ಕೆ	3—12	4— 0
ಗೋದಿ ಗೋಣಿ ೧ಕ್ಕೆ	10— 8	12— 8
ತೊಗರಿ ಗೋಣಿ ೧ಕ್ಕೆ	9— 0	10— 8
ಹುರುಳಿ ಗೋಣಿ ೧ಕ್ಕೆ	5— 4	6— 0
ಕಡಲೆ ಗೋಣಿ ೧ಕ್ಕೆ	9— 8	12— 8
ತೊಗರಿಬೇಳೆ ಗೋಣಿ ೧ಕ್ಕೆ	10 — 8	18— 0
ಉದ್ದು ಗೋಣಿ ೧ಕ್ಕೆ	7— 0	8— 4
ಹೆಸರು ಗೋಣಿ ೧ಕ್ಕೆ	8— 0	9— 0
ಊರುಬೆಲ್ಲ ಖಂಡಿ ೧ಕ್ಕೆ	30— 0	35— 0
ಉಪ್ಪು ಗೋಣಿ ೧ಕ್ಕೆ	4—14	5— 4
ಕೊಬ್ರಿ ಖಂಡಿ ೧ಕ್ಕೆ	45— 0	55— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	17— 8	18— 0
ಎಣ್ಣೆಂಡಿ ಖಂಡಿ ೧ಕ್ಕೆ	23—12	25— 0
ಕೊಬ್ರಿ ಎಣ್ಣೆ ಮಣ ೧ಕ್ಕೆ	3— 2	4— 2
ಎಳ್ಳೆಣ್ಣೆ ಮಣ ೧ಕ್ಕೆ	5— 0	6— 0
ಚಿಮಿಣಿಎಣ್ಣೆ ಪೆಟ್ಟಿಗೆ ೧ಕ್ಕೆ	7 – 0	8—12
ಮೋರಿಸ ಸಕ್ಕರೆ ಮಣ ೧ಕ್ಕೆ	3— 6	3—11
ಹೊಸ ಮೆಣಸು	8—12	9— 0
ಸಾಸಿವೆ ಮುಡಿ ೧ಕ್ಕೆ	4 – 8	4—12
ಕಾಳುಮೆಣಸು ಖಂಡಿ ೧ಕ್ಕೆ	130— 0	135— 0
ಯೇಲಕ್ಕಿ ಮಣ ೧ಕ್ಕೆ	20— 0	23— 0
ಗೇರುಬೀಜ ಮುಡಿ ೧ಕ್ಕೆ	2— 0	2— 4
ಶುಂಠಿ ಖಂಡಿ ೧ಕ್ಕೆ	42— 0	44— 0
ತಾಂಬ್ರ ತಗಡು ಮಣ ೧ಕ್ಕೆ	10— 0	10— 2
ತಾಂಬ್ರ ಪಾತ್ರಗಳು ಮಣ ೧ಕ್ಕೆ	13— 0	14— 8
ಜೀನಬೆಳ್ಳಿ ಸೇರು ೧ಕ್ಕೆ	14—12	15— 0
ಹಿತ್ತಾಳೆ ತಗಡು ಮಣ ೧ಕ್ಕೆ	9— 0	9— 8
ಪವನು ೧ಕ್ಕೆ	20— 0	20— 8
ಹುಣಿಸೆ ಹುಳಿ ಖಂಡಿ ೧ಕ್ಕೆ	45— 0	47— 0
ನೇಟಿವ್ ಕಾಫಿ ಖಂಡಿ ೧ಕ್ಕೆ	180— 0	230— 0
ಪ್ಲಾಂಟೇಶ ಕಾಫಿ ಖಂಡಿ ೧ಕ್ಕೆ	250— 0	260— 0
ಹಳೆ ಅಡಿಕೆ	115— 0	135— 0
ಹೊಸ ಅಡಿಕೆ	75— 0	95— 0

THE CANARA PUBLIC CONVEYANCE CO., LTD, MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯ ಕ್ಷೇತ್ರಗಳಿಗೆ ಹೋಗುವವು ಮೈಸೂರು, ಕೊಡಗು ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನ್ ಕೂಡಾ ಇರುವುದು

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ, ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವಂಥವರಿಗೆ ಪ್ರತಿದಿನವೂ ನಾಲ್ಕು ಸಾರಿ ಕರಾವಳಿ ಮಾರ್ಗವಾಗಿಯೂ, 4 ಸಾರಿ ಕಾರ್ಕಳ ಮಾರ್ಗವಾಗಿಯೂ ಹೋಗುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲಪಿರಿ ಒಂದೇ ಶಿಲೆಯಲ್ಲಿ ರಚಿತವಾಗಿ, 37, ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ, ಕಾರ್ಕಳ ಗೋಮಟೇಶ್ವರನ ಪ್ರತಿಮೆಯನ್ನು ನೋಡಲು ಬಹಳ ಸುಲಭ ಮಂಗಳೂರಿನಿಂದ ಬಸ್ಸುಗಳು 4 ಸಲ ಹೊರಟು ಎರಡೂವರೆ ತಾಸುಗಳ ಸಮಯದಲಿ ಕಾರ್ಕಳಕ್ಕೆ ತಲಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ, ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ತಲ್ಪಬಹುದು 'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಬೆಳಿಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲಪುವಿರಿ. ಶ್ರೀ ಶಂಕರಾಚಾರ್ಯರ ಸ್ಥಾನವಾದ **ಶೃಂಗೇರಿಯನ್ನು** ಸಂದರ್ಶಿಸಲು ಬಹಳ ಸುಲಭವಿದೆ ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಪ್ರಾಚೀನ ಕಾಲದ ದೇವಸ್ಥಾನಗಳಿಂದ ಕೂಡಿದ **ಗೋಕರ್ಣ**ಕ್ಕೆ ಹೋಗುವರೆ ನಮಗ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಬೇಲೂರಿನ ಸೋಮನಾಥ ದೇವಾಲಯವನ್ನು ನೋಡಲು, ನೋಡಲಿಚ್ಛಿಸುವವರು, ಬೆಳಿಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ, ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದೂಸ್ಥಾನ, ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣ ಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ, ಮಂಗಳೂರಿನಿಂದ ಮಡಿಕೇರಿಗೆ 7 ಘಂಟೆಗಳೊಳಗೂ, ಕಡೂರಿಗೆ 12 ಘಂಟೆಗಳೊಳಗೂ, ಮೈಸೂರಿಗೆ 12 ಗಂಟೆಗಳೊಳಗೂ ಸಕಲೇಶಪುರಕ್ಕೆ 8 ಗಂಟೆಗಳೊಳಗೂ, ಹಾಸನಕ್ಕೆ 10 ಗಂಟೆಗಳೊಳಗೂ, ಚಿಕ್ಕಮಗಳೂರಿಗೆ 8 ಗಂಟೆಗಳೊಳಗೂ ಕೊಲ್ಲೂರಿಗೆ ಮತ್ತು ಗೋಕರ್ಣಕ್ಕೆ ೧॥ ದಿವಸದೊಳಗೂ ಶಿಮೊಗ್ಗಕ್ಕೆ 12 ಗಂಟೆ ತಲಪಬಹುದು ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು

Secretary,

The Canara Public Conveyance Company Ltd. Mangalore

Chikmagalur Public Conveyance Motor Service

CHIKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,

ಚಿಕ್ಕಮಗಳೂರು

ಮುಂಬಾಯಿಯಿಂದ – ಮಂಗಳೂರಿಗೆ

ಮಂಗಳೂರಿನಿಂದ – ಮುಂಬಾಯಿಗೆ

ಇಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ

ಮಂಗಳೂರು—ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು – ಅನುಕೂಲ ಪ್ರಯಾಣ ಸೌಕರ್ಯಗಳು.

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ.

ಚಿಕ್ಕಮಗಳೂರಿನಿಂದ— ಶಿವಮೊಗ್ಗಕ್ಕೆ, ಬೀರೂರಿಗೆ, ಕಡೂರಿಗೆ.
—ಮೂಡಿಗೆರೆಗೆ, ಸಕಲೇಶಪುರಕ್ಕೆ.
—ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
—ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ನಿರಾಯಾಸದ ಪ್ರಯಾಣ! **ಉತ್ಸಾಹಕರ ಸೌಕರ್ಯ!**

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

RAJULU & Co.,

Are pleased to announce that in view of the increasing popularity of Morris, Dodge and Crysler Cars in South Kanara and for the convenience of present and prospective clients, a Sales and Service Station has been opened at Cantonment Road, Maidan View, Mangalore.

RAJULU & Co.,
Authorized District Dealers for
West Coast for Addison & Co. Ltd., Madras.

ಮೋರಿಸ್, ಡೋಜ್ ಮತ್ತು ಕ್ರೈಸ್ಲರ್–ಈ ಕಾರುಗಳ ಮೇಲಿನ ಜನತೆಯ ಅಭಿಮಾನವು ದಿನೇ ದಿನೇ ಹೆಚ್ಚುತ್ತಿರುವುದರಿಂದಲೂ, ಈಗಿನ ಮತ್ತು ಮುಂದಿನ ಗಿರಾಕಿಗಳಿಗೆ ಸೌಕರ್ಯವನ್ನು ಒದಗಿಸಿಕೊಡಬೇಕೆಂಬುದರಿಂದಲೂ ಮಂಗಳೂರಿನ ಮೈದಾನು ಬಳಿಯ ಕೆಂಟೋನ್ಮೆಂಟ್ ರಸ್ತೆಯಲ್ಲಿ, ಮಾರಾಟದ ಮತ್ತು 'ಸರ್ವೀಸಿನ' ಒಂದು ಹೊಸದಾದ 'ಸ್ಟೇಶನನ್ನು' ಈಗ ತೆರೆದಿದೆ ಎಂದು ಪ್ರಕಟಿಸಲು ಸಂತೋಷಪಡುತ್ತೇವೆ.

ರಾಜುಲು ಅಂಡ್ ಕೋ.
ಎಡಿಸನ್ ಮತ್ತು ಕಂಪೆನಿ, ಮದ್ರಾಸ್ (ಇದರ ಪರವಾಗಿ ಪಶ್ಚಿಮ ಕರಾವಳಿಗೆಲ್ಲ ಅಧಿಕಾರ ಹೊಂದಿದ ಜಿಲ್ಲಾ ವಿಕ್ರಯಗಾರರು.)

22/12

ನೋಟೀಸು.

ಉಡುಪಿ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

ಕ್ರಮ ನಂಬ್ರ 435/31. R. E. P. 728/33. R E A 24/34

ಉಡುಪಿ ಶ್ರೀ ಸೋದೆ ಮಠದ ಶ್ರೀ ವಿಶ್ವೇಂದ್ರ ತೀರ್ಥ ಸ್ವಾಮಿಯವರು ಇವರ ಜನರಲ್ ಏಜಂಟ್ ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಉಡುಪಿ.— ಇದರ ಮೆನೆಜಿಂಗ್ ಡೈರೆಕ್ಟರ್ ಟೋನ್ಸೆ ಉಪೇಂದ್ರ ಅನಂತ ಪೈ– ಅರ್ಜಿದಾರರು.

ಮತ್ತು

ಆಲ್ಬರ್ಟ್ ಡಿಸೋಜ ಕೂಡಾ—ಎದ್ರಿರು.

ಇವರೊಳಗೆ

ಸದರಿ ಅಮಲ್‌ಜ್ಯಾರಿಯ 1ನೇ ಎದ್ರಿ Albert D'Souza, son of Santhan D'Souza, C/o A Stanley & Co, Soda Manufacturers, ಇವರಿಗೆ ಈ ಮೂಲಕ ತಿಳಿಯಪಡಿಸುವುದೇನಂದರೆ —

ಸದರಿ ಅಮಲ್‌ಜ್ಯಾರಿಯಲ್ಲಿ ಜಪ್ತಿಯಾದ ಸ್ಥಿರಾಸ್ತಿ ಏಲಂ ಕಾಲದಲ್ಲಿ ಡಿಕ್ರಿದಾರರಾದ ಅರ್ಜಿದಾರರ ಕಡೆಯಿಂದಲೂ ವಾರು ಕರೆಯುವ ಹಾಗೆ ಪರ್ಮಿಶನ್ ಅಪೇಕ್ಷಿಸಿ ವಗೈರೆ ಅರ್ಜಿದಾರರು ದಾಖಲು ಮಾಡಿದ ಸದರಿ ಅರ್ಜಿಯು ತಾ 24-1-34ಕ್ಕೆ ತನಿಕೆಗೆ ಇಟ್ಟಿರುವುದರಿಂದ ಆ ಕುರಿತು ಆಕ್ಷೇಪ ಇದ್ದರೆ ಅದನ್ನು ಸದರಿ ತಾರೀಕಿನ ದಿವಸ ಸದರಿ ಕೋರ್ಟು ಮುಂದೆ ಸದರಿ ಅರ್ಜಿ ತನಿಖೆ ಸಮಯ ಜಾಹೀರುಮಾಡಿಕೊಳ್ಳಬೇಕಾಗಿ ಸದರಿ 1ನೇ ಎದ್ರಿಗೆ ಈ ಮೂಲಕ ಕೂಡಾ ತಿಳಿಯಪಡಿಸಲಾಗುತ್ತದೆ.

Udipi S. K.
6-1-1934.

H. Keshava Pai,
Vakil for Petitioners.

ನೋಟೀಸು.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

O P No. 126/33

ನೇಮಣ್ಣ ಅಜ್ರಿ—ಅರ್ಜಿದಾರ.

ಅರ್ಜಿದಾರನು ಕುಕ್ಕೇಡಿ ಗ್ರಾಮದ ಅರ್ಜಿದಾರನ ಸೊಸೆ ಮರುದೇವಿ ಹೆಂಗಸಿನ ವಾರಿಸ್‌ದಾರನಾಗಿ ಸದರಿಯವಳಿಗೆ ಪಚ್ಚಾಡಿ ದೇವರಾಜ ಬಲ್ಲಾಳ್ ಟ್ರಾನ್ಸ್ಫರ್ ಮಾಡಿದ ತಾರೀಕು 13-5-1918ರ ಅಡವು ದಸ್ತಾವೇಜಿನ ಲೆಕ್ಕಾಚಾರದ ಬಗ್ಗೆ ಆದ ಸದರಿ ಕೋರ್ಟು ಕ್ರಮ ನಂಬ್ರ 50/1932ರ ಕುರಿತು ಸಕ್ಸೆಶನ್ ಸರ್ಟಿಫಿಕೆಟು ಕೊಡಿಸೋದಾಗಬೇಕಾಗಿ ಈ ಕೋರ್ಟಿನಲ್ಲಿ ಬರಕೊಂಡ ಸದರಿ ಮೇಲೆ ನಮೂದಿಸಿರುವ ಅರ್ಜಿಯು ತನಿಖೆ ಬಗ್ಗೆ ಇದೇ ಬರುವ ತಾ. 26-1-1934ಕ್ಕೆ ಇಟ್ಟಿದೆ. ಈ ಕುರಿತು ಆಕ್ಷೇಪಗಳನ್ನು ಜಾಹೀರುಮಾಡಿಕೊಳ್ಳಬಹುದು.

ಕಾರ್ಕಳ,
ತಾ. 6-1-1934

K. Sadasiva Bhat,
Councel for Petitioner.

ನೋಟೀಸು.

The Canara Bank Ltd, Kasaragod

ದಿ ಕೆನರಾ ಬೇಂಕ್ ಲಿಮಿಟೆಡ್, ಕಾಸರಗೋಡು.

ಈ ಕೆಳಗೆ ಹೆಸರು ಕಾಣಿಸಿದವರು ಸದರಿ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಸಾಲಗಳುಗಳನ್ನಾಗಲಿ, ಅವುಗಳ ಮೇಲಣ ಬಡ್ಡಿಯನ್ನಾಗಲಿ ವಾಯಿದೆಗೆ ಕೊಡದೆ ಇರುವುದರಿಂದಲೂ, ಅವರಿಗೆ ಬಿಟ್ಟ ರಿಜಿಸ್ಟ್ರೀ ನೋಟೀಸುಗಳು ಜ್ಯಾರಿ ಆಗದೆ ಬಂದಿರುವುದರಿಂದಲೂ, ಸದರಿ ಸಾಲಗಾರರು, ಬೇಂಕಿಗೆ ಸಲ್ಲತಕ್ಕ, ಅಸಲು, ಬಡ್ಡಿ, ನೋಟೀಸು ಖರ್ಚು ಇತ್ಯಾದಿ ಐವೇಜುಗಳನ್ನು ಇದೇ 1934ನೇ ಇಸವಿ, ಜನವರಿ ತಾರೀಕು 24ನೇ ಬುಧವಾರದೊಳಗೆ ಪಾವತಿ ಮಾಡಿ ಅಡವಿಟ್ಟ ನಗಗಳನ್ನು ಬಿಡಿಸಿಕೊಂಡು ಹೋಗದೆ ಇದ್ದರೆ, ಇದೇ 1934ನೇ ಇಸವಿ ಜನವರಿ ತಾರೀಕು 25ನೇ ಗುರುವಾರ ದಿವಸ ಮಧ್ಯಾಹ್ನ 2 ಗಂಟೆಗೆ ಸರಿಯಾಗಿ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುವು.

ಲೋನ್ ನಂಬ್ರ 831/32 Govindan Nambudari, S/o Narayana Nambudari, Alakat Amsam, Payyanur P. O. ಅಸ್ಲು ರೂ. 110

ಲೋನ್ ನಂಬ್ರ 1342/32 K Narasimha, S/o K Nagappaya, Korkode, Kasaragod ಅಸ್ಲು ರೂ 200

ಲೋನ್ ನಂಬ್ರ 252/33 Mahamad Kunhi, S/o Kunhi Pokar, Merchant, Mogral, Kumbla P O ಅಸ್ಲು ರೂ 300

ಲೋನ್ ನಂಬ್ರ 603/33. Abdula Kunhi, S/o T Mahamad Teacher, Kalnad New Board School, Kalnad, Bekal P O, ಅಸ್ಲು ರೂ 30

ಲೋನ್ ನಂಬ್ರ 2559/31 K Ramu S/o Raman, Station master, Pallikere, Bekal, P O ಅಸ್ಲು ರೂ 50

Office of Bank,
Kasaragod,
5 1-34

K M Nayak,
AGENT

NOTICE.

IN COURT OF THE DISTRICT MUNSIFF OF MANGALORE.

S.C 1165/33.

Between

The Ammembal Subba Rao Pai Memorial Fund by its Secretary, M. Madhava Rao – Plaintiff. &

Perdur Vittal Kamath – Defendant.

Notice is hereby given that the Plaintiff abovenamed has filed a suit against you in the above Court, for the recovery of Rs 159—1—9, with interest and costs of suit in respect of two bonds executed by you in favour of the Plaintiff Society and the said suit is posted for final hearing on 18—1—34 at 11 a. m. You are therefore required to appear either in person or by pleader on the said date and contest the same, failing which, the suit will be decided exparte

Mangalore,
9—1—34.

A. Damodar Pai,
Vakil for Plaintiff

ಇನಾಂ! 12 ಸೆಂಟ್ ಬಾಟ್ಲಿಗಳು!

ಬೆಸ್ಟ್ ಫೌಂಟನ್ ಪೇನಾ–16 ಆಣೆ

ಬ್ರಿಟಿಷ್ ಮೇಡ್, ಕ್ಯಾರೆಟ್ ಭಂಗಾರದ ಮುಳ್ಳು ಹಾಕಿದೆ. ಅಕ್ಷರಗಳು ಮುತ್ತುಗಳ ಹಾಗೆ ಮುದ್ದಾಗಿ ಬರೆಯುವುದು. ಇದನ್ನು ಈ ತಿಂಗಳ ಒಳಗೆ ತರಿಸಿಕೊಳ್ಳುವವರಿಗೆ 1 ಡಜನ್ ರೋಸ್, ಜಸ್ಮಿನ್, ಚಾಂಪಾ ಮೊದಲಾದ ಪರಿಮಳ ದ್ರವ್ಯದ ಸೀಸೆಗಳು ಬಹುಮಾನವಾಗಿ ಕೊಡಲ್ಪಡುತ್ತವೆ. ಕಡಿಮೆ ಕ್ರಯ ಪೇನಾ ಕ್ಕೆ 16 ಆಣೆ ಮಾತ್ರ.

ಸಿ ರಾಜ ಅಂಡ್ ಕಂಪೆನಿ,
29 ಪೆರುಮಾಳ್ ಕೋವಿಲ್ ಗಾರ್ಡನ್ ರೀದಿ,
ಸಾಹುಕಾರ ಪೇಟೆ, ಮದ್ರಾಸ್.

ಜಯವಾಣಿ ಟಾಕೀಸ್ ಮದ್ರಾಸು.

ಇವರು

ಕನ್ನಡದಲ್ಲಿ ಅಪೂರ್ವ ಪ್ರಯತ್ನವಾದ 'ಧ್ರುವಕುಮಾರ' ಎಂಬ ಪ್ರಥಮ ಕನ್ನಡ ಟಾಕಿಯನ್ನು ಮೊದಲಿನ ಸರ್ತಿ ಕನ್ನಡಿಗರಿಗೆ ಸಮರ್ಪಿಸುವರು'

೩೬ ಭವ್ಯ ಗೀತಗಳು!————————ಎಲ್ಲ ಅತ್ಯುತ್ತಮ ಗಾಯನ ಪಟುಗಳು!

ಆರೇ ವರ್ಷದ ಅದ್ಭುತಶಕ್ತಿಯುಳ್ಳ ಹುಡುಗ ಮಾಸ್ಟರ್ ಮುತ್ತು ಇವನ ಧ್ರುವಪಾತ್ರದ ಜಾದುಗಾರಿಕೆಯನ್ನು ಕೇಳಿ ಆನಂದಪಡಿರಿ!

(ಈತನ ಮೈಸೂರಿನ ಕೈ ವಾ ನಾಟಕಶಿರೋಮಣಿ ಎ ವಿ ವರದಾಚಾರ್ಯರ ಮೊಮ್ಮಗ) ಇವನಲ್ಲದೆ ಅಭಿನಯ ವಿಶಾರದ ಜಿ ನಾಗೇಶರಾವ್, ಶ್ರೀಮತಿ ಕನಕಲಕ್ಷ್ಮೀದೇವಿ, ಎಂ ಎ, ಟಿ ದ್ವಾರಕಾನಾಥ, ಬಿ ಎಸ್ಸಿ ಮೊದಲಾದವರ ಅಭಿನಯಕೌಶಲವನ್ನು ಕಣ್ಣಾರೆ ಕಾಣಬಹುದು!

ನಿಮ್ಮ 'ಟಾಕಿ' ಸಿನೆಮ ಮಂದಿರಕ್ಕೆ ಈ ಚಿತ್ರವು ಎಂದು ಬರುವುದೋ ನಿರೀಕ್ಷಿಸಿರಿ!

ನಿಮಗೆ ಭಕ್ತಿ ಜ್ಞಾನಗಳು ಬೇಕೋ? ಹಾಗಾದರೆ ಶ್ರೀ ಭಾಗವತವನ್ನು ಓದಿರಿ.

ಕನ್ನಡ ಟೀಕಾತಾತ್ಪರ್ಯಾದಿ ಸಹಿತ

ಶ್ರೀ ಭಾಗವತ ಮಹಾಪುರಾಣ.

ಆಸ್ಥಾನ ಮಹಾವಿದ್ವಾನ್ ತೋಟಗಾನಹಳ್ಳಿ ರಾಮಶೇಷಶಾಸ್ತ್ರಿಗಳಿಂದ ಪ್ರಕಟಿಸಲ್ಪಟ್ಟಿದು ಮತತ್ರಯಾನುಸಾರವಾಗಿ ಅನೇಕ ವಿಷಯಗಳೊಡನೆ ಕನ್ನಡಿಸಲ್ಪಟ್ಟ ಈ ಗ್ರಂಥವು ಮೊದಲಿನಿಂದ ಹತ್ತು ಸ್ಕಂಧಗಳು 7 ಸಂಪುಟಗಳಲ್ಲಿ ಪ್ರಚಾರವಾಗಿರುವುದು ಸರಿಯಷ್ಟೆ. ಈಗ 11–12ನೇಯ ಸ್ಕಂಧಗಳುಳ್ಳ ಎಂಟನೆಯ ಸಂಪುಟವು ಪೀಠಿಕಾ ವಿಮರ್ಶೆಗಳೊಡನೆ ಬಿಕರಿಗೆ ಸಿದ್ಧವಾಗಿದೆ ಹಿಂದಣ ಗ್ರಾಹಕ ಮಹಾಶಯರೂ ದೇಶಬಾಂಧವರೂ ಸಹಾ ಪ್ರೋತ್ಸಾಹಿಸಬೇಕೆಂದು ಪ್ರಾರ್ಥನೆ.

1ನೇಯ ಸಂಪುಟ (1–2ನೇ ಸ್ಕಂಧಗಳು) 3—4—0	7ನೇಯ ಸಂಪುಟ (ದಶಮ ಉತ್ತರ ಭಾಗ) 4—8—0
2 ,, ,, (3ನೇಯ ಸ್ಕಂಧ) 3—12—0	8 ,, ,, (11, 12ನೆಯ ಸ್ಕಂಧಗಳು ಪೀಠಿಕಾ ಸಹ) 4 8—0
3 ,, ,, (4 ,, ,,) 3—8—0	ಶ್ರೀ ಭಾಗವತ ಪುರಾಣ ವಿಮರ್ಶೆ ಮಾತ್ರ 0—8—0
4 ,, ,, (5-6ನೇಯ ಸ್ಕಂಧಗಳು) 4—0—0	ಕರ್ನಾಟಕ ಮುದ್ರಾರಾಕ್ಷಸ ನಾಟಕ 1—4—0
5 ,, ,, (7, 8 9 ಸ್ಕಂಧಗಳು) 5—8—0	(ಇದೇ ಗ್ರಂಥಕರ್ತರಿಂದ ರಚಿಸಲ್ಪಟ್ಟಿದು)
6 ,, ,, (ದಶಮ ಪೂರ್ವ ಭಾಗ) 5—0—0	

ಈ ಬೆಲೆಗಳಿಗೆ ಟಪ್ಪಾಲು ಹಾಸಲು ಸೇರಿಲ್ಲ ಹೆಚ್ಚು ವಿಷಯಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ಆರ್. ಶ್ರೀಕಂಠ ಶಾಸ್ತ್ರಿ, ಭಾರತೀ ಭವನಂ, ಚಾಮರಾಜಪೇಟೆ, ಬೆಂಗಳೂರು ಸಿಟಿ.

ಹೊಸ ರಮಂ! ಅಂದವಾದ ಸೀರೆಗಳು!

ಸ್ವದೇಶಿ ಕಲರ್ ಸೀರೆಗಳು.

ಈ ಸೀರೆಗಳನ್ನು ಹೆಸರು ಹೊಂದಿದ ಕಂಪೆನಿಯಿಂದ ಸಂಪಾದಿಸಿ ಹೆಚ್ಚಾಗಿ ತರಿಸಿರುತ್ತೇವೆ ಗಟ್ಟಿ ಬಣ್ಣ ಎಲ್ಲಾ ಬಣ್ಣಗಳಲ್ಲಿಯೂ ದೊರೆಯುವುದು. ಸುಂದರವಾದ ಸೆರಗು ಅಂದವಾದ ಅಂಚು ಇರುವುದು ನೋಡುವುದಕ್ಕೆ ರೇಶ್ಮೆ ಸೀರೆಯ ಹಾಗೆ ಕಾಣುವುದು ಎಲ್ಲಾ ಮಹಸ್ತರೂ ಉಡಲು ಲಾಯಖಾದುದು 18 ಮೊಳ ಸೀರೆ ಕ್ರಯ ರೂ 4—0—0

16 ಮೊಳ ಸೀರೆ ಕ್ರಯ ರೂ 3—4—0

ವಿಳಾಸ— ಟಿ. ಪಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
೨೮೦ ವಾಲ್‌ಟೆಕ್ಸ್ ರೋಡ್, ಪೋ ಬಾ ನಂ, ೫೧೩,
ಪಾರ್ಕ್ ಟೌನ್, ಮದ್ರಾಸ್

HALF PRIZE ONLY

SANE SEX BOOKS.

Hidden Secrets of Sex	Re 1/8
The Sex Happiness	, 0/8
How to choose a wife	, 0/8
Rati Sastra	" 1/4
My Wife As 8, Sex Exercise	0/8

N B—All the above books are ll u trated a d beautifully printed and for Rs 3 only with free postage

P K Swamy & Co, Park Town,
G T MADRAS

ಹೇರ್ ಡೆಸ್ಟ್ರಾಯರ್ ಎಂಬ ರೋಮನಾಶಕ ಕ್ರೀಂ

ಕ್ರಯ ಬಾಟ್ಲಿ 1ಕ್ಕೆ 12 ಆಣೆ

ಈ ಹೊಸ ಜರ್ಮನ್ ರೋಮನಾಶಕ ಕ್ರೀಂ ಎಂಬುದು ಶರೀರದೊಳಗಿನ ಯಾವ ಭಾಗದಲ್ಲಿಯಾದರೂ ಪ್ರಯಾಸವಿಲ್ಲದೆ ದುರ್ವಾಸನೆ ಇಲ್ಲದೆ ನೋವಿಲ್ಲದೆ ಚರ್ಮದ ಮೇಲೆ ಯಾವ ತರದ ಕಲೆಯನ್ನು ಉಂಟು ಮಾಡದೆ ಸುಲಭವಾಗಿ ಒಂದೇ ನಿಮಿಷದಲ್ಲಿ ಕೂದಲನ್ನು ತೆಗೆಯುವದು ಇದರಿಂದ ಚರ್ಮಕ್ಕೆ ಕಾಂತಿಯು ಉಂಟಾಗುವುದು ಉಪಯೋಗಿಸುವ ವಿಧಾನವನ್ನು ಬಾಟ್ಲಿ ಸಂಗಡ ಕಳುಹಿಸುವೆವು ಫ್ರೆಂಚ್ ಲಂಡನ್ ದೇಶಗಳಲ್ಲಿ ಇದನ್ನು ಬಹಳ ಉಪಯೋಗಿಸುತ್ತಾರೆ ಕ್ಷೌರಿಕನ ಹತ್ತಿರ ಹೋಗುವ ಕೆಲಸವಿಲ್ಲ ಒಂದು ಬಾಟ್ಲಿ ಬಹಳ ದಿವಸಕ್ಕೆ ಬರುವುದು

ವೆಡ್‌ಲಾಕ್ ಅಂಡ್ ಕಂಪೆನಿ, ಪಾರ್ಕ್‌ಟೌನ್ ಮದ್ರಾಸು.
Wedlock & Co Park Town MADRAS

ಟಿನಿಮೆಂಟ್ ಆಯಿಂಟ್‌ಮೆಂಟ್ ಎಂಬ

ನಪುಂಸಕತ್ವಹಾರೀ ತೈಲವು

ಮನುಷ್ಯರಲ್ಲಿ ಪುರುಷಾರ್ಥವು ಕೇವಲ ಧಾತುವಿನಿಂದಲೇ ಇರುವುದು ಮನುಷ್ಯರ ದೂಷಿತ ವೀರ್ಯವು ಗರ್ಭಕಾರಕವಾಗಲಾರದು ಅತ್ಯಂತ ಮೈಥುನದಿಂದಲೂ ವ್ಯಾಯಾಮ (ಕಸರತ್)ದಿಂದಲೂ ಹಸ್ತಪ್ರಯೋಗಾದಿಗಳಿಂದಲೂ ಸ್ತ್ರೀ ಸಂಬಂಧ ವ್ಯಾಧಿಗಳಿಂದಲೂ ವಾಯು ಜಾಸ್ತಿ ಆದ್ದರಿಂದಲೂ ಶರೀರದ ಎಲ್ಲಾ ನಾಡಿಗಳು ಬಹಳ ಬಲಹೀನವಾಗುವುದರಿಂದ ಪುರುಷತ್ವವು ಬಲಹೀನವಾಗಿ ಸ್ತ್ರೀ ಸಂಗ ಮಾಡುವುದಕ್ಕೆ ಆಗುವುದಿಲ್ಲ ಕೆಲವರ ಬಾಲ್ಯದಲ್ಲಿಯೂ ವೃದ್ಧಾಪ್ಯ(ಮುದುಕತನ) ದಲ್ಲಿಯೂ ಇಂಥಾ ವ್ಯಾಧಿಗಳನ್ನು ಉಂಟುಮಾಡಿಕೊಂಡು ಕಠಿಣವಾಗಿರುವ ವ್ಯಾಧಿಯನ್ನು ವೃದ್ಧರಲ್ಲಿ ಹೇಳಲು ನಾಚಿಕೆಯಿಂದ ವ್ಯಾಧಿಯನ್ನು ಹೆಚ್ಚು ಮಾಡಿಕೊಂಡು ಪ್ರಾಯ ಸಮರ್ಥರಾದಾಗ ರತಿಸುಖಕ್ಕೆ ಶಕ್ತಿಯಿಲ್ಲದೆ ಉತ್ಸಾಹವಿಲ್ಲದ ಅಶಾಭಂಗದಿಂದ ಮನೋವ್ಯಥೆಯನ್ನುಂಟು ಮಾಡಿಕೊಳ್ಳುವವರು ಇಂಥವರ ಉಪಯೋಗಕ್ಕೋಸ್ಕರವಾಗಿ ಇಂಗ್ಲೀಷ್ ಡಾಕ್ಟರುಗಳಿಂದ ಈ ತೈಲವನ್ನು ತಯಾರು ಮಾಡಲ್ಪಟ್ಟಿದೆ ಈ ಎಣ್ಣೆಯನ್ನು ಮೇಲೆ ಪುರುಷತ್ವಕ್ಕೆ ನಾಲ್ಕು ದಿನಗಳು ಸವರುವುದರಿಂದ ಗುಣವಾಗುವುದು

ಕ್ರಯ ಸೀಸೆ 1ಕ್ಕೆ ರೂ 1—4 0

ಸಿ ರಾಜ ಅಂಡ್ ಕಂಪೆನಿ, 20 ಬೀಟ್, ಮದರಾಸು.

ಮದನಕಳಾಶಾಸ್ತ್ರ ಎಂಬ ರಹಸ್ಯ ಪುಸ್ತಕ

ನ್ನಡ ಭಾಷೆಯಲ್ಲಿ ಸ್ತ್ರೀಪುರುಷರು ಪ್ರೀತಿಸುವ 22 ಫೋಟೋಗಳ ಸಹಿತ ಹೊರಟಿದೆ ಇದರಲ್ಲಿ ಜೈನ, ಸಿಲೋನ್ ಆಫ್ರಿಕ, ಫ್ರೆಂಚ್, ಜಪಾನ್ ಮೊದಲಾದ ದೇಶದ ಹೆಂಗಸರು ಪ್ರೀತಿಸುವ ಮರ್ಮಗಳು, ಮಲಗುವ ಶಯನೆಯಲ್ಲಿನ ವಿನೋದಗಳು, ವೇಶ್ಯಾಕನ್ಯೆಯರ ಮೋಹಿಸುವ ಕೌಶಲ್ಯಗಳು ಇನ್ನೂ ಸ್ತ್ರೀಪುರುಷರ ಲೀಲಾ ನೋಟಗಳು, ನವೀನ ಪ್ರೀತಿಯ ಫೋಟೋಗಳನ್ನು ನೋಡತಕ್ಕ, ಓದುತಕ್ಕ ಕಾಮಕರ ಪುಸ್ತಕ ಮುಗಿಯುವ ವರೆಗೂ ಶೃಂಗಾರವಾಗಿರುವುದು.

ಕ್ರಯ 22 ಫೋಟೋಗಳ ಸಹಿತ ಪುಸ್ತಕಕ್ಕೆ 1—0—0

ರಾಯಲ್ ಫೋಟೋ ಕಂಪೆನಿ, 19 ಬೀಟ್, ಮದ್ರಾಸು.

Royal Photo Company,
19 BEAT MADRAS

ಒಂದು ಸುಂದರ ಕೂಸು

ಸೆನಿಟರಿ ಇನ್ಸ್‌ಪೆಕ್ಟರರು

"ನಾನು ನಿಮ್ಮ ಹೆಸರುವಾಸಿ

ಲೋಧ್ರವನ್ನು

ನನ್ನ ಪತ್ನಿಗೆ ಉಪಯೋಗಿಸಿದನು ಅದರಿಂದಾಗಿ ನನಗೆ ಸುಂದರವಾದ ಗಂಡು ಕೂಸು ಹುಟ್ಟಿತು. ನಿಮಗೆ ನನ್ನ ನಮಸ್ಕಾರಗಳು."

ಎಸ್. ನಟರಾಜ ಮುದಲಿಯಾರ್,
ಸೆನಿಟರಿ ಇನ್ಸ್‌ಪೆಕ್ಟರ್
ವಾಲೂರು, ಮದುರಾ

ನಿಮ್ಮ ಕೆಮಿಸ್ಟರರ ಹತ್ತರ ಕೇಳಿರಿ.

ಅಥವಾ

ಕೇಸರಿ ಕುಟೀರಂ.

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

Sole Agents for South Kanara

ಪೋಪ್ಯುಲರ್ ಸ್ಟೋರ್ಸ್,
ರಥಬೀದಿ ಮಂಗಳೂರು

ಸ್ತ್ರೀ ಪುರುಷರ ಸಲುವಾಗಿ	ಸ್ತ್ರೀಯರ ಸಲುವಾಗಿ
ಶಕ್ತಿ ವ ಸ್ಫೂರ್ತಿ ಕೊಡುವಂತಹ	ಆರೋಗ್ಯ ವ ಶಕ್ತಿವರ್ಧಕ
ಸುಮಧುರ	ಪ್ರದರಾದಿ ರೋಗಗಳ ಮೇಲೆ ರಾಮಬಾಣ ಉಪಾಯ
ಝುಂಡು ದ್ರಾಕ್ಷಾಸವ	ಝುಂಡು ಅಶೋಕಾರಿಷ್ಟ
ಜರೂರು ಉಪಯೋಗಿಸಿರಿ	ಬೇಗನೇ ಉಪಯೋಗಿಸಿರಿ

'ZANDU'

ಝುಂಡು ಫಾರ್ಮಾಸ್ಯುಟಿಕಲ್ ವರ್ಕ್ಸ್ ಲಿ: ಮುಂಬ್ಯಾಗಳ.

ಮದ್ರಾಸು ಸಂಸ್ಥಾನದ ಏಜಂಟ್ —ದಾಮೋದರ ಮತ್ತು ಕಂಪೆನಿ, 78 ಚೈನ ಬಜಾರ ರೋಡ್, ಮದ್ರಾಸು
ಮೈಸೂರು ಪ್ರೊವಿನ್ಸ್ ಏಜಂಟ್ —ಬಿ ಪ್ರೊಷಟ್ ಲಾಲ ಕಂಪೆನಿ, ೫೧ ಅರ್ಕಟ ಶ್ರೀನಿವಾಸಾಚಾರ ಸ್ಟ್ರೀಟ್
ಮಂಗಳೂರು ಏಜಂಟ್ —ಶಾಹಾ ಕಂಪೆನಿ ಡಾಯ್ಮಂಡ್ ಬಿಲ್ಡಿಂಗ್, ಮಂಗಳೂರು
ಧಾರವಾಡ ಏಜಂಟ್—ದಿ ಧಾರವಾಡ ಫಾರ್ಮಸಿ ಧಾರವಾಡ

ಬೇರೆ ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತದೆ

ಆಯುರ್ವೇದ ಔಷಧಿಗಳ ಸೂಚೀಪತ್ರವನ್ನು ಮುಖ್ಯ ಏಜಂಟರಿಂದ ಪಡೆಕೊಳ್ಳಿರಿ

ನಮ್ಮ ಸಲಹೆಯೇ ಪ್ರಾಧಾನ್ಯವಾದದ್ದೆಂದು ತಿಳಿಯಬೇಡಿ.

ಕಲ್ಲಿಕೋಟೆ ಆಶೋಕ ಆಸ್ಪತ್ರೆಯ ಚೀಫ್ ಮೆಡಿಕಲ್ ಆಫೀಸರರಾದ ಡಾ ಪಿ. ಬಿ ರಾಮನ್, ಎಂ. ಆರ್ ಸಿ ಎಸ್ ಇವರು ಬರೆದಿರುವುದನ್ನು ಓದಿ ನೋಡಿ—"ನಾನು ನಿಮ್ಮ ಆಶ್ಚರ್ಯಕರವಾದ ಜೀವಾಮೃತಂ ಟಾನಿಕನ್ನು ನರಗಳಲ್ಲಿ ಉರಿತ ಇರಿತ ಹಸಿವು ಕಡಿಮೆಯಾಗಿರುವುದು ತೂಕವು ಕಡಿಮೆಯಾಗಿರುವುದು, ಇವು ವ್ಯಾಪ್ತವಾಗಿರುವ ಅನೇಕ ರೋಗಿಗಳಿಗೆ ಕೊಟ್ಟಿರುತ್ತೇನೆ, ಅದರ ಫಲಿತಾಂಶಗಳು ಬಹು ತೃಪ್ತಿಕರವಾಗಿದೆ. ಜೀವಾಮೃತವನ್ನು ದೇಹಶಕ್ತಿ ಕುಗ್ಗಿರುವ ಎಲ್ಲಾ ಸಂದರ್ಭಗಳಲ್ಲೂ ಸರ್ವ ಸಾಮಾನ್ಯವಾಗಿ ಉಪಯೋಗಿಸಬಹುದೆಂದು ನಾನು ಮನಃಪೂರ್ವಕವಾಗಿ ಶಿಫಾರಸು ಮಾಡುತ್ತೇನೆ"

ಜೀವಾಮೃತವು

ನರಗಳಿಗೆ ಶಕ್ತಿ ಕೊಡುತ್ತದೆ ವೀರ್ಯ ವೃದ್ಧಿಮಾಡುತ್ತದೆ ಹಸಿವು ಹೆಚ್ಚಿಸುತ್ತದೆ. ರಕ್ತ ವೃದ್ಧಿಮಾಡುತ್ತದೆ.

ಪಂಡಿತ ಡಿ ಗೋಪಾಲಾಚಾರ್ಲುರವರ **ಜೀವಾಮೃತವು**

ಎಲ್ಲಾ ಔಷಧ ವ್ಯಾಪಾರಿಗಳಲ್ಲೂ, ಸ್ಟೋರುಗಳಲ್ಲೂ ದೊರೆಯುತ್ತದೆ (ಸಂಪೂರ್ಣ ವಿವರಗಳಿಗೆ ಇವತ್ತೇ ಬರೆಯಿರಿ)

ಆಯುರ್ವೇದಾಶ್ರಮಂ, ಪೋ ಬಾಕ್ಸು ನಂ ೫೦೭, ಮದ್ರಾಸು.

ಹೋಲ್ ಏಜಂಟರು – ಸಿಟಿ ಮೆಡಿಕಲ್ ಮತ್ತು ಜನರಲ್ ಏಜನ್ಸಿ, ೯೨ ಚಿಕ್ಕಪೇಟೆ ಬೆಂಗಳೂರು- (ಉಡುಪಿ ಹೋಟೆಲ್ ಹತ್ತಿರ)
ದಕ್ಷಿಣ ಕನ್ನಡದ ಏಜಂಟರು— ಪೋಪ್ಯುಲರ್ ಸ್ಟೋರ್ಸ್, ಮಂಗಳೂರು. P No 104

[illegible]

... ಪದ್ಯವೊಂದಿಗೆ ಕಾರ್ಯಕ್ರಮವು ... [illegible] ... ಶ್ರೀ ಬಲರಾಮರಾಯರು ಭಾಗವತ ... ಪ್ರೇಕ್ಷಕರ ಮನರಂಜಿಸಿದರು, ಶ್ರೀ ... ಪಂಡಿತರು ... ಶ್ರೀ ... ಭಾರತ, ರಾ| ... ಭಾಗಗಳ ಪಕ್ಷ್ಮಣ, ರಾ| ಕುಂಬಳೆ ... ಪುರುಷರು ಮಂಥರ ಶೂರ್ಪನಖಿ, ಶ್ರೀ| ಬಾಳಿಕೆ ... ಭಟ್ಟರು ವಸಿಷ್ಠ ಮತ್ತು ಖರಾಸುರ, ಶ್ರೀ ... ಗೋಪಾಲಕೃಷ್ಣ ಪುತ್ತೂರು ... ಯರು ಸುಮಂತ್ರ, ... ವಿಷ್ಣು ... ಮಯ್ಯರು ಸೀತೆ ಇತ್ಯಾದಿ ನಮ್ಮ ... ಪ್ರಸಿದ್ಧ ಅರ್ಥದಾರಿಗಳು ಪಾತ್ರಗಳನ್ನು ವಹಿಸಿಕೊಂಡು ... ಭಾವಗಳನ್ನು ಯೋಗ್ಯ ರೀತಿಯಿಂದ ಪ್ರದರ್ಶಿಸಿ ಧರ್ಮಾರ್ಥ ... ವಾದ ಮಾತುಗಳನ್ನೆ ಆಡುತ್ತ ಅಸಂಬದ್ಧ ಚರ್ಚೆಗೆ ... ಮಾಡದೆ ಯಕ್ಷಗಾನವು ಯೋಗ್ಯವಾದ ... ದಾಗಿರುವುದೆಂದು ಪ್ರತಿಯೊಬ್ಬನಲ್ಲಿಯೂ ಹೃದಯಂಗಮ ... ವಾಗುವಂತೆ ಮಾಡಿದರು. ಭಾಗವತರ ಹಾಡುವಿಕೆಯು ... ರಮ್ಯವಾಗಿಯೂ ಆಕರ್ಷಕವಾಗಿಯೂ ಇತ್ತು. ... ದಂಗವಾಧಕರು ತಮ್ಮ ಹಳ್ಳಿನ ನೈಪುಣ್ಯವನ್ನು ತೋರಿಸಿ ... ಪ್ರೀತಿ ಪಾತ್ರರಾದರು. ಸಮಾರಂಭಾಂತ್ಯದಲ್ಲಿ ಎಡಪ್ಪಾ ... ರು ... ವಾದ ಭಾಷಣವೊಂದನ್ನಿತ್ತರು ಬಂದವರಿಗೆ ... ವಾದನ, ಸಾಹಿತ್ಯ ಪರಿಷತ್ತಿಗೆ ಹೋದವರನ್ನು ಬಹಿಷ್ಕರಿಸಿ ... ದರ ಅಯೋಗ್ಯತೆಯ ಕಂಟೋಕ್ತಿ, ಸ್ವಷ್ಟೀಕರಣ ಅರ್ಥ ಹೇಳುವ ... ತಿಯನ್ನು ಇನ್ನಷ್ಟು ಪರಿಷ್ಕೃತವಾಗಿ ಮಾಡಲು ಹಿತಸೂಚನೆ ... ಗಳೆ ಅವರ ಭಾಷಣದ ಮುಖ್ಯ ವಿಷಯಗಳಾಗಿದ್ದವು

ಬಂಟ್ವಾಳ.

ಇಲ್ಲಿಯ ಎಸ್. ವಿ. ಎಸ್. ಹೈಸ್ಕೂಲಿನ ಸಹಾಯಾರ್ಥ ... ಗಿ, ಹಳೇ ವಿದ್ಯಾರ್ಥಿಗಳೂ-ಉಪಾಧ್ಯಾಯರೂ ಕೂಡಿ ... ಎಸ್. ವಿ. ಎಸ್. ಎಮೆಚ್ಯೂರ್ ನಾಟಕ-ಸಂಘ ಎಂಬೊಂದು) ... ನಾಟಕ ಸಂಘವನ್ನು ಏರ್ಪಡಿಸಿ ಇಲ್ಲಿಯ "ವಿಕ್ಟೋರಿಯಾ ... ಪ್ರಿನ್ಸ್‌"-ಮೂಲಕ ಶ್ರೀ. ಬಿ. ಕೆ. ಪ್ರಭುಗಳಿಂದ ವಿರಚಿತವಾದ ... ಮಹಾತ್ಮಾ-ಕವಿ ಜಯದೇವ' ಎಂಬ ನೂತನ ಸಂಗೀತ ... ನಾಟಕವನ್ನು ಶ್ರೀ ಲಕ್ಷ್ಮೀ ಥಿಯೇಟರಿನಲ್ಲಿ ಮೂರು ಸಾರಿ ... ಅಭಿನಯಿಸಿದರು. ಮೊದಲಿನ ನಾಟಕಕ್ಕೆ ರೂ. ೫೦-೫-೧ ... ಗಾ-೬-ಟಿಕೇಟಿನ ಹಣವಿದ್ದಿತು. ಆದರೂ ಸ್ಥಳ ಸಿಗದೆ ... ಜನರು ಹಿಂತಿರುಗಬೇಕಾಯಿತು ಆದರಿಂದ ಅದೇ ನಾಟಕವನ್ನು ಮತ್ತೂ ಎರಡು ಬಾರಿ ಆಡಿ ತೋರಿಸಿದರು. ಪ್ರೇಕ್ಷಕರು—ಇನ್ನೂ ಒಂದು ಬಾರಿ ಅದೇ ನಾಟಕವನ್ನು ನೋಡಬೇಕೆಂದು ಕುತೂಹಲಿಗಳಾಗಿದ್ದರು. ಶಾಲೆಯ ರಜಾ ದಿನಗಳು ಮುಗಿದುದರಿಂದ ಅಭಿನಯಿಸಲಾಗಲಿಲ್ಲ. ಇನ್ನು ಮುಂದಿನ ರಜಾ ದಿನಗಳಲ್ಲಿ ಮಂಗ್ಳೂರಿನಲ್ಲಿಯೂ ಅದೇ ನಾಟಕವನ್ನು ಒಂದು ಬಾರಿ-ಅಭಿನಯಿಸಬೇಕೆಂದಿರುವರು.

ಕೋಟ.

ಈ ಸೆಂಟರಿನ ಉಪಾಧ್ಯಾಯರ ಮಾಸಿಕ ಸಭೆಯು ತಾ: ೩೦-೧೧-೩೩ರಲ್ಲು ತಿರುಮ್ಮಲು ಬೋರ್ಡು ಶಾಲೆಯಲಿ ಗುರುಪುರ ಹಿಂದೂ ಹಾಯರ್ ಎಲಿಮೆಂಟರಿ ಶಾಲೆಯ ಮು| ... ಎನ್. ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಮುಂದಿನ ಸಭೆಯು ತಾ. ೨೭-೧-೩೪ನೇ ಶನಿವಾರ ಕೋಟ ಶ್ರೀ ವಿದ್ಯಾವಿಲಾಸ ಶಾಲೆಯಲ್ಲಿ ವಿಶೇಷ ರೀತಿಯಿಂದ ಜರಗಲಿಕ್ಕಿರುವುದು.

ಬೆಳ್ತಂಗಡಿ.

ಅದೇ ಕಳೆದ ದಸಂಬರ ... ರಿಂದ ೩೧ರ ವರೆಗೆ ಬೆಳ್ತಂಗಡಿ ಬೋರ್ಡು ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಪುತ್ತೂರು ... [illegible] ... ಅಧಿವೇಶನ ಸಮಾರಂಭವು ... ದಿಂದ ಜರಗಿತು. ... [illegible]

... ಮುಲ್ಕಿ ... ಅಧ್ಯಕ್ಷರಿಂದ ... ಅವರ ... [illegible] ... ಸಭೆಯು ಮುಗಿಯಿತು.

ಹಿಂದೀ ಪ್ರೇಮಿ ಮಂಡಳಿ, ಮಂಗಳೂರು

ಕಳೆದ ತಿಂಗಳ ತಾ. ೩೧ನೆಯ ಆದಿತ್ಯವಾರ ಸಂಜೆ ೬—೩೦ಕ್ಕೆ ಇಲ್ಲಿಯ ಶ್ರೀ ವಿ. ಎಸ್. ಥಿಯೇಟ್ರಿಕಲ್ ಕಂಪೆನಿಯವರ ಶ್ರೀ ಲಕ್ಷ್ಮೀ ಥಿಯೇಟರಿನಲ್ಲಿ, ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯು ಕಳೆದ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ಇಲ್ಲಿನ ಹಿಂದೀ, ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಪ್ರಮಾಣ ಪತ್ರ ಮತ್ತು ಪಾರಿತೋಷಕಗಳನ್ನು ಪ್ರದಾನ ಮಾಡುವ ಸಮಾರಂಭವು ಬಹಳ ವಿಜೃಂಭಣೆಯಿಂದ ಜರಗಿತು.

ಶ್ರೀಮತಿ ಲೀಲಾಬಾಯಿ ಕಾಮತ್, ಮಂಗಳೂರು ಇವರು ಸಮಾರಂಭದ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದ್ದರು ಸ್ಥಳೀಯ ತಾಲೂಕು ಬೋರ್ಡು ಬಾಲಿಕಾ ಪಾಠಶಾಲೆಯ ಬಾಲಿಕೆಯರ ಹಿಂದೀಯ ಪ್ರಾರ್ಥನೆಯಾದ ಮೇಲೆ ಹಿಂದೀ ಪ್ರೇಮಿ ಮಂಡಲಿಯ ಸೆಕ್ರೆಟರಿ ದೇಶಭಕ್ತ ಎಚ್. ಸೂರಪ್ಪಯ್ಯನವರು ಹಿಂದೀ ಪ್ರಚಾರ ವರದಿಯನ್ನು ಓದಿದರು. ಪ್ರಮಾಣ ಪತ್ರ ಪಾರಿತೋಷಕ ಪ್ರದಾನಾ ನಂತರ ಶ್ರೀಮತಿ ಗಂಗಾಬಾಯಿ ಕೇಳ್ಕರ ಮಂಗಳೂರು, ಇವರು ರಾಷ್ಟ್ರ ಭಾಷೆಯಾದ ಹಿಂದೀಯನ್ನು ಅತಿ ಸುಲಭವಾಗಿ ಇನ್ನೂ ಹಳ್ಳಿ ಪಳ್ಳಿಗಳಲ್ಲಿಯು ನಿರಕ್ಷರಕುಕ್ಷಿಗಳಲ್ಲಿಯೂ ಅತಿ ಬೇಗನೆ ಪ್ರಸಾರಗೊಳಿಸಲು ಬೇಕಾದ ಅನೇಕ ರೀತಿಯ ಸುಲಭೋಪಾಯಗಳನ್ನು ಹೇಳುತ್ತಾ ಅತಿ ಸರಸ, ಮಧುರ, ಹಾಗೂ ಸುಲಲಿತವಾಗಿ ಹಿಂದೀಯಲ್ಲಿ ಅಭಿಭಾಷಣ ವನ್ನಿತ್ತರು. ಅಧ್ಯಕ್ಷರ ಭಾಷಣದ ತರುವಾಯ ಕೆಲವು ಜನ ಹಿಂದೀ ಪ್ರೇಮಿಗಳು ಸಂದರ್ಭೋಚಿತವಾದ ಭಾಷಣಗಳನ್ನು ಮಾಡಿದರು ಅನಂತರ ಸ್ಥಳೀಯ ಹಿಂದೀಯ ವಿದ್ಯಾರ್ಥಿಗಳು ಮೇವಾಡ ಪತನದ ಕೆಲವು ದೃಶ್ಯಗಳನ್ನು ಆಡಿ ತೋರಿಸಿದರು. ನಡುನಡುವೆ ಸಂತಸವು ಕೂಡಾ ಇತ್ತು ಧನ್ಯವಾದವು ಕೊಡಲ್ಪಟ್ಟ ಮೇಲೆ ಉಪರ್ಯುಕ್ತ ಹುಡುಗಿಯರ ಶಾಲೆಯ ಬಾಲಿಕೆಯರು ಮಾಡಿ ತೋರಿಸಿದ ಭಾರತ ಮಾತೆಯ (tablue) ದೃಶ್ಯವು ಶ್ರೇಯಃ ಪ್ರಾರ್ಥನೆಯೊಂದಿಗೆ ಅಂದಿನ ಕಾರ್ಯಕ್ರಮವು ಕೊನೆಗೊಂಡಿತು ಸಭಾಭವನವು ಸ್ಥಳೀಯ ಹಾಗೂ ಹೊರಗಿನ ಪ್ರತಿಷ್ಠಿತ ಮಹನೀಯರುಗಳಿಂದ ಕಿಕ್ಕಿರಿದು ಬಹಳ ಶೋಭಾಯಮಾನವಾಗಿದ್ದಿತು ದ. ಕ ಜಿಲ್ಲಾ ಪ್ರಚಾರಕ ಶ್ರೀಯುತ ಕೆ ರಾಘವಾಚಾರ್, ಶ್ರೀ ಕೆ. ವೆಂಕಟ್ರಾವ್ ಬಿ ಎ ಬಿ ಎಲ್ ವಕೀಲ್, ಮತ್ತು ಶ್ರೀ ಜಗನ್ನಿವಾಸ ರಾವ್ ಹಾಗೂ ಇನ್ನಿತರ ಮಹನೀಯರು ಬಂದಿದ್ದರು.

ಕಾರ್ಕಳ

ಇಲ್ಲಿಯ ಕುಕ್ಕುಂದೂರು ಶ್ರೀ ದುರ್ಗಾ ಹಾಯರ್ ಎಲಿಮೆಂಟರಿ ಶಾಲೆಯ ದ್ರವ್ಯಾನುಕೂಲಕ್ಕಾಗಿ ರೂಪಾಯಿ ೨೫೦ಕ್ಕೆ ಒಂದು ಸೋಟ್ರಿ (Raffle) ಮಾಡುವುದಾಗಿ ದಿ. ಶ್ರೀ ದುರ್ಗಾ ಹಾಯರ್ ಎಲಿಮೆಂಟರಿ ಸ್ಕೂಲ್ ಗ್ರೇಂಡ್ ...

... ಕಮಿಟಿ ಎಂಬ ... ದಿಂದ ಒಂದು ಸಂಘವು ... ಸ್ಥಾ ... ಮ. ರಾ, ಕಾರ್ಕಳ ನಾಗಪ್ಪ ಹೆಗ್ಗಡೆಗಳ್ ... ಎಂ. ಎಲ್. ಸಿ. ಯವರೇ ಇದರ ಅಧ್ಯಕ್ಷರು. ಮ. ರಾ. ಯಂ. ಎಸ್. ಅಧಿಕಾರಿ, ಬಿ. ಎ. ಎಲ್. ಎಲ್. ಬಿ. ಯವರು ಇದರ ಕಾರ್ಯದರ್ಶಿಗಳೆಂದು ತಿಳಿದು ಬರುತ್ತದೆ.

ಸರಕಾರದವರು ಸದ್ಯದಲ್ಲಿಯೇ ಇತ್ತರಿಗೆ ತರಲಿಕ್ಕಿರುವ ರಿಮಿಷನ್ನಿನ್ನು ತಡೆಯಲಿಕ್ಕೆ ಮತ್ತು ತೀರ್ವೆಯನ್ನು ಕಡಿಮೆ ಮಾಡುವ ವಿಷಯದಲ್ಲಿ ಪ್ರಯತ್ನ ಮಾಡುವರೆ ಕಾರ್ಕಳದ ವರ್ಗದಾರರ ಸಭೆಯು ತಾ. ೩೧-೧೧-೩೩ರಲ್ಲಿ ಶ್ರೀ. ಕೆ. ವೆಂಕಟ್ರಾಯ ನಾಕಯ್ಯರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಶ್ರೀಯುತರಾದ ಕಾರ್ಕಳ ನಾಗಪ್ಪ ಹೆಗ್ಗಡೆರು ಅಧ್ಯಕ್ಷರಾಗಿಯೂ ಬಿ. ಹುದ್ದಗಿರಿ ಶೆಟ್ಟಿ ಮತ್ತು ವಕೀಲ್ ಅಧಿಕಾರಿಯವರು ಜೊತೆ ಕಾರ್ಯದರ್ಶಿಯರಾಗಿಯೂ ಇರುವ ಒಂದು ವರ್ಗದಾರರ ತಾಲೂಕು ಕಮಿಟಿಯನ್ನು ಸ್ಥಾಪಿಸಲಾಯಿತು. ಸಭೆಯವರು ಇದೇ ತಿಂಗಳ ಅಖೇರಿಯೊಳಗೆ ತಾಲೂಕು ವರ್ಗದಾರರ ಪರಿಷತ್ತನ್ನು ಕಾರ್ಕಳದಲ್ಲಿ ಜರಗಿಸಬೇಕೆಂದು ನಿಶ್ಚಯ ಮಾಡಿದ್ದಾರೆ

ಮಹಾತ್ಮಾ ಗಾಂಧಿಯವರು ಮಂಗಳೂರಿನಿಂದ ಮೂಲ್ಕಿ ಮಾರ್ಗವಾಗಿ ಉಡುಪಿಗೆ ಹೋಗಿ ತಾ ೧೬ನೇ ಬೆಳಗ್ಗೆ ಕಾರ್ಕಳ ಮಾರ್ಗವಾಗಿ ಮಂಗಳೂರಿಗೆ ಹಿಂದಿರುಗಿ ಬರುತ್ತಾರೆಂದು ತಿಳಿದು ಬರುತ್ತದೆ

ಉಡುಪಿ

ಉಡುಪಿಯಲ್ಲಿ ಕಳೆದ ಶನಿವಾರ ಮಹಮ್ಮದ್‌ಪೀರರ ಶ್ರೀ ಚಂದ್ರಕಲಾ ನಾಟಕ ಸಂಘದ ನಾಟಕಾರಂಭ ಸಾಮಾಜಿಕ ನಾಟಕ ರತ್ನವಾದ 'ಸಂಸಾರ ನೌಕೆ'ಯನ್ನಭಿನಯಿಸಿದರು ಆದ್ಯಂತದ ವರೆಗೆ ಆಕರ್ಷಣೀಯವಾಗಿತ್ತು

ಮಹಾತ್ಮಾ ಗಾಂಧಿ ಸ್ವಾಗತ ಮಂಡಳಿ

ತಾ ೧೪ನೇ ಆದಿತ್ಯವಾರ ಮಂಗಳೂರನ್ನು ಸಂದರ್ಶಿಸಲಿರುವ ಮಹಾತ್ಮಾ ಗಾಂಧಿಯವರಿಗೆ ನಮ್ಮ ಜಿಲ್ಲೆಯ ಪರವಾಗಿ ಅರ್ಪಿಸಲಿರುವ ನಿಧಿಗೆ ಎಲ್ಲರೂ ಉದಾರ ಮನಸ್ಸಿನಿಂದ ಧನ ಸಹಾಯ ಮಾಡಬೇಕೆಂದು ಸ್ವಾಗತ ಕಮಿಟಿಯು ಅಪೇಕ್ಷಿಸುತ್ತದೆ ಮಹಾಜನರು ತಮ್ಮ ಅನುಕೂಲದಂತೆ ಈ ಕೆಳಗಿನವರಲ್ಲಿ ತಮ್ಮ ಸಹಾಯ ಧನವನ್ನು ಕೊಡಬಹುದು ೧ ಡಾ| ಎಚ್ ವಿ ಆಡಪ್ಪ ಅತ್ತಾವರ, ಕೋಶಾಧಿಕಾರಿ, ಸ್ವಾಗತ ಮಂಡಳಿ, ೨ ಡಾ ಯು ಪಿ ಮಲ್ಯ, ರಾಮಕೃಷ್ಣ ನರ್ಸಿಂಗ್ ಹೋಮ್ ಕಾರ್ಯದರ್ಶಿ, ಸ್ವಾಗತ ಮಂಡಳಿ, ೩ ಮೆನೇಜರ್ ಖಾದಿ ಭಂಡಾರ ಕೊಡಿಯಾಲ್‌ಬೈಲ್ ಎಂದು ಶ್ರೀ ಯು ಪಿ ಮಲ್ಯ, ಕಾರ್ಯದರ್ಶಿ ಸ್ವಾಗತ ಮಂಡಳಿ, ಇವರು ತಿಳಿಸುತ್ತಾರೆ

+ + + +

ಬೇಕಾಗಿದ್ದಾರೆ.

ಪುತ್ತೂರು, ಸಕಲೇಶಪುರ, ಚಿಕ್ಕಮಗಳೂರುಗಳಲ್ಲಿ ಬಿಡಿ ಸಂಚಿಕೆ ಮಾರಲು ಉತ್ಸಾಹೀ ಏಜಂಟರು ಬೇಕು ಶರ್ತಗಳಿಗೆ ಕೂಡಲೇ ಬರೆಯಿರಿ ಮೆನೇಜರ್ ಸ್ವದೇಶಾಭಿಮಾನಿ

ಪಂಡಿತ ಜವಾಹರಲಾಲ ನೆಹರೂ ಬಂದಾಗ್ಗೆ ಹುಬ್ಬಳ್ಳಿ ಪ್ರದರ್ಶನದಲ್ಲಿ ಸುವರ್ಣ ಪದಕ ದೊರೆತ

ಒಂದೇ ಸವನಾಗಿ ೩೫ ವರ್ಷದ ಅನುಭವದಿಂದ

ಹಿಂದೂಸ್ಥಾನದ ಸಾವಿರಾರು ಜನರಿಂದ ವರ್ಣಿಸಲ್ಪಟ್ಟ ಆಯುರ್ವೇದೋಕ್ತ

ನಾನಾ ಮತ್ತು ಔಷಧ ವನಸ್ಪತಿಗಳಿಂದ ತಯಾರಾದ ಮತ್ತು ಇದರ ಗುಣಕ್ಕಾಗಿ ಅನೇಕ ಸರ್ಟಿಫಿಕೇಟುಗಳು ಮತ್ತು ಭಂಗಾರದ ಪದಕ ದೊರೆತ ಪರದೇಶದಲ್ಲಿ ಖರ್ಚಾಗುವ ಶಕ್ತಿಯ ... ದೊಡ್ಡ ... ಟಾನಿಕ

ದ್ರಾಕ್ಷಾಮೃತ

ಈ ದ್ರಾಕ್ಷಾಮೃತವು ಸಹ್ಯಾದ್ರಿ ಪರ್ವತದಲ್ಲಿರುವ ಅನೇಕ ವನಸ್ಪತಿಗಳ ರಸಗಳೊಂದಿಗೆ ದ್ರಾಕ್ಷಾರಸವನ್ನು ವಿ. ಪ್ರಮಾಣ ... ಯಂತ್ರದಿಂದ ಶಾಸ್ತ್ರೋಕ್ತ ಪದ್ಧತಿ ಪ್ರಕಾರ ತಯಾರ ಮಾಡಿರುವುದರಿಂದ ಸ್ವಾದಿಷ್ಟವು ಮತ್ತು ಮಧುರವು ಆಗಿದೆ

ಇದರ ಸೇವನೆಯಿಂದ ಶರೀರದೊಳಗಿನ ಹಳೇ ಕಫ (ಗರಮಿ) ಸಂಪೂರ್ಣ ನಾಶವಾಗುತ್ತದೆ ಮತ್ತು ಧಾತುಸ್ರಾವ, ಸ್ವಪ್ನ ... ಅಥವಾ ಬೇರೆ ಯಾವುದೇ ವಿಕಾರದಿಂದ ಬಂದ ಅಶಕ್ತತೆಯಿಂದ ಕೈಕಾಲು, ಕಣ್ಣುಗಳಿಗೆ ಉರುವು ಬೀಳೋದು, ... ಎಲುಬಿನಲ್ಲಿ ... ನೋಯಿಸೋದು, ... ಬಂದು ... ಸಾವು ... ಎಲ್ಲಾ ವಿಕಾರಗಳು ನಷ್ಟವಾಗಿ ಶುದ್ಧರಕ್ತವು ಬೆಳೆಯುತ್ತದೆ. ಮತ್ತು ಅನ್ನ ... ಪಚನವಾಗಿ ... ಸಾಫವಾಗುತ್ತದೆ. ಇದರ ಸೇವನೆಯಿಂದ ತರುಣರಿಗೆ ವ್ಯಭಿಚಾರದಿಂದ ಅಥವಾ ಬೇರೆ ಕಾರಣದಿಂದ ... ಧಾತು ... ಹೋಗಿ ಪುನಃ ಯುವಕರಂತಾಗಿ ಶರೀರ ಬಲವಾಗಿ ಮಕ್ಕಳು ... ಹೆಂಗಸರಿಗೂ ಮತ್ತು ಮಕ್ಕಳಿಗೂ ಈ ಔಷಧವು ಗುಣಕಾರಿ ಇದೆ ಮುಟ್ಟಾಗದಿದ್ದರೆ ಮತ್ತು ಇದ್ದ ಗರ್ಭ ... ರೋಗಗಳೆಲ್ಲ ... ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವುದು. ಅಶಕ್ತ ಹುಡುಗರು ಬಲ ... ಈ ಔಷಧದ ೩ ಬಾಟ್ಲಿಗಳನ್ನು ಸೇವನೆ ಮಾಡಿದರೆ ಪೂರ್ಣ ಗುಣ ಬರುತ್ತದೆ ಇದರ ಅನುಭವ ೧ ಬಾಟ್ಲಿ ಸೇವನೆ ಮಾಡಿದ ನಂತರ ತಿಳಿದೀತು.

ಬಾಟ್ಲಿ ಬೆಲೆ ೧—೪—೦, ೩ ಬಾಟ್ಲಿಗೆ ೩—೮—೦, ... ಬಾಟ್ಲಿಗಳ ... ಬೇರೆ ...

... ಮತ್ತು ... ಅಂಗಡಿಯಲ್ಲಿ ಸಿಗುವುದು

ವ್ಯವಸ್ಥಾಪಕರು—ದ್ರಾಕ್ಷಾಮೃತ ಕಾರ್ಯಾಲಯ, ಘೋಡಗೆ ... ಜಿಲ್ಲಾ, (ಬೆಳಗಾಂವಿ)

ಸಿಗುವ ಸ್ಥಳ:— ಮಂಗಳೂರು—ಗುಜ್ಜರನ ಮೆಡಿಕಲ್ ಹಾಲ್ ಮತ್ತು ಮಿಸ್ತಾರ್‌ಕರ್ ಬ್ರದರ್ಸ್, ಕಾರ್‌ಸ್ಟ್ರೀಟ್. ಕುಂದಾಪುರ—ಕೆ. ಆರ್. ಭಟ್ಟ, ಉಡುಪಿ—ಶೈ ಫಾರ್ಮಸಿ, ಮತ್ತು ಕೆ. ಶೇಷಗಿರಿ ಶೈ. ಕಾರ್ಕಳ—ವಿ. ವಿ. ಶೆಟ್ಟಿ. ಪುತ್ತೂರು—ಗೋಪಾಲ ನಾರಾಯಣ ಶೈ ಮತ್ತು ಶೈ ಫಾರ್ಮಸಿ. ಶಾಸಗೋಡು—ಕೆ. ರಾಮ ... ಶೆಟ್ಟಿ. ಬಂಟ್ವಾಳ—ವಿ. ಎಚ್. ವಾಸುದೇವ ಶೈ.

೫-೬-೩೩

By Using

"LADCO"

Vegetable Toilet and Washing Soaps

FREE FROM ANIMAL FAT

Bath Soap, Glycerine Transparent Soap, Bar Soap
Cubes, Cakes.

Agents for South Kanara, Malabar & Coorg—

PAI PHARMACY,
Car Street, MANGALORE.

Stockists:—
JAYAVANT SHANTARAM & BROS. *Merchants,*
Bunder, Mangalore, S. K

1–9–33

ಕೋ-ಓಪರೇಟಿವ್ ಸೊಸೈಟಿಗಳಿಗೆ
ಬೇಕಾದ ನಮೂನೆಯ ಎಲ್ಲಾ ವಿಧದ
ಫಾರಂಗಳು, ರಜಿಸ್ಟ್ರಿಗಳು, ರಶೀದಿ ಪುಸ್ತಕಗಳು,
ಮತ್ತು ಇತರ ಫಾರಂಗಳೂ ಮಾರಾಟಕ್ಕಿವೆ.
ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್.
ರಥಬೀದಿ, ಮಂಗಳೂರು

ಶಹಾ ಶಿವಾಜಿ ಹಿಂದೂ ರೆಸ್ಟೋರೆಂಟ್
ಗಣಪತಿ ಹೈಸ್ಕೂಲ್ ರಸ್ತೆ, ಮಂಗಳೂರು (ದ. ಕ.)
ಮಂಗಳೂರಿನ ನೂತನ ಉಪಹಾರ ಗೃಹ.

ಶುದ್ಧ ಜಿನಸುಗಳಿಂದ, ತಾಜಾ ತುಪ್ಪದಿಂದ ತಯಾರಿಸಲ್ಪಡುವ ಮಿಠಾಯಿಗಳು ಇನ್ನೆಷ್ಟೋ ಬಗೆಯ ತಿಂಡಿ ತಿನಸುಗಳು—ಚಹಾ, ಕಾಫಿ, ಕೊಕೊ ಇತ್ಯಾದಿ ಎಲ್ಲ ತರದ ಪಾನೀಯಗಳು
ಅನುಭವಸ್ಥರಿಂದ ತಯಾರಿಸಲ್ಪಡುವುವು.
ಆಯಾಯಾ ತರಗತಿಯವರಿಗನುಕೂಲವಾಗುವಂತೆ ಸ್ಥಳವಿದೆ
ಒಮ್ಮೆ ದಯಮಾಡಿಸಿ, ಪರೀಕ್ಷಿಸಿ
ತೃಪ್ತಿ ಪಡೆಯಿರಿ.

[ಪಿ. ಸೂ—ಟೀಪಾರ್ಟಿ, ವಿವಾಹ ಉಪನಯನಾದಿ ಸಮಾರಂಭಗಳಲ್ಲಿ ಸುಲಭ ದರಗಳಲ್ಲಿ ತಿಂಡಿ ತಿನಸು—ಪಾನೀಯಗಳನು ಒದಗಿಸಲಾಗುವುದು. ವಿಶೇಷ ಮಾಹಿತಿಗೆ ಖುದ್ದಾಗಿ ಯಾ ಪತ್ರದ್ವಾರಾ ವಿಚಾರಿಸಿಕೊಳ್ಳುವುದು]

'ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

WANTED.

Four Organisers to organise the work of the South Indian General Assurance Society, Ltd, in the following places noted below. Capable organisers can expect to have attractive and encouraging terms with sound footing for their future

(1) South Canara, (2) Mysore, Hassan and Coorg, (3) Kadur. Shimoga, Chitaldroog and Tumkur (4) Mangalore, Kolar

For terms and other particulars please apply to—

The Divisional Manager,
The South Indian General Assurance Co Ltd
64, 3rd Cross Road, Srirampur Extn
Malleswaram Post, BANGALORE

OR

The Managing Agents,
The S. I. G. A. Co. Ltd.
55, Poonamallee High Road, Kilpauk, MADRAS.

ಉಪ್ಪತ್ತೇಳು ವರ್ಷಗಳು

ಅಸಂಖ್ಯಾತರಾದ ನಮ್ಮ ಗಿರಾಕಿಗಳ ಕೋರಿಕೆ ಮತ್ತು ಅನುಕೂಲತೆಗಳನ್ನು ಇದೇ ಮುಖ್ಯ ಲಕ್ಷದ ಮಾನದಿಂದ ತಿಳಿದು, ಅವರಿಗೆ ಸುಲಭ ದರದ ಯೋಗ್ಯ ಹಾಗೂ ಬಹುಕಾಲ ಬಾಳುವ ಸರ್ವ ತರದ ಉಡುಪುತೊಡುಪುಗಳನ್ನು ಒದಗಿಸುವ ನಮ್ಮ ಎರಡು ತಲಾಂತರಗಳ ಅನುಭವವು ಮುಂದಕ್ಕೂ ಸಂತೃಪ್ತಿಯನ್ನೇ ಕೊಡುವುದಲ್ಲವೇ?

ಸ್ವದೇಶೀ

ಕಾರ್ಖಾನೆಗಳಲ್ಲಾದ ನೂಲು ಮತ್ತು ಶ್ರಮಗ್ಗದ ವಸ್ತ್ರ, ಹೊದಿಕೆಗಳೂ, ಬೆಡ್‌ಶೀಟ್, ಬಾತ್ ಟುವಾಲುಗಳೂ, ಧೋತಿ, ಸೀರೆ—ಪೈರನಾಸು—ಶರ್ಟು—ಇತ್ಯಾದಿ ಎಲ್ಲವೂ ಯಾವಾಗಲೂ ಮಾರಾಟಕ್ಕಿವೆ.

ಶ್ರೀನಿವಾಸ ರಂಗಪೈ,
ರಥಬೀದಿ, ಮಂಗಳೂರು

Srinivasa Ranga Pai,
Representative for South Canara and Malabar
For— A. & F. Harvey,
Managers, Madura Mills Co. Ltd.

ಮಾರಾಟಕ್ಕಿವೆ! ಮಾರಾಟಕ್ಕಿವೆ!!
ಕಾಫಿ ಪ್ಲಾಂಟರರಿಗೂ, ತೋಟದವರಿಗೂ
ಬೇಕಾಗುವಂತಹ
ಚಕ್ ರೋಲ್‌ಗಳು
ಮೂರು ಸೈಜಿನಲ್ಲಿ ತಯಾರಿಸಲ್ಪಟ್ಟು
ಮಾರಾಟಕ್ಕೆ ಸಿದ್ಧವಿವೆ.
ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ
ಮೆನೇಜರ್,
ಕೆನರಾ ಛಾಪಖಾನೆ,
ರಥಬೀದಿ, ಮಂಗಳೂರು.

ಕ್ಷಯಕ್ಷೀಣಾದಿಗಳಿಗೆ
ಚ್ಯವನಪ್ರಾಶಾನ ಲೇಹ.
ಪ್ರಸೂತಿ ರೋಗಾದಿಗೆ
ದಶಮೂಲಾರಿಷ್ಟ.
(ಕಸ್ತೂರಿ ಮಿಶ್ರಿತ)
ಸಮಸ್ತ ವಾತರೋಗಗಳಿಗೆ
ಮಹಾನಾರಾಯಣ ತೈಲ.
ಶ್ರೀ ರಾಮಕೃಷ್ಣ ಧರ್ಮವೈದ್ಯಶಾಲೆ,
ಕೊಂಗರಕೇರಿ ರಸ್ತೆ, ಮಂಗಳೂರು

... Press, MANGALORE.

ಸ್ವದೇಶಾಭಿಮಾನಿ.

(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಶ್ವವ ಸುಡುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದ ಕುಳಿತರೆ । ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

(Oldest Kanarese Weekly in South Kanara)

ಪುಸ್ತಕ ೨೮. | ಮಂಗಳೂರು ತಾ ೧೯ನೇ ಶುಕ್ರವಾರ ಜನವರಿ ೧೯೩೪ | (19-1-'34) | ಸಂಚಿಕೆ ೩

THE CANARA BANKING CORPORATION, UDIPI, LTD.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI. **Branches:—Coondapoor, Mangalore, Shimoga & Madras.**

ಹೆಡ್ ಆಫೀಸು:— ಉಡುಪಿ. ಶಾಖೆ:—ಕುಂದಾಪುರ, ಮಂಗಳೂರು, ಶಿವಮೊಗ್ಗ ಮತ್ತು ಮದ್ರಾಸು.

Authorised Capital Rs. 3,50,000. Paid up Capital Rs. 2,25,000.

ನಿಯಮಿತ ಮೂಲಧನ ರೂ. 3,50,000. ಈಗಾ ಕಾಳಕ್ಕೆ ಅಪೇಕ್ಷಿತ ವ ವಸೂಲಾದ ಮೂಲಧನ ರೂ. 2,25,000.

STATEMENT OF ASSETS & LIABILITIES AS ON 31ST OCTOBER, 1933.

	Capital and Liabilities			Property and Assets	
1	Paid up Capital	Rs. 2,25,000-0-0	1	Bank Premises, Buildings, Furniture etc. Rs.	66,920-0-4
2	Reserve and other funds	,, 2,35,000-0-0	2	Investment on Gvt. securities	,, 3,00,560-5-6
3	Deposits.	,, 21,91,744-5-8	3	Authorised Investments	,, 23,02,701-4-1
4	Due to Bankers	,, 21,649-2-3	4	Bills per contra	10,547-3-9
5	Sundries	,, 84,330-2-6	5	Sundries	,, 28,997-6-1
6	Bills per contra	10,547-3-9	6	Cash on hand & with bankers.	,, 58,544-7-5
	Total	27,68,270-14-2		Total	27,68,270-14-2

Udipi 6-11-'33.

N. ANANDA RAO,
Secretary & Manager.

(Regd.)

ಅಮೃತಾಂಜನ.

ಇದು ಕಟ್ಟು ಶಿರೋವೇದನೆ, ಕಷ್ಟಕೊಡುವ ವಾತ, ಛಾರಿ ನೋವು, ವಿಶೇಷ ಉಳುಕು, ಅಸಹನೀಯ ಹಲ್ಲುನೋವು, ವಿಪರೀತ ಘಾಯ, ಬಹು ಶೀತ, ಸಹಿಸಲಸದಳವಾದ ಚಳಿ, ಕೈಕಾಲು ಮರಗಟ್ಟುವುದು, ಉಂಟಾಗೊ ಮೊದಲಾದ ಎಲ್ಲಾ ತರದ ವೇದನೆಗಳನ್ನು ಅತೀ ತ್ವರೆಯಲ್ಲೇ ಗುಣ ಪಡಿಸುತ್ತದೆ. ಎಲ್ಲಿಲಿಯೂ ಮಾರಲ್ಪಡುತ್ತಿದೆ.

ರಿಂಗ್‌ವರ್ಮ್ ಮುಲಾಮು— ಇದು ರಿಂಗ್‌ವರ್ಮನ್ನು ಕಜ್ಜಿಯನ್ನು ಇನ್ನಿತರ ಚರ್ಮರೋಗಗಳನ್ನು, ಮೂರು ದಿನದೊಳಗೆ ಗುಣಪಡಿಸುತ್ತದೆ.

ಡಬ್ಬಿ 1ಕ್ಕೆ 6 ಆಣೆ ಡಜನಿಗೆ ರೂ 3-8-0. ಅಂಚೆವೆಚ್ಚ ಪ್ರತ್ಯೇಕ.

ಅಮೃತಾಂಜನ ಡಿಪೋ.

ಮದರಾಸು ಮತ್ತು ಬೊಂಬಾಯಿ

ಸಣ್ಣ ಹುಡುಗರ ಸಲುವಾಗಿ,

ಡೊಂಗರೆ

ಇವರ

ಬಾಲಾಮೃತ

ಇದನ್ನು
ಕೊಡುವುದರಿಂದ ಮಕ್ಕಳು
ಸಶಕ್ತರೂ, ಪುಷ್ಟರೂ ಮತ್ತು
ಸಂತೋಷ ಚಿತ್ತರೂ ಆಗುವರು

ಕೇ. ಟಿ. ಡೊಂಗರೇ ಕಂಪೆನಿ.

ಕ್ಷಯಕ್ಷೀಣಾದಿಗಳಿಗೆ
ಚ್ಯವನಪ್ರಾಶಾನ ಲೇಹ.
ಪ್ರಸೂತಿ ರೋಗಾದಿಗೆ
ದಶಮೂಲಾರಿಷ್ಟ.
(ಕಸ್ತೂರಿ ಮಿಶ್ರಣ)
ಸಮಸ್ತ ವಾತರೋಗಗಳಿಗೆ
ಮಹಾನಾರಾಯಣ ತೈಲ.

ಶ್ರೀ ರಾಮಕೃಷ್ಣ ಧರ್ಮವೈದ್ಯಾತ್ರಮ ಸಂಘ,
ಡೊಂಗರಕೇರಿ ರಸ್ತೆ, ಮಂಗಳೂರು.

ಸ್ವಾಭಾವಿಕವಾದ ದೀರ್ಘ ನಿದ್ರೆಯು ಆರೋಗ್ಯಕ್ಕೆ ಆವಶ್ಯಕ.

ಅನೇಕರಿಗೆ ರಾತ್ರಿ ಸರಿಯಾದ ನಿದ್ರೆ ಬರುವುದಿಲ್ಲ—ಕಾರಣವೇನು? ನರಗಳು ನಿರ್ಬಲವಾಗಿವೆ ಮಿದುಳು ನಿಶ್ಶಕ್ತವಾಗಿವೆ ಬೇಸರದಿಂದಲೂ, ವಿಪರೀತ ಕೆಲಸದಿಂದಲೂ, ಹವಾ ಗುಣದಿಂದಲೂ, ಆವೇಶದಿಂ ಲೂ ಹೀಗಾಗುತ್ತದೆ

ಆರೋಗ್ಯದಿಂದಿರಬೇಕಾದರೆ, ನೀವು ಸರಿಯಾಗಿ ನಿದ್ರೆಮಾಡಬೇಕು ಸರಿಯಾಗಿ ನಿದ್ರೆ ಹತ್ತದಿದ್ದರೆ ಆರೋಗ್ಯವು ನೆಟ್ಟಗಾಗುವುದಿಲ್ಲ ಮಿದುಳು ಮತ್ತು ನರಗಳನ್ನು ಸಮಾಧಾನಗೊಳಿಸುವುದರಿಂದಲೇ ಸರಿಯಾದ ನಿದ್ರೆಯು ಬರುವುದು. ಸರಿಯಾದ ಪೋಷಣೆಯೇ ಇದಕ್ಕೆ ಅಗತ್ಯ ಇಂತಹ ಪೋಷಣೆಯೂ, ಮಿದುಳು ನರಗಳ ಸಮಾಧಾನವೂ ಒಳ್ಳೇ ನಿದ್ರೆಯೂ ರುಚಿಕರವಾದ 'ಓವಲ್ಟಿನ್' ಸೇವನೆಯಿಂದ ಲಭಿಸುತ್ತವೆ ಈ ಅಮೂಲ್ಯ ಪಾನೀಯವು ಪ್ರಕೃತಿಯ ಆಹಾರಗಳಿಂದಲೇ ತಯಾರಿಸಲ್ಪಟ್ಟಿದೆ ಬೆಳೆದ ಬಾರ್ಲಿ, ದನಗಳ ಹಾಲು ಮತ್ತು ಸ್ಪೆಶಲ್ ಕೋಕೋಗಳಿಂದ ಇದನ್ನು ತಯಾರಿಸಲಾಯಿತು ಅಸಂಖ್ಯಾತ ಸಾವಿರಾರು ಜನರು ಈ ಓವಲ್ಟಿನ್ ಪಾನೀಯದಿಂದಲೇ ಆರೋಗ್ಯ ನಿದ್ರೆಯನ್ನು ಹೊಂದುತ್ತಿರುವರು—ಶಕ್ತಿಯನ್ನು ಸಂಪಾದಿಸುತ್ತಿರುವರು

OVALTINE

ಸ್ವಾಭಾವಿಕವಾದ ದೀರ್ಘ ನಿದ್ರೆಯನ್ನು ಕೊಡುತ್ತದೆ

ತಯಾರಿಯಲ್ಲಿ ಕೈಯಲ್ಲಿ ಸ್ಪರ್ಶಿತವಾಗಿಲ್ಲ ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ದೊರೆಯುತ್ತದೆ.

ಏಜೆಂಟ್—ಜೇಮ್ಸ್ ರೈಟ್ 85ಎ ಕ್ಲೈವ್ ಸ್ಟ್ರೀಟ್ ಕಲ್ಕತ್ತಾ ಮತ್ತು ಬೊಂಬಾಯಿ ಮದ್ರಾಸುಗಳಲ್ಲಿ

OV/202

ಜಯವಾಣಿ ಟಾಕೀಸ್ ಮದ್ರಾಸು.

ಕವರ

ಕನ್ನಡದಲ್ಲಿ ಅಪೂರ್ವ ಪ್ರಯತ್ನವಾದ ಧ್ರುವಕುಮಾರ' ಎಂಬ ಪ್ರಥಮ ಕನ್ನಡ ಟಾಕಿಯನ್ನು ಮೊದಲಿನ ಸರ್ತಿ ಕನ್ನಡಿಗರಿಗೆ ಸಮರ್ಪಿಸುವರು

೩೩ ಭವ್ಯ ಗೀತಗಳು!——————ಎಲ್ಲ ಅಪ್ರತಿಮ ಗಾಯನ ಪಟುಗಳು!!

ಆರೇ ವರ್ಷದ ಅದ್ಭುತಶಕ್ತಿಯುಳ್ಳ ಹುಡುಗ ಮಾಸ್ಟರ್ ಮುತ್ತು ಇವನ ಧ್ರುವಪಾತ್ರದ ಹಾಡುಗಾರಿಕೆಯನ್ನು ಕೇಳಿ ಆನಂದಪಡಿರಿ!

(ಈತನು ಮೈಸೂರಿನ ಕೈ ವಾ ನಾಟಕಶಿರೋಮಣಿ ಎ ವಿ, ವರದಾಚಾರ್ಯರ ಮೊಮ್ಮಗ) ಇವನಲ್ಲದೆ ಅಭಿನಯ ವಿಶಾರದ ಜಿ ನಾಗೇಶರಾವ್, ಶ್ರೀಮತಿ ಕನಕಲಕ್ಷ್ಮಿ ದೇವಿ, ಎಂ ಎ., ಟಿ. ದ್ವಾರಕಾನಾಥ, ಬಿ ಎಸ್‌ಸಿ. ಮೊದಲಾದವರ ಅಭಿನಯಕೌಶಲವನ್ನು ಕಣ್ಣಾರೆ ಕಾಣಬಹುದು!

ನಿಮ್ಮ 'ಟಾಕಿ' ಸಿನೆಮ ಮಂದಿರಕ್ಕೆ ಈ ಚಿತ್ರವು ಎಂದು ಬರುವುದೋ ನಿರೀಕ್ಷಿಸಿರಿ!!

For neat and nice Printing

Please call at

THE SHARADA PRESS,

Car Street, MANGALORE.

[illegible]

ತೀರ್ಥಪ್ರಸಾದಿಸು! ಆ ಕೃಷ್ಣರಾಯನ ಪ್ರಸಾದವಿದು!

ಹಲ್ತ ದಿವಾನ್ ಮಂಟಪದವರು ಭೋಜನ ಶಾಲೆಯ ಬಳಿ ಇಲ್ಲದಿರುತ್ತಿದ್ದರೆ ಕೆಲವರಾ ಪ್ರಸಾದದಿಂದಲೇ ಊಟ ಹಾಳಾಗುವುದು ಖಚಿತವಿತ್ತು! ಭೋಜನವಾದೊಡನೆ ತಾಲೂಕು ಬೋರ್ಡಿನವರು ಮುದಿಮದಿ ಸುಣ್ಣವನ್ನು ತಂದು ನೆಲಕ್ಕೆ ಹಾಕದಿದ್ದರೆ ಗತಿಯು ಬೇರೆಯೇ ಆಗುತ್ತಿತ್ತು

ಹೊಟ್ಟೆಯುಬ್ಬರ, ಹೊಟ್ಟೆನೋವು, ಹೊಟ್ಟೆ ಎತ್ತಿಕೊಳ್ಳುವಿಕೆ, ಕಾರುವಿಕೆಗಳಿಲ್ಲ ಅಲ್ಲದ್ದುವು ಊಟವು ತೀರಿದೊಡನೆ ಆಸ್ಪತ್ರೆಗೆ ಹೋಗಿ ರೋಗಗಳಿಗೆ ಮದ್ದು ಪಡೆದವರು ಬಹಳ ಮಂದಿ! ಬ್ರಾಹ್ಮಣಂ ಭೋಜನಂ ಪ್ರಿಯ ಎನ್ನುವುದಕ್ಕಿಂತಲೂ ಬ್ರಾಹ್ಮಣಂ ಇಡಿ ಇಡಿ ಗುಳ್ಳೆ ಪ್ರಿಯಃ ಎನ್ನುವುದು ಲೇಸು!

ಅರೆ ಬೇಯಿಸಲ್ಪಟ್ಟ ಅರೆಬದನೆಕಾಯಿಯು ಪ್ರತಿಯೊಂದು ಎಲೆಯಲ್ಲಿಯೂ ಹಾಕಲ್ಪಡುತ್ತದೆ ಅದು ಬಿದ್ದ ಕಣ್ಣು ತೆರೆಯುವುದರೊಳಗೆ ಮಾಯ! ಸಣ್ಣ ಕೂಸುಗಳೂ ಕೂಡಾ ಅರ್ಧ ಬದನೆ ಕಾಯಿ ತಿಂದರೆ ಲೋಕವು ಉಳಿದೀತೋ—ನೀವೇ ಹೇಳಿ! ಇದೆಲ್ಲವನ್ನು ಸಾಂಖ್ಯನು ಉಡುಪಿಯಲ್ಲಿ ಕಣ್ಣಾರೆ ಕಂಡುದು

ಭಟ್ಟರು ಭೋಜನ ಬಡಿಸುವಾಗ ಕಡೆಗೆಟ್ಟಿಕ ಬೆವರು ಅವರ ಕೈಯೊಳಗಿನ ಪಾತ್ರೆಯಲ್ಲಿ! ಸತ್ತ ದನ ತಿನ್ನುವುದಾದರೂ ಅದೇಕು' ಇಂತಹ ಹೇಸಿಕೆ ರೀತಿಯ ಊಟವಲ್ಲ! ಇದಕ್ಕೆ ಹೇಳುವುದು ಹೊಟ್ಟೆಗಳ ಪುಣ್ಯವೆಂದು'

ಈ ಊಟಕ್ಕೆ ಮಹಾತ್ಮಾ ಗಾಂಧಿಯವರೂ ಉಡುಪಿಗೆ ಬರುತ್ತಿದ್ದರೆ ಬಹಳ ಫಸ್ಸಾಗುತ್ತಿತ್ತು' ಹರಿಜನರಾಗಲೀ ಕುಂಬಾರರಾಗಲೀ ಯಾರೆಂದು ಅವರು ನಿರ್ಧರಿಸಿಕೊಳ್ಳುತ್ತಿದ್ದರು ಗಾಂಧಿಯವರು ಬರಬಾರದೆಂದು ಉಡುಪಿಯವರು ಕೃಷ್ಣರಾಯರಿಗೆ ಹರಕೆ ಹೇಳಿದರೆಂದು ತೋರುತ್ತದೆ' ಗಾಂಧಿಯವರು ಬರದಿದ್ದುದೂ ಉಡುಪಿಯ ಹೊಟ್ಟೆಗಳ ಪುಣ್ಯ!

ಶ್ರೀ ದೇವರ ಪ್ರಸಾದವೆಂದು ಹೀಗೆ ಸಿಕ್ಕಾಬಟ್ಟೆ ಉಂಡು ರೋಗ ಹಿಡಿದುಕೊಳ್ಳುವ ಬದಲು, ಈ ಭಟ್ಟರುಗಳು ಎರಡೆರಡಾಣೆ ವೆಚ್ಚ ಮಾಡಿ ಸುಖನಿವಾಸದಲ್ಲಿ ಊಟ ಮಾಡಿ ಒಂದಾಣೆ ವೆಚ್ಚ ಮಾಡಿ ದಾಸುಭಂಡೆಗಳ ಕೋರ್ಟು ಹೊಟೇಲಲ್ಲಿ ರಮ್ಮನ್ ಕಾಫಿ ಕುಡಿದು ಶ್ರೀ ಕೃಷ್ಣರಾಯರಿಗೆ ನಮಸ್ಕಾರ ಹೊಡೆದು ಊರಿಗೆ ಹೋಗಬಹುದಲ್ಲ!

ಉಡುಪಿಯ ಭೋಜನ ಕ್ರಮವನ್ನು ಕಂಡು ನನ್ನ ಬಾಯಲ್ಲಿ ನೀರೂರಿದೆ! ಅದಕ್ಕಾಗಿ ಆನಂದಗೊಂಡು ಒಂದು ಪದ ಹೇಳಲೇ ಬೇಕಾಗಿದೆ—

ಏನು ಭೋಜನ ಆಯ್ತು ಬಿಕ್ಕಣ್ಣ। ಉಡುಪಿಯ ಮಠ್ಠಾಕೇ
ಏನು ಭೋಜನ ಆಯ್ತು ಬಿಕ್ಕಣ್ಣ।
ಭಾಗವಾಗದ ಬದನೆಕಾಯನ್ನು। ಸಾಗಲಾರದು ಹೊಟ್ಟೆಯೊಳಗದು।
ಹೇಗು ಮಾಡಿ ಒಳಗೆ ಹಾಕಿ। ಲಾಗ ಹಾಕಿ ಊಟವಾಯ್ತಣ್ಣ [illegible]
ಕೆಸರು ಮೇಲೆ ಎಲೆಯ ಹಾಕಣ್ಣ। ಏನು ಹೇಳಲಿ! [illegible]
[illegible]

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Canara Bank, Limited.

Established 1906.

Authorised Capital	10,00000-0-0
Subscribed capital	6,00,000-0-0
Paid up Capital	3,30,060-0-0
Reserves	4,31,0 -0-0

Head Office —**Bunder, Mangalore**   Local Offices —**City & Bunder**

BRANCHES— Bombay, Cochin, Calicut, Ernakulam Alleppey, Chikmagalur, Ganguli, Coondapoor, Udipi Karkal, Puttur Kasaragod, & Buntwal Out-agency

Interest is allowed on Current Fixed and Saving Banks Accounts, rates of which may be ascertained on application Advances made on approved securities at easy rates All kinds of Banking business transacted. Rules of business on application

The Bangalore Branch Office of the Bank at No 1 Albert Victor Road, Bangalore City will be opened on 8-1-34

Mangalore 22-12-33   A Madhava Pal, *Secretary*

East & West Insurance Company Ltd.,

(Incorporated in India 1913)

Head Office—EAST & WEST BUILDINGS, FORT, BOMBAY.

Eastern Company with striking features
Attractive plans,
Sympathetic & Liberal
Treatment to Policy Holders
&
Wide popularity,
Economic Management
Sound investment
That is why you should select ' East & West"
Ere you invest in the rest

Interim Bonus Declared Rs 15 Per 1000 On whole life & Endowment Policies

For particulars and Agency terms apply to —
H S Nayak, *Organiser Secretary* for West Coast, Coorg & Mysore,
"Harbour View" Mangalore.

ನಮ್ಮ ಟೊಯಿಲೆಟ್ ಮತ್ತು ವಾಶಿಂಗ್ ಸಾಬೂನುಗಳ ತಯಾರಿಯಲ್ಲಿ ಚರ್ಬಿ ಉಪಯೋಗಿಸಲ್ಪಡುವುದಾಗಿ ರುಜುಪಡಿಸುವವರಿಗೆ ರೂಪಾಯಿ
1000 ಬಹುಮಾನ.

ಸಾಬೂನು ಪಡೆಯುವಾಗ ' ' ಅದರಲ್ಲಿ ಚರ್ಬಿ ಇರಕೂಡದೆಂದು ನಿಮ್ಮ ಆಶೆ.

ಪ್ರಾಣಿಗಳ ಚರ್ಬಿ ಮಿಶ್ರಿತವಾದ ಸಾಬೂನುಗಳು ಹಿತಕ್ಕಿಂತಲೂ ಅಹಿತವನ್ನೇ ಹೆಚ್ಚಾಗಿ ಉಂಟುಮಾಡುತ್ತವೆ. ಇವುಗಳಲ್ಲಿನ ಚರ್ಬಿ ಚರ್ಮರಂಧ್ರಗಳೊಳಗೆ ಹೋಗಿ ಬೆವರನ್ನು ತಡೆಯುತ್ತದೆ. ಸೋಪನ್ನು ಪಡೆಯುವಾಗ ನೀವು ಪರಿಮಳಭರಿತ ಚರ್ಬಿನ ಮುದ್ದೆಗೆ ಬೆಲೆ ಕೊಟ್ಟು ಶುದ್ಧತೆಯ ಬದಲು ಅಶುದ್ಧತೆಯನ್ನು ಸ್ವೀಕರಿಸಬೇಕೆಂದಿರುವಿರಾ?

ಮಲಬಾರು ಸಾಬೂನುಗಳು ಜನನಕ್ಕೆ ಬಂದ ಆರು ತಿಂಗಳುಗಳ ಅಲ್ಪಾವಧಿಯಲ್ಲೇ ಸಾರ್ವಜನಿಕ ಬೆಂಬಲವನ್ನು ಪಡೆದಿವೆ. ಕೊಚ್ಚಿಯ ಮಹಾರಾಜರ ದಯಾಪೂರ್ಣ ಪ್ರಶಸ್ತಿ ಮತ್ತು ಪ್ರೋತ್ಸಾಹನದಿಂದಾಗಿಯೂ, ಪ್ರಖ್ಯಾತ ವೈದಿಕೀಯ ಅಧಿಕಾರಿಗಳ ಶಿಫಾರಸಿನಿಂದಾಗಿಯೂ, ಅನೇಕ ವಸ್ತುಪ್ರದರ್ಶನಗಳಲ್ಲಿ ದೊರೆತ ಸುವರ್ಣಪದಕ ಮತ್ತು ಪ್ರಶಸ್ತಿ ಪತ್ರಿಕೆಗಳಿಂದಾಗಿಯೂ ಮಲಬಾರ್ ಸಾಬೂನುಗಳ ಪ್ರಾಮುಖ್ಯತೆಯು ಎನ್ನೆಂದು ತಿಳಿಯುವುದು.

ಮಲಬಾರ್ ಸಾಬೂನು ಎಲ್ಲಾ ವಿಧದಿಂದಲೂ ಶ್ರೇಯಸ್ಕರವೇ ಆಗಿರುತ್ತದೆ. ನಿಮ್ಮ ಚರ್ಮಕ್ಕೆ ಬಾಧಕವನ್ನುಂಟು ಮಾಡುವಂತಹ ಪ್ರಾಣಿಗಳ ಚರ್ಬಿ ಅಥವಾ ಹಾನಿಕರವಾದ ಮಿಶ್ರಿತವೇನೂ ಅದರಲ್ಲಿರದು. ಮಲಬಾರ್ ಸಾಬೂನನ್ನು ಶಾಸ್ತ್ರೀಯ ರೀತಿಯಿಂದಲೂ, ಆರೋಗ್ಯ ದೃಷ್ಟಿಯಿಂದಲೂ ತಯಾರಿಸುವುದರಿಂದ ಎಷ್ಟು ಕೆಳದಾದ ಚರ್ಮವೂ ಬಾಧಕ ಹೊಂದುವುದಿಲ್ಲ. ಈ ಸಾಬೂನು ದೇಶಿಯ ಅಮೂಲ್ಯ ಗಂಧಯುಕ್ತ ಸಾಮಗ್ರಿಗಳಿಂದ ಎಲ್ಲರಿಗೂ ಅನುಕೂಲವಾಗುವಂತೆ ಅಗ್ಗವಾಗಿದೆಯೆಂದು ಅದರ ಉಪಯೋಗದಿಂದ ನಿಮಗೆ ತಿಳಿದುಬರುವುದು.

ನಿಮ್ಮ ವ್ಯಾಪಾರಸ್ಥರು

ಮಲಬಾರ್ ಸಾಬೂನುಗಳನ್ನು

ವಿಕ್ರಯಿಸಲು ಸಂತೋಷಪಡುವರು

ಇದರಲ್ಲಿ ಪ್ರಾಣಿಗಳ ಕೊಬ್ಬು ಇರುವುದಿಲ್ಲ.

ದಿ ವೆಜಿಟೇಬಲ್ ಸೋಪ್ ವರ್ಕ್ಸ್, ಕಲ್ಲಿಕೋಟೆ.

ಪ್ರೊಪ್ರೈಟರ್.—ಸನ್ ಬ್ರಿಂಡ್ ಕೊಡಿಯ ಖ್ಯಾತಿಯ ಸೇಟ್ ನಾಗಜೀ ಪುರುಷೋತ್ತಮ ಮತ್ತು ಕಂಪನಿ, ಕಲ್ಲಿಕೋಟೆ.

ಈ ಜಿಲ್ಲೆಗೆ ಪ್ರವರ್ತಕರು—

S. U N. & CO.

Choukhamba, Benares City

ಮೂರು ಇನಾಮುಗಳು.

ನಮ್ಮಲ್ಲಿ ಕಾಶ್ಮೀರ್ ಶಾಲುಗಳಿಗಿಂತಲೂ ಅತ್ಯುತ್ತಮವಾದ ಕಸೂತಿಗೆಲಸವುಳ್ಳ ಶುದ್ಧ ಸ್ವದೇಶೀ ಖದ್ದರ್ ಶಿಲ್ಕು ಶಾಲುಗಳು ತಯಾರಾಗುತ್ತವೆ. ಬೇಕಾದವರು ತ್ವರೆಮಾಡಿ ಬರೆದರೆ ಈ ಕೆಳಗಿನ ದರದಲ್ಲಿ ಕಳುಹಿಸಲಾಗುತ್ತದೆ. 5 ಮೊಳ ಉದ್ದ 2½ ಅಗಲ ದರ ಒಂದಕ್ಕೆ ರೂ 2—8—0ಯಿಂದ 3-12-0 5½ ಮೊಳ ಉದ್ದ 2¾ ಮೊಳ ಅಗಲ ದರ 1ಕ್ಕೆ 3-8-0, 4—8—0 6 ಮೊಳ ಉದ್ದ 3 ಅಗಲ ದರ 1ಕ್ಕೆ ರೂ. 4—8—0, ರೂ 5. ಅಲ್ಲದೆ ಸ್ವದೇಶೀ ಖದ್ದರ್ ಮಡಿಗಳೂ, ಶೀರೆಗಳೂ ಅಂಚುಗಳಿಲ್ಲದೆ ಎಲ್ಲಾ ರಂಗುಗಳಲ್ಲಿರುತ್ತವೆ. ಮತ್ತು ಜರೀಕಾರೀ ಶೀರೆ ಕೂಡ ಪೀತಾಂಬರಗಳೂ ದುಪಟೆಗಳೂ, ರುದ್ರಾಕ್ಷೀ—ಬಾಣಲಿಂಗ—ಪಂಚಾಯತನ ಸುದರ್ಶನ ಹಿತ್ತಾಳೆ ಶ್ಯಾಮಿಗೆ ಮಿಶ್ಯನ್, ಮಡಿ ಧಾವಳಿ ಶಾಲು ಜಗನ್ನಾಥ ಗಂಟೆಗಳೂ ಕೂಡಾ ಸರಿಯಾದ ದರಕ್ಕೆ ಕಳುಹಿಸಲಾಗುತ್ತದೆ. ವಿವರಕ್ಕೆ ಕೆಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ. 1 ಆಣೆ ಸ್ಟೇಂಪು ಕಳುಹಿಸಿದರೆ 1 ವಿಶ್ವೇಶ್ವರ ಪಟ, 1 ಕಾಶೀನಕ್ಷೆ, 1 ಕೆಟಲಾಗಿನೊಡನೆ 3 ಇನಾಮುಗಳು

ವಿಳಾಸ:—
ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪೆನಿ, ಚೌಖಾಂಬಾ ಬನಾರಸ್ (ಕಾಶೀ)

ಸಿದ್ಧವಾಗಿವೆ!   ತ್ವರೆ ಮಾಡಿರಿ!

ಗಳಿಕೆಳನೇ

ಸ್ವರಾಜ್ಯ ಡೈರಿಗಳು!

ಇದರಲ್ಲಿ ಹಿಂದೂ ಮಹಮ್ಮದಿ ಕ್ರೈಸ್ತರಿಗೆ ಅನುಕೂಲವಾಗುವಂತೆ ಸರಿಯಾದ ತಿಥಿ ನಕ್ಷತ್ರ ಮಗ್ಗಿರೆ ಮಾಹಿತಿಯೂ ಪ್ರತಿಯೊಂದು ಪುಟದಲ್ಲಿ ಉತ್ತಮವಾದ ನೀತಿವಾಕ್ಯಗಳೂ ಸಂಗ್ರಹಿಸಲ್ಪಟ್ಟಿವೆ!

ಮತ್ತು ಹಿಂದೂಸ್ಥಾನದ ರಾಜಕೀಯ ಸಾಂಪತ್ತಿಕ ವಿದ್ಯೆ ಕೈಗಾರಿಕೆ ಮೊದಲಾದ ಅನೇಕ ಮಹತ್ವವಿಷಯಗಳಲ್ಲಿ ನೀವು ತಿಳಿಯಬೇಕಾದ ವಿಷಯಗಳ ಹೊಸ ವರದಿಯನ್ನೂ ಸಂಗ್ರಹಿಸಿದೆ!

ಡೈರಿ,	ದೊಡ್ಡದು,	ಮಧ್ಯಮದ್ದು	ಮಧ್ಯಮದ್ದು;	ಸಣ್ಣದ್ದು
ಬೆಲೆ	೧—೧೦—೦	೦—೧೨—೦	೦—೬—೦	೦—೧೦—೦

ಕರ್ನಾಟಕ ಡೈರಿಗಳು

ಇದರಲ್ಲಿ ವ್ಯವಹಾರಕ್ಕೆ ಬೇಕಾದ ಸ್ಟಾಂಪು ಆಕ್ಟ್ ಸಾರಾಂಶ ರಿಜಿಸ್ಟ್ರೇಷನ್ ಫೀಗಳು ಕೋರ್ಟ್ ಫೀಸುಗಳ ದರ ಟಪ್ಪಾಲು ಮಾಹಿತಿ ಮಗ್ಗಿರೆ ವಿಷಯಗಳಿದ್ದು ವಕೀಲರಿಗೂ ಗುಮಾಸ್ತರಿಗೂ ಉಪಯೋಗವುಳ್ಳದ್ದು. ಈ ಡೈರಿಗಳಲ್ಲಿ ಮಂಡ್ಯಾ ಪ್ರಾಂತದವರಿಗೆ ಬೇಕಾಗುವ ವ್ಯವಹಾರದ ಮಾಹಿತಿಯನ್ನು ಸಂಗ್ರಹಿಸಿದೆ

ದೊಡ್ಡದು,	ಮಧ್ಯಮದ್ದು	ಚಿಕ್ಕದ್ದು	ಮಧ್ಯಮದ್ದು
೧—೧೦—೦	೦—೧೨—೦	೦—೬—೦	೦—೪—೦

ಪುಸ್ತಕ ವ್ಯಾಪಾರಿಗಳಲ್ಲೆಲ್ಲಾ ದೊರೆಯುವುದು
ಪಿ ಎಸ್ ಪೈ ಬ್ರದರ್ಸ್, ಪ್ರಕಾಶಕರು, ಉಡುಪಿ

1934

Sharada Diaries

Ready! Ready!

SMALL SIZE—BIG SIZE.

ಶಾರದಾ ಡೈರಿಗಳು

ಕೆಲವೇ ಮಾತ್ರ ಉಳಿದಿವೆ!

ಸಣ್ಣ ಸೈಜು—   —ದೊಡ್ಡ ಸೈಜು

Sharada Press, Mangalore

LOOK HERE!

We have got for sale all kinds of freshly prepared Exercise books, Note books and Diaries etc.,
SHARADA PRESS,
Car Street, Mangalore.

ದೇಶದಲ್ಲೆಲ್ಲಾ ಭೂಕಂಪ!! ಜನಮನೆಗಳ ನಾಶ!!!

ಪಾಟ್ನಾದಲ್ಲಿ 56 ಮರಣ!! 407 ಜನರಿಗೆ ಜಖಂ!!!

ಅಲ್ಲಲ್ಲಿಯ ತಂತಿ ವಾರ್ತೆ:—

ಚಿತ್ತಗಾಂಗ್

ಚಿತ್ತಗಾಂಗಿನ ಮೈದಾನಿನಲ್ಲಿ ಬಿದ್ದ ಬಾಂಬು ಅವಘಾತದ ನಂತರ ಅನೇಕ ಪುರಜನರು ಊರು ಬಿಡಬೇಕೆಂಬ ಅಪ್ಪಣೆಯಾಯಿತು. ಚಿತ್ತಗಾಂಗ್ ಕ್ಲಬ್ಬಿನ ಗೋಲ್ಫ್ ಆಡುವ ಮಠಾರದಲ್ಲಿ ವಾಹನಗಳು ಚಲಿಸಲೇ ಕೂಡದೆಂದು ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರು ಅಪ್ಪಣೆ ಕೊಟ್ಟಿರುವರು. ಶೋಧನೆಯೂ ದಸ್ತಗಿರಿಗಳೂ ನಡೆಯುತ್ತಾ ಇವೆ. ಮಾರ್ಗವಿಡೀ ಪೋಲೀಸರ ಬಂದೋಬಸ್ತು ಇದ್ದು ಕ್ರಾಂತಿಕಾರರ ವಾಸನೆಯನ್ನು ಕಂಡು ಹಿಡಿಯುತ್ತಿರುವರು.

ನ್ಯೂಯೋರ್ಕ್

ಎರಡು ವಾರಗಳ ಹಿಂದೆ ನ್ಯೂಯೋರ್ಕಿನಲ್ಲಿ ಆರ್ಚ್ ಬಿಷಪ್ ಟೌರೇನ್‌ರವರನ್ನು ಕೊಲೆ ಮಾಡಿದ ಸಂಬಂಧವಾಗಿ 7 ಮಂದಿಗಳನ್ನು ಸೆರೆ ಹಿಡಿದಿರುವರು ಕೈದಿಗಳನ್ನು ವಿಚಾರಣೆಗಾಗಿ ಸೆರೆಮನೆಗೊಯ್ಯುತ್ತಿದ್ದಾಗ ಸಾವಿರಾರು ಜನರು ಮೋಟರನ್ನು ನಿಲ್ಲಿಸಿ ಕೈದಿಗಳನ್ನು ಕೊಲ್ಲಲೆತ್ನಿಸಿದರು ಸ್ತ್ರೀಯರು ಕೈದಿಗಳ ವಸ್ತ್ರಗಳನ್ನು ಕಚ್ಚಿ ಹಿಡಿದರು ಕೈದಿಗಳನ್ನು ಸೆರೆಮನೆಗೆ ಕೊಂಡೊಯ್ಯಲು ಬಹಳ ಕಷ್ಟವಾಯಿತು

ಮುಂಬಾಯಿ

ಇಲ್ಲಿಯ 'ಪ್ರಭಾತ' ಎಂಬ ಮರಾಠಿ ಪತ್ರಿಕೆಯು ನವಂಬರ ತಿಂಗಳಲ್ಲಿ ನಿಷಿದ್ಧ ಲೇಖನವನ್ನು ಪ್ರಕಟಿಸಿದುದಕ್ಕಾಗಿ ಇದರ ಮುದ್ರಕರೂ ಪ್ರಕಾಶಕರೂ ರೂ ೩೦೦೦ವನ್ನು ಭದ್ರತೆಯಾಗಿಡಬೇಕೆಂದು ಮುಂಬಾಯಿ ಸರಕಾರವು ಆಜ್ಞಾಪಿಸಿರುತ್ತದೆ

ಮುಂಬಾಯಿ

ಶ್ರೀ ದೇವದಾಸ ಗಾಂಧಿಯವರು ತಾ ೧೧ನೇ ದಿನ ಮುಂಬಾಯಿಗೆ ತಲಪಿದರು ಅವರು ಪೂನೆಗೆ ಹೋಗಿ ತಾಯಿಯನ್ನು ಕಂಡು ಮುಂಬಾಯಿಗೆ ಹಿಂತಿರುಗಿ ಪುನಃ ಮದ್ರಾಸಿಗೆ ತೆರಳುವರು ಅವರ ಪತ್ನಿಯವರೂ ಅವರೊಡನಿರುವರು

ಜಾಲ್ಕನ್

ತಾ ೧೦ನೇ ರಾತ್ರಿ ಮುಂಬಾಯಿಯಿಂದ ೩೦ ಮೈಲುಗಳ ದೂರದಲ್ಲಿ ಮಾಲಪ್ಪನ್ ಎಂಬಲ್ಲಿ ಕಗ್ಗತ್ತಲಲ್ಲಿ 'ಮಹಮ್ಮದಿ' ಎಂಬ ಪತ್ತೆಮಾರಿಯೊಂದು ೪೦೦೦ ರೂಪಾಯಿಗಳ ಒಣಮೀನನ್ನು ಹಾಕಿಕೊಂಡು ಮುಂದರಿಯುತ್ತಿದ್ದಾಗ 'ಜಲಬಾಲ' ಎಂಬ ಸ್ಟೀಮರು ಬಹು ವೇಗದಿಂದ ಓಡುತ್ತಾ ಅದಕ್ಕೆ ಢಿಕ್ಕಿ ಬಡೆಯಿತು—ಒಡನೆ 'ಮಹಮ್ಮದಿ'ಯು ಅದರಲ್ಲಿದ್ದ ೧೩ ಮಂದಿಗಳೊಡನೆ ಮುಳುಗಿತು ಜಲಬಾಲದಿಂದ ಪ್ರಾಣರಕ್ಷಕ ದೋಣಿಗಳನ್ನು ಇಳಿಸಿ ೧೩ರಲ್ಲಿ ೧೧ ಮಂದಿಗಳನ್ನು ರಕ್ಷಿಸಲಾಯಿತು ಇಬ್ಬರು ಸಿಗಲಾರದಾದ—ಅವರು ಮುಳುಗಿಯೇ ಹೋದರೆಂದು ಊಹಿಸಲಾಗಿದೆ ಈ ಅವಘಡಕ್ಕೆ ಸಿಕ್ಕಿದ 'ಮಹಮ್ಮದಿ'ಯ ಕೆಲಸಗಾರನೊಬ್ಬನು ತನ್ನ ಜನ ಧನವನ್ನು ವಿವರಿಸುತ್ತಾ—ಕತ್ತಲೆಯು ಕವಿದುಕೊಂಡಿದ್ದುದರಿಂದ ಪತ್ತೆಮಾರಿಗೆ ಸ್ಟೀಮರು ಹೋಗುವ ದಾರಿಗಾಣದೆ ಪತ್ತೆಮಾರಿಯು ತಪ್ಪುದಾರಿಯನ್ನು ಹಿಡಿಯುವಂತಾಯಿತೆಂದೂ, ಢಿಕ್ಕಿ ಹೊಡೆದೊಡನೆ ಪತ್ತೆಮಾರಿಯು ಮುಳುಗಿತೆಂದೂ ಹೇಳಿರುವನು ೧೩ರ ಸಂಖ್ಯೆಯು ದುರದೃಷ್ಟಕರ

ಕಲ್ಕತ

ನೀಲನಾಗಿಣಿದೇವಿ ಅಥವಾ ಮಿಸ್ ಕ್ರೇಮ್ ಕುಕ್ ಎಂಬ ಗಾಂಧಿಜೀಯವರ ಅಮೆರಿಕನ್ ಶಿಷ್ಯಳು ಗತಿಯಿಲ್ಲದವಳಾಗಿ ತಿರುಗಾಡುತ್ತಿರುವುದರಿಂದ, ಅವಳನ್ನು ಹುಚ್ಚರಾಸ್ಪತ್ರೆಯಲ್ಲಿರಿಸಿ ಈಗ ಅವಳನ್ನು ಗಡಿಪಾರು ಮಾಡಬೇಕೆಂದಿರುವರು ಅಧಿಕಾರಿಗಳು ಅವಳಿಗೆ ಯುರೋಪೀಯ ಕ್ರಮದ ಉಡಿಗೆ ತೊಡಿಗೆಗಳನು ಕೊಟ್ಟಿರುವರು. ಅವಳು ಸ್ವಸ್ಥ ಚಿತ್ತದಲ್ಲಿದ್ದಂತೆ ಕಾಣುತ್ತಿದೆ ಅಹ್ಮದಾಬಾದಿನಲ್ಲಿರುವ ತನ್ನ ಮಗನನ್ನು ಅವಳು ಕೇಳುತ್ತಿರುವಳು. ನೀಲನಾಗಿಣಿ ದೇವಿಯನ್ನು ಮುಂದಕ್ಕೆ ಏನು ಮಾಡಬೇಕೆಂದು ಗಾಂಧಿಜೀಯವರೊಡನೆ ವಿಚಾರಿಸಿರುವರು

ಕಲ್ಕತ್ತ

ಇಲ್ಲಿಯ ಗ್ರಿಂಡ್ಲೆ ಬೇಂಕ್‌ನಲಾಕ್ಲದ ಮೋಸ ಬಂದರ ಸಂಬಂಧವಾಗಿ ವಿಕ್ಟೋರಿಯಾ ಇನ್ಸ್ಟಿಟ್ಯೂಷನ್ ಫೋರ್ ಗರ್ಲ್ಸ್ ಇದರ ಗಣಿತ ಪ್ರೊಫೆಸರಳಾದ ಮಿಸ್ ಶಾಂತಿ ಸುಧಾ ಘೋಸ್, ಎಂ. ಎ. ಇವಳನ್ನು ಸೆರೆ ಹಿಡಿದು ಒಬ್ಬೊಬ್ಬನಿಗೆ ೨೫೦೦ ರೂಪಾಯಿಗಳ ಭದ್ರತೆಯ ಮೇಲೆ ಎರಡು ಜಾಮೀನುಗಳನ್ನು ಪಡೆದು ಬಿಟ್ಟಿರುವರು.

ಮುಂಬಾಯಿ

"ದೇಶಪ್ರಿಯ ಜತೀಂದ್ರ ಮೋಹನ ಸೇನಗುಪ್ತರ ಜೀವನ ಚರಿತ್ರೆ" ಇದಕ್ಕೆ ಮುಂಬಾಯಿ ಸರಕಾರವು ಮುಟ್ಟುಗೋಲು ಹಾಕಿದೆ. ಇದರ ಪ್ರತಿಗಳು ಎಲ್ಲಿದ್ದರೂ ನಿಷಿದ್ಧವೇ ಆಗಿವೆ. ಅಮೃತ ಬಜಾರ ಪತ್ರಿಕೆಯ ಸಂಪಾದಕರಾದ ಶ್ರೀ ಟಿ. ಕೆ. ಘೋಷರವರು ಇದರಲ್ಲಿ ಮುನ್ನುಡಿ ಬರೆದಿರುತ್ತಾರೆ. ಸರಕಾರದ ವಿರುದ್ಧ ವಿಷಯಗಳನ್ನು ಇದು ಒಳಗೊಂಡಿದೆಯೆಂದು ಹೇಳಿಕೆ.

ಕಲ್ಕತ್ತಾ, ಪಾಟ್ನಾ, ಅಲ್ಲಹಾಬಾದ್, ಜಮಾಲಪುರ, ಲಖ್ನೋ, ಕಾನ್‌ಪುರ, ಬೆನಾರಿಸ್, ಜಬ್ಬಲಪುರ, ಡಿಲ್ಲಿ ಲಾಹೋರ್ ರಂಗೂನ್, ಹೈದರಾಬಾದ್, ಗುಡಿವಾಡ, ಬೆಜವಾಡಾ, ಭೀಮವರಂ ಎಲ್ಲೂರು, ಮುಸಲಿಪಟ್ಟಂ, ರಾಜಮಂಡ್ರಿ, ಕೋಕನಾಡು ಮಿತ್ತೂರು, ಟ್ಯುಟಿಕೋರಿನ್, ಕರ್ನಾಟಕ, ದಕ್ಷಿಣ ಕನ್ನಡಗಳಲ್ಲೆಲ್ಲ ೧೫—೧೬ನೇ ದಿನಗಳಲ್ಲಿ ಸಣ್ಣ ದೊಡ್ಡ ಭೂಕಂಪಗಳಾದುವು. ಕಲ್ಕತ್ತದಲ್ಲಿ ಕಟ್ಟಡಗಳು ತೊಟ್ಟಿಲುಗಳಂತೆ ತೂಗಾಡಿದುವು ಅಸಂಖ್ಯ ಕಟ್ಟಡಗಳು ಬಿದ್ದುವು ನೂರಾರು ಜನರು ಜಖಂಗೊಂಡರು ಮಧ್ಯಾಹ್ನ ೨ ಗಳಿಕ್ಕೆ ವೈಸರಾಯರು ಹೌರಾ ಸ್ಟೇಶನಿಗೆ ಇಳಿದೊಡನೆ ಭೂಕಂಪವಾಯಿತು ಆಫೀಸುಗಳಲ್ಲಿನ ಕೆಲಸಗಾರರು ರಕ್ಷಣೆಗಾಗಿ ಹೊರಗೆ ಓಡಿದರು. ಡೆಡ್‌ಲೆಟ್ಟರ್ ಆಫೀಸು, ಜನರಲ್ ಪೋಸ್ಟಾಫೀಸು ಸ್ಯಾಂಟ್ ಜೋನ್ಸ್ ಚರ್ಚ್‌ಗಳು ಕೆಲವೆಡೆ ಬಿದ್ದುವು ಚಿಟ್ಟಗೂಂಗ್, ನಾವೊಖಾಲಿ ರಾಜಶಾಹಿಗಳಲ್ಲಿ ಅನೇಕ ಕಟ್ಟಡಗಳು ಬಿದ್ದುವು ಬಿಹಾರಿನ ಹಜಾರಿಬಾಗ್ ಟವರ್ ಬಿದ್ದುಬಿಟ್ಟಿದೆ ಮದ್ರಾಸು ಗವರ್ನರರು ಕಲ್ಕತ್ತದಲ್ಲಿ ವೈಸರಾಯರನ್ನು ಬೀಳ್ಕೊಡುವಾಗ ಪುನಃ ಭೂಕಂಪವಾಯಿತು, ಆಗ ಲೇಡಿ ವಿಲ್ಲಿಂಗ್ಡನ್ನರು "ನಾವು ಹೋದುವಾಗ ಮದ್ರಾಸಿನಲ್ಲಿ ಬಿರುಗಾಳಿ—ಈಗ ಕಲ್ಕತ್ತದಲ್ಲಿ ಭೂಕಂಪ" ಎಂದರು ಕಲ್ಕತ್ತದ ಟೆಲಿಫೋನು ಸರಿಗೆಗಳು ಹಾಳಾದುದರಿಂದ ವರ್ತಮಾನಗಳು ಹರಡಲಿಲ್ಲ ಗವರ್ನಮೆಂಟ್ ಹೌಸ್ ಕಟ್ಟಡವು ವಿಶೇಷವಾಗಿ ಜರಿದುಬಿದ್ದಿದೆ ಇದರ ಬಳಿ ಕೆಲಸ ಮಾಡುತ್ತಿದ್ದ ಇಬ್ಬರು ಕೂಲಿ ಕೆಲಸಗಾರರು ಗೋಡೆ ಬಿದ್ದು ಮೃತರಾದರು ಒಬ್ಬಳು ಸ್ತ್ರೀಯು ಮಗುವನ್ನು ಹಿಡಿದುಕೊಂಡಿದ್ದಳು ಇಬ್ಬರೂ ಗೋಡೆಯಡಿ ಹೂತು ಹೋದರು ಆಗ್ರದಲ್ಲಿ ಕಂಪನವಾಗಿ Seismograph ಯಂತ್ರವು ಅಡಿ ಮೇಲಾಯಿತು

ತಾ ೧೫ನೇ ದಿನ ೨—೩೦ ಘಂಟೆ ಮಧ್ಯಾಹ್ನ ಪಾಟ್ನಾದಲ್ಲಿ ಇಷ್ಟರ ತನಕ ಅನುಭವಿಸಲಾಗದ ಭೂಕಂಪವಾಯಿತು ಅಂಗಡಿ ಮನೆ ಮಂದಿರಗಳಲ್ಲಿನ ಜನಗಳು ತಂಡೋಪ ತಂಡವಾಗಿ ಹೊರಗೆ ಓಡಿದರು ಕಟ್ಟಡಗಳು ಬಿದ್ದು ೫೦ ಮಂದಿಗಳು ಮೃತರಾದ ಲೆಕ್ಕ ಸಿಕ್ಕಿದೆ ಹೈಕೋರ್ಟ್, ಅಲ್ಲಹಾಬಾದ್ ಬೇಂಕ್, ದಿವಂಗತ ಸರ್ ಅಲಿ ಇಮಾಮರ ಬಂಗಲೆ ಚೀಫ್ ಜಸ್ಟಿಸರ ಬಂಗಲೆಗಳು ಬಹಳ ನಷ್ಟಕ್ಕೊಳಗಾದುವು ೯೦ ಮಂದಿಗಳು ಜಖಂಗೊಂಡರು ೭ ಮಂದಿಗಳು ಆಸ್ಪತ್ರೆಯಲ್ಲಿ ತೀರಿಕೊಂಡರು ಇಂಪೀರಿಯಲ್ ಬೇಂಕ್ ಪೋಲೀಸ್ ಸುಪರಿಂಟೆಂಡೆಂಟರ ಮನೆ ಜನರಲ್ ಆಸ್ಪತ್ರೆ, ಮೆಡಿಕಲ್ ಕಾಲೇಜಿನ ಪ್ರಿನ್ಸಿಪಾಲರ ಮನೆಗಳೂ ವಿಶೇಷವಾಗಿ ಹಾಳಾದುದುವು ಸೆಕ್ರೆಟೆರಿಟ್ ಕ್ಲೋಕ್ ಟವರ್ ಕೂಡಾ ಬಿದ್ದಿದೆ ಜನರೆಲ್ಲ ಮೈದಾನುಗಳಲ್ಲಿ ಡೇರೆ ಹಾಕಿ ಕುಳಿತಿರುವರು ಗವರ್ನರರು ಕಂಡು ವಿಚಾರಿಸಿ ಹಿಂದೆ ಹೋದರು ಕಾನ್‌ಪುರದಲ್ಲಿ ೫ ಮಿನಿಟುಗಳ ತನಕ ಭೂಮಿಯು ನಡುಗಿತು ೭೦೦೦ ಮನೆಗಳು ಬಿದ್ದುವು ೩೦೦ ಕಟ್ಟಡಗಳ ಭಾಗಗಳು ಅಳಿದುವು. ಅಲ್ಲಹಾಬಾದಿನಲ್ಲಿ ರೋಮನ್ ಕೆಥೋಲಿಕ್ ಇಗರ್ಜಿಯ ಪ್ರತಿಮೆಯು ಬೀಳುವುದೆಂದು ಬಿಷಪರು ನೆನೆದಿದ್ದರು, ಆದರೂ ಅದು ಬೀಳಲಿಲ್ಲ ಅನೇಕ ಯಾತ್ರಿಕರು ನದಿಯಲ್ಲಿ ಸ್ನಾನ ಮಾಡುತ್ತಿದ್ದಾಗ ನೀರು ಉಕ್ಕೇರಿ ಕೆಲವರು ನೀರು ಪಾಲಾದರು ಮುಜಫರಪುರದಲ್ಲಿ ೫೦೦ ಮನೆಗಳು ಬಿದ್ದುವು

ಲಖ್ನೋವಿನಲ್ಲಿ ಸರ್ ಸೀತಾರಾಮ್, (ಕೌನ್ಸಿಲಿನ ಅಧ್ಯಕ್ಷರ) ಮನೆ ಬಿತ್ತು ಅವರ ಒಬ್ಬ ಮಗಳು ಗೋಡೆಯಡಿ ದೈವವಶಾತ್ ಬೀಳಲಿಲ್ಲ ಬೆನಾರಿಸ್‌ನಲ್ಲೂ ಬಹು ಭಯಂಕರ ಕಂಪನವುಂಟಾಯಿತು ಅನೇಕ ಕಟ್ಟಡಗಳು ಬೀಳುವಾಗ ಜನರು ಹೊರಗೆ ಓಡಿ ಬಂದರು ನ್ಯೂಡಿಲ್ಲಿಯಲ್ಲಿನ ವೆಸ್ಟರ್ನ್ ಮತ್ತು ಈಸ್ಟರ್ನ್ ಹೊಟೆಲುಗಳ ಕಟ್ಟಡಗಳು ಬೀಳಲಾಗಿವೆ ರಂಗೂನಿನ ಅಕ್ಯಾಬ್ ಎಂಬಲ್ಲೂ ಭಯಂಕರ ಕಂಪನವುಂಟಾಯಿತು ಆಂಧ್ರದೇಶ ದಕ್ಷಿಣಕನ್ನಡ ಜಿಲ್ಲೆಯವರಿಗೆ ಈ ಭೂಕಂಪವು ಆದುದು ತಿಳಿದಿಲ್ಲವಾದರೂ, ತಾ ೧೫—೧೬ರಲ್ಲಿ ವಿಚಿತ್ರ ತಲೆನೋವು, ಜಾಡ್ಯ, ಅಜೀರ್ಣಗಳು ಜನರನ್ನು ಬಾಧಿಸಿರುವೆಂದು ತಿಳಿದು ಬರುತ್ತದೆ. ಬೆಜವಾಡಾದಲ್ಲಿ ಗಂಟೆಗಳ ಬಾರಿಸಲು ನಿಂತಿತು ಜನರಿಗೆ ತಲೆನೋವು ಪ್ರಾರಂಭವಾಯಿತು. ಗುಡಿವಾಡದಲ್ಲಿ ಈ ಕಂಪನವು ಒಂದು ಮಿನಿಟು ತನಕ ಇದ್ದು ಬಂದು ಕಲ್ಲುವು ಸಮುದ್ರಮಾರ್ಗವಾಗಿ ಓಡಿತು.

ನೋಟೀಸು.

ಉಡುಪಿ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

ಸ್ಮಾಲ ನಂಬ್ರ 759/38

ಪಿ. ಗೋಪಾಲ ನಾಯಕ (ಉಡ್ಪಿ ಖಾನ್ ಬಹದ್ದೂರ್ ಹಾಜಿ ಅಬ್ದುಲ್ಲ ಹಾಜಿ ಕಾಸಿಮ್ ಸಾಹೇಬರ ಎಸ್ಟೇಟಿನ ರಿಸೀವರ್)—ವಾದಿ.

ಮತ್ತು

ಅಬ್ಬು ಸಾಹೇಬ ಕೂಡಾ—ಪ್ರತಿವಾದಿಯು

ಇವರೊಳಗೆ

ಉಡ್ಪಿ ತಾಲೂಕು ಮೂಡ ನಿಡಂಬೂರು ಗ್ರಾಮದ ಉಡ್ಪಿ ಕಸಬೆಯಲ್ಲಿರುವ ಉಸ್ಮಾನ ಸಾಹೇಬರ ಮಗಂದಿರು 1ನೇ ಪ್ರತಿವಾದಿ ಅಬ್ಬು ಸಾಹೇಬು, 8ನೇ ಪ್ರತಿವಾದಿ ಮನ್ನು ಯಾನೆ ಖುದಾನ್ ಸಾಹೇಬ ಕೂಡಾ 2 ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ.—

ಪ್ರತಿವಾದಿಯು ಸದ್ರಿ ಎಸ್ಟೇಟಿಗೆ ತಾ. 28-2-25ರಲ್ಲಿ ರಿಜಿಸ್ಟ್ರಿ ನಿಶಿಂ ಬರಕೊಟ್ಟ ಮೂಲಗೇಣಿ ಎದ್ರು ಸುಡಿಗೆ ಕಾರಣವಾದ ಆಸ್ತಿ ಬಾಬ್ತು ಸಾಲಿಯಾನ್ ಫಾಲ್ಗುಣ ಖು 80ಗೆ ನಗದು ರೂ 24/-ದರದಲ್ಲಿ ಬರತಕ್ಕ ಕಳೆದ ಪ್ರಮೋದೂತ ಸಂವತ್ಸರದ ಆದಿ ಲಾಗಾಯ್ತು ಆಂಗೀರಸ ಸಂವತ್ಸರದ ಅಂತ್ಯದ ವರೆಗಿನ ಗೇಣಿವ ಬಡ್ಡಿ ಕೂಡಾ ರೂ 86-0-0ಕ್ಕೆ ವಾದಿಯು ದಾಕಲ್ಲ ಮಾಡಿದ ಸದ್ರಿ ವ್ಯಾಜ್ಯವು ಅಖೈರ ತನ್ನಿ ಬಗ್ಗೆ ತಾ 19-2-34ಕ್ಕೆ ಇಟ್ಟಿರುವುದರಿಂದ ಸದ್ರಿ ದಾವೆಗೆ ಉದಾಹರಣೆ ಕೊಡುವುದಕ್ಕೋಸ್ಕರ ಸದ್ರಿ 1, 8ನೇ ಪ್ರತಿವಾದಿಯು ಸ್ವತಹಾ ಅಥವಾ ವಕೀಲರ ಮುಖಾಂತರ ಸದ್ರಿ ತಾರೀಕಿನ ದಿವಸ ಸದ್ರಿ ಕೋರ್ಟು ಮುಂದೆ ಹಾಜರಾಗಲಿಕ್ಕೆ ತಪ್ಪಿದರೆ ಸದ್ರಿ ವ್ಯಾಜ್ಯವು ಅವರ ಗೈರ ಹಾಜರಿಯಲ್ಲಿ ತೀರ್ಮಾನಿಸಲಾದೀತೆಂತ ಸದ್ರಿ 1, 8ನೇ ಪ್ರತಿವಾದಿರೀಗೆ ಈ ಮೂಲಕ ತಿಳಿಯಪಡಿಸೋಣಾಗುತ್ತದೆ

Udipi S K | 10—1—1934 } H Keshava Pai, *Vakil far Plaintiff*

ನೋಟೀಸು.

ಉಡುಪಿ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

ಕ್ರಮ ನಂಬ್ರ 430/1933

ಶಿವರಾಮ ಬಾಯರಿ — ವಾದಿ ಮತ್ತು ಕೃಷ್ಣಾಚಾರ್ಯ ಯಾನೆ ಕೃಷ್ಣಯ್ಯ ತಾನ್ಯಸುಭಾಗ ಹೆರ್ಗ ನರ್ಸಿಂಗ ವಾದಿರಾಜ ತಾನ್ಯಸುಭಾಗರ ಮಗ, ಹೆರ್ಗಗ್ರಾಮದಲ್ಲಿ ಇರುವವ—ಪ್ರತಿವಾದಿ

ಇವರೊಳಗೆ

ಪ್ರತಿವಾದಿಯಿಂದ ಸಾಲಿಯಾನ ರೂಪಾಯಿ 13-3-0 ರಂತೆ 3 ವರುಷಗಳಿಗೆ ಬರತಕ್ಕ ತಸದೀಕು ಬಡ್ಡಿ ಕೂಡ ರೂಪಾಯಿ 45-9-9ಕ್ಕೆ ಮಾಡಿದ ದಾವೆಯು ತಾರೀಕು 25-1-'34ಕ್ಕೆ ಇಟ್ಟಿರುತ್ತದೆ ಆಕ್ಷೇಪವಿದ್ದರೆ ಸದರಿ ತಾರೀಕಿನ ಬೆಳಗ್ಗೆ 10 ಗಂಟೆಗೆ ಪ್ರತಿವಾದಿಯು ಹಾಜರು ಮಾಡಿಕೊಳ್ಳತಕ್ಕದ್ದು ತಪ್ಪಿದರೆ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು

Udipi 16-1-1934. } B. Srinivasa Rao, *Advocate for Plaintiff*

ನೋಟೀಸು.

ಉಡುಪಿ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

ಕ್ರಮ ನಂಬ್ರ 429/1933

ನಾರಾಯಣ ಬಾಯರಿ—ವಾದಿ ಮತ್ತು ಕೃಷ್ಣಾಚಾರ್ಯ ಯಾನೆ ಕೃಷ್ಣಯ್ಯ ತಾನ್ಯಸುಭಾಗ ಹೆರ್ಗ ನರ್ಸಿಂಗ ವಾದಿರಾಜ ತಾನ್ಯಸುಭಾಗರ ಮಗ ಹೆರ್ಗ ಗ್ರಾಮದಲ್ಲಿ ಇರುವವ-ಪ್ರತಿವಾದಿ

ಇವರೊಳಗೆ

ಪ್ರತಿವಾದಿಯಿಂದ ಸಾಲಿಯಾನ ರೂಪಾಯಿ 5-15-0 ರಂತೆ 3 ವರುಷಗಳಿಗೆ ಬರತಕ್ಕ ತಸದೀಕು ಬಡ್ಡಿ ಕೂಡಾ ರೂಪಾಯಿ 20-9-8ಕ್ಕೆ ಮಾಡಿದ ದಾವೆಯು ತಾರೀಕು 25-1-'34ಕ್ಕೆ ಇಟ್ಟಿರುತ್ತದೆ ಆಕ್ಷೇಪವಿದ್ದರೆ ಸದರಿ ತಾರೀಕಿನ ಬೆಳಗ್ಗೆ 10 ಗಂಟೆಗೆ ಪ್ರತಿವಾದಿಯು ಹಾಜರು ಮಾಡಿಕೊಳ್ಳತಕ್ಕದು. ತಪ್ಪಿದರೆ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು

Udipi 16-1-1934. } B. Srinivasa Rao, *Advocate for Plaintiff*

+ + + +

FRESH CONSIGNMENT ARRIVED.

UNEQUAL QUALITY——————EXCEPTIONAL PRICE

A TIRE THAT SAVES YOU REPUTATION AND MONEY.

The Canara Public Conveyance Co., Ltd.

MANGALORE.

ಸ್ಫುಟವಿಚಾರಗಳು:— ಅತ್ತ ಕ್ರೈಸ್ತ ಧರ್ಮಾಧಿಕಾರಿಗಳಿಗೆ, ತಕ್ಸೀರುಗಳು, ತಾಲೂಕು ಬೋರ್ಡುಗಳ ಮುಕ್ತಾಯ, ವಿದ್ಯಾರ್ಥಿಯರಿಗೆ ಉಪದೇಶ, ತೀರ್ವೆ ಮಾಫಿ, ಬರ್ಮದ ಭವಿತವ್ಯತೆ, ರೂ. ೧೫೪,೬೯,೩೮,೫೪೮.

ವಿದ್ಯಾರ್ಥಿಯರಿಗೆ ಉಪದೇಶ

ಮಹಾತ್ಮಾಜೀಯವರಿಗೆ ಎಲ್ಲೆಲ್ಲಿ ವಿದ್ಯಾರ್ಥಿಗಳು ಕಾಣಿಕೆ ಒಪ್ಪಿಸದೆ ಇಲ್ಲ. ಪ್ರತಿಯೊಂದು ಕಡೆ, ಜಿಲ್ಲಾ ಬೋರ್ಡು ಮ್ಯುನಿಸಿಪಾಲಿಟಿಗಳ ವಿಜ್ಞಾಪನೆಗಳಿಗೆ ಉತ್ತರ ಕೊಡುವದಕ್ಕಿಂತ ದೀರ್ಘವಾಗಿ ವಿದ್ಯಾರ್ಥಿಗಳಿಗೆ ಅವರು ಭಾಷಣರೂಪವಾಗಿ ಬೋಧನೆ ಮಾಡುತ್ತಿರುವರು. "ನಮ್ಮ ಮತ ಜಾತಿಗಳು ಯಾವುವೇ ಇರಲಿ, ನಾವೆಲ್ಲರು ಒಂದೇ ಭಗವಂತನ ಮಕ್ಕಳು. ಇದನ್ನು ನಾವು ಬಾಯಿಯಿಂದ ಆಡುವುದಕ್ಕೆ ಹಿಂಜರಿಯುವುದಿಲ್ಲ; ಅಷ್ಟೇ ಚೆನ್ನಾಗಿ ನಮ್ಮ ನಡೆಯಲ್ಲಿ ಮಾತ್ರ ಮರೆಯುವುದಕ್ಕೂ ಹಿಂಜರಿಯುವುದಿಲ್ಲ. ಈ ಜೀವಂತ ಸುಳ್ಳನ್ನು ನಮ್ಮಿಂದ ತೊಲಗಿಸಬೇಕಾಗಿದೆ. ನಾವೆಲ್ಲರು ಒಬ್ಬ ದೇವ (ತಂದೆಯು)ರ ಮಕ್ಕಳಾದರೆ, ನಾವೆಲ್ಲರೂ ಸಮಾನರೆಂದು ತಿಳಿದು ನಡೆಯಲು ಹಿಂತೆಗೆಯಲಾರದಷ್ಟು ಧೈರ್ಯವು ನಮ್ಮಲ್ಲಿ ಬೆಳೆಯಬೇಕಾಗಿದೆ. ಕೆಲವರು ವಿದ್ವಾಂಸರು ಕೆಲವರು ಮೂಢರು ಆಗಿ ಯಾವನೊಬ್ಬ ತಂದೆಗೆ ಮಕ್ಕಳಿರುವರಾದರೆ, ಅವನು ಮೂಢರ ಕಡೆಗೆ ಒಲಿಯುವುದು ಹೆಚ್ಚು ಎಂಬುದನ್ನು ಮರೆಯಬಾರದು. ಜನ್ಮಾರಭ್ಯ ಅಸ್ಪೃಶ್ಯರೆಂದು ನಾವು ಕೆಲವರನ್ನು ಕಾಣುವುದು ಘೋರ ಕುಂಟತನವಲ್ಲವೆ? ನಮ್ಮ ಮತವು "ಎಲ್ಲರಿಗೂ ನಾವು ದೀನರು; ಇತರರು ನಮಗೆ ಹೆಚ್ಚಿನವರು" ಎಂದು ಬೋಧಿಸುವುದು. ದೇಹವನ್ನ ಮಾತ್ರವಲ್ಲದೆ, ಆತ್ಮವನ್ನೂ ನಿರ್ಮಲವಾಗಿಟ್ಟುಕೊಳ್ಳಿರಿ" ಎಂದು ಅವರು ಪದೇ ಪದೇ ಬೋಧಿಸುತ್ತಿದ್ದಾರೆ. ಇನ್ನೊಂದು ತಲಾಂತರದೊಳಗಾದರೂ ಅಸ್ಪೃಶ್ಯತೆಯ ಸೋಂಕು ಇಲ್ಲದಂತೆ ಮಾಡಲು ಇದೇ ಸುಲಭೋಪಾಯ.

ತೀರ್ವೆ ಮಾಫಿ

ಸಂಸ್ಥಾನದಲ್ಲಿನ ರೈತರ ಸ್ಥಿತಿಯು ಕೆಟ್ಟು ಹೋಗಿರುವುದರ ವಿಷಯವಾಗಿ ಎರಡು ಅಭಿಪ್ರಾಯಗಳಿಲ್ಲವೆನ್ನಬೇಕು. ಅಲ್ಲಲ್ಲಿನ ಜಿಲ್ಲಾ ಕಲೆಕ್ಟರರು ಸರಕಾರಕ್ಕೆ ಒರೆದುಕೊಂಡಿರುವ ರಿಪೋರ್ಟುಗಳ ಆಧಾರದಿಂದಲೂ, ಪ್ರತಿ ಜಿಲ್ಲೆಯ ಪ್ರತಿನಿಧಿಗಳೂ ಸೇರಿದ ಸಭೆಗಳಲ್ಲಾದ ನಿರ್ಧಾರಗಳಿಂದಲೂ, ವಿವೇಕಪೂರ್ಣವಾದ ತೀರ್ಮಾನಿಸುವುದಾದರೆ, ತೀರ್ವೆಯನ್ನು ಸೇಕಡಾ ೨೫ರಷ್ಟು (ಬಹಳಾಯಿ ಯಲ್ಲಿ ನಾಲ್ಕಣೆಯಷ್ಟು) ಇಳಿಸಲೇ ಬೇಕೆಂದು ಸೂಚಿಸದೆ ಇರಲಾರರು. ಸರಕಾರವು ರೈತರಲ್ಲಿ ಸಹಾನುಭೂತಿ ತೋರಿಸುವುದಕ್ಕಿಂತ ಅವರೊಡನೆ ವ್ಯವಹಾರ ಪ್ರಿಯತೆಯಿಂದ ವರ್ತಿಸಲು ಆತುರವಾಗಿದೆ ಎಂದು ತೋರುವುದು. ವರ್ಗದಾರರು ಸಭೆ ಕೂಡಿಸಿ ಒಮ್ಮತವಾಗಿ ತಮ್ಮ ಹೇಳಿಕೆಗಳನ್ನು ಸರಕಾರಕ್ಕೆ ಖಂಡಿತವಾಗಿಯೂ ವಿನಂತಿಸಿಕೊಳ್ಳಲೇ ಬೇಕಾಗಿದೆ. ನಮ್ಮ ಕೌನ್ಸಿಲು ಪ್ರತಿನಿಧಿಗಳು ಈ ವಿಷಯದಲ್ಲಿ ಹೇಗೆ ಸರಕಾರಕ್ಕೆ ನಮ್ಮ ರೈತರ ಪರವಾಗಿ ಸೂಚಿಸಿಕೊಳ್ಳಬೇಕೆಂಬುದನ್ನು ಸಹ, ವರ್ಗದಾರ ವೋಟರರು ಮೆಂಬರುಗಳಿಗೆ ಆಗ್ರಹಪೂರ್ವಕವಾಗಿ ಹೇಳಿಕೊಡಬೇಕಾಗಿದೆ. ಹಿಂದಣ ವರ್ಷದ ಸರಕಾರದ ಜಮಾ ಮೊಬಲಗಿನ ಮುಕ್ಕಾಲಂಶದಷ್ಟನ್ನು ಮಾತ್ರ ಮುಂದಣ ವರ್ಷಕ್ಕೆ ಆಗುವೆಂದು ಲೆಕ್ಕ ಹಿಡಿದು ಸರಕಾರವು ತನ್ನ ಬಜೇಟು ಅಂದಾಜನ್ನು ಚರ್ಚೆಗೆ ತರುವಂತೆ ಪ್ರತಿನಿಧಿಗಳು ವ್ಯವಹರಿಸಬೇಕಾಗಿದೆ. ಹೀಗೆ ಮಾಡಿದರೆ ರೈತರಿಗೆ ಸೌಕರ್ಯ ಸಹಾಯುವಾಗುವುದು.

ಬರ್ಮದ ಭವಿತವ್ಯತೆ

ಇನ್ನೂ ಇತ್ಯರ್ಥವಾಗಿಲ್ಲ. ಮುಂದೇನಾಗುವುದೋ ಯಾರಿಗೂ ತಿಳಿದಿಲ್ಲ. ಇತ್ತೀಚೆಗೆ ಎರಡು ಕೌನ್ಸಿಲು ಚುನಾವಣೆಗಳು ಬರ್ಮದಲ್ಲಿ ನಡೆದುವು. ಚುನಾವಣೆ ಹೊಂದಿ ಬಂದ ಮೆಂಬರರು ಇಬ್ಬರೂ ಬರ್ಮವನ್ನು ಪ್ರತ್ಯೇಕಿಸಿಡಬಾರದೆಂಬ ಪಕ್ಷದವರು. ಜನ ಮತವು ಈಗ ಯಾವ ಕಡೆಗೆ ಪ್ರಬಲವಾಧಿಕ್ಯವನ್ನು ಸೂಚಿಸುತ್ತಿದೆ ಎಂಬುದನ್ನು ಸರಕಾರವು ತಿಳಿದುಕೊಳ್ಳುವುದು ಸುಲಭ. ಅದನ್ನು ತಿಳಿದುಕೊಂಡಲ್ಲಿ, ಖಂಡಿತವಾಗಿಯೂ ಬರ್ಮವನು ಪ್ರತ್ಯೇಕಿಸಲೇಬೇಕೆಂದು ಸರಕಾರವು ಎಂದೂ ಹೇಳಲಾರದು, ಹೇಳುವಂತಿಲ್ಲ. ಬರ್ಮವು ಭಾರತ ಸಂಯೋಜನೆಯಲ್ಲಿ ಅಥವಾ ಸಂಯೋಜಿತ ಭಾರತದಲ್ಲಿ ಏಕೆ ಸೇರಬಾರದೆಂದು ಯಾರೂ ಸಿದ್ಧಾಂತವಾಗಿ ಹೇಳಿಬಿಡುವುದಿಲ್ಲ. ಸಂಯೋಜಿತ ರಾಜ್ಯಭಾರ ವ್ಯವಸ್ಥೆಗೆ ಇದು ವಿರುದ್ಧವಾಗಿದೆ. ಎಂದು ಹೇಳುವುದರಲ್ಲಿ ಅರ್ಥವಿಲ್ಲ. ಸಂಯೋಜನೆಯ ಸ್ವರೂಪವೇ ಇನ್ನೂ ಸರಿಯಾಗಿಲ್ಲದಿರುವಾಗ, ಬರ್ಮವು ಸೇರುವುದರಿಂದ ಅದಿನ್ನೂ ಹಾಳಾಗುವುದೆಂದು ಹೇಳುವ ಕೆಲವರ ಆಕ್ಷೇಪಗಳಿಗೆ ಎಡೆಯೇ ಇಲ್ಲ. ಆದರೆ, ಕೌನ್ಸಿಲಿನ ಅಭಿಮತದ ವಿರುದ್ಧವಾಗಿ, ಬರ್ಮವನ್ನು ಹೇಗೂ ಪ್ರತ್ಯೇಕಿಸಬೇಕೆಂದು ನಿರ್ಣಯಿಸಿದ್ದರೆ, ಯಾರೇನು ಮಾಡುವುದು? ಬರ್ಮೀಯರೇ ತಾವು ಬೇರೆಯಾಗಿ ಇರುವೆವು ಎಂದರೆ, ಅವನ್ನು ಯಾವ ಭಾರತೀಯನು ಎಂದೂ ಆಕ್ಷೇಪಿಸಲಾರನು.

ಅತ್ತ ಕ್ರೈಸ್ತ ಧರ್ಮಾಧಿಕಾರಿಗಳಿಗೆ

ಯೋರ್ಕಿನ ಆರ್ಚ ಬಿಷಪರು ನಮ್ಮ ಧರ್ಮ ಸಂಸ್ಥೆಯು ಸಮಗ್ರವಾಗಿ ಶಾಂತಿಯ ಸ್ಥಾಪನೆಗಾಗಿ ಹೆಣಗಾಡುತ್ತಿಲ್ಲ. ಎಲ್ಲ ಜನಾಂಗಗಳು ಒಂದೇ ಕುಟುಂಬದವರಂತೆ ಬದುಕಲು ಒಲ್ಲದಿದ್ದರೆ, ಒಬ್ಬರು ಮತ್ತೊಬ್ಬರೊಡನೆ ಯುದ್ಧಕ್ಕೆ ಸನ್ನದ್ಧರಾಗದೆ ಇರುವುದು ಹೇಗೆ? ಯುರೋಪು ಖಂಡವು ಪುನಃ ಮತ್ತೊಂದು ಯುದ್ಧದಲ್ಲಿ ಸೇರಿದರೆ, ಖಂಡಿತವಾಗಿಯೂ ತನ್ನ ಅರ್ಹತೆಯಂತೆ ಸಂಪೂರ್ಣವಾಗಿ ವಿನಾಶ ಹೊಂದುವುದು. ವಿದ್ಯಮಾನಗಳಿಂದ ಸಾಕಷ್ಟು ಅರಿವು ನಮ್ಮಲ್ಲಿ ಇನ್ನೂ ಹುಟ್ಟಿಲ್ಲವೆಂಬುದನ್ನು ದೇವರು ತಿಳಿದಿರುತ್ತ, ಪ್ರಪಂಚದ ಅಧಿನಾಯಕತ್ವದಿಂದ ನಮ್ಮನ್ನು ತೊಲಗಿಸಿ, ಜನಾಂಗಿಕ ಸ್ವಾರ್ಥದ ಕಲಂಕ ತಟ್ಟದ ಇತರ ಜನಾಂಗವಾವುದೋ ಅದಕ್ಕೆ ನಮ್ಮ ಅಧಿನಾಯಕತ್ವವನ್ನು ಒಪ್ಪಿಸದಿದ್ದರೆ ಪುಣ್ಯ! ಅಂತಹ ಪರಿಣಾಮವು ಉಂಟಾಗುವ ಮೊದಲೇ ನಾವು ಪ್ರಯತ್ನಪೂರ್ವಕವಾಗಿ ಬೇಡಿ, ಪ್ರಾರ್ಥನೆಗಳನ್ನು ಸಲ್ಲಿಸುತ್ತಿರಬೇಡವೆ? ಈಗಲಾದರೂ ಸ್ವಲ್ಪ ಪ್ರಯತ್ನಿಸಿ ಜನಾಂಗಗಳನ್ನು ಮೃತ್ಯುವಿನ ಬಾಯಿಯಿಂದ ಹಿಂದೆ ಸೆಳೆದು ತರಲು ಸಮಯವಿದೆ ಎಂದು ಸಮಸ್ತ ದೇವಾಲಯಗಳು ಪ್ರಪಂಚದಲ್ಲಿ ಶಾಂತಿಯನ್ನು ಸ್ಥಾಪಿಸಲು ಸಂಯೋಜಿತವಾಗಿ ಪ್ರಯತ್ನಮಾಡುವಂತೆ ಸೂಚಿಸಿರುವರು.

ತಕ್ಸೀರುಗಳು

"ಎಲ್ಲ ದೇಶಗಳಲ್ಲಿ ಒಂದೇ ಬಗೆಯವಾಗಿಲ್ಲ; ಎಲ್ಲ ಕಾಲಮಾನಗಳಲ್ಲೂ ಒಂದೇ ಬಗೆಯ ಅಪರಾಧಿಗಳಾಗಿರಲಿಲ್ಲ; ನಿನ್ನಿನ ತಕ್ಸೀರು ನಾಳಿನ ಸದ್ಗುಣವೆಂದಾದರೂ, ಆಗುವ ಸಂಭವಗಳಿವೆ; ತಕ್ಸೀರು ಎಂಬುದನ್ನು ಈಗ ಒಂದು ಬಗೆಯ ರೋಗವೆಂದೇ ಭಾವಿಸುವವರಿರುವರು. ಅದನ್ನು ಅಣಗಿಸುವುದಕ್ಕಾಗಿ, ಅದರ ನಿವಾರಣೋಪಾಯಗಳು ತಕ್ಸೀರುಗಾರನ ಮನಸ್ಸನ್ನು ಸುಧಾರಣೆಗೊಳಿಸುವ ಉಪಾಯಗಳು,—ಇವುಗಳನ್ನೆ ಈಗ ಸಾಧಿಸಬೇಕಾಗಿದೆ. ತಕ್ಸೀರು ಮಾಡಿದವನಿಗೆ ದಂಡನೆ ಎಂಬುದು ಪ್ರತೀಕಾರವಾಗಿ ವಿಧಿಸಲಾಗುವುದು; ಇದು ವ್ಯರ್ಥ. ಇದರ ಬದಲಾಗಿ, ಶಿಕ್ಷಣವೇ ಮುಖ್ಯ ಉಪಾಯವಾದರೆ ಉತ್ತಮ. ತಕ್ಸೀರು ಮಾಡುವ ಮನೋಸ್ಥಿತಿಯ ಜಾಡ್ಯವನ್ನು ಗುಣಪಡಿಸುವುದು ಅಗತ್ಯ; ಜ್ವರ ಹಿಡಿದವನಿಗೆ ಚಾಬೂಕಿನಿಂದ ಒಡೆದರೆ ಜ್ವರವು ಶಮನವಾದೀತೆ? ಅದರಂತೆಯೆ ಇದು" ಎಂದು ಪಂಜಾಬು ಪ್ರಾಂತ್ಯದ ಜೈಲು ಇಲಾಖಾ ಇನ್ಸಪೆಕ್ಟರ ಜನರಲ್‌ರವರ ಅಭಿಪ್ರಾಯವಾಗಿದೆ. ಪಂಜಾಬಿನಲ್ಲಿ ಅತಿ ಕಠಿನವಾದ ಪಾತಕಗಳಿಗೆ ಸ್ತ್ರೀಯರ ಸಂಖ್ಯೆ ಕಡಿಮೆಯಾರುದೇ ಕಾರಣವೆಂದೂ, ಕೆಲವು ಸ್ತ್ರೀಯರಿಗೆ ಹೆಚ್ಚಿನ ಸ್ವಾತಂತ್ರ್ಯ ಕೊಟ್ಟಿರುದರಿಂದಲೇ ಈಗ ಏಳು ಮಂದಿ ಸ್ತ್ರೀಯರು ಕೊಲೆಪಾತಕಕ್ಕಾಗಿ ಫಾಸಿ ಶಿಕ್ಷೆಯನ್ನು ಅಲ್ಲಿನ ಜೈಲುಗಳಲ್ಲಿ ಕಾಯುತ್ತಿರುವರೆಂದೂ, ಸ್ತ್ರೀ ಕಡಿಮೆ ಇರುವ ಪ್ರಾಂತ್ಯಗಳಲ್ಲಿ ತಕ್ಸೀರುಗಳು ಹೆಚ್ಚೆಂದೂ ಅವರ ಟೀಕೆ.

ತಾಲೂಕು ಬೋರ್ಡುಗಳ ಮುಕ್ತಾಯ

ತಾಲೂಕು ಬೋರ್ಡುಗಳ ಕಾರ್ಯಭಾರವನ್ನೆಲ್ಲ ಜಿಲ್ಲಾ ಬೋರ್ಡುಗಳಿಗೆ ವರ್ಗಾಯಿಸಿ, ತಾಲೂಕು ಬೋರ್ಡು ಪುಸ್ತಕ ಭಂಡಾರಗಳನ್ನು ಪಂಚಾಯತಗಳಿಗೆ ಒಪ್ಪಿಸಿ, ತನ್ಮೂಲಕ ಲೋಕಲ್ ಬೋರ್ಡುಗಳ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸಬೇಕೆಂದು ಎಣಿಸಿ, ಮದ್ರಾಸು ಸರಕಾರವು ಸದ್ಯದಲ್ಲೇ ಒಂದು ಮಸೂದೆಯನ್ನು ಕೌನ್ಸಿಲು ಮಂಜೂರಾತಿಗೆ ಒಪ್ಪಿಸುವುದಾಗಿ ಪ್ರಕಟಿಸಲಾಗಿದೆ. ಹೀಗೆ ಮಾಡಿದರೆ, ಜಿಲ್ಲಾ ಬೋರ್ಡುಗಳಿಗೆ ಆರು ಲಕ್ಷ ರೂಪಾಯಿ ಹೆಚ್ಚು ಅವುಗಳ ಖರ್ಚಿಗಾಗಿ ದೊರೆವುದೆಂದೂ ಲೆಕ್ಕ ಪ್ರಕಟವಾಗಿದೆ. ಈಗ ಇರುವ ೨೦೮ ತಾಲೂಕು ಬೋರ್ಡುಗಳಲ್ಲಿ ೯೦ ಪ್ರತಿ ವರ್ಷ ಸಾಲ ಮಾಡುತ್ತಲೇ ಇವೆ; ಇನ್ನೂ ೩೯ ಸಾಲಕ್ಕೆ ಇಳಿಯುತ್ತಿವೆ. ಹಲವು ತಾಲೂಕು ಬೋರ್ಡುಗಳು ತಮ್ಮ ನೌಕರರಿಗೆ ಸಂಬಳ ಕೊಡಲಾರದೆ ಇವೆ. ಈಗ ಇರುವ ೨೫ ಜಿಲ್ಲಾ ಬೋರ್ಡುಗಳಲ್ಲಿ ೧೫ ಸಾಲಕ್ಕಿಳಿಯುವಂತಿದೆಯಾದ ಕಾರಣ ಅವುಗಳ ಖಜಾನೆಗೆ ಕೂಡಿಸುವ ಹಾಗೂ, ತಾಲೂಕು ಬೋರ್ಡುಗಳ ನಷ್ಟವು ನಿವಾರಣೆ ಹೊಂದುವ ಹಾಗೂ ಹೊಸ ಕ್ರಮವು ಜಾರಿಗೆ ಬರುವುದು.

ರೂಪಾಯಿ ೧೫೪,೬೯,೩೮,೫೪೮

ಇದುವರೆಗೆ ಇಷ್ಟು ಮೌಲ್ಯದ ಚಿನ್ನವು ಈ ದೇಶದಿಂದ ಪರದೇಶಗಳಿಗೆ ರವಾನೆಯಾಯಿತು. ಕಳೆ ಎಂಟಾಣೆಯ ಚಿನ್ನವು ಈ ಯುಗಾಂತ್ಯದ ತನಕವೂ ವ್ಯಯವಾಗಿಯೆ ನಿಂತಿತು. ಇನ್ನು ನಮ್ಮ ಬಡತನವು ಮುಗಿದಿಲ್ಲ; ನಾಲ್ವತ್ತು ಮಿಲ್ಲಿಯ ಜನರು ನಿರುದ್ಯೋಗಿಗಳಾಗಿರುವರು. ದವಸಗಳ ಬೆಲೆ ಏರಿಲ್ಲ. ಹಳ್ಳಿಗರ ಸಾಲವು ತಪ್ಪಿದೆ. ದಿವಾಳಿಗಳ ಸಂಖ್ಯೆ ಇಳಿಯಲಿಲ್ಲ. ವ್ಯಾಪಾರವು ಅಲ್ಲಲ್ಲೆ. ಪರದೇಶಗಳಿಂದ ಬರುವ ಸಾಮಾನು ಹೆಚ್ಚುತ್ತಿದೆ. ಇಲ್ಲಿಂದ ರಫ್ತಾಗುವ ಚಿನ್ನ ಮಾತ್ರ ಇಲ್ಲದಿದ್ದರೆ, ಬಹಳವಾಗಿ ನಾವು ಪರದೇಶೀಯರ ಸಾಲಗಾರರಾಗುವೆವೆಂದೂ, ಅದಕ್ಕಾಗಿ ಇನ್ನಷ್ಟು ಚಿನ್ನವು ಪರದೇಶಗಳಿಗೆ ಸಾಗಬೇಕೆಂದೂ ಸಾರುವವರಿದ್ದಾರೆ, ಹಳ್ಳಿ ಹಳ್ಳಿಗಳಿಂದ ಅದನ್ನು ಕೂಡಿಸಿ ತರುವವರಿದ್ದಾರೆ. ಪವನು ೩೦ ರೂಪಾಯಿಗಳಾಗಿ ನಿಂತಿದೆ. ರೂಪಾಯಿಯ ಬೆಲೆ ಏರುವುದಿಲ್ಲ. ಇದನ್ನು ಸರ್ವತ್ರವೂ ಚರ್ಚಿಸಿ, ಪವನಿಗೆ ಹದಿನೈದು ರೂಪಾಯಿಯೆಂತಾದರೂ ಮಾಡದೆ ದೇಶದ ಆರ್ಥಿಕ ಸ್ಥಿತಿ ಸಂಪನ್ನವಾಗಲಾರದು ಎಂದು ಅಲ್ಲಲ್ಲಿ ಸಭೆಗಳು ಚರ್ಚಿಸಿ ಸರಕಾರಕ್ಕೆ ಬಿನ್ನವಿಸಿಕೊಳ್ಳುತ್ತಿವೆ.

++

NOTES....
ನೋಟಗಳು.

ಉತ್ಪಾತಗಳು ಅಲ್ಲಲ್ಲಿ ತಲೆದೋರಿರುವುದಕ್ಕೆ—ಮೊನ್ನೆಯ ಸಪ್ತಗ್ರಹ ಯೋಗವನ್ನು ಸೂಚಿಸಿರುವಾಗ, ಪುನಃ ವಿಜ್ಞಾನ ಶಾಸ್ತ್ರದ ತತ್ವಗಳನ್ನೇನೂ ಹುಡುಕುವವರಿಲ್ಲ.

*   *   *   *

ಕೆಲವೆಡೆ ಭೂಕಂಪ, ಕೆಲವೆಡೆ ಜಲಪಾತ, ಜಂಝಾವಾತ, ಅಲ್ಲಲ್ಲಿ ದುರಾಗ್ರಹ, ಅತ್ಯಾಚಾರ,—ಇವೆಲ್ಲವೂ ಈ ವರ್ಷದ ಕುರುಹುಗಳು. ವೈಸ್ರಾಯ ಸಾಹೇಬರೆಂದರು ಮದ್ರಾಸಿಗೆ ತಲಪಿದಾಗ ತುಫಾನು ಉಂಟಾಯಿತು; ಕಲ್ಕತ್ತದಿಂದ ಹೊರಡುವಾಗ ಭೂಕಂಪವಾಯಿತು" ಎಂದು ನಕ್ಕರು.

*   *   *   *

ಭಾರತೀಯರ ದುಷ್ಕರ್ಮಗಳ ಫಲ ಪರಿಣಾಮವು ಹೀಗಿರುವಾಗ 'ಯಾರೇನು ಮಾಡುವರು, ಯಾರಿಂದಲೇನಹುದು?'

*   *   *   *

ಕ್ರಾಂತಿಕಾರರ ಬಿರುಸು, ಜಾತಿವಾದಿಗಳ ಬಾಣ ಇವುಗಳಿಂದ ರಾಜಕಾರಣವು ಕೆಡುವಾಗ, ಭೂಕಂಪಾದಿಗಳೇ ಅತ್ತ ಸಂದುವು. ಪ್ರಕೃತಿಗೂ ಪುರುಷನಿಗೂ ಜಗಳಕ್ಕಾರಂಭವಾಗಿದೆ. ಅಷ್ಟ ಸಪ್ತಗ್ರಹಾಚಾರವೆನ್ನುವ.

*   *   *   *

ಸರಕಾರದ ಭದ್ರತೆ ಹೆಚ್ಚು, ೩॥ ಸಲೆ ಬಡ್ಡಿಯಲ್ಲಾದರೂ ಕೋಟ್ಯಂತರ ರೂಪಾಯಿಗಳನ್ನು ಅರೆ ತಾಸಿನಲ್ಲಿ ಕೂಡಿಸಬಲ್ಲುದು. ಭದ್ರತೆ ಹಣಕ್ಕೆ ಖಂಡಿತವಿದ್ದಷ್ಟೂ ಬಡ್ಡಿ ಕಡಿಮೆ ದೊರೆತರೆ ಸಾಕು.

*   *   *   *

ಅಡಚಣೆಯ ಮನುಷ್ಯನು ನೂರಕ್ಕೆ ನಾನ್ನೂರು ಬಡ್ಡಿ ಕೊಡಲೂ ಸಿದ್ಧನು. ಹಣ ಸಿಕ್ಕಿತೋ, ಅದನ್ನು ಮರಳಿ ಕೊಡುವುದೂ ಕಷ್ಟ. ಮೂಲವೂ ಬಡ್ಡಿಯೂ ಕಾಣೆ.

*   *   *   *

ಠೇವಣಾತಿ ಇಡಬೇಕೆನ್ನುವವರು ಭದ್ರತೆ ನೋಡಿ, ಬಡ್ಡಿಯನ್ನು ತಿಳಿದು, ನಂತರ ಠೇವಣಾತಿ ಇಡಲಿ ಬಡ್ಡಿಗಿಂತ ಭದ್ರತೆ ಇದ್ದರೆ, ಹಣ ಉಳಿಯುವುದು.

*   *   *   *

ಗಾಂಧಿಜೀಯವರು ಬರ ಹೊರಟು ಬಾರದಾದರು. ಬಂದಿದ್ದರೂ ನಾವೇನು ಅವರಾಜ್ಞೆಗಳಿಗೆ ಸಿದ್ಧರಿದ್ದೆವೂ! ಈಗ ಬಂದಿಲ್ಲದರಿಂದ, ನಮ್ಮನ್ನು ಮರೆತರು. ಹಾಗೆ ಹೀಗೆ ಮಾಡುತ್ತಿದ್ದೆವೆಂದು ಮಾಡದಿಕ್ಕೇನೂ ಅಗತ್ಯವಿಲ್ಲದಿದ್ದಾಗ ಹೇಳಿಕೊಳ್ಳಲು ಅವಕಾಶವಾದರೂ ದೊರೆಯಿತು.

*   *   *   *

ಪರ್ಯಾಯದ ವಿಶೇಷತೆ ನೋಡಿಸಲು ಪರ್ಯಾಯ ಸಂಚಿಕೆಗಳನ್ನು ಹೊರಡಿಸಿಯೂ ನಮ್ಮ ಜಿಲ್ಲೆ ಕೃತಾರ್ಥವಾಯಿತು. ಗಾಂಧಿಜೀಯವರು ಇತ್ತ ಬಂದಿದ್ದರೆ, ಪರ್ಯಾಯವು ವಿಪರ್ಯಾಯ ಹೊಂದುತ್ತಿತ್ತೇ? ಶ್ರೀ ಕೃಷ್ಣನ ಅನುಗ್ರಹ ಕರುಣೆ. ಭಕ್ತಾಧೀನನಲ್ಲವೆ?

*   *   *   *

ಭೂಕಂಪವಿಲ್ಲದಿದ್ದರೂ, ಆಗ ಅದೊಂದು ಉತ್ಪಾತವೇ ಆಗುತ್ತಿತ್ತೇ? ಅಹಿಂಸಾವಾದಿಗಳು ಅದಕ್ಕಾಗಿ ಬಾರದಂತಾಯಿತು.

++ ++

ಗುಣಬಾರದಿದ್ದರೆ] ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ [ಹಣ ವಾಪಾಸು

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಅತಿಶಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ನಡುವಿರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ನಡುವಾಗುವುದಿಲ್ಲ. ಮೊದಲೇ ಪೂರಾ ವಿಚಾರ ಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟ ಡಾಕ್ಟರ ಬಿ. ಎ. ವೈದ್ಯ, ಎಲ್. ಸಿ. ಪಿ. ಎಸ್. ಕೇಳಬಹುದು. ಹಾನೇ; ಈ ಚೂರ್ಣದಿಂದ ಯಾವ ತರದ ಅಪಾಯವಾಗದು ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿ ಕಿಮ್ಮತ್ತು ರೂ.೪, ವಿ. ಪಿ. ಅಣೆ ೮.

ವಿಳಾಸ:—ಸಂಜೀವಿನೀ ಔಷಧಾಲಯ ಮು. ಪೋ. ಮಿರಜ, S. M. C.

ಬಹು ಕಾಲದ ಆವಶ್ಯಕತೆಗೆ



ಸಣ್ಣ ಕಬ್ಬಿನ ತೋಟದವರು ಸಣ್ಣ ರೀತಿಯಿಂದ ಸಕ್ಕರೆ ತಯಾರಿಸಲು ಯೋಗ್ಯ ರೀತಿಯ ಯಂತ್ರವು ಬೇಕೆಂದು ಬಹು ಕಾಲದ ಆವಶ್ಯಕತೆಯಲ್ಲಿದ್ದರು. ನಿಮಗೆ ಬೇಕಾದುದು ಇಲ್ಲೇ ಇದೆ.

ಕಿರ್ಲೋಸ್ಕರ ಶುಗರ್ ಸೆಂಟ್ರಿಫ್ಯುಗಲ್

ಎಂಬುದು ಆಧುನಿಕ ಮತ್ತು ಅತ್ಯುತ್ಕೃಷ್ಟ ಸಾಧನಗಳಿಂದೊಡಗೂಡಿ ಸಕ್ಕರೆ ತಯಾರಿಸಲು ಸುಲಭ ಯಂತ್ರವಾಗಿದೆ. ಸಣ್ಣ ಭಂಡವಾಳದಲ್ಲಿ ಹೆಚ್ಚಿನ ಲಾಭವನ್ನು ಕೊಡುತ್ತದೆ. ವಿವರಗಳಿಗೆ:—ಕಿರ್ಲೋಸ್ಕರ್ ಬ್ರದರ್ಸ್ ಲಿಮಿಟೆಡ್ ಕಿರ್ಲೋಸ್ಕರ್‌ವಾಡಿ (ಸತಾರ ಜಿಲ್ಲಾ) ಇಲ್ಲಿಗೆ ಬರೆಯಿರಿ.

ಸ್ಟೋಕಿಸ್ಟ್ಸ:—ಬಾಸೆಲ್ ಮಿಶನ್ ಬುಕ್ ಡಿಪೋ ಎಂಡ್ ಟ್ರೇಕ್ಟ್ ಡಿಪೋಜಿಟರಿ ಕೊ., ಮಂಗಳೂರು.

ಭೋಗಬುಹಿ ಬಹ್ಮಾನಂದ ಕಲ್ಪ

ಎನ್ನುವ ಜೀವಾನಂದ.

ವೀರ್ಯ ವೃದ್ಧಿ ಲೇಹ

ಮಾನವ ಶರೀರದಲ್ಲಿ ಶುದ್ಧವಾದ ರಕ್ತವನ್ನೂ ಮತ್ತು ಧಾತುವನ್ನು ರಕ್ಷಿಸಿಕೊಳ್ಳುವುದಕ್ಕಿಂತ ಮೇಲಾದದ್ದು ಬೇರೊಂದಿಲ್ಲ. ಈಗಿನ ಕಾಲದಲ್ಲಿ ಅನೇಕರು ಮೋಹಕ್ಕೆ ತಾಳಲಾರದೆ ಕೆಟ್ಟ ಸಹವಾಸಕ್ಕೆ ಸಿಕ್ಕಿ ಅಂದರೆ ಹಸ್ತ ಪ್ರಯೋಗದಿಂದಲೂ, ಹೆಂಗಸರ ಸಹವಾಸದಿಂದಲೂ, ಮತ್ತು ಇನ್ನೂ ಅನೇಕ ತರದ ಕೆಟ್ಟ ಚಾಲುಗಳಿಂದಲೂ ಶರೀರವನ್ನು ಕೆಡಿಸಿಕೊಂಡು ಪ್ರಾಯ ಸಮರ್ಥರಾದಾಗ ರತಿಸುಖಕ್ಕೆ ಶಕ್ತಿಯಿಲ್ಲದೆ ವ್ಯಸನಕ್ಕೆ ಗುರಿಯಾಗಿರುವರು, ಮತ್ತು ಇನ್ನೂ ಆಗುತ್ತಲೆ ಇರುವರು. ಇವರ ಉಪಯೋಗಕ್ಕಾಗಿ, ಈ ಲೇಹ ಸೇವಿಸುವುದರಿಂದ ಸೊಂಟದ ನೋವನ್ನು ಕೈಕಾಲುಗಳ ನೋವನ್ನು ತಕ್ಷಣದಲ್ಲಿ ಹೋಗಲಾಡಿಸುವುದು.



ಧಾತು ಹೋಗುತ್ತಿದ್ದರೂ, ಸ್ವಪ್ನೇಂದ್ರಿಯವಾಗುತ್ತಿದ್ದರೂ ಕೂಡಲೇ ನಿಲ್ಲಿಸುವುದು. ಈ ಲೇಹ ಸೇವಿಸುವುದರಿಂದ ಮೇಲ್ಕಂಡ ವ್ಯಾಧಿಗಳನ್ನು ಗುಣಮಾಡುವುದಲ್ಲದೆ ರಕ್ತವನ್ನು ಹೆಚ್ಚಿಸಿ ಧಾತುವನ್ನು ಶೇಖರಿಸುವುದು ಮತ್ತು ಮುಖಕ್ಕೆ ಕಾಂತಿಯನ್ನುಂಟು ಮಾಡಿ ಹಸನ್ಮುಖಿಗಳನ್ನಾಗಿ ಮಾಡುವುದು.

ಈ ಲೇಹವು ಅನೇಕ ವಿಧವಾದ ವನಸ್ಪತಿಯ ಮೂಲಿಕೆಗಳಿಂದ ಬೆಳ್ಳಿ ಭಂಗಾರದ ಭಸ್ಮವನ್ನು ಸೇರಿಸಿ ತಯಾರಿಸಿದೆ. ಈ ಲೇಹವನ್ನು ಸೇವಿಸಿ ಶರೀರದ ಎಲ್ಲಾ ವ್ಯಾಧಿಗಳನ್ನು ಹೋಗಲಾಡಿಸಿಕೊಂಡು ನಂತರ ರತಿ ಸುಖಕ್ಕೆ ಸೇರಿದರೆ ಪ್ರಪಂಚದ ಸುಖವನ್ನು ಬಹು ಚೆನ್ನಾಗಿ ಕಳೆಯುವುದಲ್ಲದೆ ಹುಟ್ಟುವ ಮಕ್ಕಳೂ ಕಾಯ ಪುಷ್ಟವಾಗುವವು. ಈ ಲೇಹದ ವಿಷಯದಲ್ಲಿ ಬಹಳವಾಗಿ ಬರೆದು ತಿಳಿಸಲು ಆಗದು. ಬೆಳ್ಳಿ, ಭಂಗಾರ ಮತ್ತು ಸಾಚಾ ಮುತ್ತಿನ ಭಸ್ಮಗಳು ಈ ಲೇಹಕ್ಕೆ ಎಷ್ಟು ಮಾತ್ರವೂ ಸಮನಾಗಲಾರವು.

೩೪ ತೊಲೆ ಡಬ್ಬಿ ೧ಕ್ಕೆ ರೂ. ೨—೦—೦.

ಒಂದೇ ಸಲ ೨ ಡಬ್ಬಿ ತರಿಸಿದರೆ ರೂ. ೩—೮—೦.

ಲೇಲ ಆಪಿ ಸಯನ

(ಮೇಲೆ ಸವರುವುದಕ್ಕೆ)

ಮನುಷ್ಯರಲ್ಲಿ ಪುರುಷಾರ್ಥವು ಕೇವಲ ಧಾತುವಿನಿಂದಲೇ ಇರುವದು ಮನುಷ್ಯರ ದೂಷಿತ ವೀರ್ಯವು ಗರ್ಭಕಾರಕವಾಗಲಾರದು. ಅತ್ಯಂತ ವ್ಯಸನದಿಂದಲೂ ವ್ಯಾಯಾಮ (ಕಸರತ್) ದಿಂದಲೂ ಯಾವಾಗಲೂ ಕೂತುಕೊಂಡೇ ಇರುವುದರಿಂದಲೂ, ಹಸ್ತ ಪ್ರಯೋಗಾದಿಗಳಿಂದಲೂ, ಸ್ತ್ರೀ ಸಂಬಂಧ ವ್ಯಾಧಿಯಿಂದಲೂ, ಪ್ರಾಯ ಜಾಸ್ತಿ ಆದ್ದರಿಂದಲೂ. ಶರೀರದ ಎಲ್ಲಾ ನಾಡಿಗಳು ಬಲಹೀನವಾಗುವುದರಿಂದ ಪುರುಷತ್ವವು ಬಲಹೀನವಾಗಿ ಸ್ತ್ರೀ ಸಂಗ ಮಾಡುವುದಕ್ಕೆ ಆಗುವುದಿಲ್ಲ. ಕೆಲವರು ಬಾಲ್ಯದಲ್ಲಿಯೂ ವೃದ್ಧಾಪ್ಯ (ಮುದುಕತನ) ದಲ್ಲಿಯೂ ಇಂತಹ ವ್ಯಾಧಿಗಳನ್ನು ಉಂಟುಮಾಡಿಕೊಂಡು ತಮಗಿರುವ ವ್ಯಾಧಿಯನ್ನು ವೈದ್ಯರಲ್ಲಿ ಹೇಳಲು ನಾಚಿಕೆಯಿಂದ ವ್ಯಾಧಿಯನ್ನು ಹೆಚ್ಚು ಮಾಡಿಕೊಂಡು ಪ್ರಾಯ ಸಮರ್ಥರಾದಾಗ ಸ್ತ್ರೀಸುಖಕ್ಕೆ ಶಕ್ತಿಯಿಲ್ಲದೆ ಲಜ್ಜಾಸ್ಪದದಿಂದ ಅಸಮರ್ಥರಾಗಿ ಮನೋವ್ಯಥೆಯನ್ನುಂಟುಮಾಡಿಕೊಳ್ಳುವರು. ಇಂಥವರ ಉಪಯೋಗಕ್ಕೋಸ್ಕರವಾಗಿ ಇಂಗ್ಲೀಷ್ ಡಾಕ್ಟರುಗಳಿಂದ ತಯಾರು ಮಾಡಲ್ಪಟ್ಟ ಈ ಮೇಲ್ಕಂಡ ಲೇಹವನ್ನು ಸೇವಿಸಿದರೆ ಬಹಳ ಒಳ್ಳೇದು.

ಕ್ರಯ ಬಾಟ್ಲಿ ಒಂದಕ್ಕೆ ರೂ. ೨—೦—೦.

ಒಂದೇ ಸಲ ಎರಡು ಡಬ್ಬಿ ಮೇಲ್ಕಂಡ ಲೇಹವೂ ಒಂದು ಬಾಟ್ಲಿ ಲೇಲ ಆಪಿ ಸಯನ ತರಿಸಿಕೊಂಡರೆ ಕ್ರಯ ರೂ. ೫—೦—೦.

Lakshminarayana OUSHADA SALA,
POST BOX No., 53 MADRAS.
ಲಕ್ಷ್ಮೀನಾರಾಯಣ ಔಷಧ ಶಾಲೆ,
ಪೋಸ್ಟು ಬಾಕ್ಸ ನಂ., 53 ಮದರಾಸು.

WANTED.

ಕಲ್ಯಾಣಪುರದಲ್ಲಿರುವ "ವರಗೋಸ್ ಬೇಂಕಿಂಗ್ ಮತ್ತು ಟ್ರೇಡಿಂಗ್ ಕಂಪೆನಿ"ಯವರು ಬಾಬ್ತು ಸೈಕಲ್‌ಗಳು, ಪೆಟ್ರೊಮೆಕ್ಸ ದೀಪಗಳು, ಗ್ರಾಮೋಫೋನ್ ರಿಕಾರ್ಡುಗಳು ಮತ್ತು ಪೆಟ್ಟಿಗೆಗಳು, ಹೊಲಿಯುವ ಮೆಷಿನ್‌ಗಳು ಇತ್ಯಾದಿ ಸಾಮಾನುಗಳನ್ನು ಈ ಪ್ರಾಂತ್ಯದಲ್ಲಿ ವಿಕ್ರಯಿಸುವರೆ ಏಜಂಟರು ಅಗತ್ಯ ಉಂಟು. ಏಜಂಟರಿಗೆ ತಿಂಗಳು ಒಂದಕ್ಕೆ ರೂ. 50—0—0 ಸಂಬಳವು ಕಂಪೆನಿಯಿಂದ ಕೊಡಲಾಗುವುದು. ಹೆಚ್ಚಿನ ತಪಶೀಲು ಈ ಕೆಳಗೆ ದಸ್ಕತ್ತು ಮಾಡಿದವರಿಂದ ತಿಳಕೊಳ್ಳಬಹುದು:—

ಕಂಡ್ಕೂರು, ಮಂಗಳೂರು. ೬I—I—1934.

ಯಂ. ಯೂಸೂಫ್ ಖಾನ್, ಟ್ರೆಂಚ್ ಮೆನೇಜರ್, ವರಗೋಸ್ ಬೇಂಕಿಂಗ್ ಮತ್ತು ಟ್ರೇಡಿಂಗ್ ಕಂಪೆನಿ.,

ಜನವರಿ ಹಬ್ಬದ ಸೇಲ್



ಫೌಂಟನ್ ಪೆನ್.

ಬ್ರಿಟಿಷ್ ಮೇಡ್, 14 ಕ್ಯಾರೆಟ್ ಭಂಗಾರದ ಮುಳ್ಳು ಹಾಕಿದೆ ಅಕ್ಷರಗಳು ಮುತ್ತುಗಳ ಹಾಗೆ ಬರೆಯುವದು.

ಕ್ರಯ ಪೆನಾ ರೂ. 2—12—0.

ಬೆಸ್ಟ್ ಪಾಕೆಟ್ ವಾಚ್.

ಚಿಕ್ಕ ಸೈಜ್, ಸರಿಯಾಗಿ ಕಾಲವನ್ನು ತೋರಿಸುವುದು. ನಿಕ್ಕಲ್ ಕೇಸ್, ಸರಪಣಿ ಸಹಿತ.

ಕ್ರಯ ರೂ. 3—4—0

ಜರ್ಮನ್ ಟೇಬಲ್ ಟಯಂಪೀಸ್.

ಬಾಳಿಕೆ ಬರುವುದು, ಗ್ಯಾರಂಟಿ; ಅಂಗಡಿಗಳಲ್ಲಿ ಇಡಲು ಚೆನ್ನಾಗಿದೆ. ಒಂದನ್ನು ತರಿಸಿ ನೋಡಿರಿ.

ಕ್ರಯ ರೂ. 3—0—0.

ಜಂಟ್ಸ್ ರಿಸ್ಟ್ ವಾಚ್.

ಕೈಯಲ್ಲಿ ಕಟ್ಟಲು ಅನುವಾಗಿದೆ. ಬಾಳಿಕೆ ಬರುವುದು. ಸರಿಯಾದ ಕಾಲವನ್ನು ತೋರಿಸುವುದು. ನಿಕ್ಕಲ್ ಕೇಸ್, ಕ್ರಯ ರೂ. 5—0—0.

ಸೂಚನೆ:—ಒಂದೇ ಸಲ ಈ ಮೇಲ್ಕಂಡ 4 ಸಾಮಾನುಗಳನ್ನು ತರಿಸಿಕೊಂಡರೆ ಕ್ರಯ ರೂ. 13—0—0.

ಗ್ಯಾರಂಟಿಯಾದ ಮಾಲು ಒಂದು ಸಲ ತರಿಸಿ ನೋಡಿರಿ. ಪರಸ್ಥಳದ ಆರ್ಡರುಗಳನ್ನು ಪರೀಕ್ಷೆ ಮಾಡಿ, ಕಳುಹಿಸಲ್ಪಡುತ್ತೆ.

ವಿಳಾಸ:—

ಟಿ. ಪಿ. ನಾಗಲಿಂಗಪ್ಪಾ, ಮತ್ತು ಕಂಪೆನಿ,
೩೦ ವಾಲ್‌ಟ್ಯಾಕ್ಸ್ ರೋಡ್, ಪೋ. ಬೋ. ನಂ. ೫೧೬,
ಪಾರ್ಕ ಟೌನ್, ಮದರಾಸು.

ಇನಾಂ! ಕ್ಯಾಲೆಂಡರ್, ಡೈರಿ! ಇನಾಂ!!

ನಮ್ಮ ಕಂಪೆನಿಯ ಹೆಸರು ಪ್ರಖ್ಯಾತಿಯಾಗುವುದಕ್ಕೆ ೮ ಆಣೆ ಸ್ಟಾಂಪು ಕಳುಹಿಸುವವರಿಗೆ ೧೯೩೪ ವರ್ಷದ ಸೊಗಸಾದ ಫ್ರೆಂಚ್ ದೇಶದ ಲೇಡಿಸ್ [illegible] ಕ್ಯಾಲೆಂಡರ್ ೩, ಮತ್ತು ಪೋಕೆಟ್ ಡೈರಿ ೩, ಬಹುಮಾನವಾಗಿ ಕೊಡಲ್ಪಡುತ್ತವೆ. ಬೇಕಾದವರು ೮ ಆಣೆ ಪೋಸ್ಟು ಸ್ಟಾಂಪು ಕಳುಹಿಸುವವರಿಗೆ ಈ ಮೇಲ್ಕಂಡ ೩ ಕ್ಯಾಲೆಂಡರ್, ೩ ಡೈರಿ ಪೋಸ್ಟು ಮೂಲಕ ಬಹುಮಾನವಾಗಿ ಕಳುಹಿಸಲ್ಪಡುತ್ತದೆ. ಬೇಗನೆ ತರಿಸಿಕೊಳ್ಳುವವರಿಗೆ ಮಾತ್ರ ದೊರೆಯುವುದು.



T. R. Royal & Co.,
3. Krishnappa Nayakan,
Tank Street, Sowcarpet MADRAS.

ವಿಷಯಸೂಚಿ.

[illegible]
[illegible] ... ೪
[illegible] ... ೩
[illegible] ... ೫
[illegible] ಸಂಗ್ರಹಗಳು ... ೫
[illegible] ... ೬
[illegible] ... ೭
[illegible] ... ೧೧
[illegible] ... ೮
ದೇಶದಲ್ಲೆಲ್ಲಾ ಭೂಕಂಪ! [illegible] ... ೯
[illegible] ... ೧೩
[illegible] ... ೧೦

ಸ್ವದೇಶಾಭಿಮಾನಿ.

ತಾ. ೧೯ನೇ ಶುಕ್ರವಾರ ಜನವರಿ ೧೯೩೪.

ನಾಗರಿಕತೆಯ ಪರಿಣಾಮ

ಮನುಷ್ಯನು ಇತರ ಪ್ರಾಣಿಗಳಿಗಿಂತಲೂ ಶ್ರೇಷ್ಠನು ಎಂಬುದೇ ಮನುಷ್ಯನ ಹೆಗ್ಗಳಿಕೆಯ ವಿಷಯ. ಅವನಲ್ಲಿ ತರ್ಕ ಶಕ್ತಿಯಿದೆ; ನೂತನ ವಿಷಯಗಳಲ್ಲಿ ಚಿಂತನವಿದೆ. ಅವನು ತನ್ನ ಜೀವನದಲ್ಲಿ ನೂತನ ಭಾವಗಳನ್ನು ಆವಿರ್ಭವಿಸಬಲ್ಲನು; ತನ್ನ ವಿಚಾರ ಶಕ್ತಿಯಲ್ಲಿ ಅತ್ಯಂತ ಗಹನವಾದ ವಿಷಯಗಳನ್ನು ಸೇರಿಸಬಲ್ಲನು; ಪ್ರಕೃತಿಯನ್ನು ಶೋಧಿಸಿ, ಅದರ ರಹಸ್ಯಗಳನ್ನು ಬಯಲು ಮಾಡಬಲ್ಲನು. ಆದುದರಿಂದ ಸರ್ವ ಪ್ರಾಣಿಗಳಿಗಿಂತಲೂ ಮನುಷ್ಯನು ಶ್ರೇಷ್ಠನೆನಿಸಿಕೊಳ್ಳುವನು.

ಅವನ ವಿಚಾರ ಶಕ್ತಿಯು ಅವನಲ್ಲಿ ನೂತನ ತತ್ವಗಳನ್ನು ಪ್ರೇರಿಸಿತು. ಒಂದಾನೊಂದು ಕಾಲದಲ್ಲಿ ಮನುಷ್ಯನು ಇತರ ಪ್ರಾಣಿಗಳಂತೆಯೇ ಪಶುಜೀವನವನ್ನು ನಡೆಸುತ್ತಿದ್ದನೆಂಬುದಕ್ಕೆ ಸಂದೇಹವಿಲ್ಲ. ಹಸಿವನ್ನು ತಣಿಸುವುದು, ಅಸ್ತಿತ್ವವನ್ನು ಕಾಯುವುದು, ಒಂದಾನೊಂದು ಸಮಯ ಇವು ಮಾತ್ರವೇ ಮನುಷ್ಯನ ಕರ್ತವ್ಯಗಳಾಗಿದ್ದುವು. ಆದರೆ, ಕ್ರಮೇಣ ಮನುಷ್ಯನು ಸುತ್ತಲಿನ ಪ್ರಕೃತಿಯನ್ನು ಪರಿಶೋಧಿಸ ತೊಡಗಿದನು. ಆಗಲೇ ಅವನ ವಿಚಾರಗಳ ಅಲೆಗಳು ಚಲವಿತ್ತಲಾರಂಭಿಸಿದುವು.

ಈ ವಿಚಾರದ ವಿಕಾಸವೇ ನಾಗರಿಕತೆಯಾಗಿ ಪರಿಣಮಿಸಿತು. ಇದು ಒಂದು ಕಡೆಯಿಂದ ಮತ ತತ್ವಗಳನ್ನು ನಿರ್ಮಿಸಿತು; ಒಂದು ಕಡೆಯಿಂದ ಸಮಾಜವನ್ನು ವ್ಯವಸ್ಥೆಗೊಳಿಸಿತು; ಒಂದು ಕಡೆಯಿಂದ ಸೌಕರ್ಯಗಳನ್ನು ಶೋಧಿಸಲಾರಂಭಿಸಿತು; ಒಂದು ಕಡೆಯಿಂದ ಯಶಸ್ಸಿಗಾಗಿ ಹೆಣಗಾಡಿತು. ಇವುಗಳ ಬಗ್ಗೆ ಮಾನವನು ನಡೆಸಿದ ಪ್ರಯತ್ನಗಳೇ ನಾಗರಿಕತೆಯಾಗಿ ರೂಪ ಹೊಂದಿದುವು.

ಈ ಮೂಲಕ ಮಾನವನು ಶ್ರೇಷ್ಠನೆನ್ನಿಸಿಕೊಂಡನು. ಇತರ ಪ್ರಾಣಿಗಳಲ್ಲಿ ಈ ತರದ ಯಾವ ಸುಧಾರಣೆಯೂ ಆದದ್ದು ಕಂಡು ಬರುವುದಿಲ್ಲ. ಹುಲಿಯು ಹಳೆಯ ಪದ್ಧತಿಯಂತೆಯೇ ಕಾಡುಗಳಲ್ಲಿದ್ದು ಬಾಯಿ ಉಗುರುಗಳಿಂದ ತನ್ನ ಜೀವನಕ್ಕಾಗಿ ಗುಹೆ ಪೊದರುಗಳಲ್ಲಿ ವಾಸಿಸುತ್ತಿದೆ; ಸಿಂಹ ಶಾರ್ದೂಲಗಳ ವಂಶವೇ ನಾಮಾವಶೇಷವಾಗಿ ಬಂದಿದೆ; ದೊಡ್ಡ ದೊಡ್ಡ ಆನೆಗಳು ಮನುಷ್ಯನಿಗೆ ಸೇವಕರುಗಳು ಮಾತ್ರವಾಗಿವೆ; ಬಹಳ ಬುದ್ಧಿಶಾಲಿಗಳೆನ್ನುವ ನಾಯಿಗಳು ಕೂಡ ಕಲಿಸಿದಷ್ಟು ಬುದ್ಧಿಯನ್ನು ತೋರಿಸಿ ಯಜಮಾನನ ಬಾಗಿಲು ಕಾಯುತ್ತವೆ.

ಮನುಷ್ಯನು ಮಾತ್ರ ಕಾಡುಗಳನ್ನು ಅಳಿಸಿ ಪಟ್ಟಣಗಳನ್ನು ರಚಿಸಿದನು; ಶ್ರಮವನ್ನು ನಿವಾರಿಸಿ ಯಂತ್ರಗಳನ್ನು ರಚಿಸಿದನು; ನೆಲ-ಜಲ-ಅನಿಲ-ಅನಲ-ಖಗೋಲ ಈ ಪಂಚ ಭೂತಗಳಲ್ಲಿಯೂ ಅಧಿಕರಿಸುತ್ತಿರುವನು; ಕೆಲವು ಶತಮಾನಗಳ ಹಿಂದಿನ ಮನುಷ್ಯನ ಶಕ್ತಿಯನ್ನೂ ಈಗಿನ ಮಾನವ ಶಕ್ತಿಯನ್ನೂ ನೋಡಿದರೆ, ಮೇರೆಯಿಲ್ಲದ ಅಂತರವನ್ನು ಕಾಣಬಹುದು. ವ್ಯವಸ್ಥೆ, ವಿಕಾಸ, ಜ್ಞಾನ ಇವುಗಳು ಪ್ರಚಂಡವಾಗಿ ಬೆಳೆದು ಹೋಗಿವೆ.

ಆದರೇನು? ಜೀವನದ ಉದ್ದೇಶವು ಬದಲಾಗಿದೆಯೇ? ಜೀವನದ ಸುಖಗಳು ಹೆಚ್ಚಾಗಿವೆಯೇ? ಶರೀರದ ಸ್ವಾಯತ್ತವು ಹೆಚ್ಚಾಗಿದೆಯೇ? ಮನುಷ್ಯನ ಅಸ್ತಿತ್ವಕ್ಕೆ ನೆಲೆಯುಂಟಾಗಿದೆಯೇ? ಮನುಷ್ಯ ಜೀವನದಲ್ಲಿ ಅತ್ಯಂತ ಪ್ರಮುಖವಾದ ಈ ಸಮಸ್ಯೆಗಳಿಗೆ ಮಾತ್ರ ಸರಿಯಾದ ಉತ್ತರವು ದೊರಕುತ್ತಿಲ್ಲ. ಈ ಮೊದಲು ನಡೆದೇ ಪ್ರಯಾಣ ಮಾಡುವಲ್ಲಿ ಈಗ ಮೋಟಾರು ಕಾರುಗಳಿವೆ. ಆದರೆ ಹಿಂದಿನ ನಡೆಯುವಿಕೆಯಲ್ಲಿದ್ದ ಆರೋಗ್ಯವು ಈಗಿನ ಮೋಟಾರು ಕಾರಿನ ಸವಾರಿಯಲ್ಲಿರುವುದಿಲ್ಲ. ಹಿಂದೆ ದಿನಗಟ್ಟಲೆಯಲ್ಲಿ ಮಾಡಬೇಕಾಗಿದ್ದ ಕೆಲಸಗಳನ್ನು ಈಗ ಘಂಟೆಯೊಳಗೆ ಮಾಡಬಹುದು; ಆದರೆ ಜೀವನದ ಕಾರ್ಯಕ್ಷೇತ್ರವು ದೊಡ್ಡದಾಗಿಲ್ಲ. ಈ ಮೊದಲು ಕಾಡುಗಳ ಗಿಡಮೂಲಿಕೆಗಳಲ್ಲಿ ಕಾಣಬೇಕಾಗಿದ್ದ ಔಷಧಗಳ ಬದಲಿಗೆ ಈಗ ಕಾಲೇಜಿನ ಪ್ರತಿಭಾಶಾಲಿಗಳಾದ ಡಾಕ್ಟರರು ದೊರಕುತ್ತಾರೆ; ಆದರೆ ಜೀವಮಾನವು ಬೆಳೆದಿಲ್ಲ. ಮತತತ್ವಗಳು ಹೊಸ ಹೊಸದಾಗಿ ಶೋಧಿಸಲ್ಪಡುತ್ತಿವೆ; ಆದರೆ ದೇವರನ್ನು ಯಾರೂ ಇನ್ನೂ ಕಂಡಿಲ್ಲ. ಮತ್ತೆ ಈ ನಾಗರಿಕತೆಯಿಂದೇನು?

ಮಾನವ ಸಂಖ್ಯೆಯು ಬೆಳೆಯುತ್ತ ಇದೆ; ಸಂಘಗಳು ರಚಿಸಲ್ಪಡುತ್ತಾ ಇವೆ; ಸ್ವಾರ್ಥಗಳು ಪೋಷಿಸಲ್ಪಡುತ್ತಾ ಇವೆ; ದ್ವೇಷಗಳು ಬೆಳೆಯುತ್ತಾ ಇವೆ. ಪ್ರಾಣಿ ವರ್ಗದಲ್ಲಿ ಸಹ ಜಾತಿಯೊಳಗೆ ವಿರೋಧವಿರುತ್ತದೆ; ಮನುಷ್ಯನಲ್ಲಿ ಹಗೆತನವು ಹೆಚ್ಚು. ನಾಗರಿಕತೆಯೊಡನೆ ವೈಯಕ್ತಿಕ ಹಿತಗಳು ಬೆಳೆಯುತ್ತಾ ಬರುತ್ತಿವೆ. ಫಲವಾಗಿ ವ್ಯಕ್ತಿ ವ್ಯಕ್ತಿಯೊಳಗೆ, ಕುಟುಂಬ ಕುಟುಂಬಗಳೊಳಗೆ, ಸಮಾಜ ಸಮಾಜಗಳೊಳಗೆ, ಜಾತಿ ಜಾತಿಗಳೊಳಗೆ, ರಾಷ್ಟ್ರ ರಾಷ್ಟ್ರಗಳೊಳಗೆ ಭೇದಗಳು, ದ್ವೇಷಗಳು, ಕಲಹಗಳು ಬೆಳೆಯುತ್ತಿವೆ. ಹಿಂದಿನ ಕಲ್ಲು ಈಟಿಗಳು ಹೋಗಿ ಇಂದಿನ ರಾಸಾಯನಿಕ ಧ್ವಂಸಾತ್ಮಕ ಉಪಕರಣಗಳಿವೆ. ಹಿಂದಿನ ರಥ ಚತುರಂಗಗಳು ಹೋಗಿ ಇಂದಿನ ನೌಕಾ ವಿಮಾನಗಳು ಉಂಟಾಗಿವೆ. ಹಿಂದೆ ಒಬ್ಬನು ಒಬ್ಬನನ್ನು ತಿವಿಯಬಲ್ಲನಾಗಿದ್ದರೆ, ಈಗ ಒಬ್ಬನು ಒಂದು ಜನಾಂಗವನ್ನೇ ನಾಶ ಮಾಡಬಲ್ಲನು.

ವಿಚಾರಿಗಳೂ ತಾರ್ಕಿಕರೂ ಈಗಿನ ದಿನಗಳಲ್ಲಿ ಹೆಚ್ಚಾಗಿದ್ದಾರೆ; ಭೂಗೋಳ ಇತ್ಯಾದಿಗಳ ಮೂಲಕ ತತ್ವಗಳೂ ಜ್ಞಾನವೂ ಪ್ರಸಾರವಾಗುತ್ತಿವೆ. ಆದರೆ ಫಲವೇನು? ಮಿಥ್ಯಾಚಾರಿಗಳ ಸಂಖ್ಯೆಯು ಬೆಳೆಯುತ್ತಿದೆ. ಪೂರ್ವದಲ್ಲಿ ತತ್ವಜ್ಞಾನವಿಲ್ಲದೆ ಏನಾದರೂ ಕಿಂಚಿತ್ ದೋಷಗಳನ್ನು ಮಾಡುತ್ತಿದ್ದದ್ದಾದರೆ, ಈಗ ತತ್ವಜ್ಞಾನವಿದ್ದೇ ವಿರೋಧ ವರ್ತನೆಯನ್ನು ತೋರಿಸುತ್ತಾರೆ. ಜನಾಂಗಗಳ ಧುರೀಣರು ಶಾಂತತೆಯ ತತ್ವವನ್ನು ಪ್ರಸರಿಸುತ್ತ ಯುದ್ಧ ತಯಾರಿ ಮಾಡುತ್ತಾರೆ; ಸಮಾಜ ಮುಖಂಡರು ನಿರ್ಮಲ ವರ್ತನವನ್ನುಪದೇಶಿಸುತ್ತ ನೀಚ ಕೆಲಸಗಳಿಗೆ ಕೈಯಿಕ್ಕುತ್ತಾರೆ.

ಮನುಷ್ಯನು ವಿಚಾರವನ್ನು ಬೆಳೆಸಿದನು; ವಿಜ್ಞಾನವನ್ನು ರಚಿಸಿದನು; ಪ್ರಕೃತಿಯನ್ನು ಸಂಶೋಧಿಸಿದನು; ಆಶ್ಚರ್ಯದ ವಿಷಯಗಳನ್ನು ಉಂಟುಮಾಡಿದನು; ಆದರೆ ವಿಜ್ಞಾನದ ಸೂತ್ರಗಳು ತಿಳಿದಿದ್ದರೂ, ಅವುಗಳ ಆಧಾರವು ಗೊತ್ತಿಲ್ಲ; ವಿಚಾರದ ಪ್ರವಾಹವನ್ನು ಕಂಡು ಹಿಡಿದರೂ ಅದರ ಮೂಲವನ್ನು ಕಂಡುಕೊಳ್ಳಲಾಗಲಿಲ್ಲ, ಆಕಾಶ, ನಕ್ಷತ್ರ, ವಿದ್ಯುತ್ ಚಲನ ಮುಂತಾದ ಗಹನ ವಿಷಯಗಳನ್ನು ಕಂಡುಕೊಂಡನು—ಆದರೆ ಅವುಗಳ ಕಾರಣವೇನು?—ವಿಜ್ಞಾನ ಶಾಸ್ತ್ರವು ಇಲ್ಲಿ ಮೂಕವಾಗಿರುತ್ತದೆ.

ಆದರೂ ನಾಗರಿಕತೆಯು ಮನುಷ್ಯನ ಹೆಗ್ಗಳಿಕೆಯ ವಿಷಯ; ಆದರ ಮೂಲಕ ಮನುಷ್ಯನೆಲ್ಲಿ ಹೋಗುವನು?

++ + +

Stop Press.

ಇದೇ ಜನವರಿ ತಾ. ೫ನೇ ಶುಕ್ರವಾರ ದಿನ ಕುಂದಾಪುರ ತಾಲೂಕಿನ ಹೆಮ್ಮಾಡಿ ಉಳ್ಳೂರು ಗ್ರಾಮದ ೧೫ ಅನಂತ ಭಟ್ಟರ ಮಗ ಮಂಜುನಾಥ ಭಟ್ಟನೆಂಬ ಬ್ರಾಹ್ಮಣ ತರುಣನು ಮಹಮ್ಮದೀ ಮತಕ್ಕೆ ಸೇರಿದನೆಂದು ತಿಳಿದು ಬಂದಿದೆ. ಹಿಂದೂಗಳು ಎಚ್ಚರಿಯಲಾರರು!

ಮೈಸೂರಾಯರು ಪತ್ನಿಯವರೊಡಗೂಡಿ ಬೆನಾರೆಸ್‌ಗೆ ಹೋದರು.

ಗಾಂಧೀಜಿಯವರು ಗುರುವಯ್ಯೂರು ದೇವಸ್ಥಾನದ ಪ್ರಮುಖರಾದ ಜಮೋರಿನರನ್ನು ಕಂಡು ಮಾತನಾಡಿದರು.

ಲಕ್ನೋವಿನಲ್ಲಿ ಎರಡು ಸೈಕಲುಗಳ ಮೇಲೆ ೬ ಚಕ್ರಗಳ ಲೋರಿಯು ಓಡಿ, ಅದೂ ಸಾಲದೆ ಬಳಿಯ ಅಂಗಡಿಯ ಒಳಗೆ ನುಗ್ಗಿ ಒಬ್ಬ ೬ ಮಂದಿಗಳನ್ನು ಕೂಡಲೇ ಆಸ್ಪತ್ರೆಗೆ ಕಳುಹಿಸಿಯೇ ಬಿಟ್ಟಿತು.

ಅಮೃತಸರದ ಒಂದು ಮನೆಯಲ್ಲಿ ಪೋಲೀಸರು ಪತ್ತೆ ನಡೆಸಿದಾಗ ೧೦೦ ಜನರನ್ನು ಕೊಲ್ಲಬಹುದಾದಷ್ಟು ಬಾಂಬು ಮೊದಲಾದ ಶಸ್ತ್ರಗಳು ಒಂದು ಮೂಲೆಯಲ್ಲಿ ಸ್ವಸ್ಥವಾಗಿದ್ದುದು ಕಂಡು ಬಂತು. ಅವುಗಳ ಯಜಮಾನರನ್ನು ಕರೆದುಕೊಂಡು ಹೋಗಿರುವರು.

++ + +

ಪರದೇಶದ ಸಂಗ್ರಹ.

ಕಳೆದ ಡಿಸೆಂಬರ ೧೬ರಲ್ಲಿ ಡೆಹರಾಡೂನ್ ಆರ್ಯ ಸಮಾಜದಲ್ಲಿ 'ಗುರುದ್ದೀನ್' ಎಂಬ ಮಹಮ್ಮದೀಯನನ್ನು ಅಲ್ಲಿಯ ಆರ್ಯ ಸಮಾಜದವರು ಶುದ್ಧಿಗೊಳಿಸಿದರು.

ಡಿಸೆಂಬರ ತಾ. ೯ರಲ್ಲು ಫರೂಖಾಬಾದ್ ಆರ್ಯ ಸಮಾಜದಲ್ಲಿ (೧೯ವರ್ಷದಲ್ಲಿ ಕ್ರೈಸ್ತ ಮತಕ್ಕೆ ಸೇರಿದ್ದ) ಠಾಕೂರ್ ಬಾಲಸಿಂಹ ಎಂಬವನ್ನು ಶುದ್ಧಿಗೊಳಿಸಲಾಯಿತು.

ಡಿಸೆಂಬರ ತಾ. ೫ರಲ್ಲಿ ಮುಜಫ್ಫರ್ ನಗರದ ಆರ್ಯ ಸಮಾಜದಲ್ಲಿ ಮುಸಲ್ಮಾನ್ ಕನ್ಯಾ ಎಂಬವಳನ್ನೂ, ತಾ. ೧೫ರಲ್ಲಿ ಮುಜಫ್ಫರ್ ಉಮರ್ ಎಂಬ ಮಹಮ್ಮದೀಯನನ್ನೂ ಶುದ್ಧಿಗೊಳಿಸಲಾಯಿತು.

ಗೋಧ್ರಾದಲ್ಲಿ ಒಬ್ಬ ಪೋಲೀಸನು ತಾನು ಗಾಂಧೀಪಾರ್ಟಿಗೆ ಸೇರುತ್ತೇನೆಂದು ಹೇಳಿ ರಜೆ ಕೇಳಿ, ರಜೆ ದೊರಕದಿರಲು, ಪೋಲೀಸ ಯೂನಿಫಾರ್ಮ್ ಹೇಳನ್ನು ಹರಿದು ಕೈದು ಮಾಡಲ್ಪಟ್ಟಿರುವನೆಂದು ತಿಳಿದು ಬಂದಿದೆ.

ಲಾಹೋರಿನಲ್ಲಿ ಒಬ್ಬಳು ಸ್ತ್ರೀಯು ಪತ್ನಿಯ ಕೊಲೆಗಾಗಿ ಜೈಲಿನಲ್ಲಿರಿಸಲ್ಪಟ್ಟಿದ್ದಳು. ಅವಳು ಈಗ ಜೈಲಿನಿಂದ ತಲೆತಪ್ಪಿಸಿರುವಳೆಂದೂ, ಹತ್ತು ಅಡಿಗಳ ಗೋಡೆಯನ್ನು ಹಾರಿ ಪರಾರಿಯಾಗಿರುವಳೆಂದೂ ತಿಳಿದು ಬಂದಿದೆ.

ಮುಸ್ತಫಾಬಾದಿನಲ್ಲಿ ೧೦೦ ಮಂದಿ ಹರಿಜನರು ಕ್ರೈಸ್ತಮತಾನುಯಾಯಿಗಳಾದರು.

ಗುಜರಾಥ್ ಜ್ಞಾನಕೋಶವನ್ನು ರಚಿಸುವುದಕ್ಕಾಗಿ ಕಾಥೇವಾಡಿನ ಲಿಂ ಎಂಬಲ್ಲಿನ ಗೊಂಡಳದ ಠಾಕೂರ್ ಸಾಹೇಬರು ೫ ಲಕ್ಷ ರೂಪಾಯಿಗಳ ಉದಾರ ದಾನವನ್ನು ಮಾಡಿರುವರು.

ಗಾಂಧೀಜಿಯವರೆದುರಿನಲ್ಲಿ ಸನಾತನ ಪಕ್ಷದ ಇಬ್ಬರು ಜನಾನರಿಗೆ ಜಗಳವಾಗಿ ಹೊಡೆದುಕೊಂಡು ಅವರಿಬ್ಬರನ್ನೂ ಗಾಂಧೀಜಿಯವರ ಕಾರಿನಲ್ಲಿ ಆಸ್ಪತ್ರೆಗೊಯ್ಯಲಾಯಿತು.

ಆಲ್ವಾರ್ ಮಹಾರಾಜರು ವೈಸರಾಯರನ್ನು ಭೇಟಿ ಮಾಡಿ ತನ್ನ ಮುಕುಟದ ಕುರಿತು ನಿವೇದಿಸಿಕೊಳ್ಳಲಿರುವರು.

ದಾವಣಗೆರೆಯ ಹೈಸ್ಕೂಲಿನ ಹೆಡ್ ಮಾಸ್ತರರಿಗೆ ಪಾದರಕ್ಷೆಯಿಂದ ಹೊಡೆಯಲೆತ್ನಿಸಿದ ಒಬ್ಬ ಮುಸಲ್ಮಾನ ವಿದ್ಯಾರ್ಥಿಗೆ ೫ ರೂಪಾಯಿಗಳ ಜುಲುಮಾನೆಯಾಗಿದೆ.

ಇಂಗ್ಲೆಂಡಿನಿಂದ ಬಂದು ಅನೇಕ ಕ್ರಿಕೆಟ್ ಆಟಗಳಲ್ಲಿ ಜಯ ಹೊಂದಿದ ಎಂ. ಸಿ. ಸಿಯು ಬೆನಾರೆಸ್‌ನಲ್ಲಿ ವಿಜಯನಗರಂ ಟೀಮಿನೊಡನೆ ಸೋತು ಹೋಯಿತು.

ಜಪಾನಿಯರಿಗೂ ಚೀನಿಯರಿಗೂ ಆದ ಯುದ್ಧದಲ್ಲಿ ಎರಡು ಪಾರಿವಾಳಗಳು ಕಾಗದ ಬಟವಾಡೆಗಳನ್ನು ಸಮರ್ಪಕವಾಗಿ ಮಾಡಿದುದಕ್ಕೆ ಅಲ್ಲಿಯ ಸೈನ್ಯಾಧಿಕಾರಿಗಳು ಅವುಗಳಿಗೆ ಮೆಡಲ್‌ಗಳನ್ನೂ ಸರ್ಟಿಫಿಕೇಟುಗಳನ್ನೂ ಕೊಟ್ಟು ಬಹು ಆದರದಿಂದ ಗೌರವಿಸಿದರು.

ಬಂಗಾಳದ ಬಳ್ಸಾರ್ ಎಂಬಲ್ಲಿ ಮೌಲ್ವಿ ತಯಬರ ಪೀಡೆಯನ್ನು ಸಹಿಸಲಾರದೆ ೧೦೦ ಜನ ಹರಿಜನರು ಪ್ರಮದಿಂದ ಹೊರಗೆ ನಡೆದರು.

ಮದ್ರಾಸಿನ ಎಗ್ಮೋರ್ ರೈಲ್ವೇ ಸ್ಟೇಶನಿನಲ್ಲಿ, ಹೊರಲು ಜನರಿಲ್ಲದೆ ಮೂಲೆಯಲ್ಲಿದ್ದ ಗೋಣಿ ಚೀಲದಿಂದ ದುರ್ವಾಸನೆ ಹೊರಡಲು, ಪರೀಕ್ಷಿಸುವಾಗ ೪೦ ವರ್ಷದ ಸ್ತ್ರೀಯ ಶವವನ್ನು ಗಂಟು ಕಟ್ಟಿದ್ದುದು ತಿಳಿದು ಬಂತು. ವೈಯಲ್ಲಿ ಕತ್ತಿಯ ಗಾಯಗಳೂ ಇದ್ದು, ಒಬ್ಬನನ್ನು ಕೈದು ಮಾಡಿರುವರು.

ಲೂಧಿಯಾನದ ವೃದ್ಧಾಶ್ರಮದ ಕೊಲೆಜನ ಸರ್ದಾರ್ ಶಾಂತಸಿಂಗ್ ನೆಂಬವನು ಒಬ್ಬ ರೋಗಿಯ ರಕ್ಷಣೆಗಾಗಿ ತನ್ನ ದೇಹದಿಂದ ಎರಡು ಪೈಂಟು ರಕ್ತ ಕೊಟ್ಟು ಆರೋಗ್ಯ ಕೆಟ್ಟು ಕೊನೆಗೆ ತೀರಿಕೊಂಡನು.

ಸೂರ್ಯ ಚಂದ್ರ ಶುಕ್ರ, ಶನಿ, ಬೃಹಸ್ಪತಿ ಮತ್ತು ಮಂಗಳಗಳು ಒಂದಾಗಿ ಅವುಗಳೊಡನೆ ರಾಹುವೂ ಕೂಡಿದುದರಿಂದ ಭೂಕಂಪವಾಯಿತೆಂದು ಜೋತಿಷ್ಯರ ಹೇಳಿಕೆ, ಇಂತಹ ಯೋಗದಲ್ಲಿ ಮಹಾಭಾರತ ಯುದ್ಧವಾರಂಭವಾದ್ದುದು!

ಗುಜರಾಥಿನಲ್ಲಿ ಜಂಗಾಲ ಜೇನು ಬೆಳೆಯು ಹಾಳಾಗಿದೆ. ಒಬ್ಬನು ಹೇಳದಿಂದಲೇ ತೀರಿಕೊಂಡನು.

ಭೂಕಂಪದಿಂದಾಗಿ ಬಹಳವಾದ ನಷ್ಟಕ್ಕೆ ಗುರಿಯಾದುದು ಬಿಹಾರ್ ಪ್ರಾಂತ್ಯವೆಂದು ಅಂದಾಜು ಮಾಡಲಾಗಿದೆ.

ಭೋಪಾಲದ ನವಾಬರು ಮೈಸೂರಿಗೆ ಫೆಬ್ರುವರಿ ತಾ. ೧೫ರಲ್ಲಿ ಬರುವರು.

ಪ್ರಾನ್ಸಿನ [illegible] ನದಿಯಲ್ಲಿ [illegible] ಜಲಾಂತರ್ಗಾಮಿ [illegible] ಬಹು ಕಷ್ಟದಿಂದ ತೆಗೆದಿರುವರು. [illegible] ಅನೇಕ [illegible] ೧೬ ಅಡಿ [illegible] ಘಂಟೆಗೆ ೧೦ ಮೈಲು ಹೋಗುತ್ತದೆಂದೂ ತಿಳಿದು ಬಂದಿದೆ.

++ + +

ಮುಂಬಾಯಿಯಲ್ಲಿ ಸತ್ಯಾಗ್ರಹ ಮಾಡುತ್ತಿದ್ದವನೊಬ್ಬನನ್ನು ಸಂಪತರಾವ್ ಗೋವಿಂದರಾವ್ ಎಂಬವನು ಗದರಿಸಿ, ತನಗೆ ಲಂಚ ಕೊಡದಿದ್ದರೆ ನಾನು ಚಾರ್ಜು ಮಾಡುವೆನೆಂದು ಹೇಳಿದನು. ಹೀಗೆಯೇ ಅನೇಕ ದಿನಗಳಲ್ಲಿ ಇವನು ಲಂಚ ಪಡೆದು ವಿಸರ್ಜನೆ ಮಾಡಿದನು. ನಾನು ಸರಕಾರದಿಂದ ಅಧಿಕೃತನಾದ ಸಿ. ಐ. ಡಿ. ಎಂದೇ ಇವನ ಹೇಳಿಕೆ. ಇತ್ತಲಾಗೆ ಇವನು ಒಂದು ಕಡೆಯಲ್ಲಿ ಒಬ್ಬನನ್ನು ಹಿಡಿದು ವಿಚಾರಿಸುತ್ತಿರುವಾಗ್ಗೆ ಪೋಲೀಸನು ಬಂದು ವಿಚಾರಿಸಲು ಸಂಪತರಾಯನು ಸಿ. ಐ. ಡಿ. ಆಗಿರದೆ, ನಿರುದ್ಯೋಗಿ ಬಂಟನೆಂದು ತಿಳಿದು ಬಂತು

ಪೇಶಾವರದ ಪ್ರಸಿದ್ಧ ವರ್ತಕರಾದ ಹಾಜಿ ಗುಲಾಂ ಹೈದರ್ ಖಾನ್ ಎಂಬವರನ್ನು ಕಾಬೂಲಿನಲ್ಲಿ ರಾಜಕೀಯ ಸಂಬಂಧವಾದ ಒಂದು ಸಂಶಯದಿಂದ ಸೆರೆಹಿಡಿದಿರುವರು

ಶ್ರೀ ದೇವದಾಸ ಗಾಂಧಿಯವರು ಡಿಲ್ಲಿಯಲ್ಲಿ ವಾಸಿಸುವುದಕ್ಕೆ ತನ್ನ ಅಡ್ಡಿಯಿಲ್ಲವೆಂದು ಚೀಫ್ ಕಮಿಶನರು ಒಪ್ಪಿಗೆ ಕೊಟ್ಟಿರುವರು, ಅವರು ತಿಂಗಳುಗಳ ಹಿಂದೆ ಕೇಳಿಕೊಂಡಿದ್ದರು.

ಕಾಬೂಲು ಮತ್ತು ಜಲಾಲಾಬಾದುಗಳೊಳಗೆ ವೃತ್ತಿಯನ್ನು ಬೆಳೆಸಿ ವ್ಯಾಪಾರ ನಡೆಸುವುದಕ್ಕಾಗಿ ಜಪಾನಿನ ಒಂದು ಪ್ರಸಿದ್ಧ ಕಂಪನಿ ಕಾಬೂಲಿಗೆ ತೆರಳಿದೆ

ಪಂಡಿತ ಜವಾಹರಲಾಲರು ತನ್ನ ಪತ್ನಿಯ ಅಸ್ವಸ್ಥ ಸಂಬಂಧವಾಗಿ ಕಲ್ಕತ್ತೆಗೆ ತೆರಳಿರುವರು.

ಕರಾಚಿಯಲ್ಲಿ ಅಪೂರ್ವ ಚಳಿಯು ಪ್ರಾರಂಭವಾಗಿ ಅನೇಕ ಪ್ರಾಣಪಕ್ಷಿಗಳು ಬಿದ್ದು ಸತ್ತವು

ನ್ಯೂಡಿಲ್ಲಿಯಲ್ಲಿ ಅಫೀಮನ್ನು ಅಡಗಿಸಿಕೊಂಡು ಹೋಗುತ್ತಿದ್ದ ಇಬ್ಬರನ್ನು ಪೋಲೀಸನೊಬ್ಬನು ತಡೆದು ವಿಚಾರಿಸುವಾಗ ಅವರಲ್ಲೊಬ್ಬನು ಪೋಲೀಸನಿಗೆ ಚೂರಿ ಹಾಕಿದನು

ಲಾಹೋರಿನ ಮೊಂಟ್‌ಗೊಮರಿ ಜಿಲ್ಲೆಯಲ್ಲಿ ಗಂಡಹೆಂಡಿರನ್ನೂ ಒಬ್ಬ ಸೇವಕಿಯನ್ನೂ ಕೊಂದು ಡಕಾಯಿತರು ಹಣದೊಡವೆ ಅಪಹಾರ ಮಾಡಿದರು.

ದಕ್ಷಿಣ ಕನ್ನಡ.

ಮಹಾತ್ಮಾ ಗಾಂಧಿಯವರು ಮಂಗಳೂರಿಗೆ ಬರುವುದಿಲ್ಲವಾಗಿ ನಿರ್ಧಾರವಾಗಿದೆ, ನಾಲ್ಕಾರು ತಿಂಗಳುಗಳ ನಂತರ ಅವರು ಬಂದರೂ ಬರಬಹುದು.

ಶ್ರೀ ವೆಂಕಟರಮಣ ಥಿಯೇಟ್ರಿಕಲ್ ಕಂಪೆನಿಯವರ ನಾಟಕವು ತಾ. ೧೮ನೇ ದಿವಸದಿಂದ ಹಿಂದೂಸ್ಥಾನ ಸಿನೆಮಾದಲ್ಲಿ ಆರಂಭವಾಗಿದೆ

ಹಿಂದೂಸ್ಥಾನ ಸಿನೇಮಾವು ಕೆಲವು ದಿನಗಳಿಂದ ಮುಚ್ಚಲ್ಪಟ್ಟಿರುತ್ತದೆ.

ಬೊಂಬಾಯಿ ಸರ್ಕಸ್ ಕಂಪೆನಿಯೊಂದು ಮಂಗಳೂರಿಗೆ ಕಳೆದ ವಾರ ಬಂದಿದ್ದು, ಸಿಂಹ, ಹುಲಿ, ಒಂಟೆ, ಕುದುರೆ ಮೊದಲಾದವುಗಳ ಆಟವೂ ಸರ್ಕಸ್ಸೂ ನಡೆಯುತ್ತಿದೆ

ಚಂದ್ರಕಲಾ ನಾಟಕ ಮಂಡಳಿಯವರ ನಾಟಕವು ತಾರೀಕು ೨೪ನೇ ದಿನದಿಂದ ಆರಂಭವಾಗುವುದೆಂದು ತಿಳಿದು ಬಂದಿದೆ.

ಸ್ಥಳೀಯ ಶ್ರೀ ಕೃಷ್ಣಸಿನೇಮಾ ಟಾಕಿ ಮಂದಿರದಲ್ಲಿ ತಾರೀಕು ೨೧—೧—೩೪ರಿಂದ ಪ್ರಭಾತ ಸಿನಿಟೋನ್ ಕಂಪೆನಿಯವರ ಅತ್ಯುಜ್ವಲ ಚಿತ್ರವಾದ "ಕುರುಕ್ಷೇತ್ರ"ವೆಂಬ ಮಾತಾಡುವ ಚಲಚಿತ್ರವು ಪ್ರದರ್ಶಿಸಲ್ಪಡುವುದು

ಕಳೆದ ವಾರದ ೧೧ನೇ ಪುಟದಲ್ಲಿ ರಾಮಚಂದ್ರನ ನೋಟೀಸು ಕೊಟ್ಟ ತಾರೀಕು ೧೦—೧—೩೪ ಆಗಬೇಕು ತಾ. ೧—೧೦—೩೪ ಅಲ್ಲ.

ಸಂಗೀತ ಶಾಸ್ತ್ರರತ್ನರಾದ ಶ್ರೀ ಕೆ ವಾಸುದೇವಾಚಾರ್ಯರು ಕಳೆದ ಶನಿವಾರ ಇಲ್ಲಿಗೆ ಬಂದಿದ್ದರು

ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯ ವೈಸ್ ಪ್ರಸಿಡೆಂಟರೂ ಸುಪ್ರಸಿದ್ಧ ರಾಷ್ಟ್ರೀಯ ಕೆಲಸಗಾರರೂ ಆದ ಪಂಡಿತ ಹೃದಯನಾಥ ಕುಂಜರುರವರು ಕಳೆದ ವಾರ ಇಲ್ಲಿಗೆ ಬಂದಿದ್ದು, ರಾಷ್ಟ್ರೀಯ ಬಾಲಿಕಾ ಪಾಠಶಾಲೆಯಲ್ಲಿ ಭಾಷಣಗಳನ್ನಿತ್ತು ಹಿಂದಿರುಗಿದರು

ಮದ್ರಾಸು ಸಂಸ್ಥಾನದ ತಾಲೂಕುಬೋರ್ಡುಗಳನ್ನೆಲ್ಲ ರದ್ದುಗೊಳಿಸಿ, ಡಿಸ್ಟ್ರಿಕ್ಟ್‌ಬೋರ್ಡು ಅವುಗಳ ಕೆಲಸಗಳನ್ನು ನಿರ್ವಹಿಸುತ್ತವೆಂದು ಗೊತ್ತಾಗಿದೆ.

ಕಲ್ಲಿಕೋಟೆಯ ಮೆಸರ್ಸ್ ಎ. ಸಿ. ರಾಜುಲು ಎಂಡ್ ಕೋ ರವರ ಒಂದು 'ಪ್ರದರ್ಶನ ಶಾಲೆ'ಯು ಹೆಡ್ ಟಪ್ಪಾಲಾಫೀಸಿನ ಬಳಿ ಕಳೆದ ಸೋಮವಾರ ತೆರೆಯಲ್ಪಟ್ಟಿತು.

ಕಂಠೀರವದ ಪರ್ಯಾಯ ಸಂಚಿಕೆಯು ಹಸ್ತಗತವಾಗಿದೆ ೪೬ ಪುಟಗಳಿದ್ದು ಸಚಿತ್ರವಾಗಿ ವಾಚನೀಯವಿದೆ ಸರ್ವಗ್ರಾಹ್ಯವಾಗಿದೆ

ಫೆಬ್ರುವರಿಯ ಪ್ರಥಮ ವಾರದಲ್ಲಿ ಇಲ್ಲಿಯ ಗವರ್ನಮೆಂಟ್ ಕೊಲೇಜಿನಲ್ಲಿ ಬಾಸ್ಕೆಟ್ ಬೋಲ್ ಸ್ಪರ್ಧೆಯು ನಡೆಯಲಿದೆ.

ಸ್ಥಳೀಯ ಮುನಿಸಿಪಾಲಿಟಿ ಕೌನ್ಸಿಲಿನ ಸಭೆಯು ಇದೇ ತಾ. ೧೫ನೇ ಸೋಮವಾರ ದಿನ ಅಪರಾಹ್ನ ಘಂಟೆ ೫—೩೦ಕ್ಕೆ ಅದರ ಆಫೀಸಿನಲ್ಲಿ ಜರಗಿತು.

ಶ್ರೀ ಗೋಕರ್ಣನಾಥ ಕ್ಷೇತ್ರದಲ್ಲಿ ಫೆಬ್ರುವರಿ ತಾ ೭ನೇ ಬುಧವಾರ ಬೆಳಿಗ್ಗೆ ಮಹಾ ಶಿವರಾತ್ರಿ ಸಂಬಂಧದ ಧ್ವಜಾರೋಹಣವಾಗಿ ತಾರೀಕು ೮, ೯, ೧೦, ೧೧ರ ವರೆಗೆ ನಿತ್ಯದಂತೆ ಪೂಜಾವಿಧಿಗಳು ಜರಗುವುವೆಂದೂ ೧೨ನೇ ರಾತ್ರಿ ಜಾಗರನೆಂದೂ ೧೩ನೇ ಮಂಗಳವಾರ ಬೆಳಿಗ್ಗೆ ಅವಭೃತ ಸ್ನಾನವೆಂದೂ ಕಾರ್ಯದರ್ಶಿಗಳಾದ ರಾವ್ ಬಹದ್ದೂರ್ ಎಸ್ ಎಸ್ ಸುವರ್ಣರವರು ತಿಳಿಸುತ್ತಾರೆ.

ಮಾಜಿ ಡಿಸ್ಟ್ರಿಕ್ಟ್ ಜಡ್ಜರಾಗಿದ್ದ ಶ್ರೀ ಬಂಟ್ವಾಳ ವೆಂಕಟರಾಯರಿಗೂ ದಕ್ಷಿಣ ಆರ್ಕಾಡಿನ ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರ್ ಡಾ। ಪಿ. ಪಿ. ಕಾಮತರವರಿಗೂ ರಾವ್ ಬಹದ್ದೂರ್ ಬಿರುದುಗಳು ಹೊಸ ವರ್ಷದ ಗೌರವಾರ್ಥವಾಗಿ ದೊರೆತುವೆಂದೂ ಕಳೆದ ಸಂಚಿಕೆಯಲ್ಲಿ ಈ ವಿಷಯವಾಗಿ ಎರಡು ತಪ್ಪುಗಳು ಬಿದ್ದಿದ್ದವೆಂದೂ ತಿಳಿಸಲಾಗಿದೆ

ಶ್ರೀ ಶಿವಭಕ್ತಿಯೋಗ ಸಂಘದಲ್ಲಿ ತಾ ೨೧—೧—೩೪ನೇ ಆದಿತ್ಯವಾರ ಬೆಳಿಗ್ಗೆ ಗಂಟೆ ೮ಕ್ಕೆ ೧೦ ವರ್ಷ ಪ್ರಾಯದ ಶ್ರೀಮತಿ ಸುನಂದಾ ಎಂಬ ಬಾಲಿಕೆಯು "ಸ್ತ್ರೀಯರ ಕರ್ತವ್ಯ"ವೆಂಬ ಸಣ್ಣ ಭಾಷಣವನ್ನೂ "ಸಾವಿತ್ರಿ ಸತ್ಯವಾನ್" ಎಂಬ ಪತಿವ್ರತಾ ಧರ್ಮೋಪದೇಶಕ ಹರಿಕೀರ್ತನೆಯನ್ನೂ ಮಧುರವಾದ ಸಂಗೀತದೊಡನೆ ಮಾಡಲಿರುವಳು. ಸರ್ವರಿಗೂ ಸುಸ್ವಾಗತವಿದೆ

೧೯೩೪ರ ಗೋಕರ್ಣ ಯಾತ್ರೆಯು ಫೆಬ್ರುವರಿ ತಾ ೧೨ಕ್ಕೆ ಬೀಳುತ್ತದೆ ೧೨ ಮತ್ತು ೧೩ನೇ ತಾರೀಕುಗಳಲ್ಲಿ ಸಮುದ್ರಸ್ನಾನ ಮತ್ತು ರಥೋತ್ಸವಗಳು ಜರಗುವುವು. ದಕ್ಷಿಣ ಮತ್ತು ಉತ್ತರ ಪ್ರಾಂತ್ಯಗಳ ಯಾತ್ರಾರ್ಥಿಗಳ ಅನುಕೂಲದ ಬಗ್ಗೆ ಡಿ. ಬೊಂಬೆ ಸ್ಟೀಮ ನೆವಿಗೇಶನ್ ಕಂಪೆನಿ ಲಿಮಿಟೆಡ್ ಮಂಗಳೂರು—ಇವರು ತದ್ರಿಯಲ್ಲಿ ಇಳಿಯುವಂತೆ ಈ ಕೆಳಗಿನ ಸ್ಟೀಮರು ಬಿಡುವ ವ್ಯವಸ್ಥೆಯನ್ನು ಮಾಡಿರುವರು ಮುಂಬಾಯಿಯಿಂದ—ಫೆಬ್ರುವರಿ ತಾ ೬ನೇ ಮಂಗಳವಾರ, ೯ನೇ ಶುಕ್ರವಾರ ಮತ್ತು ತಾ ೧೩ನೇ ಮಂಗಳವಾರ ದಿನ, ಮಂಗಳೂರಿನಿಂದ—ಫೆಬ್ರುವರಿ ತಾ ೨ನೇ ಶುಕ್ರವಾರ ಮತ್ತು ೫ನೇ ಸೋಮವಾರ ಮತ್ತು ೯ನೇ ಶುಕ್ರವಾರ ದಿನ

ಹಳೆಯಂಗಡಿ — ಇಲ್ಲಿ ಈ ಹಿಂದೆ ಕ್ಯಾಂಪ್ ಮಾಡಿಕೊಂಡಿದ್ದ ಶ್ರೀ ಶಂಕರನಾರಾಯಣ ಪ್ರಸಾದಿತ ಯಕ್ಷಗಾನ ನಾಟಕ ಸಭಾ, ಇವರು ಸುಭದ್ರಾ ಪರಿಣಯ, ಕಂಸವಧೆ, ಸತ್ಯ ಹರಿಶ್ಚಂದ್ರ ಮೊದಲಾದ ಪೌರಾಣಿಕ ನಾಟಕಗಳನ್ನು ಯಶಸ್ವಿಯಾಗಿ ಆಡಿ ತೋರಿಸಿದರು

ಬೆಳ್ತಂಗಡಿ: — ಇದೇ ಕಳೆದ ತಾ ೧೪—೧—೩೪ನೇ ದಿವಸ ಇಲ್ಲಿಯ ಡಿಪ್ಯುಟಿ ತಹಶೀಲ್ದಾರರ ಆಫೀಸಿನ ಗುಮಾಸ್ತರಾದ ರಾ। ಸದಾಶಿವರಾಯರಿಗೆ ಇಲ್ಲಿಂದ ಪುತ್ತೂರಿಗೆ ವರ್ಗವಾದ ಸಂಬಂಧ ಅವರಿಗೆ ವಿದಾಯವನ್ನೀಯುವ ಉಪಹಾರ ಕೂಟದ ಸಮಾರಂಭವು ಇಲ್ಲಿಯ ಕ್ಲಬ್ ಕಟ್ಟಡದಲ್ಲಿ ಬಹಳ ವಿಜೃಂಭಣೆಯಿಂದ ಜರಗಿತು. ಕ್ಲಬ್ಬಿನ ಮೆಂಬರರಲ್ಲಿ ಹಲವರು ಇವರ ಕಾರ್ಯದಕ್ಷತೆ, ಸೌಜನ್ಯತೆ ಇತ್ಯಾದಿಗಳ ಕುರಿತು ಗುಣಕಥನ ಮಾಡಿ ಇವರಲ್ಲಿ ತಮಗಿರುವ ಪ್ರೀತಿಯನ್ನು ತೋರ್ಪಡಿಸಿದರು

ದಕ್ಷಿಣ ಕನ್ನಡ ಜಿಲ್ಲಾ ಭೂಮಾಲೀಕರ ಸಂಘ, ಪ್ರಕಟನೆ

ಕಳೆದ ತಾ ೧೬—೧—೩೪ರಲ್ಲಿ ಮದ್ರಾಸ್ ಸರಕಾರದವರು ನಮ್ಮ ವ ಇತರ ಜಿಲ್ಲೆಗಳಲ್ಲಿ ಈ ಕೆಳಗಿನಂತೆ ಚಾಲ್ತಿ ಪಸಲಿಯಲ್ಲಿ ಧಾರಣೆ ಕಡಿಮೆಯಾದ ಕಾರಣ ಕಂದಾಯದಲ್ಲಿ ಕೆಲವು ಅಂಶ ವಸೂಲಿ ಮಾಡುವುದನ್ನು ಸಸ್ಪೆಂಡ್ ಅಥವಾ ಬಾಕಿ ಇಟ್ಟಿರುತ್ತಾರೆ. ಹಾಗೆ ಕಟ್ಟು ಆದ ಅಂಶವು ನಮ್ಮ ಜಿಲ್ಲೆಯಲ್ಲಿ ಎಪ್ರಿಲ್ ಕಿಸ್ತಿನಿಂದ ಕಳೆಯಲಾಗುವುದು.

೧೯೧೮—೧೯ರಲ್ಲಿ ವ ನಂತರ ಹೊಸ ಸೆಟ್ಲುಮೆಂಟು ಆದ ಜಿಲ್ಲೆಗಳಲ್ಲಿ ರೂಪಾಯಿ ೧ರ

(ಎ) ನಂಜ, ಬಾಗಾಯತು ವಗೈರೆ— ೨ ಆಣೆ, (ಬಿ) ಪುಂಜ ೦—೧—೦

ಇತರ ಎಲ್ಲಾ ಜಿಲ್ಲೆಗಳಲ್ಲಿ (ನಮ್ಮ ಜಿಲ್ಲೆ ಕೂಡಾ)

(ಎ) ನಂಜ ವ ಬಾಗಾಯತು—೦—೧—೬ (ಬಿ) ಪುಂಜ—೧ ಆಣೆ

ಕೋಟೆ ರಾಮಕೃಷ್ಣ ಕಾರಂತ, ಕಾರ್ಯದರ್ಶಿ

Canara Bank Ltd Mangalore

NOTICE

Is hereby given that under Section 37 of the Indian Companies Act No VII of 1913, the Register of Members of the Bank will be closed from Monday the 22nd January 1934 to Saturday the 17th Febry of Morris, days inclusive in South Kanara

ಕೆನರಾ ಬೇಂಕ ಲಿಮಿಟೆ of present and

ನೋ Sales and Service

೧೯ ೧೩ನೇ ಇಸವಿಯ ನ ed at Cantonment

ಆಕ್ಟಿನ ೩೭ನೇ ಸೆಕ್ಷನಿನ ಅನುಸಾರವಾ ngalore

೧೯೩೪ನೇ ಇಸವಿ ಜನವರಿ ತಾ ೨೨ನೇ & Co,

ಇಸವಿ ಫೆಬ್ರುವರಿ ತಾ ೧೭ ದಿನ ದ ವರೆಗೆ lers for

ಕೂಡಿ) ಮುಚ್ಚಲ್ಪಡುವುದು Madras.

By Order

Office of the Bank
Bunder Mangalore
17-1-1934

P. Survothum Nayak
General Manager

Karnataka Chemical and Pharmaceutical Works, Ltd, Udipi (South India)

ಕುಂಭಕೋಣದಲ್ಲಿಯೂ ಮಧುರೆಯಲ್ಲಿಯೂ ಮೈಸೂರಿನಲ್ಲಿಯೂ ಸುವರ್ಣ ಪದಕಗಳನ್ನು ಪಡೆದಿರುವ

ಕರ್ಣಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದಕ್ಷಿಣ ಹಿಂದೂಸ್ಥಾನ).

ನಮ್ಮಲ್ಲಿ ಟಿಂಕ್ಚರ್ಸ್ ವಗೈರೆ ಎಲ್ಲಾ ಎಲ್ಲೋಪತಿಕ್ ಔಷಧ ದ್ರವ್ಯಗಳೂ, ಆಯುರ್ವೇದಿಯ ಔಷಧಿಗಳೂ, ಟ್ಯಾಲೆಟ್ ಸಾಮಗ್ರಿಗಳೂ, ಸಾಬೂನುಗಳೂ, ಫೌಂಟನ್ ಪೆನ್ ಶಾಯಿಗಳೂ ತಯಾರಿಸಲ್ಪಡುತ್ತವೆ.

ದ್ರಾಕ್ಷಾಸವ, ಪ್ರಸೂತಿ ಸಂಜೀವನ, ಹಿಯೋಮಿಗರ್, ಸ್ನೋ,

ಕ್ಷೀರಬಲಾ, ಕಾರ್ಬೋಫ್ಲೋಜಿಸ್ಟಿನ್, ಯುಟೆರೀನಾ, ಇಂಕ್ಸ್

ಮೆನೇಜಿಂಗ್ ಡೈರೆಕ್ಟರ್—ವೆಂಕಟ್ರಾಯ ಅಚ್ಚಪ್ಪ ಬಾಳಿಗ.

ಹೆಡ್ ಆಫೀಸು.
ಉಡುಪಿ. (ದಕ್ಷಿಣ ಹಿಂದೂಸ್ಥಾನ)

ಬ್ರೇಂಚ್ ಆಫೀಸು
ದೇವಕರಣ ಮೆನ್ಶನ್ಸ್, 45 ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ ನಂ 2.

ಪಶ್ಚಿಮ ಕರಾವಳಿ ಮತ್ತು ಮೈಸೂರು ಪ್ರಾಂತ್ಯಗಳ ಪ್ರಾಮುಖ್ಯ ಏಜಂಟರು:—

ಕರ್ಣಾಟಕ ಪ್ರೊಡಕ್ಟ್ಸ್ ಡಿಸ್ಟ್ರಿಬ್ಯೂಟಿಂಗ್ ಕಂಪೆನಿ, ಮಂಗಳೂರು.

ಅನುಕ್ರಮಣಿಕೆ.

ಸ್ವದೇಶಿ [illegible]
[illegible]
[illegible]
[illegible] ,,
[illegible] ಸಂಗ್ರಹಗಳು ,,
[illegible] ೨
[illegible] ೬
ಬಿಹಾರ [illegible] ೧೧
[illegible] ೧೩
[illegible] ಬೆಳ್ಗಾಂ [illegible] ೧೪
ದೇಶದಲ್ಲಿ [illegible] ೧೯
ಪತ್ರವ್ಯವಹಾರ ೧೯
ಮೂರೆ ಮೂಲೆಗಳಿಂದ ೧೦

ಸ್ವದೇಶಾಭಿಮಾನಿ.

ತಾ. ೧೯ನೇ ಶುಕ್ರವಾರ ಜನವರಿ ೧೯೩೪.

ನಾಗರಿಕತೆಯ ಪರಿಣಾಮ

ಮನುಷ್ಯನು ಇತರ ಪ್ರಾಣಿಗಳಿಗಿಂತಲೂ ಶ್ರೇಷ್ಠನು ಎಂಬುದೇ ಮನುಷ್ಯನ ಹೆಗ್ಗಳಿಕೆಯ ವಿಷಯ. ಅವನಲ್ಲಿ ತರ್ಕ ಶಕ್ತಿಯಿದೆ; ನೂತನ ವಿಷಯಗಳಲ್ಲಿ ಚಿಂತನವಿದೆ. ಅವನು ತನ್ನ ಜೀವನದಲ್ಲಿ ನೂತನ ಭಾವಗಳನ್ನು ಆವಿರ್ಭವಿಸಬಲ್ಲನು; ತನ್ನ ವಿಚಾರ ಶಕ್ತಿಯಲ್ಲಿ ಅತ್ಯಂತ ಗಹನವಾದ ವಿಷಯಗಳನ್ನು ಸೇರಿಸಬಲ್ಲನು; ಪ್ರಕೃತಿಯನ್ನು ಶೋಧಿಸಿ, ಅದರ ರಹಸ್ಯಗಳನ್ನು ತಿಳಿಯಲು ಮಾಡಬಲ್ಲನು. ಆದುದರಿಂದ ಸರ್ವ ಪ್ರಾಣಿಗಳಿಗಿಂತಲೂ ಮನುಷ್ಯನು ಶ್ರೇಷ್ಠನೆನಿಸಿಕೊಳ್ಳುವನು:

ಅವನ ವಿಚಾರ ಶಕ್ತಿಯು ಅವನಲ್ಲಿ ನೂತನ ತತ್ವಗಳನ್ನು ಪ್ರೇರಿಸಿತು. ಒಂದಾನೊಂದು ಕಾಲದಲ್ಲಿ ಮನುಷ್ಯನು ಇತರ ಪ್ರಾಣಿಗಳಂತೆಯೇ ಪಶುಜೀವನವನ್ನು ನಡೆಸುತ್ತಿದ್ದನೆಂಬುದಕ್ಕೆ ಸಂದೇಹವಿಲ್ಲ. ಹಸಿವನ್ನು ತಣಿಸುವುದು, ಅಸ್ತಿತ್ವವನ್ನು ಕಾಯುವುದು, ಒಂದಾನೊಂದು ಸಮಯ ಇವು ಮಾತ್ರವೇ ಮನುಷ್ಯನ ಕರ್ತವ್ಯಗಳಾಗಿದ್ದುವು. ಆದರೆ, ಕ್ರಮೇಣ ಮನುಷ್ಯನು ಸುತ್ತಲಿನ ಪ್ರಕೃತಿಯನ್ನು ಪರಿಶೋಧಿಸ ತೊಡಗಿದನು. ಆಗಲೇ ಅವನ ವಿಚಾರಗಳ ಅಲೆಗಳು ಬಲವತ್ತರವಾಗಲಾರಂಭಿಸಿದುವು.

ಈ ವಿಚಾರದ ವಿಕಾಸವೇ ನಾಗರಿಕತೆಯಾಗಿ ಪರಿಣಮಿಸಿತು. ಇದು ಒಂದು ಕಡೆಯಿಂದ ಮತ ತತ್ವಗಳನ್ನು ನಿರ್ಮಿಸಿತು; ಒಂದು ಕಡೆಯಿಂದ ಸಮಾಜವನ್ನು ವ್ಯವಸ್ಥೆಗೊಳಿಸಿತು; ಒಂದು ಕಡೆಯಿಂದ ಸೌಕರ್ಯಗಳನ್ನು ಶೋಧಿಸಲಾರಂಭಿಸಿತು; ಒಂದು ಕಡೆಯಿಂದ ಯಶಸ್ಸಿಗಾಗಿ ಹೆಣಗಾಡಿತು. ಇವುಗಳ ಬಗ್ಗೆ ಮಾನವನು ನಡೆಸಿದ ಪ್ರಯತ್ನಗಳೇ ನಾಗರಿಕತೆಯಾಗಿ ರೂಪ ಹೊಂದಿದುವು.

ಈ ಮೂಲಕ ಮಾನವನು ಶ್ರೇಷ್ಠನೆನ್ನಿಸಿಕೊಂಡನು. ಇತರ ಪ್ರಾಣಿಗಳಲ್ಲಿ ಈ ತರದ ಯಾವ ಸುಧಾರಣೆಯೂ ಆದದ್ದು ಕಂಡು ಬರುವುದಿಲ್ಲ. ಹುಲಿಯು ಹಳೆಯ ಪದ್ಧತಿಯಂತೆಯೇ ಕಾಡುಗಳಲ್ಲಿದ್ದು ಬಾಯಿ ಉಗುರುಗಳಿಂದ ತನ್ನ ಜೀವನಸಾಗಿಸಿ ಗುಹೆ ಪೊದರುಗಳಲ್ಲಿ ವಾಸಿಸುತ್ತಿದೆ; ಸಿಂಹ ಶಾರ್ದೂಲಗಳ ವಂಶವೇ ನಾಮಾವಶೇಷವಾಗಿ ಬಂದಿದೆ; ದೊಡ್ಡ ದೊಡ್ಡ ಆನೆಗಳು ಮನುಷ್ಯನಿಗೆ ಸೇವಕರುಗಳು ಮಾತ್ರವಾಗಿವೆ; ಬಹಳ ಬುದ್ಧಿಶಾಲಿಗಳೆನ್ನುವ ನಾಯಿಗಳು ಕೂಡ ಕಲಿಸಿದಷ್ಟು ಬುದ್ಧಿಯನ್ನು ತೋರಿಸಿ ಯಜಮಾನನ ಬಾಗಿಲು ಕಾಯುತ್ತವೆ.

ಮನುಷ್ಯನು ಮಾತ್ರ ಕಾಡುಗಳನ್ನು ಅಳಿಸಿ ಪಟ್ಟಣಗಳನ್ನು ರಚಿಸಿದನು; ಶ್ರಮವನ್ನು ನಿವಾರಿಸಿ ಯಂತ್ರಗಳನ್ನು ರಚಿಸಿದನು; ನೆಲ-ಜಲ-ಅನಿಲ-ಅನಲ-ಖಗೋಲ ಈ ಪಂಚ ಭೂತಗಳಲ್ಲಿಯೂ ಅಧಿಕರಿಸುತ್ತಿರುವನು; ಕೆಲವು ಶತಮಾನಗಳ ಹಿಂದಿನ ಮನುಷ್ಯನ ಶಕ್ತಿಯನ್ನೂ ಈಗಿನ ಮಾನವ ಶಕ್ತಿಯನ್ನೂ ನೋಡಿದರೆ, ಮೇರೆಯಿಲ್ಲದ ಅಂತರವನ್ನು ಕಾಣಬಹುದು. ವ್ಯವಸ್ಥೆ, ವಿಚಾರ, ಜ್ಞಾನ ಇವುಗಳು ಪ್ರಚಂಡವಾಗಿ ಬೆಳೆದು ಹೋಗಿವೆ.

ಆದರೇನು! ಜೀವನದ ಉದ್ದೇಶವು ಬದಲಾಗಿದೆಯೇ! ಜೀವನದ ಸುಖಗಳು ಹೆಚ್ಚಾಗಿವೆಯೇ! ಶರೀರದ ಸ್ವಾಯತ್ತತೆ ಹೆಚ್ಚಾಗಿದೆಯೇ! ಮನುಷ್ಯನ ಅಸ್ತಿತ್ವಕ್ಕೆ ನೆಲೆಯುಂಟಾಗಿದೆಯೇ! ಮನುಷ್ಯ [illegible] ಪ್ರಯುಕ್ತ [illegible] ಗಳಿಗೆ ಮಾತ್ರ ಸಂಶಯಾದ [illegible] ದೊರಕಿಲ್ಲ. [illegible] ಕುರಿತು [illegible] ಪ್ರಯಾಣ ಮಾಡುತ್ತಲಿ ಈಗ ಮೋಟಾರು ಕಾರುಗಳಿವೆ. ಆದರೆ ಹಿಂದಿನ ನಡೆಯುವಿಕೆಯಲ್ಲಿದ್ದ ಉತ್ಸಾಹವು [illegible] ಮೋಟಾರು ಕಾರಿನ ಸವಾರಿಯಲ್ಲಿರುವುದಿಲ್ಲ. ಹಿಂದೆ ದಿನಗಟ್ಟಳೆಯಲ್ಲಿ ಮಾಡಬೇಕಾಗಿದ್ದ ಕೆಲಸಗಳನ್ನು ಈಗ ಘಂಟೆಯೊಳಗೆ ಮಾಡಬಹುದು; ಆದರೆ ಜೀವನದ ಕಾರ್ಯಕ್ಷೇತ್ರವು ದೊಡ್ಡದಾಗಿಲ್ಲ. ಈ ಮೊದಲು ಕಾಡುಗಳ ಗಿಡಮೂಲಿಕೆಗಳಲ್ಲಿ ಕಾಣಬೇಕಾಗಿದ್ದ ಔಷಧಗಳ ಬದಲಿಗೆ ಈಗ ಕಾಲೇಜಿನ ಪ್ರತಿಭಾಶಾಲಿಗಳಾದ ಡಾಕ್ಟರರು ದೊರಕುತ್ತಾರೆ; ಆದರೆ ಜೀವಮಾನವು ಬೆಳೆದಿಲ್ಲ. ಮತತತ್ವಗಳು ಹೊಸ ಹೊಸದಾಗಿ ಶೋಧಿಸಲ್ಪಡುತ್ತಿವೆ; ಆದರೆ ದೇವರನ್ನು ಯಾರೂ ಇನ್ನೂ ಕಂಡಿಲ್ಲ. ಮತ್ತೆ ಈ ನಾಗರಿಕತೆಯಿಂದೇನು!

ಮಾನವ ಸಂಖ್ಯೆಯು ಬೆಳೆಯುತ್ತಾ ಉಂಟು; ಸಂಗಡಗಳು ರಚಿಸಲ್ಪಡುತ್ತಾ ಇವೆ; ಸ್ಪರ್ಧೆಗಳು ಸೂಚಿಸಲ್ಪಡುತ್ತಾ ಇವೆ; ದ್ವೇಷಗಳು ಬೆಳೆಯುತ್ತಾ ಇವೆ. ಪ್ರಾಣಿ ವರ್ಗದಲ್ಲಿ ಸಹ ಜಾತಿಯೊಳಗೆ ಐಕ್ಯವಿರುತ್ತದೆ; ಮನುಷ್ಯನಲ್ಲಿ ಹಗೆತನವು ಹೆಚ್ಚು. ನಾಗರಿಕತೆಯೊಡನೆ ವ್ಯಯಕ್ತಿಕ ಹಿತಗಳು ಬೆಳೆಯುತ್ತಾ ಬರುತ್ತಿವೆ. ಫಲವಾಗಿ ವ್ಯಕ್ತಿ ವ್ಯಕ್ತಿಯೊಳಗೆ, ಕುಟುಂಬ ಕುಟುಂಬಗಳೊಳಗೆ, ಸಮಾಜ ಸಮಾಜಗಳೊಳಗೆ, ಜಾತಿ ಜಾತಿಗಳೊಳಗೆ, ರಾಷ್ಟ್ರ ರಾಷ್ಟ್ರಗಳೊಳಗೆ ಭೇದಗಳು, ದ್ವೇಷಗಳು ಕಲಹಗಳು ಬೆಳೆಯುತ್ತಿವೆ. ಹಿಂದಿನ ಕಲ್ಲು ಇಟ್ಟಿಗಳು ಹೋಗಿ ಇಂದಿನ ರಾಸಾಯನಿಕ ಧ್ವಂಸಾತ್ಮಕ ಉಪಕರಣಗಳಿವೆ. ಹಿಂದಿನ ರಥ ಚತುರಂಗಗಳು ಹೋಗಿ ಇಂದಿನ ನೌಕಾ ವಿಮಾನಗಳು ಉಂಟಾಗಿವೆ. ಹಿಂದೆ ಒಬ್ಬನು ಒಬ್ಬನನ್ನು ತಿವಿಯಬಲ್ಲನಾಗಿದ್ದರೆ, ಈಗ ಒಬ್ಬನು ಒಂದು ಜನಾಂಗವನ್ನೇ ನಾಶ ಮಾಡಬಲ್ಲನು.

ವಿಚಾರಿಗಳೂ ತಾರ್ಕಿಕರೂ ಈಗಿನ ದಿನಗಳಲ್ಲಿ ಹೆಚ್ಚಾಗಿದ್ದಾರೆ; ಭಾಷಣಾದಿ ಇತ್ಯಾದಿಗಳ ಮೂಲಕ ತತ್ವಗಳೂ ಜ್ಞಾನವೂ ಪ್ರಸಾರವಾಗುತ್ತಿವೆ. ಆದರೆ ಫಲವೇನು! ಮಿಥ್ಯಾಚಾರಿಗಳ ಸಂಖ್ಯೆಯು ಬೆಳೆಯುತ್ತಿದೆ. ಪೂರ್ವದಲ್ಲಿ ತತ್ವಜ್ಞಾನವಿಲ್ಲದೆ ಏನಾದರೂ ಕಿಂಚಿತ್ ದೋಷಗಳನ್ನು ಮಾಡುತ್ತಿದ್ದರಾದರೆ, ಈಗ ತತ್ವಜ್ಞಾನವಿದ್ದೇ ವಿರೋಧ ವರ್ತನೆಯನ್ನು ತೋರಿಸುತ್ತಾರೆ. ಜನಾಂಗಗಳ ಧುರೀಣರು ಶಾಂತತೆಯ ತತ್ವವನ್ನು ಪ್ರಸರಿಸುತ್ತ ಯುದ್ಧ ತಯಾರಿ ಮಾಡುತ್ತಾರೆ; ಸಮಾಜ ಮುಖಂಡರು ನಿರ್ಮಲ ವರ್ತನವನ್ನುಪದೇಶಿಸುತ್ತ ನೀಚ ಕೆಲಸಗಳಿಗೆ ಕೈಯಿಕ್ಕುತ್ತಾರೆ.

ಮನುಷ್ಯನು ವಿಚಾರವನ್ನು ಬೆಳಸಿದನು; ವಿಜ್ಞಾನವನ್ನು ರಚಿಸಿದನು; ಪ್ರಕೃತಿಯನ್ನು ಪರಿಶೋಧಿಸಿದನು; ಆಶ್ಚರ್ಯದ ವಿಷಯಗಳನ್ನು ಊಹಿಸಿದನು; ಆದರೆ ವಿಜ್ಞಾನದ ಸೂತ್ರಗಳು ತಿಳಿದಿದ್ದರೂ, ಅವುಗಳ ಅರ್ಥವು ಗೊತ್ತಿಲ್ಲ; ವಿಚಾರದ ಪ್ರವಾಹವನ್ನು ಕಂಡು ಹಿಡಿದರೂ ಅದರ ಮೂಲವನ್ನು ಕಂಡುಕೊಳ್ಳಲಾಗಲಿಲ್ಲ, ಆಕಾಶ, ನಕ್ಷತ್ರ, ವಿದ್ಯುತ್ ಚಲನ ಮುಂತಾದ ಗಹನ ವಿಷಯಗಳನ್ನು ಕಂಡುಕೊಂಡನು—ಆದರೆ ಅವುಗಳ ಕಾರಣವೇನು?—ವಿಜ್ಞಾನ ಶಾಸ್ತ್ರವು ಇಲ್ಲಿ ಮೂಕನಾಗಿರುತ್ತದೆ.

ಆದ್ದರಿಂದ ನಾಗರಿಕತೆಯು ಮನುಷ್ಯನ ಹೆಗ್ಗಳಿಕೆಯ ವಿಷಯ; ಆದರ ಮೂಲಕ ಮನುಷ್ಯನೆಲ್ಲಿ ಹೋಗುವನು!

++ + +

Stop Press.

ಇದೇ ಜನವರಿ ತಾ. ೫ನೇ ಶುಕ್ರವಾರ ದಿನ ಕುಂದಾಪುರ ತಾಲೂಕಿನ ಹೆಜ್ಮಾಡಿ ಉಳ್ಳೂರು ಗ್ರಾಮದ ೧೫ ಅನಂತ ಭಟ್ಟರ ಮಗ ಮಂಜುನಾಥ ಭಟ್ಟನೆಂಬ ಬ್ರಾಹ್ಮಣ ತರುಣನು ಮಹಮ್ಮದೀ ಮತಕ್ಕೆ ಸೇರಿದನೆಂದು ತಿಳಿದು ಬಂದಿದೆ. ಹಿಂದೂಗಳು ಎಚ್ಚರಿಯಬಾರದು!

ವೈಸರಾಯರು ಪತ್ನಿಯವರೊಡಗೂಡಿ ಬೆನಾರಿಸ್‌ಗೆ ಹೋದರು.

ಗಾಂಧೀಜಿಯವರು. ಗುರುವಾಯೂರು ದೇವಸ್ಥಾನದ ಪ್ರಮುಖರಾದ ಜಮೋರಿನರನ್ನು ಕಂಡು ಮಾತನಾಡಿದರು.

ಲಕ್ನೋವಿನಲ್ಲಿ ಎರಡು ಸೈಕಲುಗಳ ಮೇಲೆ ೬ ಚತ್ರಗಳ ಬೋರಿಯು ಓಡಿ, ಅದೂ ಸಾಕಾಗದೆ ಬಳಿಯ ಅಂಗಡಿಯ ಒಳಗೆ ನುಗ್ಗಿ ಒಟ್ಟು ೬ ಮಂದಿಗಳನ್ನು ಕೂಡಲೇ ಆಸ್ಪತ್ರೆಗೆ ಕಳುಹಿಸಿಯೇ ಬಿಟ್ಟಿತು.

ಅಮೃತಸರದ ಒಂದು ಮನೆಯಲ್ಲಿ ಪೋಲೀಸರು ಶೋಧ ನಡೆಸಿದಾಗ ೧೦೦೦ ಜನರನ್ನು ಮುಳುಗಿಸುವ ಶಕ್ತಿಯುಳ್ಳ ಬಾಂಬು ಮೊದಲಾದ ಶಸ್ತ್ರಗಳು ಒಂದು ಮೂಲೆಯಲ್ಲಿ ಸ್ವಸ್ಥವಾಗಿದ್ದುದು ಕಂಡು ಬಂತು. ಅವುಗಳ ಯಜಮಾನರನ್ನು ಕರೆದುಕೊಂಡು ಹೋಗಿರುವರು.

ವರ್ತಮಾನ ಸಂಗ್ರಹ.

[illegible] ೧೮ರಲ್ಲಿ [illegible] ಸಮಾಜದಲ್ಲಿ ಗುರುದ್ದೀನ್ ಎಂಬ ಮಹಮ್ಮದೀಯನನ್ನು ಅಲ್ಲಿಯ ಆರ್ಯ ಸಮಾಜದವರು ಶುದ್ಧಿಗೊಳಿಸಿದರು.

ನವೆಂಬರ ತಾ. ೯ರಲ್ಲಿ ಫರೂಕಾಬಾದ್ ಆರ್ಯ ಸಮಾಜದಲ್ಲಿ (೧೯ನೇ ವರ್ಷದಲ್ಲಿ ಕ್ರೈಸ್ತ ಮತಕ್ಕೆ ಸೇರಿದ್ದ) ಕಾಳೂರ್ ರಾಮಸಿಂಹ ಎಂಬವನನ್ನು ಶುದ್ಧಿಗೊಳಿಸಲಾಯಿತು.

ನವೆಂಬರ ತಾ. ೫ರಲ್ಲಿ ಮುಜಫರ್ ನಗರದ ಆರ್ಯ ಸಮಾಜದಲ್ಲಿ ಮುಸಲ್ಮಾನ್ ಸ್ತ್ರೀಯೊ ಎಂಬವಳನ್ನೂ, ತಾ. ೧೫ರಲ್ಲಿ ಮಹಮ್ಮದ್ ಉಮರ್ ಎಂಬ ಮಹಮ್ಮದೀಯನನ್ನೂ ಶುದ್ಧಿಗೊಳಿಸಲಾಯಿತು.

ಗೋಹಟಿಯಲ್ಲಿ ಒಬ್ಬ ಪೋಲೀಸನು ತಾನು ಗಾಂಧೀಜಿಯವರಿಗೆ ಸೇರುತ್ತೇನೆಂದು ಹೇಳಿ ರಜೆ ಕೇಳಿ, ರಜೆ ದೊರಕದಿರಲು, ಅಫೀಸಿನ ಯೂನಿಫಾರ್ಮ್ ಅನ್ನು ಹರಿದು ಸುಟ್ಟು ಹಾಕಲ್ಪಟ್ಟಿರುವನೆಂದು ತಿಳಿದು ಬಂದಿದೆ.

ಲಾಹೋರಿನಲ್ಲಿ ಒಬ್ಬಳು ಸ್ತ್ರೀಯು ಪತಿಯ ಕೊಲೆಗಾಗಿ ಜೈಲಿನಲ್ಲಿರಿಸಲ್ಪಟ್ಟಿದ್ದಳು. ಅವಳು ಈಗ ಜೈಲಿನಿಂದ ತಲೆತಪ್ಪಿಸಿರುವಳೆಂದೂ, ಹಣ್ಣು ಅಡಿಗಳ ಗೋಡೆಯನ್ನು ಹಾರಿ ಪರಾರಿಯಾಗಿರುವಳೆಂದೂ ತಿಳಿದು ಬಂದಿದೆ.

ಮುಸ್ತಫಾಬಾದಿನಲ್ಲಿ ೧೦೦ ಮಂದಿ ಹರಿಜನರು ಕ್ರೈಸ್ತಮತಾವಲಂಬಿಗಳಾದರು.

ಗುಜರಾಥ್ ಜ್ಞಾನಕೋಶವನ್ನು ರಚಿಸುವುದಕ್ಕಾಗಿ ಕಾಠೇವಾಡಿನ ಲಖ ಎಂಬಲ್ಲಿನ ಗೊಂಡಳದ ಠಾಕೂರ್ ಸಾಹೇಬರು ೫ ಲಕ್ಷ ರೂಪಾಯಿಗಳ ಉದಾರ ದಾನವನ್ನು ಮಾಡಿರುವರು.

ಗಾಂಧೀಜಿಯವರೆದುರಿನಲ್ಲಿ ಸನಾತನ ಪಕ್ಷದ ಇಬ್ಬರು ಜವಾನರಿಗೆ ಜಗಳವಾಗಿ ಚಚ್ಚಿಗೊಂಡು ಅವರಿಬ್ಬರನ್ನೂ, ಗಾಂಧೀಜಿಯವರ ಕಾರಿನಲ್ಲಿ ಆಸ್ಪತ್ರೆಗೊಯ್ಯಲಾಯಿತು.

ಅಲ್ವಾರ್ ಮಹಾರಾಜರು ವೈಸರಾಯರನ್ನು ಭೇಟಿ ಮಾಡಿ ತನ್ನ ಮುಚ್ಚಟೆದ ಕುರಿತು ನಿವೇದಿಸಿಕೊಳ್ಳಲಿರುವರು.

ದಾವಣಗೆರೆಯ ಹೈಸ್ಕೂಲಿನ ಹೆಡ್ ಮಾಸ್ತರರಿಗೆ ಪಾದರಕ್ಷೆಯಿಂದ ಹೊಡೆಯಲೆತ್ನಿಸಿದ ಒಬ್ಬ ಮುಸಲ್ಮಾನ ವಿದ್ಯಾರ್ಥಿಗೆ ೫ ರೂಪಾಯಿಗಳ ಜುಲುಮಾನೆಯಾಗಿದೆ.

ಇಂಗ್ಲೆಂಡಿನಿಂದ ಬಂದು ಅನೇಕ ಕ್ರಿಕೆಟ್ ಆಟಗಳಲ್ಲಿ ಜಯ ಹೊಂದಿದ ಎಂ. ಸಿ. ಸಿಯು ಬೆನಾರಿಸ್‌ನಲ್ಲಿ ವಿಜಯನಗರಂ ಟೀಮಿನೊಡನೆ ಸೋತು ಹೋಯಿತು.

ಜಪಾನಿಯರಿಗೂ ಚೀನಿಯರಿಗೂ ಆದ ಯುದ್ಧದಲ್ಲಿ ಎರಡು ಪಾರಿವಾಳಗಳು ಕಾಗದ ಪಟ್ಟಾಡೆಗಳನ್ನು ಸಮರ್ಪಕವಾಗಿ ಮಾಡಿದುದಕ್ಕೆ ಅಲ್ಲಿಯ ಸೈನ್ಯಾಧಿಕಾರಿಗಳು ಅವುಗಳಿಗೆ ಮೆಡಲುಗಳನ್ನೂ, ಸರ್ಟಿಫಿಕೇಟುಗಳನ್ನೂ ಕೊಟ್ಟು ಬಹು ಆದರದಿಂದ ಗೌರವಿಸಿದರು.

ಬಂಗಾಳದ ಬಳ್ಸಾರ್ ಎಂಬಲ್ಲಿ ಮೇಲ್ಜಾತಿಯವರ ಪೀಡೆಯನ್ನು ಸಹಿಸಲಾರದೆ ೧೦೦ ಜನ ಹರಿಜನರು ಪ್ರಮದಿಂದ ಹೊರಗೆ ನಡೆದರು.

ಮದ್ರಾಸಿನ ಎಗ್ಮೋರ್ ರೈಲ್ವೇ ಸ್ಟೇಶನಿನಲ್ಲಿ, ಹೊರಲು ಜನರಿಲ್ಲದ ಮೂಲೆಯಲ್ಲಿದ್ದ ಗೋಣಿ ಚೀಲದಿಂದ ದುರ್ವಾಸನೆ ಹೊರಡಲು, ಪರೀಕ್ಷಿಸುವಾಗ ೩೦ ವರ್ಷದ ಸ್ತ್ರೀಯ ಶವವನ್ನು ಗಂಟು ಕಟ್ಟಿದ್ದುದು ತಿಳಿದು ಬಂತು. ನ್ಯಾಯಲ್ಲಿ ಸ್ತ್ರೀಯ ಗಾಯಗಳಲ್ಲಿ ಒಬ್ಬನನ್ನು ಕೈದು ಮಾಡಿರುವರು,

ಲೂದಿಯಾನದ ವೈದ್ಯಶಾಲೆಯ ಕೊರಚಿನ ಸರ್ದಾರ್ ಕಾಂತಸಿಂಗನೆಂಬವನು ಒಬ್ಬ ರೋಗಿಯ ರಕ್ಷಣೆಗಾಗಿ ತನ್ನ ದೇಹದಿಂದ ಎರಡೈಂಟು ರಕ್ತ ಕೊಟ್ಟು ಆರೋಗ್ಯ ಕೆಟ್ಟು ಮೊನ್ನೆ ತೀರಿಕೊಂಡನು.

ಸೂರ್ಯ ಚಂದ್ರ ಶುಕ್ರ, ಶನಿ, ಬೃಹಸ್ಪತಿ ಮತ್ತು ಮಂಗಳಗಳು ಒಂದಾಗಿ ಅವುಗಳೊಡನೆ ರಾಹುವೂ ಕೂಡಿದುದರಿಂದ ಭೂಕಂಪವಾದ ದೆಂದು-ಜೋತಿಷ್ಯರ ಹೇಳಿಕೆ. ಇಂತಹ ಯೋಗದಲ್ಲಿ ಮಹಾಭಾರತ ಯುದ್ಧವಾರಂಭವಾದುದು!

ಗುಜರಾಥಿನಲ್ಲಿ ಚೆಂಗಾಲ ಜೇನು ಬೆಳೆಯು ಹಾಳಾಗಿದೆ. ಒಬ್ಬ [illegible] ತೀಪಡಿಂದಲೇ ತೀರಿಕೊಂಡನು.

ಭೂಕಂಪದಿಂದಾಗಿ ಬಹಳವಾದ ನಷ್ಟಕ್ಕೆ ಗುರಿಯಾದುದು ಬಿಹಾರ್ ಪ್ರಾಂತ್ಯವೆಂದು ಅಂದಾಜು ಮಾಡಲಾಗಿದೆ.

ಭೋಪಾಲದ ನವಾಬರು ಮೈಸೂರಿಗೆ ಫೆಬ್ರವರಿ ತಾ. ೧೫ರ [illegible] ಬರುವರು.

ಫ್ರಾನ್ಸಿನ ಕೋರ್ಟಿನಲ್ಲಿಯು ನದಿಯಲ್ಲಿರುವ ಭಯಂಕರ ಜಲಜಂತುವಿನ ಫಿಲ್ಮನ್ನು ಬಹು ಕಷ್ಟದಿಂದ ತೆಗೆದಿರುವರು. [illegible] ಬೆಟ್ಟದಲ್ಲಿ ಅನೇಕ ಕೋಣಗಳವಯಿಂದಲೂ ಅದು ೧೬ ಅಡಿ ಉದ್ದ [illegible] ಇಂಚುಗಳ ೧೬ ಮೈಲು ಓಡುತ್ತದೆಂದೂ ತಿಳಿದು ಬಂದಿದೆ.

ಮುಂಬಾಯಿಯಲ್ಲಿ ಸಟ್ಟಾ ಜೂಜುಗಾರನೊಬ್ಬನನ್ನು ಸಂಪತರಾವ್ ಗೋವಿಂದರಾವ್ ಎಂಬವನು ಗದರಿಸಿ, ತನಗೆ ಲಂಚ ಕೊಡದಿದ್ದರೆ ತಾನು ಚಾರ್ಜು ಮಾಡುವೆನೆಂದು ಹೇಳಿದನು. ಹೀಗೆಯೇ ಅನೇಕ ದಿನಗಳಲ್ಲಿ ಇವನು ಲಂಚ ಪಡೆದು ದಿನಹರಣ ಮಾಡಿದನು. ತಾನು ಸರಕಾರದಿಂದ ಅಧಿಕೃತನಾದ ಸಿ. ಐ. ಡಿ. ಎಂದೇ ಇವನ ಹೇಳಿಕೆ. ಇತ್ತಲಾಗೆ ಇವನು ಒಂದು ಕಡೆಯಲ್ಲಿ ಒಬ್ಬನನ್ನು ಹಿಡಿದು ವಿಚಾರಿಸುತ್ತಿರುವಾಗ್ಗೆ ಪೋಲೀಸನು ಬಂದು ವಿಚಾರಿಸಲು ಸಂಪತರಾಯನು ಸಿ. ಐ. ಡಿ. ಆಗಿರದೆ, ನಿರುದ್ಯೋಗಿ ಲಂಪಟನೆಂದು ತಿಳಿದು ಬಂತು.

ಪೇಶಾವರದ ಪ್ರಸಿದ್ಧ ವರ್ತಕರಾದ ಹಾಜಿ ಗುಲಾಂ ಹೈದರ್ ಖಾನ್ ಎಂಬವರನ್ನು ಕಾಬೂಲಿನಲ್ಲಿ ರಾಜಕೀಯ ಸಂಬಂಧವಾದ ಒಂದು ಸಂಶಯದಿಂದ ಸೆರೆಹಿಡಿದಿರುವರು.

ಶ್ರೀ ದೇವದಾಸ ಗಾಂಧಿಯವರು ದಿಲ್ಲಿಯಲ್ಲಿ ವಾಸಿಸುವುದಕ್ಕೆ ತನ್ನ ಅಡ್ಡಿಯಿಲ್ಲವೆಂದು ಚೀಫ್ ಕಮಿಶನರು ಒಪ್ಪಿಗೆ ಕೊಟ್ಟಿರುವರು. ಆರು ತಿಂಗಳುಗಳ ಹಿಂದೆ ಕೂಡದೆಂದಿದ್ದರು.

ಕಾಬೂಲು ಮತ್ತು ಜಪಾನುಗಳೊಳಗೆ ಮೈತ್ರಿಯನ್ನು ಬೆಳಸಿ ವ್ಯಾಪಾರ ನಡೆಸುವುದಕ್ಕಾಗಿ ಜಪಾನಿನ ಒಂದು ಪ್ರತಿನಿಧಿ ತಂಡವು ಕಾಬೂಲಿಗೆ ತೆರಳಿದೆ.

ಪಂಡಿತ ಜವಾಹರಲಾಲರು ತನ್ನ ಪತ್ನಿಯ ಅಸ್ವಸ್ಥ ಸಂಬಂಧವಾಗಿ ಕಲ್ಕತ್ತಕ್ಕೆ ತೆರಳಿರುವರು.

ಕರಾಚಿಯಲ್ಲಿ ಅಪೂರ್ವ ಚಳಿಯು ಪ್ರಾರಂಭವಾಗಿ ಅನೇಕ ಪ್ರಾಣಿಪಕ್ಷಿಗಳು ಬಿದ್ದು ಸತ್ತವು.

ನ್ಯೂಡಿಲ್ಲಿಯಲ್ಲಿ ಅಫೀಮನ್ನು ಅಡಗಿಸಿಕೊಂಡು ಹೋಗುತ್ತಿದ್ದ ಇಬ್ಬರನ್ನು ಪೋಲೀಸನೊಬ್ಬನು ತಡೆದು ವಿಚಾರಿಸಿದಾಗ ಅವರಲ್ಲೊಬ್ಬನು ಪೋಲೀಸನಿಗೆ ಚೂರಿ ಹಾಕಿದನು.

ಲಾಹೋರಿನ ಮೊಂಟ್‌ಗೊಮರಿ ಜಿಲ್ಲೆಯಲ್ಲಿ ಗಂಡಹೆಂಡಿರನ್ನೂ ಒಬ್ಬ ಸೇವಕಿಯನ್ನೂ ಕೊಂದು ದರೋಡೆಕಾರರು ಹಣದೊಡನೆ ಪರಾರಿಯಾದರು.

ದಕ್ಷಿಣ ಕನ್ನಡ.

ಮಹಾತ್ಮಾ ಗಾಂಧಿಯವರು ಮಂಗಳೂರಿಗೆ ಬರುವುದಿಲ್ಲವಾಗಿ ನಿರ್ಧಾರವಾಗಿದೆ, ನಾಲ್ಕಾರು ತಿಂಗಳುಗಳ ನಂತರ ಅವರು ಬಂದರೂ ಬರಬಹುದು.

ಶ್ರೀ ವೆಂಕಟರಮಣ ಥಿಯೇಟ್ರಿಕಲ್ ಕಂಪೆನಿಯವರ ನಾಟಕವು ತಾ. ೧೪ನೇ ದಿನದಿಂದ ಹಿಂದೂಸ್ಥಾನ ಸಿನೆಮಾದಲ್ಲಿ ಆರಂಭವಾಗಿದೆ.

ಹಿಂದೂಸ್ಥಾನ ಸಿನೇಮಾವು ಕೆಲವು ದಿನಗಳಿಂದ ಮುಚ್ಚಲ್ಪಟ್ಟಿರುತ್ತದೆ.

ಬೊಂಬಾಯಿ ಸರ್ಕಸ್ ಕಂಪೆನಿಯೊಂದು ಮಂಗಳೂರಿಗೆ ಕಳೆದ ವಾರ ಬಂದಿದ್ದು, ಸಿಂಹ, ಹುಲಿ, ಒಂಟೆ, ಕುದುರೆ ಮೊದಲಾದವುಗಳ ಆಟವೂ ಸರ್ಕಸ್ಸೂ ನಡೆಯುತ್ತಿವೆ.

ಚಂದ್ರಕಲಾ ನಾಟಕ ಮಂಡಳಿಯವರ ನಾಟಕವು ತಾರೀಖು ೨೪ನೇ ದಿನದಿಂದ ಆರಂಭವಾಗುವುದೆಂದು ತಿಳಿದು ಬಂದಿದೆ.

ಸ್ಥಳೀಕ ಶ್ರೀ ಕೃಷ್ಣಸಿನೇಮ ಟಾಕಿ ಮಂದಿರದಲ್ಲಿ ತಾರೀಖು ೨೧—೧—೩೪ರಿಂದ ಛತ್ರಪತಿ ಸಿನೆಟೋನ್ ಕಂಪೆನಿಯವರ ಅತ್ಯುಜ್ವಲ ಚಿತ್ರವಾದ "ಕುರುಕ್ಷೇತ್ರ"ವೆಂಬ ಮಾತಾಡುವ ಚಲಚಿತ್ರವು ಪ್ರದರ್ಶಿಸಲ್ಪಡುವುದು.

ಕಳೆದ ವಾರದ ೧೧ನೇ ಪುಟದಲ್ಲಿ ರಾಮುಕಂಗನಿನ ನೋಟೀಸು ಕೊಟ್ಟ ತಾರೀಖು ೧೦—೧—೩೪ ಆಗಬೇಕು. ತಾ. ೧—೧೦—೩೪ ಅಲ್ಲ.

ಸಂಗೀತ ಶಾಸ್ತ್ರರತ್ನರಾದ ಶ್ರೀ ಕೆ. ವಾಸುದೇವಾಚಾರ್ಯರು ಕಳೆದ ಶನಿವಾರ ಇಲ್ಲಿಗೆ ಬಂದಿದ್ದರು.

ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯ ವೈಸ್ ಪ್ರೆಸಿಡೆಂಟರೂ ಸುಪ್ರಸಿದ್ಧ ರಾಷ್ಟ್ರೀಯ ಕೆಲಸಗಾರರೂ ಆದ ಪಂಡಿತ ಹೃದಯನಾಥ ಕುಂಜುರುರವರು ಕಳೆದ ವಾರ ಇಲ್ಲಿಗೆ ಬಂದಿದ್ದು, ರಾಷ್ಟ್ರೀಯ ಬಾಲಿಕಾ ಪಾಠಶಾಲೆಯಲ್ಲಿ ಭಾಷಣಗಳನ್ನಿತ್ತು ಹಿಂದಿರುಗಿದರು.

ಮದ್ರಾಸು ಸಂಸ್ಥಾನದ ತಾಲೂಕುಬೋರ್ಡುಗಳನ್ನೆಲ್ಲ ರದ್ದು ಗೊಳಿಸಿ, ಡಿಸ್ಟ್ರಿಕ್ಟ್‌ಬೋರ್ಡು ಅವುಗಳ ಕೆಲಸಗಳನ್ನು ನಿರ್ವಹಿಸುವುದೆಂದು ಗೊತ್ತಾಗಿದೆ.

ಕಲ್ಲಿಕೋಟೆಯ ಮೆಸರ್ಸ್ ವಿ. ಸಿ. ರಾಜುಲು ಎಂಡ್ ಕೋರವರ ಒಂದು ಪ್ರದರ್ಶನ ಶಾಲೆಯು ಹೆಡ್ ಟಪ್ಪಾಲಾಫೀಸಿನ ಬಳಿ ಕಳೆದ ಸೋಮವಾರ ತೆರೆಯಲ್ಪಟ್ಟಿತು.

ಕಂಠೀರವದ ಪರ್ಯಾಯ ಸಂಚಿಕೆಯು ಹಸ್ತಗತವಾಗಿದೆ. ೪೮ ಪುಟಗಳಿದ್ದು ಸಚಿತ್ರವಾಗಿ ವಾಚನೀಯವಿದೆ. ಸರ್ವಶ್ಲಾಘ್ಯ ಯತ್ನ.

ಫೆಬ್ರುವರಿಯ ಪ್ರಥಮ ವಾರದಲ್ಲಿ ಇಲ್ಲಿಯ ಗವರ್ನಮೆಂಟ್ ಕೊಲೇಜಿನಲ್ಲಿ ಬಾಸ್ಕೆಟ್ ಬೋಲ್ ಸ್ಪರ್ಧೆಯು ನಡೆಯಲಿದೆ.

ಸ್ಥಳೀಕ ಮುನಿಸಿಪಾಲಿಟಿ ಕೌನ್ಸಿಲಿನ ಸಭೆಯು ಇದೇ ತಾ. ೧೫ನೇ ಸೋಮವಾರ ದಿನ ಅಪರಾಹ್ನ ಘಂಟೆ ೫—೩೦ಕ್ಕೆ ಅದರ ಆಫೀಸಿನಲ್ಲಿ ಜರಗಿತು.

ಶ್ರೀ ಗೋಕರ್ಣನಾಥ ಕ್ಷೇತ್ರದಲ್ಲಿ ಫೆಬ್ರುವರಿ ತಾ. ೭ನೇ ಬುಧವಾರ ಬೆಳಿಗ್ಗೆ ಮಹಾ ಶಿವರಾತ್ರಿ ಸಂಬಂಧದ ಧ್ವಜಾರೋಹಣವಾಗಿ, ತಾರೀಖು ೮, ೯, ೧೦, ೧೧ರ ವರೆಗೆ ನಿತ್ಯದಂತೆ ಪೂಜಾವಿಧಿಗಳು ಜರಗುವುವೆಂದೂ, ೧೨ನೇ ರಾತ್ರಿ ಜಾಗರವೆಂದೂ, ೧೩ನೇ ಮಂಗಳವಾರ ಬೆಳಿಗ್ಗೆ ಅವಭೃತ ಸ್ನಾನವೆಂದೂ ಕಾರ್ಯದರ್ಶಿಗಳಾದ ರಾವ್ ಬಹದ್ದೂರ್ ಎಸ್. ಎಸ್. ಸುವರ್ಣರವರು ತಿಳಿಸುತ್ತಾರೆ.

ಮಾಜಿ ಡಿಸ್ಟ್ರಿಕ್ಟ್ ಜಡ್ಜರಾಗಿದ್ದ ಶ್ರೀ ಬಂಟ್ವಾಳ ವೆಂಕಟರಾಯರಿಗೂ ದಕ್ಷಿಣ ಆರ್ಕಾಡಿನ ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರ್ ಡಾ| ವಿ. ಪಿ. ಕಾಮತರವರಿಗೂ ರಾವ್ ಬಹದ್ದೂರ್ ಬಿರುದುಗಳು ಹೊಸ ವರ್ಷದ ಗೌರವಾರ್ಥವಾಗಿ ದೊರೆತುವೆಂದೂ, ಕಳೆದ ಸಂಚಿಕೆಯಲ್ಲಿ ಈ ವಿಷಯದಾಗಿ ಎರಡು ತಪ್ಪುಗಳು ಬಿದ್ದಿದ್ದುವೆಂದೂ ತಿಳಿಸಲಾಗಿದೆ.

ಶ್ರೀ ಶಿವಭಕ್ತಿಯೋಗ ಸಂಘದಲ್ಲಿ ತಾ. ೨೧—೧—೩೪ನೇ ಆದಿತ್ಯವಾರ ಬೆಳಿಗ್ಗೆ ಗಂಟೆ ೮ಕ್ಕೆ ೧೦ ವರ್ಷ ಪ್ರಾಯದ ಶ್ರೀಮತಿ ಸುನಂದಾ ಎಂಬ ಬಾಲಿಕೆಯು "ಸ್ತ್ರೀಯರ ಕರ್ತವ್ಯ"ವೆಂಬ ಸಣ್ಣ ಭಾಷಣವನ್ನೂ, "ಸಾವಿತ್ರಿ ಸತ್ಯವಾನ್" ಎಂಬ ಪತಿವ್ರತಾ ಧರ್ಮೋಪದೇಶಕ ಹರಿಕೀರ್ತನೆಯನ್ನೂ ಮಧುರವಾದ ಸಂಗೀತದೊಡನೆ ಮಾಡಲಿರುವಳು. ಸರ್ವರಿಗೂ ಸುಸ್ವಾಗತವಿದೆ.

೧೯೩೪ರ ಗೋಕರ್ಣ ಯಾತ್ರೆಯು ಫೆಬ್ರುವರಿ ತಾ. ೧೨ಕ್ಕೆ ಬೀಳುತ್ತದೆ. ೧೩ ಮತ್ತು ೧೪ನೇ ತಾರೀಖುಗಳಲ್ಲಿ ಸಮುದ್ರಸ್ನಾನ ಮತ್ತು ರಥೋತ್ಸವಗಳು ಆಗುವುವು. ದಕ್ಷಿಣ ಮತ್ತು ಉತ್ತರ ಪ್ರಾಂತ್ಯಗಳ ಯಾತ್ರಾರ್ಥಿಗಳ ಅನುಕೂಲದ ಬಗ್ಗೆ ದಿ. ಬೊಂಬೆ ಸ್ಟೀಮ್ ನೆವಿಗೇಶನ್ ಕಂಪೆನಿ ಲಿಮಿಟೆಡ್ ಮಂಗಳೂರು—ಇವರು ಅದ್ರಿಯಲ್ಲಿ ಇಳಿಯುವಂತೆ ಈ ಕೆಳಗಿನ ಸ್ಟೀಮರು ಬಿಡುವ ವ್ಯವಸ್ಥೆಯನ್ನು ಮಾಡಿರುವರು. ಮುಂಬಾಯಿಯಿಂದ—ಫೆಬ್ರುವರಿ ತಾ. ೬ನೇ ಮಂಗಳವಾರ, ೯ನೇ ಶುಕ್ರವಾರ ಮತ್ತು ತಾ. ೧೩ನೇ ಮಂಗಳವಾರ ದಿನ. ಮಂಗಳೂರಿನಿಂದ—ಫೆಬ್ರುವರಿ ತಾ. ೯ನೇ ಶುಕ್ರವಾರ ಮತ್ತು ೧೨ನೇ ಸೋಮವಾರ ಮತ್ತು ೧೬ನೇ ಶುಕ್ರವಾರ ದಿನ.

ಹಳೆಯಂಗಡಿ — ಇಲ್ಲಿ ಈ ಹಿಂದೆ ಕ್ಯಾಂಪ್ ಮಾಡಿಕೊಂಡಿರುವ ಶ್ರೀ ಶಂಕರನಾರಾಯಣ ಪ್ರಸಾದಿತ ಯಕ್ಷಗಾನ ನಾಟಕ ಸಭಾ, ಇವರು ಸುಭದ್ರಾ ಪರಿಣಯ, ಕಂಸವಧೆ, ಸತ್ಯ ಹರಿಶ್ಚಂದ್ರ ಮೊದಲಾದ ಪೌರಾಣಿಕ ನಾಟಕಗಳನ್ನು ಯಶಸ್ವಿಯಾಗಿ ಆಡಿ ತೋರಿದರು.

ಬೆಳ್ತಂಗಡಿ: — ಇದೇ ಕಳೆದ ತಾ. ೧೪—೧—೩೪ನೇ ದಿವಸ ಇಲ್ಲಿಯ ಡಿಪ್ಯೂಟಿ ತಹಶೀಲ್ದಾರರ ಕಚೇರಿಯ ಗುಮಾಸ್ತರಾದ ರಾ| ಸದಾಶಿವರಾಯರಿಗೆ ಇಲ್ಲಿಂದ ಪುತ್ತೂರಿಗೆ ವರ್ಗವಾದ ಸಂಬಂಧ ಅವರಿಗೆ ವಿದಾಯವನ್ನೀಯುವ ಉಪಹಾರ ಕೂಟದ ಸಮಾರಂಭವು ಇಲ್ಲಿಯ ಕ್ಲಬ್ ಕಟ್ಟಡದಲ್ಲಿ ಬಹಳ ವಿಜೃಂಭಣೆಯಿಂದ ಜರಗಿತು. ಕ್ಲಬ್ಬಿನ ಮೆಂಬರರಲ್ಲಿ ಹಲವರು ಇವರ ಕಾರ್ಯದಕ್ಷತೆ, ಸೌಜನ್ಯತೆ ಇತ್ಯಾದಿಗಳ ಕುರಿತು ಗುಣಕಥನ ಮಾಡಿ ಇವರಲ್ಲಿ ತಮಗಿರುವ ಪ್ರೀತಿಯನ್ನು ತೋರ್ಪಡಿಸಿದರು.

ದಕ್ಷಿಣ ಕನ್ನಡ ಜಿಲ್ಲಾ ಭೂಮಾಲಿಕರ ಸಂಘ, ಪ್ರಕಟಣೆ.

ಕಳೆದ ತಾ. ೧೦—೧—೩೪ರಲ್ಲಿ ಮದ್ರಾಸ್ ಸರಕಾರದವರು ನಮ್ಮ ವ ಇತರ ಜಿಲ್ಲೆಗಳಲ್ಲಿ ಈ ಕೆಳಗಿನಂತೆ ಬಾಲ್ತಿ ಪಸಲಿಯಲ್ಲಿ ಧಾರಣೆ ಕಡಿಮೆಯಾದ ಕಾರಣ ತೀರ್ವೆಯಲ್ಲಿ ಕೆಲವು ಅಂಶ ವಸೂಲಿ ಮಾಡುವುದನ್ನು ಸಸ್ಪೆಂಡ್ ಅಥವಾ ಬಾಕಿ ಇಟ್ಟಿರುತ್ತಾರೆ. ಹಾಗೆ ಕಮ್ಮಿ ಆದ ಅಂಶವು ನಮ್ಮ ಜಿಲ್ಲೆಯಲ್ಲಿ ಎಪ್ರಿಲ್ ಕಿಸ್ತಿನಿಂದ ಕಳೆಯಲಾಗುವದು.

೧೯೧೮—೧೯ರಲ್ಲಿ ವ ನಂತರ ಹೊಸ ಸೆಟ್ಲುಮೆಂಟು ಆದ ಜಿಲ್ಲೆಗಳಲ್ಲಿ

ರೂಪಾಯಿ ೧ರ

(ಎ) ನಂಜ, ಬಾಗಾಯ್ತು ವಗೈರೆ— ೨ ಆಣೆ. (ಬಿ) ಪುಂಜ ೦—೧—೦.

ಇತರ ಎಲ್ಲಾ ಜಿಲ್ಲೆಗಳಲ್ಲಿ (ನಮ್ಮ ಜಿಲ್ಲೆ ಕೂಡಾ)

(ಎ) ನಂಜ ವ ಬಾಗಾಯ್ತು—೦—೧—೬. (ಬಿ) ಪುಂಜ—೧ ಆಣೆ.

ಕೋಟಿ ರಾಮಕೃಷ್ಣ ಕಾರಂತ, ಕಾರ್ಯದರ್ಶಿ.

Canara Bank Ltd., Mangalore.

NOTICE.

Is hereby given that under Section 37 of the Indian Companies Act No VII of 1913, the Register of Members of the Bank will be closed from Monday the 22nd Jan[illegible] 1934 to Saturday the 17th Fe[illegible] days inclusive).

ಕೆನರಾ ಬೇಂಕ್ ಲಿಮಿ|

ನೋ[illegible]

1913ನೇ ಇಸವಿಯ ನೇ[illegible] ಆಕ್ಟಿನ 37ನೇ ಸೆಕ್ಷನಿಗೆ ಅನುಗುಣವಾಗಿ 1934ನೇ ಇಸವಿ ಜನವರಿ ತಾ. 22ನೇ ಸೋ[illegible] ಇಸವಿ ಫೆಬ್ರುವರಿ ತಾ. 17 ಶನಿವಾರದ ವರೆಗೆ [illegible] ಕೂಡಿ) ಮುಚ್ಚಲ್ಪಡುವುವು.

By Order

Office of the Bank, Bunder, Mangalore 17-1-1934

P. Survothum Nayak.
General Manager.

Karnataka Chemical and Pharmaceutical Works, Ltd., Udipi. (South India)

ಕುಂಭಕೋಣದಲ್ಲಿಯೂ ಮಧುರೆಯಲ್ಲಿಯೂ ಮೈಸೂರಿನಲ್ಲಿಯೂ ಸುವರ್ಣ ಪದಕಗಳನ್ನು ಪಡೆದಿರುವ

ಕರ್ಣಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದಕ್ಷಿಣ ಹಿಂದೂಸ್ಥಾನ).

ನಮ್ಮಲ್ಲಿ ಟಿಂಕ್ಚರ್ಸ್ ವಗೈರೆ ಎಲ್ಲಾ ಎಲ್ಲೋಪತಿಕ್ ಔಷಧ ದ್ರವ್ಯಗಳೂ, ಆಯುರ್ವೇದಿಯ ಔಷಧಿಗಳೂ, ಟೋಯಿಲೆಟ್ ಸಾಮಗ್ರಿಗಳೂ, ಸಾಬೂನುಗಳೂ, ಫೌಂಟನ್ ಪೆನ್ ಶಾಯಿಗಳೂ ತಯಾರಿಸಲ್ಪಡುತ್ತವೆ.

ದ್ರಾಕ್ಷಾಸವ, ಪ್ರಸೂತಿ ಸಂಜೀವನ, ನಿಯೋವಿಗರ್, ಸ್ನೋ, ಕ್ಷೀರಬಲಾ, ಕಾರ್ಪೋಫೆಲ್ಲಿಸ್ಟಿನ್, ಯುಟೆರೀನಾ, ಇಂಕ್ಸ್

ಮೆನೇಜಿಂಗ್ ಡೈರೆಕ್ಟರ್—ವೆಂಕಟ್ರಾಯ ಅಣ್ಣಪ್ಪ ಬಾಳಿಗ.

ಹೆಡ್ ಆಫೀಸು. ಉಡುಪಿ. (ದಕ್ಷಿಣ ಹಿಂದೂಸ್ಥಾನ)

ಬ್ರೇಂಚ್ ಆಫೀಸು ದೇವಕರಣ ಮೆನ್ಶನ್ಸ್, 45 ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ ನಂ. 2.

ಪಶ್ಚಿಮ ಕರಾವಳಿ ಮತ್ತು ಮೈಸೂರು ಪ್ರಾಂತ್ಯಗಳ ಪ್ರಾಮುಖ್ಯ ಏಜಂಟರು:—

ಕರ್ಣಾಟಕ ಪ್ರೊಡಕ್ಟ್ಸ್ ಡಿಸ್ಟ್ರಿಬ್ಯೂಟಿಂಗ್ ಕಂಪೆನಿ, ಮಂಗಳೂರು.

ಮೂಲೆ ಮೂಲೆಯಿಂದ

ಮಂಗಳೂರು:—ಸ್ಪೆಷಲ್ ನೈಟ್ ಶಾಲೆಗಳಲ್ಲಿ ಕಲಿತು ಡಿಪ್ಯುಟಿ ಇನ್ಸ್‌ಪೆಕ್ಟರರಿಂದ VIIIನೆ ದರ್ಜೆ ಸರ್ಟಿಫಿಕೇಟು ಪಡೆದ ಲೋವರ ಗ್ರೇಡ್ ಟ್ರೈಂಡ್ ಉಪಾಧ್ಯಾಯರ ಸರ್ಟಿಫಿಕೇಟುಗಳು ಹಾಯರ ಗ್ರೇಡ್ ಸರ್ಟಿಫಿಕೇಟುಗಳಾಗಲಿಕ್ಕೆ ಕಳೆದ ನವಂಬರ ತಿಂಗಳಲ್ಲಿ ಡೈರೆಕ್ಟರರವರು ಮಂಗಳೂರಿಗೆ ಬಂದಾಗ ರಾ|| ಮೋಳಹಳ್ಳಿ ಶಿವರಾಯರವರ ಮುಂದಾಳುತನದಲ್ಲಿ ಒಂದು ಡೆಪ್ಯುಟೇಶನ್ ಹೋಗಿತ್ತು. ಅದಕ್ಕೆ ಯಾವ ಉತ್ತರವನ್ನು ಡೈರೆಕ್ಟರವರು ಕೊಟ್ಟರು ಎಂಬುದು ತಿಳಿಯುವುದಿಲ್ಲ. ಆದರೆ ಬಂಟವಾಳ ಸ್ಪೆಶಿಯಲ್ ನೈಟ್ ಸ್ಕೂಲಿನಿಂದ ೫ ರೂ. ಪೆನಲ್ಟಿ ಫೀಸನ್ನಾದರೂ ತೆಗೆದುಕೊಂಡು ಆ ಸರ್ಟಿಫಿಕೇಟುಗಳನ್ನು ಬದಲಾಯಿಸಿ ಉಪಾಧ್ಯಾಯರನ್ನು ರಕ್ಷಿಸಬೇಕೆಂದು ಡೈರೆಕ್ಟರವರಿಗೆ ಬರೆದುದಕ್ಕೆ ಪ್ರತ್ಯುತ್ತರವಾಗಿ ಈ ಕೆಳಗಿನ ಹುಕುಂ ಬಂದಿರುತ್ತದೆ

N. Dis. on C. 2995—E/33 Dated —12—'33 of the Director of Public Instruction Madras on the Petition regarding conversion of Teachers' Certificates

With reference to Proceedings R C No. 2021/E 33 Dated 12—12—'33 the Manager of Special Night School is informed that Lower Elementary Trained Teachers' Certificates cannot be converted into one of the Higher Elementary Grade after 4—9—'33 (the date of the Issue of G O No 1581 Law Edu) even if the teachers have succesfully undergone the Higher Literary course prior to that date—"G O No 1581/4 9 33 ಕೊಟ್ಟ ಮೇಲೆ ಲೋವರ ಎಲಿಮೆಂಟರಿ ಗ್ರೇಡಿನ ಸರ್ಟಿಫಿಕೇಟುಗಳನ್ನು ಹಾಯರ ಗ್ರೇಡಿಗೆ ಬದಲಾಯಿಸಲು ಅವರು ಆ G O ತಾರೀಕಿನ ಮೊದಲು ಹಾಯರ್ ಲಿಟರರಿ ಪರೀಕ್ಷೆ ಪಾಸಾದರೂ ಸಾಧ್ಯವಿಲ್ಲ" ಇನ್ನು ಗವರ್ನಮೆಂಟ್ ಸೆಕ್ರೆಟರಿಯವರಿಗೆ ಬರೆದುಕೊಂಡ ಮನವಿಗೆ ಯಾವ ಹುಕುಂ ಬರಲಿಕ್ಕಿದೆಯೋ ನೋಡಲಿಕ್ಕಿದೆ

ಅಡ್ಯಾರು:—ಇಲ್ಲಿನ ಶ್ರೀ ಮಹಾಲಿಂಗೇಶ್ವರ ಕೃಪಾಪೋಷಿತ ಸಂಘದ ಉಪಾಧ್ಯಕ್ಷರೂ ಶ್ರೀಮಂತ ಬಂಟ ತರುಣರೂ ಆದ ಶ್ರೀಯುತ ಅಡ್ಯಾರು ಗುತ್ತು ಲಕ್ಷ್ಮಣ ಶೇಕರರವರು ಇದೇ ಕಳೆದ ತಾರೀಕು ೧೨ನೇ ಶುಕ್ರವಾರ ದಿನ ಅಕಾಲ ಮರಣಕ್ಕೆ ತುತ್ತಾದರೆಂಬುದನ್ನು ತಿಳಿಸಲು ತುಂಬಾ ವಿಷಾದವೆನಿಸುತ್ತದೆ. ದಿವಂಗತರ ಆತ್ಮಕ್ಕೆ ಪರಮಾತ್ಮನು ಸದಾ ಶಾಂತಿಯನ್ನು ಕೊಡಲೆಂದು ಹಾರೈಸುತ್ತೇವೆ

ಅಖಿಲಭಾರತ ಆಯುರ್ವೇದ ವಿದ್ಯಾಪೀಠದ ಪರೀಕ್ಷೆಗಳು

ಭಿಷಗ್ ವಿಶಾರದ ಮತ್ತು ಆಚಾರ್ಯ ಪರೀಕ್ಷೆಗಳು ಎಂದಿನಂತೆ ಈ ವರ್ಷವೂ ಕೇಂದ್ರವಾದ ಶಿವಮೊಗ್ಗದಲ್ಲಿ ತಾ. ೨೫ನೇ ಮಾರ್ಚ ೩೪ರಿಂದ ನಡೆಯುವವು.

ದರಖಾಸ್ತುಗಳು ರುಸುಂ ಸಮೇತ ವಿದ್ಯಾಪೀಠ ಮಂತ್ರಿಗಳು—ಪೂನಾ ೨ ಇವರಿಗೆ ಫೆಬ್ರವರಿ ೨೫ರ ಒಳಗಾಗಿ ತಲಪಬೇಕು. ದರಖಾಸ್ತು ಫಾರಂಗಳನ್ನು ಪಾರ್ಥನಾರಾಯಣ ಪಂಡಿತ ಶಿವಮೊಗ್ಗ, ಇವರಿಂದ ತರಿಸಿಕೊಳ್ಳಬಹುದು

ವಿಟ್ಲ:—ಈ ಆಸುಪಾಸಿನ ವರ್ಗದಾರರ ಸಭೆಯು ಇದೇ ತಾ ೭-೧-'೩೪ರಲ್ಲಿ ಮ ರಾ ರಾ ವಿ. ರಾಜಲಕ್ಷ್ಮೀನಾಥ ಸ್ವಾಮಿಜಿಯವರ ಅಧ್ಯಕ್ಷತೆಯಲ್ಲಿ ವಿಟ್ಲ ಹಾ. ಎಲಿಮೆಂಟರಿ ಶಾಲಾ ಕಟ್ಟಡದಲ್ಲಿ ಜರಗಿತು ಸುತ್ತುಮುತ್ತಲಿನ ಗ್ರಾಮಗಳಿಂದ ಹಲವು ಜನ ಮಹನೀಯರು ಚಿತ್ತೈಸಿದ್ದರು ಈ ಕೆಳಗೆ ಕಾಣಿಸಿದ ನಿರ್ಣಯಗಳು ಸರ್ವಾನುಮತದಿಂದ ಮಂಜೂರು ಮಾಡಲ್ಪಟ್ಟವು (೧) ಪ್ರಕೃತ ದವಸಧಾನ್ಯಗಳಿಗೆ ಬೆಲೆಯು ಬಹಳ ಕಡಿಮೆಯಾಗಿರುವುದರಿಂದ ಸಗ್ಗ ರಿ ಸೆಟ್ಲಮೆಂಟನ್ನು ಜ್ಯಾರಿಗೆ ತರಕೂಡದಾಗಿ ಮಾನ್ಯ ಸರಕಾರದವರೊಡನೆ ಕೇಳಿಕೊಳ್ಳಬೇಕೆಂದು ನಿರ್ಣಯಿಸಲಾಯಿತು. (೨) ಪ್ರಕೃತ ದವಸಧಾನ್ಯಗಳ ಬೆಳೆಯಲ್ಲಿ ರೈತರಿಗೆ, ತೀರ್ವೆ ತೆರುತ್ತ ಜೀವನ ನಡೆಸುವುದು ಕಷ್ಟವಾದುದರಿಂದ ಈಗಿನ ತೀರ್ವೆಯಲ್ಲಿ ಕನಿಷ್ಠಪಕ್ಷಕ್ಕೆ ಶೇಕಡಾ ೨೫ರಂತೆಯಾದರೂ ಕಡಿಮೆಮಾಡಬೇಕಾಗಿಯೂ ಮಾನ್ಯ ಸರಕಾರದವರೊಡನೆ ಕೇಳಿಕೊಳ್ಳಬೇಕೆಂದು ನಿಶ್ಚಯಿಸಲಾಯಿತು. (೩) ಮುಂಚಿನಿಂದಲೇ ಹೆಚ್ಚು ಕಡಿಮೆಯಾಗುತ್ತಿದ್ದ, ಭೂಮಿಗಳ ಕಿಸಮ್‌ಗಳು ರಿ. ಸರ್ವೆಯಲ್ಲಿ ಸಹ ಸರಿಪಡಿಸದಿರುವುದರಿಂದ ರೈತರಿಗೆ ಹೆಚ್ಚಿನ ನಷ್ಟ ಸಂಭವಿಸುವುದರಿಂದ ಅವನ್ನು ಈಗ ಸದರಿ ಹೆಚ್ಚು ಕಡಿಮೆಯನ್ನು ಕೋರಿಕೆಯಂತೆ ಸರಿಪಡಿಸಬೇಕಾಗಿ ಮಾನ್ಯ ಸರಕಾರದವರೊಡನೆ ಕೇಳಿಕೊಳ್ಳಬೇಕೆಂದು ನಿರ್ಧರಿಸಲಾಯಿತು. (೪) ಸುರಕ್ಷಿತಪಡಿಸಿದ ಕಾಡುಗಳ ಕುರಿತು ರೈತರಿಗಿದ್ದ ರಿಯಾಯಿತಿಗಳನ್ನು ಇತ್ತೀಚೆಗೆ ಮುಸ್ತಾನ್ನಾದಿದ್ದರಿಂದ ರೈತರ ಸಾಗುವಳಿ ಮುಂತಾದ ಅನುಕೂಲತೆಗಳಿಗೆ ಹೆಚ್ಚಿನ ಭಂಗ ಬರುತ್ತಿರುವುದರಿಂದ ಮೊದಲಿದ್ದ ರಿಯಾಯಿತಿಗಳನ್ನು ಮುಂದೆಯೂ ಊರ್ಜಿತದಿಂದ ಇರಗೊಳಿಸಬೇಕಾಗಿ ಮಾನ್ಯ ಸರಕಾರದವರೊಡನೆ ಕೇಳಿಕೊಳ್ಳಬೇಕೆಂದು ನಿರ್ಣಯಿಸಲಾಯಿತು

ಶ್ರೀ. ಯಡಮೀರು ಮಠ:—ಇಲ್ಲಿ ಇದೇ ಬರುವ ತಾ. ೨೯ನೆಯ ಸೋಮವಾರ ಶ್ರೀಮದ್ಗುರುಗಳವರ ಆರಾಧನೆಯ ದಿವಸ ಧಾರ್ಮಿಕ ಮತ್ತು ವಿದ್ಯಾವಿಷಯಗಳ ಕುರಿತು ವಿದ್ವಾಂಸರುಗಳ ಭಾಷಣಗಳೂ ಮತ್ತು ಅದೇ ದಿವಸ ರಾತ್ರಿ ಶ್ರೀ. ಬಲಿಪನಾರಾಯಣ ಭಾಗವತರ ಹಾಡುಗಾರಿಕೆಯಿಂದ ಯಕ್ಷಗಾನ ಇವುಗಳೂ ನೆರವೇರಲಿರುವದರಿಂದ ಸದರಿ ಸಮಾರಂಭಕ್ಕೆ ಸರ್ವರಿಗೂ ಸುಸ್ವಾಗತವಿದೆಯೆಂದು ಶ್ರೀ ಸ್ವಾಮಿಗಳ ಅನುಜ್ಞೆಯಿಂದ ಎಡ್ವೊಕೇಟ್ ಕೆ ಬಾಲಕೃಷ್ಣರಾಯರು ತಿಳಿಸುತ್ತಾರೆ

ಉಡುಪಿ:—ಸಂಕ್ರಮಣ ಜಾತ್ರೆಯು ಆರಂಭವಾಗಿದೆ. ಕಳೆದ ಲಕ್ಷದೀಪದಷ್ಟು ಸಹ ಜನಸ್ತೋಮವಿಲ್ಲ. 'ಪರಿಶೆ' ಜನರು ಬಹಳ ಕಡಿಮೆ ಪರ್ಯಾಯ ಪಟ್ಟವನ್ನೇರುವ ಶ್ರೀ. ಕಾಣಿಯೂರು ಮಠದ ವಿದ್ಯಾ ಸಮುದ್ರ ತೀರ್ಥ ಶ್ರೀಪಾದಂಗಳವರಿಗೆ ಶ್ರೀ ಕೃಷ್ಣಸನ್ನಿಧಾನದಲ್ಲಿಯೂ ಶ್ರೀ ಕೃಷ್ಣಾಪುರ ಮಠದಲ್ಲಿಯೂ ಔತಣ ಸನ್ಮಾನಗಳಾದುವು

ಪೆರಡಾಲ:—ಇಲ್ಲಿನ ಮಹಾಜನ ಸಂಸ್ಕೃತ ಕಾಲೇಜಿನ ಪ್ರಿನ್ಸಿಪಾಲರೂ ಘನ ಸಂಸ್ಕೃತ ಪಂಡಿತರೂ ಆಗಿದ್ದ ಬ್ರಹ್ಮ ಶ್ರೀ ಮಹೋಪಾಧ್ಯಾಯ ಪು ಶಂಕರ ಶಾಸ್ತ್ರಿಗಳವರು ಇದೇ ಕಳೆದ ತಾ ೨೯ ೧೨—೩೩ನೆಯ ಸೋಮವಾರ ಅಕಾಲ ಮರಣಕ್ಕೆ ತುತ್ತಾಗಿ ಸ್ವರ್ಗಸ್ಥರಾದರೆಂಬ ವಿಷಯದಲ್ಲಿ ನಾವೆಲ್ಲರೂ ತುಂಬಾ ವಿಷಾದಿಸುತ್ತಿದ್ದೇವೆ

ಮೈಸೂರು ವಾರ್ತೆ

ಮೈಸೂರು ಮಹಾರಾಣಿ ಕಾಲೇಜಿನ 'ಅಸಿಸ್ಟೆಂಟ್ ಪ್ರೊಫೆಸರ್' ಶ್ರೀಮತಿ ಬಿ ಎ ವಾಟ್ಸ್‌ರವರನ್ನು ಬೆಂಗಳೂರು ಇಂಟರ್ ಮೀಡಿಯಲ್ ಕಾಲೇಜು ಸುಪರಿಂಟೆಂಡೆಂಟನ್ನಾಗಿ ನೇಮಿಸಿದ್ದಾರೆ

ಪಬ್ಲಿಕ್ ಅಕೌಂಟ್ ಕಮಿಟಿಗೆ ೧೯೩೩-೩೪ನೇ ವರ್ಷಕ್ಕೆ ಸರ್ಕಾರದ ಪರವಾಗಿ ಸರಕಾರದ ಅರ್ಥ ಕಾರ್ಯದರ್ಶಿಗಳನ್ನೂ, ಸಾರ್ವಜನಿಕರ ಪರವಾಗಿ ಶ್ರೀಯುತರುಗಳಾದ ಗುಂಡಪ್ಪಗೌಡ, ಜಿ ಚೆನ್ನಪ್ಪ, ಪಿ ಸುಬ್ರಮಣಿಶೆಟ್ಟಿ, ಎಚ್ ಸಿದ್ದಯ್ಯ ಇವರುಗಳನ್ನೂ ನೇಮಿಸಿದ್ದಾರೆ

ಕೃಷ್ಣರಾಜ ಸಾಗರದ ಉದ್ಯಾನವನವನ್ನು ನೋಡಲು ಹೋದವರಿಗೆ ಒಂದಾಣೆ ಸುಂಕವನ್ನು ಹಾಕಿರುವರಷ್ಟೆ, ಶಿಕ್ಷಣ ಶಾಖೆಯಿಂದ ಅಂಗೀಕೃತವಾದ ಶಾಲಾ ವಿದ್ಯಾರ್ಥಿಗಳು ಸರಿಯಾದ ರಹದಾರಿ ಪತ್ರವನ್ನು ಬರೆಸಿಕೊಂಡು ಬಂದರೆ ಅಂತಹವರಿಗೆ ಅರ್ಧಶುಲ್ಕ ಕೊಡಬಹುದೆಂದು ಆಜ್ಞೆ ಮಾಡಿದ್ದಾರೆ.

ಪೋಲೀಸ್ ಇನ್ಸ್‌ಪೆಕ್ಟರ್ ಶ್ರೀ ಎಚ್ ಶ್ರೀನಿವಾಸಯ್ಯಂಗಾರ್ಯರನ್ನು ಅಸಿಸ್ಟೆಂಟ್ ಸುಪರಿಂಟೆಂಡೆಂಟರನ್ನಾಗಿ ಮಾಡಿ ಬೆಂಗಳೂರು ಪೋಲೀಸು ಶಿಕ್ಷಣ ಶಾಲೆಗೆ ಹಾಕಿದ್ದಾರೆ

ಚಿಂತಾಮಣಿ ಮಹಾಲಕ್ಷ್ಮಮ್ಮನ ಮೊಕದ್ದಮೆಯಲ್ಲಿ ಶಿಕ್ಷಿಸಲ್ಪಟ್ಟ ಅಪರಾಧಿಗಳ ಪರವಾಗಿ ಶ್ರೀ ರಾಜರತ್ನಂರವರು ಹೈ ಕೋರ್ಟಿಗೆ ಅಪೀಲು ಹಾಕಿ ಅಪರಾಧಿಗಳನ್ನು ಜಾಮೀನು ಮೇಲೆ ಬಿಟ್ಟುಬಿಡಬೇಕೆಂದು ಹೇಳಿದರು ಇದರ ಚರ್ಚೆಯು ೧೮ನೇ ತಾರೀಕಿಗೆ ನಡೆಯುವುದು

ಬೆಂಗಳೂರಿನ ಸೆಷನ್ಸ್ ಜಡ್ಜರಾದ ಶ್ರೀ ಶ್ರೀನಿವಾಸ ರಾಘವಾಚಾರಿಯವರು ಬೌದ್ಧಮತಾವಲಂಬಿಗಳಾದರೆಂಬ ಸುದ್ದಿಯು ಸುಳ್ಳೆಂದು ಗೊತ್ತಾಗಿದೆ

ಗಾಂಧೀಜಿಯವರ ಆಗಮನದ ಪ್ರಯುಕ್ತ ಬೆಂಗಳೂರು ಖಾದಿ ವಸ್ತ್ರಾಲಯದವರು ಕಲಾಮಂದಿರದಲ್ಲಿ ಪ್ರದರ್ಶನವೊಂದನ್ನೇರ್ಪಡಿಸಿದ್ದರು ನಾನಾ ಪ್ರಾಂತ್ಯಗಳಿಂದ ಬಟ್ಟೆಬರೆಗಳು ಬಂದಿದ್ದವು ಮಹಾತ್ಮರು ಸ್ವಹಸ್ತದಿಂದ ನೈದ ಬಟ್ಟೆಯೂ ಗಾಂಧೀ ಸುದರ್ಶನ ಚಕ್ರವೂ (ಇದು ಗಂಟೆಗೆ ೧೦೦೦ ಗಜಗಳ ದಾರ ತೆಗೆಯುವುದು) ಪ್ರದರ್ಶಿಸಲ್ಪಟ್ಟಿದ್ದುವು

ಬೆಂಗಳೂರು ದಂಡಿನ ಕಲೆಕ್ಟರೂ, ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರೂ ಆದ ಎ. ಜಿ. ಎಚ್. ಕುಕ್‌ರವರು ಸನ್ನದಲ್ಲಿಯೇ ಮದರಾಸು ಸರಕಾರಕ್ಕೆ ಹಿಂದಕ್ಕೆ ತೆಗೆದುಕೊಳ್ಳಲ್ಪಡುವರು. ಅವರ ಸ್ಥಾನಕ್ಕೆ ಮಿ| ಎಲ್ ಜೆ. ಮ್ಯಾಕ್ ಐವರ್ ಎಂಬವರನ್ನು ನೇಮಕ ಮಾಡುವರೆಂದು ವರ್ತಮಾನ.

ಮೂಲ್ಕಿ:—ಪ್ರಾಂತಿಕಲಕಟ್ಟೆಯ ಡಾಕ್ಟರ್ ಶ್ರೀ ಯಸ್ ಸುಬ್ಬರಾಯರು ಇದೇ ಕಳೆದ ತಾ. ೩೦ನೇ ಶನಿವಾರ ಪೂರ್ವಾಹ್ನ ಘಂಟೆ ೧೧ಕ್ಕೆ ಸ್ಥಳೀಕ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲಾ ವಿದ್ಯಾರ್ಥಿಗಳ ತರ್ಕ ಸಂಘದ ನೇತೃತ್ವದಲ್ಲಿ "ಆರೋಗ್ಯ ರಕ್ಷಣೆಯ" ಕುರಿತಾಗಿ ಸುಮಾರು ೨ ತಾಸುಗಳ ವರೆಗೆ ಉಜ್ವಲವಾಗಿ ಭಾಷಣವನ್ನು ಕೊಟ್ಟರು.

ಹಿಂದೆ ಪ್ರಚುರಪಡಿಸಿದ್ದಂತೆ ಮಂಗಳೂರಿನ ಸೈಂಟ್ ಎಲೋಶಿಯಸ್ ಕೋಲೇಜಿನ ಸಂಸ್ಕೃತ ಪಂಡಿತರಾದ ಬ್ರಹ್ಮ ಶ್ರೀ ನಿಡ್ಲೋಡಿ ಅನಂತ ಉಪಾಧ್ಯಾಯರು ಇದೇ ಕಳೆದ ತಾರೀಕು ೨೮-೧೨-೧೯೩೩ನೇ ಗುರುವಾರ ಸಾಯಂಕಾಲ ಘಂಟೆ ೫ಕ್ಕೆ ಸ್ಥಳೀಕ ಯೂನಿಯನ್ ಕ್ಲಬ್ಬಿನಲ್ಲಿ "ವೇದಕಾಲದ ಸಂಸ್ಕೃತಿಯೂ ಆ ಕಾಲದಲ್ಲಿನ ಹರಿಜನರ ಸ್ಥಾನವೂ" ಎಂಬ ವಿಷಯದಲ್ಲಿ ಸುಮಾರು ೨ ತಾಸುಗಳ ವರೆಗೆ ಉದಾತ್ತ ವಿಚಾರಗಳನ್ನೊಳಗೊಂಡ ಭಾಷಣವನ್ನು ಕೊಟ್ಟರು.

ಸ್ಥಳೀಕ ಕೋ-ಒಪರೇಟಿವ್ ಬೇಂಕಿನ ವಾರ್ಷಿಕ ಮಹಾಸಭೆಯು ಇದೇ ಕಳೆದ ತಾ. ೭-೧-೩೪ನೇ ಆದಿತ್ಯವಾರ ಅಪರಾಹ್ನ ಸ್ಥಳೀಕ ಯೂನಿಯನ್ ಕ್ಲಬ್ಬಿನಲ್ಲಿ ಜರಗಿತು

ಇಲ್ಲಿ ಕಳೆದ ೭ ವರ್ಷಗಳಿಂದ ಎಕ್ಸೈಜ್ ಸಬ್ ಇನ್ಸ್‌ಪೆಕ್ಟರಾಗಿದ್ದ ಶ್ರೀ ಟಿ. ಗೋವಿಂದನ್ ನಾಯರರು ೩ ತಿಂಗಳ ರಜೆಯಲ್ಲಿ ಹೋಗಿರುತ್ತಾರೆ. ರಜೆ ಕಳೆದ ಮೇಲೆ ಅವರು ಇಲ್ಲಿಗೇ ಬರಲಿರುವರೇ ಎಂಬುದು ಅನುಮಾನಕರವಿದೆ. ಅಂತೂ ಅವರು ಇಲ್ಲಿದ್ದ ಸಮಯ ಸರ್ವ ಗ್ರಾಮ ಪಕ್ಷೀಯರಾಗಿದ್ದು ಜನಪ್ರೀತರಾಗಿದ್ದರು

ಹಿರಿಯಡ್ಕ:—ತಾ. ೭-೭-'೩೩ರಲ್ಲಿ ಸ್ಥಳೀಕ ತರುಣ ವೃಂದದಿಂದ 'ಮಿತ್ರಮಂಡಳಿ' ಎಂಬ ವಾಚನಾಲಯವು ಊರವ ಪರವೂರ ಸಹೃಹಸ್ತರ ಉದಾರಾಶ್ರಯದಿಂದಲೂ, ಪ್ರೋತ್ಸಾಹದಿಂದಲೂ ಜನ್ಮವೆತ್ತಿರುವುದು.

ಕಾರ್ಕಳ ತಾಲೂಕು ವರ್ಗದಾರರ ಪರಿಷತ್ತು

ಈ ಮುಂಚಿನಿಂದಲೇ ಅತ್ಯಧಿಕವಾಗಿರುವ ತೀರ್ವೆಯನ್ನು ತಗ್ಗಿಸುವರೆ ಯತ್ನಿಸುವುದೂ, ಕಂದಾಯವನ್ನು ಏರಿಸಲು ಸರಕಾರದವರು ಜ್ಯಾರಿಗೆ ತರಬೇಕೆಂದಿರುವ ರಿಸೆಟ್ಲ್‌ಮೆಂಟನ್ನು ತಡೆಯುವುದೂ, ಮತ್ತು ತಾಲೂಕಿನ ಭೂಮ್ಯಾಲಿಕರಿಗೆ ಸಂಬಂಧಪಟ್ಟ ಎಲ್ಲಾ ಹಕ್ಕುಗಳನ್ನು ಕಾಪಾಡುವುದೂ ಇವೇ ಮೊದಲಾದುವುಗಳ ವಿಷಯ ಆಲೋಚಿಸಿ ಪ್ರಯತ್ನ ಮಾಡುವರೆ ಇದೇ ತಿಂಗಳ ೨೮ನೇ ಆದಿತ್ಯವಾರ ದಿವಸ ಮಧ್ಯಾಹ್ನ ೧ ಘಂಟೆ ಸಮಯಕ್ಕೆ ಕಾರ್ಕಳ ತಾಲೂಕಿನ ರೈತರ ಯಾ ಭೂಮ್ಯಾಲಿಕರ ಪರಿಷತ್ತು ಶ್ರೀಯುತ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಕಾರ್ಕಳದಲ್ಲಿ ಬಂಟರ ಯಾನೆ ನಾಡವರ ಹೊಸ್ಟೇಲಿನಲ್ಲಿ ಜರಗುವುದು ಎಲ್ಲಾ ರೈತರೂ ಭೂಮಾಲೀಕರಾಗಿರುವ ತಮ್ಮ ತಮ್ಮ ಸ್ನೇಹಿತರನ್ನು ಕರೆದುಕೊಂಡು ಬಂದು ಪರಿಷತ್ತನ್ನು ಯಶಸ್ವೀಯನ್ನಾಗಿ ಮಾಡಬೇಕೆಂದೂ ತಾಲೂಕು ವರ್ಗದಾರರ ಸಂಘದ ಸ್ವಾಗತ ಮಂಡಳಿಯು ಜತೆ ಕಾರ್ಯದರ್ಶಿ ವಕೀಲ್ ಮಟ್ಟಿ ಸುಬ್ಬರಾವ್ ಅಧಿಕಾರಿಯವರು ಎಲ್ಲಾ ರೈತರೊಡನೆ ವಿನಂತಿ ಮಾಡಿಕೊಳ್ಳುತ್ತಾರೆ.

++ + +

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. No. 147/1933

ದೂಮಕ್ಕೆ ಸಹಾ—ವಾದಿರು ಮತ್ತು ಮುತ್ತು ಸಹಾ—ಪ್ರತಿವಾದಿರು

ಇವರೊಳಗೆ

ಕಾಸರಗೋಡು ತಾಲೂಕು ಎಣ್ಮಕಜೆ ಗ್ರಾಮದ ಸೇರಾಜೆ ಮನೆಯ ಪೊಳ್ಳಪ್ಪೆ ಹೆಂಗ್ಸಿನ ಮಗಳು—ದೂಮಕ್ಕೆ ಈಕೆ ಮಗ ದೇವಪ್ಪ ಅಕ್ಕ—ಕೂಡಾ ವಾದಿರಾಗಿ ಸದ್ರಿಯವರ ಕುಟುಂಬದ ಆಡಳ್ತೆದಾರಳು 1ನೇ ಪ್ರತಿವಾದಿ ಮತ್ತು ಕುಟುಂಬದ ಬೇರೆ ಹಿರಿ ಮೆಂಬರರು 9 ಜನ ಪ್ರತಿವಾದಿರ ಮೇಲೆ ಕುಟುಂಬದ ಸ್ಥಿರಚರ ಸೊತ್ತುಗಳಿಂದ ತಮಗೆ ಸಿಕ್ಕಬೇಕಾದ ಗತ 6 ವರ್ಷಗಳ ಅಶನಾರ್ಥ ಮತ್ತು ಇನ್ನು ಮುಂದಿನ ವರ್ಷಗಳ ಅಶನಾರ್ಥ ಕುರಿತು ದಾವೆದಾಕಲು ಮಾಡಿರುತ್ತಾರೆಂತಲೂ ಸದ್ರಿ ದಾವೆಯು ಇದೇ ತಾ. 26-1-1934ಕ್ಕೆ ತನ್ನಿಗೆ ಇಟ್ಟಿದೆ ಎಂತಲೂ ಸದ್ರಿ ವ್ಯವಹಾರಕ್ಕೆ ಆಕ್ಷೇಪವುಳ್ಳ ಸದ್ರಿ ಕುಟುಂಬದ ಯಾವ ಮೆಂಬರನು ಕಕ್ಷಿಯಲ್ಲಿ ಸೇರಿ ಉತ್ತರಿಸಿಕೊಳ್ಳತಕ್ಕದ್ದು ಎಂತಲೂ ಈ ಮೂಲಕ ನೋಟೀಸು ಕೊಡೋಣವಾಗುತ್ತದೆ.

ಕಾಸರಗೋಡು
15—1—1934

H. S. Maiya,
Vakil for Plaintiff.

+ + + +

೧೯೩೪ರಲ್ಲಿ ಅನಾಹುತವೂ ರಕ್ತಪಾತವೂ!!!

೧೯೩೪ರಲ್ಲಿ ಅನಾಹುತವೂ ರಕ್ತಪಾತವೂ!

ಇದೇ ಜನವರಿ ತಾ. ೧೬ರಲ್ಲಿ ಅಂಗಾರಕನೂ ಶನಿಯೂ ಒಟ್ಟುಗೂಡುವರು. ಸನಾತನಿಗೂ ಸುಧಾರಕರಿಗೂ ಹೋರಾಟವು ಬಹಳ ತೀಕ್ಷ್ಣವಾಗಿ ನಡೆಯುವುದು. ದೌರ್ಜನ್ಯವೂ ರಕ್ತಪಾತವೂ ಆಗುವವು. ಕಡೆಗೆ ದೊರೆತನದವರು ಮುಕ್ತಾಯಕ್ಕೆ ನಡೆದಲ್ಲಿ ಸನಾತನರ ಪಕ್ಷವಹಿಸುವರು. ಬಂಗಾಳ ರಾಜ್ಯದಲ್ಲಿ ಅರಾಜಕ ಕೃತ್ಯಗಳು ಬಹಳ ಪ್ರಬಲಿಸುವಂತಿದೆ. ಅಲಹಾಬಾದಿನ ಜಾತೀಯ ನಾಯಕರಿಗೆ ಕೆಲ ತೊಂದರೆಗಳು ಸಂಭವಿಸುವವು. ಜರ್ಮನಿ, ಪೋಲೆಂಡು, ಫ್ರಾನ್ಸು ದೇಶಗಳು ಮುಖ್ಯವಾಗಿ ಯೂರೋಪು ಖಂಡದ ದೇಶಗಳೆಲ್ಲವೂ ಯುದ್ಧದಲ್ಲಿ ಸೇರುವಂತಿದೆ. ಜರ್ಮನಿ, ಫ್ರಾನ್ಸು, ಪೋಲೆಂಡು, ರುಮೇನಿಯಾ, ಈಜಿಪ್ಟು, ಮಂಚೂರಿಯ ಉತ್ತರ ಚೀನಾದೇಶಗಳಿಗೆ ಮಹಾಯುದ್ಧವಾಗುವ ಹಾಗಿದೆ. ಈ ಜನವರಿ ೩೦ ೧೯೩೪ ಸಾಯಂಕಾಲ ೪ ಘಂಟೆಗೆ ೬ ಗ್ರಹಗಳು ಒಂದು ಕಡೆ ಸೇರುವವು. ಇದಕ್ಕೆ ಗೋಲ ಯೋಗವೆಂದು ಹೆಸರು. ಇದರಿಂದ ಪ್ರಪಂಚಕ್ಕೆ ದುಃಸ್ಥಿತಿಯುಂಟಾಗುವುದು, ರಾಜರು ವ್ಯಾಕುಲಗೊಂಡುವುದು, ಅಗ್ನಿಪರ್ವತಗಳು ಸಿಡಿಯುವುದು, ಪ್ಲೇಗು, ಕಾಲರ ಮುಂತಾದ ಅಂಟುರೋಗಗಳು ಪ್ರಬಲಿಸುವುದು ಇತ್ಯಾದಿ ಉಪದ್ರವಗಳುಂಟಾಗುವವು. ಕಾಬೂಲ್, ಬರ್ಮ, ಇಂಡ್ಯಾದಲ್ಲಿ ಪೂರ್ವ ಸಮುದ್ರ ತೀರ ಉತ್ತರ ಹಿಂದುಸ್ಥಾನಗಳಲ್ಲಿ ಭೂಕಂಪವಾಗಿ ಬಹಳ ನಷ್ಟಸಂಭವಿಸುವುದು. ಈ ಗೋಲಯೋಗದಲ್ಲಿ ಧೂಮಕೇತು ಕಾಣಿಸಿಕೊಳ್ಳುವುದು. ೧೯೧೪ರಲ್ಲಿ ಈ ಗೋಲಯೋಗವಾದಾಗ ಧೂಮಕೇತು ಕಾಣಿಸಿಕೊಂಡಿದ್ದಿತು. ಆಗ ಸಂಭವಿಸಿದ ಅನರ್ಥವು ಈಗಲೂ ಸಂಭವಿಸಬಹುದು. ೧—೩ ವರ್ಷಗಳಲ್ಲಿ ಬಹಳ ಭಯಂಕರ ಯುದ್ಧವಾಗುವ ಸಂಭವವಿದೆ ಎಂದು ಮೈಸೂರು ಸ್ಟಾರ್ ಹೇಳುತ್ತಿದೆ.

ಆರೋಗ್ಯ ವಿಚಾರ.

ಮನುಷ್ಯರಿಗೆ ಬರತಕ್ಕ ವ್ಯಾಧಿಗಳಲ್ಲಿ ಇನ್‌ಸೋಮ್ನಿಯಾ ಎಂಬುದೊಂದು. ಎಂದರೆ, ಸ್ವಲ್ಪವೂ ನಿದ್ರೆ ಬಾರದಂತೆ ಇರುವುದು. ಮನುಷ್ಯನ ದೇಹಾರೋಗ್ಯಕ್ಕೆ ಮೈಮರೆತು ಸುಖನಿದ್ರೆಯು ಬರಬೇಕಾದುದು ಅವಶ್ಯವು. ನಿದ್ರೆಯಿಂದಲೇ ದೇಹಕ್ಕೂ ಮನಸ್ಸಿಗೂ ಒಳ್ಳೇ ವಿಶ್ರಾಂತಿಯು ದೊರೆಯುವುದು. ಆದುದರಿಂದಲೇ ನಿದ್ರೆಯೆಂಬುದು "ಜೀರ್ಣವಾದ ದೇಹವನ್ನು ರಿಪೇರಿ ಮಾಡಿ, ತಿರುಗಿ ಹೊಸದಾಗಿ ಮಾಡುವುದಕ್ಕೆ ದೈವಕಲ್ಪಿತವಾದ ಒಂದು ಏರ್ಪಾಡು" ಎಂದು ಹೇಳಬಹುದು. ಒಬ್ಬನಿಗೆ ಸರಿಯಾದ ನಿದ್ರೆ ಬಾರದಿದ್ದರೆ ಅವನು ಕ್ರಮಕ್ರಮದಿಂದ ಅನೇಕ ವ್ಯಾಧಿಗಳಿಗೆ ಒಳಗಾಗುವುದು ನಿಜವೇ. ನಿದ್ರೆಯಿಲ್ಲದಿರುವುದಕ್ಕೆ ಮುಖ್ಯ ಕಾರಣಗಳಾವುವೆಂದರೆ— ೧ ಪ್ರಮಾಣಕ್ಕೆ ಮೀರಿ ಭುಜಿಸುವುದು. ೨ ದೇಹಕ್ಕೆ ತಕ್ಕಷ್ಟು ವ್ಯಾಯಾಮವಾಗಲಿ, ಕೆಲಸವಾಗಲಿ, ಇಲ್ಲದಿರುವುದು. ೩ ದೀರ್ಘಕಾಲದ ಅಥವಾ ತೀವ್ರವಾದ ವ್ಯಾಧಿ. ೪ ಕಾಫಿ, ಟೀ, ಹೊಗೆಸೊಪ್ಪು ಮುಂತಾದುವನ್ನು ಹೆಚ್ಚಾಗಿ ಸೇವಿಸುವುದು. ೫ ಗಾಳಿಯು ಧಾರಾಳವಾಗಿಲ್ಲದ ಮನೆಗಳಲ್ಲಿ ಮಲಗುವುದು. ೬ ಬಹಳ ಕೆಲಸಮಾಡುವುದು, ಅಥವಾ ಅಧಿಕವಾಗಿ ಕಾಮಭೋಗವನ್ನನುಭವಿಸುವುದು. ೭ ಮನಸ್ಸಿಗೆ ಚಿಂತೆ, ವ್ಯಾಕುಲ ಮೊದಲಾದ ಕಳವಳವು. ಈ ಕಠಿಣವಾದ ವ್ಯಾಧಿಯನ್ನು ನಿವೃತ್ತಿಮಾಡಬೇಕಾದರೆ, ಈ ಕೆಳಗೆ ಕಾಣಿಸಿರುವ ಪ್ರಕೃತಿ ಚಿಕಿತ್ಸೆಯನ್ನು ಆರಂಭದಲ್ಲಿಯೇ ಅನುಸರಿಸಬೇಕು. ೧ ಊಟವಾದ ಕೂಡಲೆ ನಿದ್ರೆ ಮಾಡಲು ಹೋಗಬಾರದು. ಊಟವಾದ ಮೇಲೆ ಮಲಗುವುದಕ್ಕೆ ಮೊದಲು ಕೊನೆ ಪಕ್ಷ ಎರಡು ಘಂಟೆಗಳ ಕಾಲವಾದರೂ ಅವಕಾಶವನ್ನು ಬಿಡಬೇಕು. ಅಲ್ಲದೆ ಭೋಜನ ಮತ್ತು ನಿದ್ರೆ, ಇವೆರಡನ್ನೂ ಯಾವಾಗಲೂ ನಿಯಮಿತ ಕಾಲದಲ್ಲಿಯೇ ನಡೆಸಬೇಕು. ೨ ರಾತ್ರಿ ಭೋಜನವಾದೊಡನೆ ಸ್ವಲ್ಪ ಹೊತ್ತು ಮೆಲ್ಲಗೆ ನಡೆಯುತ್ತಿರಬೇಕು. ಇದರಿಂದ ಒಳ್ಳೇ ನಿದ್ರೆಬರುವುದು. ನಿದ್ರೆ ಬರಲಾರದೆಂಬ ಭಾವನೆಯಿಂದ ಹೋಗಿ ಮಲಗಬಾರದು. ಆ ಭಾವನೆಯೇ ನಿದ್ರೆ ಬಾರದಂತೆ ಮಾಡುವುದುಂಟು. ೩ ಬೆಳಗ್ಗೆ ಮತ್ತು ಸಾಯಂಕಾಲಗಳಲ್ಲಿ ಲಘುವಾದ ವ್ಯಾಯಾಮಗಳನ್ನು ಮಾಡಬೇಕು, ವ್ಯಾಯಾಮವನ್ನು ಮಾಡಿದ ಸ್ವಲ್ಪ ಹೊತ್ತಿನ ಮೇಲೆ ಬಿಸಿನೀರಿನಲ್ಲಿ ಸ್ನಾನ ಮಾಡಬೇಕು. ೪ ಯಾವಾಗಲೂ ಧಾರಾಳವಾಗಿ ಗಾಳಿ ಬೀಸುವ ಕಡೆಗಳಲ್ಲಿಯೇ ಮಲಗಬೇಕು. ಶುದ್ಧವಾದ ಗಾಳಿಯೇ ನಿದ್ರೆಗೆ ಅವಶ್ಯಕವು. ೫ ಮಲಬಂಧವನ್ನು ನೀಗಿಸಬೇಕು. ಇದೂ ನಿದ್ರೆಬಾರದಂತೆ ಮಾಡುವುದು. ೬ ನಿದ್ರೆಗೆ ಹೋಗುವ ಮೊದಲು ಒಂದು ಟಂಬ್ಲರ್ ಬಿಸಿ ಹಾಲನ್ನು ಕುಡಿಯಬಹುದು. ದೇಹಕ್ಕೆ ಸೌಕರ್ಯವಾದಂತೆ ಹಾಸಿಗೆಯನ್ನು ಸಿದ್ಧಪಡಿಸಿಕೊಂಡು ಮಲಗಬೇಕು. ಹಾಸಿಗೆಯು ಬಹಳ ಮೆತ್ತಗೂ ಇರಬಾರದು. ಬಹಳ ಕಠಿಣವಾಗಿಯೂ ಇರಬಾರದು. ೭ ಮಲಗುವಾಗ ಕೈಕಾಲುಗಳನ್ನು ಸಡಿಲವಾಗಿ ಚಾಚಿದು ಮಲಗಬೇಕು. ತಲೆಯು ದೇಹಕ್ಕಿಂತಲೂ ಸ್ವಲ್ಪ ಎತ್ತರವಾಗಿರುವಂತೆ ತಲೆದಿಂಬನ್ನು ಇಟ್ಟುಕೊಂಡು ಮಲಗಬಹುದು. ೮ ನಿದ್ರೆಗೆ ಹೋಗುವಾಗ ಯಾವ ಯೋಚನೆಗಳನ್ನೂ ಮನಸ್ಸಿನಲ್ಲಿಟ್ಟುಕೊಳ್ಳದೆ ಚಿಂತೆ, ಕಳವಳ, ಕ್ರೋಧ ಮುಂತಾದ ಮನೋವಿಕಾರಗಳೊಂದಕ್ಕೂ ಎಡೆಗೊಡದೆ ಮನಶ್ಶಾಂತಿಯಿಂದಿರಬೇಕು. ೯ ದೀರ್ಘಕಾಲದ ವ್ಯಾಧಿಯುಳ್ಳವರು ಮಲಗಲು ಹೋಗುವ ಮೊದಲು ಬಿಸಿನೀರಿನಲ್ಲಿ ಕಟಿಸ್ನಾನ, ಅಥವಾ ಪಾದಸ್ನಾನವನ್ನು ಮಾಡಿ ಹೋಗಬೇಕು. ೧೦ ನಿದ್ರೆಯ ಕಾಲದಲ್ಲಿ ಸುತ್ತುಮುತ್ತಲೂ ಗದ್ದಲವಿರಬಾರದು. ನಿದ್ರೆ ಬರಬೇಕೆಂಬುದಕ್ಕಾಗಿ ಔಷಧಗಳೊಂದನ್ನೂ ಸೇವಿಸಬಾರದು. ಅದರಿಂದ ದುಷ್ಪರಿಣಾಮ ಕೆಡುಕಾಗುವುದಲ್ಲದೆ ಗುಣವಿಲ್ಲ.

ಅದರಿಂದಲೇ ಮರಣ!

ಬಹು ವೇಗವಾಗಿ ಓಡುವ ರೈಲ್ವೇ ಎಂಜಿನುಗಳನ್ನು ರಚಿಸಿದ ಚಾರ್ಲ್ಸ್ ವಾರ್ಡ್ ಎಂಬವನು ಇಂಗ್ಲೆಂಡಿನ ಸ್ಟೇಷನ್ ಎಂಬ ಊರಿನಲ್ಲಿ ರೈಲ್ವೇ ಮಾರ್ಗದ ಬಳಿ ಇದ್ದ ತನ್ನ ಬಂಗಲೆಯಲ್ಲಿ ವಾಸಿಸುತ್ತಲಿದ್ದನು. ಇವನು ನಿರ್ಮಿಸಿದ ಎಂಜಿನುಗಳು ಘಂಟೆಗೆ ೧೦೨ ಮೈಲಿನ ವೇಗದಲ್ಲಿ ಓಡುತ್ತಿದ್ದುವು. ರೈಲ್ವೇ ಇಂಜಿನುಗಳೆಂದರೆ ಇವನ ಪ್ರಾಣ. ಇವನು ಮೊನ್ನೆ ರೈಲ್ವೇ ಲೈನಿನ ಮೇಲೆ ಸಂಚರಿಸಿ ಮಾರ್ಗವನ್ನು ಪರಿಶೀಲಿಸುತ್ತಿದ್ದಾಗ, ದೂರದಲ್ಲಿ ಮಸುಕಿದ್ದ ಕಾರಣ, ದೂರದಿಂದ ವೇಗವಾಗಿ ಬಂದ ರೈಲ್ವೇ ಟ್ರೈನ್ ಒಂದನ್ನು ಕಾಣಲಾರದೆ ಧಕ್ಕೆ ಅದಿಗೆ ಬಿದ್ದು ಬಿಟ್ಟನು. ಆಸ್ಪತ್ರೆಯಲ್ಲಿ ಕಾಲವಾದನು.

ಲಂಡನ್ ನಗರದ ವಾಹನ ಸಂಚಾರ!

ಲಂಡನ್ ನಗರದಲ್ಲಿ ಜನರು ಕಾಲಿಂದ ನಡೆಯುವುದಕ್ಕಿಂತಲೂ ವಾಹನಗಳಲ್ಲಿ ಸಂಚರಿಸುವುದು ಹೆಚ್ಚು. ಅಲ್ಲಿನ ಮುಖ್ಯ ಬೀದಿಗಳಲ್ಲಿ ದಿನವಹಿ ಎಷ್ಟು ಮೋಟಾರು ವಾಹನಗಳು ಸಂಚರಿಸುತ್ತವೆಂದು ಲೆಕ್ಕ ತೆಗೆದರು. ಹೈಡ್‌ಪಾರ್ಕ್ ಎಂಬಲ್ಲಿ ಮಧ್ಯಾಹ್ನ ಘಂಟೆ ೧೨ರ ವರೆಗೆ ಘಂಟೆಗೆ ಸರಾಸರಿ ೪೧,೮೫೭ ವಾಹನಗಳು ಓಡುತ್ತವೆ. ಇದರಂತೆ ಇನ್ನೂ ೧೪ ಕಡೆಗಳಲ್ಲಿ ಲೆಕ್ಕ ತೆಗೆದಾಗ ಟ್ರಫಾಲ್ಗರ್ ಸ್ಕ್ವೈರ್‌ನಲ್ಲಿ ೩೪,೭೩೬ ಮೋಟಾರುಗಳೂ, ಮಾರ್ಬಲ್ ಆರ್ಚ್ ಎಂಬಲ್ಲಿ ೫೨,೧೯೩ ಮೋಟಾರುಗಳೂ ಪಿಕ್ಯಾಡಿಲ್ಲಿ ಎಂಬಲ್ಲಿ ೧೨,೧೬೦ ಮೋಟಾರುಗಳೂ ಚಲಿಸುತ್ತವೆಂದು ಗೊತ್ತಾಗಿದೆ.

ಭಯಂಕರ ನರ್ತನ!

ಮೆಸಚುಸೆಟ್ಸ್ ಎಂಬಲ್ಲಿ ೧೯೩೩ರ ಜೂನ್ ತಿಂಗಳಲ್ಲಿ ೩೦ ದಂಪತಿಗಳ ನರ್ತನವಾರಂಭವಾಯಿತು. ಈ ನರ್ತನವು ೧೯೩೪ರ ಜೂನ್ ತಿಂಗಳಲ್ಲಿ ಕೊನೆಗಾಣಲೇಕಾಗಿದೆ. ಇದೇ ವರ್ಷ ನರ್ತನ ಮಾಡಿ ಕೊನೆಯ ವರೆಗೆ ನಿಲ್ಲುವವರಿಗೆ ಅಮೋಘವಾದ ಬಹುಮಾನಗಳನ್ನಿಟ್ಟಿರುವರು. ಜನವರಿಯು ದಾಟುವ ಒಳಗೆ ೨೦ ಜೋಡಿಗಳು ಬಿದ್ದು ಹೋದುವು. ಇನ್ನು ೧೦ ಜೋಡಿಗಳು ದಿನೇ ದಿನೇ ನರ್ತನ ಮಾಡುತ್ತಾ ಜೂನ್ ತಿಂಗಳನ್ನು ದಾಟುವರೋ ಇಲ್ಲವೋ ತಿಳಿಯದಾಗಿದೆ.

ವಿಚಿತ್ರ ರೀತಿಯ ನಡೆಗಳು

ರಷ್ಯದಲ್ಲಿ ಒಬ್ಬನು ಅಂಬೆಗಾಲು ಹಾಕುತ್ತ ಜಗತ್ತಿನ ಸಂಚಾರಕ್ಕೆ ಹೊರಟಿರುವನು. ಅವನ ಈ ರೀತಿಯ ನಡೆಯಿಂದಾಗಿ ಇವನು ವಿಖ್ಯಾತಿಯನ್ನು ಹೊಂದಿರುತ್ತಾನೆ. ಇವನು ಈ ನಡೆಯಿಂದಾಗಿ ವಿಜಯಶಾಲಿಯಾಗುವುದು ದೈವಾಯತ್ತ ವಿಷಯವೆಂದೇ ಪ್ರತಿಯೊಬ್ಬನ ಹೇಳಿಕೆ. ಸ್ಕಾಟ್‌ಲೆಂಡಿನಲ್ಲಿ ಒಬ್ಬನು ತನ್ನ ಹೆಂಡತಿಯನ್ನು ಒಂದು ಚಕ್ರಕ್ಕೆ ಸಿಕ್ಕಿಸಿ ಆ ಚಕ್ರವನ್ನು ಮಾರ್ಗದಲ್ಲಿ ಹೊರಳಾಡಿಸುತ್ತಾ ತಾನು ಲೋಕಸಂಚಾರಕ್ಕೆ ತೆರಳಿರುವನು. ಅವನ ಪತ್ನಿಯು ಶ್ರಮ ಸಹನಾಶೀಲತೆಯನ್ನು ಕಂಡು ಬೆರಗಾಗಿರುವರು. ಓಕ್ಲಹೋಮದಿಂದ ಡಾ॥ ಎಚ್ ಕಾಲಿನ್ಸ್ ಎಂಬವನು ಕೈಯಲ್ಲಿ ಚೀಲ್ಪಾಟ್ಟಿದ ಭೂಪ್ರದಕ್ಷಿಣೆ ಮಾಡಬೇಕೆಂದು ಹೊರಟು ಈಗಾಗಲೇ ೨೦,೦೦೦ ಮೈಲುಗಳನ್ನು ದಾಟಿದನು. ಇವನು ಸಾವಧಾನವಾಗಿ ನಡೆಯುತ್ತಾ, ಕೆಲವು ದೊರೆಯುವಲ್ಲಿ ಕೆಲವು ದಿನ ತಂಗಿ ಕೆಲಸ ಮಾಡಿ ಹಣ ಕೇಳುರಿಸುತ್ತಾ ಮಾರ್ಗ ಕ್ರಮಣ ಮಾಡುತ್ತಿರುವನು. ಡೋವರ್‌ನಲ್ಲಿ ಇಬ್ಬರು ತರುಣರು ೮ ಶಿಲಿಂಗುಗಳೊಂದು ಸಣ್ಣ ಕಾರನ್ನು ಪಡೆದು ತಮ್ಮ ಕಾರಿನ ಚಿತ್ರವನ್ನು ವಿಕ್ರಯಿಸಿ ಹಣ ಕೂಡಿಸುತ್ತಾ ಲೋಕಯಾತ್ರೆಗೆ ಹೊರಟಿರುವರು. ಲಂಡನಿನಿಂದ ಒಬ್ಬ ಮಧ್ಯವಯಸ್ಕನು ಹಿಂದೆ ಹೆಜ್ಜೆಯಿಡುತ್ತಾ ನಡೆದು ಭೂಸಂಚಾರಕ್ಕೆ ತೊಡಗಿರುವನು.

ಮನುಷ್ಯರಿಗೆ ಪರಮ ಶತ್ರುಗಳಾರು?

ಕಾಡಿನಲ್ಲಿರುವ ಹುಲಿಕರಡಿಗಳಲ್ಲ! ಕ್ರಿಮಿಕೀಟಗಳೂ ಅಲ್ಲ' ವಿಷ ಸರ್ಪಗಳೂ ಅಲ್ಲ. ಕಣ್ಣಿಗೆ ಕಾಣದ ಸೂಕ್ಷ್ಮ ಕ್ರಿಮಿಗಳೇ ಮಾನವ ವರ್ಗದ ಪರಮ ವೈರಿಗಳು. ಆ ಸೂಕ್ಷ್ಮ ಕ್ರಿಮಿಗಳಾವುವು, ರಕ್ತವನ್ನು ಕೆಡಿಸತಕ್ಕ ಕೆಲವು ಜಾತಿಯ ಕ್ರಿಮಿಗಳು. ಕಾಲಾಧೀನರಾದ ಸರ್ ಫ್ರೆಡರಿಕ್ ಅಂಡ್ರೂಸ್ ಎಂಬವರು ಅವು 'ಹೆಮೊಲಿಟಿಕ್ ಸ್ಟ್ರೆಪ್ಟೊಕಾಕ್ಕಿ" ಎಂಬ ವರ್ಗಕ್ಕೆ ಸೇರಿದುವೆಂದು ಹೇಳಿರುವರು. ಈ ಕ್ರಿಮಿಗಳು ನೂರಿಗೆ ಮನೆಗಳನ್ನು ಪ್ರವೇಶಿಸಿ, ಹಾಗೆ ಸಾಲಾಗಿ ಸೇರಿಕೊಂಡು, ರಕ್ತದಲ್ಲಿರುವ ಕೆಂಪು ಕಣಗಳನ್ನೆಲ್ಲ ಕರಗಿಸಿ, ಅದರಿಂದ ದೇಹಕ್ಕೆ ಬೇಕಾದ ಆಮ್ಲಜನಕ ವಾಯುವನ್ನು ಒದಗಿಸದಂತೆ ಮಾಡುವುವು. ಅವುಗಳಲ್ಲಿ ಹಲವು ಬಗೆಯುಂಟು, 'ಸ್ಕಾರ್ಲೆಟ್ ಜ್ವರ, ನ್ಯುಮೋನಿಯಾ, ನಾನಾ ತರದ ಹೃದಯ ರೋಗಗಳೂ, ಬಾಣಂತಿಯರಿಗೆ ಉಂಟಾಗುವ ವ್ಯಾಧಿಗಳು, ವಿಷವ್ರಣಗಳು, ಇವೆಲ್ಲ ಆ ಕ್ರಿಮಿಗಳಿಂದಲೇ ಉಂಟಾಗುವುವು. ರೋಗಗಳು ಗುಣವಾದ ಮೇಲೆಯೂ ಇವು ದುರ್ಬಲವಾದ ದೇಹದಲ್ಲಿ ಪ್ರವೇಶಿಸಿ ಆ ರೋಗವು ಮರುಕೊಳಿಸುವ ಹಾಗೆ ಮಾಡುವುವು. ಅಲ್ಲದೆ ಈ ಕ್ರಿಮಿಗಳು ಅಯಾ ಸನ್ನಿವೇಶಕ್ಕೂ, ಆಹಾರ ಗುಣಕ್ಕೂ ತಕ್ಕಂತೆ ತಮ್ಮ ಆಕೃತಿಗಳನ್ನೂ ಗುಣವನ್ನೂ ಮಾರ್ಪಡಿಸಿಕೊಳ್ಳಬಲ್ಲವಾದುದರಿಂದ ಇವುಗಳ ನಿಜಸ್ಥಿತಿಯನ್ನು ಕಂಡು ಹಿಡಿಯುವುದು ಎಂತಹ ನಿಪುಣರಿಗೂ ಕಷ್ಟವಾಗುವುದು,

ಮಹಾಪರಾಧ

ಹಿಲಿ ಎಂಬಲ್ಲಿ ಸಬ್ ಇನ್ಸ್‌ಪೆಕ್ಟರರೊಬ್ಬರು ಸಿಗರೇಟು ಸೇದುತ್ತಿದ್ದಾಗ ಮೋಹನ ಗೋಸ್ವಾಮಿ ಎಂಬ ಸ್ವದೇಶಿ ಭಕ್ತನೊಬ್ಬನು 'ಆ ಸಿಗರೇಟು ಪರದೇಶದದ್ದು, ಅದನ್ನು ಬಿಟ್ಟುಬಿಡಿ—ಬಿಡಬಿಡಿ' ಎಂದನು. ಸಬ್ ಇನ್ಸ್‌ಪೆಕ್ಟರರಿಗೆ ಕೋಪವಾಗಿ ಅವರು ದಾವೆ ಹೂಡಿದರು. ಗೋಸ್ವಾಮಿಗೆ ೧೮ ತಿಂಗಳ ಕಠಿಣ ಶಿಕ್ಷೆಯು ವಿಧಿಸಲ್ಪಟ್ಟಿತು. ಅದರ ಮೇಲೆ ೧೫೦ ರೂಪಾಯಿಗಳ ದಂಡವೂ ಆಯಿತು. ಗೋಸ್ವಾಮಿಯು ಈಗ ಹೈಕೋರ್ಟಿಗೆ ಅಪೀಲು ಮಾಡಿರುವನು.

ಪ್ರಕಟಣೆ.

ಕಾರ್ಕಳ, ತಾರೀಖು 16—1—1934

ಸುಬ್ಬಣ್ಣ—ಅರ್ಜಿದಾರ.

ಕಾರ್ಕಳ ತಾಲೂಕು ಮಿಜಾರು ಮಾಗಣೆ, ಬಡಗು ಮಿಜಾರು ಗ್ರಾಮದಲ್ಲಿ ವಾಸವಾಗಿರುತ್ತಿದ್ದು ಹಾಲಿಮೃತನಾಗಿರುವ ವೀರಯ್ಯ ಯಾನೆ ಕೊರಗಪ್ಪನಿಗೆ ಬರಬೇಕಾದ ಸಾಲಗಳ ವಸೂಲು ಬಗ್ಗೆ ತನಗೆ ವಾರಿಸ ಸರ್ಟಿಫಿಕೇಟು ಕೊಡಬೇಕಾಗಿ ಕೇಳಿ ಮಿತಾಕ್ಷರ ಹಿಂದೂ ಲಾ ಆಚರಣೆಯ ಅವನ ಮಗ, ಮೇಲೆ ಹೆಸರು ಕಾಣಿಸಿರುವ ಅರ್ಜಿದಾರನು ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ O P No 5/1934ನಗೆ ದಾಖಲು ಮಾಡಿರುವ ಅರ್ಜಿಯು ತಾ 20—2—1934ಕ್ಕೆ ಮಂಗಳವಾರ ದಿನ ಬೆಳಗ್ಗೆ 11 ಘಂಟೆಗೆ ತನಿಖೆಗೆ ಇಡಲ್ಪಟ್ಟಿರುತ್ತದೆ ಎಂತಲೂ ಸದ್ರಿ ಅರ್ಜಿದಾರನ ಅರ್ಜಿ ಪ್ರಕಾರ ವಾರಿಸ ಸರ್ಟಿಫಿಕೇಟು ಯಾಕೆ ಕೊಡಕೂಡದು ಎಂಬ ಬಗ್ಗೆ ಸಬಬು ತೋರಿಸಲಿಕ್ಕೆ ಅಪೇಕ್ಷೆ ಉಳ್ಳವರು ತಾ 20—2—1934ನೇ ದಿನ ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿಗೆ ಮೇಲೆ ಹೇಳಿದ ಹೊತ್ತಿನಲ್ಲಿ ಸ್ವತಹಾ ಯಾವ ವಕೀಲರ ಮುಖಾಂತ್ರ ಹಾಜರಾಗಿ ತಮ್ಮ ಆಕ್ಷೇಪಗಳನ್ನು ಹೇಳಿಕೊಳ್ಳಬಹುದು. ಸಂಬಂಧಪಟ್ಟ ಸರ್ವರೂ ಇದನ್ನು ತಿಳಿದಿರಬೇಕು.

ಕೋರ್ಟಿನವರ ಅಪ್ಪಣೆ ಪ್ರಕಾರ,

ಇಡ್ಯ ವಾಸುದೇವಯ್ಯ, ಬಿ. ಎ, ಬಿ ಎಲ್,

ಅರ್ಜಿದಾರನ ಕಡೆ ವಕೀಲ

RAJULU & Co.,

Are pleased to announce that in view of the increasing popularity of Morris, Dodge and Crysler Cars in South Kanara and for the convenience of present and prospective clients, a Sales and Service Station has been opened at Cantonment Road Maidan View Mangalore

RAJULU & Co.,
Authorized District Dealers for
West Coast for Addison & Co Ltd., Madras.

ಮೋರಿಸ್, ಡೋಜ್ ಮತ್ತು ಕ್ರೈಸ್ಲರ್—ಈ ಕಾರುಗಳ ಮೇಲಿನ ಜನತೆಯ ಅಭಿಮಾನವು ದಿನೇ ದಿನೇ ಹೆಚ್ಚುತ್ತಿರುವುದರಿಂದಲೂ, ಈಗಿನ ಮತ್ತು ಮುಂದಿನ ಗಿರಾಕಿಗಳಿಗೆ ಸೌಕರ್ಯವನ್ನು ಒದಗಿಸಿಕೊಡಬೇಕೆಂಬುದರಿಂದಲೂ ಮಂಗಳೂರಿನ ಮೈದಾನು ಬಳಿಯ ಕಂಟೋನ್ಮೆಂಟ್ ರಸ್ತೆಯಲ್ಲಿ, ಮಾರಾಟದ ಮತ್ತು 'ಸರ್ವೀಸಿನ ಒಂದು ಹೊಸದಾದ 'ಸ್ಟೇಶನನ್ನು' ಈಗ ತೆರೆದಿದೆ ಎಂದು ಪ್ರಕಟಿಸಲು ಸಂತೋಷಪಡುತ್ತೇವೆ.

ರಾಜುಲು ಅಂಡ್ ಕೋ.

ಎಡಿಸನ್ ಮತ್ತು ಕಂಪೆನಿ, ಮದ್ರಾಸ್ (ಇವರ ಪರವಾಗಿ ಪಶ್ಚಿಮ ಕರಾವಳಿಗೆಲ್ಲ ಅಧಿಕಾರ ಹೊಂದಿದ ಜಿಲ್ಲಾ ಏಜಂಟುಗಾರರು)

23/13

ಇದಿಗೋ! 12 ಸೆಂಟ್ ಬಾಟ್ಲುಗಳು!

ಬೆಸ್ಟ್ ಫೌಂಟಿನ್ ಪೇನಾ—15 ಅಣೆ.

ಬ್ರಿಟಿಷ್ ಮೇಡ್, ಕ್ಯಾರೆಟ್ ಭಂಗಾರದ ಮುಳ್ಳು ಹಾಕಿದೆ. ಅಕ್ಷರಗಳು ಮುತ್ತುಗಳ ಹಾಗೆ ಮುದ್ದಾಗಿ ಬರೆಯುವುದು. ಇದನ್ನು ಈ ತಿಂಗಳ ಒಳಗೆ ತರಿಸಿಕೊಳ್ಳುವವರಿಗೆ 1 ಡಜನ್ ರೋಸ್, ಜಾಸ್‌ಮಿನ್, ಹಾಜಿಗೆ ಮೊದಲಾದ ಪರಿಮಳ ದ್ರವ್ಯದ ಸೀಸೆಗಳು ಬಹುಮಾನವಾಗಿ ಕೊಡಲ್ಪಡುತ್ತವೆ. ಕಡಿಮೆ ಕ್ರಯ ಪೇನಾ 1ಕ್ಕೆ 15 ಅಣೆ ಮಾತ್ರ,

ಸಿ. ರಾಜ ಅಂಡ್ ಕಂಪೆನಿ,
28 ಪೆರುಮಾಳ್ ಕೋವಿಲ್ ಗಾರ್ಡನ್ ಬೀದಿ,
ಸಾಹುಕಾರ ಪೇಟೆ, ಮದ್ರಾಸ್.

ಮೂಲೆ ಮೂಲೆಯಿಂದ

ಮಂಗಳೂರು:—ಟ್ರೈನ್ಡ್ ನೈಟ್ ಶಾಲೆಗಳಲ್ಲಿ ಕಲಿತು ಉತ್ತೀರ್ಣರಾದವರಿಗೆ ೧೯೩೧ನೆ ಇಸವಿ ಸರ್ಟಿಫಿಕೇಟು ಸಹಿತ ಲೋವರ ಗ್ರೇಡ್ ಟ್ರೈನ್ಡ್ ಉಪಾಧ್ಯಾಯರ ಸರ್ಟಿಫಿಕೇಟುಗಳು ಹಾಯರ ಗ್ರೇಡ್ ಸರ್ಟಿಫಿಕೇಟುಗಳಾಗಲಿಕ್ಕೆ ಕಳೆದ ನವಂಬರ ತಿಂಗಳಲ್ಲಿ ಡೈರೆಕ್ಟರವರು ಮಂಗಳೂರಿಗೆ ಬಂದಾಗ ರಾ! ಮೋಳಹಳ್ಳಿ ಶಿವರಾಯರವರ ಮುಂದಾಳುತನದಲ್ಲಿ ಒಂದು ಡೆಪ್ಯುಟೇಶನ್ ಹೋಗಿತ್ತು. ಅದಕ್ಕೆ ಯಾವ ಉತ್ತರವನ್ನು ಡೈರೆಕ್ಟರವರು ಕೊಟ್ಟರು ಎಂಬುದು ತಿಳಿಯುವುದಿಲ್ಲ. ಆದರೆ ಬಂಟವಾಳ ಸ್ಪೆಷಿಯಲ್ ನೈಟ್ ಸ್ಕೂಲಿನಿಂದ ೫ ರೂ. ಫೀಸನ್ನು ವರೂ ತೆಗೆದುಕೊಂಡು ಆ ಸರ್ಟಿಫಿಕೇಟುಗಳನ್ನು ಬದಲಾಯಿಸಿ ಉಪಾಧ್ಯಾಯರನ್ನು ರಕ್ಷಿಸಬೇಕೆಂದು ಡೈರೆಕ್ಟರವರಿಗೆ ಬರೆದುದಕ್ಕೆ ಪ್ರತ್ಯುತ್ತರವಾಗಿ ಈ ಕೆಳಗಿನ ಹುಕುಂ ಬಂದಿರುತ್ತದೆ.

N. Dis. on C. 2995—E/33 Dated 3—12—'33 of the Director of Public Instruction Madras on the Petition regarding conversion of Teachers' Certificates.

With reference to Proceedings R. C. No. 2021/E 33 Dated 12—12—'33 the Manager of Special Night School is informed that Lower Elementary Trained teachers' Certificates cannot be converted into one of the Higher Elementary Grade after 4—9—'33 (the date of the Issue of G. O. No. 1581 Law Edu) even if the teachers have successfully undergone the Higher Literary course prior to that date—"G. O No. 1581/4-9-33 ಕೊಟ್ಟ ಮೇಲೆ ಲೋವರ ಎಲಿಮೆಂಟರಿ ಗ್ರೇಡಿನ ಸರ್ಟಿಫಿಕೇಟುಗಳನ್ನು ಹಾಯರ ಗ್ರೇಡಿಗೆ ಬದಲಾಯಿಸಲು ಅವರು ಆ G. O ತಾರೀಕಿನ ಮೊದಲು ಹಾಯರ್‌ಲಿಟರರಿ ಪರೀಕ್ಷೆ ಪಾಸಾದರೂ ಸಾಧ್ಯವಿಲ್ಲ' ಇನ್ನು ಗವರ್ನಮೆಂಟ್ ಸೆಕ್ರೆಟರಿಯವರಿಗೆ ಬರಕೊಂಡ ಮನವಿಗೆ ಯಾವ ಹುಕುಂ ಬರಲಿಕ್ಕಿದೆಯೋ ನೋಡಲಿಕ್ಕಿದೆ.

ಅಡ್ಯಾರು:—ಇಲ್ಲಿನ ಶ್ರೀ ಸೋಮಲಿಂಗೇಶ್ವರ ಕೃಷಿಕ ಪ್ರೋತ್ಸಾಹಕ ಸಂಘದ ಉಪಾಧ್ಯಕ್ಷರಾಗಿ ಶ್ರೀಮಂತ ಬಂಟ ತರುಣರೂ ಆದ ಶ್ರೀಯುತ ಅಡ್ಯಾರು ಗುತ್ತು ಅಚ್ಚಣ್ಣ ಸೇಕರವರು ಇದೇ ಕಳೆದ ತಾರೀಖು ೧೨ನೇ ಶುಕ್ರವಾರ ದಿನ ಅಕಾಲ ಮರಣಕ್ಕೆ ತುತ್ತಾದರೆಂಬುದನ್ನು ತಿಳಿಸಲು ತುಂಬಾ ವಿಷಾದ ಪಡಿಸುತ್ತದೆ. ದಿವಂಗತರ ಆತ್ಮಕ್ಕೆ ಪರಮಾತ್ಮನು ಸದಾ ಶಾಂತಿಯನ್ನು ಕೊಡಲೆಂದು ಪ್ರಾರ್ಥಿಸುತ್ತೇವೆ.

ಅಖಿಲ ಭಾರತ ಆಯುರ್ವೇದ ವಿದ್ಯಾಪೀಠದ ಪರೀಕ್ಷೆಗಳು.

ಭಿಷಗ್ ವಿಶಾರದ ಮತ್ತು ಆಚಾರ್ಯ ಪರೀಕ್ಷೆಗಳು ಎಂದಿನಂತೆ ಈ ವರ್ಷವೂ ಕೇಂದ್ರವಾದ ಶಿವಮೊಗ್ಗದಲ್ಲಿ ತಾ. ೨೯ನೇ ಮಾರ್ಚ ೩೪ರಿಂದ ನಡೆಯುವುವು.

ದರಖಾಸ್ತುಗಳು ರುಸುಂ ಸಮೇತ ವಿದ್ಯಾಪೀಠ ಮಂತ್ರಿಗಳು—ಪೂನಾ ೨. ಇವರಿಗೆ ಫೆಬ್ರವರಿ ೨೮ರ ಒಳಗಾಗಿ ತಲಪಬೇಕು. ದರಖಾಸ್ತು ಫಾರಂಗಳನ್ನು ಪಾರ್ಥನಾರಾಯಣ ಪಂಡಿತ ಶಿವಮೊಗ್ಗ, ಇವರಿಂದ ತರಿಸಿಕೊಳ್ಳಬಹುದು.

ವಿಟ್ಲ:—ಈ ಅಸ್ಪಾಸಿನ ವರ್ಗದಾರರ ಸಭೆಯು ಇದೇ ತಾ. ೭-೧-'೩೪ರಲ್ಲಿ ಮ. ರಾ. ರಾ. ವಿ. ರಾಜಲಕ್ಷ್ಮೀನಾಥ ಸ್ವಾಮಿಜಿಯವರ ಅಧ್ಯಕ್ಷತೆಯಲ್ಲಿ ವಿಟ್ಲ ಹಾ. ಎಲಿಮೆಂಟರಿ ಶಾಲಾ ಕಟ್ಟಡದಲ್ಲಿ ಜರಗಿತು. ಸುತ್ತುಮುತ್ತಲಿನ ಗ್ರಾಮಗಳಿಂದ ಹಲವು ಜನ ಮಹನೀಯರು ಚಿತ್ತೈಸಿದ್ದರು. ಈ ಕೆಳಗೆ ಕಾಣಿಸಿದ ನಿರ್ಣಯಗಳು ಸರ್ವಾನುಮತದಿಂದ ಮಂಜೂರು ಮಾಡಲ್ಪಟ್ಟವು. (೧) ಪ್ರಕೃತ ದವಸಧಾನ್ಯಗಳಿಗೆ ಬೆಲೆಯು ಬಹಳ ಕಡಿಮೆಯಾಗಿರುವುದರಿಂದ ಸನ್ನ ರಿ. ಸೆಟ್ಲ್‌ಮೆಂಟನ್ನು ಜಾರಿಗೆ ತರಕೂಡದಾಗಿ ಮಾನ್ಯ ಸರಕಾರದವರೊಡನೆ ಕೇಳಿಕೊಳ್ಳಬೇಕೆಂದು ನಿರ್ಣಯಿಸಲಾಯಿತು. (೨) ಪ್ರಕೃತ ದವಸಧಾನ್ಯಗಳ ಬೆಳೆಯಲ್ಲಿ ರೈತರಿಗೆ, ತೀರ್ವೆ ತೆರುತ್ತ ಜೀವನ ನಡೆಸುವುದು ಕಷ್ಟವಾದುದರಿಂದ ಈಗಿನ ತೀರ್ವೆಯಲ್ಲಿ ಕನಿಷ್ಠಪಕ್ಷಕ್ಕೆ ಶೇಕಡಾ ೫೦ರಂತೆಯಾದರೂ ಕಡಿಮೆಮಾಡಬೇಕಾಗಿಯೂ ಮಾನ್ಯ ಸರಕಾರದವರೊಡನೆ ಕೇಳಿಕೊಳ್ಳಬೇಕೆಂದು ನಿಶ್ಚೈಯಿಸಲಾಯಿತು. (೩) ಮುಂಚಿನಿಂದಲೇ ಹೆಚ್ಚು ತೀರ್ವೆಯಾಗುತ್ತಿದ್ದು, ಭೂಮಿಗಳ ಕಿಸವಾರ್ಗಳು ರಿ. ಸರ್ವೆಯಲ್ಲಿ ಸಹ ಸರಿಪಡಿಸದಿರುವುದರಿಂದ ರೈತರಿಗೆ ಹೆಚ್ಚಿನ ನಷ್ಟ ಸಂಭವಿಸುವಲ್ಲಿ ಅನಿವಾರ್ಯ ಸರಿ ಹಣ್ಣು ಕಡಿಮೆಯನ್ನು ಹೋಗಲಾಡಿಸಿ ಸರಿಪಡಿಸಬೇಕಾಗಿ ಮಾನ್ಯ ಸರಕಾರದವರೊಡನೆ ಕೇಳಿಕೊಳ್ಳಬೇಕೆಂದು ನಿರ್ಧರಿಸಲಾಯಿತು. (೪) ಸಂರಕ್ಷಿತವಾಗಿದ್ದ ಕಾಡುಗಳ ಕುರಿತು ರೈತರಿಗಿದ್ದ ರಿಯಾಯಿತಿಗಳನ್ನು ಇತ್ತೀಚೆಗೆ ಮನ್ನಾಮಾಡಿದ್ದರಿಂದ ರೈತರ ಸಾಗುವಳಿ ಮುಂತಾದ ಅನುಕೂಲತೆಗಳಿಗೆ ಹೆಚ್ಚಿನ ಭಂಗ ಒದಗಿಸುವುದರಿಂದ ಮೊದಲಿದ್ದ ರಿಯಾಯತಿಗಳನ್ನು ಮುಂದೆಯೂ ಊರ್ಜಿತದಿಂದ ಇರಗೊಳಿಸಬೇಕಾಗಿ ಮಾನ್ಯ ಸರಕಾರದವರೊಡನೆ ಕೇಳಿಕೊಳ್ಳಬೇಕೆಂದು ನಿರ್ಣಯಿಸಲಾಯಿತು.

ಶ್ರೀ. ಯಡನೀರು ಮಠ:—ಇಲ್ಲಿ ಇದೇ ಬರುವ ತಾ. ೨೯ನೆಯ ಸೋಮವಾರ ಶ್ರೀಮದ್ಗುರುಗಳವರ ಆರಾಧನೆಯ ದಿವಸ ಧಾರ್ಮಿಕ ಮತ್ತು ವಿದ್ಯಾವಿಷಯಗಳ ಕುರಿತು ವಿದ್ವನ್ಮಣಿಗಳ ಭಾಷಣಗಳೂ ಮತ್ತು ಅದೇ ದಿವಸ ರಾತ್ರಿ ಶ್ರೀ. ಬಲಿಪನಾರಾಯಣ ಭಾಗವತರ ಹಾಡುವಿಕೆಯಿಂದ ಯಕ್ಷಗಾನ ಇವುಗಳೂ ನೆರವೇರಲಿರುವದರಿಂದ ಸದರಿ ಸಮಾರಂಭ ಸರ್ವರಿಗೂ ಸುಸ್ವಾಗತವಿದೆಯೆಂದು ಶ್ರೀ ಸ್ವಾಮಿಗಳ ಅನುಜ್ಞೆಯಿಂದ ಎಡ್ವೊಕೇಟ್ ಕೆ. ಬಾಲಕೃಷ್ಣರಾಯರು ತಿಳಿಸುತ್ತಾರೆ.

ಉಡುಪಿ:—ಸಂಕ್ರಮಣ ಜಾತ್ರೆಯು ಆರಂಭವಾಗಿದೆ. ಕಳೆದ ಲಕ್ಷದೀಪದಷ್ಟು ಸಹ ಜನಸ್ತೋಮವಿಲ್ಲ. 'ಪರಶೆ' ಜನರು ಬಹಳ ಕಡಿಮೆ. ಪರ್ಯಾಯ ಪಟ್ಟವನ್ನೇರುವ ಶ್ರೀ. ಕಾಣೂರು ಮಠದ ವಿದ್ಯಾ ಸಮುದ್ರ ತೀರ್ಥ ಶ್ರೀಪಾದಂಗಳವರಿಗೆ ಶ್ರೀ ಕೃಷ್ಣಸನ್ನಿಧಾನದಲ್ಲಿಯೂ ಶ್ರೀ ಕೃಷ್ಣಾಪುರ ಮಠದಲ್ಲಿಯೂ ಉತ್ತಮ ಸನ್ಮಾನಗಳಾದುವು.

ಪೆರಡಾಲ:—ಇಲ್ಲಿನ ಮಹಾಜನ ಸಂಸ್ಕೃತ ಕಾಲೇಜಿನ ಪಿನ್ಸಿಪಾಲರೂ ಘನ ಸಂಸ್ಕೃತ ಪಂಡಿತರೂ ಆಗಿದ್ದ ಬ್ರಹ್ಮ ಶ್ರೀ. ಮಹೋಪಾಧ್ಯಾಯ ಪು. ಶಂಕರ ಶಾಸ್ತ್ರಿಗಳವರು ಇದೇ ಕಳೆದ ತಾ. ೨೫-೧೨-'೩೩ನೆಯ ಸೋಮವಾರ ಅಕಾಲ ಮರಣಕ್ಕೆ ತುತ್ತಾಗಿ ಸ್ವರ್ಗಸ್ಥರಾದರೆಂಬ ವಿಷಯದಲ್ಲಿ ನಾವೆಲ್ಲರೂ ತುಂಬಾ ವಿಷಾದಿಸುತ್ತಿದ್ದೇವೆ.

ಮೈಸೂರು ವಾರ್ತೆ

ಮೈಸೂರು ಮಹಾರಾಣಿ ಕಾಲೇಜಿನ 'ಅಸಿಸ್ಟೆಂಟ್' ಪ್ರೊಫೆಸರ್ ಶ್ರೀಮತಿ ಬಿ. ಎ. ವಾಟ್ಸನ್‌ರವರನ್ನು ಬೆಂಗಳೂರು ಇಂಟರ್ ಮೀಡಿಯಟ್ ಕಾಲೇಜಿನ ಸುಪರಿಂಟೆಂಡೆಂಟರನ್ನಾಗಿ ನೇಮಿಸಿದ್ದಾರೆ.

ಪಬ್ಲಿಕ್ ಅಕೌಂಟ್ ಕಮಿಟಿಗೆ ೧೯೩೩-೩೪ನೇ ವರ್ಷಕ್ಕೆ ಸರಕಾರದ ಪರವಾಗಿ ಸರಕಾರದ ಅರ್ಥ ಕಾರ್ಯದರ್ಶಿಗಳನ್ನೂ, ಸಾರ್ವಜನಿಕರ ಪರವಾಗಿ ಶ್ರೀಯುತರುಗಳಾದ ಗುಂಡಪ್ಪಗೌಡ, ಜಿ. ಚೆನ್ನಪ್ಪ, ಪಿ. ಸುಬ್ರಾಮಶೆಟ್ಟಿ, ಎಚ್. ಸಿದ್ದಯ್ಯ ಇವರುಗಳನ್ನೂ ನೇಮಿಸಿದ್ದಾರೆ.

ಕೃಷ್ಣರಾಜ ಸಾಗರದ ಉದ್ಯಾನವನವನ್ನು ನೋಡಲು ಹೋದವರಿಗೆ ಬಂದಾಣೆ ಸುಂಕವನ್ನು ಹಾಕಿರುವರಷ್ಟೆ. ಶಿಕ್ಷಣ ಶಾಖೆಯಿಂದ ಅಂಗೀಕೃತವಾದ ಶಾಲಾ ವಿದ್ಯಾರ್ಥಿಗಳು ಸರಿಯಾದ ರಹದಾರಿ ಪತ್ರವನ್ನು ಬರೆಸಿಕೊಂಡು ಬಂದರೆ ಅಂತಹವರಿಗೆ ಅರ್ಧಶುಲ್ಕ ಕೊಡಬಹುದೆಂದು ಆಜ್ಞೆ ಮಾಡಿದ್ದಾರೆ.

ಪೋಲೀಸ್ ಇನ್ಸ್‌ಪೆಕ್ಟರ್ ಶ್ರೀ ಎಚ್. ಶ್ರೀನಿವಾಸಯ್ಯಂಗಾರ್ಯರನ್ನು ಅಸಿಸ್ಟೆಂಟ್ ಸುಪರಿಂಟೆಂಡೆಂಟರನ್ನಾಗಿ ಮಾಡಿ ಬೆಂಗಳೂರು ಪೋಲೀಸು ಶಿಕ್ಷಣ ಶಾಲೆಗೆ ಹಾಕಿದ್ದಾರೆ.

ಚಿಂತಾಮಣಿ ಮಹಾಲಕ್ಷ್ಮಮ್ಮನ ಮೊಖದ್ದಮೆಯಲ್ಲಿ ಶಿಕ್ಷಿಸಲ್ಪಟ್ಟ ಅಪರಾಧಿಗಳ ಪರವಾಗಿ ಶ್ರೀ ರಾಜರತ್ನಂರವರು ಹೈಕೋರ್ಟಿಗೆ ಅಪೀಲು ಹಾಕಿ ಅಪರಾಧಿಗಳನ್ನು ಜಾಮೀನು ಮೇಲೆ ಬಿಟ್ಟುಬಿಡಬೇಕೆಂದು ಹೇಳಿದರು. ಇದರ ಚರ್ಚೆಯು ೧೮ನೇ ತಾರೀಕಿಗೆ ನಡೆಯುವುದು.

ಬೆಂಗಳೂರಿನ ಸೆಷನ್ಸ್ ಜಡ್ಜರಾದ ಶ್ರೀ ಶ್ರೀನಿವಾಸ ರಾಘವಾಚಾರಿಯವರು ಬೌದ್ಧಮತಾವಲಂಬಿಗಳಾದರೆಂಬ ಸುದ್ದಿಯು ಸುಳ್ಳೆಂದು ಗೊತ್ತಾಗಿದೆ.

ಗಾಂಧೀಜೀಯವರ ಆಗಮನದ ಪ್ರಯುಕ್ತ ಬೆಂಗಳೂರು ಖಾದಿ ವಸ್ತ್ರಾಲಯದವರು ಕಲಾಮಂದಿರದಲ್ಲಿ ಪ್ರದರ್ಶನವೊಂದನ್ನೇರ್ಪಡಿಸಿದ್ದರು. ನಾನಾ ಪ್ರಾಂತ್ಯಗಳಿಂದ ಬಟ್ಟೆಬರೆಗಳು ಬಂದಿದ್ದವು. ಮಹಾತ್ಮರು ಸ್ವಹಸ್ತದಿಂದ ನೈದ ಬಟ್ಟೆಯೂ ಗಾಂಧೀ ಸುದರ್ಶನ ಚರಕವೂ (ಇದು ಗಂಟೆಗೆ ೧೦೦೦ ಗಜಗಳ ದಾರ ತೆಗೆಯುವುದು) ಪ್ರದರ್ಶಿಸಲ್ಪಟ್ಟಿದ್ದುವು.

ಬೆಂಗಳೂರು ದಂಡಿನ ಕಲೆಕ್ಟರರೂ, ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರೂ ಆದ ಮಿ. ಜಿ. ಎಚ್. ಕುಕ್‌ರವರು ಸನ್ನದಲ್ಲಿಯೇ ಮದರಾಸು ಸರಕಾರಕ್ಕೆ ಹಿಂದಕ್ಕೆ ತೆಗೆದುಕೊಳ್ಳಲ್ಪಡುವರು. ಅವರ ಸ್ಥಾನಕ್ಕೆ ಮಿ! ಎಲ್. ಜಿ. ಮ್ಯಾಕ್ ಐವರ್ ಎಂಬವರನ್ನು ನೇಮಕ ಮಾಡುವರೆಂದು ವರ್ತಮಾನ.

ಮೂಲ್ಕಿ:—ಪುಂಜಾಲಕಟ್ಟೆಯ ಡಾಕ್ಟರ್ ಶ್ರೀ ಯಸ್. ಸುಬ್ಬರಾಯರು ಇದೇ ಕಳೆದ ತಾ. ೩ನೇ ಶನಿವಾರ ಪೌರ್ವಾಹ್ಣ ಘಂಟೆಯಲ್ಲಿ ಸ್ಥಳೀಕ ಬೋರ್ಡು ಹಾಯರ್ ಎಲಿಮೆಂಟರಿ ಶಾಲಾ ವಿದ್ಯಾರ್ಥಿಗಳ ತರ್ಕ ಸಂಘದ ನೇತೃತ್ವದಲ್ಲಿ "ಆರೋಗ್ಯ ರಕ್ಷಣೆ"ಯ ಕುರಿತಾಗಿ ಸುಮಾರು ೨ ತಾಸುಗಳ ವರೆಗೆ ಅಸ್ಖಲಿತವಾಗಿ ಭಾಷಣವನ್ನು ಕೊಟ್ಟರು.

ಹಿಂದೆ ಪ್ರಚುರಪಡಿಸಿದ್ದಂತೆ ಮಂಗಳೂರಿನ ಸೈಂಟ್ ಲೋಯಿಸಿಯಸ್ ಕೋಲೇಜಿನ ಸಂಸ್ಕೃತ ಪಂಡಿತರಾದ ಬ್ರಹ್ಮ ಶ್ರೀ ನಿಡ್ಲೋಡಿ ಅನಂತ ಉಪಾಧ್ಯಾಯರು ಇದೇ ಕಳೆದ ತಾರೀಕು ೨೮-೧೨-೧೯೩೩ನೇ ಗುರುವಾರ ಸಾಯಂಕಾಲ ೬ ಘಂಟೆಗೆ ಸ್ಥಳೀಕ ಯೂನಿಯನ್ ಕ್ಲಬ್ಬಿನಲ್ಲಿ "ವೇದಕಾಲದ ಸಂಸ್ಕೃತಿಯೂ ಆ ಕಾಲದಲ್ಲಿನ ಹರಿಜನರ ಸ್ಥಾನವೂ" ಎಂಬ ವಿಷಯದಲ್ಲಿ ಸುಮಾರು ೨ ತಾಸುಗಳ ವರೆಗೆ ಉದಾತ್ತ ವಿಚಾರಗಳನ್ನೊಳಗೊಂಡ ಭಾಷಣವನ್ನು ಕೊಟ್ಟರು.

ಸ್ಥಳೀಕ ಕೊ-ಆಪರೇಟಿವ್ ಬೇಂಕಿನ ವಾರ್ಷಿಕ ಮಹಾಸಭೆಯು ಇದೇ ಕಳೆದ ತಾ. ೭-೧-೩೪ನೇ ಆದಿತ್ಯವಾರ ಅಪರಾಹ್ನ ಸ್ಥಳೀಕ ಯೂನಿಯನ್ ಕ್ಲಬ್ಬಿನಲ್ಲಿ ಜರುಗಿತು.

ಇಲ್ಲಿ ಕಳೆದ ೬ ವರ್ಷಗಳಿಂದ ಎಕ್ಸೈಜ್ ಸಬ್ ಇನ್ಸ್‌ಪೆಕ್ಟರಾಗಿದ್ದ ಶ್ರೀ ಟಿ. ಗೋವಿಂದನ್ ನಾಯರರು ೩ ತಿಂಗಳ ರಜೆಯಲ್ಲಿ ಹೋಗಿರುತ್ತಾರೆ. ರಜೆ ಕಳೆದ ಮೇಲೆ ಅವರು ಇಲ್ಲಿಗೇ ಬರಲಿರುವರೇ ಎಂಬುದು ಅನುಮಾನಕರವಿದೆ. ಅಂತೂ ಅವರು ಇಲ್ಲಿದ್ದ ಸಮಯ ಸರ್ವ ಗ್ರಾಮ ಪಕ್ಷೀಯರಾಗಿದ್ದು ಜನಪ್ರೀತರಾಗಿದ್ದರು.

ಹಿರಿಯಡ್ಕ:—ತಾ. ೬-೬-'೩೩ರಲ್ಲಿ ಸ್ಥಳೀಯ ತರುಣ ವೃಂದದಿಂದ 'ಮಿತ್ರಮಂಡಳಿ' ಎಂಬ ವಾಚನಾಲಯವು ಊರವರ ಪೂರ್ಣ ಸಹೃದಯರ ಉದಾರಾಶ್ರಯದಿಂದಲೂ, ಪ್ರೋತ್ಸಾಹದಿಂದಲೂ ಜನ್ಮವೆತ್ತಿರುವುದು.

ಕಾರ್ಕಳ ತಾಲೂಕು ವರ್ಗದಾರರ ಪರಿಷತ್ತು

ಈ ಮುಂಚಿನಿಂದಲೇ ಅತ್ಯಧಿಕವಾಗಿರುವ ತೀರ್ವೆಯನ್ನು ತಗ್ಗಿಸುವರೆ ಯತ್ನಿಸುವುದೂ, ಕಂದಾಯವನ್ನು ಏರಿಸಲು ಸರಕಾರದವರು ಜಾರಿಗೆ ತರಬೇಕೆಂದಿರುವ ರಿಸೆಟ್ಲ್‌ಮೆಂಟನ್ನು ತಡೆಯುವುದೂ, ಮತ್ತು ತಾಲೂಕಿನ ಭೂಮ್ಯಾಲಿಕರಿಗೆ ಸಂಬಂಧಪಟ್ಟ ಎಲ್ಲಾ ಹಕ್ಕುಗಳನ್ನು ಕಾಪಾಡುವುದೂ ಇವೇ ಮೊದಲಾದುವುಗಳ ವಿಷಯ ಆಲೋಚಿಸಿ ಪ್ರಯತ್ನ ಮಾಡುವರೆ ಇದೇ ತಿಂಗಳ ತಾ. ೨೮ನೇ ಆದಿತ್ಯವಾರ ದಿವಸ ಮಧ್ಯಾಹ್ನ ೧ ಘಂಟೆ ಸಮಯಕ್ಕೆ ಕಾರ್ಕಳ ತಾಲೂಕಿನ ರೈತರ ಯಾ ಭೂಮ್ಯಾಲಿಕರ ಪರಿಷತ್ತು ಶ್ರೀಯುತ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಕಾರ್ಕಳದಲ್ಲಿ ಬಂಟರ ಯಾನೆ ನಾಡವರ ಹಾಸ್ಟೇಲಿನಲ್ಲಿ ಜರಗುವುದು. ಎಲ್ಲಾ ರೈತರೂ ಭೂಮಾಲಿಕರಾಗಿರುವ ತಮ್ಮ ತಮ್ಮ ಸ್ನೇಹಿತರನ್ನು ಕರೆದುಕೊಂಡು ಬಂದು ಪರಿಷತ್ತನ್ನು ಯಶಸ್ವಿಯನ್ನಾಗಿ ಮಾಡಬೇಕೆಂದೂ ತಾಲೂಕು ವರ್ಗದಾರರ ಸಂಘದ ಸ್ವಾಗತ ಮಂಡಳಿಯ ಜತೆ ಕಾರ್ಯದರ್ಶಿ ವಕೀಲ್ ಮಟ್ಟಿ ಸುಬ್ಬರಾವ್ ಅಧಿಕಾರಿಯವರು ಎಲ್ಲಾ ರೈತರೊಡನೆ ವಿನಂತಿ ಮಾಡಿಕೊಳ್ಳುತ್ತಾರೆ.

++ + +

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. No. 147/1933.

ದೂಮಕ್ಕೆ ಸಹಾ—ವಾದಿರು ಮತ್ತು ಮುತ್ತು ಸಹಾ—ಪ್ರತಿವಾದಿರು.

ಇವರೊಳಗೆ

ಕಾಸರಗೋಡು ತಾಲೂಕು ಎಣ್ಮಕಜೆ ಗ್ರಾಮದ ಸೇರಾಜೆ ಮನೆಯ ಪೊಳ್ಳಪ್ಪೆ ಹೆಂಗ್ಸಿನ ಮಗಳು—ದೂಮಕ್ಕ ಈಕೆ ಮಗ ದೇವಪ್ಪ ಆಳ್ವ—ಕೂಡಾ ವಾದಿರಾಗಿ ಸದ್ರಿಯವರ ಕುಟುಂಬದ ಆಡಳ್ತೆದಾರಳು 1ನೇ ಪ್ರತಿವಾದಿ ಮತ್ತೆ ಕುಟುಂಬದ ಬೇರೆ ಹಿರೆ ಮೆಂಬರರು ೯ ಜನ ಪ್ರತಿವಾದಿರ ಮೇಲೆ ಕುಟುಂಬದ ಸ್ಥಿರಚರ ಸೊತ್ತುಗಳಿಂದ ತಮಗೆ ಸಿಕ್ಕಬೇಕಾದ ಗತ 6 ವರ್ಷಗಳ ಅಶನಾರ್ಥ ಮತ್ತು ಇನ್ನು ಮುಂದಿನ ವರ್ಷಗಳ ಅಶನಾರ್ಥ ಕುರಿತು ದಾವೆದಾಕಲು ಮಾಡಿರುತ್ತಾರೆಂತಲೂ ಸದ್ರಿ ದಾವೆಯು ಇದೇ ತಾ. 26-1-1934ಕ್ಕೆ ತನ್ಖಿಗೆ ಇಟ್ಟದೆ ಎಂತಲೂ ಸದ್ರಿ ವ್ಯವಹಾರಕ್ಕೆ ಆಕ್ಷೇಪವುಳ್ಳ ಸದ್ರಿ ಕುಟುಂಬದ ಯಾವ ಮೆಂಬರನು ಕಕ್ಷಿಯಲ್ಲಿ ಸೇರಿ ಉಪಹರಿಸಿಕೊಳ್ಳತಕ್ಕದ್ದು ಎಂತಲೂ ಈ ಮೂಲಕ ನೋಟೀಸು ಕೊಡೋಣಾಗುತ್ತದೆ.

ಕಾಸರಗೋಡು
15—1—1934

H. S. Malya,
Vakil for Plaintiff.

+ ++ +

೧೯೩೪ರಲ್ಲಿ ಅನಾಹುತವೂ ರಕ್ತಪಾತವೂ!!!

೧೯೩೪ರಲ್ಲಿ ಅನಾಹುತವೂ ರಕ್ತಪಾತವೂ!

ಇದೇ ಜನವರಿ ತಾ. ೧೪ರಲ್ಲಿ ಅಂಗಾರಕನೂ ಶನಿಯೂ ಒಟ್ಟು ಗೂಡುವರು. ಸನಾತನಿಗೂ ಸುಧಾರಕರಿಗೂ ಹೋರಾಟವು ಬಹಳ ತೀಕ್ಷ್ಣವಾಗಿ ನಡೆಯುವುದು. ದೌರ್ಜನ್ಯವೂ ರಕ್ತಪಾತವೂ ಆಗುವವು. ಕಡೆಗೆ ದೊರೆತನದವರು ಮುತಾಲಿಕ್ಕ್ಯನೆಸದಲ್ಲಿ ಸನಾತನರ ಪಕ್ಷವಹಿಸುವರು. ಬಂಗಾಳ ರಾಜ್ಯದಲ್ಲಿ ಅರಾಜಕ ಕೃತ್ಯಗಳು ಬಹಳ ಪ್ರಬಲಿಸುವಂತಿದೆ. ಅಲಹಾಬಾದಿನ ಜಾತೀಯ ನಾಯಕರಿಗೆ ಕೆಲ ತೊಂದರೆಗಳು ಸಂಭವಿಸುವವು. ಜರ್ಮನಿ, ಪೋಲೆಂಡು, ಫ್ರಾನ್ಸು ದೇಶಗಳು ಮುಖ್ಯವಾಗಿ ಯೂರೋಪು ಖಂಡದ ದೇಶಗಳೆಲ್ಲವೂ ಯುದ್ಧದಲ್ಲಿ ಸೇರುವಂತಿದೆ. ಜರ್ಮನಿ, ಫ್ರಾನ್ಸು, ಪೋಲೆಂಡು, ರುಮೇನಿಯಾ, ಟಿಬೆಟ್ಟು, ಮಂಚೂರಿಯ ಉತ್ತರ ಚೀನಾದೇಶಗಳಿಗೆ ಯುದ್ಧವಾಗುವ ಹಾಗಿದೆ. ಈ ಜನವರಿ ೨೩ ೧೯೩೪ ಸಾಯಂಕಾಲ ೪ ಘಂಟೆಗೆ ೬ ಗ್ರಹಗಳು ಒಂದು ಕಡೆ ಸೇರುವವು. ಇದಕ್ಕೆ ಗೋಲ ಯೋಗವೆಂದು ಹೆಸರು. ಇದರಿಂದ ಪ್ರಪಂಚಕ್ಕೆ ದಶ್ಶಿತಿಯುಂಟಾಗುವುದು, ರಾಜರು ನಷ್ಟಹೊಂದುವುದು, ಅಗ್ನಿಪರ್ವತಗಳು ಸಿಡಿಯುವುದು, ಪ್ಲೇಗು, ಕಾಲರ ಮುಂತಾದ ಅಂಟುರೋಗಗಳು ಪ್ರಬಲಿಸುವುದು ಇತ್ಯಾದಿ ಉಪದ್ರವಗಳುಂಟಾಗುವವು. ಆಫ್ರಿಕಾ, ಬರ್ಮ, ಇಂಡ್ಯಾದಲ್ಲಿ ಪೂರ್ವ ಸಮುದ್ರ ತೀರ ಉತ್ತರ ಹಿಂದುಸ್ಥಾನಗಳಲ್ಲಿ ಭೂಕಂಪವಾಗಿ ಬಹಳ ನಷ್ಟಸಂಭವಿಸುವುದು. ಈ ಗೋಲಯೋಗದಲ್ಲಿ ಧೂಮಕೇತು ಕಾಣಿಸಿಕೊಳ್ಳುವುದು. ೧೯೧೦ರಲ್ಲಿ ಈ ಗೋಲಯೋಗವಾದಾಗ ಧೂಮಕೇತು ಕಾಣಿಸಿಕೊಂಡಿದ್ದಿತು. ಆಗ ಸಂಭವಿಸಿದ ಅನರ್ಥವು ಈಗಲೂ ಸಂಭವಿಸಬಹುದು. ೧—೩ ವರ್ಷಗಳಲ್ಲಿ ಬಹಳ ಭಯಂಕರ ಯುದ್ಧವಾಗುವ ಸಂಭವವಿದೆ ಎಂದು ಮೈಸೂರು ಸ್ಟಾರ್ ಹೇಳುತ್ತಿದೆ.

ಆರೋಗ್ಯ ವಿಚಾರ.

ಮನುಷ್ಯರಿಗೆ ಬರತಕ್ಕ ವ್ಯಾಧಿಗಳಲ್ಲಿ ಇನ್‌ಸೋಮ್ನಿಯಾ ಎಂಬುದೊಂದು. ಹಾಗೆಂದರೆ ಸ್ವಲ್ಪವೂ ನಿದ್ರೆಬಾರದಂತೆ ಇರುವುದು. ಮನುಷ್ಯನ ದೇಹಾರೋಗ್ಯಕ್ಕೆ ಮೈಮರೆತು ಸುಖನಿದ್ರೆಯು ಬರಬೇಕಾದುದು ಅವಶ್ಯವು. ನಿದ್ರೆಯಿಂದಲೇ ದೇಹಕ್ಕೂ ಮನಸ್ಸಿಗೂ ಒಳ್ಳೇ ವಿಶ್ರಾಂತಿಯು ದೊರೆಯುವುದು. ಆದುದರಿಂದಲೇ ನಿದ್ರೆಯೆಂಬುದು "ಜೀರ್ಣವಾದ ದೇಹವನ್ನು ರಿಪೇರಿ ಮಾಡಿ, ತಿರುಗಿ ಹೊಸದಾಗಿ ಮಾಡುವುದಕ್ಕೆ ದೈವಕಲ್ಪಿತವಾದ ಒಂದು ನಿರ್ಮಾಣ" ಎಂದು ಹೇಳಬಹುದು. ಒಬ್ಬನಿಗೆ ಸರಿಯಾದ ನಿದ್ರೆ ಬಾರದಿದ್ದರೆ ಅವನು ಕಾಲಕ್ರಮದಿಂದ ಅನೇಕ ವ್ಯಾಧಿಗಳಿಗೆ ಒಳಗಾಗುವುದು ನಿಜವೇ. ನಿದ್ರೆಯಿಲ್ಲದಿರುವುದಕ್ಕೆ ಮುಖ್ಯ ಕಾರಣಗಳಾವುವೆಂದರೆ— ೧ ಪ್ರಮಾಣಕ್ಕೆ ಮೀರಿ ಭುಜಿಸುವುದು. ೨ ದೇಹಕ್ಕೆ ತಕ್ಕಷ್ಟು ವ್ಯಾಯಾಮವಾಗಲಿ ಕೆಲಸವಾಗಲಿ ಇಲ್ಲದಿರುವುದು. ೩ ದೀರ್ಘಕಾಲದ ಅಥವಾ ತೀವ್ರವಾದ ವ್ಯಾಧಿ. ೪ ಕಾಫಿ, ಟೀ, ಹೊಗೆಸೊಪ್ಪು ಉಪಯೋಗಿಸುವುದನ್ನು ಹೆಚ್ಚಾಗಿ ಸೇವಿಸುವುದು. ೫ ಗಾಳಿಯು ಧಾರಾಳವಾಗಿಲ್ಲದ ಮನೆಗಳಲ್ಲಿ ಮಲಗುವುದು. ೬ ಬಹಳ ಕೆಲಸವಿಲ್ಲದಿದ್ದರೂ, ಅಥವಾ ಅಧಿಕವಾಗಿ ಕಾಮಭೋಗವನ್ನನುಭವಿಸುವುದು. ೭ ಮನಸ್ಸಿಗೆ ಚಿಂತೆ, ವ್ಯಾಕುಲ ಮೊದಲಾದ ಕಳವಳವು. ಈ ಕಠಿಣವಾದ ವ್ಯಾಧಿಯನ್ನು ನಿವೃತ್ತಿಮಾಡಬೇಕಾದರೆ, ಈ ಕೆಳಗೆ ಸೂಚಿಸಿರುವ ಪ್ರಕೃತಿ ಚಿಕಿತ್ಸೆಯನ್ನು ಆರಂಭದೆಶೆಯಲ್ಲಿಯೇ ಅನುಸರಿಸಬೇಕು. ೧ ಊಟವಾದ ಕೂಡಲೆ ನಿದ್ರೆ ಮಾಡಲು ಹೋಗಬಾರದು. ಊಟವಾದ ಮೇಲೆ ಮಲಗುವುದಕ್ಕೆ ಮೊದಲು ಕೊನೆ ಪಕ್ಷ ಎರಡು ಘಂಟೆಗಳ ಕಾಲವಾದರೂ ಅವಕಾಶವನ್ನು ಬಿಡಬೇಕು. ಅಲ್ಲದೆ ಭೋಜನ ಮತ್ತು ನಿದ್ರೆ, ಇವೆರಡನ್ನೂ ಯಾವಾಗಲೂ ನಿಯಮಿತ ಕಾಲದಲ್ಲಿಯೇ ನಡೆಸಬೇಕು. ೨ ರಾತ್ರಿ ಭೋಜನವಾದೊಡನೆ ಸ್ವಲ್ಪ ಹೊತ್ತು ಮೆಲ್ಲಗೆ ನಡೆಯುತ್ತಿರಬೇಕು. ಇದರಿಂದ ಒಳ್ಳೇ ನಿದ್ರೆಬರುವುದು. ನಿದ್ರೆ ಬರಲಾರದೆಂಬ ಭಾವನೆಯಿಂದ ಹೋಗಿ ಮಲಗಬಾರದು. ಆ ಭಾವನೆಯೇ ನಿದ್ರೆ ಬಾರದಂತೆ ಮಾಡುವುದುಂಟು. ೩ ಬೆಳಗ್ಗೆ ಮತ್ತು ಸಾಯಂಕಾಲಗಳಲ್ಲಿ ಲಘುವಾದ ವ್ಯಾಯಾಮಗಳನ್ನು ಮಾಡಬೇಕು. ವ್ಯಾಯಾಮವನ್ನು ಮಾಡಿದ ಸ್ವಲ್ಪ ಹೊತ್ತಿನ ಮೇಲೆ ಬಿಸಿನೀರಿನಲ್ಲಿ ಸ್ನಾನ ಮಾಡಬೇಕು. ೪ ಯಾವಾಗಲೂ ಧಾರಾಳವಾಗಿ ಗಾಳಿ ಬೀಸುವ ಕಡೆಗಳಲ್ಲಿಯೇ ಮಲಗಬೇಕು. ಶುದ್ಧವಾದ ಗಾಳಿಯೇ ನಿದ್ರೆಗೆ ಆವಶ್ಯಕವು. ೫ ಮಲಬಂಧವನ್ನು ನೀಗಿಸಬೇಕು. ಇದೂ ನಿದ್ರೆಬಾರದಂತೆ ಮಾಡುವುದು. ೬ ನಿದ್ರೆಗೆ ಹೋಗುವ ಮೊದಲು ಒಂದು ಟಂಬ್ಲರ್ ಬಿಸಿ ಹಾಲನ್ನು ಕುಡಿಯಬಹುದು. ದೇಹಕ್ಕೆ ಸೌಕರ್ಯವಾಗುವಂತೆ ಹಾಸಿಗೆಯನ್ನು ಸಿದ್ಧಪಡಿಸಿಕೊಂಡು ಮಲಗಬೇಕು. ಹಾಸಿಗೆಯು ಬಹಳ ಮೆತ್ತಗೂ ಇರಬಾರದು. ಬಹಳ ಕಠಿಣವಾಗಿಯೂ ಇರಬಾರದು. ೭ ಮಲಗುವಾಗ ಕೈಕಾಲುಗಳನ್ನು ಸಡಿಲವಾಗಿ ಬಿಟ್ಟು ಮಲಗಬೇಕು. ತಲೆಯು ದೇಹಕ್ಕಿಂತಲೂ ಸ್ವಲ್ಪ ಎತ್ತರವಾಗಿರುವಂತೆ ತಲೆದಿಂಬನ್ನು ಇಟ್ಟುಕೊಂಡು ಮಲಗಬಹುದು. ೮ ನಿದ್ರೆಗೆ ಹೋಗುವಾಗ ಯಾವ ಯೋಚನೆಗಳನ್ನೂ ಮನಸ್ಸಿನಲ್ಲಿಟ್ಟುಕೊಳ್ಳದೆ ಚಿಂತೆ, ಕಳವಳ, ಕ್ರೋಧ, ಕ್ರೌರ್ಯಾದಿ ಮನೋವಿಕಾರಗಳೊಂದಕ್ಕೂ ಎಡೆಗೊಡದೆ ಮನಸ್ಸು ತೃಪ್ತಿಯಿಂದಿರಬೇಕು. ೯. ದೀರ್ಘಕಾಲದ ವ್ಯಾಧಿಯುಳ್ಳವರು ಮಲಗಲು ಹೋಗುವ ಮೊದಲು ತಣ್ಣೀರಿನಲ್ಲಿ ಕಟಿಸ್ನಾನ, ಅಥವಾ ಪಾದಸ್ನಾನವನ್ನು ಮಾಡಿ ಹೋಗಬೇಕು. ೧೦. ನಿದ್ರೆಯ ಕಾಲದಲ್ಲಿ ಸುತ್ತುಮುತ್ತಲೂ ಗದ್ದಲವಿರಬಾರದು. ನಿದ್ರೆ ಬರಬೇಕೆಂಬುದಕ್ಕಾಗಿ ಔಷಧಗಳೊಂದನ್ನೂ ಸೇವಿಸಬಾರದು. ಅದರಿಂದ ಮತ್ತಷ್ಟು ಕೆಡಕಾಗುವುದಲ್ಲದೆ ಗುಣವಿಲ್ಲ.

ಅದರಿಂದಲೇ ಮರಣ!

ಬಹು ವೇಗವಾಗಿ ಓಡುವ ರೈಲ್ವೇ ಎಂಜಿನುಗಳನ್ನು ರಚಿಸಿದ ಚರ್ಚ್‌ವಾರ್ಡ್ ಎಂಬವನು ಇಂಗ್ಲೆಂಡಿನ ಸ್ವಿಂಡನ್ ಎಂಬ ಊರಿನಲ್ಲಿ ರೈಲ್ವೇ ಮಾರ್ಗದ ಬಳಿ ಇದ್ದ ತನ್ನ ಬಂಗಲೆಯಲ್ಲಿ ವಾಸಿಸುತ್ತಲಿದ್ದನು. ಇವನು ನಿರ್ಮಿಸಿದ ಎಂಜಿನುಗಳು ಘಂಟೆಗೆ ೧೦೩ ಮೈಲಿನ ವೇಗದಲ್ಲಿ ಓಡುತ್ತಿದ್ದುವು. ರೈಲ್ವೇ ಇಂಜಿನುಗಳೆಂದರೆ ಇವನ ಪ್ರಾಣ. ಇವನು ಮೊನ್ನೆ ರೈಲ್ವೇ ಲೈನಿನ ಮೇಲೆ ಸಂಚರಿಸಿ ಮಾರ್ಗವನ್ನು ಪರಿಶೀಲಿಸುತ್ತಿದ್ದಾಗ, ದೂರದಲ್ಲಿ ಮುಸುಕಿದ್ದ ಕಾರಣ, ದೂರದಿಂದ ವೇಗವಾಗಿ ಬಂದ ರೈಲ್ವೇ ಟ್ರೈನ್ ಒಂದನ್ನು ಕಾಣಲಾರದೆ ಥಟ್ಟನೆ ಅಡಿಗೆ ಬಿದ್ದುಬಿಟ್ಟನು. ಆಸ್ಪತ್ರೆಯಲ್ಲಿ ಕಾಲವಾದನು.

ಲಂಡನ್ ನಗರದ ವಾಹನ ಸಂಚಾರ!

ಲಂಡನ್ ನಗರದಲ್ಲಿ ಜನರು ಕಾಲಿಂದ ನಡೆಯುವುದಕ್ಕಿಂತಲೂ ವಾಹನಗಳಲ್ಲಿ ಸಂಚರಿಸುವುದು ಹೆಚ್ಚು. ಅಲ್ಲಿನ ಮುಖ್ಯ ಬೀದಿಗಳಲ್ಲಿ ದಿನವಹಿ ಎಷ್ಟು ಮೋಟಾರು ವಾಹನಗಳು ಸಂಚರಿಸುತ್ತವೆಂದು ಲೆಕ್ಕ ತೆಗೆದರು. ಹೈಡ್‌ಪಾರ್ಕ್ ಎಂಬಲ್ಲಿ ಮಧ್ಯಾಹ್ನ ಘಂಟೆ ೧೨ರ ವರೆಗೆ ಘಂಟೆಗೆ ಸರಾಸರಿ ೪೧ ೮೫೬ ವಾಹನಗಳು ಓಡುತ್ತವೆ. ಇದರಂತೆ ಇನ್ನೂ ೧೮ ಕಡೆಗಳಲ್ಲಿ ಲೆಕ್ಕ ತೆಗೆದಾಗ ಟ್ರಫಾಲ್ಗರ್ ಸ್ಕ್ವೇಯರ್‌ನಲ್ಲಿ ೬೪ ೭೬೦ ಮೋಟಾರುಗಳೂ, ಪೋರ್ಟರ್ ಆರ್ಚ್ ಎಂಬಲ್ಲಿ ೫೨,೧೯೩ ಮೋಟಾರುಗಳೂ ಪಿಕ್ಯಾಡಿಲ್ಲಿ ಎಂಬಲ್ಲಿ ೧೧,೧೬೦ ಮೋಟಾರುಗಳೂ ಚಲಿಸುತ್ತವೆಂದು ಗೊತ್ತಾಗಿದೆ.

ಭಯಂಕರ ನರ್ತನ!

ಮೆಸಚುಸೆಟ್ಸ್ ಎಂಬಲ್ಲಿ ೧೯೩೩ರ ಜೂನ್ ತಿಂಗಳಲ್ಲಿ ೬೦ ದಂಪತಿಗಳ ನರ್ತನವಾರಂಭವಾಯಿತು. ಈ ನರ್ತನವು ೧೯೩೪ರ ಜೂನ್ ತಿಂಗಳಲ್ಲಿ ಕೊನೆಗಾಣಬೇಕಾಗಿದೆ. ಇಡೀ ವರ್ಷ ನರ್ತನ ಮಾಡಿ ಕೊನೆಯ ವರೆಗೆ ನಿಲ್ಲುವವರಿಗೆ ಅಮೋಘವಾದ ಬಹುಮಾನಗಳನ್ನಿಟ್ಟಿರುವರು. ಜನವರಿಯು ದಾಟುವ ಒಳಗೆ ೨೦ ಜೋಡಿಗಳು ಬಿದ್ದುಹೋದುವು. ಇನ್ನು ೧೦ ಜೋಡಿಗಳು ದಿನೇ ದಿನೇ ನರ್ತನ ಮಾಡುತ್ತಾ ಜೂನ್ ತಿಂಗಳನ್ನು ದಾಟುವರೋ ಇಲ್ಲವೋ ತಿಳಿಯದಾಗಿದೆ.

ವಿಚಿತ್ರ ರೀತಿಯ ನಡಿಗೆಯು

ರಷ್ಯದಲ್ಲಿ ಒಬ್ಬನು ಅಂಬೆಗಾಲು ಹಾಕುತ್ತ ಜಗತ್ತಿನ ಸಂಚಾರಕ್ಕೆ ಹೊರಟಿರುವನು. ಇವನ ಈ ರೀತಿಯ ನಡೆಯಿಂದಾಗಿ ಇವನು ವಿಖ್ಯಾತಿಯನ್ನು ಹೊಂದಿರುತ್ತಾನೆ. ಇವನು ಈ ನಡೆಯಿಂದಾಗಿ ವಿಜಯಶಾಲಿಯಾಗುವುದು ದೈವಾಯತ್ತ ವಿಷಯವೆಂದೇ ಪ್ರತಿಯೊಬ್ಬನ ಹೇಳಿಕೆ. ಸ್ಕಾಟ್ಲೆಂಡಿನಲ್ಲಿ ಒಬ್ಬನು ತನ್ನ ಹೆಂಡತಿಯನ್ನು ಒಂದು ಚಕ್ರಕ್ಕೆ ಸಿಕ್ಕಿಸಿ ಆ ಚಕ್ರವನ್ನು ಮಾರ್ಗದಲ್ಲಿ ಹೊರಳಾಡಿಸುತ್ತಾ ತಾನು ಲೋಕಸಂಚಾರಕ್ಕೆ ತೆರಳಿರುವನು. ಅವನ ಪತ್ನಿಯ ಕಷ್ಟ ಸಹನಾಶೀಲತೆಯನ್ನು ಕಂಡು ಬೆರಗಾಗಿರುವರು. ಒಕ್ಸ್‌ಫರ್ಡಿನಿಂದ ಡಾ। ಎಚ್ ಕೌಲ್ಸನ್ ಎಂಬವನು ಕೈಯಲ್ಲಿ ಚಿಕ್ಕಾಸಿಲ್ಲದೆ ಭೂಪ್ರದಕ್ಷಿಣೆ ಮಾಡಬೇಕೆಂದು ಹೊರಟು ಈಗಾಗಲೇ ೨೦,೦೦೦ ಮೈಲುಗಳನ್ನು ದಾಟಿದನು. ಇವನು ಸಾವಧಾನವಾಗಿ ನಡೆಯುತ್ತಾ ಕೆಲಸವು ದೊರೆಯುವಲ್ಲಿ ಕೆಲವು ದಿನ ತಂಗಿ ಕೆಲಸ ಮಾಡಿ ಹಣ ಶೇಖರಿಸುತ್ತಾ ಮಾರ್ಗಕ್ರಮಣ ಮಾಡುತ್ತಿರುವನು. ಡೋವರ್‌ನಲ್ಲಿ ಇಬ್ಬರು ತರುಣರು ೬ ಶಿಲಿಂಗುಗಳಿಗೊಂದು ಸಣ್ಣ ಕಾರನ್ನು ಪಡೆದು ತಮ್ಮ ಕಾರಿನ ಚಿತ್ರವನ್ನು ವಿಕ್ರಯಿಸಿ ಹಣ ಶೇಖರಿಸುತ್ತಾ ಲೋಕಯಾತ್ರೆಗೆ ಹೊರಟಿರುವರು. ಲಂಡನಿನಿಂದ ಒಬ್ಬ ಮಧ್ಯವಯಸ್ಕನು ಹಿಂದೆ ಹೆಜ್ಜೆಯಿಡುತ್ತಾ ನಡೆದು ಭೂಸಂಚಾರಕ್ಕೆ ತೊಡಗಿರುವನು.

ಮನುಷ್ಯರಿಗೆ ಪರಮ ಶತ್ರುಗಳಾರು?

ಕಾಡಿನಲ್ಲಿರುವ ಹುಲಿಕರಡಿಗಳಲ್ಲ! ಕ್ರಿಮಿಕೀಟಗಳೂ ಅಲ್ಲ! ವಿಷ ಸರ್ಪಗಳೂ ಅಲ್ಲ. ಕಣ್ಣಿಗೆ ಕಾಣದ ಸೂಕ್ಷ್ಮ ಕ್ರಿಮಿಗಳೇ ಮಾನವ ವರ್ಗದ ಪರಮ ವೈರಿಗಳು. ಆ ಸೂಕ್ಷ್ಮ ಕ್ರಿಮಿಗಳಾವುವು, ರಕ್ತವನ್ನು ಕೆಡಿಸತಕ್ಕ ಕೆಲವು ಜಾತಿಯ ಕ್ರಿಮಿಗಳು. ಕಾಲಾಧೀನರಾದ ಸರ್ ಫ್ರೆಡರಿಕ್ ಅಂಡ್ರೂಸ್ ಎಂಬವರು ಅವು "ಹೆಮೊಲಿಟಿಕ್ ಸ್ಟ್ರೆಪ್ಟೋಕಾಕ್ಕಿ" ಎಂಬ ವರ್ಗಕ್ಕೆ ಸೇರಿದುವೆಂದು ಹೇಳಿರುವರು. ಈ ಕ್ರಿಮಿಗಳು ನೂರಿಗೆ ಮಿಗಿಲಾಗಿ ಪೋಣಿಸಿಟ್ಟ ಹಾಗೆ ಸಾಲಾಗಿ ಸೇರಿಕೊಂಡು, ರಕ್ತದಲ್ಲಿರುವ ಕೆಂಪು ಕಣಗಳನ್ನೆಲ್ಲ ಕರಗಿಸಿ ಆದರಿಂದ ದೇಹಕ್ಕೆ ಬೇಕಾದ ಆಮ್ಲಜನಕ ವಾಯುವನ್ನು ಒದಗಿಸದಂತೆ ಮಾಡುವುವು. ಅವುಗಳಲ್ಲಿ ಹಲವು ಬಗೆಯುಂಟು. 'ಸ್ಕಾರ್ಲೆಟ್ ಜ್ವರ, ನ್ಯುಮೋನಿಯಾ, ನಾನಾ ತರದ ಹೃದಯ ರೋಗಗಳು, ಬಾಣಂತಿಯರಿಗೆ ಉಂಟಾಗುವ ವ್ಯಾಧಿಗಳು, ವಿಷವ್ರಣಗಳು, ಇವೆಲ್ಲ ಆ ಕ್ರಿಮಿಗಳಿಂದಲೇ ಉಂಟಾಗುವುವು. ರೋಗಗಳು ಗುಣವಾದ ಮೇಲೆಯೂ ಇವು ದುರ್ಬಲವಾದ ದೇಹದಲ್ಲಿ ಪ್ರವೇಶಿಸಿ ಆ ರೋಗವು ಮರುಕೊಳಿಸುವ ಹಾಗೆ ಮಾಡುವುವು. ಅಲ್ಲದೆ ಈ ಕ್ರಿಮಿಗಳು ಆಯಾ ಸನ್ನಿವೇಶಕ್ಕೂ ಆಹಾರ ಗುಣಕ್ಕೂ ತಕ್ಕಂತೆ ತಮ್ಮ ಆಕೃತಿಗಳನ್ನೂ ಗುಣವನ್ನೂ ಮಾರ್ಪಡಿಸಿಕೊಳ್ಳಬಲ್ಲುವಾದುದರಿಂದ ಇವುಗಳ ನಿಜಸ್ಥಿತಿಯನ್ನು ಕಂಡು ತಿಳಿಯುವುದು ಎಂತಹ ನಿಪುಣರಿಗೂ ಕಷ್ಟವಾಗುವುದು.

ಮಹಾಪರಾಧ

ಹಿಲಿ ಎಂಬಲ್ಲಿ ಸಬ್ ಇನ್ಸ್‌ಪೆಕ್ಟರೊಬ್ಬರು ಸಿಗರೇಟು ಸೇದುತ್ತಿದ್ದಾಗ ಮೋಹನ ಗೋಸ್ವಾಮಿ ಎಂಬ ಸ್ವದೇಶಿ ಭಕ್ತನೊಬ್ಬನು 'ಆ ಸಿಗರೇಟು ಪರದೇಶದ್ದು, ಅದನ್ನು ಮುಟ್ಟಬೇಡಿ—ಬಿಸಾಡಿರಿ' ಎಂದನು. ಸಬ್ ಇನ್ಸ್‌ಪೆಕ್ಟರಿಗೆ ಕೋಪವಾಗಿ ಅವರು ದಾವೆ ಹೂಡಿದರು. ಗೋಸ್ವಾಮಿಗೆ ೧೮ ತಿಂಗಳ ಕಠಿಣ ಶಿಕ್ಷೆಯು ವಿಧಿಸಲ್ಪಟ್ಟಿತು. ಅದರ ಮೇಲೆ ೧೦೦ ರೂಪಾಯಿಗಳ ದಂಡವೂ ಆಯಿತು. ಗೋಸ್ವಾಮಿಯು ಈಗ ಹೈಕೋರ್ಟಿಗೆ ಅಪೀಲು ಮಾಡಿರುವನು.

ಪ್ರಕಟಣೆ.

ಕಾರ್ಕಳ, ತಾರೀಖು 16 – 1—1934

ಸುಬ್ಬಣ್ಣ—ಅರ್ಜಿದಾರ

ಕಾರ್ಕಳ ತಾಲೂಕು ಮಿಜಾರು ಮಾಗಣೆ, ಬಡಗು ಮಿಜಾರು ಗ್ರಾಮದಲ್ಲಿ ವಾಸವಾಗಿರುತ್ತಿದ್ದು ಹಾಲಿ ಮೃತ ವಾಗಿರುವ ವೀರಯ್ಯ ಯಾನೆ ಕೊರಗಪ್ಪನಿಗೆ ಬರಾ ಸಾಲಗಳ ವಸೂಲಿ ಬಗ್ಗೆ ತನಗೆ ವಾರಿಸ ಸರ್ಟಿಫಿಕೇಟು ಕೊಡಬೇಕಾಗಿ ಕೇಳಿ ಮಿತಾಕ್ಷರ ಹಿಂದೂ ಲಾ ಆಚರಣೆಯು ಅವನ ಮಗ, ಮೇಲೆ ಹೆಸರು ಕಾಣಿಸಿರುವ ಅರ್ಜಿದಾರನು ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ O P No 5/1934ನೆಗೆ ದಾಖಲು ಮಾಡಿರುವ ಅರ್ಜಿಯು ತಾ 20—2—1934ಕ್ಕೆ ಮಂಗಳವಾರ ದಿನ ಬೆಳಗ್ಗೆ 11 ಘಂಟೆಗೆ ತನಿಖೆಗೆ ಇಡಲ್ಪಟ್ಟಿರುತ್ತದೆ ಎಂತಲೂ ಸದ್ರಿ ಅರ್ಜಿದಾರನ ಅರ್ಜಿ ಪ್ರಕಾರ ವಾರಿಸ ಸರ್ಟಿಫಿಕೇಟು ಯಾಕೆ ಕೊಡಕೂಡದು ಎಂಬ ಬಗ್ಗೆ ಸಬಬು ತೋರಿಸಲಿಕ್ಕೆ ಅಪೇಕ್ಷೆ ಉಳ್ಳವರು ತಾ 20—2—1934ನೇ ದಿನ ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿಗೆ ಮೇಲೆ ಹೇಳಿದ ಹೊತ್ತಿನಲ್ಲಿ ಸ್ವತಹಾ ಯಾವ ವಕೀಲರ ಮುಖಾಂತ್ರ ಹಾಜರಾಗಿ ತಮ್ಮ ಆಕ್ಷೇಪಗಳನ್ನು ಹೇಳಿಕೊಳ್ಳಬಹುದು. ಸಂಬಂಧಪಟ್ಟ ಸರ್ವರೂ ಇದನ್ನು ತಿಳಿದಿರಬೇಕು.

ಕೋರ್ಟಿನವರ ಅಪ್ಪಣೆ ಪ್ರಕಾರ,

ಇಡ್ಯ ವಾಸುದೇವಯ್ಯ, ಬಿ. ಎ, ಬಿ ಎಲ್,

ಅರ್ಜಿದಾರನ ಕಡೆ ವಕೀಲ

RAJULU & Co.,

Are pleased to announce that in view of the increasing popularity of Morris, Dodge and Crysler Cars in South Kanara and for the convenience of present and prospective clients, a Sales and Service Station has been opened at Cantonment Road Maidan View Mangalore

RAJULU & Co,
Authorized District Dealers for
West Coast for Addison & Co Ltd Madras

ಮೋರಿಸ್, ಡೋಜ್ ಮತ್ತು ಕ್ರೈಸ್ಲರ್—ಈ ಕಾರುಗಳ ಮೇಲಿನ ಜನತೆಯ ಅಭಿಮಾನವು ದಿನೇ ದಿನೇ ಹೆಚ್ಚುತ್ತಿರುವುದರಿಂದಲೂ, ಈಗಿನ ಮತ್ತು ಮುಂದಿನ ಗಿರಾಕಿಗಳಿಗೆ ಸೌಕರ್ಯವನ್ನು ಒದಗಿಸಿಕೊಡಬೇಕೆಂಬುದರಿಂದಲೂ ಮಂಗಳೂರಿನ ಮೈದಾನು ಬಳಿಯ ಕಂಟೋನ್ಮೆಂಟ್ ರಸ್ತೆಯಲ್ಲಿ, ಮಾರಾಟದ ಮತ್ತು 'ಸರ್ವೀಸಿನ ಒಂದು ಹೊಸದಾದ 'ಸ್ಟೇಶನನ್ನು ಈಗ ತೆರೆದಿದೆ ಎಂದು ಪ್ರಕಟಿಸಲು ಸಂತೋಷಪಡುತ್ತೇವೆ

ರಾಜುಲು ಅಂಡ್ ಕೋ.

ಎಡಿಸನ್ ಮತ್ತು ಕಂಪೆನಿ, ಮದ್ರಾಸ್ (ಇದರ ಪರವಾಗಿ ಪಶ್ಚಿಮ ಕರಾವಳಿಗೆಲ್ಲ ಅಧಿಕಾರ ಹೊಂದಿದ ಜಿಲ್ಲಾ ವಹಿವಾಟುಗಾರರು)

23/12

ಅಗ್ಗ! 12 ಸೆಂಟ್ ಬಾಟ್ಲಿಗಳು!

ಬೆಸ್ಟ್ ಫೌಂಟನ್ ಪೇನಾ—15 ಅಣೆ



ಬ್ರಿಟಿಷ್ ಮೇಡ್, ಕ್ಯಾರೆಟ್ ಬಂಗಾರದ ಮುಳ್ಳು ಹಾಕಿದೆ. ಅಕ್ಷರಗಳು ಮುತ್ತುಗಳ ಹಾಗೆ ಮುದ್ದಾಗಿ ಬರೆಯುವುದು. ಇದನ್ನು ಈ ತಿಂಗಳ ಒಳಗೆ ತರಿಸಿಕೊಳ್ಳುವವರಿಗೆ 1 ಡಜನ್ ರೋಸ್, ಜಸ್ಮಿನ್, ಜಾಜಿಗೆ ಮೊದಲಾದ ಪರಿಮಳ ದ್ರವ್ಯದ ಸೀಸೆಗಳು ಬಹುಮಾನವಾಗಿ ಕೊಡಲ್ಪಡುತ್ತವೆ. ಕಡಿಮೆ ಕ್ರಯ ಪೇನಾ ಕ್ಕೆ 10 ಅಣೆ ಮಾತ್ರ,

ಸಿ ರಾಜ ಅಂಡ್ ಕಂಪೆನಿ,

28 ಪೆರುಮಾಳ್ ಕೋವಿಲ್ ಗಾರ್ಡನ್ ಬೀದಿ,

ಸಾಹುಕಾರ ಪೇಟೆ, ಮದ್ರಾಸ್

ಮೂಲೆ ಮೂಲೆಯಿಂದ

ಬಂಟ್ವಾಳ:—ಸ್ಪೆಶಲ್ ನೈಟ್ ಶಾಲೆಗಳಲ್ಲಿ ತರಿತು ಬಿಷ್ಟ ಟ ಅನ್ನವೆಕ್ಟರಿಂದ VIIIನೆ ದರ್ಜೆ ಸರ್ಟಿಫಿಕೇಟು ಪಡೆದ ಲೋವರ ಗ್ರೇಡ್ ಟ್ರೇಂಡ್ ಉಪಾಧ್ಯಾಯರ ಸರ್ಟಿಫಿಕೇಟುಗಳು ಹಾಯರ ಗ್ರೇಡ್ ಸರ್ಟಿಫಿಕೇಟುಗಳಾಗಲಿಕ್ಕೆ ಕಳೆದ ನವಂಬರ ತಿಂಗಳಲ್ಲಿ ಡೈರೆಕ್ಟರವರು ಮಂಗಳೂರಿಗೆ ಬಂದಾಗ ರಾ|| ಮೊಳಹಳ್ಳಿ ಶಿವ ರಾಯರವರ ಮುಂದಾಳುತನದಲ್ಲಿ ಒಂದು ಡೆಪ್ಯುಟೇಶನ್ ಹೋಗಿತ್ತು. ಅದಕ್ಕೆ ಯಾವ ಉತ್ತರವನ್ನು ಡೈರೆಕ್ಟರವರು ಕೊಟ್ಟರು ಎಂಬುದು ತಿಳಿಯುವುದಿಲ್ಲ. ಆದರೆ ಬಂಟ್ವಾಳ ಸ್ಪೆಶಿಯಲ್ ನೈಟ್ ಸ್ಕೂಲಿನಿಂದ ೫ ರೂ. ಪೆನಲ್ಟಿ ಫೀಸನ್ನಾ ದರೂ ತೆಗೆದುಕೊಂಡು ಆ ಸರ್ಟಿಫಿಕೇಟುಗಳನ್ನು ಬದಲಾಯಿಸಿ ಉಪಾಧ್ಯಾಯರನ್ನು ರಕ್ಷಿಸಬೇಕೆಂದು ಡೈರೆಕ್ಟರವರಿಗೆ ಬರೆದು ದಕ್ಕೆ ಪ್ರತ್ಯುತ್ತರವಾಗಿ ಈ ಕೆಳಗಿನ ಹುಕುಂ ಬಂದಿರುತ್ತದೆ.

N. Dis. on C. 2995—E/33 Dated 6—12—'33 of the Director of Public Instruction Madras on the Petition regarding conversion of Teachers' Certificates.

With reference to Proceedings R C. No. 2021/E 32 Dated 12—12—'33 the Manager of Special Night School is informed that Lower Elementary Trained teachers' Certificates cannot be converted into one of the Higher Elementary Grade after 4—9—'33 (the date of the Issue of G. O. No. 1581 Law Edu) even if the teachers have succesfully undergone the Higher Literary course prior to that date—"G. O. No. 1581/4-9-33 ಕೊಟ್ಟ ಮೇಲೆ ಲೋವರ ಎಲಿಮೆಂಟರಿ ಗ್ರೇಡಿನ ಸರ್ಟಿಫಿಕೇಟುಗಳನ್ನು ಹಾಯರ ಗ್ರೇಡಿಗೆ ಬದಲಾಯಿಸಲು ಅವರು ಆ G. O ತಾರೀಕಿನ ಮೊದಲು ಹಾಯರ್ ಲಿಟರರಿ ಪರೀಕ್ಷೆ ಪಾಸಾದರೂ ಸಾಧ್ಯವಿಲ್ಲ' ಇನ್ನು ಗವರ್ನಮೆಂಟ್ ಸೆಕ್ರೆಟರಿಯವರಿಗೆ ಬರೆಕೊಂಡ ಮನ ವಿಗೆ ಯಾವ ಹುಕುಂ ಬರಲಿಕ್ಕಿದೆಯೋ ನೋಡಲಿಕ್ಕಿದೆ.

ಅಡ್ಯಾರು:—ಇಲ್ಲಿನ ಶ್ರೀ ಮಹಾಲಿಂಗೇಶ್ವರ ಕೃಷಿ ಪ್ರೋಷಿತ ಸಂಘದ ಉಪಾಧ್ಯಕ್ಷರೂ ಶ್ರೀಮಂತ ಬಂಟ ತರು ಣರೂ ಆದ ಶ್ರೀಯುತ ಅಡ್ಯಾರು ಗುತ್ತು ಅಚ್ಚಣ್ಣ ಸೇಕರ ವರು ಇದೇ ಕಳೆದ ತಾರೀಕು ೧೨ನೇ ಶುಕ್ರವಾರ ದಿನ ಅಕಾಲ ಮರಣಕ್ಕೆ ತುತ್ತಾದರೆಂಬುದನ್ನು ತಿಳಿಸಲು ತುಂಬಾ ವಿಷಾದ ವೆನಿಸುತ್ತದೆ. ದಿವಂಗತರ ಆತ್ಮಕ್ಕೆ ಪರಮಾತ್ಮನು ಸದಾ ಶಾಂತಿ ಯನ್ನು ಕೊಡಲೆಂದು ಪ್ರಾರ್ಥಿಸುತ್ತೇವೆ.

ಅಖಿಲ ಭಾರತ ಆಯುರ್ವೇದ ವಿದ್ಯಾಪೀಠದ ಪರೀಕ್ಷೆಗಳು.

ಭಿಷಗ್ ವಿಶಾರದ ಮತ್ತು ಆಚಾರ್ಯ ಪರೀಕ್ಷೆಗಳು ಎಂದಿ ನಂತೆ ಈ ವರ್ಷವೂ ಕೇಂದ್ರವಾದ ಶಿವಮೊಗ್ಗದಲ್ಲಿ ತಾ. ೨೫ನೇ ಮಾರ್ಚಿ ೩೧ರಿಂದ ನಡೆಯುವುವು.

ದರಖಾಸ್ತುಗಳು ರುಸುಂ ಸಮೇತ ವಿದ್ಯಾಪೀಠ ಮಂತ್ರಿ ಗಳು—ಪೂನಾ ೨. ಇವರಿಗೆ ಫೆಬ್ರವರಿ ೨೨ರ ಒಳಗಾಗಿ ತಲಪ ಬೇಕು. ದರಖಾಸ್ತು ಫಾರಂಗಳನ್ನು ಪಾರ್ಥನಾರಾಯಣ ಪಂಡಿತ ಶಿವಮೊಗ್ಗ, ಇವರಿಂದ ತರಿಸಿಕೊಳ್ಳಬಹುದು.

ವಿಟ್ಲ:—ಈ ಅಸಪಾಸಿನ ವರ್ಗದಾರರ ಸಭೆಯು ಇದೇ ತಾ. ೭-೧-'೩೪ರಲ್ಲಿ ಮ. ರಾ. ರಾ. ವಿ. ರಾಜಲಕ್ಷ್ಮೀ ನಾಥ ಸ್ವಾಮಿಜಯವರ ಅಧ್ಯಕ್ಷತೆಯಲ್ಲಿ ವಿಟ್ಲ ಹಾ. ಎಲಿ ಮೆಂಟರಿ ಶಾಲಾ ಕಟ್ಟಡದಲ್ಲಿ ಜರಗಿತು. ಸುತ್ತುಮುತ್ತಲಿನ ಗ್ರಾಮಗಳಿಂದ ಹಲವು ಜನ ಮಹನೀಯರು ಚಿತ್ತೈಸಿದ್ದರು. ಈ ಕೆಳಗೆ ಕಾಣಿಸಿದ ನಿರ್ಣಯಗಳು ಸರ್ವಾನುಮತದಿಂದ ಮಂಜೂರು ಮಾಡಲ್ಪಟ್ಟವು. (೧) ಪ್ರಕೃತ ದವಸಧಾನ್ಯ ಗಳಿಗೆ ಬೆಲೆಯು ಬಹಳ ಕಡಿಮೆಯಾಗಿರುವುದರಿಂದ ಸನ್ನ ರಿ. ಸೆಟ್ಲೆಮೆಂಟನ್ನು ಜ್ಯಾರಿಗೆ ತರಕೂಡದಾಗಿ ಮಾನ್ಯ ಸರಕಾರ ದವರೊಡನೆ ಕೇಳಿಕೊಳ್ಳಬೇಕೆಂದು ನಿರ್ಣಯಿಸಲಾಯಿತು. (೨) ಪ್ರಕೃತ ದವಸಧಾನ್ಯಗಳ ಬೆಳೆಯಲ್ಲಿ ರೈತರಿಗೆ, ತೀರ್ವೆ ತೆರುತ್ತ ಜೀವನ ನಡೆಸುವುದು ಕಷ್ಟವಾದುದರಿಂದ ಈಗಿನ ತೀರ್ವೆಯಲ್ಲಿ ಕನಿಷ್ಠಪಕ್ಷಕ್ಕೆ ಶೇಕಡಾ ೫೦ರಂತೆಯಾದರೂ ಕಡಿಮೆಮಾಡಬೇಕಾಗಿಯೂ ಮಾನ್ಯ ಸರಕಾರದವರೊಡನೆ ಕೇಳಿ ಕೊಳ್ಳಬೇಕೆಂದು ನಿಶ್ಚಯಿಸಲಾಯಿತು. (೩) ಮುಂಚಿನಿಂದಲೇ ಜಿಷ್ಟು ಬೆಮೆಯಾಗುತ್ತಿದ್ದ, ಭೂಮಿಗಳ ಕಿಸವ್‌ಗಳು ರಿ. ಸರ್ವೆಯಲ್ಲಿ ಸಹ ಪರಿಪಡಿಸಧಿರುವುದರಿಂದ ರೈತರಿಗೆ ಹೆಚ್ಚಿನ ನಷ್ಟ ಸಂಭವಿಸುವುದರಿಂದ ಅವುಗಳ ಸದರಿ ಹೆಚ್ಚು ಬೆಲೆ ಯನ್ನು ಕೂಡಲೆ ಸರಿಪಡಿಸಬೇಕಾಗಿ ಮಾನ್ಯ ಸರ ಕಾರದವರೊಡನೆ ಕೇಳಿಕೊಳ್ಳಬೇಕೆಂದು ನಿರ್ಧರಿಸಲಾಯಿತು. (೪) ಪುರಕ್ಷಿತಮಾಡಿದ ಕಾಡುಗಳ ಕುರಿತು ರೈತರಿಗಿದ್ದ ರಿಯಾ ಯತಿಗಳನ್ನು ಇತ್ತೀಚೆಗೆ ಮನ್ನಾ ಮಾಡಿದ್ದರಿಂದ ರೈತರ ನಾಗು ವಳಿ ಮುಂತಾದ ಅನುಕೂಲತೆಗಳಿಗೆ ಹೆಚ್ಚಿನ ಭಂಗ ಒದಗಿಸು ವುದರಿಂದ ಮೊದಲಿದ್ದ ರಿಯಾಯತಿಗಳನ್ನು ಮುಂದೆಯೂ ಊರ್ಜಿತದಿಂದ ಇರಗೊಳಿಸಬೇಕಾಗಿ ಮಾನ್ಯ ಸರಕಾರದವ ರೊಡನೆ ಕೇಳಿಕೊಳ್ಳಬೇಕೆಂದು ನಿರ್ಣಯಿಸಲಾಯಿತು.

ಶ್ರೀ. ಯಡನೀರು ಮಠ:—ಇಲ್ಲಿ ಇದೇ ಬರುವ ತಾ. ೨೯ನೆಯ ಸೋಮವಾರ ಶ್ರೀಮದ್ಗುರುಗಳವರ ಆರಾ ಧನೆಯ ದಿವಸ ಧಾರ್ಮಿಕ ಮತ್ತು ವಿದ್ಯಾವಿಷಯಗಳ ಕುರಿತು ವಿದ್ವನ್ಮಣಿಗಳ ಭಾಷಣಗಳೂ ಮತ್ತು ಅದೇ ದಿವಸ ರಾತ್ರಿ ಶ್ರೀ. ಬಲಿಪನಾರಾಯಣ ಭಾಗವತರ ಹಾಡುವಿಕೆಯಿಂದ ಯಕ್ಷ ಗಾನ ಇವುಗಳೂ ನಂವೇರಲಿರುವದರಿಂದ ಸದರಿ ಸಮಾರಂಭ ಸರ್ವರಿಗೂ ಸುಸ್ವಾಗತವಿದೆಯೆಂದು ಶ್ರೀ ಸ್ವಾಮಿಗಳ ಅನುಜ್ಞೆ ಯಿಂದ ಎಡ್ವೊಕೇಟ್ ಕೆ. ಬಾಲಕೃಷ್ಣರಾಯರು ತಿಳಿಸುತ್ತಾರೆ.

ಉಡುಪಿ:—ಸಂಕ್ರಮಣ ಜಾತ್ರೆಯು ಆರಂಭವಾಗಿದೆ. ಕಳೆದ ಲಕ್ಷದೀಪದಷ್ಟು ಸಹ ಜನಸ್ತೋಮವಿಲ್ಲ. 'ಪರಿಶೆ' ಜನರು ಬಹಳ ಕಡಿಮೆ. ಪರ್ಯಾಯ ಪಟ್ಟವನ್ನೇರುವ ಶ್ರೀ. ಕಾಣೂರು ಮಠದ ವಿದ್ಯಾ ಸಮುದ್ರ ತೀರ್ಥ ಶ್ರೀಪಾದಂಗಳ ವರಿಗೆ ಶ್ರೀ ಕೃಷ್ಣಸನ್ನಿಧಾನದಲ್ಲಿಯೂ ಶ್ರೀ ಕೃಷ್ಣಾಪುರ ಮಠ ದಲ್ಲಿಯೂ ಔತಣ ಸನ್ಮಾನಗಳಾದುವು.

ಪೆರಡಾಲ:—ಇಲ್ಲಿನ ಮಹಾಜನ ಸಂಸ್ಕೃತ ಶಾಲೇ ಜಿನ ಪ್ರಿನ್ಸಿಪಾಲರೂ ಘನ ಸಂಸ್ಕೃತ ಪಂಡಿತರೂ ಆಗಿದ್ದ ಬ್ರಹ್ಮ ಶ್ರೀ. ಮಹೋಪಾಧ್ಯಾಯ ಪು. ಶಂಕರ ಶಾಸ್ತ್ರಿಗಳವರು ಇದೇ ಕಳೆದ ತಾ. ೨೯-೧೨-'೩೩ನೆಯ ಸೋಮವಾರ ಅಕಾಲ ಮರಣಕ್ಕೆ ತುತ್ತಾಗಿ ಸ್ವರ್ಗಸ್ಥರಾದರೆಂಬ ವಿಷಯದಲ್ಲಿ ನಾವೆ ಲ್ಲರೂ ತುಂಬಾ ವಿಷಾದಿಸುತ್ತಿದ್ದೇವೆ.

ಮೈಸೂರು ವಾರ್ತೆ

ಮೈಸೂರು ಮಹಾರಾಣಿ ಕಾಲೇಜಿನ 'ಅಸಿಸ್ಟೆಂಟ್' ಪ್ರೊಫೆಸರ್' ಶ್ರೀಮತಿ ಬಿ. ಎ. ವಾಟ್ಸನ್‌ರವರನ್ನು ಬೆಂಗಳೂರು ಇಂಟರ್ ಮೀಡಿಯಟ್ ಕಾಲೇಜು ಸುಪರಿಂಟೆಂಡೆಂಟನ್ನಾಗಿ ನೇಮಿಸಿದ್ದಾರೆ.

ಪಬ್ಲಿಕ್ ಅಕೌಂಟ್ ಕಮಿಟಿಗೆ ೧೯೩೩-೩೪ನೇ ವರ್ಷಕ್ಕೆ ಸರ್ಕಾರದ ಪರವಾಗಿ ಸರಕಾರದ ಅರ್ಥಿಕ ಕಾರ್ಯದರ್ಶಿ ಗಳನ್ನೂ, ಸಾರ್ವಜನಿಕರ ಪರವಾಗಿ ಶ್ರೀಯುತರುಗಳಾದ ಗುಂಡಪ್ಪಗೌಡ, ಬಿ. ಚೆನ್ನಪ್ಪ, ಪಿ. ಸುಬ್ರಮಣಿಚೆಟ್ಟಿ, ಎಚ್. ಸಿದ್ದಯ್ಯ ಇವರುಗಳನ್ನೂ ನೇಮಿಸಿದ್ದಾರೆ.

ಕೃಷ್ಣರಾಜ ಸಾಗರದ ಉದ್ಯಾನವನವನ್ನು ನೋಡಲು ಹೋದವರಿಗೆ ಒಂದಾಣೆ ಸುಂಕವನ್ನು ಹಾಕಿರುವರಷ್ಟೆ. ಶಿಕ್ಷಣ ಶಾಖೆಯಿಂದ ಅಂಗೀಕೃತವಾದ ಶಾಲಾ ವಿದ್ಯಾರ್ಥಿಗಳು ಸರಿ ಯಾದ ದಸ್ತಾವೇಜಿ ಪತ್ರವನ್ನು ಬರೆಸಿಕೊಂಡು ಬಂದರೆ ಅಂತಹ ವರಿಗೆ ಅರ್ಧಶುಲ್ಕ ಕೊಡಬಹುದೆಂದು ಆಜ್ಞೆ ಮಾಡಿದ್ದಾರೆ.

ಪೋಲೀಸ್ ಇನ್ಸ್‌ಪೆಕ್ಟರ್ ಶ್ರೀ ಎಚ್. ಶ್ರೀನಿವಾಸ ಯ್ಯಂಗಾರ್ಯರನ್ನು ಅಸಿಸ್ಟೆಂಟ್ ಸುಪರಿಂಟೆಂಡೆಂಟರನ್ನಾಗಿ ಮಾಡಿ ಬೆಂಗಳೂರು ಪೋಲೀಸು ಶಿಕ್ಷಣ ಶಾಲೆಗೆ ಹಾಕಿದ್ದಾರೆ.

ಚಿಂತಾಮಣಿ ಮಹಾಲಕ್ಷ್ಮಮ್ಮನ ಮೊಕದ್ದಮೆಯಲ್ಲಿ ಶಿಕ್ಷಿಸ ಲ್ಪಟ್ಟ ಅಪರಾಧಿಗಳ ಪರವಾಗಿ ಶ್ರೀ ರಾಜರತ್ನಂರವರು ಹೈ ಕೋರ್ಟಿಗೆ ಅಪೀಲು ಹಾಕಿ ಅಪರಾಧಿಗಳನ್ನು ಜಾಮೀನು ಮೇಲೆ ಬಿಟ್ಟುಬಿಡಬೇಕೆಂದು ಹೇಳಿದರು. ಇದರ ಚರ್ಚೆಯು ೧೮ನೇ ತಾರೀಕಿಗೆ ನಡೆಯುವುದು.

ಬೆಂಗಳೂರಿನ ಸೆಷನ್ಸ್ ಜಡ್ಜರಾದ ಶ್ರೀ ಶ್ರೀನಿವಾಸ ರಾಘ ವಾಚಾರಿಯವರು ಬೌದ್ಧಮತಾವಲಂಬಿಗಳಾದರೆಂಬ ಸುದ್ದಿಯು ಸುಳ್ಳೆಂದು ಗೊತ್ತಾಗಿದೆ.

ಗಾಂಧಿಜೀಯವರ ಆಗಮನದ ಪ್ರಯುಕ್ತ ಬೆಂಗಳೂರು ಖಾದಿ ವಸ್ತ್ರಾಲಯದವರು ಕಲಾಮಂದಿರದಲ್ಲಿ ಪ್ರದರ್ಶನ ವೊಂದನ್ನೇರ್ಪಡಿಸಿದ್ದರು. ನಾನಾ ಪ್ರಾಂತ್ಯಗಳಿಂದ ಬಟ್ಟೆಬರೆ ಗಳು ಬಂದಿದ್ದವು. ಮಹಾತ್ಮರು ಸ್ವಹಸ್ತದಿಂದ ನೈದ ಬಟ್ಟೆಯೂ ಗಾಂಧೀ ಸುದರ್ಶನ ಚರಕವೂ (ಇದು ಗಂಟೆಗೆ ೧೦೦೦ ಗಜ ಗಳ ದಾರ ತೆಗೆಯುವುದು) ಪ್ರದರ್ಶಿಸಲ್ಪಟ್ಟಿದ್ದವು.

ಬೆಂಗಳೂರು ದಂಡಿನ ಕಲೆಕ್ಟರರೂ, ಡಿಸ್ಟ್ರಿಕ್ಟ್ ಮ್ಯಾಜಿ ಸ್ಟ್ರೇಟರೂ ಆದ ಮಿ. ಜಿ. ಎಚ್. ಕುಕ್‌ರವರು ಸದ್ಯದಲ್ಲಿಯೇ ಮದರಾಸು ಸರಕಾರಕ್ಕೆ ಹಿಂದಕ್ಕೆ ತೆಗೆದುಕೊಳ್ಳಲ್ಪಡುವರು. ಅವರ ಸ್ಥಾನಕ್ಕೆ ಮಿ| ಎಲ್. ಜಿ. ಮ್ಯಾಕ್ ಪವರ್ ಎಂಬವ ರನ್ನು ನೇಮಕ ಮಾಡುವರೆಂದು ವರ್ತಮಾನ.

ಮೂಲ್ಕಿ:—ಪುಂಜಾಲಕಟ್ಟೆಯ ಡಾಕ್ಟರ್ ಶ್ರೀ ಯಸ್ ಸುಬ್ಬ ರಾಯರು ಇದೇ ಕಳೆದ ತಾ. ೩೦ನೇ ಶನಿವಾರ ಪೂರ್ವಾಹ್ನ ಘಂಟೆ ೮ಕ್ಕೆ ಸ್ಥಳೀಕ ಬೋರ್ಡು ಹಾಯರ್ ಎಲಿಮೆಂಟರಿ ಶಾಲಾ ವಿದ್ಯಾರ್ಥಿಗಳ ತರ್ಕ ಸಂಘದ ನೇತೃತ್ವದಲ್ಲಿ "ಆರೋಗ್ಯ ರಕ್ಷ ಣೆ"ಯ ಕುರಿತಾಗಿ ಸುಮಾರು ೨ ತಾಸುಗಳ ವರೆಗೆ ಉಜ್ವಲ ವಾಗಿ ಭಾಷಣವನ್ನು ಕೊಟ್ಟರು.

ಹಿಂದಿ ಪ್ರಚಾರಕರಾಗಿದ್ದಂತೆ ಮಂಗಳೂರಿನ ಸೈಂಟ್ ಅಲೋ ಸಿಯಸ್ ಕಾಲೇಜಿನ ಸಂಸ್ಕೃತ ಪಂಡಿತರಾದ ಬ್ರಹ್ಮ ಶ್ರೀ ಸಿಡ್ಲೀರು ಅನಂತ ಉಪಾಧ್ಯಾಯರು ಇದೇ ಕಳೆದ ತಾರೀಕು ೨೮-೧೨-೧೯೩೩ನೇ ಗುರುವಾರ ಸಾಯಂಕಾಲ ಘಂಟೆ ೫ಕ್ಕೆ ಸ್ಥಳೀಕ ಯೂನಿಯನ್ ಕ್ಲಬ್ಬಿನಲ್ಲಿ "ವೇದಕಾಲದ ಸಂಸ್ಕೃ ತಿಯೂ ಆ ಕಾಲದಲ್ಲಿನ ಹರಿಜನರ ಸ್ಥಾನವೂ" ಎಂಬ ವಿಷಯ ದಲ್ಲಿ ಸುಮಾರು ೨ ತಾಸುಗಳ ವರೆಗೆ ಉದಾತ್ತ ವಿಚಾರಗಳ ನ್ನೊಳಗೊಂಡ ಭಾಷಣವನ್ನು ಕೊಟ್ಟರು.

ಸ್ಥಳೀಕ ಕೊ-ಆಪರೇಟಿವ್ ಬೇಂಕಿನ ವರ್ಷಾವಧಿ ಮಹಾ ಸಭೆಯು ಇದೇ ಕಳೆದ ತಾ. ೭-೧-೩೪ನೇ ಆದಿತ್ಯವಾರ ಅಪ ರಾಹ್ನ ಸ್ಥಳೀಕ ಯೂನಿಯನ್ ಕ್ಲಬ್ಬಿನಲ್ಲಿ ಜರಗಿತು.

ಇಲ್ಲಿ ಕಳೆದ ೬ ವರ್ಷಗಳಿಂದ ಎಕ್ಸೈಜ್ ಸಬ್ ಇನ್ಸ್ ಪೆಕ್ಟರಾಗಿದ್ದ ಶ್ರೀ ಟಿ. ಗೋವಿಂದನ್ ನಾಯರರು ೩ ತಿಂಗಳ ರಜೆಯಲ್ಲಿ ಹೋಗಿರುತ್ತಾರೆ. ರಜೆ ಕಳೆದ ಮೇಲೆ, ಅವರು ಇಲ್ಲಿಗೇ ಬರಲಿರುವರೇ ಎಂಬುದು ಅನುಮಾನಕರವಿದೆ. ಅಂತೂ ಅವರು ಇಲ್ಲಿದ್ದ ಸಮಯ ಸರ್ವ ಗ್ರಾಮ ಪಕ್ಷೀಯರಾಗಿದ್ದು ಜನಪ್ರೀತರಾಗಿದ್ದರು.

ಹಿರಿಯಡ್ಕ:—ತಾ. ೬-೬-'೩೩ರಲ್ಲಿ ಸ್ಥಳೀಕ ತರುಣ ವೃಂದದಿಂದ 'ಮಿತ್ರಮಂಡಳಿ' ಎಂಬ ವಾಚನಾಲಯವು ಊರ ವ ಪರವೂರ ಸಹೃದಯರ ಉದಾರಾಶ್ರಯದಿಂದಲೂ, ಪ್ರೋತ್ಸಾ ಹದಿಂದಲೂ ಜನ್ಮವೆತ್ತಿರುವುದು.

ಕಾರ್ಕಳ ತಾಲೂಕು ವರ್ಗದಾರರ ಪರಿಷತ್ತು

ಈ ಮುಂಚಿನಿಂದಲೇ ಅತ್ಯಧಿಕವಾಗಿರುವ ತೀರ್ವೆಯನ್ನು ತಗ್ಗಿಸುವರೆ ಯತ್ನಿಸುವುದೂ, ಕಂದಾಯವನ್ನು ಏರಿಸಲು ಸರ ಕಾರದವರು ಜ್ಯಾರಿಗೆ ತರಬೇಕೆಂದಿರುವ ರಿಸೆಟ್ಲಮೆಂಟನ್ನು ತಡೆಯುವುದೂ, ಮತ್ತು ತಾಲೂಕಿನ ಭೂಮಾಲೀಕರಿಗೆ ಸಂಬಂಧ ಪಟ್ಟ ಎಲ್ಲಾ ಹಕ್ಕುಗಳನ್ನು ಕಾಪಾಡುವುದೂ ಇವೇ ಮೊದ ಲಾದುವುಗಳ ವಿಷಯ ಆಲೋಚಿಸಿ ಪ್ರಯತ್ನ ಮಾಡುವರೆ ಇದೇ ತಿಂಗಳ ತಾ. ೨೮ನೇ ಆದಿತ್ಯವಾರ ದಿವಸ ಮಧ್ಯಾಹ್ನ ೧ ಘಂಟೆ ಸಮಯಕ್ಕೆ ಕಾರ್ಕಳ ತಾಲೂಕಿನ ರೈತರ ಯಾ ಭೂಮಾಲೀಕರ ಪರಿಷತ್ತು ಶ್ರೀಯುತ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಕಾರ್ಕಳದಲ್ಲಿ ಬಂಟರ ಯಾನೆ ನಾಡವರ ಹೊಸ್ಟೇಲಿನಲ್ಲಿ ಜರಗುವುದು. ಎಲ್ಲಾ ರೈತರೂ ಭೂಮಾಲಿಕ ರಾಗಿರುವ ತಮ್ಮ ತಮ್ಮ ಸ್ನೇಹಿತರನ್ನು ಕರೆದುಕೊಂಡು ಬಂದು ಪರಿಷತ್ತನ್ನು ಯಶಸ್ವಿಯನ್ನಾಗಿ ಮಾಡಬೇಕೆಂದೂ ತಾಲೂಕು ವರ್ಗದಾರರ ಸಂಘದ ಸ್ವಾಗತ ಮಂಡಳಿಯ ಜತೆ ಕಾರ್ಯದರ್ಶಿ ವಕೀಲ್ ಮಟ್ಟಿ ಸುಬ್ಬರಾವ್ ಅಧಿಕಾರಿಯವರು ಎಲ್ಲಾ ರೈತ ರೊಡನೆ ವಿನಂತಿ ಮಾಡಿಕೊಳ್ಳುತ್ತಾರೆ.

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. No. 147/1933.

ದೂಮಕ್ಕೆ ಸಹಾ—ವಾದಿರು ಮತ್ತು ಮುತ್ತ ಸಹಾ— ಪ್ರತಿವಾದಿರು.

ಇವರೊಳಗೆ

ಕಾಸರಗೋಡು ತಾಲೂಕು ಎಣ್ಮಕಜೆ ಗ್ರಾಮದ ಸೇರಾಜೆ ಮನೆಯ ಪೊಳ್ಳಪ್ಪೆ ಹೆಂಗ್ಸಿನ ಮಗಳು—ದೂಮಕ್ಕೆ ಈಕೆ ಮಗ ದೇವಪ್ಪ ಆಕ್ಸ-ಕೂಡಾ ವಾದಿರಾಗಿ ಸದ್ರಿಯವರ ಕುಟುಂಬದ ಆಡಳ್ತೆದಾರಳು 1ನೇ ಪ್ರತಿವಾದಿ ಮತ್ತು ಸಟುಂ ಬದ ಬೇರೆ ಹಿರಿ ಮೆಂಬರರು 9 ಜನ ಪ್ರತಿವಾದಿರ ಮೇಲೆ ಕುಟುಂಬದ ಸ್ಥಿರಚರ ಸೊತ್ತುಗಳಿಂದ ತಮಗೆ ಸಿಕ್ಕಬೇಕಾದ ಗತ 6 ವರ್ಷಗಳ ಅಶನಾರ್ಥ ಮತ್ತು ಇನ್ನು ಮುಂದಿನ ವರ್ಷ ಗಳ ಅಶನಾರ್ಥ ಕುರಿತು ದಾವಾದೆಕಲು ಮಾಡಿರುತ್ತಾ ರೆಂತಲೂ ಸದ್ರಿ ದಾವೆಯು ಇದೇ ತಾ. 26-1-1934ಕ್ಕೆ ತನ್ನಿಗೆ ಇಟ್ಟಿದೆ ಎಂತಲೂ ಸದ್ರಿ ವ್ಯವಹಾರಕ್ಕೆ ಆಕ್ಷೇಪವುಳ್ಳ ಸದ್ರಿ ಕುಟುಂಬದ ಯಾವ ಮೆಂಬರನು ಕಕ್ಷಿಯಲ್ಲಿ ಸೇರಿ ಉವಹರಿಸಿಕೊಳ್ಳತಕ್ಕದ್ದು ಎಂತಲೂ ಈ ಮೂಲಕ ನೋಟೀಸು ಕೊಡೋಣವಾಗುತ್ತದೆ.

ಕಾಸರಗೋಡು 15—1—1934

H. S. Maiya,
Vakil for Plaintiff.

೧೯೩೪ರಲ್ಲಿ ಅನಾಹುತವೂ ರಕ್ತಪಾತವೂ!!!

೧೯೩೪ರಲ್ಲಿ ಅನಾಹುತವೂ ರಕ್ತಪಾತವೂ!

ಇದೇ ಜನವರಿ ತಾ. ೧೯ರಲ್ಲಿ ಅಂಗಾರಕನೂ ಶನಿಯೂ ಒಟ್ಟು ಗೂಡುವರು. ಸನಾತನಿಗೂ ಸುಧಾರಕರಿಗೂ ಹೋರಾಟವು ಬಹಳ ತೀಕ್ಷ್ಣವಾಗಿ ನಡೆಯುವುದು. ದೌರ್ಜನ್ಯವೂ ರಕ್ತಪಾತವೂ ಆಗು ವುವು. ಕಡೆಗೆ ದೊರೆತನದವರು ಸುಧಾರಕ ಪಕ್ಷವಹಿಸಿ ಸನಾತನರ ಶಕ್ತಿಕುಂದಿಸುವರು. ಬಂಗಾಳ ರಾಷ್ಟ್ರದಲ್ಲಿ ಅರಾಜಕ ಕೃತ್ಯಗಳು ಬಹಳ ಪ್ರಬಲಿಸುವವಂತೆ. ಅಲಹಾಬಾದಿನ ಜ್ಯೋತಿಷ ನಾಯಕರಿಗೆ ಕೆಲ ಘಟನೆಗಳು ಸಂಭವಿಸುವುವು ಜರ್ಮನಿ, ಪೋಲೆಂಡು, ಫ್ರಾನ್ಸು ದೇಶಗಳು ಮುಖ್ಯವಾಗಿ ಯುರೋಪು ಖಂಡದ ದೇಶಗಳೆಲ್ಲವೂ ಯುದ್ಧದಲ್ಲಿ ಸೇರುವವಂತೆ, ಜರ್ಮನಿ, ಫ್ರಾನ್ಸು, ಪೋಲೆಂಡು, ರುಮೇನಿಯಾ, ಇಟೆಲ್ಲಿ, ಮಂಚೂರಿಯ ಉತ್ತರ ಚೀನಾದೇಶಗಳಿಗೆ ಯುದ್ಧವಾಗುವ ಹಾಗಿದೆ ಈ ಜನವರಿ ೨೨ ೧೯೩೪ ಸಾಯಂಕಾಲ ೪ ಘಂಟೆಗೆ ೬ ಗ್ರಹಗಳು ಒಂದು ಕಡೆ ಸೇರುವವು ಇದಕ್ಕೆ ಗೋಲ ಯೋಗವೆಂದು ಹೆಸರು. ಇದರಿಂದ ಪ್ರಪಂಚಕ್ಕೆ ದುಃಸ್ಥಿತಿಯುಂಟಾಗು ವುದು, ರಾಜರು ಮೃತಿಹೊಂದುವುದು, ಅಗ್ನಿಪರ್ವತಗಳು ಸಿಡಿಯು ವುದು, ಪ್ಲೇಗು, ಕಾಲರ ಮುಂತಾದ ಅಂಟುರೋಗಗಳು ಪ್ರಬಲಿಸು ವುದು ಇತ್ಯಾದಿ ಉಪದ್ರವಗಳುಂಟಾಗುವುವು. ಕ್ಯೂಬಾ, ಬರ್ಮ, ಇಂಡ್ಯಾದಲ್ಲಿ ಪೂರ್ವ ಸಮುದ್ರ ತೀರ ಉತ್ತರ ಹಿಂದುಸ್ಥಾನಗಳಲ್ಲಿ ಭೂಕಂಪವಾಗಿ ಬಹಳ ನಷ್ಟಸಂಭವಿಸುವುದು ಈ ಗೋಲಯೋಗದಲ್ಲಿ ಭೂಮಕೇತು ಕಾಣಿಸಿಕೊಳ್ಳುವುದು, ೧೯೧೦ರಲ್ಲಿ ಈ ಗೋಲಯೋಗ ವಾದಾಗ ಧೂಮಕೇತು ಕಾಣಿಸಿಕೊಂಡಿದ್ದಿತು ಆಗ ಸಂಭವಿಸಿದ ಅನರ್ಥವು ಈಗಲೂ ಸಂಭವಿಸಬಹುದು ೧—೨ ವರ್ಷಗಳಲ್ಲಿ ಬಹಳ ಭಯಂಕರ ಯುದ್ಧವಾಗುವ ಸಂಭವವಿದೆ ಎಂದು ಮೈಸೂರು ಸ್ಟಾರ್ ಹೇಳುತ್ತಿದೆ.

ಆರೋಗ್ಯ ವಿಚಾರ.

ಮನುಷ್ಯರಿಗೆ ಬರತಕ್ಕ ವ್ಯಾಧಿಗಳಲ್ಲಿ ಇನ್‌ಸೋಮ್ನಿಯಾ ಪ್ರಬಲವಾದುದು. ಎಂದರೆ, ಸ್ವಲ್ಪವೂ ನಿದ್ರೆಬಾರದಂತೆ ಇರುವುದು. ಮನುಷ್ಯನ ದೇಹಾರೋಗ್ಯಕ್ಕೆ ಮೈಮರೆತು ಸುಖನಿದ್ರೆಯು ಬರಬೇ ಕಾದುದು ಅವಶ್ಯವು. ನಿದ್ರೆಯಿಂದಲೇ ದೇಹಕ್ಕೂ ಮನಸ್ಸಿಗೂ ಒಳ್ಳೇ ವಿಶ್ರಾಂತಿಯು ದೊರೆಯುವುದು. ಆದುದರಿಂದಲೇ ನಿದ್ರೆಯೆಂಬುದು "ಜೀರ್ಣವಾದ ದೇಹವನ್ನು ರಿಪೇರಿ ಮಾಡಿ, ತಿರುಗಿ ಹೊಸದಾಗಿ ಮಾಡು ವುದಕ್ಕೆ ದೈವಕಲ್ಪಿತವಾದ ಒಂದು ಏರ್ಪಾಡು" ಎಂದು ಹೇಳಬಹುದು. ಒಬ್ಬನಿಗೆ ಸರಿಯಾದ ನಿದ್ರೆ ಬಾರದಿದ್ದರೆ ಅವನು ಕಾಲಕ್ರಮದಿಂದ ಅನೇಕ ವ್ಯಾಧಿಗಳಿಗೆ ಒಳಗಾಗುವುದು ನಿಜವೇ. ನಿದ್ರೆಯಿಲ್ಲದಿರುವುದಕ್ಕೆ ಮುಖ್ಯ ಕಾರಣಗಳಾವುವೆಂದರೆ— ೧ ಪ್ರಮಾಣಕ್ಕೆ ಮೀರಿ ಭುಜಿಸು ವುದು. ೨ ದೇಹಕ್ಕೆ ತಕ್ಕಷ್ಟು ವ್ಯಾಯಾಮವಾಗಲಿ, ಕೆಲಸವಾಗಲಿ ಇಲ್ಲದಿರುವುದು ೩ ದೀರ್ಘಕಾಲದ ಅಥವಾ ತೀವ್ರವಾದ ವ್ಯಾಧಿ. ೪ ಕಾಫಿ, ಟೀ, ಹೊಗೆಸೊಪ್ಪು ಮುಂತಾದುವುಗಳನ್ನು ಹೆಚ್ಚಾಗಿ ಸೇವಿಸು ವುದು ೫. ಗಾಳಿಯು ಧಾರಾಳವಾಗಿಲ್ಲದ ಮನೆಗಳಲ್ಲಿ ಮಲಗು ವುದು ೬. ಬಹಳ ಕೆಲಸಮಾಡುವುದು, ಅಥವಾ ಅಧಿಕವಾಗಿ ಕಾಮ ಭೋಗವನ್ನನುಭವಿಸುವುದು ೭. ಮನಸ್ಸಿಗೆ ಚಿಂತೆ, ವ್ಯಾಕುಲ ನೋದ ಲಾದ ಕಳವಳವು. ಈ ಕಠಿಣವಾದ ವ್ಯಾಧಿಯನ್ನು ನಿವೃತ್ತಿಮಾಡಬೇ ಕಾದರೆ, ಈ ಕೆಳಗೆ ಕಾಣಿಸಿರುವ ಪ್ರಕೃತಿ ಚಿಕಿತ್ಸೆಯನ್ನು ಆರಂಭದಶೆ ಯಲ್ಲಿಯೇ ಅನುಸರಿಸಬೇಕು ೧ ಊಟವಾದ ಕೂಡಲೆ ನಿದ್ರೆ ಮಾಡಲು ಹೋಗಬಾರದು ಊಟವಾದ ಮೇಲೆ ಮಲಗುವುದಕ್ಕೆ ಮೊದಲು ಕೊನೆ ಪಕ್ಷ ಎರಡು ಘಂಟೆಗಳ ಕಾಲವಾದರೂ ಅವಕಾಶ ವನ್ನು ಬಿಡಬೇಕು. ಅಲ್ಲದೆ ಭೋಜನ ಮತ್ತು ನಿದ್ರೆ, ಇವೆರಡನ್ನೂ ಯಾವಾಗಲೂ ನಿಯಮಿತ ಕಾಲದಲ್ಲಿಯೇ ನಡೆಸಬೇಕು. ೨ ರಾತ್ರಿ ಭೋಜನವಾದೊಡನೆ ಸ್ವಲ್ಪ ಹೊತ್ತು ಮೆಲ್ಲಗೆ ನಡೆಯುತ್ತಿರಬೇಕು. ಇದರಿಂದ ಒಳ್ಳೇ ನಿದ್ರೆಬರುವುದು. ನಿದ್ರೆ ಬರಲಾರದೆಂಬ ಭಾವನೆಯಿಂದ ಹೋಗಿ ಮಲಗಬಾರದು. ಆ ಭಾವನೆಯೇ ನಿದ್ರೆ ಬಾರದಂತೆ ಮಾಡುವು ದುಂಟು. ೩. ಬೆಳಗ್ಗೆ ಮತ್ತು ಸಾಯಂಕಾಲಗಳಲ್ಲಿ ಲಘುವಾದ ವ್ಯಾಯಾಮಗಳನ್ನು ಮಾಡಬೇಕು. ವ್ಯಾಯಾಮವನ್ನು ಮಾಡಿದ ಸ್ವಲ್ಪ ಹೊತ್ತಿನ ಮೇಲೆ ಬಿಸಿನೀರಿನಲ್ಲಿ ಸ್ನಾನ ಮಾಡಬೇಕು. ೪ ಯಾವಾ ಗಲೂ ಧಾರಾಳವಾಗಿ ಗಾಳಿ ಬೀಸುವ ಕಡೆಗಳಲ್ಲಿಯೇ ಮಲಗಬೇಕು. ಶುದ್ಧವಾದ ಗಾಳಿಯೇ ನಿದ್ರೆಗೆ ಅವಶ್ಯಕವು. ೫ ಮಲಬಂಧವನ್ನು ನೀಗಿಸಬೇಕು, ಇದೂ ನಿದ್ರೆಬಾರದಂತೆ ಮಾಡುವುದು ೬ ನಿದ್ರೆಗೆ ಹೋಗುವ ಮೊದಲು ಒಂದು ಟಂಬ್ಲರ್ ಬಿಸಿ ಹಾಲನ್ನು ಕುಡಿಯ ಬಹುದು. ದೇಹಕ್ಕೆ ಸೌಕರ್ಯವಾದಂತೆ ಹಾಸಿಗೆಯನ್ನು ಸಿದ್ಧಪಡಿಸಿ ಕೊಂಡು ಮಲಗಬೇಕು. ಹಾಸಿಗೆಯು ಬಹಳ ಮೆತ್ತಗೂ ಇರಬಾರದು. ಬಹಳ ಕಠಿಣವಾಗಿಯೂ ಇರಬಾರದು ೭. ಮಲಗುವಾಗ ಕೈಕಾಲು ಗಳನ್ನು ಸುಖಿಯಾಗಿ ಚಾಚಿದು ಮಲಗಬೇಕು ತಲೆಯು ದೇಹ ಕ್ಕಿಂತಲೂ ಸ್ವಲ್ಪ ಎತ್ತರವಾಗಿರುವಂತೆ ತಲೆದಿಂಬನ್ನು ಇಟ್ಟುಕೊಂಡು ಮಲಗಬಹುದು ೮. ನಿದ್ರೆಗೆ ಹೋಗುವಾಗ ಯಾವ ಯೋಚನೆ ಗಳನ್ನೂ ಮನಸ್ಸಿನಲ್ಲಿಟ್ಟುಕೊಳ್ಳದೆ ಚಿಂತೆ, ಕಳವಳ, ಕ್ರೋಧಾದಿ ಮನೋವಿಕಾರಗಳೊಂದಕ್ಕೂ ಎಡೆಗೊಡದ ಮನಸ್ಥಿತಿಯಿಂದಿರಬೇಕು ೯. ದೀರ್ಘಕಾಲದ ವ್ಯಾಧಿಯಿದ್ದವರು ಮಲಗಲು ಹೋಗುವ ಮೊದಲು ಉಗುರುಬೆಚ್ಚನೆಯ ನೀರಿನಲ್ಲಿ ಕಟಿಸ್ನಾನ, ಅಥವಾ ಪಾದಸ್ನಾನವನ್ನು ಮಾಡಿ ಹೋಗ ಬೇಕು. ೧೦ ನಿದ್ರೆಯ ಕಾಲದಲ್ಲಿ ಸುತ್ತುಮುತ್ತಲೂ ಗದ್ದಲವಿರ ಬಾರದು. ನಿದ್ರೆ ಬರಬೇಕೆಂಬುದಕ್ಕಾಗಿ ಔಷಧಗಳೊಂದನ್ನೂ ಸೇವಿಸ ಬಾರದು. ಅವರಿಂದ ಕೆಡುಕು ಕೇಡಾಗುವುದಲ್ಲದೆ ಗುಣವಿಲ್ಲ.

ಅದರಿಂದಲೇ ಮರಣ!

ಬಹು ವೇಗವಾಗಿ ಓಡುವ ರೈಲ್ವೇ ಎಂಜಿನುಗಳನ್ನು ರಚಿಸಿದ ಆರ್ಚ್‌ಬಾಲ್ಡ್ ಎಂಬವನು ಇಂಗ್ಲೆಂಡಿನ ಸ್ಟೀಫನ್ ಎಂಬ ಊರಿನಲ್ಲಿ ರೈಲ್ವೇ ಮಾರ್ಗದ ಬಳಿ ಇದ್ದ ತನ್ನ ಬಂಗಲೆಯಲ್ಲಿ ವಾಸಿಸುತ್ತಲಿದ್ದನು. ಇವನು ನಿರ್ಮಿಸಿದ ಎಂಜಿನುಗಳು ಘಂಟೆಗೆ ೧೧೨ ಮೈಲಿನ ವೇಗದಲ್ಲಿ ಓಡುತ್ತಿದ್ದುವು ರೈಲ್ವೇ ಇಂಜಿನುಗಳೆಂದರೆ ಇವನ ಮಿತ್ರರು ಇವನು ಮೊನ್ನೆ ರೈಲ್ವೇ ಲೈನಿನ ಮೇಲೆ ಸಂಚರಿಸಿ ಮಾರ್ಗವನ್ನು ಪರಿಶೀಲಿಸು ತ್ತಿದ್ದಾಗ, ದೂರದಲ್ಲಿ ಮುಸುಕಿದ್ದ ಕಾರಣ, ದೂರದಿಂದ ವೇಗವಾಗಿ ಬಂದ ರೈಲ್ವೇ ಟ್ರೈನ್ ಒಂದನ್ನು ಕಾಣಲಾರದೆ ಥಳ್ಳನೆ ಅದಿಗೆ ಬಿದ್ದು ಬಿಟ್ಟನು. ಆಸ್ಪತ್ರೆಯಲ್ಲಿ ಕಾಲವಾದನು.

ಲಂಡನ್ ನಗರದ ವಾಹನ ಸಂಚಾರ!

ಲಂಡನ್ ನಗರದಲ್ಲಿ ಜನರು ಕಾಲಿಂದ ನಡೆಯುವುದಕ್ಕಿಂತಲೂ ವಾಹನಗಳಲ್ಲಿ ಸಂಚರಿಸುವುದು ಹೆಚ್ಚು. ಅಲ್ಲಿನ ಮುಖ್ಯ ಬೀದಿಗಳಲ್ಲಿ ದಿನವಹಿ ಎಷ್ಟು ಮೋಟಾರು ವಾಹನಗಳು ಸಂಚರಿಸುತ್ತವೆಂದು ಲೆಕ್ಕ ತೆಗೆದರು ಹೈಡ್‌ಪಾರ್ಕ್ ಎಂಬಲ್ಲಿ ಮಧ್ಯಾಹ್ನ ಘಂಟೆ ೧೨ರ ವರೆಗೆ ಘಂಟೆಗೆ ಸರಾಸರಿ ೪೧ ೪೫೬ ವಾಹನಗಳು ಓಡುತ್ತವೆ ಇದರಂತೆ ಇನ್ನೂ ೧೪ ಕಡೆಗಳಲ್ಲಿ ಲೆಕ್ಕ ತೆಗೆದಾಗ ಟ್ರಫಾಲ್ಗರ್ ಸ್ಕ್ವೇರ್‌ನಲ್ಲಿ ೬೪,೬೫೦ ಮೋಟಾರುಗಳೂ, ಮಾರ್ಬಲ್ ಆರ್ಚ್ ಎಂಬಲ್ಲಿ ೫೨,೧೯೨ ಮೋಟಾರುಗಳೂ ಪಿಕ್ಯಾಡಿಲ್ಲಿ ಎಂಬಲ್ಲಿ ೧೦,೧೬೦ ಮೋಟಾರುಗಳೂ ಚಲಿಸುತ್ತವೆಂದು ಗೊತ್ತಾಗಿದೆ

ಭಯಂಕರ ನರ್ತನ!

ಮೆಸಚುಸೆಟ್ಸ್ ಎಂಬಲ್ಲಿ ೧೯೩೩ರ ಜೂನ್ ತಿಂಗಳಲ್ಲಿ ೫೦ ದಂಪತಿಗಳ ನರ್ತನವಾರಂಭವಾಯಿತು ಈ ನರ್ತನವು ೧೯೩೪ರ ಜೂನ್ ತಿಂಗಳಲ್ಲಿ ಕೊನೆಗಾಣಬೇಕಾಗಿದೆ ಇದೇ ವರ್ಷ ನರ್ತನ ಮಾಡಿ ಕೊನೆಯ ವರೆಗೆ ನಿಲ್ಲುವವರಿಗೆ ಅಮೋಘವಾದ ಬಹುಮಾನಗಳನ್ನಿಟ್ಟಿರು ವರು ಜನವರಿಯು ದಾಟುವ ಒಳಗೆ ೨೦ ಜೋಡಿಗಳು ಬಿದ್ದು ಹೋದುವು ಇನ್ನು ೧೦ ಜೋಡಿಗಳು ದಿನೇ ದಿನೇ ನರ್ತನ ಮಾಡುತ್ತಾ ಜೂನ್ ತಿಂಗಳನ್ನು ದಾಟುವರೋ ಇಲ್ಲವೋ ತಿಳಿಯ ದಾಗಿದೆ

ವಿಚಿತ್ರ ರೀತಿಯ ನಡಿಗೆ

ರಷ್ಯದಲ್ಲಿ ಒಬ್ಬನು ಅಂಬೆಗಾಲು ಹಾಕುತ್ತ ಜಗತ್ತಿನ ಸಂಚಾ ರಕ್ಕೆ ಹೊರಟಿರುವನು. ಇವನ ಈ ರೀತಿಯ ನಡೆಯಿಂದಾಗಿ ಇವನು ವಿಖ್ಯಾತಿಯನ್ನು ಹೊಂದಿರುತ್ತಾನೆ ಇವನು ಈ ನಡೆಯಿಂದಾಗಿ ವಿಜಯಶಾಲಿಯಾಗುವುದ ದೈವಾಯತ್ತ ವಿಷಯವೆಂದೇ ಪ್ರತಿಯೊಬ್ಬನ ಹೇಳಿಕೆ ಸ್ಕಾಟ್‌ಲೆಂಡಿನಲ್ಲಿ ಒಬ್ಬನು ತನ್ನ ಹೆಂಡತಿಯನ್ನು ಒಂದು ಚಕ್ರಕ್ಕೆ ಸಿಕ್ಕಿಸಿ ಆ ಚಕ್ರವನ್ನು ಮಾರ್ಗದಲ್ಲಿ ಹೊರಳಾಡಿಸುತ್ತಾ ತಾನು ಲೋಕಸಂಚಾರಕ್ಕೆ ತೆರಳಿರುವನು ಅವನ ಪತ್ನಿಯು ತನ್ನ ಸಹನಾ ಶೀಲತೆಯನ್ನು ಕಂಡು ಬೆರಗಾಗಿರುವರು ಒಕ್ಸ್‌ಫರ್ಡಿನಿಂದ ಜಾ ಎಚ್ ಕಾಲಿನ್ಸ್ ಎಂಬವನು ಕೈಯಲ್ಲಿ ಬಿಕ್ಕಾಸಿಲ್ಲದೆ ಭೂಪ್ರದಕ್ಷಿಣೆ ಮಾಡಬೇಕೆಂದು ಹೊರಟು ಈಗಾಗಲೇ ೨೦,೦೦೦ ಮೈಲುಗಳನ್ನು ದಾಟಿದನು. ಇವನು ಸಾವಧಾನವಾಗಿ ನಡೆಯುತ್ತಾ, ಕೆಲಸವು ದೊರೆ ಯುವಲ್ಲಿ ಕೆಲವು ದಿನ ತಂಗಿ ಕೆಲಸ ಮಾಡಿ ಹಣ ಶೇಖರಿಸುತ್ತಾ ಮಾರ್ಗ ಕ್ರಮಣ ಮಾಡುತ್ತಿರುವನು ಡೋವರ್‌ನಲ್ಲಿ ಇಬ್ಬರು ತರುಣರು ೬ ಶಿಲಿಂಗುಗಳಿಗೊಂದು ಸಣ್ಣ ಕಾರನ್ನು ಪಡೆದು ತಮ್ಮ ಕಾರಿನ ಚಿತ್ರವನ್ನು ವಿಕ್ರಯಿಸಿ ಹಣ ಶೇಖರಿಸುತ್ತಾ ಲೋಕಯಾತ್ರೆಗೆ ಹೊರಟಿರುವರು ಲಂಡನಿನಿಂದ ಒಬ್ಬ ಮಧ್ಯವಯಸ್ಕನು ಹಿಂದೆ ಹೆಜ್ಜೆಯಿಡುತ್ತಾ ನಡೆದು ಭೂಸಂಚಾರಕ್ಕೆ ತೊಡಗಿರುವನು

ಮನುಷ್ಯರಿಗೆ ಪರಮ ಶತ್ರುಗಳಾರು?

ಕಾಡಿನಲ್ಲಿರುವ ಹುಲಿಕರಡಿಗಳಲ್ಲ! ಕ್ರಿಮಿಕೀಟಗಳೂ ಅಲ್ಲ' ವಿಷ ಸರ್ಪಗಳೂ ಅಲ್ಲ ಕಣ್ಣಿಗೆ ಕಾಣದ ಸೂಕ್ಷ್ಮ ಕ್ರಿಮಿಗಳೇ ಮಾನವ ವರ್ಗದ ಪರಮ ವೈರಿಗಳು. ಆ ಸೂಕ್ಷ್ಮ ಕ್ರಿಮಿಗಳಾವುವು, ರಕ್ತವನ್ನು ಕೆಡಿಸತಕ್ಕ ಕೆಲವು ಜಾತಿಯ ಕ್ರಿಮಿಗಳು. ಕಾಲಾಧೀನ ರಾದ ಸರ್ ಫ್ರೆಡರಿಕ್ ಅಂಡ್ರೂಸ್ ಎಂಬವರು ಅವು 'ಹೆಮೊಲಿಟಿಕ್ ಸ್ಟ್ರೆಪ್ಟೊಕಾಕ್ಕಿ' ಎಂಬ ವರ್ಗಕ್ಕೆ ಸೇರಿದುವೆಂದು ಹೇಳಿರುವರು ಈ ಕ್ರಿಮಿಗಳು ನೂಲಿಗೆ ಮಣಿಗಳನ್ನು ಪೋಣಿಸಿಟ್ಟ ಹಾಗೆ, ಸಾಲಾಗಿ ಸೇರಿ ಕೊಂಡು, ರಕ್ತದಲ್ಲಿರುವ ಕೆಂಪು ಕಣಗಳನ್ನೆಲ್ಲ ಕರಗಿಸಿ, ಅದರಿಂದ ದೇಹಕ್ಕೆ ಬೇಕಾದ ಆಮ್ಲಜನಕ ವಾಯುವನ್ನು ಒದಗಿಸದಂತೆ ಮಾಡು ವುವು. ಇವುಗಳಲ್ಲಿ ಹಲವು ಬಗೆಯುಂಟು, 'ಸ್ಕಾರ್ಲೆಟ್ ಜ್ವರ, ನ್ಯೂ ಮೋನಿಯಾ, ನಾನಾ ತರದ ಹೃದಯ ರೋಗಗಳೂ, ಬಾಣಂತಿಯರಿಗೆ ಉಂಟಾಗುವ ವ್ಯಾಧಿಗಳು, ವಿಷವ್ರಣಗಳು, ಇವೆಲ್ಲ ಈ ಕ್ರಿಮಿಗಳಿಂದಲೇ ಉಂಟಾಗುವುವು. ರೋಗಗಳು ಗುಣವಾದ ಮೇಲೆಯೂ ಇವು ದುರ್ಬಲವಾದ ದೇಹದಲ್ಲಿ ಪ್ರವೇಶಿಸಿ ಆ ರೋಗವು ಮರುಕೊಳಿಸುವ ಹಾಗೆ ಮಾಡುವುವು ಅಲ್ಲದೆ ಈ ಕ್ರಿಮಿಗಳು ಆಯಾ ಸನ್ನಿವೇಶಕ್ಕೂ, ಆಹಾರ ಗುಣಕ್ಕೂ ತಕ್ಕಂತೆ ತಮ್ಮ ಆಕೃತಿಗಳನ್ನೂ ಗುಣವನ್ನೂ ಮಾರ್ಪಡಿಸಿಕೊಳ್ಳಬಲ್ಲುವಾದುದರಿಂದ ಇವುಗಳ ನಿಜಸ್ಥಿತಿಯನ್ನು ಕಂಡು ತಿಳಿಯುವುದು ಎಂತಹ ವಿಜ್ಞಾನಿಗೂ ಕಷ್ಟವಾಗುವುದು.

ಮಹಾಪರಾಧ

ಹಿರಿ ಎಂಬಲ್ಲಿ ಸಬ್ ಇನ್ಸ್‌ಪೆಕ್ಟರೊಬ್ಬರು ಸಿಗರೇಟು ಸೇದು ತಿದ್ದಾಗ ಮೋಹನ ಗೋಸ್ವಾಮಿ ಎಂಬ ಸ್ವದೇಶಿ ಭಕ್ತನೊಬ್ಬನು 'ಆ ಸಿಗರೇಟು ಪರದೇಶದ್ದು, ಅದನ್ನು ಮುಟ್ಟಬೇಡಿ—ದಿಕ್ಕಾರ' ಎಂದನು ಸಬ್ ಇನ್ಸ್‌ಪೆಕ್ಟರಿಗೆ ಕೋಪವಾಗಿ ಅವರು ದಾವೆ ಹೂಡಿ ದರು ಗೋಸ್ವಾಮಿಗೆ ೧೮ ತಿಂಗಳ ಕಠಿಣ ಶಿಕ್ಷೆಯು ವಿಧಿಸಲ್ಪಟ್ಟಿತು. ಅದರ ಮೇಲೆ ೧೦೦ ರೂಪಾಯಿಗಳ ದಂಡವೂ ಆಯಿತು, ಗೋಸ್ವಾಮಿಯು ಈಗ ಹೈಕೋರ್ಟಿಗೆ ಅಪೀಲು ಮಾಡಿರುವನು.

ಪ್ರಕಟಣೆ.

ಕಾರ್ಕಳ, ತಾರೀಕು 16 – 1—1934

ಸುಬ್ಬಣ್ಣ—ಅರ್ಜಿದಾರ.

ಕಾರ್ಕಳ ತಾಲೂಕು ಮಿಯಾರು ಮಾಗಣೆ ಬಡಗು ಮಿಯಾರು ಗ್ರಾಮದಲ್ಲಿ ವಾಸವಾಗಿರುತ್ತಿದ್ದು ಕಾಲವಾದ ವಾಗಿರುವ ವೀರಯ್ಯ ಯಾನೆ ಕೊರಗಪ್ಪನಿಗೆ ಬರಾ ಸಾಲಗಳ ವಸೂಲ್ ಬಗ್ಗೆ ತನಗೆ ವಾರಿಸ ಸರ್ಟಿಫಿಕೇಟು ಕೊಡಬೇಕಾಗಿ ಕೇಳಿ ಮಿತಾಕ್ಷರ ಹಿಂದೂ ಲಾ ಅರ್ಜಿದಾರ ಅವನ ಮಗ, ಮೇಲೆ ಹೆಸರು ಕಾಣಿಸಿರುವ ಅರ್ಜಿದಾರನು ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ O P No 5/1934ನೇ ದಾಖಲು ಮಾಡಿರುವ ಅರ್ಜಿಯು ತಾ 20—2—1934ಕ್ಕೆ ಮಂಗಳವಾರ ದಿನ ಬೆಳಗ್ಗೆ 11 ಘಂಟೆಗೆ ತನಿಖೆಗೆ ಇಡಲ್ಪಟ್ಟಿರು ತ್ತದೆ ಎಂತಲೂ ಸದ್ರಿ ಅರ್ಜಿದಾರನ ಅರ್ಜಿ ಪ್ರಕಾರ ವಾರಿಸ ಸರ್ಟಿಫಿಕೇಟು ಯಾಕೆ ಕೊಡಕೂಡದು ಎಂಬ ಬಗ್ಗೆ ಸಬಬು ತೋರಿಸಲಿಕ್ಕೆ ಅಪೇಕ್ಷೆ ಉಳ್ಳವರು ತಾ. 20 - 2—1984ನೇ ದಿನ ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿಗೆ ಮೇಲೆ ಹೇಳಿದ ಹೊತ್ತಿನಲ್ಲಿ ಸ್ವತಹಾ ಯಾವ ವಕೀಲರ ಮುಖಾಂತ್ರ ಹಾಜ ರಾಗಿ ತಮ್ಮ ಆಕ್ಷೇಪಗಳನ್ನು ಹೇಳಿಕೊಳ್ಳಬಹುದು ಸಂಬಂಧ ಪಟ್ಟ ಸರ್ವರೂ ಇದನ್ನು ತಿಳಿದಿರಬೇಕು

ಕೋರ್ಟಿನವರ ಅಪ್ಪಣೆ ಪ್ರಕಾರ,

ಇಡ್ಯದ ವಾಸುದೇವಯ್ಯ, ಬಿ. ಎ, ಬಿ ಎಲ್,

ಅರ್ಜಿದಾರನ ಕಡೆ ವಕೀಲ

RAJULU & Co.,

Are pleased to announce that in view of the increasing popularity of Morris, Dodge and Crysler Cars in South Kanara and for the convenience of present and prospective clien s, a Sales and Service Station has been opened at Cantonment Road, Maidan View Mangalore

RAJULU & Co.,
Authorized District Dealers for
West Coast for Addison & Co, Ltd, Madras.

ಮೋರಿಸ್, ಡೋಜ್ ಮತ್ತು ಕ್ರೈಸ್ಲರ್—ಈ ಕಾರುಗಳ ಮೇಲಿನ ಜನತೆಯ ಅಭಿಮಾನವು ದಿನೇ ದಿನೇ ಹೆಚ್ಚುತ್ತಿರು ವುದರಿಂದಲೂ, ಈಗಿನ ಮತ್ತು ಮುಂದಿನ ಗಿರಾಕಿಗಳಿಗೆ ಸೌಕರ್ಯವನ್ನು ಒದಗಿಸಿಕೊಡಬೇಕೆಂಬುದರಿಂದಲೂ ಮಂಗ ಳೂರಿನ ಮೈದಾನು ಬಳಿಯ ಕಂಟೋನ್ಮೆಂಟ್ ರಸ್ತೆಯಲ್ಲಿ, ಮಾರಾಟದ ಮತ್ತು 'ಸರ್ವೀಸಿನ' ಒಂದು ಹೊಸದಾದ 'ಸ್ಟೇಶನನ್ನು' ಈಗ ತೆರೆದಿದೆ ಎಂದು ಪ್ರಕಟಿಸಲು ಸಂತೋಷ ಪಡುತ್ತೇವೆ

ರಾಜುಲು ಅಂಡ್ ಕೋ.

ಎಡಿಸನ್ ಮತ್ತು ಕಂಪೆನಿ, ಮದ್ರಾಸ್ (ಇದರ ಪರವಾಗಿ ಪಶ್ಚಿಮ ಕರಾವಳಿಗೆಲ್ಲ ಅಧಿಕಾರ ಹೊಂದಿದ ಜಿಲ್ಲಾ ವ್ಯಾಪಾರಿಗಳು)

22/12

ಇನಾಮ! 12 ಸೆಂಟ್ ಬಾಟ್ಲಿಗಳು!

ಬೆಸ್ಟ್ ಫೌಂಟನ್ ಪೆನ್—15 ಅಣೆ



ಬ್ರಿಟಿಷ್ ಮೇಡ್, ಕ್ಯಾರಟ್ ಭಂಗಾರದ ಮುಳ್ಳು ಹಾಕಿದೆ. ಅಕ್ಷರಗಳು ಮುತ್ತುಗಳ ಹಾಗೆ ಮುದ್ದಾಗಿ ಬರೆಯುವುದು. ಇದನ್ನು ಈ ತಿಂಗಳ ಒಳಗೆ ತರಿಸಿಕೊಳ್ಳುವವರಿಗೆ 1 ಡಜನ್ ರೋಸ್, ಜಸ್‌ಮಿನ್, ಜಾಜಿಗೆ ಮೊದಲಾದ ಪರಿಮಳ ದ್ರವ್ಯದ ಸೀಸೆಗಳು ಬಹುಮಾನವಾಗಿ ಕೊಡಲ್ಪಡುತ್ತವೆ. ಕಡಿಮೆ ಕ್ರಯ ಪೆನ್ನ 1ಕ್ಕೆ 1 ರೂ ಅಣೆ ಮಾತ್ರ.

ಸಿ ರಾಜ ಅಂಡ್ ಕಂಪೆನಿ,

28 ಪೆರುಮಾಳ್ ಕೋವಿಲ್ ಗಾರ್ಡನ್ ಬೀದಿ,

ಸಾಹುಕಾರ ಪೇಟೆ, ಮದ್ರಾಸ್.

ಶಾಲಿವಾಹನಶಕ ೧೮೫೫ನೆಯ ಶ್ರೀಮುಖ ಸಂವತ್ಸರದ ಪೌಷ ಶು. ೫ ಶನಿವಾರದಿಂದ ಶ್ರೀಮುಖ ಸಂವತ್ಸರದ ಪೌಷ ಶು. ೧೧ ಶುಕ್ರವಾರದ ವರೆಗಿನ ಪಂಚಾಂಗ

(೧೯೩೪ನೆಯ ಧನು—ಜೆಂವರಿ).

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಮಾಸದಿನ	ಸೂರ್ಯ ಉ	ಅಸ್ತ
20	ಶನಿ	೫	೧೩ ೪೬	ಉ ಭಾ	೫೭ ೪೬	೬	7	6.25
21	ರವಿ	೬	೧೧ ೨	ರೇವತಿ	೫೮ ೨೯	೮	7	6 25
22	ಸೋಮ	೭	೧೩ ೪೦	ಅಶ್ವಿನಿ	೬೦ ೦	೯	7	6 26
23	ಕುಜ	೮	೦೧ ೨೯	ಭರಣಿ	೦ ೪೨	೧೦	7.	6 26
24	ಬುಧ	೯	೧೬ ೪೧	ಕೃತ್ತಿಕಾ	೪ ೪೪	೧೧	7	6 27
25	ಗುರು	೧೦	೧೩ ೪೬	ರೋಹಿಣಿ	೪ ೧	೧೨	7	6.27
26	ಶುಕ್ರ	೧೧	೨೦ ೫೯	ಮೃಗಶಿರಾ	೧೪ ೨೪	೧೩	7	6 27

ಮಂಗಳೂರಿನ ವಾಯುಸ್ಥಿತಿ.

Date ತಾರೀಖು	Temperature ಉಷ್ಣ (ಕಾವು) Maximum ಅಧಿಕ	Minimum ಅಲ್ಪ	Rainfall. ಮಳೆ ದಿನದ ಮಳೆ	ಒಟ್ಟು ಮಳೆ
11	89— 2	73 – 6	—	—
12	87— 9	71— 2	—	—
13	90— 3	74— 2	—	—
14	91— 2	7[illegible]— 0	—	—
15	89— 6	74— 9	—	—
16	90— 0	72— 4	—	—
17	87— [illegible]	64— 2	0 – 22	167–61

ಮಂಗಳೂರಿನ ಪೇಟೆ ಧಾರಣೆ.

ದೇನಸು	ಇಂದ ರೂ. ಆ	ವರೆಗೆ ರೂ. ಆ
ಹೊಸ ರಾಶಿ ಅಕ್ಕಿ	3— 6	3—12
ಹೊಸ ಮುಸ್ಕಿ	4— 4	4 8
ಹೊಸ ಗುಡ್ಡು	3—12	4— 2
ಊರ ಅಪ್ಪಲ್ ಬೆಳ್ತಿಗೆ	4— 4	5 4
ರಂಗೂನು ಬೆಳ್ತಿಗೆ ಗೋಣಿ ೧ಕ್ಕೆ	5— 6	6 0
ಎಲ್ಲೂರು ಬೆಳ್ತಿಗೆ ಮುಡಿ ೧ಕ್ಕೆ	3— 8	4 0
ಗೋಧಿ ಗೋಣಿ ೧ಕ್ಕೆ	10— 8	12— 8
ತೊಗರಿ ಗೋಣಿ ೧ಕ್ಕೆ	9— 0	10 8
ಹುರುಳಿ ಗೋಣಿ ೧ಕ್ಕೆ	5— 4	6— 0
ಕಡಲೆ ಗೋಣಿ ೧ಕ್ಕೆ	9— 8	12— 8
ತೊಗರಿಬೇಳೆ ಗೋಣಿ ೧ಕ್ಕೆ	10— 8	18— 0
ಉದ್ದು ಗೋಣಿ ೧ಕ್ಕೆ	7— 0	8— 4
ಹೆಸರು ಗೋಣಿ ೧ಕ್ಕೆ	8— 0	9— 0
ಊರುಬೆಲ್ಲ ಖಂಡಿ ೧ಕ್ಕೆ	27— 8	35— 0
ಉಪ್ಪು ಗೋಣಿ ೧ಕ್ಕೆ	4—14	5— 4
ಕೊಪ್ರ ಖಂಡಿ ೧ಕ್ಕೆ	40— 0	55— 0
ಕೊಪ್ರ ಹಿಂಡಿ ಖಂಡಿ ೧ಕ್ಕೆ	17— [illegible]	18— 8
ಎಳ್ಳಿಂಡಿ ಖಂಡಿ ೧ಕ್ಕೆ	23—12	22— 8
ಕೊಪ್ರಿ ಎಣ್ಣೆ ಮಣ ೧ಕ್ಕೆ	3— 0	4— 0
ಎಳ್ಳೆಣ್ಣೆ ಮಣ ೧ಕ್ಕೆ	5— 0	6— 0
ಹರಳೆಣ್ಣೆ ಬಟ್ಟಿಗೆ ೧ಕ್ಕೆ	7— 0	8—12
ಮೋರಿಸ ಸಕ್ಕರೆ ಮಣ ೧ಕ್ಕೆ	3—10	3—11
ಹೊಸ ಮೆಣಸು	8—10	9— 0
ಸಾಸಿವೆ ಮುಡಿ ೧ಕ್ಕೆ	4— [illegible]	4—12
ಕಾಳುಮೆಣಸು ಖಂಡಿ ೧ಕ್ಕೆ	130— 0	— 0
ಯೇಲಕ್ಕಿ ಮಣ ೧ಕ್ಕೆ	20— 0	23 0
ಗೇರುಬೀಜ ಮುಡಿ ೧ಕ್ಕೆ	2 – 0	2— 4
ಕಬ್ಬಿಣ ಖಂಡಿ ೧ಕ್ಕೆ	42— 0	44— 0
ತಾಂಬ್ರ ತಗಡು ಮಣ ೧ಕ್ಕೆ	10— 0	10— 2
ತಾಂಬ್ರ ಪಾತ್ರಗಳು ಮಣ ೧ಕ್ಕೆ	13— 0	14— 8
ಬೇಸಿಬೆಳ್ಳಿ ಸೇರು ೧ಕ್ಕೆ	14—12	15— 0
ಹಿತ್ತಾಳಿ ತಗಡು ಮಣ ೧ಕ್ಕೆ	9— 0	9— 8
ಸವಸು ೧ಕ್ಕೆ	20 0	20— 8
ಹುಣಿಸೆ ಹುಳಿ ಖಂಡಿ ೧ಕ್ಕೆ	45— 0	47— 0
ನೇಟಿವ್ ಕಾಫಿ ಖಂಡಿ ೧ಕ್ಕೆ	180— 0	230— 0
ಪ್ಲಂಟೇಶನ್ ಕಾಫಿ ಖಂಡಿ ೧ಕ್ಕೆ	250— 0	2[illegible]0— 0
ಹಳೆ ಅಡಿಕೆ	115— 0	135— 0
ಹೊಸ ಅಡಿಕೆ	75— 0	100— 0

THE CANARA PUBLIC CONVEYANCE CO., LTD, MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪನಿ, ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯ ಕ್ಷೇತ್ರಗಳಿಗೆ ಹೋಗುವುವು ಮೈಸೂರು, ಕೊಡಗು ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನ್ ಕೂಡಾ ಇರುವುದು

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ, ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವರಾದರೆ ಪ್ರತಿದಿನವೂ ನಾಲ್ಕು ಸಾರಿ ಕರಾವಳಿ ಮಾರ್ಗವಾಗಿಯೂ, 4 ಸಾರಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲುಪಿರಿ ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 3 , ಫೀಟು ಉನ್ನವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ, ಕಾರ್ಕಳ ಗೋಮಟೇಶ್ವರನ ಪ್ರತಿಮೆಯನ್ನು ನೋಡಲು ಬಹಳ ಸುಲಭ ಮಂಗಳೂರಿನಿಂದ ಬಸ್ಸುಗಳು 4 ಸಲ ಹೊರಟು ಎರಡೂವರೆ ತಾಸುಗಳ ಸಮಯದಲಿ ಕಾರ್ಕಳಕ್ಕೆ ತಲುಪುವವು

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ತಲ್ಪಬಹುದು 'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಬೆಳಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲುಪುವಿರಿ ಶ್ರೀ ಶಂಕರಾಚಾರ್ಯರ ಸ್ಥಾನವಾದ **ಶೃಂಗೇರಿಯನ್ನು** ಸಂದರ್ಶಿಸಲು ಬಹಳ ಸುಲಭವಿದೆ ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಪ್ರಾಚೀನ ಕಾಲದ ದೇವಸ್ಥಾನಗಳಿಂದ ಕೂಡಿದ **ಗೋಕರ್ಣಕ್ಕೆ** ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಬೇಲೂರಿನ ಸೋಮನಾಥ ದೇವಾಲಯವನ್ನು ನೋಡಲು, ನೋಡಲಿಚ್ಛಿಸುವವರು ಬೆಳಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದೂಸ್ಥಾನ, ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣ ಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು

ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ, ಮಂಗಳೂರಿನಿಂದ ಮಡಿಕೇರಿಗೆ 7 ಘಂಟೆಗಳೊಳಗೂ, ಕಡೂರಿಗೆ 12 ಘಂಟೆಗಳೊಳಗೂ ಮೈಸೂರಿಗೆ 12 ಗಂಟೆ ಳೊಳಗೂ ಸಕಲೇಶಪುರಕ್ಕೆ 8 ಗಂಟೆಗಳೊಳಗೂ ಹಾಸನಕ್ಕೆ 10 ಗಂಟೆಗಳೊಳಗೂ ಚಿಕ್ಕಮಗಳೂರಿಗೆ 8 ಗಂಟೆಗಳೊಳಗೂ ಕೊಲ್ಲೂರಿಗೆ ಮತ್ತು ಗೋಕರ್ಣಕ್ಕೆ ೧॥ ದಿವಸದೊಳಗೂ ಶಿಮೊಗ್ಗಕ್ಕೆ 12 ಗಂಟೆ ತಲಪಬಹುದು ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು

Secretary

The Canara Public Conveyance Company Ltd., Mangalore

Chikmagalur Public Conveyance Motor Service

CHIKMAGALUR

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,

ಚಿಕ್ಕಮಗಳೂರು

ಮುಂಬಾಯಿಯಿಂದ – ಮಂಗಳೂರಿಗೆ

ಮಂಗಳೂರಿನಿಂದ – ಮುಂಬಾಯಿಗೆ

ಅಲ್ಲದೆ

ಹುಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ

ಮಂಗಳೂರು–ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು – ಅನುಕೂಲ ಪ್ರಯಾಣ ಸೌಕರ್ಯಗಳು

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ

ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ

ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ

ಚಿಕ್ಕಮಗಳೂರಿನಿಂದ – ಶಿವಮೊಗ್ಗಕ್ಕೆ, ಬೀರೂರಿಗೆ, ಕಡೂರಿಗೆ.
– ಮೂಡಗೆರೆಗೆ, ಸಕಲೇಶಪುರಕ್ಕೆ.
– ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
– ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ನಿರಾಯಾಸದ ಪ್ರಯಾಣ! ಉತ್ಸಾಹಕರ ಸೌಕರ್ಯ!

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

ಸಂಪಾದಕರ ಟಪ್ಪಾಲು ಪೆಟ್ಟಿಗೆ.

ಪತ್ರಿಕಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಎಲ್ಲಾ ಲೇಖಕರು ತಮ್ಮ ಸಂಪೂರ್ಣ ಹೆಸರು ವಿಳಾಸಗಳನ್ನು ಕೊಡತಕ್ಕದು. ದೀರ್ಘ ಲೇಖನಗಳಿಗೆ ಎಡೆ ಕೊಡಲಾಗುವುದಿಲ್ಲ. ಲೇಖನಗಳು ಸಾರ್ವಜನಿಕ ಹಿತದೃಷ್ಟಿಯಿಂದಿಷ್ಟು ಯುಕ್ತ ಶೈಲಿಯಲ್ಲಿರತಕ್ಕದು (ಸಂ. ಸ್ವ.)

ವಿಶೇಷವೇನು?

ಕೋಲಾರದ ಸಮೀಪದ ಚಿಂತಾಮಣಿ ವಾಸಿ ವೇದಮೂರ್ತಿ ಎಚ್ಚಾ ಪಂಡಿತರವರ ಮಗಳು ಶ್ರೀಮತಿ ಮಹಾಲಕ್ಷ್ಮಮ್ಮನಿಗೆ ಬಾಲ್ಯದಲ್ಲಿಯೇ ವಿವಾಹವಾಗಿ ವೈಧವ್ಯ ಉಂಟಾದುದರ ಮೇಲೆ ಪದ್ಧತಿಯಂತೆ ಇದಿಗಾಗಿ ಕೇಶಮುಂಡನದ ಯೋಚನೆಯ ಪ್ರಯತ್ನಕ್ಕೆ ಅಪ್ಪನವರಲ್ಲಿ ಹಟ ನಡೆಯುತ್ತಿದ್ದುದು ಕೇವಲ ೧೫ ವರ್ಷದ ಬಾಲಕಿಯಾದ ಮಹಾಲಕ್ಷ್ಮಮ್ಮನಿಗೆ ರುಚಿಸದೆ ಯಾವುದಾದರೂ ಸಹಾಯಕ ಸಿಂದೂ ರನ್ನಗೆ ಸೇರಿ ಸದ್ವಿದ್ಯಾರ್ಜನೆಯ ಮೂಲಕ ಮುಂದಿನ ಕಾಲಕ್ಷೇಪವನ್ನು ಕಳೆಯಲು ನಿಶ್ಚಯಿಸಿ, ಮನೆಯಿಂದ ಹೊರಬಿದ್ದುದೂ, ದಾರಿಯಲ್ಲಿ ಕೆಲವು ಮುಸಲ್ಮಾನರಿಂದ ಹಿಡೆಯಲ್ಪಟ್ಟು, ಭ್ರಷ್ಟಳಾದ[?]ರ ಇಂಥದ ಕಥನವು ವಾರ್ತಾ ಪತ್ರಿಕೆಗಳಲ್ಲಿ ಈ ದೊಡ್ಡವನ್ನು ಕುರಿತು ಪ್ರಸಿದ್ಧವಾಗುತ್ತಿದ್ದ ವಾರ್ತೆಗಳಿಂದ ಸರ್ವ ಶ್ರುತವಾದಂತಾಗಿರುತ್ತದು. ಕೊಂಚ ವಿಶಾಲ ದೃಷ್ಟಿಯನ್ನುಪಯೋಗಿಸಿ ನೋಡಿದ್ದಲ್ಲಿ ಈ ರೀತಿಯ ಘಟನೆಗಳು ಬೇಕಾದಷ್ಟು ದೊರೆಯುತ್ತವೆ ಎಂಬುದಲ್ಲಿ ಸಂದೇಹಪಡಬೇಕಾಗಿಲ್ಲ.

ಈಗ ನಡೆಸಲ್ಪಡುತ್ತಿರುವ ಶ್ರಾದ್ಧಾದಿ ರೀತಿಗಳು ವೈದಿಕ ಶೋಡಷ ಕರ್ಮ ವಿಧಿಗಳಿಗೆ ಕೇವಲ ವಿರುದ್ಧಾಚರಣೆಯಾದವಾಗಿದ್ದು ಸ್ತ್ರೀ ಶಿರೋಮುಂಡನಕ್ಕೆ ವೈದಿಕ ಸಾಹಿತ್ಯಗಳಲ್ಲೆಲ್ಲಿಯೂ ಆಧಾರ ಇಲ್ಲವೆಂದು ಒತ್ತಿ ಹೇಳಬಹುದಾಗಿದೆ. ಶ್ರಾದ್ಧಾದಿ ವಿಧಿಗಳನ್ನು ಪ್ರತಿಪಾದಿಸುವ ಗರುಡ ಪುರಾಣದಲ್ಲಾದರೂ ಕೇಶಮುಂಡನಕ್ಕೆ ಆಧಾರವಿದೆಯೇ ಎಂದು ಹುಡುಕಿ ನೋಡಿದ್ದಲ್ಲಿ ಅದರಲ್ಲಿಯೂ ಇದಕ್ಕೆ ಬಿಡಿಸಿದ್ದಂತೆ ತೋರುವುದಿಲ್ಲ. ನಿರ್ದಿಷ್ಟವಿಲ್ಲದ ಇತರ ಸಾಹಿತ್ಯದಲ್ಲಿ ಎಲ್ಲಿಯಾದರೂ ಇದಕ್ಕೆ ಆಧಾರವಿದೆಯೆಂದು ಇಷ್ಟು ನಂಬುವುದಾದರೂ ನ್ಯಾಯಸ ಸ್ವಾರ್ಥರೋಷಣ ಅಥವಾ ಪ್ರಕ್ಷಿಪ್ತ. ಮುಂಡನದ ಆಯುಧಗಳಾಗಲೀ ಮುಂಡನ ನಡೆಸುವ ಕ್ಷೌರಿಕರಾಗಲಿ ಕಾದಣಬಾಗುವುದಾದರೇ ವ್ಯತಿರಿಕ್ತ ಮೂರ್ಖ ಬೇರೆ ಎತ್ತರ ಕ್ರಿಯಾದಿಗಳು ಆವಶ್ಯಕವೆಂತಾಗುವುದು. ಪರಪುರುಷಾವಲೋಕನವು ದುರಾಚಾರವೆಂದು ಎಲೆ ಬಡಿದು ಬಡಿದುಕೊಂಡು ಸಾರುತ್ತಿದ್ದ ಧರ್ಮಧುರೀಣರುಗಳು ಪರಪುರುಷನಾದ ಕ್ಷೌರಿಕನ ಸ್ಪರ್ಶ-ಹಸ್ತಕ್ಷೇಪದಲ್ಲಿ ಮುಗ್ಧರಾಗಿರ್ಪ ದಕ್ಕೆ ಮುಗುಳು ನಗೆಯಿಂದ ಪುರಸ್ಕರಿಸೋಣವೇ ಅಥವಾ ಸಂಪೂರ್ಣ ಹಲ್ಲು ಬಿಟ್ಟು ಪುರಸ್ಕರಿಸೋಣವೇ ಎಂಬುದನ್ನು ವಿವೇಕಿಗಳು ನಿರ್ಧರಿಸಲಿ.

ಶಿರೋಮುಂಡನದ ವಿಕಾರತೆಯಿಂದ ವಿಧವೆಯರು ವ್ಯಭಿಚಾರದೇ ಮೊದಲಾದ ದುಷ್ಕರ್ಮಗಳಿಂದ ರಕ್ಷಿಸಲ್ಪಡುವರೆಂಬ ಕಾಂಟು ಕಾರಣವನ್ನು ತಂದೊಡ್ಡಬಹುದು. ವಿಷಯಾಭಿಲಾಷಿಗಳು ಶಿರೋಮುಂಡನದ ಈ ಕೃಪಾಲ್ಪ[?] ಬೆದರಿಕೆಗೆ ಎಷ್ಟು ಮಟ್ಟಿಗೆ ಅಂಜುತ್ತಿರುವರೆಂಬುದು ಶಿರೋಮುಂಡನ ದುರ್ವಿಕಾರಿತ ವಿಧವೆಯರಲ್ಲಿ ಎಷ್ಟೋ ಜನರು ನಡೆಸುವ ಭ್ರೂಣಹತ್ಯೆ ಮೊದಲಾಗಿ ಕೆಲವು ಸಂದರ್ಭಗಳಲ್ಲಿ ನಡೆಸುವ ಆತ್ಮಹತ್ಯೆ ಮುಂತಾದುವುಗಳಿಂದ ತಿಳಿಯಬಹುದು. ಮುಂಡನ ಮಾಡಿಕೊಳ್ಳದ ವಿಧವೆಯರಲ್ಲಿ ಎಷ್ಟೋ ಮಹಿಳೆಯರು ಧರ್ಮನಿಷ್ಠೆಯಲ್ಲಿ ನಿಪುಣರೆಂದೆನಿಸಿಕೊಂಡಿರುವುದನ್ನು ನೋಡುವಲ್ಲಿ ಇವರ ಈ ಶಿರೋಮುಂಡನ ವಿಧಿಗೆ ನೆಲೆಯಿಲ್ಲವೆಂದಾಗುವುದು. ಅದಂತಿರಲಿ ಇವರ ಕೇಶ ಮುಂಡನದ ಮೂಲಕ ಪವಿತ್ರರಾಗಿ ನಿಯಮದ ವ್ರತದಲ್ಲಿ ನಿಷ್ಠೆಯಿಂದ ನಡೆಯುತ್ತಿರುವ ಬ್ರಹ್ಮಚಾರಿಣಿ ಭಗಿನಿಯರಿಗೆ ಸಮಾಜದಲ್ಲಿಯೂ ಸಂಬಂಧಿಗಳಲ್ಲಿಯೂ ದೊರೆಯುತ್ತಿರುವ ಮನ್ನಣೆಯಾದರೋ ಶುಭ ಸಂಸ್ಕಾರಾದಿಗಳಲ್ಲಿ ಬಹಿಷ್ಕಾರ ದರ್ಶನಾದಿಗಳಲ್ಲಿ ತಿರಸ್ಕಾರವಲ್ಲವೇ? ಭಾವನಾ ಕಲ್ಪನೆಯ ಗುಲಾಮತನದಲ್ಲಿ ಮುಗ್ಧರಾಗಿರುವವರಲ್ಲಿ ಬುದ್ಧಿಸ್ವಾತಂತ್ರ್ಯದ ವಿಚಾರಲುಪ್ತವಾಗಿರುವುದು ಸಹಜವಾಗಿದೆ. ಪವಿತ್ರತೆಯು ಮುಂಡನದ ಸ್ಪರ್ಶವು ಒಮ್ಮೆಗೆ ಮುಕ್ತಾಯವಾಗದೆ, ಸ್ವಾಭಾವಿಕವಾಗಿ ಬೆಳೆಯುತ್ತಿರುವ ಕೇಶಮುಂಡನಕ್ಕಾಗಿ ವಿಧವಾ ಭಗಿನಿಯರು ಆಗಾಗ ಕ್ಷೌರಿಕನ ಪವಿತ್ರ ಸ್ಪರ್ಶಕ್ಕೆ ಭಾಗಿಗಳಾಗುತ್ತಿರುವುದರಲ್ಲಿ ಕೇವಲ ಉದಾಸೀನರಾಗಿ ವರ್ತಿಸುತ್ತಿರುವ ಮುಂದಾಳುಗಳಿಗೇನೆಂದು ಹೇಳೋಣವೋ ತೋಚದಾಗಿದೆ.

ಈ ರೀತಿ ಕಣ್ಣಿದ್ದೂ ಕುರುಡರೂ, ಕಿವಿಗಳಿದ್ದೂ ಕಿವುಡರೂ, ಬಾಯಿದ್ದೂ ಮೂಕರೂ, ಆಗಿಯೂ ಮತ್ತು ಆರ್ಯ ಧರ್ಮೋಪದೇಶದ ಅಧಿಕಾರಗಳ ವಿಚಾರದಲ್ಲಿ ಕೇವಲ ಉದಾಸೀನರಾಗಿಯೂ ಸಹ ವರ್ತಿಸುತ್ತಿರುವ ಇವರಲ್ಲಿ—ವಿಧವೆಯರ ವಿವಾಹ ವಿಚಾರದಲ್ಲಿ ಶ್ರುತಿ ಮತ್ತು ಪ್ರಾಚೀನ ಸ್ಮೃತಿಗಳಲ್ಲಿ ಕಾಣ ಬರುವ ಆಧಾರಗಳೆಷ್ಟು ಚರ್ಚಿಸಿದಲ್ಲಿ ಅದನ್ನು ರೋಧನವಾಗಬಹುದೆಂಬುದರ ಮೇಲೆ ಇವರ ಹೇಳಿಕೆಯ ಯುಗ ಧರ್ಮಕ್ಕೂ ಮತ್ತು ಇವರ ಮನ್ನಣೆಗೂ ಪವಿತ್ರವಾದ ಆಧಾರವಾದ ಪರಾಶರ ಸ್ಮೃತಿಯ ಪ್ರಮಾಣವನ್ನು ಕೊಡಲು ಇಚ್ಛಿಸುತ್ತೇನೆ.

ನಷ್ಟೇ ಮೃತೇ ಪ್ರವ್ರಜಿತೇ ಕ್ಲೀಬೇ ಚ ಪತಿತೇ ಪತೌ।
ಪಂಚ ಸ್ವಾಪತ್ಸು ನಾರೀಣಾಂ ಪತಿ ರನ್ಯೋ ವಿಧೀಯತೇ॥

ಪತಿಯು ಅಂಗಹೀನನೂ, ಮೃತನೂ, ಪರದೇಶಾಗಮನದಿಂದ ಕಾಣೆಯಾದವನೂ, ನಪುಂಸಕನೂ, ಪತಿತನೂ ಆದಲ್ಲಿ ಪತ್ನಿಯಾದವಳು ಅನ್ಯ ಪತಿಯನ್ನು ಸ್ವೀಕರಿಸಬಹುದೆಂದು ಮೇಲಿನ ಪ್ರಮಾಣದಿಂದ ನಿರ್ಧಾರವಾದಂತಾಯಿತು. ಈ ರೀತಿ ಅಧಿಕಾರಯುತರಾದ ಸ್ತ್ರೀಯರಿಗೆ ಅವರ ಇಚ್ಛೆಗೆ ವಿರೋಧವಾದ ಒತ್ತಾಯದ ಕೇಶಮುಂಡನವು ಅಧರ್ಮದ ತಳಹದಿಯೂ, ರಾಕ್ಷಸ ವೃತ್ತಿಯೂ ಆಗಿದೆ ಎಂದು ನಿರಾತಂಕವಾಗಿ ಹೇಳಬಹುದು. ಆ ವೈದಿಕ ಸ್ವಾರ್ಥಾಂಧ ರೂಢಿಯ ಗುಲಾಮರೂ, ದೂರ ದೃಷ್ಟಿಯ ಶತ್ರುಗಳೂ, ನಿರ್ದಯತೆಯ ಅಭಿಮಾನಿಗಳೂ ಅಧರ್ಮದ ಪುರಸ್ಕೃತರೂ ಆದ ಮಾನವ ಪಶುಗಳಿಂದ ಉಂಟಾಗುತ್ತಿರುವ ಹಿಂದೂ ಭಗಿನಿಯರ ಮೇಲಿನ ಅತ್ಯಾಚಾರವನ್ನು ನೀಗಲು ಕಂಕಣಬದ್ಧರಾಗಿ ವರ್ತಿಸುವುದು ನೈಜ ಧರ್ಮಾಭಿಮಾನಿಯಾದ ಪ್ರತಿಯೊಬ್ಬನ ಆದ್ಯ ಕರ್ತವ್ಯವೆಂದು ಸೂಚಿಸಿದುದು ಅಸಾಧುವಾದುದೆಂದು ಭಾವಿಸಲಾರರಾಗಿ ನಂಬಿರುವ,

ಜ್ಞಾನೇಂದ್ರ ಪ್ರಭು,
ತೀರ್ಥಹಳ್ಳಿ

ಕಾಸರಗೋಡು ಕೋಟೆಯವರ (ಕ್ಷತ್ರಿಯರ) ಪೂರ್ಣದಿನ ಭಜನೆ

ಕಾಸರಗೋಡಿನಲ್ಲಿ ಕೋಟೆಕೋಡೆಂದರೆ ಯಾರಿಗೂ ಗೊತ್ತಿಲ್ಲದಿಲ್ಲ. ಅದ. ಪ್ರಾಮುಖ್ಯವಾಗಿ ಕೋಟೆಯವರ ವಾಸಸ್ಥಾನ ಇತೀಚೆಗೆ ಒಂದು ಹಪ್ತೆಯ ಹಿಂದೆ ಸ್ವಾಮಿ ಲಕ್ಷ್ಮಣಾನಂದಜಿಯವರ ನೇತೃತ್ವದಲ್ಲಿ ಅಲ್ಲೊಂದು ಪೂರ್ಣ ದಿನ ಭಜನೆಯು ನಡೆಯಿತು. ಬಿಲ್ಲವ ಸಮಾಜದವರು ಈ ಭಜನೆಗೆ ಸೇರುವುದರಲ್ಲಿ ಕೋಟೆಯವರೆಲ್ಲರ ಆಕ್ಷೇಪ ಹಾಗಂತೂ ಸ್ವಾಮಿಯವರ ಆಕ್ಷೇಪವಿರಲಿಲ್ಲ. ಇವರೆಲ್ಲರ ಆಕ್ಷೇಪವಸ್ತರಿತು ಭಜನೆಯಲ್ಲಿ ಸಕ್ತರಾದ ಮೂವರೋ ನಾಲ್ವರೋ ಬಿಲ್ಲವ ಯುವಕ ಇಸ್ಪೀಟ್ ಗೆಳೆಯರೂ ಒಂದುಗೂಡಿ ಕೋಟೆಯವರ ಭಜನೆಗೆ ಹೋಗುವ ಅವಶ್ಯವಿಲ್ಲವೆಂದು ನಿರ್ಧರಿಸಿದರು. ಆದರೆ ಪರಮಾತ್ಮನ ಇಚ್ಛೆಯು ಬೇರೆ, ಸಾಯಂಕಾಲವಾಗುತ್ತಲೆ ಈ ಭಜನೆಗೆ ಹೋಗಲೇಬೇಕೆಂದು ಅನೇಕರು ಛಲ ಹಿಡಿದ ಕಾರಣ ಹತ್ತು ಹದಿನೈದು ಮಂದಿ ಸೇರಿಕೊಂಡು ದಾರಿಯಲ್ಲಿ ಭಗವನ್ನಾಮವನ್ನು ಸ್ತುತಿಸುತ್ತ ಕೋಟೆಕೋಡಿಗೆ ಹೊರಟೇ ಬಿಟ್ಟೆವು.

ಭಜನೆಯು ಜರಗುವ ಸ್ಥಳಕ್ಕೆ ಸಮೀಪಿಸುತ್ತಲೆ ಆ ಜಾತಿ ಈ ಜಾತಿ ಎಂದು ನೀ ಕೆಡ ಬೇಡ ಮನುಜಾ ಎಂಬಹೊಂದು ಬಹು ಮನೋಹರವಾದ ಕೀರ್ತನೆಯು ನಮ್ಮ ಕರ್ಣೇಂದ್ರಿಯಗಳನ್ನು ಭೇದಿಸಲು ನಮಗೆ ಮಹದಾನಂದವಾಯಿತು. ಒಂದೆರಡು ನಿಮಿಷಗಳಲ್ಲಿ ಅಲ್ಲ ಒಂದು ಗುಡಿಸಲಲ್ಲಿ ಕುಳಿತುಕೊಂಡಿದ್ದ ಸ್ವಾಮಿ ಲಕ್ಷ್ಮಣಾನಂದರ ಸನಿಹಕ್ಕೆ ಬಂದು ಗದ್ದಲ್ಲಿಯೂ ಆ ದಿವ್ಯ ಶಕ್ತಿಗೆ ಸಾಷ್ಟಾಂಗ ನಮಸ್ಕರಿಸಿ ಕುಸು ಸಮಯ ಅವರೊಡನೆ ಕುಶಲ ವಾಕ್ಯಗಳನ್ನಾಡಿ ಅವರೇ ಮುಂದಾಳಾಗಿ ನಾವು ಭಜನೆ ಮಂದಿರವನ್ನು ಪ್ರವೇಶಿಸಿದೆವು.

ಇನ್ನು ಮುಂದಿನ ಸಂಗತಿಯು ಬಹುರಸವತ್ತಾದುದು ನಾವು ಜೋರಿಗೆ ಸೇರುವುದೇ ತಡ (ನಾವೆಂದರೆ ನಾಲ್ವರು ಬಿಲ್ಲವರು ಉಳಿದವರು ಬಲ್ಲವರು) ಆಗತಾನೆ ಅಲ್ಲಿ ಭಜನೆ ಮಾಡುತ್ತಿದ್ದ ಕೋಟೆಯವರು—ಪ್ರಾಮುಖ್ಯವಾಗಿ ಬೀರಂಡಟ್ಟಿಲ ವಾಸಿಗಳಾದ ಕೋಟೆಯವರು (ಬೀರಂಡ ಬೈಲಲ್ಲಿ ಕೋಟೆಯಿಲ್ಲ)—ಒಟ್ಟೊಟ್ಟಿಗೆ ಭಜನೆ ಮಾಡುವಲ್ಲಿಂದ ತಾಳಗಳನ್ನು ಕೆಳಗಿಟ್ಟು ದೂರ ಹೋಗಿ ಕುಳಿತುಕೊಂಡರು ಉಳಿದವರು ಬಿಲ್ಲವರು, ಮತ್ತು ಹಲಕೆಲವರು ಗೌಡ ಸಾರಸ್ವತ ಬ್ರಾಹ್ಮಣರು ಮಾತ್ರ ನಮ್ಮ ಭಜನೆ ಪ್ರಾರಂಭವಾಯಿತಯ್ಯಾ! ಏನು ಆನಂದ, ಏನು ಕುಣಿದಾಟ, ಏನು ಕೋಲಾಹಲ!

ಈಗರೀಗ ಅಲ್ಲಲ್ಲಿ ಕುಳಿತಿದ್ದ ಕೋಟೆಯವರು, "ಅಯ್ಯೋ, ನಮ್ಮ ಜಾತಿ ಹೋಯಿತು! ನಮ್ಮ ಮಾನಹೋಯಿತು! ಮರ್ಯಾದೆ ಹೋಯಿತು ಇನ್ನು ನಮಗೆ ಶೃಂಗೇರಿಯಿಂದ ಜಾತಿ ತರಬೇಕು, ಈ ಸ್ವಾಮಿಯಿಂದ ನಾವು ಹಾಳಾದೆವು .. " ಎಂಬ ಮುಂತಾಗಿ ಪಿಸು ಮಾತಾಡಿದರು, ಪಿಸು ಮಾತಾಡಿ ಬುಸುಗುಟ್ಟಿದರು, ಗೌಜಿಯೇ ಗೌಜು! ಬೊಬ್ಬೆಯೇ ಬೊಬ್ಬೆ!! ಬಿಲ್ಲವರಿಂದ ಜಾತಿನಾಶ ನೀತಿನಾಶ, ಸರ್ವನಾಶ!! ಪಾಪ, ಸ್ವಾಮಿಯವರು ಒಂದು ಮೂಲೆಯಲ್ಲಿ ನೀರವವಾಗಿ ಕುಳಿತಿದ್ದರು ಇನ್ನು ಸ್ವಲ್ಪ ಸಮಯದ ಬಳಿಕ ಬಿಲ್ಲವರ ಭಜನೆಯು ಮುಂದರಿಯಿತು ನಂತರ ಹೊರಟುಹೋದರು.

ಲೋಕವು ಪರಸ್ಪರ ಐಕ್ಯತೆಗಾಗಿ, ಪ್ರೇಮಕ್ಕಾಗಿ, ಪ್ರೇಮಸಹವಾಸಕ್ಕಾಗಿ, ಬೊಬ್ಬಿಡಲು, ಅಸ್ಪೃಶ್ಯತೆಯನ್ನು ನೀಗಾಡಿ ಹಿಂದೂ ಧರ್ಮಗ್ಲಾನಿಯಾಗದಂತೆ, ಅಂತೂ ಲೋಕಶಾಂತತೆಗಾಗಿ, ಆ ಮುದಿಯಜ್ಞನಾದ ಮಹಾತ್ಮಾ ಗಾಂಧಿಯು ಸೊಂಟ ಕಟ್ಟಿ, ಭಗೀರಥ ಪ್ರಯತ್ನದಿಂದ ಲೋಕಸಂಚಾರ ಮಾಡುವುದರಲ್ಲಿ ನಿರತರಾಗಿರಲು ಇವರದೊಂದು ಜಾತ್ಯಭಿಮಾನಕ್ಕೆ ಎಲ್ಲಿಯ ಬೆಲೆ?

ಅಂಥ ವೃದ್ಧೆಯಿಂದಲೂ ಅಸಂಬದ್ಧ ಪೂರ್ವ ಪದ್ಧತಿಯಿಂದಲೂ ಪ್ರತಿಯೊಂದು ಜಾತಿಯಲ್ಲಿಯೂ ಅನೈಕ್ಯತೆ ಅಜ್ಞಾನಗಳು ಉಂಟಾರುವುದು ಸಹಜವೇ ಪರಂತು, ಸ್ವಲ್ಪ ಸ್ವಲ್ಪವಾಗಿ ವಿದ್ಯೆಯನ್ನು ಗಳಿಸಿಕೊಂಡು ಸಮಾಜೋನ್ನತಿಗೂ, ದೇಶದೇಳ್ಗೆಗೂ ರಾಷ್ಟ್ರೋದ್ಧಾರಕ್ಕೂ ಯತ್ನಿಸುವುದು ಪ್ರತಿಯೊಬ್ಬನ ಕರ್ತವ್ಯ. ಅದರಲ್ಲೂ ಒಗ್ಗಟ್ಟಿಲ್ಲದೆ ಕಂಗೆಟ್ಟು ಹೋದ ಭರತಮಾತೆಯ ಮಕ್ಕಳಾದ ನಾವು ನಮ್ಮ ಸಂಕುಚಿತ ಭಾವನೆಯನ್ನೂ ಕೊಳೆತ ಪದ್ಧತಿಗಳನ್ನೂ ಅವಿದ್ಯಾಪರಿಣಾಮವಾದ ಭೇದ ಬುದ್ಧಿಯನ್ನು ಬಿತ್ತಿಟ್ಟಿಗಿಟ್ಟು ಜಾತಿ ಜಾತಿಯೆನ್ನದೆ ಕೇವಲ ಪ್ರೀತಿಗಾಗಿ ಪ್ರಯತ್ನಿಸುವ ಸಮಯವು ಪ್ರಾಪ್ತವಾಗಿರಲು, ಬಿಲ್ಲವರು ಭಜನೆಗೆ ಬರಬಾರದು, ಅವರಿಗೆ ತಮ್ಮೊಡನೆ ಸೇರಲು ಯೋಗ್ಯತೆಯಿಲ್ಲ, ಎಂದೊಡೆರುವ ಸಮಯವು ಇದಲ್ಲ. ಇದರಿಂದಾಗಿ, ಯಾರ ಅಜ್ಞಾನವು ಅವಿದ್ಯಾಲಕ್ಷಣವು ಬಯಲಾದುದು?

"ಇದ್ದವ"

ಕಾರ್ಕಳ ತಾಲೂಕು ಬೋರ್ಡಿಗೊಂದು ಬಿನ್ನಹ.

ಅಯ್ಯಾ—ಮಾನ್ಯ ಬೋರ್ಡಿನವರೇ!!

ನಮ್ಮ ಕಾರ್ಕಳ ತಾಲೂಕು ಬೋರ್ಡಿಗೆ ಒಳಪಟ್ಟ ಹಾಯರ್ ಎಲಿಮೆಂಟರಿ ಶಾಲೆಗಳಲ್ಲಿ ಕಡಂದಲೆ ಶಾಲೆಯು ಹಾಯರಾಗಿ ತೆರೆದು ಆರೇಳು ವರ್ಷಗಳಾದರೂ ಅದು ತಕ್ಕ ಸ್ಥಾನಕ್ಕೆ ಇನ್ನೂ ಬರಲಿಲ್ಲ ದುಡ್ಡಿನ ಅಭಾವವೋ? ನಮ್ಮ ದೌರ್ಭಾಗ್ಯವೋ? ತಾಲೂಕು ಬೋರ್ಡಿನ ಬಡತನವೋ?

ಅದರೂ ನಮ್ಮ ಗ್ರಾಮದ ಪಟೇಲ್ ಕೆ ದೇಜು ಸೆಟ್ರವರು ಸಹಾಯಪೂರ್ವಕವಾಗಿ ಶಾಲಾ ಕಟ್ಟಡವನ್ನು ಬೋರ್ಡಿನ ಸಹಾಯದಿಂದ ಸಾಧಾರಣ ಕೆಲಸ ಮಾಡಿಸಿದ್ದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಕಟ್ಟೋಣ ವಗೈರೆ ಇನ್ನೂ ಪೂರ್ತಿಯಾಗದ್ದು ಪಶ್ಚಾತ್ತಾಪಕರ! ಪೂರ್ತಿ ಕಟ್ಟಿದ, ಯೋಗ್ಯ ಸಾಹಿತ್ಯಗಳ ಸಂಗ್ರಹದ ಪರ್ವದ ಮೇಲೆ ಹಂಗಾಮಿ ಮಂಜೂರಾತಿಯನ್ನು ಎಜ್ಯುಕೇಶನ್ ಕೌನ್ಸಿಲ್‌ನವರು ದಯಪಾಲಿಸಿದ್ದಾದರೂ, ಗ್ರಾಮಸ್ಥರು ಇನ್ನೂ ಉದಾಸೀನತೆಯಿಂದ ವರ್ತಿಸಿದ್ದು ತುಂಬಾ ದುಃಖಕರ! ಈ ಮೊದಲಿನ ಹೆಡ್ ಮಾಸ್ತರಾದ ರಾ। ಎಂ ಎಸ್ ಅನಂತರವರು, ಇತರ ಉಪಾಧ್ಯಾಯರ ಸಹಾಯದಿಂದ ಗ್ರಾಮದಲ್ಲಿ ಮಂತಿಗೆ ಎತ್ತಿದ್ದು ಅವರ ಸ್ಥಾನಭೇದದಿಂದ ಹಾಗೆಯೇ ಉಳಿಯಿತು. ಇತರ ಗ್ರಾಮಸ್ಥರು ಸುಮ್ಮನೆ ಬಿಟ್ಟರಾದರು ಉಪಾಧ್ಯಾಯರೇಕೆ ಸುಮ್ಮಗಾದರು! ಅಗಲಿ!! ಚಿಂತಿಲ್ಲ.

ನಮ್ಮ ಗ್ರಾಮ ಮುನಿಸಿಪಾಲಿಟಿಯ ಕೆ. ದೇಜು ಶೆಟ್ರು, ಕೆ ರಾಜು ಹೆಗ್ಗಡೆ ಕೆ ಸಂಜೀವ ಶೆಟ್ಟಿ ಕೆ ಬಸಪ್ಪ ಶೆಟ್ಟಿ ಮುಂತಾದವರು ಯೋಗ್ಯರೂ ಧನಿಕರೂ ಇರುವಾಗ್ಯೂ ಈ ಹೀನಸ್ಥಿತಿಯಲ್ಲಿರುವ ಶಾಲೆಯ ಮಂಜೂರಾತಿಯನ್ನು ಕಳೆದು ಹಾಕದಂತೆ, ಆ ಪರ್ವದ ಕರ್ತವ್ಯಕ್ಕೆ ಸಿದ್ಧರಾಗದೆ ಎಂದೂ ಸುಮ್ಮನಿರಲಾರದು ಅಂತೆಯೇ ಮೊನ್ನೆ ತಾನೇ ಕೆ ಸಂಜೀವ ಶೆಟ್ರವರು ಈ ಪರ್ವದಿಗೆ ಶಾಲಾ ಮಕ್ಕಳಿಂದ ಮತ್ತು ಇತರ ಹಳೆ ವಿದ್ಯಾರ್ಥಿಗಳಿಂದ ನಾಟಕವನ್ನಾಡಿಸಿ ದ್ರವ್ಯಸಂಕಲನಾರ್ಥ ಕೈ ಹಚ್ಚಿದ್ದಾರೆ. ಹೀಗಿರುವಾಗ ಇನ್ನಿತರ ಗ್ರಾಮಸ್ಥರು ಸುಮ್ಮಗಿರಲಾರದೆಂಬ ಭರವಸೆ ಇದೆ. ಈ ಶಾಲೆಯ ಉರ್ಜಿತಕ್ಕೆ ಸಹಾಯ ಕರಾಗದೆ ಸುಮ್ಮನಿರುವುದು ಹಿತವೆನಿಸುವುದೇ? ಮುಂತಾಗಿ ಒಬ್ಬನಿಗೆ ಅಸಾಧ್ಯವಾದರೆ ಹಿಂದಿನಿಂದ ಏಕೆ ಬಂದಿರುವರು? ಈ ಸಾರಿ ಖಂಡಿತ ಸಹಾಯಕರಾಗಿ ಶಾಲೆಯ ಕೆಲಸವು ಪೂರ್ತಿಯಾಗಲಿ ಅನುಮಾನವಿಲ್ಲ.

ಆದ್ದರಿಂದ ಮಾನ್ಯ ಎಜ್ಯುಕೇಶನ್ ಕೌನ್ಸಿಲಿನವರೂ, ತಾಲೂಕು ಬೋರ್ಡಿನವರೂ ಶಾಲೆಯ ಮಂಜೂರಾತಿಯ ವಿಷಯ ತುಂಬಾ ಗಮನ ಕೊಟ್ಟು, ನಮ್ಮ ಗ್ರಾಮದ ವಿದ್ಯಾಭ್ಯಾಸವನ್ನು ಕಾಪಾಡಿ ಕೊಟ್ಟರೆ, ನಮ್ಮ ಮುಂದಿನ ಬಾಲಜನಾಂಗವು ತುಂಬಾ ಕೃತಜ್ಞರಾಗಿರಲಿಕ್ಕಿಲ್ಲವೇ?

ಗ್ರಾಮಸ್ಥ

ನೋಟೀಸು.

ನಂಬ್ರ 958ನೇ ಉಡ್ಪಿ ಸಹಕಾರ ಸಂಘದ ಎಲ್ಲಾ ಮೆಂಬರರಿಗೂ, ಶೇರುದಾರರಿಗೂ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ತಾ 12—12—1933ಲ್ಲು ಜರಗಿದ ನಮ್ಮ ಸಂಘದ ಮಹಾಸಭೆಯ ನಂಬ್ರ 5 A. & B ಮತ್ತು ತಾ. 27—9—1933ಲ್ಲು ಜರಗಿದ ಮಹಾಸಭೆಯ ನಂಬ್ರ 6ನೇ ನಿರ್ಣಯಗಳ ಮೇರೆಗೆ ಸ್ವಾಧೀನದಲ್ಲಿರೋ ಸಂಘವನ್ನು ಮಿತಜವಾಬದಾರಿಯ ಸಂಘವನ್ನಾಗಿ ಮಾರ್ಪಡಿಸೋಣಾಗುವುದು. ಸಂಘದ ವ್ಯವಹಾರ ಕ್ಷೇತ್ರಕ್ಕೆ ಕಿದಿಯೂರು ಗ್ರಾಮವನ್ನು ಸಹಾ ಕೂಡಿಸಿಕೊಳ್ಳಲಾದೀತ.

ಉಡುಪಿ, } (Sd) ಕೇಲು ನಂಬಿಯಾರ್,
ತಾ. 12-1-'34. } ಅಧ್ಯಕ್ಷ

ಬೇಕಾಗಿದ್ದಾರೆ.

ಪುತ್ತೂರು, ಸಕಲೇಶಪುರ, ಚಿಕ್ಕಮಗಳೂರುಗಳಲ್ಲಿ ಬಿಡಿ ಸಂಚಿಕೆಗಳನ್ನು ಮಾರಲು ಉತ್ಸಾಹೀ ಏಜೆಂಟರು ಬೇಕಾಗಿದ್ದಾರೆ. ಶರ್ತಗಳಿಗೆ ಕೂಡಲೇ ಬರೆಯಿರಿ.

ಮೆನೇಜರ್—ಸ್ವದೇಶಾಭಿಮಾನಿ, ಮಂಗಳೂರು.

ಹೊಸ ರಕಂ! ಅಂದವಾದ ಸೀರೆಗಳು!

ಸ್ವದೇಶಿ ಕಲರ್ ಸೀರೆಗಳು.

ಈ ಸೀರೆಗಳನ್ನು ಹೆಸರು ಹೊಂದಿದ ಕಂಪೆನಿಯಿಂದ ಸಂಕ್ರಾಂತಿ ಹಬ್ಬಕ್ಕಾಗಿ ತರಿಸಿರುತ್ತೇವೆ. ಗಟ್ಟಿ ಬಣ್ಣ. ಎಲ್ಲಾ ಬಣ್ಣಗಳಲ್ಲಿಯೂ ದೊರೆಯುವುದು. ಸುಂದರವಾದ ಸೆರಗು, ಅಂದವಾದ ಅಂಚು ಇರುವುದು. ...ಕೆ ರೀತಿ ಸೀರೆಯ ಹಾಗೆ ಕಾಣುವುದು. ಎಲ್ಲಾ ಮಹಸ್ತರೂ ...ಬಹುದು. 18 ಮೊಳ ಸೀರೆ ಕ್ರಯ ರೂ. 4—0—0 ೮ ಮೊಳ ಸೀರೆ ಕ್ರಯ ರೂ. 3—4—0

ವಿಳಾಸ— ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ, ೨೧೮ ವಾಲ್‌ಟ್ಯಾಕ್ಸ್ ರೋಡ್, ಪೋ. ಬಾ. ನಂ. ೫೧೬, ಪಾರ್ಕ್ ಟೌನ್, ಮದ್ರಾಸ್.

HALF PRIZE ONLY.

SANE SEX BOOKS.

Hidden Secrets of Sex	Re.	1/8
The Sex Happiness	,,	0/8
How to choose a wife	,,	0/8
Rati Sastra	,,	1/4
My Wife As. 8, Sex Exercise	,,	0/8

N. B.—All the above books are illustrated and beautifully printed and for Rs. 3 only with free postage.

P. K. Swamy & Co, Park Town, G. T. MADRAS.

ಹೇರ್ ಡೆಸ್ಟ್ರಾಯರ್ ಎಂಬ ರೋಮನಾಶಕ ಕ್ರೀಂ.

ಕ್ರಯ ಬಾಟ್ಲಿ 1ಕ್ಕೆ 12 ಆಣೆ.

ಈ ಹೊಸ ಜರ್ಮನ್ ರೋಮನಾಶಕ ಕ್ರೀಂ ಎಂಬುದು ಶರೀರದೊಳಗಿನ ಯಾವ ಭಾಗದಲ್ಲಿಯಾದರೂ ಪ್ರಯಾಸವಿಲ್ಲದೆ, ದುರ್ವಾಸನೆ ಇಲ್ಲದ, ನೋವಿಲ್ಲದೆ ಚರ್ಮದ ಮೇಲೆ ಯಾವ ತರದ ಕಲೆಯನ್ನು ಉಂಟು ಮಾಡದೆ ಸುಲಭವಾಗಿ ಒಂದೇ ನಿಮಿಷದಲ್ಲಿ ಕೂದಲನ್ನು ತೆಗೆಯುವದು. ಇದರಿಂದ ಚರ್ಮಕ್ಕೆ ಕಾಂತಿಯು ಉಂಟಾಗುವುದು. ಉಪಯೋಗಿಸುವ ವಿಧಾನವನ್ನು ಬಾಟ್ಲಿ ಸಂಗಡ ಕಳುಹಿಸುವೆವು. ಫ್ರೆಂಚ್, ಲಂಡನ್ ದೇಶಗಳಲ್ಲಿ ಇದನ್ನು ಬಹಳ ಉಪಯೋಗಿಸುತ್ತಾರೆ ಕ್ಷೌರಿಕನ ಹತ್ತಿರ ಹೋಗುವ ಕೆಲಸವಿಲ್ಲ. ಒಂದು ಬಾಟ್ಲಿ ಬಹಳ ದಿವಸಕ್ಕೆ ಬರುವುದು.

ವೆಡ್‌ಲಾಕ್ ಅಂಡ್ ಕಂಪೆನಿ, ಪಾರ್ಕ್‌ಟೌನ್ ಮದ್ರಾಸು

Wedlock & Co. Park Town, MADRAS.

ಲಿನಿಮೆಂಟ್ ಆಯಿಂಟ್‌ಮೆಂಟ್ ಎಂಬ ನಪುಂಸಕತ್ವಹಾರೀ ತೈಲವು.

ಮನುಷ್ಯರಲ್ಲಿ ಪುರುಷಾರ್ಥವು ಕೇವಲ ಧಾತುವಿನಿಂದಲೇ ಇರುವುದು. ಮನುಷ್ಯರ ದೂಷಿತ ವೀರ್ಯವು ಗರ್ಭಕಾರಕವಾಗಲಾರದು. ಅತ್ಯಂತ ಮೈಥುನದಿಂದಲೂ, ವ್ಯಾಯಾಮ (ಕಸ್ರತ್)ದಿಂದಲೂ, ಹಸ್ತಪ್ರಯೋಗಾದಿಗಳಿಂದಲೂ, ಸ್ತ್ರೀ ಸಂಬಂಧ ವ್ಯಾಧಿಯಿಂದಲೂ, ಪ್ರಾಯ ಜಾಸ್ತಿ ಆದ್ದರಿಂದಲೂ, ಶರೀರದ ಎಲ್ಲಾ ನಾಡಿಗಳು ಬಹಳ ಬಲಹೀನವಾಗುವುದರಿಂದ ಪುರುಷತ್ವವು ಬಲಹೀನವಾಗಿ ಸ್ತ್ರೀ ಸಂಗ ಮಾಡುವುದಕ್ಕೆ ಆಗುವುದಿಲ್ಲ. ಕಲವರು ಬಾಲ್ಯದಲ್ಲಿಯೂ, ವೃದ್ಧಾಪ್ಯ(ಮುದುಕತನ) ದಲ್ಲಿಯೂ ಇಂಥಾ ವ್ಯಾಧಿಗಳನ್ನು ಉಂಟುಮಾಡಿಕೊಂಡು ತಮಗಿರುವ ವ್ಯಾಧಿಯನ್ನು ವೈದ್ಯರಲ್ಲಿ ಹೇಳಲು ನಾಚಿಕೆಯಿಂದ ವ್ಯಾಧಿಯನ್ನು ಹೆಚ್ಚು ಮಾಡಿಕೊಂಡು, ಪ್ರಾಯ ಸಮರ್ಥರಾದಾಗ ರತಿಸುಖಕ್ಕೆ ಶಕ್ತಿಯಿಲ್ಲದ ಉತ್ಸಾಹದಿಂದ ಅಶಾಭಗ್ನರಾಗಿ ಮನೋವ್ಯಥೆಯನ್ನುಂಟು ಮಾಡಿಕೊಳ್ಳುವರು, ಇಂಥವರ ಉಪಯೋಗಕ್ಕೋಸ್ಕರವಾಗಿ ಇಂಗ್ಲೀಷ್ ಡಾಕ್ಟರುಗಳಿಂದ ಈ ತೈಲವನ್ನು ತಯಾರು ಮಾಡಲ್ಪಟ್ಟಿದೆ. ಈ ಎಣ್ಣೆಯನ್ನು ಮೇಲೆ ಪುರುಷತ್ವಕ್ಕೆ ನಾಲ್ಕು ದಿನಗಳು ಸವರುವುದರಿಂದ ಗುಣವಾಗುವುದು.

ಕ್ರಯ ಸೀಸೆ 1ಕ್ಕೆ ರೂ. 1—4—0.

ಸಿ. ರಾಜ ಅಂಡ್ ಕಂಪೆನಿ, 20 ಬೀಟ್, ಮದರಾಸು.

ಮದನಕಳಾಶಾಸ್ತ್ರ ಎಂಬ ರಹಸ್ಯ ಪುಸ್ತಕ.

ಕನ್ನಡ ಭಾಷೆಯಲ್ಲಿ ಸ್ತ್ರೀಪುರುಷರು ಪ್ರೀತಿಸುವ 22 ಫೋಟೋಗಳ ಸಹಿತ ಕೂಡಿವೆ. ಇದರಲ್ಲಿ ಜೈನಾ, ಸಿಲೋನ್ ಅಫ್ರಿಕನ್, ಫ್ರೆಂಚ್, ಜರ್ಮನಿ, ನೇಪಾಳ ಮೊದಲಾದ ದೇಶದ ಹೆಂಗಸರು ಪ್ರೀತಿಸುವ ಮಾರ್ಗಗಳು, ಮಲಗುವ ಮನೆಯಲ್ಲಿನ ವಿನೋದಗಳು, ವೇಶ್ಯಾಕನ್ಯೆಗಳು ಮೋಹಿಸುವ ಉಪಾಯಗಳು, ಕನ್ಯಾ ಸ್ತ್ರೀಪುರುಷರ ಲೀಲಾ ವಿನೋದಗಳು, ಮನಸು ಪ್ರೀತಿಯು ಫೋಟೋಗಳನ್ನು ನೋಡ ಹತ್ತಿ, ಓದುತ್ತ ಕಡೆತನಕ ಪುಸ್ತಕ ಮುಗಿಯುವ ವರೆಗೂ ಶೃಂಗಾರವಾಗಿರುವುದು.

ಕ್ರಯ 22 ಫೋಟೋಗಳ ಸಹಿತ ಪುಸ್ತಕಕ್ಕೆ 1—0—0.

ರಾಯಲ್ ಫೋಟೋ ಕಂಪೆನಿ, 19 ಬೀಟ್, ಮದ್ರಾಸು.

Royal Photo Company,
19 BEAT MADRAS.

ಶ್ರೀಮತಿ ಡಿ. ರಾಜರಾಜೇಶ್ವರಮ್ಮ.

ಶಾರದಾ ವಿಲಾಸ, ದಿಗುಪಹಂಡಿ, ಗಂಜಾಂ ಜಿಲ್ಲೆ.

ಇವರು ಬರೆಯುತ್ತಾರೆ:—

"ಮುಟ್ಟಾಗುವ ವೇಳೆ ನನ್ನ ಸಹೋದರಿಯು ಅಸಹನೀಯ ನೋವನ್ನನುಭವಿಸುತ್ತಿದ್ದಳು. ಅವಳು ದಿನೇ ದಿನೇ ಕೃಶಳಾಗುತ್ತಿದ್ದಳು. ನಾವು ಅನೇಕ ಔಷಧಿಗಳನ್ನುಪಯೋಗಿಸಿದೆವು-ಫಲವಾಗಲಿಲ್ಲ. ಕಡೆಗೆ ನಿಮ್ಮ **ಲೋದ್ರ**ದ ಖ್ಯಾತಿಯನ್ನು ಕೇಳಿದೆವು. ಎರಡು ಬಾಟ್ಲಿಗಳನ್ನು ಪಡೆದು ಅವಳಿಗೆ ಕೊಟ್ಟೆವು. ಅವಳು ಆಶ್ಚರ್ಯಕರವಾಗಿ ಗುಣಹೊಂದಿರುವಳು, ಅಲ್ಲದೆ ಒಂದು ಹೆಣ್ಣು ಕೂಸೂ ಜನಿಸಿದೆ. ಈ ಸುವಾರ್ತೆಯನ್ನು ನಿಮಗೆ ಈ ಮೂಲಕ ತಿಳಿಸುವೆನು."

ಸ್ತ್ರೀಯರ ಎಲ್ಲಾ ರೋಗಗಳನ್ನೂ 'ಲೋದ್ರ'ವು ಗುಣಪಡಿಸುತ್ತದೆ.

ಎಲ್ಲಾ ಕೆಮಿಸ್ಟರಲ್ಲಿಯೂ ದೊರೆಯುತ್ತದೆ.

ಕೇಸರಿ ಕುಟೀರಂ,

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

Sole Agents for South Kanara

ಪೋಪ್ಯುಲರ್ ಸ್ಟೋರ್ಸ್,

ರಥಬೀದಿ ಮಂಗಳೂರು.

ಸ್ತ್ರೀ ಪುರುಷರ ಸಲುವಾಗಿ ಶಕ್ತಿ ವ ಸ್ಫೂರ್ತಿಕೊಡುವಂತಹ	ಸ್ತ್ರೀಯರ ಸಲುವಾಗಿ ಆರೋಗ್ಯ ವ ಶಕ್ತಿವರ್ಧಕ.
ಸುಮಧುರ **ಝಂಡು ದ್ರಾಕ್ಷಾಸವ** ಜರೂರು ಉಪಯೋಗಿಸಿರಿ.	ಪ್ರದರಾದಿ ರೋಗಗಳ ಮೇಲೆ ರಾಮಬಾಣ ಉಪಾಯ. **ಝಂಡು ಅಶೋಕಾರಿಷ್ಟ** ಬೇಗನೇ ಉಪಯೋಗಿಸಿರಿ.

'ZANDU'

ಝಂಡು ಫಾರ್ಮಾಸ್ಯುಟಿಕಲ್ ವರ್ಕ್ಸ್ ಲಿ: ಮುಂಬೈಗಳ.

ಮದ್ರಾಸ್ ಸಂಸ್ಥಾನದ ಏಜಂಟ್:—ದಾಮೋದರ ಮತ್ತು ಕಂಪೆನಿ, 78 ಜೈನ ಬಜಾರ ರೋಡ್, ಮದ್ರಾಸು.

ಮೈಸೂರು ಪ್ರೊವಿನ್ಸ್ ಏಜಂಟ್:—ಬಿ. ಪ್ರೊಹಟ್‌ಲಾಲ ಕಂಪೆನಿ, ೫೧ ಅರ್ಕಟ ಶ್ರೀನಿವಾಸಾಚಾರ ಸ್ಟ್ರೀಟ್.

ಮಂಗಳೂರು ಏಜಂಟ್:—ಶಾಹಾ ಕಂಪೆನಿ ಡಾಯ್‌ಮಂಡ್ ಬಿಲ್ಡಿಂಗ್, ಮಂಗಳೂರು.

ಧಾರವಾಡ ಏಜಂಟ್—ದಿ ಧಾರವಾಡ ಫಾರ್ಮಸಿ, ಧಾರವಾಡ.

ಬೇರೆ ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತದೆ.

ಆಯುರ್ವೇದ ಔಷಧಿಗಳ ಸೂಚೀಪತ್ರವನ್ನು ಮುಖ್ಯ ಏಜಂಟರಿಂದ ಪಡೆಕೊಳ್ಳಿರಿ.

ನಮ್ಮ ಸಲಹೆಯೇ ಪ್ರಾಧಾನ್ಯವಾದದ್ದೆಂದು ತಿಳಿಯಬೇಡಿ.

ಕಲ್ಲಿಕೋಟೆ ಅಶೋಕ ಆಸ್ಪತ್ರೆಯ ಚೀಫ್ ಮೆಡಿಕಲ್ ಆಫೀಸರರಾದ ಡಾ। ವಿ. ಬಿ. ರಾಮನ್, ಎಂ. ಆರ್., ಸಿ. ಎಸ್. ಇವರು ಬರೆದಿರುವುದನ್ನು ಓದಿ ನೋಡಿ—"ನಾನು ನಿಮ್ಮ ಆಶ್ಚರ್ಯಕರವಾದ ಜೀವಾಮೃತಂ ಟಾನಿಕನ್ನು ನರಗಳಲ್ಲಿ ಉರಿತ ಅರಿತ ಹಸಿವು ಕಡಿಮೆಯಾಗಿರುವುದು, ತೂಕವು ಕಡಿಮೆಯಾಗಿರುವುದು, ಇವು ಪ್ರತ್ಯಕ್ಷವಾಗಿರುವ ಅನೇಕ ರೋಗಿಗಳಿಗೆ ಕೊಟ್ಟಿರುತ್ತೇನೆ, ಅದರ ಫಲಿತಾಂಶಗಳು ಬಹು ತೃಪ್ತಿಕರವಾಗಿದೆ. ಜೀವಾಮೃತವನ್ನು ದೇಹಶಕ್ತಿ ಕುಗ್ಗಿರುವ ಎಲ್ಲಾ ಸಂದರ್ಭಗಳಲ್ಲೂ ಸರ್ವ ಸಾಧಾರಣವಾಗಿ ಉಪಯೋಗಿಸಬಹುದೆಂದು ನಾನು ಮನಃಪೂರ್ವಕವಾಗಿ ಶಿಫಾರಸು ಮಾಡುತ್ತೇನೆ"

ಜೀವಾಮೃತವು

ನರಗಳಿಗೆ ಶಕ್ತಿ ಕೊಡುತ್ತದೆ. ವೀರ್ಯ ವೃದ್ಧಿಮಾಡುತ್ತದೆ. ಹಸಿವು ಹೆಚ್ಚುತ್ತದೆ. ರಕ್ತ ವೃದ್ಧಿಮಾಡುತ್ತದೆ.

ಪಂಡಿತ ಡಿ. ಗೋಪಾಲಾಚಾರ್ಲುರವರ **ಜೀವಾಮೃತವು**

ಎಲ್ಲಾ ಔಷಧ ಮಾರುವವರಲ್ಲೂ, ಸ್ಟೋರುಗಳಲ್ಲೂ ದೊರೆಯುತ್ತದೆ. (ಸಂಪೂರ್ಣ ವಿವರಗಳಿಗೆ ಇವರಿಗೆ ಬರೆಯಿರಿ)

ಆಯುರ್ವೇದಾಶ್ರಮಂ, ಪೋ. ಬಾಕ್ಸ್ ನಂ. ೩೧೭, ಮದ್ರಾಸು.

ಸೋಲ್ ಏಜಂಟರು:- ಸಿಟಿ ಮೆಡಿಕಲ್ ಮತ್ತು ಜನರಲ್ ಏಜನ್ಸಿ, ೧೨೨ ಚಿಕ್ಕಪೇಟೆ ಬೆಂಗಳೂರು. (ಉಡುಪಿ ಹೋಟೆಲ್ ಹತ್ತಿರ)

ದಕ್ಷಿಣ ಕನ್ನಡದ ಏಜಂಟರು- ಪೋಪ್ಯುಲರ್ ಸ್ಟೋರ್ಸ್, ಮಂಗಳೂರು. P. No. 104

Jubilee year!

The Bombay Life Assurance Co., Ltd.,

Bombay—Established 1908.

Chairman—Sir Lalubhai Samaldas, Kt., C. I. E., J. P.

Wanted

ONE LADY ORGANISOR FOR EACH OF THE DISTRICTS OF SOUTH KANARA, COORG, BELLARY AND TWO FOR MYSORE STATE.

Either on pay or commission or both with reasonable Travelling Allowance. Only educated ladies need apply.

Right opportunity to those who desire independant and respectable vocation.

Applications can be made to the undersigned giving full qualifications and whether they can guarantee business.

Apply to:—

KOCHIKAR BROTHERS,
Madras Branch Secretaries.

Vishveshwarapuram Circle, *Bangalore City* *or* Udipi, *South India.* *or* Post Box No. 337, *Mount Road, Madras.*

N. B. Intending candidates may interview by previous appointment with our Organizing Secretary (now in Bombay) who will be touring.

(25—8—33.)

ಶ್ರೀಮಧ್ವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು! **ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!**

ಕಸ್ತೂರಿ ಮಿಶ್ರಿತ ದಶಮೂಲಾರಿಷ್ಟ ೧೬ ಔನ್ಸ್ ಬಾಟ್ಲಿ ಗಳ್ಕೆ ರೂ. 1-8-0. ದ್ರಾಕ್ಷಾಸವ ೧೬ ಔನ್ಸ್ ಬಾಟ್ಲಿ 1ಕ್ಕೆ ರೂ. 1. ಅಶ್ವಗಂಧಾರಿಷ್ಟ ೧೬ಂ. ಔನ್ಸ್ ಬಾಟ್ಲಿ ಒಂದಕ್ಕೆ ರೂ. 1—4—0. ಅಬಲಾಮೃತ ೧೬ ಔನ್ಸ್ ಬಾಟ್ಲಿ ಗಳ್ಕೆ ರೂ. 2. ಅಶೋಕಾರಿಷ್ಟ ೧೬ ಔನ್ಸ್ ಬಾಟ್ಲಿ ಗಳ್ಕೆ ರೂ. 1-4-0. ಚತುರ್ಮುಖರಸ ೧ ರಾತಿಗೆ ರೂ. 2-8-0. ಅಧ್ಯಯಾಮಲಕಿ ೧ ರಾತ್ಲಿಗೆ ರೂ. 2. ಚಂದ್ರಮುಖ (ವಿಶೂಚಿಕೆಗೆ ರಾಮಬಾಣ) ಕಾಲು ಔನ್ಸಿಗೆ ರೂ. 0—5—0. ದಂತಧಾವನ ಚೂರ್ಣ ಡಬ್ಬಿ ಗಳ್ಕೆ 0-1-0. ಕ್ರಿಮಿಘ್ನಾಂಕ (ದದ್ದು, ಕಜ್ಜಿಗೆ) ಡಬ್ಬಿ ಗಳ್ಕೆ ರೂ. 0-4-0. ಕೃಷ್ಣಾಂಕ ೧ ಔನ್ಸಿಗೆ ರೂ. 0-6—0 ಚಿತ್ರಕ (ಮಕ್ಕಳ ಗೃಹಣೀ ರೋಗಕ್ಕೆ ದಿವ್ಯೌಷಧ) ಡಬ್ಬಿ ಗಳ್ಕೆ ರೂ. 0-8-0. ಮಹಾ ಚಿತ್ರಕ ತೊಲ ಗಳ್ಕೆ ರೂ. 1-0-0. ಪಿಂಡ ತೈಲ ೫ ಔನ್ಸ್ ಬಾಟ್ಲಿ ಗಳ್ಕೆ ರೂ. 0-10-0. ಬಲಾಶ್ವಗಂಧಾದಿ ತೈಲ ೫ ಔನ್ಸ್ ಬಾಟ್ಲಿ ಗಳ್ಕೆ 0-12-0. ಹಿಮಸಾಗರ ತೈಲ ೫ ಔನ್ಸ್ ಬಾಟ್ಲಿ ಗಳ್ಕೆ ರೂ. 1-8-0. ಮಹಾಚಂದನಾದಿ ತೈಲ ೫ ಔನ್ಸ್ ಬಾಟ್ಲಿ ಗಳ್ಕೆ ರೂ. 1—0—0. ಶ್ರೀ ಗೋಪಾಲ ತೈಲ ೫ ಔನ್ಸ್ ಬಾಟ್ಲಿ ಗಳ್ಕೆ ರೂ. 3-8-0.

ನಮ್ಮ ಔಷಧಗಳು ದೊರೆಯುವ ಸ್ಥಳಗಳು:— ಮಂಗಳೂರು—ರಾಘವೇಂದ್ರ ರಂಗ ಪೈ ಫಾರ್ಮಸಿ, ಕೆನರಾ ಡಿಸ್ಪೆನ್ಸರಿ ಕೊಡಿಯಾಲಬೈಲ್. ಕುಂದಾಪುರ—ಕೆ. ಕೃಷ್ಣ ಶಾನುಭೋಗ. ಗಂಗೊಳ್ಳಿ—ಬಿ. ಸುರೇಂದ್ರ ನಾಯ್ಕ. ಕುಂದಾಪುರ—ಕೆ. ರಾವ ಭಟ್. ಡಾಕ್ಟರ್ ಕೆ. ಆರ್. ಕಾಮತ್. ಉಡುಪಿ—ಪಿ ಜನಾರ್ಧನ ನಾಯಕ್ ಎಂಡ್ ಕೊ., ಪೈ ಫಾರ್ಮಸಿ, ಆರ್. ಎಸ್. ಶೆಣೈ, ರಥಬೀದಿ. ಕಾರ್ಕಳ—ವಿ. ವಿ. ಶೆಣೈ. ಕಾಪು—ಡಾಕ್ಟರ್ ಬಿ. ಕೆ. ಜೇಕಲ ಡಿಸ್ಪೆನ್ಸರಿ. ಬಟ್ಕಳ—ವಾಮನ ನರಸಿಂಹ ನಾಯಕ್. ಬಾರ್ಕೂರು—ಬಿ. ಭಗವಂತ ಮಲ್ಯ, ಆರ್. ಪಿ. ಔಷಧಾಲಯ. ಬ್ರಹ್ಮಾವರ ಕೆ. ವೈಕುಂಠ ಪೈ ಎಂಡ್ ಸನ್ಸ್, ಕೆ. ಶೇಷಗಿರಿ ನಾಗಪ್ಪ ಎಂಡ್ ಸನ್ಸ್. ಎಲ್ಲೆಲ್ಲಿಯೂ ಏಜಂಟರು ಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಬಹುದು.

ನಾಯಕ್ ಬ್ರದರ್ಸ್, ಶ್ರೀಮಧ್ವನೇಂದ್ರ ಮಹೌಷಧಾಲಯ, ಪೋಸ್ಟು ಕಟಪಾಡಿ, ದ. ಕ.

The Canara Industrial & Banking Syndicate Limited.,

Established in 1925. *Head Office:—Mukunda Nivas, UDIPI.*

Branches: Mangalore, Payyanur, Brahmavar, Kumta, Karwar, Hubli, Honnavar, Bangalore & Cannanore.

Authorised Capital Rs. 5,00,000. Subscribed Capital Rs. 1,06,300. Paid up Capital Rs. 26,300 Issued Capital Rs. 2,00,00

STATEMENT OF AFFAIRS OF THE SYNDICATE AS ON 30TH November 1933.

LIABILITIES.			ASSETS.		
Paid up Capital	Rs.	26,300—0—0.	Loans on Land mortgage	Rs.	2,71,186—9—2
Reserve & other funds	,,	20,250—0—0.	Loans on Valuable Securities	,,	2,29,690—7—9
Deposits	,,	10,64,121—4—10.	Loans on Bills of Exchange, Hundis and Promissory Notes		4,73,634—4—0
Due to Bankers	,,	1,19,606—0—6.	Investment on Shares of other Companies	,,	43,575—0—0
			Investments on Government of Mysore Conversion Loan	,,	50,000—0—0.
			On Deposits with other Bankers	,,	1,11,000—0—0.
Bills for Collection	,,	29,283—1—3.	Bills for collection (per contra)	,,	29,283—1—3.
Sundries	,,	1,19,[illegible]—3—11.	Sundries	,,	1,40,794—4—10.
			Cash in hand & with Bankers	,,	29,677—15—6
Total Rs.		13,78,841—10—6	Total Rs.		13,78,841—19—6

Long and Short term Loans on attractive Schemes are granted.
ALL KINDS OF BANKING BUSINESS UNDERTAKEN.

Udipi, [illegible]

P. A. Pai Bros.,
Managing Agents.

... both ... and ... with sound looking ... future.

(1) South Canara, (2) Mysore, Hassan and Coorg, (3) Kadur, Shimoga, Chitaldroog and Tumkur, (4) Bangalore, Kolar.

For terms and other particulars please apply to—

The Divisional Manager,
The South Indian General Assurance Co. Ltd.
64, 3rd, Cross Road, Srirampur Extn.
Malleswaram Post, BANGALORE.

OR

The Managing Agents,
The S. I. G. A. Co. Ltd.
55, Poonamallee High Road, Kilpauk, MADRAS.

... ರ್ ಗ್ರಂಥಮಾಲಾ ...

ಕೊ-ಆಪರೇಟಿವ್ ಸೊಸೈಟಿಗಳಿಗೆ

ಬೇಕಾದ ನಮೂನೆಯ ಎಲ್ಲಾ ವಿಧದ ಫಾರಂಗಳು, ರಿಜಿಸ್ಟರುಗಳು, ರಶೀದಿ ಪುಸ್ತಕಗಳು, ಮತ್ತು ಇತರ ಫಾರಂಗಳೂ ಮಾರಾಟಕ್ಕಿವೆ.

ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್.
ರಥಬೀದಿ, ಮಂಗಳೂರು

ಶಹಾ ಶಿವಾಜಿ ಹಿಂದೂ ರೆಸ್ಟೋರೆಂಟ್

ಗಣಪತಿ ಹೈಸ್ಕೂಲ್ ರಸ್ತೆ, ಮಂಗಳೂರು (ದ. ಕ.)

ಮಂಗಳೂರಿನ ನೂತನ ಉಪಹಾರ ಗೃಹ.

ಶುದ್ಧ ಜಿನಸುಗಳಿಂದ, ತಾಜಾ ತುಪ್ಪದಿಂದ ತಯಾರಿಸಲ್ಪಡುವ ಮಿಠಾಯಿಗಳು ಇನ್ನೆಷ್ಟೋ ಬಗೆಯ ತಿಂಡಿ ತಿನಸುಗಳು—ಚಹಾ, ಕಾಫಿ, ಕೊಕೋ ಇತ್ಯಾದಿ ಎಲ್ಲ ತರದ ಪಾನೀಯಗಳು

ಅನುಭವಸ್ಥರಿಂದ ತಯಾರಿಸಲ್ಪಡುವುವು
ಆಯಾಯಾ ತರಗತಿಯವರಿಗನುಕೂಲವಾಗುವಂತೆ ಸ್ಥಳವಿದೆ

ಒಮ್ಮೆ ದಯಮಾಡಿಸಿ, ಪರೀಕ್ಷಿಸಿ ತೃಪ್ತಿ ಪಡೆಯಿರಿ.

[ಟಿ ಪಾರ್ಟಿ, ಟೀಪಾರ್ಟಿ, ವಿವಾಹ ಉಪನಯನಾದಿ ಸಮಾರಂಭಗಳಲ್ಲಿ ಸುಲಭ ದರಗಳಲ್ಲಿ ತಿಂಡಿ ತಿನಸು—ಪಾನೀಯಗಳನು ಒದಗಿಸಲಾಗುವುದು. ವಿಶೇಷ ಮಾಹಿತಿಗೆ ಖುದ್ದಾಗಿ ಯಾ ಪತ್ರದ್ವಾರಾ ವಿಚಾರಿಸಿಕೊಳ್ಳುವುದು]

ಪಂಡಿತ ಜವಾಹಿರಲಾಲ ನೆಹರೂ ಬಿರುದಾಗಿ ಮುಬ್ಬಯಿ ಪ್ರದರ್ಶನದಲ್ಲಿ ಸುವರ್ಣಪದಕ ದೊರೆತ

ಒಂದೇ ಸವನಾಗಿ ೩೫ ವರ್ಷದ ಅನುಭವದಿಂದ

ಹಿಂದೂಸ್ಥಾನದ ಸಾವಿರಾರು ಜನರಿಂದ ವರ್ಣಿಸಲ್ಪಟ್ಟ ಆಯುರ್ವೇದೋಕ್ತ

ತಾಜಾ ಮತ್ತು ಪ್ರಾಕೃತಿಕ ದಿನಸ್ಸಿನಿಂದ ತಯಾರಿಸಿರುವ ಮತ್ತು ಅದರ ಗುಣಕ್ಕಾಗಿ ಅನೇಕ ಸರ್ಟಿಫಿಕೇಟುಗಳು ಮತ್ತು ಭಂಗಾರದ ಪದಕ ದೊರೆತಿರುವ ... ಶಕ್ತಿಯ ಮೇಲೆ ಮೊದಲನೆ ತರಗತಿಯ ಟಾನಿಕ

ದ್ರಾಕ್ಷಾಮೃತ

ಈ ದ್ರಾಕ್ಷಾಮೃತವು ... ಪರ್ವತದಲ್ಲಿರುವ ಅನೇಕ ವನಸ್ಪತಿಗಳ ರಸಾರ್ಕಗಳೊಂದಿಗೆ ದ್ರಾಕ್ಷಾರಸವನ್ನು ಮಿಶ್ರಮಾಡಿ ಸ್ವದೇಶೀ ಯಂತ್ರದಿಂದ ಶಾಸ್ತ್ರೋಕ್ತ ಪದ್ಧತಿ ಪ್ರಕಾರ ತಯಾರ ಮಾಡಿರುವುದರಿಂದ ಸ್ವಾದಿಷ್ಟವು ಮತ್ತು ಮಧುರವು ಆಗಿದೆ

ಇದರ ಸೇವನೆಯಿಂದ ಶರೀರದೊಳಗಿನ ಹಳೇ ಉಷ್ಣ (ಗರಮಿ) ಸಂಪೂರ್ಣ ನಾಶವಾಗುತ್ತದೆ ಮತ್ತು ಧಾತುಸ್ರಾವ, ಸ್ವಪ್ನದೋಷದಿಂದ ಅಥವಾ ಬೇರೆ ಯಾವುದೇ ವಿಕಾರದಿಂದ ಬಂದ ಅಶಕ್ತತೆಯಿಂದ ಕೈಕಾಲು, ಕಣ್ಣುಗಳಿಗೆ ಉರುವು ಬೀಳೋಣ, ಯಾವಾಗಲೂ ... ಜ್ವರ ಇರೋಣ, ನಡು ನೋಯೋಣ, ಪಿತ್ತದಿಂದ ತಲೆಗೆ ಕತ್ತಲು ಬಂದು ಘೋರವಾಗಿ ಬರೋಣ, ... ನಿದ್ರೆ ಬಾರದೇ ಇರೋಣ, ಮುಂತಾದ ಎಲ್ಲಾ ವಿಕಾರಗಳು ನಷ್ಟವಾಗಿ ಶರೀರಾರೋಗ್ಯವು ಬೆಳೆಯುತ್ತದೆ. ಮತ್ತು ಅನ್ನ ಚೆನ್ನಾಗಿ ಪಚನವಾಗಿ ... ಇದರ ಸೇವನೆಯಿಂದ ಸಣ್ಣಂದಿನ ವ್ಯಭಿಚಾರದಿಂದ ಅಥವಾ ಬೇರೆ ಕಾರಣದಿಂದ ಬಂದ ಧಾತು ಕ್ಷೀಣತೆ ... ಅವು ಹೋಗಿ ಪುನಃ ಯವನವಂತರಾಗಿ ಶರೀರ ಬಲವಾಗಿ ... ಪುಷ್ಟಿವಂತರಾಗುವರು. ಹೆಂಗಸರಿಗೂ ಮತ್ತು ಮಕ್ಕಳಿಗೂ ಈ ಔಷಧವು ಗುಣಕಾರಿ ಇದೆ ಮುಟ್ಟಾಗದಿದ್ದರೆ ಮತ್ತು ... ಗರ್ಭ ಸಂಬಂಧವಾದ ರೋಗಗಳಿದ್ದರೂ ಅವುಗಳೆಲ್ಲ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವುದು. ಅಶಕ್ತ ಹುಡುಗರು ಬಲವಂತರಾಗುವರು ಈ ಔಷಧದ ೪ ಬಾಟ್ಲಿಗಳನ್ನು ಸೇವನೆ ಮಾಡಿದರೆ ಪೂರ್ಣ ಗುಣ ಬರುತ್ತದೆ ಇದರ ಅನುಭವ ೧ ಬಾಟ್ಲಿ ಸೇವನೆ ಮಾಡಿದ ನಂತರ ತಿಳಿದೀತು.

ಬಾಟ್ಲಿ ಬೆಲೆ ೧—೪—೦ ೪ ಬಾಟ್ಲಿಗೆ ೪—೮—೦ ಡಝನ ಬಾಟ್ಲಿಗೆ ... ರೂಪಾಯಿ ಟಪಾಲು ಖರ್ಚು ... ಬೇರೆ ಬೀಳುತ್ತದೆ

ಪ್ರಸಿದ್ಧ ಕೆಮಿಸ್ಟ ಮತ್ತು ಸ್ಟೋರ್ಸದೊಳಗೆ ಮತ್ತು ಕಿರಾಣಿ ಅಂಗಡಿಯಲ್ಲಿ ಸಿಗುವುದು

ವ್ಯವಸ್ಥಾಪಕರ ದ್ರಾಕ್ಷಾಮೃತ ಕಾರ್ಯಾಲಯ, ಪೋಸ್ಟ ನಿಪ್ಪಾಣಿ ಜಿಲ್ಲಾ, (ಬೆಳಗಾಂವಿ)

ಸಿಕ್ಕುವ ಸ್ಥಳ — ಮಂಗಳೂರು—ಗಜಾನನ ಮೆಡಿಕಲ್ ಹಾಲ್ ಮತ್ತು ಮಿಟ್ಟಾಲ್‌ಕಾರ್ ಬ್ರದರ್ಸ್, ಕಾರ್‌ಸ್ಟ್ರೀಟ್. ಕುಂದಾಪುರ—ಕೆ ಆರ್ ಭಟ್ಟ, ಉಡುಪಿ—ಪೈ ಫಾರ್ಮಸಿ, ಮತ್ತು ಕೆ ಶೇಷಗಿರಿ ಪೈ. ಕಾರ್ಕಳ—ಎ. ಎ. ಶೆಟ್ಟಿ, ಪುತ್ತೂರು—ಗೋಪಾಲ ನಾರಾಯಣ ಪೈ ಮತ್ತು ಪೈ ಫಾರ್ಮಸಿ. ಕಾಸರಗೋಡು—ಕೆ ರಾಮ ನಾಯ್ಕ, ಕೋರ್ಟ್ ರಸ್ತೆ ಬಂಟವಾಳ—ಬಿ ಎಚ್. ವಾಸುದೇವ ಪೈ

2-6-'38

ನಿಮಗೆ ಭಕ್ತಿ ಜ್ಞಾನಗಳು ಬೇಕೋ? ಹಾಗಾದರೆ ಶ್ರೀ ಭಾಗವತವನ್ನು ಓದಿರಿ.

ಕನ್ನಡ ಟೀಕಾತಾತ್ಪರ್ಯಾದಿ ಸಹಿತ

ಶ್ರೀ ಭಾಗವತ ಮಹಾಪುರಾಣ.

ಆಸ್ಥಾನ ಮಹಾವಿದ್ವಾನ್ ಪೋಟಿಗಾನಹಳ್ಳಿ ರಾಮಶೇಷಶಾಸ್ತ್ರಿಗಳಿಂದ ಪ್ರಕಟಿಸಲ್ಪಟ್ಟಿದ್ದು. ಮತತ್ರಯಾನುಸಾರವಾಗಿ ಅನೇಕ ವಿಷಯಗಳೊಡನೆ ಕನ್ನಡಿಸಲ್ಪಟ್ಟ ಈ ಗ್ರಂಥವು ಮೊದಲಿನಿಂದ ಹತ್ತು ಸ್ಕಂಧಗಳು 7 ಸಂಪುಟಗಳಲ್ಲಿ ಪ್ರಚಾರವಾಗಿರುವುದು ಸರಿಯಷ್ಟೇ. ಈಗ 11-12ನೇಯ ಸ್ಕಂಧಗಳುಳ್ಳ ಎಂಟನೆಯ ಸಂಪುಟವು ಪೀಠಿಕಾ ವಿಮರ್ಶೆಗಳೊಡನೆ ಬಿಕರಿಗೆ ಸಿದ್ಧವಾಗಿದೆ. ಹಿಂದಣ ಗ್ರಾಹಕ ಮಹಾಶಯರೂ ದೇಶಬಾಂಧವರೂ ಸಹಾ ಪ್ರೋತ್ಸಾಹಿಸಬೇಕೆಂದು ಪ್ರಾರ್ಥನೆ.

1ನೇಯ ಸಂಪುಟ (1–2ನೇ ಸ್ಕಂಧಗಳು) 3—4—0	7ನೇಯ ಸಂಪುಟ (ದಶಮ ಉತ್ತರ ಭಾಗ) 4—8—0
2 „ „ (3ನೇಯ ಸ್ಕಂಧ) 3—12—0	8 „ „ (11, 12ನೆಯ ಸ್ಕಂಧಗಳು ಪೀಠಿಕಾ ಸಹ) 4—8—0
3 „ „ (4 „ „) 3—8—0	ಶ್ರೀ ಭಾಗವತ ಪುರಾಣ ವಿಮರ್ಶ ಮಾತ್ರ 0—8—0
4 „ „ (5-6ನೇಯ ಸ್ಕಂಧಗಳು) 4—0—0	ಕರ್ನಾಟಕ ಮಹಾಪುರಾಣ ... 1—4—0
5 „ „ (7, 8, 9 ಸ್ಕಂಧಗಳು) 5—8—0	(ಇದೇ ಗ್ರಂಥಕರ್ತರಿಂದ ರಚಿಸಲ್ಪಟ್ಟಿದ್ದು)
6 „ „ (ದಶಮ ಪೂರ್ವಭಾಗ) 5—0—0	

ಈ ಬೆಲೆಗಳಿಗೆ ಟಪಾಲು ಹಾಸಲು ಸೇರಿಲ್ಲ. ಹೆಚ್ಚು ವಿಷಯಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ಆರ್. ಶ್ರೀಕಂಠ ಶಾಸ್ತ್ರಿ, ಭಾರತೀ ಭವನಂ, ... ಬೆಂಗಳೂರು ಸಿಟಿ.

Seventyseven Years!

Two generations of approved service enables us to pick and choose what is cheap lasting & good to suit the pockets & the tastes of our longstanding wide circle of

CUSTOMERS
who know our

Premier House for Swadeshi
Mill Yarns—Handloom Cloths,
Dhoties—Saries—Cintzesh etc

Shrinivas Ranga Pai,
Sawkar Mahal,
Car Street, MANGALORE.

EDITED, PRINTED & PUBLISHED BY V. S. KUDVA AT THE SHARADA PRESS, MANGALORE.

ಸ್ವದೇಶಾಭಿಮಾನಿ.

(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥

ದೊರೆಯಲಮಲತಮರತ್ನಗಳು ಸಾ । ಗರವ ಮಥಿಸಲು ಸುರರಗದರಿಂ । ಹರುಷವಾಯಿತೆ! ಮತ್ತೆ ವಿಷದ ಸುಡುತ ಬರುತಿರುವ ॥

ಗರಲಕವರಂಜದರೆ! ಸುಧೆಯನು । ಮರೆತು ತ್ವದ್ರ್ರರ ತೆರದ ಕುಳಿತರೆ । ತೆರೆಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

(Oldest Kanarese Weekly in South Kanara)

ಪು. ೨೮. | ಮಂಗಳೂರು ತಾ ೨೬ನೇ ಶುಕ್ರವಾರ ಜನವರಿ ೧೯೩೪ | (26 – 1 – '34) | ಸಂಚಿಕೆ ೪

THE CANARA BANKING CORPORATION, UDIPI, LTD.

(Incorporated in British India)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI. **Branches:—Coondapoor, Mangalore, Shimoga & Madras.**

With a view to keep up with the prevailing conditions of the market, the Public are informed that the rate of interest on FIXED DEPOSITS of one year and above has been reduced to 4½% p. a. with effect from 18–1–1934.

Rates of interest on fixed deposits of lesser periods and on other deposits remain unchanged.

Lending rates also have been correspondingly reduced.

For further particulars apply to the Head office or to branches.

By Order

UDIPI. 18–1–'34.

N. ANANDA RAO
Manager.

(Regd)

ಅಮೃತಾಂಜನ.

ಇದು ತಲೆ ಶಿರೋವೇದನೆ, ಕಟ್ಟಿಕೊಡುವ ವಾತ, ಛಾತಿ ನೋವು, ವಿಶೇಷ ಉಳುಕು, ಅಸಹನೀಯ ಹಲ್ಲುನೋವು, ವಿಪರೀತ ಛಾಯ ಬಿಡು ಶೀತ, ಸಹಿಸಲಸದಳವಾದ ಚಳಿ, ಕೈಕಾಲು ಮರಗಟ್ಟುವುದು, ಉಂಟಾಗೊ ಮೊದಲಾದ ಎಲ್ಲಾ ತರದ ವೇದನೆಗಳನ್ನೂ ಅತೀ ತ್ವರೆಯಲ್ಲೇ ಗುಣ ಪಡಿಸುತ್ತದೆ. ಎಲ್ಲಿಲಿಯೂ ಮಾರಲ್ಪಡುತ್ತಿದೆ.

ರಿಂಗ್‌ವರ್ಮ್ ಮುಲಾಮು— ಇದು ರಿಂಗ್‌ವರ್ಮನ್ನು ಕಜ್ಜಿಯನ್ನು ಇತ್ಯಾದಿ ಚರ್ಮರೋಗಗಳನ್ನೂ, ಬೇಗನೆ ಸಲಪಡಿಸುತ್ತಾ ರೋಗಿಗೆ ಗುಣಪಡಿಸುತ್ತದೆ.

ಡಬ್ಬಿ 1ಕ್ಕೆ 6 ಆಣೆ ಡಜನಿಗೆ ರೂ. 3–8–0. ಅಂಚೆವೆಚ್ಚ ಪ್ರತ್ಯೇಕ.

ಅಮೃತಾಂಜನ ಡಿಪೋ.

ಮದರಾಸು ಮತ್ತು ಬೊಂಬಾಯಿ.

ಕ್ಷಯಕ್ಷೀಣಾದಿಗಳಿಗೆ
ಚ್ಯವನಪ್ರಾಶಾನ ಲೇಹ.

ಪ್ರಸೂತಿ ರೋಗಾದಿಗೆ
ದಶಮೂಲಾರಿಷ್ಟ.
(ಕಸ್ತೂರಿ ಮಿಶ್ರಿತ)

ಸಮಸ್ತ ವಾತರೋಗಗಳಿಗೆ
ಮಹಾನಾರಾಯಣ ತೈಲ.

ಶ್ರೀ ರಾಮಕೃಷ್ಣ ಆಯುರ್ವೇದ ವೈದ್ಯಶಾಲೆ,
ಡೊಂಗರಕೇರಿ ರಸ್ತೆ, ಮಂಗಳೂರು.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ

ಇವರ

ಬಾಲಾಮೃತ.

ಇದನ್ನು
ಕೊಡುವುದರಿಂದ ಮಕ್ಕಳು
ಸಶಕ್ತರೂ, ಪುಷ್ಟರೂ ಮತ್ತು
ಸಂತೋಷ ಚಿತ್ತರೂ ಆಗುವರು.

ಕೇ. ಟಿ. ಡೋಂಗರೇ ಕಂಪೆನಿ.
ಗಿರಗಾಂವ, ಮುಂಬಾಯಿ.

ಏಜಂಟರು— ಪಾಯ್ ಕಂಪೆನಿ, ಕುಂದಾಪುರ.

ಬೆಳೆಯುತ್ತಿರುವ ಮಕ್ಕಳಿಗೆ ಸರಿಯಾದ ಪೋಷಣೆಯು ಅಗತ್ಯ.

ಮುಂದಕ್ಕೆ ಚೆನ್ನಾಗಿ ಬೆಳೆಯ ಬೇಕಾದರೆ ಚಿಕ್ಕಂದಿನಲ್ಲೇ ಮಕ್ಕಳನ್ನು ಚೆನ್ನಾಗಿ ಸಲಹಬೇಕು ಬೆಳೆಯುತ್ತಿರುವ ಮಕ್ಕಳು ಮನಸ್ಸು, ದೇಹಗಳೆರಡೂ ಆರೋಗ್ಯವಾಗಿಯೂ ಪುಷ್ಟವಾಗಿಯೂ ಬೆಳೆಯಬೇಕಾದರೆ ಸರಿಯಾದ ಪೋಷಣೆಯು ಬೇಕು ನಿತ್ಯದ ಭೋಜನಗಳಲ್ಲಿ ಸರಿಯಾದ ಪೋಷಣೆ ಸಾಲದಿಲ್ಲ ಎಷ್ಟೋ ಚೆನ್ನಾಗಿರಲಿ, ನಿತ್ಯದ ಆಹಾರದಲ್ಲಿ ಮಕ್ಕಳ ಮನದೇಹಗಳನ್ನು ಬೆಳೆಸುವಷ್ಟು ಸಾರವಿರುವುದಿಲ್ಲ ಒಂದೇ ಆಹಾರವು ನಿಮ್ಮ ಮಕ್ಕಳನ್ನು ಆರೋಗ್ಯ, ಬಲ, ಶಕ್ತಿಗಳಿಂದ ಪೋಷಿಸುವುದು ಅದೇ ಆಹಾರವು 'ಓವಲ್ಟಿನ್'

ಓವಲ್ಟಿನ್ ಎಂಬುದ ಅಮೋಘವಾದ ಆಹಾರ ಅದನ್ನು ಪ್ರಕೃತಿಸಿದ್ಧ ವಸ್ತುಗಳಿಂದ ತಯಾರಿಸಲಾಗಿದೆ ಬೆಳೆದ ಬಾರ್ಲಿ ದನದ ಕೆನೆ ಹಾಲು, ಕೋಳಿಮೊಟ್ಟೆಗಳಿಂದ ತಯಾರಿಸಲ್ಪಟ್ಟಿದ್ದು, ಆರೋಗ್ಯ ಕಾಯಲಿರುವ ಮಕ್ಕಳಿಗೆಲ್ಲ ಅಗತ್ಯ ಬೇಕಾದುದು—ಹೆಸರಾದುದು

OVALTINE

ಮೆದುಳು, ನರ, ದೇಹಗಳನ್ನು ವೃದ್ಧಿಸುತ್ತದೆ

ತಯಾರಿಯಲ್ಲಿ ಹಸ್ತ ಸ್ಪರ್ಶಿತವಾಗಿಲ್ಲ — ಎಲ್ಲಾ ಸ್ಟೋರುಗಳಲ್ಲಿಯೂ ಕೆಮಿಸ್ಟರಲ್ಲಿಯೂ ಸಿಗುತ್ತದೆ

ಏಜಂಟ್ ಜೇಮ್ಸ್ ರ್‍ಯಾಟ್ 8೯ಎ ರಿಪನ್ ಸ್ಟ್ರೀಟ್ ಕಲ್ಕತ್ತ ಮತ್ತು ಬೊಂಬಾಯಿ ಮದ್ರಾಸುಗಳಲ್ಲಿ

OV/105

ಜಯವಾಣಿ ಟಾಕೀಸ್ ಮದ್ರಾಸು.

ಇವರು

ಕನ್ನಡದಲ್ಲಿ ಅಪೂರ್ವ ಪ್ರಯತ್ನವಾದ 'ಧ್ರುವಕುಮಾರ' ಎಂಬ ಪ್ರಥಮ ಕನ್ನಡ ಟಾಕಿಯನ್ನು ಮೊದಲಿನ ಸರ್ತಿ ಕನ್ನಡಿಗರಿಗೆ ಸಮರ್ಪಿಸುವರು

೬೭ ಭವ್ಯ ಗೀತಗಳು!————ಎಲ್ಲ ಅಪ್ರತಿಮ ಗಾಯನ ಪಟುಗಳು!

ಆರೇ ವರ್ಷದ ಅದ್ಭುತಶಕ್ತಿಯುಳ್ಳ ಹುಡುಗ ಮಾಸ್ಟರ್ ಮುತ್ತು ಇವನ ಧ್ರುವಪಾತ್ರದ ಕಾರ್ಯಗಾರಿಕೆಯನ್ನು ಕೇಳಿ ಆನಂದಪಡಿರಿ!

(ಈತನು ಮೈಸೂರಿನ ಕೈ ವಾ. ನಾಟಕಶಿರೋಮಣಿ ಎ ವಿ ವರದಾಚಾರ್ಯರ ಮೊಮ್ಮಗ) ಇವನಲ್ಲದೆ ಅಭಿನಯ ವಿಶಾರದ ಬಿ ನಾಗೇಶರಾವ್, ಶ್ರೀಮತಿ ಕನಕಲಕ್ಷ್ಮಿದೇವಿ, ಎಂ ವಿ, ಟಿ ದ್ವಾರಕಾನಾಥ, ಬಿ ಎನ್ ಸಿ ಮೊದಲಾದವರ ಅಭಿನಯಕೌಶಲವನ್ನು ಕಣ್ಣಾರೆ ಕಾಣಬಹುದು!

ನಿಮ್ಮ 'ಟಾಕಿ' ಸಿನೆಮ ಮಂದಿರಕ್ಕೆ ಈ ಚಿತ್ರವು ಎಂದು ಬರುವುದೋ ನಿರೀಕ್ಷಿಸಿರಿ!

For neat and nice Printing

Please call at

THE SHARADA PRESS,

Car Street, MANGALORE

'ಸ್ವ[illegible]ವತಾನಿಗೆ' ಇಂದೇ ಚಂದಾದಾರರಾಗಿರಿ!

× × × ×

ಬಿಹಾರ್, ಒರಿಸ್ಸಾಗಳಲ್ಲಿ ಹಂಗಾಂಶ್ರಿತರು ಅಕ್ಕನವರು ನ್ಯೂಕರಾಗಿರುವರೆಂದು ಅಂದಾಜು ಮಾಡಲಾಗಿದೆ. ಜೋಗಗಳನ್ನು ಕೂಡಿಸಲು ಸಾಧ್ಯವಾಗದೆ ಅಕ್ಕಿಗಳನ್ನು ಕಡುದೆಳ್ಳಿಸಿಯುತ್ತಿರುವರು.

× × × ×

ಜನಜಾನುವಾರುಗಳೆಲ್ಲ ಮೈದಾನುಗಳಲ್ಲಿ ಡೇರೆ ಹೊಡೆದು ಬಿದ್ದುಕೊಂಡಿವೆ. ಅದರೆ ನಮ್ಮ ಗುಳ್ಳಗಳ ಕೃಪಾಕ ಕಡಿಮೆಯಾಗಿಲ್ಲ.

× × × ×

ಅಂತೂ ದೇವರೇ ಮುನಿದಂತೆ ತೋರುತ್ತದೆ. ಸತ್ತವರಲ್ಲಿ ಬಟ್ಟಿನವರು ಐಶ್ವರ್ಯವಂತರು—ಬಡವರಲ್ಲ. ಮಾಳಿಗೆ ಮನೆಗಳು ಭೂಕಂಪದಿಂದ ಬಿದ್ದುವು. ಮುಳಿ ಮಾಡುಗಳು ಉಳಿದುವು.

× × × ×

ಶ್ರೀ ಕೃಷ್ಣರಾಯನು "ಯುಗೇ ಯುಗೇ ಸಂಭವಾಮಿ" "ಯುಗಯುಗಗಳಲ್ಲೂ ಜನಿಸುವೆನು" ಎಂದಿರುವನಂತೆ ಹಾಗಾದರೆ ಇದೇ ರೀತಿಯಿಂದ "ಸಂಭವಾಮಿಯೋ" ಏನೋ, ಯಾರಿಗೆ ಗೊತ್ತು?

× × × ×

ಉಡುಪಿಯಲ್ಲಿ ಕೊಲೆಯಾದ ಗುಳ್ಳಗಳೇ ಮುನಿದಂತೆ ಸಾಧ್ಯವಾಗಿ ಭಾಸವಾಗುತ್ತದೆ ಸತ್ಯವಾದರೆ ಗುಳ್ಳ ಪೂಜೆಯನ್ನು ಕೂಡಲೇ ಮಾಡಬೇಕಾಗಿದೆ

× × × ×

ಬಿಹಾರ್ ಪ್ರಾಂತ್ಯದಲ್ಲಿ ಜನರು ಅನ್ನ ಅನ್ನವೆಂದು ಬೊಬ್ಬಿಡುತ್ತಿರುವರು ರಿಲೀಫ್‌ಗಾಗಿ ವ್ಯಾಸರಾಯರೇ ಹೊರಟಿರುವರು ಚಕ್ರವರ್ತಿಯವರು ೧೫೦ ಪೌಂಡುಗಳನ್ನು ವೈಸರಾಯರಿಗೆ ರವಾನಿಸಿರುವರು ಉಡುಪಿಯವರು ಗುಳ್ಳಗಳನ್ನಾದರೂ ರವಾನಿಸಬಾರದೇ?

× × × ×

ಜವಾಹರಲಾಲರು ಘೋಷಣೆ ಮಾಡುತ್ತಾ "ಕಾಂಗ್ರೆಸ್‌ವಾಲರು ಅದಷ್ಟು ಸಹಾಯವನ್ನು ಮಾಡಬೇಕೆ"ಂದು ಹೇಳಿರುವರು. ಸನಾತನವಾದಿಗಳು ಏನು ಮಾಡಲಿರುವರೋ ಆ ಕೃಷ್ಣಯ್ಯನಿಗೇನೆ ಗೊತ್ತು!

× × × ×

ತಾ. ೨೦ನೇ ದಿನವೂ ಬಾಟ್ನಾದಲ್ಲಿ ಭೂಕಂಪವಾದಂತೆ ಮುಂದೇನಾಗಲಿರುವುದೋ ಆ ದೇವರೇ ಬಲ್ಲ!

× × × ×

ಭೂಮಿಗಾಗಿ ಜನರು ಜಗಳಾಡುತ್ತಾರೆ, ಅದಕ್ಕೆ ಭೂಕಂಪರಾಯನು ಜಗಳಾಡಿದರೆ ಜಗಳಾಡುವವರೂ ಧ್ವಂಸ!

× × × ×

ಅದುದರಿಂದ ಮಾಳಿಗೆ ಮನೆ ಕಟ್ಟುವವರೂ ಜಗಳಾಡುವವರೂ ಎಚ್ಚರಿಕೆ! ೯ ದಕ್ಷಿಣ ಕನ್ನಡದಲ್ಲೂ (ಒಂದು ವೇಳೆ) ಭೂಕಂಪವಾಗಿಬಿಟ್ಟರೆ .... !

× × × ×

ಕಳೆದ ಸೋಮವಾರದ ಭೂಕಂಪದಿಂದ ಎಲೆಕ್ಟ್ರಿಯಸ್ ಕೊಲೆಯ ಜಿಸ ಸ್ಯಾನಿಟ್ರಾಕ್ಟ್‌ನ ಮುಳ್ಳು ಬಿದ್ದಿತೆಯಂತೆ! ಅಂದರೆ ಇಲ್ಲಿಯೂ ಭೂಕಂಪವಾದಂತಾಯಿತು! ಸ್ವಲ್ಪ ಕಠಿಣವಾಗುತ್ತಿದ್ದರೆ ಗುಳ್ಳಗಳಿಂದ ತುಂಬಿದ ಕಣ್ಣು ಕೊಟ್ಟಿಗಳ ಗತಿಯೇನು?—ನೀನೇ ಹೇಳು!

× × × ×

ಭೂಕಂಪದಿಂದ ಅಳಿದವರನ್ನು ಅಭಿನಂದಿಸಿ, ಉಳಿದವರನ್ನು ಹರಸುವ,

ಇಮ್ಮ.

ಸ್ವರ್ಣ

ಬೇಕಾಗಿದ್ದಾರೆ.

Canara Bank, Limited.

Established 1906.

Authorised Capital	10,00000—0—0
Subscribed capital	6,00,000—0—0
Paid up Capital	3,30,000—0—0
Reserves	4,31,0[illegible]—0—0

Head Office —**Bunder, Mangalore** Local Offices — **City & Bunder**

BRANCHES — Bombay, Cochin, Calicut, Ernakulam, Alleppey, Chikmagalur, Ganguli, Coondapoor, Udipi, Karkal, Puttur, Kasaragod, & Buntwal Out agency.

Interest is allowed on Current, Fixed and Saving Banks Accounts, rates of which may be ascertained on application. Advances made on approved securities at easy rates. All kinds of Banking business transacted. Rules of business on application.

The Bangalore Branch Office of the Bank at No. 1 Albert Victor Road Bangalore City will be opened on 8—1—34

Mangalore 22—12—33

A. Madhava Pai, *Secretary*

S. U. N. & CO.

Choukhamba, Benares City

ಮೂರು ಇನಾಮುಗಳು.

ನಮ್ಮಲ್ಲಿ ಕಾಶ್ಮೀರ್ ಶಾಲುಗಳಿಗಿಂತಲೂ ಅತ್ಯುತ್ತಮವಾದ ಕಸೂತಿಗಳಿಂದೊಪ್ಪುವ ಶುದ್ಧ ಸ್ವದೇಶೀ ಖದ್ದರ್ ಶಿಲ್ಕು ಶಾಲುಗಳು ತಯಾರಾಗುತ್ತವೆ. ಬೇಕಾದವರು ತ್ವರೆಮಾಡಿ ಬರೆದರೆ ಈ ಕೆಳಗಿನ ದರದಲ್ಲಿ ಕಳುಹಿಸಲಾಗುತ್ತದೆ. 5 ಮೊಳ ಉದ್ದ 2½ ಅಗಲ ದರ ಒಂದಕ್ಕೆ ರೂ. 2—8—0ಯಿಂದ 3—12—0 5½ ಮೊಳ ಉದ್ದ 2¾ ಮೊಳ ಅಗಲ ದರ 1ಕ್ಕೆ 3—8—0, 4—8—0 6 ಮೊಳ ಉದ್ದ 3 ಅಗಲ ದರ 1ಕ್ಕೆ ರೂ. 4—8—0, ರೂ. 5 ಅಲ್ಲದೆ ಸ್ವದೇಶೀ ಖದ್ದರ್ ಮಡಿಗಳೂ, ಶೀರೆಗಳೂ ಅಂಚುಗಳಿಲ್ಲದೆ ಎಲ್ಲಾ ರಂಗುಗಳಲ್ಲಿರುತ್ತವೆ ಮತ್ತು ಜರೀಕಾರೀ ಶೀರೆಗಳೂ ಪೀತಾಂಬರಗಳೂ ರವಕೆಗಳೂ, ರುದ್ರಾಕ್ಷೀ—ಬಾಣಲಿಂಗ—ಪಂಚಾಯತನ ಸುದರ್ಶನ ಹಿತ್ತಾಳಿ ಶ್ಯಾಮಿಗೆ ಪಿಶ್ಮನ್, ಮಡಿ ಧಾವಳಿ ಶಾಲು, ಜಗನ್ನಾಥ ಗಂಟೆಗಳೂ ಕೂಡಾ ಸರಿಯಾದ ದರಕ್ಕೆ ಕಳುಹಿಸಲಾಗುತ್ತದೆ. ವಿವರಕ್ಕೆ ಕೆಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ. 1 ಆಣೆ ಸ್ಟೇಂಪು ಕಳುಹಿಸಿದರೆ 1 ವಿಶ್ವೇಶ್ವರ ಪಟ, 1 ಕಾಶೀನಕ್ಷೆ, 1 ಕೆಟಲಾಗಿನೊಡನೆ 3 ಇನಾಮುಗಳು.

ವಿಳಾಸ:—

ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪೆನಿ, ಚೌಖಾಂಬಾ, ಬೆನಾರಿಸ್ (ಕಾಶೀ)

East & West Insurance Company Ltd.,

(Incorporated in India 1913)

Head Office —EAST & WEST BUILDINGS, FORT, BOMBAY.

Eastern Company with striking features
Attractive plans,
Sympathetic & Liberal
Treatment to Policy Holders,
&
Wide popularity,
Economic Management
Sound investment
That is why you should select 'East & West'
Ere you invest in the rest

Interim Bonus Declared Rs. 15 Per 1000 On whole life & Endowment Policies

For particulars and Agency terms apply to —

H. S. Nayak, *Organiser, Secretary* for West Coast, Coorg & Mysore,
"Harbour View" Mangalore.

ಸಿದ್ಧವಾಗಿವೆ! ತ್ವರೆ ಮಾಡಿರಿ!

ಗಿ೯೩೪ನೇ

ಸ್ವರಾಜ್ಯ ಡೈರಿಗಳು!

ಇದರಲ್ಲಿ ಹಿಂದೂ ಮಹಮ್ಮದಿ ಕ್ರೈಸ್ತರಿಗೆ ಅನುಕೂಲವಾಗುವಂತೆ ಸರಿಯಾದ ತಿಥಿ ನಕ್ಷತ್ರ ವಗೈರೆ ಮಾಹಿತಿಯೂ ಪ್ರತಿಯೊಂದು ಪುಟದಲ್ಲಿ ಉತ್ತಮವಾದ ನೀತಿವಾಕ್ಯಗಳೂ ಸಂಗ್ರಹಿಸಲ್ಪಟ್ಟಿವೆ!

ಸಮಸ್ತ ಹಿಂದುಸ್ಥಾನ ರಾಜಕೀಯ, ಸಾಂಪತ್ತಿಕ, ವಿದ್ಯೆ ಕೈಗಾರಿಕೆ ಮೊದಲಾದ ಅನೇಕ ಮಹತ್ವದ ವಿಷಯಗಳಲ್ಲಿ ನೀವು ತಿಳಿಯಬೇಕಾದ ವಿಷಯಗಳ ಹೊಸ ವರದಿಯನ್ನು ಸಂಗ್ರಹಿಸಿದೆ!

ಸೈಜು	ದೊಡ್ಡದು	ಮುಚ್ಚಳದ್ದು	ಮಧ್ಯಮದ್ದು,	ಮುಚ್ಚಳದ್ದು.
ಬೆಲೆ	೦—೬—೦	೦—೧೨—೦	೦—೮—೦,	೦—೧೦—೦

ಕರ್ನಾಟಕ ಡೈರಿಗಳು.

ಇದರಲ್ಲಿ ವ್ಯವಹಾರಗಳಿಗೆ ಬೇಕಾದ ಸ್ಟಾಂಪು ಆಕ್ಟಿನ ಸಾರಾಂಶ ರಿಜಿಸ್ಟ್ರೇಶನ್ ಫೀಸುಗಳು, ಕೋರ್ಟು ಫೀಸುಗಳ ದರ ಟಪ್ಪಾಲ ಮಾಹಿತಿ ವಗೈರೆ ವಿಷಯಗಳಿದ್ದು ವಕೀಲರಿಗೂ ಗುಮಾಸ್ತರಿಗೂ ಉಪಯೋಗವುಳ್ಳದ್ದು. ಈ ಡೈರಿಗಳಲ್ಲಿ ಮುಖ್ಯವಾಗಿ ಕರ್ನಾಟಕದವರಿಗೆ ಬೇಕಾಗುವ ವ್ಯವಹಾರದ ಮಾಹಿತಿಯನ್ನು ಸಂಗ್ರಹಿಸಿದೆ.

ದೊಡ್ಡದು,	ಮುಚ್ಚಳದ್ದು	ಚಿಕ್ಕದ್ದು,	ಮುಚ್ಚಳದ್ದು
೦—೧೦—೦	೦—೧೨—೦	೦—೬—೦	೦—೮—೦.

ಪುಸ್ತಕ ವ್ಯಾಪಾರಿಗಳಲ್ಲೆಲ್ಲಾ ಮಾರಲ್ಪಡುವುದು
ಪಿ. ಎ. ಶೈ ಬ್ರದರ್ಸ್, ಪ್ರಕಾಶಕರು, ಉಡುಪಿ.

ನಮ್ಮ ಟೊಯಿಲೆಟ್ ಮತ್ತು ವಾಶಿಂಗ್ ಸಾಬೂನುಗಳ ತಯಾರಿಯಲ್ಲಿ ಚರ್ಬಿ ಉಪಯೋಗಿಸಲ್ಪಡುವುದಾಗಿ ರುಜುಪಡಿಸುವವರಿಗೆ ರೂಪಾಯಿ

1000 ಬಹುಮಾನ.

ಸಾಬೂನು ಪಡೆಯುವಾಗ " " ಅದರಲ್ಲಿ ಚರ್ಬಿ ಇರಕೂಡದೆಂದು ನಿಮ್ಮ ಆಶೆ.

ಪ್ರಾಣಿಗಳ ಚರ್ಬಿ ಮಿಶ್ರಿತವಾದ ಸಾಬೂನುಗಳು ಹಿತಕ್ಕಿಂತಲೂ ಅಹಿತವನ್ನೇ ಹೆಚ್ಚಾಗಿ ಉಂಟುಮಾಡುತ್ತವೆ. ಕಾರಣ ಅವುಗಳಲ್ಲಿನ ಚರ್ಬಿ ಚರ್ಮರಂಧ್ರಗಳೊಳಗೆ ಹೋಗಿ ಬೆವರನ್ನು ತಡೆಯುತ್ತದೆ. ಸೋಪನ್ನು ಪಡೆಯುವಾಗ ನೀವು ಪರಿಮಳಭರಿತ ಚರ್ಬಿನ ಮುದ್ದೆಗೆ ಬೆಲೆ ಕೊಟ್ಟು ಶುದ್ಧತೆಯ ಬದಲು ಅಶುದ್ಧತೆಯನ್ನು ಸ್ವೀಕರಿಸಬೇಕೆಂದಿರುವಿರಾ?

ಮಲಬಾರು ಸಾಬೂನುಗಳು ಜನನಕ್ಕೆ ಬಂದ ಆರು ತಿಂಗಳುಗಳ ಅಲ್ಪಾವಧಿಯಲ್ಲೇ ಸಾರ್ವಜನಿಕ ಬೆಂಬಲವನ್ನು ಪಡೆದಿವೆ. ಕೊಚ್ಚಿಯ ಮಹಾ ರಾಜರ ದಯಾಪೂರ್ಣ ಪ್ರಶಸ್ತಿ ಮತ್ತು ಪ್ರೋತ್ಸಾಹನದಿಂದಾಗಿಯೂ, ಪ್ರಖ್ಯಾತ ವೈದಕೀಯ ಅಧಿಕಾರಿಗಳ ಶಿಫಾರಸಿನಿಂದಾಗಿಯೂ, ಅನೇಕ ವಸ್ತುಪ್ರದರ್ಶನಗಳಲ್ಲಿ ದೊರೆತ ಸುವರ್ಣಪದಕ ಮತ್ತು ಪ್ರಶಸ್ತಿ ಪತ್ರಿಕೆಗಳಿಂದಾಗಿಯೂ ಮಲಬಾರ್ ಸಾಬೂನುಗಳ ಪ್ರಾಮುಖ್ಯತೆಯು ಎಷ್ಟೆಂದು ತಿಳಿಯುವುದು.

ಮಲಬಾರ್ ಸಾಬೂನು ಎಲ್ಲಾ ವಿಧದಿಂದಲೂ ಶ್ರೇಯಸ್ಕರವೇ ಆಗಿರುತ್ತದೆ. ನಿಮ್ಮ ಚರ್ಮಕ್ಕೆ ಬಾಧಕವನ್ನುಂಟು ಮಾಡುವಂತಹ ಪ್ರಾಣಿಗಳ ಚರ್ಬಿ ಅಥವಾ ಹಾನಿಕರವಾದ ಮಿಶ್ರಿತವೇನೂ ಅದರಲ್ಲಿರದು. ಮಲಬಾರ್ ಸಾಬೂನನ್ನು ಶಾಸ್ತ್ರೀಯ ರೀತಿಯಿಂದಲೂ, ಆರೋಗ್ಯ ದೃಷ್ಟಿಯಿಂದಲೂ ತಯಾರಿಸುವುದರಿಂದ ಎಷ್ಟು ಕೆಳವಾದ ಚರ್ಮವೂ ಬಾಧಕ ಹೊಂದುವುದಿಲ್ಲ. ಈ ಸಾಬೂನು ದೇಶಿಯ ಅಮೂಲ್ಯ ಗಂಧಯುಕ್ತ ಸಾಮಾಗ್ರಿಗಳಿಂದ ಎಲ್ಲರಿಗೂ ಅನುಕೂಲವಾಗುವ ಹಾಗೆ ಅಗ್ಗವಾಗಿದೆಯೆಂದು ಅದರ ಉಪಯೋಗದಿಂದ ನಿಮಗೆ ತಿಳಿದುಬರುವುದು.

ನಿಮ್ಮ ವ್ಯಾಪಾರಸ್ಥರು

ಮಲಬಾರ್ ಸಾಬೂನುಗಳನ್ನು

ವಿಕ್ರಯಿಸಲು ಸಂತೋಷಪಡುವರು

ಇದರಲ್ಲಿ ಪ್ರಾಣಿಗಳ ಕೊಬ್ಬು ಇರುವುದಿಲ್ಲ

ದಿ ವೆಜಿಟೇಬಲ್ ಸೋಪ್ ವರ್ಕ್ಸ್, ಕಲ್ಲಿಕೋಟೆ.

ಪ್ರೊಪ್ರೈಟರ್.—ಸನ್ ಟ್ರೇಡ್ ಕೂಡಿಯ ಖ್ಯಾತಿಯ ಸೇಟ್ ನಾಗಜೀ ಪುರುಷೋತ್ತಮ ಮತ್ತು ಕಂಪೆನಿ, ಕಲ್ಲಿಕೋಟೆ

ಈ ಜಿಲ್ಲೆಗೆ ಪ್ರವರ್ತಕರು:—

ರಾಘವೇಂದ್ರ ರಂಗ ಶೈ, ರಥಬೀದಿ, ಮಂಗಳೂರು.

1934

Sharada Diaries

Ready! Ready!

SMALL SIZE—BIG SIZE—

ಶಾರದಾ ಡೈರಿಗಳು

ಕಲವೇ ಮಾತ್ರ ಉಳಿದಿವೆ!

ಸಣ್ಣ ಸೈಜು— —ದೊಡ್ಡ ಸೈಜು

Sharada Press, Mangalore.

LOOK HERE!

We have got for sale all kinds of freshly prepared Exercise books, Note books and Diaries etc.,

SHARADA PRESS,
Car Street, Mangalore.



ಬೆಳೆಯುತ್ತಿರುವ ಮಕ್ಕಳಿಗೆ ಸರಿಯಾದ ಪೋಷಣೆಯು ಅಗತ್ಯ.

ಮುಂದಕ್ಕೆ ಚೆನ್ನಾಗಿ ಬೆಳೆಯ ಬೇಕಾದರೆ ಚಿಕ್ಕಂದಿನಲ್ಲೇ ಮಕ್ಕಳನ್ನು ಚೆನ್ನಾಗಿ ಸಲಹಬೇಕು. ಬೆಳೆಯುತ್ತಿರುವ ಮಕ್ಕಳು ಮನಸ್ಸು, ದೇಹಗಳಲ್ಲಿ ಆರೋಗ್ಯವಾಗಿಯೂ ಪುಷ್ಟರಾಗಿಯೂ ಬೆಳೆಯಬೇಕಾದರೆ ಸರಿಯಾದ ಪೋಷಣೆಯು ಬೇಕು. ನಿತ್ಯದ ಭೋಜನಗಳಲ್ಲಿ ಸರಿಯಾದ ಪೋಷಣೆ ಸಾರವಿಲ್ಲ. ಎಷ್ಟೋ ಚೆನ್ನಾಗಿರಲಿ, ನಿತ್ಯದ ಆಹಾರದಲ್ಲಿ ಮಕ್ಕಳ ಮನದೇಹಗಳನ್ನು ಬೆಳೆಸುವಷ್ಟು ಸಾರವಿರುವುದಿಲ್ಲ. ಒಂದೇ ಆಹಾರವು ನಿಮ್ಮ ಮಕ್ಕಳನ್ನು ಆರೋಗ್ಯ, ಬಲ, ಶಕ್ತಿಗಳಿಂದ ಪೋಷಿಸುವುದು. ಅದೇ ಆಹಾರವು ಓವಲ್ಟಿನ್

ಓವಲ್ಟಿನ್ ಎಂಬುದು ಜೀವೋಪಯೋಗಿ ಆಹಾರ. ಅದನ್ನು ಪ್ರಕೃತಿಸಿದ್ಧ ವಸ್ತುಗಳಿಂದ ತಯಾರಿಸಲಾಗಿದೆ. ಬೆಳದ ಬಾರ್ಲಿ, ದನದ ಕೆನೆ ಹಾಲು, ಕೋಕೋಗಳಿಂದ ತಯಾರಿಸಲ್ಪಟ್ಟದ್ದು, ಆರೋಗ್ಯ ಕಾಯಿರಂದ ಮಕ್ಕಳಿಗೆ ಅಗತ್ಯ ಬೇಕಾದುದು—ಹೆಸರಾದುದು

OVALTINE

ಮೆದುಳು, ನರ, ದೇಹಗಳನ್ನು ವೃದ್ಧಿಸುತ್ತದೆ

ತಯಾರಿಯಲ್ಲಿ ಹಸ್ತ ಸ್ಪರ್ಶವಾಗಿಲ್ಲ. ಎಲ್ಲಾ ಸ್ಟೋರುಗಳಲ್ಲಿಯೂ ಕೆಮಿಸ್ಟರಲ್ಲಿಯೂ ಸಿಗುತ್ತದೆ.

ಏಜಂಟ್ ಜೇಮ್ಸ್ ರ್‍ಯಾಟ್ 85ಎ ಲಿಸನ್ ಸ್ಟ್ರೀಟ್ ಕಲ್ಕತ್ತ ಮತ್ತು ಬೊಂಬಾಯಿ ಮದ್ರಾಸುಗಳಲ್ಲಿ

OV/203

ಜಯವಾಣಿ ಟಾಕೀಸ್ ಮದ್ರಾಸು.

ಇವರು

ಕನ್ನಡದಲ್ಲಿ ಅಪೂರ್ವ ಪ್ರಯತ್ನವಾದ 'ಧ್ರುವಕುಮಾರ' ಎಂಬ ಪ್ರಥಮ ಕನ್ನಡ ಟಾಕಿಯನ್ನು ಮೊದಲಿನ ಸರ್ತಿ ಕನ್ನಡಿಗರಿಗೆ ಸಮರ್ಪಿಸುವರು

೩೬ ಭವ್ಯ ಗೀತಗಳು!——ಎಲ್ಲ ಅತ್ಯುತ್ತಮ ಗಾಯನ ಪಟುಗಳು!!

ಆರೇ ವರ್ಷದ ಅದ್ಭುತಶಕ್ತಿಯುಳ್ಳ ಹುಡುಗ ಮಾಸ್ಟರ್ ಮುತ್ತು ಇವನ ಧ್ರುವಪಾತ್ರದ ಹಾಡುಗಾರಿಕೆಯನ್ನು ಕೇಳಿ ಆನಂದಪಡಿರಿ!

(ಈತನು ಮೈಸೂರಿನ ಶ್ರೀ ನಾ. ನಾಟಕಶಿರೋಮಣಿ ಎ ವಿ ವರದಾಚಾರ್ಯರ ಮೊಮ್ಮಗ) ಇವನಲ್ಲದೆ ಅಭಿನಯ ವಿಶಾರದ ಟಿ. ನರಸಿಂಗರಾವ್, ಶ್ರೀಮತಿ ಕನಕಲಕ್ಷ್ಮೀದೇವಿ, ಎಂ. ವಿ. ಟಿ. ದ್ವಾರಕಾನಾಥ, ಬಿ ಎ. ಮೊದಲಾದವರ ಅಭಿನಯ ಕೌಶಲವನ್ನು ಶ್ಲಾಘಿಸಬಹುದು!

ನಿಮ್ಮ ಟಾಕಿ ಸಿನೆಮ ಮಂದಿರಕ್ಕೆ ಈ ಚಿತ್ರವು ಎಂದು ಬರುವುದೋ ನಿರೀಕ್ಷಿಸಿರಿ!!

For neat and nice Printing

Please call at

THE SHARADA PRESS,

Car Street, MANGALORE.

ಬಿಹಾರ್ .... ಅಂದಾಜು ಮಾಡಲಾಗಿದೆ. .... ಹೂಳಿಡಲು ಸಾಧ್ಯವಾಗದ ಅಷ್ಟುಗಳನ್ನು ಸಮುದ್ರಕ್ಕೆಸೆಯುತ್ತಿರುವರು.

× × × ×

ಜನಜಾನುವಾರುಗಳಲ್ಲ ಮೃದಾನುಗಳಲ್ಲ ಹೇಳ ಹೋದರೆ .... ಕೊಂಡಿವೆ. ಆದರೆ ನಮ್ಮ ಗುಳ್ಳಗಳ ಪ್ರಕಾಶ ಕಡಿಮೆಯಾಗಿಲ್ಲ.

× × × ×

ಅಂತೂ ದೇವರೇ ಮುನಿದಂತೆ ತೋರುತ್ತದೆ. ನಿತ್ಯದಲ್ಲಿ .... ನವರು ಐಶ್ವರ್ಯವಂತರು—ಬಡವರಲ್ಲ. ಮೂಳಗೆ ಮನೆಗಳು .... ಕಂಪದಿಂದ ಬಿದ್ದುವು. ಮುಳಿ ಮಾಡುಗಳು ಉಳಿದುವು.

× × × ×

ಶ್ರೀ ಕೃಷ್ಣರಾಯನು "ಯುಗೇ ಯುಗೇ ಸಂಭವಾಮಿ" "ಯುಗಯುಗಗಳಲ್ಲೂ ಅವತರಿಸುವೆನು" ಎಂದಿರುವನಂತೆ. ಹಾಗಾದರೆ ಇದೇ .... ಯಿಂದ "ಸಂಭವಾಮಿಯೋ" ಏನೋ, ಯಾರಿಗೆ ಗೊತ್ತು?

× × × ×

ಉಡುಪಿಯಲ್ಲಿ ಕೊಳೆಯಾದ ಗುಳ್ಳಗಳೇ ಮುನಿದಂತೆ .... ಭಾಸವಾಗುತ್ತದೆ. ಸತ್ಯವಾದರೆ ಗುಳ್ಳ ಪೂಜೆಯನ್ನು ಕೂಡಲೇ .... ಬೇಕಾಗಿದೆ.

× × × ×

ಬಿಹಾರ್ ಪ್ರಾಂತ್ಯದಲ್ಲಿ ಜನರು ಅನ್ನ ಅನ್ನವೆಂದು ಬೊಬ್ಬಿಡುತ್ತಿರುವರು. ರಲೀಫ್‌ಗಾಗಿ ವ್ಯಾಪಾರಾಯರೇ ಹೊರಟಿರುವರು. .... ಯವರು ೧೫೦ ಪೌಂಡುಗಳನ್ನು ವೈಸರಾಯರಿಗೆ ರವಾನಿಸಿರುವರು. ಉಡುಪಿಯವರು ಗುಳ್ಳಗಳನ್ನಾದರೂ ರವಾನಿಸಬಾರದೇ?

× × × ×

ಜವಾಹರಲಾಲರು ಮುಕ್ತರಾಗುತ್ತಾ "ಕಾಂಗ್ರೆಸ್‌ವಾಲ .... ಅವರನ್ನು ಸಹಾಯವನ್ನು .... ಹೇಳಿರುವರು. .... ವಾದಿಗಳು ಏನು ಮಾಡಲಿರುವರೋ ಆ ಕೃಷ್ಣರಾಯನಿಗೇ ಗೊತ್ತು!

× × × ×

೩೦ನೇ ದಿನವೂ ಜಾಮ್ನಾದಲ್ಲಿ ಭೂಕಂಪವಾದಂತು .... ಆಗಲಿರುವುದೋ ಆ ದೇವರೇ ಬಲ್ಲ!

× × × ×

ಭೂಮಿಯಾಗಿ ಜನರು ಜಗಳಾಡುತ್ತಾರೆ. ಆದರೆ ಭೂಕಂಪದಲ್ಲಿ ಜಗಳಾಡಿದರೆ ಜಗಳಾಡುವವರೂ ಧ್ವಂಸ!

× × × ×

ಆದುದರಿಂದ ಮಾಳಿಗೆ ಮನೆ ಕಟ್ಟುವವರೂ ಜಗಳಾಡುವವರೂ ಎಚ್ಚರಿಕೆ! ದಕ್ಷಿಣ ಕನ್ನಡದಲ್ಲೂ (ಒಂದು ವೇಳೆ) ಭೂಕಂಪ .... ಬಿಟ್ಟರೆ .... !

× × × ×

ಕಳೆದ ಸೋಮವಾರದ ಭೂಕಂಪದಿಂದ .... ಜನ ಸಿಕ್ಕಾ ಗ್ರಾಫ್ .... ಅಂದರೆ ಇಲ್ಲಿಯ ಭೂಕಂಪವಾದಂತಾಯಿತು! .... ಗುಳ್ಳಗಳ .... ಗೊತ್ತಿದೆಯೇ?—ಇದೇ ಹೇಳಿ!

ಬೇಕಾಗಿದ್ದಾರೆ

Canara Bank, Limited.

Established 1906.

Authorised Capital	10,000 ... 0-0
Subscribed capital	6,00,000—0—0
Paid up Capital	3,30,000—0-...
Reserves	4,31,... 0-0

Head Office —Bunder, Mangalore   Local Offices —City & Bunder.

BRANCHES:— Bombay, Cochin, Calicut, Ernakulam, Alleppey, Chikmagalur, Gangull, Coondapoor, Udipi, Karkal, Puttur, Kasaragod, & Buntwal Out-agency.

Interest is allowed on Current, Fixed and Saving Banks-Accounts rates of which may be ascertained on application Advances made on approved securities at easy rates All kinds of Banking business transacted. Rules of business on application

The Bangalore Branch Office of the Bank at No I Albert Victor Road Bangalore City will be opened on 8-1-34.

Mangalore
22—12—33

A Madhava Pai,
Secretary

East & West Insurance Company Ltd.,

(Incorporated in India 1913)

Head Office -EAST & WEST BUILDINGS, FORT, BOMBAY.

Eastern Company with striking features
Attractive plans,
Sympathetic & Liberal
Treatment to Policy Holders,
&
Wide popularity,
Economic Management
Sound investment
That is why you should select 'East & West'
Ere you invest in the rest

Interim Bonus
Declared
Rs 15 Per 1000
On whole life &
Endowment Policies

For particulars and Agency terms apply to —
H S Nayak, *Organiser, Secretary* for West Coast, Coorg & Mysore,
"Harbour View" Mangalore.

ನಮ್ಮ ಟೊಯಿಲೆಟ್ ಮತ್ತು ವಾಶಿಂಗ್ ಸಾಬೂನುಗಳ ತಯಾರಿಯಲ್ಲಿ ಚರ್ಬಿ
ಉಪಯೋಗಿಸಲ್ಪಡುವುದಾಗಿ ರುಜುಪಡಿಸುವವರಿಗೆ ರೂಪಾಯಿ
1000 ಬಹುಮಾನ.

ಸಾಬೂನು ಪಡೆಯುವಾಗ ' ' ಅದರಲ್ಲಿ ಚರ್ಬಿ ಇರಕೂಡದೆಂದು ನಿಮ್ಮ ಆಶೆ.

ಪ್ರಾಣಿಗಳ ಚರ್ಬಿ ಮಿಶ್ರಿತವಾದ ಸಾಬೂನುಗಳು ಹಿತಕ್ಕಿಂತಲೂ ಅಹಿತವನ್ನೇ ಹೆಚ್ಚಾಗಿ ಉಂಟುಮಾಡುತ್ತವೆ. ಕಾರಣ ಅವುಗಳಲ್ಲಿನ ಚರ್ಬಿ ಚರ್ಮರಂಧ್ರಗಳೊಳಗೆ ಹೋಗಿ ಬೆವರನ್ನು ತಡೆಯುತ್ತದೆ. ಸೋಪನ್ನು ಪಡೆಯುವಾಗ ನೀವು ಪರಿಮಳಭರಿತ ಚರ್ಬಿನ ಮುದ್ದೆಗೆ ಬೆಲೆ ಕೊಟ್ಟು ಶುದ್ಧತೆಯ ಬದಲು ಅಶುದ್ಧತೆಯನ್ನು ಸ್ವೀಕರಿಸಬೇಕೆಂದಿರುವಿರಾ?

ಮಲಬಾರು ಸಾಬೂನುಗಳು ಜನನಕ್ಕೆ ಬಂದ ಆರು ತಿಂಗಳುಗಳ ಅಲ್ಪಾವಧಿಯಲ್ಲೇ ಸಾರ್ವಜನಿಕ ಬೆಂಬಲದ ... ಪಡೆದಿವೆ ಕೊಚ್ಚಿಯ ಮಹಾರಾಜರ ದಯಾಪೂರ್ಣ ಪ್ರಶಸ್ತಿ ಮತ್ತು ಪ್ರೋತ್ಸಾಹನದಿಂದಾಗಿಯೂ, ಪ್ರಖ್ಯಾತ ವೈದಕೀಯ ಅಧಿಕಾರಿಗಳ ಶಿಫಾರಸಿನಿಂದಾಗಿಯೂ, ಅನೇಕ ವಸ್ತುಪ್ರದರ್ಶನಗಳಲ್ಲಿ ದೊರೆತ ಸುವರ್ಣಪದಕ ಮತ್ತು ಪ್ರಶಸ್ತಿ ಪತ್ರಿಕೆಗಳಿಂದಾಗಿಯೂ, ಮಲಬಾರ್ ಸಾಬೂನುಗಳ ಪ್ರಾಮುಖ್ಯತೆಯು ಎಷ್ಟೆಂದು ತಿಳಿಯುವುದು

ಮಲಬಾರ್ ಸಾಬೂನು ಎಲ್ಲಾ ವಿಧದಿಂದಲೂ ಶ್ರೇಯಸ್ಕರವೇ ಆಗಿರುತ್ತದೆ. ನಿಮ್ಮ ಚರ್ಮಕ್ಕೆ ಒಗ್ಗಿ ... ಮಾಡುವಂತಹ ಪ್ರಾಣಿಗಳ ಚರ್ಬಿ ಅಥವಾ ಹಾನಿಕರವಾದ ಮಿಶ್ರಿತವೇನೂ ಅದರಲ್ಲಿರದು. ಮಲಬಾರ್ ಸಾಬೂನನ್ನು ಶಾಸ್ತ್ರೀಯ ರೀತಿಯಿಂದಲೂ, ಆರೋಗ್ಯ ದೃಷ್ಟಿಯಿಂದಲೂ ತಯಾರಿಸುವುದರಿಂದ ಎಷ್ಟು ಕೆಳುವಾದ ಚರ್ಮವೂ ಬಾಧಕ ಹೊಂದುವುದಿಲ್ಲ. ಈ ಸಾಬೂನು ದೇಶಿಯ ಅಮೂಲ್ಯ ಗಂಧಯುಕ್ತ ಸಾಮಗ್ರಿಗಳಿಂದ ಎಲ್ಲರಿಗೂ ಅನುಕೂಲವಾಗುವಂತೆ ಅಗ್ಗವಾಗಿದೆಯೆಂದು ಅದರ ಉಪಯೋಗದಿಂದ ನಿಮಗೆ ತಿಳಿದುಬರುವುದು

ನಿಮ್ಮ ವ್ಯಾಪಾರಸ್ಥರು

ಮಲಬಾರ್ ಸಾಬೂನುಗಳನ್ನು

ವಿಕ್ರಯಿಸಲು ಸಂತೋಷಪಡುವರು

ಇದರಲ್ಲಿ ಪ್ರಾಣಿಗಳ ಕೊಬ್ಬು ಇರುವುದಿಲ್ಲ.

ದಿ ವೆಜಿಟೇಬಲ್ ಸೋಪ್ ವರ್ಕ್ಸ್, ಕಲ್ಲಿಕೋಟೆ.

ಪ್ರೊಪ್ರೈಟರ್:—ಸನ್ ಬ್ರೆಂಡ್ ಕೊಡೆಯ ಖ್ಯಾತಿಯ ಸೇಟ್ ನಾಗಜೀ ಪುರುಷೋತ್ತಮ ಮತ್ತು ಕಂಪೆನಿ, ಕಲ್ಲಿಕೋಟೆ.

ಈ ಜಿಲ್ಲೆಗೆ ಪ್ರವರ್ತಕರು:—

ರಾಘವೇಂದ್ರ ರಂಗ ಪೈ ರಥಬೀದಿ, ಮಂಗಳೂರು.

S. U. N. & CO.

Chowkhamba, Benares City

ಮೂರು ಇನಾಮುಗಳು.

ನಮ್ಮಲ್ಲಿ ಕಾಶ್ಮೀರ್ ಶಾಲುಗಳಿಗಿಂತಲೂ ಅತ್ಯುತ್ತಮವಾದ ಕಸೂತಿಗಳುಳ್ಳ ಕೆಂದೊಪ್ಪುವ ಶುದ್ಧ ಸ್ವದೇಶೀ ಖದ್ದರ್ ಶಿಲ್ಕು ಶಾಲುಗಳು ತಯಾರಾಗುತ್ತವೆ. ಬೇಕಾದವರು ತ್ವರೆಮಾಡಿ ಬರೆದರೆ ಈ ಕೆಳಗಿನ ದರದಲ್ಲಿ ಕಳುಹಿಸಲಾಗುತ್ತದೆ. 5 ಮೊಳ ಉದ್ದ 2½ ಅಗಲ ದರ ಒಂದಕ್ಕೆ ರೂ. 2-8-0ಯಿಂದ 3-12-0 5½ ಮೊಳ ಉದ್ದ 2½ ಮೊಳ ಅಗಲ ದರ 1ಕ್ಕೆ 3-8-0, 4-8-0. 6 ಮೊಳ ಉದ್ದ 3 ಅಗಲ ದರ 1ಕ್ಕೆ ರೂ. 4-8-0, ರೂ. 5. ಅಲ್ಲದೆ ಸ್ವದೇಶೀ ಖದ್ದರ್ ಮಡಿಗಳೂ, ಶೀರೆಗಳೂ ಅಂಚುಗಳಿಲ್ಲದೆ ಎಲ್ಲಾ ರಂಗುಗಳಲ್ಲಿರುತ್ತವೆ ಮತ್ತು ಜರೀತಾರೀ ಶೀರೆಗಳೂ ಪಿತಾಂಬರಗಳೂ ರವಿಕೆಗಳೂ, ರುದ್ರಾಕ್ಷೀ—ಬಾಣಲಿಂಗ—ಪಂಚಾಯತನ ಸುದರ್ಶನ ಹಿತ್ತಾಳೆ ಶ್ಯಾಮಿಗೆ ಮಿಶ್ಶನ್, ಮಡಿ ಧೋತ್ರಿ ಶಾಲು, ಜಗನ್ನಾಥ ಗಂಟೆಗಳೂ ಕೂಡಾ ಸರಿಯಾದ ದರಕ್ಕೆ ಕಳುಹಿಸಲಾಗುತ್ತದೆ. ಎವರಕ್ಕೆ ಕೆಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ. 1 ಆಣೆ ಸ್ಟೇಂಪು ಕಳುಹಿಸಿದರೆ 1 ವಿಶ್ವೇಶ್ವರ ಪಟ, 1 ಕಾಶೀನಕ್ಷೆ, 1 ಕೆಟಲಾಗಿನೊಡನೆ 3 ಇನಾಮುಗಳು.

ವಿಳಾಸ—
ಶಿರೋಮಣಿ ನಾರಾಯಣಾಚಾರ್ಯ ಮತ್ತು
ಕಂಪೆನಿ, ಚೌಖಾಂಬಾ, ಬನಾರಸ್ (ಕಾಶೀ)

ಸಿದ್ಧವಾಗಿವೆ!   ತ್ವರೆ ಮಾಡಿರಿ!

೧೯೩೪ನೇ

ಸ್ವರಾಜ್ಯ ಡೈರಿಗಳು!

ಇದರಲ್ಲಿ ಹಿಂದೂ, ಮಹಮ್ಮದಿ, ಕ್ರೈಸ್ತರಿಗೆ ಅನುಕೂಲವಾಗುವಂತೆ ಸರಿಯಾದ ತಿಥಿ ನಕ್ಷತ್ರ ವಗೈರೆ ಮಾಹಿತಿಯೂ ಪ್ರತಿಯೊಂದು ಪುಟದಲ್ಲಿ ಉತ್ತಮವಾದ ನೀತಿವಾಕ್ಯಗಳೂ ಸಂಗ್ರಹಿಸಲ್ಪಟ್ಟಿವೆ!

ನಮ್ಮ ಹಿಂದೂಸ್ಥಾನ ರಾಜಕೀಯ, ಸಾಂಪತ್ತಿಕ, ವಿದ್ಯೆ, ವ್ಯಾಪಾರಿಕ ಮೊದಲಾದ ಅನೇಕ ಮಹತ್ವವಿಷಯಗಳಲ್ಲಿ ನೀವು ತಿಳಿಯಬೇಕಾದ ವಿಷಯಗಳ ದೊಡ್ಡ ವರದಿಯನ್ನು ಸಂಗ್ರಹಿಸಿದೆ!

ಡೈರಿ,	ದೊಡ್ಡದು,	ಮುಚ್ಚಳದ್ದು,	ಮಧ್ಯದದ್ದು;	ಮುಚ್ಚಳದ್ದು.
ಬೆಲೆ	೦-೧೦-೦,	೦-೧೨-೦	೦-೮-೦;	೦-೧೦-೦

ಕರ್ನಾಟಕ ಡೈರಿಗಳು.

ಇದರಲ್ಲಿ ವ್ಯವಹಾರಕ್ಕೆ ಬೇಕಾದ ಸ್ಟಾಂಪು ಅಕ್ಟಿನ ಸಾರಾಂಶ, ರಜಾ ದಿನಗಳು, ಕೋರ್ಟ ಫೀಸುಗಳ ದರ ಟಪ್ಪಾಲು ಮಾಹಿತಿ ವಗೈರೆ ಇರುವುದಲ್ಲದೆ ವಕೀಲರಿಗೂ ಗುಮಾಸ್ತರಿಗೂ ಉಪಯೋಗವುಳ್ಳದ್ದು. ಈ ಡೈರಿಗಳಲ್ಲಿ ಮುಂಬಯಿ ಪ್ರಾಂತದವರಿಗೆ ಬೇಕಾಗುವ ಸ್ವಪರಿಚಯ ಮಾಹಿತಿಯನ್ನು ಸಂಗ್ರಹಿಸಿದೆ

ದೊಡ್ಡದು,	ಮುಚ್ಚಳದ್ದು	ಚಿಕ್ಕದ್ದು,	ಮುಚ್ಚಳದ್ದು.
೧-೧೦-೦,	೦-೧೨-೦	೦-೬-೦,	೦-೮-೦.

ಪುಸ್ತಕ ವ್ಯಾಪಾರಿಗಳಲ್ಲೆಲ್ಲಾ ಮಾರಲ್ಪಡುವುದು.
ಪಿ ಎ ಪೈ ಬ್ರದರ್ಸ್, ಪ್ರಕಾಶಕರು, ಉಡುಪಿ.

1934

Sharada Diaries

Ready! Ready!

SMALL SIZE--BIG SIZE-

ಶಾರದಾ ಡೈರಿಗಳು

ಕಲವೇ ಮಾತ್ರ ಉಳಿದಿವೆ!

ಸಣ್ಣ ಸೈಜು—   —ದೊಡ್ಡ ಸೈಜು.

Sharada Press, Mangalore.

LOOK HERE!

We have got for sale all kinds of freshly prepared Exercise books, Note books and Diaries etc.,

SHARADA PRESS,
Car Street, Mangalore.

ಪ್ರಚಲಿತ ವಿಚಾರಗಳು:—

ಸ್ವಾಮಿ ವಿವೇಕಾನಂದರ ವರ್ಧಂತ್ಯುತ್ಸವ, ಠೇವಣಾತಿಗಳ ಮೇಲೆ ಬಡ್ಡಿ ಕಡಿಮೆಯಾದರೆ, ರಷ್ಯದಲ್ಲಿ ಎರಡನೆ ಪಂಚವಾರ್ಷಿಕ ಯೋಜನೆ, ಟಪ್ಪಾಲು ದರಗಳು, ಕ್ರಾಂತಿಕಾರರಿಗೆಂದು ಕಾನೂನು, ಶ್ವೇತಪತ್ರದ ವಿಚಾರ, ಅಮ್ಮೆಂಬಳ ಸುಬ್ರಾಯ ಪೈ ಸ್ಮಾರಕ ಫಂಡು, ಗಾಂಧೀ ಸಂದೇಶ.

ಸ್ವಾಮಿ ವಿವೇಕಾನಂದರ ವರ್ಧಂತ್ಯುತ್ಸವ. ಸರ್ವತ್ರವೂ ನೆರವೇರಿತು. ನಮ್ಮ ದೇಶದಲ್ಲಿ ಜಾಗ್ರತಿಯನ್ನುಂಟು ಮಾಡಿದವರಲ್ಲಿ ಇವರೇ ಶ್ರೇಷ್ಠರು. ದೇಶದ ಇತಿಹಾಸದಲ್ಲಿ ಊರ್ಧ್ವ ಅಥವಾ ಅಧೋಗತಿಗೆ ದೇಶವು ನಡೆಯಬಹುದಾದ ಸಂಭವವಿದ್ದಾಗ ಇವರು ಉತ್ತಿಷ್ಠತ ಜಾಗ್ರತ ಪ್ರಾಪ್ಯವರಾನ್ನಿಬೋಧತ ಎಂದೇ ಸಾರ ತೊಡಗಿ, ನಿದ್ರೋನ್ಮುಖವಾದ ದೇಶವನ್ನು ಸರ್ವ ಇಂದ್ರಿಯಗಳ ಮೂಲಕವೂ ಎಚ್ಚರಿಸಿದರು. ಜನಾಂಗವು ಆತ್ಮಗೌರವನ್ನು ಬಲಿಸಿಕೊಂಡಿತು. ಸುತ್ತಲೂ ಕವಿದ ಕತ್ತಲೆಯನ್ನು ಭೇದಿಸಿಕೊಂಡು ಬೆಳಗಿದ ಜ್ಯೋತಿಯು ಇವರೆಂದು. ಇತರ ಜನಾಂಗಗಳಿಗೆ ನಾವು ಸಮಾನರು, ಬಡವರು ದೀನರು ದಲಿತರುಗಳ ಉದ್ಧಾರವು ಸಾಗಲೇ ಬೇಕಾದುದು ಎಂದು ಸಾರಿ, ದೇಶದ ಮೇಲ್ಮೆಗಾಗಿ ಧರ್ಮಭಕ್ತಿಯನ್ನು ದೇಶಬಾಂಧವ ಭಕ್ತಿಯನ್ನು ಇವರು ಬಿತ್ತಿದರು. ರಾಜಕೀಯಕ್ಕೂ ಸಾಮಾಜಿಕ ಅಥವಾ ಧಾರ್ಮಿಕ ಪ್ರವೃತ್ತಿಗೂ ಸಂಬಂಧವೇನೆಂಬುದನ್ನು ಇವರು ಕಲ್ಪಿಸಿ ಕೊಟ್ಟರು. ಸುಧಾರಣೆಯ ಮರೀಚಿಕೆಯನ್ನು ಹಿಂಬಾಲಿಸದೆ, ತಮ್ಮೊಳಗಣ ಜಾತಿಯ ಗೌರವದ ಸೂತ್ರಗಳನ್ನು ಎತ್ತಿ ಹಿಡಿದು, ಸ್ವದೇಶೋದ್ಧಾರದ ಕಾರ್ಯ ಕ್ರಮವನ್ನು ಬೋಧಿಸಿದವರಲ್ಲಿ ಇವರೇ ಮೊದಲನೆಯವರು. ಹಿಂದೆ ಎಂದೂ ಇದ್ದುದಕ್ಕಿಂತ ಮುಂದೆ ಯಾವಾಗಲಾದರೂ ನಮ್ಮ ದೇಶವು ಅಭ್ಯುದಯ ಹೊಂದಲಿರುವುದಾದರೆ, ಇವರು ಸಾರಿರುವ ತತ್ವಗಳ ಅಂಗೀಕಾರ ಅನುಸರಣೆಗಳಿಂದಲೇ ಆಗತಕ್ಕದೆಂದು ನಾವು ಮರೆಯಲಾರೆವು.

ಠೇವಣಾತಿಗಳ ಮೇಲೆ ಬಡ್ಡಿ ಕಡಿಮೆಯಾದರೆ ಠೇವಣೆದಾರನ ಹಣ ಭದ್ರವಾಯಿತೆಂದು ಅರ್ಥ. ಬೇಂಕುಗಳು ಜನರಿಂದ ಹಣವನ್ನು ಠೇವಣಾತಿಗೆ ಇಟ್ಟುಕೊಂಡು, ಅದನ್ನು ಇತರರಿಗೆ ಬಡ್ಡಿಗೆ ಕೊಟ್ಟು ಬೆಳಸುವವು. ಜನರಿಂದ ಪಡೆದ ಠೇವಣಾತಿಗಳ ಮೇಲೆ ಬಡ್ಡಿ ಹೆಚ್ಚಿನದಾದರೆ, ಅದಕ್ಕಿಂತ ಹೆಚ್ಚಿನ ಬಡ್ಡಿಗೆ ಆ ಮೊಬಲಗನ್ನು ಸಾಲಗಾರರಿಗೆ ತೆರಬೇಕು. ಹಣವೂ ಬಡ್ಡಿಯೂ ಹಾಗೆ ಸಾಲಗಾರನಿಗೆ ಸಿಗಬೇಕಾದರೆ, ಠೇವಣಾತಿಯ ಬಡ್ಡಿಗಿಂತ ಸಾಲಗಾರನು ಬೇಂಕಿಗೆ ತೆರಬೇಕಾದ ಬಡ್ಡಿಯು ಹೆಚ್ಚಾಗಿರುವ ಕಾರಣ, ಅಷ್ಟು ಅಧಿಕ ಬಡ್ಡಿ ತೆರುವ ಸಾಲಗಾರನು ತನ್ನ ಅಡಚಣೆಯು ಬಹಳವಾಗಿದ್ದರೇ ಅಷ್ಟು ಬಡ್ಡಿ ತೆರಲು ಮುಂದೊತ್ತಿ ಬರುವನು. ಸಾಲಗಾರನ ಅಡಚಣೆಯು ಬಹಳವೆಂದರೆ, ಅವನ ಆಯವ್ಯಯ ಮತ್ತು ಸಾಲಮೂಲಗಳು ಬಹಳ ಅಂತರವುಳ್ಳವು ಎಂದು ಸ್ಪಷ್ಟವು. ಹೀಗಾಗಿ, ಅವನು ಸಾಲವನ್ನು ಮರಳಿ ಬೇಂಕಿಗೆ ತೆರಲಾರದ ಸಂಭವಗಳು ಹೆಚ್ಚು. ಆಗ ಬೇಂಕು ದಿವಾಳಿ ಹೋಗುವ ಅವನ ಮೂಲದಿಂದ ಪಡೆಯಬಹುದಾದ ಅಂಶವನ್ನೆ ತನ್ನ ಸಾಲ ಪಾವತಿಗೆ ಜಮಾ ಮಾಡಬಲ್ಲುದು ಹೊರತು ಎಲ್ಲವನ್ನೂ ವಸೂಲ್ಮಾಡಿಕೊಳ್ಳಲಾರದು. ಹೀಗಾದರೆ, ಠೇವಣಾತಿದಾರನಿಂದ ಪಡೆದ ಹಣವನ್ನು ಬೇಂಕು ಮರಳಿ ಅವನಿಗೆ ತೆರಬಲ್ಲುದೆ? ಆದುದರಿಂದ, ಬೇಂಕು ಠೇವಣೆದಾರನಿಗೆ ತೆರುವ ಬಡ್ಡಿ ಕಡಿಮೆಯಾದರೆ, ಅದಕ್ಕಿಂತ ಸ್ವಲ್ಪ ಹೆಚ್ಚಿಗೆ ಬಡ್ಡಿ ಸಿಕ್ಕಿದರೂ ಬೇಂಕಿನಿಂದ ಸಾಲ ಪಡೆವವನು ಭದ್ರನೆಂದು ತಿಳಿದೇ ಸಾಲ ಕೊಟ್ಟು, ತನ್ನ ವಸೂಲಾತಿಯನ್ನು ಧೈರ್ಯದಿಂದ ಸಾಗಿಸಿಕೊಳ್ಳಬಲ್ಲುದು; ಠೇವಣಾತಿಯನ್ನು ಖಂಡಿತ ಹಿಂದಕ್ಕೆ ತೆರಬಲ್ಲುದು. ಈ ವಿಚಾರವು ಠೇವಣೆದಾರರ ಕಣ್ಣೆದುರಲ್ಲಿ ಇರಬೇಕು. ಠೇವಣಾತಿಗಳ ಮೇಲೆ ೭—೮ರಂತೆ ಬಡ್ಡಿ ಸಿಗುವಲ್ಲಿ ಹಣವಿಟ್ಟವರು ಠೇವಣೆಗಳನ್ನು ಮಡಗುವ ಮೊದಲು, ತಮ್ಮ ಹಣಕ್ಕೆ ಅಗತ್ಯವಾಗಿಯೂ ಇರುವ ಗಂಡಾಂತರವಾವುದೆಂದು ನಿರ್ಧರಿಸಿ ವಿಚಾರಿಸಿ ನಂತರ ಠೇವಣಾತಿ ಇಟ್ಟರೆ ನಷ್ಟವಾಗುವ ಸಂಭವ ಕಡಿಮೆ. 'ಬಡ್ಡಿಯ ದರ ಕಡಿಮೆ' ಎಂದರೆ, ಬೇಂಕಿನಲ್ಲಿ ಠೇವಣಾತಿಗಳು ಹೆಚ್ಚಿವೆ, ಬೇಂಕು ಸಾಲ ಕೊಡುವಾಗ ಬಹಳ ಭದ್ರತೆ ವಿಶ್ವಾಸಾದಿಗಳನ್ನು ನೋಡಿಯೆ ಸಾಲ ಕೊಟ್ಟು ಹಣ ಬೆಳಸಿ, ಮೋಸ ಬಾರದಂತೆ ಠೇವಣೆದಾರನನ್ನು ಕಾಪಾಡುತ್ತಿದೆಯೆಂದು ಸ್ಪಷ್ಟವು. ಸಾಂಪತ್ತಿಕ ಪರಿಷತ್ತುಗಳು ಈ ವಿಷಯ ಚರ್ಚಿಸಿ ಇತ್ಯರ್ಥಿಸಿವೆ.

ರಷ್ಯದಲ್ಲಿ ಎರಡನೆ ಪಂಚವಾರ್ಷಿಕ ಯೋಜನೆ ಇತರ ಸುಧಾರಿತ ಮಹಾ ರಾಷ್ಟ್ರಗಳು ರಷ್ಯದ ಮೊದಲನೆ ಪಂಚವಾರ್ಷಿಕ ಯೋಜನೆಯ ಸುದ್ದಿ ಕೇಳಿ ನಗುತ್ತಾ ಅಪಹಾಸ್ಯ ಮಾಡಿದುವು. ಆದರೆ ರಷ್ಯವು ಮಾತ್ರ ಕೃತಕೃತ್ಯವಾಯಿತು. ಈಗಲೆ ರಷ್ಯವು ಎರಡನೆ ಯೋಜನೆಯನ್ನು ಮುಂದಿಟ್ಟಿರುವುದು. ಯುದ್ಧದ ಮೊದಲು ರಷ್ಯದ ಉತ್ಪನ್ನಗಳು ಎಷ್ಟಿದ್ದುವೊ ಅವುಗಳು ಈಗ ಅದರ ನಾಲ್ಕು ಮಡಿ ಹೆಚ್ಚಾಗಿವೆ. ಮುಂದಣ ಐದು ವರ್ಷಗಳಲ್ಲಿ, ಈಗಿನ ದುಬಾರಿಯು ತಪ್ಪಬೇಕೆಂದೇ ರಷ್ಯದ ಪ್ರಯತ್ನ. ಎಂದರೆ, ೧೯೩೨ರಲ್ಲಾದ ಉತ್ಪನ್ನಗಳ ಐದರಷ್ಟು ಮಡಿ ಉತ್ಪನ್ನಗಳು ೧೯೩೭ರಲ್ಲಿ ಆಗಬೇಕಾಗಿ ಸನ್ನಾಹ. ಎಂಟುಸಾವಿರ ಮೈಲುದ್ದಕ್ಕೆ ಹೊಸ ರೈಲು ಮಾರ್ಗಗಳಾಗುವವು; ಕೃಷಿಯ ಉತ್ಪನ್ನಗಳು ಇಮ್ಮಡಿಯಾಗುವವು; ಮೋಟರ ಯಂತ್ರಗಳು ನೂರಕ್ಕೆ ನೂರಮೂವತ್ತಾಗುವವು; ಹೊಸ ಕಾಲುವೆಗಳು ಕಡಿದು ಮುಗಿದವು. ಈ ಯೋಜನೆಯು ಕೈಗೂಡಲಿ, ಕೈಗೂಡದಿರಲಿ,—ರಷ್ಯವು ಮುಂದರಿಯುವುದು ನಿಜವೆಂದೇ ಹೇಳಬಹುದು. ಅದೆಂತಾದರೂ, ಇಂಡಿಯದಂಥ ರಾಷ್ಟ್ರಗಳು ಇಂತಹ ಯೋಜನೆಗಳನ್ನು ಕೈಕೊಂಡು ಸಾಧಿಸುವುದರಿಂದ, ಯೋಗ್ಯ ರೀತಿಯಲ್ಲಿ ಅಭಿವೃದ್ಧಿ ಹೊಂದಲು ಆಸ್ಪದವಿದೆ ಎಂಬುದರಲ್ಲಿ ಸಂದೇಹವಿದ್ದೀತೆ?

ಟಪ್ಪಾಲು ದರಗಳು ವಿಪರೀತವಾಗಿವೆ. ಮೂರು ಪೈಯ ಕಾರ್ಡಿಗೆ ಮೂರು ಮುಕ್ಕಾಲು; ಅರ್ಧಾಣೆಯ ಕವರಿಗೆ ಒಂದೂಕಾಲಾಣೆ. ಹೀಗಿದ್ದರೂ, ಟಪ್ಪಾಲು ಇಲಾಖೆಯಿಂದ ನಷ್ಟವೆ. ನಷ್ಟ ತುಂಬಿಸಬೇಕಾದರೆ ಈ ದರಗಳನ್ನು ಇನ್ನೂ ಹೆಚ್ಚಿಸಬೇಕು. ದರಗಳನ್ನು ಹೆಚ್ಚಿಸಿದಂತೆ ಆಯವು ಕಡಿಮೆಯಾಗುತ್ತಿದೆ. ಈ ಬಗೆಯಾಗಿ ಹುಟ್ಟುತ್ತಿರುವ ಈ ರಗಳೆಗಳನ್ನು ತೀರಿಸುವುದಕ್ಕಾಗಿ, ಒಂದು ಕಮಿಟಿಯನ್ನು ನೇಮಿಸಿ, ಟಪ್ಪಾಲು ಇಲಾಖೆಯ ಖರ್ಚನ್ನು ಹೇಗೆ ಇಳಿಸಬಹುದೆಂಬುದನ್ನು ವಿಮರ್ಶಿಸಿಕೊಳ್ಳಲು ತೊಡಗಿದೆ. ದಿವಸಗಳ ಧಾರಣೆಯು ತೀರ ಇಳಿದು, ಸಾಮಾನ್ಯ ಖರ್ಚಿಗೂ ಅಡಚಣೆಯು ತೋರಿರುವಾಗ, ಟಪ್ಪಾಲುದ್ವಾರಾ ವ್ಯವಹಾರ ನಡೆಸುವವರಿಗೆ ಈ ಏರಿದ ದರಗಳು ಬಲು ಬಾಧಕಕಾರವಾಗಿವೆ. ಉಪಯೋಗ ಮಾಡುವವನಿಗೆ ಕೈ ನಿಲುಕದಷ್ಟು ಭಾರವಾದ ದಸ್ತೂರಿಯಿಂದ ಯಾರಿಗೂ ಪ್ರಯೋಜನವಿಲ್ಲ.

ಕ್ರಾಂತಿಕಾರರಿಗೆಂದು ಕಾನೂನು ಎದೆ ನಡುಗಿದ ಕೆಲವರು ಲಂಡನಿನ ಪತ್ರಿಕೆಗಳಲ್ಲಿ ಸಂಶಯ ತಂದವರನ್ನೆಲ್ಲ ಅತಿಯಾದ ದಂಡನೆಗೆ ಗುರಿಪಡಿಸಬೇಕಾಗಿ ಬಾರಿ ಬಾರಿಗೂ ಬರೆದುಕೊಂಡರು. ಮಿದ್ನಾಪುರ, ಬಂಗಪುರಗಳ ಯುರೋಪಿಯರು ಕ್ರಾಂತಿಕಾರರ ದೆಸೆಯಿಂದಾಗಿ ಉದ್ವಿಗ್ನ ಚಿತ್ತರಾಗಲು ಕಾರಣವಿದೆಯಾದರೂ, ಹಾಗೆಂದು ವಿವೇಕವನ್ನು ಕಳೆದುಕೊಳ್ಳಬೇಕಾಗಿಲ್ಲ. ಈಗ ಅಲ್ಲಿ ನಡೆಯುತ್ತಿರುವ ಕಾನೂನು ಬಿಜಾವಣೆಗೆ ಇನ್ನೂ ಬಲ ಹುಟ್ಟಲೆಂದು ಕಾನೂನನ್ನು ತಿದ್ದುವ ಮಸೂದೆಯೊಂದು ಬಂಗಾಳ ಕೌನ್ಸಿಲಿನಲ್ಲಿ ಆಲೋಚನೆಗೆ ಬರುವುದು. "ಯಾವುದೊಂದು ಸಿಡಿಗುಂಡು ಹತ್ಯಾರು ಮೊದಲಾದುವು ಇದ್ದವನು ಅವನನ್ನು ಜೀವಹಾನಿಗೆ ಉಪಯೋಗಿಸಬಹುದಾಗಿ ವಿಚಾರವಾದರೆ; ಅಂತವನನ್ನು ಫಾಸೀ ಶಿಕ್ಷೆಗೆ ಒಳಪಡಿಸಬೇಕು..." ಎಂದು ಸೂಚನೆಯಾಗಿರುವಾಗ, ಯಾವನೊಬ್ಬನಲ್ಲಿ ಒಂದು ಹಳೇ ಕೋವಿ ಇದ್ದರೂ, ಈ ಗಲಿಬಿಲಿಯ ಕಾಲದಲ್ಲಿ ಅದು ಯಾರನ್ನೂ ಕೊಲ್ಲಲಿಕ್ಕಲ್ಲದೆ ಮತ್ತೇಕೆಂದು ಸಂಶಯ ಸ್ಥಾಪಿಸಲೂ ಅವಕಾಶವುಂಟಾಗಿ ಅವನು ಫಾಸಿ ಶಿಕ್ಷೆ ಹೊಂದಬಹುದೆಂದು ಪತ್ರಿಕೆಗಳು ಈಗಲೆ ಟೀಕಿಸಿವೆ. 'ಅಂದಮಾನ ದ್ವೀಪಗಳಲ್ಲಿರುವ ಕೈದಿಗಳ ಕ್ಷೇಮಾತಿಶಯಗಳನ್ನು ಕುರಿತಾಗಿ ಬರೆವುದೂ ಒಂದು ಅಪರಾಧ ಕೇಳಲು ಕಾರಣವಾಗಬೇಕೆಂದು ಪತ್ರಿಕೆಗಳನ್ನು ಕುರಿತಾದ ಕಾನೂನನ್ನು ತಿದ್ದುವ ಸೂಚನೆಯೂ' ಇದೆಯಂತೆ!

ಶ್ವೇತಪತ್ರದ ವಿಚಾರ ಶ್ರೀಮಾನ್ ಶ್ರೀನಿವಾಸ ಶಾಸ್ತ್ರಿಯವರು ಶ್ವೇತಪತ್ರವನ್ನು ಕುರಿತಾದ ತಮ್ಮ ಅಮೂಲ್ಯ ವಿಚಾರಗಳನ್ನು ಮದರಾಸಿನಲ್ಲಿ ಭಾಷಣಗಳ ಮೂಲಕ ಪ್ರಚುರಿಸುತ್ತಿರುವರು. ಲಿಬರಲರ ಮಹಾಸಭೆ ಸೇರಿದಾಗ, ಶ್ವೇತಪತ್ರವು ಹಲವು ಬಗೆಯಲ್ಲಿ ತಮಗೆ ಗ್ರಾಹ್ಯವಾದುದಲ್ಲ ಎಂದು ಅವರು ಹೇಳಿದರೂ, ಆ ವಿಷಯವಾಗಿ ಮುಂದೆ ಮಾಡತಕ್ಕುದೇನೆಂದು ಒಂದೂ ನಿಶ್ಚಿತವಾಗದೆ ಅವರ ಪರಿಷತ್ತು ಮುಗಿಯಿತು. 'ಅಸಹಕಾರ' ಮಂತ್ರ ಜಪಿಸಿ ದೂರ ನಿಂತರೆ, ದೇಶದ ಸ್ಥಿತಿಯೂ ಸರಕಾರದ ಸ್ಥಿತಿಯೂ ಇನ್ನೂ ಕೆಡುವ ಸಂಭವವಿದೆ. "ರಾಷ್ಟ್ರೀಯ ಭಾವನೆಯಿಂದಲೂ, ಆದರ್ಶದಿಂದಲೂ ನಾವು ಕೂಡಿ, ಸಹಕರಿಸಿ, ಎಲ್ಲೆಲ್ಲಿ ಮಟ್ಟು ಮುಟ್ಟಿದೆಯೋ ಯಾವುದು ಉದಾರವಲ್ಲವೊ ದೇಶದ ಏಳ್ಗೆಗೆ ವಿರುದ್ಧವಾದುದಾವುದೋ ನಮ್ಮ ನಾಗರಿಕ ಉದ್ದೇಶದ ಪ್ರಗತಿಗೆ ಯಾವುದು ತೊಡಕಾಗಿದೆಯೋ ಅಂತದನ್ನೆಲ್ಲ ತಿದ್ದಲು ಪ್ರಯತ್ನಿಸಬೇಕಾಗಿದೆ. ಶ್ವೇತಪತ್ರವನ್ನು ಮೋಹಿಸಿ ನಾನು ಹೀಗೆ ಹೇಳುವುದಲ್ಲ; ಬ್ರಿಟಿಷರ ಕಡೆಗೆ ವಾತ್ಸಲ್ಯದಿಂದಲೂ ಅಲ್ಲ; ನಮ್ಮವರ ಹಿತಕ್ಕಾಗಿಯೇ ಇದು ಸದುಪಾಯವೆಂದು ನಾನೆಣಿಸುತ್ತೇನೆ. ಸರಕಾರಕ್ಕೆ ಬುದ್ಧಿ ಕಲಿಸಬೇಕೆಂದು ಹೊರಟು, ಜನತೆಯನ್ನು ಬಗ್ಗು ಬಡಿವುದು ನ್ಯಾಯವಾಗಿಲ್ಲ. ಸರಕಾರಕ್ಕೆ ಬಡಿಯಲು ಕೈಯೆತ್ತಿದರೆ, ಜನತೆಗೆ ಪ್ರಬಲವಾದ ಆಘಾತವಾದೀತೆಂದು ನನ್ನ ಅಭಿಮತ, ನನ್ನನ್ನು ಈ ಮಾತುಗಳನ್ನು ಹೇಳಿರುವುದಕ್ಕೆ ಟೀಕಿಸುವವರು ಇರಬಹುದು; ಅಂತಹ ಟೀಕೆಗಳನ್ನು ಓದಿ, ಮಥಿಸಿ, ನಾನು ತಪ್ಪಾಡಿದೆನಾದರೆ ತಿದ್ದಿಕೊಳ್ಳಲು ಬದ್ಧನು; ಹಾಗಿಲ್ಲದಿರುವಲ್ಲಿ ನಾನು ಇದುವರೆಗೆ ಹೇಳಿದಂತೆಯೆ ಮುಂದೆಯೂ ಹೇಳುವೆನು!" ಎಂದೇ ಅವರ ಆಶ್ವಾಸನೆ.

ಅಮ್ಮೆಂಬಳ ಸುಬ್ರಾಯ ಪೈ ಸ್ಮಾರಕ ಫಂಡು ೧೯೩೩ ನವಂಬರ್ ೧೯ನೇ ತಾರೀಕಿಗೆ ಅಂತ್ಯವಾಗುವ ಒಂದು ವರ್ಷದ ಕಾರ್ಯವೃತ್ತಾಂತದಲ್ಲಿ,— ಫಂಡಿನಿಂದ ಸಹಾಯ ಪಡೆದವರೊಳಗೆ ೩೨ ಜನರು ತಾವು ಪಡೆದ ಸಹಾಯವಾದ ಸಾಲವನ್ನು ಕಂತುಗಳಲ್ಲಿ ಮರುಪಾವತಿ ಮಾಡುತ್ತಿರುವುದರಿಂದ, ಕಳೆದ ವರ್ಷ ೩೪ ವಿದ್ಯಾರ್ಥಿಗಳಿಗೆ ತೆತ್ತ ೫೧೭೦ ರೂಪಾಯಿ ವೇತನ ಸಾಲದ ಬದಲಾಗಿ ಈ ವರ್ಷ ೩೮ ವಿದ್ಯಾರ್ಥಿಗಳಿಗೆ ೭೩೫೦ ರೂಪಾಯಿ ಸಹಾಯ ಮಾಡಲು ಅನುಕೂಲವಾಯಿತೆಂದು ತಿಳಿದು ತೃಪ್ತಿಯಾಗುತ್ತಿದೆ. ಇನ್ನೆಷ್ಟೋ ಬಡ ವಿದ್ಯಾರ್ಥಿಗಳಿಗೆ ಸಹಾಯ ಮಾಡಲು ಉತ್ಸುಕತೆಯಿಟ್ಟರೂ, ಸಮಾಜವು ಇತರರಿಗೆ ಸಮಾನವಾಗಿ ಕಾಲಿಟ್ಟು ಮುಂದರಿಯಬೇಕಾದರೆ ವಿದ್ಯಾರ್ಥಿಗಳಿಗೆ ಸಹಾಯವೇ ಅಗತ್ಯವಾಗಿದ್ದರೂ, ಫಂಡಿನಿಂದ ಹಿಂದೆ ಸಾಲ ಪಡೆದು ಈಗ ಇಂಪೀರಿಯಲ್ ಬೇಂಕ್ ಮೊದಲಾದುವುಗಳಲ್ಲಿ ಹೆಚ್ಚಿನ ವೇತನ ದುಡಿಯುತಿದ್ದವರೇ ಆಡಳಿತದವರನ್ನು ಕೋರ್ಟಿನ ವರೆಗೆ ವಸೂಲ್ಮಾಡಿಕೊಳ್ಳಲು ಮೆರೆಯಿಡುವ ಹಾಗೆ ಒತ್ತಾಯವಾಗಿರುವರೆಂದು ಓದಿ ಖೇದವಾಗುತ್ತಿದೆ. ಕೃತಜ್ಞತೆ, ಪರೋಪಕಾರಬುದ್ಧಿ, ತ್ಯಾಗ ಇವೆಲ್ಲವೂ ಶಿಕ್ಷಿತ ಯುವಕರಲ್ಲಿ ಇರಬೇಕಾದ ವಿನಯದ ಲಕ್ಷಣಗಳಲ್ಲವೆ? ೨೬ ಮಂದಿ ಪಡೆದ ಸಾಲವನ್ನು ಹಿಂತೆತ್ತಿರುವರೇ ಅಲ್ಲದೆ, ಇಬ್ಬರು ಹೆಚ್ಚಿನ ೫೨ ರೂಪಾಯಿಗಳನ್ನು ಫಂಡಿಗೆ ದಾನಕೊಟ್ಟಿರುವುದೂ ಅವರು ಹೈಸ್ಕೂಲಿನ ಶಿಕ್ಷಕರಾಗಿರುವುದೂ ಸ್ತುತ್ಯ; ಸಾಹುಕಾರರೊಬ್ಬರು ೨೫ ರೂಪಾಯಿಗಳನ್ನು ದಾನ ಕೊಟ್ಟುದೂ ಮಾದರಿ. ಖಾಯಂ ಹಣವಾಗಿ ಬೇಂಕಿನಲ್ಲಿ ೧೯,೭೫೦ ರೂಪಾಯಿ ಖಾಯಂ ಠೇವಣಾತಿಯಿದೆ; ರೂ. ೭೩೩ ನಗದು ಸಿಲ್ಕು ಇದೆ; ೭೭೦೭ ರೂಪಾಯಿ ವಸೂಲಿಗೆ ಹೋಗಿದೆ;— ಎಂದವೆ, ಲೆಕ್ಕ ಪರಿಶೋಧಕರೆನ್ನುವಂತೆ, ಅವರೊಡನೆ ನಾವೂ, ಆಡಳಿತದವರನ್ನು ಮನಸಾ ವಂದಿಸಬೇಕಾಗಿದೆ. ಸಮಾಜದಲ್ಲಿನ ಬಡ ವಿದ್ಯಾರ್ಥಿಗಳು (ಬಡವರಲ್ಲೇ ಜಾಣ ವಿದ್ಯಾರ್ಥಿಗಳೇ ಹೆಚ್ಚಾಗಿದೆ) ಈ ಫಂಡಿನ ಸಹಾಯ ಪಡೆದು, ಕೀರ್ತಿಶೇಷರ ಸ್ಮಾರಕವು ಸಾಂಗವಾಗಿ ಸಾಗುವಂತೆಯೂ ಸಮಾಜವು ಸರ್ವತಃ ಮುಂದೊತ್ತಿ ಬರುವಂತೆಯೂ, ಮೂಲಧನಕ್ಕೆ ಅಗತ್ಯವಾಗಿಯೂ ಧಾರ್ಮಿಕರ ದಾನ ಸಹಾಯವು ಅಗತ್ಯವಿದೆ. ಸಾಲ ಪಡೆದವರು ತಮ್ಮ ಜೀವನಸಾಗುತ್ತಿರುವಾಗ ಸಾಲವನ್ನೂ ಅಲ್ಲದೆ ರೂಪಾಯಿಗೆ ಒಂದು ಪೈಯಂತಾದರೂ ಹೆಚ್ಚಿಗೆ ಕೂಡಿಸಿ ಕೊಡುತಿದ್ದರೆ ಮುಂದಣ ಪೀಳಿಗೆಯ ಪುಣ್ಯಕ್ಕೂ ಕಾರಣರಾಗದೆ?

ಗಾಂಧೀ ಸಂದೇಶ "ನಿಮ್ಮ ಕರ್ತವ್ಯವೇನು? ಹರಿಜನರು ನಮ್ಮ ಸೋದರರು ಎಂದರೇ ನಿಮ್ಮ ಅಥವಾ ನನ್ನ ಕರ್ತವ್ಯವು ಮುಗಿದಂತಾಗಲಿಲ್ಲ. ಇಲ್ಲೀಗ ನಮ್ಮ ಕರ್ತವ್ಯ ಪ್ರಾರಂಭವಾದಂತಾಯಿತು. ಪ್ರತಿಯೊಂದು ಬಗೆಯ ಅಸ್ಪೃಶ್ಯತೆಗೆ ಅವಕಾಶವೇ ಇರಬಾರದೆಂಬುದು ನಮ್ಮ ಆದರ್ಶವಾಗಿರಬೇಕು. ಈ ಅಸ್ಪೃಶ್ಯತೆಯೇ ನಮ್ಮ ಜೀವನವನ್ನು ಕೊರೆದಿಕ್ಕಿದೆ. ಹೊಲೆಯರು ನಾಯಾಡಿಗಳು ನಮ್ಮ ಸೋದರರು ಎಂದು ಅಂಗೀಕರಿಸುವುದರಿಂದ ನಾವು ಕೃತಕೃತ್ಯರಾಗಲಿಲ್ಲ. ಸವರ್ಣ ಹಿಂದುಗಳಲ್ಲೇ ಜಾತಿಗೆ ಜಾತಿ ಮೇಲು ಕೀಳು ಭಾವದಿಂದ ಇದೆಯಲ್ಲ! ಈ ಅಸ್ಪೃಶ್ಯತೆ, ಈ ಮೇಲು ಕೀಳಿನ ವಿಷವನ್ನು ನಾವು ನಿವಾರಿಸುವುದೆಂದಿಗೆ? ನಮ್ಮಲ್ಲಿನ ಈ ರೋಗದ ಸೋಂಕು ಮುಸಲ್ಮಾನರು ಕ್ರೈಸ್ತರು ಮೊದಲಾದವರನ್ನೂ ಆಕ್ರಮಿಸಿದೆ. ಪ್ರಪಂಚದಲ್ಲಿ ಮೇಲು ಕೀಳು ಎಂಬುದೇ ಇರಲಾರದು. ದೇವರು ನಮ್ಮ ಸರ್ವರ ತಂದೆ ಎಂಬುದು ನಿಜವಾದರೆ, ನಾವು ಸರ್ವರೂ ಭ್ರಾತೃಗಳು. ಇದನ್ನು ಅಂಗೀಕರಿಸಿ ನಡೆದರೆ, ಹಿಂದೂಗಳೆಲ್ಲರು ಒಂದಾಗುವುದು ಮಾತ್ರವಲ್ಲದೆ, ನಮ್ಮ ನೆರೆಯವರಾದ ಮುಸ್ಲಿಮರು, ಕ್ರೈಸ್ತರು ಪಾರಸಿಯರೊಡನೆ ಸಹ ನಮಗೆ ತುಂಬಾ ಸೋದರಭಾವವು ಒಕ್ಕಟ್ಟೂ ಉಂಟಾಗುವುವು." ಕೇರಳ ಸಂಚಾರದ ನಂತರ ಮಹಾತ್ಮಾಜೀಯವರು ಹೇಳಿರುವ ಅನುಭವವಿದು.

+ + + +

FRESH CONSIGNMENT ARRIVED.

UNEQUAL QUALITY——————EXCEPTIONAL PRICE

A TIRE THAT SAVES YOU REPUTATION AND MONEY

The Canara Public Conveyance Co., Ltd.

MANGALORE.

ಸ್ಫುಟವಿಚಾರಗಳು:—

ಸ್ವಾಮಿ ವಿವೇಕಾನಂದರ ವರ್ಧಂತ್ಯುತ್ಸವವು, ಠೇವಣಾತಿಗಳ ಮೇಲೆ ಬಡ್ಡಿ ಕಡಿಮೆಯಾದರೆ, ರಷ್ಯದಲ್ಲಿ ಎರಡನೆ ಪಂಚವಾರ್ಷಿಕ ಯೋಜನೆ, ಟಪ್ಪಾಲು ದರಗಳು, ಕ್ರಾಂತಿಕಾರರಿಗೊಂದು ಕಾನೂನು, ಶ್ವೇತಪತ್ರದ ವಿಚಾರ, ಅಮ್ಮೆಂಬಳ ಸುಬ್ರಾಯ ಪೈ ಸ್ಮಾರಕ ಫಂಡು, ಗಾಂಧೀ ಸಂದೇಶ

ಸ್ವಾಮಿ ವಿವೇಕಾನಂದರ ವರ್ಧಂತ್ಯುತ್ಸವವು. ಸರ್ವತ್ರವೂ ನೆರವೇರಿತು. ನಮ್ಮ ದೇಶದಲ್ಲಿ ಜಾಗ್ರತಿಯನ್ನುಂಟು ಮಾಡಿದವರಲ್ಲಿ ಇವರೇ ಶಕಪುರುಷರು. ದೇಶದ ಇತಿಹಾಸದಲ್ಲಿ ಊರ್ಧ್ವ ಅಥವಾ ಅಧೋಗತಿಗೆ ದೇಶವು ನಡೆಯಬಹುದಾದ ಸಂಭವವಿದ್ದಾಗ ಇವರು ಉತ್ತಿಷ್ಠತ ಜಾಗ್ರತ ಪ್ರಾಪ್ಯವರಾನ್ನಿಬೋಧತ ಎಂದೇ ಸಾರ ತೊಡಗಿ, ನಿದ್ರೋನ್ಮುಖವಾದ ದೇಶವನ್ನು ಸರ್ವ ಇಂದ್ರಿಯಗಳ ಮೂಲಕವೂ ಎಬ್ಬಿಸಿದರು. ಜನಾಂಗವು ಆತ್ಮಗೌರವವನ್ನು ಲಭಿಸಿಕೊಂಡಿತು. ಸುತ್ತಲೂ ಕವಿದ ಕತ್ತಲೆಯನ್ನು ಭೇದಿಸಿಕೊಂಡು ಬೆಳಗಿದ ಜ್ಯೋತಿಯು ಇವರದು. ಇತರ ಜನಾಂಗಗಳಿಗೆ ನಾವು ಸಮಾನರು, ಬಡವರು ದೀನರು ದುಃಖಿತರುಗಳ ಉದ್ಧಾರವು ನಾಗಲೇ ಬೇಕಾದುದು ಎಂದು ಸಾರಿ, ದೇಶದ ಮೇಲ್ಮೆಗಾಗಿ ಧರ್ಮಭಕ್ತಿಯನ್ನು ದೇಶಬಾಂಧವ ಭಕ್ತಿಯನ್ನು ಇವರು ಬಿತ್ತಿದರು. ರಾಜಕೀಯಕ್ಕೂ ಸಾಮಾಜಿಕ ಅಥವಾ ಧಾರ್ಮಿಕ ಪ್ರವೃತ್ತಿಗೂ ಸಂಬಂಧವೇನೆಂಬುದನ್ನು ಇವರು ಕಲ್ಪಿಸಿ ಕೊಟ್ಟರು. ಸುಧಾರಣೆಯ ಮರೀಚಿಕೆಯನ್ನು ಹಿಂಬಾಲಿಸದೆ, ತಮ್ಮೊಳಗಣ ಜಾತಿಯ ಗೌರವದ ಸೂತ್ರಗಳನ್ನು ಎತ್ತಿ ಹಿಡಿದು, ಸ್ವದೇಶೋದ್ಧಾರದ ಕಾರ್ಯ ಕ್ರಮವನ್ನು ಬೋಧಿಸಿದವರಲ್ಲಿ ಇವರೇ ಮೊದಲನೆಯವರು. ಹಿಂದೆ ಎಂದೂ ಇದ್ದುದಕ್ಕಿಂತ ಮುಂದೆ ಯಾವಾಗಲಾದರೂ ನಮ್ಮ ದೇಶವು ಅಭ್ಯುದಯ ಹೊಂದಲಿರುವುದಾದರೆ, ಇವರು ಸಾರಿರುವ ತತ್ವಗಳ ಅಂಗೀಕಾರ ಅನುಸರಣೆಗಳಿಂದಲೇ ಆಗತಕ್ಕುದೆಂದು ನಾವು ಮರೆಯಲಾರೆವು.

ಠೇವಣಾತಿಗಳ ಮೇಲೆ ಬಡ್ಡಿ ಕಡಿಮೆಯಾದರೆ ಠೇವಣಿದಾರನ ಹಣ ಭದ್ರವಾಯಿತೆಂದು ಅರ್ಥ. ಬೇಂಕುಗಳು ಜನರಿಂದ ಹಣವನ್ನು ಠೇವಣಾತಿಗೆ ಇಟ್ಟುಕೊಂಡು, ಅದನ್ನು ಇತರರಿಗೆ ಬಡ್ಡಿಗೆ ಕೊಟ್ಟು ಬೆಳಸುವವು. ಜನರಿಂದ ಪಡೆದ ಠೇವಣಾತಿಗಳ ಮೇಲೆ ಬಡ್ಡಿ ಹೆಚ್ಚಿನದಾದರೆ, ಅದಕ್ಕಿಂತ ಹೆಚ್ಚಿನ ಬಡ್ಡಿಗೆ ಆ ಮೊಬಲಗನ್ನು ಸಾಲಗಾರರಿಗೆ ತೆರಬೇಕು. ಹಣವೂ ಬಡ್ಡಿಯೂ ಹಾಗೆ ಸಾಲಗಾರನಿಗೆ ಸಿಗಬೇಕಾದರೆ, ಠೇವಣಾತಿಯ ಬಡ್ಡಿಗಿಂತ ಸಾಲಗಾರನು ಬೇಂಕಿಗೆ ತೆರಬೇಕಾದ ಬಡ್ಡಿಯು ಹೆಚ್ಚಾಗಿರುವ ಕಾರಣ, ಅಷ್ಟು ಅಧಿಕ ಬಡ್ಡಿ ತೆರುವ ಸಾಲಗಾರನು ತನ್ನ ಅಡಚಣೆಯು ಬಹಳವಾಗಿಲ್ಲದೇ ಅಷ್ಟು ಬಡ್ಡಿ ತೆರಲು ಮುಂದೊತ್ತಿ ಬರುವನು. ಸಾಲಗಾರನ ಅಡಚಣೆಯು ಬಹಳವೆಂದರೆ, ಅವನ ಆಯವ್ಯಯ ಮತ್ತು ಸಾಲಜುಲಗಳು ಬಹಳ ಅಂತರವುಳ್ಳವು ಎಂದು ಸ್ಪಷ್ಟವು. ಹೀಗಾಗಿ, ಅವನು ಸಾಲವನ್ನು ಮರಳಿ ಬೇಂಕಿಗೆ ತೆರಲಾರದ ಸಂಭವಗಳು ಹೆಚ್ಚು. ಆಗ ಬೇಂಕು ದಿವಾಳಿ ಹೋಗುವ ಅವನ ಮೂಲದಿಂದ ಪಡೆಯಬಹುದಾದ ಅಂಶವನ್ನೆ ತನ್ನ ಸಾಲ ಬಾಪತಿಗೆ ವಜಾ ಮಾಡಬಲ್ಲುದು ಹೊರತು ಎಲ್ಲವನ್ನೂ ವಸೂಲ್ಮಾಡಿಕೊಳ್ಳಲಾರದು. ಹೀಗಾದರೆ, ಠೇವಣಾತಿದಾರನಿಂದ ಪಡೆದ ಹಣವನ್ನು ಬೇಂಕು ಮರಳಿ ಅವರಿಗೆ ತೆರಬಲ್ಲುದೆ? ಆದುದರಿಂದ, ಬೇಂಕು ಠೇವಣಿದಾರನಿಗೆ ತೆರುವ ಬಡ್ಡಿ ಕಡಿಮೆಯಾದರೆ, ಅದಕ್ಕಿಂತ ಸ್ವಲ್ಪ ಹೆಚ್ಚಿಗೆ ಬಡ್ಡಿ ಸಿಕ್ಕಿದರೂ ಬೇಂಕಿನಿಂದ ಸಾಲ ಪಡೆವವನು ಭದ್ರನೆಂದು ತಿಳಿದೇ ಸಾಲ ಕೊಟ್ಟು, ತನ್ನ ವಸೂಲಾತಿಯನ್ನು ಧೈರ್ಯದಿಂದ ಸಾಗಿಸಿಕೊಳ್ಳಬಲ್ಲುದು; ಠೇವಣಾತಿಯನ್ನು ಬಂಧಿಸಿ ಹಿಂದಕ್ಕೆ ತೆರಬಲ್ಲುದು. ಈ ವಿಚಾರವು ಠೇವಣಿದಾರರ ಕಣ್ಣೆದುರಲ್ಲಿ ಇರಬೇಕು. ಠೇವಣಾತಿಗಳ ಮೇಲೆ ೬—೮ರಂತೆ ಬಡ್ಡಿ ಸಿಗುವಲ್ಲಿ ಹಣವಿಟ್ಟವರು ಠೇವಣಿಗಳನ್ನು ಮಡಗುವ ಮೊದಲು, ತಮ್ಮ ಹಣಕ್ಕೆ ಅಗತ್ಯವಾಗಿಯೂ ಇರುವ ಗಂಡಾಂತರವಾವುದೆಂದು ನಿರ್ಧರಿಸಿ ವಿಚಾರಿಸಿ ನಂತರ ಠೇವಣಾತಿ ಇಟ್ಟರೆ ನಷ್ಟವಾಗುವ ಸಂಭವ ಕಡಿಮೆ. 'ಬಡ್ಡಿಯ ದರ ಕಡಿಮೆ' ಎಂದರೆ, ಬೇಂಕಿನಲ್ಲಿ ಠೇವಣಾತಿಗಳು ಹೆಚ್ಚಿವೆ, ಬೇಂಕು ಸಾಲ ಕೊಡುವಾಗ ಬಹಳ ಭದ್ರತೆ ವಿಶ್ವಾಸಾದಿಗಳನ್ನು ನೋಡಿಯೆ ಸಾಲ ಕೊಟ್ಟು, ಹಣ ಬೆಳಸಿ, ಮೋಸ ಬಾರದಂತೆ ಠೇವಣಿದಾರನನ್ನು ಕಾಪಾಡುತ್ತಿದೆ ಎಂದು ಸ್ಪಷ್ಟವು. ಸಾಂಪತ್ತಿಕ ಪರಿಷತ್ತುಗಳು ಈ ವಿಷಯ ಚರ್ಚಿಸಿ ಇತ್ಯರ್ಥಿಸಿವೆ.

ರಷ್ಯದಲ್ಲಿ ಎರಡನೆ ಪಂಚವಾರ್ಷಿಕ ಯೋಜನೆ ಇತರ ಸುಧಾರಿತ ಮಹಾ ರಾಷ್ಟ್ರಗಳು ರಷ್ಯದ ಮೊದಲನೆ ಪಂಚವಾರ್ಷಿಕ ಯೋಜನೆಯ ಸುದ್ದಿ ಕೇಳಿ ನಗುತ್ತಾ ಅಪಹಾಸ್ಯ ಮಾಡಿದುವು. ಆದರೆ ರಷ್ಯವು ಮಾತ್ರ ಕೃತಕೃತ್ಯವಾಯಿತು. ಈಗಲೆ ರಷ್ಯವು ಎರಡನೆ ಯೋಜನೆಯನ್ನು ಮುಂದಿಟ್ಟಿರುವುದು. ಯುದ್ಧದ ಮೊದಲು ರಷ್ಯದ ಉತ್ಪನ್ನಗಳು ಎಷ್ಟಿದ್ದುವೊ ಅವುಗಳು ಈಗ ಅದರ ನಾಲ್ಕು ಮಡಿ ಹೆಚ್ಚಾಗಿವೆ. ಮುಂದಣ ಐದು ವರ್ಷಗಳಲ್ಲಿ, ಈಗಿನ ದುಬಾರಿಯಷ್ಟಾಗಬೇಕೆಂದೇ ರಷ್ಯದ ಪ್ರಯತ್ನ. ಎಂದರೆ, ೧೯೧೩ರಲ್ಲಾದ ಉತ್ಪನ್ನದ ಒಂಭತ್ತು ಮಡಿ ಉತ್ಪನ್ನಗಳು ೧೯೩೭ರಲ್ಲಿ ಆಗಬೇಕಾಗಿ ಸನ್ನಾಹ. ಏಳುಸಾವಿರ ಮೈಲುದ್ದಕ್ಕೆ ಹೊಸ ರೈಲು ಮಾರ್ಗಗಳಾಗುವವು; ಕೃಷಿಯ ಉತ್ಪನ್ನಗಳು ಇಮ್ಮಡಿಯಾಗುವವು, ಮೋಟರ ಯಂತ್ರಗಳು ನೂರಕ್ಕೆ ನೂರಮೂವತ್ತಾಗುವವು, ಹೊಸ ಕಾಲುವೆಗಳು ಕಡಿದು ಮುಗಿವವು. ಈ ಯೋಜನೆಯು ಕೈಗೂಡಲಿ, ಕೈಗೂಡದಿರಲಿ,—ರಷ್ಯವು ಮುಂದರಿಯುವುದು ನಿಜವೆಂದೇ ಹೇಳಬಹುದು. ಅದೆಂತಾದರೂ, ಇಂಡಿಯದಂಥ ರಾಷ್ಟ್ರಗಳು ಇಂತಹ ಯೋಜನೆಗಳನ್ನು ಕೈಕೊಂಡು ಸಾಧಿಸುವುದರಿಂದ, ಯೋಗ್ಯ ರೀತಿಯಲ್ಲಿ ಅಭಿವೃದ್ಧಿ ಹೊಂದಲು ಅಸ್ಪದವಿದೆ ಎಂಬುದರಲ್ಲಿ ಸಂದೇಹವಿದ್ದೀತೆ?

ಟಪ್ಪಾಲು ದರಗಳು ವಿಪರೀತವಾಗಿವೆ. ಮೂರು ಪೈಯ ಕಾರ್ಡಿಗೆ ಮೂರು ಕಾಸ್ಗಳು; ಆಧರ್ಶಣೆಯ ಕವರಿಗೆ ಒಂದೂಕಾಲಾಣೆ. ಹೀಗಿದ್ದರೂ, ಟಪ್ಪಾಲು ಇಲಾಖೆಯಿಂದ ನಷ್ಟವೆ. ನಷ್ಟ ತುಂಬಿಸಬೇಕಾದರೆ ಈ ದರಗಳನ್ನು ಇನ್ನೂ ಹೆಚ್ಚಿಸಬೇಕು. ದರಗಳನ್ನು ಹೆಚ್ಚಿಸಿದಂತೆ ಆಯವು ಕಡಿಮೆಯಾಗುತ್ತಿದೆ. ಈ ಬಗೆಯಾಗಿ ಸುತ್ತಾಡುತ್ತಿರುವ ಈ ರಗಳೆಗಳನ್ನು ತೀರಿಸುವುದಕ್ಕಾಗಿ, ಒಂದು ಕಮಿಟಿಯನ್ನು ನೇಮಿಸಿ, ಟಪ್ಪಾಲು ಇಲಾಖೆಯ ಖರ್ಚನ್ನು ಹೇಗೆ ಇಳಿಸಬಹುದೆಂಬುದನ್ನು ವಿಮರ್ಶಿಸಿಕೊಳ್ಳಲು ತೊಡಗಿದೆ. ದವಸಗಳ ಧಾರಣೆಯು ತೀರ ಇಳಿದು, ಸಾಮಾನ್ಯ ಖರ್ಚಿಗೂ ಅಡಚಣೆಯು ತೋರಿರುವಾಗ, ಟಪ್ಪಾಲಿನ ದ್ವಾರಾ ವ್ಯವಹಾರ ನಡೆಸುವವರಿಗೆ ಈ ವಿಧದ ದರಗಳು ಬಲು ಬಾಧಕಕರವಾಗಿವೆ. ಉಪಯೋಗ ಮಾಡುವವನಿಗೆ ಕೈ ನಿಲುಕದಷ್ಟು ಭಾರವಾದ ದಸ್ತೂರಿಯಿಂದ ಯಾರಿಗೂ ಪ್ರಯೋಜನವಿಲ್ಲ.

ಕ್ರಾಂತಿಕಾರರಿಗೆಂದು ಕಾನೂನು ಎದೆ ನಡುಗಿದ ಕೆಲವರು ಲಂಡನಿನ ಪತ್ರಿಕೆಗಳಲ್ಲಿ ಸಂಶಯ ಕಂಡವರನ್ನೆಲ್ಲ ಅತಿಯಾದ ದಂಡನೆಗೆ ಗುರಿಪಡಿಸಬೇಕಾಗಿ ಬಾರಿ ಬಾರಿಗೂ ಬರೆದುಕೊಂಡರು. ಮಿಡ್ನಾಪುರ, ಚಿಟಗಾಂಗುಗಳ ಯುರೋಪೀಯರ ಕ್ರಾಂತಿಕಾರರ ದೆಸೆಯಿಂದಾಗಿ ಉದ್ವಿಗ್ನ ಚಿತ್ತರಾಗಲು ಕಾರಣವಿದೆಯಾದರೂ, ಹಾಗೆಂದು ವಿವೇಕವನ್ನು ಕಳೆದುಕೊಳ್ಳಬೇಕಾಗಿಲ್ಲ. ಈಗ ಅಲ್ಲಿ ನಡೆಯುತ್ತಿರುವ ಕಾನೂನು ಒಚಾಣೆಗೆ ಇನ್ನೂ ಬಲ ಹುಟ್ಟಲೆಂದು ಕಾನೂನನ್ನು ತಿದ್ದುವ ಮಸೂದೆಯೊಂದು ಬಂಗಾಳ ಕೌನ್ಸಿಲಿನಲ್ಲಿ ಆಲೋಚನೆಗೆ ಬರುವುದು. "ಯಾವುದೊಂದು ಸಿಡಿಗುಂಡು ಪಿಸ್ತೂಲು ಮೊದಲಾದುವು ಇದ್ದವನು ಅವನನ್ನು ಜೀವಹಾನಿಗೆ ಉಪಯೋಗಿಸಬಹುದಾಗಿ ವಿಚಾರವಾದರೆ, ಅಂತವನನ್ನು ಫಾಸೀ ಶಿಕ್ಷೆಗೆ ಒಳಪಡಿಸಬೇಕು" ಎಂದು ಸೂಚನೆಯಾಗಿದ್ದಾಗ, ಯಾವನೊಬ್ಬನಲ್ಲಿ ಒಂದು ಹಳೇ [illegible] ಇದ್ದರೂ, ಈ ಗಲಿಬಿಲಿಯ ಕಾಲದಲ್ಲಿ ಅದು ಯಾರನ್ನೊ ಕೊಲ್ಲಲಿಕ್ಕಲ್ಲದೆ ಮತ್ತೇಕೆಂದು ಸಂಶಯ ಸ್ಥಾಪಿಸಲೂ ಅವಕಾಶವುಂಟಾಗಿ ಅವನು ಫಾಸಿ ಶಿಕ್ಷೆ ಹೊಂದಬಹುದೆಂದು ಪತ್ರಿಕೆಗಳು ಈಗಲೆ ಟೀಕಿಸಿವೆ. 'ಅಂಡಮಾನ ದ್ವೀಪಗಳಲ್ಲಿರುವ ಕೈದಿಗಳ ಕ್ಷೇಮಾತಿಶಯಗಳನ್ನು ಕುರಿತಾಗಿ ಬರೆವುದೂ ಒಂದು ಅಪರಾಧವೆನಿಸಲು ಕಾರಣವಾಗಬೇಕೆಂದು ಪತ್ರಿಕೆಗಳನ್ನು ಕುರಿತಾದ ಕಾನೂನನ್ನು ತಿದ್ದುವ ಸೂಚನೆಯೂ ಇದೆಯಂತೆ!

ಶ್ವೇತಪತ್ರದ ವಿಚಾರ ಶ್ರೀಮಾನ್ ಶ್ರೀನಿವಾಸ ಶಾಸ್ತ್ರಿಯವರು ಶ್ವೇತಪತ್ರವನ್ನು ಕುರಿತಾದ ತಮ್ಮ ಅಮೂಲ್ಯ ವಿಚಾರಗಳನ್ನು ಮದ್ರಾಸಿನಲ್ಲಿ ಭಾಷಣಗಳ ಮೂಲಕ ಪ್ರಚುರಿಸುತ್ತಿರುವರು. ಲಿಬರಲರ ಮಹಾಸಭೆ ಸೇರಿದಾಗ, ಶ್ವೇತಪತ್ರವು ಹಲವು ಬಗೆಯಲ್ಲಿ ತಮಗೆ ಗ್ರಾಹ್ಯವಾದುದಲ್ಲ ಎಂದು ಅವರು ಹೇಳಿದರೂ, ಆ ವಿಷಯವಾಗಿ ಮುಂದೆ ಮಾಡತಕ್ಕುದೇನೆಂದು ಒಂದೂ ನಿಶ್ಚಿತವಾಗದೆ ಅವರ ಪರಿಷತ್ತು ಮುಗಿಯಿತು. 'ಅಸಹಕಾರ' ಮಂತ್ರ ಜಪಿಸಿ ದೂರ ನಿಂತರೆ, ದೇಶದ ಸ್ಥಿತಿಯೂ ಸರಕಾರದ ಸ್ಥಿತಿಯೂ ಇನ್ನೂ ಕೆಡುವ ಸಂಭವವಿದೆ. "ರಾಷ್ಟ್ರೀಯ ಭಾವನೆಯಿಂದಲೂ, ಆದರ್ಶದಿಂದಲೂ ನಾವು ಕೂಡಿ, ಸಹಕರಿಸಿ, ಎಲ್ಲೆಲ್ಲಿ ಮಬ್ಬು ಮುಚ್ಚಿದೆಯೋ ಯಾವುದು ಉದಾರವಲ್ಲವೊ ದೇಶದ ಏಳಿಗೆಗೆ ವಿರುದ್ಧವಾದುದಾವುದೋ ನಮ್ಮ ನಾಗರಿಕ ಉದ್ದೇಶದ ಪ್ರಗತಿಗೆ ಯಾವುದು ತೊಡಕಾಗಿದೆಯೋ ಅಂತದನ್ನೆಲ್ಲ ತಿದ್ದಲು ಪ್ರಯತ್ನಿಸಬೇಕಾಗಿದೆ. ಶ್ವೇತಪತ್ರವನ್ನು ಮೋಹಿಸಿ ನಾನು ಹೀಗೆ ಹೇಳುವುದಲ್ಲ, ಬ್ರಿಟಿಷರ ಕಡೆಗೆ ವಾತ್ಸಲ್ಯದಿಂದಲೂ ಅಲ್ಲ, ನಮ್ಮವರ ಹಿತಕ್ಕಾಗಿಯೇ ಇದು ಸದುಪಾಯವೆಂದು ನಾನೆನ್ನುತ್ತೇನೆ. ಸರಕಾರಕ್ಕೆ ಬುದ್ಧಿ ಕಲಿಸಬೇಕೆಂದು ಹೊರಟು, ಜನತೆಯನ್ನು ಬಗ್ಗು ಬಡೆವುದು ನ್ಯಾಯವಾಗಿಲ್ಲ. ಸರಕಾರಕ್ಕೆ ಬಡೆಯಲು ಹೋಯಿತ್ತಿದರೆ, ಜನತೆಗೆ ಪ್ರಬಲವಾದ ಆಘಾತವಾದೀತೆಂದು ನನ್ನ ಅಭಿಮತ, ನನ್ನನ್ನು ಈ ಮಾತುಗಳನ್ನು ಹೇಳಿರುವುದಕ್ಕೆ ಟೀಕಿಸುವವರು ಇರಬಹುದು, ಅಂತಹ ಟೀಕೆಗಳನ್ನು ಓದಿ, ಮಥಿಸಿ, ನಾನು ತಪ್ಪಿದ್ದೆನಾದರೆ ತಿದ್ದಿಕೊಳ್ಳಲು ಬಯಸುವೆನು, ಹಾಗಿಲ್ಲದಿರುವಲ್ಲಿ ನಾನು ಇದುವರೆಗೆ ಪ್ರೇಚಾಡಿದಂತೆಯೇ ಮುಂದೆಯೂ ಪ್ರೇಚಾಡುವೆನು!" ಎಂದೇ ಅವರ ಅಕ್ರಾಸನ.

ಅಮ್ಮೆಂಬಳ ಸುಬ್ರಾಯ ಪೈ ಸ್ಮಾರಕ ಫಂಡು ೧೯೩೩ ನವಂಬರ್ ೧೫ನೇ ತಾರೀಕಿಗೆ ಅಂತ್ಯವಾಗುವ ಒಂದು ವರ್ಷದ ಕಾರ್ಯವೃತ್ತಾಂತದಲ್ಲಿ,— ಫಂಡಿನಿಂದ ಸಹಾಯ ಪಡೆದವರೊಳಗೆ ೩೨ ಜನರು ತಾವು ಪಡೆದ ಸಹಾಯವಾದ ಸಾಲವನ್ನು ಕಂತುಗಳಲ್ಲಿ ಮರುಪಾವತಿ ಮಾಡುತ್ತಿರುವುದರಿಂದ, ಕಳೆದ ವರ್ಷ ೩೪ ವಿದ್ಯಾರ್ಥಿಗಳಿಗೆ ಕೊಟ್ಟ ೫೯೭೦ ರೂಪಾಯಿ ವೇತನ ಸಾಲದ ಬದಲಾಗಿ ಈ ವರ್ಷ ೩೮ ವಿದ್ಯಾರ್ಥಿಗಳಿಗೆ ೬೩೫೦ ರೂಪಾಯಿ ಸಹಾಯ ಮಾಡಲು ಅನುಕೂಲವಾಯಿತೆಂದು ತಿಳಿದು ತೃಪ್ತಿಯಾಗುತ್ತಿದೆ. ಇನ್ನಷ್ಟೋ ಬಡ ವಿದ್ಯಾರ್ಥಿಗಳಿಗೆ ಸಹಾಯ ಮಾಡಲು ಉತ್ಸುಕತೆಯಿಟ್ಟರೂ, ಸಮಾಜವು ಇತರರಿಗೆ ಸಮಾನವಾಗಿ ಕಾಲಿಟ್ಟು ಮುಂದರಿಯಬೇಕಾದರೆ ವಿದ್ಯಾರ್ಥಿಗಳಿಗೆ ಸಹಾಯವೇ ಅಗತ್ಯವಾಗಿದ್ದರೂ, ಫಂಡಿನಿಂದ ಹಿಂದೆ ಸಾಲ ಪಡೆದು ಈಗ ಇಂಪೀರಿಯಲ್ ಬೇಂಕ್ ಮೊದಲಾದುವುಗಳಲ್ಲಿ ಹೆಚ್ಚಿನ ವೇತನ ದುಡಿಯುತಿದ್ದವರೇ ಅಡಳಿತದವರನ್ನು ಕೋರ್ಟಿನ ವರೆಗೆ ವಸೂಲ್ಮಾಡಿಕೊಳ್ಳಲು ಮೊರೆಯಿಡುವ ಹಾಗೆ ಒತ್ತಾಯವಮಾಡಿರುವರೆಂದು ಓದಿ ಖೇದವಾಗುತ್ತಿದೆ. ಕೃತಜ್ಞತೆ, ಪರೋಪಕಾರಬುದ್ಧಿ, ತ್ಯಾಗ ಇವೆಲ್ಲವೂ ಶಿಕ್ಷಿತ ಯುವಕರಲ್ಲಿ ಇರಬೇಕಾದ ವಿನಯದ ಲಕ್ಷಣಗಳಲ್ಲವೆ? ೫೬ ಮಂದಿ ಪಡೆದ ಸಾಲವನ್ನು ಹಿಂತಿತ್ತಿರುವರೇ ಅಲ್ಲದೆ, ಇಬ್ಬರು ಹೆಚ್ಚಿನ ೫೫ ರೂಪಾಯಿಗಳನ್ನು ಫಂಡಿಗೆ ದಾನಕೊಟ್ಟಿರುವುದೂ ಅವರು ಹೈಸ್ಕೂಲಿನ ಶಿಕ್ಷಕರಾಗಿರುವುದೂ ಸ್ತುತ್ಯ, ಸಾಹುಕಾರರೊಬ್ಬರು ೫೫ ರೂಪಾಯಿಗಳನ್ನು ದಾನ ಕೊಟ್ಟುದೂ ಮಾದರಿ. ಫಂಡಿನ ಹಣವಾಗಿ ಬೇಂಕನಲ್ಲಿ ೧೫,೬೨೦ ರೂಪಾಯಿ ಕಾಯಂ ಠೇವಣಾತಿಯಿದೆ, ರೂ ೭೨೫ ನಗದಿ ಸಿಲ್ಕು ಇದೆ, ೩೭,೦೬೪ ರೂಪಾಯಿ ವಸೂಲಿಗೆ ಉಳಿದಿದೆ,— ಎಂದರೆ, ಲೆಕ್ಕ ಪರಿಶೋಧಕರೆನ್ನುವಂತೆ, ಅವರೊಡನೆ ನಾವೂ, ಆಡಳಿತದವರನ್ನು ಪುನಃ ವಂದಿಸಬೇಕಾಗಿದೆ. ಸಮಾಜದಲ್ಲಿನ ಬಡ ವಿದ್ಯಾರ್ಥಿಗಳು (ಬಡವರಲ್ಲೇ ಜಾಣೆ ವಿಚಕ್ಷಣತೆ ಹೆಚ್ಚಾಗಿದೆ) ಈ ಫಂಡಿನ ಸಹಾಯ ಪಡೆದು, ಕೀರ್ತಿಶೇಷರ ಸ್ಮರಣವು ಸಾಂಗವಾಗಿ ಸಾಗುವಂತೆಯೂ ಸಮಾಜವು ಸರ್ವತಃ ಮುಂದೊತ್ತಿ ಬರುವಂತೆಯೂ, ಮೂಲಧನಕ್ಕೆ ಅಗತ್ಯವಾಗಿಯೂ ಧರ್ಮಾರ್ಥಕರ ದಾನ ಸಹಾಯವು ಅಗತ್ಯವಿದೆ. ಸಾಲ ಪಡೆದವರು ತಮ್ಮ ಜೀವನಸಾಗುತ್ತಿರುವಾಗ ಸಾಲವನ್ನೂ ಅಲ್ಲದೆ ಉಪಾಯಿಗೆ ಒಂದು ಪೈಯಂತಾದರೂ ಹೆಚ್ಚಿಗೆ ಕೂಡಿಸಿ ಕೊಡುತಿದ್ದರೆ ಮುಂದಣ ಪೀಳಿಗೆಯ ಪುಣ್ಯಕ್ಕೂ ಕಾರಣರಾಗರೆ?

ಗಾಂಧೀ ಸಂದೇಶ "ನಿಮ್ಮ ಕರ್ತವ್ಯವೇನು? ಹರಿಜನರು ನಮ್ಮ ಸೋದರರಿಯಾದರೆಂದರಲೇ ನಿಮ್ಮ ಅಥವಾ ನನ್ನ ಕರ್ತವ್ಯವು ಮುಗಿದಂತಾಗಲಿಲ್ಲ. ಇಲ್ಲೀಗ ನಮ್ಮ ಕರ್ತವ್ಯ ಪ್ರಾರಂಭವಾದಂತಾಯಿತು. ಪ್ರತಿಯೊಂದು ಬಗೆಯ ಅಸ್ಪೃಶ್ಯತೆಗೆ ಅವಕಾಶವೇ ಇರದಾರೆಂಬುದು ನಮ್ಮ ಆದರ್ಶವಾಗಿರಬೇಕು. ಈ ಅಸ್ಪೃಶ್ಯತೆಯೋ ನಮ್ಮ ಜೀವನವನ್ನು ಕೊರೆದಿಕ್ಕಿದೆ. ಹೊಲೆಯರು ನಾಯಾಡಿಗಳು ನಮ್ಮ ಸೋದರರು ಎಂದು ಅಂಗೀಕರಿಸುವುದರಿಂದ ನಾವು ಕೃತಕೃತ್ಯರಾಗಲಿಲ್ಲ. ಸವರ್ಣ ಹಿಂದುಗಳಲ್ಲೇ ಜಾತಿಗೆ ಜಾತಿ ಮೇಲು ಕೀಳು ಭಾವದಿಂದ ಇದೆಯಲ್ಲ! ಈ ಅಸ್ಪೃಶ್ಯತೆ, ಈ ಮೇಲು ಕೀಳಿನ ವಿಷವನ್ನು ನಾವು ನಿವಾರಿಸುವುದೆಂದಿಗೆ? ನಮ್ಮಲ್ಲಿನ ಈ ರೋಗದ ಸೋಂಕು ಮುಸಲ್ಮಾನರು ಕ್ರೈಸ್ತರು ಮೊದಲಾದವರನ್ನೂ ಆಕ್ರಮಿಸಿದೆ. ಪ್ರಪಂಚದಲ್ಲಿ ಮೇಲು ಕೀಳು ಎಂಬುದೇ ಇರಲಾರದು. ದೇವರು ನಮ್ಮ ಸರ್ವರ ತಂದೆ ಎಂಬುದು ನಿಜವಾದರೆ, ನಾವು ಸರ್ವರೂ ಭ್ರಾತೃಗಳು. ಇದನ್ನು ಅಂಗೀಕರಿಸಿ ನಡೆದರೆ, ಹಿಂದೂಗಳೆಲ್ಲರು ಒಂದಾಗುವುದು ಮಾತ್ರವಲ್ಲದೆ, ನಮ್ಮ ನೆರೆಯವರಾದ ಮುಸ್ಲಿಮರು, ಕ್ರೈಸ್ತರು, ಪಾರಸಿಯರೊಡನೆ ಸಹ ನಮಗೆ ತುಂಬಾ ಸೋದರಭಾವವು ಒಳ್ಳಟ್ಟು ಉಂಟಾಗುವವು." ಕೇರಳ ಸಂಚಾರದ ನಂತರ ಮಹಾತ್ಮಾಜೀಯವರು ಹೇಳಿರುವ ಅನುಭವವಿದು.

FRESH CONSIGNMENT ARRIVED.

UNEQUAL QUALITY————————EXCEPTIONAL PRICE

A TIRE THAT SAVES YOU REPUTATION AND MONEY.

The Canara Public Conveyance Co., Ltd.

M A N G A L O R E.

ಭೂಕಂಪದಿಂದ ೨೦ ಸಾವಿರ ಜನರು ಮೃತರಾದರು?

ಸುಮಾರು ಎರಡು ಲಕ್ಷ ರೂಪಾಯಿಗಳಷ್ಟು ಸಹಾಯ ಧನ!

ಅಲ್ಲಲ್ಲಿಯ ತಂತಿ ವಾರ್ತೆ:—

ಅಹ್ಮದಾಬಾದ್,

ಇಲ್ಲಿ ತಾ. ೧೯ನೇ ದಿನ ಕಥಿಯಾವಾರ್ ವಿಮಾನದ್ವಿನ ಒಂದು ವಿಮಾನವು ಮೇಲೆ ಹಾರುತ್ತಿದ್ದು, ಯಂತ್ರವು ಮುರಿದು, ಥಕ್ಕನೆ ಕೆಳಗೆ ಒಂದು ಹೊಳೆಯ ನಡುವಿನಲ್ಲಿ ಬಿದ್ದಿತು. ಅದರ ಒಂದು ರೆಕ್ಕೆಯು ಕೆಸರಿನೊಳಗೆ ಸಿಕ್ಕಿಕೊಂಡಿತು. ಬಳ್ಳಿ ಯೂರೋಪಿಯಾನನೂ ಇನ್ನಿಬ್ಬರೂ ಮುಳುಗುತ್ತಿದ್ದಾಗ ದಡದಲ್ಲಿದ್ದವರು ಅವರನ್ನು ರಕ್ಷಿಸಿ ಆಸ್ಪತ್ರೆಗೊಯ್ದರು.

ಐರ್ಲೆಂಡ್

ಐರ್ಲೆಂಡಿನೊಳಗೆ ಬರುವ ಯಂತ್ರಗಳ ಮೇಲೆ ಹೊಸ ಸುಂಕಗಳನ್ನು ಹೊರಿಸಿರುತ್ತಾರೆ. ಹೊಸತಾಗಿ ಆಮದು ಮಾಡಲ್ಪಡುವ ಕಾರುಗಳ ಮೇಲೆ ಶೇಕಡಾ ೩೩ರಷ್ಟು ಸುಂಕವನ್ನು ಹೊರಿಸಿರುತ್ತಾರೆ. ಮೊದಲು ಶೇಕಡಾ ೨೨ರಷ್ಟಿತ್ತು. ಬೇಸಾಯಕ್ಕೆ ಉಪಯೋಗ ಬೀಳುವ ಸಾಮಗ್ರಿಗಳ ಮೇಲೂ ಇದೇ ರೀತಿ ಸುಂಕ ಹೊರಿಸಲಾಗಿದೆ. ಬ್ರಿಟಿಷ ಸಾಮಾನುಗಳನ್ನು ತಡೆಯುವುದಕ್ಕಾಗಿ ಈ ಯೋಜನೆಯಂತೆ.

ಕ್ರಾಯ್‌ಡನ್

ಲಾರ್ಡ್ ವಿಲ್ಲಿಂಗ್ಡನರ ಪುತ್ರ ವೈಕೌಂಟ್ ಟಿಂಡೊನ್‌ರವರು ಬೆರಿಸ್ ನಗರದಿಂದ ಕ್ರಾಯ್‌ಡನ್‌ಗೆ ವಿಮಾನ ಮೂಲಕ ಹಾರಿ ತನ್ನ ೨೦,೦೦೦ ಮೈಲು ಪ್ರಯಾಣವನ್ನು ಮುಗಿಸಿದರು

ಲಂಡನ್.

ಇಂಗ್ಲೆಂಡಿಗೆ ೧೯೩೨ರಲ್ಲಿ ವಿಮಾನ ಮೂಲಕ ಕಳುಹಿಸಲ್ಪಟ್ಟ ಕಾಗದ ಪತ್ರಗಳ ಭಾರವು ೭೪ ಟನ್ನುಗಳು. ೧೯೩೩ರಲ್ಲಿ ಇದು ೮೫ ಟನ್ನುಗಳಿಗೆ ಏರಿತು. ೧೯೩೨ರಲ್ಲಿ ೫೭ ಟನ್ನು ಪಾರ್ಸೆಲುಗಳು ವಿಮಾನ ಮೂಲಕ ಇಂಗ್ಲೆಂಡಿಗೆ ಹೋದುವು ೧೯೩೩ರಲ್ಲಿ ೬೭ ಟನ್ನುಗಳಿಗೆ ಏರಿತು

ಮುಂಬಾಯಿ.

ಜಪಾನದಿಂದ ಹಿಂದೂಸ್ಥಾನಕ್ಕೆ ಹಣ್ಣು ಹಂಪಲುಗಳು ಬರಲಾರಂಭವಾಗಿದೆ. ಕಳೆದ ಕೆಲವು ವಾರಗಳಿಂದ ೫೦,೦೦೦ಕ್ಕಿಂತ ಹೆಚ್ಚು ಹಣ್ಣುಗಳು ಮುಂಬಾಯಿಗೆ ತಲಪಿದುವು. ಒಂದು ತಿಂಗಳು ಮುಗಿಯುವುದರೊಳಗೆ ಮುಂಬಾಯಿಯಲ್ಲಿ ೫ ಮಿಲಿಯ ಹಣ್ಣುಗಳ ಪೆಟ್ಟಿಗೆಗಳು ಮುಂಬಾಯಿಯಲ್ಲಿರುವುವು.

ತ್ರಿವೇಂಡ್ರಂ

ಮಹಾತ್ಮಾ ಗಾಂಧಿಯವರು ತಾ. ೨೨ನೇ ದಿನ ೭ ಗಂಟೆಗೆ ತ್ರಿವೇಂಡ್ರಂನ್ನು ಬಿಟ್ಟು, ಕೇಪ್ ಕೊಮೊರಿನ್‌ಗೆ ಹೋಗಿ ಅಲ್ಲಿ ತಾ ೨೫ನೇ ದಿನದಿಂದ ೮ ದಿನಗಳ ತನಕ ವಿಶ್ರಾಂತಿ ಹೊಂದುವರು. ಫೆಬ್ರವರಿ ತಾ ೧೩ಕ್ಕೆ ಮದ್ರಾಸಿನಿಂದ ಬೆಳ್ಳಾರಿ, ಉತ್ತರ ಕನ್ನಡಗಳಿಗೆ ಹೋಗುವರು. ಫೆಬ್ರವರಿ ೧೮ರಲ್ಲಿ ಹೈದರಾಬಾದ್ (ಡೆಕ್ಕನ್)ಗೆ ಹೋಗುವರು. ೨೭ನೇ ಫೆಬ್ರವರಿಯಲ್ಲಿ ಕಲ್ಕತ್ತಕ್ಕೆ ತಲಪಲಿರುವರು. ಅವರ ಆರೋಗ್ಯವು ಸರಿಯಾಗಿದೆ. **ಫೆಬ್ರವರಿ ೧೧ರಲ್ಲಿ ಕರ್ನಾಟಕ ಸಂಚಾರಕ್ಕೆ ತೊಡಗುವರು**

ಕಲ್ಕತ್ತ

ಕ್ರಾಂತಿಕಾರರ ಚಳವಳಿಯನ್ನು ದಂಗು ಬಡಿಯುವುದಕ್ಕಾಗಿ ಬಂಗಾಳ ನ್ಯಾಯ ವಿಧಾಯಕ ಸಭೆಯಲ್ಲಿ ೧೯೩೪ರ ಬಂಗಾಳ ಕ್ರಿಮಿನಲ್ ಲಾ ಎಮೆಂಡ್‌ಮೆಂಟ್ ಶಾಸನವು ಜಾರಿಗೆ ಬರಮಾಡುವಂತಾಗಲಿದೆಯೆಂದೂ ಈ ಶಾಸನ ಮೇರೆಗೆ ಯಾರೊಬ್ಬನು ಕೊಲೆಮಾಡುವುದಕ್ಕಾಗಿ ಶಸ್ತ್ರೋಪಕರಣ ಸಿಡಿಮದ್ದುಗಳನ್ನು ಮಾಡಿದರೆ, ಉಪಯೋಗಿಸಿದ್ದರೆ ಮರಣ ದಂಡನೆಗೊಳಗಾಗುವನು.

ಮುಂಬಾಯಿ

ಮುಂಬಾಯಿಯ ಡೆಮೊಕ್ರೆಟಿಕ್ ಸ್ವರಾಜ್ಯ ಪಾರ್ಟಿಯಲ್ಲಿ ಶ್ರೀ ಜಮ್ನಾದಾಸ ಮೆಹ್ತಾರವರು ಮಾತನಾಡುತ್ತ, ದೇವಸ್ಥಾನ ಪ್ರವೇಶ ಮಸೂದೆ, ಗಾಂಧೀ ಕಾರ್ಯಕ್ರಮ, ಜವಾಹರಲಾಲರ ಲೇಖನ ಭಾಷಣಗಳನ್ನು ತೀವ್ರವಾಗಿ ಖಂಡಿಸಿ ಕೌನ್ಸಿಲು ಪ್ರವೇಶವೊಂದೇ ದೇಶದ ಹೆದ್ದಾರಿಯೆಂದು ಹೇಳಿದರು.

ಪೆರಿಸ್

ಇಂಗ್ಲಿಷ್ ಚೆನಲ್‌ನಲ್ಲಿ ೧೯೩೩ರ ಜನವರಿ ೪ರಲ್ಲಿ ಬೆಂಕಿ ಹಿಡಿದು ಸುಟ್ಟುಹೋದ 'ಅಟ್ಲಾಂಟಿಕ್' ಸ್ಟೀಮರನ್ನು ಇನ್ಶೂರ್ ಮಾಡಿದ್ದು, ಈಗ ಅದರ ಮಾಲಿಕರು ಇನ್ಶೂರ್ ಕಂಪೆನಿಯಿಂದ ೧೨೦ ಮಿಲಿಯ ಫ್ರೆಂಕ್ಸ್ ಕೇಳಿರುವರು. ಈ ಸ್ಟೀಮರು ೫೦,೦೦೦ ಟನ್ ಭಾರವಿತ್ತು. ೫೦೦ ಮಿಲಿಯ ಫ್ರೆಂಕ್ಸ್ ವೆಚ್ಚ ಮಾಡಿ ಕಟ್ಟಿದುದು.

ತಾ. ೧೮.

ಬಿಹಾರ್ ಮರಣಗಳು ಸರಕಾರದ ಅಂದಾಜು ಮೇರೆಗೆ ಭೂಕಂಪದಿಂದ ೫೦೦೦ ಆಗಬಹುದು. ಪಾಟ್ನಾದಿಂದ ಶ್ರೀ ಬಾಬು ರಾಜೇಂದ್ರ ಪ್ರಸಾದರವರು ಬಿಹಾರಿನ ವಿಪನ್ನ ಜನರಿಗೆ ಸಹಾಯ ಮಾಡಬೇಕೆಂದು ಅರಿಕೆ ಮಾಡಿಕೊಂಡಿರುವರು. ದರ್ಭಾಂಗದ ರಾಜರ ಅರಮನೆ ಮೊದಲಾದ ಕಟ್ಟಡಗಳು ಹಾಳಾಗಿವೆ. ಮೊಂಘೀರ್ ಎಂಬಲ್ಲಿ ೪೦೦೦ ಜನರು ಮೃತರಾಗಿರುವರು. ಹೆಣಗಳನ್ನು ಸಮುದ್ರಕ್ಕೆಸೆಯುತ್ತಿರುವರು. ಜನರಿಗೆ ಆಹಾರವು ದೊರಕುವುದಿಲ್ಲ. ಜಮಾಲಪುರದಲ್ಲಿನ ಈಸ್ಟ್ ಇಂಡಿಯಾ ರೈಲ್ವೆ ವರ್ಕ್‌ಶೋಪಿನಲ್ಲಿ ೧೦,೦೦೦ ಸಾವಿರ ಕೆಲಸಗಾರರು ಕೆಲಸಮಾಡುತ್ತಿದ್ದಾಗ ಭೂಕಂಪವಾಯಿತು. ಒಡನೆ ಬಿಗಿಲು ಊದಿದರು. ಎಲ್ಲಾ ಕೆಲಸಗಾರರು ಹೊರಗೆ ಓಡಿದರು. ಆ ಮೇಲೆ ಕಟ್ಟಡವು ಬಿತ್ತು. ಜನರು ಜಖಂಗೊಳ್ಳಲಿಲ್ಲ. ಮೊಂಘೀರ್ ಪಟ್ಟಣವು ಇನ್ನಿಲ್ಲವೆಂದೇ ರೆವರೆಂಡ್. ಎ. ಜಿ. ಎಸ್. ಡೇಸ್ಲಿ ಎಂಬವರ ಅಭಿಪ್ರಾಯ. ವೈಸರಾಯರು ಎಲ್ಲಾ ಅಧಿಪತ್ಯದ ಗವರ್ನರುಗಳಿಗೆ ತಂತಿ ಬಿಟ್ಟು ಎಚ್ಚರವಿರಬೇಕಾಗಿ ಹೇಳಿರುವರು.

ತಾ ೧೯

ವೈಸರಾಯರು ಒಂದು ರಿಲೀಫ್ ಫಂಡನ್ನು ತೆರೆದಿರುವರು. ಈ ಫಂಡಿಗೆ ಐದನೇ ಜೋರ್ಜರು ೧೦೦೦ ಪೌಂಡುಗಳನ್ನು ರವಾನಿಸಿರುವರು. ಅವರ ಪತ್ನಿಯವರು ೫೦೦ ಪೌಂಡುಗಳನ್ನು ಕೊಟ್ಟಿರುವರು. ಈ ರಿಲೀಫ್ ಫಂಡಿಗೆ ವೈಸರಾಯರು ೫೦೦೦ ರೂಪಾಯಿಗಳನ್ನು ಕೊಟ್ಟಿರುವರು. ಮುಜಾಫರ್‌ಪುರದಲ್ಲಿ ೪೦೦೦ ಜನರು ಮೃತರಾದರು. ಬಿಹಾರ್‌ನಲ್ಲಿ ೧೦,೦೦೦ ಜನರು ಮೃತರಾಗಿರಬಹುದೆಂದು ಅಂದಾಜು. ಒಂದು ಕೋಟಿ ರೂಪಾಯಿ ನಷ್ಟವಾಗಿದೆಯೆಂದು ಊಹೆ

ವಿಜ್ಞಾಪನೆ

ಉತ್ತರ ಹಿಂದೂಸ್ಥಾನದಲ್ಲಾದ ಭೂಕಂಪದಿಂದಾಗಿ ಅಲ್ಲಿ ಸಾವಿರಗಟ್ಟಳೆ ಜನರ ಮರಣವಾಗಿ ಲಕ್ಷಗಟ್ಟಳೆ ಜನರು ಗತಿಹೀನರಾಗಿರುವರು. ಚಕ್ರವರ್ತಿಯವರು, ವೈಸರಾಯರು, ಗವರ್ನರುಗಳೂ, ಪ್ರಮುಖರೂ ಅಲ್ಲಿನ ಜನರಿಗಾಗಿ ಧನ ಸಹಾಯವನ್ನು ಕೇಳಿರುವರು. ಮದ್ರಾಸು ಗವರ್ನರರು ಈ ಅಧಿಪತ್ಯದವರೊಡನೆ ಅರಿಕೆ ಮಾಡಿ ಶಕ್ತರೆಲ್ಲರೂ ವೈಸರಾಯ ರಿಲೀಫ್ ಫಂಡಿಗೆ ಸಹಾಯ ಮಾಡಬೇಕಾಗಿ ತಿಳಿಸಿರುವರು. ದಕ್ಷಿಣ ಕನ್ನಡದ ಧನಾಢ್ಯರು ಅಲ್ಲಿಯ ಭಾರತೀಯರ ದುರಂತ ಸಂಕಷ್ಟಗಳನ್ನು ನಿವಾರಿಸಲು ಮುಂಬರಲೆಂದು ಹಾರೈಸುವೆವು

ಸಂಪಾದಕ

ತಾ ೨೦

ಪಾಟ್ನಾ, ಮುಜಾಫರಪುರ, ಕಲ್ಕತ್ತ ಮೊದಲಾದ ಕಡೆಗಳಲ್ಲಿ ಈ ದಿನವೂ ೧೨-೩೩ ಅಪರಾಹ್ನದಲ್ಲಿ ಪುನಃ ಭೂಕಂಪವಾಯಿತು. ಕಲ್ಕತ್ತದಲ್ಲಿ ೧೮೯೭ರಲ್ಲಾದ ಭೂಕಂಪದಿಂದ ಹಾಳಾಗಿ ಸರಿ ಮಾಡಲ್ಪಟ್ಟ ಸೈಂಟ್‌ಪೋಲ್ ಇಗರ್ಜಿಯು ಬೀಳುವಂತಿದೆ. ಬಿಹಾರ್ ಒರಿಸ್ಸಾಗಳ ಸ್ಥಿತಿಯು ನಿರಾಶಾಜನಕವಾಗಿರುವುದೆಂದು ಇಲ್ಲಿಂದ ಸರಕಾರವೇ ಹೇಳಿರುತ್ತದೆ. ಮುಜಾಫರಪುರದಲ್ಲಿ ಕಂಪನದೊಡನೆ ಭೂಮಿಯಡಿಯಿಂದ ನೀರು ಮೇಲೆದ್ದಿತು. ಹೆಚ್ಚಿನ ಮನೆಮಂದಿರಗಳ ನೆಲಗಳು ಒದ್ದೆಯಾಗಿವೆ. ಮುಜಾಫರ್‌ಪುರಕ್ಕೆ ಸರಕಾರವು ೬ ಲಕ್ಷಗಳ ಗ್ರೇಂಟ್ ಕೊಟ್ಟು ಜನರನ್ನು ರಕ್ಷಿಸುವಂತೆ ಏರ್ಪಾಡು ಮಾಡುತ್ತಲಿದೆ. ಮತ್ತು ಪ್ರತಿ ಜಿಲ್ಲೆಗೂ ರೂ. ೫೦೦೦ವನ್ನು ಕೊಟ್ಟಿರುತ್ತದೆ. ಬಿಹಾರ್ ಪ್ರಾಂತ್ಯ ಎಸೆಂಬ್ಲಿ ಸದಸ್ಯರು ಇಷ್ಟರ ತನಕವೂ ಡಿಲ್ಲಿಯ ಎಸೆಂಬ್ಲಿಗೆ ಬಂದಿರುವುದಿಲ್ಲ. ಏನೋ ವಿಶೇಷವಿರಬೇಕೆಂದು ತಿಳಿಯಲಾಗಿದೆ. ಗೋರಖಪುರದಿಂದ ಕಾನ್‌ಪುರಕ್ಕೆ ಒಂದು ಧೂಳಿನ ಮಹಾ ಬಿರುಗಾಳಿಯು ಬೀಸಿತು. ಜನರು ಮನೆಗಳಿಂದ ಚದರಿದರು. ಭೂಕಂಪಗಳಲ್ಲಿ ಮರಣ ಹೊಂದಿದವರಲ್ಲಿ ಹೆಚ್ಚಿನವರು ಪರದೆಯ ಸ್ತ್ರೀಯರೆಂದು ಗೊತ್ತಾಗಿದೆ.

ಮಿಲಾನ್,

ಶ್ರೀ· ಸುಭಾಷ್ಚಂದ್ರ ಭೋಸರು ಮಿಲಾನಿನಲ್ಲಿ ಭಾಷಣ ಮಾಡುತ್ತಾ ಇಟೆಲಿಯಧಿಪತಿಯಾದ ಸೀನಿಯರ್ ಮುಸೋಲಿನಿಯವರು ಆಧುನಿಕಯುಗದ ಅಗ್ರಗಣ್ಯ ಬಾಲಪುರುಷರೆಂದರು.

ನೋಟೀಸು.

Jaya Laxmi Bank, Limited.

ಜಯಲಕ್ಷ್ಮಿ ಬೇಂಕ್, ಲಿಮಿಟೆಡ್ ಕಾಸರಗೋಡು.

ಈ ಕೆಳಗೆ ಹೆಸರು ಕಾಣಿಸಿದವರು ನಮ್ಮ ಬೇಂಕಿನಿಂದ ನಗದ ಈಡಿನ ಮೇಲೆ ಸಾಲ ಪಡಕೊಂಡ ನಂತರ ಕ್ಲಪ್ತ ವಾಯಿದೆಗೆ ಅಸಲು ಬಡ್ಡಿ ಕೊಡದೆ, ಈ ವರೆಗೆ ಬಾಕಿ ಮಾಡಿರುವುದರಿಂದಲೂ ಸದ್ರಿ ಸಾಲವನ್ನು ಬರಮಾಡಿಕೊಳ್ಳುವರೆ ಅವರಿಗೆ ಬಿಟ್ಟ ರಿಜಿಸ್ಟ್ರೀ ನೋಟೀಸುಗಳು ನಮಗೆ ವಾಪಾಸು ಬಂದಿರುವುದರಿಂದಲೂ ಸದ್ರಿಯವರು ಈಡಿಟ್ಟ ನಗಗಳನ್ನು ತಾರೀಕು ೧೦—೨—೩೪ರಲ್ಲು ಶನಿವಾರ ದಿವಸ ನಮ್ಮ ಕಾಸರಗೋಡು ಬ್ರಾಂಚ್ ಆಫೀಸಿನಲ್ಲಿ ೩ ಗಂಟೆಗೆ ಬಹಿರಂಗವಾಗಿ ಏಲಂ ಮಾಡೋಣಾಗುವುದು ಎಂಬುದನ್ನು ಈ ಮೂಲಕ ತಿಳಿಸಿರುತ್ತದೆ

ಸಾಲ ಪಡಕೊಂಡ ತಾ. 4-8-32. ಸಾಲದ ಜ. ನಂ 473/32. ಬ್ಯಾರಾನ್, ಮೊಹಿದಿನ್ ಕುಞ ಮಗ, ಕಲನಾಡ ಗ್ರಾಮ ಬೇಕಲ್ ಪೋಸ್ಟು. ಸಾಲದ ಮೊಬಲಗು ರೂ. 15—0—0 ಸಾಲ ಪಡಕೊಂಡ ತಾ. 10-8-32. ಸಾಲದ ಜ ನಂ 583/32 ಕುಞ ಮೊಹಿದಿನ್ ಕುಟ್ಟಿ, ಕುಞಾಮದೆಯ ಮಗ, ಬೇಸಾಯಗಾರ, ತುರ್ತಿ, ಚೆರ್ವತ್ತೂರ್ ಗ್ರಾಮ ನೀಲೇಶ್ವರ ಪೋಸ್ಟ್ ಸಾಲದ ಮೊಬಲಗು ರೂ. 15-0—0 ಸಾಲ ಪಡಕೊಂಡ ತಾ. 15-8-32 ಸಾಲದ ಜ. ನಂ 676/32. ಕುಞ ಮೊಹಿದಿನ್ ಕುಟ್ಟಿ, ಕುಞಾಮದೆಯ ಮ ಬೇಸಾಯಗಾರ, ತುರ್ತಿ, ಚೆರ್ವತ್ತೂರ್ ಗ್ರಾಮ, ನೀಲೇಶ್ವ ಪೋಸ್ಟ್. ಸಾಲದ ಮೊಬಲಗು ರೂ. 35—0-0; ಸಾಲ ಪ ಕೊಂಡ ತಾ. 10-10-32. ಜ. ನಂ. 1644/32. ಕುಞ ಮೊಹಿದಿನ್ ಕುಟ್ಟಿ, ಕುಞಾಮದೆಯ ಮಗ, ಬೇಸಾಯಗಾ ತುರ್ತಿ, ಚೆರ್ವತ್ತೂರ್ ಗ್ರಾಮ, ನೀಲೇಶ್ವರ ಪೋಸ್ಟ್ ಸಾಲದ ಮೊಬಲಗು ರೂ. 9-0—0; ಸಾಲ ಪಡಕೊಂ ತಾ 18-10-32 ಸಾಲದ ಜ. ನಂ. 1702/32 ಕುಞ ಮೊಹಿದಿನ್ ಕುಟ್ಟಿ, ಕುಞಾಮದೆಯ ಮಗ, ಬೇಸಾಯಗಾರ, ತುರ್ತಿ, ಚೆರ್ವತ್ತೂರ್ ಗ್ರಾಮ, ನೀಲೇಶ್ವರ ಪೋಸ್ಟ್ ಸಾಲದ ಮೊಬಲಗು ರೂ. 6-0-0, ಸಾಲ ಪಡಕೊಂ ತಾ 29 11-32 ಸಾಲದ ಜ. ನಂ 2449/32. ಕುಞ ಮೊಹಿದಿನ್ ಕುಟ್ಟಿ, ಕುಞಾಮದೆಯ ಮಗ, ಬೇಸಾಯಗಾರ ತುರ್ತಿ, ಚೆರ್ವತ್ತೂರ್ ಗ್ರಾಮ, ನೀಲೇಶ್ವರ ಪೋಸ್ಟ್. ಸಾಲ ಮೊಬಲಗು ರೂ 24-0—0, ಸಾಲ ಪಡಕೊಂಡ ತಾರೀ 1—12-32 ಸಾಲದ ಜ ನಂ 2484/32 ಕುಞ ಮೊಹಿದಿ ಕುಟ್ಟಿ, ಕುಞಾಮದೆಯ ಮಗ, ಬೇಸಾಯಗಾರ ತುರ್ತಿ ಚೆರ್ವತ್ತೂರು ಗ್ರಾಮ ನೀಲೇಶ್ವರ ಪೋಸ್ಟ್ ಸಾಲದ ಮೊಬಲಗು ರೂ, 42-0-0, ಸಾಲ ಪಡಕೊಂಡ ತಾ. 5-1-33 ಸಾಲದ ಜ. ನಂ. 2981/32 ಕುಞಮೊಹಿದಿನ್ ಕುಟ್ಟಿ, ಕುಞಾ ಮದೆಯ ಮಗ, ಬೇಸಾಯಗಾರ ತುರ್ತಿ ಚೆರ್ವತ್ತೂರು ಗ್ರಾ ನೀಲೇಶ್ವರಪೋಸ್ಟ್ ಸಾಲದ ಮೊಬಲಗು ರೂ 6-0-0, ಸಾ ಪಡಕೊಂಡ ತಾ 21-12-32 ಸಾಲದ ಜ ನಂ. 2802/32 ಮಂಜುನಾಥ ಸುಬ್ರಾಯನ ಮಗ, ಕಾಫಿ ಹೊಟೇಲ್, ಕೋಟೆ ಕಾಂಞಂಗಾಡ್ ಪೋಸ್ಟ್, ರೂ 45-0-0; ಸಾಲ ಪ ಕೊಂಡ ತಾ. 21-1-33 ಸಾಲದ ಜ. ನಂ 3145/3 ಗೆಬ್ರಿಯೇಲ್ ಸುಮಿತ್ರ ಚೆಲ್ಲಯ್ಯನ ಮಗ, ಉಪಾಧ್ಯಾ ಕಾಸರಗೋಡು ಬಿ. ಎಮ್ ಸೆಕಂಡರಿ ಶಾಲೆ, ಸಾಲದ ಮೊ ಲಗು ರೂ. 17-0-0; ಸಾಲ ಪಡಕೊಂಡ ತಾ. 21—1-3 ಸಾಲದ ಜ. ನಂ 3148/32. ಗೆಬ್ರಿಯೇಲ್ ಸುಮಿತ್ರ, ಚೆ ಯ್ಯನ ಮಗ, ಉಪಾಧ್ಯಾಯ ಕಾಸರಗೋಡು ಬಿ. ಎಮ್. ಸೆಕಂಡರಿ ಶಾಲೆ, ಸಾಲದ ಮೊಬಲಗು ರೂ. 20-0-0; ಸಾ ಪಡಕೊಂಡ ತಾ. 16-2-33 ಜ. ನಂ. 3456/32. ಮ್ಮದ್ ಅಬ್ದುಲ್ಲನ ಮಗ, ಟೊಪ್ಪಿ ಕಸಬು ಎಳ್ಳಿರಬೈಲ್ ತಳಂ ಕಾಸರಗೋಡು. ಮೊಬಲಗು ರೂ. 8-0-0, ಸಾಲ ಕೊಂಡ ತಾ. 16-3-33 ಸಾಲದ ಜ. ನಂ. 3811/ ಅಬ್ದುಲ್, ಬಾವಬ್ಯಾರಿ ಮಗ, ಅಂಗಡಿ ವ್ಯಾಪಾರ ಕೊ ಕುಂಟು, ಮೊಗ್ರಾಲ್ ಪುತ್ತೂರು, ಕುಂಬಳೆ ಪೋಸ್ಟ್, ಸಾ ಮೊಬಲಗು ರೂ. 18—0—0; ಸಾಲ ಪಡಕೊಂಡ ತಾರೀ 23-3-33 ಸಾಲದ ಜ. ನಂ. 3949/32 ಮಮ್ಮದು, ಪ ಮಗ, ಅಂಗಡಿವ್ಯಾಪಾರ, ಪಾಲ್ತಡ್ಕ ಪಟ್ಲಗ್ರಾಮ ಕಾಸರಗೋ ಸಾಲದ ಮೊಬಲಗು ರೂ. 15-0-0; ಸಾಲ ಪಡಕೊಂಡ 24-3-33 ಸಾಲದ ಜ. ನಂ. 3967/32 ಅಬ್ ಮಮ್ಮದು ಮಗ, ಬೇಸಾಯಗಾರ ನೀರಳ ಗ್ರಾಮ, ಪ ಪೋಸ್ಟ್ ಕಾಸರಗೋಡು ಸಾಲದ ಮೊಬಲಗು ರೂ. 10-0-

24-1-'34 } **Dathathriya Rao, M.**
ಕಾಸರಗೋಡು. } Ag

ಗೊಡ್ರೆಜ್ ಸಾಬೂನುಗಳಿಗೆ

ಅಮೂಲ್ಯವೂ ಹೊಸತೂ ಆದ ಪ್ರಾಶಸ್ತಿ

ಡಾ| ಎಂ. ಎ. ಅನ್ಸಾರಿ. ಎಂ. ಡಿ.

(ಅಖಿಲ ಭಾರತ ಕಾಂಗ್ರೆಸ್ಸಿನ ಮಾಜಿ ಅಧ್ಯಕ್ಷರು)

"ಗೊಡ್ರೆಜ್ ಸಾಬೂನುಗಳ ಉತ್ಕೃಷ್ಟ ಗುಣಗಳನ್ನು ಕಂಡು ನಾನು ಸಂತೋಷದಿಂದ ಮೆಚ್ಚಿದವನಾಗಿರುತ್ತೇನೆ ಕಳೆದ ಹತ್ತು ವರ್ಷಗಳಿಂದ ನಾನವುಗಳನ್ನು ಉಪಯೋಗಿಸುತ್ತಿರುವೆನು ಯುರೋಪಿನದಲ್ಲಾಗಲೀ ಇನ್ನಿತರ ಯಾವ ದೇಶದಲ್ಲಾಗಲೀ ತಯಾರಿಸಲ್ಪಟ್ಟ ಸಾಬೂನುಗಳಿಗಿಂತ ಇವು ಅತ್ಯುತ್ಕೃಷ್ಟವೆಂದೇ ನನ್ನ ಅನುಭವದ ಮಾತು ಅವುಗಳ ಉತ್ಕರ್ಷತೆಯ ದೃಷ್ಟಿಯಿಂದಲೂ, ಅಲ್ಲದೆ ಅವು ಹಿಂದೂದೇಶದಲ್ಲೇ ಸಿದ್ಧಗೊಳಿಸಲ್ಪಟ್ಟುವೆಂಬ ದೃಷ್ಟಿಯಿಂದಲೂ ನಾನವುಗಳನ್ನು ಹಿಂದೀಯ ಜನತೆಗೆ ಶಿಫಾರಸು ಮಾಡುತ್ತೇನೆ"

ಪ್ರಮುಖ ಡಾಕ್ಟರರೂ ಮತ್ತು ಪ್ರಮುಖ ರಾಷ್ಟ್ರೀಯ ಧುರೀಣರೂ ಆದ ಡಾ| ಅನ್ಸಾರಿಯವರ ಹೇಳಿಕೆಯು ಪ್ರತಿಯೊಬ್ಬ ವ್ಯಕ್ತಿಯ ಮತ್ತು ಪ್ರತಿಯೊಂದು ರಾಷ್ಟ್ರದ ದೈಹಿಕ ದೃಷ್ಟಿ ಮತ್ತು ರಾಷ್ಟ್ರೀಯ ದೃಷ್ಟಿಯಿಂದ ಸಹಾಯಕರವಾಗಬೇಕು

Jaya Bharatham Co, P B No 83 MADRAS

ಜಯ ಭಾರತಂ ಕೋ, ಬ ಪ 83 ಮದ್ರಾಸು

ದ ಕ ಜಿಲ್ಲೆಗೆ ಏಜಂಟರು:–ಎಸ್ ಇ ಬಂಗೇರಾ, ಮಿಶ್ಶನ್ ಕಂಪೌಂಡು, ಕಾಸರಗೋಡು

ಡಿಲ್ಲಿ ಬಿಸ್ಕೂಟಿನ ಕುರಿತು

ಇಂಡಿಯಾದ ಘನ ಕೈಗಾರಿಕಾ ಸಂಸ್ಥೆಯ

ಸರ್ ದೋರಾಬ್ ತಾತಾರವರು

"ಈ ಬಿಸ್ಕೂಟುಗಳನ್ನು ಹಿಂದೀಯ ಜನತೆಯು ಹೆಚ್ಚಿನ ಆದಾಹನೆಗೆ ತಂದಲ್ಲಿ ಸಹಜವಾಗಿ ಇವುಗಳ ಹೆಚ್ಚಿನ ವಿಕ್ರಯವಾಗುವುದರಲ್ಲಿ ಸಂದೇಹವಿರುವುದಿಲ್ಲ

"ಇಂಗ್ಲೆಂಡಿನಲ್ಲಿ ತಯಾರಿಸಲ್ಪಟ್ಟವುಗಳಿಗಿಂತಲೂ ನಾನ ಈ ಬಿಸ್ಕೂಟುಗಳನ್ನೇ ಪ್ರಶಸ್ತವೆನ್ನುತ್ತೇನೆ — "ಇಂಗ್ಲೆಂಡಿನಲ್ಲಿ ನಿಮ್ಮ ಬಿಸ್ಕೂಟುಗಳು ಬಹಳ ಮೆಚ್ಚುಗೆಗೆ ಪಾತ್ರವಾಗಿವೆ –ಎಂಬುದೇ ಕೆಲವು ಯುರೋಪಿಯನರ ಹೇಳಿಕೆ

ಮದ್ರಾಸು ಪ್ರಾಂತ್ಯಕ್ಕೆ ಏಜಂಟರು:—

Jaya Bharatham Co, P, B No 83 MADRAS

ಜಯ ಭಾರತಮ್ ಕೋ, ಬ ಪ 83, ಮದ್ರಾಸು.

ಸ್ಟೋಕಿಸ್ಟರು –ಮೆಸರ್ಸ್ ಕಾಮತ್ ಎಂಡ್ ಕೋ, ಮಂಗಳೂರು

ದ ಕ. ಜಿಲ್ಲಾ ಏಜಂಟರು –ಎಸ್ ಇ ಬಂಗೇರಾ, ಮಿಶ್ಶನ್ ಕಂಪೌಂಡು, ಕಾಸರಗೋಡು

ಗುಣಬಾರದಿದ್ದರೆ] ಸುಪ್ರಸಿದ್ಧ ವೈದ್ಯರಾದ ಎಮ್ ಕೆ ರಜಪೂತ ಇವರ **[ಹಣ ವಾಪಾಸು**

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡೆಯುವುದರಿಂದ ಹೆಂಗಸರ ಅತಿಶಯ ಅಶಕ್ತಿಯಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡೆಯುವುದು ಬೇಡಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ ಮೊದಲೇ ಪೂರಾ ವಿಚಾರ ಮಾಡಿ ಔಷಧ ಬೇಡಿರಿ ಮುಖ್ಯ ಸರ್ಟಿಫಿಕೇಟು ಡಾಕ್ಟರ ಬಿ ಎ ವೈದ್ಯ ಎಲ್ ಸಿ ಪಿ ಎಸ್ ಕೆಳವಾಮಾಡಿದು ಕಾಣೇ ಈ ಚೂರ್ಣದಿಂದ ಯಾವ ತರದ ಅಪಾಯವಾಗದು ಗರ್ಭಧಾರಣವೂ ಆಗುವುದಿಲ್ಲ ಪೂರ್ಣ ಗುಣಕಾರಿ ತಪ್ಪಿ ಕಿಮ್ಮತ್ತು ರೂ ೪, ವಿ ಪಿ ಅಣೆ ೮

ವಿಳಾಸ –ಸಂಜೀವಿನೀ ಔಷಧಾಲಯ ಮು ಪೊ ವಿರಳೆ, S M C.

ಇಸ್ಕೊಂದು ವೈಶಿಷ್ಟ್ಯ



ನೀವು ಕಬ್ಬಿನ ಗಾಣವನ್ನು ಪಡೆಯುವಾಗ ನೀವು ಸ್ವಾಭಾವಿಕವಾಗಿ ಅದರ ಗಟ್ಟಿ ಮುಟ್ಟು, ಬಾಳ್ವಿಕೆ ಮತ್ತು ಪ್ರಾಶಸ್ತ್ಯದ ಕಡೆ ಗಮನವನ್ನೀಯುತ್ತೀರಿ ನೀವು

ಕಿರ್ಲೋಸ್ಕರ

ವಸಂತ ಪವರ್ ಕ್ರಶರ್ ಗಾಣವನ್ನು ನಿಮ್ಮ ಕೆಲಸಕ್ಕೆ ಯೋಗ್ಯವೆಂದು ತಿಳಿಯುವಿರಿ ಬಸವು ಒಳಗೆ ಸೇರಿ, ಹಾಳಾಗದ ಹಾಗೆ ಅದರ ಬೇರಿಂಗುಗಳನ್ನು ಮುಚ್ಚಿರುತ್ತದೆ ಇದರಿಂದಾಗಿ ಎಣ್ಣೆಯು ನಷ್ಟವಾಗುವುದಿಲ್ಲ–ಗಾಣವು ದೀರ್ಘಕಾಲ ಸಂತೃಪ್ತಿಕರವಾಗಿ ನಡೆಯುತ್ತದೆ ಅದರಎಲ್ಲಾ ಭಾಗಗಳೂ ದೀರ್ಘವಾಗಿ ಬಾಳುವಂತೆ ಮಾಡಲಾಗಿದೆ

ಎಲ್ಲಾ ವಿವರಗಳಿಗೆ ಇಲ್ಲಿಗೆ ಬರೆಯಿರಿ–

ಕಿರ್ಲೋಸ್ಕರ ಬ್ರದರ್ಸ್ ಲಿಮಿಟೆಡ್, ಕಿರ್ಲೋಸ್ಕರವಾಡಿ (ಜಿ ಸತಾರಾ)

ಸ್ಟೋಕಿಸ್ಟರು:—ಬಾಸೆಲ್ ಮಿಶನ್ ಬುಕ್ ಡಿಪೊ ಎಂಡ್ ಟ್ರೆಕ್ಟ್ ಡಿಪೋಜಿಟರಿ ಕೊ ಮಂಗಳೂರು ದ ಕ

ಜನವರಿ ಹಬ್ಬದ ಸೇಲ್!

ಫೌಂಟನ್ ಪೆನ್. –

ಬ್ರಿಟಿಷ್ ಮೇಡ್, 14 ಕ್ಯಾರೆಟ್ ಭಂಗಾರದ ಮುಳ್ಳು ಹಾಕಿದೆ ಅಕ್ಷರಗಳು ಮುತ್ತುಗಳ ಹಾಗೆ ಬರೆಯುವದು.

ಕ್ರಯ ಮೇನಾ ರೂ. 2–12–0.

ಬೆಸ್ಟ್ ಪಾಕೆಟ್ ವಾಚ್

ಚಿಕ್ಕ ಸೈಜ್, ಸರಿಯಾಗಿ ಕಾಲವನ್ನು ತೋರಿಸುವುದು ನಿಕ್ಕಲ್ ಕೇಸ್, ಸರಪಣಿ ಸಹಿತ

ಕ್ರಯ ರೂ. 3–4–0

ಜರ್ಮನ್ ಟೇಬಲ್ ಟಯಂಪೀಸ್.

ಬಾಳಿಕೆ ಬರುವುದು, ಗ್ಯಾರಂಟಿ, ಅಂಗಡಿಗಳಲ್ಲಿ ಇಡಲು ಚೆನ್ನಾಗಿದೆ. ಒಂದನ್ನು ತರಿಸಿ ನೋಡಿರಿ

ಕ್ರಯ ರೂ 3–0–0.

ಜಂಟ್ಸ್ ರಿಸ್ಟ್ ವಾಚ್

ಕೈಯಲ್ಲಿ ಕಟ್ಟಲು ಅಂದವಾಗಿದೆ ಬಾಳಿಕೆ ಬರುವುದು ಸರಿಯಾದ ಕಾಲವನ್ನು ತೋರಿಸುವುದು ನಿಕ್ಕಲ್ ಕೇಸ್, ಕ್ರಯ ರೂ. 5–0–0

ಸೂಚನೆ –ಒಂದೇ ಸಲ ಈ ಮೇಲ್ಕಂಡ 4 ಸಾಮಾನುಗಳನ್ನು ತರಿಸಿಕೊಂಡರೆ ಕ್ರಯ ರೂ 13–0–0

ಗ್ಯಾರಂಟಿಯಾದ ಮಾಲು. ಒಂದು ಸಲ ತರಿಸಿ ನೋಡಿರಿ ಪರಸ್ಥಳದ ಆರ್ಡರುಗಳನ್ನು ಪರೀಕ್ಷೆ ಮಾಡಿ, ಕಳುಹಿಸಲ್ಪಡುತ್ತೆ

ವಿಳಾಸ.–

ಟಿ ಸಿ ನಾಗಲಿಂಗಪ್ಪ, ಮತ್ತು ಕಂಪೆನಿ,

೨೮೦ ವಾಲ್‌ಟ್ಯಾಕ್ಸ್ ರೋಡ್, ಪೋ ಬೋ ನಂ ೫೧೬,

ಜಾರ್ಜ್ ಟೌನ್, ಮದರಾಸು

ಇನಾಂ! ಕ್ಯಾಲೆಂಡರ್, ಡೈರಿ! ಇನಾಂ!!

ನಮ್ಮ ಕಂಪೆನಿಯ ಹೆಸರು ಪ್ರಖ್ಯಾತಿಯಾಗುವುದಕ್ಕೆ ೭ ಅಣೆ ಸ್ಟಾಂಪು ಕಳುಹಿಸುವವರಿಗೆ ೧೯೩೯ ವರ್ಷದ ಸೊಗಸಾದ ಫ್ರೆಂಚ್ ದೇಶದ ಲೇಡಿಸ್ ಕಲ್ಲರ್ ಕ್ಯಾಲೆಂಡರ್ ೩, ಮತ್ತು ಪೋಕೆಟ್ ಡೈರಿ ೩, ಬಹುಮಾನವಾಗಿ ಕೊಡಲ್ಪಡುತ್ತವೆ ಬೇಕಾದವರು ೮ ಅಣೆ ಪೋಸ್ಟ ಸ್ಟಾಂಪು ಕಳುಹಿಸುವವರಿಗೆ ಈ ಮೇಲ್ಕಂಡ ೩ ಕ್ಯಾಲೆಂಡರ್, ೩ ಡೈರಿ ಪೋಸ್ಟು ಮೂಲಕ ಬಹುಮಾನವಾಗಿ ಕಳುಹಿಸಲ್ಪಡುತ್ತದೆ. ಬೇಗನೆ ತರಿಸಿಕೊಳ್ಳುವವರಿಗೆ ಮಾತ್ರ ದೊರೆಯುವುದು.



T. R. Royal & Co.,

3. Krishnappa Nayakan,

Tank Street, Sowcarpet MADRAS.

ಅನುಕ್ರಮಣಿಕೆ.

ದಕ್ಷಿಣ ಕನ್ನಡದ ಹಳ್ಳಿಗಳು	೧
[illegible]	[illegible]
[illegible]	[illegible]
ವರ್ತಮಾನ ಸಂಗ್ರಹಗಳು	೩
ಯುಗೇ ಯುಗೇ ಸಂಭವಾಮಿ	೬
ಸ್ವದೇಶ ವರ್ತಮಾನ, ವಿದೇಶ ವರ್ತಮಾನ	೮
ವಿವಿಧ ಸಮಾಚಾರಗಳು	೧೧
ದಕ್ಷಿಣ ಕನ್ನಡ—ಮಂಗಳೂರು, ಉಡುಪಿ, ಪುತ್ತೂರು	೯
ಪತ್ರವ್ಯವಹಾರ	೧೫
ಮೂಲೆ ಮೂಲೆಗಳಿಂದ	೧೦

ಸ್ವದೇಶಾಭಿಮಾನಿ.

ತಾ. ೨೬ನೇ ಶುಕ್ರವಾರ ಜನವರಿ ೧೯೩೪.

ದಕ್ಷಿಣ ಕನ್ನಡದ ಹಳ್ಳಿಗಳು.

ಹಳ್ಳಿಗಳ ದುರವಸ್ಥೆಯೆಂಬುದು ನಮ್ಮ ನಾಡಿಗೇ ಹೇಳಿದ ಸಾತು. ಭರತಖಂಡದ ಹಿತವನ್ನು ಬಯಸುವ ಪ್ರತಿಯೊಬ್ಬ ಮುಂದಾಳುವೂ ಗ್ರಾಮ ಸುಧಾರಣೆಯ ವಿಚಾರವನ್ನು ಮರೆಯುವಂತಿಲ್ಲ. ಈ ವಿಚಾರವಾಗಿ ಅಹರ್ನಿಶಿ ಮಾತನಾಡುವ ಕೆಲಸವೇನೋ ನಡೆಯುತ್ತಿದೆ, ಆದರೆ ಕಾರ್ಯಕ್ಷೇತ್ರದಲ್ಲಿ ಆದ ಕೆಲಸವು ಬಲು ಕಮ್ಮಿ,— ಏನೂ ಇಲ್ಲವೆಂದರೂ ಅತಿಶಯೋಕ್ತಿಯಲ್ಲ. ನಮ್ಮ ಜಿಲ್ಲೆಯ ಹಳ್ಳಿಗಳ ಮಾತಾದರೂ ಹೀಗೆಯೇ ಸರಿ. ಸಹಜೀವನದಲ್ಲಿ ನವೀನ ಕ್ರಾಂತಿಯ ಕುರುಹು ಎಲ್ಲೆಲ್ಲೂ ಕಾಣುತ್ತಿದೆ, ನಿಜ. ಆದರೆ ಅದು ನಮ್ಮ ಹಳ್ಳಿಯ ಜೀವನದಲ್ಲಿಲ್ಲ. ಹತ್ತು ವರ್ಷಗಳ ಅಸಹಕಾರ ಚಳವಳಿಯು ನವೀನ ವಿಚಾರ ಕ್ರಾಂತಿಯನ್ನು ಉಂಟು ಮಾಡಿದೆಯಾದರೂ ನಮ್ಮ ಜಿಲ್ಲೆಯ ಹಳ್ಳಿಗಳ ಜೀವನದಲ್ಲಿ ಅದರ ಪರಿಣಾಮವು ಅಷ್ಟಾಗಿ ಕಾಣಿಸದು. ದೇಶದ ಸುಧಾರಕರೂ ತಮ್ಮ ಕಾರ್ಯಕ್ಷೇತ್ರಗಳನ್ನು ಪಟ್ಟಣಗಳಿಗಷ್ಟೇ ವಿಸ್ತರಿಸಿ ಹಳ್ಳಿಯಿಂದ ದೂರ ನಿಂತಿರುವುದೇ ಇದರ ಮುಖ್ಯ ಕಾರಣ.

ಹಿಂದುಸ್ಥಾನದ ಸೌಭಾಗ್ಯವು ಹಳ್ಳಿಗಳನ್ನಾಶ್ರಯಿಸಿದೆ. ನಮ್ಮ ಜಿಲ್ಲೆಯ ಸೌಭಾಗ್ಯಕ್ಕೂ ಅದೇ ಮೂಲವು. ಅಲ್ಲಿ ಹುಟ್ಟಿದ ಚಳವಳಿಗಳು, ಪ್ರಗತಿಗಳೂ ನಮ್ಮ ಜೀವನವನ್ನೇ ಕಲಕಿದುವೆನ್ನಲು ಬರುವುದಿಲ್ಲ. ಯಾವುದೇ ಕಾರ್ಯಕ್ರಮವಾಗಲೀ ಇನ್ನು ಮುಂದಿನದು—ನಗರಗಳ ಮೇಲೆ ಹಾದು ಹೋಗುವುದರಿಂದ ಫಲಕಾರಿಯಾಗಲಾರದು.

ಈಗ ನಾವು ನಮಗಾಗ ಬೇಕಾದುದೇನೆಂದು ವಿಚಾರಿಸುವ. ನಮ್ಮ ಜಿಲ್ಲೆಗೆ ಬಂದಿರುವ ಕೊರತೆ ಒಂದೆರಡಲ್ಲ. ನಮ್ಮ ಹಳ್ಳಿಯಲ್ಲಿ ಸಂಪತ್ತಿನ ಕೊರತೆ ಹೇಳಿ ತೀರದು. ಈಗಿನ ಆರ್ಥಿಕ ಅವನತಿಯು ಅದನ್ನು ಮತ್ತಷ್ಟು ಕುಗ್ಗಿಸಿಬಿಟ್ಟಿದೆ. ನಮ್ಮ ಜಿಲ್ಲೆಯ ಹಳ್ಳಿಗನ ಸರಾಸರಿ ಆಯವು ವರುಷಕ್ಕೆ ಬರೇ ರೂ ೨೦ರಷ್ಟಿದೆ। ಇದರ ಮೇಲೆ ಆ ಶಕ್ತಿಗೆ ಮೀರಿದ ಸಾಲದ ಹೊರೆ. ಇಷ್ಟು ಅಲ್ಪ ವರಮಾನದಲ್ಲಿ ಜೀವನದ ಸಾವು ಹುಟ್ಟುಗಳ ಸಮಾರಾಧನೆ ಯಿಂದ ಹಿಡಿದು ನಿತ್ಯ ಜೀವನದ ಕಾಣಿಕೆಗಳೂ ಸಲ್ಲಬೇಕು. ಹುಟ್ಟುವಳಿ ಇಲ್ಲದೆ ವ್ಯಯಿಸುವುದೆಲ್ಲಿಂದ? ಈ ಸಾಲದ ಹೊರೆಯನ್ನು ತಪ್ಪಿಸುವ ಬಗೆ ಹೇಗೆ? ವರಮಾನವನ್ನು ಹೆಚ್ಚಿಸುವ ರೀತಿ ಯಾವುದು? ಎರಡೂ ಉಪನ್ಯಾಸಗಳಿಂದಾಗುವ ಕೆಲಸವಲ್ಲ. ಕೃಷಿಯು ನಮ್ಮಲ್ಲಿ ಅನಾಗರಿಕ ಸ್ಥಿತಿಯಲ್ಲಿದೆಯೆನ್ನಬಹುದು. ಉಳುವುದು, ಬಿತ್ತುವುದು, ವಿಕ್ರಯಿಸುವುದು ಎಲ್ಲವೂ ಅವ್ಯವಸ್ಥಿತವಾಗಿವೆ. ಫಲವೂ ಅನಿಶ್ಚಿತವೇ ಸರಿ. ಇದರ ಕೊರತೆಗಳನ್ನು ಜನರ ಮುಂದಿಟ್ಟು ಅವರ ಹಾದಿಯನ್ನು ಬದಲಾಯಿಸಬೇಕು.

ಆರ್ಥಿಕ ಜೀವನದ ಮಗ್ಗುಲಲ್ಲಿ ಅವರ ವಿಚಾರಗಳೂ ಕಲ್ಲುಟವಾಗಿರಬೇಕು. ನಾವು ೧೯೩೪ನೆಯ ಇಸವಿಯಲ್ಲಿ ಬದುಕುವವರೇನೋ ನಿಜ, ಆದರೆ ನಮ್ಮ ವಿಚಾರಗಳು ಶತಕಗಳಷ್ಟು ಹಿಂದಿನವು. ನಮ್ಮ ಸಾಮಾಜಿಕ ಸಂಬಂಧಗಳ ಸ್ಥಿತಿ ಹೇಗೆ? ನಮ್ಮ ಮದುವೆ, ಮುಂಜಿ, ದೆಯ್ಯಗಳ ನೇಮ—[illegible] ನಮ್ಮ ವರ್ತನೆಯು ಹೇಗಿರಬೇಕು? ನಮ್ಮ ಆರ್ಥಿಕ ಜೀವನಕ್ಕೂ ಇವಕ್ಕೂ ಸಂಬಂಧವಿರಬೇಕವೇ—ಎಂಬುದನ್ನು ನಾವು ಚೆನ್ನಾಗಿ ವಿಚಾರಿಸಬೇಕಾಗಿದೆ. ಜೀವಕ್ಕೆ ತೊಡಕಾಗುತ್ತಿರುವ ಹಲವು ಹಳೆಯ ಪದ್ಧತಿಗಳನ್ನು ಕಿತ್ತು ಬಿಸುಡಲೇ ಬೇಕು. ಹಳ್ಳಿಯ ಜೀವನಕ್ಕೆ ಅಂಟಿದ ದೊಡ್ಡದೊಂದು ಭೂತವು—ಆಲಸ್ಯ. ನಮ್ಮ ಯಾವ ಕಾರ್ಯದಲ್ಲೂ ಚಟುವಟಿಕೆಯಿಲ್ಲ. ಆದರಿಂದ ಚೆಲುವೂ ಇಲ್ಲ—ನಲಿವೂ ಇಲ್ಲ. ನಮಗೆ ವಿರಾಮವಿದೆ—ಮಾಡಬೇಕಾದ ಉದ್ಯೋಗವಿದೆ. ಆದರೆ ನಮ್ಮ ಸೋಮಾರಿತನವನ್ನು ಓಡಿಸುವ ಮುಸುಲೋನಿಯರು ಇಲ್ಲ.

ನಮ್ಮ ಜಿಲ್ಲೆಯ ಇನ್ನೊಂದು ದೈವವು ಮಲೇರಿಯಾ ಜ್ವರವೊಂದರಿಂದಲೇ ನಮ್ಮಲ್ಲಿ ವರ್ಷಕ್ಕೆ ೧೦,೦೦೦ ಜನ ಸಾಯುತ್ತಿದ್ದಾರೆ. ಧರ್ಮಾರ್ಥ ಕ್ವಿನಿನು ಬಟ್ವಾಡೆಯಾಗ ತೊಡಗಿದಂದಿನಿಂದ ಈ ಸಂಖ್ಯೆ ೮,೦೦೦ಕ್ಕೆ ಇಳಿದಿದೆ. ಆದರೂ ೮,೦೦೦ವು ಸಣ್ಣ ಸಂಖ್ಯೆಯಲ್ಲ. ಇಷ್ಟು ಜೀವಗಳನ್ನೂ ಇದರ ಆರು ಮಡಿ ನರಳುವಿಕೆಯನ್ನೂ ಉಳಿಸಲು ಉಪಾಯವೇ ಇಲ್ಲವೇ? ಇಂಥ ಕೆಲಸಗಳಲ್ಲಿ ಸರಕಾರದ ಹೊಣೆ ಬಹಳವಿದೆ. ಜನರ ಹೊಣೆ ಅದಕ್ಕೂ ಕಡಿಮೆಯಾಗಿಲ್ಲ. ಮಲೇರಿಯವನ್ನು ಓಡಿಸುವ ಕೆಲಸ ಜನರಿಂದಲೇ ಬಹುಮಟ್ಟಿಗೆ ನಿವಾರಿಸಲು ಬಂದೀತು. ನಮ್ಮ ನಷ್ಟವಾದ ಗ್ರಾಮ ಜೀವನವು ಈ ಕೆಲಸವನ್ನು ಮಾಡಬೇಕಾಗಿದೆ.

ಇದೆಲ್ಲ ವಿಶಾಲ ಗೋಷ್ಠಿಯ ಮಾತಾಯಿತು. ಸರಕಾರದಿಂದ ಆಗಬೇಕಾದ ಕೆಲಸಗಳು ಸ್ವತಃ ಹಳ್ಳಿಯವರು ಮಾಡಬೇಕಾದ ಕೆಲಸಗಳು—ನಮ್ಮ ವಿದ್ಯಾವಂತ ಜನರಿಂದ ಆಗಬೇಕಾದ ಕೆಲಸಗಳು—ಇವೆಲ್ಲವೂ ಸೇರಿದ ಮಹಾ ಕಾರ್ಯವಿದು. ಇದರ ಸೂಕ್ಷ್ಮ ಪರಿಶೀಲನೆಯನ್ನು ಮಾಡಿ, ಹೇಗೆ ವ್ಯವಸ್ಥಿತ ಕಾರ್ಯ ನಡೆಯಬೇಕು—ನಡೆಯಿಸುವವರಾರು—ನಡೆಯಿಸುವ ಬಗೆ ಹೇಗೆ—ಎಂಬುದನ್ನು ತರ್ಕಿಸಿ, ಸಾಗಿಸದೆ, ನಮ್ಮ ಗ್ರಾಮ ಜೀವನವು ಸುಧಾರಿಸುವಂತಿಲ್ಲ. ಈ ಪ್ರಶ್ನೆಯನ್ನು ಬಿಡಿಸಿ ಇದರ ಒಳಹೊರಗುಗಳನ್ನು ಇನ್ನೂ ಸೂಕ್ಷ್ಮವಾಗಿ ವಿವೇಚಿಸುವ ಕೆಲಸವನ್ನು ಇನ್ನು ಮುಂದಿನ ಲೇಖಗಳಲ್ಲಿ ಮಾಡುವೆವು.

ನಮ್ಮ ಈ ಎಲ್ಲ ಕೆಲಸಗಳಿಗೆ ಧನವೂ ಬೇಕು—ಜನರೂ ಬೇಕು. ಮೊದಲಾಗಿ ಜನರು ಬೇಕಾಗಿರುವರು. ನಿರುದ್ಯೋಗದಿಂದ ನಗರದಲ್ಲಿ ಬಳಲುತ್ತಿರುವೆವೆಂಬ ತರುಣರು ಹಳ್ಳಿಯ ಕಡೆಗೆ ಮುಖ ಮಾಡುವ ಸಾಹಸ ಮಾಡಿದರೆ—ನಮ್ಮ ಜೀವನವು ಸಿಧಾನವಾಗಿ ಸುಧಾರಿಸದೆ ಇರಲಾರದು.

ವರ್ತಮಾನ ಸಂಗ್ರಹ

೨೨ನೇ ತಾರೀಖಿನ ದಿನ ಟರ್ಕಿ ದೇಶದಲ್ಲಿ ಭೂಕಂಪವಾಯಿತು ಜನಧನ ನಷ್ಟವಾಗಿರುವುದಿಲ್ಲ. ಎಲ್ಲೆಲ್ಲೂ ಭಯವು ಕಲೆದೇರಿದೆ.

ಶ್ರೀ ಜೆ ಕೃಷ್ಣ ಮೂರ್ತಿಯವರು ಕೊಲೊಂಬೊವಿಗೆ ತಲುಪಿದರು. ಸಾವಿರಾರು ಜನರು ಅವರನ್ನು ಸ್ವಾಗತೀಕರಿಸಿದರು.

ಕಾನ್ಪುರದಲ್ಲಿ ಮಿಲಿಟರಿ ಲೋರಿಯೊಂದು ಕೆಡನಿ ಬಿದ್ದು ಇಬ್ಬರು ಜಖಂಗೊಂಡರು. ಒಬ್ಬನು ಒಡನೆ ಪರಲೋಕವಾಸಿಯಾಗದೆ ಉಪಾಯ ವಾಗಲಿಲ್ಲ.

ಕೊಲೊಂಬೊವಿನಲ್ಲಿ ಮಹಾ ಜನಸಭೆಯೊಂದು ಪನದುರ ಟೌನ್ ಹೋಲಿನಲ್ಲಿ ಜರಗಿ, ಕುರ್ಚಿ ಮೇಜುಗಳು ಹಾರಿ ಸರ್ ಬೆರನ್ ಜಯತಿಲಕರು ಗಡಿಬಿಡಿಗೊಳ್ಳುವಂತಾಯಿತು.

ಹಿಂದೂಸ್ಥಾನದಲ್ಲಿರುವ ತನ್ನ ಪತಿಯ ಅಪ್ಪಣೆ ಪಡೆದು ಮಿಸೆಸ್ ಪೆಟಿಗುರು ಎಂಬ ಸ್ತ್ರೀಯೋರ್ವಳು ಮೋಟರ್ ಸೈಕಲ್‌ನಲ್ಲಿ ಇಡೀ ಯುರೋಪವನ್ನು ಸುತ್ತಿ ಲಂಡನಿಗೆ ತಲಪಿರುವಳು.

'ಹಿಂದೂ' ಪತ್ರಿಕೆಯ ಸಂಪಾದಕರಾದ ಶ್ರೀ ಎ ರಂಗಸ್ವಾಮಿ ಅಯ್ಯಂಗಾರರು ಕಠಿಣ ಕಾಯಿಲೆಯಿಂದ ವಿಮುಕ್ತರಾಗಿ ಗುಣಮುಖ ಹೊಂದುತ್ತಿರುವರು.

ಪಂಡಿತ ಜವಾಹರಲಾಲರೂ ಬಾಬು ರಾಜೇಂದ್ರ ಪ್ರಸಾದರೂ ಬಿಹಾರಿನಲ್ಲಿಯ ವಿಪನ್ನ ಜನರಿಗೆ ಸಹಾಯವನ್ನೊದಗಿಸುತ್ತಿರುವರು ಅವರೊಡನೆ ಸರಕಾರವೂ ಸಹಕರಿಸುತ್ತದೆ.

ಬೋಂಬೆ ಮೆಂಬರರಾದ ಸರ್ ಮಹಮ್ಮದ್ ಉಸ್ಮಾನರು ಮದ್ರಾಸು ಗವರ್ನರರಾಗಿ ನೇಮಕ ಹೊಂದಿರುವರಷ್ಟೆ, ಅವರ ಬದಲಿಗೆ ಅವರ ಸ್ಥಾನಕ್ಕೆ ಯಾರು ಕುಸಾಯಿತರಾಗಿರುವರೆಂದು ಇಂಡಿಯಾ ಸರಕಾರಕ್ಕೂ ತಿಳಿದಿಲ್ಲ.

ಕಲಕತ್ತಿನ ಮುನಿಸಿಪಲ್ ಕೆಲಸಗಾರರಿಗೂ ಕಡಿಮೆ ಸಂಬಳ ಇರುವ ನೌಕರರಿಗೂ ೧೬ ಲಕ್ಷ ರೂಪಾಯಿಗಳನ್ನು ವೆಚ್ಚಮಾಡಿ ಮನೆಗಳನ್ನು ಕಟ್ಟಿಸಬೇಕೆಂದಿರುವರು.

ಬಿಹಾರ್ ಪ್ರಾಂತ್ಯದಲ್ಲಿ ಭೂಕಂಪದಿಂದಾಗಿ ಒಟ್ಟು ೨೦,೦೦೦ ಜನರು ತೀರಿಕೊಂಡಿರುವರೆಂದು ಪರಿಚಿತ ಮೂಲದವರ ಖಾತ್ರಿಕ ಪೂರ್ವಕ ಅಂದಾಜು.

ಲಂಡನಿನ ಲೀಡ್ಸಿನಲ್ಲಿ ನೇಶನಲ್ ಸರಕಾರದ ಅಧಿವೇಶನವು ಪ್ರಾರಂಭಿಸುವಾಗ ಪ್ರಧಾನ ಮಂತ್ರಿಯವರಿಗೆ ಜನಸಂಘವು ಪದೇ ಪದೇ ಅಡ್ಡಿಪಡಿಸಿ ಪರಿಹಾಸ್ಯವಾಯಿತು.

ಮುಂಬಾಯಿಯವರು ಬಿಹಾರ್ ರಿಲೀಫ್ ಫಂಡಿನ ಸಂಬಂಧವಾಗಿ ವೈಸರಾಯರಿಗೆ ಹಣವನ್ನು ರವಾನಿಸುವ ಬದಲು, ಅದನ್ನು ಪಾಟ್ನಾದಲ್ಲಿನ ಕೊಂಗ್ರೆಸ್ ಮುಖಂಡರಾದ ಬಾಬು ರಾಜೇಂದ್ರ ಪ್ರಸಾದರಿಗೆ ರವಾನಿಸಬೇಕೆಂದು ಬೀಡ ಕಲ್ಪಿಸಿಕೊಂಡರು.

ಲಾಹೋರಿನ ಕೋರ್ಟಿನಲ್ಲಿ ನ್ಯಾಯ ವಿಚಾರಣೆಯಾಗುತ್ತಿದ್ದಾಗ ಕೈದಿಯೊಬ್ಬನು ವಕೀಲರ ಕೆನ್ನೆಗೆ ಗುದ್ದಿದನು. ಅವನನ್ನು ೧೦೦೦ ರೂಪಾಯಿ ಜಾಮೀನಿನ ಮೇಲೆ ಬಿಡುಗಡೆ ಮಾಡಿದರು.

ಮಧ್ಯ ಪ್ರಾಂತ್ಯದಲ್ಲಿ ಭೂಕಂಪದ ಕಷ್ಟವಲ್ಲದೆ ವಿಪರೀತ ಚಳಿಯನ್ನು ಜನರು ಅನುಭವಿಸುವ ದುರದೃಷ್ಟವು ಒದಗಿದೆ.

ಕಲ್ಕತ್ತದ ಆರ್ಯ ಪ್ರೆಸ್‌ನ ಮಾಲೀಕರಾದ ಶ್ರೀ ರಾಜೇಂದ್ರ ಪ್ರಸಾದರೆಂಬವರಿಂದ ೧೦೦೦ ಭದ್ರತೆಯನ್ನು ಸರಕಾರವು ಕೇಳಿತು. ಅವರು ೫೦೦ ರೂಪಾಯಿಗಳನ್ನು ಮೊದಲು ಕಟ್ಟಿದ್ದರು. ಮೊನ್ನಿನ ಭೂಕಂಪದಲ್ಲಿ ಅವರ ಮನೆ ಹಾಳಾಯಿತು. "ಕಷ್ಟ ಬಂದಿದೆ ೫೦೦ ರೂಪಾಯಿಗಳನ್ನು ಕಟ್ಟಲು ಸಮಯ ಕೊಡಬೇಕೆ"ಂದು ಪ್ರಸಾದರ ಪತ್ನಿಯವರು ಪ್ರಾರ್ಥಿಸಿದುದಕ್ಕೆ ಆ ಮೆಜಿಸ್ಟ್ರೇಟರು ಒಪ್ಪಿಕೊಂಡರು.

ಬ್ರಿಟಿಷ್ ಸರಕಾರವು ಕ್ರಾಂತಿಕಾರರ ಚಳವಳಿಯನ್ನು ಖಂಡಿತವಾಗಿ ಬಗ್ಗು ಬಡೆಯಬೇಕೆಂದು ಚಿತ್ತಗಾಂಗಿನವರಾದ ಬೋಲ್‌ಫಸ್‌ನವರ ಮುಖಂಡತ್ವದಲ್ಲಿ ನಿರ್ಧರಿಸಿರುತ್ತದೆ.

ಮುಂಬಾಯಿಯ ಸಮೀಪದಲ್ಲಿ ಮರ್ಕೆಂಟೈಲ್ ಬ್ಯಾಂಕಿನವರ ಹತ್ತಿ ಭಂಡಾರಕ್ಕೆ ಬೆಂಕಿ ಬಿದ್ದು ಅರ್ಧ ಲಕ್ಷ ರೂಪಾಯಿಯ ಹತ್ತಿಯು ಸುಟ್ಟಿತು. ೧೨ ಫಯರ್ ಬ್ರಿಗೇಡುಗಳು ಓಡಿ ಬೆಂಕಿಯನ್ನು ನೊಂದಿಸಿದುವು. ಹತ್ತಿಯು ಇನ್ಸೂರ್ ಮಾಡಲ್ಪಟ್ಟಿತ್ತು.

ಬಿಹಾರ್ ಭೂಕಂಪ ಸಂಬಂಧವಾಗಿ ಇಷ್ಟರ ತನಕ ಒಟ್ಟು ರೂ ೯,೪೯,೦೦೦ ಮತ್ತು ೧೫೮ ಪೌಂಡ್ ಶೇಖರಿಸಲ್ಪಟ್ಟಿದೆ. ಇದರಲ್ಲಿ ರೂ ೫೦,೦೦೦ವನ್ನು ಬಿಹಾರ್ ಗವರ್ನರರಿಗೆ ಸಹಾಯದ ಬಗ್ಗೆ ರವಾನಿಸಿದರು.

ಬಿಹಾರ್ ಭೂಕಂಪ ಸಹಾಯ ಫಂಡಿಗೆ ನೈಜಾಮ ಸರಕಾರವು ರೂ. ೧೫,೦೦೦, ಸರ್ ಕವಾಸ್ಜಿ ಜಹಾಂಗೀರ್‌ರವರು ರೂ. ೭೫೦೦, ಚಂದ್ ಮಹಾರಾಜರು ರೂ ೧೦,೦೦೦, ಗಾಯಿಕವಾಡರ ಮಹಾರಾಜರು ರೂ. ೫೦೦೦ ದಾನ ಮಾಡಿರುವರು.

ಮುಜಾಫರ್ ಪುರದ ಶ್ರೀ ಗಯಾ ಪ್ರಸಾದ ಸಿಂಗ್ ಎಂ. ಎಲ್ ಎ ಯವರು ದಿಲ್ಲಿಗೆ ಬಂದಿದ್ದು, ನ್ಯಾಯವಿಧಾಯಕ ಸಭೆಯಲ್ಲಿ ತನ್ನ ನಾಡಿನ ಜನರ ದುರ್ಗತಿ ಹೇಳಿ, ಭೂಕಂಪವಾಗುವಾಗ ತಾನು ಕುಟುಂಬ ಸಮೇತ ಹೊರಗೆ ಓಡಿದೊಡನೆ ತನ್ನ ಬಂಗಲೆಯು ಸಂಪೂರ್ಣ ಬಿದ್ದು ಧ್ವಂಸವಾಯಿತೆಂದು ತಿಳಿಸಿರುತ್ತಾರೆ.

ಬಜ್ಜರ ಕೊಲೆಯನ್ನು ಹೇತುವಾಗಿಟ್ಟುಕೊಂಡು ಸರಕಾರದವರು ಮಿದ್ನಾಪುರದ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಟಿ. ಬಿಶ್ವಾಸ ಇವರಿಗೂ ಇನ್ನಿಬ್ಬರು ಪ್ರೊಫೆಸರರಿಗೂ ಒಂದು ವಾರದೊಳಗೆ ಊರು ಬಿಟ್ಟೋಡಬೇಕೆಂದು ಹುಕುಂ ಕೊಟ್ಟಿದ್ದಾರೆ. ಈ ತನಕ ೨೫ ಮಂದಿಗಳ ಗಡಿಪಾರಾಯಿತು.

ಚಿಲಿಯೆಂಬಲ್ಲಿ ಅದ್ಭುತ ನೆರೆಯುಂಟಾಗಿ ಅರ್ಜೆಂಟೈನ್‌ನಿಂದ ಬಂದ ೩೦ ಸಾವಿರ ಪ್ರಯಾಣಿಕರು ದಿಕ್ಕಿಲ್ಲದಾಗಿದ್ದಾರೆ. ೪೦ಕ್ಕೆ ಮಿಕ್ಕಿ ಜನರು ಗಾಳಿಯ ವಶವಾಗಿದ್ದಾರೆ.

ಇಂಡೋ ಚೈನದಿಂದ ಅಲ್ಲಿಯ ಗವರ್ನರರನ್ನು ಹೊತ್ತುಕೊಂಡು ಹೊರಟ ಫ್ರೆಂಚ್ ವಿಮಾನವು ಕೊರಿಬಗ್ಗಿ ಎಂಬಲ್ಲಿ ಸುಟ್ಟು ಕೆಳಬಿತ್ತು. ಗವರ್ನರರು ಕೂಡ ೯ ಮಂದಿ ಭಸ್ಮವಾಗಿದ್ದಾರೆ.

ಪಂಡಿತ ಜವಾಹರಲಾಲರನ್ನು ಸೆರೆಹಿಡಿಯುವರೆಂದು ಒಮ್ಮೆ ಸುದ್ದಿ ಹರಡಿತ್ತಾದರೂ ಈಗ ಉಪಶಮನವಾಗಿದೆ.

ಅಮೇರಿಕದ ಸೈಂಟ್ ಪೌಲ್ ಎಂಬಲ್ಲಿ ಎಡ್ವರ್ಡ್ ಬ್ರೆಮರನೆಂಬ ಬ್ಯಾಂಕರನನ್ನು ಕಳ್ಳರು ಕದ್ದೊಯ್ದು ಅವನನ್ನು ಬಿಡಬೇಕಾದರೆ ೨ ಲಕ್ಷ ಡಾಲರು ಪ್ರತಿಫಲ ಕೇಳಿರುವರು.

ಆಫ್ರಿಕದ ಪ್ರಿಟೋರಿಯ ಪಟ್ಟಣದಿಂದ ೫೦ ಮೈಲು ದೂರದಲ್ಲಿ ಒಬ್ಬನಿಗೆ ೫೦೦ ಮತ್ತು ೭೩ ಕರಟಗಳ ವಜ್ರಗಳು ಸಿಕ್ಕಿರುವವು. ಅದನ್ನವನು ೭೫೦೦ ಪವನುಗಳಿಗೂ ಕೊಡಲೊಪ್ಪಿರುವುದಿಲ್ಲ.

ಅಮೇರಿಕಕ್ಕೆ ೧೩೦ ಹೊಸ ಯುದ್ಧ ಸಾಮಗ್ರಿಗಳನ್ನು ರಚಿಸಬೇಕೆಂದು ಸರ್ಕಾರ, ಆಗಲೇ ಕೆಲವು ನಿರಿಯ ಸ್ವರ್ಲಂಗುಗಳು ಪ್ರತ್ಯೇಕಿಸಿದ ಲ್ಪಟ್ಟು ಕೆಲಸದಾರಂಭವಾಗಿದೆ ಅವಸರದಿಂದ ಕೆಲಸವಾಗಬೇಕಂತೆ! ಏಕೋ?

ಲೀಗ್ ಆಫ್ ನೇಶನ್ಸಿಗೆ ಹಿಂದೂ ಮಹಾ ಸಭೆಯ ಪರವಾಗಿ ಪ್ರತಿನಿಧಿಗಳು ಹೋಗಲಿರುವರು.

ಬಿಹಾರ್ ವಿಪನ್ನರಿಗೆ ಸಹಾಯವನ್ನು ಮಾಡಬೇಕೆಂದೂ ಸರಕಾರ ಕೂಡನೆ ಎಲ್ಲರೂ ಸಹಕರಿಸಿ ನಡೆಯಬೇಕೆಂದೂ ಗಾಂಧಿಜಿಯವರು ಹೇಳಿರುವರು.

ಬಿಹಾರಿನಲ್ಲಿ ಸಂಚರಿಸುತ್ತಿರುವಾಗ ಪಂಡಿತ-ಜವಾಹರಲಾಲರು ಕಾಲಿಡಪಿ, ಕಾಲಿನಲ್ಲಿ ಘಾಯವಾಗಿದೆ. ಅವರು ಅಲ್ಲ ಹಾಬಾದಿಗೆ ತೆರಳಿರುವರು.

ಕಲ್ಕತ್ತದ ಗಿಂಡ್ಲೆ ಬೇಂಕಿನ ಹಣ ದುರುಪಯೋಗದ ಸಂಬಂಧ ವಾಗಿ ಇಬ್ಬರು ಪ್ರಸಿದ್ಧ ಡಾಕ್ಟರರನ್ನು ಸೆರೆ ಹಿಡಿದಿರುವರು

ಕೊಲೊಂಬೋವಿಗೆ ಕಳೆದ ವರ್ಷ ಬಂದ ಪ್ರತಿ ೧೦೧ ಮೋಟಾರ್ ಕಾರಿನಲ್ಲಿ ೯೩ ಅಮೇರಿಕದ್ದು! ೧೯೩೩ರಲ್ಲಿ ಒಟ್ಟು ೨೩೩೪೯ ಕಾರು ಗಳು ರಜಿಸ್ಟರ್ ಆದುವು

ಬರೋಡಾ ಮಹಾರಾಜರು ಸಂಚರಿಸುವಲ್ಲಿ ಸಭೆ ಸೇರಿದಾಗ ಗಾಂಧಿ ಟೋಪಿಗಳನ್ನು ಧರಿಸಿದರೆ ಅಧಿಕಾರಿಗಳು ಬೆದರಿಕೆಯನ್ನೊಡ್ಡುಸು ತ್ತಿರುವರೆಂದು ವಾರ್ತೆ ಇದೆ.

ದಕ್ಷಿಣ ಕನ್ನಡ.

ಮಂಗಳೂರು: — ಅಂಜುಮನ್ ಹಿದಾಯತುಲ್ ಇಸ್ಲಾಮು ಸಂಘದ ವರುಷಾವಧಿ ಉತ್ಸವವು ಇದೇ ತಿಂಗಳ ತಾ ೨೦-೧-೧೯೩೪ ನೇ ಶನಿವಾರ ರಾತ್ರಿ ಘಂಟೆ ಆಕ್ಕೆ ಜನಾಬ್ ಮಹಿದಿನ್ ಬಿನ್ ಅಹಮ್ಮದ್ ಸಾಹೇಬ್ ಬಹದೂರ್ ಬಿ. ಎ. ಎಲ್ ಟಿ. ಡಿಪ್ಯುಟಿ ಇನ್ಸ್ಪೆಕ್ಟರ್ ಆಫ್ ಸ್ಕೂಲ್ಸ್ ಕೆನರಾ ಮುಹಮ್ಮದನ್ ರೇಂಜ್ ಇವರ ಅಧ್ಯಕ್ಷತೆಯಲ್ಲಿ ಕುದ್ರೋಳಿ ಹಿಂದೂಸ್ಥಾನಿ ಶಾಲೆಯಲ್ಲಿ ಜರಗಿತು ದೇವರ ಪ್ರಾರ್ಥನೆ ಯೊಂದಿಗೆ ಕಾರ್ಯ ಕ್ರಮ ಆರಂಭಿಸಲ್ಪಟ್ಟಿತು

ನಂತರ ಜನಾಬ್ ಸೈಫುಲ್ಲಾ ಸಾಹೇಬ, ಜನಾಬ್ ರಫೀಉದ್ದಿನ್ ಅಹ್ಮದ್ ಸಾಹೇಬ್, ಜನಾಬ್ ಉಮ್ಮರ್ ಸಾಹೇಬ್ ಕೂಡಾ ಮಹದಿ ಯರಲ್ಲಿ ವಿದ್ಯೆ ಮತ್ತು ಕೈಗಾರಿಕೆ ಕಲಿಯುವ ಆಸಕ್ತಿಯ ಕುಂತು ಮತ್ತು ಈ ಆಸಕ್ತಿಗೆ ಮುಖ್ಯ ಕಾರಣವಾದ ಸಹಾಯ ಕೊರತೆಯು ಹಣದ ಅಭಾವವೂ ಇರುವುದೇ ಆಗಿದೆ ಎಂದೂ ಇದನ್ನು ಪ್ರೋತ್ಸಾಹಿಸುವ ಜನರು ಸಹ ಕಡಿಮೆ ಇರದ್ದೇ ಕಾರಣವೆಂದೂ ಇದಕ್ಕೋಸ್ಕರ ಸ್ಥಾಪಿತವಾದ ಈ ಅಂಜುಮನ್ ಸಂಘವು ಅನೇಕ ಕಷ್ಟಗಳು ತೊಂದರೆಗಳು ಅನುಭವಿಸಿ ಕೊಂಡರೂ ಮಧ್ಯದಲ್ಲಿ ಎದೆ ಗುಂದದೆ ತನ್ನ ಧ್ಯೇಯವನ್ನು ಪೂರೈಸುವ ವರೆಗೆ ಎಡೆ ಬಿಡದೆ ಕೆಲಸ ಮಾಡಿದರೆ ದೇವರ ದಯದಿಂದ ಇನ್ನು ಸ್ವಲ್ಪ ಕಾಲದಲ್ಲಿಯೇ ಮಹಮ್ಮದಿಯರ ವಿದ್ಯೆ ಮತ್ತು ಕೈಗಾರಿಕೆಯಲ್ಲಿ ಅಭಿವೃದ್ಧಿ ಆಗುವುದಕ್ಕೆ ಸಂದೇಹವಿಲ್ಲವೆಂದೂ ಅಭಿಪ್ರಾಯ ಪಟ್ಟು ಸೂಚಿ ದರು. ಇದಕ್ಕೋಸ್ಕರ ಕೆಲಸ ಮಾಡುವ ಎಲ್ಲಾ ಮೆಂಬರರು ಸಹಾಯ ಮಾಡುವ ಮಹನೀಯರಿಗೂ ಶ್ರೀ ದೇವರು ಶಕ್ತಿಯನ್ನೂ ಧೈರ್ಯವನ್ನೂ ಮನಸ್ಸನ್ನೂ ಒಗ್ಗಟ್ಟನ್ನೂ ದಯಪಾಲಿಸಲೆಂದು ಪ್ರಾರ್ಥಿಸಿ ಭಾಷಣವನ್ನು ಕೊನೆಗಾಣಿಸಿದರು. ನಂತರ ಅಧ್ಯಕ್ಷರು ಸಭಿಕರಿಗೂ ಧನ್ಯವಾದ ಗಳನ್ನು ಅರ್ಪಿಸಲಾಗಿ ಸಭೆಯು ಮುಕ್ತಾಯವಾಯಿತು.

ತಾ. ೨೪ನೇ ರಾತ್ರಿ ಶ್ರೀ ವೆಂಕಟರಮಣ ಸ್ವಾಮಿ ಥಿಯೇಟ್ರಿಕಲ್ ಕಂಪೆನಿಯವರು ಹಿಂದೂಸ್ಥಾನ ಸಿನೆಮದಲ್ಲಿ 'ಸಂಸಾರ ಲೀಲೆ'ಯೆಂಬ ನಾಟಕವನ್ನಭಿನಯಿಸಿದರು. ಎಲ್ಲಾ ಪಾತ್ರಾವರ್ಗಗಳ ಹಾವ ಭಾವ ಗಳೂ, ಕಥಾವಸ್ತು, ಕಥಾ ರಚನೆಯೂ ಶ್ರೇಯಸ್ಕರವಾಗಿದ್ದುವು. ಲಿಂಗಪ್ಪನ ಮಾತು ಬಿಡಿಗನ್ನಡದಲ್ಲಿರುತ್ತಿದ್ದರೆ ನಗೆಗಡಲು ಹರಿಯುತ್ತಿತ್ತು. ನವೀನ ಚಂದ್ರನ ದಾತಿನ ಓಟವು ಕಡಿಮೆಯಾಗುತ್ತಿದ್ದರೆ ನಾಟಕವು ಇನ್ನೂ ಬೋಧಪರವೂ ಸುಮಧುರವೂ ಆಗುತ್ತಿತ್ತು. ಶ್ರೀ ಪುಣೆಂಚತ್ತಾ ಯರೆಂಬಂತೆ ಈ ಕಂಪೆನಿಯವರಿಗೆ ಸಮಾಜದವರೂ ಸಾರ್ವಜನಿಕರೂ ಆಶ್ರಯವೀಯುವುದು ಆಗತ್ಯ

ಶ್ರೀ ಕೃಷ್ಣ ಸಿನೆಮ ಮಂದಿರದಲ್ಲಿ ತಾ ೨೬-೧-೩೪ರಿಂದ ಸಾಗರ ಮುವಿಟೋನ್ ಕಂಪೆನಿಯವರ 'ಮಾಯ ಬಝಾರ್' ಎಂಬ ಮಾತಾಡುವ ಚಲಚಿತ್ರವನ್ನು ಪ್ರದರ್ಶಿಸಲಾಗುವುದು ಈ ಚಿತ್ರದಲ್ಲಿ ಬಾಬು ರಾವ್, ಬಾಳು, ದಿನ್ಕರ್, ಮಿಸ್ ಕಟೂನ್ ಮತ್ತು ಮಿಸ್ ನೆತ್ತಲ ಮೊದಲಾದವರು ಮುಖ್ಯ ಪಾತ್ರಗಳನ್ನು ವಹಿಸಿರುವರು ಕರ್ಮಾ ಎಂಬ ಜಗತ್ಪ್ರಸಿದ್ಧ ಮಾತಾಡುವ ಚಿತ್ರವು ಅತಿ ಬೇಗನೇ ಬರುತ್ತದೆ. ಈ ಚಿತ್ರವು ಪೆರಿಸ್, ನೋರ್ವೆ, ಲಂಡನ್, ಬರ್ಲಿನ್ ಮೊದಲಾದ ನಗರ ಗಳನ್ನು ಆನಂದ ಸಾಗರದಲ್ಲಿ ಮುಳುಗಿಸಿರುವುದು ಹಿಮಾನುಸರ್ಕೈ ಮತ್ತು ದೇವಿಕಾ ರಾಣಿ ಎಂಬವರೇ ಮುಖ್ಯ ಅಭಿನಯಗಾರರು.

ಬರುವ ಫೆಬ್ರವರಿ ತಾ ೫ನೇ ಸೋಮವಾರ ಅಪರಾಹ್ನ ಗಂಟೆ ೧-೩೦ಕ್ಕೆ ಎರಡು ಇಂಗ್ಲಿಷ್ ಜಲವಿಮಾನಗಳು ಬಸ್ರದಿಂದ ಇಲ್ಲಿಗೆ ಪೆಟ್ರೋಲ್ ತುಂಬಿಸುವುದಕ್ಕಾಗಿ ಬಂದು ಮರುದಿನ ಬೆಳಗ್ಗೆ ಗಂಟೆ ೮-೩೦ಕ್ಕೆ ಹೊರಟು ಹೋಗುವುವು ಇವು ಕಲ್ಕತ್ತಕ್ಕೆ ಹೋಗಲಿರುವುವು

ಮಂಗಳೂರು ತಾಲೂಕು ರೈತರಿಗೆ ಈ ಮೂಲಕ ತಿಳಿಸುವುದೇ ನೆಂದರೆ,—ಬರುವ ಕಾರ್ತಿ ಬೆಳೆಗೆ ಬೇಕಾದ ಕುಮುರಿ ಭತ್ತ, ರಾಜ ಕಾಯಮೆ ಬೀಜ, ತವಳಕಣ್ಣ ಭತ್ತದ ಬೀಜ, ಸುಗ್ಗಿ ಬೆಳೆಗೆ ಬೇಕಾದ ಕೆಂಪು ಮುತ್ತೂರು ನಂಬ್ರ ೩ನೇ ಮತ್ತು ಜಿ. ಐ ಬಿ ನಂಬ್ರ ೨೪ನೇ ಭತ್ತದ ಬೀಜಗಳು, ಕಸಿ ಅನಾನಾಸು ಗಿಡ, ಕೊಳಂಜಿ ಸಸಿ ಗೊಬ್ಬರ ಬೀಜ ಮತ್ತು ಯಾವ ಯಾವ ಪೈರಿಗೆ ಎಂತೆಂತಹ ಗೊಬ್ಬರ ಹಾಕ ಬೇಕೆಂಬ ಮಾಹಿತಿ ಇತ್ಯಾದಿಗಳು ಬೇಕಾದವರು ಮಂಗಳೂರು ಕೃಷಿ ಇಲಾಖೆಯ ಡೆಮೊನ್‌ಸ್ಟ್ರೇಟರರಾದ ಶ್ರೀ ಎಸ್ ರಾಮಣ್ಣ ರೈಗಳಿಗೆ ತಿಳಿಸಬೇಕೆಂದು ಸದ್ರಿಯವರು ತಿಳಿಸುತ್ತಾರೆ

ಈಗ ಅನಂತಪುರ ಕೋಲೆಜಿನ ಕನ್ನಡ ಪಂಡಿತರಾಗಿರುವ ಶ್ರೀ ಸೀತಾರಾಮಾಚಾರ್ಯರು ಇಲ್ಲಿಯ ಗವರ್ನಮೆಂಟ್ ಕೋಲೆಜಿನ ಸೀನಿಯರ್ ಕನ್ನಡ ಪಂಡಿತರಾಗಿ ವರ್ಗಾಯಿಸಲ್ಪಟ್ಟು ಇಲ್ಲಿಯ ಶ್ರೀ ನಂಜುಂಡ ಸ್ವಾಮಿಯವರು ಮದ್ರಾಸಿಗೆ ವರ್ಗ ಹೊಂದಿರುವರು

ಇಲ್ಲಿಯ ಕರ್ನಾಟಕ ಬೇಂಕಿನ ಶಾಖೆಯೊಂದು ಉಡುಪಿಯಲ್ಲಿ ದಿವಂಗತ ಸಾಂತಪ್ಪರು ಭಟ್ಟರ ಮನೆಯಲ್ಲಿ ತೆರೆಯಲ್ಪಟ್ಟಿರುವುದು

ರಾ ಬಿ ಎಂ ಶಾಬುದ್ದೀನ್ ಸಾಹೇಬರು ಧರ್ಮಾರ್ಥವಾಗಿ ನಡಿಸಿಕೊಂಡು ಬರುವ ಬೋಳಾರದಲ್ಲಿರುವ ಸಾಮಾಜಿಕ ಸೇವಾಸದನದ ರಜತೋತ್ಸವವು ಬರುವ ಫೆಬ್ರವರಿ ತಾ ೪ನೇ ಆದಿತ್ಯವಾರ ಪ್ರಾತಃ ಗಂಟೆ ೭ಕ್ಕೆ ಜನಾಬ್ ಕೆ ಗುಲಾಮ್ ಮಹಮ್ಮದ್ ಸಾಹೇಬ್ ಬಹ ದ್ದೂರ್ ಬಿ ಎ (ಇನ್ಸ್‌ಪೆಕ್ಟಿಂಗ್ ತಹಶೀಲ್ದಾರ್) ಇವರ ಅಧ್ಯಕ್ಷತೆ ಯಲ್ಲಿ ನಡೆಯಲಿರುವುದು ಸರ್ವರಿಗೂ ಸುಸ್ವಾಗತವಿದೆ

ಮಹಾತ್ಮಾ ಗಾಂಧಿಯವರು ಹೆಟ್ಟಿನ ಶಕ್ತಿಕ್ಕೆ ದಕ್ಷಿಣ ಕನ್ನಡ ವನ್ನು ಸಂದರ್ಶಿಸುವ ಸಂಭವ ತೋರುವುದಿಲ್ಲ ಅವರ ಸಂದರ್ಶನದ ವಿಷಯದಲ್ಲಿ ಶ್ರೀ ಕಾರ್ನಾಡು ಸದಾಶಿವರಾಯರು ಅವರಿಗೂ ಕರ್ನಾ ಟಕ ಪ್ರಾಂತಿಕ ಹರಿಜನ ಸೇವಾ ಸಮಿತಿಗೂ ಪತ್ರ ಬರೆದಿರುವರೆಂದು ತಿಳಿದು ಬರುತ್ತದೆ. ಇಷ್ಟರ ವರೆಗೆ ಪ್ರಕಟವಾದ ಕರ್ನಾಟಕ ಸಂಚಾರದ ಕಾರ್ಯಕ್ರಮದಲ್ಲಿ ದಕ್ಷಿಣ ಕನ್ನಡದ ಸುದ್ದಿಯಿಲ್ಲ

ಉಡುಪಿ — ಶ್ರೀ ಕಾಣಿಯರು ಮಠಕ್ಕೆ ಇದೇ ಪರ್ಯಾಯ ಮಹೋತ್ಸವದ ಸಂಬಂಧವಾಗಿ ಹೊರೆ ಕಳುಹಿಸುವ ನನ್ನ ಅಸಾಧ್ಯ ಕಾರ್ಯಭಾರದಲ್ಲಿ ಘೋರ ಪರಪೂರ ಮಹನೀಯರಿಲ್ಲರೂ ನನಗೆ ಶ್ರೇಯಃಪೂರ್ವಕವಾದ ಸಹಕಾರವನ್ನಿತ್ತು, ನನ್ನ ಹಾಗೂ ಜನತೆಯ ನಿರೀಕ್ಷಣೆಗಿಂತಲೂ ಮಿಕ್ಕಿ ಸುಮಾರು ೪೦೦೦ ಹೊರೆಗಳನ್ನು ಒದಗಿಸಿ ಕೊಟ್ಟು ನನ್ನನ್ನು ಪ್ರೋತ್ಸಾಹಿಸಿದ ಬಗ್ಗೆ ಸದರಿ ಮಹನೀಯರಿಗೆಲ್ಲಾ ನನ್ನ ಹೃತ್ಪೂರ್ವಕವಾದ ಧನ್ಯವಾದಗಳನ್ನು ಸಮರ್ಪಿಸುತ್ತೇನೆಂದು ಶ್ರೀ ಕುರುಕಾಲು ಗಣಪಯ್ಯ ಸೆಟ್ರು ತಿಳಿಸುತ್ತಾರೆ.

ಪರ್ಯಾಯ ಜಾತ್ರೆಯ ಸುಲುವಾಗಿ ಇಲ್ಲಿಗೆ ಬಂದಿದ್ದ ಎರಡು ನಾಟಕ ಕಂಪೆನಿಗಳ ಪೈಕಿ "ಶ್ರೀ ಚಂದ್ರಕಲಾ ನಾಟಕ ಕಂಪೆನಿಯವರು" ಮಂಗಳೂರಿಗೆ ತೆರಳಿರುವರು. ನಾಟಕಾಲಂಕಾರ, ಅಭಿನಯಕೇಸರಿ, ಶ್ರೀಮಾನ್ ಗರೂಡ ಸದಾಶಿವರಾಯರ ಗದಗ ಶ್ರೀ ದತ್ತಾತ್ರೇಯ ನಾಟಕಮಂಡಲದವರು ಇನ್ನು ಒಂದೆರಡು ನಾಟಕಗಳನ್ನು ಅಭಿನಯಿಸಿ ಮುಂದೆ ಕಾರ್ಕಳಕ್ಕೆ ಪ್ರಯಾಣ ಬೆಳೆಸುವರಾಗಿ ತಿಳಿದು ಬರುತ್ತದೆ.

ಉಡುಪಿಯವರಾದ ಶ್ರೀ ಪಿ ಮಂದಾಕಿನಿ ಬಾ, ರಾಷ್ಟ್ರಭಾಷಾ ವಿಶಾರದ ಇವರು ಮದ್ರಾಸಿನ ಕ್ವೀನ್ಸ್‌ಮೇರಿಸ್ ಕೋಲೇಜಿನ ಕರ್ನಾಟಕ ಪಂಡಿತರಾಗಿ ನೇಮಿಸಲ್ಪಟ್ಟಿರುವರು

ಬೈಸಿಕಲಿನಲ್ಲಿ ಪ್ರಪಂಚ ಸಂಚಾರ ಗೈಯುವವರೆಂದು ಕೆಲವು ದಿನಗಳ ಹಿಂದೆ ಇಲ್ಲಿಗೂ ಪ್ರವಾಸಗೈದಿದ್ದ ಶ್ರೀ ಎಸ್ ಎಸ್, ರಾಮನಾಥರೆಂಬವರು ಇಲ್ಲಿಗೆ ತಲುಪಿದಾಗ ೧೩ ಸಾವಿರ ಮೈಲು ಇದುವರೆಗೆ ಸುತ್ತಾಡಿರುವೆನಾಗಿ, ಮಂಗಳೂರಿಗೆ ತಲುಪಿದೊಡನೆ ೧೪ ಸಾವಿರ ಮೈಲು ಸಂಚರಿಸಿದುವೆನೆಂದೂ ಹೇಳುತ್ತಿರುವರು. ಇವರು ಬೇಗನೇ ಉತ್ತರ ಹಿಂದೂಸ್ಥಾನಕ್ಕೆ ಹೋಗುವರು.

ಮಹಾತ್ಮಾ ಗಾಂಧಿಯವರು ಇದೇ ತಿಂಗಳ ಮಧ್ಯಕ್ಕೆ ನಮ್ಮ ಜಿಲ್ಲೆಯನ್ನು ಸಂದರ್ಶಿಸುವರೆಂದಿದ್ದುದು, ಯಾವ ದೆಸೆಯಿಂದಲೋ ರದ್ದಾಗಿದ್ದರೂ ನಮ್ಮ ಜಿಲ್ಲೆಯಿಂದ ಕೆಲ ಪ್ರಮುಖರು ಕಲ್ಲಿಕೋಟೆ ವರೆಗೆ ಮಹಾತ್ಮರನ್ನು ಭೇಟಿಮಾಡಿದರಂತೆ ನಮ್ಮ ಜಿಲ್ಲೆಗೆ ತಮ್ಮ ಸಂದರ್ಶನವು ಆಗ್ಗ ಆಗದಿದ್ದುದಕ್ಕೆ ವ್ಯಸನಿಸುತ್ತೇನೆಂದೂ, ಅಂತಹ ಸಂಧಿಯನ್ನು ಒದಗಿಸಿ ಕೊಡುವುದರಲ್ಲಿ ತವಗೆ ತುಂಬಾ ಸಂತೋಷ ವಿದೆಯೆಂದೂ, ಕಾರ್ಯಕ್ರಮವನ್ನು ಮಾತ್ರ ಕರ್ನಾಟಕ ಆಗಮನ ವ್ಯವಸ್ಥಾಪಕರೊಡನೆ ಎಷ್ಟರ್ಶಿಸಿ ವ್ಯವಸ್ಥೆಮಾಡಿಕೊಳ್ಳಿರೆಂದರಂತೆ ಆದರೆ ಕರ್ನಾಟಕದವರು ಈಚೆಗೆ ಪ್ರಕಟಿಸಿರುವ ಕರ್ನಾಟಕ ಕಾರ್ಯಕ್ರಮ ದಲ್ಲಿ ಮಂಗಳೂರನ್ನಾಗಲಿ ದಕ್ಷಿಣ ಕನ್ನಡ ಜಿಲ್ಲೆಯ ಯಾವ ಭಾಗವ ನ್ನಾಗಲಿ ಸೇರಿಸಿಕೊಂಡ ಹಾಗಿಲ್ಲ

ತಾ ೨೧ನೆಗೆ ಪ್ರಕಟವಾಗಿದ್ದಂತೆ ಕಡೆಕೊಪ್ಪಲ ಮಠದಲ್ಲಿ ಮ। ರಾ। ಎಚ್ ರಾಮಕೃಷ್ಣ ಪೂಂಜರವರ ಅಧ್ಯಕ್ಷತೆಯಲ್ಲಿ ಉಡುಪಿ ತಾಲೂಕು ರೈತರ ಪರಿಷತ್ತು ಜರಗಿತು ಶ್ರೀಗಳಾದ ಬಿ. ಕೃಷ್ಣಯ್ಯ ಹೆಗ್ಗಡೆ ಬಿ. ವಾಸುದೇವರಾವ್, ಎನ್ ರಂಜಗೋಪಾಲ ಕೃಷ್ಣರಾವ್ ಮುಂತಾದ ಹಲವು ಮಹನೀಯರು ನೆರೆದಿದ್ದರು

ಮಿತ್ತೂರು— ಸದ್ರಿ ಶಾಲೆಯ ಹೊಸ ವರುಷದ ಪ್ರಥಮ ಮೀಟಿಂಗು ಇದೇ ಬರುವ ೨೯ನೇ ತಾರೀಕು ಸೋಮವಾರ ಅಪರಾಹ್ನ ಘಂಟೆ ೩ಕ್ಕೆ ಜರಗುವುದೆಂದು ನಿಶ್ಚಯಿಸಿರುತ್ತದೆ. ಆ ಪ್ರಯುಕ್ತ ಸರ್ವ ಜನರೂ ಬಂದು ಸದ್ರಿ ಮೀಟಿಂಗನ್ನು ಎಲ್ಲಾ ವಿಷಯಗಳಲ್ಲಿಯೂ ಛಂದ ಗಾಣಿಸಿಕೊಡಬೇಕೆಂದು ಕಾರ್ಯದರ್ಶಿಯವರ ವಿನಂತಿ

+ + + +

Karnataka Chemical and Pharmaceutical Works, Ltd , Udipi (South India)

ಕುಂಭಕೋಣದಲ್ಲಿಯೂ ಮಧುರೆಯಲ್ಲಿಯೂ ಮೈಸೂರಿನಲ್ಲಿಯೂ ಸುವರ್ಣ ಪದಕಗಳನ್ನು ಪಡೆದಿರುವ

ಕರ್ಣಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದಕ್ಷಿಣ ಹಿಂದೂಸ್ಥಾನ).

ನಮ್ಮಲ್ಲಿ ಟಿಂಕ್ಚರ್ಸ್ ವಗೈರೆ ಎಲ್ಲಾ ಎಲ್ಲೋಪೆತಿಕ್ ಔಷಧ ದ್ರವ್ಯಗಳೂ, ಆಯುರ್ವೇದಿಯ ಔಷಧಿಗಳೂ, ಟ್ಯೊಲೆಟ್ ಸಾಮಗ್ರಿಗಳೂ, ಸಾಬೂನುಗಳೂ, ಫೌಂಟನ್ ಪೆನ್ ಶಾಯಿಗಳೂ ತಯಾರಿಸಲ್ಪಡುತ್ತವೆ.

ದ್ರಾಕ್ಷಾಸವ, ಪ್ರಸೂತಿ ಸಂಜೀವನ, ನಿಯೋವಿಗರ್, ಸ್ನೋ, ಕ್ಷೀರಬಲಾ, ಕಾರ್ಪೊಫೆಲ್ಲೋಜಿಸ್ಟಿನ್, ಯುಟೆರೀನಾ, ಇಂಕ್ಸ್

ಮೆನೆಜಿಂಗ್ ಡೈರೆಕ್ಟರ್—ವೆಂಕಟ್ರಾಯ ಅಜ್ಜಪ್ಪ ಬಾಳಿಗ.

ಹೆಡ್ ಆಫೀಸು, ಉಡುಪಿ. (ದಕ್ಷಿಣ ಹಿಂದೂಸ್ಥಾನ)

ಬ್ರೇಂಚ್ ಆಫೀಸು ದೇವಕರಣ ಮೆನ್ಶನ್ಸ್, 45 ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ ನಂ 2.

ಪಶ್ಚಿಮ ಕರಾವಳಿ ಮತ್ತು ಮೈಸೂರು ಪ್ರಾಂತ್ಯಗಳ ಪ್ರಾಮುಖ್ಯ ಏಜಂಟರು:—

ಕರ್ಣಾಟಕ ಪ್ರೊಡಕ್ಟ್ಸ್ ಡಿಸ್ಟ್ರಿಬ್ಯೂಟಿಂಗ್ ಕಂಪೆನಿ, ಮಂಗಳೂರು

ಮೂಲೆ ಮೂಲೆಯಿಂದ

ಕಾರ್ಕಳ ಮಾ॥—ಇಲ್ಲಿ ಇದೇ ಬರುವ ತಾರೀಕು ಶನಿಯು ಶ್ರೀಮದ್ಗುರುಗಳವರ ಆರಾಧನೆಯ ದಿವಸ ಅಪರಾಹ್ನ ೩ರಿಂದ ೬ರ ವರೆಗೆ ಶ್ರೀಗಳಾದ ಪಂಡಿತ ನಿಡ್ಲೆ ಅನಂತ ಉಪಾಧ್ಯಾಯರು, ಕೆ. ಆರ್. ಆಚಾರ್ಯರು, ಎಂ. ಎ., ಎಲ್. ಟಿ., ಕೆ. ಬಾಲಕೃಷ್ಣ ರಾವ್, ಪಾವಂಜೆ ಗುರುನಾರಾಯಣ ರಾವ್, ಪಂಡಿತ ಶ್ರೀಪತಿ ಶಾಸ್ತ್ರಿಗಳು, ಮೊದಲಾದವರ ಭಾಷಣಗಳಿರುವವು. ಅದೇ ದಿವಸ ರಾತ್ರಿ ಶಾಸ್ತ್ರಿ ಪಂಡಿತ ನಿಡ್ಲೆ ಅನಂತ ಉಪಾಧ್ಯಾಯರ ಅಧ್ಯಕ್ಷತೆಯಲ್ಲಿ ಶ್ರೀ ಬಲಿಪ ನಾರಾಯಣ ಭಾಗವತರ ಹಾಡುವಿಕೆಯ ಯಕ್ಷಗಾನ ಸಮಾರಂಭವೂ ನೆರವೇರಲಿರುವುದು ಪ್ಲೀಡರ್ ಕೆ. ಬಾಲಕೃಷ್ಣ ರಾವ್, ಶ್ರೀಗಳಾದ ಪತ್ರೆ ಶ್ರೀಪತಿ ಶಾಸ್ತ್ರಿ, ಬಳ್ಳಮಜಲು ರಂಗಪ್ಪಯ್ಯ, ಕುರ್ಯ ವೆಂಕಟ್ರಮಣ ಶಾಸ್ತ್ರಿ, ಚಣಿಲ ತಿರುಮಲೇಶ್ವರ ಭಟ್ಟ, ಕುದ್ಪದ ಸುಬ್ರಾಯ ಭಟ್, ಕಂಡೆತ್ತೋಡಿ ನಾರಾಯಣ ಕೇಕುಣ್ಣಾಯ, ರಾ॥ ಶಾಸ್ತ್ರಿಯವರು—ಈ ಮೊದಲಾದ ಮಹನೀಯರೇ ಪಾತ್ರಗಳನ್ನು ವಹಿಸಲಿರುವರು ಪ್ರಸಂಗ 'ಕೃಷ್ಣ ಸಂಧಾನ' ಮೃದಂಗ ವಾದಕರು ರಾ॥ ಕೆಮ್ಮಣ್ಣು ನಾರಾಣಪ್ಪಯ್ಯನವರು ಸರ್ವರಿಗೂ ಸ್ವಾಗತವಿದೆ

ಕೊಡಗಿನ ಎಡಿಷನಲ್ ಜುಡಿಷಿಯಲ್ ಕಮೀಶನರರಾದ ಮಿ॥ ಬಟ್ಲೆರವರನ್ನು ಮದ್ರಾಸ್ ಹೈಕೋರ್ಟಿನ ಜಡ್ಜಿಯಂನ್ನಾಗಿ ನೇಮಿಸಿರುವರು ಇವರ ಬದಲಿಗೆ ಮಿ॥ ಹಾರ್ ವಿಲ್ಸನರವರು ಬರುವರೆಂದು ವರ್ತಮಾನ

ತಾ ೧೩-೧- ೩೪ರಲ್ಲು ಮಲ್ಲಿಕಾರ್ಜುನ ಬಸ್ಸು ಮಡಿಕೇರಿ ಸಿದ್ದಾಪುರ ರಸ್ತೆ ಕಾನಂಗಾಡು ಸಮೀಪ ಮುಂದಿನ ಕಡೆಯ ಒಂದು ಚಕ್ರವು ಕಳಚಿ ಬಿದ್ದು ಬಸ್ಸು ಬರೆಗೆ ತಾಗಿ ಮಿ॥ ...ನಂಡ ಮಾಚ್ಚಯ್ಯನವರ ಕಾಲು ಮುರಿದು ಜಖಂ ಆಗಿರುವ ಹಾಗೂ ಅವರನ್ನು ವಿರಾಜಪೇಟೆ ಆಸ್ಪತ್ರೆಗೆ ಸಾಗಿಸಿರುವ ಹಾಗೂ ಮತ್ತು ಕಾವೇರಿ ಸರ್ವಿಸ್ಸಿನ ಒಂದು ಬಸ್ಸಿನ ಹಿಂಭಾಗದ ಒಂದು ಚಕ್ರವು ಮಡಿಕೇರಿ ಸ್ಪೆನ್ಸರ್ ಅಂಗಡಿ ಸಮೀಪ ಕಳಚಿ ಬಿದ್ದು ದೈವಾನುಗ್ರಹದಿಂದ ಪ್ರಯಾಣಿಕರಿಗೆ ಏನೂ ಅಪಾಯವಾಗಲಿಲ್ಲವೆಂದೂ, ಅಧಿಕಾರಿಗಳು ಲೈಸನ್ಸ್ ಕೊಡುವಾಗ ಹೆಚ್ಚಿನ ನಿಗವಿಟ್ಟರೆ ಪ್ರಯಾಣಿಕರಿಗೆ ಇಂಥಾ ಅನಾಹುತಗಳು ಆಗಲಿಕ್ಕಿಲ್ಲವೆಂದೂ ಒಂದು ವಾರ್ತೆ

ಕೆಲವು ತಿಂಗಳುಗಳ ಹಿಂದೆ ಕುಟ್ಟ ಗ್ರಾಮದಲ್ಲಿ ಬಿಲ್ಲವರ ...ಕಪ್ಪ ಎಂಬವನನ್ನು ಕೊಂದರೆಂಬ ಕಾರಣ ೧ನೇ ಅಪರಾಧಿ ಬಿಲ್ಲವರ ಪೊಂಕ್ರ ಎಂಬವನಿಗೆ ಫಾಸಿ ಸಜೆಯು ಕೊಡಗಿನ ಸೆಷನ್ಸ್ ಜಡ್ಜಿಯವರಿಂದ ವಿಧಿಸಲ್ಪಟ್ಟಿದ್ದು, ಜುಡಿಷಿಯಲ್ ಕಮಿಶನರವರಿಂದ ಖಾಯಂ ಮಾಡಲ್ಪಟ್ಟಿತು ನಂತರ ಲೋಕಲ್ ಗವರ್ನಮೆಂಟಿಗೆ ದಯೆ ತೋರಿಸಬೇಕೆಂದು ಅಪೀಲು ಮಾಡಿದುದರ ಮೇಲೆ ಲೋಕಲ್ ಗವರ್ನಮೆಂಟಿನವರು ಫಾಸಿ ಸಜೆಯನ್ನು ಜೀವ ಪರಿಯಂತರ ನೀರಿನ ಮೇಲೆ ಕಳುಹಿಸುವ ಶಿಕ್ಷೆಯನ್ನು ವಿಧಿಸಿರುವುದಾಗಿ ತಿಳಿಯುತ್ತೇವೆ

ರಜೆಯಲ್ಲಿ ಹೋಗಿದ್ದ ಅಸಿಸ್ಟೆಂಟ್ ಸರ್ಜನ್ ಮಿ॥ ಕ್ರಾಂಜಿಡಿನ್ಸ್‌ರವರು ರಜೆ ತೀರಿ ತಮ್ಮ ಕೆಲಸದ ಚಾರ್ಜನ್ನು ತಾ. ೧–೧ '೩೪ರಲ್ಲು ತೆಗೆದುಕೊಂಡಿರುವರು ಸಬ್ ಅಸಿಸ್ಟೆಂಟ್ ಸರ್ಜನ್ ಮಿ॥ಗಳಾದ ನಾಯುಡುರವರು ಸಿದ್ದಾಪುರಕ್ಕೂ ಮತ್ತು ರುದ್ರಪ್ಪನವರನ್ನು ವಿರಾಜಪೇಟೆಗೂ ವರ್ಗಾಯಿಸಿರುವರು

ಮಡಿಕೇರಿ ಹುಡುಗಿಯರ ಹೈಸ್ಕೂಲಿನಿಂದ ಈ ವರುಷದ ಸ್ಕೂಲ್ ಫೈನಲ್ ಪರೀಕ್ಷೆಗೆ ೯ ವಿದ್ಯಾರ್ಥಿನಿಯರ ಪೈಕಿ ೮ ವಿದ್ಯಾರ್ಥಿನಿಯರನ್ನು ಸೆಲೆಕ್ಟ್ ಮಾಡಿರುವುದಾಗಿ ತಿಳಿಯುತ್ತೇವೆ

ಕೊಡಗಿನ ಕಮಿಷನರಾದ ಮಿ॥ ಮೆಕ್ಕೀವರವರನ್ನು ಬೆಂಗಳೂರು ಕೆಂಟೋನ್‌ಮೆಂಟಿನ ಕಲೆಕ್ಟರು ಮತ್ತು ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರಾಗಿ ನೇಮಿಸಿರುವುದಾಗಿ ಪ್ರಕಟವಾಗಿದೆ ಇವರ ಬದಲಿಗೆ ಯಾರು ಬರುವರೆಂದು ಗೊತ್ತಾಗಿರುವುದಿಲ್ಲ

ಟೆರಿಟೋರಿಯಲ್ ರೆಜಿಮೆಂಟಿನಲ್ಲಿ ಸೆಕೆಂಡ್ ಲೆಫ್ಟಿನೆಂಟ್ ಆಗಿದ್ದ ಮಿ॥ ಕೊರವಂಡ ಐಯಣ್ಣನವರನ್ನು ಲೆಫ್ಟಿನೆಂಟರಾಗಿಯೂ, ಜಮೇದಾರ ಮತ್ತು ಹಾನರರಿ ಸೆಕೆಂಡ್ ಲೆಫ್ಟಿನೆಂಟರಾಗಿದ್ದ ಮಿ॥ ಮನೆಯಪಂಡ ಐಯ್ಯಪ್ಪನವರನ್ನು ಸುಬೇದಾರ ಮತ್ತು ಹಾನರರಿ ಲೆಫ್ಟಿನೆಂಟರಾಗಿಯೂ ನೇಮಿಸುವರೆಂದು ತಿಳಿಯುತ್ತೇವೆ

ತಾ ೧೫ರಲ್ಲು ಅವುಂದೂರ್ ಗ್ರಾಮದ ಪರಿಚಾರಕ ಸೋಮಯ್ಯನವರ ಮನೆಗೆ ಆಕಸ್ಮಾತ್ತಾಗಿ ಬೆಂಕಿ ಬಿದ್ದು ಸುಟ್ಟುಹೋಗಿದೆಯಾಗಿ ವರ್ತಮಾನ.

ಕರ್ನಾಟಕ ಸಾಹಿತ್ಯ ಪರಿಷತ್ತು

ಸಾಹಿತ್ಯ ಪರಿಷತ್ತಿನ ಕಾರ್ಯ ನಿರ್ವಾಹಕ ಮಂಡಲಿಯ ಅಧಿವೇಶದ ಆರಂಭ ಕಾಲದಲ್ಲಿ ಉಪಾಧ್ಯಕ್ಷರಾದ ಶ್ರೀಮಾನ್ ಡಿ. ವಿ. ಗುಂಡಪ್ಪನವರು ಈ ಕೆಳಗಿನ ಭಾಷಣವನ್ನು ಮಾಡಿದರು.:—

ಮಿತ್ರರೇ,

ಈ ದಿವಸ ತಮ್ಮೆಲ್ಲರನ್ನು ಈ ಅಧಿವೇಶನಕ್ಕೆ ಬರಮಾಡಿಕೊಳ್ಳುವ ಸಂತೋಷವು ನನಗೆ ತೋರುತ್ತಿದೆ ತಾವೆಲ್ಲರೂ ಸುಖಾಸೀನರಾಗಿ ನನ್ನ ವಿಜ್ಞಾಪನೆಯನ್ನು ಲಾಲಿಸಬೇಕೆಂದು ಬೇಡುತ್ತೇನೆ

ಪರಿಷತ್ತಿನ ಉಪಾಧ್ಯಕ್ಷರ ಪದವಿಯ ಭಾರವನ್ನು ಪರಿಷತ್ತಿನ ಸದಸ್ಯರು ನನ್ನ ಮೇಲೆ ಹೊರಿಸಿ ಗೌರವಿಸಿದ್ದಾರೆ ಇದು ಮಹಾ ಪಂಡಿತರೂ ಕಾರ್ಯಾಧ್ಯಕ್ಷರೂ ಪ್ರತಿಷ್ಠಾವಂತರೂ ಹೊತ್ತ ಭಾರ ಅದನ್ನು ತಾಳಬಲ್ಲ ಶಕ್ತಿಯು ನನ್ನ ಹೆಗಲಿಗಿರುವುದೆಂದು ನಾನು ಎಷ್ಟು ಮಾತ್ರವೂ ನಂಬಿಲ್ಲ. ತಮ್ಮೆಲ್ಲರ ಸಹಕಾರ ಸಹಾನುಭೂತಿಗಳು ಸಂಪೂರ್ಣವಾಗಿ ನನಗೆ ದೊರೆಯುವುವೆಂಬ ಭರವಸೆಯೊಂದೇ ನನಗೆ ಇರುವ ಆಧಾರ

ನಾವು ಪರಸ್ಪರ ಸ್ನೇಹದಿಂದ—ನಿಜವಾದ ವಿಶ್ವಾಸ ಗೌರವಗಳಿಂದ—ಒಂದು ಕುಟುಂಬದಂತೆ ನಡೆದುಕೊಳ್ಳುವುದೆಂದು ನಾನು ಮನಃಪೂರ್ವಕ ನಂಬಿದ್ದೇನೆ ನಮ್ಮಲ್ಲಿ ಅಭಿಪ್ರಾಯ ಭೇದಗಳು ಕಾಣಬಹುದು ಅಭಿಪ್ರಾಯ ಭೇದಗಳು ಬೇಡವಾದರೆ ಈ ಮಂಡಲಿಯಲ್ಲಿ ನಾವಿಷ್ಟು ಮಂದಿಗಳು ಏಕಿರಬೇಕು? ಆಗ ಒಬ್ಬರ ಕೈಯಲ್ಲೇ ಎಲ್ಲವನ್ನೂ ಬಿಡಬಹುದು ಅಭಿಪ್ರಾಯ ಭೇದವಿಲ್ಲದೆ ಅಭಿಪ್ರಾಯ ಶೋಧನೆಯಾಗದು ಆದರೆ ಉದ್ದೇಶ ಭೇದವು ಮಾತ್ರ ಇರಬಾರದು ನಮ್ಮಲ್ಲಿ ಅದು ಇಲ್ಲ ನಮಗೆಲ್ಲ ಇರುವುದು ಒಂದೇ ಉದ್ದೇಶ, ಒಂದೇ ಆಶಯ ಅದು ನಮ್ಮ ಜನರ ಮತ್ತು ನಮ್ಮ ಭಾಷೆಯ ಮೇಲ್ಮೆ ಈ ಉದ್ದೇಶವನ್ನು ಸಾಧಿಸುವ ಕ್ರಮಗಳ ವಿಚಾರದಲ್ಲಿ ಅಭಿಪ್ರಾಯ ಭೇದವು ತೋರಬಹುದು ಆದರೇನು? ಚರ್ಚೆಯಲ್ಲಿ ಕೊಟ್ಟು ತೆಗೆದು, ಫಲಿತಾಂಶದಲ್ಲಿ ಒಮ್ಮನಸ್ಸಿನವರಾಗುವಷ್ಟು ಅನ್ಯೋನ್ಯ ವಿಶ್ವಾಸವೂ ಸಹನೆಯೂ ನಮಗೆ ಅಸಾಧ್ಯವೇನೂ ಅಲ್ಲ

ಪರಿಷತ್ತು ಇಷ್ಟು ಕಾಲವೂ ಮಾಡಿದ ಕೆಲಸವು ವ್ಯರ್ಥವಾಗಿಲ್ಲವೆಂಬುದರ ಸೂಚನೆಯ ಈಗ ಜನರಿಗೆ ಕಾಣಬರುತ್ತಿದೆ ಪರಿಷತ್ತು ಏನು ಮಾಡುತ್ತಿದೆ? ಏನು ಮಾಡಬೇಕಾಗಿದೆ ಎಂಬೀ ತರದ ಪ್ರಶ್ನೆಗಳನ್ನು ಮಹಾಜನರು ಕೇಳಲಾರಂಭಿಸಿದ್ದಾರೆ ಪರಿಷತ್ತು ತಮ್ಮ ಗಮನಕ್ಕೂ ಬೆಂಬಲಕ್ಕೂ ಅರ್ಹವಾದುದೆಂದು ಅವರು ಅಂಗೀಕರಿಸಿ ಜನಜೀವನದಲ್ಲಿ ಅದಕ್ಕೊಂದು ಮುಖ್ಯಸ್ಥಾನವುಂಟೆಂಬುದನ್ನೂ ಒಪ್ಪಿಕೊಂಡಿದ್ದಾರೆ ಇಂಥಾ ಸಮಯದಲ್ಲಿ ಮಹಾ ಜನರಿಗೆ ಸಮರ್ಪಕವಾಗುವಂತೆ ಕಾರ್ಯ ನಡೆಸಿ ಅವರ ಪ್ರೋತ್ಸಾಹಕ ಸಹಾಯಗಳನ್ನು ಸಂಪಾದಿಸಿ ಉಳಿಸಿಕೊಳ್ಳುವುದು ವಿಶೇಷ ಕಷ್ಟದ ಕೆಲಸವೆಂದು ನಾನು ತಿಳಿದುಕೊಂಡಿದ್ದೇನೆ

ನಮಗೆ ಹಣದ ಕೊರತೆಯೂ, ಜನಸಹಾಯದ ಕೊರತೆಯೂ ಇತರ ಕೊರತೆಗಳೂ ನಮ್ಮ ಉತ್ಸಾಹವನ್ನು ಕುಗ್ಗಿಸುವಷ್ಟು ಮಟ್ಟಿಗೆ ಇದೆ ಇವುಗಳ ನಡುವೆ ನಮಗಿರುವುದು ನಮ್ಮ ಒಗ್ಗಟ್ಟಿನ ಬಲವೊಂದೇ. ಇಲ್ಲಿರುವ ಕಾರ್ಯಗಳ ಭಾರವನ್ನೂ ನಾವೆಲ್ಲರ ಹಂಚಿಕೊಂಡು ಒಬ್ಬೊಬ್ಬರಿಗೆ ಒತ್ತಾಸೆಯಾಗಿ ನಿಂತು ಶ್ರದ್ಧೆಯಿಂದಲೂ ಒಂದು ಕ್ರಮವನ್ನನುಸರಿಸಿ ದುಡಿಯುವರೆ ದಾನಕಾರರ ಆಶ್ರಯವೂ ಮಹಾಜನರ ಬೆಂಬಲವೂ ನಮಗೆ ಹೆಚ್ಚು ಹೆಚ್ಚಾಗಿ ದೊರೆಯುವುವೆಂದು ನಾನು ದೃಢವಾಗಿ ನಂಬಿದ್ದೇನೆ

ಸ್ನೇಹಿತರೇ, ಪರಿಷತ್ತಿನ ಸದಸ್ಯರನ್ನು ಮುಖ್ಯತಃ ವಂದಿಸಿ, ಈ ತರದ ಒಂದೆರಡು ಬಿನ್ನಹಗಳನ್ನು ಅವರಿಗೆ ಶ್ರುತಪಡಿಸಲು ತಮಗೂ ನನಗೂ ಅವಕಾಶ ದೊರೆಯಲಿಲ್ಲ ಆದಕಾರಣ ಈಗ ಇಲ್ಲಿ ಆ ತಾತ್ಪರ್ಯದಿಂದ ಮಾತನಾಡಿದ್ದೇನೆ ನಮ್ಮೆಲ್ಲರಲ್ಲಿ ಈ ರೀತಿ ನಂಬಿಗೆ ತೋರಿ ಈ ಪರಿಷತ್ಸೇವಾ ಪ್ರಕಾಶವನ್ನು ನಮಗೆ ಕೊಟ್ಟಿರುವುದಕ್ಕಾಗಿ ತಮ್ಮೆಲ್ಲರ ಮತ್ತು ನನ್ನ ಪರವಾಗಿ ಪರಿಷತ್ತಿನ ಸದಸ್ಯರನ್ನು ವಂದಿಸಿ ನಮ್ಮ ಇಂದಿನ ಕಾರ್ಯಕ್ಕೆ ಹೊರಡೋಣ

ಉಪಾಧ್ಯಕ್ಷರಾದ ಶ್ರೀಮಾನ್ ಡಿ ವಿ ಗುಂಡಪ್ಪನವರು ಆ ರೀತಿ ಭಾಷಣ ಮಾಡಿದ ಮೇಲೆ ಕಾರ್ಯ ನಿರ್ವಾಹಕ ಮಂಡಲಿಯಿಂದ ಈ ರೀತಿ ನಿರ್ಣಯವು ನಡೆಯಿತು

ಬಹು ಭಾಷಾ ಪ್ರವೀಣರಾಗಿ ಕರ್ನಾಟಕ ಭಾಷೋಜ್ಜೀವನಕ್ಕಾಗಿ ಬಹು ಕಾಲದಿಂದ ಶ್ರಮಿಸುತ್ತ, ಕವಿಚರಿತ್ರೆ ಮೊದಲಾದ ಅನೇಕ ಗ್ರಂಥಗಳ ಮೂಲಕ ಈ ದೇಶದ ಜನ ಭಾಷೆ ಸಾಹಿತ್ಯ ಶಿಲ್ಪಾದಿ ವಿಚಾರಗಳ ಚರಿತ್ರೆಗೂ ವಾಙ್ಮಯಕ್ಕೂ ಅಸಾಧಾರಣವಾದ ಉಪಕಾರ ಮಾಡಿರುವ ಪ್ರಾಕ್ತನ ವಿಮರ್ಶ, ವಿಚಕ್ಷಣ, ರಾವ್ ಬಹದ್ದೂರು ಆರ್ ನರಸಿಂಹಾಚಾರ್ಯ, ಎಂ ಎ ಎಂ ಆರ್ ಎ ಎಸ್ ಇವರಿಗೆ ಸಾರ್ವಭೌಮ ಸರಕಾರದವರು ಮಹಾ ಮಹೋಪಾಧ್ಯಾಯ ಎಂಬ ಅನ್ವರ್ಥವಾದ ಬಿರುದನ್ನೂ ದಯಪಾಲಿಸಿರುವುದಕ್ಕಾಗಿ ಈ ಕಾರ್ಯ ನಿರ್ವಾಹಕ ಮಂಡಲಿಯು ಸಂತೋಷಿಸಿ ಪರಿಷತ್ತಿನ ಪರವಾಗಿ ಆಚಾರ್ಯರವರನ್ನು ಅಭಿನಂದಿಸುತ್ತದೆ ”

ಭೋಗಋಷಿ ಬ್ರಹ್ಮಾನಂದ ಕಲ್ಪ

ಎನ್ನುವ ಜೀವಾನಂದ.

ವೀರ್ಯ ವೃದ್ಧಿ ಲೇಹ

ಮಾನವ ಶರೀರದಲ್ಲಿ ಶುದ್ಧವಾದ ರಕ್ತವನ್ನೂ ಮತ್ತು ಧಾತುವನ್ನು ರಕ್ಷಿಸಿಕೊಳ್ಳುವುದಕ್ಕಿಂತ ಮೇಲಾದದ್ದು ಬೇರೊಂದಿಲ್ಲ ಈಗಿನ ಕಾಲದಲ್ಲಿ ಅನೇಕರು ಮೋಹಕ್ಕೆ ತಾಳಲಾರದೆ ಕೆಟ್ಟ ಸಹವಾಸಕ್ಕೆ ಸಿಕ್ಕಿ ಅಂದರೆ ಹಸ್ತ ಪ್ರಯೋಗದಿಂದಲೂ, ಹೆಂಗಸರ ಸಹವಾಸದಿಂದಲೂ, ಮತ್ತು ಇನ್ನೂ ಅನೇಕ ತರದ ಕೆಟ್ಟ ಚಾಳುಗಳಿಂದಲೂ ಶರೀರವನ್ನು ಕೆಡಿಸಿಕೊಂಡು ಪ್ರಾಯ ಸಮರ್ಥರಾದಾಗ ರತಿಸುಖಕ್ಕೆ ಶಕ್ತಿಯಿಲ್ಲದೆ ವ್ಯಸನಕ್ಕೆ ಗುರಿಯಾಗಿರುವರು, ಮತ್ತು ಇನ್ನೂ ಆಗುತ್ತಲೆ ಇರುವರು ಇವರ ಉಪಯೋಗಕ್ಕಾಗಿ, ಈ ಲೇಹ ಸೇವಿಸುವುದರಿಂದ ಸೊಂಟದ ನೋವನ್ನು ಕೈಕಾಲುಗಳ ನೋವನ್ನು ತಕ್ಷಣದಲ್ಲಿ ಹೋಗಲಾಡಿಸುವುದು



ಧಾತು ಹೋಗುತ್ತಿದ್ದರೂ, ಸ್ವಪ್ನೇಂದ್ರಿಯವಾಗುತ್ತಿದ್ದರೂ ಕೂಡಲೇ ನಿಲ್ಲಿಸುವುದು ಈ ಲೇಹ ಸೇವಿಸುವುದರಿಂದ ಮೇಲ್ಕಂಡ ವ್ಯಾಧಿಗಳನ್ನು ಗುಣಮಾಡುವುದಲ್ಲದೆ ರಕ್ತವನ್ನು ಹೆಚ್ಚಿಸಿ ಧಾತುವನ್ನು ಶೇಖರಿಸುವುದು ಮತ್ತು ಮುಖಕ್ಕೆ ಕಾಂತಿಯನ್ನುಂಟುಮಾಡಿ ಹಸನ್ಮುಖಿಗಳನ್ನಾಗಿ ಮಾಡುವುದು

ಈ ಲೇಹವು ಅನೇಕ ವಿಧವಾದ ವನಸ್ಪತಿಯ ಮೂಲಿಕೆಗಳಿಂದ ಬೆಳ್ಳಿ ಭಂಗಾರದ ಭಸ್ಮವನ್ನು ಸೇರಿಸಿ ತಯಾರಿಸಿದೆ ಈ ಲೇಹವನ್ನು ಸೇವಿಸಿ ಶರೀರದ ಎಲ್ಲಾ ವ್ಯಾಧಿಗಳನ್ನು ಹೋಗಲಾಡಿಸಿಕೊಂಡ ನಂತರ ರತಿ ಸುಖಕ್ಕೆ ಸೇರಿದರೆ ಪ್ರಪಂಚದ ಸುಖವನ್ನು ಬಹು ಚೆನ್ನಾಗಿ ಕಳೆಯುವುದಲ್ಲದೆ ಹುಟ್ಟುವ ಮಕ್ಕಳೂ ಖಾಯ ಪುಷ್ಟರಾಗುವವು ಈ ಲೇಹದ ವಿಷಯದಲ್ಲಿ ಬಹಳವಾಗಿ ಬರೆದು ತಿಳಿಸಲು ಬೇಡ ಬೆಳ್ಳಿ, ಭಂಗಾರ ಮತ್ತು ಸಾಚಾ ಮುತ್ತಿನ ಭಸ್ಮಗಳು ಈ ಲೇಹಕ್ಕೆ ಎಷ್ಟು ಮಾತ್ರವೂ ಸಮನಾಗಲಾರವು ೨೪ ತೊಲೆ ಡಬ್ಬಿ ೧ಕ್ಕೆ ರೂ ೨—೦—೦

ಒಂದೇ ಸಲ ೨ ಡಬ್ಬಿ ೪೮ ತೊಲೆ ತರಿಸಿದರೆ

ಕ್ರಯ ರೂ ೩—೮—೦

ಲೀಲ ಅತಿ ಸಯನ

(ಮೇಲೆ ಸವರುವುದಕ್ಕೆ)

ಮನುಷ್ಯರಲ್ಲಿ ಪುರುಷಾರ್ಥವು ಕೇವಲ ಧಾತುವಿನಿಂದಲೇ ಇರುವದು ಮನುಷ್ಯರ ದೂಷಿತ ವೀರ್ಯವು ಗರ್ಭಕಾರಕವಾಗಲಾರದು ಅತ್ಯಂತ ಮೈಥುನದಿಂದಲೂ ವ್ಯಾಯಾಮ (ಕಸರತ್) ದಿಂದಲೂ ಯಾವಾಗಲೂ ಕೂತುಕೊಂಡೇ ಇರುವುದರಿಂದಲೂ, ಹಸ್ತ ಪ್ರಯೋಗಾದಿಗಳಿಂದಲೂ, ಸ್ತ್ರೀ ಸಂಬಂಧ ವ್ಯಾಧಿಯಿಂದಲೂ, ಪ್ರಾಯ ಜಾಸ್ತಿ ಆದ್ದರಿಂದಲೂ ಶರೀರದ ಎಲ್ಲಾ ನಾಡಿಗಳು ಬಲಹೀನವಾಗುವುದರಿಂದ ಪುರುಷತ್ವವು ಬಲಹೀನವಾಗಿ ಸ್ತ್ರೀ ಸಂಗ ಮಾಡುವುದಕ್ಕೆ ಆಗುವುದಿಲ್ಲ ಕೆಲವರು ಬಾಲ್ಯದಲ್ಲಿಯೂ ವೃದ್ಧಾಪ್ಯ (ಮುದುಕತನ) ದಲ್ಲಿಯೂ ಇಂತಹ ವ್ಯಾಧಿಗಳನ್ನು ಉಂಟುಮಾಡಿಕೊಂಡು ತಮಗಿರುವ ವ್ಯಾಧಿಯನ್ನು ವೈದ್ಯರಲ್ಲಿ ಹೇಳಲು ನಾಚಿಕೆಯಿಂದ ವ್ಯಾಧಿಯನ್ನು ಹೆಚ್ಚು ಮಾಡಿಕೊಂಡು ಪ್ರಾಯ ಸಮರ್ಥರಾದಾಗ ಸ್ತ್ರೀಸುಖಕ್ಕೆ ಶಕ್ತಿಯಿಲ್ಲದೆ ಲಜ್ಜಾಸ್ಪದದಿಂದ ಅಸಭ್ಯರಾಗಿ ಮನೋವ್ಯಥೆಯನ್ನುಂಟುಮಾಡಿಕೊಳ್ಳುವರು ಇಂಥವರ ಉಪಯೋಗಕ್ಕೋಸ್ಕರವಾಗಿ ದೊಡ್ಡ ಡಾಕ್ಟರುಗಳಿಂದ ತಯಾರು ಮಾಡಲ್ಪಟ್ಟಿದೆ

ಕ್ರಯ ಬಾಟ್ಲಿ ಒಂದಕ್ಕೆ ರೂ ೨—೧—೦

ಒಂದೇ ಸಲ ಎರಡು ಡಬ್ಬಿ ಮೇಲ್ಕಂಡ ಲೇಹವೂ ಒಂದು ಬಾಟ್ಲಿ ಲೀಲ ಅತಿ ಶಯನ ತರಿಸಿಕೊಂಡರೆ ಕ್ರಯ ರೂ. ೫—೦—೦.

Lakshminarayana OUSHADA SALA,

POST BOX No., 53 MADRAS.

ಲಕ್ಷ್ಮೀನಾರಾಯಣ ಔಷಧ ಶಾಲೆ,

ಪೋಸ್ಟು ಬಾಕ್ಸ್ ನಂ., 53 ಮದರಾಸು.

ಲಂಡನಿನಲ್ಲಿ ನಾಯಿಯು ಒಂದು ಕುಟುಂಬವನ್ನು ರಕ್ಷಿಸಿತು !!

ಕನ್ನಡದಲ್ಲಿ ಮಾತಾಡುವ ಚಲಚ್ಚಿತ್ರ.

ಹಿಂದೂದೇಶದ ಹೆಚ್ಚಾದ ಎಲ್ಲಾ ಭಾಷೆಗಳಲ್ಲಿ ಮಾತಾಡುವ ಚಲಚ್ಚಿತ್ರಗಳು ತಯಾರಾಗಿವೆ ಈ ತನಕ ಕನ್ನಡ ಭಾಷೆಯಲ್ಲಿ ತಯಾರಾಗಿಲ್ಲ ಆದರೆ ಕನ್ನಡಿಗರ ಈ ಕುಂದನ್ನು ಅಳಿಸಬೇಕೆಂದು ಮೈಸೂರವರು ಹೊಂಟಿಕಟ್ಟಿದ್ದಾರೆ 'ಧ್ರುವ ಕುಮಾರ್' ಎಂಬ ಭಕ್ತಿ ರಸಭರಿತವಾದ ಚಿತ್ರವನ್ನು ತಯಾರಿಸಿ ಇದೇ ಫೆಬ್ರವರಿ ೧೫ನೆಯ ತಾರೀಕಿನ ಒಳಗಾಗಿ ಪ್ರದರ್ಶನಕ್ಕೆ ಕೊಡುವರೆಂದು ತಿಳಿದಿದೆ. ಚಿತ್ರ ತೆಗೆಯುವ ಕಾರ್ಯವು ಮುಂಬಾಯಿಯ ಅಜಂತ ಚಲಚಿತ್ರ ಕಾರ್ಯಾಲಯದಲ್ಲಿ ಇದೇ ತಿಂಗಳ ಆದಿಯಲ್ಲಿ ಪ್ರಾರಂಭವಾಗಿದೆ. ಇದು ಯಶಸ್ವಿಯಾಗಿ ಚಲಚ್ಚಿತ್ರಗಳನ್ನು ಮಾರಿಕೆಂದರೆ ಕನ್ನಡಿಗರಿಗೂ ಗೌರವವಲ್ಲವೇ? ಈ ಕಥೆಯನ್ನು ಚಲಚ್ಚಿತ್ರಕ್ಕೊಪ್ಪುವಂತೆ ಬರೆದವರು ಶ್ರೀ ದೇವುಡು ನರಸಿಂಹ ಶಾಸ್ತ್ರಿ, ಎಂ ಎ ದೃಶ್ಯಗಳ ಸೂತ್ರಧಾರತ್ವವನ್ನು ಅವರೇ ವಹಿಸಿಕೊಂಡಿರುತ್ತಾರೆ ಈ ಹೊಸ ಚಿತ್ರದಲ್ಲಿ ಕರ್ನಾಟಕ ರಂಗಭೂಮಿಯಲ್ಲಿ ಮೆರೆದವರಲ್ಲಿ ಆರಿಸಿದ ನಟನಟಿಯರೇ ಭಾಗ ವಹಿಸುವರು. ಅವರಲ್ಲಿ ಪ್ರಮುಖ ಪಾತ್ರ ವಹಿಸುವವರೇ ನಟಶಿರೋಮಣಿ ಎಂದು ಬಿರುದು ಪಡೆದ ದಿವಂಗತ ಎ ವಿ ವರದಾಚಾರ್ಯರ ಶಿಷ್ಯರೇ

ಪಾತ್ರಗಳ ವಿವರ—ಉತ್ತಾನಪಾದ (ಅರಸು) ಶ್ರೀ ಜಿ ನಾಗೇಶ ರಾವ, ಕಟಂಜಲ (ವಿದೂಷಕ)—ಶ್ರೀ ಎಂ ಜಿ ಮರಿರಾವ್, ದುರ್ಧರ (ಚಾಂಡಾಲ)—ಶ್ರೀ ಸೀತಾರಾಮು (ಈ ಮೂವರು ವರದಾಚಾರ್ಯರಿಗೆ ಶಿಷ್ಯರು) ನಾರದ—ಶ್ರೀ ಟಿ ದ್ವಾರಕನಾಥ, ಬಿ. ಎ. (ವರದಾಚಾರ್ಯರ ಸೋದರಳಿಯ) ಧ್ರುವ—ಮಾಸ್ಟರ್ ಮುತ್ತು (ವರದಾಚಾರ್ಯರ ಮೊಮ್ಮಗ) ಸುನೀತಿ (ಹಿರಿಯ ರಾಣಿ)—ಶ್ರೀಮತಿ ಕನಕಲಕ್ಷ್ಮೀ ದೇವಿ, ಎಂ ಎ ಸುರುಚಿ (ಎರಡನೇಯ ರಾಣಿ)—ಶ್ರೀಮತಿ ಶ್ರೀದೇವಿ (ಇವರಿಬ್ಬರು ವರದಾಚಾರ್ಯರ ಸೊಸೆಯರು) ಕುಮುದಿನಿ (ರಾಣಿಯ ಸಖಿ) ಶ್ರೀಮತಿ ಎಸ್ ಸುನಂದಿದೇವಿ ವೇತ್ರವತಿ (ರಾಣಿಯ ಸಖಿ)—ಶ್ರೀಮತಿ ಲಕ್ಷ್ಮೀದೇವಿ ಉತ್ತಮ—ಮಾಸ್ಟರ್ ಕೃಷ್ಣಮೂರ್ತಿ ಮಹಾ ವಿಷ್ಣು—ಮಾಸ್ಟರ್ ಪ್ರಸಾದ

ಕನ್ನಡಕಗಳ ಪ್ರಾಚೀನತೆ

ಗಾಂಧಿಯು ಕನ್ನಡಕವನ್ನು ಕಂಡು "ಇವನೇನು ಅಪ್ ಟು ಡೇಟ್ ಮನುಷ್ಯ" ಎಂದೆನ್ನುವವರಿದ್ದಾರೆ ಕನ್ನಡಕವೆಂಬುದು ಆಧುನಿಕ ನೇತ್ರೋಪಕರಣವಲ್ಲ—ಈಗಿನವರಿಗೆ ಅದು ನೇತ್ರಭೂಷಣಪ್ರಾಯ ವಿಷಯವೆಂದಾದರೂ, ಪುರಾತನ ಕಾಲದವರಿಗೆ ಅದು ಅತ್ಯವಶ್ಯ ವಸ್ತುವಾಗಿದ್ದಿತು ಈಗಿನ ಕಾಲದಲ್ಲಿ ಮಕ್ಕಳೂ ಕನ್ನಡಕ ಧರಿಸುವನ್ನು ಆದರೆ ಮುಂಚೆ ಅಂತಹ ಸೂಕ್ಷ್ಮ ಕೆಲಸಗಾರರು ಮಾತ್ರ ಅವುಗಳನು ಧರಿಸುತ್ತಿದ್ದರು ಈ ಕನ್ನಡಕಗಳು ನಮ್ಮ ಕಾಲದಲ್ಲಿ ಹುಟ್ಟಿದುವೆಂದು ತಿಳಿಯಬಾರದು ಈಗ್ಗೆ ೬೦೦೦ ವರ್ಷಗಳ ಹಿಂದೆ ಜೀವಿಸುತ್ತಿದ್ದ ಅಂಟ್ಲಾಂಟಿಯನರೆಂಬ ಒಂದು ಜಾತಿಯ ಜನರು ಕನ್ನಡಕವನ್ನು ಉಪಯೋಗಿಸುತ್ತಿದ್ದರು, ಚೀನಾ ಎಂಬ ಪ್ರಾಚೀನ ಪ್ರಾಂತ್ಯದಲ್ಲಿ ಶೋಧ ನಡೆಸಲಾಗಿ ಅಲ್ಲಿ ೩೬೦೦ ವರ್ಷಗಳ ಹಿಂದೆ ಅಲ್ಲಿಯ ಜನರು ಗಾಜು ಮಾಡುವ ವಿಧಾನವನ್ನು ಕಲಿತು ಕನ್ನಡಕಗಳ ಉಪಯೋಗವನ್ನು ತಿಳಿದಿದ್ದರು. ೪೦೦೦ ವರ್ಷಗಳ ಹಿಂದಿನ ಈಜಿಪ್ತ ದೇಶದವರು ಬೆಣಚು ಗಲ್ಲಿನಿಂದ ಕನ್ನಡಕಗಳನ್ನು ತಯಾರಿಸಿ ಉಪಯೋಗಿಸುತ್ತಿದ್ದರೆಂದು ಗೊತ್ತಾಗಿದೆ. ಬೆಬಿಲೋನಿನ ಶಿಲ್ಪಿಗಳು ಭೂತಕನ್ನಡಿ ವಿನಹ ಅವರ ಕೆತ್ತನೆಯ ಕೆಲಸಗಳನ್ನು ಮಾಡಲು ಅಸಾಧ್ಯವೆಂದೇ ತೀರ್ಮಾನಿಸಲಾಗಿದೆ, ರೋಮ್ ನಗರವು ಬೆಂಕಿಯಿಂದ ಉರಿಯುತ್ತಿದ್ದಾಗ ಪಿಟೀಲನ್ನು ಬಾರಿಸಿ ಆನಂದಿಸುತ್ತಿದ್ದ ನೀರೋ ರಾಜನು ದೂರದ ನಿರೂಪವು ಓದುವಾಗ ದಪ್ಪ ಕನ್ನಡಕವನ್ನು ಉಪಯೋಗಿಸುತ್ತಿದ್ದನಂತೆ

ಸ್ತ್ರೀ ಸಾಹಸ!

ಸರೋಜಿನಿ ದತ್ ಎಂಬ ಬಂಗಾಳಿ ಯುವತಿಯೋರ್ವಳು ಬಡ್ಡ ಜನರಿಗೆ ವೈದ್ಯ ಸಹಾಯವನ್ನು ಮಾಡಬೇಕೆಂದು, ವೈದ್ಯ ವಿದ್ಯೆಯನು ಕಲಿತು, ಸಂಪಾದನೆ ಮಾಡಿ, ತಾನು ಬಹಳ ಸರಳ ಜೀವನವನ್ನು ನಡೆಸುತ್ತಾ ಎರಡು ಲಕ್ಷ ರೂಪಾಯಿಗಳನ್ನು ಉಳಿಸಿದಳು ಈಗ, ವಾರ್ಷಿಕ ಉತ್ಪತ್ತಿ ರೂ ೧೨೦೦ ದೊರೆಯುವ ಒಂದು ಆಸ್ತಿಯನ್ನು ತೆಗೆದುಕೊಂಡು ಕಲ್ಕತ್ತೆಯ ಆಸ್ಪತ್ರೆಯಲ್ಲಿ ಬಡವರಿಗೆ ಧರ್ಮಾರ್ಥವಾಗಿ ಶಸ್ತ್ರಚಿಕಿತ್ಸೆಯನ್ನು ಮಾಡಿಸಬೇಕೆಂದು ಆಸ್ತಿಯನ್ನು ಅವರ ವಶಕ್ಕೊಪ್ಪಿಸಿರುವಳು. ಈ ಚಿಕಿತ್ಸಾಲಯಕ್ಕೆ ಈಗ ಸರೋಜಿನೀ ದತ್ ಸರ್ಜಿಕಲ್ ವಾರ್ಡ್ ಎಂಬ ಹೆಸರು ಬಂದಿದೆ

ಗಡಿಯಾರವು ಸರಿಯಾಗಿ ನಡೆಯಬೇಕೆ—

ಬೇಲಜಿಯಂ ದೇಶದವನೊಬ್ಬ ಹಿಂದೀಯ ವಿದ್ಯಾರ್ಥಿಯು ಗಡಿಯಾರಗಳೆಲ್ಲಾ ಒಂದೇ ರೀತಿಯ ಸಮಯವನ್ನು ಕೊಡುವುದಕ್ಕಾಗಿ ಒಂದು ವಿದ್ಯುತ್ ಯೋಜನೆಯನ್ನು ಹೂಡಿರುವನು ಯಾವುದಾದರೂ ಒಂದು ಸ್ಥಳದಲ್ಲಿ ಸರಿಯಾದ ಕಾಲವನ್ನು ತೋರಿಸುವ ಒಂದು ಗಡಿಯಾರವನ್ನಿಟ್ಟು, ಅದಕ್ಕೂ ಪ್ರಪಂಚದ ಮೇಲೆ ಎಲ್ಲಿ ಬೇಕಾದರೂ ಅದೇ ಸಮಯವನ್ನು ತೋರಿಸುವ ಇತರ ಗಡಿಯಾರಗಳಿಗೂ ರೇಡಿಯೋ ಸಂಬಂಧವನ್ನು ಯೋಜಿಸಿ, ತಪ್ಪು ಗಂಟೆ ತೋರಿಸುವ ಘಂಟೆಯು ಮುಂದಕ್ಕೆ ಸರಿಯಾದ ಸಮಯವನ್ನು ತೋರಿಸುವಂತೆ ಮಾಡಬಹುದು.

ಕಳಾಯಿಯ ಪ್ರಯೋಜನ!

ಬರ್ಮಾದ ಬೆಸಿನ್ ಜಿಲ್ಲೆಯಲ್ಲಿ ಒಂದು ಸಂಸಾರವು ರಾತ್ರಿ ಊಟ ಮಾಡಿತು, ಮರುದಿನ ಬೆಳಿಗ್ಗೆ ಎಲ್ಲರೂ ಅಸ್ವಸ್ಥ—ಕೆಲವು ತಾಸುಗಳಲ್ಲಿ ಒಬ್ಬನು ತೀರಿಕೊಂಡನು, ಮಧ್ಯಾಹ್ನ ಮತ್ತೊಬ್ಬನು ಮಡಿದನು ಆಹಾರವನ್ನು ಪರೀಕ್ಷಿಸಲಾಗಿ ಆ ಪಾತ್ರೆಯಲ್ಲಿ ಕಲಾಯಿ ಇಲ್ಲದ್ದ ಕಿಲುಬಿನಿಂದಾಗಿ ಅವರು ಪರಲೋಕವಾಸಿಗಳಾದರೆಂದು ತಿಳಿದು ಬಂತು

ಸುತ್ತಿದ ತನಿ ಬಿಡನು!

ಸಿಲೋನ್‌ನಲ್ಲಿ ಒರದು ಖೂನಿ ಮೊಕದ್ದಮೆಯಲ್ಲಿ ದಸ್ತಗಿರಿ ಮಾಡಲ್ಪಟ್ಟ ಒಬ್ಬನು ತಾನು ನಿರಾಪರಾಧಿಯೆಂದು ಅಪಮಾನವನ್ನು ಸೈರಿಸಲಾರದೆ ತಾನಿದ್ದ ಕೋಣೆಯ ಮೇಲಿನಿಂದ ಕೆಳಗೆ ಬಿದ್ದು ಆತ್ಮಹತ್ಯೆ ಮಾಡಿಕೊಳ್ಳಲು ಯತ್ನಿಸಿದನು. ಆದರೆ ಅದರಿಂದ ರಕ್ಷಿತನಾದನು. ಅವನನ್ನು ಹೇಗೂ ಮಾಡಿ ಬದುಕಿಸಿದರು ಖೂನಿ ವಿಚಾರಣೆಯಾ? ಅವನಿಗೆ ಮರಣ ದಂಡನೆಯು ವಿಧಿಸಲ್ಪಟ್ಟಿತು ಅವನು ಅಪೀಲು ಮಾಡಲು ಅದರಿಂದ ವಿಮುಕ್ತನಾದನು ಈಗ ಅವನ ಮೇಲೆ ಆತ್ಮಹತ್ಯೆಯತ್ನದ ತಕ್ರಾರು ಸ್ಥಾಪಿತವಾಗಿದೆ.

ವಿಚಿತ್ರ ಕುತೂಹಲ!

ರಂಗೂನಿನ ನೌಕ್ಷನ ಮುನಿಸಿಪಾಲ್ ಮೆಂಬರುಗಳ ಚುನಾವಣೆಯಲ್ಲಿ ವಿಚಿತ್ರ ಕುತೂಹಲಗೊಂಡು ಒಬ್ಬ ಹೆಸರುವ ಸಿ ಗೃಹಸ್ಥ ಉಮೇದ್ವಾರನು ಒಂದೆರಡು ದಿನಗಳ ಮಟ್ಟಿಗೆ ಒಂದು ವಿಮಾನವನ್ನೇ ಬಾಡಿಗೆಗೆ ಹಿಡಿದು ಹಸ್ತ ಪತ್ರಿಕೆಗಳನ್ನು ಅಂತರಿಕ್ಷದಿಂದ ಚೆಲ್ಲಿಸಿದನು ಇವನು ಜಯಶೀಲನಾಗುವ ಸಂದರ್ಭ ಎಂದೂ ಇಲ್ಲವೆಂದು ಅಲ್ಲಿಯ ಪತ್ರಿಕೆಯು ಬರೆದಿದೆ

ನಾಯಿಯು ಇಡೀ ಕುಟುಂಬವನ್ನು ರಕ್ಷಿಸಿತು.

ಲಂಡನಿನಲ್ಲಿನ ಕಿಂಗ್ಸ್‌ಟನ್ ಎಂಬಲ್ಲಿ ಮಿ ಎಸ್ ಸೋಪರ್ ಎಂಬವರು ಮಹಡಿಯ ಮೇಲೆ ಸಕುಟುಂಬರಾಗಿ ನಿದ್ರಿಸುತ್ತಿದ್ದಾಗ ಮಧ್ಯರಾತ್ರಿ ರೋವರ ಎಂಬ ನಾಯಿಯು ಮಾಳಿಗೆ ಹತ್ತಿ ಬಾಗಿಲು ಪರಚತೊಡಗಿತು ಮನೆಯವರು ಎದ್ದು ನಾಯಿಯ ಹಿಂದೆ ಹೋದಾಗ ಕೆಳ ಮನೆಯು ಬೆಂಕಿಯಿಂದಾವೃತವಾಗಿದ್ದಿತು ನಾಯಿಯು ಒಂದು ಕುಟುಂಬವನ್ನೇ ರಕ್ಷಿಸಿತು

ಪಂಡಿತ ತಾರಾನಾಥರ ಹೊಸ ಮಾರ್ಗ

ಧಾರವಾಡದ ಕರ್ನಾಟಕ ಸಂಘದಲ್ಲಿ ತುಂಗಭದ್ರೆಯ ಪಂಡಿತ ತಾರಾನಾಥರು ಹೀಗೆಂದಿರುವರು —

ಇತ್ತೀಚೆಗೆ ನಮ್ಮ ಕರ್ನಾಟಕಸ್ಥರು ಹಿಂದಿನ ಗತವೈಭವದ ವಿಷಯಗಳನ್ನು ಹಾಡಿ ಚರ್ಚಿಸಿ ಅಲ್ಲಿ ತಮ್ಮ ಅಮೂಲ್ಯವಾದ ವೇಳೆಯನ್ನು ಹಾಳು ಮಾಡುತ್ತಿರುವರು ಪರರ ಉತ್ಕರ್ಷವನ್ನು ನೋಡಿ ಸಮಾಧಾನಪಟ್ಟು ತಾವೂ ಅದರಂತೆಯೇ ಸಾಹಸಿಗಳಾಗದೆ ಅಸೂಯೆ ಪಡುವರು ಇದು ನಮ್ಮ ಅಜ್ಞಾನದ ಲಕ್ಷಣ ಪರರಾಷ್ಟ್ರದವರು ಉತ್ಕರ್ಷಗೇರಿದ ಮಾರ್ಗದಿಂದಲೇ ನಮ್ಮ ಜನಾಂಗದವರೂ ಇಲ್ಲಿಯ ಪರಿಸ್ಥಿತಿಯನ್ನವಲೋಕಿಸದೆ ಕಾರಿಗನಂತೆ ಆ ಮಾರ್ಗವನ್ನೇ ಅವಲಂಬಿಸಿರುವರು ಮಹಾರಾಷ್ಟ್ರೀಯರು ಶಿವಾಜಿ ಮಹಾರಾಜನ ನೆನಪಿನಿಂದ ಇಷ್ಟು ಪ್ರಶಸ್ತಿಯನ್ನು ಪಡೆದರೆಂದು ತಿಳಿದರೆ ನಾವಾದರೂ ವಿಜಯನಗರದ ನೆನಪಿನಿಂದ ಜಗತ್ತಿನಲ್ಲಿ ಮಾನ್ಯರಾಗುವೆವೆಂದು ತಿಳಿಯುವುದು. ಪಟಮಾರಿತನ ನಮ್ಮ ಸುತ್ತುಮುತ್ತಲಿನ ಪರಿಸ್ಥಿತಿಯನ್ನು ನಾವು ಚನ್ನಾಗಿ ಅವಲೋಕಿಸಬೇಕು. ವಿಜಯನಗರವು ದೊಡ್ಡ ಸಾಮ್ರಾಜ್ಯವಿದ್ದರೆ ಅದು ಎಲ್ಲ ರೀತಿಯಿಂದಲೂ ಪರಿಪೂರ್ಣವಿತ್ತೆಂದು ಹೇಳುವುದು ಸಾಹಸದ ಕೆಲಸ. ವಿದ್ಯಾರಣ್ಯರ ಹೆಸರನ್ನು ಬಿಟ್ಟರೆ ಆ ರಾಜ್ಯದಲ್ಲಿ ಮತ್ತೊಬ್ಬ ವಿಭೂತಿಯ ಹೆಸರಿಲ್ಲ ಆ ರಾಜ್ಯದಲ್ಲಿ ಎಲ್ಲಿ ನೋಡಿದರೂ ಹಾಳಾದ ಗುಡಿ, ಸೂಳೆಗೇರಿ ಮೊದಲಾದ ಅರಮನೆಯ ಕುರುಹುಗಳೇ ಸಿಗುವುವು. ಒಂದು ವಿಶ್ವವಿದ್ಯಾಲಯವಿದ್ದುದರ ಕುರುಹು ಇಲ್ಲ ಔಷಧಾಲಯದ ಕುರುಹಿಲ್ಲ ಇಂತಹ ರಾಜ್ಯದ ನೆನಪು ಮಾಡುವುದೆಂದರೆ ಅಜ್ಞಾನದ ಪರಮಾವಧಿ ನಮ್ಮ ಕೀರ್ತಿಯನ್ನು ಉಳಿಸಿಕೊಳ್ಳಬೇಕಾದರೆ ಈ ತರಹದ ವ್ಯಸನ ವಿಷಯಗಳ ಮೇಲೆ ಲಕ್ಷ್ಯ ಬಿಡದೆ ಕರ್ನಾಟಕಕ್ಕೆ ಅಲ್ಲದೆ, ಇಡೀ ಪ್ರಪಂಚಕ್ಕೆ ಸಹಾಯಕಾರಿಯಾಗುವ ವರ್ತನೆಯು ಬೇಕು ಪರಕೀಯರಿಗೆ ಮಾನಮಾಡಬೇಕಾದರೆ ನಮ್ಮ ಗತವೈಭವವನ್ನು ನೆನಸಿ ಹಾಳುಹಂಪೆಯ ಗುಡಿಗೋಪುರಗಳನ್ನು ತೋರಿಸಿ ಅವನಿಗೆ ಮಾನ ಕೊಡುವುದೇ?

ಇಂತಹ ಹಾಳು ವಿಚಾರಗಳಲ್ಲಿ ನಮ್ಮ ವೇಳೆಯನ್ನು ಕಳೆಯದೆ ಕರ್ನಾಟಕದ ನಿಜವಾದ ಅಭ್ಯುದಯಕ್ಕಾಗಿ ಯತ್ನಿಸಬೇಕು, ಹೀಗಾಗಬೇಕಾದರೆ ನಮ್ಮ ಸಾಹಿತ್ಯವು ಸರ್ವತೋಮುಖವಾಗಬೇಕು ಅದರಲ್ಲಿಯೇ ನಮ್ಮ ಅಭ್ಯುದಯದ ಮಾರ್ಗ ಅದನ್ನನುಸರಿಸುವುದೇ ನಮ್ಮ ದಾರಿ

ದಕ್ಷಿಣ ಕನ್ನಡ ಜಿಲ್ಲಾ ಬಂಧುಗಳಲ್ಲಿ ವಿನಂತಿ

ಮಹಾತ್ಮಾಜಿಯವರು ನಮ್ಮ ಜಿಲ್ಲಾ ಸಂದರ್ಶನವನ್ನು ಮುಂದೆ ಹಾಕಿರುವ ಸಮಾಚಾರವು ಜಿಲ್ಲೆಯ ಜನರಲ್ಲಿ ಅತಿ ಸಹಜವಾಗಿ ಒಂದೊಮ್ಮೆ ನಿರುತ್ಸಾಹವನ್ನುಂಟುಮಾಡದಿರದು ದೇಶದ ಸನ್ಮಾನ್ಯ ಹಾಗೂ ಸುಪ್ರೀತ ಮುಖಂಡರಾದ ಗಾಂಧಿಯವರಿಗೆ—ಯೋಗ್ಯ ಸ್ವಾಗತ ಸತ್ಕಾರವೀಯಲು ದಕ್ಷಿಣ ಕನ್ನಡಿಗರೆಲ್ಲರೂ ವಿಚಿತ್ರ ಉತ್ಸಾಹದಿಂದ ತಕ್ಕ ಏರ್ಪಾಡು ಮಾಡಿಕೊಂಡಿದ್ದರು ನಮ್ಮ ಪವಿತ್ರ ಜನ್ಮ ಭೂಮಿಯಲ್ಲಿ ನಾವೆಲ್ಲಿದ್ದರೂ ಗಾಂಧೀಜಿಯವರ ಅತ್ಮಕಿರಣಗಳು ನಮ್ಮ ಮೇಲೆ ಬೆಳಗದಿರವೆಂದು ನನ್ನ ನಂಬಿಕೆ ಗಾಂಧಿಯವರ ಆತ್ಮ ಪ್ರಭಾವವು, ದೀನ ಹರಿಜನ ಬಂಧುಗಳ ಕಡೆಗಣ ನಮ್ಮ ಕರ್ತವ್ಯವನ್ನು ನೆರವೇರಿಸಲು ನಮಗೆ ಶಕ್ತಿಯನ್ನೀಯಲಿ ನಾವೆಲ್ಲರೂ ಉತ್ಸಾಹಗುಂದದೆ, ಹರಿಜನ ಸ್ವಯಂ ಸೇವಕ ದಳದ ಬೆಂಬಲದಿಂದ ಆದಷ್ಟು ಹರಿಜನ ಫಂಡನ್ನು ಸಂಗ್ರಹಿಸುತ್ತ, ಹರಿಜನೋದ್ಧಾರ ಕಾರ್ಯವನ್ನು ನಡೆಸುತ್ತಾ, ಆದಷ್ಟು ಬೇಗನೆ ಗಾಂಧಿಯವರ ಸಂದರ್ಶನ ಭಾಗ್ಯದ ಅರ್ಹತೆಯನ್ನು ನಮ್ಮ ಜಿಲ್ಲೆಗೆ ದೊರೆಯುವಂತಾಗಲೆಂದೇ ನನ್ನ ವಿನಯಪರ ಹಾಗೂ ಅಂತಃಕರಣ ಪೂರ್ವಕ ಪ್ರಾರ್ಥನೆ

ಉಪೇಂದ್ರ ಪೈ ಮುಲ್ಕಿ

Proceedings of the Director of Public Instructions

Dis No 4846 of 1933

Dated 6—12—33

Extract from the letter No 67/33 dated 14 1 1933 from the Correspondent S M S P Sanskrit College Udipi to the Superintendent of Sanskrit Schools Madras

I have the honour to state that this Institution is prepared to give admission to it and qualified students and no student will be refused admission on the ground of the community to which he belongs

Copy communicated to Mr A Subbaraya Sarma Hindu Missionary Sringeri for information

(By order)

Sd V Kalyana Raman

Ag Senior Superintendent

(True copy)

RAJULU & Co.,

Are pleased to announce that in view of the increasing popularity of Morris, Dodge and Crysler Cars in South Kanara and for the convenience of present and prospective clients, a Sales and Service Station has been opened at Cantonment Road, Maidan View Mangalore

RAJULU & Co

Authorized District Dealers for West Coast for Addison & Co Ltd Madras

ಮೋರಿಸ್, ಡೋಜ್ ಮತ್ತು ಕ್ರೈಸ್ಲರ್—ಈ ಕಾರುಗಳ ಮೇಲಿನ ಜನತೆಯ ಅಭಿಮಾನವು ದಿನೇ ದಿನೇ ಹೆಚ್ಚುತ್ತಿರುವುದರಿಂದಲೂ, ಈಗಿನ ಮತ್ತು ಮುಂದಿನ ಗಿರಾಕಿಗಳಿಗೆ ಸೌಕರ್ಯವನ್ನು ಒದಗಿಸಿಕೊಡಬೇಕೆಂಬುದರಿಂದಲೂ ಮಂಗಳೂರಿನ ಮೈದಾನ ಬಳಿಯ ಕೆಂಟೋನ್ಮೆಂಟ್ ರಸ್ತೆಯಲ್ಲಿ, ಮಾರಾಟದ ಮತ್ತು 'ಸರ್ವೀಸಿನ' ಒಂದು ಹೊಸದಾದ 'ಸ್ಟೇಶನನ್ನು' ಈಗ ತೆರೆದಿದೆ ಎಂದು ಪ್ರಕಟಿಸಲು ಸಂತೋಷಪಡುತ್ತೇವೆ

ರಾಜುಲು ಅಂಡ್ ಕೋ.

ಎಡಿಸನ್ ಮತ್ತು ಕಂಪೆನಿ, ಮದ್ರಾಸ್ (ಇವರ ಪಶ್ಚಿಮ ಕರಾವಳಿಗೆಲ್ಲ ಅಧಿಕಾರ ಹೊಂದಿದ ಜಿಲ್ಲಾ ವಹಿವಾಟುಗಾರರು)

22/12

ಜನಾಂ! 12 ಸೆಂಟ್ ಪಾಟ್ಲಿಗಳು!

ಬೆಸ್ಟ್ ಫೌಂಟನ್ ಪೆನ್—16 ಆಣೆ



ಬ್ರಿಟಿಷ್ ಮೇಡ್, ಕ್ಯಾರೆಟ್ ಬಂಗಾರದ ಮುಳ್ಳು ಹಾಕಿದೆ. ಅಕ್ಷರಗಳು ಮುತ್ತುಗಳ ಹಾಗೆ ಮುದ್ದಾಗಿ ಬರೆಯುವುದು. ಇದನ್ನು ಈ ತಿಂಗಳ ಒಳಗೆ ತರಿಸಿಕೊಳ್ಳುವವರಿಗೆ 1 ಡಜನ್ ರೋಸ್, ಜಸ್ಮಿನ್ ಹಾಗೆ ಮೊದಲಾದ ಪರಿಮಳ ದ್ರವ್ಯದ ಸೀಸೆಗಳು ಬಹುಮಾನವಾಗಿ ಕೊಡಲ್ಪಡುತ್ತವೆ. ಕಡಿಮೆ ಕ್ರಯ ಪೇನಾ ಕ್ಕೆ 16 ಆಣೆ ಮಾತ್ರ

ಸಿ ರಾಜ ಅಂಡ್ ಕಂಪೆನಿ,

28 ಪೆರುಮಾಳ್ ಕೋಯಿಲ್ ಗಾರ್ಡನ್ ಬೀದಿ,

ಸಾಹುಕಾರ ಪೇಟೆ, ಮದ್ರಾಸ್

ಶಾಲಿವಾಹನಶಕ [illegible], ಗತಾಬ್ದಗಳು ಶ್ರೀಮುಖ ಸಂವತ್ಸರದ ಮಾಘ ಶು॥ ೫ ಶನಿವಾರದಿಂದ ಶ್ರೀಮುಖ ಸಂವತ್ಸರದ ಮಾಘ ಶು॥ ೧೧ ಶುಕ್ರವಾರದ ವರೆಗಿನ ಪಂಚಾಂಗ

(ಗ್ರಾಹಸೌರ ಧನು—ಮಕರ)

ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಇಂಗ್ಲೀಷು	ಸೂರ್ಯ: ಉ.	ಅಸ್ತ.
ಶನಿ	೫	[illegible]	ಉ ಭಾ	[illegible]	[illegible]	7	6.26
ರವಿ	೬	[illegible]	ರೇವತಿ	[illegible]	[illegible]	7	6.25
ಸೋಮ	೭	[illegible]	ಅಶ್ವಿನಿ	[illegible]	[illegible]	7	6 26
ಮಂಗಳ	೮	[illegible]	ಭರಣಿ	[illegible]	೧೦	7.	6 26
ಬುಧ	೯	[illegible]	ಕೃತ್ತಿಕಾ	[illegible]	೧೧	7	6 27
ಗುರು	೧೦	[illegible]	ರೋಹಿಣೀ	[illegible]	೧೨	7	6.27
ಶುಕ್ರ	೧೧	[illegible]	ಮೃಗಶಿರಾ	[illegible]	೧೩	7	6 27

ಮಂಗಳೂರಿನ ವಾಯುಸ್ಥಿತಿ.

	Temperature ಉಷ್ಣ (ಕಾವು)		Rainfall. ಮಳೆ	
	Maximum ಹೆಚ್ಚಾದದ್ದು	Minimum ಕಡಿಮೆ	ದಿನದ ಮಳೆ	ಒಟ್ಟು ಮಳೆ
1	89— 2	78— 6	—	—
2	87— 9	71— 2	—	—
3	90— 8	74— 2	—	—
4	91— 2	75— 0	—	—
5	89— 6	74— 9	—	—
6	90— 0	72— 4	—	—
7	87— 5	64— 2	0—22	167—61

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ. ಆ.	ವರೆಗೆ ರೂ. ಆ.
ಹೊಸ ರಾಶಿ ಅಕ್ಕಿ	3— 6	3—12
ಹೊಸ ಮುಸ್ಕಿ	4— 4	4— 8
ಹೊಸ ಗುಡ್ಡೆ	3—12	4— 2
	—	—
ಗೂರ ಅಪ್ಪರ್ ಬೆಳ್ತಿಗೆ	4— 4	5— 4
ಬಂಗುಡೆ ಬೆಳ್ತಿಗೆ ಗೋಣಿ ಒಕ್ಕೆ	5— 6	6— 0
ಎಲ್ಲೂರು ಬೆಳ್ತಿಗೆ ಮುಡಿ ಒಕ್ಕೆ	3— 6	3—12
ಕೋದಿ ಗೋಣಿ ಒಕ್ಕೆ	10— 8	12— 8
ಹೆಸರು ಗೋಣಿ ಒಕ್ಕೆ	9— 0	10— 8
ಹುರುಳಿ ಗೋಣಿ ಒಕ್ಕೆ	5— 4	6— 0
ಕಡಲೆ ಗೋಣಿ ಒಕ್ಕೆ	9— 8	12— 8
ಕೊಂಗಣಬೇಳೆ ಗೋಣಿ ಒಕ್ಕೆ	10— 8	18— 0
ಉದ್ದು ಗೋಣಿ ಒಕ್ಕೆ	7— 0	8— 4
ಹೆಸರು ಗೋಣಿ ಒಕ್ಕೆ	8— 0	9— 0
ಊರುಬೆಲ್ಲ ಖಂಡಿ ಒಕ್ಕೆ	27— 8	35— 0
ಉಪ್ಪು ಗೋಣಿ ಒಕ್ಕೆ	4—14	5— 4
ಕೊಬ್ರಿ ಖಂಡಿ ಒಕ್ಕೆ	40— 0	45— 0
ಕೊಬ್ರಿ ಹಿಂಡಿ ಖಂಡಿ ಒಕ್ಕೆ	17— 8	18— 8
ಎಳ್ಳಿಂಡಿ ಖಂಡಿ ಒಕ್ಕೆ	23—12	22— 8
ಕೊಬ್ರಿ ಎಣ್ಣೆ ಮುಡಿ ಒಕ್ಕೆ	3— 1	4— 2
ಎಳ್ಳೆಣ್ಣೆ ಮುಡಿ ಒಕ್ಕೆ	5— 0	6— 0
ಹರಳೆಣ್ಣೆ ಪಟ್ಟಿಗೆ ಒಕ್ಕೆ	7— 0	8—12
ಕೋಲಾರ ಸಕ್ಕರೆ ಮುಡಿ ಒಕ್ಕೆ	3—1	3—12
ಹೊಸ ಮೆಣಸು	8—10	9— 0
ಸಾಸಿವೆ ಮುಡಿ ಒಕ್ಕೆ	4— 8	4—12
ಕಾಳುಮೆಣಸು ಖಂಡಿ ಒಕ್ಕೆ	130— 0	135— 0
ಮೆಂತ್ಯ ಮುಡಿ ಒಕ್ಕೆ	20— 0	24— 0
ಗೇರುಬೀಜ ಮುಡಿ ಒಕ್ಕೆ	2— 4	2— 8
ಕಿತ್ತಳೆ ಖಂಡಿ ಒಕ್ಕೆ	42— 0	44— 0
ತಾಂಬ್ರ ತಗಡು ಮುಡಿ ಒಕ್ಕೆ	10— 0	10— 2
ತಾಂಬ್ರ ಪಾತ್ರಗಳು ಮುಡಿ ಒಕ್ಕೆ	13— 0	14— 8
ಬೀಡಿಬಳ್ಳಿ ಸೀರು ಒಕ್ಕೆ	14—12	15— 0
ಹಿತ್ತಾಳೆ ತಗಡು ಮುಡಿ ಒಕ್ಕೆ	9— 0	9— 8
ಹವಸು ಒಕ್ಕೆ	20— 0	20— 8
ಹುಣಸೆ ಹುಳಿ ಖಂಡಿ ಒಕ್ಕೆ	25— 8	80— 0
ನೇಟಿವ್ ಕಾಫಿ ಖಂಡಿ ಒಕ್ಕೆ	180— 0	205— 0
ಪ್ಲಾಂಟೇಶನ್ ಕಾಫಿ ಖಂಡಿ ಒಕ್ಕೆ	270— 0	275— 0
ಹಳೆ ಅಡಿಕೆ	115— 0	135— 0
ಹೊಸ ಅಡಿಕೆ	75— 0	100— 0

THE CANARA PUBLIC CONVEYANCE CO., LTD, MANGALORE.
(Established 1914)
ಕೆನರಾ ಪಬ್ಲಿಕ್ ಕನ್ವಯನ್ಸ್ ಕಂಪನಿ, ಲಿಮಿಟೆಡ್,
ಮಂಗಳೂರು.
ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.
ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯ ಕ್ಷೇತ್ರಗಳಿಗೆ ಹೋಗುವವು ಮೈಸೂರು, ಕೊಡಗು ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನ್ ಕೂಡಾ ಇರುವುದು.
ಮಧ್ವಾಚಾರ್ಯರ ಜನ್ಮಸ್ಥಾನವನ್ನೂ, ಶ್ರೀ ಕೃಷ್ಣನ ಪ್ರತಿಮೆಯನ್ನೂ,
ನೋಡಲಿಚ್ಛಿಸುವಂತಾದರೆ ಪ್ರತಿದಿನವೂ ನಾಲ್ಕು ಸಾರಿ ಕರಾವಳಿ ಮಾರ್ಗವಾಗಿಯೂ, 4 ಸಾರಿ ಘಾಟಿನ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲಪಿರಿ, ಒಂದೇ ಶಿಲೆಯಲ್ಲಿಯೇ ರಚಿತವಾಗಿ, 37, ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲೆಸಿರುವ, ಕಾರ್ಕಳ ಗೋಮಟೇಶ್ವರನ ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು 4 ಸಲ ಹೊರಟು ಎರಡೂವರೆ ತಾಸುಗಳ ಸಮಯದಲಿ ಕಾರ್ಕಳಕ್ಕೆ ತಲಪುವವು
ಕೊಲ್ಲೂರು ಮೂಕಾಂಬಿಕಾ ದೇವಾಲಯ
ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ, ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ತಲ್ಪಬಹುದು
'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಬೆಳಿಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲಪುವಿರಿ,
ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ
ಪ್ರಾಚೀನ ಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೂ ಕನೆಕ್ಷನ್ ಇರುತ್ತದೆ
ಬೇಲೂರಿನ ಸೋಮನಾಥ ದೇವಾಲಯವನ್ನು ನೋಡಲು, ನೋಡಲಿಚ್ಛಿಸುವವರು, ಬೆಳಿಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ, ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು.
ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದೂಸ್ಥಾನ, ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣ ಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.
ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ, ಮಂಗಳೂರಿನಿಂದ ಮಡಿಕೇರಿಗೆ 7 ಘಂಟೆಗಳೊಳಗೂ, ಕಡೂರಿಗೆ 12 ಘಂಟೆಗಳೊಳಗೂ, ಮೈಸೂರಿಗೆ 12 ಗಂಟೆಗಳೊಳಗೂ ಸಕಲೇಶಪುರಕ್ಕೆ 8 ಗಂಟೆಗಳೊಳಗೂ, ಹಾಸನಕ್ಕೆ 10 ಗಂಟೆಗಳೊಳಗೂ, ಚಿಕ್ಕಮಗಳೂರಿಗೆ 8 ಗಂಟೆಗಳೊಳಗೂ ಕೊಲ್ಲೂರಿಗೆ ಮತ್ತು ಗೋಕರ್ಣಕ್ಕೆ ೧॥ ದಿವಸದೊಳಗೂ ಶಿಮೊಗ್ಗಕ್ಕೆ 12 ಗಂಟೆ ತಲಪಬಹುದು
ಹೆಚ್ಚಿನ ವರ್ತಮಾನಕ್ಕೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು
Secretary,
The Canara Public Conveyance Company Ltd., Mangalore

Chikmagalur Public Conveyance Motor Service.
CHIKMAGALUR.
ಚಿಕ್ಕಮಗಳೂರು ಪಬ್ಲಿಕ್ ಕನ್ವಯನ್ಸ್ ಮೋಟರ್ ಸರ್ವಿಸ್,
ಚಿಕ್ಕಮಗಳೂರು
ಮುಂಬಾಯಿಯಿಂದ – ಮಂಗಳೂರಿಗೆ
ಮಂಗಳೂರಿನಿಂದ – ಮುಂಬಾಯಿಗೆ.
ಅಲ್ಲದೆ
ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ
ಮಂಗಳೂರು–ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!
ಹೊಸ ಬಸ್ಸುಗಳು – ಅನುಕೂಲ ಪ್ರಯಾಣ ಸೌಕರ್ಯಗಳು.
ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ
ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ
ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ.
ಚಿಕ್ಕಮಗಳೂರಿನಿಂದ – ಶಿವಮೊಗ್ಗಕ್ಕೆ, ಬೀರೂರಿಗೆ, ಕಡೂರಿಗೆ.
– ಮೂಡಗೆರೆಗೆ, ಸಕಲೇಶಪುರಕ್ಕೆ.
– ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
– ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.
ನಿರಾಯಾಸದ ಪ್ರಯಾಣ! ಉತ್ಸಾಹಕರ ಸೌಕರ್ಯ!
ಬೇಕಾದ ವರ್ತಮಾನ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

ಸಂಪಾದಕರ ಟಪ್ಪಾಲು ಪೆಟ್ಟಿಗೆ.

ಬಾತ್ಮಿದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಎಲ್ಲಾ ಲೇಖಕರು ತಮ್ಮ ಸಂಪೂರ್ಣ ಹೆಸರು ವಿಳಾಸಗಳನ್ನು ಕೊಡತಕ್ಕದ್ದು ದೀರ್ಘ ಲೇಖನಗಳಿಗೆ ಎಡೆ ಕೊಡಲಾಗುವುದಿಲ್ಲ ಲೇಖನಗಳು ಸಾರ್ವಜನಿಕ ಹಿತದೃಷ್ಟಿಯಿಂದಿದ್ದು ಯುಕ್ತ ಶೈಲಿಯಲ್ಲಿರತಕ್ಕದು (ಸಂ. ಸ್ವ)

'ಇದ್ದವ'ನ ಇಲ್ಲದ ಸುದ್ದಿ

ಬೀರಂತಬೈಲು, ಕಾಸರಗೋಡು, ತಾ ೨೨—೧—೧೯೩೪

ತಾ ೧೯—೧—೧೯೩೪ನೇ ಸ್ವದೇಶಾಭಿಮಾನಿಯಲ್ಲಿ 'ಕಾಸರಗೋಡು ಕೋಟೆಯವರ (ಕ್ಷತ್ರಿಯರಂತೆ) ಪೂರ್ಣ ದಿನ ಭಜನೆ' ಎಂಬ ಪತ್ರದಲ್ಲಿ 'ಯಾರೋ ಕೆಲವು ಕೋಟೆಯವರು ಬಿಲ್ಲವರು ತಮ್ಮ ಭಜನೆಯಲ್ಲಿ ಸೇರಲು ಯೋಗ್ಯತೆಯಿಲ್ಲ' ಎಂದು ಹೇಳಿದರೆಂದು 'ಇದ್ದವ'ನೆಂಬವನು ಬರೆದಿದ್ದುದು ಬಹಳ ವಿಷಾದಕರ

ಕೋಟೆಯವರ ಭಜನೆಗೆ ಅವರು ಬಿಲ್ಲವರನ್ನು ಆಮಂತ್ರಿಸಿರಲಿಲ್ಲ ಪ್ರತಿಯೊಂದು ಜಾತಿಯಲ್ಲಿಯೂ ಅಂಧಶ್ರದ್ಧೆ ಅಸಂಬದ್ಧ ಪೂರ್ಣ ಪದ್ಧತಿಗಳಿವೆಯೆಂದು 'ಇದ್ದವ'ನು ಒಪ್ಪಿಕೊಳ್ಳುತ್ತಾನೆ. ಕೋಟೆಯವರಲ್ಲಿಯೂ ಇರಬಹುದು ಬಿಲ್ಲವರಲ್ಲಿಯೂ ಇರಬಹುದು ಇತರ ಜಾತಿಗಳಲ್ಲಿಯೂ ಇರಬಹುದು. ಇದ್ದೇ ಇದೆ—ಹಾಗಾದುದರಿಂದಲೇ ನಮ್ಮ ಬಾಗಿಲಿಗೆ ಬಂದಿದ್ದ ಭಾಗ್ಯದೇವತೆಯು (ಗಾಂಧಿಯು) ನಿರಾಶರಾಗಿ ಹಿಂತೆರಳಿದುದು

ಕೋಟೆಯವರ ಭಜನೆಯಲ್ಲಿ ಬಿಲ್ಲವರು ಸೇರುವುದು ಆಕ್ಷೇಪಕರವೆಂದು ಪ್ರವೇಶಿಸಿದ ನಮ್ಮ ಬಿಲ್ಲವಗೆಳೆಯರು ತಿಳಿದಿದ್ದರು ಹಾಗೆಯೇ ಕೋಟೆಯವರ ಭಜನೆಗೆ ಹೋಗುವುದಿಲ್ಲವೆಂದೂ ನಿರ್ಧರಿಸಿದ್ದರೆಂದೂ ಮೇಲೆ ಹಠಾತ್ತಾಗಿ ಛಲ ಹಿಡಿದು ಭಜನೆಗೆ ಹೋದರೆಂದೂ ಹೇಳುವ 'ಇದ್ದವ'ನ ಮಾತಿನ ಅರ್ಥವೇನು? ಗೂಢವೇನು? ಜಾತ್ಯಾಭಿಮಾನಕ್ಕೆ ಬೆಲೆಯಿಲ್ಲವಾದರೆ ಇವರ ಈ ತರದ ದುರಾಗ್ರಹ, ದುರಭಿಮಾನಗಳಿಗೆ ಬೆಲೆಯೇ?

'ಇದ್ದವ'ನು ಹೇಳುವಂತೆ ನಾಲ್ವರು ಬಿಲ್ಲಗೆಳೆಯರು ಭಜನೆ ಮಾಡುವಲ್ಲಿಗೆ ಹೋದ ಕೂಡಲೆ (ಬೀರಂತಬೈಲು ಬೀರಂಡಬೈಲು ಎಂತಾದುದೇಕೋ?) ಕೋಟೆಯವರು ತಾಳವನ್ನು ಕೆಳಗಿಟ್ಟು ದೂರ ಕುಳಿತರಂತೆ. ಇದರಲ್ಲಿ ತಪ್ಪೇನೋ ನಮಗೆ ತಿಳಿಯದು ಅಭ್ಯಾಗತರಾಗಿ ಬಂದ ಭಕ್ತರಾದ ಬಿಲ್ಲವ ಮಿತ್ರರು ಭಜನೆಯನ್ನು ಮುಂದರಿಸಲೆಂಬುದೇ ಅವರ ಉದ್ದೇಶವಾಗಿತ್ತು ಆದರೆ ಬಂದ ಗೆಳೆಯರ ದೋಷಯುಕ್ತ ದೃಷ್ಟಿಗೆ ಅದು ವಿಪರೀತವಾಗಿ ತೋರಿದರೆ ಅದು ಕೋಟೆಯವರ ತಪ್ಪಲ್ಲ 'ಎಲ್ಲಾ ಕೋಟೆಯವರು ಬಿಟ್ಟುಹೋದರು' ಎಂಬುದು 'ಇದ್ದವ'ನ ಇಲ್ಲದ ಸುದ್ದಿ—ತೀರಾ ಸುಳ್ಳು

ಭಜನೆಯಲ್ಲಿ ಇದ್ದವರಾದ ಬಿಲ್ಲಗೆಳೆಯರು ಭಕ್ತಿಪರವಶರಾಗಿ ಆನಂದಪಟ್ಟರು. ಆ ಆನಂದದಿಂದ ಕುಣಿಕುಣಿದು ದಣಿದರು ಆ ಮೇಲೆ ಕೋಲಾಹಲವೆಬ್ಬಿಸಿದೆವು ಎಂದು ಹೆಮ್ಮೆಯಿಂದ ಹೇಳಿಕೊಳ್ಳುವುದರಿಂದ ಅವರು ಭಜನೆಗೆ ಭಕ್ತಿಯಿಂದ ಬಂದವರೋ ಕುಂದುಟೀಕೆ ಮಾಡಲು ಬಂದವರೋ ಎಂಬುದನ್ನು ವಾಚಕರೇ ತೀರ್ಮಾನಿಸಲಿ

'ಅಯ್ಯಯ್ಯೋ ಜಾತಿ ಹೋಯಿತು' ಎಂದು ಮೊದಲಾಗಿ ಕೋಟೆಯವರು ಕೂಗುತ್ತಿರುವರೆಂದು 'ಇದ್ದವ'ನು ಇಲ್ಲದ ಸಲ್ಲದ ಸುಳ್ಳು ಮಾತುಗಳ ಸುರಿಮಳೆಯನ್ನೇ ಸುರಿಸುತ್ತಿರುವನು ಅವನು ವೃಥಾ ಹೀಗೆ ಅರಣ್ಯರೋದನ ಮಾಡುವುದನ್ನು ಕಂಡರೆ ನಮಗೆ ಬಹಳ ದುಃಖವಾಗುತ್ತದೆ

ಪ್ರಸ್ತುತ ಸ್ಥಿತಿಯಲ್ಲಿ ಕೋಟೆಯವರು ಬಿಲ್ಲಗೆಳೆಯರನ್ನು ತಮ್ಮ ಭಜನೆಯಲ್ಲಿ ಬರಬಿಟ್ಟುದನ್ನು ನೋಡಿದರೆ ಅವರ ಉದಾರ ಬುದ್ಧಿಯನ್ನು ಶ್ಲಾಘಿಸಬೇಕಾಗಿದೆ. ಸುಧಾರಣೆಯಲ್ಲಿ ಕೆಲವಡಿಗಳನ್ನಾದರೂ ಮುಂದಿಟ್ಟಿದ್ದಾರೆಂದು 'ಇದ್ದವ'ನಾದರೂ ಒಪ್ಪಿಕೊಳ್ಳಬೇಕು ಈ ವಿಷಯದಲ್ಲಿ ಕೋಟೆಯವರು 'ಇದ್ದವ'ನ ಮಾತಿನಂತೆ ಬಿಲ್ಲವರೇ.

ಶಿವರಾಮ್

INSIST ON USING ONLY

'KOHINUR INK'

For All Your Pens

The A 1 ink that will Suit your taste

Ask your Stationer to supply you a bottle and you will never accept A N Y other Substitute

Wanted agents in all principal Towns.

Apply to —

The Kohinur Industrials, (India)

Kallianpur P O (S India)

or

The General Stores

Hospital Road, Udipi

ಮಂಗಳೂರು ಕ್ಷತ್ರಿಯ ಯುವಕ ಸಂಘದ ಪರವಾಗಿ "ಇದ್ದವ"ನಿಗೊಂದು ಉತ್ತರವು ಬಂದಿರುತ್ತದೆ. ಅದನ್ನು ಸ್ಥಳಾಭಾವದಿಂದ ಪ್ರಕಟಿಸಲಾಗಲಿಲ್ಲ ಈ ವಿಷಯಕವಾದ ಪತ್ರವ್ಯವಹಾರಗಳನ್ನು ಇಲ್ಲಿಗೆ ಕೊನೆಗಾಣಿಸಲಾಗಿದೆ

ಸಂಪಾದಕ

ತಾ ೫—೧—೩೪ರಲ್ಲಿ ಕುಂದಾಪುರ ತಾಲೂಕು ಬೈಂದೂರಲ್ಲಿ ಕೂಡಿರುವ ವರ್ಗದಾರರ ಮಹಾಸಭೆಯ ಪ್ರೊಸೀಡಿಂಗ್ಸ್.—

ಈ ಸಭೆಗೆ ಮ। ರಾ। ಬ್ರಹ್ಮಾವರ ತಿಮ್ಮಪ್ಪಾಚಾರ್ಯರು ಅಧ್ಯಕ್ಷರಾಗಿರಬೇಕಾಗಿ ಸರ್ವಾನುಮತದಿಂದ ಸೂಚಿಸಲಾಯಿತು

ಕಳೆದ ದಶಂಬರ ತಾ ೩೧ಕ್ಕೆ ಈ ಜಿಲ್ಲಾ ರೈತರ ವ ವರ್ಗದಾರ ಸಂಘದ ಪರಿಷತ್ತು ಪುತ್ತೂರಲ್ಲಿ ಜರಗಿ ಅದರಲ್ಲಿ ಸಿನೇದಿಸಿ ಕಾಡಿನ ಫೋರೆಸ್ಟು ಮತ್ತು ರಿಸರ್ವುಮೆಂಟು ಈ ಎರಡು ಬಾಬಿನ ಸವಿವರವಾದ ನಿರ್ಣಯಗಳನ್ನು ಈ ಸಭೆಯು ಅತ್ಯಂತ ವಾತ್ಸಲ್ಯದಿಂದ ಅನುಮೋದಿಸಿಕೊಂಡು ಅದಕ್ಕನುಸರಿಸಿ ಈ ಕೆಳಗಿನ ಎರಡು ನಿರ್ಣಯಗಳನ್ನು ಮಾನ್ಯ ಮದ್ರಾಸು ಸರಕಾರದವರು ಅತ್ಯಂತ ವಾತ್ಸಲ್ಯವಿಟ್ಟು ಅತೀ ಜರೂರಾಗಿ ಜ್ಯಾರಿಗೆ ತರಬೇಕಾಗಿ ಈ ಸಭೆಯು ಅತ್ಯಾಗ್ರಹದಿಂದ ಪ್ರಾರ್ಥಿಸುತ್ತದೆ

I ಎಲ್ಲಾ ರಿಜರ್ವ ಕಾಡುಗಳಲ್ಲಿ ಎಲ್ಲಾ ಕಾಡುಜಾತಿ ಮರಮಟ್ಟುಗಳ ಹಸಿಸೊಪ್ಪು, ಕಟ್ಟಿಗೆ ವಗೈರೆ ವಿಶಿಷ್ಟ ವ್ಯವಸಾಯದ ಸಾಮಗ್ರಿಗಳು ಮತ್ತು ಈ ಮರಮಟ್ಟುಗಳ ಎಲ್ಲಾ ಒಣ ಉತ್ಪತ್ತಿ ಮನ್ನಾ ಜಾತಿ ಮರಗಳ ಒಣ ಕಟ್ಟಿಗೆ ಒಣ ಸೊಪ್ಪು ಮುಂತಾದ ವ್ಯವಸಾಯ ವ ನಿತ್ಯ ಜೀವನೋಪಾಯದ ಸಾಹಿತ್ಯಗಳನ್ನು ಆಯಾಯ ಒಕ್ಕಲು ಭೂಮಾಲಿಕರು ವ ವ್ಯವಸಾಯಗಾರರು ಆಗತ್ಯವಿರುವಷ್ಟು ಪ್ರಮಾಣಗಳಿಂದ ಕಡಿದು ತಂದು ಉಪಯೋಗಿಸಿಕೊಳ್ಳುವಲ್ಲಿ ಫೋರೆಸ್ಟ್ ರಿಜರ್ವ ಕಾಡಿನ ಮಾಲಿಕರಾದ ಸರಕಾರದವರು ಯಾವ ವಿಧದ ಆತಂಕವನ್ನೂ ಮಾಡಕೂಡದು ಮತ್ತು ಈಗಿನ ಎಲ್ಲಾ ಆತಂಕದ ಕ್ವಾಯಿದೆಗಳನ್ನು ವಾಪಾಸು ತೆಗೆದುಕೊಳ್ಳಬೇಕಾಗಿ ಈ ಸಭೆಯು ಆಗ್ರಹದಿಂದ ಪ್ರಾರ್ಥಿಸುತ್ತದೆ

II ಈ ಜಿಲ್ಲೆಯ ದವಸಧಾನ್ಯಗಳ ಕ್ರಯವಿಳಿದು ಬೆಳೆಯೂ ಕಡಿಮೆಯಾದುದರಿಂದ ಈಗಿರುವ ತೀರ್ವೆಯಲ್ಲಿ ನಾಲ್ಕಾಣೆ ಒಂದು (ಕಾಲು) ಅಂಶ ಕಡಿಮೆ ಮಾಡಿ ತೆಗೆದುಕೊಳ್ಳಬೇಕಲ್ಲದೆ ಯಾವ ವಿಧದಿಂದಲೂ ರಿಸೆಟ್ಲುಮೆಂಟು ಜ್ಯಾರಿಗೆ ತರುವ ಯೋಚನೆಯನ್ನೆ ಸರಕಾರವು ಎದುರಿಗೆ ತೆಗೆದುಕೊಳ್ಳಬಾರದಾಗಿ ಈ ಸಭೆಯು ಅತ್ಯಂತ ಆಗ್ರಹದಿಂದ ಪ್ರಾರ್ಥಿಸುತ್ತದೆ.

II ಇದರ ನಕಲುಗಳಲ್ಲಿ ಜಿಲ್ಲೆಯ ವರ್ಗದಾರ ಸಂಘದ ಕಾರ್ಯದರ್ಶಿಗಳಿಗೂ ಎಲ್ಲಾ ವೃತ್ತಪತ್ರಗಳಿಗೂ ಮದ್ರಾಸ್ ಕೌನ್ಸಿಲು ಮೆಂಬರರಿಗೂ ಲೋಕ ಮೆಂಬರರಿಗೂ ಮದ್ರಾಸು ಸರಕಾರದ ಫೋರೆಸ್ಟು ಚೀಫ್ ಕನ್ಸರ್ವೇಟರ್ ಕನ್ಸರ್ವೇಟರ್ ಜಿಲ್ಲಾ ಫೋರೆಸ್ಟ್ ಆಫೀಸರರು ಜಿಲ್ಲಾ ಕಲೆಕ್ಟರರು ಇವರುಗಳಿಗೆಲ್ಲ ಕಳುಹಿಸುವರೆ ಈ ಸಭೆಯ ಕಡೆಯಿಂದ ಮ। ರಾ। ನ್ಯಾಕರಕಟ್ಟೆ ಕೃಷ್ಣ ಭಟ್ಟರಿಗೆ ಅಧಿಕಾರ ಕೊಟ್ಟಿದೆ

ಪ್ರೆಸಿಡೆಂಟ್

ಮುಟಿಕ ಪಡವು ಶಾಲೆಯಲ್ಲಿ ಕೂಡಿದ ಪೆರುವಾಯಿ, ಅಳಿಕೆ, ಮಾಣಿಲ ವಗೈರೆ ಗ್ರಾಮಗಳ ವರ್ಗದಾರರ ಸಭೆಯ ಪ್ರೊಸೀಡಿಂಗ್ಸ್ –೧೩–೧–೩೪

ಮ ರಾ ರಾ। ವಿ. ರಾಜಲಕ್ಷ್ಮೀನಾಥ ಸ್ವಾಮಿಜಿ ಅರಸುಗಳವರು ಅಧ್ಯಕ್ಷಸ್ಥಾನವನ್ನು ವಹಿಸಿಕೊಳ್ಳಬೇಕೆಂದು ಮ। ರಾ। ಅಡ್ಯಾಯ ಸುಬ್ಬಣ್ಣ ಭಟ್ಟರು ಸೂಚಿಸಿದ್ದನ್ನು ಮುಳಿಯ ಕಡರಿಬಿಲ ತಿಮ್ಮಣ್ಣ ಭಟ್ಟರು ಅನುಮೋದಿಸಿದ ಪ್ರಕಾರ ಸರ್ವಾನುಮತದಿಂದ ಆರಿಸಲಾಯಿತು ಅಧ್ಯಕ್ಷಸ್ಥಾನವನ್ನು ವಹಿಸಿದರು

ಮ। ರಾ ವಿ ರಾಜಲಕ್ಷ್ಮೀನಾಥ ಸ್ವಾಮಿಜಿ ಅರಸುಗಳವರು ಮತ್ತು ೯೫ ಜನರು ಕೂಡಾ.

1 ಅಡಿಕೆ ತೆಂಗಿನಕಾಯಿ ವಗೈರೆ ದವಸಗಳಿಗೆ ಕ್ರಯವು ಬಹು ಕಮ್ಮಿಯಿರುವುದರಿಂದ ನಂಜಗಳಿಗೆ ಶೇಕಡಾ ೨೫ರಂತೆ ತೀರ್ವೆ ತಗ್ಗಿಸುವಂತೆ ಬಾಗಾಯ್ತು ವ ಪುಂಜ ಸ್ಥಳಗಳಿಗೆ ಕೂಡಾ ಶೇಕಡಾ ೨೫ರಂತೆ ತೀರ್ವೆ ತಗ್ಗಿಸಬೇಕೆಂತ ಮ। ರಾ। ವ ತಿಮ್ಮಣ್ಣ ಭಟ್ಟರು ಸೂಚಿಸಿದಂತೆ ಸರಕಾರವನ್ನು ಕೇಳಿಕೊಳ್ಳುವುದೆಂತ ಸರ್ವಸಮ್ಮತದಿಂದ ನಿರ್ಣಯಿಸಲಾಯಿತು

2 ಬಾಗಾಯ್ತು ಕಿಸಂ ವಿವರಣೆಯಿಂದ ಒಳ್ಳೆಮೆಣಸಿನ ಬಳ್ಳಿಗಳನ್ನು ಕಳೆಚಹಾಕಬೇಕಾಗಿಯೂ ಈ ಬಳ್ಳಿಗಳು ಇರುವ ದೆಸೆಯಿಂದ ಬಾಗಾಯ್ತು ಎಂತ ಇತ್ಯರ್ಥಿಸಿ ತೀರ್ವೆ ಹೊರಿಸಿದ ಸಂಗತಿಯಲ್ಲಿ ಅವುಗಳ ಕಿಸಂ ದುರುಸ್ತಿಪಡಿಸಬೇಕಾಗಿ ಮು. ಕ ತಿಮ್ಮಣ್ಣ ಭಟ್ಟರು ಸೂಚಿಸಿದಂತೆ ಕೇಳಿಕೊಳ್ಳುವರೆ ಸರ್ವಸಮ್ಮತದಿಂದ ನಿರ್ಣಯಿಸಲಾಯಿತು

3 ಈ ನಿರ್ಣಯಗಳನ್ನು ಮದ್ರಾಸ್ ಸರಕಾರಕ್ಕೂ ನಮ್ಮ ಜಿಲ್ಲೆಯ ಲೆಜಿಸ್ಲೆಟಿವ್ ಕೌನ್ಸಿಲ್ ಮೆಂಬರರಿಗೂ ಜಿಲ್ಲಾ ಸಂಘದ ಕಾರ್ಯದರ್ಶಿಯವರಿಗೂ ತಿಳಿಸುವರೆ ಮು। ರಾ। ಅಡ್ಯಾಯ ಸುಬ್ಬಣ್ಣ ಭಟ್ಟರಿಗೆ ಅಧಿಕಾರ ಕೊಡಲಾಯಿತು

(ಪ್ರೊಸೀಡಿಂಗ್ಸಿನ ಯಥಾ ನಕಲಾಗಿರುತ್ತದೆ)

ಸುಬ್ಬಣ್ಣ ಭಟ್ಟ.

ಸಮಸ್ತ ವರ್ಗದಾರರಲ್ಲೊಂದು ವಿನಂತಿ

ಇದೇ ೧೯೩೪ನೇ ಇಸವಿಯ ಜಮಾಬಂದಿಯು ಪುತ್ತೂರು ಮೊಕ್ಕಾಮಿನಲ್ಲಿ ಮಾನ್ಯ ಜಿಲ್ಲಾ ಕಲೆಕ್ಟರ್ ಧೊರೆಗಳವರಿಂದ ನಡೆದು ತಾ ೩—೨—೩೪ನೇ ಶನಿವಾರ ಮಧ್ಯಾಹ್ನ ೧೨ ಘಂಟೆಯಿಂದ ವರ್ಗದಾರರ ಸಭೆಯು ಜರಗಲಿಕ್ಕಿದೆ

ಆದುದರಿಂದ ಎಲ್ಲಾ ಹವಾಲೆಗಳು ಧೊರೆಗಳಿಗೆ ಸಮರ್ಪಿಸದಿರುವ ಕಾರಣ ಎಲ್ಲಾ ವರ್ಗದಾರರು ಸ್ವಲ್ಪ ಮುಂದಾಗಿಯೇ ಪುತ್ತೂರು ಮೊಕ್ಕಾಮಿಗೆ ಅಗತ್ಯವಾಗಿ ಬರುವರೆಂದು ನಾನು ನಂಬುತ್ತೇನೆ

ಎ ಆರ್ ತಗ್ರಿತ್ತಾಯ.

ನೋಟೀಸು:

ಮಂಗಳೂರು ತಾಲೂಕು ಕಾವಳ ಮೂಡೂರು ಗ್ರಾಮದ ಅರಂತೊಟ್ಟು ರಾಮಪ್ಪಯ್ಯನವರ ಮಗಳು ವ ಪಣಂಬೂರು ವೆಂಕಪ್ಪಯ್ಯನವರ ವಿಧವೆ ಮಾಚಮ್ಮ ಯಾನೆ ಮಹಾಲಕ್ಷ್ಮಿ ಅಮ್ಮನು ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವುದೇನಂದರೆ

ಇದೇ ಕಳೆದ ತಾ ೧೨–೧–೩೪ನೇ ಶುಕ್ರವಾರ ಸಾಯಂಕಾಲ ಸುಮಾರು ೬ ಘಂಟೆ ಸಮಯಕ್ಕೆ ನನ್ನ ಗಂಡನ ಹಿರೀ ಹೆಂಡತಿ ಮಗನಾದ ಬಂಟ್ವಾಳ ಮೂಡಗ್ರಾಮದಲ್ಲಿರುವ ಟಿ ವಾಸ್ತೇವರಾಯನು ನನ್ನ ದ್ವೇಷಿಕ ಪತ್ತುಮುಡಿ ವೆಂಕಪ್ಪಯ್ಯನವರ ಪ್ರಚೋದನೆಗೂ ವಳಸಂಚಿಗೂ ಒಳಪಟ್ಟು ನನ್ನನ್ನು ನಿರ್ಬಂಧಕ್ಕೊಳಪಡಿಸಿ ಬಲಾತ್ಕಾರದಿಂದ ನನ್ನ ಎಡ ಕೈಯ ಹೆಬ್ಬೆಟ್ಟಿನ ಮೊಹರುಗಳನ್ನು ಕೆಲವು ಖಾಲಿ ಕಾಗದಗಳಿಗೆ ಹಾಕಿಸಿ ಇಟ್ಟುಕೊಂಡಿರುತ್ತಾನೆ ಸದರಿ ಟಿ ವಾಸ್ತೇವರಾಯನ ಆ ಸ್ವಂತ ಒಂದು ಕಾಗದದಲ್ಲಿ ನಾನು ಕೊಟ್ಟಿದ್ದಾಗಿ ಕಂಡು ಬರುವ ಮಂಗಳೂರು ವಿ ಮು ಕೋರ್ಟು ಕ್ರಮಸಂಖ್ಯೆ 107/24ನೇ ವ್ಯಾಜ್ಯದ ರಾಜಿ ಡಿಕ್ರಿಮೇರೆಗೆ ನನಗೆ ವಾಸ್ತೇವರಾಯನ ಅಂಶದ ಆಸ್ತಿ ಜವಾಬ್ದಾರಿಯಿಂದ ಕೂಡಾ ಸಿಕ್ಕತಕ್ಕ 1926—27—28—29ನೇ ಇಸವಿಗಳ ಜೀವನಾಂಶದ ಬಾಬ್ತು ಮತ್ತು ಸದರಿ ಕೋರ್ಟು O S ನಂಬ್ರ 247 29ನೇ ಡಿಕ್ರಿ ವಿಧಿ ಮೇರೆಗೆ ಸದರಿ ವಾಸ್ತೇವರಾಯನಿಂದ ನನಗೆ ಸಿಕ್ಕತಕ್ಕ ಬಾಬ್ತುಗಳ ಸಂದಾಯಾರ್ಥದ ರಶೀದಿಯನ್ನು ತಯಾರಿಸಿರುತ್ತಾರಾಗಿ ನನ್ನ ತಿಳುವಳಿಕೆಗೆ ಬಂದಿದೆ ಮಿಕ್ಕ ಕಾಗದಗಳಲ್ಲಿ ಸದರಿ ವಾಸ್ತೇವರಾಯನು ವ ಪತ್ತುಮುಡಿ ವೆಂಕಪ್ಪಯ್ಯನವರು ಇತರ ರಿಕಾರ್ಡುಗಳನ್ನು ಸೃಷ್ಟಿಸಿ ಮಾಡಲಿಕ್ಕು ಸಾಕು ನಾನು ಸದರಿ ವಾಸ್ತೇವರಾಯನಿಗೆ ಯಾವದೊಂದು ರಶೀದಿ ಯಾ ನೋಟು ವಗೈರೆ ಯಾವ ತರದ ದಸ್ತಾವೇಜು ವ ಬರಹ ಮೂಲಕ ರಿಕಾರ್ಡನ್ನು ಈ ವರೆಗೂ ಮಾಡಿಕೊಟ್ಟಿದ್ದಿಲ್ಲಾ ಪತ್ತುಮುಡಿ ವೆಂಕಪ್ಪಯ್ಯನಿಗೆ ಮಾತ್ರ ನನಗೆ ಮ್ಯಾನರ ಸುಬ್ರಾಯನ ಅಂಶದ ಆಸ್ತಿ ಜವಾಬ್ದಾರಿಯಿಂದ ಸಿಕ್ಕತಕ್ಕ ಅಶನಾರ್ಥದ ಬಾಬ್ತು ಸಂದಾಯದ ಬಗ್ಗೆ ನನ್ನ ಎಡಕೈಯ ಹೆಬ್ಬೆಟ್ಟು ಕೊಟ್ಟ ಮೂರು ರಶೀದಿಗಳನ್ನೂ ಒಂದು ಮುಣಿಯಾರ್ಡರು ರಶೀದಿಯನ್ನೂ ಅಂತು ನಾಲ್ಕು ರಶೀದಿಗಳು ಮಾತ್ರ ಕೊಟ್ಟಿದ್ದಲ್ಲದೆ ಬೇರೆ ಕೊಡಲಿಲ್ಲ ಕೊಡುವರೆ ಕಾರಣವೂ ಇಲ್ಲ ವ ಇನ್ಯಾರಿಗೂ ರಶೀದಿ ವ ನೋಟು ವಗೈರೆ ಬರಕೊಟ್ಟಿದ್ದು ಇಲ್ಲ ಮೇಲ್ಕಂಡಂತೆ ಬಲಾತ್ಕಾರದಿಂದ ತೆಗೆದುಕೊಂಡ ನನ್ನ ಕೈಮೊಹರದ ಖಾಲಿ ಕಾಗದಗಳಲ್ಲಿ ಸದರಿ ವಾಸ್ತೇವರಾಯನಾಗಲಿ ವ ಪತ್ತುಮುಡಿ ವೆಂಕಪ್ಪಯ್ಯನಾಗಲಿ ನನ್ನ ರಶೀದಿ ನೋಟು ವಗೈರೆ ರಿಕಾರ್ಡುಗಳನ್ನು ತಯಾರಿಸಿದ್ದಾದರೆ ಅದು ಸೃಷ್ಟಿಸಿದ್ದು ಮಂಜೂರಾಗತಕ್ಕದ್ದಲ್ಲ ನನ್ನ ವ ನನ್ನ ಮ್ಯಾನರ ಮಗನ ಹಕ್ಕಿಗೆ ವಿರೋಧವಾಗಿ ಸಿಂಧುಗೊಳ್ಳತಕ್ಕದ್ದಲ್ಲ ಈ ಕುರಿತು ನಾನು ದಾಖಲು ಮಾಡಿದ ಕ್ರಿಮಿನಲ್ ವ್ಯವಹಾರ ತನಿಖೆಯಲ್ಲಿ ಬಾಕಿ ಇರುತ್ತದೆ ಎಂತ ಈ ಮೂಲಕ ತಿಳಿಸಲಾಗಿಯದೆ

ಮಂಗಳೂರು, ತಾ. ೨೦ 1—34 ||| ಈ ಮೂರು ಗೆರೆ ಮತ್ತು ಎಡ ಕೈಯ ಹೆಬ್ಬೆಟ್ಟಿನ ಗುರ್ತು
ಮಾಚಮ್ಮ ಯಾನೆ ಮಹಾಲಕ್ಷ್ಮಿಯಮ್ಮನ ರುಜು

ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O S No 187/82 R E P. No 950/88

ಚುಳ್ಳಿವೀಟಿಲ್ ಅಂಬುಕುರ್ಪ್ಪ— ವಾದಿ ಅರ್ಜಿದಾರ

ಮತ್ತು

1 ಕಣ್ಣನ್ ನಂಬಿಯಾರ, 2 ಅಂಬುನಿಯಾರ, 8. ಕಣ್ಣನ್‌ನಿಯಾರ—ಪ್ರತಿವಾದಿ ರೆಸ್ಪೊಂಡೆಂಟ್

ಇವರೊಳಗೆ

ಮೇಲ್ಕಂಡ ವ್ಯಾಜ್ಯದ ಡಿಕ್ರಿ ಬಗ್ಗೆ ನಡೆಸಿದ ಸದರಿ ಅಮಲ್‌ಜ್ಯಾರಿಯಲ್ಲಿ ರೆಸ್ಪೊಂಡೆಂಟರ ತರವಾಡು ಬಾಬ್ತು ಸ್ಥಿರಾಸ್ತಿಯನ್ನು ಜಪ್ತಿಮಾಡಿ ಆ ಕುರಿತು ಏಲಂ ಇಸ್ತಿಹಾರು ಮಂಜೂರು ಬಗ್ಗೆ ತಾ. 30–1–34ಕ್ಕೆ ವಿಚಾರಣೆಗೆ ಇಡೋಣಾಗಿಯದೆ. ಆ ಕುರಿತು ಆಕ್ಷೇಪವಿದ್ದವರು ಸದರಿ ದಿವಸ 11 ಘಂಟೆಗೆ ಕೋರ್ಟುಮುಂದೆ ಹಾಜರಾಗತಕ್ಕದ್ದು. ತಪ್ಪಿದರೆ, ಏಕಪಕ್ಷವಾಗಿ ತೀರ್ಮಾನವಾಗುವುದು ಎಂತ ಈ ಮೂಲಕ ತಿಳಿಸೋಣಾಗಿಯದೆ

ಕಾಸರಗೋಡು, ತಾ. 23–1–'34

E. R. Othena Menon,
ಅರ್ಜಿದಾರನ ಕಡೆ ವಕೀಲ್,

...ಷ ರತ್ನಂ! ಅಂದವಾದ ಸೀರೆಗಳು!

ಸ್ವದೇಶಿ ಕಲರ್ ಸೀರೆಗಳು

ಈ ಸೀರೆಗಳನ್ನು ಹೆಸರು ಹೊಂದಿದ ಕಂಪೆನಿಯಿಂದ ಸಂಕ್ರಾಂತಿ ಹಬ್ಬಕ್ಕಾಗಿ ತರಿಸಿರುತ್ತೇನೆ. ಗಟ್ಟಿ ಬಣ್ಣ ಎಲ್ಲಾ ಬಣ್ಣಗಳಲ್ಲಿಯೂ ದೊರೆಯುವುದು. ಸುಂದರವಾದ ಸೆರಗು ಅಂದವಾದ ಅಂಚು ಇರುವುದು ...ಡುವುದಕ್ಕೆ ರೇಶ್ಮೆ ಸೀರೆಯ ಹಾಗೆ ಕಾಣುವುದು ಎಲ್ಲಾ ಮಾಕಸ್ತರೂ ...ಡಲು ಲಾಯಕಾದುದು 18 ಮೊಳ ಸೀರೆ ಕ್ರಯ ರೂ 4—0—0 ... ಮೊಳ ಸೀರೆ ಕ್ರಯ ರೂ 3—4—0

ವಿಳಾಸ—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
೨೮೦ ವಾಲ್‌ಟ್ಯಾಕ್ಸ್ ರೋಡ್, ಪೋ ಬಾ ನಂ. ೫೧೩,
ಪಾರ್ಕ್ ಟೌನ್, ಮದ್ರಾಸ್

HALF PRIZE ONLY·

SANE SEX BOOKS.

Hidden Secrets of Sex	Re 1/8
The Sex Happiness	0/8
How to choose a wife	, 0/8
Rati Sastra	, 1/4
My Wife As 8, Sex Exercise	, 0/8

N B—All the above books are illustrated and beautifully printed and for Rs [illegible] only with free postage

P K Swamy & Co, Park Town,
G T MADRAS

ಹೇರ್ ಡಿಸ್ಟ್ರಾಯರ್ ಎಂಬ ರೋಮನಾಶಕ ಕ್ರೀಂ

ಕ್ರಯ ಬಾಟ್ಲಿ 1ಕ್ಕೆ 12 ಆಣೆ

ಈ ಹೊಸ ಜರ್ಮನ್ ರೋಮನಾಶಕ ಕ್ರೀಂ ಎಂಬುದು ಶರೀರದೊಳಗಿನ ಯಾವ ಭಾಗದಲ್ಲಿಯಾದರೂ ಪ್ರಯಾಸವಿಲ್ಲದೆ ದುರ್ವಾಸನೆ ಇಲ್ಲದ ನೋವಿಲ್ಲದೆ ಚರ್ಮದ ಮೇಲೆ ಯಾವ ತರದ ಕಲೆಯನ್ನು ಉಂಟು ಮಾಡದೆ ಸುಲಭವಾಗಿ ಒಂದೇ ನಿಮಿಷದಲ್ಲಿ ಕೂದಲನ್ನು ತೆಗೆಯುವದು ಇದರಿಂದ ಚರ್ಮಕ್ಕೆ ಕಾಂತಿಯು ಉಂಟಾಗುವುದು. ಉಪಯೋಗಿಸುವ ವಿಧಾನವನ್ನು ಬಾಟ್ಲಿ ಸಂಗಡ ಕಳುಹಿಸುವೆವು ಫ್ರೆಂಚ್ ಲಂಡನ್ ದೇಶಗಳಲ್ಲಿ ಇದನ್ನು ಬಹಳ ಉಪಯೋಗಿಸುತ್ತಾರೆ ಕ್ಷೌರಿಕನ ಹತ್ತಿರ ಹೋಗುವ ಕೆಲಸವಿಲ್ಲ ಒಂದು ಬಾಟ್ಲಿ ಬಹಳ ದಿವಸಕ್ಕೆ ಬರುವುದು

ವೆಡ್‌ಲಾಕ್ ಅಂಡ್ ಕಂಪೆನಿ ಪಾರ್ಕ್‌ಟೌನ್ ಮದ್ರಾಸು
Wedlock & Co Park Town MADRAS

ಲಿನಿಮೆಂಟ್ ಆಯಿಂಟ್‌ಮೆಂಟ್ ಎಂಬ

ನಪುಂಸಕತ್ವಹಾರೀ ತೈಲವು

ಮನುಷ್ಯರಲ್ಲಿ ಪುರುಷಾರ್ಥವು ಕೇವಲ ಧಾತುಪುಷ್ಟಿಯಿಂದಲೇ ಇರುವುದು ಮನುಷ್ಯರ ದೂಷಿತ ಪಿಂಡವು ಗರ್ಭಕಾರಕವಾಗಲಾರದು. ಅತ್ಯಂತ ವೈಷಯಿಕತೆಯಿಂದಲೂ ವ್ಯಾಯಾಮ (ಕಸ್ರತ್)ದಿಂದಲೂ ಹಸ್ತ ಪ್ರಯೋಗಾದಿಗಳಿಂದಲೂ ಸ್ತ್ರೀ ಸಂಬಂಧ ವ್ಯಾಧಿಯಿಂದಲೂ ಶಾಯು ಜಾಸ್ತಿ ಆದ್ದರಿಂದಲೂ ಶರೀರದ ಎಲ್ಲಾ ನಾಡಿಗಳು ಬಹಳ ಬಲಹೀನವಾಗುವುದರಿಂದ ಪುರುಷತ್ವವು ಬಲಹೀನವಾಗಿ ಸ್ತ್ರೀ ಸಂಗ ಮಾಡುವುದಕ್ಕೆ ಆಗುವುದಿಲ್ಲ ಕೆಲವರು ಬಾಲ್ಯದಲ್ಲಿಯೂ ವೃದ್ಧಾಪ್ಯ(ಮುದುಕತನ) ದಲ್ಲಿಯೂ ಇಂಥಾ ವ್ಯಾಧಿಗಳನ್ನು ಉಂಟುಮಾಡಿಕೊಂಡು ತಮಗಿರುವ ವ್ಯಾಧಿಯನ್ನು ವೈದ್ಯರಲ್ಲಿ ಹೇಳಲು ನಾಚಿಕೆಯಿಂದ ವ್ಯಾಧಿಯನ್ನು ಹೆಚ್ಚು ಮಾಡಿಕೊಂಡು ಪ್ರಾಯ ಸಮರ್ಥರಾದಾಗ ರತಿಸುಖಕ್ಕೆ ಶಕ್ತಿಯಿಲ್ಲದೆ ಲಜ್ಜಾಸ್ಪದದಿಂದ ಆಶಾಭಗ್ನರಾಗಿ ಮನೋವ್ಯಥೆಯನ್ನುಂಟು ಮಾಡಿಕೊಳ್ಳುವವರು, ಇಂಥವರ ಉಪಯೋಗಕ್ಕೋಸ್ಕರವಾಗಿ ಇಂಗ್ಲೀಷ್ ಡಾಕ್ಟರುಗಳಿಂದ ಈ ತೈಲವನ್ನು ತಯಾರು ಮಾಡಲ್ಪಟ್ಟದ ಈ ಎಣ್ಣೆಯನ್ನು ಮೇಲೆ ಪುರುಷತ್ವಕ್ಕೆ ನಾಲ್ಕು ದಿನಗಳು ಸವರುವುದರಿಂದ ಗುಣವಾಗುವುದು.

ಕ್ರಯ ಸೀಸೆ 1ಕ್ಕೆ ರೂ 1—4—0

ಸಿ ರಾಜ ಅಂಡ್ ಕಂಪೆನಿ, 20 ಬೀಟ್, ಮದರಾಸು

ಮದನಕಳಾಶಾಸ್ತ್ರ ಎಂಬ ರಹಸ್ಯ ಪುಸ್ತಕ

ಕನ್ನಡ ಭಾಷೆಯಲ್ಲಿ ಸ್ತ್ರೀಪುರುಷರು ಪ್ರೀತಿಸುವ 22 ಫೋಟೋಗಳ ಸಹಿತ ಕೂಡಿವೆ ಇದರಲ್ಲಿ ಚೈನಾ, ಸಿಲೋನ್, ಆಫ್ರಿಕನ್, ಫ್ರೆಂಚ್, ಜರ್ಮನಿ, ವಿಳಾಯಿತಿ ಮೊದಲಾದ ದೇಶದ ಹೆಂಗಸರು ಪ್ರೀತಿಸುವ ಮರ್ಮಗಳು, ಮಲಗುವ ಮನೆಯಲ್ಲಿನ ವಿನೋದಗಳು, ವೇಶ್ಯಾಕನ್ನೆಗಳು ಮೋಹಿಸುವ ಉಪಾಯಗಳು, ಇನ್ನು ಸ್ತ್ರೀಪುರುಷ ಲೀಲಾ ವಿನೋದಗಳು, ಮನೋಪ್ರೀತಿಯ ಫೋಟೋಗಳನ್ನು ನೋಡುತ್ತಾ, ಓದುತ್ತಾ ಕೊನೆ ಪುಸ್ತಕ ಮುಗಿಯುವ ವರೆಗೂ ಶೃಂಗಾರವಾಗಿರುವುದು.

ಕ್ರಯ 22 ಫೋಟೋಗಳ ಸಹಿತ ಪುಸ್ತಕಕ್ಕೆ 1—0—0

ರಾಯಲ ಫೋಟೋ ಕಂಪೆನಿ, 19 ಬೀಟ್, ಮದ್ರಾಸು.

Royal Photo Company,
19 BEAT MADRAS

ಶ್ರೀಮತಿ ಡಿ. ರಾಜರಾಜೇಶ್ವರಮ್ಮ

ಶಾರದಾ ವಿಲಾಸ, ದಿಗುಪಹಂಡಿ, ಗಂಜಾಂ ಜಿಲ್ಲೆ

ಇವರು ಬರೆಯುತ್ತಾರೆ —

"ಮುಟ್ಟಾಗುವ ವೇಳೆ ನನ್ನ ಸಹೋದರಿಯು ಅಸಹನೀಯ ನೋವನ್ನನುಭವಿಸುತ್ತಿದ್ದಳು. ಅವಳು ದಿನೇ ದಿನೇ ಕೃಶಳಾಗುತ್ತಿದ್ದಳು ನಾವು ಅನೇಕ ಔಷಧಿಗಳನ್ನುಪಯೋಗಿಸಿದೆವು—ಫಲವಾಗಲಿಲ್ಲ ಕಡೆಗೆ ನಿಮ್ಮ **ಲೋದ್ರ**ದ ಖ್ಯಾತಿಯನ್ನು ಕೇಳಿದೆವು ಎರಡು ಬಾಟ್ಲಿಗಳನ್ನು ಪಡೆದು ಅವಳಿಗೆ ಕೊಟ್ಟೆವು ಅವಳು ಆಶ್ಚರ್ಯಕರವಾಗಿ ಗುಣಹೊಂದಿರುವಳು ಅಲ್ಲದೆ ಒಂದು ಹೆಣ್ಣು ಕೂಸೂ ಜನಿಸಿದೆ ಈ ಸುವಾರ್ತೆಯನ್ನು ನಿಮಗೆ ಈ ಮೂಲಕ ತಿಳಿಸುವೆನು"

ಸ್ತ್ರೀಯರ ಎಲ್ಲಾ ರೋಗಗಳನ್ನೂ 'ಲೋದ್ರ'ವು ಗುಣಪಡಿಸುತ್ತದೆ.

ಎಲ್ಲಾ ಕೆಮಿಷ್ಟರಲ್ಲಿಯೂ ದೊರೆಯುತ್ತದೆ

ಕೇಸರಿ ಕುಟೀರಂ,

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

Sole Agents for South Kanara

ಪೊಪ್ಯುಲರ್ ಸ್ಟೋರ್ಸ್,
ರಥಬೀದಿ ಮಂಗಳೂರು

ಸ್ತ್ರೀ ಪುರುಷರ ಸಲುವಾಗಿ ಶಕ್ತಿ ವ ಸ್ಫೂರ್ತಿಕೊಡುವಂತಹ	ಸ್ತ್ರೀಯರ ಸಲುವಾಗಿ ಆರೋಗ್ಯ ವ ಶಕ್ತಿವರ್ಧಕ.
ಸುಮಧುರ	ಪ್ರದರಾದಿ ರೋಗಗಳ ಮೇಲೆ ರಾಮಬಾಣ ಉಪಾಯ
ಝಂಡು ದ್ರಾಕ್ಷಾಸವ	ಝಂಡು ಅಶೋಕಾರಿಷ್ಟ
ಜರೂರು ಉಪಯೋಗಿಸಿರಿ	ಬೇಗನೇ ಉಪಯೋಗಿಸಿರಿ

'ZANDU'

ಝಂಡು ಫಾರ್ಮಸ್ಯುಟಿಕಲ್ ವರ್ಕ್ಸ್ ಲಿ: ಮುಂಬಯಿ.

ಮದ್ರಾಸ್ ಸಂಸ್ಥಾನದ ಏಜಂಟ್ ದಾಮೋದರ ಮತ್ತು ಕಂಪೆನಿ, 78 ಜೈನ ... ರೋಡ್, ಮದ್ರಾಸು
ಮೈಸೂರು ಪ್ರೊವಿನ್ಸ್ ಏಜಂಟ್—ಬಿ ಪ್ರೊಪಟ್‌ಲಾಲ ಕಂಪೆನಿ, ... ಆರ್ಕಟ ಶ್ರೀನಿವಾಸಾಚಾರ ಸ್ಟ್ರೀಟ್
ಮಂಗಳೂರು ಏಜಂಟ್—ಶಾಹಾ ಕಂಪೆನಿ ಡಾಯ್ಮಂಡ್ ಬಿಲ್ಡಿಂಗ್, ಮಂಗಳೂರು
ಧಾರವಾಡ ಏಜಂಟ್—ದಿ ಧಾರವಾಡ ಫಾರ್ಮಸಿ, ಧಾರವಾಡ

ಬೇರೆ ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತದೆ

ಆಯುರ್ವೇದ ಔಷಧಿಗಳ ಸೂಚೀಪತ್ರವನ್ನು ಮುಖ್ಯ ಏಜಂಟರಿಂದ ಪಡಕೊಳ್ಳಿರಿ

ನಮ್ಮ ಸಲಹೆಯೇ ಪ್ರಾಧಾನ್ಯವಾದದ್ದೆಂದು ತಿಳಿಯಬೇಡಿ.

ಕಲ್ಲಿಕೋಟೆ ಅಶೋಕ ಆಸ್ಪತ್ರೆಯ ಚೀಫ್ ಮೆಡಿಕಲ್ ಆಫೀಸರರಾದ ಡಾ। ವಿ ಬಿ ರಾಮನ್, ಎಂ ಆರ್ ಸಿ ಎಸ್ ಇವರು ಬರೆದಿರುವುದನ್ನು ಓದಿ ನೋಡಿ—"ನಾನು ನಿಮ್ಮ ಆಶ್ಚರ್ಯಕರವಾದ ಜೀವಾಮೃತಂ ಟಾನಿಕನ್ನು ನರಗಳಲ್ಲಿ ಉಂಠ ಇರಿಕ ... ಇವು ಪ್ರಾಪ್ತವಾಗಿರುವ ಅನೇಕ ರೋಗಿಗಳಿಗೆ ಕೊಟ್ಟಿರುತ್ತೇನೆ ಅವರ ಹಸಿವು ಕಡಿಮೆಯಾಗಿರುವುದು ... ಕಡಿಮೆಯಾಗಿರುವುದು ಫಲಿತಾಂಶಗಳು ಬಹು ತೃಪ್ತಿಕರವಾಗಿದೆ. ಜೀವಾಮೃತವನ್ನು ದೇಹಶಕ್ತಿ ಕುಗ್ಗಿರುವ ಎಲ್ಲಾ ಸಂದರ್ಭಗಳಲ್ಲೂ ಸರ್ವ ಸಾಮಾನ್ಯವಾಗಿ ಉಪಯೋಗಿಸಬಹುದೆಂದ ನಾನು ಮನಃಪೂರ್ವಕವಾಗಿ ಶಿಫಾರಸು ಮಾಡುತ್ತೇನೆ"

ಜೀವಾಮೃತವು

ನರಗಳಿಗೆ ಶಕ್ತಿ ಕೊಡುತ್ತದೆ ವೀರ್ಯ ವೃದ್ಧಿಮಾಡುತ್ತದೆ ಹಸಿವು ಹೆಚ್ಚಿಸುತ್ತದೆ. ರಕ್ತ ವೃದ್ಧಿಮಾಡುತ್ತದೆ

ಪಂಡಿತ ಡಿ. ಗೋಪಾಲಾಚಾರ್ಯರವರ **ಜೀ ವಾ ಮೃ ತ ವು**

ಎಲ್ಲಾ ಔಷಧ ಮಾರುವವರಲ್ಲೂ, ಸ್ಟೋರುಗಳಲ್ಲೂ ದೊರೆಯುತ್ತದೆ (ಸಂಪೂರ್ಣ ವಿವರಗಳಿಗೆ ಇವತ್ತೇ ಬರೆಯಿರಿ)

ಆಯುರ್ವೇದಾಶ್ರಮಂ, ಪೋ. ಬಾಕ್ಸ್ ನಂ ೨೮೭, ಮದ್ರಾಸು

ಸೋಲ್ ಏಜಂಟರು – ಸಿಟಿ ಮೆಡಿಕಲ್ ಮತ್ತು ಜನರಲ್ ಏಜನ್ಸಿ, ... ಚಿಕ್ಕಪೇಟೆ ಬೆಂಗಳೂರು (... ಹೋಟೆಲ್ ಹತ್ತಿರ)
ದಕ್ಷಿಣ ಕನ್ನಡದ ಏಜಂಟರು— ಪೊಪ್ಯುಲರ್ ಸ್ಟೋರ್ಸ್, ಮಂಗಳೂರು P No 104

Jubilee year!

The Bombay Life Assurance Co., Ltd.,

Bombay—Established 1908.

Chairman—**Sir Lalubhai Samaldas**, Kt. C. I. E., J. P.

Wanted

ONE LADY ORGANISOR FOR EACH OF THE DISTRICTS OF SOUTH KANARA, COORG, BELLARY AND TWO FOR MYSORE STATE.

Either on pay or commission or both with reasonable Travelling Allowance. Only educated ladies need apply.

Right opportunity to those who desire independant and respectable vocation.

Applications can be made to the undersigned giving full qualifications and whether they can guarantee business.

Apply to:—

KOCHIKAR BROTHERS,
Madras Branch Secretaries.

Vishveshwarapuram Circle, *Bangalore City.* *or* Udipi, *South India.* *or* Post Box No. 337, *Mount Road, Madras.*

N. B. Intending candidates may interview by previous appointment with our Organizing Secretary (now in Bombay) who will be touring.

(25—8—33.)

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು **ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು.**

ಕಸ್ತೂರಿ ಮಿಶ್ರಿತ ದಶಮೂಲಾರಿಷ್ಟ ೧೬ ಔನ್ಸ್ ಬಾಟ್ಲಿ ಗಳ್ಗೆ ರೂ. 1–8–0. ದ್ರಾಕ್ಷಾಸವ ೧೬ ಔನ್ಸ್ ಬಾಟ್ಲಿ 1ಕ್ಕೆ ರೂ. 1. ಅಶ್ವಗಂಧಾರಿಷ್ಟ ೧೬ಂ. ಔನ್ಸ್ ಬಾಟ್ಲಿ ಒಂದಕ್ಕೆ ರೂ. 1–4–0. ಅಬಲಾಮೃತ ೧೬ ಔನ್ಸ್ ಬಾಟ್ಲಿ ಗಕ್ಕೆ ರೂ 2. ಅಶೋಕಾರಿಷ್ಟ ೧೬ ಔನ್ಸ್ ಬಾಟ್ಲಿ ಗಕ್ಕೆ ರೂ. 1–4–0. ಚ್ಯವನಪ್ರಾಶಲೇಹ ೧ ರಾತಲಿಗೆ ರೂ. 2–8–0. ಅಥಯಾಮಲಕಿ ೧ ರಾತ್ಲಿಗೆ ರೂ. 2. ಚಂದ್ರಮುಖ (ವಿಶೂಚಿಕೆಗೆ ರಾಮಬಾಣ) ಕಾಲು ಟಿನ್ನಿಗೆ ರೂ. 0–5–0. ದಂತಧಾವನ ಚೂರ್ಣ ಕೂಪಿ ಗಳ್ಗೆ 0–1–0. ಕ್ರಿಮಿಘಾತಿನಿ (ದದ್ದು, ಕಜ್ಜಿಗೆ) ಡಬ್ಬಿ ಗಳ್ಗೆ ರೂ. 0–4–0. ಕೃಷ್ಣಾಂಕ ೧ ಟಿನ್ನಿಗೆ ರೂ. 0–6–0 ಚಿತ್ರಕ (ಮಕ್ಕಳ ಗೃಹಣೀ ರೋಗಗಳ್ಗೆ ದಿವ್ಯೌಷಧ) ಕೂಪಿ ಗಳ್ಗೆ ರೂ. 0–8–0. ಮಹಾ ಚಿತ್ರಕ ಕೂಪಿ ಗಳ್ಗೆ ರೂ. 1–0–0. ಪಿಂಡ ತೈಲ ೫ ಔನ್ಸ್ ಬಾಟ್ ಗಳ್ಗೆ ರೂ. 0–10–0. ಬಲಾಶ್ವಗಂಧಾದಿ ತೈಲ ೫ ಔನ್ಸ್ ಬಾಟ್ಲಿ ಗಳ್ಗೆ 0–12–0. ಹಿಮಸಾಗರ ತೈಲ ೫ ಔನ್ಸ್ ಬಾಟ್ಲಿ ಗಳ್ಗೆ ರೂ. 1–8–0. ಮಹಾಚಂದನಾದಿ ತೈಲ ೫ ಔನ್ಸ್ ಬಾಟ್ಲಿ ಗಳ್ಗೆ ರೂ. 1–0–0. ಶ್ರೀ ಗೋಪಾಲ ತೈಲ ೫ ಔನ್ಸ್ ಬಾಟ್ಲಿ ಗಳ್ಗೆ ರೂ. 3–8–0.

ನಮ್ಮ ಔಷಧಗಳು ದೊರೆಯುವ ಸ್ಥಳ:—ಮಂಗಳೂರು–ರಾಘವೇಂದ್ರ ರಂಗ ಪೈ ರಥಬೀದಿ, ಕೆನರಾ ಡಿಸ್ಪೆನ್ಸರಿ ಕೊಡಿಯಾಲಬೈಲ್. ಕುಂದಾಪುರ–ಕೆ. ರಾಮ ಭಟ್. ಡಾಕ್ಟರ್ ಕೆ. ಆರ್. ಕಾಮತ್. ಉಡುಪಿ–ಪಿ. ಜನಾರ್ದನ ಪ್ರಭು. ಬೈಂದೂರು–ಕೆ. ಕೃಷ್ಣ ಕಾಮತ್. ಗಂಗೊಳ್ಳಿ–ಬಿ. ಸುರೇಂದ್ರ ನಾಯ್ಕ. ಕಾಪು–ಡಾಕ್ಟರ್ ಬಿ. ಕೆ. ಬೀಕಲ ಡಿಸ್ಪೆನ್ಸರಿ. ಭಟ್ಕಳ–ನಾಯಕ್ ಎಂಡ್ ಕೋ., ಶೈ ಫಾರ್ಮಸಿ, ಆರ್. ಎಸ್. ಶೆಟ್ಟಿ, ರಥಬೀದಿ. ಕಾರ್ಕಳ–ವಿ. ವಿ. ಶೆಟ್ಟಿ. ಬ್ರಹ್ಮಾವರ ಕೆ. ವೈಕುಂಠ ಪೈ ಎಂಡ್ ಸನ್ಸ್, ಕೆ. ಶೇಷಗಿರಿ ನಾಗಪ್ಪ ಎಂಡ್ ಸನ್ಸ್. ವಾಮನ ನರಸಿಂಹ ನಾಯಕ್. ಬಾರ್ಕೂರು–ಬಿ. ಭಗವಂತ ಮಲ್ಯ, ಆರ್. ಪಿ. ಔಷಧಾಲಯ.

ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಬಹುದು. ಎಲ್ಲೆಲ್ಲಿಯೂ ಏಜಂಟರು ಬೇಕಾಗಿದ್ದಾರೆ.

ನಾಯಕ್ ಬ್ರದರ್ಸ್, ಶ್ರೀಮದ್ಭುವನೇಂದ್ರ ಮಹೌಷಧಾಲಯ, ಪೋಸ್ಟ್ ಕಟಪಾಡಿ, ದ. ಕ.

The Canara Industrial & Banking Syndicate Limited.,

Established in 1925. **Head Office:—Mukunda Nivas, UDIPI**

Branches: Mangalore, Payyanur, Brahmavar, Kumta, Karwar, Hubli, Honnavar, Bangalore & Cannanore.

Authorised Capital Rs. 5,00,000. Subscribed Capital Rs. 1,06,300. Paid up Capital Rs. 26,300 Issued Capital Rs. 2,00,000

STATEMENT OF AFFAIRS OF THE SYNDICATE AS ON 30TH November 1933.

Liabilities			Assets		
Paid up Capital	Rs.	26,300—0—0.	Loans on Land mortgage	Rs.	2,71,186—9—2.
Reserve & other funds	,,	20,250—0—0.	Loans on Valuable Securities	,,	2,29,690— 7—9.
Deposits	,,	10,64,181—4—10.	Loans on Bills of Exchange, Hundis and Promissory Notes		4,73,634— 4—0.
Due to Bankers	,,	1,19,606—0—6.	Investment on Shares of other Companies	,,	43,575— 0—0.
			Investments on Government of Mysore Conversion Loan	,,	50,000—0—0.
			On Deposits with other Bankers	,,	1,11,000— 0—0.
Bills for Collection	,,	29,283—1—3.	Bills for collection (per contra)	,,	29,283— 1—3.
Sundries	,,	1,19,281—3—11.	Sundries	,,	1,40,794—4—10.
			Cash in hand & with Bankers	,,	29,677—15—6.
Total Rs.		13,78,841—10—6.	Total Rs.		13,78,841—10—6.

Long and Short term Loans on attractive Schemes are granted.
ALL KINDS OF BANKING BUSINESS UNDERTAKEN.

Udipi,
1-12-1933.

P. A. Pai Bros.,
Managing Agents.

WANTED.

Four Organisers to organise the work of the South Indian General Assurance Society, Ltd. in the following places noted below. Capable organisers can expect to have attractive and encouraging terms with sound footing for their future

(1) South Canara, (2) Mysore, Hassan and Coorg, (3) Kadur, Shimoga, Chitaldroog and Tumkur (4) Mangalore, Kolar.

For terms and other particulars please apply to—

The Divisional Manager,
The South Indian General Assurance Co. Ltd.
64, 3rd. Cross Road, Srirampur Extn.
Malleswaram Post, BANGALORE

OR

The Managing Agents,
The S. I. G. A. Co. Ltd.
55. Poonamallee High Road, Kilpauk, MADRAS.

ಡಾಕ್ಟರ್ ಗೋಪಾಲರಾವ್

ಡಾ. ಗೋಪಾಲರಾವ್ ಕೇಶವ ಅಂಡ್ ಸನ್ಸ್,

ಕೋ-ಒಪರೇಟಿವ್ ಸೊಸೈಟಿಗಳಿಗೆ

ಬೇಕಾದ ನಮೂನೆಯ ಎಲ್ಲಾ ವಿಧದ
ಫಾರಂಗಳು, ರಿಜಿಸ್ಟ್ರಿಗಳು, ರಶೀದಿ ಪುಸ್ತಕಗಳು,
ಮತ್ತು ಇತರ ಫಾರಂಗಳೂ ಮಾರಾಟಕ್ಕಿವೆ.
ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್.
ರಥಬೀದಿ, ಮಂಗಳೂರು

ಶಹಾ ಶಿವಾಜಿ ಹಿಂದೂ ರೆಸ್ಟೋರೆಂಟ್

ಗಣಪತಿ ಹೈಸ್ಕೂಲ್ ರಸ್ತೆ, ಮಂಗಳೂರು (ದ. ಕ.)
ಮಂಗಳೂರಿನ ನೂತನ ಉಪಹಾರ ಗೃಹ.
ಶುದ್ಧ ಜಿನಸುಗಳಿಂದ, ತಾಜಾ ತುಪ್ಪದಿಂದ ತಯಾರಿಸಲ್ಪಡುವ ಮಿಠಾಯಿಗಳು ಇನ್ನಿತ್ಯೋ ಬಗೆಯ ತಿಂಡಿ ತಿನಸುಗಳು—ಚಹಾ, ಕಾಫಿ, ಕೋಕೋ ಇತ್ಯಾದಿ ಎಲ್ಲ ತರದ ಪಾನೀಯಗಳು
ಅನುಭವಸ್ಥರಿಂದ ತಯಾರಿಸಲ್ಪಡುವುವು.
ಆರೋಗ್ಯ ತರಗತಿಯವರಿಗನುಕೂಲವಾಗುವಂತೆ ಸ್ಥಳವಿದೆ,
ಒಮ್ಮೆ ದಯಮಾಡಿಸಿ, ಪರೀಕ್ಷಿಸಿ
ತೃಪ್ತಿ ಪಡೆಯಿರಿ.
[ಟೀ ಪಾರ್ಟಿ, ವಿವಾಹ ಉಪನಯನಾದಿ ಸಮಾರಂಭಗಳಲ್ಲಿ ಸುಲಭ ದರಗಳಲ್ಲಿ ತಿಂಡಿತಿನಸು—ಪಾನೀಯಗಳನ್ನು ಒದಗಿಸಲಾಗುವುದು. ವಿಶೇಷ ಮಾಹಿತಿಗೆ ಖುದ್ದಾಗಿ ಯಾ ಪತ್ರದ್ವಾರಾ ವಿಚಾರಿಸಿಕೊಳ್ಳುವುದು]

ಪಂಡಿತ ಜವಾಹಿರಲಾಲ ನೆಹರೂ ಬಂದಾಗ್ಗೆ ಹುಬ್ಬಳ್ಳಿ ಪ್ರದರ್ಶನದಲ್ಲಿ ಸುವರ್ಣಪದಕ ದೊರೆತ
ಒಂದೇ ಸವನಾಗಿ ೩೫ ವರ್ಷದ ಅನುಭವದಿಂದ
ಹಿಂದೂಸ್ಥಾನದ ಸಾವಿರಾರು ಜನರಿಂದ ವರ್ಣಿಸಲ್ಪಟ್ಟ ಆಯುರ್ವೇದೋಕ್ತ
ತಾಜಾ ಮತ್ತು ಪೌಷ್ಟಿಕ ವನಸ್ಪತಿಗಳಿಂದ ತಯಾರಿಸಿರುವ ಮತ್ತು ಅದರ ಗುಣಕ್ಕಾಗಿ ಅನೇಕ ಸರ್ಟಿಫಿಕೇಟುಗಳು ಮತ್ತು ಬಂಗಾರದ ಪದಕಗಳು ದೊರಕಿರುವ ಪರದೇಶದಲ್ಲಿ ಖರ್ಚಾಗುವ ಶಕ್ತಿಯ ಮೇಲೆ ಮೊದಲನೇ ತರಗತಿಯ ಟಾನಿಕ

ದ್ರಾಕ್ಷಾಮೃತ

ಈ ದ್ರಾಕ್ಷಾಮೃತವು ಸಹ್ಯಾದ್ರಿ ಪರ್ವತದಲ್ಲಿರುವ ಅನೇಕ ವನಸ್ಪತಿಗಳ ರಸಾರ್ಕಗಳೊಂದಿಗೆ ದ್ರಾಕ್ಷಾರಸವನ್ನು ಮಿಶ್ರಮಾಡಿ ಸ್ವದೇಶೀ ಯಂತ್ರದಿಂದ ಶಾಸ್ತ್ರೋಕ್ತ ಪದ್ಧತಿ ಪ್ರಕಾರ ತಯಾರ ಮಾಡಿರುವುದರಿಂದ ಸ್ವಾದಿಷ್ಟವು ಮತ್ತು ಮಧುರವು ಆಗಿದೆ. ಇದರ ಸೇವನೆಯಿಂದ ಶರೀರದೊಳಗಿನ ಹಳೇ ಕಡಕಿ (ಗರಮಿ) ಸಂಪೂರ್ಣ ನಾಶವಾಗುತ್ತದೆ ಮತ್ತು ಧಾತುಸ್ರಾವ, ಸ್ವಪ್ನದೋಷದಿಂದ ಅಥವಾ ಬೇರೆ ಯಾವುದೇ ವಿಕಾರದಿಂದ ಬಂದ ಅಶಕ್ತತೆಯಿಂದ ಕೈಕಾಲು, ಕಣ್ಣುಗಳ ಉರುಪು ಬೀಳೋಣ, ಯಾವಾಗಲೂ ಎದೆಯಲ್ಲಿ ಜ್ವರ ಇರೋಣ, ಸೊಂಟ ನೋಯೋಣ, ಪಿತ್ತದಿಂದ ಕಣ್ಣಿಗೆ ಕತ್ತಲೆ ಬಂದು ಭೋರೀಳೆ ಬರೋಣ, ಇವೇ ಮೊದಲಾದ ಎಲ್ಲ ವಿಕಾರಗಳು ನಷ್ಟವಾಗಿ ಜಠರಾಗ್ನಿಯು ಬೆಳೆಯುತ್ತದೆ. ಮತ್ತು ಅನ್ನ ಪಚನಕ್ಕೆ ಸಹಾಯವಾಗುತ್ತದೆ. ಇದರ ಸೇವನೆಯಿಂದ ತರುಣರಿಗೆ ವ್ಯಭಿಚಾರದಿಂದ ಅಥವಾ ಬೇರೆ ಕಾರಣದಿಂದ ಬಂದ ಧಾತುಕ್ಷೀಣತೆ, ನಪುಂಸಕತ್ವ ಇದ್ದರೆ ಅದು ಹೋಗಿ ಪುನಃ ಯುವನವಂತರಾಗಿ ಶರೀರ ಬಲವಾಗಿ ಮಕ್ಕಳು ಹುಟ್ಟುವಂತಾಗುವರು. ಹೆಂಗಸರಿಗೂ ಮತ್ತು ಮಕ್ಕಳಿಗೂ ಈ ಔಷಧವು ಗುಣಕಾರಿ ಇದೆ. ಮುಟ್ಟಾಗದಿದ್ದರೆ ಮತ್ತು ಉಷ್ಣದ ಗರ್ಭ ಹಾಗುವರು. ಹೆಂಗಸರಿಗೂ ಮತ್ತು ಮಕ್ಕಳಿಗೂ ಈ ಔಷಧವು ಗುಣಕಾರಿ ಇದೆ. ಅಶಕ್ತ ಹುಡುಗರು ಬಲ ಸಂಬಂಧವಾದ ರೋಗಗಳಿದ್ದರೂ ಅವುಗಳೆಲ್ಲ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವುದು. ಇದರ ಅನುಭವ ೧ ಬಾಟ್ಲಿ ಸೇವನೆಮಾಡಿದ ನಂತರ ತಿಳಿದೀತು. ಈ ಔಷಧದ ೩ ಬಾಟ್ಲಿಗಳನ್ನು ಸೇವನೆ ಮಾಡಿದರೆ ಪೂರ್ಣ ಗುಣ ಬರುತ್ತದೆ.

ಬಾಟ್ಲಿ ಬೆಲೆ ೧—೪—೦, ೩ ಬಾಟ್ಲಿಗೆ ೩—೮—೦. ಡಝನ ಬಾಟ್ಲಿಗೆ ರೂಪಾಯಿ ಟಪ್ಪಾಲು ಖರ್ಚು ಪ್ರೋಕ್ಷೇಜ ಬೇರೆ ಬೀಳುತ್ತದೆ.
ಪ್ರಸಿದ್ಧ ಕೆಮಿಸ್ಟ ಮತ್ತು ಸ್ಟೋರ್ಸದೊಳಗೆ ಮತ್ತು ಕಿರಾಣಿ ಅಂಗಡಿಯಲ್ಲಿ ಸಿಗುವುದು.
ವ್ಯವಸ್ಥಾಪಕ— ದ್ರಾಕ್ಷಾಮೃತ ಕಾರ್ಯಾಲಯ, ಪೋಸ್ಟು ನಿಪ್ಪಾಣಿ ಜಿಲ್ಲಾ, (ಬೆಳಗಾಂವಿ)

ಸಿಕ್ಕುವ ಸ್ಥಳ:— ಮಂಗಳೂರು—ಗಜಾನನ ಮೆಡಿಕಲ್ ಹಾಲ್ ಮತ್ತು ಮಿಜಾರ್ ಕಾರ್ ಬ್ರದರ್ಸ್, ಕಾರ್ ಸ್ಟ್ರೀಟ್. ಕಾರ್ಕಳ—ಕುಂದಾಪುರ—ಕೆ. ಆರ್. ಭಟ್ಟ, ಉಡುಪಿ—ಸ್ಟೈ ಫಾರ್ಮಸಿ, ಮತ್ತು ಕೆ. ಶೀವಗಿರಿ ಪೈ. ಕಾಸರಗೋಡು—ವಿ. ವಿ. ಶೆಣೈ. ಪುತ್ತೂರು—ಗೋಪಾಲ ನಾರಾಯಣ ಪೈ ಮತ್ತು ಪೈ ಫಾರ್ಮಸಿ. ಶಿವಮೊಗ್ಗ—
2-6-38 ಕೆ. ರಾಮ ನಾಯ್ಕ, ಕೋರ್ಟ್ ರಸ್ತೆ. ಬಂಟವಾಳ— ವಿ. ಎಚ್. ವಾಸುದೇವ ಪೈ.

ಉಪಯೋಗಿ ವಸ್ತುಗಳು

ಅಸಂಖ್ಯಾತರಾದ ನಮ್ಮ ಗಿರಾಕಿಗಳ ಬೇಕೆಗೆ ಮತ್ತು ಅನುಕೂಲತೆಗಳನ್ನು ಇದೇ ಮುಖ್ಯಉದ್ದೇಶದಿಂದ ತಿಳಿದು, ಅವರಿಗೆ ಸುಲಭ ದರದ ಯೋಗ್ಯ ಹಾಗೂ ಬಹುಕಾಲ ಬಾಳುವ ಸರ್ವ ತರದ ಉಡುಪುತೊಡುಪುಗಳನ್ನು ಒದಗಿಸುವ ನಮ್ಮ ಎರಡು ದಶಾಂತರಗಳ ಅನುಭವವು ಮುಂದಕ್ಕೂ ಸಂತೃಪ್ತಿ ಯನ್ನೀಯದಿರುವುದಲ್ಲವೇ?

ಸ್ವದೇಶೀ

ಕಾರ್ಖಾನೆಗಳಲ್ಲಾದ ನೂಲು ಮತ್ತು ಕೈಮಗ್ಗದ ವಸ್ತ್ರ, ಹೊದಿಕೆಗಳೂ, ಬೆಡ್ ಶೀಟ್ ಬಾತ್ ಟುವಾಲುಗಳೂ ಧೋತಿ, ಸೀರೆ—ಪೈರವಾಸು—ಚಿಕ್ಕು—ಚೀಟು ಇತ್ಯಾದಿ ಎಲ್ಲವೂ ಯಾವಾಗಲೂ ಮಾರಾಟಕ್ಕಿದೆ.

ಶ್ರೀನಿವಾಸ ರಂಗಪೈ,
[ಸಾಹುಕಾರ ಮಹಾಲ್]
ರಥಬೀದಿ, ಮಂಗಳೂರು

Srinivasa Ranga Pai,
Representatives for South Canara and Malabar
For— A. & F. Harvey,
Managers: Madura Mills Co, Ltd.

ನಿಮಗೆ ಭಕ್ತಿ, ಜ್ಞಾನಗಳು ಬೇಕೋ? ಹಾಗಾದರೆ ಶ್ರೀ ಭಾಗವತವನ್ನು ಓದಿರಿ.

ಕನ್ನಡ ಟೀಕಾತಾತ್ಪರ್ಯಾದಿ ಸಹಿತ

ಶ್ರೀ ಭಾಗವತ ಮಹಾಪುರಾಣ.

ಆಸ್ಥಾನ ಮಹಾವಿದ್ವಾನ್ ಮೋಟಗಾನಹಳ್ಳಿ ರಾಮಶೇಷಶಾಸ್ತ್ರಿಗಳಿಂದ ಪ್ರಕಟಿಸಲ್ಪಟ್ಟಿರುವ ಮತತ್ರಯಾನುಸಾರವಾಗಿ ಅನೇಕ ವಿಷಯಗಳೊಡನೆ ಕನ್ನಡಿಸಲ್ಪಟ್ಟ ಈ ಗ್ರಂಥವು ಮೊದಲಿನಿಂದ ಹತ್ತು ಸ್ಕಂಧಗಳು 7 ಸಂಪುಟಗಳಲ್ಲಿ ಪ್ರಚಾರವಾಗಿರುವುದು ತಿಳಿಯಷ್ಟೆ. ಈಗ 11-12ನೇಯ ಸ್ಕಂಧಗಳುಳ್ಳ ಎಂಟನೆಯ ಸಂಪುಟವು ಪೀಠಿಕಾ ವಿಮರ್ಶೆಗಳೊಡನೆ ಬೆಳಕಿಗೆ ಸಿದ್ಧವಾಗಿದೆ. ಹಿಂದಣ ಗ್ರಾಹಕ ಮಹಾಶಯರೂ ದೇಶಬಾಂಧವರೂ ಸಹಾ ಪ್ರೋತ್ಸಾಹಿಸಬೇಕೆಂದು ಪ್ರಾರ್ಥನೆ.

1ನೇಯ ಸಂಪುಟ (1—2ನೇ ಸ್ಕಂಧಗಳು) 3—4—0	7ನೇಯ ಸಂಪುಟ (ದಶಮ ಉತ್ತರ ಭಾಗ) 4—8—0
2 ,, ,, (3ನೇಯ ಸ್ಕಂಧ) 3—12—0	8 ,, ,, (11, 12ನೆಯ ಸ್ಕಂಧಗಳು ಪೀಠಿಕಾಸಹಿತ) 4—8—0
3 ,, ,, (4 ,, ,,) 3—8—0	ಶ್ರೀ ಭಾಗವತ ಪುರಾಣ ಪರಿಚಯ ಮಾತ್ರ 0—8—0
4 ,, ,, (5-6ನೇಯ ಸ್ಕಂಧಗಳು) 4—0—0	ಕರ್ನಾಟಕ ಮಹಾರಾಷ್ಟ್ರ ಚರಿತೆ 1—4—0
5 ,, ,, (7, 8, 9 ಸ್ಕಂಧಗಳು) 5—8—0	(ಇದೇ ಗ್ರಂಥಕರ್ತರಿಂದ ರಚಿಸಲ್ಪಟ್ಟಿದು)
6 ,, ,, (ದಶಮ ಪೂರ್ವಭಾಗ) 5—0—0	

ಈ ಬೆಲೆಗಳಿಗೆ ಟಪ್ಪಾಲು ಹಾಸಲು ಸೇರಿಲ್ಲ. ಹೆಚ್ಚು ವಿಷಯಗಳಿಗೆ ಈ ವಿಳಾಸಕ್ಕೆ ಬರೆಯಿರಿ.
ಎಂ. ಆರ್. ಶ್ರೀಕಂಠ ಶಾಸ್ತ್ರಿ, ಭಾರತೀ ಭವನ, ಚಾಮರಾಜಪೇಟೆ, ಬೆಂಗಳೂರು ಸಿಟಿ.

EDITED, PRINTED & PUBLISHED BY V. S. KUDVA AT THE SHARADA PRESS, MANGALORE.

ಬಿಡಿ ಸಂಚಿಕೆ ... ವರ್ಷಕ್ಕೆ ... ವಾರ್ಷಿಕ ಮುಂಗಡ ... ಮೂರ್ಲು ಮಾಸಲು ಸೇರಿ ರೂಪಾಯಿ ೩-೧೩-೦

ಸ್ವದೇಶಾಭಿಮಾನಿ.

(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೭ರಲ್ಲಿ ಸ್ಥಾಪಿತವಾದುದು.)

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ಕಾರ್ಶ್ಯಗಸ್ತುಕುರ್ಸ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥

ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಷ್ಣವ ಸುಡುಕ ಬರುತಿರುವ ॥

ಗರಲಕೆವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ । ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

(Oldest Kanarese Weekly in South Kanara)

ಪುಸ್ತಕ ೨೮. ಮಂಗಳೂರು ತಾ ೨ನೇ ಶುಕ್ರವಾರ ಫೆಬ್ರವರಿ ೧೯೩೪ (2-2-'34) ಸಂಚಿಕೆ ೫

THE CANARA BANKING CORPORATION, UDIPI, LTD.

(Incorporated in British India)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI. **Branches:—Coondapoor, Mangalore, Shimoga & Madras.**

NOTICE

is hereby given that the ORDINARY GENERAL MEETING of the share-holders of the Corporation will be held at UDIPI on Sunday, the 11th day of February 1934, at 10 A. M.

The Share transfer books of the Corporation will remain closed from 20-1-1934 to 15-2-1934.

By Order

UDIPI, 18-1-'34

N. ANANDA RAO.
Manager,

(Regd)

ಅಮೃತಾಂಜನ.

ಇದು ಕೆಟ್ಟ ಶಿರೋವೇದನೆ, ಕಟ್ಟಕೊಡುವ ವಾತ, ಧಾರಿ ನೋವು, ವಿಶೇಷ ಉಳುಕು, ಅಸಹನೀಯ ಹಲ್ಲುನೋವು, ವಿಪರೀತ ಛಾಯು ಬಹು ಶೀತ, ಸಹಿಸಲಸದಳವಾದ ಚಳಿ, ಕೈಕಾಲು ಮರಗಟ್ಟುವುದು, ಉಂಬಾಗೊ ಮೊದಲಾದ ಎಲ್ಲಾ ತರದ ಬೇನೆಗಳನ್ನೂ ಅತೀ ತ್ವರೆಯಲ್ಲೇ ಗುಣ ಪಡಿಸುತ್ತದೆ. ಎಲ್ಲಿಯೂ ಮಾರಲ್ಪಡುತ್ತಿದೆ.

ರಿಂಗ್‌ವರ್ಮ್ ಮುಲಾಮು— ಇದು ರಿಂಗ್‌ವರ್ಮನ್ನು ಕಜ್ಜಿಯನ್ನು ಇನ್ನಿತರ ಚರ್ಮರೋಗಗಳನ್ನು, ಮೂರು ಸಲವುಟ್ಟಿಸುವುದರೊಳಗೆ ಗುಣಪಡಿಸುತ್ತದೆ.

ಡಬ್ಬಿ 1ಕ್ಕೆ 6 ಆಣೆ ಡಜನಿಗೆ ರೂ- 3-8-0. ಅಂಚೆವೆಚ್ಚ ಪ್ರತ್ಯೇಕ.

ಅಮೃತಾಂಜನ ಡಿಪೋ.

ಮದರಾಸು ಮತ್ತು ಬೊಂಬಾಯಿ.

ಬೊಂಬಯಿ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

ಸ್ಥಾಪಿತವಾದುದು ಬೊಂಬಾಯಿ. 1908ರಲ್ಲಿ.

ಚೆಯರ್‌ಮೇನ್_ಸರ್. ಲಲ್ಲೂಭಾಯ್ ಶ್ಯಾಮಲದಾಸ್, ಕೆಟಿ. ಸಿ. ಐ. ಇ. ಜೆ. ಪಿ.

ಜೀವವಿಮೆಯ ಪದ್ಧತಿಯಲ್ಲಿ ಅತ್ಯುತ್ಕೃಷ್ಟವಾಗಿರುವ ಎಲ್ಲ ಸೌಕರ್ಯಗಳನ್ನೂ ಈ ಸಂಸ್ಥೆಯು ಒದಗಿಸಿ ಕೊಡುತ್ತದೆ. ಕಾಲೋಚಿತವಾದ ಆವಶ್ಯಕತೆಗಳಿಗೊಪ್ಪುವ ಸರ್ವೋತ್ಕೃಷ್ಟಮವಾದ ಯೋಜನೆಗಳು! ಸ್ತ್ರೀಯರ ಜೀವವಿಮೆಯನ್ನೂ ಸ್ವೀಕರಿಸಲಾಗುತ್ತದೆ.

ಸಂಯುಕ್ತ ಜೀವನ ವಿಮಾ ಪದ್ಧತಿಯು ಇದರದೊಂದು ವೈಶಿಷ್ಟ್ಯವೇ!

ಬಳಸ್ಪಿಯ ನಿಯಮಗಳು ಬಹಳ ಉದಾರ! ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ:— ಯೋಗ್ಯ ಗ್ರಹಸ್ಥರಿಗೆ ಅತ್ಯುತ್ತಮ ಸಂದರ್ಭ!

ಕೊಟ್ಟಿಕಾರ್ ಬ್ರದರ್ಸ್, ಮದ್ರಾಸು ಶಾಖೆಯ ಕಾರ್ಯದರ್ಶಿಗಳು. ಮತ್ತು ಬೊಂಬಯಿ ನಗರಕ್ಕೂ, ನಗರದ ಆಸುಪಾಸಿಗೂ ಮುಖ್ಯ ಏಜೆಂಟರುಗಳು.

ಆಫೀಸುಗಳು:—

ಮದ್ರಾಸು.	ಬೆಂಗಳೂರು.	ಮಂಗಳೂರು.	ಬೊಂಬಯಿ.	ಉಡುಪಿ.
ಪೋಸ್ಟ್ ಬಾಕ್ಸ್ ನಂಬ್ರ 337. ನಾರ್ತ್ ಬೀಚ್.	ವಿಕ್ಟೋರಿಯಾ ಸರ್ಕಲ್. ಬೆಂಗಳೂರು ಸಿಟಿ.	ಕಾರ್ಪೊರೇಶನ್ ಬಿಲ್ಡಿಂಗ್, ಕಾರ್‌ಸ್ಟ್ರೀಟ್.	ಇಸ್ಮಾಯಿಲ್ ಬಿಲ್ಡಿಂಗ್ ಲಾಹರ್ ಹೌಸ್.	ದಕ್ಷಿಣ ಇಂಡಿಯ.

[illegible]

× × × ×

ಒಂದು ಮನೆಯಲ್ಲಿ ಒಂದು ಗಂಡು ಮಗು ಹುಟ್ಟಿ, [illegible] ಇನ್ನೊಂದು ಮನೆಯಲ್ಲಿ ಒಂದು ಗಂಡು ಮಗು [illegible] ಬಂದು ಬಳಗದವರನ್ನು ದುಃಖಸಾಗರದಲ್ಲಿ [illegible]

× × × ×

ಭೂಮಿಯ ದಕ್ಷಿಣ ಪ್ರಾಂತ್ಯದ ಜನರು ಬೇಕಾದ ರೀತಿಯಿಂದ ಸುಖಲೋಲುಪರಾಗಿ ಬಾಳುತ್ತಿರುವಾಗ, ಉತ್ತರ ಪ್ರಾಂತ್ಯದವರು ಉಣಲಿಕ್ಕೆ ಅನ್ನವಿಲ್ಲದೆ, ಉಡಲಿಕ್ಕೆ ವಸ್ತ್ರವಿಲ್ಲದೆ ಸಾಯುತ್ತಿರುವರು!

× × × ×

ಬಿಹಾರದಲ್ಲಿ ನೀರಿಗಾಗಿ ಜನರು ಬಾಯಿಬಿಟ್ಟು ಪ್ರಾಣಬಿಡುತ್ತಿರುವಾಗ ಚೀನದಲ್ಲಿ ನೀರಿನ ನೆರೆಯಿದ್ದು ೧೦ ೦೦೦ ಜನರು ಮೃತರಾದರು ೪೦ ೦೦೦ ಜನರು ಕಾಣೆಯಾಗಿರುವರು.

× × × ×

ಇದಕ್ಕೆಲ್ಲವೇ ದೇವಬಂದಿಹನೆನ್ನುವುದು! ಸೃಷ್ಟಿಕರ್ತನಾದ ದೇವರು ಸೃಷ್ಟಿಯ ರೂಪದೃಷ್ಟಿಯಿಂದಲೇ ಭೂಮಿಗಿಳಿದಿಹನೆನ್ನುವುದಕ್ಕೆ ಸಂದೇಹವೇನು?

× × × ×

ಉತ್ತರ ಪ್ರಾಂತ್ಯದಲ್ಲಿ ಬ್ರಾಹ್ಮಣ ಅಬ್ರಾಹ್ಮಣ ಜಾತಿ ಹಿಂದೂ ಅಸ್ಪೃಶ್ಯವೆಂಬ ಭೇದಕ್ಕೆ ಮೇರೆಯಿಲ್ಲ. ದೇವರೇ ಕೊಟ್ಟಿರುವ ಈ ಭೂಕಂಪವು ಅಂತಹ ಜನರಿಗೆ ಒಳ್ಳೆಯ ಪಾಠವನ್ನು ಕಲಿಸಿತು.

× × × ×

ಜನರು ಭೇದ ಮಾಡಿದರೆ ನಗೆಯಾರಂಭವಾಗುತ್ತದೆ — ಆದರೆ ದೇವರು ಭೇದ ಮಾಡಿದರೆ ಪ್ರಳಯವೇ ತಲೆದೋರುತ್ತದೆ. ಬಡವರನ್ನು ದಣಿಸುವವರು ಇನ್ನಾದರೂ ಕಣ್ತೆರೆಯುವುದು ಅವಶ್ಯ

× × × ×

ಕಟ್ಟಡಗಳು ಒಂದರ ಮೇಲೆ ಒಂದು ಬೀಳುವಾಗ ಅಡಿಗೆ ಬಿದ್ದ ಬ್ರಾಹ್ಮಣನನ್ನು ಅಸ್ಪೃಶ್ಯರೆಂಬುವವರು ಈಚೆಗೆಳೆದು ಆಸ್ಪತ್ರೆಗೆ ಸಾಗಿಸಿದ ಘಟನೆಗಳಿಗೂ ಈ ಭೂಕಂಪದಲ್ಲಿ ಕಡಿಮೆಯಿಲ್ಲ

× × × ×

ಸುಖವಿರುವ ಜನರ ಧರ್ಮ ಭೇದ ಅಹಂಕಾರಗಳು ದುಃಖವು ಮುತ್ತಿದ ವೇಳೆ ಯಾವುದಕ್ಕೂ ಎಡೆಯಿಲ್ಲ

× × × ×

ಉತ್ತರ ಪ್ರಾಂತ್ಯದಲ್ಲಾದ ಭೂಕಂಪದಿಂದಾಗಿ ಸತ್ತ ಜನ ಜಂತುಗಳಿಂದಾಗಿ ರೋಗರುಜಿನೆಗಳ ತಲೆದೋರಿ ದೇಶವೆಲ್ಲಾ ಹರಡುವುದೆಂದು ಚಿಂತಿಸಲ್ಪಟ್ಟಿದೆ ಆ ಸೃಷ್ಟಿಕರ್ತನೇ ಕಾಪಾಡಬೇಕು!

× × × ×

ಬಿಹಾರಿನ ಜನರಿಗೆ ಅಸಹನೀಯ ಕಷ್ಟವು ಬಂದಿದೆ. ಲಕ್ಷಗಟ್ಟಲೆ ಧನಸಹಾಯವು ಕಳುಹಿಸಲ್ಪಟ್ಟಿದೆ ದಕ್ಷಿಣ ಕನ್ನಡದವರಿಗೆ ಬಿಹಾರಿನವರ ಕಷ್ಟದ ಕುರಿತು ತಿಳಿದಂತೆ ಕಂಡಿಲ್ಲ

× × × ×

ದಿನಂಪ್ರತಿ ಎಂಬಂತೆ ಜನಹಾನಿಯವಾರ್ತೆಗಳು ಮರಣಹೊಂದುವಂತಾಗಿದೆ ಈ ಮರಣಗಳಲ್ಲದೆ ಬೇಗನೇ ಯುದ್ಧವು ತಲೆದೋರಿ ಸಹಸ್ರಾರು ಜನರು ಮೃತಿಯನ್ನೈದಲಿದೆ ಎಂದು ಜೋತಿಷ್ಯಗಾರರ ಹೇಳಿಕೆ ದೇವಬಂದಿಹನೆಂಬುದು ಸುಳ್ಳಾಗಲಾರದು

× × × ×

ಬುದ್ಧಿನಡತೆ, ವಿದೇಶಿಯ ಪ್ರಾಬಲ್ಯಗಳಿಂದ ದೇಶವು ಬಳಲಿದುದು ಸಾಕು.—ಇನ್ನು ಭೂಕಂಪಗಳಿಂದಾಗಿಯೂ ನಮ್ಮನ್ನು ದಾರಿದ್ರ್ಯಕ್ಕೀಡಾಗಿಸ ಬಾರದೆಂದು ಈ ದಿವಸದಲ್ಲಿ ಪ್ರತಿಯೊಬ್ಬ ಭಾರತೀಯನೂ ಪ್ರಾರ್ಥಿಸಿಕೊಳ್ಳಬೇಕಾಗಿದೆ

× × × ×

ದಕ್ಷಿಣ ಕನ್ನಡವೆಂಬುದು ಪರಶುರಾಮ ಸೃಷ್ಟಿ! ಅದುದರಿಂದ ಇದಕ್ಕೆ ಯಾವ ಬಾಧಕವೂ ಬಾರದೆಂದು ತಿಳಿದರೆ ಆಹಾ! ಭೂಕಂಪ ದೇವರೇ, ದಕ್ಷಿಣ ಕನ್ನಡಿಗರ ಮೇಲೆ ಸ್ವಲ್ಪ ದಯೆ ತೋರಿಸುವೆಯಾ? ನೆರೆಯೂ [illegible]

[illegible] ದಾಗುವುದು.

ಮಂಗಳೂರು, ೨೬-೧-೩೪. } K. Gopalakrishna Rao, *Vakil for Plaintiff.*

ನೋಟೀಸು.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

O P No. 8/34.

ಎಂ ಬಾಬು ಪೂಜಾರಿ—ಅರ್ಜಿದಾರ

1 ಪೂವು ಹೆಂಗಸು, 2 ನೀಲು ಹೆಂಗಸು—ಎದ್ರಿರು

ಇವರೊಳಗೆ.

ವೈಕೂರು ಪ್ರಾಂತ್ಯದ ಕೆಳಗಿನ ತೋಟದ ರ್‍ಯಾಟರ ಈಗ ಮೃತಪಟ್ಟಿರುವ ತುಕ್ರ ಪೂಜಾರಿಗೆ ಬಂತಕ್ಕ ಸಾಲ ವಸೂಲಿ ಬಗ್ಗೆ ತನಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾರನು ಮೇಲ್ಕಂಡ ಕೋರ್ಟಿನಲ್ಲಿ ಬರಕೊಂಡ ಸದ್ರಿ ಅರ್ಜಿಯು ಇದೇ ಬರುವ ತಾ 22-2-84ಕ್ಕೆ ತನ್ಖಿಗೆ ಇಡೋಣಾಗಿಯದೆ ಈ ಕುರಿತ ಆಕ್ಷೇಪವುಳ್ಳವರು ತಾ 22-2-84ನೇ ಬೆಳಗ್ಗೆ 11 ಘಂಟೆಗೆ ಕೋರ್ಟಿನ ಮುಂದೆ ಹಾಜರಾಗಿ ಜವಾಬು ಕೊಡಬಹುದು

ಕಾರ್ಕಳ ೩೧-೧-೩೪ | ಹಾಜಿ ಸಯ್ಯದ ಹುಸೇನ ಸಾಹೇಬ, ಅರ್ಜಿದಾರನ ಕಡೆ ವಕೀಲ್

ನೋಟೀಸು

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

R I A /1933 ಕ್ರಮ ಸಂಖ್ಯೆ 100/1932

ಕಮಲೆ ಕೊಡಗಿ— ವಾದಿ

ಮತ್ತು

ಅರಗಪ್ಪ ಸೆಟ್ಟಿಗಾರ ಕೊಡಂ—ಪ್ರತಿವಾದಿ.

ಎಂದಿಂ ಕಡೆಯಿಂದ ಈ ವ್ಯಾಜ್ಯದಲ್ಲಿ ಮೃತಪಟ್ಟ ಕಾರ್ಕಳ ತಾಲೂಕು ಕಲ್ಯ ಗ್ರಾಮದ 2ನೇ ಪ್ರತಿವಾದಿ ಮೋಂಟ ಸೆಟ್ಟಿಗಾರನ ವಾರಿಸ್‌ದಾರರಾಗಿ ಸದ್ರಿಯವನ ಹೆಂಡತಿ ಸಪ್ಲಿ ಮೊಂಟ 4ನೇ ಪ್ರತಿವಾದಿ ತುಂಗು ಸೆಟ್ಟಿಗಾರ್ತಿ ಮತ್ತು ಸದ್ರಿಯವನ ಮಕ್ಕಳು 5. ಮೆಣ್ಪ ಸೆಟ್ಟಿಗಾರ 6 ಚಂದುಸೆಟ್ಟಿಗಾರ (ಮ್ಯಾನರ) ಇವನ ಬಗ್ಗೆ ಸದ್ರಿಯವನ ತಾಯಿ 4ನೇ ಪ್ರತಿವಾದಿ ತುಂಗುಸೆಟ್ಟಿಗಾರ್ತಿಯನ್ನು ಗಾರ್ಡಿಯನಳಾಗಿ ನೇಮಕ ಮಾಡಬೇಕಾಗಿ ಕೊಟ್ಟ ಅರ್ಜಿ ಮೇಲಾದ ಹುಕುಂ ಪ್ರಕಾರ ಸದ್ರಿಯವರಿಗೆ ತಿಳಿಯಪಡಿಸುವುದೇನೆಂದರೆ —ಸದ್ರಿ ಮೃತಪಟ್ಟ 2ನೇ ಪ್ರತಿವಾದಿ ಮೋಂಟ ಸೆಟ್ಟಿಗಾರನ ವಾರಿಸ್ದಾರರಾಗಿ ಮೇಲೆ ಕಾಣಿಸಿದ ತುಂಗುಸೆಟ್ಟಿಗಾರ್ತಿ, ಮೆಣ್ಪ ಸೆಟ್ಟಿಗಾರ, ವ ಮ್ಯಾನರ ಚಂದು ಸೆಟ್ಟಿಗಾರರನ್ನು ಕಕ್ಷಿಯಾಗಿ ಸೇರಿಸಿ ಸದ್ರಿ ಮ್ಯಾನರ 6ನೇ ಪ್ರತಿವಾದಿ ಚಂದುಸೆಟ್ಟಿಗಾರನ ಗಾರ್ಡಿಯನಳಾಗಿ ಸದ್ರಿ ಮ್ಯಾನರನ ತಾಯಿ 4ನೇ ಪ್ರತಿವಾದಿನು ತುಂಗು ಸೆಟ್ಟಿಗಾರ್ತಿಯನ್ನು ನೇಮಕ ಮಾಡಬೇಕಾಗಿ ಕೊಟ್ಟ ಅರ್ಜಿಯ ತನ್ಖ ವ ಸದ್ರಿ ದಾವೆಯಲ್ಲಿ ಸದ್ರಿ ವಾರಿಸ್ದಾರರ ಹಾಜರಿ ಬಗ್ಗೆ ಸಹಾ ಇದೇ ತಾ. 9—2—34ಕ್ಕೆ ಈ ಕೋರ್ಟಿನಲ್ಲಿ ಇಟ್ಟಿರುತ್ತದೆ. ಸಂಬಂಧಪಟ್ಟವರು ಸದ್ರಿ ತನ್ಖ ತಾ. 9—2—34ನೇ ದಿನ ಪೂರ್ವಾಹ್ನ ಘಂಟೆ 10ಕ್ಕೆ ಈ ಕೋರ್ಟಿಗೆ ಹಾಜರಾಗಿ ಆಕ್ಷೇಪಗಳನ್ನು ಕೊಡಬಹುದು. ತಪ್ಪಿದರೆ ಸದ್ರಿ ಸ್ವಾಹಲ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

[illegible] and [illegible]

The abovenamed petitioner [illegible] the above petition praying that [illegible] may be appointed guardian of the [illegible] and property of the said minors. The said petition stands posted to 23—2—34, at 11 a. m. for hearing before the abovementioned Court. Any person interested may appear in person or by Pleader and oppose the said petition on or before the said date, failing which the same will be heard and decided in their absence.

Mangalore, 26—1—34. } K. P. GOPALKRISHNA RAO, Vakil for petitioner.

Notice.

A competitive examination for the award of the Victoria Jubilee Scholarship to a candidate belonging to the Non-Brahmin community will be held in the Government College, Mangalore on Tuesday the 19th June 1934

Applications for the examination in the prescribed form will be received in the District Court till Saturday, the 16th June after which none will be received

Forms of applications and copies of the rules regulating the award of the Scholarship can be had from this office at one anna and two annas respectively

Dt Court, S K Mangalore 25—1—1934 } *G Y Reddi*, Dt. Judge & President V J S FUND.

ಕ್ಷಯಕ್ಷೀಣಾದಿಗಳಿಗೆ

ಚ್ಯವನಪ್ರಾಶಾನ ಲೇಹ.

ಪ್ರಸೂತಿ ರೋಗಾದಿಗೆ

ದಶಮೂಲಾರಿಷ್ಟ.

(ಕಸ್ತೂರಿ ಮಿಶ್ರಣ)

ಸಮಸ್ತ ವಾತರೋಗಗಳಿಗೆ

ಮಹಾನಾರಾಯಣ ತೈಲ.

ಶ್ರೀ ರಾಮಕೃಷ್ಣ ಧರ್ಮೌಷಧ್ಯಾಲಯ ಸಂಘ, ಡೊಂಗರಕೇರಿ ರಸ್ತೆ, ಮಂಗಳೂರು.

ಅನಾ! [illegible] 12 [illegible]

[illegible] —15 [illegible]

[illegible]

Canara Bank, Limited.

Established 1906.

Authorised Capital	10,00000-0-0
Subscribed capital	6,00,000—0—0
Paid up Capital	3,30,000—0—0
Reserves	4,31,000—0—0

Head Office —**Bunder, Mangalore** Local Offices —**City & Bunder**

BRANCHES — Bombay, Cochin, Calicut, Ernakulam, Alleppey, Chikmagalur, Ganguli, Coondapoor, Udipi, Karkal, Puttur, Kasaragod, & Buntwal Out-agency.

Interest is allowed on Current, Fixed and Saving Banks Accounts, rates of which may be ascertained on application Advances made on approved securities at easy rates All kinds of Banking business transacted. Rules of business on application

The Bangalore Branch Office of the Bank at No 1 Albert Victor Road Bangalore City will be opened on 8 1-34

Mangalore
22-12-33

A Madhava Pai,
Secretary

East & West Insurance Company Ltd.,

(Incorporated in India 1913)

Head Office —EAST & WEST BUILDINGS, FORT, BOMBAY.

Eastern Company with striking features
Attractive plans,
Sympathetic & Liberal
Treatment to Policy Holders,
&
Wide popularity,
Economic Management
Sound investment
That is why you should select "East & West"
Ere you invest in the rest

Interim Bonus
Declared
Rs 15 Per 1000
On whole life &
Endowment Policies

For particulars and Agency terms apply to —
H S Nayak, *Organiser, Secretary* for West Coast, Coorg & Mysore,
"Harbour View" Mangalore.

ನಮ್ಮ ಟೋಯಿಲೆಟ್ ಮತ್ತು ವಾಶಿಂಗ್ ಸಾಬೂನುಗಳ ತಯಾರಿಯಲ್ಲಿ ಚರ್ಬಿ
ಉಪಯೋಗಿಸಲ್ಪಡುವುದಾಗಿ ರುಜುಪಡಿಸುವವರಿಗೆ ರೂಪಾಯಿ
1000 ಬಹುಮಾನ.

ಸಾಬೂನು ಪಡೆಯುವಾಗ " " ಅದರಲ್ಲಿ ಚರ್ಬಿ ಇರಕೂಡದೆಂದು ನಿಮ್ಮ ಆಶೆ.

ಪ್ರಾಣಿಗಳ ಚರ್ಬಿ ಮಿಶ್ರಿತವಾದ ಸಾಬೂನುಗಳು ಹಿತಕ್ಕಿಂತಲೂ ಅಹಿತವನ್ನೇ ಹೆಚ್ಚಾಗಿ ಉಂಟುಮಾಡುತ್ತವೆ. ಕಾರಣ ಅವುಗಳಲ್ಲಿನ ಚರ್ಬಿ ಚರ್ಮರಂಧ್ರಗಳೊಳಗೆ ಹೋಗಿ ಬೆವರನ್ನು ತಡೆಯುತ್ತದೆ ಸೋಪನ್ನು ಪಡೆಯುವಾಗ ನೀವು ಪರಿಮಳಭರಿತ ಚರ್ಬಿನ ಮುದ್ದೆಗೆ ಬೆಲೆ ಕೊಟ್ಟು ಶುದ್ಧತೆಯ ಬದಲು ಅಶುದ್ಧತೆಯನ್ನು ಸ್ವೀಕರಿಸಬೇಕೆಂದಿರುವಿರಾ?

ಮಲಬಾರು ಸಾಬೂನುಗಳು ಜನಕ್ಕೆ ಬಂದ ಆರು ತಿಂಗಳುಗಳ ಅಲ್ಪಾವಧಿಯಲ್ಲೇ ಸಾರ್ವಜನಿಕ ಬೆಂಬಲವನ್ನು ಪಡೆದಿವೆ, ಕೊಚ್ಚಿಯ ಮಹಾರಾಜರ ದಯಾಪೂರ್ಣ ಪ್ರಶಸ್ತಿ ಮತ್ತು ಪ್ರೋತ್ಸಾಹನದಿಂದಾಗಿಯೂ, ಪ್ರಖ್ಯಾತ ವೈದಕೀಯ ಅಧಿಕಾರಿಗಳ ಶಿಫಾರಸಿನಿಂದಾಗಿಯೂ, ಅನೇಕ ವಸ್ತುಪ್ರದರ್ಶನಗಳಲ್ಲಿ ದೊರೆತ ಸುವರ್ಣಪದಕ ಮತ್ತು ಪ್ರಶಸ್ತಿ ಪತ್ರಿಕೆಗಳಿಂದಾಗಿಯೂ, ಮಲಬಾರ್ ಸಾಬೂನುಗಳ ಪ್ರಾಮುಖ್ಯತೆಯು ಎಷ್ಟೆಂದು ತಿಳಿಯುವುದು

ಮಲಬಾರ್ ಸಾಬೂನು ಎಲ್ಲಾ ವಿಧದಿಂದಲೂ ಶ್ರೇಯಸ್ಕರವೇ ಆಗಿರುತ್ತದೆ ನಿಮ್ಮ ಚರ್ಮಕ್ಕೆ ಬಾಧಕವನ್ನುಂಟು ಮಾಡುವಂತಹ ಪ್ರಾಣಿಗಳ ಚರ್ಬಿ ಅಥವಾ ಹಾನಿಕರವಾದ ಮಿಶ್ರಿತವೇನೂ ಅದರಲ್ಲಿರದು ಮಲಬಾರ್ ಸಾಬೂನನ್ನು ಶಾಸ್ತ್ರೀಯ ರೀತಿಯಿಂದಲೂ, ಆರೋಗ್ಯ ದೃಷ್ಟಿಯಿಂದಲೂ ತಯಾರಿಸುವುದರಿಂದ ಎಷ್ಟು ಕೋಮಲವಾದ ಚರ್ಮವೂ ಬಾಧಕ ಹೊಂದುವುದಿಲ್ಲ ಈ ಸಾಬೂನು ದೇಶಿಯ ಅನುಕೂಲ್ಯ ಗಂಧಯುಕ್ತ ಸಾಮಾಗ್ರಿಗಳಿಂದ ಎಲ್ಲರಿಗೂ ಅನುಕೂಲವಾಗುವಂತೆ ಅಗ್ಗವಾಗಿದೆಯೆಂದು ಅದರ ಉಪಯೋಗದಿಂದ ನಿಮಗೆ ತಿಳಿದುಬರುವುದು.

ನಿಮ್ಮ ವ್ಯಾಪಾರಸ್ಥರು

ಮಲಬಾರ್ ಸಾಬೂನುಗಳನ್ನು

ವಿಕ್ರಯಿಸಲು ಸಂತೋಷಪಡುವರು

ಇದರಲ್ಲಿ ಪ್ರಾಣಿಗಳ ಕೊಬ್ಬು ಇರುವುದಿಲ್ಲ.

ದಿ ವೆಜಿಟೇಬಲ್ ಸೋಪ್ ವರ್ಕ್ಸ್, ಕಲ್ಲಿಕೋಟೆ.

ಪ್ರೊಪ್ರೈಟರ್:—ಸನ್ ಬ್ರೆಂಡ್ ಕೊಡೆಯ ಖ್ಯಾತಿಯ ಸೇಟ್ ನಾಗಜೀ ಪುರುಷೋತ್ತಮ ಮತ್ತು ಕಂಪೆನಿ, ಕಲ್ಲಿಕೋಟೆ.

ಈ ಜಿಲ್ಲೆಗೆ ಪ್ರವರ್ತಕರು:—

ರಾಘವೇಂದ್ರ ರಂಗ ಪೈ ರಥಬೀದಿ, ಮಂಗಳೂರು.

S. U. N. & CO.

Choukhamba. Benares City

ಮೂರು ಇನಾಮುಗಳು.

ನಮ್ಮಲ್ಲಿ ಕಾಶ್ಮೀರ್ ಶಾಲುಗಳಿಗಿಂತಲೂ ಉತ್ಕೃಷ್ಟವಾದ ಕಸೂತಿಗೆಲಸದೊಳ್ಳುವ ಶುದ್ಧ ಸ್ವದೇಶೀ ಖದ್ದರ್ ಶಿಲ್ಕು ಶಾಲುಗಳು ತಯಾರಾಗುತ್ತವೆ ಬೇಕಾದವರು ತ್ವರೆಮಾಡಿ ಬರೆದರೆ ಈ ಕೆಳಗಿನ ದರದಲ್ಲಿ ಕಳುಹಿಸಲಾಗುತ್ತದೆ. 5 ಮೊಳ ಉದ್ದ 2½ ಅಗಲ ದರ ಒಂದಕ್ಕೆ ರೂ 2—8—0ಯಿಂದ 3-12-0 5½ ಮೊಳ ಉದ್ದ 2½ ಮೊಳ ಅಗಲ ದರ 1ಕ್ಕೆ 3-8-0, 4—8-0 6 ಮೊಳ ಉದ್ದ 3 ಅಗಲ ದರ 1ಕ್ಕೆ ರೂ 4—8-0, ರೂ 5 ಅಲ್ಲದೆ ಸ್ವದೇಶೀ ಖದ್ದರ್ ಮಡಿಗಳೂ, ಶೀರೆಗಳೂ ಅಂಚುಗಳಿಲ್ಲದೆ ಎಲ್ಲಾ ರಂಗುಗಳಲ್ಲಿರುತ್ತವೆ ಮತ್ತು ಜರೀಕಾರೀ ಶೀರೆಗಳೂ ಪೀತಾಂಬರಗಳೂ ರವಕೆಗಳೂ, ರುದ್ರಾಕ್ಷೀ—ಬಾಣಲಿಂಗ—ಪಂಚಾಯತನ ಸುದರ್ಶನ ಹಿತ್ತಾಳೆ ಕ್ಯಾಮಿಗೆ ಮಿಶ್ಯನ್, ಮಡಿ ಧಾವಳಿ ಶಾಲು, ಜಗನ್ನಾಥ ಗಂಟೆಗಳೂ ಕೂಡಾ ಸರಿಯಾದ ದರಕ್ಕೆ ಕಳುಹಿಸಲಾಗುತ್ತದೆ. ವಿವರಕ್ಕೆ ಕೆಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ 1 ಆಣೆ ಸ್ಟ್ಯಾಂಪು ಕಳುಹಿಸಿದರೆ 1 ವಿಶ್ವೇಶ್ವರ ಪಟ, 1 ಕಾಶೀನಕ್ಷೆ, 1 ಕೆಟಲಾಗಿನೊಡನೆ 3 ಇನಾಮುಗಳು

ವಿಳಾಸ:—
ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪೆನಿ, ಚೌಖಾಂಬಾ ಬೆನಾರಸ್ (ಕಾಶೀ)

ಬೇಕಾಗಿದ್ದಾರೆ.

ಪುತ್ತೂರು, ಸಕಲೇಶಪುರ, ಚಿಕ್ಕಮಗಳೂರುಗಳಲ್ಲಿ ಬಿಡಿ ಸಂಚಿಕೆಗಳನ್ನು ಮಾರಲು ಉತ್ಸಾಹೀ ಏಜೆಂಟರು ಬೇಕಾಗಿದ್ದಾರೆ ಶರ್ತಗಳಿಗೆ ಕೂಡಲೇ ಬರೆಯಿರಿ

ಮೆನೇಜರ್— ಸ್ವದೇಶಾಭಿಮಾನಿ, ಮಂಗಳೂರು

ನೋಟೀಸು.

ಮಂಗಳೂರು ತಾಲೂಕು ಕಾವಳ ಮೂಡೂರು ಗ್ರಾಮದ ಅರಂತೊಟ್ಟು ರಾಮಪ್ಪಯ್ಯನವರ ಮಗಳು ವ ಪಣಂಬೂರು ವೆಂಕಪ್ಪಯ್ಯನವರ ವಿಧವೆ ಮಾಣಿಮ್ಮ ಯಾನೆ ಮಹಾಲಕ್ಷ್ಮಿ ಅಮ್ಮನು ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವುದೇನೆಂದರೆ

ಇದೇ ಕಳೆದ ತಾ 12—1—34ನೇ ಶುಕ್ರವಾರ ಸಾಯಂಕಾಲ ಸುಮಾರು 5 ಘಂಟೆಯ ಸಮಯಕ್ಕೆ ನನ್ನ ಗಂಡನ ಹಿರೇ ಹೆಂಡತಿ ಮಗನಾದ ಬಂಟ್ವಾಳ ಮೂಡಗ್ರಾಮದಲ್ಲಿರುವ ಪಿ ವಾಸ್ತೇವರಾಯನು ನನ್ನ ದ್ವೇಷಿತ ಪಕ್ಕ್ರಮುಡಿ ವೆಂಕಪ್ಪಯ್ಯನ ದುಬೋಧನೆಗೂ ಒಳಸಂಚಿಗೂ ಒಳಪಟ್ಟು ನನ್ನನ್ನು ನಿರ್ಬಂಧಕ್ಕೊಳಪಡಿಸಿ ಬಲತ್ಕಾರದಿಂದ ನನ್ನ ಎಡಕೈಯ ಹೆಬ್ಬೆಟ್ಟಿನ ಮೊಹರಗಳನ್ನು ಕೆಲವು ಖಾಲಿ ಕಾಗದಗಳಿಗೆ ತೆಗೆದು ಇಟ್ಟುಕೊಂಡಿರುತ್ತಾನೆ ಸದರಿ ಪಿ ವಾಸ್ತೇವರಾಯನು ಆ ಪೈಕಿ ಒಂದು ಕಾಗದದಲ್ಲಿ ನಾನು ಕೊಟ್ಟದ್ದಾಗಿ ಕಂಡು ಬರುವ ಮಂಗಳೂರು ಡಿ ಮು ಕೋರ್ಟು ಕ್ರಮನಂಬ್ರ 107/24ನೇ ವ್ಯಾಜ್ಯದ ರಾಜಿ ಡಿಕ್ರಿ ಮೇರೆಗೆ ನನಗೆ ವಾಸ್ತೇವರಾಯನ ಅಂಶದ ಅಸ್ತಿ ಜವಾಬ್ದಾರಿಯಿಂದ ಕೂಡಾ ಸಿಕ್ಕತಕ್ಕ 1926—27—28—29ನೇ ಇಸವಿಗಳ ಜೀವನಾಂಶದ ಐವೇಜು ಮತ್ತು ಸದರಿ ಕೋರ್ಟು O S ನಂಬ್ರ 247/29ನೇ ಡಿಕ್ರಿ ವಿಧಿ ಮೇರೆಗೆ ಸದರಿ ವಾಸ್ತೇವರಾಯನಿಂದ ನನಗೆ ಸಿಕ್ಕತಕ್ಕ ಐವೇಜುಗಳ ಸಂದಾಯಾರ್ಥದ ರಶೀದಿಯನ್ನು ತಯಾರಿಸುತ್ತಾನಾಗಿ ನನ್ನ ತಿಳುವಳಿಕೆಗೆ ಬಂದದೆ, ಮಿಕ್ಕ ಕಾಗದಗಳಲ್ಲಿ ಸದರಿ ವಾಸ್ತೇವರಾಯನು ವ ಪಕ್ಕ್ರಮುಡಿ ವೆಂಕಪ್ಪಯ್ಯನು ಇತರ ರಿಕಾರ್ಡುಗಳನ್ನು ಸೃಷ್ಟಿಸಿ ಮಾಡಲಿಕ್ಕೂ ಸಾಕು ನಾನು ಸದರಿ ವಾಸ್ತೇವರಾಯರಿಗೆ ಯಾವದೊಂದು ರಶೀದಿ ಯಾ ನೋಟು ವಗೈರೆ ಯಾವ ತರದ ದಸ್ತ್ಯವೇಜು ವ ಬರಹ ಮೂಲಕ ರಿಕಾರ್ಡನ್ನು ಈ ವರೆಗೂ ಮಾಡಿಕೊಟ್ಟದ್ದಿಲ್ಲಾ ಪಕ್ಕ್ರಮುಡಿ ವೆಂಕಪ್ಪಯ್ಯನಿಗೆ ಮಾತ್ರ ನನಗೆ ಮ್ಯಾನರ ಸುಬ್ರಾಯನ ಅಂಶದ ಅಸ್ತಿಜವಾಬ್ದಾರಿಯಿಂದ ಸಿಕ್ಕತಕ್ಕ ಅಶನಾರ್ಥದ ಐವೇಜು ಸಂದಾಯದ ಬಗ್ಗೆ ನನ್ನ ಎಡಕೈಯ ಹೆಬ್ಬೆಟ್ಟು ಹಾಕಲ್ಪಟ್ಟ ಮೂರು ರಶೀದಿಗಳನ್ನೂ ಒಂದು ಮಣಿಯಾರ್ಡರು ರಶೀದಿಯನ್ನೂ ಅಂತೂ ನಾಲ್ಕು ರಶೀದಿಗಳು ಮಾತ್ರ ಕೊಟ್ಟದ್ದಲ್ಲದೆ ಬೇರೆ ಕೊಡಲಿಲ್ಲ ಕೊಡುವರೆ ಕಾರಣವೂ ಇಲ್ಲ, ವ ಇನ್ಯಾರಿಗೂ ರಶೀದಿ ವ ನೋಟು ವಗೈರೆ ಬರೆಕೊಟ್ಟದ್ದೂ ಇಲ್ಲ ಮೇಲ್ಕಂಡಂತೆ ಬಲತ್ಕಾರದಿಂದ ತೆಗೆದುಕೊಂಡ ನನ್ನ ಕೈಮೊಹರದ ಖಾಲಿ ಕಾಗದಗಳಲ್ಲಿ ಸದರಿ ವಾಸ್ತೇವರಾಯನಾಗಲಿ ವ ಪಕ್ಕ್ರಮುಡಿ ವೆಂಕಪ್ಪಯ್ಯನಾಗಲಿ ನನ್ನ ರಶೀದಿ ನೋಟು ವಗೈರೆ ರಿಕಾರ್ಡುಗಳನ್ನು ತಯಾರಿಸಿದ್ದಾದರೆ ಅದು ಸೃಷ್ಟಿಸಿದ್ದು ಮುಂಜೂರಾಗತಕ್ಕದ್ದಲ್ಲ. ನನ್ನ ವ ನನ್ನ ಮ್ಯಾನರ ಮಗನ ಹಕ್ಕಿಗೆ ವಿರೋಧವಾಗಿ ಸಿಂಧಾಗತಕ್ಕದ್ದಲ್ಲ. ಈ ಕುರಿತು ನಾನು ದಾಖಲು ಮಾಡಿರುವ ಕ್ರಿಮಿನಲ್ ವ್ಯವಹಾರ ತನಿಖೆಯಲ್ಲಿ ಬಾಕಿ ಇರುತ್ತದೆ ಎಂತ ಈ ಮೂಲಕ ತಿಳಿಸೋಣಾಗಿಯದೆ

ಮಂಗಳೂರು,
ತಾ 20-1-34

III ಈ ಮೂರು ಗೆರೆ ಮತ್ತು ಎಡಕೈಯ ಹೆಬ್ಬೆಟ್ಟಿನ ಗುರ್ತು
ಮಾಣಿಮ್ಮ ಯಾನೆ ಮಹಾಲಕ್ಷ್ಮಿಯಮ್ಮನ ರುಜು.

ಬಿಹಾರಿನಲ್ಲಿ ಮಿಲಿಯಗಟ್ಟಳೆ ಜನರ ಅನಾಥ ಸ್ಥಿತಿ!!!

ಚೀನಾದಲ್ಲಿ ೧೦೦೦೦ ಜನರು ನೆರೆಗೆ ಆಹುತಿಯಾದರು!!

ಇನ್ನೊಂದು ಭೂಕಂಪವಾಗುವುದೆಂದು ಜನರ ಭಯ!

ಅಲ್ಲಲ್ಲಿಯ ತಂತಿ ವಾರ್ತೆ:—

ಮುಜಾಫರ್‌ಪುರದಲ್ಲಿ

ವಾಹನ ಸಂಚಾರಕ್ಕೆ ಎಡೆಯೇ ಇರುವುದಿಲ್ಲ. ಪ್ರತಿಯೊಂದು ಮಾರ್ಗದಲ್ಲಿ ಕಟ್ಟಡಗಳು ಬಿದ್ದುಕೊಂಡಿವೆ. ಕೆಲವು ವರ್ಷಗಳ ತನಕ ರಾತ್ರಿ ಹಗಲು ಕೆಲಸ ಮಾಡಿದರೂ ಮಣ್ಣು ಕಲ್ಲುಗಳನ್ನು ಎತ್ತಿ ಒಯ್ಯುವ ಕೆಲಸವು ಮುಗಿಯಲಾರದು. ಮುಜಾಫರ್‌ಪುರ ಸಂಪೂರ್ಣವನ್ನು ಪ್ರತ್ಯೇಕವಾಗಿ ಕಟ್ಟಬೇಕೇ ಹೊರತು ಮೊದಲಿದ್ದ ಯಾವ ಕಟ್ಟಡವಾಗಲೀ ಸ್ಥಾನವಾಗಲೀ ಕೆಲಸಕ್ಕೆ ಬೀಳುವಂತಿಲ್ಲ. ಕೋರ್ಟು ಕಚೇರಿಗಳು ಬಿದ್ದಿರುವುದರಿಂದ ಲಾಯರರೆಲ್ಲ ನಿರುಪಾಯರಾಗಿ ರಜೆಯನ್ನನುಭವಿಸುತ್ತಿರುವರು. ಶ್ರೀ ಬಾಬು ಮಧುಸೂದನ ಪ್ರಸಾದ ಅಗರ್‌ವಾಲಾ ಎಂಬ ಎಡ್ವೊಕೇಟರೊಬ್ಬರು ತಾನು ಭೂಕಂಪದಿಂದ ಅನುಭವಿಸಿದುದನ್ನು ಪತ್ರಿಕಾ ಪ್ರತಿನಿಧಿಗಳಿಗೆ ಹೇಳಿರುವರು. ಭೂಕಂಪದಿಂದಾಗಿ ಅವರ ನವಮಾಸಭರಿತ ಪತ್ನಿಯವರಿಗೆ ಹೆರಿಗೆಯ ನೋವು ತಲೆದೋರಿತು. ನೋವು ತಲೆದೋರಿದೊಡನೆ ಬಲವಾದ ಕಂಪನವಾಗಿ ಅವರ ವಿಶಾಲವಾದ ಬಂಗಲೆಯು ಮಹಾ ಶಬ್ದದಿಂದೊಡಗೂಡಿ ಧರೆಗೊರಗಿತು. ಪತ್ನಿಯು ಹೆರುವುದಕ್ಕೆ ಯಾವ ಸ್ಥಳವನ್ನೂ ಕಾಣಲಾರದಾದರು. ಪ್ರತಿ ಮನೆಯಲ್ಲೂ ಹಾಹಾಕಾರವು ಎದ್ದಿದ್ದಿತು. ಇದನ್ನು ಕಂಡು ಕೂಡಲೇ ಅವರು ಒಂದು ವಿಶಾಲವಾದ ಸ್ಥಳದಲ್ಲಿ ಒಂದು ಹಟ್ಟಿಯನ್ನು ಕಟ್ಟಿದರು. ಅರ್ಧ ತಾಸಿನೊಳಗೆ ಅವರ ಪತ್ನಿಯವರು ಗಂಡು ಮಗುವೊಂದನ್ನು ಹಡೆದರು. ಗಂಡು ಮಗು ಹುಟ್ಟಿದ ಆನಂದದೊಡನೆ ಅವರು ಬಿದ್ದ ಮನೆಯ ಸಾಮಾನುಗಳನ್ನು ವ್ಯವಸ್ಥೆಯಿಂದಿಡಲು ಮನೆಯತ್ತ ಹೋಗಲು, ಬಿದ್ದ ಗೋಡೆಯಡಿಯಿಂದ ಯಾರೋ ನರಳುತ್ತಿದ್ದುದು ಕೇಳಿ ಬಂತು. ಅವರ ತಾಯಿಯು ಹೊರಗಿರದಿರುವುದನ್ನು ಕಂಡು ಅವರು ದಿಗಿಲುಗೊಂಡರು. ಶಬ್ದವೆಲ್ಲಿಂದ ಬರುವುದೆಂದು ಕಿವಿಗೊಟ್ಟು, ಕೊನೆಗೆ, ಗೋಡೆ ಸಂದನ್ನು ಸೇರಿ ನೋಡಲು, ತಾಯಿಯ ತಲೆಯು ಮಣ್ಣಿನಡಿಯಲ್ಲಿ ತೋರಿ ಬಂತು. ಕೂಡಲೇ ಅವರು ಸ್ವಹಸ್ತದಿಂದಲೇ ಮಣ್ಣನ್ನು ಕೊರೆದು, ಕಲ್ಲುಗಳನ್ನು ಆಚೆಗೆ ಹಾಕಿ ತಾಯಿಯನ್ನು ಹೊರಗೆಳೆದರು. ಆ ಮುದುಕಿಯು ಜಖಂಗೊಂಡರೂ ಬದುಕಿ ಉಳಿದುದೆ ಆಶ್ಚರ್ಯವೆಂದು ಅವರು ತಿಳಿಸಿರು. ಮುಜಾಫರ್‌ಪುರದ ಪ್ರತಿಯೊಂದು ಕುಟುಂಬವೂ ಇಂತಹ ಸಂಕಷ್ಟಮಯ ಕಥೆಯನ್ನು ಹೇಳುತ್ತಿದೆ. ಮೋಟಾರ್ ಲೋರಿಗಳು ಜನರಿಗೆ ನೀರನ್ನು ಒದಗಿಸಿ ಕೊಡುತ್ತಿವೆ. ಸ್ತ್ರೀಯರೂ ಮಕ್ಕಳೂ ಲೋರಿಯ ಸುತ್ತಲೂ ನಿಂತು ನೀರಿಗಾಗಿ ಹಾತೊರೆಯುವ ನೋಟವು ಹೃದಯ ವಿದೀರ್ಣಗೊಳಿಸುವಂತಹುದು.

ಮುಜಾಫರ್‌ಪುರದಲ್ಲಿ ಬಹು ಪುರಾತನವೂ ಐತಿಹಾಸ ಪ್ರಸಿದ್ಧವೂ ಆದ ಅಶೋಕನ ಹಲವು ಎತ್ತರ ಎತ್ತರವಾದ ಸ್ತಂಭಗಳು ಗುರುತು ಹಿಡಿಯಲಾರದಷ್ಟು ಹಾಳಾಗಿವೆ. ಅಶೋಕನ ಸಿಂಹಸ್ತೂಪದ ಹೆಸರೇ ಇಲ್ಲದಂತಾಗಿದೆ. ಹಿಂದೂ ದೇವ ಮಂದಿರಗಳಲ್ಲಿ ಉಳಿದುದೆಂದರೆ ಸಯರ್‌ಗಂಜ್ ಎಂಬಲ್ಲಿನ ದೇವಸ್ಥಾನ. ಮಿಕ್ಕ ಎಲ್ಲಾ ಇಗರ್ಜಿಗಳೂ ದೇವ ಮಂದಿರಗಳೂ ಬಿದ್ದಿವೆ, ಅಥವಾ ಬೀಳಲಿವೆ. ಕೆಲವು ದೇವಸ್ಥಾನಗಳ ಒಳ ಜನರು ಸುಳಿಯಬಾರದೆಂದೂ ಅವು ಬೀಳಲಾಗಿವೆಯೆಂದೂ, ಎಚ್ಚರ ಹುಟ್ಟಿಸಿ ನೋಟೀಸು ಹಾಕಿರುವರು. ಸಾವಿರಾರು ಕುಟುಂಬಗಳು ಮೈದಾನು ಗುಡ್ಡೆಗಳಲ್ಲಿ ವಸ್ತ್ರದ ಡೇರೆಗಳನ್ನು ಹಾಕಿ ಜಖಂಗೊಂಡವರನ್ನು ಪಾಲನೆ ಮಾಡುತ್ತಿವೆ. ಮಾರ್ಗದ ಮೇಲೆ ನಡೆಯುತ್ತಿರುವಾಗ, ಪ್ರತಿ ಮಾರ್ಗದಲ್ಲೂ ಕೆಲವು ನಿಮಿಷಗಳಿಗೊಮ್ಮೆ ಶವಗಳನ್ನು ಕೊಂಡೊಯ್ಯುವುದು ಕಂಡು ಬರುತ್ತಿದೆ. ಶವ ಸಂಸ್ಕಾರ ಭೂಮಿಯು ರಾತ್ರಿಂದಿವ ಜನನಿಬಿಡವಾಗಿರುತ್ತದೆ. ಇಷ್ಟು ದುರಂತ ಕ್ಲೇಶವು ಸನ್ನಿಹಿತವಾಗಿರುವುದಾದರೂ, ಕೆಲವು ಸಣ್ಣ ಸಣ್ಣ ಅಂಗಡಿಕಾರರು ತಮ್ಮ ಮಹಾಲನ್ನು ದ್ವಿಗುಣಿತ ಲಾಭಕ್ಕೆ ಮಾರಿ ಲೂಟಿಗೈದಿರುವರು. ಅಧಿಕಾರಿಗಳು ಇಂತಹ ವೃತ್ತಿಯನ್ನು ಆದಷ್ಟು ಮುರಿಯುತ್ತಿರುವರು. ಭೂಕಂಪವಾದ ಮೇಲೆ ಬೇಗನೆ ವ್ಯವಸ್ಥಿತವಾದುದು ತಂತಿ ಆಫೀಸು ಒಂದೇ. ಒಂದು ದೊಡ್ಡ ಸಕ್ಕರೆ ಕಾರ್ಖಾನೆಯಲ್ಲಿ ಹಲ ಲಕ್ಷ ರೂಪಾಯಿಗಳ ಕಬ್ಬನ್ನು ತಯಾರಿಸಿಟ್ಟಿದ್ದರು. ಭೂಕಂಪದಿಂದ ಕಾರ್ಖಾನೆಯು ಬಿದ್ದುದರಿಂದ ಅಷ್ಟು ಕಬ್ಬೂ ಹಾಳಾಗಿ ಹೋಗುವಂತಾಗಿದೆ.

ಮುಜಾಫರ್‌ಪುರಕ್ಕೆ ಬರುವ ರೈಲುಗಾಡಿಗಳು ಖರಿದಾಗಿವೆ. ಹೊರಗೆ ಹೋಗುವ ರೈಲು ಗಾಡಿಗಳು ಎಳೆಯಲಾರದಷ್ಟು ಜನ ಸಮೂಹವನ್ನು ಮುಜಾಫರಿನಿಂದ ಕೊಂಡೊಯ್ಯುತ್ತಿವೆ. ಇನ್ನೊಂದು ಭೂಕಂಪವಾಗುವುದೆಂಬ ಭಯವು ಜನರೆಲ್ಲರನ್ನು ಕಳವಳಿಕೆಗೊಳಿಸಿದೆ. ಬಡತನವೆಂಬುದು ಅಷ್ಟದಿಕ್ಕುಗಳಲ್ಲೂ ಹರಡಿದೆ. ಜನರಲ್ಲಿದ್ದ ಧನ, ವಸ್ತ್ರ ಸಾಮಾನುಗಳು ಕಟ್ಟಡಗಳಡಿಯಲ್ಲಿ ಹೂಳಲ್ಪಟ್ಟಿರುವುದರಿಂದ ಐಶ್ವರ್ಯವಂತರು ಕೂಡಾ ನಿರ್ಗತಿಕರಾಗಿರುವರು. ಪಟ್ಟಣವೆಲ್ಲಾ ದುರ್ವಾಸನೆಯಿಂದ ತುಂಬಿಕೊಂಡಿದೆ. ಮಣ್ಣಿನಡಿಯಲ್ಲಿರುವ ಸಾವಿರಾರು ನಾಯಿ, ದನ ಮೊದಲಾದುವುಗಳೂ, ಇಷ್ಟರ ತನಕ ದೊರೆಯದಿದ್ದ ಅನೇಕ ಜನರೂ ಕೊಳೆತು ಅಸಹನೀಯ ವಾಸನೆಯು ಹರಡಿದೆ. ಗೌರವಸ್ಥರಾದವರು ಸಹಾಯ ಸಮಿತಿಗಳೊಡನೆ ಯಾಚಿಸಲು ಹಿಂಜರಿಯುತ್ತಿರುವುದರಿಂದ ಅವರ ಗತಿಯು ಮತ್ತಷ್ಟು ಕನಿಕರಗೊಳಿಸುವಂತಹದುದಾಗಿದೆ. ಪರದಾ ಪದ್ಧತಿಯನ್ನನುಸರಿಸುತ್ತಿದ್ದ ಸ್ತ್ರೀಯರು ಸರಿಯಾದ ವಸ್ತ್ರವಿಲ್ಲದೆ ಅಂತಹ ಪದ್ಧತಿಗೆ ತಿಲಾಂಜಲಿಯನ್ನು ಕೊಟ್ಟಿರುವರು. ಕಟ್ಟಡಗಳಡಿಯಲ್ಲಿ ಬಿದ್ದು ಸತ್ತವರಲ್ಲಿ ಹೆಚ್ಚಿನವರು ಸ್ತ್ರೀಯರು—ಅದರಲ್ಲೂ ಪರದೆಯ ಸ್ತ್ರೀಯರು. ಸಮಾಜದ ರೋಷಕ್ಕೆ ಭಯಗೊಂಡು ಇವರು ಭೂಕಂಪವಾಗುವಾಗಲೂ ಮನೆಯೊಳಗೆ ಇದ್ದುದೇ ಇದಕ್ಕೆ ಕಾರಣ. ಮಕ್ಕಳು ಮರಿಗಳೆಲ್ಲ ವಸ್ತ್ರವಿಲ್ಲದೆ ತಿರುಗುತ್ತಿರುವುವು. ಡಿಸ್ಟ್ರಿಕ್ಟ್ ಕೋರ್ಟು ಕಟ್ಟಡವು ಸಂಪೂರ್ಣ ಭೂಮಿಯ ಅಡಿಗಾಗಿದೆ. ರಿಕಾರ್ಡುಗಳು ಮಣ್ಣಡಿಯಲ್ಲಿವೆ. ಭೂಕಂಪವಾದೊಡನೆ ಸೆಷನ್ಸ್ ಜಡ್ಜರೇ ಮೊದಲಾದ ಅನೇಕರು ಹೊರಗೆ ಓಡದಿರುತ್ತಿದ್ದರೆ, ನಿಮಿಷಾರ್ಧದಲ್ಲಿ ನೆಲಸಮವಾದ ಕಟ್ಟಡವು ಅವರನ್ನು ಆಹುತಿಯಾಗಿ ಸ್ವೀಕರಿಸುತ್ತಿದ್ದಿತು. ದರ್ಭಂಗದಿಂದ ೨೦ ಮೈಲುಗಳ ದೂರದಲ್ಲಿ ದಿನೇ ದಿನೇ ಪ್ರವರ್ಧಿಸುತ್ತಿದ್ದ ರಾಜ ನಗರವು ತಾ|| ೧೫ನೇ ದಿನದ ೨ ಘಂಟೆಯ ತನಕ ಸುಖ ವೈಭವಗಳಿಂದಲೂ, ಯುರೋಪಿಯನ್ ಅಮೇರಿಕನ್ ಜನರ ವಿಲಾಸ ಕೇಂದ್ರವಾಗಿಯೂ ಇದ್ದಿತು. ಈಗ ಅದನ್ನು ನೋಡಿದರೆ ಮಣ್ಣದಿನ್ನೆಯನ್ನು ನೋಡಿದಂತೆಯೇ ಸರಿ. ಈ ಪಟ್ಟಣವನ್ನೂ ಸಜ್ಜುಗೊಳಿಸಲು ಸಾಧ್ಯವೇ ಇಲ್ಲ. ಮುಜಾಫರ್‌ಪುರದಲ್ಲಿ ಭೂಕಂಪವಾಗುವಾಗ ಮರಮಟ್ಟುಗಳೆಲ್ಲಾ ಒಮ್ಮೆ ಭೂಮಿಗೆ ನಮಸ್ಕಾರ ಮಾಡಿ ಎದ್ದು ನಿಂತುವೆಂದು ಬಾರ್‌ನ ವಕೀಲರು ಕೆಲವರು ಹೇಳುತ್ತಿರುವರು. ಕೊಯಲಿಗೆ ಬಂದ ಪೈರು ಹಾಗೆಯೇ ಉಳಿದಿದೆ. ತಿರುಹಟ್ ಎಂಬಲ್ಲಿ ನೀರಿನ ಬರಗಾಲವು ತಲೆದೋರಿದೆ. ಅಲ್ಲಿ ಈಗಾಗಲೇ ಸಿಡುಬು ಮತ್ತು ಕಾಲರಾವು ತಲೆದೋರಿದೆ. ನೀರಿನಭಾವವು ಇನ್ನೂ ಕೆಲವು ದಿನಗಳ ತನಕ ತಲೆದೋರಿದರೆ, ಮುಂದಕ್ಕೆ ಭಯಂಕರ ರೋಗಗಳು ಹೊರ ಬೀಳುವುವೆಂದು ಅಂದಾಜು ಮಾಡಲಾಗಿದೆ. ಅಧಿಕಾರಿಗಳೂ ಸಹಾಯ ಸಮಿತಿಗಳೂ ತಮ್ಮ ಶಕ್ತಿ ಮೀರಿ ಕೆಲಸ ಮಾಡಿ ಬಡ ಜನರನ್ನು ರಕ್ಷಿಸಲು ಏರ್ಪಾಡು ಮಾಡುತ್ತಿರುವರಾದರೂ, ಕಷ್ಟಕ್ಕೀಡಾದ ಅಸಂಖ್ಯ ಜನರ ತಾಪವನ್ನು ಮನುಷ್ಯ ಮಾತ್ರನಿಗೆ ಶಮನಿಸಲು ದುಸ್ಸಾಧ್ಯವೆಂದೇ ಭಾಸವಾಗುತ್ತದೆ. ಭಗವಂತನೇ ಒಂದು ಜನರನ್ನು ವಿಮುಕ್ತಗೊಳಿಸಬಹುದಲ್ಲದೆ ಅನ್ಯಥಾ ಅಸಾಧ್ಯ. ಈ ಪ್ರಾಂತ್ಯವು ಇಷ್ಟು ಅನಾಹುತಗಳಿಗೊಳಗಾದರೂ ವಿಷ್ಣು, ಕಾಳಿ, ಶಿವ ಮಾರುತಿ ಗುಡಿಗಳು ಹಲವು ಅಲ್ಲಾಡದೆ ಮುಂಚಿನಂತೆ ನಿಂತಿರುವುದು ಮಹದಾಶ್ಚರ್ಯಕರ ಸಂಗತಿ. ಮೊದಲೇ ಭಯಭಕ್ತಿಯುತರಾಗಿದ್ದ ಬಿಹಾರಿನ ಜನರು ಈ ಘಟನೆಯಿಂದ ಮತ್ತಷ್ಟು ದೈವ ಭಕ್ತಿಪರಾಯಣರಾಗಿರುವರು. ಚಂಪರನ್‌ನಲ್ಲಿ ಅನೇಕ ಗಿರಣಿಗಳು ಧ್ವಂಸವಾದುವು. ಹಾಜಿಪುರ ಎಂ. ಎಲ್. ಎಗಳಾದ ಮೌಲ್ವಿ ಮಹಮ್ಮದ್ ಸಫೀಯವರ ೪ ಲಕ್ಷ ರೂಪಾಯಿ ಬೆಲೆ ಬಾಳುವ ಕಟ್ಟಡಗಳು ನಿರ್ನಾಮವಾದುವು. ೧೫೦೦೦ ಬೆಲೆ ಬಾಳುವ ಅವರ ಬಂಗಲೆಯು ಇನ್ನು ಹೆಸರು ಮಾತ್ರಕ್ಕೂ ಇಲ್ಲ. ಅವರು ಭೂಕಂಪದ ದಿನ ನಡೆದ ಒಂದು ವಿಚಿತ್ರ ವಿಷಯವನ್ನು ಬಯಲಿಗೆ ತಂದಿರುವರು. ಭೂಕಂಪವಾಗುವ ದಿನ ಅವರು ಪಾಟ್ನಾದಲ್ಲಿದ್ದರು. ಅವರ ಮನೆಯವರೆಲ್ಲರೂ ಮೌಲ್ವಿಯವರನ್ನು ಬರಮಾಡಿ ಕುರಾನು ಓದಿಸಿ ತಮ್ಮ ಮೇಲೆ ಭಗವಂತನು ಕರುಣಾರ್ಣವನಿರಲಿ ಎಂದು ಪ್ರಾರ್ಥಿಸುತ್ತಿದ್ದರು. ಭೂಕಂಪವಾಗುವಾಗ ಹೊರಗೆ ಓಡುವುದಕ್ಕಿಂತಲೂ, ಈ ಪ್ರಾರ್ಥನೆಯೇ ಶ್ರೇಯಸ್ಕರವೆಂದು ಅವರೆಲ್ಲರೂ ನಿರ್ಧರಿಸಿದ್ದರು. ಪ್ರಾರ್ಥನೆಯು ಮುಗಿದು ಅವರು ಹೊರಗೆ ನೋಡಲು, ಸುತ್ತುಮುತ್ತಲಿನ ಮನೆ ಮಾರುಗಳು ಬಿದ್ದು ಲಯವಾಗಿದ್ದುವು. ಕಟ್ಟಡಗಳಿಂದ ತುಂಬಿದ್ದ ಆ ವರಾಂದ ಮನೆಗಳಲ್ಲ ಬಿದ್ದು ಜನರು ಬೊಬ್ಬಿಡುತ್ತಿದ್ದರು. ಆದರೆ ಇವರು ಪ್ರಾರ್ಥನೆ ಮಾಡುತ್ತಿದ್ದ ಕಟ್ಟಡವು ಭೂಕಂಪದಿಂದ ಸ್ವಲ್ಪವೂ ಬಾಧಿತವಾಗಿದ್ದಿಲ್ಲ.

ವಿಜ್ಞಾಪನೆ.

ಉತ್ತರ ಹಿಂದೂಸ್ಥಾನದಲ್ಲಾದ ಭೂಕಂಪದಿಂದಾಗಿ ಅಲ್ಲಿ ಸಾವಿರಗಟ್ಟಳೆ ಜನರ ಮರಣವಾಗಿ ಲಕ್ಷಗಟ್ಟಳೆ ಜನರು ಗತಿ ವಿಹೀನರಾಗಿರುವರು. ಚಕ್ರವರ್ತಿಯವರೂ, ವೈಸರಾಯರೂ ಗವರ್ನರರುಗಳೂ, ಪ್ರಮುಖರೂ ಅಲ್ಲಿನ ಜನರಿಗಾಗಿ ಧನ ಸಹಾಯವನ್ನು ಕೇಳಿರುವರು. ಮದ್ರಾಸು ಗವರ್ನರರು ಈ ಆಧಿಪತ್ಯದವರೊಡನೆ ಅರಿಕೆ ಮಾಡುತ್ತಾ ಎಲ್ಲರೂ ವೈಸರಾಯ ರಿಲೀಫ್ ಫಂಡಿಗೆ ಸಹಾಯ ಮಾಡಬೇಕಾಗಿ ತಿಳಿಸಿರುವರು. ದಕ್ಷಿಣ ಕನ್ನಡದ ಧನಾಢ್ಯರೂ, ಎಲ್ಲರೂ ಅಲ್ಲಿಯ ಭಾರತೀಯರ ದುರಂತ ಸಂಕಷ್ಟಗಳನ್ನು ನಿವಾರಿಸಲು ಮುಂಬಂದು ತಮ್ಮ ಕೈಲಾದಷ್ಟು ಸಹಾಯವನ್ನು ಮಾಡಲೆಂದು ಬೇಡಿಕೊಳ್ಳುವೆವು.

ಸಂಪಾದಕ

ಮೊಂಘೀರ್

ಮೊಂಘೀರ್ ಪಟ್ಟಣವೆನ್ನುವ ಬದಲು ಅದನ್ನು ಮಣ್ಣರಾಶಿ ಎಂದರೆ ಒಪ್ಪುವುದು. ೪೦,೦೦೦ ಜನ ನಿಬಿಡವಾಗಿದ್ದ ಪಟ್ಟಣದಲ್ಲಿ ಈಗ ೨೦,೦೦೦ ಜನರು ಕಾಣ ಸಿಗುವುದು ಕಷ್ಟ. ಇಷ್ಟರ ತನಕ ನಡೆದ ಸಂಶೋಧನೆಯಿಂದ ಒಟ್ಟು ೯೦೦೦ ಜನರ ಶವಗಳನ್ನು ಕಟ್ಟಡಗಳಡಿಯಿಂದಲೂ, ಮಾರ್ಗದ ಒಳಯಿಂದಲೂ ತೆಗೆಯಲಾಗಿದೆ. ಅರ್ಧ ಪಟ್ಟಣವು ಇನ್ನೂ ಶೋಧನೆಗೊಳಗಾಗಿರುವುದಿಲ್ಲ. ಅಪಾಯಕರ ದುರ್ವಾಸನೆಯು ಪ್ರತಿ ಕಟ್ಟಡದ ಬಳಿಯೂ ಹರಡಿದೆಯೆಂದರೆ ಸತ್ತು ಬಿದ್ದಿರುವವರ ಜನಸಂಖ್ಯೆಯು ಇನ್ನೂ ಸಾವಿರಗಟ್ಟಳೆಯಲ್ಲಿದೆಯೆಂದು ಊಹಿಸಲೆಡೆಯಿದೆ.

ಮುಜಾಫರ್‌ಪುರವೇ ಧ್ವಂಸವಾಗಿದೆ, ಅದರೊಡನೆ ಮೊಂಘೀರ ಪಟ್ಟಣವೂ ನಿಷ್ಪ್ರಯೋಜಕವಾಗುವಂತೆ ನಿರ್ನಾಮವಾಗಿದೆ. ಇಡೀ ಪಟ್ಟಣದಲ್ಲಿ ಕಣ್ಣೀರಿನ ಹೊನಲು ಹರಿಯುತ್ತಿದೆ. ದಕ್ಷಿಣ ಹಿಂದೂಸ್ಥಾನಕ್ಕೆ ತಂಜಾವೂರು ಹೇಗೋ ಹಾಗೆ ಬಿಹಾರಿಗೆ ಮೊಂಘೀರ್ ಎಂಬುದಾಗಿತ್ತು. ಅನಾದಿ ಕಾಲದಿಂದಲೂ ಈ ನಗರವು ಗಂಗಾನದಿಯ ಬಳಿಯಲ್ಲಿ ವೃದ್ಧಿ ಹೊಂದುತ್ತಿತ್ತು. ಗುಂಡು ಹೊಡೆದರೆ ಬೀಳದಂತಿದ್ದ ಕೋಟೆಯ ಗೋಡೆಯು ಪುನಃ ಕಾಣ ಸಿಗದಂತೆ ಹಾಳಾಗಿದೆ. ಮುಜಾಫರ್‌ಪುರದಲ್ಲಿ ಮೂರು ಮನೆಗಳು ಉಳಿದಿದ್ದುವು—ಮೊಂಘೀರ್‌ನಲ್ಲಿ ಒಂದು ಕಟ್ಟಡವೂ ಉಳಿದಿರುವುದಿಲ್ಲ. ಇಪ್ಪತ್ತು ಸೆಕೆಂಡ್‌ಗಳಲ್ಲಿ ಇಡೀ ನಗರವೇ ಧ್ವಂಸವಾಗಿರುವುದು ಬಹಳ ವಿಚಿತ್ರವಾಗಿ ಪರಿಣಮಿಸಿರುತ್ತದೆ.

ಮೆಕ್ಸಿಕೊ

ಮೆಕ್ಸಿಕೋ ಪಟ್ಟಣದ ದಕ್ಷಿಣ ಮತ್ತು ಮಧ್ಯ ಪ್ರಾಂತ್ಯಗಳಲ್ಲಿ ಭಯಂಕರ ಭೂಕಂಪವುಂಟಾಗಿ ಸಾವಿರಾರು ಜನರು ಮೃತರಾದರು. ಪ್ರತಿಯೊಂದು ಕಟ್ಟಡವು ಬಿದ್ದಿದೆ.

ಚೀನಾ—ಶಂಘೈ

ಶಂಘೈಯಿಂದ ಬಂದ ವಾರ್ತೆಯಿಂದ—ಹತ್ತು ಸಾವಿರ ಸ್ತ್ರೀಪುರುಷ ಬಾಲರು ಹೊಪಿ ಎಂಬಲ್ಲಿ ಹಳದಿ ನದಿಯ ನೆರೆಯಿಂದಾಗಿ ಮೃತರಾದರೆಂದು ತಿಳಿದು ಬಂದಿದೆ. ಹೊನಾನ ಪ್ರಾಂತ್ಯದಲ್ಲೂ ನೆರೆಯೆದ್ದಿದೆ. ೩೦ ಜಿಲ್ಲೆಗಳು ನೆರೆಗಾಹುತಿಯಾದುವು. ಸಾವಿರಾರು ಜನರು ಶೀತದಿಂದ ಸತ್ತರು. ಲಕ್ಷಗಟ್ಟಳೆ ಜನರು ನಿರ್ಗತಿಕರಾಗಿರುವರು. ಮಹಾ ವೇಗದಿಂ ಹರಿಯುತ್ತಿರುವ ನೀರಿನ ಮೇಲೆ ಹಿಮಗಡ್ಡೆಗಳು ತೇಲಾತ್ತಿವೆ. ಸಹಾಯ ಸಮಿತಿಗಳು ಸಹಾಯವನ್ನೀಯಲು ಸಾವಿಲ್ಲದ ಹಾಗೆ ಚಳಿಯು ತಲೆದೋರಿದೆ.

FRESH CONSIGNMENT ARRIVED.

UNEQUAL QUALITY——————EXCEPTIONAL PRICE

A TIRE THAT SAVES YOU REPUTATION AND MONEY

The Canara Public Conveyance Co., Ltd.

MANGALORE.

ಸ್ಫುಟ ವಿಚಾರಗಳು:—

ಕೇಂಬ್ರಿಜ್ ವಿಶ್ವವಿದ್ಯಾಲಯದವರೂ, ಭೂಕಂಪದ ಹಾವಳಿ, ಇದ್ದ ಫಂಡಿನಿಂದ ಸಹಾಯ ಸಿಗದೆ? ಚೀನದಲ್ಲೂ ಹಾಗೆಯೆ!, ನಿಜವಾದ ಭೂಭಾರವು ಎಲ್ಲಿದೆ?, ಸರ್ವ ಪಕ್ಷಗಳ ಪರಿಷತ್ತು, ಬಳ್ಳಾರಿಯ ದೂರು, ತಿರುವಾಂಕೂರಿನಲ್ಲಿ ಹರಿಜನೋದ್ಧಾರ, ನೋಟಿಗಳು.

ಕೇಂಬ್ರಿಜ್ ವಿಶ್ವ ವಿದ್ಯಾಲಯದವರೂ

ಆಕ್ಸ್‌ಫರ್ಡ್ ವಿಶ್ವ ವಿದ್ಯಾಲಯದವರೂ ಸೇರಿ ನಡೆದ ಒಂದು ಸಭೆಯಲ್ಲಿ,—ಹಿಂದೀ ಸರಕಾರವನ್ನು ಪಾರ್ಲಿಮೆಂಟಿನ ಕೈಯಿಂದ ತಪ್ಪಿಸಿ ಸಾಮ್ರಾಜ್ಯದ ಕೈಕೆಳಗೆಯೇ ಇರಿಸಬೇಕೆಂದು ಒಂದು ಸೂಚನೆಯನ್ನು ಮೊದಲನೆಯವರು ಮುಂತಂದರು. ಪಾರ್ಲಿಮೆಂಟು ಈಗ ಹಿಂದೂದೇಶವನ್ನು ಆಳುವುದೆಂದರೆ, ಹಿಂದೆ ಅಮೇರಿಕದಲ್ಲಿನ ವಸಾಹತುಗಳನ್ನು ಆಳುವಾಗ ಯಾವ ಮನೋಭಾವನೆಯಿತ್ತೋ, ಅದನ್ನೆ ಈಗಲೂ ಹಿಡಿದುಕೊಂಡೇ ಆಳುವುದೆಂದಾಗಿದೆ. "ಇದುವರೆಗೆ ಹಿಂದೀಯರಿಗೆ ಕೊಟ್ಟ ವಾಗ್ದಾನಗಳನ್ನು ಅಲ್ಲಗಳೆಯುವರೆಂದು ನಾವು ಎಣಿಸಿದರೆ ಅದೂ ಕನ್ಸರ್ವೇಟಿವರ ಮೇಲೆ ದೋಷಾರೋಪಣೆ ಮಾಡಿದಂತಾಗುವುದಾದರೂ," "ಸ್ವರ್ಗದಲ್ಲಿ ಆಳಾಗಿರುವ ಬದಲಾಗಿ ನರಕದಲ್ಲಿ ಅರಸಾಗಿ ಆಳುವುದು ಲೇಸೆಂದು ಹಿಂದೀಯರ ಭಾವನೆಯಾಗಿದ್ದಲ್ಲಿ ತಪ್ಪೇನು?" ಎಂದೂ ಮಾತು ನಡೆಯಿತು. ಆಕ್ಸ್‌ಫರ್ಡಿನವರೊಬ್ಬರು 'ಚಿರಕಾಲವೂ ಹಿಂದೀಯರು ಕುಂಟು ಕರಿಕಲ್ಲಮ್ಮನಾಗಿಯೆ ಇರಬೇಕೆ?' ಎಂದರು. ಕೊನೆಗೆ ಶ್ವೇತ ಪತ್ರವನ್ನೆ ಸಮರ್ಥಿಸಿ ಸಭೆ ಮುಗಿಯಿತು.

ಭೂಕಂಪದ ಹಾವಳಿ

ಎಷ್ಟಾಯಿತೆಂಬ ವಿವರವು ದಿನೇ ದಿನೇ ಬಲವಾಗಿ ಪ್ರಕಟಗೊಳ್ಳುತ್ತಲಿ ಇದೆ. ಹಲಾವಣೆಗೆ ಉಪಾಯವೇ ಇಲ್ಲ. ಹಲವು ಊರುಗಳು ಶತಮಾನಗಳ ಹಿಂದೆ ಹಾಳು ಬಿದ್ದಂತೆ ಕ್ಷಣದೊಳಗೆ ಮಾಯವಾಗಿ ಅಥವಾ ಮುರಿದು ಬಿದ್ದುದರಿಂದ, ಅವುಗಳಲ್ಲಿ ನಿರ್ನಾಮವಾದ ಜನ ಜಾನುವಾರುಗಳು ಎಷ್ಟೆಂದು ಹೇಳುವುದಕ್ಕೂ ಸಾಧ್ಯವಿಲ್ಲವಾಗಿದೆ. ಅಳಿದವರ ಲೆಕ್ಕವೇ ಇಲ್ಲದಿರುವಾಗ, ಉಳಿದವರ ದುಃಖಕ್ಕೂ ಮಿತಿಯಿಲ್ಲವಾಗಿದೆ. ನೇಪಾಳದಂಥ ರಾಜ್ಯವು ಮಿತಿ ಮೀರಿ ದುಃಖಕ್ಕೊಳಗಾಗಿದೆ, ಬಿಹಾರ (ಸೀತಾದೇವಿಯ ಜನ್ಮಭೂಮಿ)ದ ಆಪತ್ತು ಅಷ್ಟಿಷ್ಟಲ್ಲ ಹಲವು ಪ್ರಾಚೀನ ದೇವಾಲಯಗಳು ಮಾತ್ರ ಹೇಗೋ ಉಳಿದಿವೆ, ರಾಜ ಭವನಗಳೂ ಸರಕಾರೀ ಕಟ್ಟಡಗಳೂ ಭಗ್ನಗೊಂಡಿವೆ ಎಷ್ಟು ಬೇಗನೆ ಈ ಮಹಾ ವಿಪತ್ತು ದೇಶದ ಮೇಲೆ ಕವಿಯಿತೋ ಅಷ್ಟೆ ಬೇಗನೆ ಸಂಕಟ ನಿವಾರಣೆಗೆ ಧನ ಜನಬಲಗಳೂ ದೊರೆಯುತ್ತಿವೆ ಎಂಬುದಷ್ಟೆ ಸಂತೋಷ

ಇದ್ದ ಫಂಡಿನಿಂದ ಸಹಾಯ ಸಿಗದೆ?

ಜಯಪುರದ ಮಹಾರಾಜರು ೧೯೦೦ರಲ್ಲಿ ೧೫ ಲಕ್ಷ ರೂಪಾಯಿಗಳನ್ನು ಸರಕಾರಕ್ಕೊಪ್ಪಿಸಿ, ಅವರ ಬಡ್ಡಿಯಿಂದ ನೆರೆಹಾವಳಿ, ಕ್ಷಾಮಕಾಲದ ಸಂಕಟ ಮೊದಲಾದುವನ್ನು ನಿವಾರಿಸಲು ಯುಕ್ತವೆಂದು ಬಳಸಬೇಕೆಂದು ಆಶಿಸಿದರು ಹಾಗೆಯೆ ಆ ಫಂಡಿಗೆ ಒಂದು ಆಡಳಿತದ ಕಮಿಟಿ ಉಂಟಾಯಿತು. ಆ ಧನವು ಈಗ ೨೦ ಲಕ್ಷ ರೂಪಾಯಿಗಳಾಗಿವೆ. ಕಳೆದ ವರ್ಷ ನಗದು ರೂಪಾಯಿ ೭,೮೦,೦೦೦ ಈ ಫಂಡಿನಲ್ಲಿ ಸಿಲ್ಕು ಉಳಿದಿದೆ. ಬರಗಾಲದ ಅಷ್ಟು ಗೋಳಾಟವೇನೂ ಇಲ್ಲದಿರುವ ಈ ಕಾಲದಲ್ಲಿ, ಈ ಹಣದಲ್ಲಿ ಕೆಲವಂಶವನ್ನಾದರೂ ಸಂಕಟದಿಂದ ತಲ್ಲಣಗೊಂಡಿರುವ ಬಿಹಾರದ ಜನರ ನಿತ್ಯ ಜೀವನಕ್ಕೆ ಒದಗಿಸುವುದಕ್ಕೆ ಯಾರ ಆತಂಕವೂ ಇರಲಾರದಷ್ಟೆ! ಈ ದಕ್ಷಿಣ ಕನ್ನಡದಿಂದ ನೆರೆಹಾವಳಿಯ ಸಂಕಟ ನಿವಾರಣೆಗೆಂದು ಕೂಡಿಸಿದ ಹಣದ ಸಿಲ್ಕಿನಿಂದ ೫೦೦ ರೂಪಾಯಿಗಳನ್ನು ಈ 'ಭೂಕಂಪದ ಫಂಡಿಗೆ' ಒಪ್ಪಿಸಿರುವಾಗ, ದೊಡ್ಡ ಫಂಡು ಸರಕಾರದ ತಾಬೆಯಲ್ಲಿಯೇ ಇದ್ದೂ, ಅದರಿಂದ ಹಣವು ಈ ಉದ್ದೇಶವಾಗಿ ದೊರೆಯಲಾರದೆಂದು ಭಾವಿಸುವುದು ಕಷ್ಟವಾದರೂ, ಇದುವರೆಗೂ ಅದರಿಂದ ಪಾವತಿ ಮಾಡಿದ ಪ್ರಸ್ತಾಪವು ಪತ್ರಿಕೆಗಳಲ್ಲಿಲ್ಲವೇಕೆ?

ಚೀನದಲ್ಲೂ ಹಾಗೆಯೆ!

ಪಶ್ಚಿಮೋತ್ತರ ಚೀನದಲ್ಲೂ ಬಲವಾದ ಭೂಕಂಪವೊಂದು ಕಳೆದ ವಾರ ಉಂಟಾಯಿತು. ಚೀನದಲ್ಲಿ ಅಂದಿನಿಂದ ಇದು ವರೆಗೂ 'ಕಣ್ಣೀರಿನ ಹೊಳೆ' ಎಂದು ಹೆಸರಿರುವ ಹಳದಿ ಹೊಳೆಯು ಏಕಪ್ರಕಾರವಾಗಿ ಏರುತ್ತಲೇ ಇದೆಯೆಂದೂ, ಇಷ್ಟರಲ್ಲೇ ಈ ದೆಸೆಯಿಂದ ೧೦೦೦೦ ಮಂದಿ ಮಡಿದರೆಂದೂ, ಹೊಳೆಯು ದಾರಿಯೇ ಬೇರೆಯಾಗುವ ಸಂಭವವಿದ್ದು ಇನ್ನೂ ಹೆಚ್ಚಿನ ಹಾವಳಿಯುಂಟಾಗಬಹುದೆಂದೂ ಜನರಲ್ಲಿ ಭಯವು ನಾಟಿರುವುದು ಆಗಾಗ ಅಲ್ಲಲ್ಲಿ ಭೂಕಂಪಗಳಾಗುತ್ತಿವೆ ಎಂದು ಈಗ ಮನಸ್ಸು ಭೀತಿಗೊಂಡಿರುವಾಗಲೆ ಪ್ರಕಟವಾಗುತ್ತಿರುವುದು ಅಷ್ಟು ಸುಖದ ಮಾತಲ್ಲ. ನಮ್ಮ ದೇಶದ ಉತ್ತರಭಾಗದಲ್ಲಾದ ಭೂತಳದ ವಿಚಲನಕ್ಕೆ ಸರಿ ಹೋಗುವ ರೀತಿಯಲ್ಲಿ ಚೀನದಲ್ಲಿ ಈ ಬಗೆಯ ಕಂಪನವುಂಟಾಗಿದ್ದಿರಬಹುದು. ಅದೇ ರೀತಿ, ದೂರದ ಮೆಕ್ಸಿಕೋ ಪ್ರಾಂತ್ಯದಲ್ಲಿ ಸಹ ಭೂಕಂಪವಾದುದರ ವರ್ತಮಾನವಿದೆ. ಅದು ನಮಗೆ ಭೂಪೃಷ್ಠದ ಭಾಗವಾಗಿರುವುದು.

ಜೀವಕೋಟಿಯು ನೆಲೆಸಿಂತ ಭಾಗಗಳೆಲ್ಲೆಲ್ಲ ಭೂಮಿಯು ಕಂಪಿಸುತ್ತಿರುವುದು ನಿಜವಾಗಿಯೂ ಭೂಭಾರವನ್ನು ಕಡಿಮೆ ಮಾಡಬೇಕೆಂದೇ? ಅಸ್ಪೃಶ್ಯತೆಯಂತಹ ಮಹಾಪಾಪದ ಭಾರವು ಅಸಹನೀಯವಾಗಿದೆ ಎಂದು ಹೀಗಾಗುವುದಾಗಿ ಮಹಾತ್ಮಾಜೀಯವರು ಎನ್ನುತ್ತಿರುವರು.

ನಿಜವಾದ ಭೂಭಾರವು ಎಲ್ಲಿದೆ?

ಯುದ್ಧತಂತ್ರಗಳಿಗಾಗಿ ಪ್ರಯತ್ನಗಳು ಸಫಲವಾಗದೆ ಇರುವುದೇ ಶಾಂತಿಗೆ ಇನ್ನೂ ಸಮರ್ಥವಾದ ನೆಲೆ ನಿಲುಕದಿರುವುದೇ ಮಹತ್ವದ ಭಾರದ ಕುರುಹಾಗಿದೆ. ಜರ್ಮನಿಯೊಂದು ಅತ್ತ ಫ್ರಾನ್ಸು, ಇತ್ತ ರಷ್ಯ ಇವುಗಳ ನಡುವೆ ಸಿಲ್ಕಿಕೊಂಡಿದೆ. ಹಣವೂ ಬಲವೂ ಇವೆರಡು ರಾಷ್ಟ್ರಗಳಲ್ಲಿವೆ. ಜರ್ಮನಿಯು ಇನ್ನೂ ಇತರ ಜನಾಂಗಗಳ ಸಮಾನತೆಗೆ ಬರಕೂಡದೆಂಬ ಆತಂಕಗಳು ಫ್ರಾನ್ಸಿನಿಂದ ಹೊರಡುತ್ತಿವೆ ಫ್ರಾನ್ಸಿನಷ್ಟು ತನ್ನ ಬಲವಾಗಬೇಕೆಂದು ಜರ್ಮನಿಯೂ, ಜರ್ಮನಿಯು ಸಂಪೂರ್ಣ ದುರ್ಬಲವಾಗದೆ ತಾನು ಬಲ ಕಡಿಮೆ ಮಾಡುವುದಿಲ್ಲವೆಂದು ಫ್ರಾನ್ಸು ಹಟ ತೊಟ್ಟಿವೆ. ಇದೇ ರೀತಿ, ಈಚೆಗೆ ಜಪಾನು, ಅತ್ತ ರಷ್ಯ, ಎಡಗಡೆ ಅಮೇರಿಕಾ, ಮಂಚೂರಿಯದಲ್ಲಿ ಜಪಾನೀ ಜನರೇ ತುಂಬಿ, ಅವರೂ ಚೀನದೊಡನೆ ಈಗ ಮಿತ್ರರಾಗಿ, ಜಪಾನು ಮಂಚೂರಿಯ ಚೀನ ಇವು ಮೂರೂ ಒಂದಾದರೆ ರಷ್ಯವನ್ನೂ, ಅಮೇರಿಕವನ್ನೂ ಎದುರಿಸಬಹುದೆಂದು, ಏಷ್ಯವು ಏಷ್ಯದವರ ಸ್ವಾಧೀನವೇ ಇರಬೇಕೆಂದೂ ಜಪಾನಿನ ಪ್ರಯತ್ನ ಎಲ್ಲಕ್ಕೂ ಬೆಂಬಲವಾಗಿ, ಸಾಮ್ರಾಜ್ಯಾಭಿಲಾಷೆ, ಸಿಡಿಗುಂಡು ಹತ್ಯಾರು ಮೊದಲಾದುವುಗಳ ವ್ಯಾಪಾರಿಗಳ ಹಂಬಲ, ಆರ್ಥಿಕ ದುರವಸ್ಥೆಯ ಒದೆ, ಇವುಗಳೆಲ್ಲವೂ ಸೇರಿ ಶಾಂತಿಗೆ ನೆಲೆಯಿಲ್ಲ, ಭೂಮಿಗೆ ಶಾಂತಿಯಿಲ್ಲ

ಸರ್ವ ಪಕ್ಷಗಳ ಪರಿಷತ್ತು

ಸೇರಿದರೆ ಉತ್ತಮ ಸೇರುವುದಕ್ಕೆ ಆತಂಕಗಳೂ ಬಹಳ, ತರ್ಕ ವಿಪರೀತ ಜನಾಂಗವು ಒಮ್ಮೊಗವಾಗಿ ಏಕಕಂಠವಾಗಿ ಕೇಳಿದರೆ ಸ್ವರಾಜ್ಯ ಸಿಗುವುದು ನಿಶ್ಚಯವೆಂದು ಎಲ್ಲರೂ ತಿಳಿದಿರುತ್ತಾ, ಸಹಸ್ರಮುಖವಾಗಿಯೇ ಬೊಬ್ಬಿಡುವಂತೆ ಈಗ ಉಂಟಾಗಿರುವ ವಿದ್ಯಮಾನಗಳನ್ನು ಗೆಲ್ಲುವುದೇ ಕಷ್ಟವಾಗಿದೆ ಅದಕ್ಕಾಗಿ ಶ್ವೇತಪತ್ರವನ್ನು ಎಲ್ಲರಿಗೂ ಸರಿಯೊಪ್ಪುವಂತೆ ತಿದ್ದೋಣವೆಂದು ಬೊಂಬಾಯಿಯಿಂದ ಬಹು ದಿನಗಳಿಂದಲೂ ಸರ್ವಪಕ್ಷಗಳ ಪರಿಷತ್ತು ಕೂಡಿಸಲು ಪ್ರಯತ್ನಗಳಾಗುತ್ತಿವೆ. ಆದರೆ ಮುಖಂಡರುಗಳಲ್ಲೇ ಭಿನ್ನಾಭಿಪ್ರಾಯಗಳು! ಶ್ವೇತಪತ್ರವನ್ನು ಇದ್ದಂತೆಯೆ ಅಂಗೀಕರಿಸುವ ಒಂದು ಪಕ್ಷದವರೂ ಇಲ್ಲ ಪ್ರತಿಯೊಬ್ಬರೂ ಬೇರೆ ಬೇರೆ ಸಲಹೆಗಳನ್ನು ಸೆಕ್ರೆಟರಿಯವರಿಗೆ ಒಪ್ಪಿಸಿರುವರು ಆದರೆ,—ಒಂದು ವೇಳೆ ಇಂತಹದೊಂದು ಪರಿಷತ್ತು ಸೇರಿ, ಒಮ್ಮತವಾಗಿ ಸರಕಾರಕ್ಕೆ ಸೂಚನೆಗಳನ್ನು ಕಳುಹಿಸಿದರೂ, ಅವನ್ನು ಸರಕಾರವು ಅಂಗೀಕರಿಸದಿದ್ದರೆ ಏನುಪಾಯ ಎಂದು ಕೇಳಿದರೆ ಮರುತ್ತರವೂ ಇಲ್ಲದ ಕಾರಣ ಇಂತಹ ಪರಿಷತ್ತು ಸೇರಿ ಇನ್ನಷ್ಟು ಭೇದಗಳಾದಾವೊ ಎಂಬ ಅಂಜಿಕೆಯೂ ಉಂಟಾಗಿದೆ

ಬಳ್ಳಾರಿಯ ದೂರು

ಕರ್ನಾಟಕ ಏಕೀಕರಣ ಸಂಘದ ಪರವಾಗಿ ನಮ್ಮ ವಿದ್ಯಾ ಇಲಾಖಾ ಮಂತ್ರಿಗಳಲ್ಲಿ ಬಳ್ಳಾರಿಯ ಕನ್ನಡಿಗರು ಅಭಿಮಾನದಿಂದ ಬಿನ್ನವಿಸಿಕೊಂಡರು. ಬಳ್ಳಾರಿಯ ಆರು ತಾಲೂಕುಗಳಲ್ಲಿ ತೆಲುಗು ಆಡುವವರಿಲ್ಲ. ಉಳಿದುವುಗಳಲ್ಲಾದರೂ ನೂರರಲ್ಲಿ ೬೬ ಕನ್ನಡವನ್ನೂ ೧೨ ಹಿಂದುಸ್ಥಾನಿಯನ್ನೂ ೨೨ ಮಾತ್ರ ತೆಲುಗನ್ನೂ ಆಡುವರು. ಆದರೆ, ಎಲ್ಲಿ ನೋಡಿದರೂ ಮೂಲ ಶಾಲೆಗಳಲ್ಲಿ ಸಹ, ತೆಲುಗನ್ನೇ ಅಲ್ಲದೆ ಕನ್ನಡ ಕಲಿಸುವವರೇ ಇಲ್ಲ. ಅದೋನಿ, ಬಳ್ಳಾರಿಯ ಹೈಸ್ಕೂಲುಗಳಲ್ಲಿ ಮಾತ್ರ ಕನ್ನಡವಿದೆ—ಆದರೆ ಅಲ್ಲಿಯೂ ಕನ್ನಡ ಭಾಷಾ ಪಾಠಗಳನ್ನಲ್ಲದೆ ಇತರ ಯಾವತ್ತು ಪಾಠಗಳನ್ನೂ ತೆಲುಗಿನಲ್ಲೇ ಕಲಿಸುವರು! ಈ ದೂರು, ಒಂದು ತಲಾಂತರದಿಂದಲೂ ಪದೇ ಪದೇ ಸರಕಾರದ ಕಡೆಗೆ ತಲುಪಿದ್ದರೂ, ಸರಕಾರವು ಇದನ್ನೇನೂ ಗಣನೆಗೆ ತಂದುಕೊಂಡಿಲ್ಲ ಸರಕಾರೀ ಕಚೇರಿಗಳಲ್ಲೂ, ಸ್ಥಳೀಯ ಸಂಸ್ಥೆಗಳ ಆಫೀಸುಗಳಲ್ಲೂ ಕನ್ನಡದ ಸುಳಿವಿಲ್ಲ ಬಳ್ಳಾರಿಯಲ್ಲಿರುವ ಉಪಾಧ್ಯಾಯರ ತರಬೇತಿನ ಶಾಲೆಯಲ್ಲಿ, ತೆಲುಗು ಉಪಾಧ್ಯಾಯರ ತರಬೇತು ಮಾತ್ರ ನಡೆಯುತ್ತಿದೆ. ಸರಕಾರದ ಹೆಮ್ಮಕ್ಕಳ ಶಾಲೆಯಲ್ಲೂ ತೆಲುಗೇ ಭಾಷೆ. ಇದಲ್ಲದೆ, ಬಳ್ಳಾರಿಯನ್ನು ಆಂಧ್ರ ವಿಶ್ವವಿದ್ಯಾಲಯಕ್ಕೆ ಸೇರಿಸಲು ಮಸೂದೆಯೂ ತಯಾರಾಗಿದೆ. ಅನಂತಪುರ, ಚಿತ್ತೂರು, ಸೇಲಂ, ನೀಲಗಿರಿ, ಮದುರಾ ಜಿಲ್ಲೆಗಳಲ್ಲಿ ಒಂದೇ ಕನ್ನಡ ಮೂಲ ಶಾಲೆ ಇಲ್ಲ ಇಲ್ಲಿಯೂ ತುಂಬ ಕನ್ನಡಿಗರಿರುವರು!' ಮಂತ್ರಿಗಳು ಲಾಲಿಸಿದರು; ಇನ್ನು ಎಂದಿನಂತೆ ಪಾಲಿಸುವರು.

NOTES...
ನೋಟಿಗಳು.

ಎಲ್ಲೆಲ್ಲಿಯೂ ಭೂಕಂಪ—ಅಡಿಮೇಲು! ವ್ಯಾಪಾರ ಅಡಿಮೇಲು! ಜನರ ಸ್ಥಿತಿ ಗತಿಗಳು ಅಡಿಮೇಲು!

* * * *

ಅದರೊಡನೆ ನಮ್ಮ ಹೆಡ್ ಪೋಸ್ಟಾಫೀಸಿನಲ್ಲೂ ಸ್ಥಿತಿ ಗತಿಗಳ ಅಡಿಮೇಲು! ಎಷ್ಟೋ ವರ್ಷಗಳಿಂದ ತಂತಮ್ಮ ವಾರ್ಡುಗಳಲ್ಲಿ ದೀರ್ಘ ಅನುಭವದಿಂದ ಕೆಲಸ ಮಾಡಿದ ಪೋಸ್ಟ್ ಮೆನರಿಗೆಲ್ಲಾ ಟ್ರಾನ್ಸ್‌ಫರ್! ಟ್ರಾನ್ಸ್‌ಫರ್ ಸಿನರಿಯಂತೆ ವಿಚಿತ್ರ ಟ್ರಾನ್ಸ್‌ಫರ್!

* * * *

ಪೂರ್ವದವರು ಪಶ್ಚಿಮಕ್ಕೆ ವರ್ಗ! ಪಶ್ಚಿಮದವರು ಪೂರ್ವಕ್ಕೆ ವರ್ಗ! ಈ ವರ್ಗಗಳಿಂದಾಗಿ ಕೆಲವು ದಿನಗಳಿಂದ ಕಾಗದ ಬಟವಾಡೆ ಮಾಡುವ ಪೋಸ್ಟ್ ಮೆನರನ್ನು ಕಾದು ನಿಲ್ಲುವ ಸ್ವರ್ಗವೇ ದೊರೆತಂತಾಗಿದೆ.

* * * *

ಒಂದು ದಿನ ರಂಗಪ್ಪನವ್ರೆಂದು ವೆಂಕಪ್ಪನೊಡನೆ ವಿಚಾರಿಸುವುದು. ವೆಂಕಪ್ಪನ ಮನೆ ಎಲ್ಲಿ ಎಂದು ಮರುದಿನ ತಿಮ್ಮಪ್ಪನೊಡನೆ ಕೇಳಿ ವಿಠಪ್ಪನ ಮನೆಯಲ್ಲಿ ಡೆಲಿವರಿ ಮಾಡುವುದು ವಿಠಪ್ಪನವ್ರೆಂದು ಸೋಮಪ್ಪನೊಡನೆ ವಿಚಾರಿಸಿ ಈಗಿನ ಪೋಸ್ಟ್ ಮೇನರು ಡೆಲಿವರಿ ಕೆಲಸದಲ್ಲಿ ಕತ್ತಲಾದ ಮೇಲೂ ಕಷ್ಟಪಡುವುದೆಂದರೆ ಇದರರ್ಥವೇನು?

* * * *

೬ ಘಂಟೆಗೆ ತಲಪುವ ಪೋಸ್ಟ್ ಮೇನನು ೭ ಘಂಟೆಯಾದರೂ ಕಾಣೆ! ಎದುರಿನಲ್ಲಿ ಕಾಣಸಿಕ್ಕಿದರೂ, ಅಪರಿಚಿತನಾದುದರಿಂದ ಪೋಸ್ಟ್ ಮೇನನು ಕಾಗದ ಕೊಡುವುದಿಲ್ಲ! ಹಳ್ಳಿಯ ವರ್ಗದ ಕಾಗದವಯ್ಯ ಇದು!!

* * * *

ಲೋಕವೆಲ್ಲಾ ಸುಧಾರಣೆಯಾಗಿದೆ—ಹೊಸತಾಗಿದೆ ನಮ್ಮ ಪೋಸ್ಟಾಫೀಸನ್ನೂ ಹೊಸದು ಮಾಡೋಣವೆಂದು ಪೋಸ್ಟ್ ಮಾಸ್ಟರರ ಅಭಿಪ್ರಾಯವೇ? ಈ ಅನಾನುಕೂಲತೆಗಳಿಗೆ ಯಾರು ಹೊಣೆ? ಮುಂಚಿನಂತೆಯೇ ವ್ಯವಸ್ಥೆ ಮಾಡಬಾರದೇ?

* * * *

ಮಂಗಳೂರಿಂದ ಸೇಲಮಿಗೆ ಹೋಗಿರುವ ಗನ್ ಬೋಟ್ ದೊರೆ (?) ಗಳವರ ಬದುಕಿನ ಕುರಿತು ಜನರು ಏನೇನೋ ಆಡಿಕೊಳ್ಳಲಾರಂಭಿಸಿದ್ದಾರೆ ಸತ್ಯಾಂಶವು ಏನಂತೆ?

++ ++

'ಸಾಹಿತ್ಯ ಸಂಚಿಕೆ'ಯು ಬರುವ ಸಂಚಿಕೆಯಲ್ಲಿ—

ತಿರುವಾಂಕೂರಿನಲ್ಲಿ ಹರಿಜನೋದ್ಧಾರ

ದೇವಾಲಯಗಳಿಗೆ ಹರಿಜನರನ್ನು ಪ್ರವೇಶಿಸ ಬಿಡುವ ವಿಚಾರದಲ್ಲಿ ತಿರುವಾಂಕೂರು ಸರಕಾರವು ನೇಮಿಸಿದ್ದ ಒಂದು ಕಮಿಟಿಯು "ಅಸ್ಪೃಶ್ಯತೆಯಂತಹ ಸಾಮಾಜಿಕ ಕಟ್ಟಳೆಯ ದೋಷವನ್ನು ನಿವಾರಿಸಲು ಸರಕಾರವು ಕಾನೂನನ್ನು ಸೃಷ್ಟಿಸಬೇಕೆಂದು" ಶಿಫಾರಸು ಮಾಡಿರುವುದು. ಈ ಶಿಫಾರಸು ಅಂಗೀಕೃತವಾದರೆ, ದೇವಾಲಯಗಳಿಗೆ ಹರಿಜನರು ಪ್ರವೇಶಿಸಲು ಅವಕಾಶವು ಉಂಟಾಗುವುದು. ಹರಿಜನೋದ್ಧಾರಕ್ಕೆ ಅವರಿಗೆ ಬೇಕಾದ ವಸತಿಯೇ ಮೊದಲಾದ ಅನುಕೂಲತೆಗಳೂ ಹಣವೂ ಬೇಕು. ಧಾರ್ಮಿಕ ವಿಷಯವೆಂತೂ ಇರಲಿ, ಸಾಮಾಜಿಕ ದೃಷ್ಟಿಯಿಂದಾದರೂ ಹರಿಜನರಿಗೆ ಈ ಹೊಸ ಏರ್ಪಾಡುಗಳಿಂದ ಅಭಿವೃದ್ಧಿ ಉಂಟಾಗಬಹುದು. ತೀರ ಮತ ಸಂಬಂಧವಾದ ತೀರ್ಮಾನವನ್ನು ಸರಕಾರವು ಹರಿಹತ್ತು ಮೂಲಕ ಪಡೆಯಲೆಂದೇ ಸೂಚನೆಯಿದೆ. ಕಡು ಧರ್ಮಭಕ್ತರ ಕೋಟೆಯಂತಿರುವ ತಿರುವಾಂಕೂರಲ್ಲಾದರೂ, "ಹರಿಜನರಿಗೆ ದೇವಾಲಯ ಪ್ರವೇಶದ ಹಕ್ಕಿರಬೇಕಾದುದು ನ್ಯಾಯ" ಎಂದು ಕಮಿಟಿಯು ಬರೆದುದರಲ್ಲಿ ತುಂಬ ಅರ್ಥವಿದೆ. ಇದರಿಂದ ದೇಶದಲ್ಲಿ ಈ ವಿಷಯವಾಗಿ ಅಭಿಪ್ರಾಯವು ಹೇಗಿದೆ ಎಂಬಷ್ಟಾದರೂ ಸೂಚನೆಯು ವ್ಯಕ್ತವಾಗುತ್ತಿದೆಯಲ್ಲವೆ?

ಗೊಡ್ರೆಜ್ ಸಾಬೂನುಗಳಿಗೆ

ಅಮೂಲ್ಯವೂ ಹೊಸತೂ ಆದ ಪ್ರಾಶಸ್ತಿ

ಡಾ। ಎಂ. ಎ. ಅನ್ಸಾರಿ. ಎಂ. ಡಿ.

(ಅಖಿಲ ಭಾರತ ಕೊಂಗ್ರೆಸ್ಸಿನ ಮಾಜಿ ಅಧ್ಯಕ್ಷರು)

ಗೊಡ್ರೆಜ್ ಸಾಬೂನುಗಳ ಉತ್ಕೃಷ್ಟ ಗುಣಗಳನ್ನು ಕಂಡು ನಾನು ಸಂತೋಷದಿಂದ ಮೆಚ್ಚಿದವನಾಗಿರುತ್ತೇನೆ. ಕಳೆದ ಹತ್ತು ವರ್ಷಗಳಿಂದ ನಾನವುಗಳನ್ನು ಉಪಯೋಗಿಸುತ್ತಿರುವೆನು ಯುರೋಪ್ಪದಲ್ಲಾಗಲೀ ಇನ್ನಿತರ ಯಾವ ದೇಶದಲ್ಲಾಗಲೀ ತಯಾರಿಸಲ್ಪಟ್ಟ ಸಾಬೂನುಗಳಿಗಿಂತ ಇವು ಅತ್ಯುತ್ಕೃಷ್ಟವೆಂದೇ ನನ್ನ ಅನುಭವದ ಮಾತು. ಅವುಗಳ ಉತ್ಕರ್ಷತೆಯ ದೃಷ್ಟಿಯಿಂದಲೂ, ಅಲ್ಲದೆ ಅವು ಹಿಂದೂದೇಶದಲ್ಲೇ ಸಿದ್ಧಗೊಳಿಸಲ್ಪಟ್ಟುವೆಂಬ ದೃಷ್ಟಿಯಿಂದಲೂ ನಾನವುಗಳನ್ನು ಹಿಂದೀಯ ಜನತೆಗೆ ಶಿಫಾರಸು ಮಾಡುತ್ತೇನೆ''

ಪ್ರಮುಖ ಡಾಕ್ಟರರೂ ಮತ್ತು ಪ್ರಮುಖ ರಾಷ್ಟ್ರೀಯ ಧುರೀಣರೂ ಆದ ಡಾ। ಅನ್ಸಾರಿಯವರ ಹೇಳಿಕೆಯು ಪ್ರತಿಯೊಬ್ಬ ವ್ಯಕ್ತಿಯ ಮತ್ತು ಪ್ರತಿಯೊಂದು ರಾಷ್ಟ್ರದ ದೈಹಿಕ ದೃಷ್ಟಿ ಮತ್ತು ರಾಷ್ಟ್ರೀಯ ದೃಷ್ಟಿಯಿಂದ ಸಹಾಯಕರವಾಗಬೇಕು.

Jaya Bharatham Co., P B No 83 MADRAS

ಜಯ ಭಾರತಂ ಕೋ, ಪೊ. ಬ ೮೩ ಮದ್ರಾಸು

ದ ಕ ಜಿಲ್ಲೆಗೆ ಏಜಂಟರು:—ಎಸ್ ಇ ಬಂಗೇರಾ ಮಿಶ್ಯನ್ ಕಂಪೌಂಡು, ಕಾಸರಗೋಡು

ಡೆಲ್ಲಿ ಬಿಸ್ಕೂಟಿನ ಕುರಿತು

ಇಂಡಿಯಾದ ಘನ ಕೈಗಾರಿಕಾ ಸಂಸ್ಥೆಯ

ಸರ್ ದೋರಾಬ್ ತಾತಾರವರು

"ಈ ಬಿಸ್ಕೂಟುಗಳನ್ನು ಹಿಂದೀಯ ಜನತೆಯ ಹೆಚ್ಚಿನ ಅವಗಾಹನೆಗೆ ತಂದಲ್ಲಿ ಸಹಜವಾಗಿ ಇವುಗಳು ಹೆಚ್ಚಿನ ವಿಕ್ರಯವಾಗುವುದರಲ್ಲಿ ಸಂದೇಹವಿರುವುದಿಲ್ಲ

"ಇಂಗ್ಲಾಂಡಿನಲ್ಲಿ ತಯಾರಿಸಲ್ಪಟ್ಟುವುಗಳಿಗಿಂತಲೂ ನಾನು ಈ ಬಿಸ್ಕೂಟುಗಳನ್ನೇ ಪ್ರಶಸ್ತವೆನ್ನುತ್ತೇನೆ' — "ಇಂಗ್ಲಾಂಡಿನಲ್ಲಿ ನಮ್ಮ ಬಿಸ್ಕೂಟುಗಳ ಬಹಳ ಮೆಚ್ಚುಗೆಗೆ ಪಾತ್ರವಾಗಿವೆ'—ಎಂಬುದೇ ಕೆಲವು ಯೂರೋಪಿಯನರ ಹೇಳಿಕೆ.

ಮದ್ರಾಸು ಪ್ರಾಂತ್ಯಕ್ಕೆ ಏಜಂಟರು:—

Jaya Bharatham Co, P, B No 88 MADRAS

ಜಯ ಭಾರತಮ್ ಕೋ, ಪೊ. ಬ ೮೩ ಮದ್ರಾಸು.

ಸ್ಟೋಕಿಸ್ಟರು.—ಮೆಸರ್ಸ್ ಕಾಮತ್ ಎಂಡ್ ಕೋ, ಮಂಗಳೂರು.

ದ. ಕ. ಜಿಲ್ಲಾ ಏಜಂಟರು:—ಎಸ್ ಇ ಬಂಗೇರಾ, ಮಿಶ್ಯನ್ ಕಂಪೌಂಡು, ಕಾಸರಗೋಡು.

ಗುಣಬಾರದಿದ್ದರೆ] ಸುಪ್ರಸಿದ್ಧ ವೈದ್ಯರಾದ ಎಮ್ ಕೆ ರಜಪೂತ ಇವ- [ಹಣ ವಾಪಾಸು

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆಶಯ ಅಶಕ್ತಿಯಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದ ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ ಮೊದಲೇ ಪೂರಾ ವಿಚಾರ ಮಾಡಿ ಔಷಧ ಬೇಡಿರಿ ಮುಖ್ಯ ಸರ್ಟಿಫಿಕೇಟು ಡಾಕ್ಟರ ಬಿ ಎ ವೈದ್ಯ, ಎಲ್ ಸಿ ಪಿ ಎಸ್ ಕೆಳವಾಡಿನವು ಕಾಣೆ ಈ ಚೂರ್ಣದಿಂದ ಯಾವ ತರದ ಅಪಾಯವಾಗದು ಗರ್ಭಧಾರಣವೂ ಆಗುವುದಿಲ್ಲ ಪೂರ್ಣ ಗುಣಕಾರಿ ಡಬ್ಬಿ ಕಿಮ್ಮತ್ತು ರೂ ೪, ವಿ ಪಿ ಅಣೆ ೮

ವಿಳಾಸ —ಸಂಜೀವಿನೀ ಔಷಧಾಲಯ ಮು ಪೊ ಮಿರಜ್, S M C·

ಬಹು ಕಾಲದ ಆವಶ್ಯಕತೆಗೆ



ಸಣ್ಣ ಕಬ್ಬಿನ ತೋಟದವರು ಸಣ್ಣ ರೀತಿಯಿಂದ ಸಕ್ಕರೆ ತಯಾರಿಸಲು ಯೋಗ್ಯ ರೀತಿಯ ಯಂತ್ರವು ಬೇಕೆಂದು ಬಹು ಕಾಲದ ಆವಶ್ಯಕತೆಯಲ್ಲಿದ್ದರು. ನಿಮಗೆ ಬೇಕಾದುದ್ದು ಇಲ್ಲೇ ಇದೆ

ಕಿರ್ಲೋಸ್ಕರ ಶುಗರ್ ಸೆಂಟ್ರಿಫ್ಯುಗಲ್

ಇದು ಆಧುನಿಕ ಮತ್ತು ಅತ್ಯುತ್ಕೃಷ್ಟ ಸಾಧನಗಳಿಂದೊಡಗೂಡಿ ಸಕ್ಕರೆ ತಯಾರಿಸಲು ಸುಲಭ ಯಂತ್ರವಾಗಿದೆ. ಸಣ್ಣ ಭಂಡವಾಳದಲ್ಲಿ ಹೆಚ್ಚಿನ ಲಾಭವನ್ನು ಕೊಡುತ್ತದೆ. ವಿವರಗಳಿಗೆ:—ಕಿರ್ಲೋಸ್ಕರ್ ಬ್ರದರ್ಸ್ ಲಿಮಿಟೆಡ್ ಕಿರ್ಲೋಸ್ಕರ್‌ವಾಡಿ (ಸತಾರ ಜಿಲ್ಲಾ) ಇಲ್ಲಿಗೆ ಬರೆಯಿರಿ

ಸ್ಟೋಕಿಸ್ಟ್ಸ್:—ಬಾಸೆಲ್ ಮಿಶನ್ ಬುಕ್ ಡಿಪೊ ಎಂಡ್ ಟ್ರೇಡ್ಸ್ ಡಿಪೊಸಿಟರಿ ಕೊ., ಮಂಗಳೂರು

ಭೋಗಋಷಿ ಬ್ರಹ್ಮಾನಂದ ಕಲ್ಪ

ಎನ್ನುವ ಜೀವಾನಂದ.

ವೀರ್ಯ ವೃದ್ಧಿ ಲೇಹ

ಮಾನವ ಶರೀರದಲ್ಲಿ ಶುದ್ಧವಾದ ರಕ್ತವನ್ನೂ ಮತ್ತು ಧಾತುವನ್ನು ರಕ್ಷಿಸಿಕೊಳ್ಳುವುದಕ್ಕಿಂತ ಮೇಲಾದದ್ದು ಬೇರೊಂದಿಲ್ಲ ಈಗಿನ ಕಾಲದಲ್ಲಿ ಅನೇಕರು ಮೋಹಕ್ಕೆ ತಾಳಲಾರದೆ ಕೆಟ್ಟ ಸಹವಾಸಕ್ಕೆ ಸಿಕ್ಕಿ ಅಂದರೆ ಹಸ್ತ ಪ್ರಯೋಗದಿಂದಲೂ, ಹೆಂಗಸರ ಸಹವಾಸದಿಂದಲೂ, ಮತ್ತು ಇನ್ನೂ ಅನೇಕ ತರದ ಕೆಟ್ಟ ಚಾಲುಗಳಿಂದಲೂ ಶರೀರವನ್ನು ಕೆಡಿಸಿಕೊಂಡು ಪ್ರಾಯ ಸಮರ್ಥರಾದಾಗ ರತಿಸುಖಕ್ಕೆ ಶಕ್ತಿಯಿಲ್ಲದೆ ವ್ಯಸನಕ್ಕೆ ಗುರಿಯಾಗಿರುವರು, ಮತ್ತು ಇನ್ನೂ ಆಗುತ್ತಲೆ ಇರುವರು. ಇವರ ಉಪಯೋಗಕ್ಕಾಗಿ, ಈ ಲೇಹ ಸೇವಿಸುವುದರಿಂದ ಸೊಂಟದ ನೋವನ್ನು ಕೈಕಾಲುಗಳ ನೋವನ್ನು ತಕ್ಷಣದಲ್ಲಿ ಹೋಗಲಾಡಿಸುವುದು



ಧಾತು ಹೋಗುತ್ತಿದ್ದರೂ, ಸ್ವಪ್ನೇಂದ್ರಿಯವಾಗುತ್ತಿದ್ದರೂ ಕೂಡಲೇ ನಿಲ್ಲಿಸುವುದು ಈ ಲೇಹ ಸೇವಿಸುವುದರಿಂದ ಮೇಲ್ಕಂಡ ವ್ಯಾಧಿಗಳನ್ನು ಗುಣ ಮಾಡುವುದಲ್ಲದೆ ರಕ್ತವನ್ನು ಹೆಚ್ಚಿಸಿ ಧಾತುವನ್ನು ಶೇಖರಿಸುವುದು. ಮತ್ತು ಮುಖಕ್ಕೆ ಕಾಂತಿಯನ್ನುಂಟು ಮಾಡಿ ಹಸನ್ಮುಖಿಗಳನ್ನಾಗಿ ಮಾಡುವುದು

ಈ ಲೇಹವು ಅನೇಕ ವಿಧವಾದ ವನಸ್ಪತಿಯ ಮೂಲಿಕೆಗಳಿಂದ ಬೆಳ್ಳಿ ಭಂಗಾರದ ಭಸ್ಮವನ್ನು ಸೇರಿಸಿ ತಯಾರಿಸಿದೆ ಈ ಲೇಹವನ್ನು ಸೇವಿಸಿ ಶರೀರದ ಎಲ್ಲಾ ವ್ಯಾಧಿಗಳನ್ನು ಹೋಗಲಾಡಿಸಿಕೊಂಡು ನಂತರ ರತಿ ಸುಖಕ್ಕೆ ಸೇರಿದರೆ ಪ್ರಪಂಚದ ಸುಖವನ್ನು ಬಹು ಚೆನ್ನಾಗಿ ಕಳೆಯುವುದಲ್ಲದೆ ಹುಟ್ಟುವ ಮಕ್ಕಳೂ ಬಹಳ ಪುಷ್ಟವಾಗುವವು ಈ ಲೇಹದ ವಿಷಯದಲ್ಲಿ ಬಹಳವಾಗಿ ಬರೆದು ತಿಳಿಸಲು ಆಗದು ಬೆಳ್ಳಿ, ಭಂಗಾರ ಮತ್ತು ಸಾಚಾ ಮುತ್ತಿನ ಭಸ್ಮಗಳು ಈ ಲೇಹಕ್ಕೆ ಎಷ್ಟು ಮಾತ್ರವೂ ಸಮನಾಗಲಾರವು

೨೪ ತೊಲೆ ಡಬ್ಬಿ ಒಂದಕ್ಕೆ ರೂ ೨—೦—೦

ಒಂದೇ ಸಲ ೩ ಡಬ್ಬಿ ೭೨ ತೊಲೆ ತರಿಸಿದರೆ

ಕ್ರಯ ರೂ ೩—೮—೦

ಲೀಲ ಅತಿ ಸಯನ

(ಮೇಲೆ ಸವರುವುದಕ್ಕೆ)

ಮನುಷ್ಯರಲ್ಲಿ ಪುರುಷಾರ್ಥವು ಕೇವಲ ಧಾತುವಿನಿಂದಲೇ ~~ಇರುವದು ಮನುಷ್ಯರ ದೂಷಿತ ವೀರ್ಯವು ಗರ್ಭಕಾರಕವಾಗ~~ಲಾರದು ಅತ್ಯಂತ ಮೈಥುನದಿಂದಲೂ ವ್ಯಾಯಾಮ (ಕಸರತ್) ದಿಂದಲೂ ಯಾವಾಗಲೂ ಕೂತುಕೊಂಡೇ ಇರುವುದರಿಂದಲೂ, ಹಸ್ತ ಪ್ರಯೋಗಾದಿಗಳಿಂದಲೂ, ಸ್ತ್ರೀ ಸಂಬಂಧ ವ್ಯಾಧಿಯಿಂದಲೂ, ಪ್ರಾಯ ಜಾಸ್ತಿ ಇದ್ದುದರಿಂದಲೂ ಶರೀರದ ಎಲ್ಲಾ ನಾಡಿಗಳು ಬಲಹೀನವಾಗುವುದರಿಂದ ಪುರುಷತ್ವವು ಬಲಹೀನವಾಗಿ ಸ್ತ್ರೀ ಸಂಗ ಮಾಡುವುದಕ್ಕೆ ಆಗುವುದಿಲ್ಲ. ಕೆಲವರು ಬಾಲ್ಯದಲ್ಲಿಯೂ ವೃದ್ಧಾಪ್ಯ (ಮುದುಕತನ) ದಲ್ಲಿಯೂ ಇಂತಹ ವ್ಯಾಧಿಗಳನ್ನು ಉಂಟುಮಾಡಿಕೊಂಡು ತಮಗಿರುವ ವ್ಯಾಧಿಯನ್ನು ವೈದ್ಯರಲ್ಲಿ ಹೇಳಲು ನಾಚಿಕೆಯಿಂದ ವ್ಯಾಧಿಯನ್ನು ಹೆಚ್ಚು ಮಾಡಿಕೊಂಡು ಪ್ರಾಯ ಸಮರ್ಥರಾದಾಗ ಸ್ತ್ರೀಸುಖಕ್ಕೆ ಶಕ್ತಿಯಿಲ್ಲದೆ ಲಜ್ಜಾಸ್ಪದದಿಂದ ಅಸಭಗ್ನರಾಗಿ ಮನೋವ್ಯಥೆಯನ್ನುಂಟುಮಾಡಿಕೊಳ್ಳುವರು ಇಂಥವರ ಉಪಯೋಗಕ್ಕೋಸ್ಕರವಾಗಿ ದೊಡ್ಡ ಡಾಕ್ಟರುಗಳಿಂದ ತಯಾರು ಮಾಡಲ್ಪಟ್ಟಿದೆ

ಕ್ರಯ ಬಾಟ್ಲಿ ಒಂದಕ್ಕೆ ರೂ. ೨—೦—೦.

ಒಂದೇ ಸಲ ಎರಡು ಡಬ್ಬಿ ಮೇಲ್ಕಂಡ ಲೇಹವೂ ಒಂದು ಬಾಟ್ಲಿ ಲೀಲ ಅತಿ ಸಯನ ತರಿಸಿಕೊಂಡರೆ ಕ್ರಯ ರೂ. ೫—೦—೦.

Lakshminarayana OUSHADA SALA,

POST BOX NO, 53 MADRAS.

ಲಕ್ಷ್ಮೀನಾರಾಯಣ ಔಷಧ ಶಾಲೆ,

ಪೋಸ್ಟು ಬಾಕ್ಸ್ ನಂ., ೫೩ ಮದರಾಸು

ಅನುಕ್ರಮಣಿಕೆ.

ಅಗ್ರಲೇಖ
ಭೂಕಂಪ ... ೩
ಸ್ಫುಟ ವಿಚಾರಗಳು ... ೩
ಟೀಕೆಗಳು ... "
ವರ್ತಮಾನ ಸಂಗ್ರಹಗಳು ... "
ದೇಶ ಬಂಧುಗಳು ... ೨
ಭೂಕಂಪ ... ೮
ವಿವಿಧ ಸಮಾಚಾರಗಳು ... ೧೧
ದಕ್ಷಿಣ ಕನ್ನಡ—ಮಂಗಳೂರು, ಉಡುಪಿ, ... ೯
ಪತ್ರವ್ಯವಹಾರ ... ೧೪
ಮೂಲೆ ಮೂಲೆಗಳಿಂದ ... ೧೦
ಬಿಹಾರದಲ್ಲಿ ಲಕ್ಷಗಟ್ಟಲೆ ಜನರ ಅನಾಥಸ್ಥಿತಿ ... ೪

ಸ್ವದೇಶಾಭಿಮಾನಿ.

ತಾ. ೨ನೇ ಶುಕ್ರವಾರ ಫೆಬ್ರವರಿ ೧೯೩೪.

ಭೂಕಂಪ

ಪ್ರಾಯಶಃ ಈ ಬಾರಿ ಉತ್ತರ ಹಿಂದೂಸ್ಥಾನದಲ್ಲಿ ಉಂಟಾದ ಭೂಕಂಪವು ಹಾನಿಯುಂಟು ಮಾಡಿದಷ್ಟು ಈ ವರೆಗೆ ಯಾವ ತರದ ಅನಾಹುತಗಳೂ ಈ ದೇಶದಲ್ಲಿ ಹಾನಿ ಮಾಡಿಲ್ಲ. ನೇಪಾಳದ ಒಂದೇ ರಾಜ್ಯದಲ್ಲಿ ೨೦,೦೦೦ ಜನರೂ, ಮುಜಾಫರಪುರ ಎಂಬ ಒಂದು ಊರಿನಲ್ಲಿಯೇ ೪೦೦೦ ಜನರೂ, ಇತ್ಯಾದಿ ಉತ್ತರ ಹಿಂದೂಸ್ಥಾನದ ಹಲವು ಕಡೆಗಳಲ್ಲಿ ಒಂದು ಆಧುನಿಕ ಮಹಾ ಯುದ್ಧವು ಮಾಡಬಹುದಾದ ಅನಾಹುತಗಳನ್ನೂ, ನಷ್ಟವನ್ನೂ, ಮರಣಗಳನ್ನೂ ಈ ಭೂಕಂಪವು ಮಾಡಿರುತ್ತದೆ. ಮನೆಗಳೂ ಕಟ್ಟೋಣಗಳೂ ಉರುಳಿದುವು. ನೆಲಗಳೊಡೆದುವು; ಜನರು ಸಾವಿಗೆ ತುತ್ತಾದರು. ಪ್ರಕೃತಿಯ ಕಾಠಿಣ್ಯವೂ ಎಂದೂ ಅರಿವಿಲ್ಲದಷ್ಟು ಇಂದು ಜನತೆಯ ಮೇಲೇರಿ ಬಂದಿತು. ಹಿಂದೊಮ್ಮೆ ಜಾಪಾನಿನಲ್ಲಿ ಜ್ವಾಲಾಮುಖಿಗಳ ಉದ್ರೇಕದಿಂದ ಭೂಕಂಪವಾಗಿ ನಷ್ಟವುಂಟಾಗಿದ್ದಿತು. ಆದರೆ, ಈ ಭೂಕಂಪವು ಅದಕ್ಕಿಂತಲೂ ಅಧಿಕವಾಗಿದ್ದಿತೆನ್ನಲು ಸಂದೇಹವಿಲ್ಲ.

ಉತ್ತರ ಹಿಂದೂಸ್ಥಾನದ ಜನರಿಗೆ ಒದಗಿದ ಈ ತೀವ್ರ ಸಂಕಷ್ಟದ ಕಡೆಗೆ ಇಡೀ ಹಿಂದೂಸ್ಥಾನದ ಜನರ ಸಹಾನುಭೂತಿಯು ಉಂಟಾಗಿಯುದೆನ್ನುವುದು ಸಂತೋಷಕರ. ಬಾಬು ರಾಜೇಂದ್ರ ಪ್ರಸಾದರು ಈ ಜನರ ಸಹಾಯದ ಬಗ್ಗೆ ಸಹಾಯ ನಿಧಿಯನ್ನು ತೆರೆದು, ಈಗಾಗಲೇ ಎಂಟೂವರೆ ಲಕ್ಷ ರೂಪಾಯಿಯನ್ನು ಸೇರಿಸಿದ್ದಾರೆ. ಹಾಗೆಯೇ ವೈಸರಾಯರ ಭೂಕಂಪ ನಿಧಿಯು ಹಲವು ಲಕ್ಷಗಳನ್ನು ಸೇರಿಸಿದೆ. ಆದರೆ ನಿಜವಾದ ನಷ್ಟವು ಲಕ್ಷಗಟ್ಟಲೆಯಿಂದ ಲೆಕ್ಕ ಮಾಡಲಿಕ್ಕಾಗುವುದಿಲ್ಲ. ಎಷ್ಟೋ ಜನರು ಮನೆಮಾರುಗಳನ್ನು ಕಳಕೊಂಡಿದ್ದಾರೆ; ಎಷ್ಟೋ ಸ್ಥಳಗಳು ವಿರೂಪ ಹೊಂದಿವೆ; ಎಷ್ಟೋ ಸಂಸ್ಥೆಗಳು ಬಿದ್ದು ಹೋಗಿವೆ. ಇವುಗಳನ್ನೆಲ್ಲಾ ಪೂರ್ವದ ಸ್ಥಿತಿಯಲ್ಲಿ ಅಲ್ಲವಾದರೂ, ಅಸ್ತಿತ್ವಕ್ಕೆ ಅನುಕೂಲವಾಗುವಂತೆ ಅವುಗಳಿಗೆ ಸಹಾಯ ಮಾಡುವುದು ಅವಶ್ಯವಾಗಿದೆ.

ಭೂಕಂಪವು ಒಂದೇ ಜನತೆಗೆ ಸಂಕಷ್ಟಗಳನ್ನೊದಗಿಸಿದುದಲ್ಲ. ಭೂಕಂಪದಲ್ಲಿ ಮನೆಗಳುರುಳಿ ಅಡಿಗೆ ಬಿದ್ದು ಸತ್ತವರಲ್ಲದೆ ಬಾಕಿ ಉಳಿದವರು ಹೊರಗಿನ ಮೈದಾನಿನಲ್ಲಿಯಾದರೂ ಬದುಕುತ್ತೇವೆಂದು ಆಕಾಶದ ಆಶ್ರಯಕ್ಕೆ ಬಂದಿರುವಾಗ, ಆಕಾಶವೂ ಆ ದುರ್ದೈವಿಗಳ ಮೇಲೆ ಮುನಿದಂತೆ ಕಾಣುತ್ತಿದೆ-ಪ್ರಚಂಡವಾದ ಮಳೆಯೂ, ಸಹಿಸಲಾರದ ಚಳಿಯೂ ಉಳಿದವರನ್ನು ಬಾಧಿಸಿ, ಈ ಮೂಲಕವೂ ಹಲವರು ಹತರಾಗಿದ್ದಾರೆ. ಬದುಕು ಬಾಳನ್ನು ಕಳಕೊಂಡವರು ಉಪವಾಸದ ಬಾಯಿಗೆ ಬಿದ್ದಿದ್ದಾರೆ. ಆದ್ದುದರಿಂದ ಈ ದುರ್ಭಾಗಿಗಳಿಗೆ ಅನ್ನದಾನವೂ ಆಶ್ರಯದಾನವೂ ಈಗ ಅತ್ಯಂತ ಅಗತ್ಯವಿರುವುದರಿಂದ ಆ ಬಗ್ಗೆಯೇ ಕೋಟ್ಯಾವಧಿ ಐವೇಜು ಬೇಕಾಗಿರುತ್ತದೆ.

ಹೊರದೇಶಗಳು ಹಿಂದೂಸ್ಥಾನದ ಈ ದುರ್ಘಟನೆಯ ಬಗ್ಗೆ ಸಹಾನುಭೂತಿಯನ್ನು ತೋರಿಸಿವೆ. ಲಂಡನಿನಲ್ಲಿಯೂ ಪ್ಯಾರಿಸ್‌ನಲ್ಲಿಯೂ ಸಹಾಯ ನಿಧಿಯನ್ನು ಏರ್ಪಡಿಸಿದ್ದಾರೆ. ಅಮೇರಿಕದಲ್ಲಿಯೂ ಸಹಾಯ ನಿಧಿಯು ಏರ್ಪಾಡಾಗಿಯುದೆ. ನಮ್ಮ ದೇಶದ ಜನರು ಉದಾರರಾಗಿ, ತಾವು ಭೂಕಂಪಕ್ಕೆ ತುತ್ತಾಗದೆ ಉಳಿದ ಅದೃಷ್ಟಶಾಲಿಗಳಾಗಿದ್ದುದರಿಂದ ಮುಂದೆ ಬಂದಲ್ಲಿ, ಹೊರದೇಶದವರೂ ನಮ್ಮ ಉತ್ಸಾಹವನ್ನು ನೋಡಿ, ಸಂಕಟದಲ್ಲಿರುವ ಆ ಜನರಿಗೆ ತುಂಬಾ ಸಹಾಯವನ್ನು ಮಾಡದೆ ಇರಲಾರರು. ಆದುದರಿಂದ ಪ್ರತಿ ಕಡೆಯಿಂದಲೂ ಸಹಾಯ ನಿಧಿಯು ಕೂಡಿಸಲ್ಪಟ್ಟು ನಿರಾಶ್ರಿತ ಜನರಿಗೆ ಸಹಾಯವನ್ನು ಕಳುಹಿಸುವುದು ಆವಶ್ಯಕವಿದೆ.

ಈ ಭೂಕಂಪದ ವಿಷಯವಾಗಿ ಇನ್ನು ಒಂದು ಮಾತು ಹೇಳಲಿದೆ. ಭೂಕಂಪವು ಯಾವ ಪಾಪ ಕೃತ್ಯದ ಕಾರಣದಿಂದ ಉಂಟಾಯಿತು? ಎಂದು ದೇವಭಕ್ತರು ಹುಡುಕುವರು. ದೇವರ ಕೃತ್ಯಗಳು ಅಗಾಧವಾದುವು-ಅವುಗಳ ಕಾರಣವನ್ನು ಮಾನವನು ಹುಡುಕಲಾರನು. ಭೂಕಂಪವಾಯಿತು; ಪ್ರಕೃತಿಯು ಪ್ರಕ್ಷುಬ್ಧಳಾದಳು; ಅದು ಏಕಾಯಿತೆಂದು ಭೂಗರ್ಭ ಶೋಧಕರು ಹುಡುಕಬಹುದೇ ಹೊರತು ಮತಸ್ಥಾಪಕರು ಹುಡುಕುವುದರಲ್ಲಿ ಅರ್ಥವಿರುವುದಿಲ್ಲ.

ಮಹಾತ್ಮಾಜೀಯವರು ಕೂಡಾ ಪಾಪನ್ವೇಷಣಕ್ಕೆ ಹೋದುದು ವಿಷಾದಕರವಿದೆ. "ನೀವೆಲ್ಲಾ ದೇವರನ್ನು ನಂಬುವವರು. ಜನರಿಗೆ ಸಂಕಟಗಳು ಅವರ ಪಾಪದಿಂದ ಉಂಟಾಗುತ್ತಿವೆ ಎಂದು ನಮ್ಮ ಹಿರಿಯರು ಕಲಿಸಿದ್ದಾರೆ. + + + + . ಈಗಿನ ಅಂತಹ ಪಾಪವೇನು ಎಂದು ನಾನು ನನ್ನನ್ನೇ ಕೇಳಿಕೊಂಡಾಗ, ಆ ಪಾಪವು ಅಸ್ಪೃಶ್ಯತೆಯೆಂದೇ ನನಗೆ ಕಾಣುತ್ತಿದೆ" ಎಂದು ಮಹಾತ್ಮಾಜೀಯವರು ಹೇಳುತ್ತಾರೆ. ಪ್ರತಿಯಾಗಿ "ಅಸ್ಪೃಶ್ಯತೆಯು ದೇವರಿಂದಾದುದು; ಅದನ್ನು ನಿವಾರಿಸಲಿಕ್ಕೆ ಮಹಾತ್ಮಾಜೀಯವರು ಹೊರಟಿದ್ದಾರೆ; ದೇವರಿಗೆ ಆ ಕಾರಣದಿಂದ ಕೋಪ ಬಂದು ಭೂಕಂಪವನ್ನು ಉಂಟುಮಾಡಿದ್ದಾನೆ. ಅದಲ್ಲವಾದರೆ ಈ ಅಸ್ಪೃಶ್ಯತೆಯ ಚಳವಳದ ಮೊದಲೇ ಭೂಕಂಪ ಯಾಕೆ ಆಗಿಲ್ಲ?" ಎಂದು ಸನಾತನಿಗಳು ಹೇಳುತ್ತಾರೆ. ನಿಜವಾಗಿ ಆಲೋಚಿಸಿದರೆ, ಸನಾತನಿಗಳ ಊಹೆಯಾದರೂ ಸಕಾರಣವೆನ್ನಬಹುದು, ಮಹಾತ್ಮಾಜೀಯವರ ಊಹೆಯು ಸಕಾರಣವೆನ್ನಲಾಗುವುದಿಲ್ಲ.

ಮಹಾತ್ಮಾಜೀಯವರಂತಹರೇ ಈ ತರದ ಗೊಡ್ಡು ಪಾಪದ ರೂಪಗಳನ್ನು ರಚಿಸಿ, ಜನತೆಯಲ್ಲಿ ಅಜ್ಞಾನದ ಪ್ರಸಾರವನ್ನುಂಟುಮಾಡಲು ಯತ್ನಿಸುವುದು ತೀರಾ ಖಂಡನೀಯವಿದೆ. ಅಸ್ಪೃಶ್ಯತೆಯಿಂದ ಭೂಕಂಪ ಬರುವುದಾದರೆ ಅದು ದಕ್ಷಿಣ ಹಿಂದೂಸ್ಥಾನಕ್ಕೆ ಮೊದಲು ಬರಬೇಕಿತ್ತು. ಅಲ್ಲದೆ ಮಹಾತ್ಮಾಜೀಯವರ ತರ್ಕವನ್ನು ಮನ್ನಿಸುವುದಾದರೆ ಸನಾತನಿಗಳ ತರ್ಕವು ತೀರಾ ಸಮಂಜಸವಾದುದು. ಊಹೆಯಿಂದ ದೇವರ ಮನೋಗತವನ್ನು ಹುಡುಕುವಷ್ಟು ಅಜ್ಞಾನದ ಕೆಲಸವು ಬೇರೊಂದಿಲ್ಲ. ಭೂಕಂಪವು ಬಂತು; ಜನತೆಯು ಸಂಕಟಗಳಿಗೀಡಾದರು; ಪಾಪದ ಊಹಾಪೋಹದಿಂದ ಅವರ ಸಂಕಟಗಳನ್ನು ಮತ್ತೂ ಹೆಚ್ಚಿಸದೆ ಇರುವ. ಜನತೆಯ ಸೇವೆಯೇ ದೇವರ ಸೇವೆ. ದೇವರು ವಿಶ್ವವನ್ನು ರಚಿಸಿದ್ದಾನೆ; ವಿಶ್ವದ ಸಂಚಲನೆಗೆ ಸೂತ್ರಗಳನ್ನೂ ರಚಿಸಿದ್ದಾನೆ. ಅವನು ಭಾವಹೀನನು; ಅವನಿಗೆ ಕೋಪವೂ ಇಲ್ಲ; ಸಂತೋಷವೂ ಇಲ್ಲ; ಅವನ ವಿಶ್ವವು ಅವನ ಸೂತ್ರಗಳಿಂದ ಚಲಿಸುತ್ತಿರುವಾಗ ಒಂದು ಸಮಯದಲ್ಲಿ ರಚನೆಯೂ ಒಂದು ಸಮಯದಲ್ಲಿ ಧ್ವಂಸವೂ ಆಗಬೇಕು. ರಚನೆಗೆ ತನ್ನ ಪುಣ್ಯವೆಂದೂ, ಧ್ವಂಸಕ್ಕೆ ತನ್ನ ಪಾಪವೆಂದೂ ಮನುಷ್ಯನು ರಚನೆ ಧ್ವಂಸಗಳ ಅಭಿಮಾನವನ್ನು ತಾಳುವುದು ಅವನ ಜಂಭವಷ್ಟೇ ಅಲ್ಲದೆ ಅವನ ಯಾವ ಕೃತ್ಯಕ್ಕೂ ಆ ವಿಶಾಲ ಅಧಿಕಾರವಿಲ್ಲ.

++ ++

ವರ್ತಮಾನ ಸಂಗ್ರಹ.

ಬಾಪಟ್ಲಾದಲ್ಲಿ ಒಬ್ಬ ಹುಡುಗನನ್ನು ಚಿತೆಗೇರಿಸಲಿದ್ದಾಗ ಅವನ ದೇಹವು ಸ್ವಲ್ಪ ಕಂಪಿಸಿತು. ಪರೀಕ್ಷಿಸಲಾಗಿ, ಹುಡುಗನು ಜೀವದಲ್ಲಿದ್ದನೆಂದು ತಿಳಿದು ಬಂತು.

ಕರ್ನಾಟಕ ದೇಶದ ನಕ್ಷತ್ರಕ್ಕೆ ಕೇತುವೇಧ ಗ್ರಹವೇಧ ಮೊದಲಾದ ದೋಷಗಳು ಇಲ್ಲದಿರುವುದರಿಂದ ಇಲ್ಲಿ ಭೂಕಂಪವಾಗಲಾರದೆಂದು ಮೈಸೂರು ಮಹಾರಾಜಾ ಸಂಸ್ಕೃತ ಮಹಾ ಪಾಠಶಾಲೆಯ ಶ್ರೀ ಕರೂರು ಶೇಷಾಚಾರ್ಯರು ಹೇಳುತ್ತಾರೆ.

ಮುಂಬಾಯಿ ಕ್ರೊನಿಕಲ್, ಮುಂಬಾಯಿ ಸಮಾಚಾರ ಮತ್ತು ಸೆಂಟಿನೆಲ್ ಪತ್ರಿಕೆಗಳ ಮೂಲಕವಾಗಿ ಇಷ್ಟರ ವರೆಗೆ ೨೪೦೦೦ ರೂಪಾಯಿಗಳು ಭೂಕಂಪ ಸಹಾಯ ನಿಧಿಗಾಗಿ ಶೇಖರಿಸಲ್ಪಟ್ಟು ರವಾನಿಸಲ್ಪಟ್ಟಿವೆ.

ಮಹಾತ್ಮಾ ಗಾಂಧಿಯವರು ವಿದೇಶಗಳಿಗೆ ಮನವಿ ಮಾಡಿ ಭೂಕಂಪ ನಿಧಿಗಾಗಿ ಬೇಡಿಕೊಳ್ಳಬೇಕೆಂದು ಬಾಬು ರಾಜೇಂದ್ರ ಪ್ರಸಾದರು ಗಾಂಧೀಜೀಯವರಿಗೆ ತಂತಿ ಕಳುಹಿಸಿರುವರು.

ಭೂಕಂಪ ಸಹಾಯ ನಿಧಿಯಾಗಿ ಕಲ್ಕತ್ತ ಮೇಯರರು ಶೇಖರಿಸಿದ ಹಣವು ಒಟ್ಟು ರೂ. ೨,೩೧,೬೦–೬–೫ ಆಗಿದೆ.

ಡಾ। ಶೇರ್‌ವುಡ್ ಎಂಬವರು "ಭೂಕಂಪದಿಂದ ಪ್ರದೇಶಗಳಲ್ಲಿ ಪುನಃ ಅಲ್ಲಿನ ಜನರ ವರ್ಣಾಶ್ರಮ ಧರ್ಮಗಳ ಪರಿಹಾರಕ್ಕಾಗಿ ಸಹಾಯ ಮಾಡದವರು ದೈವ ವಿರೋಧಿಗಳಾದಂತೆಯೇ ಸರಿ ಎಂದು ಅಭಿಪ್ರಾಯಪಟ್ಟಿರುವರು.

ಲಂಡನಿನಲ್ಲಿ ಸ್ಕಾಟ್ ದಳಪತಿಯಾದ ಲೋರ್ಡ್ ಬೆಡನ್ ಪವೆಲರವರು ಅಸ್ವಸ್ಥರಾಗಿರುವರು. ಡಾಕ್ಟರರ ಅಭಿಪ್ರಾಯದಂತೆ ಅವರು ಅಪಾಯದಿಂದ ಇನ್ನೂ ದೂರವಾಗಿಲ್ಲವೆಂದು ತಿಳಿದು ಬಂದಿದೆ.

ಲಾಹೋರಿನಲ್ಲಿ ಫೆಬ್ರವರಿ ೧ಕ್ಕೆ ಬಿಡುಗಡೆ ಹೊಂದಲಿರುವ ಸರ್ದಾರ್ ಸರ್ದೂಲಸಿಂಗರನ್ನು ತಾ. ೨೦ನೆ ದಿನ ಅನಿರೀಕ್ಷಿತವಾಗಿ ಬಿಡುಗಡೆ ಮಾಡಿದರು.

ಡೆಟಿನ್ಯೂ ಕೈದಿಗಳಾದ ೬೭ ಮಂದಿ ವಿದ್ಯಾರ್ಥಿಗಳನ್ನು, ಅವರು ಕಲ್ಕತ್ತ ಯುನಿವರ್ಸಿಟಿ ಪರೀಕ್ಷೆಗಳಿಗೆ ಕಾಲೇಜ್ ವಿದ್ಯಾರ್ಥಿಗಳೆಂದೆಣಿಸದೆ ಕುಳಿತುಕೊಳ್ಳಬಹುದೆಂದು ಅಲ್ಲಿಯ ಸಿನೆಟ್ ಒಪ್ಪಿಕೊಂಡಿದೆ.

ರಷ್ಯ, ಅಮೇರಿಕಾ, ಬೆಲ್ಜಿಯಮ್, ಸ್ವಿಸ್, ಜಾಪಾನಿಯ ಸರಕಾರಗಳು ತಮ್ಮ ವಿಮಾನ ಬಲವನ್ನು ಹೆಚ್ಚಿಸುತ್ತಿರುವಂತೆ ನಾವೂ ಮಾಡುವೆವೆಂದು ಪ್ರಧಾನ ಮಂತ್ರಿಯವರಾದ ಮೆಕ್ಡೊನಾಲ್ಡರ ಭಾಷಣ.

ಹೆನ್ರಿಫೋರ್ಡರ ಸಹೋದರರಾದ ವಿಲಿಯಮ್ ಫೋರ್ಡರು ೮೩ ಸಾವಿರ ಪೌಂಡು ಸಾಲಕ್ಕೆ ಗುರಿಯಾಗಿ ದಿವಾಳಿ ಅರ್ಜಿ ದಾಖಲು ಮಾಡಿದ್ದಾರೆ.

ಎಲ್ಗಿನ್ ರಿವರ್‌ನಲ್ಲಿ ಒಂದು ಹೊಗೆ ಹಡಗವು ಮುದ್ದಿನ ಸಿಡಿತಕ್ಕೆ ಗುರಿಯಾಗಿ ೧೭೫ ಮಂದಿ ಜನರು ಮೃತರಾದರು.

ಇಂಗ್ಲೆಂಡಿನಲ್ಲಿ ಕಳೆದ ವಾರ ಎಲ್ಲೆಲ್ಲೂ ಮಂಜು ಮುಸುಕಿ ವಾಹನಗಳ ಚಲನೆಗೆ ಬಾಧಕವಾಯಿತು. ನೂರಾರು ಜನರು ಮೃತರಾದರು.

ಅಮೃತಸರದಲ್ಲಿ ನಾರಾಯಣಸಿಂಗ್ ಎಂಬ ಸಾಧುವರ್ಯರು ಒಬ್ಬ ಬಾಲಕಿಯನ್ನು ಎತ್ತಿಕೊಂಡು ಹೋಗಿ, ಸಿಕ್ಕಿ ಬಿದ್ದು ಕಾರಾವಾಸ ಶಿಕ್ಷೆಯಾಗಿ, ಸಾಧುಕುಲಕ್ಕೆ ಗೌರವಪ್ರಾಯ(?)ರಾದರು.

ಅಹ್ಮದಾಬಾದಿನ ಸನಾತನಿಗಳು ದೇವಸ್ಥಾನ ಪ್ರವೇಶ ಬಿಲ್ಲಿಗೆ ವಿರುದ್ಧ ಠರಾವನ್ನು ಮಾಡಿ ಕಲೆಕ್ಟರರನ್ನು ಭೇಟಿ ಮಾಡಿ ಕೊಟ್ಟುಬಿಟ್ಟುಕೊಂಡರು.

ಅಹ್ಮದಾಬಾದಿನಲ್ಲಿ ಶ್ರೀ ಕಾಕಾ ಕಾಲೇಲಕರರನ್ನು ದಸ್ತಗಿರಿ ಮಾಡಿ ಬಿಟ್ಟುಕೊಳಿದಿರುವರು.

ಮಾಳವ ಮೇಳದಲ್ಲಿ ಒಬ್ಬಳು ಸ್ತ್ರೀಯು ತನ್ನ ಮಗುವನ್ನು ವಿಧಿ ಪ್ರಕಾರ ನೀರಿಗೆ ೫ ಸಲ ಮುಳುಗಿಸಿ ತೆಗೆದಾಗ ಅದು ಮೃತವಾಗಿದ್ದಿತು.

ಅಂಬಾಲಾ ಕೆಂಟೋನ್‌ಮೆಂಟಿನಲ್ಲಿ ಒಬ್ಬ ಸ್ತ್ರೀಯು ಎರಡು ತಲೆ, ಎರಡು ಮುಖ, ನಾಲ್ಕು ಕೈ, ಒಂದು ಹೊಟ್ಟೆ ಮತ್ತು ಒಂದು ಎದೆಯುಳ್ಳ ಮಗುವನ್ನು ಹಡೆದಳು. ಮಗುವು ತೀರಿಕೊಂಡಿತು.

ಬಿಹಾರ ಎಂಬಲ್ಲಿ ಭೂಕಂಪವಾದಾಗ ಒಬ್ಬ ಉಪಾಧ್ಯಾಯಿನಿಯು ತನ್ನ ಕ್ಲಾಸಿನ ಹುಡುಗಿಯರನ್ನು ಬಹು ಸಾಹಸಪೂರ್ವಕವಾಗಿ ರಕ್ಷಿಸಿ ಅಧಿಕಾರಿಗಳ ಮೆಚ್ಚುಗೆಗೆ ಪಾತ್ರಳಾಗಿರುವಳು.

ಶ್ರೀ ಅಣೆಯವರನ್ನೂ ಅವರ ಬಿಡುಗಡೆ ಅವಧಿಯ ಮೊದಲೇ ನಾಗಪುರ ಸೆಂಟ್ರಲ್ ಜೈಲಿನಿಂದ ತಾ. ೨೫ಕ್ಕೆ ಬಿಡುಗಡೆ ಮಾಡಿದರು. ಒಂದು ತಿಂಗಳ ಮೊದಲೇ ಬಿಡಲು ಕಾರಣವೇನೆಂದು ಅವರಿಗೂ ತಿಳಿಯದು.

ಜಲಂಧರದಲ್ಲಿ ಪತಿಗೆ ತಿಳಿಯದೆ ಪತ್ನಿಯು ತನ್ನನ್ನು ದುರ್ಮಾರ್ಗಕ್ಕೆಳೆಯುವುದನ್ನು ಕಂಡು ಪತಿವ್ರತೆಯೊಬ್ಬಳು ಆತ್ಮಹತ್ಯೆ ಮಾಡಿಕೊಂಡಳು.

ನ್ಯೂಡಿಲ್ಲಿಯಲ್ಲಿ ವೈನ್‌ನ ಅಂಗಡಿಯಲ್ಲಿ ಪಿಕೆಟಿಂಗ್ ನಡೆಸಿದ ಒಬ್ಬ ಯುವಕನನ್ನು ಮೂರು ತಿಂಗಳ ಕಾರಾವಾಸಕ್ಕೆ ಗುರಿ ಮಾಡಿದರು.

ಅಪಾಯಕರ ವಿಷ ಮದ್ದುಗಳನ್ನು ಪಾರ್ಸಲ್ ಆಗಿ ಕಳುಹಿಸಿದುದಕ್ಕಾಗಿ ಕಲ್ಕತ್ತದ ಗಾರ್ಡನರ್ ಎಂಬ ಔಷಧಿ ಮಾರಾಟಗಾರನು ಶಿಕ್ಷೆಗೊಳಗಾಗಿರುವನು.

ಟಿಬೆಟಿನ ಅಧಿಪತಿಗಳಾದ ದಲಾಯಿ ಲಾಮಾ ಎಂಬವರು ಡಿಸೆಂಬರ ತಾ. ೧೭ರಲ್ಲಿ ಮೃತರಾಗಿ ತಾನು ಇನ್ನೊಂದು ಜನ್ಮದಲ್ಲಿ ಅದೇ ದೇಶಕ್ಕೆ ಬರುವೆನೆಂದಿರುವರು, ಜನರು ಅವರ ಅವತಾರವನ್ನು ನಿರೀಕ್ಷಿಸಿ ಪ್ರಾರ್ಥಿಸುತ್ತಿರುವರು.

ವೈಸರಾಯರ ಭೂಕಂಪ ಸಹಾಯ ಫಂಡಿನಿಂದ ೩ ಲಕ್ಷ ರೂಪಾಯಿಗಳು ಬಿಹಾರ್ ಗವರ್ನರರಿಗೆ ಕಳುಹಿಸಲ್ಪಟ್ಟಿವೆ.

ಬಿಹಾರ್‌ನವರ ಸಹಾಯಾರ್ಥವಾಗಿ ಲಂಡನ್ ಮೇಯರರು ಜನರೊಡನೆ ಅರಿಕೆ ಮಾಡಿ ಒಂದು ಫಂಡನ್ನು ತೆರೆದಿರುವರು.

—, ಸರಕಾರದ ಪ್ರಕಟಣೆಯಂತೆ ಪಾಟ್ನಾದಲ್ಲಿ ೧೩೪, ಗಯದಲ್ಲಿ ೩೪, ಶಹಬಾದ್‌ನಲ್ಲಿ ೧೬, ಮುಜಾಫರ್ ಪುರದಲ್ಲಿ ೧೫೩೫, ಚಂಪರನ್‌ನಲ್ಲಿ ೪೩೪, ಸರನ್‌ನಲ್ಲಿ ೧೬೭, ದರ್ಭಾಂಗದಲ್ಲಿ ೧೮೦೭, ಭಾಗಲಪುರದಲ್ಲಿ ೧೧೧, ಮೊಂಘೀರ್‌ದಲ್ಲಿ ೧೩೧೮, ಪರ್ಣಿಯಾದಲ್ಲಿ ೨, ಒಟ್ಟು ೬೦೮೦ ಜನರು ಮೃತರಾದರೆಂದು ಗೊತ್ತಾಗಿದೆ.

ಚಿಟ್ಟಗೋಂಗಿನಲ್ಲಿ ಸ್ಫೋಟನವಾದ ಬೊಂಬಿನ ಸಂಬಂಧವಾಗಿ ೧೫ ಮಂದಿ ವಿದ್ಯಾರ್ಥಿಗಳನ್ನೂ ಒಬ್ಬ ಮಾಸ್ತರರನ್ನೂ ಕೈದು ಮಾಡಿ ಠಾಣೆಗೆ ಒಯ್ದಿರುತ್ತಾರೆ.

ಮೀರತ್ತಿನಲ್ಲಿ ಜುಗಾರಿಗಾರರನ್ನು ಹಿಡಿಯುವುದಕ್ಕಾಗಿ ಹೋದ ಪೊ. ಡಿ. ಸುಪರಿಂಟೆಂಡೆಂಟರನ್ನು ಜನರು ಹಿಡಿದು ಆಸ್ಪತ್ರೆಗೆ ಕಳುಹಿಸಿರುವರು.

ಪಾಟ್ನಾದ ಫುಲ್‌ವಾರಿ ಶರೀಫ್ ಎಂಬಲ್ಲಿ ಭೂಕಂಪವಾಗಿ ಬಿದ್ದ ಮುಸ್ಲಿಮ ಮಸೀದಿಯೊಳಗೊಂದು ಪುಸ್ತಕವು ದೊರೆತಿದೆ ೧೮೩೩ರಲ್ಲಿ ಬಿಹಾರಿನಲ್ಲಿ ಅಸಾಧರಣ ಕಠಿಣತೆಯ ಭೂಕಂಪವಾಗಿ ಜನಧನವು ನಾಶವಾದ ಕತೆಯನ್ನು ಅದು ಹೇಳುತ್ತದೆ

ಅಜ್ಮೀರದಲ್ಲಿ ಪೆಟ್ರೋಲ್ ಟಾಂಕಿಗೆ ಬೆಂಕಿ ಬಿದ್ದು, ಬಳಿಯಿದ್ದ ಮೋಟರ್ ಕಾರ್ ಸುಟ್ಟು ಭಸ್ಮವಾಯಿತು ಹತ್ತಿರ ಹೋದ ಒಬ್ಬ ಒಬ್ಬ ವಿದ್ಯಾರ್ಥಿಯೂ ಸುಟ್ಟುಕೊಂಡನು

ದಕ್ಷಿಣ ಕನ್ನಡ.

ಕಳೆದ ವಾರ ಮಾಚನ್ನು ಯಾನೆ ಮಹಾಲಕ್ಷ್ಮಿಯಮ್ಮನ ನೋಟೀಸು ಪ್ರಕಟಣೆಯ ೧೯ನೇ ಪಂಕ್ತಿಯಲ್ಲಿ 'ತಯಾರಿಸಿರುತ್ತಾನಾಗಿ' ಎಂಬುದನ್ನು "ತಯಾರಿಸುತ್ತಾನಾಗಿ" ಎಂದು ಓದಿಕೊಳ್ಳಬೇಕು.

ಮಂಗಳೂರು: - ಮಹಾತ್ಮಾಗಾಂಧಿಯವರು ದಕ್ಷಿಣ ಕನ್ನಡವನ್ನು ಸಂದರ್ಶಿಸುವ ವಿಷಯದಲ್ಲಿ ದ. ಕ. ಹರಿಜನ ಸೇವಾಸಮಿತಿಯ ಪರವಾಗಿ ಯಾರಾದರೊಬ್ಬರು ಬಂದು ಈಗ ಕೂನೂರಲ್ಲಿ ವಿಶ್ರಾಂತಿ ತೆಗೆದುಕೊಳ್ಳುತ್ತಿರುವಾಗ ಗಾಂಧಿಯವರೊಡನೆ ಮಾತಾಡಬೇಕೆಂದು ಶ್ರೀ ಠಕ್ಕರರಿಂದ ಕಳೆದ ಮಂಗಳವಾರ ತಂತಿಯೊಂದು ಬಂದಿರುವುದು ಮೊನ್ನೆ ಬೆಳಗ್ಗಿನ ಮೈಲಿನಲ್ಲಿ ಶ್ರೀ ಕೋಟಣ್ಣ ಭಂಡಾರಿಗಳು ಕುನೂರಿಗೆ ಹೋಗಿರುವರು ಗಾಂಧೀಜಿಯವರು ದಕ್ಷಿಣ ಕನ್ನಡವನ್ನು ಸಂದರ್ಶಿಸುವ ಸಂಭವವಿರುವುದು

ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರರ ಒಂದು ಜನರಲ್ ಬೋರ್ಡ ಮೀಟಿಂಗು ಫೆಬ್ರವರಿ ತಾ ೧೯ನೇ ದಿನ ೧೦ ಗಂಟೆಗೆ ಆಫೀಸಿನಲ್ಲಿ ಜರಗಿ, ಫೆಬ್ರವರಿ ೫ನೇ ತಾರೀಕಿನೊಳಗೆ ಬಂದ ೧೯೩೪-೩೫ರ ಬಜೆಟ್ ಮೊದಲಾದುವು ತರ್ಕಿಸಲ್ಪಡುವುವು

ಮೃತನನ್ನು ಇನ್‌ಷ್ಯೂರ್ ಮಾಡಿ ಬೊಂಬೇ ಪ್ರಸಿಡೆನ್ಸಿ ಲೈಫ್ ಇನ್‌ಷ್ಯೂರೆನ್ಸ್ ಕಂಪೆನಿಯಿಂದ ರೂ ೨೦೦೦ ಪಡೆಯುವ ವಂಚನೆ ನಡೆಸಿದ ಕಂಪೆನಿಯ ಏಜೆಂಟ್ ಜೆ ಜೆ ಫೆರ್ನಾಂಡೀಸರು, ಸದರಿ ಪೋಲಿಸಿಯ ಹಕ್ಕು ಪಡಕೊಂಡ ಲಕ್ಷ್ಮಣರಾಯರ ಮೊದಲಾದ ೧೦ ಮಂದಿಯ ಮೇಲೆ ಮಂಗಳೂರು ಡಿವಿಜನಲ್ ಆಫೀಸರರಲ್ಲಿ ಖಟ್ಲೆ ನಡೆದು ಆದ ಶಿಕ್ಷೆಯ ಕುರಿತು ಅಪೀಲು ನಡೆದು ಫೆರ್ನಾಂಡೀಸ್ ಮತ್ತು ಲಕ್ಷ್ಮಣರಾಯರ ಮೊದಲಿನ ೯ ತಿಂಗಳ ಶಿಕ್ಷೆ ಮತ್ತು ರೂ. ೧೦೦ ಜುಲುಮಾನೆಯು ಜಡ್ಜರಿಂದ ಸಮರ್ಥಿಸಲ್ಪಟ್ಟು ಉಳಿದವರನ್ನೆಲ್ಲಾ ಬಿಟ್ಟುಬಿಟ್ಟಿರುವರು

ದಕ್ಷಿಣ ಕನ್ನಡ ಜಿಲ್ಲಾ ಗೌಡ ವಿದ್ಯಾ ಸಂಘದ ವರ್ಷಾವಧಿ ಮಹಾಸಭೆಯನ್ನು ತಾ ೨೫-೨-೩೪ನೇ ಆದಿತ್ಯವಾರ ಅಪರಾಹ್ನ ಘಂಟೆ ೨ಕ್ಕೆ ಪುತ್ತೂರು ತಾಲೂಕು ಕಡಬ ಬೋರ್ಡು ಹಾಯರ್ ಎಲಿಮೆಂಟರಿ ಶಾಲೆಯ ವಠಾರದಲ್ಲಿ ಶ್ರೀಮಾನ್ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರ ಸಭಾಧ್ಯಕ್ಷತೆಯಲ್ಲಿ ಜರಗಿಸುವುದೆಂದು ನಿಶ್ಚಯಿಸಿರುತ್ತದೆ. ಮಹಾಸಭೆಯಲ್ಲಿ ಚರ್ಚಿಸಲಿಕ್ಕಿರುವ ವಿಷಯಗಳನ್ನು ತಾರೀಕು ೧೫-೨-೩೪ರೊಳಗೆ ಕಾರ್ಯದರ್ಶಿಯವರಿಗೆ ಬರೆಯಬೇಕಾಗಿ ವಿನಂತಿ ಇದೆ

ಮಂಗಳೂರು ಮ್ಯುನಿಸಿಪಾಲಿಟಿ.

ಇದರ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವುದೇನೆಂದರೆ — ೧೯೩೪ನೇ ಇಸವಿ ಎಪ್ರಿಲ್ ತಿಂಗಳ ತಾ ೧ರ ಆರಂಭವಾಯಿತು, ಡಿಸ್ಟ್ರಿಕ್ಟ್ ಮ್ಯುನಿಸಿಪಾಲಿಟಿಗಳ ೮೧ನೇ ಪ್ರಕರಣದ ಮೇರೆಗೆ ಈ ಕೆಳಗೆ ತೋರಿಸಲ್ಪಟ್ಟಂತೆ ಸ್ವತ್ತಿನ ತೆರಿಗೆಯು ಹೊರಿಸಲ್ಪಡುವುದು

೧ ಸರ್ವಸಾಧಾರಣ ಉದ್ದೇಶಗಳ ಬಗ್ಗೆ—(a) ಕೇವಲ ವ್ಯವಸಾಯದ ಉದ್ದೇಶಗಳಿಗಾಗಿಯೇ ಉಪಯೋಗಿಸಲ್ಪಡದ ಮತ್ತು ಕಟ್ಟಡಗಳಿಗೆ ಆವರಿಸಲ್ಪಡದ ಯಾ ಅವಕ್ಕೆ ನೆರೆಕರೆಯಾಗಿದ್ದು ಸೇರದ ಜಮೀನುಗಳ ಸಂಗತಿಯಲ್ಲಿ ಅರ್ಧ ವರ್ಷಕ್ಕೆ ೮೨೦೦ ಚದರ ಫೂಟಿಗೆ ಕಮ್ಮಿಯಾದರೆ ನಾಲ್ಕಾಣೆ, ಪ್ರತಿ ೮೦೦೦ ಚದರ ಫೂಟು ವಿಸ್ತೀರ್ಣ ಯಾ ಅದರ ಅಂಶಕ್ಕೆ ನಾಲ್ಕಾಣೆ (b) ಕೇವಲ ವ್ಯವಸಾಯದ ಬಗ್ಗೆ ಉಪಯೋಗಿಸಲ್ಪಡುವ ಜಮೀನುಗಳಿಗೆ ಅರ್ಧ ವರ್ಷಕ್ಕೆ ಸರಕಾರದವರು ಅಂಥಾ ಜಮೀನುಗಳಿಗೆ ಹೊರಿಸಿದ ವಾರ್ಷಿಕ ತೀರ್ವೆಯ ಶೇಕಡಾ ಇಪ್ಪತ್ತೈದರ ದರದಲ್ಲಿ (c) ಕಟ್ಟಡಗಳು ಅವುಗಳ ಸ್ಥಳ ಮತ್ತು ಅದರ ಉಪಭಾಗವಾಗಿ ಅನುಭೋಗಿಸಲ್ಪಡುವ ನೆರೆಯಲ್ಲಿರುವ ಇತರ ನಿವೇಶನಗಳ ಸಹಿತ ಮತ್ತು ಮೇಲೆ a ಮತ್ತು b ಪ್ರಕರಣದಲ್ಲಿ ಬಾರದ ಎಲ್ಲಾ ಜಮೀನು ವಗೈರೆಗೆ ಅರ್ಧ ವರ್ಷಕ್ಕೆ ಅವುಗಳ ವರ್ಷಾವಧಿ ಮೌಲ್ಯದ ಸೇಕಡಾ ಐದರ ದರದಲ್ಲಿ ೨ ಶುಚಿಪಡಿಸುವ ತೆರಿಗೆ ಅರ್ಧ ವರ್ಷಕ್ಕೆ—(a) ಮೇಲೆ ೧ a ಪ್ರಕರಣದಲ್ಲಿ ಸೂಚಿಸಿದ ಬಾಬತುಗಳಲ್ಲಿ ಸರ್ವಸಾಧಾರಣ ಉದ್ದೇಶದ ಬಗ್ಗೆ ನಿಶ್ಚಯ ಮಾಡಿದ ತೆರಿಗೆಯ ಎಂಟನೇ ಒಂದಂಶ. (b) ಮೇಲೆ ೧ b ಕಲಮಿನಲ್ಲಿ ನಮೂದಿಸಲ್ಪಟ್ಟ ಬಾಬತುಗಳಲ್ಲಿ ಸರಕಾರದವರು ಹೊರಿಸಿದ ವರ್ಷಾವಧಿ ತೆರಿಗೆಯ ಶೇಕಡಾ ಐದರಂತೆ (c) ಬಾಕಿ ಎಲ್ಲಾ ಸಂಗತಿಗಳಲ್ಲಿ ವಾರ್ಷಿಕ ಮೌಲ್ಯದ ಸೇಕಡಾ ಒಂದರಂತೆ ಮೇಲೆ ಕಾಣಿಸಿದ ತೆರಿಗೆಗಳ ವಿಷಯದಲ್ಲಿ ಯಾವುದಾದರೂ ಆಕ್ಷೇಪ ಯಾ ಸೂಚನೆಗಳು ಈ ನೋಟೀಸು ಪ್ರಕಾಶದ ೩೦ ದಿವಸಗಳೊಳಗೆ ತಲಪಿದ್ದಲ್ಲಿ ಆ ಛಪ್ಪುಗಳನ್ನು ಮ್ಯುನಿಸಿಪಲ್ ಕೌನ್ಸಿಲಿನವರು ಆಲೋಚಿಸುವರು ಎಂತ ಈ ಮೂಲಕ ತಿಳಿಸೋಣವಾಗುತ್ತದೆ ಎಂದು ಚೆಯರ್ಮೇನರು ತಿಳಿಸುತ್ತಾರೆ

ಶ್ರೀ ಗೋಕರ್ಣನಾಥ ಕ್ಷೇತ್ರದಲ್ಲಿ ನಾರಾಯಣ ಪರಮಹಂಸ ಹೊಸ್ಟೆಲಿನ ದಿನಾಚರಣೆಯು ಕಳೆದ ಆದಿತ್ಯವಾರ ರಾವ್ ಬಹದ್ದೂರ್ ಶ್ರೀ ಎನ್ ಎಸ್ ಸುವರ್ಣರ ಅಧ್ಯಕ್ಷತೆಯಲ್ಲಿ ವಿನೋದ ಕೂಟ, ನಾಟಕ ಭಾಷಣಗಳೊಡನೆ ಬಹು ವಿಜೃಂಭಣೆಯಿಂದ ನಡೆಯಿತು.

ತಾರೀಕು ೯-೨-೩೪ರಿಂದ ಮಹಾಲಕ್ಷ್ಮಿ ಸಿನಿಟೋನ್ ಕಂಪೆನಿಯವರ "ಪಂಜಾಬ್ ಕಿ ಪದ್ಮಿನಿ" ಎಂಬ ಮಾತಾಡುವ ಚಲಚಿತ್ರವನ್ನು ಪ್ರದರ್ಶಿಸಲಾಗುವುದು ಮಾಸ್ಟರ್ ಮೋಡಕ್ ಮತ್ತು ಮಿಸ್ ಜುಬೇದ ಮೊದಲಾದ ಸಿನೇಮ ಶಿರೋಮಣಿಗಳು ಅಭಿನಯಿಸಿರುವರು ಅನಂತರ ಹಂಚ್ ಬೇಕ್ ಒಫ್ ನೋಟ್ರಿಡೇಮ್ ಎಂಬ ಚಲಚಿತ್ರವು ಪ್ರದರ್ಶಿಸಲ್ಪಡುವುದು "ಕರ್ಮ" "ಸೀತಾ ಸ್ವಯಂವರ" "ಭಕ್ತ ರಾಮದಾಸ್" ಮೀರಾಬಾಯಿ ಮೊದಲಾದ ಚಿತ್ರಗಳು ಅತಿ ಬೇಗನೇ ಬರುತ್ತವೆ

ಮಂಗಳವಾರ ದಿನ ಇಲ್ಲಿಯ ಡಿಪ್ರೆಸ್ಡ್ ಕ್ಲಾಸಸ್ ಮಿಶನಿನಲ್ಲಿ ರಂಗರಾವ್ ಸ್ಮಾರಕ ದಿನವು ಭಜನೆ ಮೆರವಣಿಗೆಯಿಂದ ನಡೆಯಿತು ಮೂಲ್ಕಿಯ ಶ್ರೀ ಎಮ್ ಉಪೇಂದ್ರ ಪೈ—ಬಿ ಎ ಯವರು ಸುಮಧುರವಾಗಿ ಭಜನೆ ಮಾಡುತ್ತಾ ಹರಿಜನ ಬಂಧುಗಳನ್ನು ಮುನ್ನಡೆಸಿದರು.

ಮಂಗಳೂರಿನಿಂದ ಸೇಲಮಿಗೆ ಹೋಗಿರುವ ಗನ್‌ಬೋಟ್ ಜೇಕರ ಪ್ರದರ್ಶನದ ಕುರಿತೂ ಅವರ ಅಸ್ತಿತ್ವದ ಕುರಿತೂ ಏನೇನೋ ವಾರ್ತೆ ಹರಡಿದೆ

ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್ ಬೋರ್ಡು ಮೆಂಬರರ ಒಂದು ಸ್ಪೆಶಲ್ ಮೀಟಿಂಗು ಇದೇ ತಾ. ೧೪ನೇ ಬುಧವಾರ ಅವರ ಆಫೀಸಿನಲ್ಲಿ ಜರಗುವುದು.

ಕರಂಗಿಪೇಟೆ ಪುದು ಮಹಮ್ಮದನ್ ಬೋರ್ಡು ಶಾಲಾ ೧೯೩೪ನೇ ಇಸವಿಯ ವರ್ಧಂತಿ ಉತ್ಸವವು ಮ। ರಾ। ಜನಾಬ್ ಮೊಹಿದ್ದೀನ್ ಬಿನ್ ಅಹಮ್ಮದ್, ಇವರ ಅಧ್ಯಕ್ಷತೆಯಲ್ಲಿ ಇದೇ ತಾ. ೪-೨-೩೪ನೇ ಆದಿತ್ಯವಾರ ಮಧ್ಯಾಹ್ನ ಘಂಟೆ ೩ಕ್ಕೆ ಕರಂಗಿಪೇಟೆಯಲ್ಲಿ ಜರಗುವುದು

ಮಂಗಳೂರು ಶ್ರೀ ರಾಮಕೃಷ್ಣ ವಿದ್ಯಾರ್ಥಿಭವನದ ವಾರ್ಷಿಕೋತ್ಸವವು ಫೆಬ್ರವರಿ ತಾ ೧೧ನೇ ಆದಿತ್ಯವಾರ ಸಂಜೆ ೫ ಘಂಟೆಗೆ ನವಾಬ್ ಕೆ ಮುಹಮ್ಮದ್ ಸಾಹೇಬ್, ಎಮ್ ಎ (ಎಜುಕೇಶನಲ್ ಆಫೀಸರರು, ದಕ್ಷಿಣ ಕನ್ನಡ) ಇವರ ಅಧ್ಯಕ್ಷತೆಯಲ್ಲಿ ನಡೆಯಲಿರುವುದು

ಶ್ರೀ ಕೆ ಸಿ ಕೃಷ್ಣನ್ ನಾಯರರು ದಕ್ಷಿಣ ಕನ್ನಡದ ಸ್ಪೆಶಲ್ ಡಿಪ್ಯೂಟಿ ಕಲೆಕ್ಟರರಾಗಿ ವರ್ಗ ಹೊಂದಿರುತ್ತಾರೆ

ಜನವರಿ ತಾ. ೨೧ನೇ ಆದಿತ್ಯವಾರ ಬೆಳಗ್ಗೆ ಐತು ಎಂಬ ಮೇದೆಯೊಬ್ಬನ ಶವವು ಗದ್ದೆಕೇರಿಯ ಬಾವಿಯೊಂದರಲ್ಲಿ ದೊರೆತಿರುವುದು ಕಠಿಣ ವ್ಯಾಧಿಯ ನಿಮಿತ್ತ ಇವನು ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ತಿಳಿಯಬರುತ್ತದೆ

ಇಲ್ಲಿಯ ರಥಬೀದಿಯ ಸುಪ್ರಸಿದ್ಧ ವೃದ್ಧ ವ್ಯಾಪಾರಿಗಳಾದ ಶ್ರೀ ಎಲ್. ರಾಮರಾಯರು ಕಳೆದ ಸೋಮವಾರ ಪ್ರಾತಃಕಾಲ ಅಕಸ್ಮಾತ್ತಾಗಿ ಮೃತರಾಗಿರುವರೆಂಬುದನ್ನು ತಿಳಿಸಲು ವಿಷಾದಪಡುತ್ತದೆ. ಶ್ರೀಯುತರು ಗುಣಾಢ್ಯರೂ ಉದಾರಿಗಳೂ ಆಗಿದ್ದರು ಅವರ ಆತ್ಮಕ್ಕೆ ಶಾಂತಿಯಿರಲಿ!

ಉಡುಪಿ — ದಕ್ಷಿಣ ಕನ್ನಡ ಜಿಲ್ಲಾ ನೆರೆಹಾವಳಿ ನಿವಾರಣಾ ಕಮಿಟಿ ಉಡುಪಿ ಇದರಿಂದ ತಾತ್ಕಾಲಿಕವಾಗಿ ರೂ ೬೨೫ನ್ನು ಬಿಹಾರದಲ್ಲಿನ ಭೂಕಂಪ ಹಾವಳಿ ನಿವಾರಣೆಗಾಗಿ ಶ್ರೀ ಬಾಬುರಾಜೇಂದ್ರ ಪ್ರಸಾದರವರಿಗೆ ಕಳುಹಿಸೋಣಾದೆ ಅಲ್ಲದೆ ಇನ್ನೂ ಹೆಚ್ಚಿನ ದ್ರವ್ಯ ಸಹಾಯ ಮಾಡಲು ತಿರಿಗಿ ಯೋಚನೆ ಮಾಡುವುದೆಂದಿದೆ

ಸ್ಥಳೀಯ ಬೋರ್ಡು ಹೈಸ್ಕೂಲಿನ ಉಪಾಧ್ಯಾಯ ವಿದ್ಯಾರ್ಥಿ ವರ್ಗದವರೂ ಬಾರ್ ಎಸೋಸಿಯೇಶನ್ನಿನವರೂ ಹಣ ಸಂಚಯವನ್ನು ಈ ಬಗ್ಗೆ ಮಾಡುತ್ತಿರುವರಲ್ಲದೆ ಶ್ರೀ ಬಂಗಾಳ ಮಂಜುನಾಥ ನಾಯಕರವರು ಸ್ಥಳೀಯ ಮಹನೀಯರಿಂದ ಹುಂಡಿ ರೂಪದಿಂದ ಹಣವನ್ನು ಶೇಖರಿಸುತ್ತಿದ್ದಾರೆ ಇಲ್ಲಿ ಪರ್ಯಾಯ ಜಾತ್ರೆ ಸಂಬಂಧವಾಗಿ ಕ್ಯಾಂಪ್ ಮಾಡಿದ್ದ ಶ್ರೀ ಸದಾಶಿವರಾವ್ ಗರೋಡರೂ ಇಲ್ಲಿ ಕಡ್ಡಿ ಕೊನೇ ಆಟದಿಂದ ಉತ್ಪನ್ನವಾದುದರಲ್ಲಿ ರೂ ೪೩ನ್ನು ಪೈಸರಾಯ ನಿಧಿಗೆ ಸಹಾಯ ಕಳುಹಿಸಿರುವರಾಗಿಯೂ ತಿಳಿದು ಬರುತ್ತದೆ

ಶ್ರೀ ಚಂದ್ರಿಕಾ ನಾಟಕ ಮಂಡಳಿಯವರು ಇಲ್ಲಿಂದ ಮಂಗಳೂರಿಗೆ ತೆರಳುವ ಮೊದಲು ತಾ. ೨೦ನೆಗೆ ಆದದ ನಾಟಕ ವೇಳೆಗೆ ಉಡುಪಿ ಮಹಾಜನರು ಸದರಿ ಕಂಪೆನಿಗೆ ಪ್ರೋತ್ಸಾಹಕವಾಗಿ ಮೂರು ಪವನಿನ ಬಂಗಾರದ ಪದಕವೂ ಮಾಲಿಕರಾದ ಸಿ. ಎಮ್ ಪೀರ್ ರವರಿಗೆ ಅಭಿನಯ ಭೂಷಣ ಎಂಬ ಬಿರುದೂ ಮಾನಪತ್ರವೂ ಕೊಡಲಾದುವು ಇವರ ಸಂಸಾರ ನೌಕ ಹಾಗೂ ಷಾಜಹಾನ್ ನಾಟಕಗಳು ಮುಖ್ಯತಃ ಇಲ್ಲಿನವರಿಗೆ ಹೃದಯಂಗಮವಾದುವು ಅಲ್ಲದೆ ಇನ್ನೂ ಪ್ರಾ ಬಗೆಗಳಲ್ಲಿ ತೃಪ್ತಿಕರವಾದುದೇ ಇದಕ್ಕೆ ಕಾರಣವಾಗಿದೆ

ಪರ್ಯಾಯದ ಸಲುವಾಗಿ ಮುದ್ದಾಂ ಇಲ್ಲಿ ಕ್ಯಾಂಪ್ ಮಾಡಿದ್ದ ವಿನೋದಾವಳಿಗಳಲ್ಲೊಂದಾಗಿರುವ ಫನ್‌ಫೇರ್ ಕಾರ್ನಿವಲ್ ತಾ. ೩೧ಕ್ಕೆ ಕಡೇ ಪ್ರದರ್ಶನ ಮಾಡಿ ಮುಂದ ಕಣ್ಣನೂರಿಗೆ ತೆರಳುವವರಿದ್ದಾರೆ, ಇದರ ಮಟ್ಟಿಗೆ ಜುಗಾರಾಟದ ಹವ್ಯಾಸವು ಕಡಿಮೆಯಾಯಿತಾದರೂ, ರಥಬೀದಿಯಲ್ಲಿ ರಾತ್ರಿ ಹಗಲೆನ್ನದೆ ಜುಗಾರಿನ ವಿಧವಿಧದ ಆಟಗಳ ಕೊನೆಯೆಂದಾಗುವುದೋ? ಇದನ್ನು ಪ್ರತಿಬಂಧಿಸಲಾಗದೆ?

Karnataka Chemical and Pharmaceutical Works, Ltd, Udipi (South India)

ಕುಂಭಕೋಣದಲ್ಲಿಯೂ ಮಧುರೆಯಲ್ಲಿಯೂ ಮೈಸೂರಿನಲ್ಲಿಯೂ ಸುವರ್ಣ ಪದಕಗಳನ್ನು ಪಡೆದಿರುವ

ಕರ್ನಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದಕ್ಷಿಣ ಹಿಂದೂಸ್ಥಾನ).

ನಮ್ಮಲ್ಲಿ ಟಿಂಕ್ಚರ್, ವಗೈರೆ ಎಲ್ಲಾ ಎಲ್ಲೋಪತಿಕ್ ಔಷಧ ದ್ರವ್ಯಗಳೂ, ಆಯುರ್ವೇದಿಯ ಔಷಧಿಗಳೂ, ಟೊಯಿಲೆಟ್ ಸಾಮಗ್ರಿಗಳೂ, ಸಾಬೂನುಗಳೂ, ಫೌಂಟನ್ ಪೆನ್ ಶಾಯಿಗಳೂ ತಯಾರಿಸಲ್ಪಡುತ್ತವೆ

ದ್ರಾಕ್ಷಾಸವ, ಪ್ರಸೂತಿ ಸಂಜೀವನ, ನಿಯೋವಿಗರ್, ಸ್ನೋ, ಕ್ಷೀರಬಲಾ, ಕಾರ್ವೋಫ್ಲೋಜಿಸ್ಟಿನ್, ಯುಟೆರೀನಾ, ಇಂಕ್ಸ್

ಮೆನೆಜಿಂಗ್ ಡ್ಯರೆಕ್ಟರ್—ನೇರಕಟ್ಟಾಯ ಅಣ್ಣಪ್ಪ ಬಾಳಿಗ

ಹೆಡ್ ಆಫೀಸು ಉಡುಪಿ (ದಕ್ಷಿಣ ಹಿಂದೂಸ್ಥಾನ)

ಬ್ರೇಂಚ್ ಆಫೀಸು ದೇವಕರಣ ಮೆನ್ಶನ್ಸ್, ೪೮ ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ ನಂ ೨.

ಪಶ್ಚಿಮ ಕರಾವಳಿ ಮತ್ತು ಮೈಸೂರು ಪ್ರಾಂತ್ಯಗಳ ಪ್ರಾಮುಖ್ಯ ಏಜಂಟರು:—

ಕರ್ನಾಟಕ ಪ್ರೊಡಕ್ಟ್ಸ್ ಡಿಸ್ಟ್ರಿಬ್ಯೂಟಿಂಗ್ ಕಂಪೆನಿ, ಮಂಗಳೂರು.

ಮೂಲೆ ಮೂಲೆಯಿಂದ

ಕಾರ್ಕಳ:—ಇಲ್ಲಿಯ ದೊಡ್ಡ ಮನುಷ್ಯರಿಂದ ಕೂಡಿದ ಒಂದು ಕಮಿಟಿಯವರಿಂದ 'ಕುಕ್ಕುಂದೂರು ಶ್ರೀದುರ್ಗಾ ಹಾಯರ್ ಎಲಿಮೆಂಟರಿ ಶಾಲೆ'ಗಾಗಿ ಆರಂಭಿಸಿದ ಲೋಟ್ರಿಯ ಟಿಕೇಟುಗಳು ಮಾರಾಟಕ್ಕೆ ಸಿದ್ಧವಾಗಿವೆ. ಏಜಂಟರಿಗೆ ಧಾರಾಳ ಕಮಿಶನ್ ಇದೆ. ಮಹಾಜನರು ಪ್ರೋತ್ಸಾಹಿಸಬೇಕಾಗಿ ವಿನಂತಿ.

ಕಾರ್ಕಳ ಶಹರಿನ ಸರಹದ್ದಿನಲ್ಲಿರುವ ಗ್ರಾಮಗಳ ಬಡ ಮಕ್ಕಳ ವಿದ್ಯಾಭಿವೃದ್ಧಿಗಾಗಿ ಕಾರ್ಕಳ ತಾಲೂಕು ಬಚೇರಿಯ ಬಳಿ ಜೋಡುರಸ್ತೆ ಎಂಬಲ್ಲಿ ಈ ಮೇಲಿನ ಶಾಲೆಯು ಕ್ರಿ. ಶ 1911ರಿಂದ ನಡೆದು ಬರುತ್ತದೆ ಈ ಸಂಸ್ಥೆಯು ದಿನೇ ದಿನೇ ವೃದ್ಧಿ ಹೊಂದುತ್ತಾ ಈಗ 12 ಮಂದಿ ಉಪಾಧ್ಯಾಯರುಗಳಿಂದ 800 ಮಂದಿ ವಿದ್ಯಾರ್ಥಿಗಳು ವಿದ್ಯಾಭ್ಯಾಸವನ್ನು ಹೊಂದುತ್ತಲಿದ್ದಾರೆ. ಆದರೆ ಸರಕಾರದ ಈಗಿನ ರಿಟ್ರೆಂಚ್‌ಮೆಂಟು ಪ್ರಕಾರ ಈ ಕಡಿತವು ಹೆಚ್ಚಿನ ಮಟ್ಟಿಗೆ ವಿದ್ಯಾ ಸಂಸ್ಥೆಗಳಿಗೆನೇ ತಗಲಿದ್ದುದರಿಂದ, ಈ ಶಾಲಾ ಮೆನೇಜರರು ಇಂತಹ ದುಃಸ್ಥಿತಿಗಳಲ್ಲೂ ಶಾಲೆಯನ್ನು ಉತ್ತಮ ರೀತಿಯಲ್ಲಿ ನಡೆಸುವುದು ಶ್ರೇಯಸ್ಕರವಾಗಿದ್ದರೂ, ಹಣದ ಅಡಚಣೆಯಿಂದ ವಿದ್ಯಾಭ್ಯಾಸದ ಕ್ರಮವನ್ನು ಈಗಿನ ಕ್ರಮಗಳಿಗನುಸಾರವಾಗಿ ನಡೆಸುವುದು ಕಷ್ಟಕರವಾಗಿದೆ. ಆದುದರಿಂದ ಮಹಾಜನರ ಪ್ರೋತ್ಸಾಹ ನಿರೀಕ್ಷಣೆಯ ಮೇರೆಗೆ ಈ ಕಮಿಟಿಯವರಿಂದ ಈ ಶಾಲೆಯ ದ್ರವ್ಯಾನುಕೂಲದ ಬಗ್ಗೆ ಸದರಿ ಲೋಟ್ರಿಯನ್ನು ತೆರೆಯಲಾಗಿದೆ ಈ ಶಾಲೆಯಲ್ಲಿ ೬೦ ಮತ್ತು ಹಿಂದುಳಿದ ಜಾತಿಯ ಮಕ್ಕಳಿಗೆ, ಹೆಣ್ಣು ಮಕ್ಕಳಿಗೆ ಧರ್ಮಾರ್ಥ ವಿದ್ಯೆಯು ಕೊಡಲ್ಪಡುತ್ತದೆ. ಮಾತ್ರವಲ್ಲದೆ ಹಲವು ಸಂದರ್ಭಗಳಲ್ಲಿ ಬಡಮಕ್ಕಳ ಶಾಲಾ ಉಪಕರಣಗಳ ಖರ್ಚನ್ನು ಕೂಡಾ ಮೆನೇಜರರೇ ನೋಡಿಕೊಳ್ಳಬೇಕಾಗಿದೆ

ಪ್ರತಿ ಜಿಲ್ಲೆಯಿಂದ ಪ್ರತಿ ತಿಂಗಳು ಎಂಬಂತೆ ಸಾವಿರಾರು ರೂಪಾಯಿಗಳು ಗೋವಾ ಲೋಟ್ರಿಗೆ ರವಾನಿಸಲ್ಪಡುತ್ತದೆಂದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ ಇಂತಹ ಸ್ಥಿತಿಯಲ್ಲಿ ವಿದ್ಯಾಭ್ಯಾಸವೆಂಬ ಸದುದ್ದೇಶಕ್ಕೆ ವಿನಿಯೋಗಿಸಲ್ಪಡುವ ಈ ಲೋಟ್ರಿಯಲ್ಲಿ ಮಹಾಜನರು ತುಂಬಾ ಸಹಕಾರಿಗಳಾಗಬೇಕೆಂದು ಅಪೇಕ್ಷಿಸುತ್ತೇವೆ ಅದಲ್ಲದೆ ಈ ಲೋಟ್ರಿಗೆ ಸಹಾಯ ಮಾಡಲಿಚ್ಛಿಸುವವರು ತಮ್ಮ ಭಾಗ್ಯೋದಯವನ್ನು ಮಾತ್ರ ನಿರೀಕ್ಷಿಸುವುದಲ್ಲದೆ ಅವರು ಕೊಡಬಹುದಾದ ಒಂದೇ ಒಂಟಣೆಯಲ್ಲಿ ಕೂಡಾ ಕೆಲವು ಅಂಶವು ನಮ್ಮ ದೇಶದ ಬಡಮಕ್ಕಳ ವಿದ್ಯಾರ್ಜನೆಗೋಸ್ಕರ ವಿನಿಯೋಗಿಸಲ್ಪಡುವುದೆಂದು ಊಹಿಸಬಹುದು

ಇವೇ ಮೊದಲಾದ ಹಲವು ವಿಚಾರಗಳನ್ನು ಪರಿಶೀಲಿಸಿ ಈ ಲೋಟ್ರಿಯ ಕಮಿಟಿಯವರು ಮಹಾ ಜನರ ಪ್ರೋತ್ಸಾಹವನ್ನು ಅಪೇಕ್ಷಿಸಿ ಶಾಲಾ ಶ್ರೇಯೋಭಿವೃದ್ಧಿಗಾಗಿ ಈ ಸದುದ್ದೇಶದಿಂದ ಈ ಲೋಟ್ರಿಯನ್ನು ಆರಂಭಿಸಿದ್ದಾಗಿದೆ

ಕುಕ್ಕುಂದೂರು—ಕಾರ್ಕಳದಲ್ಲಿ ಜರಗಿದ ವರ್ಗದಾರರ ಪರಿಷತ್ತಿಗೆ ಅಧ್ಯಕ್ಷರಾಗಿ ದಯಮಾಡಿಸಿದ್ದ ಶ್ರೀಮಾನ್ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರೂ ಶ್ರೀ ಕೆ ಆರ್ ಕಾರಂತರವರೂ, ಶ್ರೀ ಕಾರ್ಕಳ ನಾಗಣ್ಣ ಹೆಗ್ಗಡೆಯವರೂ, ಮತ್ತು ವಕೀಲ ಜಿನರಾಜ ಹೆಗ್ಗಡೆಯವರೂ, ಇಲ್ಲಿಯ ಶ್ರೀದುರ್ಗಾ ಹಾಯರ್ ಎಲಿಮೆಂಟರಿ ಶಾಲಾ ಮೆನೆಜರ ಪಂಡಿತ ಕೆ ನಾರಾಯಣರಾಯರಿಂದ ಆಮಂತ್ರಿಸಲ್ಪಟ್ಟು ಶಾಲೆಯನ್ನು ಸಂದರ್ಶಿಸಿದುದಲ್ಲದೆ, ಶ್ರೀ ಧರ್ಮಸ್ಥಳ ಹೆಗ್ಗಡೆಯವರು ಶಾಲೆಗೆ ರೂ ೨೫-೦-೦ನ್ನು ದಾನವಾಗಿ ಇತ್ತರು ಇವರು ಈ ಎರಡು ವರ್ಷಗಳ ಹಿಂದೊಮ್ಮೆ ರೂ ೨೫-೦-೦ನ್ನು ಈ ಶಾಲೆಗೆ ಕೊಟ್ಟಿದ್ದರು ಆರ್ಥಿಕ ದುರವಸ್ಥೆಯಲ್ಲಿರುವ ಈ ಶಾಲೆಗೆ ಧನಸಹಾಯ ಮಾಡಿದ ಶ್ರೀ ಹೆಗ್ಗಡೆಯವರಿಗೆ ಅನಂತ ಧನ್ಯವಾದಗಳು ಮತ್ತು ಪರಿಷದರ್ಥವಾಗಿ ದಯಮಾಡಿಸಿದ ಈ ಮಹನೀಯರುಗಳು ಬಡ ಶಾಲೆಯನ್ನು ಸಂದರ್ಶಿಸಲು ತಮ್ಮ ಅಮೂಲ್ಯವಾದ ಸಮಯವನ್ನು ವಿನಿಯೋಗಿಸಿದುದಕ್ಕಾಗಿ ಹೃತ್ಪೂರ್ವಕ ವಂದನೆಗಳು ಎಂದು ತಿಳಿಸಲಾಗಿದೆ

ದಿ ಸೌತ್ ಕೆನರಾ ಸ್ಪೋರ್ಟಿಂಗ್ ಎಸೋಸಿಯೇಶನ್ ಕಪ್, ಮುಂಬಾಯಿ

ಈ ಮೇಲಿನ ಸಂಸ್ಥೆಯ ನೇತೃತ್ವದಲ್ಲಿ ಜರಗುತ್ತಲಿದ್ದ ಫೂಟ್‌ಬೋಲ್ ಕಪ್ ಪಂದ್ಯಾಟವು ಕಳೆದ ಒಕ್ಟೋಬರ್ ತಿಂಗಳ ತಾರೀಕು ೨೦ಕ್ಕೆ ಪ್ರಾರಂಭವಾಗಿ ತಾ ೨೧-೧-೩೪ರಲ್ಲು ಕೊನೆಗೊಂಡಿತು ಪಂದ್ಯಾಟಕ್ಕೆ ಒಟ್ಟಾರೆ ೧೮ ಪಂಗಡಗಳು ಸೇರಿದ್ದುವು. ಕೊನೆಯ ಅಂದರೆ ಫೈನಲ್ ಆಟವು ಮೊಗವೀರ ಸ್ಪೋರ್ಟ್ಸ್ ಕ್ಲಬ್ "ಎ" ಮತ್ತು ಕೆನರಾ ಯಂಗ್ ಫೂಟ್ ಬೋಲರ್ಸ್ "ಎ" ಪಂಗಡದವರೊಳಗೆ ನಡೆಯಿತಲ್ಲದೆ ಇತ್ತಂಡದವರೂ ಬಹಳ ಸಾಹಸದಿಂದಲೂ ವಿಶೇಷ ಕೌಶಲ್ಯತೆಯಿಂದಲೂ ಒಬ್ಬರನ್ನೊಬ್ಬರು ಪ್ರತಿಭಟಿಸಿ ಜಯಾಪಜಯ ಇತ್ಯರ್ಥವಾಗದೆ ಇರದೆ, ಒಂದೆರಡು ಸಾವಿರಕ್ಕೆ ಮಿಕ್ಕ ನೆರೆದಿದ್ದ ಪ್ರೇಕ್ಷಕರನ್ನು ಸಂತೋಷಗೊಳಿಸುವ ತೆರದಲ್ಲಿ ಆಡಿದರು. ಆದರೆ ಸೋಲು ಗೆಲವೆಂಬುದು ರೂಢಿಯಲ್ಲಿದ್ದಂತೆ, ಅಂದಿನ ಜಯಲಕ್ಷ್ಮಿಯು ಮೊಗವೀರ ಸ್ಪೋರ್ಟ್ಸ್ ಕ್ಲಬ್ಬಿನ ಬೆನ್ನಟ್ಟಿದ ಕಾರಣ ಪೆನಲ್ಟಿಯ ಒಂದು ಗೋಲಿನಿಂದ ಕೆನರಾ ಯಂಗ್ ಫೂಟ್ ಬೋಲರ್ಸನವರು ಪರಾಜಯವನ್ನು ಹೊಂದಿದರು. ಅಂತೆಯೇ ಜಯಶೀಲರಾದ ಮೊಗವೀರ ಸ್ಪೋರ್ಟ್ಸ್ ಕ್ಲಬ್ಬಿನವರಿಗೆ ಬೆಳ್ಳಿಯ ಕಪ್ಪನ್ನೂ ಕೆನರಾ ಯಂಗ್ ಫೂಟ್ ಬೋಲರ್ಸನವರಿಗೆ ರಜತ ಪದಕವನ್ನೂ ಓಟದ ಸ್ಪರ್ಧೆಯಲ್ಲಿ ಒಂದನೆ ಮತ್ತು ಎರಡನೆಯದಾಗಿ ಬಂದ ಕೆನರಾ ಯಂಗ್ ಫೂಟ್ ಬೋಲರ್ಸ್‌ನ ಎಮ್. ಆರ್. ಶ್ರೀಯನರಿಗೂ ಶ್ರೀಕೃಷ್ಣ ಫೂಟ್‌ಬೋಲ್ ಕ್ಲಬ್ಬಿನ ಕೆ. ಜನಾರ್ದನರಿಗೂ ಅನುಕ್ರಮವಾಗಿ ರಜತ ಪದಕಗಳನ್ನು ಅಂದಿನ ಸಮಾರಂಭಕ್ಕೆ ಅಧ್ಯಕ್ಷರಾಗಿದ್ದ ರಾವ್ ಬಹದ್ದೂರ್ ರಾಮಸ್ವಾಮಿ ಜಿ ಪಿ (Dy Ex Engineer P W.D. Bombay)ಯವರಿಂದ ಕೊಡಲ್ಪಟ್ಟಿತು

ಕಾರ್ಕಳ ತಾಲೂಕು ಬೋರ್ಡು ಸಭೆ:—ಇದು ಇದೇ ಕಳೆದ ತಾ ೨೦ಕ್ಕೆ ಪೂರ್ವಾಹ್ನ ಘಂಟೆ ೧೧-೩೦ಕ್ಕೆ ಕೂಡಿತು ಕುಂಟಾಡಿಯಲ್ಲಿ ಎಲಿಮೆಂಟರಿ ಶಾಲೆ ಕಟ್ಟಿಸುವುದಕ್ಕೆ ಶ್ರೀ ಸ್ಥಳೀಕ ಕೃಷ್ಣಯ್ಯ ಹೆಗ್ಗಡೆಯವರು ತನ್ನ ಹಕ್ಕಿಗೆ ಒಳಪಟ್ಟ ಸ್ಥಳವನ್ನು ಧರ್ಮಾರ್ಥ ಕೊಟ್ಟುದನ್ನು ಬೋರ್ಡಿನವರು ಆದರದಿಂದ ಸ್ವೀಕರಿಸಿದರು ಕಾರ್ಕಳ-ನಿಟ್ಟೆ ರಸ್ತೆಯಲ್ಲಿರುವ ಕಾಬೆಟ್ಟು ಸಂಕದ ದುರಸ್ತಿಯು ಬೇಗನೆ ಆಗಬೇಕಿರುವುದರಿಂದ, ಟೆಂಡರ್ನನ್ನು ತರಿಸುವುದು ಬೇಡವೆಂದಾಯಿತು. ಎಲಿಮೆಂಟರಿ ಶಾಲೆಗಳನ್ನು ಒಂದುಗೂಡಿಸುವ ಸಂದರ್ಭದಲ್ಲೂ ವ್ಯತ್ಯಾಸ ಹೊಂದದ ೮ ಶಾಲೆಗಳ ದುರಸ್ತಿ ಅಥವಾ ಸುಧಾರಿಸುವ ಕೆಲಸವನ್ನು ಕೈಕೊಂಡಿತೆ? ಎಂಬ ಡಿಸ್ಟ್ರಿಕ್ಟ ಇನ್ಸ್‌ಪೆಕ್ಟರರ ಪ್ರಶ್ನೆಗೆ ಹಣದ ಅಭಾವದಿಂದ ಕೆಲಸ ನಡೆಸಲು ಸಾಧ್ಯವಿಲ್ಲವೆಂದೇ ತೀರ್ಮಾನಾಯಿತು. ಪುತ್ತಿಗೆಯಲ್ಲಿರುವ ಹುಡುಗಿಯರ ಶಾಲೆಯನ್ನು ಮುಚ್ಚಿ ಅದಕ್ಕೆ ತಗಲುತ್ತಿದ್ದ ವೆಚ್ಚದಿಂದ ಮಾರ್ನೆಯಲ್ಲೊಂದು ಹುಡುಗಿಯರ ಶಾಲೆಯನ್ನು ತೆರೆಯುವುದೆಂದಾಯಿತು ಬರುವ ವರ್ಷದ ಬಜೆಟನ್ನು ಸುಸೂತ್ರವಾಗಿ ತಯಾರಿಸುವುದಕ್ಕಾಗಿ ಮೂರು ಮಂದಿ ಸದಸ್ಯರ ಸಮಿತಿ ನೇಮಿಸಲ್ಪಟ್ಟಿತು

ಕಿದೂರು—ಇಲ್ಲಿಯ ಬೋರ್ಡು ಶಾಲೆಯಲ್ಲಿ ವಾರ್ಷಿಕ ವರ್ಧಂತ್ಯುತ್ಸವವನ್ನು ಜರಗಿಸುವ ವ್ಯವಸ್ಥೆಗಾಗಿ ಅಸಾಧಾರಣ ಮಹಾಸಭೆಯು ಕಳೆದ ತಾ ೨೦-೧-೩೪ನೆಯ ಶನಿವಾರ ಅಪರಾಹ್ನ ಘಂಟೆ ೩ಕ್ಕೆ ಕಾಸರಗೋಡು ತಾ ಬೋ ಮೆಂಬರರಾದ ಶ್ರೀ ಜನಾಬ್ ಎಂ ಸಿ ಮಮ್ಮು ಸಾಹೇಬರ ಅಧ್ಯಕ್ಷತೆಯಲ್ಲಿ ಜರಗಿತು ವರ್ಧಂತ್ಯುತ್ಸವದ ವ್ಯವಸ್ಥೆಗಾಗಿ ೧೭ ಜನರಿರುವ ಒಂದು ಸಮಿತಿಯು ನಿರ್ಮಾಣವಾಯಿತು ಶ್ರೀ ಅಡಿಗಳ ಶಂಭಟ್ಟರು ಅಧ್ಯಕ್ಷರು, ಶ್ರೀ ಪಟೇಲ ಕೆ ತಿಮ್ಮಪ್ಪ ಭಂಡಾರಿಗಳು ಖಜಾಂಚಿಯರು, ಶ್ರೀ ಕೆ ಈಶ್ವರ ಭಟ್ಟರು, ಶ್ರೀ ಕೆ ಜನಾರ್ಧನ ಕಾರಂತರು ಇವರಿಬ್ಬರು ಕಾರ್ಯದರ್ಶಿಗಳು ಶ್ರೀ ಎಂ ಶಂಕರನಾರಾಯಣ ಭಟ್ಟರ ಗಾಯನ, ಅಧ್ಯಕ್ಷರ ಭಾಷಣಗಳಾದ ಮೇಲೆ ಸಭಾ ಮುಕ್ತಾಯವಾಯಿತು

ಶಂಕರನಾರಾಯಣ:—ಇಲ್ಲಿಯ ಶ್ರೀ ಶಂಕರನಾರಾಯಣ ದೇವಸ್ಥಾನದ ಮಹಾ ರಥೋತ್ಸವವು ತಾ ೮-೧-೩೪ರಿಂದ ಪ್ರಾರಂಭವಾಗಿ ತಾ ೧೭-೧-೩೪ಕ್ಕೆ ಮ ರಾ ಮುಕ್ತೇಸರ ಹಿರಿಯಣ ಮಹಾದೇವ ಹೊಳ್ಳರ ಆಡಳಿತೆಯಲ್ಲಿ ಅತಿ ವಿಜೃಂಭಣೆಯಿಂದ ಸಾಂಗವಾಗಿ ನೆರವೇರಿತು

ಇಲ್ಲಿಯ ರೇಂಜರಾಗಿದ್ದ ಮ ರಾ ಎ ರಾಮಹೆಬ್ಬಾರ್ ಇವರಿಗೆ ರಜೆ ಮಂಜೂರಾಗಿ ರಜಾಂತ್ಯದಲ್ಲಿ ಅವರು ರಿಟಾಯರ್ ಆಗುವವರಾಗಿರುವುದರಿಂದ ಇಲ್ಲಿಯ ಮಹಾಜನರು ಮಿತ್ರಭೋಜನಾದಿಗಳಿಂದಲೂ ಅವರ ಇಲಾಖೆಯವರು ಟೀಪಾರ್ಟಿಗಳಿಂದಲೂ ಅವರನ್ನು ಪಚರಿಸಿ ಕೃತಜ್ಞತಾ ಪೂರ್ವಕವಾದ ಧನ್ಯವಾದಗಳಿಂದ ಸನ್ಮಾನಿಸಿದರು

ಇಲ್ಲಿಯ ಸ್ಥಳೀಕ ಬೋರ್ಡು ಶಾಲೆಯ ಮಾಸ್ತರರಾದ ಶ್ರೀ ವೈ ಆನಂದರಾಯರು ಇದೇ ಶಾಲೆಯಲ್ಲಿಯೇ ಸುಮಾರು ೩೦ ವರುಷಗಳಿಂದಲೂ ಕೆಲಸ ಮಾಡಿ ದೇಹದ ಅನಾರೋಗ್ಯದ ನಿಮಿತ್ತ ರಜೆ ತೆಗೆದುಕೊಂಡು ರಜಾಂತ್ಯದಲ್ಲಿ ರಿಟಾಯರ್ ಆಗುವವರಾಗಿರುತ್ತಾರೆಂದು ತಿಳಿಯುತ್ತೇವೆ

ಉಡುಪಿ ತಾಲೂಕಿನ ರೈತರ ಎರಡನೆ ಪರಿಷತ್ತು

ಉಡುಪಿ ತಾಲೂಕಿನ ರೈತರ ಎರಡನೆ ಪರಿಷತ್ತು ಇದೇ ತಿಂಗಳ ತಾರೀಕು ೨೧ನೆಯ ಆದಿತ್ಯವಾರ ದಿವಸ ಉಡುಪಿಯ ಕಡೆ ಕೊಪ್ಪಲ ಮಠದ ಅಂಗಣದಲ್ಲಿ ಮ ರಾ. ರಾ. ಮುಲ್ಕಿ ರಾಮಕೃಷ್ಣ ಪೂಂಜರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು ತಾಲೂಕಿನ ಎಲ್ಲಾ ಭಾಗಗಳಿಂದಲೂ ಪ್ರತಿನಿಧಿಗಳು ಬಂದಿದ್ದರು. ಶ್ರೀಗಳಾದ ಬಿ. ಮಹಾಬಲ ಹೆಗ್ಗಡೆಯವರು, ಕೋಟಿ ರಾಮಕೃಷ್ಣ ಕಾರಂತರು, ಕೆ ಜಗನ್ನಾಥ ಬಲ್ಲಾಳ ಇವರಿಂದ ಬಂದ ತಂತಿ ಪತ್ರಗಳು ಓದಲ್ಪಟ್ಟುವು.

ಬೆಂಗಳೂರು

ತಾ. ೨೮ನೇ ದಿನ ೮ ಘಂಟೆಗೆ ಬೆಂಗಳೂರು ಶ್ರೀ ಕೃಷ್ಣರಾಜೇಂದ್ರ ಕರ್ನಾಟಕ ಸಾಹಿತ್ಯ ಪರಿಷನ್ಮಂದಿರದಲ್ಲಿ ಸಾಹಿತ್ಯೋತ್ಸವವು ನಡೆಯಿತು. ಶ್ರೀ ನವರತ್ನ ರಾಮರಾಯರ ಭಾಷಣ, ಶ್ರೀಮತಿ ತಂಗಮ್ಮನವರ ವೀಣಾವಾದನ, ಶ್ರೀಮತಿ ಸರೋಜಮ್ಮನವರ ಗಾಯನ ಇವುಗಳು ಬಹು ವಿಜೃಂಭಣೆಯಿಂದ ನಡೆದುವು.

ದೇಶೀಯ ವಿದ್ಯಾಶಾಲೆಯ ಹಿರಿಯ ತರುಣ ಸಂಘದ ವಾರ್ಷಿಕೋತ್ಸವವು ತಾ. ೧೧—೨—೩೪ನೇ ದಿನ ನಡೆಯುವುದು. ವಾರ್ಷಿಕ ಚಂದಾ ಹಣವಾದ ೮ ಆಣೆಗಳನ್ನು ತಮ್ಮ ವಿಳಾಸದೊಡನೆ ಕಳುಹಿಸಿ ಸದಸ್ಯರಾದ ಹಿರಿಯ ತರುಣರಿಗೆ ಮಾತ್ರ ಆಹ್ವಾನಗಳು ಕಳುಹಿಸಲ್ಪಡುವುವಲ್ಲದೆ ಅಂದಿನ ಕಾರ್ಯಕಲಾಪಗಳಲ್ಲಿ ಭಾಗ ದೊರೆಯುವುದೆಂದೂ, ಸದಸ್ಯರಾಗದೆ ಇರುವವರು ತಾ ೬—೨—೩೪ರೊಳಗೆ ತಮ್ಮ ವಿಳಾಸಗಳನ್ನು ರಿಜಿಸ್ಟರ್ ಮಾಡಿಸಿ ಸಂಘದ ಅಭಿವೃದ್ಧಿಗೆ ಸಹಾಯ ಮಾಡಬೇಕೆಂದೂ ಕಾರ್ಯದರ್ಶಿಗಳು ಕೋರುತ್ತಾರೆ.

ಶ್ರೀ ಸಿ ಕೆ. ವೆಂಕಟರಾಮಯ್ಯನವರ 'ತುರಾಯಿ' ಎಂಬ ಹೊಸ ಕಥೆಗಳ ಸಂಗ್ರಹವು ಈಗ ತಾನೇ ಪ್ರಕಟವಾಗಿದೆ. 'ಸತ್ಯಶೋಧನ ಪುಸ್ತಕ ಭಂಡಾರ'ದಲ್ಲಿ ದೊರೆಯುವುದು

ತಾ ೨—೨-೩೪ನೇ ದಿನ ಶ್ರೀ ಎಚ್. ಎನ್. ರಾಘವೇಂದ್ರಾಚಾರ್ಯರು ಬೆಂಗಳೂರು ಸೆಂಟ್ರಲ್ ಕಾಲೇಜು ಗಣಿತ ಶಾಸ್ತ್ರ ಭವನದಲ್ಲಿ 'ದೇವರು ಒಬ್ಬನೇ' ಎಂಬ ವಿಚಾರವಾಗಿ ವ್ಯಾಖ್ಯಾನ ಮಾಡಿದರು

ಬೆಂಗಳೂರು ನಗರದಿಂದ ನ್ಯಾಯ ವಿಧಾಯಕ ಸಭೆಗೆ ಶ್ರೀ ಬಿ ಕೆ ಗರುಡಾಚಾರ್ಯರೂ, ಶ್ರೀ ಎನ್. ಬಾಲ ಕೃಷ್ಣಯ್ಯನವರೂ ಬೆಂಗಳೂರು ಜಿಲ್ಲೆಯಿಂದ ಶ್ರೀ ವಿ. ವೆಂಕಟಪ್ಪನವರೂ ಉಮೇದುವಾರರಾಗಿ ನಿಂತಿರುವರು

ದೇವನಹಳ್ಳಿಯ ಪೌರಸಭಾ ಉಪಾಧ್ಯಕ್ಷ ಸ್ಥಾನಕ್ಕೆ ಚುನಾವಣೆಗಳು ನಡೆದು ಶ್ರೀ ವೈ ಕೆ ಚೆನ್ನ ವೀರಪ್ಪನವರು ೧೦ ಓಟುಗಳನ್ನು ಪಡೆದು ಜಯಶಾಲಿಗಳಾದರು.

ಮಾರ್ಚಿ ತಾ ೩ನೇ ದಿನ ನ್ಯಾಯ ವಿಧಾಯಕ ಸಭೆಗೂ, ಪ್ರಜಾ ಪ್ರತಿನಿಧಿ ಸಭೆಗೂ ಚುನಾವಣೆಗಳು ನಡೆಯುವುವು

ಬಸವನ ಗುಡಿಯಲ್ಲಿ ವಾಸವಾಗಿರುವ ರೆವಿನ್ಯೂ ಕಮಿಷನರ್ ಶ್ರೀ ಎನ್ ಮಾಧವರಾಯರ ಮನೆಗೆ ತಾ ೨೦ನೇ ದಿನ ಕಳ್ಳರು ನುಗ್ಗಿ ಅಪಾರ ಸಾಮಾನುಗಳನ್ನು ಅಪಹರಿಸಿರುವರು

ಬೆಂಗಳೂರು ನಗರದ ಮುಸ್ಲಿಮರು ತಾ ೨೦ನೇ ದಿನ ಒಂದು ಸಭೆ ನಡೆಸಿ ದಕ್ಷಿಣ ಭಾರತ ಮುಸ್ಲಿಂ ಸಮ್ಮೇಳನದ ೩ನೇ ಅಧಿವೇಶನವನ್ನು ಬೆಂಗಳೂರಲ್ಲಿ ನಡೆಸುವಂತೆ ಮಾಡಬೇಕೆಂದು ನಿಶ್ಚಯಿಸಿದ್ದಾರೆ ಇದಕ್ಕಾಗಲೇ ನವಾಬ್ ಗುಲಾಂ ಅಹಮ್ಮದ್ ಕಲಾಮಿಯವರ ಅಧ್ಯಕ್ಷತೆಯಲ್ಲಿ ಒಂದು ಸ್ವಾಗತ ಸಮಿತಿಯು ರಚನೆಯಾಗಿದೆ

ಲಂಡನಿನ ಎಂ ಸಿ ಸಿ ಆಟಗಾರರಿಗೂ ಮೈಸೂರಿನವರಿಗೂ, ಕ್ರಿಕೆಟ್ ಪಂದ್ಯಗಳು ನಡೆಯುವುದರಿಂದ ತಾ. ೨೯ನೇ ಸೋಮವಾರ ಎಲ್ಲ ಶಾಲೆ ಮತ್ತು ಕಚೇರಿಗಳಿಗೂ ಸರಕಾರದವರು ರಜೆ ಕೊಟ್ಟಿರುತ್ತಾರೆ.

ಮೈಸೂರು

ತಾ ೧—೨-೩೪ನೇ ದಿನ ಕೃಷ್ಣರಾಜ ಪೇಟೆ ತಾಲೂಕು ಅಕ್ಕಿ ಹೆಬ್ಬಾಳನಲ್ಲಿ ಶ್ರೀ ಲಕ್ಷ್ಮೀ ನರಸಿಂಹ ಸ್ವಾಮಿಯವರ ಮಹಾ ರಥೋತ್ಸವವು ನಡೆಯಿತು.

ಪೆರಿಯಾ ಪಟ್ಟಣದ ಸಬ್ ತಾಲೂಕು ಬೆಟ್ಟದ ಪುರದಲ್ಲಿ ಶ್ರೀ ಸಿದ್ಧ ಮಲ್ಲಿಕಾರ್ಜುನ ಸ್ವಾಮಿಯವರ ಮಹಾ ರಥೋತ್ಸವವು ತಾ ೧—೩—೩೪ನೇ ದಿನ ನಡೆಯುವುದು.

ಮೈಸೂರು ಜಿಲ್ಲಾ ಆದಿ ಕರ್ನಾಟಕ ಸಂಘದವರು ತಾ. ೩೦—೧—೧೯೩೪ನೇ ದಿನ ಮುಡುಕು ತೊರೆಯ ಶಾಸ್ತ್ರಿಯ ಕಾಲದಲ್ಲಿ ಆದಿಕರ್ನಾಟಕ ಸಮ್ಮೇಳನವನ್ನು ನಡೆಸಿದರು. ಶ್ರೀ ನಿರಂಜನ ರಾಜೆ ಅರಸಿನವರು ಅಧ್ಯಕ್ಷತೆ ವಹಿಸಿದ್ದರು.

ಬಾಪೂಜಿಯವರು ಮೈಸೂರಿಗೆ ಬಂದಾಗ್ಗೆ ಸೇವೆ ಸಲಿಸಿದ ಸ್ವಯಂಸೇವಕರಿಗಾಗಿ ತಾ. ೨೫ನೇ ದಿನ ಮೈಸೂರು ಕುಕ್ಕರಹಳ್ಳಿ ಕೆರೆ ಹತ್ತಿರ ಬೆಳದಿಂಗಳೂಟವೇರ್ಪಡಿಸಿದ್ದರು.

ತಾ. ೨೨-೧-೩೪ನೇ ದಿನ ರಂಗಾಚಾರ್ಲು ಸ್ಮಾರಕ ಭವನದಲ್ಲಿ ಶ್ರೀ ಪುರಂದರದಾಸರ ದಿನಾಚರಣೆಯು ಬಹು ವಿಜೃಂಭಣೆಯಿಂದ ನಡೆಯಿತು. ಬಿ. ನಾಗೇಶ್ವರ ರಾಯರು ಅಧ್ಯಕ್ಷರಾಗಿದ್ದರು. ಶ್ರೀ ಎಂ. ಎ. ನಾರಾಯಣಯ್ಯಂಗಾರರು ಪುರಂದರದಾಸರ ಜೀವನ ಚರಿತ್ರೆ ಮತ್ತು ಉಪದೇಶಗಳ ವಿಚಾರವಾಗಿ ವ್ಯಾಖ್ಯಾನ ಮಾಡಿದರು.

ಬಿಹಾರ್ ಮತ್ತು ಚಿತ್ತಗೊಂಗಿನಲ್ಲಿ ಪುನಃ ಭೂಕಂಪ!!!

ಕರಾಚಿ

ತಾ. ೨೯ನೇ ದಿನ ಇಲ್ಲಿ ಭೂಕರ ಬಿರುಗಾಳಿಯು ಸಾರ್ವತ್ರಿಕವಾಗಿ ಎಬ್ಬಿಕೊಂಡು ಕಂಬಿಯಲ್ಲಿ ಓಡುತ್ತಿದ್ದ ರೈಲ್ವೆಬಂಡಿಗಳನ್ನು ನಿಲ್ಲಿಸಿತು. ರೈಲ್ವೆ ಕಂಬಿಯಲ್ಲ ಉದ್ದಕ್ಕೂ ಧೂಳಿನಿಂದ ಮುಚ್ಚಲ್ಪಟ್ಟು ಬಂಡಿಗಳು ನಿಲ್ಲುವಂತಾಯಿತು. ಹೊಯಿಗೆಯನ್ನು ಅಗೆದು ತೆಗೆದ ಮೇಲೆ ಇನ್ನೊಂದು ಇಂಜಿನನ್ನು ಕಟ್ಟಿ ರೈಲನ್ನು ನಡೆಸಿದರು

ಸಿಂಧ್ ಇಂಡಿಯನ್ ಕ್ರೈಸ್ತರ ಸಂಘವು ಸಭೆ ಜರಗಿಸಿ ಕವುಗೆ ಸರ್ವೀಸ್‌ಗಳಲ್ಲಿ ಸಾಕಷ್ಟು ಪ್ರಾತಿನಿಧ್ಯಗಳನ್ನು ಸರಕಾರವು ಕೊಡಬೇಕಾಗಿಯೂ, ದಿವಾನ್ ಬಹದ್ದೂರ್ ರಾಮಸ್ವಾಮಿ ಮುದಲಿಯಾರರು ಆ ಬಗ್ಗೆ ಮಾಡುವ ಯತ್ನವು ಶ್ಲಾಘ್ಯವಿದೆಯೆಂದೂ ಠರಾವು ಮಾಡಿಕೊಂಡರು.

ಮೊಸ್ಕೊ.

ರಷ್ಯದ ನಾಯಕರಾದ ಸ್ಟಾಲಿನ್‌ನವರು ಒಂದು ಪ್ರಕಟಣೆಯನ್ನು ಮಾಡಿ, ಮಹಾಯುದ್ಧದ ಹಗೆತನವು ಇನ್ನೂ ಕುದಿಯುತ್ತಲಿದೆಯೆಂದೂ ಚೀನಾ ಜಪಾನುಗಳೊಳಗೆ ದಂಡಯಾತ್ರೆಯಾದಲ್ಲಿ ಇನ್ನೊಂದು ಯುದ್ಧವಾಗಲಿರುವುದಲ್ಲದೆ, ಮುಂದಕ್ಕೆ ಘೋರ ಯುದ್ಧವೊಂದು ನಡೆಯಲಿದೆಯೆಂದೂ ತಿಳಿಸಿದರು ಸೋವಿಯಟ್ ಸರಕಾರವೂ ಜಪಾನೂ ಶಾಂತಿ ಭಂಗದಿರಲು ಯತ್ನ ಮಾಡುವುವು ಎಂದು ಅವರ ಆಶ್ವಾಸನೆ.

ರಾವಲ್ಪಿಂಡಿ.

ಮೀನು ಹಿಡಿಯಲು ಉಪಯೋಗಿಸಿದ ಒಂದು ಭೂಭಾಗದ ಕುರಿತು ಇಲ್ಲಿ ಎರಡು ಪಕ್ಷಗಳೊಳಗೆ ಜಗಳವಾಗಿ ಇಬ್ಬರು ಕೊಲೆ ಮಾಡಲ್ಪಟ್ಟರು ಒಬ್ಬನನ್ನು ಗುಂಡಿಕ್ಕಿ ಕೊಂದರು ಆರು ಜನರು ಜಖಂಗೊಂಡರು ರಾಮಸ್ವಾಮಿ ಸಿಪಾಯಿ ಎಂಬವನನ್ನು ರಿವಾಲ್ವರಿನಿಂದ ಕೊಂದರು ಪೋಲೀಸರು ಕೂಡಲೇ ಓಡಿದರು!!!

ಮೊಂಘೀರ್

ಇಲ್ಲಿ ಭೂಕಂಪದಿಂದ ಬಿದ್ದ ಗೋಡೆಯಡಿಯಲ್ಲಿ ಒಬ್ಬಳು ಸ್ತ್ರೀಯು ೧೪ ದಿನಗಳ ತನಕವೂ ಜೀವದಿಂದಿದ್ದು ಸ್ಮೃತಿತಪ್ಪಿ ಮಲಗಿದ್ದಳು. ಅವಳನ್ನು ಕೂಡಲೇ ಆಸ್ಪತ್ರೆಗೊಯ್ದು ಉಪಚರಿಸಿದರೆಂದು ರಿಲೀಫ್ ಪ್ರಕಟಣಾ ಸಮಿತಿಯವರ ಪ್ರಕಟಣೆ.

ಮರಣವನ್ನು ಕಂಡ ಮನುಷ್ಯ

ಮುಜಫರಾಬಾದ ಎಂಬಲ್ಲಿ ಒಬ್ಬ ೩೦ ವರುಷ ಪ್ರಾಯದ ಮೋಟ್ಟೆಗಾರನು ಬಹಳ ಚಳಿಯ ಸಮಯ ಬಂಡಿಯೊಳಗೆ ಕುಳಿತು ಪಾರ ನಡೆಯುತ್ತಿದ್ದನು ಅವನ ಸಂಗಡ ಅವನ ಮಗನೂ ಇದ್ದನು ಸ್ವಲ್ಪ ಹೊತ್ತಿನ ಮೇಲೆ ಅವನು ತನ್ನ ಮಗನಿಗೆ "ನಾನು ಸಿಡಿಲು ಬಡಿದು ಸಾಯುವೆನು. ದೂರ ಹೋಗು" ಎಂದು ಹೇಳಹತ್ತಿದನು ಮಗನು ತಂದೆಯ ಹೇಳಿಕೆಯನ್ನು ನಂಬಲಾರದೆ, ಹಾಗೆಯೇ ಅವನ ಜೊತೆಯಲ್ಲಿಯೇ ಹೋದನು. ಮರಣ ಸಮೀಪಿಸಿತು ಮತ್ತೆ ತನ್ನ ಮಗನನ್ನು ಹೇಳಿ ದೂರ ಹೋಗಲಿಕ್ಕೆ ಒತ್ತಾಯ ಪಡಿಸಿದನು ಆಶ್ಚರ್ಯವಾಗಿಯೇ, ಫಡ್ ಫಡಲ್ ಎಂದು ಭೀಕರ ಶಬ್ದವಾಗಿ ಸಿಡಿಲು ಬಂದು ಮೋಟ್ಟೆಗಾರನಿಗೆ ಬಡಿಯಿತು, ಕೂಡಲೆ ಅವನು ಬಂಡಿಯಿಂದ ನೆಲಕ್ಕುರುಳಿಸಿದವನಾಗಿ ಮೂರ್ಛೆ ಹೊಂದಿದನು, ಅವನನ್ನು ಸಮೀಪದ ಒಂದು ಮನೆಯೊಳಗೆ ಎತ್ತಿಕೊಂಡೊಯ್ದು ಉಪಚರಿಸಿದರು ಅದರೇನು? ಆ ಮೋಟ್ಟೆಗಾರನು ತಿರುಗಿ ಬದುಕಲಿಲ್ಲ

~~ಮಾವಿನ ಮರದ ಸಂಗಡ ಮದುವೆ~~

ಹೋಂಕಾಂಗ್:—ನಾಲ್ಕು ಸಾರಿ ವೈಧವ್ಯವನ್ನು ಪ್ರಾಪ್ತಿಸಿ ಐನೆಯ ಸಲ ಒಬ್ಬ ೨೫ ವರ್ಷ ಪ್ರಾಯದ ತರುಣಿಯು ಒಂದು ೧೦೦ ವರ್ಷದ ಮುದಿ ಮಾವಿನ ಮರವನ್ನು ಮದುವೆಯಾದಳು, ಆಕೆಯ ಹೆಸರ್ ಮಿಸೆಸ್ ಲೀ ಎಂದು ಅವಳು ಇರುವುದು ಕ್ಯಾಂಟನ್ ಶಹರದ ಹತ್ತಿರ ಪೋಲೋ ಎಂಬೊಂದು ಹಳ್ಳಿಯಲ್ಲಿ ಲಗ್ನವಾದ ಮೇಲೆ ಸ್ವಲ್ಪ ದಿನಗಳಲ್ಲಿಯೇ ಆಕೆಯ ಗಂಡನು ಮರಣ ಹೊಂದುವನು. ಹೀಗೆ ೪ ಸಲ ಅನುಭವವನ್ನುಂಡ ಮೇಲೆ ತನ್ನ ನಷ್ಟ ಚರ್ಯವನ್ನು ತಪ್ಪಿಸುವುದಕ್ಕಾಗಿ ಒಬ್ಬ ಜ್ಯೋತಿಷಿಯನ್ನು ವಿಚಾರಿಸಿದಳು, ಆತನು ಐನೆಯ ಸಲ ಮದುವೆಯಾಗುವ ಮೊದಲು ಒಂದು ಮರದ ಸಂಗಡ ಮದುವೆ ಮಾಡಿಕೊಳ್ಳಬಹುದೆಂದು ಉಪಾಯವನ್ನು ಸೂಚಿಸಿದನು ಆತನ ಸಲಹೆಯ ಮೇರೆಗೆ ಆಕೆಯು ಒಂದು ಶುಭದಿನದ ಮೇಲೆ ಬಲು ವಿಜೃಂಭಣೆಯಿಂದ ಒಂದು ಮಾವಿನ ಮರದ ಸಂಗಡ ಮದುವೆಯಾದಳು.

ಏನು ಮಾಡಿದರೇನು? ವಿಧಿ ಬೆನ್ನು ಬಿಡಲಿಲ್ಲ ಸ್ವಲ್ಪ ದಿನಗಳೊಳಗಾಗಿಯೇ ಆ ಮಾವಿನ ಮರವೂ ಕೂಡ ಒಂದು ದೊಡ್ಡ ಬಿರುಗಾಳಿಯೊಳಕ್ಕೆ ಸಿಕ್ಕು ನೆಲಕ್ಕುರುಳಿತು. ಇಷ್ಟರಿಂದಲೂ ಆಕೆಯ ಸಂಕಷ್ಟಪರ್ಯವು ತೀರಲಿಲ್ಲ. ಈಗ ಸದ್ಯಕ್ಕೆ ಆ ಮಾವಿನ ಮರದ ಮಾಲೀಕನು ಆಕೆಯ ಮೇಲೆ ತನ್ನ ನಷ್ಟ ತುಂಬಿಕೊಡಬೇಕೆಂದು ಫಿರ್ಯಾದಿ ಮಾಡಿರುವನು ಅದು ಹೇಗಾದರೂ, ಮಾವಿನ ಮರವು ಕೂಡ ನೆಲಕ್ಕುರುಳಿದ ಮೇಲೆ ತನ್ನನ್ನು ಐನೇ ಸಲ ಮದುವೆಯಾಗಲು ಯಾರೂ ಒಪ್ಪಿಕೊಳ್ಳಲಿಕ್ಕಿಲ್ಲವೆಂದು ಇದೀಗ ಆಕೆಯು ಭಯ ಪಡುತ್ತಿರುವಳು.

ನ್ಯೂಡಿಲ್ಲಿ

ತಾ. ೨೬ನೇ ದಿನ ಕೆಲವು ಕಡೆಗಳಲ್ಲಿ ನಡೆದಂತೆ ಇಲ್ಲಿಯೂ "ಸ್ವಾತಂತ್ರ್ಯ ದಿನಾಚರಣೆ"ಗೆ ಯತ್ನವಾಯಿತು ಒಂದು ಮುದ್ರಾಲಯದಲ್ಲಿ ಪೋಲೀಸರು ಶೋಧ ನಡೆಸಿದರು ನಾಲ್ವರು ಪುರುಷರು ಮತ್ತು ಇಬ್ಬರು ಸ್ತ್ರೀಯರನ್ನು ಸೆರೆ ಹಿಡಿದು ಬಿಡುಗಡೆ ಮಾಡಿರುವರು

ಶ್ರೀ ದೇವದಾಸರು ನ್ಯೂಡಿಲ್ಲಿಯ ಅಧಿಕಾರಿಗಳ ಅಪ್ಪಣೆ ಪಡೆದು ಮದ್ರಾಸಿನಿಂದ ನ್ಯೂಡಿಲ್ಲಿಗೆ ಹೋಗಿ ಅಲ್ಲಿ ವಾಸಿಸಲನುಮಾಡಿರುವರು. "ಹಿಂದೂಸ್ಥಾನ್ ಟೈಮ್ಸ್ ಲಿಮಿಟೆಡ್" ಇದರ ಒಬ್ಬ ಡೈರೆಕ್ಟರರಾಗಿ ಅವರು ಆರಿಸಲ್ಪಟ್ಟಿರುವರು. ಈ ಕಂಪೆನಿಯ ಬೋರ್ಡ್ ಒಫ್ ಡೈರೆಕ್ಟರ್ಸ್ ಇದಕ್ಕೆ ಸೆಕ್ರೆಟರಿಯಾಗಿಯೂ ಅವರು ಕೆಲಸ ನೋಡುವರು

ವೈಸರಾಯ ರಿಲೀಫ್ ಫಂಡಿನಲ್ಲಿ ತಾ. ೨೮ರ ವರೆಗೆ ರೂ. ೪,೬೫,೦೦೦ ಪೌಂಡು ೧೧೬೩,ಡಾಲ್ಲರು ೧೦೦ ಗಳಾಗಿವೆ ಗೊಂಡಾಲ ಮಹಾರಾಜರು ಒಂದು ಲಕ್ಷ ರೂಪಾಯಿಗಳನ್ನು ಈ ಫಂಡಿಗೆ ಕೊಟ್ಟರು

ಬ್ರುನ್ಸ್‌ವಿಕ್

ಇಲ್ಲಿ ತಾ ೨೯ನೇ ದಿನ ಡಚ್ಚೆಸ್ ಒಫ್ ಯೋರ್ಕ್ ಹೋಗೆ ಹಡಗವು ಅಟ್ಲಾಂಟಿಕ ಸಾಗರದಲ್ಲಿ ಮುಂದರಿಯುತ್ತಿದ್ದಾಗ ಎಂದೂ ಕಾಣಲಾಗದ ಮೂರು ಘೋರ ತೆರೆಗಳು ಹಡಗದೊಳಗೆ ಹಾರಿ ೨೦ ಕ್ಕಿಂತಲೂ ಹೆಚ್ಚು ಜನರನ್ನು ಜಖಂಗೊಳಿಸಿತು ಸಮುದ್ರದೊಳ ಗುಂಟಾದ ಭೀಕರ ತಳಮಳವೇ ಈ ತೆರೆಗಳಿಗೆ ಕಾರಣವೆಂದು ಕಪ್ತಾನನ ಹೇಳಿಕೆ ೪೦೦ ಪೌಂಡುಗಳಷ್ಟು ಸಾಮಾನು ಹಾಳಾಗಿದೆ.

ಮದ್ರಾಸು

'ಹಿಂದೂ' ಪತ್ರಿಕೆಯ ಸಂಪಾದಕರಾದ ಶ್ರೀ ಎ. ರಂಗಸ್ವಾಮಿ ಅಯ್ಯಂಗಾರ್ಯರು ಅಸ್ವಸ್ಥದಿಂದಿರುವರು ಇಷ್ಟರ ತನಕವೂ ಸ್ವಸ್ಥವಾದ ಚಿಹ್ನೆಯಿರುವುದಿಲ್ಲ ಸ್ಥಿತಿಯು ಆಪಾದನಕವಾಗಿದೆ

ರಗ್ಬಿ

ಡಾ! ಫ್ರೀಕ್ ಎಂಬ ಬ್ರಿಟಿಷ ವಿಜ್ಞಾನಿಗಳೊಬ್ಬರು ಮುಂದಾಗುವ ಯುದ್ಧದಲ್ಲಿ ವಿಷ ಗಾಳಿಯ ಪ್ರಯೋಗವನ್ನು ಶೃದು ತಪ್ಪಿಮಾಗಲು ಎಡೆಯಿಲ್ಲ ಆದುದರಿಂದ ಜನರು ಭಯಪಡುವುದು ಅನಗತ್ಯ ಎಂದು ಹೇಳಿರುವರು

ಪಾಟ್ನಾ

ಮಹಾತ್ಮಾ ಗಾಂಧಿಯವರು ತನ್ನ ಹರಿಜನ ಸಂಚಾರವನ್ನು ಇಲ್ಲಿಗೆ ಕೊನೆಗಾಣಿಸಿ ಕೂಡಲೇ ಬಿಹಾರಿಗೆ ತೆರಳಿ ಭೂಕಂಪದಿಂದ ನೊಂದವರಿಗೆ ಸಹಾಯ ಮಾಡಲು ತೊಡಗಿದರಾಗದೇ ಎಂಬ ಪ್ರಶ್ನೆಯು ಅಲ್ಲಲ್ಲಿ ಹರಡಿಕೊಂಡಿದೆ ಮಹಾತ್ಮಾ ಗಾಂಧಿಯವರ ಹರಿಜನ ನಿಧಿಯ ಕೆಲ ದಂಶವನ್ನಾದರೂ ಬಿಹಾರಿನವರಿಗಾಗಿ ಉಪಯೋಗಿಸಿದರಾಗದೇ ಎಂಬ ಪ್ರಶ್ನೆಯೂ ಬಂದಿದೆ ಬಾಬು ರಾಜೇಂದ್ರ ಪ್ರಸಾದರು ಈ ಪ್ರಶ್ನೆಗೆ ಉತ್ತರವನ್ನು ಕೊಡುತ್ತಾ "ಒಂದು ಉದ್ದೇಶಕ್ಕಾಗಿ ಕೇಳಿಸಲ್ಪಟ್ಟ ನಿಧಿಯನ್ನು ಇನ್ನೊಂದು ಉದ್ದೇಶಕ್ಕಾಗಿ ವ್ಯಯ ಸಬೇಕೆಂದು. ನಾನೆನ್ನಲಾರೆ ಬಿಹಾರಿನವರು ಇತ್ತಲಾಗೆ ಕಷ್ಟಕ್ಕೊಳಗಾದರು, ಆದರೆ ಹರಿಜನರು ಎಷ್ಟೋ ಕಾಲಗಳಿಂದ ದಾರಿದ್ರ್ಯದಿಂದಿರುವರು ಹೀಗಿರುವಾಗ, ಅವರ ಉದ್ಧಾರವೂ ಆಗಬೇಕಾಗಿದೆ, ಗಾಂಧೀಜೀಯವರು ಬಿಹಾರಿನವರಿಗಾಗಿ ಮನವಿಗಳನ್ನು ಮಾಡುತ್ತಿರುವರು ಅದೇ ಸಾಕು" ಎಂದಿರುವರು

ಸಗಾಸಕೀ

ಇಲ್ಲಿ ತಾರೀಖು ೨೮ನೇ ದಿನ ಒಂದು ದೊಡ್ಡ ಹಾಯಿ ಹಡಗವು ಸಮುದ್ರದಲ್ಲಿ ಮುಳುಗಿ ೩೮೦ ಜನರು ಪ್ರಾಣ ಕಳೆದುಕೊಂಡರೆಂದು ಬೆಳ್ತವಿತಲಾಗಿದೆ ೩೦ ಮಂದಿಗಳು ರಕ್ಷಿಸಲ್ಪಟ್ಟಿರುವರು.

ಮೆಕ್ಸಿಕೋ

ಮೆಕ್ಸಿಕೋವಿನಲ್ಲಿ ತಾ ೨೬ರಲ್ಲಾದ ಭೂಕಂಪದಿಂದಾಗಿ ಇದೀ ನಗರವೇ ಜನರಿಂದ ಶೂನ್ಯವಾಗಿದೆ ಜನರು ಡೇರೆಗಳಲ್ಲಿ ವಾಸಿಸುತ್ತಿರುವರು ಇಗರ್ಜಿ ಮೊದಲಾದ ಕಟ್ಟಡಗಳೊಳಗಿನ ಜನಸಮೂಹವು ಹೊರಗೆ ಓಡಿದ ಭರದಿಂದಾಗಿ ಅನೇಕರು ಜಖಂಗೊಂಡಿರುವರು

ಟೋಕಿಯೋ

ಇಲ್ಲಿ ವಿಚಿತ್ರವೂ ಭಯಂಕರವೂ ಆದ ಬಿರುಗಾಳಿಯು ಬೀಸಿ ಕೊರಿಯಾದ ಬಳಿ ಡಗೆಲೆಟ್ ಎಂಬ ದ್ವೀಪದಲ್ಲಿ ಜನರು ವ್ಯಾಕರಾದರು. ೫೧ ಜನರ ಶವಗಳು ದೊರೆತಿವೆ ಸಹಾಯಗಾರರು ಹೋಗುವಾಗ ಮತ್ತೆ ವಿಶೇಷ ಬಿರುಗಾಳಿಯು ಬೀಸಿತು

ನಾಗಪುರ

ಇಲ್ಲಿ ಪ್ಲೇಗು ಕಲೆಹೋರಿದೆ. ಸೀತಾ ಬಲ್ಡಿ ಎಂಬಲ್ಲಿನ ಪಟ್ಟಣದ ಹೈಸ್ಕೂಲಿನಲ್ಲಿ ಪ್ಲೇಗಿನಿಂದ ಸತ್ತ ಒಂದು ಇಲಿಯು ಕಾಣಸಿಕ್ಕಿದೆ ಮುನ್ಸಿಪಾಲಿಟಿಯ ಶಾಲಾ ಸಂಸ್ಥೆಗಳಿಗೆ ೧೫ ದಿನಗಳ ರಜೆ ಕೊಡಲ್ಪಟ್ಟಿದೆ. ರೋಗವು ಮುಂದುವರಿಯುತ್ತಿರುವುದರಿಂದ ರೋಗ ಬಾಧೆಯು ಹೆಚ್ಚಾಗುವುದೆಂದು ಜನರ ತಿಳುವಳಿಕೆ. ಅಧಿಕಾರಿಗಳು ದಾಳು ಹಾಕುತ್ತಿರುವರು.

ಭೂಕಂಪವಾಗುವುದಕ್ಕೆ ಕಾರಣಗಳು.

ಅಲೀಪುರದ ಒಬ್ಸರ್‌ವೇಟರಿಯ ಎ. ಕೆ. ದಾಸರು ಬೆಂಗಳೂರಿನ ವೈ. ಎಂ. ಸಿ. ಎ. ಭವನದಲ್ಲಿ ಭೂಕಂಪಗಳ ವಿಚಾರವಾಗಿ ಸ್ವಾರಸ್ಯವಾದ ಭಾಷಣದಲ್ಲಿ ಹೇಳಿದ್ದೇನೆಂದರೆ:—'ಜಪಾನ್, ಇಟಲಿ, ದಕ್ಷಿಣ ಅಮೇರಿಕಾ ಮತ್ತು ಪೋರ್ಚುಗೀಸ್‌ಗಳಲ್ಲಾದ ಭೂಕಂಪಗಳನ್ನು ಗಮನಿಸಿದರೆ ನಮ್ಮ ದೇಶದಲ್ಲಿ ಸಂಭವಿಸುವುದು ಬಹು ಸ್ವಲ್ಪವೆಂದೇ ಹೇಳಬೇಕು. ಜಪಾನ್ ದೇಶದಲ್ಲಿ ೧೭೦೩, ೧೮೨೩ ಮತ್ತು ೧೮೯೬ರಲ್ಲಾದ ಭಯಂಕರ ಭೂಕಂಪದಿಂದ ಒಟ್ಟು ೧೧೦,೦೦೦ ಪ್ರಜೆಗಳು ಮರಣವನ್ನು ಹೊಂದಿದ್ದಾರೆ ಈ ಅಪಾರವಾದ ಪ್ರಾಣ ನಷ್ಟವು ಒಂದೆರಡು ಕ್ಷಣದಲ್ಲಿ ನಡೆದು ಹೋಯಿತು ಈ ಭೂಕಂಪಕ್ಕೆ ನಿಜವಾದ ಕಾರಣಗಳನ್ನು ಕಂಡು ಹಿಡಿದುದು ೧೮೫೬ರಲ್ಲಿ. ಇಂಗ್ಲೆಂಡಿನ ಭೌತಿಕ ಶಾಸ್ತ್ರಜ್ಞರಾದ ಡಾ! ಥಾಮಸ್ ಯಂಗ್‌ರು ತಮ್ಮ ಸಂಶೋಧನೆಗಳಿಂದ ೧೮೫೬ರಲ್ಲಿ ಒಂದು ಹೊಸ ಕಾರಣವನ್ನು ವೈಜ್ಞಾನಿಕ ಪ್ರಪಂಚಕ್ಕೆ ತಿಳಿಸಿದರು. ಅವರ ಸಂಶೋಧನೆಯ ಮೇರೆಗೆ ಭೂಮಧ್ಯದಿಂದ ಹೊರಟ ಕಂಪನದ ತರಂಗಗಳು ಮೆಲ್ಲಮೆಲ್ಲನೆ ಹೊರಹೊಮ್ಮಿ ಅದರಿಂದ ಭೂಮಿಯು ಕುಸಿದು ಬೀಳಬಹುದೆಂದು ಕಂಡುಬಂದಿತು ಭೂಮಿಯ ಒಂದು ಭಾಗವು ಯಾವುದೋ ಒಂದು ಅಂತರ್ದಹನದಿಂದ ಕಂಪಿಸತೊಡಗಿದರೆ ಮೇಲಿರುವ ಭಾಗವು ಈ ಸನ್ನಿವೇಶದಿಂದ ಕುಸಿದು ಬಿದ್ದು ಅನರ್ಥವುಂಟಾಗುವುದು" ಅವರು ತನ್ನ ಭಾಷಣವನ್ನು ಮುಂದರಿಸುತ್ತಾ, ಈ ಭೂಮಿಯಲ್ಲಿ ಕಂಪನಗಳುಂಟಾದರೆ ಅದಕ್ಕೆ ಬಲವಾದ ಒಂದು ಕಾರಣವು ಇದ್ದೇ ಇರಬೇಕು ಭೂಮಿಯ ಮೇಲ್ಭಾಗವು ಮೊಟ್ಟಮೊದಲು ತನ್ನಷ್ಟಕ್ಕೆ ತಾನೇ ರೂಪುಗೊಂಡಿರಬೇಕು ಅನೇಕ ಶತಮಾನಗಳ ಹಿಂದೆ ಭೂಗರ್ಭ ಶೋಧಕರಿಂದ ನಿರ್ಧರಿಸಲ್ಪಟ್ಟಂತೆ ಈ ಚಲನವಲನಗಳಿಂದ ಭೂಮಿಯ ಮೇಲೆ ಪರ್ವತಗಳೂ ನದಿಗಳೂ, ಮುಂತಾದ ನೈಸರ್ಗಿಕ ಸೃಷ್ಟಿಗಳಾಗಿರಬೇಕು ಹೀಗೆ ದಿನ ದಿನಕ್ಕೂ ರೂಪುಗೊಳ್ಳುತ್ತಿರುವ ಈ ಪ್ರಪಂಚದಲ್ಲಿ ಆಗಿಂದಾಗ್ಗೆ ಇಂತಹ ಭಯಂಕರ ಸನ್ನಿವೇಶಗಳಾಗುತ್ತ ದುಂಟು ಇದಲ್ಲದೆ ಜ್ವಾಲಾಮುಖಿಗಳಿರುವ ಕಡೆ ಈ ಭೂಕಂಪಗಳಾಗುವುದೂ ಉಂಟು ಈ ಭೂಕಂಪಗಳಿಗೆ ಮತ್ತೆ ಕರ ಕಾರಣವೇಯಿಲ್ಲವೆ ಉತ್ತರ ಭಾರತಿಯಾದಲ್ಲಿ ಜನವರಿ ೧೩ರಿಂದ ೧೪ರ ವರೆಗೂ ಆಗುತ್ತಿದ್ದ ಭೂಮಿಯ ಚಲನಗಳು ಈ ಭೂಕಂಪಕ್ಕೆ ಸ್ವಲ್ಪ ಸಹಾಯವಾಗಿರಬೇಕೆಂದು ನನಗೆ ಕಾಣುತ್ತದೆ. ಭೂಗರ್ಭ ಸಂಶೋಧಕರ ಅಭಿಪ್ರಾಯದಲ್ಲಿ ರಾಣೀಗಂಜಿನ ಬಳಿ, ಭೂಮಿಯಲ್ಲಿ ಒಂದು ವಿಧವಾದ ಪರಿಸ್ಥಿತಿಯುಂಟಾಗುತ್ತಿರುವುದೆಂದು ಹೇಳಲ್ಪಟ್ಟಿದೆ ಇದರಿಂದಲೂ ಪರಿಣಾಮ ಉಂಟಾಗಿರಬಹುದು

ಭೂಕಂಪವನ್ನು ನಿರೀಕ್ಷಿಸುವುದು ಅಷ್ಟು ಸಂಭವವಲ್ಲ ಆಧುನಿಕ ಯಂತ್ರಗಳು ಎಷ್ಟೆಷ್ಟೋ ಇವೆ ಆದರೆ ಅವುಗಳಿಂದ ನಿಜವಾದ ಸ್ಥಿತಿಯನ್ನು ಪರಿಗಣಿಸಲಾಗುವುದಿಲ್ಲ ಒಂದು ಭೂಕಂಪವಾದರೆ ಅದರಿಂದ ೬೫೦ ಬಿಲಿಯನ್ ಕುದುರೆಗಳಷ್ಟು ಶಕ್ತಿಯು ಹೊರಡುವುದು ಭೂಕಂಪವು ಪ್ರತಿ ಕ್ಷಣದಲ್ಲಿಯೂ ಆಗುವುದು ಆದರೆ ಒಂದೊಂದು ಮಾತ್ರ ಭಯಂಕರವಾಗಿ ಪರಿಣಮಿಸಿ ಬಿಹಾರಿನಲ್ಲಾದ ಸ್ಥಿತಿಯುಂಟಾಗುವುದು. ಪ್ರತಿ ವರ್ಷವೂ ೧೧,೦೦೦ ಭೂಕಂಪಗಳಾಗುವುದೆಂದು ಹೇಳಲ್ಪಟ್ಟಿದೆ

ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O S No 467/33

ದೂಮಕ್ಕ ಸಹ—ವಾದಿಗಳು

ಮತ್ತೆ

ಮುತ್ತ ಸಹಾ—ಪ್ರತಿವಾದಿಗಳು

ಇವರೊಳಗೆ—

ಕಾಸರಗೋಡು ತಾಲೂಕು ಎಣ್ಮಕಜೆ ಗ್ರಾಮದ ಸೇರಾಜೆ ಮನೆಯ ಪೊಕ್ಕಪ್ಪೆ ಹೆಂಗ್ಸಿನ ಮಗಳ ದೂಮಕ್ಕ ಆಕೆಯ ಮಗ ದೇವಪ್ಪ ಅಲ್ಲ ಗೂಡಾ ವಾದಿಗಳ ಪತ್ನಿಯ ವರ ಕುಟುಂಬದ ಆಡಳ್ತೆದಾರ 1ನೇ ಪ್ರತಿವಾದಿ ಮುತ್ತ ಕುಟುಂಬದ ಬೇರೆ ಹಿರೇ ಮೆಂಬರು 9 ಜನ ಪ್ರತಿವಾದಿ ಮೇಲೆ ಕುಟುಂಬದ ಸ್ಥಿರಚರಗೊತ್ತುಗಳಿಂದ ತಮಗೆ ಕಳೆದ ಹೋದ ಗತ 6 ವರುಷಗಳ ಅಶನಾರ್ಥ ಮತ್ತು ಇನ್ನು ಮುಂದಿನ ವರುಷಗಳ ಅಶನಾರ್ಥ ಕುರಿತ ದಾವಾ ದಾಖಲು ಮಾಡಿರುತ್ತಾರೆಂತಲೂ ಸದರಿ ದಾವೆಯು ತಾ. 16—2—1934ಕ್ಕೆ ತನಿಖೆಗೆ ಇಟ್ಟಿದೆ ಎಂತಲೂ ಸದರಿ ವ್ಯವಹಾರಕ್ಕೆ ಆಕ್ಷೇಪವುಳ್ಳ ಸದರಿ ಕುಟುಂಬದ ಯಾವ ಮೆಂಬರನು ಕಕ್ಷಿಯಲ್ಲಿ ಸೇರಿ ಉದಹರಿಸಿಕೊಳ್ಳತಕ್ಕದ್ದು ಎಂತಲೂ ಈ ಮೂಲಕ ನೋಟೀಸು ಕೊಡಲಾಗಿರುತ್ತದೆ.

ಕೋರ್ಟು ಹುಕುಂ ಪ್ರಕಾರ.

ಕಾಸರಗೋಡು
ತಾ. 30—1—34

H. S. Malya,
Vakil for Plaintiffs

ಶಾಲಿವಾಹನಶಕೆ, ಗತಶಕೆಯ ಶ್ರೀಮುಖ ಸಂವತ್ಸರದ ಮಾಘ ಬ. ೨ ಶನಿವಾರದಿಂದ ಶ್ರೀಮುಖ ಸಂವತ್ಸರದ ಮಾಘ ಬ. ೧೦ ಶುಕ್ರವಾರದ ವರೆಗಿನ ಪಂಚಾಂಗ

(ಗ್ರಹಣಶೆಯ ಧನು—ಶೆರಾದ್ರ).

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೌರಮಾನ	ಸೂರ್ಯ F. ಉದಯ	ಅಸ್ತ
2	ಶನಿ	೪	[illegible]	ಉತ್ತರಾ	[illegible]	೨೦	7.	6.25
3	ರವಿ	೫	[illegible]	ಹಸ್ತಾ	[illegible]	೨೧	7	6.25
4	ಸೋಮ	೬	[illegible]	ಚಿತ್ರಾ	[illegible]	೨೨	7	6 26
5	ಮಂಗಳ	೭	[illegible]	ಸ್ವಾತಿ	[illegible]	೨೩	7.	6 26
6	ಬುಧ	೮	[illegible]	ವಿಶಾಖಾ	[illegible]	೨೪	7.	6 27
7	ಗುರು	೯	[illegible]	ಅನುರಾಧ	[illegible]	೨೫	7.	6.27
8	ಶುಕ್ರ	೧೦	[illegible]	ಜ್ಯೇಷ್ಠಾ.	[illegible]	೨೬	7	6 27

ಮಂಗಳೂರಿನ ವಾಯುಸ್ಥಿತಿ.

Date ತಾರೀಖು	Temperature. ಉಷ್ಣ (ಶಾಖ) Maximum ಹೆಚ್ಚಾದದ್ದು	Minimum ಕಡಿಮೆ	Rainfall. ಮಳೆ ದಿನದ ಮಳೆ	ಒಟ್ಟು ಮಳೆ.
25	93— 2	73— 4	—	—
26	90 – 4	73— 2	0—06	—
27	88— 6	70 – 7	—	—
28	92— 3	78 – 4	—	—
29	90— 1	68— 9	—	—
30	87— 2	70— 1	—	—
31	90— 2	78 – 0	0 – 22	167 – 64

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ. ಅ.	ವರೆಗೆ ರೂ. ಅ.
ಹೊಸ ದಾಲಿ ಅಕ್ಕಿ	3— 6	3— 12
ಹೊಸ ಮುಸ್ಕತಿ	4— 4	4 – 8
ಹೊಸ ಗುಡ್ಡ	[illegible]	4— 2
	—	—
ಊರ ಅವ್ವಲ್ ಬೆಳ್ತಿಗೆ	4 4	5 — 4
ರಂಗೂನು ಬೆಳ್ತಿಗೆ ಗೋಣಿ ಗಳ್ಳೆ	5— 4	6 0
ಎಲ್ಲಾ ತರ ಬೆಳ್ತಿಗೆ ಮುಡಿ ಗಳ್ಳೆ	3— 4	3 — 12
ಗೋದಿ ಗೋಣಿ ಗಳ್ಳೆ	10— 0	12— 8
ತೊಗರಿ ಗೋಣಿ ಗಳ್ಳೆ	9— 0	10— 8
ಹುರುಳಿ ಗೋಣಿ ಗಳ್ಳೆ	6— 4	6— 8
ಕಡಲೆ ಗೋಣಿ ಗಳ್ಳೆ	9— 8	12— 8
ತೊಗರಿಬೇಳೆ ಗೋಣಿ ಗಳ್ಳೆ	10— 8	18— 0
ಉದ್ದು ಗೋಣಿ ಗಳ್ಳೆ	7— 0	7 — 4
ಹೆಸರು ಗೋಣಿ ಗಳ್ಳೆ	8— 0	9 — 0
ಊರುಬೆಲ್ಲ ಖಂಡಿ ಗಳ್ಳೆ	27— 8	35— 0
ಉಪ್ಪು ಗೋಣಿ ಗಳ್ಳೆ	4—14	5— 4
ಕೊಬ್ರಿ ಖಂಡಿ ಗಳ್ಳೆ	40— 0	45— 0
ಕೊಬ್ರಿ ಹಿಂಡಿ ಖಂಡಿ ಗಳ್ಳೆ	17— 0	17— 8
ಎಳ್ಳಿಂಡಿ ಖಂಡಿ ಗಳ್ಳೆ	22— 8	23—12
ಕೊಬ್ರಿ ಎಣ್ಣೆ ಮುಡಿ ಗಳ್ಳೆ	3 - 1	4— 2
ಎಳ್ಳೆಣ್ಣೆ ಮುಡಿ ಗಳ್ಳೆ	5— 0	6— 0
[illegible] ಕಟ್ಟಿಗೆ ಗಳ್ಳೆ	6— 8	8—
ಮೋರಿಸ ಸಕ್ಕರೆ ಮುಡಿ ಗಳ್ಳೆ	3—11	3—12
ಹೊಸ ಮೆಣಸು	8—10	9—10
ಸಾಸಿವೆ ಮುಡಿ ಗಳ್ಳೆ	4— 8	4—12
ಕಾಳುಮೆಣಸು ಖಂಡಿ ಗಳ್ಳೆ	130— 0	130— 0
ಮೇಲಕ್ಕಿ ಮುಡಿ ಗಳ್ಳೆ	20— 0	24— 0
ಗೇರುಬೀಜ ಮುಡಿ ಗಳ್ಳೆ	2— 4	2— 8
ಕಪ್ಪಿನ ಖಂಡಿ ಗಳ್ಳೆ	42— 0	44— 0
ತಾಂಬ್ರ ತಗಡು ಮುಡಿ ಗಳ್ಳೆ	10— 0	10— 2
ತಾಂಬ್ರ ಪಾತ್ರಗಳು ಮುಡಿ ಗಳ್ಳೆ	13— 0	14— 8
ಹಿತ್ತಾಳೆ ಸೇರು ಗಳ್ಳೆ	14—12	15— 0
ಹಿತ್ತಾಳೆ ತಗಡು ಮುಡಿ ಗಳ್ಳೆ	9— 0	9— 8
ಹವನು ಗಳ್ಳೆ	20— 2	20—10
ಹುಣಸೆ ಹುಳಿ ಖಂಡಿ ಗಳ್ಳೆ	25— 8	160— 0
ಪ್ಲೇಟಿವ್ ಕಾಫಿ ಖಂಡಿ ಗಳ್ಳೆ	180— 0	205— 0
ಫ್ಲಾಂಟೇಶನ್ ಕಾಫಿ ಖಂಡಿ ಗಳ್ಳೆ	270— 0	275— 0
ಹಳೆ ಅಡಿಕೆ	115— 0	135— 0
ಹೊಸ ಅಡಿಕೆ	75— 0	100— 0

THE CANARA PUBLIC CONVEYANCE CO., LTD, MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪನಿ, ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯ ಕ್ಷೇತ್ರಗಳಿಗೆ ಹೋಗುವುವು. ಮೈಸೂರು, ಕೊಡಗು ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನ್ ಕೂಡಾ ಇರುವುದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ, ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ ನಾಲ್ಕು ಸಾರಿ ಉಡುಪಿ ಮಾರ್ಗವಾಗಿಯೂ, 4 ಸಾರಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲುಪಿರಿ. ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 3?, ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ, ಕಾರ್ಕಳ ಗೋಮಟೇಶ್ವರನ ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು 4 ಸಲ ಹೊರಟು ಎರಡೂವರೆ ತಾಸುಗಳ ಸಮಯದಲಿ ಕಾರ್ಕಳಕ್ಕೆ ತಲಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ, ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ತಲ್ಪಬಹುದು.

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಬೆಳಿಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲುಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಪ್ರಾಚೀನ ಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಬೇಲೂರಿನ ಸೋಮನಾಥ ದೇವಾಲಯವನ್ನು ನೋಡಲು, ನೋಡಲಿಚ್ಛಿಸುವವರು, ಬೆಳಿಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ, ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದೂಸ್ಥಾನ, ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣ ಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ, ಮಂಗಳೂರಿನಿಂದ ಮಡಿಕೇರಿಗೆ 7 ಘಂಟೆಗಳೊಳಗೂ, ಕಡೂರಿಗೆ 12 ಘಂಟೆಗಳೊಳಗೂ, ಮೈಸೂರಿಗೆ 12 ಗಂಟೆಗಳೊಳಗೂ ಸಕಲೇಶಪುರಕ್ಕೆ 8 ಗಂಟೆಗಳೊಳಗೂ, ಹಾಸನಕ್ಕೆ 10 ಗಂಟೆಗಳೊಳಗೂ, ಚಿಕ್ಕಮಗಳೂರಿಗೆ 8 ಗಂಟೆಗಳೊಳಗೂ, ಕೊಲ್ಲೂರಿಗೆ ಮತ್ತು ಗೋಕರ್ಣಕ್ಕೆ ೧॥ ದಿವಸದೊಳಗೂ ಶಿವಮೊಗ್ಗಕ್ಕೆ 12 ಗಂಟೆ ತಲಪಬಹುದು. ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು

Secretary,

The Canara Public Conveyance Company Ltd., Mangalore

Chikmagalur Public Conveyance Motor Service.

CHIKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,

ಚಿಕ್ಕಮಗಳೂರು

ಮುಂಬಾಯಿಯಿಂದ - ಮಂಗಳೂರಿಗೆ

ಮಂಗಳೂರಿನಿಂದ - ಮುಂಬಾಯಿಗೆ.

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ

ಮಂಗಳೂರು—ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು - ಅನುಕೂಲ ಪ್ರಯಾಣ ಸೌಕರ್ಯಗಳು.

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ

ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ

ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ.

ಚಿಕ್ಕಮಗಳೂರಿನಿಂದ— ಶಿವಮೊಗ್ಗಕ್ಕೆ, ಬೇಲೂರಿಗೆ, ಕಡೂರಿಗೆ.
— ಮೂಡಗೆರೆಗೆ, ಸಕಲೇಶಪುರಕ್ಕೆ.
— ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
— ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ನಿರಾಯಾಸದ ಪ್ರಯಾಣ! - ಉತ್ಸಾಹಕರ ಸೌಕರ್ಯ!

ಬೇಕಾದ ಮಾಹಿತಿಗ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

ಸಂಪಾದಕರ ಟಪ್ಪಾಲು ಪೆಟ್ಟಿಗೆ.

ಪತ್ರಕಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಎಲ್ಲಾ ಲೇಖಕರು ತಮ್ಮ ಸಂಪೂರ್ಣ ಹೆಸರು ವಿಳಾಸಗಳನ್ನು ಕೊಡತಕ್ಕದ್ದು. ದೀರ್ಘ ಲೇಖನಗಳಿಗೆ ಎಡೆ ಕೊಡಲಾಗುವುದಿಲ್ಲ. ಲೇಖನಗಳು ಸಾರ್ವಜನಿಕ ಹಿತದೃಷ್ಟಿಯಿಂದಿದ್ದು ಯುಕ್ತ ಶೈಲಿಯಲ್ಲಿರತಕ್ಕದ್ದು (ಸಂ. ಸ್ವ.)

ಸಂಸಾರ ನೌಕೆಯೂ ಚಂದ್ರಕಲಾ ನಾಟಕ ಮಂಡಳಿಯೂ.

ಚಂದ್ರಕಲಾ ನಾಟಕ ಮಂಡಳಿಯ ಚಾಲಕರಾದ ಜನಾಬ್ ಫೀರ್ ಸಾಹೇಬರವರು ಅಭಿನಂದನೀಯರೇ! ಸರ್ವತ್ರ ತನ್ನ ಸಮಯವನ್ನು ವಿರಾಮವಿಲ್ಲದೆ ರಂಗಭೂಮಿಯ ಏಳಿಗೆಯ ಸಲುವಾಗಿ ಉಪಯೋಗಿಸಿ, ಎಲ್ಲಾ ಸುಶಿಕ್ಷಿತರನ್ನೇ ನಟರನ್ನಾಗಿ ಇಟ್ಟುಕೊಂಡು ರಂಗಭೂಮಿಯ ಚಿತ್ರಪಟಂಗದ ಮೇಲಿನ ಅಪವಾದದ ಹೊರೆಯನ್ನು ಹೋಗಲಾಡಿಸಿದ ಕೀರ್ತಿಯು ಇವರಿಗೆ ಸಲ್ಲುವುದು, ಅಲ್ಲದೆ ಸ್ವತಹ ಅಭಿನಯಪಟುಗಳಾಗಿದ್ದು ರಂಗಭೂಮಿಯ ಕಳೆಯನ್ನು ಹೆಚ್ಚಿಸಲಿಕ್ಕೆ ಪ್ರಯತ್ನಿಸುವುದು ಕೇವಲ ಸ್ತುತ್ಯವೇ! ಇಂದಿನ ವರೆಗೆ ರಂಗಭೂಮಿಯಲ್ಲಿ ಅನೇಕ ಅಭಿನಯಕಾರರು ಆಗಿಹೋದರು. ಒಬ್ಬೊಬ್ಬರು ಒಂದೊಂದು ವಿಷಯದಲ್ಲಿ ಭರತಶಾಸ್ತ್ರದ ಮೇಲ್ಮೆಯನ್ನು ಬಯಸಿ ಹೋರಾಡಿದವರೇ! ಎರಡು ದಶಕದ ಹಿಂದೆ ನಾಟ್ಯಭೂಮಿಯನ್ನು ನೋಡಿದವರು ಇಂದಿನ ರಂಗಭೂಮಿಯ ಸುಧಾರಣೆಗಳನ್ನು ಕಂಡು ಚಕಿತರಾಗದಿರಲಿಕ್ಕಿಲ್ಲ. ಹೆಚ್ಚೆಂದರೆ ೧೫ ವರ್ಷಗಳ ಕೆಳಗೆಯೇ ರಂಗಭೂಮಿಯ ಮುಖಾಂತರವೇ ಕಾದಂಬರಿಕ ತಿದ್ದುಪಡಿಗಳು ಆಗುವುದು ಉತ್ತಮವೆಂದು ತಿಳಿದು, ಆದ ಪ್ರೋತ್ಸಾಹವೇ ಹೇಗಾದರೂ, ತನ್ನ ಬುದ್ಧಿಶಕ್ತಿ ಕೌಶಲ್ಯ ಸಮಯ ಮೊದಲಾದುದನ್ನೆಲ್ಲ ವೆಚ್ಚ ಮಾಡಿ "ವಿಷಮ ವಿವಾಹ"ವೆಂಬ ನಾಟಕವನ್ನು ಸ್ವತಃ ಬರೆದು, ಸಾಧ್ವೀಸ್ತ್ರೀಯ ಭೂಮಿಕೆಯನ್ನು ತಾನೇ ವಹಿಸಿಕೊಂಡು ಅಂತಹ ಸುಧಾರಣೆಗಾಗಿ ಕಾದಾಡಿ, ಜಯಶೀಲರಾದುದರಿಂದ "ನಾಟ್ಯಕಲಾ ಸುಧಾರಣಾ ಪಿತಾಮಹ"ನೆಂಬ ಬಿರುದು ಶ್ರೀಮಾನ್ ಗರೂಡ ಸದಾಶಿವರಾಯರಿಗೆ ನಿರ್ವಿವಾದವಾಗಿ ಸಲ್ಲುವುದು, ಅಲ್ಲದೆ ತಾನು ಬರೆದ ಪ್ರತಿಯೊಂದು ನಾಟಕದಲ್ಲಿಯೂ, ಯಾವುದಾದರೂ ಒಂದು ತರದಲ್ಲಿ ಸುಧಾರಣೆಯನ್ನು ತಂದಿಡುವುದು ಅವರ ಮುಖ್ಯೋದ್ದೇಶವಾಗಿದೆ ಮತ್ತು ಅದೂ ಒಂದು ಕನ್ನಡಿಗರ ಭಾಗ್ಯವಿಶೇಷವೇ!

ವೃದ್ಧಾಪ್ಯದ ನೆಳಲು ಅವರನ್ನು ಎಳೆಯುತ್ತಿರುವಾಗ ಉಳಿದವರು (ತರುಣ ವರ್ಗದವರು) ಮುಂದೆ ಬಂದು ಕಲಾಭಿವೃದ್ಧಿಗೋಸ್ಕರವಾಗಿ ಹೋರಾಡುವುದು ವಿಹಿತವೇ! ಆಧುನಿಕ ಸಮಾಜದ ತರುಣನಾದುದರಿಂದ ನನ್ನ ಮನಸ್ಸು ಜೊನ್ನೆ ತಾನೇ ಕಲಾಕೌಶಲ್ಯಪೂರಿತವಾಗಿ ಅಭಿನಯಿಸಲ್ಪಟ್ಟ "ಸಂಸಾರ ನೌಕೆ"ಯ ಕಡೆಗೆ ಎಳೆಯಲ್ಪಡುತ್ತಿರುವುದು. ಹೊಸ ಮಾದರಿಗನುಸರಿಸಿ ಬರೆದಿರುವ ಈ ನಾಟಕವು ಶ್ರೀ ಸಿಂಹರ ಮನೋಪ್ರವೃತ್ತಿಯನ್ನು ಬಹಿರಂಗಪಡಿಸಿರುವುದು. ಪಾಶ್ಚಾತ್ಯ ರೀತಿಯ ಶಿಕ್ಷಣವನ್ನು ಹೊಂದಿದ ಗ್ರಂಥಕಾರರು ತನ್ನ ಮನಸ್ಸಿಗೆ ಹೊಳೆದುದನ್ನೆಲ್ಲಾ ಕನ್ನಡಿಗರ ಮುಂದೆ ಇಟ್ಟಿರುವರು. ಆಲೋಚಿಸಿದರೆ "ಸಂಸಾರ ನೌಕೆ"ಯು ಇನ್ನೂ ಕೆಲವು ಸುಧಾರಣೆಗಳನ್ನು ಒಳಗೊಂಡರೆ ಉತ್ಕೃಷ್ಟ ನಾಟಕವಾಗಿ ಕನ್ನಡ ನಾಡಿನಲ್ಲಿ ಯಶಸ್ವಿಯಾಗಿ ಬಹಳ ಕಾಲ ಬಾಳಲಿಕ್ಕೆಯೇ ಬೇಕು. ಶ್ರೀ ಸಿಂಹರ ಕೃತಿಯಲ್ಲಿ ಪೌರ್ವಾತ್ಯ ಸೋಗಿನ ಆದರ್ಶ ಪಾಶ್ಚಾತ್ಯ ತರುಣಿಯಾಗಿ ಕಥಾನಾಯಕಿಯಾದ ಸುಶೀಲೆಯು ತೋರುವಳು. ಅವಳಿಗೆ ಮನೋದೌರ್ಬಲ್ಯದ ಒಂದು ಆದೇಶವು ಗ್ರಂಥಕಾರನ ಕೃತಿಯಲ್ಲಿ ಜೋಡಿಸಲ್ಪಟ್ಟು ವ್ಯಭಿಚಾರ ಪ್ರವೃತ್ತಿಯ ವಾಸನೆಯುಳ್ಳವಳು ನೀಚಳ ರೀತಿಯನ್ನು ಮಾಡುವವಳು ಎಂಬುದು ಬೋಧಿಸಲ್ಪಡದಿರುತ್ತಿದ್ದರೆ, ನಿಜವಾಗಿಯೂ ಸುಶೀಲೆಯು ಉತ್ತಮವಾದ ಭೂಮಿಕೆಯೇ ಸರಿ. ಹೇಗೆ ಶುಲನೆ ಮಾಡಿದರೂ ಸುಂದರನಿಗೆ ತಕ್ಕುದಾದ ಪಾತ್ರವಾಗುತ್ತಿರಲಿಲ್ಲ. ಕೀರ್ತಿಶೇಷ ಬಿ. ವೆಂಕಟಾಚಾರ್ಯರು ತನ್ನ "ನವಾಬ ನಂದಿನಿಯಲ್ಲಿ" ಆ ಯವನ ನಂದಿನಿಯನ್ನು ಎಷ್ಟು ಉತ್ಕೃಷ್ಟವಾಗಿ ಚಿತ್ರಿಸಿರುವರೋ, ಅದೇ ರೀತಿಯಲ್ಲಿ ಚಿತ್ರಿಸಿ ಬಿಡಬಹುದಾಗಿತ್ತು—ಹಾಗೆ ಮಾಡುವುದರ ಬದಲಾಗಿ, ಪೈಶಾಚಿಕ ನಿಸರ್ಗಪೂರ್ವಕವಾದ ದೋಷವೆಂದು ಉಜ್ವಲವಾದ ಸ್ತ್ರೀಭೂಮಿಕೆಯು ನೋಲಿ ತನ್ನ ಮೈದುನನ ಮೇಲೆ ಅತ್ಯಾಚಾರ ಮಾಡಲು ಮುಂದರಿಯುವ ಹೊಲಸನ್ನು ಕಂಡರೆ ಪ್ರೇಕ್ಷಕರಿಗೆ ಒಮ್ಮೆಂದೊಮ್ಮೆ ಶ್ರೀಮಾನ್ ಗರೂಡ ಸದಾಶಿವರಾಯರ ಸಂಪೂರ್ಣ ರಾಮಾಯಣದ ಶೂರ್ಪನಖಿಯ ನೆನಪಾಗುವುದು. ಇದಕ್ಕಿಂತಲೂ "ನೀನೇ ನನಗೆ ಸ್ವಾಮಿಯು, ಜನ್ಮ ಜನ್ಮಾಂತರಗಳಲ್ಲಿಯೂ ನನಗೆ ನೀನೇ ಪತಿಯಾಗು ವೆನು, ದೇವಾಂಶಭೂತನೇ! ನಿನ್ನ ಕಾರ್ಯಕ್ಷೇತ್ರದಲ್ಲಿ ನಾನು ಮುಂದಡಿಯಿಡುವೆ" ಎಂಬ ಮಾತುಗಳು ಸುಶೀಲೆಯ ಬಾಯಿಯಿಂದ ಸುಂದರನ ವಿಚಾರದಲ್ಲಿ ಹೊರಡುತ್ತಿದ್ದ ಪಕ್ಷದಲ್ಲಿ, ಶ್ರೀ ಸಿಂಹರ ಕೃತಿಯು ಸುಧಾರಣಾ ಪ್ರಪಂಚದಲ್ಲಿ ಇನ್ನಷ್ಟು ಉತ್ಕರ್ಷಕ್ಕೆ ಬರುತ್ತಿತ್ತಲ್ಲದೆ, ಪಾಶ್ಚಾತ್ಯ ನಾಮಮಾತ್ರ ಮೋಹವು ಸುಶೀಲೆಯ ಸೌಜನ್ಯ ಮುಖೇಂದುವಿನ ಮೇಲೆ ಕವಿಯಲ್ಪಡುತ್ತಿರಲಿಲ್ಲ.

ಇನ್ನು ಗಂಡನಿಲ್ಲದಿರುವಾಗ ಹೋದ ಸರಳೆಯ ಪಶ್ಚಾತ್ತಾಪವು ಒಂದು ದೃಷ್ಟಿಯಲ್ಲಿ ವಿಚಾರಿಸಿದ್ದಲ್ಲಿ ಕ್ಷಮೆಗೆ ಅನರ್ಹವಾದುದು. ಯಾವ ಸುಂದರನು ತನ್ನ ಸರ್ವಸ್ವವನ್ನು ಆಕೆಯ ಹೃದಯಮಂದಿರಕ್ಕರ್ಪಿಸಿರುವನೋ, ಮತ್ತು ಅವಳೇ ಕೇವಲ ತನ್ನ ಒಡತಿ, ಸಂಸಾರಸಾಗರದಿಂದ ಪಾರುಮಾಡುವ ಒಂದು ನಾವೆಯೆಂದು ಭಾವಿಸಿರುವನೋ, ಆ ಕಾಲದಲ್ಲಿ ಆಕೆಯು ಅವನನ್ನು ನಿರ್ಗತಿಕನು, ಅನಾಥನು ಎಂದು ಗೊತ್ತಿದ್ದು ಬಿಟ್ಟುಹೋದುದು ಆರ್ಯಸಂಸ್ಕೃತಿಗೆ ವಿರೋಧವಾದುದು, ಅಲ್ಲದೆ ಸುಂದರನು ಕೇವಲ ಸರಳಸ್ವಭಾವದವನಿದ್ದು ಆದರ್ಶಗುಣಗಳಿಂದ ಕೂಡಿದ ಅತ್ಯುಜ್ವಲ ವ್ಯಕ್ತಿಯು. ಪ್ರೇಮದ ಬೆಲೆ ಮತ್ತು ಪ್ರೇಮದ ರೀತಿ, ಇವುಗಳನ್ನು ಲೋಕಕ್ಕೆ ವ್ಯಕ್ತಪಡಿಸಿದ ಘನಮಹಿಮನು. ತನ್ನ ತವರ್ಮನೆಗೆ ಪತ್ರ ಬರೆಯುವುದಾಗಲಿ ಅಥವಾ ಇಂತಹ ಹೃದಯದ್ರಾವಕವಾದ ದುಃಸ್ಥಿತಿಯಲ್ಲಿ ಹೋಗುವುದಾದರೂ ಸರಿಯಲ್ಲವೆಂದು ಮೊದಲೇ ತಿಳಿಸಿರುವಾಗ, ಸ್ವಾಭಾವಿಕವಾದ ಸ್ತ್ರೀಗುಣಕ್ಕನುಸರಿಸಿ ತನ್ನ ಮಗುವಿನ ಕಾಯಿಲೆಯ ವಿಚಾರವಾಗಲಿ ತನ್ನ ವಿಷಯವಾಗಲಿ ತಿಳಿಯಗೊಡದ ಶಂಕೆಯಾದ ಮುದುಕಿಯೊಬ್ಬಳನ್ನೇ ಬಿಟ್ಟುಹೋದುದು ಭಾರತೀಯರ ಆದರ್ಶ ಸತೀತ್ವಕ್ಕೆ ಕುಂದನ್ನೊಡ್ಡಿದಂತಾಗುವುದು. ಅದರ ಬದಲಾಗಿ ಸರಳೆಯು ಸೀತಾ, ದ್ರೌಪದಿ, ದಮಯಂತಿ, ಚಂದ್ರಮತಿಯರಂತೆ ಗಂಡನನ್ನನುಸರಿಸಿ ಭಿಕ್ಷಾಟನ ಮಾಡುವುದಾದರೂ ವಿಹಿತವೆನಿಸುತ್ತಿತ್ತು. ಹೀಗಿದ್ದರೂ ಇಷ್ಟೆಲ್ಲವನ್ನು ಸಹಿಸಿಕೊಂಡು ಕ್ಷಮಿಸಿದುದು ಸುಂದರನಂತಹ ಧೀರೋದಾತ್ತ ನಾಯಕನ ಗುಣಕ್ಕೆ ಸರಿಯಾಗಿದೆ. ತನ್ನ ಕೃತಿಯನ್ನು ಹೃದಯಂಗಮವಾದ ದೃಶ್ಯಗಳನ್ನಾಗಿ ಚಿತ್ರಿಸಬೇಕೆಂಬ ಶ್ರೀ ಸಿಂಹರ ಘೋಷಣೆಯು ಸ್ಪಷ್ಟವಾಗಿ ತೋರುವುದಾದರೂ ಕೆಲವು ಮಲಿನತೆಗಳನ್ನು ಎಷ್ಟೋ ಸುಲಭವಾಗಿ ತೊಳೆಯಬಹುದಾಗಿತ್ತು.

ಇನ್ನು ಶ್ರೀ ಸಿಂಹರು ಸ್ವತಹ ಅಭಿನಯಿಸಿ ತೋರಿಸುವ ಮಾಧವು ಸ್ವತಂತ್ರ ವಿಚಾರದ ವ್ಯಕ್ತಿಯೇ ಅಲ್ಲ. ಅವನು ಬಾಲ್ಯದಲ್ಲಿಯೇ ತನ್ನನ್ನು ಸಹವಾಸದೋಷದಿಂದ ಕೆಡಿಸಿಕೊಂಡವನಾಗಿ ಅತಿ ಕಪ್ಪಲ್ಲದ ಸ್ವಭಾವದ "ದಿಕ್ಕಿ"ಯ ಮಾನಸಿಕ ಪರಿವರ್ತನೆಗೆ ಅಧೀನನಾದ್ದು! ಮಾಡಿಕೊಂಡಿದ್ದು ಸರ್ವ ಘಾತಕ್ಕೆ ಕಾರಣನಾದ ವ್ಯಕ್ತಿಯೆಂಬುದು ಸಂವಾದಸಾಗರದಲ್ಲಿ ಅಲ್ಲಲ್ಲಿ ತೋರುತ್ತಿರುವ ಭಯಾನಕವಾದ ದೃಶ್ಯಗಳಿಂದೊಂದು. ಶ್ರೀ ಸಿಂಹರು ಅಭಿನಯಿಸುವಾಗ ಕನ್ನಡ ಭಾಷೆಯನ್ನು ಆಂಗ್ಲೇಯ (Tone) ಸೊಲ್ಲಿನಲ್ಲಿ ಉಚ್ಚರಿಸುವುದು ಒಂದು ರೀತಿಯ ದೋಷವಾಗಿದೆ. ಇದನ್ನು ಅದಷ್ಟು ಕಮ್ಮಿ ಮಾಡಿದರೆ ಕನ್ನಡದ ಮಾನಿಯು ಮಾನವನ್ನು ಕಸಿದಂತಾಗುವುದಲ್ಲದೆ ಶಾಶ್ವತವಾಗಿ ಬಾಳಲಿಕ್ಕಿರುವ ಕನ್ನಡ ಕೃತಿಯನ್ನು ಅನ್ಯದೇಶೀಯ ಭಾಷೆಯಿಂದ ಪರಿವೇಷ್ಟಿತವಾಗದಂತೆ ರಕ್ಷಿಸಿದ ಹಾಗಾಗುವುದು. ಅಲ್ಲದೆ ಜನರ ದೃಷ್ಟಿಯಲ್ಲಿ "ಆಂಗ್ಲಭಾಷಾ ಪ್ರದರ್ಶನ"ವೆಂದು ತಿಳಿದುಕೊಳ್ಳಲವಕಾಶವಾಗುವ ಕಾರಣದಿಂದ ಪ್ರಾಜ್ಞರಾದ ಕೃತಿಕಾರರು ತನ್ನ ನಾಟಕದಲ್ಲಿ ಇಂಗ್ಲಿಷ ಶಬ್ದಗಳನ್ನು ಸೇರಿಸದಿರುವುದು ಸರ್ವಸಮ್ಮತವಾಗಬಹುದು. ಹೆಚ್ಚಾಗಿ ಪ್ರತಿಯೊಂದು ಭೂಮಿಕೆಯೂ ಅಭಿನಯಿಸಲ್ಪಡುವಾಗ ಇಂಗ್ಲಿಷ ಶಬ್ದಗಳನ್ನೇ ಹೆಚ್ಚು ಉಚ್ಚರಿಸುವುದರಿಂದ ದೂರದೃಷ್ಟಿಯುಳ್ಳ ಕಲಕೋವಿದರು ಇನ್ನೊಂದು ದಿನ ಕರ್ನಾಟಕ ರಂಗಭೂಮಿಯು ಆಂಗ್ಲ ಸಾಹಿತ್ಯ ರಂಗವಾಗುವುದೋ ಎಂದು ಮನಸ್ಸಂಕೋಚಪಟ್ಟಲ್ಲದೆ ಭಾವಿಸಬೇಕಾಗಿದೆಯಾದ್ದರಿಂದ ಶ್ರೀಯುತರು ರಂಗಭೂಮಿಗೆ ಬರಲಿಕ್ಕಿರುವ ಆಪತ್ತನ್ನು ದೂರೀಕರಿಸಬೇಕಾಗಿ ಸಹಾನುಭಾವದ ಮತ್ತು ಸಹಾನುಭೂತಿಯ ವಿನಯಪೂರ್ವಕವಾದ ಸೂಚನೆಯಾಗಿದೆ.

ಗಿರಿಜೆಯು ಸ್ವಾಭಾವಿಕವಾಗಿಯೇ ನಿಸರ್ಗಪೂರ್ವಕವಾದ ದೌರ್ಬಲ್ಯಕ್ಕೆ ಬಲಿಬಿದ್ದುದು ಒಮ್ಮೆಗೆ ತಪ್ಪಲ್ಲವಾದರೂ ಸ್ವಾರ್ಥತಂದೆಯಾದ ರಾಘವೇಂದ್ರ ರಾಯನ ಮಾತನ್ನು ಮನ್ನಿಸಿ ತನ್ನ ಮನಸ್ಸಿಗೆ ಒಪ್ಪದ ಮಾಧವನನ್ನು ಮದುವೆಯಾದ ಮೇಲೆ ಸ್ನೇಹಿತೆಯಾದವಳು ಯಾವ ನಿಷ್ಕಳಂಕ ಪ್ರೇಮದಿಂದ ಗಂಡನನ್ನು ತಿದ್ದಿ ಹಾದಿಗೆ ತರಬಹುದಾಗಿತ್ತೋ ಅದು ಸುಶೀಲೆಗೂ ಸಾಧ್ಯವಿತ್ತು. ಈ ರೀತಿಯನ್ನು ಬಿಟ್ಟು ತನ್ನ ಮನೋದೌರ್ಬಲ್ಯವನ್ನು ತೋರಿಸಿ ವಿಕಟ ರೀತಿಯಲ್ಲಿ ನಡೆಯುವುದರ ಬದಲಾಗಿ ಆಕೆಯು ಮದುವೆಯಾಗದೆಯೇ ಅನೇಕ ಆರ್ಯಮಹಿಳೆಯರಂತೆ ಸನ್ಯಾಸಿನಿಯಾಗಿದ್ದುಕೊಂಡು ಇಡೀ ಕುಟುಂಬದ ಉನ್ನತಿಯನ್ನು ಸದ್ವರ್ತನದ ಹೆಸರಿನಲ್ಲಿ ಮಾಡಲಿಕ್ಕಾಗುತ್ತಿತ್ತು. ಹೀಗಿಲ್ಲದಿರುವುದರಿಂದ ಶ್ರೀ ಸಿಂಹರ ಕೃತಿಯು ಪೌರ್ವಾತ್ಯ ರೀತಿಯಾದದ್ದಲ್ಲ, ಪಾಶ್ಚಾತ್ಯ ಪ್ರಪಂಚದಲ್ಲಿ ಹೆಚ್ಚು ಆದರ್ಶತೆಯನ್ನು ಹೊಂದಬಹುದು. ಅಲ್ಲದೆ ಸಿಂಹ ವಿರಚಿತ ಕೃತಿಯಲ್ಲಿ ಅಲ್ಲಲ್ಲಿ ಶೇಕ್ಸ್‌ಪಿಯರ್ ಕವಿಯ ಕೃತಿಯ ಚಿತ್ರದ ಭೂಮಿಕೆಗಳ ಹಾವಭಾವಗಳು ತೋರಿಬರುವುದು ಆಶ್ಚರ್ಯವಲ್ಲ. ಏಕೆಂದರೆ ಅವರು ಉಭಯ ಭಾಷೆಯ ನಾಟಕಗಳನ್ನು ಓದಿದವರಾದುದರಿಂದ ನಿಸರ್ಗಭಾವನೆಯು ಹುಟ್ಟಿನ ವಿಚಾರಗಳಲ್ಲಿ ಮನುಜ ಸಂಸಾರದಲ್ಲಿ ಎಲ್ಲೆಲ್ಲಿಯೂ ಒಂದೇ ತೆರನಾದ ಎಂಬುದು ಅವರು ತರ್ಕಿಸಿಟ್ಟ ವಿಷಯವೇ ಆಗಿರಬಹುದು. ಅದರೆ ಮೂಲೋದ್ದೇಶವು ಯಾವುದೇ ಇದ್ದರೂ ಕಲೆಯ ಕಡೆಗೆ ದೃಷ್ಟಿಯಿಟ್ಟು ಸಾಹಸಿಗಳಾದ ಶ್ರೀ ಸಿಂಹರು ಕನ್ನಡ ಭಾಷೆಯನ್ನು ಅನ್ಯಭಾಷೆಯ ಸಂಪರ್ಕ ವಿರಹಿತವಾಗಿ, ಸರ್ವ ವಿಧದಲ್ಲಿಯೂ ಸುಧಾರಿಸಿದ ಪೌರ್ವಾತ್ಯ ಕೃತಿಯನ್ನಾಗಗೊಳ್ಳಿರಿ. ಅವರ ಹೆಸರು ಚಿರಸ್ಥಾಯಿಯಾಗಿ ನಿಲ್ಲಲಾರದೇಕೆ? ಶಾಸ್ತ್ರಿ ಮತ್ತು ಮುದುಕಿಯ ಪಾತ್ರಗಳು ಇದ್ದಕ್ಕಿದ್ದಂತೆಯೇ ಮನೋಹರವಾಗಿ ಚಿತ್ರಿಸಲ್ಪಟ್ಟಿದ್ದು ಆನಂದದಾಯಕವೇ! ಪರೋಪಕಾರ ನಿರತನಾದ ರಾಘವೇಂದ್ರರಾಯನ ಭೂಮಿಕೆಯು ಸಾಮಾನ್ಯ ಗುಣಭರಿತ ವ್ಯಕ್ತಿಯಾಗಿಯೇ ತೋರಿಸಲ್ಪಟ್ಟಿದೆಯಾದರೂ, ಸುಶಿಕ್ಷಿತನಾದ ಆತನು ಸುಶೀಲೆಯನ್ನು ಮಾಧವನಿಗೆ ಮದುವೆಯಾಗುವಂತೆ ಒತ್ತಾಯಪಡಿಸಿದ್ದು ಸರಿಯೆಂದು ತೋರುವುದಿಲ್ಲ. ಹೀಗಿದ್ದರೂ ತನ್ನ ಅತ್ಯಧಿಕ ಪ್ರೇಮದ ಭರದಿಂದ ಹಾಗೆ ಮಾಡಿದ್ದಾದ ಕಾರಣ ದೋಷವು ಕ್ಷಮ್ಯವಾದುದು. ಇನ್ನು ನ್ಯಾಯಸ್ಥಾನದ ನ್ಯಾಯಾನ್ಯಾಯ ವಿಮರ್ಶೆಯು ಕನ್ನಡದಲ್ಲಿ ಆಗುವುದು ಉತ್ತಮವಿತ್ತು. ಸೇವಕ ಸಿದ್ಧನನ್ನು ಚಿತ್ರಿಸುವಾಗ ಕೃತಿಕಾರರು ತನ್ನ ನೈಪುಣ್ಯವನ್ನು ತಂದಿಲ್ಲವೆ ತೋರಿಸಿರುವರು. ಹೇಗೂ, ಆಗತಕ್ಕವಾದ ಸುಧಾರಣೆಗಳನ್ನು ಅವರು ಮುಂದಕ್ಕಿಟ್ಟರೆಂದರೆ ಅವರ ಪ್ರಯತ್ನವು ಸಫಲವಾಗದಿರದು. ಆದ್ದರಿಂದ ಇನ್ನೂ ಶೈಶವದಲ್ಲಿಯೇ ಇರುವ ಶ್ರೀ ಸಿಂಹರ ನಾಟ್ಯದ ಪ್ರಪಂಚದ ಧೋರಣೆಯು ಅಭಿವೃದ್ಧಿಗೆ ಬಂದು ಅವರು ಯಶಸ್ವಿಯಾಗಿ ನಾಟ್ಯಕಲೆಯ ಅಭಿಮಾನವನ್ನು ಉಳಿಸುವರೆಂಬ ಭಾವನೆಯಿಂದ ಪ್ರೋತ್ಸಾಹಭರಿತವಾದ ಧನ್ಯವಾದಗಳನ್ನು ಅವರಿಗೆ ಅರ್ಪಿಸುವೆನು. ಇತಿ

ಸುಧಾರಕ

ತಗಡೂರಿನಲ್ಲಿ ಅಸ್ಪೃಶ್ಯತಾ ನಿವಾರಣಾ ಸಂಘ ಸ್ಥಾಪನೆಯೂ, ಆದಿ ಕರ್ನಾಟಕ ಹಾಸ್ಟಲ್ ಕಟ್ಟಡ ಪ್ರಾರಂಭೋತ್ಸವವೂ

ತಗಡೂರು ಸಮೀಪದಲ್ಲಿರುವ ಕಿರುಗುಂದದಲ್ಲಿ ಎಂನೇ ತಾರೀಖು ಶನಿವಾರ ದಿವಸ ಹನ್ನೆರಡು ಗ್ರಾಮದ ಆದಿ ಕರ್ನಾಟಕರು, ಮುಖಂಡ ಜನರು ಸಭೆ ಸೇರಿ ತಗಡೂರು ಸತ್ಯಾಗ್ರಹಾಶ್ರಮದ ಆವರಣದಲ್ಲಿ ಆದಿ ಕರ್ನಾಟಕರ ಬಾಲಕರ ವಿದ್ಯಾಭ್ಯಾಸದ ಸೌಕರ್ಯಕ್ಕಾಗಿ ಒಂದು ಹೊಸ್ಟೆಲನ್ನು ಕಟ್ಟಬೇಕೆಂಬುದಾಗಿಯೂ ಅಲ್ಲಿಗೆ ತಮ್ಮ ತಮ್ಮ ಗ್ರಾಮದ ಬಾಲಕರುಗಳನ್ನು ಕಳುಹಿಸಬೇಕೆಂಬುದಾಗಿಯೂ, ಈ ವಿಷಯವನ್ನು ಗ್ರಾಮಗ್ರಾಮಗಳಲ್ಲಿಯೂ ಪ್ರಚಾರ ಮಾಡಿ ಅಭಿಪ್ರಾಯವನ್ನು ಬಲಪಡಿಸಬೇಕೆಂಬ ದಾಗಿಯೂ ತೀರ್ಮಾನವಾಯಿತು.

ತಗಡೂರು ಮಾದರೀ ತಾಲ್ಲೂಕು ಹೆಡ್ ಆಫೀಸಿನಲ್ಲಿ ತಾ ೨೦ನೇ ಮಧ್ಯಾಹ್ನ ೩ ಗಂಟೆಗೆ ಸರಿಯಾಗಿ ಗ್ರಾಮ ಮುಖಂಡರ ಸಭೆಯು ಸೇರಿತು. ಆ ಸಭೆಗೆ ವಯೋವೃದ್ಧರೂ ಗ್ರಾಮ ಮುಖಂಡರೂ ಆದ ಶ್ರೀ ಭಾಸ್ಕರರಾಜೇ ಅರಸಿನವರು ಅಧ್ಯಕ್ಷರಾಗಿದ್ದರು. ಸಭೆಯಲ್ಲಿ ಸಂಸ್ಥಾನದ ಅಸ್ಪೃಶ್ಯತಾ ನಿವಾರಣಾ ಸಂಘದ ಉದ್ದೇಶವನ್ನೂ, ಅಸ್ಪೃಶ್ಯತಾ ನಿವಾರಣಾ ಮಸೂದೆಯನ್ನೂ ಸಂಪೂರ್ಣವಾಗಿ ಚರ್ಚಿಸಿ ದೇವಾಲಯ ಪ್ರವೇಶದ ವಿಷಯವನ್ನು ಪ್ರಚಾರ ಮಾಡುವುದೇ ನಮ್ಮ ಮುಂದಿನ ಗುರಿಯೆಂದು ತೀರ್ಮಾನ ಮಾಡಿ ಸಂಘದ ನಿಯಮಗಳಿಗೆ ಬದ್ಧರಾಗಿ ಈ ಕೆಳಗೆ ಕಂಡ ಸದ್ಗೃಹಸ್ಥರನ್ನೊಳಗೊಂಡ ಸಂಘವು ಸ್ಥಾಪನೆಯಾಯಿತು.

ಶ್ರೀಗಳಾದ ತಗಡೂರು ರಾಮಚಂದ್ರರಾಯರು (ಅಧ್ಯಕ್ಷರು), ಭಾಸ್ಕರರಾಜೇ ಅರಸಿನವರು ಪಳ್ಳೀ ಮಾದಪ್ಪನವರು (ಉಪಾಧ್ಯಕ್ಷರು) ಕೆ. ಪೊನ್ನಸೆಟ್ಟರು (ಕಾರ್ಯದರ್ಶಿಗಳು) ಬಿ. ಮುದ್ದಪ್ಪಾಚಾರ್ಯರು ಬವಳಿ ಅಂಗಡಿ ಕೃಷ್ಣಶೆಟ್ಟರು ಕಿರಾಣ ಅಂಗಡಿ ನಾಗಪ್ಪಸೆಟ್ಟರು ಗಣಪತಯ್ಯನವರು ಜಿ. ಅಶ್ವತ್ಥನಾರಾಯಣನವರು ತಂಕಲು ಕೇರಿ ಮೇಲು ಸಕ್ಕರೆ ಬಾತಿ ಪುಟ್ಟ ಮಾದಸೆಟ್ಟರು ಗೌಡಿಕೆ ಮಾಡುವ ಉಮ್ಮತ್ತೂರು ದೇವಣ್ಣನವರು, ಜೋತಿಪಣಕಟ್ಟೆನ ಅಂಗಡಿ ಸಿದ್ಧಸೆಟ್ಟರು ಜೋತಿಪಣಕಟ್ಟೆನ ಮಾದಸೆಟ್ಟರು ಆದಿ ಕರ್ನಾಟಕರ ಅಂಕಯ್ಯನವರು ಆದಿಕರ್ನಾಟಕರ ಸಿದ್ಧಯ್ಯನವರು ಇವರುಗಳು ಮೆಂಬರಾಗಿರತಕ್ಕದೆಂದೂ ಮತ್ತು ಇನ್ನೂ ನಾಲ್ಕು ಜನಗಳನ್ನು ಮೆಂಬರುಗಳಾಗಿ ತೆಗೆದುಕೊಳ್ಳುವುದಕ್ಕೆ ಮೇಲ್ಕಂಡ ಕಮಿಟಿಗೆ ಅಧಿಕಾರ ಕೊಟ್ಟಿರುತ್ತದೆಂದೂ ತೀರ್ಮಾನಿಸಲಾಯಿತು. ಮಹಾತ್ಮಾ ಗಾಂಧಿಯವರು ತಗಡೂರಿಗೆ ದಯಮಾಡಿಸಿದ್ದ ಜ್ಞಾಪಕಾರ್ಥವಾಗಿ ತಗಡೂರು ಸತ್ಯಾಗ್ರಹ ಆಶ್ರಮದ ಆವರಣದಲ್ಲಿ ಒಂದು ಆದಿಕರ್ನಾಟಕ ಹೋಸ್ಟೆಲನ್ನೂ ಕಟ್ಟಬೇಕೆಂದು ಸರ್ವಾನುಮತದಿಂದ ಪಾಸಾಯಿತು. ತಗಡೂರು ಸತ್ಯಾಗ್ರಹ ಆಶ್ರಮದ ಆವರಣದಲ್ಲಿ ತಾ ೨೨ನೇ ಸೋಮವಾರ ದಿವಸ ಆದಿಕರ್ನಾಟಕ ಹಾಸ್ಟಲ್ ಕಟ್ಟಡವನ್ನು ಕಟ್ಟಲು ಮುಹೂರ್ತದ ಪೂಜೆಯನ್ನು ವೇಗನಾಡ ಲಕ್ಷ್ಮೀನಾರಾಯಣ ಶಾಸ್ತ್ರಿಗಳು ಮಾಡಿದರು. ಶ್ರೀ ಭಾಸ್ಕರರಾಜೇ ಅರಸಿನವರು ಗುದ್ದಲೀ ಪೂಜೆಯನ್ನು ಮಾಡಿದರು. ಇವರು ಈ ಕಾರ್ಯವು ಬಹಳ ಯಶಸ್ವಿಯಾಗಿ ನಡೆಯಲೆಂದು ಹರಸಿ ಸಭೆಯನ್ನು ಭರಖಾಸ್ತು ಮಾಡಿದರು.

—— ತಗಡೂರು ರಾಮಚಂದ್ರ ರಾವ್,

ಮಹಾಪುರುಷರ ಉಚ್ಚವಿಚಾರ

ಕನ್ನಡಿಯು ಮನುಷ್ಯನ ನಿಜವಾದ ಪ್ರತಿಬಿಂಬವನ್ನು ಹೊರಗೆಡಹುವುದಿಲ್ಲ. ಮನುಷ್ಯನಲ್ಲಿರುವ ಪವಿತ್ರ ಸಂಭಾಷಣೆಯೇ ಅವನ ಯಥಾರ್ಥವಾದ ಪ್ರತಿಬಿಂಬವಾಗಿರುತ್ತದೆ.

ಸದಾ ಸಮಯ ಕರ್ತವ್ಯಶೀಲನಾಗಿರುವುದರಿಂದ ಅಪರಿಮಿತವಾದ ಮಹತ್ವವು ವಿಕಾಸವಾಗುತ್ತದೆ. ಆಲಸ್ಯದಿಂದಿದ್ದರೆ ಸದಾ ಸಮಯ ನಿರಾಶೆಯೇ ಗೋಚರಿಸುತ್ತದೆ.

ಸಾಂಸಾರಿಕ ಸುಖಸಾಧನೆಯೇ ಮಾನವ ಜೀವನದ ಅಂತಿಮ ಗುರಿಯಲ್ಲ. ಸಾಂಸಾರಿಕ ಜೀವನದೊಂದಿಗೆ ಪಾರಮಾರ್ಥಿಕ ಸುಖಪ್ರಾಪ್ತಿಗಾಗಿ ಹೋರಾಡುವವನೇ ಶ್ರೇಷ್ಠಪುರುಷನೆನಿಸಲ್ಪಡುವನು.

ಉತ್ತಮವಾದ ವಿಚಾರ ಪ್ರವಾಹವು ಜಲಪ್ರವಾಹಕ್ಕಿಂತ ಪ್ರಬಲವಾಗಿರುತ್ತದೆ.

ಪ್ರಬಲವಾದ ಪರಿಶ್ರಮದ ಹೊರತು ಯಾವ ಕಾರ್ಯವೂ ಸಿದ್ಧಿಸಲಾರದು.

ಉತ್ತಮ ಗುಣಗಳ ಕೇಂದ್ರವು ಮಸ್ತಕದಲ್ಲಿರುತ್ತದೆ. ಯಾರ ವಿಚಾರಗಳು ಉತ್ತಮವಾಗಿರುತ್ತವೋ, ಅವರೇ ಮಹಾಪುರುಷರಾಗುವರು.

ಶಾಂತಿಸಮರದಲ್ಲಿಯೇ ವಿಜಯ ವಿಭೂತಿಯು ಗೋಚರಿಸುತ್ತದೆ. ಆದುದರಿಂದ ಶಾಂತಿಯ ಉಪಾಸಕನೇ ಜಗತ್ತಿನಲ್ಲಿ ಶಾಂತಿಯನ್ನು ಸ್ಥಾಪಿಸಿದನು.

ಸ ರಟಣೆ ಅಂದವಾದ ಸೀರೆಗಳು

ಸ್ವದೇಶಿ ಕಲರ್ ಸೀರೆಗಳು

ಈ ಸೀರೆಗಳನ್ನು ಹೊಸದು ಹೊಂದಿದ ಕಂಪೆನಿಯಿಂದ ಸಂಪೂರ್ಣವಾಗಿ ತಯಾರಿಸುತ್ತೇವೆ. ಗಟ್ಟಿ ಬಣ್ಣ ಎಲ್ಲಾ ಬಣ್ಣಗಳಲ್ಲಿಯೂ ದೊರೆಯುವುದು. ಸುಂದರವಾದ ಸೆರಗು ಅಂದವಾದ ಅಂಚು ಇರುವುದು ...ಯುವುದಕ್ಕೆ ರೇಷ್ಮೆ ಸೀರೆಯ ಹಾಗೆ ಕಾಣುವುದು ಎಲ್ಲಾ ಮತಸ್ಥರೂ ...ಯ ಉಪಯುಕ್ತವಾದುದು. 18 ಮೊಳ ಸೀರೆ ಕ್ರಯ ರೂ 4—0—0 ...ಮೊಳ ಸೀರೆ ಕ್ರಯ ರೂ 3—4—0

ವಿಳಾಸ— ಟಿ. ಸಿ ನಾಗಲಿಂಗಪ್ಪಾ ಮತ್ತು ಕಂಪೆನಿ, ೨೮೦ ವಾಲ್‌ಟ್ಯಾಕ್ಸ್ ರೋಡ್, ಪೋ ಬಾ ನಂ. ೩೧೩, ಪಾರ್ಕ್ ಟೌನ್, ಮದ್ರಾಸ್

HALF PRIZE ONLY·

SANE SEX BOOKS.

Hidden Secrets of Sex	Re 1/8
The Sex Happiness	,, 0/8
How to choose a wife	,, 0/8
...ti Sastra	,, 1/4
...y Wife As 8, Sex Exercise	0/8

...B—All the above books are illustrated a d beautifully ...inted and for Rs 3 only with free postage

K Swamy & Co, Park Town, G T MADRAS

...ಕೇರ್ ಡೆಸ್ಟ್ರಾಯರ್ ಎಂಬ ರೋಮನಾಶಕ ಕ್ರೀಂ

ಕ್ರಯ ಬಾಟ್ಲಿ 1ಕ್ಕೆ 12 ಆಣೆ.

ಈ ಹೊಸ ಜರ್ಮನ್ ರೋಮನಾಶಕ ಕ್ರೀಂ ಎಂಬುದು ಶರೀರದೊಳಗಿನ ಯಾವ ಭಾಗದಲ್ಲಿಯಾದರೂ ಪ್ರಯಾಸವಿಲ್ಲದೆ ದುರ್ವಾಸನೆ ಇಲ್ಲದೆ ನೋವಿಲ್ಲದೆ ಚರ್ಮದ ಮೇಲೆ ಯಾವ ತರದ ಕಲೆಯನ್ನು ಉಂಟು ಮಾಡದೆ ...ಲಭವಾಗಿ ಒಂದೇ ನಿಮಿಷದಲ್ಲಿ ಕೂದಲನ್ನು ತೆಗೆಯುವದು ಇದ...ಂದ ಚರ್ಮಕ್ಕೆ ಕಾಂತಿಯು ಉಂಟಾಗುವುದು. ಉಪಯೋಗಿಸುವ ...ಧಾನವನ್ನು ಬಾಟ್ಲಿ ಸಂಗಡ ಕಳುಹಿಸುವೆವು ಫ್ರೆಂಚ್ ಲಂಡನ್ ...ದೇಶಗಳಲ್ಲಿ ಇದನ್ನ ಬಹಳ ಉಪಯೋಗಿಸುತ್ತಾರೆ. ಕ್ಷೌರಿಕನ ಹತ್ತಿರ ಹೋಗುವ ಕೆಲಸವಿಲ್ಲ. ಒಂದು ಬಾಟ್ಲಿ ಬಹಳ ದಿವಸಕ್ಕೆ ಬರುವುದು

ವೆಡ್‌ಲಾಕ್ ಅಂಡ್ ಕಂಪೆನಿ, ಪಾರ್ಕ್‌ಟೌನ್ ಮದ್ರಾಸು

Wedlock & Co Park Town MADRAS.

ಲಿನಿಮೆಂಟ್ ಆಯಿಂಟ್‌ಮೆಂಟ್ ಎಂಬ ನಪುಂಸಕತ್ವಹಾರೀ ತೈಲವು

ಮನುಷ್ಯರಲ್ಲಿ ಪುರುಷಾರ್ಥವು ಕೇವಲ ಧಾತುವಿನಿಂದಲೇ ಇರುವುದು. ಮನುಷ್ಯರ ದೂಷಿತ ವೀರ್ಯವು ಗರ್ಭಕಾರಕವಾಗಲಾರದು ಅತ್ಯಂತ ಮೈಥುನದಿಂದಲೂ ವ್ಯಾಯಾಮ (ಕಸ್ರತ್)ದಿಂದಲೂ ಹಸ್ತ ಪ್ರಯೋಗಾದಿಗಳಿಂದಲೂ ಸ್ತ್ರೀ ಸಂಬಂಧ ವ್ಯಾಧಿಯಿಂದಲೂ ವಾಯು ಜಾಸ್ತಿ ಆದ್ದರಿಂದಲೂ ಶರೀರದ ಎಲ್ಲಾ ನಾಡಿಗಳು ಬಹಳ ಬಲಹೀನವಾಗುವುದರಿಂದ ಪುರುಷತ್ವವು ಬಲಹೀನವಾಗಿ ಸ್ತ್ರೀ ಸಂಗ ಮಾಡುವುದಕ್ಕೆ ಆಗುವುದಿಲ್ಲ. ಕೆಲವರು ಬಾಲ್ಯದಲ್ಲಿಯೂ ವೃದ್ಧಾಪ್ಯ(ಮುದುಕತನ)ದಲ್ಲಿಯೂ ಇಂಥಾ ವ್ಯಾಧಿಗಳನ್ನು ಉಂಟುಮಾಡಿಕೊಂಡು ತಮಗಿರುವ ವ್ಯಾಧಿಯನ್ನು ವೈದ್ಯರಲ್ಲಿ ಹೇಳಲು ನಾಚಿಕೆಯಿಂದ ವ್ಯಾಧಿಯನ್ನು ಹೆಚ್ಚು ಮಾಡಿಕೊಂಡು ಪ್ರಾಯ ಸಮರ್ಥರಾದಾಗ ರತಿಸುಖಕ್ಕೆ ಶಕ್ತಿಯಿಲ್ಲದೆ ಲಜ್ಜಾಸ್ಪದದಿಂದ ಆಶಾಭಗ್ನರಾಗಿ ಮನೋವ್ಯಥೆಯನ್ನುಂಟು ಮಾಡಿಕೊಳ್ಳುವವರು, ಇಂಥವರ ಉಪಯೋಗಕ್ಕೋಸ್ಕರವಾಗಿ ಇಂಗ್ಲೀಷ್ ಡಾಕ್ಟರುಗಳಿಂದ ಈ ತೈಲವನ್ನು ತಯಾರು ಮಾಡಲ್ಪಟ್ಟಿದೆ ಈ ಎಣ್ಣೆಯನ್ನು ಮೇಲೆ ಪುರುಷತ್ವಕ್ಕೆ ನಾಲ್ಕು ದಿನಗಳು ಸವರುವುದರಿಂದ ಗುಣವಾಗುವುದು.

ಕ್ರಯ ಸೀಸೆ 1ಕ್ಕೆ ರೂ 1—4—0

ಸಿ ರಾಜ ಅಂಡ್ ಕಂಪೆನಿ, 20 ಬೀಟ್, ಮದರಾಸು

ಮದನಕಳಾಶಾಸ್ತ್ರ ಎಂಬ ರಹಸ್ಯ ಪುಸ್ತಕ

ಕನ್ನಡ ಭಾಷೆಯಲ್ಲಿ ಸ್ತ್ರೀಪುರುಷರು ಪ್ರೀತಿಸುವ 22 ಫೋಟೋಗಳ ಸಹಿತ ಕೂಡಿದೆ ಇದರಲ್ಲಿ ಚೈನಾ, ಸಿಲೋನ್, ಆಫ್ರಿಕನ್, ಫ್ರೆಂಚ್, ಜರ್ಮನಿ, ಮಲೆಯಾಳ ಮೊದಲಾದ ದೇಶದ ಹೆಂಗಸರು ಪ್ರೀತಿಸುವ ಮರ್ಮಗಳು, ಮಲಗುವ ಮನೆಯಲ್ಲಿನ ವಿನೋದಗಳು, ವೇಶ್ಯಾಕನ್ನಿಗಳು ಮೋಹಿಸುವ ಉಪಾಯಗಳು, ಇನ್ನು ಸ್ತ್ರೀಪುರುಷರ ಲೀಲಾ ವಿನೋದಗಳು, ಮನೆಯ ಪ್ರೀತಿಯ ಫೋಟೋಗಳನ್ನು ನೋಡುತ್ತಾ, ಓದುತ್ತಾ ಕಡೆತನಕ ಪುಸ್ತಕ ಮುಗಿಯುವ ವರೆಗೂ ಶೃಂಗಾರವಾಗಿರುವುದು

ಕ್ರಯ 22 ಫೋಟೋಗಳ ಸಹಿತ ಪುಸ್ತಕಕ್ಕೆ 1—0—0.

ರಾಯಲ್ ಫೋಟೋ ಕಂಪೆನಿ, 19 ಬೀಟ್, ಮದ್ರಾಸು.

Royal Photo Company, 19 BEAT MADRAS

ಶ್ರೀಮತಿ ಡಿ. ರಾಜರಾಜೇಶ್ವರಮ್ಮ,

ಶಾರದಾ ವಿಲಾಸ, ದಿಗುಪಹಂಡಿ, ಗಂಜಾಂ ಜಿಲ್ಲೆ.

ಅವರು ಬರೆಯುತ್ತಾರೆ —

"ಮುಟ್ಟಾಗುವ ವೇಳೆ ನನ್ನ ಸಹೋದರಿಯು ಅಸಹನೀಯ ನೋವನ್ನನುಭವಿಸುತ್ತಿದ್ದಳು. ಆವಳು ದಿನೇ ದಿನೇ ಕೃಶಳಾಗುತ್ತಿದ್ದಳು ನಾವು ಅನೇಕ ಔಷಧಿಗಳನ್ನುಪಯೋಗಿಸಿದೆವು—ಫಲವಾಗಲಿಲ್ಲ. ಕಡೆಗೆ ನಿಮ್ಮ ಲೋಧ್ರದ ಖ್ಯಾತಿಯನ್ನು ಕೇಳಿದೆವು. ಎರಡು ಬಾಟ್ಲಿಗಳನ್ನು ಪಡೆದು ಅವಳಿಗೆ ಕೊಟ್ಟೆವು. ಆವಳು ಆಶ್ಚರ್ಯಕರವಾಗಿ ಗುಣಹೊಂದಿರುವಳು ಅಲ್ಲದೆ ಒಂದು ಹೆಣ್ಣು ಕೂಸೂ ಜನಿಸಿದೆ. ಈ ಸುವಾರ್ತೆಯನ್ನು ನಿಮಗೆ ಈ ಮೂಲಕ ತಿಳಿಸುವೆನು"

ಸ್ತ್ರೀಯರ ಎಲ್ಲಾ ರೋಗಗಳನ್ನೂ 'ಲೋಧ್ರ'ವು ಗುಣಪಡಿಸುತ್ತದೆ.

ಎಲ್ಲಾ ಕೆಮಿಸ್ಟರಲ್ಲಿಯೂ ದೊರೆಯುತ್ತದೆ.

ಕೇಸರಿ ಕುಟೀರಂ,

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

Solo Agents for South Kanara

ಪೋಪ್ಯುಲರ್ ಸ್ಟೋರ್ಸ್,

ರಥಬೀದಿ ಮಂಗಳೂರು.

ಸ್ತ್ರೀ ಪುರುಷರ ಸಲುವಾಗಿ ಶಕ್ತಿ ವ ಸ್ಫೂರ್ತಿಕೊಡುವಂತಹ

ಸುಮಧುರ

ಝಂಡು ದ್ರಾಕ್ಷಾಸವ

ಜರೂರು ಉಪಯೋಗಿಸಿರಿ

ಸ್ತ್ರೀಯರ ಸಲುವಾಗಿ ಆರೋಗ್ಯ ವ ಶಕ್ತಿವರ್ಧಕ.

ಪ್ರದರಾದಿ ರೋಗಗಳ ಮೇಲೆ ರಾಮಬಾಣ ಉಪಾಯ

ಝಂಡು ಅಶೋಕಾರಿಷ್ಟ

ಬೇಗನೇ ಉಪಯೋಗಿಸಿರಿ

'ZANDU'

ಝಂಡು ಫಾರ್ಮಾಸ್ಯುಟಿಕಲ್ ವರ್ಕ್ಸ್ ಲಿ: ಮುಂಬೈ.

ಮದ್ರಾಸು ಸಂಸ್ಥಾನದ ಏಜಂಟ್—ದಾಮೋದರ ಮತ್ತು ಕಂಪೆನಿ, 78 ಜೈನ ಬಜಾರ ರೋಡ್, ಮದ್ರಾಸು

ಮೈಸೂರು ಪ್ರೊವಿನ್ಸ್ ಏಜಂಟ್ —ಬಿ ಪೋಪಟ್‌ಲಾಲ ಕಂಪೆನಿ, ೫೫ ಅವೆನ್ಯೂ ಶ್ರೀನಿವಾಸಾಚಾರ ಸ್ಟ್ರೀಟ್

ಮಂಗಳೂರು ಏಜಂಟ್ —ಶಾಹಾ ಕಂಪೆನಿ ಡಾಯ್ಮಂಡ ಬಿಲ್ಡಿಂಗ್, ಮಂಗಳೂರು

ಧಾರವಾಡ ಏಜಂಟ್—ದಿ ಧಾರವಾಡ ಫಾರ್ಮಸಿ, ಧಾರವಾಡ

ಬೇರೆ ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತದೆ

ಆಯುರ್ವೇದ ಔಷಧಿಗಳ ಸೂಚೀಪತ್ರವನ್ನು ಮುಖ್ಯ ಏಜಂಟರಿಂದ ಪಡೆಕೊಳ್ಳಿರಿ

ನಮ್ಮ ಸಲಹೆಯೇ ಪ್ರಾಧಾನ್ಯವಾದದ್ದೆಂದು ತಿಳಿಯಬೇಡಿ.

ಕಲ್ಲಿಕೋಟೆ ಅಶೋಕ ಆಸ್ಪತ್ರೆಯ ಚೀಫ್ ಮೆಡಿಕಲ್ ಆಫೀಸರರಾದ ಡಾ। ವಿ. ಕೆ. ರಾಘುನ್, ಎಲ್. ಆರ್. ಸಿ ಎಸ್ ಇವರು ಬರೆದಿರುವುದನ್ನು ಓದಿ ನೋಡಿ—"ನಾನು ನಿಮ್ಮ ಆಶ್ಚರ್ಯಕರವಾದ ಜೀವಾಮೃತ ಟಾನಿಕನ್ನು ನರಗಳಲ್ಲಿ ಉರಿತ ಇರುವ ಹಸಿವು ಕಡಿಮೆಯಾಗಿರುವುದು, ತೂಕವು ಕಡಿಮೆಯಾಗಿರುವುದು, ಇವು ಪ್ರಾಪ್ತವಾಗಿರುವ ಅನೇಕ ರೋಗಿಗಳಿಗೆ ಕೊಡುತ್ತಿರುತ್ತೇನೆ, ಅದರ ಫಲಿತಾಂಶಗಳು ಬಹು ತೃಪ್ತಿಕರವಾಗಿದೆ. ಜೀವಾಮೃತವನ್ನು ದೇಹಶಕ್ತಿ ಕುಗ್ಗಿರುವ ಎಲ್ಲಾ ಸಂದರ್ಭಗಳಲ್ಲೂ ಜನರು ಸಾಮಾನ್ಯವಾಗಿ ಉಪಯೋಗಿಸಬಹುದೆಂದು ನಾನು ಮನಃಪೂರ್ವಕವಾಗಿ ಶಿಫಾರಸು ಮಾಡುತ್ತೇನೆ"

ಜೀವಾಮೃತವು

ನರಗಳಿಗೆ ಶಕ್ತಿ ಕೊಡುತ್ತದೆ. ವೀರ್ಯ ವೃದ್ಧಿಮಾಡುತ್ತದೆ. ಹಸಿವು ಹೆಚ್ಚಿಸುತ್ತದೆ. ರಕ್ತ ವೃದ್ಧಿಮಾಡುತ್ತದೆ.

ಪಂಡಿತ ಡಿ. ಗೋಪಾಲಾಚಾರ್ಯರವರ ಜೀವಾಮೃತವು

ಎಲ್ಲಾ ಔಷಧ ಮಾರುವವರಲ್ಲಿ, ಸ್ಟೋರುಗಳಲ್ಲಿ ದೊರೆಯುತ್ತದೆ. (ಸಂಪೂರ್ಣ ವಿವರಗಳಿಗೆ ಇವತ್ತೇ ಬರೆಯಿರಿ)

ಆಯುರ್ವೇದಾಶ್ರಮಂ, ಪೋ. ಬಾಕ್ಸ್ ನಂ. ೩೦೭, ಮದ್ರಾಸು.

ಸೋಲ್ ಏಜಂಟರು:—ಸಿಟಿ ಮೆಡಿಕಲ್ ಮತ್ತು ಜನರಲ್ ಏಜನ್ಸಿ, ಕೆ ಆರ್ ಮಾರ್ಕೆಟ್ ಬೆಂಗಳೂರು. (...)

ದಕ್ಷಿಣ ಕನ್ನಡದ ಏಜಂಟರು— ಪೋಪ್ಯುಲರ್ ಸ್ಟೋರ್ಸ್, ಮಂಗಳೂರು. P. No. 104

[illegible] ಪ್ಪ ಪೆನ್ [illegible]

[illegible] ಟನ್ ಪೆನ್.

[illegible] 14 ಕ್ಯಾರೆಟ್ ಬಂಗಾರದ [illegible] ಅಕ್ಷರಗಳು ಮುತ್ತುಗಳ [illegible]ಯುವದು.

ಕ್ರಯ [illegible] ರೂ. 2—12—0.

ಬೆಸ್ಟ ಪಾಕೆಟ್ ವಾಚ್.

[illegible] ಸರಿಯಾಗಿ ಕಾಲವನ್ನು ತೋರಿಸುವುದು. ನಿಕ್ಕಲ್ ಕೇಸ್, ಸರಪಣಿ ಸಹಿತ ಕ್ರಯ ರೂ. 3—4—0.

[illegible]

[illegible] ಗ್ಯಾರಂಟಿ [illegible] ಅಂಗಡಿಗಳಲ್ಲಿ [illegible] ಒಂದನ್ನು ತರಿಸಿ ನೋಡಿರಿ.

ಕ್ರಯ ರೂ. 8—0—0.

ಜಂಟ್ಸ್ ರಿಸ್ಟ್ ವಾಚ್.

[illegible] ಅಂದವಾಗಿದೆ. ಬಾಳಿಕೆ ಬರುವುದು. ಸರಿಯಾದ ಕಾಲವನ್ನು ತೋರಿಸುವುದು.

ನಿಕ್ಕಲ್ ಕೇಸ್, ಕ್ರಯ ರೂ. 5—0—0.

[illegible]—ಒಂದೇ ಸಲ ಈ ಮೇಲ್ಕಂಡ 4 ಸಾಮಾನು ಗಳನ್ನು ತರಿಸಿಕೊಂಡರೆ ಕ್ರಯ ರೂ. 18—0—0.

ಗ್ಯಾರಂಟಿಯಾದ ಮಾಲು ಒಂದು ಸಲ ತರಿಸಿ ನೋಡಿರಿ. ಪರಸ್ಥಳದ ಆರ್ಡರುಗಳನ್ನು ಪರೀಕ್ಷೆ ಮಾಡಿ, ಕಳುಹಿಸಲ್ಪಡುತ್ತೆ.

ವಿಳಾಸ:—

ಟಿ. ಸಿ. ನಾಗಲಿಂಗಂಪ್ಪಾ, ಮತ್ತು ಕಂಪೆನಿ,

[illegible] ವಾಲ್‌ಟ್ಯಾಕ್ಸ್ ರೋಡ್, ಪೋ. ಬೋ. ನಂ. [illegible],

ಪಾರ್ಕ ಟೌನ್, ಮದರಾಸು.

[illegible] ಕ್ಯಾಲೆಂಡರ್, ಫ್ರಿ [illegible]!

[illegible]



[illegible] ದುತ್ತದೆ. ಬೇಗನೆ ತರಿಸಿಕೊಳ್ಳುವವರಿಗೆ ಮಾತ್ರ ದೊರೆಯುವುದು.

T. R. Royal & Co.,
3. Krishnappa Nayakan,
Tank Street, Sowcarpet MADRAS

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು **ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು.**

ಕಸ್ತೂರಿ ಮಿಶ್ರಿತ ದಶಮೂಲಾರಿಷ್ಟ ೧೬ ಔನ್ಸ್ ಬಾಟ್ಲಿ ಗಳ್ಳೆ ರೂ. 1-8-0. ದ್ರಾಕ್ಷಾಸವ ೧೬ ಔನ್ಸ್ ಬಾಟ್ಲಿ 1ಕ್ಕೆ ರೂ. 1. ಅಶ್ವಗಂಧಾರಿಷ್ಟ ೧೬೦. ಔನ್ಸ್ ಬಾಟ್ಲಿ ಒಂದಕ್ಕೆ ರೂ. 1—4—0. ಅಬಲಾಮೃತ ೧೬ ಔನ್ಸ್ ಬಾಟ್ಲಿ ಗಳ್ಳೆ ರೂ 2. ಅಶೋಕಾರಿಷ್ಟ ೧೬ ಔನ್ಸ್ ಬಾಟ್ಲಿ ಗಳ್ಳೆ ರೂ. 1-4-0. ಜೀವನಪ್ರಾಶಲೇಹ ೧ ರಾತಿಗೆ ರೂ. 2-8-0. ಅಧಯಾಮಲಕಿ ೧ ರಾತ್ಲಿಗೆ ರೂ. 2. ಚಂದ್ರಮುಸ್ (ವಿಶೂಚಿಕೆಗೆ ರಾಮಬಾಣ) ಕಾಲು ಟಿನ್ನಿಗೆ ರೂ. 0—5—0. ದಂತಧಾವನ ಚೂರ್ಣ ತೊಲೆ ಗಳ್ಳೆ 0-1-0. ಕ್ರಿಮಿಘಾತಿನಿ (ದದ್ದು, ಕಜ್ಜಿಗೆ) ಡಬ್ಬಿ ಗಳ್ಳೆ ರೂ 0-4-0. ಕೃಷ್ಣಾಂಕ ೧ ಟಿನ್ನಿಗೆ ರೂ. 0-6—0 ಚಿತ್ರಕ (ಮಕ್ಕಳ ಗ್ರಹಣೀ ರೋಗಕ್ಕೆ ದಿವ್ಯೌಷಧ) ತೊಲೆ ಗಳ್ಳೆ ರೂ. 0—8—0. ಮಹಾ ಚಿತ್ರಕ ತೊಲೆ ಗಳ್ಳೆ ರೂ. 1-0-0. ಪಿಂಡ ತೈಲ ೫ ಔನ್ಸ್ ಬಾಟ್ಲಿ ಗಳ್ಳೆ ರೂ. 0-10-0. ಬಲಾಶ್ವಗಂಧಾದಿ ತೈಲ ೫ ಔನ್ಸ್ ಬಾಟ್ಲಿ ಗಳ್ಳೆ 0-12-0. ಹಿಮಸಾಗರ ತೈಲ ೫ ಔನ್ಸ್ ಬಾಟ್ಲಿ ಗಳ್ಳೆ ರೂ. 1-8-0. ಮಹಾಚಂದನಾದಿ ತೈಲ ೫ ಔನ್ಸ್ ಬಾಟ್ಲಿ ಗಳ್ಳೆ ರೂ. 1—0—0. ಶ್ರೀ ಗೋಪಾಲ ತೈಲ ೫ ಔನ್ಸ್ ಬಾಟ್ಲಿ ಗಳ್ಳೆ ರೂ. 3—8-0.

ನಮ್ಮ ಔಷಧಗಳು ದೊರೆಯುವ ಸ್ಥಳ:—ಮಂಗಳೂರು—ರಾಘವೇಂದ್ರ ರಂಗ ಪೈ ರಥಬೀದಿ, ಕೆನರಾ ಡಿಸ್ಪೆನ್ಸರಿ ಕೊಡಿಯಾಲಬೈಲ್. ಕುಂದೂರು—ಕೆ. ಪುತ್ತು ಕಾನುಭಾಗ. ಗಂಗೊಳ್ಳಿ—ಜಿ. ಸುರೇಂದ್ರ ನಾಯ್ಕ. ಕುಂದಾಪುರ—ಕೆ. ರಾಮ ಭಟ್. ಡಾಕ್ಟರ್ ಕೆ. ಆರ್. ಕಾಮತ್. ಉಡುಪಿ—ಪಿ. ಜನಾರ್ದನ ನಾಯಕ್ ಎಂಡ್ ಕೊ., ಪೈ ಫಾರ್ಮಸಿ, ಆರ್. ಎಸ್. ಶೆಟ್ಟಿ, ರಥಬೀದಿ. ಕಾರ್ಕಳ—ವಿ. ವಿ. ಶೆಟ್ಟಿ. ಕಾಪು—ಡಾಕ್ಟರ್ ಬಿ. ಕೆ. ಬೇಕಲ ಡಿಸ್ಪೆನ್ಸರಿ. ಬಟ್ಕಲ್—ವಾಮನ ನರಸಿಂಹ ನಾಯಕ್. ಬಾರ್ಕೂರು—ಬಿ. ಭಗವಂತ ಮಲ್ಯ, ಆರ್. ಪಿ. ಔಷಧಾಲಯ. ಬ್ರಹ್ಮಾವರ ಕೆ. ವೈಕುಂಠ ಪೈ ಎಂಡ್ ಸನ್ಸ್, ಕೆ. ಶೇಷಗಿರಿ ನಾಗಪ್ಪ ಎಂಡ್ ಸನ್ಸ್. ಎಲ್ಲೆಲ್ಲಿಯೂ ಏಜಂಟರು ಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಬಹುದು.

ನಾಯಕ್ ಬ್ರದರ್ಸ್, ಶ್ರೀಮದ್ಭುವನೇಂದ್ರ ಮಹೌಷಧಾಲಯ, ಪೋಸ್ಟು ಕಟಪಾಡಿ, ದ. ಕ.

The Canara Industrial & Banking Syndicate Limited.,

Established in 1925. **Head Office:—Mukunda Nivas, UDIPI.**

Branches: Mangalore, Payyanur, Brahmavar, Kumta, Karwar, Hubli. Honnavar, Bangalore & Cannanore.

Authorised Capital Rs, 5,00,000. Subscribed Capital Rs. 1,06,300. Paid up Capital Rs. 26,300 Issued Capital Rs. 2,00,000

STATEMENT OF AFFAIRS OF THE SYNDICATE AS ON 30TH November 1933.

Liabilities.			Assets.		
Paid up Capital	Rs.	26,300—0—0.	Loans on Land mortgage	Rs.	2,71,186—9—2.
Reserve & other funds	,,	20,250—0—0.	Loans on Valuable Securities	,,	2,29,690—7—9.
Deposits	,,	10,64,121—4—10.	Loans on Bills of Exchange, Hundis and Promissory Notes		4,73,634—4—0.
Due to Bankers	,,	1,19,606—0—6.	Investment on Shares of other Companies	,,	43,575—0—0.
			Investments on Government of Mysore Conversion Loan	,,	50,000—0—0.
			On Deposits with other Bankers	,,	1,11,000—0—0
Bills for Collection	,,	29,283—1—3.	Bills for collection (per contra)	,,	29,283—1—3.
Sundries	,,	1,19,281—3—11.	Sundries	,,	1,40,794—4—10.
			Cash in hand & with Bankers	,,	29,677—15—6.
Total Rs.		13,78,841—10—6.	Total Rs.		13,78,841—10—6.

Long and Short term Loans on attractive Schemes are granted.

ALL KINDS OF BANKING BUSINESS UNDERTAKEN.

Udipi, 1-12-1933.

P. A. Pai Bros.,
Managing Agents.

[illegible]

(1) South Canara, (2) Mysore, Hassan and Coorg, (3) Kadur, Shimoga, Chitaldroog and Tumkur, (4) Mangalore, Kolar.

For terms and other particulars please apply to—

The Divisional Manager,
The South Indian General Assurance Co. Ltd.
64, 3rd Cross Road, Srirampur Extn.
Malleswaram Post, BANGALORE.

OR

The Managing Agents,
The S. I. G. A. Co. Ltd.
55, Poonamallee High Road, Kilpauk, MADRAS.

ಪಂಡಿತ ಜವಾಹಿರಲಾಲ ನೆಹರೂ ಬಂದಾಗ್ಗೆ ಹುಬ್ಬಳ್ಳಿ ಪ್ರದರ್ಶನದಲ್ಲಿ ಸುವರ್ಣಪದಕ ದೊರೆತ

ಒಂದೇ ಸವನಾಗಿ ೩೫ ವರ್ಷದ ಅನುಭವದಿಂದ

ಹಿಂದೂಸ್ಥಾನದ ಸಾವಿರಾರು ಜನರಿಂದ ವರ್ಣಿಸಲ್ಪಟ್ಟ ಆಯುರ್ವೇದೋಕ್ತ

ತಾಜಾ ಮತ್ತು ಶಾಸ್ತ್ರೀಯ ವನಸ್ಪತಿಗಳಿಂದ ತಯಾರಾಗಿರುವ ಮತ್ತು ಅದರ ಗುಣಕ್ಕಾಗಿ ಅನೇಕ ಸರ್ಟಿಫಿಕೇಟುಗಳು ಮತ್ತು ಬಂಗಾರದ ಪದಕಗಳು ದೊರೆತಿರುವ ಪರದೇಶದಲ್ಲಿ ಹೋಗುವ ಶಕ್ತಿಯು ಮೇಲೆ ಮೊದಲನೆ ಪದಗಳ ...

ದ್ರಾಕ್ಷಾಮೃತ

ಈ ದ್ರಾಕ್ಷಾಮೃತವು ಸಹ್ಯಾದ್ರಿ ಪರ್ವತದಲ್ಲಿರುವ ಅನೇಕ ವನಸ್ಪತಿಗಳ ರಸಾರ್ಕಗಳೊಂದಿಗೆ ದ್ರಾಕ್ಷಾರಸವನ್ನು ಮಿಶ್ರಮಾಡಿ ಸ್ವದೇಶೀ ಯಂತ್ರದಿಂದ ಶಾಸ್ತ್ರೋಕ್ತ ಪದ್ಧತಿ ಪ್ರಕಾರ ತಯಾರ ಮಾಡಿರುವುದರಿಂದ ಸ್ವಾದಿಷ್ಟವು ಮತ್ತು ಮಧುರವು ಆಗಿದೆ.

ಇದರ ಸೇವನೆಯಿಂದ ಶರೀರದೊಳಗಿನ ಹಳೇ ಕಡಕಿ (ಗರಮಿ) ಸಂಪೂರ್ಣ ನಾಶವಾಗುತ್ತದೆ ಮತ್ತು ಧಾತುಸ್ರಾವ, ಸ್ವಪ್ನ ದೋಷ ... ಶಕ್ತಿಯು ಬೆಳೆಯುತ್ತದೆ. ... [illegible]

ಈ ಔಷಧದ ೩ ಬಾಟ್ಲಿಗಳನ್ನು ಸೇವನೆ ಮಾಡಿದರೆ ಪೂರ್ಣ ಗುಣ ಬರುತ್ತದೆ. ಇದರ ಅನುಭವ ೧ ಬಾಟ್ಲಿ ಸೇವನೆಮಾಡಿದ ನಂತರ ತಿಳಿದೀತು.

ಬಾಟ್ಲಿ ಬೆಲೆ ೧–೪–೦, ೩ ಬಾಟ್ಲಿಗೆ ೩–೮–೦. ... ಪೋಸ್ಟೇಜ ಬೇರೆ ಬೀಳುತ್ತದೆ.

ಪ್ರಸಿದ್ಧ ಕೆಮಿಸ್ಟ ಮತ್ತು ಸ್ಟೋರ್ಸದೊಳಗೆ ಮತ್ತು ಕಿರಾಣಿ ಅಂಗಡಿಯಲ್ಲಿ ಸಿಗುವುದು.

ಮ್ಯಾನೇಜರ— ದ್ರಾಕ್ಷಾಮೃತ ಕಾರ್ಯಾಲಯ, ... (ಬೆಳಗಾಂವಿ)

ಸಿಕ್ಕುವ ಸ್ಥಳ:— ಮಂಗಳೂರು—ಗಜಾನನ ಮೆಡಿಕಲ್ ಹಾಲ್ ಮತ್ತು ಮಿಟ್ಠಾರ್‌ಲಾಲ್ ಬ್ರದರ್ಸ್, ಕಾರ್‌ಸ್ಟ್ರೀಟ್. ಕುಂದಾಪುರ—ಕೆ. ಆರ್. ಭಟ್ಟ, ಉಡುಪಿ—ಪೈ ಫಾರ್ಮಸಿ, ಮತ್ತು ಕೆ. ಶೇಷಗಿರಿ ಪೈ. ಕಾರ್ಕಳ— ಪಿ. ವಿ. ಶೆಟ್ಟಿ. ಪುತ್ತೂರು—ಗೋಪಾಲ ನಾರಾಯಣ ಪೈ ಮತ್ತು ಪೈ ಫಾರ್ಮಸಿ. ಕಾಸರಗೋಡು— ಕೆ. ರಾಮ ನಾಯ್ಕ, ಕೋರ್ಟ ರಸ್ತೆ. ಬಂಟವಾಳ— ಬಿ. ಎಚ್. ವಾಸುದೇವ ಪೈ.

2–6–'38

ನಿಮಗೆ ಭಕ್ತಿ, ಜ್ಞಾನಗಳು ಬೇಕೋ? ಹಾಗಾದರೆ ಶ್ರೀ ಭಾಗವತವನ್ನು ಓದಿರಿ.

ಕನ್ನಡ ಟೀಕಾತಾತ್ಪರ್ಯಾದಿ ಸಹಿತ

ಶ್ರೀ ಭಾಗವತ ಮಹಾಪುರಾಣ.

ಆಸ್ಥಾನ ಮಹಾವಿದ್ವಾನ್ ... ರಾಮಶೇಷಶಾಸ್ತ್ರಿಗಳಿಂದ ಪ್ರಕಟಿಸಲ್ಪಟ್ಟುದು. [illegible] ಸ್ಕಂಧಗಳು 7 ಸಂಪುಟಗಳಲ್ಲಿ ಪ್ರಚಾರವಾಗಿರುವುದು ಸರಿಯಷ್ಟೆ. ಈಗ 11–12ನೇಯ ಸ್ಕಂಧಗಳುಳ್ಳ ಎಂಟನೆಯ ಸಂಪುಟವು ಪೀಠಿಕಾ ವಿಮರ್ಶೆಗಳೊಡನೆ ಬೆಳಗಿ ಸಿದ್ಧವಾಗಿದೆ. ಹಿಂದಿನ ಗ್ರಾಹಕ ಮಹಾಶಯರೂ ದೇಶಬಾಂಧವರೂ ಸಹಾ ಪ್ರೋತ್ಸಾಹಿಸಬೇಕೆಂದು ಪ್ರಾರ್ಥನೆ.

1ನೇಯ ಸಂಪುಟ (1–2ನೇ ಸ್ಕಂಧಗಳು)	3—4—0	7ನೇಯ ಸಂಪುಟ ([illegible])	4—8—0
2 ,, ,, (3ನೇಯ ಸ್ಕಂಧ)	3—12—0	8 ,, ,, (11, 12ನೇಯ ಸ್ಕಂಧಗಳು [illegible])	4—8—0
3 ,, ,, (4 ,, ,,)	3—8—0	ಶ್ರೀ ಭಾಗವತ [illegible]	[illegible]
4 ,, ,, (5-6ನೇಯ ಸ್ಕಂಧಗಳು)	4—0—0	[illegible]	[illegible]
5 ,, ,, (7, 8, 9 ಸ್ಕಂಧಗಳು)	5—8—0	([illegible])	
6 ,, ,, ([illegible])	5—0—0		

ಈ ಬೆಲೆಗಳಿಗೆ ಟಪ್ಪಾಲು ಹಾಸಲು ಸೇರಿಲ್ಲ. ... ವಿಷಯಗಳಿಗೆ [illegible]

ಎಂ. ಆರ್. ಶ್ರೀಕಂಠ ಶಾಸ್ತ್ರಿ, [illegible]

[illegible]

ಕೋ-ಒಪರೇಟಿವ್ ಸೊಸೈಟಿಗಳಿಗೆ

ಬೇಕಾದ ನಮೂನೆಯ ಎಲ್ಲಾ ವಿಧದ ಫಾರಂಗಳು, ರಜಿಸ್ಟರುಗಳು, ರಶೀದಿ ಪುಸ್ತಕಗಳು, ಮತ್ತು ಇತರ ಫಾರಂಗಳೂ ದೊರೆಯುತ್ತವೆ.

ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್.

ರಥಬೀದಿ, ಮಂಗಳೂರು.

ಶಹಾ ಶಿವಾಜಿ ಹಿಂದೂ ರೆಸ್ಟೋರೆಂಟ್

ಗಣಪತಿ ಹೈಸ್ಕೂಲ್ ರಸ್ತೆ, ಮಂಗಳೂರು (ದ. ಕ.)

ಮಂಗಳೂರಿನ ನೂತನ ಉಪಹಾರ ಗೃಹ.

ಶುದ್ಧ ಜೀನಸುಗಳಿಂದ, ತಾಜಾ ತುಪ್ಪದಿಂದ ತಯಾರಿಸಲ್ಪಡುವ ಮಿಠಾಯಿಗಳು ಅನ್ನೆಷ್ಟೋ ಬಗೆಯ ತಿಂಡಿ ತಿನಸುಗಳು—ಚಹಾ, ಕಾಫಿ, ಕೋಕೋ ಇತ್ಯಾದಿ ಎಲ್ಲ ತರದ ಪಾನೀಯಗಳು

ಅನುಭವಸ್ಥರಿಂದ ತಯಾರಿಸಲ್ಪಡುವುವು.

ಆಯಾಯಾ ಕೆಲಗಳಿಯವರಿಗನುಕೂಲವಾಗುವಂತೆ ಸ್ಥಳವಿದೆ.

ಒಮ್ಮೆ ದಯಮಾಡಿಸಿ, ಪರೀಕ್ಷಿಸಿ ತೃಪ್ತಿ ಪಡೆಯಿರಿ.

[ಟೀ ಪಾರ್ಟಿ, ವಿವಾಹ ಉಪನಯನಾದಿ ಸಮಾರಂಭಗಳಲ್ಲಿ ಸುಲಭ ದರಗಳಲ್ಲಿ ತಿಂಡಿತಿನಸು—ಪಾನೀಯಗಳನ್ನು ಒದಗಿಸಲಾಗುವುದು. ವಿಶೇಷ ಮಾಹಿತಿಗೆ ಖುದ್ದಾಗಿ ಯಾ ಪತ್ರದ್ವಾರಾ ವಿಚಾರಿಸಿಕೊಳ್ಳುವುದು]

Seventy seven Years!

Two generations of approved service enables us to pick and choose what is cheap lasting & good to suit the pockets & the tastes of our longstanding wide circle of

CUSTOMERS

who know our

Premier House for Swadeshi Mill Yarns—Handloom Cloths, Dhoties—Sarees—Chintzes etc.

Shrinivas Ranga Pai,

[illegible]

Car Street, [illegible]

ವರ್ಷಕ್ಕೆ — ವರ್ಷದ ಮುಂದಕ್ಕೆ ಕ್ರಯ 3-0-0 ಸರಕಾರದ ರಿಜಿ. ನಂ. 495 ಟಪ್ಪಾಲು ಹಾಸಲು ಸೇರಿ ರೂಪಾಯಿ 3-13-0

ಸ್ವದೇಶಾಭಿಮಾನಿ.

(ಕೀರ್ತಿಶೇಷ ವಿ. ಶ್ರೀನಿವಾಸಕಾಮತರಿಂದ ೧೯೦೭ರಲ್ಲಿ ಸ್ಥಾಪಿತವಾದುದು.)

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾಗರದ ಮಥಿಸಲು ಸುರರಿಗದರಿ । ಹರುಷವಾಯಿತೆ ಮತ್ತೆ ವಿಷವ ಸುಡುತ ಬರುತಿರುವ ॥
ಗರಲಕವರಂಜಿದರೆ ಸುಧೆಯನು । ಮರೆತು ಕ್ಷಣದ ತೆರದಿ ಕುಳಿತರೆ । ತೆರಳ ಬಲ್ಲರೆ ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

(Oldest Kanarese Weekl in South Kanara)

ಪುಸ್ತಕ ೨೮. ಮಂಗಳೂರು, ತಾ ೯ನೇ ಶುಕ್ರವಾರ ಫೆಬ್ರವರಿ ೧೯೩೪ 9-2-'34) ಸಂಚಿಕೆ ೬

THE CANARA BANKING CORPORATION, UDIPI, LTD.

(Incorporated in British India)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI. **Branches:—Coondapoor, Mangalore, Shimoga & Madras**

NOTICE

is hereby given that the ORDINARY GENERAL MEETING of the share-holders of the Corporation will be held at UDIPI on Sunday, the 11th day of February 1934, at 10 A M

The Share transfer books of the Corporation will remain closed from 20-1-1934 to 15-2-1 34

By Order

UDIPI 18-1 '34

N ANANDA RAO
Manager

(Regd.)

ಅಮೃತಾಂಜನ.

ಈ ಕಟ್ಟು ಕಾಯೋವೇದನೆ, ಕಣ್ಣುಕೊಡುವ ವಾತ, ಥಂಡಿ ನೋವು, ವಿಶೇಷ ಉಳುಕು, ಅಸಹನೀಯ ಹಲ್ಲುನೋವು, ವಿಪರೀತ ಛಾಯ ಒಹು ಶೀತ, ಸಹಿಸಲಶಕ್ಯವಾದ ಚಳಿ, ಕೈಕಾಲು ಮರಗಟ್ಟುವುದು, ಉಂಟಾಗೊ ಮೊದಲಾದ ಎಲ್ಲಾ ತರದ ಬೇನೆಗಳನ್ನೂ ಅತೀ ತ್ವರೆಯಲ್ಲೇ ಗುಣ ಪಡಿಸುತ್ತದೆ ಎಲ್ಲೆಲಿಯೂ ಮಾರಲ್ಪಡುತ್ತಿದೆ

ರಿಂಗ್‌ವರ್ಮ್ ಮುಲಾಮು — ಇದು ರಿಂಗ್‌ವರ್ಮನ್ನೂ ಕಜ್ಜಿಯನ್ನೂ ಇನ್ನಿತರ ಚರ್ಮರೋಗಗಳನ್ನೂ, ಮೂರ ದಿನದೊಳಗೆ ಗುಣಪಡಿಸುತ್ತದೆ.

ಡಬ್ಬಿ 1ಕ್ಕೆ 6 ಆಣೆ ಡಜನಿಗೆ ರೂ 3-8-0. ಅಂಚೆವೆಚ್ಚ ಪ್ರತ್ಯೇಕ

ಅಮೃತಾಂಜನ ಡಿಪೋ,

ಮದರಾಸು ಮತ್ತು ಬೊಂಬಾಯಿ.

ಬೊಂಬಯಿ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

ಸ್ಥಾಪಿತವಾದುದು ಬೊಂಬಾಯಿ 1908ರಲ್ಲಿ.

ಚೆಯರ್‌ಮಾನ್—ಸರ್ ಲಲ್ಲೂಭಾಯಿ ಶ್ಯಾಮಲದಾಸ್ ಕೆಟಿ ಸಿ ಐ ಇ ಜೆ ಪಿ

ಜೀವವಿಮೆಯ ಪದ್ಧತಿಯಲ್ಲಿ ಅತ್ಯುತ್ಕೃಷ್ಟವಾಗಿರುವ ಎಲ್ಲ ಸೌಕರ್ಯಗಳನ್ನೂ ಈ ಸಂಸ್ಥೆಯು ಒದಗಿಸಿ ಕೊಡುತ್ತದೆ ಕಾಲೋಚಿತವಾದ ಆವಶ್ಯಕತೆಗಳಿಗೊಪ್ಪುವ ಸರ್ವೋತ್ತಮವಾದ ಯೋಜನೆಗಳು ಸ್ತ್ರೀಯರ ಜೀವವಿಮೆಯನ್ನೂ ಸ್ವೀಕರಿಸಲಾಗುತ್ತದೆ

ಸಂಯುಕ್ತ ಜೀವನ ವಿಮಾ ಪದ್ಧತಿಯು ಇದರದೊಂದು ವೈಶಿಷ್ಟ್ಯವೇ

ಏಜನ್ಸಿಯ ನಿಯಮಗಳು ಬಹಳ ಉದಾರ! ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ — ಯೋಗ್ಯ ಗೃಹಸ್ಥರಿಗೆ ಅತ್ಯುತ್ತಮ ಸಂದರ್ಭ!

ಕೊಚ್ಚಿಕಾರ್ ಬ್ರದರ್ಸ್, ಮದ್ರಾಸು ಶಾಖೆಯ ಕಾರ್ಯದರ್ಶಿಗಳು ಮತ್ತು ಬೊಂಬಯಿ ನಗರಕ್ಕೂ, ನಗರದ ಆಸುಪಾಸಿಗೂ ಮುಖ್ಯ ಏಜೆಂಟರುಗಳು

ಆಫೀಸುಗಳು.—

ಮದ್ರಾಸು	ಬೆಂಗಳೂರು	ಮಂಗಳೂರು	ಬೊಂಬಯಿ	ಉಡುಪಿ.
ಪೋಸ್ಟ್ ಬಾಕ್ಸ್ ನಂಬ್ರ 337	ವಿಶ್ವೇಶ್ವರಪುರಂ ಸರ್ಕಲ್	ಕಾರ್ಪರೇಶನ್ ಆಫೀಸು,	ಇಸ್ಮಾಯೇಲ್ ಬಿಲ್ಡಿಂಗ್	ದಕ್ಷಿಣ ಇಂಡಿಯ
ಮೌಂಟ್ ರೋಡ್.	ಬೆಂಗಳೂರು ಸಿಟಿ	ಕಾರ್ ಸ್ಟ್ರೀಟ್	ಲಾಹರ್ ಚಾಲ್	

ನಿಮ್ಮ ಕುಟುಂಬದ ಸದಾರೋಗ್ಯ

ರುಚಿಕರವಾದ ಓವಲ್ಟಿನ್ನನ್ನು ನಿಮ್ಮ ಕುಟುಂಬದ ಪಾನೀಯವಾಗಿ ದಿನನಿತ್ಯ ಉಪಯೋಗಿಸಿರಿ. ಪ್ರಕೃತಿಸಿದ್ಧವಾದ ಪಾನೀಯವು ನಿಮ್ಮ ಕುಟುಂಬದವರ ಆರೋಗ್ಯವನ್ನು ವೃದ್ಧಿಸುವುದು. ಓವಲ್ಟಿನ್ ಎಂಬುದು ಸಂಪೂರ್ಣ ಮತ್ತು ಸಂತೃಪ್ತಿಕರವಾದ ಆಹಾರ. ಇದನ್ನು ಸೃಷ್ಟಿಯ ಅಮೂಲ್ಯ ಪೋಷಕ ಆಹಾರಗಳಿಂದ ತಯಾರಿಸಲಾಗಿದೆ. ಬೆಳೆದ ಬಾರ್ಲಿ, ದನದ ದಪ್ಪ ಹಾಲು ಮತ್ತು ವಿಶಿಷ್ಟ ಕೋಕೋಗಳಿಂದ ಇದು ತಯಾರಾಗಿದೆ. ಆರೋಗ್ಯ, ಮತ್ತು ಶಕ್ತಿವರ್ಧನೆಗಳಿಗಾಗಿ ಇದು ಎಲ್ಲಾ ಚೈತನ್ಯವನ್ನು ಕೊಡುತ್ತದೆ.

ಬೆಳಗ್ಗೂ ರಾತ್ರಿಯೂ ಒಂದು ಕಪ್ ಓವಲ್ಟಿನ್ ತೆಗೆದುಕೊಂಡರೆ ಇದು ನಿಮ್ಮನ್ನು ಆರೋಗ್ಯವಂತರನ್ನಾಗಿ ಇಡುವುದು. ದಿನದ ಕೆಲಸಕ್ಕೆ ಇದು ಚೈತನ್ಯಶಕ್ತಿಗಳನ್ನು ಕೊಟ್ಟು ರಾತ್ರಿ ಗಾಢ ನಿದ್ರೆಯನ್ನು ಅದರ ಅಮೋಘ ಶಕ್ತಿಯಿಂದ ಕೊಡುತ್ತದೆ. ನಿಮ್ಮ ಕುಟುಂಬವು ಇದರ ರುಚಿಯನ್ನರಿತು ಆರೋಗ್ಯವಂತರಾಗಿ ಬಾಳಲಿ.

OVALTINE

ಮೆದುಳು, ನರ ಮತ್ತು ದೇಹವನ್ನು ವೃದ್ಧಿಸುತ್ತದೆ.

ತಯಾರಿಯಲ್ಲಿ ಕೈಯಿಂದ ಸ್ಪರ್ಶಿತವಾಗಿಲ್ಲ. ಎಲ್ಲ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಸಿಗುತ್ತದೆ.

ಏಜಂಟ್ಸ್—ಜೇಮ್ಸ್ ರೈಟ್, 8-ಎ ಏಜ್ರಾ ಸ್ಟ್ರೀಟ್, ಕಲ್ಕತ್ತ ಮತ್ತು ಬೊಂಬಾಯಿ ಮದ್ರಾಸುಗಳಲ್ಲಿ

OV/310

NOTICE

In the Court of the District Munsif of Kasaragod

O. P. No. 4/1934

Between

1. Beepathumma, 2. Aisabi, 3. Mahamad Sha Mograf, 4. Khadijabi—Petitioners.

and

1. M. K. Mahamad Beary, 2. Kunhamu Sha Mograf—Respondents.

Notice is hereby given that the Petitioners who are the heirs of the deceased Hassan Sha Mograf have filed the above petition for the grant to them of a succession certificate under Sec. 370 and 372 of the Succession Act authorising them to collect the debts due to the said deceased Hassan Sha Mograf and the said petition stands posted to 13—2—1934.

Kasaragod, 1—2—1934. — **K. P. Anantha Rao,** Advocate for Petitioners.

++ ++

ಕ್ಷಯಕ್ಷೀಣಾದಿಗಳಿಗೆ

ಚ್ಯವನಪ್ರಾಶಾನ ಲೇಹ.

ಪ್ರಸೂತಿ ರೋಗಾದಿಗೆ

ದಶಮೂಲಾರಿಷ್ಟ.

(ಕಸ್ತೂರಿ ಮಿಶ್ರಣ)

ಸಮಸ್ತ ವಾತರೋಗಗಳಿಗೆ

ಮಹಾನಾರಾಯಣ ತೈಲ.

ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ,

ಡೊಂಗರಕೇರಿ ರಸ್ತೆ, ಮಂಗಳೂರು.

++ ++

ಸ್ವದೇಶಾಭಿಮಾನಿ

ಪತ್ರಿಕೆಯ ಚಂದಾದಾರರು ಪತ್ರವ್ಯವಹಾರಗಳಲ್ಲಿ ತಮ್ಮ ಚಂದಾ ನಂಬರುಗಳನ್ನು ನಮೂದಿಸ ಬೇಕು. ಅವುಗಳಿಲ್ಲದ ಪತ್ರಗಳಿಗೆ ಸರಿಯಾದ [illegible] ಸಿಗುವುದಿಲ್ಲ.

ಮೆನೇಜರ್.

[illegible] ದೌಲತ್ತು ಜಾ!

[illegible] ಎಲ್ಲರಿಗೆ [illegible] ಬೇಕು! [illegible] — [illegible] ಹಣವನ್ನು [illegible]!

× × × ×

ಈ ಮಹಾ ನವಾಬರು ಲಂಡನಿನಲ್ಲಿ ಆಟದ ಸಾಮಗ್ರಿಗಳ [illegible] ಯನ್ನು ಹೊಕ್ಕರು. ಎರಡು ತಾಸು ಕಳೆಯುವಷ್ಟರಲ್ಲಿ [illegible] ಹೊಸ ರೀತಿಯ ಆಟದ ಸಾಮಾನುಗಳನ್ನು ಕೊಂಡರು! ಬಿಲ್ ಬಂತು! ಎಷ್ಟಕ್ಕೆ? ರೂಪಾಯಿಗೆ ಅಲ್ಲ!—೭೫೦ ಪೌಂಡುಗಳಿಗೆ!!!

× × × ×

ಮಕ್ಕಳ ಆಟದ ಸಾಮಗ್ರಿಗಳಿಗಾಗಿ ೭೫೦ × ೧೫ = ರೂಪಾಯಿ ೧೧,೨೫೦ ವೆಚ್ಚ ಮಾಡಿದ ನವಾಬರು ನಿಜವಾಗಿಯೂ ನವಾಬರಲ್ಲವೆ?

× × × ×

ಪೌಂಡು ೬೫೦ ಕೊಟ್ಟು ಒಂದು ಆಟದ ಮನೆಯನ್ನು ಕೊಂಡುಕೊಂಡಿರುವರಂತೆ. ಇದರೊಳಗೆ ಮಂಚ, ಕುರ್ಚಿ, ಹಾಸಿಗೆಗಳೂ ಇವೆಯಂತೆ. ಒಂದು ಮಗುವು ಸಂಗಾತಿಗಳೊಡನೆ ಮನೆ ಮಾಡಿ ಆಟವಾಡಬಹುದಂತೆ. ಜೈ! ನವಾಬರಿಗೆ!!!

× × × ×

ಹಿಂದೂಸ್ಥಾನದಲ್ಲಿ ಭಯಂಕರ ಭೂಕಂಪವಾಗುವಾಗ ನವಾಬರ ವಿಚಿತ್ರ ಭೂಕಂಪವಾಯಿತು। ಪೌಂಡುಗಳ ಭೂಕಂಪವು ಲಂಡನ್ ನಗರದಲ್ಲೇ ಆಗಬೇಕೆ? ಹಿಂದೀಯರ ನಶೀಬ್! ನವಾಬರ ನಕ್ಷತ್ರವು ಒಳ್ಳೆಯದಿರಲೇ ಬೇಕು! ನವಾಬರಿಗೆ ದೌಲತ್ತು ಜಾ!

× × × ×

ದರ್ಭಂಗ ಮಹಾರಾಜರು ಬೇಕಾದ ಹಾಗೆ ವೆಚ್ಚ ಮಾಡುವುದರಲ್ಲಿ ಕಡಿಮೆಯವರೇನಲ್ಲ! ಪಾಪ! ಅವರ ಅರಮನೆಯು ಭೂಕಂಪಕ್ಕೊಳಗಾಗಿ ಕುಟುಂಬದ ಕೆಲವರು ಆಹುತಿಯಾದರು! ಸುಖಪೋಟ್ಟಿಗೆ ಕಷ್ಟವು ಹೊರತಿಲ್ಲ ಎಂಬುದು ಅವರಿಗೆ ತಿಳಿದುದೇ ದೊಡ್ಡದು!

× × × ×

ಆಲ್ವಾರಿನ ಮಹಾರಾಜರು ಮನವಿದ್ದಂತೆ ವೆಚ್ಚ ಮಾಡಿ, ಕೊನೆಗೆ ಕಿರೀಟವನ್ನೇ ಬಿಟ್ಟು ಇಂಗ್ಲಾಂಡಿಗೆ ಹೋಗಬೇಕಾಯಿತು! ಬಹಳ ಕಷ್ಟದಿಂದ, ಉಸುರು ಕಟ್ಟಿ ಅಲ್ಲಿಗೆ ಹೋಗಿ, ದುಡ್ಡಿನಡಚಣೆಯನ್ನು ಅನುಭವಿಸಿದರು!

× × × ×

ಆದರೆ, ಸ್ವದೇಶಕ್ಕೆ ತೆರಳುತ್ತಲೇ ಅವರಿಗೆ ಇಲ್ಲಿಯ ಅಗ್ಗದ ದುಡ್ಡಿನ ಸ್ಮರಣೆಯಾಯಿತು! ಊರಿಗೆ ಹೋದರೆ ತಾನು ಮಹಾರಾಜನೆಂದೇ ನಿರ್ಧರಿಸಿ ಲಂಡನಿನ ಒಬ್ಬ ಟೈಲರನನ್ನು ಆಲ್ವಾರಿಗೆ ಕೊಂಡೊಯ್ದು ಕೆಲವು ಪೌಂಡುಗಳನ್ನು ಕೊಟ್ಟು, ತನ್ನ ಕೋಟಿನ ಗುಂಡಿಯೊಂದನ್ನು ಸರಿಮಾಡಿಸಿ ಅವನನ್ನು ಊರಿಗೆ ಹಿಂದೆ ಕಳುಹಿಸಿದರಂತೆ!

× × × ×

ದುಡ್ಡೆಂಬುದು ಚಿತ್ತಚಾಂಚಲ್ಯ (Temptation) ಉಂಟುಮಾಡುವ ವಸ್ತುವೆಂದು ತಿಳಿದು, ಈ ಮಹಾರಾಜರುಗಳು ಹೀಗೆ ಸಿಕ್ಕಂತೆ ಹಣ ವೆಚ್ಚ ಮಾಡುತ್ತಿರಬಹುದು!

× × × ×

ನಮ್ಮ ಯುವಕರು ಸ್ವದೇಶಪ್ರೇಮದಿಂದ ವಿದೇಶಿ ಸಿಗರೇಟುಗಳನ್ನು ಕ್ರಯ ಕೊಟ್ಟು ಪಡೆದು ಅವುಗಳನ್ನು ಬಾಯಿಯಲ್ಲಿಟ್ಟು, ಸುಟ್ಟು, ದೇಶೀ ಬಹಿಷ್ಕಾರ ಚಳವಳವನ್ನು ಹೂಡುವ ಹಾಗೆ, ಈ ಮಹಾ ಮಹಾ ರಾಜರುಗಳು ಹಣವನ್ನು ಹೀಗೆ ವೆಚ್ಚ ಮಾಡುತ್ತಿರಬಹುದು!

× × × ×

ಆದರೆ ಸಿಗರೇಟುಗಳನ್ನು ಬಾಯಿಯಲ್ಲಿಟ್ಟು ಸುಟ್ಟು, ಪರದೇಶೀ ಬಹಿಷ್ಕಾರ ಚಳವಳವನ್ನು ಹೂಡುವ ಯುವಕರು ಕೊನೆಗೆ ಕೆಮ್ಮು ಹಿಡಿದು ಕಷ್ಟಕ್ಕೆ ತುತ್ತಾಗುವಂತೆ, ಈ ರಾಜರುಗಳೂ ಆಗದಿದ್ದರೆ ನಮಗೂ ನಿಮಗೂ ಸಂತೋಷ!

× × × ×

ಮೊನ್ನಿನ ಭೂಕಂಪಕ್ಕೆ ಗೊಂಡಾಲದ ಮಹಾರಾಜರು ೧ ಲಕ್ಷ ರೂಪಾಯಿಗಳನ್ನು ದಾನ ಮಾಡಿ ಲೋಕದಲ್ಲೆಲ್ಲಾ ಗೊಂದಲವೆಬ್ಬಿಸಿದರು. ಬರೇ ೧೫೦೦ ಪೌಂಡುಗಳನ್ನು ಅದಕ್ಕಾಗಿ ದಾನ ಮಾಡಿದ ನಮ್ಮ ಜಾರ್ಜ ಚಕ್ರವರ್ತಿಯವರೂ ಅವರ ಪತ್ನಿಯವರೂ ಆಶ್ಚರ್ಯಗೊಂಡಿರಬೇಕು!

× × × ×

ನಮ್ಮ ಐದನೇ ಜೋರ್ಜರು ಭೂಕಂಪ ನಿಧಿಗೆ ೧೦೦೦ ಪೌಂಡುಗಳನ್ನು ಕೊಟ್ಟುದನ್ನು ಕಂಡು ಕೆಲವರಿಗೆಲ್ಲಾ ಬೇಸರ ಕಾಣಿ! ಈ ಜನರ ಬೇಸರ ನೋಡಿ ಸಾಯ್ಬನಿಗೆ ಹೊಟ್ಟೆ ನೋವಾಗುವಷ್ಟು ದುಃಖ ಕಾಣಿ!

× × × ×

ಲೋಕದಲ್ಲೆಲ್ಲಾ ರಿಟ್ರೆಂಚ್ ಮೆಂಟ್! ಚಕ್ರವರ್ತಿಯವರ ಬೊಕ್ಕಸದಲ್ಲೂ ರಿಟ್ರೆಂಚ್ ಮೆಂಟ್ ಇಲ್ಲದೆ ಹೋದೀತೆ! ಆದುದರಿಂದಲೇ ಅವರು ಹಿಂದೂಸ್ಥಾನದಲ್ಲಾದ ಭೂಕಂಪಕ್ಕೆ ಬರೇ ೧೦೦೦ ಪೌಂಡುಗಳ ಮಹಾದಾನವನ್ನು ಮಾಡಿರಬೇಕೆಂದು ಸಾಯ್ಬನ ಊಹನೆ!

× × × ×

ಒಂದುವೇಳೆ ಭೂಕಂಪವು ಇಂಗ್ಲಾಂಡಿನಲ್ಲಾಗುತ್ತಿದ್ದರೆ ಸಾರ್ವಭೌಮರು ಬೊಕ್ಕಸದ ಬಾಯನ್ನು ಎಷ್ಟು ಅಗಲವಾಗಿ ತೆರೆಯುತ್ತಿದ್ದರೋ ತಿಳಿಯದು! ಆದರೆ ಇದು ಗಾಂಧಿಯ ಊರಲ್ಲವೆ? ಏಕೆ ಹೆಚ್ಚು ದಾನ? ಕಿಂಗ್ ಜೋರ್ಜರಿಗೆ ದೌಲತ್ತು ಜಾ! [illegible] ರಿಗೆ [illegible] ದೌಲತ್ತು ಜಾ!

'ಸಾ. ಬು.'

Canara Bank, Limited.

Established 1906.

Authorised Capital	10,00000-0-0
Subscribed capital	6,00,000—0—0
Paid up Capital	3,10,000—0—0
Reserves	4,31,000—0—0

Head Office —Bunder, Mangalore Local Offices - **City & Bunder**

BRANCHES— Bombay, Cochin, Calicut, Ernakulam, Alleppey, Chikmagalur, Ganguli, Coondapoor, Udipi, Karkal, Puttur, Kasaragod, & Buntwal Out-agency.

Interest is allowed on Current, Fixed and Saving Banks Accounts, rates of which may be ascertained on application. Advances made on approved securities at easy rates. All kinds of Banking business transacted. Rules of business on application.

The Bangalore Branch Office of the Bank at No 1 Albert Victor Road, Bangalore City will be opened on 8-1-34.

Mangalore
22-12-33

A Madhava Pai,
Secretary

East & West Insurance Company Ltd.,

(Incorporated in India 1913)

Head Office.-EAST & WEST BUILDINGS, FORT, BOMBAY.

Eastern Company with striking features
Attractive plans,
Sympathetic & Liberal
Treatment to Policy Holders,
&
Wide popularity,
Economic Management
Sound investment
That is why you should select "East & West"
Ere you invest in the rest

Interim Bonus
Declared
Rs 15 Per 1000
On whole life &
Endowment Policies

For particulars and Agency terms apply to —
H S. Nayak, *Organiser Secretary* for West Coast, Coorg & Mysore,
"Harbour View" Mangalore.

ನಮ್ಮ ಟೊಯಿಲೆಟ್ ಮತ್ತು ವಾಶಿಂಗ್ ಸಾಬೂನುಗಳ ತಯಾರಿಯಲ್ಲಿ ಚರ್ಬಿ
ಉಪಯೋಗಿಸಲ್ಪಡುವುದಾಗಿ ರುಜುಪಡಿಸುವವರಿಗೆ ರೂಪಾಯಿ
1000 ಬಹುಮಾನ.

ಸಾಬೂನು ಪಡೆಯುವಾಗ " " ಅದರಲ್ಲಿ ಚರ್ಬಿ ಇರಕೂಡದೆಂದು

ನಿಮ್ಮ ಆಶೆ.

ಪ್ರಾಣಿಗಳ ಚರ್ಬಿ ಮಿಶ್ರಿತವಾದ ಸಾಬೂನುಗಳು ಹಿತಕ್ಕಿಂತಲೂ ಅಹಿತವನ್ನೇ ಹೆಚ್ಚಾಗಿ ಉಂಟುಮಾಡುತ್ತವೆ. ಇದರ ಅಣುಗಳಲ್ಲಿನ ಚರ್ಬಿ ಚರ್ಮರಂಧ್ರಗಳೊಳಗೆ ಹೋಗಿ ಬೆವರನ್ನು ತಡೆಯುತ್ತದೆ. ಸೋಪನ್ನು ಪಡೆಯುವಾಗ ನೀವು ಪರಿಮಳಭರಿತ ಚರ್ಮದ ಶುದ್ಧಿಗೆ ಬೆಲೆ ಕೊಟ್ಟು ಆರೋಗ್ಯತೆಯ ಬದಲು ಅಶುದ್ಧತೆಯನ್ನು ಸ್ವೀಕರಿಸಬೇಕೆಂದಿರುವಿರಾ?

ಮಲಬಾರು ಸಾಬೂನುಗಳು ಜನನಕ್ಕೆ ಬಂದ ಆರು ತಿಂಗಳುಗಳ ಅಲ್ಪಾವಧಿಯಲ್ಲೇ ಸಾರ್ವಜನಿಕ ಬೆಂಬಲವನ್ನು ಪಡೆದಿವೆ. ಕೊಟ್ಟಿಯ ಮಹಾರಾಜರ ದರ್ಬಾರಿನ ಪ್ರಶಸ್ತಿ ಮತ್ತು ಪ್ರೋತ್ಸಾಹನದಿಂದಾಗಿಯೂ, ಪ್ರಖ್ಯಾತ ವೈದಕೀಯ ಅಧಿಕಾರಿಗಳ ಶಿಫಾರಸಿನಿಂದಾಗಿಯೂ, ಅನೇಕ ವಸ್ತುಪ್ರದರ್ಶನಗಳಲ್ಲಿ ದೊರೆತ ಸುವರ್ಣಪದಕ ಮತ್ತು ಪ್ರಶಸ್ತಿ ಪತ್ರಿಕೆಗಳಿಂದಾಗಿಯೂ, ಮಲಬಾರ್ ಸಾಬೂನುಗಳ ಪ್ರಾಶಸ್ತ್ಯವು ಎಷ್ಟೆಂದು ತಿಳಿಯಬಹುದು.

ಮಲಬಾರ್ ಸಾಬೂನು ಎಲ್ಲಾ ವಿಧದಿಂದಲೂ ಶ್ರೇಯಸ್ಕರವೇ ಆಗಿರುತ್ತದೆ. ನಿಮ್ಮ ಚರ್ಮಕ್ಕೆ ಬಾಧಕವನ್ನುಂಟು ಮಾಡುವಂತಹ ಪ್ರಾಣಿಗಳ ಚರ್ಬಿ ಅಥವಾ ಹಾನಿಕರವಾದ ಮಿಶ್ರಿತವೇನೂ ಅದರಲ್ಲಿರದು. ಮಲಬಾರ್ ಸಾಬೂನನ್ನು ಶಾಸ್ತ್ರೀಯ ರೀತಿಯಿಂದಲೂ, ಆರೋಗ್ಯ ದೃಷ್ಟಿಯಿಂದಲೂ ತಯಾರಿಸುವುದರಿಂದ ಎಷ್ಟು ಕೋಮಲವಾದ ಚರ್ಮವೂ ಬಾಧಕ ಹೊಂದುವುದಿಲ್ಲ. ಈ ಸಾಬೂನು ದೇಶೀಯ ಅಮೂಲ್ಯ ಗಂಧಯುಕ್ತ ಸಾಮಾಗ್ರಿಗಳಿಂದ ಎಲ್ಲರಿಗೂ ಅನುಕೂಲವಾಗುವಂತೆ ಅಗ್ಗವಾಗಿದೆಯೆಂದು ಅದರ ಉಪಯೋಗದಿಂದ ನಿಮಗೆ ತಿಳಿದುಬರುವುದು.

ನಿಮ್ಮ ವ್ಯಾಪಾರಸ್ಥರು

ಮಲಬಾರ್ ಸಾಬೂನುಗಳನ್ನು

ವಿಕ್ರಯಿಸಲು ಸಂತೋಷಪಡುವರು

ಇದರಲ್ಲಿ ಪ್ರಾಣಿಗಳ ಕೊಬ್ಬು ಇರುವುದಿಲ್ಲ.

ದಿ ವೆಜಿಟೇಬಲ್ ಸೋಪ್ ವರ್ಕ್ಸ್, ಕಲ್ಲಿಕೋಟೆ.

ಪ್ರೊಪ್ರೈಟರ್:—ಸನ್ ಬ್ರೆಂಡ್ ಕೊಡೆಯ ಖ್ಯಾತಿಯ ಸೇಟ್ ನಾಗ್‌ಜೀ ಪುರುಷೋತ್ತಮ ಮತ್ತು ಕಂಪೆನಿ, ಕಲ್ಲಿಕೋಟೆ.

ಈ ಜಿಲ್ಲೆಗೆ ಪ್ರವರ್ತಕರು:—

ರಾಘವೇಂದ್ರ ರಂಗ ಪೈ, ರಥಬೀದಿ, ಮಂಗಳೂರು.

S. U. N. & CO.

Choukhamba, Benares City

ಮೂರು ಇನಾಮುಗಳು

ನಮ್ಮಲ್ಲಿ ಕಾಶ್ಮೀರ್ ಶಾಲುಗಳಿಗಿಂತಲೂ ಉತ್ಕೃಷ್ಟವಾದ ಕಸೂತಿಗಳಿಂದೊಪ್ಪುವ ಶುದ್ಧ ಸ್ವದೇಶೀ ಖದ್ದರ್ ಶಿಲ್ಕು ಶಾಲುಗಳು ತಯಾರಾಗುತ್ತವೆ. ಬೇಕಾದವರು ತ್ವರೆಮಾಡಿ ಬರೆದರೆ ಈ ಕೆಳಗಿನ ದರದಲ್ಲಿ ಕಳುಹಿಸಲಾಗುತ್ತದೆ. 5 ಮೊಳ ಉದ್ದ 2½ ಅಗಲ ದರ ಒಂದಕ್ಕೆ ರೂ. 2-8-0ಯಿಂದ 3-12-0 5½ ಮೊಳ ಉದ್ದ 2¾ ಮೊಳ ಅಗಲ ದರ 1ಕ್ಕೆ 3-8-0, 4-8-0 6 ಮೊಳ ಉದ್ದ 3 ಅಗಲ ದರ 1ಕ್ಕೆ ರೂ. 4-8-0, ರೂ 5 ಅಲ್ಲದೆ ಸ್ವದೇಶೀ ಖದ್ದರ್ ಮಡಿಗಳೂ, ಶೀರೆಗಳೂ ಅಂಚುಗಳಿಲ್ಲದೆ ಎಲ್ಲಾ ರಂಗುಗಳಲ್ಲಿರುತ್ತವೆ ಮತ್ತು ಜರೀಕಾಶೀ ಶೀರೆಗಳೂ ಪೀತಾಂಬರಗಳೂ ರವಕೆಗಳೂ, ರುದ್ರಾಕ್ಷಿ—ಬಾಣಲಿಂಗ—ಪಂಚಾಯತನ ಸುದರ್ಶನ ಹಿತ್ತಾಳೆ ಕ್ವಾಮಿಗೆ ಮಿಕ್ಸ್ಚರ್ ಮಡಿ ಧಾವಳಿ ಶಾಲು, ಜಗನ್ನಾಥ ಗಂಟೆಗಳೂ ಕೂಡಾ ಸರಿಯಾದ ದರಕ್ಕೆ ಕಳುಹಿಸಲಾಗುತ್ತದೆ. ವಿವರಕ್ಕೆ ಕೆಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ. 1 ಆಣೆ ಸ್ಟೇಂಪು ಕಳುಹಿಸಿದರೆ 1 ವಿಶ್ವೇಶ್ವರ ಪಟ, 1 ಕಾಶೀನಕ್ಷೆ, 1 ಕೆಟಲಾಗಿನೊಡನೆ 3 ಇನಾಮುಗಳು.

ವಿಳಾಸ—
ಶಿರೋಮಣಿ ನಾರಾಯಣಾಚಾರ್ಯ ಮತ್ತು
ಕಂಪೆನಿ, ಚೌಖಾಂಬಾ, ಬನಾರಸ್ (ಕಾಶೀ)

ಬೇಕಾಗಿದ್ದಾರೆ.

ಸ್ವದೇಶಾಭಿಮಾನಿ, ಪತ್ರಿಕೆಗೆ ಊರುಗಳಲ್ಲಿ ಚಂದಾ ಸಂಗ್ರಹಿಸುವವರು ಉತ್ಸಾಹೀ ಏಜೆಂಟರು ಬೇಕಾಗಿದ್ದಾರೆ. ಶರ್ತಗಳಿಗೆ ಕೂಡಲೇ ಬರೆಯಿರಿ.

ಮೆನೇಜರ್- ಸ್ವದೇಶಾಭಿಮಾನಿ, ಮಂಗಳೂರು

ನೋಟೀಸು.

ಮಂಗಳೂರು ತಾಲೂಕು ಕಾವೂರು ಮೂಡೂರು ಗ್ರಾಮದ ಅರಂತೊಟ್ಟು ರಾಮಪ್ಪಯ್ಯನವರ ಮಗಳು ವ ಪಣಂಬೂರು ವೆಂಕಪ್ಪಯ್ಯನವರ ವಿಧವೆ ಪಾರ್ವತಮ್ಮ ಯಾನೆ ಮಹಾಲಕ್ಷ್ಮಿ ಅಮ್ಮನು ಈ ಮೂಲಕ ಸರ್ವಜನರಿಗೆ ತಿಳಿಯಪಡಿಸುವುದೇನೆಂದರೆ

ಇದೇ ಕಳೆದ ತಾ 12-1 '34ನೇ ಶುಕ್ರವಾರ ಸಾಯಂಕಾಲ ಸುಮಾರು 5 ಘಂಟೆಯ ಸಮಯಕ್ಕೆ ನನ್ನ ಗಂಡನ ಹಿರೇ ಹೆಂಡತಿ ಮಗನಾದ ಬಂಟ್ವಾಳ ಮೂಡಗ್ರಾಮದಲ್ಲಿರುವ ಪಿ ವಾಸ್ತೇವರಾಯನು ನನ್ನ ದ್ವೇಷಿ ಪತ್ತುಮುಡಿ ವೆಂಕಪ್ಪಯ್ಯನ ದುಷ್ಪ್ರೇರಣೆಗೂ ಕಳಸಂಚಿಗೂ ಒಳಪಟ್ಟು ನನ್ನನ್ನು ನಿರ್ಬಂಧಕ್ಕೊಳಪಡಿಸಿ ಬಲಾತ್ಕಾರದಿಂದ ನನ್ನ ಎಡಕೈಯ ಹೆಬ್ಬೆಟ್ಟಿನ ಮೊಹರುಗಳನ್ನು ಕೆಲವು ಖಾಲಿ ಕಾಗದಗಳಿಗೆ ತೆಗೆದು ಇಟ್ಟುಕೊಂಡಿರುತ್ತಾನೆ. ಸದರಿ ಪಿ ವಾಸ್ತೇವರಾಯನು ಆ ಪೈಕಿ ಒಂದು ಕಾಗದದಲ್ಲಿ ನಾನು ಕೊಟ್ಟಿದ್ದಾಗಿ ಅಂದು ಬರುವ ಮಂಗಳೂರು ಡಿ ಮ. ಕೋರ್ಟು ಕ್ರಮ ನಂಬ್ರ 107/24ನೇ ವ್ಯಾಜ್ಯದ ರಾಜಿ ಡಿಕ್ರಿ ಮೇರೆಗೆ ನನಗೆ ವಾಸ್ತೇವರಾಯನ ಅಂಶದ ಆಸ್ತಿ ಜವಾಬ್ದಾರಿಯಿಂದ ಕೊಡಬೇಕಾದ್ದು ಸಿಕ್ಕತಕ್ಕ 1926-27-28-29ನೇ ಇಸವಿಗಳ ಜೀವನಾಂಶದ ಐವೇಜು ಮತ್ತು ಸದರಿ ಕೋರ್ಟು O S. ನಂಬ್ರ 247/29ನೇ ಡಿಕ್ರಿ ಪಡಿ ಮೇರೆಗೆ ಸದರಿ ವಾಸ್ತೇವರಾಯನಿಂದ ನನಗೆ ಸಿಕ್ಕತಕ್ಕ ಐವೇಜುಗಳ ಸಂದಾಯಾರ್ಥದ ರಶೀದಿಯನ್ನು ತಯಾರಿಸುತ್ತಾನಾಗಿ ನನ್ನ ತಿಳುವಳಿಕೆಗೆ ಬಂದದೆ. ಮಿಕ್ಕ ಕಾಗದಗಳಲ್ಲಿ ಸದರಿ ವಾಸ್ತೇವರಾಯನು ವ ಪತ್ತುಮುಡಿ ವೆಂಕಪ್ಪಯ್ಯನು ಇತರ ರಿಕಾರ್ಡುಗಳನ್ನು ಸೃಷ್ಟಿ ಮಾಡಬಹುದಾಗಿದೆ. ನಾನು ಸದರಿ ವಾಸ್ತೇವರಾಯನಿಗೆ ಯಾವದೊಂದು ರಶೀದಿ ಯಾ ನೋಟು ವಗೈರೆ ಯಾವ ತರದ ದಸ್ತೈವೇಜು ವ ಬರಹ ಮೂಲಕ ರಿಕಾರ್ಡನ್ನು ಈ ವರೆಗೂ ಮಾಡಿಕೊಟ್ಟದ್ದಿಲ್ಲ. ಪತ್ತುಮುಡಿ ವೆಂಕಪ್ಪಯ್ಯನಿಗೆ ಮಾತ್ರ ನನಗೆ ಮಾವನ ಕುಟುಂಬದ ಅಂಶದ ಆಸ್ತಿ ಜವಾಬ್ದಾರಿಯಿಂದ ಸಿಕ್ಕತಕ್ಕ ಅಶನಾರ್ಥದ ಐವೇಜು ಸಂದಾಯದ ಬಗ್ಗೆ ನನ್ನ ಎಡಕೈಯ ಹೆಬ್ಬೆಟ್ಟು ಹಾಕಲ್ಪಟ್ಟ ಮೂರು ರಶೀದಿಗಳನ್ನೂ ಒಂದು ಮನೆಯಾರ್ಡರು ರಶೀದಿಯನ್ನೂ, ಅಂತೂ ನಾಲ್ಕು ರಶೀದಿಗಳು ಮಾತ್ರ ಕೊಟ್ಟದ್ದಲ್ಲದೆ ಬೇರೆ ಕೊಡಲಿಲ್ಲ. ಕೊಡುವದೆ ಕಾರಣವೂ ಇಲ್ಲ. ವ ಇನ್ಯಾರಿಗೂ ರಶೀದಿ ವ ನೋಟು ವಗೈರೆ ಬರೆಕೊಟ್ಟದ್ದೂ ಇಲ್ಲ. ಮೇಲ್ಕಂಡಂತೆ ಬಲತ್ಕಾರದಿಂದ ತೆಗೆದುಕೊಂಡ ನನ್ನ ಕೈಮೊಹರದ ಖಾಲಿ ಕಾಗದಗಳಲ್ಲಿ ಸದರಿ ವಾಸ್ತೇವರಾಯನಾಗಲಿ ವ ಪತ್ತುಮುಡಿ ವೆಂಕಪ್ಪಯ್ಯನಾಗಲಿ ನನ್ನ ರಶೀದಿ ನೋಟು ವಗೈರೆ ರಿಕಾರ್ಡುಗಳನ್ನು ತಯಾರಿಸಿದ್ದಾದರೆ ಅದು ಸೃಷ್ಟಿಸಿದ್ದು ಮುಂಜೂರಾಗತಕ್ಕದ್ದಲ್ಲ. ನನ್ನ ವ ನನ್ನ ಮ್ಯಾನೇಜರ ಮಾರ್ಗಕ್ಕಾಗಿ ವಿರೋಧವಾಗಿ ನಿಂತಾಗತಕ್ಕದ್ದಲ್ಲ. ಈ ಬಗ್ಗೆ ನಾನು ದಾಖಲು ಮಾಡಿದ ಕ್ರಿಮಿನಲ್ ವ್ಯವಹಾರ ನಡೆಯುತ್ತಿದೆ. ಇದು ಇರುತ್ತದೆ ಎಂದು ಈ ಮೂಲಕ ತಿಳಿಸೋಣವಾಗಿದೆ.

ಮಂಗಳೂರು,
ತಾ. 20-1-'34.

III ಈ ಮೂರು ಗೆರೆ ಮತ್ತು ಎಡಕೈಯ ಹೆಬ್ಬೆಟ್ಟಿನ ಗುರ್ತು



ನಿಮ್ಮ ಕುಟುಂಬದ ಸದಾರೋಗ್ಯ

ರುಚಿಕರವಾದ ಓವಲ್ಟಿನ್ನನ್ನು ನಿಮ್ಮ ಕುಟುಂಬದ ಪಾನೀಯವಾಗಿ ದಿನನಿತ್ಯ ಉಪಯೋಗಿಸಿರಿ. ಪ್ರಕೃತಿ ಸಿದ್ಧವಾದ ಪಾನೀಯವು ನಿಮ್ಮ ಕುಟುಂಬದವರ ಆರೋಗ್ಯವನ್ನು ವೃದ್ಧಿಸುವುದು. ಓವಲ್ಟಿನ್ ಎಂಬುದು ಸಂಪೂರ್ಣ ಮತ್ತು ಸಂತೃಪ್ತಿಕರವಾದ ಆಹಾರ. ಇದನ್ನು ಸೃಷ್ಟಿಯ ಅನುಕೂಲ್ಯ ಟೋನಿಕ್ ಆಹಾರಗಳಿಂದ ತಯಾರಿಸಲಾಗಿದೆ. ಬೆಳೆದ ಬಾರ್ಲಿ, ದನದ ದಪ್ಪ ಹಾಲು ಮತ್ತು ವಿಶಿಷ್ಟ ಕೋಕೋಗಳಿಂದ ಇದು ತಯಾರಾಗಿದೆ. ಆರೋಗ್ಯ, ಮತ್ತು ಶಕ್ತಿವರ್ಧನೆಗಳಿಗಾಗಿ ಇದು ಎಲ್ಲಾ ಚೈತನ್ಯವನ್ನು ಕೊಡುತ್ತದೆ.

ಬೆಳಗ್ಗೆ ರಾತ್ರಿಯೂ ಒಂದು ಕಪ್ ಓವಲ್ಟಿನ್ ತೆಗೆದುಕೊಂಡರೆ ಇದು ನಿಮ್ಮನ್ನು ಆರೋಗ್ಯವಂತರನ್ನಾಗಿ ಇಡುವುದು. ದಿನದ ಕೆಲಸಕ್ಕೆ ಇದು ಚೈತನ್ಯಶಕ್ತಿಗಳನ್ನು ಕೊಟ್ಟು ರಾತ್ರಿ ಗಾಢ ನಿದ್ರೆಯನ್ನು ಅದರ ಅಮೋಘ ಶಕ್ತಿಯಿಂದ ಕೊಡುತ್ತದೆ. ನಿಮ್ಮ ಕುಟುಂಬವು ಇದರ ರುಚಿಯನ್ನರಿತು ಆರೋಗ್ಯವಂತನಾಗಿ ಬಾಳಲಿ.

OVALTINE

ಮೆದುಳು, ನರ ಮತ್ತು ದೇಹವನ್ನು ವೃದ್ಧಿಸುತ್ತದೆ.

ತಯಾರಿಯಲ್ಲಿ ಕೈಯಲ್ಲಿ ಸ್ಪರ್ಶಿತವಾಗಿಲ್ಲ. ಎಲ್ಲ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಸಿಗುತ್ತದೆ.
ಏಜಂಟ್—ಜೇಮ್ಸ್ ರೈಟ್, 85ಎ ಕ್ಲೈವ್ ಸ್ಟ್ರೀಟ್, ಕಲ್ಕತ್ತ ಮತ್ತು ಬೊಂಬಾಯಿ ಮದ್ರಾಸುಗಳಲ್ಲಿ

OV/210

NOTICE.

In the Court of the District Munsif of Kasaragod.

O. P. No. 4/1934

Between

1. Beepathumma, 2. Alsabi, 3. Mahamad Sha Mogral, 4. Khadijabi—Petitioners.

and

1. M. K. Mahamad Beary, 2. Kunhamu Sha Mogral—Respondents.

Notice is hereby given that the Petitioners who are the heirs of the deceased Hassan Sha Mogral have filed the above petition for the grant to them of a succession certificate under Sec. 370 and 372 of the Succession Act authorising them to collect the debts due to the said deceased Hassan Sha Mogral and the said petition stands posted to 13—2—1934.

Kasaragod, 1—2—1934. | K. P. Anantha Rao, Advocate for Petitioners.

++ ++

ಕ್ಷಯಕ್ಷೀಣಾದಿಗಳಿಗೆ
ಚ್ಯವನಪ್ರಾಶಾನ ಲೇಹ.

ಪ್ರಸೂತಿ ರೋಗಾದಿಗೆ
ದಶಮೂಲಾರಿಷ್ಟ.
(ಕಸ್ತೂರಿ ಮಿಶ್ರಿತ)

ಸಮಸ್ತ ವಾತರೋಗಗಳಿಗೆ
ಮಹಾನಾರಾಯಣ ತೈಲ.

ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ,
ಡೊಂಗರಕೇರಿ ರಸ್ತೆ, ಮಂಗಳೂರು.

++ ++

ಸ್ವದೇಶಾಭಿಮಾನಿ

ಪತ್ರಿಕೆಯ ಚಂದಾದಾರರು ಪತ್ರವ್ಯವಹಾರಗಳಲ್ಲಿ ತಮ್ಮ ಚಂದಾ ನಂಬರುಗಳನ್ನು ನಮೂದಿಸಬೇಕು. ಅವುಗಳಿಲ್ಲದ ಪತ್ರಗಳಿಗೆ ಸರಿಯಾದ ನಿಗಾ ಸಿಗುವುದಿಲ್ಲ.

ಮೆನೇಜರ್.

[illegible]

× × × ×

ಈ ಮಹಾ ಪ್ರಭುಗಳು ಲಂಡನಿನಲ್ಲಿ [illegible] ಯನ್ನು ಹೊಕ್ಕರು. ಎರಡು ವಾರ ಕಳೆಯುವುದರೊಳಗೆ [illegible] ರಿಕೆಯ ಇವರ ಸಾಹಸಗಳನ್ನು ಪಡೆದರು! [illegible] ದಾಖಲಾಯಿಗೆ ಇಲ್ಲ! — ೬೦೦ ಪೌಂಡುಗಳ!!!

× × × ×

ದುಕ್ಕಳ ಇವರ ಸಾಮಗ್ರಿಗಳಾಗಿ ೬೫೦ × [illegible] = [illegible] ೧೧,೨೫೦ ಬೆಲೆ ಕೊಡುವ ಪದಾರ್ಥಗಳು ಹಿಡಿತಾಗಿಯೂ ಪೆಟ್ಟಿಗೆಯಲ್ಲಿ!!

× × × ×

ನಾಲ್ಕು ೬೫೦ ಕೊಟ್ಟು ಒಂದು ಇವರ ಮನೆಯನ್ನು [illegible] ಕೊಂಡಿರುವರಂತೆ. ಇದರೊಳಗೆ ಮಾಳಿಗೆ, ಕೋಣೆ, ಹಾಸಿಗೆಗಳೂ [illegible] ಯಂತೆ. ಒಂದು ಮಗುವು ಸಂಗಾತಿಗೆಯಾಗಿ ಮನೆ ಮಾಡಿ [illegible] ಬಹುದಂತೆ. ಛೆ! ನವಾಬರೇ!!!

× × × ×

ಹಿಂದೂಸ್ಥಾನದಲ್ಲಿ ಭಯಂಕರ ಭೂಕಂಪವಾದಾಗ [illegible] ಬಿಹಾರ ಭೂಕಂಪವಾಯಿತು! ಪೌಂಡುಗಳ ಭೂಕಂಪವು ಲಂಡನ್ [illegible] ದಲ್ಲೇ ಆಗಬೇಕೇ? ಹಿಂದೀಯರ ಪಾಲ್! ನವಾಬರ [illegible] ಒಕ್ಕಿಯದಿರಲೇ ಬೇಕು! ನವಾಬರಿಗೆ ದೌಲತ್ತು ಬಾ!

× × × ×

ಪರ್ಲಗಿ ಮಹಾರಾಜರು ಬೇಕಾದ ಹಾಗೆ ವೆಚ್ಚ ಮಾಡುವುದರ [illegible] ಕಡಿಮೆಯವರಲ್ಲಿಲ್ಲ! ಪಾಪ! ಅವರ ಅರಮನೆಯು ಭೂಕಂ[illegible] ಕ್ಕೊಳಗಾಗಿ ಕುಟುಂಬದ ಕೆಲವರು ಅಪಾಯಕ್ಕೊಳಗಾದರು! [illegible] ಕಷ್ಟವು ಹೊರಗಿಲ್ಲ ಎಂಬುದು ಅವರಿಗೆ ತಿಳಿದುದೇ ದೊಡ್ಡದು!

× × × ×

ಅಲ್ವಾರಿನ ಮಹಾರಾಜರು ಮನವಿದ್ದಂತೆ ವೆಚ್ಚ ಮಾಡಿ, ಕೊ[illegible] ಕಿರೀಟವನ್ನೇ ಬಿಟ್ಟು ಇಂಗ್ಲಾಂಡಿಗೆ ಹೋಗಬೇಕಾಯಿತು! ಬಹಳ [illegible] ದಿಂದ, ಉಸುರು ಕಟ್ಟಿ ಅಲ್ಲಿಗೆ ಹೋಗಿ, ದುಡ್ಡಿನಹಿಡಿಯನ್ನು [illegible] ಭವಿಸಿದರು!

× × × ×

ಆದರೆ, ಸ್ವದೇಶಕ್ಕೆ ತೆರಳುತ್ತಲೇ ಅವರಿಗೆ ಇಲ್ಲಿಯ ಅಗ್[illegible] ದುಡ್ಡಿನ ಸ್ಮರಣೆಯಾಯಿತು! ಊರಿಗೆ ಹೋದರೆ ತಾನು ಮಹಾರಾ[illegible] ನೆಂದೇ ಸಿರ್ಸ್‌ನ ಲಂಡನಿನ ಒಬ್ಬ ಟೈಲರನನ್ನು ಅಲ್ವಾರಿಗೆ ಕೊಂಡೊಯ್ದು [illegible] ಕೆಲವು ಪೌಂಡುಗಳನ್ನು ಕೊಟ್ಟು, ತನ್ನ ಕೋಟಿನ ಗುಂಡಿಯೊಂದನ್ನು [illegible] ಮಾಡಿಸಿ ಅವನನ್ನು ಊರಿಗೆ ಹಿಂದೆ ಕಳುಹಿಸಿದರಂತೆ!

× × × ×

ದುಷ್ಟೆಂಬುದು ಚಿತ್ತಚಾಂಚಲ್ಯ (Temptation) ಉಂ[illegible] ಮಾಡುವ ವಸ್ತುವೆಂದು ತಿಳಿದು, ಈ ಮಹಾರಾಜರುಗಳು ಹೀಗೆ ಸ್ವ[illegible] ಹಣ ವೆಚ್ಚ ಮಾಡುತ್ತಿರಬಹುದು!

× × × ×

ನಮ್ಮ ಯುವಕರು ಸ್ವದೇಶಪ್ರೇಮದಿಂದ ವಿದೇಶಿ ಸಿಗರೇಟುಗಳ[illegible] ಕ್ರಯ ಕೊಟ್ಟು ಪಡೆದು ಅವುಗಳನ್ನು ಬಾಯಿಯಲ್ಲಿಟ್ಟು, ಸುಟ್ಟು, ದೇ[illegible] ಬಹಿಷ್ಕಾರ ಚಳವಳನ್ನು ಹೂಡುವ ಹಾಗೆ, ಈ ಮಹಾ ಮಹಾ ರಾಜ[illegible] ಗಳು ಹಣವನ್ನು ಹೀಗೆ ವೆಚ್ಚ ಮಾಡುತ್ತಿರಬಹುದು!

× × × ×

ಆದರೆ ಸಿಗರೇಟುಗಳನ್ನು ಬಾಯಿಯಲ್ಲಿಟ್ಟು ಸುಟ್ಟು, ಪರದೇ[illegible] ಬಹಿಷ್ಕಾರ ಚಳವಳವನ್ನು ಹೂಡುವ ಯುವಕರು ಕೊನೆಗೆ ಕೆಮ್ಮು ಹಿಡಿ[illegible] ದಕ್ಕೆ ತುತ್ತಾಗುವರಂತೆ, ಈ ರಾಜರುಗಳೂ ಆದಿದ್ದರೆ ನಮ[illegible] ನಮಗೂ ಸಂತೋಷ!

× × × ×

ಮೊನ್ನಿನ ಭೂಕಂಪಕ್ಕೆ ಗೊಂದಲದ ಮಹಾರಾಜರು [illegible] ರೂಪಾಯಿಗಳನ್ನು ದಾನ ಮಾಡಿ ಲೋಕದಲ್ಲೆಲ್ಲಾ ಗೊಂದಲವೆಬ್ಬಿಸಿದ[illegible] ಬರೇ ೧೫೦ ಪೌಂಡುಗಳನ್ನು ಅದಕ್ಕಾಗಿ ದಾನ ಮಾಡಿದ ನಮ್ಮ [illegible] ಚಕ್ರವರ್ತಿಯವರೂ ಅವರ ಪತ್ನಿಯವರೂ ಅತ್ಯುದಾರಿಗಳೆಂದರಬೇಕು!

× × × ×

ನಮ್ಮ ಬರೋಡೆ ಮಹಾರಾಜರು ಭೂಕಂಪ ನಿಧಿಗೆ ೧೦೦೦ ಪೌಂಡುಗ[illegible] ಕೊಟ್ಟುದನ್ನು ಕಂಡು ಕೆಲವರಿಗೆಲ್ಲಾ ಬೇಸರ ಬಾಳಿ! ಈ ಜಾರ [illegible] ನೋಡಿ ಸಾಮ್ರಾಟನಿಗೆ ಹೊಟ್ಟೆ ನೋವಾಗುವದನ್ನು ದುಃಖ ಬಾಳಿ!

× × × ×

ಲೋಕದಲ್ಲೆಲ್ಲಾ ಲಕ್ಷ್ಮೀಯುಕ್ತ [illegible]! ಚಕ್ರವರ್ತಿಯವರ [illegible] ದಲ್ಲಾ ರಿಕ್ಷಾ [illegible] ಇಲ್ಲವೇ ಹೋದರೇ! ಅವರಿಂದಲೇ [illegible] ಹಿಂದೂಸ್ಥಾನದಲ್ಲಾದ ಭೂಕಂಪಕ್ಕೆ ಬರೇ ೧೦೦ ಪೌಂಡುಗಳ [illegible] ದಾನವನ್ನು ಮಾಡಿರಬೇಕೆಂದು ಸಾಮ್ರಾಟ ಆಜ್ಞೆ!

× × × ×

ಒಂದುವೇಳೆ ಭೂಕಂಪವು ಇಂಗ್ಲಾಂಡಿನಲ್ಲಾಗುತ್ತಿದ್ದರೆ [illegible] ಪ್ರಭುಗಳು ಬೇರೆ ಬಾಯನ್ನು ಎಷ್ಟು ಅಗಲವಾಗಿ ತೆರೆಯುತ್ತಿದ್ದ[illegible] ತಿಳಿಯದು! ಆದರೆ ಇದು ಗಾಂಧಿಯ ಊರಲ್ಲವೇ? [illegible] ಬಾಳಿ! ಕಿಂಗ್ ಜಾರ್ಜರಿಗೆ ದೌಲತ್ತು ಬಾ! [illegible] ರಿಗೆ ಹಿಟ್ಲರಿಗೆ ದೌಲತ್ತು ಬಾ!

[illegible]

Canara Bank, Limited.

Established 1906.

Authorised Capital	10,00000-0-0
Subscribed capital	5,00,000-0-0
Paid up Capital	3,30,000-0-0
Reserves	4,31,600-0-0

Head Office:—**Bunder, Mangalore** Local Offices:—**City & Bunder.**

BRANCHES:— Bombay, Cochin, Calicut, Ernakulam, Alleppey, Chikmagalur, Ganguli, Coondapoor, Udipi, Karkal, Puttur, Kasaragod, & Buntwal Out-agency.

Interest is allowed on Current, Fixed and Saving Banks Accounts, rates of which may be ascertained on application. Advances made on approved securities at easy rates. All kinds of Banking business transacted. Rules of business on application.

The Bangalore Branch Office of the Bank at No. 1 Albert Victor Road, Bangalore City will be opened on 8-1-34.

Mangalore
23-12-33

A. Madhava Pai,
Secretary.

S. U. N. & CO.

Choukhamba, Benares City.

ಮೂರು ಇನಾಮುಗಳು.

ನಮ್ಮಲ್ಲಿ ಕಾಶ್ಮೀರ ಶಾಲುಗಳಿಗಿಂತಲೂ ಅತ್ಯುತ್ತಮವಾದ ಕಸೂತಿಗಳಿಂದೊಪ್ಪುವ ಶುದ್ಧ ಸ್ವದೇಶೀ ಖದ್ದರ್ ಶಿಲ್ಕು ಶಾಲುಗಳು ತಯಾರಾಗುತ್ತವೆ. ಬೇಕಾದವರು ತ್ವರೆಮಾಡಿ ಬರೆದರೆ ಈ ಕೆಳಗಿನ ದರದಲ್ಲಿ ಕಳುಹಿಸಲಾಗುತ್ತದೆ. 5 ಮೊಳ ಉದ್ದ 2½ ಅಗಲ ದರ ಒಂದಕ್ಕೆ ರೂ. 2–8–0ಯಿಂದ 3–12–0. 5½ ಮೊಳ ಉದ್ದ 2¾ ಮೊಳ ಅಗಲ ದರ 1ಕ್ಕೆ 3–8–0, 4–8–0. 6 ಮೊಳ ಉದ್ದ 3 ಅಗಲ ದರ 1ಕ್ಕೆ ರೂ. 4–8–0, ರೂ. 5. ಅಲ್ಲದೆ ಸ್ವದೇಶೀ ಖದ್ದರ್ ಮಡಿಗಳೂ, ಶೀರೆಗಳೂ ಅಂಚುಗಳಿಲ್ಲದೆ ಎಲ್ಲಾ ರಂಗುಗಳಲ್ಲಿರುತ್ತವೆ. ಮತ್ತು ಜರೀಕಾರೀ ಶೀರೆಗಳೂ ಪೀತಾಂಬರಗಳೂ ರವಕೆಗಳೂ, ರುದ್ರಾಕ್ಷೀ—ಬಾಣಲಿಂಗ—ಪಂಚಾಯತನ ಸುದರ್ಶನ ಹಿತ್ತಾಳೆ ಸ್ವಾಮಿಗೆ ವಿಗ್ರಹ, ಮಡಿ ಧಾವಳಿ ಶಾಲು, ಜಗನ್ನಾಥ ಗಂಟೆಗಳೂ ಕೂಡಾ ಸರಿಯಾದ ದರಕ್ಕೆ ಕಳುಹಿಸಲಾಗುತ್ತದೆ. ವಿವರಕ್ಕೆ ಕೆಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ. 1 ಅಣೆ ಸ್ಟೇಂಪು ಕಳುಹಿಸಿದರೆ 1 ವಿಶ್ವೇಶ್ವರ ಪಟ, 1 ಕಾಶೀನಕ್ಷೆ, 1 ಕೆಟಲಾಗಿನೊಡನೆ 3 ಇನಾಮುಗಳು.

ವಿಳಾಸ—

ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪೆನಿ, ಚೌಖಾಂಬಾ, ಬನಾರಿಸ್ (ಕಾಶೀ)

East & West Insurance Company Ltd.,

(Incorporated in India 1913).

Head Office:—EAST & WEST BUILDINGS, FORT, BOMBAY.

Eastern Company with striking features
Attractive plans,
Sympathetic & Liberal
Treatment to Policy Holders,
&
Wide popularity,
Economic Management
Sound investment
That is why you should select "East & West"
Ere you invest in the rest

Interim Bonus
Declared
Rs. 15 Per 1000
On whole life &
Endowment Policies.

For particulars and Agency terms apply to:—
H. S. Nayak, *Organiser, Secretary,* for West Coast, Coorg & Mysore,
"Harbour View" Mangalore.

ಬೇಕಾಗಿದ್ದಾರೆ.

ಕಾಲೇಶ್ವರ, ಚಿತ್ರ ಗಳೂರುಗಳಲ್ಲಿ ಬಿಡಿ ಸಂಚಿಕೆಗಳನ್ನು ಮಾರಲು ಉತ್ಸಾಹೀ ಏಜೆಂಟರು ಬೇಕಾಗಿದ್ದಾರೆ. ಶರ್ತಗಳಿಗೆ ಕೂಡಲೇ ಬರೆಯಿರಿ.

ಮೆನೇಜರ್— ಸ್ವದೇಶಾಭಿಮಾನಿ, ಮಂಗಳೂರು

ನಮ್ಮ ಟೊಯಿಲೆಟ್ ಮತ್ತು ವಾಶಿಂಗ್ ಸಾಬೂನುಗಳ ತಯಾರಿಯಲ್ಲಿ ಚರ್ಬಿ ಉಪಯೋಗಿಸಲ್ಪಡುವುದಾಗಿ ರುಜುಪಡಿಸುವವರಿಗೆ ರೂಪಾಯಿ

1000 ಬಹುಮಾನ.

ಸಾಬೂನು ಪಡೆಯುವಾಗ ‹ › ಅದರಲ್ಲಿ ಚರ್ಬಿ ಇರಕೂಡದೆಂದು ನಿಮ್ಮ ಆಶೆ.

ಪ್ರಾಣಿಗಳ ಚರ್ಬಿ ಮಿಶ್ರಿತವಾದ ಸಾಬೂನುಗಳು ಹಿತಕ್ಕಿಂತಲೂ ಅಹಿತವನ್ನೇ ಹೆಚ್ಚಾಗಿ ಉಂಟುಮಾಡುತ್ತವೆ. ಕಾರಣ ಅವುಗಳಲ್ಲಿನ ಚರ್ಬಿ ಚರ್ಮರಂಧ್ರಗಳೊಳಗೆ ಹೋಗಿ ಬೆವರನ್ನು ತಡೆಯುತ್ತದೆ. ಸಾಬೂನನ್ನು ಪಡೆಯುವಾಗ ನೀವು ಪರಿಮಳಭರಿತ ಚರ್ಬಿಗೆ ಹುದ್ದೆಗೆ ಬೆಲೆ ಕೊಟ್ಟು ಶುಭ್ರತೆಯ ಬದಲು ಅಶುಭ್ರತೆಯನ್ನು ಸ್ವೀಕರಿಸಬೇಕೆಂದಿರುವಿರಾ?

ಮಲಬಾರು ಸಾಬೂನುಗಳು ಪೇಟೆಗೆ ಬಂದ ಆರು ತಿಂಗಳುಗಳ ಅಲ್ಪಾವಧಿಯಲ್ಲೇ ಸಾರ್ವಜನಿಕ ಬೆಂಬಲವನ್ನು ಪಡೆದಿವೆ. ಕಲ್ಲಿಕೋಟೆಯ ಮಹಾ ರಾಜರ ಡೆಯರ್ ಫಾರ್ಮ್ ಪ್ರಶಸ್ತಿ ಮತ್ತು ಪ್ರೋತ್ಸಾಹನದಿಂದಾಗಿಯೂ, ಪ್ರಖ್ಯಾತ ವೈದ್ಯರ ಅಧಿಕಾರಿಗಳ ಶಿಫಾರಸಿನಿಂದಾಗಿಯೂ, ಅನೇಕ ವಸ್ತುಪ್ರದರ್ಶನಗಳಲ್ಲಿ ದೊರೆತ ಸುವರ್ಣಪದಕ ಮತ್ತು ಪ್ರಶಸ್ತಿ ಪತ್ರಿಕೆಗಳಿಂದಾಗಿಯೂ, ಮಲಬಾರ್ ಸಾಬೂನುಗಳ ಪ್ರಾಮುಖ್ಯತೆಯು ಎಷ್ಟೆಂದು ತಿಳಿಯುವುದು.

ಮಲಬಾರ್ ಸಾಬೂನು ಎಲ್ಲಾ ವಿಧದಿಂದಲೂ ಶ್ರೇಯಸ್ಕರವೇ ಆಗಿರುತ್ತದೆ. ನಿಮ್ಮ ಚರ್ಮಕ್ಕೆ ಬಾಧಕವನ್ನುಂಟು ಮಾಡುವ [illegible] ಪ್ರಾಣಿಗಳ ಚರ್ಬಿ ಅಥವಾ ಹಾನಿಕರವಾದ ಮಿಶ್ರಣವೇನೂ ಅದರಲ್ಲಿರದು. ಮಲಬಾರ್ ಸಾಬೂನನ್ನು ಶಾಸ್ತ್ರೀಯ ರೀತಿಯಿಂದಲೂ, ಆರೋಗ್ಯ ದೃಷ್ಟಿಯಿಂದಲೂ ತಯಾರಿಸುವುದರಿಂದ ಎಷ್ಟು ಕೋಮಲವಾದ ಚರ್ಮವೂ ಬಾಧಕ ಹೊಂದುವುದಿಲ್ಲ. ಈ ಸಾಬೂನು [illegible] ಉಪಯೋಗದಿಂದ ನಿಮಗೆ ತಿಳಿದುಬರುವುದು.

ನಿಮ್ಮ ವ್ಯಾಪಾರಸ್ಥರು

ಮಲಬಾರ್ ಸಾಬೂನುಗಳನ್ನು

ವಿಕ್ರಯಿಸಲು ಸಂತೋಷಪಡುವರು

ಇದರಲ್ಲಿ ಪ್ರಾಣಿಗಳ ಕೊಬ್ಬು ಇರುವುದಿಲ್ಲ.

ದಿ ವೆಜಿಟೇಬಲ್ ಸೋಪ್ ವರ್ಕ್ಸ್, ಕಲ್ಲಿಕೋಟೆ.

ಪ್ರೊಪ್ರೈಟರ್:—ಸನ್ ಬ್ರೆಂಡ್ ಕೊಡೆಯ ಪಟ್ಟತಿಯ ಸೇಟ್ ನಾಗಜೀ ಪುರುಷೋತ್ತಮ ಮತ್ತು ಕಂಪೆನಿ, ಕಲ್ಲಿಕೋಟೆ.

ಈ ಜಿಲ್ಲೆಗೆ ಪ್ರವರ್ತಕರು—

ರಾಘವೇಂದ್ರ ರಂಗ ಪೈ ರಥಬೀದಿ, ಮಂಗಳೂರು.

ನೋಟೀಸು.

ಮಂಗಳೂರು ತಾಲೂಕು ಕಸಬ ಮೂಡೂರು ಗ್ರಾಮದ ಅರಂತೊಟ್ಟು ರಾಮಪ್ಪಯ್ಯನವರ ಮಗಳು ವ ಪಣಂಬೂರು ವೆಂಕಪ್ಪಯ್ಯನವರ ವಿಧವೆ ಮಹಾಜನ್ನು ಯಾನೆ ಮಹಾಲಕ್ಷ್ಮಿ ಅಮ್ಮನು ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವುದೇನೆಂದರೆ:

ಇದೇ ಕಳೆದ ತಾ. 13–1–'34ನೇ ಶುಕ್ರವಾರ ಸಾಯಂಕಾಲ ಸುಮಾರು 5 ಘಂಟೆಯ ಸಮಯಕ್ಕೆ ನನ್ನ ಗಂಡನ ಹಿರೀ ಹೆಂಡತಿ ಮಗನಾದ ಬಂಟ್ವಾಳ ಮೂಡಗ್ರಾಮದಲ್ಲಿರುವ ಪಿ. ವಾಸ್ತೇವರಾಯನು ನನ್ನ ದ್ವೇಷಿತ ಪಕ್ಷ ಪಿ. ವೆಂಕಪ್ಪಯ್ಯನ ದುಬೋಧನೆಗೂ ಕಳ ಸಂಚಿಗೂ ಒಳಪಟ್ಟು ನನ್ನನ್ನು ಸಿಟ್ಟಿಗೆಬ್ಬಿಸಿ ಬಲಾತ್ಕಾರದಿಂದ ನನ್ನ ಎಡಕೈಯ ಹೆಬ್ಬೆಟ್ಟಿನ ಗುರುತುಗಳನ್ನು ಕೆಲವು ಖಾಲಿ ಕಾಗದಗಳಿಗೆ ತೆಗೆದು ಇಟ್ಟುಕೊಂಡಿರುತ್ತಾನೆ. ಸದರಿ ಪಿ. ವಾಸ್ತೇವರಾಯನು ಆ ಪೈಕಿ ಒಂದು ಕಾಗದದಲ್ಲಿ ನಾನು ಕೊಟ್ಟಿದ್ದಾಗಿ ಕಂಡು ಬರುವ ಮಂಗಳೂರು ಡಿ. ಮು. ಕೋರ್ಟು ಕ್ರಮನಂಬ್ರ 107/24ನೇ ವ್ಯಾಜ್ಯದ ರಾಜಿ ಡಿಕ್ರಿ ಮೇರೆಗೆ ನನಗೆ ವಾಸ್ತೇವರಾಯನ ಅಂಶದ ಆಸ್ತಿ ಅವಾಬ್ದಾರಿಯಿಂದ ಕೊಡಾ ಸಿಕ್ಕತಕ್ಕ 1926–27–28–29ನೇ ಇಸವಿಗಳ ಜೀವನಾಂಶದ ಬಾಕಿ ಮತ್ತು ಸದರಿ ಕೋರ್ಟು O. S. ನಂಬ್ರ 247/29ನೇ ಡಿಕ್ರಿ ವಿಧಿ ಮೇರೆಗೆ ಸದರಿ ವಾಸ್ತೇವರಾಯನಿಂದ ನನಗೆ ಸಿಕ್ಕತಕ್ಕ ಬಾಕಿಗಳ ಸಂಚಾಯನಾರ್ಥದ ರಶೀದಿಯನ್ನು ತಯಾರು ಮಾಡುವುದಾಗಿ ನನ್ನ ತಿಳುವಳಿಕೆಗೆ ಬಂದದೆ. ಮಿಕ್ಕ ಕಾಗದಗಳಲ್ಲಿ ಸದರಿ ವಾಸ್ತೇವರಾಯನು ವ ಪಕ್ಕುಮುಡಿ ವೆಂಕಪ್ಪಯ್ಯನು ಇತರ ರಿಕಾರ್ಡುಗಳನ್ನು ಸೃಷ್ಟಿ ಮಾಡಬಹುದು. ನಾನು ಸದರಿ ವಾಸ್ತೇವರಾಯರಿಗೆ ಯಾವದೊಂದು ರಶೀದಿ ಯಾ ನೋಟು ವಗೈರೆ ಯಾವ ಸದರಿ ದಸ್ತಾವೇಜು ವ ಬರಹ ಮೂಲಕ ರಿಕಾರ್ಡನ್ನು ಈ ತನಕ ಮಾಡಿಕೊಟ್ಟಿದ್ದಿಲ್ಲ. ಪಕ್ಕುಮುಡಿ ವೆಂಕಪ್ಪಯ್ಯನಿಗೆ ಮಾತ್ರ ನನಗೆ ವ್ಯಾಸರ ಸುಬ್ರಾಯನ ಅಂಶದ ಆಸ್ತಿ ಅವಾಬ್ದಾರಿಯಿಂದ ಸಿಕ್ಕತಕ್ಕ ಅಶನಾರ್ಥದ ಬಾಕಿ ಸಂದಾಯದ ಬಗ್ಗೆ ನನ್ನ ಎಡಕೈಯ ಹೆಬ್ಬೆಟ್ಟು ಹಾಕಲ್ಪಟ್ಟ ಮೂರು ರಶೀದಿಗಳನ್ನೂ ಒಂದು ಮುಣೆಯಾರ್ಡರು ರಶೀದಿಯನ್ನೂ, ಅಂತೂ ನಾಲ್ಕು ರಶೀದಿಗಳು ಮಾತ್ರ ಕೊಟ್ಟಿದ್ದಲ್ಲದೆ ಬೇರೆ ಕೊಡಲಿಲ್ಲ. ಕೊಡುವರೆ ಕಾರಣವೂ ಇಲ್ಲ. ವ ಇನ್ನಾಂಗೂ ರಶೀದಿ ವ ನೋಟು ವಗೈರೆ ಬರೆಕೊಟ್ಟದ್ದೂ ಇಲ್ಲ. ಮೇಲ್ಕಂಡಂತೆ ಬಲಾತ್ಕಾರದಿಂದ ತೆಗೆದುಕೊಂಡ ನನ್ನ ಕೈಮೊಹರಿನ ಖಾಲಿ ಕಾಗದಗಳಲ್ಲಿ ಸದರಿ ವಾಸ್ತೇವರಾಯನಾಗಲಿ ವ ಪಕ್ಕುಮುಡಿ ವೆಂಕಪ್ಪಯ್ಯನಾಗಲಿ ನನ್ನ ರಶೀದಿ ನೋಟು ವಗೈರೆ ರಿಕಾರ್ಡುಗಳನ್ನು ತಯಾರಿಸಿದ್ದಾದರೆ ಅದು ಸೃಷ್ಟಿಸಿದ್ದು ಮುಂಜೂರಾಗತಕ್ಕದ್ದಲ್ಲ. ನನ್ನ ವ ನನ್ನ ಪ್ರಾನದ ಮಗನ ಹಕ್ಕಿಗೆ ವಿರೋಧವಾಗಿ ಸಿಂಧಾಗತಕ್ಕದ್ದಲ್ಲ. ಈ ಬಗ್ಗೆ ನಾನು ದಾಖಲು ಮಾಡಿರುವ ಕ್ರಿಮಿನಲ್ ಸ್ವದಾವೆ ಕೆನರಾಯಲ್ಲಿ ಬಾಕಿ ಇರುತ್ತದೆ ಎಂತ ಈ ಮೂಲಕ ತಿಳಿಸೋಣಾಗಿಯದೆ.

ಮಂಗಳೂರು,
ತಾ. 20–1–'34.

ಈ ಮೂರು ಗೆರೆ ಮತ್ತು ಎಡಕೈಯ ಹೆಬ್ಬೆಟ್ಟಿನ ಗುರುತು ಮಹಾಜನು ಯಾನೆ ಮಹಾಲಕ್ಷ್ಮಿ ಯಮ್ಮ ಸ ರುಜು.

...ಹಾರಿನ ಭೂಕಂಪದ ಹಾವಳಿ! ಭಯಂಕರ ವಿವರ!!

ಧ್ವಂಸವಾಗದ ಒಂದು ಮನೆಯಾದರೂ ಇಲ್ಲ!

ಗವರ್ನರರ ಹೃದಯದ್ರಾವಕ ಬೇಡಿಕೆ!

ಅಲ್ಲಿಲ್ಲಿಯ ತಂತಿ ವಾರ್ತೆ:—

...ನವರಿ ತಾ. ೧೫ನೇ ದಿನ ಆದ ಭೂಕಂಪದ ಹಾವಳಿಯ ...ರಿತಾಗಿ ದಿನೇ ದಿನೇ ಭಯಂಕರ ವಿವರಗಳು ಹಸ್ತಗತವಾಗು ...ವೆ:—ಮುಜಾಫರ್‌ಪುರದ ಮಾರ್ಗಗಳು ಬಿದ್ದ ಕಟ್ಟಡಗಳ ...ಣ್ಣು ಮಾಡುಗಳಿಂದ ಇನ್ನೂ ಮುಚ್ಚಲ್ಪಟ್ಟಿವೆ. ಬೀದಿಗಳೆಲ್ಲಿ, ...ಟ್ಟಣವೆಲ್ಲಿ ಎಂಬುದು ತಿಳಿಯಲಸಾಧ್ಯವಾಗಿದೆ. ದಿನೇ ದಿನೇ ...ಡೆಯುವ ಕೆಲಸಗಳು ಹೃದಯದ್ರಾವಕ ವಿಷಯಗಳನ್ನು ಹೊರ ...ಡಹುತ್ತವೆ. ಜಾನುವಾರುಗಳು ಕಟ್ಟಡಗಳಡಿಯಲ್ಲಿ ಬಿದ್ದು ...ೃತವಾದುದಕ್ಕೆ ಲೆಖ್ಖವಿರುವುದಿಲ್ಲ. ದಿನೇ ದಿನೇ ಶವಗಳು ...ಣಸಿಗುತ್ತಲಿವೆ. ಮುಜಾಫರ್‌ಪುರದಲ್ಲಿ ಒಂದರಲ್ಲೇ ೧೫೦೦೦ ...ನರಿಗಿಂತ ಕಡಿಮೆ ಸಾಯಲಿಲ್ಲವೆಂದು ಈಗ ಊಹಿಸಲ್ಪಟ್ಟಿದೆ. ...ಷ್ಟರ ತನಕ ದೊರೆತ ಶವಗಳ ದ್ವಿಗುಣಿತ ಸಂಖ್ಯೆಯು ...ಣ್ಣಿನಡಿಯಲ್ಲಿರುವುದೆಂದು ಬಂಧು ಬಾಂಧವರನ್ನು ಕಳೆದು ...ಕೊಂಡ ಕುಟುಂಬಗಳ ಗೋಳಿನಿಂದಲೂ, ಪಟ್ಟಣವಿಡೀ ಹರಡಿ ...ುವ ದುರ್ವಾಸನೆಯಿಂದಲೂ ಗೊತ್ತಾಗಬಹುದು. ಪ್ರಸಿದ್ಧ ...ಕಾಂಗ್ರೆಸ್ ಕೆಲಸಗಾರರಾದ ಶ್ರೀ ಧರ್ಮ ನಾರಾಯಣ ಸಿಂಗರ ...ವರೂ, ಅವರ ಮನೆಯವರೂ ಕಟ್ಟೋಣದ ಗೋಡೆಯಡಿಯಲ್ಲಿ ...ಬಿದ್ದು ಮೃತರಾಗಿರುವರೆಂದು ತಿಳಿದು ಬಂದಿದೆ. ಭೂಕಂಪ ...ವಾಗುವಾಗ ಹೊರ ದೇಶದಲ್ಲಿದ್ದ ಸುಪ್ರಸಿದ್ಧ ಶ್ರೀ ರಾಮ ...ಪ್ರಸಾದರೊಬ್ಬರಲ್ಲದೆ, ಅವರ ದೊಡ್ಡ ಕುಟುಂಬವೆಲ್ಲಾ ಭೂಕಂಪ ...ದಿಂದ ಹತವಾಯಿತು. ರಾವ್ ಬಹದ್ದೂರ್ ದಿಕ್ಷನಾರಾ...ಯಣ ಸಿಂಗರೂ ಅವರ ಮಕ್ಕಳೂ ಕಟ್ಟಡದಡಿಯಲ್ಲಿ ಬಿದ್ದು ...ದೈವ ವಶರಾದರು. ಮೊಂಘೀರ್ ರಾಜ ಮನೆತನದವರಲ್ಲಿ ...ಐದು ಮಂದಿಗಳು ನಾಶವಾದರು. ಅವರ ಅರಮನೆಯು ಭೂಮಿಗೆ ಸಮವಾಗಿದೆ. ಧರ್ಮ ಶಾಲೆ, ನಾಟ್ಯ ಮಂದಿರಗಳು ಇನ್ನು ಕಾಣಲಿಕ್ಕೆ ಇಲ್ಲದಂತಾಗಿವೆ. ಮೊಂಘೀರ್‌ನಲ್ಲಿ ಉಪ ಯೋಗಕ್ಕೆ ಬೀಳುವ ಶಾಲೆಯು ಒಂದಾದರೂ ಇರುವುದಿಲ್ಲ. ಆಸ್ಪತ್ರೆಯು ಹೆಸರು ಮಾತ್ರಕ್ಕೂ ಉಳಿದಿರುವುದಿಲ್ಲ. ಜಡ್ಜರ ಕೋರ್ಟು ಎಂದರೆ ಮಣ್ಣು ಗೋಡೆ ಮಾಡುಗಳ ರಾಶಿಯಾಗಿದೆ. ಕಲೆಕ್ಟರರ ಖಚೇರಿಯು ಕಸದ ರಾಶಿಯೊಡ್ಡದಂತಾಗಿದೆ. ಮೊಂಘೀರ್‌ನಲ್ಲಿದ್ದ ಬೇಂಕ್ ಒಫ್ ಬಿಹಾರ್ ಇದರ ಕಟ್ಟಡವು ಬಿದ್ದು ಬಿಟ್ಟಿದೆ. ಮೊಂಘೀರ್ ರಾಜನ ಅರಮನೆಯ ದೇವಸ್ಥಾನ ವೊಂದಲ್ಲದೆ ಎಲ್ಲವೂ ಸರ್ವ ನಾಶವಾಗಿದೆ. ಉಳಿದ ಅದೊಂದು ಕೂಡಾ ಈಗಲೋ ಮತ್ತೋ ಬೀಳುವಂತಿದೆ. ಮೊಂಘೀರ್ ನಲ್ಲಿಯ ದನ ಕರುಗಳು ಹೆಚ್ಚಿನ ಮಟ್ಟಿಗೆ ಸತ್ತಿವೆ. ೭೦,೦೦೦ ದಿಂದ ಒಂದು ಲಕ್ಷ ದನಕರು, ಎಮ್ಮೆಗಳು ಸತ್ತುವೆಂದು ಅಂದಾಜು. ಬಾವಿಗಳೆಲ್ಲಾ ಜರಿದು ಮುಚ್ಚಿಕೊಂಡಿವೆ. ಭೂಮಿಯು ಭೀಕರವಾಗಿ ನಡುಗಿದುದರಿಂದ ಮೊದಲಾಗಿ ಬಾವಿ ಗಳ ಮಣ್ಣು ಜರಿದು ನೀರು ಹಾಳಾಯಿತು; ಅಥವಾ ಬಾವಿಗಳು ಮುಚ್ಚಿಕೊಂಡುವು. ಬಾವಿಗಳ ಮಣ್ಣು ತೆಗೆಯುವ ಒಂದು ಕೆಲಸಕ್ಕೆ ಸಾವಿರಗಟ್ಟಳೆ ಹಣ ಬೇಕಾದೀತು. ಪಟ್ಟಣವನ್ನು ಸುಸಜ್ಜಿತಗೊಳಿಸುವ ಸಾಧನೆಯು ಯಾರಿಂದ ಹೇಗಾಗ-ವು ದೆಂದು ಹೇಳಲಸಾಧ್ಯ. ಹೆಚ್ಚಿನ ಮಟ್ಟಿಗೆ ಅದು ಸಾಧ್ಯವಾಗ-ವ ಕೆಲಸವೆಂದು ಹೇಳಬರುವುದಿಲ್ಲ. ಪೋಲೀಸರೂ, ವಿ...ಟಿ...ರಿ ಯುವರೂ, ರಾಷ್ಟ್ರ ಪ್ರೇಮಿಗಳೂ ತಮ್ಮಿಂದ ಕೈಲಾದಷ್ಟು ಸಹಾ ಯವನ್ನೀಯುತ್ತಿರುವರು. ಮೊಂಘೀರ್ ಪಟ್ಟಣ ಒಂದರಲ್ಲೇ ಎರಡರಿಂದ ಮೂರು ಕೋಟಿಗಳ ನಷ್ಟವು ಉಂಟಾಗಿದೆಯೆಂದರೂ ಅದು ಕಡಿಮೆಯಾಯಿತೆಂದೇ ಊಹಿಸಲಡೆಯದೆ. ಮೊಂಘೀರ್ ಪ್ರಾಂತ್ಯವು ಕಲ್ಕತ್ತದ ಸಮೀಪವಿರುವುದರಿಂದ ಸಹಾಯಗಳು ಸುಲಭವಾಗಿ ಹಸ್ತಗತವಾಗುತ್ತಿವೆ. ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರೂ ಬಾಬುರಾಜೇಂದ್ರ ಪ್ರಸಾದರೂ ಇನ್ನಿತರ ನೂರಾರು ದೇಶ ಸೇವ ಕರೂ ಮಾಡುತ್ತಿರುವ ಯತ್ನವು ಸರ್ವ ಶ್ಲಾಘ್ಯವಿರುವುದಾ ದರೂ, ಅವರು ಇಷ್ಟೊಂದು ವಿಸ್ತಾರ ಪ್ರಾಂತ್ಯದ ಸಂಕಷ್ಟಗಳನ್ನು ಸುಲಭದಲ್ಲಿ ನಿವಾರಿಸಲು ಸಾಧ್ಯವಿಲ್ಲದಂತಾಗಿದೆ. ಬೇಯಿಸಿದ ಅನ್ನ ಪದಾರ್ಥಗಳು ಜನರಿಗೆ ಕೊಡಲ್ಪಡುತ್ತಿವೆ. ಅನೇಕ ವೈದ್ಯರೂ, ಡಾಕ್ಟರರೂ, ನಾನಾ ದೇಶಗಳಿಂದ ಬಂದು ಧರ್ಮಾರ್ಥ ಚಿಕಿತ್ಸಾಲಯಗಳನ್ನು ನಡೆಸುತ್ತಿರುವರು. ಶ್ರೀ ರಾಮಕೃಷ್ಣ ಮಿಶನ್‌ನವರೂ, ಮಾರ್ವಾಡಿ ರಿಲೀಫ್ ಫಂಡಿನವರೂ ಹಿಂದೂ ಮಹಾ ಸಭೆಯವರೂ, ದಿಲ್ಲಿ ಆರ್ಯ ಸಮಾಜದವರೂ ಹೀಗೆ ಇಪ್ಪತ್ತು ಸಂಸ್ಥೆಗಳು ಒಂದಾಗಿ ಕೆಲಸ ಮಾಡುತ್ತಿವೆ. ಮುಂಬಾಯಿ ಸೇವಕ ಸಮಿತಿಯವರೂ ಸಹಾಯ ಮಾಡುತ್ತಿರು ವರು. ತಂತಿ ಆಫೀಸನ್ನು ಒಂದು ಡೇರೆಯೊಳಗಿಟ್ಟು ಕೆಲಸವು ಅವಿಶ್ರಾಂತವಾಗಿ ನಡೆಯುತ್ತಿದೆ. ಬಿಹಾರಿನವರಿಗೆ ಹೊರದೇಶ ಗಳಿಂದ ಬಂದ ತಂತಿಗಳು ಜನರಿಂದ ಹೊರಲ್ಪಡುವುದಿಲ್ಲ—ಗಂಟಿ ಗಳಲ್ಲಿ ಒಟ್ಟಲ್ಪಡುತ್ತಿವೆ. ತಂತಿ ಆಫೀಸಿನ ಕೆಲಸಗಾರರಲ್ಲಿ ಕೆಲವರ ಮನೆಗಳಲ್ಲಿ ನಡೆದ ಅನಾಹುತಗಳೂ, ಮರಣಗಳೂ ಕೂಡ ಅವರನ್ನು ಅವರ ಸ್ಥಾನ ಬಿಟ್ಟು ಕದಲಿಸಲು ಸಮರ್ಥ ವಾಗಲಿಲ್ಲ. ಪಬ್ಲಿಕ್ ಕೆಲಸಗಾರರೆಲ್ಲಾ ಬಹು ಉದಾರ ಹೃದಯಿಗಳಾಗಿ ಕೆಲಸಗಳನ್ನು ಸೌಮ್ಯತೆಯಿಂದಲೇ ನಡೆಸುತ್ತಿರು ವರು. ವಾಹನಗಳಿರುವವರು ಒಂದರೆ ಕ್ಷಣ ಪಟ್ಟಣಕ್ಕೆ ಹೋಗಿ ನಡೆದ ಅನಾಹುತಗಳನ್ನು ನೋಡಿ ಹಿಂದಿರುಗುವಷ್ಟು ಕೂಡಾ ಬಿಡುವಿಲ್ಲದಂತೆ ಕೆಲಸ ಮಾಡುತ್ತಿದ್ದಾರೆ. ಬದುಕಿ ಉಳಿದವ ರಿಗೆ ತಿನ್ನಲು ದವಸಧಾನ್ಯಗಳು ದೊರೆಯದಾಗಿವೆ. ಗದ್ದೆಗಳಿಂದ ಇತ್ತೀಚೆಗೆ ತೆಗೆದ ಧಾನ್ಯಗಳು ಅಲ್ಪ ಸ್ವಲ್ಪ ತಿನ್ನ ಸಿಗುತ್ತಿವೆ. ಹಣ ಕೊಟ್ಟರೂ ಕೂಡಾ ಅಕ್ಕಿಯಾಗಲೀ ಬೇಳೆಯಾಗಲೀ ಹಣ್ಣು ಹಂಪಲುಗಳಾಗಲೀ ಹಾಲಾಗಲೀ ದೊರೆವಂತೆಯೇ ಇಲ್ಲ. ಇವುಗಳನ್ನು ಈಗಲೂ ಭುಂಜಿಸುವುದೆಂದರೆ ಅದೊಂದು ವೈಭವವೇ ಆಗಿ ಹೋಗಿದೆ. ಜವಾಹರಲಾಲರೊಂದು ಮೊಂಘೀರ್ ನಿಂದ ೬ ಮೈಲುಗಳ ದೂರದಲ್ಲಿರದಿರುತ್ತಿದ್ದರೆ, ಮೊಂಘೀರ್‌ನ ಗತಿಯು ಯಾರಿಗೂ ಇಷ್ಟರ ತನಕ ತಿಳಿಯುತ್ತಿದ್ದಿಲ್ಲ. ಮೊಂಘೀ ರ್‌ಗೆ ಇಂತಹ ದುರ್ದಿನವು ಸಂಭವಿಸುವುದೆಂದು ಯಾರೂ ಕನಸಿ ನಲ್ಲೂ ಭಾವಿಸಿರಲಿಲ್ಲ. ಒಂದು ಹೊಸ್ಟೆಲಿನಲ್ಲಿದ್ದ ೧೫ ಮಂದಿ ಯುವಕರು ಭೂಕಂಪದ ಕೋಪಾಗ್ನಿಗಾಹುತಿಯಾದರು. ಡೇರೆ ಗಳೊಳಗೆ ಆಸ್ಪತ್ರೆಯು ಇಡಲ್ಪಟ್ಟಿದೆ. ಬೆಳೆಯು ಹೆಚ್ಚಾಗಿ ಕೊಯ್ಲಿಗೆ ಬಂದಿದೆ. ಆದರೆ ಅದರ ಫಲವನ್ನುಣ್ಣುವ ಯಜ ಮಾನರಾರೆಂದು ತಿಳಿದು ಬರುವುದಿಲ್ಲ. ಅವರು ಇಷ್ಟರ ತನಕ ಕಾಣ ಸಿಕ್ಕಿರುವುದಿಲ್ಲ. ಬಿದ್ದ ಕಟ್ಟಡಗಳ ಒಳಹೊಕ್ಕು ಕಳ್ಳರು ಹಾವಳಿ ನಡೆಸಿರುವರು. ದ್ರವ್ಯಗಳನ್ನು ಕದ್ದೊಯ್ದರು. ಬೀಳ ...ದ್ದ ಕಟ್ಟಡಗಳೊಳಗೆ ಹೋಗಿ ಆಹುತಿಯಾಗಿರುವ ಕೆಲವು ಕಳ್ಳರ ಶವಗಳು ಕಾಣಸಿಕ್ಕಿವೆ. ಛಳಿಯು ವಿಪರೀತವಾಗಿದೆ. ತಿಪ್ಪೆಯವನೂ ಉಪ್ಪರಿಗೆಯವನೂ ಒಂದಾಗಿ, ಒಟ್ಟಿ ಬಯಲು ಭೂಮಿಯಲ್ಲಿ ಛಳಿಯಲ್ಲಿ ಬಿದ್ದು ನರಳುವಂತಾಗಿದೆ. ಗಂಗಾ ನದಿಯು, ಬದುಕಿ ಉಳಿದವರಿಗೂ ಮೃತರಾದವರಿಗೂ ಆಶ್ರಯ ವನ್ನು ಕೊಡುತ್ತಿದೆ. ಕೆಲವು ಜನರು ಗಂಗೆಯ ನೀರಿನಿಂದಲೇ ಬದುಕುತ್ತಿರುವರು. ಕಾಂಗ್ರೆಸ್ ಕೆಲಸಗಾರರು ಸರಕಾರೀ ನೌಕರರು—ಅಧಿಕಾರಿಗಳೆಂಬ ಭೇದಗಳಿಗೆ ಇಲ್ಲಿ ಎಡೆಯಿರುವುದಿಲ್ಲ. ಕಾಂಗ್ರೆಸಿನವರ ಸ್ಟೋಲ್‌ಗಳಲ್ಲಿ ನೆಲದ ಮೇಲೆ ಸರಕಾರಿ ಅಧಿ ಕಾರಿಗಳು ಕುಳಿತು ತಮ್ಮ ಸಾಧನೆಯ ವಿವಿಧ ಹೆಜ್ಜೆಗಳನ್ನು ತರ್ಕಿಸಿ ವಿಮರ್ಶಿಸಿಕೊಳ್ಳುತ್ತಿರುವರು. ಒಬ್ಬ ಯುರೋಪಿ ಯನ್ ಅಧಿಕಾರಿಗೆ ದೊರೆತಿರುವ ಪುರಾತನ ಗ್ರಂಥದಿಂದಾಗಿ, ಇದೇ ಪ್ರಾಂತ್ಯದಲ್ಲಿ ೧೧೧ ವರ್ಷಗಳ ಹಿಂದೆ ಒಂದು ಭಯಂಕರ ಭೂಕಂಪವಾಗಿತ್ತೆಂದೂ, ಆಗ ಕೂಡಾ ಘೋರ ನಷ್ಟಗಳು ಸಂಭ ವಿಸಿದ್ದುವೆಂದೂ ಗೊತ್ತಾಗಿದೆ. ಮಹಾ ಭೂಗರ್ಭ ಶೋಧಕ ರೆಂದು ಹೆಸರುಗೊಂಡಿರುವ ಒಬ್ಬರ ಅಭಿಪ್ರಾಯದ ಮೇರೆಗೆ, ಇನ್ನು ೧೦೦ ವರ್ಷಗಳ ತನಕ ಬಿಹಾರಿನಲ್ಲಿ ಭೂಕಂಪವಾಗ ಲಾರದೆಂದು ತಿಳಿಯಲಾಗಿದೆ. ಪಾಟಲಿಪುತ್ರವು ಒಂದು ನೂರು ವರ್ಷಗಳ ಹಿಂದೆ ಭೂಕಂಪದಿಂದ ಹಾಳಾಯಿತು—ಹಾಗೆ ಬಿಹಾರ್ ಪ್ರಾಂತ್ಯವೂ ಪ್ರತಿ ನೂರು ವರ್ಷಗಳಿಗೊಮ್ಮೆ ಭೂಕಂಪಕ್ಕೀಡಾ ಗಾಗುತ್ತದೆಂದು ಊಹಿಸಲ್ಪಟ್ಟಿದೆ. ಸರ್ ಸುಲ್ತಾನ್ ಅಹಮ್ಮದ್ ಎಂಬವರು ಒಂದು ಕಾಲದಲ್ಲಿ ಐಶ್ವರ್ಯವಂತರಾಗಿದ್ದರು. ಈಗ ಒಂದು ಸೈಯನ್ನು ಒಂದು ಪವನಿನ ದೃಷ್ಟಿಯಿಂದ ನೋಡಬೇಕಾ ದಷ್ಟು ಬಡವರಾಗಿರುವರು. ಇವರು ಬಾಹ್ಯ ಪ್ರಪಂಚದ ಜ... ರಿಗೆ ಅರಿಕೆ ಮಾಡುತ್ತಾ, "ಇದೇ ಜಗತ್ತೇ ನಮಗೆ ಸಹಾಯ ಮಾಡಬೇಕು, ಇಲ್ಲದಿದ್ದರೆ ಬಹಳ ಸಾಯುವುದು ದಿಟ" ಎಂದಿರುವರು.

ಸಂತೋಷದ ವಾರ್ತೆ!

ಮಹಾತ್ಮಾ ಗಾಂಧಿಯವರು ಇದೇ ತಿಂಗಳ ತಾ. ೨೪-೨೫ಕ್ಕೆ ನಮ್ಮ ಜಿಲ್ಲೆಯನ್ನು ಸಂದರ್ಶಿ ಸುವರಾಗಿ ನಿಶ್ಚೈಸಿದೆ. ಅವರು ಕೊಡಗಿನಿಂದ ಪುತ್ತೂರು ಮಾರ್ಗವಾಗಿ, ಬಂಟ್ವಾಳ, ಮಂಗ ಳೂರು, ಮೂಲ್ಕಿ, ಉಡುಪಿ, ಕುಂದಾಪುರ ಇತ್ಯಾದಿ ಸ್ಥಳಗಳಿಗೆ ಹೋಗುವರು. ದಾರಿಯ ಮುಖ್ಯ ಮುಖ್ಯ ಸ್ಥಳಗಳಲ್ಲಿ ಗಾಂಧಿಜೀಯರಿಗೆ ನಿಧಿಯನ್ನರ್ಪಿಸುವ ಬಗ್ಗೆ ಸ್ಥಳೀಯ ಮಹನೀ ಯರು ತಕ್ಕ ವ್ಯವಸ್ಥೆಯನ್ನು ಮಾಡಬೇಕಾಗಿ ವಿನಂತಿ. ಅಗತ್ಯವುಳ್ಳ ಮಾಹಿತಿ ಬಗ್ಗೆ—ಕಾರ್ಯ ದರ್ಶಿ, ಮಹಾತ್ಮಾ ಗಾಂಧಿ ಸ್ವಾಗತ ಮಂಡಳಿ, ಕೊಡಿಯಾಲ್‌ಬೈಲು, ಇವರಿಗೆ ಬರೆಯುವುದು.

ಧನಿಕನೆಂದೆಣಿಸಲ್ಪಟ್ಟವರಿಂದ ಬಡವರ ವರೆಗಿನವರು ಮ... ಮಾಡುಗಳ ಆಶ್ರಯವಿಲ್ಲದೆ ಮೊದಲೇ ಕಂಗೆಟ್ಟು ಬಳಲಿರುವವ... ಅವರ ದುರದೃಷ್ಟವೆಂಬಂತೆ ಕಳೆದ ವಾರದಲ್ಲಿ ಬಿಹಾರಿನಲ್ಲಿ... ಮೂರು ದಿನಗಳ ಪ್ರಚಂಡ ಮಳೆ! ಎಲ್ಲಿಯೂ ಹೋಗಲು... ಕಂಗಾಣದೆ ಅನೇಕ ಸಾವಿರ ಜನರು ನಿಂತಲ್ಲೇ ಮುದುಡಿ ಕುಳಿತು... ಮೂರು ದಿನಗಳ ಮಳೆಯನ್ನು ತಮ್ಮ ದೇಹದ ಮೇಲೆಯೇ... ಹರಿಸಿದರು. ಅಧಿಕಾರಿಗಳು ತಗಡಿನ ಹೆಟ್ಟೆಗಳನ್ನು ಕ... ಕೈಲಾದಷ್ಟು ಜನರಿಗೆ ಆಶ್ರಯವನ್ನೀಯುತ್ತಿರಾದರೂ, ೧೦... ರಲ್ಲಿ ೫೦ ಮಂದಿಗಳು ರಾತ್ರಿ ಹಗಲು ಒದ್ದೆಯಾದರು. ಮ... ಯೊಡನೆ ಅಸಹನೀಯ ಛಳಿಯೂ ಆರಂಭವಾಯಿತು. ಇ... ರಲ್ಲೇ ಕೊನೆಗಾಣಲಿಲ್ಲ—ಚಂಡಮಾರುತಗಳೂ ಸಿಟ್ಟುಗೊ... ಡಂತೆ ಬಿರುಗಾಳಿಯು ಬೀಸಿತು. ಅಂತೂ ಬಿಹಾರಿ... ವರ ಮೇಲೆ ಪ್ರಕೃತಿಯೇ ಮುನಿದಿರುವಂತೆ ಭಾಸ... ಯಿತು—ಆಗುತ್ತದೆ. ಮಕ್ಕಳು ತಾಯಿತಂದೆಗಳ ತೊ... ಗಳಲ್ಲಿ ಬಿದ್ದು ಮಳೆಯ ಧಾರೆಯೊಡನೆ ಕಣ್ಣೀರ ಧಾರೆಯ... ಹರಿಸಿದುವು. ಅವುಗಳೊಡನೆ ತಾಯಿತಂದೆಗಳು ಸೇರಿ, ಸ... ಸೃಷ್ಟಿಯೂ ಗೋಳೋ ಎಂದು ಅತ್ತಂತೆ ಕಂಡು ಬಂದಿ... ಹಸಿವಿನಿಂದಲಾದರೂ ತಪ್ಪಿಸಲು ಹಾಳಾದ ಛತ್ರವಿದೆ—ವ... ಯಿಂದ ತಪ್ಪಿಸಲು ಜನರಿಗೆ ಮಾಡೇ ಇಲ್ಲದಂತಾಯಿ... ಇವಿಷ್ಟಾಗಿಯೂ, ಮೊದಲೇ ಇನ್ನು ಮುಂದಿನ ಭೂಕಂಪದ ಭ... ದಿಂದಿರುವ ಜನರನ್ನು ಎಚ್ಚರಿಸುವುದಕ್ಕೆಂಬಂತೆ ತಾ. ೩೦ನೇ ... ಪುನಃ ಎರಡು ಸಲ ಭೂಮಿಯು ಕಂಪಿಸಿಕೊಂಡಿತು. ಮದ... ಪ್ರಾಂತ ತಿರುಚಿನಾಪಳ್ಳಿಯ ವರೆಗೂ, ಮದ್ರಾಸಿನಿಂದ ಬೆಂಗಳೂ... ವರೆಗೂ, ಜಾಲಾರಪೇಟೆಯಿಂದ ಒಲವಕೋಟ್‌ನ ವರೆಗೂ ಇ... ವಷ್ಟು ವಿಸ್ತೀರ್ಣದಷ್ಟು ಭೂಮಿಯಲ್ಲಿ ಬಿಹಾರ್ ಭೂಕಂ... ತನ್ನ ಕಾಠಿಣ್ಯವನ್ನೂ ಕ್ರೌರ್ಯವನ್ನೂ ತೋರಿಸಿ ಮೆರೆದಿದೆ ಎಂ... ವಾಚಕರಿಗೆ ಬಿಹಾರ್ ಭೂಕಂಪದಲ್ಲಿ ಸಂಕಷ್ಟಗಳಿಗೀಡಾದ... ಜಯವೆಷ್ಟೆಂದು ಒಂದು ಅಂದಾಜು ಆಗಬಹುದು. ಮೊ... ಹೇಳಿದ ಭೂಮಿಯ ವಿಸ್ತೀರ್ಣದಲ್ಲಿ ಸಂಪೂರ್ಣ ಲಯ... ಉಂಟಾಗಿದೆ. ವಿಮಾನಗಳು ಕೂಡಾ ಅಲ್ಲಿಗೆ ಹಾರಿದರೆ ಇ... ನಿಲ್ಲುವಷ್ಟು ಭೂಮಿಯು ಅಲ್ಲಿ ಸಮನಾಗಿ ಇರುವುದಿ... ಅಲ್ಲಿಯ ಜನರಿಗೂ ಮನೆಮಾರು ಇರುವುದೇ ಇಲ್ಲ. ಕೆ... ಕಡೆಗಳಲ್ಲಿ ಉಳಿದ ಕಟ್ಟಡಗಳು ಮನುಷ್ಯರ ವಾಸಕ್ಕೆ ಪ್ರಾ... ಜನ ಬೀಳುವಂತೆಯೇ ಇಲ್ಲ. ಬಡತನವೆಂಬುದು ಜನ... ಎದುರಾಯಿಸಿ ನಡೆವೆನೆಂದೇ ಎಡೆಗೊಟ್ಟು ನಿಂತಿದೆ. ಯ... ಕುಟುಂಬವೂ ತನ್ನ ಹೃದಯಭೇದಕ ಕತೆಗಳನ್ನು ಹೇ... ಇಲ್ಲದಂತೆ ಆಗಿಲ್ಲ. ಹೆಚ್ಚಿನ ಅನಾಹುತವೆಲ್ಲ ಕಣ್ಣುಚ್ಚಿ... ಯುವುದರೊಳಗೆ ಘಟಿಸಿ ಹೋಯಿತೆಂದು ಅಲ್ಲಿಯ ... ಹೇಳಿಕೆ. ನೀರು ದೊರೆಯದಿರುವುದರಿಂದ ಜನರು ... ಸ್ನಾನಾದಿ ಮೂರು ವಾರಗಳು ಕಳೆದುವೆಂದು ತಿಳಿದು ಒ... ಬಾಬುರಾಜೇಂದ್ರ ಪ್ರಸಾದರ ಲೆಫ್ಟಿನೆಂಟರಾದ ಶ್ರೀ ... ಪ್ರಸಾದರವರು ತಾನು ಜನವರಿ ೧೫ನೇ ತಾರೀಕಿನಿಂದ ... ತನಕವೂ ಸ್ನಾನ ಮಾಡಿರುವುದಿಲ್ಲವೆಂದು ತಿಳಿಸಿರುವರು. ಸುಲ್ತಾನ್ ಅಹಮ್ಮದ್ ಎಂಬವರು ತನ್ನ ಅನುಭವ... ಹೇಳುತ್ತಾ—"ನಾನು ಭಿಕ್ಷಾಪಾತ್ರವನ್ನು ಇಷ್ಟರ ತನ... ದವನಲ್ಲ. ಆದರೆ, ಇಂದಿನ ದಿನದಲ್ಲಿ ಎರಡು ಕೈಗ... ಭಿಕ್ಷಾಪಾತ್ರೆಯನ್ನು ಹಿಡಿದುಕೊಂಡು ನಾನು ಜೀವಿಸಬೇಕಾ... ಯಾರು ಒಂದು ರೂಪಾಯಿಯನ್ನು ನನಗೆ ಕೊಡುವರು... ಅವರು ನನಗೆ ೫ ರೂಪಾಯಿಗಳನ್ನು ಕೊಡುವಂತೆ ... ಬೇಕಾಗಿದೆ. ಬಿಹಾರ್ ಪ್ರಾಂತ್ಯವನ್ನು ಭೂಪಟದಲ್ಲಿ ... ಬೇಕಾದರೆ, ಇಡೀ ಹಿಂದೂಸ್ಥಾನವು ಒಂದಾಗಿ ಸಹಾಯ... ಶೀಘ್ರವಾಗಿ ನೀಡಬೇಕು. ಅಲ್ಲದೆ ಹೋದರೆ ಈ ಪ್ರಾ... ಮುಂದಕ್ಕೆ ಲೆಖ್ಖಕ್ಕೆ ಸಿಗಲಾರದು" ಎಂದಿರುವರು. ವೈಸರಾ... ಫಂಡಿನಿಂದಲೂ, ಬಾಬು ರಾಜೇಂದ್ರ ಪ್ರಸಾದರ ಫಂಡಿನ... ಸುಮಾರು ೧೦ ಲಕ್ಷ ರೂಪಾಯಿಗಳು ರವಾನೆಯಾ... ವಾದರೂ, ಜನರ ದುರಂತ ಕ್ಲೇಶ ಹಾದಿಯಲ್ಲಿ ಈ ... ಕೃಣ ಸಮಾನವೇ ಸರಿ. ಪಾಟ್ನಾ ಒಂದರಲ್ಲೇ ೧೫೦೦ ... ಗಳಾದುವು. ಅವುಗಳಲ್ಲಿ ೧೫೦೦ ಮನೆಗಳು ... ವಾಗಿದೆ.

FRESH CONSIGNMENT ARRIVED.

UNEQUAL QUALITY——————EXCEPTIONAL PRICE

A TIRE THAT SAVES YOU REPUTATION AND MONEY



The Canara Public Conveyance Co., Ltd.

MANGALORE.

ಅಸ್ಪೃಶ್ಯತಾ ನಿವಾರಣೆಯ ಮಸೂದೆ! ಜಪಾನಿನ ಅಭಿವೃದ್ಧಿ!

ಟಿಪ್ಪಣಿಗಳು:—

ಸಹಕಾರ ಪ್ರಚಾರ ಸಹಕಾರ ಸಂಘಗಳ ರಿಜಿಸ್ಟ್ರಾರರುಗಳ ಹನ್ನೊಂದನೆಯ ವಾರ್ಷಿಕ ಸಭೆಯು ಡಿಲ್ಲಿಯಲ್ಲಿ ಸೇರಿದಾಗ, ಸರ್ ಫಜಲಿ ಹುಸೇನರವರು, "೧೯೦೪ರಿಂದ ೧೯೨೯-೩೦ರ ತನಕ ಸಹಕಾರ ತತ್ವವು ಚೆನ್ನಾಗಿ ಪ್ರಚಾರ ಹೊಂದುತ್ತಿದ್ದಂತೆ ತೋರುತ್ತಿತ್ತು. ಹಿಂದೆ ೯೬೦೦ ಸಂಘಗಳಿದ್ದಾಗ, ಆ ವರ್ಷದಲ್ಲಿ ೧೦೬೦೦೦ ಸಂಘಗಳಾದುವು ೩೦½ ಲಕ್ಷ ಮೆಂಬರುಗಳಿದ್ದುದು, ೪೩ ಲಕ್ಷಕ್ಕೇರಿತು. ೭೬ ಕೋಟಿ ಮೂಲ ಧನವಿದ್ದು ೯೨ ಕೋಟಿ ರೂಪಾಯಿಯಷ್ಟಾಯಿತು. ೧೯೩೦-೩೧ನೇ ವರ್ಷದ ನಂತರ ಕಾಟಕ್ಕೆ ಏಟಾಯಿತು. ಸಂಘಗಳ ಮತ್ತು ಮೆಂಬರುಗಳ ಸಂಖ್ಯೆಗಳು ಕಂದಿದುವು. ಮಹಾಯುದ್ಧದ ಕಾಲದಲ್ಲಾದರೂ ಮುಂದರಿದ 'ಸಹಕಾರ'ವು ಪ್ರಪಂಚದ ಆರ್ಥಿಕ ದುರವಸ್ಥೆಯ ಫಲವಾಗಿಯೂ, ದವಸಗಳ ಬೆಲೆಯು ಇಳಿದ ಕಾರಣವೂ ಕುಂದುತ ಬಂತು" ಎಂದರು. ಇವು ಕಾರಣಗಳಾಗಿದ್ದಿರಬಹುದು, ನಿಜವಾಗಿಯೂ ಇತರ ಕಾರಣಗಳಾವವೂ ಇಲ್ಲವೆ? ಸಭೆಯು ಮುಗಿದ ಬಳಿಕ, ಅಲ್ಲಿ ನಡೆದ ತರ್ಕಗಳನ್ನು ಓದಿದರಾದರೂ, ಆ ನಿಜವಾದ ಕಾರಣಗಳು ತಿಳಿದು ಬಂದಾವೆ? ನೋಡಬೇಕು

ಜಪಾನಿನ ಅಭಿವೃದ್ಧಿ ಅಲ್ಲಿನ ಸರಕಾರವೇ ಪ್ರಕಟಿಸಿರುವ ಅಂಕೆ ಸಂಖ್ಯೆಗಳಿಂದ ಕಳೆದ ವರ್ಷ ೨,೧೮೨,೭೪೩ ಜನನಗಳಾದುವೆಂದು ತೋರುವುದು ಎಂದರೆ, ಪ್ರತಿ ಮಿನಿಟಿಗೆ ನಾಲ್ಕು ಜನನಗಳು ಇದೇ ರೀತಿ, ಪ್ರತಿ ದಿನ, ಇಡೀ ವರ್ಷ! ಇದುವರೆಗೆ ಜಪಾನಿನ ಜನಸಂಖ್ಯೆಯು ಬಲು ಚೆನ್ನಾಗಿ ಅಭಿವೃದ್ಧಿ ಹೊಂದುತ್ತಿತ್ತೆಂಬ ಶಿಫಾರಸು ಇದ್ದೇ ಇದ್ದರೂ ಕಳೆದ ವರ್ಷದ ಜನನಗಳ ಸಂಖ್ಯೆಯು ಈ ಶಿಫಾರಸಿಗೆ ಇನ್ನೂ ಚಿನ್ನದ ಮುಲಾಮು ಹಚ್ಚಿದಂತೆ ಮಾಡಿಯದೆ ಅಲ್ಲದ ಜನಾಂಗಗಳಲ್ಲಿಲ್ಲ ಈ ಬಗೆಯ ಆತುರ, ವೇಗ ಇದ್ದುದರಿಂದಲೇ ಜಗತ್ತಿನ ಶಾಂತಿಗೆ ಭಂಗವುಂಟಾಗದಿರದು ಎಂದು ಸಾರುವವರು ಅಮೇರಿಕಾ ಯುರೋಪುಗಳಲ್ಲಿರುವರು ಅಲ್ಲದ ಜನಾಂಗಗಳೆಲ್ಲವು ತೊಟ್ಟಿಲ ಸ್ಪರ್ಧೆಗೆ ತಲೆ ಕೊಟ್ಟಿವೆ ಎನ್ನುವರು ಲೀಗ್ ಒಫ್ ನೇಶನ್ಸ್ ಸಭೆಯಾದರೂ ಈ ಕಡೆಗೆ ಗಮನ ಕೊಟ್ಟು, ಈ ಬಗೆಯ ಅಭಿವೃದ್ಧಿಯನ್ನು, ಅದರ ವೇಗವನ್ನು ತಡೆಯಲು, ಸೂಚನೆ ಕೊಡಬಾರದೆ? ಹೀಗೆ ಬೆಳೆದ ಬರುವ ಜನಾಂಗಕ್ಕೆ ನೆಲ ಸಿಗದೆ, ಈಗ ಚೀನ ಮತ್ತು ಮೆಂಚೂರಿಯಾ, ಅನಂತರ ಆಸ್ಟ್ರೇಲಿಯಾ ಎಂದು ನೆಲಕ್ಕೆ ಜಗಳಗಳಾಗದೆ ಇರುವುವೆ? ಇದರಿಂದ ಇನ್ನೊಂದು ಮಹಾಯುದ್ಧಕ್ಕೆ ಬೀಜ ಬಿತ್ತಿದಂತಾಗದೆ? ಎಂದು ಮಿತ ಸಂತತಿ ತತ್ವ ಪ್ರಚಾರಕರು ಬೋಧಿಸುತ್ತಿರುವರು

ಮುದ್ರಾಸಿನಲ್ಲಿ ಸ್ವದೇಶೀ "ಯಾವುದಾದರೊಂದು ಪರದೇಶೀಯ ಪದಾರ್ಥವನ್ನು ಕಾಣ ಸಿಕ್ಕಲು ಅಂತಹದೇ ನಮ್ಮ ದೇಶದಲ್ಲಾದ ಸಾಮಾನಿಗಿಂತ ಅದೇ ಉತ್ತಮವಾದುದೆನ್ನುವ ದುಷ್ಟ ಅಭ್ಯಾಸವು ನಮ್ಮನ್ನು ಇನ್ನೂ ತೊಲಗಿಲ್ಲ ಈಗ ಪೇಟೆಯಲ್ಲಿ ಸಾಬೂನು, ಚರ್ಮದ ಕೈಗಾರಿಕೆಯ ಸಾಮಾನುಗಳ, ಉಕ್ಕಿನ ಸಾಮಾನುಗಳು, ಕಮ್ಮಾರ ಯಂತ್ರಗಳು, ಬಟ್ಟೆ ಮೊದಲಾದುವನ್ನು ನೋಡಿಯೂ ಕೊಂಡುಕೊಳ್ಳುವ ಗಿರಾಕಿಗಳು ಹೆಚ್ಚು ಇವುಗಳಲ್ಲಿ ಕೆಲವು ದೇಶೀಯ ಒಡವೆಗಳು ಅಷ್ಟು ನಾಜೂಕಾಗಿಲ್ಲ ನಿಜ ಹಾಗೆಂದು ಅವುಗಳನ್ನು ಕೊಂಡುಕೊಳ್ಳ ಬಾರದೆಂದೇನೂ ಇಲ್ಲವಷ್ಟೆ ಇವನ್ನು ಕೊಂಡುಕೊಳ್ಳುವವರಿಲ್ಲದಿದ್ದರೆ, ಇವು ಮುಂದೆ ಚೆನ್ನಾಗಿ ತಯಾರಾಗುವ ಬಗೆ ಯಾವುದು? ಕಿರಿಕಿರಿ ಅರಚುವ ಪಾದರಕ್ಷೆಗಳು, ಅಧಿಕ ವಾಸನೆಯುಳ್ಳ ಎಣ್ಣೆಗಳು, ಕೆಲಸವಿಲ್ಲದ ಪರವೀಧರನಷ್ಟೆ ಬೇಸರ ಕೊಡುವುವು ನಿಜ ನಮಗೆ ಇದು ವರೆಗೆ ಮನಸ್ತುಷ್ಟಿ ಕೊಡುತ್ತಿದ್ದ ಪರಕೀಯ ಒಡವೆಗಳ ಬದಲಾಗಿ ಇವನ್ನು ಉಪಯೋಗಿಸಲು ನಾವು ತೊಡಗದಿರುವಲ್ಲಿ, ನಮ್ಮ ನಂತರದವರಾದರೂ ಈ ದೇಶೀಯ ಜಿನಸುಗಳನ್ನು ಕಣ್ತೆರೆದು ನೋಡುವರೋ? ಐರ್ಲೆಂಡಿಗಾಗಿ ಅಲ್ಲಿನವರು, ಅಮೇರಿಕಕ್ಕಾಗಿ ಅಲ್ಲಿನವರು ಜಪಾನಿಗಾಗಿ ಜಪಾನೀಯರು ಎಷ್ಟು ಸಹನ ಬುದ್ಧಿಯಿಂದ ಉದಾರಚಿತ್ತರಾಗಿ ವರ್ತಿಸಿದರು ಎಂದಾದರೂ ತಿಳಿದು ನಮ್ಮ ಪ್ರಯತ್ನದಿಂದ ತಾನೆ ಸ್ವರಾಜ್ಯ ಪ್ರಾಪ್ತಿ ಎಂಬುದನ್ನು ವಿಶ್ವಾಸವಿಟ್ಟು ನಮ್ಮ ಸಾಮಾನುಗಳನ್ನು ನಾವು ಕೊಂಡುಕೊಳಲು ಕಲಿಯ ಬಾರದೇ? ಎಂದು ಮುದ್ರಾಸಿನಲ್ಲಿ ಸ್ವದೇಶೀ ಸಾಮಾನುಗಳಿಗೆ ಪ್ರೋತ್ಸಾಹ ಕೊಡುತ್ತಿರುವುದನ್ನು ಕಂಡು ವಿಮರ್ಶಕರೊಬ್ಬರು ಬರೆದಿರುವರು

ಸುಧಾರಣಾ ಕಮಿಟಿಯ ರಿಪೋರ್ಟ್ ಜೊಯಿಂಟ್ ಸಿಲೆಕ್ಟ್ ಕಮಿಟಿಯು ಜನವರಿ ತಾರೀಕು ೩ರಲ್ಲಿ ಪುನಃ ಸೇರಿದ್ದು, ಅಂತರಂಗದಲ್ಲೇ ವಿಚಾರ ಮಾಡುತ್ತ ಕುಳಿತಿದೆ ಇನ್ನು ರಿಪೋರ್ಟ್ ಬರೆವಾಗ, ಹೇಗೆ ಬರೆಯಬೇಕೆಂಬುದೇ ಅದರ ಚಿಂತೆ ಈ ಕಮಿಟಿಗೆ ಇದುವರೆಗೆ ೩೦೭೯೭ ಪವನು ಬರೆದಾಗಿದೆ. ೩೭ ಪುಟಗಳ ಮೂರು ಸಂಪುಟಗಳಷ್ಟು ವಾಚ್ಯೂಲವನ್ನು ಇದು ಪಡೆದಿದೆ. ಇನ್ನು ಸಂಪುಟವೂ ಬಾಕಿ, ಅವಶಿಷ್ಟ ಪರಿಶಿಷ್ಟಗಳೂ ಬಾಕಿ ಉಳಿದಿವೆ. ಇವೆಲ್ಲವನ್ನು ಮುದ್ರಿಸಿದ ಬಳಿಕ ತಾನೆ ರಿಪೋರ್ಟ್ ಬರೆವ ಅಂದಾಜು? ೧೯೪೧ನೇ ಇಸವಿಗೆ ಇನ್ನೆಷ್ಟೋ ವರ್ಷಗಳಿರುವಾಗ, ಅವಸರವೇತಕ್ಕೆ?

೧೯ ವರ್ಷದ ವ್ಯಾಜ್ಯ ಅರ್ಧ ಎಕ್ರೆ ಸ್ಥಳ, ಮೌಲ್ಯ ಸುಮಾರು ೪೦೦ ರೂಪಾಯಿ. ಅದರ ಯಜಮಾನರಾರು ಎಂದು ತೀರ್ಮಾನಿಸಲು ಮೊನ್ನೆ ತಾನೆ, ಮದ್ರಾಸು ಹೈಕೋರ್ಟಿನ ಮುಂದೆ ಬಂದಿತು ಸ್ವಲ್ಪ ಸಾಮಾನ್ಯ ರೀತಿಯನ್ನು ಕಕ್ಷಿಗಾರರು ತಿಳಿದಿದ್ದರೆ, ಹತ್ತೊಂಬತ್ತು ವರ್ಷದ ತನಕ ಈ ವ್ಯಾಜ್ಯವನ್ನು ಕೋರ್ಟುಗಳ ಮುಂದೆ ಅಲೆದಾಡಿಸುವ ವಿಪರ್ಯಾಸವನ್ನು ತಪ್ಪಿಸಬಹುದಿದ್ದಿತು ಒಟ್ಟು ಮುನ್ಸಿಫರು ಇಬ್ಬರು ಸಬ್‌ಜಡ್ಜರು, ಮೂವರು ಹೈಕೋರ್ಟ್ ಜಡ್ಜರು ಈ ವ್ಯಾಜ್ಯದ ವಿಚಾರಣೆ ಮಾಡಿದ್ದರು ಇಷ್ಟಾದರೂ, ಯಾವುದೊಂದು ಕಾನೂನಿನ ದೃಷ್ಟಿಯಿಂದ ವಿಚಾರಣೆ ಮಾಡಿ ಪುನರ್ವಿಮರ್ಶೆ ಮಾಡಲು ವ್ಯಾಜ್ಯದಲ್ಲೇನೂ ಇದ್ದಿಲ್ಲ ಮೂಲ ಕಕ್ಷಿಗಾರರೊಳಗೆ ಈಗ ತೀರ್ಮಾನವಾಗುವಾಗ ಉಳಿದ ಆಸಾಮಿ ಒಬ್ಬನೇ!

ಅಸ್ಪೃಶ್ಯತಾ ನಿವಾರಣೆಯ ಮಸೂದೆ ಎಸೆಂಬ್ಲಿಯಲ್ಲಿ ಇದು ವಿಮರ್ಶೆಗೆ ಬಂದು, ಅದನ್ನು ಈಗ ಸಿಲೆಕ್ಟ್ ಕಮಿಟಿಯ ಅಭಿಪ್ರಾಯಕ್ಕೆ ಒಪ್ಪಿಸಿಕೊಡಲಾಗಿದೆ ಎನ್ನುವುದರಲ್ಲಿ ಆಶ್ಚರ್ಯವೇನೂ ಇಲ್ಲ ಸನಾತನ ಧರ್ಮಾಭಿಮಾನಿಗಳಾಗಿರುವ ಪಂಡಿತರೇ ಬಹಳವಾಗಿರುವ ಈಗಣ ಎಸೆಂಬ್ಲಿಯಲ್ಲಿ ಈ ಮಸೂದೆಯನ್ನು ಪ್ರಾಂತಿಕ ಸರಕಾರಗಳಿಗೆ ಕಳುಹಿಸಿ ಇತರ ಸಾರ್ವಜನಿಕ ಸಂಸ್ಥೆಗಳಿಂದಲೂ ಬೇಕಾದಷ್ಟು ಅಭಿಮತ ಪಡೆದು ಮುಂದೆ ಚರ್ಚೆಗೊಳಪಡಿಸಿ ನಿಷ್ಕರ್ಷಿಸುವುದರಲ್ಲಿ ವಿಶೇಷವೇನೂ ಇಲ್ಲ ಆದರೆ, ೬೧೦ ದಾಗ ಅಸ್ಪೃಶ್ಯತಾ ನಿವಾರಣೆಗಾಗಿ ಎದೆ ತಲ್ಲಣಗೊಂಡಿರುವುದಾಗಿ ಸಾರಿದ ಸರಕಾರದ ಮುಖಂಡರುಗಳೇ ಮಾತ್ರ ಈ ಸಲ ಹೊರಗೆಡವಿದ ಅಭಿಪ್ರಾಯಗಳು ಮನಸ್ಸನ್ನು ಕಲಕಿಸುವುವಾಗಿವೆ ಶ್ರೀ| ರಾಜರು ಪಕ್ಷವಾಗಿ ಸರಕಾರವೇ ಮುಂದರು ನಾಲ್ಕು ಮಾತುಗಳನ್ನಾದರೂ ಮುಕ್ತಕಂಠರಾಗಿ ಹೇಳಲ್ವೆಂದು ಪತ್ರಿಕೆಗಳು ದೂರುತ್ತಿವೆ ಶ್ರೀ| ರಾಜರು ಗಂಗಾ ನದಿಯನ್ನು ಸಟ್ಟು ಹಾಕಲು ಹೊರಟರೆ? ಅವರ ಮಸೂದೆಯನ್ನು ಈಗಲ ಚರ್ಚೆಗಿಟ್ಟೆನ್ನು, ಅಥವಾ ಒಂದು ವೇಳೆ ಮಂಜೂರು ಮಾಡಿದ್ದಲ್ಲಿ ಆಕಾಶವೇ ಕುಸಿದು ಬೀಳುತ್ತಿದ್ದಿತೆ? ಪ್ರಾಚೀನ ಕಾಲದಿಂದ ಕಟ್ಟು ಕಟ್ಟಳೆಗಳನ್ನು ಅನುಸರಿಸಿ ನೊಂದು ಬರುವ ಬಾಂಧವರನ್ನು ನ್ಯಾಯಸ್ಥಾನಗಳು ಪರಿಶೋಧಿಸಲಿ ಎಂಬ ಭಾವನೆಯುಳ್ಳ ಶ್ರೀ ರಾಜರ ಮಸೂದೆಯ ಆಲೋಚನಾ ಕಾಲದಲ್ಲಿ, ಹರಿಜನೋದ್ಧಾರದ ಕಡೆಗೆ ಸಂಪೂರ್ಣ ಶಕ್ತಿಯಿಂದ ದುಡಿಯುವ ಮಹಾತ್ಮಾಜೀಯವರ ಮೇಲೂ ಗದಾಪ್ರಹಾರಗಳಾದುವು ಎಂದು ಪಕ್ಷವನ್ನು ಜರೆದರೆ, ತನ್ನ ಪಕ್ಷಕ್ಕೆ ರಾಜ ಮಂತ್ರಿನ ಬಲವು ಹೆಚ್ಚುವುದಾಗಿ ನಂಬುವವರಿದ್ದಾರೆ!

ತಾಲೂಕು ಬೋರ್ಡುಗಳ ಮುಕ್ತಾಯ ಆಗಬೇಕೆಂದೇ ನಮ್ಮ ಮಂತ್ರಿಗಳು ಹಟ ತೊಟ್ಟಿರುವರು ಮೂರು ವರ್ಷಗಳ ಹಿಂದೆ ಇದೇ ವಿಷಯ ಚರ್ಚೆಯಾಗಿ, ಆ ಪ್ರಸ್ತಾಪವೇ ಬೇಡವೆಂದೂ, ಈ ಬೋರ್ಡು ಸಂಸ್ಥೆಗಳು ಅಗತ್ಯವೆಂದೂ, ಎಣಿಸಲಾಯಿತು, ಪಂಚಾಯತ ಬೋರ್ಡುಗಳೂ ಅಧಿಕಾರ ಸಾಗಿಸಲಿ ಎಂದೂ ನಿರ್ಧಾರವಾಯಿತು ಈಗ ಇವು ಕಂಗಾಲಾದ ಪ್ರಯುಕ್ತ ಇನ್ನು ಇವನ್ನು ರದ್ದುಗೊಳಿಸಿ, ಪಂಚಾಯತ ಬೋರ್ಡುಗಳನ್ನೂ ಜಿಲ್ಲಾ ಬೋರ್ಡುಗಳನ್ನೂ ಮಾತ್ರ ಊರ್ಜಿತವಿರಿಸುವುದು ಉತ್ತಮವೂ ಅಗತ್ಯವೂ ಎಂದು ಮಂತ್ರಿಗಳು ಖಂಡಿತ ಮಾಡಿರುವರು ಹಣವಿಲ್ಲದ ಬೋರ್ಡುಗಳು ಇದ್ದು ಫಲ ಕಡಿಮೆಯಾದ ಕಾರಣ, ಅದೊಂದು ಕಾರಣದಿಂದ ಅವನ್ನು ರದ್ದುಪಡಿಸುವುದು ವಿಹಿತ. ಇವು ಇದ್ದಾಗ ನಡೆಯುತ್ತಿದ್ದ ಕೆಲಸವು ತಪ್ಪುವುದೆಂಬುದೂ ನಿಜ, ಇವರಲ್ಲಿ ಸಾಧ್ಯವಾಗುವಷ್ಟು ಮುಂದಿನ ಜಿಲ್ಲಾ ಬೋರ್ಡು, ಪಂಚಾಯತುಗಳಲ್ಲಿ ಕೆಲಸಕ್ಕೆ ಇಡಲೂ ಮಂತ್ರಿಗಳು ಸಿದ್ಧರು; ಹಾಗಾದರೆ, ಖರ್ಚು ಎಲ್ಲಿ ಕಡಿಮೆಯಾಯಿತು? ಯಾವ ಕೆಲಸಕ್ಕಾಗಿ ಈ ಬೋರ್ಡುಗಳು ಉಂಟಾದುವೊ, ಅವು ಆ ಕೆಲಸ ಮಾಡಲು ಹಣ ಸಿಗದವಂತಾದರೆ, ಅವು ಬೇಗನೆ ನಿವೃತ್ತಿ ಹೊಂದುವುದು ಪುಣ್ಯ. ಆದರೆ, ಜಿಲ್ಲಾ ಬೋರ್ಡುಗಳನ್ನು ಸಹ ಎರಡಾಗಿ ತುಂಡಾಗಿಸುವುದರಿಂದ ಖರ್ಚು ಕಡಿಮೆಯಾದೀತೆ? ಹೆಚ್ಚೀತೆ? ರೆವಿನ್ಯೂ ಜಿಲ್ಲೆಗಳಿಗೆ ಸರಿಯಾಗಿ ಜಿಲ್ಲಾ ಬೋರ್ಡುಗಳು ಎಷ್ಟೋ ಕಾಲದಿಂದ ಇಲ್ಲಿಯೂ ಇತರ ಪ್ರಾಂತ್ಯಗಳಲ್ಲೂ ಇರುವಾಗ, ಇಲ್ಲಿ ಮಾತ್ರ ಎರಡೇಕೆ ತಾಲೂಕು ಬೋರ್ಡುಗಳಿಗೆ ಬದ್ಧಿ ಕೊಟ್ಟು ಅವನ್ನು ಜಿಲ್ಲಾ ಬೋರ್ಡುಗಳೆಂದು ಕರೆಯುವುದೆ ಹೊಸ ಉದ್ಯಮದ ಮುಖ್ಯ ಪಂಚಾಯತುಗಳನ್ನು ಸಮರ್ಪಕವಾಗಿರಿಸಿ, ಅವುಗಳ ಮೇಲ್ವಿಚಾರಣೆಯನ್ನು ಮಾತ್ರ ನೋಡುತ್ತ ಬರುವುದರಿಂದ ಜಿಲ್ಲಾ ಬೋರ್ಡುಗಳು ಅವ್ಯಗವಾಗದೆ ಇರಲಾಗುತ್ತದೆ.

NOTES...
ನೋಟಿಗಳು,

ಭೂಕಂಪದಿಂದ ಸತ್ತವರಿಗೂ ಉಳಿದವರಿಗೂ ತೃಪ್ತಿಕರವಾದ ಸಮಾಧಾನವನ್ನು ಸರಕಾರದ ಭೂಗರ್ಭ ಶಾಸ್ತ್ರಜ್ಞರು ಕೊಟ್ಟಿರುವುದೂ ಸಮಾಧಾನಕರವಾಗಿದೆ—"ಇನ್ನು ನೂರು ವರ್ಷಗಳ ತನಕ ಇನ್ನೊಂದು ಭೂಕಂಪವು ಬಿಹಾರವನ್ನು ತಟ್ಟದು ಎಂದು!—ಬಿಹಾರವು ನೂರು ವರ್ಷ ಬಾಳಲಿ.

• • • •

ಆಲ್ವಾರು ಮಹಾರಾಜರು ಸ್ವದೇಶಕ್ಕೆ ಮರಳಿರುವರು. ರಾಜಧಾನಿಗೆ ಅಲ್ಲ ಕಾಶಿನಲ್ಲಿ ಬೇಟೆಯಾಡುತ್ತಿದ್ದಾಗ, ಅಂಗಿಯ ಗುಂಡಿಗಳು ಸ್ವಲ್ಪ ಮೇಲೆ ಕೆಳಗೆ ಆಗಿದ್ದುವೆಂದು ೨೦೦೦ ಮೈಲು ದೂರದಿಂದ ಇಂಗ್ಲಿಷ ದರ್ಜಿಯನ್ನು ಕರೆತರಿಸಿ ಅವನ್ನು ಪುನಃ ಹೊಲಿಸಿದ್ದ ಶ್ರೀಮಂತರಿವರು.

• • • •

ವೈಕುಂಠ ಏಕಾದಶಿಯ ದಿನ ಕಲ್ಕತ್ತದಲ್ಲಿ ಹಿಂದೂ ಮಹಿಳೆಯೊಬ್ಬಳು ತನ್ನ ಮಗುವನ್ನು ಐದು ಸಲ ಗಂಗಾ ನದಿಯಲ್ಲಿ ಮುಳುಗಿಸಿ ಮಿಂಯಿಸಿದಳು ಅದರ ಆ ಜನ್ಮದ ಪಾಪವೆಲವು ತೊಳೆದು ಹೋಗಲು, ಅದು ಕೂಡಲೆ ದಿವ್ಯ ದೇಹ ಧರಿಸಿ ಸ್ವರ್ಗವನ್ನೇ ಸೇರಿತು ತಾಯಿಯ ತೋಳುಗಳಲ್ಲಿ ನಶ್ವರವಾದ ಹೆಣವೇ ಉಳಿಯಿತು!

• • • •

ಭೂಕಂಪದಿಂದಾಗಿ ಮಡಿದವರು ೪೦೦೦ವನ್ನು ಮೀರದು ಎಂದು ಸರಕಾರದ ಅಂಕೆಗಳಾಗಿದ್ದುವು ಜನರು ೨೦೦೦೦ ಎನ್ನುತ್ತಿದ್ದಾರೆ ಈಗ ಸರಕಾರದ ಲೆಕ್ಕದಲ್ಲೇ ಮಡಿದವರು ೯೦೦೦! ಜನರ ಲೆಕ್ಕದಲ್ಲೆಷ್ಟೊ?

• • • •

ಗ್ರಹಣ ಕಾಲದಲ್ಲಿ ಭೂಕಂಪವಾಗಲಿಲ್ಲ, ಮದ್ರಾಸು ಕೌನ್ಸಿಲಿನಲ್ಲಿ ಮಾತ್ರ ತಾಲೂಕು ಬೋರ್ಡುಗಳನ್ನು ಕಿತ್ತು ಬಿಡುವ ಭೂಕಂಪವುಂಟಾಯಿತು

• • • •

ಐದು ರೂಪಾಯಿಗಿಂತ ಕಡಿಮೆ ಬೆಲೆಯ ಒಡವೆಗಳನ್ನು ವಿ ಪಿ ಮುಖಾಂತರ ಕಳುಹಿಸುವಾಗ ೨೦ ವರ್ಷಗಳ ಹಿಂದೆ ಒಂದಾಣೆ ಚಾರ್ಜು ತೆರುವುದಿತ್ತು, ಈಗ ಬರೇ ಎರಡಾಣೆಗಳಷ್ಟೆ ಖರ್ಚು ತಗಲುತ್ತದೆ ಈ ಭಾಗದಲ್ಲಿ ನಮ್ಮ ದೇಶವು ಅಭ್ಯುದಯ ಹೊಂದಿದಷ್ಟು ಹೆಚ್ಚಾಗಿ,—ಸೇಕಡಾ ೪೦೦-ಇತರ ಯಾವ ಪ್ರಾಂತ್ಯವೂ ಮುಂದರಿದಿಲ್ಲ!

• • • •

ಹರಿಜನೋದ್ಧಾರದ ಪ್ರತಿಫಲ ನೋಡಬಾರದೆ? ಮಹಾತ್ಮಾಜೀಯವರು ದಕ್ಷಿಣಕ್ಕೆ ಈ ಸಲುವಾಗಿ ಸಂಚಾರಕ್ಕೆ ಹೊರಟಾಗ, ಕಾಲ ರಾತ್ರಿ ಭಾರವಿದ್ದವರು, ಈಗ ಸಾವಿರಾರು ಮೈಲು ಮೂರು ತಿಂಗಳಲ್ಲಿ ಸಂಚರಿಸಿ ೧೧೨ ರಾತ್ತು ಭಾರವಾಗಿರುವರು ಅಸ್ಪೃಶ್ಯತೆ ತೊಳೆದಷ್ಟೂ ದೇಹಕ್ಕೆ ಆರೋಗ್ಯ

• • • •

ಕಾಲಿನ್ ಇನ್ಸಪೆಕ್ಟರರು ಎಲ್ಲವನ್ನು ಸಂದರ್ಶಿಸಿ, ಏನನ್ನೂ ಕಾಣದೆ, ಕೊನೆಗೆ ಭೂಗೋಲದ ನಕ್ಷೆಯನ್ನು ನೋಡಿ, ಬೆರಳಿನಿಂದ ಸವರಿ, "ಏನು ದೊಳಯ್ಯ ಇಲ್ಲಿ?" ಎಂದು ದೂರಿದರು ಮಾಸ್ತರರು,—ತಾವು ಬೆರಳಿಟ್ಟಲ್ಲಿ ನಕ್ಷೆಯಲ್ಲಿ ಸಹಾರಾ ಮರುಭೂಮಿಯಿದೆಯಲ್ಲವೆ? ಎಂದರು ಸಂದರ್ಶನೆ ಮುಗಿಯಿತು.

• • • •

ನಮ್ಮ ಹೆಡ್ ಪೋಸ್ಟಾಫೀಸಿನ ಪಶ್ಚಿಮದ ಬಾಗಿಲಿನ ಬಳಿ ಪೋಸ್ಟ್‌ಮೇನರು ಡೆಲಿವರಿ ಮಾಡಬಾರದೆಂದೂ, ಎಲ್ಲರೂ ಉತ್ತರ ದಿಕ್ಕಿನ ಗೇಟಿನಿಂದಲೇ ಹೋಗಬೇಕೆಂದೂ ಅಲ್ಲಿ ಅನುಕೂಲ!

ಗೋದ್ರೆಜ್ ಸಾಬೂನುಗಳಿಗೆ

ಅಮೂಲ್ಯವೂ ಹೊಸತೂ ಆದ ಪ್ರಾಶಸ್ತಿ

ಡಾ। ಎಂ. ಎ. ಅನ್ಸಾರಿ. ಎಂ. ಡಿ.

(ಅಖಿಲ ಭಾರತ ಕಾಂಗ್ರೆಸ್ಸಿನ ಮಾಜಿ ಅಧ್ಯಕ್ಷರು)

"ಗೋದ್ರೆಜ್ ಸಾಬೂನುಗಳ ಉತ್ಕೃಷ್ಟ ಗುಣಗಳನ್ನು ಕಂಡು ನಾನು ಸಂತೋಷದಿಂದ ಮೆಚ್ಚಿದವನಾಗಿರುತ್ತೇನೆ. ಕೆಲವು ವರ್ಷಗಳಿಂದ ನಾನವುಗಳನ್ನು ಉಪಯೋಗಿಸುತ್ತಿರುವೆನು. ಯುರೋಪಿನಲ್ಲಾಗಲೀ ಅನ್ಯತ್ರ ಯಾವ ದೇಶದಲ್ಲಾಗಲೀ ತಯಾರಿಸಲ್ಪಟ್ಟ ಸಾಬೂನುಗಳಿಗಿಂತ ಅವು ಅತ್ಯುತ್ಕೃಷ್ಟವೆಂದೇ ನನ್ನ ಅನುಭವದ ಮಾತು. ಅವುಗಳ ಉತ್ಕೃಷ್ಟತೆಯ ದೃಷ್ಟಿಯಿಂದಲೂ, ಅಲ್ಲದೆ ಅವು ಹಿಂದೂದೇಶದಲ್ಲೇ ಸಿದ್ಧಗೊಳಿಸಲ್ಪಟ್ಟವೆಂಬ ದೃಷ್ಟಿಯಿಂದಲೂ ನಾನವುಗಳನ್ನು ಹಿಂದೀಯ ಜನತೆಗೆ ಶಿಫಾರಸು ಮಾಡುತ್ತೇನೆ"

ಪ್ರಮುಖ ದೇಶ್ಯರೂ ಮತ್ತು ಪ್ರಮುಖ ರಾಷ್ಟ್ರೀಯ ಧುರೀಣರೂ ಆದ ಡಾ। ಅನ್ಸಾರಿಯವರ ಹೇಳಿಕೆಯು ಪ್ರತಿಯೊಬ್ಬ ವ್ಯಕ್ತಿಯ ಮತ್ತು ಪ್ರತಿಯೊಂದು ರಾಷ್ಟ್ರದ ದೈಹಿಕ ದೃಷ್ಟಿ ಮತ್ತು ರಾಷ್ಟ್ರೀಯ ದೃಷ್ಟಿಯಿಂದ ಸಹಾಯಕರವಾಗ ಬೇಕು.

Jaya Bharatham Co, P B No 83 Madras

ಜಯ ಭಾರತಂ ಕೋ., ಪ. ಪೆ. ೮೩, ಮದ್ರಾಸು

ದ. ಕ. ಜಿಲ್ಲೆಗೆ ಏಜಂಟರು:—ಎಸ್. ಬಂಗೇರಾ ಮಿಶ್ಯನ್ ಕಂಪೌಂಡು, ಮಂಗಳೂರು

ಡಿಲ್ಲಿ ಬಿಸ್ಕೂಟಿನ ಕುರಿತು

ಇಂಡಿಯಾದ ಘನ ಕೈಗಾರಿಕಾ ಸಂಸ್ಥೆಯ

ಸರ್ ದೊರಾಬ್ ಟಾಟಾರವರು

"ಈ ಬಿಸ್ಕೂಟುಗಳನ್ನು ಹಿಂದೀಯ ಜನತೆಯು ಹೆಚ್ಚಿನ ಅವಗಾಹನೆಗೆ ತಂದಲ್ಲಿ ಸಹಜವಾಗಿ ಅವುಗಳು ಹೆಚ್ಚಿನ ವಿಕ್ರಯವಾಗುವುದರಲ್ಲಿ ಸಂದೇಹವಿರುವುದಿಲ್ಲ.

"ಇಂಗ್ಲಾಂಡಿನಲ್ಲಿ ತಯಾರಿಸಲ್ಪಟ್ಟವುಗಳಿಗಿಂತಲೂ ನಾನು ಈ ಬಿಸ್ಕೂಟುಗಳನ್ನೇ ಪ್ರಶಸ್ತವೆನ್ನುತ್ತೇನೆ" — "ಇಂಗ್ಲಾಂಡಿನಲ್ಲಿ ನಿಮ್ಮ ಬಿಸ್ಕೂಟುಗಳು ಬಹಳ ಮೆಚ್ಚುಗೆಗೆ ಪಾತ್ರವಾಗಿವೆ"—ಎಂಬುದೇ ಕೆಲವು ಯೂರೋಪಿಯನರ ಹೇಳಿಕೆ.

ಮದ್ರಾಸು ಪ್ರಾಂತ್ಯಕ್ಕೆ ಏಜಂಟರು:—

Jaya Bharatham Co, P. B No 83 Madras

ಜಯ ಭಾರತಮ್ ಕೋ., ಪ. ಪೆ. ೮೩ ಮದ್ರಾಸು.

ಸ್ಟಾಕಿಸ್ಟರು —ಮೆಸರ್ಸ್ ಕಾಮತ್ ಎಂಡ್ ಕೋ, ಮಂಗಳೂರು

ದ. ಕ. ಜಿಲ್ಲಾ ಏಜಂಟರು:—ಎಸ್. ಬಂಗೇರಾ, ಮಿಶ್ಯನ್ ಕಂಪೌಂಡು, ಮಂಗಳೂರು

ಗುಣಬಾರದಿದ್ದರೆ] ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಅವರ [ಹಣ ವಾಪಾಸು

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಬಹಳ ಸಾರಿ ಹೆರಿಯುವುದರಿಂದ ಹೆಂಗಸರ ಆರೋಗ್ಯವು ಅಶಕ್ತವಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹೆರಿಯುವುದು ಬೇಡವಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೋವಿಲ್ಲದಂತೆ ಸುರುವಾಗುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣೆ ಇಲ್ಲದಾಗುವುದು. ಕಡಮೆ ಬೆಲೆಯ ಏನು ಮಾಡಿದರೂ ಸುಖವಾಗುವುದಿಲ್ಲ. ಕೂಡಲೇ ಪೂರಾ ವಿಚಾರ ಮಾಡಿ ಔಷಧ ಬೇಕಾದರೆ ಕುಮುಟ ಸರ್ಟಿಫಿಕೇಟು ಡಾಕ್ಟರ ಬಿ. ಎ. ವೈದ್ಯ, ಎಲ್. ಸಿ. ಪಿ. ಎಸ್. ಕೊಡುತ್ತಾರೆ. ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿ ಕಿಮ್ಮತ್ತು ರೂ ೪, ವಿ ಪಿ ಅಣೆ ೮.

ವಿಳಾಸ :—ಸಂಜೀವಿನೀ ಔಷಧಾಲಯ ಮು ಪೋ ಮಿರಜ, S M C

ಇನ್ನೊಂದು ವೈಶಿಷ್ಟ್ಯ



ನೀವು ಕಬ್ಬಿನ ಗಾಣವನ್ನು ಪಡೆಯುವಾಗ ನೀವು ಸ್ವಾಭಾವಿಕವಾಗಿ ಅದರ ಗಟ್ಟಿಮುಟ್ಟು, ಬಾಳ್ವಿಕೆ ಮತ್ತು ಅಗ್ಗತನದ ಕಡೆ ಗಮನವನ್ನೀಯುತ್ತೀರಿ ನೀವು

ಕಿರ್ಲೋಸ್ಕರ

ವಸಂತ ಪವರ್ ಕ್ರಶರ್ ಗಾಣವನ್ನು ನಿಮ್ಮ ಕೆಲಸಕ್ಕೆ ಯೋಗ್ಯವೆಂದು ತಿಳಿಯುವಿರಿ. ರಸವು ಒಳಗೆ ಸೇರಿ, ಹಾಳಾಗದ ಹಾಗೆ ಅದರ ಬೇರಿಂಗುಗಳನ್ನು ಮುಚ್ಚಿರುತ್ತದೆ. ಇದರಿಂದಾಗಿ ಎಣ್ಣೆಯು ನಷ್ಟವಾಗುವುದಿಲ್ಲ—ಗಾಣವು ದೀರ್ಘಕಾಲ ಸಂತೃಪ್ತಿಕರವಾಗಿ ನಡೆಯುತ್ತದೆ. ಅದರ ಎಲ್ಲಾ ಭಾಗಗಳೂ ದೀರ್ಘವಾಗಿ ಬಾಳುವಂತೆ ಮಾಡಲಾಗಿದೆ.

ಎಲ್ಲಾ ವಿವರಗಳಿಗೆ ಇಲ್ಲಿಗೆ ಬರೆಯಿರಿ:—

ಕಿರ್ಲೋಸ್ಕರ ಬ್ರದರ್ಸ್ ಲಿಮಿಟೆಡ್, ಕಿರ್ಲೋಸ್ಕರವಾಡಿ (ಜಿ. ಸತಾರಾ)

ಸ್ಟಾಕಿಸ್ಟರು:—ಬಾಸೆಲ್ ಮಿಶನ್ ಬುಕ್ ಡಿಪೊ ಎಂಡ್ ಟ್ರೆಕ್ಟ್ ಡಿಪಾಜಿಟರಿ ಕೊ. ಮಂಗಳೂರು ದ. ಕ.

ಭೋಗಋಷಿ ಬ್ರಹ್ಮಾನಂದ ಕಲ್ಪ

ಎನ್ನುವ ಜೀವಾನಂದ

ವೀರ್ಯ ವೃದ್ಧಿ ಲೇಹ

ಮಾನವ ಶರೀರದಲ್ಲಿ ಶುದ್ಧವಾದ ರಕ್ತವನ್ನು ಮತ್ತು ಧಾತುವನ್ನು ರಕ್ಷಿಸಿಕೊಳ್ಳುವುದಕ್ಕಿಂತ ಮೇಲಾದದ್ದು ಬೇರೊಂದಿಲ್ಲ. ಈಗಿನ ಕಾಲದಲ್ಲಿ ಅನೇಕರು ಮೋಹಕ್ಕೆ ತಾಳಲಾರದೆ ಕೆಟ್ಟ ಸಹವಾಸಕ್ಕೆ ಸಿಕ್ಕಿ ಅಂದರೆ ಹಸ್ತ ಪ್ರಯೋಗದಿಂದಲೂ, ಹೆಂಗಸರ ಸಹವಾಸದಿಂದಲೂ, ಮತ್ತು ಇನ್ನೂ ಅನೇಕ ತರದ ಕೆಟ್ಟ ಚಾಳಿಗಳಿಂದಲೂ ಶರೀರವನ್ನು ಕೆಡಿಸಿಕೊಂಡು ಪ್ರಾಯ ಸಮರ್ಥರಾದಾಗ ರತಿಸುಖಕ್ಕೆ ಶಕ್ತಿಯಿಲ್ಲದೆ ವ್ಯಸನಕ್ಕೆ ಗುರಿಯಾಗಿರುವರು, ಮತ್ತು ಇನ್ನೂ ಆಗುತ್ತಲಿರುವರು. ಇವರ ಉಪಯೋಗಕ್ಕಾಗಿ, ಈ ಲೇಹ ಸೇವಿಸುವುದರಿಂದ ಸೊಂಟದ ನೋವನ್ನು ಕೈಕಾಲುಗಳ ನೋವನ್ನು ಕ್ಷಣದಲ್ಲಿ ಹೋಗಲಾಡಿಸುವುದು



ಧಾತು ಹೋಗುವಿಕೆ, ಸ್ವಪ್ನಸ್ಖಲನ, ಮೂತ್ರದೊಡನೆ ಧಾತು ಹೋಗುವಿಕೆ ಇವುಗಳನ್ನು ಕೂಡಲೇ ನಿಲ್ಲಿಸುವುದು. ಈ ಲೇಹ ಸೇವಿಸುವುದರಿಂದ ಮೇಹದಿಂದ ವ್ಯಾಧಿಗಳನ್ನು ಗುಣಮಾಡುವುದಲ್ಲದೆ ರಕ್ತವನ್ನು ಹೆಚ್ಚಿಸಿ ಧಾತುವನ್ನು ಶೋಧಿಸುವುದು ಮತ್ತು ಮುಖಕ್ಕೆ ಕಾಂತಿಯನ್ನುಂಟುಮಾಡಿ ಹಸನ್ಮುಖಿಗಳನ್ನಾಗಿ ಮಾಡುವುದು.

ಈ ಲೇಹವು ಅನೇಕ ವಿಧವಾದ ವನಸ್ಪತಿಯ ಮೂಲಿಕೆಗಳಿಂದ ಬೆಳ್ಳಿ ಭಂಗಾರದ ಭಸ್ಮವನ್ನು ಸೇರಿಸಿ ತಯಾರಿಸಿದೆ. ಈ ಲೇಹವನ್ನು ಸೇವಿಸಿ ಶರೀರದ ಎಲ್ಲಾ ವ್ಯಾಧಿಗಳನ್ನು ಹೋಗಲಾಡಿಸಿಕೊಂಡು ನಂತರ ರತಿ ಸುಖಕ್ಕೆ ಸೇರಿದರೆ ಪ್ರಪಂಚದ ಸುಖವನ್ನು ಬಹು ಚೆನ್ನಾಗಿ ಕಳೆಯುವುದಲ್ಲದೆ ಹುಟ್ಟುವ ಮಕ್ಕಳೂ ಆಯುಷ್ಯವಂತರಾಗುವವು. ಈ ಲೇಹದ ವಿಷಯದಲ್ಲಿ ಬಹಳವಾಗಿ ಬರೆದು ತಿಳಿಸಲು ಆಗದು. ಬೆಳ್ಳಿ, ಭಂಗಾರ ಮತ್ತು ಸಾಚಾ ಮುತ್ತಿನ ಭಸ್ಮಗಳು ಈ ಲೇಹಕ್ಕೆ ಎಷ್ಟು ಮಾತ್ರವೂ ಸಮಾನವಾಗಲಾರವು. ೨೪ ತೊಲೆ ಡಬ್ಬಿಗೆ ರೂ ೨—೦—೦ ಒಂದೇ ಸಲ ೨ ಡಬ್ಬಿ ೪೮ ತೊಲೆ ಕರಿಸಿದರೆ ಕ್ರಯ ರೂ ೩—೮—೦

ಲೀಲ ಅತಿ ಸಯನ

(ಮೇಲೆ ಸವರುವುದಕ್ಕೆ)

ಮನುಷ್ಯರಲ್ಲಿ ಪುರುಷಾರ್ಥವು ಕೇವಲ ಧಾತುವಿನಿಂದಲೇ ಇರುವುದು. ಮನುಷ್ಯರ ದೂಷಿತ ವೀರ್ಯವು ಗರ್ಭಕೋಶವಾಗಲಾರದು. ಅತ್ಯಂತ ವ್ಯಸನದಿಂದಲೂ ವ್ಯಭಿಚಾರ (ಶುಕ್ರ) ದಿಂದಲೂ ಯಾವಾಗಲೂ ಶುಕ್ರ ಕೆಡುವುದರಿಂದಲೂ, ಹಸ್ತ ಪ್ರಯೋಗಾದಿಗಳಿಂದಲೂ, ಸ್ತ್ರೀ ಸಂಬಂಧ ವ್ಯಾಧಿಯಿಂದಲೂ, ಪ್ರಾಯ ಜಾಸ್ತಿ ಆದುದರಿಂದಲೂ ಶರೀರದ ಎಲ್ಲಾ ನಾಡಿಗಳು ಬಲಹೀನವಾಗುವುದರಿಂದ ಪುರುಷತ್ವವು ಹೀನವಾಗಿ ಸ್ತ್ರೀ ಸಂಗ ಮಾಡುವುದಕ್ಕೆ ಆಗುವುದಿಲ್ಲ. ಕೆಲವರು ಬಾಲ್ಯದಲ್ಲಿಯೂ ವೃದ್ಧಾಪ್ಯ (ಮುದುಕತನ) ದಲ್ಲಿಯೂ ಇಂತಹ ವ್ಯಾಧಿಗಳನ್ನು ಉಂಟುಮಾಡಿಕೊಂಡು ತಮಗಿರುವ ವ್ಯಾಧಿಯನ್ನು ವೈದ್ಯರಲ್ಲಿ ಹೇಳಲು ನಾಚಿಕೆಯಿಂದ ವ್ಯಾಧಿಯನ್ನು ಹೆಚ್ಚು ಮಾಡಿಕೊಂಡು ಪ್ರಾಯ ಸಮರ್ಥರಾದಾಗ ಸ್ತ್ರೀಸುಖ ಶಕ್ತಿಯಿಲ್ಲದೆ ಅಜ್ಞಾನದಿಂದ ಅಧರ್ಮವಾಗಿ ಜೀವನವನ್ನುಂಟುಮಾಡಿಕೊಳ್ಳುವರು. ಇಂಥವರ ಉಪಯೋಗಕ್ಕೋಸ್ಕರವಾಗಿ ದೊಡ್ಡ ಡಾಕ್ಟರುಗಳಿಂದ ತಯಾರು ಮಾಡಲ್ಪಟ್ಟಿದೆ.

ಕ್ರಯ ಬಾಟ್ಲಿ ಒಂದಕ್ಕೆ ರೂ. ೨—೦—೦

ಒಂದೇ ಸಲ ಎರಡು ಡಬ್ಬಿ ಮೇಲ್ಕಂಡ ಲೇಹವೂ ಒಂದು ಬಾಟ್ಲಿ ಲೀಲ ಅತಿ ಸಯನ ತರಿಸಿಕೊಂಡರೆ ಕ್ರಯ ರೂ. ೫—೦—೦.

Lakshminarayana OUSHADA SAL[A]

Post Box No, 53 Madra[s]

ಲಕ್ಷ್ಮೀನಾರಾಯಣ ಔಷಧ ಶಾಲೆ,

ಪೋಸ್ಟು ಬಾಕ್ಸ ನಂ. ೫೩ ಮದ್ರಾಸು.

ಪರಿವಿಡಿ.

ತಾಲೂಕು ಬೋರ್ಡುಗಳ ಅವಸಾನ!
ಟಿಪ್ಪಣಿಗಳು
ಸೂಚನೆಗಳು.
ವರ್ತಮಾನ ಸಂಗ್ರಹಗಳು
ಬಹಿಷ್ಕಾರದ ಹಾದಿಗೆ ಧಾಳಿಯಾಗಲಿ! ೩
ವಿವಿಧ ಸಮಾಚಾರಗಳು ೧೧
ದಕ್ಷಿಣ ಕನ್ನಡ—ಜಿಲ್ಲೆಗಳಿಂದ, ಉಡುಪಿ, ೪
ಪತ್ರವ್ಯವಹಾರ ೧೩
ಮೂಲೆ ಮೂಲೆಗಳಿಂದ ೧೦
ಬಿಹಾರದ ಭೂಕಂಪದ ಹಾವಳಿ! ಭಯಂಕರ ವಿವರ! ೪

ಸ್ವದೇಶಾಭಿಮಾನಿ.

ತಾ. ೯ನೇ ಶುಕ್ರವಾರ ಫೆಬ್ರವರಿ ೧೯೩೪.

ತಾಲೂಕು ಬೋರ್ಡುಗಳ ಅವಸಾನ.

ತಾಲೂಕು ಬೋರ್ಡುಗಳನ್ನು ತೆಗೆದು ಹಾಕಿ, ಅವುಗಳು ಮಾಡಬೇಕಿರುವ ಕರ್ತವ್ಯಗಳನ್ನು ಡಿಸ್ಟ್ರಿಕ್ಟ್ ಬೋರ್ಡಿಗೂ, ಸ್ಥಳೀಕ ಪಂಚಾಯತ ಮತ್ತು ಮ್ಯುನಿಸಿಪಲ್ ಅಧಿಕಾರಿಗಳಿಗೂ ಹಂಚಿ ಹಾಕುವ ಬಗ್ಗೆ ಮದ್ರಾಸ್ ಕೌನ್ಸಿಲಿನಲ್ಲಿ ಒಂದು ಮಸೂದೆಯು ಚರ್ಚೆಗೆ ಬಂದು, ಸಿಲೆಕ್ಟ್ ಕಮಿಟಿಗೆ ಒಪ್ಪಿಸಲ್ಪಟ್ಟಿತು. ಈ ಮಸೂದೆಯ ಮುಖ್ಯ ಉದ್ದೇಶವು ಲೋಕಲ್ ಬೋರ್ಡುಗಳಿಂದ ಈಗ ಉಂಟಾಗುವ ನಷ್ಟವನ್ನು ನಿವಾರಿಸುವುದು, ಮತ್ತು ಪಂಚಾಯತಗಳ ಸಂಖ್ಯೆಯನ್ನು ಹೆಚ್ಚಿಸಿ ಅವುಗಳನ್ನು ಪ್ರೋತ್ಸಾಹಿಸುವುದು.

ಈ ಮಸೂದೆಯನ್ನು ಕೌನ್ಸಿಲಿನ ವಿರೋಧ ಪಕ್ಷ(oppo sition)ದ ಮುಂದಾಳುಗಳಾದ ಡಾ| ಸುಬ್ಬರಾಯನವರೂ ಸ್ವಾಮಿ ವೆಂಕಟಾಚಲ ಶೆಟ್ಟರೂ ವಿರೋಧಿಸುವರು. ಆದರೆ ಮದ್ರಾಸ್ ಸಂಸ್ಥಾನದಲ್ಲಿ ಈ ಮಸೂದೆಗೆ ಸಾರ್ವಜನಿಕ ವಿರೋಧವು ಬಲವತ್ತರವಿದ್ದಂತೆ ಕಂಡು ಬರುವುದಿಲ್ಲ. ಇದರ ಮುಖ್ಯ ಕಾರಣವೆಂದರೆ—ಈ ಸ್ಥಳೀಕ ಬೋರ್ಡುಗಳು ಜನರಲ್ಲಿ ಬಹಳ ಬೇಸರವನ್ನುಂಟುಮಾಡಿವೆ. ಈ ಸ್ಥಳೀಕ ಬೋರ್ಡುಗಳ ಅಸ್ತಿತ್ವವು ಜನತೆಗೆ ಎಂಥಾ ಸಂದರ್ಭಗಳಲ್ಲಿ ತಿಳುವಳಿಕೆಗೆ ಬರುತ್ತದೆ. ಒಂದು ಚುನಾವಣೆಯ ಸಮಯ ಇನ್ನೊಂದು ತೆರಿಗೆಯ ನೋಟೀಸು ಬಂದ ಸಮಯ, ಚುನಾವಣೆಯಾದ ಮೇಲೆ ಬೋರ್ಡುಗಳ ಅವಸ್ಥೆಯೇನು? ತೆರಿಗೆ ಕೊಟ್ಟ ಮೇಲೆ ಕೊಟ್ಟ ದುಡ್ಡಿನ ಅವಸ್ಥೆಯೇನು? ಇವೆರಡೂ ಪ್ರಶ್ನೆಗಳಿಗೆ ನ್ಯಾಯವಾದ ಉತ್ತರವು ದೊರಕುವುದಿಲ್ಲ.

ಮುಖ್ಯವಾಗಿ, ಹಲವು ತಾಲೂಕು ಬೋರ್ಡುಗಳು ಅವ್ಯವಸ್ಥೆಯಿಂದ ತುಂಬಿರುವ ವಿಷಯವು ಎಲ್ಲರಿಗೂ ತಿಳಿದೇ ಇದೆ. ಚುನಾವಣೆಯು ಬಹಳ ಮೇಲಾಟದಿಂದ ನಡೆಯುತ್ತದೆಯಾದರೂ, ಈ ಮೇಲಾಟವು ಯೋಗ್ಯತೆಯ ಮೇಲಾಟವಾಗಿರದೆ ದುಡ್ಡಿನ ಮತ್ತು ದಾಕ್ಷಿಣ್ಯದ ಮೇಲಾಟವಾಗಿರುತ್ತದೆ. ಸದಸ್ಯರ ಚುನಾವಣೆಯಾದ ಮೇಲೆ ಆಗಬೇಕಾದ ಅಧ್ಯಕ್ಷ ಚುನಾವಣೆಯು ಕೂಡ ದುಡ್ಡಿನ ಮತ್ತು ದಾಕ್ಷಿಣ್ಯದ ಬಲಾತ್ಕಾರದಿಂದಲೇ ನಡೆಯುತ್ತದೆ. ಫಲವಾಗಿ, ಅಯೋಗ್ಯರೂ, ಗುಣಹೀನರೂ ಆದ ಅಧ್ಯಕ್ಷರು ಚುನಾಯಿಸಲ್ಪಟ್ಟು ಬಂದ ಉದಾಹರಣೆಗಳು ಎಷ್ಟೋ ಇವೆ. ಇಂತಹ ಸಂದರ್ಭದಲ್ಲಿ ತಾಲೂಕು ಬೋರ್ಡಿನ ಆಡಳಿತ ಮೆಟ್ಟಿ, ಹೆಡ್ ಕ್ಲಾರ್ಕರ ಅಧೀನವಾಗಿ ನೌಕರರು ಪೀಡಿಸಲ್ಪಡುವುದೂ, ತಾಲೂಕು ಬೋರ್ಡಿನ ವಿಧಾಯಕ ಕರ್ತವ್ಯಗಳು ತಿರಸ್ಕೃತವಾಗಿ ಹೋಗುವುದೂ ಹಲವು ಬೋರ್ಡುಗಳಲ್ಲಿ ಕಂಡು ಬರುತ್ತಿದೆ. ಈ ಕಾರಣಗಳಿಂದ ಮತದಾರರೂ ಬೋರ್ಡುಗಳಲ್ಲಿ ಅನಾದರವನ್ನು ತೋರುವುದು ಆಶ್ಚರ್ಯವಾಗಲಾರದು.

ಮುಖ್ಯವಾಗಿ ಈ ಕಾರಣಗಳಿಂದ ಪ್ರಾಂತಿಕ ಜನತೆಯು ತಾಲೂಕು ಬೋರ್ಡುಗಳನ್ನು ತೆಗೆದು ಹಾಕುವುದನ್ನು ವಿರೋಧಿಸಿಲ್ಲ. ಆದರೆ ವಿರೋಧ ಪಕ್ಷದವರಾದ ಸ್ವಾಮಿ ವೆಂಕಟಾಚಲ ಶೆಟ್ಟರು—ಪಂಚಾಯತನ್ನು ಸುವ್ಯವಸ್ಥೆಗೊಳಿಸುವ ಕ್ರಮವನ್ನು ನಿರ್ಮಿಸುವ ಮೊದಲೇ ತಾಲೂಕು ಬೋರ್ಡುಗಳನ್ನು ತೆಗೆದು ಹಾಕಲು ಕೈ ಹಚ್ಚಿರುವರು—ಎಂದ ಮಾತು ವಿಚಾರಣೀಯವಿದೆ. ಏಕೆಂದರೆ, ಪ್ರಕೃತದಲ್ಲಿ ಪಂಚಾಯತ ಸಂಸ್ಥೆಗಳು ತಾಲೂಕು ಬೋರ್ಡುಗಳಿಗಿಂತಲೂ ಹೆಚ್ಚು ಒಳ್ಳೆಯದೆಂದು ಹೇಳುವುದಕ್ಕೆ ಕಾರಣವಿಲ್ಲ. ಅವುಗಳ ಆಡಳಿತವೂ ಹೆಚ್ಚುಕಡಿಮೆ ಇದೇ ರೀತಿಯಲ್ಲಿರುತ್ತದೆ. ಅಲ್ಲದೆ ಪಂಚಾಯತಗಳ ಮೇಲೆ ಡಿಸ್ಟ್ರಿಕ್ಟ್ ಬೋರ್ಡುಗಳ ಹಿಡಿತವೂ ಕಡಿಮೆಯಾಗಿದೆ. ಪಂಚಾಯತಗಳನ್ನು ಸುಧಾರಿಸುವ ಕ್ರಮವನ್ನು ಕೈಗೊಳ್ಳದೆ ಅವುಗಳ ಸಂಖ್ಯೆಯನ್ನು ಹೆಚ್ಚಿಸುವುದು ಅಷ್ಟು ಬುದ್ಧಿವಂತಿಕೆಯ ಕೆಲಸವಲ್ಲ. ಪಂಚಾಯತಗಳಿಂದ ಒಳ್ಳೆಯ ಕೆಲಸ ಆಗುವಂತೆ ಮಾಡುವುದು ಸರಕಾರದ ಕರ್ತವ್ಯ. ತಾಲೂಕು ಬೋರ್ಡುಗಳನ್ನು ತೆಗೆದು ಹಾಕುವ ಉದ್ದೇಶ

ಎರಡನೆಯದಾಗಿ, ವೆಚ್ಚವನ್ನು ಕಡಿಮೆ ಮಾಡುವ ಉದ್ದೇಶವನ್ನು ಸರಕಾರವು ಸೂಚಿಸುತ್ತದೆ. ಆದರೆ ತಾಲೂಕು ಬೋರ್ಡುಗಳನ್ನು ತೆಗೆದುದರಿಂದ ಡಿಸ್ಟ್ರಿಕ್ಟ್ ಬೋರ್ಡುಗಳನ್ನು ವಿಭಾಗಿಸುವ ಅಗತ್ಯ ಬೀಳಬಹುದೆಂದೂ ಕಾಣುತ್ತದೆ. ವಿಭಾಗಿಸಿದರೆ ವೆಚ್ಚದಲ್ಲಿ ಉಳಿತಾಯವಾಗುವುದಿಲ್ಲವೆಂದು ಸ್ವಾಮಿ. ವೆಂಕಟಾಚಲ ಶೆಟ್ಟರು ಹೇಳುವರು; ವೆಚ್ಚವು ಬರೇ ಶೇಕಡಾ ಮೂರರಷ್ಟು ಹೆಚ್ಚಾಗುವುದಲ್ಲದೆ, ಈಗಿನ ಜವಾಬ್ದಾರಿ ವೆಚ್ಚದಲ್ಲಿ ಉಳಿತಾಯವಿದೆ ಎಂದು ಸರಕಾರವು ಹೇಳುವುದು. ಡಿಸ್ಟ್ರಿಕ್ಟ್ ಬೋರ್ಡುಗಳ ವೆಚ್ಚದ ಅನುಭವವು ನಮಗಿರುತ್ತಾ, ಎರಡು ಬೋರ್ಡುಗಳಿಗೆ ಒಟ್ಟಿಗೆ ಒಂದು ಬೋರ್ಡಿನ ಒಂದೂ ಕಾಲು ಪಾಲು ಮಾತ್ರ ವೆಚ್ಚವಾಗುವುದೆಂಬ ಸರಕಾರದ ಮಾತು ಸ್ವೀಕಾರ ಮಾಡಲು ಯೋಗ್ಯವೆನ್ನಲಾಗುವುದಿಲ್ಲ. ಈ ಹೆಚ್ಚಿನ ವೆಚ್ಚದೊಂದಿಗೆ ಹೊಸ ಪಂಚಾಯತಗಳ ವೆಚ್ಚವು ಸೇರಿದರೆ ಜಿಲ್ಲೆಯ ಬೋರ್ಡು ಸಂಸ್ಥೆಗಳ ಜವಾಬ್ದಾರಿ ವೆಚ್ಚವು ಕಡಿಮೆಯಾದೀತೆಂದು ನಂಬಲಾಗುವುದಿಲ್ಲ. ವೆಚ್ಚವು ಮತ್ತೂ ಹೆಚ್ಚಾಗಬಹುದೇ? ಸರಕಾರವು ಸ್ಥಳೀಕ ಬೋರ್ಡುಗಳಿಗೆ ಕೊಡಬೇಕಾಗುವ ಐವೇಜನ್ನು ಪಂಚಾಯತಗಳ ಮೂಲಕ ಹೊಸ ತೆರಿಗೆಗಳನ್ನು ಹಾಕಿ ಉಳಿಸ ಬಹುದೇ? ಜನರ ಮೇಲಿನ ತೆರಿಗೆಯು ಇದರಿಂದ ಮತ್ತೂ ಹೆಚ್ಚಬಹುದೇ? ಎಂಬುದು ವಿಚಾರ ಮಾಡತಕ್ಕ ವಿಷಯವಾಗಿದೆ.

++ ++

ಭೂಕಂಪದ ಮೇಲೆ ಮಹಾತ್ಮಾ ಗಾಂಧಿಯವರ ಟೀಕೆ.

ನಮ್ಮ ಕಳೆದ ಸಂಚಿಕೆಯ ಅಗ್ರಲೇಖದಲ್ಲಿ ಮೇಲಿನ ವಿಚಾರದಲ್ಲಿ ನಾವು ಕೆಲವು ಮಾತುಗಳನ್ನು ಬರೆದಿದ್ದೆವು. ಇದೇ ವಿಚಾರದಲ್ಲಿ ಡಾ. ರವೀಂದ್ರನಾಥ ಠಾಗೂರರ ಅಭಿಪ್ರಾಯವನ್ನು ಇದೇ ತಾ. ೭ರ 'ಹಿಂದೂ'ವಿನಿಂದ ತೆಗೆದು ಕೆಳಗೆ ಕೊಟ್ಟಿರುವೆವು.

ಅಸ್ಪೃಶ್ಯತೆಯನ್ನು ತಮ್ಮ ಸಮಾಜದ ಕಟ್ಟಳೆಯಾಗಿ ಕಣ್ಣು ಮುಚ್ಚಿ ಅನುಸರಿಸುವವರನ್ನು, ಅವರು ತಮ್ಮ ಆ ಪಾಪದಿಂದ ಬಿಹಾರಿನ ಮೇಲೆ (ದೇವರು ಬಿಹಾರನ್ನೇ ತನ್ನ ಧ್ವಂಸಕಾರಕ ಕ್ರೋಧಕ್ಕಾಗಿ ಆರಿಸಿದನೆಂದು ಕಾಣುತ್ತದೆ) ದೇವರ ಕ್ರೋಧವು ಬೀಳುವಂತೆ ಅವರು ಮಾಡಿದರೆಂದು ಮಹಾತ್ಮಾಜೀಯವರು ಅರೋಪಿಸಿದುದನ್ನು ನೋಡಿ ನನಗೆ ಸಂಕಟಕರ ಆಶ್ಚರ್ಯವಾಯಿತು. ಇಂತಹ ವಿಜ್ಞಾನವಿರೋಧವಾದ ಅಭಿಪ್ರಾಯಗಳನ್ನು ನಮ್ಮ ದೇಶದ ಜನರು ಬೇಗನೆ ಸ್ವೀಕರಿಸುವುದರಿಂದ ಇದು ಮತ್ತೂ ದುರ್ಭಾಗ್ಯವಿದೆ. ಭೌತಿಕ ಅನಾಹುತಗಳ ಮೂಲವು ಭೌತಿಕ ಪರಿಸ್ಥಿತಿಗಳ ಸಂಯೋಗದಲ್ಲಿಯೇ ಅಡಗಿದೆ ಎಂಬ ಸತ್ಯಸ್ಥಿತಿಯು ಹೇಳಬರುವಾಗ ಗಾಂಧೀಜಿಯವರ ಮಾತುಗಳು, ನನ್ನ ದೇಶದಲ್ಲಿ ಉದ್ರೇಕವನ್ನುಂಟುಮಾಡುತ್ತಿ." ಈಶ್ವರನೇ ಅಡ್ಡಬರಲೊಪ್ಪದ ವಿಶ್ವನಿಯಮಗಳು ಅನಿವಾರ್ಯವೆಂದು ನಾವು ಒಪ್ಪದಿದ್ದರೆ ಈಶ್ವರನ ಕೃತ್ಯಗಳ ನ್ಯಾಯವನ್ನು ಹುಡುಕುವುದೇ ಅಸಾಧ್ಯವಾಗುವುದು.

× × × ಮಹಾತ್ಮಾಜೀಯವರ ಈ ತರದ ತರ್ಕವು ಅವರ ವಿರೋಧಿಗಳಿಗೆ ಹೆಚ್ಚಿನ ಸಹಾಯ ಮಾಡುವುದು! ಮತ್ತು ಈ ಅನಾಹುತಕ್ಕೆ ಮಹಾತ್ಮಾಜೀಯವರೂ ಅವರ ಅನುಯಾಯಿಗಳೂ ಕಾರಣರೆಂದು ಅವರು ಹೇಳಿದ್ದಾದರೆ ನನಗೆ ಆಶ್ಚರ್ಯವಾಗುತ್ತಿರಲಿಲ್ಲ. × × ×

ನಮ್ಮ ಪಾಪಗಳು ಎಷ್ಟೋ ಭಯಂಕರವಿದ್ದರೂ ಅವು ಸೃಷ್ಟಿ ಸೂತ್ರಗಳನ್ನು ಹರಿದು ಹಾಕುವ ಶಕ್ತಿಯುಳ್ಳವುಗಳಾಗಿಲ್ಲ." × × ಇತ್ಯಾದಿ

ವರ್ತಮಾನ ಸಂಗ್ರಹ

ನ್ಯೂಯೋರ್ಕಿನಲ್ಲಿ ಸಹನಾತೀತವಾದ ಚಳಿಯು ಪ್ರಾರಂಭವಾಗಿ ಹವಾಮಾಪಕ[ಯಂತ್ರವು] ಸೊನ್ನೆಗಿಂತ ೨೩ ಕೆಳಗೆ ಇಳಿದಿದೆ. ಕೆಲವರು ಪ್ರಾಣ ತೊರೆದಿರುವರು.

ಕಲ್ಕತ್ತದಲ್ಲಿ ಡಿಟೆನ್ಯೂ ಕೈದಿಗೆ ಕೊಡಲ್ಪಟ್ಟ ಸಾಮಗ್ರಿಗಳೊಡನೆ ೨೫ ರೂಪಾಯಿಗಳ ನೋಟನ್ನು ಅಡಗಿಸಿ ಕೊಟ್ಟುದಕ್ಕಾಗಿ ಒಬ್ಬ ವಿದ್ಯಾರ್ಥಿಗೆ ೬ ತಿಂಗಳ ಶಿಕ್ಷೆಯು ವಿಧಿಸಲ್ಪಟ್ಟಿದೆ.

ಮುಂಬಯಿ ಗವರ್ನರರು ಸಿಂಧ್ ಪ್ರಾಂತಕ್ಕೆ ಸಂಚಾರ ಹೋಗಲಿರುವುದರಿಂದ, ಅವರನ್ನು ಸ್ವಾಗತಿಸಬೇಕೆಂದು ಕರಾಚಿ ಕಾರ್ಪೊರೇಶನಿನ ಠರಾವು.

ಡಾ| ಆಲಮರು ಮುಂದಕ್ಕೆ ರಾಜವಿರೋಧವಾಗಿ ನಡೆಯುವುದಿಲ್ಲವೆಂದು ಹೇಳಿದರೆ, ಅವರನ್ನು ಅವರ ವೃತ್ತಿಯಲ್ಲಿ ಸೇರಿಸಲಾಗುವುದೆಂದು ಲಾಹೋರು ಹೈಕೋರ್ಟಿನ ತೀರ್ಪು! ತಾನು ತನ್ನ ಸ್ಥಾನದಲ್ಲಿರುವ ತನಕ ರಾಜವಿರೋಧಿಯಾಗಲಾರನೆಂದು ಆಲಮರ ಉತ್ತರ.

ಹಿಂದೂ ದೇಶದಲ್ಲಾದ ಭೂಕಂಪಕ್ಕೆ ಸಹಾಯ ಮಾಡಬೇಕೆಂದು ಟೋಕಿಯೋ ಮೇಯರರು ಫೆಬ್ರವರಿ ೫ನೇ ದಿನ ಜಪಾನಿನಲ್ಲಿ ಬ್ರಾಡ್‌ಕಾಸ್ಟ್ ಮೂಲಕ ಮನವಿ ಮಾಡಿಕೊಂಡರು. ಎಷ್ಟು ದ್ರವ್ಯ ಸಿಗಬಹುದೆಂದು ಅಂದಾಜು ಇಲ್ಲ.

ಬ್ರಿಟಿಷ್ [ಪೋಸ್ಟ್] ಆಫೀಸಿನಲ್ಲಿ ೧೯೩೨—೩೩ರಲ್ಲಿ ಒಟ್ಟು ಪ್ರಕಾರ ೧,೧೬,೫೦೦ ಪೌಂಡುಗಳು ಹೆಚ್ಚು ಲಾಭವಾಗಿದೆ.

—ಆಸ್ಟ್ರಿಯಾಕ್ಕೂ ಜರ್ಮನಿಗೂ ವ್ಯವಹಾರ ವಿವಾದವು ಆರಂಭವಾಗಿದೆ. ಇದನ್ನು ಲೀಗ್ ಆಫ್ ನೇಶನ್ಸ್‌ನ ಮುಂದಿನ ಮೀಟಿಂಗಿಗೆ ಕೊಂಡೊಯ್ಯುವ ಸೂಚನೆ.

ಬಂಗಾಳ ನ್ಯಾಯವಿಧಾಯಕ ಸಭೆಗೆ ಮಿ| ಆರ್. ಸ್ಮಿತರ ಬದಲಿಗೆ ಸರ್| ಡಿ. ಆರ್ಯರವರನ್ನು ಚುನಾಯಿಸಿರುವರು ಎಂದು ತಿಳಿಯಬಹುದು.

ಸಂಯುಕ್ತ ಪ್ರಾಂತ್ಯದ ಗವರ್ನರರಾದ ಸರ್ ಮ್ಯಾಲ್ಕಂ ಹೈಲಿಯವರು ಅಲ್ಲಹಾಬಾದ್ ಮ್ಯುನಿಸಿಪಲ್ ಕಮ್ಮಿಟಿಯವರಿಗೆ ಅಮೂಲ್ಯ ನಾಟ್ಯಗಳ ಪೆಟ್ಟಿಗೆಯೊಂದನ್ನು ಬಹು ಆಗ್ರಹದಿಂದ ಕೊಟ್ಟರು.

ಅಹ್ಮದಾಬಾದಿನ ಸಿಲಾಜ ನಲ್ಲಿ ಭಾಷಣ ಮಾಡುವಾಗ ಕಾಂಗ್ರೆಸ್ ಕಾರ್ಯಕರ್ತರನ್ನು ಪುನಃ ಕೈದು ಮಾಡಿ, ಅವರ ಭಾಷಣವನ್ನು ಮುರಿದರು. ಪೋಲೀಸರು ಮನೆಗೆ ತೆರಳುವಾಗ ಕಾರ್ಯಕರ್ತರನ್ನು ಮನೆಗೆ ಕಳುಹಿಸಿದರು.

ಬಿಹಾರ್ ಒರಿಸ್ಸಾಗಳ ಮಾಜಿ ಚೀಫ್ ಮಿನಿಸ್ಟರರಾದ ಶ್ರೀ| ಮಧುಸೂದನ ದಾಸರು ತನ್ನ ೮೬ನೇ ವಯಸ್ಸಿನಲ್ಲಿ ಜನರ ಕಷ್ಟವನ್ನು ಕಾಣಲಾರೆನೆಂಬಂತೆ ಪರಲೋಕವಾಸಿಗಳಾದರು.

ಅಲ್‌ಗೀರಿಸಿನ ಸಮುದ್ರದಡಿಯಲ್ಲಿ ಘೋರ ಬಿರುಗಾಳಿಯಿದ್ದುದರಿಂದ ಭೀಷಣ ತರಂಗಗಳು ಎದ್ದು ದೋಣಿಗಳು ಮುಳುಗಿ ಕೆಲವರು ಜೀವ ಬಿಟ್ಟರು.

ಕೈರೋದಲ್ಲಿ ರೆವರೆಂಡ್ ಜೋನ್ ಕಾರ್ಡನ್ ಎಂಬ ಪಾದ್ರಿಯನ್ನು ಯಾರೋ ಗುಂಡು ಹಾರಿಸಿ ಕೊಂದು, ಅವರ ಹಣಕಾಸನ್ನು ಸುಲಿಗೆ ಮಾಡಿದರು.

ಬಂಗಾಳ ಕ್ರಾಂತಿಕಾರರನ್ನು ಸದೆಬಡಿಯಲು ಹೆಚ್ಚು ತಗಲುವುದರಿಂದಾಗಿ ಎಲ್ಲವೂ ಶಾಂತವೆಂದು ಲಂಡನಿನಲ್ಲಿ ಸರ್ ಜಾನ್ ಆಂಡರ್‌ಸನ್.

ಕಲಬುರ್ಗಿಯ ಇಂಗ್ಲೆಂಡಿನಲ್ಲಿ ಹೆಸರುವಾಸಿಯಾಗಿದ್ದ ಗಿಬ್ಸನ್ ಮಂದಿರವು ಬೆಂಕಿಯಿಂದ ಸಂಪೂರ್ಣ ಸುಟ್ಟು ಬೆಲೆ ಬಾಳುವ ವಸ್ತುಗಳನ್ನು ನುಂಗಿಕೊಂಡಿತು. ಇಂಗ್ಲೆಂಡಿನ ಕಲೆಯೇ ಅದರೊಳಗೆ ತುಂಬಿತ್ತು.

ಪ್ರಸಿದ್ಧ ಕ್ರಿಕೆಟ್ ಆಟಗಾರನಾದ ಮಹಮದ್ ನಿಸ್ಸಾರನು ಮುಂಬಯಿನಲ್ಲಿ ಪ್ರದರ್ಶಿತನಾಗಿರುವನು.

ಚೀನಾ ಜಪಾನಿಗಳಿಗೆ ನಡೆಯುತ್ತಿರುವ ಯುದ್ಧದಲ್ಲಿ ಸಿಂಗಿಟಿಯಾ ಎಂಬಲ್ಲಿ ೬೦೦೦ ಸೈನಿಕರು ಹತ ಮಾಡಲ್ಪಟ್ಟರು.

ಜಪಾನಿನ ಸಿಂಗೋ ಎಂಬಲ್ಲಿ ೭೦೦ ಜನರು ಗಣಿಯ ಸ್ಫೋಟನದಿಂದ ಮೃತರಾದರು.

ಪ್ಯಾರಿಸ್ ನಲ್ಲಿ ಫ್ರಾನ್ಸಿನ ಪ್ರಧಾನ ಮಂತ್ರಿಯವರು ಭಾಷಣ ಮಾಡುವಾಗ ಜನರು ಬೊಬ್ಬೆಯೆಬ್ಬಿಸಿ ಭಾಷಣಗಾರರಿಗೆ ತಡೆಯನ್ನುಂಟು ಮಾಡಿದರು.

ಮಹಾತ್ಮರು ಮಧುರೆಯಲ್ಲಿ ಒಟ್ಟು ೯೦೦೦ ರೂಪಾಯಿಗೆ ಮಿಕ್ಕ ದ್ರವ್ಯಾರ್ಜನೆಯನ್ನು ಮಾಡಿ ಈಗ ಕೊಯಮತ್ತೂರಿನಲ್ಲಿದ್ದಾರೆ. ಮುಖ್ಯ ದೇವಕೋಟೆಯಲ್ಲಿ ಬಂದಿಳಿದು ೧೫೦೦೦ ಜನರು ನೆರೆದ ಪ್ರಚಂಡ ಸಭೆಯಲ್ಲಿ ಮಹಾತ್ಮರು ಗಾಂಧಿ ಸ್ವಾಗತ ಸಮಿತಿಯವರು ಸಂಗ್ರಹಿಸಿಟ್ಟ ೩೬೦೦ ರೂಪಾಯಿ ನಿಧಿಯನ್ನು ಸ್ವೀಕರಿಸಿ, ಹರಿಜನ ವಾಸ್ತವ್ಯಗಳಿಗೆ ಸಂದರ್ಶನವಿತ್ತರು. ಅಲ್ಲಿಯ ನೆರೆಯೂರಾದ ರಾಮನಗರದಲ್ಲಿ ಏರ್ಪಾಡಾದ ಹರಿಜನ ಶಾಲೆಯ ಶಂಕುಸ್ಥಾಪನೆಗೈದರು, ತಾಲೂಕು ಬೋರ್ಡಿನವರ ೫೧ ರೂಪಾಯಿಯನ್ನು ಸ್ವೀಕರಿಸಿ, ಭಾಷಣವಿತ್ತು, ಅನಂತರ ಹರಿಜನರಿಗೆ ಬೋಧನೆಯನ್ನಿತ್ತರು. ಅನಂತರ ಕಾರೈಕುಡಿ ಎಂಬಲ್ಲಿ ಆಧೋಗತಿಗಿಳಿಸಲ್ಪಟ್ಟ ಬಿಡಾರಿನ ಕಥನವನ್ನು ಅಲ್ಲಿ ನೆರೆದ ೧೫೦೦೦ ಮಂದಿಯ ಸಭೆಗೆ ತಿಳಿಸಿ ಅವರಿಗೆ ಸಹಾಯ ಮಾಡುವುದು ದೇಶೀಯರಾದ ನಮ್ಮವರ ಆದ್ಯ ಕರ್ತವ್ಯವೆಂದರು. ಆ ಮುಖ್ಯ ಹರಿಜನೋದ್ಧಾರದ ಭಾಷಣವನ್ನು ಮುಗಿಸಿದರು. ಚೆಟ್ಟಿನಾಡಿನಲ್ಲಿ ಮ್ಯುನಿಸಿಪಲ್ ಚೇರ್‌ಮೆನರು ಕೊಟ್ಟ ದ್ರವ್ಯವನ್ನೂ ಮಾನಪತ್ರವನ್ನೂ ಸ್ವೀಕರಿಸಿ ಅದಕ್ಕೆ ಪ್ರತಿಯಾಗಿ ಭಾಷಣವಿತ್ತು ಕೊಯಮತ್ತೂರಿಗೆ ಬಂದರು.

ದರ್ಭಂಗದ ಮಹಾರಾಜಾಧಿರಾಜ ಸರ್. ಕಾಮೇಶ್ವರ ಸಿಂಘರು ವೈಸರಾಯ ರಿಲೀಫ್ ಫಂಡಿಗೆ ರೂ. ೧ ಲಕ್ಷವನ್ನು ಕೊಟ್ಟಿರುವರು. ರೂ. ೨೫ ಲಕ್ಷ ವೆಚ್ಚಮಾಡಿ ದರ್ಭಂಗವನ್ನು ಪುನರ್ರಚನೆಗೆ ಮಹಾರಾಜರು ಸಿದ್ಧರಿರುವರು.

ರಂಗೂನಿನಲ್ಲಿ ಹಠಯೋಗಿಯೊಬ್ಬ ಆಶ್ಚರ್ಯಪ್ರದರ್ಶನ ಮಾಡುವಾಗ ಜನರು ಅವನನ್ನು ಕೊಂದರು.

ಶ್ರೀಯುತ ... ರಾವ್ (ಬಿ. ಎ.) ಇವರು ... ಹಲವು ಪ್ರಶ್ನೆಗಳನ್ನೆತ್ತಿದರು.

ಫ್ರಾನ್ಸಿನಲ್ಲಿ ಹುನಾವಣೆಯು ನಡೆಯುತ್ತಿದೆ. ಜನರು ಶಸ್ತ್ರಗಳನ್ನು ... ಹಿಡಿದಿರುವರು. ಸರಕಾರವು ಮೆಶಿನ್‌ಗನ್ನುಗಳನ್ನು ಉಪಯೋಗಿಸಿ ಸಿದ್ಧಗೊಳಿಸಿದೆ.

... ಎಸ್ ... ನಲ್ಲಿ ... ಯು ... ಬಿದ್ದು, ಬಿದ್ದು ... ಯೂರೋಪಿಯನರನ್ನು ... ಆಸ್ಪತ್ರೆಗೆ ಸಾಗಿಸುವಂತೆ ವರ್ತಿಸಿತು.

"ಜಪಾನು ಯುದ್ಧಕ್ಕೆ ಸಿದ್ಧವಾಗಿದೆ, ನಾವು ಕಣ್ಣು ಮುಚ್ಚಿ ಕುಳಿತುದು ಮೂರ್ಖ"ನೆಂದು ರಷ್ಯದ ವಾರ್ ಕಮಿಶನರರು ಬಹಳ ಆವೇಶದಿಂದ ನುಡಿದು ಎಚ್ಚರಿಸಿದರು.

ಪ್ರಶ್ಯಾ ಚಳವಳಿಗಾರರನ್ನು ಕೆಲಸದಿಂದ ಡಿಸ್‌ಮಿಸ್ ಮಾಡುವ ಅಥವಾ ಕೈದಿಗಳನ್ನು ಕ್ಷಮಿಸುವ ಅಧಿಕಾರವನ್ನು ಜರ್ಮನಿಯಲ್ಲಿ ಹರ್ ಹಿಟ್ಲರನಿಗೆ ಕೊಡಲಾಗಿದೆ ಕಡಿಮೆಯಲ್ಲ!

ಮುಂಬಾಯಿ ನ್ಯಾಯವಿಭಾಗದ ಸಭೆಯಲ್ಲಿ ಹಿಂದೀಯ ಹಕ್ಕಿಯನ್ನು ರಕ್ಷಿಸಿ ದೇಶೋದ್ಧಾರ ಮಾಡುವ ಒಂದು ಠರಾವು ಆಗಲಿದೆ ಎಂದು ಪತ್ರಿಕೆಗಳಲ್ಲಿ ಮುದ್ರಣ!

ಕಾಂಗ್ರೆಸ್ಸಿಗಾಗಿ ಜೈಲಿಗೆ ಹೋದವರ ಗುಣವು ಕೆಟ್ಟಿದಲ್ಲ ಅವರನ್ನು ಶಾಲಾ ಮಾಸ್ತರರಾಗಿ ನೇಮಿಸಬಹುದೆಂದು ಶ್ರೀ ಸುಭಾಸ್ ಬೋಸರು ಮೆಂಚೆಸ್ಟರ್ ಗಾರ್ಡಿಯನಿಗೆ ಬರೆದಿರುವರು.

ಪಾಟಿಯಾಲದ ವಿರೋಧವಾಗಿ ಮನವಿ ಮಾಡಲು ಡಿಲ್ಲಿಯ ಸರಕಾರೀ ಆಫೀಸಿನೆದುರು ಗುಂಪು ಕೂಡಿ, ಗಲಾಟೆ ಮಾಡಿದ ೧೩೧ ಸಿಖ್ಖ ಸ್ತ್ರೀಪುರುಷರನ್ನು ಸಿಕ್ಕಂತೆ ಕೈದು ಮಾಡಿ ಪೋಲೀಸ್ ಠಾಣೆಯೊಳಗೆ ಹಾಕಿರುವರು.

ಬೆನಾರಿಸ್‌ನಲ್ಲಿ ಪ್ರೊಫೆಸರ್ ಕೃಪಾಲನಿಯವರು ಕಾನೂನಿಗೆ ವಿರೋಧವಾಗಿ ನಡೆದುದರಿಂದ, ಅವರನ್ನು ಕೈದು ಮಾಡಿದರು. ಅವರ ಹೇಳಿಕೆಯನ್ನು ಕೇಳಿದ ಮೆಜಿಸ್ಟ್ರೇಟರು ಅವರನ್ನು ಬಿಟ್ಟರು. ಅವರು ಬಿಹಾರಿಗೆ ಧಾವಿಸಿರುವರು.

ದಕ್ಷಿಣ ಕನ್ನಡ

ಮಂಗಳೂರು. ಇದೇ ತಾರೀಕು ೧೦ನೇ ಶನಿವಾರ ದಿನ ಇಲ್ಲಿಯ ಶ್ರೀ ಚಂದ್ರಕಲಾ ನಾಟಕ ಮಂಡಳಿಯವರು ಅಭಿನಯಿಸಲಿರುವ "ರಾಮಾಂಜನೇಯ" ಪೌರಾಣಿಕ ನಾಟಕದಲ್ಲಿ ಗ್ರಾಮಫೋನ್ ಖ್ಯಾತರಾದ ಶ್ರೀ ಮಂಜುನಾಥ ಶಾಲಿವಾಹನರು ನಾರದನ ಭೂಮಿಕೆಯನ್ನು ವಹಿಸುವರೆಂದು ಮಂಡಳಿಯವರು ತಿಳಿಸುತ್ತಾರೆ.

ಇಲ್ಲಿಯ ಸನ್ಯಾಸಿಗುಡ್ಡೆಯಲ್ಲಿರುವ ಆರ್ಯಸಮಾಜ ಮಂದಿರದಲ್ಲಿ ಇದೇ ತಿಂಗಳ ತಾ ೧೨ನೇ ಸೋಮವಾರ ಸಾಯಂಕಾಲ ಗಂಟೆ ೪-೩೦ಕ್ಕೆ ಋಷಿ ಬೋಧೋತ್ಸವವು (ಶಿವರಾತ್ರಿ) ಶ್ರೀ ಪಂಡಿತ ಧರ್ಮದೇವ ವಿದ್ಯಾವಾಚಸ್ಪತಿ ಇವರ ಅಧ್ಯಕ್ಷತೆಯಲ್ಲಿ ಆಚರಿಸಲ್ಪಡುವುದು. ಈ ಸಮಾರಂಭದಲ್ಲಿ ಶ್ರೀಯುತ ಕೆ ಲಕ್ಷ್ಮಣ ಬಿ ಎ ಮತ್ತು ಎಸ್ ಎಸ್ ಕರಂಜೆಕಾರ್ ಇವರು ಭಾಷಣ ಮಾಡುವರು. ಸರ್ವರಿಗೂ ಸುಸ್ವಾಗತವಿದೆಯೆಂದು ತಿಳಿಸುತ್ತಾರೆ.

ಬೆಂಗಳೂರಿನ "ಸಿನೇಮ ಪ್ರಪಂಚ" ಪಕ್ಷ ಪತ್ರಿಕೆಗೆ ಅಂಚೆ ರಿಯಾಯಿತಿಯು ಇನ್ನೂ ಬಂದಿರುವುದಿಲ್ಲವಾದುದರಿಂದ ಪ್ರಕಟಣೆಗೆ ತೊಂದರೆಯುಂಟಾಗಿದೆಯೆಂದು ತಿಳಿದು ಬಂದಿದೆ.

ಶ್ರೀ ಗೋಕರ್ಣನಾಥ ಕ್ಷೇತ್ರದಲ್ಲಿ ನಡೆಯಲಿರುವ ಮಹಾಶಿವರಾತ್ರಿ ಜಾಗರ ತಾ ೧೨ನೇ ದಿನವೂ, ಮರುದಿನ ತಾ. ೧೩ರಲ್ಲು ಅವಭೃತಸ್ನಾನದ ದಿನವೂ, ರಾತ್ರಿ ... ಅಟವೂ ಪ್ರಸಿದ್ಧ ಭಾಗವತರ ಯಕ್ಷಗಾನ ತಾಳಮದ್ದಳೆಯೂ ಇರುವುವಾಗಿ ಕಾರ್ಯದರ್ಶಿಯವರು ತಿಳಿಸುತ್ತಾರೆ.

ಇಲ್ಲಿಯ ಬಂದರದ ವರ್ತಕರು ಒಟ್ಟುಗೂಡಿ ರೂ ೧೩೦೦ರನ್ನು ಬಿಹಾರ ರಿಲೀಫ್ ಫಂಡಿಗೆ ಕಳುಹಿಸಿರುವರು.

ಮಂಗಳೂರು ಸ್ವದೇಶಿ ಸ್ಟೋರ್ಸಿನಿಂದ ನಡೆಸಲ್ಪಡುವ "ಖಾದಿ ಪ್ರ್ಯಾಕ್ ಚಿಟ್ಟು ಫಂಡಿ"ನ ೪ನೇ ಸೋಡ್ತಿಯು ಎತ್ತಲಾಗಿ ಈ ತಿಂಗಳ ಬಹುಮಾನವು ಮ| ರಾ| ಶ್ರೀ ಎಮ ನರಸಿಂಹ ಆರ್ ಕಾಮತ್ ಇವರಿಗೆ ಸಿಕ್ಕಿರುತ್ತದೆ.

ಶ್ರೀ ಕೃಷ್ಣ ಸಿನೆಮ ಮಂದಿರದಲ್ಲಿ ತಾ ೯ರಿಂದ ಜೋನ್ ಬಾನಿ ಎಂಬ ಜಗತ್ಪ್ರಸಿದ್ಧ ನಟನಿಂದ ಅಭಿನಯಿಸಲ್ಪಟ್ಟ "ಹಂಚ ಬ್ಯಾಕ್ ಒಫ್ ನೋಟ್ರ ಡೇಮ್" ಎಂಬ ಸಿಂಕರ್ಸ್ಪರ್ಡ್ ಚಲಚಿತ್ರವನ್ನು ಪ್ರದರ್ಶಿಸಲಾಗುವುದು. ತಾರೀಕು ೧೩ರಿಂದ "ಸೀತಾ ಸ್ವಯಂವರ" ಎಂಬ ಮಾತಾಡುವ ಚಿತ್ರ ಪ್ರದರ್ಶನವು ಪ್ರದರ್ಶಿಸಲ್ಪಡುವುದು.

ಜನಸೇವಾ ನಿರತರಾದ ಮದ್ರಾಸಿನ ಶ್ರೀ ರಾಮಕೃಷ್ಣ ಮಿಶನಿನ ಸಹಾಯಾರ್ಥವಾಗಿ ಇದೇ ತಾ ೧೧ನೇ ಸಂಜೆ ಘಂಟೆ ೫ ೧೫ಕ್ಕೆ ಕೆನರಾ ಹೈಸ್ಕೂಲಿನಲ್ಲಿ ಪ್ರಸಿದ್ಧ ಗಾಯಕರಾದ ವಿದ್ವಾನ್ ಮುಸುರಿ ಸುಬ್ರಹ್ಮಣ್ಯ ಅಯ್ಯರರ ಗಾಯನ ಮೈಸೂರಿನ ಟಿ. ಚೌಡಯ್ಯನವರ ಫಿಡ್ಲ್ ಮತ್ತು ವೈದ್ಯನಾಥ ಅಯ್ಯರರ ಮೃದಂಗ ವಾದನಗಳಿರುವುವು. ಪುರವಾಸಿಗಳೆಲ್ಲರೂ ಪ್ರೋತ್ಸಾಹಿಸಿ ಮಿಶನನ್ನುದ್ಧರಿಸಲೆಂದು ಹಾರೈಸುವೆವು.

ತಾ ೬ನೇ ದಿನ ಮಂಗಳೂರಿಗೆ ಎರಡು ಜಲವಿಮಾನಗಳು ಬಂದು ಎಣ್ಣೆ ತುಂಬಿಸಿ ಪುನಃ ಹಾರಿ ಹೋದವು. ಪ್ರೇಕ್ಷಕರ ಗಲಾಟೆ ಹೆಚ್ಚು.

ಈ ದಿನ ರಾತ್ರಿ ೯ ೩೦ಕ್ಕೆ ಜಿ ಎಚ್ ಎಸ್ ನಾಟಕ ಸಂಘದವರು ಗಣಪತಿ ಹೈಸ್ಕೂಲಿನ ಶಾರದಾ ಸದನದಲ್ಲಿ ಶ್ರೀ ಪುರಂದರದಾಸ ಎಂಬ ಹೊಸ ಸಂಗೀತ ನಾಟಕವನ್ನು ಅಭಿನಯಿಸುವರು.

ಬಡವರ ಬಂಧುವನ್ನು ಒಂದನೇ ತಾರೀಕಿನಲ್ಲಿ ಪೋಸ್ಟು ಮಾಡಿದ್ದುದಕ್ಕಾಗಿ ಅಂಚೆ ಅಧಿಕಾರಿಗಳು ಒಂದೊಂದು ಪ್ರತಿಗೆ ಅರ್ಧಾಣೆಯಂತೆ ಅಂಚೆ ಚೀಟನ್ನು ಹಚ್ಚಬೇಕೆಂದು ಆಕಸ್ಮಿಕವಾಗಿ ಅಜ್ಞಾಪಿಸಿರುವುದರಿಂದ ಈ ಸಲದ ಬಂಧುವು ಮುದ್ರಿತವಾಗಿ ಸಿದ್ಧವಾಗಿರುವುದಾದರೂ ಅನಾವಶ್ಯಕವಾಗಿ ಹೇರಳ ನಷ್ಟವಾಗಲಿರುವುದರಿಂದ ಪೋಸ್ಟು ಮಾಸ್ಟರ್ ಜನರಲರ ಅಪ್ಪಣೆಯನ್ನು ನಿರೀಕ್ಷಿಸಬೇಕಾಗಿದೆ. ಸಂಚಿಕೆಯು ತಡವಾದುದಕ್ಕೆ ಪರವೂರ ಚಂದಾದಾರರ ಕ್ಷಮೆಯಿರಲೆಂದು ಬಡವರ ಬಂಧು ಸಂಪಾದಕರು ತಿಳಿಸುತ್ತಾರೆ.

ಮಂಗಳೂರು ಪಟ್ಟಣದಲ್ಲಿ ಸಿಡುಬು ರೋಗವು ಕೇರಿ ಕೋಟಲೆಗಳೂ ತಲೆದೋರಿವೆ.

ಜನವರಿ ೯ನೇ ...ರ ಗೋವೆ ಸೋಡ್ತಿಯಲ್ಲಿ ಇಲ್ಲಿಯ ಮಲ್ಲಿಗುತ್ತ ಶ್ರೀಯುತ ಹೊಟೇಲ್ ಕೀಪರ್ ಎಟ್ಟಪ್ಪ ಪ್ರಭುಗಳಿಗೆ ರೂ ೭೫೦೦೦ ದೊರೆತಿದೆ ಎಂದು ವಾರ್ತೆ.

ಉಡುಪಿ ದಕ್ಷಿಣ ಕನ್ನಡದವರು ಸೌಭಾಗ್ಯದಿಂದ ಪತಿತಪಾವನ ಮಹಾತ್ಮಾ ಗಾಂಧಿಯವರು ಇದೇ ತಾ ೨೪-೨೫ರಲ್ಲು ನಮ್ಮ ಜಿಲ್ಲೆಯನ್ನು ಸಂದರ್ಶಿಸಲಿರುವರು. ತಾ. ೨೪ನೇ ಪ್ರಾತಃ ಮಡಿಕೇರಿಯಿಂದ ಹೊರಟು ಪುತ್ತೂರು ಬಂಟ್ವಾಳ ಮಾರ್ಗವಾಗಿ ಸಾಯಂಕಾಲ ಮಂಗಳೂರನ್ನು ಸೇರುವರು. ಮರುದಿನ ತಾ ೨೫ನೇ ಪ್ರಾತಃ ಮಂಗಳೂರಿನಿಂದ ಹೊರಟು ಗುರುಪುರ ಬಜಪೆ ಮೂಲ್ಕಿ ಮಾರ್ಗವಾಗಿ ಉಡುಪಿಯ ಕಾರ್ಯಕ್ರಮವನ್ನು ಸಾಯಂಕಾಲ ಗಂಟೆ ೪-೩೦ರೊಳಗೆ ಮುಗಿಸಿಕೊಂಡು ಕುಂದಾಪುರಕ್ಕೆ ತಲಪಿ ರಾತ್ರಿ ೮ ಗಂಟೆಯೊಳಗೆ ಅಲ್ಲಿನ ಕಾರ್ಯಕ್ರಮವನ್ನು ಮುಗಿಸಿ ಪ್ರತಿ ಸೋಮವಾರದ ಮೌನವ್ರತವನ್ನು ತೊಡಗುವರು. ತಾ. ೨೬ನೇ ಪ್ರಾತಃ ೬ ಗಂಟೆಗೆ ಕುಂದಾಪುರದಿಂದ ಹೊರಟು ಗಂಗೊಳ್ಳಿ ಬಂದರದಿಂದ ಸ್ಟೀಮರು ಹತ್ತಿ ಕಾರವಾರಕ್ಕೆ ಪಯಣ ಬೆಳೆಸುವರು. ಈ ಶುಭಸಂಧಿಯ ಸದುಪಯೋಗ ಮಾಡಿಕೊಳ್ಳುವರೆ ಜಿಲ್ಲಾ ಬಾಂಧವರು ಮಹಾತ್ಮರ ದರ್ಶನಲಾಭವನ್ನು ಹೊಂದುವುದಲ್ಲದೆ, ಅವರು ಕೈಕೊಂಡಿರುವ ನಮ್ಮೆಲ್ಲರ ಪ್ರಾಯಶ್ಚಿತ್ತ ರೂಪವಾದ ಹರಿಜನ ಸೇವಾ ನಿಧಿಗೆ ಮುಕ್ತಹಸ್ತಗಳಿಂದ ದ್ರವ್ಯಸಹಾಯ ಮಾಡಬೇಕಾಗಿರುವುದು.

ಉಡುಪಿ ಕಟಪಾಡಿ ತೆಂಕಪೇಟೆ, ಬಡಗುಪೇಟೆ ರಸ್ತೆಗಳಲ್ಲಿ ಅನೇಕ ಹೊಂಡಗಳಿದ್ದು ಮಳೆಗಾಲ ದುರುಸ್ತಿಕಾರ್ಯವು ಮೀರಿಹೋಗಿರುತ್ತಾ ಇದ್ದಾದರೂ ಸರಿಗೊಳಿಸಲ್ಪಡುವ ದಾಗಿಲ್ಲ. ಕಲ್ಲುಸಂಕದ ಮೇಲೆಯೇ ದೊಡ್ಡ ಹೊಂಡವಿರುತ್ತದೆ. ಅಂದರೆ ರಸ್ತೆಗಳಲ್ಲಿ ಕಾಲುದಾರಿಯಾಗಿ ಹೋಗುವ ಪ್ರಯಾಣಿಕರು ಮಾರ್ಗದ ಹೊಂಡಗಳನ್ನು ನೋಡಿಕೊಂಡು ಹೋಗುತ್ತಿದ್ದರೆ ಮೋಟಾರು ಮುಂತಾದ ವಾಹನಗಳಡಿಗೆ ಬಿದ್ದು ಪ್ರಾಣಾಪಾಯದ ಭೀತಿಗೊಳಗಾಗುವರು. ಇದನ್ನು ತಪ್ಪಿಸಹೋದರೆ ಕೈಕಾಲು ಮುರಿದು ಆಸ್ಪತ್ರೆಗೆ ಹೋಗಬೇಕಾಗುವ ಸಂಕಟವೊದಗುವಂತಿದೆ. ಮತ್ತು ಪರ್ಕಳದ ಹೊಸ ಹಂಗಾಮಿ ರಸ್ತೆ (ಡ್ಯಾವರ್ಶನ್) ಯಿಂದ ಮೋಟಾರುಗಳಲ್ಲಿ ಪ್ರಯಾಣ ಮಾಡುವುದೆಂದರೆ ಮೋಟಾರುಗಳಿಗೂ ಪ್ರಯಾಣಿಕರಿಗೂ ಇನ್ಶೂರ ಮಾಡಿಸಿಲ್ಲದೆ ಹೋಂಬಾ ಅಪಾಯಕರ ರಸ್ತೆಯು. ಇಲ್ಲವೆ ... ಅಭಿವೃದ್ಧಿಸಲ್ಪಟ್ಟಿರುವ ಸೇತುವೆ ದರಸ್ತಿ ಪ್ರಯತ್ನಗಳು ಕಾಣಬರುವುದಿಲ್ಲ. ಅಂತೂ ಮಳೆಗಾಲಕ್ಕೆ ಈ ರಸ್ತೆಯ ಚಲಾವಣೆಗೆ ದೊರಕುವಂತಿಲ್ಲ. ಹೇಳಿ ದಾಟುವವರು ಆರು ಯೋಜನ ದೂರದ ... ಮಾರ್ಗವನ್ನು ... ಹಾಗಲ್ಲವೇ ಇದು ... ಈ ಸೇತುವೆಯ ದುರುಸ್ತಿಕಾಲಕ್ಕೆ ಆದಕ್ಕೆ ಸಮಾನಾಂತರವಾಗಿ ... ಹಂಗಾಮಿ ರಸ್ತೆ ಮಾಡಿದ್ದರೆ ನಮ್ಮ ಜಿಲ್ಲಾ ಬೋರ್ಡ್ ಮೆಂಬರರೂ ಆಯಾಯ ಬಸ್ಸು ಕಂಪೆನಿಗಳ ಡೈರೆಕ್ಟರರೂ ... ಆಫೀಸರರೂ ಈ ಸಂಗತಿಗಳನ್ನು ತಿಳಿದಿರುವರಾದರೂ ... ಇದನ್ನೆಲ್ಲಾ ಸಂಶಯಿಸುವ ಹವ್ಯಾಸದಲ್ಲಿಲ್ಲ! ಇದೇ ತಿಂಗಳ ... ರಲ್ಲು ನಡೆಯಲಿರುವ ಜಿಲ್ಲಾ ಬೋರ್ಡು ಸಭೆಗಳಲ್ಲಾದರೂ ಈ ಪ್ರಸ್ತಾಪ ಬರುವಂತಾಗಿ ತೀವ್ರ ಅಗತ್ಯ ವಿಲೇವಾರಿಗಳನ್ನು ಮಾಡಲಾದೀತೆ. ... ಮಳೆಗಾಲದಲ್ಲಿ ಮಾರ್ಗ ಕಡಿದ ಸಂದರ್ಭವಿದೆ. ಆದ್ದ ಮಾರ್ಗ ದುರುಸ್ತಿಗೊಳಿಸದಿದ್ದರೆ ಮಳೆಗಾಲದಲ್ಲಿ ತೊಂದರೆಯೆ.

ನೋಟೀಸು

ಹಾಸನ್ ಜಿಲ್ಲೆ ... ಪೇಟೆಯಲ್ಲಿರುವ ... ಸಂಕ್ರಪ್ಪನವರ ಮಗ ... ಬಸಪ್ಪನವರು ... ವಾಚ ಮೇಕರ್ ಯಾನೆ ಬಾಬು ... ೩೩ಕ್ಕೆ ... ಬಸಪ್ಪನವರು ... ೧೦ — ೪ರಲ್ಲು ನನ್ನ ... ಬಸಪ್ಪನವರಿಗೆ ... ನೋಟೀಸು ... ದಿನಸ ಟೆಲಿಗ್ರಾಮ್ ... ದಿರುವುದರಿಂದ ... ನನ್ನ ... ಜಯವಂತ ... ೧೪ — ೨ ... ಕ್ಕೆ ...

ಮಂಗಳೂರು

8 2 1 4

M Madhava Rau,

Karnataka Chemical and Pharmaceutical Works, Ltd, Udipi (South India)

ಕುಂಭಕೋಣದಲ್ಲಿಯೂ ವ ಧುರೆಯಲ್ಲಿಯೂ ಮೈಸೂರಿನಲ್ಲಿಯೂ ಸುವರ್ಣ ಪದಕಗಳನ್ನು ಪಡೆದಿರುವ

ಕರ್ಣಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್ ಲಿಮಿಟೆಡ್, ಉಡುಪಿ. (ದಕ್ಷಿಣ ಹಿಂದೂಸ್ಥಾನ)

ನಮ್ಮಲ್ಲಿ ಟಿಂಕ್ಚರ್, ವಗೈರೆ ಎಲ್ಲಾ ಎಲ್ಲೋಪತಿಕ್ ಔಷಧ ದ್ರವ್ಯಗಳೂ, ಆಯುರ್ವೇದಿಯ ಔಷಧಿಗಳೂ, ಟೊಯಿಲೆಟ್ ಸಾಮಗ್ರಿಗಳೂ, ಸಾಬೂನುಗಳೂ, ಫೌಂಟನ್ ಪೆನ್ ಶಾಯಿಗಳೂ ತಯಾರಿಸಲ್ಪಡುತ್ತವೆ

ದ್ರಾಕ್ಷಾಸವ, ಪ್ರಸೂತಿ ಸಂಜೀವನ, ಸಿಂಪೋಲಿಗ್, ಸ್ನೋ,

ಕ್ಷೀರಬಲಾ, ಕಾರ್ಪೋಫೋಸ್ಫೇಟ್ಸ್, ಯುಟೆರೀನಾ, ಇಂಕ್ಸ್

ಮೆನೆಜಿಂಗ್ ಡೈರೆಕ್ಟರ್—ವೆಂಕಟರಾಯ ಅಣ್ಣಪ್ಪ ಬಾಳಿಗ

ಹೆಡ್ ಆಫೀಸು
ಉಡುಪಿ (ದಕ್ಷಿಣ ಹಿಂದೂಸ್ಥಾನ)

ಬ್ರೇಂಚ್ ಆಫೀಸು
ದೇವಕರಣ ಮೆನ್ಶನ್ಸ್, 45 ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ ನಂ 2.

ಪಶ್ಚಿಮ ಕರಾವಳಿ ಮತ್ತು ಮೈಸೂರು ಪ್ರಾಂತ್ಯಗಳ ಪ್ರಾಮುಖ್ಯ ವಿಜಂಟರು:—

ಕರ್ಣಾಟಕ ಪ್ರೊಡಕ್ಟ್ಸ್ ಡಿಸ್ಟ್ರಿಬ್ಯೂಟಿಂಗ್ ಕಂಪೆನಿ, ಮಂಗಳೂರು

ಮೂಲೆ ಮೂಲೆಯಿಂದ

ಎಣ್ಣೇಹೊಳೆ ಮಠ:—ಈ ವರುಷ ಕಾರ್ಕಳ ತಾಲೂಕಿನ ಶ್ರೀ ಎಣ್ಣೇಹೊಳೆ ಮಠದಲ್ಲಿ ಧಾರ್ಮಿಕ ಮಹಾಸಭೆ ಮತ್ತು ಪ್ರಕೋಡ ಯಕ್ಷಗಾನ ಸಭೆಗಳೂ ಇದೇ ಕಳೆದ ತಾ. ೫ನೆಯ ದಿವಸ ಅತಿ ವಿಜೃಂಭಣೆಯಿಂದ ನೆರವೇರಿದುವು. ಮೊದಲನೆ ಮಹಾ ಸಭೆಯು ಈಗ ತಾನೆ ಸಬ್‌ಜಡ್ಜ್ ಪದವಿಯಿಂದ ನಿವೃತ್ತರಾಗಿದ್ದ ಮ. ರಾ. ರಾ. ಬೈಲು ಗೋಪಾಲ ಕೃಷ್ಣಯ್ಯ ಬಿ. ಎ., ಬಿ. ಎಲ್. ಇವರ ಅಧ್ಯಕ್ಷತೆಯಲ್ಲಿಯೂ, ಎರಡನೆಯ ಸಭೆಯು ಶ್ರೀಮಾನ್ ಪಂಡಿತ ನಿಡ್ಲೋಡಿ ಅನಂತ ಉಪಾಧ್ಯಾಯರ ಅಧ್ಯಕ್ಷತೆಯಿಂದಲೂ ಶ್ರೀ ಗೋಪಾಲಕೃಷ್ಣ ಸನ್ನಿಧಿಯಲ್ಲಿ ಶ್ರೀ ಪಾದಂಗಳವರ ಅನುಜ್ಞೆಯಿಂತ ನೆರವೇರಿದುವು.

ಪಡುಬಿದ್ರೆ:—ಇದೇ ಕಳೆದ ೨೯-೧-೩೬ನೇ ಸೋಮ ವಾರ ದಕ್ಷಿಣಕನ್ನಡ ಜಿಲ್ಲಾ ಎಡ್ಯುಕೇಶನಲ್ ಆಫೀಸರವರು ಉಡ್ಪಿ ರೇಂಜ್ ಶಾಲೆಗಳ ಸೀನಿಯರ್ ಹಾಗೂ ಜೂನಿಯರ್ ಡಿಪ್ಟಿ ಇನ್ಸ್‌ಪೆಕ್ಟರವರುಗಳೊಂದಿಗೆ ಚಿತ್ತೈಸಿ ಪಡುಬಿದ್ರೆಯಲ್ಲಿ ಪೊಳಲ್ಕಂ ಮಾಡಿ ಕಟ್ಪಾಡಿ, ಎರ್ಮಾಳ, ಕಾಪು, ಶಿರ್ವ ಇತ್ಯಾದಿ ಕಡೆಗಳ ಹಾಯರ್ ಎಲಿಮೆಂಟರಿ, ಲೋವರ್ ಎಲಿಮೆಂಟರಿ, ಬಾಲಿಕಾ ಪಾಠಶಾಲೆಗಳನ್ನು ಸಂದರ್ಶಿಸಿ, ಕಾಪು ಬೋರ್ಡ್ ಹಾಯರ್ ಎಲಿಮೆಂಟರಿ ಶಾಲಾ ಮೈದಾನದಲ್ಲಿ—ಕಾಪು, ಮಜೂರು ಕರಂದಾಡಿ ಶಾಲೆಗಳ ಹಾಗೂ ಜೂನಿಯರ್ ಡಿಪ್ಟಿ ಇನ್ಸ್‌ಪೆಕ್ಟರವರಾದ ಮ। ರಾ। ರಾ। ಬಿ. ವಿ. ವಿ. ರಮಣ ಇವರಿಂದ ಕಾಪಿನಲ್ಲಿ ತೆರೆಯಲ್ಪಟ್ಟಿದ್ದ 'Rover Scout Crew'ನ ಶಿಬಿರಾಗ್ನಿಯ ಸಮಾರಂಭವನ್ನು ನೆರವೇರಿಸಿದರು.

ಮೂಲ್ಕಿ:—ಇದೇ ಬರುವ ೧೦-೨-'೩೬ ನೇ ಸೋಮ ವಾರ ಅಪರಾಹ್ನ ಘಂಟೆ ೪-೩೦ಕ್ಕೆ ಸ್ಥಳೀಕ ಯೂನಿಯನ್ ಕ್ಲಬ್ಬಿನ ಸಭಾ ಮಂದಿರದಲ್ಲಿ ಉಡುಪಿಯ 'ಶ್ರೀಕೃಷ್ಣ ಸಂದೇಶ'ದ ಸಂಪಾದಕ ಶ್ರೀಮಾನ್ ಮುದ್ರಾಡಿ ಜನಾರ್ಧನ ಆಚಾರ್ಯ ರವರು 'ಸನಾತನ ಧರ್ಮ' ಎಂಬ ವಿಷಯವನ್ನೆತ್ತಿಕೊಂಡು ಭಾಷಣ ಮಾಡಲಿರುವರು. ಸರ್ವರಿಗೂ ಸುಸ್ವಾಗತವಿದೆ.

ಸ್ಥಳೀಕ ಸೆಂಟರಿನ ಉಪಾಧ್ಯಾಯ ಸಂಘದ ಸಾಮಾನ್ಯ ಸಭೆಯು ಮೊನ್ನೆ ತಾ. ೨೬-೧-೩೬ನೇ ಶನಿವಾರ ಅಪರಾಹ್ನ ಘಂಟೆ ೨-೩೦ಕ್ಕೆ ಕವತಾರು ಬೋರ್ಡು ಎಲಿಮೆಂಟರಿ ಶಾಲೆ ಯಲ್ಲಿ ಕೂಡಿಬಂತು. ಮಂಗಳೂರು ರೇಂಜ್ ಶಾಲೆಗಳ ಡಿಪ್ಟಿ ಇನ್ಸ್‌ಪೆಕ್ಟರ್, ಮ। ರಾ। ರಾ। ಕೆ. ಎಲ್ ಭಟ್ಟೇ ಅವರ್ಗಳ್, ಬಿ. ಎ. ಎಲ್ ಟಿ., ರವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಹಾಜರಿಯು ತೀರಾ ಅಸಮಾಧಾನಕರವಾಗಿತ್ತು. ಶ್ರೀ ದೇವತಾ ಪ್ರಾರ್ಥನೆ; ಗತಸಭೆಯ ವರದಿ ವಾಚನ, ಸದ್ರಿ ಶಾಲೆಯ ಸಹಾಯಕ ಮಿ। ಸೆಬಸ್ಟಿಯನ್ ಸಿಕ್ವೇರಾರಿಂದ ೩ನೇ ದರ್ಜೆಯ ಮಕ್ಕಳಿಗೆ 'ಅಯನದ' ಕುರಿತಾದ ಪಾಠ, ಸದ್ರಿ ಶಾಲೆಯ ಇನ್ನೊಬ್ಬ ಸಹಾಯಕ ಶ್ರೀ ಬ್ಲಿ. ನಾರಾಯಣ ಶೆಟ್ರ ಇಂದಿನ "ಉಪಾಧ್ಯಾಯರ ಕರ್ತವ್ಯ" ಎಂಬ ವಿಷಯದಲ್ಲಿ ಉಪನ್ಯಾಸ, ಇತ್ಯಾದಿ ಕಾರ್ಯ ಭಾಗಗಳು ನಡೆದು, ಈ ಸಂಘವನ್ನು ದ. ಕ. ಜಿಲ್ಲಾ ಉಪಾಧ್ಯಾಯರ ಸಂಘಕ್ಕೆ ಸಂಯೋಜಿಸುವ ಕುರಿತು ಠರಾವೊಂದು ಪಾಸಾಯಿತು. ಅನಂತರ ಸನ್ಮಾನ್ಯ ಅಧ್ಯಕ್ಷ ಮಹಾಶಯರ ಬೋಧಪ್ರದ ಭಾಷಣವು ನಡೆದು ಉಪಕಾರ ಸ್ಮರಣೆಯಿಂದ ಸಭಾಕಾರ್ಯವು ಕೊನೆಗೊಂಡಿತು.

ಫರಂಗಿಪೇಟೆ:—ಈ ಸೆಂಟರಿನ ಉಪಾಧ್ಯಾಯರ ಸಂಘದ ಮಾಸಿಕ ಸಭೆಯು ಮೇರಮಜ್ಲು ಸೈಂಟ್ ಜೋಸೆಫ್ಸ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ರೆವೆರೆಂಡ್ ಫಾದರ್ ಎಮ್. ಎಫ್. ಫೆರ್ನಾಂಡಿಸರವರ ಅಧ್ಯಕ್ಷತೆಯಲ್ಲಿ ಜರಗಿತು. ೬ನೇ ಕ್ಲಾಸಿಗೆ ಇಂಗ್ಲಿಷಿನಲ್ಲಿ ಮೇರಮಜ್ಲು ಶಾಲಾ ಅಧ್ಯಾಪಕ ಮೀ. ಜೆ. ಎ. ಡಿಸೋಜರೂ ೬ನೇ ಕ್ಲಾಸಿಗೆ ದೇಹಶಾಸ್ತ್ರದಲ್ಲಿ ಪ್ರಥಮ ಚಿಕಿತ್ಸೆಯ ಕುರಿತು—ಫರಂಗಿಪೇಟೆ ಶಾಲಾ ಉಪಾಧ್ಯಾಯ ಎನ್. ಕೃಷ್ಣಯ್ಯ ಭಟ್ಟರೂ ಒಂದೊಂದು ಪಾಠವನ್ನು ಕೊಟ್ಟ ಬಳಿಕ ಉಪಹಾರವಾಗಿ—ಮುಂದಿನ ಸಭೆಯನ್ನು ಫರಂಗಿ ಪೇಟೆಯಲ್ಲಿ ತಾ. ೨೯-೨-೩೬ಕ್ಕೆ ಜರಗಿಸಬೇಕಾಗಿ ನಿರ್ಣಯಿಸ ಲಾಯಿತು. ಅಧ್ಯಕ್ಷರು 'ಉಪಾಧ್ಯಾಯ ವರ್ಗಕ್ಕೆ ಅತಿ ಉಪ ಯುಕ್ತವಾದ ಸೂಚನೆಗಳು ಮತ್ತು ಬೋಧನೆಗಳಿಂದೊಳ ಗೂಡಿದ ತಮ್ಮ ಸುರಸವಾದ ಭಾಷಣವನ್ನು ಮಾಡಿದ ಬಳಿಕ ರಾಷ್ಟ್ರ ಗೀತದೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಇಲ್ಲಿಯ ಪುದುಬೋರ್ಡ ಮಹಮ್ಮದನ್ ಶಾಲೆಯ ವರ್ಷೋತ್ಸವವು ತಾ. ೪-೨-೩೬ನೇ ಆದಿತ್ಯವಾರ ದಿನ ಕೆನರಾ ರೇಂಜ್ ಮಹಮ್ಮದನ್ ಶಾಲೆಗಳ ಡಿ. ಇನ್ಸ್‌ಪೆಕ್ಟರವರ ಅಧ್ಯಕ್ಷತೆಯಲ್ಲಿ ಜರಗಿತು.

ಇಲ್ಲಿಯ ಶಾಲಾ ಬಳಿಯಲ್ಲಿ 'School-Zone' ಎಂಬ ನಿಶಾನಿ ಕಂಭವು ಇಲ್ಲದ್ದರಿಂದ ಪಣಂಬೂರಿನಿಂದ ಬರತಕ್ಕ ಮೋಟರ್ ಬಂಡಿಗಳ ಡ್ರೈವರರಿಗೆ ತಿಳಿಯದೆ ಅನೇಕ ಅಪಘಾ ತಗಳು ಸಂಭವಿಸುತ್ತಿವೆ. ... ಅಲ್ಲದೆ ಬೀದಿಯಲ್ಲಿ ... ವಾಹನಗಳಿಂದ ಬರತಕ್ಕ ... ಅಲ್ಲಿಯೇ ಕೂತು ತ್ತವೆ. ಆದ್ದರಿಂದ ದಯಮಾಡಿ ಡಿಸ್ಟ್ರಿಕ್ಟ್ ಬೋರ್ಡಿನವರು ಇಲ್ಲಿಯೂ ನಿಶಾನಿ ಕಂಭಗಳನ್ನು ನೆಡಿಸಿ ಬಾಲಕರಿಗೆ ಸಂಭವಿಸ ಬಹುದಾದ ಅಪಾಯವನ್ನು ನಿವಾರಿಸುವರಾಗಿ ನಂಬಿಕೆ.

ಹಂಗಾರ ಕಟ್ಟೆ:—ಮಾನ್ಯ ಸರಕಾರದವರೂ ಉಡ್ಪಿ ತಾಲೂಕು ಬೋರ್ಡಿನವರೂ ಇತ್ತೀಚೆಗೆ ಹಂಗಾರ ಕಟ್ಟೆ ಮೊತ್ತು ಆಸುಪಾಸಿನ ಜನರ ಹಿತಕ್ಕಾಗಿ ಸ್ಥಾಪಿಸಲು ನಿರ್ಣಯಿಸಿದ ರೂರಲ್ ಆಸ್ಪತ್ರೆಯ ಅನಾವರಣ ಸಮಾರಂಭವು ತಾ ೧-೨-೩೬ ನೇ ಅಪರಾಹ್ನ ಘಂಟೆ ೩ಕ್ಕೆ ಹಂಗಾರ ಕಟ್ಟೆ ಬಂದರದಲ್ಲಿ ಬಹು ವಿಜೃಂಭಣೆಯಿಂದ ಜರಗಿತು.

ಘಳಿಮಾರು:—ತಾ. ೨—೨-'೩೬ನೇ ಶುಕ್ರವಾರ ಶ್ಯಾಮ ಘಂಟೆ ೩ಕ್ಕೆ ಘಳಿಮಾರಿನ ಸುಶಿಮಾರ್ಕೆಟಿನ ಬಳಿಯಲ್ಲಿ ಪುತ್ತೂರು ತಾಲೂಕಿನ ಪದ್ಮಾವತಿ ಎಂಬ ಚಿಕ್ಕ ಬಾಲಕಿಯಿಂದ ಸೀತಾ ಪರಿಣಯವೆಂಬ ಹರಿಕಥೆಯು ಬಹು ಚಲೋದಾಗಿ ಮಾಡಲ್ಪಟ್ಟಿತು. ಜನ ಸಂದಣಿಯು ಕಿಕ್ಕಿರಿದಿತ್ತು. ದಿನೇ ದಿನೇ ಇಲ್ಲಿ ಹೊಸತಾಗಿ ತೆರೆಯಲ್ಪಟ್ಟ ಸಂತೆಯು ವೃದ್ಧಿಯಾ ಗುತ್ತಾ ಬರುತ್ತದೆ.

ಇಲ್ಲಿಯ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಧ್ವಜಾ ರೋಹಣ ಸಂಭ್ರಮವು ತಾ. ೧೭-೨-'೩೬ನೇ ಸೋಮವಾರ ಶಿವರಾತ್ರಿ ದಿನ ಜರಗಿ ತಾ. ೧೬-೨-'೩೬ನೇ ಶುಕ್ರವಾರ ರಥೋತ್ಸವವು ಮಹಾ ವೈಭವದಿಂದ ಅಂತ್ಯಗೊಳ್ಳುವುದು. ಸರ್ವ ರಿಗೂ ಸುಸ್ವಾಗತ.

ಕುಂದಾಪುರ:—ತಾಲೂಕು ಕೋಟ್ಲದ ಗ್ರಾಮದ ಶಿವ ಬ್ರಾಹ್ಮಣ ರಾಮಚಂದ್ರ ಹೆಬ್ಬಾರರ ಮನೆಯ ಹಟ್ಟಿಯಲ್ಲಿ ಕಳೆದ ತಾ. ೨೦—೧—'೩೬ನೆಯ ದಿವಸ ಸಾಯಂಕಾಲ ಸುಮಾರು ೭ ಘಂಟೆ ಸಮಯ ಏನೋ ಶಬ್ದವಾಯಿತು. ಆ ಕೂಡಲೆ ಎಮ್ಮೆ ಕರುವು ವಿಕಾರ ಸ್ವರದಿಂದ ಕೂಗಲು ಮನೆ ಯವರ ಪೈಕಿ ಸುಮಾರು ೩೭—೪೦ ವರ್ಷ ಪ್ರಾಯದ ಪುಟ್ಟಮ್ಮ ಎಂಬ ಹೆಂಗಸು ಗಾಬರಿಯಿಂದ ಕರುವಿನ ಕುತ್ತಿಗೆಗೆ ಕಟ್ಟಿದ್ದ ಹಗ್ಗ ಬಿಗಿದು ಕೂಗುವುದಿರಬಹುದೆಂದು ಕತ್ತಲೆಯಲ್ಲಿ ಹೋಗಿ ಕರುವನ್ನು ತಪ್ಪಿ ನೋಡಿದಳು. ಆಗ ಕರುವಿನ ಮುಖ ಕೆಳಗಿನ ಬದಲಾಗಿ ನುಣುಪಾದ ಗಟ್ಟಿ ಕಿವಿ ಕೈಗೆ ಸಿಕ್ಕಿತು. ಹುಲಿ ಯೆಂದು ಅವಸರದಿಂದ ಕೈಗೆ ಸಿಕ್ಕಿದ ಮರದ ತುಂಡಿನಿಂದ ಗಟ್ಟಿಯಾಗಿ ಹೊಡೆದಳು. ಪೆಟ್ಟಿನ ನೋವಿಂದಲೂ ದನಕರುಗಳ ಬೊಬ್ಬೆಯಿಂದಲೂ ಕರುವನ್ನು ಬಿಟ್ಟು ಹುಲಿ ಸರಿಯಿತು. ಈ ಗಲಾಟೆ ಕೇಳಿ ಮನೆಯ ಇನ್ನೊಬ್ಬ ಸುಮಾರು ೧೭-೧೮ ಪ್ರಾಯದ ನಾರಾಯಣನೆಂಬ ಹುಡುಗನು ಬೆಳಕನ್ನು ತಂದನು, ಆ ಬೆಳಕನ್ನು ನೋಡಿ ಮೂಲೆಯಲ್ಲಿ ಕುಳಿತ ಹುಲಿಯು ಹೆದರಿತು. ಆ ಹೆಂಗಸು ಧೈರ್ಯಗೆಡದೆ ಸ್ವಲ್ಪ ಅಡ್ಡವಾಗಿ ಹೋಗಿ ಅದೇ ಕೈಯಲ್ಲಿದ್ದ ಆಯುಧದಿಂದ ನಾಲ್ಕು ಪೆಟ್ಟು ಹುಲಿಯ ತಲೆಯ ಮೇಲೆ ಹೊಡೆದಳು. ಹುಲಿಯು ರಕ್ತ ಕಾರಿ ಪ್ರಾಣ ಬಿಟ್ಟಿತು. ಆ ಸಮಯ ಹುಲಿಯನ್ನು ನೋಡುವುದಕ್ಕಾಗಿ ತುಂಬಾ ಜನರು ನೆರೆದಿದ್ದರು.

ಕಾಸರಗೋಡು:—ಕಾರಡ್ಕ ಗ್ರಾಮದ ಸುಪ್ರಸಿದ್ಧ ಜಮೀನುದಾರ ಶ್ರೀ. ಮಾರಂಗ್ಯೆ ಶಂಕರನಾರಾಯಣ ಭಟ್ಟರು ಅಡೂರು ಮೇಳದ ಮಂದಿಯ ಕೇವು ದಶಾವತಾರ ಆಟಗಳಲ್ಲಿ ಪ್ರಮುಖ ಪಾತ್ರಗಳನ್ನು ಅಭಿಮಾನಪೂರ್ವಕವಾಗಿ ವಹಿಸಿ ಮನೋಹರವಾಗಿ ಅಭಿನಯಿಸಿದರು.

ಮೂಡಬಿದ್ರೆ:—ಈ ಸೆಂಟರಿನ ಉಪಾಧ್ಯಾಯರ ಸಂಘದ ನಾಲ್ಕನೆಯ ಸಭೆಯು ಜನವರಿ ತಿಂಗಳ ೨೦ನೆಯ ಶನಿವಾರ ೨ ಘಂಟೆಗೆ ಗುರುಪುರ ಬೈಲು ಶಾಲಾ ಮುಖ್ಯ ಅಧ್ಯಾಪಕರಾದ ಮ. ರಾ. ರಾ. ಬಿ. ನಾಗಪ್ಪಯ್ಯನವರ ಅಧ್ಯಕ್ಷತೆ ಯಲ್ಲಿ ಜರುಗಿತು. ೧೪ ಶಾಲೆಗಳ ೩೦ ಮಂದಿ ಅಧ್ಯಾಪಕರು ಹಾಜರಿದ್ದರು. ದೇರೆಬೈಲ್ ಶಾಲಾ ಮುಖ್ಯ ಅಧ್ಯಾಪಕರಾದ ಮ. ರಾ. ರಾ. ಕೆ. ಪಿ. ನೇಮಿರಾಜ ಹೆಗ್ಗಡೆಯವರು ಜೈನ ಶಾಲಾ ೪ನೆಯ ಕ್ಲಾಸಿನ ಮಕ್ಕಳಿಗೆ ಪದ್ಯ ಮಾದರಿ ಪಾಠ ವನ್ನು ಕೊಟ್ಟರು. ಬರುವ ಸಭೆಯು ಫೆಬ್ರವರಿ ತಾ. ೧೬ಕ್ಕೆ ಇಡಲ್ಪಟ್ಟಿದೆ ಎಂದು ಸಂಘದ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಬಂಟ್ವಾಳ:—ಇಲ್ಲಿ ಬೋರ್ಡು ಮಾರ್ಗದ ಬಳಿ ಅಗ್ರಹಾರದಲ್ಲಿ ಬಾಳಿಕೆ ತಿಮ್ಮಪ್ಪ ಭಂಡಾರಿಗಳ ಮತ್ತು ಮಂಗಳೂರು ತಾಲೂಕು ಬೋರ್ಡ ಮೆಂಬರ ರಾಮಯ್ಯ ಭಂಡಾರಿಗಳು ಮುಂತಾದ ನಾಡವ ಮಹನೀಯರ ಮುಂದಾಳುತನದಿಂದ ನಡೆ ಸಿದ ಕಂಬಳವು ಬಹಳ ವಿಜೃಂಭಣೆಯಿಂದ ಜರಗಿತು. ಸಾಧಾ ರಣ ಏಳೆಂಟು ಸಾವಿರ ಜನಸ್ತೋಮವು ಕೂಡಿತ್ತು. ನೂರಾರು ಸಂತೆಗಳು ಬಂದಿದ್ದುವು. ಭಂಗಾರದ ಮೆಡಲು ಕೊಳ್ಳೂರು ... ಕೋಣಗಳು, ... ಮೊದಲಾದ ... ಗಳು ... "... ..." ಎಂಬ ... ಯಕ್ಷಗಾನ ... ಜರಗಿತು.

ಬಂಟವಾಳದಲ್ಲಿ ಬಿಹಾರ ಭೂಕಂಪ ಸಹಾಯಾರ್ಥವಾಗಿ ಒಂದು ಸಭೆಯು ಸೋಮವಾರ ಸಾಯಂಕಾಲ ... ಶಾಲೆಯಲ್ಲಿ ಜರಗಿತು.

ಉಡುಪಿ:—ಪರ್ಯಾಯೋತ್ಸವದಲ್ಲಿಯೂ ಮೈಸೂರ ಶ್ರೀಮನ್ಮಹಾರಾಜರ ಪಟ್ಟಾಭಿಷೇಕ ದಿನವಾದ ರಥಸಪ್ತಮಿಯ ದಿನ ಶ್ರೀಕೃಷ್ಣ ಸನ್ನಿಧಿಯಲ್ಲಿ ನಡೆದ ಸಂಗೀತ ಕಚೇರಿಯಲ್ಲಿಯೂ ಮಹಾರಾಜರವರ ಶ್ರೇಯಃಪ್ರಾರ್ಥನೆಯನ್ನು ಸಮುಚಿತವಾಗಿ ನಡೆಯಿಸಿ, ಮಹಾರಾಜರಿಗಾಗಿ ಪ್ರಸಾದ ನಿರ್ಮಾಲ್ಯಗಳನ್ನು ಪಡೆದು ಆಸ್ಥಾನ ವಿದ್ವಾನ್ ಸಂಗೀತ ಶಾಸ್ತ್ರಜ್ಞ ಶ್ರೀಮಾನ್ ಕೆ. ವಾಸುದೇವಾಚಾರ್ಯರು ಇಲ್ಲಿಯ ಪ್ರವಾಸವನ್ನು ಮುಗಿಸಿ ಕೊಂಡು ಕಳೆದ ಸೋಮವಾರ ಕಾರ್ಕಳಕ್ಕೂ ಅಲ್ಲಿಂದ ಮುಂದೆ ಮಂಗಳೂರಿಗೂ ಪ್ರಯಾಣ ಮಾಡಿದ್ದಾರೆ.

ಬೆಂಗಳೂರು.

ಬೆಂಗಳೂರು ಸರಕಾರದ ವಾಣಿಜ್ಯ ಪಾಠಶಾಲೆಯ ಉತ್ಸವವು ೩೧-೧—೩೬ನೆಯ ದಿನ ಲಂಡನಿನಲ್ಲಿ ಮೈಸೂರು ವಾಣಿಜ್ಯ ಪಾಲಕರಾಗಿ, ಈಗ ಇಲ್ಲಿಗೆ ಬಂದಿರುವ ಶ್ರೀ ರಂಗನಾಥ ರಾವ್ ಸಾಹೇಬರ ಅಧ್ಯಕ್ಷತೆಯಲ್ಲಿ ನಡೆಯಿತು. ಆ ದಿನ 'ಮದುವೆಯೋ ಮನೆ ಹಾಳೋ' ಎಂಬ ನಾಟಕ ಪ್ರದರ್ಶನವೂ ಆಯಿತು..

ದೊಡ್ಡ ಬಳ್ಳಾಪುರದ ಜವಳಿ ಅಂಗಡಿ ಸಾಹುಕಾರ ಶ್ರೀ ಹ. ಸುಬ್ಬಯ್ಯ ಶೆಟ್ಟರು ಈ ಸೆಂಟರಿಗೆ ಪರೀಕ್ಷೆಗೆ ಬರುವ ವಿದ್ಯಾರ್ಥಿಗಳಿಗೆಲ್ಲ ಭೋಜನ ಸೌಕರ್ಯಗಳನ್ನು ಕಲ್ಪಿಸುತ್ತಾರೆ. ಮಾರ್ಚ ಗೋಸ್ಕರವಾಗಿ ಬರುವವರು ತಿಳಿಸಬೇಕಾಗಿ ಲೋಕ ಸೇವಾನಿರತ ಡಿ. ಕೊಂಗಾಡಿಯಪ್ಪನವರು ಬರೆಯುತ್ತಾರೆ.

ಚಿಕ್ಕ ಬಳ್ಳಾಪುರದಲ್ಲಿ 'ಅಸಿಸ್ಟೆಂಟ್ ಕಮಿಷನರ್' ಆಗಿದ್ದ ಶ್ರೀ ಸಯ್ಯದ್ ಅಬ್ದುಲ್ ಖಲಕ್‌ರವರನ್ನು ಮೈಸೂರು ಸಂಸ್ಥಾನದ ಸೈನ್ಯಾಧಿಕಾರಿಗಳ 'ಪರ್ಸನಲ್ ಅಸಿಸ್ಟೆಂಟರ'ನ್ನಾಗಿ ನೇಮಕ ಮಾಡಿದ್ದಾರೆ.

ಶ್ರೀ. ಡಿ. ವಿ. ಗುಂಡಪ್ಪನವರು ವಿಶ್ವ ವಿದ್ಯಾನಿಲಯ ಸಮಿತಿಯಿಂದ ನ್ಯಾಯ ವಿಧಾಯಕ ಸಭೆಗೆ ನಿಂತಿದ್ದಾರೆ. ಶ್ರೀ ಎಂ. ಪಿ. ಸೋಮಶೇಖರರಾಯರು ವಿಶ್ವವಿದ್ಯಾನಿಲಯ ಸಮಿತಿ ಯಿಂದ ಪ್ರಜಾ ಪ್ರತಿನಿಧಿ ಸಭೆಗೆ ನಿಂತಿದ್ದಾರೆ..

ಚೆನ್ನಪಟ್ಟಣದ ಕೈಗಾರಿಕಾ ಪಾಠಶಾಲೆಯಲ್ಲಿ ಶಿಕ್ಷಣ ಪಡೆಯುತ್ತಿರುವ ಹರಿಜನ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಒಂದು ಛಾತ್ರಾಲಯವನ್ನು ತೆರೆಯಬೇಕೆಂದು ಪ್ರಿನ್ಸಿಪಾಲ ರಾಮಚಂದ್ರನ್‌ರವರು ಪ್ರಯತ್ನ ಮಾಡುತ್ತಿರುವರಂತೆ.

ಬೆಂಗಳೂರಿನಲ್ಲಿ ರೆವೆನ್ಯೂ ಕಮಿಷನರ ಮನೆಯಲ್ಲಿ ತಾ. ೪—೧—೩೬ನೇ ದಿನ ಭಾರಿ ಕಳ್ಳತನ ನಡೆದಿತ್ತಷ್ಟೆ. ಪೋಲೀಸಿನವರು ಅಪಹಾರವಾದ ಚಿನ್ನದ ಸಾಮಾನೊಂದನ್ನು ಪತ್ತೆ ಮಾಡಿದ್ದಾರೆ.

ಮೈಸೂರು:—ತಾ. ೩೬ನೇ ದಿನ ಕೃಷ್ಣರಾಜ ಪೇಟೆ ಯಿಂದ ಮೈಸೂರಿಗೆ ಹೋಗುತ್ತಿದ್ದ ಮೋಟಾರು ಬಸ್ಸಿನಿಂದ ಮೈಸೂರು ಸುಂಕದ ಕಟ್ಟೆಯ ಹತ್ತಿರ ೧೪ ವಯಸ್ಸಿನ ಒಬ್ಬ ಹುಡುಗನ ಮೇಲೆ ಹಾದು ಬಾಲಕನು ತಕ್ಷಣ ಮೃತಪಟ್ಟನೆಂದು ತಿಳಿದುಬಂದಿದೆ.

೪—೧—೩೬ನೆಯ ದಿನ ಮದ್ದೂರು ತಾಲೂಕು ಗ್ರಾಮ ಪಂಚಾಯತಿಗಳ ಸಮ್ಮೇಳನವು ಮೈಸೂರು ಜಿಲ್ಲಾಧಿಕಾರಿಗಳಿಂದ ತೆರೆಯಲಾಯಿತು. ಶ್ರೀ. ಜ. ವಿ. ಗಣಪತಿ ಅಯ್ಯರವರು (ಸಬ್ ಡಿವಿಜನ್ ಅಧಿಕಾರಿಗಳು) ಅಧ್ಯಕ್ಷತೆ ವಹಿಸಿದ್ದರು.

ಕನ್ನಡ ಇಂಟರ್‌ಮೀಡಿಯೆಟ್ ಪರೀಕ್ಷೆಗೆ ಕನ್ನಡ ಪಠ್ಯ ಪುಸ್ತಕವಾದ 'ಹರಿಶ್ಚಂದ್ರ ಕಾವ್ಯಸಂಗ್ರಹ'ವು ಮೈಸೂರು ಓರಿಯಂಟಲ್ ಪುಸ್ತಕ ಭಂಡಾರದಲ್ಲಿ ಗತಿ ಅಣೆಗೆ ದೊರೆಯುವು ದೆಂದು ರಿಜಿಸ್ಟ್ರಾರ್ ಶ್ರೀ ವಿ. ಗೋಪಾಲ ಸ್ವಾಮಿ ಅಯ್ಯಂಗಾರ್ ರವರು ತಿಳಿಸುತ್ತಾರೆ.

ಮೈಸೂರು ಪೌರಸಭೆಯ ಉಪಾಧ್ಯಕ್ಷ ಸ್ಥಾನಕ್ಕೆ ರಾವ್ ಸಾಹೇಬ್ ಎಂ. ರಾಮಸ್ವಾಮಿ, ಶ್ರೀ ಪಿ. ಸೀತಾರಾಮಯ್ಯ, ಶ್ರೀ ಮಹಮ್ಮದ್ ಸೇಟ್ ಇವರುಗಳು ಉಮೇದುವಾರರಾಗಿ ನಿಂತಿರುವರಂತೆ.

ತಾ. ೨೪, ೨೫ರಲ್ಲಿ ಮಂಗಳೂರಿಗೆ ಮಹಾತ್ಮಾಜೀಯವರ ಆಗಮನ.

ಲೀಪ್‌ಸಿಗ್

'ವಿಸ್ಕಿ' ಎಂಬ ಹೆಸರು ಇಂಗ್ಲಾಂಡು ಸ್ಕಾಟ್‌ಲೆಂಡಿನ ಮಾದಕ ಪದಾರ್ಥಕ್ಕೆ ಇರುವುದರಿಂದ ಅಂತಹ ಹೆಸರನ್ನು ಜರ್ಮನಿಯಲ್ಲಿ ತಯಾರಾಗುವ ಅಂತಹ ಮಾದಕ ಪದಾರ್ಥಗಳಿಗೆ ಇಡಬಾರದೆಂದು ಸುಪ್ರೀಂ ಕೋರ್ಟಿನ ಅಡ್ಡೆ, ಬ್ರಿಟಿಷ ಕಂಪೆನಿಯೊಂದು ತನ್ನ ಮಾದಕ ಪದಾರ್ಥದ ಹೆಸರಿಗಾಗಿ ಹೆಣಗಾಡಿದ ವಿಚಿತ್ರ ಪರಿಣಾಮವಿದು.

ನ್ಯೂಯೋರ್ಕ್

ಸಂಯುಕ್ತ ಅಮೇರಿಕದಲ್ಲಿ ನಡೆವ ಕಳ್ಳತನ ದರೋಡೆ, ಕೊಲೆಗಳಿಗೆ ಮಿತಿಯೇ ಇಲ್ಲ. ಮಸಾಚುಸೆಟ್ಸ್‌ನಲ್ಲಿ ಒಂದು ಬೇಂಕಿನಲ್ಲಾದ ದರೋಡೆಯಲ್ಲಿ ನಾಲ್ವರು ಭಂಡಾಯಿಗಾರರು ಕೊಲ್ಲಲ್ಪಟ್ಟರು. ಒಬ್ಬ ಪೋಲೀಸನು ಘಾಯಗೊಂಡನು. ಆದರೆ ಮತ್ತೊಬ್ಬನು ೧೧೦೦೦ ಡೊಲ್ಲರುಗಳೊಡನೆ ಓಡಿದನು. ನ್ಯೂ ಜೆರ್ಸಿಯ ಪೆನ್ನಿಗ್ರೋವ್ ನೇಶನಲ್ ಬೇಂಕಿನಲ್ಲಿ ೧೩೦,೦೦೦ ಡೊಲ್ಲರುಗಳನ್ನು ನಾಲ್ಕು ಜನರು ಎತ್ತಿದರು. ಟೆಕ್ಸಾಸ್‌ನಲ್ಲಿ ಮೂವರು ಕೂಡಿ ೩೮೦೦೦ ಡೊಲ್ಲರುಗಳನ್ನು ಬೇಂಕಿನಿಂದ ಒಯ್ದರು.

ಕಲ್ಲಿಕೋಟೆ

ಉನ್ನಮನ್ ಎಂಬವನೂ ಅವನ ಪತ್ನಿಯೂ ಮತ್ತು ಅವಳ ಸಹೋದರಿಯೊಬ್ಬಳೂ ಇಲ್ಲಿ ಕಳೆದ ವಾರ ಕತ್ತಿಯ ಘಾಯಗಳಿಂದ ಬಿದ್ದಿದ್ದರು. ಭಯಂಕರ ಹತ್ಯೆಯೊಂದು ಪರಿಶೋಧನೆಯಾಗುತ್ತಲಿದೆ. ಅಪರಾಧಿಕರ ಗತ್ತೆಯೇ ಇಲ್ಲ. ಉನ್ನಮನನಿಗೆ ಮದನರೋಗವಿತ್ತು.

ವಿಜಗಪಟಾಂ

ವಿಜಗಪಟಾಂ ಏಜನ್ಸಿಯನ್ನು ಹೊಕ್ಕು ತಾನು ಮಹಾ ಸಾಧುವೆಂದು ಹೇಳಿಕೊಂಡು ಗುಡ್ಡ ಬೆಟ್ಟಗಳಲ್ಲಿ ತನ್ನ ನಿವಾಸಸ್ಥಾನವನ್ನು ಮಾಡಿ ಅನೇಕರನ್ನು ತನ್ನ ದಶವರ್ತಿಗಳನ್ನಾಗಿ ಮಾಡಿ, ತನ್ನ ಪ್ರಸಾದವನ್ನು ಕೊಟ್ಟು ಜನರಿಂದ ಹೇರಳ ದ್ರವ್ಯವನ್ನು ಸಂಪಾದಿಸಿದ ಕವಿ ಶ್ರೀ ಹರಿದಾಸ ಅಥವಾ 'ಏಜನ್ಸಿ ಕಿಂಗ್'ನನ್ನು ನಾಲ್ಕನೇ ಸಲವಾಗಿ ಒಂದು ವರ್ಷ ಕಳೆದ ನಂತರ ಪುನಃ ಸೆರೆ ಹಿಡಿದಿರುವರು. ಒಮ್ಮೆ ಇವನು ಬೆಳ್ಳಾರಿ ಜೈಲಿನಿಂದ ಹೇಗೋ ತಪ್ಪಿಸಿಕೊಂಡನು. ಇವನನ್ನು ಪುನಃ ಸೆರೆ ಹಿಡಿದು ಬಲವಾದ ಸೆರೆಯಲ್ಲಿಟ್ಟರು. ಅಲ್ಲಿಂದಲೂ ತಪ್ಪಿಸಿಕೊಂಡನು. ಈಗ ನಾಲ್ಕನೇ ಸಲ ಹಿಡಿದಿರುವರು. "ನಾನು ನಿಜವಾಗಿಯೂ ವಿಜಗಪಟಾಮಿನ ದೊಗ್ಗು, ಸೆರೆಮನೆ ನನಗಲ್ಲ" ಎಂಬುದೇ ಇವನ ವಾದ.

ಮದ್ರಾಸು

ಮದ್ರಾಸಿನ "ಹಿಂದೂ" ಪತ್ರಿಕೆಯ ಸಂಪಾದಕರಾದ ಶ್ರೀಯುತ ಎ. ರಂಗಸ್ವಾಮಿ ಅಯ್ಯಂಗಾರ್ಯರು ಕಳೆದ ಆದಿತ್ಯವಾರ ದಿನ ಬೆಳಿಗ್ಗೆ ರೋಗಬಾಧಿತರಾಗಿ ಸ್ವರ್ಗಸ್ಥರಾದರೆಂದು ತಿಳಿಸಲು ತುಂಬಾ ವಿಷಾದಿಸಬೇಕಾಗುತ್ತದೆ. ಶ್ರೀಯುತರು ಉಜ್ವಲ ರಾಷ್ಟ್ರಾಭಿಮಾನಿಯೂ, ವಿದ್ಯಾಭಿಮಾನಿಯೂ ಆಗಿದ್ದು, ರಾಷ್ಟ್ರೀಯ ಪತ್ರಿಕೆಯಾದ "ಹಿಂದೂ" ಆಂಗ್ಲ ಭಾಷಾ ಪತ್ರಿಕೆಯನ್ನೂ, ಆಂಧ್ರ ದೇಶದಲ್ಲಿ ಪ್ರಸಿದ್ಧವಾದ "ಸ್ವದೇಶಮಿತ್ರನ್" ಎಂಬ ತಮಿಳು ಪತ್ರಿಕೆಯನ್ನೂ ನಡೆಸುತ್ತಿದ್ದರು. ಇವರು ಅನೇಕ ತಾಪತ್ರಯಗಳನ್ನು ಪೂರ್ವದಲ್ಲಿಯೇ ಅನುಭವಿಸಿ, ಸ್ವರಾಜ್ಯ ಪಾರ್ಟಿಗೆ ಚಾಲಕರಾಗಿ ನಿಂತು ಸರಕಾರದ ಮತ್ತು ಜನತೆಗಳ ಪ್ರೀತಿಗೆ ಪಾತ್ರರಾದರು. ಇವರು ರೌಂಡ್‌ಟೇಬಲ್ ಪರಿಷತ್ತಿನ ಪ್ರತಿನಿಧಿಯಾಗಿ ಮಹಾತ್ಮಾ ಗಾಂಧಿಯವರೊಡನೆ ಲಂಡನಿಗೆ ಹೋಗಿದ್ದರು. ಮಹಾತ್ಮಾಜೀಯವರೂ, ವೈಸರಾಯರೂ, ಸ್ಟೇಟ್ ಸೆಕ್ರೆಟರಿಗಳೂ ಮೊದಲಾದ ಗಣ್ಯರು ಇವರ ಮರಣದಿಂದಾಗಿ ದುಃಖಿಸಿಕೊಂಡಿರುವರು.

ಹುಬ್ಬಳ್ಳಿ

ಮಹಾತ್ಮರು ಕರ್ನಾಟಕಕ್ಕೆ ಬರುವರೋ ಇಲ್ಲವೋ ಎಂದು ಜನರು ಶಂಕೆಗೊಂಡರು. ಅದರ ಕುರಿತು ನಿಶ್ಚಿತವಾಗಿ ಉಡುಪಿ ಯಿಂದ ಶ್ರೀ ಪಾಟೀಲ ವೀರನಗೌಡರು ಹೀಗೆ ತಿಳಿಸುವರು—"ಗಾಂಧಿಜೀಯವರು ಕರ್ನಾಟಕದಲ್ಲಿ ಒಟ್ಟಿಗೆ ೧೨ ದಿವಸಗಳನ್ನು ಕಳೆಯುವರು. ಅವುಗಳಲ್ಲಿ ವಿಶ್ರಾಂತಿಯು ಒಟ್ಟು ೪ ದಿನಗಳೂ ಸೇರಿವೆ. ಹೊರತಾಗಿ ಮಹಾತ್ಮರು ಕೊಡಗು ಮಂಗಳೂರುಗಳಿಗೂ ಹೋಗಲಿರುವರು. ಮಳೆಯ ದೆಸೆಯಿಂದಾಗಿ ತಮಿಳು ನಾಡಿಗೆ ಒಂದು ವಾರ ಹೆಚ್ಚಿಗೆ ಕೊಡಲಾಗಿದೆ. ಇದೇ ತಿಂಗಳ ೨೫ನೇ ತಾರೀಕಿಗೆ ಅವರು ಮಂಗಳೂರಿನಿಂದ ಜಲಮಾರ್ಗವಾಗಿ ಕಾರವಾರ ಜಿಲ್ಲೆಯ ಸಂಚಾರಕ್ಕಾಗಿ ಹೊರಡುವರು"

ಧಾರವಾಡ

ದಿವಾಕರ ರಂಗರಾಯರು ತಮ್ಮ ಮೂರುವರೆ ವರ್ಷಗಳ ಶಿಕ್ಷೆಯ ಕಾಲವನ್ನು ಹಿಂಡಲಗಿ ಜೈಲಿನಲ್ಲಿ ಕಳೆಯುತ್ತಿದ್ದಾರೆ. ೧೯೩೨ ಜುಲಾಯಿ ತಿಂಗಳಲ್ಲಿ ಆಡುವಾಗ ಅವರ ಬಲಗಾಲಿನ ಹೆಬ್ಬೆರಳಿನ ಮೇಲಿನ ಸಂದು ತಪ್ಪಿತು. ಅದಕ್ಕೆ ಶಸ್ತ್ರಕ್ರಿಯೆ ನಡೆಸಲಾಯಿತು. ಆದರೆ ನೋವು ಕಡಿಮೆಯಾಗಲಿಲ್ಲ. ಆ ಭಾಗವು ಬಾತುಹೋಗಿ ಹೀಗೆಯೇ ನಿಂತಿತು. ಅನೇಕ ಉಪಾಯಗಳಿಂದಲೂ ಅದು ಗುಣ ಹೊಂದಲಿಲ್ಲ. ಈಗ ಏಳು ತಿಂಗಳುಗಳಾದರೂ ಮೊದಲಿನಂತೆಯೇ ನೋವು ಇದೆ. ಈಗ ಎರಡು ತಿಂಗಳಿನಿಂದ ಅವರ ಬಲಗಾಲಿನ ನಡುವಿನ ಬೆರಳೂ ಬಾತು ಅದೂ ನೋವುಗೊಂಡಿದೆ. ನೋವು ಯಾವಾಗಲೂ ಇದ್ದೇ ಇರುತ್ತದೆ. ಶ್ರೀ ದಿವಾಕರರ ಆರೋಗ್ಯವು ನೆಟ್ಟಗಾಗುವ ಬದಲು ದಿನೇ ದಿನೇ ಬಾಧಕವೇ ಹೆಚ್ಚಾಗುತ್ತಿದೆ

ಕಲ್ಕತ್ತೆ

ಬಂಗಾಳ ಗವರ್ನರರು ಕಳೆದ ವಾರ ಒಂದು ಭೋಜನಕೂಟವನ್ನೇರ್ಪಡಿಸಿದರು. ಅತಿಥಿಗಳು ಹೆಚ್ಚಿದ್ದಿಲ್ಲ—೩೬೦೦! ಇವರು ಭೂಕಂಪನಿಧಿಗೆ ಎಷ್ಟು ಕೊಟ್ಟರೆಂಬ ಲೆಕ್ಕವು ಸಿಕ್ಕದುದಿಲ್ಲ. ಬಿಹಾರ ಎಂಬುದು ಕಲ್ಕತ್ತದಿಂದ ಹೆಚ್ಚು ದೂರದ ಪ್ರಾಂತ್ಯವಲ್ಲ!

ಲೈಸನ್ಸು ಇಲ್ಲದೆ ರಿವಾಲ್ವರನ್ನು ಇಟ್ಟುಕೊಂಡುದಕ್ಕಾಗಿ ಕಲ್ಕತ್ತದಲ್ಲಿ ಆಚಾರ್ಯನಾದ ಮಿತ್ರ ಎಂಬವನಿಗೆ ಬಂಗಾಳ ಕ್ರಾಂತಿವಿರೋಧ ಶಾಸನದ ಮೇರೆಗೆ ಸಂಪೂರ್ಣ ಏಳು ವರ್ಷಗಳ ಕಠಿಣ ಸಜೆ ವಿಧಿಸಿದರು.

ದಿಲ್ಲಿ

ನೇಪಾಳ ಸರಕಾರದ ಎನ್‌ವೋಯಾಗಿ ದಿಲ್ಲಿಯಲ್ಲಿದ್ದ ಕರ್ನಲ್ ಚಂದ್ರಜಂಗ್‌ಥಾಪ ಎಂಬವರೆ ೬೦ ವರ್ಷ ಪ್ರಾಯದ ತಾಯಿಯು ನೇಪಾಳದಲ್ಲಿ ಕಟ್ಟಡದಡಿ ಬಿದ್ದು ಮೃತರಾದರು. ಶವವು ಕೆಲವು ದಿನಗಳ ನಂತರ ಸಿಕ್ಕಿತು.

ಮೊಸ್ಕೊ

ಮೊಸ್ಕೊದಲ್ಲಿ ಜನವರಿ ತಾ. ೩೦ನೇ ದಿನ ಬೇಲೂನಿನಲ್ಲಿ ಹಾರ್‍ಯಾಡಿ ಶೋಧೆ ನಡೆಸುತ್ತಲಿದ್ದ ಮೂವರು ಬೇಲೂನು ಸಮೇತ ಬಿದ್ದು ಮೃತರಾದರು. ಲೆನಿನ್ ಮೃತ್ಯುವಿನ ನಂತರ ಇಷ್ಟೊಂದು ಸಂಭ್ರಮದಿಂದಲೂ ಲಕ್ಷಗಟ್ಟಳೆ ಜನವಂದಿತವಾಗಿಯೂ ಯಾರ ಶವವೂ ಸ್ಮಶಾನ ಭೂಮಿಗೆ ನಡೆದುದಿಲ್ಲ.

ಕೊಲೊಂಬೊ

ದೇವಾಲಯಕ್ಕೆ ಹೋಗುವ ಅವಸರದಿಂದ ಒಬ್ಬಳು ಬರ್ಘರ್ ತರುಣಿಯು ರೈಲ್ವೆ ಲೈನನ್ನು ದಾಟುತ್ತಿದ್ದಾಗ, ಒಂದು ರೈಲು ಓಡಿ ಬಂದು ಅವಳ ಮೇಲೆ ಸರಿದು ಅವಳ ದೇಹವನ್ನು ಅನೇಕ ತುಂಡುಗಳನ್ನಾಗಿ ಮಾಡಿತು. ರೈಲಿನ ಅವಸರವೇ ವಿಜಯಗೊಂಡಿತು!

ಲಂಡನ್

ಹೆನ್ರಿ ವಾಟ್ಸನ್ ಎಂಬವನು ಎರಡು ವರ್ಷ ಪ್ರಾಯದವನಾಗುವಾಗಲೇ ಅವನ ಕಣ್ಣಿನ ಕಾರ್ನಿಯಾವು ಹಾಳಾಗಿ ಅವನು ಕುರುಡನಾದನು. ಈಗ ಅವನಿಗೆ ೨೯ ವರ್ಷ ಪ್ರಾಯ. ಅಸಾಧ್ಯನೆಂದು ಕಂಡುಬಂದ ಈ ಕುರುಡನ ಕಾರ್ನಿಯಾಗಳನ್ನು ಇನ್ನೊಬ್ಬ ಕುರುಡನ ಕಾರ್ನಿಯಾಗಳಿಂದ ಸರಿಪಡಿಸಿ ಡಿ. ಟ್ಯೂಡರ್ ಥೋಮಸ್ ಎಂಬವರು ಶಸ್ತ್ರಕ್ರಿಯೆ ನಡೆಸಿದರು. ಈಗ ವಾಟ್ಸನನು ಕಣ್ಣುಗಳಿರುವ ಪುಣ್ಯಾತ್ಮನಾಗಿರುತ್ತಾನೆ. ಸರ್ ಡ್ಯೂಕ್ ಎಲ್ಡರ್ ಮೊದಲಾದ ವೈದ್ಯರು ಪರೀಕ್ಷೆಮಾಡಿ ಸ್ವಸ್ಥತೆಯನ್ನು ಕಂಡು ಆನಂದಭರಿತರಾದರು.

ಅಮರಾವತಿ

ಅಮರಾವತಿಯಲ್ಲಿ ೧೫,೦೦೦ ರೂಪಾಯಿಗಳ ಗಾಂಧಿನೋಟುಗಳನ್ನು ಕಳವು ಮಾಡಿದ ಪಿರೋಜ ಮಹಾರ್ ಎಂಬವನನ್ನು ವಿಚಾರಿಸಿ ೧೩ ಛಡಿಗಳಿಗೆ ಗುರಿಪಡಿಸಿದರು. ಕಟ್ಟಕಡೆಯ ವಕೀಲರು "ಗಾಂಧಿನೋಟಿಗೆ ಸರಕಾರದ ದೃಷ್ಟಿಯಿಂದ ಬೆಲೆಯಿದೆಯೋ? ಇಲ್ಲವಾದರೆ ಅಪರಾಧಿಕನೆಂಬವನನ್ನು ಏಕೆ ಬಿಡಬಾರದು?" ಎಂದು ನ್ಯಾಯ ತರ್ಕಿಸಿದರು. ಅಮರಾವತಿಯ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರು ಕೊಟ್ಟ ಈ ಶಿಕ್ಷೆಯನ್ನು ಏಕೆ ರದ್ದುಪಡಿಸಬಾರದೆಂದು ತನಗೆ ತಿಳಿಸಬೇಕೆಂದು ಸಮಿಾನರರ ಕಾಗದ.

ನ್ಯೂ ಡಿಲ್ಲಿ

೧೯೩೩—೩೪ರಲ್ಲಿ ಸರಕಾರೀ ನೌಕರರ ಸಂಬಳದಲ್ಲಾದ ಕೇಕಡಾ ೫ರಷ್ಟು ಕಡಿತವನ್ನು ೩೧ನೇ ಮಾರ್ಚ ೧೯೩೫ರ ಸಂಬಳದ ವರೆಗೂ ಸರಕಾರವು ಮುಂದುವರಿಸಿದೆ. ಸರ್. ಜೋಸೆಫ್ ಭೋರರು ಈ ಕುರಿತು ಸೆಕ್ರೆಟರಿ ಒಫ್ ಸ್ಟೇಟ್ ಫೋರ್ ಇಂಡಿಯಾ ಅವರೊಡನೆ ವಿಚಾರಿಸಿ ನಿರ್ಧರಿಸಿರುವರು. ಆರ್ಥಿಕ ಸ್ಥಿತಿಯು ಸುಧಾರಿಸುವುದರ ಪ್ರಥಮವಾಗಿ ಈ ಕಡಿತವನ್ನು ತೊಡೆದುಹಾಕುವರಾಗಿ ಆಶ್ವಾಸನೆ ದೊರೆತಿದೆ.

ಮದುರೆ

ಕಳೆದ ವಾರ ಸರಕಾರೀ ಆಸ್ಪತ್ರೆಗೆ ಒಬ್ಬ ಹುಚ್ಚನು ಹೋದನು. ಆಸ್ಪತ್ರೆಯವರು ಅವನನ್ನು ವಿಚಾರಿಸುವಾಗ ಅವನು ಹೆದರಿ ಓಡಿದನು. ಜನರು ಹಿಡಿಯ ಓಡಿದರು. ಅವನು ಒಂದು ದೊಡ್ಡ ಮರವನ್ನು ಹತ್ತಿ ಅದರ ಮೇಲೆ ಎರಡು ತಾಸುಗಳ ತನಕ ಕುಳಿತನು. ಗೆಲ್ಲುಗೆಲ್ಲುಗಳ ಮೇಲೆ ಹಾರಿದನು. ಪೋಲೀಸರು ಬಂದು ಕೆಳಗಿಳಿಯುವಾಗ ಅವನು ಇನ್ನೊಂದು ಗೆಲ್ಲನ್ನು ಹಿಡಿಯಲು ಹಾರಿ, ಬಿದ್ದನು. ಆಸ್ಪತ್ರೆಯಲ್ಲಿ ಮಲಗಿಸಿದಾಗ ಕೂಡಲೇ ಪರಲೋಕಯಾತ್ರೆ ಮಾಡಿದನು.

ಲಾಹೋರ

೧೯೩೦ರಲ್ಲಿ ಮೂವರು ಕೊಂಗ್ರೆಸ್‌ವಾಲರನ್ನು ಲಾಹೋರಿನ ಲೋವರ್ ಕೋರ್ಟಿನವರು ಸ್ಪೆಶಲ್ ಪವರ್ಸ್ ಎಕ್ಟ್ ಪ್ರಕಾರ ಕೈದು ಮಾಡಿ ರಿಮಾಂಡಿನಲ್ಲಿಟ್ಟಿದ್ದರು. ಕನ್ನಿಷ್ಠ ಸ್ಪೆಶಲ್ ಪವರ್ಸ್ ಎಕ್ಟ್ ಕರಗಿ ಹೋಯಿತು. ಅದರ ಬದಲಿಗೆ ಕ್ರಿಮಿನಲ್ ಲೋ ಎಮೆಂಡ್‌ಮೆಂಟ್ ಏಕ್ಟ್ ಹೊರಟಾಯಿತು. ಈ ಎರಡನೆ ಶಾಸನದ ಮೇಲೆ ಲೋವರ್ ಕೋರ್ಟು, ಕೈದಿಗಳನ್ನು ವಿವಿಧ ಶಿಕ್ಷೆಗೆ ಗುರಿಪಡಿಸಿತು. ಮೊದಲಿನ ಏಕ್ಟ್ ಪ್ರಕಾರ ಕೈದಾದವರನ್ನು ಎರಡನೆ ಏಕ್ಟ್ ಪ್ರಕಾರ ಶಿಕ್ಷೆಗೆ ಗುರಿಪಡಿಸಕೂಡದೆಂದು ಅಪ್ಪೀಲಾಯಿತು—ಅದು ಬಿದ್ದುಹೋಯಿತು. ಹೈಕೋರ್ಟಿನವರು ಮೂವರನ್ನು ಬಿಟ್ಟುಬಿಟ್ಟರು.

ಅಮೇರಿಕ

ಮನುಷ್ಯನು ಭೂಮಿಗೆ ಬಂದು ಎಷ್ಟು ವರ್ಷಗಳಾದುವೆಂದು ಇಂಗ್ಲೆಂಡಿನ ಪ್ರಸಿದ್ಧ ಶಾಸ್ತ್ರಜ್ಞರಾದ ಸರ್. ಆರ್ಥರ್ ಸ್ಮಿತ್ ವುಡ್ ವಾರ್ಡ ಎಂಬವರು ಅಮೇರಿಕ ವಾಶಿಂಗ್ಟನ್ ಭೂಶಾಸ್ತ್ರಗಳ ಪರಿಷತ್ತಿನಲ್ಲಿ ಭಾಷಣಮಾಡುತ್ತಾ—"ಮನುಷ್ಯನು ಭೂಮಿಯ ಮೇಲೆ ಒಂದು ಎರಡು ಕೋಟಿ ವರ್ಷಗಳಾಗಿರಬೇಕು. ಯೂರೋಪಿನಲ್ಲಿಯೇ ವಿಸ್ತಾರ ಖಂಡವಾಗಲೀ ಮನುಷ್ಯನ ಆದ್ಯ ಭೂಮಿಯೆಂಬುದು ತಪ್ಪು. ಆಫ್ರಿಕ ಖಂಡವೇ ಮನುಷ್ಯನ ಆದ್ಯಭೂಮಿಯಾಗಿದೆ" ಎಂದಿರುವರು. ಮನುಷ್ಯನು ಮೊದಲು ಆಫ್ರಿಕದ ಗೋರಿಲ್ಲದ ಹಾಗೆಯೇ ಇದ್ದನೆಂಬುದು ವಿಕಾಸಂಶಿಕ ಹೂರಣ.

ನೋಟೀಸು.

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

O. P. No. 10/34.

ಕುಟ್ಟಣ್ಣ ಯಾನೆ ಶ್ರೀನಿವಾಸ ಭಟ್ಟ—ಅರ್ಜಿದಾರ.

ಮತ್ತು

ಲಕ್ಷ್ಮೀನಾರಾಯಣ ಆಚಾರ್ಯ—ಎದ್ರಿ.

ಅರ್ಜಿದಾರನ ತಂದೆ ವ ಎದ್ರಿಯ ಅಜ್ಜ ಈಗ ಮೃತಪಟ್ಟಿರುವ ಉಡುಪಿ ತಾಲೂಕು ಉದ್ಯಾವರ ಕಸಬಾ ಗ್ರಾಮದಲ್ಲಿದ್ದ ಉದ್ಯಾವರ ದಾಸಭಟ್ಟರು ತಾ. 22-2-'83ರಲ್ಲಿ ಅರ್ಜಿದಾರನ ಹೆಸರಿಗೆ ಬರೆದಿಟ್ಟ ರಿಜಿಸ್ಟ್ರಿಸಿರಾ ವಿಲ್‌ನಾಮೆಯ ಮೇರೆಗೆ, ಹೊರಬರದ ವಸೂಲು ಕುರಿತು, ತನಗೆ ವಾರೀಸು ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾರನು ಕೊಟ್ಟ ಮೇಲ್ಕಂಡ ಅರ್ಜಿಯು ತಾ. 21-2-34ಕ್ಕೆ ತನಿಖೆಗೆ ಇಟ್ಟಿರುವುದರಿಂದ, ಆ ಕುರಿತು ಆಕ್ಷೇಪವುಳ್ಳವರು, ಈ ಕೋರ್ಟು ಮುಂದೆ ಸದರಿ ದಿವಸ ಹಗಲು ಘಂಟೆ 11ಕ್ಕೆ ಹಾಜರಾಗಿ ತರಬಹುದಾದ ಆಕ್ಷೇಪಗಳನ್ನು ಜಾಹೀರು ಮಾಡಿಕೊಳ್ಳಬೇಕಾಗಿ ಸರ್ವ ಜನರಿಗೆ ಈ ಮೂಲಕ ತಿಳಿಸೋಣವಾಗುತ್ತದೆ.

Udipi, 7—2—1934.

K. Vittal Nayak,
Vakil for Petitioner.

IN THE COURT OF THE DT. MUNSIFF OF UDIPI

O. S. NO. 411/33.

Peppin Carvalho Bai—Plaintiff.

and

Evelyn Louis,& others—Defendants.

To, 3rd Defendant Pjad Louis, and 4th Defendant Madthin Louis.

Take notice that the above suit filed by plaintiff against you and others for Rs. 866-0-6, being arrears of Mulageni rent and the principal and interest due upon a mortgage bond dated 10-4-30 executed by your late father Juvaum Salvadore Louis, stands posted to 22-2-1934 for hearing in the above Court. If you fail to appear before the said Court either in person or Pleader on the said date the suit will be proceeded with exparte against you.

Udipi, 7—2—'34.

G. C. Rego,
Pleader for Plaintiff.

IN THE COURT OF THE DT. MUNSIFF OF UDIPI

S. C. No. 811/1933.

Tonse Vamana Kini & other—Plaintiffs.

and

Tandel Angara Marakala & 2 others—Defendants.

To, 2nd defendant Uppoor Mahalinga Marakala & 3rd defendant Uggelbettu Chandu Marakala.

Take notice that the above suit filed by the plaintiffs against you and another on dealings for Rs. 188-6-0 stands posted to 16-2-1934 for hearing in the said Court. If you fail to appear before the said Court either in person or pleader on the said date the suit will be proceeded with exparte against you.

Udipi, 7-2-1934.

G. C. Rego,
Pleader for Plffs.

10	ಶನಿ	[illegible]	[illegible]	ಉತ್ತರಾ	[illegible]	[illegible]	7.	6.25
11	ರವಿ	[illegible]	[illegible]	ಹಸ್ತ	[illegible]	[illegible]	7	6.25
12	ಸೋಮ	[illegible]	[illegible]	ಚಿತ್ರಾ	[illegible]	[illegible]	7	6 26
13	ಮಂಗಳ	[illegible]	[illegible]	ಸ್ವಾತಿ	[illegible]	[illegible]	7.	6 26
14	ಬುಧ	●	[illegible]	ವಿಶಾಖಾ	[illegible]	[illegible]	7.	6 27
15	ಗುರು	[illegible]	[illegible]	ಅನುರಾಧ	[illegible]	[illegible]	7	6.27
16	ಶುಕ್ರ	[illegible]	[illegible]	ಜ್ಯೇಷ್ಠ.	[illegible]	[illegible]	7	6 27

ಮಂಗಳೂರಿನ ವಾಯುಸ್ಥಿತಿ.

Date ತಾರೀಕು	Temperature ಉಷ್ಣ (ಕಾವು) Maximum		Minimum		Rainfall. ಮಳೆ ದಿನದ ಮಳೆ	ಜನವರಿ ಮಳೆ.
25	93—	2	79—	4	—	—
26	90—	4	73—	2	0—06	—
27	88—	6	70—	7	—	—
28	92—	3	78—	4	—	—
29	90—	1	68—	9	—	—
30	87—	2	70—	1	—	—
31	90—	9	78—	0	0—32	167—61

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಕಂಟು ರೂ.	ಆ	ವರೆಗೆ ರೂ.	ಆ
ಹೊಸ ರಾಶಿ ಅಕ್ಕಿ	3—	6	3—	12
ಹೊಸ ಮುಸ್ತಿ	4—	4	4	9
ಹೊಸ ಗುಡ್ಡು	3—	12	4—	2
ಊರ ಅದ್ವಲ್ ಬೆಳ್ತಿಗೆ	4	4	5—	4
ರಂಗೂನು ಬೆಳ್ತಿಗೆ ಗೋಣಿ ಗಳ್ಳೆ	5—	4	6—	0
ಎಲ್ಲೂರು ಬೆಳ್ತಿಗೆ ಮುಡಿ ಗಳ್ಳೆ	9—	4	3—	[illegible]
ಗೋದಿ ಗೋಣಿ ಗಳ್ಳೆ	1[illegible]—	0	12—	8
ತೊಗರಿ ಗೋಣಿ ಗಳ್ಳೆ	9—	0	10—	8
ಹುರುಳಿ ಗೋಣಿ ಗಳ್ಳೆ	6—	0	6—	8
ಕಡಲೆ ಗೋಣಿ ಗಳ್ಳೆ	9—	8	12—	8
ತೊಗರಿಬೇಳೆ ಗೋಣಿ ಗಳ್ಳೆ	10—	0	16—	0
ಉದ್ದು ಗೋಣಿ ಗಳ್ಳೆ	7—	0		—10
ಹೆಸರು ಗೋಣಿ ಗಳ್ಳೆ	8—	0	9—	0
ಊರುಬೆಲ್ಲ ಖಂಡಿ ಗಳ್ಳೆ	32—	0	37—	8
ಉಪ್ಪು ಗೋಣಿ ಗಳ್ಳೆ	4—	14	5—	4
ಕೊಬ್ರಿ ಖಂಡಿ ಗಳ್ಳೆ	40—	0	45—	0
ಕೊಬ್ರಿ ಒಂದಿ ಖಂಡಿ ಗಳ್ಳೆ	17—	8	18—	8
ಎಳ್ಳಿಂಡಿ ಖಂಡಿ ಗಳ್ಳೆ	22—	8	23—	12
ಕೊಬ್ರಿ ಎಣ್ಣೆ ಮಣ ಗಳ್ಳೆ	3—	1	4—	2
ಎಳ್ಳೆಣ್ಣೆ ಮಣ ಗಳ್ಳೆ	5—	0	6—	0
ಚಿಮಿಣಿಎಣ್ಣೆ ಪೆಟ್ಟಿಗೆ ಗಳ್ಳೆ	6—	8	8—	
ದೋರಿನ ಸಕ್ಕರೆ ಮಣ ಗಳ್ಳೆ	3—	11	3—	12
ಹೊಸ ಮೆಣಸು	8—	10	9—	10
ಸಾಸಿವೆ ಮುಡಿ ಗಳ್ಳೆ	4—	8	4—	12
ಕಾಳುಮೆಣಸು ಖಂಡಿ ಗಳ್ಳೆ	130—	0	135—	0
ಮೆಂತ್ಯೆ ಮಣ ಗಳ್ಳೆ	20—	0	24—	0
ಗೇರುಬೀಜ ಮುಡಿ ಗಳ್ಳೆ	2—	4	2—	8
ಹತ್ತಿಬೀಜ ಖಂಡಿ ಗಳ್ಳೆ	42—	0	44—	0
ತಾಂಬ್ರ ತಗಡು ಮಣ ಗಳ್ಳೆ	10—	0	10—	2
ತಾಂಬ್ರ ಪಾತ್ರೆಗಳು ಮಣ ಗಳ್ಳೆ	13—	0	14—	8
ಚಿಲ್ಲರೆ ಸೇರು ಗಳ್ಳೆ	14—	12	15—	0
[illegible] ತಗಡು ಮಣ ಗಳ್ಳೆ	9—	0	9—	8
[illegible] ಗಳ್ಳೆ	20—	2	20—	10
[illegible] ಖಂಡಿ ಗಳ್ಳೆ	25—	8	160—	0
ನೇಟಿವ್ ಕಾಫಿ ಖಂಡಿ ಗಳ್ಳೆ	180—	0	205—	0
ಪ್ಲಾಂಟೇಶನ್ ಕಾಫಿ ಖಂಡಿ ಗಳ್ಳೆ	270—	0	275—	0
ಹಳೆ ಅಡಕೆ	115—	0	135—	0
ಹೊಸ್ಸ ಅಡಕೆ	75—	0	100—	0

THE CANARA PUBLIC CONVEYANCE CO., LTD, MANGALORE.
(Established 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪನಿ, ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯ ಕ್ಷೇತ್ರಗಳಿಗೆ ಹೋಗುವವು ಮೈಸೂರು, ಕೊಡಗು ಮತ್ತು ಉತ್ತರ ಕನ್ನಡಾಗಳ ಬಸ್ಸುಗಳೊಂದಿಗೆ ಕನೆಕ್ಷನ್ ಕೂಡಾ ಇರುವುದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ, ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ ನಾಲ್ಕು ಸಾರಿ ಉಡುಪಿ ಮಾರ್ಗವಾಗಿಯೂ, 4 ಸಾರಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲಪಿರಿ. ಒಂದೇ ಶಿಲೆಯಿಂದ ರಚಿತವಾಗಿ, 37 ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನಿಲಿಸಿರುವ, ಕಾರ್ಕಳ ಗೋಮಟೇಶ್ವರನ ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು 4 ಸಲ ಹೊರಟು ಎರಡೂವರೆ ತಾಸುಗಳ ಸಮಯದಲಿ ಕಾರ್ಕಳಕ್ಕೆ ತಲಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ, ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ತಲ್ಪಬಹುದು. 'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಬೆಳಿಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲಪುವಿರಿ, ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನ ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಪ್ರಾಚೀನ ಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಬೇಲೂರಿನ ಸೋಮನಾಥ ದೇವಾಲಯವನ್ನು ನೋಡಲು, ನೋಡಲಿಚ್ಛಿಸುವವರು, ಬೆಳಿಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದೂಸ್ಥಾನ, ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣ ಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ, ಮಂಗಳೂರಿನಿಂದ ಮಡಿಕೇರಿಗೆ 7 ಘಂಟೆಗಳೊಳಗೂ, ಕಡೂರಿಗೆ 12 ಘಂಟೆಗಳೊಳಗೂ, ಮೈಸೂರಿಗೆ 12 ಗಂಟೆಗಳೊಳಗೂ ಸಕಲೇಶಪುರಕ್ಕೆ 8 ಗಂಟೆಗಳೊಳಗೂ, ಹಾಸನಕ್ಕೆ 10 ಗಂಟೆಗಳೊಳಗೂ, ಚಿಕ್ಕಮಗಳೂರಿಗೆ 8 ಗಂಟೆಗಳೊಳಗೂ ಕೊಲ್ಲೂರಿಗೆ ಮತ್ತು ಗೋಕರ್ಣಕ್ಕೆ 1½ ದಿವಸದೊಳಗೂ ಶಿವಮೊಗ್ಗಕ್ಕೆ 12 ಗಂಟೆ ತಲಪಬಹುದು ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು

Secretary,
The Canara Public Conveyance Company Ltd Mangalore

Chikmagalur Public Conveyance Motor Service.

CHIKMAGALUR

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,

ಚಿಕ್ಕಮಗಳೂರು

ಮುಂಬಾಯಿಯಿಂದ – ಮಂಗಳೂರಿಗೆ
ಮಂಗಳೂರಿನಿಂದ – ಮುಂಬಾಯಿಗೆ.

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ

ಮಂಗಳೂರು–ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು – ಅನುಕೂಲ ಪ್ರಯಾಣ ಸೌಕರ್ಯಗಳು.

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ

ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ

ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ.

ಚಿಕ್ಕಮಗಳೂರಿನಿಂದ– ಶಿವಮೊಗ್ಗಕ್ಕೆ, ಬೇಲೂರಿಗೆ, ಕಡೂರಿಗೆ.
– ಮೂಡಗೆರೆಗೆ, ಸಕಲೇಶಪುರಕ್ಕೆ.
– ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
– ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ನಿರಾಯಾಸದ ಪ್ರಯಾಣ! ಉತ್ಸಾಹಕರ ಸೌಕರ್ಯ!

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

ಸಂಪಾದಕರ ಟಪ್ಪಾಲು ಪೆಟ್ಟಿಗೆ.

ಪತ್ರಿಕೆಯ ಅಭಿಪ್ರಾಯಗಳಿಗೆ ನಾವು ಬಾಧ್ಯಸ್ಥರಲ್ಲ. ಎಲ್ಲಾ [illegible] ಲೇಖನಗಳನ್ನು ಕಳುಹಿಸುವವರು [illegible] ಹೆಸರು ವಿಳಾಸಗಳನ್ನು [illegible] ಬರೆದಿರಬೇಕು. (ಸಂ. ಸ್ವ.)

ಡಿಸ್ಟ್ರಿಕ್ಟ್ ಬೋರ್ಡಿಗೆ ಸೆಕ್ರೆಟರಿ.

ಡಿಸ್ಟ್ರಿಕ್ಟ್ ಬೋರ್ಡಿನ "[illegible]" ಎಂಬ [illegible] ಸೆಕ್ರೆಟರಿ ಎಂಬ [illegible] ಡಿಸ್ಟ್ರಿಕ್ಟ್ ಬೋರ್ಡಿನ ಸಭೆಯು [illegible] ನ್ನು ಕರೆದಿದ್ದರು. [illegible]

[illegible]

ಮುಂದಿನ ಪ್ರೆಸಿಡೆಂಟರು [illegible] ಡಿಸ್ಟ್ರಿಕ್ಟ್ ಬೋರ್ಡಿನ ಸಭೆಯಲ್ಲಿ [illegible] ಸೆಕ್ರೆಟರಿ [illegible]

[illegible]

ಒಂದೇ ಒಂದು ಕಾರಣಕ್ಕೆ [illegible] ಇಲ್ಲದಿದ್ದರೆ [illegible] ಆದರೆ ಯಾವುದು? [illegible]

ಅಂಬಂಧವಾದ ಬಿ ಕೇಳಬೇಕಾದುದೇ? ಅದು ಸಾರ ಅಧಿಕಾರದ ಕಳೆದುಕೊಂಡನ್ನು [illegible] ಕೊಡಬಹುದೇ?

[illegible] ಗವರ್ನಮೆಂಟಿನವರು [illegible] ಹೇಳಬಹುದು [illegible] ಈಗ ಇರುವ **ಕಾನೂನು ಮೇರೆಗೆ ಗವರ್ನಮೆಂಟಿನವರಿಗೆ ಹಾಗೆ ಮಾಡಲು ಅಧಿಕಾರವಿಲ್ಲ.** ಎಂಬ್ಲಾಯಿ ಆಫೀಸರರನ್ನು ಗವರ್ನಮೆಂಟಿನವರು ನೇಮಿಸಲಿಲ್ಲವೇ ಎಂದು ವಾದಿಸಬಹುದು. ಅದರ ಹಾಗೆ ಮಾಡಲು ಅಕ್ಟಿನಲ್ಲಿ ಪ್ರತ್ಯೇಕ ಒಂದು ಪ್ರಕರಣವನ್ನು ಸೇರಿಸಲು ಸರಕಾರದವರು ನ್ಯಾಯವಿಧಾಯಕ ಸಭೆಯಲ್ಲಿ ತಂದ ಮಸೂದೆಗೆ ನಮ್ಮ ಪ್ರತಿನಿಧಿಗಳು ಒಪ್ಪಿದುದರಿಂದ ಸರಕಾರಕ್ಕೆ ಅಧಿಕಾರ ಬಂತು. ಹಾಗೆ, ನಾವೇ ಕೊಟ್ಟ ಅಧಿಕಾರ ಅದರ [illegible] ಈಗ ಲೋಕಲ್ ಬೋರ್ಡುಗಳನ್ನು ಅರಗಿಸುವರೆ ತಂದ [illegible] ಡಿ. ಬೋರ್ಡಿಗೆ ಒಬ್ಬ "ಎಕ್ಸಿಕ್ಯೂಟಿವ್ ಆಫೀಸರ"ನನ್ನು ನೇಮಿಸಬೇಕೆಂದು ಒತ್ತಾಯ ಮಾಡಲು ಗವರ್ನಮೆಂಟಿನವರಿಗೆ ಅಧಿಕಾರ ಕೊಟ್ಟಿದೆ. ಅದು ಕಾನೂನಿಗೆ ಆ ಆಫೀಸರರನ್ನು ನೇಮಿಸಬೇಕೆಂಬ [illegible] ಬರುತ್ತದೆ. ನೇಮಿಸಲೇ ಬೇಕು. ಅವರ ಅಧಿಕಾರಗಳನ್ನು ಕೂಡಾ ನಿರ್ಣಯಿಸುವುದು ಗವರ್ನಮೆಂಟಿನವರು. ಪ್ರೆಸಿಡೆಂಟರ ಅಧಿಕಾರದ ಅಧಿಕಾಂಶವು [illegible] ಆ ಆಫೀಸರರಿಗೆ ಹೋಗಲಿಕ್ಕಿದೆ. ಆ ಕಾಲಕ್ಕೆ "ಸೆಕ್ರೆಟರಿ" ಎಂಬುದು ಬರೇ [illegible] ಹೆಸರಾಗಿ ನಿಲ್ಲಲಿಕ್ಕಿದೆ. ಈಗ ಸೆಕ್ರೆಟರಿ ಎಂದು [illegible] ಆ ಅವಸ್ಥೆ ಸಾವು ನೋಡಲು ಹೇಗೆ ಸಹನವಾದೀತು?

ಆದುದರಿಂದ ಈಗ ನ್ಯಾಯವಿಧಾಯಕ ಸಭೆಯು ಮುಂದಿಟ್ಟ [illegible] ನೋಡಿ, ನಂತರ [illegible] ಸಂಪ್ರದಾಯವನ್ನು ಸಾಗಿಸುವುದು ಉಚಿತವೆಂದು ಕಾಣುತ್ತದೆ, ಆಗದೇ?

ಒಬ್ಬ ಡಿ. ಬೋ. ಮೆಂಬರ.

" ಮಠಗಳು. "

ಈ ಭಾರತ ವರ್ಷದಲ್ಲಿ ಸೂರ್ಯ ಚಂದ್ರಾದಿಗಳು ಇರುವ ವರೆಗೂ ಹಿಂದೂಧರ್ಮವು ಎಂದೆಂದಿಗೂ ಲೋಪವಾಗಲೇ ಬಾರದೆಂದು ಮತಸ್ಥಾಪನಾಚಾರ್ಯರಾದ ಶ್ರೀ ಆದಿ ಶಂಕರಾಚಾರ್ಯರು ಭಾರತ ವರ್ಷದಲ್ಲಿ ಎಂಟು ಮಠಗಳನ್ನು ಸ್ಥಾಪಿಸಿ ಅವುಗಳಿಗೆ ತಮ್ಮ ಶಿಷ್ಯರನ್ನು ತಮ್ಮ ಧರ್ಮಾಧಿಪತಿಗಳನ್ನಾಗಿ [illegible] ದೂರ ದೃಷ್ಟಿಯಾದ ಭಾರತೀಯರ ದೃಷ್ಟಿಗೆ [illegible] ಸರಿಯಷ್ಟೆ. ಈ ಮಠಗಳಲ್ಲೆಲ್ಲಾ ಶೃಂಗೇರಿ ಶ್ರೀಮಠವು ದೊಡ್ಡದು. ಈ ಮಠದಲ್ಲಿ ಧರ್ಮಕಾರ್ಯಗಳು ನಿರ್ವಿಘ್ನವಾಗಿ ನಡೆಯಲು ಅನೇಕ ಭಕ್ತಾದಿಗಳು [illegible] ಕೊಡುತ್ತಿರುವರು. ಈ ಮಠದ [illegible] ಉತ್ಪತ್ತಿಯು ಎಲ್ಲಾ [illegible] ಎರಡೂವರೆ ಲಕ್ಷ ರೂಪಾಯಿಗಳಿಗೆ [illegible]. ಶ್ರೀ ಜಗದ್ಗುರುಗಳವರು ನ್ಯಾಯವಾಗಿಯೂ ಈ ಜಹಗೀರಿಯ ಆದಾಯದ ಮೇಲ್ವಿಚಾರಣೆಯನ್ನು ನೋಡಿಕೊಳ್ಳಬೇಕಾದುದು. ಹೀಗೆ ಮಾಡುವುದರಿಂದ ತಪಸ್ಸಿಗೆ ತೊಂದರೆಯಾಗುವುದೆಂದು [illegible] ಗುರುಗಳವರು ಈ ಮಠದ ಸರ್ವಾಧಿಕಾರವನ್ನು [illegible] ಶ್ರೀ [illegible] ಕಿ. ಮೂರು ೪೬ ಸಂವತ್ಸರಗಳ ಹಿಂದೆ, [illegible] ಈ [illegible] ಮೇಲೆ ಹೇಳಿದ ಅಧಿಕಾರಕ್ಕೆ ಬಂದ ಮೇಲೆ ಈ ಜಹಗೀರಿಗಳು ಅನೇಕ ಬದಲಾವಣೆಗಳನ್ನು ಹೊಂದಿವೆ. ಪುರಾತನದಿಂದಲೂ ನಡೆಯುತ್ತಿದ್ದ ಧರ್ಮಕಾರ್ಯಗಳಲ್ಲಿ ಅರ್ಧ ಭಾಗವನ್ನು [illegible] ಮೂಲಕ ಉಳಿಯುವ ಹಣದಿಂದ ಅನೇಕರಿಗೆ ಮಾಸಾಶನಗಳನ್ನು ಕೊಟ್ಟು ಇವರ ಅನ್ಯಭೂಮಿಯಾದ [illegible] ಜನಗಳನ್ನು ಕರೆಸಿ ಕೆಲಸಕ್ಕೆ ನಿಯಮಿಸಿಕೊಂಡು ಇವರ ತಮ್ಮಂದಿರಾಗಿರುವ ಮುತ್ತುಸ್ವಾಮಿ [illegible] ಅರಮನೆಯಲ್ಲಿ ಧರ್ಮಾಧಿಕಾರಿಗಳಾಗಿರುವ ಮಿ। ಕೃಷ್ಣಶಾಸ್ತ್ರಿಗಳ ಮೂಲಕ "ಮಹಾಸ್ವಾಮಿಗಳವರು" [illegible]

[illegible]

ಗಳಿಗೆ [illegible] ಪ್ರಕಾಶನವಾದ ಜಗದ್ಗುರು ಸಂಸ್ಥಾನದ [illegible] ಮೂಲಕ ನಡೆಯುವಂತೆ ಅದನ್ನು ಜಾಗ್ರತೆಯಾಗಿ [illegible] ನಂಬಿರುತ್ತೇನೆ.

ಎಚ್. ಎಸ್. ಸುಬ್ಬರಾವ್.

ದಕ್ಷಿಣ ಕನ್ನಡ ಜಿಲ್ಲಾ ಬೋರ್ಡ್ ನೌಕರರ ಸಂಘ ಮತ್ತು ಜಿಲ್ಲಾ ಉಪಾಧ್ಯಾಯರ ಸಂಘದ ಸಭೆಗಳು.

ಸದ್ಯದಲ್ಲಿಯೇ ಜಾರಿಗೆ ಬರಲಿಕ್ಕಿರುವ ಶಾಲೆಗಳ ಎಮಾಲ್ಗಮೇಶನ್ ದ ಕನ್ಸಂಟ್ರೇಶನ್ ಸ್ಕೀಮಿನ ಕುರಿತು ಸೂಚನೆಗಳನ್ನೀಯುವುದಕ್ಕಾಗಿ ನಮ್ಮ ಮದ್ರಾಸು ವಿದ್ಯಾಂಗದ ಡಿಪ್ಯುಟಿ ಡೈರೆಕ್ಟರರಾದ ಮಾನ್ಯ ಡಿ. ಸದಾಶಿವ ರೆಡ್ಡಿಯವರು ತಾ. ೧೮-೩-೩೪ಕ್ಕೆ ಮಂಗಳೂರನ್ನು ಸಂದರ್ಶಿಸುವರು. ಈ ವಿಷಯದಲ್ಲಿ ನಮ್ಮ ಮನಸ್ಸುಗಳನ್ನು ತಿಳಿಸುವ ಬಗ್ಗೆ ತಾ. ೧೯-೩-೩೪ಕ್ಕೆ ರಾ। ಬೋಳಾರ ಶಿವರಾಯರ ಮುಂದಾಳುತನದಿಂದ ಮಾನ್ಯ ಡಿಪ್ಯುಟಿ ಡೈರೆಕ್ಟರರ ಸನ್ನಿಧಾನಕ್ಕೆ ಡೆಪ್ಯುಟೇಶನ್‌ಗಳು ಹೋಗ ಬೇಕೆಂತಲೂ, ಆ ಸಂಬಂಧ ತಾ. ೧೮-೩-೩೪ನೇ ಭಾನುವಾರ ಘಂಟೆ ೧೦ಕ್ಕೆ ಮಂಗಳೂರು ಬಾಸೆಲ್ ಮಿಶ್ಯನ್ ಮಂಡಳದ ಆಫೀಸಿನಲ್ಲಿ ಸದರಿ ಸಂಘಗಳ ಆಡಳಿತ ಮಂಡಳಿಯ ಸಭೆಗಳನ್ನು ಜರಗಿಸಬೇಕೆಂತಲೂ ನಿಶ್ಚಯಿಸಿಯದೆ. ಆದುದರಿಂದ ಈ ಸಭೆಗಳಿಗೆ ಸಂಬಂಧಪಟ್ಟ ಎಲ್ಲಾ ಮೆಂಬರರು ದಯ ಮಾಡಿ ತಪ್ಪದೆ ಹಾಜರಾಗುವುದಲ್ಲದೆ, ನಮ್ಮ ಸಹೋದ್ಯಾಧ್ಯಾ ಬಂಧುಗಳು ಈ ಸ್ಕೀಮಿನ ಕಾರಣದಿಂದ ಕಷ್ಟಗುಂಟಾಗಲಿಕ್ಕೆ [illegible] ಸದರಿ ಮೀಟಿಂಗಿನ ಮೊದಲೇ ನನಗೆ ತಿಳಿಸಬೇಕಾಗಿ ವಿನಂತಿಸಿಕೊಳ್ಳಲಾಗುತ್ತದೆ.

ಮಂಗಳೂರು, ಕುರುಕಾಲು ಗಣಪಯ್ಯ ಶೆಟ್ಟಿ.
೬-೩-೧೯೩೪. ಪ್ರೆಸಿಡೆಂಟ್.

ಮಹಾಪುರುಷರ ಉಚ್ಚವಿಚಾರ.

ಎಷ್ಟೋ ವಸ್ತುಗಳು ಸೃಷ್ಟಿಯಲ್ಲಿ ಹಿಡಿದಲ್ಪಡುತ್ತವೆ, ಪರಂತು ಅಷ್ಟರು ಅವುಗಳನ್ನು ಚಿಕ್ಕ ಕೊಳ್ಳುತ್ತಾರೆ. ಒಂದಾನೊಂದು ಕಾಲದಲ್ಲಿ ಅವುಗಳು ನವರತ್ನಗಳಂತಲೂ ಬೆಟ್ಟದ ಹೂಗಳಂತಲೂ ಬೆಳೆಯುತ್ತವೆ.

ಮಾನವ ಜೀವನವು ನಾವು ಎಣಿಸುವಷ್ಟು ಕೆಟ್ಟದ್ದಲ್ಲ. ಎಲ್ಲಾ ಪ್ರಾಣಿಗಳ ಜೀವನಕ್ಕಿಂತ ಮನುಷ್ಯ ಜೀವನವೇ ಶ್ರೇಷ್ಠವಾಗಿರುತ್ತದೆ.

ಧನ, ಕರಾರು, ದಸ್ತಾವೇಜುಗಳ ಆಧಾರದಿಂದ ನಿಜವಾದ ಶಾಂತಿಯು ಉಂಟಾಗಲಾರದು.

ಮಾನವನ ಹೃದಯವೇ ಶಾಂತಿಯ ಆವಾಸಸ್ಥಾನವಾಗಿರುತ್ತದೆ.

ತನ್ನ ಅಪರಾಧವನ್ನು ಸ್ವೀಕಾರ ಮಾಡುವುದರಿಂದ ಮನುಷ್ಯನು ಶ್ರೇಷ್ಠನಾಗುತ್ತಾನೆ. ಈ ಒಂದು ಗುಣವೇ ಮನುಷ್ಯನಲ್ಲಿ ಉತ್ತಮ ಗುಣಗಳ ವಿಕಾಸವನ್ನು ಬೆಳೆಸುತ್ತದೆ.

ಉತ್ತಮವಾದ ಭಾವನೆಗಳೇ ಸಾರ್ವಜನಿಕ ಜೀವನದ ಬುನಾದಿಯಾಗಿರುತ್ತದೆ.

ಪ್ರತಿಯೊಬ್ಬ ವ್ಯಕ್ತಿಯು ಪ್ರತಿಯೊಂದು ವಸ್ತುಗಳಲ್ಲಿ ಹೇಗೆ ತನ್ನ ಹೊಂದಿಕೆಯಿರುತ್ತದೆಯೋ, ಹಾಗೆಯೇ ಪ್ರತಿಯೊಬ್ಬ ಮನುಷ್ಯನಲ್ಲಿ ಒಂದಿಲ್ಲೊಂದು ಉತ್ತಮ ಗುಣವು ಇದ್ದೇ ಇರುತ್ತದೆ.

ಅದೂರದರ್ಶಿತೆಯಷ್ಟು ಭಯಂಕರ ರೋಗವು ಮತ್ತೊಂದಿಲ್ಲ, ಇದರಿಂದ ಮನುಷ್ಯನು ಮಹಾ ಗಂಡಾಂತರಕ್ಕೆ ಬೀಳುತ್ತಾನೆ.

ಆ ಮನುಷ್ಯನಿಗೆ ಬೇರೊಬ್ಬನದನ್ನು ತಿಳಿದುಕೊಳ್ಳುವುದಕ್ಕೆ ಅನುಭವವಿಲ್ಲದಾಗುವುದಿಲ್ಲ. ಆ ಪರಿಸ್ಥಿತಿಯಲ್ಲಿ (ಯಾವುದಾದರೊಂದು ಕಠಿಣ ಪರಿಸ್ಥಿತಿಯಲ್ಲಿ) ಒಬ್ಬ ಮನುಷ್ಯನು ಏನು ಮಾಡಬೇಕೆಂಬುದನ್ನು ತಿಳಿದುಕೊಳ್ಳುವುದೇ ನಿಜವಾದ ಅನುಭವವೆನ್ನಲ್ಪಡುತ್ತದೆ.

ಯಾವಾತನು ಪಕ್ಷಪಾತಪೂರ್ವಕವಾಗಿ ಕೆಲಸ ಮಾಡುತ್ತಾನೋ ಆಂತಹವನ ಜೀವನವು ಸುಖಕರ ನಾಟಕದಂತೆಯೂ, ಯಾವಾಗಲೂ ಪಶ್ಚಾತ್ತಾಪ ಮತ್ತು ಅವಿಚಾರದಿಂದಿರುವ ಮನುಷ್ಯನ ಜೀವನವು ದುಃಖಾಂತ್ಯ ನಾಟಕದಂತೆಯೂ ಇರುವುದು.

ಮನೆ ಮಾಡಿನಲ್ಲಿ ಕುಳಿತು ಒಂದು ಜೇನು ನೊಣದಿಂದ ಹೇಗೆ ಮಧುವು ಸಂಗ್ರಹವಾಗಲಾರದೋ, ಹಾಗೆಯೇ ಸಾಮಾಜಿಕ ಜೀವನದಲ್ಲಿರದ ಮನುಷ್ಯನಿಂದ ಯಾವ ಕಾರ್ಯವೂ ಆಗಲಾರದು.

ವಿನೋದ ಪ್ರಪಂಚ!!!

ಬೆಂಗಳೂರಿನ ಹಾಸ್ಯರಸಭರಿತ ಪತ್ರಿಕೆ!
ಓದಿದರೆ ಹೊಟ್ಟೆ ಹುಣ್ಣಾಗುತ್ತದೆ.
ಪ್ರತಿ ಪಕ್ಷಕ್ಕೊಂದು ಸಂಚಿಕೆ.
ವಾ. ಚಂದಾ ರೂ. ೧—೮—೦
ಮನಿ ಆರ್ಡರಿನ ಮೂಲಕ, ವಿ. ಪಿ. ಯಿಂದ ಅಲ್ಲ.
ಮಾದರಿಗಾಗಿ ಬರೆಯಿರಿ!

ಸಂಪಾದಕ,
ವಿನೋದ ಪ್ರಪಂಚ, ಬೆಂಗಳೂರು ಸಿಟಿ.
ದ. ಕನ್ನಡ ಏಜಂಟರು—ಪೋಪ್ಯುಲರ್ ಸ್ಟೋರ್ಸ್ ಮಂಗಳೂರು.

ನೋಟೀಸು

ಉಡುಪಿ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

S. C No. 689/1933.

ಶೀನಿವಾಸಾಚಾರ್ಯ—ವಾದಿ.

ಮತ್ತು

ಕರ್ನಿಕ ರಾಮಪ್ಪಯ್ಯ, ಶಂಕರನಾರಾಯಣಯ್ಯನವರ ಮಗ, ಉಡುಪಿ ತಾಲೂಕು ಮಟ್ಪಾಡಿ ಗ್ರಾಮದ ಬೀಡು—

ಪ್ರತಿವಾದಿ.

ಇವರೊಳಗೆ

ಸದ್ರಿ ಪ್ರತಿವಾದಿಗೆ—

ವಾದಿಯು ಪ್ರತಿವಾದಿಯ ಮೇಲೆ ಮಾಡಿದ ಸದ್ರಿ ವ್ಯಾಜ್ಯವು ತಾ. 2—8—1934ಕ್ಕೆ ಅಖೈರು ತನ್ಕಿಗೆ ಇಟ್ಟಿರುವುದರಿಂದ ಆಕ್ಷೇಪ ಇದ್ದಲ್ಲಿ ಆ ದಿವಸ 10 ಗಂಟೆ ವರೆಗೆ ಕೋರ್ಟಿನ ಮುಂದೆ ಹಾಜರಾಗಿ ಹ್ಯಾಜೀರು ಮಾಡಿಕೊಳ್ಳತಕ್ಕದ್ದು, ತಪ್ಪಿದರೆ ಸದರಿ ವ್ಯಾಜ್ಯವನ್ನು ಏಕಪಕ್ಷವಾಗಿ ತೀರ್ಮಾನಿಸಲಾದೀತು.

ಉಡುಪಿ } ಶೀನಿವಾಸಾಚಾರ್ಯ.
೧—೫—೩೪. } *Plaintiff*

ನೋಟೀಸು.

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

O. P. No. 9/1934

1. ಬಾಪು ಬಳ್ಳಾರಿ, 2. ಆದಮ ಬ್ಯಾರಿ, 3. ಪಾತ್ತುಮ್ಮ ಅರ್ಜಿದಾರರು.

ಮತ್ತು

ಹಸನಬ್ಬ ಬ್ಯಾರಿ—ರೆಸ್ಪಾಂಡೆಂಟ.

ಇವರೊಳಗೆ.

1, 2ನೇ ಅರ್ಜಿದಾರರ ತಂದೆ, ವ 3ನೇ ಅರ್ಜಿದಾರಳ ಗಂಡ ಮೃತಪಟ್ಟ ಸೇಖ್ ಬ್ಯಾರಿಗೆ ತಾ. 25-11-1930 ರಲ್ಲು ರೆಸ್ಪಾಂಡೆಂಟನು ಬರಕೊಟ್ಟ ಡಿ. ಪ್ರೋ. ನೋಟು ಪ್ರಕಾರ ಬರಬೇಕಾದ ಅಸ್ಲುಬಡ್ಡಿ ವಿವರ ವಸೂಲಿ ಬಗ್ಗೆ ಸಕ್ಸೆಶನ್ ಸರ್ಟಿಫಿಕೇಟು ಅಪೇಕ್ಷಿಸಿ ಅರ್ಜಿದಾರರು ಕೊಡಕೊಂಡ ಮೇಲ್ಕಂಡ ಒ. ಪಿ. ನಂಬ್ರ 9/1934ನೇ ಅರ್ಜಿಯು ತಾ. 24—2—34ಕ್ಕೆ ತನ್ಕಿಗೆ ಇಟ್ಟಿರುವುದರಿಂದ ಆ ಸಂಬಂಧ ಆಕ್ಷೇಪವುಳ್ಳವರು ಸದ್ರಿ ತಾರೀಕಿಗೆ ಕೋರ್ಟಿನಲ್ಲಿ ಮನವಿಮಾಡಿಕೊಳ್ಳಬೇಕೆಂತ ಈ ಮೂಲಕ ತಿಳಿಸಲಾಗುತ್ತದೆ.

ಕಾಸರಗೋಡು, } K. R. Dandillaya,
೫—೨—೩೪. } Vakil for Petitioners.

ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

ಕಣ್ಣನೂರು ಡಿ. ಮು ಕೋರ್ಟಿನ O. S. 62/1931.

ಈ ಕೋರ್ಟಿನಲ್ಲಿ. R. E. P. No. 1119/1933

ವಲಿಯಪೀಡಿಗಯಿಲ್ ಕುಂಞು ಪೋಕಯಿಲ್ ಅಬ್ದುಲ್ಲ ರಹಿಮಾನ ಹಾಜಿ—ಅರ್ಜಿದಾರ.

ಮತ್ತು

ಮೂಲ ಕೃತ್ತ ಅಬ್ದುಲ್ಲ ರಹಿಮಾನ ಕೂಡ-ರೆಸ್ಪಾಂಡೆಂಟರು

ಇವರೊಳಗೆ.

ಅರ್ಜಿದಾರರಿಗೆ ಬರಬೇಕಾದ ಐವಜಿನ ಕುರಿತು 1ನೇ ರೆಸ್ಪಾಂಡೆಂಟ ಮೂಲಕೃತ್ತ ಅಬ್ದುಲ್ಲ ರಹಿಮಾನ, 2ನೇ ಅಸ್ಸೈನರ, 3ನೇ ಅವರಲ್ಲ ಇವರ ಬಾಬ್ತು ಆಸ್ತಿಗಳನ್ನು ನಿಲಾಂ ಮಾಡಿಸುವುದರ ಬಗ್ಗೆ ಅರ್ಜಿದಾರನು ನಡಿಸಿದ ಸದ್ರಿ ಅಮ್ಲಜಾರಿ ಅರ್ಜಿ ವ್ಯವಹರಣೆಯು ತಾ. 20-2-1934ಕ್ಕೆ ತನ್ಕಿಗೆ ಇಟ್ಟಿರುತ್ತದೆ. ಆ ಸಂಬಂಧ ಆಕ್ಷೇಪಿಸುವ ರೆಸ್ಪಾಂಡೆಂಟರು ಸದ್ರಿ ತಾರೀಕಿನೊಳಗೆ ಕೋರ್ಟಿನ ಮುಂದೆ ಹಾಜರಾಗಿ ಹ್ಯಾಜೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗತಿ ಈ ಮೂಲಕ ತಿಳಿಸಲಾಗುತ್ತದೆ.

ಕಾಸರಗೋಡು, } K. R. Dandillaya,
೧—೨—೧೯೩೪ } Vakil for Petitioners.

ಶ್ರೀಮತಿ ಡಿ. ರಾಜರಾಜೇಶ್ವರಮ್ಮ

ಶಾರದಾ ವಿಲಾಸ, ದಿಗಪಹಂಡಿ, ಗಂಜಾಂ ಜಿಲ್ಲೆ.

ಅವರು ಬರೆಯುತ್ತಾರೆ:—

"ಏಳೆಂಟು ತಿಂಗಳ ವೇಳೆ ನನ್ನ ಸಹೋದರಿಯು ಅಸಹನೀಯ ನೋವನ್ನನುಭವಿಸುತ್ತಿದ್ದಳು. ಅವಳು ದಿನೇ ದಿನೇ ಕೃಶಳಾಗುತ್ತಿದ್ದಳು. ನಾವು ಅನೇಕ ಔಷಧಿಗಳನ್ನುಪಯೋಗಿಸಿದೆವು—ಫಲವಾಗಲಿಲ್ಲ. ಕಡೆಗೆ ನಿಮ್ಮ ಲೋಧ್ರದ ಖ್ಯಾತಿಯನ್ನು ಕೇಳಿದೆವು. ಎರಡು ಬಾಟ್ಲಿಗಳನ್ನು ತರಿಸಿ ಅವಳಿಗೆ ಕೊಟ್ಟೆವು. ಅವಳು ಆಶ್ಚರ್ಯಕರವಾಗಿ ಗುಣಹೊಂದಿರುವಳು. ಅಲ್ಲದೆ ಒಂದು ಹೆಣ್ಣು ಕೂಸೂ ಜನಿಸಿದೆ. ಈ ಸುವಾರ್ತೆಯನ್ನು ನಿಮಗೆ ಈ ಮೂಲಕ ತಿಳಿಸುವೆನು."

ಸ್ತ್ರೀಯರ ಎಲ್ಲಾ ರೋಗಗಳನ್ನೂ 'ಲೋಧ್ರ'ವು ಗುಣಪಡಿಸುತ್ತದೆ.

ಎಲ್ಲಾ ಕೆಮಿಸ್ಟರಲ್ಲಿಯೂ ದೊರೆಯುತ್ತದೆ.

ಕೇಸರಿ ಕುಟೀರಂ,

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್, ಮದರಾಸು,

Sole Agents for South Kanara

ಪೋಪ್ಯುಲರ್ ಸ್ಟೋರ್ಸ್,

ರಥಬೀದಿ ಮಂಗಳೂರು.

ಸ್ತ್ರೀ ಪುರುಷರ ಸಲುವಾಗಿ
ಶಕ್ತಿ ವ ಸ್ಫೂರ್ತಿ ಕೊಡುವಂತಹ

ಸುಮಧುರ
ಝಂಡು ದ್ರಾಕ್ಷಾಸವ
ಜರೂರು ಉಪಯೋಗಿಸಿರಿ.

ಸ್ತ್ರೀಯರ ಸಲುವಾಗಿ
ಆರೋಗ್ಯ ವ ಶಕ್ತಿವರ್ಧಕ.

ಪ್ರದರಾದಿ ರೋಗಗಳ ಮೇಲೆ
ರಾಮಬಾಣ ಉಪಾಯ.
ಝಂಡು ಅಶೋಕಾರಿಷ್ಟ
ಬೇಗನೇ ಉಪಯೋಗಿಸಿರಿ.

'ZANDU'

ಝಂಡು ಫಾರ್ಮಾಸ್ಯುಟಿಕಲ್ ವರ್ಕ್ಸ್ ಲಿ: ಮುಂಬ್ಯಾಗಳು

ಮದ್ರಾಸು ಸಂಸ್ಥಾನದ ಏಜಂಟ್:—ದಾಮೋದರ ಮತ್ತು ಕಂಪನಿ, 78 ಜೈನ ಬಜಾರ ರೋಡ್, ಮದ್ರಾಸು.
ಮೈಸೂರು ಪ್ರಾವಿನ್ಸ್ ಏಜಂಟ್:— ಬಿ. ಪೊಪಟ್ ಲಾಲ ಕಂಪನಿ, ೫೧ ಅರ್ಕಟ ಶ್ರೀನಿವಾಸಾಚಾರ ಸ್ಟ್ರೀಟ್.
ಮಂಗಳೂರು ಏಜಂಟ್:—ಶಾಹಾ ಕಂಪನಿ ಡಾಯ್ಮಂಡ್ ಬಿಲ್ಡಿಂಗ್, ಮಂಗಳೂರು.
ಧಾರವಾಡ ಏಜಂಟ್—ದಿ ಧಾರವಾಡ ಫಾರ್ಮಸಿ, ಧಾರವಾಡ.

ಬೇರೆ ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತದೆ.

ಆಯುರ್ವೇದ ಔಷಧಿಗಳ ಸೂಚೀಪತ್ರವನ್ನು ಮುಖ್ಯ ಏಜಂಟರಿಂದ ಪಡಕೊಳ್ಳಿರಿ.

ನಮ್ಮ ಸಲಹೆಯೇ ಪ್ರಾಧಾನ್ಯವಾದದ್ದೆಂದು ತಿಳಿಯಬೇಡಿ.

ಕಲ್ಲಿಕೋಟೆ ಆಶೋಕ ಆಸ್ಪತ್ರೆಯ ಚೀಫ್ ಮೆಡಿಕಲ್ ಆಫೀಸರರಾದ ಡಾ। ಪಿ. ಐ. ರಾಮನ್, ಎಂ. ಆರ್., ಸಿ. ಎಸ್. ಇವರು ಬರೆದಿರುವುದನ್ನು ಓದಿ ನೋಡಿ—"ನಾನು ನಿಮ್ಮ ಆಶ್ಚರ್ಯಕರವಾದ ಜೀವಾಮೃತಂ ಟಾನಿಕನ್ನು ನರಗಳಲ್ಲಿ ಉರಿತ ಇರಿತ ಹಸಿವು ಕಡಿಮೆಯಾಗಿರುವುದು, ತಲೆನೋವು ಕಡಿಮೆಯಾಗಿರುವುದು, ಇವು ಪ್ರಾಪ್ತವಾಗಿರುವ ಅನೇಕ ರೋಗಿಗಳಿಗೆ ಕೊಟ್ಟಿರುತ್ತೇನೆ. ಅವರ ಫಲಿತಾಂಶಗಳು ಬಹು ತೃಪ್ತಿಕರವಾಗಿದೆ. ಜೀವಾಮೃತವನ್ನು ದೇಹಶಕ್ತಿ ಕುಗ್ಗಿರುವ ಎಲ್ಲಾ ಸಂದರ್ಭಗಳಲ್ಲಿಯೂ ಸರ್ವೇ ಸಾಧಾರಣವಾಗಿ ಉಪಯೋಗಿಸಬಹುದೆಂದು ನಾನು ಮನಃಪೂರ್ವಕವಾಗಿ ಶಿಫಾರಸು ಮಾಡುತ್ತೇನೆ"

ಜೀವಾಮೃತವು

ನರಗಳಿಗೆ ಶಕ್ತಿ ಕೊಡುತ್ತದೆ. ವೀರ್ಯ ವೃದ್ಧಿಮಾಡುತ್ತದೆ. ಹಸಿವು ಹುಟ್ಟಿಸುತ್ತದೆ. ರಕ್ತ ವೃದ್ಧಿಮಾಡುತ್ತದೆ.

ಪಂಡಿತ
ಡಿ. ಗೋಪಾಲಾಚಾರ್ಲುರವರ
ಜೀವಾಮೃತವು

ಎಲ್ಲಾ ಔಷಧ ಮಾರುವವರಲ್ಲೂ, ಸ್ಟೋರುಗಳಲ್ಲೂ ದೊರೆಯುತ್ತದೆ. (ಸಂಪೂರ್ಣ ವಿವರಗಳಿಗೆ ಇವರಿಗೇ ಬರೆಯಿರಿ)
ಆಯುರ್ವೇದಾಶ್ರಮಂ, ಪೋ. ಬಾಕ್ಸು ನಂ. ೨೦೬, ಮದ್ರಾಸು.
ಸೋಲ್ ಏಜಂಟರು:— ಸಿಟಿ ಮೆಡಿಕಲ್ ಮತ್ತು ಜನರಲ್ ಏಜನ್ಸಿ, ಕಾಳಿ ಚಿತ್ರವೇಲ ಬೆಂಗಳೂರು. (ಉಡುಪಿ ಹೋಟೆಲ್ ಹತ್ತಿರ)
ದಕ್ಷಿಣ ಕನ್ನಡ ಏಜಂಟರು— ಪೋಪ್ಯುಲರ್ ಸ್ಟೋರ್ಸ್, ಮಂಗಳೂರು. P. No 104

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು **ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು.**

ಕಸ್ತೂರಿ ಮಿಶ್ರಿತ ದಶಮೂಲಾರಿಷ್ಟ ೧೬ ಔನ್ಸ್ ಬಾಟ್ಲಿ ೧ಕ್ಕೆ ರೂ. 1-8-0. ದ್ರಾಕ್ಷಾಸವ ೧೬ ಔನ್ಸ್ ಬಾಟ್ಲಿ 1ಕ್ಕೆ ರೂ 1 ಅಶ್ವಗಂಧಾರಿಷ್ಟ ೧೬ ಔನ್ಸ್ ಬಾಟ್ಲಿ ಒಂದಕ್ಕೆ ರೂ. 1-4-0. ಅಬಲಾಮೃತ ೧೬ ಔನ್ಸ್ ಬಾಟ್ಲಿ ೧ಕ್ಕೆ ರೂ 2. ಅಶೋಕಾರಿಷ್ಟ ೧೬ ಔನ್ಸ್ ಬಾಟ್ಲಿ ೧ಕ್ಕೆ ರೂ. 1-4-0, ಜವನಪ್ರಾಶಲೇಹ ೧ ರಾತಿಗೆ ರೂ. 2-8-0 ಅಧಯಾಮಲಕಿ ೧ ರಾತ್ಲಿಗೆ ರೂ. 2 ಚಂದ್ರನುಖ (ವಿಶೂಚಿಕೆಗೆ ರಾಮಬಾಣ) ಕಾಲು ಔನ್ಸಿಗೆ ರೂ 0-6-0. ದಂತಧಾವನ ಚೂರ್ಣ ತೊಲೆ ೧ಕ್ಕೆ 0-1-0. ಕ್ರಿಮಿಘಾತಿನಿ (ದದ್ರು ಕಜ್ಜಿಗೆ) ಡಬ್ಬಿ ೧ಕ್ಕೆ ರೂ 0-4-0 ಕೃಷ್ಮಾಂಡ ೧ ಔನ್ಸಿಗೆ ರೂ 0-6-0 ಚಿತ್ರಕ (ಮುಖ್ಯ ಗೃಹಣೀ ರೋಗಕ್ಕೆ ದಿವ್ಯೌಷಧ) ತೊಲೆ ೧ಕ್ಕೆ ರೂ. 0-8-0 ಮಹಾ ಚಿತ್ರಕ ತೊಲೆ ೧ಕ್ಕೆ ರೂ 1-0-0 ಪಿಂಡ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ ರೂ. 0-10-0 ಒಲಾಶ್ವಗಂಧಾದಿ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ 0-12-0 ಹಿಮಸಾಗರ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ ರೂ 1-8 0 ಪ.ಹ.ಚಂದನಾದಿ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ ರೂ. 1-0-0. ಶ್ರೀ ಗೋಪಾಲ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ ರೂ 3-8-0

ನಮ್ಮ ಔಷಧಗಳು ದೊರೆಯುವ ಸ್ಥಳ:— ಮಂಗಳೂರು—ರಾಘವೇಂದ್ರ, ರಂಗ ಪೈ ರಥಬೀದಿ, ಕೆನರಾ ಡಿಸ್ಪೆನ್ಸರಿ ಕೊಡಿಯಾಲಬೈಲ್ ಬೈಂದೂರು—ಕೆ. ಪುತ್ತು ಶಾನುಭಾಗ. ಗಂಗೊಳ್ಳಿ—ಡಿ. ಸುರೇಂದ್ರ ನಾಯ್ಕ ಕುಂದಾಪುರ—ಕೆ. ರಾಮ ಭಟ್ ಡಾಕ್ಟರ್ ಕೆ ಆರ್ ಕಾಮತ್. ಉಡುಪಿ—ಪಿ ಜನಾರ್ಧನ ನಾಯಕ್ ಎಂಡ್ ಕೊ., ಪೈ ಫಾರ್ಮಸಿ, ಆರ್. ಎಸ್ ಶೆಟ್ಟಿ, ರಥಬೀದಿ ಕಾರ್ಕಳ—ವಿ ಎ ಶೆಟ್ಟಿ ಕಾಪು—ಡಾಕ್ಟರ್ ಬಿ. ಕೆ. ದೇಶಲ ಡಿಸ್ಪೆನ್ಸರಿ ಒಟ್ಟಲ್—ವಾಮನ ನರಸಿಂಹ ನಾಯಕ್. ಬಾರ್ಕೂರು—ಡಿ. ಭಗವಂತ ಮಲ್ಯ, ಆರ್ ಪಿ ಔಷಧಾಲಯ, ಬ್ರಹ್ಮಾವರ ಕೆ ವೈಕುಂಠ ಪೈ ಎಂಡ್ ಸನ್ಸ್, ಕೆ ಶೇಷಗಿರಿ ನಾಗಪ್ಪ ಎಂಡ್ ಸನ್ಸ್, ಎಲ್ಲೆಲ್ಲಿಯೂ ಏಜಂಟರು ಬೇಕಾಗಿದ್ದಾರೆ

ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಬಹುದು

ನಾಯಕ್ ಬ್ರದರ್ಸ್, ಶ್ರೀಮದ್ಭುವನೇಂದ್ರ ಮಹೌಷಧಾಲಯ, ಪೋಸ್ಟ್ ಕಟಪಾಡಿ ದ. ಕ.

The Canara Industrial & Banking Syndicate Limited.,

Established in 1925. **Head Office:—Mukunda Nivas UDIPI**

Branches: Mangalore, Payyanur, Brahmavar, Kumta, Karwar, Hubli Honnavar, Bangalore & Cannanore

Authorised Capital Rs 5,00,000 Subscribed Capital Rs 1 06 300 Paid up Capital Rs 26 300 Issued Capital Rs 2 00 000

STATEMENT OF AFFAIRS OF THE SYNDICATE AS ON 30TH November 1933

Liabilities.			Assets		
Paid up Capital	Rs	26,300-0-0	Loans on Land mortgage	Rs	2 71,186—9—2
Reserve & other funds	"	20,250—0—0	Loans on Valuable Securities	,	2 29 690— 7—9
Deposits	"	10,64,121—4—10	Loans on Bills of Exchange Hundis and Promissory Notes		4 73 674— 4—0
Due to Bankers	"	1,19 606—0—6	Investment on Shares of other Companies	,	43 575— 0—0
			Investments on Government of Mysore Conversion Loan		50 000—0—0
			On Deposits with other Bankers	,	1 11 000— 0—0
Bills for Collection	"	29,283—1—3	Bills for collection (per contra)	"	29 283— 1—3
Sundries	"	1 19,281—3—11	Sundries	,	42 791—4—10
			Cash in hand & with Bankers	,	[illegible]
Total Rs		13,78 841 10-6		Total Rs	[illegible]

Long and Short term Loans on attractive Schemes are granted

ALL KINDS OF BANKING BUSINESS UNDERTAKEN

Udipi, 7-12-1933.

P. A. Pai Bros,
Managing Agents.

ಪ್ರಥಮ ಕನ್ನಡ ಮಾತಾಡುವ ಚಲಚಿತ್ರ!

ಮಿಸ್. ತ್ರಿಪುರಾಂಬ
ಮಿಸ್ ರಾಜಂ
ಮಿಸ್ ಲಕ್ಷ್ಮಿ

ಮಿಸ್ಟರ್ ಸುಬ್ಬಯ್ಯ ನಾಯಿಡು
ಮಿಸ್ಟರ್ ನಾಗೇಂದ್ರ ರಾವ್,
ಮಿಸ್ಟರ್ ವೈ. ವಿ. ರಾವ್
ಮಿಸ್ಟರ್ ಮೂರ್ತಿ

ಇವರುಗಳಿಂದ ನಟಿಸಲ್ಪಟ್ಟು

ಮಿಸ್ಟರ್ ವೈ. ವಿ. ರಾವ್, ಇವರಿಂದ ಡೈರೆಕ್ಟ್ ಮಾಡಲ್ಪಟ್ಟು

ಕರ್ಣಾಟಕ ಕವಿಕೇಸರಿ ಬೆಳ್ಳಾರೆ ನರಹರಿ ಶಾಸ್ತ್ರಿಗಳಿಂದ ಕಥೆಯು ರಚಿಸಲ್ಪಟ್ಟು

ಸೌತ್ ಇಂಡಿಯನ್ ಮುವಿಟೋನ್‌ರವರು ಕೊಲ್ಹಾಪುರದ ಛತ್ರಪತಿ ಸ್ಟುಡಿಯೋದಲ್ಲಿ ತಯಾರಿಸಲ್ಪಟ್ಟಿರುವ ಪ್ರಸಿದ್ಧ ಪುರಾಣ ಕಥೆ

'ಸತಿ ಸುಲೋಚನ'

ಎಂಬ ಚಿತ್ರವು ಕನ್ನಡ ಮಾತನಾಡುವ ಹಾಡುವ ರೂಪದಲ್ಲಿ ಪ್ರದರ್ಶಿಸಲ್ಪಡುತ್ತದೆ.

ಮಧುರ ಸಂಗೀತ! ಸ್ಪಷ್ಟವಾದ ಧ್ವನಿ! ಇಂಪಾದ ಶ್ರುತಿ!

ಮಂಗಳೂರಿನಲ್ಲಿ ಶೀಘ್ರದಲ್ಲೇ ಪ್ರದರ್ಶನ. ದಿ ಸೌತ್ ಇಂಡಿಯನ್ ಫಿಲ್ಮ್ ಸಪ್ಲೈ ಕಂಪೆನಿ ಬೆಂಗಳೂರು.

WANTED

Four Organisers to organise the work of the South Indian General Assurance Society, Ltd., in the following places noted below. Capable organisers can expect to have attractive and encouraging terms with sound footing for their future.

(1) South Canara, (2) Mysore, Hassan and Coorg, (3) Kadur, Shimoga, Chitaldroog and Tumkur. (4) Mangalore, Kolar.

For terms and other particulars please apply to

The Divisional Manager,
The South Indian General Assurance Co. Ltd.
64, 3rd Cross Road Srirampur Extn
Malleswaram Post, BANGALORE

OR

The Managing Agents,
The S. I. G. A. Co. Ltd.
55 Poonamallee High Road, Kilpauk, MADRAS.

ಡಾ. ಗೌತಮರಾವ್ ಕೇಶವ ಅಂಡ್ ಸನ್ಸ್

ಕೋ-ಓಪರೇಟಿವ್ ಸೊಸೈಟಿಗಳಿಗೆ

ಬೇಕಾದ ನಮೂನೆಯ ಎಲ್ಲಾ ವಿಧದ ಫಾರಂಗಳು, ರಿಜಿಸ್ಟರುಗಳು, ರಶೀದಿ ಪುಸ್ತಕಗಳು, ಮತ್ತು ಇತರ ಫಾರಂಗಳೂ ವಿಕ್ರಯಕ್ಕಿವೆ.

ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ರಥಬೀದಿ, ಮಂಗಳೂರು

ದ್ರಾಕ್ಷಾಮೃತ

2-6-33

ಶಿವಾಜಿ ಹಿಂದೂ ರೆಸ್ಟೋರೆಂಟ್

ಒಮ್ಮೆ ದಯಮಾಡಿಸಿ, ಪರೀಕ್ಷಿಸಿ ತೃಪ್ತಿ ಪಡೆಯಿರಿ.

ಎಚ್ಚರಿಕೆ / ವರ್ತಕರಿಗೆ [uncertain reading]

ಅಸಂಖ್ಯಾತರಾದ ನಮ್ಮ ಗಿರಾಕಿಗಳ ಕೇಳಿಕೆ ಮತ್ತು ಅನುಕೂಲತೆಗಳನ್ನು ಇದೇ ಮುಖ್ಯ ಉದ್ದೇಶವನ್ನಾಗಿಟ್ಟುಕೊಂಡು ... [illegible]

ಸ್ವದೇಶೀ

ಕಾರ್ಖಾನೆಗಳಲ್ಲಾದ ನೂಲು ಮತ್ತು ಕೈಮಗ್ಗದ ವಸ್ತ್ರ, ಹೊದಿಕೆಗಳೂ, ಬೆಡ್ ಶೀಟ್ ... [illegible]

ಎಲ್ಲವೂ ಯಾವಾಗಲೂ ವಿಕ್ರಯಕ್ಕಿವೆ.

ಶ್ರೀನಿವಾಸ ರಂಗಪೈ,
[ಕಾರ್ಬಾರ್ ಬಜಾರ್]
ರಥಬೀದಿ, ಮಂಗಳೂರು.

Srinivasa Ranga Pai,
Representatives for South Canara and Malabar.
For — A. & F. Harvey,
Managers Madura Mills Co., Ltd.

ನಿಮಗೆ ಭಕ್ತಿ, ಜ್ಞಾನಗಳು ಬೇಕೋ? ಹಾಗಾದರೆ ಶ್ರೀ ಭಾಗವತವನ್ನು ಓದಿರಿ.

ಕನ್ನಡ ಟೀಕಾತಾತ್ಪರ್ಯಾದಿ ಸಹಿತ

ಶ್ರೀ ಭಾಗವತ ಮಹಾಪುರಾಣ.

1ನೇಯ ಸಂಪುಟ (1-2ನೇ ಸ್ಕಂಧಗಳು) 3—4—0	7ನೇಯ ಸಂಪುಟ (ದಶಮ ಉತ್ತರ ಭಾಗ) 4—8—0
2 „ „ (3ನೇಯ ಸ್ಕಂಧ) 3—12—0	8 „ (11 12ನೆಯ ಸ್ಕಂಧಗಳು ಟೀಕೆ ಸಹಿತ) 4—8—0
3 „ (4 „) 3—8—0	ಶ್ರೀ ಭಾಗವತ ಪುರಾಣ ವಿಷಯ ಸೂಚಿ 0—8—0
4 „ (5-6ನೇಯ ಸ್ಕಂಧಗಳು) 4—0—0	ಕರ್ನಾಟಕ ಅಧ್ಯಾತ್ಮ ರಾಮಾಯಣ ನಾಟಕ 1—4—0
5 „ „ (7, 8, 9 ಸ್ಕಂಧಗಳು) 5—8—0	(ಇದೇ ಗ್ರಂಥಕರ್ತರಿಂದ ರಚಿಸಲ್ಪಟ್ಟಿದು)
6 „ „ (ದಶಮ ಪೂರ್ವಭಾಗ) 5—0—0	

ಈ ಬೆಲೆಗಳಿಗೆ ಕಮಿಷನು ಕೊಡಲು ಸಾಧ್ಯವಿಲ್ಲ. ಹೆಚ್ಚು ವಿಷಯಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ಆರ್. ಶ್ರೀಕಂಠ ಶಾಸ್ತ್ರಿ, ಭಾರತೀ ಭವನಂ, ಬಾಮಂಡಜಪೇಟೆ, ಬೆಂಗಳೂರು ಸಿಟಿ.

EDITED, PRINTED & PUBLISHED BY V. S. KUDVA AT THE SHARADA PRESS, MANGALORE.

...[illegible] – ವರ್ಷ ಒಂದಕ್ಕೆ ರೂಪಾಯಿ [illegible]-0-0 Registered No. M. [illegible] ಟಪಾಲು ಹಾಸಲು ಸೇರಿ ರೂಪಾಯಿ [illegible]-0

ಸ್ವದೇಶಾಭಿಮಾನಿ.

(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೭ರಲ್ಲಿ ಸ್ಥಾಪಿತವಾದುದು.)
ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರಕ್ಷ್ಯೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಶ್ವವ ಸುಡುತ ಬರುತಿರುವ ॥
ಗರಳಕವರಂಜಿದರೆ! ಸುಧೆಯನು ಮರೆತು ಕ್ಷುದ್ರರ ತೆರದಿ ಕುಳಿತರೆ । ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

(Oldest Kanarese Weekly in South Kanara)

ಪುಸ್ತಕ ೨೮. ಮಂಗಳೂರು, ತಾ ೧೬ನೇ ಶುಕ್ರವಾರ ಫೆಬ್ರವರಿ ೧೯೩೪ (16–2–'34) ಸಂಚಿಕೆ ೭.

THE CANARA BANKING CORPORATION, UDIPI, LTD.

(Incorporated in British India)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI, S K **Branches:—Goondapoor, Mangalore, Shimoga & Madras**
ಹೆಡ್ ಆಫೀಸು—ಉಡುಪಿ, ದಕ್ಷಿಣ ಕನ್ನಡ ಶಾಖೆ.—ಕುಂದಾಪುರ, ಮಂಗಳೂರು, ಶಿವಮೊಗ್ಗ ಮತ್ತು ಮದ್ರಾಸು

Authorised Capital Rs. 3,50,000 Paid up Capital Rs. 2,25,000-
ನಿಯಮಿತ ಮೂಲಧನ ರೂ 3,50,000- ಚಂದಾ ಹಾಕಲಿಕ್ಕೆ ಅಪ್ಪಿಸಿದ ವ ಎತ್ತಿದ ಮೂಲಧನ ರೂ. 2,25,000-

STATEMENT OF ASSETS & LIABILITIES AS ON 31ST JANUARY, 1934.

	CAPITAL AND LIABILITIES.			PROPERTY AND ASSETS	
1	Paid up Capital	Rs 2,25,000-0 0	1	Bank Premises Buildings, Furniture etc Rs	55 457 10 0
2	Reserve and other funds	„ 2,34,062 10 11	2	Investment on Gvt securities	„ 4 44 168 5 6
3	Deposits	22,56 659 4 10	3	Authorised Investments	„ 23 00 980-0 11
4	Due to Bankers	„ 82,579 7 4	4	Bills for collection	13 596 12 7
5	Sundries	„ 1 06227 11 5	5	Sundries	„ 49,501 13 8
6	Bills per contra	13,596-12 7	6	Cash on hand & with bankers	„ 45 521 4 5
	Total	29 19,225 15 1		Total	29,19 225 15 1

UDIPI 6–2–'34

N. ANANDA RAO
Manager,

(Regd.)

ಅಮೃತಾಂಜನ.

ಇದು ಚಿಟ್ಟು ಶಿರೋವೇದನೆ, ಕಣ್ಣುಕೊಡುವ ವಾತ, ಧಾರಿ ನೋವು, ವಿಶೇಷ ಉಳುಕು, ಅಸಹನೀಯ ಹಲ್ಲುನೋವು, ವಿಪರೀತ ಛಾಯು ಜಹು ಶೀತ, ಸಹಿಸಲಸದಳವಾದ ಚಳಿ, ಕೈಕಾಲು ಮರಗಟ್ಟುವುದು, ಉಂಟಾಗೊ ಮೊದಲಾದ ಎಲ್ಲಾ ತರದ ಬೇನೆಗಳನ್ನೂ ಅತೀ ತ್ವರೆಯಲ್ಲೇ ಗುಣ ಪಡಿಸುತ್ತದೆ. ಎಲ್ಲಲಿಯೂ ಮಾರಲ್ಪಡುತ್ತಿದೆ.

ರಿಂಗ್‌ವರ್ಮ್ ಮುಲಾಮು— ಇದು ರಿಂಗ್‌ವರ್ಮ್‌ನ್ನೂ ಕಜ್ಜಿಯನ್ನೂ ಇನ್ನಿತರ ಚರ್ಮರೋಗಗಳನ್ನೂ ಮೂರು ಸಲಮುಟ್ಟಿಸುವುದರೊಳಗೆ ಗುಣಪಡಿಸುತ್ತದೆ.

ಡಬ್ಬಿ 1ಕ್ಕೆ 6 ಆಣೆ ಡಜನಿಗೆ ರೂ. 3—8—0. ಅಂಚೆವೆಚ್ಚ ಪ್ರತ್ಯೇಕ.

ಅಮೃತಾಂಜನ ಡಿಪೋ.

ಮದರಾಸು ಮತ್ತು ಬೊಂಬಾಯಿ.

ಬೊಂಬಯಿ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

ಸ್ಥಾಪಿತವಾದುದು ಬೊಂಬಾಯಿ. 1908ರಲ್ಲಿ.

ಚೆಯರ್‌ಮನ್—ಸರ್ ಲಲೂಭಾಯ್ ಶ್ಯಾಮಲದಾಸ್, ಕೆಟಿ ಸಿ ಐ ಇ ಚ ಪಿ.

ಜೀವವಿಮೆಯ ಪದ್ಧತಿಯಲ್ಲಿ ಅತ್ಯುತ್ಕೃಷ್ಟವಾಗಿರುವ ಎಲ್ಲ ಸೌಕರ್ಯಗಳನ್ನೂ ಈ ಸಂಸ್ಥೆಯು ಒದಗಿಸಿ ಕೊಡುತ್ತದೆ. ಕಾಲೋಚಿತವಾದ ಆವಶ್ಯಕತೆಗಳಿಗೂಪ್ಪುವ ಸರ್ವೋತ್ತಮವಾದ ಯೋಜನೆಗಳು! ಸ್ತ್ರೀಯರ ಜೀವವಿಮೆಯನ್ನೂ ಸ್ವೀಕರಿಸಲಾಗುತ್ತದೆ.
ಸಂಯುಕ್ತ ಜೀವನ ವಿಮಾ ಪದ್ಧತಿಯು ಇದರದೊಂದು ವೈಶಿಷ್ಟವೇ!

ಏಜನ್ಸಿಯ ನಿಯಮಗಳು ಬಹಳ ಉದಾರ! ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ.— ಯೋಗ್ಯ ಗೃಹಸ್ಥರಿಗೆ ಅತ್ಯುತ್ತಮ ಸಂದರ್ಭ!

ಕೊಚ್ಚಿಕಾರ್ ಬ್ರದರ್ಸ್, ಮದ್ರಾಸು ಶಾಖೆಯ ಕಾರ್ಯದರ್ಶಿಗಳು. ಮತ್ತು
ಬೊಂಬಯಿ ನಗರಕ್ಕೂ, ನಗರದ ಆಸುಪಾಸಿಗೂ ಮುಖ್ಯ ಏಜೆಂಟರುಗಳು.

ಆಫೀಸುಗಳು:—

ಮದ್ರಾಸು.	ಬೆಂಗಳೂರು	ಮಂಗಳೂರು.	ಬೊಂಬಯಿ.	ಉಡುಪಿ.
ಪೋಸ್ಟ್ ಬಾಕ್ಸ್ ನಂಬ್ರ 337.	ವಿಶ್ವೇಶ್ವರಪುರಂ ಸರ್ಕಲ್	ಕಾರ್ಪೊರೇಶನ್ ಬಿಲ್ಡಿಂಗ್,	ಇಸ್ಮಾಯಿಲ್ ಬಿಲ್ಡಿಂಗ್.	ದಕ್ಷಿಣ ಇಂಡಿಯ.
ಮೌಂಟ್ ರೋಡ್.	ಬೆಂಗಳೂರು ಸಿಟಿ.	ಕಾರ್ ಸ್ಟ್ರೀಟ್	ಲಾಹರ್‌ಚಾಲ್.	

ಪ್ರತಿಯೊಬ್ಬ ತಾಯಿಯೂ ಮಗುವಿಗೆ ಎದೆ ಹಾಲು ಕೊಡಬಹುದು

ಪ್ರತಿಯೊಂದು ತಾಯಿಯೂ ತನ್ನ ಮಗುವಿಗೆ ಎದೆ ಹಾಲು ಕೊಡಬೇಕೆಂದು ಆಶಿಸುತ್ತಾಳೆ ಕಾರಣ, ಅದು ಅತ್ಯುತ್ತಮ ಆಹಾರ, ಆರೋಗ್ಯಕರವಾಗಿ ಬೆಳೆಯಬೇಕಾದರೆ ಅದಕ್ಕೆ ಎದೆ ಹಾಲು ಅವಶ್ಯ ಆದರೆ ಹೆಚ್ಚಿನ ತಾಯಂದಿರಿಗೆ ಇದನ್ನು ಕೊಡಲು ಶಕ್ತಿಯಿಲ್ಲ ಇದ್ದರೂ ಸಾಕಷ್ಟು ಹಾಲು ಕೊಡಲು ಸಾಧ್ಯವಾಗುವುದಿಲ್ಲ

ಮಗು ಹುಟ್ಟುವ ಮೊದಲೂ ನಂತರವೂ ಪ್ರತಿಯೊಬ್ಬ ತಾಯಿಯೂ ಬಿಡದೆ ಓವಲ್ಟಿನ್ ಸೇವಿಸಿದರೆ ಎದೆ ಹಾಲನ್ನು ಸುಲಭವಾಗಿ ಕೊಡಬಹುದು ಓವಲ್ಟಿನ್ ಹಾಲನ್ನು ಹೆಚ್ಚಿಸುತ್ತದೆ ತಾಯಿಗೆ ಶಕ್ತಿ ಅವಳ ಆರೋಗ್ಯವು ಸಹಜ ರೀತಿಯಿಂದಿರುವಂತೆ ಸಾಧಕವಾಗುತ್ತದೆ ಇದು ಅತೀ ಶ್ರೇಷ್ಠವೆಂದ ಆಹಾರ ಇದನ್ನು ಟೋನಿಕ್ ಆಹಾರಾಂಗಗಳಿಂದ ತಯಾರಿಸಲಾಗಿದೆ ಬೆಳೆದ ಬಾರ್ಲಿ, ದನದ ಕೆನೆ ಹಾಲು, ಸ್ವಿಶ್ವಲಾಗಿ ತಯಾರಿಸಲ್ಪಟ್ಟ ಕೋಳಿಮೊಟ್ಟೆಗಳು ಇದರ ಸಾರ

OVALTINE

ಜೊತೆ ಹಾಲು ಕೊಡಲು ಸಾಧಕವಾಗಿದೆ

ತಯಾರಿಯಲ್ಲಿ ಕರ ಸ್ಪರ್ಶವಾಗಿಲ್ಲ ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಸಿಗುತ್ತದೆ

ಏಜಂಟ್—ಜೇಮ್ಸ್ ರೈಟ್ 8 ಎ ರಿಪನ್ ಸ್ಟ್ರೀಟ್ ಕಲ್ಕತ್ತ ಮತ್ತು ಮದ್ರಾಸು ಮುಂಬಾಯಿಗಳಲ್ಲಿ

OV/126

ಕ್ಷಯಕ್ಷೀಣಾದಿಗಳಿಗೆ

ಚ್ಯವನಪ್ರಾಶಾನ ಲೇಹ.

ಪ್ರಸೂತಿ ರೋಗಾದಿಗೆ

ದಶಮೂಲಾರಿಷ್ಟ

(ಕಸ್ತೂರಿ ಮಿಶ್ರಣ)

ಸಮಸ್ತ ವಾತರೋಗಗಳಿಗೆ

ಮಹಾನಾರಾಯಣ ತೈಲ.

ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ,

ಡೊಂಗರಕೇರಿ ರಸ್ತೆ, ಮಂಗಳೂರು

ಸ್ವದೇಶಾಭಿಮಾನಿ

ಪತ್ರಿಕೆಯ ಚಂದಾದಾರರು ಪತ್ರವ್ಯವಹಾರಗಳಲ್ಲಿ ತಮ್ಮ ಚಂದಾ ನಂಬರುಗಳನ್ನು ನಮೂದಿಸಬೇಕು. ಅವುಗಳಿಲ್ಲದ ಪತ್ರಗಳಿಗೆ ಸರಿಯಾದ ನಿಗಾ ಸಿಗುವುದಿಲ್ಲ

ಮೆನೇಜರ್

ನೋಟೀಸು

ಉಡುಪಿ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

S C No 772/1933

ರಾವ ಚಂದ್ರಯ್ಯ—ಅಣ್ಣಯ್ಯ ಯಾನೆ ವೆಂಕಟ್ರವ ಣಯ್ಯನವರ ಮಗ, ಉಳಿಯಾಗೋಳಿ ಉಡುಪಿ ತಾಲೂಕು—ವಾದಿ

ಮತ್ತು

ಐ ವಾಸುದೇವ ರಾವ್, ಇನ್ನಂಜೆ ಕಂಬ್ಳಿ ಮನೆ ರಾಮಕೃಷ್ಣಯ್ಯನವರ ಮಗ—ಪ್ರತಿವಾದಿ.

ಪ್ರತಿವಾದಿಗೆ ಈ ಮೂಲಕ ತಿಳಿಸಲ್ಪಡುವುದೇನೆಂದರೆ— ಬೊಂಬಾಯಲ್ಲಿ ಪ್ರತಿವಾದಿಯು ಯು ಭೀಮರಾವ್ ರಿಗೆ ತಾರೀಕು 4—1—31ರಲ್ಲು ರೂ 56—13—6ಕ್ಕೆ ಬರಕೊಟ್ಟ ಪ್ರೋ ನೋಟನ್ನು ಭೀಮರಾಯರು ಕಾರೀಕು 28-8-88ರಲ್ಲು ವಾದಿಗೆ ಎಂಡಾರ್ಸ್ ಮಾಡಿದ ಮೇರೆಗೆ ಸದ್ರಿ ನೋಟಿನ ಬಾಬ್ತು ಬಹ ಅಸಲು ಬಡ್ಡಿ ಬಗ್ಗೆ, ವಾದಿ ಮೇಲ್ಕಂಡ ದಾವಾ ಮಾಡಿರುತ್ತಾನೆ ಸದ್ರಿ ದಾವೆಯು ತಾ 28-2-84ಕ್ಕೆ ತನ್ಸಿಗೆ ಇಟ್ಟಿರುತ್ತದೆ ತತ್ಸಂಬಂಧ ಉದಾಹರಣೆ ಇದ್ದಲ್ಲಿ ಸದ್ರಿ ದಿನ ಬೆಳಿಗ್ಗೆ 10 ಗಂಟೆಗೆ ಕೋರ್ಟು ಮುಂದೆ ಪ್ರತಿವಾದಿ ಸ್ವತಹ ವ ವಕೀಲರ ಮುಖಾಂತರ ಹಾಜರಾಗಿ ಜಾಹೀರು ಮಾಡಿಕೊಳ್ಳಬಹುದು ತಪ್ಪಿದರೆ ದಾವೆಯು ಪ್ರತಿವಾದಿಯ ಗೈರುಹಾಜರಿಯಲ್ಲಿ ತೀರ್ಮಾನಿಸಲ್ಪಡುವುದು.

ಉಡುಪಿ
೧೦—೩—೩೪.

P. N. Madhava Rao,
Pleader for Plaintiff

ಇದ್ದರೇನು?—ಇಲ್ಲದಿದ್ದರೇನು?

(ಪುರಂದರ ಪದ)

ಇದ್ದರೇನು?—ಇಲ್ಲದಿದ್ದರೇನು?
ಶುದ್ಧವಾದ ಕೃಪಣನಲ್ಲಿ
ಬದ್ಧವಾದ ಹಣದ ಗಂಟು,—ಇದ್ದರೇನು? ಇಲ್ಲದಿದ್ದರೇನು?
ಸಾಯುವಾಗ ಬಾಯಿಗೆಂದು
ಹಾಯು ಬಿಡಲು ಬರದ ಹಣವು
ಸಾಯುವಾಗ ಬರದು, ಕೇಳಿ—ಇದ್ದರೇನು? ಇಲ್ಲದಿದ್ದರೇನು?
ಕೊಡಿರಿ ಅನರೆ ಕೊಡದವನ್ನು
ಜಡನೆ ಸಾಯ್ವ ಜಿಪುಣ ಜಗಗೆ
ಬಿಡಿರಿ ಹಣದ ಲೋಭವನ್ನು,—ಇದ್ದರೇನು? ಇಲ್ಲದಿದ್ದರೇನು?

ಇದ್ದರೇನು?—ಇಲ್ಲದಿದ್ದರೇನು?—ಶುದ್ಧವಾದ ಲೋಭಿಯೊಳು ಬದ್ಧವಾದ ಹಣದ ರಾಶಿ? ಎಂಬುದು ಪುರಂದರದಾಸರ ಪ್ರಶ್ನೆ! ಅದೇ ರೀತಿ ಮೇಲಿನ ಪದವು ಸಾಯ್ಬನ ಪ್ರಶ್ನೆ!

ಬಿಹಾರಿನಲ್ಲಿ ಸತ್ತ ಸಾವಿರಗಟ್ಟಲೆ ಜನರ ಕುಟುಂಬದವರಿಗಾಗಿ, ಕಷ್ಟಪಟ್ಟವರಿಗಾಗಿ ಸಹಾಯ ಮಾಡಿರೆಂದು ೩೫ ದಿನಗಳಿಂದ ಬೊಬ್ಬೆಯಿದ್ದಿದೆ!—ಆದರೆ ನಮ್ಮ ಕಿವಿಯೊಳಗಿನ ಹತ್ತಿ ಕಳಗೆ ಹೋಗಲೇ ಇಲ್ಲ!

ನಾಟಕ, ಸಿನೇಮಾ, ಲೋಟರಿಗಳಿಗೆ ರೂಪಾಯಿ ರೂಪಾಯಿ ಸುಟ್ಟುಹಾಕುವ ನಮ್ಮ ದಕ್ಷಿಣ ಕನ್ನಡಿಗರು ಪೆಟ್ಟಿಗೆಯ ಬಾಗಿಲನ್ನು ಅಗಲವಾಗಿ ತೆರೆಯಲು ಹಿಂಜರಿಯುತ್ತಿರುವುದನ್ನು ಕಂಡು ಸಾಯ್ಬಗೆ ಪೆಯಿನ್‌ಫುಲ್ ಸರ್ಪ್ರೈಸ್!

ನಾಳೆದು ತಾ ೨೪ ೨೫ಕ್ಕೆ ಹರಿಜನ ಬಂಧುವು ದಕ್ಷಿಣ ಕನ್ನಡಕ್ಕೆ ಬರಲಿರುವನು ನಮ್ಮವರು ಎಷ್ಟೆಷ್ಟು ವಂತಿಗೆ ಕೊಡುವರೋ ದೇವರೇ ಬಲ್ಲ ಸೈಗಳ ಜಾತಿಯನ್ನು ಸರಗನಲ್ಲಿ ಕೊಂಡೊಯ್ದು ಯಾರಾದರೂ ಗಾಂಧಿಗೆ ಕೊಡಲಿ!

ಎಲ್ಲಾ ಕಡೆಗಳಿಗಿಂತಲೂ ಮಹಾತ್ಮಾ ಗಾಂಧಿಯವರಿಗೆ ಇಲ್ಲಿ ದೊರೆಯುವುದು ವೆಂಪ್ಲೂವರ್ ಹಣವೆಂದು ನನ್ನ ಊಹನೆ. ನಮ್ಮಲ್ಲಿ ಗಾಂಧಿಯು ಬರುವ ದಿನ ಹಣದ ಪಕೀಟನ್ನು ಮನೆಯಲ್ಲೇ ಬಿಟ್ಟು ಗಾಂಧಿಸಭೆಗೆ ಹೋಗಬೇಕೆಂದು ಈಗಲೇ ನಿರ್ಧರಿಸಿದ ದೂರದೃಷ್ಟಿಗಳೂ ಇರಬಹುದು! (ಹೀಗೆಂದೆನೆಂದು ಕೋಪಿಸಬೇಡಿ!)

ನಮ್ಮವರಿಗೆ ದಾನವೆಂದರೆ ಅರ್ಥವಾಗದು ದಾಸವೆಂದರೆ ದೀನಾ (ಕೊಂಕಣಿಯಲ್ಲಿ ಕೊಡುವುದಿಲ್ಲ) ಎಂದಂತೆ ಕೆಲವರಿಗೆ ಕೇಳುವುದೂ ಸಹಜವೇ!

ಗಾಂಧಿಗೆ ದೀನಾ ಎಂದು ಹೇಳುವವರೆಷ್ಟೆಂಬುದನ್ನೂ 'ದಾನ' ಎಂದು ಹೇಳುವವರೆಷ್ಟೆಂಬುದನ್ನೂ ಒಂದು ಖಾನೆಸುಮಾರಿ ತೆಗೆದು ತಿಳಿಯಬೇಕೆಂದು ನನ್ನ ಮಹವಿದೆ ನೋಡಬೇಕು!

ಅಯ್ಯಾ! ಜಾಗ್ರತೆ ಗಾಂಧಿ ಸಭೆಗೆ ಬರುವಾಗ ವಜ್ರದ ಓಂಟು ಭರಿಗಾರದ ರಿಸ್ಟ್‌ವಾಚ್ ಭಂಗಾರದ ಬಟನ್‌ಗಳನ್ನು ಧರಿಸಿಕೊಂಡು ಅವರೆದುರಿಗೆ ಬೀಳಬೇಡ! ನಿಮ್ಮ ಬಿದ್ದೀತು!—ನಾದು!!

ಸಭೆಗೆ ಹೋಗಲಿರುವ ಸ್ತ್ರೀಯರಿಗೆ ಸಾಯ್ಬನ ಸಲಹೆ ಏನೆಂದರೆ— ನೀವು ಸಭೆಗೆ ಹೋಗಿರಿ,—ಹೋಗುವಾಗ ಗಿಲಿಟ್ಟಿನ ಭಂಗಾರಗಳನ್ನಿಟ್ಟುಕೊಳ್ಳಿರಿ ಗಾಂಧಿ ನಿಮ್ಮೊಡನೆ ಭಂಗಾರ ಕೇಳಿದರೆ ಕೂಡಲೇ ಬಹಳ ಔದಾರ್ಯದಿಂದ ಅವಸರವಸರವಾಗಿ ನಿಮ್ಮ ಭಂಗಾರ ತೆಗೆದು ಕೊಡಿರಿ.

ನೀವು ಕೊಟ್ಟ ಭಂಗಾರಗಳು ಗಿಲಿಟಿನವೋ ಏನೆಂದು ಪರೀಕ್ಷಿಸುವವರು ಗಾಂಧಿಯ ಬಳಿ ಇಲ್ಲ! ಅಲ್ಲದೆ ಗಾಂಧಿಯು ಅವುಗಳನ್ನು ಕೂಡಲೇ ಒಂದು ವಾರ್! ಎರಡು ವಾರ್! ಮಾಡಿದೊಡನೆ ಅವುಗಳು ಬೇರೆಯವರಿಗೆ ಹೋಗುತ್ತವೆ! ನೀವು ಭಯಪಡಬೇಡಿರಿ!

ಗಿಲಿಟು ಭಂಗಾರಗಳು ಎಲ್ಲಿ ದೊರೆಯುತ್ತವೆಂದು ನಿಮಗೆ ಚಿಂತೆ ಇರಬಹುದು! ಅವುಗಳಿರುವ ಸ್ಥಳ ಹೇಳಕೊಡಬೇಕೆ? ಮಂಗಳೂರು ಮೈದಾನಿನ ಬಳಿ "ಡೋಂಗಿ ಬಜಾರ್" ಇದೆ! ಅಲ್ಲಿ ಕೆಲವರು ಮದ್ದಿನ ಲೆಕ್ಕರು ಕೊಡುತ್ತಾರೆ ಅಥವಾ ಕೃಷ್ಣಸಿನಿಮದ ಎದುರು, ಕಂಚಿ, ಹಿತ್ತಾಳೆ ಇಸ್ಪೀಟು ಮಂಡಗಳನ್ನು ಹಾಕಿ ಇಸ್ಪೀಟು ಆಡುತ್ತಾರೆ!—ಅವರ ಬಳಿ ಹೋಗಿ ಕೇಳಿದರೂ ಗಿಲಿಟು ಭಂಗಾರಗಳು ಸಿಗುತ್ತವೆ!

ನಿಮಗೆ ಹೋಗಲು ನಾಚಿಕೆಯಾಗುತ್ತದಾದರೆ ಕೆಲಸದ ಹುಡುಗರನ್ನಾದರೂ ಕಳುಹಿಸಿದರೆ ಆದೀತು! ಅಂತೂ ಇಂತೂ ಹೇಗೂ ಮಾಡಿ ಗಾಂಧಿಗೆ ಗಿಲಿಟುಭಂಗಾರಗಳನ್ನು ಕೊಟ್ಟು ಮಹಾ ಪುಣ್ಯ ಗಳಿಸಿಕೊಳ್ಳಲೇ ಬೇಕು! ತಿಂದಿರಲಿ

ಸ್ತ್ರೀಯರೆಲ್ಲ ಬನ್ನಿ ಕೇಳಿ ಸಾಯ್ಬ ಮಾತನೂ!।
ಧೈರ್ಯವಿಟ್ಟು ತನ್ನಿ ನೀವು ಗಿಲ್ಟು ಒಳೆಯನೂ।
ಅತ್ತ ಇತ್ತ ನೋಡಬೇಡಿ ಕೊಡಿರಿ ಗಾಂಧಿಗೆ।
ಮತ್ತು ಎದ್ದು ಒಡನೆ ಹೋಗಿ ನಿಮ್ಮ ದಾರಿಗೆ।
ಕೊಡಲುಬೇಡಿ ಗಾಂಧಿಗೊಂದು ಬಿಲುಬು ವೈಯನೂ।
ಹಿಡಿದುಕೊಳ್ಳಿ ಗಟ್ಟಿಯಾಗಿ ನಿಮ್ಮ ಮನಸನೂ।
ಪುರುಷರೆಲ್ಲ ಕೇಳಿ, ನೀವು ನನ್ನ ನುಡಿಯನೂ।
ಹರುಷಗೊಂಡು ಕೊಡಿರಿ ಅವಗೆ ಬಿಲುಬು ಕಾಸನೂ।
ಉಡುಪಿಯವರೆ ಹೆದರಬೇಡಿ ಗಾಂಧಿ ಭೇಟಿಗೆ!।
ಉಡುಪಿ ರಾಷ್ಟ್ರ ನಿಮ್ಮವಯ್ಯ, ತಿಳಿಸಿ ಗಾಂಧಿಗೆ।
ಕೋಪಬೇಡ ಹೇಳ್ವೆನೆಂದು ನಿಮ್ಮ ಮೂಗಿಲಿ!।
ಕೋಪವೇಕೆ ಹೆದರಬೇಕು?—ಬಾಪುಗಾಂಧಿಜೀ!।

ಸಾಯ್ಬ

Canara Bank, Limited.

Established 1906.

Authorised Capital	10,00000- 0 – 0
Subscribed capital	6,00,000—0—0
Paid up Capital	3,30,000—0—0
Reserves	4,31,00 0—0

Head Office —**Bunder, Mangalore** • Local Offices –**City & Bunder.**

BRANCHES— Bombay, Cochin, Calicut, Ernakulam, Alleppey, Chikmagalur, Ganguli, Coondapoor, Udipi, Karkal, Puttur, Kasaragod, & Buntwal Out-agency.

Interest is allowed on Current, Fixed and Saving Banks Accounts, rates of which may be ascertained on application. Advances made on approved securities at easy rates. All kinds of Banking business transacted. Rules of business on application.

The Bangalore Branch Office of the Bank at No 1 Albert Victor Road, Bangalore City will be opened on 8–1–34.

Mangalore
22–12–33

A Madhava Pai,
Secretary

S·U·N·& CO.

Choukhamba, Benares City

ಮೂರು ಇನಾಮುಗಳು.

ನಮ್ಮಲ್ಲಿ ಕಾಶ್ಮೀರ್ ಶಾಲುಗಳಿಗಿಂತಲೂ ಅತ್ಯುತ್ತಮವಾದ ಕಸೂತಿಗಳಿಂದೊಪ್ಪುವ ಶುದ್ಧ ಸ್ವದೇಶೀ ಖದ್ದರ್ ಶಿಲ್ಕು ಶಾಲುಗಳು ತಯಾರಾಗುತ್ತವೆ. ಬೇಕಾದವರು ತ್ವರಿತವಾಗಿ ಬರೆದರೆ ಈ ಕೆಳಗಿನ ದರದಲ್ಲಿ ಕಳುಹಿಸಲಾಗುತ್ತದೆ. 5 ಮೊಳ ಉದ್ದ 2½ ಅಗಲ ದರ ಒಂದಕ್ಕೆ ರೂ 2—8—0ಯಿಂದ 3–12–0 5½ ಮೊಳ ಉದ್ದ 2½ ಮೊಳ ಅಗಲ ದರ 1ಕ್ಕೆ 3–8–0, 4–8–0 6 ಮೊಳ ಉದ್ದ 3 ಅಗಲ ದರ 1ಕ್ಕೆ ರೂ 4–8–0, ರೂ 5 ಅಲ್ಲದೆ ಸ್ವದೇಶೀ ಖದ್ದರ್ ಮಡಿಗಳೂ, ಶೀರೆಗಳೂ ಅಂಚುಗಳಿಲ್ಲದ ಎಲ್ಲಾ ರಂಗುಗಳಲ್ಲಿರುತ್ತವೆ ಮತ್ತು ಜರೀಕಾಮೀ ಶೀರೆಗಳೂ ಪೀತಾಂಬರಗಳೂ ರವಕೆಗಳೂ, ರುದ್ರಾಕ್ಷೀ—ಬಾಣಲಿಂಗ—ಪಂಚಾಯತನ ಸುದರ್ಶನ ಚಿತ್ರಾಳಿ ಶ್ವಾಮಿಗೆ ಮಿಶ್ರನ್, ಮಡಿ ಧಾವಳಿ ಶಾಲು, ಜಗನ್ನಾಥ ಗಂಜಿಗಳೂ ಕೂಡಾ ಸರಿಯಾದ ದರಕ್ಕೆ ಕಳುಹಿಸಲಾಗುತ್ತದೆ. ವಿವರಕ್ಕೆ ಕೆಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ. 1 ಆಣೆ ಸ್ಟೇಂಪು ಕಳುಹಿಸಿದರೆ 1 ವಿಶ್ವೇಶ್ವರ ಪಟ, 1 ಕಾಶೀನಕ್ಷೆ, 1 ಕೆಟಲಾಗಿನೊಡನೆ 3 ಇನಾಮುಗಳು.

ವಿಳಾಸ—

ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪೆನಿ, ಚೌಖಾಂಬಾ, ಬನಾರಿಸ್ (ಕಾಶೀ)

East & West Insurance Company Ltd.,

(Incorporated in India 1913)

Head Office –EAST & WEST BUILDINGS, FORT, BOMBAY.

Eastern Company with striking features
Attractive plans,
Sympathatic & Liberal
Treatment to Policy Holders
&
Wide popularity
Economic Management
Sound investment
That is why you should select 'East & West'
Ere you invest in the rest

Interim Bonus Declared Rs 15 Per 1000 On whole life & Endowment Policies

For particulars and Agency terms apply to —

H S. Nayak, *Organiser Secretary* for West Coast, Coorg & Mysore,
"Harbour View" Mangalore.

ಬೇಕಾಗಿದ್ದಾರೆ.

ಗ್ರಾಮಗಳಲ್ಲಿ, ಪಟ್ಟಣಗಳಲ್ಲಿ ಪತ್ರಿಕೆ ಸಂಚಿಕೆಗಳನ್ನು ಮಾರಲು ಉತ್ಸಾಹೀ ಏಜೆಂಟರು ಬೇಕಾಗಿದ್ದಾರೆ. ಕರ್ತರಿಗೆ ಕೂಡಲೇ ಬರೆಯಿರಿ.

ಮೆನೇಜರ್ – ಸ್ವದೇಶಾಭಿಮಾನಿ, ಮಂಗಳೂರು

ತುಳಸೀ ಪೂಜೆಯ ಮಹತ್ವ.

ಹಿಂದೂ ಸಮಾಜದಲ್ಲಿ ತುಳಸೀ ಪೂಜೆಗೆ ಹೆಚ್ಚಿನ ಪ್ರಾಧಾನ್ಯತೆ ಕೊಡಲಾಗಿದೆ. ತುಳಸಿಯ ಆರಾಧನೆಯು ಮಹಾ ಪುಣ್ಯಕರವೆಂದು ಪರಿಗಣಿಸಲ್ಪಟ್ಟದೆ. ಹೊರತು ಜನರು ಮಹತ್ವವನ್ನು ಅನೇಕ ಕಥೆಗಳಿಂದ ಅಲಂಕರಿಸಿ ಅದನ್ನು ಪುರಾಣಗಳಲ್ಲಿ ಸೇರಿಸಿ ಮತ್ತಷ್ಟು ಬಲಪಡಿಸಲಾಗಿದೆ. ಈಗ ಇದೊಂದು ಧಾರ್ಮಿಕ ಸಂಪ್ರದಾಯವೇ ಆಗಿ ಇದರ ಮೇಲೆ ಕಟ್ಟಿ ನಮಗೆ ಒಂದು ಅಂಧಶ್ರದ್ಧೆಯನ್ನು ಹುಟ್ಟಿಸಿದ್ದಾರಲ್ಲದೆ ತುಳಸಿಯಿಂದ ಪ್ರಯೋಜನವನ್ನೂ ಅದರಲ್ಲಿರುವ ಉತ್ತಮ ಗುಣಗಳನ್ನೂ ಸರಿಯಾಗಿ ತಿಳಿದುಕೊಳ್ಳುವವರು ಒಬ್ಬರೂ ಇಲ್ಲ. ಹಿಂದಿನ ಕಾಲದ ಜನರು ತುಳಸಿಯ ಸರ್ವ ಗುಣಗಳನ್ನು ತಿಳಿದು ಅವುಗಳಿಂದ ಸರಿಯಾದ ಪ್ರಯೋಜನವನ್ನು ಹೊಂದುತ್ತಿದ್ದರು. ಈಗ ನಮ್ಮಂದರೋ ಹಿಂದಿನದರ ಆಚರಣೆಯ ಯಥಾರ್ಥವನ್ನು ತಿಳಿಯದೆ ಕೇವಲ ಹೊರಗಿನ ಆಡಂಬರದಲ್ಲೇ ನಿರತರಾದುದರಿಂದ ತುಳಸೀ ಗಿಡದ ಮಹಿಮೆ ಈಗಿನ ಶಿಕ್ಷಿತರಲ್ಲಿಯೂ ಅಶ್ರದ್ಧೆಯು ಕಲೆದೋರಿದೆ. ಪರಂತು, ಪಾಶ್ಚಾತ್ಯ ವಿದ್ವಾಂಸರು ನಮಗಿಂತಲೂ ಉತ್ತಮ ರೀತಿಯಲ್ಲಿ ಸಂಶೋಧನೆ ನಡೆಸಿ ತುಳಸೀ ಗಿಡದಿಂದ ಹೆಚ್ಚಿನ ಪ್ರಯೋಜನವನ್ನು ಹೊಂದುತ್ತಿದ್ದಾರೆ. ಆದುದರಿಂದ ಹಿಂದೂಗಳಾದ ನಾವು ತುಳಸೀ ಗಿಡದ ನಿಜವಾದ ಪ್ರಯೋಜನವನ್ನು ತಿಳಿದುಕೊಳ್ಳುವುದು ಅತ್ಯಾವಶ್ಯಕವಾಗಿರುತ್ತದೆ.

ಲಂಡನಿನಲ್ಲಿ "ಇಂಪೀರಿಯಲ್ ಇನ್ಸ್ಟಿಟ್ಯೂಟ್" ಎಂಬ ಒಂದು ಪ್ರಯೋಗ ಶಾಲೆಯಿದೆ. ಅಲ್ಲಿ "ಡಾ! ರೋಲಿಂಗ್" ಮತ್ತು "ವೆಲ್ಲಿ" ಎಂಬ ಇಬ್ಬರು ರಸಾಯನ ಶಾಸ್ತ್ರಜ್ಞರು ತುಳಸೀ ಎಲೆಯನ್ನು ಪರೀಕ್ಷಿಸಿ ಅದರಲ್ಲಿ ರೋಗಜಂತು ನಾಶಕ ತೈಲವಿರುವುದೆಂದು ಸಾರಿದ್ದಾರೆ. ಆ ತೈಲವು "ಥೈಮಾಲ್" ಎಂಬ ಔಷಧಿ ವಿಶೇಷಕರವಾಗಿರುತ್ತದೆ. ಅದು ಗಾಳಿಯಲ್ಲಿ ಹಾರಿ ಹೋಗುವುದು. ಆ ತೈಲದಲ್ಲಿ ಶೇಕಡಾ ೩೦ ಭಾಗದಷ್ಟು "ಥೈಮಾಲ್" ಇರುವುದೆಂದು ನಿರ್ಧರಿಸಲಾಗಿದೆ. ವನಸ್ಪತಿ ಶಾಸ್ತ್ರಜ್ಞನಾದ ಡಾಕ್ಟರ್ ಹೂವರ್ ಎಂಬಾತನೂ ತುಳಸೀ ದಳದಲ್ಲಿ "ಥೈಮಾಲ್" ಇರುವುದೆಂದು ಪ್ರಕಟಗೊಳಿಸಿದ್ದಾನೆ. ಶಸ್ತ್ರಕ್ರಿಯೆಗಳನ್ನೂ ಗಾಯಗಳನ್ನೂ ಶುದ್ಧವಾಗಿಡುವುದಕ್ಕೆ ಥೈಮಾಲ್ ಸಹಕಾರಿಯಾಗುವುದು. ಇಂತಹ ಔಷಧಿ ದ್ರವ್ಯವನ್ನು ಗಾಳಿಯಲ್ಲುಂಟುಮಾಡುವಂತಹ ಗಿಡಗಳನ್ನು ಮನೆ ಮುಂದೆ ಬೆಳೆಸಿದರೆ ಗಾಳಿಯು ಪರಿಶುದ್ಧವಾಗುವುದೆಂದು ಶಾಸ್ತ್ರಜ್ಞರ ಅಭಿಪ್ರಾಯವಾಗಿರುವುದು.

ಮುಂಬೈ ಗ್ರೇಂಟ್ ಮೆಡಿಕಲ್ ಕಾಲೇಜಿನಲ್ಲಿ "ಸರ್. ಜಾರ್ಜ್ ಬರ್ಡ್ ವುಡ್" ಎಂಬವರು ವೈದ್ಯಕೀಯ ಅಧ್ಯಾಪಕರಾಗಿದ್ದರು. ಅಲ್ಲಿ "ಕ್ವೀನ್ಸ್ ಗಾರ್ಡನ್" ಎಂಬ ತೋಟವನ್ನು ಸ್ಥಾಪಿಸಿದವರು ಅವರೇ. ಮೊದಲಲ್ಲಿ ಜೌಗು ಸ್ಥಳವಿದ್ದು ಸೊಳ್ಳೆ ಮೊದಲಾದ ಕ್ಷುದ್ರಜಂತುಗಳ ಉಪದ್ರವವು ತುಂಬಿತ್ತು. ಅದನ್ನು ನಾಶಗೊಳಿಸಲಿಕ್ಕಾಗಿ ಅವರು ಅಲ್ಲಿ ತುಳಸಿಗಿಡಗಳನ್ನು ಹೆಚ್ಚಾಗಿ ನಡಿಸಿದರು. ಅದರಿಂದಲೇ ಸೊಳ್ಳೆಗಳು ನಾಶವಾದವು. "ತುಳಸಿ ಗಿಡದ ಗಾಳಿಯಿಂದ ಸೊಳ್ಳೆಗಳು ಸಾಯುವವು" ಎಂದು "ಮೇಜರ್ ಲಾರಿಯರ್" ಎಂಬವನು ಸ್ವಂತ ಅನುಭವ ಮಾಡಿ ತೋರಿಸಿರುವನು.

ನಮ್ಮ ಟೊಯಿಲೆಟ್ ಮತ್ತು ವಾಶಿಂಗ್ ಸಾಬೂನುಗಳ ತಯಾರಿಯಲ್ಲಿ ಚರ್ಬಿ ಉಪಯೋಗಿಸಲ್ಪಡುವುದಾಗಿ ರುಜುಪಡಿಸುವವರಿಗೆ ರೂಪಾಯಿ

1000 ಬಹುಮಾನ.

ಸಾಬೂನು ಪಡೆಯುವಾಗ ' ' ಅದರಲ್ಲಿ ಚರ್ಬಿ ಇರಕೂಡದೆಂದು ನಿಮ್ಮ ಆಶೆ.

ಪ್ರಾಣಿಗಳ ಚರ್ಬಿ ಮಿಶ್ರಿತವಾದ ಸಾಬೂನುಗಳು ಹಿತಕ್ಕಿಂತಲೂ ಅಹಿತವನ್ನೇ ಹೆಚ್ಚಾಗಿ ಉಂಟುಮಾಡುತ್ತವೆ. ಕಾರಣ ಅವುಗಳಲ್ಲಿನ ಚರ್ಬಿ ಚರ್ಮರಂಧ್ರಗಳೊಳಗೆ ಹೋಗಿ ಬೆವರನ್ನು ತಡೆಯುತ್ತದೆ. ಸೋಪನ್ನು ಪಡೆಯುವಾಗ ನೀವು ಪಂಮುಳಭಂತ ಚರ್ಬಿನ ಮುದ್ದೆಗೆ ಬೆಲೆ ಕೊಟ್ಟು ಶುದ್ಧತೆಯ ಬದಲು ಅಶುದ್ಧತೆಯನ್ನು ಸ್ವೀಕರಿಸಬೇಕೆಂದಿರುವಿರಾ?

ಮಲಬಾರು ಸಾಬೂನುಗಳು ಜನನಕ್ಕೆ ಬಂದ ಆರು ತಿಂಗಳುಗಳ ಅಲ್ಪಾವಧಿಯಲ್ಲೇ ಸಾರ್ವಜನಿಕ ಬೆಂಬಲವನ್ನು ಪಡೆದಿವೆ. ಕೊಚ್ಚಿಯ ಮಹಾ ರಾಜರ ದರ್ಯಾಪೂರ್ಣ ಪ್ರಶಸ್ತಿ ಮತ್ತು ಪ್ರೋತ್ಸಾಹನದಿಂದಾಗಿಯೂ, ಪ್ರಖ್ಯಾತ ವೈದಕೀಯ ಅಧಿಕಾರಿಗಳ ಶಿಫಾರಸಿನಿಂದಾಗಿಯೂ, ಅನೇಕ ವಸ್ತುಪ್ರದರ್ಶನಗಳಲ್ಲಿ ದೊರೆತ ಸುವರ್ಣಪದಕ ಮತ್ತು ಪ್ರಶಸ್ತಿ ಪತ್ರಿಕೆಗಳಿಂದಾಗಿಯೂ, ಮಲಬಾರ್ ಸಾಬೂನುಗಳ ಪ್ರಾಮುಖ್ಯತೆಯು ಎಷ್ಟೆಂದು ತಿಳಿಯುವುದು.

ಮಲಬಾರ್ ಸಾಬೂನು ಎಲ್ಲಾ ವಿಧದಿಂದಲೂ ಶ್ರೇಯಸ್ಕರವೇ ಆಗಿರುತ್ತದೆ. ನಿಮ್ಮ ಚರ್ಮಕ್ಕೆ ಬಾಧಕವನ್ನುಂಟುಮಾಡುವಂತಹ ಪ್ರಾಣಿಗಳ ಚರ್ಬಿ ಅಥವಾ ಹಾನಿಕರವಾದ ಮಿಶ್ರಿತವೇನೂ ಅದರಲ್ಲಿರದು. ಮಲಬಾರ್ ಸಾಬೂನನ್ನು ಶಾಸ್ತ್ರೀಯ ರೀತಿಯಿಂದಲೂ, ಆರೋಗ್ಯ ದೃಷ್ಟಿಯಿಂದಲೂ ತಯಾರಿಸುವುದರಿಂದ ಎಷ್ಟು ಕೋಮಲ ಚರ್ಮವೂ ಬಾಧಕ ಹೊಂದುವುದಿಲ್ಲ. ಈ ಸಾಬೂನು ದೇಶಿಯ ಅದ್ಭುತ ಗಂಧಯುಕ್ತ ಸಾಮಗ್ರಿಗಳಿಂದ ಎಲ್ಲರಿಗೂ ಅನುಕೂಲವಾಗುವಂತೆ ಅಗ್ಗವಾಗಿದೆಯೆಂದು ಅದರ ಉಪಯೋಗದಿಂದ ನಿಮಗೆ ತಿಳಿದುಬರುವುದು.

ನಿಮ್ಮ ವ್ಯಾಪಾರಸ್ಥರು

ಮಲಬಾರ್ ಸಾಬೂನುಗಳನ್ನು

ವಿಕ್ರಯಿಸಲು ಸಂಕೋಚಪಡುವರು

ಇದರಲ್ಲಿ ಪ್ರಾಣಿಗಳ ಕೊಬ್ಬು ಇರುವುದಿಲ್ಲ.

ದಿ ವೆಜಿಟೇಬಲ್ ಸೋಪ್ ವರ್ಕ್ಸ್, ಕಲ್ಲಿಕೋಟೆ.

ಪ್ರೊಪ್ರೈಟರ್:—ಸನ್ ಬ್ರೆಂಡ್ ಕೊಡಿಯ ಖ್ಯಾತಿಯ ಸೇಟ್ ನಂಗಬೀ ಪುರುಷೋತ್ತಮ ಮತ್ತು ಕಂಪೆನಿ, ಕಲ್ಲಿಕೋಟೆ.

ಈ ಜಿಲ್ಲೆಗೆ ಪ್ರವರ್ತಕರು:—

ರಾಘವೇಂದ್ರ ರಂಗ ಷೈ, ರಥಬೀದಿ, ಮಂಗಳೂರು.

ಪಂಡಿತ ಜವಾಹರಲಾಲರನ್ನು ಕೈದು ಮಾಡಿದರು!!!

ಕಲ್ಕತ್ತದಲ್ಲಿ ಮಾಡಿದ ಭಾಷಣದ ಪರಿಣಾಮ!!

"ಇನ್ನೊಂದು ಮನೆಗೆ ಹೋಗುವೆನು——ಜಾಮೀನು ಬೇಡ"

ಅಲ್ಲಿಲ್ಲಿಯ ತಂತಿ ವಾರ್ತೆ:—

ಅಲ್ಲಹಾಬಾದ್

ತಾ. ೧೨ನೇ ಸೋಮವಾರ ದಿನ ಸಂಜೆ ೬-೩೦ಕ್ಕೆ ಪಂಡಿತ ಜವಾಹರಲಾಲರನ್ನು ಅಲ್ಲಹಾಬಾದಿನ ಅವರ 'ಆನಂದ ಭವನ'ದಲ್ಲಿ ದಸ್ತಗಿರಿ ಮಾಡಿದರು

ಸಿಟಿ ಡಿಪ್ಯುಟಿ ಸುಪರಿಂಟೆಂಡೆಂಟರಾದ ರಾವ್ ಸಾಹೇಬ್ ಪ್ಯಾರಿ ಶಂಕರರು 'ಆನಂದ ಭವನ'ಕ್ಕೆ ಸಂಜೆ ೬-೩೦ಕ್ಕೆ ಪೋಲೀಸರೊಡನೆ ತಲಪಿದರು. ಇವರ ಆಗಮನವನ್ನು ನಿರೀಕ್ಷಿಸುತ್ತಿದ್ದ ಪಂಡಿತ ಜವಾಹರಲಾಲರು ಫಲಾಹಾರ ಮೇಜನ್ನು ಒಡನೆ ಬಿಟ್ಟು, ಒಡನಿದ್ದ ಬಾಬು ಪುರುಷೋತ್ತಮದಾಸ ಟಂಡನ್ ಶ್ರೀಕೃಷ್ಣಕಾಂತ ಮಾಲವೀಯ ಮೊದಲಾದವರನ್ನು ಕೋಣೆಯಲ್ಲಿಯೇ ಬಿಟ್ಟು, ಶಂಕರರ ಬಳಿ ಹೋಗಿ ವಂದಿಸಿ 'ನಿಮ್ಮನ್ನು ಕಾಯುತ್ತಾ ಇದ್ದೆ. ಏನು ತಡವಾಯಿತು?' ಎಂದು ಪ್ರಶ್ನಿಸಿದರು. ರಾವ್ ಸಾಹೇಬರು "ನಾನು ಈಗಲೇ ಬಂದೆ" ಎಂದು ನಗುತ್ತಾ ಉತ್ತರ ಕೊಟ್ಟರು. ಪಂಡಿತರು ಸನ್ನದ್ಧರಾಗಬೇಕೆಂದು ಅವರಿಗೆ ೫ ಮಿನಿಟುಗಳ ಬಿಡು ಕೊಟ್ಟರು. ಜವಾಹರಲಾಲರು ಪೆಟ್ಟಿಗೆ ಕಟ್ಟಿ ಹೊರಡುತ್ತಾ ಗಾಂಧೀಜಿಯವರಿಗೂ, ಬಾಬು ರಾಜೇಂದ್ರ ಪ್ರಸಾದರಿಗೂ, ಪುತ್ರಿ ಇಂದಿರಾ ನೆಹರೂರಿಗೂ ತಂತಿ ಬಿಟ್ಟರು. ಗಾಂಧೀಜಿಯವರಿಗೆ—"ಪುನಃ ವಿಶ್ರಾಂತಿಗೂ ಆರೋಗ್ಯಲಾಭಕ್ಕೂ ಕಲ್ಕತ್ತೆಗೆ ತೆರಳುವೆನು ಸಪ್ರೇಮ ನಮಸ್ತೆ" ಎಂದು ತಂತಿ ಕೊಟ್ಟರು. ರಾಜೇಂದ್ರ ಪ್ರಸಾದರಿಗೆ "ವ್ಯಸನ ಕ್ರಾಂತನಾಗಿದ್ದೇನೆ ಮುಂದಕ್ಕೆ ಸಹಾಯ ಕೆಲಸದಲ್ಲಿ ಸಹಕರಿಸಲಾರೆ ನಿಮ್ಮ ಕಾರ್ಯ ಸಾಧನದಲ್ಲಿ ನಿಮಗೆ ಜಯವಾಗಲಿ ಯತ್ನದಲ್ಲಿ ಬಿಹಾರವು ಜಯಶೀಲವಾಗಿ ಹೊರ ಬರಲಿ" ಎಂದು ತಂತಿ ಕಳುಹಿಸಿದರು. ಮಗಳಿಗೆ—"ನಾನು ನನ್ನ ಇನ್ನೊಂದು ಮನೆಗೆ ಸದ್ಯಕ್ಕೆ ಹೋಗುವೆನು ಸಪ್ರೇಮ ಆಶೀರ್ವಾದಗಳು—ಚೀರಿಯೋ" ಎಂಬ ತಂತಿ ವಾರ್ತೆ ಬಿಟ್ಟರು.

ಪಂಡಿತರು ಪೋಲೀಸರೊಡನೆ ಹೊರಡುವಾಗ ಅವರ ಮಾತೋಶ್ರೀಯವರಾದ ಶ್ರೀಮತಿ ಸ್ವರೂಪರಾಣಿ ನೆಹರೂ ಅವರು ತನ್ನ ಹಸ್ತಕ್ಕೆ ಕಾಲಿಗೆರಗಿದ ಮಗನನ್ನು ತಬ್ಬಿ, ಮೌನದಿಂದ ಮುದ್ದಾಡಿ ಪ್ರೇಮ ವ್ಯಕ್ತಪಡಿಸಿ, ಕಣ್ಣಿನಲ್ಲಿ ನೀರು ಸುರಿಸಿದರು. ಶ್ರೀಮತಿ ಕಮಲಾ ನೆಹರೂರವರೂ ಪತಿಯ ಅಗಲುವಿಕೆಯಿಂದ ಬಹಳ ಕೊರಗಿದಂತೆ ಭಾಸವಾಯಿತು. ಆ ಮೇಲೆ ಪಂಡಿತರು ಎಲ್ಲರನ್ನೂ ವಂದಿಸಿ ಪುರುಷೋತ್ತಮದಾಸ್ ಟಂಡನರೊಡಗೂಡಿ ಪೋಲೀಸ್ ಕಾರನ್ನು ಹತ್ತಿದರು.

ಪಂಡಿತ ಜವಾಹರಲಾಲರು ಬಿಹಾರಿನಲ್ಲಿ ಹತ್ತು ದಿನಗಳ ತನಕ ತಿರುಗಾಡಿ ಅಲ್ಲಹಾಬಾದಿನ ಸೆಂಟ್ರಲ್ ಕಮಿಟಿಗಾಗಿ ಒಂದು ರಿಪೋರ್ಟನ್ನು ಬರೆಯುತ್ತಿದ್ದರು. ಪಂಡಿತರು ತಾ. ೧೧ನೇ ದಿನ ಅಲ್ಲಹಾಬಾದಿಗೆ ಬಂದರು. ಅವರನ್ನು ಬಂದ ಮರುದಿನವೇ ದಸ್ತಗಿರಿ ಮಾಡುವರೆಂದು ಯಾರೂ ತಿಳಿದಿರಲಿಲ್ಲ. ಇದು ಪಂಡಿತರ ೧೧ನೇ ಸಲದ ಸೆರೆಮನೆ ಸಂಚಾರ. ಇಷ್ಟರ ತನಕ ಒಟ್ಟು ೫|| ವರ್ಷಗಳನ್ನು ಅವರು ಜೈಲಿನಲ್ಲಿ ಕಳೆದರು. ಇಂಡಿಯನ್ ಪಿನಾಲ್ ಕೋಡಿನ ೧೨೪—A ಸೆಕ್ಷನಿನ ಮೇರೆಗೆ ಅವರನ್ನು ಕಲ್ಕತ್ತದ ವಾರಂಟಿನನ್ವಯ ದಸ್ತಗಿರಿ ಮಾಡಿದರು. ಕಲ್ಕತ್ತಕ್ಕೆ ಮೊನ್ನೆ ಪಂಡಿತರು ಕೊಟ್ಟ ದರ್ಶನದ ವೇಳೆ ವೆಲ್ಲಿಂಗ್ಟನ್ ಸ್ಕ್ವೇರ್‌ನಲ್ಲಿ ರಾಮಮೋಹನ್ ರೋಯ್ ಶತಾಬ್ದಿಯ ಸಮಯ ಅವರಿತ್ತ ಆದೊಂದು ಭಾಷಣದ ನಿಷಿದ್ಧಾಂಶವೇ ಅವರ ದಸ್ತಗಿರಿಗೆ ಕಾರಣವೆಂದು ವಿಚಾರಿಸಲಾಗಿ ತಿಳಿದು ಬಂದಿದೆ. ಪಂಡಿತರನ್ನು ನೈನಿಯಲ್ಲಿ ನಂ ೨ನೇ ಟ್ರೇನ್ ಮೈಲನ್ನು ನಿಲ್ಲಿಸಿ, ಎರಡನೇ ತರಗತಿಯ ರಿಜರ್ವ್ಡ್ ಕೋಣೆಯಲ್ಲಿ ಕುಳ್ಳಿರಿಸಿ ಕಲ್ಕತ್ತಕ್ಕೆ ಒಯ್ದರು.

ಕಲ್ಕತ್ತದಲ್ಲಿ ಪಂಡಿತರನ್ನು ತಾ ೧೩ನೇ ಬೆಳಿಗ್ಗೆ ಚೀಫ್ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರ ಬಳಿ ನಿಲ್ಲಿಸಿ ಅವರು ಜಾಮೀನಿನ ಮೇಲೆ ಬಿಡುಗಡೆ ಹೊಂದಲಿಚ್ಛಿಸುವುದಾದರೆ ಹಾಗೆ ಮಾಡಬಹುದು ಎಂದು ಅಪ್ಪಣೆಯಾಯಿತು. ಆದರೆ ಪಂಡಿತರು ತಾನು ಅದಕ್ಕೆ ಸಿದ್ಧನಿಲ್ಲವೆಂದರು. ಆ ಮೇರೆಗೆ ಅವರನ್ನು ರಿಮಾಂಡಿನಲ್ಲಿಟ್ಟರು. ಅವರ ಮೇಲಿನ ತಕ್ಸೀರು ಇದೇ ಗುರುವಾರ ದಿನ ವಿಚಾರಿಸಲ್ಪಟ್ಟಿತು.

ವಿಯೆನ್ನಾ

ವಿಯೆನ್ನಾ, ಲಿನ್ಸ್, ಒಸ್ಟ್ರಿಯಾಗಳಲ್ಲಿ ಸೋಶಿಯಲಿಸ್ಟರಿಗೂ ಸರಕಾರಿ ಅಧಿಕಾರಿಗಳಿಗೂ ಮಾರಾಮಾರಿ ನಡೆದಿರುತ್ತದೆ. ಎಲ್ಲಾ ಕಡೆಗಳಲ್ಲೂ ಮಾರ್ಷಲ್ ಲೋ ಜಾರಿಯಾಗಿರುತ್ತದೆ. ವಿಯೆನ್ನಾದಲ್ಲಿ ಸರಕಾರೀ ಕಟ್ಟಡಗಳನ್ನು ಪೋಲೀಸರು ಸಶಸ್ತ್ರರಾಗಿ ಕಾವಲು ನೋಡುತ್ತಿರುವರು. ಸೋಶಿಯಲಿಸ್ಟರ ವಾಸಸ್ಥಾನಗಳನ್ನೆಲ್ಲ ಪೋಲೀಸರು ಜಪ್ತಿ ನಡೆಸುತ್ತಿರುವರು. ವಿಯೆನ್ನಾದ ಮಾರ್ಗಗಳಲ್ಲಿ ಗುಂಡುಗಳು ಪದೇ ಪದೇ ಹಾರುತ್ತಿವೆ. ೧೫ ಜನರು ಮೃತರಾದರು. ಗ್ರ್ಯಾಜ್ ಎಂಬಲ್ಲಿ ೨೦೦ ಜನರು ಗಾಯಗೊಂಡು ೨೬ ಜನರು ಮೃತರಾದರು. ಲಿನ್ಸ್‌ನಲ್ಲಿ ಇಬ್ಬರು ಪೋಲೀಸರು ವಧೆ ಮಾಡಲ್ಪಟ್ಟರು. ೨೦ ಪೋಲೀಸರು ಜಖಂಗೊಂಡರು. ಸೋಶಿಯಲಿಸ್ಟರ ಸಂಘಗಳ ನಿರ್ನಾಮವಾಗಬೇಕೆಂದು ಸರಕಾರವು ಪ್ರಕಟಿಸಿರುತ್ತದೆ.

ಕ್ಯೋಟೋ

ಜನವರಿ ತಾ ೬ರಲ್ಲಿ ಇಲ್ಲಿಯ ರೈಲ್ವೇ ಸ್ಟೇಶನಿನಲ್ಲಿ ಭೀಷಣ ಅನಾಹುತಗಳು ನಡೆದುವು. ಹೊಸ ವರ್ಷದ ಆನಂದೋತ್ಸಾಹ ಭರಿತರಾದ ೧೦೦೦೦ ಜನರು ೭೦೭ ಜನ ಸೈನಿಕರನ್ನು ರೈಲ್ವೇ ಸ್ಟೇಶನಿನಲ್ಲಿ ಬೀಳ್ಕೊಟ್ಟರು. ಹಬ್ಬದ ಸ್ಮರಣಾರ್ಥವಾಗಿ ಸೇವಿಸಿದ ಕಠಿಣ ಮಾದಕ ಪದಾರ್ಥಗಳು ಕೆಲಸ ಮಾಡಲಾರಂಭಿಸಿದುವು — ಕೆಳಗೆ ರೈಲು ಬಂಡಿಯಿಂದ ಎತ್ತರವಾದ ಮಾಳಿಗೆಗೆ ಉದ್ದವಾದ ಮಾಳಿಗೆಯ ಏಣಿಯ ಹಲಿಗೆಯಲ್ಲಿ ಸಾವಿರಗಟ್ಟಲೆ ಜನರು ನಿಂತಿದ್ದರು. ೬೦೦೦ ಪ್ಲೇಟ್ ಫೋರ್ಮ್ ಟಿಕೇಟುಗಳು ಮಾರಲ್ಪಟ್ಟುವು. ಕೆಳಗಿನ ತುದಿಯಲ್ಲಿದ್ದ ಜನರು ರೈಲನ್ನು ಹತ್ತುವಷ್ಟರಲ್ಲಿ ಅವರ ಹಿಂದಿನಿಂದ ಸಾವಿರಾರು ಜನರು ದೂಡಿದರು. ಸ್ತ್ರೀಪುರುಷರು ತಳ್ಳಲ್ಪಟ್ಟರು. ಕೆಳಗಿಳಿದು ರೈಲಿನ ಬಳಿ ನಿಂತವರು ಮೇಲಿನಿಂದ ಹಿಂಭಾಗದಲ್ಲಿದ್ದವರಿಂದ ದೂಡಲ್ಪಟ್ಟು ರೈಲಿಗೆ ತಾಗಿ ಸತ್ತು ಬಿದ್ದರು. ಬಿದ್ದವರ ಮೇಲೆ ನಿಂತವರು ನಡೆದರು. ಸಂಕದಂತಿದ್ದ ಆ ಏಣಿಯಲ್ಲಿದ್ದವರೆಲ್ಲರೂ ಪ್ರಾಣಗಳಾರಾಗುವಂತಾದರು. ಕೊನೆಗೆ ೬ ತಾಸುಗಳ ತನಕ ಪೋಲೀಸರು ಕೆಲಸ ಮಾಡಿ ಜನರನ್ನು ಶಾಂತಗೊಳಿಸಿದರು. ಒಟ್ಟು ೭೭ ಮಂದಿ ಮೃತರಾದರು.

ಪಾಟ್ನಾ

ಮಹಾತ್ಮಾ ಗಾಂಧಿಯವರು ಬಿಹಾರಕ್ಕೆ ಬರಬಹುದೋ ಎಂದು ಬಾಬು ರಾಜೇಂದ್ರ ಪ್ರಸಾದರು ತಂತಿ ಬಿಟ್ಟಿದ್ದರು. ಮಹಾತ್ಮರು ಒಂದು ತಿಂಗಳು ತನ್ನ ದಿಹಲಿನಲ್ಲಿ ಸಂಚರಿಸುವರೆಂದೂ ಈ ತಿಂಗಳಾಂತ್ಯದಲ್ಲಿ ಅವರು ಅತ್ತ ತೆರಳುವರೆಂದೂ ಗೊತ್ತಾಗಿದೆ. ಬಿಹಾರಿನ ರಿಲೀಫ್ ಫಂಡಿನವರು ೧೬,೦೦೦ ರೂಪಾಯಿಗಳನ್ನು ಇಷ್ಟು ತನಕ ಸಹಾಯಾರ್ಥ ಕೆಲಸಗಳಿಗೆ ವೆಚ್ಚ ಮಾಡಿರುವರು. ಈ ಹಣದಿಂದ ಅತ್ತ ತೀವ್ರ ಪ್ರಯೋಜನವಾಗಲೆಂದು ಕಮಿಟಿಯವರ ಊಹನೆ. ಪಾಟ್ನಾದ ಎಕ್ಸಿಕ್ಯುಟಿವ್ ಇಂಜಿನಿಯರ್ ಮೋಂಟಿಗೋಮರಿ ಎಂಬವರು ವಿಮಾನದ ಮೂಲಕ ಉತ್ತರ ಬಿಹಾರಿನಲ್ಲಿ ಹಾರಿ ತಿರುಗಿ ವಿಮಾನ ಬಿದ್ದು ಜಖಂಗೊಂಡಿರುವರು. ವಿಶೇಷ ಗಾಯಗಳಿಂದರೂ ಅಪಾಯಕರವಾಗಿಲ್ಲವೆಂದು ಗೊತ್ತಾಗಿದೆ. ಬಿಹಾರ್ ರಿಲೀಫ್ ಕಮಿಟಿಯವರು ಬಡವರಿಗೆ ಸಾಲಗಳನ್ನು ಕೊಡುತ್ತಿರುವರು. ಆ ಹಣದಿಂದ ಕಟ್ಟಡಗಳನ್ನು ಸರಿಮಾಡಿಕೊಳ್ಳುವ ಕೆಲಸವು ನಡೆಯುತ್ತಿದೆ. ಪೇಟೆಯನ್ನು ವ್ಯವಸ್ಥೆಗೊಳಿಸಲು ಆರಂಭವಾಗಿದೆ. ಒಂದೆರಡು ವರ್ಷಗಳ ತನಕ ಇದೇ ರೀತಿ ಧನ ಜನ ಬಲಗಳಿಂದ ಕೆಲಸ ಮಾಡಿದರೆ ಬಿಹಾರ್ ಪ್ರಾಂತ್ಯವನ್ನು ಪೂರ್ಣವಾಗಿ ರಕ್ಷಿಸಬಹುದೆಂದು ಅಂದಾಜಾಗಿದೆ.

ಮೊಸ್ಕೋ

ರಷ್ಯದ ಸೇನಾನಾಯಕರಾದ ಬ್ಲಸರ್ ಎಂಬವರು ಅಲ್ಲಿ ಒಂದು ಭಾಷಣ ಮಾಡುತ್ತಾ ತನ್ನ ಜನರಿಗೆ ಎಚ್ಚರಿಕೆಯನ್ನು ಕೊಟ್ಟು ಜಪಾನು ಯುದ್ಧಕ್ಕೆ ಸಿದ್ಧವಾಗಿದೆಯೆಂದು ತಿಳಿಸಿದರು. ರಷ್ಯದ ಮೇಲೆ ಜಪಾನು ಬೀಳುವುದೆಂದು ಅವರು ಭವಿಷ್ಯ ಹೇಳಿದರು. ರಷ್ಯದ ಸಮೀಪದ ಮಂಚುಕೋವಿನಲ್ಲಿ ಜಪಾನ ಸರಕಾರವು ಸೈನ್ಯಸ್ಥಾಪನೆ ಮಾಡಿರುತ್ತದೆ. ಇವರನ್ನು ಪ್ರತಿಭಟಿಸುವುದಕ್ಕಾಗಿ ರಷ್ಯಾ ಸರಕಾರವೂ ಸಾಕಷ್ಟು ರಣಮಂಡಳಿಗಳನ್ನು ಸಿದ್ಧಗೊಳಿಸುತ್ತದೆ. ಇನ್ನೊಂದು ಯುದ್ಧವು ಪ್ರಾರಂಭವಾಗುವುದಾದರೆ ಇವೆರಡು ಪಕ್ಷಗಳ ಆಂದೋಲನದಿಂದಲೇ ಎಂದು ಸಮರ ಶಾಸ್ತ್ರಜ್ಞರ ಭಾವನೆಯಾಗಿರುತ್ತದೆ.

ಗುಂಟೂರು

ಇಲ್ಲಿನ ತೆನಾಲಿ ತಾಲೂಕಿನ ಗೋವಾಡಾ ಎಂಬಲ್ಲಿನ ಶ್ರೀ ಕೋಟೀಶ್ವರ ಸ್ವಾಮಿ ದೇವಸ್ಥಾನವನ್ನು ಹರಿಜನರ ಪ್ರವೇಶಕ್ಕಾಗಿ ತೆರೆಯಲಾಗುವುದೆಂದು ಅದರ ಆಡಳಿತದಾರರು ಒಪ್ಪಿದ್ದರು. ಆದರೆ ಮಹಾತ್ಮಾ ಗಾಂಧಿಯವರು ಅಲ್ಲಿಗೆ ಬರುತ್ತಾರೆಂದಾದೊಡನೆ ಅವರು ಮೊದಲಿನ ಭಾವನೆಯನ್ನು ಮರೆತರು. ಇದನ್ನು ಕಂಡು ಶ್ರೀ ಗೊಲ್ಲಪೂಡಿ ಸೀತಾರಾಮ ಶಾಸ್ತ್ರಿ ಎಂಬವರು ಉಪವಾಸವನ್ನು ತೊಟ್ಟರು. ಎಂಟು ದಿನಗಳ ಉಪವಾಸವು ಕಳೆದು ಹೋಯಿತು. ಆದರೂ ಆಡಳಿತದಾರರು ಇನ್ನೂ ನಿರ್ಧರಿಸಿರುವುದಿಲ್ಲ. ಬಾಗಿಲು ತೆರೆಯದೆ ತಾನು ಆಹಾರವನ್ನು ಸೇವಿಸೆನೆಂದು ಶಾಸ್ತ್ರಿಯವರ ಹೇಳಿಕೆ. ಡಾಕ್ಟರರು ಕೂಡಿ ಅವರನ್ನು ಪರೀಕ್ಷಿಸುತ್ತಿರುವರು.

ವಾಶಿಂಗ್ಟನ್

ಅಮೇರಿಕದ ಸೆನೆಟನ್ನು ನಿಂದಿಸಿದುದಕ್ಕಾಗಿ ಹೂವರ್ ರಾಜ್ಯದಲ್ಲಿ ಮಂತ್ರಿಯವರಾಗಿದ್ದ ಮಿ|| ಮೆಕ್‌ಕ್ರಕನ್ ಎಂಬವರನ್ನು ಕೈದು ಮಾಡಿರುವರು. ವಿಮಾನ ಟಪ್ಪಾಲಿನ ಕುರಿತು ಸರಕಾರವು ಮಾಡುವ ವ್ಯವಸ್ಥೆಯನ್ನು ಖಂಡಿಸಿದುದೂ ಕೂಡಾ ಅವರ ಇನ್ನೊಂದು ಅಪರಾಧ.

ಪಾಟ್ನಾ

ತನ್ನ ಸಂದರ್ಶನೆಯು ಅತ್ಯಗತ್ಯವೆಂದಾದರೆ ತಾ ೨೬ನೇ ಫೆಬ್ರವರಿ ನಂತರ ತಾನು ಬಿಹಾರಿಗೆ ಬರುವೆನೆಂದೂ ಇಲ್ಲದಿದ್ದರೆ ಬಿಹಾರಿನ ಸಂಚಾರವನ್ನು ಅಲ್ಲಿಗೆಯೇ ಬಿಟ್ಟು ತಾನು ಕೂಡಲೇ ಹೊರಡುವೆನೆಂದೂ ಮಹಾತ್ಮರು ಬಾಬು ರಾಜೇಂದ್ರ ಪ್ರಸಾದರಿಗೆ ತಂತಿ ಬಿಟ್ಟಿರುವರು.

ಕಲ್ಕತ

ಮಹಾತ್ಮಾಜೀಯವರ ಅಮೇರಿಕನ್ ಶಿಷ್ಯಳಾದ ಮಿಸ್ ಶ್ರೇಂಕರ್ ಅಥವಾ ನೀಲನಾಗಿಣಿ ದೇವಿಯನ್ನು ಸರಕಾರವು ಸಿಟಿ ಒಫ್ ಎಲ್‌ವುಡ್ಸ್ ಎಂಬ ಹೊಗೆ ಹಡಗದಲ್ಲಿ ಹಾಕಿ ನ್ಯೂಯೋರ್ಕಿನ ಅವಳ ಊರಿಗೆ ಕಳುಹಿಸಿತು. ನೀಲನಾಗಿಣಿಯು ಈಗ ಸ್ವಲ್ಪ ಮಾನಸಿಕ ಪರಿವರ್ತನೆ ಹೊಂದಿದವಳಂತೆ ತೋರುತ್ತಿದ್ದಾಳೆ. ಆಶ್ರಮವಾಸವು ತನಗೆ ಪ್ರಯೋಜನವಿಲ್ಲವೆಂದೇ ಅವಳ ಮನೋನಿರ್ಧಾರವಾಯಿತೆಂದು ಅವಳು ತಿಳಿಸಿದಳು. ನ್ಯೂಯೋರ್ಕಿನಲ್ಲಿ ಅವಳ ಸಹೋದರನು ಅವಳ ಜಾಗ್ರತೆ ತೆಗೆದುಕೊಳ್ಳುವನು.

ಮದ್ರಾಸು

ಹರಿಜನ ದೇವಸ್ಥಾನದ ಪ್ರವೇಶ ಬಿಲ ಜನಾಭಿಪ್ರಾಯವನ್ನು ಸಂಗ್ರಹಿಸಲೋಸುಗ ಇಂಡಿಯಾ ಸರಕಾರದಿಂದ ಹೊರಬೀಳುವುದು. ಬರುವ ಆಗೋಸ್ತು ತಿಂಗಳ ವರೆಗೆ ಅಭಿಮತ ನಡೆಯಲಿರುವುದು. ಈ ಬಿಲಿನ ಅನುಮೋದನೆ ಅಥವಾ ತಿರಸ್ಕಾರದ ಮೇಲೆ ಹರಿಜನ ಪ್ರವೇಶದ ಸುದ್ದಿಯು ತೀರ್ಮಾನಿಸಲಿರುವುದು.

ನೋಟೀಸು

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಸ್ಮಾಲ ನಂಬ್ರ 9 34

ಉಡುಪಿ ರಾಘವೇಂದ್ರ ಪಡಿಯಾರ—ವಾದಿ

ಮತ್ತು

ಅರೂರು ವೆಂಕಟರಮಣ ಪ್ರಭು ಅಣ್ಣಪ್ಪ ಪ್ರಭುಗಳ ಮಗ ಅರೂರು ಕಸಬೆಯಲ್ಲಿರುವವ — ಪ್ರತಿವಾದಿ

ಇವರೊಳಗೆ

ಸದರಿ ಪ್ರತಿವಾದಿಗೆ

ಪ್ರತಿವಾದಿಯಿಂದ ವಾದಿಗೆ ಒಪ್ಪಿಗೆ ಲೇವಾದೇವಿ ಬಾಬ್ತು ರೂಪಾಯಿ 142-11-0ಕ್ಕೆ ವಾದಿಯು ಪ್ರತಿವಾದಿಯ ಮೇಲೆ ಮಾಡಿದ ಸದರಿ ವ್ಯಾಜ್ಯವು ತಾ 26-2-1934ಕ್ಕೆ ಅಖೈರ ತನಿಖೆಗೆ ಇಟ್ಟಿರುವದರಿಂದ ಆಕ್ಷೇಪ ಇದ್ದರೆ ಆ ದಿವಸ 10 ಘಂಟೆಯ ಒಳಗೆ ಕೋರ್ಟು ಮುಂದೆ ಹಾಜರು ಆಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದರೆ ಸದರಿ ವ್ಯಾಜ್ಯವನ್ನು ಏಕ ಪಕ್ಷವಾಗಿ ತೀರ್ಮಾನಿಸಲಾದೀತು ಎಂತ ಈ ಮೂಲಕ ತಿಳಿಸಲಾಗುತ್ತದೆ.

ಉಡುಪಿ
ತಾ 12-2 34

K. Ramanatha Pai,
Pleader for Plaintiff

FRESH CONSIGNMENT ARRIVED

UNEQUAL QUALITY **EXCEPTIONAL PRICE**

A TIRE THAT SAVES YOU REPUTATION AND MONEY

The Canara Public Conveyance Co., Ltd.

MANGALORE.

ಬಳ್ಳಾರಿಯ ವ್ಯಾಜ್ಯ!!

ಭೂಕಂಪದಿಂದಾಗಿ ಹಿತಸಂಭವ

ಸ್ಫುಟಾಂಶಗಳು:

ಬಳ್ಳಾರಿಯ ವ್ಯಾಜ್ಯ ಉಳಿದಿರುವಷ್ಟು ಕನ್ನಡವಾದರೂ ಉಳಿಯಲಿ ಎಂಬ ಅಭಿಪ್ರಾಯದಿಂದ ಶ್ರೀ ಚಂದ್ರಶೇಖರ ಶಾಸ್ತ್ರಿಗಳೇ ಮೊದಲಾದ ಕರ್ನಾಟಕಾಭಿಮಾನಿಗಳು ಕನ್ನಡ ಕಲಿಸುವ ಮೂಲಶಾಲೆಗಳು ಬಳ್ಳಾರಿ ಜಿಲ್ಲೆಯಲ್ಲಿ ಉಳಿಯಲೆಂದು ಚಳವಳಿಸುವಾಗ, ಬಳ್ಳಾರಿ ಅನಂತಪುರಗಳು ಕನ್ನಡ ಜಿಲ್ಲೆಗಳೇ ಅಲ್ಲವೆಂದು ತೆಲುಗರ ಆಕ್ಷೇಪಗಳು ಎದ್ದಿವೆ. ಬಳ್ಳಾರಿಯ ಪೂರ್ವದಿಕ್ಕಿನ ತಾಲೂಕುಗಳಲ್ಲೂ ಅನಂತಪುರದ ಪಡುದಿಕ್ಕಿನ ತಾಲೂಕುಗಳಲ್ಲೂ ಕನ್ನಡವೇ ಜನರ ಭಾಷೆಯಾಗಿದೆ. ಜನರ ನಾಟಕಾದಿಗಳೂ ಕನ್ನಡದಲ್ಲೇ ಹೊರತು ತೆಲುಗಿನಲ್ಲಿಲ್ಲ. ಆದೋನಿ ಮೊದಲಾದ ತಾಲೂಕುಗಳಲ್ಲಿ ಕನ್ನಡ ನಾಟಕ ಸಂಘಗಳಿವೆ. ವರ್ತಕರಲ್ಲಿ ನೇಕಡಾ ೮೦ ಕನ್ನಡದಲ್ಲಿ ಲೆಕ್ಕಪತ್ರವಿಡುತ್ತಿದ್ದಾರೆ; ಆದರೆ ಅವರ ಬರಹ ಮಾತ್ರ ತೆಲುಗು, ಭಾಷೆ ಕನ್ನಡ. ಎಲ್ಲಾ ಹಳ್ಳಿಗಳ ಹೆಸರುಗಳು ಕನ್ನಡ, ತೆಲುಗಲ್ಲ; ಒಂದೂ ತೆಲುಗು ಹೆಸರ ಗ್ರಾಮವಿಲ್ಲ. ಶಾಸನಗಳು 'ಅಳಿಯ ರಾಮರಾಜ'ನೆಂದಿವೆ ಹೊರತು 'ಅಳ್ಳುಡು ರಾಮರಾಜು' ಎಂದೇನೂ ಇಲ್ಲವಲ್ಲ! ರೈಲ್ಸೆಯವರು ತಮ್ಮ ಪುಸ್ತಕದಲ್ಲಿ ಮಾಹಿತಿ ಕೊಡುತ್ತಾ ಕರ್ನಾಟಕ ಪೂರ್ವಗಡಿ ಅನಂತಪುರವೆಂದು ಬರೆದಿದ್ದಾರೆ. ಐದು ತಾಲೂಕುಗಳಲ್ಲಿ ಕನ್ನಡಿಗರೇ ಇರುತ್ತಾ ಇವರಿಗೆ ಕನ್ನಡ ಕಲಿಸುವ ಒಂದೂ ಶಾಲೆ ಇಲ್ಲವೆಂಬ ಬಳಿಕ, ಅದಕ್ಕಾಗಿ ವಿರೋಧಿಸುವ ಆಂಧ್ರರು ಅಂಥರೇ ಅಲ್ಲದೆ ಮತ್ತೇನು!

* * * *

ಶಿಕ್ಷಿತ ನಿರುದ್ಯೋಗಿಗಳು ಕುಂಭಕೋಣ ತಾಲೂಕಿನ ಹಲವು ಸ್ವಯಂಸೇವಕರು ಆ ತಾಲೂಕಿನಲ್ಲಿ ಶಿಕ್ಷಿತರಾಗಿಯೂ ನಿರುದ್ಯೋಗಿಗಳಾಗಿರುವವರು ಎಷ್ಟೆಂದು ಎಲ್ಲ ವಿವರಗಳನ್ನೂ ಕೊಂಡ ಖಾನೇಸುಮಾರಿಯನ್ನು ಪ್ರಾರಂಭಿಸಿರುವರು. ಇದೇ ಸಂಸ್ಥಾನದಲ್ಲಿ ಇಂತಹದೆಷ್ಟೋ ಒಂದು ಲೆಕ್ಕವು ಸಿಗಲು ಅನುಕೂಲವಾಗುವ ಹಾಗೆ ಎಲ್ಲ ಕಡೆಗಳಲ್ಲೂ ಇಂತಹ ಖಾನೇಸುಮಾರಿಯನ್ನು ಎತ್ತಿಕೊಳ್ಳಬಹುದೆಂದು ಅಲ್ಲಿನವರ ಸೂಚನೆ. ಎಸ್. ಎಸ್. ಎಲ್. ಸಿ. ವರೆಗೆ ಪಾಠಕ್ರಮ ಮಾಡಿದವರಾಗಿ, ಸಂಪಾದನಾವಾಗಿ ಅಥವಾ ಜೀವನಕ್ಕೆ ಸಾಕಾಗುವಷ್ಟು ದುಡಿತವಿಲ್ಲದೆ ಇರುವವರನ್ನು ಶಿಕ್ಷಿತ ನಿರುದ್ಯೋಗಿಗಳ ಸಾಲಿಗೆ ಸೇರಿಸತಕ್ಕದ್ದು. ನಮ್ಮ ಜಿಲ್ಲೆಯಲ್ಲಿ ಈ ತರಗತಿಗೆ ಸೇರತಕ್ಕವರು ಪ್ರತಿಯೊಂದು ತಾಲೂಕಿನ ಮುಖ್ಯ ಪಟ್ಟಣಗಳಲ್ಲಿರುವರು. ಅವರಾದರೂ ಒಂದುಗೂಡಿ, ತಾಲೂಕಿನ ಮೂಲೆಗಳಿಂದಲೂ ಬೇಕಾದ ಮಾಹಿತಿಯನ್ನು ಕೂಡಿಸಲು ಉಪಕ್ರಮಿಸಿದರೆ ಪ್ರಯೋಜನವಿದೆ. ಕಲ್ಕತ್ತ ಯೂನಿವರ್ಸಿಟಿಯವರು, ಇನ್ನು ಯೂನಿವರ್ಸಿಟಿ ವಿದ್ಯಾಭ್ಯಾಸಕ್ಕೆ ಸೇರಿಸಿಕೊಳ್ಳತಕ್ಕವರನ್ನು ಆಕ್ಷೇಪವಾಗಿಯೂ ಪ್ರತ್ಯೇಕಿಸಿ ಅವರ ಸಂಖ್ಯೆಯು ಆಗುವಷ್ಟು ಕಡಿಮೆಯಾಗುವಂತೆ ಮಾಡಬೇಕೆಂದು ಯತ್ನಪಡುತ್ತಾರೆ. ಜರ್ಮನಿಯಲ್ಲಿ ಶಿಕ್ಷಿತ ನಿರುದ್ಯೋಗಿಗಳ ಸಂಖ್ಯೆ ಹೆಚ್ಚಾಗಿ ಅಂಥವರು ಚಳವಳಿಗಳಲ್ಲಿ ಸೇರಿ ಪೀಡಕರಾಗುವರೆಂದು, ಈಗ ಪ್ರೌಢಶಾಲೆಯ ಪುಸ್ತಕಾಭ್ಯಾಸಕ್ಕೆ ಸೇರುವವರನ್ನು ಅರ್ಧಕ್ಕರ್ಧ ತಡೆಯುವರು. ಹಾಗಾದರೆ, ಅವರು ವೃತ್ತಿ ಶಿಕ್ಷಣಕ್ಕೆ ಅಗತ್ಯ ಕೈ ಹಚ್ಚಿ, ತಮ್ಮ ಜೀವನೋದ್ಯೋಗದಲ್ಲಿ ಸಂತುಷ್ಟರಾಗಿರುವರು ಎಂದೇ ಅವರ ತಿಳುವಳಿಕೆ.

ಜೀವನೋದ್ಯೋಗ ಕುರಿತಾದ ಗ್ರಂಥ ನಮ್ಮ ಜಿಲ್ಲೆಯವರೂ ಮೈಸೂರು ರಾಜ್ಯದಲ್ಲಿ ವೃತ್ತಿ ಶಿಕ್ಷಣದ ಅಧಿಕಾರಿಗಳೂ ಆಗಿರುವ ಶ್ರೀ. ಕೆ. ಎನ್. ಕಿಣಿಯವರು ಇಷ್ಟರಲ್ಲೇ ಅಮೇರಿಕಕ್ಕೆ ತೆರಳಿ, ಆ ವಿಷಯದಲ್ಲಿ ಬೇಕಾದ ಮಾಹಿತಿ ಪಡೆದು ಅಲ್ಲಿ ಪಿ. ಎಚ್. ಡಿ. ಪದವಿಗಳಿಸಿ ಬಂದಿರುವರಷ್ಟೆ. ಅವರು ಮೈಸೂರು ಸಂಸ್ಥಾನದಲ್ಲಿನ ವೃತ್ತಿಶಿಕ್ಷಣದ ಸದ್ಯಸ್ಥಿತಿ ಮತ್ತು ಭವಿತವ್ಯತೆಯ ವಿಚಾರವಾಗಿ, ಇಂಗ್ಲಿಷಿನಲ್ಲಿ ಒಂದು ಗ್ರಂಥವನ್ನು ಈಗ ಪ್ರಕಟಿಸಿರುವರು. ಅವರು ಡಾಕ್ಟರ್ ಬಿರುದು ಪಡೆದುಕೊಳ್ಳಲು ಅರ್ಹತೆ ~~ಮುಟ್ಟಿಸಿದ್ದ ಈ ಪ್ರೌಢ ಗ್ರಂಥವು ೨೦೦ ಪುಟಗಳುಳ್ಳದಾಗಿ~~ (ಉತ್ತಮ ಮುದ್ರಣ ಚಿತ್ರಗಳೊಡನೆ,) ಎಂಟು ರೂಪಾಯಿ ಬೆಲೆಗೆ ದೊರೆಯುವುದು. ಗ್ರಂಥವು ಒಂಬತ್ತು ಅಧ್ಯಾಯಗಳಲ್ಲಿ ವಿಭಾಗ ಹೊಂದಿದ್ದು, ಪ್ರತಿಯೊಂದು ಸಂಬಂಧಪಟ್ಟ ವಿಚಾರವು ಅಮೂಲಾಗ್ರವಾಗಿ ಶೋಧಿತವಾಗಿ, ಸುಲಭ ಶೈಲಿಯಲ್ಲಿ ವಿವರಣೆಯುಳ್ಳ ಕಾರಣ, ಈ ವಿಜ್ಞಾನದ ಮಾಹಿತಿಯೇ ಇಲ್ಲದವರಾದರೂ ಓದಿ ಚೆನ್ನಾಗಿ ಗ್ರಹಿಸಿದರೆ ಅನುಕೂಲವಾಗಿದೆ. ಈ ಶಿಕ್ಷಣ ಶಾಖೆಗೆ ಮೈಸೂರು ಸರಕಾರವು ಖರ್ಚು ಮಾಡುವುದೂ ಕಡಿಮೆಯಾಗಿಲ್ಲ, ಇದರಿಂದ ಉಂಟಾದ ಉಪಕಾರವೂ ಹೆಚ್ಚಾಗಿಲ್ಲ ಏತಕ್ಕೆಂದು ಒಂದು ಪ್ರಶ್ನೆ ಹಾಕಿಕೊಂಡು, ಇದೀ ಗ್ರಂಥವು ಮುಂದಿರಿಸಿದೆ. ಎಷ್ಟು ವಿಧವಾಗಿ ಜೀವನೋಪಾರ್ಜನೆ ಮಾಡಬಹುದೋ ಅಷ್ಟಕ್ಕು ವಿದ್ಯಾಲಯಗಳಲ್ಲಿ ಸ್ಥಳವಿದೆ, ಆದರೆ ಅದೇಕೆ ಮತ್ತು ಹೇಗೆ ಬೋಧಿಸಬೇಕು ಎಂಬುದೇ ಗ್ರಂಥದ ಮುಖ್ಯ ಹೇಳಿಕೆ. ಸಂಗ್ರಹ ಯೋಗ್ಯವಾಗಿ, ಇಂಗ್ಲಿಷಿನಲ್ಲಿ ಇದೇ ಮೊದಲಾಗಿ, ಸದ್ಯಸ್ಥಿತಿಗೆ ಅಗತ್ಯವಾಗಿರುವ ಈ ಗ್ರಂಥದ ವಿಚಾರವಾಗಿ ಮುಂದಣ ಸಂಚಿಕೆಗಳಲ್ಲಿ ಅಲ್ಪಸ್ವಲ್ಪ ಪರಿಚಯ ಕೊಡುತ್ತ ಬರುವೆವು. ವಾಚಕರು ಅವಶ್ಯವಾಗಿಯೂ ಓದತಕ್ಕದ್ದು.

* * * *

ತೀರ್ವೆ ಮಾಫಿಗಾಗಿ ಕೌನ್ಸಿಲು ಅಭಿಮತ ಇದೇ ಸಂಸ್ಥಾನದಿಂದ ಒಟ್ಟು ತೀರ್ವೆಯು ಸುಮಾರು ೩ ಕೋಟಿ ವಸೂಲಾಗುವುದು. ಈಗಣ ಶೋಚನೀಯ ಸ್ಥಿತಿಯಲ್ಲಿ ತೀರ್ವೆಯಲ್ಲಿ ಒಂದು ಕೋಟಿಯಷ್ಟನ್ನಾದರೂ ಮಾಫಿ ಬಿಡಬೇಕಾಗಿ ರೈತರ ಇಚ್ಛೆ. ಸರಕಾರಕ್ಕೆ ರೂಪಾಯಿಯಲ್ಲಿ ಎರಡಾಣೆಯನ್ನು ಬಿಡುವುದೇ ಸದ್ಯಕ್ಕೆ ಯುಕ್ತವೆಂದೂ, ಇದರಿಂದ ಜನತೆಗೆ ಸಾಕಷ್ಟು ರಿಯಾಯತಿ ತೋರಿಸಿದಂತಾಗುತ್ತದೆಂದೂ ಕಂಡು ಬಂದಿದೆ. ಕೌನ್ಸಿಲಿನಲ್ಲಿ ಈ ವಿಷಯ ಚರ್ಚೆಯಾದಾಗ, ಪ್ರತಿನಿಧಿಗಳ ಅಭಿಪ್ರಾಯವು ಕಾಲಂಶ ಮಾಫಿಯ ಕಡೆಗೂ ಒಲಿದಿಲ್ಲ, ಪ್ರತಿನಿಧಿಗಳಾಗಿ ಮಂತ್ರಿ ಪದವಿಯನ್ನೇರಿದವರು ಸರಕಾರದ ಕಡೆಗೆ ನಿಂತರು. ಇವರನ್ನು ಚುನಾಯಿಸಿದವರ ಬಾಯಿಗೆ ಸಕ್ಕರೆ ಸುರಿಯಲಿ. [ಹತ್ತು ರೂಪಾಯಿಗಿಂತ ಕಡಿಮೆ ತೀರ್ವೆ ಕೊಡುವವರಿಗೆ ಮಾತ್ರ ರಿಯಾಯಿತಿಯನ್ನು ತೋರುವಂತೆ ಸರಕಾರದ ಛಲ] ನೇಕಡಾ ೩೫ರ ರಿಯಾಯತಿಯಾಗಬೇಕೆಂದು ವೋಟು ತೆಗೆವಾಗಲಾದರೂ, ಅಂದೇ ಕುದುರೆ ಜೂಜು ಇದ್ದುದರಿಂದ ಪ್ರತಿನಿಧಿಗಳಲ್ಲಿ ಹಲವರು ಗೈರುಹಾಜರು! ನೊಮಿನೇಟೆಡ್ ಮೆಂಬರುಗಳಲ್ಲಿ ಸಹ ಸರಕಾರಕ್ಕೆ ಒಲಿದವರು ೫, ವೋಟು ಕೊಡದವರು ೪, ಚುನಾಯಿತರೊಳಗೆ ಗಂಜಾಮಿನ ಪಟ್ರೋ ಮಹಾಶಯರೊಬ್ಬರೇ ವಿರುದ್ಧ, ಇತರರೆಲ್ಲರೂ ಸಂತೋಷದಿಂದ ವೋಟು ಕೊಟ್ಟರು. ಗಂಜಾಮಿಗೆ ಈ ರಿಯಾಯತಿಯೇ ಬೇಡವೋ, ಈ ಮೆಂಬರೇ ಬೇಡವೋ ಮುಂದೆ ನೋಡಬಹುದು. ಯುರೋಪೀಯ ಮೆಂಬರರೊಬ್ಬರೂ ಜನತೆಯ ದೆಸೆಯಿಂದಾಗಿ ಹಾಜರಿದ್ದಿಲ್ಲ!

* * * *

ಭೂಕಂಪದಿಂದಾಗಿ ಹಿತಸಂಭವ ಬಿಹಾರಕ್ಕೊದಗಿದ ದುಃಖವು ಉಂಟಾದದ್ದೇ, ಅದರ ಆಪತ್ತಿನಿಂದ ಬೆಂದ ನಿರಾಶ್ರಿತರು, ಜಾತಿ, ಮತ, ಪಂಗಡ ಸಂಪತ್ತು ಮುಂತಾದ ವಿಷಯಗಳೆಂದುವೇನನ್ನೂ ಗಣನೆಗೆ ತಾರದೆ, ಸಮಸ್ತ ಭೇದ ಭಾವಗಳನ್ನು ಮರೆತು ಒಂದಾಗುವರು ಎಂಬುದು. ಬಿಹಾರದ ದುಃಖದ ಪರಿಹಾರದಿಂದ ತೀರದೆ ಲಂಡನಿನಿಂದ ಮುಸ್ಲಿಮರು ಹಣ ಕೂಡಿಸಿ ಮುಸ್ಲಿಮರಿಗಾಗಿಯೆ ಅದನ್ನು ವ್ಯಯಿಸಬೇಕಾಗಿ ಬರೆಯಲು, ಹಾಗೆ ಪ್ರತ್ಯೇಕ ಜಾತಿಗಳಿಗಾಗಿ ಎಂದು ಹಣ ಕಳುಹಿಸಿದರೆ, ಅದನ್ನು ಸ್ವೀಕರಿಸಬಾರದಾಗಿ ಹಿಂದೂ ಮಹಾ ಸಭೆಯು ಆಕ್ಷೇಪವೆತ್ತಿತು. ಮುಸ್ಲಿಮರು ಸಹ ಯಾರೂ ಹೀಗೆ ಪ್ರತ್ಯೇಕವೊಂದು ಸಮಾಜದವರಿಗೆಂದೇ ಮಾತ್ರ ಹಣ ಕಳಿಸಬಾರದೆಂಬಯಿಯೂ, ಆದರೆ ಸಾವಿರಾರು ಮಸೀದಿಗಳು ಭಗ್ನವಾದುದಕ್ಕಾಗಿ ಮಾತ್ರ ಮುಸ್ಲಿಮರು ಹಣ ಕಳಿಸಿ ಅವುಗಳ ಜೀರ್ಣೋದ್ಧಾರ ಮಾಡಿಸಬಹುದೆಂದೂ ನಿರ್ಧರಿಸಿರುವರು. ಇನ್ನು ರೂ ಪತಿತ-ಸನಾತನಿ ಎಂಬ ಭೇದಭಾವಗಳನ್ನಳಿದು ನೂತನ ಸಮಾಜವನ್ನು ಸೃಷ್ಟಿಸಲು ಸರ್ವರೂ ಸಿದ್ಧರಾಗಿರಿ, ಎಂದು ಈ ಸಂದರ್ಭವನ್ನರಿತು ಮಹಾತ್ಮಾಜೀಯವರು ಬೋಧಿಸುತ್ತಿರುವರು. ಇದುವರೆಗೆ ಸುಮಾರು ೧೮ ಲಕ್ಷ ರೂಪಾಯಿಗಳು ವೈಸ್ರಾಯರ ಫಂಡಿಗೂ ಅದರ ಅರೆವಾಸಿಗೂ ಕಡಿಮೆ ಬಾಬು ರಾಜೇಂದ್ರ ಪ್ರಸಾದರ ಫಂಡಿಗೂ ಜಮೆಯಾಗಿದೆ. ಇಂಗ್ಲೆಂಡಿನ ಹಣ ಸುಮಾರು ೫೦೦೦೦ ಜಮೆಯಾಗಬಹುದು, ತಿಳಿಪುತ್ತಲಿದೆ. ಪರರಾಷ್ಟ್ರಗಳು ಹಿಂದೀಯರ ಕಡೆಗೆ ಎಷ್ಟು ಸಹಾನುಭೂತಿಯುಳ್ಳವರೆಂದು ತಿಳಿಯಲೂ ಇಂತಹ ಅನುಕೂಲ ಸಂದರ್ಭವು ಈ ಭೂಕಂಪದಿಂದಾಗಿ ಉಂಟಾಗಿದೆ. ಸಹಾನುಭೂತಿಯು ಗುಣ ಮಂತಿಗೆಯ ಅಂಕೆಯ ತಿಳಿಸದಿರುವುದೆ!

ತಾಲೂಕು ಬೋರ್ಡುಗಳ ನಿಯಾಮಕ ನಿರ್ಣಯವಾಗಿದೆ. ಮಸೂದೆಯಲ್ಲಿ ಸ್ವಲ್ಪ ಹೆಚ್ಚು ಕಡಿಮೆಗಳಾಗಿ ಇವು ಮುಕ್ತಾಯ ಹೊಂದುವುವು. ಗ್ರಾಮ ಪಂಚಾಯತುಗಳು ಧಾರಾಳವಾಗಿ ಬಲಗೊಳ್ಳುವುವು. ಜಿಲ್ಲೆಯ ಹಿತಕ್ಕೆ ಸಾಧಕವಾಗುವಂತೆ ಕಮಿಟಿಗಳು ಏರ್ಪಡುವುವು. ಜಿಲ್ಲಾ ಬೋರ್ಡುಗಳೆಲ್ಲವಕ್ಕೆ ಸರಕಾರವು ಎಕ್ಸಿಕ್ಯೂಟಿವ್ ಆಫೀಸರುಗಳನ್ನು ನೇಮಿಸುವುದು ಅಗತ್ಯವೇ ಇಲ್ಲವೇ ಎಂಬುದು ಸ್ವಲ್ಪ ವಿವಾದಾಸ್ಪದವಾದುದು. ಜಿಲ್ಲಾ ಬೋರ್ಡುಗಳನ್ನು ಮಾತ್ರ ಇಬ್ಭಾಗ ಮಾಡಿ ನೇಮಿಸುವ ಕ್ರಮವೇನೂ ಸರಿ ದೋರುವುದಿಲ್ಲ, ಜಿಲ್ಲೆಗೊಂದರಂತೆ ಬೋರ್ಡುಗಳಿದ್ದರೆ ಹಿತವಲ್ಲವೆ? ಒಂದು ಜಿಲ್ಲೆಗೆ ಎರಡು ಬೋರ್ಡುಗಳೆಂದಾದರೆ, ಅವು ಹೊಸ್ತು ಬೆಳೆದ ತಾಲೂಕು ಬೋರ್ಡುಗಳಂತೆಯೆ ವಿಕಟವಾಗಿ ತೋರುವವಲ್ಲವೇ? ಮುಂದೆ ಪ್ರಾಂತಿಕ ಕೌನ್ಸಿಲು ಚುನಾವಣೆಗೆ ವೋಟರಿಗಾಗಿ ಹೀಗೆ ಪ್ರಾಂತ್ಯವನ್ನು ವಿಭಾಗಗೊಳಿಸಲಾಗುವುದೋ ಅಷ್ಟೇ ವಿಸ್ತೀರ್ಣಗಳಿಗೆ ಒಂದೊಂದು ಜಿಲ್ಲಾ ಬೋರ್ಡ್ ಎಂತಾದರೆ ಚಂದವೆ?

NOTES....
ನೋಟಿಗಳು.

ಬಿಹಾರದಲ್ಲಾದ ಭೂಕಂಪದ ಕಾಲದಲ್ಲಿ ಒಬ್ಬ ವಕೀಲ ಮಹಾಶಯನ ಕಾಲಡಿಯಲ್ಲೇ ನೆಲವು ಬಾಯ್ತೆರೆದು ಅವನನ್ನು ನುಂಗಿತೆಂದೂ, ಆದರೆ ಮತ್ತೊಂದು ಕ್ಷಣದಲ್ಲಿ ಅವನನ್ನು ಪುನಃ ನೆಲವು ಬಾಯ್ತೆರೆದು ಉಗುಳಿತೆಂದೂ ಅವನ ಹೇಳಿಕೆಯು ಪ್ರಕಟವಾಗಿದೆ. ಇಂತಹ ವಕೀಲರನ್ನು ನುಂಗಿದರೆ ಭೂಮಿಗೆ ಅಜೀರ್ಣವಾಗುವುದಾಗಿ ಬೆದರಿಕೆ ಹುಟ್ಟಬೇಕು.

* * * *

ಲಂಕೆಯಲ್ಲಿ ಹೆಂಡತಿಯನ್ನು ಕೊಂದವನೊಬ್ಬನು ತೆಂಗಿನ ಮರ ಹತ್ತಿ ಕುಳಿತನು. ಎಷ್ಟೇ ಪ್ರಯತ್ನಿಸಿದರೂ ಆಹಾರವನ್ನು ಸಹ ಸ್ವೀಕರಿಸದೆ, ಕೆಳಗಿಳಿಯಲೇ ಇಲ್ಲ. ಪೋಲೀಸರು ನಿರುಪಾಯರಾಗಿ ಕಾದು ಕೂತರು. ಅವರು ಮೇಲೆ ಹತ್ತಿದರೆ ಅವನು ಕೆಳಕ್ಕೆ ಹಾರಿ ಸತ್ತರೆ, ಅವರ ಮೇಲೆ ತಪ್ಪಿರಾದೀತೆಂದು ಅವರು ಬೆದರಿದರು. ಆದರೆ, ಅವನು ಮೂರನೇ ದಿನ ತಾನಾಗಿ ಕೆಳಕ್ಕೆ ಬಿದ್ದು ಸತ್ತುದರಿಂದ ಯಾರಿಗೂ ಬಾಧೆ ತಟ್ಟಲಿಲ್ಲ.

* * * *

ಭೂಕಂಪವಾದ ಸರಹದ್ದುಗಳಲ್ಲಿ ಚಳಿ ಹೆಚ್ಚು. ಬಿಹಾರದಲ್ಲಿ ಭೂಕಂಪವಾಗಿ ಸಿಂಧ, ಮುಂಬಾಯಿ ಮಧ್ಯ ಪ್ರಾಂತ್ಯಗಳು ಚಳಿ ಹಿಡಿದುವು. ಮೆಕ್ಸಿಕೋ ಭೂಕಂಪದಿಂದ ಯುನೈಟೆಡ್ ಸ್ಟೇಟ್ಸ್‌ನಲ್ಲಿ ನೀರೆಲ್ಲ ಗಡ್ಡೆಕಟ್ಟಿದ ನುಸಿಗಳ ಕಾಟವೂ ಕಡಿತವೂ ಎಷ್ಟೆಂದು ತಿಳಿದಿಲ್ಲವಾದರೂ, ಭೂಕಂಪವೂ ಈ ಚಳಿಯೂ ಸೇರಿ, ಭೂಮಿಗೆ ಅಲ್ಲಲ್ಲ ಮಲೇರಿಯ ಜ್ವರ ಹಿಡಿದಂತಾಗಿದೆ ಎನ್ನಬೇಕು.

* * * *

ವೈಸ್ರಾಯರಿಗೆ ರಜೆ, ಮದ್ರಾಸು ಗವರ್ನರರು ವೈಸ್ರಾಯರಾದರು. ಮದ್ರಾಸು ಗವರ್ನರರ ಬದಲು ಒಬ್ಬ ಪ್ರಸಿದ್ಧ ಮುಸ್ಲಿಮ ಕೌನ್ಸಿಲರು ನೇಮಕ ಹೊಂದಿದರು. ಪಂಜಾಬು ಗವರ್ನರರಿಗೆ ರಜೆ, ಅಲ್ಲಿಯೂ ಮುಸ್ಲಿಮ ಕೌನ್ಸಿಲರೊಬ್ಬರಿಗೆ ಬದಲಿ ನೇಮಕವಾಯಿತು. ಇನ್ನು ಬಂಗಾಳ ಗವರ್ನರರೂ ರಜೆಗೆ ಸಿದ್ಧರಂತೆ, ಅಲ್ಲಂತೂ ಮುಸ್ಲಿಮ ಕೌನ್ಸಿಲರು ಸಿದ್ಧರಾಗಿದ್ದಾರಾದರೂ ಹೇಗಾಗುವುದೋ?

* * * *

ತ್ರಿಚಿನಾಪಳ್ಳಿಯ ಶ್ರೀಯುತ ಶೇಷಶಾಯಿಯವರು ತಮ್ಮ ವಾಯುವಿಮಾನವನ್ನೇರಿ ಊರನ್ನು ಸುತ್ತುವಾಗ ಅದು ನೆಲದಿಂದ ನಾಲ್ಕಡಿ ಎತ್ತರವಿದ್ದಾಗಲೆ ಕವಚಿಬಿದ್ದು ಅವರನ್ನು ಕೊಂದಿತ್ತು. ಎಲ್ಲರಿಗೂ ಇದು ವಿಚಿತ್ರವಾಗಿದೆ. ಅವರ ವಿಮಾನಕ್ಕೆ ಶೇಷ ವಿಮಾನ ಎಂದು ಹೆಸರಿದ್ದಿತು. ಶೇಷವು ಬಿಲದೊಳಗೆ ನುಸುಳಿದಷ್ಟು ಕ್ರಮದಿಂದ ಈ ಶೋಚನೀಯ ಅಪಘಡವು ಇವರಿಗೆ ಉಂಟಾಯಿತಲ್ಲ!

* * * *

ಜಪಾನು ಕಳೆದ ವರ್ಷ ಅಬಿಸೀನಿಯಾದಲ್ಲಿ ರಾಜನಿಂದ ಸಾವಿರಾರು ಎಕ್ರೆ ಸ್ಥಳ ಪಡೆದು ಅಲ್ಲಿ ಹತ್ತಿ ಬಿತ್ತಿದೆ. ಇಂಗ್ಲಿಷರ ಸುಡಾನ್ ಪ್ರಾಂತ್ಯದ ಹತ್ತಿಗೂ ಇದಕ್ಕೂ ಸ್ಪರ್ಧೆ ~~ಈಗ ಜಪಾನಿನ ಸ್ತ್ರೀಯರು ಸುಂದರಿಯರು ಎಂದು ರಾಜನ~~ ಅಭಿಪ್ರಾಯವಂತೆ. ಸದ್ಯದಲ್ಲೇ ಜಪಾನಿನ ಸುಂದರಿಯೊಬ್ಬಳು ರಾಣಿಯಾಗುವಂತಿದೆ, ಇತ್ತ ಮಂಚೂರಿಯಾ, ಅತ್ತ ಅಬಿಸೀನಿಯಾ ಹೀಗೆ ಜಪಾನು ಪ್ರಬಲವಾಗುತ್ತಿದೆಯಾಗಿ ಇತರ ಯುರೋಪಿಯ ರಾಷ್ಟ್ರಗಳ ಹೇಳಿಕೆ.

* * * *

ರಷ್ಯದ ಮೇಲೆ ಜಪಾನು ಕೈಯೆತ್ತುವಂತಿದೆ ಎಂದು ರಷ್ಯದ ದೂರು. ಆಸ್ಟ್ರಿಯದ ಮೇಲೆ ಜರ್ಮನಿಯು ಹಾಯುವುದೆಂದು ಆಸ್ಟ್ರಿಯದ ದೂರು. ಜರ್ಮನಿಯು ಯುದ್ಧ ಸಿದ್ಧತೆ ದೂರುತ್ತೇದ್ದ ಫ್ರಾನ್ಸು, ತನ್ನಲ್ಲೇ ರಂಗಸ್ಥಳ ಮಾಡಿಟ್ಟುಕೊಂಡು ಯುದ್ಧಾಭಿನಯ ನಡೆಸುತ್ತಿದೆ

ಗೋಡ್ರೆಜ್ ಸಾಬೂನುಗಳಿಗೆ

ಅಮೂಲ್ಯವೂ ಹೊಸತೂ ಆದ ಪ್ರಶಸ್ತಿ

ಡಾ। ಎಂ. ಎ. ಅನ್ಸಾರಿ ಎಂ. ಡಿ.

(ಅಖಿಳ ಭಾರತ ಕೊಂಗ್ರೆಸ್ಸಿನ ಮಾಜಿ ಅಧ್ಯಕ್ಷರು.)

"ಗೋಡ್ರೆಜ್ ಸಾಬೂನುಗಳ ಉತ್ಕೃಷ್ಟ ಗುಣಗಳನ್ನು ಕಂಡು ನಾನು ಸಂತೋಷದಿಂದ ಮೆಚ್ಚಿದವನಾಗಿರುತ್ತೇನೆ. ಕಳೆದ ಹತ್ತು ವರ್ಷಗಳಿಂದ ನಾನವುಗಳನ್ನು ಉಪಯೋಗಿಸುತ್ತಿರುವೆನು. ಯುರೋಪುದಲ್ಲಾಗಲೀ ಇನ್ನಿತರ ಯಾವ ದೇಶದಲ್ಲಾಗಲೀ ತಯಾರಿಸಲ್ಪಟ್ಟ ಸಾಬೂನುಗಳಿಗಿಂತ ಇವು ಅತ್ಯುತ್ಕೃಷ್ಟವೆಂದೇ ನನ್ನ ಅನುಭವದ ಮಾತು. ಅವುಗಳ ಉತ್ಕರ್ಷತೆಯ ದೃಷ್ಟಿಯಿಂದಲೂ, ಅಲ್ಲದೆ ಅವು ಹಿಂದೂದೇಶದಲ್ಲೇ ಸಿದ್ಧಗೊಳಿಸಲ್ಪಟ್ಟವೆಂಬ ದೃಷ್ಟಿಯಿಂದಲೂ ನಾನವುಗಳನ್ನು ಹಿಂದೀಯ ಜನತೆಗೆ ಶಿಫಾರಸು ಮಾಡುತ್ತೇನೆ"

ಪ್ರಮುಖ ಡಾಕ್ಟರರೂ ಮತ್ತು ಪ್ರಮುಖ ರಾಷ್ಟ್ರೀಯ ಧುರೀಣರೂ ಆದ ಡಾ। ಅನ್ಸಾರಿಯವರ ಹೇಳಿಕೆಯು ಪ್ರತಿಯೊಬ್ಬ ವ್ಯಕ್ತಿಯ ಮತ್ತು ಪ್ರತಿಯೊಂದು ರಾಷ್ಟ್ರದ ದೈಹಿಕ ದೃಷ್ಟಿ ಮತ್ತು ರಾಷ್ಟ್ರೀಯ ದೃಷ್ಟಿಯಿಂದ ಸಹಾಯಕರವಾಗಬೇಕು.

Jaya Bharatham Co., P. B. No. 83. MADRAS.

ಜಯ ಭಾರತಂ ಕೋ., ಪಿ. ಬಿ. ೮೩, ಮದ್ರಾಸು.

ದ. ಕ. ಜಿಲ್ಲೆಗೆ ಏಜಂಟರು:—ಎಸ್. ಇ. ಬಂಗೇರಾ ಮಿಶ್ಶನ್ ಕಂಪೌಂಡು, ಕಾಸರಗೋಡು.

ಡಿಲ್ಲಿ ಬಿಸ್ಕೂಟಿನ ಕುರಿತು

ಇಂಡಿಯಾದ ಘನ ಕೈಗಾರಿಕಾ ಸಂಸ್ಥೆಯ

ಸರ್ ದೋರಾಬ್ ತಾತಾರವರು

"ಈ ಬಿಸ್ಕೂಟುಗಳನ್ನು ಹಿಂದೀಯ ಜನತೆಯ ಹೆಚ್ಚಿನ ಅವಗಾಹನೆಗೆ ತಂದಲ್ಲಿ ಸಹಜವಾಗಿ ಇವುಗಳು ಹೆಚ್ಚಿನ ವಿಕ್ರಯವಾಗುವುದರಲ್ಲಿ ಸಂದೇಹವಿಲ್ಲವುದಿಲ್ಲ."

"ಇಂಗ್ಲಾಂಡಿನಲ್ಲಿ ತಯಾರಿಸಲ್ಪಟ್ಟವುಗಳಿಗಿಂತಲೂ ನಾನು ಈ ಬಿಸ್ಕೂಟುಗಳನ್ನೇ ಪ್ರಶಸ್ತವೆನ್ನುತ್ತೇನೆ"— "ಇಂಗ್ಲಾಂಡಿನಲ್ಲಿ ನಿಮ್ಮ ಬಿಸ್ಕೂಟುಗಳು ಬಹಳ ಮೆಚ್ಚುಗೆಗೆ ಪಾತ್ರವಾಗಿವೆ"—ಎಂಬುದೇ ಕೆಲವು ಯೂರೋಪಿಯನರ ಹೇಳಿಕೆ.

ಮದ್ರಾಸು ಪ್ರಾಂತ್ಯಕ್ಕೆ ಏಜಂಟರು:—

Jaya Bharatham Co, P. B. No. 83 MADRAS.

ಜಯ ಭಾರತಮ್ ಕೋ., ಪಿ. ಬಿ. ೮೩ ಮದ್ರಾಸು.

ಸ್ಟೋಕಿಸ್ಟರು:—ಮೆಸರ್ಸ್ ಕಾಮತ್ ಎಂಡ್ ಕೋ., ಮಂಗಳೂರು.

ದ. ಕ. ಜಿಲ್ಲಾ ಏಜಂಟರು:—ಎಸ್. ಇ. ಬಂಗೇರಾ, ಮಿಶ್ಶನ್ ಕಂಪೌಂಡು, ಕಾಸರಗೋಡು.

ಗುಣಬಾರದಿದ್ದರೆ] ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ [ಹಣ ವಾಪಾಸು

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆಶೆಯ ಅಶಕ್ತಿಯಾಗುತ್ತದೆ. ಬಹಳ ಜನನದಲ್ಲಿ ವಿಶೇಷ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಮೊದಲೇ ಪೂರಾ ವಿಚಾರ ಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟ್ ಡಾಕ್ಟರ ಬಿ. ಎ. ವೈದ್ಯ, ಎಲ್. ಸಿ. ಪಿ. ಎಸ್, ಕೆಳಮಾಡುವರು. ಕಾಣಿ: ಈ ಚೂರ್ಣದಿಂದ ಯಾವ ತರದ ಅಪಾಯವಾಗದು ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿ ಕಿಮ್ಮತ್ತು ರೂ.೪, ವಿ. ಪಿ. ಆಣೆ ೮

ವಿಳಾಸ:—ಸಂಜೀವಿನೀ ಔಷಧಾಲಯ ಮು. ಪೊ. ಮಿರಜ, S. M. C.

ಬಹು ಕಾಲದ ಆವಶ್ಯಕತೆಗೆ



ಸಣ್ಣ ಕಬ್ಬಿನ ತೋಟದವರು ಸಣ್ಣ ರೀತಿಯಿಂದ ಸಕ್ಕರೆ ತಯಾರಿಸಲು ಯೋಗ್ಯ ರೀತಿಯ ಯಂತ್ರವು ಬೇಕೆಂದು ಬಹು ಕಾಲದ ಆವಶ್ಯಕತೆಯಲ್ಲಿದ್ದರು. ನಿಮಗೆ ಬೇಕಾದುದು ಇಲ್ಲೇ ಇದೆ.

ಕಿರ್ಲೋಸ್ಕರ ಶುಗರ್ ಸೆಂಟ್ರಿಫ್ಯುಗಲ್

ಎಂಬುದು ಆಧುನಿಕ ಮತ್ತು ಅತ್ಯುತ್ಕೃಷ್ಟ ಸಾಧನಗಳಿಂದೊಡಗೂಡಿ ಸಕ್ಕರೆ ತಯಾರಿಸಲು ಸುಲಭ ಯಂತ್ರವಾಗಿದೆ. ಸಣ್ಣ ಧಂಡವಾಳದಲ್ಲಿ ಹೆಚ್ಚಿನ ಲಾಭವನ್ನು ಕೊಡುತ್ತದೆ. ವಿವರಗಳಿಗೆ:—ಕಿರ್ಲೋಸ್ಕರ್ ಬ್ರದರ್ಸ್ ಲಿಮಿಟೆಡ್ ಕಿರ್ಲೋಸ್ಕರ್‌ವಾಡಿ (ಸತಾರ ಜಿಲ್ಲಾ) ಇಲ್ಲಿಗೆ ಬರೆಯಿರಿ.

ಸ್ಟೋಕಿಸ್ಟು:—ಬಾಸೆಲ್ ಮಿಶನ್ ಬುಕ್ ಡಿಪೊ ಎಂಡ್ ಟ್ರೇಡ್ ಡಿಪೊಜಿಟರಿ ಕೋ., ಮಂಗಳೂರು.

ಮಹಾತ್ಮಾಜೀಯವರ ಕರ್ನಾಟಕ ಸಂಚಾರ.

ಮಹಾತ್ಮಜೀಯವರು ತಾ. ೨೧ನೇ ಬುಧವಾರ ರಾತ್ರಿ ೯-೩೦ಕ್ಕೆ ಮದರಾಸಿನಿಂದ ಹೊರಟು, ತಾ. ೨೨ನೇ ಗುರುವಾರ ಮುಂಜಾನೆ ೭-೩೦ಕ್ಕೆ ಬೆಂಗಳೂರಿಗೆ ತಲಪುವರು. ಅಲ್ಲಿಂದ ಘಂಟೆ ೭ಕ್ಕೆ ಹೊರಟು, ೧೧-೨೦ಕ್ಕೆ ಮೈಸೂರಿಗೆ ತಲಪುವರು. ಅಲ್ಲಿ ೧೧ರಿಂದ ೨ರ ವರೆಗೆ ಮಧ್ಯಾಹ್ನದ ಊಟ ಮತ್ತು ವಿಶ್ರಾಂತಿ ತೀರಿಸಿಕೊಂಡು, ಮಧ್ಯಾಹ್ನ ೨ಕ್ಕೆ ಕೊಡಗು ಪ್ರಾಂತ್ಯಕ್ಕೆ ತೆರಳುವರು.

ತಾ. ೨೨ನೇ ಗುರುವಾರ ಸಂಜೆ ೫—೩೦ಕ್ಕೆ ಪನ್ನಂಪೇಟೆಗೆ ತಲಪುವರು. ೫-೩೦ರಿಂದ ೭-೩೦ರ ವರೆಗೆ ಊಟ. ೭-೩೦ರಿಂದ ೭ರ ವರೆಗೆ ಸಭೆ ಮತ್ತು ರಾತ್ರಿ ವಿಶ್ರಾಂತಿ. ತಾ. ೨೩ನೇ ಶುಕ್ರವಾರ ಮುಂಜಾನೆ ೭ರಿಂದ ೮ರ ವರೆಗೆ ವೀರರಾಜೇಂದ್ರ ಪೇಟೆಗೆ ಪ್ರಯಾಣ. ೮ರಿಂದ ೯ರ ವರೆಗೆ ಸಭೆ. ೯-೩೦ರಿಂದ ೧೧ರ ವರೆಗೆ ಮಡಿಕೇರಿಗೆ ಪ್ರಯಾಣ, ದಾರಿಯಲ್ಲಿ ಮೂರು ಚಿಕ್ಕ ಸಭೆಗಳು. ೧೧ರಿಂದ ೩ರ ವರೆಗೆ ಊಟ ಮತ್ತು ವಿಶ್ರಾಂತಿ. ಮಧ್ಯಾಹ್ನ ೩ರಿಂದ ೪.೨೦ರ ವರೆಗೆ ಫ್ರೇಜರಪೇಟೆಗೆ ಪ್ರಯಾಣ. ೪-೨೦ರಿಂದ ೪.೫೦ರ ವರೆಗೆ ಸಭೆ. ೪-೫೦ರಿಂದ ೫-೪೫ರ ವರೆಗೆ ಸಂಜೆ ಊಟ ಮತ್ತು ವಿಶ್ರಾಂತಿ. ೬-೪೫ರಿಂದ ೭ರ ವರೆಗೆ ತಿರುಗಿ ಮಡಿಕೇರಿಗೆ ಪ್ರಯಾಣ. ೭ರಿಂದ ೮ರ ವರೆಗೆ ಸಭೆ, ರಾತ್ರಿ ವಿಶ್ರಾಂತಿ.

ತಾ. ೨೪ನೇ ಶನಿವಾರ ಮುಂಜಾನೆ ೬-೩೦ರಿಂದ ೯-೩೦ರ ವರೆಗೆ ಪುತ್ತೂರಿಗೆ ಪ್ರಯಾಣ. ದಾರಿಯಲ್ಲಿ ಸುಳ್ಯ ಮತ್ತು ಇನ್ನೊಂದು ಹಳ್ಳಿಯಲ್ಲಿ ೫ ಮಿನಿಟಿನ ಸಭೆಗಳು. ೯-೩೦ರಿಂದ ೧೦ರ ವರೆಗೆ ಸಭೆ. ೧೦ರಿಂದ ೨ರ ವರೆಗೆ ಊಟ ಮತ್ತು ವಿಶ್ರಾಂತಿ ಮಧ್ಯಾಹ್ನ ೨ರಿಂದ ೪.೩೦ರ ವರೆಗೆ ಮಂಗಳೂರಿಗೆ ಪ್ರಯಾಣ. ೧೦ ಮಿನಿಟು ಹರಿಜನ ವಸತಿಗೆ ಭೇಟಿ. ದಾರಿಯಲ್ಲಿ ಪಾಣೆಮಂಗಳೂರು, ಬಂಟವಾಳ ಮತ್ತೆರಡು ಸ್ಥಳಗಳಲ್ಲಿ ೫ ಮಿನಿಟಿನ ಸಭೆಗಳು. ೪-೩೦ರಿಂದ ೫ರ ವರೆಗೆ ಸ್ತ್ರೀಯರ ಸಭೆ. ೫ರಿಂದ ೫-೩೦ರ ವರೆಗೆ ಹರಿಜನ ವಸತಿ ಗೃಹಕ್ಕೆ ಭೇಟಿ. ೫—೩೦ರಿಂದ ೬-೩೦ರ ವರೆಗೆ ಸಂಜೆ ಊಟ. ೬-೩೦ರಿಂದ ೮ರ ವರೆಗೆ ಸಭೆ ರಾತ್ರಿ ವಿಶ್ರಾಂತಿ.

ತಾ. ೨೫ನೇ ಆದಿತ್ಯವಾರ ಮುಂಜಾನೆ ೭ರಿಂದ ೭-೩೦ರ ವರೆಗೆ ಕೆನರಾ ಹೈಸ್ಕೂಲಿನ ಶಾಲೆಯಲ್ಲಿ ಎಲ್ಲರಿಗೂ ತೆರೆಯಲ್ಪಡುವ ದೇವಸ್ಥಾನದ ಶಂಕುಸ್ಥಾಪನೆ ಮತ್ತು ವಿದ್ಯಾರ್ಥಿಗಳ ಸಭೆ. ೭-೩೦ರಿಂದ ೮ರ ವರೆಗೆ ಹರಿಜನ ಕೇರಿಗೆ ಭೇಟಿ. ೮ರಿಂದ ೧೦ರ ವರೆಗೆ ಮುಲ್ಕಿಗೆ ಪ್ರಯಾಣ. ದಾರಿಯಲ್ಲಿ ಗುರ್ಪುರ, ಬಜಪೆ, ಎಕ್ಕಾರ್ ಕಟೀಲು ಮತ್ತು ಕಿನ್ನಿಗೋಳಿ ಮೊದಲಾದ ಸ್ಥಳಗಳಲ್ಲಿ ೫ ಮಿನಿಟಿನ ಸಭೆಗಳು. ೧೦ರಿಂದ ೧೦-೧೫ರ ವರೆಗೆ ಮುಲ್ಕಿಯಲ್ಲಿ ಸಭೆ. ೧೦-೧೫ರಿಂದ ೨ರ ವರೆಗೆ ಊಟ ಮತ್ತು ವಿಶ್ರಾಂತಿ. ಮಧ್ಯಾಹ್ನ ೨ರಿಂದ ೩-೩೦ರ ವರೆಗೆ ಉಡುಪಿಗೆ ಪ್ರಯಾಣ. ದಾರಿಯಲ್ಲಿ ಎರಡು ೫ ಮಿನಿಟಿನ ಸಭೆಗಳು. ೩-೩೦ರಿಂದ ೪ರ ವರೆಗೆ ಉಡುಪಿಯಲ್ಲಿ ಸಭೆ. ೪ರಿಂದ ೫-೪೫ರ ವರೆಗೆ ಕುಂದಾಪುರಕ್ಕೆ ಪ್ರಯಾಣ. ದಾರಿಯಲ್ಲಿ ೩ ಸಣ್ಣ ಸಭೆ. ೫-೪೫ರಿಂದ ೬-೩೦ರ ವರೆಗೆ ಸಂಜೆ ಊಟ ೬-೩೦ ೭ರ ವರೆಗೆ ಸಭೆ. ರಾತ್ರಿ ವಿಶ್ರಾಂತಿ. ಸಂಜೆ ೭ ಘಂಟೆಗೆ ಮಹಾತ್ಮರ ಮೌನ ವ್ರತವು ಪ್ರಾರಂಭವಾಗುವುದು.

ತಾ. ೨೬ನೇ ಸೋಮವಾರ ದಿನ ಮಹಾತ್ಮರ ಮೌನ ದಿನ ಕುಂದಾಪುರದಲ್ಲಿ.

ತಾ. ೨೭ನೇ ಮಂಗಳವಾರ ಮುಂಜಾನೆ ೭ಕ್ಕೆ ಕಾರವಾರಕ್ಕೆ ಸಮುದ್ರ ಪ್ರಯಾಣ.

ತಾ. ೨೮ನೇ ಬುಧವಾರ ಮುಂಜಾನೆ ೭ಕ್ಕೆ ಕಾರವಾರಕ್ಕೆ ತಲಪುವರು. ೭-೩೦ರಿಂದ ೭ರ ವರೆಗೆ ಆಶ್ರಮಕ್ಕೆ ಭೇಟಿ. ೭ರಿಂದ ೭-೪೫ರ ವರೆಗೆ ಅಂಕೋಲಾಕ್ಕೆ ಪ್ರಯಾಣ. ೭-೪೫ರಿಂದ ೮-೪೫ರ ವರೆಗೆ ಸಭೆ ೮-೪೫ರಿಂದ ೧೧ರ ವರೆಗೆ ಕುಮಟೆಗೆ ಪ್ರಯಾಣ. ನಡುವೆ ಎರಡು ನದಿ ದಾಟುವುದು. ೧೧ರಿಂದ ೩ ಗಂಟೆಯ ವರೆಗೆ ಊಟ ಮತ್ತು ವಿಶ್ರಾಂತಿ. ೩ರಿಂದ ೩-೩೦ರ ವರೆಗೆ ಸಭೆ. ೩-೩೦ರಿಂದ ೬ರ ವರೆಗೆ ಮೋಟರಗಾಡಿಯಲ್ಲಿ ಶಿರ್ಸಿಗೆ ಪ್ರಯಾಣ. ೬-೩೦ರಿಂದ ೭-೩೦ರ ವರೆಗೆ ಸಭೆ, ರಾತ್ರಿ ವಿಶ್ರಾಂತಿ, ಒಟ್ಟು ೬೧ ಮೈಲು ಪ್ರವಾಸ.

ತಾ. ೧ನೇ ಗುರುವಾರ ಮುಂಜಾನೆ ೭ರಿಂದ ೮ರ ವರೆಗೆ ಸಿದ್ದಾಪುರಕ್ಕೆ ಪ್ರಯಾಣ. ೮ರಿಂದ ೯ರ ವರೆಗೆ ಸಭೆ. ೯ರಿಂದ ೧೦ರ ವರೆಗೆ ತಿರುಗಿ ಶಿರ್ಸಿಗೆ ಪ್ರಯಾಣ. ೧೦ರಿಂದ ೨ರ ವರೆಗೆ ಊಟ ಮತ್ತು ವಿಶ್ರಾಂತಿ. ೨ರಿಂದ ೪.೩೦ರ ವರೆಗೆ ಹಾವೇರಿಗೆ ಪ್ರಯಾಣ. ದಾರಿಯಲ್ಲಿ ಮಳಗಿಯಲ್ಲಿ ೫ ಮಿನಿಟಿನ ಸಭೆ, ಆಲೂರಿನಲ್ಲಿ ಅರ್ಧ ತಾಸಿನ ಸಭೆ. ೪.೩೦ರಿಂದ ೫.೩೦ರ ವರೆಗೆ ಹಾವೇರಿಯಲ್ಲಿ ಸಭೆ. ೫.೭೦ರಿಂದ ೫.೪೦ರ ವರೆಗೆ ಧರ್ಮ ಶಾಲೆಯ ಶಂಕುಸ್ಥಾಪನೆ.

ವಿಷಯಸೂಚಿಕೆ.

ಅಗ್ರಲೇಖ

ರಾಜಕೀಯ ಸುಧಾರಣೆಗಳ ಭವಿತವ್ಯ ೧

ಸ್ಫುಟವಿಚಾರಗಳು ೩

ಸೋಟಿಗಳು. ೧೧

ವರ್ತಮಾನ ಸಂಗ್ರಹಗಳು ೧೨

ಅಲ್ಲರೇನು—ಇಲ್ಲದಿದ್ದರೇನು? ೨

ವಿವಿಧ ಸಮಾಚಾರಗಳು ೧೧

ಪತ್ರಿಕಾ ಕನ್ನಡಿ—ಮಂಗಳೂರು, ಬಂಟ್ವಾಳ ಸುದ್ದಿ ೯

ಪತ್ರವ್ಯವಹಾರ ೧೪

ಮೂಲೆ ಮೂಲೆಗಳಿಂದ ೧೦

ಪಂಡಿತ ಜವಾಹರಲಾಲರನ್ನು ಸೆರೆ ಮಾಡಿದರು ೮

ಸ್ವದೇಶಾಭಿಮಾನಿ.

ತಾ. ೧೬ನೇ ಶುಕ್ರವಾರ ಫೆಬ್ರವರಿ ೧೯೩೪.

ರಾಜಕೀಯ ಸುಧಾರಣೆಗಳ ಭವಿತವ್ಯ.

ಹಿಂದೂಸ್ಥಾನಕ್ಕೆ ಜವಾಬ್ದಾರ ಸರಕಾರ(Responsible Government)ವೇ ಗುರಿಯಾಗಿರುವುದೆಂದು ಹಿಂದೆ ಇಂಡಿಯದ ಸೆಕ್ರೆಟರಿ ಒಫ್ ಸ್ಟೇಟರಾಗಿದ್ದ ಮೋಂಟೆಗ್ಯು ದೊರೆಗಳವರು ಹೇಳಿ ಮೊಂಟ್‌—ಫೋರ್ಡ್ ರಿಫೋರ್ಮ್ಸ್ ಎಂಬ ದ್ವಿದಳ ಪದ್ಧತಿಯ ನೂತನ ರಾಜಾಧಿಕಾರ ಕ್ರಮವನ್ನು ಇಲ್ಲಿಗೆ ತಂದರು. ಆದರೆ ಹಿಂದೂಸ್ಥಾನದ ಗುರಿಯು ಸ್ವಾತಂತ್ರ್ಯವೇ ಆಗಿರುತ್ತದೆಂದು ಕಾಂಗ್ರೆಸ್ಸು ಮೂಲಕ ಮಹಾತ್ಮಾಜೀಯವರು ಮೋಂಟೆಗ್ಯುರವರನ್ನು ನಿರೋಧಿಸಿ ಅಸಹಕಾರ ಚಳವಳವನ್ನು ಪ್ರಾರಂಭಿಸಿದರು. ಆ ನಂತರ, ಕಳೆದ ವರ್ಷದ ವರೆಗೆ, ರಾಜಕೀಯ ವಾತಾವರಣವು ಅಶಾಂತಿಯುತವೂ ಮತ್ತು ನೌಕರಶಾಹಿಯ ಯುದ್ಧದ ರಂಗಭೂಮಿಯಾಗಿ ಪರಿಣಮಿಸಿತ್ತು. ಅಸಹಕಾರದ ನಂತರ ದೇಶಬಂಧು ದಾಸರ ಸ್ವರಾಜ್ಯ ಪಕ್ಷವು ತುಂಬಾ ಕೆಲಸ ನಡೆಸಿ ಸರಕಾರಕ್ಕೆ ಬಹಳ ಸಂದಿಗ್ಧ ವಿಷಯಗಳನ್ನುಂಟುಮಾಡಿತು. ಕಟ್ಟಕಡೆಗೆ ಮಹಾತ್ಮಾಜೀಯವರು ತಮ್ಮ ಸತ್ಯಾಗ್ರಹ ಚಳವಳವನ್ನು ಹೂಡಿ ದೇಶವನ್ನು ಚೇತನದಿಂದ ತುಂಬಿದರು.

ಲೋರ್ಡ್ ಇರ್ವಿನ್ ಸಾಹೇಬರು ಸತ್ಯಾಗ್ರಹ ಚಳವಳಕ್ಕೆ ಹೆದರಿಯೂ, ದೇಶದ ದುರ್ವಸ್ಥೆಯ ವಾತ್ಸಲ್ಯದಿಂದಲೂ ಹೇಳಿ ಡೊಮಿನಿಯನ್ ಸ್ಟೇಟಸ್(Dominion Status) ಅಂದರೆ, ಬ್ರಿಟಿಷ ವಸಾಹತಗಳನ್ನು ಸ್ವಾತಂತ್ರ್ಯವು ಕೊಡಲ್ಪಡುವುದೆಂದೂ, ಮಹಾತ್ಮಾಜಿಯವರಿಗೆ ಅದು ಸ್ವೀಕಾರವಾಗದೆ, ಸತ್ಯಾಗ್ರಹವು ನಡೆಯಿತು. ಎಲ್ಲಾ ಮುಖಂಡರೂ ಜೈಲಿನೊಳಗಾದರು. ಆದರೂ, ಇಂಗ್ಲೆಂಡಿನಲ್ಲಿ ಅಧಿಕಾರದಲ್ಲಿದ್ದ ಮಜೂರ ಸರಕಾರದ ಸಹಾನುಭೂತಿಯಿಂದಲೂ, ಸ್ವಂತ ಮನಸ್ಸಿನ ದೊಡ್ಡಸ್ತಿಕೆಯಿಂದಲೂ, ಹೇಗೂ ಲೋರ್ಡ್ ಇರ್ವಿನರು ದಬ್ಬಾಳಿಕೆಯನ್ನು ಹಿಂತೆಗೆದು ಕಾಂಗ್ರೆಸ್ಸನ್ನು ಸಹಕಾರಕ್ಕೆ ಕರೆದು ಎರಡನೇ ರೌಂಡ್‌ಟೇಬಲ್ ಪರಿಷತ್ತಿಗೆ ಮಹಾತ್ಮಾಜೀಯವರನ್ನು ಕಳುಹಿಸಿದರು.

ಅಷ್ಟರೊಳಗೆ ಎರಡು ಬದಲಾವಣೆಗಳಾದುವು. ಇಂಗ್ಲೆಂಡಿನ ಮಜೂರ ಸರಕಾರವು ಅಧಿಕಾರದಿಂದ ಹೋಯಿತು, ಲೋರ್ಡ್ ಇರ್ವಿನರ ವೈಸರಾಯಿ ಸಮಯವು ಅಂತ್ಯವಾಯಿತು. ಹಾಗೂ, ಇಂಗ್ಲೆಂಡಿನಲ್ಲಿ ನೆಶನಲ್ ಸರಕಾರದ ಹೆಸರಿನಲ್ಲಿ ಕನ್ಸರ್ವೇಟಿವ್ ಪಕ್ಷವೂ, ಹಿಂದೂಸ್ಥಾನದಲ್ಲಿ ಅನುಭವಶಾಲಿ ಮತ್ತು ಸಹಾನುಭೂತಿಪೂರ್ಣರಾದವರೆಂದು ಲೋರ್ಡ್ ವಿಲ್ಲಿಂಗ್ಡನ್ನರೂ ಅಧಿಕಾರಕ್ಕೆ ಬಂದರು. ಮೊದಲನೇ ರೌಂಡ್ ಟೇಬಲ್ ಪರಿಷತ್ತಿನಲ್ಲಿ ಉದಾರವೂ, ಉದಾತ್ತವೂ ಆದ ತತ್ವಗಳನ್ನು ಉಪದೇಶಿಸಿದ ಅದೇ ರಾಮ್ಸೆ ಮೆಕ್ಡೊನಾಲ್ಡರು ಆಗಲೂ ಈಗಲೂ ಅಧಿಕಾರದಲ್ಲಿರುವರು. ರಾಮ್ಸೆ ಮೆಕ್ಡೊನಾಲ್ಡರೆಂದರೆ ಸಾಮಾನ್ಯರಲ್ಲ. ಅವರು ಹಿಂದೊಮ್ಮೆ ಹಿಂದೂಸ್ಥಾನಕ್ಕೆ ಬಂದು ದೇಶದ ದುರವಸ್ಥೆಯನ್ನು ನೋಡಿ, ಕನಿಕರಪಟ್ಟು, ಒಂದು ಪುಸ್ತಕ ಬರೆದು ಆಗಿನ ಬ್ರಿಟಿಷ ಮತ್ತು ಹಿಂದೀ ಸರಕಾರದ ಅವಕೃಪೆಗೆ ಪಾತ್ರರಾದವರು. ಆಗಿನ ಅವರ ಪುಸ್ತಕದ ಮೇಲೆ ಹಿಂದೀ ಸರಕಾರದ ಮುಟ್ಟುಗೋಲು ಈಗಲೂ ಇರುತ್ತದೆ. ಅಂತಹ ಉದಾರ ತತ್ವವಾದ, ಮಜೂರರ ಮುಂದಾಳು, ಮಿ| ರಾಮ್ಸೆ ಮೆಕ್ಡೊನಾಲ್ಡರು ಹಿಂದೂಸ್ಥಾನದ ಭಯಂಕರ ದಬ್ಬಾಳಿಕೆಯ ಸೂತ್ರಗಳನ್ನು ಕೈಯಲ್ಲಿ ಹಿಡಿದುಕೊಂಡು ನಿಂತಿದ್ದಾರೆ. ಆಗಿನ ಮೆಕ್ಡೊನಾಲ್ಡರು—ಈಗಿನ ಮೆಕ್ಡೊನಾಲ್ಡರು! ವ್ಯಕ್ತಿಗೇ ಈ ರೀತಿಯಲ್ಲಿ ಬದಲಾವಣೆ ಹೊಂದುವಾಗ ತತ್ವಗಳ ಪಾಡೇನು?

ಅಂತೂ ಮೋಂಟೆಗ್ಯುರವರ ಜವಾಬ್ದಾರ ಸರಕಾರದ ಆಶೆಯಿಲ್ಲ. ಇರ್ವಿನರ ಡೊಮಿನಿಯನ್ ಸ್ಟೇಟಸ್ ಇಲ್ಲ; ಪ್ರಥಮ ರೌಂಡ್‌ಟೇಬಲ್ ಪರಿಷತ್ತಿನ—ಹಿಂದೀ ಹಿತಗಳನ್ನೇ ಉದ್ದೇಶಿಸಿ ರಕ್ಷಣೆಗಳನ್ನೊಳಗೊಂಡ—ಫೆಡರೇಶನ್ ಸಂಸ್ಕಾರವಿಲ್ಲ; ಕಟ್ಟಕಡೆಗೆ ಬಂದಿರುವ ವ್ಹೈಟ್‌ಪೇಪರ್ (White Paper) ಇದರ ಗತಿಯೇನೆಂ! ಇತ್ತ ವ್ಹೈಟ್ ಪೇಪರಿನ ಸುಧಾರಣೆಗಳನ್ನು ನಿರೀಕ್ಷಿಸುತ್ತ ಹಳೇ ಕೌನ್ಸಿಲುಗಳ ಜೀವಮಾನವು ವರ್ಷದಿಂದ ವರ್ಷಕ್ಕೆ ವೃದ್ಧಿ ಹೊಂದುತ್ತಲೇ ಇದೆ. ಈ ಕೌನ್ಸಿಲುಗಳಲ್ಲಿ ಚೇತನವೂ ಇಲ್ಲ, ಸ್ವಂತ ವಿಚಾರ ಶಕ್ತಿಯೂ ಇಲ್ಲ, ಒಟ್ಟಾರೆ, ಈ ಗೊಂದಲಗಳಲ್ಲಿ ಇದ್ದ ಹಳೇ ಪದ್ಧತಿಯ ಕೌನ್ಸಿಲುಗಳೂ ಕೂಡ ಇಲ್ಲದಂತೆಯೇ ಸರಿ.

ಮೆಕ್ಡೊನಾಲ್ಡರ ಪೂರ್ವದ ಧ್ಯೇಯವು ಅಧಿಕಾರದ ಅಭಿಲಾಷೆಗೆ ಬಲಿಯಾಯಿತು, ಬಾಲ್ಡವಿನ್ನರ ವಿವೇಕಪರ ಸಂಕುಚಿತ ಧೋರಣವು ಚರ್ಚಿಲ್ ಸಾಹೇಬರ ನಿರಂಕುಶ ವಕ್ತೃತ್ವಕ್ಕೆ ಬಲಿಯಾಯಿತು. ಆ ಕಾರಣಗಳಿಂದ "ವ್ಹೈಟ್‌ಪೇಪರ್"ನ ಆಕಾಶ ಕುಸುಮವೂ ಗಾಳಿಯಲ್ಲಿ ತೇಲಿ ಹೋಗುವಂತಾಗಿದೆ. ಇಂಗ್ಲೆಂಡಿಗೆ ಸಾಮ್ರಾಜ್ಯದ ದರ್ಪವು ಪ್ರತಿ ಒಬ್ಬನಲ್ಲಿಯೂ ತುಂಬಿ ಎದ್ದು ಒಡೆಯುತ್ತಿದೆ. ಆದುದರಿಂದ ಹಿಂದೂಸ್ಥಾನವು ಆಶಿಸುವುದೇನು! ಅವರು ಕೊಡುವುದೇನು? ಎಂಬುದನ್ನು ಹೇಳಲಾಗುವುದಿಲ್ಲ. ಹಿಂದೂಸ್ಥಾನದ ದೌರ್ಭಾಗ್ಯವು ಕೂಡ ಇಂಗ್ಲೆಂಡಿಗೆ ವಿಜಯದ ಹೆಗ್ಗುರುತಾಗಿ ಕಾಣುತ್ತಿದೆ. ಇಲ್ಲವಾದರೆ ಬಿಹಾರಿನ ಭೂಕಂಪವು ವ್ಹೈಟ್ ಪೇಪರನ್ನು ಮೂಲೆಗೊತ್ತಲಿಕ್ಕೆ ಬಂದು ಕಾರಣವಾಗಿ ಇಂಗ್ಲೆಂಡಿನ ಕನ್ಸರ್ವೇಟಿವ್ ಪಕ್ಷದವರಿಗೆ ದೊರಕುತ್ತಿರಲಿಲ್ಲ. ಹಿಂದೂಸ್ಥಾನದ ಮಂದಪಕ್ಷೀಯರಾದರೂ ತಮ್ಮ ಆಶಾ ತ್ಯಾಗವನ್ನು ಮಾಡಿದ್ದರೆ ಒಳ್ಳೆಯದಿತ್ತು.

+ o o +

ವರ್ತಮಾನ ಸಂಗ್ರಹ

ಮದ್ರಾಸು ಗವರ್ನರರೂ ಅವರ ಪತ್ನಿಯವರೂ ಅಸ್ವಸ್ಥರಿಂದಿದ್ದವರು ಈಗ ಗುಣಮುಖರಾಗಿರುವರು.

ಗಂಡನ ಆ ಶಬ್ದಗಳನ್ನು ತಡೆಯಲಾರದೆ ಗೀತಾದೇವಿ ಎಂಬವಳು ಪ್ರಾಣಹತ್ಯ ಮಾಡಿಕೊಳ್ಳಲು ಯತ್ನಿಸಿದುದಕ್ಕಾಗಿ ಅವಳಿಗೆ (ಗಂಡಸಿಗಲ್ಲ) ಸೆರೆಮನೆಯ ಶಿಕ್ಷೆ.

ಶ್ರೀನಗರದಲ್ಲಿ ಮುಸಲ್ಮಾನರ ಮೆರವಣಿಗೆಯನ್ನು ಹೋಗಗೊಡದ ಪೋಲೀಸರು ಹೊಡೆದು ಮೆರವಣಿಗೆಯಿಂದಲೇ ಕಳುಹಿಸಿದರು.

ಆಲದ ದಾಸಿಗೆಲ್ಲರೂ ದಂಡಕ್ಕೆ ವೈಯಕ್ತಿಕ ಕಾಯಿದೆ ಭಂಗವನ್ನು ಮಾಡಿ ಜೈಲಿಗೆ ಹೋಗದೆ ಬಿಹಾರಿಗೆ ಸಹಾಯಕ್ಕೆ ಹೋಗಬೇಕಾಗಿ ಮಹಾತ್ಮರ ಆಜ್ಞೆ.

ದಾವಣಗೆರೆಯಲ್ಲಿ ಬೆಂಕಿಯೆದ್ದು ೬೦ ಮನೆಗಳನ್ನು ನುಂಗಿ ಶಾಂತವಾದನು.

ಬಿಹಾರಿನಲ್ಲಿ ಈ ೧ನೇ ದಿನವೂ ಭೂಕಂಪವಾಗುವದೆಂದು ಎಚ್ಚರ ಹುಟ್ಟಿಸಿತು.

ಆಕಸ್ಮಿಕ ಅಪಘಾತಗಳಿಂದ ೧೯೩೩ರಲ್ಲಿ ಬ್ರಿಟನ್ ಒಂದರಲ್ಲೇ ೬೦೦೦ ಜನರು ಪರಲೋಕ ಯಾತ್ರೆ ಬೆಳೆಸಿದರೆಂದು ತಿಳಿದು ಬಂದಿದೆ.

ಜಾಂಸಿಯಾದಲ್ಲಿ ಮೊನ್ನೆ ಒಂದು ದಿನ ಭೂಕಂಪವಾಗುವುದೆಂದು ಸುದ್ದಿ ಕೇಳಿ ಜನರು ಅಂಗಡಿ ಮನೆಗಳಿಗೆ ಬೀಗ ಹಾಕಿ ಮೈದಾನುಗಳಲ್ಲಿ ಕುಳಿತು ಸುತ್ತುಮುತ್ತು ನೋಡಿ ಬಿಂಬಿಸಿಕೊಂಡರು.

ಸರ್ವ ಪಕ್ಷೀಯ ಸಭೆಯೊಂದು ಮುಂಬಾಯಿಯಲ್ಲಿ ವಿ. ಶ್ರೀನಿವಾಸ ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ನಡೆಯುವುದು. ಠರಾವುಗಳಾಗುವುದೂ ಖಂಡಿತ.

ಅಮರಾವತಿ ಜೈಲಿನಲ್ಲಿ ಸೆರೆಯೊಳಗಿದ್ದ ರಾಜಕೀಯ ಕೈದಿಗಳೊಡನೆ ಹೊರಗಿನವರು ಪತ್ರವ್ಯವಹಾರ ನಡೆಸಲು ಅನುಕೂಲಿಸಿದ ಗಾರ್ಡರಾದ ರಾಮರಾಜನೆಂಬವರಿಗೆ ಜಡ್ಜರು ಮೂರು ತಿಂಗಳ ಸೆರೆಯನ್ನು ಕರುಣಿಸದೆ ಬಿಡಲಿಲ್ಲವಾದರು.

ಮುಂಬಾಯಿಯ ಭದ್ರವಾದ ಬಚ್ಚಲು ಕೊಟ್ಟಿಗೆಯಲ್ಲಿ ಬಾಗಿಲು ಹಾಕಿ ಸ್ನಾನಮಾಡುತ್ತಿದ್ದ ತರುಣಿಯೋರ್ವಳು ಕೋಣೆಯ ವಿಷ ಗಾಳಿಗೆ ತುತ್ತಾಗಿ ಮೃತಳಾದಳು.

ಗ್ವಾಲಿಯರದಲ್ಲಿ ಸಾಧುವೊಬ್ಬನು ಸಾಧುತ್ವದಿಂದಲೇ ಜನರಿಂದ ಹಣ ಸುಲಿಗೆ ಮಾಡುತ್ತಿದ್ದುದನ್ನು ತಿಳಿದ ಕೆಲವು ಪುಂಡರು ಅವನ ತಲೆಗೆ ಮೋಳೆ ಬಡಿದು ಕೊಂದೇ ಬಿಟ್ಟರು.

ಧಾರವಾಡದ ಮಾರ್ಕೆಟನಲ್ಲಿ ವಿದ್ಯುತ್‌ಶಕ್ತಿಯು ಒಬ್ಬ ಹುಡುಗನ ಪ್ರಾಣ ಶಕ್ತಿಯನ್ನೇ ತಿಂದುಬಿಟ್ಟಿತು.

ಜಾ. ಪಟೇಲರು ಬೇಗನೇ ಬಿಹಾರ್ ಪ್ರಾಂತ್ಯವನ್ನು ಸಂಚರಿಸುವರು.

ಬಿಹಾರ್ ಪ್ರಾಂತ್ಯಕ್ಕೆ ಕಡಿಮೆ ಬಡ್ಡಿಯಿಂದ ೨ ಕೋಟಿಗಳ ಸಾಲವನ್ನು ಕೊಡಬೇಕೆಂದು ಇಂಡಿಯಾ ಸರಕಾರವು ಆಲೋಚಿಸಿರುವುದು. ಬೇರೆ ಆಗಿರಬಹುದು.

ಬೆಂಗಳೂರು ಪೌರಸಭೆಯವರು ೧೦೦೦ ರೂಪಾಯಿಗಳನ್ನು ಭೂಕಂಪ ಸಹಾಯ ನಿಧಿಗೆ ಕಳುಹಿಸಿರುವರು.

ಭೂಕಂಪದ ಪ್ರಾಂತ್ಯದಲ್ಲಿ ಫಿಲ್ಮ್ ತೆಗೆದು ಚಲಚ್ಚಿತ್ರ ಕಂಪೆನಿಗಳು ಲಾಭ ಮಾಡಲು ತೊಡಗಿವೆ.

ಕೈರಾದಲ್ಲಿ 'ಎಲ್ಲರಿಗೆಂದು ಪ್ರತ್ಯೇಕಿಸಲ್ಪಟ್ಟಿದ್ದ ಡಿಸ್ಟ್ರಿಕ್ಟ್ ಬೋರ್ಡಿನ ಭಾವಿಯ ಉಪಯೋಗದ ಕುರಿತು ಹಿಂದೂ ಮುಸಲ್ಮಾನ ಕ್ರೈಸ್ತರಿಗೆ ಜಗಳವಾಗಿ ಕೆಲವರು ಪೋಲೀಸರ ಒಡನೆ ಅತ್ತ ತೆರಳಿದರು.

"ನಿಮ್ಮ ನಾಡು ದೈವಿಕ ಕೋಪಕ್ಕೆ ಪಾತ್ರವಾಗಿದೆ, ನಾನು ಅಸಹಾಯಕನು, ಇಲ್ಲದಿದ್ದರೆ ಬರುತ್ತಿದ್ದೆ" ಎಂದು ನಾಸಿಕ ಜೈಲಿನಿಂದ ವಲ್ಲಭಬಾಯಿಯವರು ಬಾಬು ರಾಜೇಂದ್ರ ಪ್ರಸಾದರಿಗೆ ತಂತಿ ಬಿಟ್ಟಿರುತ್ತಾರೆ.

ಗಾಂಧಿಜೀಯವರ ಹರಿಜನ ಬಂಧುವಿನ ಸೇವೆಯನ್ನು ಹೊಗಳುವುದಕ್ಕಾಗಿ ಪುಂಡು ಜಗದ್ಗುರುಗಳು 'ಧರ್ಮ ರಾಜ್ಯ' ಎಂಬ ಇಂಗ್ಲಿಷ ವಾರಪತ್ರಿಕೆಯನ್ನು ಹೊರಡಿಸಿರುವುದು ಶಾಸ್ತ್ರಿಗಳಿಗೆಲ್ಲರಿಗೆ ಹಬ್ಬದ ಸುದ್ದಿ.

ಸರ್ ಫಜ್ಲಿ ಹುಸೇನರು ಆಗಾಖಾನರನ್ನು ಆದರಿಸಿ ಒಂದು ರುಚಿಕರ ಭೋಜನವನ್ನು ಕೊಟ್ಟು ಒಂದು ಸಾವಿರಕ್ಕಿಂತ ಹೆಚ್ಚು ರೂಪಾಯಿಗಳನ್ನು ವೆಚ್ಚ ಮಾಡಲು ಸಮರ್ಥರಾದರು.

ಲಾಹೋರಿನ ಚೀಫ್ ಜಸ್ಟಿಸರಾಗಿ ದಿ ಹೊನರೆಬಲ್ ಮಿ| ಜಸ್ಟಿಸ್ ಜೋನ್ ಡೊಗ್ಲಾಸರವನ್ನು ನೇಮಿಸಲಾಗಿದೆ.

ಲಂಡನ್ ಕೊಲೊಂಬೊಗಳನ್ನು ಜೂನ್ ತಿಂಗಳೊಳಗೆ ಟೆಲಿಫೋನ್ ಮೂಲಕ ಕಟ್ಟಿ ಹಾಕಲಿರುವರು.

ಮಿಡ್ನಾಪುರದ ತರುಣರು ನಾಲ್ವರನ್ನು ಕಲ್ಕತ್ತ ಪೋಲೀಸರು ಕೈದು ಮಾಡಿದರು. ಮೃತರಾಗಿ ಹೋದ ಬರ್ಜ್‌ರ ಖೂನಿಗಾಗಿ.

ತೀರ ಧುರ್ವಾಲಿನ ಮಹಾರಾಜರವರು ತಮ್ಮ ಇಬ್ಬರು ಪತ್ನಿಗಳೊಡನೆ ಕಾರಿನಲ್ಲಿ ಸಂಚರಿಸುತ್ತಿದ್ದಾಗ ಡ್ರೈವ್ ಮಾಡುತ್ತಿದ್ದ ಸಣ್ಣ ಹೆಂಡತಿಯು ಕಾರನ್ನು ಕೆಳಗೆ ಹಾಕಿ ಜಖಂಗೊಂಡು—ಜಖಂಗೊಳಿಸಿ ಪ್ರಾಣವನ್ನು ಬಿಟ್ಟು ಹೋದಳು.

ಕಲ್ಕತ್ತ ಯುನಿವರ್ಸಿಟಿಯ ಮೆಟ್ರಿಕ್ಯುಲೇಶನ್ ಪರೀಕ್ಷೆಗೆ ಈ ವರ್ಷ ೨೩೦೦೦ ವಿದ್ಯಾರ್ಥಿಗಳು ಕುಳಿತಿರುವರು. ೧೦೦೦ ಮಂದಿ ವಿದ್ಯಾರ್ಥಿನಿಯರೇ ಇರುವರು.

ಪ್ರಿವಿ ಕೌನ್ಸಿಲರರಾಗಿ ಚುನಾಯಿತರಾದ ಸರ್ ತೇಜಬಹದ್ದೂರ್ ಸಪ್ರೂರವರನ್ನು ಅಭಿನಂದಿಸುವುದಕ್ಕಾಗಿ ಅಲ್ಲಹಾಬಾದಿನಲ್ಲಿ ೧ ಸಾವಿರ ರೂಪಾಯಿ ಜಮೆಯಾಯಿತು. ಸಪ್ರೂರವರು ಆ ಹಣವನ್ನು ಬಿಹಾರಿಗೆ ಕಳುಹಿಸಲು ಕೇಳಿಕೊಂಡು ಜನರನ್ನು ಆಶ್ಚರ್ಯಗೊಳಿಸಿದರು.

ಡೆಕ್ಕಾದಲ್ಲಿ ಎರಡು ವರ್ಷಗಳಿಂದ ಎಡಿಶನಲ್ ಪೋಲೀಸ್ ಸುಪರಿಂಟೆಂಡೆಂಟರಾಗಿದ್ದ ಮಿ. ಪ್ರಿಚರ್ಡ್ ಎಂಬವರು ಹೇಗೋ ಏಕೋ ಆತ್ಮಹತ್ಯೆ ಮಾಡಿಕೊಂಡು ಸ್ವರ್ಗಸ್ಥರಾದರು.

ಯುನಿಯನ್ ಘಾಟನಲ್ಲಿ ಕೆಲವು ಮಹಮದೀಯರು ತಮ್ಮ ಮತಗಳಲ್ಲಿ ಬೇಸರಗೊಂಡು ಕ್ರೈಸ್ತರಾದರು. ಮತಾವಲಂಬನೆಯ ಸಮಯ ಪೋಲೀಸರ ಪಹರೆ!

ಅಹ್ಮದಾಬಾದಿನ ನಗರ ಮಿಲ್ಲಿನ ಕೆಲವು ನೂರು ಜನರು ತಮಗೆ ಸಂಬಳ ಕಡಿಮೆಯಾಯಿತೆಂದು ಹೇಳಿ ಮಿಲ್ಲಿನ ಮ್ಯಾನೇಜರನ್ನು ಚಚ್ಚಿ ಹಾಕಿದರು.

ಪುಣೆಯ 'ಸ್ಫೂರ್ತಿ' ಎಂಬ ಮಾಸ ಪತ್ರಿಕೆಯವರು ಮೂರು ಸಾವಿರ ರೂಪಾಯಿ ಭದ್ರತೆ ಕೊಡಬೇಕೆಂದು ಆಗದ ಹೋಗಿದೆ.

ಇಂಗ್ಲಾಂಡಿನ ಇಂಗ್ಲಿಷ್ ಸರೋವರದಲ್ಲಿ ಮಂಜು ಮುಸುಕಿ ಸ್ಟೀಮರುಗಳಿಗೆ ಕಣ್ಣು ಕಾಣದೆ ತಲೆ ಬಡೆದುಕೊಂಡುವು. ಮ್ಯಾನ್ ಡ್ರೇಕ್ ಎಂಬುದು ಡಾರ್ಟ್‌ಫೋರ್ಡ್ ಎಂಬ ಸ್ಟೀಮರನ್ನು ಮುಳುಗಿಸಿತು.

ಗಾಂಧೀಜೀಯವರು ಕಾಯಿದೆಭಂಗ ಚಳವಳವನ್ನು ಮೂಲೆಗಟ್ಟಿದ್ದು ಉತ್ತಮವೇ ಆಯಿತೆಂದು ಸಿ. ಎಫ್. ಎಂಡ್ರ್ಯೂಸರು ಲಂಡನಿನಲ್ಲಿ ತಿಳಿಸಿದರು.

ಪಂಡಿತ ಜವಾಹರಲಾಲರನ್ನು—ಬಿಹಾರಿನ ಕಷ್ಟ ದಿನಗಳಲ್ಲಿ—ಅವರು ಸಹಾಯ ಮಾಡುತ್ತಿದ್ದಾಗ—ಸೆರೆ ಹಿಡಿದುದು ಬಹು ಶೋಚನೀಯವೆಂದು ಹಿಂದೂ ದಿ ಲೀಡರ ಪತ್ರಿಕೆಗಳ ಅಭಿಮತ.

ನ್ಯೂಡಿಲ್ಲಿಯ ಬಂಗಾಳ ನಿವಾಸಿಕರಾದ ಶ್ರೀ ಸುಕುಮಾರ ಎಂಬವರು ಪ್ರಾಂತ್ಯದ ಹೊರಗೆ ಹೋಗಬೇಕೆಂದು ಅಪ್ಪಣೆ.

ಎಪ್ರಿಲ್ ತಿಂಗಳಿನಲ್ಲಿ ಮಹಾತ್ಮರು ಹೈದರಾಬಾದಿಗೆ ತೆರಳುವರು.

ತಿರುವಾಂಕೂರಿನ ಪ್ರಸಿದ್ಧ ದೈವಜ್ಞರಾದ [illegible] ಎಂಬವರು ವಿಮಾನ ಅಪಘಾತದಿಂದ ಬಿದ್ದು ಶರೀರ ತ್ಯಾಗ ಮಾಡಿದರು.

ಕಲ್ಕತ್ತ ಮುದ್ರಕರುಗಳಿಗೆ ವಿಮಾನ ಟಪ್ಪಾಲು ಆರಂಭಿಸಲ್ಪಟ್ಟಿದೆ.

ದೆಹಲಿಯಲ್ಲಿ ಪ್ರೊಫೆಸರ್ ಎಂ. ಸುಬ್ಬರಾಯರೆಂಬವರು ೨೪ ಹೆಂಡಿರುಗಳ ಕೊಲ್ಲಲು ವಿಷಕ್ಕೆ ಕಲ್ಲಿ ಎತ್ತಿದರು. ಸರ್ಕಾರದ ಅನ ಸರೇ ಇದಕ್ಕೆ ಕಾರಣವೆಂದು ಅವರ ಹೇಳಿಕೆ.

ಕೊಲಂಬೊದಲ್ಲಿ ಕೊಶ ಎಂಬ ಫ್ರೆಂಚನೊಬ್ಬನು ಕುದುರೆ ಮೇಲೆ ಸವಾರಿ ಮಾಡುತ್ತಿದ್ದಾಗ ಬಿಳಿಗೆ ಬಿದ್ದು ತೀರಿಕೊಂಡನು.

ಮದ್ರಾಸಿನ ಹೈಕೋರ್ಟು ಚೀಫ್ ಜಡ್ಜಿಯವರಿಗೆ ಮಿ। ಸಿಡ್ನಿ ಬರ್ನರವರು ಹೈಕೋರ್ಟು ವಕೀಲರಾಗಿ ನೇಮಕ ಹೊಂದಿರುವರು.

ತಾಲೂಕು ಬೋರ್ಡು ಅವಸಾನದ ಕುರಿತು ಚರ್ಚಿಸುವುದಕ್ಕಾಗಿ ತಾರೀಕು ೨೭ನೇ ದಿನವು ಉತ್ತಮವೆಂದು ನಿಶ್ಚಯಿಸಿರುವರು. ಮಾರ್ಚಿ ಕ್ಕೆ ಉತ್ತರಕ್ರಿಯೆಗಳು ಕೊನೆಗಾಣಬಹುದು.

ತಾ. ೨೪ನೇ ದಿನ ಅಖಿಲ ಪಕ್ಷದ ಪರಿಷತ್ತು ಅಕೋಲದಲ್ಲಿ ಶ್ರೀ ಎಂ. ಎಸ್. ಅಣೆಯವರ ಅಧ್ಯಕ್ಷತೆಯಲ್ಲಿ ಜರಗುವುದು.

ಮಲಬಾರ ಜಿಲ್ಲೆಯ ಸಮುದ್ರ ಕರಾವಳಿಯಲ್ಲಿ ಅತಿ ದೊಡ್ಡ ತಿಮಿಂಗಿಲವೊಂದು ಯಾವುದೋ ಒಂದು ಜಂತುವಿನಿಂದ ಕಚ್ಚಲ್ಪಟ್ಟು ಘಾಯಗೊಂಡು ಸತ್ತು ಬಿದ್ದಿರುವುದು.

ಬಿಹಾರ ಕಮಿಟಿಯವರು ದಿನಕ್ಕೆ ೨೫ ಲಕ್ಷ ಜನರನ್ನಾದರೂ, ದಿನಕ್ಕೆ ಒಂದಾಣೆಯಂತೆ ವೆಚ್ಚ ಮಾಡಿ ಬದುಕಿಸಲಿರುವುದರಿಂದ ಕಲ್ಪ್ಲಿಸ್ಟ್ ಹಣವು ಬೇಗನೇ ವೆಚ್ಚವಾಗುವುದೆಂದೂ, ಇದರಿಂದಾಗಿ ಕ್ಷಾಮವು ತಲೆದೋರುವ ಸಂಭವವು ದೂರವಿಲ್ಲವೆಂದೂ ರಾಜೇಂದ್ರ ಪ್ರಸಾದರು ತಿಳಿಸಿ ಎಚ್ಚರವಿತ್ತಿರುವರು.

ಸಯಾಮಿನ ಅರಸನ ಇಬ್ಬರು ಆಳಿಯಂದಿರು ದೇಶದಲ್ಲಿ ಕ್ಷೋಭೆ ಯೆಬ್ಬಿಸಿದುದಕ್ಕಾಗಿ ದ್ವೀಪಾಂತರವಾಸಕ್ಕೆ ಗುರಿಯಾದರು.

ಮೋಟಾರಿನ ಧಕ್ಕೆ ಹೊಡೆತದಿಂದ ಬೆಂಗಳೂರಿನಲ್ಲಿ ಮಿ। ಎಂ. ಜಿ. ಸಾಲ್ಡಾನರೆಂಬವರು ತೀರಿಕೊಂಡರು.

ವಿಯೆನ್ನಾದಲ್ಲಿನ ಮಾರ್ಗದಲ್ಲಿ ಸೋಶಿಯಲಿಸ್ಟರು ಪೋಲೀಸರ ಗುಂಡುಗಳಿಗೊಳಗಾಗಿ ಮಡಿದವರ ಸಂಖ್ಯೆಯನ್ನು ೫೦೦ಕ್ಕೆ ಏರಿಸಿದರು.

ಬಿಹಾರ ಪ್ರಾಂತ್ಯದ ಬಜೆಟಿನಲ್ಲಿ ೧೪ ಲಕ್ಷ ರೂಪಾಯಿ ಕಡಿಮೆ ಬಿದ್ದಿದೆ.

ಪಂಡಿತ ಜವಾಹರಲಾಲರ ದಸ್ತಗಿರಿಯ ಸಂಬಂಧವಾಗಿ ಕರಾಚಿಯ ಹತ್ತಿ ಮತ್ತು ಧಾನ್ಯದ ಅಂಗಡಿಗಳು ಹರತಾಳವನ್ನಾಚರಿಸಿದುವು.

ಅಭಾರ ಸ್ವೀಕಾರ.

"ಧರ್ಮ ರಾಜ್ಯ" — ಸನಾತನೀಯ ಇಂಗ್ಲಿಷ ವಾರಪತ್ರಿಕೆ. ಪುರಿಯ ಸ್ವಾಮಿಗಳು ಸ್ಥಾಪಕರು. ಸಂಪಾದಕರು ಶ್ರೀ ಕೆ. ಎಸ್. ರಾಮಸ್ವಾಮಿ ಶಾಸ್ತ್ರಿ, ಬಿ. ಎ ಬಿ ಎಲ್.

ಚಲನ ಚಿತ್ರ—ಸಚಿತ್ರ ವಾರಪತ್ರಿಕೆ ಬೆಂಗಳೂರು. ಸಂಪಾದಕರು ಶ್ರೀ ಎ. ಜಿ ರಾಮು.

ಧನ್ವಂತರಿ ಸಾಗರ—ಮಾಸ ಪತ್ರಿಕೆ ಬೆಂಗಳೂರು. ಸಂಪಾದಕರು ಶ್ರೀ ಸಿ. ಕೆ. ಹನುಮಂತಪ್ಪ ಮತ್ತು ಜಿ. ಲಕ್ಷ್ಮಣರಾವ್

ನವಸಂದೇಶ—ವಾರ ಪತ್ರಿಕೆ ಬಳ್ಳಾರಿ. ವಾರ್ಷಿಕ ಚಂದಾ ರೂ. ೩.

'ನವ ಕರ್ನಾಟಕ'—ದಿನ ಪತ್ರಿಕೆ ೩೦೧ ರೋಡ್ ಮುಂಬಾಯಿ

ದಕ್ಷಿಣ ಕನ್ನಡ

ಮಂಗಳೂರು: - ಶ್ರೀ ಗೋಕರ್ಣನಾಥ ಕ್ಷೇತ್ರದಲ್ಲಿ ಶಿವರಾತ್ರಿ ಮಹೋತ್ಸವವು ಈ ವರ್ಷ ಬಹು ಯಶಸ್ವಿಯಾಗಿ ಜರಗಿತೆಂದೂ, ಅದರ ಯಶಸ್ವಿಗೆ ಕಾರಣೀಭೂತರಾದ ಅನೇಕ ಮಹನೀಯರುಗಳಿಗೆ ತಾನು ಅಭಾರಿಯಾಗಿದ್ದೇನೆಂದೂ ರಾವ್ ಬಹದ್ದೂರ್ ಸುವರ್ಣರವರು ತಿಳಿಸುತ್ತಾರೆ.

ಶ್ರೀ। ಕಾರ್ನಾಡು ಸದಾಶಿವರಾಯರ ಅಧ್ಯಕ್ಷತೆಯಿಂದ ಪ್ರಾರಂಭವಾದ ಬಿಹಾರ ರಿಲೀಫ್ ಫಂಡಿಗೆ ಶ್ರೀಗಳಾದ ಕಸ್ತೂರಿ ಸುಬ್ರಾಯ ಪೈ ಮತ್ತು ಕಂಪೆನಿ, ಶ್ರೀ। ಬಸ್ತಿ ರಾಮಯ್ಯ ಶೆಣೈ, ಶ್ರೀ। ಕಿಣಿ ಮಾಧವಜೀ, ಶ್ರೀ। ಕೌಟ್ ಪದ್ಮಾದಾಸ್, ಶ್ರೀ। ಭಿಕ್‌ಚಂದ್ ಪ್ರೇಮಚಂದ್, ಶ್ರೀ। ಭಾಮಿ ಪಾಂಡುರಂಗ ಶೆಣೈ, ಮೆಸರ್ಸ್ ಮಲ್ಲಯ್ಯ ಬ್ರದರ್ಸ್, ಶ್ರೀ। ಕುಶಲಚಂದ ಜೀವನಲಾಲ್ "ಶಾಂತಾರಾಮ್ ಎಂಡ್ ಕೊ ಇವರೂ ವಿವಿಧ ಧನಸಹಾಯ ಮಾಡಿರುವರು.

ಶ್ರೀ. ಕೃಷ್ಣ ಸಿನೆಮ ಮಂದಿರದಲ್ಲಿ ತಾ. ೧೬ರಿಂದ "ಝಹರೀ ಇಶ್ಕ" ಎಂಬ ಮಾತಾಡುವ ಚಿತ್ರವನ್ನೂ, ತಾ ೨೦ರಿಂದ ನಿವ್ ಥಿಯೇಟರ್ ಕಂಪೆನಿಯ ಅತ್ಯುತ್ತಮವಾದ ಸೀತಾ ಎಂಬ ಮಾತಾಡುವ ಚಿತ್ರವನ್ನೂ ಪ್ರದರ್ಶಿಸಲಾಗುವುದು. ಈ ಚಿತ್ರದಲ್ಲಿ ದುರ್ಗಾಬಾಯಿ ಖೋಟೆ ಎಂಬವಳು ಮುಖ್ಯ ನಾಯಕಿಯಾಗಿರುವಳು.

ಮಂಗಳೂರು ತಾಲೂಕುಬೋರ್ಡಿನ ಹಿಂದು ಸಭೆಯು ಇದೇ ತಿಂಗಳ ತಾ. ೨೦—೨—೩೪ನೇ ದಿನ ಮಧ್ಯಾಹ್ನ ೨ ಗಂಟೆಗೆ ಜರಗುವುದು.

ಇದೇ ತಾ. ೧೮ನೇ ಆದಿತ್ಯವಾರ ಎಸ್. ಆರ್. ಎಸ್. ಹೋಮ್ ಡ್ರಮೇಟಿಕ್ ಸೊಸೈಟಿಯವರು ನವಜೀವನ ಎಂಬ ಆಧುನಿಕ ನಾಟಕವನ್ನು ಶ್ರೀ। ಚಂದ್ರಕಲಾ ನಾಟಕ ಥಿಯೇಟರಿನಲ್ಲಿ ಅಭಿನಯಿಸಲಿರುವರು.

ಭೂಕಂಪ ಫಂಡಿಗಾಗಿ ಮಂಗಳೂರು ಮುನಿಸಿಪಾಲಿಟಿಯು ರೂ. ೨೫೦ನ್ನು ಮಂಜೂರು ಮಾಡಿರುತ್ತದೆ.

ಮಂಗಳೂರಿನ ಎರಡು ಮಾರ್ಗಗಳಿಗೆ ರಾಜಾರಾಮ ಮೋಹನ್ ರಾಯ್ ಮತ್ತು ದಿವಂಗತ ಕುದ್ಮುಲ್ ರಂಗರಾಯರ ಹೆಸರುಗಳನ್ನು ಇಡಬೇಕಾಗಿ ನಗರಸಭೆಯವರ ಯೋಚನೆಯಿದೆ.

ಮಧ್ಯಾಹ್ನ ೧೨ ಗಂಟೆಗೆ ಹಾರಿಸುವ ತುಪಾಕಿಯನ್ನು, ಲಾಪಟಿ ಗುಡ್ಡೆಯಲ್ಲಿಟ್ಟು ರಾತ್ರಿ ೮ ಗಂಟೆಗೆ ಹಾರಿಸುವ ಆಲೋಚನೆಯೂ ಇದೆ.

ಡಿಪ್ಯುಟಿ ಪೋಲೀಸ್ ಇನ್ಸ್‌ಪೆಕ್ಟರ್ ಜನರಲರು ಕಳೆದ ವಾರ ಇಲ್ಲಿಗೆ ಬಂದು ಹಿಂತಿರುಗಿದರು.

ಸೈಂಟ್ ಎಲೋಶಿಯಸ್ ಕೊಲೆಜಿನ ದ್ವೇಷ ಕರ್ನಾಟಕ ಸಂಘದ ವಾರ್ಷಿಕೋತ್ಸವವು ರಾಷ್ಟ್ರಬಂಧುವಿನ ಸಂಪಾದಕರಾದ ಶ್ರೀ। ಕೆ. ಶಂಕರ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು.

ತಾ. ೧೧ನೇ ದಿನ ಕೊಡಿಯಾಲ್‌ಬೈಲಿನ ದಕ್ಷಿಣ ಕನ್ನಡ ದ್ರಾವಿಡ ಬ್ರಾಹ್ಮಣರ ಸಂಘದಲ್ಲಿ ಡಾ। ಪಿ. ರಾಮರಾಯರ ಭಾವಚಿತ್ರ ಅನಾವರಣವು ಸನ್ಮಿತ್ರ ಪ. ಜಡ್ಜರಾದ ಎಂ. ನರಸಿಂಗರಾವ್ ಬಿ. ಎ ಎಮ್. ಎಲ್. ರವರಿಂದ ನಡೆಯಿತು.

ತಾ. ೧೧ನೇ ದಿನ ಬಜಾರಿಯೋ ಸೆಕೆಂಡರಿ ಶಾಲೆಯ ವಾರ್ಷಿಕೋತ್ಸವವು ರಾವ್ ಬಹದ್ದೂರ್ ನೆಲ್ಲಿಕಾಯಿ ವೆಂಕಟರಾಯರ ಅಧ್ಯಕ್ಷತೆಯಲ್ಲಿ ಜರಗಿತು.

ಜಿ. ಎಚ್. ಎಚ್. ನಾಟಕ ಸಂಘದವರು ತಾ. ೯ನೇ ರಾತ್ರಿ ಆಡಿದ "ಪುರಂದರ ದಾಸ" ಎಂಬ ನವೀನ ನಾಟಕವು ಬಹು ಭಾವಪೂರಿತವೂ ತತ್ವಬೋಧಕವೂ ಆಗಿದ್ದಿತು.

ಬಂಟ್ವಾಳ— ಇದೇ ತಿಂಗಳ ತಾ. ೨೪ರಲ್ಲಿ ಅಪರಾಹ್ನ ಘಂಟೆ ೩-೩೦ಕ್ಕೆ ಮಹಾತ್ಮಾಜೀಯವರು ಇಲ್ಲಿಗೆ ಬರುವವರಿರುವ ಕಾರಣ, ಅವರಿಗೆ ಒಪ್ಪಿಸುವ ನಿಧಿಗೆ ಪುರಜನರೆಲ್ಲರೂ ತಮ್ಮ ಉದಾರಾಶ್ರಯವನ್ನಿತ್ತು ಸನ್ಮಾನದ ಸಹಕರಿಸಬೇಕಾಗಿ ಕಾರ್ಯದರ್ಶಿಯವರ ವಿನಂತಿ.

ಇಲ್ಲಿ ಇದೇ ತಿಂಗಳ ತಾ. ೫ನೇ ಸೋಮವಾರ ಇಲ್ಲಿಯ ತಾಲೂಕು ಮತ್ತು ಡಿಸ್ಟ್ರಿಕ್ಟ್ ಬೋರ್ಡು ಮೆಂಬರರೂ, ಪರಸ್ಪರ ಸಹಾಯಕ ಸಂಘದ ಪ್ರೆಸಿಡೆಂಟರೂ ಆದ ಜನಾಬ್ ಬಿ. ಎಲ್. ಹಾಮದ್ ಸಾಹೇಬ ಬಹದೂರರು ಸದ್ರಿ ಸಂಘದ ಮಾಳಿಗೆಯಲ್ಲಿ ಬಿಹಾರಿನ ಭೂಕಂಪ ರಿಲೀಫ್ ಫಂಡಿನ ಸಹಾಯಾರ್ಥವಾಗಿ ಪುರಜನರ ಒಂದು ಸಭೆಯನ್ನು ಕರೆದು ಶ್ರೀ. ಸಾಹುಕಾರ ಪದ್ಮನಾಭ ಬಾಳಿಗರು, ಜನಾಬ ಬಿ. ಎಲ್. ಹಾಮದ ಸಾಹೇಬ, ಡಾ. ಕೆ. ಎಸ್. ಅಮೃತರಾಯರು, ಶ್ರೀಗಳಾದ ಭಾಮಿ ಕೃಷ್ಣರಾಯರು, ಬಿ. ಕೇಶವ ಬಾಳಿಗರು, ದಾಮೋಧರ ಶ್ಯಾನುಭಾಗರು, ಬಿ. ಅಚ್ಯುತಪ್ಪಗಳವರೂ ಒಂದು ಕಮಿಟಿ ನಿಶ್ಚಯಿಸಿ, ಇದರಲ್ಲಿ ರಾ। ಬಿ. ಟಿ ಬಾಳಿಗರು ಅಧ್ಯಕ್ಷರಾಗಿಯೂ, ಜನಾಬ ಸಾಹೇಬ ಬಹದೂರರು ಕಾರ್ಯದರ್ಶಿಯರಾಗಿಯೂ ನೇಮಕವಾಯಿತು. ಸದ್ರಿ ಕಮಿಟಿಯವರು ವಂತಿಗೆಯನ್ನು ಬಹು ರಭಸದಿಂದಲೂ ಉತ್ಸಾಹದಿಂದಲೂ ಎತ್ತುತ್ತಿರುವುದು ಶ್ಲಾಘ್ಯವಾಗಿದೆ.

ಬಂಟವಾಳದಲ್ಲಿ ಬಂದೆರಡು ಅಂಗಡಿಗಳಲ್ಲಿ ಕೆಲವು ವರ್ಷಗಳಿಂದ ಕಳ್ಳರ ಸುಳಿವು ಇಲ್ಲದಿದ್ದು, ಈಗ ಛತ್ರಬೆಟ್ಟು ಗೋಪಾಲ ಶ್ಯಾನುಭಾಗರ ಅಂಗಡಿಯಲ್ಲಿಯೂ, ಕೊಟ್ರಪ್ಪನ ಗಲ್ಲಿಯ ಒಂದು ಅಂಗಡಿಯಲ್ಲಿಯೂ ಕಳವಿಗೆ ಮುಹೂರ್ತ ಮಾಡಿರುತ್ತಾರೆಂದು ತಿಳಿದುಬರುತ್ತದೆ.

ಪಡುಬಿದ್ರೆ— ತಾ. ೧೧ರಲ್ಲಿ ಪೂರ್ವಾಹ್ನ ಘಂಟೆ ೮-೩೦ಕ್ಕೆ ಇಲ್ಲಿಯ ಬೋರ್ಡು ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಸ್ಥಳೀಯ ಸೆಂಟರಿನ ಮೂಲಪಾಠ ಶಾಲಾಧ್ಯಾಪಕ ಸಂಘದ ಆದೊಂದು ಸಾಮಾನ್ಯ ಸಭೆಯು ಫಲಿಮಾರು ಬೋ. ಹಾ. ಎ. ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ। ಕೆ. ವೆಂಕಟ್ರಾಯ ಪೈಗಳವರ ಅಧ್ಯಕ್ಷತೆಯಲ್ಲಿ ಜರಗಿತು.

ನೋಟೀಸು.

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

ಸ್ಮಾಲ್ ನಂಬ್ರ 21/34.

ಪೆರಂಪಳ್ಳಿ ರಾಘವೇಂದ್ರ ನಾಯ್ಕ—ವಾದಿ

ಮತ್ತು

ಲುವಿಸ್ ಅರೆಂಜಾ—ದೂಜ ಅರೆಂಜಾನ ಮಗ—ಶಿರ್ವ ಗ್ರಾಮದ ಮಂಚಕಲ್ಲು—ಪ್ರತಿವಾದಿ

ಇವರೊಳಗೆ

ಸದರಿ ಪ್ರತಿವಾದಿಗೆ

ಪ್ರತಿವಾದಿಯಿಂದ ವಾದಿಗೆ ಬರತಕ್ಕ ಲೇವಾದೇವಿ ಬಾಬ್ತು ರೂ. 71-5-2ಕ್ಕೆ ವಾದಿಯು ಪ್ರತಿವಾದಿ ಮೇಲೆ ಮಾಡಿದ ಸದರಿ ವ್ಯಾಜ್ಯವು ತಾ. 2-3-'34ಕ್ಕೆ ಅಖೈರ ತನಿಖೆಗೆ ಇಟ್ಟಿರುವದರಿಂದ ಆಕ್ಷೇಪ ಇದ್ದರೆ ಆ ದಿವಸ 10 ಘಂಟೆಯ ಒಳಗೆ ಕೋರ್ಟು ಮುಂದೆ ಹಾಜರಾಗಿ ಆಕ್ಷೇಪ ಮಾಡಿಕೊಳ್ಳತಕ್ಕದ್ದು. ತಪ್ಪಿದರೆ ಸದರಿ ವ್ಯಾಜ್ಯವನ್ನು ಏಕ ಪಕ್ಷವಾಗಿ ತೀರ್ಮಾನಿಸಲಾದೀತು ಎಂತ ಈ ಮೂಲಕ ತಿಳಿಸೋಣಾಗುತ್ತದೆ.

ಉಡುಪಿ
ತಾ. 13-2-'34

K. Ramanatha Pai,
Pleader for Plaintiff

Karnataka Chemical and Pharmaceutical Works, Ltd., Udipi. (South India)

ಕುಂಭಕೋಣದಲ್ಲಿಯೂ ಮಧುರೆಯಲ್ಲಿಯೂ ಮೈಸೂರಿನಲ್ಲಿಯೂ ಸುವರ್ಣ ಪದಕಗಳನ್ನು ಪಡೆದಿರುವ

ಕರ್ನಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದಕ್ಷಿಣ ಹಿಂದೂಸ್ಥಾನ).

ನಮ್ಮಲ್ಲಿ ಟಿಂಕ್ಚರ್ಸ್ ವಗೈರೆ ಎಲ್ಲಾ ಎಲ್ಲೋಪತಿಕ್ ಔಷಧ ದ್ರವ್ಯಗಳೂ, ಆಯುರ್ವೇದೀಯ ಔಷಧಿಗಳೂ, ಟೊಯ್ಲೆಟ್ ಸಾಮಗ್ರಿಗಳೂ, ಸಾಬೂನುಗಳೂ, ಫೌಂಟನ್ ಪೆನ್ ಶಾಯಿಗಳೂ ತಯಾರಿಸಲ್ಪಡುತ್ತವೆ.

ದ್ರಾಕ್ಷಾಸವ, ಪ್ರಸೂತಿ ಸಂಜೀವನ, ನಿಯೂವಿಗರ್, ಸ್ನೋ,

ಕ್ಷೀರಬಲಾ, ಕಾರ್ಪೊಫ್ಲೊಜಿಸ್ಟಿನ್, ಯುಟೆರೀನಾ, ಇಂಕ್ಸ್

ಮೆನೇಜಿಂಗ್ ಡೈರೆಕ್ಟರ್—ವೆಂಕಟ್ರಾಯ ಅಣ್ಣಪ್ಪ ಬಾಳಿಗೆ.

ಹೆಡ್ ಆಫೀಸು:
ಉಡುಪಿ. (ದಕ್ಷಿಣ ಹಿಂದೂಸ್ಥಾನ)

ಬ್ರೇಂಚ್ ಆಫೀಸು
ದೇವಕರಣ ಮೆನ್ಶನ್ಸ್, 45 ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ ನಂ. 2.

ಪಶ್ಚಿಮ ಕರಾವಳಿ ಮತ್ತು ಮೈಸೂರು ಪ್ರಾಂತ್ಯಗಳ ಪ್ರಾಮುಖ್ಯ ಏಜಂಟರು:

ಕರ್ನಾಟಕ ಪ್ರೊಡಕ್ಟ್ಸ್ ಡಿಸ್ಟ್ರಿಬ್ಯೂಟಿಂಗ್ ಕಂಪೆನಿ, ಮಂಗಳೂರು

ದೂರದ ಮೂಲೆಯಿಂದ

ಹಂಪನಕಟ್ಟೆ:—ತಾ. ೧೯—೨—೩೮ನೇ ಶುಕ್ರವಾರ ಇಲ್ಲಿಗೆ ಆಗಮಿಸಿದ ಜಿಲ್ಲಾ ಬೋರ್ಡ್ ಪ್ರೆಸಿಡೆಂಟರಾದ ರಾವ್ ಬಹದೂರ್ ಶೆಟ್ಟಿ ವೆಂಕಟ್ರಾಯರವರೂ, ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರರಾದ ಖಾನ್ ಬಹದೂರ್ ಹಾಜಿ ಅಬ್ದುಲ್ಲ ಸಾಹೇಬರವರೂ ಉಪ್ಪಿನಂಗಡಿ ಹೆಲ್ತ್ ಇನ್ಸ್‌ಪೆಕ್ಟರವರಾದ ರಾ| ಕೋಟೆ ರಾಮರಾಯರೂ ಮತ್ತು ಉಪ್ಪಿ ಡಿವಿಜನಿನ ಅಸಿಸ್ಟೆಂಟ್ ಇಂಜಿನಿಯರಾದ ರಾ| ಶ್ರೀನಿವಾಸರಾಯರೂ ಚಿತ್ತೈಸಿ ಇಲ್ಲಿಯ ಬೋರ್ಡ್ ಹುಡುಗರ ವ ಹುಡುಗಿಯರ ಶಾಲೆಗಳನ್ನೂ, ಹಿಂದೀ ಸಂಗೀತ ಮತ್ತು ಚಿತ್ರಕಲಾ ಶಾಲೆಗಳನ್ನೂ, ಸಾರ್ವಜನಿಕ ವಾಚನಾಲಯವನ್ನೂ ಸಂದರ್ಶಿಸಿ ಬಹಳ ಒಳ್ಳೇ ಅಭಿಪ್ರಾಯವನ್ನು ಕೊಟ್ಟಿರುತ್ತಾರೆ.

—ತಾ. ೧೪—೨—೩೮ನೇ ಸೋಮವಾರ ರಾತ್ರಿ ಬಲಿಪ ನಾರಾಯಣ ಭಾಗವತರ ಶ್ರೀ ಶಂಕರನಾರಾಯಣ ಪ್ರಸಾದಿತ ಯಕ್ಷಗಾನ ಮಂಡಳಿಯವರು ಇಲ್ಲಿಯ ಸ್ಥಳೀಕ ಕ್ಷತ್ರಿಯ ಸಂಬಂಧ ನೂತನವಾಗಿ ಕಟ್ಟಿಸಿದ ಶ್ರೀರಾಮಾ ಥಿಯೇಟರಿನಲ್ಲಿ ಸೀತಾಸ್ವಯಂವರವೆಂಬ ಪ್ರಸಂಗವನ್ನು ಅಭಿನಯಿಸಿದರು. ಇಲ್ಲಿ ಇವರು ಅನ್ನೇಕ ನಾಟಕಗಳನ್ನು ಅಭಿನಯಿಸಿರುವರು. ಬಯಲಾಟದಲ್ಲಿ ಸುಧಾರಣೆಯನ್ನು ಮಾಡಿದ ಮಂಡಳಿಯವರ ಪರಿಶ್ರಮಕ್ಕೆ ತಕ್ಕ ಫಲವನ್ನು ಆ ಪರಮಾತ್ಮನು ದಯೆ ಪಾಲಿಸಲಿ.

ಮಂಗಳೂರು:—ಸದ್ಯದಲ್ಲಿಯೇ ಜ್ಯಾರಿಗೆ ಬರಲಿಕ್ಕಿರುವ ಶಾಲೆಗಳ ಎವಾಲ್ಗಮೇಶನ್ ಅಥವಾ ಕನ್ಸಂಟ್ರೇಶನ್ ಸ್ಕೀಮಿನ ಕುರಿತು ಸೂಚನೆಗಳನ್ನೀಯುವುದಕ್ಕಾಗಿ ನಮ್ಮ ಮದ್ರಾಸು ವಿದ್ಯಾಂಗದ ಡೆಪ್ಯುಟಿ ಡೈರೆಕ್ಟರಾದ ಮಾನ್ಯ ಡಿ. ಸದಾಶಿವ ರೆಡ್ಡಿಯವರು ತಾ. ೧೮—೨—೩೮ಕ್ಕೆ ಮಂಗಳೂರನ್ನು ಸಂದರ್ಶಿಸುವರು. ಈ ವಿಷಯದಲ್ಲಿ ನಮ್ಮ ಮನವಿಗಳನ್ನು ತಿಳಿಸುವ ಬಗ್ಗೆ ತಾ. ೧೫—೨—೩೮ಕ್ಕೆ ಮೊಳಹಳ್ಳಿ ಶಿವರಾಯರ ಮುಂದಾಳುತನದಿಂದ ಮಾನ್ಯ ಡೆಪ್ಯುಟಿ ಡೈರೆಕ್ಟರ ಬಳಿಗೆ ಡೆಪ್ಯುಟೇಶನುಗಳು ಹೋಗಬೇಕೆಂದೂ, ಆ ಸಂಬಂಧ ತಾ. ೧೮—೨—೩೮ನೇ ಪ್ರಾತಃಕಾಲ ಘಂಟೆ ೧೧ಕ್ಕೆ ಮಂಗಳೂರು ಬಾಲಸಾಹಿತ್ಯ ಮಂಡಲದ ಆಫೀಸಿನಲ್ಲಿ ಸದರಿ ಸಂಘಗಳ ಆಡಳಿತ ಮಂಡಳಿಯ ಸಭೆಗಳನ್ನು ಬರಗಿಸಬೇಕೆಂದೂ ನಿರ್ಣಯಿಸಿರುವುದರಿಂದ ಈ ಸಭೆಗಳಿಗೆ ಸಂಬಂಧಪಟ್ಟ ಎಲ್ಲಾ ಸದಸ್ಯರು ತಪ್ಪದೆ ಹಾಜರಾಗುವುದಲ್ಲದೆ ನಮ್ಮ ಸಹಾಧ್ಯಾಯಿ ಬಂಧುಗಳು ಈ ಸ್ಕೀಮಿನ ಜಾರಿಯಿಂದ ತಮಗುಂಟಾಗತಕ್ಕ ಬಾಧಕದ ಸ್ವಾನುಭವ ಸೂಚನೆಗಳನ್ನು ಸದರಿ ಸಭೆಯ ಮೊದಲೇ ನಮಗೆ ತಿಳಿಸಬೇಕಾಗಿ ಪ್ರೆಸಿಡೆಂಟರಾದ ಕುಂಬಳೆ ಗಣಪಯ್ಯ ಶೆಟ್ಟರು ತಿಳಿಸುತ್ತಾರೆ.

ಪುತ್ತೂರು:—ಇಲ್ಲಿಯ ತಾಲೂಕು ಬೋರ್ಡು ಸಭೆಯು ಇದೇ ತಾರೀಕು ೨೬ನೆಯ ಶನಿವಾರ ಸಂಜೆ ೫ ಘಂಟೆಗೆ ಕಡಬದ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಜರಗುವುದೆಂದು ಬೋರ್ಡಿನ ಪ್ರೆಸಿಡೆಂಟರು ತಿಳಿಸುತ್ತಾರೆ.

ಪುತ್ತೂರು:—ಬ್ರಹ್ಮ ಶ್ರೀ ಶೇಖರಿ ಸೀತಾ ರಾಮಯ್ಯನವರ ಮನೆಯಲ್ಲಿ ತಾ. ೮ನೆಯ ಗುರುವಾರ ವಿವಾಹೋತ್ಸವದ ಸಂದರ್ಭ ಅಪರಾಹ್ನ ಘಂಟೆ ೩ರಿಂದ ೬ರ ವರೆಗೆ ಸೌ| ಪದ್ಮಾವತಿ ಎಂಬ ಹರಿಕಥಾಗಾಯಕಿಯಿಂದ 'ಸೀತಾಪರಿಣಯ' ವೆಂಬ ಹರಿಕಥೆಯು ಅತಿ ಸೊಗಸಾಗಿ ನೆರವೇರಿತು. ಅವಳು ಈ ವರೆಗೆ ೫ ಸುವರ್ಣ ಪದಕಗಳನ್ನು ಪಡೆದಿರುತ್ತಾಳೆ.

ನಿಟ್ಟೆಯಲ್ಲಿ:—'ದಿ ಯೂನಿಯನ್ ಕ್ಲಬ್' ಎಂಬ ಹೊಸ ವಾಚನಾಲಯವು ತಾ. ೧—೨—೩೮ರಲ್ಲಿ ಅಂದಿನ ಉದ್ಘಾಟನಾ ಸಮಾರಂಭದ ಅಧ್ಯಕ್ಷರಾದ ಶ್ರೀ ನಿಟ್ಟೆಗುತ್ತು ಮಂಜಯ್ಯ ಅಧ್ಯಂತಾಯರಿಂದ ತೆರೆಯಲ್ಪಟ್ಟಿತು.

ಉಡುಪಿ:—ಉಡುಪಿಯಲ್ಲಿ ಬಿಹಾರಿನ ಸಹಾಯಾರ್ಥವಾಗಿ ಅಲ್ಲಿಯ ದಕ್ಷಿಣ ಕನ್ನಡ ಜಿಲ್ಲಾ ನೆರೆಯ ಸಹಾಯಕ ಸಮಿತಿಯವರು ಬಾಬು ರಾಜೇಂದ್ರ ಪ್ರಸಾದರಿಗೆ ೫೦೦ ರೂಪಾಯಿಗಳನ್ನೂ ಅಲ್ಲಿಯ ಬಾರ್ ಎಸೋಸಿಯೇಶನಿನವರು 'ಹಿಂದು' ಸಹಾಯಕ ನಿಧಿಗೆ ೨೫ ರೂಪಾಯಿಗಳನ್ನೂ, ಶ್ರೀ ಮಂಜುನಾಥ ನಾಯಕರಿಂದ ಸಂಗ್ರಹಿಸಲ್ಪಟ್ಟ ರೂ. ೫೪-೯-೫ 'ಹಿಂದು'ವಿನ ಮೂಲಕ ರಾಜೇಂದ್ರ ಪ್ರಸಾದರಿಗೂ, ಅಲ್ಲಿಯ ಡಿ. ಮುನ್ಸಿಫ್ ಕೋರ್ಟಿನವರು ರೂ. ೧೬-೨-೦ 'ಹಿಂದು'ವಿಗೂ ಕಳುಹಿಸಿದ್ದಾರೆಂದು ಉಡುಪಿ ಕೆ. ಶ್ರೀನಿವಾಸ ಪೈಗಳವರು ತಿಳಿಸುತ್ತಾರೆ.

ಗದಗ ನಾಟಕ ಮಂಡಳಿಯೊಡೆಯರಾದ ಶ್ರೀ ಗರೂಡರ ಸಹ ರೂಪಾಯಿ ೪೩ರನ್ನು ಮೈಸೂರಾಯ ಫಂಡಿಗೆ ಕಳುಹಿಸಿರುತ್ತಾರಾಗಿ ತಿಳಿದು ಬರುತ್ತದೆ.

ಪೆರಂಪಳ್ಳಿ ಕಕ್ಕುಂಜೆ ಬದಿಯಲ್ಲಿ ತಾ. ೬ನೆಯ ಮಂಗಳವಾರ ರಾತ್ರಿ ಸಾಧಾರಣ ಒಂಭತ್ತುವರೆ ತಾಸಿಗೆ ಬಡಬಂಟರ

[illegible] ಸಾಧಾರಣ ದೊಡ್ಡ ಗಂಡಸ್ಸು [illegible] ನಾಗಾಬಹುದೆಂದು ಊಹಿಸಲಾಗಿದೆ.

ಮಹಾತ್ಮಾಜೀಯವರು ಇದೇ ತಿಂಗಳ ತಾ. ೨೦ನೆಯ ಆದಿತ್ಯವಾರ ಅಪರಾಹ್ನ ಗಂಟೆ ೩||ಗೆ ರಜತಪೀಠದಲ್ಲಿ ಪಾದಾರ್ಪಣ ಮಾಡುವರು. ೪|| ತಾಸಿನ ತನಕ ಮಹಾಜನ ಸಭೆ ಜರಗುವುದು. ೫|| ಗಂಟೆಯ ತನಕ ವಿಶ್ರಾಂತಿ ಪಡೆದು ಕುಂದಾಪುರಕ್ಕೆ ಪಯಣ ಬೆಳೆಸುವರಾಗಿ ಈಗತಾನೆ ತಿಳಿದು ಬರುತ್ತದೆ.

ಫಲಿಮಾರು:—ಕಳೆದ ತಾ. ೨—೨—೩೮ನೆಯ ಶುಕ್ರವಾರ ಫಲಿಮಾರು ಸಂತೆಕಟ್ಟೆಯ ಬಳಿ ಪುತ್ತೂರು ತಾಲೂಕಿನ ಪದ್ಮಾವತಿ ಎಂಬ ಚಿಕ್ಕ ಬಾಲಿಕೆಯು ಮಾಡಿದ ಸೀತಾಪರಿಣಯವೆಂಬ ಹರಿಕಥೆಯು ಬಹು ಸೊಗಸಾಗಿ ಅಭಿನಯಿಸಲ್ಪಟ್ಟಿತೆಂದು ಸುದ್ದಿಗಾರರಲ್ಲೊಬ್ಬರು ತಿಳಿಸುತ್ತಾರೆ.

ಕಾಸರಗೋಡು:—'ಛತ್ರಪತಿ ಶ್ರೀ ಶಿವಾಜಿ ಮಹಾರಾಜರ ಜನ್ಮೋತ್ಸವ'ವನ್ನು ವರ್ಷಂಪ್ರತಿ ಜರಗಿಸುವರೆ ಒಂದು ಸಂಘವನ್ನು ಏರ್ಪಡಿಸುವ ಬಗ್ಗೆ ಮಹಾರಾಷ್ಟ್ರ ಕ್ಷತ್ರಿಯರ ಒಂದು ಸಭೆಯು ತಾ. ೨೦—೨—೩೮ನೇ ಮಂಗಳವಾರ ದಿನ ಕಾಸರಗೋಡು ಪೈಕಿ ಕೊಂಕೋಡು ಶ್ರೀ ಮಹಾದೇವಿ ಅಮ್ಮನವರ ದೇವಸ್ಥಾನದಲ್ಲಿ ಜರಗುವುದು. ಎಲ್ಲಾ ಸ್ವಜಾತಿ ಬಂಧುಗಳು ಚಿತ್ತೈಸಿ ತಮ್ಮ ಸಲಹೆಗಳನ್ನೀಯಬೇಕಾಗಿ ಶ್ರೀ. ಮೋಹಿತೆ ಕೆ. ಎಸ್. ಆರ್. ವೈತ್ರೇಯ ಕೋರುತ್ತಾರೆ.

ಮಂಗಳೂರು:—ಇದೇ ತಿಂಗಳ ಕಳೆದ ತಾ. ೧೧ನೇ ಆದಿತ್ಯವಾರ ಪ್ರಾತಃಕಾಲ ಘಂಟೆ ೮ಕ್ಕೆ ಮಂಗಳೂರ ಲೈಟು ಹೌಸಿನ ಬಳಿ ಇರುವ ಎಂಪಾಯರ್ ಬಿಲ್ಡಿಂಗಿನ ಮಾಳಿಗೆಯಲ್ಲಿ ಶ್ರೀಯುತ ವಿಶ್ವಭಾನುರವರ ಪ್ರೋತ್ಸಾಹದಿಂದ ಮಂಗಳೂರು ಸಿಟಿ ಆರ್ಯ ಸಮಾಜದ ಸದಸ್ಯರ ವಿಶೇಷ ಸಭೆಯೊಂದು ಜರಗಿತು. ಪ್ರಾರಂಭದಲ್ಲಿ ಶ್ರೀಯುತ ವಿಶ್ವಭಾನು ಮತ್ತು ಬಿ. ಲಕ್ಷ್ಮಣದೇವ ವಿದ್ಯಾರ್ಥಿಯವರು ಹವನ ಭಜನೆ ಇತ್ಯಾದಿಗಳನ್ನು ನೆರವೇರಿಸಿದ ನಂತರ ಅಂದಿನ ಸಭೆ ಜರಗಿಸಿದ ಮತ್ತು ಮುಂದಿನ ಕಾರ್ಯಕ್ರಮಗಳ ಕುರಿತು ವಿಶ್ವಭಾನು ಕಲ್ಪಾಡೆ ಉದ್ದೇಶಗಳನ್ನು ವಿದ್ಯಾರ್ಥಿಯವರು ವಿವರಿಸಿದ ನಂತರ ಮುಂದಕ್ಕೆ ಪ್ರತಿ ಆದಿತ್ಯವಾರ ಇದೇ ರೀತಿಯಲ್ಲಿ ಸಭೆ ಜರಗಿಸಬೇಕೆಂದೂ ಪ್ರಚಾರ ಕಾರ್ಯಗಳನ್ನು ವ್ಯವಸ್ಥಿತ ರೀತಿಯಲ್ಲಿ ಮುಂದರಿಸಬೇಕೆಂದೂ ನಿಶ್ಚಯಿಸಲಾಯಿತು.

ಇದೇ ತಿಂಗಳ ಬರುವ ತಾ. ೧೮ನೇ ಆದಿತ್ಯವಾರ ಪ್ರಾತಃಕಾಲ ಘಂಟೆ ೮ಕ್ಕೆ ಸರಿಯಾಗಿ ಮೇಲೆ ವಿವರಿಸಿದ ಸಮಾಜ ಮಂದಿರದಲ್ಲಿ ಸಮಾಜದ ಸಾಪ್ತಾಹಿಕ ಅಧಿವೇಶನವು ಜರಗುವುದು. ಶ್ರೀಯುತ ವಿಶ್ವಭಾನುರವರು ದೇವಾರಾಧನೆ ಮತ್ತು ವ್ಯಾಖ್ಯಾನ ನಡೆಸುವರು. ಸರ್ವರೂ ಸಹಕರಿಸಬೇಕಾಗಿ ವಿನಂತಿ.

ಕೊಡಗಿನಲ್ಲಿ ಕಳೆದ ಡಿಸೆಂಬರ್ ತಿಂಗಳಲ್ಲಿ ೩೧೯ ಮರಣಗಳು, ಮತ್ತು ೨೮೧ ಜನನಗಳು ಆದವು.

ಕೊಡಗಿನ ಎಕ್ಸೈಜ್ ಎಡ್ವೈಸರಿ ಕಮಿಟಿಗೆ ಡಿಸ್ಟ್ರಿಕ್ಟ್ ಬೋರ್ಡಿನ ಪ್ರೆಸಿಡೆಂಟರನ್ನು ಮೆಂಬರರಾಗಿ ನೇಮಿಸಿಕೊಳ್ಳಲು ಸಂಬಂಧಪಟ್ಟ ನಿಬಂಧನೆಯು ತಿದ್ದುಪಡಿ ಮಾಡಲಾಗಿದೆ.

ಚೇರಳ ಶ್ರೀಮಂಗಲ ಗ್ರಾಮದ ಎಲಿಮೆಂಟರಿ ಶಾಲೆಯ ೪ನೇ ವಾರ್ಷಿಕೋತ್ಸವವು ಈ ತಾ. ೯ರಲ್ಲಿ ಶಾಲಾ ಇನ್ಸ್‌ಪೆಕ್ಟರರಾದ ಮಿ. ಎಡ್‌ಮಂಡ್ಸ್‌ರವರ ಅಧ್ಯಕ್ಷತೆಯಲ್ಲಿ ನಡೆಯುವುದು.

ಮಡಿಕೇರಿ ಸಬ್ ಜಡ್ಜ್ ಕೋರ್ಟಿನಲ್ಲಿ ಕ್ಲಾರ್ಕರಾದ ಮ. ರಾ. ರಾ. ಎ. ಕೆ. ನಾರಾಯಣರಾಯರ ಪತ್ನಿಯವರು ಈ ತಾ. ೬ರಲ್ಲಿ ಮಹದೇವ ಪೇಟೆಯಲ್ಲಿ ಪ್ಲೇಗಿನಿಂದ ಮೃತರಾದರೆಂದು ತಿಳಿಯುತ್ತೇವೆ.

ಶ್ರೀಮಂಗಲನಾಡು ಕುರ್ಚಿ ಗ್ರಾಮದ ಇರ್ಪು ಜಾತ್ರೆಗೆ ಈ ತಾ ೧೫ ಮತ್ತು ೧೬ರಲ್ಲು ಪ್ಲೇಗು ಇರು ವ್ಯಾಂತಿಭೇದಿ ಇರುವ ಕಡೆಗಳಿಂದ ಜನರು ಹೋಗಕೂಡದೆಂದು ಚೀಫ್ ಕಮಿಶನರವರ ಹುಕುಂ ಆಗಿದೆ.

ಬರುವ ಮಾರ್ಚ ತಾ. ೯ರಲ್ಲಿ ಪ್ರಾರಂಭವಾಗುವ ಕೊಡಗು ಕೌನ್ಸಿಲು ಮೀಟಿಂಗಿನಲ್ಲಿ ಬಜೆಟ್ಟಿನ ವಿಷಯ ಚರ್ಚಿಸಲಿಕ್ಕಿರುವ ಠರಾವುಗಳನ್ನು ತಾ. ೩-೩-೩೮ರೊಳಗೆ ಕಳುಹಿಸತಕ್ಕದ್ದೆಂದು ಪ್ರಕಟವಾಗಿದೆ.

ಕಳೆದ ತಾ. ೧೨ರಲ್ಲಿ ನಡೆದ ವೀರಾಜಪೇಟೆ ಗವರ್ನಮೆಂಟ್ ಹೈಸ್ಕೂಲಿನ ವಾರ್ಷಿಕೋತ್ಸವದ ಅಧ್ಯಕ್ಷಸ್ಥಾನವನ್ನು ಶಾಲಾ ಇನ್ಸ್‌ಪೆಕ್ಟರರಾದ ಮಿ. ಎಸ್. ಎಸ್. ಸಿ. ಎಡ್ಮಂಡ್ಸ್‌ರವರು ಒಪ್ಪಿರುವರೆಂದು ತಿಳಿಯ ಬರುತ್ತದೆ.

ಶ್ರೀರಾಮ ಲಿಂಗೇಶ್ವರ ಸಹಕಾರ ಸಂಘದ ಮತ್ತು [illegible] ಸಹಕಾರ ಸಂಘದ ರೆಜಿಸ್ಟ್ರೇಷನು ರದ್ದು ಮಾಡಲ್ಪಟ್ಟು, ಸಹಕಾರ ಇನ್ಸ್‌ಪೆಕ್ಟರುಗಳಾದ ಮ. ರಾ. ಪಿ. ಯು ಪೊನ್ನಪ್ಪನವರು ೧ನೇ ಸಂಘದ ಮತ್ತು ಮ. ರಾ. [illegible] ಶೇಷಗಿರಿರಾವ್‌ರವರು ೨ನೇ ಸಂಘದ ಲಿಕ್ವಿಡೇಟರುಗಳಾಗಿ ನೇಮಿಸಲ್ಪಟ್ಟಿರುವರು.

ರಿಜರ್ವ ಫಾರೆಸ್ಟಿನಲ್ಲಿ ಬೇಟೆಯಾಡಲು ಲೈಸನ್ಸು ಪಡೆದುಕೊಂಡಿರುವವರು ಫಾರೆಸ್ಟಿನಲ್ಲಿ ಮೃಗವನ್ನು 'ಗುಂಡು ಹೊಡೆದಾಗ' ಅದನ್ನು ತಿಳಿಸಬೇಕೆಂಬುದರ ಬದಲು 'ಗುಂಡು ಹೊಡೆದು ೩ ದಿವಸಗಳೊಳಗೆ' ಆ ಸಂಗತಿಯನ್ನು ಚೀಫ್ ಫಾರೆಸ್ಟು ಆಫೀಸರಿಗೂ ಮತ್ತು ಸ್ಥಳೀಯ ರೇಂಜರಿಗೂ ತಿಳಿಸಬೇಕೆಂದು ನಿಬಂಧನೆ ತಿದ್ದುಪಡಿ ಮಾಡಲಾಗಿದೆ.

ಫ್ರೇಜರ್‌ಪೇಟೆ ಹೋಬಳಿ ಮತ್ತು ಫ್ರೇಜರ್‌ಪೇಟೆ ನೋಟಿಫೈಡ್ ಏರಿಯಾಕ್ಕೆ ಬೆಂಚ್ ಮೇಜಿಸ್ಟ್ರೇಟರುಗಳು ಕೋರ್ಟೊಂದು ಸ್ಥಾಪಿಸಲ್ಪಟ್ಟು, ಮ. ರಾ. ಯಸ್. ಯನ್. ರಾಮ ಶೆಟ್ರರವರು ಅದರ ಅಧ್ಯಕ್ಷರಾಗಿಯೂ, ಮ. ರಾ. ಗಳಾದ ಫ್ರೇಜರ್‌ಪೇಟೆಯ ಎ. ವೈಲಾರ್ ಶೆಟ್ಟಿಯವರು, ಸಿರಂಗಾಲದ ಮುರುಗಪ್ಪನವರು ಹೆಬ್ಬಾಲೆಯ ಹೊನ್ನಪ್ಪನವರು ಮತ್ತು ನಲ್ಲೂರು ಕಾಳೇಗೌಡರು ಬೆಂಚ್ ಮೆಜಿಸ್ಟ್ರೇಟರುಗಳಾಗಿಯೂ ನೇಮಿಸಲ್ಪಟ್ಟಿರುವರು.

ಸುಮಾರು ೬ ತಿಂಗಳ ಹಿಂದೆ ಮ| ರಾ| ಕುಟ್ಟೀಟಿರ ಸುಬ್ಬಯ್ಯನವರ ರೈಟರ್ ಬಾಡನ ಅಪ್ಪಚ್ಚನವರು ಕ್ರಿಸ್ತನ್ ಡಿಸೋಜ ಮೇಸ್ತ್ರಿಯ ಮೂಲಕ ೫೦೦ ರೂಪಾಯಿಯ 'ಗಾಂಧಿ ನೋಟ'ನ್ನು ಖಜಾನೆಗೆ ಕಳುಹಿಸಿ ಚಿಲ್ಲರೆ ತರಲು ಪ್ರಯತ್ನಿಸಿದರೆಂದು ಅವರಿಗೆ ಉತ್ತರ ಕೊಡಗು ತಾಲೂಕು ಸುಬೇದಾರರ ಕೋರ್ಟಿನಲ್ಲಿ ಇಂಡಿಯನ್ ಪಿನಲ್‌ಕೋಡು ೪೨೦ ಮತ್ತು ೧೧೪ನೇ ಕಲಮುಗಳ ಮೇರೆ ಕೋರ್ಟು ಏಳುವ ವರೆಗೆ ಸಜೆಯೂ ಮತ್ತು ರೂ. ೧೫೦ ಜುಲುಮಾನೆಯು ವಿಧಿಸಲಾಗಿತ್ತು. ನಂತರ ಕೊಡಗು ಸೆಶನ್ಸ್ ಜಡ್ಜರ ಕೋರ್ಟಿನಲ್ಲಿ ಅಪ್ಪೀಲು ಮಾಡಲಾಗಿ ಕೇಸು ಕುಲಾಸ್ ಮಾಡಲಾಯಿತು.

ಕಾಸರಗೋಡು:—ಇಲ್ಲಿ ನವೀನವಾಗಿ 'ದಿ ಸಾರಸ್ವತ ಎಮೆಚ್ಯೂರ್ ಡ್ರಮೆಟಿಕ್ ಎಸೋಸಿಯೇಶನ್' ಎಂಬ ನಾಟಕ ಸಭೆಯ 'ಸಂಗೀತ ಸೌಭದ್ರ'ವೆಂಬ ಮೊದಲನೆಯ ಕನ್ನಡ ನಾಟಕವು ತಾ. ೮—೨—೩೮ನೆಯ ರಾತ್ರಿ ಕೃಷ್ಣ ಮಾರುತಿ ನಾಟಕ ಕಂಪೆನಿಯವರು ಇಲ್ಲಿ ಕಟ್ಟಿಸಿದ ವಿಶಾಲವಾದ 'ಥಿಯೇಟರಿ'ನಲ್ಲಿ ಸೊಗಸಾಗಿ ಅಭಿನಯಿಸಲ್ಪಟ್ಟಿತು.

ತಾ. ೮—೨—೩೮ನೇ ಗುರುವಾರ ಇಳಂತೋಡಿಯಲಿ ಜರಗಿದ ಕೋಣಗಳ ಓಟಸ್ಪರ್ಧೆಯಲ್ಲಿ ಮ. ರಾ. ರಾ. ಶ್ರೀಯುತ ನೇರೆಪ್ಪಾಡಿ ರಾಮಚಂದ್ರ ಆಳ್ವೋರಾಯರ ಕೋಣಗಳ ಬಗ್ಗೆ ಚಿನ್ನದ ಮೆಡಲನ್ನು, ತುಡಿಪ್ಪಿನ ಕೋಣಗಳ ಪೈಕಿ—ತಿದ್ರ ಕರ್ಕ ಶ್ಯಾನುಭೋಗ ಮ. ರಾ. ರಾ. ಶ್ರೀಯುತ ವಾಸುದೇವ ಕೆದಿಲಾಯರ ಕೋಣಗಳ ಬಗ್ಗೆ ಬೆಳ್ಳಿಯ ಮೆಡಲನ್ನು ಸದ್ರಿ ಗ್ರಾಮದ ಶ್ರೀಯುತ ಬಂಡಿಗೆ ಕೃಷ್ಣ ಭಟ್ಟರಿಂದ ಪಾರಿತೋಷಕವಾಗಿ ಕೊಡಲ್ಪಟ್ಟಿತು. ಸದ್ರಿ ಕಂಬಳದಲ್ಲಿ ತಾ. ೨೫—೨—೩೮ನೇ ಆದಿತ್ಯವಾರ ಕೋಣಗಳ ಓಟಸ್ಪರ್ಧೆಯು ಜರಗಲಿರುತ್ತದೆಂದೂ, ಸದ್ರಿ ವಿವರವೂ ಬಹುಮಾನವಾಗಿ ಮೆಡಲುಗಳನ್ನು ಕೊಡಲ್ಪಡುತ್ತದೆಂದೂ, ಸ್ಪರ್ಧೆಯ ಬಗ್ಗೆ ಕೋಣಗಳನ್ನು ತರುವರೆ ಎಲ್ಲರಿಗೂ ಸುಸ್ವಾಗತವಿದೆಯೆಂದೂ, ಮ. ರಾ. ರಾ. ಶ್ರೀಯುತ ತಂಬುತ್ತಡ್ಕ ವಿಷ್ಣು ಕಡಂಬಳಿತ್ತಾಯರು ತಿಳಿಸುತ್ತಾರೆ.

ಕಾರ್ಕಳ:—ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಪ್ರಥಮ ಮಧ್ಯಮ ಮತ್ತು ರಾಷ್ಟ್ರಭಾಷಾ ಪರೀಕ್ಷೆಗಳು ಇದೇ ೧೧—೨—೩೮ನೇ ದಿನ ಬೋರ್ಡ್ ಹೈಸ್ಕೂಲಿನಲ್ಲಿ ಶ್ರೀಯುತ ಎಂ. ಸರ್ವೋತ್ತಮ ಕಾಮತ್ ಬಿ. ಎ. ಎಲ್. ಟಿ.ಯವರ ವ್ಯವಸ್ಥಾಪಕತ್ವದಲ್ಲಿ ನಿರ್ವಿಘ್ನವಾಗಿ ನಡೆದುವು. ಪರೀಕ್ಷೆಗೆ ಕೂತುಕೊಂಡ ೬೨ ಮಂದಿಯಲ್ಲಿ ೨೯ ಮಂದಿ ಪರೀಕ್ಷೆಗಳನ್ನು ಕೊಟ್ಟಿರುವರು. ಇವರೊಳಗೆ ೫ ಮಂದಿ ಸ್ತ್ರೀಯರಿದ್ದರು. ಸ್ತ್ರೀಸಮೂಹದಲ್ಲಿ ಹಿಂದೀ ಪ್ರಚಾರವನ್ನು ನಡೆಸುತ್ತಿರುವ ಶ್ರೀಮತಿ ಮೂಲ್ಕಿ ಲೀಲಾದೇವಿ ಭವಾನಿ ಶಂಕರರಾಯರ ಪ್ರಯತ್ನವು ಪ್ರಶಂಸನೀಯವಾಗಿರುವುದು. ಇವರು ಇದೇ ರೀತಿ ತನ್ನ ಪ್ರಚಾರ ಕಾರ್ಯವನ್ನು ಎಂದಿನಂತೆ ನಡೆಸುವರೆಂದು ನಂಬಲಾಗಿದೆ.

ವಿದ್ಯಾರ್ಥಿಗಳು, ಉಪಾಧ್ಯಾಯರು ಮತ್ತು ಇತರ ಹೊಸ ಹಿಂದೀ ಕ್ಲಾಸುಗಳು ೧—೩—೩೮ರ ಸುಮಾರಿಗೆ ತೆರೆಯಲಾಗುವವೆಂದೂ ಎಲ್ಲರೂ ಎಂದಿನಂತೆ ಈ ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಸಹಭಾಗಿಗಳಾಗಿ ಪ್ರೋತ್ಸಾಹಿಸಬೇಕೆಂದೂ ಪ್ರಚಾರಕರಾದ ಶ್ರೀಯುತ ಕಟಪಾಡಿ ಶ್ರೀನಿವಾಸ ಶೆಣೈಯವರು ವಿನಂತಿ ಮಾಡಿಕೊಳ್ಳುತ್ತಾರೆ.

ತಾ. ೨೪, ೨೫ರಲ್ಲಿ ದಕ್ಷಿಣ ಕನ್ನಡಕ್ಕೆ ಮಹಾತ್ಮಾಜೀಯವರ ಆಗಮನ!

ರಂಗೂನು

ಇಲ್ಲಿ ಕೇಂಬ್ರಿಜ್ ನಿವಾಸಿ ಬಂಗಾರ್ಪ್ರಿಯ ಎಂಬ ಬೌದ್ಧ ಸನ್ಯಾಸಿಯೊಬ್ಬನು ನಿರ್ವಾಣವನ್ನು ಹೊಂದುವುದಕ್ಕಾಗಿ ತನ್ನ ವಸ್ತ್ರಕ್ಕೆ ಬೆಂಕಿ ಹಚ್ಚಿಕೊಂಡು ತಾಂಡೂಂಡು ಎಂಬಲ್ಲಿನ ಪವಿತ್ರ ಪಗೋಡದ ಮೇಲೆ ಕುಳಿತು ಸುಟ್ಟು ನಿರ್ವಾಣ ಹೊಂದಿದನು.

ನಾಗಪುರ

೧೯೩೩ ಜನವರಿ ೧೧ನೇ ತಾರೀಖಿನ ದಿನ ನಾಗಪುರದ ಅಸಿಸ್ಟೆಂಟ್ ಇನ್‌ಸ್ಪೆಕ್ಟರ್ ಅಫೀಸರರಾದ ಶ್ರೀ ಕೆ. ಪಿ. ವರ್ಮ ಎಂಬವರ ಪುತ್ರಿ ಮಿಸ್. ಶಾಂತಿ ಎಂಬವಳನ್ನು ಅವಳು ಶಾಲೆಯ ಆವರಣವನ್ನು ಪ್ರವೇಶಿಸುವಾಗ ಕೃಷ್ಣ ಮುರಾರಿ ಎಂಬವನು ಕೆಲವರೊಡನೆ ಕೂಡಿಕೊಂಡು ಅವಳನ್ನು ಟೇಕ್ಸಿಯಲ್ಲಿ ಹಾಕಿ ಓಡಿ ಅಲ್ಲಹಾಬಾದಿನಲ್ಲಿ ವಿವಾಹವಾಗುವೆನೆಂದು ಸ್ವೀಕರಿಸಿದನು. ಹುಡುಗಿಯು ಅಭ್ಯರ್ಥನವನ್ನು ಕೇಳದ ಪೋಲೀಸರು ಕೃಷ್ಣಮುರಾರಿಯನ್ನು ಸೆರೆಹಿಡಿದು ವಿಚಾರಣೆಗೊಳಗಾಗಿ ಅವನಿಗೆ ಎರಡು ವರ್ಷಗಳ ಕಠಿಣ ಶಿಕ್ಷೆ ವಿಧಿಸಲ್ಪಟ್ಟಿತು. ಈಗ ಅವನ ಅಪರಾಧದ ಸಮರ್ಥನೆಗೆ ಸಾಕ್ಷಿಯಿಲ್ಲವೆಂದು ಅವನನ್ನು ಬಿಡಲಾಗಿದೆ.

ಲಕ್ನೋ

ನಿರುದ್ಯೋಗದ ಹಾವಳಿಯನ್ನು ನಿಲ್ಲಿಸುವುದಕ್ಕಾಗಿ ಸಂಯುಕ್ತ ಪ್ರಾಂತದ ಸರಕಾರವು ಒಂದು ಉಪಾಯವನ್ನು ಹುಡುಕಿರುತ್ತದೆ. ಕೃಷಿ ಇಲಾಖಾ ಡೈರೆಕ್ಟರರೂ ಇನ್ನಿತರರೂ ಕೂಡಿ ಒಂದು ಕಮಿಟಿ ಮಾಡಿ ಹತ್ತು ಎಕ್ರೆ ಸ್ಥಳವನ್ನು ಹತ್ತು ಜನ ಶಿಕ್ಷಿತ ನಿರುದ್ಯೋಗಿಗಳಿಗೆ ಕೊಟ್ಟು ಅವರು, ಒಳ್ಳೇ ಕೃಷೀವಲರಾಗಿ, ತಮ್ಮ ಸ್ಥಳಗಳಿಂದ ತುಂಬಾ ಲಾಭವನ್ನು ಸಂಪಾದಿಸುವಂತೆ ಸಾಲಗಳನ್ನೂ, ಮತ್ತಿತರ ಸೌಕರ್ಯಗಳನ್ನೂ ಒದಗಿಸಿ ಕೊಡುವರು. ಪ್ರತಿ ಮೂರು ವರ್ಷಗಳಿಗೊಮ್ಮೆ ಈ ಭೂಮಿಯನ್ನು ಆ ಹತ್ತು ಜನರೂ ಬೇರೆ ಹತ್ತು ಜನರಿಗೆ ಕೊಡುವರು. ಈ ಯೋಜನೆಯಿಂದಾಗಿ ಶಿಕ್ಷಿತ ನಿರುದ್ಯೋಗಿಗಳಿಗೆ ಉದರಭರಣದ ಮಾರ್ಗವು ದೊರೆಯುವುದೆಂದು ತಿಳಿಯಲಾಗಿದೆ. ಎಗ್ರಿಕಲ್ಚರಲ್ ಡೈರೆಕ್ಟರರು ಸ್ಥಳವನ್ನು ಆರಿಸುತ್ತಿರುವರು.

ದಿಲ್ಲಿ

ಸಂಸ್ಥಾನಾಧಿಪತಿಗಳ ಕುರಿತು ಇಂಗ್ಲಾಂಡಿನಲ್ಲಿ ಇತ್ತೀಚೆಗೆ ಒಂದು ಪುಸ್ತಕ ಪ್ರಕಟವಾಯಿತು. ಇದನ್ನು ಓದಿದ ಅಧಿಕಾರಿಗಳು ಒಡನೆ ಈ ಪುಸ್ತಕವು ಹಿಂದೂಸ್ಥಾನಕ್ಕೆ ಹೋಗಕೂಡದೆಂದು ನಿಷಿದ್ಧಾಜ್ಞೆಯನ್ನು ಇಟ್ಟರು. ಈ ಪುಸ್ತಕದ ಕೆಲವು ಪ್ರತಿಗಳು ಹಿಂದೂಸ್ಥಾನವನ್ನು ಕಂಡೇ ಕಂಡುವು. ಆ ಪುಸ್ತಕದಲ್ಲಿದ್ದ ಸಂಗತಿಗಳೆಂದರೆ—ಒಂದು ಸಂಸ್ಥಾನದ ಒಬ್ಬ ಮಹಾರಾಜರು ಎರಡು ನಾಯಿಗಳ ವಿವಾಹವನ್ನು ನೆರವೇರಿಸಿದರಂತೆ. ಅದಕ್ಕೆ ೨೦,೦೦೦ ಪೌಂಡುಗಳನ್ನು ವೆಚ್ಚ ಮಾಡಿದರು. ಮತ್ತೊಬ್ಬ ಮಹಾರಾಜರು ಬೆಳೆಯ ಬೆಲೆ ಇಳಿಲೆಂದು ಹರಿಕೆ ಹೇಳಿ ದೇಶದ ಎಲ್ಲಾ ಇರುವೆಗಳಿಗೆ ಧಾನ್ಯಗಳನ್ನು ಹಾಕಬೇಕೆಂದೂ, ಅದಕ್ಕಾಗಿ ಕಂದಾಯವನ್ನು ಹೆಚ್ಚಿಸಬೇಕೆಂದೂ ನಿರ್ಧರಿಸಿದರು. ಒಬ್ಬ ಮಹಾರಾಜರಿಗೆ ಅವರ ಗೇರೇಜಿನಲ್ಲಿ ೩೦೦ ಮೋಟರು ಕಾರುಗಳಿವೆ. ಅವುಗಳಲ್ಲಿ ೭೨ ರೋಲ್ಸ್ ರೋಯ್ಸ್! ಮಹಾರಾಜರುಗಳ ವೈಯಕ್ತಿಕ ಜೀವನ ಕ್ರಮವನ್ನು ಬಯಲಿಗೆಳೆದು ಬರೆಯಲ್ಪಟ್ಟಿರುವ ಈ ಪುಸ್ತಕದಲ್ಲಿ ಹೆಚ್ಚಿನವು ನಿಜವೆಂದು ಊಹನೆ.

ಪಂಜಾಬು

ಪಂಜಾಬ್ ಗವರ್ನರರಾದ ಸರ್. ಜೆಫ್ರೀ ಎಮರ್ಸನರಿಗೆ ಫೆಬ್ರವರಿ ತಾ. ೫ರಿಂದ ನಾಲ್ಕು ತಿಂಗಳ ರಜೆ ದೊರೆತಿದೆ. ಅವರು ಬೇಗನೇ ಇಂಗ್ಲಾಂಡಿಗೆ ತೆರಳುವರು. ಅವರ ಬದಲಿಗೆ ಸರ್. ಸಿಕಂದರ್ ಹಯಾತ್ ಖಾನರೆಂಬವರನ್ನು ಗವರ್ನರರಾಗಿ ನೇಮಿಸಲಾಗಿದೆ.

ಕಲ್ಕತ್ತ

ಮಿಡ್ನಾಪುರದ ಮೆಜಿಸ್ಟ್ರೇಟರಾಗಿದ್ದ ಮಿ. ಬರ್ಜನ್ನು ಕೊಲೆ ಮಾಡಿದ ಮೂವರನ್ನು ಪಾಶಿಗೂ, ನಾಲ್ವರನ್ನು ದ್ವೀಪಾಂತರ ವಾಸಕ್ಕೂ ಗುರಿಪಡಿಸಿ, ನಾಲ್ವರನ್ನು ಬಿಟ್ಟು ಪುನಃ ಕೈದು ಮಾಡಿದರು.

ಫೆರೋಜಪುರ.

ಬಲದೇವ ಎಂಬ ಕೆ, ಹಿಯೊಲ್ಲನಿಗೆ ಬರೀ ೨೧ ವರುಷ ಪ್ರಾಯ! ಅವನು ಒಟ್ಟು ೨೧ ಮಂದಿಯನ್ನು ಕೊಂದಿದ್ದನು. ಆದರೆ ಸಾಯಲಿಲ್ಲ. ಸೆರೆಗೆ ಸಿಕ್ಕಿ ತಪ್ಪಿಸಿಕೊಂಡು ಕಾಡಿನಲ್ಲಿ ವಾಸಿಸಿ ನಾಡಿನಲ್ಲಿ ಮೆರೆದನು. ಒಂದು ದಿನ ಅವನ ಸೆರೆಮನೆಯಲ್ಲಿ ಬಾಂಬು ಕೇಸು ಸಿಕ್ಕಿತು. ಅದನ್ನು ಎಸೆದು ಕೆಲವರನ್ನು ಅಟಕಾಯಿಸಿದನು. ವಿಚಾರಣೆ ನಡೆಯುತ್ತಿದ್ದಾಗ ಅವನು ಒಬ್ಬ ಪೋಲೀಸನ ಬಂದೂಕನ್ನು ಕಾಲಿನಿಂದ ಕಿತ್ತು ಎಡಿಷನಲ್ ಸೆಷನ್ಸ್ ಜಡ್ಜರಿಗೆ ಹೊಡೆ ಮಾಡಿದನು. ಅದರಿಂದಾಗಿ ಪೋಲೀಸನ ಕೆಲಸಕ್ಕೆ ಸಾಧನವಾಯಿತು. ಅವನು ಸೆರೆಯಿಂದ ತಪ್ಪಿಸಿ ಓಡಿದುದರಿಂದಾಗಿ ೧೨ ಜನ ವಾರ್ಡರರ ಉದ್ಯೋಗವೇ ಹೋಯಿತು.

ಮುಂಬಾಯಿ

ಅಹ್ಮದಾಬಾದ್ ಮತ್ತು ಬ್ರೋಚ್ ಜಿಲ್ಲೆಗಳಲ್ಲಿ ಕೆಲವು ಕಡೆಗಳಲ್ಲಿ 'ಪ್ರಕೃತಿಸಿದ್ಧ ಗೇಸ್' ಉಳ್ಳ ಗದ್ದೆಗಳು ಕಾಣಸಿಕ್ಕಿವೆ ಎಂದು ಗೊತ್ತಾಗಿದೆ. ಕಲ್ಲಿದ್ದಲಿನಂತೆ ಇದನ್ನು ನಾನಾ ತರದ ಕೆಲಸಗಳಿಗೆ ಉಪಯೋಗಿಸಬಹುದು. ಎಣ್ಣೆಯು ಕೂಡಾ ಕಾಣಸಿಕ್ಕೀತೆಂದು ಅಲ್ಲಿನ ಭೂಗರ್ಭ ಶೋಧಕರು ಶೋಧಿಸುತ್ತಿರುವರು. ಮುಂಬಾಯಿ ಪ್ರಾಂತ್ಯದಲ್ಲಿ ಹೊಸ ವ್ಯಾಪಾರವೊಂದು ಬಳಕೆಗೆ ಬಂದು ಹೊಸ ಕೈಗಾರಿಕೆ ಕಾರ್ಖಾನೆಗಳು ಉತ್ಪನ್ನವಾಗುವುವು ಎಂದು ಆಶಿಸಲಾಗಿದೆ.

ಸ್ಟೆಂಟ್ ಪಾಲ್

ಅಮೆರಿಕದ ಪ್ರಸಿದ್ಧ ಮಿಲಿಯನಾಧಿಪತಿಯಾದ ಬ್ರೆಮರ್ ಎಂಬವರನ್ನು ಮುಕ್ತಿತ್ಯು ಐಶ್ವರ್ಯವಂತನನ್ನೂ ದರೋಡೆಕಾರರು ಸೆರೆಹಿಡಿದು ತಮಗೆ ೨೦೦,೦೦೦ ಡಾಲರುಗಳನ್ನು ಕೊಟ್ಟಿದ್ದಲ್ಲದೆ ಬಿಡಲಾರೆವೆಂದರು. ಅವರಿಬ್ಬರನ್ನೂ ಒಂದು ಮುಚ್ಚಿದ ಸೆರೆಮನೆಯಲ್ಲಿ ಕಣ್ಣಿಗೆ ವಸ್ತ್ರ ಕಟ್ಟಿ ಅನೇಕ ದಿನಗಳ ನಂತರ ಬಿಟ್ಟರು. ಹೇಗೂ ಮಾಡಿ ಅವರಿಗೆ ಅವರು ಕೇಳಿದಷ್ಟು ದ್ರವ್ಯವು ದೊರೆಯಿತು. ಈಗ ದರೋಡೆಕಾರರ ಪತ್ತೆಗೆ ತೊಡಗಿರುತ್ತಾರೆ.

ಬಹವಲಪುರ.

ಬಹವಲಪುರದ ಮಹಾರಾಜರು ಕಳೆದ ತಿಂಗಳಲ್ಲಿ ಏಕೋ ಭಕ್ತಿವಿಹೀನರಾದರು. ಹಿಂದೂ ಸಿಖ್ಖರು ಭಕ್ತಿಯಿಂದ ಕಾಣುತ್ತಿದ್ದ ಒಂದು ದೇವಸ್ಥಾನವನ್ನು ನಿರ್ಮೂಲ ಮಾಡುವುದಕ್ಕಾಗಿ ಅವರು ಒಂದೆರಡು ಆನೆಗಳನ್ನು ಕಳುಹಿಸಿ ತನ್ನ ಇಂಗಿತವನ್ನು ಪೂರೈಸಿಕೊಂಡರು. ಈಗ ಆ ಸಂಸ್ಥಾನದಲ್ಲಿ ಮಹಾರಾಜರ ಎದುರಾಳಿಗಳು ಎದ್ದಿರುವರು.

ಚೀನಾ.

ಪೌಲ್‌ರೋಗ್ ಮತ್ತು ಅವನ ಪತ್ನಿಯು ಚೀನೀಯರಿಂದ ಸೆರೆಹಿಡಿಯಲ್ಪಟ್ಟಿರುವರು. ಬ್ರಿಟಿಷರಾದ ಇವರನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ಇಂಗ್ಲಾಂಡಿನ ಪ್ರಮುಖರು ಆಳವಳಿಸಿದರು. ಇತ್ತಲಾಗಿ ಈ ದಂಪತಿಗಳು ಪ್ರತ್ಯೇಕ ನ್ಯಾಯ ವಿಚಾರಣೆಯಾಗದಿದ್ದರೆ ನಾವು ಜೀವಾಂತ್ಯದ ವರೆಗೆ ಉಪವಾಸ ಮಾಡಿ ಪ್ರಾಣಬಿಡುವೆವೆಂದು ನಿರ್ಧರಿಸಿರುವರು. ಎಚ್. ಜಿ. ವೆಲ್ಸ್, ರೊಮೈನ್ ರೋಲೆಂಡ್ ಮೊದಲಾದವರು ಚೀನಾ ಸರಕಾರಕ್ಕೆ ಬರೆದುಕೊಂಡು ಕೈದಿಗಳನ್ನು ಬಿಡುಗಡೆ ಮಾಡಬೇಕೆಂದು ಬೇಡಿರುವರು.

ಮಹಾ ಯುದ್ಧದ ಪಟ್ಟಿ.

೧೯೧೪ರಿಂದ ೧೯೧೮ರ ವರೆಗೆ ನಡೆದ ಮಹಾ ಯುದ್ಧದಿಂದ ಒಟ್ಟು ಏನೇನಾಯಿತೆಂದು ತಿಳಿಯಬೇಕಾದರೆ ಈ ಕೆಳಗಿನ ಪಟ್ಟಿಯನ್ನು ಮನಗಾಣಬೇಕು: ಈ ಯುದ್ಧವು ೧೫೬೫ ದಿನಗಳ ವರೆಗೆ ನಡೆಯಿತು. ೧೪,೦೦೦,೦೦೦ ಸೈನಿಕರು ಸಂಪೂರ್ಣ ಹತರಾದರು. ೨೦,೦೦೦,೦೦೦ ಜನರು ಗಾಯಹೊಂದಿದರು. ೩,೦೦೦,೦೦೦ ಜನರು ಬಂಧಿಸಲ್ಪಟ್ಟರು. ೯,೦೦೦,೦೦೦ ಮಕ್ಕಳು ಅನಾಥರಾದರು. ೫,೦೦೦,೦೦೦ ಸ್ತ್ರೀಯರು ವಿಧವೆಯರಾದರು. ೧೦,೦೦೦,೦೦೦ ಜನರು ದೇಶಾಂತರದ ಅಲೆದಾಟಕ್ಕೆ ಗುರಿಯಾದರು. ೨೬೦೦೦ ಲಕ್ಷ ಜನರು ಭೂಮಿಗಾಗಿ ಹೋರಾಡಿ ಮೃತರಾಗುವುದೆಂದರೆ ಯಾರಿಂದ ಊಹಿಸಾಧ್ಯದ ವಿಷಯ? ಒಂದು ಮರಣದಿಂದ ಒಂದು ಕುಟುಂಬದ ಜನರು ವ್ಯಥೆಗೊಳಗಾಗುವ ಲೆಕ್ಕ ಮಾಡಿದರೆ ಇಷ್ಟೊಂದು ಜನರ ಮೃತಿಯಿಂದಾಗಿ ಎಷ್ಟು ಜನರು ದುಃಖತಪ್ತರಾದರೆಂದು ಊಹಿಸುವುದು ಸಾಧ್ಯವಿದೆಯೋ? ಈ ಯುದ್ಧದಲ್ಲಿ ಒಟ್ಟು ೩೩೭,೯೪೬,೧೭೯,೬೫೭ ಡಾಲರುಗಳು ಅಥವಾ ರೂಪಾಯಿ ಲೆಕ್ಕದಲ್ಲಿ ಹೇಳುವುದಾದರೆ ೧೦೧೩೯೪೩೬,೪೫೬೬೪೫೨೫ ರೂಪಾಯಿಗಳು ನಿಷ್ಪ್ರಯೋಜನ ಹೊಂದಿದುವು. ಇನ್ನೊಂದು ರೀತಿಯಿಂದೆನ್ನುವುದಾದರೆ ಹತ್ತು ಕೋಟಿ ಲಕ್ಷ ರೂಪಾಯಿಗಳು ಧ್ವಂಸವಾದುವೆನ್ನಬಹುದು. ಹೀಗೆಂದಾಗ ದಿನ ಒಂದಕ್ಕೆ ೨೧೫,೦೦೦,೦೦೦ ಡಾಲರುಗಳು ಅಥವಾ ಗಂಟೆಯೊಂದಕ್ಕೆ ೯೦೦,೦೦೦೦ ಡಾಲರುಗಳು ಕೈಬಿಟ್ಟು ಹೋದುವೆಂದೆನ್ನಬಹುದು. ಈ ಒಂದು ದಿನದಲ್ಲಿ ಆದ ವೆಚ್ಚವನ್ನು ಮತ್ತೂ ಕೂಲಂಕುಷವಾಗಿ ಹೇಳುವುದಾದರೆ ೨೧೫೦ ಜನರು ವರ್ಷಕ್ಕೆ ೨೫೦೦ ಡಾಲರುಗಳ ವೇತನದ ಮೇಲೆ ೪೦ ವರ್ಷಗಳ ವರೆಗೆ ಕೆಲಸ ಮಾಡಿದರೆ ಎಷ್ಟಾಗುತ್ತದೋ ಅಷ್ಟು ವೆಚ್ಚವೆಂದೆನ್ನಬಹುದು. ಇಂತಹ ಭಯಂಕರ ನಷ್ಟದ ಭಯಂಕರ ಪರಿಣಾಮವೇನೆಂದು ಯಾರು ಹೇಳಲು ಸಮರ್ಥರು?

ರಬ್ಬರಿನ ದೀಪ ಕಂಭ!

ಲೀಸೆಸ್ಟರಿನ ವ್ಯವಹಾರ ಕೇಂದ್ರವಾದ ಒಂದು ವಿಶಾಲ ಮಾರ್ಗದ ಮಧ್ಯೆ ನಿಲ್ಲಿಸಲ್ಪಟ್ಟಿದ್ದ ಒಂದು ದೀಪ ಕಂಭವು ಮೋಟಾರು ಕಾರು, ಲಾರಿಗಳ ಪೆಟ್ಟು ತಿಂದು ವರ್ಷಕ್ಕೆ ಇಪ್ಪತ್ತು ಸಲ ಹೊಸ ರೂಪವನ್ನು ತಾಳುತ್ತಿದ್ದಿತು. ಎಷ್ಟು ಗಟ್ಟಿಯಾಗಿ ನೆಟ್ಟರೂ ಮೋಟರುಗಳು ಅಷ್ಟು ರಭಸದಿಂದ ಬಂದು ಈ ಕಂಭವನ್ನು ಬೀಳಿಸಿ ದೀಪವನ್ನು ನೊಂದಿಸಿ ಕಾಲು ಮುರಿದು ಬೀಳುತ್ತಿದ್ದುವು. ಈ ತಾಪತ್ರಯಗಳನ್ನು ನಿವಾರಿಸುವುದಕ್ಕಾಗಿ ಒಂದು ಯೋಜನೆಯನ್ನು ಒಬ್ಬ ಇಂಜಿನಿಯರನು ಮಾಡಿದನು. ರಬ್ಬರ್ ಕಾರ್ಖಾನೆಗೆ ಹೋಗಿ ರಬ್ಬರಿನ ದೊಡ್ಡ ಕಂಭವನ್ನು ತಯಾರಿಸಿ ಅದನ್ನು ತಂದು ಮಾರ್ಗದ ಮಧ್ಯೆ ನಿಲ್ಲಿಸಿದನು. ಅದರ ಬುಡವನ್ನು ನೆಲದೊಳಗೆ ಆಳದಲ್ಲಿ ಇಟ್ಟನು. ಈಗ ಒಂದು ಲಾರಿ ಬಂದು ಕಲೆ ಹೊಡೆಸಿದರೂ ಕೂಡಾ ಕಂಭವು ಮುರಿಯುವುದಿಲ್ಲ. ಬದಲಿಗೆ ಬಗ್ಗಿಕೊಂಡು ಹೆಚ್ಚು ತಿಸ್ಸುತ್ತದೆ. ಲಾರಿಯು ತನ್ನ ಮೇಲಿಂದ ಕೆಳಗಿಳಿದೊಡನೆ ಪಟ್ಟಾಗಿ ಎದ್ದು ನಿಲ್ಲುತ್ತದೆ. ಅಹಿಂಸಾವಾದಿಯಂತೆ ಸನ್ಯಾಸಿಯಂತಾಗಿರುತ್ತದೂ ಎಂಬಂತೆ, ಈ ಕಂಭವು ಲಾರಿಗಳಿಗೂ ಬಾಧಕವನ್ನುಂಟು ಮಾಡುವುದಿಲ್ಲ, ಅವುಗಳ ಮುಂಭಾಗಗಳನ್ನು ಘಾಯಗೊಳಿಸುವುದಿಲ್ಲ. ಮೋಟರು ಕಾರುಗಳು ಗೋಡೆಗಳಿಗೆ ಢಿಕ್ಕಿ ಹೊಡೆಯುವಾಗ ಗೋಡೆಗಳೂ ಹೀಗೆಯೇ ವರ್ತಿಸುವಂತಾಗುತ್ತಿದ್ದರೆ ಬಹಳ ಉಪಕಾರವಿತ್ತು.

ವೃದ್ಧ ನಾರೀ ಪತಿವ್ರತಾ!

ದಿಲ್ಲಿಯಲ್ಲಿನ ಹಬ್ಸನ್ ಬೀಚ್ ಹುಡುಗಿಯರ ಮುನಿಸಿಪಲ್ ಶಾಲೆಯಲ್ಲಿ ಕೆಲಸದ ಮುಸಲ್ಮಾನ ಮುದುಕಿಯೊಬ್ಬಳಿದ್ದಳು. ಮೊದಮೊದಲು ನಂಬಿಗಸ್ಥ ಕೆಲಸಗಾರಳಾಗಿದ್ದರೂ, ಕೊನೆಕೊನೆಗೆ ಅವಳಿಗೆ ಪಾತಿವ್ರತ್ಯದ ಚಿಂತೆಯುಂಟಾಯಿತು. "ವೃದ್ಧ ನಾರೀ ಪತಿವ್ರತಾ" ಎಂಬುದನ್ನು ಮನಸಾ ಮಾಡಿ ಸಾಕ್ಷಾತ್ಕರಿಸಿಕೊಂಡಳು. ಒಂದೇ ಒಂದು ವ್ಯಕ್ತಿಗೆ ಕೈ ಇಕ್ಕಿದಳು. ದಾಸಿಯವರೂ ಅವಿವಾಹಿತಳೂ ಆದ ತನ್ನ ತಂಗಿಯನ್ನು ವರನಿಗೆ ತೋರಿಸಿ, ಘೋಷಾ ರೀತಿಯಿಂದ ತಾನೇ ಆ ವರನನ್ನು ಮದುವೆಯಾದಳು. ವಿವಾಹವಾದ ಒಂದೆರಡು ದಿನಗಳ ತನಕ ಮುಖವನ್ನು ಗಂಡನಿಗೆ ತೋರಿಸದೆ ಘೋಷದಲ್ಲಿಯೇ ಉಳಿಯುವಳು, ಮರುದಿನ ಮನೆಗೆ ಪರಾರಿಯಾಗುವಳು. ಹೀಗೆ ಒಟ್ಟು ಆರು ಜನರೊಡನೆ ವಿವಾಹವಾಗಿ ಆರು ಜನರಿಗೂ ಟೋಪಿ ಇಟ್ಟಳು. ಇತ್ತಲಾಗೆ ಅತ್ಯಾಶಾವಾನ ನೆಂಟ ೬೦ ವರ್ಷ ಪ್ರಾಯದ ಒಬ್ಬನಿಗೂ ಹೀಗೆ ನಾಮ ಹಾಕಿ, ಈಗ ತಂಗಿಯೊಡನೆ ಜಾಡೆಯೊಳಗೆ ದಿಸ್ಸ ಯೋಚನೆಗೆ ತೊಡಗಿರುವಳು.

ಅಂಟಿಪಾತಿಯಲ್ಲಿ

ಎಣಿಸಿದಷ್ಟು ಲಾಭವಾಗದೆ ಎಣಿಸದಷ್ಟು ನಷ್ಟವಾದ ಕಾರಣ ಅಂಟಿಚಿಟಗಳ ಕ್ರಯವನ್ನು ತಗ್ಗಿಸಿ, ಅತ್ಯಾಸೆ ಗತಿ ಗೇಡೆಂಬುದನ್ನು ಇನ್ನಾದರೂ ಇಂಡಿಯಾ ಸರಕಾರವು ಕಲಿಯಲಿಕ್ಕಿದೆ.

ಅಂಟಿಪಾತಿಯ ಸಮುದ್ರದಲ್ಲಿ ಸೆಪ್ಪದ ತಿಮಿಂಗಿಲಗಳು ಎದ್ದಿರುವುದರಿಂದ ಕೆಲಸಗಾರರೊಡನೆ "ಆದಿ"ದ ಕೊಡೆಯನ್ನು ಕೊಡಲಿರುವರು.

ನೋಟೀಸು

ಉಡುಪಿ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

ಸ್ಯೂಟ್ ನಂಬ್ರ 727/33.

ಮೇರಿ ಬೆನಾರ್ಡ್ ರುದ್ರಿಗ್ಸ್—ವಾದಿಳು.

ಮತ್ತು

ಯೂನಸ ದಾಲ್ಮೇದಿ—ಪ್ರತಿವಾದಿ.

ಇವರೊಳಗೆ

ಸದ್ರಿ ವ್ಯಾಜ್ಯದ ಪ್ರತಿವಾದಿಯಾದ ಉಡುಪಿ ತಾಲೂಕು ಮೂಡನಿಡಂಬೂರು ಗ್ರಾಮದಲ್ಲಿರುವ ಕೈತಾನ ದಾಲ್ಮೇದರ ಮಗ ಯೂನಾಸ ದಾಲ್ಮೇದರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—ಸದ್ರಿ ಕೋರ್ಟಿನ ಸ್ಯೂಟ್ ನಂಬ್ರ 642/31ನೇ ಡಿಕ್ರಿ ಮೇಲೆ ನಡೆ R. E. P. No 237/32ನೇ ಅಮಲ್ ಜಾರಿಯಲ್ಲಿ ವಾದಿಗೆ ಅಪೇಕ್ಷಿಸಿದ ಬಾಬ್ತು ಪ್ರತಿವಾದಿಯ ಹಕ್ಕಿನ ಸ್ಥಿರಾಸ್ತಿಯನ್ನು ಉಳಿಸಿಕೊಳ್ಳುವಗೋಸ್ಕರ ಪ್ರತಿವಾದಿಯ ಬಗ್ಗೆ ಆತನ ಹೇಳಿಕೆ ಪ್ರಕಾರ ವಾದಿಯು ತಾರೀಖು 28-11-32ಕ್ಕೆ ಕೊಟ್ಟ ಪಟ್ಟೀಯ ವ ಇದರ ಮೇಲಣ ಬಡ್ಡಿ ಕೂಡಾ ರೂಪಾಯಿ 130/-ನ್ನು ಪ್ರತಿವಾದಿಯಿಂದ ವಸೂಲುಮಾಡಿ ಕೊಳ್ಳುವರೆ ವಾದಿಯು ದಾಖಲು ಮಾಡಿದ ಸದ್ರಿ ವ್ಯಾಜ್ಯವು ಅಖೈರು ತನಿಖೆ ಬಗ್ಗೆ ತಾ. 26-2-34ಕ್ಕೆ ಇಟ್ಟಿರುವುದರಿಂದ ಸದ್ರಿ ದಾವೆಗೆ ಉದಾಹರಣೆ ಕೊಡಲಿಕ್ಕೆ ಸದ್ರಿ ಪ್ರತಿವಾದಿಯು ಸ್ವತಃ ಅಥವಾ ವಕೀಲರ ಮುಖಾಂತರ ಸದ್ರಿ ತಾರೀಕಿನ ದಿವಸ ಸದ್ರಿ ಕೋರ್ಟಿನ ಮುಂದೆ ಹಾಜರಾಗಬೇಕು, ತಪ್ಪಿದರೆ ಸದ್ರಿ ವ್ಯಾಜ್ಯವು ಆತನ ಗೈರುಹಾಜರಿಯಲ್ಲಿ ತೀರ್ಮಾನಿಸಲಾದೀತೆಂತ ಸದ್ರಿ ಪ್ರತಿವಾದಿಗೆ ಈ ಮೂಲಕ ಕೂಡ ತಿಳಿಯಪಡಿಸಲಾಗುತ್ತದೆ.

ಉಡುಪಿ,
೫೬—೧—೩೪. } H. Keshava Pai, Vakil for Plaintiff.

ನೋಟೀಸು.

ಮಂಗಳೂರು ಮುನ್ಸೀಫ್ ಕೋರ್ಟಿನಲ್ಲಿ.

I. P. No. 6/1934.

ಕೊಡಿಯಾಲಬೈಲು ಕಾರಂತನಾಥ ಶೆಟ್ಟಿ, ಅನಂತ ಶೆಟ್ಟಿಯ ಮಗ, ಮಾರ್ಕೆಟ್ ರೋಡ್ ಮಂಗಳೂರು—ಅರ್ಜಿದಾರ.

ಹರೀಕೆಳ ವಾಮನ ಪೈ ಕೂಡಾ—ಲೇಣೆದಾರರು.

ಮೇಲ್ಕಂಡ ಅರ್ಜಿದಾರನು ತನ್ನನ್ನು ದಿವಾಳಿಯಾಗಿ ಮಾಡಬೇಕಾಗಿ ಮೇಲೆ ಕಾಣಿಸಿದ ಅರ್ಜಿಯನ್ನು ಕೊಟ್ಟಿರುವುದರಿಂದ ಸದರಿ ಅರ್ಜಿಯು ಅಪ್ಲಿಕೇಶನ್ ಬಗ್ಗೆ ತಾರೀಖು 28-2-34ಕ್ಕೆ ಹಗಲು 11 ಗಂಟೆಗೆ ಈ ಕೋರ್ಟಿನಲ್ಲಿ ತನಿಖೆಗೆ ಇಟ್ಟಿರುವುದರಿಂದ ಆಕ್ಷೇಪವಿರುವವರು ತಮ್ಮ ಆಕ್ಷೇಪಣೆಗಳನ್ನು ಸದರಿ ತಾರೀಕಿನ ಒಳಗೆ ದಾಖಲುಮಾಡತಕ್ಕದ್ದು.

ಮಂಗಳೂರು,
೧೦—೨—'೩೪. } ಮೂಡಬಿದ್ರೆ ಶಂಕರನಾರಾಯಣರಾವ್, ಅರ್ಜಿದಾರರ ವಕೀಲ್.

ಶಾಲಿವಾಹನ ಶಕೆ ... ಯುವನಾಮ ಸಂವತ್ಸರದ
ಫಾಲ್ಗುಣ ಶು ೪ ಶನಿವಾರದಿಂದ ಶ್ರೀಯುವ ಸಂವತ್ಸರದ
ಫಾಲ್ಗುಣ ಶು ೧೦ ಶುಕ್ರವಾರದ ವರೆಗಿನ ಪಂಚಾಂಗ
(ಗಣಿತ...ಸಿದ್ಧ — ವಾಯು).

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಯೋಗ	ಸೂರ್ಯ ಉದಯ	ಅಸ್ತ
17	ಶನಿ	೪	೪೯. ೧	ಉ.ಭಾ	೧೬ ೩೧	೫	7.	6.25
18	ರವಿ	೫	೪೭ ೪೩	ರೇವತಿ	೧೮. ೨	೬	7	6.25
19	ಸೋಮ	೬	೪೯ ೩೦	ಅಶ್ವಿನಿ	೧೯ ೪೪	೭	7	6 26
20	ಕುಜ	೭	೫೦. ೩೦	ಭರಣಿ	೨೨.೩೦	೮	7	6 26
2	ಬುಧ	೮	೫೫ ೦	ರೋಹಿಣಿ	೨೬. ೪೩	೯	7	6 27
22	ಗುರು	೯	೫೫ ೧೪	ಮೃಗಶಿರ	೩೨. ೦	೧೦	7	6.27
23	ಶುಕ್ರ	೧೦	೬೦ ೦	ಆರ್ದ್ರಾ	೩೭ ೪೩	೧೧	7	6 27

ಮಂಗಳೂರಿನ ವಾಯುಸ್ಥಿತಿ.

Date ತಾರೀಖು	Temperature. ಉಷ್ಣ (ಕಾವು) Maximum ಹೆಚ್ಚಿನದು		Minimum ಕಡಿಮೆ		Rainfall ಮಳೆ ದಿನದ ಮಳೆ	ಒಟ್ಟು ಮಳೆ.
7	90—	9	66 —	9	—	—
8	92—	[illegible]	67—	4	—	—
9	92—	2	66 —	9	—	—
10	88—	8	69—	9	—	—
11	90—	5	68 —	8	—	—
12	88—	7	7?	9	—	—
13	86—	0	73—	1	—	167—64

ಮಂಗಳೂರಿನ ಪೇಟೆ ಧಾರಣೆ.

ಜಿನಸು	ಇಂದ ರೂ.	ಆ	ವರೆಗೆ ರೂ.	ಆ
ಹೊಸ ರಾಶಿ ಅಕ್ಕಿ	3 —	[illegible]	[illegible]	12
ಹೊಸ ಮುಷ್ಠಿ	4 —	4	4	0
ಹೊಸ ಗುಡ್ಡು	3	12	4 —	[illegible]
ಊರ ಅವ್ವಲ್ ಬೆಳ್ತಿಗೆ	4 —	4	[illegible]	4
ರಂಗೂನು ಬೆಳ್ತಿಗೆ ಗೋಣಿ ಗಿಳ್ಳೆ	5 —	4	6	0
ಎಲ್ಲೂರು ಬೆಳ್ತಿಗೆ ಮುಡಿ ಗಿಳ್ಳೆ	3 —	4	3 —	8
ಗೋದಿ ಗೋಣಿ ಗಿಳ್ಳೆ	10 —	0	12 —	8
ತೊಗರಿ ಗೋಣಿ ಗಿಳ್ಳೆ	9 —	0	[illegible] —	8
ಹುರುಳಿ ಗೋಣಿ ಗಿಳ್ಳೆ	6 —	0	6 —	8
ಕಡಲೆ ಗೋಣಿ ಗಿಳ್ಳೆ	9 —	8	12 —	8
ತೊಗರಿಬೇಳೆ ಗೋಣಿ ಗಿಳ್ಳೆ	10 —	0	16 —	0
ಉದ್ದು ಗೋಣಿ ಗಿಳ್ಳೆ	7	0	[illegible] —	10
ಹೆಸರು ಗೋಣಿ ಗಿಳ್ಳೆ	8 —	0	9 —	0
ಊರುಬೆಲ್ಲ ಖಂಡಿ ಗಿಳ್ಳೆ	32 —	0	37 —	8
ಉಪ್ಪು ಗೋಣಿ ಗಿಳ್ಳೆ	4 —	14	5 —	4
ಕೊಬ್ರಿ ಖಂಡಿ ಗಿಳ್ಳೆ	40 —	0	45 —	0
ಕೊಬ್ರಿ ಹಿಂಡಿ ಖಂಡಿ ಗಿಳ್ಳೆ	17 —	8	18 —	8
ಎಳ್ಳಿಂಡಿ ಖಂಡಿ ಗಿಳ್ಳೆ	22 —	8	23 —	12
ಕೊಬ್ರಿ ಎಣ್ಣೆ ಮುಡಿ ಗಿಳ್ಳೆ	3 —	1	4 —	2
ಎಳ್ಳೆಣ್ಣೆ ಮುಡಿ ಗಿಳ್ಳೆ	5 —	0	6 —	0
ಚಿಮಿಣಿಎಣ್ಣೆ ಪೆಟ್ಟಿಗೆ ಗಿಳ್ಳೆ	6 —	8	8 —	
ದೋರಿಸ ಸಕ್ಕರೆ ಮುಡಿ ಗಿಳ್ಳೆ	3 —	11	3 —	12
ಹೊಸ ಮೆಣಸು	8 —	10	9 —	10
ಸಾಸಿವೆ ಮುಡಿ ಗಿಳ್ಳೆ	4 —	8	4 —	12
ಕಾಳುಮೆಣಸು ಖಂಡಿ ಗಿಳ್ಳೆ	130 —	0	135 —	0
ಮೆಂತ್ಯೆ ಮುಡಿ ಗಿಳ್ಳೆ	20 —	0	24 —	0
ಗೇರುಬೀಜ ಮುಡಿ ಗಿಳ್ಳೆ	2 —	4	2 —	8
ಕಚ್ಚಿಲ ಖಂಡಿ ಗಿಳ್ಳೆ	42 —	0	44 —	0
ಕಾಯಿ ತಗಡು ಮುಡಿ ಗಿಳ್ಳೆ	10 —	0	10 —	2
ತಾಂಬ್ರ ಪಾತ್ರಗಳು ಮುಡಿ ಗಿಳ್ಳೆ	13 —	0	14 —	8
ಬೀಡಿಹೆಲ್ಲಿ ಸೇರು ಗಿಳ್ಳೆ	14 —	12	15 —	0
ಹಿತ್ತಾಳೆ ತಗಡು ಮುಡಿ ಗಿಳ್ಳೆ	9 —	0	9 —	8
ಪನಸು ಗಿಳ್ಳೆ	20	2	20 —	10
ಹುಣಸೆ ಹುಳಿ ಖಂಡಿ ಗಿಳ್ಳೆ	25 —	8	160 —	0
ನೇಟಿವ್ ಕಾಫಿ ಖಂಡಿ ಗಿಳ್ಳೆ	180 —	0	205 —	0
ಫೆಟೀರ ಕಾಫಿ ಖಂಡಿ ಗಿಳ್ಳೆ	270 —	0	275 —	0
ಹಳೆ ಅಡಿಕೆ	115 —	0	135 —	0
ಹೊಸ ಅಡಿಕೆ	75 —	0	100 —	0

THE CANARA PUBLIC CONVEYANCE CO., LTD, MANGALORE.

(ESTABLISHED 1914)

ಕನರಾ ಪಬ್ಲಿಕ್ ಕನ್ವಯನ್ಸ್ ಕಂಪನಿ, ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯ ಕ್ಷೇತ್ರಗಳಿಗೆ ಹೋಗುವವು. ಮೈಸೂರು, ಕೊಡಗು ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನ್ ಕೂಡಾ ಇರುವುದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ, ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ ನಾಲ್ಕು ಸಾರಿ ಕಲ್ಯಾಣಪುರ ಮಾರ್ಗವಾಗಿಯೂ, 4 ಸಾರಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕೇವಲ ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲುಪಿರಿ. ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 37, ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ, ಕಾರ್ಕಳ ಗೋಮಟೇಶ್ವರನ ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು 4 ಸಲ ಹೊರಟು ಎರಡೂವರೆ ತಾಸುಗಳ ಸಮಯದಲಿ ಕಾರ್ಕಳಕ್ಕೆ ತಲುಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ತಲ್ಪಬಹುದು. 'ಸುಬ್ರಹ್ಮಣ್ಯಾ'ಕ್ಕೆ ಹೋಗಬೇಕಾದರೆ ಬೆಳಿಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲುಪುವಿರಿ. ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಪ್ರಾಚೀನ ಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಬೇಲೂರಿನ ಸೋಮನಾಥ ದೇವಾಲಯವನ್ನು ನೋಡಲು, ನೋಡಲಿಚ್ಛಿಸುವವರು, ಬೆಳಿಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದೂಸ್ಥಾನ, ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣ ಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ, ಮಂಗಳೂರಿನಿಂದ ಮಡಿಕೇರಿಗೆ 7 ಘಂಟೆಗಳೊಳಗೂ, ಕಡೂರಿಗೆ 12 ಘಂಟೆಗಳೊಳಗೂ, ಮೈಸೂರಿಗೆ 12 ಗಂಟೆಗಳೊಳಗೂ ಸಕಲೇಶಪುರಕ್ಕೆ 8 ಗಂಟೆಗಳೊಳಗೂ, ಹಾಸನಕ್ಕೆ 10 ಗಂಟೆಗಳೊಳಗೂ, ಚಿಕ್ಕಮಗಳೂರಿಗೆ 8 ಗಂಟೆಗಳೊಳಗೂ, ಕೊಲ್ಲೂರಿಗೆ ಮತ್ತು ಗೋಕರ್ಣಕ್ಕೆ ೧॥ ದಿವಸದೊಳಗೂ ಶಿಮೊಗ್ಗಕ್ಕೆ 12 ಗಂಟೆ ತಲಪಬಹುದು. ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary
The Canara Public Conveyance Company Ltd Mangalore

Chikmagalur Public Conveyance Motor Service

CHIKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,

ಚಿಕ್ಕಮಗಳೂರು

ಮುಂಬಾಯಿಯಿಂದ ಮಂಗಳೂರಿಗೆ
ಮಂಗಳೂರಿನಿಂದ - ಮುಂಬಾಯಿಗೆ
ಅಲ್ಲದೆ
ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ
ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ
ಮಂಗಳೂರು—ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!
ಹೊಸ ಬಸ್ಸುಗಳು - ಅನುಕೂಲ ಪ್ರಯಾಣ ಸೌಕರ್ಯಗಳು.
ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ
ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ
ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ

ಚಿಕ್ಕಮಗಳೂರಿನಿಂದ— ಶಿವಮೊಗ್ಗಕ್ಕೆ, ಬೇಲೂರಿಗೆ, ಕಡೂರಿಗೆ.
- ಮೂಡಗೆರೆಗೆ, ಸಕಲೇಶಪುರಕ್ಕೆ.
— ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
—ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ನಿರಾಯಾಸದ ಪ್ರಯಾಣ! ಉತ್ಸಾಹಕರ ಸೌಕರ್ಯ!

ಬೇಕಾದ ಮಾಹಿತಿಗ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

ಶ್ರೀ ಎ. ರಂಗಸ್ವಾಮಿ ಅಯ್ಯಂಗಾರರು.

ಮದ್ರಾಸಿನಲ್ಲಿ ಹೊರಡುವ 'ಹಿಂದು' ಪತ್ರಿಕೆಯ ಹೆಸರನ್ನು ವೃತ್ತ ಪತ್ರಿಕೆಗಳಲ್ಲಿ ಆಸಕ್ತಿಯುಳ್ಳವರೆಲ್ಲ ಕೇಳಿದ್ದಾರೆ; ಓದಿದ್ದಾರೆ. ಅಂದ ಮೇಲೆ ಅದರ ಸಂಪಾದಕರಾಗಿದ್ದ ಶ್ರೀ ಎ. ರಂಗಸ್ವಾಮಯ್ಯಂಗಾರ್ಯರ ಹೆಸರು ಪರಿಚಯವಿದ್ದ ಹಾಗೆಯೇ ಆಯಿತು. ಶ್ರೀಯುತರು ಕಳೆದ ಮೂರು ವಾರಗಳಿಂದ ರೋಗಪೀಡಿತರಾಗಿದ್ದು, ಕಡೆಗೆ ಗುಣ ಹೊಂದುವ ಚಿಹ್ನೆಗಳು ತೋರಿಬಂದರೂ ತಾ. ೪—೨—೧೯೩೪ನೇ ದಿನ ರಾತ್ರಿ ೧೧ ಗಂಟೆಗೆ ತಮ್ಮ ೫೬ನೇ ವಯಸ್ಸಿನಲ್ಲಿ ಮದ್ರಾಸಿನಲ್ಲಿ ತಮ್ಮ ಸ್ವಗೃಹದಲ್ಲಿ ಕಾಲವಾದರು. ಅವರ ಅಂತ್ಯಕಾಲದಲ್ಲಿ ಬಂಧುಮಿತ್ರರೆಲ್ಲ ಕಣ್ಣ ಮುಂದಿದ್ದರು. ೬ನೇ ತಾರೀಖಿನ ದಿನ ಅಂತ್ಯಕ್ರಿಯೆಗಳು ಸಾಂಗವಾಗಿ ನೆರವೇರಿದುವು.

ಶ್ರೀಯುತ ಎ. ರಂಗಸ್ವಾಮಯ್ಯಂಗಾರ್ಯರು ೧೮೭೭ನೆ ಜುಲೈ ತಿಂಗಳಲ್ಲಿ ಜನಿಸಿದರು. ತಂಜಾವೂರು ಜಿಲ್ಲೆಯ ತಿರುಕಟ್ಟೂರು ಎಂಬ ಚಿಕ್ಕ ಹಳ್ಳಿಯೊಂದು ಇವರನ್ನು ಪಡೆಯುವ ಸುಯೋಗ ಹೊಂದಿತು. ಇವರ ತಂದೆಗಳು ಆ ಹಳ್ಳಿಯಲ್ಲಿ ಬಹಳ ಸುಪ್ರತಿಷ್ಠಿತರು. ಇವರಿಗೆ ಆಂಗ್ಲಭಾಷೆಯ ಗಂಧವೇ ಇರಲಿಲ್ಲ. ಆಡಂಬರವಿಲ್ಲದ ಜೀವನ ಅವರದು. ಬುದ್ಧಿಯಾದರೋ ಬಹಳ ಚುರುಕು. ಇಂಥ ಸನ್ನಿವೇಶಗಳಲ್ಲಿ ಬೆಳೆದ ಶ್ರೀ ಅಯ್ಯಂಗಾರ್ಯರಿಗೆ ಸರಿಯಾದ ತಳಹದಿ ಸಿಕ್ಕಿತು. ಈ ತಳಹದಿಯೇ ಅವರು ಮುಂದೆ ಜನಜೀವನದಲ್ಲಿ ಒಂದು ಸ್ಥಾನವನ್ನು ಗಳಿಸಲು ಮೂಲಸಾಧನವಾಯಿತೆನ್ನಬಹುದು. ಇವರು ತಮ್ಮ ಪ್ರೌಢ ವಿದ್ಯಾಭ್ಯಾಸವನ್ನು ಮುಂದುವರಿಸಲು ತಾಯಿಯ ಕಡೆಯ ಬಂಧುಗಳ ಸಹಾಯವು ಅತಿಶಯವಾಗಿ ದೊರೆಯಿತು. ಬರೋಡದ ದಿವಾನರಾಗಿದ್ದು ವಿಶ್ರಾಂತಿ ಪಡೆದ ಕೀರ್ತಿಶೇಷ ದಿವಾನ್ ಬಹದ್ದೂರ್ ಶ್ರೀನಿವಾಸ ರಾಘವಯ್ಯಂಗಾರ್ಯರವರು ಇವರ ಸೋದರಮಾವ. ಇವರ ಸಂಪರ್ಕದಿಂದ ಶ್ರೀ ರಂಗಸ್ವಾಮಯ್ಯಂಗಾರ್ಯರ ಬುದ್ಧಿವಿಕಾಸವಾಯಿತು ಮತ್ತು ಸಾರ್ವಜನಿಕ ಸೇವೆ ಮಾಡಬೇಕೆಂಬ ಆಕಾಂಕ್ಷೆಯು ಬೇರೂರಿತು.

ಕಾಲೇಜು ವಿದ್ಯಾಭ್ಯಾಸವು ಜಯಪ್ರದವಾಗಿ ನಡೆಯಿತು. ಇನ್ನೂ ಮುಂದೆ ವಿದ್ಯಾಭ್ಯಾಸ ಮಾಡಬೇಕೆಂಬ ಆಸೆ; ಆದರೆ ಹಣವಿಲ್ಲ. ಇದಕ್ಕೊಂದು ಉಪಾಯವನ್ನು ಇವರು ಹುಡುಕಿದರು. ಸೆಕ್ರೆಟೇರಿಯಟ್ಟಿನಲ್ಲಿ ಲೆಕ್ಕಪತ್ರವನ್ನಿಡುವ ಕೆಲಸಕ್ಕೆ ಸೇರಿ ಅಲ್ಲಿನ ಸಂಪಾದನೆಯಿಂದ ವಿದ್ಯಾಭ್ಯಾಸವನ್ನು ಮುಂದುವರಿಸಿದರು. ಸರಿ, ವಕೀಲಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ತಮ್ಮ ಜಿಲ್ಲೆಯಲ್ಲಿಯೇ ವಕೀಲಿ ವೃತ್ತಿಯನ್ನವಲಂಬಿಸಿದರು. ಸ್ವಲ್ಪ ಕಾಲದಲ್ಲಿಯೇ ಪ್ರಸಿದ್ಧಿಗೂ ಬಂದರು. ಸಂಪಾದನೆಯೂ ಚೆನ್ನಾಗಿತ್ತು. ಶ್ರೀ ಅಯ್ಯಂಗಾರ್ಯರಿಗೆ ಇದಿಷ್ಟರಿಂದಲೇ ತೃಪ್ತಿಯಾಗಲಿಲ್ಲ. ಈ ವೃತ್ತಿಯೇಕೋ ಸರಿಬೀಳಲಿಲ್ಲ; ಅದನ್ನು ಬಿಟ್ಟರೆ ಬೇರೆ ಗತಿಯಿಲ್ಲ. ಕೆಲಸ ಮಾಡಬೇಕೆಂಬ ಹುರುಪು ಅತಿಶಯವಾಗಿತ್ತು. ತನ್ನ ಬುದ್ಧಿಚಾತುರ್ಯಗಳನ್ನು ಸುಮ್ಮನೆ ಕೊಳೆಯಗೊಡಿಸಲು ಅಯ್ಯಂಗಾರ್ಯರಿಗೆ ಇಷ್ಟವಾಗಲಿಲ್ಲ. ಬೇರೆ ದಾರಿ ಕಾಣದೆ ಅದಕ್ಕೇ ಹೇಗೋ ಅಂಟಿಕೊಂಡಿದ್ದರು. ಮನುಷ್ಯನ ಜೀವಮಾನವನ್ನು ಪರಿವರ್ತನಗೊಳಿಸುವ ದೈವೀಶಕ್ತಿಯೊಂದುಂಟಷ್ಟೆ. ಈ ಸಂದಿಗ್ಧ ಸಮಯದಲ್ಲಿ ಈ ದೈವೀಶಕ್ತಿಯ ಪ್ರಭಾವವು ಶ್ರೀ ಅಯ್ಯಂಗಾರ್ಯರ ಮುಂದಿನ ಜೀವನ ವೈಖರಿಯನ್ನೇ ಪೂರ್ಣವಾಗಿ ಮಾರ್ಪಡಿಸಿತು. ಮದ್ರಾಸಿನಲ್ಲಿದ್ದ ಇವರ ಸೋದರಮಾವಂದಿರಾದ ಶ್ರೀ ಕಸ್ತೂರಿ ರಂಗಯ್ಯಂಗಾರ್ಯರು 'ಹಿಂದೂ' ಪತ್ರಿಕೆಯ ಯಜಮಾನ್ಯವನ್ನು ವಹಿಸಿ ಅದನ್ನು ಪುನರುಜ್ಜೀವನಗೊಳಿಸಲು ಹಠಾತ್ತಾಗಿ ನಿಶ್ಚಯಿಸಿದರು. ಅವರಾದರೋ ಈ ಉದ್ಯೋಗಕ್ಕೆ ಹೊಸಬರು; ಅನುಭವವಿಲ್ಲ, ಆದ್ದರಿಂದ ಅವರು ಕೈಗೊಂಡ ಕಾರ್ಯವನ್ನು ಜಯಪ್ರದವಾಗಿ ನಡೆಸಲು ಒಬ್ಬ ಗಟ್ಟಿಗರಾದಂಥವರ ಸಹಾಯವು ಆವಶ್ಯವಾಯಿತು. ವಿದ್ಯಾಬುದ್ಧಿಗಳನ್ನು ಕಲಿಸಿ ಪ್ರಬುದ್ಧರನ್ನಾಗಿ ಮಾಡಿರುವ ಶ್ರೀ ರಂಗಸ್ವಾಮಯ್ಯಂಗಾರ್ಯರ ಮೇಲೆಯೇ ಇವರ ಕಣ್ಣು ಬೀಳುವುದು ಸಹಜವಿದೆ! ಆಗಿನ ಪತ್ರಿಕಾ ಜೀವನವೋ ಕ್ಷಣಕ್ಷಣಕ್ಕೂ ಏಳುಬೀಳುಗಳನ್ನು ನೋಡುತ್ತಿತ್ತು. ಹೆಚ್ಚೇಕೆ, ಪತ್ರಿಕಾ ವೃತ್ತಿಯೇ ಅಷ್ಟು ಅಮೋಘವೆಂದು ಆ ಕಾಲದಲ್ಲಿ ಎಣಿಸಲ್ಪಟ್ಟಿರಲಿಲ್ಲ. ಆದರೂ ಶ್ರೀ ಅಯ್ಯಂಗಾರ್ಯರು ಹೆದರದೆ ತಮ್ಮ ನೂತನ ಜೀವನವನ್ನಾರಂಭಿಸಲು ಮದ್ರಾಸಿಗೆ ತೆರಳಿದರು.

೧೯೦೫ರಲ್ಲಿ ಇವರು 'ಹಿಂದೂ' ಪತ್ರಿಕೆಯ ಸೇವೆ ಮಾಡಲು ಆರಂಭಿಸಿದ್ದು. ಉಪಸಂಪಾದಕ ವೃತ್ತಿಯನ್ನವಲಂಬಿಸಿ ಮಾವಂದಿರಿಗೆ ಬಲಗಯ್ಯಾದರು. ಮೊದಮೊದಲು ಇವರ ಕಾಲವೆಲ್ಲ ಹಣಕಾಸಿನ ಕಡೆಯನ್ನು ಭದ್ರಪಡಿಸುವುದರಲ್ಲೇ ಆಯಿತು. ಆದರೆ ಇದಕ್ಕಿಂತ ಹೆಚ್ಚಾಗಿ ಸಂಪಾದಕೀಯ ಜವಾಬ್ದಾರಿಯನ್ನು ಹೊತ್ತಿದ್ದರು. ಪತ್ರಿಕೆಯ ಏಳಿಗೆಗಾಗಿ ತಮ್ಮ ಯುಕ್ತಿಸಾಮರ್ಥ್ಯಗಳನ್ನೆಲ್ಲ ವಿನಿಯೋಗಿಸಿದರು. ಮೊದಲಿನಿಂದಲೂ ರಾಜ್ಯಾಂಗ ವ್ಯವಸ್ಥೆಯಲ್ಲಿ ಇವರಿಗೆ ಆಸಕ್ತಿ. ಇತಿಹಾಸ ಪ್ರಿಯರು. ಅದೇ ಸಮಯದಲ್ಲೇ ಇವರು 'ಭಾರತ ರಾಜ್ಯಾಂಗದ ಉತ್ಪತ್ತಿ ಮತ್ತು ಅಭಿವೃದ್ಧಿಯ ವಿಚಾರದ ಕುರಿತು ಒಂದು ಗ್ರಂಥವನ್ನು ಹೊರಡಿಸಿದರು. ಅದು ಇಂದಿಗೂ ಒಂದು ಆಧಾರಭೂತವಾದ ಗ್ರಂಥವಾಗಿದೆ.

ಇವರು ಉಪಸಂಪಾದಕ ವೃತ್ತಿಯನ್ನವಲಂಬಿಸಿದ ಕಾಲದಲ್ಲಿ ರಾಜಕೀಯ ಪ್ರಪಂಚದಲ್ಲಿದ್ದ ವಾತಾವರಣವೇ ಬೇರೆ. ಜನರಲ್ಲಿ 'ಸ್ವದೇಶಿ' 'ಸ್ವಾತಂತ್ರ್ಯ' ಈ ಭಾವನೆಗಳಿದ್ದರೂ ಅವು ಅಷ್ಟೇನೂ ಬೇರೂರಿ ನಿಲ್ಲುತ್ತಿರಲಿಲ್ಲ; ಅವರ ಮನಸ್ಸು ಪರಿಷ್ಕಾರ ಹೊಂದಿರಲಿಲ್ಲ. ಆಗಿನ ಕಾಲದಲ್ಲಿ ಸಾರ್ವಜನಿಕಾಭಿಪ್ರಾಯವನ್ನು ಬಲಪಡಿಸಿ ಅವರು ಮುಂದೆ ನುಗ್ಗುವಂತೆ ಮಾಡುವುದು ಜವಾಬ್ದಾರಿಯುಳ್ಳ ಪತ್ರಿಕಾಕರ್ತನ ಮುಖ್ಯ ಕೆಲಸವಾಗಿತ್ತು. ಆಗ ತಮ್ಮ ಅವಕಾಶವನ್ನೆಲ್ಲ ರಾಜಕಾರಣದ ಕಡೆಗೆ ಉಪಯೋಗಿಸುತ್ತಿದ್ದವರೆಂದರೆ ಪತ್ರಿಕಾಕರ್ತರು ಮಾತ್ರ! ಅಂತಹ ಸಮಯದಲ್ಲಿ ಶ್ರೀ ಅಯ್ಯಂಗಾರ್ಯರು ತಮ್ಮ ಸ್ಥಾನಬಲದಿಂದ ಅವರಿಗೆ ಎಷ್ಟು ಕೆಲಸ ಮಾಡಲವಕಾಶವಿತ್ತೋ ಅದಕ್ಕಿಂತ ಹೆಚ್ಚಾಗಿಯೇ ಮಾಡಿದರೆನ್ನಬಹುದು.

೧೯೧೫ರ ಹೊತ್ತಿಗೆ ಪತ್ರಿಕೆಯು ಅಭಿವೃದ್ಧಿ ಹೊಂದಿ ಬಾಹ್ಯ ಪ್ರಪಂಚದಲ್ಲಿ ತನ್ನದೇ ಒಂದು ಸ್ಥಾನವನ್ನು ಗಳಿಸಿತು. ತನ್ನ ಕಾಲಿನ ಮೇಲೆ ತಾನು ನಿಲ್ಲುವಂತಾಯಿತು. ವೃತ್ತಪತ್ರಿಕಾ ಪ್ರಪಂಚದಲ್ಲಿ ಶ್ರೀ ಅಯ್ಯಂಗಾರ್ಯರ ಹೆಸರು ತೀವ್ರವಾಗಿ ಪ್ರಸರಿಸ ತೊಡಗಿತು. ಇದಿಷ್ಟರಿಂದಲೇ ಅವರಿಗೆ ತೃಪ್ತಿಯಾಗಲಿಲ್ಲ. ತಾಯಿ ನಾಡಿಗೆ ಇನ್ನೂ ಹೆಚ್ಚು ಸೇವೆ ಸಲಿಸಲು ಸಮಯ ಕಾಯುತ್ತಿದ್ದರು.

೧೯೧೫ರ ಅಂತ್ಯಭಾಗದಲ್ಲಿ ಇಂತಹ ಒಂದು ಅವಕಾಶವು ಅವರಿಗೆ ಸಿಕ್ಕಿತು. "ಸ್ವದೇಶ ಮಿತ್ರನ್" ಎಂಬ ದೇಶ ಭಾಷಾ ಪತ್ರಿಕೆಯ ಸಂಪಾದಕರಾಗಿದ್ದ ಕೀರ್ತಿಶೇಷ ಜಿ. ಸುಬ್ರಹ್ಮಣ್ಯ ಅಯ್ಯರವರ ಆರೋಗ್ಯವು ಕೆಟ್ಟಿದ್ದರಿಂದ ಶ್ರೀ ರಂಗಸ್ವಾಮಯ್ಯಂಗಾರ್ಯರನ್ನು ಆ ಪತ್ರಿಕೆಯ ಸಂಪಾದಕತ್ವವನ್ನು ವಹಿಸಬೇಕೆಂದು ಕೇಳಿಕೊಂಡರು. ಆ ಸಮಯದಲ್ಲಿ ದೇಶಭಾಷಾ ಪತ್ರಿಕೆಗಳನ್ನು ಕೇಳುವವರೇ ಇರಲಿಲ್ಲ. ಇಂಗ್ಲಿಷು ಪತ್ರಿಕೆಗಳ ಮುಂದೆ ಇವು ನಿಕೃಷ್ಟವೆಂದು ಗಣಿಸಲ್ಪಟ್ಟಿದ್ದುವು. ಆಯಾ ದೇಶಗಳ ಅಭಿವೃದ್ಧಿಗೆ ಅಲ್ಲಲ್ಲಿಯ ವೃತ್ತಪತ್ರಿಕೆಗಳೇ ಮೂಲಸಾಧನವೆಂಬ ಅಂಶವನ್ನು ಅರಿತ ಶ್ರೀ ಅಯ್ಯಂಗಾರ್ಯರು ತನ್ನ ಅನುಭವ ಫಲವನ್ನು ಅವುಗಳಿಗುಂಟುಮಾಡಿ ಕೊಡುವುದು ತಮ್ಮ ಕರ್ತವ್ಯವೆಂದರಿತರು. "ಸ್ವದೇಶ ಮಿತ್ರನ್" ಪತ್ರಿಕೆಯ ಸಂಪಾದಕರು ಬೇಗನೇ ಇವರ ಶಕ್ತಿ ಸಾಮರ್ಥ್ಯಗಳನ್ನು ನೋಡ ತೊಡಗಿದರು. ಇಂದು ಆ ಪತ್ರಿಕೆಗೆ ಭರತಖಂಡದಲ್ಲಿ ಒಂದು ಸ್ಥಾನವಿದ್ದರೆ ಅದಕ್ಕೆ ಶ್ರೀ ರಂಗಸ್ವಾಮಯ್ಯಂಗಾರ್ಯರೇ ಕಾರಣರೆನ್ನಬೇಕು. ಈಗ ಕೆಲವು ವರ್ಷಗಳಿಂದ ಭರತ ಖಂಡದಲ್ಲಿ ಆಗುತ್ತಿರುವ ರಾಜಕೀಯ ಪ್ರಳಯವನ್ನು ನಾವು ನೋಡಿದ್ದೇವೆ. ಜನಾಭಿಪ್ರಾಯವನ್ನು ವ್ಯಕ್ತ ಮಾಡಿ ಸ್ವಾತಂತ್ರ್ಯ ಚಳುವಳಿಗೆ ಭದ್ರವಾದ ತಳಹದಿ ಹಾಕಿದ ಪತ್ರಿಕೆಗಳಲ್ಲಿ ಸ್ವದೇಶ ಮಿತ್ರನ್ ಪತ್ರಿಕೆಯೂ ಒಂದು.

ಶ್ರೀ ಅಯ್ಯಂಗಾರ್ಯರಲ್ಲಿ ಯಾರ ಮನಸನ್ನಾದರೂ ಒಲಿಸುವ ವ್ಯಕ್ತಿತ್ವವಿತ್ತು. ಇದರಿಂದಲೇ ಅವರು ಕೈಗೊಂಡ ಕೆಲಸವು ಬಹಳ ಮಟ್ಟಿಗೆ ಹಗುರವಾಗುತ್ತಿತ್ತು. ಅವರಲ್ಲಿದ್ದ ವಿನಯ, ಲಘುಹಾಸ್ಯ, ನಗುನಗುತ್ತಿರುವ ಮುಖ ಇವುಗಳನ್ನು ಕಂಡರೆ ಯಾರಿಗಾದರೂ ಅವರ ಸಂಗಡ ಸಂಭಾಷಣೆ ನಡೆಸಬೇಕೆಂದು ಮನಸ್ಸಾಗುತ್ತಿತ್ತು. ಕೈಕೆಳಗಿನವರನ್ನು ಕಂಡರೆ ಅವರಿಗೆ ಬಲು ಪ್ರೀತಿ. ಕೆಲಸ ಮಾಡುವವರಿಗೂ ಉತ್ಸಾಹ. ಅಷ್ಟೇಕೆ, ಇವರು ಯಜಮಾನರಾಗಿದ್ದ ಸ್ಥಳದಲ್ಲಿ ಸೇವಕರು ಸೇವಾವೃತ್ತಿಯ ನೋವನ್ನೇ ಅರಿಯುತ್ತಿರಲಿಲ್ಲ. ರಾಜಕೀಯ ವಾತಾವರಣವು ತೀವ್ರವಾಗಿ ಮಾರ್ಪಡುತ್ತಿತ್ತು. ರಾಜಕಾರಣಕ್ಕಾಗಿಯೇ ಕಾಲವೆಲ್ಲವನ್ನೂ ಉಪಯೋಗಿಸುವ ಸಮಯವುಂಟಾಗಿತ್ತು. ದೇಶದಲ್ಲಿ ಅಲ್ಲಲ್ಲಿ ತೋರಿಬರುತ್ತಿದ್ದ ಉತ್ಸಾಹವನ್ನು ಕಾರ್ಯರೂಪಕ್ಕಿಳಿಸಲು ಜ್ಞಾನವು ಬೇಕಾಗಿತ್ತು; ವ್ಯವಸ್ಥೆಯು ಬೇಕಾಗಿತ್ತು. ಇಂಥಾ ಮಹಾಶಕ್ತಿಯು ಶ್ರೀ ಅಯ್ಯಂಗಾರ್ಯರಲ್ಲಿದೆಯೆಂದು ಜನರು ಅರಿತರು. ಬರೆ ಬರವಣಿಗೆಯಲ್ಲಿ ಚತುರರಲ್ಲದೆ ಭಾಷಣ ಮಾಡುವುದರಲ್ಲಿಯೂ ಇವರು ಚತುರರೆಂದು ಬಯಲಾಯಿತು. ಸಣ್ಣ ಸಭೆಯಾಗಲಿ, ದೊಡ್ಡ ಸಭೆಯಾಗಲಿ ಎಲ್ಲಿ ನೋಡಿದರೂ ಈ ಭವ್ಯ ಮೂರ್ತಿಯೆ!

ರಾಜಕೀಯ ಪ್ರಪಂಚದಲ್ಲಿಯಾದರೂ ಇವರು ಅಮೂಲ್ಯ ಕೆಲಸ ಮಾಡಿದ್ದಾರೆ. ಯೂರೋಪಿನ ಮಹಾ ಯುದ್ಧದ ಪರಿಣಾಮವು ಭಾರತದ ಮೇಲೂ ಆಯಿತು. ಸರಿ ಅನಿಬೆಸೆಂಟರು ಸ್ವರಾಜ್ಯ ಸಂಘವೊಂದನ್ನು ಸ್ಥಾಪಿಸಿದರು. ಆ ಸಂಘದ 'ಜನರಲ್ ಸೆಕ್ರೆಟರಿ'ಗಳಾಗಬೇಕೆಂದು ಶ್ರೀ ಅಯ್ಯಂಗಾರ್ಯರಿಗೆ ಆಹ್ವಾನ ಬಂತು. ಈ ಸಂಘದ ಆಶ್ರಯದಲ್ಲಿ ಅದ್ಭುತ ಕಾರ್ಯಕ್ರಮಗಳಾದುವು. 'ಮೋಂಟೆಗ್ಯೂ ಛೇಮ್ಸ್‌ಫರ್ಡ್' ಸುಧಾರಣೆಗಳನ್ನು ಸಿದ್ಧಪಡಿಸುವ ಕಾಲದಲ್ಲಿ ತಮ್ಮ ಅನುಭವ ಲಾಭವನ್ನು ಉಂಟುಮಾಡಿ ಕೊಡಲು ಲಂಡನ್ನಿಗೆ ಹೋದರು. ಕಾಂಗ್ರೆಸ್ ಸ್ವರಾಜ್ಯ ಸಂಸ್ಥೆಯು ಸ್ಥಾಪಿತವಾಗಿ ಅದು ಶಾಸನ ಸಭೆಯನ್ನು ಪ್ರವೇಶಿಸಲು ನಿರ್ಧರಿಸಿದಾಗ ಶ್ರೀ ಮೋತಿಲಾಲ್ ನೆಹರುರವರು ಇವರನ್ನು ಸಂಸ್ಥೆಯ ಕಾರ್ಯದರ್ಶಿಗಳಾಗಬೇಕೆಂದು ಕೇಳಿಕೊಂಡರು. ಮದ್ರಾಸ್ ಅಧಿಪತ್ಯದ ಎರಡು ಜಿಲ್ಲೆಗಳ ಪ್ರತಿನಿಧಿಯಾಗಿ ಇವರು ಪ್ರಜಾಪ್ರತಿನಿಧಿ ಸಭೆಯಲ್ಲಿ ಕೂತರು. ಇವರಿಗೆ ಪ್ರತಿಸ್ಪರ್ಧಿಗಳಾಗಿ ಚುನಾವಣೆಗೆ ನಿಂತಿದ್ದ ಹೈಕೋರ್ಟು ಮಾಜಿ ನ್ಯಾಯಾಧೀಶರಿಗೆ ಅಪಜಯವಾಯಿತು. ಇದು ಅಲ್ಲಿನ ಪ್ರಜೆಗಳಿಗೆ ಶ್ರೀ ರಂಗಸ್ವಾಮಯ್ಯಂಗಾರ್ಯರಲ್ಲಿದ್ದ ಪ್ರೇಮವನ್ನೂ ನಂಬಿಕೆಯನ್ನೂ ವ್ಯಕ್ತಪಡಿಸುತ್ತದೆ. ಎರಡನೆ ಚುನಾವಣೆಯ ಕಾಲದಲ್ಲಿಯೂ ಕೂಡ ಮತ್ತೆ ಇವರು ಜಯಶಾಲಿಗಳಾದರು. ಇವರು ಸಭೆಯಲ್ಲಿ ಹೆಚ್ಚಿಗೆ ಏನು ಮಾಡದಿದ್ದರೂ ಮಾಡಿರುವುದನ್ನೇ ತೃಪ್ತಿಕರವಾಗಿ ಮಾಡಿದ್ದಾರೆ. ಇವರು ನಮ್ಮ ದೇಶದಲ್ಲಿ ಕಾಂಗ್ರೆಸ್ ಚಳವಳಿಯು ಅಭಿವೃದ್ಧಿ ಹೊಂದುವುದಕ್ಕೂ ಬಹಳ ದುಡಿದರು. ಇವರು ಯಾವ ಸಂಸ್ಥೆಗೆ ಸೇರಿದರೂ ತಮ್ಮ ಹೆಸರು ಅಚಂದ್ರಾರ್ಕವಾಗಿ ನಿಲ್ಲುವಂಥ ಕೆಲಸಗಳನ್ನು ಮಾಡಿದ್ದಾರೆ.

೧೯೨೮ರಲ್ಲಿ 'ಹಿಂದೂ' ಪತ್ರಿಕೆಯು ಬಹಳ ಅಭಿವೃದ್ಧಿ ಹೊಂದಿತು. ಸರಿಯಾದ ಯೋಗ್ಯತೆಯೂ, ಅಸಾಧಾರಣ ಅನುಭವವೂ ಉಳ್ಳ ಒಬ್ಬ ಸಂಪಾದಕರ ಅವಶ್ಯಕತೆಯು ಹುಟ್ಟಿತು. ಅಯ್ಯಂಗಾರ್ಯರಿಗೆ ಈ ಕಡೆಗೆ ಮತ್ತೆ ಮನ ಸೆಳೆಯಿತು. ಅವರು 'ಹಿಂದೂ' ಪತ್ರಿಕೆಗೆ ಮಾಡಿದ ಸೇವೆಯನ್ನು ಅಳೆಯಲಾಗುವುದಿಲ್ಲ. ಪ್ರಜೆಗಳ ದೃಷ್ಟಿಯಲ್ಲಿಯೂ ಸರಕಾರದವರ ದೃಷ್ಟಿಯಲ್ಲಿಯೂ ಪತ್ರಿಕೆಯ ಅಂತಸ್ತು ಹೆಚ್ಚಿತು. ಇಂದು ಆ ಪತ್ರಿಕೆಗೆ ಇರುವ ಸ್ಥಾನಕ್ಕೆ ಶ್ರೀ ರಂಗಸ್ವಾಮಿ ಅಯ್ಯಂಗಾರ್ಯರೂ ಬಹಳ ಮಟ್ಟಿಗೆ ಕಾರಣರೆಂದು ಧಾರಾಳವಾಗಿ ಹೇಳಬಹುದು. ಎರಡನೇ ಚಕ್ರಗೋಷ್ಠಿಯಲ್ಲಿ ಭಾಗವಹಿಸಲು ಸರಕಾರದವರು ಆಹ್ವಾನವಿತ್ತುದೂ ಮಹಾತ್ಮಾ ಗಾಂಧಿಯವರು ಆ ಚಕ್ರಗೋಷ್ಠಿಯಲ್ಲಿ ಇವರ ಅನುಭವ ಲಾಭ ಪಡೆದುದೂ ಇವರ ಯೋಗ್ಯತೆಯನ್ನು ವ್ಯಕ್ತಪಡಿಸುತ್ತದೆ. ದೊಡ್ಡವರು ಇವರಲ್ಲಿಟ್ಟಿದ್ದ ಗೌರವವನ್ನು ಬಯಲು ಮಾಡುತ್ತದೆ. ತೃತೀಯ ಚಕ್ರಗೋಷ್ಠಿಯ ನಂತರ ಇವರು ಮತ್ತೆ ಜಾಯಿಂಟ್ ಪಾರ್ಲಿಮೆಂಟರಿ ಸಮಿತಿಯಲ್ಲಿ ಭಾಗವಹಿಸಿದರು. ಭರತಖಂಡಕ್ಕೆ ಹಿಂತಿರುಗಿದ ಸಮಯ ಆರೋಗ್ಯವು ಕೆಟ್ಟಿತು; ದೇಹವು ಬಡವಾಯಿತು. ಅಂತೆಯೇ ತಾ. ೪ನೇ ದಿನ ವೈದ್ಯರು ಎಷ್ಟೇ ಕಷ್ಟಪಟ್ಟರೂ ಅವರು ಕಣ್ಮರೆಯಾದರು. ಸ್ವರಾಜ್ಯ ಸಂಘ ಸ್ಥಾಪನೆಯ ಮೂಲ ಪುರುಷರಲ್ಲಿ ಕೊನೆಯವರು ತೆರಳಿದರು. ಶ್ರೀ ಅಯ್ಯಂಗಾರ್ಯರು ಅನೇಕ ಕೆಲಸಗಳಿಗೆ ಕೈಹಚ್ಚಿದರು. ಅದ್ಭುತ ಫಲಗಳನ್ನು ಗಳಿಸಿದರು! ಅವರ ಆತ್ಮಕ್ಕೆ ಪರಮಾತ್ಮನು ಶಾಂತಿಯನ್ನೀಯಲಿ!

ಸಂಪಾದಕರ ಟಪ್ಪಾಲು ಪೆಟ್ಟಿಗೆ.

ಬಾತ್ಮೀದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಎಲ್ಲಾ ಲೇಖಕರು ತಮ್ಮ ಸಂಪೂರ್ಣ ಹೆಸರು ವಿಳಾಸಗಳನ್ನು ಕೊಡತಕ್ಕದ್ದು. ದೀರ್ಘ ಲೇಖನಗಳಿಗೆ ಎಡೆ ಕೊಡಲಾಗುವುದಿಲ್ಲ. ಲೇಖನಗಳು ಸಾರ್ವಜನಿಕ ಹಿತದೃಷ್ಟಿಯಿಂದಿದ್ದು ಯುಕ್ತ ಶೈಲಿಯಲ್ಲಿರತಕ್ಕದ್ದು. (ಸಂ. ಸ್ವ.)

ಶಿವಭಕ್ತಿಯೋಗ ಸಂಘವೂ ಮಹಾಶಿವರಾತ್ರಿಯೂ.

(ಬರೆದು ಬಂದುದು)

ಇದೇ ತಾ. ೧೧—೧೨ನೇ ದಿನಗಳಲ್ಲಿ ಶ್ರೀ ಗೋಕರ್ಣನಾಥ ಕ್ಷೇತ್ರದಲ್ಲಿ ಮಹಾಶಿವರಾತ್ರಿ ಮಹೋತ್ಸವವು ಬಹು ವಿಜೃಂಭಣೆಯಿಂದ ನಡೆಯಿತು. ಸುಮಾರು ಎಂಟು ಅಥವಾ ಹತ್ತು ಸಾವಿರ ಜನ ಸಂದಣಿಯು ಸೇರಿತ್ತು. ಬೊಗಳೂರಿನ ಶ್ರೀ ಕೆ. ಎಸ್. ಗುರುಸ್ವಾಮಿ, ಶ್ರೀ ವೆಂಕಟಸ್ವಾಮಿ, ಮಲ್ಪೆ ಅಣ್ಣಯ್ಯ ಮೊದಲಾದ ಮಹನೀಯರುಗಳೂ ಬಿಜಯಂಗೈದಿದ್ದರು. ಜಾಗರದ ದಿನ ರಾತ್ರಿ ನಡೆದ ಗೊಂಬೆ ಆಟದ ವ್ಯವಸ್ಥೆಯು ಅಷ್ಟೊಂದು ಸಂತೃಪ್ತಿಕರವಾಗಿರದಿದ್ದರೂ, ಶ್ರೀ ಬಿ. ಸೋಮಪ್ಪ, ಶ್ರೀ ಬಿ. ಸಪ್ಪಪ್ಪ, ಶ್ರೀ ಎ. ಚೆನ್ನಪ್ಪನವರೇ ಮೊದಲಾದವರ ಸಾಹಸದಿಂದ ಸಾವಿರಾರು ಸ್ತ್ರೀಯರು ಗೊಂಬೆಗಳನ್ನಾದರೂ ಮನದಣಿಯೆ ನೋಡುವಂತಾಯಿತು. ಜಾಗರದ ರಾತ್ರಿಯ ವ್ಯವಸ್ಥೆಗಳೆಲ್ಲ ತೃಪ್ತಿಕರವಾಗಿದ್ದುವು. ಮರುದಿವಸದ ಭೋಜನದಲ್ಲಿ ಸುಮಾರು ನಾಲ್ಕಾರು ಸಾವಿರ ಜನರಾದರೂ ಇರಬಹುದೆಂದು ಅಂದಾಜು. ಇಷ್ಟು ಜನರಿಗೂ ಊಟೋಪಚಾರಗಳ ಕುರಿತಾಗಿ ಒದಗಿಸಲ್ಪಟ್ಟ ಅನುಕೂಲತೆಗಳಿಗಾಗಿ ಶ್ರೀ ಶಿವಭಕ್ತಿಯೋಗ ಸಂಘದ ಎಲ್ಲಾ ತರುಣರನ್ನೂ, ರಾವ್ ಬಹದ್ದೂರ್ ಎನ್. ಎಸ್. ಸುವರ್ಣರನ್ನೂ ಶ್ಲಾಘಿಸಲೇ ಬೇಕಾಗಿದೆ. ರಾವ್ ಬಹದ್ದೂರ್ ಸುವರ್ಣರವರು ಎಲ್ಲಾ ಜವಾಬ್ದಾರಿಕೆಗಳನ್ನೂ ತರುಣರ ಹೆಗಲಮೇಲೆ ಬಿಟ್ಟು ಅನ್ನ ಬಡಿಸುವಿಕೆ ಮೊದಲಾದವುಗಳಿಗೆ ಕೊಟ್ಟ ಮೌನ ಸೂಚನೆಯು ತರುಣರನ್ನು ಮತ್ತಷ್ಟು ಉತ್ತೇಜಿತರನ್ನಾಗಿ ಮಾಡಿ ಅವರು ಇಷ್ಟು ವರ್ಷಗಳಿಗಿಂತಲೂ ಹೆಚ್ಚಾಗಿ ಮೈ ಬಿಟ್ಟು, ಸ್ವಪ್ರತಿಷ್ಠೆಯನ್ನು ಮರೆತು, ಕೆಲಸ ಮಾಡುವಂತೆಯೇ ಆಯಿತು. ಧರಿಸಿದ ಮಡಿವಸ್ತ್ರಗಳನ್ನು ಹಾಳಾಗಗೊಡದಿದ್ದ ಇಬ್ಬರು ಮೂವರಲ್ಲದೆ ಶ್ರೀಗಳಾದ ಸೋಮಪ್ಪ, ಸುಂದರ, ಅಂತಪ್ಪ ಮೊದಲಾದವರು, ನೀರು ಹೊರುವುದು ಅಡಿಗೆ ಮಾಡುವುದು ಇತ್ಯಾದಿಗಳಲ್ಲಿ ಹೆಚ್ಚಿನ ಶ್ಲಾಘ್ಯ ಪ್ರಯತ್ನಗಳನ್ನು ಮಾಡಿದರು. ಅಡಿಗೆಗಾರರಲ್ಲಿ ಬಿಲ್ ಕಲೆಕ್ಟರ್ ಬಾಬು ಮೊದಲಾದವರ ಶಾಂತಪರ ಸಾಹಸಪೂರ್ವಕ ಕೆಲಸಗಳು ಪ್ರಶಂಸನೀಯ. ಅಂದಿನ ದಿನದ ಯಶಸ್ವಿತೆಗೆ ಅಡಿಗೆಯ ಮುಖಂಡರೇ ಪಾತ್ರರು. ಹೊಸ್ಪೆಲಿನ ಯುವಕರು ಮಾಡಿದ ಕೆಲಸವು ವರ್ತಕಗಳನ್ನು ಎಕ್ಸೈಸ್ ಡಿಪಾರ್ಟ್‌ಮೆಂಟಿನಲ್ಲಿ ದುಡಿದ ಶ್ರೀ ದೇವೇಂದ್ರ, ಶ್ರೀ ಬಾಬುರವರನ್ನು ಹೊಗಳದಿರಲು ಸಾಧ್ಯವಿಲ್ಲ. ಅಂತೂ, ಈ ವರ್ಷದ ಉತ್ಸವವು ಇಷ್ಟು ವರ್ಷಗಳಿಗಿಂತ ಸಾಂಗವಾಗಿಯೂ, ವಿಜಯಶಾಲಿಯಾಗಿಯೂ ನೆರವೇರಿತು. ಸೇವೆಗೆ ಹೆದರಿ ಹಿಂದೆ ನಿಲ್ಲುವ ಕೆಲವರಿಗೆ ಈ ಸಂಘದವರು ಮಾರ್ಗದರ್ಶಕರು. ಸೇವೆಯಿಂದ ವಿಶಾಲಭಾವವೂ, ವಿಶಾಲಭಾವದಿಂದ ಸಹನೆಯೂ, ಸಹನೆಯಿಂದ ಪ್ರೇಮವೂ ತಲೆದೋರಿ ಐಕ್ಯಮತ್ಯವು ಉಂಟಾಗುತ್ತದೆಂಬುದಕ್ಕೆ ಶ್ರೀ ಶಿವಭಕ್ತಿಯೋಗ ಸಂಘದ ತರುಣರೂ ಅವರ ಮುಂದಾಳಾದ ರಾವ್ ಬಹದ್ದೂರ್ ಸುವರ್ಣರವರೂ ಸಾಕ್ಷಿ. ಪ್ರತಿಯೊಂದು ಸಮಾಜವೂ ಉನ್ನತಿಯನ್ನು ಹೊಂದಬೇಕಾದರೆ ಶ್ರೀ ಶಿವಭಕ್ತಿಯೋಗ ಸಂಘದ ಕಾರ್ಯ ಸೂತ್ರದ ಮಾದರಿಯ ಅನುಸರಣೆಯು ತೀರ ಅಗತ್ಯವೆಂದು ಒತ್ತಿ ಹೇಳಬಹುದು.

'ನೆ. ಜಾ.'

'ವಿನೋದ ಪ್ರಪಂಚ'!!!

ಬೆಂಗಳೂರಿನ ಹಾಸ್ಯರಸಭರಿತ ಸಚಿತ್ರ ಪತ್ರಿಕೆ!
ಓದಿದರೆ ನಕ್ಕು ನಕ್ಕು ಸಾಕಾಗುತ್ತದೆ.
ಮಾದರಿ ಪ್ರತಿಗೆ ಚಿಲ್ಲರೆ ಕಳಿಸುವುದು.
ವಾ. ಚಂದಾ ರೂ. ೧—೮—೦
ಚಂದಾ ಮನಿಯಾರ್ಡರ್ ಮೂಲಕ ವಿ. ಪಿ.ಯಿಂದ ಇಲ್ಲ.
ಜಾಹೀರಾತಿಗೆ ಬರೆಯಿರಿ!
ಸಂಪಾದಕ,
ವಿನೋದ ಪ್ರಪಂಚ, ಬೆಂಗಳೂರು ಸಿಟಿ
ದಕ್ಷಿಣ ಕನ್ನಡದ ಏಜಂಟರು—ಪಾಪ್ಯುಲರ್ ಸ್ಟೋರ್ಸ್, ಮಂಗಳೂರು.

ನೋಟೀಸು.

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

O. S No. 34/1934. R I A 111/1934.

ಕಾಪಿಲ್ ಕುಂಞಬ್ಬಮು ಬ್ಯಾರಿ, ಅಬ್ದುಲ್ಲಖಾದರ ಬ್ಯಾರಿಗಳ ಮಗ, ಕಾಸರಗೋಡು ತಾಲೂಕು ಪಳ್ಳಿಕೆರೆ ಗ್ರಾಮದಲ್ಲಿರುವವ—ವಾದಿ ಅರ್ಜಿದಾರ.

ಮತ್ತು

1. ಮುಹಮ್ಮದ ಕುಂಞಬ್ಯಾರಿ, ಕಾಪಿಲ್ ಮುಹಮ್ಮದ ಬ್ಯಾರಿ ಮಗ. 2. ಅಬ್ದುಲ್ಲ ಬ್ಯಾರಿ, ಮಾಳಿಗೆ ಬಳ್ಪಿಲ್ ಮೂಸೆ ಬ್ಯಾರಿ ಮಗ ಕಾಸರಗೋಡು ತಾಲೂಕು ಪಳ್ಳಿಕೆರೆ ಗ್ರಾಮದ ಕೋಟಿಕುಂಜದಲ್ಲಿರುವವರು—ಪ್ರತಿವಾದಿರು ರೆಸ್ಪಾಂಡೆಂಟರು

ಇವರೊಳಗೆ

1ನೇ ಪ್ರತಿವಾದಿಯು 2ನೇ ಪ್ರತಿವಾದಿಯ ಹೆಸರಲ್ಲಿ ತಾ 20—12—1932ರಲ್ಲಿ ರಿಜಿಸ್ಟ್ರಿ ಸಿಕಿಂ ಬರಕೊಟ್ಟ ಕ್ರಯಚೀಟು ಸಿಂಧು ಅಥವಾ ಮಂಜೂರಾಗತಕ್ಕದ್ದಲ್ಲವೆಂತಲೂ, 1ನೇ ಪ್ರತಿವಾದಿಯು ಸಾಲಗಾರರಾದ ವಾದಿಗೆ ವ ಇತರರಿಗೆ ಬಾಧಿಸತಕ್ಕದ್ದಲ್ಲವೆಂತಲೂ ವಗೈರೆ ಡಿಕ್ಲರೇಶನ್ ಅಪೇಕ್ಷಿಸಿ ವಾದಿಯು ಮೇಲ್ಕಂಡ ದಾವಾ ಮಾಡಿರುವುದಾಗಿಯೂ, 1ನೇ ಪ್ರತಿವಾದಿಯ ಇತರ ಸಾಲಗಾರರ ಕಡೆಯಿಂದ ಸಹಾ ವಾದಿಯು ಈ ವ್ಯಾಜ್ಯ ತಂದುದರಿಂದ ಸದ್ರಿ ಸಾಲಗಾರರ ಬಗ್ಗೆ ಸಹಾ ಸದ್ರಿ ವ್ಯಾಜ್ಯ ನಡಿಸುವರೆ ತನಗೆ ಪರ್ಮಿಶನ್ ಕೊಡಿಸಬೇಕಾಗಿ ವಾದಿಯು ಅರ್ಜಿ ದಾಕ್ಲು ಮಾಡಿರುವದಾಗಿಯೂ ಸದ್ರಿ ವ್ಯಾಜ್ಯ ವ ಅರ್ಜಿ ಸಹಾ ಇದೇ ಬರುವ ತಾ 24—2—34ಕ್ಕೆ ತನ್ಖಿಗೆ ಇಟ್ಟಿರುವುದಾಗಿಯೂ, ಆ ಕರಿತ ಆಕ್ಷೇಪವುಳ್ಳವರು ಆ ದಿನದ ಕೋರ್ಟಿಗೆ ಹ್ಯಾಜರಾಗಬೇಕಾಗಿಯೂ ಈ ಮೂಲಕ ತಿಳಿಸಲಾಗಿದೆ

ಕಾಸರಗೋಡು
೮—೨—೧೯೩೪ } **K. Rama Varma Raja**
Vakil for Plaintiff
P. Ahamad
Advocate for Plaintiff

ನೋಟೀಸು.

ಉಡುಪಿ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

ಕ್ರಮ ನಂಬ್ರ 476/1933

ಯು. ರಾವ ಪ್ರಭು ಕೂಡಾ—ವಾದಿರು

ಮತ್ತು

ನಾರಾಯಣ ಯಾನೆ ದೇವೇಂದ್ರ ಕಮ್ತಿ ಕೂಡಾ—ಪ್ರತಿವಾದಿರು

ಇವರೊಳಗೆ

ಸದ್ರಿ ವ್ಯಾಜ್ಯದ ಪ್ರತಿವಾದಿರಾದ ಉಡುಪಿ ತಾಲೂಕು ಕೊರಂಗ್ರಪಾಡಿ ಗ್ರಾಮದ ಕೆಮ್ತೂರಲ್ಲಿರುವ ಗೋವರ್ಧನ ಕಮ್ತಿರ ಮಗಂದಿರು 1ನೇ ನಾರಾಯಣ ಯಾನೆ ದೇವೇಂದ್ರ ಕಮ್ತಿ 2ನೇ ರಾಮಚಂದ್ರ ಕಮ್ತಿ ಸಹ 2 ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—ಪ್ರತಿವಾದಿರು ವಾದಿರಿಗೆ ತಾರೀಕು 15—9—1925ರಲ್ಲು ರಿಜಿಸ್ಟ್ರಿ ಸಿಕಿಂ ರೂ 200/ಕ್ಕೆ ಬರಕೊಟ್ಟ ಸ್ಥಿರಸೊತ್ತು ಈಡಿನ ಅಸ್ಲು ಮತ್ತು ಬಡ್ಡಿ ಬಾಕಿ ಕೂಡಾ ರೂಪಾಯಿ 317—1—3ನ್ನು ಬರಮಾಡಿಕೊಳ್ಳುವರೆ ವಾದಿರು ದಾಕ್ಲು ಮಾಡಿದ ಸದ್ರಿ ವ್ಯಾಜ್ಯವು ಅಖೈರ ತನ್ಖಿ ಬಗ್ಗೆ ತಾರೀಕು 8—3—34ಕ್ಕೆ ಇಟ್ಟಿರುವದರಿಂದ ಸದ್ರಿ ದಿವಸಕ್ಕೆ ಉದಾಹರಣೆ ಕೊಡುವದಕ್ಕೋಸ್ಕರ ಸದ್ರಿ ಪ್ರತಿವಾದಿರು ಸ್ವತಹ ಅಥವಾ ವಕೀಲರ ಮುಖಾಂತರ ಸದ್ರಿ ತಾರೀಕಿನ ದಿವಸ ಸದ್ರಿ ಕೋರ್ಟು ಮುಂದೆ ಹಾಜರಾಗಲಿಕ್ಕೆ ತಪ್ಪಿದರೆ ಸದ್ರಿ ವ್ಯಾಜ್ಯವು ಅವರ ಗೈರಹಾಜರಿಯಲ್ಲಿ ತೀರ್ಮಾನಿಸಲಾದೀತೆಂತ ಸದ್ರಿ ಪ್ರತಿವಾದಿರಿಗೆ ಈ ಮೂಲಕ ಸೂಚಿಸಲಾಗುತ್ತದೆ

Udipi, **H. Keshava Pai,**
3—2—1934 Vakil for Plaintiffs.

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್.
ಸ್ತ್ರೀಯರಿಗೊಂದು ಮಹಾ ವರ.

ಯಾವ ತರದ ಅಥವಾ ಎಲ್ಲಾ ತರದ ಮುಟ್ಟಿನ ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮುಟ್ಟು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧ ರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ ರೂ 3 ಮತ್ತು 1—10—0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು.

Sole Agents for West Coast and North Kanara

Wanted Agents in Principal Towns
For terms Apply to—POPULAR STORES
Mangalore

ಪಾಪ್ಯುಲರ್ ಸ್ಟೋರ್ಸ್,
ರಥಬೀದಿ ಮಂಗಳೂರು.

ಸ್ತ್ರೀ ಪುರುಷರ ಸಲುವಾಗಿ
ಶಕ್ತಿ ವ ಸ್ಫೂರ್ತಿ ಕೊಡುವಂತಹ

ಸುಮಧುರ
ಝಂಡು ದ್ರಾಕ್ಷಾಸವ
ಜರೂರ ಉಪಯೋಗಿಸಿರಿ.

ಸ್ತ್ರೀಯರ ಸಲುವಾಗಿ
ಆರೋಗ್ಯ ವ ಶಕ್ತಿವರ್ಧಕ.

ಪ್ರದರಾದಿ ರೋಗಗಳ ಮೇಲೆ
ರಾಮಬಾಣ ಉಪಾಯ
ಝಂಡು ಅಶೋಕಾರಿಷ್ಟ
ಬೇಗನೇ ಉಪಯೋಗಿಸಿರಿ

'ZANDU'

ಝಂಡು ಫಾರ್ಮಾಸ್ಯುಟಿಕಲ್ ವರ್ಕ್ಸ್ ಲಿ: ಮುಂಬಯಿ.

ಮದ್ರಾಸು ಸಂಸ್ಥಾನದ ಏಜಂಟ್—ದಾಮೋದರ ಮತ್ತು ಕಂಪನಿ, 78 ಜೈನ ಬಜಾರ ರೋಡ್, ಮದ್ರಾಸು
ಮೈಸೂರು ಪ್ರೊವಿನ್ಸ್ ಏಜಂಟ್—ಬಿ ಪೂಪಟ್ ಲಾಲ ಕಂಪನಿ, ೫೧ ಅರಳೆಪೇಟೆ ಶ್ರೀನಿವಾಸಾಚಾರ ಸ್ಟ್ರೀಟ್
ಮಂಗಳೂರು ಏಜಂಟ್—ಶಾರದಾ ಕಂಪನಿ ಡಾಯ್ಮಂಡ್ ಬಿಲ್ಡಿಂಗ್, ಮಂಗಳೂರು
ಧಾರವಾಡ ಏಜಂಟ್—ದಿ ಧಾರವಾಡ ಫಾರ್ಮಸಿ, ಧಾರವಾಡ

ಬೇರೆ ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತದೆ

ಆಯುರ್ವೇದ ಔಷಧಿಗಳ ಸೂಚೀಪತ್ರವನ್ನು ಮುಖ್ಯ ಏಜಂಟರಿಂದ ಪಡಕೊಳ್ಳಿರಿ

ನಮ್ಮ ಸಲಹೆಯೇ ಪ್ರಾಧಾನ್ಯವಾದದ್ದೆಂದು ತಿಳಿಯಬೇಡಿ.

ಕಲ್ಲಿಕೋಟೆ ಅಶೋಕ ಅಸ್ಪತ್ರೆಯ ಚೀಫ್ ಮೆಡಿಕಲ್ ಆಫೀಸರರಾದ ಡಾ। ಪಿ. ಜಿ. ಥಾಮಸ್, ಎಂ. ಆರ್, ಸಿ ಎಸ್ ಅವರು ಬರೆದಿರುವುದನ್ನು ಓದಿ ನೋಡಿ—"ನಾನು ನಿಮ್ಮ ಆಶ್ಚರ್ಯಕರವಾದ ಜೀವಾಮೃತಂ ಟಾನಿಕನ್ನು ನರಗಳಲ್ಲಿ ಉಂಟಾದ ಬಲಹೀನತೆ, ಹಸಿವು ಕಡಿಮೆಯಾಗಿರುವುದು ತೂಕವು ಕಡಿಮೆಯಾಗಿರುವುದು, ಇವು ಕಾರಣವಾಗಿರುವ ಅನೇಕ ರೋಗಿಗಳಿಗೆ ಕೊಟ್ಟಿರುತ್ತೇನೆ. ಅದರ ಫಲಿತಾಂಶಗಳು ಬಹು ತೃಪ್ತಿಕರವಾಗಿದೆ. ಜೀವಾಮೃತವನ್ನು ದೇಹಶಕ್ತಿ ಕುಗ್ಗಿರುವ ಎಲ್ಲಾ ಸಂದರ್ಭಗಳಲ್ಲೂ ಸರ್ವ ಸಾಮಾನ್ಯವಾಗಿ ಉಪಯೋಗಿಸಬಹುದೆಂದು ನಾನು ಮನಃಪೂರ್ವಕವಾಗಿ ಶಿಫಾರಸು ಮಾಡುತ್ತೇನೆ"

ಜೀವಾಮೃತವು

ನರಗಳಿಗೆ ಶಕ್ತಿ ಕೊಡುತ್ತದೆ ವೀರ್ಯ ವೃದ್ಧಿಮಾಡುತ್ತದೆ ಹಸಿವು ಹೆಚ್ಚಿಸುತ್ತದೆ. ರಕ್ತ ವೃದ್ಧಿಮಾಡುತ್ತದೆ.

ಪಂಡಿತ
ಡಿ. ಗೋಪಾಲಾಚಾರ್ಲುರವರ
ಜೀವಾಮೃತವು

ಎಲ್ಲಾ ಔಷಧ ಮಾರುವವರಲ್ಲೂ, ಸ್ಟೋರುಗಳಲ್ಲೂ ದೊರೆಯುತ್ತದೆ (ಸಂಪೂರ್ಣ ವಿವರಗಳಿಗೆ ಇವರಿಗೆ ಬರೆಯಿರಿ)

ಆಯುರ್ವೇದಾಶ್ರಮಂ, ಪೋ ಬಾಕ್ಸ ನಂ ೫೧೭, ಮದ್ರಾಸು.

ಸೋಲ್ ಏಜಂಟರು:—ಸಿಟಿ ಮೆಡಿಕಲ್ ಮತ್ತು ಜನರಲ್ ಏಜನ್ಸಿ, ೬೧ ಚಿಕ್ಕಪೇಟೆ ಬೆಂಗಳೂರು. (ಉಡುಪಿ ಹೋಟೆಲ್ ಹತ್ತಿರ)
ದಕ್ಷಿಣ ಕನ್ನಡದ ಏಜಂಟರು—ಪಾಪ್ಯುಲರ್ ಸ್ಟೋರ್ಸ್, ಮಂಗಳೂರು. P. No. 104.

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು   ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು.

ಕಸ್ತೂರಿ ಮಿಶ್ರಿತ ದಶಮೂಲಾರಿಷ್ಟ ೧೬ ಔನ್ಸ್ ಬಾಟ್ಲಿ ೧ಕ್ಕೆ ರೂ. 1-8-0. ದ್ರಾಕ್ಷಾಸವ ೧೬ ಔನ್ಸ್ ಬಾಟ್ಲಿ 1ಕ್ಕೆ ರೂ. 1 ಅಶ್ವಗಂಧಾರಿಷ್ಟ ೧೬ ಔನ್ಸ್ ಬಾಟ್ಲಿ ಒಂದಕ್ಕೆ ರೂ. 1-4-0. ಅಬಲಾಮೃತ ೧೬ ಔನ್ಸ್ ಬಾಟ್ಲಿ ೧ಕ್ಕೆ ರೂ 2. ಅಶೋಕಾರಿಷ್ಟ ೧೬ ಔನ್ಸ್ ಬಾಟ್ಲಿ ೧ಕ್ಕೆ ರೂ. 1-4-0. ಜೀವನಚಿತ್ರಲೇಹ ೧ ರಾತಿಗೆ ರೂ. 2-8-0. ಅಭಯಾಮಲಕಿ ೧ ರಾತ್ಲಿಗೆ ರೂ 2. ಚಂದ್ರಮುಖ (ವಿಷೂಚಿಕೆಗೆ ರಾಮಬಾಣ) ಕಾಲು ಔನ್ಸಿಗೆ ರೂ 0-0-0. ದಂತಧಾವನ ಚೂರ್ಣ ಕೋಲೆ ೧ಕ್ಕೆ 0-1-0. ಕ್ರಿಮಿಘಾತಿನಿ (ದದ್ದು, ಕಜ್ಜಿಗೆ) ಡಬಿ ೧ಕ್ಕೆ ರೂ 0-4-0 ... ೧ ... ರೂ 0-6-0

...ಸ್ ಬಾಟ ೧ಕ್ಕೆ ... ಚಂದನಾದಿ ...

—ಪಿ ಜನಾರ್ದನ ... ಬಟ್ಕಳ್— ...ಸ್ ಎಂಡ್ ಸನ್ಸ್. ...ಕೊಳ್ಳಬಹುದು ಕಟಪಾಡಿ, ದ. ಕ.

ಮಹಾತ್ಮರ ಹರಿಜನ ಸಂದೇಶವನ್ನು

ಮಹಾಜನರಿಗೆ ಹೃದಯಂಗಮವಾಗಿ ಮನಗಾಣಿಸಲು

ನವಜೀವನ

ಎಂಬ ಹರಿಜನೋದ್ಧಾರ ನಾಟಕವು

ಎಸ್. ಆರ್. ಎಸ್. ಹೋಮ್ ಡ್ರಮೇಟಿಕ್ ಸೊಸೈಟಿಯ ಆಶ್ರಯದಲ್ಲಿ

ಮೈದಾನಿನ ಶ್ರೀ ಚಂದ್ರಕಲಾ ನಾಟಕ ಕಂಪೆನಿಯವರ ಭವ್ಯಥಿಯೇಟರಿನಲ್ಲಿ

ತಾ 18—2—'34ನೇ ಆದಿತ್ಯವಾರ ರಾತ್ರಿ ಘಂಟೆ 9 30ಕ್ಕೆ ಪ್ರದರ್ಶಿಸಲ್ಪಡುವುದು.

ಉತ್ಕೃಷ್ಟ ನಟವರ್ಗ   ಉದ್ಬೋಧಕ ಕಥಾನಕ

ಸುಧಾರಕನ ಉಜ್ವಲ ಸ್ವಾರ್ಥತ್ಯಾಗ—ಯೋಗಿಯ ತುಚ್ಛ ಭೋಗವಿಲಾಸ—ಬಡತನದ ಅಸಹನೀಯ ಕಷ್ಟ—ಸುಖಲೋಲುಪತೆಯ ದುಷ್ಪರಿಣಾಮ—ಪತ್ನಿಯ ಪವಿತ್ರ ಸೇವಾಧರ್ಮ—ವಿತಂಡುವಿನ ಪತನ—ಸುಧಾರಕರ ಸಾಹಸ—ಸನಾತನಿಗಳ ನಾನಾ ತಂತ್ರ

ಕಟ್ಟಕಡೆಗೆ

ನವಜೀವನ ಅರುಣೋದಯ.

ಹರಿಜನ ದೇವಸ್ಥಾನ ಪ್ರವೇಶ—ಬಾಲಾಶ್ರಮ ಬಿಟ್ಟು ಗೃಹಸ್ಥಾಶ್ರಮ ಅಂಗೀಕಾರ.

ಎಲ್ಲರೂ ನೋಡಲೇಬೇಕಾದ ನಾಟಕ.

ಗ್ರಾಮಫೋನ್ ಹೆಸರುಗೊಂಡ ಮಾಸ್ಟರ್ ಎಚ್. ನಾರಾಯಣರಾಯರು ಕಥಾನಾಯಕ—ಮೋಹನರಾವ್, ಶ್ರೀ. ರಂಗರಾವ್ ಕಲಬೇರಿಕರ್ ಬಿ. ಎ., ಎಲ್. ಎಲ್. ಬಿ ಯವರು ಪ್ರತಿನಾಯಕ—ಯೋಗಾನಂದಸ್ವಾಮಿ, ಶ್ರೀ. ಮಾಧವ ಕಂಗಳಾಯರು ಕಥಾನಾಯಿಕೆ—ಸುಲೋಚನ, ಮತ್ತು 'ಮಾಸ್ಟರ್ ಕಮೇಡಿಯನ್' ಶ್ರೀ. ಎಮ್. ಸೀತಾರಾಮ ಶೆಟ್ಟಿ ಸ್ವಾಮಿಯ ಹಸ್ತಕ ಸುಬ್ಬಣ್ಣನ ಪಾತ್ರ ವಹಿಸುವರು.

ಬೋಧಪರ ಗದ್ಯ, ಮನೋಹರ ಗಾನ, ನಕ್ಕುನಕ್ಕುನಗಿಸುವ ಪ್ರಹಸನಗಳಿಂದ ಸರ್ವಾಂಗಸುಂದರ ನಾಟಕ.

ಟೀಕೀಟು ದರ:—I ಕ್ಲಾಸು ರೂ. 3. II ಕ್ಲಾಸು ರೂ. 2. III ಕ್ಲಾಸು ರೂ. 1. ಚಾಪೆ 8 ಆಣೆ. ನೆಲ 4 ಆಣೆ.

ನಾಟಕದ ದಿನ ಅಪರಾಹ್ನ ಘಂಟೆ 2ರಿಂದ 6 ಘಂಟೆಯೊಳಗೆ ಥಿಯೇಟರಿಗೆ ಬಂದು 2 ಆಣೆ ಹೆಚ್ಚು ಕೊಟ್ಟರೆ ಸೀಟು ರಿಸರ್ವ್ ಮಾಡಲಾಗುವುದು.

ಕೆ. ಕೆ. ಶೆಟ್ಟಿ,
ವ್ಯವಸ್ಥಾಪಕ.

ಕೆನರಾ ಛಾಪಖಾನೆ, ಮಂಗಳೂರು

...d., ...s UDIPI ...nnanore ...l Rs 2 00 00⁰

71,186—9—2
9,690— 7—9
3,634— 4—0
3 575— 0—0
...0 000—0—0
1,000 — 0—0
9 263— 1—3
...,794—4—10
... 677—15—6
...3,841 10—6

Bros, ...ing Agents.

...ತ್ರ!

ಸತಿ ಸುಲೋಚನ

ಎಂಬ ಚಿತ್ರವು ಕನ್ನಡ ಮಾತನಾಡುವ ಹಾಡುವ ರೂಪದಲ್ಲಿ ಪ್ರದರ್ಶಿಸಲ್ಪಡುತ್ತದೆ.

ಮಧುರ ಸಂಗೀತ!   ಸ್ಪಷ್ಟವಾದ ಧ್ವನಿ!   ಇಂಪಾದ ಶ್ರುತಿ!

ಮಂಗಳೂರಿನಲ್ಲಿ ಶೀಘ್ರದಲ್ಲೇ ಪ್ರದರ್ಶನ.   ದಿ ಸೌತ್ ಇಂಡಿಯನ್ ಫಿಲ್ಮ್ಸ್ ಸಪ್ಲೈ ಕಂಪೆನಿ ಬೆಂಗಳೂರು.

"ವಿನೋದ ಪ್ರಪಂಚ"!!!
ಬೆಂಗಳೂರಿನ ಹಾಸ್ಯರಸಭರಿತ ಪಕ್ಷ ಪತ್ರಿಕೆ!
ಓದಿದರೆ ಹೊಟ್ಟೆ ಹುಣ್ಣಾಗುತ್ತದೆ.
ವಾ. ಚಂದಾ ರೂ. ೧-೮-೦
ಜಾಹೀರಾತಿಗೆ ಸುಸಮಯ!
ಸಂಪಾದಕ,
ವಿನೋದ ಪ್ರಪಂಚ, ಬೆಂಗಳೂರು ಸಿಟಿ.
ದಕ್ಷಿಣ ಕ. ಏಜಂಟರು—ಪೋಪ್ಯುಲರ್ ಸ್ಟೋರ್ಸ್, ಮಂಗಳೂರು.

ನೋಟೀಸು.

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

O. S. No. 34/1934, R. I. A. 111/1934.

ಕಾಪಿಲ್ ಕುಂಞುಮ್ಮ ಬ್ಯಾರಿ, ಅಬ್ದುಲ್ಲ ಖಾದರ ಬ್ಯಾರಿಗೆ ಮಗ, ಕಾಸರಗೋಡು ತಾಲೂಕು ಪಳ್ಳಿಕೆರೆ ಗ್ರಾಮದಲ್ಲಿರುವವ—ವಾದಿ ಅರ್ಜಿದಾರ.

ಮತ್ತು

1. ಮಹಮ್ಮದ ಕುಂಞುಬ್ಯಾರಿ, ಕಾಪಿಲ್ ಮಹಮ್ಮದ ಬ್ಯಾರಿ ಮಗ. 2. ಅಬ್ದುಲ್ಲ ಬ್ಯಾರಿ, ಮಾಳಿಗೆ ಬಳ್ಸಲ್ ಮೂಸೆ ಬ್ಯಾರಿ ಮಗ. ಕಾಸರಗೋಡು ತಾಲೂಕು ಪಳ್ಳಿಕೆರೆ ಗ್ರಾಮದ ಕೋಟೆಕುಂಜದಲ್ಲಿರುವವರು—ಪ್ರತಿವಾದಿರು. ರೆಸ್ಪಾಂಡೆಂಟರು.

ಇವರೊಳಗೆ

1ನೇ ಪ್ರತಿವಾದಿಯು 2ನೇ ಪ್ರತಿವಾದಿಯ ಹೆಸರಲ್ಲಿ ತಾ. 30–12–1932ರಲ್ಲು ರಿಜಿಸ್ಟ್ರ ಸಿಕಿಂ ಬರೆಕೊಟ್ಟ ಕ್ರಯಚೀಟು ಸಿಂಧು ಯಾ ಮುಂದೂರಾಗತಕ್ಕದ್ದಲ್ಲವೆಂತಲೂ, 1ನೇ ಪ್ರತಿವಾದಿಯ ಸಾಲಗಾರರಾದ ವಾದಿಗೆ ವ ಇತರರಿಗೆ ಬಾಧಿಸತಕ್ಕದ್ದಲ್ಲವೆಂತಲೂ ವಗೈರೆ ಡಿಕ್ಲರೇಶನ್ ಅಪೇಕ್ಷಿಸಿ ವಾದಿಯು ಮೇಲ್ಕಂಡ ದಾವಾ ಮಾಡಿರುವುದಾಗಿಯೂ, 1ನೇ ಪ್ರತಿವಾದಿಯ ಇತರ ಸಾಲಗಾರರ ಕಡೆಯಿಂದ ಸಹಾ ವಾದಿಯು ಈ ವ್ಯಾಜ್ಯ ತಂದುದರಿಂದ ಸದ್ರಿ ಸಾಲಗಾರರ ಬಗ್ಗೆ ಸಹಾ ಸದ್ರಿ ವ್ಯಾಜ್ಯ ನಡಿಸುವರೆ ತನಗೆ ಪರ್ಮಿಶನ್ ಕೊಡಬೇಕಾಗಿ ವಾದಿಯು ಅರ್ಜಿ ದಾಖಲ್ಲು ಮಾಡಿರುವದಾಗಿಯೂ ಸದ್ರಿ ವ್ಯಾಜ್ಯ ವ ಅರ್ಜಿ ಸಹಾ ಇದೇ ಬರುವ ತಾ. 28–2–34ಕ್ಕೆ ತನ್ನಿಗೆ ಇಟ್ಟಿರುವುದಾಗಿಯೂ, ಆ ಕುರಿತು ಆಕ್ಷೇಪವುಳ್ಳವರು ಆ ದಿವಸ ಕೋರ್ಟಿಗೆ ಹ್ಯಾಜರು ಮಾಡಬೇಕಾಗಿಯೂ ಈ ಮೂಲಕ ತಿಳಿಸಲಾಗಿದೆ.

ಕಾಸರಗೋಡು,
೯–೨–೧೯೩೪

K. Rama Varma Raja,
Vakil for Plaintiff.

P. Ahamad
Advocate for Plaintiff

ನೋಟೀಸು.

ಉಡುಪಿ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

ಕ್ರಮ ಸಂಖ್ಯೆ 476/1933.

ಯು. ರಾಮ ಪ್ರಭು ಕೂಡಾ—ವಾದಿರು.

ಮತ್ತು

ನಾರಾಯಣ ಯಾನ ದೇವೇಂದ್ರ ಕಮ್ತಿ ಕೂಡಾ—ಪ್ರತಿವಾದಿರು.

ಇವರೊಳಗೆ

ಸದ್ರಿ ವ್ಯಾಜ್ಯದ ಪ್ರತಿವಾದಿಂಗಳ ಉಡುಪಿ ತಾಲೂಕು ಕೊರಂಗ್ರಪಾಡಿ ಗ್ರಾಮದ ಕೆಮ್ತೂರಲ್ಲಿರುವ ಗೋವರ್ಧನ ಕಮ್ತಿರ ಮಗಂದಿರು 1ನೇ ನಾರಾಯಣ ಯಾನ ದೇವೇಂದ್ರ ಕಮ್ತಿ 2ನೇ ರಾಮಚಂದ್ರ ಕಮ್ತಿ ಸಹ 2 ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—ಪ್ರತಿವಾದಿರು ವಾದಿರಿಗೆ ತಾರೀಕು 15–9–1925ರಲ್ಲು ರಿಜಿಸ್ಟ್ರ ಸಿಕಿಂ ರೂ. 200/-ಕ್ಕೆ ಬರೆಕೊಟ್ಟ ಸ್ಕ್ರೀನೊತ್ತು ಇದರ ಅಸ್ಲು ಮತ್ತು ಒಡ್ಡಿ ಬಾಕಿ ಕೂಡಾ ರೂಪಾಯಿ 317–1–3ನ್ನು ಬರಮಾಡಿಕೊಳ್ಳಲಿಕ್ಕೆ ವಾದಿರು ದಾಖಲ್ಲು ಮಾಡಿದ ಸದ್ರಿ ವ್ಯಾಜ್ಯವು ಅಖೈರ ತನ್ನಿ ಬಗ್ಗೆ ತಾರೀಕು 8–3–34ಕ್ಕೆ ಇಟ್ಟಿರುವುದರಿಂದ ಸದ್ರಿ ದಿವಸಕ್ಕೆ ಉದಾಹರಣೆ ಕೊಡುವಗೋಸ್ಕರ ಸದ್ರಿ ಪ್ರತಿವಾದಿರು ಸ್ವತಹ ಅಥವಾ ವಕೀಲರ ಮುಖಾಂತರ ಸದ್ರಿ ತಾರೀಕಿನ ದಿವಸ ಸದ್ರಿ ಕೋರ್ಟಿನ ಮುಂದೆ ಹಾಜರಾಗಲಿಕ್ಕೆ ತಪ್ಪಿದರೆ ಸದ್ರಿ ವ್ಯಾಜ್ಯವು ಅವರ ಗೈರಹಾಜರಿಯಲ್ಲಿ ತೀರ್ಮಾನವಾಗಲಾದೀತೆಂತ ಸದ್ರಿ ಪ್ರತಿವಾದಿರಿಗೆ ಈ ಮೂಲಕ ಸೂಚಿಸಲಾಗುತ್ತದೆ.

Udipi,
3–2–1934.

H. Keshava Pai,
Vakil for Plaintiffs.

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್.
ಸ್ತ್ರೀಯರಿಗೊಂದು ಮಹಾ ವರ.
ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮುಟ್ಟು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧ ರಕ್ತ, ಮೇರೆ ಪಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.
ಲೋಧ್ರ
ಎರಡು ಸೈಜಿನಲ್ಲಿ ದೊರೆಯುತ್ತದೆ. ರೂ. 3 ಮತ್ತು 1–10–0
ಕೇಸರಿ ಕುಟೀರಂ
ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು.
Sole Agents for West Coast and North Kanara
Wanted Agents in Principal Towns. ಪೋಪ್ಯುಲರ್ ಸ್ಟೋರ್ಸ್,
For terms Apply to:—POPULAR STORES, ರಥಬೀದಿ ಮಂಗಳೂರು.
Mangalore.

ಸ್ತ್ರೀ ಪುರುಷರ ಸಲುವಾಗಿ
ಶಕ್ತಿ ವ ಸ್ಫೂರ್ತಿಕೊಡುವಂತಹ
ಸುಮಧುರ
ಝಂಡು ದ್ರಾಕ್ಷಾಸವ
ಜರೂರು ಉಪಯೋಗಿಸಿರಿ.

ಸ್ತ್ರೀಯರ ಸಲುವಾಗಿ
ಆರೋಗ್ಯ ವ ಶಕ್ತಿವರ್ಧಕ.
ಪ್ರದರಾದಿ ರೋಗಗಳ ಮೇಲೆ
ರಾಮಬಾಣ ಉಪಾಯ.
ಝಂಡು ಅಶೋಕಾರಿಷ್ಟ
ಬೇಗನೇ ಉಪಯೋಗಿಸಿರಿ.

'ZANDU'
ಝಂಡು ಫಾರ್ಮಾಸ್ಯುಟಿಕಲ್ ವರ್ಕ್ಸ್ ಲಿ: ಮುಂಬಾಯಿ.
ಮದ್ರಾಸು ಸಂಸ್ಥಾನದ ಏಜಂಟ್:—ದಾಮೋದರ ಮತ್ತು ಕಂಪೆನಿ, 78 ಜೈನ ಬಜಾರ ರೋಡ್, ಮದ್ರಾಸು.
ಮೈಸೂರು ಪ್ರೊವಿನ್ಸ್ ಏಜಂಟ್:—ಬಿ. ಪ್ರೂಪಟ ಲಾಲ ಕಂಪೆನಿ, ...
ಮಂಗಳೂರು ಏಜಂಟ್:—ಶಾಹಾ ಕಂಪೆನಿ ಡಾಯ್ಮಂಡ್ ಬಿಲ್ಡಿಂಗ್, ಮಂಗಳೂರು.
ಧಾರವಾಡ ಏಜಂಟ್—ದಿ ಧಾರವಾಡ ಫಾರ್ಮಸಿ, ಧಾರವಾಡ.
ಬೇರೆ ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತದೆ.
ಆಯುರ್ವೇದ ಔಷಧಿಗಳ ಸೂಚೀಪತ್ರವನ್ನು ಮುಖ್ಯ ಏಜಂಟರಿಂದ ಪಡಕೊಳ್ಳಿರಿ.

ನಮ್ಮ ಸಲಹೆಯೇ ಪ್ರಾಧಾನ್ಯವಾದದ್ದೆಂದು ತಿಳಿಯಬೇಡಿ.
ಕಲ್ಲಿಕೋಟೆ ಆಸ್ಪತ್ರೆಯ ಚೀಫ್ ಮೆಡಿಕಲ್ ಆಫೀಸರರಾದ ಡಾ|| ಪಿ. ಜಿ. ರಾಮನ್, ಎಂ. ಆರ್., ಸಿ. ಎಸ್. ಇವರು ಬರೆದಿರುವುದನ್ನು ಓದಿ ನೋಡಿ—"ನಾನು ನಿಮ್ಮ ಆಶ್ಚರ್ಯಕರವಾದ ಜೀವಾಮೃತಂ ಟಾನಿಕನ್ನು ನರಗಳಿಗೆ ... ಜೀವಾಮೃತವನ್ನು ದೇಹಶಕ್ತಿ ... ಎಲ್ಲಾ ಸಂದರ್ಭಗಳಲ್ಲೂ ... ನಾನು ಮನಃಪೂರ್ವಕವಾಗಿ ಶಿಫಾರಸು ಮಾಡುತ್ತೇನೆ"
ಜೀವಾಮೃತವು
ನರಗಳಿಗೆ ಶಕ್ತಿ ಕೊಡುತ್ತದೆ. ವೀರ್ಯ ವೃದ್ಧಿಯಾಗುತ್ತದೆ. ಹಸಿವು ಹೆಚ್ಚಿಸುತ್ತದೆ. ರಕ್ತ ವೃದ್ಧಿಯಾಗುತ್ತದೆ.
ಪಂಡಿತ
ಡಿ. ಗೋಪಾಲಾಚಾರ್ಯರವರ
ಜೀವಾಮೃತವು
ಎಲ್ಲಾ ಔಷಧ ಮಾರುವವರಲ್ಲೂ, ಸ್ಟೋರುಗಳಲ್ಲೂ ದೊರೆಯುತ್ತದೆ. (ಸಂಪೂರ್ಣ ವಿವರಗಳಿಗೆ ಇವತ್ತೇ ಬರೆಯಿರಿ)
ಆಯುರ್ವೇದಾಶ್ರಮಂ, ಪೋ. ಬಾಕ್ಸ್ ನಂ. ೫೦೭, ಮದ್ರಾಸು.
ಸೋಲ್ ಏಜಂಟರು:— ಸಿಟಿ ಮೆಡಿಕಲ್ ಮತ್ತು ಜನರಲ್ ಏಜನ್ಸಿ, ... ಪೇಟೆ ಬೆಂಗಳೂರು.
ದಕ್ಷಿಣ ಕನ್ನಡದ ಏಜಂಟರು— ಪೋಪ್ಯುಲರ್ ಸ್ಟೋರ್ಸ್, ಮಂಗಳೂರು. P. No. 104

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು **ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು.**

ಕಸ್ತೂರಿ ಮಿಶ್ರಿತ ದಶಮೂಲಾರಿಷ್ಟ ೧೬ ಔನ್ಸ್ ಬಾಟ್ಲಿ ೧ಕ್ಕೆ ರೂ. 1-8-0. ದ್ರಾಕ್ಷಾಸವ ೧೬ ಔನ್ಸ್ ಬಾಟ್ಲಿ 1ಕ್ಕೆ ರೂ. 1 ಅಶ್ವಗಂಧಾರಿಷ್ಟ ೧೬ ಔನ್ಸ್ ಬಾಟ್ಲಿ ಒಂದಕ್ಕೆ ರೂ. 1-4-0. ಅಬಲಾಮೃತ ೧೬ ಔನ್ಸ್ ಬಾಟ್ಲಿ ೧ಕ್ಕೆ ರೂ 2. ಅಶೋಕಾರಿಷ್ಟ ೧೬ ಔನ್ಸ್ ಬಾಟ್ಲಿ ೧ಕ್ಕೆ ರೂ. 1-4-0. ಜವನಪ್ರಾಶಲೇಹ ೧ ರಾತಿಗೆ ರೂ. 2-8-0. ಅಭಯಾಮಲಕಿ ೧ ರಾತ್ಲಿಗೆ ರೂ 2. ಚಂದ್ರಮುಖ್ (ವಿಷೂಚಿಕೆಗೆ ರಾಮಬಾಣ) ಕಾಲು ಔನ್ಸಿಗೆ ರೂ. 0-5-0. ದಂತಧಾವನ ಚೂರ್ಣ ತೊಲೆ ೧ಕ್ಕೆ 0-1-0. ಕ್ರಿಮಿಘಾತಿನಿ (ದದ್ರು, ಕಜ್ಜಿಗೆ) ಡಬ್ಬಿ ೧ಕ್ಕೆ ರೂ 0-4-0 ಕೃಷ್ಣಾಂಕ ೧ ಔನ್ಸಿಗೆ ರೂ 0-8-0 ಚಿತ್ರಕ (ಮಕ್ಕಳ ಗೃಹಚೇ ರೋಗಕ್ಕೆ ದಿವ್ಯೌಷಧ) ತೊಲೆ ೧ಕ್ಕೆ ರೂ. 0-8-0 ಮಹಾ ಚಿತ್ರಕ ತೊಲೆ ೧ಕ್ಕೆ ರೂ 1-0-0. ಪಿಂಡ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ ರೂ. 0-10-0. ಅಶ್ವಗಂಧಾದಿ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ 0-12-0 ಹಿಮಸಾಗರ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ ರೂ 1-8 0 ಮಹಾಚಂದನಾದಿ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ ರೂ. 1-0-0. ಶ್ರೀ ಗೋಪಾಲ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ ರೂ 3-8-0

ನಮ್ಮ ಔಷಧಗಳು ದೊರೆಯುವ ಸ್ಥಳ:— ಮಂಗಳೂರು—ರಾಘವೇಂದ್ರ ರಂಗ ಪೈ ರಥಬೀದಿ, ಕೆನರಾ ಡಿಸ್ಪೆನ್ಸರಿ ಕೊಡಿಯಾಲಬೈಲ್ ಬೈಂದೂರು—ಕೆ. ಪುಟ್ಟು ಶಾನುಭಾಗ. ಗಂಗೊಳ್ಳಿ—ಜಿ ಸುರೇಂದ್ರ ನಾಯ್ಕ ಕುಂದಾಪುರ—ಕೆ ರಾಮ ಭಟ್ ಡಾಕ್ಟರ್ ಕೆ ಆರ್ ಕಾಮತ್. ಉಡುಪಿ—ಪಿ ಜನಾರ್ದನ ನಾಯಕ್ ಎಂಡ್ ಕೊ., ಪೈ ಫಾರ್ಮಸಿ, ಆರ್ ಎಸ್. ಶೆಣೈ, ರಥಬೀದಿ ಕಾರ್ಕಳ—ಎ ಪಿ ಶೆಣೈ ಕಾಪು—ಡಾಕ್ಟರ್ ಬಿ ಕೆ ಬೇಕಲ ಡಿಸ್ಪೆನ್ಸರಿ ಬಟ್ಕಳ್—ವಾಮನ ನರಸಿಂಹ ನಾಯಕ್. ಬಾರ್ಕೂರು—ಬಿ. ಭಗವಂತ ಮಲ್ಯ, ಆರ್ ಪಿ ಔಷಧಾಲಯ ಬ್ರಹ್ಮಾವರ ಕೆ ವೈಕುಂಠ ಪೈ ಎಂಡ್ ಸನ್ಸ್, ಕೆ ಶೇಷಗಿರಿ ನಾಗಪ್ಪ ಎಂಡ್ ಸನ್ಸ್.

ಎಲ್ಲೆಲ್ಲಿಯೂ ಏಜಂಟರು ಬೇಕಾಗಿದ್ದಾರೆ ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಬಹುದು

ನಾಯಕ್ ಬ್ರದರ್ಸ್, ಶ್ರೀಮದ್ಭುವನೇಂದ್ರ ಮಹೌಷಧಾಲಯ, ಪೋಸ್ಟ್ ಕಟಪಾಡಿ, ದ ಕ.

The Canara Industrial & Banking Syndicate Limited.,

Established in 1925. **Head Office:—Mukunda Nivas, UDIPI**

Branches Mangalore, Payyanur, Brahmavar, Kumta, Karwar, Hubli Honnavar, Bangalore & Cannanore

Authorised Capital Rs. 5,00,000 Subscribed Capital Rs 1 06 300 Paid up Capital Rs 26 300 Issued Capital Rs 2,00,000

STATEMENT OF AFFAIRS OF THE SYNDICATE AS ON 30TH November 1933

Liabilities			Assets		
Paid up Capital	Rs	26,300-0-0	Loans on Land mortgage	Rs	2 71,186—9—2
Reserve & other funds	,,	20 250—0—0	Loans on Valuable Securities		2,29,690— 7—9
Deposits	,,	10,64,121—4—10	Loans on Bills of Exchange Hundis and Promissory Notes		4 73 634— 4—0
Due to Bankers	,,	1,19 606—0—6	Investment on Shares of other Companies		43,575— 0—0
			Investments on Government of Mysore Conversion Loan		50 000—0—0
			On Deposits with other Bankers		1,11 000— 0—0
Bills for Collection	,,	29,283—1—3	Bills for collection (per contra)		29 283— 1—3
Sundries	,,	1,19 281—3—11	Sundries	,,	1 40 794—4—10
			Cash in hand & with Bankers	,	29 677—15—6
Total	Rs	13 78 841 10-6	Total	Rs	13 78,841 10—6

Long and Short term Loans on attractive Schemes are granted

ALL KINDS OF BANKING BUSINESS UNDERTAKEN

Udipi, 7-12-1933.

P A Pal Bros,
Managing Agents.

ಪ್ರಥಮ ಕನ್ನಡ ಮಾತಾಡುವ ಚಲಚಿತ್ರ!

ಮಿಸ್. ತ್ರಿಪುರಾಂಬ
ಮಿಸ್ ರಾಜಂ
ಮಿಸ್ ಲಕ್ಷ್ಮಿ

ಮಿಸ್ಟರ್ ಸುಬ್ಬಯ್ಯ ನಾಯಿಡು
ಮಿಸ್ಟರ್ ನಾಗೇಂದ್ರ ರಾವ್,
ಮಿಸ್ಟರ್ ವೈ. ವಿ. ರಾವ್
ಮಿಸ್ಟರ್ ಮೂರ್ತಿ

ಇವರುಗಳಿಂದ ನಟಿಸಲ್ಪಟ್ಟು

ಮಿಸ್ಟರ್ ವೈ. ವಿ. ರಾವ್, ಇವರಿಂದ ಡೈರೆಕ್ಟ್ ಮಾಡಲ್ಪಟ್ಟು

ಕರ್ಣಾಟಕ ಕವಿಕೇಸರಿ ಬಳ್ಳಾರಿ ನರಹರಿ ಶಾಸ್ತ್ರಿಗಳಿಂದ ಕಥೆಯು ರಚಿಸಲ್ಪಟ್ಟು

ಸೌತ್ ಇಂಡಿಯನ್ ಮೂವಿಟೋನ್‌ರವರು ಕೊಲ್ಹಾಪುರದ ಛತ್ರಪತಿ ಸ್ಟುಡಿಯೋದಲ್ಲಿ ತಯಾರಿಸಲ್ಪಟ್ಟಿರುವರು.

ಪ್ರಸಿದ್ಧ ಪುರಾಣ ಕಥೆ

'ಸತಿ ಸುಲೋಚನ'

ಎಂಬ ಚಿತ್ರವು ಕನ್ನಡ ಮಾತನಾಡುವ ಹಾಡುವ ರೂಪದಲ್ಲಿ ಪ್ರದರ್ಶಿಸಲ್ಪಡುತ್ತದೆ.

ಮಧುರ ಸಂಗೀತ! ಸ್ಪಷ್ಟವಾದ ಧ್ವನಿ! ಇಂಪಾದ ಶ್ರುತಿ!

ಮಂಗಳೂರಿನಲ್ಲಿ ಶೀಘ್ರದಲ್ಲೇ ಪ್ರದರ್ಶನ. ದಿ ಸೌತ್ ಇಂಡಿಯನ್ ಫಿಲ್ಮ್ ಸಪ್ಲೈ ಕಂಪೆನಿ ಬೆಂಗಳೂರು.

WANTED.

Four Organisers to organise the work of the South Indian General Assurance Society, Ltd., in the following places noted below. Capable organisers can expect to have attractive and encouraging terms with sound footing for their future.

(1) South Canara, (2) Mysore, Hassan and Coorg, (3) Kadur, Shimoga, Chitaldroog and Tumkur. (4) Mangalore, Kolar.

For terms and other particulars please apply to—

The Divisional Manager,
The South Indian General Assurance Co. Ltd.
64, 3rd. Cross Road, Srirampur Extn
Malleswaram Post, BANGALORE.

OR

The Managing Agents,
The S. I. G. A. Co. Ltd.
55. Poonamallee High Road, Kilpauk, MADRAS.

[illegible]

ಡಾಕ್ಟರ್ ಗೌತಮರಾವ್
ಕೇಶವರವರ
ಪ್ರೊಸ್ಪರಸ್ ಗುಳಿಗೆಗಳು
[illegible]

ಡಾ. ಗೌತಮರಾವ್ ಕೇಶವ ಅಂಡ್ ಸನ್ಸ್,
[illegible]
[illegible] ಮಂಗಳೂರು.

ಕೊ-ಒಪರೇಟಿವ್ ಸೊಸೈಟಿಗಳಿಗೆ

ಬೇಕಾದ ನಮೂನೆಯ ಎಲ್ಲಾ ವಿಧದ
ಫಾರಂಗಳು, ರಿಜಿಸ್ಟರುಗಳು, ರಶೀದಿ ಪುಸ್ತಕಗಳು,
ಮತ್ತು ಇತರ ಫಾರಂಗಳೂ ಮಾರಾಟಕ್ಕಿವೆ.
ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್.
ರಥಬೀದಿ, ಮಂಗಳೂರು.

ಪಂಡಿತ ಜವಾಹಿರಲಾಲ ನೆಹರೂ ಬಂದಾಗ್ಗೆ ಹುಬ್ಬಳ್ಳಿ ಪ್ರದರ್ಶನದಲ್ಲಿ ಸುವರ್ಣಪದಕ ದೊರೆತ
ಒಂದೇ ಸಮನಾಗಿ ೩೫ ವರ್ಷದ ಅನುಭವದಿಂದ
ಹಿಂದೂಸ್ಥಾನದ ಸಾವಿರಾರು ಜನರಿಂದ ವರ್ಣಿಸಲ್ಪಟ್ಟ ಆಯುರ್ವೇದೋಕ್ತ,
[illegible]

ದ್ರಾಕ್ಷಾಮೃತ

[illegible]

ಬಾಟ್ಲಿ ಬೆಲೆ [illegible] ಪ್ರಸಿದ್ಧ ಕೆಮಿಸ್ಟ ಮತ್ತು ಸ್ಟೋರ್ಸದೊಳಗೆ ಮತ್ತು ಕಿರಾಣಿ ಅಂಗಡಿಯಲ್ಲಿ ಸಿಗುವುದು.

ವ್ಯವಸ್ಥಾಪಕ— ದ್ರಾಕ್ಷಾಮೃತ ಕಾರ್ಯಾಲಯ, [illegible] ಜಿಲ್ಲಾ, (ಬೆಳಗಾಂವಿ)

ಸಿಕ್ಕುವ ಸ್ಥಳ:— ಮಂಗಳೂರು—ಗಜಾನನ ಮೆಡಿಕಲ್ ಹಾಲ್ ಮತ್ತು [illegible] ಬ್ರದರ್ಸ, ಕಾರ್‌ಸ್ಟ್ರೀಟ್. ಕುಂದಾಪುರ—ಕೆ. ಆರ್. ಭಟ್ಟ, ಉಡುಪಿ—ಪೈ ಫಾರ್ಮಸಿ, ಮತ್ತು ಕೆ. ಶೇಷಗಿರಿ ಪೈ. ಕಾರ್ಕಳ—ಎ. ಎ. ಶೆಣೈ. ಪುತ್ತೂರು—ಗೋಪಾಲ ನಾರಾಯಣ ಪೈ ಮತ್ತು ಪೈ ಫಾರ್ಮಸಿ. ಕಾಸರಗೋಡು—ಕೆ. ರಾಮ ನಾಯ್ಕ, ಕೋರ್ಟ್ ರಸ್ತೆ. ಬಂಟವಾಳ— ಬಿ. ಎಚ್. ವಾಸುದೇವ ಪೈ.

2-6-'38

ಶಹಾ ಶಿವಾಜಿ ಹಿಂದೂ ರೆಸ್ಟೋರೆಂಟ್

ಗಣಪತಿ ಹೈಸ್ಕೂಲ್ ರಸ್ತೆ, ಮಂಗಳೂರು (ದ. ಕ.)
ಮಂಗಳೂರಿನ ನೂತನ ಉಪಹಾರ ಗೃಹ.

ಶುದ್ಧ ಜಿನಸುಗಳಿಂದ, ತಾಜಾ ತುಪ್ಪದಿಂದ ತಯಾರಿಸಲ್ಪಡುವ ಮಿಠಾಯಿಗಳು ಇನ್ನೆಷ್ಟೋ ಬಗೆಯ ತಿಂಡಿ ತಿನಸುಗಳು—ಚಹಾ, ಕಾಫಿ, ಕೋಕೋ ಇತ್ಯಾದಿ ಎಲ್ಲ ತರದ ಪಾನೀಯಗಳು

ಅನುಭವಸ್ಥರಿಂದ ತಯಾರಿಸಲ್ಪಡುವುವು.
[illegible]

ಒಮ್ಮೆ ದಯಮಾಡಿಸಿ, ಪರೀಕ್ಷಿಸಿ
ತೃಪ್ತಿ ಪಡೆಯಿರಿ.

[illegible]

ನಿಮಗೆ ಭಕ್ತಿ, ಜ್ಞಾನಗಳು ಬೇಕೋ? ಹಾಗಾದರೆ ಶ್ರೀ ಭಾಗವತವನ್ನು ಓದಿರಿ.

ಕನ್ನಡ ಟೀಕಾತಾತ್ಪರ್ಯಾದಿ ಸಹಿತ

ಶ್ರೀ ಭಾಗವತ ಮಹಾಪುರಾಣ.

ಆಸ್ಥಾನ ಮಹಾವಿದ್ವಾನ್ ಮೋಟಗಾನಹಳ್ಳಿ ರಾಮಶೇಷಶಾಸ್ತ್ರಿಗಳಿಂದ ಪ್ರಕಟಿಸಲ್ಪಟ್ಟುದು.
ಮತತ್ರಯಾನುಸಾರವಾಗಿ ಅನೇಕ ವಿಷಯಗಳೊಡನೆ ಕನ್ನಡಿಸಲ್ಪಟ್ಟ ಈ ಗ್ರಂಥವು ಮೊದಲಿನಿಂದ ಹತ್ತು ಸ್ಕಂಧಗಳು 7 ಸಂಪುಟಗಳಲ್ಲಿ ಪ್ರಚಾರವಾಗಿರುವುದು ಸರಿಯಷ್ಟೆ. ಈಗ 11-12ನೇಯ ಸ್ಕಂಧಗಳುಳ್ಳ ಎಂಟನೆಯ ಸಂಪುಟವು ಪೀಠಿಕಾ ವಿವರಣೆಗಳೊಡನೆ ಜಕರಿಗೆ ಸಿದ್ಧವಾಗಿದೆ. ಹಿಂದಣ ಗ್ರಾಹಕ ಮಹಾಶಯರೂ ದೇಶಬಾಂಧವರೂ ಸಹಾ ಪ್ರೋತ್ಸಾಹಿಸಬೇಕೆಂದು ಪ್ರಾರ್ಥನೆ.

1ನೇಯ ಸಂಪುಟ (1–2ನೇ ಸ್ಕಂಧಗಳು)	3—4—0	7ನೇಯ ಸಂಪುಟ (ದಶಮ ಉತ್ತರ ಭಾಗ)	4—8—0
2 ,, ,, (3ನೇಯ ಸ್ಕಂಧ)	3—12—0	8 ,, ,, (11, 12ನೆಯ ಸ್ಕಂಧಗಳು ಪೀಠಿಕೆ ಸಹ)	4—8—0
3 ,, ,, (4 ,, ,,)	3—8—0	ಶ್ರೀ ಭಾಗವತ ಪುರಾಣ ವಿಮರ್ಶ ಮಾತ್ರ	0—8—0
4 ,, ,, (5-6ನೇಯ ಸ್ಕಂಧಗಳು)	4—0—0	ಕರ್ನಾಟಕ ಮುದ್ರಾರಾಕ್ಷಸ ನಾಟಕ	1—4—0
5 ,, ,, (7, 8, 9 ಸ್ಕಂಧಗಳು)	5—8—0	(ಇದೇ ಗ್ರಂಥಕರ್ತರಿಂದ ರಚಿಸಲ್ಪಟ್ಟುದು)	
6 ,, ,, (ದಶಮ ಪೂರ್ವಭಾಗ)	5—0—0		

ಈ ಬೆಲೆಗಳಿಗೆ ಟಪ್ಪಾಲು ಹಾಕಿಸಲು ಸೇರಿಲ್ಲ. ಹೆಚ್ಚು ವಿಷಯಗಳಿಗೆ ಕಳಗಿನ ವಿಳಾಸಕ್ಕೆ ಬರೆಯಿರಿ.

ಎನ್. ಆರ್. ಶ್ರೀಕಂಠ ಶಾಸ್ತ್ರಿ, ಭಾರತೀ ಭವನಂ, ಚಾಮರಾಜಪೇಟೆ, ಬೆಂಗಳೂರು ಸಿಟಿ.

ಬಹುಕಾಲ ಬಾಳುವ ವಸ್ತ್ರಗಳು

ಅಸಂಖ್ಯಾತರಾದ ನಮ್ಮ ಗಿರಾಕಿಗಳ ಬೇಕೆ ಮತ್ತು ಅನುಕೂಲತೆಗಳನ್ನು ಇದೇ ತುಲ್ಯಾಲುಕತ ಮಾನದಿಂದ ತಿಳಿದು, ಅವರಿಗೆ ಸುಲಭ ದರದ ಯೋಗ್ಯ ಹಾಗೂ ಬಹು ಕಾಲ ಬಾಳುವ ಸರ್ವ ತರದ ಉಡುಪುತೊಡುಪುಗಳನ್ನು ಒದಗಿಸುವ ನಮ್ಮ ಎರಡು ತಲಾಂತರದ ಅನುಭವವು ಮುಂದಕ್ಕೂ ಸಂತೃಪ್ತಿಯನ್ನೇ ಕೊಡುವುದಲ್ಲವೇ?

ಸ್ವದೇಶೀ

ಕಾರ್ಖಾನೆಗಳಲ್ಲಾದ ನೂಲು ಮತ್ತು ಕೈಮಗ್ಗದ ವಸ್ತ್ರ, ಹೊದಿಕೆಗಳೂ, ಬೆಡ್‌ಶೀಟ್, ಬಾತ್ ಟುವಾಲುಗಳೂ ಧೋತಿ, ಸೀರೆ ಪೈರಾಣು—ಚಕ್ಕು—ಚೀಟು ಇತ್ಯಾದಿ

ಎಲ್ಲವೂ ಯಾವಾಗಲೂ ಮಾರಾಟಕ್ಕಿವೆ.

ಶ್ರೀನಿವಾಸ ರಂಗಪೈ,
[ಸಾಹುಕಾರ ಬಜಾಲ್]
ರಥಬೀದಿ, ಮಂಗಳೂರು.

Srinivasa Ranga Pai,
Representatives for South Canara and Malabar.
For— A. & F. Harvey,
Managers: Madura Mills Co, Ltd.

EDITED, PRINTED & PUBLISHED BY V. S. KUDVA AT THE SHARADA PRESS, MANGALORE.

[illegible]

ಸ್ವದೇಶಾಭಿಮಾನಿ.

(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೭ರಲ್ಲಿ ಸ್ಥಾಪಿತವಾದುದು.)

ಪ್ರತಿ ಶುಕ್ರವಾರವು ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರಕ್ಷೈರ್ಮಹಾರ್ಘೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥

ದೊರೆಯಲನುಪಮರತ್ನಗಳು ಸಾ, । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ ಮುಕ್ತಿ ವಿಶ್ವವ ಸುಡುತ ಬರುತಿರುವ ॥

ಗರಳಕಳವಳಂಜಿದರೆ ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ । ತೆರಳ ಬಲ್ಲರೆ ಕೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

(Oldest Kanarese Weekly in South Kanara)

ಪುಸ್ತಕ ೨೮. | ಮಂಗಳೂರು, ತಾ ೨೩ನೇ ಶುಕ್ರವಾರ ಫೆಬ್ರವರಿ ೧೯೩೪ | (23 – 2 – '84) | ಸಂಚಿಕೆ ೮

THE CANARA BANKING CORPORATION, UDIPI, LTD.

(Incorporated in British India)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI, S K — **Branches:—Coondapoor, Mangalore, Shimoga & Madras.**

ಹೆಡ್ ಆಫೀಸು—ಉಡುಪಿ, ದಕ್ಷಿಣ ಕನ್ನಡ — ಶಾಖೆ—ಕುಂದಾಪುರ, ಮಂಗಳೂರು, ಶಿವಮೊಗ್ಗ ಮತ್ತು ಮದ್ರಾಸು.

Authorised Capital Rs. 3,50,000- — Paid up Capital Rs. 2,25,000-

ನಿಯಮಿತ ಮೂಲಧನ ರೂ. 3,50,000- ಶಂಡಾ ಪಾಲಿಕಲ್ಲಿ ಅರ್ಪಿಸಿದ ವ ಎಕ್ಕಿದ ಮೂಲಧನ ರೂ. 2,25,000-

STATEMENT OF ASSETS & LIABILITIES AS ON 31ST JANUARY, 1934.

	Capital and Liabilities.			Property and Assets	
1	Paid up Capital	Rs. 2,25,000-0 0	1	Bank Premises, Buildings, Furniture etc Rs.	65 457-10- 0
2	Reserve and other funds	„ 2,34,662-10 11	2	Investment on Gvt securities	„ 4,44,168- 5- 6
3	Deposits	„ 22 56,659 4 10	3	Authorised Investments	„ 23,00,980-6- 11
4	Due to Bankers	„ 82°79 7 4	4	Bills for collection	13,596-12 7
5	Sundries	„ 1,00227 11 5	5	Sundries	„ 49,501 13- 8
6	Bills per contra	13,596 12 7	6	Cash on hand & with bankers	„ 45 521, 4- 5
	Total	29,19,225 15 1		Total	29,19,225-15-1

UDIPI 6—2—'34.

N. ANANDA RAO
Manager,

(Regd.)

ಅಮೃತಾಂಜನ.

ಇದು ಕೆಟ್ಟ ಶಿರೋವೇದನೆ, ಸಪ್ಪೆಕೆಡಿಸುವ ವಾತ, ಧಾತಿ ನೋವು, ವಿಶೇಷ ಉಳುಕು, ಅಸಹನೀಯ ಹಲ್ಲುನೋವು, ವಿಪರೀತ ಛಾಯ ಟಕು ಶೀತ, ಸಹಿಸಲಸದಳವಾದ ಚಳಿ, ಕೈಕಾಲು ಮರಗಟ್ಟುವುದು, ಲುಂಬಾಗೊ ಮೊದಲಾದ ಎಲ್ಲಾ ತರದ ಬೇನೆಗಳನ್ನೂ ಅತೀ ಕ್ಷಿಪ್ರದಲ್ಲೇ ಗುಣ ಪಡಿಸುತ್ತದೆ. ಎಲ್ಲೆಲಿಯೂ ಮಾರಲ್ಪಡುತ್ತಿದೆ.

ರಿಂಗ್‌ವರ್ಮ್ ಮುಲಾಮು— ಇದು ರಿಂಗ್‌ವರ್ಮನ್ನೂ ಕಜ್ಜಿಯನ್ನೂ ಇನ್ನಿತರ ಚರ್ಮರೋಗಗಳನ್ನೂ, ಮೂರು ಸಲಮುಟ್ಟಿಸುವುದ ರೊಳಗೆ ಗುಣಪಡಿಸುತ್ತದೆ.

ಡಬ್ಬಿ 1ಕ್ಕೆ 6 ಆಣೆ ಡಜನಿಗೆ ರೂ. 8—8—0. ಅಂಚೆವೆಚ್ಚ ಪ್ರತ್ಯೇಕ.

ಅಮೃತಾಂಜನ ಡಿಪೋ,

ಮದರಾಸು — ಮತ್ತು — ಬೊಂಬಾಯಿ.

ಬೊಂಬಯಿ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

ಸ್ಥಾಪಿತವಾದುದು ಬೊಂಬಾಯಿ. 1908ರಲ್ಲಿ.

ಚೆಯರ್‌ಮನ್—ಸರ್. ಲಲ್ಲೂಭಾಯಿ ಶ್ಯಾಮಲದಾಸ್ ಕೆಟಿ. ಸಿ. ಐ. ಇ. ಜೆ ಪಿ.

ಜೀವವಿಮೆಯ ಪದ್ಧತಿಯಲ್ಲಿ ಅತ್ಯುತ್ಕೃಷ್ಟವಾಗಿರುವ ಎಲ್ಲ ಸೌಕರ್ಯಗಳನ್ನೂ ಈ ಸಂಸ್ಥೆಯು ಒದಗಿಸಿ ಕೊಡುತ್ತದೆ- ಕಾಲೋಚಿತವಾದ ಆವಶ್ಯಕತೆಗಳಿಗೊಪ್ಪುವ ಸರ್ವೋತ್ತಮವಾದ ಯೋಜನೆಗಳು! ಸ್ತ್ರೀಯರ ಜೀವವಿಮೆಯನ್ನೂ ಸ್ವೀಕರಿಸಲಾಗುತ್ತದೆ.

ಸಂಯುಕ್ತ ಜೀವನ ವಿಮಾ ಪದ್ಧತಿಯು ಇದರದೊಂದು ವೈಶಿಷ್ಟ್ಯವೇ!

ಏಜನ್ಸಿಯ ನಿಯಮಗಳು ಬಹಳ ಉದಾರ! ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ:— ಯೋಗ್ಯ ಗೃಹಸ್ಥರಿಗೆ ಅತ್ಯುತ್ತಮ ಸಂಬಳ!

ಕೊಟ್ಟಿಕಾರ್ ಬ್ರದರ್ಸ್, ಮದ್ರಾಸು ಶಾಖೆಯ ಕಾರ್ಯದರ್ಶಿಗಳು ಮತ್ತು ಬೊಂಬಯಿ ನಗರಕ್ಕೂ, ನಗರದ ಆಸುಪಾಸಿಗೂ ಮುಖ್ಯ ಏಜೆಂಟರುಗಳು.

ಆಫೀಸುಗಳು:—

ಮದ್ರಾಸು.	ಬೆಂಗಳೂರು.	ಮಂಗಳೂರು.	ಬೊಂಬಯಿ.	[illegible]
ಪೋಸ್ಟ್ ಬಾಕ್ಸ್ ನಂಬ್ರ 337. ಮೌಂಟ್ ರೋಡ್.	ವಿಶ್ವೇಶ್ವರಪುರಂ ಸರ್ಕಲ್ ಬೆಂಗಳೂರು ಸಿಟಿ.	ಕಾರ್ಪೋರೇಶನ್ ಬಿಲ್ಡಿಂಗ್, ಕಾರ್‌ಸ್ಟ್ರೀಟ್.	ಇಂಪೀರಿಯಲ್ ಬಿಲ್ಡಿಂಗ್ ಲಾಹರ್ ಚಾಲ್.	ಸ್ಟೇಶನ್ ಇಂಡಿಯು.

A FRESH CONSIGNMENT ARRIVED.

UNEQUAL QUALITY——————EXCEPTIONAL PRICE

A TIRE THAT SAVES YOU REPUTATION AND MONEY

The Canara Public Conveyance Co., Ltd.

MANGALORE.

ಅನುಕ್ರಮಣಿಕೆ.

ಅಗ್ರಲೇಖ
ಮದ್ರಾಸು ಸರಕಾರದ ಬಜ್ಜೇಟು, ಸ್ಫುಟವಿಚಾರಗಳು ೩
ಕೋಟೆಗಳು, ೪
ವರ್ತಮಾನ ಸಂಗ್ರಹಗಳು ೧೧
ಸ್ಯಾಟನ ಓಪನ್ ಲೆಟರ್ ೫
ವಿವಿಧ ಸಮಾಚಾರಗಳು ೧೧
ಹಳ್ಳಿಯ ಕಣ್ಣು—ಮಂಗಳೂರು, ಕಾಸರಗೋಡು, ಕುಂದಾಪುರ, ಉಡುಪಿ, ಸುರತ್ಕಲ್ ೯
ಪತ್ರವ್ಯವಹಾರ ೪
ಮೂರೆ ಮೂಲೆಗಳಿಂದ ೬
ಪಂಡಿತ ಜವಾಹರಲಾಲರಿಗೆ ಎರಡು ವರ್ಷಗಳ ಸಾದಾ ಸಜೆ! ೩
ಇನ್ನಾದರು ಇದ್ದ ಹಾಗೆ! ೧೦

ಸ್ವದೇಶಾಭಿಮಾನಿ.

ಶು. ೨೩ನೇ ಶುಕ್ರವಾರ ಫೆಬ್ರವರಿ ೧೯೩೪.

ಮದ್ರಾಸು ಸರಕಾರದ ಬಜ್ಜೇಟು

ಮದ್ರಾಸು ಸರಕಾರದ ಅರ್ಥಸಚಿವರಾದ ಸರ್ ಎಚ್ ಜಿ ಸ್ಟೋಕ್ಸರವರು ಮದ್ರಾಸಿನ ಕಳೆದ ಎರಡು ವರ್ಷಗಳ ಆರ್ಥಿಕ ಪರಿಸ್ಥಿತಿಯನ್ನೂ, ಬರುವ ವರ್ಷದ ಆಯವ್ಯಯದ ಅಂದಾಜು ಪಟ್ಟಿಯನ್ನೂ ಕಳೆದ ೨೦ನೇ ತಾರೀಕಿನ ದಿನ ಕೌನ್ಸಿಲಿನ ಮುಂದಿಟ್ಟರು. ಸರ್ ಸ್ಟೋಕ್ಸರು ಕೌನ್ಸಿಲ್ ಮುಂದೆ ಇವುಗಳನ್ನು ವಿವರಿಸಿ ಒಂದು ಘಂಟೆ ಭಾಷಣವನ್ನು ಕೂಡ ಮಾಡಿರುವರು. ಸನ್ ೧೯೩೨–೩೩ರಲ್ಲಿ ೧೬,೦೩,೮೯ ಲಕ್ಷ ರೂಪಾಯಿ ಆಯವೂ ೧೫,೮೦,೭೮ ವ್ಯಯವೂ ೭೭,೨೧ ಉಳಿತಾಯವೂ ಇದೆಯೆಂದೂ ೧೯೩೩–೩೪ರಲ್ಲಿ ೧೬,೨೬,೨೭ ಆಯವೂ, ೧೬,೨೬,೬೬ ವ್ಯಯವೂ ೬೧ ಉಳಿತಾಯವೂ ಇದೆಯೆಂದೂ, ೧೯೩೪–೩೫ರಲ್ಲಿ ೧೬,೪೩,೬೬ ಆಯವೂ ೧೬,೩೮,೧೭ ವ್ಯಯವೂ ೪೪ ಉಳಿತಾಯವೂ ಆಗಬಹುದೆಂದೂ ಅವರು ತೋರಿಸಿದರು ಅಲ್ಲದೆ ಮದ್ರಾಸಿನ ಆರ್ಥಿಕ ಪರಿಸ್ಥಿತಿಯು ಕಠಿಣ ಸ್ಥಿತಿಯಿಂದ ಉದ್ಧಾರವಾಗಿದೆಯೆಂದೂ, ಈ ಉಳಿತಾಯದೊಡನೆ ಸರಕಾರವು ಇನ್ನು ಧೈರ್ಯಗೊಳ್ಳಬಹುದೆಂದೂ ಸೂಚಿಸಿದ್ದಾರೆ. ಅದೇ ಸಮಯದಲ್ಲಿ ಅವರು ಒಂದೇ ಸವನೆ ಸರಕಾರವು ಅತೀ ಸಮೃದ್ಧವಾದ ಪರಿಸ್ಥಿತಿಗೆ ಬಂದೀತೆಂದು ಯೋಚಿಸಬೇಕಾಗುವುದಿಲ್ಲವೆಂದೂ, ಮುಂದಿನ ಕೆಲಸಗಳಲ್ಲಿ ಜಾಗ್ರತೆಯು ಅವಶ್ಯವಿದೆಯೆಂದೂ, ಲೋಕ ವಿಸ್ತಾರವಾದ ವ್ಯಾಪಾರದ ಮತ್ತು ವೃತ್ತಿಯ ದುಃಸ್ಥಿತಿಯು ಇನ್ನೂ ಕೊನೆಗಾಣಲಿಲ್ಲವೆಂದೂ ಹೇಳಲು ಮರೆಯಲಿಲ್ಲ.

ಮದ್ರಾಸು ಸರಕಾರದ ಆರ್ಥಿಕ ಪರಿಸ್ಥಿತಿಯು ತುಂಬಾ ಸುಧಾರಣೆಗೆ ಬಂದದೆ ಎನ್ನಲು ನಮಗೂ ಸಂತೋಷವಾಗುತ್ತದೆ ಆದರೆ ಈ ಸುಧಾರಣೆಯು ಯಾವ ರೀತಿಯಲ್ಲಿ ಆಗಿಯದೆಯೆಂದು ನೋಡಿದ್ದಲ್ಲಿ ಸರ್ ಸ್ಟೋಕ್ಸರನ್ನಾಗಲೀ ಮದ್ರಾಸು ಸರಕಾರವನ್ನಾಗಲೀ ಅಭಿನಂದಿಸುವ ವಿಷಯವು ಇದರಲ್ಲಿ ಇರುವುದಿಲ್ಲವೆಂಬುದು ತನ್ನಷ್ಟಕ್ಕೆ ತೋರಿಬರುವುದು. ಏಕೆಂದರೆ, ಸರಕಾರದ ಯಾವ ಇಲಾಖೆಗಳಲ್ಲಿ ಹೋದರೂ, ಜನತೆಯ ಹಿತದ ಕೆಲಸಗಳನ್ನು ಮಾಡುವ ಬಗ್ಗೆ ದುಡ್ಡಿನ ಅವಶ್ಯವಿದ್ದಾಗ ದುಡ್ಡಿಲ್ಲವೆಂಬ ಒಂದೇ ಘಂಟಾನಾದವು ಕೇಳಿಬರುವುದು. ಹಾಗೆಂದು, ಸರಕಾರಿ ನೌಕರರ ಸಂಬಳದ ಕಡಿತವನ್ನು ತೆಗೆದು ಹಾಕಿದುದನ್ನು ಸಮರ್ಥಿಸುವ ರೀತಿಯಂತೆಯೇ ಜನತೆಗೆ ಅವಶ್ಯವಿಲ್ಲದ ಸರಕಾರೀ ಖರ್ಚುಗಳಿಗೆ ದ್ರವ್ಯಾಭಾವವು ಇದ್ದಂತೆ ತೋರುವುದಿಲ್ಲ. ವಿದ್ಯಾ ವೈದ್ಯಕೀಯ ಸಹಾಯಗಳು ಕೆಲವು ವರ್ಷಗಳ ಹಿಂದೆ ಇದ್ದಂತೆ ಇವೆಯಲ್ಲದೆ ಅವು ಪ್ರಕೃತದ ಲೋಕ ಸುಧಾರಣೆಗೆ ಸರಿಯಾಗಿ ಸುಧಾರಣೆ ಹೊಂದಿರುವುದಿಲ್ಲ.

ಸರಕಾರಿ ನೌಕರರ ಸಂಬಳದ ಕಡಿತದ ವಿಷಯದಲ್ಲಿ ಬಹಳ ಉತ್ಸಾಹದಿಂದ ಅರ್ಥ ಸಚಿವರು ಮಾತನಾಡಿದ್ದಾರೆ ಆದರೆ ಸಮಗ್ರಲೋಕದ ಜನರೇ ಸಂಕಟದಲ್ಲಿರುವಾಗ ಸರಕಾರಿ ನೌಕರರೂ ಜನತೆಯೊಡನೆ ಸಹಕರಿಸಿದ್ದಲ್ಲಿ ಸರಕಾರಕ್ಕೆ ಒಂದು ಗೌರವವೂ ಜನತೆಗೆ ತಮ್ಮ ಸಂಕಷ್ಟಗಳಲ್ಲಿ ಒಂದು ಸಮಾಧಾನವೂ ಆಗುತ್ತಿತ್ತು. ಸಂಬಳದ ಕಡಿತವು ಸಂದಿಗ್ಧ ಸಮಯವನ್ನು ಹಾರಗಾಣಿಸಲಿಕ್ಕೆ ಮಾತ್ರವಲ್ಲದೆ ನಿತ್ಯದ ಆಯವ್ಯಯಗಳನ್ನು ಸರಿದೂಗಿಸಲಿಕ್ಕಲ್ಲ, 1930-31ರಲ್ಲಿ ಸರಕಾರಕ್ಕೆ ೧೦೫ ಲಕ್ಷ ವ್ಯಯಾಧಿಕ್ಯವಿತ್ತು, ಈಗ ಉಳಿತಾಯವೇ ಇದೆ, ಆದುದರಿಂದ ಸಂಬಳದ ಕಡಿತವನ್ನು ಕೊನೆಗಾಣಿಸುವುದು ಅಗತ್ಯವೆಂದು ಸರ್ ಸ್ಟೋಕ್ಸರು ಹೇಳಿದರು. ಆದರೆ ಸರಕಾರದ ಆಯವ್ಯಯದ ಸಂಖ್ಯೆಯೇ ಸಮಯದ ಸಂದಿಗ್ಧತೆಯನ್ನು ತೋರಿಸುವುದೇ? ದವಸಗಳ ಬೆಲೆ ಇಳಿಯುತ್ತಲೇ ಇದೆಯಲ್ಲದೆ ಏರುವುದಿಲ್ಲ, ನಿರುದ್ಯೋಗದ ಸಮಸ್ಯೆಯು ಬೆಳೆಯುತ್ತಲೇ ಇದೆಯಲ್ಲದೆ ಇಳಿಯುವುದಿಲ್ಲ, ಮಳೆಯು ಕೂಡ ತೃಪ್ತಿಕರವಿಲ್ಲ, ಕೈಗಾರಿಕೆಗಳು ಮುರಿಯುತ್ತಿವೆ, ರಫ್ತಿನ ಸಾಮಗ್ರಿಗಳ ಚಲಾವಣೆಯು ಕಡಿಮೆಯಾಗಿದೆ, ಆಮದಾದ ವಸ್ತುಗಳು ದೇಶೀಯ ವಸ್ತುಗಳೊಡನೆ ಮೇಲಾಟ ನಡೆಸುವುದು ಇನ್ನೂ ಹೆಚ್ಚಾಗುತ್ತಾ ಬಂದಿದೆ, ಈ ಪರಿಸ್ಥಿತಿಯು ಸಂದಿಗ್ಧ ಸಮಯದ ಲಕ್ಷಣಗಳಲ್ಲದಿದ್ದರೆ ಬೇರಾವುದು ಸಂದಿಗ್ಧ ಸಮಯವಾಗಿದೆ?

ಕೆಲವು ತೀರ್ವೆಯನ್ನು ಕಾಯಂ ಮಾಫಿ ಮಾಡಿಯದಾಗಿಯೂ, ಕೆಲವು ತಾತ್ಕಾಲಿಕ ಅಮಾನತು ಮಾಡಿದ್ದಾಗಿಯೂ ಕೇಳಿ ಸಂತೋಷವಾಯಿತು ಇನ್ನೂ ಹೆಚ್ಚು ಮಾಫಿ ಮಾಡುವುದರ ವಿಷಯದಲ್ಲಿ ಅರ್ಥ ಸಚಿವರು ಹೇಳಿದ ಮಾತುಗಳೊಡನೆ ನಾವು ಒಪ್ಪಲಾರೆವು ಅವರ ಭಾಷಣದ ಒಂದು ಮುಖ್ಯ ವಿಶೇಷವೇನೆಂದರೆ,-ಅಂತಹ ಹೆಚ್ಚಿನ ಮಾಫಿಯ ಅವಶ್ಯಕತೆಯು ಇಲ್ಲವೆಂದು ಅವರು ಹೇಳಿಲ್ಲ, ಅರ್ಥಾತ್ ಅಂತಹ ಅವಶ್ಯಕತೆಯು ಇದೆಯೆಂದು ಅವರೂ ಒಪ್ಪುವರೆಂದು ಅವರ ಭಾಷಣದಿಂದ ಊಹಿಸಬಹುದಾಗುತ್ತದೆ ಆದರೆ, ಹಾಗೆ ತೀರ್ವೆ ಮಾಫಿ ಮಾಡಿದರೆ, ಒಟ್ಟೊಟ್ಟು ರೈತನಿಗೆ ಸರಾಸರಿ ರೂ ೧–೪–೦ರಿಂದ ಹೆಚ್ಚಾದರೆ ೨–೮–೦ರ ವರೆಗೆ ಮಾತ್ರವೇ ಪ್ರಯೋಜನವಾಗಬಹುದೆಂದೂ, ಆದರೆ ಹಾಗೆ ಮಾಫಿ ಕೊಟ್ಟಲ್ಲಿ, ರೈತರಿಗೆ ಸರಕಾರವು ನೀರಾವರಿ ಮತ್ತಿತರ ಮೂಲಕ ಕೊಡುತ್ತಿರುವ ಕೆಲಸಗಳಿಗೆ ದ್ರವ್ಯಾಭಾವ ಉಂಟಾಗಿ ಅವುಗಳನ್ನು ನಿಲ್ಲಿಸಬೇಕಾಗುವುದೆಂದೂ, ಹೀಗೆ ಇವುಗಳನ್ನು ನಿಲ್ಲಿಸಿದರೆ ರೈತರಿಗೆ ಉಂಟಾಗುವ ನಷ್ಟವು ತೀರ್ವೆ ಮಾಫಿಯಿಂದಾಗುವ ಲಾಭಕ್ಕಿಂತಲೂ ಹೆಚ್ಚಾಗಬಹುದೆಂದೂ, ಆದುದರಿಂದ ತೀರ್ವೆ ಮಾಫಿಯು ಪ್ರಯೋಜನವಿಲ್ಲವೆಂದೂ, ಅರ್ಥ ಸಚಿವರು ಬಹಳ ದೀರ್ಘವಾಗಿ ತರ್ಕಿಸಿರುವರು ಆದರೆ ರೈತರ ಸಂಕಷ್ಟ ನಿವಾರಣೆಯೇ ಸರಕಾರದ ಉದ್ದೇಶವಾಗಿದ್ದು, ಅವರಿಗೆ ಸರ್ವ ತರದ ಸಹಾಯಗಳನ್ನು ಕೊಡುವುದು ಸರಕಾರದ ಕರ್ತವ್ಯವಾಗಿದೆ ನಮ್ಮ ದೇಶವು ಮುಖ್ಯವಾಗಿ ರೈತರ ದೇಶ, ಅವರ ಅಸ್ತಿತ್ವವೇ ಸಂದೇಹದ ಸ್ಥಿತಿಗೆ ಬಂದಿದೆ ಅಂತಹ ಸಮಯದಲ್ಲಿ ತೀರ್ವೆ ಮಾಫಿ ಕೊಡುವುದೂ ರೈತರ ಹಿತದ ಕೆಲಸಗಳನ್ನೂ ಮಾಡುವುದೂ ಸರಕಾರದ ಕರ್ತವ್ಯವಿದೆ ಈ ಬಗ್ಗೆ ದ್ರವ್ಯಾಭಾವವುಂಟಾದಲ್ಲಿ ಇತರ ರೀತಿಯಲ್ಲಿ ಉಳಿತಾಯವನ್ನು ಹೆಚ್ಚಿಸಲು ಯತ್ನಿಸಬೇಕು ಇದು ಅಸಾಧ್ಯವೆಂದು ನಾವು ನೆನಸುವುದಿಲ್ಲ

ಸರಕಾರವು ಈ ತರ್ಕದಿಂದಲೇ ತೃಪ್ತವಾಗದೆ, ಮುಂದಿನ ಸರಕಾರ ಬದಲಾವಣೆಯನ್ನೂ ಉದ್ದೇಶಿಸಿರುತ್ತದೆ "ನಾವು ಈಗ ಆದಾಯವನ್ನು ಹೆಚ್ಚಿಸದೆ, ಖರ್ಚನ್ನು ತಗ್ಗಿಸದೆ, ವ್ಯಯಾಧಿಕ್ಯವನ್ನು ಹೆಚ್ಚಿಸಿ ಸರಕಾರವನ್ನು ಪ್ರಾಂತಿಕ ಸ್ವಾತಂತ್ರ್ಯ ಬಂದಾಗ ನಿಮಗೆ ವಹಿಸಿಕೊಟ್ಟರೆ ನಿಮಗೂ ಅದನ್ನು ನಡೆಯಿಸುವುದು ಕಷ್ಟವಾದೀತು" ಎಂದು ನಮ್ಮ ಸಹಾಯವನ್ನೂ ಅರ್ಥ ಸಚಿವರು ಸೂಚಿಸುತ್ತಾರೆ ಆದರೆ ಪ್ರಾಂತಿಕ ಸ್ವಾತಂತ್ರ್ಯವು ಬರುವುದು ಯಾವಾಗ, ಯಾವ ತರದ್ದು, ಯಾವ ರೀತಿಯಲ್ಲಿಯಲ್ಲಿ, ಯಾರು ಸ್ವೀಕರಿಸಬಹುದು ಇತ್ಯಾದಿ ಇನ್ನೂ ಸ್ಥಿರವಾಗಲಿದೆ; ಅಲ್ಲದೆ ಕಷ್ಟೀಭೆಯಿಂದ ತುಂಬಿದ ದೇಶವನ್ನು ನಮ್ಮ ಕೈಯಲ್ಲಿ ಕೊಟ್ಟೇನು ಪ್ರಯೋಜನವೆಂದೂ ಆಲೋಚಿಸಲಿದೆ

ಹಾಗೂ ಸರಕಾರದ ಅಂದಾಜು ಪಟ್ಟಿಯು ತಾತ್ಕಾಲಿಕವಾಗಿ ಸಮಾಧಾನಕರವಿದ್ದರೂ, ಪ್ರಾಂತ್ಯದ ಮುಂದಿನ ಪ್ರಗತಿಯನ್ನು ಲಕ್ಷಿಸಿದ್ದಲ್ಲಿ, ಹೆಚ್ಚು ಹಾನಿಯನ್ನುಂಟುಮಾಡುವಂತಹುದಾಗಿದೆ ಎಂದು ಕಂಡುಬರುವುದು

ಸ್ಫುಟವಿಚಾರಗಳು.

ಸೆಕೆಂಡರಿ ಟ್ರೈನಿಂಗ್ ಶಾಲೆ ಈ ಶಾಲೆಯ ರಜತೋತ್ಸವವು ಕಳೆದ ರವಿವಾರ ಶ್ರೀಮಾನ್ ಎ ಬಿ ಶೆಟ್ರಿ ಅಧ್ಯಕ್ಷತೆಯಲ್ಲಿ ಗವರ್ನಮೆಂಟ್ ಕೊಲೇಜಿನಲ್ಲಿ ಜರಗಿತು ಇಪ್ಪತ್ತೈದು ವರುಷಗಳ ಹಿಂದೆ ನಮ್ಮೂರ ಸೆಕೆಂಡರಿ ಉಪಾಧ್ಯಾಯರು ತರಬೇತಿಗಾಗಿ ಕಲ್ಲಿಕೋಟೆಗೆ ಹೋಗಬೇಕಾಗಿದ್ದಿತು. ಅಲ್ಲಿ ಪಾಠ ಕಲಿತು ಪ್ರತ್ಯಕ್ಷ ಬೋಧೆ ಮಾಡುವುದಕ್ಕೂ ತಮ್ಮವರೊಡನೆ ಸೇರಿರುವುದಕ್ಕೂ ಸಂಕಟವಾಗುತ್ತಿತ್ತಲ್ಲದೆ, ಆ ಜಿಲ್ಲೆಯವರು ಹೊರಗಿನವರೇ ಆಗಿದ್ದು, ಸ್ಥಳ ಸಿಗುವುದೂ ಕಷ್ಟಸಾಧ್ಯವಾಗುತಿದ್ದಿತು ಪರೀಕ್ಷಾರ್ಥವಾಗಿ ಹತ್ತು ಮಂದಿ ಉಪಾಧ್ಯಾಯರನ್ನು ಕೂಡಿಸಿ, ಹಳೇ ತಾಲೂಕು ಕಚೇರಿಯಲ್ಲಿ ಉಂಟಾದ ಈ ಶಾಲೆಯು ಇದಿಷ್ಟರಲ್ಲಿ ಈ ಜಿಲ್ಲೆಯ ಮತ್ತು ಕೊಡಗಿನ ಸೆಕೆಂಡರಿ ಉಪಾಧ್ಯಾಯರಲ್ಲಿ ಸುಮಾರು ೮೦೦ ಮಂದಿಯನ್ನು ತರಬೇತುಗೊಳಿಸಿ, ಅವರಿಗೆ ಜೀವನೋಪಾಯ ಕಲ್ಪಿಸಿ ಕೊಟ್ಟಿತಲ್ಲದೆ, ಜಿಲ್ಲೆ ತುಂಬ ಸೆಕೆಂಡರಿ ಉಪಾಧ್ಯಾಯರು ಶಾಲೆಗಳಲ್ಲಿ ಕೆಲಸ ನೋಡಲು ಒದಗುವಂತೆ ಮಾಡಿ ಕೊಟ್ಟಿತು. ಈಗ ಭವ್ಯವಾದ ಕಟ್ಟಡವೂ ಅದಕ್ಕೆ ಗವರ್ನಮೆಂಟ್ ಕೊಲೇಜಿನಲ್ಲೇ ದೊರೆತಿದೆ ಸೆಂಟ್ರಲ್ ಸ್ಕೂಲುಗಳು ಹೆಚ್ಚುತ್ತ ವಿದ್ಯಾಭ್ಯಾಸವು ಬಹಳವಾಗಿ ಪ್ರಚಾರ ಹೊಂದುತ್ತ ಒಂದು, ನೂತನ ವಾತಾವರಣದಲ್ಲಿ ನಮ್ಮ ಯುವಕರು ಜೀವಿಸಿ ಬರಲು ಹೊಸ ಸಂಘಟನೆಗಳಾಗುತ್ತಿರುವಾಗ, ಈ ಶಾಲೆಯ ಉಪಯೋಗತೆಯೂ ಮಹತ್ವವೂ ಜವಾಬ್ದಾರಿಯೂ ಹೆಚ್ಚುವುದಲ್ಲದೆ, ಸೆಕೆಂಡರಿ ತರಗತಿಯ ಉಪಾಧ್ಯಾಯರ ಸಮಸ್ಯೆಗಳೂ ಹೆಚ್ಚುವ ಕಾರಣ, ಅವನ್ನು ಸರಿಯಾಗಿ ನಿರ್ವಹಿಸಲು ಹಳೇ ವಿದ್ಯಾರ್ಥಿಗಳ ಸಂಘವೂ ಈ ಸುಮುಹೂರ್ತದಲ್ಲಿ ಉಂಟಾದುದು ಯೋಗ್ಯವಾದುದೆನ್ನಬೇಕು.

ಶಾಲಾ ಸಮಾಪ್ತಿ ಪುನಃ ಈ ಮಹಾ ಪರೀಕ್ಷೆಯ ಮತ್ತೊಂದು ಅವತಾರಕ್ಕೆ ಎಕೆಡಮಿಕ್ ಕೌನ್ಸಿಲು ಅವಕಾಶವನ್ನುಂಟು ಮಾಡಿರುವುದು. ನಿರಕ್ಷರರೂ ಮೂಢರೂ ಗಳಿಗೆಗೊಂದರಂತೆ ಕಟ್ಟುಪಾಡನ್ನು ಏರ್ಪಡಿಸಿಕೊಳ್ಳುವುದುಂಟು ವಿದ್ಯಾವಂತರೆಂಬವರು ಹೇಗಿರಬೇಕೆಂದು ಪರೀಕ್ಷೆ ಮಾಡಲು ಅಧಿಕಾರರೂಢರಾದ ಮಹಾ ವಿದ್ಯಾವಂತರು, ಜ್ಞಾನ ಚಕ್ರವನ್ನು ಸುತ್ತು ಬಳಸಿ, ಕೊನೆಗೆ ಮಹಾ ಜ್ಞಾನಿಗಳಾಗಿ ಭ್ರಮಿಸುವರು ಇದುವರೆಗೆ ಇಲ್ಲದ ಎಸ್. ಎಸ್ ಸಿ, ಮೊದಲಾದ ಹೊಸ ಡಿಗ್ರಿಗಳನ್ನು ಹುಟ್ಟಿಸಿದ ಈ ಬ್ರಹ್ಮರು, ಬ್ರಹ್ಮರಾಕ್ಷಸ ಸ್ವರೂಪವಾದ ಸ್ಕೂಲ್ ಫೈನಲ್ ಪರೀಕ್ಷೆಯ ಮತ್ತೊಂದು ವಿಕಾರಾಕ್ಕೆ ಆಕಾರವನ್ನುಂಟುಮಾಡಿರುವರು ಆದರಂತೆ, ಇಂಗ್ಲಿಷು, ಮತ್ತೊಂದು ಭಾಷೆ ಗಣಿತ (ಎಂದಿಗಿಂತ ಸ್ವಲ್ಪ ಹೆಚ್ಚಿಗೆ ಕೂಡಿಸಿ,) ಇವು A ವರ್ಗದುವು, ಚಿತ್ರಲೇಖನ, ಅಥವಾ ಚರಿತ್ರ ಭೂಗೋಲ ವಿಜ್ಞಾನ ಮೊದಲಾದುವು IV ಫೋರ್ಮಿನಲ್ಲಿಯೂ ವ್ಯಾಯಾಮ ಕೈಕೆಲಸವೆ ಎಮ್ಬ ಸೇರಿ B ವರ್ಗದುವು, ನಂತರ ಇತಿಹಾಸಾದಿಗಳಿಂದ, ವಿಜ್ಞಾನ ಶಾಖೆಯಿಂದ, ಇತರ ವಿಷಯಗಳಿಂದ ಒಟ್ಟಾಗಿ ಯಾವುವಾದರೂ ಒಂದೊಂದು ಶಾಖೆಯಿಂದ ಒಂದರಂತೆ ಒಟ್ಟು ಎರಡು C ವರ್ಗದುವು, ಇಷ್ಟನ್ನೂ ಕಲಿಯಬೇಕೆಂದಾಯಿತು ದೊಡ್ಡದೊಂದು ಸ್ಕೂಲ್ ಫೈನಲ್ ಕ್ಲಾಸು ಇರುವಲ್ಲಿ ಆರಂಟು ವಿಷಯಗಳನ್ನಿಡದೆ ವಿದ್ಯಾರ್ಥಿಗಳು ಕಲಿಯುವ ಸೌಕರ್ಯ ಸಿಗಲಾರದು ನೂರರಲ್ಲಿ ಅವರ್ತತ್ತೈದು ಮೀರಿದ ವಿದ್ಯಾರ್ಥಿಗಳು ವಿದ್ಯಾಗಂಧವೇ ಇಲ್ಲದೆ ಅಲೆದಾಡಲೂ, ಉಳಿದ ೪೦ ಅರೆ ಜಾಣರಾಗಿ ನಿರುದ್ಯೋಗಿಗಳಾಗಲೂ ತುಂಬ ಅನುಕೂಲವಿದೆ ಇಷ್ಟು ಜಾಣತನವು ವಿದ್ಯಾರ್ಥಿಗಳಲ್ಲಿ ಉಂಟಾಗುವ ಹಾಗೆ ಮಹಜ್ಞಾನಿಗಳ ಸಿದ್ಧಾಂತವಾಯಿತು ಇದೂ ಇನ್ನೊಂದೆರಡು ವರ್ಷಗಳಲ್ಲಿ ಪುನಃ ಮಾರ್ಪಟ್ಟು, ಹೊಸ ರೂಪಗೊಂಡರೆ ವಿದ್ಯಾಭ್ಯಾಸದ ಉದ್ಧಾರ!

ಮುಜಫರಪುರ ಭೂಕಂಪದಿಂದಾದ ಅನರ್ಥಗಳ ಅಂದಾಜು ವಾರ್ತೆ ಇದೊಂದು ಕಡೆಯಿಂದ ಆಗುವಷ್ಟು ಸಂಪೂರ್ಣ ತಿಳಿದು ಬರುತ್ತಿದೆ ಅಲ್ಲಿ ಸತ್ತವರು ೩,೦೦೦, ಗಾಯಗೊಂಡವರು ೫೦೦೦, ನೀರಡಿಯಲ್ಲಿ ಬಿದ್ದಿರುವ ಜಮೀನು ಕಾಲಂಶ, ಹೊಯಿಗೆ ಮುಚ್ಚಿರುವ ಜಮೀನು ಅರ್ಧಾಂಶ, ಮಣ್ಣು ತುಂಬಿರುವ ಬಾವಿಗಳ ನೂರರಲ್ಲಿ ೮೦ ರಂತೆ, ಮುರಿದು ಬಿದ್ದ ಮನೆಗಳು ನೂರರಲ್ಲಿ ೮೦ರಂತೆ, ಜನರಲ್ಲಿ ಹೆಚ್ಚಿನವರಿಗೆ ಉಪವಾಸ ಮೈ ಮುಚ್ಚಿಕೊಳ್ಳಲು ಬಟ್ಟೆಯೂ ಇಲ್ಲ. ದಿನಕ್ಕೆ ೫೦೦ ಮಂದಿ ಕೂಲಿಗಳಿಂದ ಮುರಿದು ಬಿದ್ದ ಗೋಡೆ ಮಾಡುಗಳನ್ನು ಎತ್ತುತ್ತ, ಅಡಿಯಲ್ಲಿರುವ ಹೆಣಗಳನ್ನು ಮೇಗೆತ್ತುತ್ತಿರುವರು. ಈ ವಾರದಲ್ಲಿ ಬಿಹಾರಕ್ಕೇನು ಕಳಿಸಿದಿರಿ?

ಮಹಾತ್ಮಾ ಗಾಂಧಿ ಯವರು ಈಗ ಪುನಃ ಹಾಡುತ್ತಾರೆ. "ಸರ್ಕಾರದೊಡನೆ ಶಾಂತಿ ಬೇಕೆ ಬಂದಾಗುವುದಕ್ಕೆ ನಾನು ಬಾಗಿಲು ತೆರೆದೇ ಇಟ್ಟಿರುವೆನು. ಕೆಲವರ್ಷಗಳ ಶಾಂತಿಯು ನಮಗೆ ದೊರೆತರೆ ನಾವೆಷ್ಟೋ ಅಭ್ಯುದಯವನ್ನು ಸಾಧಿಸಬಹುದು ಭಾರತೀಯರೆಲ್ಲರು ಒಂದಾಗಿ, ಒಂದು ಇತ್ಯರ್ಥವನ್ನು ತಮ್ಮೊಳಗೆ ಮಾಡಿಕೊಂಡರೆ, ಈಗ ಇರುವ ವ್ಯರ್ಥವಾದ ಸಂದೇಹಗಳು ತೊಲಗಿದರೆ, ಮಿಕ್ಕವರೆಲ್ಲರು ನಮ್ಮ ಬಳಿಗೆ ಒಂದು ನಮ್ಮೊಡನೆ ನಮ್ಮ ಶರ್ತಗಳಂತೆ ಕರಾರು ಮಾಡಿಕೊಳ್ಳಬೇಕಾಗುವುದು. ನಮ್ಮಲ್ಲಿ ಒಕ್ಕಟ್ಟು ಉಂಟಾಗಿಲ್ಲದರಿಂದಲೇ ಇಂಗ್ಲೆಂಡು ನಮ್ಮ ಮೇಲೆ ತನ್ನ ಇಚ್ಛೆಯಂತೆ ಸಾಗುತ್ತಲಿದೆ. ನಾವು ಇನ್ನೂ ಒಂದಾಗುವುದು ಅಪರೂಪವಾಗುವಂತೆ ವಿಧ್ವಮಾನಗಳಾಗುತ್ತಲಿವೆ. ಇದರಿಂದ ನಮಗೆ ಜನ್ಮಸಿದ್ಧವಾಗಿ ಸಲ್ಲತಕ್ಕುದೆಂದೂ ಸಿಗದಂತಾಗಿದೆ. ಯಥಾರ್ಥತೆ, ಧೈರ್ಯ, ಎರಡು ಇದ್ದರೆ ಜಯವು ಸಿದ್ಧ; ಇನ್ನು ಸದ್ಯಕ್ಕೆ ಒರ್ಮಕಸ್ಸಿ ತೆರೆ, ಅಲ್ಲಿ ಆಗುವಷ್ಟು ಇದೇ ಕಾರ್ಯವನ್ನು ಸಾಧಿಸುವೆನು" ಎಂದಿರುವರು. ಈಗ ಇನ್ನಷ್ಟು ಸಾಂಗ ಕೆಲಸ ಮಾಡಲು, ಅನುಕೂಲವಾಗುವ ಹಾಗೆ, ಹಲವು ವರ್ಷಗಳಿಂದ ತ್ಯಜಿಸಿದ್ದ ಫನ್ನನನ್ನು ಸರಕಾರದಿಂದ ಪಡೆಯಲು ಸನ್ನಾಹಿಸಿರುವರು!

ಸಂಪಾದಕರ ಟಪ್ಪಾಲು ಪೆಟ್ಟಿಗೆ.

ಪತ್ರಿಕಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಎಲ್ಲಾ ಲೇಖಕರು ತಮ್ಮ ನಿಜವಾದ ಹೆಸರು ವಿಳಾಸಗಳನ್ನು ಕೊಡತಕ್ಕದ್ದು. ಅನಾಮಧೇಯ ಲೇಖನಗಳಿಗೆ ಎಳ್ಳಷ್ಟೂ ಅವಕಾಶವಿಲ್ಲ. ಲೇಖನಗಳು ಸಾರ್ವಜನಿಕ ಹಿತಕ್ಕನುಗುಣವಾಗಿದ್ದು ಯುಕ್ತ ಶೈಲಿಯಲ್ಲಿ ಬರೆಯಲ್ಪಡತಕ್ಕದ್ದು. (ಸಂ. ಸ್ವ.)

ರಂಗಭೂಮಿಯ ಗಾಯನ.

ರಂಗಭೂಮಿಯೆಂದರೆ ಭೋಗಿಗಳಿಗೆ ಬಾಹ್ಯ ಚಿತ್ರಗಳ ಪಟ್ಟಿಗಳಿಂದ ಕೂಡಿ ಎಡಬಲಗಳಲ್ಲಿ ವಿಧವಿಧವಾದ ವೇಷಧಾರಿಗಳು ಕುಣಿಯುವ ರಂಗಸ್ಥಳವಲ್ಲ. ಹಾವ ಭಾವ ವಿಲಾಸಗಳಿಂದ ಕೂಡಿ, ಮನಮೋಹನಗೊಳಿಸುವ ಪಾತ್ರಗಳ ಕೂರಂಬುಗಳಿಂದೊಡಗೊಂಡ ಲೀಲಾ ರಂಗವಲ್ಲ. ಮಾನವನ ನಿತ್ಯ ಜೀವನದಲ್ಲಿ ಬರಬಹುದಾದ, ಅಲ್ಲದೆ ಅನುಭವಿಸಬಹುದಾದ ಅನೇಕಾನೇಕ ಘಟನೆಗಳನ್ನು ಪ್ರತಿಬಿಂಬಿಸುವ, ಹಾಗೂ ಉತ್ತಮ ಧ್ಯೇಯಗಳನ್ನು ಜನರ ಬುದ್ಧಿಶಕ್ತಿಗನುಸಾರವಾಗಿ ಬೋಧಿಸುವ ಸೂತ್ರ; ಜನಜೀವನದ ಅಂತಸ್ಸನ್ನು ನಿರ್ದೇಶಿಸುವ ಸಾಧನ.

ಹೀಗಿರುವಲ್ಲಿ ಇಂದಿಗೂ — ಎಂದರೆ ಜನಸಾಮಾನ್ಯದ ಬುದ್ಧಿಯು ಉಚ್ಚಸ್ಥಾನವನ್ನು ಸಮೀಪಿಸಲು ತೊಡಗಿರುವುದೆಂದು ತಿಳಿದಿರುವ ಕಾಲದಲ್ಲಿಯೂ — ಮಾನವನ ನಿತ್ಯಜೀವನದಲ್ಲಿ ಬರಬಹುದಾದ ಅನೇಕಾನೇಕ ಅಂಶಗಳ ಅಗಮನವನ್ನು ರಂಗಭೂಮಿಯಲ್ಲಿ ನಿರೀಕ್ಷಿಸುತ್ತಿರುವ ಕೊಡದೆ ಬಹು ಶೋಚನೀಯವಾಗದಿರದು. ರಂಗಭೂಮಿಯಲ್ಲಿ ಇಂದಿನ ಗಾಯನಕ್ಕೆ ಕೊಟ್ಟಿರುವ ಗಮನವು ಮೇರೆ ಮೀರಿ ರಂಗಭೂಮಿಯ ಅಪ್ರತಿಮ ಧ್ಯೇಯವನ್ನೇ ಮರೆತು ಕ್ಷಣಿಕ ಸುಖವನ್ನಾಶಿಸಿ ಕಲೆಯ ಕೊಲೆಗಾರಂಭವಾಗಿರುವುದು. ಗಾಯನವು ಸುಮಧುರವಾದುದೇನೋ ಹೌದು. ಶ್ರೇಷ್ಠ ಕಲೆಯೂ ಹೌದು. ಅದ ಮಾತ್ರಕ್ಕೇ ಮಾನವ ಪ್ರಕೃತಿಗೆ ವಿರೋಧವಾದ ಸನ್ನಿವೇಶ ಅ ಮಧ್ಯದಲ್ಲಿ ಈ ಶ್ರೇಷ್ಠ ಕಲೆಯನ್ನು ಪ್ರದರ್ಶಿಸುವುದರಿಂದ ಇದರ ಶ್ರೋತೃಗಳು ಕುಂದುಂಟಾಗ ವುದಲ್ಲದೆ ಕೊಲೆಯೂ ಸಹ ಆಗುವುದುಂಟು. ಈ ಕೊಲೆಯನ್ನೇ ತಪ್ಪಿಸಿ ರಂಗಭೂಮಿಯ ಪ್ರೌಢಿಮೆಯನ್ನು ಅನ್ವರ್ಥವಾಗಿ ಬೆಳಗುವಂತೆ ಮಾಡುವುದು ಇಂದಿನ ಎಲ್ಲಾ ನಾಟಕಸಂಸ್ಥೆಗಳವರ ಕರ್ತವ್ಯ. ಈ ಕರ್ತವ್ಯ ಸಾಧನೆಗೆ ಬೇಕಾಗುವ ಉತ್ತೇಜನವನ್ನು ಒದಗಿಸಿ ಕೊಡುವುದು ನಮ್ಮೆಲ್ಲರ ಧರ್ಮ.

ನಮ್ಮ ಕರ್ನಾಟಕದಲ್ಲಿ ಈಗಾಗಲೇ ಕೆಲ ಸುಶಿಕ್ಷಿತ ಸಂಸ್ಥೆಗಳವರು ಈ ಪವಿತ್ರತಮ ಕಾರ್ಯದಲ್ಲಿ ತೊಡಗಿರುವುದು ನಮ್ಮೆಲ್ಲರ ಸೌಭಾಗ್ಯವೇ ಸರಿ. ಆದರೆ ಇವರುಗಳಿಗೆ ಸಾಕಷ್ಟು ಉತ್ತೇಜನ ದೊರೆತ್ತು ಲಭಿಸದ ಭಗ್ನಮನೋರಥರಾಗಲಿರುವರು. ಈ ಸಂದಿಗ್ಧ ಸಮಯದಲ್ಲಿ ಕರ್ನಾಟಕಾಭಿಮಾನಿಗಳು ಇಂಥ ಸುಸಂಸ್ಥೆಗಳ ಪೋಷಣೆಗಾಗಿ ತಕ್ಕ ಸಾಧನಗಳನ್ನು ಕಲ್ಪಿಸಿಕೊಟ್ಟು ಕರ್ನಾಟಕ ರಂಗಭೂಮಿಯ ಶ್ರೇಯೋಭಿವೃದ್ಧಿ ಎಲ್ಲೆಡೆಯಲ್ಲಿಯೂ ಮೆರೆಯುತ್ತಿರುವಂತೆ ಮಾಡಬೇಕಾದುದು ಅತ್ಯಾವಶ್ಯಕ.

ಕರ್ನಾಟಕ ಕೇಂದ್ರಸ್ಥಾನವಾದ ಮೈಸೂರು ದೇಶದ ಶ್ರೀ ಎಂ. ಪೀರ್‌ರವರು ತಮ್ಮ ಸುಶಿಕ್ಷಿತ ನಟರಿಂದೊಡಗೂಡಿ ಕರ್ನಾಟಕದ ನಾನಾ ಭಾಗಗಳಲ್ಲಿ ಸಾಮಾಜಿಕ, ಐತಿಹಾಸಿಕ ನಾಟಕಗಳನ್ನು ಪ್ರದರ್ಶಿಸಿ ಕಲಾಪ್ರೇಮಿಗಳೆಲ್ಲರಿಂದಲೂ ಸನ್ಮಾನಿತರಾಗಿ ಈಗ ಮಂಗಳೂರಿನಲ್ಲಿ ಒಂದು ತಿಂಗಳಿಂದಲೂ ತಮ್ಮ ಅಮೋಘವಾದ ನಾಟಕಗಳನ್ನು ಪ್ರದರ್ಶಿಸುತ್ತಿರುವರು. ಇವರ ಸಾಮಾಜಿಕ ನಾಟಕಗಳು ಜನಜೀವನದ ತತ್ವವನ್ನು ಧಾರೆ ಎರೆಯುವಂತಿರುವುವು; ಮಾನವ ಜೀವನಕ್ಕೆ ಸ್ವಾಭಾವಿಕವಾದ ಸಂಘಟನೆಗಳನ್ನು ಆದರ್ಶಪ್ರಾಯವಾಗಿ ಪ್ರತಿಬಿಂಬಿಸುವಂತಿರುವುವು. ಸಮಾಜದ ಬಾಹ್ಯಾಕಾರವು ಎಷ್ಟು ಮೆಚ್ಚಿನದಾಗಿರಬೇಕೆಂದು ಜನತೆಯು ಆಶಿಸುತ್ತಿರುವುದೋ ಅಂತೆಯೇ ಅಂತರ್ಯದಲ್ಲಿಯೂ ಸಹ ಅಂತರಾತ್ಮನ ಮೆಚ್ಚುಗೆಗೆ ಪಾತ್ರರಾಗಿರಬೇಕೆಂದು ಬೋಧಿಸುತ್ತಿರುವುದು ಜೀವನಸಮಸ್ಯೆಗಳ ತೊಡಕುಗಳನ್ನು ಪರಿಹರಿಸುವ ಸಾಧಕ ಪ್ರದರ್ಶನವಾಗಿರುವುದು.

ಇಷ್ಟಿದ್ದರೂ ಕೂಡ ಇಲ್ಲಿ ಇವರ ಸಂಸ್ಥೆಗೆ ತಕ್ಕ ಉತ್ತೇಜನವು ದೊರೆಯದಿರುವುದು ಇದಕ್ಕೆ "ಸಂಗೀತವಿಲ್ಲ; ಆಡಂಬರ ಸಲಕರಣೆಗಳೂ ಇಲ್ಲ" ಎಂಬುದೊಂದೇ ಕಾರಣವೆಂದು ಮೇಲಿಂದ ಮೇಲೆ ಕೇಳಿಬರುತ್ತಿರುವ ಜನವಾಣಿಯು ವೇದಾಂತ್ಯಗಳನ್ನುಂಟು ಮಾಡುವುದು. ಮಾನವ ಜೀವನವು ಕೇವಲ ಆಡಂಬರ ಜೀವನ ಮಾತ್ರವೆ? ಅಲ್ಲದೆ ಮನೋರಂಜನ ಸಾಧಕಮಾತ್ರವೆ?

ರಂಗಭೂಮಿಯಲ್ಲಿ (ಸನ್ನಿವೇಶದ ಸಂಗೀತ ಪರಿವೆಯಿಲ್ಲದ) ಗಾಯನವೇ ಕಾರ್ಯದಕ್ಷತೆಯ ಕುರುಹೆಂದು ಹೇಳುವುದು ಸಾಧುವಾದುದಲ್ಲ. ರಂಗಭೂಮಿಯು ನಿತ್ಯ ಜೀವನದ ಸರಳ ಹಾಗೂ ತೊಡಕು ಮಾರ್ಗಾವಲಂಬಿಗಳ ಪರಿಣಾಮವನ್ನು ಉತ್ಪ್ರೇಕ್ಷೆಗೆಡೆಗೊಡದೆ, ಸ್ವಾಭಾವಿಕ ರೀತಿಯಲ್ಲಿಯೇ ಪ್ರತಿಬಿಂಬಿಸುವ ಕಾರ್ಯಕ್ಷೇತ್ರವಾದುದರಿಂದ ಅಲ್ಲಲ್ಲಿನ ಸಮಯಗಳಲ್ಲಿ ಗಾಯನವಾಗಮನವನ್ನು ನಿರೀಕ್ಷಿಸಿದರೆ, ರಂಗಭೂಮಿಯನ್ನು ಅನಂದಕ್ಷೇತ್ರವನ್ನಾಗಿ ಎಣಿಸುವಂತಾಗುವುದು; ಎಂದ ಮೇಲೆ ಇದರ ರೀತಿನೀತಿಗಳ ಸ್ಥಾನವು ಅಷ್ಟು ಎತ್ತರದವರೆಗೆ ಮಾರ್ಪಾಡಾಗಬೇಕೆಂಬುದನ್ನು ವ್ಯಕ್ತಪಡಿಸಬೇಕಾಗುವುದು.

ರಂಗಭೂಮಿಯಲ್ಲಿ ಸ್ವಾಭಾವಿಕತೆಯುಳ್ಳ ಗಾಯನ ಸನ್ನಿವೇಶಗಳನ್ನು ಕಲ್ಪಿಸುತ್ತಲೂ, ಅಪ್ರಕೃತ ಸಮಯಗಳಲ್ಲಿ ನೃತ್ಯಗೀತಾದಿಗಳನ್ನು ತಂದೊಡ್ಡುತ್ತಲೂ, ಸಹಜವಾದ ಬಂಧಿತವಾಗಿರುವ ಚಾಪಲ್ಯತನವನ್ನು ಪ್ರಕಟಿಸುತ್ತಲೂ, ಮುಂತಾದವು ಕಲೆಯ ಕೊಲೆಗೆ ನೆರವಾಗುವುವೆಂಬುದನ್ನು ನಿರೂಪಿಸಲು ಬೇಕಾದಷ್ಟು ಅತ್ಯಾವಶ್ಯಕ. ಕಲಾಪ್ರೇಮಿಗಳಾದ ಕನ್ನಡಿಗರೂ, ಕಲಾಧುರೀಣರೂ, ಸಂಸ್ಥೆಗಳೂ ವ್ಯಕ್ತಿಗಳಂತೆ ರಂಗಭೂಮಿಯ ಸೇವಾಕಾರ್ಯದಲ್ಲಿ ತತ್ಪರರಾಗಿರುವ ಇಂಥ ಸುಸಂಸ್ಥೆಗಳಿಗೆ ಉತ್ತೇಜನವನ್ನು ಕೊಟ್ಟು ಬಾಹ್ಯಾಡಂಬರ ಅಥವಾ ಅಪ್ರಕೃತ ಸನ್ನಿವೇಶಗಳ ಅಪೇಕ್ಷೆಗಳ ಕಡೆಗೆ ಮನಗೊಡದೆ, ಜೀವನಸಾಂಗತ್ಯದ ಸವಿಯನ್ನು ಅನುಭವಿಸುವಂತೆ ಕರುಣಿಸಲೆಂದು ಬೇಡುವ,

ರಂಗಭೂಮಿ ಪ್ರೇಮಿ.

'ನವಜೀವನ'

ಇದೇ ತಾ. ೧೭ನೇ ರವಿವಾರ ರಾತ್ರಿ ಮೈದಾನಿನಲ್ಲಿರುವ ಶ್ರೀ ಚಂದ್ರಕಲಾ ನಾಟಕ ಥಿಯೇಟರಿನಲ್ಲಿ ಎಸ್. ಆರ್. ಎಸ್. ಶಾಲೆಯ ವಿದ್ಯಾರ್ಥಿಗಳು, ಶ್ರೀ. ಕೆ. ಕೆ. ಶೆಟ್ಟಿಯಿಂದ ಬರೆಯಲ್ಪಟ್ಟ 'ನವಜೀವನ' ಎಂಬ ನಾಟಕವನ್ನು ಅಭಿನಯಿಸಿದರು. ಮನೋರಂಜಕ ಸುಬ್ಬಣ್ಣ, ಬಹು ಮಧುರವಾಗಿ ಹಾಡುವ ಸುಂದರಿ, ಗಾಯಕನಾದ ಮೋಹನ, ಮೊದಲಾದವರಿಂದಾಗಿ ಈ ನಾಟಕವು ಆಧುನಿಕ ಕೃತಕೃತ್ಯತೆ ಯಶಸ್ವಿಯಾಯಿತೆನ್ನಬಹುದು. ಕಥಾ ವಸ್ತುವೂ ಸಂವಿಧಾನವೂ — ಸರ್ವ ಶ್ಲಾಘ್ಯ. ಸಾಮಾಜಿಕ ಕ್ರಾಂತಿಯನ್ನು ಕನ್ನಡಿಗರು ಕಲಿಯಬೇಕೆಂದು ಟೊಂಕ ಕಟ್ಟಿರುವ ಶ್ರೀ ಶೆಟ್ಟಿಯವರ ಪ್ರಯತ್ನವು ಶ್ಲಾಘನೀಯವಾದುದು. ಸ್ವಾಮಿರಾಯರ ಭೂಮಿಕೆಯನ್ನು ಅಭಿನಯಿಸಲು ಮೊದಲು ಮುನಾವರೂಪರಾದವರು ಅಕಸ್ಮಾತ್ ಸಂಭವದಿಂದ ಹಿಂದೆ ನಿಂತುದು ಹೆಚ್ಚಿನ ಮಟ್ಟಿಗೆ ನಾಟಕದ ಕೆಲವು ಅವ್ಯವಸ್ಥೆಗೆ ಕಾರಣವೆಂದು ತಿಳಿದುಬಂತು. ಅಂತಹ ಅನಾನುಕೂಲತೆಗೆ ಗುರಿಯಾದರೂ ಶ್ರೀ ಶೆಟ್ಟರು ನಾಟಕವನ್ನು ಭಾವಪೂರಿತವಾಗಿಯೂ ಉದ್ಬೋಧಕವಾಗಿಯೂ ಅಭಿನಯಿಸಿದುದು ಸಂತೋಷಪ್ರದವಾಗಿದೆ. ಶ್ರೀ ಕೆ. ಕೆ. ಶೆಟ್ಟರ ಕ್ರಾಂತಿಯು ಜಯಗೊಳ್ಳಲಿ.

ಸಂಸಾರ ನೌಕಾ

ಕರ್ನಾಟಕ ರಂಗಭೂಮಿಯು ದಿನೇ ದಿನೇ ಊರ್ಜಿತಗೊಳ್ಳುತ್ತಿದೆ ಎಂಬುದಕ್ಕೆ ಈಗೀಗ ಅಲ್ಲಲ್ಲಿ ಹೊರಬೀಳುತ್ತಿರುವ ಉತ್ಕೃಷ್ಟ ನಾಟಕಗಳೇ ಸಾಕ್ಷಿ! ಶ್ರೀ ಚಂದ್ರಕಲಾ ನಾಟಕ ಕಂಪೆನಿಯವರ ಸಂಸಾರ ನೌಕೆಯು ಅತ್ಯಂತ ಉತ್ಕೃಷ್ಟವಾದ ನಾಟಕಗಳಲ್ಲೊಂದು. ಕಥಾ ವಸ್ತುವು ಸರ್ವ ರೀತಿಯಿಂದಲೂ ನವಜಾಗ್ರತಿ ಬೋಧಕವಾಗಿದೆ. ಆಧುನಿಕ ಪ್ರಪಂಚವೇ ಅದರಲ್ಲಡಗಿಕೊಂಡಿದೆ ಎಂದಾಗ ಈ ಕಥಾಲೇಖಕರಾದ ಶ್ರೀ ಸುಂದರ ವಿಚಕ್ಷಣತೆ ಜಾಣ್ಮೆಗಳ ಅದೆಷ್ಟೆಂದು ಬೇರೆ ಹೇಳಬೇಕಾಗಿಲ್ಲ. ಶ್ರೀ ಎಂ. ಮಹಮ್ಮದ್ ಪೀರ್‌ರವರ ಅಭಿನಯವು ತೀರ ರೋಮಾಂಚನಗೊಳಿಸುವಂತಹುದು. ಅವರು ಭಕ್ತನಾಗಿ ಅಭಿನಯಿಸುವ ಹಾವಭಾವಗಳು ರಂಗಭೂಮಿಯಲ್ಲಿ ಆದರ್ಶವ ರಂಗಭೂಮಿಗಾಗಿಯೇ ಇವರು ಜನ್ಮಿಸಿದರೋ ಎಂಬ ಭಾವವು ಒಮ್ಮೊಮ್ಮೆ ಪ್ರೇಕ್ಷಕರಲ್ಲಿ ಮೂಡುವಂತಿದೆ. ರಾಗರಸವೇ ನಾಟಕವೆಂದು ತಿಳಿದವರು ತಮ್ಮ ತಪ್ಪನ್ನೊಪ್ಪಿ ಭಾವರಸವೇ ನಾಟಕವೆಂಬುದನ್ನು ಮುಂದಾದರೂ ತಿಳಿಯಬೇಕಾಗಿದೆ.

ಪ್ರೇಕ್ಷಕ

ಇದೆಂತಹ ವ್ಯಾಪಾರ?

ಮಂಗಳೂರಿನ ಮಹಾ ಜನಗಳೇ! ನಾನೊಬ್ಬ ಪ್ರವಾಸಿ. ಮುಖ್ಯ ಪ್ರಜಾ ಸೇವಕ ಮಂಗಳೂರನ್ನು ನೋಡಿ ಹೋಗಬೇಕೆಂಬ ಆಶೆಯಿಂದ ಬಂದವನು ತಾ. ೧೩ನೇ ದಿನ ಓರ್ವ ಚಿನ್ನ ವ್ಯಾಪಾರಿ ಮಹಾಶಯರಲ್ಲಿ ಹೋಗಿ ನನ್ನ ಹತ್ತಿರವಿದ್ದ ೪ ಪವನಿನ ಒಂದು ಭಂಗಾರದ ಸರವನ್ನೂ ೧ ಪವನು ಮತ್ತು ೨ ಹಣ ತೂಕದ ಒಂದು ನಗವನ್ನೂ ಕೊಟ್ಟು ಕೂಕ ಮಾಡಬೇಕೆಂದು ಕೇಳಿದೆನು. ಅದಕ್ಕೆ ಅವರು "ಒಟ್ಟಿಗೆ ೩ ಪವನು ಕೂಕವಿದೆ. ನೀವು ನಮಗೆ ಖರೀದಿಗೆ ಕೊಟ್ಟರೆ ಪವನು ಒಂದಕ್ಕೆ ೩೦ ರೂಪಾಯಿ ಪ್ರಕಾರ ತೆಗೆದುಕೊಳ್ಳುತ್ತೇವೆ" ಎಂದರು. ನಾನು ಮನಸ್ಸಿನಲ್ಲಿ ನಕ್ಕು ಇವರೆಂಥ ಧರ್ಮಿಷ್ಠರು ಎಂದೆಣಿಸಿ ಮನೆಗೆ ಬಂದೆನು. ಮಾರನೇಯ ದಿನ ಅದೇ ಮತ್ತೊಂದು ಅಂಗಡಿಯಲ್ಲಿ ಸರವನ್ನೂ ನಗವನ್ನೂ ತೂಕ ಮಾಡಲಿಕ್ಕೆಂದು ಕೊಟ್ಟೆನು. ಯಥಾಪ್ರಕಾರ ಹಿಂದಿನ ದಿನದ ಚಿನ್ನದ ವ್ಯಾಪಾರಿಯೂ ಬಂದು ಕುಳಿತು ಗಿರಾಕಿಯ ಭಾಷೆಯಲ್ಲಿ ಅವರೊಡನೆ ಮಾತಾಡತೊಡಗಿದರು. ನಾನು ಏನೂ ತಿಳಿಯದವನಂತೆ ಕುಳಿತೆನು. ನಾಲ್ಕು ಗುಂಡನ್ನೂ ತೆಗೆದು ಅಚ್ಚು ಅರಗು ತೆಗೆದು ತೂಕ ಮಾಡಿ, ಒಟ್ಟಿಗೆ ಮೂರು ಪವನು ಇದೆ. ಪವನ್ ಒಂದಕ್ಕೆ ೨೦ ರೂಪಾಯಿ ಪ್ರಕಾರ ೬೦ ರೂಪಾಯಿ ತೆಗೆದುಕೊಳ್ಳಿ ಎಂದು ಒತ್ತಾಯ ಪಡಿಸಿದರು. ನಾನು ಮನೆಗೆ ಬಂದು ಓರ್ವ ನಂಬಿಕೆಯ ಅಕ್ಕಸಾಲಿಯನ್ನು ಕರೆತರಿಸಿ ಭಂಗಾರವನ್ನು ತೂಕ ಮಾಡಿಸಲು, ಒಟ್ಟಿಗೆ ೫ ಪವನ್ ೬ ಹಣ ತೂಕವಿದ್ದುದೆಂದು ಸ್ಥಿರವಾಯಿತು. ಅಂತೂ, ಮಂಗಳೂರಿನ ನಿವಾಸಿಗರೇ ಎಚ್ಚರಿಕೆ! ಈ ಅಕ್ಕಸಾಲರ ಹೃದಯಗಳು ಸುವರ್ಣದಂತಿರುವ ಗುಟ್ಟು. ಇನ್ನು ಮುಂದಾದರೂ ಬಡವರು ಹಾಳಾಗದಂತೆ ನೋಡಿಕೊಳ್ಳಬೇಕೆಂದು ನನ್ನ ಪ್ರಾರ್ಥನೆ.

ಒಬ್ಬ ಪ್ರವಾಸಿ.

ಇಷ್ಟಗ್ರಾಮ ಪಟೇಲರ ವಾಸಸ್ಥಾನವೆಲ್ಲಿ?

ಸರಕಾರ್ ನೆರೆಯ ಇಷ್ಟಗ್ರಾಮದ ಪಟೇಲ ದಿವಂಗತ ಕೆ. ಶ್ರೀಧರರಾಯರ ಸ್ಥಾನಕ್ಕೆ ಇತ್ತೀಚೆಗೆ ಅವರ ಮಗ ಶ್ರೀ ಬಾಬುರಾಯರು ನೇಮಕವಾಗಿ, ಇದಕ್ಕೆ ಕಳೆದ ತಾ. ೧೬-೧-೧೯೩೮ಕ್ಕೆ ಅಧಿಕಾರ್ ಪಟೇಲ ಶ್ರೀ ಕೆ. ರಾಮರಾಯ ರಾಮುರವರಿಂದ ಚಾರ್ಜ್ ಪಡೆದುಕೊಂಡಿರುವರೆಂದು ತಿಳಿದುಬರುತ್ತದೆ.

ಆದರೆ ಇವರು ಇಷ್ಟದಲ್ಲಿ ಇರುತ್ತಿದ್ದು ಹೀರಾ ಕಲಿತು ಮಂಗಳೂರಲ್ಲೇ ಇರುವಂತಿದೆ. ಕಾಯಂ ಪಟೇಲರಿಗೆ ಕಾಯಂ ವಾಸ್ತವ್ಯ ವಿರಬೇಕಾಗಿಲ್ಲವೆಂಬ ಭಾವನೆಯಿಂದ ಹೀಗೆ ವರ್ತಿಸುವರೋ ಏನೆಂದು ತಿಳಿಯುವುದಿಲ್ಲ. ಅಂತೂ ಇವರು ಊರಲ್ಲೇ ಇರುತ್ತಿದ್ದರೆ ಬಹು ಅನುಕೂಲವಿತ್ತು. ಇಲ್ಲವಾದರೆ ಗ್ರಾಮಸ್ಥರಿಗೆ ಪಟೇಲರು ಇರುವ ಸ್ಥಳವನ್ನು ತಿಳಿದುಕೊಳ್ಳಲಾಗದೆಯೂ, "ಎರಡು ದಾಸರ ನಂದಿಯ ಕುರುಡದಾಸನ ಗತಿ"ಯಂತೆಯೂ ಆಗಿ ನಿತ್ಯ ಧ್ಯಾನವೆಂದರೂ ಹೆಚ್ಚಾಗದು. ಆದುದರಿಂದ ದಯವಿಟ್ಟು ಇನ್ನಾದರೂ ಶ್ರೀಯುತರು ಇಷ್ಟ ಗ್ರಾಮದಲ್ಲೇ ಇರುವಂತೆ ಏರ್ಪಾಡಾಗದೆ?

ಗ್ರಾಮಸ್ಥ

ದಕ್ಷಿಣ ಕನ್ನಡದ ಸಿಂಹ

ಸುಮಾರು ೧೦-೧೫ ವರ್ಷಗಳ ಹಿಂದೆ ಪ್ರೊಫೆಸರ್ ಎಸ್. ಶೇಷಪ್ಪನವರ ಅಂಗಸಾಧನಾ ಮಂದಿರವು ಮಂಗಳೂರಲ್ಲಿದ್ದುದು ಮಂಗಳೂರವರಿಗೆ ವಿದಿತವೇ! ಅವರ ಕೀರ್ತಿಯು ಆಗಲೇ ಮಂಗಳೂರಿಗೆ ಮಾತ್ರವಲ್ಲ ಇಡೀ ದಕ್ಷಿಣ ಕನ್ನಡಕ್ಕನೇ ಹಬ್ಬಿತ್ತು. ಆದರೆ ಕಾರಣಾಂತರಗಳಿಂದ ಅವರ ಸರ್ಕಸ್ ಕಂಪೆನಿಯು ಛಿನ್ನಭಿನ್ನವಾಗಿ ಅವರ ಶಿಷ್ಯವರ್ಗದವರೆಲ್ಲರೂ ದಿಕ್ಕಾಪಾಲಾದರು. ಅಲ್ಲಿಂದೀಚೆ ಈ ಪ್ರೊಫೆಸರರು ಅಜ್ಞಾತವಾಸಿಗಳಾಗಿಯೇ ಇದ್ದು ತನಗೆ ಎಷ್ಟೆಷ್ಟು ಎಡರುತೊಡರುಗಳೊದಗಿದರೂ ತಾನು ಅಭ್ಯಸಿಸಿದ ವಿದ್ಯೆಯನ್ನು ಮಾತ್ರ ಬಿಟ್ಟುಬಿಡದೆ ನಿಶ್ಚಲ ಮನಸ್ಕರಾಗಿ ಈಗ ಕೆಲವು ವರ್ಷಗಳಿಂದ ಮುಂಬಾಯಿಯಲ್ಲಿ ತನಗೆ ಬೇಕಾಗುವಷ್ಟು ಶಿಷ್ಯರುಗಳನ್ನು ಕೂಡ ಹಾಕಿ, ಅವರಿಗೆ ತನ್ನ ವಿದ್ಯೆಯನ್ನು ಏನೊಂದೂ ಪ್ರತಿಫಲಾಪೇಕ್ಷೆ ಇಲ್ಲದೇನೇ ಕಲಿಸುತ್ತಾ ತಮ್ಮದೊಂದು ಉತ್ತಮ ಸಂಸ್ಥೆಯನ್ನೇ ಏರ್ಪಡಿಸಿ ತಮ್ಮ ಶಿಷ್ಯವರ್ಗದವರಿಗೆ ಮಾತ್ರವಲ್ಲ ಅಖಿಲ ಕರ್ನಾಟಕಕ್ಕನೇ ಭೂಷಣಪ್ರಾಯರಾಗಿ ಮೆರೆಯುತ್ತಿದ್ದಾರೆ. ಇದೀಗ ಕನ್ನಡಿಗರೆಲ್ಲರಿಗೂ ಒಂದು ಹೆಮ್ಮೆಯ ವಿಷಯವೇ! ಮುಂಬಾಯಿಯಲ್ಲಿರುವ ಅಂಗಸಾಧನಾ ಮಂದಿರಗಳಲ್ಲಿ ಪ್ರಥಮ ಶ್ರೇಣಿಗೆ ಸೇರತಕ್ಕಂತಹದ್ದೆಂದರೆ ಇದೆ. ಈ ಪ್ರೊಫೆಸರರ ದಿ. ಕೆನರಾ ಫಿಸಿಕಲ್ ಕಲ್ಚರ್ ಇನ್ಸ್ಟಿಟ್ಯೂಟ್ ಎಂಬುದು. ಈ ಸಂಸ್ಥೆಯಲ್ಲೀಗ ಸುಮಾರು ೮೦ ಮಂದಿಗಳಿಂತಲೂ ಹೆಚ್ಚಿನ ಅಂಗಸಾಧಕರಿರುವರು. ಇವರಲ್ಲಿ ಹಲವು ಮಂದಿಗಳಂತೂ ಅಸಾಧಾರಣ ಅಂಗಸಾಧನೆಗಳನ್ನು ಮಾಡಿ ಜನರನ್ನು ಬೆರಗುಗೊಳಿಸುವರು. ಈ ಸಂಸ್ಥೆಯವರು ತಮ್ಮ ದೇಖಾವೆಗಳಲ್ಲಿ ಮಾಡಿ ತೋರಿಸುವ ಹಲಕೆಲವು ಆಟಗಳು ನಿಜವಾಗಿಯೂ ವಿಸ್ಮಯಕರವಾದುವುಗಳೇ. ಇವರ ಕೆಲವು ಆಟಗಳಿಗೆ ಎಷ್ಟು ಸಮಯದ ಅಭ್ಯಾಸವು ಆಗಬೇಕಿತ್ತೋ ಅದನ್ನು ಊಹಿಸಲಸದಳ. ಈ ಸಂಸ್ಥೆಯಲ್ಲಿರುವ ಡೈನಮೊ ಬಲ್ಲೀ ಶ್ರೀ ಎಮ್. ವಿ. ರಾವ್ ಇವರ ೩ ವರ್ಷದ ಗಂಡು ಮಗುವು ತಾನು ಏಣಿಯನ್ನು ಹತ್ತಿ ಅಲ್ಲಿ ಮಾಡಿ ತೋರಿಸುವ ಆಟಗಳಿಂದ ಪ್ರೇಕ್ಷಕರನ್ನು ದಂಗುಬಡಿಸಿಬಿಡುವುದು. ಒಬ್ಬ ಚಿಕ್ಕ ಬಾಲಕಿಯ ಆಟವನ್ನು ನೋಡುತ್ತಿರುವ ಪ್ರೇಕ್ಷಕರಿಗೆ ರೋಮಾಂಚನವಾಗದಿರುವುದಿಲ್ಲವೆಂದರೆ ಅತಿಶಯೋಕ್ತಿಯಲ್ಲ. ಒಟ್ಟಿನ ಮೇಲೆ ಈ ಸಂಸ್ಥೆಯ ಪ್ರತಿಯೊಂದು ಆಟವೂ ಪ್ರೇಕ್ಷಕರ ಕಣ್ಣುಗಳನ್ನು ಸೂರೆಗೊಳ್ಳುವಂತಹುಗಳೇ. ಮುಂಬಾಯಿಯಲ್ಲಿ ಸಂಸ್ಥೆಯನ್ನು ಕನ್ನಡಿಗರಂತೂ ಇರಲಿ, ಗುಜರಾತಿ, ಮರಾಠಿ ಮುಂತಾದ ಪ್ರಾಂತ್ಯದವರು ಕೂಡಾ ಹೊಗಳುತ್ತಿರುವರು. ಪ್ರೊಫೆಸರರು ತಮ್ಮ ಮಕ್ಕಳನ್ನೂ ಇದೇ ಸಂಸ್ಥೆಗನೇ ಸೇರಿಸಿಕೊಂಡಿರುವುದು ಅವರಿಗೆ ಕೆಂಪು ಬೆಂಬಲವೇ ಆಗಿರುವುದು. ಮುಂಬಾಯಿಯಂತಹ ಮರಾಠ ದೇಶದಲ್ಲೂ ಕನ್ನಡಿಗರೆದೆಯ ಕೆಚ್ಚನ್ನು ಪ್ರದರ್ಶಿಸಿ ಕನ್ನಡಿಗರು ಯಾವುದರಲ್ಲೂ ಹಿಂದಿಲ್ಲವೆಂಬುದನ್ನು ತೋರಿಸಿ 'ದಕ್ಷಿಣ ಕನ್ನಡದ ಸಿಂಹ' ವೆಂಬ ಬಿರುದಾಂಕಿತದಿಂದ ಪ್ರೊಫೆಸರರು ಮೆರೆಯುತ್ತಿರುವುದು ಕನ್ನಡಿಗರಿಗೊಂದು ಅಭಿಮಾನವಲ್ಲದೆ ಮತ್ತಿನ್ನೇನು? ಅಲ್ಲದೆ ಶ್ರೀಯುತರು ತನ್ನ ಸಂಸ್ಥೆಯ ದೇಖಾವೆ ಪ್ರದರ್ಶನಗಳಿಂದ ಹುಟ್ಟಿ ಬಂದ ಹಣದ ಹೆಚ್ಚಿನ ಭಾಗವನ್ನು ಇತರ ಧರ್ಮಕಾರ್ಯಗಳಿಗೂ ಇನ್ನಿತರ ಧರ್ಮಸಂಸ್ಥೆಗಳಿಗೂ ದಾನ ಮಾಡುತ್ತಿರುವುದು ಶ್ಲಾಘನೀಯವೂ ಪುಣ್ಯಪ್ರದವೂ ಆಗಿರುತ್ತದೆ. ಈ ಸಂಸ್ಥೆಯು ಇನ್ನಷ್ಟು ಊರ್ಜಿತಾವಸ್ಥೆಗೇರಿ ಕನ್ನಡಿಗರ ಕೀರ್ತಿಯನ್ನು ಮತ್ತಷ್ಟು ಹೆಚ್ಚಿಸುತ್ತಿರಲಿ.

ವಿ. ನರಸಪ್ಪ

ಕಲ್ಲು ತಿನ್ನುವ ಪುರುಷ.

ಯುನೈಟೆಡ್ ಸ್ಟೇಟ್ಸಿನಲ್ಲಿ ಒಬ್ಬ ಪುರುಷನಿರುವನು. ಅವನು ಊಟಮಾಡುವಾಗ ಯಾರಾದರೂ ಅವನ ಬಳಿ ನಿಲ್ಲಲು ಒಪ್ಪುತ್ತಾನೆ. ಊಟವೆಂದರೇನು? — ರೋಜನ್ನು ಹುಡುಗಿಯ ಅವರ ಮೇಲೆ ದೊಡ್ಡ ಇಟ್ಟಿಗೆಯೊಂದನ್ನು ಇಡುತ್ತಾನೆ, ಹಸಿವಾದಂತೆ ಅದನ್ನು ತಿನ್ನಲಾರಂಭಿಸುತ್ತಾನೆ. ಅನ್ನದೊಡನೆ ಪದಾರ್ಥ ತಿನ್ನುವಂತೆ ಅದರೊಡನೆ ಸ್ವಲ್ಪ ಸ್ವಲ್ಪ ಕಲ್ಲಿದ್ದಲನ್ನೂ ತಿನ್ನುತ್ತಾನೆ. ಆದಾದ ಮೇಲೆ ಒಂದು ಮುಂಡು ಶೀಲವನ್ನು ತಿನ್ನುತ್ತಾನೆ. ಕಡೆಗೆ ಒಂದು ಗ್ಲಾಸು ನೀರು ಕುಡಿಯುತ್ತಾನೆ. ಈ ಮನುಷ್ಯನು ಈಗಲೂ ಸದಾರೋಗ್ಯದಿಂದಿದ್ದಾನೆ.

ಆರೋಗ್ಯ ಮತ್ತು ಬಲವರ್ಧನೆಗಾಗಿ.

ಯಾವ ಆಟದಲ್ಲಾಗಲೀ, ಯಾವ ಕೆಲಸದಲ್ಲಾಗಲೀ, ದಿನಂಪ್ರತಿಯೂ ಆರೋಗ್ಯವೂ ಶಕ್ತಿಯೂ ಜಯಕ್ಕೆ ಅಗತ್ಯ. ಆದಕ್ಕಾಗಿಯೇ ಪ್ರಪಂಚದ ಆಟಗಾರರು,—ಕೈ, ಮಿದುಳುಗಳಿಂದ ಕೆಲಸ ಮಾಡುವವರು ದಿನನಿತ್ಯವೂ ಓವಲ್ಟಿನ್ನನ್ನು ಸೇವಿಸುವರು.

ಈ ದೇಶದಲ್ಲಿ ಓವಲ್ಟಿನ್ ಅಗತ್ಯ. ಏಕೆಂದರೆ, ಈ ದಿನಗಳ ಕಷ್ಟ ಜೀವನ ದೊಡನೆ ನಾವು ನಮ್ಮ ಹವಾಗುಣದ ತಾಪವನ್ನು ಸಹಿಸುವಷ್ಟು ಚೈತನ್ಯಶಾಲಿಗಳಾಗ ಬೇಕು.

ಓವಲ್ಟಿನ್‌ನಲ್ಲಿರುವ ಉತ್ಕೃಷ್ಟ ಪೋಷಣವು ಆರೋಗ್ಯ, ಶಕ್ತಿ ಮತ್ತು ಬಲಕ್ಕೆ ಬೇಕಾದ ಸಾರವನ್ನು ಒದಗಿಸಿಕೊಡುತ್ತದೆ. ಇದನ್ನು ಸದಾ ಸೇವಿಸುತ್ತಾ ಇದ್ದರೆ ಮಾನಸಿಕ ಮತ್ತು ದೈಹಿಕ ಶಕ್ತಿಯು ಬರುತ್ತದೆ.

OVALTINE

ಮಿದುಳು, ನರ ಮತ್ತು ದೇಹವನ್ನು ವೃದ್ಧಿಸುತ್ತದೆ.

ತಯಾರಿಯಲ್ಲಿ ಕೈಯಲ್ಲಿ ಸ್ಪರ್ಶಿಸಲಾಗಿಲ್ಲ. ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಸಿಗುತ್ತದೆ
ಏಜಂಟ್—ಜೇಮ್ಸ್ ರೈಟ್, 86ಎ, ಕ್ಲೈವ್ ಸ್ಟ್ರೀಟ್ ಕಲ್ಕತ್ತ, ಮತ್ತು ಬೊಂಬಾಯಿ ಮದ್ರಾಸುಗಳಲ್ಲಿ

OV/...

'ಸ್ಕ್ಯಾಬ್'ನ ಓಪನ್ ಲೆಟರ!!!

ರಾಜಮಾನ್ಯರಾಜೇಶ್ರೀ!—ತಪ್ಪಿದೆ—ಜನಮಾನ್ಯರಾದ ಶ್ರೀಯುತರಾದ ಮಹಾತ್ಮಾಗಾಂಧೀ ಮಹಾರಾಜರಿಗೆ! (ಇಲ್ಲ, ತಪ್ಪಿದೆ, ಮಹಾರಾಜರಲ್ಲ) ಮಹಾತ್ಮಾಗಾಂಧೀ ಫಕೀರರಿಗೆ, ಕರ್ನಾಟಕ ಕೇಸರಿ, ಹಿಂದೂ ಮುಸಲ್ಮಾನ ಮುಕುಂದ, ಧೀರ ಬರೆಹಗಾರ ಸ್ವದೇಶಾಭಿಮಾನಿ, ಸಾಷ್ಟಾಂಗ ಪ್ರಣಾಮದ ಭಾರಿ ಉದ್ದಂಡ ನಮಸ್ಕಾರ.

ತರುವಾಯ ಉಭಯ ಕುಶಲೋಪರಿ. ಈ ಮೇಲೆ ತಿಳಿಸುವುದೇ ನೆಂದರೆ—ನೀವು ಮಂಗಳೂರಿಗೆ ಬಂದಿರುವುದು ಅತ್ಯಂತ ಆನಂದದಾಯಕ ವಿಷಯ—ಪೋಲೀಸರು ನಿಮ್ಮ ಹಿಂದೆಯೇ ಇರುವರಾದರೂ ನಿಮ್ಮನ್ನು ನೋಡುವ ಭಾಗ್ಯವು ನಮಗೆ ದೊರಕಿರುವುದು ನಿಜವಾಗಿಯೂ ಮಹಾ ಪುಣ್ಯಪ್ರದ ವಿಷಯವೇ ಸರಿ! ಇರಲಿ!—

ನೀವು ಹರಿಜನ ಬಂಧುಗಳಾಗಿ, ಅದರಿಗಾಗಿ ಹಣ ಶೇಖರಿಸಲು ಹೊರಟಿರಿ ಎಂದು ಹೇಳುತ್ತಿರುವಿರಿ' "ಜನರೇ, ಹರಿಜನರನ್ನು ಮನೆಗೆ ಬಿಡಿರಿ. ದೇವಸ್ಥಾನಕ್ಕೆ ಬಿಡಿರಿ, ಬಿಹಾರಿನಲ್ಲಿ ಭೂಕಂಪವು ಅಸ್ಪೃಶ್ಯತೆಯ ಪಾಪದ ದೈವೀಕ ಎಚ್ಚರಿಕೆ" ಎಂದು ನೇರವಾಗಿ ಹೇಳುತ್ತಿರುವಿರಿ. ಒಪ್ಪಿದೆನು ಆದರೆ ಮಂಗಳೂರಿಗೆ ಬಂದ ನೀವು ಯಾವ ಹರಿಜನರ ಮನೆಯಲ್ಲಿ ವಾಸವಾಗಲು ನಿರ್ಧರಿಸಿರುವಿರಿ? ಹರಿಜನ ಬಂಧುವಾದ ನೀವೂ ನಿಮ್ಮ ಪರಿವಾರದವರೂ ಇಲ್ಲಿಯ ಹರಿಜನರ ಮನೆಯಲ್ಲಿ ಬಡವರಂತೆ ಕೆಲವು ತಾಸುಗಳ ಕಾಲವಾದರೂ ಉಳಿದು ಎಲ್ಲರಿಗೂ ಆದರ್ಶ ಪ್ರಾಯರಾಗಬಹುದೇ? ದಕ್ಷಿಣ ಕನ್ನಡಿಗರೆಂದರೆ ತೀರ ಕುರಿಜನರು. ಅಂತಹವರಿಗೆ ನಿಮ್ಮ ಚಟುವಟಿಕೆಗಳ ಅರ್ಥವೇ ಆಗುವುದಿಲ್ಲ. ನೀವು ಇಷ್ಟೊಂದು ಹಣವನ್ನು ಏನು ಮಾಡಲಿರುವಿರಿ? ಎಂಬುದೇ ಅವರಿಗೆ ಕನಸಿನಲ್ಲೂ ಕಣ್ಮುಂದೆ ಬರುವ ಘೋರ ಪ್ರಶ್ನೆ' ಅಂದು ಹಲವು ಲಕ್ಷ ರೂಪಾಯಿಗಳ ಗಂಟನ್ನು ಕಟ್ಟಿ, ಅದರ ಧೈರ್ಯದಿಂದ ನೀವು ಜೈಲಿಗೆ ಸೇರಿ, ಇಲ್ಲದವರನ್ನು ಸೇರಿಸಿ, ಅಷ್ಟು ಲಕ್ಷ ರೂಪಾಯಿಗಳನ್ನೂ, ಒಡ್ಡಾಯದ ಹೇಳಿಕೆ ಮೇರೆಗೆ ಆಚರಿಸಿದ ಸರಕಾರವು ವಶೀಕರಿಸುವಂತೆ (Coufiscate) ಮಾಡಿ ಆ ದ್ರವ್ಯವನ್ನು ನಿರರ್ಥಕವಾಗಿಸಿದಿರೆಂದು ನಮ್ಮಲ್ಲಿ ಕೆಲವರ ಅಂಬೋಣ. ಇದಕ್ಕೆ ನಿಮ್ಮ ಉತ್ತರವೇನು? ನಮ್ಮೂರಿನ ಕೆಲವು ಕಾಂಗ್ರೆಸ್ ಕೆಲಸಗಾರರು—ಅಂದು ಶರಾಬು ಬಹಿಷ್ಕಾರ ಹಾಕಿದವರು ಇಂದು ಶರಾಬು ಮಾರಿ ಜೀವನ ನಡೆಸುವ ವಿಷಯವು ತಿಳಿದಿರುವುದೋ? ಮುಂದಕ್ಕೆ ನಿಮ್ಮ ಸ್ವಾತಂತ್ರ್ಯ ಚಳವಳಿಕ್ಕೆ ಇಂತಹ ಮೋಸಗಾರರನ್ನು ಸೇರಿಸದಂತೆ ಜಾಗ್ರತೆ ತೆಗೆದುಕೊಳ್ಳಿರಿ. ಕೆಲವು ಸ್ವದೇಶೀ ಪ್ರೇಮಿಗಳು ಈ ವರೆಗೂ ವಿದೇಶಿ ಪುರಸ್ಕಾರವನ್ನು ಮಾಡುತ್ತಾ ಈಗ ನೀವು ಇಲ್ಲಿಗೆ ಬರುತ್ತೀರೆಂದಾದೊಡನೆ, ಖದ್ದರ್ ಅಂಗಡಿಗಳಿಗೆ ಹೋಗಿ ಟೋಪಿ, ದೋತಿಗಳನ್ನು ಪಡೆದು, ಉದ್ದ ಕೈ ಜುಬ್ಬಗಳನ್ನು ತೊಡಿಸಿ ನಿಮ್ಮನ್ನು ವಂಚಿಸುವ ಕೆಲವರ ಕುರಿತು ನಿಮ್ಮಭಿಪ್ರಾಯವೇನು? ನಮ್ಮೂರ ದೊಡ್ಡ ದೊಡ್ಡವರು ಕೆಲವರು ನಿಮ್ಮ ಪಾದದರ್ಶನ ಮಾಡುವುದಕ್ಕಾಗಿ ಮುಂದಾಳುಗಳಾಗಿ ಬರಬಹುದು. ಸ್ವಾಮೀ, ಆದರೆ ಅವರ ಮೇಲೆ ಎಳ್ಳಷ್ಟೂ ನಂಬಿಕೆಯಿಲ್ಲದಿರಲಿ. ನಿಮ್ಮ ಮನೋ ಸಾಕ್ಷಿ, ಮನೋಭಿಲಾಷೆಗಳಂತೆ ನಡೆಯುವವರು ಇವರೊಬ್ಬರೂ ಅಲ್ಲ. ಇವರಲ್ಲಿ ಕಾಣುವ ಕುಹಕದ "ಅಂಧ.ವರ್ಗ" ಮಾತ್ರ ಅಲ್ಲದೆ ಅನ್ಯಾರ್ಥದಿಲ್ಲ. ಅನುಕೂಲಶಾಸ್ತ್ರ ಒಂದಲ್ಲದೆ ಮತ್ತಾವ ಶಾಸ್ತ್ರವೂ ನಿಮಗಿಲ್ಲಿ ಕೇಳಿಬರದು. ಮೊನ್ನೆ ಇಲ್ಲಿಗೆ ಬಂದ ಗವರ್ನರರ ದರ್ಬಾರಿನಲ್ಲಿ ಭಾಗವಹಿಸಿ ಸೇರಿದ್ದ ಮಂಗಳೂರು ಜನರಂತೆ ನೀವೂ ಹರಿಜನ ಚೀಲಕ್ಕೆ ಎರೆದವರಂತೆ ಹಾಕಿದರೆ, ನಿಮ್ಮ ಚೀಲದಲ್ಲಿ ಕನಿಷ್ಠ ೫೦೦೦ ರೂಪಾಯಿಗಳಾದರೂ ಆಗದಿರದು. ಆದರೆ, ಈ ಜನರು ನಿಮ್ಮ ಚೀಲಕ್ಕೆ ಈಗ ಹಾಕಿಯಾರೇ? ಇಲ್ಲ ಇಲ್ಲ! ಸ್ವಾತಂತ್ರ್ಯಕ್ಕೆ ನಮ್ಮವರ ಕೈ ಹಿಂದೆ—ದುಷ್ಕಾರ್ಯಕ್ಕೆ ನಮ್ಮವರ ಕೈ ಬಾರಾ ಮುಂದೆ. ನೀವು ಉಡುಪಿಗೆ ಹೋದಾಗ ನಿಮಗೆ ಯಾವ ರೀತಿಯ ಸ್ವಾಗತವು ದೊರೆಯುವುದೋ ನಾನರಿಯೆ. ಮಠಗಳವರು ನಿಮ್ಮ ದರ್ಶನಕ್ಕಾಗಿ ಬರಲಾರರೆಂದೇ ನನ್ನ ಊಹೆ ಇದೆ. ಬಂದರೂ ನಿಮ್ಮೊಡನೆ ಮಾತನಾಡಲಾರರೆಂದೇ ನನ್ನ ಭಾವನೆ ಇದೆ. ಮಾತನಾಡಿದ್ದರೂ ಮಠಗಳ ಆಡಳಿತದ ಕುರಿತು ಮಾತನಾಡಲಾರರೆಂದೇ ನನ್ನ ಮಾತು ಇದೆ. ಮಾತನಾಡಿದರೂ ಅಲ್ಲಿಂದ ನಿಮ್ಮ ತಿಳಿಯಲು ಅವಕಾಶ ಇರದೆಂದೇ ನನ್ನ ಅಭಿಮತ ಇದೆ. ಅವಕಾಶ ವಿದ್ದರೂ ನಿಮಗೆ ಸಾಧ್ಯವಿಲ್ಲವೆಂದೇ ನನ್ನ ಅಭಿಪ್ರಾಯ ಇದೆ. ಸಾಧ್ಯವಿದ್ದರೂ ಉಡುಪಿಯಲ್ಲಿ ಅಸಾಧ್ಯವೆಂದೇ ನನ್ನ ಭವಿಷ್ಯನುಡಿ ಇದೆ. ನಿಮ್ಮ ಮೈದಾನದ ಸಭೆಯಲ್ಲಿ ನಾಡಿನ ಸಾವಿರಾರು ಸ್ತ್ರೀಯರು ಸೇರಿ, ಮನೆಯಲ್ಲಿ ತೆಗೆದಿಟ್ಟು ಬಾಕಿ ಉಳಿದಿರುವ ನಗನಾಣ್ಯಗಳನ್ನು ನಿಮಗೆ ಅರ್ಪಿಸಬಹುದು. ಆದರೆ ಅದು ಅವರ ಸ್ವಾರ್ಥತ್ಯಾಗದ ಆರಂಭದ ಕೊನೆ ಎಂದೇ ತಿಳಿಯಿರಿ. ಮನೆಗೆ ಹೋದೊಡನೆ ಅವರು ವಿದೇಶಿ ಸೀರೆಗಳನ್ನೋ ಭಂಗಾರದ ರಾಶಿರಾಶಿಗಳನ್ನೋ ಧರಿಸಿ ತಾವು ನಿಮ್ಮೆದುರು ಮಾಡಿದ ಸ್ವಾರ್ಥತ್ಯಾಗದ ಸಿದ್ಧಿಯನ್ನೇ ಮರೆಯಲಾರ ದಿರುವರೇ? ಶ್ರೀ ಕೃಷ್ಣನು ಪೂರ್ವಕ್ಕೆ ಮೊಗ ತಿರುಗಿಸಿ ನಿಮಗೆ ಮಂಗಳವನ್ನುಂಟುಮಾಡಲೆಂದು ಸೆರಗೊಡ್ಡಿ ಬೇಡುವ,

'ಸ್ಕ್ಯಾಬ್'

ಕ್ಷಯರೋಗಾದಿಗಳಿಗೆ

ಚ್ಯವನಪ್ರಾಶಾನ ಲೇಹ.

ಪ್ರಸೂತಿ ರೋಗಾದಿಗೆ

ದಶಮೂಲಾರಿಷ್ಟ.

(ಕಸ್ತೂರಿ ಮಿಶ್ರಿತ)

ಸಮಸ್ತ ವಾತರೋಗಗಳಿಗೆ

ಮಹಾನಾರಾಯಣ ತೈಲ.

ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ,
ಡೊಂಗರಕೇರಿ ರಸ್ತೆ, ಮಂಗಳೂರು.

ನೋಟೀಸು.

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ
O P No 25/1934.

ಬೀರಾಪ್ಪುಂಞಿ ಕೂಡಾ 8 ಜನರು—ಅರ್ಜಿದಾರರು.

ಕಾಸರಗೋಡು ಕಸಬೆಯಲ್ಲಿರುತ್ತಿದ್ದ ಅಬ್ಬಲ್ಲ ಬ್ಯಾರಿಯ ಮಗ ವೃತಪಟ್ಟ ಕರಿಪ್ಪೋಡಿ ಮಮ್ಮುಂಞಿ ಬ್ಯಾರಿಗೆ ದಕ್ಷಿಣ ಕನ್ನಡ ಜಿಲ್ಲಾ ಎಜುಕೇಶನಲ್ ಆಫೀಸರಿಂದ ಕಾಸರಗೋಡು ತನ್ವೀರುಲ್ ಇಸ್ಲಾಂ ಹಾಯರ್ ಎಲಿಮೆಂಟರಿ ಶಾಲೆಯ ಗ್ರಾಂಟಿನ ಬಾಬಿನಲ್ಲಿ ಬರತಕ್ಕ ರೂ. 8½/-ನ್ನು ವಸೂಲು ಪಡೆಯುವರೆ ಆತನ ವಾರಿಸುದಾರರಾದ ತಮ್ಮ ಬಗ್ಗೆ 1ನೇ ಅರ್ಜಿದಾರರ ಹೆಸರಲ್ಲಿ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರರು ದಾಖಲು ಮಾಡಿದ ಸದರಿ ಅರ್ಜಿಯು ತಾ 9-8—34 ರಲ್ಲಿ ಮೇಲ್ಕಂಡ ಕೋರ್ಟಿನಲ್ಲಿ ತನಿಖೆಗೆ ಇಡೋಣಾಗಿದೆ. ಆ ಕುರಿತು ಆಕ್ಷೇಪಿಸುವವರು ಆ ದಿನದ ವಳಗೆ ತಮ್ಮ ಆಕ್ಷೇಪಣೆಯನ್ನು ಹಾಜರು ಮಾಡಿಕೊಳ್ಳಬಹುದೆಂಬ ಸಂಗತಿ ಈ ಮೂಲಕ ತಿಳಿಸೋಣಾಗುತ್ತದೆ.

Kasaragod,
20—3—1934.

G. Rama Rao,
ಅರ್ಜಿದಾರರ ಪರ ವಕೀಲ್.

+ + ++

ಸ್ವದೇಶಾಭಿಮಾನಿ

ಪತ್ರಿಕೆಯ ಚಂದಾದಾರರು ಪತ್ರವ್ಯವಹಾರಗಳಲ್ಲಿ ತಮ್ಮ ಚಂದಾ ನಂಬರುಗಳನ್ನು ನಮೂದಿಸ ಬೇಕು. ಅವುಗಳಿಲ್ಲದ ಪತ್ರಗಳಿಗೆ ಸರಿಯಾದ ಶಿಗಾ ಸಿಗುವುದಿಲ್ಲ.

ಮ್ಯಾನೇಜರ್.

ಜವಾಹರಲಾಲರಿಗೆ ಎರಡು ವರ್ಷಗಳ ಸಾದಾ ಸಜೆ!

ಬಿಹಾರಿಗೆ ೧೦,೦೦೦ ಪೌಂಡುಗಳ ಸಹಾಯ!!!

ಅಲ್ಲಿಯ ಚಿಂತೆ ಹಾಗೇ—

ಪಂಡಿತ ಜವಾಹರಲಾಲರ ನ್ಯಾಯ ವಿಚಾರಣೆಯು ತಾ. ೧೬ನೇ ದಿನ ಕಲ್ಕತ್ತದಲ್ಲಿ ಚೀಫ್ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರಾದ ಮಹಾಶ್ಯ ಎಸ್. ಕೆ. ಸಿಂಹರೆದುರು ನಡೆಯಿತು. ಪಂಡಿತರು ಕಲ್ಕತ್ತದಲ್ಲಿ ಮಾಡಿದ ಎರಡು ಭಾಷಣಗಳೂ ಸಂಪೂರ್ಣ ನಿಷಿದ್ಧವಾಗಿರುವುವೆಂದೂ, ಕಾಯಿದೆ ವಿರೋಧವಾಗಿರುವುವೆಂದೂ ರಾಜದ್ರೋಹಕರವಾಗಿರುವುವೆಂದೂ ಮ್ಯಾಜಿಸ್ಟ್ರೇಟರು ವಿವರಪೂರ್ವಕವಾಗಿ ನುಡಿದು, ಸ್ಥಿರಗೊಳಿಸಿದರು. ತನ್ನಲ್ಲಿ, ಪಂಡಿತರ ಹೇಳಿಕೆಯು ನಡೆಯಿತು. ಅವರು, ತಾನು ಎಷ್ಟೋ ಕಾಲದಿಂದಲೂ ನಿಷಿದ್ಧ ಭಾಷಣಗಳನ್ನೇ ಮಾಡುತ್ತಿರುವೆನೆಂದೇ ಹೇಳಿದರು. ಕೊನೆಗೆ ಪಂಡಿತರಿಗೆ ಎರಡು ವರ್ಷಗಳ ಸಾದಾ ಸಜೆಯನ್ನು ವಿಧಿಸಲಾಗಿ ಅವರನ್ನು ಅಲಿಪುರ ಜೈಲಿಗೆ ಕೊಂಡೊಯ್ಯಲಾಯಿತು.

ಪೆರಿಸ್‌ನಲ್ಲಿ ಭಯಂಕರ ಲೂಟಿ!

ಸರಕಾರೀ ಕಟ್ಟಡಗಳಲ್ಲಿ ಬೆಂಕಿ!

ಪೆರಿಸ್‌ನ ಪೆಲೆಸ್ ಡಿ. ಲಿ. ಕೊಂಕೊರ್ಡ್‌ನಲ್ಲಿ ಕಳೆದ ವಾರ ಸಾವಿರಾರು ಜನರ ಸಮೂಹವು ಸರಕಾರೀ ಕಟ್ಟಡಗಳನ್ನು ಮುತ್ತಿ 'ಸರಕಾರವು ನಾಶವಾಗಲಿ' ಎಂದು ಬೊಬ್ಬಿಟ್ಟು ಕಮ್ಯೂನಿಸ್ಟ ದಂಗೆಗಾರರು ಪೆಟ್ರೋಲಿಯಂಗಳಿಂದ ಅಲ್ಲಲ್ಲಿದ್ದ ಮೋಟರ್ ಕಾರುಗಳಿಗೆ ಬೆಂಕಿ ಕೊಟ್ಟರು. ಮಿನಿಸ್ಟ್ರಿ ಆಫ್ ಮೆರೈನ್ ಇವರ ಆಫೀಸಿಗೆ ಬೆಂಕಿ ಕೊಟ್ಟರು. ಕುದುರೆಗಳನ್ನೇರಿದ ಪೋಲೀಸ ದಳಗಳಿಗೂ ಜನರಿಗೂ ಹೊಯ್‌ಕೈ ನಡೆಯಿತು. ನೂರಾರು ಜನರು ಗಾಯಗೊಂಡರು. ೩೫೦ ಜನರನ್ನು ಬಹು ಪ್ರಯಾಸದಿಂದ ಸೆರೆ ಹಿಡಿದರು. ಅನೇಕ ಪೋಲೀಸರೂ ಜಖಂಗೊಂಡರು.

ಇಂಗ್ಲಾಂಡಿಗೆ ಎಚ್ಚರಿಕೆ!

ಯುದ್ಧಕ್ಕಾಗಿ ಎಚ್ಚರವಿರೋಣ!

ಪಾರ್ಲಿಮೆಂಟಿನಲ್ಲಿ ಬಾಲ್ಡ್‌ವಿನ್ ದೊರೆಗಳು ಒಂದು ವಿಶೇಷ ಎಚ್ಚರಿಕೆಯನ್ನು ದೇಶಕ್ಕೆ ಇತ್ತರು. ಅವರು ಹೇಳಿದ್ದೇನೆಂದರೆ—"ನಮ್ಮಲ್ಲಿರುವ ಶಸ್ತ್ರಗಳು ಸಾಲವು. ಯೂರೋಪಿನ ಧಣಿಗಳು ಜಿನೀವಾದಲ್ಲಿ ಜಂಗಿ ಶಸ್ತ್ರ ಸನ್ಯಾಸ ಪರಿಷತ್ತಿನ ಬಯಲಲ್ಲಿ ಹೊಂದಿಕೊಂಡಿದೆ. ಅದು ಮುರಿದರೆ ನಾವು ನಮ್ಮ ಶಸ್ತ್ರಗಳನ್ನು ಹೆಚ್ಚಿಸಿ ಜತನದಿಂದಿರಬೇಕು. ಅದಷ್ಟು ತ್ವರಿತಗಲ್ಲೇ ನಾವು ಉಪಕರಣಗಳನ್ನು ಸಿದ್ಧಗೊಳಿಸಬೇಕು. ಇದು ನಮ್ಮ ಆದ್ಯ ಕರ್ತವ್ಯ. ನಾವು ಪರರಾಷ್ಟ್ರಗಳೊಡನೆ ಸಮಾನಸ್ಕಂಧತೆಯಿಂದಿರಬೇಕಾದರೆ ಇದು ತೀರ ಅಗತ್ಯ.

ಸಹನಾತೀತ ಶೀತ! ನ್ಯೂಯೋರ್ಕಿನಲ್ಲಿ

ಜನರಿಗೆ ಬಾಧೆ!

ಕಳೆದ ವಾರ ನ್ಯೂಯೋರ್ಕಿನಲ್ಲಿ ಅಸಹನೀಯ ಶೀತ!—೯ ಡಿಗ್ರಿಗಿಂತಲೂ ಕೆಳಗೆ ಹವಾಮಾಪಕ ಯಂತ್ರವು ಇಳಿಯಿತು. ಹೈಲುಬಂಡಿಗಳು ತಡವಾಗಿ ಬಂದುವು. ಹಡ್ಸನ್ ನದಿಯು ಸಂಪೂರ್ಣವಾಗಿ ಗಟ್ಟಿ ಕಟ್ಟಿತು. ಇದರೊಡನೆ ತೀವ್ರ ಬಿರುಗಾಳಿಯು ಬೀಸಿ ಚಳಿಯನ್ನು ಹೆಚ್ಚಿಸುತ್ತಿದೆ. ಅನೇಕ ಜನ ಚಳಿಸುವಾರುಗಳು ವ್ಯಕ್ತವಾಗುವಂತಾಗಿದೆ. ವರ್ಣನೆಯಾದಲ್ಲೂ ಬಹಳ ಚಳಿ!

ಭೂಕಂಪದಿಂದಾಗಿ ಪಲಾಯನ

ಪಿಸ್ತೂಲು ಹಿಡಿದವನಿಗೆ ಶಿಕ್ಷೆ!

ಲೈಸೆನ್ಸು ಇಲ್ಲದ ಪಿಸ್ತೂಲು ಗುಂಡುಗಳನ್ನು ವಶಪಡಿಸಿಕೊಂಡುದಕ್ಕಾಗಿ ಹಬುಲ್ ಚಂದ್ರ ರೋಯ್ ಎಂಬ ಬಂಗಾಳಿಯೊಬ್ಬನು ಪೋಲೀಸರಿಂದ ಸೆರೆಹಿಡಿಯಲ್ಪಟ್ಟಿದ್ದನು. ತಾ. ೧೫ನೇ ಜನವರಿ ದಿನ ಭೂಕಂಪವಾದಾಗ ಅವನು ಪೋಲೀಸರಿಂದ ತಲೆ ತಪ್ಪಿಸಿ ಓಡಿದನು. ಕಳೆದ ವಾರ ಪುನಃ ಮ್ಯಾಜಿಸ್ಟ್ರೇಟರನ್ನು ಕಂಡು ತಪ್ಪನ್ನೊಪ್ಪಿಕೊಂಡನು. ಕಲ್ಕತ್ತ ಮ್ಯಾಜಿಸ್ಟ್ರೇಟರು ಇವನ ಧೈರ್ಯಕ್ಕಾಗಿ ಮೆಚ್ಚಿ ಎರಡೂವರೆ ವರ್ಷಗಳ ಶಿಕ್ಷೆಯನ್ನು ಕಡಿಮೆ ಮಾಡಿ ೨ ವರ್ಷಗಳ ಕಠಿಣ ಸಜೆಯನ್ನು ವಿಧಿಸಿದರು.

ಅಖಿಲ ಭಾರತ ಸಂಚಾರ

ಭಕ್ತನ ಸಾಹಸ

ಸೆತಾರನಿವಾಸೀ ಹೇಮಚಂದ್ ನಾನ್‌ಚಂದ್ ಎಂಬ ೬೫ ವರ್ಷದ ಭಕ್ತರೊಬ್ಬರು ಹಿಂದೂಸ್ಥಾನದ ಪವಿತ್ರ ಕ್ಷೇತ್ರ ಮತ್ತು ಚಾರಿತ್ರಿಕ ಸ್ಥಳಗಳನ್ನು ಕಾಣುವುದಕ್ಕಾಗಿ ೩೪ ತಿಂಗಳುಗಳ ಪೂರ್ವದಲ್ಲಿ ಕಾಲ್ನಡೆಯಿಂದಲೇ ಹೊರಟರು. ಈಗ ತಮ್ಮ ಸಾಹಸವನ್ನು ಪೂರೈಸಿ ಊರಿಗೆ ತಲಪಿರುವರು.

ಹೈದರಾಬಾದ್ ಗಾಡಿಗಾರರ ಮುಷ್ಕರ

ಕಾರು ಹಾಕಿದುದು ಆಗಲಿಲ್ಲ!

ಹೈದರಾಬಾದ್ (ಸಿಂಧ್)ನಲ್ಲಿ ತಿಲಕ ರೋಡಿನ ಇಳಿಜಾರಿಗೆ ಉದ್ದಕ್ಕೂ ಕಾರು ಹಾಕಿದುದಕ್ಕಾಗಿ ಗಾಡಿಗಾರರೆಲ್ಲ ಕೂಡಿ ಮುಷ್ಕರ ಹಿಡಿದು ಮ್ಯುನಿಸಿಪಾಲಿಟಿಯು ಈ ಕ್ರಿಯೆಯು ತಮ್ಮ ಗಾಡಿಗಳ ಕುದುರೆಗಳ ದೃಷ್ಟಿಕೋಣದಲ್ಲಿಯೂ, ಜನರ ಮುಗ್ಗರಿಸುವಿಕೆಯಲ್ಲಿಯೂ ಪರಿಣಾಮಗೊಳ್ಳುತ್ತದೆಂದು ಕಲೆಕ್ಟರರಿಗೆ ಮನವಿ ಮಾಡಿರುವರು. ಈ ಮುಷ್ಕರದಿಂದಾಗಿ ಜನರಿಗೆ ಒಹಳ ಅನಾನುಕೂಲವೊದಗಿದೆ. ಕಲೆಕ್ಟರರು ಮನವಿಯನ್ನು ಪರ್ಯಾಲೋಚಿಸುವೆನಾಗಿ ಆಶ್ವಾಸನೆಯಿತ್ತಿರುವರು.

೬ ಮಿಲಿಯ ಜನರು ಆಕಾಶವಾಣಿ ಕೇಳುವರು

ವರ್ಷಂಪ್ರತಿ ಸಂಖ್ಯೆ ಹೆಚ್ಚುತ್ತದೆ!

ಬ್ರಿಟಿಷ ಬ್ರೊಡ್ ಕ್ಯಾಸ್ಟಿಂಗ್ ಕೊರ್ಪರೇಶನಿನವರು ತಮ್ಮ ರಿಪೋರ್ಟನ್ನು ಲಂಡನಿನಲ್ಲಿ ಪ್ರಕಟಿಸಿರುವರು. ಅದರಂತೆ ಬ್ರೊಡ್ ಕ್ಯಾಸ್ಟಿಂಗನ್ನು ಕೇಳುವವರ ಸಂಖ್ಯೆಯು ವರ್ಷಂಪ್ರತಿ ಹೆಚ್ಚುತ್ತಿದೆಯೆಂದು ಗೊತ್ತಾಗುತ್ತದೆ. ೧೯೩೨ ರಲ್ಲಿ ೫,೨೬,೨೩೬ ಜನರಿಗೆ ಲೈಸನ್ಸು ಕೊಟ್ಟಿತ್ತು. ೧೯೩೩ರಲ್ಲಿ ೫,೯೭೩,೭೫೮ ಜನರಿಗೆ ಕೊಡಲಾಯಿತು. ಈಗ ಅದು ೬,೦೦೦,೦೦೦ ಜನಸಂಖ್ಯೆಯಲ್ಲಿ ನಿಂತಿದೆ. ಬ್ರೊಡ್ ಕಾಸ್ಟಿಂಗ್ ಕೇಳುವ ಲೈಸನ್ಸಿಗಾಗಿ ಕಳೆದ ವರ್ಷ ೨,೮೭೬,೦೦೦ ಪೌಂಡುಗಳು ಜನರಿಂದ ಕೊಡಲ್ಪಟ್ಟುವು. ಇದರಲ್ಲಿ ೧,೪೫೦,೩೫೨ ಪೌಂಡು ಕೊರ್ಪರೇಶನಿಗೆ ಸಂದಿತು. ೧೨೧,೦೦೦,೦೦೦ ಪೌಂಡುಗಳು ಇನ್‌ಕಂಟೇಕ್ಸ್ ಆಗಿ ಹೋದುವು.

ಕಾಶಿ ಪುಣ್ಯಕ್ಷೇತ್ರಕ್ಕೆ ಚಿತ್ತೈಸಿರುವ "ಪರಮ ಬಂಧು" ಮಹಾತ್ಮಾಜೀಯವರು

ನಮ್ಮಿಂದ ಹೆಚ್ಚನ್ನು ನಿರೀಕ್ಷಿಸುತ್ತಿರುವರು!

ಬಿದಾಯ್ರ್ದಿಂದ ಕೊಡೋಣ!

ದೋಣಿಯಲ್ಲಿ ದೇಶ ಸಂಚಾರ!

ಸಾಹಸದ ಯಾತ್ರೆ!

ಜರ್ಮನಿಯ ಮೂವರು ಯುವಕರು ಒಂದು ಸಣ್ಣ ದೋಣಿಯಲ್ಲಿ ಪ್ರಪಂಚ ಪ್ರದಕ್ಷಿಣೆಗೆ ಹೊರಟಿರುವರು. ಕಳೆದ ವಾರ ರಂಗೂನಿಗೆ ತಲಪಿದರು. ಸಿಂಗಾಪೂರ್, ಚೀನಾಗಳಿಗೆ ಹೋಗಲಿರುವರು.

'ವಿಶ್ವಾಮಿತ್ರ' ಪತ್ರಿಕೆಯಿಂದ

ಜಾಮೀನು

ಬಂಗಾಳ ಸರಕಾರವು ಕಲ್ಕತ್ತದ 'ವಿಶ್ವಾಮಿತ್ರ' ಎಂಬ ಹಿಂದೀ ದೈನಂದಿನ ಪತ್ರಿಕೆಯ ಮೊದಲಿನ ರೂ ೨೦೦ ಧರ್ಮತೆಯನ್ನು ವಶೀಕರಿಸಿ ಈಗ ರೂ ೬೦೦೦ವನ್ನು ಹೊಸತಾಗಿ ಕೇಳಿರುವರು. ಪಂಡಿತ ಜವಾಹರಲಾಲರೊಡನೆ ನಡೆದ ಭೇಟಿಯ ಪ್ರಸಂಗವನ್ನು ಪ್ರಕಟಿಸಿದುದಕ್ಕಾಗಿ ಈ ಧದ್ರತೆ ಎಂದು ತಿಳಿದು ಬಂದಿದೆ.

ಶ್ರೀ ಕಾಲೇಲ್ಕರರ ದಸ್ತಗಿರಿ!

ಎರಡು ವರ್ಷಗಳ ಸಜೆ!

ತಾ. ೧೯ನೇ ದಿನ ಅಹ್ಮದಾಬಾದಿನಲ್ಲಿ ಶ್ರೀ ಕಾಲೇಲ್ಕರರ ಮೇಲೆ ಮ್ಯಾಜಿಸ್ಟ್ರೇಟರ ನಿಷೇಧಾಜ್ಞೆಯು ನಡೆದು ಅವರು ೨೪ ತಾಸುಗಳೊಳಗೆ ಊರು ಬಿಟ್ಟು ಹೊರಗೆ ಹೋಗಬೇಕೆಂದಾಯಿತು. ಆದರೆ ಕಾಲೇಲ್ಕರರು ಅದನ್ನು ಮಾನ್ಯ ಮಾಡಿಲ್ಲ. ಅವರನ್ನು ದಸ್ತಗಿರಿ ಮಾಡಿ ಎರಡು ವರ್ಷಗಳ ಕಠಿಣ ಸಜೆಗೆ ಗುರಿಪಡಿಸಿರುವರು.

ಅಮೇರಿಕದ ನಂಬ್ರ ೧ ಕಳ್ಳನ ಆತ್ಮಹತ್ಯೆ!

ಲಿಂಡ್‌ಬರ್ಗ್ ಕೊಲೆಗಾರ!

'ಅಮೇರಿಕದ ಪಬ್ಲಿಕ್ ಎನಿಮಿ ನಂಬ್ರ ೧' ಎಂದು ಅಭಿಧಾನವನ್ನು ಪಡೆದಿದ್ದ ವೆರ್ನ್ ಸೆಂಕಿ ಎಂಬವನನ್ನು ಚಿಕಾಗೋವಿನ ಒಂದು ಸೆಲೂನಿನಲ್ಲಿ ದಸ್ತಗಿರಿ ಮಾಡಿದರು. ಆ ಮೇಲೆ ಅವನ ಪತ್ನಿಯನ್ನು ಸೆರೆ ಹಿಡಿದು ಸ್ಕೂರ್ಸ್ ಜೈಲಿನಲ್ಲಿರಿಸಿದ್ದರು. ಮಿಲಿಯಾಧೀಶನಾದ ಚಾರ್ಲ್ಸ್ ಬ್ಯೂಚರ್ ಎಂಬವನನ್ನು ಕದ್ದೊಯ್ದು ಎರಡು ಮಿಲಿಯ ಡೊಲ್ಲರುಗಳನ್ನು ಕೊಟ್ಟರೆ ಮಾತ್ರ ಅವನನ್ನು ಬಿಡುವೆನೆಂದು ಈ ದರೋಡೆಗಾರನು ಪ್ರಕಟಿಸಿದ್ದನು. ಲಿಂಡ್‌ಬರ್ಗ್ ಮಗುವನ್ನು ಕೊಂದವರಲ್ಲಿ ಇವನೂ ಒಬ್ಬನೆಂದು ಊಹಿಸಲಾಗಿದೆ. ಸಾಧಾರಣ ಮನುಷ್ಯನಂತೆ ಇವನು ದೇಶದಲ್ಲಿ ಮೋಟರ್‌ಗಳಲ್ಲೇ ಸಂಚರಿಸುತ್ತಿದ್ದನು. ಇವನು ಮೊನ್ನೆ ತನ್ನ ನ್ಯಾಯ ತೀರ್ಪಿನ ದಿನ ಎರಡು ನೆಕ್ಟಾಯಿಗಳ ಮೂಲಕ ಜೈಲಿನೊಳಗೆ ಪ್ರಾಣ ತ್ಯಾಗ ಮಾಡಿದನು. ಇದನ್ನು ತಿಳಿದ ಅವನ ಪತ್ನಿಯೂ ಚೀರಿದಳು.

ಮೊದಲು ಸಾವಿರ ಕೊಡಿರಿ!

ಅಭ್ಯುದಯ ಪತ್ರಿಕೆಯ ಮುದ್ರಣಕ್ಕೆ ಕೊಡಲು!

ಅಲ್ಲಹಾಬಾದಿನಲ್ಲಿ ಪಂಡಿತ ಕೃಷ್ಣಕಾಂತ ಮಾಲವೀಯರ ಸಂಪಾದಕತ್ವದಲ್ಲಿ ಹೊರಡುತ್ತಿದ್ದ 'ಅಭ್ಯುದಯ' ಪತ್ರಿಕೆಯನ್ನು ಕಾಯಿದೆ ವಿರುದ್ಧ ಲೇಖನ ಪ್ರಕಟಣೆಗಾಗಿ ನಿಲ್ಲಿಸಿದ್ದರು. ಈಗ ಅದೇ ಪತ್ರಿಕೆಯನ್ನು ಪುನರೆಬ್ಬಿಸುವುದಕ್ಕಾಗಿ ಸಂಪಾದಕರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ ಅರ್ಜಿ ಮಾಡಿಕೊಂಡರು. ಅಭ್ಯುದಯ ಮುದ್ರಣಾಲಯವನ್ನು ಸ್ಥಾಪಿಸುವೆನೆಂದರು. ಆದರೆ ಮ್ಯಾಜಿಸ್ಟ್ರೇಟರು ಸಾವಿರ ರೂಪಾಯಿ ಧದ್ರತೆ ಕೊಟ್ಟ ವಿನಹ ಅವರ ಅರ್ಜಿಯನ್ನು ಸ್ವೀಕರಿಸಲಾಗುವುದಿಲ್ಲವೆಂದರು. ಧದ್ರತೆಯ ಹಣಕ್ಕಾಗಿ ವ್ಯವಸ್ಥೆಯಾಗುತ್ತಿದೆ.

ಕನ್ನಡ ಸಂಗೀತಕ್ಕೆ ಬಹುಮಾನ!

ಅಣ್ಣಾಮಲೈ ವಿಶ್ವವಿದ್ಯಾಲಯದ ನಿರ್ಧಾರ!

ಮದ್ರಾಸಿನ ಅಣ್ಣಾಮಲೈ ಯುನಿವರ್ಸಿಟಿಯ ಸಿಂಡಿಕೇಟ್‌ನವರು ಕರ್ನಾಟಕ ಸಂಗೀತ ಪುಸ್ತಕವೊಂದನ್ನು ಅವರು ಪ್ರಕಟಿಸುವ ಸಿಲೆಬಸ್ ಪ್ರಕಾರ ಬರೆಯುವವರಿಗೆ ೬೦೦ ರೂಪಾಯಿಗಳ ಒಂದು ಬಹುಮಾನವನ್ನು ಇಟ್ಟಿದ್ದಾರೆಂದೂ ಈ ಬಗ್ಗೆ ಪ್ರತ್ಯೇಕ ಪ್ರಕಟಣೆಯಾಗಲಿರುವುದೆಂದೂ ಗೊತ್ತಾಗಿದೆ.

ಬಿಹಾರಿಗೆ ೧೦,೦೦೦ ಪೌಂಡುಗಳು!

ಲಂಡನಿನಲ್ಲಿ ಚಳಿ!

ಲ್ಯೊಡ್ಸ್ ಕಂಪೆನಿಯ ಮೆಂಬರ್ ಕೊರ್ಪರೇಶನಿನವರೂ ಇಷ್ಟರ ತನಕ ಬಿಹಾರ್ ಭೂಕಂಪದ ಸಲುವಾಗಿ ೧೦,೦೦೦ ಪೌಂಡುಗಳನ್ನು ಜಮೆ ಮಾಡಿರುವರು. ಈ ದ್ರವ್ಯವು ಲೋರ್ಡ್ ಮೇಯರರ ಫಂಡಿಗೆ ಹೋಗುವುದು.

ಜಸ್ಟಿಸ್ ಕೆ. ಪಿ. ಲಕ್ಷ್ಮಣ ರಾಯರು

ಮದ್ರಾಸ್ ಹೈಕೋರ್ಟಿನಿಂದ ಜನರಲ್ ಜಸ್ಟಿಸ್ ಪದವಿಯಿಂದಲೇಯವರು ಎಪ್ರಿಲ್‌ನಲ್ಲಿ ನಿವೃತ್ತ ಹೊಂದಿದೊಡನೆ ಶ್ರೀ ಜಸ್ಟಿಸ್ ಕೆ. ಪಿ. ಲಕ್ಷ್ಮಣರಾವ್ ಇವರು ಆ ಖಾಲಿಸ್ಥಾನಕ್ಕೆ ಕಾಯಂ ನ್ಯಾಯಾಧೀಶರು ಬರುವ ತನಕ—ನೇಮಕ ಹೊಂದುವರೆಂದು ಗೊತ್ತಾಗಿದೆ.

ಗ್ರಾಮ ಮುನ್ಸೀಫರನ್ನು ಸೆರೆ ಹಿಡಿದರು.

[illegible]

ಪಾಜೆ ಗ್ರಾಮ ಮುನ್ಸೀಫರಾಗಿದ್ದ ಜಿ. ಡಿ. ಕುಮಾರಸ್ವಾಮಿ ನಾಯ್ಡು ಎಂಬವರು ರಾತ್ರಿಯಲ್ಲಿ ರಾತ್ರಿ ಮನೆಗೆ ಬರುತ್ತಿರುವಾಗ ಅವರನ್ನು ಯಾರೋ ಕೊಂದು ಹಾಕಿದರು. ಸ್ಥಳೀಯ ಗ್ರಾಮ ಮುನ್ಸೀಫರನ್ನು ಮತ್ತೊಬ್ಬರನ್ನು ಸೆರೆ ಹಿಡಿದಿರುವರು. ಪರಸ್ಪರ ವೈರತ್ವವೇ ಇದಕ್ಕೆ ಕಾರಣವೆಂದು ಊಹೆ.

ಮೂಲೆ ಮೂಲೆಯಿಂದ

ಹೆಡ್ ಕ್ಲಾರ್ಕರಿಗೆ ಹೊಸ ನಾಮಕರಣ:—

ಮಂಗಳೂರು. ನಮ್ಮ ಜಿಲ್ಲಾ ಬೋರ್ಡಿನ ಸಾಮಾನ್ಯ ಸಭೆಯು ಇದೇ ಕಳೆದ ತಾ. ೧೩ನೆಯ ಮಂಗಳವಾರ ಘಂಟೆ ೧೧ಕ್ಕೆ ಶ್ರೀ ಎ. ಬಿ. ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಹೆಡ್ ಕ್ಲಾರ್ಕರಿಗೆ ಸೆಕ್ರೆಟರಿ ಎಂದು ನಾಮಕರಣ ಮಾಡಬೇಕೆಂಬ ಡಾ| ಆಚಾರ್ಯರ ಠರಾವು ಮಾನ್ಯವಾಯಿತು. ಯುರೋಪಿಯನರ ಸ್ಥಾನವು ಖಾಲಿ ಬಿದ್ದುದರಿಂದ ಆ ಸ್ಥಾನಕ್ಕೆ ಮಿ| ಯುಸ್. ಕರ್ವಾನರು ಸರ್ವಾನುಮತದಿಂದ ಆರಿಸಲ್ಪಟ್ಟರು. ಮಲಬಾರು ಮತ್ತು ನಮ್ಮ ಜಿಲ್ಲೆಗಳಿಗೆ ವ್ಯವಹಾರವು ಸರಿ ನಡೆಯುವಂತೆ ಕರಾವಳಿಯಲ್ಲಿ ಎರಡು ಮೈಲು ರಸ್ತೆಯನ್ನು ಕಡಿದು ಕೂಡಿಸುವುದಕ್ಕೆ ೩೦೦೦ ರೂಪಾಯಿ ಕೊಡುವುದೆಂದು ತೀರ್ಮಾನವಾಯಿತು. ಉಡುಪಿ, ಬ್ರಹ್ಮಾವರ ಮತ್ತು ಕುಂದಾಪುರ ಇಲ್ಲಿಯ ಸೇತುಗಳಿಗೆ ಬಣ್ಣ ಬಳಿಯಬೇಕೆಂಬ ವಿಚಾರದಲ್ಲಿ ಡಾ| ವಿಟ್ಠಲ ಶೆಟ್ಟರಿಗೂ ಬೋಳಿಗರಿಗೂ, (ವೈಸ್ ಪ್ರೆಸಿಡೆಂಟ್) ಮಾತಾಗಿ ಕೊನೆಗೆ ಕೆಲಸವು ತ್ವರೆಯಾಗಿ ಆಗುವಂತೆ ಡಾಕ್ಟರರು ಹೇಳಿದಂತೆ ಕೆಲಸವು ಆ ಇಲಾಖೆಯವರಿಗೆ ಒಪ್ಪಿಸಲಾಯಿತು. ಬಜೆಟ್ ತಯಾರಿಸಲು ಒಂದು ಸಮಿತಿಯು ನಿರ್ಮಾಣವಾಯಿತು. ಗಾಂಧೀಜಿಯವರು ಇಲ್ಲಿಗೆ ದಯಮಾಡಿಸುವಾಗ ಮಾನಪತ್ರವನ್ನರ್ಪಿಸುವುದೆಂದು ನಿಶ್ಚಯಿಸಿದ್ದಲ್ಲದೆ ಅದಕ್ಕಾಗಿ ಅಲ್ಲಿ ೪೦ ರೂಪಾಯಿಯು ಸಂಗ್ರಹವೂ, ಕೊಡುತ್ತೇವೆಂದು ಹೇಳಿದ ಹಲವರ ಹೆಸರುಗಳ ಪಟ್ಟಿಯೂ ತಯಾರಾಯಿತು. ಆ ಕಾರ್ಯ ನಿರ್ವಹಿಸಲು ಒಂದು ಸಮಿತಿ ಏರ್ಪಾಡಾಯಿತು. ಅಂತೂ ಅಂದು ಅಪರಾಹ್ನ ಘಂಟೆ ೧||ಯ ತನಕ ನಡೆದು ಕಾರ್ಯಕ್ರಮವು ಮರುದಿವಸಕ್ಕೆ ಮುಂದುವರಿಸಬೇಕಾಗಿ ಬಂತು.

ಮರುದಿನದ ವಿಶೇಷ ಸಭೆಯಲ್ಲಿ ೧೯೩೦ರಲ್ಲಿ ಸ್ಥಾಪನೆಯಾದ ೫ ಮಂದಿ ಸದಸ್ಯರುಳ್ಳ ರಿಟ್ರೆಂಚ್‌ಮೆಂಟ್ ಸಮಿತಿಯ ವರದಿಯು ಹೊರಬಿತ್ತು. ಅದರಲ್ಲಿ ಆಗಬೇಕಾದ ತಿದ್ದುಪಡಿಗಳನ್ನು ಶ್ರೀ ರಾಮಕೃಷ್ಣ ಪೂಂಜರೂ, ಶ್ರೀ ಮೋಹಳ್ಳಿ ಶಿವರಾಯರೂ ಎ. ಯುಸ್. ಮಹಾಬಲ ರೈಗಳವರೂ ಸೂಚಿಸಿದ್ದರು. ಅಂತೂ ತಾಲೂಕು ಬೋರ್ಡುಗಳ ಗತಿಯ ವಿಚಾರ ನೇತಾಡುತ್ತಿರುವುದರಿಂದ ಅದರ ಇತ್ಯರ್ಥವಾದ ಮೇಲೆ ಈ ವರದಿಯ ಪರಿಶೀಲನೆಯೆಂದು ಡಾ| ಆಚಾರ್ಯರು ಸೂಚಿಸಿದಂತೆ ಡಾ| ಶೆಟ್ಟರು ಸಮರ್ಥಿಸಿ ಅದು ಸರ್ವಾನುಮತದಿಂದ ಮುಂದುವರಿಸಲಾಯಿತು. ಮಂಗಳೂರ ಟ್ರಂಕು ರಸ್ತೆಯನ್ನು ಸುಧಾರಿಸುವುದಕ್ಕೆ ೬ ತಿಂಗಳಿಗೆ ೮೦ ರೂಪಾಯಿ ಸಂಬಳಕ್ಕೆ ಓವರ್ ಓವರ್ಸೀಯರನ್ನಲ್ಲದೆ ಒಬ್ಬ ಕೂಲಿಯನ್ನು ನೇಮಿಸುವುದೆಂಬುದಕ್ಕೆ ಸಮ್ಮತಿ ಸಿಕ್ಕಿತು.

ಪಣಂಬೂರು:— ಇಲ್ಲಿಯ ಪಣಂಬೂರು ಮೊಗವೀರ ಶ್ರೀ ಜ್ಞಾನೋದಯ ಸಮಾಜದ ೯ನೇ ವಾರ್ಷಿಕೋತ್ಸವವು ಕಳೆದ ಆದಿತ್ಯವಾರ ಶ್ರೀಯುತ ಬಿ. ಮೋಹನಪ್ಪ ತಿಂಗಳಾಯರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ಜರಗಿತು. ಅಂದು ಸಾಯಂಕಾಲ ೫ರು ಘಂಟೆಗೆ ಸಮುದ್ರ ಬದಿಯ [illegible] ತೋಟದಲ್ಲಿ ತಳಿರುತೋರಣಗಳಿಂದ ಅಲಂಕರಿಸಿದ ಸಭಾಮಂಟಪದಲ್ಲಿ ಮೊಗವೀರ ಸ್ತ್ರೀಪುರುಷರೂ, ಇತರರೂ ಮಹಾಸಭೆ ನೆರೆದು ಬಂದರು. ಸಮಾಜದ ಅಧ್ಯಕ್ಷರಾದ ಬಡಗು ಮನೆ ರಾಮಪ್ಪ ಕಾಂಚನರು ವೈದಿಕ ಧ್ವಜಾರೋಹಣ ಮಾಡಿ ಸಭಾಕಾರ್ಯವನ್ನು ಪ್ರಾರಂಭಿಸಿದರು. ಸಂಧ್ಯಾವಂದನ, ಹವನ, ಭಜನೆ ಪ್ರಾರ್ಥನೆಗಳಾದ ತರುವಾಯ ಶ್ರೀಯುತ ತಿಂಗಳಾಯರು ವೇದೋಪದೇಶವನ್ನು ಮಾಡಿದರು. ಸಮಾಜದ ಉತ್ಸಾಹೀ ಕಾರ್ಯದರ್ಶಿಯವರಾದ ಶ್ರೀಯುತ ಐತಪ್ಪ ಕಾಂಚನರು ಸಮಾಜದ ವರದಿಯನ್ನು ಓದಿದರು. ನಂತರ ಮಂಗಳೂರು ಬೆಂಗರೆಯ ಮೊಗವೀರ ಆರ್ಯ ಸ್ತ್ರೀ ಭಜನೆ ಮಂಡಳಿಯವರ ಹರಿಭಕ್ತಿಪರವಾದ ವೈದಿಕ ಭಜನೆಗಳಾದುವು; ಮತ್ತು ಅಧ್ಯಕ್ಷರ ಸಮಯೋಚಿತ ಭಾಷಣವಾಗಿ ಶಾಂತಿ ವಚನದೊಂದಿಗೆ ಸಭಾ ವಿಸರ್ಜನೆಯಾಯಿತು.

ಮಾರನೇದಿನ ಪಣಂಬೂರು ಶ್ರೀನಂದನೇಶ್ವರ ಜಾತ್ರೆಯಲ್ಲಿ ಸಮಾಜದ ಭಜನೆ ಮಂಡಳಿಯವರ ಸಂಗೀತದೊಂದಿಗೆ ಶ್ರೀಯುತರುಗಳಾದ ಮೋಹನಪ್ಪ ತಿಂಗಳಾಯರೂ, ಐತಪ್ಪ ಕಾಂಚನರೂ, ಕಂಡಾ ಪುತ್ರನ್ನಾಯರೂ ಮದ್ಯಪಾನ ನಿಷೇಧ, ಕೋಳಿಜೂಜು, ಅಸ್ಪೃಶ್ಯತೆ, ವಿಗ್ರಹಾರಾಧನೆ ಇತ್ಯಾದಿ ವಿಷಯಗಳ ಮೇಲೆ ಭಾಷಣಗಳನ್ನು ಮಾಡಿದರು.

ಪಡುಬಿದ್ರಿ:— ತಾ. ೧೭-೩-೩೪ನೇ ಶನಿವಾರ ಅಪರಾಹ್ನ ೩ ಘಂಟೆ ಸಮಯಕ್ಕೆ ಸಂತೆಕಟ್ಟೆಯ ಬಳಿಯಲ್ಲಿರುವ ಜನಪ್ರೀತರಾದ ಶ್ರೀಯುತ ಪಿ. ರಾಮಚಂದ್ರರಾಯರ ಮನೆಯ ಹಟ್ಟಿಯೊಂದಕ್ಕೆ ಆಕಸ್ಮಾತ್ತಾಗಿ ಬೆಂಕಿ ತಗಲಿ ಸುಮಾರು ೨೦೦ ರೂಪಾಯಿಗಳಷ್ಟು ಬೆಲೆ ಬಾಳುವ ಸಾಮಾನುಗಳಷ್ಟು ಅಗ್ನಿ ಸಾಧಾರಣ ಜನರಿಂದ ಸ್ವೀಕರಿಸಲ್ಪಟ್ಟಿದ್ದು ಕಡು ಹೇರಾಸ್ಪದವಿದ್ದುದಾದರೂ, ಕಾರ್ಯ ಧುರೀಣರಾದ ಕೆಲಕೆಲವು ಮಹಾಶಯರು ಅನುಮಾನಗಳನ್ನೂ, ಅತ್ಯಂತ ಸಮೀಪದಲ್ಲಿದ್ದ ಇತರ ಕೆಲವು ಅಂಗಡಿ ಹಾಗೂ ಮನೆಗಳಿಗೆ ಬಂದಿತ್ತು ಅಪಾಯ ಬಾರದಂತೆ ಸಾಹಸ ಪಟ್ಟುದು ತುಂಬಾ ಶ್ಲಾಘನೀಯವು.

ಮಡಿಕೇರಿ:— ಮುತ್ತದೇವ ಪೇಟೆಯಲ್ಲಿ ಪ್ಲೇಗು ಇಲಿಗಳು ಸಾಯುತ್ತಿವೆಯೆಂದೂ ಪಟ್ಟಣದಲ್ಲಿ ಇನಾಕ್ಯುಲೇಶನ್ ಕೆಲಸವು ನಡೆಯುತ್ತಿದೆಯೆಂದೂ ತಿಳಿಯಬರುತ್ತದೆ.

ಅಮ್ಮತ್ತಿ ಶಾಲೆಯ ವಾರ್ಷಿಕೋತ್ಸವವು ಕಳೆದ ತಾ. ೧೭ನೇ ದಿನ ನಡೆಯಿತು. ದಿ. ಬಾ. ಕೆ. ಚೆಂಗಪ್ಪನವರು ಇದರ ಅಧ್ಯಕ್ಷಸ್ಥಾನವನ್ನು ವಹಿಸಿದ್ದರು.

ಚೆಟ್ಟಳ್ಳಿ:— ಶಾಲೆಯ ೪ನೇ ವಾರ್ಷಿಕೋತ್ಸವವು ಕಳೆದ ತಾ. ೯ನೇ ದಿನ ಶಾಲಾ ಇನ್ಸ್‌ಪೆಕ್ಟರ್ ಮಿ. ಎಡ್ಮಂಡ್ಸನವರ ಅಧ್ಯಕ್ಷತೆಯಲ್ಲಿ ಜರಗಿತು.

ಕೊಡಗು ಎಥ್ಲೆಟಿಕ್ ಸಂಘದ ಆಶ್ರಯದಲ್ಲಿ ನಡೆಸಲ್ಪಡುವ ಟೆನ್ನಿಸ್ ಟೂರ್ನಮೆಂಟು ಬರುವ ಮಾರ್ಚಿ ತಿಂಗಳ ಆಖೈರು ವಾರದಲ್ಲೂ ಮತ್ತು ಕ್ರಿಕೆಟ್ ಟೂರ್ನಮೆಂಟು ಏಪ್ರಿಲ್ ತಿಂಗಳ ಪ್ರಥಮ ವಾರದಲ್ಲೂ ನಡೆಯುವುದೆಂದು ಸದರಿ ಸಂಘದ ಗೌರವ ಕಾರ್ಯದರ್ಶಿಯವರು ತಿಳಿಸುತ್ತಾರೆ.

ಕೊಡಗು:— ಡಿಸ್ಟ್ರಿಕ್ಟ್ ರಿಜಿಸ್ಟ್ರಾರರಾದ ಸಬ್ ಜಡ್ಜರು ರಿಜಿಸ್ಟ್ರೇಷನ್ ಇಲಾಖೆಯ ಇನ್ಸ್‌ಪೆಕ್ಷನ್ ಬಗ್ಗೆ ಇದೇ ತಾರೀಖು ೧೯ರಿಂದ ೨೧ರ ವರೆಗೆ ವೀರರಾಜಪೇಟೆಗೂ, ಬರುವ ಮಾರ್ಚಿ ತಾ. ೧೨ರಿಂದ ೧೪ರ ವರೆಗೆ ಪೊನ್ನಂಪೇಟೆಗೂ ಮತ್ತು ಅದೇ ತಾ. ೨೪ರಿಂದ ೨೭ರ ವರೆಗೆ ಸೋಮವಾರಪೇಟೆಗೂ ಹೋಗುವರೆಂದೂ ತಿಳಿಯಬರುತ್ತದೆ.

ವೀರರಾಜಪೇಟೆ ಹೈಸ್ಕೂಲಿನ ಶಾಲಾ ದಿನವು ಕಳೆದ ತಾ. ೧೨ನೇ ಸೋಮವಾರ ಬಹು ವಿಜೃಂಭಣೆಯಿಂದ ಜರಗಿತು. ಶಾಲಾ ಇನ್ಸ್‌ಪೆಕ್ಟರರಾದ ಮಿ. ಎಡ್ಮಂಡ್ಸ್‌ರವರು ಆ ದಿನ ಬೆಳಗ್ಗೆ ತ್ವರಿತವಾಗಿ ಬೆಂಗಳೂರಿಗೆ ಹಿಂತಿರುಗಬೇಕಾಗಿ ಬಂದುದರಿಂದ ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನ ಹೆಡ್ಮಾಸ್ಟರರಾದ ಮ. ರಾ. ಸಿ. ಯಂ. ರಾಮರಾಯರು ಅಧ್ಯಕ್ಷರಾಗಿದ್ದರು. ಬೆಳಗ್ಗೆ ಶಾಲಾ ಮೈದಾನಿನಲ್ಲಿ ಆಟೋಟಗಳಾದುವು. ಮಧ್ಯಾಹ್ನದ ಮೇಲೆ ದಿವಂಗತ ಮ. ಚೇನಂಗ ಮುತ್ತಣ್ಣನವರ ಛಾಯಾ ಚಿತ್ರವು ತೆರೆಯಲ್ಪಟ್ಟ ನಂತರ ಶಾಲೆಯ ಮತ್ತು ಡಿಬೇಟಿಂಗ್ ಸೊಸೈಟಿಯ ವರದಿಗಳು ಓದಲ್ಪಟ್ಟವು. ಆ ಮೇಲೆ ಬಹುಮಾನಗಳು ಹಂಚಲ್ಪಟ್ಟವು. ಅಧ್ಯಕ್ಷ ಭಾಷಣವಾದ ಮೇಲೆ ಇಂಗ್ಲಿಷ್ ಮತ್ತು ಕನ್ನಡ ನಾಟಕಗಳು ಶಾಲಾ ಮಕ್ಕಳಿಂದ ಮನೋಹರವಾಗಿ ಅಭಿನಯಿಸಲ್ಪಟ್ಟವು.

ಅಮ್ಮತ್ತಿ ಶಾಲೆಯ ಸ್ಕೂಲ್ ಡೇಯು ಇದೇ ತಾ. ೧೭ರಲ್ಲಿ ದಿವಾನ್ ಬಹದ್ದೂರ್ ಕೆ. ಚೆಂಗಪ್ಪನವರ ಅಧ್ಯಕ್ಷತೆಯಲ್ಲಿ ನಡೆಯುವುದೆಂದೂ, ಬಹುಮಾನ ಹಂಚುವಿಕೆಯು ಮಿ. ಕಸ್, ಬಿದ್ದಂಡ ಕ. ಕಾಳಪ್ಪನವರಿಂದ ನಡೆಸಲ್ಪಡುವುದೆಂದೂ ತಿಳಿಯುತ್ತೇವೆ.

ವೀರರಾಜಪೇಟೆ:— ಬೆಪ್ಪುನಾಡು ಕಡಂಗದಲ್ಲಿ ಬರುವ ಸೋಮವಾರದಿಂದ ಸಂತೆ ತೆರೆಯುತ್ತಾರಾಗಿ ವರ್ತಮಾನ.

ವೀರರಾಜಪೇಟೆ ಶಾಲೆಯ ಸ್ಕೂಲ್ ಡೇಯು ಮ. ಸಿ. ಯಂ. ರಾಮರಾವ್‌ರವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನಡೆಯಿತಾಗಿ ತಿಳಿದುಬರುತ್ತದೆ.

ಕೊಡಗು ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗೊಂದು ತಾ. ೨೪-೨-೩೪ನೇ ಶನಿವಾರ ದಿನ ಮಧ್ಯಾಹ್ನ ೩ ಘಂಟೆಗೆ ಬ್ಯಾಂಕಿನ ಆಫೀಸಿನಲ್ಲಿ ನಡೆಯುತ್ತದೆಂದು ತಿಳಿಯುತ್ತೇವೆ.

ಕೊಡಗು ಸೆಂಟ್ರಲ್ ಬ್ಯಾಂಕಿನ ಸುಪರ್ವಿಜನ್ ಬೋರ್ಡಿನ ಡೈರೆಕ್ಟರುಗಳ ಮೀಟಿಂಗು ಇದೇ ತಾ. ೨೪ನೇ ಶನಿವಾರ ಬೆಳಗ್ಗೆ ೧೧ ಘಂಟೆಗೆ ಬ್ಯಾಂಕಿನ ಆಫೀಸಿನಲ್ಲಿ ನಡೆಯುವುದಾಗಿ ತಿಳಿಯುತ್ತೇವೆ.

ಕಮಿಷನರ ಆಫೀಸಿನಲ್ಲಿ ಮೆನೇಜರರಾಗಿದ್ದ ಮಿ| ಎಚ್. ರಾಮಚಂದ್ರರವರು ಕಳೆದವಾರ ಮೃತಪಟ್ಟರೆಂದು ತಿಳಿಸಲು ವ್ಯಸನಪಡುತ್ತೇವೆ.

ಬಲಮುರಿ ಗ್ರಾಮದಲ್ಲಿ ಕೆಲ ಮಾಪಿಳ್ಳೆಯರಿಗೆ ಸಿಡುಬು ರೋಗವು ತಗಲಿದೆಯೆಂದು ವರ್ತಮಾನ.

ಕೊಡಗಿನ ಡಿಸ್ಟ್ರಿಕ್ಟ್ ರಿಜಿಸ್ಟ್ರಾರರವರು ಇನ್ಸ್‌ಪೆಕ್ಷನ್ ಬಗ್ಗೆ ಇದೇ ತಾ. ೧೯ರಲ್ಲಿ ವೀರರಾಜಪೇಟೆಗೆ ಹೋಗಿ ತಾ. ೨೧-೩-೩೪ರಲ್ಲಿ ಪುನಃ ಮಡಿಕೇರಿಗೂ, ತಾ. ೧೨-೩-೩೪ರಲ್ಲಿ ಪೊನ್ನಂಪೇಟೆಗೆ ಹೋಗಿ ತಾರೀಖು ೧೪-೩-೩೪ರಲ್ಲಿ ವಾಪಸು ಮಡಿಕೇರಿಗೂ ಮತ್ತು ತಾ. ೨೪-೩-೩೪ರಲ್ಲಿ ಸೋಮವಾರಪೇಟೆಗೆ ಹೋಗಿ ತಾ. ೨೭-೩-೩೪ರಲ್ಲಿ ವಾಪಸು ಮಡಿಕೇರಿಗೆ ಬರುತ್ತಾರಾಗಿ ತಿಳಿಯುತ್ತೇವೆ.

ಕೊಡಗು ನಾಡು:— [illegible] ಶಾಲೆಯ ಸ್ಕೂಲ್ ಡೇಯು ತಾ. ೯-೩-೩೪ರಲ್ಲಿ ಮ. ಎಂ. ಎನ್ [illegible] ಡೆಪ್ಯುಟಿ ಡೈರೆಕ್ಟರವರ ಅಧ್ಯಕ್ಷತೆಯಲ್ಲಿ ನಡೆಯುವುದಾಗಿ ವರ್ತಮಾನ.

ಬೇರೆ ಶ್ರೀಮಂಗಲನಾಡು ಚೆಟ್ಟಳ್ಳಿ ಶಾಲೆಯ ಸ್ಕೂಲ್ ಡೇಯು ಶಾಲಾ ಇನ್ಸ್‌ಪೆಕ್ಟರು ಮಿ| ಎಡ್ಮಂಡ್ಸ್‌ರವರ ಅಧ್ಯಕ್ಷತೆಯಲ್ಲಿ ಇದೇ ತಾ. ೯ರಲ್ಲಿ ನಡೆಯಿತಾಗಿ ತಿಳಿದುಬರುತ್ತದೆ.

ಕಮಿಷನರವರು ತಾ. ೧೭-೩-೩೪ರಲ್ಲಿ ಬೆಂಗಳೂರಿಗೆ ಹೋಗುತ್ತಾರಾಗಿ ವರ್ತಮಾನ.

ಮೈಸೂರು:— ಸಂಸ್ಥಾನದ ವಾಣಿಜ್ಯ ಪಾಲಕರಾದ ಶ್ರೀ ರಂಗನಾಥರಾವ್ ಸಾಹೇಬರು ಈ ತಿಂಗಳು ಲಂಡನಿಗೆ ಹೋಗುವರು. ತಾ. ೧೫ನೇ ದಿನ ಸಂಜೆ ಬೆಂಗಳೂರಿನ ವಾಣಿಜ್ಯ ಭವನದಲ್ಲಿ ಶ್ರೀ ರಂಗನಾಥರಾವ್ ಸಾಹೇಬರು ಸದಸ್ಯರೊಂದಿಗೆ ಮೈಸೂರು ವ್ಯಾಪಾರ ಸಾಹಸ ಕುರಿತು ಚರ್ಚೆ ಮಾಡಿದರು.

ತಾ. ೨೪-೩-೩೪ರಿಂದ ವ್ಯವಸಾಯ ಕಾರ್ಯಾಧಿಕಾರಿಗಳಾದ ಶ್ರೀ ಕೋಲ್ಮನ್ನರಿಗೆ ೨೩ ದಿನಗಳ ರಜೆ. ಅನಂತರ ನಿವೃತ್ತರಾಗಲು ಅನುಮತಿ ದೊರಕಿದೆ. ಅವರ ಸ್ಥಾನಕ್ಕೆ ಶ್ರೀ ಯಜ್ಞನಾರಾಯಣಯ್ಯರವರು ನೇಮಕ ಮಾಡಲ್ಪಟ್ಟಿದ್ದಾರೆ.

ಮಹಾ ಶಿವರಾತ್ರಿಯ ದಿನ ಬೆಂಗಳೂರು ಗೌರಿ ಪಾಳ್ಯದಲ್ಲಿ ಹರಿಜನ ಶಾಲೆಯಲ್ಲಿ ಹರಿಭಜನೆಯು ನಡೆಯಿತು.

ಮೈಸೂರು ವಿದ್ಯಾಶಾಲೆಯ ಪಂಡಿತರ ಸಂಘವೊಂದನ್ನು ಸ್ಥಾಪಿಸುವುದರ ಸಲುವಾಗಿ ತಾ. ೧೧ನೇ ದಿನ ಕೋಟೆ ಹೈಸ್ಕೂಲಿನಲ್ಲಿ ಶ್ರೀ ಡಿ. ವೆಂಕಟರಾಮಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಸಭೆ ನಡೆಯಿತು. ಅನೇಕ ಉಪನ್ಯಾಸಗಳಾದುವು. ಶ್ರೀ. ಎಸ್. ಎಸ್. ಸುಬ್ಬರಾಯರವರು ಸಭೆಯ ಅಧ್ಯಕ್ಷಸ್ಥಾನಕ್ಕೆ ಆರಿಸಲ್ಪಟ್ಟರು. ಶ್ರೀ ವೆಂಕಟರಾಮಯ್ಯನವರು ಉಪಾಧ್ಯಕ್ಷರಾದರು. ಶ್ರೀ ಹನುಮಂತಪ್ಪ ಮತ್ತು ಶ್ರೀ ಚೆಂಗಲರಾಯರವರುಗಳು ಕಾರ್ಯದರ್ಶಿಗಳಾದರು. ಸಭೆಗೆ ೮ ಜನ ಸದಸ್ಯರ ಚುನಾವಣೆಯಾಯಿತು.

ಹೊಸಕೋಟೆ:— ಪರಸ್ಪರ ಸಹಾಯ ಸಂಘದವರು ಬಿಹಾರ್ ಭೂಕಂಪದ ಪರಿಹಾರ ನಿಧಿಗೆ ಸಂಘದ ನಿಧಿಯಿಂದ ೫೦ ರೂಪಾಯಿಗಳನ್ನು ಕೊಡುವುದಾಗಿ ನಿಶ್ಚಯ ಮಾಡಿದ್ದಾರೆ. ತಾ. ೧೦ನೇ ದಿನ ದೇವಾಸ್ ಸಂಸ್ಥಾನದ ಮಹಾರಾಜರು ಪರಿವಾರದೊಂದಿಗೆ ಒಂದು ಸಂಘದ ಕಾರ್ಯಕಲಾಪಗಳನ್ನು ನೋಡಿ ಸಂತೋಷಪಟ್ಟು ಹೋದರು.

ಮೈಸೂರು ಬ್ಯಾಂಕಿನವರು ಬಿಹಾರ ಭೂಕಂಪ ಪರಿಹಾರ ನಿಧಿಗೆ ೫೦೦೦ ರೂಪಾಯಿಗಳನ್ನು ಕೊಟ್ಟಿರುತ್ತಾರೆ.

ಮೈಸೂರಿನ ಬಿಹಾರ ಭೂಕಂಪ ಪರಿಹಾರ ನಿಧಿಗೆ ಹಣವನ್ನು ಕೊಡಿಸುವ ಮಹನೀಯರಿಂದ ಮೊಬಲಗುಗಳನ್ನು ಮೈಸೂರು ಸಂಸ್ಥಾನದಲ್ಲಿರುವ ಎಲ್ಲಾ ಖಜಾನೆಗಳೂ ತೆಗೆದುಕೊಳ್ಳಬೇಕೆಂದು ಸರಕಾರದವರು ಆಜ್ಞೆ ಮಾಡಿದ್ದಾರೆ.

ಬೆಂಗಳೂರು:— ಪೌರಸಭೆಯವರು ಬಿಹಾರಿನಲ್ಲಿ ನೊಂದವರ ಸಹಾಯಾರ್ಥವಾಗಿ ಒಂದು ನಿಧಿಯನ್ನು ಸ್ಥಾಪಿಸಿ ಎಲ್ಲರೂ ಶಕ್ತಿ ಮೀರಿ ಸಹಾಯ ಮಾಡಬೇಕೆಂದು ಕೇಳಿದ್ದಾರೆ. ರಜಾ ದಿನಗಳಲ್ಲದ ಇತರ ದಿನಗಳಲ್ಲಿ ಪೌರಸಭಾ ಕಚೇರಿಯಲ್ಲಿ ಹಣವನ್ನು ಸ್ವೀಕರಿಸುವರು.

ತಾ. ೨೫ನೇ ದಿನ ಬೆಂಗಳೂರು ಶಂಕರಯ್ಯನವರ ಹಾಲಿನಲ್ಲಿ ೪| ಘಂಟೆಗೆ ಶ್ರೀ ಅರಿಯಕ್ಕುಡಿ ರಾಮಾನುಜ ಅಯ್ಯಂಗಾರ್ಯರ ಹಾಡುಗಾರಿಕೆ, ಕುಂಭಕೋಣಂ ಜಯರಾಮಯ್ಯರ ಪಿಟೀಲು, ತಂಜಾವೂರು ವೈದ್ಯನಾಥಯ್ಯರ ಮೃದಂಗ ಇವುಗಳಿಂದೊಡಗೂಡಿದ ಸಂಗೀತ ಕಚೇರಿಯು ನಡೆಯುವುದು.

ತಾ. ೧೪-೩-೩೪ನೇ ದಿನ ಬೆಂಗಳೂರು 'ಸೆಂಟ್ರಲ್ ಜೈಲಿ'ನಲ್ಲಿ ಜೀವಾವಧಿ ಶಿಕ್ಷೆಗೊಳಗಾಗಿದ್ದ ನಸ್ಸೆ ಸಾಬನು ಇನ್ನೊಬ್ಬ ಬಂದಿಯಾದ ಭೈರೇಗಯ್ಯನ ತಲೆಯ ಮೇಲೆ ಕಲ್ಲು ಎತ್ತಿ ಹಾಕಿ ಕೊಂದಿದ್ದನು. 'ಸೆಷನ್ಸ್ ಜಡ್ಜ'ರು ಅತನಿಗೆ ಮರಣ ದಂಡನೆ ವಿಧಿಸಿದರು. ಸರಿ ಆತನು ಹೈಕೋರ್ಟನ್ನು ಹತ್ತಿದನು. ಈಗ ಅಲ್ಲಿಯೂ ಶಿಕ್ಷೆ ನ್ಯಾಯವೆಂದು ಅಂಗೀಕರಿಸಲ್ಪಟ್ಟಿತು. ಮಹಾರಾಜರಿಗೆ ದಯೆಗಾಗಿ ಪ್ರಾರ್ಥಿಸಿರುವನಂತೆ!

ದೇಶೀಯ ವಿದ್ಯಾಶಾಲೆಯ ಕಿರಿಯ ತರುಣರ ಸಂಘದವರ ಆಶ್ರಯದಲ್ಲಿ ಫೆಬ್ರವರಿ ತಾ. ೨೮ನೇ ಸಂಜೆ ೫-೩೦ಕ್ಕೆ ಸರಿಯಾಗಿ ಬಿ. ಎಂ. ಶ್ರೀಕಂಠಯ್ಯನವರ ಅಧ್ಯಕ್ಷತೆಯಲ್ಲಿ ಶ್ರೀ ಟಿ. ಪಿ. [illegible], ಶ್ರೀ ಪಿ. ಟಿ. ನರಸಿಂಹಾಚಾರ್ ಮೊದಲಾದ ತರುಣ ಕವಿಗಳು ತಮ್ಮ ಕೃತಿಗಳನ್ನು ದೇಶೀಯ ವಿದ್ಯಾಶಾಲೆಯ ಸಭಾಂಗಣದಲ್ಲಿ ಓದುತ್ತಾರೆ.

ಶ್ರೀಮಾನ್ ಮಹಾರಾಜರವರು ಮೈಸೂರಿನ ಬಿಹಾರ್ ಪರಿಹಾರ ನಿಧಿಗೆ ೫೦೦೦ ರೂಪಾಯಿಗಳ ಧನಸಹಾಯ ಮಾಡಿರುವರೆಂದು ತಿಳಿದು ಬಂದಿದೆ.

ಶ್ರೀಮತಿ ಅಮ್ಮಣ್ಣಿಬಾಯಿ ಮತ್ತು ಶ್ರೀಮತಿ ಥಿಯೋಬಾಲ್ಡ್ ಇವರುಗಳನ್ನು ಮೈಸೂರು ಬೆಂಚ್ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ 'ಸ್ಪೆಶಲ್ ಮ್ಯಾಜಿಸ್ಟ್ರೇಟ'ರನ್ನಾಗಿ ನೇಮಿಸಿದ್ದಾರೆ.

NOTES
ನೋಟಿಗಳು

ವೈಸರಾಯಿಗೆ ಸಂಚಾರದಲ್ಲಿ ಬಂದಿರುವ ಭೋಜನಾಲಯದ ನವಾಬರಿಗೆ ಸ್ವಲ್ಪ ಇನ್‌ಫ್ಲುಯೆಂಜಾ ತಲೋರಿದೆ ಎಂದು ಪ್ರೈವೇಟ್ ಸೆಕ್ರೆಟರಿಯವರು ಪ್ರಕಟಿಸಿ, ಈ ದೆಸೆಯಿಂದಾಗಿ ಮಾರುದಿನ ಮೊನೆನ ಶಿಕಾರಿ ಮತ್ತು ವ್ಯಾಗರೀಟ ಮಾಡಲಾಗಲಿಲ್ಲೆಂದು ಸರ್ವ ಜನರಿಗೆ ತಿಳಿಸಿರುವರು.

• • • •

ನವಾಬರ ಬಾಯಿಂದ ಮೃಗಗಳೂ ಮೊಸಗಳೂ ಅಂದಿನ ಮಟ್ಟಿಗೆ ಬಚಾವು! ಜಗತ್ತಿಗೆಲ್ಲ ತಿಳಿದಿರಲಿ!

• • • •

ನಮ್ಮ ದೇಶದಲ್ಲಿ ನಿರುದ್ಯೋಗಿಗಳಾಗಿರುವ ತರುಣರಿಗೆ ಉದ್ಯೋಗಗಳನ್ನು ಕಲಿಸಿ ಕೊಡಲು ಒಂದು ಬೋರ್ಡನ್ನು ನೇಮಿಸಬೇಕಾಗಿ ಸರ್ ಹರಿಸಿಂಗಗೌಡರು ಸೂಚನೆ ತಂದಿರುವ ಕಾರಣ ಇಂಗ್ಲೆಂಡಿನಲ್ಲಿ ನಿರುದ್ಯೋಗಿಗಳಾಗಿರುವ ಪ್ರೊಫೆಸರುಗಳಿಗೆ ಇಲ್ಲಿ ಉದ್ಯೋಗ ಸಿಗುವಂತೆ ಅವಕಾಶ ಕಲ್ಪಿಸಿದ ಪುಣ್ಯವಾದರೂ ನಮ್ಮ ನಿರುದ್ಯೋಗಿಗಳಿಗೆ ಒದಗುವಂತಾಯಿತು.

• • • •

ಮಹಾತ್ಮಜೀಯವ ಹರಿಜನೋದ್ಧಾರ ಚಳವಳದಲ್ಲಿ ಯಾವ ಬಗೆಯ ಭಾಗವನ್ನೂ ಸರಕಾರದ ನೌಕರರೂ ವಹಿಸಬಾರದಾಗಿ ಸರಕಾರದ ಆಜ್ಞೆ ಇದ್ದುವ ಕಾರಣ, ಇನ್ನು ಇಂಥ ನೌಕರರನ್ನು ನೇಮಿಸುವ ಕಾಲಕ್ಕೆ ಅವರು ಸನಾತನಿಗಳೇ ಆಗಬೇಕೆಂದು ನಿರ್ಧರಿಸುವ ಒಂದು ಸೂಚನೆಯನ್ನೂ ಕೌನ್ಸಿಲಿನಲ್ಲಿ ಮುಂದೆ ತರಬಾರದೆ?

• • • •

ಪಂಜಾಬು ಕೌನ್ಸಿಲಿನ ಮೊದಲನೆ ಮಹಿಳಾ ಪ್ರತಿನಿಧಿಯು ದಾರಿಗಳಲ್ಲಿ ಬೇಡುವವರಿಗೆ ೬ ತಿಂಗಳ ಸಜೆ ಸಿಗುವಂತೆ ಕಾನೂನಾಗಬೇಕೆಂಬ ಸೂಚನೆ ತಂದಿರುವ ಕಾರಣ, ಒಮ್ಮೆ ಬೇಡಿದರೆ ಆರು ತಿಂಗಳ ಅನ್ನ ದೊರೆಕಿಸಿ ಕೊಟ್ಟ ಈ ಮಹಿಳೆಯನ್ನು ಭಿಕ್ಷುಕರು ಅಲ್ಲಿ ಕೊಂಡಾಡಿ, ಇವಳ ನಾಮಸ್ಮರಣೆ ಮಾಡುತ್ತಿರುವರು.

• • • •

ಬಂಗಾಳ ಕೌನ್ಸಿಲಿನಲ್ಲಿ ತಾ. ೩೧ರಲ್ಲಿ ಸುಂದರವಾದ ರಾಜದಂಡ (Mace) ವನ್ನು 'ನ್ಯಾಯದ ನಿಶಾನೆ' ಎಂದು ಸ್ಥಾಪಿಸಲಾಗಿದೆ; ಅಂದೇ ಅತ್ಯಾಚಾರ ಸಂಬಂಧವಾದ ಹೊಸ ಕಾನೂನನ್ನು ಚರ್ಚಿಸಲಾಗಿದೆ. ರಾಜದಂಡದ ನ್ಯಾಯವಾದ ಮೊದಲನೆ ಪ್ರಹಾರವಿದು!

• • • •

ಪಾರ್ಲಿಮೆಂಟಿನ ಜೊಯಿಂಟ್ ಸಿಲೆಕ್ಟ್ ಕಮಿಟಿಯ ರಿಪೋರ್ಟು ಬಲು ತ್ವರೆಯಾಗಿ ಹೊರ ಬೀಳುವುದಾಗಿ ವಾರ್ತೆ ಬಂದಿದೆ. ಅಲ್ಲಲ್ಲಿ ಭೂಕಂಪಗಳಾಗುವಾಗ, ಬೇಗನೆ ಹೊರ ಬೀಸದೆ ಮತೆ?

• • • •

ಬೊಂಬಾಯಿಯ ವ್ಯಾಪಾರಿಗಳಾದ ಸುಲ್ತಾನ ಚಿನಾಯ್ ಎಂಬವರು ಕಾಥೇವಾಡದಲ್ಲಿ ಜಮಿನಿ ಎಣ್ಣೆ ಸಿಗುವುದನ್ನು ಗುಪ್ತವಾಗಿ ಕಂಡು ಹಿಡಿದಿದ್ದಾರೆ; 'ತೈಲಬುದ್ಧಿ' ಎಂದರೆ ಇದು.

• • • •

ಪೂಣೆಯಲ್ಲಿ ಒಬ್ಬ ಕಳ್ಳನಿಗೆ ಅವನ ೮೦ನೇ ವಯಸ್ಸಿನಲ್ಲಿ ೮ ವರ್ಷದ ಸಜೆ ವಿಧಿಸಲಾಗಿದೆ. ಅವನು ಇದುವರೆಗೆ ೧೪ ಸಲ ಜೈಲು ಸೇರಿದ್ದನು. ಅಷ್ಟು ದಿನಗಳ ಶಿಕ್ಷೆ ಈಗ ಆದ ಕಾರಣ ಅವನ ಕಳವುಗಳ 'ಸಿಲ್ವರ್ ಜ್ಯುಬಿಲೀ' ಮಹೋತ್ಸವವನ್ನು ಎಂದಿಗೆ ಆಚರಿಸುವನು?

• • • •

ಸ್ಕೂಲ್ ಫೈನಲ್ ಪರೀಕ್ಷೆಗೆ ಈಗ ಇರುವ A, B, C, ಗ್ರೂಪ್‌ಗಳಿಗೆ D ಗ್ರೂಪ್ ಸೇರಿಸಬೇಕೆಂದು ಒಬ್ಬರ ಸೂಚನೆ; D ಗ್ರೂಪ್ ಎಂದರೆ ಸಂಬಳ ಮಾತ್ರ ತಿನ್ನುತ್ತ ಕಾಲೇಜಿಗೆ ಹೋಗದಿರುವ ಹೊಸ ವಿಷಯ; ಇದನ್ನು ಆಚರಿಸಿದರಾಯಿತು, ಪರೀಕ್ಷೆಯಲ್ಲಿ, ಸರ್ಟಿಫಿಕೇಟ್ ಪುಸ್ತಕ ಲಾಭ.

ನೋಟೀಸು

ಸ್ವದೇಶಾಭಿಮಾನಿಯ ಚಂದಾದಾರರು ನಮ್ಮೊಡನೆ ಮಾಡುವ ತಮ್ಮ ಪತ್ರವ್ಯವಹಾರದಲ್ಲಿ ಚಂದಾ ನಂಬರುಗಳನ್ನು ಸೂಚಿಸಬೇಕೆಂದರೂ ಕೆಲವರು ಲಕ್ಷ್ಯವಿಟ್ಟಿಲ್ಲ. ಚಂದಾದಾರರ ಸಂಖ್ಯೆಯು ಹೆಚ್ಚುತ್ತಾ ಇರುವುದರಿಂದ ಮುಂದಕ್ಕಾದರೂ ಅವರು ಅನಾನುಕೂಲತೆಗಳನ್ನು ತಪ್ಪಿಸುವುದಕ್ಕಾಗಿ ತಮ್ಮ ಚಂದಾ ನಂಬರುಗಳನ್ನು ಸೂಚಿಸಬೇಕಾಗಿ ಕೋರಿಕೆ.

ಸಂ. ಸ್ವ.

ವರ್ತಮಾನ ಸಂಗ್ರಹ.

ಧ್ರುವರಿ ೧೫ನೇ ದಿನವೂ ಪಟ್ಣಾದಲ್ಲಿ ಸಂಜೆ ೫-೩೦ ಘಂಟೆಗೆ ಭೂಮಿಯು ನಡುಗಿತು. ರಾತ್ರಿ ೮-೩೦ಕ್ಕೆ ಹಾಗೆಯೇ ಆಯಿತು. ರಾತ್ರಿ ಭಾರೀ ಮಳೆ ಮುಂದೇನೋ!

ಲಂಗೂನಿನ ಶಾರವಾರಿಯಲ್ಲಿ ಮೋಟಾರು ಬಸ್ಸು ಒಂದು ಮರಕ್ಕೆ ಬಲವಾಗಿ ಮುಟ್ಟಿ ೧೫ ಜನರನ್ನು ಆಹುತಿಗೊಳಿಸಿತು. ೫ ಜನರು ಇಲ್ಲಿರುವಂತೆ ಅಲ್ಲವೆಂದು ಅಂದಾಜು!

ಬಿಹಾರ್ ಭೂಕಂಪದಿಂದಾಗಿ ಅಹ್ಮದಾಬಾದಿನ ಗಿರಣಿಗಳ ವಸ್ತ್ರಗಳ ವಿಕ್ರಯಕ್ಕೆ ಗೆದ್ದಲು ಹಿಡಿದಂತಾಗಿ ೫೦ ಲಕ್ಷ ರೂಪಾಯಿಗಳ ನಷ್ಟವಾಗಿದೆ.

ವಿಯೆನ್ನಾದಲ್ಲಿ ೪೫ ವರ್ಷ ಪ್ರಾಯದ ಸ್ತ್ರೀಯೊಬ್ಬಳಿಗೆ ೨೩ ಗಂಡು, ೬ ಹೆಣ್ಣು ಮಕ್ಕಳಿವೆ. ೧೯ನೇ ವಯಸ್ಸಿನಲ್ಲಿ ವಿವಾಹವಾದಳು.

ಜಪಾನ ಚಕ್ರವರ್ತಿಯವರಿಗೆ ಪುತ್ರನು ಜನಿಸಿರುವುದರಿಂದ ರಾಜಧಾನಿಯಲ್ಲಿ ೪೫೦೦೦ ಜನರನ್ನು ಬಿಡುಗಡೆ ಮಾಡಿ ಕಂದಾಯ ಕಡಿಮೆ ಮಾಡಿರುವರು.

ಬರೋಡದ ವಿಧವಾಶ್ರಮಕ್ಕೆ ಒರಾವತಿ ಸೇನರೆಂಬವರೊಬ್ಬರು ಅರ್ಧ ಲಕ್ಷ ರೂಪಾಯಿಗಳನ್ನು ದಾನ ಮಾಡಿರುವರು.

ಸಾಯಲ್‌ಕೋಟೆಯಲ್ಲಿ ಒಬ್ಬ ಬ್ರಾಹ್ಮಣನು ತನ್ನ ೧೧೬ನೇ ವರ್ಷ ಪ್ರಾಯದಲ್ಲಿ ಮೊನ್ನೆ ಪರಲೋಕವಾಸಿಯಾದನು.

ಕ್ರಿಕೆಟ್ ಹೆಸರುವಾಸಿಯಾದ ರಣಜಿತ ಸಿಂಗರು ತಾನು ೧೯೩೩ರಲ್ಲಿ ಸಾಯುವೆನೆಂದು ಜ್ಯೋತಿಷ್ಯನ ಭವಿಷ್ಯನ್ನುಡಿಯನ್ನು ನಂಬಿದ್ದೇನೆಂದಿದ್ದರು.

ಸೂರತ್‌ನಲ್ಲಿ ೭೦ ವರ್ಷ ಪ್ರಾಯದ ಸುಂದರಿಯೊಬ್ಬಳಿಗೆ ಬಾಲಕನೊಡನೆ ವಿವಾಹವಾಗಲು ವ್ಯವಸ್ಥೆಯಾಯಿತು. ತರುಣ ಬಾಲೆಗೆ ೩೦೦ ಬಡತಿ ಶಿಕ್ಷೆಗೆ ಗುರಿಯಾದಳು.

ಹಾಸನ ಹೊಸಕೊಪ್ಪಲ್‌ನಲ್ಲಿ ೪ ಮಕ್ಕಳ ಮೈಗೆ ಆಕಸ್ಮಾತ್ ಬೆಂಕಿ ತಗಲಿ ಎರಡು ಮಕ್ಕಳು ಆಹುತಿಯಾದುವು.

ಲಂಡನಿನಿಂದ ಬಳಿ ಮಿಲಿಯ ಪೌಂಡುಗಳ ಚಿನ್ನವು ಅಮೇರಿಕಾಕ್ಕೆ ಮೊನ್ನೆ ಸಾಗಿ ಹೋಯಿತು.

ಸಿಂಗಾಪುರದಲ್ಲಿ ವ್ಯಾಪಾರಸ್ಥರು ಬ್ರಿಟಿಷ ಸರಕಿನ ಬದಲು ಜಪಾನೀಯರ ಸಾಮಗ್ರಿಗಳಲ್ಲೇ ವ್ಯವಹಾರ ನಡೆಸುತ್ತಿರುವರು.

ತಾ. ೧೪ನೇ ದಿನ ಶ್ರೀ ರಾಮಕೃಷ್ಣ ಪರಮಹಂಸರ ೯೯ನೆಯ ಜಯಂತ್ಯುತ್ಸವವು ಅಖಿಲ ಹಿಂದೂಸ್ಥಾನದಲ್ಲೂ ಪ್ರಪಂಚದ ನಾನಾ ಭಾಗಗಳಲ್ಲೂ ನಡೆಯಿತು.

ಪೂನೆಯ 'ಮರಾಟ' ಪತ್ರಿಕೆಯು ವೈಟ್‌ಪೇಪರಿನ ಮೇಲೆ ಟೀಕಾಗಿ ಟೀಕೆ ಮಾಡಿದ ಸಂಬಂಧ ೩೦೦೦ ರೂಪಾಯಿ ಭದ್ರತೆ ಕೊಡಬೇಕೆಂದು ಸರಕಾರದ ಆಜ್ಞೆ.

ಕಾಶ್ಮೀರದ ಬಳಿ ಒಂದು ಗ್ರಾಮದಲ್ಲಿ ಒಂದು ಭೂಕಂಪವು ತನ್ನ ವೈರಿಯ ಮನೆಯನ್ನೂ ಆ ವೈರಿಗೆ ಸಹಾಯ ಮಾಡಿದ ಕೆಲವರ ಮನೆಗಳನ್ನೂ ಸುಟ್ಟಿತೆಂದು ಎಲ್ಲರ ದೇಳಿಕೆ.

ವೈಸರಾಯ ಭೂಕಂಪ ನಿಧಿಗೂ, ಬಾಬುರಾಜೇಂದ್ರ ಪ್ರಸಾದರ ನಿಧಿಗೂ ಮಹಾಯಾರ್ಜರು ಮುಖಾಂತರ ಕಳುಹಿಸಲ್ಪಡುವ ದ್ರವ್ಯದ ಮೇಲೆ ಮನಿಯಾರ್ಡರು ವೆಚ್ಚವನ್ನು ಅಂಚೆ ಆಫೀಸಿನವರು ತೆಗೆದುಕೊಳ್ಳುವುದಿಲ್ಲವೆಂದು ಇಂಡಿಯಾ ಸರಕಾರದ ಪ್ರಕಟಣೆ.

ಕೊಂಗ್ರೆಸ್ಸಿನವರ ಮತ್ತು ಲಿಬರಲರ ಮಹಾ ಪರಿಷತ್ತನ್ನು ಪ್ರಬಂಧವಾಗಿ ಸೇರಿಸಲು ಕಲ್ಕತ್ತಾ ಮೇಯರರಾದ ಡಾ. ಬಿಧನ್ ಚಂದ್ರರೋಯ್‌ರವರು ಯೋಚಿಸಿರುವರು.

ಅಕ್ಟೋಬರ ೧೩೩ ಕೋಟಿ ರೂಪಾಯಿಗಳ ಭಂಗಾರವು ನಮ್ಮ ದೇಶದಿಂದ ಅಕ್ಷೀಗೆ ಪ್ರಯಾಣ ಬೆಳೆಸಿತು.

ಕಾಶ್ಮೀರದಲ್ಲಿ ದಿವಂಗತ ಜೆ. ಎಂ. ಸೇನಗುಪ್ತರ ಸ್ಮಾರಕ ಯಾತ್ರೆಯ ಅಂಚೆ ಪ್ರದರ್ಶನ ಮಾಡಬಾರದೆಂದು ದರ್ಬಾರಿನ ಆಜ್ಞೆ.

ಸಬರ್ಮತಿ ಆಶ್ರಮವು ಹರಿಜನ ಸಂಘದ್ದಾಗಿರುವುದರಿಂದ, ಈಗ ಅದರ ಆದಾಯವನ್ನು ಸರಿಯಾಗಿ ಸರಕಾರಕ್ಕೆ ನಾವು ಮಾಡಬೇಕೆಂದು ಗಾಂಧೀಜೀಯವರ ಕೇಳಿಕೆ.

ಬಿಹಾರಿನಲ್ಲಿ ಕೆಲವೆಡೆ ಉಷ್ಣೋದಕ ಸ್ಥಳಗಳಲ್ಲಿ ಸಿಹಿ ನೀರು ದೊರೆತಿದೆ ಕೆಲವು ಕಡೆ ಗಂಧಕದ ರಾಶಿಯು ಬಿದ್ದುಕೊಂಡಿದೆ.

ಹೈದರಾಬಾದಿನ ದೊಡ್ಡ ಅಧಿಕಾರಿಯ ಪುನಿಯ ಮಗಳಾದ ಹುಡುಗಿಯೊಬ್ಬಳು ಅವಿವಾಹಿತಳಾಗಿ ಹೆತ್ತು, ಶಿಶುಹತ್ಯೆ ಮಾಡಿ ಸಿಕ್ಕಿ ಬಿದ್ದಿರುವಳು.

ಜಬ್ಬಲ್‌ಪುರದಲ್ಲೊಂದು ಕಡೆ ನಿಕ್ಷೇಪ ನಿಧಿ ಇದೆಯೆಂದು ತಿಳಿದೊಡನೆ ಅಧಿಕಾರಿಗಳ ಅನುಮತಿ ನೋರೆಗೆ ಅಲ್ಲಿ ಜನರ ಹುಡುಕಾಟಕ್ಕೆ ಆರಂಭವಾಗಿದೆ.

ಮುಜಫ್ಫರ್‌ಪುರದಿಂದ ಭೂಕಂಪವಾಯಿತೆಂದು ಮಹಾರಾಜರು ಬಿಹಾರಿನ ಕುರಿತು ಹೇಳಿದುದಕ್ಕೆ ಸಮೀಕ್ಷಣಾರ್ಥವಾಗಿ ಅಲ್ಲಿಗೆ ಉತ್ತರ ಕೊಟ್ಟರು ಗಾಂಧೀಜೀಯವರು; ಪ್ರಕೃತಿಗೂ ಅಸ್ಪೃಶ್ಯತೆಗೂ ಸಂಬಂಧವಿದೆ ಎಂದು ಹೇಳಿಸಿದರು.

ಗಯೆಯಲ್ಲಿ ತಾ. ೧೪ರಲ್ಲಿ ಸ್ವಲ್ಪ ಭೂಕಂಪವಾಯಿತು.

ವಿದ್ಯಾಪುರದ ಜೈಲಲ್ಲಿರುವ ಶಾಬೂಲ್ ಸಿಂಗನೆಂಬವನು ಕೈದಿಗಳ ಮೇಲೆ ಕಾವಲಗಾರರಿಂದ ನಡೆವ ದೌರ್ಜನ್ಯದ ಪ್ರತಿಕ್ಷಾರ್ಥ ಉಪವಾಸ ಆರಂಭಿಸಿರುವನು.

ಪುರಿಯ ಜಗನ್ನಾಥನಲ್ಲಿ ಬಲರಾಮ ಸ್ವಾಮಿ ವಿಗ್ರಹವು ಪೀಠದಿಂದ ಕೆಳಗೆ ಬಿದ್ದುಬಿಟ್ಟಿದೆ. ಏನಾಗುವುದೋ ಎಂದು ಜನರ ಭಯ!

ಕಲ್ಕತ್ತೆಯ ನ್ಯೂ ಇಂಡಿಯನ್ ಥಿಯೇಟರ್ಸ್ ಫಿಲ್ಮ್ ಕಂಪೆನಿಯವರು ಬಿಹಾರಿನಲ್ಲಾದ ಭೂಕಂಪದ ಸಂಪೂರ್ಣ ಚಲಚ್ಚಿತ್ರವನ್ನು ತೆಗೆದಿರುವರು.

ವೈಸರಾಯರ ಭೂಕಂಪ ನಿಧಿಗೆ ತಾ. ೧೬ರ ತನಕ ೧೪ ಲಕ್ಷ ರೂಪಾಯಿಗಳು ಶೇಖರವಾಗಿರುವುದು.

ಸರಕಾರದವರು ಬೇಗನೇ ಪೋಸ್ಟಲ್ ಕವರಿನ ಕ್ರಯವನ್ನು ಮೊದಲಿನ ಕ್ರಯವಾದ ಒಂದಾಣೆಯಲ್ಲಿ ಮರಳಿ ಪ್ರಕಟಿಸಿ.

ಬಾಬುರಾಜೇಂದ್ರ ಪ್ರಸಾದರ ಭೂಕಂಪ ಸಹಾಯ ಫಂಡಿಗೆ ಇಷ್ಟರ ತನಕ ೧೬ ಲಕ್ಷಕ್ಕಿಂತಲೂ ಹೆಚ್ಚು ಸಹಾಯವು ದೊರೆತಿದೆ.

ಧಾರವಾಡದಲ್ಲಿ ೬೦ ವರ್ಷ ಪ್ರಾಯದ ಯುವಕನು ೧೬ ವರ್ಷದ ಮುದಿಯಳೊಬ್ಬಳನ್ನು ವಿವಾಹವಾಗಲು ಮಂಟಪದಲ್ಲಿ ಕುಳಿತಿದ್ದಾಗ, ವಧುವು ಸಿಟ್ಟಿನಿ ವರನ ಕೆನ್ನೆಗೆ ಎರಡು ಬಿರಿಸಿದಳು. ವಿವಾಹ ಮುರಿಯಿತು.

ಮದ್ರಾಸಿನ ಹಿಂದೂ ಪತ್ರಿಕೆಯ ಮೂಲಕ ಬಿಹಾರಿಗೆ ರೂಪಾಯಿ ೮೬೦೦೦ ಇಲ್ಲಿರೆ ಸಂಗ್ರಹವಾಗಿ ಕೊಡಲ್ಪಟ್ಟಿದೆ.

ಮದ್ರಾಸ್ ಪ್ರಾಂತ್ಯದ ಅಕ್ಕಿಯ ಧಾರಣೆಗಳನ್ನು ತಿಳಿದು ವ್ಯವಸ್ಥೆ ಮಾಡುವುದಕ್ಕಾಗಿ ಸರಕಾರವು ಒಬ್ಬ ಮೇಲಧಿಕಾರಿಯನ್ನು ನಿಯಮಿಸಿದೆ.

ತಿನ್ನವೆಲ್ಲಿಯ ದೇವಿಪಟ್ಟಣ ಎಂಬಲ್ಲಿ ಇಬ್ಬರು ಮಕ್ಕಳು ಚೆಂಡೆಂದು ಭಾವಿಸಿ ಆಡಲು ಎತ್ತಿದುದರಿಂದ ದಾರಿಯಲ್ಲಿ ಒಂದು ಬೊಂಬೊಡೆದು ಮೃತರಾದರು.

ಇಟೆಲಿಯ ರಿವಾನೋ ಎಂಬಲ್ಲಿ ಎರಡು ರೈಲುಗಾಡಿಗಳು ಡಿಕ್ಕಿ ಹೊಡೆದು, ಒಂದು, ಬೆಂಕಿಯಿಂದ ಸುಟ್ಟು ಹೋಯಿತು.

ಆಫ್ರೀಯಾದಲ್ಲಾದ ಪ್ರಜಾ ಕ್ಷೋಭೆಯಿಂದಾಗಿ ಒಟ್ಟು ೩೪೧ ಜನರು ಮೃತರಾದರು. ೬೫೮ ಮಂದಿಗಳು ಗಾಯಗೊಂಡಿರುವರು.

ತಾ. ೧೬ರಲ್ಲಿ ಪರ್ವತದಲ್ಲಿ ಬೇಟೆಯಾಡುತ್ತಿರುವಾಗ ಬೆಲ್ಜಿಯಮಿನ ಅರಸರಾದ ಅಲ್ಬರ್ಟರೆಂಬವರು ಬಿದ್ದು ಮೃತರಾದರು. ಅವರು ಮಹಾಯುದ್ಧದಲ್ಲಿ ಜರ್ಮನಿಗೆ ಎದುರು ನಿಂತು ಬ್ರಿಟಿಷರಿಗೆ ಸಹಾಯ ಕೊಟ್ಟವರು. ಯುರೋಪಿನಲ್ಲಿ ಮಹಾ ದುಃಖವುಂಟಾಗಿದೆ.

ದಕ್ಷಿಣ ಕನ್ನಡ.

ಮಂಗಳೂರು: ಶ್ರೀಕೃಷ್ಣ ಸಿನಿಮಾ ಮಂದಿರದಲ್ಲಿ ತಾ. ೨೫ರಿಂದ ಪತಿತಪಾವನ ಮತ್ತು ಗುಲ್ಜಾರ್ ಬೇಗಮ್ಮಳ ಗಾನನರ್ತನ ತಾ. ೧೮ರಿಂದ ಇಂಡಿಯಾ ಮಿಥೀಯಾ ಎಂಬ ಮಾತಾಡುವ ಚಿತ್ರವನ್ನು ಪ್ರದರ್ಶಿಸಲಾಗುವುದು ಕರ್ಮ, ಈಸ್ಟ್ ಒಫ್ ಬೋರ್ನಿಯೊ ಮತ್ತು ಮೆರಿ ಮ್ಯಾಗ್ಡಲಿನ್ ಎಂಬ ಚಿತ್ರಗಳು ಅತಿ ಬೇಗನೆ ಬರುತ್ತವೆ.

ದಿ. ಬೊಂಬೆ ಮ್ಯೂಚ್ಯುವಲ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್ ಇವರ ಜೀವವಿಮಾ ಕಂಪೆನಿಯು ೧೯೩೩ರಲ್ಲಿ ಒಟ್ಟು ೯೪,೧೪,೦೦೦ ರೂಪಾಯಿಗಳ ವಿಮೆಯನ್ನು ಸಂಪಾದಿಸಿ ತಮ್ಮ ಕಂಪೆನಿಯ ಇಷ್ಟು ವರ್ಷಗಳ ವಹಿವಾಟುಗಳಿಗಿಂತ ಈ ವರ್ಷ ಪ್ರಥಮವಾಗಿ ನಿಂತಿರುವರೆಂದೂ, ಮೆಸರ್ಸ್ ಕೊಟ್ಟಾರಿ ಬ್ರದರ್ಸ್‌ರವರು ೧೯೩೩ರಲ್ಲಿ ಒಟ್ಟು ೨೧೧೧೬೩೦ ರೂಪಾಯಿಗಳ ವಿಮಾ ಸಂಪಾದನೆ ಮಾಡಿ, ಡೈರೆಕ್ಟರರ ಶಿಫಾರಸನ್ನು ಹೊಂದಿದರೆಂದೂ ತಿಳಿದುಬರುತ್ತದೆ.

ಗವರ್ನಮೆಂಟ್ ಕಾಲೇಜಿನ ಸೆಕೆಂಡರಿ ಟ್ರೈನಿಂಗ್ ಭಾಗದ ರಜತೋತ್ಸವವು ತಾ. ೧೩ನೇ ದಿನ ಶ್ರೀ ಎ. ಬಿ. ಶೆಟ್ಟಿ ಎಂ. ಎಲ್. ಸಿ. ಇವರ ಅಧ್ಯಕ್ಷತೆಯಲ್ಲಿ ಜರಗಿತು.

ಮದರಾಸಿನ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದ ಸಹಾಯಾರ್ಥವಾಗಿ ಕೆನರಾ ಹೈಸ್ಕೂಲಿನಲ್ಲಿ ಜರಗಿದ ಸಂಗೀತ ಕಚೇರಿಯಿಂದ ಸುಮಾರು ಒಂದು ಸಾವಿರ ರೂಪಾಯಿ ಸಂಗ್ರಹವಾಗಿದೆಯೆಂದು ತಿಳಿದು ಬಂದಿದೆ.

ಬಿಹಾರ್ ಭೂಕಂಪ ನಿಧಿಯ ಪರವಾಗಿಯೂ ಜರ್ಮನರ ಬಂಧುವಿನ ಪರವಾಗಿಯೂ ಮಾರ್ಚ್ ತಾ. ೩ನೇ ಸೋಮವಾರ ಚಂದ್ರಕಲಾ ನಾಟಕ ಮಂಡಳಿಯವರು ಸದಾರಮೆ ಎಂಬ ಸಂಗೀತ ನಾಟಕವನ್ನು ಬಹು ಸುಧಾರಿತ ರೀತಿಯಿಂದಾಡಲಿರುವರೆಂದೂ ಎಲ್ಲರೂ ಪ್ರೋತ್ಸಾಹ ಕೊಡಬೇಕೆಂದೂ ಸಂಪಾದಕರು ತಿಳಿಸುತ್ತಾರೆ.

ಈ ಸಲದ ಸಂಚಿಕೆಯಲ್ಲಿ ಸಾಹಿತ್ಯ ಸಂಚಿಕೆಯು ಇದೆ.

ಮಹಾತ್ಮಾ ಗಾಂಧಿಯವರು ಇಲ್ಲಿಗೆ ಬಂದಾಗ ಸ್ತ್ರೀಯರಿಗಾಗಿ ತಾ. ೨೪ನೇ ಶನಿವಾರ ಘಂಟೆ ೫ರಿಂದ ೫-೩೦ರ ವರೆಗೆ ನೇಶನಲ್ ಗರ್ಲ್ಸ್ ಸ್ಕೂಲಿನಲ್ಲಿ ಒಂದು ಸಭೆ ಜರಗುವುದು.

ಇಲ್ಲಿಯ ಭವಂತಿಕೇರಿಯಲ್ಲಿರುವ ಕರ್ನಾಟಕ ಗ್ರಂಥಾಲಯದ ವಾರ್ಷಿಕೋತ್ಸವವು ವಿದ್ವಾನ್ ಶ್ರೀ ಯು. ರಾಮಪ್ಪನವರ ಅಧ್ಯಕ್ಷತೆಯಲ್ಲಿ ಇದೇ ತಾ. ೧-೩-೩೪ರಲ್ಲಿ ಸಂಜೆ ಗಂಟೆ ೪-೩೦ಕ್ಕೆ ಜರಗಲಿರುವುದರಿಂದಲೂ, ರಾತ್ರಿ ಗಂಟೆ ೮-೩೦ಕ್ಕೆ ಸುನಂದಾಬಾಯಿ ಎಂಬ ಚಿಕ್ಕ ಬಾಲಕಿಯೋರ್ವಳ ಹರಿಕಥೆ ಇರುವುದೆಂದೂ, ಇದಕ್ಕೆ ಸರ್ವರಿಗೂ ಸುಸ್ವಾಗತವೆಂದೂ ಗ್ರಂಥಾಲಯದ ಚಾಲಕರು ತಿಳಿಸುತ್ತಾರೆ.

ಶ್ರೀಯುತ ಕಳ್ಳಿಮಾರು ರಘುಚಂದ್ರ ಬಲ್ಲಾಳರವರು ಜೀರ್ಣೋದ್ಧಾರ ಮಾಡಿ ಕಟ್ಟಿಸಿದ ಮಂಗಳೂರು ಶ್ರೀ ಶಾಂತೀಶ್ವರಸ್ವಾಮಿ ಬಸದಿಯಲ್ಲಿ ನಡೆಯುವ [illegible] ಮಹೋತ್ಸವವು ತಾರೀಕು ೨೬-೩-೩೪ಕ್ಕೆ ಪ್ರಾರಂಭವಾಗಿ ತಾ. ೧-೪-೩೪ರಲ್ಲಿ ೧೦೮ ಕಲಶ ಸ್ನಪನ ಮಹೋತ್ಸವ, ಮರುದಿನ ಅವಭೃತ ಸಾಂಘಸಂತರ್ಪಣೆ ವಗೈರೆ ನಡೆಯುವುದರಿಂದ ಸರ್ವರಿಗೂ ಸುಸ್ವಾಗತವಿದೆ.

ಶ್ರೀ ವಿವೇಕಾನಂದ ಸ್ಟಡಿ ಸೊಸೈಟಿ ಮಂಗಳೂರು ಇದರಿಂದ ೧೯೩೩ರಲ್ಲಿ ಸ್ಥಾಪಿತವಾಗಿದ್ದು ಶ್ರೀ ರಾಮಕೃಷ್ಣ ಪರಮಹಂಸರ ಜನ್ಮದಿನವು ತಾ. ೧೮-೩-೩೪ನೇ ದಿನ ಕೆನರಾ ಹೈಸ್ಕೂಲಿನಲ್ಲಿ ಜರಗಿಸಲ್ಪಟ್ಟಿತು.

ತಾರೀಕು ೧೬-೩-೩೪ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯೊಳಗೆ ಒಟ್ಟು ೪೯ ಜನನಗಳೂ ೨೬ ಮರಣಗಳೂ ಆಗಿವೆ.

ಕಾಸರಗೋಡು — ಇಲ್ಲಿಯ ಬಿ. ಇ. ಎಂ. ಸೆಕಂಡರಿ ಶಾಲೆಯ ವಿದ್ಯಾರ್ಥಿಸಂಘದ ಅದೊಂದು ಸಭೆಯು ತಾ. ೧೪-೩-೩೪ರಲ್ಲಿ ನಡೆಯಿತು. ಶ್ರೀಯುತ ಎಚ್. ದತ್ತಾತ್ರಿಯರಾವ್ ಎಮ್. ಎ. ಎಲ್. ಟಿ. ಇವರು ಭಾಷಣಕಲೆ (Public speaking as an art) ಎಂಬ ವಿಷಯವಾಗಿ ಸುಲಭವೂ ಸುಮಧುರವೂ ಆದ ಚಿತ್ತಾಕರ್ಷಕ ಭಾಷಣವನ್ನಿತ್ತು ಬಾಲಕರಲ್ಲಿ ಅಪೂರ್ವ ಉತ್ಸಾಹವನ್ನುಂಟುಮಾಡಿದರು. ಅನಂತರ ಇದೇ ಶಾಲೆಯ ಮುಖ್ಯೋಪಾಧ್ಯಾಯರಾದ ಎಮ್. ಎಸ್. ಎಚ್ಚರವರ ಭಾಷಣವೂ ಧನ್ಯವಾದ ಸಮರ್ಪಣೆಯೂ ಜರಗಿತು.

ಸುರತ್ಕಲ್ — ಕಳೆದ ವಾರ ಇಲ್ಲಿಯ ಗ್ರಾಮಪಂಚಾಯತ ಕೋರ್ಟಿನ ಸದಸ್ಯರುಗಳಲ್ಲಿಬ್ಬರ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಶ್ರೀಗಳಾದ ಕೃಷ್ಣಾಪುರ ಗೋಪಾಲಕೃಷ್ಣಯ್ಯ ಮತ್ತು ಜೇಮ್ಸ್ ಪಿ. ಡಿ. ಸೋಜರವರೀರ್ವರು ಪ್ರತಿಸ್ಪರ್ಧಿಗಳಿಲ್ಲದೆ ಚುನಾಯಿಸಲ್ಪಟ್ಟಿರುವ ಸಂಗತಿ ತಿಳಿದುಬರುತ್ತದೆ.

ಒಂದೊಮ್ಮೆ ಇಲ್ಲಿ ಅಧಿಕವಾಗಿದ್ದ ಹುಚ್ಚುನಾಯಿಗಳ ಕಾಟವು "ಗ್ರಾಮಪಂಚಾಯತ ಸಮಿತಿ"ಯವರ ಪ್ರಯತ್ನಗಳಿಂದ ಕಡಿಮೆಯಾಗಿದ್ದಿತಾದರೂ, ಇತ್ತೀಚೆಗೆ ಪುನಃ ಹೆಚ್ಚಾಗಿ ಅನೇಕ ಜನ ಜಾನುವಾರುಗಳೂ, ಸಾಕುನಾಯಿಗಳೂ ಹುಚ್ಚುನಾಯಿಗಳ ಕಡಿತಕ್ಕೊಳಗಾಗಿರುವುದಂತೂ ತುಂಬಾ ಶೋಚನೀಯವೇ ಸರಿ; ಸಮಿತಿಯವರು ಇನ್ನೊಮ್ಮೆ ನಾಯಿಗಳನ್ನೆಲ್ಲಾ ಕೊಲ್ಲಿಸುವ ಹಾಗೂ, ಹುಚ್ಚುನಾಯಿಗಳ ಕಡಿತದ ಔಷಧಿಯನ್ನು ತರಿಸಿಟ್ಟುಕೊಳ್ಳುವ ವ್ಯವಸ್ಥೆಗಳನ್ನೇರ್ಪಡಿಸಿ, ಗ್ರಾಮ ಕ್ಷೇಮಾಭ್ಯುದಯವನ್ನು ಬಯಸಬೇಕಾಗಿ ಊರವರ ಹಾರೈಕೆ!

ಇದೇ ತಾ. ೧೩ನೇ ಮಂಗಳವಾರ ಹಗಲು ಇಲ್ಲಿಯ ಮುಂಚೂರು ಎಂಬಲ್ಲಿ ಪೊದೆಯೊಂದರಲ್ಲಿ ಮಲಗಿದ್ದ ದೊಡ್ಡ ಹುಲಿಯೊಂದನ್ನು ಕಾಣಲು ಸೇರಿದ ಜನರಲ್ಲೊಬ್ಬನ ಮೇಲೆ ಹಾರಿ ಗಾಯಗೊಳಿಸಿ, ಮತ್ತೊಂದು ಪೊದೆಯನ್ನು ಸೇರಿ ಮಲಗಿದ್ದುದನ್ನು, ಮಂಗಳೂರಿನಿಂದ ರಾ। ಶ್ರೀ ವಕೀಲ ಸಿ. ಲೋಬೋರವರು ಬಂದು ಎರಡು ಗುಂಡು ಹೊಡೆದು ಕೊಂದು ಸರ್ವರ ಶ್ಲಾಘನೆಗೂ ಪಾತ್ರರಾಗಿರುವರೆಂದೂ, ಕೊಂದಿರುವ ೭೮ ಅಡಿ ಉದ್ದದ ಆ ದೊಡ್ಡ ಹುಲಿಯನ್ನು ಬಸ್ಸಿನಲ್ಲಿ ಮಂಗಳೂರಿಗೊಯ್ದಿರುವರೆಂದೂ ತಿಳಿಸಲು ತುಂಬಾ ಸಂತೋಷವಾಗುತ್ತದೆ.

ಮೂಲ್ಕಿ: — ಬಿಹಾರ್ ಭೂಕಂಪ ಸಹಾಯ ನಿಧಿಗೆ ಇಲ್ಲಿ ಶೇಖರಿಸಲ್ಪಟ್ಟ ಹಣದಲ್ಲಿ ರೂಪಾಯಿ ೧೫೫ನ್ನು ಬಾಬು ರಾಜೇಂದ್ರ ಪ್ರಸಾದರಿಗೆ ಕಳುಹಿಸಿ ಕೊಡಲಾಗಿದೆ. ಸ್ಥಳೀಕ ಶ್ರೀ ವೆಂಕಟ್ರಮಣ ದೇವಳದ ಟ್ರಸ್ಟಿಯವರು ಈ ನಿಧಿಗೆ ರೂಪಾಯಿ ೧೫ನ್ನು ಸಹಾಯಿಸಿತ್ತಿರುವರು.

ಇಲ್ಲಿಯ ಹೈಸ್ಕೂಲ್ ಯೋಜನೆ ಫಂಡಿಗೆ ಶ್ರೀ ವೆಂಕಟರಮಣ ದೇವಳದಿಂದ ರೂಪಾಯಿ ೩೦೦೦ದ ಧನ ಸಹಾಯ ಸೆಂಕ್ಷನ್ ಆಗಿದೆ ಎಂಬ ವಾರ್ತೆಯನ್ನು ತಿಳಿಸುವರೆ ಸಂತೋಷವಾಗುತ್ತದೆ.

ಉಡುಪಿ: — ಬಿಹಾರ ಭೂಕಂಪಹಾವಳಿ ನಿವಾರಣೆಗೋಸ್ಕರ ದ. ಕ. ಜಿಲ್ಲಾ ನೆರೆಹಾವಳಿ ನಿವಾರಣಾ ಕಮಿಟಿ, ಉಡುಪಿ ಇದರಿಂದ ಈ ಮೊದಲೇ ರೂ. ೩೦೦ನ್ನು ಕಳುಹಿಸಿ ಕೊಟ್ಟಿದ್ದಲ್ಲದೆ, ೨೦೧ ರೂ. ೧೩೭೫ನ್ನು ರವಾನಿಸಿಯದೆ. ಶ್ರೀ ಪಾಂಗಾಳ ಮಂಜುನಾಥ ನಾಯಕರಿಂದ ಉಡುಪಿಯಲ್ಲಿ ಹುಂಡಿರೂಪದಿಂದ ಜಮೆ ಮಾಡಿ ಈ ಮೊದಲು ಕಳುಹಿಸಿದ್ದ ರೂ. ೫೪-೯-೫ ಅಲ್ಲದೆ ಅನಂತರ ಜಮೆಯಾದ ರೂ. ೧೩-೧೩-೯, ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟ್ ಸ್ಟಾಫ್‌ನಿಂದ ಮೊದಲಿನ ರೂ. ೧೫-೩-೦, ಅನಂತರದ ರೂ. ೩-೧-೦, ಕ್ರಿಶ್ಚನ್ ಹೈಸ್ಕೂಲಿನ ಉಪಾಧ್ಯಾಯ ಮತ್ತು ವಿದ್ಯಾರ್ಥಿವರ್ಗದಿಂದ ರೂಪಾಯಿ ೩೦-೮-೦ ಕಳುಹಿಸಲಾಗಿದೆ. ಸ್ಥಳೀಕ ಬೋರ್ಡ್ ಹೈಸ್ಕೂಲಿನಲ್ಲೂ ವಂತಿಗೆಯಾಗುತ್ತಲಿದೆ.

ಪರ್ಯಾಯ ಜಾತ್ರೆ ಸಂಬಂಧವಾಗಿ ಇಲ್ಲಿಗೆ ಬಂದಿರುವ ಹೊಸ ರೀತಿಯಲ್ಲಿ ಹಣ ಗಳಿಸುತ್ತಿರುವ (ಒಂದು ತರದ ಬಹಿರಂಗ ಜುಗಾರು) ಕಸ್ ಫೆಯರ್ ಕಾರ್ನಿವಲ್‌ನವರು ಇದೇ ತಾ. ೭ಕ್ಕೆ ಮುಂದಕ್ಕೆ ಪಯಣ ಬೆಳೆಸುವರೆಂದಿದ್ದರೂ, ಮಹಾಜನರ ಉದಾರಾಶ್ರಯ ಪ್ರೋತ್ಸಾಹದ ದೆಸೆಯಿಂದ ಇದೇ ತಾ. ೨೮ಕ್ಕೆ ಇಲ್ಲಿಂದ ಹೊರಟು ಮಂಗಳೂರಿಗೆ ಹೋಗುವರೆಂದಿದೆ. ಆದರೆ ಬಡವರ ಬಂಧು, ಪತಿತಪಾವನ, ಹರಿಜನೋದ್ಧಾರಕ ಮಹಾತ್ಮಾ ಗಾಂಧಿಯ ರಜತಪುರ ಕೃಷ್ಣಸನ್ನಿಧಾನದ ಉಡುಪಿಗೆ ಚಿತ್ತೈಸುವರೆಂದರೆ ಮಹಾಜನರಲ್ಲಿ ಆ ಬಗೆಯ ದೃಷ್ಟಿ ಸ್ವಾಗತಸನ್ನಾಹಗಳಲ್ಲಿ? ತಾ. ೧೩ಕ್ಕೆ ಸ್ಥಳೀಯ ಜಂಟಿ ಯೂನಿಯನ್ ಕ್ಲಬ್ಬಿನ ಮೈದಾನದಲ್ಲಿ, ಆ ಬಗ್ಗೆ ಸಿದ್ಧತೆಗಳನ್ನು ಕೂಡುವರೆ ಮಹಾಜನ ಸಭೆಯೊಂದು ಶ್ರೀ. ಪಾಂಗಾಳ ಮಂಜುನಾಥನಾಯಕರು ಜರಗಿಸಬೇಕೆಂದು ಪ್ರಕಟಣೆಗಳನ್ನು ಹೊರಡಿಸಿದರು. ಊರ ಪ್ರಮುಖ ಗೃಹಸ್ಥರಾರೂ ಹಾಜರಾಗದಿದ್ದುದರಿಂದ ಸಭೆಯು ಸೇರಲಿಲ್ಲ. ಆದಾಗ್ಯೂ ಸ್ವಾಗತಸನ್ನಾಹಗಳನ್ನೇರ್ಪಡಿಸುವ ಯತ್ನಗಳು ಸಾಗುತ್ತಿವೆ.

ಈ ಸಲದ ಹಿಂದೀ ಪರೀಕ್ಷೆಗಳಿಗೆ ೫೧ ಮಂದಿ ಅರ್ಜಿಗಳನ್ನು ಮಾಡಿದ್ದರು; ಅಸೌಖ್ಯದ ನಿಮಿತ್ತ ೩-೪ ಮಂದಿ ಗೈರುಹಾಜರಾಗಿದ್ದರು. ಸಪ್ಪಂಬರ ಪರೀಕ್ಷೆಗಳ ಬಗ್ಗೆ ವಿದ್ಯಾರ್ಥಿಗಳ ತಯಾರಿಯು ಏರ್ಪಾಟು ಆಗುತ್ತಿದೆ.

ಕಳೆದ ತಾ. ೧೧ನೇ ಆದಿತ್ಯವಾರ ಇಲ್ಲಿಯ ಬೋರ್ಡ್ ಹೈಸ್ಕೂಲಿನಲ್ಲಿ ಮಿ. ರೋಕಿ ಫೆರ್ನಾಂಡೀಸರ ಸಂಚಾಲಕತ್ವದಲ್ಲಿ ಹಿಂದೀ ಪರೀಕ್ಷೆಗಳು ನಿರ್ವಿಘ್ನವಾಗಿ ಕೊನೆಗೊಂಡವು. ಒಟ್ಟಿಗೆ ೫೧ ಮಂದಿ ಪರೀಕ್ಷಾರ್ಥಿಗಳಿದ್ದರು. ಇವರಲ್ಲಿ ೧೬ ಮಂದಿ ಮಹಿಳೆಯರು. ಪರೀಕ್ಷೆಯ ದಿನ ಸಾಯಂಕಾಲ ಹಿಂದೀ ವಿದ್ಯಾರ್ಥಿಗಳು ತಮ್ಮ ಅಧ್ಯಾಪಕರಾದ ಶ್ರೀ ಕೆ. ರಾಘವಾಚಾರ್ಯರ ಸನ್ಮಾನಾರ್ಥವಾಗಿ ಒಂದು (Social) ಮಿತ್ರಕೂಟವನ್ನು ಜರಗಿಸಿ ಛಾಯಾಚಿತ್ರವನ್ನು ತೆಗೆಸಿದುದಲ್ಲದೆ ಮಿ. ಫೆರ್ನಾಂಡೀಸರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಅಧ್ಯಾಪಕರಿಗೆ ಹಿಂದೀಯಲ್ಲಿ ಒಂದು ಮಾನಪತ್ರವನ್ನು ಅರ್ಪಿಸಿದರು. ಈ ಸಂದರ್ಭದಲ್ಲಿ ಅನೇಕ ವಿದ್ಯಾರ್ಥಿ ವಿದ್ಯಾರ್ಥಿನಿಯರು ಹಿಂದೀ ಪ್ರಚಾರಕರ ಉತ್ತಮ ಶಿಕ್ಷಣ ಹಾಗೂ ಗುಣ ನಡತೆಗಳನ್ನು ಕುರಿತು ಪ್ರಶಂಸಾಪರ ಭಾಷಣಗಳನ್ನು ಮಾಡಿದರು. ಶ್ರೀ ರಾಘವಾಚಾರ್ಯರ ಹಾಗೂ ಅಧ್ಯಕ್ಷರ ಭಾಷಣಗಳು ಸಮಯೋಚಿತವೂ ಸ್ಫೂರ್ತಿದಾಯಕವೂ ಆಗಿದ್ದುವು. ಅಧ್ಯಕ್ಷರ ಭಾಷಣದಲ್ಲಿ ಹಿಂದೀಯು ಶೀಘ್ರದಲ್ಲೇ ಬೋರ್ಡ್ ಹೈಸ್ಕೂಲಿನ ಕಾರ್ಯಕ್ರಮದಲ್ಲಿ ಸೇರುವುದೆಂದು ಊಹೆಗೆ ಸಾಕಷ್ಟು ಅವಕಾಶವಿರುವುದು.

ಕುಂದಾಪುರ — ಇಲ್ಲಿ ಗಾಂಧಿ ಸ್ವಾಗತ ಮಂಡಳಿಯ ಕಾರ್ಯವು ಭರದಿಂದ ಸಾಗುತ್ತಿದೆ. ೭೦ ವರ್ಷ ಪ್ರಾಯದ ವೃದ್ಧ ಜಮೀನುದಾರರೂ, ಗಾಂಧೀಜಿಯವರಲ್ಲಿ ತುಂಬಾ ಶ್ರದ್ಧಾವಂತರೂ ಆದ ಶ್ರೀ ಮಂಜಯ ಸೇರುಗಾರರು ಅಧ್ಯಕ್ಷರಾಗಿಯೂ, ಶ್ರೀ ಕೆ. ನರಸಿಂಹ ಕಾಮತರು ಉಪಾಧ್ಯಕ್ಷ ಮತ್ತು ಖಜಾನ್ಚಿಯರಾಗಿಯೂ, ಎಚ್. ಸೂರಪ್ಪಯ್ಯನವರು ಕಾರ್ಯದರ್ಶಿಗಳಾಗಿಯೂ ನೇಮಿಸಲ್ಪಟ್ಟಿರುವರು.

ಸ್ವೀಕಾರ.

ಕಥಾಕುಂಜ—ಬೆಳಗಾಂವಿಯಿಂದ ಹೊರಡುವ ಉತ್ಕೃಷ್ಟ ಮಾಸಿಕ ಪತ್ರಿಕೆ. ಪ್ರಸಿದ್ಧ ಬರೆಹಗಾರರ ಕೃತಿಗಳು ಪ್ರಕಟವಾಗುತ್ತವೆ. ಸಂಪಾದಕರು ಪ್ರೋತ್ಸಾಹಾರ್ಹರು. ವಾರ್ಷಿಕ ಚಂದಾ ರೂಪಾಯಿ ೨-೪-೦.

ಹರಿಜನ ಸಂಧಾನ—ಶ್ರೀ ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯರಿಂದ. ಸರಳಶೈಲಿಯ ಮಧುರ ಗೀತೆಗಳಿಂದ ತುಂಬಿದೆ. ಬೆಲೆ ೧ ಆಣೆ. ಪ್ರತಿಯೊಬ್ಬನೂ ಓದಿ ಮಥಿಸುವಂಥ ಕೃತಿ.

ಚಲನ ಚಿತ್ರ—ವಾರಪತ್ರಿಕೆ, ಬೆಂಗಳೂರು.

—ಸಚಿತ್ರವೂ, ಮನೋರಂಜಕವೂ ಆದ ಪುಸ್ತಕ ರೂಪದ ಪತ್ರಿಕೆ. ಚಲಚಿತ್ರ ವಿಲಾಸಿಗಳು ಓದಲೇಬೇಕಾದುದು. ಮುದ್ರಣವು ಇನ್ನಷ್ಟು ಉತ್ತಮವಾಗುತ್ತಿದ್ದರೆ ಮತ್ತೂ ಆಕರ್ಷಕವಾಗುತ್ತಿತ್ತು. ಕರ್ನಾಟಕದಲ್ಲಿ ಪ್ರಥಮೋದ್ಯಮದ ಈ ಸಾಹಸಕ್ಕಾಗಿ ಸಂಪಾದಕರು ಅಭಿನಂದನೀಯರು.

ವಿನೋದ ಪ್ರಪಂಚ—ಬೆಂಗಳೂರಿನಿಂದ ಹೊರಡುವ ಪಕ್ಷಪತ್ರಿಕೆ. ಸಂಪಾದಕರು ಶ್ರೀ [illegible] ಗೋಪಾಲಾಚಾರ್ಯ ಶರ್ಮನ್. ವಾರ್ಷಿಕ ಚಂದಾ ೧-೮-೦, ಆರು ತಿಂಗಳಿಗೆ ೧೩ ಆಣೆಗಳು. ಜನಜೀವನದ ನೀಳ ಟೀಕೆಟಿಪ್ಪಣಿಗಳನ್ನು ಕೊಟ್ಟು ಪ್ರಪಂಚವನ್ನೇ ವಿನೋದಮಯವಾಗಿ ಮಾಡುವಂತಹ [illegible] ಉದಾತ್ತವೂ ಆದ ಲೇಖನಗಳು ಪ್ರಕಟವಾಗುತ್ತವೆ. ಆದರೆ ಕನ್ನಡ ನಾಡಿಗೆ ಭೂಷಣಪ್ರಾಯವಾಗಿ ಮಾಡಬೇಕೆಂದಿದ್ದಾರೆ. ಎಲ್ಲರೂ ಪ್ರೋತ್ಸಾಹಿಸುವುದು ಅವಶ್ಯ.

ತರಂಗಿಣಿ—ಜಯಕರ್ನಾಟಕ ಗ್ರಂಥಮಾಲೆಯ ೧ನೇ ಪುಷ್ಪ. ಲೇಖಕರು—ಶ್ರೀ ಚೆಟ್ಟಿ ಗೋವಿಂದರಾಯರು, ಎಲ್. ಎಲ್. ಬಿ. ಬೆಲೆ—ಆರಾಣೆಗಳು. ಕವಿ ಜಗನ್ನಾಥ ಪಂಡಿತರು ಈ ನಾಟಕದ ನಾಯಕರು. ಶೃಂಗಾರದ ಈ [illegible] ಕಾಶಿಯಲ್ಲಿ ಪಂಡಿತರ ಮುಕುಟಮಣಿಯಾಗಿ ಜ್ಞಾನವರ್ಧನದಿಂದ ಮಾಡಿದ ಸಂಸ್ಕೃತ ಸೇವೆಯು ಇದರ ಕಥಾವಸ್ತುವು. ಮಧುರಶೈಲಿಯಿಂದಲೂ, ಭಾವಗರ್ಭಿತವಾಗಿಯೂ ಬರೆಯಲ್ಪಟ್ಟಿದೆ. ಎಲ್ಲರೂ ಓದತಕ್ಕದಿದೆ.

ರಘುದೇವಿಯ ಗೋಕರ್ಣ [illegible] ತಯಾರಾದ ಆಯರ್ನ್ ಪ್ರೋಡಕ್ಟ್ಸ್ ಕಂಪೆನಿಯವರ ದಶಾಂಗವು ಹಸ್ತಗತವಾಗಿದೆ. ಬಹಳ ಪರಿಮಳಭರಿತವಾಗಿ, ಬೆಂಕಿಗೆ ಹಾಕಿದ್ದಲ್ಲಿ, ಹೊಗೆಯದ್ದು ಮನದಲ್ಲಿ ದೃಢತೆಯನ್ನುಂಟು ಮಾಡುವಂತಹುದು.

Karnataka Chemical and Pharmaceutical Works, Ltd., Udipi. (SouthIndia)

ಕುಂಭಕೋಣದಲ್ಲಿಯೂ ಮಧುರೆಯಲ್ಲಿಯೂ ಮೈಸೂರಿನಲ್ಲಿಯೂ ಸುವರ್ಣ ಪದಕಗಳನ್ನು ಪಡೆದಿರುವ

ಕರ್ನಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದಕ್ಷಿಣ ಹಿಂದೂಸ್ಥಾನ).

ನಮ್ಮಲ್ಲಿ ಟಿಂಕ್ಚರ್ ವಗೈರೆ ಎಲ್ಲಾ ಎಲ್ಲೋಪತಿಕ್ ಔಷಧ ದ್ರವ್ಯಗಳೂ, ಆಯುರ್ವೇದೀಯ ಔಷಧಿಗಳೂ, ಟಾಯ್ಲೆಟ್ ಸಾಮಗ್ರಿಗಳೂ, ಸಾಬೂನುಗಳೂ, ಫೌಂಟನ್ ಪೆನ್ ಶಾಯಿಗಳೂ ತಯಾರಿಸಲ್ಪಡುತ್ತವೆ.

ದ್ರಾಕ್ಷಾಸವ, ಪ್ರಸೂತಿ ಸಂಜೀವನ, ಸಿಯೋವಿಗರ್, ಸ್ನೋ

ಕ್ಷೀರಬಲಾ, ಕಾರ್ವೋಫ್ಲೋಜಿಸ್ಟಿನ್, ಯುಟರೀನಾ, ಇಂಕ್ಸ್

ಮೆನೆಜಿಂಗ್ ಡೈರೆಕ್ಟರ್—ವೆಂಕಟ್ರಾಯ ಅಚ್ಚಪ್ಪ ಬಾಳಿಗ.

ಹೆಡ್ ಆಫೀಸು
ಉಡುಪಿ. (ದಕ್ಷಿಣ ಹಿಂದೂಸ್ಥಾನ)

ಬ್ರೇಂಚ್ ಆಫೀಸು
ದೇವಕರಣ ಮೆನ್ಶನ್ಸ್, 46 ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ ನಂ. 2.

ಪಶ್ಚಿಮ ಕರಾವಳಿ ಮತ್ತು ಮೈಸೂರು ಪ್ರಾಂತ್ಯಗಳ ಪ್ರಾಮುಖ್ಯ ಏಜಂಟರು:—

ಕರ್ನಾಟಕ ಪ್ರೊಡಕ್ಟ್ಸ್ ಡಿಸ್ಟ್ರಿಬ್ಯೂಟಿಂಗ್ ಕಂಪೆನಿ, ಮಂಗಳೂರು

As It is............(?)
ಇದ್ದುದು ಇದ್ದ ಹಾಗೆ.......(?)

ಇದ್ದುದನ್ನು ಇದ್ದ ಹಾಗೆ ಹೇಳುವುದೆಂದರೆ ಕಂಡದ್ದನ್ನು ಕಂಡಂತೆ ಹೇಳುವುದು. ಇದ್ದುದನ್ನು ಹೇಳುವುದು ಕಷ್ಟವಲ್ಲ— ಅದನ್ನು ಕೇಳುವುದೂ ಕೂಡಾ ಸುಲಭವಲ್ಲ. ಆದರೂ ಇದ್ದುದನ್ನು ಇದ್ದ ಹಾಗೆ ಹೇಳಲೇ ಬೇಕು!

\+ + + +

'ನವಯುಗ'ಕ್ಕಾಗಿ ಕಳೆದ ಆದಿತ್ಯವಾರ 'ನವಜೀವನ'ವೆಂಬ ನಾಟಕವನ್ನಭಿನಯಿಸಿದರು. ನಾಟಕವು 'ಚಂತಿಲ್ಲ'ವಾಗಿದ್ದರೂ, ಕೆಲವರು ಗಾಯಕರಿಗೆ ವನ್ಸ್‌ಮೋರ್ ಹಾಕಿದ್ದಾರು ಎನ್ನುವುದು ಚಿಂತೆಗೆ ಕಾರಣ.

\+ + + +

ಹರಿಜನರಿಗಾಗಿ ದೇವಸ್ಥಾನಗಳು ಇಲ್ಲಿ ತೆರೆಯಲ್ಪಡುವ ವ್ಯವಸ್ಥೆಯು ಯಾರಿಂದಲೂ ಇಷ್ಟರ ತನಕವೂ ಆಗಿರುವುದಿಲ್ಲ— ಮಹಾತ್ಮಾಜೀಯವರನ್ನು ಸಂದರ್ಶಿಸಲಿರುವ ಗಡಿಬಿಡಿಯಿಂದ ಈ ಕರ್ತವ್ಯವು ಮರೆತು ಹೋಗಿರಬಹುದು ನಮ್ಮವರಿಗೆ!

\+ + + +

ಉರ್ವದಲ್ಲಿ ಮಾರಿಪೂಜೆಯು ನಡೆಯಿತು. ಕೋಳಿ ಕೋಣಗಳ ರಕ್ತ ಕುಡಿದ ಮಾರಿಯು ಹಾರಿದಳು! ಉರ್ವದವರ ಮೇಲೆ ಹಾರಲಿಲ್ಲ ಪುಣ್ಯಕ್ಕೆ. ಭಕ್ತ ಸ್ತ್ರೀಪುರುಷರು ಮಡಸ್ತಾನ ಹಾಕಿ ದೇಹವನ್ನು ದಣಿಸುತ್ತಿದ್ದಾಗ, ಬ್ರಾಹ್ಮಣ ಸ್ತ್ರೀಪುರುಷರು ಚಾವಡಿಗಳಲ್ಲಿ ಆನಂದದಿಂದ ಕುಳಿತು ನೋಡಿ ಹೊರಳಾಡುವವರ ಶ್ರದ್ಧೆಯ ಲಾಭ ಪಡೆಯುತ್ತಿದ್ದರು.

\+ + + +

ಶ್ರೀ ಕೆ. ಕೆ. ಶೆಟ್ಟರು 'ನವಜೀವನ'ವು ಪತ್ರಾಧಿಪತಿಗಳಿಗೆ ಹೊಡೆದ 'ಎಮ್ಡನ್ ಗುಂಡು' ಎಂದು ಎಲ್ಲರೆಂದರೋ! ಆಗಿರಬಹುದು. ಈ ನಾಟಕವನ್ನು ಉಡುಪಿ ಶೃಂಗೇರಿಗಳಲ್ಲಿ ಆಡಿದರೆ ಜೊಂಬಿಯಾಗದೆಂದು ಯಾರು ಹೇಳುವರು?

\+ + + +

ಬಿಹಾರ್ ಭೂಕಂಪದ ನಿಧಿಗೆ ನಮ್ಮಲ್ಲಿ ೧೩೦೦ ರೂಪಾಯಿ ಹೇ-ಗಾ-ದ-ರೂ ಶೇಖರಿತವಾಯಿತು. ಅದರಲ್ಲೂ ೧೫೦ ರೂಪಾಯಿಗಳು ಶೇಖರವಾಗಲು ಇನ್ನೂ ಉಳಿದಿವೆಯಂತೆ! ಉದಾರಿಗಳಲ್ಲೂ ಹುಸಿಕಾರಿಗಳಿರುವುದು ಸಂತೋಷವಲ್ಲ.

\+ + + +

ಚಂದ್ರಕಲಾದ ನಾಟಕಗಳು ಭಾವೋದ್ರೇಕಪದ–ಬೋಧಪದ—ಶಕ್ತಿಮಯ–ಕಲಾಮಯವೆಂದು ಮಂಗಳೂರವರ ಹೇಳಿಕೆ ಘೋಷವಾದರೂ, ಈ ಕಂಪೆನಿಯು ಗನ್‌ಬೋಟ್‌ಜೇಕರ ಬಂಗಾರಿ ಮಂಡಗಳನ್ನು ಥಿಯೇಟರಿನೊಳಗೆ ಇರದಿದ್ದುದರಿಂದ ನನ್ನವರಿಗೆ ಲಾಭದಾಯಕವಾಗಿಲ್ಲ. 'ಧರ್ಮಕ್ಕೆ ಕೈಬಾರದೀಕಾಲ' ಎಂದು ಪುರಂದರನು ಹಾಡಿದುದು ವಂದ್ಯ.

\+ + + +

ಡಿಸ್ಟ್ರಿಕ್ಟ್‌ಬೋರ್ಡಿನ ಹೆಡ್ ಕ್ಲಾರ್ಕರಿಗೆ 'ಸೆಕ್ರೆಟರಿ' ಎಂಬ ಟೈಟಲ್ ಕೊಡುವರೆ ನಿರ್ಧಾರವಾಯಿತು. ಪರ್ಮನೆಂಟೋ! ಟೆಂಪ್ರರ್ವೆಂಟೋ?

\+ + + +

~~'ನವಜೀವನ' ನಾಟಕವು, ಮಠಗಳ ಸ್ವಾಮಿಗಳ ದುಷ್ಟನ್ನು~~ ರಟ್ಟುಗೊಳಿಸಿತು' ಎಂದು ಪ್ರೇಕ್ಷಕರ ಉದ್ಗಾರ. ಕಥಾಕರ್ತರು ಇದಕ್ಕಾಗಿ ಸಂಪೂರ್ಣ ಪಂದ್ಯರೆಂದು ಸುಧಾಕರರು ಹೇಳಿದರೂ, ಉಡುಪಿಯವರೂ ಅವರ ಸಹಾನುಭೂತಿಪರರೂ ಕಥಾ ಕರ್ತರು ನಿಂದ್ಯರೆಂದೆನ್ನದಿರರು.

\+ + + +

ಮೊನ್ನೆ ಹೆಡ್ ಪೋಸ್ಟಾಫೀಸಿನ ಬಳಿ ಸೈಕಲ್ ಸವಾರನಾದ ಗಾಡಿಯವನೊಬ್ಬನ ಮೇಲೆ ಮೋಟರ್‌ಕಾರ್ ಒಂದು ನಾಲ್ಕು ಕಾಲುಗಳನ್ನು ಊರಿ ಆನಂದದಿಂದ ನಡೆಯಿತು. ಮೋಟರ್ ಬಿಡುವಾಗ ಒಂದು ತಲೆಗೆ ನಾಲ್ಕು ತಲೆ ತೋರುವಷ್ಟು ಶಕ್ತಿಯನ್ನು ಹೊಂದಿದವರು ಡ್ರೈವರರಾದರೆ ಇದೇ

\+ + + +

ಖದ್ದರ್ ವಸ್ತ್ರಗಳು ಡೋಬಿಗಳ ಮನೆಯಲ್ಲಿ ರಾಶಿ ರಾಶಿ ಬಿದ್ದಿವೆ. ದೇಶಪ್ರೇಮಿಗಳು ಬಹಳ ವ್ಯಾಸಂಗ ಮಾಡಿದರೆಂದು ಡೋಬಿಗಳ ಹೇಳಿಕೆ. ಗಾಂಧಿಯವರು ಮಂಗಳೂರಿಗೆ ಬರುತ್ತಾರೆಂದು ಈ ಮಡಿವಾಳರಿಗೆ ತಿಳಿದಿಲ್ಲವೋ?

\+ + + +

ಮುನಿಸಿಪಾಲಿಟಿಯು ನೀರಿನ ಲೋರಿಗಳು ರಣವು, ಅತ್ತ ಮಾರ್ಗಗಳನ್ನು ಕಣ್ಣೀರಿನಿಂದ ತೊಯ್ದು ಧೂಳು ರಾಜ್ಯವನ್ನು ನಿರ್ಮೂಲಿಸುವುದು ಹಿತಕರ— ಆದರೆ ಮಾರ್ಗದಲ್ಲಿ ನೀರು ನಿಂತು, ಆ ನೀರಿನ ಮೇಲೆ ವಾಹನಗಳು ಓಡಿ ಆದ ಕಜ್ಜ

ದಾಕ್ಷಿ ಹಾಕಿದಗಳು ಎಲ್ಲಾ ಮಾರ್ಗಗಳಲ್ಲ ಇವೆ. ಇವ ಬಹುವಲ್ಲವೇ!—ವಾಹನಗಳು!—ರೋಡ್ ಇನ್ಸ್‌ಪೆಕ್ಟರೇ ಹೇಳಿ!

ಬ್ರಹ್ಮಶ್ರೀ ನಾರಾಯಣ ಗುರು ಸ್ವಾಮಿಗಳವರ ಶಿಷ್ಯ ಸ್ವಾಮಿ ಧರ್ಮ ತೀರ್ಥನ್ ಬಿ. ಎ., ಎಲ್. ಎಲ್. ಬಿ ಯವರು ಮಂಗಳೂರಿಗೆ ಬಂದಿರುವರು. ಶ್ರೀ ಗೋಕರ್ಣನಾಥ ಕ್ಷೇತ್ರವನ್ನು ಹರಿಜನರಿಗಾಗಿ ತೆರೆಯಿಸುವರೋ ಎಂದು 'ಹರಿಜನ ಬಂಧು'ವಿನ ಆಗಮನದ ಸಮಯದಲ್ಲಾದರೂ ನಿರೀಕ್ಷಿಸೋಣ.

\+ + + +

ಗಾಂಧೀಜಿಯವರೆದುರು ಹರಿಜನರ ದೇವಸ್ಥಾನ ಪ್ರವೇಶದ ಪ್ರಶ್ನೆಯನ್ನು ಎತ್ತಿ ಸಮರ್ಥರಾದರೂ, ಶ್ರೀ ವೆಂಕಟರಮಣ ದೇವಸ್ಥಾನದವರು 'ಹರಿಜನ ನಿಧಿ'ಗೆ ಪನನಾಜ್ರೂ ಅರ್ಪಿಸಲು ಆಲೋಚಿಸಿದರೇ? ಫನ್‌ಫೇರಿನಿಂದ ಬಂದ ಸ್ವಲ್ಪವನ್ನಾದರೂ..

\+ + + +

ಗಾಂಧೀಜಿಯವರು ಹಿಂದೂವಾಗಿ ಹುಟ್ಟಿ ಬಹಳ ನಷ್ಟವಾಯಿತು. ಕ್ರೈಸ್ತರಾಗುತ್ತಿದ್ದರೆ ನಮ್ಮಾ ಕ್ರೈಸ್ತರು ಅವರನ್ನು ಹಣದಿಂದ ಮುಚ್ಚುತ್ತಿದ್ದರು (?)

ಮ. ಜಾ.

\++ ++

ದಕ್ಷಿಣ ಕನ್ನಡದಲ್ಲಿ ಗಾಂಧಿಜೀಯವರ ಸಂಚಾರ ಕಾರ್ಯಕ್ರಮ.

ತಾ. ೨೪ನೇ ಶನಿವಾರ ಬೆಳಿಗ್ಗೆ ೬-೩೦ರಿಂದ ೯-೩೦ರ ವರೆಗೆ ಮಡಿಕೇರಿಯಿಂದ ಪುತ್ತೂರಿಗೆ ಪ್ರಯಾಣ. ಸುಳ್ಯದಲ್ಲಿ ನಿಧಿ ಸ್ವೀಕಾರ ಸಭೆ, (೫ ಮಿನಿಟು) ೯-೩೦ರಿಂದ ೧೧ರ ವರೆಗೆ ಪುತ್ತೂರಲ್ಲಿ ಸಾರ್ವಜನಿಕ ಸಭೆ. ನಿಧಿ ಮತ್ತು ಮಾನಪತ್ರಗಳನ್ನರ್ಪಿಸುವಿಕೆ. ೧೧ರಿಂದ ೨ರ ವರೆಗೆ ಪುತ್ತೂರಲ್ಲಿ ಊಟ ಮತ್ತು ವಿಶ್ರಾಂತಿ. ಮಧ್ಯಾಹ್ನ ೨ರಿಂದ ೪-೩೦ರ ವರೆಗೆ ಪುತ್ತೂರಿಂದ ಮಂಗಳೂರಿಗೆ ಪ್ರಯಾಣ. ಪಾಣೆಮಂಗಳೂರು, ಬಂಟ್ವಾಳ, ಫರಂಗಿಪೇಟೆ, ಅಡ್ಯಾರು ಮತ್ತು ಹೆಗ್ಗೆ ಜ್ಞಾನೋದಯ ಸಮಾಜದಲ್ಲಿ ಐದೈದು ಮಿನಿಟುಗಳ ಸಭೆ ಮತ್ತು ನಿಧಿ ಸ್ವೀಕಾರ. ೪-೩೦ರಿಂದ ೫ರ ವರೆಗೆ ಬಪ್ಪಿಸ್ಟ್ ಕ್ಲಾಸ್ ಮಿಶನ್ ಕಾಲೇಜಿಗೆ ಸಂದರ್ಶನ. ೫ರಿಂದ ೫-೩೦ರ ವರೆಗೆ ನೇಶನಲ್ ಗರ್ಲ್ಸ್ ಶಾಲೆಯಲ್ಲಿ ಮಹಿಳೆಯರ ಸಭೆ, ನಿಧಿ, ಮಾನಪತ್ರ ಅರ್ಪಿಸೋಣ. ೫-೩೦ರಿಂದ ೬-೩೦ರ ವರೆಗೆ ಊಟ, ವಿಶ್ರಾಂತಿ. ಪೆಂಟ್ಲೆಂಡ್ ಪೇಟೆಯ ಶ್ರೀ ಆರ್. ಎಸ್. ನಗರಕರರ ಸರಸ್ವತಿ ನಿವಾಸದಲ್ಲಿ. ೬-೩೦ರಿಂದ ೭-೩೦ರ ವರೆಗೆ ಮಂಗಳೂರು ಮೈದಾನದಲ್ಲಿ ಸಾರ್ವಜನಿಕ ಸಭೆ, ಮಾನಪತ್ರ ಮತ್ತು ನಿಧಿಗಳನ್ನರ್ಪಿಸುವಿಕೆ. ರಾತ್ರಿ ವಿಶ್ರಾಂತಿ, ಆರ್. ಎಸ್. ನಗರಕರರ ಸರಸ್ವತಿ ನಿವಾಸದಲ್ಲಿ.

ತಾ. ೨೫ನೇ ಆದಿತ್ಯವಾರ ಬೆಳಿಗ್ಗೆ ೭ರಿಂದ ೭-೩೦ರ ವರೆಗೆ ಹರಿಜನ ಕೇರಿಗಳಿಗೆ ಸಂದರ್ಶನ. ೭-೩೦ರಿಂದ ೮ರ ವರೆಗೆ ಸಾರ್ವಜನಿಕ ಪ್ರಾರ್ಥನಾ ಮಂದಿರದ ಶಂಕುಸ್ಥಾಪನೆಗಾಗಿ ಕೆನರಾ ಹೈಸ್ಕೂಲಿಗೆ ಸಂದರ್ಶನ. ಕೆನರಾ ಹೈಸ್ಕೂಲ್ ಹಳೆ ವಿದ್ಯಾರ್ಥಿಗಳ ಸಂಘದ ಮತ್ತು ಮಂಗಳೂರ ವಿದ್ಯಾರ್ಥಿಗಳ ಮಾನಪತ್ರ ಮತ್ತು ನಿಧಿ ಸ್ವೀಕಾರ ಸಭೆ. ೮ರಿಂದ ೧೧ರ ವರೆಗೆ ಮಂಗಳೂರಿನಿಂದ ಮುಲ್ಕಿಗೆ ಪ್ರಯಾಣ. ಗುರ್ಪೂರ, ಬಜ್ಪೆ, ಕಿನ್ನಿಗೋಳಿಯಲ್ಲಿ ಐದೈದು ಮಿನಿಟುಗಳ ಸಭೆ, ನಿಧಿ ಸ್ವೀಕಾರ. ೧೧ರಿಂದ ೧೧-೪೫ರ ವರೆಗೆ ಮೂಲ್ಕಿಯಲ್ಲಿ ಸಾರ್ವಜನಿಕ ಸಭೆ. ನಿಧಿ ಮಾನಪತ್ರ ಅರ್ಪಿಸುವಿಕೆ. ೧೧-೪೫ರಿಂದ ೩ರ ವರೆಗೆ ಮೂಲ್ಕಿ ಶ್ರೀ ಎಂ. ಆರ್. ಪೂಂಜರ ಮನೆಯಲ್ಲಿ, ಊಟ, ವಿಶ್ರಾಂತಿ. ಮಧ್ಯಾಹ್ನ ೩ರಿಂದ ೩-೩೦ರ ವರೆಗೆ ಮುಲ್ಕಿಯಿಂದ ಉಡುಪಿಗೆ ಪ್ರಯಾಣ. ಪಡುಬಿದ್ರೆ, ಕಟಪಾಡಿಯಲ್ಲಿ ಐದೈದು ಮಿನಿಟುಗಳ ಸಭೆ, ನಿಧಿ ಸ್ವೀಕಾರ. ೩-೩೦ರಿಂದ ೪-೩೦ರ ವರೆಗೆ ಉಡುಪಿಯಲ್ಲಿ ಸಾರ್ವಜನಿಕ ಸಭೆ, ನಿಧಿ ಮತ್ತು ಮಾನಪತ್ರ ಅರ್ಪಿಸುವಿಕೆ. ೪-೩೦ರಿಂದ ೫-೩೦ರ ವರೆಗೆ ಉಡುಪಿಯಲಿ ಶ್ರೀ ರಾಮರಾಯರ ರಾಮಭವನದಲ್ಲಿ ಊಟ, ವಿಶ್ರಾಂತಿ. ೫-೩೦ರಿಂದ ೭-೧೫ರ ವರೆಗೆ ಉಡುಪಿಯಿಂದ ಕುಂದಾಪುರಕ್ಕೆ ಪ್ರಯಾಣ. ಬ್ರಹ್ಮಾವರದಲ್ಲಿ ೫ ಮಿನಿಟಿನ ಸಭೆ, ನಿಧಿ ಸ್ವೀಕಾರ. ೭-೧೫ರಿಂದ ೮ರ ವರೆಗೆ ಕುಂದಾಪುರದಲ್ಲಿ ಸಾರ್ವಜನಿಕ ಸಭೆ, ನಿಧಿ ಮತ್ತು ಮಾನಪತ್ರ ಅರ್ಪಿಸೋಣ, ಇತ್ಯಾದಿ.

ತಾ. ೨೬—೨—೩೪ನೇ ಸೋಮವಾರ ಮೌನ ದಿನಾಚರಣೆ ಕುಂದಾಪುರದಲ್ಲಿ ಶ್ರೀ ನಾರಾಯಣ ಕಾಮತರ ಮನೆಯಲ್ಲಿ.

ತಾ. ೨೭—೨—೩೪ನೇ ಮಂಗಳವಾರ ಬೆಳಿಗ್ಗೆ ೭ ಘಂಟೆಗೆ ಕಾರವಾರಿಗಾಗಿ ಸ್ಟೀಮರ್ ಏರುವುದು.

ಕಾರ್ಯದರ್ಶಿ, ಗಾಂಧಿ ಸ್ವಾಗತ ಮಂಡಳಿ,
ಮಂಗಳೂರು.

\+ ++ +

ಸ್ವದೇಶಾಭಿಮಾನಿಗೆ
ಇಂದೇ ಚಂದಾದಾರರಾಗಿರಿ

ಇನ್ನೊಂದು ಪ್ರತಿಷ್ಠೆ



ನೀವು ಕಬ್ಬಿನ ಗಾಣವನ್ನು ಪಡೆಯುವಾಗ ನೀವು ಸ್ವಾಭಾವಿಕವಾಗಿ ಅದರ ಗಟ್ಟಿಮುಟ್ಟು, ಬಾಳ್ವಿಕೆ ಮತ್ತು ಶಕ್ತಿಯ ಕಡೆ ಗಮನವನ್ನೀಯುತ್ತೀರಿ ನೀವು

ಕಿರ್ಲೋಸ್ಕರ

ವಸಂತ ಪವರ್ ಕ್ರಶರ್ ಗಾಣವನ್ನು ನಿಮ್ಮ ಕೆಲಸಕ್ಕೆ ಯೋಗ್ಯವೆಂದು ತಿಳಿಯುವಿರಿ. ರಸವು ಒಳಗೆ ಸೇರಿ ಹೋಳಾಗ ಹಾಗೆ ಅದರ ಬೇರಿಂಗುಗಳನ್ನು ಮುಚ್ಚಿರುತ್ತದೆ. ಇದರಿಂದಾಗಿ ಎಣ್ಣೆಯು ನಷ್ಟವಾಗುವುದಿಲ್ಲ—ಗಾಣವು ದೀರ್ಘಕಾಲ ಸಂತೃಪ್ತಿಕರವಾಗಿ ನಡೆಯುತ್ತದೆ. ಅದರೆಲ್ಲಾ ಭಾಗಗಳೂ ದೀರ್ಘವಾಗಿ ಬಾಳುವಂತೆ ಮಾಡಲಾಗಿದೆ.

ಎಲ್ಲಾ ವಿವರಗಳಿಗೆ ಇಲ್ಲಿಗೆ ಬರೆಯಿರಿ:—

ಕಿರ್ಲೋಸ್ಕರ ಬ್ರದರ್ಸ್ ಲಿಮಿಟೆಡ್, ಕಿರ್ಲೋಸ್ಕರವಾಡಿ (ಜಿ. ಸತಾರಾ)

ಸ್ಟಾಕಿಸ್ಟ್ಸ:— ಬಾಸೆಲ್ ಮಿಶನ್ ಬುಕ್ ಡಿಪೋ ಎಂಡ್ ಟ್ರೈಕ್ಟ ಡಿಪೋಜಿಟರಿ ಕೊ. ಮಂಗಳೂರು ದ. ಕ.

ಗುಣಬಾರದಿದ್ದರೆ] ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ [ಹಣ ವಾಪಾಸು

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆಶಯು ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣೆ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಮೊದಲೇ ಪೂರಾ ವಿಚಾರ ಮಾಡಿ ಔಷಧ ಬೇಕಾ, ಮುಖ್ಯ ಸರ್ಟಿಫಿಕೇಟ ಡಾಕ್ಟರ ಬಿ. ಎ. ವೈದ್ಯ, ಎಲ್. ಸಿ. ಪಿ. ಎಸ್. ಕೊಲ್ಹಾಪೂರ ಇವರು ಕಾಣಿ: ಈ ಚೂರ್ಣದಿಂದ ಯಾವ ತರದ ಅಪಾಯವಾಗದು ಗರ್ಭಧಾರಣೆಯೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿ ಕಿಮ್ಮತ್ತು ರೂ. ೪, ವಿ. ಪಿ. ಆಣೆ ೬.

ವಿಳಾಸ:— ಸಂಜೀವಿನೀ ಔಷಧಾಲಯ ಮು. ಪೊ. ಮಿರಜ, S. M. C.

'ಹರಿಜನ ಬಂಧು'ವಿಗೆ ಕೈಲಾದ ಸಹಾಯ ಮಾಡಿರಿ!

ಮುದ್ರಣದ ಪ್ರಗತಿ

೧೨—೧೩ನೇ ಶತಮಾನದ ವರೆಗೆ ಮನುಷ್ಯನಿಗೆ ಮುದ್ರಣವೆಂದರೇನೆಂದು ತಿಳಿಯದು, ವಿಶೇಷ ಸಂಗತಿಗಳನ್ನು ಓಲೆಗರಿಗಳ ಮೇಲೆಯೇ ಬರೆದಿಡುತ್ತಿದ್ದನು. ಆದರೆ ೧೫ನೆಯ ಶತಮಾನದ ನಂತರ ಈ ಉದ್ಯಮದಲ್ಲಿ ವಿಶೇಷ ಪ್ರಗತಿಯುಂಟಾಯಿತು. ವರ್ಷಂಪ್ರತಿ ಹೊಸ ಶೋಧೆಗಳು ನಡೆದು, ಈಗ, ಇಡೀ ಪ್ರಪಂಚದಲ್ಲಿ ಒಂದು ವರ್ಷಕ್ಕೆ—ಮುದ್ರಿತವಾದ ಪುಸ್ತಕಗಳನ್ನು ಸಾಲುಸಾಲಾಗಿ ಇಟ್ಟರೆ ಇಡೀ ಪ್ರಪಂಚವನ್ನೇ ಸುತ್ತುವಷ್ಟು—ಪುಸ್ತಕಗಳ ರಾಶಿಯು ಮುದ್ರಿತವಾಗುತ್ತವೆಯೆಂದು ಲೆಕ್ಕ ಹಾಕಲಾಗಿದೆ. ಇಂಗ್ಲೀಷಿನಲ್ಲೇ ವರ್ಷಕ್ಕೊಮ್ಮೆ ಅಚ್ಚಾಗುವ ಪುಸ್ತಕಗಳೇ ಒಂದು ಸಾವಿರ ಜನರು ದಿನಂಪ್ರತಿ ಓದಿದರೆ ಅವರ ಆಯುಷ್ಯವಿಡೀ ಓದುವಷ್ಟು ಮುದ್ರಣಗೊಳ್ಳುತ್ತವೆ.

ಮೋಟರಿನಿಂದ ಅಪಾಯವು ತಪ್ಪಿತು

ಮೋಟರ್ ಕಾರಿನಿಂದ ಹೊರಗೆ ಬೀಳುವ ಹೊಗೆಯು ಗರೇಜಿನಲ್ಲಿ ವಿಷವಾಗಿ ಅನೇಕರು ಮೃತರಾಗಿರುವರು. ಇಂಥಹ ಅಪಾಯವನ್ನು ತಪ್ಪಿಸುವುದಕ್ಕಾಗಿ ಈಗ ಒಂದು ನವೀನ ಉಪಾಯವನ್ನು ಶೋಧಿಸಿರುವರು. ಈ ಹೊಗೆಯಲ್ಲಿ Carbon Monoxide ಎಂಬ ಅಪಾಯಕರ ವಸ್ತುವಿದೆ. ಇದರಿಂದಾಗಿಯೇ ಮರಣಗಳು ಸಂಭವಿಸುವುವು. ಇದರ ಶಕ್ತಿಯನ್ನು ಕುಂದಿಸಿ, ಇದು ದೇಹಕ್ಕೆ ಅಪಾಯಕರವಾಗದಂತೆ ಅದರೊಡನೆ ಒಂದು [illegible] bauxite ಎಂಬುದನ್ನು ಹಾಕುವರು. ಇದು ಕಾರ್ಬನ್ ಮೊನೊಕ್ಸೈಡನ್ನು ನಂದಿಸಿ ಅದರ ವಿಷವನ್ನು ಹೊರಗಟ್ಟುವುದು.

೩೦ ಟನ್‌ಗಳನ್ನು ನಾವು ಹೊರಬಹುದೇ?

ಒಂದು ದೊಡ್ಡ ಲೋರಿಯ ಭಾರ ೨ ಟನ್ನು. ಅದನ್ನು ಒಬ್ಬ ಮನುಷ್ಯನು ತಲೆಯ ಮೇಲೆ ಹೇರಿಕೊಳ್ಳಲಾರನು. ಹೀಗಿರುವುದಾದರೂ ಮನುಷ್ಯನು ೩೦ ಟನ್ನು ಭಾರವನ್ನು ಅವನಿಗೆ ತಿಳಿಯದನೇ ಹೊರುತ್ತಾನೆಂದು ಈಗ ಕಂಡುಹಿಡಿಯಲಾಗಿದೆ. ನಾವು ಬಯಲು ಪ್ರದೇಶಕ್ಕೆ ಹೋದಾಗ ನಮ್ಮ ತಲೆಯ ಮೇಲೆ ೩೦ ಟನ್ನುಗಳ ಭಾರದ ಗಾಳಿಯ ಒತ್ತಾಟವು ಇರುತ್ತದೆ. ಸರ್ವಸಾಧಾರಣವಾದ ವಾತಾವರಣದ ಒಂದು ಚಚ್ಚೌಕ ಇಂಚಿನ ಭಾರವನ್ನೂ, ಸರ್ವಸಾಧಾರಣವಾದ ಮನುಷ್ಯನ ದೇಹದ ಒಟ್ಟು ಚಚ್ಚೌಕ ಇಂಚುಗಳೊಡನೆ ಗುಣಿಸಿದರೆ ೩೦ ಟನ್ನುಗಳ ಲೆಕ್ಕ ಸಿಗುತ್ತದೆ. ಇದರಿಂದಾಗಿಯೇ ಮನುಷ್ಯನು ಭೂಮಿಯಿಂದ ಮೇಲಕ್ಕೆ ತಾನಾಗಿಯೇ ಏರಲಾರನು.

ಜಗತ್ತಿನಲ್ಲೇ ಸಣ್ಣದು

ಲಂಡನಿನ ಮಾರ್ಗಗಳಲ್ಲಿ ಒಂದು ಮೋಟರ್‌ಕಾರು ಓಡುತ್ತಿದೆ. ಇದು ಜಗತ್ತಿನಲ್ಲಿ ಅತೀ ಸಣ್ಣ ಮೋಟಾರ್‌ಕಾರೆಂದು ತಿಳಿಯಲ್ಪಟ್ಟಿದೆ. ಮೂರೂವರೆ ಕುದುರೆ ಶಕ್ತಿಯ ಇಂಜಿನು ಇದಕ್ಕಿದೆ. ಊಟದ ಬಟ್ಟಲುಗಳಷ್ಟು ಸುತ್ತಳತೆಯುಳ್ಳ ಚಕ್ರಗಳಿವೆ. ಇದರ ರಚನೆಗೆ ಹೆಚ್ಚಿನ ಪ್ರಯಾಸವಿದೆಯಾದರೂ, ಸ್ವಲ್ಪ ವರ್ಷಗಳಲ್ಲಿ ದೊಡ್ಡವರ ಮಕ್ಕಳು ಇದನ್ನೇ ಸುಲಭವಾಗಿ ಉಪಯೋಗಿಸುವ ಸುದಿನವು ಬರಬಹುದೆಂದು ಭಾವಿಸಲ್ಪಟ್ಟಿದೆ.

ಸಾರ ಬೇಕೋ ಭಾರ ಬೇಕೋ?

ನಾವು ತಿನ್ನುವ ಆಹಾರವು ಸಾರಭರಿತವಾಗಿರಬೇಕೋ ಭಾರಭರಿತವಾಗಿರಬೇಕೋ ಎಂಬ ಪ್ರಶ್ನೆಗೆ ಸದುತ್ತರವನ್ನು ಕೊಡುವುದು ಸುಲಭವಾದರೂ ಕಷ್ಟವಾಗಿರುತ್ತದೆ. ಐಶ್ವರ್ಯವಂತರೊಡನೆ ಕೇಳಿದರೆ, ಅವರು ಸಾರಭರಿತವಾಗಿರಬೇಕು ಎನ್ನುತ್ತಾರೆ. ಬಡವರೊಡನೆ ಕೇಳಿದರೆ, ಅದು ಅಗತ್ಯವಾಗಿಯೂ ಭಾರಭರಿತವೇ ಇರಬೇಕೆಂದು ಹೇಳುತ್ತಾರೆ. ಆದರೆ ಥೋಮಸ್ ವಿಲ್ಸನ್ ಎಂಬ ಆಹಾರಶೋಧಕನು ಆಹಾರವು ಬಡವರಿಗೂ ಐಶ್ವರ್ಯವಂತರಿಗೂ ಸಮಾನರೂಪದಿಂದಿದ್ದು ಅದು ಭಾರಕ್ಕಿಂತಲೂ ಸಾರಭರಿತವಾಗಿಯೇ ಇರಬೇಕೆಂದನ್ನುತ್ತಾನೆ. ಭಾರವಾದ ಆಹಾರವನ್ನು ತಿನ್ನುವ ಅಭ್ಯಾಸವನ್ನು ಮೆಲ್ಲಮೆಲ್ಲನೆ ತೊರೆದು ಅದನ್ನು ಸಾರಭರಿತವಾಗಿ ಮಾಡಬೇಕೆಂದು ಅವನ ಅಭಿಪ್ರಾಯ. ಸಾರವೇ ಶಕ್ತಿ, ಶಕ್ತಿಯೇ ಜೀವ, ಜೀವವೇ ಪ್ರಾಣ, ಪ್ರಾಣವೇ ತ್ರಾಣ ಎಂಬ ತತ್ವವನ್ನನುಸರಿಸಿ ಅವನು ಈ ಉದ್ದೇಶಕ್ಕೋಸ್ಕರ, Food Capsule ಎಂಬ ಮಾತ್ರೆಗಳನ್ನು ತಯಾರಿಸುತ್ತಿರುವನು. ಈ ಮಾತ್ರೆಗಳನ್ನು ತಿಂದು ಎರಡು ಗ್ಲಾಸು ನೀರು ಕುಡಿದರೆ ಹಸಿವಂತೂ ಆಗಲಾರದು, ಅಲ್ಲದೆ ದೇಹವು ಕೂಡಾ ಪುಷ್ಟಿಯಾಗುತ್ತದೆ. ಈ ಗುಳಿಗೆಗಳಲ್ಲಿ Proteins, carbo-hydrates ಮುಂತಾದ ಜೀವಸಾರಗಳಿವೆ.

ಹೊಸ ಶೋಧನೆ

ವಿಮಾನ ಅಪಘಾತಗಳು ಕಡಿಮೆಯಾಗುತ್ತಿಲ್ಲ. ೧೯೩೭ರಲ್ಲಿ ವಿಮಾನ ಅಪಘಾತಗಳು ಹೆಚ್ಚಾದುದರಿಂದ ಹೊಸ ಯಂತ್ರಗಳನ್ನು ರಚಿಸಿ ಪ್ರಾಣಗಳನ್ನು ರಕ್ಷಿಸಲು ವಿಚಾರ ಮಾಡಿದರು. ೧೯೩೯ರಲ್ಲಿ ಅಂಥಹ ಅಪಘಾತಗಳು ಕಡಿಮೆಯಾಗುವುದರ ಬದಲು ಹೆಚ್ಚಾದುವು. ೧೯೩೯ರ ಅನುಭವದ ಮೇರೆಗೆ ಈಗ ವಿಮಾನ ಅಪಘಾತಗಳನ್ನು ಕಡಿಮೆಗೊಳಿಸಲು ಹೊಸ ಶೋಧನೆಗಳಾಗಿವೆ. ವಿಮಾನವು [illegible] ಅದರ [illegible]ಕ್ಕಿರುವ 'Parachute'ನ್ನು ಬಿಡಿಸಿದೊಡನೆ ವೈಮಾನಿಕನು ಭೂಮಿಗೆ ಬೀಳದೆ, ಅದರ ಬಲದಿಂದ ಹಾರಾಡುವನು. ಆದರೆ ಇಂತಹ ಗಾಳಿಚೀಲಗಳು ಸಮುದ್ರಕ್ಕೋ ನದಿಗೋ ಬಿದ್ದು ಅನೇಕ ಪ್ರಾಣನಾಶವಾದುದಕ್ಕಾಗಿ, ಈಗ ಗಾಳಿಚೀಲದ ಮನುಷ್ಯನು ನೀರಿಗೆ ಬಿದ್ದರೂ ಮುಳುಗದಂತೆ ನ್ಯೂಯೋರ್ಕಿನ ಒಬ್ಬ ಯಂತ್ರಗಾರನು ಹೊಸ ಶೋಧನೆಯನ್ನು ಮಾಡಿರುವನು. ಗಾಳಿಚೀಲವು ನೀರಿಗೆ ಬಿದ್ದೊಡನೆ ಬಿದ್ದವನು ಅವನ ಬೆಲ್ಟಿನಲ್ಲಿರುವ ಒಂದು ಗುಂಡಿಯನ್ನು ಒತ್ತುವನು. ಕೂಡಲೇ ಬೆಲ್ಟು ಗಾಳಿಯಿಂದ ತುಂಬಿ ಮುಳುಗುವವನನ್ನು ಎತ್ತಿ ಹಿಡಿಯುವುದು. ಈ ಉಪಾಯದಿಂದಾಗಿ ಅನೇಕ ಪ್ರಾಣ ರಕ್ಷಣೆಯಾಗಬಹುದೆಂದು ಅಂದಾಜು ಮಾಡಿದ್ದಾರೆ. ಮುಂದಕ್ಕೆ ಯಾವ ಅನಾಹುತವು ಬರಲಿದೆಯೋ!

ವಿಚಿತ್ರ ಲೋಹ ಆಹಾರಿ

ಮನುಷ್ಯ ವರ್ಗದಲ್ಲಿ ಮಾಂಸಾಹಾರಿ, ಸಸ್ಯಾಹಾರಿಗಳಿರುವಂತೆ ಲೋಹಾಹಾರಿಗಳೂ ಇರುತ್ತಾರೆ. ಇತ್ತಲಾಗೆ ಇಂಗ್ಲಾಂಡಿನಲ್ಲಿ ಒಬ್ಬ ಯುವಕನು ತೀರಿಕೊಂಡನು. ಕಾರಣವೇನೆಂದು ವಿಚಾರಿಸಲಾಗಿ, ಅವನಿಗೆ ಲೋಹಗಳನ್ನು ತಿನ್ನುವ ಅಭ್ಯಾಸವಿತ್ತೆಂದು ತಿಳಿದು ಬಂತು. ಒಪರೇಷನು ನಡೆಸಿದರು. ನೋಡಲು, ಅವನ ಹೊಟ್ಟೆಯೊಳಗೆ ೫೦೦ ಬಗೆಯ ಸಾಮಾಗ್ರಿಗಳು ಹೊಟ್ಟೆಯೊಳಗೆ ಸುಮ್ಮಗೆ ಬಿದ್ದುಕೊಂಡಿದ್ದುವು. ಅವುಗಳನ್ನು ತೆಗೆದು, ತೂಕ ನೋಡಿದರು—೩॥ ಪೌಂಡುಗಳಷ್ಟು ಇತ್ತು. ಎಲ್ಲವನ್ನೂ ತೆಗೆದು ಪರೀಕ್ಷಿಸಲಾಗಿ, ೨೦೦ ಮೊಳೆಗಳು, ಕೆಲವು ನೂರು ಉಕ್ಕಿನ ಸರಿಗೆಯ ತುಂಡುಗಳು, ಗ್ರಾಮಫೋನು ಪಿನ್ನುಗಳು, ಚಮಚಗಳು, ತಾಮ್ರ ನಾಣ್ಯಗಳು, ಬೀಗದ ಕೈಗಳು, ಸಣ್ಣ ಚೂರಿಗಳು, ಕೊಕ್ಕೆಗಳು, ಬೋಲ್ಟ್‌ಗಳು, ನಟ್‌ಗಳು ಇದ್ದುವು. ಅವುಗಳೊಡನೆ ಅನೇಕ ಗ್ಲಾಸು ಚೂರುಗಳೂ ಅವನ ಉದರದೊಳಗೆ ಬಿದ್ದುಕೊಂಡಿದ್ದುವು. ಇಷ್ಟೇ ಅಲ್ಲ, ಒಂದು ಜೀವಂತ ಬೊಂಬೂ ಇದ್ದಿತು!

ಅರಿಯದ ತ್ಯಾಗಿ

ಮಹಾತ್ಮಾಜೀಯವರು ದೊನ್ನೆ ತ್ರಿವೆಂಡ್ರಂನಲ್ಲಿದ್ದಾಗ ೧೩ ವರ್ಷ ಪ್ರಾಯದ ಬಾಲಿಕೆಯೊಬ್ಬಳು ಅವರ ದರ್ಶನ ಲಾಭಕ್ಕೆಂದು ಮುಂದೆ ಬಂದು ನಿಂತಳು. ಆಗ ಗಾಂಧೀಜೀಯವರು ಅವಳನ್ನು ಕಂಡು, ಮಾತನಾಡಿದರು,

"ನೀನು ಯಾರು?"

"ನಾನು ಇಲ್ಲಿಯ ಹುಡುಗಿ"

"ಹುಡುಗಿಗೆ ಆಭರಣಗಳಿಂದೇನು ಪ್ರಯೋಜನ?"

'ನಾನು ಬಾಲಿಕೆಯಾಗಿಯೇ ಇರಬೇಕೆಂಬ ಆಶೆ'

'ಹಾಗಾದರೆ ಬಾಲಿಕೆಯು ಆಭರಣಗಳನ್ನು ಧರಿಸಕೂಡದು' ಎಂದು ಗಾಂಧೀಜೀಯವರು ಕೌಮುದಿಯ ಕಥೆಯನ್ನು ಹೇಳಿ "ಕೌಮುದಿಗೆ ೧೬ ವರ್ಷ, ನಿನಗಿಂತಲೂ ಒಂದು ವರ್ಷ ಚಿಕ್ಕವಳು. ಅವಳು ತನ್ನ ಆಭರಣಗಳನ್ನು ತ್ಯಜಿಸಿದಳು' ಎಂದು ಹೇಳಿದರು.

ಮೀನಾಕ್ಷಿಯ ಕಣ್ಣುಗಳು ಅರಳಿದುವು; "ನಾನು ನನ್ನ ಆಭರಣಗಳನ್ನು ಬಿಡುವೆನು" ಎಂದಳು.

"ನಿನ್ನ ತಂದೆತಾಯಿಗಳ ಸಮ್ಮತಿಯುಂಟೆಯೋ!"

"ನಾನು ಅದನ್ನು ಪಡೆಯುವೆನು."

"ನಿನ್ನ ಒಡವೆಗಳನ್ನೆಲ್ಲ ಹರಿಜನರಿಗೆ ಕೊಡು. ನಾನು ನಿಜವಾದ ಹರಿಜನ ಎಂದು ತಿಳಿದರೆ ನನಗೇ ಕೊಡು. ಹೆಣ್ಣು ಮಕ್ಕಳಿಗೆ ಆಭರಣಗಳ ಮೇಲೆ ಬಲು ಪ್ರೀತಿ. ಆದರೆ ಸತ್ಕಾರ್ಯ ಮಾಡುವುದೇ ಸೌಂದರ್ಯ"

ಮೀನಾಕ್ಷಿಯು ವಿಚಾರ ಮಾಡುವುದಕ್ಕಾಗಿ ಗಾಂಧೀಜೀಯವರು ಒಂದು ರಾತ್ರಿಯನ್ನು ಕೊಟ್ಟರು. ಮರುದಿನ ಅವಳು ತನ್ನ ಆಭರಣಗಳನ್ನು ಬಿಟ್ಟು ಮಹಾತ್ಮರ ದರ್ಶನಕ್ಕೆ ಹೋದಾಗ, ಅವರಿಗೆ ಅವಳ ಗುರುತು ಸಿಗಲಿಲ್ಲ. ತಂದೆಗೆ ಬಹಳ ಸಾಲವಿದ್ದುದರಿಂದ ಅವಳು ಒಡವೆಗಳನ್ನು ತಂದೆಗೆ ಕೊಟ್ಟು ಗಾಂಧೀಜೀಯವರ ಬಳಿ ಬಂದಿದ್ದಳು. ಮೀನಾಕ್ಷಿಯ ತಂದೆಯು ಗಾಂಧೀಜೀಯವರಿಗೆ ಕೆಲವು ಆಭರಣಗಳನ್ನು ಕೊಡಹೋದನು. ಆದರೆ ಗಾಂಧೀಜೀಯವರು ಸ್ವೀಕರಿಸದೆ, "ಅವುಗಳನ್ನು ಮಾರಿ ಸಾಲ ತೀರಿಸು. ಮುಂದಕ್ಕೆ ಮಗಳಿಗೆ ಭಂಗಾರ ಬೇಡ" ಎಂದರು. ಆಗ ಅವಳ ಹೆತ್ತವರು "ಅದು ಹೇಗಾದೀತು. ಒಡವೆಗಳಿಲ್ಲದ ಬಾಲಿಕೆಯನ್ನು ಯಾರು ವಿವಾಹವಾಗುವರು?" ಎಂದು ಶೋಕ ಸೂಚನೆ ಮಾಡಿದರು. ಇದನ್ನು ಕೇಳಿ ಗಾಂಧೀಜೀಯವರು "ನೀವು ಚಿಂತಿಸಬೇಡಿ, ನಾನಿದ್ದೇನೆ. ಅವಳಿಗೆ ೨೦ ವರರನ್ನು ನಾನು ಹುಡುಕುತ್ತೇನೆ. ನೀವು ನಿಮಗೆ ಬೇಕಾದವನನ್ನು ಆರಿಸಿರಿ. ನಾನು ವ್ಯವಸ್ಥೆ ಮಾಡುವೆನು" ಎಂದರು. ಹೆತ್ತವರ ಆನಂದವು ಅಪಾರವಾಯಿತು.

ವಿಚಿತ್ರ ಮರಗಳು

ಬಂಗಾಲ ಪ್ರಾಂತ್ಯದಲ್ಲೊಂದು ಮರವುಂಟು. ಅದು ಸೂರ್ಯಾಸ್ತಮಾನದೊಡನೆಯೆ ಭೂಮಿಗೆ ಬಗ್ಗಿ ಮಲಗುವುದು. ಬೆಳಗಾಗುತ್ತಲೇ ಮೆಲ್ಲಮೆಲ್ಲನೆ ಮೇಲಕ್ಕೇಳುವುದು—ಎದ್ದು ನಿಲ್ಲುವುದು. ಜಾವಾ ನಡುಗಡ್ಡೆಯಲ್ಲಿ ಒಂದು ಜಾತಿಯ ಗಿಡವಿದೆ. ಸುತ್ತಮುತ್ತಲಿನ ಗಿಡಮರಗಳ ರಸವನ್ನು ಹೀರಿ ಜಾಸ್ತಿ ಪುಷ್ಟವಾಗುತ್ತದೆ. ರಜಸ್ಥಾನದಲ್ಲಿ [illegible]. ಅದರ ಗರ್ಭದಲ್ಲಿಯ ನೀರನ್ನು ಜನರು ಕುಡಿಯುವರು, ಪ್ರಯಾಣಿಕರಿಗೆ ಬಹಳ ಸಹಾಯವಾಗುತ್ತಿದೆ. ಉತ್ತರ ಅಮೇರಿಕದಲ್ಲಿ ಒಂದು ಗಿಡವಿದೆ. ಇದನ್ನು ಯಾವ ದಿಕ್ಕಿಗೆ ಮುಖಮಾಡಿ ನೆಟ್ಟರೂ ಪೂರ್ವ ದಿಕ್ಕಿಗೆ ಬಾಗಿ ಬೆಳೆಯುವುದು. ಇದರ ಸಹಾಯದಿಂದ ಮರಳುಗಾಡಿನಲ್ಲಿ ದಿಕ್ಕು ಕಂಡುಹಿಡಿಯಬಹುದು, ಇದಕ್ಕೆ ಹೋಕಾಯಂತ್ರಗಿಡವೆಂದು ಹೆಸರಿದೆ. ದಕ್ಷಿಣ ಆಫ್ರಿಕದ ಅಡವಿಯಲ್ಲಿ ಒಂದು ವಿಜಾತಿಯ ಗಿಡವಿದೆ. ಅದರ ಎಲೆಗಳ ಮೇಲೆ ತೀರ ಬೆಳ್ಳಿಯಂತೆ ಹೊಳೆಯುವ ಬೀಜಹುಡಿಯು ದಿನೇ ದಿನೇ ಮೂಡುತ್ತದೆ. ಅಮೇರಿಕದ [illegible]ಯಲ್ಲಿ ಗಾಳಿ ಬೀಸುವಾಗ ಮಧುರವಾಗಿ ಹಾಡುವ ಎಲೆಗಳ ಮರಗಳಿವೆ. ದಕ್ಷಿಣ ಆಫ್ರಿಕದ ಫಿಜಿಯಲ್ಲಿ ಒಂದು ಭಯಂಕರ ಮರವಿದೆ. ನೋಡಿದರೆ ಸುಮ್ಮಗಿದೆ. ರಾತ್ರಿ ಕಾಲದಲ್ಲಿ ಅದರ ಬುಡ ಮಲಗಿದರೆ ಮಾತ್ರ ಬೆಳಗ್ಗೆ ಏಳುವಂತೆಯೇ ಇಲ್ಲ. ಮಲಗುವವನನ್ನು ತನ್ನ ಟೊಂಗೆಗಳಿಂದ ಬಿಗಿ ಹಿಡಿದು ಅವನ ರಕ್ತವನ್ನು ಜಿಗಣೆಯಂತೆ ಹೀರಿಕೊಂಡು ಚರ್ಮವನ್ನು ಬಿಟ್ಟುಬಿಡುತ್ತದೆ. ಪ್ರಾಣಿಗಳು ಅದರಡಿ ಸೇರುವುದು ಹೆಚ್ಚು. ಸಾಯುವುದೂ ಹೆಚ್ಚು. ಇದರಲ್ಲಿರುವ ಒಂದು ಸೌಮ್ಯ ಪರಿಮಳವು ಎಂತಹರನ್ನೂ ಆಕರ್ಷಿಸುವಂತಿದೆ.

ಉಪವಾಸೀ ತರುಣಿ

ಬ್ರಿಟನಿನ ಮಿಸ್ ಕ್ಲಿಫೋರ್ಡ್ ಎಂಬ ಹುಡುಗಿಯೊಬ್ಬಳು ಮುಚ್ಚಿ ಹಾಕಲ್ಪಟ್ಟ ಒಂದು ದೊಡ್ಡ ಪೆಟ್ಟಿಗೆಯೊಳಗೆ ೪೬ ದಿನಗಳ ತನಕ ಕೇವಲ ಅನ್ನಾಹಾರ ನೀರನ್ನು ಸೇವಿಸದೆ ಬದುಕಿ ಉಪವಾಸದ ದಾಖಲೆಯನ್ನೇ ಮುಂದಿರಿಸಿದಳು. ಪೆಟ್ಟಿಗೆಯೊಳಗೆ ಗಾಳಿ ಬೆಳಕು ಸೇರುವಂತೆ ಏರ್ಪಾಡು ಮಾಡಿದ್ದಳು. ಅವಳ ಸಾಹಸವನ್ನು ಕಂಡು ಮೆಚ್ಚಿ ೧೦೦ ಪೌಂಡುಗಳ ಬಹುಮಾನವನ್ನು ಜನರು ಮಾಡಿದರು.

ಮಹಾತ್ಮಾಜೀಯವರ ಸಂಚಾರದಲ್ಲಿ ಖಾಸಗಿ ಕ್ರಮಗಳು.

ಮಹಾತ್ಮಾ ಗಾಂಧಿಯವರು ಭಾಷಣ ಮಾಡಲಿರುವ ಸ್ಥಳಗಳಲ್ಲಿ ಏನೇನು ವ್ಯವಸ್ಥೆಗಳಿರಬೇಕೆಂದು ಪ್ರತ್ಯೇಕ ಹೇಳಬೇಕಾಗಿಲ್ಲ. ಆದರೆ ಅವರ ಪ್ರವಾಸದಲ್ಲಿ ಖಾಸಗಿ ಕ್ರಮಗಳು ಹೀಗಿವೆ—ಮಹಾತ್ಮರನ್ನು ಕಾಣಲು ಬಯಸುವ ಹರಿಜನ ಮುಖಂಡರಿಗೆ ಆ ಬಗ್ಗೆ ವ್ಯವಸ್ಥೆ ಮಾಡಿಕೊಡಬೇಕು. ಅಲ್ಲದೆ ಹಾಗೆ ಅವರು ಮುಂದೆ ಬರುವುದಕ್ಕಾಗಿ ಅವರನ್ನು ಪ್ರೋತ್ಸಾಹಿಸಬೇಕು. ಕಾರಣ, ಅವರು ಸ್ವಾಭಾವಿಕವಾಗಿ ತಾವೇ ಭೇಟಿಯಾಗಲು ಹಿಂಜರಿಯುತ್ತಾರೆ. ಮಹಾತ್ಮರ ಪರಿವಾರವು ಉಳುಕೊಳ್ಳುವ ಮನೆಯವರು ಕಾಯಿಪಲ್ಲೆ, ಬೇಳೆಗಳನ್ನು ತಯಾರಿಸುವಾಗ ಖಾರ, ಮೆಣಸು ಮುಂತಾದ ಪದಾರ್ಥಗಳನ್ನು ಉಪಯೋಗಿಸಕೂಡದು. ಮಹಾತ್ಮರಿಗಾಗಿ ೨೪ ತಾಸುಗಳಲ್ಲೂ ೪ ಪೌಂಡು ಆಡಿನ ಹಾಲು, ಸಕ್ಕರೆ, ತಕ್ಕ ಹಣ್ಣುಗಳು, ೬ ಲಿಂಬೇ ಹಣ್ಣುಗಳು ಬೇಕಾಗಿವೆ. ಅವರ ಅನುಯಾಯಿಗಳಿಗೆ ಸಾದಾ ಅನ್ನ, ರೊಟ್ಟಿ, ಬೇಳೆ, ಒಂದು ಬಗೆಯ ಕಾಯಿಪಲ್ಲೆ, ಹಾಲು, ಮೊಸರು ಮತ್ತು ಹಣ್ಣುಗಳು ಉಪಯೋಗಿಸಲ್ಪಡಬೇಕು. ಮಿಷ್ಟಾನ್ನಗಳಿರಕೂಡದು. [illegible] ಆಗಬಾರದು. ಅವರು ಕುಡಿಯುವ ನೀರನ್ನು ಎಸರು ಬರುವಂತೆ ಕಾಯಿಸಿ, ಆರಿಸಿ ಮಣ್ಣಿನ ಪಾತ್ರೆಯಲ್ಲಿ ಹಾಕಬೇಕು. ಮಹಾತ್ಮರು ಇರುವ ಕೋಣೆಯ ಬದಿಯಲ್ಲಿಯೇ ಸ್ನಾನ ಮಾಡುವ ಬಚ್ಚಲು ಇದ್ದರೆ ಒಳ್ಳೇದು. ಅವರು [illegible] ನೀರು ಒಂದು ಅಗಲವಾದ ಪಾತ್ರೆ, ಒಂದು ಚೇಂಬರ ಪೋಟ್ (ಮೂತ್ರ ವಿಸರ್ಜನೆಗಾಗಿ) ಇರಬೇಕು. ಮಹಾತ್ಮರಿಗೆ ಮಲಗಲು ಬಯಲು ಪ್ರದೇಶ ಬೇಕು. ಚಾಪೆಗಳು ಅಗತ್ಯವಿಲ್ಲ. ಕಾಫಿ, ಚಹಗಳ ಅಗತ್ಯವಿಲ್ಲ. ಮಹಾತ್ಮರೊಡನೆ ಬಂದವರು ತಮ್ಮ ತಮ್ಮ ಅರಿವೆಗಳನ್ನು ತಾವೇ ಒಗೆದುಕೊಳ್ಳುವರು. ಅದಕ್ಕಾಗಿ ಪ್ರತ್ಯೇಕ ಸ್ಥಳವು ಏರ್ಪಾಡಾಗಬೇಕು. ಅದಷ್ಟು ಕಡಿಮೆ ಸ್ವಯಂಸೇವಕರನ್ನು ನಿಯಮಿಸಬೇಕು. ಮೋಟಾರ ಮೊದಲಾದ ವಾಹನಗಳ ಖರ್ಚು ಅದಷ್ಟು ಕಡಿಮೆ ಮಾಡಬೇಕು. ಅವಶ್ಯವಿದ್ದ ಮಟ್ಟಿಗೆ ಮಾತ್ರ ಮುದ್ರಣ ವೆಚ್ಚ ಮಾಡಬೇಕು. ಮಂಟಪ ಶೋಭೆಗಾಗಿ ಮಾಡಿದ ವೆಚ್ಚವನ್ನು ಸಹಾಯನಿಧಿಯಿಂದ ತೆಗೆಯಕೂಡದು. ಮಾನಪತ್ರದ ವೆಚ್ಚವನ್ನು ಸಹಾಯ ನಿಧಿಯಿಂದ ತೆಗೆಯಕೂಡದು. ಹರಿಜನೋದ್ಧಾರಕ್ಕಾಗಿ ಹಣ ಕೂಡಿಸುವಾಗ ಅದಷ್ಟು ಮಿತವ್ಯಯ ಮಾಡಬೇಕು. ಸತ್ಯನಿಷ್ಠ ಸ್ವಯಂ ಸೇವಕರು ಬೇಕು.

ಹೈದರಾಬಾದ್ ಕೊರ್ಪೊರೇಷನಿನ ಸೆಕ್ರೆಟರಿಯವರ ಪತ್ನಿಯಾದ ಶ್ರೀಯುತ ರಾಣಿಯವರು ಸಿಕಂದರಾಬಾದಿನಲ್ಲಿ ಸೈಕಲ್ ಸವಾರಿಯನ್ನು ಕಲಿತು ಹೋಗುವಾಗ ಮೋಟರಿನ ಡಿಕ್ಕಿ ಹೊಡೆದು ಆಸ್ಪತ್ರೆಗೆ ಎತ್ತೊಯ್ಯಲ್ಪಟ್ಟರು.

× × × ×

ನ್ಯೂಯೋರ್ಕಿನಲ್ಲಿ ಒಬ್ಬ ಗಂಡನು ತನ್ನ ಪತ್ನಿಯು ಪರಪುರುಷನೊಡನೆ ಪ್ರೇಮಸಲ್ಲಾಪ ಮಾಡುವುದನ್ನು ಗ್ರಾಮಫೋನ್ ರೆಕಾರ್ಡ್ ಮೂಲಕ ತೆಗೆದು ಕೋರ್ಟಿನಲ್ಲಿ ಹಾಜರುಪಡಿಸಿ ವಿವಾಹವಿಚ್ಛೇದ ಮಾಡ ಕೋರಿರುವನು.

'ವಿನೋದ ಪ್ರಪಂಚ'!!!

ಕರ್ನಾಟಕದ ಹಾಸ್ಯರಸಪೂರಿತ ಪಕ್ಷ ಪತ್ರಿಕೆ!

ಓದಿದರೆ ನಕ್ಕು ನಕ್ಕು ಸಾಕಾಗುತ್ತದೆ.

[illegible]

ವಾ. ಚಂದಾ ರೂ. ೧-೮-೦

[illegible]

ಜಾಹೀರಾತಿಗೆ ಸುಸಮಯ!

ಸಂಪಾದಕ,

ವಿನೋದ ಪ್ರಪಂಚ, ಬೆಂಗಳೂರು ಸಿಟಿ.

ದಕ್ಷಿಣ ಕ. ಏಜಂಟರು—ಪೋಪ್ಯುಲರ್ ಸ್ಟೋರ್ಸ್ ಮಂಗಳೂರು

ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

O S No. 40/'82 R. E P No 1916/'88

ಪ್ರತಿವಾದಿ [illegible] ನಾರಾಯಣ ಭಟ್ಟ [illegible] ಗೋವಿಂದ ಭಟ್ಟರ ಮಗ [illegible] ಗ್ರಾಮದಲ್ಲಿರುವವ-ಅರ್ಜಿದಾರ

ಮತ್ತು

ವಾದಿ, [illegible] ಕೃಷ್ಣ ಭಟ್ಟ ಗೋವಿಂದ ಭಟ್ಟರ ಮಗ, [illegible] ಗ್ರಾಮದ [illegible]ರುವವ-ರೆಸ್ಪಾಂಡೆಂಟು.

ಮೇಲ್ಕಂಡ ಅಮ್ಲಜಾರಿಯಲ್ಲಿ ಅರ್ಜಿದಾರಂಗೆ [illegible] ಕೋರ್ಟು ಬರ್ಜಿನ ಕುರಿತು ಆತನು ರೆಸ್ಪಾಂಡೆಂಟನ [illegible] ಜಪ್ತಿ ಮಾಡಿಸಿ ಏಲಮಿಗೆ ಅಪೇಕ್ಷಿಸಿರುತ್ತಾನೆ. ಸದ್ರಿ ಅರ್ಜಿಯು [illegible] ಶರ್ತಗಳನ್ನು ನಿರ್ಣಯಿಸಲಿಕ್ಕೂ ಏಲಮಿನ ಸಮಯ ಅರ್ಜಿದಾರಂಗೆ [illegible] ಯಾಕೆ ಪರ್ಮಿಶನ್ ಕೊಡಕೂಡದೆಂಬ [illegible] ತೋರಿಸಲಿಕ್ಕೂ ಈ 6-3-1934ಕ್ಕೆ ಇಟ್ಟಿರುತ್ತದೆ. ಈ ಕುರಿತು ರೆಸ್ಪಾಂಡೆಂಟಿಗೆ ಆಕ್ಷೇಪವಿದ್ದರೆ ಆತನು ಸದರಿ ದಿವಸ ಕೋರ್ಟಿಗೆ ಹಾಜರಾಗಿ ಉದಾಹರಿಸತಕ್ಕದ್ದು. ತಪ್ಪಿದರೆ ಏಕಪಕ್ಷವಾಗಿ ತೀರ್ಮಾನಿಸಲಾದೀತು ಎಂಬ ಸಂಗತಿ ಈ ಮೂಲಕ ತಿಳಿಸಲಾಗಿದೆ

ಕಾಸರಗೋಡು [illegible] K. Sundar Rama Shetty,
ಅರ್ಜಿದಾರನ ಕಡೆ ವಕೀಲ

ನೋಟೀಸು

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

S C No 6/1934

[illegible] ನಾರಾಯಣ ಭಂಡಾರಿ—ವಾದಿ

ಮತ್ತು

[illegible] ಪ್ರಭು—[illegible] ಸುಬ್ರಾಯ ಪ್ರಭು ಮಗ, ಮಂಗಳೂರು [illegible] ಗಲ್ಲಿಯಲ್ಲಿ [illegible]ವವ—ಪ್ರತಿವಾದಿ

ಮೇಲ್ಕಂಡ ವ್ಯಾಜ್ಯವು, ವಾದಿಗೆ ಪ್ರತಿವಾದಿಯಿಂದ ಬರಬೇಕಾದ [illegible] ರೂ 85-1-10ರ ವಸೂಲಿ [illegible] ದಾಖಲು ಮಾಡಲ್ಪಟ್ಟು ತಾ 6—3—1934ಕ್ಕೆ [illegible] ಬಗ್ಗೆ ವಾಯಿದೆ ನಿರ್ಣಯಿಸುವುದರಿಂದ ಆ ದಿವಸ ಸದ್ರಿ ಪ್ರತಿವಾದಿಯು ಏನಾದರೂ ಆಕ್ಷೇಪಗಳಿದ್ದಲ್ಲಿ ಮೇಲ್ಕಂಡ ಕೋರ್ಟಿನಲ್ಲಿ ಪೂರ್ವಾಹ್ನ ಗಂಟೆ 11ಕ್ಕೆ ಹಾಜರಾಗಿ ಉದಾಹರಿಸುವದು, ತಪ್ಪಿದರೆ ಆತನ ಗೈರುಹಾಜರಿಯಿಂದ ಸದ್ರಿ ವ್ಯಾಜ್ಯವು ತೀರ್ಮಾನಿಸಲಾಗುವುದೆಂದು ಈ ಮೂಲಕ ತಿಳಿಸಲಾಗುತ್ತದೆ

ಮಂಗಳೂರು [illegible] H. Dasanna Alva,
Pleader for Plaintiff

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

ಸ್ಮಾಲ್ ಕಾಜ್ ನಂಬ್ರ 602 1933

ಚೆನ್ನಪ್ಪ ಹೆಗಡೆ, [illegible] ಅಳಿಯ, ಕಾರ್ಕಳ ತಾಲೂಕು [illegible] ಗ್ರಾಮದ [illegible]ದಲ್ಲಿರುವವ—ವಾದಿ

ಮತ್ತು

ಸುಬ್ರಾಯ [illegible], [illegible] ಮಗ ಕಾರ್ಕಳ ತಾಲೂಕು [illegible] ಗ್ರಾಮದ [illegible] ಎಂಬಲ್ಲಿರುವವ—ಪ್ರತಿವಾದಿ

ಇವರೊಳಗೆ

ಈ ಮೂಲಕ ಸರ್ವ ಜನರಿಗೂ [illegible]ದೇನೆಂದರೆ, ಪ್ರತಿವಾದಿಯು ವಾದಿಗೆ ಬರಕೊಟ್ಟ ತಾ 26-4-33ನೇ ದಿವಸದ ನೋಟು ಪ್ರಕಾರ [illegible] ರೂಪಾಯಿ 54—2—4ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ವಾದಿಯು ದಾವಾ ತಂದಿರುತ್ತಾನೆ. ಸದ್ರಿ ದಾವೆಯು ತನ್ನಿ ಬಗ್ಗೆ 12-3-34ಕ್ಕೆ [illegible] ಎಂಬ ಸಂಗತಿಯನ್ನು ಈ ಮೂಲಕ ತಿಳಿಸಲಾಗುತ್ತದೆ

ಕಾರ್ಕಳ, [illegible] K. L Kudva,
ವಾದಿಯ ಕಡೆ ವಕೀಲ್

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್.

ಸ್ತ್ರೀಯರಿಗೊಂದು ಮಹಾ ವರ.

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮುಟ್ಟು ಮುಟ್ಟಾಗದಿರುವಿಕೆ, ಬಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು ಅಶುದ್ಧ ರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕ ನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ ರೂ 1 ಮತ್ತು 1—10—0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

Sole Agents for West Coast and North Kanara

Wanted Agents in Principal Towns
For terms Apply to—POPULAR STORES
Mangalore

ಪೋಪ್ಯುಲರ್ ಸ್ಟೋರ್ಸ್,
ರಥಬೀದಿ ಮಂಗಳೂರು

ಸ್ತ್ರೀ ಪುರುಷರ ಸಲುವಾಗಿ
ಶಕ್ತಿ ವ ಸ್ಫೂರ್ತಿ ಕೊಡುವಂತಹ

ಸುಮಧುರ

ಝಂಡು ದ್ರಾಕ್ಷಾಸವ್

ಜರೂರು ಉಪಯೋಗಿಸಿರಿ.

ಸ್ತ್ರೀಯರ ಸಲುವಾಗಿ
ಆರೋಗ್ಯ ವ ಶಕ್ತಿವರ್ಧಕ.

ಪ್ರದರಾದಿ ರೋಗಗಳ ಮೇಲೆ
ರಾಮಬಾಣ ಉಪಾಯ.

ಝಂಡು ಅಶೋಕಾರಿಷ್ಟ

ಬೇಗನೇ ಉಪಯೋಗಿಸಿರಿ

'ZANDU'

ಝಂಡು ಫಾರ್ಮಾಸ್ಯುಟಿಕಲ್ ವರ್ಕ್ಸ್ ಲಿ: ಮುಂಬೈಗಳ.

ಮದ್ರಾಸ್ ಸಂಸ್ಥಾನದ ಏಜೆಂಟ್—ದಾಮೋದರ ಮತ್ತು ಕಂಪೆನಿ, 78 [illegible] ರೋಡ್, ಮದ್ರಾಸು
ಮೈಸೂರು ಪ್ರಾವಿನ್ಸ್ ಏಜಂಟ್—ದಿ ಪ್ರೊಪಟ್ ಲಾಲ ಕಂಪೆನಿ, [illegible] ಶ್ರೀನಿವಾಸಾಚಾರ ಸ್ಟ್ರೀಟ್
ಮಂಗಳೂರು ಏಜಂಟ್—ಶಾಹಾ ಕಂಪೆನಿ ಡಾಯ್ಮಂಡ್ ಬಿಲ್ಡಿಂಗ್, ಮಂಗಳೂರು.
ಧಾರವಾಡ ಏಜಂಟ್—ದಿ ಧಾರವಾಡ ಫಾರ್ಮಸಿ, ಧಾರವಾಡ

ಬೇರೆ ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತದೆ

ಆಯುರ್ವೇದ ಔಷಧಿಗಳ ಸೂಚೀಪತ್ರವನ್ನು ಮುಫ್ತ ಏಜಂಟರಿಂದ ಪಡಕೊಳ್ಳಿರಿ

ನಮ್ಮ ಸಲಹೆಯೇ ಪ್ರಾಧಾನ್ಯವಾದದ್ದೆಂದು ತಿಳಿಯಬೇಡಿ.

[illegible]

ಜೀವಾಮೃತವು

ನರಗಳಿಗೆ ಶಕ್ತಿ ಕೊಡುತ್ತದೆ ವೀರ್ಯ ವೃದ್ಧಿಮಾಡುತ್ತದೆ ಹಸಿವು ಹೆಚ್ಚಿಸುತ್ತದೆ ರಕ್ತ ವೃದ್ಧಿಮಾಡುತ್ತದೆ

ಪಂಡಿತ
ಡಿ. ಗೋಪಾಲಾಚಾರ್ಲುರವರ

ಜೀವಾಮೃತವು

ಎಲ್ಲಾ ಔಷಧ ವ್ಯಾಪಾರಿಗಳಲ್ಲೂ, ಸ್ಟೋರುಗಳಲ್ಲೂ ದೊರೆಯುತ್ತದೆ. (ಸಂಪೂರ್ಣ ವಿವರಗಳಿಗೆ ಇವರಿಗೆ ಬರೆಯಿರಿ)

ಆಯುರ್ವೇದಾಶ್ರಮಂ, ಪೋ ಬಾಕ್ಸ್ ನಂ [illegible], ಮದ್ರಾಸು.

ಹೋಲ್ ಏಜಂಟರು— ಸಿಟಿ ಮೆಡಿಕಲ್ ಮತ್ತು ಜನರಲ್ ಏಜನ್ಸಿ, [illegible] ಬೆಂಗಳೂರು. [illegible]
ದಕ್ಷಿಣ ಕನ್ನಡದ ಏಜಂಟರು— ಪೋಪ್ಯುಲರ್ ಸ್ಟೋರ್ಸ್, ಮಂಗಳೂರು P. No 104

ಶಾಲಿವಾಹನಶಕ [illegible] ಗತಶಕೆ, ಶ್ರೀಮುಖ ಸಂ||ರದ ಫಾಲ್ಗುಣ ಶು ೧೦ ಶನಿವಾರದಿಂದ ಶ್ರೀಮುಖ ಸಂ||ರದ ಫಾಲ್ಗುಣ ಶು ೧ ಶುಕ್ರವಾರದ ವರೆಗಿನ ಪಂಚಾಂಗ

(ಗಣಿತಸೇಯ ಕುಂಭ—ಮಾಘ).

ತಾರೀಖು	ವಾರ	ತಿ.	ಘಳಿಗೆ.	ನಕ್ಷತ್ರ	ಘಳಿಗೆ.	ಸೌರದಿನ	ಸೂರ್ಯ. ಉ	ಅಸ್ತ
24	ಶನಿ	೧೦	[illegible]	[illegible]	[illegible]	೧೨	6.52	6.38
25	ರವಿ	೧೧	[illegible]	ಪುನರ್ವಸು	[illegible]	೧೩	6.51	6.38
26	ಸೋಮ	೧೨	[illegible]	ಪುಷ್ಯ	[illegible]	೧೪	6.51	6.38
27	ಮಂಗಳ	೧೩	[illegible]	ಆಶ್ಲೇಷ	[illegible]	೧೫	6.50	6.38
28	ಬುಧ	೧೪	[illegible]	ಆಶ್ಲೇಷ	[illegible]	೧೬	6.50	6.38
1	ಗುರು	○	[illegible]	ಮಘಾ	[illegible]	೧೭	6.40	6.38
2	ಶುಕ್ರ	೧	[illegible]	ಹುಬ್ಬ	[illegible]	೧೮	6.48	6.39

ಮಂಗಳೂರಿನ ವಾಯುಸ್ಥಿತಿ.

ತಾರೀಖು Date	Temperature. ಉಷ್ಣ (ಶಾಖ) Maximum ಹೆಚ್ಚು	Minimum ಕಡಿಮೆ	Rainfall. ಮಳೆ ದಿನದ ಮಳೆ	ಒಟ್ಟು ಮಳೆ
7	90—9	66—9	—	—
8	92—[illegible]	67—4	—	—
9	92—2	66—9	—	—
10	88—8	69—9	—	—
11	90—5	68—8	—	—
12	88—7	72—9	—	—
13	86—0	73—1	—	167—64

ಮಂಗಳೂರಿನ ಪೇಟೆ ಧಾರಣೆ.

ಜಿನಸು		ಇಂದ ರೂ.—ಆ.	ವರೆಗೆ ರೂ.—ಆ.
ಹೊಸ ರಾಶಿ ಅಕ್ಕಿ	...	3—6	3—12
ಹೊಸ ಸುಣ್ಣ [illegible]	...	4—4	4—8
ಹೊಸ ಗುಡ್ಡ	...	3—12	4—2
	...	—	—
[illegible] ಬೆಲ್ಲ	...	4—4	5—4
ರಂಗೂನು ಬೆಲ್ಲ ಗೋಣಿ ಒಳ್ಳೆ	...	5—4	6—0
ಎಲ್ಲೂರು ಬೆಲ್ಲ ಮುಡಿ ಒಳ್ಳೆ	...	3—4	3—8
ಗೋಧಿ ಗೋಣಿ ಒಳ್ಳೆ	...	10—0	12—8
[illegible] ಗೋಣಿ ಒಳ್ಳೆ	...	9—0	10—8
[illegible] ಗೋಣಿ ಒಳ್ಳೆ	...	6—0	6—8
[illegible] ಗೋಣಿ ಒಳ್ಳೆ	...	9—8	12—8
[illegible] ಗೋಣಿ ಒಳ್ಳೆ	...	10—0	16—0
ಉದ್ದು ಗೋಣಿ ಒಳ್ಳೆ	...	7—0	7—10
ಹೆಸರು ಗೋಣಿ ಒಳ್ಳೆ	...	8—0	9—0
[illegible] ಖಂಡಿ ಒಳ್ಳೆ	...	32—0	37—8
ಉಪ್ಪು ಗೋಣಿ ಒಳ್ಳೆ	...	4—14	5—4
[illegible] ಖಂಡಿ ಒಳ್ಳೆ	...	40—0	45—0
[illegible] ಖಂಡಿ ಒಳ್ಳೆ	...	17—8	18—8
[illegible] ಖಂಡಿ ಒಳ್ಳೆ	...	22—8	23—12
[illegible] ಎಣ್ಣೆ ಮುಡಿ ಒಳ್ಳೆ	...	3—1	4—2
ಎಳ್ಳೆಣ್ಣೆ ಮುಡಿ ಒಳ್ಳೆ	...	5—0	6—0
[illegible] ಒಳ್ಳೆ	...	6—8	8—
[illegible] ಸಕ್ಕರೆ ಮುಡಿ ಒಳ್ಳೆ	...	3—11	3—12
ಹೊಸ ಮೆಣಸು	...	8—10	9—10
[illegible] ಮುಡಿ ಒಳ್ಳೆ	...	4—8	4—12
[illegible] ಖಂಡಿ ಒಳ್ಳೆ	...	130—0	135—0
[illegible] ಮುಡಿ ಒಳ್ಳೆ	...	20—0	24—0
[illegible] ಮುಡಿ ಒಳ್ಳೆ	...	2—4	2—8
[illegible] ಖಂಡಿ ಒಳ್ಳೆ	...	42—0	44—0
[illegible] ಮುಡಿ ಒಳ್ಳೆ	...	10—0	10—2
[illegible] ಮುಡಿ ಒಳ್ಳೆ	...	13—0	14—8
[illegible] ಒಳ್ಳೆ	...	14—12	15—0
[illegible] ಮುಡಿ ಒಳ್ಳೆ	...	9—0	9—8
[illegible] ಒಳ್ಳೆ	...	20—2	20—10
[illegible] ಖಂಡಿ ಒಳ್ಳೆ	...	25—8	160—0
[illegible] ಕಾಫಿ ಖಂಡಿ ಒಳ್ಳೆ	...	180—0	205—0
[illegible] ಕಾಫಿ ಖಂಡಿ ಒಳ್ಳೆ	...	270—0	275—0
[illegible]	...	115—0	135—0
[illegible]	...	75—0	100—0

THE CANARA PUBLIC CONVEYANCE CO., LTD, MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯ ಕ್ಷೇತ್ರಗಳಿಗೆ ಹೋಗುವವು. ಮೈಸೂರು, ಕೊಡಗು ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನ್ ಕೂಡಾ ಇರುವುದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ, ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಬೇಕೆನ್ನುವವರು [illegible] ಪ್ರತಿದಿನವೂ ನಾಲ್ಕು ಸಾರಿ ಕರಾವಳಿ ಮಾರ್ಗವಾಗಿಯೂ, 4 ಸಾರಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ [illegible] ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲಪಿರಿ. ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 37 ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ, ಕಾರ್ಕಳ ಗೋಮಟೇಶ್ವರನ ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು 4 ಸಲ ಹೊರಟು ಎರಡೂವರೆ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ, ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ತಲ್ಪಬಹುದು.

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಬೆಳಿಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ **ಶೃಂಗೇರಿಯನ್ನು** ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಪ್ರಾಚೀನ ಕಾಲದ ದೇವಸ್ಥಾನಗಳಿಂದ ಕೂಡಿದ **ಗೋಕರ್ಣಕ್ಕೆ** ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಬೇಲೂರಿನ ಸೋಮನಾಥ ದೇವಾಲಯವನ್ನು ನೋಡಲು, ನೋಡಲಿಚ್ಛಿಸುವವರು, ಬೆಳಿಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ, ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದೂಸ್ಥಾನ, ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣ ಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ, ಮಂಗಳೂರಿನಿಂದ ಮಡಿಕೇರಿಗೆ 7 ಘಂಟೆಗಳೊಳಗೂ, ಕಡೂರಿಗೆ 12 ಘಂಟೆಗಳೊಳಗೂ, ಮೈಸೂರಿಗೆ 12 ಗಂಟೆಗಳೊಳಗೂ, ಸಕಲೇಶಪುರಕ್ಕೆ 8 ಗಂಟೆಗಳೊಳಗೂ, ಹಾಸನಕ್ಕೆ 10 ಗಂಟೆಗಳೊಳಗೂ, ಚಿಕ್ಕಮಗಳೂರಿಗೆ 8 ಗಂಟೆಗಳೊಳಗೂ, ಕೊಲ್ಲೂರಿಗೆ ಮತ್ತು ಗೋಕರ್ಣಕ್ಕೆ ೧|| ದಿವಸದೊಳಗೂ ಶಿಮೊಗ್ಗಕ್ಕೆ 12 ಗಂಟೆ ತಲಪಬಹುದು.

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,
The Canara Public Conveyance Company Ltd., Mangalore

Chikmagalur Public Conveyance Motor Service.

CHIKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,

ಚಿಕ್ಕಮಗಳೂರು.

ಮುಂಬಾಯಿಯಿಂದ – ಮಂಗಳೂರಿಗೆ.
ಮಂಗಳೂರಿನಿಂದ – ಮುಂಬಾಯಿಗೆ.

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ

ಮಂಗಳೂರು—ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು — ಅನುಕೂಲ ಪ್ರಯಾಣ ಸೌಕರ್ಯಗಳು.

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ

ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ

ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ.

ಚಿಕ್ಕಮಗಳೂರಿನಿಂದ — ಶಿವಮೊಗ್ಗಕ್ಕೆ, ಬೇಲೂರಿಗೆ, ಕಡೂರಿಗೆ.
— ಮೂಡಿಗೆರೆಗೆ, ಸಕಲೇಶಪುರಕ್ಕೆ.
— ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
— ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ನಿರಾಯಾಸದ ಪ್ರಯಾಣ! ಉತ್ಸಾಹಕರ ಸೌಕರ್ಯ!

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

Canara Bank, Limited.

Established 1906.

Authorised Capital	10,00000—0—0
Subscribed capital	6,00,000—0—0
Paid up Capital	3,30,000—0—0
Reserves	4,31,000—0—0

Head Office:—Bunder, Mangalore — **Local Offices:- City & Bunder.**

BRANCHES:— Bombay, Cochin, Calicut, Ernakulam, Alleppey, Chikmagalur, Ganguli, Coondapoor, Udipi, Karkal, Puttur, Kasaragod, & Buntwal Out-agency.

Interest is allowed on Current, Fixed and Saving Banks Accounts, rates of which may be ascertained on application. Advances made on approved securities at easy rates. All kinds of Banking business transacted. Rules of business on application.

The Bangalore Branch Office of the Bank at No. I Albert Victor Road, Bangalore City will be opened on 8-1-34.

Mangalore
22-12-33

A. Madhava Pai,
Secretary.

East & West Insurance Company Ltd.,

(Incorporated in India 1913).

Head Office:—EAST & WEST BUILDINGS, FORT, BOMBAY.

Eastern Company with striking features
Attractive plans,
Sympathetic & Liberal
Treatment to Policy Holders,
&
Wide popularity,
Economic Management
Sound investment
That is why you should select "East & West"
Ere you invest in the rest

Interim Bonus
Declared
Rs. 15 Per 1000
On whole life &
Endowment Policies.

For particulars and Agency terms apply to:—

H. S. Nayak, *Organiser, Secretary,* for West Coast, Coorg & Mysore,
"Harbour View" Mangalore.

ನಮ್ಮ ಟೊಯಿಲೆಟ್ ಮತ್ತು ವಾಶಿಂಗ್ ಸಾಬೂನುಗಳ ತಯಾರಿಯಲ್ಲಿ ಚರ್ಬಿ
ಉಪಯೋಗಿಸಲ್ಪಡುವುದಾಗಿ ರುಜುಪಡಿಸುವವರಿಗೆ ರೂಪಾಯಿ
1000 ಬಹುಮಾನ.

ಸಾಬೂನು ಪಡೆಯುವಾಗ " " ಅದರಲ್ಲಿ ಚರ್ಬಿ ಇರಕೂಡದೆಂದು ನಿಮ್ಮ ಆಶೆ.

ಪ್ರಾಣಿಗಳ ಚರ್ಬಿ ಮಿಶ್ರಿತವಾದ ಸಾಬೂನುಗಳು ಹಿತಕ್ಕಿಂತಲೂ ಅಹಿತವನ್ನೇ ಹೆಚ್ಚಾಗಿ ಉಂಟುಮಾಡುತ್ತವೆ. ಕಾರಣ ಅವುಗಳಲ್ಲಿನ ಚರ್ಬಿ ಚರ್ಮರಂಧ್ರಗಳೊಳಗೆ ಹೋಗಿ ಬೆವರನ್ನು ತಡೆಯುತ್ತದೆ. ಸೋಪನ್ನು ಪಡೆಯುವಾಗ ನೀವು ಪರಿಮಳಭರಿತ ಚರ್ಬಿಗೆ ಮುದ್ದಾಗಿ ಬೆಲೆ ಕೊಟ್ಟು ಶುದ್ಧತೆಯ ಬದಲು ಅಶುದ್ಧತೆಯನ್ನು ಸ್ವೀಕರಿಸಬೇಕೆಂದಿರುವಿರಾ?

ಮಲಬಾರು ಸಾಬೂನುಗಳು ಜನನಕ್ಕೆ ಬಂದ ಆರು ತಿಂಗಳುಗಳ ಅಲ್ಪಾವಧಿಯಲ್ಲೇ ಸಾರ್ವಜನಿಕ ಬೆಂಬಲವನ್ನು ಪಡೆದಿವೆ. ಕೊಚ್ಚಿಯ ಮಹಾ ರಾಜರ ದಯಾಪೂರ್ಣ ಪ್ರಶಸ್ತಿ ಮತ್ತು ಪ್ರೋತ್ಸಾಹನದಿಂದಾಗಿಯೂ, ಸ್ವದೇಶೀ ಪ್ರದರ್ಶನದ ಅಧಿಕಾರಿಗಳ ಶಿಫಾರಸಿನಿಂದಾಗಿಯೂ, ಅನೇಕ ವಸ್ತುಪ್ರದರ್ಶನಗಳಲ್ಲಿ ದೊರೆತ ಸುವರ್ಣಪದಕ ಮತ್ತು ಪ್ರಶಸ್ತಿ ಪತ್ರಿಕೆಗಳಿಂದಾಗಿಯೂ, ಮಲಬಾರ್ ಸಾಬೂನುಗಳ ಪ್ರಾಮುಖ್ಯತೆಯು ಎಷ್ಟೆಂದು ತಿಳಿಯುವುದು.

ಮಲಬಾರ್ ಸಾಬೂನು ಎಲ್ಲಾ ವಿಧದಿಂದಲೂ ಶ್ರೇಯಸ್ಕರವೇ ಆಗಿರುತ್ತದೆ. ನಿಮ್ಮ ಚರ್ಮಕ್ಕೆ ಬಾಧಕವನ್ನುಂಟು ಮಾಡುವಂತಹ ಪ್ರಾಣಿಗಳ ಚರ್ಬಿ ಅಥವಾ ಹಾನಿಕರವಾದ ಮಿಶ್ರಿತವೇನೂ ಅದರಲ್ಲಿರದು. ಮಲಬಾರ್ ಸಾಬೂನನ್ನು ಶಾಸ್ತ್ರೀಯ ರೀತಿಯಿಂದಲೂ, ಆರೋಗ್ಯ ದೃಷ್ಟಿಯಿಂದಲೂ ತಯಾರಿಸುವುದರಿಂದ ಎಷ್ಟು ಕೋಮಲವಾದ ಚರ್ಮಕ್ಕೂ ಬಾಧಕ ತೋರಿಸುತ್ತದಿಲ್ಲ. ಈ ಸಾಬೂನು ದೇಶೀಯ ಅಮೂಲ್ಯ ಗಂಧಯುಕ್ತ ಪದಾರ್ಥಗಳಿಂದ ಎಲ್ಲರಿಗೂ ಅನುಕೂಲವಾಗುವಂತೆ ಅಗ್ಗವಾಗಿದೆಯೆಂದು ಅದರ ಉಪಯೋಗದಿಂದ ನಿಮಗೆ ತಿಳಿದುಬರುವುದು.

ನಿಮ್ಮ ವ್ಯಾಪಾರಸ್ಥರು

ಮಲಬಾರ್ ಸಾಬೂನುಗಳನ್ನು

ವಿಕ್ರಯಿಸಲು ಸಂತೋಷಪಡುವರು

ಇದರಲ್ಲಿ ಪ್ರಾಣಿಗಳ ಕೊಬ್ಬು ಇರುವುದಿಲ್ಲ.

ದಿ ವೆಜಿಟೇಬಲ್ ಸೋಪ್ ವರ್ಕ್ಸ್, ಕಲ್ಲಿಕೋಟೆ.

ಪ್ರೊಪ್ರೈಟರ್:—ಸನ್ ಬ್ರೆಂಡ್ ಕೋಡೆಯ ಖ್ಯಾತಿಯ ಸೇಟ್ ನಾಗಜೀ ಪುರುಷೋತ್ತಮ ಮತ್ತು ಕಂಪೆನಿ, ಕಲ್ಲಿಕೋಟೆ.

ಈ ಜಿಲ್ಲೆಗೆ ಪ್ರವರ್ತಕರು:—

ರಾಘವೇಂದ್ರ ರಂಗ ಪೈ ರಥಬೀದಿ, ಮಂಗಳೂರು.

S. U. N. & CO.

Choukhamba, Benares City

ಮೂರು ಬಹುಮಾನಗಳು.

ನಮ್ಮಲ್ಲಿ ಕಾಶ್ಮೀರ್ ಶಾಲುಗಳಿಗಿಂತಲೂ ಅತ್ಯುತ್ತಮವಾದ ಕಸೂತಿಗಳಿಂದೊಪ್ಪುವ ಶುದ್ಧ ಸ್ವದೇಶೀ ಖದ್ದರ್ ಶಿಲ್ಕು ಶಾಲುಗಳು ತಯಾರಾಗುತ್ತವೆ. ಬೇಕಾದವರು ತ್ವರಿತಮಾಡಿ ಬರೆದರೆ ಈ ಕೆಳಗಿನ ದರದಲ್ಲಿ ಕಳುಹಿಸಲಾಗುತ್ತದೆ. 5 ಮೊಳ ಉದ್ದ 2½ ಅಗಲ ದರ ಒಂದಕ್ಕೆ ರೂ. 2—8—0ಯಿಂದ 3—12—0 5½ ಮೊಳ ಉದ್ದ 2¾ ಮೊಳ ಅಗಲ ದರ 1ಕ್ಕೆ 3—8—0, 4—8—0. 6 ಮೊಳ ಉದ್ದ 3 ಅಗಲ ದರ 1ಕ್ಕೆ ರೂ. 4—8—0, ರೂ. 5. ಅಲ್ಲದೆ ಸ್ವದೇಶೀ ಖದ್ದರ್ ಮಡಿಗಳೂ, ಶೀರೆಗಳೂ ಅಂಚುಗಳಿಲ್ಲದೆ ಎಲ್ಲಾ ರಂಗುಗಳಲ್ಲಿರುತ್ತವೆ. ಮತ್ತು ಜರೀಕಾರೀ ಶೀರೆಗಳೂ ಪೀತಾಂಬರಗಳೂ ರವಕೆಗಳೂ, ರುದ್ರಾಕ್ಷೀ—ಬಾಣಲಿಂಗ—ಪಂಚಾಯತನ ಸುದರ್ಶನ ಹಿತ್ತಾಳಿ ಸ್ವಾಮಿಗೆ ಮಿಶ್ಶನ್, ಮಡಿ ಧಾವಳಿ ಶಾಲು, ಜಗನ್ನಾಥ ಗಂಟೆಗಳೂ ಕೂಡಾ ಸರಿಯಾದ ದರಕ್ಕೆ ಕಳುಹಿಸಲಾಗುತ್ತದೆ. ವಿವರಕ್ಕೆ ಕೆಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ. 1 ಆಣೆ ಸ್ಟೇಂಪು ಕಳುಹಿಸಿದರೆ 1 ವಿಶ್ವೇಶ್ವರ ಪಟ, 1 ಕಾಶೀನಕ್ಷೆ, 1 ಕೆಟಲಾಗಿನೊಡನೆ 3 ಇನಾಮುಗಳು.

ವಿಳಾಸ—

ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪೆನಿ, ಚೌಖಾಂಬಾ, ಬನಾರಸ್ (ಕಾಶೀ)

ಬೇಕಾಗಿದ್ದಾರೆ.

ಸಕಲೇಶಪುರ, ಚಿಕ್ಕಮಗಳೂರುಗಳಲ್ಲಿ ಬಿಡಿ ಸಂಚಿಕೆಗಳನ್ನು ಮಾರಲು ಉತ್ಸಾಹೀ ಏಜೆಂಟರು ಬೇಕಾಗಿದ್ದಾರೆ. ಶರ್ತಗಳಿಗೆ ಕೂಡಲೇ ಬರೆಯಿರಿ.

ಮೆನೇಜರ್— ಸ್ವದೇಶಾಭಿಮಾನಿ, ಮಂಗಳೂರು

ನೋಟೀಸು.

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

ಸ್ಮಾಲ್ ನಂಬ್ರ 26/1934

ಕಾಳಿಂಗ ರಾವ್—ವಾದಿ.

ಮತ್ತು

ಬಂಟ್ವಾಳಕಾರ್ ನಾರಾಯಣ ಕಾಮತ್, ಕಾರ್ಕಳ ಶ್ರೀ ವೆಂಕಟ್ರಮಣಸ್ವಾಮಿ ಥಿಯೇಟ್ರಿಕಲ್ ಕಂಪೆನಿಯ ಮೆನೇಜಿಂಗ್ ಪ್ರೊಪ್ರೈಟರ, ಮಂಗಳೂರು ಟೌನ್—ಪ್ರತಿವಾದಿ.

ಇವರೊಳಗೆ

ವಾದಿಯು ಕೂಡೆ ಪ್ರತಿವಾದಿಯು ನಡಿಸಿದ ಲೇವಾದೇವಿ ಬಾಬ್ತು ಬಾಕಿಯಾದ ರೂಪಾಯಿ 142—14—5ಕ್ಕೆ ಮಾಡಿದ ದಾವೆಯು ತಾ. 26—2—34ಕ್ಕೆ ಇಟ್ಟಿರುತ್ತದೆ. ಸದ್ರಿ ವ್ಯಾಜ್ಯಕ್ಕೆ ಆಕ್ಷೇಪವಿದ್ದರೆ ಸದ್ರಿ ತಾರೀಕಿನ ಬೆಳಿಗ್ಗೆ 10 ಗಂಟೆಗೆ ಸದ್ರಿ ಕೋರ್ಟಿನಲ್ಲಿ ಪ್ರತಿವಾದಿಯು ಹ್ಯಾಜೀರು ಮಾಡಿಕೊಳ್ಳತಕ್ಕದ್ದು. ತಪ್ಪಿದರೆ ಗೈರುಹಾಜರಿಯಲ್ಲಿ ತೀರ್ಮಾನಿಸಲ್ಪಡುವುದು,

ಉಡುಪಿ,
೧೯—೨—೩೪.

B. Srinivasa Rao,
Advocate for Plaintiff.

ನೋಟೀಸು.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

ಸ್ಮಾಲ ವ್ಯಾಜ್ಯದ ನಂಬ್ರ 565/1933.

ಎನ್ ಸುಂದರ ಶೆಟ್ಟಿ—ವಾದಿ

ಮತ್ತು

(1) ಉಪೇಂದ್ರ ಪ್ರಭು, (2) ಸಟ್ಟು ನಪಳಿಗ—ಪ್ರತಿವಾದಿಯು.

ಉಪೇಂದ್ರ ಪ್ರಭು ವೈಕುಂಠ ಪ್ರಭುರ ಮಗ Sundara vilas, Mint road, Bombay

ಸದ್ರಿ ಪ್ರತಿವಾದಿಗೆ—

ಮೇಲ್ಕಂಡ ವ್ಯಾಜ್ಯ ತಾ. 12—3—'34ಕ್ಕೆ ತನ್ನಿಗೆ ಇಟ್ಟಿರುವದರಿಂದ ಆ ದಿವಸ ಬೆಳಿಗ್ಗೆ 10 ಘಂಟೆಗೆ ಕೋರ್ಟಿಗೆ ನೀವು ಹಾಜರು ಆಗಿ ನಿಮ್ಮ ಆಕ್ಷೇಪ ಇದ್ದರೆ ಹ್ಯಾಜೀರುಮಾಡಿಕೊಳ್ಳತಕ್ಕದ್ದು. ಆ ಪ್ರಕಾರ ನೀವು ಹಾಜರು ಆಗದೆ ಹೋದಲ್ಲಿ ಕೋರ್ಟಿನವರಿಗೆ ಯುಕ್ತ ಕಂಡ ರೀತಿ ತೀರ್ಮಾನಿಸಲಾದೀತು ತಿಳಿದಿರಿ.

ಕಾರ್ಕಳ,
20—2—'34

S. N. Shetty,
ವಾದಿ ಕಡೆ ವಕೀಲ.

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು   ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು.

ಕಸ್ತೂರಿ ಮಿಶ್ರಿತ ದಶಮೂಲಾರಿಷ್ಟ ೧೬ ಔನ್ಸ್ ಬಾಟ್ಲಿ ಗಳ್ಗೆ ರೂ. 1-8-0 ದ್ರಾಕ್ಷಾಸವ ೧೬ ಔನ್ಸ್ ಬಾಟ್ಲಿ 1ಕ್ಕೆ ರೂ 1 ಅಶ್ವಗಂಧಾರಿಷ್ಟ ೧೬ ಔನ್ಸ್ ಬಾಟ್ಲಿ ಒಂದಕ್ಕೆ ರೂ. 1-4-0. ಬಲಾಮೃತ ೧೬ ಔನ್ಸ್ ಬಾಟ್ಲಿ ಗಳ್ಗೆ ರೂ 2 ಅಶೋಕಾರಿಷ್ಟ ೧೬ ಔನ್ಸ್ ಬಾಟ್ಲಿ ಗಳ್ಗೆ ರೂ. 1-4-0. ಚ್ಯವನಪ್ರಾಶಲೇಹ ೧ ಪೌಂಡಿಗೆ ರೂ. 1-8-0. ಅಭಯಾಮಲಕಿ ೧ ರಾತ್ಲಿಗೆ ರೂ 2 ಚಂದ್ರಮುಖ್ (ವಿಷಮಜ್ವರಕ್ಕೆ ರಾಮಬಾಣ) ಕಾಲು ಡಬ್ಬಿಗೆ ರೂ 0-5-0. ದಂತಧಾವನ ಚೂರ್ಣ ತೊಲೆ ಗಳ್ಗೆ 0-1-0. ಕ್ರಿಮಿಘಾತಿನಿ (ದದ್ರು ಕಜ್ಜಿಗೆ) ಡಬ್ಬಿ ಗಳ್ಗೆ ರೂ 0-4-0 ಕೃಷ್ಣಾಂಕ ೧ ಡಬ್ಬಿಗೆ ರೂ 0-6-0 ಚಿತ್ರಕ (ಮಕ್ಕಳ ಗ್ರಹಣೀ ರೋಗಕ್ಕೆ ದಿವ್ಯೌಷಧ) ತೊಲೆ ಗಳ್ಗೆ ರೂ 0-8-0 ಮಹಾ ಚಿತ್ರಕ ತೊಲೆ ಗಳ್ಗೆ ರೂ 1-0-0. ಪಿಂಡ ತೈಲ ೫ ಔನ್ಸ್ ಬಾಟ್ಲಿ ಗಳ್ಗೆ ರೂ. 0-10-0 ಬಲಾಶ್ವಗಂಧಾದಿ ತೈಲ ೫ ಔನ್ಸ್ ಬಾಟ್ಲಿ ಗಳ್ಗೆ 0-12-0 ಹಿಮಸಾಗರ ತೈಲ ೫ ಔನ್ಸ್ ಬಾಟ್ಲಿ ಗಳ್ಗೆ ರೂ 1-8 0 ಮಹಾಚಂದನಾದಿ ತೈಲ ೫ ಔನ್ಸ್ ಬಾಟ್ಲಿ ಗಳ್ಗೆ ರೂ. 1-0-0. ಶ್ರೀ ಗೋಪಾಲ ತೈಲ ೫ ಔನ್ಸ್ ಬಾಟ್ಲಿ ಗಳ್ಗೆ ರೂ 3-8-0

ನಮ್ಮ ಔಷಧಗಳು ದೊರೆಯುವ ಸ್ಥಳ — ಮಂಗಳೂರು—ರಾಘವೇಂದ್ರ, ರಂಗ ಪೈ ರಥಬೀದಿ, ಕಿನಿ ಡಿಸ್ಪೆನ್ಸರಿ ಕೊಡಿಯಾಲಬೈಲ್ ಕುಂದಾಪುರ—ಕೆ ಕೃಷ್ಣ ಕಾಮತರಾಗ ಗಂಗೊಳ್ಳಿ—ಬಿ ಸುರೇಂದ್ರ ನಾಯ್ಕ ಕುಂದಾಪುರ—ಕೆ ರಾಮ ಭಟ್ ಡಾಕ್ಟರ್ ಕೆ ಆರ್ ಕಾಮತ್ ಉಡುಪಿ—ಸಿ ಜನಾರ್ಧನ ನಾಯಕ್ ಎಂಡ್ ಕೊ, ಪೈ ಫಾರ್ಮೆಸಿ, ಆರ್ ಎಸ್ ಶೆಟ್ಟಿ, ರಥಬೀದಿ ಕಾರ್ಕಳ—ಎ ವಿ ಶೆಟ್ಟಿ ಕಾಪು—ಡಾಕ್ಟರ್ ಬಿ ಕೆ ದೇಶಲ ಡಿಸ್ಪೆನ್ಸರಿ ಬಟ್ಕಳ—ವಾಮನ ನರಸಿಂಹ ನಾಯಕ್ ಬಾರಕೂರು—ಬಿ ಭಗವಂತ ಮಲ್ಯ, ಆರ್ ಪಿ ಔಷಧಾಲಯ ಬ್ರಹ್ಮಾವರ ಕೆ ವೈಕುಂಠ ಪೈ ಎಂಡ್ ಸನ್ಸ್, ಕೆ ಶೇಷಗಿರಿ ನಾಗಪ್ಪ ಎಂಡ್ ಸನ್ಸ್ ಎಲ್ಲೆಲ್ಲಿಯೂ ಏಜಂಟರು ಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಬಹುದು

ನಾಯಕ್ ಬ್ರದರ್ಸ್, ಶ್ರೀಮದ್ಭುವನೇಂದ್ರ ಮಹೌಷಧಾಲಯ, ಪೋಸ್ಟು ಕಟಪಾಡಿ, ದ. ಕ.

The Canara Industrial & Banking Syndicate Limited.,

Established in 1925. **Head Office—Mukunda Nivas UDIPI**

Branches Mangalore, Payyanur, Brahmavar Kumta Karwar, Hubli Honnavar, Bangalore & Cannanore

Authorised Capital Rs 5,00,000 Subscribed Capital Rs 1 06 300 Paid up Capital Rs 26 300 Issued Capital Rs 2,00 000

STATEMENT OF AFFAIRS OF THE SYNDICATE AS ON 30TH November 1933

Liabilities		Assets	
Paid up Capital	Rs 26 300-0-0	Loans on Land mortgage	Rs. 2,71,186—9—8
Reserve & other funds	,, 20,250—0—0	Loans on Valuable Securities	,, 2,29 690— 7—9
Deposits	10,64 121—4—10	Loans on Bills of Exchange Hundis and Promissory Notes	4,73,634— 4—0
Due to Bankers	1 19 606—0—6	Investment on Shares of other Companies	43,575— 0—0
		Investments on Government of Mysore Conversion Loan	50 000— 0—0
		On Deposits with other Bankers	1 11 000— 0—0
Bills for Collection	,, 29 283—1—3	Bills for collection (per contra)	,, 29,283— 1—3
Sundries	,, 1 19 281—3—11	Sundries	,, 1 40 794—4—10
		Cash in hand & with Bankers	,, 29 677—15—6
Total Rs	13 78 841 10 6	Total Rs	13 78,841 10—6

Long and Short term Loans on attractive Schemes are granted
ALL KINDS OF BANKING BUSINESS UNDERTAKEN

Udipi,
7-12-1933

P A Pai Bros,
Managing Agents.

ಪ್ರಥಮ ಕನ್ನಡ ಮಾತಾಡುವ ಚಲಚಿತ್ರ!

ಮಿಸ್. ತ್ರಿಪುರಾಂಬ
ಮಿಸ್ ರಾಜು
ಮಿಸ್ ಲಕ್ಷ್ಮಿ

ಮಿಸ್ಟರ್ ಸುಬ್ಬಯ್ಯ ನಾಯಿಡು
ಮಿಸ್ಟರ್ ನಾಗೇಂದ್ರ ರಾವ್,
ಮಿಸ್ಟರ್ ವೈ. ವಿ. ರಾವ್
ಮಿಸ್ಟರ್ ಮೂರ್ತಿ

ಇವರುಗಳಿಂದ ನಟಿಸಲ್ಪಟ್ಟು

ಮಿಸ್ಟರ್ ವೈ. ವಿ. ರಾವ್, ಇವರಿಂದ ಡೈರೆಕ್ಟ್ ಮಾಡಲ್ಪಟ್ಟು

ಕರ್ಣಾಟಕ ಕವಿಕೇಸರಿ ಬೆಳ್ಳಾವೆ ನರಹರಿ ಶಾಸ್ತ್ರಿಗಳಿಂದ ಕಥೆಯು ರಚಿಸಲ್ಪಟ್ಟು

ಸೌತ್ ಇಂಡಿಯನ್ ಮೂವಿಟೋನ್‌ರವರು ಕೊಲ್ಹಾಪುರದ ಛತ್ರಪತಿ ಸ್ಟುಡಿಯೋದಲ್ಲಿ ತಯಾರಿಸಲ್ಪಟ್ಟಿರುವದು.

ಪ್ರಸಿದ್ಧ ಪುರಾಣ ಕಥೆ

‘ಸತಿ ಸುಲೋಚನ’

ಎಂಬ ಚಿತ್ರವು ಕನ್ನಡ ಮಾತನಾಡುವ ಹಾಡುವ ರೂಪದಲ್ಲಿ ಪ್ರದರ್ಶಿಸಲ್ಪಡುತ್ತದೆ

ಮಧುರ ಸಂಗೀತ! ಸ್ಪಷ್ಟವಾದ ಧ್ವನಿ! ಇಂಪಾದ ಶ್ರುತಿ!

ಮಂಗಳೂರಿನಲ್ಲಿ ಶೀಘ್ರದಲ್ಲೇ ಪ್ರದರ್ಶನ   ದಿ ಸೌತ್ ಇಂಡಿಯನ್ ಫಿಲ್ಮ್ ಸಪ್ಲೈ ಕಂಪೆನಿ ಬೆಂಗಳೂರು

WANTED.

Four Organisers to organise the work of the South Indian General Assurance Society, Ltd., in the following places noted below. Capable organisers can expect to have attractive and encouraging terms with sound footing for their future

(1) South Canara, (2) Mysore, Hassan and Coorg, (3) Kadur. Shimoga, Chitaldroog and Tumkur. (4) Mangalore, Kolar.

For terms and other particulars please apply to—

The Divisional Manager,
The South Indian General Assurance Co Ltd
64, 3rd Cross Road Srirampur Extn
Malleswaram Post BANGALORE.

OR

The Managing Agents,
The S. I. G. A. Co. Ltd.
55 Poonamallee High Road Kilpauk MADRAS.

ಒಂದೇ ಸವನಾಗಿ ಕ್ಷಿ ವರ್ಷದ ಅನುಭವದಿಂದ

ದ್ರಾಕ್ಷಾಮೃತ

[illegible]

2-6-38

ನಿಮಗೆ ಭಕ್ತಿ ಜ್ಞಾನಗಳು ಬೇಕೋ? ಹಾಗಾದರೆ ಶ್ರೀ ಭಾಗವತವನ್ನು ಓದಿರಿ.

ಕನ್ನಡ ಟೀಕಾತಾತ್ಪರ್ಯಾದಿ ಸಹಿತ

ಶ್ರೀ ಭಾಗವತ ಮಹಾಪುರಾಣ.

ಆಸ್ಥಾನ ಮಹಾವಿದ್ವಾನ್ ವೋಟಿಗಾನಹಳ್ಳಿ ರಾಮಶೇಷಶಾಸ್ತ್ರಿಗಳಿಂದ ಪ್ರಕಟಿಸಲ್ಪಟ್ಟಿದು

ಸ್ಕಂಧಗಳು 7 ಸಂಪುಟಗಳಲ್ಲಿ ಪ್ರಕಾಶವಾಗಿರುವುದು ... 11-12ನೇಯ ಸ್ಕಂಧಗಳುಳ್ಳ ಎಂಟನೆಯ ಸಂಪುಟವು ... ಸಿದ್ಧವಾಗಿದೆ ...

1ನೇಯ ಸಂಪುಟ (1-2ನೇ ಸ್ಕಂಧಗಳು) 3—4—0	7ನೇಯ ಸಂಪುಟ (ದಶಮ ಉತ್ತರ ಭಾಗ) 4—8—0
2 „ (3ನೇಯ ಸ್ಕಂಧ) 3—[illegible]	8 „ (11, 12ನೇಯ ಸ್ಕಂಧಗಳು ಟಿಪ್ಪಣಿ ಸಹಿತ) 4—8—0
3 „ (4 „ „) 3—8—0	ಶ್ರೀ ಭಾಗವತ ಪುರಾಣ ... 0—8—0
4 „ (5-6ನೇಯ ಸ್ಕಂಧಗಳು) 4—0—0	... 1—4—0
5 „ (7 8 9 ಸ್ಕಂಧಗಳು) 3—8—0	(ಅದೇ ಗ್ರಂಥಕರ್ತರಿಂದ ರಚಿಸಲ್ಪಟ್ಟಿದು)
6 „ (ದಶಮ ಪೂರ್ವ ಭಾಗ) 3—0—0	

ಹೆಚ್ಚು ವಿಷಯಗಳಿಗೆ ... ಬರೆಯಿರಿ

ಎಂ. ಆರ್. ಶ್ರೀಕಂಠ ಶಾಸ್ತ್ರಿ, ಭಾರತೀ ಭವನಂ, ಚಾಮರಾಜಪೇಟೆ, ಬೆಂಗಳೂರು ಸಿಟಿ



ಕೃಷ್ಣ ... ಕೇಶವ ಅಂಡ್ ಸನ್ಸ್,

ಕೋ-ಒಪರೇಟಿವ್ ಸೊಸೈಟಿಗಳಿಗೆ
ಬೇಕಾದ ನಮೂನೆಯ ಎಲ್ಲಾ ವಿಧದ
ಫಾರಂಗಳು, ರಜಿಸ್ಟರುಗಳು, ರಶೀದಿ ಪುಸ್ತಕಗಳು,
ಮತ್ತು ಇತರ ಫಾರ್ಮಗಳೂ ಮಾರಾಟಕ್ಕಿವೆ.
ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್.
ರಥಬೀದಿ, ಮಂಗಳೂರು

ಶಹಾ ಶಿವಾಜಿ ಹಿಂದೂ ರೆಸ್ಟೋರೆಂಟ್

ಮಂಗಳೂರಿನ ನೂತನ ಉಪಾಹಾರ ಗೃಹ

[illegible]

ಅನುಭವಸ್ಥರಿಂದ ತಯಾರಿಸಲ್ಪಡುವವು

ಒಮ್ಮೆ ದಯ ಮಾಡಿ, ಪರೀಕ್ಷಿಸಿ ತೃಪ್ತಿ ಪಡೆಯಿರಿ.

[illegible]

Seventyseven Years!

Two generations of approved service enables us to pick and choose what is cheap, lasting & good to suit the pockets & the tastes of our longstanding wide circle of



CUSTOMERS
who know our

Premier House for Swadeshi.
Mill Yarns—Handloom Cloths,
Dhoties - Sarees—Chintzes etc

Shrinivas Ranga Pai,
Sawkar Mahal,
Car Street, MANGALORE.

EDITED, PRINTED & PUBLISHED BY V S KUDVA AT THE SHARADA PRESS, MANGALORE

ಸ್ವದೇಶಾಭಿಮಾನಿ.

(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೭ರಲ್ಲಿ ಸ್ಥಾಪಿತವಾದುದು.)

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ತಾ । ಗರವ ಮಥಿಸಲು ಸುರರಿಗವರಿಂ । ಪರುಷವಾಯಿತೆ! ಮತ್ತೆ ವಿಷವ ಸುಡುಕ ಬರುತಿರುವ ॥
ಗರಲಕವರಂಜದರೆ! ಸುಧೆಯನು । ದುರಿತು ಕೃಷ್ಣದ್ರರ ತೆರದಿ ಕುಳಿತರೆ । ತೆರಳೆ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

(Oldest Kanarese Weekly in South Kanara)

ಪುಸ್ತಕ ೨೮.	ಮಂಗಳೂರು, ೩೦. ಎನೆ ಶುಕ್ರವಾರ ಮಾರ್ಚ ೧೯೩೪	(2-3-'34)	ಸಂಚಿಕೆ ೯

THE CANARA BANKING CORPORATION, UDIPI, LTD.

(Incorporated in British India)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI, S K **Branches:—Coondapoor, Mangalore, Shimoga & Madras.**

ಹೆಡ್ ಆಫೀಸು:—ಉಡುಪಿ, ದಕ್ಷಿಣ ಕನ್ನಡ ಶಾಖೆ—ಕುಂದಾಪುರ, ಮಂಗಳೂರು, ಶಿವಮೊಗ್ಗ ಮತ್ತು ಮದ್ರಾಸು

Authorised Capital Rs 3,50,000- Paid up Capital Rs- 2,25,000-

ನಿಯಮಿತ ಮೂಲಧನ ರೂ 3,50,000- ಚಂದಾ ಕಾಳರಿಕ್ಕೆ ಅರ್ಪಿಸಿದ ವ ಪತ್ತಿದ ಮೂಲಧನ ರೂ 2,25,000-

STATEMENT OF ASSETS & LIABILITIES AS ON 31ST JANUARY 1934.

Capital and Liabilities.	Rs	Property and Assets	Rs
1 Paid up Capital	Rs 2,25,000 0 0	1 Bank Premises Buildings, Furniture etc Rs	65 457-10 0
2 Reserve and other funds	" 2,34,562-10 11	2 Investment on Gvt securities	" 4,44,168 5 6
3 Deposits	22,56 659 4 10	3 Authorised Investments	23 00,980-0 11
4 Due to Bankers	, 82 879 7 4	4 Bills for collection	13 596 12 7
5 Sundries	" 1 00827 11 5	5 Sundries	" 49,501 13 8
6 Bills per contra	13 596-12 7	6 Cash on hand & with bankers	45 521 4 2
Total	29 19 225 15 1	Total	29,19,225 15 1

UDIPI 6-2-'34

N. ANANDA RAO
Manager

(Regd.)

ಅಮೃತಾಂಜನ.

ಇದು ಕೆಟ್ಟ ಶಿರೋವೇದನೆ, ಕತ್ತುಕೊಡುವ ವಾತ, ಧಾಡಿ ನೋವು, ವಿಶೇಷ ಉಳುಕು, ಅಸಹನೀಯ ಹಲ್ಲುನೋವು, ವಿಪರೀತ ಛಳಿಯೆ. ಬಹು ಶೀತ, ಸಹಿಸಲಸದಳವಾದ ಚಳಿ, ಕೈಕಾಲು ಮರಗಟ್ಟುವುದು, ಉಂಬಾಗೊ ಮೊದಲಾದ ಎಲ್ಲಾ ತರದ ಬೇನೆಗಳನ್ನೂ ಅತೀ ಶೀಘ್ರದಲ್ಲೇ ಗುಣಪಡಿಸುತ್ತದೆ ಎಲ್ಲೆಲಿಯೂ ಮಾರಲ್ಪಡುತ್ತಿದೆ

ರಿಂಗ್‌ವರ್ಮ್ ಮುಲಾಮು—ಇದು ರಿಂಗ್‌ವರ್ಮನ್ನೂ ಕಜ್ಜಿಯನ್ನೂ ಇನ್ನಿತರ ಚರ್ಮರೋಗಗಳನ್ನೂ, ದುರ್ಗಂಧ ಸಂಮುಟ್ಟಿಸುವುದ ರೊಳಗೆ ಗುಣಪಡಿಸುತ್ತದೆ

ಡಬ್ಬಿ 1ಕ್ಕೆ 6 ಆಣೆ ಡಜನಿಗೆ ರೂ 3—8—0 ಅಂಚೆವೆಚ್ಚ ಪ್ರತ್ಯೇಕ

ಅಮೃತಾಂಜನ ಡಿಪೋ.

ಮದರಾಸು ಮತ್ತು ಬೊಂಬಾಯಿ.

ಬೊಂಬಯಿ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

ಸ್ಥಾಪಿತವಾದ್ದುದು ಬೊಂಬಾಯಿ. 1908ರಲ್ಲಿ.

ಚೆಯರ್‌ಮಾನ್_ಸರ್ ಲಲೂಭಾಯ್ ಶ್ಯಾಮಲದಾಸ್, ಕೆಟಿ ಸಿ ಐ. ಇ ಕೆ ಬಿ

ಜೀವವಿಮೆಯ ಪದ್ಧತಿಯಲ್ಲಿ ಅತ್ಯುತ್ಕೃಷ್ಟವಾಗಿರುವ ಎಲ್ಲ ಸೌಕರ್ಯಗಳನ್ನೂ ಈ ಸಂಸ್ಥೆಯು ಒದಗಿಸಿ ಕೊಡುತ್ತದೆ- ಕಾಲೋಚಿತವಾದ ಅವಶ್ಯಕತೆಗಳಿಗೊಪ್ಪುವ ಸರ್ವೋತ್ತಮವಾದ ಯೋಜನೆಗಳು। ಸ್ತ್ರೀಯರ ಜೀವವಿಮೆಯನ್ನೂ ಸ್ವೀಕರಿಸಲಾಗುತ್ತದೆ

ಸಂಯುಕ್ತ ಜೀವನ ವಿಮಾ ಪದ್ಧತಿಯು ಇದರದೊಂದು ವೈಶಿಷ್ಟ್ಯವೇ'

ಏಜನ್ಸಿಯ ನಿಯಮಗಳು ಬಹಳ ಉದಾರ! ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ.— ಯೋಗ್ಯ ಗೃಹಸ್ಥರಿಗೆ ಅತ್ಯುತ್ತಮ ಸಂದರ್ಭ!

ಕೊಟ್ಟಿಕಾರ್ ಬ್ರದರ್ಸ್, ಮದ್ರಾಸು ಶಾಖೆಯ ಕಾರ್ಯದರ್ಶಿಗಳು. ಮತ್ತು ಬೊಂಬಯಿ ನಗರಕ್ಕೂ, ನಗರದ ಆಸುಪಾಸಿಗೂ ಮುಖ್ಯ ಏಜೆಂಟರುಗಳು

ಆಫೀಸುಗಳು:—

ಮದ್ರಾಸು	ಬೆಂಗಳೂರು.	ಮಂಗಳೂರು	ಬೊಂಬಯಿ.	ಉಡುಪಿ.
ಪೋಸ್ಟ್ ಬಾಕ್ಸ್ ನಂಬ್ರ 337	ವಿಶ್ವೇಶ್ವರಪುರಂ ಸರ್ಕಲ್	ಕಾರ್ಪೊರೇಶನ್ ಬಿಲ್ಡಿಂಗ್,	ಇನ್ಶೂರೆನ್ಸ್ ಬಿಲ್ಡಿಂಗ್	ದಕ್ಷಿಣ ಕನ್ನಡ,
ಮೌಂಟ್ ರೋಡ್	ಬೆಂಗಳೂರು ಸಿಟಿ	ಕಾರ್‌ಸ್ಟ್ರೀಟ್.	ಲಾಮಿಂಗ್ಟನ್ ರೋಡ್.	

ನಿಮ್ಮ ಕುಟುಂಬಕ್ಕೆ ಸದಾರೋಗ್ಯ

ನಿಮ್ಮ ಮನೆಯಲ್ಲಿ ಬೆಳಗ್ಗೆ ಓವಲ್ಟಿನ್ನನ್ನು ದಿನನಿತ್ಯದ ಪಾನೀಯವನ್ನಾಗಿ ಮಾಡಿರಿ. ನಿಮ್ಮವರ ಚೈತನ್ಯ ಬಲಗಳನ್ನು ಇದು ದಿನೇ ದಿನೇ ವೃದ್ಧಿಸುತ್ತದೆ. ಇದು ಪೂರ್ಣ ಮತ್ತು ಸಮತೂಕದ ಆಹಾರ. ಇದನ್ನು ಪ್ರಕೃತಿ ಸಿದ್ಧವಾದ ಟಾನಿಕ್ ಆಹಾರಗಳಿಂದ ತಯಾರಿಸಲಾಯಿತು. ... ಆರೋಗ್ಯ ಶಕ್ತಿಗಳನ್ನು ಹೆಚ್ಚಿಸುವುದಕ್ಕಾಗಿ ಬೇಕಾದ ಎಲ್ಲಾ ಶಕ್ತಿಗಳನ್ನು ಇದು ಧಾರಾಳವಾಗಿ ಕೊಡುತ್ತದೆ.

ಬೆಳಿಗ್ಗೆ ರಾತ್ರೆಯೂ ಒಂದು ಕಪ್ ಓವಲ್ಟಿನ್ ... ಇದು ಚೈತನ್ಯವನ್ನು ... ಶಕ್ತಿಯನ್ನು ಕೊಡುತ್ತದೆ ... ರಾತ್ರಿಯ ನಿದ್ರೆಯನ್ನು ಕೊಡುತ್ತದೆ. ನಿಮ್ಮ ಕುಟುಂಬವು ಇದರಿಂದ ದೀರ್ಘಾರೋಗ್ಯ ಹೊಂದಲಿ.

OVALTINE

ಮೆದುಳು, ನರ ಮತ್ತು ದೇಹವನ್ನು ವೃದ್ಧಿಸುತ್ತದೆ

ಕಯಾರಿಯಲ್ಲಿ ... ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಸಿಗುತ್ತದೆ

ಏಜಂಟ್ಸ್—ಜೇಮ್ಸ್ ರೈಟ್ ... ರೀನ್ ಸ್ಟ್ರೀಟ್ ಕಲ್ಕತ್ತ ಮತ್ತು ಬೊಂಬಾಯಿ ದ್ವಾರಗಳಲ್ಲಿ

OV/...

ಕ್ಷಯಕ್ಷೀಣಾದಿಗಳಿಗೆ

ಚ್ಯವನಪ್ರಾಶಾನ ಲೇಹ

ಪ್ರಸೂತಿ ರೋಗಾದಿಗೆ

ದಶಮೂಲಾರಿಷ್ಟ

(ಕಸ್ತೂರಿ ಮಿಶ್ರಣ)

ಸಮಸ್ತ ವಾತರೋಗಗಳಿಗೆ

ಮಹಾನಾರಾಯಣ ತೈಲ.

ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ

ಡೊಂಗರಕೇರಿ ರಸ್ತೆ, ಮಂಗಳೂರು

+ + + +

ಸ್ವದೇಶಾಭಿಮಾನಿ

ಪತ್ರಿಕೆಯ ಚಂದಾದಾರರು ಪತ್ರವ್ಯವಹಾರಗಳಲ್ಲಿ ತಮ್ಮ ಚಂದಾ ನಂಬರುಗಳನ್ನು ನಮೂದಿಸಬೇಕು. ಅವುಗಳಿಲ್ಲದ ಪತ್ರಗಳಿಗೆ ಸರಿಯಾದ ಕ್ರಮ ಸಿಗುವುದಿಲ್ಲ.

ಮೆನೇಜರ್

ನೋಟೀಸು

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ ಕೋರ್ಟಿನಲ್ಲಿ

O S No 532 1933

ಗುರುಪುರ ರಗುನಾಥ ಶೈ—ವಾದಿ

1 ಅಬ್ಬುಸಾಹೇಬ 2 ಅಲ್ಲಿಸಾಹೇಬ ಪಟೇಲ ಹಮ್ಮದ ಸಾಹೇಬರ ಮಕ್ಕಳು—ಪ್ರತಿವಾದಿ

ಮಂಗಳೂರು ತಾಲೂಕು ಮೂಡು ಪೆರಾರ ಗ್ರಾಮದಲ್ಲಿರುವವರು

ಪ್ರತಿವಾದಿಗಳು ವಾದಿಗೆ ಬರೆದ ತಾ 18-10-1930 ರಲ್ಲು ರೂಪಾಯಿ 121 ಕ್ಕೆ ಬರಕೊಟ್ಟ ಡಿಮಾಂಡ ಪ್ರೋಮಿಸರಿ ನೋಟಿನ ಅಸಲು ಬಡ್ಡಿ ಖರ್ಚು ರೂಪಾಯಿ 166-3-0 ಅರ ವಸೂಲಿಗೆ ... ತಾ 28-3-1934 ಕ್ಕೆ ಮೇಲೆ ಕಾಣಿಸಿದ ಕೋರ್ಟಿನಲ್ಲಿ ತನ್ನಿಗೆ ಇಡೋಣಾಗಿಯದೆ ಪ್ರತಿವಾದಿರು ಸದ್ರಿ ದಿವಸ ಹಗಲು 10 ಘಂಟೆಗೆ ಹಾಜರು ಆಗದೆ ಇದ್ದರೆ ಸದ್ರಿಯವರ ಗೈರು ಹಾಜರಿಯಲ್ಲಿ ಸದ್ರಿ ವ್ಯಾಜ್ಯವು ತನ್ನಿಯಿಂದ ತೀರ್ಮಾನವಾಗುವದೆಂತ ಈ ಮೂಲಕ ತಿಳಿಸೋಣಾಗುತ್ತದೆ

Karkal, 21-2-1934.	A Santhayya Kamath, Pleader for Plaintiff

ಸಂತೋಷವಿಲ್ಲವೇ... ಗಾಂಧಿಯವರನ್ನು ... ಸ್ವಯಂಸೇವಕರು ... ಗಾಂಧಿಯವರನ್ನು ನೋಡುವ ಒಂದು ಸುಸಂದರ್ಭವನ್ನು ಕಳೆದುಕೊಂಡೆವಲ್ಲಾ ಎಂದು ಅವರ ಸಾಯ್ಬನಿಗೆ ಸಂತೋಷವೂ ಇಲ್ಲ! ದುಃಖವೂ ಇಲ್ಲ!

× × × ×

ಸಂತೋಷವಿಲ್ಲ ಏತ್ಯಕ್ಕೆವು ಘೋಷಣೆ ಪರೆ—ಜ್ವಾಲೋದಯ ಸಮಾಜದ ಕಡೆಯಿಂದ ಬಂದ ಸ್ವಯಂಸೇವಕರು ಮಹಾತ್ಮಾ ಗಾಂಧೀಜೀ ಕೈ! ವಂದೇ ಮಾತರಂ! ಎಂದೆಲ್ಲಾ ಜಯಕಾರ ಹಾಕಿ ಸ್ವರಾಜ್ಯವನ್ನು ಮುಕ್ತಿ ಹಿಂದೆ ದೂಡಿದರಲ್ಲಾ ಎಂದು.

× × × ×

ದುಃಖವಿಲ್ಲ ಏಕೆಂದರೆ—ಹೆಚ್ಚಿನ ಜನರಿಗೆ ಗಾಂಧಿಯವರನ್ನು ಸರಿಯಾಗಿ ಕಾಣಲಾಗದಿದ್ದರೂ ಮುಖಂಡರಾದರೂ ಅವರನ್ನು ಮನದಣಿಯೆ ಕಂಡು ಧನ್ಯರಾದರಲ್ಲಾ ಎಂದು.

× × × ×

ಮಹಾತ್ಮರ ಕಳೆಕೊಡಲು ಗದ್ದಲಗಳು ಕೂಡ ಹೆಚ್ಚಾಗಿ ಬಂದವರಿಗೆ ಹಲ್ಲಾದರೂ ಇರುವಂತೆ ತೋರುವುದಿಲ್ಲ. ಅಂತಹವರನ್ನು ಇನ್ನು ಯಾವಾಗ ಮಂಗಳೂರಲ್ಲಿ ನೋಡಲಿ? ಪ್ರತಿ ಅವರು ಇಲ್ಲಿಗೆ ಬಂದು ನಮ್ಮೂರನ್ನು ಪಾವನಗೊಳಿಸುವುದು ಎಂದು? ಎಂದು ಸಾಯ್ಬನ ಚಿಂತನೆ!

× × × ×

ಗಾಂಧೀಜೀಯವರು ನಮ್ಮೂರಿನಿಂದ ಕೆಲವು ನೂರು ರೂಪಾಯಿಗಳನ್ನು ಪಡೆದು ಹರಿಜನ ಕೇರಿಗಳನ್ನು ಸಂದರ್ಶಿಸಿದರಾದರೂ ತಮಗೇನೂ ಪ್ರಯೋಜನವಾಗಲಿಲ್ಲವೆಂದೇ ಹರಿಜನರ ದೂರು! ಸತ್ಯವು ತುಂಬಿರುವುದಿಲ್ಲವೇ ಇದರಲ್ಲಿ?

× × × ×

ಒಂದು ವಾರ್! ಎರಡು ವಾರ್!—ಮೂರು ವಾರ್! ಎಂದು ಮಹಾತ್ಮಾ ಗಾಂಧಿಯವರೇ ಸಾಮಾನುಗಳನ್ನು ಮೈದಾನ್ ಸಭೆಯಲ್ಲಿ ಏಲಂ ಹಾಕಿದರು! ಏಲಂನಿಂದ ಒಟ್ಟು ರೂ ೧೩೦ ದೊರೆಯಿತೆಂದರೆ ಮಂಗಳೂರವರ ಔದಾರ್ಯವೆಷ್ಟೆಂದು ನೀವೇ ಊಹಿಸಿಕೊಳ್ಳಿ

× × × ×

ಮಂಗಳೂರಿನ ನಾಗರಿಕರ ಪರವಾಗಿ ಮಹಾತ್ಮರಿಗೆ ೧೦೦೧ ರೂಪಾಯಿಗಳು ಸಮರ್ಪಿಸಲ್ಪಟ್ಟವು. ಈ ಥೈಲಿಯನ್ನು ಸ್ವೀಕರಿಸಿದ ಮಹಾತ್ಮರು ಒನ್ನು ಸಂತೃಪ್ತಿಯನ್ನು ತೋರಿಸಿದರೂ ಪ್ರತಿ! ಅಷ್ಟೊಂದು ಹೆಚ್ಚಾಗಿಲ್ಲವೆಂದು ಹೇಳಿದರು.

× × × ×

ಮಹಾತ್ಮರ ಆಗಮನಾರ್ಥವಾಗಿ ನಗರಸಭೆಯವರು ಮಾರ್ಗಗಳನ್ನು ನೀರಿನಿಂದ ತೊಳೆದಿದ್ದರು. ಪೋಲೀಸರೂ ಸಿದ್ಧರಾಗಿಯೇ ಇದ್ದರು.

× × × ×

ಮಹಾತ್ಮರ ದರ್ಶನದ ಕಳೆದ ವಾರದಲ್ಲಿ ಹೊರಗೆ ಬಂದ ಗಾಂಧಿ ಟೋಪಿಗಳೆಷ್ಟು! ಖಾದಿ ಅಂಗಿಗಳೆಷ್ಟು! ನಮ್ಮ ಜನರು ಅಷ್ಟಾದರೂ ಅಭಿಮಾನೋತ್ಸಾಹವನ್ನು ತೋರ್ಪಡಿಸಿದರಲ್ಲ! ಸಂತೋಷ. ನಮ್ಮ ಜಿಲ್ಲೆಯಲ್ಲಿ ಮಹಾತ್ಮರಿಮರು ಸನಾತನಿಗಳ ಪುಂಡಾಟಿಕೆಯೂ ಇಲ್ಲವೆಂಬುದು ಎಲ್ಲಕ್ಕಿಂತಲೂ ಸಂತೋಷಗೊಳ್ಳಬೇಕಾಗಿದೆ. ಇದಕ್ಕೆ ಅಗು ... ಪ್ರೋತ್ಸಾಹವಿಲ್ಲವೇ?

× × × ×

ಉಡುಪಿಯಲ್ಲಿ ಏನು ಪರಿಣಾಮವೆಂದು ಇನ್ನೂ ತಿಳಿದುಬಂದಿಲ್ಲ. ಶ್ರೀ ಕೃಷ್ಣರಾಯರ ಭಕ್ತರು ಗಾಂಧಿಯ ಮುಖವನ್ನು ನೋಡಲು ಕೂಡಾ ಹೋಗಿರುವುದಿಲ್ಲವೋ ಏನೋ!

× × × ×

ಮಹಾತ್ಮರಿಗೆ ಉಡುಪಿಯ ಪ್ರಸಿದ್ಧ ಶ್ರೀ ಕೃಷ್ಣದೇವಸ್ಥಾನವನ್ನು ನೋಡಲು ಆಶೆಯಿದ್ದಿರಬಹುದು. ಆದರೂ ಪಾಪ—ಬಹಿಷ್ಕಾರದವರು! ಅವರನ್ನು ಯಾರೂ ಕೇರ್ ಮಾಡುತ್ತಾರೆ?

× × × ×

ಹೀಗಿದ್ದರೂ ಉಡುಪಿಯವರು ಖಾದಿ ಗಾಂಧಿಯವರಿಗೆ ಸಲ್ಲದ ಮಾನಪತ್ರವನ್ನಾದರೂ ಅರ್ಪಿಸಿ ಅವರನ್ನು ಕಳಿಸಬಹುದಿತ್ತು. ಹಾಗೆ ಉಡುಪಿಯವರು ಮಾಡಿರಲಿಕ್ಕಿಲ್ಲ ತೋರುತ್ತೆ.

× × × ×

ಗಾಂಧೀಜೀಯವರು ಈ ಸಲ ಮೂರನೆಯದಾಗಿ ಬಂದಾಗ ನಮ್ಮ ಜಿಲ್ಲೆಯಲ್ಲಿ ಹರಿಜನರಿಗಾಗಿ ಒಂದು ದೇವಸ್ಥಾನವೂ ತೆರೆದಿಡಲ್ಪಡುವಂತಾಗಲಿಲ್ಲ. ಆದರೂ ಗಾಂಧೀಜೀ ಕೈ ಎನ್ನುವವರು ಕಡಿಮೆಯಿಲ್ಲ!

× × × ×

ಇನ್ನು ದಕ್ಷಿಣ ಕನ್ನಡದಲ್ಲಿ ಹರಿಜನರ ದೇವಸ್ಥಾನಪ್ರವೇಶವು ಗಾಂಧೀಜೀಯವರಿಂದ ಸಾಧ್ಯವೇ ಇಲ್ಲವೆಂದು ಸಾಯ್ಬನ ಅಭಿಪ್ರಾಯ! ಕಾರಣವೇನೆಂದು ನೀವೇ ಊಹಿಸಿಕೊಳ್ಳಿ!

• • • •

ಹಾಗೂ ತೆರೆಯಲ್ಪಡುವುದಾದರೆ ಅವುಗಳು ಶ್ರೀ ರಂಗಅಯ್ಯರ ಬಿಲ್ಲಿನ ಒತ್ತಾಯದ ಮೂಲಕವೇ ತೆರೆಯಲ್ಪಡಬೇಕಲ್ಲದೆ 'ದಮ್ಮಯ್ಯ' ಹಾಕಿ ಸಾಧ್ಯವಿಲ್ಲ! ಮಹಾತ್ಮಾ ಗಾಂಧೀಜೀ ಕೈ!

'ಸಾಯ್ಬ'

ಅನುಕ್ರಮಣಿಕೆ

ಅಗ್ರಲೇಖ

ಮಂಗಳೂರಿಗೊಂದು ಚೇಂಬರ್ ಆಫ್ ಕಾಮರ್ಸ್

ಸ್ಫುಟವಿಚಾರಗಳು . . . ೩

ಸೂಚನೆಗಳು, . . . ೪

ವರ್ತಮಾನ ಸಂಗ್ರಹಗಳು ೧೧

ಅಯ್ಯೋ – ಹೋಯಿತು!! ೨

ವಿವಿಧ ಸಮಾಚಾರಗಳು ೧೧

ದಕ್ಷಿಣ ಕನ್ನಡ—ಮಂಗಳೂರು, ಕಾಸರಗೋಡು, ಕುಂಬಳೆ, ಉಡುಪಿ, ಸುರತ್ಕಲ್. ೯

ಪತ್ರವ್ಯವಹಾರ ೧೩

ಮೂಲೆ ಮೂಲೆಗಳಿಂದ . . ೬

ದಕ್ಷಿಣ ಕನ್ನಡಕ್ಕೆ ಮಹಾತ್ಮರ ಆಗಮನ! ೩

ಇದ್ದುದು ಇದ್ದ ಹಾಗೆ! . . . ೧೦

ಸ್ವದೇಶಾಭಿಮಾನಿ.

ತಾ. ೨ನೇ ಶುಕ್ರವಾರ ಮಾರ್ಚಿ ೧೯೩೪.

ಮಂಗಳೂರಿಗೊಂದು ಚೇಂಬರ್ ಆಫ್ ಕಾಮರ್ಸ್

ಚೇಂಬರ್ ಆಫ್ ಕಾಮರ್ಸ್ ಎಂದರೆ ಒಂದು ದೊಡ್ಡ ಶಬ್ದ. ಕರ್ನಾಟಕದಲ್ಲಿ ಅದನ್ನು ತರ್ಜುಮೆ ಮಾಡಿದರೆ "ವರ್ತಕರ ಸಂಘ"ವೆಂದಾಗುತ್ತದೆ. ಇಂತಹ ಸಂಘವೊಂದು ಮಂಗಳೂರಿಗೆ ಅತ್ಯಗತ್ಯವಿದ್ದಿತೆಂದು ಈ ಮೊದಲೇ ನಾವು ಹೇಳಿದ್ದೇವೆ; ಈ ಬಗ್ಗೆ ಕೆಲವು ಮುಖ್ಯ ವರ್ತಕರೂ ಈ ಮೊದಲು ಪ್ರಯತ್ನಿಸಿದ್ದಾರಾಗಿಯೂ ತಿಳಿದು ಬರುತ್ತಿದೆ. ಆದರೆ, ಕಾರಣಾಂತರಗಳಿಂದ ವರ್ತಕರ ಸಂಘವು ಇಲ್ಲಿ ಸಂಘಟಿಸಲ್ಪಡಲಿಲ್ಲ.

ಆದರೆ ಈ ಬಾರಿಯ ಕೆಲವರ ಪ್ರಯತ್ನಗಳು ಹಿಂದಿನ ಪ್ರಯತ್ನಗಳಂತೆ ನಿರರ್ಥಕವಾಗಲಿಲ್ಲ. ಮಂಗಳೂರು ಬಂದರಿನ ಪ್ರಮುಖ ವರ್ತಕರು ಕೆಲವು ದಿನಗಳ ಹಿಂದೆ ಕೆನರಾ ಬ್ಯಾಂಕಿನ ಕಟ್ಟೋಣದಲ್ಲಿ ಕೂಡಿ ಈ ಸಂಘವನ್ನು ರಚಿಸಲು ನಿರ್ಧರಿಸಿದರು. ಮತ್ತು ಈ ಸಂಘದ ರಚನೆ (Constitution) ಯನ್ನು ತಯಾರಿಸುವರೆ ಒಂದು ಕಮಿಟಿಯನ್ನೂ ನೇಮಿಸಿದರು.

ಕೆನರಾ ಬ್ಯಾಂಕಿನ ಕಟ್ಟೋಣದಲ್ಲಿ ಕೂಡಿದ ಸಭೆಯಲ್ಲಿ ವರ್ತಕರ ಸಂಘದ ಅವಶ್ಯಕತೆಯ ವಿಷಯವಾಗಿ ಹಲವು ಪ್ರಧಾನ ವರ್ತಕರು ಭಾಷಣ ಮೂಲಕವಾಗಿ ಮಾತನಾಡಿರುವರು. ಹಾಗೂ ವರ್ತಕರ ಸಂಘವು ಅತ್ಯಂತ ಮುಖ್ಯವೂ, ಪ್ರಯೋಜನಕಾರಿಯೂ, ಸಮಾಜಕ್ಕೇನೇ ಹಿತಕಾರಿಯೂ ಎಂಬುವುದರಲ್ಲಿ ವರ್ತಕರಲ್ಲಿ ಯಾರಿಗೂ ಸಂದೇಹವಿಲ್ಲವೆಂಬುವುದು ಸ್ಪಷ್ಟವಾಯಿತು.

ಆಶ್ಚರ್ಯವೆಂದರೆ ಬಹಳ ವಿದ್ಯಾವಂತರೂ ಶಿಕ್ಷಿತರೂ ಎನ್ನಿಸಿಕೊಳ್ಳುವ ಮಂಗಳೂರು ಸಾಹುಕಾರರು ಈ ಸಂಘವನ್ನು ಈ ಮೊದಲೇ ರಚಿಸದೇ ಇದ್ದುದು. ಪ್ರಾಚೀನ ಕಾಲದಲ್ಲಿ ಡಿಮೊಕ್ರಸಿ, ಅರ್ಥಾತ್ ಸಾರ್ವಜನಿಕ ಸಂಸ್ಥೆಗಳು ಅಷ್ಟೊಂದು ಪ್ರಾಬಲ್ಯವಿಲ್ಲದೆ ಇದ್ದ ಸಮಯದಲ್ಲಿ, ಪ್ರಬಲನಾದ ಮತ್ತು ಪ್ರತಿಭಾಶಾಲಿಯಾದ ವ್ಯಕ್ತಿಗೇನೇ ಅಧಿಕಾರವೂ ಪ್ರಾಬಲ್ಯವೂ ದೊರೆಯುತ್ತಿತ್ತು. ಈಗಿನ ದಿನಗಳಲ್ಲಿ ಹಳೆಯ ಪದ್ಧತಿಗಳು ಹೋಗಿವೆ. "ಸಂಘೇ ಶಕ್ತಿ ಕಲೌಯುಗೇ" ಎಂಬ ಮಾತು ಈಗಿನ ದಿನಗಳಲ್ಲಿ ಅಕ್ಷರಶಃ ನಿಜವಾಗಿ ಕಾಣುತ್ತದೆ. ರಾಜ್ಯಾಡಳಿತದಿಂದ ಗ್ರಾಮದ ಸುಖಸಾಧನೆಗಳ ವರೆಗೆ ಎಲ್ಲವೂ ಸಂಘಗಳ ಮೂಲಕ ನಡೆಯುತ್ತಿದೆ. ಸಂಘಗಳಿಗೆ ಪ್ರಾಮುಖ್ಯತೆಯಿದೆ; ಅವುಗಳಿಂದ ಹೊರಡುವ ಅಭಿಪ್ರಾಯಗಳು ಸ್ವೀಕೃತವಾಗುತ್ತಿವೆ; ಅವುಗಳ ಚಳವಳಿಗಳು ಪರಿಣಾಮಕಾರಿಯಾಗುತ್ತಿವೆ.

ಆದುದರಿಂದ ಪ್ರತಿಯೊಂದು ವ್ಯಕ್ತಿಯೂ ತನ್ನ ಹಿತ ಸಾಧನೆಗಳನ್ನು ಸಂಘರಚನೆಯಿಂದ ಮಾಡುವುದು ಎಲ್ಲೆಲ್ಲಿಯೂ ಕಂಡು ಬರುತ್ತದೆ. ಪಾಶ್ಚಾತ್ಯರಲ್ಲಿ ಈ ತರದ ವ್ಯವಸ್ಥೆಯು ಪೂರ್ಣತೆಯನ್ನು ಹೊಂದಿರುತ್ತದೆ. ಅಲ್ಲಿ ಸಂಘಗಳಿಗೆ ಲೆಕ್ಕವಿಲ್ಲ. ಪ್ರತಿಯೊಂದು ಚಳವಳಿಯೂ ಸಂಘರಚನೆಯ ಮೂಲಕ ನಡೆಯುತ್ತಿದೆ.

ವ್ಯಾಪಾರವೆಂಬುದು ದೇಶದ ಜೀವಾಳ; ಅದು ಜೀವನಪ್ರಾಣ್ಯಸ್ವರೂಪ. ವ್ಯಾಪಾರವು ಕೆಟ್ಟು ಹೋದ ರಾಜ್ಯಗಳು ನಾಶವಾಗಿ ಹೋಗುತ್ತಿವೆ. ರಾಜ್ಯ—ರಾಜ್ಯಗಳೊಳಗಿನ ಮನಸ್ತಾಪಗಳಿಗೆ ವ್ಯಾಪಾರವೇ ಮೂಲಕಾರಣ—ಏಕೆಂದರೆ ಪ್ರತಿ ರಾಷ್ಟ್ರವೂ ವ್ಯಾಪಾರವನ್ನು ರಕ್ಷಿಸಲು ಯತ್ನಿಸಿ ಇತರ ರಾಷ್ಟ್ರಗಳನ್ನು ಆ ಬಗ್ಗೆ ನಿರೋಧಿಸಬೇಕಾಗುತ್ತದೆ. ಹಲವು ಘೋರ ಯುದ್ಧಗಳು ವ್ಯಾಪಾರದ ಬಗ್ಗೆ ಹೋರಾಡಲ್ಪಟ್ಟಿವೆ.

ಅಂದ ಮೇಲೆ ವ್ಯಾಪಾರದ ಪ್ರಾಮುಖ್ಯತೆಯನ್ನು ನಾವು ಬೇರೆ ಹೇಳಬೇಕಾಗಿಲ್ಲ. ಮಂಗಳೂರಿನ ಜೀವ ಕಳೆಯು ವ್ಯಾಪಾರದಲ್ಲಿ ಇದೆ. ಈಗ ಕೆಲವು ವರ್ಷಗಳಿಂದ ಮಂಗಳೂರು, ವ್ಯಾಪಾರದಲ್ಲಿ ತುಂಬಾ ತೊಂದರೆಗಳನ್ನು ಅನುಭವಿಸುತ್ತದೆ. ಇಲ್ಲಿ ವ್ಯಾಪಾರ ಸಂಘವು ಮೊದಲೇ ಇದ್ದುದಾದರೆ ಮಂಗಳೂರು ಬಂದರವನ್ನು ಅಭಿವೃದ್ಧಿಗೆ ತರಲು ಎಷ್ಟೋ ಸಾಹಸಪಡಬಹುದಿತ್ತು. ಈಗಲಾದರೂ ಸಂಘವು ರಚಿಸಲ್ಪಡುವುದು ಅಭಿನಂದನೀಯ.

ಆದರೆ ಸಂಘವು ರಚಿಸಲ್ಪಟ್ಟ ಮಾತ್ರದಿಂದ ಕೆಲಸವು ಕೈಗೂಡಲಿಲ್ಲ. ಸಂಘರಚನೆಯಿಂದ ಕೆಲಸದ ಆರಂಭವಾಯಿತಷ್ಟೇ ಮಾತ್ರ. ಒಂದರಿನ ವ್ಯಾಪಾರದ ಪರಿಸ್ಥಿತಿಯನ್ನು ಅವಲೋಕಿಸಲಿದೆ; ಹಿಂದಿನ ಪಾರಗಳನ್ನು ನೆನಪಿಗೆ ತರಲಿದೆ; ಮುಂದಿನ ಅಭಿವೃದ್ಧಿಗಳ ಮಾರ್ಗವನ್ನು ರಚಿಸಲಿದೆ; ಇದಕ್ಕೆಷ್ಟೋ ಕೆಲಸವಿದೆ. ಸಾಹಸದಿಂದಲೂ, ಉದ್ಯಮದಿಂದಲೂ ಈ ಸಂಘವನ್ನು ನಡೆಸಿದ್ದಲ್ಲಿ ಮಂಗಳೂರಿನ ಸಂಪದಭಿವೃದ್ಧಿಗೆ ಬಹಳ ಪ್ರಯೋಜನವಾಗುವುದರಲ್ಲಿ ಸಂದೇಹವಿಲ್ಲ.

ಸ್ಫುಟವಿಚಾರಗಳು.

ಮದ್ರಾಸು ಸರಕಾರದ ಬಜೆಟು

ಆಯ-ವ್ಯಯಗಳು ಮುಂದಣ ವರ್ಷ ಸಮತೂಕವಾಗಿ, ಕಂದಾಯ ಮಾಫಿ ಮಾಡಿದ ಕಾರಣ ಆಯದಲ್ಲಿ ಕಡಿಮೆಯಾಗಿದ್ದರೂ, ಸುಮಾರು ೧೫೪ ಲಕ್ಷ ರೂಪಾಯಿ ಕೂಡಿಕೆಯಾಗಿ ವ್ಯಯವು ೧೬೩ ಲಕ್ಷವೆಂದಾಗಿ, ೪ ಲಕ್ಷ ರೂಪಾಯಿ ಉಳಿತಾಯವಾಗಬಹುದು ಎಂದು ತೋರುತ್ತಿದೆ. ನೀರಾವರಿ ಕೆಲಸಗಳು ಸಾಲ ಪಾವತಿ ಪೆನ್ಶನುಗಳ ಬಗ್ಗೆ ಇತ್ಯಾದಿ ಖರ್ಚು ಹೆಚ್ಚುವುದಾದರೂ, ಆಬಕಾರಿ ಫೊರೆಸ್ಟ್ ಸಾಧಾರಣ ಆಡಳಿತದ ಇಲಾಖೆಗಳಲ್ಲಿ ಖರ್ಚು ಕಡಿಮೆಯಾಗುವುದರಿಂದಲೂ ವಿದ್ಯುಚ್ಛಕ್ತಿ ಮತ್ತು ಇತರ ಹೊಸ ಜಮಾಗಳಲ್ಲಿ ಕಡಿತ ವಿರುವುದರಿಂದಲೂ ಇಷ್ಟಕ್ಕೇ ಸಂಪೂರ್ತಿಯಾದೀತೆಂದು ಊಹಿಸಿ ಕಳೆದ ವಾರ ಬೊಂಬಾಯಿಯಲ್ಲಿ ಪ್ರಕಟವಾಗಿದೆ!

ಕ್ಷೌರಿಕರ ಪರಿಷತ್ತು

ಇದು ಪರಿಷತ್ತುಗಳ ಯುಗ ಬೊಂಬಾಯಿಯಲ್ಲಿ ಕ್ಷೌರಿಕರ ಪರಿಷತ್ತು ಸೇರಿತು. ಕ್ಷೌರಿಕರ ಸಹಕಾರವಿಲ್ಲದೆ ಯಾವ ಸಭೆ ಪರಿಷತ್ತುಗಳಿಗೂ ತಲೆ ಸರಿಯಿರದೆ ಅವು ಶೋಭಿಸಲಾರವು. ಹಾಗೆಂದು ಅವರ ಹೆಸರೇ ಪತ್ರಿಕೆಗಳಲ್ಲಿ ಬರುವುದಿಲ್ಲವಾದ ಕಾರಣ, ಈ ಮೂಲಕ ಅವರೇ ಪತ್ರಿಕೆಗಳಲ್ಲಿ ಬರುವ ಹಾಗಾಯಿತು. ಸೆಲೂನುಗಳು ಉಂಟಾಗಿ ಅವುಗಳಲ್ಲಿಲ್ಲದ ಕ್ಷೌರಿಕರ ತಲೆಬಗ್ಗಿತು. ಇದೀ ತಲೆ ೩ ಆಣೆ, ಗಡ್ಡ ಮಾತ್ರ ಒಂದಾಣೆ ಎಂದು ಸೆಲೂನುಗಳು ಹೇಳುವಾಗ ನಾಲ್ಕಾಣೆ ಎರಡಾಣೆಗಳ ಗಿರಾಕಿಗಳೇ ಇಲ್ಲವಾದರು ಅದುಕಾರಣ ೪ ಆಣೆ, ೨ ಆಣೆಗಳನ್ನ ಕಾಯಮ್ಮಾಗಿಡಬೇಕೆಂದು ನಿರ್ಧಾರ. ದೋಳು ತಲೆ ಇಲ್ಲದ ಬೊಂಬಾಯಿ ಜನಗಳು ಈಗ ಪರಿಷತ್ತು ಸೇರಿ ಈ ಹೆಚ್ಚಿನ ತೆರಿಗೆಯನ್ನು ನಿರೋಧಿಸುವ ನಿರ್ಧಾರ ಮಾಡಲು ಯತ್ನಿಸದೆ ಉಪಾಯವಿಲ್ಲ.

ಮುಸ್ಲಿಮ ಮುಖಂಡರು

ಸರ್ ಆಗಾಖಾನರು ತಿಲ್ಲಿಗೆ ಹೋದುದೇ, ಮುಸ್ಲಿಮ ಕೊನ್ಫರೆನ್ಸಿನ ಕೃ ನ ರ ಜನೆಯಾಯಿತು ಚಿತ್ತಾರಿಯ ನವಾಬರೇ ಅಧ್ಯಕ್ಷರು; ಎರಡು ಸಲ ಯುಕ್ತಪ್ರಾಂತ್ಯದ ಗವರ್ನರರಾಗಿರುವ ಈ ನವಾಬರು ಅಧ್ಯಕ್ಷರಾಗಿ ಬರಗಿದ್ದುದನ್ನು ತಿಳಿದರೆ ಕೊನ್ಫರೆನ್ಸಿನ ಮಾಯಾಪಾಶಗಳು ಯಾವ ಕಡೆಗೆ ಇವೆ ಎಂದು ಊಹಿಸಬಹುದು. ಇವರು ಅಖಂಡ ಮುಸ್ಲಿಮ ಪಕ್ಷಪಾತಿಗಳಲ್ಲದುದರಿಂದ ದೇಶೀಯ ಭಾವನೆಯ ಕಡೆಗೆ ಇವರು ಒಲಿಯಬಹುದು; ಸದಾ ಸರ್ವತ್ರವೂ ಸಾಮಾಜಿಕ ಭೇದಭಾವಗಳು ಇರಬಾರದೆಂದೂ ಇವರು ನಂಬಬಹುದು; ಪ್ರತ್ಯೇಕ ಪ್ರಾತಿನಿಧ್ಯ ಕ್ರಮ ಈಗ ಸದ್ಯಕ್ಕೆ ಮಾತ್ರ ನಿರುಪಾಯವಾಗಿ ಅಗತ್ಯ ತೋರಿತು ಶಾಶ್ವತವಾಗ ಬಾರದೆಂದೂ ಅಪೇಕ್ಷಿಸಬಹುದು; ಮುಸ್ಲಿಮ ಲೀಗ್ ಸಂಘಗಳು ಇನ್ನು ಎರಡು ಇವೆ. ಅವನ್ನು ಈ ಪರಿಷತ್ತಿಗೆ ಸೇರಿಸಲು ಸಾಧ್ಯವಾಗಿಲ್ಲವಾದರೂ ಮುಂದೆ ಸಾಧ್ಯವಾಗಬಹುದು; ಮಿ| ಜಿನ್ನಾರವರ ಅಂಕೆಯಲ್ಲಿ ಮುಸ್ಲಿಮ ಲೀಗ್ ಸಂಘವು ಹಾಗೆಯೇ ಇದ್ದು ಮುಂದೆ ಸೇರುವುದಾದರೆ ಕೊನ್ಫರೆನ್ಸು ಇದನ್ನು ಸೇರಿಸಿ ಕೊಳ್ಳಬಹುದು;—ಇಷ್ಟು 'ಬಹುದು'ಗಳ ಮೇಲೆ ನಿರ್ಧಾರವಾಗಿ ಚಿತ್ತಾರಿಯ ನವಾಬರು ಬಹದ್ದೂರರಾಗಿಯೂ ಇರಬಹುದು.

'ಭೂಕಂದಾಯದಲ್ಲಿ ರಿಯಾಯತಿ ಇಲ್ಲ;'

ಎಂಬ ಅರ್ಥವು ಸ್ಪಷ್ಟವಾಗುವಂತೆ ಅಲಂಕಾರಿಕ ಶಬ್ದಗಳಿಂದ ಮದರಾಸು ಕೌನ್ಸಿಲಿನ ಪ್ರಾಂತಿಕ ಪ್ರತಿನಿಧಿಗಳೆಲ್ಲರಿಗೆ ಸರಕಾರದ ಸಚಿವರಿಂದ ರಮ್ಯವಾದ ಭಾಷಣ ಶ್ರವಣದ ಆನಂದ ದೊರೆಯಿತು. ಉಳಿತಾಯವನ್ನು ತೋರುವ ಆಯ-ವ್ಯಯದ ಪಟ್ಟಿಯನ್ನು ಮುಂದಿರಿಸಿ, ಮುಂದಿನವರಿಗೆ (ಅಧಿಕಾರಕ್ಕೆ ಬರುವವರಿಗೆ) ಸರಕಾರದ ಆರ್ಥಿಕ ಅಡಿಗಟ್ಟನ್ನು ಬಲಪಡಿಸಿಕೊಟ್ಟಿದ್ದೇ ಮಹದುಪಕಾರವೆಂದು ಸರ್ ಪಾತ್ರೋಗಳವರ ಒಂದು ಸಮಾಧಾನ ವಾಕ್ಯ ವಾತಾವರಣದಲ್ಲಿ ಧ್ವನಿಸಿತು! ಅತಿವೃಷ್ಟಿ-ಅನಾವೃಷ್ಟಿಗಳ ದೆಸೆಯಿಂದಲೂ ಧಾನ್ಯದವಸಗಳ ಧಾರಣೆ ಇಳಿಕೆಯಾದ ಕಾರಣದಿಂದಲೂ ಸೇಕಡಾ ಇಪ್ಪತ್ತರೂ ಭೂಕಂದಾಯ ರಿಯಾಯತಿಯು ಅತ್ಯಗತ್ಯವೆಂದು ಹೆಚ್ಚಿನ ಪ್ರತಿನಿಧಿಗಳು ಸರಕಾರಕ್ಕೆ ಉಚಿತ ಪಡಿಸಲೆಳಸಿದ ಶ್ರಮವು ವ್ಯರ್ಥವಾಯಿತು. "ಸರಕಾರಿ ನೌಕರರ ಸಂಬಳದಲ್ಲಿ ಸೇಕಡಾ ೫ರ ಕಡಿತಾಯದಿಂದ ಹೆಚ್ಚಿನ ಪ್ರಯೋಜನವಿಲ್ಲದ ಕೇವಲ ೧೫ ಲಕ್ಷ ಮಾತ್ರ ಉಳಿತಾಯವಾಗುವುದೆಂದೂ ಭೂಕಂದಾಯದಲ್ಲಿ ಸೇಕಡಾ ೭॥ಯಷ್ಟು ರಿಯಾಯತಿ ತೋರಿಸಿದರೆ ೧೩೩ ಲಕ್ಷದ ಮಹತ್ತಾದ ನಷ್ಟವಾಗುವುದೆಂದೂ" ಅರ್ಥ ಸಚಿವರು ಚಮತ್ಕಾರವಾಗಿ ನುಡಿದು ತೋರಿಸಿದುದರ ಮೇಲೆ ಬ್ಯುರೋಕ್ರಸಿಯ ನಿರ್ದಯ ಅಂತರ್ಯವನ್ನು ಪ್ರಕಟಪಡಿಸಿದಂತಾಯಿತಲ್ಲದೆ ನಿಜವಾದ ಜವಾಬ್ದಾರೀ ಸರಕಾರಕ್ಕಾಗಿ ಪ್ರತಿಯೊಬ್ಬ ವರ್ಗದಾರನೂ ಹಾತೊರೆಯುವಂತಾಯಿತೆಂದು ಹೇಳಬೇಕಾಗಿದೆ. ಜವಾಬ್ದಾರೀ ಸರಕಾರವು 'ಅಪೂರ್ವ' ಯಾ 'ಅಬಲ'ವಾಗಿ ಅಧಿಕಾರವನ್ನು ನಡೆಯಿಸಿದರೂ ಜನತೆಯ ಕೂಗನ್ನು ಕೇಳಿ ತಿರಸ್ಕರಿಸುವಷ್ಟು ಅಲಕ್ಷ್ಯಭಾವವನ್ನು ತಾಳದು. 'ಉಳಿತಾಯ'ವೆಂದು ಸಂತೋಷದಿಂದ ನುಡಿದ ಸರಕಾರವು, ಅದನ್ನು ಭೂಕಂದಾಯ ರಿಯಾಯತಿ, ಆರೋಗ್ಯ ಪಾಲನೆಯ ಸುವ್ಯವಸ್ಥೆ, ಶಿಕ್ಷಣದ ಹೆಚ್ಚಿನ ಸೌಕರ್ಯ ಇವುಗಳಲ್ಲಿ ವಿನಿಯೋಗಿಸಲಾರದಾದರೆ,—'ಧನಸಂಗ್ರಹವಿದ್ದು ಮುಮೂರ್ಷು ಪುತ್ರನಿಗೆ ಔಷಧೋಪಚಾರ ನಡೆಸದೆ ಕೊಲ್ಲಗೊಟ್ಟ ಕೃಪಣನಂತಾಗುವುದು' ಎಂದು ಪ್ರತಿನಿಧಿಗಳೊಬ್ಬರು ಹೇಳಿದ ಮಾತಿನ ಸತ್ಯತೆಯು ರುಜುವಾತಿಗಾಗಿ ವಿಷಾದಿಸಬೇಕಾಗುವುದು.

ಬೊಂಬಾಯಿಯ ಕಥೆಯೇನು?

ಅದೇ!—'ಉಳಿತಾಯ ಪೆನ್ನಪಷ್ಟಕ್ಕೆ ಅಂಕಸಂಖ್ಯೆಗಳನ್ನು ತೋರಿಸಲಾರದ ಅರ್ಥ ಸಚಿವರು ಆಯ-ವ್ಯಯದ 'ಸಮತೂಕ'ವನ್ನು ಪ್ರದರ್ಶಿಸಿದರು. ರೈತರ ಸಂಕಷ್ಟಗಳನ್ನು ಲಕ್ಷಿಸಿ ಈ ಅಂಕೆ-ಸಂಖ್ಯೆಗಳನ್ನು ತೋರಿಸುದರಿಂದ ಆರ್ಥಿಕ ಸ್ಥಿತಿಯು ಸುಧಾರಿಸಿದೆಯೆನ್ನುವ ಬದಲಾಗಿ ಮತ್ತಷ್ಟು ಹೀನಸ್ಥಿತಿಗೆ ಇಳಿದಿದೆಯೆಂದು ತೋರಿದಂತಾಯಿತೆಂದೂ, 'ಆವಶ್ಯಕವಾದ ರಿಯಾಯತಿಗಳ ಕಡೆಗೆ ಅಗಣ್ಯಭಾವವನ್ನು ಪ್ರದರ್ಶಿಸಿ ತೋರಿದ ಈ ಆಯ-ವ್ಯಯದ 'ಸಮತೂಕ'ದ ಸಂಖ್ಯೆಗಳು ಆಯವ್ಯಯವೇ ಹೊಟ್ಟಿಗಿಡತಕ್ಕುದಿತ್ತೆಂಬುದನ್ನು ಸೂಚಿಸುವವೆಂದೂ ಮೆಂಬರರು ನಿದರ್ಶಕ್ತಿಯಾಗಿ ನುಡಿದರು. 'ಮಿತವ್ಯಯ' ಸುಗುಣವನ್ನು ಪ್ರಜಾಕೋಟಿಯು ಸರಕಾರದಲ್ಲಿ ನಿರೀಕ್ಷಿಸುವುದು ಸಹಜವಾದರೂ ಅವಶ್ಯವೆಂದು ಕಂಡಲ್ಲಿ ಸದ್ವಿನಿಯೋಗ ಮಾಡದೆ (ಅಥವಾ ಅತಿ ಕಡಿಮೆ ವ್ಯಯ ಮಾಡಿ) ಅನಿವಾರ್ಯವಲ್ಲದ ಕಡೆಯಲ್ಲಿ ಅತಿವ್ಯಯ ಮಾಡಿದ ಚಾತುರ್ಯವು ಶ್ಲಾಘ್ಯವಾಗದು; ಮಿತವ್ಯಯವೆನಿಸದು. ಆಯ-ವ್ಯಯದ ಪಟ್ಟಿಯನ್ನು ಮುಂದಿರಿಸುತ್ತ ಅರ್ಥ ಸಚಿವರು 'ವಿರಾಮದ ವಾದ-ಸುದ್ಯಭಾವದ ಕಾರ್ಯನಿರ್ವಹಣದಲ್ಲಿ ಸಹಕಾರವನ್ನು ಬೇಡಿದುದನ್ನು ಯಾರೂ ತಿರಸ್ಕರಿಸಲಾರರಾದರೂ, ಪ್ರಜಾಕೋಟಿಯ ಸುಖ-ಸಂಪತ್ತುಗಳ ಕಡೆಗೆ ವಿಶೇಷ ಲಕ್ಷ್ಯ ಕೊಟ್ಟು ಅವರ ಸಂಪದಭಿವೃದ್ಧಿಯ ಕಾರ್ಯಗಳಲ್ಲಿ ಅತಿವ್ಯಯವನ್ನಾದರೂ ಮಾಡಲು ಹಿಂಜರಿಯದ ಸರಕಾರಕ್ಕೆ ಎಲ್ಲ ಕಡೆಗಳಿಂದಲೂ ಸಹಕಾರವು ತಾನಾಗಿಯೇ ಲಭಿಸುವುದೆಂಬುದನ್ನು ಸಚಿವರು ನೆನಪಿನಲ್ಲಿಡಬೇಕಾಗಿದೆ. 'ಹಣ ಹಣ'ವೆಂದು ಮುತ್ತೂ ಕೈಯೊಡ್ಡುವುದರ ಬದಲು ಜನರ ದಾರಿದ್ರ್ಯ, ನಿರಕ್ಷರತೆ, ನಿರುದ್ಯೋಗ, ರೋಗಾದಿಗಳ ನಿವಾರಣೆಗೆ ಸುಲಭೋಪಾಯಗಳನ್ನು ಕಂಡು ಹಿಡಿದು ವರ್ತಿಸಿದರೆ, ದೇಶದಲ್ಲಿ ಶಾಂತ ವಾತಾವರಣವು ಧೃತವಾಗಿ, ಧನಾಭಾವವು ನೀಗಿ, ಸರಕಾರವು ಬಲಗೊಳ್ಳುವದೆಂಬುದನ್ನು ಅರ್ಥಸಚಿವರು ಯೋಚಿಸುವರೇ!

[illegible]

(ಗ್ರಾಹಕರ ... ಮೂರು).

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]	ಸೂರ್ಯ: ಉ	ಅಸ್ತ
3	ಶನಿ	[illegible]	[illegible]	ಉತ್ತರಾ	[illegible]	[illegible]	6.48	6.39
4	ರವಿ	[illegible]	[illegible]	ಹಸ್ತ	[illegible]	[illegible]	6 47	6.39
5	ಸೋಮ	[illegible]	[illegible]	ಚಿತ್ತ	[illegible]	[illegible]	6.47	6.39
6	ಮಂಗಳ	[illegible]	[illegible]	ಸ್ವಾತಿ	[illegible]	[illegible]	6.46	6.39
7	ಬುಧ	[illegible]	[illegible]	ವಿಶಾಖಾ	[illegible]	[illegible]	6.45	6.39
8	ಗುರು	[illegible]	[illegible]	ಅನುರಾಧ	[illegible]	[illegible]	6 46	6.39
9	ಶುಕ್ರ	[illegible]	[illegible]	ಜ್ಯೇಷ್ಠ	[illegible]	[illegible]	.644	6 39

ಮಂಗಳೂರಿನ ವಾಯುಸ್ಥಿತಿ.

Date ತಾರೀಖು	Temperature. ಉಷ್ಣ (ಕಾವು)		Rainfall. ಮಳೆ	
	Maximum ಹೆಚ್ಚಾದದ್ದು	Minimum ಕಡಿಮೆ	ದಿನದ ಮಳೆ	ಒಟ್ಟು ಮಳೆ.
22	89 — 6	75 — 3	—	—
23	88 — 3	74 — 5	—	—
24	90 — 1	73 — 7	—	—
25	89 — 5	76 — 2	—	—
26	90 — 5	77 — 2	—	—
27	83 — 9	75 1	—	—
28	87 — 2	73 2	—	167-64

ಮಂಗಳೂರಿನ ಪೇಟೆ ಧಾರಣೆ.

ಜೀನಸು		ಇಂದ	ವರೆಗೆ
		ರೂ. ಆ.	ರೂ. ಆ.
ಹೊಸ ರಾಶಿ ಅಕ್ಕಿ	...	3 — 4	3 — 12
ಹೊಸ ಮುಸ್ಕಿ	...	4 — 8	4 — 10
ಹೊಸ ಗುಡ್ಡು	...	3 — 10	4 — 2
	...	—	—
ಊರ ಅಪ್ಪಲ್ ಬೆಲ್ಲಗೆ	...	4 — 4	5 — 4
ರಂಗೂನು ಬೆಳ್ತಿಗೆ ಗೋಣಿ ಒಳ್ಳೆ	...	5 — 2	5 — 12
ಎಲ್ಲೂರು ಬೆಳ್ತಿಗೆ ಮುಡಿ ಒಳ್ಳೆ	...	3 — 4	3 — 8
ಗೋದಿ ಗೋಣಿ ಒಳ್ಳೆ	...	10 — 0	12 — 8
ತೊಗರಿ ಗೋಣಿ ಒಳ್ಳೆ	...	9 — 0	10 — 8
ಹುರುಳಿ ಗೋಣಿ ಒಳ್ಳೆ	...	5 — 12	6 — 0
ಕಡಲೆ ಗೋಣಿ ಒಳ್ಳೆ	...	9 — 8	12 — 8
ತೊಗರಿಬೇಳೆ ಗೋಣಿ ಒಳ್ಳೆ	...	10 — 0	16 — 0
ಉದ್ದು ಗೋಣಿ ಒಳ್ಳೆ	...	7 — 0	7 — 10
ಹೆಸರು ಗೋಣಿ ಒಳ್ಳೆ	...	8 — 0	9 — 0
ಊರುಬೆಲ್ಲ ಖಂಡಿ ಒಳ್ಳೆ	...	32 — 0	37 — 8
ಉಪ್ಪು ಗೋಣಿ ಒಳ್ಳೆ	...	5 — 0	5 — 8
ಕೊಬ್ರಿ ಖಂಡಿ ಒಳ್ಳೆ	...	40 — 0	45 — 0
ಕೊಬ್ರಿ ಹಿಂಡಿ ಖಂಡಿ ಒಳ್ಳೆ	...	17 — 8	18 — 8
ಎಳ್ಳೆಂಡಿ ಖಂಡಿ ಒಳ್ಳೆ	...	23 — 12	25 — 0
ಕೊಬ್ರಿ ಎಣ್ಣೆ ಮಣ ಒಳ್ಳೆ	...	3 — 1	4 — 2
ಎಳ್ಳೆಣ್ಣೆ ಮಣ ಒಳ್ಳೆ	...	5 — 0	6 — 0
ಚಿಮಿಣಿಎಣ್ಣೆ ಪೆಟ್ಟಿಗೆ ಒಳ್ಳೆ	...	6 — 8	8 —
ಮೋರಿಸ ಸಕ್ಕರೆ ಮಣ ಒಳ್ಳೆ	...	3 — 10	3 — 11
ಹೊಸ ಮೆಣಸು	...	8 — 0	9 — 10
ಸಾಸಿವೆ ಮುಡಿ ಒಳ್ಳೆ	...	4 — 8	4 — 12
ಕಾಳುಮೆಣಸು ಖಂಡಿ ಒಳ್ಳೆ	...	130 — 0	130 — 0
ಯೇಲಕ್ಕಿ ಮಣ ಒಳ್ಳೆ	...	20 — 0	24 — 0
ಹೊಸ ಗೇರುಬೀಜ ಮುಡಿ ಒಳ್ಳೆ	...	2 — 8	3 — 0
ಕಪ್ಪುರ ಖಂಡಿ ಒಳ್ಳೆ	...	42 — 0	44 — 0
ಕಾಂಡ್ಲ ಹಗಲು ಮಣ ಒಳ್ಳೆ	...	10 — 0	10 — 2
ಕಾಂಡ್ಲ ಪಾತ್ರಗಳು ಮಣ ಒಳ್ಳೆ	...	13 — 0	14 — 8
ಜೀರಿಗೆ ಸೇರು ಒಳ್ಳೆ	...	14 — 12	15 — 0
[illegible] ಮಣ ಒಳ್ಳೆ	...	9 — 0	9 — 8
ಪದಸು ಒಳ್ಳೆ	...	20 — 2	21 — 4
ಮೆಣಸಿ ಹುಳಿ ಖಂಡಿ ಒಳ್ಳೆ	...	25 — 8	60 — 0
ನೇಟಿವ್ ಕಾಫಿ ಖಂಡಿ ಒಳ್ಳೆ	...	180 — 0	205 — 0
ಪ್ಲಾಂಟೇಶನ್ ಕಾಫಿ ಖಂಡಿ ಒಳ್ಳೆ	...	270 — 0	275 — 0
ಹಳೆ ಅಡಿಕೆ	...	110 — 0	125 — 0
ಹೊಸ ಅಡಿಕೆ	...	75 — 0	100 — 0

THE CANARA PUBLIC CONVEYANCE CO., LTD, MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪನಿ, ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯ ಕ್ಷೇತ್ರಗಳಿಗೆ ಹೋಗುವುವು. ಮೈಸೂರು, ಕೊಡಗು ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನ್ ಕೂಡಾ ಇರುವುದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ, ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವವರಾದರೆ ಪ್ರತಿದಿನವೂ ನಾಲ್ಕು ಸಾರಿ ಕಲ್ಯಾಣಪುರ ಮಾರ್ಗವಾಗಿಯೂ, 4 ಸಾರಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲುಪಿರಿ, ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 37 ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ, ಕಾರ್ಕಳ ಗೋಮಟೇಶ್ವರನ ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು 4 ಸಲ ಹೊರಟು ಎರಡೂವರೆ ತಾಸುಗಳ ಸಮಯದಲಿ ಕಾರ್ಕಳಕ್ಕೆ ತಲುಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ, ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ತಲ್ಪಬಹುದು.

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಬೆಳಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲುಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಪ್ರಾಚೀನ ಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಬೇಲೂರಿನ ಸೋಮನಾಥ ದೇವಾಲಯವನ್ನು ನೋಡಲು, ನೋಡಲಿಚ್ಛಿಸುವವರು, ಬೆಳಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ, ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದೂಸ್ಥಾನ, ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣ ಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ, ಮಂಗಳೂರಿನಿಂದ ಮಡಿಕೇರಿಗೆ 7 ಘಂಟೆಗಳೊಳಗೂ, ಕಡೂರಿಗೆ 12 ಘಂಟೆಗಳೊಳಗೂ, ಮೈಸೂರಿಗೆ 12 ಗಂಟೆಗಳೊಳಗೂ, ಸಕಲೇಶಪುರಕ್ಕೆ 8 ಗಂಟೆಗಳೊಳಗೂ, ಹಾಸನಕ್ಕೆ 10 ಗಂಟೆಗಳೊಳಗೂ, ಚಿಕ್ಕಮಗಳೂರಿಗೆ 8 ಗಂಟೆಗಳೊಳಗೂ, ಕೊಲ್ಲೂರಿಗೆ ಮತ್ತು ಗೋಕರ್ಣಕ್ಕೆ 1½ ದಿವಸದೊಳಗೂ ಶಿಮೊಗ್ಗಕ್ಕೆ 12 ಗಂಟೆ ತಲಪಬಹುದು. ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,
The Canara Public Conveyance Company Ltd., Mangalore

Chikmagalur Public Conveyance Motor Service.

CHIKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,

ಚಿಕ್ಕಮಗಳೂರು

ಮುಂಬಾಯಿಯಿಂದ – ಮಂಗಳೂರಿಗೆ

ಮಂಗಳೂರಿನಿಂದ – ಮುಂಬಾಯಿಗೆ.

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ

ಮಂಗಳೂರು — ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು – ಅನುಕೂಲ ಪ್ರಯಾಣ ಸೌಕರ್ಯಗಳು.

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ

ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ

ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ

ಚಿಕ್ಕಮಗಳೂರಿನಿಂದ — ಶಿವಮೊಗ್ಗಕ್ಕೆ, ಬೀರೂರಿಗೆ, ಕಡೂರಿಗೆ.
– ಮೂಡಗೆರೆಗೆ, ಸಕಲೇಶಪುರಕ್ಕೆ.
— ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
— ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ಮಿತವ್ಯಯದ ಪ್ರಯಾಣ! **ಉತ್ಸಾಹಕರ ಸೌಕರ್ಯ!**

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

ದ. ಕನ್ನಡಕ್ಕೆ ಮಹಾತ್ಮಾ ಗಾಂಧಿಯವರ ಆಗಮನ!!!

ಸಾವಿರಗಟ್ಟಳೆ ಜನರ ಭಕ್ತಿ ಪ್ರದರ್ಶನ!!!

ಮಡಿಕೇರಿಯಿಂದ:—

ಮಹಾತ್ಮಾ ಗಾಂಧಿಯವರು ತಾ. ೨೪ನೇ ಬೆಳಿಗ್ಗೆ ಮಡಿಕೇರಿಯಿಂದ ಪುತ್ತೂರಿಗೆ ಪರಿವಾರ ಸಮೇತ ತೆರಳಿದರು. ಸಂಪಾಜೆಯಲ್ಲಿ ಅವರನ್ನು ಸಾವಿರಾರು ಜನರು ರೂ. ೩೫-೪-೦ ಸಮೇತ ಬೀಳ್ಕೊಟ್ಟು ಅದೇ ಮಾರ್ಗವಾಗಿ ಬರುವಾಗ ಸುಳ್ಯದಲ್ಲಿ ಒಂದು ಸಾವಿರ ಜನರು ಅವರನ್ನು ಸಂದರ್ಶಿಸಿ ರೂ. ೫೫ನ್ನು ಕಾಣಿಕೆಯಾಗಿ ಅರ್ಪಿಸಿದರು. ೫೬ ರೂಪಾಯಿಗಳನ್ನು ಭೂಕಂಪ ನಿಧಿಗಾಗಿಯೂ ಅರ್ಪಿಸಿದರು.

ಪುತ್ತೂರಲ್ಲಿ:—

ಪುತ್ತೂರಿಗೆ ಮಹಾತ್ಮರು ಬಂದಾಗ ಸುಮಾರು ೬೦೦೦ ಜನರು ನೆರೆದು, ಅವರನ್ನು ಭಕ್ತಿಪೂರ್ವಕವಾಗಿ ಸ್ವಾಗತೀಕರಿಸಿದರು. ರೂ. ೬೧೭-೪-೪ ಮತ್ತು ಮಾನಪತ್ರಗಳ ಸಮರ್ಪಣೆಯಾಯಿತು. ರೂ. ೧೧೧ನ್ನು ಬಿಹಾರ್ ಭೂಕಂಪದ ಕುರಿತಾಗಿ ಅರ್ಪಿಸಲಾಯಿತು. ಪಂಚಾಯತ ಬೋರ್ಡು, ಹಿಂದೀ ಪ್ರೇಮಿ ಮಂಡಲ ಉಪ್ಪಿನಂಗಡಿಯವರ ಸಮರ್ಪಣೆ, ಬೆಳ್ಳಾರು ಯಕ್ಷಗಾನ ನಾಟಕ ಸಭಾ ಇವರ ಸ್ವಾಗತಗಳೂ, ವಿಸ್ತ್ರಿ, ಪೀಠಕಂಭಗಳವರ ಅರ್ಪಣೆಯೂ ನಡೆಯಿತು. ಮಹಾತ್ಮರು ಅವುಗಳೆಲ್ಲವನ್ನೂ ಸ್ವೀಕರಿಸಿ ಕರ್ನಾಟಕವನ್ನು ಶ್ಲಾಘಿಸಿ, ಕರ್ನಾಟಕವು ನಗಗಳ ದಾನದಲ್ಲಿ ಮುಂದೆಯೇ ಇದೆಯೆಂದೂ, ಹಣದ ಅಭಾವದ ಈ ವೇಳೆಯಲ್ಲಿ ಅರ್ಪಿತವಾದ ನಿಧಿಗಳು ಕಡಿಮೆಯಾಗಿಲ್ಲವೆಂದೂ, ಮಾನಪತ್ರದಲ್ಲಿ ಹೇಳಿದಂತೆ ಸಾರ್ವಜನಿಕರು ತಮ್ಮ ಹೃದಯಗಳನ್ನು ತನ್ನ ಪಾದಗಳ ಮೇಲೆ ಇಡುವುದಕ್ಕಿಂತ ಅವುಗಳನ್ನು ತನ್ನ ಶಿರದ ಮೇಲೆ ಇಟ್ಟರೆ ತಾನು ಅವುಗಳನ್ನು ಸಂತೋಷದಿಂದ ಧರಿಸಿ ಕೊಂಡೊಯ್ಯುವೆನೆಂದೂ ಹೇಳಿ, ಜನರ ಪ್ರೇಮವಾತ್ಸಲ್ಯವು ಹರಿಜನರ ಮೇಲೆ ಸದಾ ಇರಲೆಂದೂ ಹೇಳಿದರು. ಆ ಮೇಲೆ ಮಹಾತ್ಮರು ಹರಿಜನರಿಗೆ ಅಕ್ಕಿ ಹಂಚಿ ಅಲ್ಲಿಂದ ಬಂಟವಾಳಕ್ಕೆ ತೆರಳಿದರು.

ಬಂಟವಾಳದಲ್ಲಿ (ಮೀರಾ ಬೆನ್‌ರವರು.)

ನಮ್ಮ ಜಿಲ್ಲೆಯಲ್ಲಿ ಇದೀಗ ಪ್ರಥಮಬಾರಿಯದಾಗಿ ಮೀರಾಬೆನ್‌ರವರ ಭಾಷಣವನ್ನು ಕೇಳುವ ಸುಯೋಗವು ಬಂಟವಾಳದ ಭಗಿನಿಯರಿಗೆ ದೊರೆಯಿತು. ತಾ. ೨೪-೨-೩೪ನೇ ಅಪರಾಹ್ನ ೩ ಘಂಟೆಗೆ, ಗಾಂಧೀಜೀಯವರು ಬರುವ ಅರ್ಧ ತಾಸಿನ ಮೊದಲು ಮೀರಾಬೆನ್‌ರವರು ಆಗಮಿಸಿ, ಶ್ರೀ ವೆಂಕಟ್ರಮಣ ದೇವಾಲಯದೆದುರಿನಲ್ಲಿ ಏರ್ಪಡಿಸಿದ ಧರ್ಮಶಾಲೆಗೆ ಪ್ರವೇಶಿಸಿ, ಇವರ ಆಗಮನಾಕಾಂಕ್ಷಿಗಳಾಗಿ ನೆರೆದಿದ್ದ ಮಹಿಳಾ ವೃಂದವನ್ನುದ್ದೇಶಿಸಿ—ಅವಸರದಲ್ಲಾದರೂ ವಿಚಾರಣೀಯವಾದ ಚಿಕ್ಕ ಭಾಷಣ ಮಾಡಿದರು. ಸುಧಾರಣೆಗಳಿಗೆ ಸಂಭವವಾಗಿ ಇಂಬುಕೊಡುವ ಈ ಚಿಕ್ಕ ಬಂಟವಾಳದಲ್ಲಿ ಖಾದೀಧಾರಿಗಳು ಬಹ್ವಂಶದಲ್ಲಿರುವರೆಂಬುದನ್ನು ತಾನು ಕೇಳಿರುವೆನೆಂದೂ, 'ಶುದ್ಧ ಖಾದಿಯೆಂದರೆ ಕೈನೂಲಿನಿಂದ ಕೈಮಗ್ಗಗಳಲ್ಲಾದ ಅರಿವೆ'ಯೆಂಬುದನ್ನು ಮರೆಯದೆ ಮುಂದಕ್ಕಾದರೂ ಎಲ್ಲರೂ ಖಾದಿಗೆ ಪುರಸ್ಕಾರವನ್ನು ಹೆಚ್ಚಾಗಿ ಕೊಡುತ್ತಿರಬೇಕೆಂದೂ ನುಡಿದು, ಹೆಚ್ಚು ಸಮಯ ತಾನು ಇಲ್ಲಿ ನಿಲ್ಲಲಾರದುದಕ್ಕಾಗಿ ವಿಷಾದಿಸಿ, ಈಗಾಗಲೇ ಹರಿಜನ ಕಾರ್ಯದ ಸಲುವಾಗಿ ಬರಲಿರುವ ಗಾಂಧೀಜೀಯವರನ್ನು ಹರ್ಷಗೊಳಿಸುವಂತೆ ಎಲ್ಲರೂ ಸರ್ವಸಿದ್ಧರಾಗುವರೆಂಬ ತನ್ನ ಭರವಸೆಯನ್ನು ವ್ಯಕ್ತಪಡಿಸಿ, ಸ್ತ್ರೀಯರೆಂತೆ ಪುರುಷರಾದರೂ ತಂತಮ್ಮ ಕರ್ತವ್ಯಸೀಮೆಯನ್ನರಿತು ವರ್ತಿಸಲೆಂದಾಶಿಸಿ, ಮಂಗಳೂರಿಗೆ ಹೊರಟುಹೋದರು. ಮೀರಾಬೆನ್‌ರವರು ಇಂಗ್ಲಿಷಿನಲ್ಲಿ ನುಡಿದುದು ಎಲ್ಲರಿಗೂ ಅರ್ಥವಾಗುವಂತೆ ಅವರೊಂದಿಗೆ ಬಂದಿದ್ದ ಶ್ರೀ ನಾರಾಯಣ ಕಿಲ್ಲರು ಕನ್ನಡದಲ್ಲಿ ತರ್ಜುಮೆ ಮಾಡಿ ಹೇಳಿದರು.

ಅಪರಾಹ್ನ ೩-೩೦ಕ್ಕೆ ಸರಿಯಾಗಿ ಮಹಾತ್ಮಾ ಗಾಂಧಿಜೀಯವರ ಆಗಮನ[illegible]. ಕರಪತ್ರ ಮುಖೇನ ಮೊದಲೇ ಪ್ರಕಟಿಸಲಾದ ಕಾರ್ಯವು ನಡೆದಿದ್ದ ಕಾರಣ, ನೆರೆಕರೆಯ ಗ್ರಾಮಗಳಿಂದಲೂ ಸಾವಿರಾರು ಜನರು ಬಂದು, ಬಡ್ಡಕಟ್ಟೆಯ ಬಳಿ ನರಿಕನಾರಿಯ ಹೊಲದಲ್ಲಿ ಏರ್ಪಡಿಸಿದ್ದ ರಂಗದಲ್ಲಿ ನೆರೆದಿದ್ದರು. ಪಟ್ಟಣದ ರಸ್ತೆಗಳನ್ನು ಗುಡಿಸಿ, ನೀರು ಚಿಮುಕಿಸಿ, ಚೊಕ್ಕವಾಗಿಯೂ ತಂಪಾಗಿಯೂ ಇರಿಸಿದ್ದರು. ಅಲ್ಲಲ್ಲಿ ನಿರಾಡಂಬರವಾದ ತೋರಣಗಳೂ ಇಲ್ಲದಿರಲಿಲ್ಲ. ಗಾಂಧೀಜೀಯವರು ಬರುತ್ತಲೇ, ಶಾಂತಿಪ್ರಿಯವಾದ ಜನಸ್ತೋಮವು ಅವರನ್ನು ಶಾಂತವಾಗಿಯೇ ಸ್ವಾಗತೀಕರಿಸಿತು. ಕೇವಲ ಐದು ನಿಮಿಷಗಳ ಕಾರ್ಯಕ್ರಮವೆಂದು ನಿಶ್ಚಯಿಸಲ್ಪಟ್ಟಿತ್ತಾದ ಕಾರಣ ಗಾಂಧೀಜೀಯವರು ಇಲ್ಲಿ ಮೋಟರಿನಿಂದ ಕೆಳಗಿಳಿವ ಆವಶ್ಯಕತೆಯನ್ನು ಕಾಣದೆ, ಕುಳಿತಲ್ಲಿ ನಿಧಿಗಳನ್ನು ಸ್ವೀಕರಿಸಿದರು. ಬಂಟವಾಳಪುರನಿವಾಸಿಗಳಿಂದ ಹರಿಜನ ನಿಧಿಗಾಗಿ ರೂ. ೧೮೫, ಬಿಹಾರ್ ರಿಲೀಫ್ ಫಂಡಿಗಾಗಿ ರೂ. ೧೫೮-೮-೦, ಶ್ರೀ ವೆಂಕಟ್ರಮಣ ಸ್ವಾಮಿ ಥಿಯೇಟ್ರಿಕಲ್ ಕಂಪೆನಿಯವರಿಂದ ರೂ. ೫೧, ಇದಲ್ಲದೆ ಅವರ ಹಸ್ತಲಿಖಿತ ಸಹಿಗಳಿಗಾಗಿ ಸುಮಾರು ರೂ. ೧೫, ಸಭೆಯೊಳಗಿನ ಸಭೆ ಮಹಿಳೆಯರು ಸುಮಾರು ರೂ. ೧೫೦ ಬೆಲೆ ಬಾಳುವ ಆಭರಣಗಳನ್ನು ಕೊಟ್ಟಿರುವರು. ಬಂಟವಾಳದ ಹಿತ್ತಾಳೆ ಕೆಲಸಗಾರರಾದ ಶ್ರೀ ಸೋಮಪ್ಪನವರು ತಾವೇ ತಯಾರಿಸಿದ ಒಂದು 'ಸ್ಟವ' (Stove)ನ್ನು ಗಾಂಧೀಜೀಯವರಿಗೆ ಬಹುಮಾನವಾಗಿ ಕೊಟ್ಟುದನ್ನು ಮಹಾತ್ಮರು ಅಲ್ಲೇ ಏಲಂ ಹಾಕಿದರು. (ಈ 'ಸ್ಟವ್' ಶ್ರೀಕ್ಷೇತ್ರ ಧರ್ಮಸ್ಥಳದ ಕಳೆದ ವರ್ಷದ ಪ್ರದರ್ಶನದಲ್ಲಿ ರಜತ ಪದಕದ ಬಹುಮಾನ ಪಡೆದಿದೆ) ಬೇರೆ ಕೆಲವು ಸಾಮಾನುಗಳೂ (ಆಭರಣಗಳ ಹೊರತು) ಅಲ್ಲೇ ಏಲಂ ಮಾಡಲ್ಪಟ್ಟುವು. ಅನಂತರ ಗಾಂಧೀಜೀಯವರು ಈ ಕೆಳಗಿನಂತೆ ಭಾಷಣ ಮಾಡಿದರು—

"ಬಂಧು ಭಗಿನಿಯರೇ, ಬಿಹಾರ್ ನಿಧಿಗೆ ಹಣ ಸಹಾಯ ಮಾಡಿದವರನ್ನುಳಿದು ಇತರರಿಗೆ ನನ್ನ ಸಂದೇಶವೇನೆಂದರೆ,—'ಅಸ್ಪೃಶ್ಯರು' ಎಂಬುದಾಗಿ ನಾವು ಪ್ರತ್ಯೇಕಿಸಿಟ್ಟ ನಮ್ಮ ಭ್ರಾತೃವರ್ಗವನ್ನು ಸರಿಯಾಗಿ ಅರಿದು ಅವರ ತಾಪವನ್ನೂ ನಮ್ಮ ಪಾಪವನ್ನೂ ತೊಳೆಯಬೇಕಾಗಿದೆ. ಹರಿಜನರನ್ನು ನಮಗಿಂತ ಕೀಳೆಂದು ಭಾವಿಸುವ ನಾವೇ ಅವರಿಗಿಂತ ಕೀಳಾಗುವೆವು. ನಮ್ಮ ಭ್ರಾತೃವರ್ಗಕ್ಕಾಗಿ ಕರುಣೆ, ನಮ್ಮವರೆಂಬ ಅಭಿಮಾನ ಇವುಗಳುದಯವಾಗಲಿ. ನಮ್ಮವರನ್ನೆ ನಾವು ಹಳಿದು ದೂರವಿರಿಸುವ ಹೀನಮಾನಸಿಕತೆಯುಳ್ಳವರು, ತಮ್ಮನ್ನು ತಾವೇ ಹೀನತೆಗಿಳಿಸಿಕೊಳ್ಳುವವರು, ಈ ಸಮೂಹದಲ್ಲಿರಲಾರರೆಂದು ನಾನು ಭಾವಿಸುವೆನು."

ಶ್ರೀ ವೆಂಕಟ್ರಮಣ ಸ್ವಾಮಿ ಥಿಯೇಟ್ರಿಕಲ್ ಕಂಪೆನಿಯ ಆಡಳಿತಗಾರರಾದ ಶ್ರೀ. ಎನ್. ಆರ್. ಬಂಟ್ವಾಳಕಾರರಿಂದ ರೂ. ೫೧ರ ನಿಧಿಯನ್ನ ಸ್ವೀಕರಿಸುತ್ತ ಗಾಂಧೀಜೀಯವರು ಅವರನ್ನು ಹರಸಿ, ಹಿಂದೀಯಲ್ಲಿಯೂ ಕನ್ನಡದಲ್ಲಿಯೂ ತನ್ನ ಸಹಿಗಳನ್ನಿತ್ತರು.

ಎಲ್ಲ ಕಾರ್ಯಕ್ರಮಗಳೂ ಸುಸೂತ್ರವಾಗಿ, ಸಾಂಗವಾಗಿ ಶಾಂತತೆಯಿಂದ ನಡೆದು ಮುಗಿದುವು. ಅವಿರಾಮವಾದ ಜಯಕಾರಗಳಾಗಲಿ ಪಾದಕ್ಕೆರಗುವ ನೂಗ್ಗಾಟವಾಗಲಿ ಇರಲಿಲ್ಲ. ಎಲ್ಲ ಸುವ್ಯವಸ್ಥೆಗಳಿಗಾಗಿ ಬಂಟವಾಳದ ಯುವಕರ ಕಾರ್ಯಚತುರತೆಯನ್ನು ಕೊಂಡಾಡಬೇಕಾಗಿದೆ.

ಬಂಟವಾಳಕ್ಕೆ ಗಾಂಧೀಜೀಯವರ ಆಗಮನವು ಇದೇ ಮೊದಲನೆ ಬಾರಿಯದಾಗಿದೆ. ಇಲ್ಲಿಯ ಕಾರ್ಯಕ್ರಮಗಳಿಂದ ಗಾಂಧೀಜೀಯವರು ಪೂರ್ಣ ತುಷ್ಟರಾಗಿರುವರೆಂಬುದು 'ಇಂತಹ ಊರಿನಲ್ಲಿ ಕೇವಲ ಐದೇ ನಿಮಿಷಗಳ ಕಾರ್ಯಕ್ರಮವೇ?' ಎಂದು ಅವರು ತೆಗೆದ ಉದ್ಗಾರದಿಂದ ಸ್ವಯಂವ್ಯಕ್ತ.

ಮೊಗವೀರ ಶ್ರೀ ಜ್ಞಾನೋದಯ ಸಮಾಜಕ್ಕೆ ಮಹಾತ್ಮಾಜೀಯವರ ಆಗಮನ.—

ಮಹಾತ್ಮಾಜೀಯವರು ತಾ. ೨೪ನೇ ಸಾಯಂಕಾಲ ಮಂಗಳೂರಿಗೆ ಬಂದವರು ಪ್ರಥಮತಃ ಶ್ರೀ ಜ್ಞಾನೋದಯ ಸಮಾಜ ಮಂದಿರವನ್ನು ಸಂದರ್ಶಿಸಿದರು. ಮಂದಿರದ ಎದುರು ಆರೋರಾ ಸೋಪ್ ಕಾರ್ಖಾನೆಯ ಪಟಾಂಗಣದಲ್ಲಿ ಈ ಬಗ್ಗೆ ಶೃಂಗರಿಸಿ ತಯಾರಿಸಿದ ಸಭಾ ಮಂಟಪದೊಳಗೆ, ಮೊಗವೀರ ಪ್ರತಿನಿಧಿಗಳು ಜಯಘೋಷದೊಡನೆ ಮಹಾತ್ಮರನ್ನು ಸ್ವಾಗತೀಕರಿಸಿದರು. ಶ್ರೀ ಮೋಹನಪ್ಪ ತಿಂಗಳಾಯರು ಅಲ್ಲಿ ನೆರೆದ ಮತ್ಸ್ಯ ವ್ಯವಸಾಯಿಗಳ ಪರವಾಗಿ ಖಾದಿ ವಸ್ತ್ರದಲ್ಲಿ ಛಾಪಿಸಲ್ಪಟ್ಟ ನಿವೇದನ ಪತ್ರವನ್ನು ಓದಿ, ಅದನ್ನು ಸಣಬು ನೂಲಿನ ಬಲೆಯಿಂದ ತಯಾರಿಸಿದ ಸಂದೂಕದೊಳಗಿಟ್ಟು ೧೫೭ ರೂಪಾಯಿಗಳ ನಿಧಿಯೊಂದಿಗೆ ಮಹಾತ್ಮರಿಗೆ ಸಮರ್ಪಿಸಿದರು. ಸಣ್ಣಂಬಡಿರಿನ ಶ್ರೀ ಐತಪ್ಪ ಕಾಂಚನರು ಸಣಬಿನ ನಾರಿನಿಂದ ಉಳ್ಳಾಲ ಶಕ್ತಿ[illegible]ಯಲ್ಲಿ ಮೊಗವೀರ ಸ್ತ್ರೀಯರಿಂದ ತಯಾರಿಸಲ್ಪಡುವ [illegible] ಸಪೂರ ನೂಲಿನ ಒಂದು ಮಾಲೆಯನ್ನು ಹಾಕಿದರು. ಮೊಗವೀರ ಸ್ತ್ರೀ ಸಮಾಜದ ಪರವಾಗಿ ಶ್ರೀಮತಿ ಜೋಗಮ್ಮನವರು ಬೆಳ್ಳಿಯಿಂದಲೇ ತಯಾರಿಸಲ್ಪಟ್ಟ ಸುಂದರವಾದ ಒಂದು ಚರಕವನ್ನು ಸಮರ್ಪಿಸಿದರು. (ಈ ಚರಕವು ಮೈದಾನಿನಲ್ಲಿ ರೂ. ೫೫ಕ್ಕೆ ಏಲಂ ಆಗಿದೆ.) ಮಹಾತ್ಮರು ಈ ಎಲ್ಲಾ ಕಾಣಿಕೆಗಳನ್ನೂ, ಎಲ್ಲರೂ ಖಾದಿ ವಸ್ತ್ರಾಲಂಕೃತರಾಗಿ ನಿಂತಿದ್ದ ಸ್ತ್ರೀ ಪುರುಷ ಸಮೂಹವನ್ನೂ, ಉತ್ತಮ ವ್ಯವಸ್ಥೆಯನ್ನೂ ಕಂಡು ನಗುಮುಖದಿಂದ ತನ್ನ ಸಂತೋಷವನ್ನು ವ್ಯಕ್ತಪಡಿಸುತ್ತ ಈ ಕೆಳಗಿನಂತೆ ಭಾಷಣ ಮಾಡಿದರು:—

ಗೃಹಸ್ಥ ಗೃಹಿಣಿಯರೇ:—

ಮತ್ಸ್ಯ ವ್ಯವಸಾಯಿಗಳಾದ ನೀವು ಈ ಪ್ರಕಾರ ಉತ್ಸಾಹದಿಂದ ಮುಂದೆ ಬಂದು ನನ್ನನ್ನು ಸ್ವಾಗತೀಕರಿಸಿದುದಕ್ಕಾಗಿಯೂ, ಕಾಣಿಕೆಗಳನ್ನು ಸಮರ್ಪಿಸಿದ್ದಕ್ಕಾಗಿಯೂ ನಿಮ್ಮ ಉಪಕಾರ ಸ್ಮರಿಸುತ್ತೇನೆ. ನಾನು ಸಹ ಮೀನುಗಾರರ ಒಂದು ಗ್ರಾಮದವನಾಗಿದ್ದೇನೆ. ಮದ್ಯಪಾನದ ಅಭ್ಯಾಸಕ್ಕೆ ಬಲಿಬಿದ್ದ ನಿಮ್ಮವರ ಕುಂದುಕೊರತೆಗಳನ್ನು ಮರೆಮಾಚದೆ ನಿಮ್ಮ ನಿವೇದನ ಪತ್ರದಲ್ಲಿ ನನಗೆ ತಿಳಿಸಿದ್ದಕ್ಕಾಗಿ ನಾನು ಬಹು ಸಂತೋಷಪಡುತ್ತೇನೆ.

ಮೀನುಗಳು ನೀರಿನಲ್ಲಿ ಮುಳುಗಿರುವಂತೆ ಮೀನುಗಾರರು ಮದ್ಯಪಾನದಲ್ಲಿ ಮುಳುಗಿರುವರು—ಎಂಬ ಇಂಗ್ಲಿಷ್ ಗಾದೆಯು, ನಿಮ್ಮನ್ನು ಕಂಡು ನನಗೆ ನೆನಪಾಯಿತು. ಈ ಗಾದೆಗೆ ವಿರೋಧವಾಗಿ ನಿಮ್ಮಲ್ಲನೇಕರು ಮೀನುಗಾರರಾಗಿದ್ದು ಕೂಡಾ ಮದ್ಯಪಾನ ವ್ಯಸನದಿಂದ ಬಿಡುಗಡೆಯಾಗಿರುವಿರಿ, ಎಂತಲೂ ಅದಕ್ಕಾಗಿ ನಿಮ್ಮದೇ ಆದ ಒಂದು ಸಂಸ್ಥೆಯ ಮೂಲಕ ಪ್ರಚಾರ ಕಾರ್ಯ ಮಾಡುತ್ತಿರಿ ಎಂತಲೂ ತಿಳಿದು ನನಗೆ ಸಂತೋಷವಾಗುತ್ತದೆ. ನಿಮ್ಮ ಪ್ರಚಾರದಲ್ಲಿ ಮದ್ಯಪಿಗಳ ಮೇಲೆ ಏನೊಂದು ತರದ ಬಲೋತ್ಕಾರವನ್ನು ಮಾಡಕೂಡದು. ಮದ್ಯಪಿಗಳು ಉದ್ಯೋಗಹೀನರಾದರೆ ಅವರಲ್ಲಿ ಕುಡಿಯುವ ಪ್ರವೃತ್ತಿಯು ಹೆಚ್ಚುವುದು. ಅವರಿಗೆ ತುಂಬಾ ಕೆಲಸ ಸಿಕ್ಕುವಂತೆ ಮಾಡಬೇಕು. ಕುಡಿಕತನದ ಅಭ್ಯಾಸವನ್ನು ಬಿಟ್ಟವರು ಪ್ರತಿಯೊಬ್ಬರೂ ಮದ್ಯಪಾನತ್ಯಾಗದ ಪ್ರಚಾರಕರಾದರೆ ನಿಮ್ಮ ಸಮೂಹದಲ್ಲಿ ಮದ್ಯವ್ಯಸನವು ನಿರ್ಮೂಲವಾಗುವುದರಲ್ಲಿ ಸಂಶಯವಿಲ್ಲ. ಮದ್ಯಪಾನವನ್ನು ನೀವು ತ್ಯಜಿಸುವಂತೆ ಅಸ್ಪೃಶ್ಯತಾರೋಗವನ್ನು ನಿವಾರಿಸುವುದೂ ನಿಮ್ಮ ಕರ್ತವ್ಯವಾಗಿದೆ.

ನಿಮ್ಮ ನಿವೇದನ ಪತ್ರದಲ್ಲಿ ನನಗೆ ತಿಳಿಸಿದಂತೆ, ಉಪ್ಪು ನಿಮ್ಮ ಕೈಗಾರಿಕೆಯ ಪ್ರಾಣಸ್ವರೂಪವಾಗಿರುತ್ತದೆಂಬುದನ್ನು ನಾನು ಬಲ್ಲೆ. ಇತರರಿಗಿಂತಲೂ ಹೆಚ್ಚಾಗಿ ಉಪ್ಪಿನ ಕರದ ಸಂಕಷ್ಟವು ನಿಮಗುಂಟೆಂಬ ನಿಮ್ಮ ಅಂಬೋಣವು ಸಹ ಸತ್ಯವೆ. ನಿಮ್ಮ ಈ ಸಂಕಷ್ಟ ನಿವಾರಣೆಗೆ ಇನ್ನು ಹೆಚ್ಚು ಸಮಯ ತಗಲಲಿಕ್ಕಿಲ್ಲ. ನಾವೆಲ್ಲರೂ ಒಂದಾಗಿ ಪ್ರಯತ್ನಪಟ್ಟರೆ ಇನ್ನು ಕೆಲವು ಕಾಲದಲ್ಲಿಯೇ ನಮ್ಮ ಸರ್ವರ ಹಿತವನ್ನು ನಾವು ಮಾಡಿಕೊಳ್ಳಲು ಶಕ್ತರಾಗುವೆವು. ನಾನು ಸ್ವಲ್ಪವಾದರೂ ಈ ವಿಷಯದಲ್ಲಿ ನಿರಾಶೆಪಡುವುದಿಲ್ಲ. ನೀವಾದರೂ ನಿರಾಶೆಪಡಬೇಡಿರಿ.

ನೀವು ನನಗೆ ಸಮರ್ಪಿಸಿದ ಕರೆನ್ಸಿ ನೋಟುಗಳು ಮಾತ್ರ ನಿಮ್ಮ ಬಲೆಯಲ್ಲಿ ಸಿಕ್ಕಿದ್ದುವು. ಆದರೆ ನನ್ನ ಚರಕ ನಿಮ್ಮ ಬಲೆಯೊಳಗೆ ಸಿಕ್ಕಬೇಕಲ್ಲವೇ? (ನಗಾಡಿದರು)

ಶ್ರೀ ಕೃಷ್ಣಪ್ಪ ತಿಂಗಳಾಯ ಮತ್ತು ಶ್ರೀ ಟಿ. ಎಲ್. ಪುತ್ರನ್‌ ಕಾರ್ಯರ ನೇತೃತ್ವದಲ್ಲಿ. ಸುಮಾರು ೭೫ ಜನ ಮೊಗವೀರ ಯುವಕ ಸ್ವಯಂಸೇವಕರ ಶಿಸ್ತಿನಿಂದ ಸಾವಿರಾರು ಜನ ಕೂಡಿದ ಈ ಸಭೆಯಲ್ಲಿ ಏನೊಂದು ಅವ್ಯವಸ್ಥೆಯಾಗಲೀ, ಅಪಘಾತವಾಗಲೀ ಆಗಲಿಲ್ಲ. ಅಂದು ಮಾರ್ಗದ ಉದ್ದಕ್ಕೂ ತಳಿರು ತೋರಣ ಪುಷ್ಪಲತಾ ಪಲ್ಲವಗಳಿಂದಲೂ, ರಾಷ್ಟ್ರಧ್ವಜಗಳಿಂದಲೂ ಹೊಯ್ಗೆ ಬಜಾರವು ಶೃಂಗಾರಮಯವಾಗಿ ೧೫ ನಿಮಿಷಗಳ ಗಾಂಧೀಜೀಯವರ ಸಂದರ್ಶನೆಯ ಆನಂದವನ್ನು ಅನುಭವಿಸಿತು.

ಡಿ. ಸಿ. ಮಿಶನಿನಲ್ಲಿ.

ಸಂಜೆ ೫ ಘಂಟೆಯ ತನಕ ಮಹಾತ್ಮರು ಈ ಮಿಶನಿನಲ್ಲಿದ್ದು ಮಿಶನಿನ ಬಾಲಕ ಬಾಲಿಕೆಯರ ಕೈಗಾರಿಕೆ ವಿದ್ಯೆಗಳ ವಿಚಾರವಾಗಿ ತಿಳಿದುಕೊಂಡು, ಸಣ್ಣ ಭಾಷಣ ಮಾಡಿ, ಕೊರಗರ ಜಾತಿಯ ಬಾಲಕನೊಬ್ಬನ ಹೂಮಾಲೆಯನ್ನು ಸಂತೋಷದಿಂದ ಸ್ವೀಕರಿಸಿ, "ಬಾಲಕ ಬಾಲಿಕೆಯರೇ, ಈ ಮಿಶನಿನಲ್ಲಿ ನಿಮಗೆ ಒದಗಿಸಿ ಕೊಡಲ್ಪಟ್ಟಿರುವ ಸರ್ವ ಅನುಕೂಲತೆಗಳನ್ನೂ ಕಂಡು ಅತ್ಯಾನಂದಭರಿತನಾದೆನು. ಈ ವಿಷಯದಲ್ಲಿ ಇದೀ ದೇಶದಲ್ಲಿ ಇದು ಪುರಾತನ ಸಂಸ್ಥೆಯೆಂದು ತಿಳಿದು ಮತ್ತೂ ಆನಂದಪಡದಿರಲಾಗದು. ದಿವಂಗತ ಕುದ್ಮುಲ್ ರಂಗರಾಯರು ಇದರ ಜನಕರೇ ಸರಿ! ಈ ಸಂಸ್ಥೆಯು ಯಶಸ್ವಿಯಾಗಿ ಬಾಳಲಿ" ಎಂದು ಮುಂತಾಗಿ ಹರಸಿದರು. ಫಾದರ್ ಪ್ರಿಸರ್ಪಿಯೋರವರೂ, ಫಾದರ್ ಪೆರೋಳಿಯವರೂ ಮತ್ತಿತ್ತರ ಕಥೋಲಿಕ ಸದ್ಗೃಹಸ್ಥರೂ ಸಭೆಗೆ ಚಿತ್ತೈಸಿದುದು ಅಂದಿನ ವೈಶಿಷ್ಟ್ಯ.

ರಾಷ್ಟ್ರೀಯ ಬಾಲಿಕಾ ಪಾಠಶಾಲೆಯಲ್ಲಿ.

ಅಲ್ಲಿ ಸಭಾಂತ್ಯವಾಗಿ ಮಹಾತ್ಮರು ರಾಷ್ಟ್ರೀಯ ಬಾಲಿಕಾ ಪಾಠಶಾಲೆಗೆ ತೆರಳಿದರು. ಮಾನಪತ್ರಗಳನ್ನೂ ಥೈಲಿ ರೂಪಾಯಿಗಳನ್ನೂ ಸಮರ್ಪಿಸಿ ಆದ ಮೇಲೆ ಮಹಾತ್ಮರು ಹರಿಜನೋದ್ಧಾರದ ಕುರಿತು, ಸ್ತ್ರೀಯರ ಕರ್ತವ್ಯವನ್ನು ವಿವರಿಸಿ ಚುಟುಕಾಗಿ ಭಾಷಣವಿತ್ತು, ಬಿಹಾರ್ ಫಂಡಿಗಾಗಿ ಅದನ್ನು ಸಹಾಯ ಮಾಡಿರೆಂದು ಕೇಳಿಕೊಂಡರು. ಹರಿಜನರಿಗಾಗಿ ೧೫೦ ರೂಪಾಯಿಗಳನ್ನೂ ೪ ಉಂಗುರಗಳನ್ನೂ ಸ್ವೀಕರಿಸಿ, ನೆರೆದಿದ್ದ ಹರಿಜನ ಬಾಲಿಕೆಯರನ್ನೂ ಸಂಸ್ಥೆಯವರನ್ನೂ ಹರಸಿದರು. ಹಿಂದೀ ವಿದ್ಯಾರ್ಥಿನಿ ಮಂಡಲದವರ ಮಾನಪತ್ರ ಸ್ವೀಕಾರವಾದ ಮೇಲೆ ಮಹಾತ್ಮರು ಸರಿಯಾದ ಘಂಟೆ ೬ಕ್ಕೆ ಮೈದಾನಿಗೆ ಹೊರಟರು. (8. ಪುಟಕ್ಕೆ ಮುಂದುವರಿಸಲ್ಪಟ್ಟಿದೆ.)

FRESH CONSIGNMENT ARRIVED.

UNEQUAL QUALITY——————EXCEPTIONAL PRICE

A TIRE THAT SAVES YOU REPUTATION AND MONEY

The Canara Public Conveyance Co., Ltd.

MANGALORE.

ಮೂಲೆ ಮೂಲೆಯಿಂದ.

ಮಂಗಳೂರು:—ಕಾರ್ಕಳ ಶ್ರೀ ವೆಂಕಟರಮಣ ಸ್ವಾಮಿ ಥಿಯೇಟ್ರಿಕಲ್ ಕಂಪೆನಿ ಇವರು ತಾ. ೨೧-೨-೩೪ನೇ ಬುಧವಾರ ರಾತ್ರಿ ಮಂಗಳೂರ ಹಿಂದೂಸ್ಥಾನ ಸಿನಿಮಾ ಮಂದಿರದಲ್ಲಿ 'ಶ್ರೀರಾಮ ಪಾದುಕಾ ಪಟ್ಟಾಭಿಷೇಕ'ವೆಂಬ ನಾಟಕವನ್ನು ನಮ್ಮ ಜಿಲ್ಲಾ ಜಡ್ಜರಾದ ಮಾನ್ಯ ಶ್ರೀ. ಸಿ ಎ. ರೆಡ್ಡಿ ಬಿ ಎ ಬಿ ಎಲ್ ಇವರ ಅಧ್ಯಕ್ಷತೆಯಲ್ಲಿ ಜಯಶೀಲರಾಗಿ ಅಭಿನಯಿಸಿದರು. ಈ ನಾಟಕಕ್ಕೆ ನಮ್ಮ ಮಂಗಳೂರು ಮ್ಯುನಿಸಿಪಲ್ ಚೇಯರ್‌ಮ್ಯಾನರಾದ ಡಾ| ಎಟ್ಟಿಲ್ ಶೆಟ್ಟರೂ ರಿಟಾಯರ್ಡ್ ಡಿ. ಜಡ್ಜರಾದ ರಾವ್‌ಸಾಹೇಬ್ ಬಿ. ವೆಂಕಟರಾಯರೇ ಮೊದಲಾದ ಗಣನೀಯ ಪುರ ಪ್ರಮುಖರೂ ದಯಮಾಡಿಸಿದ್ದರು

ಕಾಪು:—ಕಳೆದ ತಾ ೨೫ನೆಯ ಆದಿತ್ಯವಾರ ಮಧ್ಯಾಹ್ನ ಘಂಟೆ ೩ ೩೫ಕ್ಕೆ ಪತಿತೋದ್ಧಾರ ಮಹಾತ್ಮಾ ಮೋಹನದಾಸ್ ಕರಂಚಂದ ಗಾಂಧಿಜೀಯವರು ಉಡುಪಿಯಿಂದ ಕಾಪಿಗೆ ತಲಪಿದರು ನಮ್ಮೂರಲ್ಲಿ ನಿಲ್ಲುವ ಕಾರ್ಯಕ್ರಮವಿಲ್ಲದಿದ್ದರೂ ಊರ ಜನರು ಗಂಡಸರು, ಹೆಂಗಸರು, ಮಕ್ಕಳು ಕೂಡಾ ಬಾಪೂಜೀಯವರ ಕಾರಿನ ಮುಂಭಾಗದಲ್ಲಿ ನಿಂತು ಅವರ ದಿವ್ಯ ದರ್ಶನ ಪಡೆದರು. ಹಲವರು ಹೂಮಾಲೆಗಳನ್ನರ್ಪಿಸಿ, ಪುಷ್ಪ ವೃಷ್ಟಿಯನ್ನು ಸುರಿಸಿದರು ಡಾ| ಬೇಕಲರವರ ಪುತ್ರಿ ಶ್ರೀ ದೇವಿಯು ಕಾರನ್ನು ಹತ್ತಿ ಮಹಾತ್ಮರಿಗೆ ಒಂದು ಮಾವಿನ ಹಣ್ಣನ್ನು ಅರ್ಪಿಸಿದಳು ಗಾಂಧಿಜೀಯವರು ಹರ್ಷಿತರಾಗಿ ಅದನ್ನು ಸ್ವೀಕರಿಸಿ, ಹುಡುಗಿಗೆ ತನ್ನ ಬಳಿಯಲ್ಲಿದ್ದ ಹೂಮಾಲೆಗಳನ್ನು ಕೊಟ್ಟರು. ಜನರೆಲ್ಲಾ 'ಮಹಾತ್ಮಾ ಗಾಂಧಿಕೀ ಜೈ'! ಎಂದು ಜಯಘೋಷ ಮಾಡಿ, ಊರವರ ಪರವಾಗಿ ರೂಪಾಯಿ ೧೦೦ರ ಥೈಲಿಯೊಂದು ಕಾರ್ನಾಡ್ ಕೃಷ್ಣರಾಯರಿಂದ ಅರ್ಪಿಸಲ್ಪಟ್ಟಿತು, ಕಾರು ಮುಂದೆ ಹೋಯಿತು ಜನಸಂದಣಿಯಿಂದ ಮಾರ್ಗವೆಲ್ಲಾ ತುಂಬಿ ಹೋಗಿತ್ತು ಮಾರ್ಗಗಳೆಲ್ಲಾ ತಳಿರು ತೋರಣಗಳಿಂದ ಅಲಂಕೃತವಾಗಿದ್ದುವು

ಕೊಡಗಿನಿಂದ —

ಹೈದರಾಬಾದಿನ ಪ್ರೊಫೆಸರ್ ಎ ಎಚ್ ಖಾನರವರು ಕೊಡಗು ಜಮೀನ್ದಾರರ ಸಂಘದ ಹಾಲ್‌ನಲ್ಲಿ ತಾ ೨೦ರಿಂದ ಯಕ್ಷಿಣಿ ವಿದ್ಯೆಯನ್ನು ತೋರಿಸುತ್ತಿರುವರು

ಇಂಡಿಯನ್ ರೆಡ್‌ಕ್ರಾಸ್ ಸಂಘದ ಕೊಡಗು ಶಾಖೆಯ ಮಡಿಕೇರಿಯ ಶಿಶು ಪ್ರದರ್ಶನವು ಬರುವ ಮಾರ್ಚ ತಾ ೧೦ ಮತ್ತು ೧೧ರಲ್ಲಿ ನಡೆಯುವುದಾಗಿ ತಿಳಿಯುತ್ತೇವೆ

ವಿದ್ಯಾ ಇಲಾಖೆಯ ಉತ್ತರ ಕೊಡಗಿನ ಸುಪರ್ ವೈಸರಾದ ಮ ರಾ ಮೂವೆರ ಬೆಳ್ಳಪ್ಪನವರು ಮಾರ್ಚ ತಾ. ೧ರಿಂದ ರಿಟೈಯರ್ಡ್ ಆಗುವುದಾಗಿಯೂ ಮತ್ತು ಅವರ ಬದಲಿಗೆ ಮಡಿಕೇರಿ ಹೈಸ್ಕೂಲಿನ ಅಸಿಸ್ಟೆಂಟ್ ಮಾಸ್ಟರಾದ ಮ ರಾ ಯ ಕೃಷ್ಣರಾವ್‌ರವರನ್ನು ನೇಮಿಸುವುದಾಗಿಯೂ ತಿಳಿಯುತ್ತೇವೆ

ಶ್ರೀ ರಾಮಕೃಷ್ಣ ಪರಮಹಂಸರ ಮತ್ತು ಸ್ವಾಮಿ ವಿವೇಕಾನಂದರ ಜಯಂತ್ಯುತ್ಸವವು ತಾ, ೨೫ರಲ್ಲು ಮ. ರಾ| ಸಿ ಎಂ ರಾಮಯ್ಯರ ಅಧ್ಯಕ್ಷತೆಯಲ್ಲು ಮಡಿಕೇರಿ ಹೈಸ್ಕೂಲಿನಲ್ಲಿ ನಡೆಯುವುದು ಮ| ರಾ| ಪಳಂಗಂಡ ಅಪಯ್ಯನವರು ರಾಮಕೃಷ್ಣ ಪರಮಹಂಸರ ಜೀವನ ಚರಿತ್ರೆ ಮತ್ತು ಉಪದೇಶವನ್ನೂ ಮತ್ತು ಮ| ರಾ| ಯಂ ಶಂಕರನಾರಾಯಣರಾಯರು ಸ್ವಾಮಿ ವಿವೇಕಾನಂದರ ಜೀವನ ಚರಿತ್ರೆ ಮತ್ತು ಉಪದೇಶವನ್ನೂ ಕುರಿತು ಭಾಷಣ ಮಾಡಿದರು

ವೀರಾಜಪೇಟೆಯಿಂದ:—

ವೀರಾಜಪೇಟೆ ಕುಕ್ಲೂರು ಗ್ರಾಮದ ಮಾಳೆಟ್ಟಿರ ಮನೆಯವರಿಗೂ ಮತ್ತು ಕಾತಂಡ ಮನೆಯವರಿಗೂ ಗದ್ದೆ ದಾರಿ ದನಗಳನ್ನು ಹೊಡೆದುಕೊಂಡು ಹೋಗುವ ಹಕ್ಕು ಸಗಂತಿಯಾಗಿ ಕೇಸು ನಡೆದು ವೀರಾಜಪೇಟೆ ಮುನ್ಸಿಫ್ ಕೋರ್ಟ್‌ನಲ್ಲಿ ಮಾಳೆಟ್ಟಿರ ಮನೆಯವರ ಪರವಾಗಿ ತೀರ್ಮಾನವಾಗಿತ್ತು ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟ್‌ನಲ್ಲಿ ಅಪೀಲಾಗಿ ಮಾಳೆಟ್ಟಿರ ಮನೆಯವರಿಗೇ ಕಾಯಮ್ಮಾಗಿ ತೀರ್ಮಾನವಾಯಿತಾಗಿ ವರ್ತಮಾನ

ಪೊನ್ನಂಪೇಟೆಯಿಂದ:—

ಮಹಾತ್ಮರು ಪೊನ್ನಂಪೇಟೆಯಲ್ಲಿ ಘಂಟೆ ವಿಶ್ರಾಂತಿ ತೆಗೆದುಕೊಂಡು ಅಲ್ಲಿಯ ಹರಿಜನರು ಅರ್ಪಿಸಿದ ರೂ ೨೨-೧-೦ಯ ನಿಧಿಯನ್ನು ಸ್ವೀಕರಿಸಿ ಹುದಿಕೇರಿಗೆ ಹೋದರು ಅಲ್ಲಿಯ ಜನರು ಕೊಟ್ಟ ೬೨-೧೨-೦ಯ ಥೈಲಿಯನ್ನು ಹೊಂದಿಕೊಂಡು ಚಿಕ್ಕ ಭಾಷಣ ಮಾಡಿ ಪೊನ್ನಂಪೇಟೆಗೆ ಹಿಂತಿರುಗಿದರು ಪೊನ್ನಂಪೇಟೆಯ ಬೃಹತ್ ಸಭೆಯಲ್ಲಿ ೨೦೦ ರೂಪಾಯಿ ನಿಧಿಯು ಕೊಡಲಾಯಿತು. ಮಹಾತ್ಮರು ಹರಿಜನೋದ್ಧಾರ ಮತ್ತು ಬಿಹಾರಿನ ಕಷ್ಟ ನಿವಾರಣೆಯನ್ನು ಕುರಿತು ಭಾಷಣ ಮಾಡಿದ ಮೇಲೆ ಕೆಲವು ಸಾಮಾನುಗಳು ಹರಾಜು ಮಾಡಲಾದುವು. ಸಭೆಯಲ್ಲಿ ಸ್ವಲ್ಪ ಧನವೂ ಸಂಗ್ರಹವಾಯಿತು.

ಆ ರಾತ್ರಿ ಪಾರದಾತ್ರವುದಲ್ಲಿ ಪಾರ್ಟಿ ಸಮೇತ ಉಳಿದಿದ್ದ ಗಾಂಧಿಜೀಯವರು ಮರುದಿನ ಬೆಳಗ್ಗೆ ೬ ಘಂಟೆಗೆ ಹೊರಟು ಪಾಲೂರು, ಬಿಟ್ಟಂಗಾಲದ ಮಾರ್ಗವಾಗಿ ವೀರಾಜಪೇಟೆಗೆ ಬಂದು, ಅಲ್ಲಿ ನೆರೆದಿದ್ದ ದೊಡ್ಡ ಸಭೆಯಲ್ಲಿ ೫೦೧ ರೂಪಾಯಿಯ ನಿಧಿ ಸ್ವೀಕಾರ, ಭಾಷಣ, ಸಾಮಾನುಗಳ ಹರಾಜನ್ನು ಮುಗಿಸಿಕೊಂಡು ಅಮ್ಮತ್ತಿ, ಸಿದ್ದಾಪುರ, ಫ್ರೇಜರ್‌ಪೇಟೆಯಲ್ಲಿ ನೆರೆದಿದ್ದ ಜನರಿಗೆ ದರ್ಶನ ಕೊಡುತ್ತಾ, ಬೇಳೂರಿನಲ್ಲಿ ಬಂದಿಳಿದರು ಅಲ್ಲಿ ಮಧ್ಯಾಹ್ನದ ಊಟ ವಿಶ್ರಾಂತಿಯನ್ನು ಮುಗಿಸಿಕೊಂಡು ಮಧ್ಯಾಹ್ನದ ಮೇಲೆ ಸೋಮವಾರ ಪೇಟೆಯ ಸಭೆಯಲ್ಲಿ ಕೊಟ್ಟ ೩೬೫ ರೂಪಾಯಿಯ ಥೈಲಿಯನ್ನು ಹೊಂದಿಕೊಂಡು, ಚಿಕ್ಕದೊಂದು ಭಾಷಣ ಮಾಡಿದರು ಅಲ್ಲಿ ಅವರಿಗೆ ದೊರೆತ ಯಾಲಕ್ಕಿ ಮಾಲೆಗಳ ಹರಾಜನ್ನು ಮುಗಿಸಿ, ಹಿಂತಿರುಗಿ ಗುಂಡುಗುಟ್ಟಿಗೆ ಬಂದಿಳಿದರು ಅಲ್ಲಿ ಒಂದು ಘಂಟೆ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದಾಗ್ಯೆ ಅಲ್ಲಿ ನೆರೆದಿದ್ದವರು ಕೆಲವು ಚಿನ್ನದ ಆಭರಣಗಳನ್ನು ದಾನ ಮಾಡಿದರು ಸುಂಟಿಕೊಪ್ಪದಲ್ಲಿ ನೆರೆದಿದ್ದ ಜನರಿಗೆ ದರ್ಶನವನ್ನಿತ್ತು ಸಾಯಂಕಾಲ ಮಡಿಕೇರಿಗೆ ತಲಪಿದರು

ಮಡಿಕೇರಿಯಿಂದ:—

ಮಡಿಕೇರಿಯ ರಾಜಾಸೀಟ್ ಮೈದಾನದಲ್ಲಿ ನೆರೆದಿದ್ದ ಮಹಾಸಭೆಯಲ್ಲಿ ೭೬೦-೦-೭ ರೂಪಾಯಿಯ ನಿಧಿಯು ಕೊಡಲಾಯಿತು ಕೈಕೇರಿ, ಹುದಿಕೇರಿ, ಪೊನ್ನಂಪೇಟೆ ಮತ್ತು ವೀರಾಜಪೇಟೆಗಳಲ್ಲಿ ಕೊಡಲ್ಪಟ್ಟಂತೆ ಇಲ್ಲಿಯೂ ವಿನಂತಿ ಪತ್ರವು ಕೊಡಲಾಯಿತು ಕೆಲವು ಆಭರಣಗಳು ಹರಾಜಾದ ಮೇಲೆ ಬಿಹಾರ್ ನಿಧಿಗೆ ದ್ರವ್ಯ ಸಂಗ್ರಹಿಸಲಾಯಿತು ರಾತ್ರಿ ಮಡಿಕೇರಿಯಲ್ಲಿ ಉಳಿದು ಮರು ದಿನ ಮಂಗಳೂರಿಗೆ ಹೊರಟು ಹೋದರು

ಮೈಸೂರಿನಿಂದ:—

ಗುಬ್ಬಿಯಲ್ಲಿ ಶ್ರೀ ಚೆನ್ನ ಬಸವೇಶ್ವರ ಸ್ವಾಮಿ ರಥೋತ್ಸವವು ಇದೇ ಶುಕ್ರವಾರ ನಡೆಯುವುದಲ್ಲದೆ ಪ್ರತಿ ದಿನವೂ ಒಂದೊಂದು ಉತ್ಸವವು ನಡೆದು ೯ನೆಯ ಭಾನುವಾರ ತಪ್ಪೋತ್ಸವದಿಂದ ಮುಕ್ತಾಯವಾಗುವುದು ಈ ಸಮಯದಲ್ಲಿ ಎತ್ತುಗಳ ಪರೀಕ್ಷೆಯು ನಡೆದು ಮಾರ್ಚ ತಾ ೧೮ರಲ್ಲಿ ತುಮಕೂರು ಡಿಸ್ಟ್ರಿಕ್ಟ್ ಡಿಪ್ಯುಟಿ ಕಮಿಶನರ್ ಎ| ಟಿ ಅಬ್ದುಲ್ ವಾಜಿದ್ ಸಾಹೇಬರ ಅಧ್ಯಕ್ಷತೆಯಲ್ಲಿ ಉತ್ತಮ ರಾಸುಗಳಿಗೆ ಬಹುಮಾನಗಳ ಕೊಡಲ್ಪಟ್ಟವು

ಮೈಸೂರು ವಿಶ್ವವಿದ್ಯಾ ನಿಲಯದವರಿಂದ ನ್ಯಾಯವಿಧಾಯಕ ಸಭೆಗೆ ಮೆಂಬರಾಗಿ ಆರಿಸಲ್ಪಡಲು ೧ ಶ್ರೀ ಡಿ ವಿ ಗುಂಡಪ್ಪನವರು, ೨ ಎಡ್ವೊಕೇಟ್ ಎಲ್ ಲಕ್ಷ್ಮೀನಾರ್ಣಪ್ಪನವರು ಮತ್ತು ಪ್ರಜಾ ಪ್ರತಿನಿಧಿ ಸಭೆಗೆ ಮೆಂಬರಾಗಿ ಆರಿಸಲ್ಪಡಲು ೧ ಎಡ್ವೊಕೇಟ್ ಕೆ ಕೃಷ್ಣಸ್ವಾಮಿಯಂಗಾರರು, ೨ ಬೆಂಗಳೂರು ಎಡ್ವೊಕೇಟ್ ಎಂ ಪಿ ಸೋಮಶೇಖರರಾಯರು ೩ ಮೈಸೂರು ಎಡ್ವೊಕೇಟ್ ಎ ವೆಂಕಟೇಶಯ್ಯನವರು ಇವರೇ ಮೊದಲಾದ ಮಹನೀಯರು ಉಮೇದುವಾರರಾಗಿ ನಿಂತಿರುವರು

ಧೋಲಾಲ ನವಾಬರು ಬಂಡಿಪುರದತ್ತ ಮೃಗಯಾವಿಹಾರವನ್ನು ತೀರಿಸಿಕೊಂಡು ಕೃಷ್ಣರಾಜ ಸಾಗರ ಮೊದಲಾದ ಪ್ರೇಕ್ಷಣೀಯ ಸ್ಥಳಗಳನ್ನು ಪರ್ಯಟಿಸಿಕೊಂಡು ಕಳೆದ ಸೋಮವಾರ ಹಿಂದಿರುಗಿ ಪ್ರಯಾಣ ಮಾಡಿದರು ಇವರು ಇಲ್ಲಿಗೆ ಬಂದಾಗಲೂ, ಇಲ್ಲಿಂದ ಹೊರಟಾಗಲೂ ೧೯ ಗುಂಡುಗಳು ಹಾರಿಸಲ್ಪಟ್ಟವು ಅಮೇರಿಕದಿಂದ ಬಂದಿದ್ದ ಶ್ರೀಮಂತ ದಂಪತಿಗಳು ಎಲ್ಲವನ್ನೂ ನೋಡಿ ಮತ್ತು ಮಹಾಸ್ವಾಮಿಯವರ ಆತಿಥ್ಯವನ್ನು ಸ್ವೀಕರಿಸಿ ಸಂತೋಷಗೊಂಡು ತೆರಳಿದರು ಅತಿಥಿಗಳ ಸಂಗಡ ದಯಮಾಡಿಸಿದ್ದ ದಿವಾನರು ಮೊನ್ನೆ ಬೆಂಗಳೂರಿಗೆ ತಲಪಿದರು

ರಾಜಧಾನಿಯಲ್ಲಿರುವ ನ್ಯೂ ಆಪೇರ ಸಿನಿಮಾ ಕಂಪೆನಿಗೆ ಬಡ್ಡಿಕ್ಕೆ ಮುಸಲ್ಮಾನರು ೧-೨ ಟಿಕೇಟುಗಳನ್ನು ತೆಗೆದುಕೊಂಡು ಹೋಗುವಾಗ ಕೆಲವರು ಟಿಕೆಟಿಲ್ಲದೆ ನುಗ್ಗುತಿದ್ದುದರ ಮೇಲೆ ಬಾಗಿಲ ಬಳಿ ಇರುವ ಟಿಕೇಟು ಕಲೆಕ್ಟರಿಗೂ ಅವರಿಗೂ ಚರ್ಚೆಯು ನಡೆದು ಅವನು ಪ್ರತಿಭಟಿಸಿದರೂ ಲಕ್ಷಿಸದೆ ಪ್ರವೇಶ ಮಾಡಿದರಂತೆ ಇವರ ಆಟ ಹೆಚ್ಚುತ್ತಾ ಬಂದುದರ ಮೇಲೆ ಸಿನಿಮಾ ಮಂದಿರದ ಯಜಮಾನರು ದ್ವಾರದಲ್ಲಿ ಹೆಚ್ಚು ಜನರನ್ನು ಕಾವಲಿಡಿಸಿದುದಲ್ಲದೆ ಪೋಲೀಸರ ಸಹಾಯವನ್ನೂ ತೆಗೆದುಕೊಂಡಿದ್ದರಂತೆ ಇಷ್ಟೆಲ್ಲಾ ಏರ್ಪಾಡಾಗಿದ್ದರೂ, ಹುಂಟರು ಕಳೆದ ಶನಿವಾರ ರಾತ್ರಿ ೧೧ ಗಂಟೆಗೆ ನೋಟವನ್ನು ನೋಡಿಕೊಂಡು ಬರುವಾಗ ಕಾವಲಿದ್ದವರನ್ನು ಕೆಣಕಿ ಪರಸ್ಪರ ವಾಗ್ವಾದ ಮಾಡುತ್ತ ಜೂಬಿಲಿ ಗಡಿಯಾರದ ವರೆಗೂ ಬಂದು ಅಲ್ಲಿ ಮುಸಲ್ಮಾನರಿಗೂ ಹಿಂದೂಗಳಿಗೂ ಜಗಳವಾಗಿ ಮೈಸೂರು ಬೇಂಕಿನ ವರೆಗೂ ಹೋರಾಡಿಕೊಂಡು ಬಂದು ಅಲ್ಲಿ ಏಟನ್ನು ಜೋರು ಮಾಡಿದರೆಂದೂ, ಹಿಂದೂಗಳು ಮುಂದಕ್ಕೆ ಓಡಿ ಹೋಗಲೆತ್ನಿಸಲು ಮೊದಲೇ ದೊಣ್ಣೆ ಮೊದಲಾದ ಆಯುಧಗಳ ಸಮೇತ ಸನ್ನದ್ಧರಾದ ಮುಸಲ್ಮಾನರು ಹಿಂದೂಗಳ ಮೇಲೆ ಬಿದ್ದು ತಮ್ಮಾಗಿ ಪ್ರಹರಿಸಿದರೆಂದೂ, ಅದರ ಮೇಲೆ ಹಿಂದೂಗಳ ಕಲ್ಲು ಇಟ್ಟಿಗೆ ಚೂರುಗಳನ್ನೆಸೆಯುತ್ತ ಆತ್ಮ ಸಂರಕ್ಷಣೆ ಮಾಡಿಕೊಳ್ಳುತ್ತಿರುವಷ್ಟರಲ್ಲಿ ದೇವರಾಜ ಸ್ಟೇಷನಿನ ಪೋಲೀಸಿನವರು ತಿಳಿದು ಕೂಡಲೇ ಬಂದು ನೋಡಿ ತಮಗೆ ಅಸಾಧ್ಯವಾಗಿದ್ದುದರ ಮೇಲೆ ರಿಜರ್ವ್ ಪೋಲೀಸಿಗೆ ಫೋನ್ ಮಾಡಿ ಅವನ್ನು [illegible] ಅವರು ಬಂದ ಕೂಡಲೇ ಇತ್ತಂಡದವರೂ ಕಾಲ್ಗೆ ಬುದ್ಧಿ ಹೇಳಿದರೆಂದೂ, ಆಪಾಯವನ್ನು ಹೊಂದಿದ್ದ ಕೆಲ ಹಿಂದೂಗಳನ್ನೂ ಒಬ್ಬಿಬ್ಬ ಮುಸಲ್ಮಾನರನ್ನೂ ಆಸ್ಪತ್ರೆಗೆ ಸಾಗಿಸಿದರೆಂದೂ, ಮಾರನೆಯ ಬೆಳಗ್ಗೆ ಪೆಟ್ಟು ತಿಂದವರ ಹೇಳಿಕೆಯ ಮೇಲೆ ೧೦—೧೨ ಮಂದಿಗಳನ್ನು (ಇವರಲ್ಲಿ ೨-೩ ಹಿಂದೂಗಳೂ ಇರುತ್ತಾರಂತೆ) ಸೆರೆಹಿಡಿದು ಮುಂದಿನ ಕ್ರಮವನ್ನು ಜರಗಿಸುತ್ತಿರುವರೆಂದೂ, ಪೋಲೀಸಿನವರು ಬಾರದಿದ್ದಲ್ಲಿ ಅನೇಕ ಪ್ರಾಣಹಾನಿಯಾಗುತ್ತಿದ್ದಿತೆಂದೂ ತಿಳಿಯಬರುತ್ತದೆ ಅಂದಿನಿಂದಲೂ ಸಿನಿಮಾಮಂದಿರದ ಬಳಿ ಹೆಚ್ಚು ಪೋಲೀಸರು ಕಾವಲಿರಿಸಲ್ಪಟ್ಟಿರುವರು

ಮೈಸೂರಿನ ಸೀತಾರಾಮ ಹರಿದಾಸ ಶಾಸ್ತ್ರಿಯವರು ಮಡಿಕೇರಿಗೆ ಬಂದು ತಾ ೧೯ರಲ್ಲು 'ದೂರ್ವಾಸ ಚರಿತ್ರೆ' ಮತ್ತು ತಾ ೨೧ರಲ್ಲು 'ರುಕ್ಮಿಣಿ ಕಲ್ಯಾಣ' ಎಂಬ ಎರಡು ಕಥೆಗಳನ್ನು ಮಡಿಕೇರಿ ಜಮೀನ್ದಾರ ಸಂಘದ ಹಾಲ್‌ನಲ್ಲಿ ನಡಸಿದರು

ತಾ. ೨೨ನೇ ಗುರುವಾರ ಮಧ್ಯಾಹ್ನ ಮೈಸೂರಿಗೆ ಟ್ರೈನಿನಲ್ಲಿ ಬಂದಿಳಿದ ಮಹಾತ್ಮರು ತಮ್ಮ ಪಾರ್ಟಿಯ ೧೫ ಜನರೊಡನೆ ಮೈಸೂರಿನಲ್ಲಿ ಊಟವನ್ನು ಮುಗಿಸಿಕೊಂಡು ಎರಡು ಘಂಟೆಗೆ ಹೊರಟು ಹುಣಸೂರು, ತಿತಿಮತಿ, ಗೋಣಿಕೊಪ್ಪಲಲ್ಲಿ ನೆರೆದಿದ್ದ ಜನ ಸಮುದಾಯಕ್ಕೆ ದರ್ಶನವನ್ನು ಕೊಡುತ್ತಾ ಕೈಕೇರಿಯಲ್ಲಿ ಬಂದಿಳಿದರು ಅಲ್ಲಿಯ ಹರಿಜನರ ಕೇರಿಯನ್ನು ಸಂದರ್ಶಿಸಿ, ಸಂಜೆ ನೆರೆದಿದ್ದ ಸಭೆಯಲ್ಲಿ ಭಾಷಣ ಮಾಡಿದರು ಹರಿಜನರು ೨೦ ರೂಪಾಯಿಯ ನಿಧಿಯನ್ನು ಅರ್ಪಿಸಿದುದಲ್ಲದೆ ಮಹಾತ್ಮರ ವಿನಂತಿಯನ್ನು ಕೇಳಿದ ಮೇಲೆ ನೆರೆದಿದ್ದ ಸ್ತ್ರೀಯರಲ್ಲಿ ಹಲವರು ಮಹಾತ್ಮರಿಗೆ ಚಿನ್ನದ ಬಳೆ, ಕಡಗ ಮುಂತಾದ ಒಡವೆಗಳ ದಾನ ಮಾಡಿದರು ಬಿಹಾರ್ ಭೂಕಂಪ ಕಷ್ಟ ನಿವಾರಣ ಫಂಡಿಗೂ ಹಣ ಸಂಗ್ರಹಿಸಲಾಯಿತು.

ಕೊಡಗಿನಿಂದ:—

ಕೊಡಗು ಟೆರಿಟೋರಿಯಲ್ ಪಟಾಲಾಮಿನ ಮೊದಲನೆ ತರಬೇತು ಮಾರ್ಚ ತಾ ೫ರಿಂದ ಪ್ರಾರಂಭವಾಗುವುದು.

ವಂದೇ ಮಾತರಂ

ಮನುಷ್ಯ ಜೀವನದ ಜವಾಬ್ದಾರಿ

೫೦೦ ರೂಪಾಯಿಗಳು

ಉತ್ತಮ ಕುಟುಂಬಾಧಾರ! ಸುಲಭ ಸಹಾಯ!

ಸ್ವರಾಜ್ಯ ಕಂಪೆನಿಯು ಇಂಡಿಯಾ ಕಂಪೆನಿಗಳ ಕಾನೂನು ಪ್ರಕಾರ ಬೊಂಬಾಯಿ ಗವರ್ನಮೆಂಟಿನಲ್ಲಿ ರಜಿಸ್ಟರ್ ಮಾಡಲ್ಪಟ್ಟಿದೆ

ಜನಾನುರಾಗಿಗಳೂ, ಸುಪ್ರಸಿದ್ಧರೂ, ಪರಿಪಕ್ವವಾದ ಬುದ್ಧಿಯುಳ್ಳವರೂ ಮತ್ತು ಸಮರ್ಥರಾದ ಡೈರೆಕ್ಟರುಗಳುಳ್ಳ

ಉತ್ತಮವಾದ ಸಂಸ್ಥೆ,

ಇದರಲ್ಲಿ

ಹೆಂಡತಿ ಮಕ್ಕಳಾದಿಯಾಗಿ ತನ್ನನ್ನೇ ಆಶ್ರಯಿಸಿರುವ ಪ್ರತಿಯೊಬ್ಬರಿಗೂ ಆಪದ್ಧನವನ್ನು ಕೂಡಿಸುವುದು ಮೊದಲನೇ ಕಾರ್ಯವಲವೇ?

ಹೌದು!!

ಅಂದ ಮೇಲೆ ದಿ. ಸ್ವರಾಜ್ಯ ಬ್ಯಾಂಕಿಂಗ್ ಮತ್ತು ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್ ಧಾರವಾಡ ಇವರು ಏರ್ಪಾಡು ಮಾಡಿರುವ ಮದುವೆ, ಜನನ ಮತ್ತು ಮರಣ ಎನ್ನುವ ಮೂರು ತರದ ವಿಮಾ ಶಾಖೆಗಳಲ್ಲಿ ಜಾತಿ ಮತ ಭೇದವಿಲ್ಲದೆ ಗಂಡಸರು ಮತ್ತು ಹೆಂಗಸರು ಎಂಬ ವ್ಯತ್ಯಾಸವಿಲ್ಲದ 18ರಿಂದ 55 ವಯಸ್ಸಿನೊಳಗಿರುವ ಪ್ರತಿಯೊಬ್ಬರೂ ವಿಮೆಯನ್ನು ಇಳಿಸಿ 500 ರೂಪಾಯಿನ ವರೆಗೂ ಪ್ರತಿಫಲ ಹೊಂದಲು ಮುಂದುವರಿಯಬೇಕಾದುದು ಮುಖ್ಯ ಕರ್ತವ್ಯ

ಪ್ರವೇಶ ಫೀಸು 5—0—0 ಮಾಸಿಕ ಚಂದಾ 1—0—0

ವಾರ್ಷಿಕ ರುಸುಂ 1—0—0

ಮೆನೇಜಿಂಗ್ ಏಜಂಟ್ಸ್,

ದಿ ಸ್ವರಾಜ್ಯ ಬ್ಯಾಂಕಿಂಗ್ ಮತ್ತು ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್ ಧಾರವಾಡ

NOTES
ಟಿಪ್ಪಣಿಗಳು

ಬರ್ಮಾವು ಹಿಂದೂದೇಶದಿಂದ ಪ್ರತ್ಯೇಕವಾಗಿರಬೇಕೆಂಬು ದಕ್ಕೆ ಕೆಲ್ಲೆಟಿಯವರು ನಾಲ್ಕು ಕಾರಣ ಕೊಟ್ಟರು, ಮೊದ ಲನೆದಾಗಿ ಭೂಗೋಲ ಶಾಸ್ತ್ರ ಪ್ರಕಾರ ಬರ್ಮಾಕ್ಕು ಇಂಡಿ ಯಕ್ಕೂ ಸಂಬಂಧವೇ ಇಲ್ಲವೆಂದರು.

* * *

ಐರ್ಲೆಂಡಿಗೂ ಇಂಗ್ಲೆಂಡಿಗೂ ನಡುವೆ ಸೃಷ್ಟಿ ಕ್ರಮದಿಂದ ಹರಿದಿರುವ ಸಮುದ್ರ ಭಾಗವು ಎಂದೋ ಬತ್ತಿ ಹೋಗಿರಬೇಕು. ಇಲ್ಲದಿದ್ದಲ್ಲಿ, ಐರ್ಲೆಂಡು ಇಂಗ್ಲೆಂಡಿನೊಡನೆ ಸೇರಿರಬೇಕೆಂಬು ದಕ್ಕೆ ಅಷ್ಟು ಆಡಚಣೆಸುವುದೇಕೆ?

* * * *

ಬರ್ಮೀಯರು ಹಿಂದೀಯರಲ್ಲ ಎಂಬುದೂ ಒಂದು ಕಾರಣ. ಹಿಂದೂ ಜನರೂ ಬ್ರಿಟಿಷರಲ್ಲ ಎಂಬ ಕಾರಣದಿಂದ ಉಭಯತರು ದೂರ ದೂರವಾಗಲು ಕಾರಣ ಕೊಡುವುದು ಸಂಗ ತವಾದೀತೆ?

* * * *

ಸರ್. ಸಪ್ರೂ ಅವರಿಗೆ ಬಿರುದು ದೊರೆತುದಕ್ಕಾಗಿ ೧೧೦೦೦ ರೂಪಾಯಿ ವಂತಿಗೆಯಿಂದ ದೊಡ್ಡದೊಂದು ಔತಣ ಕೂಟ ಜರಗಿಸು ತಿದ್ದರು. ಸಪ್ರೂರವರು ಆ ಹಣವನ್ನೆಲ್ಲ ಬಿಹಾರ ಹಾವಳಿಯ ಸಂಕಟ ನಿವಾರಣೆಗೆ ಕೊಡಬೇಕೆಂದರು. ಅನರ್ಥಕರವಾಗಿ ವ್ಯಯವಾಗುತಿದ್ದ ಹಣವು ಉಪಯೋಗಕ್ಕೆ ದೊರೆತಂತಾಯಿತು.

* * * *

ಬಿಹಾರದ ಸಂಕಟ ನಿವಾರಣೆಗೆ ೫ ಕೋಟಿ ರೂಪಾಯಿ ಗಳು ಬೇಕೆಂದು ಸದ್ಯದ ಅಂದಾಜು. ಸಪ್ರೂಗಳಂಥ ಆಳುಆಳು ಮಹಾಪುರುಷರಿಗೆ ಬಿರುದು ಕೊಟ್ಟು, ಅವರಲ್ಲಿ ಪ್ರತಿಯೊಬ್ಬರ ಔತಣ ಕೂಟಕ್ಕೆಂದು ೧೧೦೦೦ ರೂಪಾಯಿ ವಂತಿಗೆ ಕೂಡಿಸಿ, ಔತಣ ಕೂಟ ರದ್ದು ಮಾಡಿ, ಆ ಮೊತ್ತವನ್ನೆಲ್ಲ ಈ ಫಂಡಿಗೆ ಕೊಟ್ಟರೆ ಸರಿಯಾಗುವುದು. ಆದರೆ ೫೦೦ ಮಹಾಪುರು ಷರು ಈ ಬಗೆಯ ಬಿರುದು ಪಡೆದರೆ, ಆ ಬಿರುದುಗಳ ಬೆಲೆ ಏನೂ ಉಳಿಯದ ಕಾರಣ, ಹೀಗೆ ಭಾವಿಸಿ ಫಲವಿಲ್ಲ.

* * * *

ಲಂಡನಿನಲ್ಲಿ ಟಿಕೇರ್ಟ್ ಮೇಯರು ಬಿಹಾರದ ಭೂಕಂಪದ ಫಂಡನ್ನು ಕುರಿತು ಭಾಷಣ ಮಾಡಲು, ಸಹಾಯ ಧನವು ಕೂಡಿ ಬರುತ್ತಲಿದೆ, ಬ್ರಿಟನ್ನು ವಿಶ್ವಬಾಂಧವ್ಯಕ್ಕಾಗಿ ಇಷ್ಟು ಸಿದ್ಧವಾಗಿದೆ ಎಂದು ಟೈಮ್ಸ್ ಪತ್ರ ಬರೆದಿದೆ. ವಿಶ್ವ ವಿಶಾಲತೆಗಾಗಿ ಎಷ್ಟು ಸಿದ್ಧವಾಗಿದೆ ಎಂದೆಂದರೂ ಟೈಮ್ಸ್ ಹೇಳ್ಬಹುದೇ?

—ಟಿ—ಟಿ—ಟಿ.

ಕನ್ನಡ ಗ್ರಂಥಗಳಿಗೆ ಬಹುಮಾನ

ಮದ್ರಾಸು ಸ್ಕೂಲ್ ಬುಕ್ ಅಂಡ್ ಲಿಟರೇಚರ್ ಸೊಸೈಟಿ ಯವರು ಕಳೆದ ೧೯೩೩ನೆಯ ಇಸವಿಯಲ್ಲಿ ದೇಶಭಾಷಾ ಗ್ರಂಥಗಳಿಗೆ ಒಟ್ಟು ೧,೧೧೩ ರೂಪಾಯಿಗಳನ್ನು ಸಹಾಯ ದ್ರವ್ಯವಾಗಿ ಹಂಚಿದ್ದರು. ಇದರೊಳಗೆ ಮಿ। ರಾ। ವೆಂಕೋಬಾ ಚಾರ್ಯರ ನವೀನ ವಿದ್ಯಾಭ್ಯಾಸ—ಭಾಗ ೧ಕ್ಕೆ ತದನಂತರ ಸಲ್ಲಿಸಿದ ೮೩ ರೂಪಾಯಿಗಳು ಸಹಿತ ಕನ್ನಡಕ್ಕೆ ಮಾತ್ರ ಒಟ್ಟು ೬೩೩ ರೂಪಾಯಿಗಳನ್ನು ಕೊಟ್ಟಿದ್ದರು. ಈ ವರುಷ ಅಂದರೆ ೧೯೩೪ನೇ ಫೆಬ್ರವರಿ ೫ರಂದು ನಡೆದ ವಾರ್ಷಿಕ ಸಭೆಯಲ್ಲಿ ಈ ಕೆಳಗೆ ಕಂಡ ಗ್ರಂಥಗಳಿಗೆ ಈ ಮುಂದೆ ಹೇಳುವ ಪ್ರಕಾರ ಸಹಾಯ ದ್ರವ್ಯವು ಸಲ್ಲಿಸಲಾಗಿದೆಯೆಂದು ತಿಳಿದು ಬರುತ್ತಿದೆ.

೧. ಬಾಹುಬಲಿಯ ನಾಗಕುಮಾರ ಚರಿತ್ರೆ (ಶಾಂತಿ ರಾಜ ಶಾಸ್ತ್ರಿಗಳು) ರೂ ೧೦೦, ೨ ಭಕ್ತಿವಿಜಯ (ಬೇಲೂರು ಕೇಶವದಾಸರು) ರೂ ೧೦೦, ೩ ಆಹಾರ ವಿಜ್ಞಾನ (ಡಿ ಕೆ ಭಾರದ್ವಾಜರು) ರೂ ೫೦, ೪ ಬಾಲಾದಿತ್ಯ (ಪಿ ರಾಮಕೃಷ್ಣ ರಾಯರು) ರೂ ೪೦, ೫ ಕೃಷ್ಣಗಾರುಡಿ, ಕದಿರದಾಸ, ಮಾರ್ಕಂಡೇಯ ಮತ್ತು ಕೃಷ್ಣಪಾರಿಜಾತ (ಬೆಳಾವೆ ನರಹರಿ ಶಾಸ್ತ್ರಿಗಳು) ರೂ ೪೦, ಶಾರದೆಯ ಸಂಸಾರ (ಜಹಗೀರುದಾ ರರು) ರೂ ೩೦, ೭ ವಿನೋದ ಚಿತ್ರಗಳು (ಮಿತ್ರಮಂಡಳಿ, ಮಂಗಳೂರು) ರೂ. ೨೫, ೮ ನವೀನ ವಿದ್ಯಾಭ್ಯಾಸ—ಭಾಗ ೨ (ವೆಂಕೋಬಾಚಾರ್ಯರು) ರೂ ೨೫, ೯ ನವಿಲುಗರಿ (ಮನೋಹರ ಗ್ರಂಥಮಾಲೆ) ರೂ ೨೫, ೧೦. ಪಂಚರಾತ್ರ (ಆಳಸಿಂಗರಾಚಾರ್ಯರು) ರೂ ೨೫, ೧೧. ಪಂಚತಂತ್ರ (ನಂದರ ಶಾಸ್ತ್ರಿಗಳು) ರೂ. ೨೫, ೧೨ ಬಾಲಚರಿತ (ಶೇಷಯ್ಯಂಗಾ ರ್ಯರು) ರೂ ೨೫, ೧೩ ಕುರುಡ ಧರ್ಮ (ನಾಡಗೇರ್) ರೂ ೨೫, ೧೪. ವಿಜಯನಗರ ಸಾಮ್ರಾಜ್ಯ (ಜೋರೆ ಮತ್ತು ಕುಲ ಕರ್ಣಿ) ರೂ ೨೦, ಮತ್ತು ೧೫ ಸುದರ್ಶನ (ಆನಂದ ಕಂದ) ರೂ. ೨೦.

[illegible]

ಕೊಯಮತ್ತೂರು (ಅಹಮದ್) ನಗರದ ಮಿಸ್ ಪ್ರಾಸ್ ಕಮಿಟಿಯವರು ಬಿಹಾರ್ ಭೂಕಂಪ ನಿಧಿಗೆ ಒಂದು ಸಾವಿರ ರೂಪಾಯಿಗಳ ಸಹಾಯ ಧನ ಕಳುಹಿಸುವರೆಂದು ಪ್ರಕಟವಾಗಿದೆ.

ಅಖಿಲ ಭಾರತ ಆಯವ್ಯಯದ ಅಂದಾಜು ಪಟ್ಟಿಯು ಎಸೆಂಬ್ಲಿಯ ಮುಂದೆ ಬಂದು ಹಾಯಿತು. ಸುಮಾರು ಮೂರು ಕೋಟಿ ರೂಪಾಯಿಗಳ ಅಭಾವವು ತೋರುತ್ತಿದೆ. ಮಧ್ಯ ಪ್ರಾಂತ್ಯದ ಆಯವ್ಯಯದ ಪಟ್ಟಿಯಲ್ಲಿ ಸುಮಾರು ೪ ಲಕ್ಷಗಳ ಕೊರತೆಯು, ಹಾಗೆಯೇ ಮದ್ರಾಸ್ ಕೌನ್ಸಿಲಿನಲ್ಲಿಯೂ ಕೊರತೆಯು, ಬೊಂಬಾಯಿಯಲ್ಲಿ "ಸಮತೂಕ", ಬಂಗಾಳದಲ್ಲಿ ವ್ಯಯಾಧಿಕ್ಯ, ಹೀಗೆ ವಿವಿಧ ತೆರವಾಗಿದೆ.

ಬಿಹಾರ್ ಭೂಕಂಪ ಪ್ರದೇಶದ ಹಲವು ಕಡೆಗಳಲ್ಲಿ ಮಹಾ ಮಾರಿಯೂ, ಮಾರಿಬೇನೆಯೂ ಕಲಿಯುತ್ತಿ ಹಬ್ಬುತ್ತಿದೆಯಾಗಿ ಅಲ್ಲಿಯ ಸೆಂಟ್ರಲ್ ರಿಲೀಫ್ ಕಮಿಟಿಯ ಪ್ರಕಟಣಾ ಶಾಖಾಧಿಕಾರಿಗಳು ತಿಳಿಸು ತ್ತಾರೆ.

ಶೋಲಾಪುರದ ಗಿರಣಿ ಮಾಲಿಕರೆಲ್ಲ ಕೆಲಸಗಾರರ ಮಜೂರಿ ಯನ್ನು ಸೇಕಡಾ ೧೨॥ಯಷ್ಟು ಕಡಿಯಬೇಕೆಂದು ನಿರ್ಧರಿಸಿದ ಫಲ ವಾಗಿ ಮಹಾಮುಷ್ಕರಗಳು ನಡೆದು, ಪೋಲೀಸರ ಉಸ್ತುವಾರಿಯಿಂದ ಗಲಭೆಗಳ ಗಾಬರಿಯೊಂದು ತಪ್ಪಿದರೂ, ಮುಷ್ಕರವನ್ನು ನಿಂತಿಲ್ಲ. ಕೂಲಿಗಾರರ ನಿಷೇಧ ಸಭೆಗಳಾಗುತ್ತಿವೆ. ಮುಷ್ಕರವನ್ನು ಕೊನೆಗಾಣಿ ಸುವ ಪ್ರಯತ್ನಗಳು ನಡೆಯುತ್ತಿವೆ.

೧೯೩೦ ಮೇ ಇಂಗ್ಲಾಂಡಿಗೆ ತೆರಳಲಿರುವ ಮಾನ್ಯ ವೈಸರಾ ಯರ ಸ್ಥಾನದಲ್ಲಿ ನೇಮಿಸಲ್ಪಟ್ಟ ಸರ ಜಾರ್ಜ್ ಸ್ಟೇನ್ಲಿಯವರು ಅದೇ ತಾ, ೧೬ರಲ್ಲಿ ಚಾರ್ಜನ್ನು ವಹಿಸುವರು.

"ಬಿಹಾರ್ ಭೂಕಂಪ ಸಂಕಷ್ಟ ನಿವಾರಣಾ ಕಾರ್ಯದ ಸಮಯ ದಲ್ಲಿ ಪಂಡಿತ ಜವಾಹರಲಾಲರನ್ನು ದಸ್ತಗಿರಿ ಮಾಡಿ ಕಾರಾಗೃಹದಲ್ಲಿರಿ ಸಿದ ಸಂಬಂಧವಾಗಿ ಪಂಡಿತರಿಗೆ ಸಹಾನುಭೂತಿಸೂಚಕವಾಗಿ ಈ ಸಭೆಯು ಮುಂದುವರಿಸಲ್ಪಟ್ಟಿದೆ" ಎಂದು ನಾಗಪುರ ಮುನಿಸಿಪಾಲಿ ಟಿಯು ಠರಾವಾಗಿದೆ.

ಸಾರ್ವಜನಿಕ ಕಾರ್ಯಗಳ ಸಲುವಾಗಿ ನೋಡ್ಯಯನ್ನೇರ್ಪಡಿ ಸುವುದು ಅನ್ಯಾಯವೆಂದು ಬಂಗಾಳ ಕೌನ್ಸಿಲಿನಲ್ಲಿ ಅರ್ಥಸಚಿವರು ಉದ್ಘೋಷಿಸಿರುವರು.

ಭೂಕಂಪ ಸಂಕಷ್ಟದಿಂದ ಬಳಲುತ್ತಿರುವ ಮೊಂಘೀರದಲ್ಲಿ ಪುನರ್ಘಟನಾ ಕಾರ್ಯವು ಅಲ್ಲಿಂದ ಸಾಗುತ್ತಲಿದೆ. ಕಳೆದೊಂದು ಪಕ್ಷದ ಅವಧಿಯಲ್ಲೇ ೧೩೬೧ ಗುಡಿಸಲುಗಳು ರಿಲೀಫ್ ಕಮಿಟಿಯ ಸಹಾಯದಿಂದ ಕಟ್ಟಿಸಲಾಗಿವೆ. ರಾಶಿಯಾಗಿ ಬಿದ್ದ ಮನೆಮಠಗಳ ಅವಶೇಷಗಳನ್ನು ತೆಗೆವ ಕಾರ್ಯವು ತ್ವರೆಯಿಂದ ಸಾಗುತ್ತಿದೆ.

ಶ್ರೀ ಸುಭಾಷ್ ಬೋಸರು ಜಿನೀವದಿಂದ ಬಾಬು ರಾಜೇಂದ್ರ ಪ್ರಸಾದರೊಡನೆ ತಂತಿ ಮೂಲಕ "ಭೂಕಂಪ ನಿಧಿಗಾಗಿಯೂ ಹರಿಜನ ನಿಧಿಗಾಗಿಯೂ ವಿದೇಶದಲ್ಲಿ ಧನಸಂಗ್ರಹ ಮಾಡಲು ಮಹಾತ್ಮಾಜೀ ಯವರು ನನಗೆ ಅಧಿಕಾರ ಕೊಡುವರೇ?" ಎಂದು ಕೇಳಿರುವರು.

ಸಂಸ್ಥಾನದ ನಾಯಕರೂ ಶ್ರೀಮಂತರೂ ಸೇರಿದ ವಂತಿಗೆ ಹಣವು ಇಟಲಿಯ ಶಿಲ್ಪಿಯಿಂದ ರಚಿಸಲ್ಪಟ್ಟ ಘನತೆವೆತ್ತ ಮಹಾರಾಜರ ಪ್ರತಿಮೆಯನ್ನು ಅಲ್ಲಿಯ ರಾಜಧಾನಿಯಲ್ಲಿ ಮಾನ್ಯ ವೈಸ ರಾಯರು ತಾ ೨೪ರಲ್ಲಿ ಅನಾವರಣ ಮಾಡಿದರು. "ತಮ್ಮ ೪೬ ವರ್ಷ ಗಳ ರಾಜ್ಯಭಾರದಲ್ಲಿ ಪ್ರಜಾಹಿತಕರವಾದ ಅನೇಕ ಸುಧಾರಣೆಗಳನ್ನು ಜಾರಿಗೆ ತಂದು ಇತ್ತೀಚೆಗೆ ಸಂಸ್ಥಾನದ ಬೇಸಾಯದ ವಿಸ್ತಾರಣಕ್ಕನು ಕೂಲವಾಗಲು ಹೊಸ ಕಾಲುವೆಯನ್ನು ತೋಡಿಸಿದ ಸ್ಮಾರಕವಾಗಿ ರಾಜ ಭಕ್ತ ಪ್ರಜೆಗಳಿಂದ ಈ ಪ್ರತಿಮೆಯ ಕಾಣಿಕೆ" ಎಂದು ಪ್ರಧಾನ ಸಚಿವ ಸರ್ ಮಾನುಭಾಯಿ ಮೆಹತಾರವರು ವಿವರಿಸಿದರು. ಈ ಕಾಲುವೆಗೆ ದೂರದ ಸಟ್ಲೆಜ ನದಿಯಿಂದ ನೀರನ್ನೊದಗಿಸಿಕೊಳ್ಳುತ್ತಿರುವರು.

ವೈಸರಾಯರ ಭೂಕಂಪ ನಿಧಿಯು ರೂ ೨೪ ಲಕ್ಷ ೧೯೦೦೦ಕ್ಕೆ ಮುಟ್ಟಿತು. ಇದರಲ್ಲಿ ದರ್ಭಾಂಗಾ ಮಹಾರಾಜರ ರೂ ೧ ಲಕ್ಷವೂ, ಹಜಾರಿಬಾಗಿನ ರಾಮ್‌ಗೋಪಾಲ ಪಾರ್ಟ್ನರ್ ಎಸ್ಟೇಟಿನವರ ರೂ ೪೦ ಸಾವಿರವೂ, ಗೊಂಡಾಲದ ಮಹಾರಾಜ ಕುಮಾರರ ರೂ ೧೦ ಸಾವಿರವೂ ಕೂಡಿವೆ.

ಸಂಯುಕ್ತ ಪ್ರಾಂತ್ಯದ ೧೯೩೪—೩೫ನೇ ವರ್ಷದ ಆಯ- ವ್ಯಯದ ಪಟ್ಟಿಯಲ್ಲಿ ೧೮ ಲಕ್ಷ ರೂಪಾಯಿಗಳಷ್ಟು ಕೊರತೆಯು ತೋರು ತ್ತಿದೆಯಾಗಿ ಪ್ರಕಟವಾಗಿದೆ.

ಕಲ್ಕತ್ತದ ಕಿಂಗ್ಸ್ ರೋಯಲ್ ರೈಫಲ್ಸಿನ ಪ್ರೈವೆಟ್ ಜಾರ್ಜ್ ಲಿಯೋನಾರ್ಡ್ ಎಂಬ ಸೋಲ್ಜರನು ತಾನಾಗಿ ಗುಂಡಿಟ್ಟು ಅಗಲೇ ತೀರಿದನು.

ಅಖಿಲ ಭಾರತ ಕಾರ್ಯಕಾರಿ ರಾಜಕೀಯ ಪರಿಷತ್ತು ಒಂದು ನಾಗಪುರದಲ್ಲಿ ಜರಗುವುದೆಂದು ಶ್ರೀ ಅರ್ ಎಸ್ ರುಯಿಕರ್ ಅವರು ತಿಳಿಸಿರುವರು.

ಶ್ರೀ ಕೆ. ಎ. ಕೃಷ್ಣಯ್ಯರು, ಕೆಲವು ಸರಕುಗಳ ರವಾನೆ ದರ ಗಳನ್ನು ಕೂಡಿಸಿ ಕಳಿಸಿರುವರು.

ಕಾಶ್ಮೀರದಲ್ಲಿ ಬಾಲ್ಯ ವಿವಾಹವನ್ನು ತಡೆವ ಉದ್ದೇಶದಿಂದ ೧೪—೧೬ ವರ್ಷಗಳ ಕೆಳಗಿನ ವಧೂವರರನ್ನು ಒಂದುಗೂಡಿಸಿದರೆ ಶಿಕ್ಷೆ ವಿಧಿಸಲ್ಪಡುವುದೆಂದೂ ಪ್ರಕಟಿಸಲಾಗಿದೆ.

ಬಂಗಾಳದಲ್ಲಿ ೧೯೩೧ರಲ್ಲಿ ೨೨೪೧ ಡಕಾಯಿತಿಗಳು ನಡೆದುವು; ೧೯೩೩ರಲ್ಲಿ ೧೬೧೨ರಷ್ಟಾಗಿವೆ.

ಕಾಶಿಯಲ್ಲಿ ತಮ್ಮ ಸರ್ಕಸ್ ಪ್ರಯೋಗಗಳನ್ನು ನಡೆಸುತ್ತಿದ್ದ "ಅಸೋಸಿಯೇಟೆಡ್ ರಷ್ಯನ್ ಸರ್ಕಸ್"ನವರ ಡೇರೆಗೆ ಬೆಂಕಿ ಬಿದ್ದು ೩೦ ಸಾವಿರ ರೂಪಾಯಿಗಳ ನಷ್ಟ ಸಂಭವಿಸಿ ೧೫ ಕಾಡು ಮೃಗಗಳೂ ಬೆಂಕಿಗೆ ಆಹುತಿಯಾಗಿವೆ.

ವಿದೇಶಗಳಿಂದ ಕಡಿಮೆ ದರದ ಅಕ್ಕಿಯು ಹಿಂದೂದೇಶಕ್ಕೆ ಬರುವುದನ್ನು ತಡೆದು ಹಾವಳಿಯನ್ನು ನಿಲ್ಲಿಸುವ ಕುರಿತಾಗಿ ಸರಕಾರದ ನಿರ್ಧಾರವೇನಿದೆಯೋ ಅದು ಅನ್ನು ಅಲ್ಪಾವಧಿಯಲ್ಲೇ ಪ್ರಕಟಗೊಳಿಸ ಲ್ಪಡುವುದೆಂದು ಎಸೆಂಬ್ಲಿಯಲ್ಲಿ ಆಶ್ವಾಸನೆಯಾಗಿದೆ.

ಫೆಬ್ರುವರಿ ತಾ ೨೮ರ ತನಕ ಬಿಹಾರ್ ಭೂಕಂಪ ಸಂಕಷ್ಟ ನಿವಾ ರಣಾ ಕಮಿಟಿಯ ನಿಧಿಯು (ಬಾಬು ರಾಜೇಂದ್ರ ಪ್ರಸಾದರ ನಿಧಿ) ರೂ ೧೬ ೪೬ ಲಕ್ಷದಷ್ಟಾಯಿತೆಂದು ತಿಳಿದುಬರುತ್ತದೆ.

ಬರೇಲಿ ಜೈಲಿನಲ್ಲಿ ಕಾರಾಗೃಹವಾಸವನ್ನನುಭವಿಸುತ್ತಿರುವ ಶ್ರೀ ಎಮ್ ಎನ್ ರೋಯಿಯವರು ಆರೋಗ್ಯದಲ್ಲಿರುವರೆಂದೂ ಹೃದ್ರೋ ಗದ ಚಿಹ್ನೆಗಳು ತೋರಿವೆಯೆಂದೂ, ೨೩ ರತ್ತಲುಗಳಷ್ಟು ದೈಹಿಕವು ಕಡಿಮೆಯಾಗಿರುವುದೆಂದೂ ವಾರ್ತೆಯಿದೆ. ಅವರ ಬಿಡುಗಡೆಗಾಗಿ ಸರಕಾರಕ್ಕೆ ಎಸೆಂಬ್ಲಿ ಮೆಂಬರರಿಬ್ಬರು ನಿವೇದಿಸಿಕೊಂಡಿರುವರು (ರೋಯಿಯವರು ಕಮ್ಯೂನಿಸ್ಟರಾಗಿ ೬ ವರ್ಷದ ಶಿಕ್ಷೆಗೆ ಗುರಿಮಾಡಲ್ಪ ಟ್ಟಿರುವರು)

ಹತ್ತೊಂಭತ್ತು ಮಂದಿ ರಾಜಕೀಯ ಕೈದಿಗಳು ಅಲಿಪುರ ಸೆಂಟ್ರಲ್ ಜೈಲಿನಲ್ಲಿ ಮಾನವಯೋಗ್ಯವಾದ ಆಹಾರ ಪತ್ರಿಕೆ, ಬರವಣಿಗೆಯ ಸಾಮಾನುಗಳು ಇವುಗಳ ಅಭಾವದ ನಿಷೇಧಾರ್ಥ ಇದೇ ತಾ ೧೫ರಿಂದ ಉಪವಾಸವ್ರತವನ್ನು ಕೈಕೊಂಡಂತೆಯೂ ಅಧಿಕಾರಿಗಳು ಈ ಕೋರಿಕೆ ಗಳು ಪೂರೈಸಲ್ಪಡಲು ಅಸಾಧ್ಯವೆಂದು ತಿರಸ್ಕರಿಸಿ ಸುಮ್ಮನೆ ಕುಳಿ ತಂತೆಯೂ ಪ್ರಕಟವಾಗಿದೆ.

ಬೆಳಗಾಂವಿಯ ದೈನಿಕ ಪತ್ರಿಕೆಯಾದ "ಸಂಯುಕ್ತ ಕರ್ನಾಟಕ"ವು ಮುದ್ರಣಾಲಯ ಶಾಸನದಂತೆ ರೂ ೧ ಸಾವಿರದ ನಗದು ಹೊಣೆ ತೆರ ಬೇಕಾಗಿ ಅಲ್ಲಿಯ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರ ಅಪ್ಪಣೆಯಾಯಿತು. ಪತ್ರಿ ಕೆಯ ಪ್ರಕಟಣಾ ಕಾರ್ಯವು ನಿಲ್ಲಿಸಲ್ಪಟ್ಟಿದೆ.

ಗಾಂಧಿಜಿಯವರು ಚಿಟಾಗಾಂಗಕ್ಕೆ ಹೋಗಲಿದ್ದ ತಮ್ಮ ಕಾರ್ಯ ಕ್ರಮವನ್ನು ರದ್ದುಗೊಳಿಸಿರುವರೆಂದು ಕೇಳಿ ಅಲ್ಲಿಯ ನೂರ ಮಂದಿ ಯುವಕರು —ಮಹಾತ್ಮಾಜಿಯವರು ಕರ್ನಾಟಕ ಪ್ರಾಂತ್ಯದಲ್ಲಿ ಸಂಚರಿ ಸುವಷ್ಟು ಕಾಲ (ಫೆಬ್ರುವರಿ ತಾ ೨೨ರಿಂದ ಮಾರ್ಚ್ ೬) ಉಪವಾಸ ಕೈ ಕೊಳ್ಳುವಂತಹ ಘೋರ ಪ್ರತಿಜ್ಞೆಯನ್ನು ಕಾರ್ಯರೂಪಕ್ಕೆ ಹಚ್ಚಿರು ವರು.

ಚಿಂತಾಮಣಿ ಕನ್ಯಾಪಹಾರ ಮೊಕದ್ದಮೆಯಲ್ಲಿ ಶಿಕ್ಷೆ ವಿಧಿಸಲ್ಪಟ್ಟ ನಲ್ವರು ಅಪರಾಧಿಗಳೂ ಮಾಡಿರುವ ಅಪೀಲು ಇದೇ ತಾ ೫ ೬ ೭ನೇ ದಿನಗಳಲ್ಲಿ ಹೈಕೋರ್ಟಿನಲ್ಲಿ ವಿಚಾರಣೆಯಾಗುವುದು.

ಪಿಟ್ಸ್‌ಬರ್ಗ್ ಬಳಿ ಪ ಯಾಣಿಕರನ್ನೊಯ್ಯುತ್ತಿದ್ದ ರೈಲು ಬಂಡಿಯು ಒಂದು ಸಂಕದ ಮೇಲೆ ನಡೆಯುತ್ತಿದ್ದಾಗ ಹಳಿ ತಪ್ಪಿ ಬಿದ್ದು, ಐದು ಜನ ಹತರಾಗಿರುವರು, ನೂರಾರು ಜನರು ಗಾಯಗೊಂಡಿರು ವರು.

ದಕ್ಷಿಣ ಕನ್ನಡ.

ಮಂಗಳೂರು. ಹಿಂದೆ ಇಲ್ಲಿಯ ಗೌಡ ಸಾರಸ್ವತ ಸಮಾ ಜದ ಮುಂದಾಳುಗಳಲ್ಲೊಬ್ಬರೂ ಪುರಪ್ರಮುಖರೂ ಪ್ರಸಿದ್ಧ ವಕೀ ಲರೂ ಆಗಿದ್ದು ಕೆಲವರ್ಷಗಳ ಹಿಂದೆ ನಿವೃತ್ತರಾಗಿ ಮದರಾಸಿಗೆ ತೆರಳಿ ಅಲ್ಲಿ ವಸತಿ ಮಾಡಿಕೊಂಡಿದ್ದ ರಾ। ಅಡಿಗೆ ಶ್ರೀನಿವಾಸ ರಾಯರು ಕಳೆದ ಸೋಮವಾರ ತಾ ೨೬—೨—೩೪ರಲ್ಲಿ ಅಪರಾಹ್ನ ಘಂಟೆ ೩ಕ್ಕೆ ತಮ್ಮ ೭೩ನೇ ವಯಸ್ಸಿನಲ್ಲಿ ಕಾಲವಾದರು. ಶಾಲಾಧ್ಯಾಪಕರಾಗಿ ಇವರು ತಮ್ಮ ಜೀವನವನ್ನಾರಂಭಿಸಿ ತಮ್ಮ ತೀಕ್ಷ್ಣ ಬುದ್ಧಿ ಸಾಮರ್ಥ್ಯ ದಿಂದ ಮುಂದೆ ವಕೀಲ ವೃತ್ತಿಗೆ ತರಬೇತಿ ಹೊಂದಿ ಮಂಗಳೂರಲ್ಲಿ ಅನೇಕ ವರ್ಷಗಳ ವರೆಗೆ ವಕಾಲತ್ತನ್ನು ನಡೆಸಿ ಹೆಸರು ಪಟ್ಟಿದ್ದರು. ಇಲ್ಲಿಯ ಕೆನರಾ ಹೈಸ್ಕೂಲಿನ ಸ್ಥಾಪಕರಲ್ಲಿ ಇವರೊಬ್ಬರು. ಗೌಡ ಸಾರಸ್ವತ ಸಮಾಜದ ಎಲ್ಲ ಸಾರ್ವಜನಿಕ ಸಮಾರಂಭಗಳಲ್ಲೂ ಇವರಿಗೆ ಅಗ್ರಸ್ಥಾನ ವಿತ್ತು. ಊರಿನಲ್ಲಿ ಅನೇಕರಿಗೆ ಹೋಮಿಯೋಪತಿ ಔಷಧವನ್ನು ಧರ್ಮಾರ್ಥವಾಗಿ ಹಂಚುತಿದ್ದರು. ಎಲ್ಲ ಕಾರ್ಯಗಳಲ್ಲೂ ಕ್ಲಪ್ತತೆ, ಮಿತಿ ಇವುಗಳನ್ನು ತಪ್ಪದೆ ಆಚರಿಸುತಿದ್ದು, ಅನೇಕರಿಗೆ ಆದರ್ಶರಾಗಿದ್ದರು. ಇವರ ಮಿತಾಹಾರವೇ ಮೊದಲಾದ ಆರೋಗ್ಯಪಾಲನೆಯ ಕ್ರಮಗಳು ಹಲವರಿಗೆ ಆಶ್ಚರ್ಯಕರವಾಗಿದ್ದರೂ ಅನುಕರಣೀಯವಾಗಿದ್ದುವು. ಪ್ರಸಿದ್ಧ ಉಪನ್ಯಾಸಕರೂ, ಬೋಧಕರೂ ಆಗಿದ್ದು ಗ್ರಂಥಪಠನೆಯ ಪ್ರೇಮವು ಇವರಲ್ಲಿ ವಿಶೇಷ. ಇವರ ಮರಣದಿಂದ ನಮ್ಮ ಜಿಲ್ಲೆಯು ಒಬ್ಬ ಪ್ರಸಿದ್ಧ ಪುರುಷರನ್ನು ಕಳಕೊಂಡಂತಾಯಿತು. ಅವರ ಕುಟುಂಬ

ಅವರ ಮುಖದಲ್ಲಿ ನಾವು ನಮ್ಮ ಸಭೆಗಳು, ಪರಮಾತ್ಮನು ನ್ಯಾಯ ಅಕ್ಕೆ ಶಾಂತಿಯನ್ನು ಕರುಣಿಸಲಿ!

ಇದೇ ಮಾರ್ಚ ತಾ. ೪ನೇ ಆದಿತ್ಯವಾರ ಘಂಟೆ ೩-೪ಕ್ಕೆ ಸರ್ವ ಪ್ರಯೋಜನಾರ್ಥವಾಗಿ ನಡೆಸಲ್ಪಡುವ "ಅರ್ಕಚಿಕಿತ್ಸಾಭವನ" ಎಂಬ ವೈದ್ಯಶಾಲೆಯ ೧೬ನೇ ವಾರ್ಷಿಕೋತ್ಸವವು ನಮ್ಮ ಮುನ್ಸಿಪಲ್ ವೈಸ್ ಚೇರ್ಮನ್‌ರಾದ ಮ ರಾ. ಎಸ್. ಮಾಧವ ರಾವ್, ಅವರ್ಗಳ ಇವರ ಅಧ್ಯಕ್ಷತೆಯಲ್ಲಿ ಜರಗುವುದು

ಇದೇ ಮಾರ್ಚ ತಾ. ೧೮ಲ್ಲು ಸಾಯಂಕಾಲ ಘಂಟೆ ೪-೩೦ಕ್ಕೆ ಕರ್ನಾಟಕ ಗ್ರಂಥಾಲಯದ ೪ನೇ ವಾರ್ಷಿಕೋತ್ಸವವು ಗಣಪತಿ ಹಾಯ್ ಸ್ಕೂಲಿನ ಕನ್ನಡ ಪಂಡಿತರಾದ ರಾ। ಯು. ರಾಮಪ್ಪನವರ ಅಧ್ಯಕ್ಷತೆಯಲ್ಲಿ ಜರಗಿತು.

ಶ್ರೀ ಚಂದ್ರಕಲಾ ಕರ್ನಾಟಕ ನಾಟಕ ಮಂಡಲಿಯವರು ತಾ, ೧೦—೩—೩೪ನೇ ಶನಿವಾರ "ಗೌತಮ ಬುದ್ಧ" ಎಂಬ ನೂತನ ಐತಿಹಾಸಿಕ ನಾಟಕವನ್ನು ಅಭಿನಯಿಸುವರೆಂದು ತಿಳಿದುಬರುತ್ತದೆ

ಮದರಾಸು ಕೃಷಿ ಇಲಾಖೆಯ ಪ್ರದರ್ಶನ ಮೋಟಾರ ಬಂಡಿಗಳು ಈ ಕೆಳಗೆ ಸೂಚಿಸಿದ ತಾರೀಕುಗಳ ಮೇರೆಗೆ ದಕ್ಷಿಣ ಕನ್ನಡ ಜಿಲ್ಲೆಯ ಬೇರೆ ಬೇರೆ ಸ್ಥಳಗಳನ್ನು ಸಂದರ್ಶಿಸಿ ಪ್ರದರ್ಶನಗಳನ್ನು ನಡೆಸಲಿಕ್ಕಿದೆ. ಜಿಲ್ಲೆಯ ರೈತರೆಲ್ಲರು ದಯಮಾಡಿ ಬಂದು ಪ್ರದರ್ಶನಗಳನ್ನು ಕಂಡು ಕೃಷಿ ಅನುಭವಗಳನ್ನು ಪಡೆಯಬೇಕಾಗಿ ಶ್ರೀ ಕೆ ಟಿ ಆಳ್ವ, ಡಿಪ್ಯುಟಿ ಡೈರೆಕ್ಟರ್, ಕೃಷಿ ಇಲಾಖೆ, ಮಲಬೇರು ಇವರು ಅಪೇಕ್ಷಿಸುತ್ತಾರೆ ಮಾರ್ಚ ತಾ ೪—೫ ಮಂಗಳೂರು ತಾ. ೬ ಕಟೀಲ್ ತಾ ೭—೮ ಮೂಡಬಿದ್ರೆ ತಾ ೯—೧೦ ಕಾರ್ಕಳ ತಾ. ೧೧—೧೨ ಉಡುಪಿ ತಾ ೧೩ ಕುಂದಾಪುರಕ್ಕೆ ಪ್ರಯಾಣ. ತಾ ೧೪—೧೫ ಕುಂದಾಪುರ. ತಾ ೧೬ ಹೆಬ್ರಿ ತಾ ೧೭—೧೮ ಬೆಳ್ತಂಗಡಿ, ತಾ. ೧೯—೨೦ ಬಂಟ್ವಾಳ ತಾ. ೨೧ ಪಾಣೆಮಂಗಳೂರು ತಾ. ೨೨ ವಿಟ್ಲ ತಾ ೨೩ ಮಂಜೇಶ್ವರ, ತಾ. ೨೪-೨೫ ಕಾಸರಗೋಡು. ತಾ ೨೬ ಪುತ್ತೂರಿಗೆ ಪ್ರಯಾಣ. ತಾ ೨೭ ೨೮ ಪುತ್ತೂರು ತಾ ೨೯ ಸುಳ್ಯ ತಾ. ೩೦ ೩೧ ಮಲಬೇರಿಗೆ ಪ್ರಯಾಣ.

ಮಂಗಳೂರಿನ ಗಾಂಧಿ ಸ್ವಾಗತ ಸಮಿತಿಯ ಕಾರ್ಯದರ್ಶಿಗಳಾದ ರಾ। ಬಿ. ಕೋಚಪ್ಪ ಭಂಡಾರಿಯವರು ಗಾಂಧಿಜಿಯವರ ಜತೆಯಲ್ಲಿ ಉತ್ತರ ಕನ್ನಡಾ ಜಿಲ್ಲೆಗೆ ಪ್ರಯಾಣ ಮಾಡಿರುವರು.

ಸ್ಥಳೀಯ ಗವರ್ನಮೆಂಟ್ ಕಾಲೇಜಿನ ಯೂನಿಯನ್ ಸೊಸೈಟಿಯ ವಾರ್ಷಿಕೋತ್ಸವವು ನಿನ್ನೆ ಸಾಯಂಕಾಲ ಸಂಭ್ರಮದಿಂದ ಜರಗಿತು

ಸೈಂಟ್ ಎಗ್ನೆಸ್ ಕೊಲೇಜಿನ ವಿದ್ಯಾರ್ಥಿಗಳು ನಿನ್ನೆ ಸಾಯಂಕಾಲ ಘಂಟೆ ೬ಕ್ಕೆ ಬಿಹಾರ್ ಭೂಕಂಪ ನಿಧಿಯ ಸಹಾಯಾರ್ಥ ಕೊಲೇಜಿನ ಹೋಲಿನಲ್ಲಿ ಒಂದು ಇಂಗ್ಲೀಷ್ ನಾಟಕವನ್ನಾಡಿ ತೋರಿಸಿದರು.

ಮಿಸ್ರೆಸ್ಸ್ ಕ್ಲಾಸಸ್ ಮಿಶನ್ ಮತ್ತು ಶ್ರೀ ಎಚ್ ನಾರಾಯಣ ರಾಯರ ಸಂಗೀತ ಶಾಲೆಯ ಸಹಾಯಾರ್ಥವಾಗಿ ಇಲ್ಲಿಯ ನವಜೀವನ ನಾಟಕ ಮಂಡಳಿಯವರು ಇದೇ ಬರುವ ತಾ ೮ನೇ ಗುರುವಾರ ರಾತ್ರಿ ೯-೩೦ಕ್ಕೆ ಮೈದಾನಿನ ಶ್ರೀ ಚಂದ್ರಕಲಾ ನಾಟಕ ಮಂದಿರದಲ್ಲಿ ನವ ಚೇತನವೆಂಬ ನಾಟಕವನ್ನಾಡುವರು ಪುರವಾಸಿಗಳು ಪ್ರೋತ್ಸಾಹಿಸುವರೆಂದು ಭರವಸೆ

ಈ ಕೆಳಗಿನ ತಾಲೂಕುಗಳಲ್ಲಿ ಮಹಾತ್ಮಾಜೀಯವರ ಹರಿಜನ ನಿಧಿಗೆ ಈ ಪ್ರಕಾರ ಧನಸಂಗ್ರಹವಾಗಿದೆ, ಪುತ್ತೂರು ರೂ, ೧೮೨,— ಮಂಗಳೂರು ರೂ ೪೩೩೩, ಉಡುಪಿ ೨೮೩೬, ಕುಂದಾಪುರ ರೂ, ೧೦೫೫,

ಅಸ್ಪೃಶ್ಯರ ಪರಿಹಾರ ಸಂಘದ ಕಾರ್ಯದರ್ಶಿಗಳಾದ ಶ್ರೀ ಹರಿಜನರವರು ನಿನ್ನೆ ಇಲ್ಲಿಗೆ ಬಂದು, ಈ ಸ್ಥಳದ ಈ ಸಂಘದ ಶಾಖೆಯನ್ನು ಸಂದರ್ಶಿಸಿ, ಈ ದಿನ ಇಲ್ಲಿಂದ ಹೊರಟು ಹೋಗಿರುವರು.

ಉಡುಪಿ — ಮಹಾತ್ಮಾ ಗಾಂಧಿಯವರು ತಾ. ೨೫ನೇ ಆದಿತ್ಯವಾರ ಅಪರಾಹ್ನ ೩-೩೦ಕ್ಕೆ ಸರಿಯಾಗಿ ಉಡುಪಿಗೆ ತಲಪಿ, ಸ್ಥಿತ ವಾದಂತೆ (ಈಚೆಗೆ ಸ್ಥಾಪಿತವಾದ ಸ್ವದೇಶಿ ಸ್ಟೋರ್ಸ್, ಲಿಮಿಟೆಡ್, ಉಡುಪಿ ಇದರ) ಖಾದಿ ಅಂಗಡಿಯನ್ನು ಸಂದರ್ಶಿಸಿ, ತಮ್ಮ ಅಮೃತ ಹಸ್ತಗಳಿಂದ ಅದರ ಅನಾವರಣ ಸಮಾರಂಭವನ್ನು ಮಾಡುವವರಾದರು. ಸದ್ರಿ ಕಂಪೆನಿಯ ಅಧ್ಯಕ್ಷರಾದ ಶ್ರೀ ಉಪೇಂದ್ರ ಅನಂತ ಪೈಗಳವರು ಮಹಾತ್ಮರನ್ನು ಸ್ವಾಗತೀಕರಿಸಿ ಸದ್ರಿ ಖಾದಿ ಅಂಗಡಿಯನ್ನು ಅನಾವರಣ ಮಾಡಬೇಕೆಂದು ವಿನಂತಿಸಿಕೊಂಡ ಮೇರೆಗೆ ಅವರಿಗೆ ಅರ್ಪಿಸಲಾದ ಬೆಳ್ಳಿ ಕತ್ತರಿಯಿಂದ ಅನಾವರಣ ಮಾಡಿದರು ಆಗ್ಗೆ ಸದ್ರಿ ಕಂಪೆನಿಯ ಮೆನೇಜರರಾದ ಶ್ರೀ ಕಾಡಬೆಟ್ಟು ಶ್ರೀನಿವಾಸ ಪೈಗಳು ಮಹಾತ್ಮರಿಗೆ ಅಂಗಡಿಯೊಳಗಿನ ಖಾದಿ ಸಂಗ್ರಹವನ್ನು ತೋರಿಸಿ ಮಹಾತ್ಮರು ಪ್ರಶ್ನಿಸಿದ ಹಾಗೆ ಅಖಿಲ ಭಾರತದ ಸಮಗ್ರ ಪ್ರಾಂತ್ಯಗಳಿಂದಲೂ ಚರಖಾ ಸಂಘದ ಪ್ರಮಾಣಿತ ಖಾದಿಯನ್ನೇ ಸಂಗ್ರಹಿಸಲಾಗಿದೆಯೆಂದೂ, ಹಿಂದೀ ಕೈಗಾರಿಕೆಯ ಇತರ ವಸ್ತುಗಳು ಸಂಗ್ರಹಿಸಲ್ಪಡಲಿವೆಯೆಂದೂ ತಿಳಿಯಗೊಟ್ಟ ಮೇಲೆ, ಮಹಾತ್ಮರು ಹಲವು ವಸ್ತುಗಳನ್ನು ಸ್ವತಃ ವಿಮರ್ಶಿಸಿ ಸಮಾಧಾನಗೊಂಡ ಮೇಲೆ, ಸದ್ರಿ ಸ್ಟೋರ್ಸಿನ ಡೈರೆಕ್ಟರರಿಂದ ಅರ್ಪಿಸಲಾದ ಹರಿಜನ ನಿಧಿಯನ್ನು ಸ್ವೀಕರಿಸಿಕೊಂಡು ಪುರಜನರ ಮಹಾ ಸಭೆಗೆ ಚಿತ್ತೈಸುವವರಾದರು. ಇದು ವರೆಗೆ ಅಜ್ಜರಕಾಡು ಮೈದಾನು ಎಂದು ಕರೆಯಲ್ಪಡುತ್ತಿದ್ದ ಮಹಾತ್ಮರಿಂದ ಪವಿತ್ರಗೊಳಿಸಲಾದ ಈಗಿನಿಂದ ಗಾಂಧಿ ಮೈದಾನು ಎಂದು ಸಂಬೋಧಿಸಲಾಗುತ್ತಿರುವ ವಿಶಾಲ ಮೈದಾನಿನಲ್ಲಿ ಸುಮಾರು ಆರು ಸಾವಿರ ಸ್ತ್ರೀಪುರುಷರು ಕೂಡಿದ್ದ ಮಹಾಸಭೆಗೆ ಮಹಾತ್ಮರು ತಲಪಿದೊಡನೆ ಜಯಕಾರಗಳೊಡನೆ ಸ್ವಾಗತವಾಯಿತು ಉಡುಪಿ ಮಹಾಜನರ ಮಾನಪತ್ರವು ನಿಧಿಸಂಗ್ರಹವು ಅರ್ಪಿಸಲಾದವು. ಅನಂತರ ಹಿಂದೀ ವಿದ್ಯಾರ್ಥಿ ವರ್ಗದ ಪರವಾದ ಮಾನಪತ್ರವು ಒಂಭತ್ತು ವರ್ಷ ಪ್ರಾಯದ ಹಿಂದೀ ವಿದ್ಯಾರ್ಥಿನಿ ಹಾಗೂ ಶ್ರೀ ಪಾಂಗಾಳ ಮಂಜುನಾಥ ನಾಯಕರ ಸುಕುಮಾರಿಯಾದ ನಿರುಪಮಾ ದೇವಿಯಿಂದ ಓದಲಾಗಿ ಅರ್ಪಿಸಲ್ಪಟ್ಟಿತು ಸಂದರ್ಭೋಚಿತ ಉತ್ತರವನ್ನು ಮಹಾತ್ಮರು ದಯಪಾಲಿಸಿ ಹರಿಜನ ನಿಧಿಗೆ ಅರ್ಪಿಸಲಾದ ದಾಗಿನೆಗಳ ಹರಾಜು ಪ್ರಾರಂಭವಾಯಿತು. ಹರಾಜಿನಿಂದಲೂ ನಿಧಿಸಂಗ್ರಹವು ಬಹಳ ಪುಷ್ಟಿಗೊಂಡಿತು ಮಹಾಸಭಾ ಕಾರ್ಯವು ಮುಗಿದೊಡನೆ ವಿಶ್ರಾಂತಿಗಾಗಿ ಶ್ರೀ ರಾಮಭವನಕ್ಕೆ ತೆರಳಿ, ಬಾಗಿಲಲ್ಲಿ ನೆರೆದಿದ್ದ ಹರಿಜನ ಬಾಲ ಬಾಲಕರಿಂದ ಸ್ವಾಗತ ಹೊಂದಿ, ನೂರಲೇ ಹಲವು ಗೃಹಸ್ಥರ ಉದಾರತೆಯಿಂದ ಕೂಡಿಸಲಾದ ಖಾದಿ ಉಡುಗೆಗಳನ್ನು ಮಹಾತ್ಮರು ಸದರಿ ಹರಿಜನ ಮಕ್ಕಳಿಗೆ ಹಂಚಿದರು ಫಲಾಹಾರ ವಿಶ್ರಾಂತಿಯನ್ನು ಮುಗಿಸಿಕೊಂಡು ೫ ಗಂಟೆಗೆ ಹೊರಟು, ತೇರುಬೀದಿಯಿಂದ ಹೋಗುತ್ತಾ ಹರಿಜನ ಬಂಧು ಕನಕನ ಗುಡಿಯನ್ನು ಸಂದರ್ಶಿಸಿ ಕಲ್ಯಾಣಪುರಕ್ಕೆ ಹೋಗುತ್ತಾ ಕಲ್ಯಾಣಪುರ ಹೊಳೆಯಲ್ಲಿ ಪುತ್ತೂರಿನ ಪಂಚಮ. ಕೋಲೊಸಿಯ ಬಳಿ ಇಲ್ಲಿನ ಲಕ್ಷ್ಮೀನಾರಾಯಣ ದರ್ಶನ ಲಾಭವನ್ನು ಕೊಟ್ಟು ಕುಂದಾಪುರಕ್ಕೆ ಮುಂತೆರಳಿದರು. ಉಡುಪಿ ತಾಲೂಕಿನ ಪಡುಬಿದ್ರಿ, ಕಾಪು, ಕಟ್ಪಾಡಿ, ಉದ್ಯಾವರ ಉಡುಪಿ ಬ್ರಹ್ಮಾವರಗಳಲ್ಲಿಂದ ಒಟ್ಟು ರೂ, ೨೫೦೦ಕ್ಕೆ ಮೇಲ್ಪಟ್ಟ ನಿಧಿಸಂಗ್ರಹ ಮತ್ತು ರೂ ೧೦೦೦ ಮಟ್ಟಿನ ಆಭರಣ ದಾಗಿನೆಗಳನ್ನು ಪಡೆದವರಾದರೆಂದು ತಿಳಿದುಬರುತ್ತದೆ. ಉಡುಪಿಯ ಮಟ್ಟಿನ ವ್ಯವಸ್ಥೆ ಕ್ರಮಗಳೂ ನಿಧಿಸಂಗ್ರಹ ಮೊದಲಾದ ವಿಷಯಗಳೂ ಬಹು ತೃಪ್ತಿಕರವಾದುವೆಂದು ಅಭಿಪ್ರಾಯವಿತ್ತು. ಒಂದೆರಡು ಸಲ ಜನತೆಯನ್ನು ಈ ಮೊದಲು ನಿರಾಶೆಗೊಳಿಸಿ ನಿರುತ್ಸಾಹಗೊಳಿಸಿದ್ದರೂ ಶ್ರೀಕೃಷ್ಣ ಕಟಾಕ್ಷದಿಂದ ಎಲ್ಲವೂ ಊಹನೆಗೆ ಮಿಕ್ಕಿ ತೃಪ್ತಿಕರವೂ ಸಂತೋಷದಾಯಕವೂ ಆಯಿತಷ್ಟೆ. ತರುಣ ಸ್ವಯಂಸೇವಕ ವೃಂದವೂ ತುಂಬಾ ಕೃತಜ್ಞತೆಗೆ ಪಾತ್ರನಾಗಿರುವ ಪಲ್ಲದೆ, ಕಾನ್‌ಬಹದ್ದೂರ್ ಹಾಜಿ ಅಬ್ದುಲ್ಲ ಹಾಜಿ ಕಾಸಿಮ್ ಸಾಹೇಬರವರ ಅಧ್ಯಕ್ಷತೆಯಲ್ಲಿ ಸಜ್ಜುಗೊಳಿಸಲ್ಪಟ್ಟ ಗಾಂಧಿ ಸ್ವಾಗತ ಮಂಡಲದ ಕಾರ್ಯದಕ್ಷತೆಯು ಸ್ತುತ್ಯಾರ್ಹವಾದುವು.

ಪಣಂಬೂರು: — ತೋಕೂರಿನ ಉಪಾಧ್ಯಾಯರ ಸಂಘದ ೧೫ನೇ ಸಭೆಯು ಪಣಂಬೂರ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಸದ್ರಿ ಶಾಲೆಯ ಸಹಾಯಕ ಉಪಾಧ್ಯಾಯರಾದ ಲೋರೆನ್ಸ್ ಡಿಸೋಜರ ಅಧ್ಯಕ್ಷತೆಯಲ್ಲಿ ತಾ ೨೪—೨—'ರಲ್ಲು ಜರಗಿತು.

ಮೂಡುಬಿದ್ರೆ — ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ವರ್ಷಂಪ್ರತಿ ಆಗುವ ಉತ್ಸವ ಸಂಬಂಧವಾದ "ಧ್ವಜಾರೋಹಣವು" ಇದೇ ಶ್ರೀಮುಖ ಸಂವತ್ಸರದ ಮೀನ ಸಂಕ್ರಮಣ ತಾ ೧೩—೩—'೩೪ನೇ ಶುಕ್ರವಾರ ದಿನವೂ, "ಆಯುಧೋತ್ಸವ" ಮತ್ತು ತೆಂಕುದಿಟ್ಟು ಬಡಗುದಿಟ್ಟು ಯಕ್ಷಗಾನ ಬಯಲಾಟ ಕೂಡಾ ತಾ. ೨೮—೩—೩೪ನೇ ಬುಧವಾರ ರಾತ್ರಿಗೂ, "ರಥಾರೋಹಣೋತ್ಸವ" ತಾ ೩೦—೩—'೩೪ನೇ ಶುಕ್ರವಾರ ದಿವಸವೂ, "ಬಾಗಿಲು ತೆಗೆಯುವುದು" ಮತ್ತು "ಚೆಂಡಾಟ" ಉತ್ಸವವು ತಾ ೫—೪—'೩೪ನೇ ಬುಧವಾರ ದಿವಸವೂ ಜರಗುವುವು

ಕುಂಬಳೆ: - ಇಲ್ಲಿಯ ಬೋರ್ಡ್ ಹೈಸ್ಕೂಲ್ ಎಲಿಮೆಂಟರಿ ಶಾಲೆ, ಬಾಲಿಕಾ ಪಾಠಶಾಲೆ, ಸೂರಂಬೈಲು ಮತ್ತು ಕಣ್ಣೂರು ಬೋರ್ಡ್ ಶಾಲೆಗಳ ವರ್ಧಂತಿಯು ತಾ ೧೭—೩—೧೯೩೪ನೇ ಶನಿವಾರ ಅಪರಾಹ್ನ ಘಂಟೆ ೩ಕ್ಕೆ ಹೈಸ್ಕೂಲು ಎಲಿಮೆಂಟರಿ ಶಾಲೆಯಲ್ಲಿ ಪುತ್ತೂರು ತಾಲೂಕು ಬೋರ್ಡ್ ಪ್ರಸಿಡೆಂಟರಾದ ಶ್ರೀ ಎಂ ಶಿವರಾಯರ ಅಧ್ಯಕ್ಷತೆಯಲ್ಲಿ ಜರಗಿತು ಕೆಥಿರಾ ಹೈಸ್ಕೂಲಿನ ಮೆನೇಜರ್ ಮ ರಾ ರಾ ಎ. ಶ್ರೀನಿವಾಸ ಪೈಗಳು, ಕಾಸರಗೋಡು ತಾಲೂಕು ಬೋರ್ಡ್ ಪ್ರಸಿಡೆಂಟರು, ಸೀನಿಯರ್ ಮತ್ತು ಜೂನಿಯರ್ ಡಿಪ್ಟಿ ಇನ್ಸ್‌ಪೆಕ್ಟರರು ತಾಲೂಕು ಮತ್ತು ಡಿಸ್ಟ್ರಿಕ್ಟ್ ಬೋರ್ಡುಗಳ ಕೆಲವು ಮೆಂಬರರು, ಕಾಸರಗೋಡ ಬೋರ್ಡ್ ಶಾಲೆಯ ಸ್ಕೌಟ್ ದಳದವರು ಮತ್ತು ಹಲವು ಮಂದಿ ಉಪಾಧ್ಯಾಯರೂ ಗೃಹಸ್ಥರೂ ನೆರೆದಿದ್ದು ಶಾಲೆಯು ಜನ ಸಂದಣಿಯಿಂದ ಕಿಕ್ಕಿರಿದಿತ್ತು

ಬಂಟ್ವಾಳ — ಎಲಿಮೆಂಟರಿ ಶಾಲೆಗಳ ಸಮ್ಮೇಲನ ಯೋಜನಾ ವಿಚಾರಕ್ಕಾಗಿ ಜಿಲ್ಲಾ ಎಜ್ಯುಕೇಶನಲ್ ಆಫೀಸರರೂ ಇನ್ಸ್‌ಪೆಕ್ಟರ್ ರಾದ ಗೌರಿ ಸಂಕುಣ್ಣಿಯವರೂ ಡಿಪ್ಯುಟಿ ಇನ್ಸ್‌ಪೆಕ್ಟರರೂ ಸಬ್ ಅಸಿಸ್ಟೆಂಟ್ ಇನ್ಸ್‌ಪೆಕ್ಟರರೂ ಇಲ್ಲಿಗೆ ಬಂದು ಶಾಲಾ ತನಿಖೆಯಾಯಿತು. ಇಲ್ಲಿಯ ಬೋರ್ಡ್ ಹುಡುಗಿಯರ ಶಾಲೆಯನ್ನು ತೆಗೆದು ಹಾಕಬಾರದಾಗಿಯೂ ಹುಡುಗರ ಶಾಲೆಯೊಡನೆ ಸಮ್ಮೇಲನ ಮಾಡಬಾರದಾಗಿಯೂ ತಿಳಿಸುವುದಕ್ಕಾಗಿ ಇಲ್ಲಿಯ ಮಹಿಳಾ ಪ್ರತಿನಿಧಿ ಕಮಿಟಿಯೊಂದು ಇನ್ಸ್‌ಪೆಕ್ಟರ್‌ನವರೊಡನೆ ಡಿಪ್ಯುಟೇಶನ್ ಕೊಂಡುಹೋಯಿತು.

ಸ್ವೀಕಾರ

"ದಿ ಕರ್ನಾಟಕ ಹಿಸ್ಟೋರಿಕಲ್ ರಿಸರ್ಚ್ ಸೊಸೈಟಿ" ಧಾರವಾಡ ಇದರ ೧೯೩೨ ೧೯೩೩ರ ವರದಿಯು ಹಸ್ತಗತವಾಗಿದೆ. ಸರ್ವ ವಿಧದಿಂದಲೂ ಪ್ರಗತಿಯನ್ನು ಹೊಂದುತ್ತಿರುವ ಈ ಸಂಘದ ಕಾರ್ಯಕಲಾಪಗಳು ಕನ್ನಡ ಸಂಸ್ಕೃತಿಯನ್ನು ಉಜ್ಜೀವಿಸಲಿ ದಂತಾಗಲಿ!

ದಕ್ಷಿಣ ಕನ್ನಡ ಜಿಲ್ಲಾ ಮರಾಟೆ ಸಮಾಜದ ಶ್ರೀ ಶಾರದಾ ಸಂಘದ ಮೂರನೇ ಮಹಾ ಸಭೆಯ ವರದಿಯು ನಮಗೆ ತಲುಪಿದೆ. ಸಂಘವು ದಿನೇ ದಿನೇ ವೃದ್ಧಿಯನ್ನು ಹೊಂದಿ ಈ ಸಮಾಜದ ಉದ್ದೇಶವು ಫಲದಾಯಕವಾಗಲೆಂದು ಹಾರೈಸುವೆವು.

Karnataka Chemical and Pharmaceutical Works, Ltd., Udipi. (South India)

ಕುಂಭಕೋಣದಲ್ಲಿಯೂ ಮಧುರೆಯಲ್ಲಿಯೂ ಮೈಸೂರಿನಲ್ಲಿಯೂ ಸುವರ್ಣ ಪದಕಗಳನ್ನು ಪಡೆದಿರುವ

ಕರ್ನಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದಕ್ಷಿಣ ಹಿಂದೂಸ್ಥಾನ).

ನಮ್ಮಲ್ಲಿ ಟಿಂಕ್ಚರ್, ವಗೈರೆ ಎಲ್ಲಾ ಎಲೋಪತಿಕ್ ಔಷಧ ದ್ರವ್ಯಗಳೂ, ಆಯುರ್ವೇದಿಯ ಔಷಧಿಗಳೂ, ಟೊಯ್ಲೆಟ್ ಸಾಮಗ್ರಿಗಳೂ, ಸಾಬೂನುಗಳೂ, ಫೌಂಟನ್ ಪೆನ್ ಶಾಯಿಗಳೂ ತಯಾರಿಸಲ್ಪಡುತ್ತವೆ

ದ್ರಾಕ್ಷಾಸವ, ಪ್ರಸೂತಿ ಸಂಜೀವನ, ನಿಯೋವಿಗರ್, ಸ್ನೋ, ಕ್ಷೀರಬಲಾ, ಕಾಪೂರ್ಫ್ಲೋಜಿಸ್ಟಿನ್, ಯುಟೆರೀನಾ, ಇಂಕ್ಸ್

ಮೆನೇಜಿಂಗ್ ಡೈರೆಕ್ಟರ್—ವೆಂಕಟ್ರಾಯ ಅಣ್ಣಪ್ಪ ಬಾಳಿಗ.

ಹೆಡ್ ಆಫೀಸು, ಉಡುಪಿ. (ದಕ್ಷಿಣ ಹಿಂದೂಸ್ಥಾನ)

ಬ್ರೇಂಚ್ ಆಫೀಸು ದೇವಕರಣ ಮೆನ್ಶನ್ಸ್, 45 ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ ನಂ. 2.

ಪಶ್ಚಿಮ ಕರಾವಳಿ ಮತ್ತು ಮೈಸೂರು ಪ್ರಾಂತ್ಯಗಳ ಪ್ರಾಮುಖ್ಯ ಏಜಂಟರು:—

ಕರ್ನಾಟಕ ಪ್ರೊಡಕ್ಟ್ಸ್ ಡಿಸ್ಟ್ರಿಬ್ಯೂಟಿಂಗ್ ಕಂಪೆನಿ, ಮಂಗಳೂರು

ಗೊಡ್ರೆಜ್ ಸಾಬೂನುಗಳಿಗೆ

ಅಮೂಲ್ಯವೂ ಹೊಸತೂ ಆದ ಪ್ರಾಶಸ್ತಿ

ಡಾ। ಎಂ. ಎ. ಅನ್ಸಾರಿ ಎಂ. ಡಿ.

(ಅಖಿಲ ಭಾರತ ಕಾಂಗ್ರೆಸ್ಸಿನ ಮಾಜಿ ಅಧ್ಯಕ್ಷರು.)

"ಗೊಡ್ರೆಜ್ ಸಾಬೂನುಗಳ ಉತ್ಕೃಷ್ಟ ಗುಣಗಳನ್ನು ಕಂಡು ನಾನು ಸಂತೋಷದಿಂದ ಮೆಚ್ಚಿದವನಾಗಿರುತ್ತೇನೆ. ಕಳೆದ ಹತ್ತು ವರ್ಷಗಳಿಂದ ನಾನವುಗಳನ್ನು ಉಪಯೋಗಿಸುತ್ತಿರುವೆನು. ಯುರೋಪುದಲ್ಲಾಗಲೀ ಇನ್ನಿತರ ಯಾವ ದೇಶದಲ್ಲಾಗಲೀ ತಯಾರಿಸಲ್ಪಟ್ಟ ಸಾಬೂನುಗಳಿಗಿಂತ ಇವು ಅತ್ಯುತ್ಕೃಷ್ಟವೆಂದೇ ನನ್ನ ಅನುಭವದ ಮಾತು. ಅವುಗಳ ಉತ್ಕರ್ಷತೆಯ ದೃಷ್ಟಿಯಿಂದಲೂ, ಅಲ್ಲದೆ ಅವು ಹಿಂದೂದೇಶದಲ್ಲೇ ಸಿದ್ಧಗೊಳಿಸಲ್ಪಟ್ಟುವೆಂಬ ದೃಷ್ಟಿಯಿಂದಲೂ, ನಾನವುಗಳನ್ನು ಹಿಂದೀಯ ಜನತೆಗೆ ಶಿಫಾರಸು ಮಾಡುತ್ತೇನೆ"

ಪ್ರಮುಖ ಡಾಕ್ಟರರೂ ಮತ್ತು ಪ್ರಮುಖ ರಾಷ್ಟ್ರೀಯ ಧುರೀಣರೂ ಆದ ಡಾ। ಅನ್ಸಾರಿಯವರ ಹೇಳಿಕೆಯು ಪ್ರತಿಯೊಬ್ಬ ವ್ಯಕ್ತಿಯ ಮತ್ತು ಪ್ರತಿಯೊಂದು ರಾಷ್ಟ್ರದ ದೈಹಿಕ ದೃಷ್ಟಿ ಮತ್ತು ರಾಷ್ಟ್ರೀಯ ದೃಷ್ಟಿಯಿಂದ ಸಹಾಯಕರವಾಗ ಬೇಕು.

Jaya Bharatham Co., P. B. No. 83. MADRAS.
ಜಯ ಭಾರತಂ ಕೋ., ಪಿ. ಬಿ. ೮೩, ಮದ್ರಾಸು.
ದ. ಕ. ಜಿಲ್ಲೆಗೆ ಏಜಂಟರು:—ಎಸ್. ಜಿ. ಬಂಗೇರಾ ಮಿಶ್ಯನ್ ಕಂಪೌಂಡು, ಕಾಸರಗೋಡು.

ಡಿಲ್ಲಿ ಬಿಸ್ಕೂಟಿನ ಕುರಿತು

ಇಂಡಿಯಾದ ಘನ ಕೈಗಾರಿಕಾ ಸಂಸ್ಥೆಯ

ಸರ್ ಡೋರಾಬ್ ತಾತಾರವರು

"ಈ ಬಿಸ್ಕುಟುಗಳನ್ನು ಹಿಂದೀಯ ಜನತೆಯು ಹೆಚ್ಚಿನ ಅವಗಾಹನೆಗೆ ತಂದಲ್ಲಿ ಸಹಜವಾಗಿ ಇವುಗಳು ಹೆಚ್ಚಿನ ವಿಕ್ರಯವಾಗುವುದರಲ್ಲಿ ಸಂದೇಹವಿರುವುದಿಲ್ಲ."

"ಇಂಗ್ಲಾಂಡಿನಲ್ಲಿ ತಯಾರಿಸಲ್ಪಟ್ಟುವುಗಳಿಗಿಂತಲೂ ನಾನು ಈ ಬಿಸ್ಕುಟುಗಳನ್ನೇ ಪ್ರಶಸ್ತವೆನ್ನುತ್ತೇನೆ"— "ಇಂಗ್ಲಾಂಡಿನಲ್ಲಿ ನಿಮ್ಮ ಬಿಸ್ಕುಟುಗಳು ಬಹಳ ಮೆಚ್ಚುಗೆಗೆ ಪಾತ್ರವಾಗಿವೆ"—ಎಂಬುದೇ ಕೆಲವು ಯೂರೋಪಿಯನರ ಹೇಳಿಕೆ.

ಮದ್ರಾಸು ಪ್ರಾಂತ್ಯಕ್ಕೆ ಏಜಂಟರು:—

Jaya Bharatham Co. P. B. No 83 MADRAS.
ಜಯ ಭಾರತಮ್ ಕೋ., ಪಿ. ಬಿ. ೮೩ ಮದ್ರಾಸು
ಸ್ಟಾಕಿಸ್ಟರು:—ಮೆಸರ್ಸ್ ಕಾಮತ್ ಎಂಡ್ ಕೋ., ಮಂಗಳೂರು.
ದ. ಕ. ಜಿಲ್ಲೆಗೆ ಏಜಂಟರು:—ಎಸ್. ಜಿ. ಬಂಗೇರಾ, ಮಿಶ್ಯನ್ ಕಂಪೌಂಡು, ಕಾಸರಗೋಡು.

ಗುಣಬಾರದಿದ್ದರೆ] ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ [ಹಣ ವಾಪಾಸು

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆರೋಗ್ಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ಒತ್ತಟ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಮೊದಲೇ ಪೂರಾ ವಿಚಾರ ಮಾಡಿ ಔಷಧ ಬೇಕು. ಮುಖ್ಯ ಸರ್ಟಿಫಿಕೇಟ್ ಡಾಕ್ಟರ ಬಿ. ಎ. ವೈದ್ಯ, ಎಲ್. ಸಿ. ಪಿ. ಎಸ್, ಕೆಳವಾಡಾಬಿಮು ಕಾಳೇ: ಈ ಚೂರ್ಣದಿಂದ ಯಾವ ತರದ ಅಪಾಯವಾಗದು ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿ ಕಿಮ್ಮತ್ತು ರೂ. ೪, ವಿ. ಪಿ. ಖರ್ಚು ೮.

ವಿಳಾಸ:—ಸಂಜೀವಿನೀ ಔಷಧಾಲಯ ಮು. ಪೊ. ಮಿರಜ, S. M. C.

ಬಹು ಕಾಲದ ಆವಶ್ಯಕತೆಗೆ



ಸಣ್ಣ ಕಬ್ಬಿನ ತೋಟದವರು ಸಣ್ಣ ರೀತಿಯಿಂದ ಸಕ್ಕರೆ ತಯಾರಿಸಲು ಯೋಗ್ಯ ರೀತಿಯ ಯಂತ್ರವು ಬೇಕೆಂದು ಬಹು ಕಾಲದ ಆವಶ್ಯಕತೆಯಲ್ಲಿದ್ದರು. ನಿಮಗೆ ಬೇಕಾದುದು ಇಲ್ಲೇ ಇದೆ.

ಕಿರ್ಲೋಸ್ಕರ ಶುಗರ್ ಸೆಂಟ್ರಿಫ್ಯುಗಲ್

ಎಂಬುದು ಆಧುನಿಕ ಮತ್ತು ಅತ್ಯುತ್ಕೃಷ್ಟ ಸಾಧನಗಳಿಂದೊಡಗೂಡಿ ಸಕ್ಕರೆ ತಯಾರಿಸಲು ಸುಲಭ ಯಂತ್ರವಾಗಿದೆ. ಸಣ್ಣ ಧಂದೆಗಾರರಲ್ಲಿ ಹೆಚ್ಚಿನ ಲಾಭವನ್ನು ಕೊಡುತ್ತದೆ. ವಿವರಗಳಿಗೆ:—ಕಿರ್ಲೋಸ್ಕರ್ ಬ್ರದರ್ಸ್ ಲಿಮಿಟೆಡ್ ಕಿರ್ಲೋಸ್ಕರ್‌ವಾಡಿ (ಸತಾರ ಜಿಲ್ಲಾ) ಇಲ್ಲಿಗೆ ಬರೆಯಿರಿ.

ಸ್ಟಾಕಿಸ್ಟು:—ಬಾಸೆಲ್ ಮಿಶನ್ ಬುಕ್ ಡಿಪೋ ಎಂಡ್ ಟ್ರೇಡ್ಸ್ ಡಿಪಾರ್ಟ್‌ಮೆಂಟ್ ಕೋ., ಮಂಗಳೂರು.

As It Is..............?
ಇದ್ದುದು ಇದ್ದ ಹಾಗೆ..........!

ನವಜೀವನ ನಾಟಕವನ್ನು ಬರೆದು ಆಡಿದ ಶ್ರೀ ಕೆ. ಕೆ. ಶೆಟ್ಟರು ಕಳೆದವಾರದ 'ನಾಟಕ ಕಲಾಭಿಮಾನಿ'ಯ ಟೀಕೆಗೆ ಗುರಿಯಾಗಿರುವರು! ಸ್ವಾಮಿರಾಯರ ಪಾತ್ರವನ್ನು ಶ್ರೀ ಶೆಟ್ಟರು ಆಕಸ್ಮಾತ್ತಾಗಿ ವಹಿಸುವ ಪ್ರಸಂಗವು ಬಂತೆಂದು ಅವರೇ ಹೇಳದುದು ನಾಟಕ ಕಲಾಭಿಮಾನಿಗೆ ಅಭಿಮಾನದ ದೆಸೆಯಿಂದ ಕೇಳದಿರಬಹುದು!

\+ + + +

ನವಜೀವನ ನಾಟಕದ ದಿನ ಸ್ಟೇಜಿನಲ್ಲಿ ಹರಿಜನರ ಭಜನೆಯಾಯಿತು! ನೇಶನಲ್ ಗರ್ಲ್ಸ್ ಸ್ಕೂಲಿನಲ್ಲಿ ಗಾಂಧಿಜೀಯವರ ಸಮಕ್ಷಮ ಜರಗಿದ ಮಹಿಳಾ ಸಭೆಯಲ್ಲೂ ಹರಿಜನ ಬಾಲಿಕೆಯರಿದ್ದರು! ಧರ್ಮ ಹಾಳಾಯಿತು?

\+ + + +

ಮಹಾತ್ಮಾ ಗಾಂಧಿಯವರು ನಗುತ್ತಾ, ಮೈದಾನಿನ ಸಭೆಯಲ್ಲಿ, ಮೋರೆ ಅಡಿಗೆ ಹಾಕಿ, ಕನ್ನಡದಲ್ಲಿ 'ಒಂದು ವಾರ್ ಎರಡುವಾರ್, ಮೂರು ವಾರ್' ಎಂದುದು ಎಲ್ಲರಿಗೂ ಆಶ್ಚರ್ಯಕರ! ಮೈಸೂರಲ್ಲಿ ಕನ್ನಡ ಕಲಿತಿರಬಹುದು!

\+ + + +

ಮಹಾತ್ಮರು, ಶ್ರೀ ಕಾರ್ನಾಡು ಸದಾಶಿವರಾಯರ ಮನೆಗೆ ಹೋಗಿ, ಸದಾಶಿವರಾಯರ ತಾಯಮ್ಮರವರನ್ನು ಕಂಡು 'ನಿಮ್ಮ ಪುತ್ರ ಎಲ್ಲವನ್ನೂ ತ್ಯಜಿಸಿ, ಬಡವರಾದರು. ಅವರು ದಂಡನೆಗೆ ಗುರಿಯಾಗಲು ಇನ್ನೂ ಸಿದ್ಧರಿರುವುದು ನನಗೆ ಬಹು ಸಂತೋಷಕರ' ಎಂದರು! ಬಾಲ ಕಳೆದ ನರಿಯವರೆನ್ನುವವರೂ ಇದ್ದಾರೆ.

\+ + + +

ರಜಾರಿಯೋ ಇಗರ್ಜಿ ಬಳಿ ನೂರಿನ್ನೂರು ಸ್ವಯಂಸೇವಕರು ಮಡಿಯ ಖಾದಿ ಟೋಪಿಗಳನ್ನು ಧರಿಸಿ, ಸಾಲಾಗಿ ಶ್ರದ್ಧೆಯಿಂದ ನಡೆದು, "ಮಹಾತ್ಮಗಾಂಧಿಕೀ ಜೈ!!! ವಂದೇ ಮಾತರಂ!! ವಂದೇ ಮಾತರಂ!!!" ಎಂದೆಲ್ಲ ಬೊಬ್ಬಿಟ್ಟು ಮಾರ್ಗಕ್ಕೂ ಗಾಳಿಗೂ ಮನ್ನಣೆ ಮಾಡಿದರು! ಪುಣ್ಯಕ್ಕೆ ಪೋಲೀಸರು ಅಲ್ಲಿ ಇರಲೇ ಇಲ್ಲ!

\+ + + +

ಮೈದಾನಿನಲ್ಲಿ ನಡೆದ ಗಾಂಧೀ ಸಭೆಯಲ್ಲಿ ಸಾವಿರಾರು ಸ್ತ್ರೀಯರು! ಗಾಂಧಿಜೀಯವರನ್ನು ಕಾಣಲು ಅವರಿಗೆ ಇಲ್ಲದ ಕೂತೂಹಲ! ಕತ್ತಲಾದುದರಿಂದ ಮಹಾತ್ಮಾಜೀಯವರಿಗೆ ವಿದೇಶೀ ಸೀರೆಗಳ ಗುರುತು ಸಿಗಲೇ ಇಲ್ಲ!

\+ + + +

ಹರಿಜನೋದ್ಧಾರ ಮಾಡಿರೆಂದು ಕೆನರಾಹೈಸ್ಕೂಲಿನಲ್ಲಿ ವಿದ್ಯಾರ್ಥಿಗಳೊಡನೆ ಗಾಂಧಿಜೀಯವರ ವಿನೀತ ಪ್ರಾರ್ಥನೆ. ಅಗಲೇ ಚೆನ್ನಾಗಿ ಗಾಳಿ ಬೀಸಿದೆ!

ಮು. ಪಾ.

\++ ++

ನೋಟೀಸು.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

ಕ್ರಮ. ಸಂಖ್ಯೆ 472/1933.

ಶಿಟ್ಟು ಪೂಜಾರಿ—ವಾದಿ

ಹನ್ನಪ್ಪ ಪೂಜಾರಿ—ಪ್ರತಿವಾದಿ.

ವಾದಿಯು ಪ್ರತಿವಾದಿಯ ಮೇಲೆ ಡಿಮಾಂಡ ನೋಟಿನ ಬಾಬ್ತು ಅಸಲು ಬಡ್ಡಿ ವಿವರ ರೂಪಾಯಿ 109—14—0ಕ್ಕೆ ಮೇಲೆ ಕಾಣಿಸಿದ ಕೋರ್ಟಿನಲ್ಲಿ ವ್ಯಾಜ್ಯ ದಾಖಲು ಮಾಡಿರುತ್ತಾನೆ. ಈ ಕುರಿತು ಕೋರ್ಟು ಹುಕುಂ ಪ್ರಕಾರ ತಿಳಿಯಪಡಿಸುವುದೇನೆಂದರೆ:—

ಮೇಲಿನ ವ್ಯಾಜ್ಯವು ಸದರಿ ಕೋರ್ಟಿನಲ್ಲಿ ಇದೇ ಬರುವ ತಾ. 10-8-1934ಕ್ಕೆ ತನ್ಖಿ ಬಗ್ಗೆ ಇಟ್ಟಿರುತ್ತದೆ. ಈ ಕುರಿತು ಆಕ್ಷೇಪವಿದ್ದರೆ ಪ್ರತಿವಾದಿಯು ಸದರಿ ತನ್ಖಿ ತಾ. 10-3-34ನೇ ದಿನ ಪೂರ್ವಾಹ್ನ ಘಂಟೆ 10ಕ್ಕೆ ಈ ಕೋರ್ಟು ಮುಂದೆ ಖುದ್ದು ಆಗಲೀ ವಕೀಲ ಮುಖಾಂತರವಾಗಿ ಆಗಲೀ ಹಾಜರಾಗಿ ಉದಾಹರಣೆ ಬರಕೊಳ್ಳಬಹುದು. ಇಲ್ಲವಾದರೆ ತನ್ಖಿ ದಿನ ಸದರಿ ವ್ಯಾಜ್ಯವನ್ನು ಏಕ ಪಕ್ಷವಾಗಿ ತೀರ್ಮಾನಿಸಲ್ಪಡುವದು.

ಕಾರ್ಕಳ,
ತಾ. 24-2-'34.

K. S. Bhat,
Counsel for Plaintiff.

\+ ++ +

ದಕ್ಷಿಣ ಕನ್ನಡದಿಂದ ಮಹಾತ್ಮರಿಗೆ ಸುಮಾರು ರೂ. ೯ ಸಾವಿರ ದೊರೆಯಿತು!

ನಿಮಿಷದ ಲೆಕ್ಕ!

ಲೋಕದಲ್ಲಿ ಒಂದು ನಿಮಿಷದಲ್ಲಿ ಏನೇನು ಎಷ್ಟೆಷ್ಟು ನಡೆಯುವುದೆಂದು ಗಣಕ ಶಾಸ್ತ್ರಜ್ಞರು ಕೂಡಾ ಪ್ರಯಾಸಪಟ್ಟು ಪಟ್ಟಿಯನ್ನು ಪ್ರಕಟಿಸಿರುವರು. ಒಂದು ನಿಮಿಷದಲ್ಲಿ ಜನರ ಹೃದಯವು ಸುಮಾರು ೭೨ ಸಲ ಬಡಿದುಕೊಳ್ಳುವುದು, ೯೦ ಮಕ್ಕಳು ಲೋಕದಲ್ಲಿ ಜನಿಸುವುವು. ೬೬ ಜನರು ಮೃತರಾಗುವರು. ಬ್ರಿಟಿಷ್ ದ್ವೀಪಗಳಲ್ಲಿ ನಿಮಿಷಕ್ಕೆ ಒಬ್ಬನಾದರೂ ಮೋಟರ್ ಅಪಘಾತಕ್ಕೆ ಸಿಕ್ಕಿ ಜಖಂಗೊಳ್ಳುವನು. ಅಲ್ಲಲ್ಲಿ ನಿಮಿಷಕ್ಕೆ ೨೦ ವಿವಾಹಗಳು ಜರಗುವುವು. ವಿದ್ಯಾಭ್ಯಾಸದ ಸಲುವಾಗಿ ಇಂಗ್ಲಾಂಡಿನಲ್ಲಿ ನಿಮಿಷಕ್ಕೆ ೬೫ ಪವನುಗಳು ವೆಚ್ಚವಾಗುವುವು. ೯೯ ಪವನುಗಳ ನಷ್ಟವಾಗುವುದು. ಇಂಗ್ಲೆಂಡಿನಲ್ಲಿ ನಿಮಿಷ ಒಂದರಲ್ಲಿ ೮,೪೪,೪೪೪ ಕಪ್ ಟೀ ಕುಡಿಯುವರು. ೩೦೦ ಪೌಂಡ ಬಿಸ್ಕಿಟ ತಿನ್ನುವರು. ಇಂಗ್ಲಿಷ್ ಬಂದರುಗಳಿಂದ ೧೭ ಟನ್ನು ಕಲ್ಲಿದ್ದಲು ಪರವೂರಿಗೆ ರವಾನೆಯಾಗುವುದು. ಇದೆಲ್ಲಾ ಒಂದು ನಿಮಿಷದಲ್ಲಾಗುವ ಮಾತಾಯಿತು! ಹಾಗಾದರೆ ೨೦ ವರ್ಷಗಳಲ್ಲಿ ಲೋಕದ ಪ್ರಗತಿಯು ಎಷ್ಟಾಗಬೇಕು?

ವಿಚಿತ್ರ ಸಂಬಂಧ.

[illegible]

ಆಕಾಶದ ನಕ್ಷತ್ರಗಳೆಷ್ಟು?

[illegible]

ಹಾ! ಛೆ! ಬೆಳವಳದ ನೆಲ್ಲಗೆಷ್ಟು?

[illegible]

ಇನ್ನು ಗಾಂಧಿ ಟೋಪಿಯ ಕಳವಳ!

[illegible]

ಭೂಕಂಪಪ್ರದೇಶದಲ್ಲಿ ಭಂಗಾರದವಂತೆ!

[illegible]

[illegible]

ಬರೋಕ್ಕರೊಪ್ಪರಲ್ಲಿ ಮಂತ್ರವಾದ!

[illegible]

ವಣಿದಕ ದ್ರವ್ಯಗಳ ವ್ಯಾಪಾರಾಭಿವೃದ್ಧಿಗಾಗಿ ವಿದೇಶೀ ಸಾಹುಕಾರರ ಒಳಸಂಚು

[illegible]

ಗಾಂಧೀಜಿಯವರನ್ನು ಕರೆಸಿದುದೇಕೆ?

[illegible]

[illegible] ಮಹಾತ್ಮಾಜಿಯವರ ಸಹಕಾರ—ಸಹಾಯ [illegible]

ಗವರ್ನಮೆಂಟ್ ಸೆಕೆಂಡರಿ ಟ್ರೈನಿಂಗ್ ಶಾಲೆಯ ರಜತೋತ್ಸವ

[illegible] ಸೆಕೆಂಡರಿ ಟ್ರೈನಿಂಗ್ ಶಾಲೆಯ ರಜತೋತ್ಸವವು [illegible]

[illegible]

ವಿನೋದ ಪ್ರಪಂಚ!!!

ಬೆಂಗಳೂರಿನ ಹಾಸ್ಯರಸಭರಿತ ಪಕ್ಷ ಪತ್ರಿಕೆ!
ಓದಿದರೆ ನಕ್ಕು ನಕ್ಕು ಸಾಕಾಗುತ್ತದೆ.
ಚಂದಾದಾರರಾಗಿ ಓದಲು ಮರೆಯಬೇಡಿ.
ವಾ. ಚಂದಾ ರೂ. ೧-೦-೦
ಮಾದರಿ ಪ್ರತಿಗೆ ...
ಏಜಂಟರಿಗೆ ಸುಸಮಯ!

ಸಂಪಾದಕ,
ವಿನೋದ ಪ್ರಪಂಚ, ಬೆಂಗಳೂರು ಸಿಟಿ.

ದ. ಕನ್ನಡ ಏಜಂಟರು—ಪಾಪ್ಯುಲರ್ ಸ್ಟೋರ್ಸ್, ಮಂಗಳೂರು.

ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

ಕಾಸರಗೋಡು ಎಡಿಶನಲ್ ಡಿಸ್ಟ್ರಿಕ್ಟ್ ಮುನ್ಸೀಫ್

ಕೋರ್ಟ್. O. S. No. 78/1920.

ಈ ಕೋರ್ಟ್ R. E. P. No. 1116/1933,

ಡಿಕ್ರಿ ಹೋಲ್ಡರಾದ ಮಮ್ಮುಂಞಿ ಯಾನೆ ಮಹ ಮ್ಮದ ಬ್ಯಾರಿ, ಹಸಂಕುಟ್ಟಿ ಅಬ್ದುಲ್ಲ ಬ್ಯಾರಿ ಮಗ ಕಾಸರಗೋಡು ತಾಲೂಕು ತಳಂಗರೆ ಗ್ರಾಮದಲ್ಲಿರುವವ—ಅರ್ಜಿದಾರ.

ಮತ್ತು

1. ಪೈದಿಂಕುಂಞಿ ಇಸುಬು ಬ್ಯಾರಿ ಮಗ. 2. ಬೀಪಾತುಮ್ಮ, ಪೈತಪಟ್ಟ ಮಹಮ್ಮದೆ ಹೆಂಡ್ತಿ. 3. ಅಬ್ದುಲ್ಲ. 4. ಇಬ್ರಾಹಿಮ್. 5. ಹಸನಾರೆ ಮಹಮ್ಮದೆಯ ಮಕ್ಕಳು 4-5ನೇಯವರು ಪ್ರಾಪ್ತನರು. ಇವರ ಗಾರ್ಡಿಯನ್ 3ನೇ ಅಬ್ದುಲ್ಲ. 6. ಬೀಪಾತುಮ್ಮ ಕಾದ್ರಕುಟ್ಟಿ ಬ್ಯಾರಿ ಹೆಂಡ್ತಿ. 7. ಅಬ್ಬಾಸ ಕಾದ್ರಕುಟ್ಟಿ ಮಗ. 8. ಖದಿಜುಮ್ಮ. 9. ಮರಿಯುಮ್ಮ ಕಾದ್ರಕುಟ್ಟಿಯ ಮಕ್ಕಳು. 10 ಖದಿಜುಮ್ಮ ಕಾದ್ರಕುಟ್ಟಿಯ ಮಗಳು. 11. ಬೀಪಾತುಮ್ಮ ಮಮ್ಮದೆ ಹೆಂಡ್ತಿ. 12. ಕುಂಞಮ್ಮದೆ. 13. ಉಮ್ಮ ರ್ಮ. 14. ನಫೀಸು 11ನೇ ರೆಸ್ಪೊಂಡೆಂಟರ ಮಕ್ಕಳು 13-14ನೇಯವರು ಪ್ರಾಪ್ತನರು. ಇವರ ಗಾರ್ಡಿಯನ್ 12ನೇ ರೆಸ್ಪೊಂಡೆಂಟ ಕುಂಞಮ್ಮದೆ 15. ಕುಂಞಾಮಿನಾಸ ಅಬ್ದುಲ್ಲ ಬ್ಯಾರಿ ಹೆಂಡ್ತಿ. 16 ಖ್ಯಸಾಬಿ ಅಬ್ದುಲ್ಲ ಬ್ಯಾರಿ ಮಗಳು ವ, ಅಮದನ ಹೆಂಡ್ತಿ. 17. ಆಸ್ಯಮ್ಮ ಅಬ್ದುಲ್ಲ ಬ್ಯಾರಿ ಮಗಳು ವ, ಅಮು ಬ್ಯಾರಿ ಹೆಂಡ್ತಿ 18 ಮಮ್ಮುಂಞಿ ಅಬ್ದುಲ್ಲ ಬ್ಯಾರಿ ಮಗ. 19. ಮಹಮ್ಮದ ಬ್ಯಾರಿ ಅಂದುಕುಂಞಿ ರರ ಮಗ. 20. ಅಂದುಂಞಿ ಯಾನೆ ಅಬ್ದುಲ್ಲ ಬ್ಯಾರಿ ಕನ್ನಿಲ್ ಸೈದು ಕುಂಞಿಬ್ಯಾರಿ ಮಗ—ರೆಸ್ಪೊಂಡೆಂಟರು.

1-15ರಿಂದ 18ನೇ ಯವರು ಚಿತ್ತಾರಿ ಗ್ರಾಮದಲ್ಲಿಯೂ 8ರಿಂದ 14 ಮತ್ತು 19-20ನೇಯವರು. ತಳಂಗರೆ ಗ್ರಾಮದಲ್ಲಿ ಸಹ ಇರುವವರು—ರೆಸ್ಪೊಂಡೆಂಟರು.

ಇವರೊಳಗೆ

ಜಡ್ಜಮೆಂಟ ಡೇಟದಾರ್‌ರಾದ ರೆಸ್ಪೊಂಡೆಂಟರಿಗೆ—

ಮೇಲ್ಕಂಡ ವ್ಯವಹರಣೆಯಲ್ಲಿ ಅರ್ಜಿದಾರನು ಜಪ್ತಾದ ಸ್ಥಿರಾಸ್ತಿಗಳ ವಿಕ್ರಯದ ಬಗ್ಗೆ ವ, ಏಲಂ ಸಮಯ ವಾರು ಕರೆಯುವರೆ ಪರ್ಮಿಶನ್ ಬಗ್ಗೆ ವಗೈರೆ ಮನವಿ ಮಾಡಿರುತ್ತಾನೆ. ಆದ ಕಾರಣ ವಿಕ್ರಯದ ಇಸ್ತಹಾರಿನ ಶರ್ತಗಳನ್ನು ನಿರ್ಣಯಿಸ ಲಿಕ್ಕೆ ತಾ. 17—3—1934ಕ್ಕೆ ನಿಶ್ಚಯಿಸೋಣಾಗಿಯದೆಂತ ಈ ಮೂಲಕ ತಿಳಿಸೋಣಾಗಿಯದೆ.

Kasaragod, } **P. Ahmad,**
27-2-1934. } Advocate for Petitioner.

ಪ್ರಕಟಣೆ

ಉಡುಪಿ ಡಿಸ್ಟ್ರಿಕ್ಟ ಮುನ್ಸೀಫ ಕೋರ್ಟಿನಲ್ಲಿ.

S. C. No. 850/1933.

ಮಹಾದೇವ ಭಟ್ಟ—ವಾದಿ.

ಮತ್ತು

ಕಿಲ್ಲಾರ ಲಕ್ಷ್ಮಣ ಕಾಮತಿರಾಗ—ಪ್ರತಿವಾದಿ.

ಇವರೊಳಗೆ

ಸದರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವದೇ ನೆಂದರೆ:—

ಸಂಕಾರ ತೀರ್ವೆ ಕೆತ್ತ ಬಾಬ್ತು ಪ್ರತಿವಾದಿಯಿಂದ—ವಾದಿಗೆ ಬರಾ ಅಸಲು ಬಡ್ಡಿ ರೂ. 48—1—6 ಬಂದಮಾಡಿ ಕೊಳ್ಳುವರೆ ವಾದಿಯು ದಾಖಲು ಮಾಡಿದ ಸದ್ರಿ ವ್ಯಾಜ್ಯವು ತಾ. 19-3-34ಕ್ಕೆ ತನಿಖೆಗೆ ಇಟ್ಟಿದೆ. ಅಕ್ಷೇಪ ಇದ್ದರೆ ಪ್ರತಿವಾದಿಯು ಸ್ವತಹಾ ಅಥವಾ ಪ್ಲೀಡರರ ಮೂಲಕ ತಾ. 19—3—34ರ ಹಗಲು 10 ಘಂಟೆಗೆ ಕೋರ್ಟಿಗೆ ಹಾಜರಾಗಿ ಹ್ಯಾಜೀರು ಮಾಡಿಕೊಳ್ಳತಕ್ಕದ್ದು. ತಪ್ಪಿದರೆ ಆತನ ಗೈರು ಹಾಜರಿಯಲ್ಲಿ ಸಂಬ್ರ ತೀರ್ಮಾನಿಸಲಾದೀತೆಂದು ಸಂಗತಿ ಈ ಮೂಲಕ ಪ್ರಕಟಿಸುವದಾಗಿಯದೆ.

ಉಡುಪಿ, } **M. Vittal Kamath,** B.A.B.L.
20-2-1934 } Pleader for Plaintiff.

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್.
ಸ್ತ್ರೀಯರಿಗೊಂದು ಮಹಾ ವರ.

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು,ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮುತ್ತು ಮುಟ್ಟಾಗದಿರುವಿಕೆ,ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು ಅಶುದ್ಧ ರಕ್ತ, ಮೇರೆ ದಾಟ ಅಥವಾ ಬೇಕಾದಷ್ಟು ಮುಟ್ಟಾಗದಿರು ವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ. ರೂ. 3 ಮತ್ತು 1—10—0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

Sole Agents for West Coast and North Kanara

Wanted Agents in Principal Towns. ಪಾಪ್ಯುಲರ್ ಸ್ಟೋರ್ಸ್,
For terms Apply to:—POPULAR STORES, ರಥಬೀದಿ ಮಂಗಳೂರು.
Mangalore.

ಸ್ತ್ರೀ ಪುರುಷರ ಸಲುವಾಗಿ ಶಕ್ತಿ ವ ಸ್ಫೂರ್ತಿಕೊಡುವಂತಹ	ಸ್ತ್ರೀಯರ ಸಲುವಾಗಿ ಆರೋಗ್ಯ ವ ಶಕ್ತಿವರ್ಧಕ.
ಸುಮಧುರ	ಪ್ರದರಾದಿ ರೋಗಗಳ ಮೇಲೆ ರಾಮಬಾಣ ಉಪಾಯ.
ಝಂಡು ದ್ರಾಕ್ಷಾಸವ	**ಝಂಡು ಅಶೋಕಾರಿಷ್ಟ**
ಜರೂರು ಉಪಯೋಗಿಸಿರಿ.	ಬೇಗನೇ ಉಪಯೋಗಿಸಿರಿ.

'ZANDU'

ಝಂಡು ಫಾರ್ಮಾಸ್ಯುಟಿಕಲ್ ವರ್ಕ್ಸ ಲಿ: ಮುಂಬ್ಯಾಯಿ.

ಮದ್ರಾಸು ಸಂಸ್ಥಾನದ ಏಜಂಟ್:—ದಾಮೋದರ ಮತ್ತು ಕಂಪೆನಿ, 78 ಜೈನ ಬಜಾರ ರೋಡ್, ಮದ್ರಾಸು.
ಮೈಸೂರು ಪ್ರೊವಿನ್ಸ್ ಏಜಂಟ್:—ಬಿ. ರೂಪಚಂದ ಲಾಲ ಕಂಪೆನಿ, ... ಸ್ಟ್ರೀಟ್.
ಮಂಗಳೂರು ಏಜಂಟ್:—ಶಾಹಾ ಕಂಪೆನಿ ಹಾಮ್ಯಾಂಡ್ ಬಿಲ್ಡಿಂಗ್, ಮಂಗಳೂರು.
ಧಾರವಾಡ ಏಜಂಟ್—ದಿ ಧಾರವಾಡ ಫಾರ್ಮಸಿ, ಧಾರವಾಡ.
ಬೇರೆ ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತದೆ.

ಆಯುರ್ವೇದ ಔಷಧಿಗಳ ಸೂಚೀಪತ್ರವನ್ನು ಮುಖ್ಯ ಏಜಂಟರಿಂದ ಪಡೆಕೊಳ್ಳಿರಿ.

ನಮ್ಮ ಸಲಹೆಯೇ ಪ್ರಾಧಾನ್ಯವಾದದ್ದೆಂದು ತಿಳಿಯಬೇಡಿ.

ಕಲ್ಲಿಕೋಟೆ ಅಶೋಕ ಆಸ್ಪತ್ರೆಯ ಚೀಫ್ ಮೆಡಿಕಲ್ ಆಫೀಸರರಾದ ಡಾ॥ ಪಿ. ಬಿ. ರಾಮನ್, ಎಂ. ಆರ್., ಸಿ. ಎಸ್. ಇವರು ಬರೆದಿರುವುದನ್ನು ಓದಿ ನೋಡಿ—"ನಾನು ನಿಮ್ಮ ಆಶ್ಚರ್ಯಕರವಾದ ಜೀವಾಮೃತಂ ಟಾನಿಕನ್ನು ನರಗಳಲ್ಲಿ ಉರಿತ ಇಂತ ಹಸಿವು ಕಡಿಮೆಯಾಗಿರುವುದು, ತೂಕವು ಕಡಿಮೆಯಾಗಿರುವುದು, ಇವು ಪ್ರಾಪ್ತವಾಗಿರುವ ಅನೇಕ ರೋಗಿಗಳಿಗೆ ಕೊಟ್ಟಿರುತ್ತೇನೆ, ಅದರ ಫಲಿತಾಂಶಗಳು ಬಹು ತೃಪ್ತಿಕರವಾಗಿದೆ. ಜೀವಾಮೃತವನ್ನು ದೇಹಶಕ್ತಿ ಕುಗ್ಗಿರುವ ಎಲ್ಲಾ ಸಂದರ್ಭಗಳಲ್ಲೂ ಸರ್ವ ಸಾಮಾನ್ಯವಾಗಿ ಉಪಯೋಗಿಸಬಹುದೆಂದು ನಾನು ಮನಃಪೂರ್ವಕವಾಗಿ ಶಿಫಾರಸು ಮಾಡುತ್ತೇನೆ"

ಜೀವಾಮೃತವು

ನರಗಳಿಗೆ ಶಕ್ತಿ ಕೊಡುತ್ತದೆ. ವೀರ್ಯ ವೃದ್ಧಿಮಾಡುತ್ತದೆ. ಹಸಿವು ಹುಟ್ಟಿಸುತ್ತದೆ. ರಕ್ತ ವೃದ್ಧಿಮಾಡುತ್ತದೆ.

ಪಂಡಿತ ಡಿ. ಗೋಪಾಲಾಚಾರ್ಲುರವರ **ಜೀವಾಮೃತವು**

ಎಲ್ಲಾ ಔಷಧ ಮಾರುವವರಲ್ಲೂ, ಸ್ಟೋರುಗಳಲ್ಲೂ ದೊರೆಯುತ್ತದೆ. (ಸಂಪೂರ್ಣ ವಿವರಗಳಿಗೆ ಇವತ್ತೇ ಬರೆಯಿರಿ)

ಆಯುರ್ವೇದಾಶ್ರಮಂ, ಪೋ. ಬಾಕ್ಸ್ ನಂ. ೨೦೭, ಮದ್ರಾಸು.

ಸೋಲ್ ಏಜಂಟರು:- ಸಿಟಿ ಮೆಡಿಕಲ್ ಮತ್ತು ಜನರಲ್ ಏಜನ್ಸಿ, ೯೨ ಚಿಕ್ಕಪೇಟೆ ಬೆಂಗಳೂರು. (ಉಡುಪಿ ಹೋಟೆಲ ಹತ್ತಿರ)
ಪಶ್ಚಿಮ ಕನ್ನಡದ ಏಜಂಟರು— ಪಾಪ್ಯುಲರ್ ಸ್ಟೋರ್ಸ್, ಮಂಗಳೂರು. P. No 104

ಸಂಪಾದಕರ್ಗೆ ಟಪ್ಪಾಲು ಪೆಟ್ಟಿಗೆ.

ಟಪ್ಪಾಲಿನ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ ಎಲ್ಲಾ ಲೇಖಕರು ತಮ್ಮ ಸಂಪೂರ್ಣ ಹೆಸರು ವಿಳಾಸಗಳನ್ನು ಕೊಡತಕ್ಕದು ದೀರ್ಘ ಲೇಖನಗಳಿಗೆ ಎಡೆ ಕೊಡಲಾಗುವುದಿಲ್ಲ ಲೇಖನಗಳು ಸಾರ್ವಜನಿಕ ಹಿತದೃಷ್ಟಿಯಿಂದಿದ್ದು ಯುಕ್ತ ರೀತಿ ಯಲ್ಲಿರತಕ್ಕದು (ಸಂ. ಸ್ವ.)

ಅಕ್ಷತ ವಿಧವಾ ಪುನರ್ವಿವಾಹ ವಿಮರ್ಶೆಯ ಸಭಾವೃತ್ತಾಂತ.

ಅಕ್ಷತ ವಿಧವಾವಿವಾಹ ಪ್ರಚಾರಕರಾದ ಶ್ರೀಯುತ ಅಳದಂಗ ಗಣಪತಿ ಭಟ್ಟರು ಸ್ವತಃ ಅವರ ಸಹಧಾರಕರಾಗಿ ೧೯೩೩ನೇ ಡಿಸೆಂಬರ ನಲ್ಲಿ ವಿವಾಹ ಮಾಡಿಕೊಂಡದ್ದಲ್ಲದೆ ಇಂದಿಗೂ ಸದರಿ ಪ್ರಚಾರಕಾರ್ಯ ದಲ್ಲಿ ಅವಿಶ್ರಾಂತವಾಗಿ ಕೆಲಸ ಮಾಡುತ್ತಲೂ ಜನರ ಮನಸ್ಸನ್ನು ಪರಿ ವರ್ತಿಸುವುದಕ್ಕಾಗಿ ಅಲ್ಲಲ್ಲಿ ಸಭೆಗಳನ್ನು ಜರಗಿಸುತ್ತಲೂ, ಸಾಧ್ಯವಿರು ವಲ್ಲಿ ವಿವಾಹಗಳನ್ನು ಜರಗಿಸುತ್ತಲೂ ವಿವಾಹಪತ್ರಗಳನ್ನು ಕಳುಹಿ ಸುತ್ತಲೂ, ಅವರ ಚಟುವಟಿಕೆಗಳ ಯಾವತ್ತು ವೃತ್ತಾಂತಗಳನ್ನು ನಮ್ಮ ಜಿಲ್ಲೆಯ ಸುಧಾರಕರನೇಕರಿಗೆ ಆಗಿಂದಾಗ್ಗೆ ತಿಳಿಸುತ್ತಲೂ ಇದ್ದಾ ರೆಂದು ವಾಚಕರಿಗೆ ತಿಳಿಸಲು ಸಂತೋಷಪಡುತ್ತೇನೆ ಅವರು ಇತ್ತೀ ಚೆಗೆ ಬರೆದ ಪತ್ರದೊಂದಿಗೆ ೨೨-೧-೧೯೩೪ರಲ್ಲಿ ಸಿದ್ದಾಪುರ ತಾಲೂಕಿನಲ್ಲಿ ಜರಗಿರುವ ಒಂದು ವಿವಾಹಪತ್ರವನ್ನೂ ಅಕ್ಷತ ವಿಧವಾ ಪುನರ್ವಿವಾಹ ವಿಮರ್ಶೆಗಾಗಿ [illegible] ಕಾಲಕ್ಕೆ ಮುಂಡಿಗೆಕರೆ ಶ್ರೀ ಗಣಪತಿ ದೇವಸ್ಥಾನದಲ್ಲಿ ಜರಗಿ ಸಿದ ಹವ್ಯಕ ಮಹಾಜನರ ಸಭೆಯ ವೃತ್ತಾಂತವನ್ನೂ ಕಳುಹಿಸಿ ಕೊಟ್ಟಿರುವರು ಸದರಿ ಸಭಾವೃತ್ತಾಂತದ ಸಾರಾಂಶವನ್ನು ಈ ಕೆಳಗೆ ಬರೆದಿರುವೆನು.—

[illegible]

"ಇದು ಧಾರ್ಮಿಕ ಪ್ರಶ್ನೆಯೆಂದು [illegible]

[illegible]

ಆ ಮೇಲೆ ಅಧ್ಯಕ್ಷರು ತಮ್ಮ ಉಪಸಂಹಾರ ಭಾಷಣದಲ್ಲಿ ಶ್ರೀ ಮಾನಿತ ಗಣಪತಿ ಶಾಸ್ತ್ರಿಗಳು ಹೇಳಿ ದಂತೆ ಶಾಸ್ತ್ರದಲ್ಲಿ ಇದ್ದರೂ ರೂಢಿಗೆ ವಿರೋಧವಾದ ಈ ಕಾರ್ಯವನ್ನು ಜನಸಾಮಾನ್ಯರು ಪ್ರಚಾರ ದಲ್ಲಿ ತರಲಾರರು, ಇನ್ನು ಲಗ್ನವಾಗಬೇಕೆಂಬ ವಿಧವೆಯು ಪುನರ್ವಿ ವಾಹ ಮಾಡಿಕೊಳ್ಳಲು ಅಡ್ಡಿಯಿಲ್ಲ ಮಾತ್ರ, ಅವರು ಶ್ರೀ ಗಣಪತಿ ಶಾಸ್ತ್ರಿಗಳು ಹೇಳಿದಂತೆ ಕಡಿಮೆ ದರ್ಜೆಯವರಾಗಿ ತಿಳಿದುಕೊಳ್ಳಬೇಕು, ಎಲ್ಲರೂ ಧರ್ಮವನ್ನು ಕಾಪಾಡಿರಿ. ಧರ್ಮವೇ ನಿಮ್ಮನ್ನು ಕಾಪಾಡು ವುದು, ಅಧರ್ಮ ಪ್ರವೃತ್ತರಾಗಬೇಡಿರಿ ಈ ತರದ ಸಭೆಗಳು ಸಮಾಜ ದಲ್ಲಿ ಮೇಲಿಂದ ಮೇಲೆ ಕೂಡಿದರೆ ಎಲ್ಲ ದೆಸೆಗಳಿಂದಲೂ ಸಮಾಜವು ಏಳ್ಗೆ ಹೊಂದಬಹುದು" ಎಂದು ದೇವರನ್ನು ಪ್ರಾರ್ಥಿಸಿ ಸಭೆಯು ವಿಸರ್ಜಿಸಲ್ಪಟ್ಟಿತು.

25 – 2 – 1934 N K Bhatta

ಕೋ. ಶಿ. ಕಾರಂತರು.

(ಬರೆಹಗಾರರು ಗೋವರ್ಧನರಾಯ)

ಶ್ರೀ ಕಾರಂತರ ಈ ಅಲ್ಪ ಪರಿಚಯವನ್ನು ಬರೆಯುವುದರಲ್ಲಿ ನನಗೆ ಸ್ವಲ್ಪವಾದರೂ ಸಂಕೋಚವಿಲ್ಲ ಏಕೆಂದರೆ ಕೆಲವು ದಿನಗಳ ಹಿಂದೆ ಇವರ ಸಾಹಿತ್ಯ ಶಕ್ತಿಯ ಬಗ್ಗೆ ಒಂದು ದಿನಪತ್ರಿಕೆಯಲ್ಲಿ ನಾನು ಹೆಮ್ಮೆಯಿಂದ ಈ ಕೆಳಗಿನ ಮಾತುಗಳನ್ನು ಬರೆದಿದ್ದೆ—"ಮುಂದೆ ನೆಯು ದಾಗಿ ಮಂಗಳೂರಿನ ಕಾರಂತರ ನಾಮಸ್ಮರಣೆಯಾಗುತ್ತದೆ. ಇವರ ಸಾಹಿತ್ಯಶಕ್ತಿಯ ಕೈವಾಡವನ್ನು ಕಾಣಬೇಕೆನ್ನುವವರು "ದೇವದೂತ" ವನ್ನೋದಬೇಕು ಇವರು ತಮ್ಮ ಗರ್ಭಗುಡಿಯೇ ಮುಂತಾದ [illegible]

[illegible]

[illegible]

(ಆ ಪುಟದಲ್ಲಿ ಮುಂದುವರಿಸಲ್ಪಟ್ಟಿತು)

Canara Bank, Limited.

Established 1906.

Authorised Capital	10,00000—0—0
Subscribed capital	6,00,000—0—0
Paid up Capital	3,30,000—0—0
Reserves	4,31,000—0—0

Head Office:—Bunder, Mangalore Local Offices: **City & Bunder.**

BRANCHES:— Bombay, Cochin, Calicut, Ernakulam, Alleppey, Chikmagalur, Ganguli, Coondapoor, Udipi, Karkal, Puttur, Kasaragod, & Buntwal Out-agency.

Interest is allowed on Current, Fixed and Savings Bank Accounts rates of which may be ascertained on application. Advances made on approved securities at easy rates. All kinds of Banking business transacted. Rules of business on application.

The Bangalore Branch Office of the Bank at No. 1 Albert Victor Road, Bangalore City has been opened on 8—1—34.

A. Madhava Pai,
Secretary.

East & West Insurance Company Ltd.,

(Incorporated in India 1913)

Head Office:—EAST & WEST BUILDINGS, FORT, BOMBAY.

Eastern Company with striking features
Attractive plans,
Sympathetic & Liberal
Treatment to Policy Holders,
&
Wide popularity,
Economic Management
Sound Investment
That is why you should select "East & West"
Ere you invest in the rest

Interim Bonus Declared Rs. 15 Per 1000 On whole life & Endowment Policies.

For particulars and Agency terms apply to—

B. S. Nayak, *Organiser, Secretary,* for West Coast, Coorg & Mysore,
"Harbour View" Mangalore.

ನಮ್ಮ ಟೊಯಿಲೆಟ್ ಮತ್ತು ವಾಶಿಂಗ್ ಸಾಬೂನುಗಳ ತಯಾರಿಯಲ್ಲಿ ಚರ್ಬಿ ಉಪಯೋಗಿಸಲ್ಪಡುವುದಾಗಿ ರುಜುಪಡಿಸುವವರಿಗೆ ರೂಪಾಯಿ
1000 ಬಹುಮಾನ.

ಸಾಬೂನು ಪಡೆಯುವಾಗ "　" ಅದರಲ್ಲಿ ಚರ್ಬಿ ಇರಕೂಡದೆಂದು ನಿಮ್ಮ ಆಶೆ.

ಪ್ರಾಣಿಗಳ ಚರ್ಬಿ ಮಿಶ್ರಿತವಾದ ಸಾಬೂನುಗಳು ಹಿತಕ್ಕಿಂತಲೂ ಅಹಿತವನ್ನೇ ಹೆಚ್ಚಾಗಿ ಉಂಟುಮಾಡುತ್ತವೆ. ಕಾರಣ ಅವುಗಳಲ್ಲಿನ ಚರ್ಬಿ ಚರ್ಮರಂಧ್ರಗಳೊಳಗೆ ಹೋಗಿ ಬೆವರನ್ನು ತಡೆಯುತ್ತದೆ. ಸೋಪನ್ನು ಪಡೆಯುವಾಗ ನೀವು ಪರಿಮಳಭರಿತ ಚರ್ಬಿಯ ಶುದ್ಧಿಗೆ ಬೆಲೆ ಕೊಟ್ಟು ಶುದ್ಧತೆಯ ಬದಲು ಅಶುದ್ಧತೆಯನ್ನು ಸ್ವೀಕರಿಸಬೇಕೆಂದಿರುವಿರಾ?

ಮಲಬಾರು ಸಾಬೂನುಗಳು ಜನನಕ್ಕೆ ಬಂದ ಆರು ತಿಂಗಳುಗಳ ಅಲ್ಪಾವಧಿಯಲ್ಲೇ ಸಾರ್ವಜನಿಕ ಬೆಂಬಲವನ್ನು ಪಡೆದಿವೆ. ಕೊಚ್ಚಿಯ ಮಹಾರಾಜರ ದಯಾಪೂರ್ಣ ಪ್ರಶಸ್ತಿ ಮತ್ತು ಪ್ರೋತ್ಸಾಹದಿಂದಾಗಿಯೂ, ಪ್ರಖ್ಯಾತ ವೈದಿಕೀಯ ಅಧಿಕಾರಿಗಳ ಶಿಫಾರಸಿನಿಂದಾಗಿಯೂ, ಅನೇಕ ವಸ್ತುಪ್ರದರ್ಶನಗಳಲ್ಲಿ ದೊರೆತ ಸುವರ್ಣಪದಕ ಮತ್ತು ಪ್ರಶಸ್ತಿ ಪತ್ರಿಕೆಗಳಿಂದಾಗಿಯೂ, ಮಲಬಾರ್ ಸಾಬೂನುಗಳ ಪ್ರಾಮುಖ್ಯತೆಯು ಎಷ್ಟೆಂದು ತಿಳಿಯುವುದು.

ಮಲಬಾರ್ ಸಾಬೂನು ಎಲ್ಲಾ ವಿಧದಿಂದಲೂ ಶ್ರೇಯಸ್ಕರವೇ ಆಗಿರುತ್ತದೆ. ನಿಮ್ಮ ಚರ್ಮಕ್ಕೆ ಬಾಧಕವನ್ನುಂಟು ಮಾಡುವಂಥ ಪ್ರಾಣಿಗಳ ಚರ್ಬಿ ಅಥವಾ ಹಾನಿಕರವಾದ ಮಿಶ್ರಿತವೇನೂ ಅದರಲ್ಲಿರದು. ಮಲಬಾರ್ ಸಾಬೂನನ್ನು ಶಾಸ್ತ್ರೀಯ ರೀತಿಯಿಂದಲೂ, ಆರೋಗ್ಯ ದೃಷ್ಟಿಯಿಂದಲೂ ತಯಾರಿಸುವುದರಿಂದ ಎಷ್ಟು ಕೋಮಲವಾದ ಚರ್ಮವೂ ಬಾಧಕ ಹೊಂದುವುದಿಲ್ಲ. ಈ ಸಾಬೂನು ದೇಶಿಯ ಅಮೂಲ್ಯ ಗಂಧಯುಕ್ತ ಸಾಮಾಗ್ರಿಗಳಿಂದ ಎಲ್ಲರಿಗೂ ಅನುಕೂಲವಾಗುವಂತೆ ಅಗ್ಗವಾಗಿದೆಯೆಂದು ಅದರ ಉಪಯೋಗದಿಂದ ನಿಮಗೆ ತಿಳಿಯಬರುವುದು.

ನಿಮ್ಮ ವ್ಯಾಪಾರಸ್ಥರು

ಮಲಬಾರ್ ಸಾಬೂನುಗಳನ್ನು

ವಿಕ್ರಯಿಸಲು ಸಂತೋಷಪಡುವರು

ಇದರಲ್ಲಿ ಪ್ರಾಣಿಗಳ ಕೊಬ್ಬು ಇರುವುದಿಲ್ಲ.

ದಿ ವೆಜಿಟೇಬಲ್ ಸೋಪ್ ವರ್ಕ್ಸ್, ಕಲ್ಲಿಕೋಟೆ.

ಪ್ರೊಪ್ರೈಟರ್:—ಸನ್ ಬ್ರೆಂಡ್ ಕೊಡಿಯ ಪ್ರಾತಿಯ ಸೇಟ್ ನಾಗಜೀ ಪುರುಷೋತ್ತಮ ಮತ್ತು ಕಂಪೆನಿ, ಕಲ್ಲಿಕೋಟೆ.

ಈ ಜಿಲ್ಲೆಗೆ ಪ್ರವರ್ತಕರು:—

ರಾಘವೇಂದ್ರ ರಂಗ ಪೈ, ರಥಬೀದಿ, ಮಂಗಳೂರು.

S. U. N. & CO.

Choukhamba, Benares City

ಮೂರು ಇನಾಮುಗಳು.

ನಮ್ಮಲ್ಲಿ ಕಾಶ್ಮೀರ್ ಶಾಲುಗಳಿಗಿಂತಲೂ ಅತ್ಯುತ್ತಮವಾದ ಕಸೂತಿಗೆಲಂದೊಪ್ಪುವ ಶುದ್ಧ ಸ್ವದೇಶೀ ಖದ್ದರ್ ಸಿಲ್ಕು ಶಾಲುಗಳು ತಯಾರಾಗುತ್ತವೆ. ಬೇಕಾದವರು ತ್ವರೆಮಾಡಿ ಬರೆದರೆ ಈ ಕೆಳಗಿನ ದರದಲ್ಲಿ ಕಳುಹಿಸಲಾಗುತ್ತದೆ. 5 ಮೊಳ ಉದ್ದ 2½ ಅಗಲ ದರ ಒದಕ್ಕೆ ರೂ. 2—8—0ಯಿಂದ 3—12—0 5½ ಮೊಳ ಉದ್ದ 2¾ ಮೊಳ ಅಗಲ ದರ 1ಕ್ಕೆ 3—8—0, 4—8—0. 6 ಮೊಳ ಉದ್ದ 3 ಅಗಲ ದರ 1ಕ್ಕೆ ರೂ. 4—8—0, ರೂ. 5. ಅಲ್ಲದೆ ಸ್ವದೇಶೀ ಖದ್ದರ್ ಮಡಿಗಳೂ, ಸೀರೆಗಳೂ ಅಂಚುಗಳಿಲ್ಲದೆ ಎಲ್ಲಾ ರಂಗುಗಳಲ್ಲಿರುತ್ತವೆ. ಮತ್ತು ಜರೀಕಾರೀ ಸೀರೆಗಳೂ ಪೀತಾಂಬರಗಳೂ ರವಿಕೆಗಳೂ, ರುದ್ರಾಕ್ಷೀ—ಬಾಣಲಿಂಗ—ಪಂಚಾಯತನ ಸುದರ್ಶನ ಹಿತ್ತಾಳೆ ಸ್ವಾಮಿಗೆ ಮಿಶ್ರನ್, ಮಡಿ ಧಾವಳಿ ಶಾಲು, ಜಗನ್ನಾಥ ಗಂಟೆಗಳೂ ಕೂಡಾ ಸರಿಯಾದ ದರಕ್ಕೆ ಕಳುಹಿಸಲಾಗುತ್ತದೆ. ವಿವರಕ್ಕೆ ಕೆಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ. 1 ಆಣೆ ಸ್ಟೇಂಪು ಕಳುಹಿಸಿದರೆ 1 ವಿಶ್ವೇಶ್ವರ ಪಟ, 1 ಕಾಶೀನಕ್ಷೆ, 1 ಕೆಟಲಾಗಿನೊಡನೆ 3 ಇನಾಮುಗಳು.

ವಿಳಾಸ:—
ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪೆನಿ, ಚೌಖಾಂಬ, ಬನಾರಸ್ (ಕಾಶೀ)

ಬೇಕಾಗಿದ್ದಾರೆ.

ಸಕಲೇಶಪುರ, ಚಿಕ್ಕಮಗಳೂರುಗಳಲ್ಲಿ ಬಿಡಿ ಸಂಚಿಕೆಗಳನ್ನು ಮಾರಲು ಉತ್ಸಾಹೀ ಏಜೆಂಟರು ಬೇಕಾಗಿದ್ದಾರೆ. ಶರ್ತಗಳಿಗೆ ಕೂಡಲೇ ಬರೆಯಿರಿ.

ಮೆನೇಜರ್— ಸ್ವದೇಶಾಭಿಮಾನಿ, ಮಂಗಳೂರು.

ನೋಟೀಸು.

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

ಸ್ಮಾಲ್ ದಾವಾ ನಂಬ್ರ 2/1934.

ಅಮ್ಮು ಪಡಿವಾಳ, ಚಂದಯ್ಯ ಪಡಿವಾಳರ ಅಳಿಯ, ಮಂಗಳೂರು ತಾಲೂಕು ಕಡೆಶ್ವಾಲ್ಯ ಗ್ರಾಮದ ಆಯರ್ಬಲು—ವಾದಿ.

ಮತ್ತು

ಚರ್ದ ಪೈ, ನಂಪ್ಪಪೈಗಳ ಮಗ, ಕಡೆಶ್ವಾಲ್ಯ ಗ್ರಾಮದ ದೀಟ—ಪ್ರತಿವಾದಿ.

ಮೇಲ್ಕಂಡ ವಾದಿಗೆ ಪ್ರತಿವಾದಿಯಿಂದ ನೋಟಿನ ಬಾಬ್ತು ಒಟ್ಟು ಅಸಲು ಬಡ್ಡಿ ರೂ. 33—12—11ರ ವಸೂಲಿ ಬಗ್ಗೆ ಕೂಡಾ ವಾದಿಯು ಮಾಡಿದ ವ್ಯಾಜ್ಯವು ತಾ. 3—3—'34ಕ್ಕೆ ತನ್ನಿಗೆ ಇಟ್ಟಿರುವದರಿಂದ ಆ ದಿವಸ ಪ್ರತಿವಾದಿಯು ಸದರಿ ಕೋರ್ಟಿನ ಮುಂದೆ ಹಾಜರಾಗಿ ಉದಹರಿಸಿಕೊಳ್ಳತಕ್ಕದ್ದು. ತಪ್ಪಿದರೆ ಆತನ ಗೈರು ಹಾಜರಿಯಿಂದ ನಿರ್ಣಯವನ್ನು ತೀರ್ಮಾನಿಸಲಾದೀತು.

Puttur, 16—2—'34. **B. Mangesha Rao,**
Pleader for Plaintiff.

WE HOLD IN STOCK OFF

English into Kanarese Teacher
Hindi into Kanarese Teacher
Marathi into Kanarese Teacher
Marathi into Gujarathi Teacher
Novels and well known Dramas in Hindi and all sorts of books for Schools and Colleges.

Wanted Agents and Canvassers throughout Karnatak districts.

Apply for full particulars with 1½ Annas Stamps:—

THE MANAGER
The National Kanara News Agency,
SIR PHIROJSHA METHA ROAD,
Fort Bombay.

(ಗತ ಸಂಚಿಕೆಯಿಂದ ಮುಂದುವರಿಸಿದುದು).

ಹಣೋ? ಇಂತಹ ಲೇಖಕರೂ ಇದ್ದರೆ ಅವನ್ನು ಬಿಟ್ಟುಬಿಡುವುದು ಉಚಿತ. ಕಾರಂತರಿಗಿಲ್ಲ ಸಲ್ಲುವ ಕಾರಣಗಳಿಗೆ ಅವರು ಮುಂಗಡೆಗೆ ಬರಬೇಕೆಂದು ಅಪೇಕ್ಷಿಸುವುದರಿಂದ ಧಾರವಾಡ ಬೆಂಗಳೂರಿನ ಸಾಹಿತ್ಯ ಯಾತ್ರಿಕರನ್ನು ಕರೆದಂತೆ ಬಿಟ್ಟು ಹೋಗುವ ಸಲ್ಲಿಸನ್ನು ಕಳಿಸುವ ಕೃತಿ ಮಾಡಲಿ. ತಾರಾನಾಥರು ಬರುವುದರಲ್ಲಿ ಕಿಲಮಾತ್ರವೂ ಸಂದೇಹವಿಲ್ಲವೆಂದು ನಾನು ಕಾರಂತರಿಗೆ ನಂಬಿಗೆಯಾಗುವಂತೆ ಹೇಳುತ್ತೇನೆ.

ತಾರಾನಾಥರೂ ಸಮ್ಯಂಕಿಯೇ ಮಾನವಮಾತ್ರರು. ಅವರ ನಡೆನುಡಿಗಳಲ್ಲಿ ತಪ್ಪುಗಳಿರಬಹುದು ಅವರೆ ಅವರನ್ನು ತಿದ್ದುವವನಾಗಲಿ, ಅವರಿಂದ ಜನರು ಕೆಡಬಹುದೆಂಬ ಕಳವಳವಿರುವವನಾಗಲಿ, ಕೊರೆಯುವ ಕೀಳು ವ್ಯಂಗ್ಯಕ್ಕೆ ಕೈಹಾಕುವುದಕ್ಕಿಂತ ಅವರಲ್ಲಿ ತೋರುವ ಕೇಡುಪಾಡುಗಳನ್ನು ಧಾರಾಳವಾಗಿ ವಿವರಿಸಿ ಬರೆಯುವ ಧೈರ್ಯವುಳ್ಳವನಾಗಬೇಕು. ಇಲ್ಲವಾದರೆ ಅಂತಹ ಬರಹಗಳಲ್ಲಿ ಸತ್ಯಾಸತ್ಯಕ್ಕಿಂತ ಜನರಿಗೆ ಬರಹಗಾರನ ಮಾತ್ಸರ್ಯದ ನೋಟವೇ ವಿಶೇಷವಾಗಿ ತೋರಬಹುದು.

ಅವರೆ ಕಾರಂತರಂತವರ ಬರಹದಿಂದ, ಪಶ್ಚಿಮ ಖಂಡಗಳಲ್ಲಿ ವೇಗದಿಂದ ಹಬ್ಬುತ್ತಿರುವ ತಾರಾನಾಥರ ಕೀರ್ತಿಗೇನೂ ಕಡೆಯಾಗಿಲ್ಲ. ಕರ್ನಾಟಕಕ್ಕೆ ಬೇಕಾದ ಬಿಡುಳು, ಕಾರಂತರೆಂದಂತೆ ಹೊರನಾಡಿನವರಿಗೆ ಪೂರ್ಣವಾಗಿ ಪುರಸ್ಕಾರ ಹೊಂದುತ್ತಿದೆ. ಫ್ರಾನ್ಸದ ಸರಕಾರದವರು ತಾರಾನಾಥರಿಗೆ ಪ್ಯಾರಿಸಿನಲ್ಲಿ ಕೆಲವು ರೋಗಗಳ ಚಿಕಿತ್ಸೆಗೆ ಒಂದು ಪ್ರಯೋಗಶಾಲೆಯನ್ನೇ ಅನುಕೂಲ ಮಾಡಿ ಕೊಡುತ್ತೇವೆಂದು ಹೇಳಿದ್ದಾರೆ. ಸಕಲಧರ್ಮ ಪರಿಷತ್ತಿಗೆ ಅಲ್ಲಿಯ ಸ್ವಾಗತಸಮಿತಿಯವರಿಂದ ಆಮಂತ್ರಣದ ಬಹುಮಾನವನ್ನು ಈ ಸಲ ಪಡೆದ ಭಾರತೀಯರು ಇಬ್ಬರೇ,—ಮಹಾತ್ಮಾ ಗಾಂಧಿ ಮತ್ತು ತಾರಾನಾಥರು ಈಗ ಒಂದು ವರ್ಷದಿಂದ ಅವರ ಪದತಲದಲ್ಲಿ ಕೂತು ಪಾಠ ಕಲಿಯಲು ಪಶ್ಚಿಮ ದೇಶದ ಮಹಾವಿದ್ವಾಂಸರ ಯಾತ್ರೆಯೇ ತುಂಗಭದ್ರೆಗೆ ಬರುತ್ತಿದೆ. ಫ್ರಾನ್ಸದ ಸೊರ್ಬಾನ್ ವಿಶ್ವವಿದ್ಯಾಲಯದ ಡಾಕ್ಟರ್ ಫಾವರ್ ಎಂಬಾತನು ಬಂದು ಹೋದ, ಜರ್ಮನಿಯಿಂದ ಡಾಕ್ಟರ್ ಅಂಥಾ ಎಂಬವನು ಆಯುರ್ವೇದವನ್ನು ವಿಜ್ಞಾನದ ಯುಕ್ತಿಯಿಂದ ಹೇಳಬಲ್ಲವರು ಯಾರಿರುವರೆಂದು ಭಾರತದ ಮುಖ್ಯ ನಗರಗಳಲ್ಲೆಲ್ಲಾ ಸುತ್ತಾಡಿ ಇವರಲ್ಲಿಗೆ ಬಂದು ತೃಪ್ತಿ ಹೊಂದಿ ಮತ್ತೆ ರಜೆ ಪಡೆದು ಬರುವೆನೆಂದು ಹೋದನು ಈಗ ಇಟಲಿ, ಫ್ರಾನ್ಸ್, ಸ್ವಿಟ್ಜರ್‌ಲೆಂಡ್ ದೇಶಗಳಿಂದ ಮೂರು ಜನ ಪ್ರೊಫೆಸರುಗಳು ಬಂದಿದ್ದಾರೆ. ಇಟಾಲಿಯನ್ ಸರಕಾರದವರ ಆಮಂತ್ರಣವೂ ಇಷ್ಟರಲ್ಲಿಯೇ ಬರಬಹುದೆಂದು ಅಲ್ಲಿಯ ಒಬ್ಬ ಮೇಧಾವಿಯು ಬರೆದಿದ್ದಾನೆ. ಬೆಂಗಳೂರಿನ ರಂಗಭೂಮಿಯ ಕಲಾಪ್ರಕಟನೆಗಳಲ್ಲಿ ಬಂದ ಇವರ ಬರಹಗಳನ್ನು ಓದಿ ಆನಂದತುಂದಿಲರಾದ ಫ್ರಾನ್ಸ್ ಮತ್ತು ಅಮೇರಿಕೆಯ ಜನರು ಅನೇಕರಿದ್ದಾರೆ. ಅಲ್ಲಿ ಹೊರಟಿವಾದ ಪುಸ್ತಕಗಳೇ ಈ ಸಂಗತಿಯನ್ನು ಹೇಳುತ್ತವೆ. ಇಂದು ಪಶ್ಚಿಮದಲ್ಲಿ ತಮ್ಮ ಕೀರ್ತಿಭೇರಿಯನ್ನು ಮೊಳಗಿಸಿ ಬಂದ ಡಾಕ್ಟರ್ ರಾಧಾಕೃಷ್ಣರಂತಹ ದಾರ್ಶನಿಕರು ಸಹ ತಾರಾನಾಥರಿಂದ ತಿಳಿದುಕೊಳ್ಳತಕ್ಕಂತಹ ಅಂಶಗಳಿವೆಯೆಂದರಿತು ಅವರನ್ನು ಹುಡುಕುತ್ತ ಬಂದು, ಪೂಜ್ಯಭಾವದಿಂದ ಕೇಳಿ ಮರಳಿದ್ದಾರೆ.

ಆದುದರಿಂದ ತಾರಾನಾಥರಿಗಾಗುವ ಅವಮಾನದ ಯೋಚನೆಗಿಂತಲೂ ಕಾರಂತರಂತಹ ಬೆಳೆಯುವ ತರುಣರು ತಪ್ಪು ದಾರಿಯನ್ನು ತುಳಿಯುತ್ತಿದ್ದಾರೆಂಬ ಸಂದೇಹವೇ ನನಗೆ ಈ ಬರಹವನ್ನು ಬರೆಯಲು ಹಚ್ಚಿದೆ. ವಿನಯಪೂರ್ವಕವಾಗಿ ನಾನು ತೋರಿಸಿದ ತಪ್ಪುಗಳು ಹೌದಾಗಿದ್ದರೆ ನನ್ನ ಸ್ನೇಹಿತರಾದ ಕಾರಂತರು ಅತ್ತ ಕಡೆಗೆ ತಕ್ಕ ಗಮನವನ್ನು ಕೊಡುವರೆಂದು ನಂಬುತ್ತೇನೆ.

ನೋಟೀಸು.

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S No 64/1934

ಅಹಮ್ಮದ ಬ್ಯಾರಿ, ಕಡವತ್ತ ಮಹಮ್ಮದ ಹಾಜಾರರ ಮಗ. ತಳನಾಡು ಗ್ರಾಮದ ಚಂದ್ರಗಿರಿಯಲ್ಲಿರುವವ—ವಾದಿ.

ಮತ್ತು

ಅಬ್ದುಲ್ಲಬ್ಯಾರಿ, ಮಮ್ಮು ಯಾನೆ ಮಮ್ಮದಬ್ಯಾರಿಗಳ ಮಗ. ಪಳ್ಳಿಕೆರೆ ಗ್ರಾಮದ ಪಾಲಿಕುನ್ನು ಎಂಬಲ್ಲಿರುವವ—ಪ್ರತಿವಾದಿ

ಇವರೊಳಗೆ

ಪ್ರತಿವಾದಿಯು ಫುದಿಯ ಪೂರೆ ಮಹಮ್ಮದಬ್ಯಾರಿ ಕೂಡಾ 2 ಜನರಿಗೆ ರಿಜಿಸ್ತ್ರಿ ನಿತಿಂ ತಾ 25-7-1926ರಲ್ಲು ರೂಪಾಯಿ 200—0—0ಕ್ಕೆ ಬರಕೊಟ್ಟ ಅಡವಿನ ಕರಾರಿನ ಪಡೆದು ವಾದಿಯು ಸದರಿ ಅಡವಿನ ಅಸಲು ಬಡ್ಡಿ ಐವಜಿನ ಬಗ್ಗೆ ದಾಖಲು ಮಾಡಿದ ಮೇಲ್ಕಂಡ ವ್ಯಾಜ್ಯವು ತಾ 21-3-'84ಕ್ಕೆ ತನಿಖೆಗೆ ಇಟ್ಟಿರುವುದರಿಂದ ಆ ದಿವಸ ಪ್ರತಿವಾದಿಯು ಹಾಜರಾಗದಿದ್ದರೆ ಏಕಪಕ್ಷವಾಗಿ ತೀರ್ಮಾನ ಮಾಡಲಾಗುವ ಸಂಗತಿ ತಿಳಿಸಲಾಗಿಯದೆ

ಕಾಸರಗೋಡು,
28-2-1934

P. Ahamad,
Advocate for Plaintiff.

←• • →

NOTICE.

In the Court of the District Judge of South Kanara.

Original Petition No. 23/1934.

Between:—

K Padmanabha Rao, son of Madhava Gopalakristna Rao Malhar, Advocate, Payyanoor, North Malabar District—Petitioner

and

1. K. Giridhara Rao 2. K. Damodara Rao 3 K Nagoji Rao 4 K. Varada Rao—Respondents

Take notice that the Petitioner has applied in the above petition for the grant of a Succession Certificate under Section 371 of the Indian Succession Act XXXIX of 1925 empowering him to collect the debts and to receive the interest and dividends on and negotiate and transfer the 3½ per cent G. P Notes Nos 235947 to 235951 for Rs 100/- each standing in the name of the said deceased Madhava Gopalakristna Rao Malhar and the said petition stands posted to 11 A. M. on 15—3—1934 in the above Court. Any person who wishes to oppose the same may do so either in person or by pleader by the said date, failing which the petition will be heard and decided in their absence.

Mangalore,
21-2-1934

H. Vasudeva Kamath,
Vakil for Petitioner.

ಪ್ರಕಟಣೆ.

ಕಾರ್ಕಳ ಡಿಸ್ಟ್ರಿಕ್ಟ ಮುನ್ಸೀಫ ಕೋರ್ಟಿನಲ್ಲಿ

ಕ್ರಮ ನಂಬ್ರ 244/1933

ಅಪ್ಪು ಯಾನೆ ಅಂತಪ್ಪ ಪೂಜಾರಿ—ವಾದಿ

ಮತ್ತು

ನೇಮಿರಾಜ ಶೆಟ್ಟಿ ವಗೈರೆ—ಪ್ರತಿವಾದಿ

ಪುತ್ತೂರು ತಾಲೂಕು ಬೆಳ್ತಂಗಡಿ ಕಸಬಾ ಗ್ರಾಮದ ಪೇಟೆಯಲ್ಲಿರುವ ನಾರಾಯಣ ಶೆಟ್ಟಿ ವಿಧವೆ ದುಗ್ಗಮ್ಮ ಹೆಂಗಸಿನ ಮಗಳು ಕಮಲು ಶೆಟ್ಟಿ ಇವಳಿಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ—

ಮೇಲೆ ಕಾಣಿಸಿರುವ ಕೋರ್ಟಿನಲ್ಲಿ ಮೇಲೆ ಹೆಸರು ಕಾಣಿಸಿರುವ ವಾದಿಯು ದಾಖಲು ಮಾಡಿರುವ ಮೇಲೆ ಕಾಣಿಸಿರುವ ದಾವೆಯು ತಾ 28-3-34ಕ್ಕೆ ತನಿಖೆ ಬಗ್ಗೆ ಇಡಲ್ಪಟ್ಟಿರುತ್ತದೆಂತಲೂ ಆ ದಿವಸ ಬೆಳಿಗ್ಗೆ 11 ಗಂಟೆಗೆ ಅವಳು ಸ್ವತಹಾ ಅಥವಾ ವಕೀಲರ ಮುಖಾಂತರ ಆ ಕೋರ್ಟಿಗೆ ಹಾಜರಾಗಿ ಆ ದಾವೆಯ ಪ್ಲೆಯಿಂಟಿನ ನಕ್ಲನ್ನು ಆ ಕೋರ್ಟಿನಿಂದ ಪಡೆದುಕೊಳ್ಳಬಹುದೆಂತ ಸಹಾ ಮೇಲೆ ಹೆಸರು ಕಾಣಿಸಿರುವ ಸದ್ರಿ ದಾವೆಯ 8ನೇ ಪ್ರತಿವಾದಿ ಕಮಲು ಶೆಟ್ಟಿಗೆ ಈ ಮೂಲಕ ತಿಳಿಸಲಾಗಿರುತ್ತದೆ. ಆ ದಾವೆಯಲ್ಲಿ ಸದ್ರಿ 8ನೇ ಪ್ರತಿವಾದಿಗೆ ಹಲವು ಬಗೆಗಳಲ್ಲಿ ವಾದಿಯು ಈ ಮೊದಲು ಮಾಡಿಸಿದ್ದ ನೋಟೀಸುಗಳಿಗೆ ಅವಳು ಸಿಕ್ಕದೆ ತಪ್ಪಿಸಿಕೊಂಡು ಇರುತ್ತಿದ್ದ ಕಾರಣ ಈ ನೋಟೀಸನ್ನು ಕೋರ್ಟಿನವರ ಹುಕುಂ ಪ್ರಕಾರ ಪ್ರಕಟಪಡಿಸುವದಾಗಿರುತ್ತದೆ.

(ಕೋರ್ಟಿನವರ ಹುಕುಂ ಪ್ರಕಾರ)

ಕಾರ್ಕಳ,
23-2-1934

ಇಡ್ಯದ ವಾಸುದೇವಯ್ಯ, ಬಿ. ಎ. ಬಿಎಲ್
ವಾದಿಯ ಕಡೆ ವಕೀಲ

ನೋಟೀಸು.

ಉಡುಪಿ ಡಿಸ್ಟ್ರಿಕ್ಟ ಮುನ್ಸೀಫ ಕೋರ್ಟಿನಲ್ಲಿ

O. P. No 11/1934.

ಗೋದಾವರಿ ಅಮ್ಮ—ಅರ್ಜಿದಾರಳು.

ಮೇಲ್ಕಂಡ ಅರ್ಜಿದಾರಳು ಈ ಕೋರ್ಟಿನಲ್ಲಿ ಒಂದು ಅರ್ಜಿ ದಾಖಲು ಮಾಡಿ ಸದ್ರಿಯವಳ ತಾಯಿ ಕೃಷ್ಣವೇಣಿ ಅಮ್ಮನು ತಾ. 1-5-1933ರಲ್ಲಿ ಮೃತಪಟ್ಟಿದ್ದಾಳಾದ್ದರಿಂದ ಸದ್ರಿಯವಳು ರೂಪಾಯಿ [illegible] ಕೃಷ್ಣ ಭಟ್ಟರ ಮಗ ವಾಸುದೇವ ಭಟ್ಟರಿಂದ ಬರಬೇಕಾದ ನೋಟಿನ ಹಣವನ್ನು ವಸೂಲು ಮಾಡುವರೆ ತನಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಬೇಕಾಗಿಯೂ ಸದ್ರಿ ಮೃತಳಿಗೆ ತಾನು ವಾರಿಸದಾರಳಾಗಿಯೂ ಹೇಳುವುದರಿಂದ ಸದ್ರಿ ಅರ್ಜಿಯನ್ನು ತಾ 19-3-1934ಕ್ಕೆ ತನಿಖೆಗೆ ಇಟ್ಟಿರುತ್ತದೆ. ಆಕ್ಷೇಪಿಸುವವರು ಇದ್ದರೆ ಆ ದಿವಸ 11 ಘಂಟೆಗೆ ಈ ಕೋರ್ಟಿಗೆ ಹಾಜರಾಗಿ ಮನವಿ ಮಾಡಿಕೊಳ್ಳಬೇಕು

Udipi,
26-2-1934

P. Padmanabha Rao,
Vakil for Petitioner

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S No 11/34.

ತಿಮ್ಮಯ್ಯ ಶೆಟ್ಟಿ—ವಾದಿ

ಮತ್ತು

ಅನಂತ ಶೆಟ್ಟಿ ಕೂಡಾ—ಪ್ರತಿವಾದಿರು

ಇವರೊಳಗೆ

2ನೇ ಪ್ರತಿವಾದಿ ಕೃಷ್ಣರಾಮಚಂದ್ರ ಹಲ್ವಾಡಿ, ರಾಮಚಂದ್ರ ಬಟ್ಟು ಹಲ್ವಾಡಿರ ಮಗ, ಉಡುಪಿ ತಾಲೂಕು ಮೂಡಬೆಟ್ಟು ಗ್ರಾಮದ ಪೊಸಾರ—ಇವರಿಗೆ.

ವಾದಿಯು ಪ್ಲೇಂಟಿನಲ್ಲಿ ಕೇಳಿದ ನಿವೃತ್ತಿಗೋಸ್ಕರ ದಾಖಲುಮಾಡಿದ ಮೇಲಿನ ವ್ಯಾಜ್ಯವು ಮೇಲ್ಕಂಡ ಕೋರ್ಟಿನಲ್ಲಿ ತಾ 21-3-34ನೇ ಬುಧವಾರ ದಿವಸ ತನಿಖೆ ಬಗ್ಗೆ ಇಟ್ಟಿರುವುದರಿಂದ ಆ ಕುರಿತು ನಿಮ್ಮ ಆಕ್ಷೇಪ ಇರುವ ಸಂಗತಿಯಲ್ಲಿ ಸದರಿ ತಾರೀಕಿನ ದಿವಸ ಬೆಳಿಗ್ಗೆ 10 ಗಂಟೆಗೆ ಕೋರ್ಟಿನಮುಂದೆ ಹಾಜರಾಗಿ ಅಪ್ಪಹೇಳುವಮಾಡಿಕೊಳ್ಳತಕ್ಕದ್ದು ತಪ್ಪಿದರೆ ನಿಮ್ಮ ಗೈರಹಾಜರಿ ಸಮ್ಮಂಧ ನಿಮ್ಮ ಮೇಲೆ ಕೂಡಾ ಡಿಕ್ರಿ ಆದೀತೆಂಬ ಸಂಗತಿ ಈ ಮೂಲಕ ತಿಳಿಸೋಣಾಗಿಯದೆ

ಉಡುಪಿ,
ತಾ 27-2-34

ಕೆ. ಜೆ. ಬಲ್ಲಾಳ,
ವಾದಿ ಕಡೆ ವಕೀಲ್

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

O S No 13/34

ಉಮ್ಮಕ್ಕ ಶೆಡ್ತಿ—ವಾದಿಳು

ಮತ್ತು

ಅನಂತ ಶೆಟ್ಟಿ ಕೂಡಾ—ಪ್ರತಿವಾದಿರು

ಇವರೊಳಗೆ

2ನೇ ಪ್ರತಿವಾದಿ, ಕೃಷ್ಣರಾಮಚಂದ್ರ ಹಲ್ವಾಡಿ, ರಾಮಚಂದ್ರ ಬಟ್ಟು ಹಲ್ವಾಡಿರ ಮಗ, ಉಡುಪಿ ತಾಲೂಕು ಮೂಡಬೆಟ್ಟು ಗ್ರಾಮದ ಪೊಸಾರ—ಇವರಿಗೆ

ವಾದಿಳು ಪ್ಲೇಂಟಿನಲ್ಲಿ ಕೇಳಿದ ನಿವೃತ್ತಿಗೋಸ್ಕರ ದಾಖಲು ಮಾಡಿದ ನೇಲಿನ ವ್ಯಾಜ್ಯವು ಮೇಲ್ಕಂಡ ಕೋರ್ಟಿನಲ್ಲಿ ತಾ 21-3-34ನೇ ಬುಧವಾರ ದಿವಸ ತನಿಖೆ ಬಗ್ಗೆ ಇಟ್ಟಿರುವುದರಿಂದ ಆ ಕುರಿತು ನಿಮ್ಮ ಆಕ್ಷೇಪ ಇರುವ ಸಂಗತಿಯಲ್ಲಿ ಸದರಿ ತಾರೀಕಿನ ದಿವಸ ಬೆಳಿಗ್ಗೆ 10 ಗಂಟೆಗೆ ಕೋರ್ಟಿನಮುಂದೆ ಹಾಜರಾಗಿ ಅಪ್ಪಹೇಳು ಮಾಡಿಕೊಳ್ಳತಕ್ಕದು ತಪ್ಪಿದ್ದರೆ ನಿಮ್ಮ ಗೈರಹಾಜರಿ ಸಮ್ಮಂಧ ನಿಮ್ಮ ಮೇಲೆ ಕೂಡಾ ಡಿಕ್ರಿ ಆದೀತೆಂಬ ಸಂಗತಿ ಈ ಮೂಲಕ ತಿಳಿಸೋಣಾಗಿಯದೆ

ಉಡುಪಿ,
ತಾ 27-2-34

ಕೆ. ಜೆ. ಬಲ್ಲಾಳ,
ವಾದಿ ಕಡೆ ವಕೀಲ್

ಇದೇ ಕರ್ನಾಟಕ ರಂಗಭೂಮಿಯಲ್ಲೇ ಈ ನಾಟಕವು ಅಭಿನಯಿಸಲ್ಪಡುವುದು
ಇದೇ ಮೊದಲನೇ ಸಾರಿ

ಶ್ರೀ ಚಂದ್ರಕಲಾ ಕರ್ನಾಟಕ ನಾಟಕ ಮಂಡಲಿ, ಮೈಸೂರು

ಇವರು

ಹೊಸ ಡ್ರೆಸ್! ಇಂಪಾದ ಗಾನ!! ಮನೋಹರವಾದ ಡ್ರೆಸ್ ಡ್ಯಾನ್ಸ್!!!

ವಿದ್ಯುದ್ದೀಪಗಳಿಂದಲಂಕೃತವಾದ

ಮಂಗಳೂರು ಮೈದಾನಿನಲ್ಲಿರುವ ಶ್ರೀ ಚಂದ್ರಕಲಾ ಥಿಯೇಟರಿನಲ್ಲಿ

~~10—3—1934ನೇ ಶನಿವಾರ ರಾತ್ರೆ 9½ ಘಂಟೆಗೆ~~

ಹೊಸ ನಾಟಕ! **ಗೌತಮ ಬುದ್ಧ** ಹೊಸ ನಾಟಕ!

ಎಂಬ ಅತ್ಯಪೂರ್ವ ಐತಿಹಾಸಿಕ ನಾಟಕವನ್ನು ಅಭಿನಯಿಸುತ್ತಾರೆ. ಮಹಾಜನಗಳು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ.

ಲೋಕಪೂಜ್ಯರಾದ ಮಹಾತ್ಮಾ ಗಾಂಧಿಯವರ ಅಹಿಂಸಾ ಧರ್ಮವೇ ಪ್ರಧಾನವಾಗಿರುವ ಈ ನಾಟಕವನ್ನು ಸರ್ವರೂ ನೋಡಿ ಆನಂದ ಪಡಿಯಿರಿ.

ಟಿ. ವಿಶ್ವೇಶ್ವರಯ್ಯ, ಬಿ. ಎ, ಮ್ಯಾನೇಜರ್. ಎಂ. ಹೀರ್, ಪ್ರೊಪ್ರೈಟರ್.

(ಶ್ರೀ ... ...)

ಪುತ್ತೂರಿನಲ್ಲಿ.

ನಗರ ಸಭೆಯವರು ಮೊದಲೇ ವ್ಯವಸ್ಥೆಗೊಳಿಸಿ ಪೀಠ ಹಾಕಿಸಿದ್ದರು. ೫ ಘಂಟೆಯಿಂದ ೬ ಘಂಟೆಯ ವರೆಗೆ ಮೈದಾನಿನಲ್ಲಿ ಕಿಕ್ಕಿರಿದು ನೆರೆದಿದ್ದ ೧೦-೧೫ ಸಾವಿರ ಜನರ ಅತುರತೆಯ ಪರಮಾವಧಿಗೇರುತ್ತಿದ್ದಂತೆ,-ಮಹಾತ್ಮರು ಕಾರಿನಿಂದ ಇಳಿದರು. ಕರತಾಡನವು ನಡೆಯಿತು. ಬಳಿಕ ಡಿಸ್ಟ್ರಿಕ್ಟ್ ಬೋರ್ಡ, ತಾಲೂಕು ಬೋರ್ಡ, ಮುನಿಸಿಪಾಲಿಟಿ, ಹಿಂದೀ ಪ್ರಚಾರ ಸಭಾ ಮೊದಲಾದವರ ಮಾನಪತ್ರಗಳನ್ನು ಸಾರ್ವಜನಿಕರ ಪರವಾಗಿ ೧೧೦೧ ರೂಪಾಯಿಗಳ ಕಾಣಿಕೆ ಚೀಲವನ್ನು ಅತ್ಯಾನಂದದಿಂದ ಸ್ವೀಕರಿಸಿ, ಮಾನಪತ್ರಗಳಿಂದ ತಾನು ಸಂತೋಷಗೊಂಡೆನೆಂದೂ, ನಿಧಿಯು ಸಾಕಷ್ಟಿರುವುದಿಲ್ಲವಾದರೂ, ಹಣದ ಅಭಾವದ ವೇಳೆ ಇದು ಕಡಿಮೆಯಲ್ಲವೆಂದೂ ಹೇಳಿದರು. ಶ್ರೀ ಶೆಲ್ಲೆಯವರು ಅವರ ಭಾಷಣವನ್ನು ತರ್ಜುಮೆ ಮಾಡಿ ಹೇಳಿದರು. ಆ ಮೇಲೆ ಸಾಮಾನುಗಳ ಏಲಮಿಗೆ ಪ್ರಾರಂಭವಾಗಿ ಮೊದಲು ಸಾಮಾನನ್ನು ಮಣ್ಣಗುಡ್ಡೆ ವಿಟ್ಠಲ ಪ್ರಭುಗಳೂ ಉಳಿದವುಗಳನ್ನು ಇನ್ನಿತರರೂ ಪಡೆದರು. ಮಹಾತ್ಮರು ಕನ್ನಡದಲ್ಲಿಯೇ ನುಡಿಯುತ್ತ ಏಲಂ ಮಾಡಿದರು. ಏಲಮಿನಿಂದ ಸುಮಾರು ರೂ ೩೪೪-೮-೦ ದೊರೆಯಿತು. ಎಂಟುಗಂಟೆ ಯ ನಂತರ ಸಭಾ ವಿಸರ್ಜನೆಯಾಯಿತು

ಮರುದಿನ

ತಾ ೩೦ನೇ ದಿನ ಆದಿತ್ಯವಾರ ಬೆಳಿಗ್ಗೆ ೬.೩೦ ಘಂಟೆಗೆ ಮಹಾತ್ಮರು ಕೆನರಾ ಹೈಸ್ಕೂಲಿಗೆ ಹೋದರು. ಮಾನಪತ್ರ ಸ್ವೀಕಾರವಾಗಿ ಪ್ರಾರ್ಥನಾ ಮಂದಿರದ ಶಂಕುಸ್ಥಾಪನೆ ನಡೆದು ಶ್ರೀ ಎ ಬಿ ಶೆಟ್ಟಿಯವರ ಛಾಯಾಚಿತ್ರದ ಅನಾವರಣ ಗೈದು, ಹಳೆ ಹೊಸ ವಿದ್ಯಾರ್ಥಿ-ಉಪಾಧ್ಯಾಯರು-ವ್ಯವಸ್ಥಾಪಕ ಮಂಡಲಗಳ ಪರವಾಗಿಯೂ ವಿವೇಕಾನಂದ ಸಂಘದ ಕಡೆಯಿಂದಲೂ ಮಾನಪತ್ರಗಳು ಅರ್ಪಿಸಲ್ಪಟ್ಟುದನ್ನು ಸ್ವೀಕರಿಸಿದರು. ನಿಧಿ ಸ್ವೀಕಾರವಾಗಿ ವಿದ್ಯಾರ್ಥಿಗಳಿಗೆ ಹರಿಜನೋದ್ಧಾರದ ಬಗೆ ಬೋಧನೆಯಿತ್ತರು

ಶ್ರೀ ಕಾರ್ನಾಡು ಸದಾಶಿವರಾಯರ ಮನೆಯಲ್ಲಿ

ಮಹಾತ್ಮಾ ಗಾಂಧಿಯವರು ತಮ್ಮ ದಕ್ಷಿಣ ಕನ್ನಡದ ಜಿಲ್ಲೆಯ ಸಂಚಾರ ಸಂಬಂಧವಾಗಿ ಎಂದೆಂದೂ ಸ್ಮರಣೆಯಲ್ಲಿಟ್ಟು ಕೊಳ್ಳುವ ಒಂದು ವಿಶೇಷ ಅನುಭವವೆಂದರೆ,—ದೇಶಭಕ್ತ ಕಾರ್ನಾಡು ಸದಾಶಿವರಾಯರ ವಯೋವೃದ್ಧ ಮಾತೋಶ್ರೀಯವರ ಭೇಟಿ. ತಾ ೨೪-೨-೩೪ರಲ್ಲಿ ಮಂಗಳೂರಿಗೆ ಬಂದು, ಶ್ರೀ ಅಷ್ಟಸೋದಯ ಸಮಾಜ, ಸಾರ್ವಜನಿಕ ಮೈದಾನು ಈ ಕಡೆಗಳಲ್ಲಿ ಭಾಷಣಗಳಾದ ಮೇಲೆ, ಶ್ರೀ ಆರ್ ... ನಗರ ಕಾರರಲ್ಲಿ ಹೋಗಿ ಮಹಾತ್ಮಜೀಯವರು ರಾತ್ರಿ ಬಂಧುತ್ವ ಸ್ಥಾನದಲ್ಲಿ ಕರ್ನ ಎರಡು ಪಡೆದು, ದೇಶಭಕ್ತ ಕಾರ್ನಾಡು ಸದಾಶಿವರಾಯರ ಮಾತೋಶ್ರೀಯವರನ್ನು ಕಾಣಬೇಕೆಂಬ ತನ್ನ ಇಚ್ಛೆಯನ್ನು ತಿಳಿಸಿದರು. ಕೂಡಲೇ, ಇವರ ಒಂದೆರಡು ರೀಟ ವಾರ್ತೆಯನ್ನು ಶ್ರೀ ಸದಾಶಿವರಾಯರಲ್ಲಿಗೆ ಹೋಗಿ ಸ್ವಯಂಸೇವಕರು ಮುಂದಾಗಿ ತಿಳಿಸಿದರು. ನ ಮಾರು ೧೧ ಘಂಟೆಯ ಸಮಯಕ್ಕೆ ಗಾಂಧೀಜೀಯವರು ಮೋಟಾರಿನಲ್ಲಿ ಅಲ್ಲಿಗೆ ತಲಪಿದರು. ಸ್ವಾಗತಾನಂತರ ಮಾತೋಶ್ರೀಯವರು 'ನಾನು ನಿಮ್ಮನ್ನು ಕಾಣಲು ಹೋಗಬೇಕೆಂದೆಣಿಸಿದ್ದೆನು. ಆದರೆ, ಆಗಲಿಲ್ಲ ನೀವೇ ನನ್ನನ್ನು ಕಾಣಲು ಬಂದಿರಿ, ಧನ್ಯಳಾದೆ' ಎಂದರು

ಮಹಾತ್ಮಜೀಯವರು ಅವರನ್ನು ಕುರಿತು, 'ನಿಮ್ಮ ಮಗನು ಸರ್ವಸ್ವವನ್ನೂ ದೇಶಕಾರ್ಯದಲ್ಲಿ ಕಳೆದುಕೊಂಡಿರುವರೆಂದು ನನಗೆ ತಿಳಿದಿದೆ. ಈಗ ಪುನಃ ಕಾರಾಗೃಹವಾಸಿಯಾಗಲು ಕಾರವಾರಿಗೆ ತೆರಳಿರುವರೆಂಬುದನ್ನೂ ಕೇಳಿದೆ. ದ್ರವ್ಯವು ಯಾರ ಕೈಯಲ್ಲೂ ಸ್ಥಿರವಲ್ಲ. ಮಾನವನು ಜನಿಸುವುದು ತ್ಯಾಗಕ್ಕಾಗಿ, ಭೋಗಕ್ಕಾಗಿ ಅಲ್ಲ. ಅಂತಹ ತ್ಯಾಗಿ ಪುತ್ರನ ವೀರಜನನಿಯಾಗಿ ನೀವು ಧನ್ಯರು. ಕಷ್ಟಾನುಭವವು ಮಾನವನ ಜನ್ಮಸಿದ್ಧ ಬಾಧ್ಯತೆ'' ಎಂದು ಸಮಾಧಾನ ವಾಕ್ಯಗಳನ್ನಾಡಿದರು

ಮಾತೋಶ್ರೀಯವರು ಆದಕ್ಕುತ್ತರವಾಗಿ ಸೌಮ್ಯ ಸ್ವರದಿಂದ 'ಕಷ್ಟವೆಂಬುದು ನನಗೆ ನಿತ್ಯದ ಪಾಠವಾಗಿ ಹೋಗಿದೆ. ಹಿಂದೆಯೂ ಕಷ್ಟಪಟ್ಟಿರುವೆನು, ಈಗಲೂ ಅನುಭವಿಸುತ್ತಲೇ ಇರುವೆನು. ಕಷ್ಟಗಳನ್ನು ಕಷ್ಟಗಳೆಂದು ತಿಳಿಯುತ್ತಿಲ್ಲ. ಪರಮಾತ್ಮನಲ್ಲಿ ಭರವಸೆಯನ್ನಿರಿಸಿ ಕಾಲಗಳೆಯುತ್ತಿದ್ದೇನೆ' ಎಂದರು

ಮಹಾತ್ಮಜೀಯವರು ಈ ಮಾತುಗಳಿಂದ ಹರುಷಿತರಾಗಿ, 'ಪರಮಾತ್ಮನು ಕರುಣಾಳು. ಅವನು ವಿಧಿಸುವುದೆಲ್ಲ ನಮ್ಮ ಸತ್ವಪರೀಕ್ಷೆಗಾಗಿ ಎಂದು ತಿಳಿಯತಕ್ಕದು. ನಿಮ್ಮ ಮಗನ ತ್ಯಾಗಗಳಿಂದ ನಾನು ತುಷ್ಟನು. ಆದರೆ, ಅವರ ಆರೋಗ್ಯಸ್ಥಿತಿ ಚೆನ್ನಾಗಿಲ್ಲವೆಂಬುದರಿಂದ ಮಾತ್ರ ದುಃಖವುಂಟಾಗುವುದು. ಇನ್ನಂಥ ಕಷ್ಟಗಳನ್ನು ಪರಮಾತ್ಮನು ಕೊಟ್ಟರೂ ನಿಮ್ಮ ಮಗನ ಆರೋಗ್ಯವು ಮಾತ್ರ ಪುನರ್ಘಟಿಸಿ ಅವರು ದೇಶಕಾರ್ಯದಲ್ಲಿ ಮತ್ತಷ್ಟು ಚಟುವಟಿಕೆಯಿಂದ ಭಾಗವಹಿಸುವಂತಾಗಲೆಂದು ನಾನು ಪರಮಾತ್ಮನಲ್ಲಿ ಪ್ರಾರ್ಥಿಸುವೆನು'' ಎಂದರು

'ಭಗವಂತನು ಅವನ್ನು ಕರುಣಿಸಲಿ' ಎಂದು ಮಾತೋಶ್ರೀಯವರು ಗದ್ಗದ ಕಂಠರಾಗಿ ನುಡಿದರು.

ಮಹಾತ್ಮಜೀಯವರು ನಗುತ್ತ ಎದ್ದು, ಮಾತೋಶ್ರೀಯವರನ್ನು ಭಕ್ತಿಪೂರ್ವಕವಾಗಿ ಆಲಿಂಗಿಸಿ, ಮಾತೃಪ್ರೇಮದಿಂದ ಅವರ ಬೆನ್ನನ್ನು ತಟ್ಟಿ, 'ನಿಮ್ಮ ಮಾತುಗಳಿಂದ ನನಗೆ ಸಮಾಧಾನವಾಯಿತು. ನಿಮ್ಮ ಮಗನನ್ನು ಇಲ್ಲಿ ಕಾಣಲಿಕ್ಕಾಗಲಿಲ್ಲ. ಸಾಧ್ಯವಾದರೆ, ಅವರನ್ನು ನಾನು ಕಾರವಾರದಲ್ಲಿ ಭೇಟಿಯಾಗಬಹುದು. ಆಗ ನಿಮ್ಮನ್ನು ಭೇಟಿಯಾಗಿದ್ದೆನೆಂದು ಅವರಿಗೆ ತಿಳಿಸುವೆನು' ಎಂದು ನುಡಿದು ಮಾತೋಶ್ರೀಯವರ ಅಪ್ಪಣೆ ಪಡೆದು, ಅಲ್ಲಿಂದ ಹೊರಟರು.

(ಶ್ರೀ ಕಾರ್ನಾಡು ಸದಾಶಿವರಾಯರು, ತಮ್ಮ ಮೇಲಿನ ಮೊಕದ್ದಮೆಗಾಗಿ ಕಾರವಾರಿಗೆ ತೆರಳಿರುವರು)

ಪಡುಬಿದ್ರಿ

ತಾ ೨೫-೨-೩೪ನೇ ರವಿವಾರ ಅಪರಾಹ್ನ ಬಡವರ ಬಂಧುಗಳಾದ ಮಹಾತ್ಮಾ ಗಾಂಧೀಜೀಯವರು ಇಲ್ಲಿಗೆ ಚಿತ್ತೈಸಿ, ಸಂತೆಕಟ್ಟೆಯ ಬಳಿ ಕಿಕ್ಕಿರಿದು ನೆರೆದಿದ್ದ ಸುಮಾರು ೩,೦೦೦ ಜನಸ್ತೋಮದ ನಡುವೆ ಕಾರಿನಲ್ಲಿ ೫ ಮಿನಿಟುಗಳ ತನಕ ದಿವ್ಯ ಸಂದರ್ಶನೆಯಿತ್ತರು. ಸ್ಥಳೀಯ ಮಹಾಜನರು ೫೭ ರೂಪಾಯಿಗಳಷ್ಟರ ಥೈಲಿಯೊಂದನ್ನರ್ಪಿಸಿದರಲ್ಲದೆ, ಕೆಲ ಮಹನೀಯರು ತಮ್ಮ ಯಥೋಚಿತ ಕಾಣಿಕೆಗಳನ್ನೊಪ್ಪಿಸಿದುದನ್ನು ಆದರಪೂರ್ವಕ ಸ್ವೀಕರಿಸಿ ಜಯಕಾರದೊಂದಿಗೆ ಉಡುಪಿಗೆ ಪ್ರಯಾಣ ಬೆಳೆಸಿದರು.

ಮೂಲ್ಕಿಯಲ್ಲಿ ಮಹಾತ್ಮಾಜೀಯವರ ಸ್ವಾಗತ ಸಮಾರಂಭವು.

ಮಹಾತ್ಮರ ಆಗಮನವು ನಮ್ಮ ಜಿಲ್ಲೆಗೆ ಈ ಮೊದಲು ಒಂದೆರಡು ಬಾರಿ ಆಗಿರುವದಾದರೂ ನಮ್ಮ ಊರಿಗೆ ಅವರ ಶುಭಾಗಮನವು ಇದೇ ಪ್ರಥಮವು. ಈ ಬಾರಿಯಾದರೂ ಅವರ ಪುಣ್ಯದರ್ಶನವು ಲಭಿಸುವುದೆಂದು ನಿರೀಕ್ಷಿಸಿಕೊಂಡಿದ್ದ ಜನಸಮೂಹವು ಒಮ್ಮೆಗೆ ಅವರ ಸಂದರ್ಶನದಿಂದ ಶಾಂತಿ ಸಂತೃಪ್ತಿಗಳ ಸುಖಾನುಭವವನ್ನು ಹೊಂದಿತು. ಪಟ್ಟಣವು ತಳಿರುತೋರಣಗಳಿಂದ ಅಲಂಕರಿಸಲ್ಪಟ್ಟಿದ್ದಿತು. ಆದಿತ್ಯವಾರ ದಿನ ನಿಶ್ಚಿತವಾದ ಸಮಯಕ್ಕೆ ಮುಂಚಿತವಾಗಿಯೇ ಮಹಾತ್ಮರು ಪರಿವಾರದೊಡನೆ ಇಲ್ಲಿಗೆ ತಲಪಿದರು. ಅವರ ಶುಭಾಗಮನವನ್ನು ಹಂಬಲಿಸಿಕೊಂಡಿದ್ದ ಜನಸಮೂಹವು 'ಮಹಾತ್ಮಾ ಗಾಂಧೀಕೀ ಜೈ' ಎಂಬ ಜಯಘೋಷದಿಂದ ಅವರನ್ನು ಸ್ವಾಗತೀಕರಿಸಿತು. ಅನಂತರ ಈ ಸಮಾರಂಭಕ್ಕಾಗಿ ಅನುಗೊಳಿಸಲ್ಪಟ್ಟ ಉನ್ನತಾಸನದ ಮೇಲೆ ಮಹಾತ್ಮರ ಭವ್ಯಮೂರ್ತಿಯು ವಿರಾಜಮಾನವಾಯಿತು

ದಕ್ಷಿಣ ಕನ್ನಡ ಜಿಲ್ಲಾ ನೆರೆಹಾವಳಿ ನಿವಾರಣಾ ಸಮಿತಿ, ಮಂಗಳೂರು,

ಇದರ ಲೆಕ್ಕಗಳ ವಿವರ

ತಾರೀಕು 1-8-1924ರಿಂದ 15 9-1933ರ ವರೆಗೆ

ಜಮಾ

ಆರಂಭದ ಶಿಲ್ಕು	
ತಾ 31-7-24ಕ್ಕೆ ಅಂತ್ಯವಾಗುವ ಅವಧಿಗೆ ಕಳೆದ ಪಟ್ಟಿ ಪ್ರಕಾರ	ರೂ 1127-2-10
ಸಹಾಯ ಧನ	ರೂ 2974-12-0
1918ರ ರಿಲೀಫ್ ಫಂಡಿನಿಂದ ದ ಕ ಜಿಲ್ಲಾ ಕಲೆಕ್ಟರ ಮೂಲಕ ಬಂದಂತೆ ಈ ತನಕ ಕೂಡಿಕೆಯಾದ ಠೇವಣಾತಿಗಳ ಮೇಲಣ ಬಡ್ಡಿ ಸಹಿತ—	ರೂ 6073-13 11
ಬಡ್ಡಿ –	
ಠೇವಣಾತಿಗಳ ಮೇಲೆ (ಸರಕಾರದ ಪ್ರೋನೋಟು ವ ಬೇಂಕುಗಳಲ್ಲಿ ಕಾಯಂ ಠೇವಣಾತಿ ಕೂಡ) ಜಮೆಯಾದ ಮೊಬಲಗು	ರೂ 3132 4 11
ಜುಮ್ಲಾ	ರೂ 19308 1—8
ಕೈಯಲ್ಲಿರುವ ನಗದಿ ಹಣದ ವಿವರ	
1 ಕೆನರಾ ಬೇಂಕ್ ಲಿಮಿಟೆಡ್ ಇದರಲ್ಲಿ ಚಾಲತಿ ಠೇವಣಾತಿ –	ರೂ 182-8-11
2 ಕೆನರಾ ಬೇಂಕ್ ಲಿಮಿಟೆಡ್ ಇದರಲ್ಲಿರಿಸಿದ ಕಾಯಂ ಠೇವಣಾತಿ—	ರೂ 2227-12-11
ರಶೀದಿ ತಾ 21-7-1933 ಮಂಗಳೂರಿನ ಇಂಪೀರಿಯಲ್ ಬೇಂಕ್ ಲಿಮಿಟೆಡ್‌ನಲ್ಲಿ ಕಾಯಂ ಠೇವಣಾತಿ	ರೂ 2460 1[illegible] [illegible]
ರಶೀದಿ ತಾ 16-8-1933	
1 ಮಿ ಎಂ ಪುತ್ತೂರು ನಾಡೀಬರಲ್ಲಿ	ರೂ 18[illegible]-0 0
2 ಕೆ ನರಸಿಂಹ ಕಾಮತ್‌ರಲ್ಲಿ	ರೂ 242-[illegible]-0
3 ಕೆ ಎಸ್ ಭಟ್ಟರಲ್ಲಿ	ರೂ 80-0-0
4 ಜೆ ಟಿ ಸಿಕೇರರಲ್ಲಿ	ರೂ 6[illegible] [illegible]
5 ಸಿ ಎಸ್ ಸಿಕೇರರಲ್ಲಿ	ರೂ 37-[illegible] [illegible]
ಜುಮ್ಲಾ	ರೂ 5185 6 7

ಖರ್ಚು

ಕಲ್ಲಿಕೋಟೆಯ ಮಲಬಾರ್ ರಿಲೀಫ್ ಫಂಡಿಗೆ ಧನ ಸಹಾಯ –	ರೂ 500-0-0
ಕಥಿಯಾವಾಡ್ ರಿಲೀಫ್ ಫಂಡಿಗೆ	ರೂ 1000 0-0
ಗ್ರಾಂಟುಗಳು	
ದ ಕ ಜಿಲ್ಲಾ ಕಲೆಕ್ಟರರ ಮೂಲಕ	ರೂ 619-0-0
ಮಂಗಳೂರು ರೆವೆನ್ಯೂ ಡಿವಿಜನಲ್ ಆಫೀಸರರ	ರೂ 4286 11-6
ಪುತ್ತೂರು	ರೂ 10 0 0
ಮಂಗಳೂರು ತಹಶೀಲ್ದಾರರ ಮೂಲಕ	ರೂ 216 7-5
ಬಂಟವಾಳ	ರೂ 133-0-0
ಕಾಸರಗೋಡು	ರೂ 200-0-0
ಪುತ್ತೂರು	ರೂ 170 0 0
ಕಾರ್ಕಳ	ರೂ 25 0 0
ಉಡುಪಿ	ರೂ 35 0-0
ಕುಂದಾಪುರ	ರೂ 25 0 0
ಗೌರವ ಜತೆ ಕಾರ್ಯದರ್ಶಿಗಳು	
ಬಂಟ್ವಾಳ ಮುಡಿ, ಪಾಣೆಮಂಗಳೂರು ಮತ್ತು ಅಮ್ಟಾಡಿ ಗ್ರಾಮಗಳಲ್ಲಿ	ರೂ 1310-0-0
ನಾವೂರು ಮುನ್ನೂರು ಮತ್ತು ಸಿರಿಕೊಂಬು ಗ್ರಾಮಗಳಲ್ಲಿ—ಬಂಟ್ವಾಳ ಮತ್ತು ವಗ್ಗ ಗ್ರಾಮಗಳಲ್ಲಿ	ರೂ 310-0 0
ಕಾಸರಗೋಡು ತಾಲೂಕಿನಲ್ಲಿ	ರೂ 3229-14-0
ಮಂಗಳೂರು ತಾಲೂಕಿನಲ್ಲಿ	ರೂ 408 0-0
ಕನ್ನಿಬಾಡಿ ಗ್ರಾಮದಲ್ಲಿ	ರೂ 135-0 0
ಮಲವೂರು ಗ್ರಾಮದಲ್ಲಿ	ರೂ 143 0 0
ಅದ್ಯಪಾಡಿ ಗ್ರಾಮದಲ್ಲಿ	ರೂ 164-0 0
ಅಡ್ಯಾರ್ ಗ್ರಾಮದಲ್ಲಿ	ರೂ 150-0-0
ಅಪ್ಪಿನಂಗಡಿ ಗ್ರಾಮದಲ್ಲಿ	ರೂ 133-0-0
ಕರ್ವಂಗಳ ಮತ್ತು ಬಂಧಿಲ ಗ್ರಾಮಗಳಲ್ಲಿ	ರೂ 110 0-0
ಉಪ್ಪಿನಂಗಡಿ ಗ್ರಾಮದಲ್ಲಿ	ರೂ 324-0-0
ಜಾಹೀರಾತ ನ ಬಗ್ಗೆ	ರೂ 28-0-0
ಜತೆಕಾರ್ಯದರ್ಶಿಗಳಿಗೆ ಪ್ರಯಾಣದ ಭತ್ತೆ	ರೂ 70-1-6
ಹಿಸ್ಸಾಲು	ರೂ 16-14 0
ಆಡೀಟಿನ ಖರ್ಚು	ರೂ 10 0-0
ಮುದ್ರಣ ವ ಟೈಪಿಂಗ್ ವೆಚ್ಚ	ರೂ 27-1-[illegible]
ಬೇಂಕುಗಳಿಂದ ಪಡೆದ ಸಾಲಗಳ ಮೇಲಣ ಬಡ್ಡಿ	ರೂ 85-1-8
ಇತರ ಖರ್ಚುಗಳು	ರೂ 4-8-0
ಕೈಯಲ್ಲಿ ಉಳಿದ ಶಿಲ್ಕು	ರೂ 5485-6-7
ಜುಮ್ಲಾ	ರೂ 19308-1-8

1 ಕಾರ್ಯನಿರ್ವಾಹಕ ಮಂಡಳಿಯ ತಾ 10-10-33ರ ಸಭೆಯಲ್ಲಾದ ನಿರ್ಣಯದಂತೆ, ವಸೂಲಾಗದ ಮೊಬಲಗು
2 ,, ,, ತಾ 10-2-1934 ವಜಾಮಾಡಿದ್ದು
4 ಈ ಕೆಳಗೆ ಸಹಿ ಮಾಡಿದವರಿಗೆ ಮಿ ಜೆ ಟಿ ಸಿಕೇರರಿಂದ ಕೊಡಲ್ಪಟ್ಟದ್ದು
5 ಈ ಕೆಳಗಿನಂತೆ ಸರಿಪಡಿಸಿಕೊಳ್ಳಲಾಗಿದೆ —

ಮಿ ಸಿ ಎಸ್ ಸಿಕೇರರಿಗೆ ಬಗ್ಗೆ ವೆಚ್ಚ	ರೂ 5-[illegible]-8
ಕಾಯಂ ಮುಂಗಡವಾಗಿ ಗೌರವಕಾರ್ಯದರ್ಶಿಗಳ ಕೈಯಲ್ಲಿರುವಂತದ್ದು	ರೂ 10-0-[illegible]
ಈ ಕೆಳಗೆ ಸಹಿ ಮಾಡಿದವರಿಗೆ ಮಿ ಸಿ ಎಸ್ ಸಿಕೇರರು ಕೊಟ್ಟಂತೆ	ರೂ 22 0-0
ಜುಮ್ಲಾ	ರೂ 37-6-6

ಈಗ ಕೈಯಲ್ಲುಳಿದ ಶಿಲ್ಕು ಈ ಕೆಳಗಿನಂತಿದೆ

ಮಂಗಳೂರ ಇಂಪೀರಿಯಲ್ ಬೇಂಕಿನಲ್ಲಿ ಕಾಯಂ ಠೇವಣಾತಿ—	ರೂ 2460-1[illegible]-0
ಕೆನರಾ ಬೇಂಕಿನಲ್ಲಿ ಕಾಯಂ ಠೇವಣಾತಿ	ರೂ 2227-12-11
,, ,, ಚಾಲತಿ ಠೇವಣಾತಿ	ರೂ 272-6-5
ಜುಮ್ಲಾ	ರೂ 4961-2-4

ಈ ಮೇಲಿನ ಠೇವಣಾತಿಗಳ ಬಗ್ಗೆ ದಾಖಲೆಗಳೆಲ್ಲ ಈ ಕೆಳಗೆ ಸಹಿ ಮಾಡಿದವರೊಡನೆ ಇದೆ

(ಸಹಿ) ಎ ಶ್ರೀನಿವಾಸ ಪೈ.

ಗೌರವ ಕಾರ್ಯದರ್ಶಿ ದಕ್ಷಿಣ ಕನ್ನಡ ಜಿಲ್ಲಾ ನೆರೆಹಾವಳಿ ನಿವಾರಣಾ ಸಮಿತಿ

ತಾ. 21-2-1934

(ಸಹಿ) ಎಂ ಕೃಷ್ಣರಾವ್,
ಆಡಿಟರ್.

ತಾ 16-9-1933

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು **ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು**

ಕಸ್ತೂರಿ ವಿಶ್ವಕ ದಶಮೂಲಾರಿಷ್ಟ ೧೬ ಔನ್ಸ್ ಬಾಟ್ಲಿ ೧ಕ್ಕೆ ರೂ. 1-8-0. ದ್ರಾಕ್ಷಾಸವ ೧೬ ಔನ್ಸ್ ಬಾಟ್ಲಿ 1ಕ್ಕೆ ರೂ. 1. ಅಶ್ವಗಂಧಾರಿಷ್ಟ ೧೬ ಔನ್ಸ್ ಬಾಟ್ಲಿ ಒಂದಕ್ಕೆ ರೂ. 1-4-0. ಅಬಲಾಮೃತ ೧೬ ಔನ್ಸ್ ಬಾಟ್ಲಿ ೧ಕ್ಕೆ ರೂ 2. ಅಶೋಕಾರಿಷ್ಟ ೧೬ ಔನ್ಸ್ ಬಾಟ್ಲಿ ೧ಕ್ಕೆ ರೂ. 1-4-0. ಜನನಪ್ರಾಶಲೇಹ ೧ ರಾತ್ತಲಿಗೆ ರೂ. 2-8-0. ಅಭಯಾಮಲಕಿ ೧ ರಾತ್ತಲಿಗೆ ರೂ. 2. ಚಂದ್ರಮುಖ್ (ವಿಷೂಚಿಕೆಗೆ ರಾಮಬಾಣ) ಕಾಲು ಔನ್ಸಿಗೆ ರೂ. 0-5-0. ದಂತಧಾವನ ಚೂರ್ಣ ತೊಲೆ ೧ಕ್ಕೆ 0-1-0. ಕ್ರಿಮಿಘಾತಿನಿ (ದದ್ರು, ಕಜ್ಜಿಗೆ) ಡಬ್ಬಿ ೧ಕ್ಕೆ ರೂ 0-4-0. ಕೃಷ್ಣಾಂಕ ೧ ಔನ್ಸಿಗೆ ರೂ. 0-6-0. ಚಿತ್ರಕ (ಮಕ್ಕಳ ಗ್ರಹಣೀ ರೋಗಗಳ್ಗೆ ದಿವ್ಯೌಷಧ) ತೊಲೆ ೧ಕ್ಕೆ ರೂ. 0-8-0. ಮಹಾಚಿತ್ರಕ ತೊಲೆ ೧ಕ್ಕೆ ರೂ. 1-0-0. ಪಿಂಡ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ ರೂ. 0-10-0. ಬಲಾಶ್ವಗಂಧಾದಿ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ 0-12-0. ಹಿಮಸಾಗರ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ ರೂ. 1-8-0. ಮಹಾಚಂದನಾದಿ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ ರೂ. 1-0-0. ಶ್ರೀಗೋಪಾಲ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ ರೂ. 3-8-0.

ನಮ್ಮ ಔಷಧಗಳು ದೊರೆಯುವ ಸ್ಥಳ:—ಮಂಗಳೂರು—ರಾಘವೇಂದ್ರ ರಂಗ ಪೈ ರಥಬೀದಿ, ಕೆನರಾ ಡಿಸ್ಪೆನ್ಸರಿ ಕೊಡಿಯಾಲಬೈಲ್. ಮೈಂದೂರು—ಕೆ. ಪುತ್ತು ಕಾನುಭಾಗ. ಗಂಗೊಳ್ಳಿ—ಜಿ. ಸುರೇಂದ್ರ ನಾಯ್ಕ. ಕುಂದಾಪುರ—ಕೆ. ರಾಮ ಭಟ್. ಡಾಕ್ಟರ್ ಕೆ. ಆರ್. ಕಾಮತ್. ಉಡುಪಿ—ಪಿ ಜನಾರ್ಧನ ನಾಯಕ್ ಎಂಡ್ ಕೊ., ಪೈ ಫಾರ್ಮಸಿ, ಆರ್. ಎಸ್. ಶೆಟ್ಟಿ, ರಥಬೀದಿ. ಕಾರ್ಕಳ—ವಿ. ವಿ. ಶೆಟ್ಟಿ. ಕಾಪು—ಡಾಕ್ಟರ್ ಬಿ. ಕೆ. ದೇಶಲ ಡಿಸ್ಪೆನ್ಸರಿ. ಬಟ್ಕಳ—ವಾಮನ ನರಸಿಂಹ ನಾಯಕ್. ಬಾರಕೂರು—ಬಿ. ಭಗವಂತ ಮಲ್ಯ, ಆರ್. ಪಿ. ಔಷಧಾಲಯ ಬ್ರಹ್ಮಾವರ ಕೆ. ವೈಕುಂಠ ಪೈ ಎಂಡ್ ಸನ್ಸ್, ಕೆ. ಶೇಷಗಿರಿ ನಾಗಪ್ಪ ಎಂಡ್ ಸನ್ಸ್. ಎಲ್ಲೆಲ್ಲಿಯೂ ಏಜಂಟರು ಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಬಹುದು.

ನಾಯಕ್ ಬ್ರದರ್ಸ್, ಶ್ರೀಮದ್ಭುವನೇಂದ್ರ ಮಹೌಷಧಾಲಯ, ಪೋಸ್ಟ್ ಕಟಪಾಡಿ. ದ. ಕ.

The Canara Industrial & Banking Syndicate Limited.,

Etsabilshed in 1925. **Head Office:—Mukunda Nivas, UDIPI.**

Branches: Mangalore, Payyanur, Brahmavar, Kumta, Karwar, Hubli, Honnavar, Bangalore & Cannanore.

Authorised Capital Rs. 5,00,000. Subscribed Capital Rs. 1,20,000. Paid up Capital Rs. 40,000 Issued Capital Rs. 2,00,000

STATEMENT OF AFFAIRS OF THE SYNDICATE AS ON 31ST December 1933.

Liabilities.			Assets.		
Paid up Capital	Rs.	40,000-0-0.	Loans on Land mortgage	Rs.	2,69,352—12—6.
Reserve & other funds	,,	20,250—0—0.	Loans on Valuable Securities	,,	2,52,324—13—6
Deposits	,,	10,69,202—7—11.	Loans on Bills of Exchange, Hundis and Promissory Notes		4,71,242— 1—3.
Due to Bankers	,,	1,39,891—3—2.	Investment on Shares of other Companies	,,	43,575— 0—0
			Investments on Government Securities Conversion Loan		78,390—10—0
			On Deposits with other Bankers		1,05,000— 0—0.
Bills for Collection	,,	38,138—11—3	Bills for collection (per contra)		38,138—11—3.
Sundries	,,	1,03,557—4—0.	Sundries		1,07,857—13—4
			Cash in hand & with Bankers		24,907—10—6
Total	Rs.	13,90,789-10-4	Total	Rs.	13,90,789 10 4.

Long and Short term Loans on attractive Schemes are granted.
ALL KINDS OF BANKING BUSINESS UNDERTAKEN.

Udipi,
9-2-1934.

P. A. Pi Bros,
Managing Agents.

ಪ್ರಥಮ ಕನ್ನಡ ಮಾತಾಡುವ ಚಲಚಿತ್ರ!

ಮಿಸ್. ತ್ರಿಪುರಾಂಬ
ಮಿಸ್ ರಾಜಂ
ಮಿಸ್ ಲಕ್ಷ್ಮಿ

ಮಿಸ್ಟರ್ ಸುಬ್ಬಯ್ಯ ನಾಯಿಡು
ಮಿಸ್ಟರ್ ನಾಗೇಂದ್ರ ರಾವ್,
ಮಿಸ್ಟರ್ ವೈ. ವಿ. ರಾವ್
ಮಿಸ್ಟರ್ ಮೂರ್ತಿ

ಇವರುಗಳಿಂದ ನಟಿಸಲ್ಪಟ್ಟು

ಮಿಸ್ಟರ್ ವೈ. ವಿ. ರಾವ್,
ಇವರಿಂದ ಡೈರೆಕ್ಟ್ ಮಾಡಲ್ಪಟ್ಟು

ಕರ್ಣಾಟಕ ಕವಿಕೇಸರಿ ಬೆಳ್ಳಾರೆ
ನರಹರಿ ಶಾಸ್ತ್ರಿಗಳಿಂದ ಕಥೆಯು ರಚಿಸಲ್ಪಟ್ಟು

ಸೌತ್ ಇಂಡಿಯನ್ ಮೂವಿಟೋನ್‌ರವರು ಕೊಲ್ಹಾಪುರದ ಛತ್ರಪತಿ ಸ್ಟುಡಿಯೋದಲ್ಲಿ ತಯಾರಿಸಲ್ಪಟ್ಟಿರುವರು.

ಪ್ರಸಿದ್ಧ ಪುರಾಣ ಕಥೆ

‘ಸತಿ ಸುಲೋಚನ’

ಎಂಬ ಚಿತ್ರವು ಕನ್ನಡ ಮಾತನಾಡುವ ಹಾಡುವ ರೂಪದಲ್ಲಿ ಪ್ರದರ್ಶಿಸಲ್ಪಡುತ್ತದೆ.

ಮಧುರ ಸಂಗೀತ! ಸ್ಪಷ್ಟವಾದ ಧ್ವನಿ! ಇಂಪಾದ ಶ್ರುತಿ!

ಮಂಗಳೂರಿನಲ್ಲಿ ಶೀಘ್ರದಲ್ಲೇ ಪ್ರದರ್ಶನ. ದಿ ಸೌತ್ ಇಂಡಿಯನ್ ಫಿಲ್ಮ್ ಸಪ್ಲೈ ಕಂಪೆನಿ ಬೆಂಗಳೂರು.

WANTED.

Four Organisers to organise the work of the South Indian General Assurance Society, Ltd., in the following places noted below. Capable organisers can expect to have attractive and encouraging terms with sound footing for their future

(1) South Canara, (2) Mysore, Hassan and Coorg, (3) Kadur, Shimoga, Chitaldroog, and Tumkur. (4) Mangalore, Kolar.

For terms and other particulars please apply to—

The Divisional Manager,
The South Indian General Assurance Co. Ltd.
64, 3rd. Cross Road, Srirampur Extn
Malleswaram Post, BANGALORE

OR

The Managing Agents,
The S. I. G. A. Co. Ltd.
55-1 Poonamallee High Road, Kilpauk, MADRAS.

ಪಂಡಿತ ಜವಾಹೀರಲಾಲ ನೆಹರೂ ಬಂದಾಗ್ಗೆ ಹುಬ್ಬಳ್ಳಿ ಪ್ರದರ್ಶನದಲ್ಲಿ ಸುವರ್ಣಪದಕ ದೊರೆತ

ಒಂದೇ ಸವನಾಗಿ ೩೫ ವರ್ಷದ ಅನುಭವದಿಂದ

ಹಿಂದೂಸ್ಥಾನದ ಸಾವಿರಾರು ಜನರಿಂದ ವರ್ಣಿಸಲ್ಪಟ್ಟ ಆಯುರ್ವೇದೌಷಧ,

ಶಾಸ್ತ್ರ ಮತ್ತು ಪೌಷ್ಟಿಕ ವನಸ್ಪತಿಗಳಿಂದ ತಯಾರಿಸಿರುವ ಮತ್ತು ಇದರ ಗುಣಕ್ಕಾಗಿ ಅನೇಕ ಸರ್ಟಿಫಿಕೇಟುಗಳು ಮತ್ತು ಭಂಗಾರದ ಮೆಡಲು ದೊರೆತಿರುವ ಪರದೇಶದಲ್ಲಿ ಖರ್ಚಾಗುವ ಶಕ್ತಿಯ ಮೇಲೆ ಮೊದಲನೆ ತರಗತಿಯ ಟಾನಿಕ

ದ್ರಾಕ್ಷಾಮೃತ

ಈ ದ್ರಾಕ್ಷಾಮೃತವು ಸಹ್ಯಾದ್ರಿ ಪರ್ವತದಲ್ಲಿರುವ ಅನೇಕ ವನಸ್ಪತಿಗಳ ರಸಾರ್ಕಗಳೊಂದಿಗೆ ದ್ರಾಕ್ಷಾರಸವನ್ನು ಮಿಶ್ರಮಾಡಿ ಸ್ವದೇಶೀ ಯಂತ್ರದಿಂದ ಶಾಸ್ತ್ರೋಕ್ತ ಪದ್ಧತಿ ಪ್ರಕಾರ ತಯಾರು ಮಾಡಿರುವುದರಿಂದ ಸ್ವಾದಿಷ್ಟವು ಮತ್ತು ಮಧುರವು ಆಗಿದೆ.

ಇದರ ಸೇವನೆಯಿಂದ ಶರೀರದೊಳಗಿನ ಹಳೇ ಶಕೆ (ಗರಮಿ) ಸಂಪೂರ್ಣ ನಾಶವಾಗುತ್ತದೆ ಮತ್ತು ಧಾತುಸ್ರಾವ, ಸ್ವಪ್ನ ವಸ್ಥೆಯಿಂದ ಅಥವಾ ಬೇರೆ ಯಾವುದೇ ವಿಕಾರದಿಂದ ಬಂದ ಅಶಕ್ತತೆಯಿಂದ ಕೈಕಾಲು, ಕಣ್ಣೊಳಗೆ ಉರುವು ಬೀಳೋಣ, ಮೈಮಾಂಗಳೂ ಎಲುಬಿನಲ್ಲಿ ಜ್ವರ ಇರೋಣ, ನಡು ನೋಯೋಣ, ಪಿತ್ತದಿಂದ ಕಣ್ಣಿಗೆ ಕತ್ತಲೆ ಬಂದು ಭೋಳೇಳೆ ಬರೋಣ, ಶೌಚಕ್ಕೆ ಸಾಫ ಆಗದೇ ಇರೋಣ, ಮುಂತಾದ ಎಲ್ಲಾ ವಿಕಾರಗಳು ನಷ್ಟವಾಗಿ ಕ್ಷುಧಾಗ್ನಿಯು ಬೆಳೆಯುತ್ತದೆ. ಮತ್ತು ಅನ್ನ ಚೆನ್ನಾಗಿ ಪಚನವಾಗಿ ಶರೀರಕ್ಕೆ ಸಾಧನವಾಗುತ್ತದೆ. ಇದರ ಸೇವನೆಯಿಂದ ತರುಣರಿಗೆ ವ್ಯಭಿಚಾರದಿಂದ ಅಥವಾ ಬೇರೆ ಕಾರಣದಿಂದ ಬಂದ ಧಾತು ಕ್ಷೀಣತೆ, ನಪುಂಸಕತ್ವ ಇದ್ದರೆ ಅದು ಹೋಗಿ ಪುನಃ ಯವನವಂತರಾಗಿ ಶರೀರ ಬಲವಾಗಿ ಮಕ್ಕಳು ಪುಷ್ಟಿವಂತರಾಗುವರು. ಹೆಂಗಸರಿಗೂ ಮತ್ತು ಮಕ್ಕಳಿಗೂ ಈ ಔಷಧವು ಗುಣಕಾರಿ ಇದೆ. ಮುಟ್ಟಾಗದಿದ್ದರೆ ಮತ್ತು ಉಷ್ಣದ ಗರ್ಭ ಸಂಬಂಧವಾದ ರೋಗಗಳಿದ್ದರೂ ಅವುಗಳೆಲ್ಲ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವುದು. ಅಶಕ್ತ ಮಕ್ಕಳು ಬಲವಂತರಾಗುವರು. ಈ ಔಷಧದ ೪ ಬಾಟ್ಲಿಗಳನ್ನು ಸೇವನೆ ಮಾಡಿದರೆ ಪೂರ್ಣ ಗುಣ ಬರುತ್ತದೆ. ಇದರ ಅನುಭವ ೧ ಬಾಟ್ಲಿ ಸೇವನೆಮಾಡಿದ ನಂತರ ತಿಳಿದೀತು.

ಬಾಟ್ಲಿ ಬೆಲೆ ೧—೬—೦, ೪ ಬಾಟ್ಲಿಗೆ ೪—೮—೦, ಡಝೂನ ಬಾಟ್ಲಿಗೆ ೧೨ ರೂಪಾಯಿ ಟಪ್ಪಾಲ ಖರ್ಚು ಪೋಸ್ಟೇಜ ಬೇರೆ ಹಿಡಿಯುತ್ತದೆ.

ಪ್ರಸಿದ್ಧ ಕೆಮಿಸ್ಟ ಮತ್ತು ಸ್ಟೋರ್ಸ ದೊಳಗೆ ಮತ್ತು ಕಿರಾಣಿ ಅಂಗಡಿಯಲ್ಲಿ ಸಿಗುವುದು.

ಮ್ಯಾನೇಜರ—ದ್ರಾಕ್ಷಾಮೃತ ಕಾರ್ಯಾಲಯ, ಪೋಷ್ಟ ನಿಪ್ಪಾಣಿ ಜಿಲ್ಲಾ (ಬೆಳಗಾಂವಿ)

ಸಿಕ್ಕುವ ಸ್ಥಳ:— ಮಂಗಳೂರು—ಗಜಾನನ ಮೆಡಿಕಲ್ ಹಾಲ್ ಮತ್ತು ಮಿಜಾರ್‌ಕಾರ್ ಬ್ರದರ್ಸ್, ಕಾರ್‌ಸ್ಟ್ರೀಟ್. ಕುಂದಾಪುರ—ಕೆ. ಆರ್. ಭಟ್ಟ, ಉಡುಪಿ—ಪೈ ಫಾರ್ಮಸಿ, ಮತ್ತು ಕೆ. ಶೇಷಗಿರಿ ಪೈ. ಕಾರ್ಕಳ—ವಿ. ವಿ. ಶೆಣೈ. ಪುತ್ತೂರು—ಗೋಪಾಲ ನಾರಾಯಣ ಪೈ ಮತ್ತು ಪೈ ಫಾರ್ಮಸಿ. ಕಾಸರಗೋಡು—

2-6-38 ಕೆ. ರಾಮ ನಾಯ್ಕ, ಕೋರ್ಟ ರಸ್ತೆ. ಬಂಟವಾಳ— ವಿ. ಎಚ್. ವಾಸುದೇವ ಪೈ.

ನಿಮಗೆ ಭಕ್ತಿ, ಜ್ಞಾನಗಳು ಬೇಕೋ? ಹಾಗಾದರೆ ಶ್ರೀ ಭಾಗವತವನ್ನು ಓದಿರಿ.

ಕನ್ನಡ ಟೀಕಾತಾತ್ಪರ್ಯಾದಿ ಸಹಿತ

ಶ್ರೀ ಭಾಗವತ ಮಹಾಪುರಾಣ.

ಆಸ್ಥಾನ ಮಹಾವಿದ್ವಾನ್ ಮೋಟಗಾನಹಳ್ಳಿ ರಾಮಶೇಷಶಾಸ್ತ್ರಿಗಳಿಂದ ಪ್ರಕಟಿಸಲ್ಪಟ್ಟಿದೆ. ಮತತ್ರಯಾನುಸಾರವಾಗಿ ಅನೇಕ ವಿಷಯಗಳೊಡನೆ ಕನ್ನಡಿಸಲ್ಪಟ್ಟ ಈ ಗ್ರಂಥವು ಮೊದಲಿನಿಂದ ಹತ್ತು ಸ್ಕಂಧಗಳು 7 ಸಂಪುಟಗಳಲ್ಲಿ ಪ್ರಚಾರವಾಗಿರುವುದು ಸರಿಯಷ್ಟೆ. ಈಗ 11-12ನೇಯ ಸ್ಕಂಧಗಳಲ್ಲಿ ಎಂಟನೆಯ ಸಂಪುಟವು ಪೀಠಿಕಾ ವಿಮರ್ಶೆಗಳೊಡನೆ ಬೆಳಕಿಗೆ ಸಿದ್ಧವಾಗಿದೆ. ಹಿಂದಣ ಗ್ರಾಹಕ ಮಹಾಶಯರೂ ದೇಶಬಾಂಧವರೂ ಸಹಾ ಪ್ರೋತ್ಸಾಹಿಸಬೇಕೆಂದು ಪ್ರಾರ್ಥನೆ.

1ನೇಯ ಸಂಪುಟ (1-2ನೇ ಸ್ಕಂಧಗಳು) 3—4—0	7ನೇಯ ಸಂಪುಟ (ದಶಮ ಉತ್ತರ ಭಾಗ) 4—8—0
2 ,, ,, (3ನೇಯ ಸ್ಕಂಧ) 3—12—0	8 ,, ,, (11, 12ನೆಯ ಸ್ಕಂಧಗಳು ಪೀಠಿಕೆ ಸಹಿತ) 4—8—0
3 ,, ,, (4 ,, ,,) 3—8—0	ಶ್ರೀ ಭಾಗವತ ಪುರಾಣ ವಿಮರ್ಶೆ ಮಾತ್ರ 0—8—0
4 ,, ,, (5-6ನೇಯ ಸ್ಕಂಧಗಳು) 4—0—0	ಕರ್ನಾಟಕ ಮುದ್ರಾರಾಕ್ಷಸ ನಾಟಕ 1—4—0
5 ,, ,, (7, 8, 9 ಸ್ಕಂಧಗಳು) 5—8—0	(ಇದೇ ಗ್ರಂಥಕರ್ತರಿಂದ ರಚಿಸಲ್ಪಟ್ಟಿದ್ದು)
6 ,, ,, (ದಶಮ ಪೂರ್ವಭಾಗ) 5—0—0	

ಈ ಬೆಲೆಗಳಿಗೆ ಟಪ್ಪಾಲು ಹಾಸಲು ಸೇರಿಲ್ಲ. ಹೆಚ್ಚು ವಿಷಯಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ಆರ್. ಶ್ರೀಕಂಠ ಶಾಸ್ತ್ರಿ, ಭಾರತೀ ಭವನಂ, ಚಾಮರಾಜಪೇಟೆ, ಬೆಂಗಳೂರು ಸಿಟಿ.

ಡಾಕ್ಟರ್ ವಾಮನ ಗೋಪಾಳರವರ

ಕಟ್ಟು ರಕ್ತಕ್ಕೆ ಶಂಬೌಷಧ ... ವರ್ಷದ ಅನುಭವ ... ಉಪಯೋಗಿಸಿ ದವರೇ ಹೇಳಿದ್ದಾರೆ.

ಡಾಕ್ಟರ್ ಗೌತಮರಾವ್
ಕೇಶವರವರ
ಪೊಸ್ಪರಸ್ ಗುಳಿಗೆಗಳು

ಡಾ. ಗೌತಮರಾವ್ ಕೇಶವ ಅಂಡ್ ಸನ್ಸ್,
ಠಾಕುರದ್ವಾರ, ಮುಂಬಯಿ ೨. ಸ್ಟಾಕಿಸ್ಟ - ಹಾ ಕಂಪೆನಿ,
[ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯಲ್ಲಿ] ಮಂಗಳೂರು.

ಕೊ-ಒಪರೇಟಿವ್ ಸೊಸೈಟಿಗಳಿಗೆ

ಬೇಕಾದ ನಮೂನೆಯ ಎಲ್ಲಾ ವಿಧದ
ಫಾರಂಗಳು, ರಿಜಿಸ್ಟರುಗಳು, ರಶೀದಿ ಪುಸ್ತಕಗಳು,
ಮತ್ತು ಇತರ ಫಾರಂಗಳೂ ಮಾರಾಟಕ್ಕಿವೆ.
ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್.
ರಥಬೀದಿ, ಮಂಗಳೂರು

ಶಹಾ ಶಿವಾಜಿ ಹಿಂದೂ ರೆಸ್ಟೋರೆಂಟ್

ಗಣಪತಿ ಹೈಸ್ಕೂಲ್ ರಸ್ತೆ, ಮಂಗಳೂರು (ದ. ಕ.)

ಮಂಗಳೂರಿನ ನೂತನ ಉಪಹಾರ ಗೃಹ.

ಶುದ್ಧ ಜೀನಸುಗಳಿಂದ, ತಾಜಾ ತುಪ್ಪದಿಂದ ತಯಾರಿಸಲ್ಪಡುವ ಮಿಠಾಯಿಗಳು ಇನ್ನಿತರ ಬಗೆಯ ತಿಂದಿ ತಿನಸುಗಳು—ಚಹಾ, ಕಾಫಿ, ಕೊಕೋ ಇತ್ಯಾದಿ ಎಲ್ಲ ತರದ ಪಾನೀಯಗಳು

ಅನುಭವಸ್ಥರಿಂದ ತಯಾರಿಸಲ್ಪಡುವವು.

ಉಪಹಾರ ತರಗತಿಯವರಿಗನುಕೂಲವಾದ ಪ್ರತ್ಯೇಕ ಸ್ಥಳವಿದೆ.

ಒಮ್ಮೆ ದಯಮಾಡಿಸಿ, ಪರೀಕ್ಷಿಸಿ
ತೃಪ್ತಿ ಪಡೆಯಿರಿ.

... ವಿವಾಹ ... ಸಮಾರಂಭಗಳಲ್ಲಿ ಸುಲಭ ದರಗಳಲ್ಲಿ ತಿಂಡಿತಿನಸು—ಪಾನೀಯಗಳನ್ನು ಒದಗಿಸಲಾಗುವುದು, ವಿಶೇಷ ಮಾಹಿತಿಗೆ ಖುದ್ದಾಗಿ ಯಾ ಪತ್ರದ್ವಾರಾ ವಿಚಾರಿಸಿಕೊಳ್ಳುವುದು.

ಐವತ್ತೇಳು ವರ್ಷಗಳು.

ಅಸಂಖ್ಯಾತರಾದ ನಮ್ಮ ಗಿರಾಕಿಗಳ ಕೋರಿಕೆ ಮತ್ತು
ಅನುಕೂಲತೆಗಳನ್ನು ಇದೇ ಮುಖ್ಯಾಲಂಬನ
ಮಾನದಿಂದ ತಿಳಿದ, ಅವರಿಗೆ ಸುಲಭ ದರದ
ಯೋಗ್ಯ ಹಾಗೂ ಬಹುಕಾಲ ಬಾಳುವ ಸರ್ವ
ತರದ ಉಡುಪುತೊಡುಪುಗಳನ್ನು ಒದಗಿ
ಸುವ ನಮ್ಮ ಎರಡು ತಲಾಂತರಗಳ
ಅನುಭವವು ಮುಂದಕ್ಕೂ ಸಂತೃಪ್ತಿ
ಯನ್ನೇ ಕೊಡುವುದಲ್ಲವೇ?

ಸ್ವದೇಶೀ

ಕಾರ್ಖಾನೆಗಳಲ್ಲಾದ ನೂಲು ಮತ್ತು
ಕೈಮಗ್ಗದ ವಸ್ತ್ರ, ಹೊದಿಕೆಗಳೂ, ಬೆಡ್‌ಶೀಟ್,
ಬಾತ್ ಟುವಾಲುಗಳೂ ಧೋತಿ, ಸೀರೆ—
ಪೈರವಾಸು—ಚಿಕ್ಕ—ಚೀಟು ಇತ್ಯಾದಿ
ಎಲ್ಲವೂ ಯಾವಾಗಲೂ ಮಾರಾಟಕ್ಕಿವೆ.

ಶ್ರೀನಿವಾಸ ರಂಗಪೈ,
[ಸಾಹುಕಾರ ಮಹಾಲ್]
ರಥಬೀದಿ, ಮಂಗಳೂರು.

Srinivasa Ranga Pai,
Representatives for South Canara and Malabar.
For— A. & F. Harvey,
Managers Madura Mills Co. Ltd.

EDITED, PRINTED & PUBLISHED BY V. S. KUDVA AT THE SHARADA PRESS, MANGALORE.

… ರೂಪಾಯಿ 3-0-0 Registered No. M. 498. ಟಪ್ಪಾಲು ಹಾಸಲು ಸೇರಿ ರೂಪಾಯಿ. 3-12-0

ಸ್ವದೇಶಾಭಿಮಾನಿ.

(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೭ರಲ್ಲಿ ಸ್ಥಾಪಿತವಾದುದು.)
ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತ್ತಿರುವ ।
ಗರಳತನರಂಜಿದರೆ! ಸುಧೆಯನು । ಪರಿತು ಕ್ಷುದ್ರರ ತೆರದಿ ಕುಳಿತರೆ । ತೆರಳೆ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

(Oldest Kanarese Weekly in South Kanara)

ಪುಸ್ತಕ ೨೮. ಮಂಗಳೂರು, ತಾ. ೯ನೇ ಶುಕ್ರವಾರ ಮಾರ್ಚಿ ೧೯೩೪ (9-3-'34) ಸಂಚಿಕೆ ೧೦

THE CANARA BANKING CORPORATION, UDIPI, LTD.

(Incorporated in British India)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI, S. K. **Branches:—Coondapoor, Mangalore, Shimoga & Madras.**
ಹೆಡ್ ಆಫೀಸು:—ಉಡುಪಿ, ದಕ್ಷಿಣ ಕನ್ನಡ. ಶಾಖೆ:—ಕುಂದಾಪುರ, ಮಂಗಳೂರು, ಶಿವಮೊಗ್ಗ ಮತ್ತು ಮದ್ರಾಸು.

Authorised Capital Rs. 3,50,000. Paid up Capital Rs. 2,25,000.
ನಿಯಾಮಿತ ಮೂಲಧನ ರೂ. 3,50,000. ಒಂದಾ ಹಾಕಲಿಕ್ಕೆ ಅಪೇಕ್ಷಿಸಿದ ವ ಎತ್ತಿದ ಮೂಲಧನ ರೂ. 2,25,000.

STATEMENT OF ASSETS & LIABILITIES AS ON 28TH FEBRUARY, 1934.

	Capital and Liabilities.			Property and Assets	
1	Paid up Capital	Rs. 2,25,000-0-0	1	Bank Premises, Buildings, Furniture etc.	Rs. 65,697- 5- 3
2	Reserve and other funds	" 2,50,000-0-0	2	Investment on G. P. notes	" 4,44,168- 5- 6
3	Deposits	" 22,70,954-10-2	3	Authorised Investments	" 23,68,574- 1- 5
4	Due to Bankers	" 1,36,830-14-11	4	Bills for collection	22,160- 2- 9
5	Sundries	" 61,271-3-11	5	Sundries	" 35,056- 6- 5
6	Bills per contra	22,160-2-9	6	Cash on hand & with bankers.	" 30,560-10- 5
	Total	29,66,216-15-9		Total	29,66,216-15-9

Office of the Corporation, Udipi, S. K.
3-3-'34.

N. ANANDA RAO,
Manager.

(Regd.)

ಅಮೃತಾಂಜನ.

ಇದು ಕೆಟ್ಟ ಶಿರೋವೇದನೆ, ಕಷ್ಟಕೊಡುವ ವಾತ, ಧಾರಿ ನೋವು, ವಿಶೇಷ ಉಳುಕು, ಅಸಹನೀಯ ಹಲ್ಲುನೋವು, ವಿಪರೀತ ಛಾಯ ಜಹು ಶೀತ, ಸಹಿಸಲಸದಳವಾದ ಚಳಿ, ಕೈಕಾಲು ಮರಗಟ್ಟುವುದು, ಉಂಟಾಗೊ ಮೊದಲಾದ ಎಲ್ಲಾ ತರದ ಬೇನೆಗಳನ್ನೂ ಅತೀ ತ್ವರೆಯಲ್ಲೇ ಗುಣ ಪಡಿಸುತ್ತದೆ. ಎಲ್ಲಿಲಿಯೂ ಮಾರಲ್ಪಡುತ್ತಿದೆ.

ರಿಂಗ್‌ವರ್ಮ್ ಮುಲಾಮು— ಇದು ರಿಂಗ್‌ವರ್ಮನ್ನೂ ಕಜ್ಜಿಯನ್ನೂ ಇನ್ನಿತರ ಚರ್ಮರೋಗಗಳನ್ನೂ ಮೂರು ಸಲಮುಟ್ಟಿಸುವುದ ರೊಳಗೆ ಗುಣಪಡಿಸುತ್ತದೆ.

ಡಬ್ಬಿ 1ಕ್ಕೆ 6 ಆಣೆ ಡಜನಿಗೆ ರೂ. 3-8-0. ಅಂಚೆವೆಚ್ಚ ಪ್ರತ್ಯೇಕ.

ಅಮೃತಾಂಜನ ಡಿಪೋ,
ಮದರಾಸು ಮತ್ತು ಬೊಂಬಾಯಿ

ಬೊಂಬಯಿ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

ಸ್ಥಾಪಿತವಾದುದು ಬೊಂಬಾಯಿ, 1908ರಲ್ಲಿ.

ಚೆಯರ್‌ಮಾನ್—ಸರ್. ಲಲ್ಲೂಭಾಯಿ ಶ್ಯಾಮಲದಾಸ್, ಕೆಟಿ. ಸಿ. ಐ. ಇ. ಜೆ. ಪಿ.

ಜೀವವಿಮೆಯ ಪದ್ಧತಿಯಲ್ಲಿ ಅತ್ಯುತ್ಕೃಷ್ಟವಾಗಿರುವ ಎಲ್ಲ ಸೌಕರ್ಯಗಳನ್ನೂ ಈ ಸಂಸ್ಥೆಯು ಒದಗಿಸಿ ಕೊಡುತ್ತದೆ- ಕಾಲೋಚಿತವಾದ ಆವಶ್ಯಕತೆಗಳಿಗೊಪ್ಪುವ ಸರ್ವೋತ್ತಮವಾದ ಯೋಜನೆಗಳು! ಸ್ತ್ರೀಯರ ಜೀವವಿಮೆಯನ್ನೂ ಸ್ವೀಕರಿಸಲಾಗುತ್ತದೆ.

ಸಂಯುಕ್ತ ಜೀವನ ವಿಮಾ ಪದ್ಧತಿಯು ಇದರದೊಂದು ವೈಶಿಷ್ಟ್ಯವೇ!

ಏಜನ್ಸಿಯ ನಿಯಮಗಳು ಬಹಳ ಉದಾರ! ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ:— ಯೋಗ್ಯ ಗೃಹಸ್ಥರಿಗೆ ಅತ್ಯುತ್ತಮ ಸಂದರ್ಭ!

ಕೊಟ್ಟಿಕಾರ್ ಬ್ರದರ್ಸ್, ಮದ್ರಾಸು ಶಾಖೆಯ ಕಾರ್ಯದರ್ಶಿಗಳು ಮತ್ತು ಬೊಂಬಯಿ ನಗರಕ್ಕೂ, ನಗರದ ಆಸುಪಾಸಿಗೂ ಮುಖ್ಯ ಏಜೆಂಟರುಗಳು.

ಆಫೀಸುಗಳು:—

ಮದ್ರಾಸು.	ಬೆಂಗಳೂರು.	ಮಂಗಳೂರು.	ಬೊಂಬಯಿ.	ಉಡುಪಿ.
ಪೋಸ್ಟ್ ಬಾಕ್ಸ್ ನಂಬ್ರ 337. ಮೌಂಟ್ ರೋಡ್.	ವಿಶ್ವೇಶ್ವರಪುರಂ ಸರ್ಕಲ್, ಬೆಂಗಳೂರು ಸಿಟಿ.	ಕಾರ್ಪೊರೇಶನ್ ಬಿಲ್ಡಿಂಗ್ಸ್, ಕಾರ್‌ಸ್ಟ್ರೀಟ್.	ಇಸ್ಮಾಯೀಲ್ ಬಿಲ್ಡಿಂಗ್ಸ್, ಲಾಹರ್ ಹೌಸ್.	ದಕ್ಷಿಣ ಇಂಡಿಯಾ.



ಪ್ರಕೃತಿಸಿದ್ಧವಾಗಿ ನಿಮ್ಮ ಮಗುವನ್ನು ಸಾಕಿರಿ.

ಪ್ರಕೃತಿಯು ಒದಗಿಸಿಟ್ಟಿರುವ ಪೋಷಣೆಯನ್ನು ಪಡೆಯಲು ನಿಮ್ಮ ಮಗುವಿಗೆ ಹಕ್ಕಿರುತ್ತದೆ. ಎದೆ ಹಾಲನ್ನು ಕೊಡುವುದು ತಾಯಿಯ ಕರ್ತವ್ಯ. ಮಗುವಿನ ಹಕ್ಕು. ಮಗುವಿಗೆ ಆರೋಗ್ಯ ಮತ್ತು ದೃಢತೆಯ ಪಂಚಾಂಗವನ್ನೊದಗಿಸಿ ಕೊಡುವುದಕ್ಕೆ ತಾಯಿಯ ಹಾಲಿನಂತೆ ಬೇರೊಂದಿಲ್ಲ. ಆದರೆ ಹೆಚ್ಚಿನ ತಾಯಂದಿರಿಗೆ ಮಗುವಿಗೆ ಎದೆ ಹಾಲು ಕೊಡಲು ಕಷ್ಟವೆಂದು ಭಾಸವಾಗುತ್ತದೆ. ತಾಯಿಯ ಎದೆ ಹಾಲಿಲ್ಲದಿರುವುದರಿಂದಲೂ, ಇದ್ದರೂ ಕಡಿಮೆಯಾದುದರಿಂದ ಹೆಚ್ಚಿನ ತಾಯಂದಿರಿಗೆ ಮಗುವಿಗೆ ಮೊಲೆಯುಣ್ಣಿಸಲಾಗುವುದಿಲ್ಲ.

ಮಗುವು ಜನಿಸುವ ಮೊದಲೂ, ಮೇಲೂ ಓವಲ್ಟಿನ್ ಕುಡಿದು ತಮ್ಮ ಶಕ್ತಿಯನ್ನು ರಕ್ಷಿಸಿಕೊಳ್ಳಬೇಕು. ಇದನ್ನು ಸೃಷ್ಟಿಜನ್ಯವಾದ ಟೋನಿಕ್ ಆಹಾರಗಳಿಂದಲೂ, ಬೆಳೆದ ಬಾರ್ಲಿ ಸಾರದಿಂದಲೂ, ದನದ ಕೆನೆ ಹಾಲಿನಿಂದಲೂ, ಮತ್ತು ವಿಶಿಷ್ಟವಾಗಿ ತಯಾರಿಸಿದ ಕೊಕ್ಕೊವಿನ ಸಾರದಿಂದಲೂ ತಯಾರಿಸಲ್ಪಟ್ಟಿದೆ. ಇದು ಹಾಲನ್ನು ಹೆಚ್ಚಿಸುತ್ತದೆ. ಅಲ್ಲದೆ ತಾಯಿಯ ಬಲವನ್ನು ಕುಂದಲು ಬಿಡದೆ, ಆರೋಗ್ಯವು ಶೀಘ್ರವಾಗಿ ವೃದ್ಧಿಗೊಳ್ಳುವಂತೆ ಮಾಡುತ್ತದೆ.

OVALTINE

ಮಗುವಿಗೆ ಎದೆಹಾಲು ಕೊಡಲು ಸಹಕಾರಿಯಾಗಿದೆ.

ತಯಾರಿಯಲ್ಲಿ ಕೈಯಲ್ಲಿ ಸ್ಪರ್ಶಿತವಾಗಿಲ್ಲ. ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ದೊರೆಯುತ್ತದೆ

ಏಜಂಟ್ಸ್—ಜೇಮ್ಸ್ ರೈಟ್ [illegible] ಸ್ಟ್ರೀಟ್, ಕಲ್ಕತ್ತಾ, ಮತ್ತು ಬೊಂಬಾಯಿ ಮದ್ರಾಸ್.

[illegible]

[illegible]

ಎರಡಾಣೆ ಕೈಲು ತಾ [illegible]

ಭರದಿಂದ ಬಾರೆಲು [illegible]

[illegible]

ನಾವದು ನೋಡುತ್ತಿರಲು [illegible]

ಸಾಯ್ಬ ಹೀಗೇಕೆ ಪದ ಹಾಡುತ್ತಿದ್ದಾನೆ ಎಂದು ಸ್ವದೇಶಾಭಿಮಾನಿ ವಾಚಕರ ಕೆಲವರ ಆಕ್ಷೇಪ. ಆ ಆಕ್ಷೇಪ ಅಳಿಸುವುದಕ್ಕಾಗಿ ಈ ಪದ ಹಾಡಿದೆ, ಗೊತ್ತಾಯಿತೆ?

ಈಗೀಗ ಬಹಳ ಕಷ್ಟಕಾಲ ನೋಡಿ,—ಭೂಮಿ ಅಡಿಮೇಲಾಗುತ್ತದೆ. ಕಳ್ಳ ಒಳ್ಳೆಯವನಾಗುತ್ತಾನೆ. ಒಳ್ಳೆಯವನಾಗಿದ್ದವನು ಕೆಟ್ಟವನಾಗುತ್ತಾನೆ—ಅರ್ಥಕ್ಕೆ ಅನರ್ಥವಾಗುತ್ತದೆ.

"ಸಾಯ್ಬನಿಗೆ ಗಾಂಧೀ ಮೇಲಿನ ಭಕ್ತಿ ಕಡಿಮೆ ಆಗುತ್ತಾ ಬಂದಿದೆ; ಗಾಂಧಿಗೆ ಅವನು ಬೈಯುತ್ತಾನೆ" ಎಂದು ಶ್ರೀಯುತ 'ಅಟಿಲ'ರಾಯರು ಪ್ರಸಿದ್ಧಪಡಿಸಿದ 'ನ್ಯೂದಾಸ್ ಮೆಗಜಿನ್'ನಲ್ಲಿ ಪ್ರಕಟ ಮಾಡಿದ್ದು ನಾನು ಓದಿದ್ದೇನೆ.

ಈ ಮಾತನ್ನು ಅಕ್ಷರಗಳಿಂದ ಬರೆದಿರಲಿಲ್ಲ; ಆ ಪುಸ್ತಕದಲ್ಲಿ ಯಾರೋ ಬಾಯಿಮಾತಿನ ಅಕ್ಷರದಲ್ಲಿ ಬರೆದಿದ್ದರು. ಇದನ್ನು ನೋಡಿ ಸಾಯ್ಬನಿಗೆ ಒಮ್ಮೆ ಭಾರೀ ಸಂತೋಷವಾಯಿತಾದರೂ ಆ ಮೇಲೆ ಸ್ವಲ್ಪ ದುಃಖ ಆಯಿತು.

"ಸಂತೋಷವೂ ಏತಕಾಯಿತು?" ಎಂದು ಪ್ರಶ್ನೆಯಿಡಬಹುದು. ಹೇಳಬೇಕೆ? ಕನ್ನಡ ಪೇಪರುಗಳನ್ನು ಮೂಸಿ ಕೂಡಾ ನೋಡದವರಿಗೆ ಈಗ ಓದುವ ರುಚಿ ಹಿಡಿದುಬಿಟ್ಟಿದೆಯಲ್ಲಾ ಎಂದು ಆನಂದ! ಅಲ್ಲದೆ, ಹಾಗೆ ಓದಿದ ಕನ್ನಡ ಪತ್ರಿಕೆಗಳಲ್ಲಿರುವ ಭಾವನೆಗಳನ್ನು ಜನರು ಈಗ ಮನಸ್ಸಿನೊಳಗೆ ಅಂಟಿಸಿಕೊಳ್ಳುತ್ತಾರಲ್ಲಾ ಎಂದು ತಿಳಿದು ನನಗೆ ಮತ್ತಷ್ಟು ಸಂತೋಷ!

ಮಾಷ್ಟ ಸಾಯ್ಬ ದೊರೆಯುವರ ಯಂಗ್ ಏಜಿನ ಕಾಲದಲ್ಲಿ ಕನ್ನಡ ಪತ್ರಿಕೆಗಳೇ ಒಂದೆರಡು! ಇದ್ದವುಗಳನ್ನೂ ಅವರು ಮೂಸುತ್ತಿದ್ದಿಲ್ಲ. ಮೂಸಿದರೂ ನಾತವನ್ನು ತಲೆಗೆ ಹತ್ತಿಸುತ್ತಿದ್ದಿಲ್ಲ. ಹತ್ತಿಸಿದರೂ ಬಂಗಿ ಕುಡಿದವರಂತೆಯೇ ಗಪ್ಪನೆ ಕುಳಿತುಕೊಳ್ಳುತ್ತಿದ್ದರು.

ಅದೇ ಈಗ ನೋಡಿ,—ಎಲ್ಲರೂ ಕನ್ನಡ ಪತ್ರಿಕೆಗಳನ್ನು ಓದುತ್ತಾರೆ. ಎಲ್ಲಿ ಬಿಟ್ಟಲ್ಲಿ "ಸ್ವದೇಶಾಭಿಮಾನ! ಎಲ್ಲಿ ಬಿಟ್ಟಲ್ಲಿ ಸ್ವದೇಶಾಭಿಮಾನ!" ಅವರೆಲ್ಲಾ ಕನ್ನು ಬಹು ದೂರ (ಖಾನ್ ಬಹದ್ದೂರ್) ಜನಾಬ್ ಸಾಯ್ಬರ ಆರ್ಟಿಕಲ್ಲು ಎಂದರೆ ಅವರಿಗೆ ಪಂಚಪ್ರಾಣ! ಕರ್ನಾಟಕದಲ್ಲಿ ಹೀಗೆ, ಇಂತಹ ಜಾಗ್ರತೆಯುಂಟಾದುದಕ್ಕಾಗಿ ನನಗೆ ಅಪರಿಮಿತ ಆನಂದ!

'ನ್ಯೂದಾಸ್ ಮೆಗಜಿನ್' ಓದಿದಾಗ ದುಃಖ ಯಾಕೆ ಆಯಿತೆಂದೆ ನಷ್ಟೆ! ಏಕೆಂದರೆ?—ಅವರು ಸಾಯ್ಬನ ಆರ್ಟಿಕಲ್ ಮಾತನ್ನು ಮಿಸ್ ಅಂಡರ್‌ಸ್ಟೇಂಡ್ ಮಾಡಿ, "ಅವನು ಗಾಂಧಿಗೆ ಬಯ್ಯುತ್ತಾನೆ ಗಾಂಧಿಯ ಮುಸುಕು ಎಂದು ಬಹಳ ಭಯಂಕರ ಹಾಸ್ಯ ಮಾಡುತ್ತಾನಲ್ಲಾ" ಎಂದು ಹೇಳುತ್ತಾರೆಂದು ದುಃಖ.

ನೊನ್ನೆ ರವೀಂದ್ರನಾಥ ಠಾಗೋರ್ ಸ್ವಾಮಿಗಳು ಬಂಗಾಳದವರಿಗೆ ಒಂದು ಪ್ರಕಟಣೆ ಕಳುಹಿಸುತ್ತಾ "ಯಾರೂ ಗಾಂಧಿಯನ್ನು ದೂರಬಾರದು. ಭಿನ್ನಾಭಿಪ್ರಾಯವಿದ್ದರೂ ಗಾಂಧಿಯವರ ಭಾರತೀಯ ಮುಕ್ತಿಕೆಯ [illegible] ಮಹಾನ್ ಶಕ್ತಿಯನ್ನೂ ಅಲ್ಲಗಳೆಯಲಾಗದು" ಎಂದು ಹೇಳಿದರು. ಸಾಯ್ಬ ಕೂಡಾ ಹಾಗೆಯೆ! ಅವನಿಗೆ ಗಾಂಧಿ ಎಂದರೆ ಭಕ್ತಿಯ ಮೂರ್ತಿ! ಪ್ರೇಮಪೂರಿತಳಾದ ತಾಯಿಯು ಮಗುವಿನ ಕೆನ್ನೆಗೆ ಬೆರಳಿನಿಂದ ಹೊಡೆದು ನಗುವಂತೆ ಗಾಂಧೀ – ಸಾಯ್ಬರ ಸಂಬಂಧ ತಿಳಿಯಿತೆ?

ಅದೆಲ್ಲಾ ಬಾಯಿಪುರಾಣ ಹಾಗೆ ಇರಲಿ, ನಾನು ಮೇಲೆ ಹಾಡಿದ ಪದದ ಅರ್ಥವೇನು? ತಿಳಿಯಿತೆ? ಆಗೋದಿಲ್ಲ, ತಿಂಗಳು ಬರುತ್ತದೆ! ಗಾಂಧಿರಾಯರು ತಾನು ಯಾವ ರಾಜಕೀಯ ಕೆಲಸಕ್ಕೂ ಕೈಹಾಕೋದಿಲ್ಲ ಎಂದು ಪ್ರತಿಜ್ಞೆ ಕೊಟ್ಟ ಆ ಅವಧಿಯು ಬೇಗನೇ ಹಾರಾಗಲಿ! ಆ ಮೇಲೆ ನಮ್ಮ ಅಕ್ಷೇಪರಾಯರ ಗತಿಯೇನು?

ಗಾಂಧಿಯು ಇನ್ನೂ ಬರಲಿಲ್ಲವಲ್ಲಾ ಎಂದು ಶ್ರೀಮತಿ ಎರಡಾಣೆಕು ಅಳುತ್ತಿರಬಹುದು. 'ಬೇಗ ಬಾ' ಎಂದು ಅವರನ್ನು ಕರೆಯುತ್ತಿರಬಹುದು. ಏನು ಮಾಡುತ್ತಾರೋ ಅಪ್ಪಯ್ಯಾಜಿಯವರು ಯಾರಿಗೆ ಗೊತ್ತು!

ಗಾಂಧಿಗೂ ಕೆಂಪಿಗೂ ಭಾರೀ ವೈರ. ಗಾಂಧಿಪ್ರಸವನು ಶ್ರೀಮತಿ ಎರಡಾಣೆಯಲ್ಲಿಗೆ ಹೋದೊಡನೆ [illegible] ಕೆಂಪುಪ್ಪಡವರು ಅಸ್ಪಶ್ಯದಿಂದ ಮೆಲ್ಲನೆ ಜಾರಬಹುದು! ಜೈ ಗಾಂಧಿಗೆ! (ಅಲ್ಲ ಸ್ವಾಮಿ! ತಪ್ಪಿತು! ಸರ್ಕಾರ್ ಕ್ಷಮಿಸುವಿರಾ! [illegible] ಬರೆದಿದ್ದೆ! ನಮ್ಮಯ್ಯ ಬಿಟ್ಟುಬಿಡಿ) ಜೈ ಕೆಂಪಿಗೆ!!

'ಸಾಯ್ಬ'

ಕ್ಷಯಕ್ಷೀಣಾದಿಗಳಿಗೆ

ಚ್ಯವನಪ್ರಾಶಾನ ಲೇಹ.

ಪ್ರಸೂತಿ ರೋಗಾದಿಗಳಿಗೆ

ದಶಮೂಲಾರಿಷ್ಟ.

(ಕಸ್ತೂರಿ ಮಿಶ್ರಣ)

ಸಮಸ್ತ ವಾತರೋಗಗಳಿಗೆ

ಮಹಾನಾರಾಯಣ ತೈಲ.

ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ,
ಡೊಂಗರಕೇರಿ ರಸ್ತೆ, ಮಂಗಳೂರು.

ನೋಟೀಸು.

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಸ್ಮಾಲ ನಂಬ್ರ 615/1933.

ವಾದಿ—ಕುದ್ಕುಂಜೆ ನಾರಾಯಣ ಶೈ.

ಪ್ರತಿವಾದಿ—ಸೀತಾರಾಮಯ್ಯ–ಕೊಲ್ಲಾಜೆ ವಿಷ್ಣಯ್ಯನವರ ಮಗ. ಪುಮುಟಿಟ್ಟು ಗ್ರಾಮದ ಕಣಿಯೂರಲ್ಲಿ. ಹಾಲಿ ಮೈಸೂರು ಜಿಲ್ಲಾ ಹುಣಸೂರಲ್ಲಿ ಶ್ರೀ ರಾಮವಿಲಾಸ ಕಾಫಿ ಕ್ಲಬ್ಬಿನಲ್ಲಿರುವವರು.

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—ಸದ್ರಿ ವಾದಿಯು ನಿಮ್ಮ ಮೇಲೆ ಅವರ ಅಂಗಡಿಯಲ್ಲಿ ನಡಸಿದ ಲೇವಾದೇವಿ ಕುರಿತು ಅಸಲು ಬಡ್ಡಿ ಕೂಡಾ ರೂ. 142–11—11ನ್ನು ಬಂಮಾಡಿಕೊಳ್ಳುವರೆ ದಾಖಲು ಮಾಡಿದ ಮೇಲ್ಕಂಡ ವ್ಯಾಜ್ಯವು ತನಿಖೆ ಬಗ್ಗೆ ತಾ. 17-3-1934ಕ್ಕೆ ತನ್ನಿಗೆ ಇಟ್ಟಿರುತ್ತದೆ. ಆ ಕುರಿತು ನಿಮಗೇನಾದರೂ ಆಕ್ಷೇಪಣೆ ಇದ್ದಲ್ಲಿ ಆ ತಾರೀಕಿಗೆ ಹಗಲು ಘಂಟೆ 11ಕ್ಕೆ ತಪ್ಪದೆ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ಉದಾಹರಿಸಿಕೊಳ್ಳಬಹುದು. ತಪ್ಪಿದರೆ ಸದ್ರಿ ವ್ಯಾಜ್ಯವು ಏಕಪಕ್ಷವಾಗಿ ತೀರ್ಮಾನಿಸಲಾಗುವದೆಂದು ಈ ಮೂಲಕ ತಿಳಿಸಲಾಗುತ್ತದೆ.

Puttur, 27-2-'34 — **B. Achyutha Baliga,** *Vakil for Plaintiff.*

ಸ್ವದೇಶಾಭಿಮಾನಿ

ಪತ್ರಿಕೆಯ ಚಂದಾದಾರರು ಪತ್ರವ್ಯವಹಾರಗಳಲ್ಲಿ ತಮ್ಮ ಚಂದಾ ನಂಬರುಗಳನ್ನು ನಮೂದಿಸಬೇಕು. ನಂಬ್ರಗಳಿಲ್ಲದ ಪತ್ರಗಳಿಗೆ ಸರಿಯಾದ [illegible]

ಮ್ಯಾನೇಜರ್.

ಅನುಕ್ರಮಣಿಕೆ.

ಅಗ್ರಲೇಖ

ಹಿಂದೀ ಸರಕಾರದ ಬಜೆಟ್ಟು.

ಸ್ಫುಟವಿಚಾರಗಳು

ಸೂಚನೆಗಳು,

ವರ್ತಮಾನ ಸಂಗ್ರಹ

ದಿನ ಬಂತು!

ವಿವಿಧ ಸಮಾಚಾರಗಳು . ೧೧

ಪತ್ರಿಕಾ ಕತ್ತರಿ—ಹಾಂಗಳೂರು, ಉಡುಪಿ, ಪುತ್ತೂರು, ಬಂಟ್ವಾಳ,

ಕಾರ್ಕಳ, ಶಾನಭಾಂಗಳೂರು, ಎಲಿಯನಡುಗೋಡು ೯

ಪತ್ರವ್ಯವಹಾರ ೧೩

ಮೂಲೆ ಮೂಲೆಗಳಿಂದ . ೬

ಭೂಕಂಪಗಳು ಹೇಗುಂಟಾಗುತ್ತವೆ? . ೫

ಮದರಾಸು ಲೇಬರ್ ಇಲಾಖೆ . ೧೦

ಸ್ವದೇಶಾಭಿಮಾನಿ.

ತಾ. ೯ನೇ ಶುಕ್ರವಾರ ಮಾರ್ಚಿ ೧೯೩೪.

ಹಿಂದೀ ಸರಕಾರದ ಬಜೆಟ್ಟು.

ಹಿಂದೀ ಸರಕಾರದ ಆಯವ್ಯಯದ ತಪಶೀಲು ಕಳೆದ ವಾರ ಎಸೆಂಬ್ಲಿಯ ಮುಂದೆ ಇಡಲ್ಪಟ್ಟಿದ್ದಿತು. ನ್ಯಾಯಾಧಿಕ್ಯ ಮತ್ತು ಉಳಿತಾಯಗಳ ಪ್ರಾಮುಖ್ಯತೆಯು ಈ ಬಜೆಟ್ಟಿನಲ್ಲಿ ಕಾಣುವುದಿಲ್ಲ. ಅಖಿಳ ಹಿಂದೂಸ್ಥಾನಕ್ಕೆ ಸಂಬಂಧಪಡುವ ಈ ಬಜೆಟ್ಟಿನಲ್ಲಿ ಅತೀವ ಉದಾಸೀನತೆಯಲ್ಲದೆ ಬೇರೇನೂ ಕಂಡುಬರುವುದಿಲ್ಲ. ಸಮಗ್ರ ಲೋಕದ ಆರ್ಥಿಕ ದುರವಸ್ಥೆಯು ಈ ಸಮಯದಲ್ಲಿ ಸ್ವತಂತ್ರರಾಗಿರುವ ಪ್ರತಿ ರಾಜ್ಯಗಳಲ್ಲಿಯೂ ಬಜೆಟ್ಟಿನ ಸಮಯವೆಂದರೆ ಪ್ರತಿ ಪ್ರಜೆಯೂ ಅತ್ಯಂತ ಉತ್ಸುಕತೆಯಿಂದ ಕಾಯುವನು, ಅದು ಪ್ರಕಟವಾದಾಗ ಆ ಬಜೆಟ್ಟಿನಲ್ಲಿ ರಾಷ್ಟ್ರನಿರ್ಮಾಣಕವಾದ ಹಲವು ವಿಷಯಗಳು ಅದರಲ್ಲಿ ಕಂಡು ಬರುವುವು. ಆ ದೇಶದ ಪ್ರಜೆಗಳೂ ಆ ಬಜೆಟ್ಟನ್ನು ಸರಿಯಾಗಿ ಪರಿಶೀಲಿಸಿ ದೇಶದ ಹಿತಕ್ಕಾಗಿ ಹೋರಾಡುವರು. ಒಂದು ಬಜೆಟ್ಟಿನ ಕಾರಣದಿಂದಲೇ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಎಷ್ಟೋ ಬಾರಿ ಸರಕಾರಗಳ ಬದಲಾವಣೆಯಾಗುತ್ತದೆ.

ಆದರೆ ನಮ್ಮ ದೇಶದ ಪರಿಸ್ಥಿತಿಯೇ ಬೇರೆ. ಏಕೆಂದರೆ ದೇಶದ ಆರ್ಥಿಕ ಅವಸ್ಥೆಗೂ ನಮ್ಮ ಸರಕಾರದ ಆಯವ್ಯಯ ಪಟ್ಟಿಗೂ ಏನೂ ಸಂಬಂಧವಿರುವುದಿಲ್ಲ. ಇತರ ರಾಷ್ಟ್ರಗಳಲ್ಲಿ ಬಜೆಟ್ಟು ಪ್ರಕಟವಾದ ಕೂಡಲೇ ಸರಕಾರದ ಸೆಕ್ಯೂರಿಟಿಗಳ ಬೆಲೆ ಬದಲಾಯಿಸುತ್ತದೆ, ಎಕ್ಸ್‌ಚೇಂಜ್ ದರ ಬದಲಾಯಿಸುತ್ತದೆ. ಇದೇ ವ್ಯಾಪಾರೀ ವಹಿವಾಟಗಳಲ್ಲಿ ಬದಲಾವಣೆಯಾಗುತ್ತದೆ, ನಮ್ಮ ಬಜೆಟ್ಟೆಂದರೆ ಬರೇ ಆಮದಿನ ಮೇಲೆ ಹೊರಿಸೋಣಾಗುವ ಸುಂಕದ ಬದಲಾವಣೆಯಿಂದ ಆಗಬಹುದಾದ ವಸ್ತು ಬೆಲೆಯ ಬದಲಾವಣೆಯಲ್ಲದೆ ಬೇರೇನೂ ಸಂಭವಿಸುವುದಿಲ್ಲ. ಏಕೆಂದರೆ ನಮ್ಮ ಬಜೆಟ್ಟಿನ ಮೂಲವು ಲಂಡನಿನ ಸೆಕ್ರೆಟರಿ ಒಫ್ ಸ್ಟೇಟಿನ ಆಫೀಸಿನಲ್ಲಿದೆ, ಅಲ್ಲಿಂದ ಅದು ಬ್ರಿಟಿಷ ಬಜೆಟ್ಟಿನಲ್ಲಿಯೂ ತಕ್ಕ ಮಟ್ಟಿಗೆ ಹೊಂದಿದೆ. ಮಾತಿನಲ್ಲಿ ಬ್ರಿಟಿಷರು ಎಷ್ಟೋ ಹೇಳಬಹುದಾದರೂ, ಕಾರ್ಯದಲ್ಲಿ ಲಂಡನಿನ ಹಿಡಿತ ಇನ್ನೂ ಸಡಿಲಾಗಲಿಲ್ಲ.

ಟಪ್ಪಾಲು ದರದ ಇಳಿತ, ಬೆಳ್ಳಿಯ ಕರದ ಇಳಿತ, ಇತ್ಯಾದಿಗಳು ಕಾರ್ಯಕ್ಕೆ ಬಾರದ ಲಂಚಗಳು ಪ್ರಜೆಗಳಿಗಿರುವುದೇನೊ ಸಹಜ. ಕವರಿನ ದರವನ್ನು ಒಂದಾಣೆಗೆ ಇಳಿಸಿದುದರಿಂದ ಹೆಚ್ಚು ಪ್ರಯೋಜನವಾಗಲಾರದು, ಕಾರ್ಡಿನ ದರವನ್ನು ಇಳಿಸುವ ಬದಲು ಬುಕ್‌ಪೋಸ್ಟಿನ ದರವನ್ನು ಏರಿಸಿದೆ. ಕಾರ್ಡಿಗೆ ದರ ಇಳಿಸಿದ್ದಾದರೆ ಬಡವರಿಗಾದರೂ ತುಂಬಾ ಸಹಾಯವಾಗುತ್ತಿತ್ತು. ಆದರೆ ಇವೆಲ್ಲಾ ಬರೇ ಚಿಲ್ಲರೆ ವಿಷಯಗಳು. ರಾಷ್ಟ್ರದ ಅಭಿವೃದ್ಧಿಯಲ್ಲಿ ಅವು ಏನೂ ಕಾರ್ಯಕ್ಕೆ ಬಾರದಂತಹವುಗಳು. ದೇಶದ ಆತಯಾಗಳನ್ನು ಪೂರೈಸಲಿಕ್ಕೆ, ಹಿಂದೂಸ್ಥಾನವು ಜಗತ್ತಿನ ಪ್ರಮುಖ ರಾಷ್ಟ್ರಗಳಲ್ಲೊಂದೆನ್ನಲಿಕ್ಕೆ ಈ ಬಜೆಟ್ಟಿನಲ್ಲಿ ಏನೂ ದೊರಕುವುದಿಲ್ಲ.

ನಮ್ಮ ದೇಶದಲ್ಲಿ ಸಕ್ಕರೆ ತಯಾರಿಗೆ ಪ್ರೋತ್ಸಾಹವೆಂದು ಮೊದಲು ಹೊರಗಿನ ಸಕ್ಕರೆಯ ಮೇಲೆ ವಿಪರೀತ ಕರ ಹೊರಿಸಿದರು. ಈ ತರದ ಆಕರ್ಷಣೆಯಿಂದ ದೇಶದಲ್ಲಿ ಸಕ್ಕರೆ ಕಾರ್ಖಾನೆಗಳು ಸ್ಥಾಪಿಸಲ್ಪಡಲಾರಂಭಿಸುವಾಗಲೇ, ಹೊರಸಕ್ಕರೆಯಲ್ಲದೆ—ಒಳ ಸಕ್ಕರೆಗೂ ಕರ ಹೊರಿಸಲ್ಪಟ್ಟಿತು. ಇದಕ್ಕೆ ನೂತನ ಕಾರಣ—ಈ ಕಾರ್ಖಾನೆಗಳು ಕಬ್ಬಿಗೆ ಬೆಲೆ ಸರಿಯಾಗಿ ಕೊಡುವುದಿಲ್ಲವಂತೆ! ಈ ಕಾರಣದಿಂದ ಕಾರ್ಖಾನೆಗಳಿಗೆ ಲಾಭ ಹೆಚ್ಚುವುದಂತೆ! ಇದರಿಂದ ಕಾರ್ಖಾನೆಗಳ ಸಂಖ್ಯೆಯು ಹೆಚ್ಚುವುದಂತೆ! ಇದರಿಂದ ಸಕ್ಕರೆ ತಯಾರಿ ಹೆಚ್ಚುವುದಂತೆ! ಇದರಿಂದ ಸಕ್ಕರೆಯ ಬೆಲೆಯು ಇಳಿದು ಎಲ್ಲರಿಗೂ ತುಂಬಾ ನಷ್ಟವಾಗುವುದಂತೆ. ಈ ಸುತ್ತು ಸುತ್ತು ತರ್ಕ ನೋಡಿದರೆ ಎಲ್ಲರಿಗೂ ಆಶ್ಚರ್ಯವಾಗದಿರದು. ಕಬ್ಬಿಗೆ ಸರಕಾರವು ಬೆಲೆ ನಿರ್ಣಯಿಸಬಹುದ, ಇಲ್ಲವೆ ಹೊರಸಕ್ಕರೆಯ ಮೇಲಿನ ಕರವನ್ನೇ ಇಳಿಸಬಹುದು. ಇವುಗಳಲ್ಲೊಂದನ್ನೂ ಮಾಡದೆ, ಒಳಸಕ್ಕರೆಗೂ ಕರ ನಿರ್ಣಯಿಸಿದುದು ನೋಡಿದರೆ ನಮ್ಮ ಅರ್ಥ ಸಚಿವರಿಗೆ ಹೇಗಾದರೂ ಮಾಡಿ ದುಡ್ಡು ಸೆಳೆಯಬೇಕೆಂಬುದೇ ಯೋಚನೆಯಲ್ಲದೆ ಇದರಲ್ಲಿ ಬೇರೆ ತೋರುವುದಿಲ್ಲ.

ಸ್ಫುಟ ವಿಚಾರಗಳು.

''ಖಾದಿ ಮಸೂದೆ''

ಈಗಿನ ಎಸೆಂಬ್ಲಿಯೆಂದರೆ ಯಾವ ರೀತಿಯಲ್ಲಿ ಆಳರಸರ ಪಲ್ಲವಿಗೆ ಕುಣಿಯುತ್ತಿದೆಯೆಂದು ಈ ಮೊದಲು ಎಷ್ಟೋ ಬಾರಿ ತೋರಿಸಿಕೊಟ್ಟಿದೆವು. Empire Preference Exchange ratio ಮೊದಲಾದ ಅತ್ಯಂತ ಪ್ರಮುಖ ವಿಷಯಗಳಲ್ಲಿ ಕೂಡ ಈ ಎಸೆಂಬ್ಲಿಯು ಹಿಂದೀ ಹಿತವನ್ನು ಲಕ್ಷಿಸದೆ ಆಳರಸರ ಕೇಳಿಕೆಗೆ ಹೂಂಗುಟ್ಟಿ ಹಿಂದೂಸ್ಥಾನದ ಉಪವಾಸಿಗಳ ಸಂಖ್ಯೆಯನ್ನು ಬೆಳೆಸದೆ ಇಂಗ್ಲೆಂಡಿನ ಉದ್ಯೋಗಿಗಳಿಗೆ ವ್ಯವಸಾಯವನ್ನು ಕಲ್ಪಿಸಿಯದೆ. ಈ ಅನ್ಯಾಯದ ಮಧ್ಯದಲ್ಲೊಂದು ಅತ್ಯಾಚಾರ (Adding insult to injury)ವೆ ಅದೇ ಈ ಖಾದಿ ಮಸೂದೆ, ಖಾದಿ ರಕ್ಷಣೆಯ ಉದ್ದೇಶ ಸುಲಭ ಮಂಜೂರಾತಿ ತಕ್ಕುದು. ಬಹಳ ಉದಾರ ಹಿತಕರ ಧ್ಯೇಯ ಕಾರ್ಯಗತ. ಇದರಿಂದ ಖಾದಿಗೆ ಮತ್ತೂ ಅಪಾಯ. ಕಾರಣವೇನೆಂದರೆ ಖಾದಿ ಕಾನೂನು ಜ್ಯಾರಿಗೆ ತರುವ ಅಧಿಕಾರವನ್ನು ಅದೇ ಮಸೂದೆಯಲ್ಲಿ ಪ್ರಾಂತಿಕ ಸರಕಾರಕ್ಕೆ ಕೊಟ್ಟು, ಬಿಟ್ಟಿದ್ದಾರೆ. ಪ್ರಾಂತಿಕ ಸರಕಾರವು ಅದನ್ನು ಜ್ಯಾರಿಗೆ ತರುದಿಲ್ಲವೆಂಬುದಕ್ಕೆ ಆಧಾರಗಳನ್ನು ಕೊಡುವ ಅವಶ್ಯವಿಲ್ಲ. ಫಲವಾಗಿ ಕಾನೂನು ಏನೊಂದೂ ಕೆಲಸ ಮಾಡಲಾರದು. ಇತ್ತ ವ್ಯಾಪಾರಿಗಳು ರಕಾರಿ ಖಾದಿಯನ್ನು ಗಿರಾಕಿಗಳಿಗೆ ಕೊಟ್ಟು, ಅದು ನಿಜವಾದ ಖಾದಿ ಎಂಬುದಕ್ಕೆ ಈ ಖಾದಿ ಕಾನೂನೇ ಆಧಾರವಾಗಿ ಕೊಡಲು ಬಹಳ ಅನುಕೂಲವಾಯಿತು. ರಕಾರಿ ಖಾದಿ ಮಾರಾಟವಾಗಬಾರದೆಂಬ ಪ್ರಕಟಿತ ಉದ್ದೇಶವು ಈ ಕಾನೂನಿಗೆ ಇದ್ದರೂ, ಈ ಕಾನೂನಿನ ಪರಿಣಾಮವು ಮಾತ್ರ ರಕಾರಿ ವಿಕ್ರಯಕ್ಕೆ ಯುಕ್ತಿಯನ್ನೂ ಧೈರ್ಯವನ್ನೂ ಒದಗಿಸಿಕೊಂಡು ನಂತಹದುದಾಗಿದೆ.

ಮಿಡ್ನಾಪುರಕ್ಕೆ ಮಾತ್ರ ಬೇಡ!

ಮೂವರು ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರನ್ನು ಗುಂಡಿಟ್ಟು ಕೊಲೆ ಮಾಡಿದ ದುರ್ಭಾಗಿ ಮಿಡ್ನಾಪುರಕ್ಕೆ, ಗಾಂಧಿಜೀಯವರು ಬೇಡವಾದರು! ಶ್ರೀ ಬಿ. ಎನ್ ಶಶಿಮುಖರ ಪ್ರಶ್ನೆಗೆ ಉತ್ತರವಾಗಿ ಅಲ್ಲಿಯ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರವರು, ''ಈಗ ಮಹಾತ್ಮಾಜೀಯವರು ಇಲ್ಲಿಗೆ ಬರುವುದು ಅನಪೇಕ್ಷಣೀಯ''ವೆಂದು ತಿಳಿಸಿರುವರು! ಇದರಿಂದ, ಈ ಮೆಜಿಸ್ಟ್ರೇಟ ಸಾಹೇಬರಿಗೆ ತಮ್ಮ ಜಿಲ್ಲೆಯಲ್ಲಿ ಅಹಿಂಸಾ ಬೋಧಕರಾಗಲೀ ಅಹಿಂಸಾ ಪ್ರಸಾರದ ಪ್ರಯೋಜನವಾಗಲಿ ಅನಪೇಕ್ಷಣೀಯವೆಂದು ತಿಳಿಯಬೇಡಿ. ಶಾಸನಭಂಗ ಯಾ ಇತರ ವೇಳೆಗಳಲ್ಲಿ 'ಮಿನಿಮಮ್' ಎಂಬ 'ತುಣುಕು' ಬಲ ಪ್ರಯೋಗವನ್ನು ಆ ಭಂಗಕರ ಮೇಲೆ ಮಾಡಬಹುದೆಂದು ಇರ್ವಿನ್ ಪ್ರಭುಗಳವರ ಕಾಲದಿಂದಲೂ ಅಪ್ಪಣೆಯಿದೆಯಷ್ಟೆ. ಅಂಥ ತುಣುಕು ಪ್ರಯೋಗಗಳು ಸಮಯಾನುಸಾರ ಆಗಾಗ ಆಗುತ್ತಲೇ ಇವೆ. ಅವುಗಳನ್ನು ಗಾಂಧೀಜೀಯವರು ತಮ್ಮ ಸಂಚಾರ ಕಾಲದಲ್ಲಿ ಕೇಳಿದರೆ, ಮುಖದಲ್ಲೇ ಸ್ಪಷ್ಟವಾಗಿ ಅದಿ ತೋರಿಸುವ ಬುದ್ಧಿಯುಳ್ಳ ಅವರು ಏನೇನೋ ಹೇಳುವರು. ಇದು ನಾನಾ ತೊಡಕುಗಳಿಗೆ ಕಾರಣವಾಗುವುದು. ಮತ್ತು—ಗಾಂಧಿಜೀಯವರು ಈಗ ಹರಿಜನ ಕಾರ್ಯಾರ್ಥ ಬಂದಿದ್ದರೂ ರಾಜಕೀಯ ಮುಖಂಡರೂ ಆಗಿರುವರಷ್ಟೆ? ಅವರ ದರ್ಶನ ಮಾತ್ರದಿಂದ ಅಹಿಂಸಾಯುದ್ಧಾಸಿಲವು ಭುಗಿಲ್ಲೆಂದು ಜನರಲ್ಲಿದ್ದರೆ?

ಹೊಸ ತೆರಿಗೆಗಳ ವಿನಿಯೋಗ.

ಸಕ್ಕರೆ, ತಂಬಾಕು ಮತ್ತು ಬೆಂಕಿಪೆಟ್ಟಿಗೆಗಳ ಮೇಲೆ ಅಧಿಕಕರವನ್ನು ಹೇರಿ ಇಂಡಿಯಾ ದೊರೆತನವು, ಅದರಿಂದ ಹುಟ್ಟಿ ಬರುವ ಆದಾಯವನ್ನು ಕೃಶನಾದ ಬಂಗಾಳಕ್ಕೆ ಕೊಟ್ಟು ಪೋಷಿಸುವುದೆಂದು ಕೇಳಿ ಬೊಂಬಾಯಿ, ಕರಾಚಿ ಮೊದಲಾದ ಕಡೆಗಳಲ್ಲಿ ಉದ್ವೇಗವುಂಟಾಗಿದೆ. 'ರಾಮನ ತಪ್ಪಿಗೆ ಶ್ಯಾಮನ ತಲೆಬಡಿವರೇಕೆ?' ಎಂದೂ ಕೆಲ ಕೌನ್ಸಿಲರರು ಟೀಕಿಸಿರುವರು. ಬಂಗಾಳದ ದಾರಿದ್ರ್ಯಾವಸ್ಥೆಗೆ ಕಾರಣಗಳೇನು? ಸಾಬಿನ ಬೆಳೆ ಹುಲ್ಲು, ಬೆಲೆ ಕಡಿಮೆಯಾಗಿ ಮಾರಾಟವಿಲ್ಲದುದೊಂದೆಯೇ? ಶಾಸನಭಂಗವೇ? ಭಯೋತ್ಪಾದಕರ ಮೂಲೋತ್ಪಾಟನಕ್ಕೆಂದು ಜ್ಯಾರಿಗೆ ತಂದ ಭೀಕರ ಕಾನೂನುಗಳ ಹೆಸರಲ್ಲಿ ಸರಕಾರಕ್ಕೆ ತಗಲಿದ ವೆಚ್ಚವೆಷ್ಟು? ಒಳಸಂಚುಗಾರರೆಂದು ಸಂಶಯ ಕೊಡುವರೆಷ್ಟು ಮಂದಿ ಜೇಲಿನಲ್ಲಿ ಸರಕಾರದ ಅತಿಥಿಗಳಾಗಬೇಕಾಯಿತು? ಅವರಿಗೂ ಇವರ ಕುಟುಂಬಕ್ಕೂ ಸರಕಾರದಿಂದ ಎಷ್ಟು ತಗಲುತ್ತದೆ? ಕೈದಿಗಳನ್ನು ಅಂಡಮಾನಕ್ಕೆ ಸಾಗಿಸಿದ ವೆಚ್ಚವೆಷ್ಟು? ಅಧಿಕ ಸಿಬ್ಬಂದಿ ಮಿಲಿಟರಿ ಇತ್ಯಾದಿಗಳ ವೆಚ್ಚಗಳೆಷ್ಟು? ಇವುಗಳೆಲ್ಲವನ್ನೂ ಸರಕಾರವು ಸಾವಧಾನ ಚಿತ್ತದಿಂದ ಪರ್ಯಾಲೋಚಿಸಿ ಬೊಂಬಾಯಿಯ ತಕ್ತಸ್ಸು ಬೊಂಬಾಯಿಗೂ ಬಂಗಾಳದ ತಕ್ತಸ್ಸು ಬಂಗಾಳಕ್ಕೂ ನ್ಯಾಯವಿಹಿತವಾಗುವಂತೆ ಕೊಡಿಸಬದ್ದರೆ ಬಂಗಾಳವು ಮಾತ್ರ ಸರಕಾರದ ಮುದ್ದಿನ ಕೂಸು ಎಂಬ ಅಪವಾದ ತಪ್ಪುವಂತಾಗುವುದು. ಬಂಗಾಳದಂತೆ ಮುಂಬಾಯಿ ಪ್ರಾಂತ್ಯದಲ್ಲೂ ಬೇಸಾಯಗಾರರ ಸ್ಥಿತಿ ಹೇಗಿದೆಯೆಂಬುದರ ಪರೀಕ್ಷೆಯಾಗಲಿ.

ಲೋ। ಬೋರ್ಡುಗಳು ಮಾಯವಾಗುವುವು

ಇದಕ್ಕಾಗಿ ಮದರಾಸು ಸರಕಾರದ ಮಂತ್ರಿಗಳ ಅಭಿನಂದನೀಯರು. ಸರಕಾರಿ ಚಿಕಿತ್ಸೆಯ ಪ್ರಯೋಜನವಿಲ್ಲದೆ ಹಣದ ಕೊರತೆ—ಆದರೆ ತದ ಅಕ್ರಮಗಳಿಂದ ಮೃತ ಜೀವನವನ್ನು ನಡೆಸಿಕೊಂಡಿದ್ದು, ಎಂದೋ ತಮ್ಮಷ್ಟಕ್ಕೆ ಮಾಯವಾಗಿ ಹೋಗಬೇಕಾಗಿದ್ದ ಈ ಬೋರ್ಡುಗಳ ಈಗಲಾದರೂ ಹೆಚ್ಚು ಸಂತೋಷ. ಇನ್ನು ಜಿಲ್ಲೆಗಳ ಆಡಳಿತವೆಲ್ಲವನ್ನು ಡಿಸ್ಟ್ರಿಕ್ಟ್ ಬೋರ್ಡುಗಳೇ ವಹಿಸುವುವು. ಆದರೆ ಈ ಬೋರ್ಡುಗಳನ್ನು ಸರಕಾರವು ವಿಭಜಿಸುವುದಿಲ್ಲವೆಂಬುದಕ್ಕೆ ಇದೇತರ ಕಾರಣವ? ವಿಭಜಿಸುವ ಬದಲಾಗಿ, ಭಾಷಾವಾರಾಗಿ ಸಾಧ್ಯವಾದ ತಮಿಳು ನಾಡಿಗೊಂದು ತೆಲುಗು ನಾಡಿಗೊಂದು ಮಲಿಯಾಳಿಗೊಂದು ಹೀಗೆ ಪ್ರತ್ಯೇಕಿಸಿ ಆಡಳಿತ ನಡೆಸಿದರೆ—ಸೇಕೆಂದರಿ ಶಿಕ್ಷಣ ರಸ್ತೆಗಳ ವ್ಯವಸ್ಥೆ ಮತ್ತು ಆರೋಗ್ಯಪಾಲನೆ ಇವೇ ಮುಖ್ಯ ಕಾರ್ಯಗಳಾಗುಳ್ಳ ಈ ಬೋರ್ಡುಗಳು ಸುವ್ಯವಸ್ಥೆಯಿಂದ—ಹಣದ ಕೊರತೆಗಳಿಗವಕಾಶವಿಲ್ಲದಂತೆ ಸುಗಮವಾಗಿ ಸಾಗಲು ಸಾಧ್ಯವಾಗದೆ?

ಟಪ್ಪಾಲು ದರಗಳು

ಸಾಮಾನ್ಯ ಪತ್ರಗಳ ದರವನ್ನು ಒಂದಿಷ್ಟು ಇಳಿಸಿ, ''ಬುಕ್‌ಪೋಸ್ಟ್'' ದರಗಳನ್ನು ೬ ಪೈಯಿಂದ ೯ಕ್ಕೇರಿಸಲು ನಿಶ್ಚೈಸಿ ಸರಕಾರವು ಪತ್ರಿಕಾಕರ್ತರಿಗೂ ವ್ಯಾಪಾರಸ್ಥರಿಗೂ ಅನ್ಯಾಯ ಮಾಡಿದಂತಾಯಿತೆಂದು ಹೇಳಬೇಕು. ದೈನಿಕಗಳಿಗೂ ವಾರಪತ್ರಿಕೆಗಳಿಗೂ ಕ್ರಮವಾಗಿ ಆರ್ಧಾಣೆಯ ಅಂಚೆದರಗಳ ಸೌಕರ್ಯದಿಂದ ವಾರ್ತೆಗಳನ್ನು ಕಳುಹಿಸುತ್ತಿದ್ದ ಪತ್ರಿಕಾ ಲೇಖಕರೂ, (ಬಾತ್ಮಿದಾರರು) ಪತ್ರ, ಕೆಟಲಾಗು, ದರಗಳ ಪಟ್ಟಿ, ಸರ್ಕಿಲಾರು ಇತ್ಯಾದಿಗಳನ್ನು ಅಂಚೆ ಮೂಲಕ ಸರಾಗವಾಗಿ ಕಳುಹುತ್ತಿದ್ದ ವ್ಯಾಪಾರಸ್ಥರೂ ಇನ್ನು ಪ್ರತಿ ಅರ್ಧಾಣೆಯ ಮೇಲೆ ಹೆಚ್ಚಿಗೆಯಾಗಿ ಕೊಡಬೇಕಾಗಿ ಪಾವಾಣೆಯ ಲೆಕ್ಕ ಮಾಡುತ್ತ ಸಂಕೋಚಿಸುವ ಸಂಭವವಿದೆ. ''ಟಪ್ಪಾಲು ದರಗಳಲ್ಲಿ ಸೌಕರ್ಯ''ವೆಂದು ಸರಕಾರವು ಸಾರುವಾಗ ರಾಷ್ಟ್ರದ ಪ್ರಮುಖ ಅಂಗಗಳಿವರದರ ಕೈಕಡಿವುದು ಸರಿಯಲ್ಲ. ಸರಕಾರಕ್ಕೆ ಇದರಿಂದ ನಿರೀಕ್ಷಿಸಿದಷ್ಟು ಲಾಭವಾಗುವ ಬದಲಾಗಿ ತುಂಬ ನಷ್ಟವಾಗುವ ಸಂಭವವಿರಲೂ ಬಹುದು. ಇನ್ನು ಪೋಸ್ಟ್ ಕಾರ್ಡುಗಳ ದರವಿಳಿಸದಿದ್ದುದೂ ಅನುಚಿತವೆಂದೇ ಹೇಳಬೇಕಾಗಿದೆ. ಲಿ। ಮೆಂಬರರು ಈ ವಿಷಯವಾಗಿ ಏನು ಮಾಡುವರಂತೆ?

[illegible]

(ಗಾಣಿಗರ ಪಂಚಾಂಗ—ಮಾಯಿ).

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]	ಸೂರ್ಯ ಉ.	ಅಸ್ತ
10	ಶನಿ	[illegible]	[illegible]	ಪೂ. ಷಾ.	[illegible]	[illegible]	6.48	6.39
11	ರವಿ	೧೧	[illegible]	ಉ. ಷಾ.	[illegible]	[illegible]	6 47	6.39
12	ಸೋಮ	೧೨	[illegible]	ಶ್ರವಣ	[illegible]	[illegible]	6 47	6.39
13	ಮಂಗಳ	೧೩	[illegible]	ಧನಿಷ್ಠಾ	[illegible]	[illegible]	6.46	6 39
14	ಬುಧ	೧೪	[illegible]	ಶತಭಿಷ	[illegible]	೧	6.45	6.39
15	ಗುರು	●	[illegible]	ಪೂರ್ವಾ	[illegible]	[illegible]	6 45	6.39
17	ಶುಕ್ರ	೧	[illegible]	ಉ. ಭಾ	[illegible]	[illegible]	.644	6 39

ಮಂಗಳೂರಿನ ವಾಯುಸ್ಥಿತಿ.

ತಾರೀಖು Date	Temperature. ಉಷ್ಣ (ಕಾವು) Maximum	ಹೆಚ್ಚಿನದು	Minimum	ಕಡಿಮೆ	Rainfall. ಮಳೆ ದಿನದ ಮಳೆ	ಜುಮಲಾ ಮಳೆ.
22	89—	6	75—	3	—	—
23	88—	3	74—	5	—	—
24	90—	1	73—	7	—	—
25	89 —	5	76—	2	—	—
26	90—	5	77—	2	—	—
27	88—	9	75—	1	—	—
28	8[illegible]—	3	73—	2	—	167-64

ಮಂಗಳೂರಿನ ಪೇಟೆ ಧಾರಣೆ.

ಜೀನಸು.		ಇಂದ ರೂ.	ಆ.	ವರೆಗೆ ರೂ.	ಆ.
ಹೊಸ ರಾಶಿ ಅಕ್ಕಿ	...	3 —	4	3 —	12
ಹೊಸ ಮುಸ್ಟಿ	...	4 —	2	4 —	10
ಹೊಸ ಗುಡ್ಡು	...	3—	10	4 —	[illegible]
	...	—		—	
ಊರ ಅವ್ವಲ್ ಬೆಳ್ತಿಗೆ	...	4—	4	5—	4
ರಂಗೂನು ಬೆಳ್ತಿಗೆ ಗೋಣಿ ೧ಕ್ಕೆ	...	5—	2	5 —	12
ಎಲ್ಲೂರು ಬೆಳ್ತಿಗೆ ಮುಡಿ ೧ಕ್ಕೆ	...	3—	4	3—	6
ಗೋಧಿ ಗೋಣಿ ೧ಕ್ಕೆ	...	11—	0	12—	8
ತೊಗರಿ ಗೋಣಿ ೧ಕ್ಕೆ	...	9—	0	10—	8
ಹುರುಳಿ ಗೋಣಿ ೧ಕ್ಕೆ	...	5—	8	6 —	0
ಕಡಲೆ ಗೋಣಿ ೧ಕ್ಕೆ	...	9—	8	12 —	8
ತೊಗರಿಬೇಳೆ ಗೋಣಿ ೧ಕ್ಕೆ	...	10—	0	16 —	0
ಉದ್ದು ಗೋಣಿ ೧ಕ್ಕೆ	...	7—	0	7—	10
ಹೆಸರು ಗೋಣಿ ೧ಕ್ಕೆ	...	8—	0	9—	0
ಊರುಬೆಲ್ಲ ಖಂಡಿ ೧ಕ್ಕೆ	...	32—	0	37—	8
ಉಪ್ಪು ಗೋಣಿ ೧ಕ್ಕೆ	...	5—	0	5—	8
ಕೊಬ್ರಿ ಖಂಡಿ ೧ಕ್ಕೆ	...	40—	0	45—	0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	...	17—	8	18—	8
ಎಳ್ಳಿಂಡಿ ಖಂಡಿ ೧ಕ್ಕೆ	...	23—	12	25—	0
ಕೊಬ್ರಿ ಎಣ್ಣೆ ಮಣ ೧ಕ್ಕೆ	...	3—	1	4—	2
ಎಳ್ಳೆಣ್ಣೆ ಮಣ ೧ಕ್ಕೆ	...	5—	0	6—	0
ಚಿಮಿಣಿಎಣ್ಣೆ ಪೆಟ್ಟಿಗೆ ೧ಕ್ಕೆ	...	6—	8	8—	
ಮೋರಿಸ ಸಕ್ಕರೆ ಮಣ ೧ಕ್ಕೆ	...	3—	11	3—	12
~~ಹೊಸ ಬೆಲ್ಲ~~	...	~~6—~~	~~4~~	~~9—~~	~~10~~
ಸಾಸಿವೆ ಮುಡಿ ೧ಕ್ಕೆ	...	4—	8	4—	12
ಕಾಳುಮೆಣಸು ಖಂಡಿ ೧ಕ್ಕೆ	...	130—	0	135—	0
ಮೆಂತ್ಯ ಮಣ ೧ಕ್ಕೆ	...	20—	0	24—	0
ಹೊಸ ಗೇರುಬೀಜ ಮುಡಿ ೧ಕ್ಕೆ	...	3—	5	3—	6
[illegible] ಖಂಡಿ ೧ಕ್ಕೆ	...	42—	0	44—	0
ತಾಂಬ್ರ ತಗಡು ಮಣ ೧ಕ್ಕೆ	...	10—	0	10—	2
ತಾಂಬ್ರ ಪಾತ್ರೆಗಳು ಮಣ ೧ಕ್ಕೆ	...	13—	0	14—	8
ಚೀನಬೆಳ್ಳಿ ಸೇರು ೧ಕ್ಕೆ	...	14—	12	15—	0
ಹಿತ್ತಾಳೆ ತಗಡು ಮಣ ೧ಕ್ಕೆ	...	9—	0	9—	8
ಪವನು ೧ಕ್ಕೆ	...	20—	2	21—	4
ಹುಣಿಸೆ ಹುಳಿ ಖಂಡಿ ೧ಕ್ಕೆ	...	25—	8	30—	0
ನೇಟಿವ್ ಕಾಫಿ ಖಂಡಿ ೧ಕ್ಕೆ	...	180—	0	205—	0
ಫಿಟೇರಿ ಕಾಫಿ ಖಂಡಿ ೧ಕ್ಕೆ	...	270—	0	275—	0
ಹಳೆ ಅಡಿಕೆ	...	110—	0	125—	0
ಹೊಸ ಅಡಿಕೆ	...	75—	0	100—	0

THE CANARA PUBLIC CONVEYANCE CO., LTD, MANGALORE

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯ ಕ್ಷೇತ್ರಗಳಿಗೆ ಹೋಗುವುವು. ಮೈಸೂರು, ಕೊಡಗು ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನ್ ಕೂಡಾ ಇರುವುದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ, ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಬಿಚ್ಛಿಸುವಿರಾದರೆ ಪ್ರತಿದಿನವೂ ನಾಲ್ಕು ಸಾರಿ ಕಾರಾವಳಿ ಮಾರ್ಗವಾಗಿಯೂ, 4 ಸಾರಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕೇವಲ ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲಪಿರಿ. ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 37, ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ, ಕಾರ್ಕಳ ಗೋಮಟೇಶ್ವರನ ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು 4 ಸಲ ಹೊರಟು ಎರಡೂವರೆ ತಾಸುಗಳ ಸಮಯದಲಿ ಕಾರ್ಕಳಕ್ಕೆ ತಲಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ, ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ತಲ್ಪಬಹುದು.

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಬೆಳಿಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ **ಶೃಂಗೇರಿಯನ್ನು** ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಪ್ರಾಚೀನ ಕಾಲದ ದೇವಸ್ಥಾನಗಳಿಂದ ಕೂಡಿದ **ಗೋಕರ್ಣಕ್ಕೆ** ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ದೇಲೂರಿನ ಸೋಮನಾಥ ದೇವಾಲಯವನ್ನು ನೋಡಲು, ನೋಡಬಿಚ್ಛಿಸುವವರು, ಬೆಳಿಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ, ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದೂಸ್ಥಾನ, ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣ ಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ, ಮಂಗಳೂರಿನಿಂದ ಮಡಿಕೇರಿಗೆ 7 ಘಂಟೆಗಳೊಳಗೂ, ಕಡೂರಿಗೆ 12 ಘಂಟೆಗಳೊಳಗೂ, ಮೈಸೂರಿಗೆ 12 ಗಂಟೆಗಳೊಳಗೂ, ಸಕಲೇಶಪುರಕ್ಕೆ 8 ಗಂಟೆಗಳೊಳಗೂ, ಹಾಸನಕ್ಕೆ 10 ಗಂಟೆಗಳೊಳಗೂ, ಚಿಕ್ಕಮಗಳೂರಿಗೆ 8 ಗಂಟೆಗಳೊಳಗೂ ಕೊಲ್ಲೂರಿಗೆ ಮತ್ತು ಗೋಕರ್ಣಕ್ಕೆ ೧॥ ದಿವಸದೊಳಗೂ ಶಿಮೊಗ್ಗಕ್ಕೆ 12 ಗಂಟೆ ತಲಪಬಹುದು. ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,

The Canara Public Conveyance Company Ltd, Mangalore

Chikmagalur Public Conveyance Motor Service.

CHIKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,

ಚಿಕ್ಕಮಗಳೂರು

ಮುಂಬಾಯಿಯಿಂದ - ಮಂಗಳೂರಿಗೆ

ಮಂಗಳೂರಿನಿಂದ - ಮುಂಬಾಯಿಗೆ

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ

ಮಂಗಳೂರು–ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು – ಅನುಕೂಲ ಪ್ರಯಾಣ ಸೌಕರ್ಯಗಳು.

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ

~~ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ~~

ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ.

ಚಿಕ್ಕಮಗಳೂರಿನಿಂದ – ಶಿವಮೊಗ್ಗಕ್ಕೆ, ಬೀರೂರಿಗೆ, ಕಡೂರಿಗೆ-
– ಮೂಡಗೆರೆಗೆ, ಸಕಲೇಶಪುರಕ್ಕೆ.
– ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
—ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ನಿರಾಯಾಸದ ಪ್ರಯಾಣ! **ಉತ್ಸಾಹಕರ ಸೌಕರ್ಯ!**

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

ಭೂಕಂಪಗಳು ಹೇಗುಂಟಾಗುತ್ತವೆ?

ಹಿಂದೂ ಶಾಸ್ತ್ರಜ್ಞರ ಅಭಿಪ್ರಾಯಗಳು!!

ಹಿಂದೂ ವಿಜ್ಞಾನ ಸಾಹಿತ್ಯವು ಭೂಕಂಪ ವಿಷಯವನ್ನು, ಪ್ರತ್ಯೇಕವಾಗಿ ಮಹತ್ವವನ್ನು ಕೊಟ್ಟು ವಿವರಿಸಿದೆ. ಪುರಾತನ ಭಾರತೀಯ ಸಿದ್ಧಾಂತಿಗಳೂ ಗಣಿತಜ್ಞರೂ ಭೂಕಂಪ–ಅದ್ಭುತಗಳ ವಿಷಯವಾಗಿ ಕೊಟ್ಟಿರುವ ವಿಷಯವನ್ನು ಸಂಕ್ಷೇಪತಃ ಇಲ್ಲಿ ಕೊಡಲಾಗಿದೆ ೬ನೇ ಶತಮಾನಕ್ಕಿಂತಲೂ ಹಿಂದೆ ಬರೆದಿಡಲ್ಪಟ್ಟ ಈ ವಿಷಯವು ಈಗ ವಿಶೇಷ ಮಹತ್ವ ಕೈಕೊಂಡಿದೆ. ಕ್ರಿಸ್ತಶಕ ೫೮೭ರಲ್ಲಿ ಕಾಲವಾದ ವರಾಹ ಮಿಹಿರನು ತನ್ನ ಬೃಹತ್ಸಂಹಿತೆಯನ್ನು ಸುಮಾರು ೫೭೦ರಲ್ಲಿ ಅಥವಾ ೫೮೦ರಲ್ಲಿ ಬರೆದಿಟ್ಟಿರಬಹುದು ಅವನ ನಂತರ ಜೀವಿಸಿಕೊಂಡಿದ್ದ ಭಟ್ಟೋತ್ಪಾಲನೂ ವರಾಹಮಿಹಿರ ಹಾಗೂ ಇತರ ಸಿದ್ಧಾಂತಿಗಳ ಸಾಹಿತ್ಯದ ಮೇಲೆ ಟೀಕೆ–ಟಿಪ್ಪಣಿಗಳನ್ನು ಬರೆದಿಟ್ಟಿರುವನು

ಬೃಹತ್ಸಂಹಿತೆಯ XXXIIನೇ ಅಧ್ಯಾಯದಲ್ಲಿ ವರಾಹ ಮಿಹಿರನು ಭೂಕಂಪ ವಿಚಾರವಾಗಿ ಬರೆದಿರುವನು ಅದು ಪ್ರತ್ಯೇಕವಾಗಿಯೇ ಬರೆಯಲ್ಪಟ್ಟಿದೆ

ಭೂಕಂಪದ ಕಾರಣಗಳು

ಭೂಕಂಪದ ಕಾರಣಗಳ ವಿಷಯವಾಗಿ, ಪುರಾಣೋಕ್ತ ಮನೀಷಿಗಳನ್ನುಳಿದು, ಶಾಸ್ತ್ರಜ್ಞರ ಈ ವಾದವಿದೆ –

೧. **ವಾಯುವಿನ ಉತ್ಪಾತ** –ಮೇಲಿನ ವಾಯುವು ಕೆಳಕೆಳದ (ಭೂಮಿಯ ಕೆಳಗಿನ) ವಾಯುವಿಗೆ ಘರ್ಷಣವಾಗುತ್ತಲೇ ಮಹಾ ಗರ್ಜನೆಯೊಂದಿಗೆ ಭೂಕಂಪವು ಸಂಭವಿಸುವುದು

"ಅನಿಲೋಽನಿಲೇನ ನಿಹತಃ ಕ್ಷಿತೌ ಪತನ್ನ ಸಸ್ವನಂ ಕರೋತ್ಯನ್ಯೇ"

[XXXII, 2]

ಈ ಮನೀಷೆಯು ವಸಿಷ್ಠನದು, ಅತನ ಮೂಲ ಶ್ಲೋಕಗಳು ಹೀಗಿವೆ –

ಯದಾ ತು ಬಲವಾನವಾಯುರಂತರಿಕ್ಷಾನಿಲಾಹತ
ಪತತ್ಯಾಶು ಸನಿರ್ಘಾತೋ ಭವೇದ್ಯಲಸಂಭವಃ
ತಸ್ಯ ಯೋಗಾಸ್ಸಿಪತತ್ಫಲತ್ವಾನ್ಯಾಹತಾಕ್ಷಿತಿಃ
ಸೋಽಭಿಘಾತಸವ ಕ್ಷ ಸ್ಯಾತ್ ಸನಿರ್ಘಾತ ಮಹೀಚಲಃ

—ಭಟ್ಟೋತ್ಪಾಲ, ಪು 442

೨ ಪರಾಶರನ ವಾದವು ಇದರ ಮತ್ತೊಂದು ವಿಧವೆನುವುದು ಗ್ರಹಗಳ ಕ್ರಮವಾದ ಗತಿಯಲ್ಲಿ ಏನಾದರೊಂದು ಆತಂಕ ಯಾ ಅಕ್ರಮವುಂಟಾದಾಗ, ಅವುಗಳ ಸಂಘರ್ಷಣೆಯೇ ಭೂಕಂಪಕ್ಕೆ ಕಾರಣವೆಂದು ಅತನ ಅಭಿಪ್ರಾಯ

"ಅರ್ಕ–ಚಂದ್ರ–ಗ್ರಹಣ–ಗ್ರಹ–ವಿಕೃತಚಾರಜಾಂಶ್ಚ ಕಂಪಾನಾಹು"

೩ ಮೇಲಿನವಲ್ಲದೆ, ಎಲ್ಲ ಸಿದ್ಧಾಂತ ಆಚಾರ್ಯರೂ ಭೂಕಂಪಗಳಲ್ಲೊಂದು ವಿಧವು ಪಾಂಚಭೌತಿಕ ಅಗ್ನಿಯಿಂದುಂಟಾಗುತ್ತವೆಯೆಂಬುದರಲ್ಲಿ ಏಕಾಭಿಪ್ರಾಯವನ್ನು ಪ್ರಕಟಿಸಿರುವರು

೪ ಮತ್ತೊಂದು ವಿಧವು ಅತಿವೃಷ್ಟಿಯ ಫಲವೆಂಬುದಾಗಿ ಸಿದ್ಧಾಂತಿಗಳ ಏಕಾಭಿಪ್ರಾಯ

೫ ಇನ್ನೊಂದು ವಿಧವು "ಅಂತರಿಕ" ಅಥವಾ ಪಾಂಚಭೌತಿಕ ಜಲದ ಫಲವೆನ್ನುವರು

ನಾಲ್ಕು ತರಗತಿಯ ಭೂಕಂಪಗಳು

ಭೂಕಂಪಗಳನ್ನು ಹಿಂದೂ ಸಿದ್ಧಾಂತಿಗಳು ಈ ವಿಧವಾಗಿ ನಾಲ್ಕು ತರಗತಿಗಳಾಗಿ ವಿಭಾಗಿಸಿರುವರು —

೧ **ವಾಯುವ್ಯ** ಇದು ಪರಾಶರನ ಮತದಂತೆ ಗ್ರಹಗಳ ಸಂಘರ್ಷಣೆಯಿಂದುಂಟಾಗುತ್ತದೆ; ಇತರರ ಮತದಂತೆ ಮೇಲಿನ ಮತ್ತು ಕೆಳಗಿನ ವಾಯುವಿನ ಘರ್ಷಣದಿಂದುಂಟಾಗುತ್ತದೆ ಇದು ಭೂಕಂಪಗಳಲ್ಲಿ ಮಹಾ ಭಯಂಕರ, ಮಹಾ ಅನಿಷ್ಟಕಾರ, ಹೆಚ್ಚು ಹೊತ್ತು ನಡೆಯುವಂಥದ್ದೂ ಆಗಿದೆ.

೨ **ಹೌತಾಶ** (ಅಥವಾ 'ಆಗ್ನೇಯ') ಈ ಕಂಪವು ಅಂತರಿಕ ಅಗ್ನಿಯಿಂದುಂಟಾಗುತ್ತದೆ ಇದಕ್ಕೆ ಎರಡನೆ ಸ್ಥಾನ ಸಲ್ಲುವುದು.

೩. ಮತ್ತು ೪ **ಐಂದ್ರ ಮತ್ತು ವರುಣವೆಂದು** ಇವುಗಳ ಹೆಸರು. ಇವು ಅತಿವೃಷ್ಟಿ ಮತ್ತು ನೆರೆಗಳಿಂದುಂಟಾಗುತ್ತವೆ ಕೊನೆಯದು 'ಶುಭ'ವೆಂದು ಹೇಳಿಸಿಕೊಳ್ಳಲ್ಪಡುವುದೂ ಇದೆ ಉಳಿದ ಮೂರು ವಿಧದವು 'ಅಶುಭ

ಮೊದಲನೆಯದು;—ವಾಯುವ್ಯ

'ವಾಯುವ್ಯ'ವು ಈ ಕೆಳಗಿನ ಏಳು ನಕ್ಷತ್ರಗಳಲ್ಲುಂಟಾಗುವುದು.—

'ಚಿತ್ರಾಯರ್ಯಮ್ಣಾಧ್ಯಾನ್ಯಾದಿತ್ಯಂ ಮೃಗಶಿರೋಶ್ವಯುಕ್ ಚೇತಿ
ಮಂಡಲಮೇತದ್ವಾಯುವಯ್ಯಮಸ್ಯ ರೂಪಾಣಿ ಸಪ್ತಾಹಾತ್।

[XXXII, ೮]

ಇದರ ಚಿಹ್ನೆಗಳು ಒಂದು ವಾರದ ಮೊದಲೇ ಗೋಚರಿಸುವುವು ಆಕಾಶವು ಮುಸುಕಾಗುವುದು, ಭೂಮಿಯಿಂದ ಧೂಳಿನ ಮೋಡಗಳೇಳುವುವು ಮತ್ತು ಮರಗಳನ್ನು ಮುರಿದೆಸೆವಂತಹ ಬಲವಾದ ಗಾಳಿಯು ಬೀಸುವುದು ಸೂರ್ಯನ ಕಿರಣಗಳು ಪ್ರಕಾಶಹೀನವಾಗುವುವು ['ರವಿರಪಟುಕರಾವಭಾಸೀ ಚ']

ಈ ವಿಧದ ಕಂಪವು ಬೆಳೆ, ಜಲ, ಅರಣ್ಯ ಮತ್ತು ತೋಟಗಳನ್ನು ನಾಶಮಾಡುವುದು ಅದು, ಬಾತುಕೊಳ್ಳುವಿಕೆ, ಶ್ವಾಸಶ್ವಾಸ ಜ್ವರ, ಉನ್ಮಾದ ಈ ರೋಗಗಳನ್ನೂ ಉಂಟುಮಾಡುವುದು ಆರ್ಥಿಕ ಸಂಕಷ್ಟಗಳನ್ನೂ ತಂದೊಡ್ಡುವುದು [ವಣಿಕ್ ಪೀಡಾಂವಣಿಜಾಂ ಕ್ರಮವಿಕ್ರಮ ಜೀವಿನಾಂಚ ವ್ಯಥಾ ಪೀಡಾಂ] ಲಲಿತ ಕಲೆಗಳೂ ಕೈಗಾರಿಕೆಗಳೂ ನಷ್ಟವಾಗುವುವು

ಅದು ಸಾಮಾನ್ಯವಾಗಿ ಈ ದೇಶಗಳಲ್ಲಿ ಸಂಭವಿಸುವುದು —ಕಾಥಿಯವಾಡ (ಸೌರಾಷ್ಟ್ರ), ಡಿಲ್ಲಿ (ಕುರು) ದಕ್ಷಿಣ ಬಿಹಾರ್ (ಮಗಧ) ಬುಂದೇಲಖಂಡ (ದಶಾರ್ಣ) ಆಗ್ರ ಮತ್ತು ಅದರ ನೆರೆಯಲ್ಲಿ (ಮತ್ಸ್ಯ)

ಈ ಅಶುಭಗಳ ಸೂಚಕವಾಗಿ ತಾರಾಪತನ ಪರಿವೇಶ (ಸೂರ್ಯನ ಸುತ್ತಲು ಮಂಡಲಗಳು ತೋರುವುದು) ಇತ್ಯಾದಿಗಳು ಗೋಚರವಾಗುವುವು ಈ ಚಿಹ್ನೆಗಳು ಅಂತಃರಾಷ್ಟ್ರೀಯ ಮತ್ತು ರಾಜಕೀಯ ತೊಡಕುಗಳನ್ನು ಸೂಚಿಸುವುವು

ಆ ಮಹಾ ಅನಿಷ್ಟಕಾರಿ ಭೂಕಂಪವು ೬ ತಿಂಗಳ ತನಕ ತನ್ನ ಪ್ರತಾಪ ತೋರಬಹುದು ವಾಯುವ್ಯ ವಿಧವು ೪ ಪಕ್ಷಗಳ ತನಕ ಇರಬಹುದು.

'**ವಾಯುವ್ಯ** ತರಗತಿಯ ಭೂಕಂಪವು ೨೦೦ ಯೋಜನ (೧೬೦೧) ಮೈಲಿ ತನಕ ತನ್ನ ಪ್ರತಾಪ ತೋರಿ ಹಾವಳಿ ಮಾಡುವುದು

ಜ್ವಾಲಾಮುಖಿಯ ತರಗತಿ

ಈ ವಿಧದ ಭೂಕಂಪಕ್ಕೆ ಈ ನಕ್ಷತ್ರಗಳು ಕಾರಣ —
ಪುಷ್ಯಾಗ್ನೇಯ ವಿಶಾಖಾಭರಣೀ ಪಿತ್ರ್ಯಜಭಾಗ್ಯಸಂಜ್ಞಾ।
ವರ್ಗೋರ್ಹ್ಯೇತಮುಜ್ಯೋಽಯಂ ಕರೋತಿ ರೂಪಾಣ್ಯಥೈತಾನಿ॥

(೩೨ ೧೨)

ಇದರ ಪೂರ್ವ ಚಿಹ್ನೆಗಳಾವುವೆಂದರೆ —ತಾರಾಪತನ, ದಿಗ್ದಾಹ, ಅಗ್ನಿಯುಂಟಾಗುವುದು ಮತ್ತು ಬಿರುಗಾಳಿ ಇದರ ದುಷ್ಫಲಗಳೆಂದರೆ –ಮೇಘವಿಹೀನತೆ, ಜಲವಾರುವಿಕೆ ಅಂತಃರಾಷ್ಟ್ರೀಯ ವೈಷಮ್ಯ, ಚರ್ಮವ್ಯಾಧಿಗಳು, ಅರಸಿನಮಂದಿಗೆ ಇತ್ಯಾದಿ.

ಇದು ಸಾಮಾನ್ಯವಾಗಿ ಭಾಗಲ್ಪುರ, ಮೊಂಘೀರ (ಅಂಗ), ಬೆಕ್ರಿಯಾ ಬದರಿನಾಥ ಜಿಲ್ಲೆ (ತಂಗಣ) ಒರಿಸ್ಸಾ (ಕಳಿಂಗ), ಬಂಗಾಳ (ವಂಗ), ತಮಿಳುನಾಡು (ದ್ರಾವಿಡ), ಒರಿಸ್ಸಾ ಎಜನ್ಸಿ (ಸವಾರ) ಮತ್ತು ಅಸ್ಸಾಂ (ಪಶ್ಚಿಮ ವನೌಕಸ) ಇಲ್ಲಿ ಸಂಭವಿಸಬಹುದು ಪರಾಶರನು ಈ ದೇಶಿಕ್ಷೇತ್ರಗಳಲ್ಲದೆ ಈ ಕೆಳಗಿನ ಹೆಸರುಗಳನ್ನು ಕೊಡುವನು –ಔಧ (ಇಕ್ಷ್ವಾಕು), ಕುಲ್ಲು (ಕುಲುಟ), ಪಮೀರ್ (ತುಖರ), ಬಲುಚಿಸ್ಥಾನ (ಶಿಬಿ) ಜಲಂಧರ ಕಾಂಗ್ರಾ (ತ್ರಿಗಾರ್ತ), ಉತ್ತರ ಬಿಹಾರ್ (ವಿದೇಹ) ಇತ್ಯಾದಿ

ಈ ಮೇಲಿನ ಭೂಕಂಪದ ಕ್ಷೇತ್ರವು ೧೧೨ ಯೋಜನ (೮೮೦ ಮೈಲುಗಳು)

ಗಾರ್ಗನ ಮತದಂತೆ, ಮಿಶ್ರತರಗತಿಗಳ ಭೂಕಂಪಗಳಿವೆ ಅವು ಆಯಾಯಾ ಸಮಯಗಳಲ್ಲಿ–ತಂತಮ್ಮ ಗುಣಾನುಸಾರ—ಸಂಭವಿಸುವುವು. ಕೆಲವು ನಡುರಾತ್ರಿ, ಕೆಲವು ಮಧ್ಯಾಹ್ನದಲ್ಲಿ ಜ್ವಾಲಾಮುಖಿ ತರಗತಿಯ ಭೂಕಂಪಗಳುಂಟಾಗುತ್ತವೆ ಹಗಲಿನ ಪೂರ್ವಭಾಗದಲ್ಲಿ ಅಥವಾ ರಾತ್ರಿಯ ಆರಂಭದಲ್ಲಿ "ವಾಯುವ್ಯ" ತರಗತಿಯ ಕಂಪವುಂಟಾಗುತ್ತದೆ ಮೂರನೆ ಜಾವದಲ್ಲಿ 'ಐಂದ್ರ'ವೂ ನಾಲ್ಕನೆಯ ಜಾವದಲ್ಲಿ 'ವರುಣ'ವೂ ಸಂಭವಿಸುವುವು ಆದರೆ, ಈ ಮನೀಷೆಯನ್ನು ಪರಾಶರನು ಒಪ್ಪುವುದಿಲ್ಲ

ಐತಿಹಾಸಿಕ ಪೂರ್ವದ ಭೂಕಂಪಗಳು

ಪರಾಶರನು ಹೇಳುವಂತೆ ಪೂರ್ವಕಾಲದಲ್ಲಿ ಭಯಂಕರವಾದ ಅನೇಕ ಭೂಕಂಪಗಳುಂಟಾಗಿ ಕೆಲವು ಕಡೆಗಳಲ್ಲಿ ಪರ್ವತಗಳುದಯಿಸಿವೆ ಕೆಲವು ಕಡೆಗಳಲ್ಲಿನ ಪರ್ವತಗಳು ಮಾಯವಾಗಿವೆ ಪುರಾಣಗಳಲ್ಲಿ "ಪರ್ವತಗಳು ಹಾರಿಹೋದುವೆಂದು ಹೇಳುವುದನ್ನು ಪರಾಶರನು ಭೂಕಂಪಗಳ ಕಾರಣ ಕೊಟ್ಟು ಸಮರ್ಥಿಸುತ್ತಾನೆ ಭೂಕಂಪ ಕ್ರಿಯೆಯಿಂದಾಗಿ ಪರ್ವತಗಳೆದ್ದುದು ಗೋಚರವಾಗಿದೆ

ಈ ವಿಷಯವು ವೈಜ್ಞಾನಿಕರ ವಿಶೇಷ ಶೋಧಗಳಿಗೆ ತಕ್ಕುದಿದೆ ವೈಜ್ಞಾನಿಕರು ಈ ಕಡೆ ಲಕ್ಷ್ಯ ಹರಿಸಲಿ

["ಮೊಡರ್ನ್ ರಿವ್ಯೂ" ಪತ್ರಿಕೆಯಲ್ಲಿ ಪ್ರಕಟವಾದ ಶ್ರೀ ಕೆ ಪಿ ಜಯಾಸ್ವಲರವರ ಲೇಖದ ಛಾಯಾನುವಾದ]

ಬಿಹಾರ್ ಭೂಕಂಪ ನಿಧಿ

ಸೇಟ್ ಜಮ್ನಾಲಾಲ್ ಬಜಜರು ಬಿಹಾರ್ ಕಡೆಗೆ ಪ್ರಯಾಣ ಬೆಳೆಸಿರುವರು ಸುಮಾರು ಒಂದು ತಿಂಗಳ ತನಕ ಅಲ್ಲಿ ಸಂಚರಿಸುವರೆಂದು ಗೊತ್ತಾಗಿದೆ ಗಾಂಧಿಜೀಯವರು ಬಿಹಾರಿಗೆ ಬರುತ್ತಲೇ ಅಲ್ಲಿ ಅವರ ಕಾರ್ಯಕ್ರಮವೇನೆಂದು ನಿಶ್ಚಯಿಸಲು ಪ್ರೊ। ಕೃಪಲಾನಿಯವರು ಬಾಬು ರಾಜೇಂದ್ರ ಪ್ರಸಾದರನ್ನು ಕಾಣಲು ಹೋಗಿರುವರು ಅಖಿಲ ಭಾರತ ಸಮಿತಿಯ ಸಭೆಯೊಂದು ಸಧ್ಯದಲ್ಲೇ, ಗಾಂಧಿಜೀಯವರ ಬಿಹಾರಿಗೆ ಮುಟ್ಟುತ್ತಲೇ ಜರಗಿ ನಿಧಿಯ ವಿನಿಯೋಗದ ಕುರಿತಾಗಿ ನಿಷ್ಕರ್ಷೆಯಾಗಲಿದೆ

ಬಿಹಾರ್ ನಿಧಿಗೆ ಅಹಮ್ಮದಾಬಾದಿನಲ್ಲಿ ಸಂಗ್ರಹವಾದ ಮೊಬಲಗು ರೂ ೨೫೦,೦೦೦ ಎಂದು ತಿಳಿದುಬರುತ್ತದೆ

ಮಾರ್ಚ ೩ರ ೫ರ ತನಕ ಸೆಂಟ್ರಲ್ ಬಿಹಾರ್ ನಿಧಿಗೆ ಸಂಗ್ರಹವಾದ ಜುಮ್ಲಾ ನಿಧಿ ರೂ ೧೮,೩೬,೮೮೭ ವೈಸರಾಯರ ನಿಧಿಯು ೨೧ ಲಕ್ಷಕ್ಕು ಮೀರಿದೆ

ಆದರೆ ಸುಮಾರು ೧೦ ಕೋಟಿ ರೂಪಾಯಿಗಳಾದರೂ ಬೇಕಾಗಿರುವಾಗ ಈ ನಿಧಿ ಎಷ್ಟಕ್ಕೂ ಸಾಲದು ಇಂಡಿಯ ಸರಕಾರವು ಹೆಚ್ಚು ಮೊಬಲಗನ್ನು ಕೊಡಲು ಶಕ್ತವಾಗಿಲ್ಲ ಸರಿಯಾದ ಪುನರ್ಘಟನಾ ಕಾರ್ಯವು ಇನ್ನೂ ಆರಂಭವಾಗಬೇಕಾಗಿದೆ ಈಗ ನಡೆಯುವುದೆಲ್ಲ ತಾತ್ಕಾಲಿಕ ಉಪಶಮನ

ಸ್ವಯಂಸೇವಕರು ಕುಸಿದುಬಿದ್ದ ಮನೆಗಳ ಮಣ್ಣಿನ ರಾಶಿಯನ್ನು ತೆಗೆವಾಗ ಸಿಕ್ಕಿದ ಆಭರಣಾದಿಗಳನ್ನು, ಮಾಲಿಕರನ್ನು ಕಂಡುಹಿಡಿದು ಕೊಡುತ್ತಿದ್ದಾರೆ

ನರಸರಾವ್ ಪೇಟೆಯಲ್ಲಿ ರೆವೆನ್ಯೂ ಡಿವಿಜನಲ್ ಆಫೀಸರರೇ ಮುಂದಾಳಾಗಿ ನಿಧಿಯೆತ್ತರ್ಪಡಿಸುವ ಪ್ರಯತ್ನದಲ್ಲಿರುವರು, ಪೊಲ್ಲಾಚಿಯಲ್ಲಿ ಯುವಕರು ಒಂದು ನಾಟಕವಾಡಿ ರೂ ೭೫೦ನ್ನು ಸಂಗ್ರಹಿಸಿರುವರು, ತೆನಾಲಿ ತಾಲೂಕು ಬೋರ್ಡಿನವರು ರೂಪಾಯಿ ೨೦೦ ಮಂಜೂರು ಮಾಡಿರುವರು ತಿರುಪತಿಯವರು ೧೫೦೦ ಕೊಟ್ಟಿರುವರು, ತಿರುಪನ್ನಮಲೆಯಲ್ಲಿ ಹಣಸಂಗ್ರಹವಾಗುತ್ತಾ ಇದೆ, ಗುಡಿಯಾಟಮ್ಮಿನ ನಗರಸಭೆಯವರು ರೂ ೧೦೦ ಮಂಜೂರು ಮಾಡಿರುವರು, ಪುರಜನರೂ ವಂತಿಗೆ ಎತ್ತುತ್ತಿರುವರು, ಕಣ್ಣಾನೂರಿನಲ್ಲೂ ವಿದ್ಯಾರ್ಥಿಗಳೂ ಮಹಿಳೆಯರೂ ಸಾಹುಕಾರರೂ ಪ್ರತ್ಯಪ್ರತ್ಯೇಕವಾಗಿ ನಿಧಿ ಸಂಗ್ರಹಿಸುತ್ತಿರುವರು, ಮಛಲೀಪಟ್ಟಣದಲ್ಲೂ ಎಷ್ಟೋ ಸಂಗ್ರಹವಾಗಿದೆ, ಅಲ್ಲಿ ಕೋಟೆ, ಕೊಯಮುತ್ತೂರು, ದಕ್ಷಿಣ ಕನ್ನಡ, ಸೇಲಂ ಮುಂತಾದ ಕಡೆಯವರೂ ಯಥಾಶಕ್ತಿ ಕೊಟ್ಟಿರುವರು, ಕೊಡುತ್ತಿರುವರು ಅಂತು ಮದರಾಸು ಪ್ರಾಂತ್ಯದವರೂ ಸಹಾಯಧನ ಕೊಡುವಲ್ಲಿ ಹಿಂದುಳಿದಿಲ್ಲ ಆದರೆ, ಅದಿನ್ನೂ ಸಾಲದಾಗಿದೆ. ಅಲ್ಲಿ ಕಳುಹುವ ಪ್ರತಿಯೊಂದು ಚಕ್ರಾಸೂ ನಮ್ಮ ಬಾಂಧವರ ಪ್ರಾಣದಾನಕ್ಕಾಗಿ ಸದ್ವಿನಿಯೋಗವಾಗುತ್ತದೆಂಬುದನ್ನು ತಿಳಿದು, ಕೊಡುವಲ್ಲಿ ಯಾರೂ ಸಂಕೋಚಿಸಲಾರರೆಂದು ನಂಬಲಾಗಿದೆ

FRESH CONSIGNMENT ARRIVED.

UNEQUAL QUALITY——————EXCEPTIONAL PRICE

A TIRE THAT SAVES YOU REPUTATION AND MONEY

The Canara Public Conveyance Co., Ltd.

MANGALORE.

ಮೂಲೆಮೂಲೆಯಿಂದ

ಬೆಂಗಳೂರು

ವಿಶ್ವವಿದ್ಯಾನಿಲಯ ಸಂಘದ ವಾರ್ಷಿಕೋತ್ಸವವು ತಾ ೧ನೇ ದಿನ ನೇತ್ರ ಚಿಕಿತ್ಸಾಲಯದ ಶ್ರೀ ಬಿ ಕೆ ನಾರಾಯಣರಾಯರ ಅಧ್ಯಕ್ಷತೆಯಲ್ಲಿ ನಡೆಯಿತು

ಸರಕಾರದ ಜನರಲ್ ಸೆಕ್ರೆಟರಿಗಳ ಸ್ಥಾನದಲ್ಲಿರುವ ಶ್ರೀ ಎಚ್. ವಿ ರಾಮಸ್ವಾಮಿಯವರಿಗೆ ಮಾರ್ಚ ೧ನೇ ತಾರೀಕಿನಿಂದ ೧ ತಿಂಗಳು ರಜೆ ದೊರೆತಿದೆ

ಸರಕಾರದ ಅಭಿವೃದ್ಧಿ ಶಾಖಾ ಕಾರ್ಯದರ್ಶಿಗಳಾಗಿದ್ದ ಮಿ। ಅಬ್ದುಲ್ ವಾಜೀದ್‌ರವರನ್ನು ಜನರಲ್ ಸೆಕ್ರೆಟರಿಗಳನ್ನಾಗಿ ನೇಮಿಸಲಾಗಿದೆ ಭದ್ರಾವತಿ ಕಾರ್ಖಾನೆಯಲ್ಲಿದ್ದ ಶ್ರೀ ಎಂ ವೆಂಕಟನಾರಣಪ್ಪನವರು ಅಭಿವೃದ್ಧಿ ಶಾಖಾ ಕಾರ್ಯದರ್ಶಿಗಳ ಕೆಲಸವನ್ನು ವಹಿಸಲಿರುವರು

ರಜೆಯ ಮೇಲಿರುವ ಅಸಿಸ್ಟಾಂಟ್ ಕಮಿಶನರ್ ರಾ ಕೆ ಶ್ರೀನಿವಾಸನ್‌ರವರನ್ನು ನಂಜನಗೂಡು ಸಬ್ ಡಿವಿಜನಿಗೂ ನಂಜನಗೂಡಿನ ಎಚ್ ನಂಜರಾಜ ಅರಸರನ್ನು ಮಧುಗಿರಿ ಸಬ್ ಡಿವಿಜನಿಗೂ ಮಧುಗಿರಿಯಲಿರುವ ಶ್ರೀ ಬಿ. ಎಸ್ ರಾಘವೇಂದ್ರರಾಯರನ್ನು ಸಿಟಿ ಮೆಜಿಸ್ಟ್ರೇಟರಾಗಿ ಮೈಸೂರಿಗೂ ವರ್ಗಮಾಡುವ ವ್ಯವಸ್ಥೆಯಾಗಿದೆ

೭ ತಾ ೫ನೇ ತಾರೀಕಿನಿಂದ ಚಿಂತಾಮಣಿ ಕನ್ಯಾಪಹಾರ ಮೊಕದ್ದಮೆಯಲ್ಲಿ ಶಿಕ್ಷಿಸಲ್ಪಟ್ಟ ಅಪರಾಧಿಗಳ ಅಪೀಲ್ ತನಿಖೆಯು ನಡೆಯುತ್ತಿದ್ದು ಮಿ। ನ್ಯೂಜೆಂಟ್ ಗ್ರೇಂಟರ ಅಪರಾಧಿಗಳ ಕಡೆಯಿಂದ ಸಲಹೆ ಕೊಡುವರೆಂದು ತಿಳಿದು ಬಂದಿದೆ

ಬೆಂಗಳೂರಿನಲ್ಲಿ ಹೊಸತಾಗಿ ರಚಿಸಲ್ಪಟ್ಟ ನಗರ ಭವನವನ್ನು ಸರ್ ಎಂ ವಿಶ್ವೇಶ್ವರಯ್ಯರವರು ತಾ ೧ನೇ ದಿನ ನೋಡಿ ಹೋದರು

ಸೆಂಟ್ರಲ್ ಕೊಲೆಜಿನ ಮುಖ್ಯೋಪಾಧ್ಯಾಯರಾದ ಶ್ರೀ ಎಫ್ ಆರ್ ಸೆಲ್‌ರವರು ಉದ್ಯೋಗದಿಂದ ನಿವೃತ್ತರಾಗಿ ಅವರ ಬದಲಿಗೆ ರಾವ್ ಬಹದ್ದೂರ್ ಬಿ ವೆಂಕಟೇಶಾಚಾಯರು ನೇಮಿಸಲ್ಪಟ್ಟಿರುವರು

ಮೈಸೂರು

ಚಾಮರಾಜ ನಗರದಿಂದ ಮರಹಳ್ಳಿ ಎಳಂದೂರ ಮಾಂಬಳ್ಳಿ ಅಗರ ಮಾರ್ಗವಾಗಿ ಕೊಳ್ಳೇಗಾಲಕ್ಕೆ ೧೯ ಮೈಲುಗಳ ವರೆಗೆ ರೈಲು ಮಾರ್ಗವನ್ನು ಹಾಕುವ ಯೋಜನೆಯಾಗಿದೆಯೆಂದು ತಿಳಿದು ಬರುತ್ತದೆ

ಮೈಸೂರಿನ ಪ್ರಸಿದ್ಧ ವಕೀಲರೂ ವಿಶ್ವವಿದ್ಯಾಲಯ ಸೆನೆಟ್ ಸದಸ್ಯರೂ ಆಗಿದ್ದ ಶ್ರೀ ಕೆ ಕೃಷ್ಣಸ್ವಾಮಿ ರಾಯರು ಕಳೆದ ವಾರ ಪ್ಲೇಗು ವ್ಯಾಧಿಗೆ ತುತ್ತಾದರೆಂದು ತಿಳಿಸಲು ತುಂಬಾ ವಿಷಾದವೆನಿಸುತ್ತದೆ

ಲೋವರ್ ಸೆಕೆಂಡರಿ ಪರೀಕ್ಷೆಗಾಗಿ ಶ್ರೀರಂಗಪಟ್ಟಣಕ್ಕೆ ಬರುವ ವಿದ್ಯಾರ್ಥಿಗಳಿಗೆಲ್ಲ ಚಂದಗಲ್ ಸಾಹುಕಾರ್ ಶ್ರೀ ಬಿ ಮರಿಗೌಡರು ಊಟವಸತಿಗಳಿಗಾಗಿ ವ್ಯವಸ್ಥೆ ಮಾಡಿರುತ್ತಾರೆಂದು ತಿಳಿಯುತ್ತೇವೆ

ವಿಶ್ವವಿದ್ಯಾನಿಲಯ ಸಂಘದ ವಾರ್ಷಿಕೋತ್ಸವವು ತಾ ೧ರಲ್ಲಿ ಮಹಾರಾಜಾ ಕಾಲೇಜಿನ ಸಭಾಂಗಣದಲ್ಲಿ ಶ್ರೀ ಡಿ ವಿ ಗುಂಡಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು.

ಮೈಸೂರು ಎನುಮುಯ್ಯನವರ ವಿದ್ಯಾಶಾಲೆಯ ಉಪಾಧ್ಯಾಯರಾದ ಶ್ರೀ ಎ ರಂಗಸ್ವಾಮಿ ಅಯ್ಯಂಗಾರ್ಯರು ಅಸ್ವಸ್ಥದಿಂದಾಗಿ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತಿದ್ದು, ಅವರಲ್ಲಿ ರಕ್ತಪಟುತ್ವವನ್ನು ಹೆಚ್ಚಿಸುವುದಕ್ಕಾಗಿ ಅವರ ವಿದ್ಯಾರ್ಥಿ ಶ್ರೀ ನಂಜೇಗೌಡರು ತನ್ನ ದೇಹದಿಂದ ೧೧ ಔನ್ಸ್ ರಕ್ತವನ್ನು ಕೊಟ್ಟರು

ಮೈಸೂರಿನ ಪ್ರಸಿದ್ಧ ವಕೀಲರಾದ ಶ್ರೀ ಕೆ ಕೃಷ್ಣಸ್ವಾಮಿರಾಯರು ಪ್ಲೇಗುವ್ಯಾಧಿಯಿಂದ ಕಳೆದ ವಾರ ಮೃತರಾದರು

ಮೈಸೂರು ಸಂಸ್ಥಾನದಲ್ಲಿ ತಾ ೨೨-೨-೧೯೩೪ನೇ ತಾರೀಕಿಗೆ ಅಂತ್ಯವಾದ ಒಂದು ವಾರದಲ್ಲಿ ೧೩೪ ಮಂದಿಗೆ ಪ್ಲೇಗು ತಗಲಿ ೧೦೩ ಮಂದಿಗಳು ಮೃತರಾದರೆಂದು ಗೊತ್ತಾಗಿದೆ ಅದರ ಹಿಂದಣ ವಾರ ೫೨ ಜನರ ಮೃತರಾಗಿರುವರು

ಶಿವಮೊಗ್ಗ

ಶಿವಮೊಗ್ಗ ತಾಲೂಕಿನ ಅಮಲ್ದಾರರಾಗಿದ್ದ ಶ್ರೀ ಬಿ ಕೆ ಸುಬ್ಬರಾಯರು ತನ್ನ ಕೆಲಸದಿಂದ ನಿವೃತ್ತರಾದ ಕಾರಣ ಶ್ರೀ ಬಿ ವೀರಪ್ಪನವರನ್ನು ಆ ಸ್ಥಾನಕ್ಕೆ ನೇಮಿಸಿದ್ದಾರೆ

ಚಿಕ್ಕಮಗಳೂರಿಗೆ ರೈಲು ಹಾಕುವ ಸಂಬಂಧವಾದ ಸಮಿತಿಗಾಗಿ ರೂ ೫೫೦ ವೆಚ್ಚವಾದುದನ್ನು ಜಿಲ್ಲಾ ಬೋರ್ಡಿನ ಮೂವರು ಸದಸ್ಯರಾದ ಶ್ರೀ ಹೊಸಕೊಪ್ಪ ಕೃಷ್ಣರಾವ್, ಶ್ರೀ ಬಾಗೆಮನೆ ದೇವೇಗೌಡ, ಶ್ರೀ ಸಿ ವಾಸುದೇವರಾವ್ ಇವರು ಕೊಡಬೇಕೆಂದೂ, ಆ ಹಣವು ದುರ್ವಿನಿಯೋಗವಾಗಿದೆಯೆಂದೂ ಸರಕಾರದವರ ಅಜ್ಞೆ.

ಜೋಗದ ಜಲಪಾತದಿಂದ ೧೮ ಮೈಲಿಗಳ ಮೇಲೆ ಬ್ರಿಟಿಷ ಮತ್ತು ಮೈಸೂರು ಸರಕಾರಗಳ ಗಡಿನಾಕಿನ ಮೇಲೆ ಇದ್ದ ಗೇರಸಪ್ಪಾ ಹಳ್ಳಿಯಲ್ಲಿ ಬೆಂಕಿ ಹತ್ತಿ ಭಯಂಕರ ಹಾನಿಯುಂಟಾಗಿದೆ

ಧಾರವಾಡ

ಇಲ್ಲಿಯ ಮುಸಲ್ಮಾನ ಸಮಾಜದ ತರುಣ ವಕೀಲರಾದ ಮಿ। ಎಮ್ ಎಚ್ ಕಾಜೀರವರು ಫಂಢರಪುರದ ಸಬ್ ಜಡ್ಜರಾಗಿ ನೇಮಿಸಲ್ಪಟ್ಟಿರುವರು

ನಗರ ಸಭೆಯ ಬೈಲಿನಲ್ಲಿ ಮುನಿಸಿಪಾಲಿಟಿಯ ಮೇಲ್ವಿಚಾರಣೆಯಲ್ಲಿ ವಿವಿಧ ಪಂದ್ಯಾಟಗಳು ನಡೆದುವು

ಕಳೆದ ವಾರ ಧಾರವಾಡದ ನಗರಸಭೆಯ ಅಧ್ಯಕ್ಷರ ಚುನಾವಣೆ ನಡೆದು, ಶ್ರೀ ಕರವೀರಪ್ಪಾ ಕುಲಕರ್ಣಿಯವರು ಆರಿಸಲ್ಪಟ್ಟಿರುವರು

ಹಂಸಭಾವಿಯ ಇಂಗ್ಲಿಷ್ ಅಧ್ಯಾಪಕರಾಗಿದ್ದ ಶ್ರೀ ಕೆ ಎಫ್ ಪಾಟೀಲ ಬಿ ಎ ರವರು ಕಾರ್ಯನಿಮಿತ್ತವಾಗಿ ಬ್ಯಾಡಗಿಗೆ ಹೋಗಿದ್ದಾಗ, ಅಲ್ಲಿ ಒಂದು ವರ್ಷ ಹಿಂದಿನ ವಾರಾಂಟ್ ಒಂದರ ಮೇರೆಗೆ ದಸ್ತಗಿರಿಗೊಳಗಾದರು

ನಿಮ್ನ ತರಗತಿಯವರ ಬಗ್ಗಾಗಿರುವ ಬೋರ್ಡಿಂಗಿನ ಸುಪರಿಂಟೆಂಡೆಂಟರಾದ ಶ್ರೀ ವರಾಳೆಯವರೂ ಸಮಗಾರ ಸಂಘದ ಕಾರ್ಯದರ್ಶಿಗಳಾದ ಶ್ರೀ ಹೊಂಗಲರವರೂ ಮತ್ತಿತರ ಕೆಲವರೂ ಮಹಾತ್ಮರಿಗೆ ಮಾನಪತ್ರ ನಿಧಿ ಮೊದಲಾದುವನ್ನು ಕೊಡಬಾರದೆಂದ ಪ್ರಯತ್ನನಡೆಸಿರುವರೆಂದು ವಾರ್ತೆ

ಮಾಳಾಪುರದ ಬಾವಿಯೊಂದರಲ್ಲಿ ಕಾಣಸಿಕ್ಕಿದ ಒಂದು ಸ್ತ್ರೀಶವದ ಸಂಬಂಧವಾಗಿ ಸಿಟಿ ಸಬ್ ಇನ್ಸಪೆಕ್ಟರರು ೨೪-೨೫ ವರ್ಷ ಪ್ರಾಯದ ರಜಪೂತನೊಬ್ಬನನ್ನು ಸೆರೆ ಹಿಡಿದಿರುವರು ಇವನ ಹಿತ್ತಲಲ್ಲಿ ಅವಳ ನಗನಾಣ್ಯಗಳು ಕಾಣಸಿಕ್ಕಿವೆ

ತುಮಕೂರು

ತುಮಕೂರು ಪೌರ ಸಭೆಯು ನಡೆದು ೨೫೦ ರೂಗಳನ್ನು ಬಿಹಾರಿಗೆ ರವಾನಿಸಬೇಕೆಂದು ನಿರ್ಧಾರವಾಗಿ ಆ ಮೊಬಲಗನ್ನು ವೈಸರಾಯ ಫಂಡಿಗೋ ಅಥವಾ ರಾಜೇಂದ್ರ ಪ್ರಸಾದರ ಫಂಡಿಗೋ ಎಂಬ ವಿಚಾರವಾಗಿ ಚರ್ಚೆಯೆದ್ದು ಕೊನೆಗೆ ಎರಡನೆಯ ವರಿಗೆ ರವಾನಿಸಬೇಕೆಂದು ತೀರ್ಮಾನಿಸಿಕೊಂಡರು

ಕೊಡಗು

ಇಂಡಿಯನ್ ರೆಡ್‌ಕ್ರಾಸ್ ಸಂಘದ ಕೊಡಗ ಶಾಖೆಯ ಮಡಿಕೇರಿ ಸೆಂಟರಿನ ಶಿಶು ಪ್ರದರ್ಶನವು ತಾ ೧೦-೩-೩೪ರಿಂದ ೧೧-೩-೩೪ರ ತನಕ ನಡೆಯುವುದು

ವೀರರಾಜಪೇಟೆಯ ಬಂಗಾಳ ಬೀದಿಯಲ್ಲಿ ಮುಸ್ಲಿಗರ್ಲ್ಸ ಸ್ಕೂಲಿನ ಅಸ್ತಿಭಾರದ ಕಲ್ಲನ್ನು ತಾ ೨೧ರಲ್ಲಿ ಕೊಡಗು ಕಮಿಶನರರು ಇರಿಸಿದರು

ಕೊಡಗು ಎತ್ಲೆಟಿಕ್ ಎಸೋಶಿಯೇಶನ್ನಿನ ಆಶ್ರಯದಲ್ಲಿ ಮಡಿಕೇರಿಯಲ್ಲಿ ನಡೆಯುವ ಟೆನ್ನಿಸ್ ಮತ್ತು ಕ್ರಿಕೆಟ್ ಪಂದ್ಯಾಟಗಳು ಎಪ್ರಿಲ್ ತಿಂಗಳ ಮೊದಲನೇ ವಾರದಲ್ಲಿ ನಡೆಯುವುವು

ಬೆಳಗಾಂವಿ

ಇಲ್ಲಿಯ ಮುನಿಸಿಪಾಲಿಟಿಯವರು ಮಹಾತ್ಮಾಗಾಂಧಿಯವರಿಗೆ ಮರಾಠಿಯಲ್ಲಿ ಮಾನಪತ್ರವನ್ನು ಕೊಡದೆ ಪ್ರಾಂತಿಕ ಭಾಷೆಯಾದ ಕನ್ನಡದಲ್ಲಿಯೇ ಕೊಟ್ಟು ಮಹಾತ್ಮರನ್ನು ಈ ರೀತಿಯಿಂದ ಸಂತೋಷಪಡಿಸಬೇಕೆಂದು ನಿರ್ಧರಿಸಿರುವರು

ಬೆಳಗಾಂವಿ ಸೆರೆಯಲ್ಲಿರುವ ಶ್ರೀ ದಿವಾಕರ ರಂಗರಾಯರ ದೇಹಪ್ರಕೃತಿಯು ಕಳೆದ ತಿಂಗಳಿಗಿಂತಲೂ ಹೆಚ್ಚಾಗಿ ಚಿಂತಾಜನಕವಾಗಿರುತ್ತದೆಂದು ತಿಳಿದುಬಂದಿದೆ ತೂಕವು ೧೦೯ ಪೌಂಡುಗಳಿಗಿಳಿದಿದೆ

ಧಾರವಾಡ

ವಿಜಯ ನಗರ ಸ್ಮಾರಕೋತ್ಸವ ಮಂಡಲದವರು ವಿಜಯನಗರ ಸಾಮ್ರಾಜ್ಯ ವೈಭವದ ಬಗ್ಗೆ ಗ್ರಂಥ ಬರೆಯುವವರಿಗೆ ೩೦೦ ರೂಪಾಯಿಗಳನ್ನೂ ವಿಜಯನಗರದ ಕೃತಿಯನ್ನು ಬರೆಯುವವರಿಗೆ ೫೦ ರೂಪಾಯಿಗಳನ್ನೂ ಪಾರಿತೋಷಕ ಕೊಡಬೇಕೆಂದು ನಿಶ್ಚೈಸಿರುವರೆಂದು ತಿಳಿಯಲಾಗುತ್ತದೆ

ಮಡಿಕೇರಿ

ಟೆರಿಟೋರಿಯಲ್ ರೆಜಿಮೆಂಟಿನ ಮೊದಲನೇ ತರಬೇತು ಇದೇ ತಾ ೧ರಿಂದ ಪ್ರಾರಂಭವಾಗುವುದು

ಇಲ್ಲಿ ಕಾಳಿಗೆ ಖಂಡಿಯೊಂದಕ್ಕೆ ರೂ. ೧೯೦ ಇದೆಯಾಗಿ ತಿಳಿದುಬಂದಿದೆ

ಕಳೆದ ವಾರ ಹೊಸದಾಗಿ ಒಂದು ಪ್ಲೇಗು ಮರಣವು ಮಡಿಕೇರಿಯಲ್ಲಿ ನಡೆಯಿತು

ವಂದೇ ಮಾತರಂ

ಮನುಷ್ಯ ಜೀವನದ ಜವಾಬ್ದಾರಿ

೫೦೦ ರೂಪಾಯಿಗಳು

ಉತ್ತಮ ಕುಟುಂಬಾಧಾರ! ಸುಲಭ ಮಾರ್ಗ!

ಸ್ವರಾಜ್ಯ ಕಂಪೆನಿಯು ಇಂಡಿಯಾ ಕಂಪೆನಿಗಳ ಕಾನೂನು ಪ್ರಕಾರ ಮುಂಬಯಿ ಗವರ್ನಮೆಂಟಿನಲ್ಲಿ ರಜಿಸ್ಟರ್ ಮಾಡಲ್ಪಟ್ಟಿತ್ತು

ಜನಾನುರಾಗಿಗಳೂ, ಸುಪ್ರಸಿದ್ಧರೂ ಪರಿಪಕ್ವವಾದ ಬುದ್ಧಿಯುಳ್ಳವರೂ ಮತ್ತು ಸಮರ್ಥರಾದ ಡೈರೆಕ್ಟರುಗಳುಳ್ಳ

ಉತ್ತಮವಾದ ಸಂಸ್ಥೆ,

ಇದರಲ್ಲಿ

ಹೆಂಡತಿ ಮಕ್ಕಳಾದಿಯಾಗಿ ತನ್ನನ್ನೇ ಆಶ್ರಯಿಸಿರುವ ಪ್ರತಿಯೊಬ್ಬರಿಗೂ ಆಶ್ರಯವನ್ನು ಕೊಡಿಸುವುದು ಮೊದಲನೇ ಕಾರ್ಯವಲ್ಲವೇ?

ಹೌದು !!

ಅಂದ ಮೇಲೆ ದಿ ಸ್ವರಾಜ್ಯ ಬ್ಯಾಂಕಿಂಗ್ ಮತ್ತು ಇನ್ಶ್ಯೂರೆನ್ಸ್ ಕಂಪನಿ ಲಿಮಿಟೆಡ್ ಧಾರವಾಡ ಇವರು ವಿಶೇಷವಾಗಿ ಮಾಡಿರುವ ಮದುವೆ ಜನನ ಮತ್ತು ಮರಣ ಎನ್ನುವ ಮೂರು ತರದ ವಿಮಾ ಶಾಖೆಗಳಲ್ಲಿ ಜಾತಿ ಮತ ಭೇದವಿಲ್ಲದೆ ಗಂಡಸರು ಮತ್ತು ಹೆಂಗಸರು ಎಂಬ ವ್ಯತ್ಯಾಸವಿಲ್ಲದೆ 18ರಿಂದ ೨೨ ವಯಸ್ಸಿನೊಳಗಿರುವ ಪ್ರತಿಯೊಬ್ಬರೂ ವಿಮೆಯನ್ನು ಇಳಿಸಿ ೫೦೦ ರೂಪಾಯಿನ ವರೆಗೂ ಪ್ರತಿಫಲ ಹೊಂದಲು ಮುಂದುವರಿಯಬೇಕಾದುದು ಕರ್ತವ್ಯ.

ಪ್ರವೇಶ ಫೀಸ ೨-0-0 ವಾರ್ಷಿಕ ಚಂದಾ 1-0-0

ವಾರ್ಷಿಕ ರಿನ್ಯೂ 1-0-0

ಮೆನೇಜಿಂಗ್ ಏಜಂಟ್ಸ್,

ದಿ ಸ್ವರಾಜ್ಯ ಬ್ಯಾಂಕಿಂಗ್ ಮತ್ತು ಇನ್ಶ್ಯೂರೆನ್ಸ್ ಕಂಪನಿ

ಲಿಮಿಟೆಡ್ ಧಾರವಾಡ

WE HOLD IN STOCK OF

English into Kanarese Teacher

Hindi into Kanarese Teacher

Marathi to Kanarese Teacher

Marathi into Gujarati Teacher

Novels and well known Dramas in Hindi and all sorts of books for Schools and Colleges

Wanted Agents and Canvassers throughout Karnatak Districts

Apply for full particulars with 1½ Annas Stamp

THE MANAGER

The National Kanara News Agency

SIR PHIROJSHA METHA ROAD

Fort Bombay

ಬಳ್ಳಾರಿ

ಮಹಾತ್ಮಾ ಗಾಂಧಿಯವರು ಮಾರ್ಚ ತಾ ೩ರಲ್ಲಿ ಬಳ್ಳಾರಿಗೆ ತಲಪಿದರು ಅವರನ್ನು ಮುನಿಸಿಪಲ್ ಚೆಯರ್ಮೆನರಾದ ಶ್ರೀ ಸಿ ಬಾಳಾಜಿರಾವ್ ಮೊದಲಾದವರು ಸ್ವಾಗತೀಕರಿಸಿದರು ರವಾರಿಯ ಹರಿಜನ ಸಂಘದವರ ಮತ್ತು ಬಳ್ಳಾರಿ ಡಿಸ್ಟ್ರಿಕ್ಟ್ ಬೋರ್ಡಿನವರ ನಿಧಿ ಮಾನಪತ್ರಗಳು ಅರ್ಪಿತವಾದುವು

ಬಳ್ಳಾರಿಯ ಕರ್ನಾಟಕ ಸಪ್ತಾಹಕ್ಕೆ ಇಲ್ಲಿಂದ ಕವಿಭೂಷಣ ಕೃಷ್ಣಶರ್ಮರೂ ಶ್ರೀ ಮುದವೀಡು ಕೃಷ್ಣರಾಯರೂ ವ್ಯಾಖ್ಯಾನಗಾರರಾಗಿ ಹೋಗಿದ್ದರೆಂದು ತಿಳಿದುಬಂದಿದೆ

ಶಿರ್ಶಿ

ಮಹಾತ್ಮಾ ಗಾಂಧಿಯವರು ತಾ ೨ರಲ್ಲಿ ಕುಮಟದಿಂದ ಪರಿವಾರ ಸಮೇತವಾಗಿ ಶಿರ್ಶಿಗೆ ಹೊರಟರು ಅಲ್ಲಿ ನಾಲ್ಕೈದು ಸಾವಿರ ಜನರ ಮಹಾಸಭೆಯಲ್ಲಿ ಭಾಷಣ ಮಾಡಿದರು. ಶಿರ್ಶಿ ನಗರ ಸಭೆಯವರು ಅವರಿಗೆ ನಿಧಿಯನ್ನರ್ಪಿಸಿದರು ಮಹಾತ್ಮಾ ಗಾಂಧಿಯವರು ಕ್ರಮಪ್ರಕಾರ ಭಾಷಣವಿತ್ತು, ಅಲ್ಲಿಯ ಮಾರಿಯಮ್ಮನ ದೇವಸ್ಥಾನವನ್ನು ಹರಿಜನರಿಗಾಗಿ ತೆರೆದುದು ಅತ್ಯಂತ ಸಂತೋಷದಾಯಕ ವಿಷಯವೆಂದೂ, ಆ ದೇವಾಲಯದಲ್ಲಿ ಮುಂದಕ್ಕೆ ಪ್ರಾಣಿಬಲಿಯ ಪದ್ಧತಿಯನ್ನು ಸಂಪೂರ್ಣ ತ್ಯಾಜ್ಯ ಮಾಡಬೇಕೆಂದೂ ಉಪದೇಶಿಸಿದರು ಸಿದ್ಧಾಪುರ, ಹಾವೇರಿಗಳ ಮಾರ್ಗವಾಗಿ ಮಹಾತ್ಮರು ಮುಂದರಿದರು. ಸುಮಾರು ೨೦೦೦ ರೂಪಾಯಿಗಳು ಹರಿಜನ ನಿಧಿಗೂ, ರೂ ೨೦೩ ಬಿಹಾರ್ ನಿಧಿಗೂ ದೊರೆತುವು.

NOTES
ನೋಟಗಳು

ಕಾರವಾರು ಬಂದರಿನಿಂದ ಗಾಂಧೀಜಿಯವರು ಕೆಲ ಮೈಲುಗಳ ತನಕ ನಡೆಯಬೇಕಾಯಿತೆಂದು ವಾರ್ತೆ. ಅವರ ಸಂಚಾರವೂ ನಡೆದುಹೋಗಬೇಕಾಯಿತು. ಮಡಿಕೇರಿಯಿಂದ ಕುಂದಾಪುರದ ತನಕ ಪ್ರಯಾಣ ಸೌಕರ್ಯವೇರ್ಪಡಿಸಿಕೊಟ್ಟ ಮಂಗಳೂರಿಗೂ ಕಾಲ್ನಡಿಗೆಯ 'ಸೌಕರ್ಯ' ವೇರ್ಪಡಿಸಿಕೊಟ್ಟ ಕಾರವಾರಿಗೂ ಅಂತರವೆಷ್ಟು?

* * *

ಸುಮಾರು ಐದು ಸಾವಿರ ರೂಪಾಯಿಗಳು ಕೂಡಿಕೆಯಾಗಬಹುದೆಂದು ನಿರೀಕ್ಷೆಯಿದ್ದ ನಮ್ಮ ಜಿಲ್ಲೆಯಲ್ಲಿ ಮಹಾತ್ಮಾಜಿಯವರಿಗೆ ದುಬಾರಿ ಸಿಕ್ಕಿತು;—ಒಂದಕ್ಕೆ ಎರಡು. ಇನ್ನು ಮಹಾತ್ಮಾಜಿಯವರು ಕೇಳುತ್ತಿರುವುದು 'ಹೃದಯ ಪರಿವರ್ತನೆ'. ಇದೂ ಎರಡಾಗವಷ್ಟೆ?

* * * *

ಶಾಲಾ–ಕಾಲೇಜುಗಳಿಗೆ ಪರೀಕ್ಷಾಕಾಲವು ಸಮೀಪಿಸಿರುವಾಗ ವಿದ್ಯಾರ್ಥಿಗಳು ಇಂಗ್ಲಾಂಡಿನ, ಎಮ್. ಸಿ. ಸಿ. ತಂಗಡದವರ 'ಸ್ಕೋರು' ಎಷ್ಟೆಂದು ವೃತ್ತ ಪತ್ರಿಕೆಗಳಲ್ಲಿ ನೋಡುತ್ತ ಕುಳಿತಿರುವರು. ಎಮ್. ಸಿ. ಯವರು ತಮಗೆ ಸಿಕ್ಕಿದ 'ಸ್ಕೋರಿ'ನ ಸಂಖ್ಯೆಯನ್ನು ವಿದ್ಯಾರ್ಥಿಗಳ ಪೇಪರುಗಳಿಗೆ ಹಚ್ಚಿ ಹೋಗುವರೆಂಬ ಭರವಸೆ.

* * * *

ಬರ್ಮದೇಶದಿಂದ ಇಂಡಿಯಕ್ಕೆ ಬರುತ್ತಿರುವ ಅಕ್ಕಿಯ ಆಮದನ್ನು ತಡೆಯಬೇಕೆಂದು ಎಸೆಂಬ್ಲಿಯಲ್ಲಿಯೂ ಮ॥ ಕೌನ್ಸಿಲಿನಲ್ಲಿಯೂ ಕೌನ್ಸಿಲರರ ಮಾತುಗತೆಗಳಾಗುತಿದ್ದಂತೆ, ೩೦ ಸಾವಿರ ಗೋಣಿ ಅಕ್ಕಿ ಬಂದು ಮದರಾಸು ಬಂದರದಲ್ಲಿ ಇಳಿಯಿತು. ಕೌನ್ಸಿಲಿಗೆ ಹೊಂದಿಕೊಂಡು ಒಂದು 'ಅಗಸಾಲೆ' ಕಟ್ಟಿಸಬೇಕೆಂದು ನಮ್ಮ ಸೂಚನೆ.

* * * *

ಯಾವ ವಾರ್ತೆಯಿಂದಲೂ "ಅಲ್ಲೋಲ ಕಲ್ಲೋಲ" ವಾಗದವರೆಂದರೆ ಜೂಜಿಭಕ್ತರು. ಅವರಿಗಾಗಿಯೇ ಒಂದು ವಾರ್ತೆಯುಂಟಾಯಿತು,—'ಬೆಂಕಿಪೆಟ್ಟಿಗೆಗಳ ಮೇಲಿನ ಸುಂಕವನ್ನು ಹೆಚ್ಚಿಸುವರೆಂ'ದು. ಆದರೆ, ಒಂದು ಸಮಾಧಾನ,—೧೪೪ ಬೆಂಕಿ ಪೆಟ್ಟಿಗೆಗಳ ಮೇಲೆ ಕೇವಲ ಎರಡೂಕಾಲು ರೂಪಾಯಿಯೆಂದು! ಕಡ್ಡಿಗೊಂದು ಪೈಯಷ್ಟು ಆಗಲಿಲ್ಲವಲ್ಲ!

* * * *

ಬೆಂಕಿ ಪೆಟ್ಟಿಗೆಗಳ ಮೇಲಿನ ಸುಂಕದ ಉತ್ಪನ್ನದಿಂದ ಕೃಶವಾದ ಬಂಗಾಳಕ್ಕೆ ಸಹಾಯ ಕೊಡಲಾಗುವುದಂತೆ. ಹಾಗಾದರೆ, ಕಡ್ಡಿಯುರಿಸುವಾಗ ಎದೆಗುದಿಯಿಲ್ಲ; ಇನ್ನು ಇಂಡಿಯದಲ್ಲೆಲ್ಲ ಉರಿಸುವ ಪ್ರತಿಯೊಂದು ಕಡ್ಡಿಯೂ ಬಂಗಾಳಕ್ಕಾಗಿ ಎಂಬ ಸಂತೋಷ!!!

* * * *

"ಇಂಡಿಯದಿಂದ ರಫ್ತಾಗುವ ಬಂಗಾರದ ಮೇಲೇಕೆ ಸುಂಕ ಹಾಕಬಾರದೆ"ಂದು ಎಸೆಂಬ್ಲಿಯಲ್ಲಿ ಕೆಲ ಮೆಂಬರರ ಪ್ರಶ್ನೆ. ಶೂಸ್ಟರರೆಂದರು—"ಇಲ್ಲಿ; ಸಧ್ಯದಲ್ಲಿ ತಿಳಿಸುತ್ತೇನೆ!" ಎಂದು. ನಮ್ಮ ಮೆಂಬರರ ಅಜ್ಞಾನಕ್ಕಾಗಿ ಅವರು ಮನಸ್ಸಿನಲ್ಲಿ ನಕ್ಕರೋ ಏನೋ!

* * * *

ಪಾಪ, ಇಂಡಿಯದಲ್ಲಿ ಇನ್ನು ಬಂಗಾರ ಉಳಿದಿರಲಿಕ್ಕಿಲ್ಲವೆಂದು ಮೆಂಬರರಿಗೆ ತಿಳಿದಿರಲಿಲ್ಲವಾಗಿರಬಹುದು.

* * * *

ಅಷ್ಟರಲ್ಲಿ ಒಂದು ಸುದ್ದಿ:—ಬಿಹಾರ್ ಭೂಕಂಪದ ಪ್ರದೇಶದ ಬಿರುಕುಗಳಲ್ಲಿ—ಸ್ವರ್ಣ ದೊರೆಯಲಾರಂಭಿಸಿದೆ ಎಂದು!—ಆದರೆ, ಬಿಹಾರ್ ಭೂಕಂಪ ನಿಧಿಗೆ ಹಣ ಕಳುಹಿಸಿದವರೂ ಕಳುಹುವವರೂ ಯಾವ ವಿಧದಿಂದಲೂ ಸಂಕೋಚಿಸದಿರಿ. ಆ ಸ್ವರ್ಣದ ಪಾಲು ಅಲ್ಲಿಯ ನಿರಾಶ್ರಿತರಿಗೆ ಇನ್ನೂ ಸಿಕ್ಕಿಲ್ಲ.

* * * *

ಮದರಾಸು ಸರಕಾರದ ಬಜೇಟು 'ತೃಪ್ತಿಕರ;' ಆದರೆ ~~ಭೂಕಂಪದಲ್ಲಿ ನೂರಾರು ಲಕ್ಷ ನಷ್ಟ ಬಜೇಟೇಕೆ?~~—ಅತ್ತ, ಮದರಾಸು ಸರಕಾರವು ಕೇಂದ್ರ ಸರಕಾರಕ್ಕೆ ಸಲ್ಲಬೇಕಾದ ಸಾಲದ ಪಾವತಿಗೆ ಕಡಿಮೆ ಬಡ್ಡಿಯ ಸಾಲ ದೆತ್ತಲೂ ಈ ಸರಕಾರಕ್ಕೆ ಅಪ್ಪಣೆಯಿಲ್ಲ. ಎಂದರೆ, ಜನರಿಗೆ ಸರಕಾರವು ತಲೆಯಲ್ಲಾಡಿಸಿದರೂ ಸರಕಾರಕ್ಕೆ ಸರಕಾರವೇ ತಲೆಯಲ್ಲಾಡಿಸಿದರೂ ತಲೆಗೆಡುವವರು ಪ್ರಜೆಗಳೇ!

\+ \+ \+ \+

ಬೆನೆಫಿಟ್ ಪರ್ಫೋರ್ಮೆನ್ಸ್ (Benefit Performance) ಎಂದು ಹಲವು ನಾಟಕಗಳು ಮಂಗಳೂರಲ್ಲಿ ಆಗುತ್ತಿವೆ. ಆದರೆ ಇವುಗಳ ಬೆನೆಫಿಟ್ ಯಾರಿಗೆಂಬುದೇ ಒಂದು ಪ್ರಶ್ನೆ!

* * * *

ಬೆನೆಫಿಟಿನಿಂದ ದುಡ್ಡು ಮಾಡುತ್ತೇವೆಂದು ಕೆಲವು ಸಂಸ್ಥೆಗಳು ಬಹಳ ಶ್ರಮದಿಂದ ದುಡ್ಡು ಕೂಡಿಸಿ ನಾಟಕ ಕಂಪೆನಿಗಳಿಗೆ ಖರ್ಚಿಗಿಷ್ಟೆಂದೂ ಪಾಲಿಗಿಷ್ಟೆಂದೂ ಪಹಾ ಕೊಟ್ಟು ಉಳಿದ ದುಡ್ಡು ದಾಗ್ನಾನದಿಂದ ತೃಪ್ತರಾಗುವುದೂ ಒಂದು ವೈಚಿತ್ರ್ಯ.

\+ \+ \+ \+

ಹಾಗೂ ನಿಜಕ್ಕೆ ಕಾಸು ಕೂಡಿಸಲಾರದ ಕಂಪೆನಿಗಳು ಈ ಬೆನೆಫಿಟಿನ ಮೂಲಕವಾದರೂ ದುಡ್ಡು ಗಳಿಸಲೆತ್ನಿಸುವುದು ಒಂದು ಚೋದ್ಯದ ವಿಷಯ. Benefit Peformance ಕೂಡ ಈಗ Businessಆಗಿ ಬಂದಿದೆ. ಸಹಜ ನಾಟಕ ಮಾಡುವುದಕ್ಕಿಂತ ಬೆನಿಫಿಟ್ ನಾಟಕ ಮಾಡುವುದೇ ಈಗೀಗ ಹೆಚ್ಚು ಲಾಭಕರವೆಂದು ತೋರುತ್ತದೆ.

ಒಳದೇಶ ವರ್ತಮಾನ.

ಸುಂಟರ ಗಾಳಿಯಿಂದ ಕಷ್ಟಕ್ಕೀಡಾದ ದಕ್ಷಿಣ ಅರ್ಕಾಡಿನಲ್ಲಿ ಅಯಾಯಾ ಪ್ರದೇಶಗಳ ಸ್ಥಿತಿಗತಿಗಳ ಪ್ರಮಾಣದಲ್ಲಿ ಭೂಕಂದಾಯ ಮಾಫಿ ಮಾಡಲಾಗಿಯದೆ ಎಂದು ಸರಕಾರವು ಪ್ರಕಟಿಸಿದೆ.

ಇಂಗ್ಲಾಂಡಿನ ಎಮ್. ಸಿ. ಸಿ ಕ್ರಿಕೆಟ್ ಆಟಗಾರರು ಸಿಲೋನಿನಿಂದ ಬೊಂಬಾಯಿಗೆ ಬಂದಿರುವರು.

ಅಗಾಖಾನರವರು ತಮ್ಮ ಬೇಗಮರೊಡನೆ ಕಲ್ಕತ್ತ ಸಂಚಾರವನ್ನು ಮುಗಿಸಿ ರಂಗೂನಿಗೆ ಪ್ರಯಾಣಬೆಳೆಸಿದರು.

ಹೋಳಿ ಹಬ್ಬದ ಸಂದರ್ಭದಲ್ಲಿ ಸಿದ್ಧಪುರದಲ್ಲಿ ಹಿಂದೂ–ಮುಸ್ಲಿಂ ದೊಂಬಿಯೊಂದು ನಡೆದಂತೆ ವಾರ್ತೆ.

ಪೂರಿಯ ಪ್ರಸಿದ್ಧ ಜಗನ್ನಾಥ ವಿಗ್ರಹವು ಸ್ವಸ್ಥಾನದಿಂದ ಜಾರಿ ಕೆಳಗೆ ಬಿದ್ದಿತೆಂದೂ ಇದು ಭಯೋತ್ಪಾದಕ ಅಪಶಕುನವೆಂದೂ ವಾರ್ತೆ.

ಮುಲ್ತಾನಿನ ನ್ಯೂ ಸೆಂಟ್ರಲ್ ಜೈಲಿನಲ್ಲಿ ಕೈದಿಯಾಗಿರುವ ಅಬ್ದುಲ್ಲಾ (ಅಬ್ದುಲ್ ಗಫಾರ್‌ಖಾನರ ಅಳಿಯ) ಎಂಬವರು ಅನೇಕ ದಿನಗಳಿಂದ ನಿರಶನರಾಗಿದ್ದು, ಅವರ ದೇಹಸ್ಥಿತಿಯು ನಿರಾಶಾಜನಕವಾಗಿದೆಯೆಂದು ಅಧಿಕಾರಿಗಳೇ ಪ್ರಕಟಿಸಿರುತ್ತಾರೆ.

ಶ್ರೀಮತಿ ಕಮಲಾ ನೆಹರೂರವರು ಇನ್ನೂ ವ್ಯಾಧಿಗ್ರಸ್ತರಾಗಿಯೇ ಇರುವರು. ಅವರ ಆರೋಗ್ಯ ಸ್ಥಿತಿಯೂ ಕೆಡುತ್ತಾ ಬರುವಂತಿದೆ.

ರಾಸ್ ಜಿಲ್ಲೆಯಲ್ಲಿ ಅಲೆದಾಡುತ್ತಿರುವರೆಂದು ೧ ಅಧಿಜೀಯವರ ಅಳಿಯ ಕಾಸು ಗಾಂಧಿಯವರಿಂದ ರೂ. ೨೦೦೦ರ ಭದ್ರತೆ ಕೊಡಬೇಕೆಂದು ಆಜ್ಞೆಯಾದಾಗ್ಯೂ ಅದನ್ನು ತಿರಸ್ಕರಿಸಿ ಒಂಭತ್ತು ತಿಂಗಳುಗಳ ಶಿಕ್ಷೆ ಪಡೆದರು.

ಟೀಕ್ಸ್‌ನ ನರದನ್ನು ಮೈಲಿಗೆ ಹತ್ತು ಜನ ಸ್ತ್ರೀಜನಸ್ತು ಮೈಲಿಗೆ ಎಂಟಾಣೆಯಂತೆ ಆಳಿಸಲಾಗದೆಯೆಂದು ಮದ್ರಾಸಿನ ಪೋಲೀಸು ದಿನ್ಯ ಕಮೀಷನರು ಪ್ರಕಟಿಸಿರುವರು.

ಪುದುಕೋಟೆಯ ದಿವಾನರವರು ಗೇಣಿದಾರ ಜನರಿಗೆ ಕಿಸ್ತನ್ನು ಈ ವರ್ಷದಲ್ಲಿ ಮಾಫಿ ಮಾಡಿರುವುದು ಸಂತೋಷಕರ

ಮಧ್ಯಪ್ರಾಂತದ ನಿಮಾರ್ ಜಿಲ್ಲೆಯ ಉದ್ದೇಶದಿಂದ ಕರಾಚಿ ಮುನಿಸಿಪಾಲಿಟಿಯವರು ತಮ್ಮ ಸರಹದ್ದಿನೊಳಗಿರುವ ತೆಂಗು, ತಾಳೆ ಮರಗಳಿಂದ ಕಳ್ಳು ತೆಗೆಯುವುದನ್ನು ಪ್ರತಿಬಂಧಿಸಿರುವರು.

ಇಪ್ಪತ್ತು ಸಾವಿರ ರೂಪಾಯಿಗಳ ಖರ್ಚಿನಿಂದ ಬೆಂಗಳೂರಿನ ನಗರ ಸಭೆಯವರು ಒಂದು ಧ್ವನಿವಿತರಣ (ಬ್ರೋಡ್ ಕಾಸ್ಟಿಂಗ್) ಮಂದಿರವನ್ನು ಕಟ್ಟಿಸಿ, ರೇಡಿಯೋ ಸೆಟ್ಟನ್ನಿರಿಸುವರು. ಅಲ್ಲಿಂದ ೮೦ ಮೈಲು ವ್ಯಾಸದೊಳಗಣ ಊರುಗಳಿಗೆಲ್ಲ ರೇಡಿಯೋ ಸಂಗೀತ ಭಾಷಣಗಳನ್ನೂ ಆನಂದಿಸಬಹುದಾಗಿದೆ.

ದಕ್ಷಿಣ ಅರ್ಕಾಡಿನಂತೆ ನೆಲ್ಲೂರು ಜಿಲ್ಲೆಯಲ್ಲಿಯೂ ಮದರಾಸು ಸರಕಾರದವರು, ಕೊಂಚ ತೆರಿಗೆಯನ್ನು ಮಾಫಿ ಮಾಡಿರುವರು.

ಪಂಜಾಬ ಪ್ರಾಂತ್ಯದ ಲಾಹೋರ್, ರಾವಲ್ಪಿಂಡಿ ಮೊದಲಾದ ಕಡೆಗಳಲ್ಲಿ ಗುಪ್ತ ಪೋಲೀಸರು ಸುಮಾರು ೨೫ ಮಂದಿ ಪ್ರಸಿದ್ಧ ಕಳ್ಳರನ್ನು ದಸ್ತಗಿರಿ ಮಾಡಿರುವರು. ಈ ಕಳ್ಳರ ಮಹಾಸಂಘವೊಂದಿದೆಯೆಂದೂ, ಅದರ ರಹಸ್ಯಗಳನ್ನೆಲ್ಲ ಒಂದೊಂದಾಗಿಯೇ ಬಯಲಿಗೆಳೆಯುತ್ತ, ಎಲ್ಲರನ್ನೂ ಹಿಡಿಯುವ ಯತ್ನಗಳಾಗುತ್ತಿದೆಯೆಂದೂ ತಿಳಿಯಬರುತ್ತದೆ.

ಮಿದುಳು ಸಂಬಂಧವಾದ "ಮೆನಿಂಜೈಟಿಸ್" ಎಂಬ ರೋಗವು ಅಹಮ್ಮದಾಬಾದಿನಲ್ಲಿ ಕಾಲರಾ ಭಯಂಕರವಾಗಿ ಹಬ್ಬುತ್ತಿದೆ. ಶಾಲೆಗಳನ್ನೂ ಸಿನಿಮಾ ಮಂದಿರಗಳನ್ನೂ ಸಾರ್ವಜನಿಕ ಸಂಸ್ಥೆಗಳನ್ನೂ ನಾಟಕ ಮಂದಿರಗಳನ್ನೂ ತಾತ್ಕಾಲಿಕವಾಗಿ ಮುಚ್ಚಬೇಕೆಂಬ ಬಗ್ಗೆ ಆಲೋಚನೆಯಾಗುತ್ತಿದೆ.

ಕಾಲುವೆ ಬೋರ್ಡುಗಳನ್ನು ತೆಗೆದು ಹಾಕಿ ಡಿ. ಬೋರ್ಡುಗಳನ್ನು ವಿಭಜಿಸುವುದೆಂದಿರುವ ಸರಕಾರದ ಯೋಜನೆಯಲ್ಲಿ ಸಹಾಯಕರಾಗಿ ಮದರಾಸು ಲೋಕಲ್ ಸೆಲ್ಫ್ ಗವರ್ನಮೆಂಟ್ ಸೆಕ್ರೆಟರಿಯೇಟಿನಲ್ಲಿ ಸ್ಪೆಶ್ಯಲ್ ಆಫೀಸರರಾಗಿ ಮದುರಾ ಡಿ. ಬೋ. ಅಧ್ಯಕ್ಷ ಮಿ॥ ಆರ್ ಫೌಲ್ಕ್ಸ್‌ರವರು ನೇಮಿಸಲ್ಪಟ್ಟಿದ್ದು, ಚಾರ್ಜನ್ನು ವಹಿಸಿರುವರು.

ವಿದೇಶ ವರ್ತಮಾನ.

ಸ್ಪೈನಿನಲ್ಲಿ ಪುನಃ ಹೊಸ ಸರಕಾರವು ಸ್ಥಾಪಿಸಲ್ಪಡುವುದು. ಹಿಂದಿನ ಸರಕಾರವು ಜನಾಂಗದ ವಿಶ್ವಾಸವನ್ನು ಕಳಕೊಂಡು ರಾಜೀನಾಮೆ ಕೊಟ್ಟಿತ್ತು.

ಮಂಚೂರಿಯಾದ ಹೊಸ ರಾಜ್ಯದ ಮಂಚುಕುವೋದ ಪುಯಿಯನ್ನು ಜಪಾನ ಪಟ್ಟ ಚಕ್ರವರ್ತಿಗಳೇರುವರು. ಪಟ್ಟಾಭಿಷೇಕ ಉತ್ಸವಗಳು ಲಕ್ಷಾಂತರ ರೂಪಾಯಿಗಳ ವೆಚ್ಚದಿಂದ ಜರಗುವವು.

ಐ. ಸಿ. ಎಸ್. ಆಫೀಸರರ ಕಲಹವಲ್ಲದ ಕಡಿತವನ್ನು ತಮಗೆ ಹಿಂತೆಗೆಯಲು ... ಸ್ಟೇಟ್ ಸೆಕ್ರೆಟರಿ ಸಾಮ್ಯುವೆಲ್ ಹೋರರನ್ನು ಅಧಿಕೃತ ಮಾಡುವ ಮಸೂದೆಯು ಪಾರ್ಲಿಮೆಂಟಿನಲ್ಲಿ ಚರ್ಚಿಸಲ್ಪಡುತ್ತಿದೆ.

ಇಂಗ್ಲೆಂಡಿನ ಬರುವ ವರ್ಷದ ಆಯವ್ಯಯದ ಪಟ್ಟಿಯು ಸಿದ್ಧವಾಗಿದೆ. ಕಳೆದ ವರ್ಷಕ್ಕಿಂತ ಸುಮಾರು ೬ ಮಿಲಿಯ ಪವನನ್ನು ಹೆಚ್ಚಗಳಿಸಿರುವುದು ಕಂಡುಬರುವುದು. ವ್ಯಯವು ಒಟ್ಟು ೨೯೦ ಮಿಲ್ಲಿಯ ಪವನೆಂದು ಅಂದಾಜು.

ಬ್ರಿಟ್ಟನಿನ ಬಲ್ಡರಿ ವ್ಯಾಪಾರವು ಕಳೆದ ನಾಲ್ಕು ತಿಂಗಳುಗಳಿಂದ ಅಭಿವೃದ್ಧಿಯ ಲಕ್ಷಣಗಳನ್ನು ತೋರುತ್ತಿದೆ.

ದಕ್ಷಿಣ ಕನ್ನಡ.

ಮಂಗಳೂರು: ಕಳೆದ ತಾ. ೧–೩–೩೪ರಲ್ಲು ಕರ್ನಾಟಕ ಗ್ರಂಥಾಲಯದ ೫ನೇ ವಾರ್ಷಿಕೋತ್ಸವವು ವಿದ್ವಾನ್ ಯು. ರಾಮಪ್ಪನವರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಲ್ಲಿ ಜರಗಿತು. ಶ್ರೀ॥ ಪದ್ಮನಾಭಾಚಾರ್ಯರು ಗ್ರಂಥಾಲಯದ ವಿಷಯದಲ್ಲಿ ಸರಸವಾದ ಭಾಷಣವನ್ನೂ, ಶ್ರೀ॥ ಬಿ. ವರ್ಣಪ್ಪನವರು ಓದುಗಾರಿಕೆಯ ವಿಷಯದಲ್ಲಿ ಬೋಧಪರವಾದ ಭಾಷಣವನ್ನೂ ಕೊಟ್ಟರು. ಅಧ್ಯಕ್ಷರು ಕನ್ನಡದ ವಿಷಯದಲ್ಲಿ ಹೃದಯಂಗಮವಾದ ಭಾಷಣವಿತ್ತರು. ಶ್ರೀ ಕೆ. ರಾಮಚಂದ್ರರಾಯರು ಧನ್ಯವಾದಗಳನ್ನರ್ಪಿಸಿದ ಮೇಲೆ ಗಾಯನ, ಕೊಳಲು ವಾದನ, ಫಲಾಹಾರಗಳೊಡನೆ ಸಭೆಯು ಕೊನೆಗೊಂಡಿತು.

"ಬಡವರ ಬಂಧು"ವಿನ ಮತ್ತು "ಬಿಹಾರ್ ನಿಧಿ"ಯ ಸಹಾಯಾರ್ಥವಾಗಿ ಕಳೆದ ತಾ ೫ನೇ ಸೋಮವಾರ ರಾತ್ರಿ, ಶ್ರೀ ಚಂದ್ರಕಲಾ ನಾಟಕ ಮಂಡಳಿಯವರು "ಸದಾರಮೆ" ಎಂಬ ನಾಟಕವನ್ನಾಡಿ ತೋರಿಸಿದರು. ಜನರ ಪ್ರೋತ್ಸಾಹವು ನಿರೀಕ್ಷಿಸಿದಷ್ಟು ಚೆನ್ನಾಗಿತ್ತು.

ಇಲ್ಲಿಯ ಪ್ರಸಿದ್ಧ ಕೀರ್ತನಕಾರರೂ ಜೋತಿಷ್ಯರೂ ಆಗಿದ್ದ ಶ್ರೀ॥ ಶ್ರೀನಿವಾಸ ಭಾಗವತರು ಇದೇ ತಾ. ೭ನೇ ಬುಧವಾರ ಬೆಳಗಿನ ಜಾವದಲ್ಲಿ, ತಮ್ಮ ೬೫ನೇ ವಯಸ್ಸಿನಲ್ಲಿ ಕಾಲವಾದರೆಂದು ತಿಳಿಸಲು ವಿಷಾದಿಸುವೆವು. ಇವರು, ಯಕ್ಷಗಾನದಲ್ಲಿ ನಮ್ಮ ಜಿಲ್ಲೆಯಲ್ಲಿ ಅಪ್ರತಿಮ ಕೀರ್ತಿ ಗಳಿಸಿದ್ದ ಶ್ರೀ ಮಂಜುನಾಥ ಭಾಗವತರ ಜ್ಯೇಷ್ಠ ಪುತ್ರರು. ಪುರಾಣ ಪ್ರವಚನವೆಂದರೆ ಗೊಡ್ಡುಹರಟೆಯನ್ನು ಕೇಳುವುದೆಂದು ದೂರವಿರುತ್ತಿದ್ದವರನ್ನು ಕೂಡ ಇವರ ಕೀರ್ತನೆಗಳು ಆಕರ್ಷಿಸುತ್ತಿದ್ದುವು. ಕೀರ್ತನೆಗಳಲ್ಲಿನ ಇವರ ಶೈಲಿ, ಉಪಮೆ, ಉಪಕಥೆಗಳೆಲ್ಲ ಪಂಡಿತರನ್ನೆ ತಲೆದೂಗಿಸುತ್ತಿದ್ದುವು. ಕಸವನ್ನು ರಸವನ್ನಾಗಿ ಮಾಡಿ ತೋರಿಸುವ ಜಾಣ್ಮೆ ಇವರಲ್ಲಿತ್ತೆಂದರೆ ಅತಿಶಯೋಕ್ತಿಯಾಗದು. ಹಳೆಯ ಕನ್ನಡ ಕವಿತೆಗಳೆಲ್ಲ ಇವರಿಗೆ ಬಾಯಿಪಾಠವಿದ್ದುವು; ಸ್ವತಃ ಕವಿಗಳೂ ಆಗಿದ್ದರು. ಪುರಾಣಗಳ ವಿಷಯದಲ್ಲೂ ಮತ ವಿಷಯಗಳಲ್ಲೂ ಇವರು ಅಧಿಕಾರವಾಣಿಯಿಂದಾಡುವಷ್ಟು ಪಾಂಡಿತ್ಯ ಗಳಿಸಿದ್ದರು. ಆಯುರ್ವೇದದಲ್ಲಿಯೂ ಪರಿಶ್ರಮ ಹೊಂದಿದವರಾಗಿದ್ದು, ಹಲವು ಬಡಬಗ್ಗರಿಗೆ ಧರ್ಮಾರ್ಥವಾಗಿ ಅಥವಾ ಅಲ್ಪ ಪ್ರತಿಫಲ ಪಡೆದು ಔಷಧ ಕೊಡುತ್ತಿದ್ದರು. ಜೋತಿಷ್ಯ, ಹಸ್ತಲಕ್ಷಣ, 'ಬಲೆ' ಇವುಗಳಲ್ಲಿ ಹೆಸರಾಗಿದ್ದರು. ಕೀರ್ತನಕಾರರಲ್ಲಿರಬೇಕಾದ ಗಾಂಭೀರ್ಯ, ಅಭಿಮಾನ, ತೇಜಸ್ಸುಗಳೆಲ್ಲ ಇವರಲ್ಲಿ ಪರಿಪೂರ್ಣವಾಗಿದ್ದುವು. ಇವರ ನಿಧನದಿಂದ ನಮ್ಮ ಜಿಲ್ಲೆಯು ಶ್ರೇಷ್ಠ ಕೀರ್ತನಕಾರರೊಬ್ಬರನ್ನು ಕಳಕೊಂಡಿತು. ಮೃತರ ಆತ್ಮಕ್ಕೆ ಪರಮಾತ್ಮನು ಶಾಂತಿಗರೆಯಲಿ!

"ಇದೇ ತಾ. ೨೮–೨–೩೪ರ ತನಕ "ಅಂಜುಮಾನ್ ಹಿದಾಯತುಲ್ ಇಸ್ಲಾಮ್ ಫಂಡಿ"ನಲ್ಲಿ ಜಮೆಯಾಗಿ, ಬೇಂಕಿನಲ್ಲಿಟ್ಟ ಒಟ್ಟು ಮೊಬಲಗು ರೂ. ೩೫೮–೫–೨ ಆಗಿರುತ್ತದೆ. ಸದರಿ ವಸೂಲಿಗೆ ಹೋಗುವವರಿಗೊದಗಿದ ಕೆಲವು ಅನನುಕೂಲತೆಗಳಿಂದ ಫೆಬ್ರುವರಿ ತಿಂಗಳ ವಸೂಲಿ ಕೆಲಸವು ನಿಧಾನವಾಗಿ ಸಾಗುವುದಾಯಿತು" ಎಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ಶ್ರೀ॥ ಕೋ. ಶಿ. ಕಾರಂತ ವಿರಚಿತ "ಹೇಮಂತ" ಎಂಬ ನಾಟಕವು ಈ ದಿನ ರಾತ್ರಿಯೂ, ತಾ ೧೧ನೇ ರವಿವಾರವೂ ಬಿಹಾರ್ ಭೂಕಂಪ ನಿಧಿ ಸಂಗ್ರಹಾರ್ಥ ಗಣಪತಿ ಹೈಸ್ಕೂಲಿನಲ್ಲಿ ಅಭಿನಯಿಸಲಾಗುವುದೆಂದು ತಿಳಿದು ಬರುತ್ತದೆ. ಪುರಜನರು ಪ್ರೋತ್ಸಾಹಿಸುವರಾಗಿ ನಿರೀಕ್ಷಿಸಲಾಗಿದೆ.

ಮಹಿಳಾ ಆಸಿಸ್ಟೆಂಟ್ ಸರ್ಜನರಾಗಿರುವ ಮಿಸೆಸ್ ಜೆ. ಇ. ರೈಟ್ ಎಮ್. ಬಿ. ಬಿ. ಎಸ್., ಇವರು ಇಲ್ಲಿಯ ಲೇಡಿ ಗೋಷೆನ್ ಆಸ್ಪತ್ರೆಗೆ ವರ್ಗಾಯಿಸಲ್ಪಟ್ಟಿರುವರು.

ಮಿತ್ರಮಂಡಳಿಯ ಸಪದು ವಾರ್ಷಿಕೋತ್ಸವವು ಕಳೆದ ತಾ. ೪ನೇ ರವಿವಾರ ಅಪರಾಹ್ನ ಘಂಟೆ ೪ಕ್ಕೆ ಶ್ರೀ॥ ಕೋಟ ಶಿವರಾಮ ಕಾರಂತರವರ ಅಧ್ಯಕ್ಷತೆಯಲ್ಲಿ ಜರಗಿತು. ಫಲಾಹಾರಾನಂತರ ಶ್ರೀ॥ ಕಡೆಂಗೋಡ್ಲು ಶಂಕರಭಟ್ಟ, ಮುಳಿಯ ತಿಮ್ಮಪ್ಪಯ್ಯ, ಮಂಡಳಿಯ ಅಧ್ಯಕ್ಷ ಶ್ರೀ॥ ಜೆ. ವಾಮನಭಟ್ಟ ಇವರ ಭಾಷಣಗಳಾಗಿ, ತಾರ್ಕಿಕ ಸ್ಪರ್ಧೆಯೊಂದು ನಡೆದು, ಅಧ್ಯಕ್ಷರ ಭಾಷಣಾನಂತರ ನೆರೆದವರಿಗೆ ಅಧ್ಯಕ್ಷರಿಂದ ಧನ್ಯವಾದ ಸಮರ್ಪಣೆಯಾಗಿ ಸಮಾರಂಭವು ಕೊನೆಗೊಂಡಿತು.

ರೋಯಲ್ ಎರ್‌ಫೋರ್ಸಿನವರ ಎರಡು ಜಲವಿಮಾನಗಳು ಕಳೆದ ಶನಿವಾರ ಇಲ್ಲಿಗೆ ಬಂದು, ನೇತ್ರಾವತಿ ನದಿಯಲ್ಲಿ ತಂಗಿಕೊಂಡು, ಮರುದಿನ ನಗರದ ಮೇಲೆ ಹಾರಾಡಿ ಮುಂದೆ ಹೋದುವು. ಸ್ಥಳೀಯ ಫುಟ್‌ಬಾಲ್ ಹಾಗೂ ಹಾಕ್ಕಿ ತಂಡಗಳೊಡನೆ ಪಂದ್ಯಾಟವೂ ನಡೆದಿತ್ತು.

ಶ್ರೀ ಕೃಷ್ಣ ಸಿನೆಮ ಮಂದಿರದಲ್ಲಿ ತಾ ೫ರಿಂದ ಶಾರದಾ ಮೂವಿ ಟೋನ್ ಕಂಪೆನಿಯವರ 'ಮಾಸ್ಟರ್ ಬಿರ್‍ದ್' ಅಥವಾ 'ಕಾಲಾ ಪಹಾಡ್' ಎಂಬ ವ್ಯಾಪಾಡುವ ಚಿತ್ರವನ್ನು ಪ್ರದರ್ಶಿಸಲಾಗುವುದು. ಈ ಚಿತ್ರದಲ್ಲಿ ಕರ್ನಾಟಕ ಗೋಹರ್ ಮತ್ತು ನವೀನ್‌ಚಂದ್ರ ಎಂಬವರೇ ಮುಖ್ಯ ಪಾತ್ರ ವಹಿಸಿರುವರು ಈ ಚಿತ್ರವು ಗಾನರಸದಿಂದಲೂ ವೀರರಸ ದಿಂದಲೂ ತುಳುಕಾಡುತ್ತದೆ. "ಕರ್ಮ" "ಹೌಸ್ ಆಫ್ ಟೋರ್ಚರ್‌ಯೋ" "ಪೃಥ್ವಿರಾಜ್ ಸಂಯೋಗಿತಾ" ಎಂಬ ಚಿತ್ರಗಳು ಬೇಗನೆ ಬರಲಿವೆ

ಸ್ಥಳೀಯ "ಮಂಗಳೂರು ಸ್ವದೇಶೀ ಸ್ಟೋರ್ಸ್"ನವರಿಂದ ನಡೆಸ ಲ್ಪಡುತ್ತಿರುವ ಖಾದಿ ಪ್ರಾಯ್ಜ್ ಚಿಟ್ಟಿ ಎಂಬ ಬಹುಮಾನದ ಸೋಡ್ತಿಯು ಈ ತಿಂಗಳಲ್ಲಿ ೫ನೇ ಸಲ ಎತ್ತಲಾಗಿ ಬಹುಮಾನವು ಶ್ರೀ ಬಿ. ವೆಂಕಟ್ರಾಯ ಬಾಳಿಗರವರ ಹೆಸರಲ್ಲಿ ಸಂದಿದೆಯಾಗಿ ಆಡಳಿತ ದಾರರು ತಿಳಿಸುತ್ತಾರೆ.

ಶ್ರೀ ಚಂದ್ರಕಲಾ ಕರ್ನಾಟಕ ನಾಟಕಮಂಡಳಿಯವರು ತಾರೀಕು ೧೧—೩—೩೪ನೇ ಭಾನುವಾರ ಸಾಯಂಕಾಲ ೫॥ ಗಂಟೆಗೆ ತಮ್ಮ ಲೋಕಪ್ರಿಯವಾದ "ಸಂಸಾರ ನೌಕೆ" ಎಂಬ ಸಾಮಾಜಿಕ ನಾಟಕವನ್ನು ಅಭಿನಯಿಸುವರು. ರಾತ್ರಿ ನಾಟಕಕ್ಕೆ ಬರಲು ಅನಾನುಕೂಲವಿದ್ದವರಿ ಗಾಗಿ ಈ ಸಾಯಂಕಾಲದ ಪ್ರದರ್ಶನವು ಏರ್ಪಡಿಸಲ್ಪಟ್ಟಿದೆ ಆ ದಿನ ಮಹಿಳೆಯರಿಗೂ ವಿದ್ಯಾರ್ಥಿಗಳಿಗೂ ಮೊದಲ ಐದು ತರಗತಿಗಳಲ್ಲಿ ಮಾತ್ರ ಅರ್ಧ ದರಕ್ಕೆ ರಿಯಾಯಿತಿ ಮಾಡಲ್ಪಟ್ಟಿದೆ. ಮಂಗಳೂರಿಗೆ ಮಹಿಳೆ ಯರೂ, ವಿದ್ಯಾರ್ಥಿನಿಯರೂ, ವಿದ್ಯಾರ್ಥಿಗಳೂ, ಈ ಅಪೂರ್ವ ಸಮಯ ವನ್ನು ಕಳೆದುಕೊಳ್ಳುವುದಿಲ್ಲವೆಂದು ನಂಬಿದ್ದೇನಾಗಿ ಪ್ರೊಪ್ರೈಟರರು ತಿಳಿಸುತ್ತಾರೆ

ದಿ ಕೆನರಾ ಬ್ಯಾಂಕಿಂಗ್ ಕೊರ್ಪೋರೇಶನ್ ಉಡುಪಿ ಲಿಮಿಟೆಡ್:— ಇದರ ಉಡುಪಿ ಮತ್ತು ಕುಂದಾಪುರ ಬ್ರಾಂಚುಗಳ ಆಫೀಸು ಸಮಯವು ತಾ. ೧—೩—೩೪ರಿಂದ ಈ ಕೆಳಗೆ ಕಾಣಿಸಿದಂತೆ ಬದಲಾಯಿಸಿ ಇರು ತ್ತದೆ. ಸೋಮವಾರದಿಂದ ಶುಕ್ರವಾರ ಪೂರ್ವಾಹ್ನ ೧೧ ಘಂಟೆಯಿಂದ ಮಧ್ಯಾಹ್ನ ೩ ಘಂಟೆ ವರೆಗೆ, ಶನಿವಾರ ಪೂರ್ವಾಹ್ನ ೧೧ ಘಂಟೆಯಿಂದ ಮಧ್ಯಾಹ್ನ ೧ ಘಂಟೆ ವರೆಗೆ.

ನಮ್ಮ ಜಿಲ್ಲೆಯಲ್ಲಿ ಗಾಂಧಿಜಿಯವರ ಹರಿಜನ ನಿಧಿಗೆ ಅರ್ಪಿಸಲಾದ ಮೊಬಲಗಿನ ವಿವರ ಈ ಕೆಳಗಿನಂತಿದೆ — ಮಂಗಳೂರು ತಾಲೂಕು ರೂ ೪೩೭೩ ೬ ೧। ಉಡುಪಿ ತಾಲೂಕು ರೂ ೨೮೩೭ ೫ ೨, ಕುಂದಾಪುರ ತಾಲೂಕು ರೂ. ೧೦೮೫—೯—೦, ಪುತ್ತೂರು ತಾಲೂಕು ರೂ ೧೬೨೨—೮—೨ ಅಂತು ಜುಮಲಾ ರೂ ೯೨೩೮—೧೦—೫ [ಬಿಹಾರ್ ಭೂಕಂಪನಿಧಿಗೆ ಮೊಬಲಗು ಒಟ್ಟು ರೂ ೪೩೧—೧—೬, ಈ ಪೈಕಿ ಮಂಗಳೂರು ರೂ. ೨೧೫—೮—೦, ಕುಂದಾಪುರ ರೂಪಾಯಿ ೪೮—೯—೬ ಮತ್ತು ಪುತ್ತೂರು ತಾಲೂಕು ರೂ. ೧೬೮—೦—೦]

ನಮ್ಮ ಜಿಲ್ಲೆಯವರಾದ ಶ್ರೀ ಎ ಪಟ್ಟಿಳ ಪೈ, ಐ ಸಿ. ಎಸ್, ಇವರು ರಜೆಯಿಂದ ಮರಳುತ್ತಲೇ ಸೇಲಂ ಜಿಲ್ಲೆಯ ಹೊಸೂರು ಡಿವಿಜನಿನ ಸಬ್ ಕಲೆಕ್ಟರ ಹಾಗೂ ಜೊಯಿಂಟ್ ಮೆಜಿಸ್ಟ್ರೇಟರಾಗಿ ಬದಲಿ ಸೋಡುವಂತೆ ನೇಮಕ ಹೊಂದಿರುವರು

ಮದರಾಸಿನ 'ಹಿಂದೂ' ಪತ್ರಿಕಾ ಸಂಪಾದಕರಾಗಿದ್ದ ಶ್ರೀ ಎ ರಂಗಸ್ವಾಮಿ ಅಯ್ಯಂಗಾರ್ಯರ ಅಕಾಲ ನಿಧನಕ್ಕಾಗಿ ವಿಷಾದವನ್ನು ವ್ಯಕ್ತಪಡಿಸಿ ನಮ್ಮ ನಗರಸಭೆಯವರ ಠರಾವು ಇತ್ತು.

ಇದೇ ತಾ. ೩ಕ್ಕೆ ಅಂತ್ಯವಾಗುವ ವಾರದಲ್ಲಿ ನಮ್ಮ ನಗರದಲ್ಲಿ ೨೮ ಮರಣಗಳೂ ೪೮ ಜನನಗಳೂ ಸಂಭವಿಸಿವೆ. ಮರಣಗಳ ಪೈಕಿ ಗೋರ ೨, ಆಮಶಂಕೆ ೧, ಅತಿಸಾರ ೧, ಶ್ವಾಸಮಾಸ ಸಂಬಂಧವಾ ದುದು ೮ ಮತ್ತು ಇತರ ಕಾರಣಗಳಿಂದ ೧೬. ಒಟ್ಟು ೩೩ ಜನರಿಗೆ ಸಿಡುಬು ತಗಲಿದಂತೆ ಮುನಿಸಿಪಲ್ ಹೆಲ್ತ್ ಆಫಿಸರರ ವರದಿಯಿಂದ ತಿಳಿದುಬರುತ್ತದೆ.

ಶ್ರೀ ವೆಂಕಟ್ರಮಣಸ್ವಾಮಿ ಥಿಯೇಟ್ರಿಕಲ್ ಕಂಪೆನಿಯ ಆಡಳಿತ ಗಾರರಾದ ಶ್ರೀ ಎಸ್. ಆರ್ ಬಂಟ್ವಾಳಕರರವರು ಕಳೆದ ರವಿವಾರ ಅಪರಾಹ್ನ ೩ ಘಂಟೆಗೆ ಬಂಟವಾಳದಿಂದ ಮಂಗಳೂರಿಗೆ ಬಸ್ಸಿನಲ್ಲಿ ಬರು ತ್ತಿದ್ದಾಗ್ಗೆ ಅಡ್ಯಾರು ಬಳಿ, ಬಿದಿರುಗಳನ್ನು ತುಂಬಿಸಿದ್ದ ಒಂದು ಎತ್ತಿನ ಬಂಡಿಯು ಎದುರಾಗಿ ಅದರೊಳಗಿನ ಒಂದು ಬಿದಿರು, ಬದಿಗೆ ಸರಿದು ಕುಳಿತ ಇವರ ಎದೆಯ ಬಲಭಾಗಕ್ಕೆ ರಭಸದಿಂದ ನಾಟಿ ಕುಳಿತು ಎದೆಯ ಪಕ್ಕವನ್ನು ಸೀಳಿ ನಾಟಿಕುಳಿತ ಬಿದಿರನ್ನು ಅಲ್ಲೀ ಹೊರಗೆ ತೆಗೆಯ ಲಾಗದೆ ಗರಗಸದಿಂದ ತುಂಡು ಮಾಡಿ, —ಬೆನ್ನಿನ ಹಿಂಬದಿ ಮುಂಬದಿ ಗಳಲ್ಲಿ ಮೂರು ಮೂರಡಿಯಷ್ಟು ಹುದುಗಿದ್ದಂತೆಯೇ ಅವರನ್ನು ಅದೇ ಬಸ್ಸಿನಲ್ಲಿ ಕೂಡಲೇ ಆಸ್ಪತ್ರೆಗೆ ಸಾಗಿಸಿ, ತಂದು ಶಸ್ತ್ರಕ್ರಿಯೆಯಿಂದ ತೆಗೆದರು ಅಂದಿನ ದಿನಕ್ಕೆ ಅವರ ಸ್ಥಿತಿಯು ಆಶಾಜನಕವಾಗಿರಲಿಲ್ಲ. ಈಗ ಗುಣವಾಗುತ್ತಿರುವರು

ಪುತ್ತೂರು — ಪುತ್ತೂರು ತಾಲೂಕು ಬೋರ್ಡು ಮೆಂಬರರ ಒಂದು ಸಾಧಾರಣ ಸಭೆಯು ಕಡಬ ಹಯರ್ ಎಲಿಮೆಂಟರಿ ಶಾಲೆಯಲ್ಲಿ ತಾ. ೨೪—೨—೩೪ರಲ್ಲು ಜರಗಿತು

ದಕ್ಷಿಣ ಕನ್ನಡ ಜಿಲ್ಲಾ ಗೌಡ ವಿದ್ಯಾ ಸಂಘದ ಪಕ್ಷನೆಯ ಅಧಿವೇ ಶನವು ಶ್ರೀಮಾನ್ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರ ಅಧ್ಯಕ್ಷತೆ ಯಲ್ಲಿ ಸ್ಥಳೀಯ ಶಾಲಾ ಮುಂಭಾಗದಲ್ಲಿ ರಚಿತವಾದ ಭವ್ಯವಾದ ಚಪ್ಪರ ದಲ್ಲಿ ತಾ ೨೫—೨—೩೪ರಲ್ಲು ಜರಗಿತು. ಗೌಡ ಸಮಾಜದ ವ ಇತರ ಸಮಾಜದವರು ಕೂಡಿ ೨೦೦೦ಕ್ಕೆ ಮಿಕ್ಕಿ ಸಭಿಕರಿದ್ದರು ರಾತ್ರಿ ಶ್ರೀಮತಿ ತಾಳಿಪ್ಪಾಡಿ ಪದ್ಮಾವತಿಯಮ್ಮನ ಹರಿಕಥೆಯೂ ಕಡಬ ಶಾಲಾ ಬಾಲಕರಿಂದ ಅಭಿನಯಿಸಲ್ಪಟ್ಟ 'ಚೊಕ್ಕ ಗೌಡ' ಎಂಬ ಸಾಮಾಜಿಕ ನಾಟಕವೂ ಇತ್ತು

ತಾ ೩—೩—೧೯೩೪ನೇ ಶನಿವಾರ ಇಲ್ಲಿಯ ಹಿಂದೂ ಬೋರ್ಡು ಎಲಿಮೆಂಟರಿ ಶಾಲಾ ವರ್ಧಂತಿ ಉತ್ಸವವು ಮಾನ್ಯ ಕಾಸರಗೋಡು ರೇಂಜ್ ಶಾಲಾ ಸೀನಿಯರ್ ಡಿಪ್ಟಿ ಇನ್ಸ್‌ಪೆಕ್ಟರರಾದ ಎಸ್ ಎಸ್ ಹರಿಹರ ಅಯ್ಯರ್ ಇವರ ಅಧ್ಯಕ್ಷತೆಯಲ್ಲಿ ಜರಗಿತು

ಉಡುಪಿ — ಇದೇ ತಾ ೨ನೇ ಶುಕ್ರವಾರ ಸಾಯಂಕಾಲ ೫ ಗಂಟೆಗೆ ಕ್ರಿಶ್ಚನ್ ಹೈಸ್ಕೂಲಿನ ಉಪಾಧ್ಯಾಯ ಸಂಘದ ಕಡೆಯಿಂದ ಶಾಲಾ ಆವರದಲ್ಲಿ ಸದ್ರಿ ಶಾಲಾ ವಿದ್ಯಾರ್ಥಿಗಳೊಳಗೆ ಕಲಾ, ಸ್ಪೋರ್ಟ್ಸ್ ಮತ್ತು ಸ್ಕೌಟಿಂಗ್ ಸಂಬಂಧವಾದ ಪಂದ್ಯಾಟಗಳ ಬಹುಮಾನ ವಿನಿ ಯೋಗ ಸಮಾರಂಭವು ಜರಗಿತು ಕಾರ್ಯನಿಮಿತ್ತ ಇಲ್ಲಿಗೆ ಬಂದಿದ್ದ ಕಲ್ಲಿಕೋಟೆಯ ಬಿ ಜಿ ಎಂ ಕಾಲೇಜಿನ ಪ್ರಿನ್ಸಿಪಾಲರಾದ ಮಿ। ಸ್ಟೆಫನ್ ಸನ್ನರು ಅಂದಿನ ಅಧ್ಯಕ್ಷಸ್ಥಾನವನ್ನು ಅಲಂಕರಿಸಿದ್ದರು ಸಂಘದ ಅಧ್ಯಕ್ಷರ ಪೀಠಿಕೆಯಾದ ಬಳಿಕ ಫ್ಯಾನ್ಸಿ ಡ್ರೆಸ್ ಕೊ ಸ್ಕೌಟ್ ಆಟಗಳು ಇನಾಮುಗಳ ಹಂಚೋಣವಾಯಿತು ತದನಂತರ ಅಧ್ಯಕ್ಷರ ಭಾಷಣ ವಾಗಿ ಇಂಗ್ಲಿಷಿನಲ್ಲಿಯ ಕನ್ನಡದಲ್ಲಿಯೂ ನಾಟಕಾಭಿನಯ ಗಳಾದುವು

ತಾ. ೪ನೇ ಆದಿತ್ಯವಾರ ೬ ೩೦ ಸಾಯಂಕಾಲಕ್ಕೆ ಸ್ಥಳೀಯ ಬೋರ್ಡ ಹೈಸ್ಕೂಲಿನಲ್ಲಿ ಶಾಲಾದಿನವು ಜಿಲ್ಲಾ ವಿದ್ಯಾಧಿಕಾರಿಗಳ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿತು. ಜಿಲ್ಲಾ ಬೋರ್ಡ ಪ್ರೆಸಿಡೆಂಟರೇ ಮೊದಲಾದ ಪ್ರಮುಖರು ದಯ ಮಾಡಿಸಿದ್ದರು. ಸ್ವಾಗತ ಗೀತವಾದೊಡನೆ, ಶಾಲಾ ವರದಿಯು ಓದಲಾಯಿತು ಶಾಲಾ ಸ್ಪಷ್ಟ ವಾಚನವನ್ನು ಎಚ್ ಎಸ್ ಕಾಮತ್ ಕ ಶೇಟ ಒಡೆಯರವರು ಮಾಡಿದರು ಶಾಲಾ ವಿದ್ಯಾರ್ಥಿಗಳಿಗೆ ಇನಾಮು ಹಂಚಲಾಗಿ — ಅಧ್ಯ ಕ್ಷರ ಭಾಷಣವಾಗಿ ನಾಟಕಾಭಿನಯ ಬಳಿಕ ಸುಮಾರು ರಾತ್ರಿ ರ ಗಂಟೆಗೆ ಸಮಾರಂಭವು ಕೊನೆಗೊಂಡಿತು ಅಂದೇ ಪ್ರೌಢಶಾಲೆಗಾಗಿ ಖಾನ ಬಹದ್ದೂರ್ ಹಾಜಿ ಅಬ್ದುಲ್ಲ ಹಾಜಿ ಕಾಸೀಮ್ ಬಹದ್ದೂರರ ಮಾ. ಕೀರ್ತಿಶೇಷ ಎಸ್ ಸುಬ್ಬರಾಯರ ಪ್ರತಿಬಿಂಬವನ್ನು ಶಾಲೆಯಲ್ಲಿ ಇಡಿಸಬೇಕಾಗಿ ಅಧ್ಯಕ್ಷರಿಗೊಪ್ಪಿಸಿದರು ಶಾಲೆಯು ದಿನೇ ದಿನೇ ಅಭಿ ವೃದ್ಧಿ ಹೊಂದಲು ಶ್ರಮಪಡುತ್ತಿರುವ ಅಧ್ಯಾಪಕರುಗಳೂ ಹೆಡ್ಮಾಸ್ತರರೂ ಪ್ರಶಂಸಾರ್ಹರು

ಬಂಟ್ವಾಳ — (ಹಿಚ್ಚಿನ ಮಾರ್ಗ) ತಾ ೯—೩—೩೪ನೇ ಗುರು ವಾರ ಮಧ್ಯಾಹ್ನ ಕೀರ್ತಿ ಜೈನ ಗುಡಸೀಯರು ಬೋರಿಯೊಂದಕ್ಕೆ ಆಹುತಿ ಯಾದುದು ದುಃಖಕರ. ಮೃತರ ಆತ್ಮಕ್ಕೆ ಶಾಂತಿ ಇರಲಿ

ಕಾರ್ಕಳ: — ತಾ ೩—೩—೩೪ನೇ ದಿವಸ ಸ್ಥಳೀಯ ಬೋರ್ಡು ಹೈಸ್ಕೂಲಿನ ವರ್ಧಂತಿ ಉತ್ಸವವು ಇಲ್ಲಿಯ ಡಿಸ್ಟ್ರಿಕ್ಟ್ ಮುನ್ಸೀಫರಾದ ರಾ। ಬಿ ರಂಗಯ್ಯಂಗಾರ ಪಂಕಲು, ಬಿ. ಎ. ಬಿ. ಎಲ್, ಅವರ ಅಧ್ಯಕ್ಷತೆಯಲ್ಲಿ, ಇನಾಮು ಹಂಚೋಣ, ಲೇಜಿಮ್, ನಾಟಕ, ನರ್ತನ, ಸಂಗೀತ ಮೊದಲಾದ ಜನಮನರಂಜಕವಾದ ಕಾರ್ಯಕ್ರಮ ದಿಂದಾಗಿ ವಿಜೃಂಭಣೆಯಿಂದ ಜರುಗಿತು

ಇಲ್ಲಿಯ ಪಂಚಾಯತ ಬೋರ್ಡಿನ ಸದಸ್ಯತನಕ್ಕೆ ಐದಾರು ಮಂದಿ ಕೊಟ್ಟ ರಾಜಿನಾಮೆಯನ್ನು ಸ್ವೀಕರಿಸಿದ ಬಳಿಕ ದೀರ್ಘ ಸಮಯವು ಕಳೆದುಹೋಯಿತಾದರೂ, ಇನ್ನೂ ಆ ಸ್ಥಾನಗಳಿಗೆ ಹೊಸ ಚುನಾವಣೆಯು ಏರ್ಪಡಾಗದೆ ಮತದಾರರ ಹಕ್ಕುಬಾಧ್ಯತೆಗಳ ರಕ್ಷಣೆಯಾಗಲಿಲ್ಲವೆಂದು ಕೆಲವರ ದೂರು ನಮ್ಮ ಪಂಚಾಯತ ಬೋರ್ಡಿನ ಕಾರ್ಯೋತ್ಸಾಹೀ ಅಧ್ಯಕ್ಷರು ಈ ಕಡೆಗೆ ತಮ್ಮ ಲಕ್ಷ್ಯವನ್ನು ಹರಿಸಿ, ಆಗಬೇಕಾದ ಕಾರ್ಯವು ಯಥಾ ಸಮಯದಲ್ಲಿ ಆಗುವಂತೆ ವ್ಯವಸ್ಥೆ ಮಾಡುವರೆಂದು ನಿರೀಕ್ಷಿಸಬಹುದೇ?

ಕಾರ್ಕಳದಲ್ಲಿ ವಿದ್ಯಾರ್ಥಿವೃಂದದಲ್ಲಿ ಹಿಂದೀ ಪ್ರಚಾರ ಕಾರ್ಯವು ಭರದಿಂದ ಸಾಗುತ್ತಲಿದ್ದು, ಮೂವತ್ತಕ್ಕೂ ಮಿಕ್ಕಿದ ವಿದ್ಯಾರ್ಥಿಗಳು ಹಿಂದೀ ಅಭ್ಯಾಸವನ್ನು ಮಾಡುತ್ತಿರುವರೆಂಬ ಸಂತೋಷಕರ ವರ್ತಮಾ ನವು ನಮಗೆ ತಲುಪಿದೆ

ತಾ ೩—೩—೩೪ನೇ ದಿನ ಇಲ್ಲಿಯ ಶಾಲೆಗಳ ಡಿಪ್ಟಿ ಇನ್ಸ್‌ಪೆಕ್ಟರ್ ರಾಜಶ್ರೀ ಬಿ ವೆಂಕಟ್ರಾಯ ಮಲ್ಯರ ಅಧ್ಯಕ್ಷತೆಯಲ್ಲಿ ಕೂಡಿದ ಉಪಾ ಧ್ಯಾಯರ ಕೂಟದಲ್ಲಿ ಸ್ಥಳೀಯ ಹಿಂದೀ ಪ್ರಚಾರಕರು ಉಪಾಧ್ಯಾಯರು ಹಿಂದೀ ಭಾಷೆಯನ್ನು ಕಲಿಯುವ ಆವಶ್ಯಕತೆಯ ಕುರಿತು ಭಾಷಣ ಮಾಡಿದರು. ಉಪಾಧ್ಯಾಯರು ಪ್ರಚಾರಕರ ಈ ಶ್ರಮದ ಲಾಭಪಡೆದು ಹಿಂದೀ ಭಾಷೆಯನ್ನು ಕಲಿಯುವುದರ ಮೂಲಕ ದೇಶದ ಹಿತಬಂಧನ ಮಾಡುವರೆಂದು ನಂಬುತ್ತೇವೆ

ಎಲಿಯ ನಡುಗೋಡು: — ಬಾಳ್ತಬೈಲು ಶಾಲೆಯಲ್ಲಿ ಇದೇ ತಾ ೧೭ನೇ ಶನಿವಾರ ರಾತ್ರಿ ವೇಣೂರು ವೆಂಕಟ್ರಮಣಯ್ಯನವರ ಹಾಡುವಿಕೆಯಿಂದ ಯಕ್ಷಗಾನ ತಾಳಮದ್ದಳೆಯು ಜರಗುವುದು. ಸರ್ವರೂ ಬರಬೇಕೆಂದು ಸಂಬಂಧಪಟ್ಟ ಅಧಿಕಾರಿಗಳ ವಿನಂತಿ ಇದೆ

ಪಾಣೆಮಂಗಳೂರ : — ಹರಿಜನೋದ್ಧಾರ ಮಹಾ ತ್ಮಾಜಿಯವರು ಮಡಿಕೇರಿಯಿಂದ ಮಂಗಳೂರಿಗೆ ತಾ ೨೪—೨—೩೪ರಲ್ಲಿ ತೆರಳುವಾಗ ಪಾಣೆಮಂಗಳೂರಲ್ಲಿ ಅರ್ಪಿಸಿದ ನಿಧಿ ವಿವರ —

ಹರಿಜನನಿಧಿ ೧೯೩೪ರಲ್ಲು ಗಾಂಧಿ ಪಂಡಿಗಾಗಿ ಶ್ರೀ ಸ ಕೊಗ್ಗ ಗಣಪತಿ ಕುಡ್ವ ಮತ್ತು ವೆಂಕಟ್ರಾಯ ಪ್ರಾಭುಭಾರ ಮೂಲಕ ಡಬ್ಬಿಯಲ್ಲಿ ಜಮೆ ಇದ್ದ ಬಾಬ್ತು ರೂ ೧೯—೪—೧ ಕುಂದಣ್ಣ ಶ್ರೀ ವೆಂಕಟ್ರಾಯ ಕುಡ ಒಬ್ಬರಲ್ಲಿ ಡಬ್ಬಿಯಲ್ಲಿ ಜಮೆ ಇದ್ದ ಬಾಬ್ತು ೦—೬—೯ ಶ್ರೀ ಶ್ರೀನಿವಾಸ ರಾವ ಚಂದ್ರ ಪೈ ಇವರಲ್ಲಿ ದಾಮೋದರ ಕಾಮ್ತಿಯರ ವಶ ಡಬ್ಬಿಯಲ್ಲಿ ಜಮೆ ೧— ೬—೬ ೧೯೩೪ರಲ್ಲು ಶ್ರೀ। ಕೆ ಅನಂತಯ್ಯ ಇವರು ವ ಶ್ರೀ ಉಪ್ಪಿನ್ನಸ್ವಾಮಿ ವಗೈರೆರ ಮೂಲಕ ೧೧—೪—೦, ಬಿಹಾರ್ ರಿಲೀಫ್ ಫಂಡಿಗೆ ರೂ ೧೧ ೪—೦ ಪಾಣೆಮಂಗಳೂರು ಎಸ್ ವಿ ಎಸ್ ಶಾಲೆಯಿಂದ ೩ ೪—೦ ಬಿಹಾರ್ ರಿಲೀಫ್ ಫಂಡಿಗೆ— ೯—೬—೦ ಪಾಣೆಮಂಗಳೂರು ಮಹಾಜನರಿಂದ ರೂ ೨೬—೦—೮, ಬಿಹಾರ್ ರಿಲೀಫ್ ಫಂಡಿಗೆ ೨೫—೮—೦ ಹರಿಜನೋದ್ಧಾರಿಗಳಿಬ್ಬ ರಿಂದ ರೂ ೧೧—೦—೦

+ + + +

Karnataka Chemical and Pharmaceutical Works, Ltd , Udipi (South India)
ಕುಂಭಕೋಣದಲ್ಲಿಯೂ ಮಧುರೆಯಲ್ಲಿಯೂ ಮೈಸೂರಿನಲ್ಲಿಯೂ ಸುವರ್ಣ ಪದಕಗಳನ್ನು ಪಡೆದಿರುವ
ಕರ್ನಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದಕ್ಷಿಣ ಹಿಂದೂಸ್ಥಾನ).
ನಮ್ಮಲ್ಲಿ ಟಿಂಕ್ಚರ್ಸ್ ವಗೈರೆ ಎಲ್ಲಾ ಎಲ್ಲೊಪತಿಕ್ ಔಷಧ ದ್ರವ್ಯಗಳೂ, ಆಯುರ್ವೇದಿಯ ಔಷಧಿಗಳೂ, ಟೊಯಿಲೆಟ್ ಸಾಮಗ್ರಿಗಳೂ, ಸಾಬೂನುಗಳೂ, ಫೌಂಟನ್ ಪೆನ್ ಶಾಯಿಗಳೂ ತಯಾರಿಸಲ್ಪಡುತ್ತವೆ
ದ್ರಾಕ್ಷಾಸವ, ಪ್ರಸೂತಿ ಸಂಜೀವನ, ನಿಯೋವಿಗರ್, ಸ್ನೋ,
ಕ್ಷೀರಬಲಾ, ಕಾರ್ಪೊಫ್ಲೊಜಿಸ್ಟಿನ್, ಯುಟರೀನಾ, ಇಂಕ್ಸ್
ಮೆನೆಜಿಂಗ್ ಡೈರೆಕ್ಟರ್—ವೆಂಕಟ್ರಾಯ ಅಣ್ಣಪ್ಪ ಬಾಳಿಗ
ಹೆಡ್ ಆಫೀಸು, ಉಡುಪಿ. (ದಕ್ಷಿಣ ಹಿಂದೂಸ್ಥಾನ)
ಬ್ರೇಂಚ್ ಆಫೀಸು ದೇವಕರಣ ಮೆನ್ಶನ್ಸ್, 45 ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ ನಂ. 2.
ಪಶ್ಚಿಮ ಕರಾವಳಿ ಮತ್ತು ಮೈಸೂರು ಪ್ರಾಂತ್ಯಗಳ ಪ್ರಾಮುಖ್ಯ ಏಜಂಟರು:—
ಕರ್ನಾಟಕ ಪ್ರೊಡಕ್ಟ್ಸ್ ಡಿಸ್ಟ್ರಿಬ್ಯೂಟಿಂಗ್ ಕಂಪೆನಿ, ಮಂಗಳೂರು

ಮದರಾಸು ಲೇಬರ್ ಇಲಾಖೆ

[illegible]

ಮದರಾಸು ಲೇಬರ್ ಇಲಾಖಾ ಕಮಿಷನರರ ಕಳೆದ ವರ್ಷದ ಆಡಳಿತದ ವರದಿಯನ್ನು ಪರಿಶೀಲಿಸಿ ಸರಕಾರ ದವರು ಈ ಕೆಳಗಿನ ಸಾರಾಂಶವನ್ನು ಪ್ರಕಟಿಸ ಕೊಟ್ಟಿರುವರು:—

ಕಳೆದ ವರ್ಷ ನಿಮ್ನ ತರಗತಿಯವರಿಗಾಗಿ ಕಾರ್ಯವು ಹಿಂದಿನಂತೆ ನಡೆದಿದೆ. ಆದರೆ, ಹಿಂದಣ ವರ್ಷದಷ್ಟು ಮೊಬಲಗನ್ನು ವೆಚ್ಚಮಾಡಲು ಸಾಧ್ಯವಾದುದಿಲ್ಲ (ಸಂಸ್ಥೆಗಳ ಸಂಖ್ಯೆಗಳನ್ನೇನೂ ಕಡಿಮೆ ಮಾಡಿಲ್ಲ)

[illegible] ಧನಸಹಾಯ ಕೊಟ್ಟಿರುವುದು.

ಹರಿಜನರಿಗೆ ಪ್ರತ್ಯೇಕವಾಗಿದ್ದ ಸಹಕಾರ ಸಂಘಗಳನ್ನು ಸಹಕಾರೀ ಇಲಾಖೆಗೆ ಸೇರಿಸಲಾಯಿತು. ೧೯೩೭-೩೮ನೇ ವರ್ಷಾಂತ್ಯದಲ್ಲಿ ಈ ಇಲಾಖೆಯ ಆಡಳಿತದಲ್ಲಿದ್ದ ಹರಿಜನ ಸಹಕಾರ ಸಂಘಗಳು ೨೨೫೦. ಇನ್ನು, ಹರಿಜನರಿಗಾಗಿ ಮತ್ತೂ ಕೆಲವು ಹೊಸ ಸಂಘಗಳನ್ನು ತೆರೆದು, ಅವುಗಳನ್ನು ಡಿಸ್ಟ್ರಿಕ್ಟ್ ಲೇಬರ್ ಆಫೀಸರರು ಯಾ ಸಹಕಾರ ಸಂಘಗಳ ಡಿ| ರಿಜಿಸ್ಟ್ರಾರರ ನೇತೃತ್ವದಲ್ಲಿರಿಸುವ ಯೋಜನೆಯಿದೆ.

ಕೆಲವು ಹೊಸ ಶಾಲೆಗಳನ್ನು ಹರಿಜನರಿಗಾಗಿ ತೆರೆದಿದೆ ಧನಾಭಾವದಿಂದ ಇದಕ್ಕಿಂತಲೂ ಹೆಚ್ಚು ಕಾರ್ಯ ಸಾಗಲು ಸಾಧ್ಯವಾಗಲಿಲ್ಲ. ವರ್ಷಾಂತ್ಯದಲ್ಲಿ ೪೮೦ ಲೇಬರ್ ಶಾಲೆಗಳು ಇದ್ದುವು. ಇವುಗಳಲ್ಲಿ ೧೬ ರಾತ್ರಿ ಶಾಲೆಗಳು ಈ ಶಾಲೆಗಳಲ್ಲಿ ಪಟ್ಟು ವಿದ್ಯಾಭ್ಯಾಸಂಗ ಮಾಡುತ್ತಿದ್ದವರು ೩೫೧೪೭ ವಿದ್ಯಾರ್ಥಿಗಳು ಇವರಲ್ಲಿ ೨೫೭೪೨ ಮಂದಿ ಹುಡುಗರು, ೬೪೦೫ ಮಂದಿ ಹುಡುಗಿಯರು. ಈ ಶಾಲೆಗಳಲ್ಲಿದ್ದ ಅಧ್ಯಾಪಕರುಗಳಲ್ಲಿ ಶೇಕಡಾ ೯೯ರಷ್ಟು ಮಂದಿ ತರಬೇತಿಹೊಂದಿದವರು.

ಗುಂಟೂರು, ಪೂರ್ವಗೋದಾವರಿ ಮತ್ತು ದಕ್ಷಿಣ ಆರ್ಕಾಡಿನಲ್ಲಿ ಹರಿಜನರಿಗಾಗಿ ತೃಪ್ತಿಕರವಾದ ಕೆಲಸ ನಡೆದಿತ್ತು. ಇವರಿಗಾಗಿ ಆ ಜಿಲ್ಲೆಗಳಲ್ಲಿ ಪ್ರತ್ಯೇಕವಾಗಿದ್ದ ೨೧೫ ಶಾಲೆಗಳು ಆಯಾಯಾ ಭಾಗಗಳಿಗೆ ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳಿಗೆ ಸೇರಿಸಲ್ಪಟ್ಟುವು

ವರದಿಯ ವರ್ಷದಲ್ಲಿ ೧೦೮ ಹೊಸ ಬಾವಿಗಳು ಸಾರ್ವಜನಿಕ ಉಪಯೋಗಾರ್ಥ ತೋಡಿಸಲ್ಪಟ್ಟುವು

ಮದರಾಸಿನ ದುರ್ಭಾಗ್ಯ

ಒಂದು ಕೋಟಿಯಷ್ಟಾದರೂ ತೀರ್ವೆಯಲ್ಲಿ ಮಾಫಿಯಾಗಬೇಕೆಂದು ಜನರು ಮದರಾಸು ಸರಕಾರದಲ್ಲಿ ಮೊರೆಯಿಟ್ಟುದು ಪೂರ್ತಿಯಾಗಿ ಪೂರೈಸಲ್ಪಡಲಾಗುವುದಿಲ್ಲವೆಂದು ಸರಕಾರವು ತಿಳಿಸಿತೆನ್ನುವಾಗ,-ಮದರಾಸು ಸರಕಾರವು ಕೇಂದ್ರ ಸರಕಾರದಿಂದ ಸಾಲ ಪಡೆದ ಮೊಬಲಗನ್ನು ಕಡಿಮೆ ಬಡ್ಡಿಯಲ್ಲಿ ಹೊಸ ಸಾಲವೆತ್ತಿ ಪಾವತಿ ಮಾಡುವೆವೆಂದು ಕೇಳಿಕೊಂಡುದನ್ನು ಆ ಸರಕಾರವು ತಿರಸ್ಕರಿಸಿತು ಅವಧಿಗೆ ಮುಂಚಿತವಾಗಿ ಸಾಲ ಪಾವತಿ ಪಡೆಸಂತಿಲ್ಲ, ಹೊಸ ಸಾಲ ವೆತ್ತಲು ಅಪ್ಪಣೆ ಇಲ್ಲವೆಂದಾಯಿತು, ಇದರಿಂದ ಮದರಾಸು ಸರಕಾರಕ್ಕೆ ವರ್ಷಕ್ಕೆ ಸುಮಾರು ೭ರಿಂದ ೧೦ ಲಕ್ಷ ರೂಪಾಯಿಗಳ ವರೆಗೂ ಉಳಿಕೆಯಾಗಬಹುದೆಂಬ ಆಸೆ ಕಪ್ಪಿತು ಇದೂ ಜನರ ದುರ್ಭಾಗ್ಯ ಬೊಂಬಾಯಿಗೂ ಪಂಜಾಬಕ್ಕೂ ಸಾಲಪಾವತಿಗೆ ಅಂತಹ ರಿಯಾಯತಿಗಳು ದೊರೆತಿವೆ, ಮದರಾಸಿಗೇಕಿಲ್ಲ? ಇದೇನನ್ಯಾಯ? ಎಂದು ಜನರು ಆಶ್ಚರ್ಯಪಡುವಂತಾಗಿದೆ ಮದರಾಸು ಸರಕಾರವು ಪಡೆದ ಸಾಲಗಳು ಒಟ್ಟು ೧೬ ಕೋಟಿ ೧೩ ಲಕ್ಷ ಬಡ್ಡಿಯು ಕೆಲ ಸಂದರ್ಭಗಳಲ್ಲಿ ಐದರಂತೆಯೂ, ಆರರಂತೆಯೂ ಸಲ್ಲುತ್ತಾ ಇದೆ ಇದನ್ನು ಶಕ್ಯವಿದ್ದಷ್ಟು ಕಡಿಮೆ ಮಾಡುವರೆ ಅಪ್ಪಣೆ ಕೊಡಲು ಕೇಂದ್ರ ಸರಕಾರದ ದಯಾ ಭಾಂಡಾಗಾರವು ಏಕೆ ತೆರೆದುಕೊಳ್ಳದು? ಬಂಗಾಳವು ಬಡ ಪ್ರಾಂತ್ಯವೆಂದು ಸಾರಿನ ಉತ್ಪತ್ತಿಯಲ್ಲಿ ಅರೆವಾಸಿಯಷ್ಟನ್ನು ಅದಕ್ಕೆ ಕೊಡುವುದೆಂದಾಯಿತು. ಬೆಂಕಿ ಪೆಟ್ಟಿಗೆಗಳ ಮೇಲೆ ಹೊರಿಸಲಿರುವ ಹೊಸ ಸುಂಕವೂ ಬಂಗಾಳಕ್ಕೇ ಮದರಾಸಿಗೆ ದಾನ ಧರ್ಮದ ಔದಾರ್ಯ ಬೇಡ, ಆದರೆ ನಿಷ್ಪಕ್ಷಪಾತವಾದ ನ್ಯಾಯಪಾಲನೆಯೂ ಆಗಬೇಡವೇ?

ಹಿಂದೂದೇಶದ ಪ್ರಚಂಡ ಸಂಕ.

ಈಸ್ಟರ್ನ್ ಬಂಗಾಳ ರೈಲ್ವೆ ಯವರ ರೈಲು ಹಾದಿಯಲ್ಲಿರುವ ಹಾರ್ಡಿಂಜ್ ಗಂಗಾನದಿಯ ಮೇಲಣ ಸಂಕವು ಅಪಾಯಕರ ಸ್ಥಿತಿಗೊಳಗಾಗಿದೆ ಆ ಸಂಕದ ಕೆಳಗೆ ಹರಿಯುತ್ತಿರುವ ನದಿಯು, ೬ ವರ್ಷಗಳ ಹಿಂದೆ ಹರಿಯುತ್ತಿದ್ದ ಮತ್ತೊಂದ ದಿಕ್ಕಿಗೆ ತನ್ನ ಗಮನವನ್ನು ಮಾರ್ಗಾಯಿಸುವ ಚಿಹ್ನೆ ತೋರುತ್ತದೆ ಹಾಗೆ ನದಿಯ ಗತಿಯು ಬದಲಾಗುವಾಗ ಈ ಸಂಕವು ಬಿದ್ದು ಹೋಗಬಹುದೆಂಬ ಅಂಜಿಕೆಯುಂಟಾಗಿದೆ ಚಾಣಾಕ್ಷ ಇಂಜಿನಿಯರರೂ ೧೧೦೦೦ ಕೆಲಸಗಾರರೂ ಈ ಸಂಕವನ್ನು ರಕ್ಷಿಸಲು ಹಗಲು - ರಾತ್ರಿಯೆನ್ನದೆ ಕೆಲಸ ಮಾಡುತ್ತಿರುವರು ಕೆಲಸವು ಜೂನ್ ೧೫ರೊಳಗೆ ಮುಗಿಯದಿದ್ದರೆ ಸಂಕದ ರಕ್ಷಣೆಯಾಗುವ ಆಸೆಯಿಲ್ಲ ರಾತ್ರೆ ಸಮಯ ಈ ಸಂಕದ ಕೆಲಸ ಮಾಡುವ ಬಗ್ಗೆ, ದೀಪಗಳಿಗಾಗಿ ಪ್ರತ್ಯೇಕವಾಗಿ ಒಂದು ವಿದ್ಯುಚ್ಛಕ್ತಿಯ ಸ್ಟೇಷನನ್ನು ಅಲ್ಲಿ ಕಟ್ಟಿಸಿರುವರು ಈ ಸಂಕವು ೧೯೧೫ ರಲ್ಲಿ ಕಟ್ಟಿಸಲಾಯಿತು ನಾಲ್ಕು ಕೋಟಿ ರೂಪಾಯಿ ವೆಚ್ಚ ತಗಲಿದೆ ಹಿಂದೂದೇಶದಲ್ಲಿ ಅತಿ ದೊಡ್ಡ ಸಂಕವೇ ಇದು, ಪ್ರಪಂಚದಲ್ಲಿ ಐದನೆಯದು

ಕೈಲಾಸ ಪರ್ವತಾರೋಹಣ

'ಗೌರೀಶಂಕರ' ಶಿಖರವು ೨೯ ಸಾವಿರ ಅಡಿ ಎತ್ತರವಾಗಿದ್ದು, ಪ್ರಪಂಚದ ಅತ್ಯುನ್ನತ ಶಿಖರವೆನಿಸಿದೆ. ಹಿಮಾಲಯದಲ್ಲಿ ಬೇರೆ ಎಷ್ಟೋ ದೊಡ್ಡ ಶಿಖರಗಳಿವೆ ಅವುಗಳಲ್ಲಿ 'ಕೈಲಾಸ' ಶಿಖರವೊಂದು, ಇದು ೨೩೦೦ ಅಡಿ ಎತ್ತರವಿದೆ ಮತ್ತೊಂದು 'ನಂದಾದೇವಿ' ಎಂಬುದು ಇದು ೨೫ ಸಾವಿರ ಅಡಿಯಿದೆ ಹಿಂದೂದೇಶದ ಬೇರೆ ಬೇರೆ ಭಾಗಗಳಿಂದ ಒಟ್ಟು ೨೫ ಮಂದಿ ಹಿಂದೀ ಸಾಹಸಿಗಳು ಕೆಲವು ಸಂಶೋಧನೆಗಳ ಬಗ್ಗೆ ಇದೇ ಬರುವ ಮೇ ತಿಂಗಳಲ್ಲಿ ಆರೋಹಣ ಮಾಡಲು ನಿಶ್ಚೈಸಿರುವರು. ಮುಂದಿನ ವರ್ಷ 'ನಂದಾದೇವಿ' ಶಿಖರವನ್ನೇರುವ ಆಲೋಚನೆಯೂ ಇದೆ.

ಗೊಡ್ರೆಜ್ ಸಾಬೂನುಗಳಿಗೆ

ಅಮೂಲ್ಯವೂ ಹೊಸತೂ ಆದ ಪ್ರಶಸ್ತಿ

ಡಾ| ಎಂ. ಎ. ಅನ್ಸಾರಿ ಎಂ. ಡಿ.

(ಅಖಿಲ ಭಾರತ ಕೊಂಗ್ರೆಸ್ಸಿನ ಮಾಜಿ ಅಧ್ಯಕ್ಷರು)

ಗೊಡ್ರೆಜ್ ಸಾಬೂನುಗಳ ಉತ್ಕೃಷ್ಟ ಗುಣಗಳನ್ನು ಕಂಡು ನಾನು ಸಂತೋಷದಿಂದ ಮೆಚ್ಚಿದವನಾಗಿರುತ್ತೇನೆ ಕಳೆದ ಹತ್ತು ವರ್ಷಗಳಿಂದ ನಾನವುಗಳನ್ನು ಉಪಯೋಗಿಸುತ್ತಿರುವೆನು ಯುರೋಪುದಲ್ಲಾಗಲೀ ಇನ್ನಿತರ ಯಾವ ದೇಶದಲ್ಲಾಗಲೀ ತಯಾರಿಸಲ್ಪಟ್ಟ ಸಾಬೂನುಗಳಿಗಿಂತ ಇವು ಅತ್ಯುತ್ಕೃಷ್ಟವೆಂದೇ ನನ್ನ ಅನುಭವದ ಮಾತು. ಅವುಗಳ ಉತ್ಕೃಷ್ಟತೆಯ ದೃಷ್ಟಿಯಿಂದಲೂ, ಅಲ್ಲದೆ ಅವು ಹಿಂದೂದೇಶದಲ್ಲೇ ಸಿದ್ಧಗೊಳಿಸಲ್ಪಟ್ಟವೆಂಬ ದೃಷ್ಟಿಯಿಂದಲೂ ನಾನವುಗಳನ್ನು ಹಿಂದೀಯ ಜನತೆಗೆ ಶಿಫಾರಸು ಮಾಡುತ್ತೇನೆ

ಪ್ರಮುಖ ಡಾಕ್ಟರರೂ ಮತ್ತು ಪ್ರಮುಖ ರಾಷ್ಟ್ರೀಯ ಧುರೀಣರೂ ಆದ ಡಾ| ಅನ್ಸಾರಿಯವರ ಹೇಳಿಕೆಯು ಪ್ರತಿಯೊಬ್ಬ ವ್ಯಕ್ತಿಯ ಮತ್ತು ಪ್ರತಿಯೊಂದು ರಾಷ್ಟ್ರದ ದೈಹಿಕ ದೃಷ್ಟಿ ಮತ್ತು ರಾಷ್ಟ್ರೀಯ ದೃಷ್ಟಿಯಿಂದ ಸಹಾಯಕರವಾಗ ಬೇಕು

Jaya Bharatham Co, P B No 83 MADRAS

ಜಯ ಭಾರತಂ ಕೋ, ಪ ಪ ೮೩ ಮದ್ರಾಸು

ದ ಕ ಜಿಲ್ಲೆಗೆ ಏಜಂಟರು —ಎಸ್ ಇ ಬಂಗೇರಾ ಮಿಶ್ಯನ್ ಕಂಪೌಂಡು, ಕಾಸರಗೋಡು

ಡಿಲ್ಲಿ ಬಿಸ್ಕೂಟಿನ ಕುರಿತು

ಇಂಡಿಯಾದ ಘನ ಕೈಗಾರಿಕಾ ಸಂಸ್ಥೆಯ

ಸರ್ ದೋರಾಬ್ ತಾತಾರವರು

"ಈ ಬಿಸ್ಕುಟುಗಳನ್ನು ಹಿಂದೀಯ ಜನತೆಯ ಹೆಚ್ಚಿನ ಅವಗಾಹನೆಗೆ ತಂದಲ್ಲಿ ಸಹಜವಾಗಿ ಇವುಗಳು ಹೆಚ್ಚಿನ ವಿಕ್ರಯವಾಗುವುದರಲ್ಲಿ ಸಂದೇಹವಿಲ್ಲವುದಿಲ್ಲ

"ಇಂಗ್ಲಾಂಡಿನಲ್ಲಿ ತಯಾರಿಸಲ್ಪಟ್ಟುವುಗಳಿಗಿಂತಲೂ ನಾನು ಈ ಬಿಸ್ಕುಟುಗಳನ್ನೇ ಪ್ರಶಸ್ತವೆನ್ನುತ್ತೇನೆ"—
"ಇಂಗ್ಲಾಂಡಿನಲ್ಲಿ ನಿಮ್ಮ ಬಿಸ್ಕುಟುಗಳು ಬಹಳ ಮೆಚ್ಚುಗೆಗೆ ಪಾತ್ರವಾಗಿವೆ"—ಎಂಬುದೇ ಕೆಲವು ಯುರೋಪಿಯನರ ಹೇಳಿಕೆ

ಮದ್ರಾಸು ಪ್ರಾಂತ್ಯಕ್ಕೆ ಏಜಂಟರು:—

Jaya Bharatham Co, P B No 88, MADRAS

ಜಯ ಭಾರತಮ್ ಕೋ, ಪ ಪ ೮೩ ಮದ್ರಾಸು

ಸ್ಟೋಕಿಸ್ಟರು —ಮೆಸರ್ಸ್ ಕಾಮತ್ ಎಂಡ್ ಕೋ, ಮಂಗಳೂರು

ದ. ಕ. ಜಿಲ್ಲಾ ಏಜಂಟರು —ಎಸ್ ಇ ಬಂಗೇರಾ, ಮಿಶ್ಯನ್ ಕಂಪೌಂಡು, ಕಾಸರಗೋಡು

ಇನ್ನೊಂದು ವೈಶಿಷ್ಟ್ಯ

ನೀವು ಕಬ್ಬಿನ ಗಾಣವನ್ನು ಪಡೆಯುವಾಗ ನೀವು ಸ್ವಾಭಾವಿಕವಾಗಿ ಅದರ ಗಟ್ಟಿಮುಟ್ಟು, ಬಾಳ್ವಿಕೆ ಮತ್ತು ಶ್ರಾಸ್ತ್ಯದ ಕಡೆ ಗಮನವನ್ನೀಯುತ್ತೀರಿ ನೀವು

ಕಿರ್ಲೋಸ್ಕರ

ವಸಂತ ಪವರ್ ಕ್ರಶರ್ ಗಾಣವನ್ನು ನಿಮ್ಮ ಕೆಲಸಕ್ಕೆ ಯೋಗ್ಯವೆಂದು ತಿಳಿಯುವಿರಿ ರಸವು ಒಳಗೆ ಸೇರಿ ಹಾಳಾಗದ ಹಾಗೆ ಅದರ ಬೇರಿಂಗುಗಳನ್ನು ಮುಚ್ಚಿರುತ್ತದೆ ಇದರಿಂದಾಗಿ ಎಣ್ಣೆಯು ನಷ್ಟವಾಗುವುದಿಲ್ಲ—ಗಾಣವು ದೀರ್ಘಕಾಲ ಸಂತೃಪ್ತಿಕರವಾಗಿ ನಡೆಯುತ್ತದೆ. ಅದರ ಎಲ್ಲಾ ಭಾಗಗಳೂ ದೀರ್ಘವಾಗಿ ಬಾಳುವಂತೆ ಮಾಡಲಾಗಿದೆ.

ಎಲ್ಲಾ ವಿವರಗಳಿಗೆ ಇಲ್ಲಿಗೆ ಬರೆಯಿರಿ —

ಕಿರ್ಲೋಸ್ಕರ ಬ್ರದರ್ಸ್ ಲಿಮಿಟೆಡ್, ಕಿರ್ಲೋಸ್ಕರವಾಡಿ (ಜಿ ಸತಾರಾ)

ಸ್ಟೋಕಿಸ್ಟ್ಸ್:— ಬಾಸೆಲ್ ಮಿಶನ್ ಬುಕ್ ಡಿಪೋ ಎಂಡ್ ಟ್ರೇಕ್ಟ್ ಡಿಪೋಜಿಟರಿ ಕೊ. ಮಂಗಳೂರು ದ. ಕ.

ವಿವಿಧ ವಿಷಯ.

೧ ಲಕ್ಷ ಪವನಿನ 'ಬೈಬಲ್'

ಪ್ರಪಂಚ ವಿಖ್ಯಾತವಾದ ಬ್ರಿಟಿಷ್ ವಸ್ತು ಸಂಗ್ರಹಾಲಯಕ್ಕೆ ಈ ವರ್ಷ ಬಂದ ಗ್ರಂಥಗಳಲ್ಲಿ ಅತ್ಯಮೂಲ್ಯವಾದುದೆಂದರೆ ಒಂದು 'ಬೈಬಲ್'. ಇದು ೪ನೇ ಶತಮಾನದಲ್ಲಿ ಕೈಯಿಂದ ಬರೆಯಲ್ಪಟ್ಟು ದಂತೆ! ಸೋವಿಯಟ್ (ರಷ್ಯ) ಸರಕಾರದ ವಶವಿತ್ತು. ದೇವಾಲಯಗಳ ಮೇಲೆ ಪರಶುವೆತ್ತಿದ ಆ ಸರಕಾರಕ್ಕೆ ಅದು ಬೇಡವಾಯಿತು. ಆದರೂ ಬ್ರಿಟಿಷ್ ಮ್ಯೂಸಿಯಮ್‌ನವರಿಂದ ೧ ಲಕ್ಷ ಪವನನ್ನು ಬೆಲೆಯಾಗಿ ತೆಗೆದುಕೊಂಡೇ ಈ ಬೈಬಲನ್ನು ಕೊಟ್ಟರು.

ಕೃತ್ರಿಮ ಪಡೆವ 'ಸೌಂದರ್ಯ'.

ಮುಖಸೌಂದರ್ಯವೂ ದೇಹಸೌಂದರ್ಯವೂ ಇರಬೇಕೆಂದು ಎಲ್ಲರೂ ಆಶಿಸುವರು. ಆದರೆ, ಪೂರ್ವಜನ್ಮಕರ್ಮವಿಪಾಕದಿಂದ ಕುರೂಪಿಗಳಾಗಿ ಹುಟ್ಟಿದರೆ, ಆ ಕುರೂಪವನ್ನು ತಿದ್ದುವ ಆಟಿಶ್ರಾಂತ ಶ್ರಮದ ಮರಾಳು ನಮ್ಮ ದೇಶಕ್ಕೆ ಇನ್ನೂ ಹತ್ತಿಲ್ಲ. ಆದರೆ, ಪಾಶ್ಚಾತ್ಯರಲ್ಲಿ ವಿಶೇಷವಾಗುತ್ತಿದೆ. ಲಂಡನಿನಲ್ಲಿ ಸೌಂದರ್ಯದಾತರ ಸಂಸ್ಥೆಗಳೇ ಇವುಗಳ ಬಗ್ಗೆ ಉಂಟಾಗಿ, ವಿದ್ಯುಚ್ಛಕ್ತಿಯ ಮೂಲಕವೂ, ಇಂಜಕ್ಷನ್‌ಗಳ ಮೂಲಕವೂ ಶರೀರದ ಊನಗಳನ್ನು ತಿದ್ದುವ ವ್ಯಾಪಾರವು ನಡೆಯುತ್ತಿದೆ. ಇತ್ತೀಚೆಗೆ ಕಂಡುಕೊಂಡ ಹೊಸ ವಿಧಾನದಂತೆ, ಒಂದು ಸೂಜಿಯನ್ನು ಗಲ್ಲಗಳಿಗೂ ತುಟಿಗಳಿಗೂ ಚುಚ್ಚಿ, ಗಲ್ಲಗಳಿಗೆ ಗುಲಾಬಿ ಬಣ್ಣವನ್ನೂ, ತುಟಿಗಳಿಗೆ ಕೆಂಬಣ್ಣವನ್ನೂ ಕೊಡುವರಂತೆ. ಅಷ್ಟೆಯಲ್ಲ, ಈ ಬಣ್ಣಗಳು ಸ್ವಾಭಾವಿಕ ಬಣ್ಣಗಳಂತೆಯೇ ಶಾಶ್ವತವಾಗಿ ನಿಲ್ಲುತ್ತವೆಯಾಗಿಯೂ ಹೇಳುವರು.

ಬೆವರುವ ವಿಗ್ರಹ.

ಪಾಹಿನ್‌ಪುರದಿಂದೊಂದು ವಾರ್ತೆ. ಅಲ್ಲಿಯ ಮಾರುತಿ ದೇವಾಲಯದೊಳಗಿನ ಮಾರುತಿ ವಿಗ್ರಹವು ಬೆವರಲಾರಂಭಿಸಿದೆಯಂತೆ. ಬೆವರಿನ ಹನಿಗಳು ವಿಗ್ರಹದಿಂದಿಳಿಯುತ್ತಿರುವುದು ಸ್ಪಷ್ಟವಾಗಿ ಗೋಚರವಾಗುತ್ತಿವೆಯಾಗಿ ದರ್ಶಕರ ವರದಿ. ಈ ಅದ್ಭುತ ವಾರ್ತೆಯನ್ನು ಕೇಳಿ ಸಾವಿರಾರು ಜನರು ಅತ್ತ ಹೋಗಲಾರಂಭವಾಗಿಯದೆ.

ಅಮೌಲ್ಯ ಆಭರಣಗಳ ದೇಶ,—ಚೀನ.

ಪ್ರಪಂಚದಲ್ಲಿ ಅತಿ ಅಮೌಲ್ಯಾಭರಣಗಳಿರುವ ದೇಶವು ಚೀನವೆಂದು ಈ ವರ್ಷದ ನಿರ್ಧಾರ. ಚಕ್ರವರ್ತಿಯವರ ಭೋಜನ ಪಾತ್ರೆಗಳಿಗೆ ನವರತ್ನಗಳು ಕೆತ್ತಲ್ಪಟ್ಟಿವೆ. ಅರಮನೆಯ ಆಸನಗಳೆಲ್ಲ ವಜ್ರ, ವೈಢೂರ್ಯಗಳಿಂದ ವಿರಾಜಿಸುತ್ತಿವೆ. ರಾಜಸ್ತ್ರೀಯರ ವಸ್ತ್ರಗಳಿಗೂ ನವರತ್ನಗಳು! ಹಳೆಯ ಕಿರೀಟ ಮುಂತಾದುವುಗಳ ಬೆಲೆ ೧೦೦೦೦೦೦೦೦ ಪವನಂತೆ!

ಜೋಂಕೆರ್ ವಜ್ರ.

ಟ್ರಾನ್ಸ್‌ವಾಲಿನಲ್ಲಿ ಇತ್ತೀಚೆಗೆ "ಜೋಂಕೆರ್" ನಾಮಾಂಕಿತ ವಜ್ರ ದೊರೆತಿದೆ. ಬೆಲೆ ೭೫ ಸಾವಿರ ಪವನೆಂದು ಅಂದಾಜಾದ ವಜ್ರವಿದು. ಅದನ್ನೀಗ ಲಂಡನಿಗೆ ಕಳುಹಿಸಿರುವರು. ಇನ್ಸ್ಯೂರ್ ಮಾಡದೆ, ರಿಜಿಸ್ಟರ್ ಮಾಡದೆ, ಸಾಮಾನ್ಯ ಪಾರ್ಸೆಲ್‌ನಂತೆಯೇ ಕಳುಹಿದರು ಕಳ್ಳರ ಕಾಟವಿಲ್ಲದೆ ಸುಖವಾಗಿ ತಲುಪಿತಂತೆ!

ಕಲ್ಲಿದ್ದಲಿನಿಂದ ಪೆಟ್ರೋಲು.

ಇದು ಸಾಧ್ಯವೆಂದು ತೋರಿದೆಯಷ್ಟೆ? ಅದೀಗ ಸಿದ್ಧವಾಗಿ, ರೋಯಲ್ ಏರ್ ಫೋರ್ಸ್‌ನವರು ಕೊಂಚವಾಗಿ ಉಪಯೋಗಿಸಿ, ಪರೀಕ್ಷಿಸಿ, ತೃಪ್ತಿ ಕಂಡುದೂ ಆಯಿತು. ಇದು ಸಾಮಾನ್ಯ ಪೆಟ್ರೋಲಿಗಿಂತ ಕಡಿಮೆ ಖರ್ಚಿನಲ್ಲಿ—ಆದರೆ ಅಷ್ಟೇ ಉತ್ತಮವಾಗಿ—ಉಪಯೋಗಿಸಲ್ಪಡುವುದು. ಈಗ, ಪ್ರಕೃತಕ್ಕೆ ವಿಲು ವಿಮಾನಗಳ ಬಗ್ಗೆ ಆ ಪೆಟ್ರೋಲನ್ನು ಕೊಂಡುಕೊಳ್ಳುವರೆ ಸರಕಾರದವರು ಆ ಪೆಟ್ರೋಲು ಕಂಪೆನಿಯವರೊಡನೆ ಕರಾರು ಮಾಡಿರುವರು.

'ವಿಮ್ಕೋ'—'ಸಿಮ್ಕೋ'ಗಳ ಜಗಳ.

ವಿಮ್ಕೋ (WIMCO) ಎಂದರೆ "ವೆಸ್ಟರ್ನ್ ಇಂಡಿಯಾ ಮೇಚ್ ಕಂಪೆನಿ" ಎಂದರ್ಥ. ಸಿಮ್ಕೋ (CIMCO) ಎಂದರೆ "ಸೆಂಟ್ರಲ್ ಇಂಡಿಯಾ ಮೇಚ್ ಕಂಪೆನಿ" ಎಂದರ್ಥ. ಎರಡೂ ಕಂಪೆನಿಗಳು ಬೆಂಕಿಪೆಟ್ಟಿಗೆ ತಯಾರಿಸುವುವು. ಈಗ, 'ವಿಮ್ಕೋ'ದವರು 'ಸಿಮ್ಕೋ'ರವರ ಮೇಲೆ ವ್ಯಾಜ್ಯ ತಂದಿರುವರು;—"ಸಿಮ್ಕೋ" ಎಂಬ ಹೆಸರಿನಿಂದ ಜನರು 'ವಿಮ್ಕೋ' ಎಂದು ಭ್ರಮಿಸಿ 'ಸಿಮ್ಕೋ'ವನ್ನೇ ಆದರಿಸಿ ವಿಮ್ಕೋ ವ್ಯಾಪಾರ ಕೆಡುವ ಸಂಭವವಿದೆಯೆಂದು! ವ್ಯಾಜ್ಯವು ಬೊಂಬಾಯಿ ಹೈಕೋರ್ಟಿನಲ್ಲಿ ವಿಚಾರಣೆಯಾಗುತ್ತಲಿದೆ. ಜಗಳವು 'ಟ್ರೇಡ್ ಮಾರ್ಕ್'ನ ಜಗಳ. ತಮ್ಮ ಲೇಬಲನ್ನು ನೋಡಿ ಜನರು ಇತರರದೆಂದು ಭ್ರಮಿಸುವಂತಿಲ್ಲವೆಂದು 'ಸಿಮ್ಕೋ'ರವರ ಪ್ರತಿವಾದ. "ಭ್ರಮಿಸುವರಯ್ಯಾ! ವ್ಯಾಜ್ಯ ತೀರ್ಮಾನವಾಗುವ ತನಕ ಸಿಮ್ಕೋವಿಗೊಂದು ಇಂಜಂಕ್ಷನ್ ಕೊಡಿರಿ" ಎಂದು ವಿಮ್ಕೋರವರ ವಾದ. ಜಡ್ಜರು ಇಂಜಂಕ್ಷನ್ ಕೊಡಲಿಲ್ಲ. ವ್ಯಾಜ್ಯವನ್ನು ಬೇಗನೇ ತೀರ್ಮಾನಗೊಳಿಸುವೆನೆಂದರು.

ಹೈದರಾಬಾದಿನ ಭಿಕ್ಷುಕರೆಷ್ಟು?

ಹೈದರಾಬಾದಿನಲ್ಲೆಷ್ಟು ಭಿಕ್ಷುಕರಿರುವರೆಂದು ಅಂದಾಜು ಮಾಡಿರುವರು. ಹೆಚ್ಚಿಲ್ಲ—ಕೇವಲ ೧೫೦೦೦! ಇವರಲ್ಲಿ ಹೆಂಗುಸರು ೬೩೨೧ ಮಾತ್ರ. ಮತ್ತೊಂದು ಚೋದ್ಯವೆಂದರೆ,—ಇವರಲ್ಲಿ ೧೫ ಸಾವಿರ ಮಂದಿಗೆ ಬೇರೆ ಕಸಬು ಇದ್ದರೂ ಉಪಕಸಬಾಗಿ ಭಿಕ್ಷಾವೃತ್ತಿಯನ್ನು ಕೈಕೊಂಡಿರುವರಂತೆ.

ಪ್ರಚಲಿತಸಮಾಚಾರ.

ಜಪಾನು ಹಿಂದಡಿಯಿಟ್ಟಿದೆಯೆ?

ಎಲ್ಲರಿಗೂ ಎಲ್ಲ ಕಾಲ ಇಳಿತ—ಭರತವೆಂಬುದಿದೆ. ತನ್ನ ವ್ಯಾಪಾರ ಮಂತ್ರದ ಮಾಯಾ ವ್ಯಾಪಾರದಿಂದ, ಜಗತ್ತಿನ ಪ್ರಬಲ ಜನಾಂಗಗಳೆಂದು ಹೆಸರುಗೊಂಡಿರುವವರ ವ್ಯಾಪಾರವನ್ನು ತೂಗಡಿಕೆಯ ಮಬ್ಬಿನಲ್ಲಿರಿಸಿ ತಾನೇ ತಾನಾಗಿ ಮೆರೆಯುವ ಜಪಾನು, ಈ ವರ್ಷ ಹಿಂದಡಿಯಿಡುವ ಲಕ್ಷಣಗಳನ್ನು ತೋರುತ್ತಿದೆ. ಬೊಂಬಾಯಿಯಲ್ಲಿ ನೂಲಿನ ಆಮದು, ಕಳೆದ ದಶಂಬರ ತಿಂಗಳಲ್ಲಿ ಬಹುಶೀಘ್ರ ಸಂಯುಕ್ತ ರಾಜ್ಯದಿಂದಲೇ ಆದಂತೆ ಅಂಕೆ ಸಂಖ್ಯೆಗಳಿಂದ ತಿಳಿಯಬರುವುದು. ಜಪಾನಿನ (ಹಾಗೂ ಬ್ರಿಟನಿನ) ಅಂಕೆಗಳಲ್ಲಿ ಲಕ್ಷಾಂತರ ರಾತ್ತುಗಳಷ್ಟು ಇಳಿತಾರವಿದೆ. ಆದರೂ,—ನಂಬಲಾಗದು,—ಈ ಅಂಕೆಗಳು ಬೇಗನೇ ತಲೆಕೆಳಗಾಗಲೂ ಬಹುದು.

ಬೊಂಬಾಯಿ ಬಂದರಿನ ಭವಿಷ್ಯ.

ಬೊಂಬಾಯಿ ಕೋರ್ಪೊರೇಶನಿನವರು, ಬೊಂಬಾಯಿ ನಗರದೊಳಗೆ ಬರುವ ಸರಕುಗಳ ಮೇಲೆ "ನಗರ ಸುಂಕ"ವೆಂಬುದನ್ನು ಅಧಿಕವಾಗಿ ಹೊರಿಸಿದ ಕಾರಣ, ಕಂಪನಿ ವ್ಯಾಪಾರವು ಕಾಥಿಯಾವಾಡ ಬಂದರುಗಳ ಕಡೆಗೆ ಹೆಚ್ಚುತ್ತ ಹೋಗಿ, ಬೊಂಬಾಯಿ ಬಂದರಿನಲ್ಲಿ ಕಡಿಮೆಯಾಗುತ್ತಿದೆ. ಇದರಿಂದ ಗಾಬರಿಯಾಗಿ, ಪರಿಹಾರವೇನೆಂದು ಅಲ್ಲಿಯ ನಗರಸಭೆಯಲ್ಲಿ ಆಲೋಚಿಸುತ್ತ, "ನಗರ ಸುಂಕವನ್ನು ತೆಗೆದುಹಾಕಿದರಾಗದೇ?" ಎಂಬ ಪ್ರಶ್ನೆಯೆದ್ದಿದೆ.

'ಸಟ್ಟಾ' ಜೂಜಾಟದ ಸೋಂಕು.

ಇದು ಇತ್ತೀಚೆಗೆ ಬೊಂಬಾಯಿಯಲ್ಲಿ ವಿಶೇಷವಾಗಿ ಕೂಲಿಗಾರ ತರಗತಿಗೂ ಹರಡಿದೆ. ಅಮೇರಿಕದಿಂದ ಬರುತ್ತಿರುವ ಅರಳೆದರಗಳ ಮೇಲೆ ಹಣವನ್ನಿರಿಸಿ ಆಡುವ ಈ ಮಹಾನಂದಕರ ಆಟವು ಬೊಂಬಾಯಿಯಲ್ಲಿ ಪ್ರಚಾರವಾಗಿರುವಷ್ಟು ಇನ್ನೆಲ್ಲಿಯೂ ಇಲ್ಲವೆನ್ನಬಹುದು. ಅನೇಕ ಶ್ರೀಮಂತ ಕೋಮಟಿಗಳೇ ಇದರ ಸೂತ್ರಧಾರರಾಗಿ, ಬಡವರಲ್ಲಿ ಚಿಂದಿಬಟ್ಟೆಗಳ ಸೂತ್ರಗಳೂ ಉಳಿಯದಂತಾಗಿದೆ. ಈಗಲಂತೂ ಈ ಆಟವಾಡುವವರ ಪ್ರಯೋಜನಕ್ಕಾಗಿಯೇ ನಿತ್ಯವೂ ಅರಳೆ ದರಗಳಿರುವ ಪತ್ರಿಕೆಗಳು ಅಚ್ಚಾಗಿ ಹೊರಡುತ್ತಿವೆ. ಇದನ್ನು ಸರಕಾರವು ತಡೆವರೆ ಯಾವ ಪ್ರಯತ್ನವನ್ನು ಕೈಕೊಂಡಿದೆ ಯಾ ಕೈಗೊಳ್ಳುವ ಆಲೋಚನೆಯಲ್ಲಿದೆ ಎಂದೊಬ್ಬ ಮೆಂಬರರು ಕೌನ್ಸಿಲಿನಲ್ಲಿ ಪ್ರಶ್ನೆ ಹಾಕಿ, "ಸರಕಾರವು ಏನನ್ನೂ ಮಾಡಲು ಅಸಮರ್ಥವಾಗಿದೆ" ಎಂಬ ಉತ್ತರ ಪಡೆದರು. ಆಡುವವರು ತಮ್ಮ ಪಾಡನ್ನು ಸರಿಪಡಿಸಲೆಂದೇ ಮತ್ತೂ ಮತ್ತೂ ಆಡುವವರಾದರೆ, ಆಡದ ಕೆಲವೇ ಮಂದಿ ಆಡುವವರನ್ನು ತಡೆಯಲಾರರಾದರೆ, ಸರಕಾರದವರ ಈಗಿನ 'ಎರೆಸ್ಟ್' ಕ್ರಮದಿಂದ ಪ್ರಯೋಜನವಾಗಿಲ್ಲವಾದರೆ ಇನ್ನಿದರ ಪರಿಹಾರವೆಲ್ಲಿ?

ಗವರ್ನರರ ಆಸನ ಹಿಂದೀಯರಿಗಿಲ್ಲ?

ಬಂಗಾಳದ ಗವರ್ನರರಾಗಿರುವ ಸರ್ ಜೋನ್ ಅಂಡರ್ಸನ್ನರವರು, ಬರುವ ಜುಲೈ ತಿಂಗಳಲ್ಲಿ ರಜೆ ಮೇಲೆ ವಿಲಾಯತಿಗೆ ತೆರಳಲಿರುವರೆಂದೂ, ಅವರ ಸ್ಥಾನದಲ್ಲಿ ಬದಲಿ ನೋಡುವರೆ ಅಲ್ಲಿಯ ಗೃಹಮಂತ್ರಿಗಳಾದ ಪಿ. ಆರ್. ಎಸ್. ರೈಡ್ಡರವರು ನೇಮಿಸಲ್ಪಡಬಹುದೆಂದೂ 'ಫ್ರೀ ಪ್ರೆಸ್' ವಾರ್ತೆ! ಸರ್ ಎ. ಕೆ. ಘಜ್ನವಿಯವರು ಅಲ್ಲಿಯ ಎಗ್ಜಿಕ್ಯೂಟಿವ್ ಕೌನ್ಸಿಲಿನ ಹಿರಿಯ ಮೆಂಬರರಾಗಿರುವರಾದರೂ ಅವರ ಮೆಂಬರಿಕೆಯು ಮೇ ತಿಂಗಳಲ್ಲೇ ಮುಗಿಯಲಿರುವ ಕಾರಣ, ಅವರಿಗೆ "ಸಿಗಲು-ಹು-ದು" ಎಂದಿದ್ದ ಆಸೆಯು ನಿರರ್ಥಕವಂತೆ.

ಇದು ಶಸ್ತ್ರಸನ್ಯಾಸವೇ?

ಇದೇ ಜನವರಿ ೩೧ ಕ್ಕೆ ಅಂತ್ಯವಾಗುವ ಒಂದು ವರ್ಷದಲ್ಲಿ ಭೂಲೋಕದ ಪ್ರಬಲ ಜನಾಂಗಗಳು ಕಟ್ಟಿಸಿದ ಹೊಸ ಯುದ್ಧ ನಾವೆಗಳೆಷ್ಟೆಂದು ತಿಳಿದಿರಿ? ಬ್ರಿಟಿಷ್, ಅಮೇರಿಕ, ಜಪಾನು, ಇಟಲಿ, ಫ್ರಾನ್ಸ್, ರಷ್ಯ ಮತ್ತು ಜರ್ಮನಿ ಇವರೆಲ್ಲರ ಒಟ್ಟು ಸಂಖ್ಯೆ ೧೭೬! ಇದು ಹಿಂದಣ ವರ್ಷಕ್ಕಿಂತ ೧೬ರಷ್ಟು ಕಡಿಮೆಯಾಗಿದೆಯಂತೆ. ಯುದ್ಧ ನಾವೆಗಳಲ್ಲಿ ಬ್ರಿಟನಿಗೆ ೩೪, ಅಮೇರಿಕಕ್ಕೆ ೩೪; ಸಬ ಮೇರಿನುಗಳಲ್ಲಿ ಬ್ರಿಟನ್ ೯, ಅಮೇರಿಕ ೬, ಜಪಾನು ೩, ಫ್ರಾನ್ಸು ೧೫ ಮತ್ತು ಇಟಲಿ ೨೨. ಇನ್ನು ನೈನ್ಯವನ್ನೊಯ್ಯುವ ನಾವೆಗಳು ಬ್ರಿಟನ್ ೧೦, ಅಮೇರಿಕ ೧೧, ಜಪಾನು ೩, ಫ್ರಾನ್ಸ್ ೬ ಮತ್ತು ಇಟಲಿ ೬. ರಷ್ಯದೊಡನೆ ಸಬ ಮೇರಿನುಗಳೂ ಯುದ್ಧ ನಾವೆಗಳೂ ಒಟ್ಟು ೪೪ ಇವೆ.

ಇನ್ನು 'ಕೈಲಾಸ'ವೆಂದಿಗೆ?

ಗೌರೀ ಶಂಕರಕ್ಕೆ ಅರ್ಥ ಸಾಹಸಿಗಳು ಇನ್ನಾವಾಗ ವಿಮಾನವೇರಿ ಹಾರುವರೆಂದು ಪ್ರಪಂಚವೆಲ್ಲ ಕುತೂಹಲದಿಂದ ನಿರೀಕ್ಷಿಸಿ ಕಾಯುತ್ತಿರುವಾಗ,—"ಇನ್ನು ಹದಿನೆಂಟು ವರ್ಷಗಳ ತನಕ ಸಾಧ್ಯವಿಲ್ಲ"ವೆಂದು ಆಂಗ್ಲ ಮಹನೀಯರೊಬ್ಬರೇ ಪ್ರಕಟಿಗೊಳಿಸಿರುವರು. ಹೇಗೆ? ವಿಮಾನವಿಲ್ಲದೆ ಅಲ್ಲ, ಸಾಹಸಿಗಳ ಅಭಾವದಿಂದಲೂ ಅಲ್ಲ. ಗೌರೀಶಂಕರಕ್ಕೆ ಹಾರಬೇಕಾದರೆ, ಅಲ್ಲಿಯ ನೇಪಾಳದ ಭೂಪತಿಗಳ ಅಪ್ಪಣೆ ಬೇಕು. ಆದರೆ, ಅಲ್ಲಿ ಮುತ್ತೊಬ್ಬ 'ದಲೀಬಾಮ'ನು (ಅಲ್ಲಿಯ ಅರಸರನ್ನು ಹಾಗೆ ಕರೆವರು) ಪಟ್ಟಕ್ಕೆ ಬರಬೇಕಾದರೆ ಇನ್ನು ಹದಿನೆಂಟು ವರ್ಷಗಳು ಬೇಕಾಗಬಹುದೆಂದು ಲೆಕ್ಕ.

ಮತ್ತೂ ಪ್ರವಾದ

'ಪ್ರಮಾದ'ವಲ್ಲ, 'ಪ್ರವಾದ'! ೧೯೩೭ನೇ ಇಸವಿಯಲ್ಲಿ ಹಿಂದೂ ದೇಶದ ಮುಖ್ಯ ಸ್ಥಳಗಳಲ್ಲೇನಾಗುವುದೆಂದು ಪಂಡಿತ ನಾಯರರೆಂಬ ಜ್ಯೋತಿಷ್ಯರು ಹೇಳುತ್ತಾರೆ:—"ಮಾರ್ಚಿಯಲ್ಲಿ ಪಂಜಾಬಿನಲ್ಲಿ ಅಧಿಕ ಪ್ರವಾಹ; ಸಪ್ಟಂಬರದಲ್ಲಿ ಬರ್ಮಾದಲ್ಲಿ ಭೂಕಂಪ; ದಶಂಬರದಲ್ಲಿ ಬೊಂಬಾಯಿಯಲ್ಲಿ ಅಗ್ನಿಯ ಅನಾಹುತಗಳು!!!" ಹೊಸ ಸುಂಕಗಳ ವಿಚಾರವನ್ನೂ ಈ ಪಟ್ಟಿಗೆ ಸೇರಿಸಿದರಾಗದಿತ್ತೆ?

ಇಂಡಿಯಾ-ಸರಕಾರದ ಆಯ-ವ್ಯಯದ ಪಟ್ಟಿ.

ಬರುವ ವರ್ಷದ ಆಯ-ವ್ಯಯದ ಅಂದಾಜಿನ ಪಟ್ಟಿಯು ಎಸೆಂಬ್ಲಿಯ ಮುಂದಿರಿಸಲಾಗಿದೆ. ಅರ್ಥಸಚಿವರು ಆ ವಿಷಯವಾಗಿ ಮಾಡಿರುವ ಭಾಷಣದಿಂದ ಈ ಕೆಳಗಿನ ಅಂಶಗಳನ್ನು ಕೊಟ್ಟಿದೆ:—

ಸರಕಾರದ ಆಯವು ಈ ವರ್ಷಾರಂಭಕ್ಕೆ ರೂ. ೧೧೯.೩೧ ಕೋಟಿ ರೂಪಾಯಿ ಮತ್ತು ವ್ಯಯವು ರೂ. ೧೧೫.೦೩ ಎಂದು ತಿದ್ದುಪಡಿಯಾದ ೧೯೩೬—೩೭ನೇ ಆಯವ್ಯಯದ ಪಟ್ಟಿಯಾಗಿದೆ. ಹೀಗಾಗಿ ರೂ. ೪.೨೮ ಕೋಟಿ ಉಳಿಯುವುದು. ಇದು ನಿರೀಕ್ಷಿಸಿದಷ್ಟು ಚೆನ್ನಾಗಿಲ್ಲ. ಆದರೆ ಉಳಿಯುವ ನಿಂಬಲಿಗನಲ್ಲಿ ರೂ. ೩ ಕೋಟಿಯನ್ನು ಸರಕಾರದ ಸಾಲಪಾವತಿಗಾಗಿ ವಿನಿಯೋಗಿಸಲಾಗುವುದು. ಉಳಿದ ರೂ. ೧.೨೮ ಕೋಟಿಯನ್ನು ಬಿಹಾರಿನ ಭೂಕಂಪ ಸಂಕಷ್ಟನಿವಾರಣೆಗೆ ಉಪಯೋಗಿಸಲಾಗುವುದು. ೧೯೩೭—೩೮ನೇ ಆಯವ್ಯಯದ ಅಂದಾಜಿನ ಸ್ಥಿತಿ ಹೀಗಿದೆ:—ಅಂದಾಜಾಗಿರುವ ಆಯ ರೂ. ೭೮.೦೮ ಕೋಟಿ; ವ್ಯಯ ರೂ. ೭೯.೬೧ ಕೋಟಿ. ಬೇರೆ ಕೆಲವು ಇಸಮುಗಳೂ ಕೂಡಿ ಒಟ್ಟು ರೂ. ೩ ಕೋಟಿ ನಷ್ಟ ತೋರುವುದು.

ಬರುವ ವರ್ಷದ ಅಂದಾಜುಪಟ್ಟಿಯಲ್ಲಿ, ಆಯದ ಇಸಮಿನಲ್ಲಿ ಈ ಕೆಳಗೆ ಕಾಣಿಸಿದಂತೆ ನಷ್ಟವು ನಿರೀಕ್ಷಿಸಲ್ಪಟ್ಟಿದೆ:—ಹೊಗೆಸೊಪ್ಪು ೮ ಲಕ್ಷ; ಯಂತ್ರಾದಿಗಳು ೩೩; ಕಬ್ಬಿಣ ೧೦, ಸಕ್ಕರೆ ೩; ಅರಳೆಯ ಆರವೆ ೧೫; ನೆಲ ಸುಂಕ ೭೫.

ಆದರೆ ಈ ಕೆಳಗಿನವುಗಳಲ್ಲಿ ಕೊಂಚ ರೆಚ್ಚು ಆದಾಯವು ತೋರಿಬರಬಹುದು:—ಅರಳೆ ರೂ. ೧೦ ಲಕ್ಷ; ಆಹಾರ ಪಾನೀಯಗಳು ೪; ಸಾಲು ೩೫; ಇತರ ವಸ್ತುಗಳು ೧೦; ನಾರು ೨೦; ಮೋಟಾರ್ ಸ್ಪಿರಿಟ್ ೫; ಸೀಮೆ ಎಣ್ಣೆ ೧೫.

ಮಿಲಿಟರಿ ವೆಚ್ಚಗಳನ್ನು ಈ ವರೆಗೆ ಸುಮಾರು ೧೧ ಕೋಟಿ ರೂಪಾಯಿಗಳಷ್ಟು ಕಡಿಮೆಮಾಡಿದುದಾಗಿಯು ಎಂದು ಸಚಿವರು ಸಾರಿರುವರು. ಸಂಬಳ ಕಡಿತವನ್ನೂ ಜ್ಯಾರಿಯಲ್ಲಿ ಇರಿಸಲಾಗಿದೆ. ತೊಗಲುಗಳ ಮೇಲಿನ ರಫ್ತಿನ ಸುಂಕವನ್ನು ತೆಗೆದುಹಾಕಲಾಗಿದೆ. ಪೋಸ್ಟಲ್ ದರಗಳಲ್ಲಿ ಕೊಂಚ ರಿಯಾಯತಿ ತೋರಿಸಲಾಗಿದೆ

ಹೊಸ ತೆರಿಗೆಗಳು:— ಸಕ್ಕರೆ, ಹೊಗೆಸೊಪ್ಪು ಮತ್ತು ಬೆಂಕಿಪೆಟ್ಟಿಗೆಗಳ ಮೇಲೆ ಹೊಸ ಸುಂಕಗಳುಂಟಾಗುವುವು. ವಿದೇಶೀ ಸಕ್ಕರೆಗೆ ಈ ಮೊದಲೇ ಒಂದು ಹಂಡ್ರೆಡ್ವೈಟಿಗೆ ರೂ. ೭—೪—೦ರಂತೆ ಸುಂಕವಿದ್ದುದರ ಮೇಲೆ ರೂ. ೧—೧೩—೦ರಷ್ಟು ಅಧಿಕ ಸುಂಕವೇರಿಸಿದ್ದ ಕಾರಣ ಇನ್ನೂ ಹೊರಿಸುವುದು ಅನ್ಯಾಯವೂ ಅಸಮಂಜಸವೂ ಆಗುವುದು. ಇನ್ನು ವಿದೇಶಗಳಿಂದ ಬರುವ ಸಕ್ಕರೆಯು ಆಮದು ನಿಂತು ಹೋದರೆ ದೇಶೀ ಕಂಪೆನಿಗಳಿಗೆ ಉತ್ಪತ್ತಿ ಹೆಚ್ಚಿ ಸ್ಪರ್ಧೆಗಳುಂಟಾಗಿ ಕೆ.ಇ.ಕೇ ಹೆಚ್ಚಾಗುವ ಸಂಭವ. ಬಿಹಾರ್ ಭೂಕಂಪದ ದೆಸೆಯಿಂದ ಸಕ್ಕರೆಯು ಪುನಃ ವಿದೇಶಗಳಿಂದ ಕೊಂಚ ಹೆಚ್ಚು ಬರುವ ಸಂಭವವಿದೆ. ವಿದೇಶೀ ಸಕ್ಕರೆಯ ಮೇಲಿದ್ದ ಜುಮ್ಲಾ ರೂ. ೯—೪—೦ರ ಸುಂಕವನ್ನು ರೂ. ೭—೧೨—೦ಕ್ಕೆ ನಿಲ್ಲಿಸಿ, ವಿದೇಶೀ ಹಾಗೂ ಸ್ವದೇಶೀ ಸಕ್ಕರೆಯ ಉತ್ಪನ್ನದ ಮೇಲೆ ಹಂಡ್ರೆಡ್ವೈಟಿಗೆ ರೂ. ೧—೫—೦ರಂತೆ ಅಬ್ಕಾರಿ ಸುಂಕ ಹೊರಿಸುವುದು.

ಹೊಗೆಸೊಪ್ಪು:—ಕಚ್ಚಾ ಹೊಗೆಸೊಪ್ಪಿಗೆ ರೂ. ೨—೩—೦ರಂತೆ (?); ಸಿಗರೇಟುಗಳ ಮೇಲೆ ಸಾವಿರ ಸಿಗರೇಟುಗಳಿಗೆ ರೂಪಾಯಿ ೫—೧೫—೦ ಮತ್ತು ಅವುಗಳ ಕ್ರಯದ ಎಣಿಕೆಯಲ್ಲಿ ಸೇಕಡಾ ೨೫ ಹೆಚ್ಚು.

ಬೆಂಕಿ ಪೆಟ್ಟಿಗೆ:— ಇದರ ಮೇಲೆ ಸುಂಕಹೊರಿಸಲು ಪ್ರತ್ಯೇಕವಾದ ಮಸೂದೆಯೊಂದು ಸಿದ್ಧವಾಗಿದೆ. ೧೪೪ ಪೆಟ್ಟಿಗೆಗಳಿಗೆ ರೂಪಾಯಿ ೨—೪—೦ ಸುಂಕ ಬೀಳುವುದು. (ಇದು ಬ್ರಿಟಿಷ್ ಇಂಡಿಯದಲ್ಲಿ ತಯಾರಾಗುವ ಬೆಂಕಿಪೆಟ್ಟಿಗೆಗಳಿಗೆ ಲಾಗುವಾಗುವುದು.)

ಹೊಸ ಸುಂಕಗಳ ಆಯ:— ಸಕ್ಕರೆಯ ಮೇಲಿನ ಈ ಸುಂಕದಿಂದ ರೂ. ೧೪೦ ಲಕ್ಷವೂ, ಹೊಗೆಸೊಪ್ಪಿನಿಂದ ೩೦ ಲಕ್ಷವೂ, ಬೆಳ್ಳಿಯ ಮೇಲಿನ ಆಮದು ಸುಂಕವನ್ನು ಕಡಿಮೆಮಾಡುವುದರಿಂದ ರೂ. ೪ ಲಕ್ಷವೂ ಉತ್ಪನ್ನವಾಗುವುವು. ಅಂತು ಒಟ್ಟು ರೂ. ೧೭೩ ಲಕ್ಷ. ಇದರಿಂದ ಜಮಾ ನಷ್ಟ ರೂ. ೧೫೩ ಕೋಟಿ ಹೋಗಲಾಗಿ ರೂ. ೧೬ ಲಕ್ಷ ಉಳಿಯುವುದು

ಬಂಗಾಳಕ್ಕೆ ಸಹಾಯ:— ಬಂಗಾಳ ಪ್ರಾಂತ್ಯವು ಕಳೆದ ಕೆಲ ವರ್ಷಗಳಿಂದ ಬಹಳ ಸಂಕಷ್ಟಗಳಿಗೆ ಗುರಿಯಾಗಿದ್ದು, ಅಲ್ಲಿಯ ಪ್ರಾಂತೀಯ ಸರಕಾರದ ಆರ್ಥಿಕ ಸ್ಥಿತಿಯು ವರ್ಷವರ್ಷ ೨ ಕೋಟಿ ರೂಪಾಯಿಗಳಷ್ಟು ನಷ್ಟಹೊಂದುತ್ತಿರುವನ್ನು ಶೋಚನೀಯವಾಗಿದೆ. ನಾರಿನ ಸುಂಕದಿಂದ ಬರುವ ಉತ್ಪನ್ನದಲ್ಲಿ ಸೇಕಡಾ ೫೦ರಷ್ಟನ್ನು, ಬೆಂಕಿಪೆಟ್ಟಿಗೆಯ ಮೇಲೆ ಹೊಸ ಸುಂಕವನ್ನು ಹೊರಿಸಿ ಅದರ ಉತ್ಪನ್ನವನ್ನೂ ಬಂಗಾಳಕ್ಕೆ ಕೊಡಿಸುವುದು. ನಾರಿನ ಅರೆವಾಸಿ ರಫ್ತುಸುಂಕವು ಬರುವ ವರ್ಷ ಸುಮಾರು ೧೯೦ ಲಕ್ಷವಾಗಬಹುದು. ಇವರಲ್ಲಿ ೧ ಲಕ್ಷವನ್ನು ವಸೂಲಿಯಾಗಿ ಬಿಡಲಾಗಿಸಿ, ಉಳಿದ ೧೮೯ ಲಕ್ಷಗಳಲ್ಲಿ ಬಂಗಾಳಕ್ಕೆ ೧೬೭ ಲಕ್ಷವನ್ನೂ, ಬಿಹಾರ್-ಒರಿಸ್ಸಾಗಳಿಗೆ ೧೩ ಲಕ್ಷವನ್ನೂ, ಅಸ್ಸಾಮಿಗೆ ೯ ಲಕ್ಷವನ್ನೂ ಕೊಡಿಸಬಹುದು.

ಭೂಕಂಪ ಪ್ರದೇಶದವರಿಗೆ ಸಹಾಯ:— ಭೂಕಂಪದಲ್ಲಿ ನಷ್ಟವಾದ ಸರಕಾರಿ ಕಟ್ಟಡ, ಶಾಲೆ, ಆಸ್ಪತ್ರೆ, ರಸ್ತೆ ಇತ್ಯಾದಿಗಳ ಬಗ್ಗೆ ಹೆಚ್ಚು ಹಣ ಬೇಕಾಗಿದೆ. ನಮ್ಮ ಅಂದಾಜಿನಲ್ಲಿ ಉಳಿವ ೧೨೮ ಲಕ್ಷವನ್ನು ನಾವು ಬಿಹಾರಿನ ಹೆಸರಲ್ಲಿ ವಿಭಾಗಿಸುವೆವು. ಸರಕಾರದ ಕಟ್ಟಡಗಳ ಬಗ್ಗೆ ಕನಿಷ್ಠಪಕ್ಷ ೧ ಕೋಟಿ ರೂಪಾಯಿ ಬೇಕಾಗಬಹುದು. ಅದಕ್ಕೆ ಕೇಂದ್ರಸರಕಾರವು ಅರೆವಾಸಿಯನ್ನು ಕೊಡಬೇಕೆನ್ನು

(೧೩ನೇ ಪುಟಕ್ಕೆ ಮುಂದುವರಿಸಿದೆ.)

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್.
ಸ್ತ್ರೀಯರಿಗೊಂದು ಮಹಾ ವರ.

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ; ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮುಟ್ಟು, ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ, ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧ ರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ. ರೂ. 8 ಮತ್ತು 1-10-0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

Sole Agents for West Coast and North Kanara

Wanted Agents in Principal Towns. ಪೊಪ್ಯುಲರ್ ಸ್ಟೋರ್ಸ್,
For terms Apply to:—POPULAR STORES, ರಥಬೀದಿ ಮಂಗಳೂರು.
Mangalore.

ವಿನೋದ ಪ್ರಪಂಚ!!!

ಬೆಂಗಳೂರಿನ ಹಾಸ್ಯರಸಭರಿತ ಪಕ್ಷ ಪತ್ರಿಕೆ!
ಓದಿದರೆ ನಕ್ಕು ನಕ್ಕು ಸಾಕಾಗುತ್ತದೆ.
ಬಾಲವೃದ್ಧರಿಗೂ ಓದಲು ಸುಲಭವು.
ವಾ. ಚಂದಾ ರೂ. ೧-೮-೦
ಚಂದಾ ಮನಿಯಾರ್ಡರ್ ಮೂಲಕ. ವಿ. ಪಿ. ಯಿಂದ ಇಲ್ಲ.
ಜಾಹೀರಾತಿಗೆ ಸುಸಮಯ!
ಸಂಪಾದಕ,
ವಿನೋದ ಪ್ರಪಂಚ, ಬೆಂಗಳೂರು ಸಿಟಿ.
ದ. ಕನ್ನಡ ಏಜಂಟರು—ಪೊಪ್ಯುಲರ್ ಸ್ಟೋರ್ಸ್ ಮಂಗಳೂರು.

ನೋಟೀಸು.

ಉಡುಪಿ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

O. S. 528/1933.

ಸಣ್ಣಯ್ಯ ಯಾನೆ ನಾರಾಯಣ ಹೊಳ್ಳ, ಜನರಲ್ ಏಜಂಟ್ ನಾಗಪ್ಪ ಹೊಳ್ಳ—ವಾದಿ.

ಮತ್ತು

ವ್ಯಾನರ ಮಹಾಬಲೇಶ್ವರ ಕೊಡ್ಗಿ—ಪ್ರತಿವಾದಿಯು.

ಇವರೊಳಗೆ.

ಸದ್ರಿ ವ್ಯಾಜ್ಯದ 5ನೇ ಪ್ರತಿವಾದಿ ರುಜಾರಿಯೋ ಬಾಂಜಾ, 8ನೇ ಪ್ರತಿವಾದಿ ಬೋನಿಫಾಸ್ ಬಾಂಜಾ,—ಮರಿಯಣ್ಣ ಬಾಂಜನ ಮಗಂದಿರು—ಉಡ್ಪಿ ತಾಲೂಕು ಮಟ್ಪಾಡಿ ಗ್ರಾಮದಲ್ಲಿರುವವರು.

1ನೇ ಪ್ರತಿವಾದಿ ತಂದೆ ವ್ಯತಪಟ್ಟ ಮಂಜುನಾಥಯ್ಯನು ನರಸಿಂಹ ಚಡಗರಿಗೆ ತಾ. 6-1-21ರಲ್ಲು ರೂ. 1000ಕ್ಕೆ ವ ತಾ. 15-8-28ರಲ್ಲು ನಾರಾಯಣ ಚಡಗರಿಗೆ ರೂ. 1000ಕ್ಕೆ ಕೂಡ ಬರಕೊಟ್ಟ 2 ಈಡು ದಸ್ತೈವಜುಗಳನ್ನು ವಾದಿಯು ರಿ. ನಿಶಿಂ ಟ್ರೆನ್ಸ್‌ಫರ್ ಪಡೆದು ಸದರಿ 2 ದಸ್ತೈವಜುಗಳ ಮೇರೆಗೆ ಬಂತಕ್ಕ ಅಸಲು ಬಡ್ಡಿ ವ ಬಡ್ಡಿ ಮೇಲಣ ಬಡ್ಡಿ ಕೂಡಾ ರೂ. 3000ಕ್ಕೆ ಮಾಡಿದ ದಾವೆಯು ತಾರೀಕು 17-3-34ಕ್ಕೆ ಇಟ್ಟಿರುತ್ತದೆ. ಆ ಕಾರಿತು 5, 8ನೇ ಪ್ರತಿವಾದಿಗೆ ಆಕ್ಷೇಪಗಳಿದ್ದಗೆ, ಸದರಿ ದಿನಸ ನೋಟ್ಸಂಡ ಕೋರ್ಟಿನಲ್ಲಿ ಹಗಲು ಘಂಟೆ 10ಕ್ಕೆ ಹಾಜರಾಗಿ ಜವಾಹೀರು ಮಾಡಿ ಕೊಳ್ಳತಕ್ಕದ್ದು. ತಪ್ಪಿದರೆ ಅವರ ಗೈರುಹಾಜರಿಯಲ್ಲಿ ಸದರಿ ವ್ಯಾಜ್ಯವು ತೀರ್ಮಾನಿಸಲ್ಪಡುವುದು.

ಮೊಕ್ಕಾಂ, ಉಡ್ಪಿ
28-2-1934

B. Vasudeva Rao,
Counsel for Plaintiff.

ನೋಟೀಸು.

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

O. S. 557/1932. R. I. A. 1287/1933.

ಕಿದಿಯೂರು ಅಹಮ್ಮದ ಸಾಹೇಬ—ವಾದಿ, ಅರ್ಜಿದಾರ

ಮತ್ತು

1. ಕ್ಯಾಬುದ್ದೀನ್ ಯಾನೆ ಬಾವು ಸ್ಯಾಬ, 2. ಇಬ್ರಾಹಿಂ ಸ್ಯಾಬ, 3. ಪಾತಿಮಾ ಬೀಬಿ—ಶೊಡ್ಯಾನ್ ವೃದಿನ ಸಾಹೇಬರ ಮಕ್ಕಳು. ಉಡುಪಿ ತಾಲೂಕು ಕಡುತೊನ್ಸೆ ಗ್ರಾಮದ ಹೊಡೆಯಲ್ಲಿರುವವರು—ಪ್ರತಿವಾದಿಯು, ಎದ್ರಿಯು.

ಇವರೊಳಗೆ.

ಸದರಿ ಅರ್ಜಿಯು 1ನೇ 2ನೇ ಎದ್ರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—ಮೇಲ್ಕಾಣಿಸಿದ O. S. 557/'32ನೇ ಡಿಕ್ರಿಯ ಮೇಲಾದ ಫೈನಲ್ ಡಿಕ್ರಿ ವಿಧಿ ಪ್ರಕಾರ ಜವಾಬುದಾರಿ ಆಸ್ತಿ ಏಲಂ ಆಗಿ ಹುಟ್ಟಿ ಬಂದ ಐವೇಜು ಹೋಗುತ್ತ, ಬಾಕಿ ಆಗತಕ್ಕ ರೂಪಾಯಿ 64-12-11 ಮತ್ತು ಅದರ ಮೇಲಣ ತಾ. 23-11-33ರ ತಾರೀಖಿನ ಬಡ್ಡಿ ಮತ್ತು ಖರ್ಚು ವಗೈರೆ ಬಗ್ಗೆ ಅರ್ಜಿದಾರನು ಪರ್ಸನಲ್ ಡಿಕ್ರಿ ಅಪೇಕ್ಷಿಸಿ ಕೊಟ್ಟ ಮೇಲೆ ಹೇಳಿದ ಅರ್ಜಿಯ ತನ್ನ ವಿಷಯದಲ್ಲಿ 1ನೇ 2ನೇ ಎದ್ರಿರ ಆಕ್ಷೇಪಣೆಯಿರುವುದಾದರೆ ಅವರು ತಾ. 20-3-1934ಕ್ಕೆ ಸದ್ರಿ ಕೋರ್ಟು ಮುಂದೆ ಜವಾಹೀರು ಮಾಡಬಹುದೆಂತಲೂ ತಪ್ಪಿದರೆ ಅವರನ್ನು ಎಕ್ಸ್‌ಪಾರ್ಟಿ ಮಾಡಿ ತೀರ್ಮಾನಿಸಲಾಗುವುದೆಂತಲೂ ಈ ಮೂಲಕ ತಿಳಿಸೋಣಾಗಿಯದೆ.

ಉಡುಪಿ,
5-3-1934.

T. Ganapaya Shetty,
Vakil for Petitioner.

++ ++

ಸ್ತ್ರೀ ಪುರುಷರ ಸಲುವಾಗಿ
ಶಕ್ತಿ ವ ಸ್ಫೂರ್ತಿಕೊಡುವಂತಹ

ಸುಮಧುರ
ಝಂಡು ದ್ರಾಕ್ಷಾಸವ
ಜರೂರು ಉಪಯೋಗಿಸಿರಿ

ಸ್ತ್ರೀಯರ ಸಲುವಾಗಿ
ಆರೋಗ್ಯ ವ ಶಕ್ತಿವರ್ಧಕ.

ಪ್ರದರಾದಿ ರೋಗಗಳ ಮೇಲೆ
ರಾಮಬಾಣ ಉಪಾಯ.
ಝಂಡು ಅಶೋಕಾರಿಷ್ಟ
ಬೇಗನೇ ಉಪಯೋಗಿಸಿರಿ.

'ZANDU'

ಝಂಡು ಫಾರ್ಮಾಸ್ಯುಟಿಕಲ್ ವರ್ಕ್ಸ್ ಲಿ: ಮುಂಬ್ಯಾಗಿ.

ಮದ್ರಾಸು ಸಂಸ್ಥಾನದ ಏಜಂಟ್:—ದಾಮೋದರ ಮತ್ತು ಕಂಪೆನಿ, 78 ಜೈನ ಬಜಾರ ರೋಡ್, ಮದ್ರಾಸು.
ಮೈಸೂರು ಪ್ರೊವಿನ್ಸ್ ಏಜಂಟ್:—ಬಿ. ಶೊಪತ್ ಲಾಲ ಕಂಪೆನಿ, ೫೧ ಅರ್ಕಟ ಶ್ರೀನಿವಾಸಾಚಾರ ಸ್ಟ್ರೀಟ್.
ಮಂಗಳೂರು ಏಜಂಟ್:—ಶಾಹಾ ಕಂಪೆನಿ ಡಾಯ್ಮಂಡ್ ಬಿಲ್ಡಿಂಗ್, ಮಂಗಳೂರು.
ಧಾರವಾಡ ಏಜಂಟ್—ದಿ ಧಾರವಾಡ ಫಾರ್ಮಸಿ, ಧಾರವಾಡ.
ಬೇರೆ ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತದೆ.

ಆಯುರ್ವೇದ ಔಷಧಿಗಳ ಸೂಚೀಪತ್ರವನ್ನು ಮುಖ್ಯ ಏಜಂಟರಿಂದ ಪಡಕೊಳ್ಳಿರಿ.

ನಮ್ಮ ಸಲಹೆಯೇ ಪ್ರಾಧಾನ್ಯವಾದದ್ದೆಂದು ತಿಳಿಯಬೇಡಿ.

ಕಲ್ಲಿಕೋಟೆ ಅಶೋಕ ಆಸ್ಪತ್ರೆಯ ಚೀಫ್ ಮೆಡಿಕಲ್ ಆಫೀಸರರಾದ ಡಾ। ಬಿ. ಬಿ. ರಾಮನ್, ಎಂ. ಆರ್., ಸಿ. ಎಸ್. ಇವರು ಬರೆದಿರುವುದನ್ನು ಓದಿ ನೋಡಿ—"ನಾನು ನಿಮ್ಮ ಆಶ್ಚರ್ಯಕರವಾದ ಜೀವಾಮೃತಂ ಟಾನಿಕನ್ನು ನರಗಳಲ್ಲಿ ಉಂಟಾಗುವ ಹಸಿವು ಕಡಿಮೆಯಾಗಿರುವುದು, ತೂಕವು ಕಡಿಮೆಯಾಗಿರುವುದು, ಇವು ಪ್ರಾಪ್ತವಾಗಿರುವ ಅನೇಕ ರೋಗಿಗಳಿಗೆ ಕೊಟ್ಟಿರುತ್ತೇನೆ. ಅದರ ಫಲಿತಾಂಶಗಳು ಬಹು ತೃಪ್ತಿಕರವಾಗಿದೆ. ಜೀವಾಮೃತವನ್ನು ದೇಹಶಕ್ತಿ ಕುಗ್ಗಿರುವ ಎಲ್ಲಾ ಸಂದರ್ಭಗಳಲ್ಲೂ ಸರ್ವ ಸಾಮಾನ್ಯವಾಗಿ ಉಪಯೋಗಿಸಬಹುದೆಂದು ನಾನು ಮನಃಪೂರ್ವಕವಾಗಿ ಶಿಫಾರಸು ಮಾಡುತ್ತೇನೆ"

ಜೀವಾಮೃತವು

ನರಗಳಿಗೆ ಶಕ್ತಿ ಕೊಡುತ್ತದೆ. ವೀರ್ಯ ವೃದ್ಧಿಮಾಡುತ್ತದೆ. ಹಸಿವು ಹೆಚ್ಚಿಸುತ್ತದೆ. ರಕ್ತ ವೃದ್ಧಿಮಾಡುತ್ತದೆ.

ಪಂಡಿತ
ಡಿ. ಗೋಪಾಲಾಚಾರ್ಲುರವರ
ಜೀವಾಮೃತವು

ಎಲ್ಲಾ ಔಷಧ ಮಾರುವವರಲ್ಲೂ, ಸ್ಟೋರುಗಳಲ್ಲೂ ದೊರೆಯುತ್ತದೆ. (ಸಂಪೂರ್ಣ ವಿವರಗಳಿಗೆ ಇವತ್ತೇ ಬರೆಯಿರಿ)
ಆಯುರ್ವೇದಾಶ್ರಮಂ, ಪೋ. ಬಾಕ್ಸು ನಂ. ೨೧೭, ಮದ್ರಾಸು.
ಸೋಲ್ ಏಜಂಟರು:—ಸಿಟಿ ಮೆಡಿಕಲ್ ಮತ್ತು ಜನರಲ್ ಏಜನ್ಸಿ, ಕಾಟನ್ ಪೇಟೆ ಬೆಂಗಳೂರು. (ಉಮಾ ಜೋತಿಷ ಪತ್ರಿಕೆ)
ದಕ್ಷಿಣ ಕನ್ನಡ ಏಜಂಟರು— ಪೊಪ್ಯುಲರ್ ಸ್ಟೋರ್ಸ್, ಮಂಗಳೂರು. P. No. 104

ಸಂಪಾದಕರ ಟಪ್ಪಾಲು ಪೆಟ್ಟಿಗೆ.

ಪತ್ರದಾರರ ಅಭಿಪ್ರಾಯಗಳಿಗೆ ನಾವು ಹೊಣೆಗಾರರಲ್ಲ. ಎಲ್ಲಾ ಲೇಖಕರು ತಮ್ಮ ಸಂಪೂರ್ಣ ಹೆಸರು ವಿಳಾಸಗಳನ್ನು ಕೊಡತಕ್ಕದು. ದೀರ್ಘ ಲೇಖನಗಳಿಗೆ ಎಡೆ ಕೊಡಲಾಗುವುದಿಲ್ಲ. ಲೇಖನಗಳು ಸಾರ್ವಜನಿಕ ಹಿತದೃಷ್ಟಿಯಿಂದಿದ್ದು ಯುಕ್ತ ಶೈಲಿಯಲ್ಲಿರತಕ್ಕದು. (ಸಂ. ಸ್ವ.)

ಸ್ವದೇಶಾಭಿಮಾನಿಯ ಸಂಪಾದಕರಿಗೆ:—

ಮಹನೀಯರೇ,

ಕಳೆದ ವಾರದ ಸಮಯುಗದಲ್ಲಿ ಶ್ರೀ ಸರಸಪ್ಪನವರು ಕಾಂತಪ್ಪ ಶೆಟ್ಟರು ಆಡಿಸಿದ ಸವಜೀವನ ನಾಟಕದಲ್ಲಿ ಯೋಗಾನಂದನ ಪಾತ್ರ ವಹಿಸುವೆನೆಂದು ನಾನು ಮಾತು ಕೊಟ್ಟಿದ್ದೇನೆಂದೂ ಆ ಮೇಲೆ ನಿರಾಕರಿಸಿದೆನೆಂದೂ ಇದರಿಂದ ನಾಟಕ ವ್ಯವಸ್ಥೆಗೆ ಬಹಳ ತೊಂದರೆಯಾಯಿತೆಂದೂ ಇತ್ಯಾದಿ ಬರೆದಿರುವರು. ಶ್ರೀ ಸರಸಪ್ಪನವರ ಹತ್ತಿರ ನಾನು ಕೇಳಿದಾಗ ತಾನು ಸಮಯುಗದವರಿಂದ ಕೇಳಿದ ಸಂಗತಿ ಬರೆದಿದ್ದೇನೆಂಬುದಾಗಿ ಹೇಳಿದರು. ಸ್ವದೇಶಾಭಿಮಾನಿಯಲ್ಲೂ ಅದೇ ಸುದ್ದಿ ಪ್ರಕಟವಾಗಿದೆ. ನಾನು ಮೊತ್ತಮೊದಲು ಅಭಿನಯಿಸಲು ಒಪ್ಪಿ ಆ ಮೇಲೆ ಕಾರಣಾಂತರಗಳಿಂದ ನಿರಾಕರಿಸಿದುದೂ ನಿಜ. ಆದರೆ, ಇದು ನಾಟಕದ ತರಬೇತು ಆರಂಭವಾಗುವ ಮೊದಲು. ಕೊನೆಗೆ ಕಾಂತಪ್ಪ ಶೆಟ್ಟರ ಆಗ್ರಹದಿಂದಾಗಿ ಪಾತ್ರ ವಹಿಸಲು ಒಪ್ಪಿದುದು ಮಾತ್ರವಲ್ಲದೆ ಪ್ರಥಮ ತರಬೇತಿಗೆ ಕೂಡಾ ಹೋಗಿದ್ದೆ. ಆದರ ಮರುದಿನ ಕಾಂತಪ್ಪ ಶೆಟ್ಟರು ತಾನೇ ಯೋಗಾನಂದನ ಪಾತ್ರ ವಹಿಸುವೆನೆಂದೂ ನಾನು ತರಬೇತಿಗೆ ಬರುವುದು ಅಗತ್ಯವಿಲ್ಲೆಂದೂ ತಿಳಿಸಿದರು. ಅವರು ಹಾಗೆ ಬರೆದ ಪತ್ರ ಈಗಲೂ ನನ್ನಲ್ಲಿದೆ. ಅವರು ಹಾಗೆ ತಿಳಿಸುವಾಗ ಒಂದು ತರಬೇತಿ ಮಾತ್ರ ನಡೆದಿತ್ತು. ನಾಟಕಕ್ಕೆ ಎಂಟು ದಿವಸವಿತ್ತು. ಹಾಗೂ ನೋಟೀಸು ಹಂಚಿರಲಿಲ್ಲ.

ಹೀಗಿರುತ್ತಾ, ನಾನೇ ಪಾತ್ರವಹಿಸಲು ನಿರಾಕರಿಸಿದೆನೆಂಬುದೂ ಅದರಿಂದ ಅವ್ಯವಸ್ಥೆಯಾದುದೆಂಬುದೂ ಯಥಾರ್ಥವಲ್ಲ. ತಾನೇ ಪಾತ್ರವಹಿಸುವುದೆಂದು ನಿಶ್ಚಯವಾದ ಮೇಲೂ ನನ್ನ ಹೆಸರನ್ನೇ ಕರಪತ್ರಗಳಲ್ಲಿ ತೋರಿಸಿದ್ದರ ಉದ್ದೇಶವೇನೋ ನನಗೆ ಗೊತ್ತಾಗುವುದಿಲ್ಲ. ನನ್ನ ಮೇಲೆ ಸುಳ್ಳು ದೋಷಾರೋಪಣೆಯನ್ನು ಕಾಂತಪ್ಪ ಶೆಟ್ಟರು ಯಾಕೆ ಹಾಕುತ್ತಾರೆಂಬುದು ನನಗೆ ತಿಳಿಯದ ವಿಷಯ. ದಯವಿಟ್ಟು ಇದನ್ನು ಪ್ರಕಟಿಸಿ ನಿಜಸಂಗತಿಯನ್ನು ವಾಚಕರಿಗೆ ತಿಳಿಸಬೇಕಾಗಿ ಕೋರುತ್ತೇನೆ.

ರಂಗರಾವ ತಲಚೇರಿಕರ.

ಶ್ರೀ ತಾರಾನಾಥರ ಬಗ್ಗೆ ಮ। ಗೋವರ್ಧನರಾಯರು.

[ತಿರಂತಿಮ ಉತ್ತರ]

ಕಳೆದ ಸ್ವದೇಶಾಭಿಮಾನಿಯಲ್ಲಿ ಈ ಗೋವರ್ಧನರಾಯರು "ಕೋ. ಶಿ. ಕಾರಂತ"ರು ಎಂಬ ಲೇಖ ಬರೆದಿದ್ದರಷ್ಟೆ. ನನ್ನ ಜೀವನ ವಿಮರ್ಶೆಯು ಅದರ ಉದ್ದೇಶವಾಗಿರದೆ, ನಾನು ಶ್ರೀ ತಾರಾನಾಥರನ್ನು ಕುರಿತು ಬರೆದ ವ್ಯಂಗ್ಯಲೇಖದ ವಿಮರ್ಶೆಯು ಆಗಿರಲು ಆ ರೀತಿಯು ಭ್ರಾಂತಿಮೂಲಕ ಶಿರೋಲೇಖವನ್ನು ಅವರೇಕೆ ಬರೆದರೋ ತಿಳಿಯು.

ನೀನು ಸೊಕ್ಕು ತಪ್ಪು ದಾರಿಗೆ ಇಳಿಯಬಹುದೆಂದೂ, ನಮ್ರನಾಗಿ ಹೇಳಿದ ಅವರ ಮಾತುಗಳನ್ನು ಒಪ್ಪಿ ತಿದ್ದಿಕೊಳ್ಳಬೇಕೆಂದೂ ಅವರು ಬರೆದಿದ್ದಾರೆ. ಒಮ್ಮೆ ಶ್ರೀ ತಾರಾನಾಥರ ವಿಷಯ ಬರೆದು ಮುಗಿದಾದ ಬಳಿಕ ತಿರುಗಿ ಅದೇ ವಿಷಯ ಕೆದರಿ ಬರೆಯುವುದು ನನಗಿಷ್ಟವಿಲ್ಲ. ಆದರೆ ಲೇಖಕರು—ಇಂಥದನ್ನು ಹೇಳುವುದೆಂದು ಗಾಳಿಸ್ತು ತಿಳಿದಿದ್ದರೂ, ತಮ್ಮ ಉತ್ತರದಲ್ಲಿ "ಪಂಡಿತರ ವಿರುದ್ಧ ಮೂರೇ ಆರೋಪಗಳು ಸಿಗುತ್ತವೆ"—ಎಂದು ಬರೆಯುತ್ತಾರೆ. ಅದರಿಂದಾಗಿ ನನ್ನ ಆರೋಪಗಳಾವುವೆಂದು ತಿರುಗಿ ಬರೆಯಬೇಕಾಗುತ್ತದೆ.

ಮೊದಲಿಗೆ ಲೇಖಮಾಲೆಯ ವಿಚಾರ ಹೇಳುತ್ತೇನೆ. ಅದು ವ್ಯಂಗ್ಯ ಲೇಖಮಾಲೆ. ಅದರಲ್ಲಿ ಬರಹವನ್ನು ತೀರ ತೀರ ಯಥಾಕ್ಷರವಾಗಿ ಅರ್ಥ ಮಾಡುವುದಾದರೆ, ತಪ್ಪೇ ಸರಿ. ಲೇಖಮಾಲೆಯನ್ನು ವ್ಯಂಗ್ಯಶೈಲಿಯಲ್ಲಿ ಬರೆದಿರಲು—ಶ್ರೀ ತಾರಾನಾಥರ ಸಲುವಾಗಿ ಬೇರೆ ತರದ ಹಿಡಿಯುವುದೇತಕ್ಕೆ ಅವಶ್ಯ? ಆ ರೀತಿಯ ಸಾಹಿತ್ಯವು ಕನ್ನಡ ನಾಡಿಗೆ ಹೊಸತಾದರೂ, ಇತರ ಸಾಹಿತ್ಯಗಳಿಗೆ ಪರಿಚಿತವಾದುದು. ವ್ಯಕ್ತಿ ವಿಮರ್ಶೆಯು ಬರಹಗಾರನ ತಿಳಿವಿಗೆ ಬಂದಷ್ಟು ಕೊಡುವುದೇ ಅದರ ಉದ್ದೇಶ. ಅದನ್ನೇ ಸಿದ್ಧಾಂತವೆಂದು ಜಗತ್ತು ಹಿಡಿಯುವ ಕಾರಣವಿಲ್ಲ. ಹಿಡಿದರೂ ತಪ್ಪು.

ಶ್ರೀ ತಾರಾನಾಥರ [illegible]ಯ ನನ್ನ ಪರಿಚಯವು ಅಲ್ಪವೆಂದೂ, ಆ ಪ್ರಸಂಗಗಳನ್ನು ಬರೆದಿದ್ದೇನೆ. ಅವರು "ಮನುಷ್ಯ" ಪುರುಷರೆಂದೂ ಅಂದಿದ್ದೇನೆ. ಶ್ರೀ. ಗೋವರ್ಧನರಾಯರು ಅವರ ಮೇಧಾವಿತನವನ್ನು ಹೊಗಳಿದ್ದಾರೆ. ನಾನು ಅದನ್ನು ಅಲ್ಲಗಳೆಯಲೂ ಇಲ್ಲ. ನನ್ನ ಲೇಖದ ಉದ್ದೇಶವಿಷ್ಟು. ತಾನು ಯೋಗಿಗಳೆಂದು ತಿಳಿದು ಆಡಂಬರದ ತಾಳಿರುವರೆಂದು. ಆರೋಗ್ಯಶೀಲ ವ್ಯಕ್ತಿಯೊಂದು ಸಾರ್ವಜನಿಕ ಸಭೆಗಳಲ್ಲಿ ಕುಳಿತು ಉಪನ್ಯಾಸ ಕೊಡುವ ಬಗೆಗೆ ನಾನು ಬೇರೆ ಅರ್ಥ ಮಾಡಲಾರೆ. ತಾನು ಶ್ರೇಷ್ಠನೆಂಬ ಭಾವದೇ ಅತಿಯಾಗಿ— ಮನೆಗೆ ಬಂದ ಅತಿಥಿಯನ್ನು ನೆಲದಲ್ಲಿ ಕುಳ್ಳಿರಿಸಲು ಹೇಳುವುದು, "ತಾನು" ಶ್ರೇಷ್ಠ ವ್ಯಕ್ತಿಯು—ಎಂಬ ತಿಳಿವು ಇದರ ಕಾರಣ. ನನಗೆ ಅದರಲ್ಲಿ ಮೋಹಾನ್ಧರ ಭ್ರಮೆಯಿಂದ ಹೋಗುವ ಕಾರಣವಿದ್ದಿರಲಿಲ್ಲ. ಎಲ್ಲದಕ್ಕೂ ಮಿಗಿಲಾಗಿ—ಅವರ ರೀತಿ ಬಗೆಗಳು ಅವರನ್ನು ಯೋಗಿಯನ್ನು ಭೋಗಿಯೆಂದು ನನಗೆ ತೋರಿಸುತ್ತವೆ. ನಮ್ಮ ಅಂಧ ಸಮಾಜದಲ್ಲಿ—ಸಾಧುಗಳೆಂದೊಡನೆ ಹೆಂಗುಸರು ಗಂಡುಸರು ಓಡಿ ಕಾಲು ತಿಕ್ಕಿ, ಪೂಜೆ ಮಾಡಿ, ಇಲ್ಲದ ಅನರ್ಥಕಾರಿ ಮಹಿಮೆ ತೋರಿಸುವುದನ್ನು ಕಂಡಿದ್ದೇನೆ. ವಿದ್ಯಾವಂತರ ಸಮಾಜದಲ್ಲಿ—ಇನ್ನೊಬ್ಬ ವಿದ್ಯಾವಂತ ಸಾಧುವೆ ಈ ಮಹಿಮೆಯನ್ನು ಬೆಳೆಯಿಸಲು ತೊಡಗಿದರೆ—ಆಗ ಅದರ ಅಂಧಶ್ರದ್ಧೆಯನ್ನು ಕೀಳುವುದು ನನ್ನ ಕರ್ತವ್ಯ.

ಅವರ ಸುತ್ತಲಿನ ಪ್ರಪಂಚವು ಯೋಗಿಗಳಿಗೆ ಹಿತಕಾರಿಯಾಗಿ ನನಗೆ ಕಾಣಲಿಲ್ಲ. ಅವರು ಯೋಗಿಗಳಲ್ಲ—ವಿರುದ್ಧ ಇರಬಹುದೆಂದೂ ನನಗನಿಸುತ್ತದೆ. ಅದನ್ನು ಪ್ರಚಕಟಿಸಲು ನಾನೂ ಪ್ರಯತ್ನಪಟ್ಟಿದ್ದೇನೆ. ಪ್ರಚಕವೆನಿಸಿದ ಮೇಲೆ—ಹೀಗೆ ಬರೆದಿದ್ದೇನೆ. ಆದ್ದರಿಂದಲೂ, ನನ್ನ ಅಭಿಪ್ರಾಯ ತಪ್ಪಿರಲೂ ಬಹುದು. ಅದು ತಪ್ಪೆಂದು ತಿಳಿದ ದಿನ ಪಶ್ಚಾತ್ತಾಪಪೂರ್ವಕವಾಗಿ ನನ್ನ ಮಾತನ್ನು ಹಿಂದೆಗೆಯುತ್ತೇನೆ. ಅಲ್ಲಿನ ತನಕ ಅದು ಸಾಧ್ಯವಾಗದು. ಅಲ್ಲಿನ ತನಕ—ಅವರೇಕೇ ಇಲ್ಲ ಇನ್ನೊಂದು ಗ್ರಹವೇ ಅವರನ್ನು ಗೌರವಿಸಿದರೂ, ನನ್ನ ಅಂತರಂಗವನ್ನು ಮುರಿಯಲಾರೆ. ಅವರ ಮೇಲೆ ನನಗೆ ಮಾತ್ಸರ್ಯವಿಲ್ಲ. ಮಾತ್ಸರ್ಯಕ್ಕೆ ಕಾರಣವೂ ಇಲ್ಲ.

ಇನ್ನು ಅವರು ಮಂಗಳೂರಿಗೆ ಬರಲಿಲ್ಲವೇಕೆಂಬ ವಿಚಾರ. ಮೇಲಿನ ಅಭಿಪ್ರಾಯವಿರುವಷ್ಟು ದಿನ ಕರೆಯಿಸುವ ಕೆಲಸಕ್ಕೆ ನಾನು ಹೋಗೆ. ಅದನ್ನು ಬರೆಯುವುದರಲ್ಲಿ ನನ್ನ ಉದ್ದೇಶವಿಷ್ಟಿತ್ತು. ಶ್ರೀ ತಾರಾನಾಥರು ಸಾರಸ್ವತೇತರರು. ಆದರೂ ತಾವು ಸಾರಸ್ವತರೆಂಬುವ ಅಭಿಪ್ರಾಯ ಹುಟ್ಟಿಸಿದ್ದಾರೆ. ಇದೇನೋ ನನಗೆ ಚೆನ್ನಾಗಿ ಕಾಣಿಸಲಿಲ್ಲ. ಆ ವಿಷಯದಲ್ಲಿ ಇನ್ನೂ ಬಿಡಿಸಿ ಬರೆಯುತ್ತಿದ್ದೆ. ಆದರೆ ಕೇವಲ ಜಾತಿಯ ಮೇಲೆಯೇ ತಿರಸ್ಕಾರ—ಪುರಸ್ಕಾರವನ್ನು ಕೊಡುವ ಸಮಾಜದ ಮುಂದೆ ಹಾಗೆ ಬರೆಯುವುದು ನನಗೆ ಸರಿ ತೋರಲಿಲ್ಲ.

ಶ್ರೀಯುತರು "ಕೋ. ಶಿ. ಕಾರಂತರು"—ಎಂದು ಲೇಖ ಬರೆಯುವುದಾದರೆ ಅದೇ ಉದ್ದೇಶವಿಟ್ಟು ಬರೆಯಲಿ. ನನ್ನ ಜೀವನ ಅಪವಿತ್ರವಾಗಿದೆಯೆಂದು ತೋರಿದರೆ ಅದನ್ನು ಬರೆಯಲಿ. ಅಂತಃಕರಣ ಪೂರ್ವಕವಾಗಿ ತಮ್ಮ ಸಂದೆಕಯನ್ನು ಹೊರಗೆಡವಲು ಏಕೆ ಅಂಜಬೇಕು? ಹಾಗೆ ಹೇಳುವುದೂ ಒಂದು ಸಮಾಜಸೇವೆ. ಮುಖ್ಯ ಪ್ರಾಮಾಣಿಕತೆಯಿಂದ ಹೇಳಿದರಾಯಿತು.

ಇನ್ನು - ಶ್ರೀಯುತರು ನನ್ನ ಬರವಣಿಗೆಯ ರೀತಿಯನ್ನು ಆಕ್ಷೇಪಿಸಿದ್ದಾರೆ. ಅವರೇ ಲೇಖದಲ್ಲಿ ಬರೆದ "ಕಳ್ಳ ಕಾದಿದಂತೆ ಅಂದು ಕೊಳ್ಳುವುದು"—ಎಂಬ ಮಾತು ಎಷ್ಟು ಸಭ್ಯವಾಗಿದೆ? "ಅಥವಾ (ತಾರಾನಾಥರು) ಬೇರೆಯವರನ್ನು ಪುಸಲಾಯಿಸಿ, ತಾನು ಪತ್ರಿಕೆಯನ್ನು ನಡೆಸಿ ಪುಸ್ತಕಗಳನ್ನು ಪ್ರಕಟಿಸಿದ್ದರೋ"—ಎಂಬ ಮಾತು ಯಾವ ಬಗೆಯದು? ವ್ಯಂಗ್ಯ ಬರಹದಲ್ಲಿ ಇದೆಲ್ಲ ಪ್ರಸಕ್ತ? ಪ್ರಾಮಾಣಿಕವಾಗಿ ಇವರು ಇದನ್ನು ಸಾಧಿಸಿ ತೋರಿಸಲು ಮುಂದಾಗುವರೇ? ನಾನು ನನ್ನ ಸಾಹಿತ್ಯಜೀವನದಲ್ಲಿ—ಪುಸಲಾಯಿಸಿ ಯಾರನ್ನಾದರೂ ನಷ್ಟಕ್ಕೆ ತಳ್ಳಿದ್ದರೆ ಅವರ ಹೆಸರನ್ನು ಧೈರ್ಯವಾಗಿ ತಿಳಿಸಬಹುದು.

ಅಂತು ಶ್ರೀ ತಾರಾನಾಥರ ಮಿತ್ರರಾದ ಮ। ಗೋವರ್ಧನರಾಯರಿಗೆ ನನ್ನ ಬರಹವು ಕಂಟಾ ನೋವನ್ನುಂಟುಮಾಡಿದೆ. ನನಗೇನೂ ತಾರಾನಾಥರಲ್ಲಿ ಅಭಿಮಾನವಿಲ್ಲ ನಿಜ. ಈ ಪ್ರಸಂಗದಲ್ಲಿ ನಮ್ಮ ಅಭಿಪ್ರಾಯಗಳ ತಿಕ್ಕಾಟವಾಗಿಯೇ ಆಗುತ್ತದೆ. ಉಪಾಯವಿಲ್ಲ.

(೧೧ನೇ ಪುಟದಿಂದ ಮುಂದುವರಿಸಿದುದು)

ತೆರಬಹುದು. ಉಳಿದ ಅರ್ಧವನ್ನು ಬಿಹಾರ್ ಪ್ರಾಂತಿಕ ಸರಕಾರವು ಸಾಲವಾಗಿ ನಮ್ಮಿಂದ ಪಡೆಕೊಳ್ಳಲಿ. ಇನ್ನು ಅಲ್ಲಿಯ ಸ್ಥಳೀಯ ಸರಕಾರದವರ (ಡಿ। ಬೋರ್ಡು ಇತ್ಯಾದಿ) ಶಾಲೆ, ಕಟ್ಟಡ, ಆಸ್ಪತ್ರೆ, ರಸ್ತೆ ಇತ್ಯಾದಿಗಳ ಬಗ್ಗೆ ಸುಮಾರು ೧ ಕೋಟಿ ರೂಪಾಯಿಗಳಾದರೂ ಬೇಕಾಗಬಹುದು. ಖಾಸಗಿ ಶಾಲೆಗಳೂ ಪುನಃ ನಿರ್ಮಾಣವಾಗಬೇಕಾಗಿವೆ. ಇವರಿಗೆ ಸಾಲಕೊಟ್ಟು ಬಡ್ಡಿ ಮಾಫಿಮಾಡಿದರೂ ಪ್ರಯೋಜನವಿಲ್ಲ; ಅವರು ಪುನಃ ತೆರಲು ಅಸಮರ್ಥರು. ಅದಕಾರಣ [illegible] ಲಕ್ಷ ರೂಪಾಯಿಗಳನ್ನು ಇವರಿಗೆ ದಾನಮಾಡಬಹುದು. ಹೆಚ್ಚು ಮೊಬಲಗು ಅಗತ್ಯವಿದ್ದರೆ, ಸಾಧ್ಯವಾದರೆ, ಮುಂದೆ ಕೊಡುವಲ್ಲಿ ಸರಕಾರವು ಹಿಂತೆಗೆಯದು. ಇನ್ನು,—ವೈಯಕ್ತಿಕವಾಗಿ ಜನರಿಗೆ ಸಹಾಯ ಮಾಡಲು ಅಸಾಧ್ಯ. ಅವರಿಗೆ ಸಾಲಕೊಟ್ಟರೂ ಪುನಃ ತೆರಲಾರರು. ವೈಸರಾಯರ ಮತ್ತು ಕೇಂದ್ರ ಬಿಹಾರ್ ಕಂಪನ ನಿಧಿಗಳು ಪ್ರತ್ಯೇಕವಾಗಿ ಇವೆ. ಈ ನಿಧಿಗಳಿಂದಲೇ ಅವರಿಗೆ ಸಹಾಯವಾಗುವುದು. ಆದರೆ, ಬಿಹಾರ್ ಕಂಪನದಲ್ಲಿ ಕಷ್ಟಕ್ಕೀಡಾದ ಶ್ರೀಮಂತರಿಗೆ, ಅವರು ದಾನಧರ್ಮಗಳನ್ನು ಸ್ವೀಕರಿಸಲೊಪ್ಪದೆ ಮೌನವಾಗಿ ಕಷ್ಟಾನುಭವವಮಾಡುವ ಕಾರಣ, ಅವರಿಗೆ ಕೊಂಚ ಸಾಲಗಳನ್ನು ಕೊಡಬಹುದು.

ಟಪ್ಪಾಲು ದರಗಳಲ್ಲಿ ಬದಲಾವಣೆ:— ಅರ್ಧತೊಲೆ ಭಾರದ ಪತ್ರಗಳಿಗೆ ಒಂದಾಣೆ; ೨॥ ತೊಲೆಗೆ ಮೀರದ ಪತ್ರಗಳಿಗೆ ಒಂದೂ ಕಾಲಾಣೆ. ಒಂದೂ ಕಾಲಾಣೆಯ ಮೇಲೆ ಟಿಕ್ಕೆಟಿರೋದು ಹೆಚ್ಚಿಗೆ ತೆರಬೇಕಾಗಿದ್ದ ಒಂದು ಪೈಯನ್ನು ತೆಗೆದುಹಾಕಿರುವರು. ಈ ಬದಲಾವಣೆಗಳಿಂದ ಸರಕಾರಕ್ಕೆ ಸುಮಾರು ಎರಡೂವರೆ ಲಕ್ಷ ರೂಪಾಯಿ ನಷ್ಟವಿದೆಯಂತೆ. ಇನ್ನು,—"ಬುಕ್‌ಪೋಸ್ಟಿ"ನಲ್ಲಿ ೫ ತೊಲೆಗಳಿಗಿದ್ದ ೬ ಪೈಗಳನ್ನು ೯ ಪೈ ಮಾಡುವರು; ಇದರಿಂದ ೫ ಲಕ್ಷ ರೂಪಾಯಿ ಲಾಭವಾಗಬಹುದಂತೆ.

ಟೆಲಿಗ್ರಾಮುಗಳು:— ಈಗ ೧೨ ಶಬ್ದಗಳ ಟೆಲಿಗ್ರಾಮಿಗೆ ೧೨ ಆಣೆಯಿದೆ. ಇನ್ನು ಮುಂದೆ ೮ ಶಬ್ದಗಳ ಟೆಲಿಗ್ರಾಮಿಗೆ ೯ ಆಣೆ ಪ್ರಕಾರ ತೆಗೆದುಕೊಳ್ಳುವರು. "ಎಕ್ಸ್‌ಪ್ರೆಸ್" ಟೆಲಿಗ್ರಾಮಿಗೆ ರೂಪಾಯಿ ೧—೨—೦. ಈ ಬಾಬ್ತಿನಲ್ಲಿ ಸರಕಾರಕ್ಕೆ ೪ ಲಕ್ಷ ರೂಪಾಯಿಗಳು ನಷ್ಟವಾಗಬಹುದಂತೆ. ಆದರೆ, ಮುಂದೆ ಲಾಭವಾಗಬಹುದೆಂಬ ನಿರೀಕ್ಷೆಯಿದೆ.

ತುಂಡು ವಾರ್ತೆಗಳು.

ಬಿಹಾರ್ ಭೂಕಂಪದಿಂದ ಅಂಚೆಖಾತೆಗೆ ೧೦ ಲಕ್ಷ ರೂಪಾಯಿಗಳ ನಷ್ಟವಿದೆ.

ಬ್ರಿಟನ್ನಿನಲ್ಲಿ ಪುನಃ ತೀಕ್ಷ್ಣ ಶೀತವಾತತರಂಗದ ಅನುಭವವಾಗುತ್ತಿದೆ.

ಕಳೆದ ವಾರ ಆಲ್ವಾರ್ ಮಹಾರಾಜರು ಕಾಶಿಯ ವಿಶ್ವವಿದ್ಯಾಲಯಕ್ಕೆ ಸಂದರ್ಶನವಿತ್ತರು.

ಕಲ್ಕತ್ತೆಗೆ ಬರಲಿರುವ ಆಗಾಖಾನರನ್ನು ಸನ್ಮಾನಿಸಬೇಕೆಂದು ಅಲ್ಲಿಯ ನಗರ ಸಭೆಯ ಠರಾವು.

ಪುನಃ ಸುಂಕದ ಕಟ್ಟಗಳನ್ನೇರ್ಪಡಿಸಬಾರದೆಂದು ಮುಜಫರಪುರದ ನಿವಾಸಿಗಳ ನಿವೇದನಸಭೆಯಾಯಿತು.

ವಿಶಾಖಪಟ್ಟಣದಲ್ಲಿ ಸ್ವದೇಶೀ ಪ್ರದರ್ಶನವು ಇದೇ ತಾ ೪ರಿಂದ ಆರಂಭವಾಗಿದೆ.

ಮಾಘ ಏಕಾದಶಿಗೆ ಪಂಡರಪುರಕ್ಕೆ ಬಂದ ಯಾತ್ರಿಕರು ೧ ಲಕ್ಷ; ವಸೂಲಾದ ಯಾತ್ರಿಕರ ತೆರಿಗೆ ರೂ. ೩೦೦೦೦.

ನೇಪಾಳದಲ್ಲಿ ಭೂಕಂಪಕ್ಕೆ ಆಹುತಿಯಾದವರು ೩೮೦೦ ಜನರೆಂದು ಪ್ರಕಟವಾಗಿದೆ.

ಬೆಲ್ಜಿಯಮ್ ಅರಸರು ಪರ್ವತಾರೋಹಣ ಮಾಡುವಾಗ ಕಂದರದಲ್ಲಿ ಬಿದ್ದು ಸಾಯಿದರೆಂದು ತಿಳಿದುಬರುತ್ತದೆ.

ಮಿಡ್ನಾಪುರಕ್ಕೆ ಗಾಂಧೀಜಿಯವರ ಆಗಮನವು ಹಿತಕರವಲ್ಲವೆಂದು ಕರೆಗೊಟ್ಟವರಾಗಿ ವಾರ್ತೆ.

ಡಿ। ಮೊಗಲ ಹಣವನ್ನು ಲಪಟಾಯಿಸಿದುದಕ್ಕೆ ಬಾರಾ ಪಾಲೆಬಳರಿಗೆ ೩ ವರ್ಷಗಳ ಸಜೆ.

ಜರ್ಮನಿ—ಡೆನ್ಮಾರ್ಕುಗಳೊಳಗೆ ವ್ಯಾಪಾರದ ಕರಾರಾಯಿತು.

'ಶಾಮಾಂಡಿ' (ಹೋಳಿ) ಉತ್ಸವದಲ್ಲಿ ಸಿಡಿಸಿದ ಬಿರುಸುಬಾಣಗಳಿಂದ ತಂಜಾವೂರಿನಲ್ಲಿ ೧೨ ಗುಡಿಸಲುಗಳು ಭಸ್ಮ.

ನಿರ್ಮಾಣವನ್ನುತ್ತ, ರಂಗೂನಿನ ಕರುಣ ಧಿಕ್ಕರೊಬ್ಬನು ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆಮಾಡಿಕೊಂಡನು.

ಬರ್ಲಿನಿನಲ್ಲಿ ಹೊಸದಾಗಿ 'ಸಂಯುಕ್ತ ಐರ್ಲೆಂಡ್' ಪಕ್ಷವೊಂದು ಸ್ಥಾಪಿತವಾಗಿದೆ.

ಸರ್ ಮಹಮ್ಮದ್ ಹಬೀಬುಲ್ಲರವರು ತ್ರಾವಣಕೋರಿನ ದಿವಾನರಾಗಿ ಚಾರ್ಜು ವಹಿಸಿರುವರು.

ಪಂ। ಜೌಹರಲಾಲರವರೂ ಬಿಹಾರನ್ನು ಸಂದರ್ಶಿಸಿದರಾಗಿ ತಿಳಿದುಬರುತ್ತದೆ.

ಬೇಕಾಗಿದೆ,

ತಿಂಗಳೊಂದರ ರೂ. 75 - ತಲಬಿನಂತೆ ಇಬ್ಬರು ಡಿಸ್ಟ್ರಿಕ್ಟ್ ಮೆನೇಜರರೂ, ತಿಂಗಳಿಗೆ ರೂ. 30 - ರಂತೆ (ಮತ್ತು ಕಮಿಷನ್ ಕೂಡಾ) ಕೆಲವು ಏಜಂಟರುಗಳೂ ಬೇಕಾಗಿದೆ.

ಎಲ್ಲಾ ಸ್ಥಾನಗಳಿಗೂ ಹೊಣೆ (ಭದ್ರತೆಯು) ಅವಶ್ಯ.

ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ ಯಾ ವಿಚಾರಿಸಿ:—

ಮೆನೇಜರ್, (ಸಂಚಾರದಲ್ಲಿರುವವರು)

ದಿ ಕಲ್ಕತ್ತಾ ಫೈನೆನ್ಸ್ ಎಂಡ್ ಏಜನ್ಸಿ ಸಿಂಡಿಕೇಟ್, ಲಿಮಿಟೆಡ್,

C/o ಮೊಡರ್ನ್ ಹಿಂದೂ ಹೊಟೇಲ್,

ಹಂಪನಕಟ್ಟೆ, ಮಂಗಳೂರು.

ನೋಟೀಸು.

"ದಿ ಕಲ್ಕತ್ತಾ ಫೈನೆನ್ಸ್ ಎಂಡ್ ಏಜನ್ಸಿ ಸಿಂಡಿಕೇಟ್"ನ ಮೆನೇಜರರು ಈಗ, ರೈಲ್ವೇ ಸ್ಟೇಷನು ಬಳಿ ಮೊಡರ್ನ್ ಹಿಂದೂ ಹೊಟೇಲು, (ಹಂಪನಕಟ್ಟೆ)ಯಲ್ಲಿ, ಮಂಗಳೂರಲ್ಲಿ ಒಂದು ಶಾಖೆಯನ್ನು ತೆರೆವ ಉದ್ದೇಶದಿಂದ ಮೊಕ್ಕಾಂ ಮಾಡಿರುವರು.

ಸದರಿ ಶಾಖೆಯಲ್ಲಿ ಸೆಕ್ರೆಟರಿ, ಡಿಸ್ಟ್ರಿಕ್ಟ್ ಮೆನೇಜರರು ಯಾ ಏಜಂಟರಾಗಲಿಚ್ಛಿಸುವ ಅರ್ಜಿದಾರರು ಮೆನೇಜರರನ್ನು ಹೊಟೇಲಿನಲ್ಲಿ ಮುದ್ದಾಗಿ, ಬೆಳಿಗ್ಗೆ ಘಂಟೆ 11ರಿಂದ ಅಪರಾಹ್ನ 4ರ ತನಕ ಕಾಣಬಹುದಾಗಿದೆ.

Canara Bank, Limited.

Established 1906.

Authorised Capital	10,00,000—0—0
Subscribed capital	6,00,000—0—0
Paid up Capital	3,90,000—0—0
Reserves	4,81,000—0—0

Head Office.—Bunder, Mangalore Local Offices -**City & Bunder**

BRANCHES:— Bombay, Cochin, Calicut, Ernakulam, Alleppey, Chikmagalur, Ganguli, Coondapoor, Udipi, Karkal, Puttur, Kasaragod, & Buntwal Out-agency.

Interest is allowed on Current, Fixed and Savings Bank Accounts, rates of which may be ascertained on application. Advances made on approved securities at easy rates All kinds of Banking business transacted. Rules of business on application

The Bangalore Branch Office of the Bank at No. 1 Albert Victor Road, Bangalore City has been opened on 8-1-35.

A Madhava Pal,
Secretary

S. U. N. & CO.

Choukhamba, Benares City

ಮೂರು ಇನಾಮುಗಳು

ನಮ್ಮಲ್ಲಿ ಕಾಶ್ಮೀರ್ ಶಾಲುಗಳಿಗಿಂತಲೂ ಅತ್ಯುತ್ತಮವಾದ ಕಸೂತಿಗಳೊಂದೊಪ್ಪುವ ಶುದ್ಧ ಸ್ವದೇಶೀ ಖದ್ದರ್ ಶಿಲ್ಕು ಶಾಲುಗಳು ತಯಾರಾಗುತ್ತವೆ. ಬೇಕಾದವರು ತ್ವರೆಮಾಡಿ ಬರೆದರೆ ಈ ಕೆಳಗಿನ ದರದಲ್ಲಿ ಕಳುಹಿಸಲಾಗುತ್ತದೆ. 5 ಮೊಳ ಉದ್ದ 2½ ಅಗಲ ದರ ಒದಕ್ಕೆ ರೂ 2—8—0ಯಿಂದ 3—12—0 5½ ಮೊಳ ಉದ್ದ 2½ ಮೊಳ ಅಗಲ ದರ 1ಕ್ಕೆ 3—8—0, 4—8—0. 6 ಮೊಳ ಉದ್ದ 3 ಅಗಲ ದರ 1ಕ್ಕೆ ರೂ 4—8—0, ರೂ 5 ಅಲದೆ ಸ್ವದೇಶೀ ಖದ್ದರ್ ಮಡಿಗಳೂ, ಶೀರೆಗಳೂ ಅಂಚುಗಳಿಲದೆ ಎಲ್ಲಾ ರಂಗುಗಳಲ್ಲಿರುತ್ತವೆ ಮತ್ತು ಜರೀಕಾರೀ ಶೀರೆಗಳೂ ಪಿತಾಂಬರಗಳೂ ರವಿಕೆಗಳೂ, ರುದ್ರಾಕ್ಷೀ—ಬಾಣಲಿಂಗ—ಪಂಚಾಯತನ ಸುದರ್ಶನ ಹಿತ್ತಾಳಿ ಶ್ವಾಮಿಗೆ ಮಿಶ್ರನ್, ಮಡಿ ಧಾವಳಿ ಶಾಲು, ಜಗನ್ನಾಥ ಗಂಟೆಗಳೂ ಕೂಡಾ ಸರಿಯಾದ ದರಕ್ಕೆ ಕಳುಹಿಸಲಾಗುತ್ತದೆ ವಿವರಕ್ಕೆ ಕೆಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ 1 ಆಣೆ ಸ್ಟೇಂಪು ಕಳುಹಿಸಿದರೆ 1 ವಿಶ್ವೇಶ್ವರ ಪಟ, 1 ಕಾಶೀನಕ್ಷೆ, 1 ಕೆಟಲಾಗಿನೊಡನೆ 3 ಇನಾಮುಗಳು

ವಿಳಾಸ:—

ಶಿರೋಮಣಿ ನಾರಾಯಣಾಚಾರ್ಯ ಮತ್ತು
ಕಂಪೆನಿ, ಚೌಖಾಂಬಾ, ಬನಾರಸ್ (ಕಾಶೀ)

ಗುಣಬಾರದಿದ್ದರೆ] ಸುಪ್ರಸಿದ್ಧ ವೈದ್ಯರಾದ ಎಮ್ ಕೆ ರಜಪೂತ ಇವರ [ಹಣ ವಾಪಾಸು

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆಶಯ ಅಶಕ್ತಿಯಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದೇ / ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು [illegible] ಗರ್ಭಧಾರಣ ಬಂದಾಗುತ್ತದೆ ತದನಂತರ ಏನು ಖಾದಿದರೂ ಸುರುವಾಗುವುದಿಲ್ಲ ಮೊದಲೇ ಪೂರಾ ವಿಚಾರ ಮಾಡಿ ಔಷಧ ಬೇಡಿರಿ [illegible] ಸರ್ಟಿಫಿಕೇಟು [illegible] ವೈದ್ಯ ಎಲ್ [illegible] ಎಸ್ [illegible] ಈ ಚೂರ್ಣದಿಂದ ಯಾವ ತರದ ಅಪಾಯವಾಗದು [illegible] ಪೂರ್ಣ ಗುಣಕಾರಿ [illegible] ವಿ ಪಿ [illegible]

ವಿಳಾಸ -ಸಂಜೀವಿನೀ ಔಷಧಾಲಯ ಮು ಪೊ ಮಿರಜ, S M C.

ನೋಟೀಸು.

ಕಾರ್ಕಳ ತಾಲೂಕು ಕಡಂದಲೆ ಗ್ರಾಮದ ಕುಕ್ಕುಂಜೆ ಪರಮೇಶ್ವರ ಭಟ್ರ ಮಗ ಮುತ್ತು ಭಟ್ಟನು ಈ ಮೂಲಕ ತಿಳಿಯಪಡಿಸುವುದೇನೆಂದರೆ—ಮಂಗಳೂರು ತಾಲ್ಲೂಕು ಎಡಪದವು ಗ್ರಾಮದ ಶಿರ್ದರೆಯೆಂಬಲ್ಲಿರುವ ಶಿವಮಯ್ಯ ಭಟ್ರ ಮಗಳು ಮಿನಾಕ್ಷಿಯೆಂಬಳನ್ನು ನಾನು ಹಿಂದೂ ಶಾಸ್ತ್ರ ಪ್ರಕಾರ ಮದುವೆ ಮಾಡಿಕೊಂಡಿದ್ದೆ ಹೀಗಿರುತ್ತ ಕಳೆದ ತಾ 4 8 34 ರಲ್ಲಿ ನಾನು ಮನೆಯಲ್ಲಿ ಹಾಜರು ಇಲ್ಲದ ಸಮಯ ಸದರಿ ಮಿನಾಕ್ಷಿಯ ಅಣ್ಣ ಪದ್ಮನಾಭ ಭಟ್ರ ನಮ್ಮ ಕಡಂದಲೆ ಕುಕ್ಕುಂಜೆ ಮನೆಗೆ ಬಂದು ಸದರಿ ಮಿನಾಕ್ಷಿಗೆ ದುರ್ಬೋಧಿಸಿ ಸುಮಾರು ರೂಪಾಯಿ 404-0-0 ಮೌಲ್ಯದ ಚಿನ್ನಾಭರಣವನ್ನು ಸದರಿ ಮಿನಾಕ್ಷಿಯನ್ನು ಹೊರಡಿಸಿ ಕೊಂಡ್ಹೋಗಿರುತ್ತಾರೆ ಈ ಸಂಗತಿ ನನ್ನ ತಿಳುವಳಿಕೆಗೆ ಬಂದ ಕೂಡಲೆ ಸದರಿ ಮಿನಾಕ್ಷಿಯು ಕೊಂಡ್ಹೋಗಿರುವ ಸುಮಾರು 404-0-0 ರೂಪಾಯಿ ಮೌಲ್ಯದ ಚಿನ್ನಾಭರಣವನ್ನೂ ಮತ್ತು ಮಿನಾಕ್ಷಿಯನ್ನೂ ಇಂದಿನಿಂದ 2 ಹಪ್ತೆಯೊಳಗೆ ನನಗೆ ಒಪ್ಪಿಸಿ ಆ ಬಗ್ಗೆ ನ್ಯಾಯವಾದ ನನ್ನ ರಶೀದಿ ಪಡೆಯಬೇಕಾಗಿಯೂ ಇದಕ್ಕೆ ತಪ್ಪಿದರೆ ಸದರಿ ಮಿನಾಕ್ಷಿಯನ್ನು ನಾನು ಸಂಪೂರ್ಣ ಬಿಟ್ಟು ಬಿಟ್ಟೆನೆಂತಲೂ ವ ಸದರಿ ಮಿನಾಕ್ಷಿ ವ ಸದರಿ ಮಿನಾಕ್ಷಿಯಲ್ಲಿ ಮಕ್ಕಳು ಹುಟ್ಟಿದ್ದಾದರೆ ಅಂತಹ ಮಕ್ಕಳಿಗಾಗಲಿ ವ ಸದರಿ ಮಿನಾಕ್ಷಿಗಾಗಲಿ ನನ್ನ ಯಾವತ್ತು ಸ್ಥಿರ ಚರ ಸೊತ್ತುಗಳಲ್ಲಿ ಪಕ್ಕು ಬಾಧ್ಯತೆಗಳೆ ಹೇಳುವರೆ ಹಕ್ಕು ಸಮ್ಮಂದಗಳು ಇರುವದಿಲ್ಲವೆಂತಲೂ ವ ಯಾವ ವಿಧದ ಜೀವನಾಂಶ ಸಿಕ್ಕಬೇಕೆಂತಾಗಲಿ ಹೇಳುವರೆ ಸಹ ಸದರಿ ಮಿನಾಕ್ಷಿಗೆ ಹಕ್ಕಿಲ್ಲವೆಂತ ವಗೈರೆ ಕಾಣಿಸಿ, ಸದರಿ ಮಿನಾಕ್ಷಿಗೂ ಮತ್ತು ಇವಳ ತಂದೆ ಶಿವಮಯ್ಯ ಭಟ್ರಿಗೂ ಪ್ರತ್ಯೇಕ ಪ್ರತ್ಯೇಕ ರಿಜಿಸ್ಟ್ರಿ ನೋಟೀಸು ಕೊಟ್ಟಿರುತ್ತೇನೆ ಇಂದಿನಿಂದ ಎರಡು ಹಪ್ತೆ ಒಳಗೆ ಕೊಂಡ್ಹೋಗಿರುವ ಸುಮಾರು ರೂ 404-0-0 ಮೌಲ್ಯದ ಚಿನ್ನಾಭರಣ ಸಮೇತ ಸದರಿ ಮಿನಾಕ್ಷಿಯಾಗಲಿ, ಇವಳ ತಂದೆ ಶಿವಮಯ್ಯ ಭಟ್ರಾಗಲಿ ಸದರಿಯವಳನ್ನು ಆಭರಣ ಸಮೇತ ನನ್ನಲ್ಲಿ ಇಂದಿನಿಂದ 2 ಹಪ್ತೆ ಒಳಗೆ ಕರಕೊಂಡು ಬಂದು ಯಾವ ವಿಧದ ನೆವನಗಳು ಹೇಳದೆ ನನ್ನಿಂದ ನ್ಯಾಯವಾದ ರಶೀದಿ ಪಡೆಯಲು ತಪ್ಪಿದರೆ ಸದರಿ ಮಿನಾಕ್ಷಿಯು ಹಿಂದೂ ಧರ್ಮಕ್ಕೂ ನೀತಿ ನ್ಯಾಯಕ್ಕೂ ವಿರುದ್ಧವಾಗಿ ನಡೆದಂತೆಯೂ ನನಗೆ ಕೂಡಾ ವ್ಯತಿರಿಕ್ತವಾಗಿ ನಡೆದಂತೆಯೂ ಆಗುವದರಿಂದ ಸದರಿ ಮಿನಾಕ್ಷಿಯನ್ನು ಸಂಪೂರ್ಣ ನಾನು ಬಿಟ್ಟು ಬಿಟ್ಟೆನೆಂತಲೂ ನನ್ನ ಆಭರಣದ ವಿಷಯ ಆಲ್ಪಾದರೂ ದಾವಾ ಮಾಡುವೆನು ಎಂತಲೂ ನಂತರ ಸದರಿ ಮಿನಾಕ್ಷಿಗೆ ಆಗಲೀ, ಅಥವಾ ಅವಳಲ್ಲಿ ಇನ್ನು ಮುಂದೆ ಹುಟ್ಟಬಹುದಾದ ಮಕ್ಕಳಿಗಾಗಲಿ, ನನ್ನ ಯಾವತ್ತು ಸ್ಥಿರಚರ ಸೊತ್ತಿನಲ್ಲಿ ಆಗಲಿ, ಹಕ್ಕು ಸಮ್ಮಂಧಗಳು ಬಾಧ್ಯತೆ ಆಗಲಿ, ಅಥವಾ ಜೀವನಾಂಶ ನನ್ನಿಂದ ಸಿಕ್ಕಬೇಕೆಂತ ಹೇಳುವರೆ ಸಹ ಸದರಿ ಮಿನಾಕ್ಷಿಗೆ ಯಾವ ಹಕ್ಕು ಇರುವದಿಲ್ಲ ಎಂತ ಸಹ ಈ ಮೂಲಕ ಸದರಿ ಮಿನಾಕ್ಷಿಗೂ ವ ಇವಳ ತಂದೆಗೂ ಸಹ ತಿಳಕೊಳ್ಳಬೇಕೆಂತ ಬಹಿರಂಗವಾಗಿ ಈ ಮೂಲಕ ತಿಳಿಸಿರುತ್ತೇನೆ.

ಕಡಂದಲೆ, ತಾ 6—8—'34 **ಮುತ್ತು ಭಟ್ಟನ ರುಜು.**

ನಮ್ಮ ಟೊಯಿಲೆಟ್ ಮತ್ತು ವಾಶಿಂಗ್ ಸಾಬೂನುಗಳ ತಯಾರಿಯಲ್ಲಿ ಚರ್ಬಿ ಉಪಯೋಗಿಸಲ್ಪಡುವುದಾಗಿ ರುಜುಪಡಿಸುವವರಿಗೆ ರೂಪಾಯಿ

1000 ಬಹುಮಾನ.

ಸಾಬೂನು ಪಡೆಯುವಾಗ ಅದರಲ್ಲಿ ಚರ್ಬಿ ಇರಕೂಡದೆಂದು ನಿಮ್ಮ ಆಶೆ.

ಪ್ರಾಣಿಗಳ ಚರ್ಬಿ ಮಿಶ್ರಿತವಾದ ಸಾಬೂನುಗಳು ಚಿಕಿತ್ಸೆಗಿಂತಲೂ ಅಹಿತವನ್ನೇ ಹೆಚ್ಚಾಗಿ ಉಂಟುಮಾಡುತ್ತವೆ ಕಾರಣ ಅವುಗಳಲ್ಲಿನ ಚರ್ಬಿ ಚರ್ಮರಂಧ್ರಗಳೊಳಗೆ ಹೋಗಿ ಬೆವರನ್ನು ತಡೆಯುತ್ತದೆ ರೋಗವನ್ನು ಪಡೆಯುವಾಗ ನೀವು ಶಂಕಾಸ್ಪದ ಚರ್ಬಿನ ದುಡ್ಡಿಗೆ ಬೆಲೆ ಕೊಟ್ಟು ಶುದ್ಧತೆಯ ಬದಲು ಅಶುದ್ಧತೆಯನ್ನು ಸ್ವೀಕರಿಸಬೇಕೆಂದಿರುವಿರಾ?

ಮಲಬಾರು ಸಾಬೂನುಗಳು ಜನನಕ್ಕೆ ಬಂದ ಆರು ತಿಂಗಳುಗಳ ಅಲ್ಪಾವಧಿಯಲ್ಲೇ ಸಾರ್ವಜನಿಕ ಬೆಂಬಲವನ್ನು ಪಡೆದಿವೆ ಕೊಚ್ಚಿಯ ಮಹಾ ರಾಜರ ದಯಾಪೂರ್ಣ ಪ್ರಶಸ್ತಿ ಮತ್ತು ಪ್ರೋತ್ಸಾಹನದಿಂದಾಗಿಯೂ, ಪ್ರಖ್ಯಾತ ವೈದಿಕೀಯ ಅಧಿಕಾರಿಗಳ ಶಿಫಾರಸಿನಿಂದಾಗಿಯೂ ಅನೇಕ ವಸ್ತುಪ್ರದರ್ಶನಗಳಲ್ಲಿ ದೊರೆತ ಸುವರ್ಣಪದಕ ಮತ್ತು ಪ್ರಶಸ್ತಿ ಪತ್ರಿಕೆಗಳಿಂದಾಗಿಯೂ ಮಲಬಾರ್ ಸಾಬೂನುಗಳ ಪ್ರಾವಿಣ್ಯತೆಯು ಎಷ್ಟೆಂದು ತಿಳಿಯುವುದು

ಮಲಬಾರ್ ಸಾಬೂನು ಎಲ್ಲಾ ವಿಧದಿಂದಲೂ ಶ್ರೇಯಸ್ಕರವೇ ಆಗಿರುತ್ತದೆ ನಿಮ್ಮ ಚರ್ಮಕ್ಕೆ ಬಾಧಕವನ್ನುಂಟು ಮಾಡುವಂತಹ ಪ್ರಾಣಿಗಳ ಚರ್ಬಿ ಅಥವಾ ಹಾನಿಕರವಾದ ಮಿಶ್ರಿತವೇನೂ ಅದರಲ್ಲಿರದು ಮಲಬಾರ್ ಸಾಬೂನನ್ನು ಶಾಸ್ತ್ರೀಯ ರೀತಿಯಿಂದಲೂ, ಆರೋಗ್ಯ ದೃಷ್ಟಿಯಿಂದಲೂ ತಯಾರಿಸುವುದರಿಂದ ಎಷ್ಟು ಕೆಳವಾದ ಚರ್ಮವೂ ಬಾಧೆ ಹೊಂದುವುದಿಲ್ಲ ಈ ಸಾಬೂನು ದೇಶಿಯ ಅಮೂಲ್ಯ ಗಂಧಯುಕ್ತ ಸಾಮಾಗ್ರಿಗಳಿಂದ ಎಲ್ಲರಿಗೂ ಅನುಕೂಲವಾಗುವಂತೆ ಅಗ್ಗವಾಗಿದೆಯೆಂದು ಅದರ ಉಪಯೋಗದಿಂದ ನಿಮಗೆ ತಿಳಿದುಬರುವುದು.

ನಿಮ್ಮ ವ್ಯಾಪಾರಸ್ಥರು

ಮಲಬಾರ್ ಸಾಬೂನುಗಳನ್ನು

ವಿಕ್ರಯಿಸಲು ಸಂತೋಷಪಡುವರು

ಇದರಲ್ಲಿ ಪ್ರಾಣಿಗಳ ಕೊಬ್ಬು ಇರುವುದಿಲ್ಲ.

ದಿ ವೆಜಿಟೇಬಲ್ ಸೋಪ್ ವರ್ಕ್ಸ್, ಕಲ್ಲಿಕೋಟೆ.

ಪ್ರೊಪ್ರೈಟರ್:—ಸನ್ ಬ್ರೆಂಡ್ ಕೊಡೆಯ ಖ್ಯಾತಿಯ ಸೇಟ್ ನಾಗಜೀ ಪುರುಷೋತ್ತಮ ಮತ್ತು ಕಂಪೆನಿ, ಕಲ್ಲಿಕೋಟೆ.

ಈ ಜಿಲ್ಲೆಗೆ ಪ್ರವರ್ತಕರು:—

ರಾಘವೇಂದ್ರ ರಂಗ ಪೈ ರಥಬೀದಿ, ಮಂಗಳೂರು.

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು **ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು**

ಕಸ್ತೂರಿ ಮಿಶ್ರಿತ ದಶಮೂಲಾರಿಷ್ಟ ೧೬ ಔನ್ಸ್ ಬಾಟ್ಲಿ ೧ಕ್ಕೆ ರೂ 1-8-0 ದ್ರಾಕ್ಷಾಸವ ೧೬ ಔನ್ಸ್ ಬಾಟ್ಲಿ 1ಕ್ಕೆ ರೂ 1 ಅಶ್ವಗಂಧಾರಿಷ್ಟ ೧೬ ಔನ್ಸ್ ಬಾಟ್ಲಿ ಒಂದಕ್ಕೆ ರೂ. 1-4-0 ಅಬಲಾಮೃತ ೧೬ ಔನ್ಸ್ ಬಾಟ್ಲಿ ೧ಕ್ಕೆ ರೂ 2 ಅಶೋಕಾರಿಷ್ಟ ೧೬ ಔನ್ಸ್ ಬಾಟ್ಲಿ ೧ಕ್ಕೆ ರೂ. 1-4-0 ಚ್ಯವನಪ್ರಾಶಲೇಹ ೧ ರಾತ್ತಲಿಗೆ ರೂ 2-8-0 ಅಭಯಾಮಲಕಿ ೧ ರಾತ್ತಲಿಗೆ ರೂ 2 ಚಂದ್ರಮುಖ್ (ವಿಷೂಚಿಕೆಗೆ ರಾಮಬಾಣ) ಶಾಲು ಟಿನ್ನಿಗೆ ರೂ 0-5-0 ದಂತಧಾವನ ಚೂರ್ಣ ಡಬ್ಬಿ ೧ಕ್ಕೆ 0-1-0. ಕ್ರಿಮಿಘಾತಿನಿ (ದದ್ರು, ಕಜ್ಜಿಗೆ) ಡಬ್ಬಿ ೧ಕ್ಕೆ ರೂ 0-4-0 ಕೃಷ್ಣಾರ್ಕ ೧ ಟಿನ್ನಿಗೆ ರೂ. 0-6-0 ಚಿತ್ರಕ (ಮಕ್ಕಳ ಗ್ರಹಣೀ ರೋಗಗಳ್ಗೆ ದಿವ್ಯೌಷಧ) ಡಬ್ಬಿ ೧ಕ್ಕೆ ರೂ 0-8-0 ಮಹಾ ಚಿತ್ರಕ ಡಬ್ಬಿ ೧ಕ್ಕೆ ರೂ 1-0-0 ಪಿಂಡ ತೈಲ ೫ ಔನ್ಸ್ ಬಾಟಿ ೧ಕ್ಕೆ ರೂ 0-10-0. ಬಲಾಶ್ವಗಂಧಾದಿ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ 0-12-0 ಹಿಮಸಾಗರ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ ರೂ 1-8 0 ಮಹಾಚಂದನಾದಿ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ ರೂ. 1-0-0 ಶ್ರೀ ಗೋಪಾಲ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ ರೂ 3-8-0

ನಮ್ಮ ಔಷಧಗಳು ದೊರೆಯುವ ಸ್ಥಳ:—ಮಂಗಳೂರು—ರಾಘವೇಂದ್ರ ರಂಗ ಪೈ ರಥಬೀದಿ, ಕೆನರಾ ಡಿಸ್ಪೆನ್ಸರಿ ಕೊಡಿಯಾಲಬೈಲ್ ಬೈಂದೂರು—ಕೆ. ಪುತ್ತು ಶಾನುಭಾಗ ಗಂಗೊಳ್ಳಿ—ಜಿ ಸುರೇಂದ್ರ ನಾಯ್ಕ ಕುಂದಾಪುರ—ಕೆ ರಾಮ ಭಟ್ ಡಾಕ್ಟರ್ ಕೆ ಆರ್ ಕಾಮತ್ ಉಡುಪಿ—ಪಿ ಜನಾರ್ದನ ನಾಯಕ್ ಎಂಡ್ ಕೊ, ಪೈ ಫಾರ್ಮಸಿ, ಆರ್ ಎಸ್ ಶೆಣೈ, ರಥಬೀದಿ ಕಾರ್ಕಳ—ಎ ವಿ ಶೆಣೈ ಕಾಪು—ಡಾಕ್ಟರ್ ಬಿ ಕೆ ದೇಶಲ ಡಿಸ್ಪೆನ್ಸರಿ ಬಟ್ಕಲ್—ವಾಮನ ನರಸಿಂಹ ನಾಯಕ್ ಬಾರ್ಕೂರು—ಬಿ ಭಗವಂತ ಮಲ್ಯ, ಆರ್ ಪಿ ಔಷಧಾಲಯ ಬ್ರಹ್ಮಾವರ ಕೆ ವೈಕುಂಠ ಪೈ ಎಂಡ್ ಸನ್ಸ್, ಕೆ ಶೇಷಗಿರಿ ನಾಗಪ್ಪ ಎಂಡ್ ಸನ್ಸ್

ಎಲ್ಲೆಲ್ಲಿಯೂ ಏಜಂಟರು ಬೇಕಾಗಿದ್ದಾರೆ ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಬಹುದು

ನಾಯಕ್ ಬ್ರದರ್ಸ್, ಶ್ರೀಮದ್ಭುವನೇಂದ್ರ ಮಹೌಷಧಾಲಯ, ಪೋಸ್ಟು ಕಟಪಾಡಿ ದ. ಕ.

The Canara Industrial & Banking Syndicate Limited.,

Etsablished in 1925. **Head Office—Mukunda Nivas UDIPI**

Branches Mangalore, Payyanur, Brahmavar, Kumta, Karwar Hubli Honnavar, Bangalore & Cannanore

Authorised Capital Rs 5 00,000 Subscribed Capital Rs 1 20 000 Paid up Capital Rs 40 000 Issued Capital Rs 2 00,000

STATEMENT OF AFFAIRS OF THE SYNDICATE AS ON 31st December 1933

Liabilities	Rs	Assets	Rs
Paid up Capital	40,000 0 0	Loans on Land mortgage	2 69,352—12—6
Reserve & other funds	20,250—0—0	Loans on Valuable Securities	2,52,324—13—6
Deposits	10 69 202—7—11	Loans on Bills of Exchange Hundis and Promissory Notes	4 71 242— 1—3
Due to Bankers	1,39 891—3—2	Investment on Shares of other Companies	43 575— 0—0
		Investments on Government Securities Conversion Loan	78 990—10—0
		On Deposits with other Bankers	1 05 000— 0—0
Bills for Collection	38 138—11—3	Bills for collection (per contra)	38 138—11—3
Sundries	1 03,557—4—0	Sundries	1 07 857—15—4
		Cash in hand & with Bankers	24 907—10—6
Total Rs	13 90 789—10—4	Total Rs	13 90,789 10 4

Long and Short term Loans on attractive Schemes are granted

ALL KINDS OF BANKING BUSINESS UNDERTAKEN

Udipi,
9-2-1934

P A Pal Bros,
Managing Agents

ಪ್ರಥಮ ಕನ್ನಡ ಮಾತಾಡುವ ಚಲಚಿತ್ರ!

ಮಿಸ್. ತ್ರಿಪುರಾಂಬ
ಮಿಸ್ ರಾಜಂ
ಮಿಸ್ ಲಕ್ಷ್ಮಿ

ಮಿಸ್ಟರ್ ಸುಬ್ಬಯ್ಯ ನಾಯಿಡು
ಮಿಸ್ಟರ್ ನಾಗೇಂದ್ರ ರಾವ್,
ಮಿಸ್ಟರ್ ವೈ ವಿ. ರಾವ್
ಮಿಸ್ಟರ್ ಮೂರ್ತಿ

ಇವರುಗಳಿಂದ ನಟಿಸಲ್ಪಟ್ಟು

ಮಿಸ್ಟರ್ ವೈ. ವಿ. ರಾವ್,
ಇವರಿಂದ ಡೈರೆಕ್ಟ್ ಮಾಡಲ್ಪಟ್ಟು

ಕರ್ಣಾಟಕ ಕವಿಕೇಸರಿ ಬೆಳ್ಳಾರಿ
ನರಹರಿ ಶಾಸ್ತ್ರಿಗಳಿಂದ ಕಥೆಯು ರಚಿಸಲ್ಪಟ್ಟು

ಸೌತ್ ಇಂಡಿಯನ್ ಮೂವಿಟೋನ್‌ರವರು ಕೊಲ್ಹಾಪುರದ ಛತ್ರಪತಿ ಸ್ಟುಡಿಯೋದಲ್ಲಿ ತಯಾರಿಸಲ್ಪಟ್ಟಿರುವದು.

— ಪ್ರಸಿದ್ಧ ಪುರಾಣ ಕಥೆ —

‘ಸತಿ ಸುಲೋಚನ’

ಎಂಬ ಚಿತ್ರವು ಕನ್ನಡ ಮಾತನಾಡುವ ಹಾಡುವ ರೂಪದಲ್ಲಿ ಪ್ರದರ್ಶಿಸಲ್ಪಡುತ್ತದೆ

ಮಧುರ ಸಂಗೀತ! ಸ್ಪಷ್ಟವಾದ ಧ್ವನಿ! ಇಂಪಾದ ಶ್ರುತಿ!

ಮಂಗಳೂರಿನಲ್ಲಿ ಶೀಘ್ರದಲ್ಲೇ ಪ್ರದರ್ಶನ. ದಿ ಸೌತ್ ಇಂಡಿಯನ್ ಫಿಲ್ಮ್ ಸಪ್ಲೈ ಕಂಪೆನಿ ಬೆಂಗಳೂರು.

WANTED

Tour Organisers to organise the work of the South Indian General Assurance Society, Ltd. in the following places noted below. Capable organisers can expect to have attractive and encouraging terms with sound footing for their future.

(1) South Canara, (2) Mysore, Hassan and Coorg, (3) Kadur, Shimoga, Chitaldroog and Tumkur, (4) Mangalore, Kolar.

For terms and other particulars please apply to—

The Divisional Manager,
The South Indian General Assurance Co Ltd
64, 3rd, Cross Road, Srirampur Extn
Malleswaram Post, BANGALORE

OR

The Managing Agents,
The S. I. G. A. Co. Ltd.
55, Poonamallee High Road, Kilpauk, MADRAS.

ಒಂದೇ ಸವನಾಗಿ ೩೫ ವರ್ಷದ ಅನುಭವದಿಂದ

ದ್ರಾಕ್ಷಾಮೃತ

[illegible]

ವ್ಯವಸ್ಥಾಪಕರು: ದ್ರಾಕ್ಷಾಮೃತ ಕಾರ್ಯಾಲಯ, ಪೋನ್ಪ ನಿಪ್ಪಾಣಿ ಜಿಲ್ಲಾ (ಬೆಳಗಾಂವಿ)

2-6-38 [illegible] ಬಂಟ್ವಾಳ— ಬಿ ಎಚ್ ವಾಸುದೇವ ಪೈ

ನಿಮಗೆ ಭಕ್ತಿ, ಜ್ಞಾನಗಳು ಬೇಕೋ? ಹಾಗಾದರೆ ಶ್ರೀ ಭಾಗವತವನ್ನು ಓದಿರಿ

ಕನ್ನಡ ಟೀಕಾತಾತ್ಪರ್ಯಾದಿ ಸಹಿತ

ಶ್ರೀ ಭಾಗವತ ಮಹಾಪುರಾಣ.

ಆಸ್ಥಾನ ಮಹಾವಿದ್ವಾನ್ ಹೊಳೆಗಾನಹಳ್ಳಿ ರಾಮಶೇಷಶಾಸ್ತ್ರಿಗಳಿಂದ ಪ್ರಕಟಿಸಲ್ಪಟ್ಟುದು. ಮತತ್ರಯಾನುಸಾರವಾಗಿ ಅನೇಕ ವಿಷಯಗಳೊಡನೆ ಕನ್ನಡಿಸಲ್ಪಟ್ಟ ಈ ಗ್ರಂಥವು ಮೊದಲಿನಿಂದ ಹತ್ತು ಸ್ಕಂಧಗಳು 7 ಸಂಪುಟಗಳಲ್ಲಿ ಪ್ರಕಟವಾಗಿರುವುದು ಸಮಯಷ್ಟೆ. ಈಗ 11, 12ನೇಯ ಸ್ಕಂಧಗಳುಳ್ಳ ಎಂಟನೆಯ ಸಂಪುಟವು ಪರಿಶಿಷ್ಟಗಳೊಡನೆ ಬೇಗನೆ ಸಿದ್ಧವಾಗಿದೆ. ಹಿಂದಣ ಗ್ರಾಹಕ ಮಹಾಶಯರೂ ದೇಶಬಾಂಧವರೂ ಸಹಾ ಪ್ರೋತ್ಸಾಹಿಸಬೇಕೆಂದು ಪ್ರಾರ್ಥನೆ

1ನೇಯ ಸಂಪುಟ (1—2ನೇ ಸ್ಕಂಧಗಳು) 3—4—0	7ನೇಯ ಸಂಪುಟ (ದಶಮ ಉತ್ತರ ಭಾಗ) 4—8—0
2 ,, (3ನೇಯ ಸ್ಕಂಧ) 3—12—0	8 ,, (11, 12ನೇಯ ಸ್ಕಂಧಗಳು ಪರಿಶಿಷ್ಟ ಸಹಿತ) 4—8—0
3 ,, (4 ,,) 3—8—0	ಶ್ರೀ ಭಾಗವತ ಪುರಾಣ ವಿಷಯ ಸೂಚಿ 0—8—0
4 ,, (5, 6ನೇಯ ಸ್ಕಂಧಗಳು) 4—0—0	ಕರ್ನಾಟಕ ಮುದ್ರಾರಾಕ್ಷಸ ನಾಟಕ 1—4—0
5 ,, (7, 8, 9 ಸ್ಕಂಧಗಳು) 5—8—0	(ಇದೇ ಗ್ರಂಥಕರ್ತರಿಂದ ರಚಿಸಲ್ಪಟ್ಟುದು)
6 ,, (ದಶಮ ಪೂರ್ವ ಭಾಗ) 5—0—0	

ಈ ಬೆಲೆಗಳಲ್ಲಿ ಅಂಚೆ ಹಾಸಲು ಸೇರಿಲ್ಲ. ಹೆಚ್ಚು ವಿಷಯಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ಆರ್. ಶ್ರೀಕಂಠ ಶಾಸ್ತ್ರಿ, ಭಾರತೀ ಭವನಂ, ಚಾಮರಾಜಪೇಟೆ, ಬೆಂಗಳೂರು ಸಿಟಿ



ಡಾ. ಗೋಪಾಲರಾವ್ ಕೇಶವರಾವ್ [illegible]

ಡಾ. ಗೋಪಾಲರಾವ್ ಕೇಶವ ಅಂಡ್ ಸನ್ಸ್,
[illegible] ಮಂಗಳೂರು

ಆಮಂತ್ರಣ ಪತ್ರಿಕೆಗಳು.

ಇದು ವಿವಾಹ—ಉಪನಯನಗಳ ಕಾಲ. ಮುದ್ದಾದ ಮುದ್ರಣದ ಆಮಂತ್ರಣ ಪತ್ರಿಕೆಗಳನ್ನು ನೀವು ಬಯಸುವುದು ಸಹಜ

ನಿಮಗೆ ಬೇಕಾದ ಕಾಗದಗಳಲ್ಲಿ
ಬೇಕಾದ ಬಳ್ಳಿಗಳಲ್ಲಿ
ಬೇಕಾದ ಬಣ್ಣಗಳಲ್ಲಿ
ಬೇಕಾದಷ್ಟು ಪತ್ರಿಕೆಗಳನ್ನು

ಮುದ್ರಣ ಸೌಂದರ್ಯ—ಮಿತವ್ಯಯ—ಕ್ಲಪ್ತತೆ ಇವುಗಳಲ್ಲಿ ತೃಪ್ತಿಕೊಟ್ಟೇ ಮಾಡಿಕೊಡುವೆವು. ಊರವರು ನಮ್ಮಲ್ಲಿ ಬಂದು ಮಾದರಿ ಪ್ರತಿಗಳನ್ನು ನೋಡಿ, ತಮಗೆ ಬೇಕಾದುದನ್ನಾರಿಸಬಹುದು. ಪರವೂರವರು ಟಪ್ಪಾಲುದ್ವಾರಾ ತಿಳಿಸಿದರೆ ಅವರು ವಿವರಿಸುವಂತೆ ಚ್ಯುತಿಯಿಲ್ಲದೆ ಮಾಡಿ ಕಳುಹುವೆವು

ಹೆಚ್ಚಿನ ವಿವರಗಳಿಗೆ ನಮ್ಮಲ್ಲಿಗೆ ಬನ್ನಿರಿ ಅಥವಾ ಬರೆಯಿರಿ.

ನಿಮಗೆ ಆಮಂತ್ರಣ.

ಮ್ಯಾನೇಜರ್

ಶಾರದಾ ಛಾಪಖಾನೆ, ರಥಬೀದಿ,
ಮಂಗಳೂರು

Seventyseven Years!

Two generations of approved service enables us to pick and choose what is cheap, lasting & good to suit the pockets & the tastes of our longstanding wide circle of

CUSTOMERS
who know our

~~Premier House for Swadeshi~~

Mill Yarns—Handloom Cloths, Dhoties Sarees—Cintzesh etc.

Shrinivas Ranga Pai,
Sawkar Mahal,
Car Street, MANGALORE.

Edited, Printed & Published by V. S. Kudva at the Sharada Press, Mangalore.

ವಾರ್ಷಿಕ ಚಂದಾ — ಮುಂಗಡ ರೂಪಾಯಿ 2-0-0 Registered No. M. 491 ಪತ್ರವು ಹಾಕಲು ಸೇರಿ ರೂಪಾಯಿ 2-10-0

ಸ್ವದೇಶಾಭಿಮಾನಿ.

(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೭ರಲ್ಲಿ ಸ್ಥಾಪಿತವಾದುದು.)
ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರಕ್ತೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರಗಣದಿಂ । ಹರುಷವಾಯಿತೆ! ಮತ್ತೆ ವಿಶ್ವವ ಸುಡುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಮರೆತು ಕಷ್ಟದ್ರರ ತೆರದಿ ಕುಳಿತರೆ । ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

(Oldest Kanarese Weekly in South Kanara)

ಪುಸ್ತಕ ೨೮. ಮಂಗಳೂರು, ತಾ. ೧೬ನೇ ಶುಕ್ರವಾರ ಮಾರ್ಚ್ ೧೯೩೪ (16-3-'34) ಸಂಚಿಕೆ ೧೧

THE CANARA BANKING CORPORATION, UDIPI, LTD.

(Incorporated in British India)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI, S. K. **Branches:—Coondapoor, Mangalore, Shimoga & Madras.**
ಹೆಡ್ ಆಫೀಸು:— ಉಡುಪಿ, ದಕ್ಷಿಣ ಕನ್ನಡ. ಶಾಖೆ:— ಕುಂದಾಪುರ, ಮಂಗಳೂರು, ಶಿವಮೊಗ್ಗ ಮತ್ತು ಮದ್ರಾಸು.

Authorised Capital Rs. 3,50,000. Paid up Capital Rs. 2,25,000.
ನಿಯಮಿತ ಮೂಲಧನ ರೂ. 3,50,000. ಚಂದಾ ಹಾಕಲಿಕ್ಕೆ ಅರ್ಪಿಸಿದ ವ ಎತ್ತಿದ ಮೂಲಧನ ರೂ. 2,25,000.

STATEMENT OF ASSETS & LIABILITIES AS ON 28TH FEBRUARY, 1934.

CAPITAL AND LIABILITIES.		PROPERTY AND ASSETS	
1 Paid up Capital	Rs. 2,25,000-0-0	1 Bank Premises, Buildings, Furniture etc.	Rs. 65,697- 5- 3
2 Reserve and other funds	" 2,50,000-0-0	2 Investment on G. P. notes	" 4,44,168- 5- 6
3 Deposits	" 22,70,954-10-2	3 Authorised Investments	" 23,68,574- 1- 5
4 Due to Bankers	" 1,36,830-14-11	4 Bills for collection	22,160- 2- 9
5 Sundries	" 61,271-3-11	5 Sundries	" 35,056 -6- 5
6 Bills per contra	22,160-2-9	6 Cash on hand & with bankers.	" 30,560-10- 5
Total	29,66,216-15-9	Total	29,66,216-15-9

Office of the Corporation, Udipi, S. K.
3-3-'34.

N. ANANDA RAO.
Manager.

(Regd.)

ಅಮೃತಾಂಜನ.

ಇದು ಕೆಟ್ಟ ಶಿರೋವೇದನೆ, ಕಣ್ಣುಕೊಡುವ ವಾತ, ಛಾತಿ ನೋವು, ವಿಶೇಷ ಉಳುಕು, ಅಸಹನೀಯ ಹಲ್ಲುನೋವು, ವಿಪರೀತ ಛಾಯ ಬಹು ಶೀತ, ಸಹಿಸಲಸದಳವಾದ ಚಳಿ, ಕೈಕಾಲು ಮರಗಟ್ಟುವುದು, ಲುಂಬಾಗೊ ಮೊದಲಾದ ಎಲ್ಲಾ ತರದ ಬೇನೆಗಳನ್ನೂ ಅತೀ ತ್ವರೆಯಲ್ಲೇ ಗುಣ ಪಡಿಸುತ್ತದೆ. ಎಲ್ಲೆಲಿಯೂ ಮಾರಲ್ಪಡುತ್ತಿದೆ.

ರಿಂಗ್‌ವರ್ಮ್ ಮುಲಾಮು — ಇದು ರಿಂಗ್‌ವರ್ಮನ್ನು ಕಜ್ಜಿಯನ್ನೂ ಇನ್ನಿತರ ಚರ್ಮರೋಗಗಳನ್ನೂ, ಮೂರು ಸಲಮುಟ್ಟಿಸುವುದ ರೊಳಗೆ ಗುಣಪಡಿಸುತ್ತದೆ.

ಡಬ್ಬಿ 1ಕ್ಕೆ 6 ಆಣೆ ಡಜನಿಗೆ ರೂ. 8—8—0. ಅಂಚೆವೆಚ್ಚ ಪ್ರತ್ಯೇಕ.

ಅಮೃತಾಂಜನ ಡಿಪೋ.

ಮದರಾಸು ಮತ್ತು ಬೊಂಬಾಯಿ

ಬೊಂಬಯಿ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

ಸ್ಥಾಪಿತವಾದುದು ಬೊಂಬಾಯಿ. 1908ರಲ್ಲಿ.

ಚೆಯರ್‌ಮಾನ್—ಸರ್. ಲಲೂಭಾಯ್ ಶ್ಯಾಮಲದಾಸ್, ಕೆಟಿ. ಸಿ. ಐ. ಇ. ಜೆ. ಪಿ.

ಜೀವವಿಮೆಯ ಪದ್ಧತಿಯಲ್ಲಿ ಅತ್ಯುತ್ಕೃಷ್ಟವಾಗಿರುವ ಎಲ್ಲ ಸೌಕರ್ಯಗಳನ್ನೂ ಈ ಸಂಸ್ಥೆಯು ಒದಗಿಸಿ ಕೊಡುತ್ತದೆ. ಕಾಲೋಚಿತವಾದ ಆವಶ್ಯಕತೆಗಳಿಗೊಪ್ಪುವ ಸರ್ವೋತ್ತಮವಾದ ಯೋಜನೆಗಳು! ಸ್ತ್ರೀಯರ ಜೀವವಿಮೆಯನ್ನೂ ಸ್ವೀಕರಿಸಲಾಗುತ್ತದೆ.

ಸಂಯುಕ್ತ ಜೀವನ ವಿಮಾ ಪದ್ಧತಿಯು ಇದರದೊಂದು ವೈಶಿಷ್ಟ್ಯವೇ!

ಏಜಟ್ಸಿಯ ನಿಯಮಗಳು ಬಹಳ ಉದಾರ! ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ:— ಯೋಗ್ಯ ಗ್ರಹಸ್ಥರಿಗೆ ಅತ್ಯುತ್ತಮ ಸಂದರ್ಭ!

ಕೊಚ್ಚಿಕಾರ್ ಬ್ರದರ್ಸ್, ಮದ್ರಾಸು ಶಾಖೆಯ ಕಾರ್ಯದರ್ಶಿಗಳು. ಮತ್ತು ಬೊಂಬಯಿ ನಗರಕ್ಕೂ, ನಗರದ ಆಸುಪಾಸಿಗೂ ಮುಖ್ಯ ಏಜೆಂಟರುಗಳು.

ಆಫೀಸುಗಳು:—

ಮದ್ರಾಸು.	ಬೆಂಗಳೂರು.	ಮಂಗಳೂರು.	ಬೊಂಬಯಿ.	ಉಡುಪಿ.
ಪೋಸ್ಟ್ ಬಾಕ್ಸ್ ನಂಬ್ರ 337. ಮೌಂಟ್ ರೋಡ್.	ವಿಶ್ವೇಶ್ವರಪುರಂ ಸರ್ಕಲ್, ಬೆಂಗಳೂರು ಸಿಟಿ.	ಕಾರ್ಪೊರೇಶನ್ ಬಿಲ್ಡಿಂಗ್, ಕಾರ್‌ಸ್ಟ್ರೀಟ್.	ಇಸ್ಮಾಯೀಲ್ ಬಿಲ್ಡಿಂಗ್, ಲಾಹರ್‌ಚಾಳ್.	ಪತ್ತಿಣ ಇಂಡಿಯಾ.

ವಿಚಿತ್ರ ವಿಷಯ ಸಂಗ್ರಹ

ಅಲೆಕ್ಸಾಂಡ್ರಿಯದ ನಾರನ್ ಸಿಲ್ವರ್‌ಮೇನ್ ಎಂಬ ಹೆಸರಿನ ಸಣ್ಣ ಮಗು (೨ ವರ್ಷ ೪ ತಿಂಗಳು ವಯಸ್ಸು) ೧೯೦ ಬಗೆಯ ಹಕ್ಕಿಗಳನ್ನು ಚಿತ್ರ ನೋಡಿ ಗುರುತಿಸಿ ಅವುಗಳ ಹೆಸರುಗಳನ್ನು ಹೇಳಬಲ್ಲದು.

ಎಲ್ ಡೊರಾಡೋ ಎಂಬಲ್ಲಿ ಕಾಣಸಿಕ್ಕಿದ ಒಂದು ಕೋಳಿಕ್ಕೆ ಕೊಂಬುಗಳಿದ್ದುವು! (ಆರ್. ಸಿ. ವಿಲ್ಲಿಯಮ್ಸ್ ಎಂಬವರು ಪ್ರಮಾದವಶಾತ್ ಅದನ್ನು ಗುಂಡಿಟ್ಟು ಕೊಂದರು.)

ಚಿಕಾಗೋ ನಗರದ ಸಾಲ್ಲಿ ಟ್ರೆನ್ನರ್ ಎಂಬ ಮಗು, ಪ್ರಪಂಚದ ಚಿಕ್ಕ ಸೈಕಲ್ ಸವಾರರಲ್ಲಿ ಮೊದಲನೆಯದು. ಎರಡು ಗಾಲಿಗಳ ಸೈಕಲಿನಲ್ಲಿ ಚೆನ್ನಾಗಿ ಸವಾರಿ ಮಾಡ ಬಲ್ಲದು. ಪ್ರಾಯ ಕೇವಲ ಎರಡು ವರ್ಷ!

ಕೆನಡದ ಹುಚ್ಚಿಯೊಬ್ಬಳಿಗೆ ತೀವ್ರವಾದ ಹೊಟ್ಟೆನೋವು ಆರಂಭವಾಯಿತು. ಎಕ್ಸ್‌ರೇ ಪರೀಕ್ಷೆ ಮಾಡಿ ನೋಡಿದ್ದಲ್ಲಿ — ೯೪೭ ಸೂಜಿಗಳು, ೮೩೫ ಪಿನ್ ತುಂಡುಗಳು, ೧೯೦ ಗಾಜಿನ ತುಂಡುಗಳು, ೧೭೩ ಸೇಫ್ಟಿ ಪಿನ್‌ಗಳು, ಮಣಿಗಳು, ಬೀಗದ ಕೈಗಳು, ಗುಂಡಿಗಳು, ನಾಣ್ಯಗಳೇ ಇತ್ಯಾದಿ ಹಲವು ಬಗೆಯ ವಸ್ತುಗಳು ಜಠರಕೋಶದಲ್ಲಿ ಸಿಕ್ಕಿದುವು! (ಅವುಗಳನ್ನು ಶಸ್ತ್ರಕ್ರಿಯೆಯಿಂದ ತೆಗೆದಿರುತ್ತಾರೆ.)

ಬರ್ಮಾ ದೇಶದ ಕ್ಯಾಬ್ಟಿಯು ಎಂಬಲ್ಲಿ, ಗುಡ್ಡದ ಮೇಲೆ ೩೫ ಅಡಿ ಎತ್ತರದ ಒಂದು ದೊಡ್ಡ ಬಂಡೆಕಲ್ಲು; ಆ ಕಲ್ಲಿನ ತುದಿಯ ಮೇಲೆ ಅಂತಹ ಮತ್ತೊಂದು ೧೫ ಅಡಿ ಎತ್ತರದ ಕಲ್ಲು; ಆ ಕಲ್ಲು, ನೋಡುವವರಿಗೆ, ಈಗ ಬೀಳುವುದೋ ಎಂಬ ಬೆದರಿಕೆಯುಂಟಾಗುತ್ತದೆ. ಅದರ ಮೇಲೊಂದು ಚಿಕ್ಕ ಗುಡಿ. ಈ ಗುಡಿಯುಳ್ಳ ಆ ದೊಡ್ಡ ಕಲ್ಲನ್ನು ಒಂದು ಚಿಕ್ಕ ದಂಗು ಕೂಡ ಅಲುಗಾಡಿಸಬಹುದಂತೆ!!!

ಇಂಗ್ಲಾಂಡಿನ ಸೆಂಡ್ವಿಚ್ ಎಂಬಲ್ಲಿರುವ ಒಂದು ಇಂಪಾರಿಗೆ ಸೇರಿದರೆ ಪ್ರಾಣ ಒಂದು ದಿನವಾದರೂ, ದಣಿಯದೆ ನೀರಿನಲ್ಲಿ ಈಜಾಡಬಲ್ಲ ಪಾತ್ರ!

ಮುಂದೇನು?

ಸರೀಕ್ಷೆಗಳು ಸುಗಮವಾಗಿ ನಮ್ಮ ಜಿಲ್ಲೆಯ ಜಯಶಾಲಿಯಾದವರನ್ನು ಆದರದಿಂದ ಸ್ವಾಗತಿಸಿ, ಅಭಿನಂದಿಸಿ, ಧೈರ್ಯವನ್ನರ್ಪಿಸಿ ಕಳುಹಿಸಿ ಕೊಟ್ಟೆವು. ನಮ್ಮ ಜಿಲ್ಲೆಯ ಸಂತೋಷದಿಂದ ಮಹಾತ್ಮರು ಕುಪ್ಪರಾ ಗಿರುವರೆಂಬುದು, ... ಭಾವನೆಗಳಿಂದ ವ್ಯಕ್ತವಾಗಿದೆ. ಆದರೆ, ಅವರ ಭೂರಿ ಕಪ್ಪಿಯಲ್ಲಿ? ಕೇವಲ ಧೈರ್ಯವನ್ನರ್ಪಿಸಿದ್ದೇ? ಮಹಾತ್ಮರನ್ನು ನಮ್ಮ ಜನರು ಕೇವಲ ಮಹಾತ್ಮರೆಂದು ಪೂಜಿಸಲಿಲ್ಲ; ಹರಿಜನ ಪ್ರತಿನಿಧಿಯಾಗಿ ಬಂದವರೆಂದೇ ಎಂದು ನಾವು ಭಾವಿಸುವೆವು. ನಾವು ಅರ್ಪಿಸಿದ ನಿಧಿಯು ಹರಿಜನರ ಅಭ್ಯುದಯಕ್ಕಾಗಿಯೇ ವಿನಿಯೋಗವಾಗುವುದಾದರೂ ನಮ್ಮ ನಿತ್ಯ ವ್ಯವಹಾರಗಳಲ್ಲಿ ಅವರೊಡನೆ ಬಂಧುಗಳಾಗಿ ವರ್ತಿಸಿ ಸಹಾಯ ಮಾಡದಿದ್ದಲ್ಲಿ ಮಹಾತ್ಮರ ಮಹಾ ಸುಧಾರಣಾ ಪ್ರಯತ್ನಗಳೂ ಸಫಲವಾಗಲಾರವೆಂಬುದನ್ನು ಮನಸ್ಸಿನಲ್ಲಿಟ್ಟು ವರ್ತನೆಯಲ್ಲೂ ಉದಾರ ಭಾವವನ್ನು ತಾಳಬೇಕಾಗಿದೆ. "ಹರಿಜನ ನಿಧಿಯ"ಎಂದು ಹಣವನ್ನರ್ಪಿಸಿ ನಮ್ಮ ನಡತೆಯನ್ನು ಪರಿವರ್ತಿಸದಿದ್ದರೆ "ಹೊಟ್ಟೆತುಂಬ ಉಣಿಸಿ ಹೊಟ್ಟೆಯ ಮೇಲೆಯೇ ಗುದ್ದಿದಂತಾಗುವುದೆಂ"ಬುದು ಲಕ್ಷ್ಯದಲ್ಲಿರಲಿ. ಅಲ್ಪ ಹಣವನ್ನು ಕೊಟ್ಟು ನಮ್ಮ ಜನರ ಕಾರ್ಯ ತೀರಲಿಲ್ಲ. ಇನ್ನು ಮುಂದೆಯೂ ಶಕ್ತವಿದ್ದಷ್ಟನ್ನು ಕೊಟ್ಟು, ಹರಿಜನಕಾರ್ಯಕ್ಕೆ ನೆರವಾಗುವರೆಂದು ನಂಬಿಕೆ.

ಕಪ್ಪೆ ಚಿಪ್ಪಿನ ಭಾರತ ಸಂಗ್ರಹದಿಂದಲೂ ... ನಾಡಿನಲ್ಲಿ ... ಈ ಬಾರಿಯೂ ಎಲ್ಲಾ ಕಡೆ ... !

ಅಲ್ಲದೆ, ಕೋಗಿಲೆಯಾಗಿ ... ಕೇವಲ ಹಿಂದಿ ... ಪ್ರಾಂತಕ್ಕೆ ...!

x x x x

ತೀವ್ರವಾದ ರೋಗಗಳಿಗೆ, ಚಕ್ರವರ್ತಿಗಳು ... ಕೂಡ ಬಳಸಿದ ... !

x x x x

ಸೆಂಟ್ರಲ್ ಬಜೆಟ್ ... ನಮ್ಮ ... ಕನ್ನಡ ... ಕೇಳಿ!

x x x x

ಈ ವರ್ಷದ ಅತ್ಯಂತ ವಿಜಯಶಾಲಿಯಾಗಿ, ಇನ್ನು ವರ್ಷಕ್ಕಿಂತ ಹೆಚ್ಚಿನ ... ಕೊಡಿಗೆ ಕಂಡುಬರಬೇಕೆಂದು ಅವರ ಮಾತು!

x x x x

ಬೆಳ್ತಂಗಡಿ ... ಗಳು ಈ ವರ್ಷದ ಯಾಗಕ್ಕೆ ಬೇಕಾಗಿದ್ದರೂ, ಬೆಂತಿಪಟ್ಟಿಗೆ ವ್ಯಾಪಾರವೆಂಬ ಕೋಣವೂ, ಹೊಗೆಸೊಪ್ಪು ವ್ಯಾಪಾರವೆಂಬ ಆಡೂ, ಸಕ್ಕರೆ ವ್ಯಾಪಾರವೆಂಬ ಕುರಿಮರಿಯೂ ಹೊಸತಾಗಿ ಈ ವರ್ಷ ಬೇಕಾಗಿವೆಯೆಂದು ಯಜ್ಞವನಾಡುವವರ ಪ್ರಕಟನೆ!

x x x x

ಸೆಂಟ್ರಲ್ ಬಜೆಟಿಯಾಗ ಮಾಡಿದರೆ ಸುಂಕದದೇವಿಯು ತೃಪ್ತಿಯಾಗಿ ಸುಖ ಬಂದೀತೆಂದು ಸರ್ ಜೋರ್ಜ್ ಶುಸ್ಟರರ ನುಡಿ! 'ಹೌದು! ಹೌದು!' ಎಂದು ಯಜ್ಞಕುಂಡದ ಸುತ್ತಲಿರುವ ಕೌನ್ಸಿಲರರ ಸಮ್ಮತದ ಉತ್ತರ!

x x x x

ಸಕ್ಕರೆ ವ್ಯಾಪಾರವೆಂಬ ಕುರಿಮರಿಯು ಬೆಳೆಯುತ್ತಾ, ಇನ್ನು ಪುಷ್ಟವಾಗುವ ಚಿಹ್ನೆಯು ಕಂಡುಬಂದಿರುವುದರಿಂದ ಈ ವರ್ಷ ಅದನ್ನು ಯಜ್ಞಕ್ಕೆ ಸೇರಿಸಿಕೊಂಡರೆ ಎಲ್ಲಾ ರೋಗಗಳು ನಾಶವಾಗುವುವಂತೆ!

x x x x

ಒಂದೂದೇಶದಲ್ಲೂ ಬೆಂತಿಪಟ್ಟಿಗೆ ಕೋಣಗಳು ಅಲ್ಲಲ್ಲಿ ದೊರೆಯುತ್ತಿರುವುದರಿಂದ ಈ ವರ್ಷ ಅವುಗಳನ್ನು ಯಾಗಕ್ಕೆ ಸ್ವೀಕರಿಸಿದರೆ ಸುಂಕಸ್ವಾಮಿಗೆ ಸಂತೋಷವಾಗುವುದೆಂಬ ಊಹನೆ!

x x x x

ಹೊಗೆಸೊಪ್ಪು ವ್ಯಾಪಾರದ ಆಡುಗಳು ನಾಡಿನಲ್ಲಿ ಹೆಚ್ಚಿ, ಶಾಲಾ ವಿದ್ಯಾರ್ಥಿಗಳೂ, ಎಳೆ ವಯಸ್ಕರೂ ಎಳೆ ಪ್ರಾಯದಲ್ಲೆ ಸಾಯುತ್ತಿರುವುದರಿಂದ ಅವುಗಳನ್ನು ಈ ವರ್ಷ ಕುಂಡಕ್ಕೆ ಹಾಕಬೇಕೆಂದು ಯೋಚನೆ!

x x x x

ತೆರಿಗೆಯ ಹೊಸ ಕೊಡಲಿಯಿಂದಲೇ ಈ ಪ್ರಾಣಿಗಳ ಭಾಗವಾಗಿ ಯಾಗ ನಡೆಯುವುದು. ಆದುದರಿಂದ ನೋವು ಸಂಕಷ್ಟಗಳ ಬೆದರಿಕೆಯಿಲ್ಲ. ಕಾರಣ, ಎಲ್ಲರೂ ಎಚ್ಚರವಾಗಿರಿ!

x x x x

ಜನರಿಗೆ ಯಾವುದು ಅವಶ್ಯಕತೆಯ ಪ್ರಾಣಿಗಳೋ ಅವುಗಳ ಮೇಲೆ ತೆರಿಗೆಯ ಕೊಡಲಿ ಬೀಳಿಸಿದರೆ ಲಾಭವು ಹೆಚ್ಚಾಗುವುದೆಂದೂ ದೇವಿಯ ಶೀಲವು ಈ ಸೂತ್ರದಿಂದಾಗಿಯೇ ಶಾಶ್ವತವಾಗುವುದೆಂದೂ ಎಲ್ಲರ ಚರ್ಚೆ

x x x x

ಇನ್ನು ಜನರು ಉಣ್ಣುವ ಬಟ್ಟಲುಗಳ ಮೇಲೂ ತೆರಿಗೆಯ ಹೊಸ ಹೊಸ ಕೊಡಲಿಗಳ ಪ್ರಯೋಗವಾಗುವುದೋ ಏನೋ ಎಂಬ ಭಯ ತೆರಿಗೆದಾರರಿಗೆ! ಆ ದಿನವು ಬರದಿರಲು ಕಾರಣವೇ ಇಲ್ಲ!

x x x x

ಎರಡು ಕೈಗಳಲ್ಲಿ ಎರಡು ಭಯಂಕರ ಶಸ್ತ್ರಗಳು! ಒಂದು ಕೈಯಲ್ಲಿ ತ್ರಿಶೂಲ! ಒಂದು ಕೈಯಲ್ಲಿ ಸಿಟ್ಟಿನ ಮುಷ್ಟಿ! ಸೀಲವರ್ಣದ ದೇಹದ ಮೇಲೆ ಕೆದರಿರುವ ತಲೆಗೂದಲು ಮಾಸಿಹೋಗಿದೆ! ಭೀಷಣ ನೇತ್ರಗಳು! ಸುಂಕಾಂಬೆ! ನಿನ್ನ ತೃಪ್ತಿಯೆಂದಾಗುವುದೆಂದು?

x x x x

ನಿನ್ನ ಹಸಿವನ್ನು ತಣಿಸುವುದಕ್ಕಾಗಿ ಡಿಲ್ಲಿ ಶಾಸನಶಾಲೆಯಲ್ಲಿ ಭಗೀರಥ ಪ್ರಯತ್ನವಾಗುತ್ತಿದೆ! ಭಯಗೊಳ್ಳಬೇಡ! ಸಿಟ್ಟಾಗಬೇಡ! ದಯೆದೋರು!

x x x x

ಬೆಂತಿಪಟ್ಟಿಗೆಯ ಮೇಲೂ ತೆರಿಗೆ ಹೊರಿಸುತ್ತಾರೆ! ಆ ಮೊದಲೇ ಅನೇಕ ಕಡೆಗಳಲ್ಲಿ ... ಸುಂಕಾಂಬೆ ... ಮೇಲೂ ಇದರ ಪ್ರಭಾವವು ಇರಬಹುದೋ, ಎಂದು ನೋಡಲಿದ್ದಾರೆ! ಆದುದರಿಂದ ಸಮಾಧಾನದಿಂದಿರು!

x x x x

ಸಕ್ಕರೆಯ ವ್ಯಾಪಾರವು ಹಿಂದೂದೇಶದಲ್ಲಿ ಬಲವಾಗುವ ಚಿಹ್ನೆಯು ತೋರಿಬರುತ್ತಿದೆ. ಸಕ್ಕರೆಯನ್ನು ತಿಂದು ಬದುಕು ... ಬಾರದೆಂದು ಅದರ ಮೇಲೂ ಕಂದಾಯ ಹಾಕಲಿದ್ದಾರೆ! ಅಳಬೇಡ ಸುಂಕಾಂಬೆ!

ಜೈ ಸುಂಕಾಂಬೆ!

'ಸಾಯ್ಬ'

ನೋಟೀಸು.

O. P. No. 51/1934. R. P. No. 1 ... /1933.

... ದಿವಸ ... ಶನಿವಾರ ... ದ್ಯಾನ ... ಅರಂಗಾಡಿಯಾನ್ ... ರೆಪ್ಪೋಂಡೆಂಟರು.

ಸದ್ರಿ ವ್ಯವಹಾರದಲ್ಲಿ 1ನೇ ರಿಸ್ಪೋಂಡೆಂಟರು ... ಕೊಡಲ್ಪಡುವ ನೋಟೀಸು.

ಮೇಲ್ಕಂಡ ... ಅಮಲ್ದಾರಿಯಲ್ಲಿ ... ಅರ್ಜಿದಾರರು ರೆಸ್ಪೋಂಡೆಂಟರ ಸ್ಥಿರ ಆಸ್ತಿಗಳನ್ನು ವಿಲಮಿಗೆ ... ಕೋಟ್ಟಿರುವುದರಿಂದ ಸದ್ರಿ ... ತರಿಕತು ಮತ್ತು ವಿಲಮಿನ ಸಮಯ ಅರ್ಜಿದಾರನ ... ಕರೆಯಿಸುವುದರ ಕುರಿತು ನಿಮಗೇನಾದರೂ ಆಕ್ಷೇಪ ಇದ್ದ ಪಕ್ಷಕ್ಕೆ ಸದ್ರಿ ಅಮಲ್ದಾರಿಯು ತನ್ನಿಗೆ ... ಇಟ್ಟ 29-3-34ನೇ ದಿವಸ ನೀವು ಖುದ್ದು ಯಾ ವಕೀಲರ ದ್ವಾರಾ ಹಾಜರಾಗಿ ನಿಮ್ಮ ಆಕ್ಷೇಪಣೆಗಳನ್ನು ಪ್ರಾರ್ಥಿಸಿ ವಾದಿಸಬೇಕೆಂದು, ತಪ್ಪಿದರೆ ... ನಿಮ್ಮ ಗೈರುಹಾಜರಿಯಲ್ಲಿ ತೀರ್ಮಾನಿಸಲ್ಪಡಲಿದೆ ಎಂತ ಅರ್ಜಿದಾರನ ಕಡೆ ಎಡ್ವಕೇಟ್ ಕೆ. ಪಿ. ಅನಂತರಾವ್ ಇವರು ಕೊಡುವ ನೋಟೀಸು.

Kasaragod, 5-3-'34. } K. P. Anantha Rao, Advocate for Petitioner.

ನೋಟೀಸು.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

O. P. No. 27/1934.

ಲಕ್ಷ್ಮೀನಾರಾಯಣ ಭಟ್ಟ ಸಹಾ—ಅರ್ಜಿದಾರರು.

ಈ ಮೂಲಕ ಸರ್ವಜನರಿಗೆ ತಿಳಿಯಪಡಿಸುವುದೇನೆಂದರೆ:—

ಹಾಲಿ ಮೃತಪಟ್ಟ ಕಾರ್ಕಳ ತಾಲೂಕು ಹಿರ್ಗಾನಗ್ರಾಮದ ಗುಂಡೇಶ್ವರ ಸುಬ್ಬಣ್ಣ ಭಟ್ಟರಿಗೆ ಹೊರಗಿನಿಂದ ಬರತಕ್ಕ ಬಾಕಿ ವಸೂಲು ಮಾಡುವ ಬಗ್ಗೆ 1ನೇ ಅರ್ಜಿದಾರರಿಗೆ ಒಂದು ಸಕ್ಸೆಶನ್ ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾರರು ಕೊಟ್ಟ ಮೇಲ್ಕಂಡ ಅರ್ಜಿಯು ತಾ. 7-4-1934ಕ್ಕೆ ತನ್ನಿಗೆ ಇಟ್ಟಿರುತ್ತದೆಂತಲೂ, ಆಕ್ಷೇಪವುಳ್ಳವರು ಸದ್ರಿ ತಾರೀಕಿಗೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಉದಹರಿಸಬೇಕೆಂತಲೂ ಈ ಮೂಲಕ ತಿಳಿಸೋಣಾಗುತ್ತದೆ.

Karkala, 12-3-1934. } A. N. S. Achar. Pleader for Petrs.

ನೋಟೀಸು.

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

S. C. No-107/1934.

ದಿ ಕೆಂಕರ ವಿಟ್ಠಲ ಮೋಟರ ಕಂಪೆನಿ ಲಿಮಿಟೆಡ್, ಮಂಗಳೂರು ಇದರ ಮೆನೇಜಿಂಗ್ ಡೈರೆಕ್ಟರ್ ಕ್ವಿನ್ನಿ ಶೇಷಗಿರಿ ರಾವ್—ವಾದಿ.

ಮತ್ತು

ಜೆ. ವಿನ್ಸೆಂಟ್ ಅಲ್ವರೇಸ, ಜೋಸೆಫ ಅಲ್ವರೇಸರ ಮಗ, ಮಂಗಳೂರು ಕ್ಯಾಹಾರು ಅತ್ತಾವರದಲ್ಲಿ—ಪ್ರತಿವಾದಿ.

ಮೇಲ್ಕಂಡ ವಾದಿಯು ಪ್ರತಿವಾದಿಯ ಮೇಲೆ ರೂಪಾಯಿ 161-8-0 ವಗೈರೆ ಐವೇಜುಗಳಿಗೆ ಬರಸಾಧಿಕೊಳ್ಳುವರೆ ಮೇಲ್ಕಂಡ ಕೋರ್ಟಿನಲ್ಲಿ ದಾವೆ ಮಾಡಿದ್ದಾನೆ. ಸದ್ರಿ ದಾವೆಯು ತಾ. 27-3-34ಕ್ಕೆ ಹಗಲು ಘಂಟೆ 11ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ತನ್ನಿಗೆ ಇಟ್ಟಿರುತ್ತದೆ. ಆದುದರಿಂದ ಸದ್ರಿ ವ್ಯಾದೆಗೆ ಸರಿಯಾಗಿ ಪ್ರತಿವಾದಿಯು ಹಾಜರಾಗದೆ ಇದ್ದಲ್ಲಿ ಶಿವಾಯ್ ಡಿಕ್ರಿ ಆದೀತು ಎಂಬದಾಗಿ ಈ ಮೂಲಕ ತಿಳಿಸೋಣಾಗುತ್ತದೆ.

ಮಂಗಳೂರು, ೯-೩-೧೯೩೪. } P. Sanjiva Rao, *Vakil for Plaintiff.*

ಕ್ಷಯಕ್ಷೀಣಾದಿಗಳಿಗೆ

ಚ್ಯವನಪ್ರಾಶಾವಲೇಹ.

ಪ್ರಸೂತಿ ರೋಗಾದಿಗಳಿಗೆ

ದಶಮೂಲಾರಿಷ್ಟ.

(ಕಸ್ತೂರಿ ಮಿಶ್ರಣ)

ಸಮಸ್ತ ವಾತರೋಗಗಳಿಗೆ

ಮಹಾನಾರಾಯಣ ತೈಲ.

ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ, ಡೊಂಗರಕೇರಿ ರಸ್ತೆ, ಮಂಗಳೂರು.

ಸ್ವದೇಶಾಭಿಮಾನಿ

ಪತ್ರಿಕೆಯ ಸಂಪಾದಕರು ಪತ್ರವ್ಯವಹಾರಗಳಲ್ಲಿ ತಮ್ಮ ಚಂದಾ ನಂಬರುಗಳನ್ನು ನಮೂದಿಸಬೇಕು. ಅವುಗಳಿಲ್ಲದ ಪತ್ರಗಳಿಗೆ ಸರಿಯಾದ ಜವಾಬು ಕೊಡೋಣಾಗಲಿಕ್ಕಿಲ್ಲ.

ಮೇನೇಜರ್.

[illegible] dated 16-3-1934 [illegible]

DO YOU KNOW

You are *The Luckiest Man* alive?

Please try, your ticket may bring you a first prize of

Rs. 25,000

PRIZES RANGING FROM

RS. 10 ——— TO ——— RS. 25,000

ARE AWRADED IN THIS GRAND RAFFLE

IN AID OF THE

Canara High School & the Canara Girls' School,

MANGALORE.

TOTAL VALUE OF TICKETS TO BE ISSUED

RS. ONE LAKH.

Divided into 20,000 tickets each consisting of five perforated portions of Re. 1 each.

Ist Prize Rs. 25,000 **IInd Prize Rs. 5,000**

1 Prize of Rs. 1,000; 1 Prize of Rs. 500; 2 Prizes of Rs. 250;
10 Prizes of Rs. 100; 20 Prizes of Rs. 50; 40 Prizes of Rs. 25;
500 Prizes of Rupees 10.

Commission on sale of tickets will be allowed at the following rates:

(i) *For* ***cash*** *sales:*

15% commission for purchase of tickets of value of Rs. 10,000 and over.
12½% commission for purchase of tickets of value of Rs. 5000 to Rs. 10,000.
10% commission for purchase of tickets of value of Rs. 1,000 to Rs. 5,000.
6¼% commission for purchase of tickets of value of below Rs. 1,000.

(ii) *Prises for sellers of winning tickets:* –

Sellers of tickets winning the 1st 2nd and 3rd prizes will get 1% of the amount of the prizes.

Sale of tickets will be closed on 15-6-34. Drawing of the Raffle will commence on 1-7-34

RULES:

1. The Raffle will be drawn in the Canara High School, on 1—7—1934 and on succeeding days if the drawing is not completed on that day. The Raffle Committee has, however, the option of postponing drawing for sufficient reasons.

2. Only tickets, sale of which has been duly reported to the Raffle office will be included in the drawing. The holder of the ticket can ascertain, whether the sale has been duly reported, by sending a reply paid post card, quoting the correct number of his ticket to the Raffle Office.

3. The number and the value of the prizes may be reduced in proportion to the value of tickets realized.

4. The holder of winning ticket will be entitled to the prize won thereby: the tickets must be sent with the receipt for the prize amount duly endorsed and signed with the address clearly written.

5. Prizes should be claimed within six months of the drawing, at the Raffle Office. If the prizes are not claimed by the said date, the Committee reserves to itself the right of declaring the prizes forfeited.

6. The result of drawing will be published in the papers, and also communicated to the gentlemen entrusted with tickets for sale. Ticket holders can get this information daly by sending fully addressed envelope or card with stamps for reply.

7. Buyers of tickets are requested to read the rules printed on the covers of the ticket books and reprinted in this leaflet as above. Tickets are sold subject to the above conditions.

8. In all disputes the decision of the Committee shall be final.

All communications are to be addressed to:

The Honorary Secretary,
RAFFLE OFFICE,
Canara High School, Mangalore, S. K.

ಅದೃಷ್ಟಶಾಲಿಗಳು ನೀವೆಂಬುದನ್ನು ಪರೀಕ್ಷಿಸಿ ತಿಳಿಯದೆ ಏಕಿರುವಿರಿ!

ಇಲ್ಲಿದೆ ಒಂದು ಅಪೂರ್ವ ಸಂದರ್ಭ!!!

ರೂಪಾಯಿ 25,000 ರೂಪಾಯಿ

ನೀವು ಪಡೆಯಬಹುದಾದ ಟಿಕೇಟು ಈ ಮೊಬಲಗನ್ನು ಬಹುಮಾನವಾಗಿ ಗೆಲ್ಲಬಹುದು ಅತೀ ಕಡಿಮೆ ಯೆಂದರೆ ರೂಪಾಯಿ 10 ಅತಿ ಹೆಚ್ಚೆಂದರೆ ರೂಪಾಯಿ 25,000 ತನಕ ಬಹುಮಾನ ತರುವ ಟಿಕೇಟುಗಳನ್ನು

ಈಗಲೇ ಪಡೆದುಕೊಳ್ಳಿರಿ.

ಅತಿ ಅಪೂರ್ವ ಸೋಡ್ತಿ.

ಕೆನರಾ ಹೈಸ್ಕೂಲ್ ಮತ್ತು ಕೆನರಾ ಗರ್ಲ್ಸ್ ಸ್ಕೂಲ್, ಮಂಗಳೂರು

ಈ ವಿದ್ಯಾ ಸಂಸ್ಥೆಗಳ ಸಹಾಯಾರ್ಥವಾಗಿ

ರೂಪಾಯಿ 5 ಬೆಲೆಯ (ಒಂದು ಅಂಶಕ್ಕೆ ರೂಪಾಯಿ 1ರಂತೆ 5 ಅಂಶಗಳುಳ್ಳ).

20,000 ಟಿಕೇಟುಗಳುಳ್ಳ ಸೋಡ್ತಿ.

ಟಿಕೇಟು ವಿಕ್ರಿತದ ಅವಧಿ ಜೂನ್ 15ರ ತನಕ; ಸೋಡ್ತಿ ಎತ್ತುವಿಕೆ ಆರಂಭ ಜುಲೈ 1.

ಬಹುಮಾನಗಳ ವಿವರ.

ಬಹುಮಾನ	ಸಂಖ್ಯೆ	ಬಹುಮಾನ	ಸಂಖ್ಯೆ
ರೂಪಾಯಿ 25,000	1	ರೂಪಾಯಿ 500	1
ರೂಪಾಯಿ 5000	11	ರೂಪಾಯಿ 250	2
ರೂಪಾಯಿ 1000	111	ರೂಪಾಯಿ 100	10
		ರೂಪಾಯಿ 50	20
		ರೂಪಾಯಿ 25	40
		ರೂಪಾಯಿ 10	500

ಟಿಕೇಟು ಮಾರಾಟದ ಮೇಲೆ ಕೆಳಗೆ ಕಾಣಿಸಿರುವಂತೆ ಕಮಿಶನ್ ಯಾನೆ ವಟ್ಟಾ ಕೊಡಲಾಗುವುದು.

೧. ನಗದಿ ವಿಕ್ರಿತಕ್ಕೆ ಮಾತ್ರ:

10 000 ರೂಪಾಯಿಗೆ ಮೇಲ್ಪಟ್ಟ ಮೊಬಲಗಿನ ಟಿಕೇಟು ಮಾರಾಟದ ಮೇಲೆ	ಸೇಕಡಾ 15ರಂತೆ
ರೂ 5000ದಿಂದ ರೂ. 10,000ರದ ವರೆಗೆ	ಸೇಕಡಾ 12½ಯಂತೆ
ರೂ 1000ದಿಂದ ರೂ. 5000ದ ವರೆಗೆ	ಸೇಕಡಾ 10ರಂತೆ
1000 ರೂಪಾಯಿಗೆ ಕಡಿಮೆಯಾಗಿ ಮಾರಾಟವಾದಲ್ಲಿ	ಸೇಕಡಾ 6¼ರಂತೆ

೨. ಬಹುಮಾನ ಪಡೆದ ಟಿಕೇಟುಗಳನ್ನು ಮಾರಿದವರಿಗೆ:

ಮೊದಲನೆ, ಎರಡನೆ, ಮೂರನೇ ಬಹುಮಾನಗಳನ್ನು ಗೆದ್ದ ಟಿಕೇಟುಗಳನ್ನು ಮಾರಾಟಮಾಡಿದವರಿಗೆ ಆಯಾ ಬಹುಮಾನದ ಸೇಕಡಾ ಒಂದರಂತೆ ಬಹುಮಾನ ಕೊಡಲಾಗುವುದು

ಸೋಡ್ತಿಯ ಕ್ರಮಗಳು:

(1) ತಾ 1-7-34ರಲ್ಲಿ ಮತ್ತು ಆ ದಿನ ಮುಗಿಯದಿದ್ದರೆ ಸಂಪೂರ್ಣವಾಗಿ ಎಲ್ಲಾ ಬಹುಮಾನಗಳನ್ನು ನಿರ್ಧರಿಸುವ ವರೆಗೂ ಅಂದಿನಿಂದ ಪ್ರತಿದಿನ ಈ ಸೋಡ್ತಿಯನ್ನು ಕೆನರಾ ಹೈಸ್ಕೂಲಿನಲ್ಲಿ ಎತ್ತುವರು ಸಾಕಷ್ಟು ಕಾರಣಗಳಿರುವಲ್ಲಿ ಸೋಡ್ತಿ ಕಮಿಟಿಯವರು ಸೋಡಿ ಎತ್ತುವ ದಿನವನ್ನು ಮುಂದರಿಸಲು ಅರ್ಹರಾಗಿದ್ದಾರೆ

(2) ಯಾವ ಟಿಕೇಟುಗಳ ಮಾರಾಟವು ಸೋಡ್ತಿ ಆಫೀಸಿಗೆ ಕ್ರಮವಾಗಿ ತಿಳಿದು ಬಂದಿದೆಯೋ ಆ ಟಿಕೇಟುಗಳನ್ನು ಮಾತ್ರ ಸೋಡ್ತಿಗೆ ಇಡುವರು ... ಆಫೀಸಿಗೆ ಬರೆದುಕೊಂಡಲ್ಲಿ ಎಲ್ಲಾ ಮಾಹಿತಿಯನ್ನು ಪಡೆಯಬಹುದು

(3) ಮಾರಾಟವಾದ ಟಿಕೇಟುಗಳ ಮೌಲ್ಯದ ದಾಮಾಶಾಯ ಪ್ರಕಾರ ಬಹುಮಾನದ ಸಂಖ್ಯೆ ವ ಮೊಬಲಗನ್ನು ಇಳಿಸಬಹುದು

(4) ಬಹುಮಾನವನ್ನು ಗೆದ್ದ ಟಿಕೇಟುಳ್ಳವನು ಆ ಬಹುಮಾನ ಪಡೆಯಲು ಅರ್ಹನು ಬಹುಮಾನದ ಮೊಬಲಗಿಗೆ ರಶೀದಿ ಬರೆದು, ಅದಕ್ಕೆ ಸಹಿ ಮತ್ತು ಸ್ಪಷ್ಟ ವಿಳಾಸವನ್ನುಳ್ಳ ಪತ್ರವನ್ನು ಗೆದ್ದ ಟಿಕೇಟಿನೊಡನೆ ಆಫೀಸಿಗೆ ಕಳುಹಿಸಿ, ಬಹುಮಾನ ಪಡೆಯತಕ್ಕದ್ದು

(5) ಸೋಡ್ತಿ ಎತ್ತಿದ ಆರು ತಿಂಗಳೊಳಗಾಗಿ ಬಹುಮಾನದ ಮೊಬಲಗುಗಳನ್ನು ಪಡೆದ ಕೊಳ್ಳಬೇಕು ಆ ಅವಧಿ ದಾಟಿದ ಬಳಿಕ ಬಟವಾಡೆಯಾಗದೆ ಉಳಿದ ಬಹುಮಾನದ ಹಣವನ್ನು ವಜಾಪಡಿಸುವ ಅಧಿಕಾರವು ಕಮಿಟಿಗೆ ಸೇರಿದೆ

(6) ಸೋಡ್ತಿ ಎತ್ತಿದ ಬಳಿಕ ಬಹುಮಾನಗಳು ಯಾವ ಯಾವ ಟಿಕೇಟಿಗೆ ಸಲ್ಲುವವು ಎಂದು ತಿಳಿಸುವ ಪಟ್ಟಿಯನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಲ್ಲದೆ ಟಿಕೇಟುಗಳನ್ನು ವಿಕ್ರಯ ಮಾಡಿದವರಿಗೂ ಕಳುಹಿಸಲಾಗುವುದು. ಟಿಕೇಟು ಪಡಕೊಂಡವರು ಸಹಾ ಟಪ್ಪಾಲು ಚೀಟು ಹಚ್ಚಿದ ತಮ್ಮ ಹೆಸರು ವಿಳಾಸವುಳ್ಳ ಕಾರ್ಡು ಯಾ ಲಕ್ಕೋಟೆಯನ್ನು ಆಫೀಸಿಗೆ ಕಳುಹಿಸಿ ಯಾವುದೊಂದು ಟಿಕೇಟಿನ ಅಥವಾ ಬಹುಮಾನದ ವಿಷಯ ಮಾಹಿತಿಯನ್ನು ಪಡೆದುಕೊಳ್ಳಬಹುದು

(7) ಟಿಕೇಟು ಪಡಕೊಳ್ಳುವವರು ಟಿಕೇಟು ಪುಸ್ತಕದ ಹಿಂಬದಿಯಲ್ಲಿರುವ ಮತ್ತು ಮೇಲೆ ವಿವರಿಸಲಾದ ಈ ಕ್ರಮಗಳಿಗೆ ಒಳಪಟ್ಟು ಮಾತ್ರ ತಮ್ಮ ಟಿಕೇಟುಗಳನ್ನು ಪಡೆದುಕೊಂಡಂತೆ ತಿಳಿಯಬೇಕು

(8) ಎಲ್ಲಾ ವಿಷಯಗಳಲ್ಲಿ ಕಮಿಟಿಯ ತೀರ್ಮಾನವು ಆಖೈರು ತೀರ್ಮಾನು ಆಗಿರುವುದು

ಯಾವತ್ತು ಪತ್ರವ್ಯವಹಾರಕ್ಕೆ ವಿಳಾಸ —

ಗೌರವ ಕಾರ್ಯದರ್ಶಿ,

ಕೆನರಾ ಹೈಸ್ಕೂಲ್ ಶಿಕ್ಷಲ್ ಕಮಿಟಿ,

ಕೆನರಾ ಹೈಸ್ಕೂಲ್, ಮಂಗಳೂರು, (ದ. ಕ.)

ಶಾರದಾ [illegible] ಮಂಗಳೂರು

ಅನುಕ್ರಮಣಿಕೆ.

ಅಗ್ರಲೇಖ

ಕಾಂಗ್ರೆಸ್ಸಿನ ಭವಿತವ್ಯ.

ಸ್ಫುಟವಿಚಾರಗಳು. ೩

ಟೀಕೆಗಳು. ೮

ವರ್ತಮಾನ ಸಂಗ್ರಹ ೨

ಮಹಾದೇವಿಗೆ ಜೈ! ೨

ವಿವಿಧ ಸಮಾಚಾರಗಳು ೧೧

ದಕ್ಷಿಣ ಕನ್ನಡ—ಮಂಗಳೂರು, ಕಡಬ, ಮೂಲ್ಕಿ. ೪

ಪತ್ರವ್ಯವಹಾರ ೧೩

ಮೂರೆ ಮೂಲೆಗಳಿಂದ ೬

ಸಂತಾನನಿರೋಧ ಸಾಧನೆಗಳು ಅಸ್ವಾಭಾವಿಕವಲ್ಲ! ೫

ಬಂಗಾಳ ಕೌನ್ಸಿಲಿನ ನವರಾತ್ರಿಯ ಅಧಿವೇಶನ! ೧೦

ಸ್ವದೇಶಾಭಿಮಾನಿ.

ತಾ. ೧೬ನೇ ಶುಕ್ರವಾರ ಮಾರ್ಚಿ ೧೯೩೪.

ಸ್ವದೇಶಾಭಿಮಾನಿಯ ವಾಚಕರೆಲ್ಲರಿಗೆ ನವ ವರ್ಷವು ಶುಭದಾಯಕವಾಗಲಿ!

ಕಾಂಗ್ರೆಸ್ಸಿನ ಭವಿತವ್ಯ.

ಮಹಾತ್ಮಾಜೀಯವರು ನಮ್ಮ ಜಿಲ್ಲೆಗೆ ಬಂದು ಹೋದರು; ಸಾವಿರಾರು ರೂಪಾಯಿಗಳೂ ಕೊಡಲ್ಪಟ್ಟವು; ಹರಿಜನರ ವಿಷಯದಲ್ಲಿ ಭಾಷಣಗಳೂ ಆದುವು; ಆದರೆ ಕಾಂಗ್ರೆಸ್ಸಿನ ಮಾತೇ ಇರಲಿಲ್ಲ. ಒಂದು ಸಮಯದಲ್ಲಿ ಗಾಂಧಿಜೀಯವರೂ ಕಾಂಗ್ರೆಸ್ಸೂ ಎಂದರೆ ಬೇರೆ ಬೇರೆಯಾಗಿರಲಿಲ್ಲ. ಆದರೆ ಈ ಬಾರಿ ಕಾಂಗ್ರೆಸ್ಸಿನ ನೆನಪು ಕೂಡ ಯಾರಿಗೂ ಇದ್ದಿಲ್ಲವೆಂದು ಅನ್ನಿಸುವುದು. ನಮ್ಮ ಜಿಲ್ಲೆಯಲ್ಲಿ ಮಾತ್ರವಲ್ಲ, ಅವರ ಈ ಬಾರಿಯ ಭ್ರಮಣದಲ್ಲಿ ಎಲ್ಲಿಯೂ ಕಾಂಗ್ರೆಸ್ಸಿನ ಪ್ರಾಮುಖ್ಯತೆಯೇ ಇರಲಿಲ್ಲ.

ಮಹಾತ್ಮಾಜೀಯವರು ರಾಜಕೀಯ ಕಾರ್ಯಗಳನ್ನು ಒಂದು ವರ್ಷದ ಮಟ್ಟಿಗೆ ಬದಿಗಿಟ್ಟುದರಿಂದ ಅವರ ಹರಿಜನ ಕೆಲಸದಲ್ಲಿ ಕಾಂಗ್ರೆಸ್ಸಿನ ಕಾರ್ಯಗಳಿರಲಿಕ್ಕೆ ಕಾರಣವಿಲ್ಲವೆನ್ನಬಹುದು. ಆದರೆ ಗಾಂಧಿಜೀಯವರ ಭ್ರಮಣದಲ್ಲಿ ಮಾತ್ರವಲ್ಲದೆ, ನಿಕ್ಕದ ರಾಜಕೀಯ ಚಳವಳಿಗಳಲ್ಲಿ ಕೂಡ ಕಾಂಗ್ರೆಸ್ಸು ಒಂದು ಮರೆತು ಹೋದ ಚಿತ್ರ ಮಾತ್ರವಾಗಿರುತ್ತದೆಂಬುದೇ ಈಗಿನ ಪರಿಸ್ಥಿತಿಯ ಕಠಿಣ ಪರಿಣಾಮವಾಗಿದೆ. ಕಾಂಗ್ರೆಸ್ಸಿನ ವಿಸ್ಮೃತಿಯೊಡನೆ ದೇಶದ ಉಜ್ಜೀವನಕ್ಕೆ ಕಾರಣವಾಗಬೇಕಾಗುವ ಯಾವ ತರದ ರಾಜಕೀಯ ಚೇತನದ ಚಿಹ್ನೆಯಾದರೂ ಕಂಡುಬರುವುದಿಲ್ಲವೆನ್ನುವುದೇ ನಿರಾಶೆಯ ವಿಷಯವಾಗಿದೆ.

ಮಹಾತ್ಮಾಜೀಯವರು ಜೈಲಿನಿಂದ ಹೊರಬಂದ ಮೇಲೆ ಕಾಂಗ್ರೆಸ್ಸಿಗೆ ಜೀವಕಲೆಯನ್ನುಸುರುವರೆಂದು ನಿರೀಕ್ಷಿಸಲಾಗಿತ್ತು. ಆದರೆ ಈ ನಿರೀಕ್ಷಣೆಯು ಪೂರೈಸಲಿಲ್ಲ. ಆ ಮೇಲೆ ಪಂಡಿತ ಜವಾಹರಲಾಲರು ಬಿಡುಗಡೆಯಾದ ಮೇಲಾದರೂ ನಮ್ಮ ಆಶೆಗಳು ಬಲವತ್ತರವಾಗಿದ್ದುವು. ಆದರೆ ಅವರ ತಂದೆಯ ದೀರ್ಘದೃಷ್ಟಿಯಾಗಲೀ, ಚತುರತೆಯಾಗಲಿ, ಕಲ್ಪನೆಯಾಗಲಿ ಮಗನಲ್ಲಿ ಇರುವುದಿಲ್ಲವೇನೋ! ಎಂಬ ಅನುಮಾನವು ಈಗ ನಮ್ಮಲ್ಲಿ ಹುಟ್ಟಿರುತ್ತದೆ. ಏಕೆಂದರೆ, ಮಹಾತ್ಮಾಜೀಯವರೊಡನೆ ಅಭಿಪ್ರಾಯಭೇದಗಳು ತನಗಿದೆ ಎಂಬುದಕ್ಕೆ ತುಂಬಾ ಸೂಚನೆಗಳನ್ನು ಅವರು ಕೊಟ್ಟರೂ ಮಹಾತ್ಮಾಜೀಯವರಿಗೂ ತನಗೂ ಮತಭೇದವಿಲ್ಲವೆಂದು ತೋರಿಸಲಿಕ್ಕೇನೇ ಅವರು ಪ್ರಯತ್ನಪಟ್ಟು ಕಾಂಗ್ರೆಸ್ಸಿನಲ್ಲಿ ಪರಿಸ್ಥಿತಿಗೆ ಅನುಕೂಲವಾದ ಬದಲಾವಣೆಗಳನ್ನು ಮಾಡಲು ಹಿಂಜರಿದಿದ್ದಾರೆ.

ಮಹಾತ್ಮಾಜೀಯವರ ರಾಜಕೀಯ ಧುರೀಣತೆಯು ಇತಿಹಾಸದಲ್ಲಿ ಬಹಳ ಪ್ರಸಿದ್ಧಿಯನ್ನು ಹೊಂದಲಿಕ್ಕಿರುತ್ತದೆ. ಅದರಲ್ಲಿ ಅತ್ಯಂತ ವಿಚಿತ್ರವಾದ ವಿಷಯಗಳಿವೆ. ಏಕೆಂದರೆ ಅವರು ರಾಜಕೀಯ ಚಳವಳದಲ್ಲಿ ಇತರ ವಿಷಯಗಳನ್ನು ಬೆರಸುತ್ತಾರೆ. ಹಾಗೆಂದು ನಿಶ್ಚಲವಾದ ಕ್ರಮವೂ ಇರುವುದಿಲ್ಲ. ಅಸಹಕಾರ ಚಳವಳವನ್ನು ಪ್ರಾರಂಭಿಸಿ ಅವರು ವಿಧಾಯಕ ಕಾರ್ಯಕ್ರಮಕ್ಕಿಳಿದರು; ಸತ್ಯಾಗ್ರಹ ಚಳವಳವನ್ನಾರಂಭಿಸಿ ಹರಿಜನ ಸೇವೆಗಿಳಿದರು. ವಿಧಾಯಕ ಕಾರ್ಯಕ್ರಮವಾಗಲೀ, ಹರಿಜನ ಸೇವೆಯಾಗಲೀ ಮುಖ್ಯವೇ ಆದರೂ, ರಾಜಕೀಯ ಚಳವಳದಲ್ಲಿ ಅವುಗಳು ಸಾಮಾನ್ಯ ಪ್ರಾಮುಖ್ಯತೆಯುಳ್ಳಿರಬೇಕೆ ಹೊರತು, ಅವು ಚಳವಳವನ್ನೆ ನುಂಗಿ ಬಿಡುವಂತಹವುಗಳಾಗಿದ್ದರೆ ಚಳವಳಕ್ಕೆ ರಾಜಕೀಯ ಚಳವಳವೆನ್ನುವುದೇಕೆ?

ಇತ್ತ ಕಾಂಗ್ರೆಸ್ಸಿನೊಳಗೇನೇ ಹಲವರು ಬದಲಾವಣೆಯ ಬಗ್ಗೆ ಬಹಳ ಪ್ರಯತ್ನಿಸುತ್ತಿರುವರಾದರೂ ಸತ್ಯಾಗ್ರಹದ ಪ್ರೇತಬಾಧೆಯು ಇನ್ನೂ ಕಾಂಗ್ರೆಸ್ಸಿಗೆ ತಪ್ಪಿಲ್ಲ. ಸತ್ಯಾಗ್ರಹ ಮಾಡುವುದು ಸಾಧ್ಯವಿಲ್ಲವೆಂದು ಎಲ್ಲರೂ ಒಪ್ಪಿರುತ್ತಾ, ಮತ್ತು ಸತ್ಯಾಗ್ರಹದ ಚಳವಳವೇ ಕೊನೆಗಾಣಿರುತ್ತಾ, ಅದನ್ನು ಅಷ್ಟು ಶಬ್ದಗಳಿಂದ ಒಪ್ಪಲಿಕ್ಕೆ ಗಾಂಧೀ ಅನುಯಾಯಿಗಳಿಗೆ ಗಾಂಧಿಯವರ ಸೂಚನೆಯಿಲ್ಲದೆ ಸಾಧ್ಯವಾಗುವುದಿಲ್ಲ. ಹಾಗೆಂದು ಅದನ್ನು ತೆಗೆದುಹಾಕದೆ ಇತರ ರಾಜಕೀಯ ಚಳವಳ ನಡೆಸಲಿಕ್ಕೆ ಸರಕಾರಕ್ಕೆ ಒಪ್ಪಿಗೆಯಿಲ್ಲ. ಇದ್ದ ಪರಿಸ್ಥಿತಿಯನ್ನು ಒಪ್ಪಿಕೊಂಡು ಕಾಂಗ್ರೆಸ್ಸುಧುರೀಣರು ಚೇತರಿಸಬಾರದೇಕೆ? ಈಗಿನ ಮೈಮರೆಯುವಿಕೆಯು ಕಾಂಗ್ರೆಸ್ಸಿನ ಅಂತ್ಯೇಷ್ಟಿಸತ್ಕಾರವಾಗಿ ಪರಿಣಮಿಸದಂತಾದರೂ ನೋಡುವುದು ಬೇಡವೇ?

ಕಾಂಗ್ರೆಸ್ಸಿನಲ್ಲಿ ಜೀವಕಲೆಯನ್ನು ತುಂಬಿ ಅದಕ್ಕೆ ನೂತನ ಕಾರ್ಯಕ್ಷೇತ್ರವನ್ನು ರಚಿಸಲಿಕ್ಕೆಂದು ಢಿಲ್ಲಿಯಲ್ಲಿ ಒಂದು ಪರಿಷತ್ತನ್ನು ಜರಗಿಸಲು ಪ್ರಯತ್ನಗಳು ನಡೆಯುತ್ತಿದ್ದುವು. ಆದರೆ ಮೇಲೆ ಕಾಣಿಸಿದ ತೊಂದರೆಗಳಿಂದ ಅದು ನೆರವೇರುವುದಿಲ್ಲವೆಂದು ಕಾಣುತ್ತಿದೆ. ಸತ್ಯಾಗ್ರಹದ ಪ್ರೇತಬಾಧೆಯು ತೊಲಗದ ವಿನಹ ಕಾಂಗ್ರೆಸ್ಸು ಸಜೀವವಾಗಿ ಮುಂದೆ ಬರುವುದು ಸಿಕ್ಕಿಯಿಲ್ಲ.

ಇತ್ತ ಕೌನ್ಸಿಲುಗಳಲ್ಲಿಯೂ ಎಸೆಂಬ್ಲಿಯಲ್ಲಿಯೂ ದೇಶಕ್ಕೆ ಹಾನಿಕರವಾದ ಕಾನೂನುಗಳು ದೇಶದಲ್ಲಿ ಏನೊಂದು ಸುದ್ದಿ ಇಲ್ಲದೇನೇ ರಚಿಸಲ್ಪಡುತ್ತಾ ಹೋಗುತ್ತಿವೆ. ಸರಕಾರದವರು ಹೇಳಿದುದಕ್ಕೆ ತಲೆದೂಗುತ್ತಾ ಇದ್ದಾರೆ. ರಾಷ್ಟ್ರೀಯತೆಯ ಸ್ಪರ್ಶಕೂಡ ಈ ಕೌನ್ಸಿಲುಗಳಿಗೂ ಎಸೆಂಬ್ಲಿಗೂ ಇದುವುದಿಲ್ಲ. ಹೀಗಾಗಿ ಒಂದು ಕಡೆಯಿಂದ ಕಾಂಗ್ರೆಸ್ಸಿನ ನಿಷ್ಕರ್ಮ; ಇನ್ನೊಂದು ಕಡೆಯಿಂದ ಸರಕಾರದ ದೇಶದ ಹಿತಗಳಿಗೆ ವಿರೋಧವಾದ ರಚನೆಗಳು ಸೇರಿ ದೇಶದ ಚೈತನ್ಯವನ್ನೇ ನಾಶಮಾಡಲು ಆರಂಭವಾಗಿರುತ್ತದೆ. ಪರಿಸ್ಥಿತಿಯು ಹೀಗೆಯೇ ಮುಂದರಿದರೆ ಕಳೆದ ಕೆಲವು ವರ್ಷಗಳಲ್ಲಿ ಕಾಂಗ್ರೆಸ್ಸು ಎಷ್ಟು ಮುಂದೆ ಬಂದಿದ್ದಿತೋ, ಅದೆಲ್ಲವೂ ನಾಶಹೊಂದಿ, ಕಾಂಗ್ರೆಸ್ಸು ೧೮೮೫ನೇ ಇಸವಿಯ ಸ್ಥಿತಿಗೆ ಹೋಗುವುದೇನೋ!

ಸ್ಫುಟವಿಚಾರಗಳು.

ಇನ್ನೂ ವಿನೋದಗಳು ಬೇಡ!

೧೯೩೪-೩೫ನೇ ಆಯ-ವ್ಯಯದ ಪಟ್ಟಿಯಲ್ಲಿ ನಮ್ಮ ನಗರ ಸಭೆಯು 'ನಿರೀಕ್ಷಿಸುವ ಉತ್ಪತ್ತಿಗಳಲ್ಲಿ 'ವಿನೋದಗಳ ಮೇಲಿನ ತೆರಿಗೆಯು ರೂ. ೨೦೦೦' ಎಂಬುದೊಂದು. ಪ್ರಕೃತ ಈ ವಿಚಾರವಾಗಿ ಒಂದು ಮಾತನ್ನು ಹೇಳಬಿಚ್ಛಿಸುವೆವು. ಈ ವರ್ಷ ನಮ್ಮಲ್ಲಿಗೆ ಬಂದಷ್ಟು ಸರ್ಕಸ್ ನಾಟಕ—ವಿವಿಧ ವಿನೋದಾದಿ ಆಟಗಳು ಹಿಂದೆಂದೂ ಬಂದುದು ನಮ್ಮ ಜ್ಞಾಪಕದಲ್ಲಿಲ್ಲ. 'ದುಡ್ಡಿನ ದುಷ್ಕಾಲ'ದ ವರ್ಷದಲ್ಲಿಯೇ ಇಷ್ಟು ವಿನೋದಗಳು ಬಂದು ಜನರ ಧನಶೋಷಣೆಯಾಯಿತು. ಬರುವ ವರ್ಷವೂ ನಮ್ಮ ನಗರದವರನ್ನು 'ಆನಂದ'ಗೊಳಿಸಲು ಸರ್ಕಸುಗಳೋ ನಾಟಕಗಳೋ ಬರಬಹುದೆಂದು ನಮ್ಮ ಮುನಿಸಿಪಾಲಿಟಿಯು ನಿರೀಕ್ಷಿಸುವುದು ಸಹಜವಾದರೂ, ಇನ್ನು ಕೆಲವು ವರ್ಷಗಳಿಗೆ ಯಾವ ವಿನೋದಗಳೂ ಬೇಡವೆನ್ನುವಷ್ಟಕ್ಕೆ ವೆಚ್ಚಮಾಡಿ ವೈರಾಗ್ಯ ತಾಳುವಂತಾದ ನಗರನಿವಾಸಿಗಳ ಹಿತಚಿಂತನೆಯಿಂದಲೇ ನಮ್ಮ ಮುನಿಸಿಪಾಲಿಟಿಯು ಮುಂದಿನ 'ವಿನೋದ'ಗಳ ವಿಷಯದಲ್ಲಿ ನಡಕೊಳ್ಳಬೇಕೆಂದು ನಮ್ಮ ಸೂಚನೆ. ಲೈಸನ್ಸುಗಳನ್ನು ಕೊಡುವ ಅಧಿಕಾರವು ಮಾ ಚೆಯರ್ಮ್ಯಾನರಿಗೆ ಇದೆ; ಅದನ್ನವರು 'ಎಂಟರ್‌ಟೈನ್‌ಮೆಂಟ್ ಟ್ಯಾಕ್ಸಿ'ನ ಹೆಸರಲ್ಲಿ ದುಂದುವ್ಯಯ ಮಾಡಲಿಕ್ಕಿಲ್ಲವೆಂದು ನಮ್ಮ ಭರವಸೆ.

'ಕೃಷ್ಣ ಮಂದಿರ.'

ಮಹಾತ್ಮಾಜೀಯವರ ಪೂಜ್ಯಹಸ್ತದಿಂದ ಇಲ್ಲಿಯ ಕೆನರಾ ಹೈಸ್ಕೂಲಿನಲ್ಲಿ 'ಶ್ರೀ ಕೃಷ್ಣ ಮಂದಿರ'ದ ಶಂಕುಸ್ಥಾಪನೆಯಾಯಿತಷ್ಟೆ. ಹರಿಜನ ವಿದ್ಯಾರ್ಥಿಗಳಿಗೆ ಮೊದಲಾಗಿ ಪ್ರವೇಶ ಕೊಟ್ಟು ನಮ್ಮ ಜಿಲ್ಲೆಯ ಇತರ ಶಾಲೆಗಳಿಗೂ ಆದರ್ಶವೆನಿಸಿದ ಈ ಶಾಲೆಯು ಈಗ ಕೃಷ್ಣ ಮಂದಿರದಂತಹ ದೇವಾಲಯವನ್ನು ಕಟ್ಟಿಸುವ ಯತ್ನವನ್ನು ಕೈಕೊಂಡೂ ಮೇಲ್ಪಂಕ್ತಿ ಹಾಕಿಕೊಟ್ಟಿತು. ಮಂದಿರಕ್ಕೆ ಮೇಲು-ಕೀಳೆಂಬ ಭೇದಾಭೇದವಿಲ್ಲದೆ ಸಮಸ್ತ ಹಿಂದೂಗಳಿಗೂ ಪ್ರವೇಶ ಕೊಡುವುದರಿಂದ, ಮುಂದಿನ ಜನಾಂಗವಾಗಿರುವ ಎಳೆಯ ವಿದ್ಯಾರ್ಥಿಗಳಲ್ಲಿ ಸ್ಪೃಶ್ಯಾಸ್ಪೃಶ್ಯ ಭೇದದ ಮೊಳಕೆಗೆ ಅವಕಾಶ ಕೊಡದಂತೆಯೂ, ಐಕ್ಯದ ಭಾವನೆಯು ಬಲಗೊಳ್ಳುವಂತೆಯೂ ಇದು ಸಾಧಕವಾಗುವುದೆಂದು ದೃಢವಾಗಿ ನಂಬಬಹುದು. ಕ್ರೈಸ್ತ ವಿದ್ಯಾಸಂಸ್ಥೆಗಳು ತಮ್ಮ ದೇವಾಲಯವನ್ನು ಬಳಿಯಲ್ಲಿಟ್ಟುಕೊಂಡೇ ಕ್ರೈಸ್ತ ವಿದ್ಯಾರ್ಥಿಗಳಲ್ಲಿ ಧರ್ಮಾಭಿಮಾನವನ್ನೂ ಒಗ್ಗಟ್ಟನ್ನೂ ದೃಢಗೊಳಿಸುತ್ತ, ಕ್ರೈಸ್ತೇತರರಿಗೂ ಆಗಾಗ್ಗೆ 'ಜ್ಞಾನದ ಕಿರಣ'ವನ್ನು ತೋರುತ್ತ, ದ್ವಿಮುಖವಾದ ಪ್ರಯೋಜನವನ್ನು ತೋರ್ರಿ ಉತ್ತಮ ವ್ಯವಸ್ಥೆಯಿಂದ ನಡೆಯುತ್ತಿವೆಯಾದಗೆ, ಕೃಷ್ಣ ಮಂದಿರವೂ ಅಂತಹ ಧ್ಯೇಯಗಳನ್ನೇಕೆ ಸಫಲಗೊಳಿಸಬಾರದು? ಮಾತ್ರ ಇಂತಹ ಮಂದಿರಗಳ ಪ್ರಸನ್ನತೆಯೂ ಶಾಂತತೆಯೂ ಯಾವ ವಿಧದಿಂದಲೂ ಕೆಡದಂತೆ ಉಪಾಧ್ಯಾಯರೂ, ವಿದ್ಯಾರ್ಥಿಗಳೂ ಸಹಕರಿಸಿ ಶ್ರಮಪಟ್ಟರೆ, ಇತರ ವಿದ್ಯಾಸಂಸ್ಥೆಗಳೂ ಸುಲಭವಾಗಿ ಇದನ್ನನುಸರಿಸುವ ಅವಶ್ಯಕತೆಯನ್ನು ಕಾಣದಿರವು.

ಮತ್ತೊಂದು ಆಯುಧ!

ಬಂಗಾಳ ಕೌನ್ಸಿಲು ಭಯೋತ್ಪಾದಕರ ನಿರ್ಮೂಲನದ ಹೆಸರಲ್ಲಿ ಭೀಕರ ಕಾನೂನುಗಳ ಆ 'ಎಂಟಿ ಟೆರರಿಸ್ಟ್' ಮಸೂದೆಯನ್ನು ಮಂಜೂರು ಮಾಡಿತು; ಕೆಲವೊಂದು ತಿದ್ದುಪಡಿಗಳನ್ನು, ಕಾನೂನಿನ ಬಿಗಿಯನ್ನು ಕೊಂಚವಾದರೂ ಸಡಲಿಸುವೆವೆಂದು ಬಗೆದು, ಕೆಲವೆಂಬರರು ಸೂಚಿಸಿದರೂ ವ್ಯರ್ಥವಾಯಿತು. 'ಕ್ರಾಂತಿಕಾರರ ಚಳವಳವನ್ನು ಪ್ರೋತ್ಸಾಹಿಸುವರೆ ಸಹಾಯಕವಾಗುವ ಯಾವುದೇ ಸ್ಥಳಗಳನ್ನು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ಮುಚ್ಚಿ, ತಮ್ಮ ಸ್ವಾಧೀನ ವಿರಿಸು'ವಂತೆಯೂ, 'ಕ್ರಾಂತಿಗೆ ಕಿಂಚಿತ್ತಾದರೂ ಸಂಬಂಧವಿರುವಂತಹ ಯಾ ಪ್ರೇರೇಪಿಸುವ ಸಾಹಿತ್ಯ, ಚಿತ್ರ, ಚಿಹ್ನೆಗಳಾವುವೂ ಇರುವವರನ್ನು ಪ್ರತಿಬಂಧಿಸುವ ಅಥವಾ ದಸ್ತಗಿರಿ ಮಾಡಿ ೩ ವರ್ಷಗಳ ತನಕ ಕಾರಾಗೃಹಕ್ಕೆ ದೂಡಿಬಿಡುವಂತೆ'ಯೂ, ಸಂದೇಹಾಸ್ಪದ ನಡತೆಯ ಯುವಕರ ಚಲನವಲನಗಳಿಗೆ ಪರಿಮಿತಿಯ ಪ್ರತಿಬಂಧವಿರಿಸುವಂತೆಯೂ ಈ ಮಸೂದೆಯು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಿಗೆ ಯಥೇಚ್ಛ ಅಧಿಕಾರವನ್ನು ದಯಪಾಲಿಸಿತು. ಸರಕಾರಕ್ಕೆ ಪ್ರಜಾನಾಶದ ಕೃಪೆಯಿಲ್ಲವಾದರೂ ಮೊದಲೇ ಬಂಗಾಲಾದ ಶಾಂತಿಪ್ರಿಯ ಪ್ರಜೆಗಳೂ ಈ ಕಾನೂನಿನಿಂದ ಭಯವಿಹ್ವಲರಾಗುವುದು ಖಂಡಿತ. ಯುವಕ ವಿದ್ಯಾರ್ಥಿಗಳ ಕೈಯಲ್ಲಿರಬಹುದಾದ ಸಾಮಾನ್ಯ ಚರಿತ್ರೆ ಗ್ರಂಥಗಳೂ ಕಾದಂಬರಿಗಳೂ ಹಲವು ಸಂದರ್ಭಗಳಲ್ಲಿ ಯುವಕರ ರಕ್ಷಕರಾಗಬಹುದಾದ ಈ ಬಂಗಾಳೀ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರುಗಳಿಗೆ ಅಧಿಕ-ಅಧಿಕಾರದ ಪೀಠದಿಂದ 'ಸಂದೇಹಾಸ್ಪದ'ವಾಗಿ ತೋರದಂತಾಗಲಿ! ಮೊದಲೇ ಭಯದಿಂದ ಹೆಜ್ಜೆಯಿಡುತ್ತಿರುವ ಪತ್ರಿಕೆಗಳು ಎಡವಿ ಬೀಳದಂತಾಗಲಿ!

ಖಾನರೂ ಖಾವಂದರೂ.

'ಗಡಿನಾಡಿನ ಗಾಂಧಿ'ಯೆಂದು ಉಪನಾಮವಿರುವ ಮಿ। ಗಫರ್ ಖಾನರವರ ಅಳಿಯ ಒಬೇದುಲ್ಲಾ ಖಾನರವರು ರಾಜಕೀಯ ಕಾರಣಗಳಿಂದ ಕಾರಾಗೃಹವನ್ನು ಸೇರಿದ್ದು, ಆಹಾರ-ಅಕ್ರಮವೇ ಮೊದಲಾದ ಕೆಲವು ಕಾರಣಗಳಿಂದ ಉಪವಾಸವನ್ನಾರಂಭಿಸಿ ಈಗಾಗಲೇ ಕೆಲವು ದಿನಗಳು ಸಂದು ಹೋದುವು ಅವರ ಸ್ಥಿತಿಯು ನಿರಾಶಾಜನಕವಾಗುತ್ತಿದೆಯಾಗಿ ಸುದ್ದಿಗಳು ಬರುತ್ತಿವೆ. ಆದರೆ, "ಇಂತಹ ಉಪವಾಸಗಳಿಂದ ಸರಕಾರವನ್ನು ಬಲಾತ್ಕರಿಸಲಾಗುವುದಿಲ್ಲ"ವೆನ್ನುತ್ತ ಸರಕಾರದವರು ಸುಮ್ಮಗಿರುವರೆಂದು ತಿಳಿದು ವಿಷಾದಿಸಬೇಕಾಗಿದೆ. ಒಂದಿಷ್ಟು ಉತ್ತಮ ಆಹಾರ, ಪತ್ರಿಕೆಗಳನ್ನೋದುವ ಸೌಕರ್ಯ ಇವುಗಳನ್ನು ಕೇಳುವುದು ಸರಕಾರವನ್ನು ಬಲಾತ್ಕರಿಸುವ ಹಟವಾದರೆ ಪ್ರಾಣೋತ್ಕ್ರಮಣದಂತಹ ಶೋಚನೀಯ ಸ್ಥಿತಿಗೆ ಮುಟ್ಟಿದವರನ್ನೂ—ಅವರು ಕೊಲೆಗಡಕರಲ್ಲವಾದರೆ—ಸರಕಾರವು ಇನ್ನೂ ತಾತ್ಕಾಲಿಕವಾಗಿಯಾದರೂ ಬಿಡುಗಡೆ ಮಾಡದಿರುವುದು ಇದೆಂಥ ಸ್ವಗೌರವದ ಪರಮಾವಧಿ! ಸರಕಾರವು 'ಬಲಾತ್ಕಾರ'ವೆನ್ನಲಿ, 'ಸೇಡೆ'ನ್ನಲಿ ದೀರ್ಘ ಉಪವಾಸವನ್ನು ಕೈಕೊಳ್ಳುವಂತಹ 'ಹಟ'ಕ್ಕೆ ಎಂತಹ ಪ್ರೇರೇಪಣೆಯಿದ್ದಿರಬೇಕೆಂದು, "ಉಪವಾಸದಿಂದ ಸರಕಾರವು ಬೆದರುವುದೇ?" ಎಂದು ಹೇಳುವವರಿಂದಲೇ ಒಂದೊಂದೇ ದಿನದ ಉಪವಾಸ ಮಾಡಿಸಿ ಅವರ ಬಾಯಿಯಿಂದಲೇ ಅನುಭವ ಕೇಳಿ ಊಹಿಸಿಕೊಳ್ಳಲಿ! ಯತೀಂದ್ರನಾಥನ ವಿಷಯದಲ್ಲಾದಂತೆ ಕೊನೆಯ ಪರದೆ ಬೀಳುವ ತನಕ ಸರಕಾರವು ಮೌನವಾಗಿರದೆ, ಖಾನರ ಬಿಡುಗಡೆ ಮಾಡುವುದೆಂದು ಆಶಿಸುವ!

ಕೆನರಾ ಹೈಸ್ಕೂಲಿನ ಸೋದ್ಧಿಯ ಜಾಹೀರಾತನ್ನು ಈ ಸಂಚಿಕೆಯ ಪುರವಣಿಯಾಗಿ ಕೊಟ್ಟಿರುತ್ತೇವೆ.

ಶಾಲಿವಾಹನ ಶಕ ೧೮೫೬ನೇ ಭಾವ ಸಂವತ್ಸರದ ಶ್ರಾವಣ ಶು. ೨ ಶನಿವಾರದಿಂದ—ಶ್ರಾವಣ ಶು. ೮ ಶುಕ್ರವಾರದ ವರೆಗಿನ ಪಂಚಾಂಗ.

(ಗಣ್ಯವೇಯ ಮಾನ—ಸುಗ್ಗಿ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಜನ್ಮರಾಶಿ	ಸೂರ್ಯ — ಉ	ಸೂರ್ಯ — ಅಸ್ತ
17	ಶನಿ	[illegible]	[illegible]	ರೇವತಿ	[illegible]	[illegible]	6.48	6.39
18	ರವಿ	[illegible]	[illegible]	ಅಶ್ವಿನಿ	[illegible]	[illegible]	6 47	6.39
19	ಸೋಮ	[illegible]	[illegible]	ಭರಣಿ	[illegible]	[illegible]	6 47	6.39
20	ಮಂಗಳ	[illegible]	[illegible]	ಕೃತ್ತಿಕಾ	[illegible]	[illegible]	6 46	6 39
21	ಬುಧ	[illegible]	[illegible]	ರೋಹಿಣಿ	[illegible]	[illegible]	6.45	6 39
22	ಗುರು	[illegible]	[illegible]	ಮೃಗಶಿರಾ	[illegible]	[illegible]	6 45	6.39
23	ಶುಕ್ರ	[illegible]	[illegible]	ಆರ್ದ್ರಾ	[illegible]	[illegible]	.6 44	6 39

ಮಂಗಳೂರಿನ ವಾಯುಸ್ಥಿತಿ.

Date ತಾರೀಖು	Temperature. ಉಷ್ಣ (ಕಾವು) Maximum ಹೆಚ್ಚಾದದ್ದು	Minimum ಕಡಿಮೆ	Rainfall. ಮಳೆ ದಿನದ ಮಳೆ	ಒಟ್ಟು ಮಳೆ.
22	89— 6	75— 3	—	—
23	88— 3	74— 5	—	—
24	90— 1	73 — 7	—	—
25	89— 5	76— 2	—	—
26	90— 3	77 — 2	—	—
27	88— 9	75 — 1	—	—
28	8[illegible]— 2	73 — 2	—	167—64

ಮಂಗಳೂರಿನ ಪೇಟೆ ಧಾರಣೆ.

ಜಿನಸು		ಇಂದ ರೂ. ಆ.	ವರೆಗೆ ರೂ. ಆ.
ಹೊಸ ರಾಶಿ ಅಕ್ಕಿ	...	3— 4	3—12
ಹೊಸ ಮುಸ್ಕಿ	...	4— 2	4—10
ಹೊಸ ಗುಡ್ಡು	...	3—10	4— 2
	...	—	—
ಊರ ಅಪ್ಪಲ್ ಬೆಲ್ಲ	...	4— 4	5— 4
ರಂಗೂನು ಬೆಲ್ಲ ಗೋಣಿ ಒಕ್ಕೆ	...	5— 2	5—13
ಎಲ್ಲೂರು ಬೆಲ್ಲ ಮುಡಿ ಒಕ್ಕೆ	...	3— 4	3— 6
ಗೋಧಿ ಗೋಣಿ ಒಕ್ಕೆ	...	[illegible]— 0	12— 8
ತೊಗರಿ ಗೋಣಿ ಒಕ್ಕೆ	...	9— 0	10— 8
ಹುರುಳಿ ಗೋಣಿ ಒಕ್ಕೆ	...	5— 8	6— 0
ಕಡಲೆ ಗೋಣಿ ಒಕ್ಕೆ	...	9— 8	12— 8
ತೊಗರಿಬೇಳೆ ಗೋಣಿ ಒಕ್ಕೆ	...	10— 0	16— 0
ಉದ್ದು ಗೋಣಿ ಒಕ್ಕೆ	...	7— 0	7—10
ಹೆಸರು ಗೋಣಿ ಒಕ್ಕೆ	...	8— 0	9— 0
ಊರುಬೆಲ್ಲ ಖಂಡಿ ಒಕ್ಕೆ	...	32— 0	37— 8
ಉಪ್ಪು ಗೋಣಿ ಒಕ್ಕೆ	...	5— 0	5— 8
ಕೊಬ್ಬರಿ ಖಂಡಿ ಒಕ್ಕೆ	...	40— 0	45— 0
ಕೊಬ್ಬರಿ ಹಿಂಡಿ ಖಂಡಿ ಒಕ್ಕೆ	...	17— 8	18— 8
ಎಳ್ಳೆಂಡಿ ಖಂಡಿ ಒಕ್ಕೆ	...	23—12	25— 0
ಕೊಬ್ಬರಿ ಎಣ್ಣೆ ಮುಡಿ ಒಕ್ಕೆ	...	3— 1	4— 2
ಎಳ್ಳೆಣ್ಣೆ ಮುಡಿ ಒಕ್ಕೆ	...	5— 0	6— 0
[illegible] ಪೆಟ್ಟಿಗೆ ಒಕ್ಕೆ	...	6— 8	8—
ಸೋರಿನ ಸಕ್ಕರೆ ಮುಡಿ ಒಕ್ಕೆ	...	3—11	3—12
ಹೊಸ ಮೆಣಸು	...	6— 4	9—10
ಸಾಸಿವೆ ಮುಡಿ ಒಕ್ಕೆ	...	4— 8	4—12
ಕಾಳುಮೆಣಸು ಖಂಡಿ ಒಕ್ಕೆ	...	130— 0	135— 0
ಮೆಂತ್ಯೆ ಮುಡಿ ಒಕ್ಕೆ	...	20— 0	24— 0
ಹೊಸ ಗೇರುಬೀಜ ಮುಡಿ ಒಕ್ಕೆ	...	3— 5	3— 6
ಕಲ್ಲಿದ್ದಲು ಖಂಡಿ ಒಕ್ಕೆ	...	42— 0	44— 0
ಕಾಂಬ್ರು ತಗಡು ಮುಡಿ ಒಕ್ಕೆ	...	10— 0	10— [illegible]
ಕಾಂಬ್ರು ಪಾತ್ರೆಗಳು ಮುಡಿ ಒಕ್ಕೆ	...	13— 0	14— 8
ಅರಶಿನ ಸೇರು ಒಕ್ಕೆ	...	14—12	15— 0
ಹಿತ್ತಾಳೆ ತಗಡು ಮುಡಿ ಒಕ್ಕೆ	...	9— 0	9— 8
ಜವಳು ಒಕ್ಕೆ	...	20— 2	21— 4
ಹುಣಸೆ ಹುಳಿ ಖಂಡಿ ಒಕ್ಕೆ	...	25— 8	30— 0
ನೇಟಿವ್ ಕಾಫಿ ಖಂಡಿ ಒಕ್ಕೆ	...	180— 0	205— 0
ಪ್ಲಾಂಟೇಶನ್ ಕಾಫಿ ಖಂಡಿ ಒಕ್ಕೆ	...	270— 0	275— 0
ಹಳೆ ಅಡಿಕೆ	...	110— 0	125— 0
ಹೊಸ ಅಡಿಕೆ	...	75— 0	100— 0

THE CANARA PUBLIC CONVEYANCE CO., LTD, MANGALORE

(ESTABLISHED 1914)

ಕನರಾ ಪಬ್ಲಿಕ್ ಕನ್ವೆಯನ್ಸ್ ಕಂಪನಿ, ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯ ಕ್ಷೇತ್ರಗಳಿಗೆ ಹೋಗುವುವು. ಮೈಸೂರು, ಕೊಡಗು ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನ್ ಕೂಡಾ ಇರುವುದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ, ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಬೇಕೆಂದಿರುವವರು ಪ್ರತಿದಿನವೂ ನಾಲ್ಕು ಸಾರಿ ಕರಾವಳಿ ಮಾರ್ಗವಾಗಿಯೂ, 4 ಸಾರಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲುಪಿರಿ. ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 37, ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ, ಕಾರ್ಕಳ ಗೋಮಟೇಶ್ವರನ ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು 4 ಸಲ ಹೊರಟು ಎರಡೂವರೆ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲುಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ, ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ತಲ್ಪಬಹುದು. 'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಬೆಳಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲುಪುವಿರಿ. ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಪ್ರಾಚೀನ ಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಬೇಲೂರಿನ ಸೋಮನಾಥ ದೇವಾಲಯವನ್ನು ನೋಡಲು, ನೋಡಬಿಚ್ಛಿಸುವವರು, ಬೆಳಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ, ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದೂಸ್ಥಾನ, ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣ ಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ, ಮಂಗಳೂರಿನಿಂದ ಮಡಿಕೇರಿಗೆ 7 ಘಂಟೆಗಳೊಳಗೂ, ಕಡೂರಿಗೆ 12 ಘಂಟೆಗಳೊಳಗೂ, ಮೈಸೂರಿಗೆ 12 ಗಂಟೆಗಳೊಳಗೂ ಸಕಲೇಶಪುರಕ್ಕೆ 8 ಗಂಟೆಗಳೊಳಗೂ, ಹಾಸನಕ್ಕೆ 10 ಗಂಟೆಗಳೊಳಗೂ, ಚಿಕ್ಕಮಗಳೂರಿಗೆ 8 ಗಂಟೆಗಳೊಳಗೂ, ಕೊಲ್ಲೂರಿಗೆ ಮತ್ತು ಗೋಕರ್ಣಕ್ಕೆ ೧½ ದಿನದೊಳಗೂ ಶಿವಮೊಗ್ಗಕ್ಕೆ 12 ಗಂಟೆ ತಲಪಬಹುದು. ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary

The Canara Public Conveyance Company Ltd., Mangalore

Chikmagalur Public Conveyance Motor Service

CHIKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,

ಚಿಕ್ಕಮಗಳೂರು

ಮುಂಬಾಯಿಯಿಂದ — ಮಂಗಳೂರಿಗೆ

ಮಂಗಳೂರಿನಿಂದ — ಮುಂಬಾಯಿಗೆ.

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ

ಮಂಗಳೂರು — ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು — ಅನುಕೂಲ ಪ್ರಯಾಣ ಸೌಕರ್ಯಗಳು.

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ

ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ

ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ.

ಚಿಕ್ಕಮಗಳೂರಿನಿಂದ — ಶಿವಮೊಗ್ಗಕ್ಕೆ, ಬೇಲೂರಿಗೆ, ಕಡೂರಿಗೆ-
— ಮೂಡಗೆರೆಗೆ, ಸಕಲೇಶಪುರಕ್ಕೆ.
— ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
— ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ನಿರಾಯಾಸದ ಪ್ರಯಾಣ! ಉತ್ಸಾಹಕರ ಸೌಕರ್ಯ!

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

ಸಂತಾನನಿರೋಧ ಸಾಧನೆಗಳು ಅಸ್ವಾಭಾವಿಕವಲ್ಲ!

ಮದರಾಸಿನ ವೈ. ಎಮ್. ಐ ಎ. ಸಂಘದ ಆಶ್ರಯದಲ್ಲಿ ಭಾಷಣಮಾಡುತ್ತ ಜಸ್ಟಿಸ್ ರಮೇಶಮ್‌ರವರು, ಆಧುನಿಕ ಸಂತಾನನಿರೋಧ ಸಾಧನೆಗಳು ಅಸ್ವಾಭಾವಿಕವೆಂದು ನಾವು ತಿಳಿದು ಅವುಗಳಿಂದ ದೂರವಿರುವುದು ಸಲ್ಲದೆಂದು, ತಪ್ಪು ತಿಳುವಳಿಕೆಯಿಂದ ಜನರು ಸಂತಾನನಿರೋಧ ಸಾಧನೆಗಳಿಗೆ ವಿರೋಧವಾಡುತ್ತಿರುವುದನ್ನು ಖಂಡಿಸುತ್ತ ಭಾಷಣ ಕೊಟ್ಟರು

ಸಂತಾನ ನಿರೋಧದ ಕುರಿತಾದ ವಾದ—ವಿವಾದಗಳ ಸಂಬಂಧವಾಗಿ ಪತ್ರಿಕೆಗಳಲ್ಲಿ ನಾನಾ ಪ್ರಕಟಣೆಗಳಾಗಿವೆ ಆ ಪ್ರಕಟಣೆಗಳಲ್ಲಿ ಸತ್ಯಾಂಶವು ಇರಬೇಕಾದಷ್ಟು ಇಲ್ಲ ಅವುಗಳನ್ನು ಶ್ರೀ ರಮೇಶಮ್‌ರವರು ತಿದ್ದಿ, ವಿವರಿಸಿದರು

'ಯುರೋಪಿನ ದೇಶಗಳು ಸಂತಾನನಿರೋಧ ವಿಧಾನಗಳನ್ನು ಆಚರಿಸುತ್ತಿವೆಯಾದ ಕಾರಣದಿಂದಲೇ ಹಿಂದೀಯರಾದ ನಾವೂ ಆಚರಿಸುವುದೇ ಎಂಬೊಂದು ಪ್ರಶ್ನೆ ಬಂದಿದೆ. ಅದಲ್ಲದೆ, ಸಂತಾನನಿರೋಧವನ್ನಾಚರಿಸುತ್ತಿದ್ದ ಯುರೋಪಿನ ದೇಶಗಳು ಈಗ ಅದರ ವಿರುದ್ಧವಾಗಿ ವರ್ತಿಸುವುವು, ಕೆಲ ಸರಕಾರಗಳೂ ಸಂತಾನನಿರೋಧ ಸಾಧನೆಗಳನ್ನು ಪ್ರತಿಬಂಧಿಸಿವೆಯೇಕೆ? ಎಂಬ ವಿಚಾರವಾಗಿ ವಿವರಿಸುತ್ತ ರಮೇಶಮ್‌ರವರು ಈ ಉತ್ತರಕೊಟ್ಟರು —

೧ "ಫ್ರಾನ್ಸು ಒಂದು ಶತಮಾನದಿಂದಲೂ ಮಿತಸಂತತಿಯ ವಿಧಾನಗಳನ್ನಾಚರಿಸುತ್ತಿತ್ತು ಇತ್ತೀಚೆಗೆ ಸರಕಾರವು ಅದನ್ನು ಪ್ರತಿಬಂಧಿಸುವುದು ರಾಜಕೀಯ ಕಾರಣಗಳಿಂದ"

೨ "ಜರ್ಮನಿಯಲ್ಲಿ ಫ್ರಾನ್ಸಿನ ದುಬಾರಿ ಜನಸಂಖ್ಯೆಯಿರುವುದಾದರೂ, ಸೈನ್ಯದ ಆವಶ್ಯಕತೆಯಿಂದ ಜರ್ಮನಿಯು 'ಮಿತಸಂತತಿ'ಯನ್ನು ನಿರೋಧಿಸಿತು."

೩ 'ಇಟಲಿಯ ಜನಸಂಖ್ಯೆಯು ಇಳಿತಾರ ತೋರುತ್ತಿರುವ ಕಾರಣ ಮಿತಸಂತತಿಯನ್ನು ನಿರೋಧಿಸುವುದಾಯಿತು'

"ಆದರೆ, ಸರಕಾರವು ಪ್ರತಿಬಂಧಿಸಿದುದನ್ನು ಗಣಿಸದೆ, ಆ ದೇಶಗಳೆಲ್ಲವೂ ಸಾಧ್ಯವಿದ್ದಷ್ಟು ಆಚರಿಸುತ್ತಲೇ ಇವೆ'

"ಇಂಗ್ಲಾಂಡಿನಲ್ಲಿ ಸಂತಾನ ನಿರೋಧ ವಿಚಾರವಾಗಿ ಹಿಂದೆ ಕಟುಕ್ತ ಅಭಿಪ್ರಾಯವಿದ್ದವು ಕ್ರಮೇಣ ಅವು ತೊಲಗಿ ಸರಕಾರವೇ ಜನರಿಗೆ ಮಿತಸಂತತಿಯ ಶಿಕ್ಷಣ ಕೊಡಲು ನಿಶ್ಚಿಸಿದೆ'

"ಕೆಲ ಸನಾತನಿಗಳು ಮಿತಸಂತತಿಯ ಕೃತ್ರಿಮ ವಿಧಾನಗಳಿಗೆ ವಿರೋಧವಿರಬಹುದು ಆದರೆ **ಹಿಂದೂಗಳು ಪೂರ್ವ ಕಾಲದಿಂದಲೂ ಮಿತಸಂತತಿಯ ಆಚರಣೆಯಲ್ಲಿ ಪರಿಶ್ರಮವಿದ್ದವರು 'ಶಿವಸಂಹಿತೆ' ಮತ್ತು ಇತರ ಅನೇಕ ಗ್ರಂಥಗಳು ಮಿತಸಂತತಿಯ ಆಚರಣೆಯ ಕುರಿತಾಗಿ ವಿವರಿಸಿವೆ.'**

"ಸಂತಾನ ನಿರೋಧ ಆಚರಣೆಗೆ ಕಥೋಲಿಕರು ವಿರುದ್ಧವಿರಬಹುದು, ಆದರೆ, ಪ್ರೊಟೆಸ್ಟಾಂಟರೂ, ಮುಸ್ಲಿಮರೂ ಅನುಕೂಲರಾಗಿಲ್ಲವೆಂಬುದು ನಿಜವಲ್ಲ'

ಸಂತಾನನಿರೋಧವು ಮಿತವ್ಯಯದ ಪ್ರಶ್ನೆಯಾದ ಕಾರಣ ಎಲ್ಲರೂ ಆ ಕಡೆಗೆ ಗಮನಕೊಡುವರಾಗಿ ರಮೇಶಮ್‌ರವರ ಭರವಸೆ

ರಷ್ಯದ ನೌಕಾಬಲರಹಸ್ಯ.

ಸೋವಿಯಟ್ ರಷ್ಯವು ತನ್ನ ನೌಕಾಬಲದ ಹೊಸ ಯೋಜನೆಗಳನ್ನು ರಹಸ್ಯವಾಗಿಟ್ಟುಕೊಂಡುದು, ಇತ್ತೀಚೆಗೆ ಬಯಲಿಗೆ ಬಂದಿತು

ರಷ್ಯದ ಪೂರ್ವ ಪ್ರದೇಶಗಳಲ್ಲಿ ಹೊಸ ನೌಕೆಗಳು ಸಿದ್ಧವಾಗುತ್ತಿವೆ, ಚಟುವಟಿಕೆಯಿಂದ ರಚನಾಕಾರ್ಯವು ನಡೆದೇ ಇದೆ!

ಬಾಲ್ಟಿಕ್ ಸಮುದ್ರ ಹಾಗೂ ಕಪ್ಪಿನ ಸಮುದ್ರಗಳಲ್ಲಿ ನೌಕಾಬಲವು ಹೆಚ್ಚಿಸಲ್ಪಟ್ಟಿದೆ

ಕಾರ್ಯಕುಶಲತೆಯನ್ನು ತೋರಿ ಅಲ್ಪಾವಧಿಯಲ್ಲಿ ಅಶ್ಯುತ್ತಮ ಯುದ್ಧ ನೌಕೆಗಳನ್ನು ಸಿದ್ಧಪಡಿಸಿದ ಇಂಜಿನಿಯರರಿಗೆ ಬಹುಮಾನಗಳನ್ನು ಹಂಚಿ ಪ್ರೋತ್ಸಾಹ ಕೊಟ್ಟುದು,—ರಷ್ಯದ ನೌಕಾಬಲವರ್ಧನಉತ್ಸಾಹದ ಮತ್ತೊಂದು ಚಿಹ್ನೆ

ಕಳೆದ ಶಸ್ತ್ರಸನ್ಯಾಸ ಪರಿಷತ್ತಿನಲ್ಲಿ ರಷ್ಯವು ತನ್ನ ನೌಕಾಬಲದ ಕುರಿತಾಗಿ ಕೊಟ್ಟ ಪ್ರಕಟಣೆಯಲ್ಲಿ ತೋರುವುದಕ್ಕಿಂತ ಹೆಚ್ಚು ಬಲವನ್ನು ಸಿದ್ಧಗೊಳಿಸಿದೆ ಎಂಬುದು ಸುಸ್ಪಷ್ಟ ಆ ಸಮಯದಲ್ಲಿ ರಷ್ಯದೊಡನೆ ಇದ್ದ ಯುದ್ಧ ನೌಕೆಗಳು ೬೧ ಈಗ ಅಂಕಿಯು ಮಿಕ್ಕಿರಬಹುದಾಗಿ ಊಹೆ.

ನೌಕಾಬಲದಂತೆ ರಷ್ಯದ ವಾಯುವಿಮಾನ ಬಲವೂ ಸಾಕಷ್ಟು ಇದೆ

ರಷ್ಯಕ್ಕೆ ಜಪಾನಿನ ಭಯವೂ ಇಲ್ಲದಿಲ್ಲ ಸೈಬೀರಿಯದ ತೀರಾವಳಿ ಪ್ರದೇಶಗಳನ್ನು ಜಪಾನಿನವರಿಂದ ರಕ್ಷಿಸಿಕೊಳ್ಳಲು ಹೊಸ ನೌಕಾಬಲವೂ ರಚನೆಯಾಗಿದೆ

ರೈಲ್ವೇ ಇಲಾಖೆಯಲ್ಲಿ ನಷ್ಟವೇಕೆ?

ರೈಲ್ವೆ ಬಜೇಟು ಎಸೆಂಬ್ಲಿಯಲ್ಲಿ ಬಂದುದು. ಕೋಟ್ಯಾಂತರ ರೂಪಾಯಿಗಳ ನಷ್ಟದ ಕತೆ ಹೇಳುತ್ತಿದೆ ಈ ನಷ್ಟವು ಹಿಂದಣ ವರ್ಷಗಳಷ್ಟು ಇಲ್ಲವಾದರೂ, "ವ್ಯಾಪಾರವು ಚೇತರಿಸಿಕೊಳ್ಳುತ್ತಿದೆ' ಎಂದಿದ್ದ ಪ್ರಕೃತಸ್ಥಿತಿಯಲ್ಲಿ ದೊಡ್ಡ ನಷ್ಟವೇ ಆಗಿದೆ

ರೈಲ್ವೆಗಳ ನಷ್ಟಕ್ಕೆ ಕಾರಣಗಳೇನು?—ಅಧಿಕಾರಿಗಳ ದೃಷ್ಟಿಗೆ ಮೊದಲಾಗಿ ಗೋಚರಿಸುವುದೆಂದರೆ 'ವ್ಯಾಪಾರಮಾಂದ್ಯ' ಅಹುದೆನ್ನುವ ಆದರೆ ಬೇರೆ ಕಾರಣಗಳಿಲ್ಲವೇ? ವಿಚಾರಮಾಡಲಿ'

ಹ'ಗೂಡಿ ಹಳ್ಳಿ" ಎಂಬ ನಾಣ್ಣುಡಿಯನ್ನು ಸರಕಾರವು ಮರೆಯಬಾರದು ಹಿಂದೂದೇಶದಲ್ಲಿನ ಶಾಸನಭಂಗ ಚಳವಳದ ಕಾಲದಲ್ಲಿ ರೈಲ್ವೆಗಳಿಗೆ ತುಂಬ ನಷ್ಟವಾಗಿದೆ ದೇಶದ ನಾನಾ ಭಾಗಗಳಲ್ಲಾಗುತ್ತಿದ್ದ ಅಹಿಂಸಾಬದ್ಧ ಸಭೆಗಳನ್ನು ಸಹ ಪ್ರತಿಬಂಧಿಸಿದ ಕಾರಣ, ರೈಲ್ವೆ ಪ್ರಯಾಣಗಳ ಬಹುತೇಕ ಕಡಿಮೆಯಾಗಿವೆ ಬಂಗಾಳದ ಕ್ರಾಂತಿಕಾರರ ನಿರ್ಮೂಲನಕ್ಕಾಗಿ ಕೈಕೊಂಡ ತೀಕ್ಷ್ಣ ಧೋರಣೆಯಿಂದ ಅತಿರೇಕ ನಷ್ಟವಾಗಿದೆ ವಿಹಾರಾರ್ಥ ಅತ್ತಿತ್ತ ಪ್ರಯಾಣ ಮಾಡುವವರೂ ವ್ಯಾಪಾರಸ್ಥರೂ ಹಲವು ಬಗೆಯಲ್ಲಿ ಸಂಕೋಚಮಾನಸಿಕತೆಯಿಂದ [illegible] ಪ್ರಯಾಣಗಳನ್ನು ನಿಲ್ಲಿಸಿರಬಹುದೆಂದು ಹೇಳಬಾರದೇಕೆ? ಕೆಲ ಸಮಯದ ಹಿಂದೆ ಚಿತ್ತಗಾಂಗದ ಮೆಜಿಸ್ಟ್ರೇಟರು ಕೆಲ ಕಾಲದ ತನಕ ಅತ್ತಿತ್ತ ಚಲಿಸಿಕೊಂಡಿದ್ದ ರೈಲ್ವೇ ಸರ್ವಿಸನ್ನು ನಿಲ್ಲಿಸಿಯೇ ಬಿಟ್ಟಿದ್ದರು ಮಿಡ್ನಾಪುರದಲ್ಲಿ ಸ್ವೇಚ್ಛಾವಿಹಾರವು ಬಹುಮಟ್ಟಿಗೆ ತಡೆಹಾಕಲ್ಪಟ್ಟಿದೆ ರಾಜಕೀಯ ಕಾರಣಗಳಿಂದ ಅಪರಿಚಿತ ಯುವಕರ ಮೇಲೆ ಸಂದೇಹದ ದೃಷ್ಟಿ ಬಿದ್ದ ಕಾರಣ ಎಷ್ಟೋ ಯುವಕರು ವಿಹಾರಸುಖಕ್ಕೆ ತಿಲಾಂಜಲಿಕೊಟ್ಟುದೂ ಉಂಟು

ರೈಲ್ವೇ ಇಲಾಖೆಯಲ್ಲಿ ಕೆಲಕೆಲವು ತಲೆಗಳ ತಲೆಗೆ ವಿಶೇಷ ಮುಂಡಾಸಾಗಿವೆ ಇವುಗಳಷ್ಟನ್ನೋ ಕಡಿಮೆ ಮಾಡಬಹುದು ಹಿಂದೀಯರ ನೇಮಕಗಳನ್ನು (ಹಿಂದೂದೇಶದಲ್ಲಿ ಕಾಯಂವಾಸ್ತವ್ಯವಿದ್ದ ಯುರೋಪಿಯನ್ ಮತ್ತು ಎಂಗ್ಲೋ ಇಂಡಿಯನರ ಸಹಿತ) ಹೆಚ್ಚಿಸಬಹುದಾಗಿದೆ

ರೈಲ್ವೆಯವರಿಗೆ ಹೆಚ್ಚಿನ ಆದಾಯವು ಯಾವಾಗಲೂ ಮೂರನೇ ತರಗತಿಯ ಪ್ರಯಾಣಿಕರಿಂದಲೇ ಆಗಿದೆ ಆದರೆ ಈ ಬಡ ತರಗತಿಯ ಕಡೆಗೆ ಇರುವ ರೈಲ್ವೇ ಅಧಿಕಾರಿಗಳ ಅಲಕ್ಷ್ಯವು ಇನ್ನೂ ಮಾಯವಾಗಿಲ್ಲ ಇವರ ಅನುಕೂಲತೆ ಸೌಕರ್ಯಗಳೊಂದನ್ನೂ ಗಣನೆಗೆ ತಂದುಕೊಳ್ಳುವುದಿಲ್ಲ ಮೂರನೆ ತರಗತಿಯ ಎಲ್ಲ ಬಂಡಿಗಳಲ್ಲೂ ನೀರಿನ ಸೌಕರ್ಯವಿದೆಯೇ? ಸೆಖೆ ಕಾಲದಲ್ಲಿ ಬೀಸಣಿಗೆಗಳಿವೆಯೆ? ಸ್ವಚ್ಛವಾದ ದೀಪಗಳಿವೆಯೆ? ರಾತ್ರಿ ಕಾಲದಲ್ಲಿ ನಿದ್ರಿಸಲು ಸ್ಥಳಾನುಕೂಲತೆ ಇದೆಯೆ?

ಪ್ರತಿವರ್ಷ ಎಷ್ಟೋ ಸಂದರ್ಭಗಳಲ್ಲಿ ಮೇಲ್ತರಗತಿಯ ಪ್ರಯಾಣಿಕರಿಗೆ ರಿಟರ್ನ (ಮರಳಿ ಬರುವ) ಟಿಕೇಟುಗಳಲ್ಲಿ ರಿಯಾಯತಿ ಇದೆ ಮೂರನೆ ತರಗತಿಯವರಿಗೆ ಈ ರಿಯಾಯತಿ ಇದೆಯೇ? ಇದ್ದರೆ ಎಷ್ಟು? ಇಂಥ ರಿಯಾಯತಿಯನ್ನು, ಒಂಟಿಪಯಣಕ್ಕೂ (Single journey) ಕೊಂಚ ಕೊಟ್ಟರೆ ಒಳ್ಳಿತಿದೆ

'ಈಸ್ಟ್ ಇಂಡಿಯನ್ ರೈಲ್ವೆ'ಯಂತೆಯೆ 'ಈಸ್ಟರ್ನ ಬಂಗಾಳ ರೈಲ್ವೆ'ಯು ಸಂಸ್ಥಾನಿಕ ರೈಲ್ವೆಯಾಗಿದೆ ಆದರೆ ಎರಡನೆಯದರಲ್ಲಿ ಮೊದಲನೆಯದಕ್ಕಿಂತ ಚಾರ್ಜುಗಳು ಹೆಚ್ಚು! ಇತ್ತ 'ಎಮ್ ಎಸ್ ಎಮ್.'ನವರ ಚಾರ್ಜ ಒಂದು ವಿಧ, ಸೌತ್ ಇಂಡಿಯನ್‌ನವರದೊಂದು ವಿಧ, 'ಜಿ ಐ ಪಿ' ಒಂದು ವಿಧ, 'ಬಿ. ಬಿ. ಸಿ ಐ' ಮತ್ತೊಂದು ವಿಧ. ಒಂದಕ್ಕೊಂದು 'ಕನೆಕ್ಷನ' (ಸಂಯೋಜನ) ಇದ್ದೂ, ಹಾಗೆ ಟಿಕೇಟುಕೊಟ್ಟು, ಪ್ರಯಾಣಿಕರು ದರಗಳ ಪಟ್ಟಿ ನೋಡಿ—'ಇದೇಕೆ ಎರಡು ವಿಧ?' ಎಂದು ಆಶ್ಚರ್ಯಪಡುವಂತಾಗಿದೆ.

ಇನ್ನು,—ಸರಕುಗಳನ್ನೊಯ್ಯುವ ದರಗಳ ಕುರಿತೂ ಸುಧಾರಣೆಗಳಾಗಬೇಕಾಗಿವೆ. ಹಿಂದೀ ಕೈಗಾರಿಕೆಗಳ ಮೇಲ್ಮೆಯನ್ನು ಚಿಂತಿಸಿ ದರಗಳನ್ನು ಸಾಧ್ಯವಿದ್ದಷ್ಟು ಇಳಿಸಿದರೆ 'ಗೂಡ್ಸ್' ಇಸಮಿನಲ್ಲಿಯೂ ಉತ್ಪನ್ನ ಹೆಚ್ಚುವುದರಲ್ಲಿ ಸಂದೇಹವಿಲ್ಲ. ಈಗ ಜನರಲ್ಲಿರುವ ಸಂಶಯವೇನು ಬಲ್ಲಿರಾ? ಇಂಡಿಯದಲ್ಲಿ ರೈಲ್ವೆಗಳಿರುವುದು ಇಲ್ಲಿಯ ಕಚ್ಚಾಮಾಲನ್ನು ಪರದೇಶಗಳಿಗೊಯ್ದು, ಅಲ್ಲಿ ಅವುಗಳಿಂದ ತಯಾರಾದ ಮಾಲನ್ನು ಪುನಃ ಇಲ್ಲಿಗೆ ತರುವುದಕ್ಕೆಂದು! ಅಂತಹ ಸಂಶಯಕ್ಕೆ ತಿಲಮಾತ್ರವೂ ಎಡೆದೊರೆಯದಂತೆ, ಹಿಂದೀ ಕೈಗಾರಿಕೆಗಳ ಅಭಿವೃದ್ಧಿಗೆ ನಿಜವಾಗಿಯೂ ರೈಲ್ವೆಗಳು ಸಿದ್ಧವಿವೆಯೆಂಬುದನ್ನು ಸ್ಪಷ್ಟೀಕರಿಸುವಂತೆ ದರಗಳನ್ನು ಇಳಿಸಿ, ಮೂರನೆ ತರಗತಿಯವರ ಸೌಕರ್ಯಗಳನ್ನು ಹೆಚ್ಚಿಸಿ ವರ್ತಿಸಿದರೆ ರೈಲ್ವೆ ಆಯವೂ ಹೆಚ್ಚಿ ಮುಂದೆ ನಷ್ಟದ ಬಜೇಟು ಎದುರಿಗೆ ಬಾರದಂತಾಗುವುದು ಖಂಡಿತ

ಇದು ತಮಾಷೆಯಲ್ಲ!—
ಎಸೆಂಬ್ಲಿಯಲ್ಲೇ ನಡೆಯಿತು

'ಗುಮಾಸ್ತೆ'ಯರಾಗಿರುವ ಬ್ರಿಟಿಷ್ ಸೋಲ್ಜರರಿಗೂ ಅವರ ಹೆಳೆಯರಿಗೂ ಹಿಂದೀ ಕರಣೀಕರಿಗಿಂತ ಹೆಚ್ಚಿನ ಸಂಬಳ ಸಲ್ಲುತ್ತಿದೆಯಲ್ಲಾ ಅದೇಕೆ? ಎಂದು ಶ್ರೀ ಎಸ್ ಸಿ ಮಿತ್ರರು ಎಸೆಂಬ್ಲಿಯಲ್ಲಿ ಪ್ರಶ್ನಿಸಿದರು

ಸರಕಾರೀ ಉತ್ತರ ಕೇಳಿದಿರಾ?— ಯೋಗ್ಯ ಅನುಭವವುಳ್ಳ ಸೋಲ್ಜರ್ ಕ್ಲಾರ್ಕರುಗಳೂ, ಲೇಡಿಕ್ಲಾರ್ಕರುಗಳೂ ಕಡಿಮೆ ಸಂಬಳಕ್ಕೆ ದೊರೆಯುವುದಿಲ್ಲ ಹಿಂದೀಯರಾದರೆ ಸಿಗುವರು ಲೇಡಿಕ್ಲಾರ್ಕರುಗಳು ಕೆಲವೊಂದು ಕೆಲಸಗಳನ್ನು ಪುರುಷರಿಗಿಂತ ಚೆನ್ನಾಗಿ ಮಾಡುತ್ತಾರಾದ್ದರಿಂದ ಕಾರಣ ಅವರು ಆವಶ್ಯ (ನಗು)

ಎಸ್ ಸಿ ಮಿತ್ರರು —'ಆ ಕೆಲವೊಂದು ಕೆಲಸಗಳಿಗಾಗಿ ಸಿವಿಲ್ ಡಿಪಾರ್ಟಮೆಂಟಿನಲ್ಲಿಯೂ ಲೇಡಿಕ್ಲಾರ್ಕರುಗಳನ್ನು ತೆಗೆದುಕೊಳ್ಳುವ ಆಲೋಚನೆಯಿದೆಯೇ ಸರಕಾರಕ್ಕೆ?

ಗೃಹಸಚಿವ —'ಅದಕ್ಕುತ್ತರ ಕೊಡಲು ಸಮಯ ಕೊಡಬೇಕ'

ಶ್ರೀ ಪಿ ದಾಸ್ — ಮಹಿಳೆಯರು ಆಫೀಸರರ ಅತ್ತಗಳ ಮೇಲೆ ಆರೋಗ್ಯಕರವಾದ ತಮ್ಮ ವರ್ಚಸ್ಸನ್ನು ನಡೆಸುವುದರಿಂದ ಕಾರ್ಯವು ಸುಸೂತ್ರವಾಗಿ ನಡೆವುದೆಂದು ಬಗೆದ ಮಹಿಳೆಯರನ್ನು ಸರಕಾರವು ನೇಮಿಸುತ್ತಿದೆಯೇ?"

ಉತ್ತರ ಅಲ್ಲ ಸ್ವಾಮಿ!"

ಮಸಾವೂದ್ ಅಹಮದ್ —'ಆ ನಾರಿಮಣಿಗಳಿಗೆ ವಿವಾಹವಾಗುತ್ತಲೇ ಅವರು ಕೆಲಸದಿಂದ ನಿವೃತ್ತಿಹೊಂದುವಂತೆ ತಿಳಿಸಲಾಗುವುದೇ?

ಉತ್ತರ — ಅಹುದಹುದು

ಮಸಾವೂದ್ ಅಹಮದ್ — ಹಾಗಾದರೆ ಅವಿವಾಹಿತ ಹುಡುಗಿಯರನ್ನು ಕೆಲಸಕ್ಕೆ ನೇಮಿಸುವ ಕಾರಣವೇನು?'

ಉತ್ತರ — ಕಾರಣವು ಸುವ್ಯಕ್ತ ವಿವಾಹಿತರಾಗುತ್ತಲೇ ಸ್ತ್ರೀಯರಿಗೆ ಬೇರೆ ಕರ್ತವ್ಯಗಳಿವೆ' (ನಗು)

ಎಸೆಂಬ್ಲಿಯಲ್ಲಿನ ಗಾಂಭೀರ್ಯವು ಇಂತಹ ವಿನೋದಪರ ವಾದ—ವಿವಾದಗಳಿಂದ ರಂಜಿತವಾಗುವುದೂ ಇದೆ!

ಸಂಚಾರ ವಿಚಾರದಲ್ಲಿ ಮಹಾತ್ಮಾಜೀಯವರ ಅಭಿಪ್ರಾಯಗಳು

'ಈ ಮೂರು ತಿಂಗಳ ಕಾರ್ಯ ಮತ್ತು ಅದರ ಭಾವೀಫಲದ ಕುರಿತು ನಾನು ಸ್ಪಷ್ಟವಾಗಿ ನನ್ನ ಅಭಿಪ್ರಾಯ ಕೊಡಲಾರೆ' ಎಂದರು ಮಹಾತ್ಮಾಜೀಯವರು,—ಹರಿಜನ ಕಾರ್ಯಾರ್ಥ ಅವರು ಕೈಕೊಂಡ ಸಂಚಾರದ ವಿಚಾರದಲ್ಲಿ ಪ್ರಶ್ನಿಸಿದಾಗ ಆದರೆ, ದಕ್ಷಿಣ ಹಿಂದೂಸ್ಥಾನದ ನನ್ನ ಸಂಚಾರವು ಫಲಪ್ರದವಾಗಿಯೇ ಕೊನೆಗೊಂಡಿತು ದಕ್ಷಿಣ ಹಿಂದೂಸ್ಥಾನದವರು ಹರಿಜನೋದ್ಧಾರ ಕಾರ್ಯಕ್ಕೆ ನೆರವಾಗುವವರಲ್ಲವೆಂಬುದನ್ನು ಸ್ಪಷ್ಟೀಕರಿಸುವ ಯಾವ ಆಧಾರವನ್ನೂ ನಾನು ಕಂಡಿಲ್ಲ ಅಸ್ಪೃಶ್ಯತಾ ನಿವಾರಣಾಕಾರ್ಯಕ್ಕೆ ಸಹಾಯಮಾಡುವುದರಲ್ಲೂ ದೇವಾಲಯಗಳನ್ನು ಹರಿಜನರಿಗೆ ತೆರೆವುದರಲ್ಲೂ ದಕ್ಷಿಣ ಹಿಂದೂಸ್ಥಾನದವರು ದ್ವಿತೀಯ ಸ್ಥಾನದಲ್ಲಾದರೂ ಇರುವರೆಂದು ನಾನು ಎಣಿಸುವುದಿಲ್ಲ ಉತ್ತರ ಹಿಂದೂಸ್ಥಾನದವರಷ್ಟೆ ದಕ್ಷಿಣ ಹಿಂದೂಸ್ಥಾನದವರೂ ಅಸ್ಪೃಶ್ಯತಾನಿವಾರಣೆಗೆ ಉತ್ಸುಕರಾಗಿರುವರು. ಗುರುವಯ್ಯೂರು ಮಾತ್ರ ಇದರಿಂದ ಹೊರತಾಗಿದೆ ಆದರೆ, ಅಲ್ಲಾದರೂ ಜನಾಭಿಪ್ರಾಯವು ಅನುಕೂಲವಾಗಿ ಶೀಘ್ರದಲ್ಲಿ ಘಟಿಸಿ ಬರುವುದು" ಎಂದೂ ಮಹಾತ್ಮಾಜೀಯವರು ಪತ್ರಿಕಾಪ್ರತಿನಿಧಿಗೆ ತಿಳಿಸಿರುವರು.

FRESH CONSIGNMENT ARRIVED.

UNEQUAL QUALITY——————EXCEPTIONAL PRICE

A TIRE THAT SAVES YOU REPUTATION AND MONEY.

The Canara Public Conveyance Co., Ltd.

MANGALORE.

ಮೂಲೆಮೂಲೆಯಿಂದ

ಶಿವಮೊಗ್ಗ

ಸರ್ ಮಿರ್ಝಾ ಇಸ್ಮಾಯಿಲರು ಶಿವಮೊಗ್ಗ ಜಿಲ್ಲೆಯಲ್ಲಿ ಸಂಚಾರ ಮಾಡಿದಾಗ ಅಲ್ಲಿನ ಜಮೀನ್ದಾರರು ಕೃಷೀವಲರ ಕಷ್ಟನಷ್ಟಗಳನ್ನು ಅವರಿಗೆ ತಿಳಿಯಲಿಳಿಸಿ ಸಹಾಯಮಾಡಬೇಕೆಂದು ಕೇಳಿಕೊಂಡರು. ದಿವಾನರು ಸುಸಂಧಿಯನ್ನು ಕಂಡು ಎಲ್ಲಾ ವ್ಯವಸ್ಥೆಗಳನ್ನು ಮಾಡಲಾದೀತು ಎಂದು ಆಶ್ವಾಸನೆ ಕೊಟ್ಟಿರುವರು

೧೯೩೨ರ ಎಪ್ರಿಲ್ ತಿಂಗಳಲ್ಲಿ ೧೬ ವರ್ಷ ಪ್ರಾಯದ ಎಂಬಾಣೆ ಲಕ್ಷ್ಮಿ ಎಂಬ ತರುಣಿಯನ್ನು ಅಪಹಾರ ಮಾಡಿದರೆಂದು ೧೧ ಜನರ ಮೇಲೆ ತಕ್ಷೀರು ನಡೆದಿತ್ತು. ೮ ಮಂದಿಗಳು ಸೆಶನ್ಸ್‌ಗೆ ಗುರಿಯಾಗಿರುವರು

ಬಿಹಾರ ನಿಧಿಗೆ, ಶಿವಮೊಗ್ಗ ಎಜ್ಯುಕೇಷನಲ್ ಕ್ಲಬ್‌ನವರು 'ವಿಧಿವಿಲಾಸ'ವೆಂಬ ನಾಟಕವನ್ನಾಡಿ ರೂ ೨೫೫ನ್ನು ಕಳುಹಿಸಿದರು.

ಶಿವಮೊಗ್ಗ ಹಿಂದೂಮುಸ್ಲಿಂ ದೊಂಬಿ ಮೊಕದ್ದಮೆಯ ವಿಚಾರಣಾ ಸಮಿತಿಯ ನಾಯಕರಾದ ಶ್ರೀ ಶ್ರೀನಿವಾಸರಾಯರು, "ಕೋರ್ಟಿಗೆ ಬರಲಾಗುವುದಿಲ್ಲ, ಬಾಕಿ ವಸೂಲಿಗಾಗಿ ಹಳ್ಳಿಗೆ ಹೋಗುವ ಕೆಲಸವಿದೆ" ಎಂದು ಹೇಳಿ ಕಳುಹಿಸಿದುದು ಅಪರಾಧವೆಂದು, ಮೆಜಿಸ್ಟ್ರೇಟರು ಅವರಿಗೆ ರೂ ೭೫ ದಂಡ ವಿಧಿಸಿದರು.

ಹಾಸನ

ಶ್ರವಣಬೆಳಗೊಳದ ನಗರಸಭೆಯ ಉಪಾಧ್ಯಕ್ಷರಾಗಿ ಶ್ರೀ ಬ್ರಹ್ಮಸೂರಿ ಶಾಸ್ತ್ರಿಗಳು ಆರಿಸಲ್ಪಟ್ಟರು

ಇಲ್ಲಿಯ ಹಿಂದೀ ಪ್ರೇಮಿ ಮಂಡಲದವರು 'ದೀನಬಂಧು ಕಬೀರ್' ಮತ್ತು 'ಶಿರುಕರ ಪಿಡಗು' ಎಂಬ ನಾಟಕಗಳನ್ನಾಡಿ ಬಂದ ರೂ ೯೦ನ್ನು ಬಿಹಾರಿಗೆ ಕಳುಹಿಸಿರುವರು

ಬೆಂಗಳೂರು

ಹೈಕೋರ್ಟಿನಲ್ಲಿ ಚಿಂತಾಮಣಿ ಕನ್ಯಾಪಹಾರ ಮೊಕದ್ದಮೆಯ ವಿಚಾರಣೆಯು ತಾ ೫ನೇ ದಿನ ಪ್ರಾರಂಭವಾಯಿತು ಅಪರಾಧಿಗಳ ಪರವಾಗಿ ಮದರಾಸಿನ ಮಿ। ನ್ಯೂಜೆಂಟ್ ಗ್ರಾಂಟರು ವಾದಿಸಿದರು ತೀರ್ಪು ತಿಳಿದಿಲ್ಲ

ಬೆಂಗಳೂರು ಹೊಸ ತರಗುಪೇಟೆಯ 'ಅಮರ ನಾರಾಯಣ ಹಿಟ್ಟಿನಗಿರಣಿಗೆ' ಬೆಂಕಿ ಬಿದ್ದು ಸುಮಾರು ೫ ಸಾವಿರ ರೂಪಾಯಿಗಳ ನಷ್ಟವಾಗಿದೆ

ಬೆಂಗಳೂರು ಮಹಿಳಾ ಸೇವಾಸಮಾಜದಲ್ಲಿ ತಾ ೪ನೇ ದಿನ ಮಕ್ಕಳ ಕೂಟವು ಜರಗಿತು. ಶ್ರೀಮದ್ಯುವರಾಣಿಯವರು ಚಿತ್ತೈಸಿದ್ದರು

ಅಂಕೋಲೆ

ಅಂಕೋಲೆಗೆ ಗಾಂಧಿಜೀಯವರು ಬಂದಾಗ ಏಳೆಂಟು ಸಾವಿರ ಜನರು ಅವರನ್ನು ಸ್ವಾಗತೀಕರಿಸಿದರು ಮಹಾತ್ಮರು ನಿಧಿ ಸ್ವೀಕಾರದ ನಂತರ ಭಾಷಣ ಮಾಡುತ್ತಾ ಎಲ್ಲರೂ ಆತ್ಮಶುದ್ಧಿಯಿಂದ ಹರಿಜನರನ್ನುದ್ಧರಿಸಬೇಕೆಂದು ಕೇಳಿಕೊಂಡರು

ಕುಮಟಾ

ಅಂಕೋಲೆಯಿಂದ ಕುಮಟೆಯ ವರೆಗೆ ಮಹಾತ್ಮರ ಪ್ರಯಾಣವೆಂದರೆ ಅದೊಂದು ದಿವ್ಯನೋಟವಾಗಿದ್ದಿತು ೧೩ ಸಾವಿರ ಜನಸಂದಣಿಯು ಅವರನ್ನು ಸ್ವಾಗತೀಕರಿಸಿತು ಭಗಿನಿ ಮಂಡಲದ ಪರವಾಗಿ ಧನನಿಧಿಯನ್ನರ್ಪಿಸಿದ ಶ್ರೀ ಸೀತಾದೇವಿಯವರ ಕೈಯ ಬಳೆಗಳನ್ನು ಮಹಾತ್ಮರು ಕೇಳಿದಾಗ, ಅವರವುಗಳನ್ನು ಕೊಟ್ಟರು.

ಗದಗ.

ಬಳ್ಳಾರಿ ಮತ್ತು ಗದಗಿನ ನಡುವೆ ಭಾಗಪೂರ ಸ್ಟೇಶನಿನಲ್ಲಿ ನಿಜಾಂ ಸಂಸ್ಥಾನದ ಪ್ರಜೆಗಳು ಗಾಂಧಿಜೀಯವರಿಗೆ ಮಾನಪತ್ರವನ್ನರ್ಪಿಸಿದರು ಜನಸಂದಣಿಯು ಮಿತಿಮೀರಿ ಬೆಳೆದುದರಿಂದ ಭಾಷಣಮಾಡಲವಕಾಶ ದೊರೆಯಲಿಲ್ಲ ಗಾಂಧಿಜೀಯವರು ಗಾಡಿಯಲ್ಲಿ ನೂಲುತ್ತಿದ್ದರು ಗದಗಿನ ಜನರು ಗಾಂಧಿಜೀಯವರಿಗೆ ೧೧೦೦ ರೂಪಾಯಿಗಳನ್ನು ಕೊಟ್ಟರು.

ಹಾವೇರಿ.

ಮಹಾತ್ಮಾ ಗಾಂಧಿಯವರು ಹಾವೇರಿಗೆ ಹೋದಾಗ ೩೦ ಸಾವಿರ ಜನರು ಅವರನ್ನು ಸ್ವಾಗತೀಕರಿಸಿದರು ಮಹಾತ್ಮರು ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರಘ ರಾಜೇಂದ್ರ ಮಹಾಸ್ವಾಮಿಗಳವರ ಭೇಟಿ ಮಾಡಿ ೧೫ ಮಿನಿಟುಗಳ ತನಕ ಸಂಭಾಷಣೆ ಮಾಡಿದರು ಮಹಾಸ್ವಾಮಿಗಳು ತಮ್ಮ ವೀರಶೈವ ಧರ್ಮದಲ್ಲಿ ಅಸ್ಪೃಶ್ಯತೆಗೆ ಆಧಾರವಿಲ್ಲವೆಂದೂ, ಹರಿಜನರು ಆದಿ ಜನರೆಂದು ಕರೆಯಿಸಿಕೊಂಡು ಶುದ್ಧಾಚಾರ ವಿಚಾರಗಳಲ್ಲಿದ್ದರೆ ಅಸ್ಪೃಶ್ಯತೆಯು ಶೀಘ್ರವಾಗಿ ನಾಶವಾಗುವುದೆಂದೂ ಹೇಳಿದರು

ಬಳ್ಳಾರಿ

ಕೋರ್ಟು ಫೋರ್ಮುಗಳು ಯಾವ ಭಾಷೆಯಲ್ಲಿರಬೇಕೆಂಬ ಬಗ್ಗೆ ಸಲಹೆಗಳನ್ನು ಕೇಳಿದಾಗ ಬಳ್ಳಾರಿಯ ವಕೀಲ ಸಂಘದವರು ಅವು ಮುಖ್ಯಾಲು ಪಾಲು ತೆಲುಗಿನಲ್ಲಿರಬೇಕೆಂದೂ ಒಂದುಕಾಲು ಪಾಲು ಕನ್ನಡದಲ್ಲಿರಬೇಕೆಂದೂ ಉತ್ತರ ಕೊಟ್ಟುದನ್ನು ಕೇಳಿ ಬಳ್ಳಾರಿಯ ಜಿಲ್ಲಾ ಪ್ರಜೆಗಳೂ, ತಾಲೂಕು ಬೋರ್ಡು ಮೆಂಬರರೂ ವಣಿಕ್ ಸಂಘದವರೂ ಅದನ್ನೆದುರಾಡಿ ಕೋರ್ಟು ಫೋರ್ಮುಗಳು ಕನ್ನಡದಲ್ಲಿಯೇ ಇರಬೇಕೆಂದು ಹಾಯ್ ಕೋರ್ಟಿಗೂ ಡಿಸ್ಟ್ರಿಕ್ಟ್ ಜಡ್ಜರಿಗೂ ತಿಳಿಸಿದ್ದಕ್ಕೆ "ಕೇಳಿದವರಿಗೆಲ್ಲ ಕೊಡುವಂತೆ ಕನ್ನಡ ಫಾರ್ಮ್‌ಗಳ ಸಂಗ್ರಹವು ಸಿದ್ಧವಿದೆ" ಎಂದು ಮೇಲಧಿಕಾರಿಗಳು ತಿಳಿಸಿರುವರು

ಸೊಂಡೂರು

ಮಹಾತ್ಮಾ ಗಾಂಧಿಯವರು ಸೊಂಡೂರಿಗೆ ಹೋಗಿದ್ದಾಗ ಅಲ್ಲಿಯ ಜನರು ಅವರಿಗೆ ರಾಜಸನ್ಮಾನವನ್ನಿತ್ತರು ರಾಜ-ಪ್ರಜೆಗಳು ಹರಿಜನ ಸೇವಾಸಿರತರಿರುವುದು ಆನಂದಪ್ರದಾಯಕ ವಿಷಯವೆಂದು ಮೊದಲಾಗಿ ಮಹಾತ್ಮರ ಭಾಷಣವಾಯಿತು

ಪುತ್ತೂರು

ಇಲ್ಲಿಯ ತಾಲೂಕು ಬೋರ್ಡಿನವರು ಆರಂಭಿಸಿದ ಸರ್ಕ್ಯುಲೇಟಿಂಗ್ ಲೈಬ್ರರಿಯು ಕಳೆದ ವರ್ಷವೂ ತೃಪ್ತಿಕರವಾಗಿ ಕೆಲಸ ನಡೆಸಿದೆ ೧೧೯ ಹೊಸ ಪುಸ್ತಕಗಳು ಮಾತ್ರ ಕಳೆದ ವರ್ಷ ಕೂಡಿಸಲ್ಪಟ್ಟವಾದರೂ ಓದುವ ಅಭಿರುಚಿಯು ಜನರಲ್ಲಿ ಹೆಚ್ಚಿದೆಯೆಂಬುದು ೬೧೭೨ ಮಂದಿ ಈ ಗ್ರಂಥಾಲಯದ ಪ್ರಯೋಜನ ಹೊಂದಿರುವರೆಂಬುದರಿಂದ

ಮಂಗಳೂರು ಮ್ಯುನಿಸಿಪಾಲಿಟಿಯ ೧೯೩೪-೩೫ನೇ ವರ್ಷದ ಆಯ-ವ್ಯಯದ ಪಟ್ಟಿ

ಆಯ	ರೂ 226,600
ಕಳೆದ ವರ್ಷದ ಶಿಲ್ಕು	ರೂ 15,278
ಜುಮ್ಲಾ	ರೂ 241 878

ವ್ಯಯ

ನಗರರಚನಾ ಯೋಜನೆಯ ಸಿಧಿಗೆ	ರೂ 1000
ಎಲಿಮೆಂಟರಿ ಶಿಕ್ಷಣಸಿಧಿಗೆ	ರೂ 33,800
ರಸ್ತೆ ರಿಪೇರಿ ಇತ್ಯಾದಿಗಳ ಬಗ್ಗೆ	ರೂ 33750
ಸಿಬ್ಬಂದಿ ಖರ್ಚು	ರೂ 16250
ಉಳಿತಾಯ	ರೂ 11328
ಜುಮ್ಲಾ	ರೂ 241,878

(ವಿವರ ಮುಂದಿನ ವಾರ)

ಸುಮ್ಮಕ್ತ ರೂ ೫೦೦೦ರ ಸಹಾಯದ್ರವ್ಯವನ್ನಪೇಕ್ಷಿಸಿ ಸರಕಾರಕ್ಕೆ ಬರೆದುಕೊಂಡಿರುವರು ಜನತೆಯೂ ಶಕ್ತ್ಯಾನುಸಾರ ಸಹಾಯಮಾಡುವುದೆಂಬ ನಿರೀಕ್ಷೆ

ಇಡ್ಯ, ಸುರತ್ಕಲ್ಲು

ಇದೇ ತಿಂಗಳ ತಾ ೬ನೇ ಮಂಗಳವಾರ ದಿನ ಬೆಳಿಗ್ಗೆ ೩ರಿಂದ ೩ ೧೫ ಗಂಟೆಯ ತನಕ ಬರೇ ಕಾಲು ಗಂಟೆಯಲ್ಲಿ ೦ ೧೫ ಇಂಚು ಮಳೆಯು ಬಿದ್ದಿರುತ್ತದೆ

ಸುರತ್‌ಕಲ್

ಹುಚ್ಚು ನಾಯಿಗಳ ಕಾಟಕ್ಕಾಗಿ—ಗ್ರಾಮ ಪಂಚಾಯತ ಸಮಿತಿಯವರು ಒಂದಲ್ಲ ಎರಡು ಸಲಗಳಲ್ಲಿ ಇಡ್ಯ ಮತ್ತು ಸುರತ್‌ಕಲ್ ಗ್ರಾಮಗಳೊಳಗಣ ೫೦೦ಕ್ಕೆ ಮಿಕ್ಕಿದ ಬೀದಿ ನಾಯಿಗಳನ್ನು ಕೊಲ್ಲಿಸಿದುದಲ್ಲದೆ, 'ಶ್ವಾನವಿಷಹಾರಿ' ಎಂಬ ರೂ ೩ ಬೆಲೆಯ ಔಷಧಿಗಳನ್ನು ಕೂಡಾ ಜನಾನುಕೂಲತೆಗಾಗಿ ತರಿಸಿಟ್ಟುಕೊಂಡುದು. ಸ್ತುತ್ಯವು ಸಮಿತಿಯವರಿಗೆ ನಾಯಿಗಳನ್ನು ಕೊಲ್ಲಿಸಲು ತಗಲಿದ ವೆಚ್ಚವು ರೂ ೨೩೦ಕ್ಕೂ ಮಿಕ್ಕಿರುವುದಾಗಿ ತಿಳಿದುಬರುತ್ತದೆ ಆದರೂ ಹುಚ್ಚು ನಾಯಿಗಳ ಕಾಟವು ಸಂಪೂರ್ಣ ಅಡಗಿದಂತೆ ಕಾಣುವುದಿಲ್ಲವೆನ್ನಲು ವಿಷಾದವೇ ಸರಿ

ಈ ರೇಂಜಿನ ಎಕ್ಸೈಜ್ ಸಬ್ ಇನ್ಸ್‌ಪೆಕ್ಟರರು ಮ। ರಾ। ಶ್ರೀ ಕೆ ಗೋವಿಂದ ಶೆಟ್ಟರು ಇದೇ ತಾ. ೧ರಿಂದ ೨ ತಿಂಗಳ ರಜೆಯ ಮೇಲೆ ತೆರಳಿರುವರೆಂದೂ, ಇವರ ಸ್ಥಾನದ ಎಡಿಷನಲ್ ಚಾರ್ಜನ್ನು ಮೂಲಿಕೆಯ ಸಬ್ ಇನಸ್ಪೆಕ್ಟರರು ವಹಿಸಿಕೊಂಡಿರುವರೆಂದೂ ತಿಳಿದುಬರುತ್ತದೆ.

ಭಜನಾ ಮಂಗಲೋತ್ಸವ:-

ಇಲ್ಲಿಯ ಕೃಷ್ಣಾಪುರ ಶ್ರೀಕೃಷ್ಣ ಎಲಿಮೆಂಟರಿ ಶಾಲೆಯ ಬಾಲಕರ ಭಜನಾಸಂಘದ 'ಸಂಚಾರ ಭಜನಾ ಮಂಗಲೋತ್ಸವ'ವು ಇದೇ ತಿಂಗಳ ತಾ ೧೮ನೆಯ ಆದಿತ್ಯವಾರ ರಾತ್ರೆ ಗಂಟೆ ೮ಕ್ಕೆ ಜರಗಿಸುವುದಾಗಿಯೂ, ಏತದ್ದಿನ ರಾತ್ರೆ ಶಾಲಾ ವಠಾರದಲ್ಲಿ ಕಟೀಲು 'ಶ್ರೀ ದುರ್ಗಾಂಬಾ ಕೃಪಾಪೋಷಿತ ಯಕ್ಷಗಾನ ನರ್ತನ ಸಭಾ' ಇವರಿಂದ 'ಬಯಲಾಟ' ಕೂಡಾ ಪ್ರದರ್ಶಿಸುವುದಾಗಿಯೂ ತಿಳಿದುಬರುತ್ತದೆ

ವಂದೇ ಮಾತರಂ

ಮನುಷ್ಯ ಜೀವನದ ಜವಾಬ್ದಾರಿ

೫೦೦ ರೂಪಾಯಿಗಳು

ಉತ್ತಮ ಕುಟುಂಬಾಧಾರ! ಸುಲಭ ಮಾರ್ಗ!

ಸ್ವರಾಜ್ಯ ಕ್ಷಪೆನಿಯು ಇಂಡಿಯಾ ಕಂಪೆನಿಗಳ ಕಾನೂನು ಪ್ರಕಾರ ಮುಂಬಯಿ ಗವರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ

ಜನಾನುರಾಗಿಗಳೂ, ಸುಪ್ರಸಿದ್ಧರೂ, ಪರಿಪಕ್ವವಾದ ಬುದ್ಧಿಯುಳ್ಳವರೂ ಮತ್ತು ಸಮರ್ಥರಾದ ಡೈರೆಕ್ಟರುಗಳುಳ್ಳ

ಉತ್ತಮವಾದ ಸಂಸ್ಥೆ,

ಇದರಲ್ಲಿ

ಜೆಂಷನ ವ್ಯಕ್ತಿಗಳಿರಿಯಾಗಿ ತನ್ನನ್ನೇ ಆಶ್ರಯಿಸಿರುವ ಪ್ರತಿಯೊಬ್ಬರಿಗೂ ಆಪದ್ಧನವನ್ನು ಕೂಡಿಸುವುದು ಮೊದಲನೇ ಕರ್ತವ್ಯವಲ್ಲವೇ?

ಹೌದು!!

ಅಂತ ಮೇಲೆ ದಿ ಸ್ವರಾಜ್ಯ ಬ್ಯಾಂಕಿಂಗ್ ಮತ್ತು ಇನ್ಶೂರೆನ್ಸ್ ಕಂಪನಿ ಲಿಮಿಟೆಡ್ ಧಾರವಾಡ ಇವರು ಏರ್ಪಾಡು ಮಾಡಿರುವ ಮದುವೆ, ಜನನ ಮತ್ತು ಮರಣ ಎನ್ನುವ ಮೂರು ತರದ ವಿಮಾ ಶಾಖೆಗಳಲ್ಲಿ ಜಾತಿ ಮತ ಭೇದವಿಲ್ಲದೆ ಗಂಡಸರು ಮತ್ತು ಹೆಂಗಸರು ಎಂಬ ವ್ಯತ್ಯಾಸವಿಲ್ಲದೆ 18ರಿಂದ 55 ವಯಸ್ಸಿನೊಳಗಿರುವ ಪ್ರತಿಯೊಬ್ಬರೂ ವಿಮೆಯನ್ನು ಇಳಿಸಿ 500 ರೂಪಾಯಿನ ವರೆಗೂ ಪ್ರತಿಫಲ ಹೊಂದಲು ಮುಂದುವರಿಯಬೇಕಾದುದು ಕರ್ತವ್ಯ.

ಪ್ರವೇಶ ಫೀ 5-0-0 ಮಾಸಿಕ ಚಂದಾ 1-0-0

ವಾರ್ಷಿಕ ರುಸು 1-0-0

ಮೆನೇಜಿಂಗ್ ಏಜಂಟ್ಸ್,

ದಿ ಸ್ವರಾಜ್ಯ ಬ್ಯಾಂಕಿಂಗ್ ಮತ್ತು ಇನ್ಶೂರೆನ್ಸ್ ಕಂಪನಿ ಲಿಮಿಟೆಡ್ ಧಾರವಾಡ

ಶಲಿಪಾರು

ಇಲ್ಲಿಯ ಶ್ರೀರಾಮ ಸಾರ್ವಜನಿಕ ಬೆಡ್‌ಮಿಂಟನ್ ಟೂರ್ನಮೆಂಟ್' ಪಂದ್ಯಾಟವು ಮ ರಾ ಮೂಲ್ಕಿ ರಾಮಕೃಷ್ಣ ಪೂಂಜರವರ ಅಧ್ಯಕ್ಷತೆಯಲ್ಲಿ ಬರುವ ಎಪ್ರಿಲ್ ತಾ ೬ಕ್ಕೆ ಪ್ರಾರಂಭವಾಗಿ ತಾ ೧೩ನೇ ಶುಕ್ರವಾರ ಅಂತ್ಯಗೊಳ್ಳುವುದು ಟೂರ್ನಮೆಂಟಿನಲ್ಲಿ ಸ್ಪರ್ಧಿಸುವ ಟೀಮಿನವರ ಅರ್ಜಿಗಳು ಪ್ರವೇಶ ಹಾಸಲು ಸಮೇತ ಮಾರ್ಚಿ ತಿಂಗಳ ತಾ ೨೦ರ ವರೆಗೆ ಸ್ವೀಕರಿಸಲ್ಪಡುವವು ಎರಡು ಮೆಂಬರರ ಟೀಮಿಗೆ ಪ್ರವೇಶ ಹಾಸಲು ರೂ ೨-೮-೦ ಡಬ್ಬಲ್ಸ್ ರೂ ೧-೮-೦ ಪಂದ್ಯಾಟದಲ್ಲಿ ಗೆದ್ದವರಿಗೆ ಬೆಳ್ಳಿಯ ಕಪ್ಪುಗಳು, ಪದಕಗಳು ಇತ್ಯಾದಿ ಪಾರಿತೋಷಕಗಳಾಗಿ ಕೊಡಲ್ಪಡುವುವು ಹೆಚ್ಚಿನ ಮಾಹಿತಿಗೆ ಕಾರ್ಯದರ್ಶಿಗೆ ಬರಕೊಳ್ಳಬಹುದು

ವಿಟ್ಲ

ಇಲ್ಲಿಯ 'ಯಂಗ್ ಮೆನ್ಸ್' ಬೇಡ್‌ಮಿಂಟನ್ ಟೂರ್ನಮೆಂಟಿನವರು ಇದೇ ತಿಂಗಳ ಮಾರ್ಚಿ ತಾ ೩೦ರಿಂದ ಕೆಲವು ದಿನಗಳ ವರೆಗೆ ಬೇಡ್‌ಮಿಂಟನ್ ಪಂದ್ಯಾಟವನ್ನು ನಡಿಸುವರಾಗಿ ನಿಶ್ಚಯಿಸಿರುತ್ತಾರೆ ಇದು ನಮ್ಮ ಇಡೀ ಜಿಲ್ಲೆಗೆ ಸಂಬಂಧಪಟ್ಟದ್ದರಿಂದ ಎಲ್ಲಾ ಬೇಡ್‌ಮಿಂಟನ್ ಉಮೇದ್ವಾರರೂ ಬರಬೇಕಾಗಿ ಕೇಳಿಕೊಂಡಿರುತ್ತಾರೆ ಇದರ ಹೆಚ್ಚಿನ ಮಾಹಿತಿಗಳನ್ನು ಇದರ ಕಾರ್ಯದರ್ಶಿಯವರಿಂದ ತಿಳಿದುಕೊಳ್ಳಬಹುದು.

ಪಡುಬಿದ್ರಿ

ತಾ ೧೦-೩-೩೪ನೇ ಶನಿವಾರ ಪೂರ್ವಾಹ್ನ ಘಂಟೆ ೧೧ಕ್ಕೆ ಸ್ಥಳೀಯ ಬೋ ಹಾ. ಶಾಲೆಯಲ್ಲಿ ಸ್ಥಳೀಯ ಕೇಂದ್ರದ ಮೂಲಪಾರ ಶಾಲಾಧ್ಯಾಪಕ ಸಂಘದ ಒಂದು ಸಾಮಾನ್ಯ ಸಭೆಯು ಉಡುಪಿ ರೇಂಜ್ ಶಾಲೆಗಳ ಜೂನಿಯರ್ ಡೆಪ್ಯುಟಿ ಇನ್ಸ್‌ಪೆಕ್ಟರವರಾದ ಮ। ರಾ। ರಾ। ಬಿ. ವಿ. ವಿ ರಮಣ ಬಿ. ಎ., ಎಲ್. ಟಿ.ಯವರ ನೇತೃತ್ವದಲ್ಲಿ ಕೂಡಿಬಂದಲ್ಲಿ ಕ್ರಮದಂತೆ ಗತಸಭಾವರದಿ ವಾಚನಾದಿಗಳು ನಡೆದ ಬಳಿಕ, ರಾ. ಎಸ್. ಕೃಷ್ಣಯ್ಯನವರು ಇಂಗ್ಲಿಷ್ ಪ್ರಬಂಧ ಪಾಠವನ್ನೂ, ರಾ ಯು ನಾರಾಯಣ ನಾಯ್ಕರವರು ಕನ್ನಡ ಪದ್ಯಪಾಠವನ್ನೂ ಕ್ರಮವಾಗಿ III, VIIನೇ ತರಗತಿಗಳಿಗಿತ್ತರಲ್ಲದೆ ಶ್ರೀ ವೈ ಆನಂದರಾವ್— ಇವರು 'ಜನಾತಾಸೇವೆ' ಎಂಬ ಉಪನ್ಯಾಸವನ್ನು ಓದಲಾಗಿ ಅಧ್ಯಕ್ಷ ಮಹಾಶಯರ ಬೋಧಪರ ಭಾಷಣವು ನಡೆದು, ಧನ್ಯವಾದದೊಂದಿಗೆ ಸಭಾ ಮುಕ್ತಾಯವಾಯಿತು.

NOTES
ಟೀಕೆಗಳು

ಜಿಲ್ಲಾ ಎಜ್ಯುಕೇಶನ್ ಆಫೀಸಿನಲ್ಲಿ ಸುಮಾರು ನಾಲ್ಕು ಸಾವಿರ ರೂಪಾಯಿ ಮೊಬಲಗು ಕಪ್ಪಾಗಿಯೋ ಕಾಣೆಯಾಗಿಯೋ ಹೋದ ವಾರ್ತೆ ಹರಡಿದ್ದಿತು. ಆ ಮೊಬಲಗು ದೊರೆತರೆ, ಐನೂರರ ಬದಲಾಗಿ ೫೦ ಸಿಕ್ಕಿದ ರಾತ್ರಿ ಶಾಲೆಗಳಿಗೆ ಅದನ್ನು ಹಂಚುವರೇ ಎಂದು ಹಲವರ ಪ್ರಶ್ನೆಗಳಿವೆ.

*   *   *   *

ಶ್ರೀಗಳಾದ ಶೆಟ್ಟರೂ ಭಟ್ಟರೂ ಕೂಡಿ ಮದರಾಸು ಕೌನ್ಸಿಲಿನಲ್ಲೊಂದು ಬಂದೂಕು ಹೊಡೆದರು—ಬಂದೂಕಿನ ಮದ್ದನ್ನು ಕೊಂಡುಕೊಳ್ಳಲಿಲ್ಲವೆಂಟ ಕಾರಣದಿಂದ ದ. ಕ. ಜಿಲ್ಲೆಯಲ್ಲಿ ಕೆಲವರ ಬಂದೂಕು ಲೈಸೆನ್ಸು ರದ್ದುಮಾಡಲ್ಪಟ್ಟದ್ದು ನಿಜವೇ?' ಎಂದು.

*   *   *   *

ಆದರೆ, ಹೋಮ್ ಮೆಂಬರರು ಉತ್ತರ ಕೊಟ್ಟರು—'ಗೊತ್ತಿಲ್ಲ, ವಿವರಕ್ಕಾಗಿ ಬರೆದಿದ್ದೇವೆ' ಎಂದು. ಹೋಮ್ ಮೆಂಬರರಿಗೆ ಯಾವಾಗಲೂ 'ಗನ್‌ಪ್ರೂಫ್' ಕವಚವಿರುತ್ತದೆಂದು ನಮ್ಮ ಮೆಂಬರರಿಗೆ ತಿಳಿಯಬೇಡವೇ?

*   *   *   *

ಶಾಲೆಗಳ ಬಳಿಯಿರುವ ಬೋರ್ಡುಗಳಲ್ಲಿ 'Drive Slow' ಎಂಬ ಅಕ್ಷರಗಳು ಸ್ಪಷ್ಟವಾಗಿ ಕಾಣುತ್ತಿಲ್ಲವೆಂದು ಬಾತ್ಮೀದಾರರೊಬ್ಬರ ಪ್ರಲಾಪ. ಹೊಸ ಬೋರ್ಡು ಬರುವ ತನಕ ಹಳೆ ಬೋರ್ಡಿನ ಅಕ್ಷರಗಳಲ್ಲಿ ಇವಿಷ್ಟು ಅಕ್ಷರಗಳಾದರೂ ಸ್ಪಷ್ಟವಾಗಿ ಕಂಡರೆ, ಅದಕ್ಕೂ ಅರ್ಥವಿದೆಯೆಂದು ನಮ್ಮ ಅಭಿಪ್ರಾಯ —(೧) 'Die Slow' (೨) 'Dive Low' (೩) 'Drive ow'

*   *   *   *

'ಅರ್ಥಸಚಿವರ ಸ್ಥಾನವೆಂದರೆ ವೃಕ್ಷಶಯ್ಯೆಯಲ್ಲ' ಎಂದರು ಅರ್ಥಸಚಿವ ಕೂಸ್ಪರರು. ಥಿಲ್ಲಿಯ ಭೂಗುಣವು ಪುಷ್ಪವ್ಯವಸಾಯಕ್ಕೆ ಅನುಕೂಲವಾಗಿಲ್ಲವೆಂದು, ಭೂಗೋಳ ಪಾಠವನ್ನೂ ಅರ್ಥಸಚಿವರ ಜತೆಗೆ ಕಲಿಸಿದುದಕ್ಕೆ ವಂದನೆಗಳು.

*   *   *   *

ಇನ್ನು—ಪುಷ್ಪಗಳು 'Luxury Product' (ವಿಲಾಸ ವಸ್ತು) ಆಗಿ ಹೇರಳವಾಗಿದ್ದರೆ ಅವುಗಳ ಮೇಲೂ ಕೂಸ್ಪರರಿಂದ "ಸುಂಕ"ವನ್ನು ನಿರೀಕ್ಷಿಸಬಹುದಿತ್ತು.

*   *   *   *

"ಬೆನಿಫಿಟ್ ನಾಟಕಗಳ ಮರೆಯಲ್ಲಿ ಅವುಗಳಿಂದ ಸಂಗ್ರಹವಾಗುವ ಹಣದ [illegible] ಪ್ರಾಮಾಣಿಕತೆ ಇತ್ಯಾದಿಗಳ ವಿಷಯದಲ್ಲಿ [illegible] ಈ ತರದ "ಬೆನಿಫಿಟ್" ಯಾರಿಗೆ?

*   *   *   *

ಮುಂದೆ ಬೆನಿಫಿಟ್ ನಾಟಕಗಳನ್ನಾಡುವವರು "ಬೆನಿಫಿಟ್ ನಾಟಕಗಳ ಬೆನಿಫಿಟ್" ಎಂಬ ವಿಷಯದಲ್ಲಿ ಪ್ರಬಂಧಗಳನ್ನು ಬರೆದು ಪ್ರಕಟಿಸುವರೆಂದು ನಿರೀಕ್ಷೆ.

*   *   *   *

ಬಂಗಾಳದ 'ಟೆರರಿಸ್ಟ್ ಬಿಲ್ಲಿ'ನಲ್ಲಿ 'ಉತ್ತೇಜಕ ಸಾಹಿತ್ಯ'ದ ಒಂದು ಪ್ರಕರಣ—ಕ್ರಾಂತಿಪ್ರೇರಕವಾದ ಯಾವ ಸಾಹಿತ್ಯವನ್ನೂ ಯಾರೂ ಇಟ್ಟುಕೊಳ್ಳದಂತೆ ಈ ಪ್ರಕರಣ. ಈಗ ಸರಕಾರವು ನಿಷಿದ್ಧವೆಂದು ಮೊಹರು ಹಾಕಿರದೆ ಚಾಲತಿಯಿರುವ ಗ್ರಂಥಗಳಲ್ಲಿ ಯಾವುವು "ಕ್ರಾಂತಿಪ್ರೇರಕ ಸಾಹಿತ್ಯ"ದ ತರಗತಿಗೆ ಸೇರುವುವೆಂದು ಜಾಹೀರುಪಡಿಸಿದರೆ ಅನೇಕ ಬಂಗಾಳಿಗಳಿಗೆ ಹಣವೆಚ್ಚ ಮಾಡಿ ಪೋಲೀಸರಿಂದ ಕೈಕೋಳ ತೊಡಿಸಿಕೊಳ್ಳುವ ಪ್ರಸಂಗದಿಂದ ತಪ್ಪಿಸಿದಂತಾಗದೇ?

*   *   *   *

"ಅಸ್ಪೃಶ್ಯತೆಯೆಂಬ ಮಹಾಕಂಪದ ಎದುರಲ್ಲಿ ಈ ಭೂಕಂಪವೆಂತಹದು! ಎಂದು ದುಃಖಸಮಾಧಾನ ಮಾಡಿಕೊಳ್ಳಿ" ಎಂದು, ಪಾಟ್ನಾದಲ್ಲಿಳಿಯುತ್ತಲೇ ಮಹಾತ್ಮರ ಬೋಧನೆ. ಆದರೆ, ಭೂಕಂಪದಿಂದ ಮನೆಮಾರು ಹೋಗಿ 'ಅಸ್ಪೃಶ್ಯ'ರಾದವರು ಮೊದಲೇ ಎರಡು ವಿಧದ ಮಹಾಕಂಪಗಳ ಕಷ್ಟದಲ್ಲಿರುವಾಗ, ಈ ಎರಡು ಕಂಪಗಳಿಗಿಂತ ಗಡುಸಾದ ಮತ್ತೊಂದು ಕಂಪವಾವುದನ್ನು ನಿರೀಕ್ಷಿಸಲಿ?

*   *   *   *

ಫಾಯರ್ ಇಂಜಿನೊಂದು ನಮ್ಮಲ್ಲಿಗೆ ಬರುವುದೆಂದಾಯಿತು. ಇದೇ ಸಮಯದಲ್ಲಿ ಬೆಂಕಿಪೆಟ್ಟಿಗೆಗಳ ಮೇಲಿನ ಸುಂಕವೂ ಹೆಚ್ಚುವುದೆಂದು ಕೇಳಿದೆವು. ಒಳ್ಳೆಯ ಸಂಧಿ! ಚೆಯರ್‌ಮ್ಯಾನರಿಗಿಂತಲೂ ಹೆಚ್ಚು ವಂದನೆಗಳು ಮಂಗಳೂರಿನಿಂದ ಕೂಸ್ಪರ್ ಸಾಹೇಬರಿಗೆ!

ಸ್ವದೇಶ ವರ್ತಮಾನ

ಜಗದ್ವಿಖ್ಯಾತ ನಾಟಕಕಾರರಾದ ಮ್ಯಾ. ಬರ್ನಾರ್ಡ್ ಷಾರವರ 'ಸೈಂಟ್ ಜಾನ್' ಎಂಬ ಪುಸ್ತಕದೊಳಗಿನ ಕೆಲ ಪ್ರಯೋಗಗಳು ಕ್ಲಾಸಿನ ವಿದ್ಯಾರ್ಥಿಗಳ ಮನ ನೋಯಿಸುವಂತಹದಿವೆಯೆಂದು ಢಿಲ್ಲಿ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಅದನ್ನು ಪಠ್ಯಪುಸ್ತಕ ಪಟ್ಟಿಯಿಂದ ತೆಗೆದುಹಾಕಿಸುವ ಯತ್ನ ಕೈಗೊಂಡಿರುವರು.

ಭೂಕಂಪದಿಂದ ೩೪೦೦ ಜನರು ಮಡಿದು, ಸಾವಿರಾರು ಮನೆಗಳು ಹಾಳಾಗಿ ಬಿದ್ದ ನೇಪಾಳದಲ್ಲಿ ಇನ್ನೂ ಪುನರ್ಘಟನಾಕಾರ್ಯವು ತೃಪ್ತಿಕರವಾಗಿ ನಡೆಯುತ್ತಿಲ್ಲವೆಂದೂ, ಮಳೆಗಾಲ ಬರುವುದರೊಳಗೆ ಅದು ಸಾಧ್ಯವಲ್ಲವೆಂದೂ ತಿಳಿದುಬಂದಿದೆ.

ಬಿಹಾರ್ ಭೂಕಂಪನಿಧಿಗೆ ಹಿಂದೂದೇಶದ ಸಿನೆಮಾ ಕಂಪೆನಿಗಳಿಂದ ಸಂದ ಸಹಾಯದ್ರವ್ಯ ಒಟ್ಟು ರೂ. ೩೦ ಸಾವಿರ. ಇದರಲ್ಲಿ ದಕ್ಷಿಣ ಹಿಂದೂಸ್ಥಾನದಿಂದ ರೂ. ೨ ಸಾವಿರ. ನಮ್ಮ ದೇಶದಲ್ಲಿನ ಸಿನೆಮಾ ಕಂಪೆನಿಗಳ ಸಂಖ್ಯೆಯನ್ನೆಣಿಸಿದರೆ ಇದು ಅತ್ಯಲ್ಪವಾಯಿತೆಂದೂ, ಸಿನೆಮಾ ಕಂಪೆನಿಗಳು ಮತ್ತೂ ಔದಾರ್ಯ ಪ್ರಕಟಿಸಬೇಕೆಂದೂ ಬಾಬು ರಾಜೇಂದ್ರಪ್ರಸಾದರವರ ವಿನಂತಿ.

ಇತ್ತೀಚೆಗೆ ತಿಳಿದುಬರುವಂತೆ, ಬಿಹಾರ್ ಭೂಕಂಪ ಪ್ರದೇಶಗಳಲ್ಲಿ ಕೆಲವು ಮನೆಗಳು ಮೊದಲು ಇದ್ದುದಕ್ಕಿಂತ ಎಷ್ಟೋ ಗಜ ಮುಂದೆ ಹೋಗಿವೆ! ಕೆಲವು ಮನೆಗಳು ಭೂಗರ್ಭಕ್ಕಿಳಿದು ಹೋಗಿವೆ! ಕೆಲವು ಮರಗಳು ಬುಡಮೇಲಾಗಿ ಕಾಣಿಸುತ್ತವೆ. ಕೆಲವು ಕಡೆಗಳಲ್ಲಿ ನೀರಿನ ಬುಗ್ಗೆಗಳೆದ್ದು ಹೊಸ ಸರೋವರಗಳು ದೃಷ್ಟಿಗೋಚರವಾಗುತ್ತವೆ! ಅಂತೂ ದೃಶ್ಯವೆಲ್ಲ ಅರೇಬಿಯನ್ ನೈಟ್ಸ್ ಕಥೆಗಳಲ್ಲಿ ವರ್ಣಿತವಾಗಿರುವ ಅದ್ಭುತಗಳಿಗಿಂತಲೂ ಅದ್ಭುತವಿದೆಯೆಂದು ಶ್ರೀ ಎಸ್. ಕೆ. ಪಿ. ಸಿಂಹರೆಂಬ ಇಂಜಿನಿಯರರ ಹೇಳಿಕೆ.

ಅಹಮ್ಮದಾಬಾದಿನ ಮುನಿಸಿಪಲ್ ರೋಗವು ತನ್ನ ಪ್ರತಾಪ ತೋರಿ ಮೆರೆಯುತ್ತಿದೆ. ದಿನಕ್ಕೆ ಹತ್ತೆಂಟು ಮಂದಿಯನ್ನು ಆಸ್ಪತ್ರೆಗೆ ಸಾಗಿಸುತ್ತಿರುವರು. ಪೀಡಿತರಲ್ಲಿ ನೇಕಡಾ ೫೦ರಷ್ಟು ಮರಣಗಳಾಗುತ್ತಿರುವುವು. ಸಿನೆಮಾಗಳನ್ನು ಮುಚ್ಚಬೇಕೆಂದು ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರ ಆಜ್ಞೆ. ಸಾರ್ವಜನಿಕ ಸಂತೆಗಳನ್ನೂ ಕೂಟಗಳನ್ನೂ ಮಿತ್ರಭೋಜನಗಳನ್ನೂ ಪ್ರತಿಬಂಧಿಸುವರು. ಊರಲ್ಲಿ ಹಾಹಾಕಾರವೆದ್ದಿದೆ.

ನಾನಾ ಕಾರಣಗಳಿಂದ ಸಾಲಸೋಲಗಳಿಗೊಳಗಾಗಿ ತಮ್ಮ ಜಮೀನನ್ನು ಸಿಕ್ಕಾಬಟ್ಟೆ ಕಮ್ಮಿ ಕ್ರಯಕ್ಕೆ ಮಾರಾಟ ಮಾಡುವಂತಹ ಸ್ಥಿತಿಗೊಳಗಾಗಿರುವ ಬಡ ರೈತರಿಗೆ ೨೦ ವರ್ಷದ ಮಾಯಿದೆಯಲ್ಲಿ ನೇಕಡಾ ೫ರ ಬಡ್ಡಿಯಲ್ಲಿ ರೂ. ೧೦೦ರಿಂದ ರೂ. ೫,೦೦೦ರ ವರೆಗೆ ಜಮೀನಿನ ಆಧಾರದ ಮೇಲೆ ಸಾಲಗಳನ್ನು ಕೊಡಲು ಕೊಚ್ಚಿಯ ಸರಕಾರವು ನಿಶ್ಚಯಿಸಿದೆ.

ಬರ್ಮಾದಿಂದ ಇಂಡಿಯಕ್ಕೆ ಬರುವ ಅಕ್ಕಿಯ ಆಮದನ್ನು ತಡೆಯಲು ಅಥವಾ ಇಂಡಿಯದ ಅಕ್ಕಿಯ ವ್ಯಾಪಾರವು ನಾಶವಾಗದಂತೆ ಸಂರಕ್ಷಣಾ ವ್ಯವಸ್ಥೆಯನ್ನು ಮಾಡಲು ಸರಕಾರವು ಏನೇನು ಪ್ರಯತ್ನಗಳನ್ನು ಕೈಕೊಂಡಿದೆಯೆಂದು ಮದರಾಸು ಕೌನ್ಸಿಲಿನಲ್ಲಿ ಶ್ರೀ ಎ. ಬಿ. ಶೆಟ್ಟಿ, ಶ್ರೀ ಸುಬ್ರಹ್ಮಣ್ಯ ಭಟ್ಟ ಮೊದಲಾದವರಿಂದ ಪ್ರಶ್ನೆಯಾಗಲು—ಟ್ರಾಂಕ್ವೆಬಾರ್ ಬಂದರವನ್ನು ಅಕ್ಕಿಯ ರಫ್ತಿಗಾಗಿ ತೆರೆಯಲಾಗಿದೆಯೆಂದೂ ಸಿಲೋನಿನಲ್ಲಿ ಇಂಡಿಯದ ಅಕ್ಕಿಗೆ ಪ್ರೋತ್ಸಾಹ ದೊರೆವಂತೆ ಪ್ರಯತ್ನ ನಡೆದಿದೆಯೆಂದೂ, ಸೌತ್ ಇಂಡಿಯನ್ ರೈಲ್ವೆಯವರ ದರಗಳು ಇಳಿಸಲಾಗಿವೆಯೆಂದೂ, ಇಂಡಿಯಾ ಸರಕಾರಕ್ಕೆ ಈ ಬಾಬಿನ ಸಂಗತಿ ಬರೆದುಕೊಂಡಿದೆಯೆಂದೂ ಸಚಿವರಿಂದ ಉತ್ತರ ದೊರೆಯಿತು.

ಹಿಂದೂಸ್ಥಾನದಲ್ಲಿ ತಯಾರಾಗುವ ಬೆಂಕಿಪೆಟ್ಟಿಗೆಗಳ ಮೇಲೆ ಮತ್ತು ಬ್ರಿಟಿಷ್ ಇಂಡಿಯದೊಳಗೆ ತಯಾರಾಗುವ ಸಕ್ಕರೆಯ ಮೇಲೆ ಸರಕಾರದವರು ಅಬಕಾರಿ ಸುಂಕವನ್ನು ಹೊರಿಸಲು ಶಾಸನ ಮಾಡಲಿರುವರು. ಇದು ಇದೇ ೧೯೩೪ನೇ ಎಪ್ರಿಲ್ ತಾ. ೧ರಿಂದ ಜ್ಯಾರಿಗೆ ಬರುವುದು ಎಂದು ಮದರಾಸು ಸರಕಾರದ ಕಾರ್ಯದರ್ಶಿಯವರು ಪ್ರಕಟನೆ ಕೊಟ್ಟಿರುವರು.

"ಮಠವು ದೇವಾಲಯವಲ್ಲ"ವೆಂದು ಕನ್ಯಾಕುಮಾರಿ ತಾಲೂಕಿನ ಒಂದು ಮಠದ ವಿಚಾರದಲ್ಲಿ ಎಂಡೋಮೆಂಟ್ ಬೋರ್ಡಿನವರ ತೀರ್ಮಾನಕ್ಕೆದುರಾಗಿ ಮಠದ ಕಡೆಯಿಂದ ಬಂದ ಅರ್ಜಿಯ ವಿಚಾರಣೆ ಮಾಡಿ ತಿನ್ನವೆಲ್ಲಿಯ ಡಿಸ್ಟ್ರಿಕ್ಟ್ ಜಡ್ಜರು ತೀರ್ಪು ಕೊಟ್ಟಿರುವರು.

ಮುಂಬಾಯಿ ಗವರ್ನರರು ಕರಾಚಿಗೆ ಹೋಗಿ ನಗರಸಭೆಯ ವತಿಯಿಂದ ಮಾನಪತ್ರವನ್ನು ಸ್ವೀಕರಿಸಿ, ಕೆಲವೊಂದು ಗ್ರಾಂಟುಗಳಿಗೆ ಬಂದ ವಿನಂತಿಗಳಿಗೆ ಇಲ್ಲವೆಂದು ಕಾರಣಕೊಟ್ಟು ತಿಳಿಸಿ, ಕರಾಚಿ ನಗರವನ್ನೂ ನಗರಸಭೆಯನ್ನೂ ಹೊಗಳಿ ತೆರಳಿದರು.

ಹರಿಜನರಿಗಾಗಿ, ಬಿಹಾರಕ್ಕಾಗಿ, ದರಿದ್ರನಾರಾಯಣನಿಗಾಗಿ ಎಂದು ಹಣವಂತರಿಂದ ಹಣಪಡೆವ ಮಹಾತ್ಮಾಜೀಯವರು, ಶ್ರೀಮಂತರ ಹಣವನ್ನು ಬಡವರಿಗೊಪ್ಪಿಸಿ ಆರ್ಥಿಕ ವಿಭಾಗವನ್ನು ಸಮಾನಗೊಳಿಸುವ ಕರ್ತವ್ಯಬದ್ಧರಾಗಿರುವ ಕಾರಣ, ಅವರು ಕೊಮ್ಯುನಿಸ್ಟ ಮತವನ್ನು ಪ್ರಚಾರಕ್ಕೆ ತರುವ ಬದಲು, ಆಚಾರದಲ್ಲೇ ಪ್ರಚಾರಗೊಳಿಸುವರೇ ಎಂದೂ ಒಂದು ಪ್ರಶ್ನೆ ಎದ್ದಿದೆ. ಟೈಮ್ಸ್ ಪತ್ರದ ಕೊಮ್ಯೂನಿಸ್ಟ ಜ್ಞಾನವು ಅಗಾಧವಾಗಿದೆ.

ಗಾಂಧೀಜಿಯವರು ಪಾಟ್ನಾ ನಗರಕ್ಕೆ ಬಂದಾಗ, ಅಲ್ಲಿ ನೆರೆದಿದ್ದ ಸಾವಿರಾರು ಜನರು ನೆರೆದು ಅವರನ್ನು ಜಯಘೋಷದಿಂದಲೂ ಉತ್ಸಾಹದಿಂದಲೂ ಸ್ವಾಗತಿಸಿದರು. ಹೋಗುವಾಗ ದಾರಿಯಲ್ಲಿ ಅಲ್ಲಲ್ಲಿ ಕಟ್ಟಡಗಳು ನೆಲಸಮವಾದುದನ್ನು ಕಂಡಿದ್ದರು. ಸಂಜೆ ಹರಿಜನರ ಸಭೆಯಲ್ಲಿ ಮಾತಾಡುತ್ತ, ಬಿಹಾರದ ಭೂಕಂಪದಲ್ಲಿ ಸಂಕಷ್ಟಕ್ಕೀಡಾದ ಹರಿಜನರಿಗಾಗಿ ಹಿಂದಿನ ಹಣವನ್ನು ಅಗತ್ಯಕ್ಕಂತೆ ವಿನಿಯೋಗಿಸುವುದಾಗಿಯೂ ತಿಳಿಸಿದರು. "ಅಸ್ಪೃಶ್ಯತೆಯ ಕಂಪನೆಯು ಭೂಕಂಪಕ್ಕಿಂತ ಮಹತ್ತರವಾದುದು. ಅದನ್ನು ನೆನೆದು ಈ ಕಂಪದ ಕಷ್ಟವನ್ನು ತಾಳ್ಮೆಯಿಂದ ಸಹಿಸುವ!" ಎಂದು ಅಂದು ಹೊರಡಿಸಿದ ಪ್ರಕಟಣೆಯಲ್ಲಿ ಬರೆದಿರುವರು.

ಮಿರ್ಜಾಪುರದ ಇಲೆಕ್ಟ್ರಿಕಲ್ ಇಂಜಿನಿಯರರಾದ ಕುಸ್ತಾರ್ ಬದ್ರಿನಾಥ ಗುಲಾಟಿ ಎಂಬವರು ತಮ್ಮ ಪತ್ನಿಯ ತಂಗಿಯ ಮಗುವಿನ ಮೇಲೆ ಅತ್ಯಾಚಾರ ನಡೆಸಿದ ಅಪರಾಧಕ್ಕಾಗಿ ಎರಡು ವರ್ಷಗಳ ಕಠಿಣ ಶಿಕ್ಷೆ, ರೂ. ೫೦೦ರ ಜುಲ್ಮಾನೆ ಮತ್ತು ೧೫ ಛಡಿಯೇಟುಗಳು, ಈ ಶಿಕ್ಷೆಗಳಿಗೊಳಗಾಗಿರುವರು.

"ಕಾಶ್ಮೀರ ದಿನಾಚರಣೆ"ಯು ಕಾಶ್ಮೀರ ಸಂಸ್ಥಾನದಲ್ಲಿ ಯಾವುದೊಂದೂ ಗಲಭೆಯಿಲ್ಲದೆ ಶಾಂತವಾಗಿ ತಾ. ೧೦ರಲ್ಲಿ ನಡೆಯಿತು.

ಎರಡು ಪರ್ಶಿಯನ್ ಯುದ್ಧನಾವೆಗಳು ಕೊಚ್ಚಿ ಬಂದರಿಗೆ ಬಂದು ಸ್ನೇಹಸೂಚಕ ಸಂದರ್ಶನೆಯಿತ್ತು ತೆರಳಿದುವು.

ಸರಕಾರವು ವಾರ್ತಾಪತ್ರಿಕೆಗಳ ಟೆಲಿಗ್ರಾಫ್ ದರಗಳನ್ನು ಇಳಿಸುವ ಹಂಚಿಕೆಯಲ್ಲಿದೆ.

ಮೈಸೂರ ವಿದ್ಯುಚ್ಛಕ್ತಿಯನ್ನು ಕೊಚ್ಚಿ ಸಂಸ್ಥಾನಕ್ಕೂ ಕೊಡುವ ವಿಚಾರ ನಡೆಯುತ್ತಿದೆ.

ಬೆಂಗಳೂರಿನಲ್ಲಿ ಪುನಃ ಹದಿನೈದು ವಯಸ್ಸಿನ ಹಿಂದೂ (ಒಕ್ಕಲಿಗ ಪಂಗಡದ) ಬಾಲಕಿಯೊಬ್ಬಳನ್ನು ಓರ್ವ ಹಿಂದೂವಿನ ಸಹಕಾರದಿಂದಲೇ ಮುಸಲ್ಮಾನನೊಬ್ಬನು ಒಯ್ದಿರುವನೆಂದು ಕಂಪ್ಲೇಂಟ್ ಆಗಿದೆ. ಅಪರಾಧಿಗಳನ್ನೂ ದಸ್ತಗಿರಿ ಮಾಡಿರುವರಾಗಿ ವದಂತಿ.

ಸಿನೆಮಾ ನಟಿ—ಮಿಸ್ ಸುಲೋಚನಳು ದಿವಾಳಿಯೆಂದು ಮುಂಬಯಿ ಹೈಕೋರ್ಟು ತೀರ್ಮಾನಕೊಟ್ಟಿತು. ರೂ. ೨೦೦೦ಕ್ಕೆ ಒಂದು ದಾವೆ ಇದ್ದು ಆಕೆಯ ಮೇಲೆ ಡಿಕ್ರಿಯಾದರೂ ಹಣವಿಲ್ಲವೆಂದು ಆಕೆ ಬರೆದು ತಿಳಿಸಿದ್ದಳು. ಕೋರ್ಟಿಗೂ ಬರಲಿಲ್ಲ.

ವೈಸರಾಯರು ಬಿಹಾರಿನ ಭೂಕಂಪಪ್ರದೇಶವನ್ನೆಲ್ಲ ಸಂಚರಿಸಿ ನೋಡಿದರು. ಹಾಳುಪಾಳುಗಳನ್ನು ಕೆಲವು ಕೆಲವೆಡೆಗಳಲ್ಲಿ ಪಾದಚಾರಿಯಾಗಿಯೇ ಸಂಚರಿಸಿದರು. ಭೂಕಂಪಸಂಕಷ್ಟಪೀಡಿತರ ಕಷ್ಟಗಳನ್ನು ಕಣ್ಣಾರೆ ಕಂಡುದರಿಂದ ಸರಕಾರದ ಕಡೆಯಿಂದ ಹೆಚ್ಚಿನ ಸಹಾಯವು ದೊರೆಯಬಹುದೆಂದು ನಿರೀಕ್ಷಿಸಿದೆ.

ಪಂಜಾಬಿನ ಸಾಗೊರೈಟು ಎಂಬ ಊರಿನ ಬಳಿಯ ಪಟಿಯಾರ ಎಂಬಲ್ಲಿ ಭೂಮಿಯನ್ನು ಅಗೆಯುವಾಗ ಅನೇಕ ಪಾಷಾಣದ ಕೆಲವು ಬೌದ್ಧಮತೀಯರ ವಿಗ್ರಹಗಳೂ ನಾಣ್ಯಗಳೂ ದೊರೆತಿವೆ.

ಮದರಾಸು ಲೋಕಲ್ ಬೋರ್ಡು ಮಸೂದೆಗೆ ಮಾನ್ಯ ಗವರ್ನರರ ಸಮ್ಮತಿಯು ಸಿಕ್ಕಿಯಾಯಿತು.

ಬಿಹಾರಿನ ಭೂಕಂಪ ಸಂಕಷ್ಟನಿವಾರಣೆಯ ಕಾರ್ಯಕ್ರಮಗಳನ್ನು ರಚಿಸಲಾಗಿದೆ. ಗಾಂಧೀಜಿಯವರ ನೇತೃತ್ವದಲ್ಲಿ ಸಭೆ ನಡೆದು ಅವುಗಳನ್ನು ಮಂಜೂರು ಮಾಡಲಾಯಿತು. ಕ್ಷಾಮವು ಹಬ್ಬುತ್ತಿದೆ. ದಿನಕ್ಕೆ ಒಂದಾಣೆ ಕೂಲಿಯಲ್ಲಿಯೂ ಕೆಲಸ ಮಾಡುವರೆ ಸಾವಿರಾರು ಜನ ಮುಂದೆ ಬರುತ್ತಿರುವರು. ಪುನರ್ಘಟನಾ ಕಾರ್ಯವು ಶೀಘ್ರದಲ್ಲೇ ನಡೆದು ಮುಗಿಯದಿದ್ದರೆ ಕ್ಷಾಮದ ರೂಪವು ಭಯಂಕರವಾಗಿ ದಿನಕ್ಕೆ ಒಂದು ಲಕ್ಷ ರೂಪಾಯಿಗಳನ್ನು ಹಂಚಿದರೂ ನಿವಾರಿಸಲಾಗದಷ್ಟು ಭೀಕರವಾಗಬಹುದೆಂದು ಹೆದರಿಕೆಯಿದೆ. ಈ ತನಕ ಸಂಗ್ರಹವಾದ ನಿಧಿಯು ಪುನರ್ಘಟನಾ ಕಾರ್ಯಕ್ಕೆ ಸಾಕಾಗದು. ಕಾರ್ಯಕಾರಿ ಮಂಡಳಿಯಲ್ಲಿ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸಲಾಗಿದೆ.

ವಿದೇಶ ವರ್ತಮಾನ

ಬಿಹಾರ್ ಭೂಕಂಪನಿಧಿಗೆ ಹಣವೆತ್ತುವಲ್ಲಿ ಸಹಾಯಕಾರಿಯಾಗುವಂತೆ ಸಿ. ಎಫ್. ಆಂಡ್ರ್ಯೂಸರವರು ಇಂಗ್ಲಾಂಡಿನಲ್ಲಿ ಭಾಷಣಗಳ ಪ್ರಚಾರಕಾರ್ಯ ಮಾಡಿ ಶ್ರಮಪಡುತ್ತಿರುವರು. ಅಲ್ಲಿ ಒಟ್ಟು ೧ ಲಕ್ಷ ಪವನು ಕೂಡಿಕೆಯಾಗಬಹುದಾಗಿ ನಂಬಿಕೆಯಿದೆ. ಲಂಡನ್ ಮೇಯರರ ನಿಧಿಗೆ ಈ ತನಕ ಸುಮಾರು ೩೦ ಸಾವಿರ ಪವನು ಕೂಡಿಕೆಯಾಗಿದೆ.

"ಗಾಂಧೀಜಿಯವರು ಬೊಲ್ಶೆವಿಕ್ ಏಜಂಟರು" ಎಂದರು ಜರ್ಮನಿಯ ಜನರಲ್ ಗೋರಿಂಗರು.

ಶೂದ್ರಕ ಕವಿಯ "ಮೃಚ್ಛಕಟಿಕ" ನಾಟಕವು ಜರ್ಮನಿಯ ಚಲಚ್ಚಿತ್ರ ಕಂಪೆನಿಯೊಂದರಿಂದ ಲಂಡನಿನಲ್ಲಿ ಸಿದ್ಧವಾಗುತ್ತಿದೆ.

ಫ್ರಾನ್ಸಿನ ಮಿಲಿಟರಿ ವೆಚ್ಚಗಳು ಬರುವ ವರ್ಷಕ್ಕೆ ಈ ರೀತಿ ಅಂದಾಜಾಗಿವೆ—ಗಡಿ ಪ್ರಾಂತ್ಯಗಳ ಸಂರಕ್ಷಣೆ ಬಗ್ಗೆ ೧೪ ಮಿಲಿಯ ಪವನು; ನೌಕಾದಳ ಸಂರಕ್ಷಣೆ ಬಗ್ಗೆ ೧,೫೩೬,೦೦೦ ಪವನು; ವಿಮಾನ ಸೈನ್ಯಕ್ಕೆ ೧೦,೬೫೮,೦೦೦ ಪವನು; ಒಟ್ಟು ೨೬ ಮಿಲಿಯ ಪವನಿನಿಂದ ಮಿಲಿಟರಿಯ ಪುನರ್ವ್ಯವಸ್ಥೆಯಾಗುವುದು.

ಇಂಗ್ಲಾಂಡಿನಿಂದ ಇಂಡಿಯದ ಮಿಲಿಟರಿ ಖಾತೆಗಳ ನಿಧಿಗೆ ೧೫ ಮಿಲಿಯ ಪವನಿನ ಕಾಣಿಕೆ ಬರುವುದಂತೆ.

ಸಿಲೋನಿನ ವ್ಯಾಪಾರವು ವೃದ್ಧಿಂಗತವಾಗುತ್ತಿದೆಯಾಗಿ ಇತ್ತೀಚಿನ ಅಂಕಸಂಖ್ಯೆಗಳು ತಿಳಿಸುತ್ತವೆ.

ಜಪಾನಿನ ಶ್ರೀಮಂತನಾದ ಸಾಂಜಿಯುಟೋಕಿಯನ್ನು ೨೦ ವಯಸ್ಸಿನ ಎಳೆಯ 'ಚಮುಕೊಂಡ' ರಾಜಕೀಯ ಕಾರಣಗಳಿಂದ ಪಿಸ್ತೂಲು ಹೊಡೆದು ಕೊಂದನು; ತಾನೂ ಆತ್ಮಹತ್ಯೆ ಮಾಡಿಕೊಂಡನು. ಸಾಂಜಿ ಟೋಕಿಯೋ ಆಸ್ಪತ್ರೆಯಲ್ಲಿ ಮೃತನಾದನು. ಜಪಾನಿನಲ್ಲಿ ಕೈಗಾರಿಕೆ ಪ್ರಪಂಚದಲ್ಲಿ ಅವನು ಸುಪ್ರಸಿದ್ಧನು. "ಜಿಜಿ" ಎಂಬ ಪತ್ರಿಕೆಯನ್ನು ತನ್ನ ಅಧೀನಕ್ಕೆ ಪಡೆದುಕೊಂಡು, ಹಿಂದೂದೇಶದ ಅರಿವೆಗೆ ಬಹಿಷ್ಕಾರ ಹಾಕಬೇಕೆಂಬ ಚಳವಳಿಯನ್ನು ಜಪಾನಿನಲ್ಲಿ ಉಜ್ವಲಿಸಿದವನು.

ಜರ್ಮನಿಯಲ್ಲಿ ನಾಝಿಯವರ ಅತಿರೇಕಗಳನ್ನು ಕಡೆವರೆ ನಾಝಿಗಳ ಕೈದಿಗಳಾಗುತ್ತಿವೆ.

ಸಂಯುಕ್ತ ಅಮೇರಿಕವು ಬೆಳ್ಳಿಯನ್ನು ಕೊಂಡುಕೊಳ್ಳುವಲ್ಲಿ ತನ್ನ ವೃತ್ತಿಯನ್ನು ತಿರುಗಿಸುವುದರಲ್ಲಿದೆ. ಅತ್ತ ಸಾಂರಾಜ್ಯವನ್ನೂ ಹೆಚ್ಚಾಗಿ ಕೊಂಡುಕೊಳ್ಳುವುದರಲ್ಲಿದೆ. ಇಂಗ್ಲಾಂಡಿನ ಸಾಮ್ರಾಜ್ಯವಾದಿಗಳ ಭಾಗ್ಯೋದಯದ ಚಿಹ್ನೆಯಿದು.

ಅರ್ಲ್ ಆಫ್ ಡಡ್ಲೀಯವರು ಮದರಾಸು ಗವರ್ನರರಾಗಿ ನೇಮಕ ಹೊಂದುವರೆಂದು ಲಂಡನಿನ 'ಡೈಲಿ ಎಕ್ಸ್‌ಪ್ರೆಸ್' ಪತ್ರಿಕೆ ಪ್ರಕಟಿಸಿದೆ. ಈ ಪ್ರಭುಗಳ ಪ್ರಾಯ ೪೦. ಇವರು ಶ್ರೀಮಂತರು; ೩೦೦೦೦ ಎಕ್ರೆಯನ್ನು ಆಳುವವರು. ಇವರು ಯುರೋಪಿನ ಯುದ್ಧದಲ್ಲಿ ಸೇನಾನಿಯಾಗಿ ಕೆಲಸಮಾಡಿದವರು; ಪಾರ್ಲಿಮೆಂಟ್ ಮೆಂಬರರಾಗಿದ್ದವರು; ೧೯೨೨ರಿಂದ ೧೯೨೩ರ ತನಕ ಅರ್ಲ್ ವಿಂಟರಟನ್ನರು ಇಂಡಿಯದ "ಅಂಡರ್ ಸೆಕ್ರಟರಿ ಆಫ್ ಸ್ಟೇಟು" ಕೆಲಸದಲ್ಲಿದ್ದಾಗ ಅವರಿಗೆ ಇವರು ಪ್ರೈವೇಟ್ ಸೆಕ್ರಟರಿಗಳಾಗಿದ್ದವರು.

ಸ್ಪೈನಿನ ಅಶಾಂತಿಯು ಕಡಿಮೆಯಾಗಿಲ್ಲ. ಮಹಾಯುದ್ಧದ [illegible]ಂದು ಆರಂಭವಾದಂತೆ ದಾತೆ ಮತ್ತೊಂದು ಮಹಾಕ್ರಾಂತಿಯೊ ಎಂಬಂತೆ ಚಿಹ್ನೆಗಳಿವೆ.

ದಕ್ಷಿಣ ಕನ್ನಡ

ಮಂಗಳೂರು. ರಸ್ತೆಗಳಿಗೆ ನೀರು ಹಾಕುವ ಹಾಗೂ ಬೆಂಕಿಯನ್ನಾರಿಸುವ ದ್ವಿಗುಣ ಅನುಕೂಲತೆಗಳುಳ್ಳ ಯಂತ್ರವನ್ನು ಕೊಂಡುಕೊಳ್ಳುವ ವಿಚಾರದಲ್ಲಿ ನಮ್ಮ ಮುನಿಸಿಪಾಲಿಟಿಯವರು ಅನೇಕ ಕಂಪೆನಿಗಳಿಂದ ಕ್ರಯಗಳನ್ನು ವಿಚಾರಿಸಿರುವರೆಂದೂ ಕ್ರಯ ಸರಿಯೂ ಮತ್ತು ನಮಗೆ ಬೇಕಾದ ವಿಧದ ಯಂತ್ರದ ಆಯ್ಕೆಗಳನ್ನು ಅಗದ ಕಾರಣ ವಿಳಂಬವಾಗಿದೆಯೆಂದೂ ಆದರೆ ಇನ್ನು ಶೀಘ್ರದಲ್ಲಿ ಕೊಂಡುಕೊಳ್ಳಲಾಗುವುದೆಂದೂ ಮುನಿಸಿಪಲ್ ಚೆಯರ್ಮೇನರು ಬರೆದು ತಿಳಿಸಿರುವರು.

ಇಲ್ಲಿಯ ಕೊಸ್ಮೊಪೊಲಿಟನ್ ಕ್ಲಬ್ಬಿನವರು ವರ್ಷಂಪ್ರತಿ ನಡೆಸುವ ಟೆನ್ನಿಸ್ ಪಂದ್ಯಾಟವು ಈ ವರ್ಷವೂ ಯಥೋಚಿತವಾಗಿ ಇದೇ ತಾ ೨೪ರಿಂದ ಆರಂಭವಾಗುವುದು. ಸ್ಪರ್ಧಿಸಲಿಚ್ಛಿಸುವವರು ಸಿಂಗಲ್ಸ್ ರೂ ೪ ಮತ್ತು ಡಬ್ಬಲ್ಸ್ ರೂ ೫ರಂತೆ ಪ್ರವೇಶಧನದೊಂದಿಗೆ ಟೂರ್ನಮೆಂಟ್ ಗೌರವ ಕಾರ್ಯದರ್ಶಿಗಳಿಗೆ ಇದೇ ತಾ ೨೧ರೊಳಗೆ ಬರೆದುಕೊಳ್ಳಬೇಕಾಗಿದೆ.

ಸೆಕೆಕಾಲದ ರಜೆಯ ಸಂಬಂಧ ಇಲ್ಲಿಯ ಕೆನರಾ ಹೈಸ್ಕೂಲು ಇದೇ ಎಪ್ರಿಲ್ ತಾ ೧೯ರಿಂದ ಜೂನ್ ತಾ ೩ರ ತನಕವೂ, ಗಣಪತಿ ಹೈಸ್ಕೂಲು ಎಪ್ರಿಲ್ ತಾ ೯ರಿಂದ ಜೂನ್ ತಾ ೩ರ ತನಕವೂ, ಮಿಶ್ಯನ ಹೈಸ್ಕೂಲು ಎಪ್ರಿಲ್ ತಾ ೧೧ರಿಂದ ಮೇ ತಾ ೩೧ರ ತನಕವೂ ಮುಚ್ಚಲ್ಪಡುವುವು.

ಕೆನರಾ ಹೈಸ್ಕೂಲ್ ಮತ್ತು ಕೆನರಾ ಗರ್ಲ್ಸ್ ಸ್ಕೂಲಿನ ಸಹಾಯಾರ್ಥವಾಗಿ ಒಂದು ಲೋಟರಿಯು ಏರ್ಪಡಿಸಲಾಗಿದ್ದು, ಪ್ರಥಮ ಬಹುಮಾನವು ರೂ ೨೫೦೦೦ ಎಂದು ನಿಶ್ಚಯಿಸಲ್ಪಟ್ಟಿದೆ.

ಡಾ॥ ಅವರಿಗೆ ಶ್ರೀ[illegible]ಯರ [illegible] ಸಂಬಂಧ, ಅವರ ಸಹೋದರ [illegible] ಅವರಿಗೆ ಪರಮರಾವ್, ಅಡ್ವೊಕೇಟ್, ಇವರು ಕಳೆದ ಆದಿವಾರ [illegible] ಬಡಬಗ್ಗರಿಗೂ ಹರಿಜನರಿಗೂ ಅಕ್ಕಿಯನ್ನು ಹಂಚಿಸಿದರು.

ಸಾರ್ವಜನಿಕ ಗ್ರಂಥಾಲಯದ ಉಪಯೋಗಾರ್ಥ ನಮ್ಮ ಮುನಿಸಿಪಾಲಿಟಿಯವರು ಬರುವ ವರ್ಷ ಸುಮಾರು ಒಂದು ಸಾವಿರ ರೂಪಾಯಿ ಬೆಲೆಯ ಹೊಸ ಗ್ರಂಥಗಳನ್ನು ಕೊಂಡುಕೊಳ್ಳಲಿರುವರು.

ಬೆಂಕಿಪೆಟ್ಟಿಗೆ ಮತ್ತು ಸಕ್ಕರೆಯ ಮೇಲೆ ಸರಕಾರದವರು ಹೊಸ ಸುಂಕ ಹಾಕುವರಾಗಿ ವದಂತಿ ಬಂದಾಕ್ಷಣದಿಂದಲೇ ಇವೆರಡರ ಬೆಲೆ ಏರುತ್ತಾ ಇದೆ. ಪರಿಣಾಮವಾಗಿ ಒಳ್ಳೆಯ ಕೆಲವು ಬ್ರೇಂಡುಗಳ ಬದಲಾಗಿ ಕಂಡೂ ಕೇಳದ ಬೆಂಕಿಪೆಟ್ಟಿಗೆಗಳ ಕೆಲವು ಬ್ರೇಂಡುಗಳು ಹೊರಗೆ ಬಂದಿವೆ. ಕೆಲವು ಅಂಗಡಿಗಳಲ್ಲಿ ಇದ್ದ ಸ್ಟಾಕನ್ನು ಭದ್ರವಾಗಿಟ್ಟುಕೊಂಡು ಹೆಚ್ಚು ಲಾಭದ ಮುಂದಿನ ದಿನಗಳಿಗಾಗಿ ಕಾಯುತ್ತಿರುವರು.

ಶ್ರೀ ವೆಂಕಟ್ರಮಣಸ್ವಾಮಿ ಥಿಯೇಟ್ರಿಕಲ್ ಕಂಪೆನಿಯ ಆಡಳಿತಗಾರ ಶ್ರೀ ಎನ್ ಆರ್ ಬಂಟ್ವಾಳಕರರು ಗುಣಲಾಭ ಪಡೆಯುತ್ತಿದ್ದು ಇನ್ನು ಎರಡು ವಾರಗಳಲ್ಲಿ ಪೂರ್ಣ ಗುಣಹೊಂದಬಹುದಾಗಿ ತಿಳಿದು ಬಂದಿದೆ.

ನಮ್ಮ ಜಿಲ್ಲಾ ಹರಿಜನಸೇವಾ ಸಂಘದವರು ಮುಂದಿನ ಕಾರ್ಯಕ್ರಮಗಳ ಕುರಿತಾದ ಯೋಜನೆಯನ್ನು ತಯಾರಿಸಿ ಈ ತಿಂಗಳಾಂತ್ಯದೊಳಗೆ ಸಂಘದ ಸಭೆ ನಡೆಸಿ ಈ ಕಾರ್ಯಕ್ರಮಗಳ ಪಟ್ಟಿಯನ್ನು ಅಖಿಲ ಭಾರತ ಕೇಂದ್ರ ಹರಿಜನ ಸೇವಾ ಸಂಘಕ್ಕೆ ಮಂಜೂರಾತಿ ಬಗ್ಗೆ ಕಳುಹಲಿರುವರು.

ರಥಬೀದಿಯಲ್ಲಿರುವ ಶ್ರೀ ಕಾಳಮ್ಮ ದೇವಸ್ಥಾನದಲ್ಲಿ ಈ ದಿನದಿಂದ ರಥೋತ್ಸವ ಸಂಬಂಧವಾದ ಉತ್ಸವಾದಿಗಳಾರಂಭ. ನವಮಿ ತಾ. (೨೪—೩—೩೪)ಕ್ಕೆ ರಥಾರೋಹಣವಾಗಲಿರುವುದು.

ತಾ ೧೦ಕ್ಕೆ ಅಂತ್ಯವಾಗುವ ಒಂದು ವಾರದ ನಮ್ಮ ನಗರದ ಆರೋಗ್ಯದ ವರದಿ: [illegible] ೩೮ ಮರಣಗಳು (ಸಾವಿರ ಜನಸಂಖ್ಯೆಗೆ ೨೯.೩೦ರಂತೆ); ಜನನಗಳು ೪೮ (ಸಾವಿರಕ್ಕೆ [illegible]) ಮರಣಗಳ ಪೈಕಿ ಸಿಡುಬಿನಿಂದ ೩, [illegible] ೧, [illegible] ೬, ಕ್ಷಯರೋಗ ಸಂಬಂಧವಾದವು ೮ ಮತ್ತು ಇತರ ಕಾರಣಗಳಿಂದ ೧೬. ಇವುಗಳಲ್ಲಿ ೧ ವರ್ಷ ಪ್ರಾಯದೊಳಗಿನ ಶಿಶುಗಳ ಮರಣ ಸಂಖ್ಯೆಯು ೩.

ಸಿಡುಬಿನ ಭಯವು ಇನ್ನೂ ಕಡಿಮೆಯಾದಂತೆ ತೋರುವುದಿಲ್ಲ. ಇದೇ ತಾರೀಕು ೧೦ಕ್ಕೆ ಅಂತ್ಯವಾಗುವ ವಾರದಲ್ಲಿ [illegible] ಜನರಿಗೆ ಸಿಡುಬು ತಗಲಿ ೬ ಮರಣಗಳಾಗಿವೆ. ಈ ಮರಣಗಳ ಪೈಕಿ ಪೋರ್ಟ್ ರೋಡಿನಲ್ಲೊಂದು, ಅಜೀಜ ದ್ದೀನ್ ರಸ್ತೆಯಲ್ಲೊಂದು, [illegible] ಬಜಾರಿನಲ್ಲೊಂದು, [illegible] ರಸ್ತೆಯಲ್ಲೊಂದು, III ನೇ ವಾರ್ಡಿನ [illegible]ನಲ್ಲೊಂದು, VIII ನೇ ವಾರ್ಡಿನ [illegible]ಕೆರೆಯಲ್ಲೊಂದು, ಹೀಗಿದೆ.

ಇದೇ ತಾ ೧೦—೩—೩೪ನೇ ಸೋಮವಾರ ರಾತ್ರಿ ಶ್ರೀ ಚಂದ್ರಕಲಾ ನಾಟಕ ಮಂಡಳಿಯವರು ಇಲ್ಲಿಯ ಕುಷ್ಠ ರೋಗ ನಿವಾರಣಾ ಸಂಘದ ಸಹಾಯಾರ್ಥ "ಗೌತಮ ಬುದ್ಧ" ವೆಂಬ ಹೊಸ ನಾಟಕವನ್ನಾಡಿ ತೋರಿಸಿದರು. ನಾಟಕಕ್ಕೆ ಮಾನ್ಯ ಜಿಲ್ಲಾ ಕಲೆಕ್ಟರವರೂ ಮುನಿಸಿಪಲ್ ಚೆಯರ್ಮೇನರೇ ಮೊದಲಾದ ಪ್ರಮುಖಾಧಿಕಾರಿಗಳೂ ದಯಮಾಡಿಸಿದ್ದರು. ನಾಟಕದ ನಡುವೆ ಮುನಿಸಿಪಲ್ ಚೆಯರ್ಮೇನರು ನಾಟಕದವರ ಔದಾರ್ಯವನ್ನು ಕೊಂಡಾಡಿ ಜಿಲ್ಲಾ ಕಲೆಕ್ಟರರನ್ನು ವಂದಿಸಿ, ನಾಟಕಕ್ಕೆ ಧನಸಂಗ್ರಹವು ನಿರೀಕ್ಷಿಸಿದಷ್ಟಾಗದುದಕ್ಕೆ ವಿಷಾದಿಸಿ ಸಂಗ್ರಹವಾದುದರಲ್ಲಿ ಅರ್ಧಾಂಶವು ಕುಷ್ಠರೋಗ ನಿವಾರಣಾ ಸಂಘಕ್ಕೆ ಸಲ್ಲುವುದೆಂದು ತಿಳಿಸಿ ಭಾಷಣ ಮಾಡಿದರು.

ಕಡಬ.—ಇಲ್ಲಿಯ ಜೈನ್ ಮಂಡಳಿಯವರು ಇದೇ ಕಳೆದ ತಾ. ೨೬—೨—೩೪ನೇ ಚಂದ್ರವಾರ ದಿನ ಶ್ರೀಮಾನ್ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರಿಗೆ ಒಂದು ಅಭಿನಂದನ ಪತ್ರಿಕೆಯನ್ನು ಸಮರ್ಪಿಸಿದರು. ಆ ಸಭೆಯಲ್ಲಿ ಪುತ್ತೂರಿನ ವಕೀಲ ಚಿನ್ನಪ್ಪ ಗೌಡರು ಕಡಬದ ಜೈನ ಮೊಕ್ತೇಸರರ ಅಧೀನತೆಯಲ್ಲಿ ನಡೆಯುವ ಮಾರಿಪೂಜೆಯಲ್ಲಿ ಪ್ರಾಣಿಬಲಿಯನ್ನು ನಿಲ್ಲಿಸಬೇಕಾಗಿ ಸೂಚಿಸಿದರು. ಪುತ್ತೂರು ತಾಲೂಕು ಬೋರ್ಡ್ ಪ್ರೆಸಿಡೆಂಟ್ ಮೊಳಹಳ್ಳಿ ಶಿವರಾಯರು, ಬೇಸಿಕ್ ಇನ್ಸ್‌ಪೆಕ್ಟರ್ ಸಿ. ಕೆ. ಪದ್ಮಯನವರು ಮತ್ತು ಬಿ. ಟಿ. ಅಂಗ ಜೈನಿಯವರೇ ಮೊದಲಾದವರು ಇದನ್ನು ಸಮರ್ಥಿಸಿ ಮಾತಾಡಿದರು. ಹೊಸನಗರದ ಎಸ್ ಸಿ ಶೆಟ್ಟರು ಮಾನ್ಯ ಹೆಗ್ಗಡೆಯವರ ಗುಣಕಥನ ಮಾಡಿ ಅಹಿಂಸಾ ತತ್ವದ ವಿಚಾರದಲ್ಲಿ ಸುಂದರವಾದ ಭಾಷಣ ಮಾಡಿದರು. ಮಾರಿಗುಡಿಯ ಮೊಕ್ತೇಸರರಾದ ಕಡಬ ಪಟೇಲ ಶ್ರೀ ಕಂಬಳ ಹೆಗ್ಗಡೆಯವರಿಂದ ಮಾತ್ರ ಆಶಾಜನಕ ಉತ್ತರವು ದೊರಕಲಿಲ್ಲ.

ಮುಲ್ಕಿ.—ಮಹಾತ್ಮಾ ಗಾಂಧಿಯವರ ಆಗಮನ ಸ್ವಾಗತದ ಕುರಿತು ನಿಯೋಜಿತವಾದ ಕಮಿಟಿ ಹಾಗೂ ಸ್ವಯಂಸೇವಕರ ಸುವ್ಯವಸ್ಥೆಯಿಂದ ಎಲ್ಲ ಕಾರ್ಯಭಾಗವು ನಡೆದು ಮಹಾತ್ಮಾಜೀಯವರ ದರ್ಶನವು ಆಬಾಲವೃದ್ಧರಿಗೆ ದೊರೆಯುವಂತಾಯಿತು. ಇನ್ನು ಮಹಾತ್ಮರ ಧರ್ಮಬೋಧೆಯು ಇಲ್ಲಿ ಕಾರ್ಯತಃ ಹೇಗೆ ಫಲಿಸಲಿದೆ ಎಂದು ನೋಡಲಿದೆ.

ಬಿಹಾರಿನ ಭೂಕಂಪ ನಿಧಿಗೆ ಸಂಗ್ರಹಿಸಲ್ಪಟ್ಟ ಹಣದಲ್ಲಿ ೨ನೇ ಕಂತಾಗಿ ರೂ ೨೦—೦—೦ ಶ್ರೀ ಬಾಬು ರಾಜೇಂದ್ರಪ್ರಸಾದರಿಗೆ ಕಳುಹಿಸಿ ಕೊಡಲಾಗಿದೆ ಎಂದು ತಿಳಿದುಬರುತ್ತದೆ.

ಸ್ಥಳೀಯ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲೆ ಮತ್ತು ಶ್ರೀ ದುರ್ಗಾದೇವಿ ಫ್ರೀ ನೈಟ್ ಸ್ಕೂಲಿನ ವಾರ್ಷಿಕ ತನಿಖೆಯ ಸಂಬಂಧ [illegible] ರೇಂಜಿನ ಶಾಲೆಗಳ ಡಿಪ್ಯುಟಿ ಇನ್ಸ್‌ಪೆಕ್ಟರ್ ಮಹಾಶಯರು ಇಲ್ಲಿ ಕಳೆದ ತಾ [illegible]ರಿಂದ [illegible]ರ ತನಕ ಮೊಕ್ಕಾಂ ಮಾಡಿಕೊಂಡಿದ್ದು ತಾ ೬ನೇ ದಿನ ಹಿಂತಿರುಗಿದರು.

ಸ್ಥಳೀಯ ವರ್ತಕರಾದ ಶ್ರೀ ಒಂಗ್ಲೆ ಸೀತಾರಾಮ ಕಾಮತರ [illegible] ಉಪನಯನ ಸಂಬಂಧ ಕಳೆದ ತಾ ೫ನೇ ಸಾಯಂಕಾಲ ಸುಮಾರು ೩೦೦ ಮಂದಿ [illegible]ಗೆ ಭೂರಿಭೋಜನವು ನಡೆಯಿತು. [illegible] ಸಾರ್ವಜನಿಕ ಊಟ ಬಡಿಸಿದುದು ಇಲ್ಲಿ ಇದೇ ಪ್ರಥಮ ಬಾರಿಯಾಗಿದೆ.

ಇಲ್ಲಿಂದ ಕಾರ್ಯನಿಮಿತ್ತರಾಗಿ [illegible] (ಅರಬಿ)ಗೆ ಹೋಗಲಿರುವ [illegible] ಮತ್ತು [illegible] ದೊರೆಸಾನಿಯವರನ್ನು ಸ್ಥಳೀಯರು ಇದೇ ತಾ ೬ನೇ ಸಾಯಂಕಾಲ ಸ್ಥಳೀಯ ಯೂನಿಯನ್ ಕ್ಲಬ್ಬಿನಲ್ಲಿ ಯೋಗ್ಯ ರೀತಿಯಿಂದ ಸತ್ಕರಿಸಿದರು. ಶ್ರೀ ಡಾ ಯು ಆರ್ ಕಾಮತರವರು ಸಭಾಧ್ಯಕ್ಷರಾಗಿದ್ದರು. ಕ್ಲಬ್ಬಿನ ಕಾರ್ಯದರ್ಶಿ ಶ್ರೀ ಬಿ ಭೋಜರಾಯರು ಆ ದೊರೆ-ದೊರೆಸಾನಿಯವರಿಗೆ ಸಮರ್ಪಿಸತಕ್ಕ ಮಾನಪತ್ರಗಳನ್ನು ಸಭೆಗೆ ಓದಿ ಹೇಳಿದರು. ಶ್ರೀ ನರಸಿಂಹ ಕಾಮತರು ಆ ಮಾನಪತ್ರಗಳನ್ನು ಅತಿಥಿಗಳಿಗೆ ಅರ್ಪಿಸಿದರು. ಇದು [illegible]ಯಲ್ಲಿ ಬರೆದು [illegible]. ಶ್ರೀ ಎ. [illegible] ಕಾಮತರು ಅತಿಥಿಗಳಿಗೆ ಹೂವಿನ ಹಾರ ಹಾಕಿ ಸತ್ಕರಿಸಿದರು. ಆ ವೇಳೆ [illegible] ಶ್ರೀ [illegible] ಎಸ್ ಕ್ಲೇರ್ ಶ್ರೀ ಬಿ ಭೋಜರಾಯರು ದೊರೆ-ದೊರೆಸಾನಿಯವರ ಗುಣಕಥನ ಮಾಡಿ ಅವರಿಗೆ ಸುಖ ಪ್ರಯಾಣವನ್ನೂ [illegible] ಆರೋಗ್ಯವನ್ನೂ ಕೋರಿದರು. [illegible] ಮಾನಪತ್ರಗಳನ್ನು ಅತಿಥಿಗಳಿಗೆ [illegible]. ನಂತರ ಸಭಾಧ್ಯಕ್ಷರ [illegible] ನೆರೆದಿದ್ದ ಸಮಸ್ತರನ್ನೂ ಫಲಾಹಾರ ತಾಂಬೂಲಾದಿಗಳಿಂದ ಸತ್ಕರಿಸಲಾಗಲು, ಬೇಂಡ್ ವಾದ್ಯದಿಂದ ದೊರೆ ದೊರೆಸಾನಿಯವರನ್ನು ಮೆರವಣಿಗೆಯಿಂದ ಬೀಳ್ಕೊಡಲಾಯಿತು.

Karnataka Chemical and Pharmaceutical Works, Ltd., Udipi (South India)

ಕುಂಭಕೋಣದಲ್ಲಿಯೂ ಮಧುರೆಯಲ್ಲಿಯೂ ಮೈಸೂರಿನಲ್ಲಿಯೂ ಸುವರ್ಣ ಪದಕಗಳನ್ನು ಪಡೆದಿರುವ

ಕರ್ಣಾಟಕ ಕಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದಕ್ಷಿಣ ಹಿಂದೂಸ್ಥಾನ)

ನಮ್ಮಲ್ಲಿ ಟಿಂಕ್ಚರ್ಸ್ ವಗೈರೆ ಎಲ್ಲಾ ಎಲೋಪೆತಿಕ್ ಔಷಧ ದ್ರವ್ಯಗಳೂ, ಆಯುರ್ವೇದೀಯ ಔಷಧಿಗಳೂ, ಟೊಯಿಲೆಟ್ ಸಾಮಗ್ರಿಗಳೂ, ಸಾಬೂನುಗಳೂ, ಫೌಂಟನ್ ಪೆನ್ ಶಾಯಿಗಳೂ ತಯಾರಿಸಲ್ಪಡುತ್ತವೆ

ದ್ರಾಕ್ಷಾಸವ, ಪ್ರಸೂತಿ ಸಂಜೀವನ, ನಿಯೊವಿಗರ್, ಸ್ನೋ, ಕ್ಷೀರಬಲಾ, ಕಾಮ್ಫೋಫ್ಲೋಜಿಸ್ಟಿನ್, ಯುಟೆರೀನಾ, ಇಂಕ್ಸ್

ಮೆನೆಜಿಂಗ್ ಡೈರೆಕ್ಟರ್—ವೆಂಕಟ್ರಾಯ ಅಜ್ಜಪ್ಪ ಬಾಳಿಗ

ಹೆಡ್ ಆಫೀಸು
ಉಡುಪಿ (ದಕ್ಷಿಣ ಹಿಂದೂಸ್ಥಾನ)

ಬ್ರೇಂಚ್ ಆಫೀಸು
ದೇವಕರಣ ಮೆನ್ಶನ್ಸ್, 45 ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ ನಂ. 2.

ಪಶ್ಚಿಮ ಕರಾವಳಿ ಮತ್ತು ಮೈಸೂರು ಪ್ರಾಂತ್ಯಗಳ ಪ್ರಾಮುಖ್ಯ ಏಜಂಟರು:—

ಕರ್ಣಾಟಕ ಪ್ರೊಡಕ್ಟ್ಸ್ ಡಿಸ್ಟ್ರಿಬ್ಯೂಟಿಂಗ್ ಕಂಪೆನಿ, ಮಂಗಳೂರು.

ಬಂಗಾಳ ಕೌನ್ಸಿಲಿನಲ್ಲಿ ನಡುರಾತ್ರಿಯ ಅಧಿವೇಶನ.

ಕಳೆದ ಶುಕ್ರವಾರ ಬಂಗಾಳ ಲೆಜಿಸ್ಲೇಟಿವ್ ಕೌನ್ಸಿಲಿನ ಅಧಿವೇಶನವು, ಭಯೋತ್ಪಾದಕರ ಮೂಲೋತ್ಪಾಟನಕ್ಕೆಂದು ರಚಿಸಲಾದ ಮಸೂದೆಯಲ್ಲಿ ಕೆಲವು ತಿದ್ದುಪಡಿಗಳನ್ನು ಮಾಡಲಿಕ್ಕೆಂದು, ನಡುರಾತ್ರಿಯ ತನಕ ನಡೆಯಿತು. ೪೦ ತಿದ್ದುಪಡಿಗಳು ಮುಂದೆ ಬಂದುವು; ಆದರೆ ಎಲ್ಲವೂ ಮಂಜೂರಾಗದೆ ಹೋದುವು.

ಕೆಲವು ಉಪಪ್ರಕರಣಗಳು ಹೊಸದಾಗಿ ಕೂಡಿಸಲ್ಪಟ್ಟುವು. 'ಬಿಲ್ಲು' ಮತ್ತೂ ಗಟ್ಟಿಯಾಯಿತು. ಕೂಡಿಕೆಯಾದ ಪ್ರಕರಣದಲ್ಲಿ ಇವೆರಡು ಮುಖ್ಯವೆನ್ನಬಹುದು:—

೧. ಈ ಮಸೂದೆಯಂತೆ ನೇಮಕವಾದ ಕಮೀಶನರುಗಳು, ಅಪಾದಿತರಿಂದ ತೆಗೆದುಕೊಂಡ ವಾಗ್ಮೂಲಗಳನ್ನು ಟೈಪಿಸ್ಟು ಯಾ ಕರಣೀಕರುಗಳಿಗೆ ಹೇಳಿ ಅವರಿಂದ ಬರೆಸಿ, ಹಾಗೆ ಅವರು ಬರೆದುಕೊಂಡುದನ್ನು ತಪ್ಪುಗಳಿದ್ದರೆ ತಿದ್ದಿ ತರುವರು; ಅದು 'ದಾಖಲೆ'ಯಾಗುವುದು. ಹೀಗೆ ಪೂರೈಸಿದ ದಾಖಲೆಯನ್ನು ಪುನಃ ತಿದ್ದುಪಡಿಗೊಳಪಡಿಸಬೇಕಾಗಿಲ್ಲ.''

೨. ಯಾವನೊಬ್ಬ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟನು, ತನ್ನ ಆಡಳಿತದೊಳಗಿನ ಪ್ರದೇಶದಲ್ಲಿ ತಾತ್ಕಾಲಿಕ ನಿವಾಸ ಮಾಡಿಕೊಂಡ, ಇಪ್ಪತ್ತೊಂದು ವಯಸ್ಸಿನೊಳಗಣ ಮತ್ತು ಭಯೋತ್ಪಾದಕರೊಡನೆ ಸಂಬಂಧವಿಟ್ಟುಕೊಂಡಿರುವುದೆಂಬ ಸಂದೇಹವುಳ್ಳ ಯುವಕನನ್ನು ಹಕೋಟಿಯಲ್ಲಿರುವಂತೆ ಅತನ ರಕ್ಷಕರಿಗೆ ಬರಹ ಮೂಲಕ,—ಹುಡುಗನು ಜಿಲ್ಲೆಯ ಇಂತಹ ಭಾಗದಲ್ಲಿ ಮಾತ್ರ ಇದ್ದುಕೊಳ್ಳುವಂತೆ ಪ್ರತಿಬಂಧಿಸಲು—ಎಚ್ಚರಿಕೆ ಯಾ ಅಪ್ಪಣೆ ಕೊಡಬಹುದು. ಇದು, ಆ ಹುಡುಗನನ್ನು ಭಯೋತ್ಪಾದಕರೊಂದಿಗೆ ಸೇರಿ ಕೆಟ್ಟು ಹೋಗದಂತೆ ತಡೆಯುದುವ ಉದ್ದೇಶದಿಂದಾಗಿದೆ. ಅಂತಹ ಪ್ರತಿಬಂಧವು ಅವಿಧೇಯತನದಿಂದ ದೂಷಿತವಾಗದಂತೆ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರು ಆ ಹುಡುಗನನ್ನು ವಾರಂಟಿಲ್ಲದೆ ಕೈದು ಮಾಡಿಸಬಹುದು; ಅಂತಹ ಕೈದನ್ನು ಯಾವ ಸ್ಥಳದಲ್ಲೂ ಯಾವ ಪೋಲೀಸನಿಂದಲೂ ಅಥವಾ ಸ್ವೀಯ ಸರಕಾರದ ಇತರ ಯಾವ ಅಧೀನರಿಂದಲೂ ಮಾಡಿಸಬಹುದು. ಇಂತಹ ಹುಡುಗನ ಪ್ರಾಯವು ೨೧ ದಾಟುತ್ತಲೇ ಅನಂತರವೂ ಆರು ತಿಂಗಳ ತನಕ ಅತನ ಮೇಲೆ ಡಿ. ಮ್ಯಾಗಳ ಅಧಿಕಾರವು ಜಾರಿಯಲ್ಲಿರಬಹುದು. ಈ ಪ್ರಕರಣದಲ್ಲಿ ಹುಡುಗನ 'ರಕ್ಷಕ' ಎಂಬ ಶಬ್ದವು, ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರ ಅಭಿಪ್ರಾಯಕ್ಕನುಸಾರವಾಗಿ,—ಆ ಹುಡುಗನ ಮೇಲೆ ಆ ಸಮಯದಲ್ಲಿ ಯಾರ ಅಧಿಕಾರವೂ ಹತೋಟಿ ಇತ್ತೋ ಅತನಿಗೆ ಸಂಬಂಧಿಸುತ್ತದೆ. (ಕೆಲ ಸಂದರ್ಭಗಳಲ್ಲಿ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರೇ 'ರಕ್ಷಕ'ರು!)

ಈ ಪ್ರಕರಣಗಳೆರಡಕ್ಕೂ ವಿರೋಧಾಭಿಪ್ರಾಯವಿದ್ದರೂ, ಅನುಕೂಲ ಮತಗಳು ಹೆಚ್ಚಿದ್ದ ಕಾರಣ ಸುಲಭವಾಗಿ ಮಂಜೂರಾದುವು.

ಇಂತಿವು ಮಧ್ಯರಾತ್ರಿಯ ತೀರ್ಮಾನಗಳು!

ಮದರಾಸು ಕೌನ್ಸಿಲ್ ವಾರ್ತೆಗಳು.

ಈ ಬಾರಿಯ ಮದ್ರಾಸ್ ಕೌನ್ಸಿಲಿನ ಅಧಿವೇಶನದಲ್ಲೂ, ಭೂಕಂದಾಯ ಮಾಫಿ ವಿಚಾರದಲ್ಲಿ ಸರಕಾರದ ಧೋರಣೆ ಇತ್ಯಾದಿಗಳ ವಾದ-ವಿವಾದಗಳ ವಿಷಯಗಳು ಇದ್ದಂತೆ, ಇತರ ಕೆಲವು ಮಹತ್ವದ ವಿಷಯಗಳೂ ಚರ್ಚಿಸಲ್ಪಟ್ಟುವು. ಆದರೆ, ಪ್ರತಿಯೊಂದು ಬಾರಿ ನಡೆವಂತೆ, ಆಶಾಜನಕ ತೀರ್ಮಾನಗಳಾವುವೂ ಆಗಲಿಲ್ಲವೆನ್ನಬಹುದು.

ಶ್ರೀ ಸುಬ್ರಹ್ಮಣ್ಯ ಭಟ್ಟರು, (ಅ) ದಕ್ಷಿಣ ಕನ್ನಡದಲ್ಲಿ ಬಂದೂಕು ಮದ್ದನ್ನು ಕೊಂಡುಕೊಳ್ಳಲಿಲ್ಲವೆಂಬ ಸಬಬಿನಿಂದಲೇ ಬಂದೂಕು ಲೈಸನ್ಸ್‌ಗಳು ವಜಾ ಮಾಡಲ್ಪಟ್ಟದ್ದು ನಿಜವೇ? ಅವುಗಳ ಸಂಖ್ಯೆಯೆಷ್ಟು? (ಆ) ಹಾಗೆ ಮಾಡುವ ಮೊದಲು ಲೈಸನ್ಸ್‌ದಾರರ ಹೇಳಿಕೆಯೇನೆಂದು ಸರಕಾರವು ಕೇಳಿತ್ತೇ? (ಇ) ಹೀಗೆ ಸರಕಾರವೇ ಅಪ್ಪಣೆ ಮಾಡಿತೇ? (ಈ) ಜಮಾಬಂದಿ ಕಾಲದಲ್ಲಿ ಪುತ್ತೂರಿನ ಜನರು ಹಾಗೆ ದೂರು ಕೊಟ್ಟರೇ? ಮೊದಲಾಗಿ ಕೇಳಲು,—ಮೊದಲಿನ ಮೂರು ಪ್ರಶ್ನೆಗಳ ವಿಷಯವಾಗಿ "ಸರಕಾರಕ್ಕೆ ತಿಳಿದಿಲ್ಲ; ವಿಚಾರಿಸಲಾಗುವುದು.'' ಎಂದೂ; ಕೊನೆಯ ಪ್ರಶ್ನೆಯ ವಿಚಾರವಾಗಿ ಕಲೆಕ್ಟರರಿಗೆ ಸರಕಾರವು ಹಾಗೆ ಅಪ್ಪಣೆ ಕೊಟ್ಟಿರಲಿಲ್ಲವೆಂದೂ ಉತ್ತರವಾಯಿತು.

ಮುಂದೆ ಗನ್ ಬೋಟ್ ಜೇಕರ ವಿಚಾರವೂ ಬಂತು! ಶ್ರೀ ಭಟ್ಟರೇ ಕೇಳಿದರು:—"ಗನ್ ಬೋಟ್ ಜೇಕರ ಆಟದ ರಂಗದಲ್ಲಿ ಜೂಜಾಟ ನಡೆಯುತ್ತಿರುವುದೆಂದು ಪೋಲೀಸರು ಕಲೆಕ್ಟರರಿಗೆ ಯಾ ಸರಕಾರಕ್ಕೆ ವರದಿ ಬರೆದುಕೊಂಡುದು ನಿಜವೇ? ಆಟದಲ್ಲಿ ಜೂಜಾಟವಿದೆಯೆಂಬ ಕಾರಣದಿಂದ ಕಲೆಕ್ಟರರು ಲೈಸನ್ಸ್ ಕೊಡಲಿಕ್ಕೆ ಒಪ್ಪಿಕೊಂಡಿಲ್ಲದುದು ನಿಜವೇ? ಆದರೆ, ಆಕ್ಷೇಪಣೆಯಿದ್ದರೂ ಸ್ಥಳೀಯ ಸರಕಾರವು ಲೈಸನ್ಸ್ ಕೊಟ್ಟುದು ನಿಜವೇ? ಪೋಲೀಸರ ವರದಿ, ಕಲೆಕ್ಟರರ ಉತ್ತರ ಇತ್ಯಾದಿಗಳ ಕುರಿತಾದ ಪತ್ರವ್ಯವಹಾರವನ್ನು ಗೃಹಮಂತ್ರಿಗಳು ಇಲ್ಲಿ ಮುಂದಿರಿಸುವರೇ?

ಗೃಹಮಂತ್ರಿಗಳ ಉತ್ತರವು ಸಿದ್ಧ:—"ಕಲೆಕ್ಟರರಿಗೆ ಪೋಲೀಸರು ವರದಿ ಬರೆದುಕೊಂಡುದರ ವಿಚಾರವು ಸರಕಾರಕ್ಕೆ ತಿಳಿದಿಲ್ಲ; ಲೈಸನ್ಸ್ ಕೊಡುವವರು ಮುನಿಸಿಪಲ್ ಚೆಯರ್ಮೆನರಲ್ಲದೆ ಕಲೆಕ್ಟರರಲ್ಲ; ಸರಕಾರವು ಲೈಸನ್ಸ್ ಮಂಜೂರು ಮಾಡಿಲ್ಲ; ಸಂಚಾರದಲ್ಲಿರುವ ಸರ್ಕಸ್ ಮತ್ತು ಇತರ ಆಟಗಳ ವಿಷಯವಾಗಿ ಸರಕಾರವು ಪೋಲೀಸ್ ಕಮಿಶನರರಿಗೂ ಜಿಲ್ಲಾ ಮೆಜಿಸ್ಟ್ರೇಟರುಗಳಿಗೂ ಅಜ್ಞಾಪನೆಗಳನ್ನು ಕೊಟ್ಟಿದೆ; ಪತ್ರವ್ಯವಹಾರವನ್ನು ಮುಂದೆ ತರಲಾಗುವುದಿಲ್ಲ.''

ಮತ್ತೊಂದು ಪ್ರಶ್ನೆಗೆ ಉತ್ತರವಾಗಿ ಗೃಹಮಂತ್ರಿಗಳು, "ಆಟಗಳಲ್ಲಿ ಜೂಜಾಟದ ಚಿಹ್ನೆಯಿದ್ದರೆ ಅದಕ್ಕೆ ಪ್ರೋತ್ಸಾಹ ದೊರೆಯುವಂತೆ ಸರಕಾರದ ವ್ಯವಸ್ಥೆಯಿದೆ'' ಎಂದರು.

"ಆದರೂ, ಅಂತಹ ಜೂಜಾಟಗಳು ನಡೆದೇ ಇವೆಯಲ್ಲ!'' ಎಂದು ಮೆಂಬರರೆನ್ನಲು,—"ಆ ವಿಚಾರವಾಗಿ ಕಮಿಶನರರೊಡನೆ ವರದಿ ಕೇಳಿರುವೆವು'' ಎಂದರು, ಗೃಹಮಂತ್ರಿಗಳು.

"ಅಂತಹ ಜೂಜಾಟಗಳು ನಡೆದ ಸ್ಥಳಗಳಿಂದಲೇ ವರದಿಗಳನ್ನು ತರಿಸುವರೇ'' ಎಂದು ಶ್ರೀ ಸುಬ್ರಹ್ಮಣ್ಯ ಭಟ್ಟರು ಕೇಳಿದುದಕ್ಕೆ, "ಅಗತ್ಯವಾಗಿ!'' ಎಂದರು ಗೃಹಮಂತ್ರಿಗಳು.

ಆ ನಂತರ, ತಂಜಾವೂರಿನ ನೀರಾವರಿ ಕಾಮಗಾರಿಗಳ ವಿಚಾರ, ಕೌನ್ಸಿಲಿನ ಅಧಿವೇಶನಗಳ ದಿನನಿತ್ಯದ ಅವಧಿಯ ವಿಚಾರಗಳಾದುವು; ಸೂಳೆಗಾರಿಕೆಯ ಕುರಿತಾದ ಮಸೂದೆಯ ತಿದ್ದುಪಡಿಗಳಾದುವು; ವಿನೋದಗಳ ಮೇಲಿನ ತೆಂಗೆಯ ಮಸೂದೆಯ ಕೆಲ ಸಾಮಾನ್ಯ ತಿದ್ದುಪಡಿಗಳೂ ಮಂಜೂರಾದುವು.

ತಾ. ೧೦-೩-೩೪ರ ಅಧಿವೇಶನದಲ್ಲಿ ಸರಕಾರವು ಭೂಕಂದಾಯ ಕಾರ್ಯ ನಿರ್ವಹಣದ ವಿಭಾಗದಲ್ಲಿ ರೂ. ೧೮,೨೪,೮೦೦ಕ್ಕೆ ಮಂಜೂರಾತಿ ಕೇಳಲು, ಶ್ರೀ ಟಿ. ಎ. ರಾಮಲಿಂಗ ಚೆಟ್ಟಿಯವರು ಭೂಕಂದಾಯ ವಿಚಾರದಲ್ಲಿ ಸರಕಾರದ ಧೋರಣೆಯನ್ನು ಟೀಕಿಸಿ, ನಿಷೇಧಾರ್ಥ ರೂ. ೧೦೦ರ ಕಡಿತಾಯವನ್ನು ಸೂಚಿಸಲು, ಅದು ಮಂಜೂರಾಗಿ, ಸರಕಾರವು ಅಪಜಯ ಹೊಂದಿತು.

ಭೂಕಂದಾಯದಲ್ಲಿ ಸೇಕಡಾ ೨೫ರಷ್ಟು ರಿಯಾಯತಿಯಿರಬೇಕೆಂದು ಜನರ ಕೇಳಿಕೆ; ಸೇಕಡಾ ೧೮॥ರ ರಿಯಾಯತಿಯಾಗಬಹುದೆಂದು ಅರ್ಥ ಸಮಿತಿಯ ಶಿಫಾರಸು; ಆದರೆ, ಎರಡನ್ನೂ ಸ್ವೀಕರಿಸಲಾರದೆ ಸರಕಾರವು ಸೇಕಡಾ ೧೨॥ರ ರಿಯಾಯತಿ ಸಾರಿತ್ತು.

ಗೋದ್ರೆಜ್ ಸಾಬೂನುಗಳಿಗೆ

ಅಮೂಲ್ಯವೂ ಹೊಸತೂ ಆದ ಪ್ರಶಸ್ತಿ

ಡಾ। ಎಂ. ಎ. ಅನ್ಸಾರಿ, ಎಂ. ಡಿ.

(ಅಖಿಲ ಭಾರತ ಕಾಂಗ್ರೆಸ್ಸಿನ ಮಾಜಿ ಅಧ್ಯಕ್ಷರು)

ಗೋದ್ರೆಜ್ ಸಾಬೂನುಗಳ ಉತ್ಕೃಷ್ಟ ಗುಣಗಳನ್ನು ಕಂಡು ನಾನು ಸಂತೋಷದಿಂದ ಮೆಚ್ಚಿದವನಾಗಿರುತ್ತೇನೆ. ಕಳೆದ ಹತ್ತು ವರ್ಷಗಳಿಂದ ಸ್ನಾನವುಗಳನ್ನು ಉಪಯೋಗಿಸುತ್ತಿರುವೆನು. ಯುರೋಪಿನದಲ್ಲಾಗಲೀ ಇನ್ನಿತರ ಯಾವ ದೇಶದಲ್ಲಾಗಲೀ ತಯಾರಿಸಲ್ಪಟ್ಟ ಸಾಬೂನುಗಳಿಗಿಂತ ಇವು ಅತ್ಯುತ್ಕೃಷ್ಟವೆಂದೇ ನನ್ನ ಅನುಭವದ ಮಾತು. ಅವುಗಳ ಉತ್ಕೃಷ್ಟತೆಯ ದೃಷ್ಟಿಯಿಂದಲೂ, ಅಲ್ಲದೆ ಅವು ಹಿಂದೂದೇಶದಲ್ಲೇ ಸಿದ್ಧಗೊಳಿಸಲ್ಪಟ್ಟವೆಂಬ ದೃಷ್ಟಿಯಿಂದಲೂ ಸ್ನಾನವುಗಳನ್ನು ಹಿಂದೀಯ ಜನತೆಗೆ ಶಿಫಾರಸು ಮಾಡುತ್ತೇನೆ''

ಪ್ರಮುಖ ಡಾಕ್ಟರೂ ಮತ್ತು ಪ್ರಮುಖ ರಾಷ್ಟ್ರೀಯ ಧುರೀಣರೂ ಆದ ಡಾ। ಅನ್ಸಾರಿಯವರ ಹೇಳಿಕೆಯು ಪ್ರತಿಯೊಬ್ಬ ವ್ಯಕ್ತಿಯ ಮತ್ತು ಪ್ರತಿಯೊಂದು ರಾಷ್ಟ್ರದ ದೈಹಿಕ ದೃಷ್ಟಿ ಮತ್ತು ರಾಷ್ಟ್ರೀಯ ದೃಷ್ಟಿಯಿಂದ ಸಹಾಯಕರವಾಗಬೇಕು.

Jaya Bharatham Co., P. B. No. 83. MADRAS.

ಜಯ ಭಾರತಂ ಕೋ., ಪೆ. ಬಿ. ೮೩, ಮದ್ರಾಸು.

ದ. ಕ. ಜಿಲ್ಲೆಗೆ ಏಜಂಟರು:—ಎಸ್. ಆ ಬಂಗೇರಾ ಮಿಶ್ಯನ್ ಕಂಪೌಂಡು, ಕಾಸರಗೋಡು.

ಬಹು ಕಾಲದ ಆವಶ್ಯಕತೆಗೆ



ಸಣ್ಣ ಕಬ್ಬಿನ ತೋಟದವರು ಸಣ್ಣ ರೀತಿಯಿಂದ ಸಕ್ಕರೆ ತಯಾರಿಸಲು ಯೋಗ್ಯ ರೀತಿಯ ಯಂತ್ರವು ಬೇಕೆಂದು ಬಹು ಕಾಲದ ಆವಶ್ಯಕತೆಯಲ್ಲಿದ್ದರು. ನಿಮಗೆ ಬೇಕಾದುದು ಇಲ್ಲೇ ಇದೆ.

ಕಿರ್ಲೋಸ್ಕರ ಶುಗರ್ ಸೆಂಟ್ರಿಫ್ಯುಗಲ್

ಎಂಬುದು ಆಧುನಿಕ ಮತ್ತು ಅತ್ಯುತ್ಕೃಷ್ಟ ಸಾಧನಗಳಿಂದೊಡಗೂಡಿ ಸಕ್ಕರೆ ತಯಾರಿಸಲು ಸುಲಭ ಯಂತ್ರವಾಗಿದೆ. ಸಣ್ಣ ಧಂದವಾಳದಲ್ಲಿ ಹೆಚ್ಚಿನ ಲಾಭವನ್ನು ಕೊಡುತ್ತದೆ. ವಿವರಗಳಿಗೆ:—ಕಿರ್ಲೋಸ್ಕರ್ ಬ್ರದರ್ಸ್ ಲಿಮಿಟೆಡ್ ಕಿರ್ಲೋಸ್ಕರ್‌ವಾಡಿ (ಸತಾರ ಜಿಲ್ಲಾ) ಇಲ್ಲಿಗೆ ಬರೆಯಿರಿ.

ಸ್ಟೋಕಿಸ್ಟ್ಸ್:—ಬಾಸೆಲ್ ಮಿಶನ್ ಟೈಲ್ ವರ್ಕ್ಸ್ ಎಂಡ್ ಟ್ರೇಡ್ಸ್ ಡಿಪೋಜಿಟರಿ ಕೋ., ಮಂಗಳೂರು.

WE HOLD IN STOCK OF

English into Kanarese Teacher
Hindi into Kanarese Teacher
Marathi into Kanarese Teacher
Marathi into Gujarathi Teacher

Novels and well known Dramas in Hindi and all sorts of books for Schools and Colleges.

Wanted Agents and Canvassors throughout Karnatak districts.

Apply for full particulars with 1½ Annas Stamp:—

THE MANAGER
The National Kanara News Agency,
SIR PHIROJSHA METHA ROAD,
Fort Bombay.

ವಿವಿಧ ವಿಷಯ.

ಕೆಲವು ಅಂಕೆಸಂಖ್ಯೆಗಳು.

ನಮ್ಮ ಸರಕಾರವು ಕಳೆದ ೪ ವರ್ಷಗಳಲ್ಲಿ ಮಿಲಿಟರಿ ವೆಚ್ಚವನ್ನು ಸುಮಾರು ೧೦ ಕೋಟಿ ೬೨ ಲಕ್ಷದಷ್ಟು ಕಡಿಮೆಮಾಡಿದೆ. ೧೯೩೨–೩೩ರಲ್ಲಿ ರೂ. ೫೫ ಕೋಟಿ ಮತ್ತು ೧೦ ಲಕ್ಷದಷ್ಟು ವೆಚ್ಚ ಮಾಡಿತ್ತು; ಆಗಿನ ವರ್ಷ ಕೇವಲ ೪೪ ಕೋಟಿ ಮತ್ತು ೪೭ ಲಕ್ಷ. ಬರುವ ವರ್ಷ ೪೭ ಕೋಟಿ ೪೮ ಲಕ್ಷ ವೆಚ್ಚ ಮಾಡಬೇಕೆಂದು ನಿರ್ಧರಿಸಿದೆ.

ಹಳೇ ದೇವಾಲಯದ ಶೋಧ.

ಅಲ್ಲಪ್ಪೆಯ ಬಳಿ, ಪನಂಗಾಡ ಎಂಬಲ್ಲಿ ಒಂದು ಕಾಡನ್ನು ಕಡಿಯುತ್ತಿರುವಾಗ ಒಂದು ಪುರಾತನ ದೇವಾಲಯವು ಗೋಚರವಾಗಿದೆ. ದೇವಾಲಯದೊಳಗೆ ಶಿವ ವಿಗ್ರಹವಿದೆ. ಬಳಿಯಲ್ಲೊಂದು ಬತ್ತಿಹೋದ ಕೊಳವೂ ಇದೆ. ೮೦ ವಯಸ್ಸಿನವರೂ ಕೂಡ ಆ ಸ್ಥಳದಲ್ಲಿ ದೇವಾಲಯವಿತ್ತೆಂಬ ವಿಚಾರವನ್ನರಿಯರು. ಇದರ ಜೀರ್ಣೋದ್ಧಾರ ಮಾಡಿಸಿ ಎಲ್ಲ ಹಿಂದೂಗಳಿಗೂ ಪ್ರವೇಶ ಕೊಡಬೇಕೆಂದು ಈಗ ಪ್ರಯತ್ನಗಳಾಗುತ್ತಿವೆ.

ಆಗುತ್ತಾ ಇದೆ.

ಯುದ್ಧದ ಭಯವು ದಿನೇ ದಿನೇ ಹೆಚ್ಚುತ್ತಿರುವಾಗ ಅಲ್ಲಲ್ಲಿ ಸಿದ್ಧವಾಗುವ ಸಮರ ಸಾಹಿತ್ಯಗಳ ವಾರ್ತೆಗಳು ಪಠಮುಖ್ಯವಾಗಿ ಬರುತ್ತಿವೆ. ಶೆಫೀಲ್ಡ್ ಶಸ್ತ್ರಸಿದ್ಧತೆಯ ಕೇಂದ್ರದಲ್ಲಿ ಬಹು ಅವಸರದಿಂದಲೂ ಆತುರದಿಂದಲೂ ಕೆಲಸವು ನಡೆಯುತ್ತಾ ಇದೆ. ಅಲ್ಲಿ ತಯಾರಾಗುತ್ತಿರುವ ಸಾಮಗ್ರಿಗಳು ಯಾವ ರಾಷ್ಟ್ರಕ್ಕೆ ಕಳುಹುತ್ತಿದೆಯೆಂದು ಯಜಮಾನರುಗಳಲ್ಲದೆ ಮತ್ತಾರಿಗೂ ತಿಳಿಯುವಂತಿಲ್ಲ. ಎಲ್ಲ ಶಸ್ತ್ರಗಳೂ ರಹಸ್ಯವಾಗಿಯೇ ಸಿದ್ಧವಾಗುತ್ತಿವೆ. ರಾತ್ರಿಂದಿನವೂ ಗಾರ್ಡರು ಗೇಟು ಬಿಡುವುದಿಲ್ಲ. ಸರಕಾರಿ ಇನ್ಸ್‌ಪೆಕ್ಟರರು ಸಾಮಗ್ರಿಗಳನ್ನು ಜಾಗ್ರತೆಯಿಂದ ಕಾವಲು ನೋಡುತ್ತಿರುವರು. ೩೦ ಪೌಂಡು, ಒಂದು ಟನ್ ಭಾರದ ಬೊಂಬುಗಳು ಸಿದ್ಧವಾಗುತ್ತಿವೆಯೆಂದೂ, ಸಂಕಗಳ ಮೇಲಾಗಲೀ, ಗುಡ್ಡಗಳ ಮೇಲಾಗಲೀ ನಿಂತು ಭಾವಚಿತ್ರ ತೆಗೆಯಬಾರದೆಂದು ಆಜ್ಞೆಯಾಗಿದೆಯೆಂದೂ ಡೈಲಿ ಹೆರಾಲ್ಡ್ ಪತ್ರಿಕೆಯ ಪ್ರತಿನಿಧಿಯೊಬ್ಬನ ಪ್ರಕಟಿಸಿಯುರುತ್ತದೆ.

ಸಂಸ್ಥಾನಿಕ ರೈಲ್ವೆಯಲ್ಲಿ ಹಿಂದೀಯರೆಷ್ಟು?

೧೯೩೩–೩೪ನೇ ವರುಷದಲ್ಲಿ ಸಂಸ್ಥಾನಿಕ ರೈಲ್ವೆಗಳಲ್ಲಿ ಹಿಂದೀಯರಿಗೆಷ್ಟು ಸ್ಥಾನಗಳು ಹೆಚ್ಚಿದ್ದುವೋ ಅದು ಪ್ರಕಟವಾಗಿದೆ. ಇನ್ನೂ ಅನ್ಯಾಯವೆತ್ತ? ರೂಪಾಯಿ ಕಲದಿನ ೫೬೭೫ ಸ್ಥಾನಗಳಲ್ಲಿ ೩೩೫೫ ಸ್ಥಾನಗಳು ಆಂಗ್ಲೋ ಇಂಡಿಯನರಿಗೆ; ೧೯೫೩ ಸ್ಥಾನಗಳು ಯುರೋಪಿಯನರಿಗೆ! ಇತರ ಕಂಪೆನಿ ಅಧೀನದ ರೈಲ್ವೆಗಳಲ್ಲಿ ಅದೇ ಕಲದಿನ ೨೬೮೪ ಸ್ಥಾನಗಳಲ್ಲಿ ೫೧೩ ಸ್ಥಾನಗಳು ಯುರೋಪಿಯನರಿಗೆ; ೧೧೬೫ ಸ್ಥಾನಗಳು ಆಂಗ್ಲೋ ಇಂಡಿಯನರಿಗೆ! ಹಿಂದೀಯ ಕೆಲಸಗಾರರಿಗಿಂತ ಆಂಗ್ಲೋ ಇಂಡಿಯನ್ ಹಾಗೂ ಯುರೋಪಿಯ ನೌಕರರಿಗೆ ಸೌಕರ್ಯ-ಅನುಕೂಲತೆಗಳು ಹೆಚ್ಚು. ರೈಲ್ವೆ ನೌಕರರ ಮಕ್ಕಳಿಗಾಗಿರುವ ಶಾಲೆಗಳಲ್ಲಿ,—ಆಂಗ್ಲೋ ಇಂಡಿಯನರ ಒಂದು ಶಾಲೆಗೆ ಹಿಂದೀಯರ ಬಗ್ಗಾಗಿರುವ ಎಲ್ಲ ಶಾಲೆಗಳಷ್ಟು ವೆಚ್ಚ! ಅಸ್ಪೃಶ್ಯತೆಯ ವಿಚಾರದಲ್ಲೂ ಇಂತಹ ಪಕ್ಷಪಾತ ನಡೆದಿದೆಯಾಗಿ ದೂರು!

ಹೊಸ ವಿಮಾನ!

ಬ್ರಿಟನಿನಲ್ಲಿ ಇತ್ತಲಾಗೆ ಹೊಸ ವಿಮಾನವೊಂದು ಸಿದ್ಧವಾಗಿದೆ. ಒಂಭತ್ತು ಮಿನಿಟುಗಳಲ್ಲಿ ಇದು ೨೦,೦೦೦ ಅಡಿಗಳನ್ನು ಎರಡು ಮೆಶಿನ್‌ಗನ್ನುಗಳ ಸಹಿತ ಏರಬಹುದು! "ಎಂತಹ ವೈರಿಯೂ ನಮ್ಮ ದಳವನ್ನು ಸೇರಿದನೆಂದು ತಿಳಿದುಬಂದ ಎಷ್ಟು ನಿಮಿಷಗಳಲ್ಲಿ ನಾವು ಅವರನ್ನು ಎದುರಿಸಲು ಈಗ ಸಿದ್ಧರಿರುವೆವು" ಎಂದು ಅದರ ಕಪ್ತಾನನ ಅಭಿಪ್ರಾಯ. ಇಂತಹ ವಿಮಾನದ ರಚನೆಯ ವಾರ್ತೆಯು ಹೌಸ್ ಆಫ್ ಕಾಮನ್ಸ್‌ನಲ್ಲಿ ಕೆಪ್ಟನ್ ಕನ್ನಿಂಗ್‌ಹೇವ್ ರೀಡರ ಮೂಲಕ ಪ್ರಕಟವಾಯಿತು.

ರೂಪಾಯಿಗೆ ಮೂರು ವರ್ಷ!

ಕಲ್ಕತ್ತೆಯ ಶೇಕ್ ಗುಲಾಮ್ ಹುಸ್ಸೇನನೆಂಬವನು ಹಳೇ ಅಪರಾಧಿ; ಒಂದು ಸರ್ಕಸ್ ಥೇಟರಿಯ ಬಳಿ ಚಿತ್ರದೊಂದು ಆಟವಾಡಿದನು. ಅಂದರೆ, ಒಬ್ಬ ಬಂಗಾಳಿ ಗೃಹಸ್ಥನ ಕಿಸೆಗೆ ಕೈಹಾಕಿ ರೂ. ೨೧ನ್ನು ಅದ್ದುಬಿಟ್ಟನು. ಗೃಹಸ್ಥನಿಗೆ ತಿಳಿಯುವಷ್ಟು ಬಹಿರಂಗವಾಗಿ ಕದಿಯಬೇಕೇ! ಮೆಜಿಸ್ಟ್ರೇಟರ ಮುಂದೆ ಹುಸ್ಸೇನನನ್ನು ಹಾಜರುಪಡಿಸಿದುದಾಯಿತು. ಶಿಕ್ಷೆ ಇಷ್ಟೇ,—೩ ವರ್ಷಕ್ಕೆ ಸಶ್ರಮ!

ಪ್ರಭುಗಳ ದರ್ಬಾರು.

ಅಲ್ವಾರ್ ಪ್ರಭುಗಳು ತಮ್ಮ ಉಡುಪನ್ನು ಹೊಲಿಸಲು ಲಂಡನಿನಿಂದ ದರ್ಜಿಯನ್ನು ಕರೆಸಿದ್ದಾರೆ. ಜೋಧಪುರದ ಮಹಾರಾಜರಿಗೆ ರಾಜಧಾನಿಯಲ್ಲಿ ಹೊಸ ಅರಮನೆ ಕಟ್ಟುವ ಬಗ್ಗೆಯೂ ಲಂಡನಿನ ಶಿಲ್ಪಿಯೇ ಬೇಕಾದನು.

ಭಾವೀ ಪ್ರಧಾನರು ಆಗಾಖಾನರಂತೆ!

ಇಂಡಿಯದ ಭಾವೀ ಸಮ್ಮೇಳ (Federal) ರಾಜ್ಯಭಾರದಲ್ಲಿ ಆಗಾಖಾನರು ಮುಖ್ಯ ಸಚಿವರ ಸ್ಥಾನವನ್ನಲಂಕರಿಸಬಹುದೆಂದು ಸುದ್ದಿ. ಪ್ರಾಪ್ತಪುರುಷರು!

ಪ್ರಚಲಿತಸಮಾಚಾರ.

ಮುಸ್ಲಿಮ ಸ್ತ್ರೀಯ ಚುನಾವಣೆ.

ಪೆಶಾವರಿನ ಮುನಿಸಿಪಾಲಿಟಿಯ ವೈಸ್ ಚೇರ್‌ಮನರಾದ ಖಾನ್ ಬಹದ್ದೂರ್ ಸಲಾಂ ಎಂಬವರ ಧರ್ಮಪತ್ನಿ ಅವೇನ ಖಟೂನ್ ಎಂಬವರು ಕೌನ್ಸಿಲ್ ಚುನಾವಣೆಗೆ ಉಮೇದ್ವಾರರಾಗಿ ನಿಂತಿರುವರು. ಅಲ್ಲಿಯ ಮಹಿಳಾ ಸಮಿತಿಯು ಅವರು ಜಯಪ್ರದರಾಗುವಂತೆ ಬಗೆಬಗೆಯ ಯೋಜನೆಗಳನ್ನು ಹೂಡಿ ಸ್ತ್ರೀಯ ಅದರಲ್ಲೂ ಮುಸ್ಲಿಮ ಮಹಿಳೆಯ ಸಾಹಸವನ್ನು ಪುರಸ್ಕರಿಸಿ, ಎಲ್ಲರೂ ವೋಟು ಕೊಟ್ಟು ಸಹಕರಿಸಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ. ಹಿಂದೂಗಳು ಹೆಚ್ಚಾಗಿರುವ ಈ ಪ್ರಾಂತ್ಯದಲ್ಲಿ ಈ ಮುಸ್ಲಿಮ ಮಹಿಳೆಯು ಗೆದ್ದರೆ ಎರಡು ಮತಗಳ ಐಕ್ಯಮತ್ಯಕ್ಕೆ ಬಹು ಪ್ರಯೋಜನವಿದೆಯೆಂದು ತಿಳಿಯಲಾಗಿದೆ.

ಭೂಕಂಪ ಪ್ರದೇಶದ ಕೆಲಸಗಾರರ ದಸ್ತಗಿರಿ!

ದಿಗ್ವಾವಿನ ಬಾಬು ರಾಮವಿನೋದ ಸಿಂಘ್ ಎಂಬವರು ಬಾಬು ರಾಜೇಂದ್ರ ಪ್ರಸಾದರೊಡಗೂಡಿ ಬಿಹಾರಿನ ಜನರ ಸಂಕಷ್ಟ ನಿವಾರಣಾರ್ಥವಾಗಿ ದುಡಿಯುತ್ತಿದ್ದರು. ಪಾರ್ಲಿಮೆಂಟ್ ಸದಸ್ಯರಾದ ಮಿ. ಎಚ್. ಜಿ. ಪೋಲ್ಲರವರು ಮೊನ್ನೆ ಭೂಕಂಪವಾದ ಪ್ರಾಂತ್ಯಗಳಲ್ಲಿ ಸಂಚಾರ ಮಾಡಿದಾಗ ಇವರು ಅವರಿಗೆ ಯಥೇಷ್ಟ ಸಹಾಯವನ್ನಿತ್ತರು. ಬಿಹಾರಿನ ಅನೇಕರಿಗೆ ಇವರಿಂದ ಬಹಳ ಸಹಾಯವಾಗುತಿತ್ತು. ಅಂತಹವರನ್ನು ಕ್ರಿಮಿನಲ್ ಟ್ರೈಬ್ಸ್ ಏಕ್ಟ್ ಮೇರೆಗೆ ಮೊನ್ನೆ ದಸ್ತಗಿರಿಮಾಡಿದರು.

ತಲೆಗೊಂದರಂತೆ ಮೋಟಾರು.

ಜರ್ಮನಿಯ ಹಿಟ್ಲರರು, ಮೋಟಾರು ಪ್ರದರ್ಶನವೊಂದರಲ್ಲಿ ಭಾಷಣ ಮಾಡುತ್ತ ಹೇಳಿದರು:—"ಪ್ರತಿಯೊಬ್ಬ ಜರ್ಮನನೂ ಒಂದೊಂದು ಮೋಟಾರು ಕೊಂಡುಕೊಳ್ಳಲಿ! ಇದರಿಂದ ನಿರುದ್ಯೋಗವು ಬಹು ಅಂಶ ಕಡಿಮೆಯಾಗುವುದು". ಜರ್ಮನಿಯಲ್ಲೀಗ ಐದು ಲಕ್ಷ ಮೋಟಾರುಗಳಿವೆಯಂತೆ. ಈ ಸಂಖ್ಯೆಯು ೬೦ ಲಕ್ಷವಾಗಬೇಕೆಂದು ಹಿಟ್ಲರರ ಬೋಧನೆ.

ಮದರಾಸು ಮಂತ್ರಿಗಳ ಪ್ರಯಾಣ ಖರ್ಚು.

ನಮ್ಮ ಮಂತ್ರಿಗಳ ಪ್ರಯಾಣ ಖರ್ಚುಗಳನ್ನು ಕೇಳಿದಿರಾ? ಎರಡು ಲಕ್ಷಕ್ಕೂ ಮಿಗಿಲಾದ ಸಂಖ್ಯೆ! ರೂಪಾಯಿ ೨,೦೬,೫೦೦ ಸಾಲದೆ ಸರಕಾರವು ಮತ್ತೂ ೧೧೦೦೦ ಹೆಚ್ಚಿಗೆ ಬೇಕಾಗುವುದೆಂದು ಕೇಳಿತು. ಅಂತು ಈ ವರುಷದ ಖಾವತ್ತು ರೂಪಾಯಿ ೨,೧೭,೫೦೦ ಎಂದಾಯಿತು! ಮಂತ್ರಿಗಳ ಪ್ರಯಾಣಗಳು ಹೆಚ್ಚಿಗೆ ಆದುವು ಸ್ಪೆಶಲ್ ರೈಲು ಬಂಡಿಗಳ ಅಧಿಕ ವ್ಯಯವೂ ಆಯಿತು. ಜೀಗಿದೆ ಸರಕಾರದ ಅಧಿಕಾರಿಗಳ ಮಿತವ್ಯಯದ ಧೋರಣೆ!

ಜರ್ಮನಿಯ ಕೈಗಾರಿಕೆಗಳ ಪ್ರಗತಿ.

ಜರ್ಮನಿಯ ಸರಕಾರವು ನಿರುದ್ಯೋಗ ಸಮಸ್ಯಾ ನಿವಾರಣೆಗಾಗಿ ಮಹಾ ಪ್ರಯತ್ನವನ್ನು ಕೈಕೊಂಡಿದೆಯೆಂದು, ಈ ವರ್ಷದ ಲೀಪ್‌ಜಿಗ್ ಮಹಾ ಪ್ರದರ್ಶನವನ್ನು ತೆರೆಯುತ್ತ ಅಲ್ಲಿಯ ಪ್ರಚಾರಶಾಖಾಮಂತ್ರಿಗಳಾದ ಗೋಬೆಲ್ಸರವರು ತಿಳಿಸಿದರು. ೧೯೩೩ನೇ ವರ್ಷದ ಆರಂಭದಲ್ಲಿ ಸುಮಾರು ೬ ಮಿಲ್ಲಿಯನು ಜನರು ನಿರುದ್ಯೋಗಿಗಳಾಗಿದ್ದರು. ಈ ವರ್ಷ ಬರೇ ೩½ ಮಿಲ್ಲಿಯು. ಬರುವ ವರ್ಷ ಮತ್ತೂ ಎರಡು ಮಿಲ್ಲಿಯ ಮಂದಿಗೆ ಉದ್ಯೋಗ ಕೊಡುವಂತಾಗುವುದೆಂದೂ ಸಾರಿದರು. ಕಾರಣ, ನಿರುದ್ಯೋಗನಿವಾರಣೆಗಾಗಿ ಸರಕಾರವು ಮತ್ತೊಂದು ಯೋಜನೆಯನ್ನು ಕೈಕೊಳ್ಳಲಿದೆ. ದಿವಾಳಿಗಳು ೧೯೩೩ರಲ್ಲಿ ನೂರಕ್ಕೆ ೪೬ರಂತೆ ಕಡಿಮೆಯಾದುವು. ೧೯೩೨ರಲ್ಲಿ ಇದ್ದುದಕ್ಕಿಂತ ೧೯೩೩ರಲ್ಲಿ ನೂರಕ್ಕೆ ೧೨ರಷ್ಟು ಹೆಚ್ಚು ಸರಕುಗಳು ಉತ್ಪತ್ತಿಯಾದುವು. ಯಂತ್ರೋದ್ಯಮಗಳ ವ್ಯಾಪಾರವು ೧೪೦ ಮಿಲ್ಲಿಯ "ಮಾರ್ಕ್"ಗಳಷ್ಟು ಹೆಚ್ಚಿತು. ಮೋಟಾರಿನ ಕೈಗಾರಿಕೆಯೂ ನೂರಕ್ಕೆ ೧೨೦ರಷ್ಟು ವೃದ್ಧಿಹೊಂದಿದೆ.

ಜಪಾನಿನ 'ಆತ್ಮರಕ್ಷಣೆ'.

ಜಪಾನಿಗೂ ಕಳವಳ! ತನ್ನ ಸರಕುಗಳು ಪ್ರಪಂಚದಲ್ಲೆಲ್ಲ ಹರಡುತ್ತಿರುವಾಗ, ಅನ್ಯರಗಳ ಪಾರಂಟಿಪ ಹಾವಳಿಯನ್ನು ವಿರೋಧಿಸಲು ಎಲ್ಲಾ ಜನಾಂಗಗಳೂ ಉಪಾಯಗಳನ್ನು ಕಂಡುಕೊಳ್ಳುತ್ತಿವೆ. ತಾನೂ ಹಾಗೆಮಾಡಬಾರದೇಕೆನ್ನುತ್ತ,—ಜಪಾನಿನಿಂದ ಹೊರಗಣ ದೇಶಕ್ಕೆ ಹೋಗುವ, ಕೆಲವು ಸರಕುಗಳ ರಫ್ತನ್ನು ತಡೆಯಲೂ ಆಮದುಗಳ ಮೇಲೆ ಸೇಕಡಾ ೧೦೦ರ ಸುಂಕವನ್ನು ಹೇರಿಸಲೂ ಸರಕಾರಕ್ಕೆ ಅಧಿಕಾರ ದೊರೆವಂತೆ ಒಂದು ಮಸೂದೆಯು ಅಲ್ಲಿಯ ಪಾರ್ಲಿಮೆಂಟಿನಲ್ಲಿ ಬಂದಿದೆ.

"ಪುಷ್ಪಶಯ್ಯೆಯಲ್ಲ!"

ಇಂಡಿಯಾ ಸರಕಾರದ ಅರ್ಥಸಚಿವರಾದ ಶೂಸ್ಟರರು ನಿವೃತ್ತಿಹೊಂದಲಿರುವರು. ಅವರ ಸನ್ಮಾನಾರ್ಥ ಡಿಲ್ಲಿಯ ಯುರೋಪಿಯ ಕ್ಲಬ್‌ದವರು ಒಂದು ಮಿತ್ರಭೋಜನ ನಡೆಸಿದರು. ಶೂಸ್ಟರರ ಗುಣಕಥನವು ವಾಸ್ತವವಾಗಿ ಹಲವು ಮಂದಿಯಿಂದ ನಡೆಯಿತು. ಶೂಸ್ಟರರು ಉತ್ತರವಾಗಿ "ನನ್ನ ಸ್ಥಾನವು ಪುಷ್ಪಶಯ್ಯೆಯಲ್ಲ; ಇಂಡಿಯಕ್ಕೆ ನಾನು ಮಾಡಿದುದೇನು? ನನಗೆ ಬರುತ್ತಿರುವ ಪತ್ರಗಳನ್ನು ನೋಡಿದಿರಾ? —ಎಲ್ಲ ನಿಷೇಧಪತ್ರಗಳು; ನಾನು ಇಂತಿಂತಹ ನಿರ್ಧಾರವನ್ನು ಹಿಂದೆಗೆಯಿಸದಿದ್ದರೆ ಆತ್ಮಹತ್ಯೆಗಳು ನಡೆವುವೆಂದು!" ಎಂದು ವಿನೋದಪರವಾಗಿ ನುಡಿದರು.

ತುಂಡು ವಾರ್ತೆಗಳು.

ಓಕ್ಸ್‌ಫರ್ಡ್ ವಿಶ್ವವಿದ್ಯಾಲಯದ ೧೯೩೫ನೇ 'ರ್‍ಯಾಲೀಸ್' ಸ್ಮಾರಕ ಭಾಷಣಗಳ ಬಗ್ಗೆ, ಸರ್ ಮಹಮ್ಮದ್ ಇಕ್ಬಾಲರಿಗೆ ಆಮಂತ್ರಣ ಬಂದಿದೆ.

ಚೀನಾ, ಜಪಾನುಗಳೊಳಗೆ ಪುನಃ ಯುದ್ಧಸಂಭವಿಸುವದೆಂಬ ಭವಿಷ್ಯದ್ವಾಣಿ ಪ್ರಕಟವಾಗಿದೆ.

ವೈಸರಾಯರ ಭೂಕಂಪ ನಿಧಿಗೆ ಕೊಲ್ಹಾಪುರಾಧೀಶರು ಕೊಟ್ಟುದು ರೂ. ೩ ಸಾವಿರ.

ಬಿಹಾರ ಕಂಪನದಲ್ಲಿ ಬಹು ಸಕ್ಕರೆಯ ಕಾರ್ಖಾನೆಗಳು ಹಾನಿ.

ಅಖಿಲ ಭಾರತ ಸ್ವದೇಶೀ ಪ್ರದರ್ಶನವೊಂದು ಇದೇ ತಾ. ೨೧ರಲ್ಲಿ ಪೂನೆಯಲ್ಲಾರಂಭವಾಗುವುದು.

ಅಹಮ್ಮದಾಬಾದ ಗಿರಣಿಗಳಲ್ಲಿ ಸಂಬಳದಲ್ಲಿ ಮತ್ತೆ ಕಡಿತವೆಂದು ಹಾಹಾಕಾರ.

ಬ್ರಿಟಿಷರ ವಿಮಾನಸೈನ್ಯಕ್ಕೆ ಬರುವ ವರ್ಷಕ್ಕೆ ೧೬.೫ ಮಿಲ್ಲಿಯ ಪವನು ಮಂಜೂರಾಯಿತು.

ಇಂಗ್ಲಾಂಡಿನಿಂದ ಬಂದ ಎಮ್. ಸಿ. ಸಿ. ಕ್ರಿಕೆಟ್ ಸಂಘದವರು ಸ್ವದೇಶಕ್ಕೆ ಹಿಂತಿರುಗಿದರು.

ಜಾವಿಯಲ್ಲಿ ಅತಿವೃಷ್ಟಿ!—ಬೆಳೆಗೆ ತುಂಬ ಹಾನಿತಟ್ಟಿದೆ.

ದಕ್ಷಿಣಾಫ್ರಿಕದಿಂದ ಲಂಡನಿಗೆ ಬಂದ ಪೆಟ್ಟಿಗೆಯೊಂದನ್ನು ತೆರೆದಾಗ—ಸೀಸ! ೫ ಸಾವಿರ ಪವನು ಬೆಲೆಯ ಸ್ವರ್ಣವಿತ್ತಂತೆ!

ನಭಾಸಂಸ್ಥಾನಾಧೀಶರು ವಿದ್ಯಾಭ್ಯಾಸದ ಬಗ್ಗೆ ಇಂಗ್ಲಾಂಡಿಗೆ ಹೊರಟುಹೋದರು.

೩೦೦೦ ಟನ್ ಬರ್ಮಾ ಅಕ್ಕಿಯು ಮುಂಬಾಯಿಗೆ ಬಂದಿಳಿದಿದೆ.

ಮಾನ್ಯ ವೈಸರಾಯರು ಕಪೂರ್ತಲಾ ಸಂಸ್ಥಾನಕ್ಕೆ ಸಂದರ್ಶನವಿತ್ತರು.

ಕರ್ನೂಲು ಜಿಲ್ಲೆಯವರೂ ಅಖಿಲಭಾರತ ಸ್ವದೇಶೀ ವಸ್ತು ಪ್ರದರ್ಶನವೊಂದನ್ನು ನಡೆಸುವ ಸಿದ್ಧತೆಯಲ್ಲಿರುವರು.

ಹೈದರಾಬಾದು ಸಂಸ್ಥಾನದ ಪ್ರಗತಿ.

೧೯೩೩ನೇ ಒಕ್ಟೋಬರ ತಾ. ೩೧ಕ್ಕೆ ಅಂತ್ಯವಾಗುವ ಒಂದು ವರ್ಷದ ಹೈದರಾಬಾದ್ ಸಂಸ್ಥಾನದ ಆಡಳಿತದ ವರದಿಯು ಇದೀಗ ಪ್ರಕಟವಾಗಿದೆ ವರದಿಯು ತೃಪ್ತಿಕರವಾದ ಪ್ರಗತಿಯನ್ನು ಸೂಚಿಸುವುದು.

ಸಂಸ್ಥಾನದ ಆಯ:—ರೈತ್ವಾರಿ ಜಮೀನುಗಳಿಂದ ರೂಪಾಯಿ ೩,೦೯,೪೩,೩೧೭ ಭೂಕಂದಾಯವು ವಸೂಲಾಯಿತು; ಇದು ಹಿಂದಿನ ವರ್ಷಕ್ಕಿಂತ ಸುಮಾರು ೯ ಲಕ್ಷ ರೂಪಾಯಿಗಳಷ್ಟು ಹೆಚ್ಚಳವನ್ನು ತೋರಿಸುವುದಾಗಿದೆ. ಅಬ್ಕಾರಿ ಇಲಾಖೆಯಲ್ಲಿ ಸುಮಾರು ರೂ. ೩½ ಲಕ್ಷದಷ್ಟು ಆಯ ಕಡಿಮೆಯಾದರೂ, ಗುತ್ತಿಗೆಗಳ ಸಂಖ್ಯೆಯನ್ನು ಕಡಿಮೆಮಾಡಿದುದೇ ಇದಕ್ಕೆ ಕಾರಣನೆಂದು ವರದಿ ತಿಳಿಸುತ್ತದೆ. ಅರಣ್ಯ ಶಾಖೆಯು ತೃಪ್ತಿಕರವಾಗಿ ಕೆಲಸಮಾಡಿದೆ. ವ್ಯಾಪಾರದ ಮುಗ್ಗಟ್ಟಿನಿಂದ ಕಸ್ಟಮ್ಸ್ ಇಲಾಖೆಯಲ್ಲಿ ಕೊಂಚ ನಷ್ಟವಿದೆ.

ವ್ಯಯ:—ಸರಕಾರವು ಅಗತ್ಯಕಂಡಲ್ಲಿ ಭೂಕಂದಾಯದಲ್ಲಿ ರಿಯಾಯತಿ ತೋರಿಸಿದೆ; ಮಾಫಿ ಮಾಡಿದುದೂ ಇದೆ. ಸಾರ್ವಜನಿಕ ಕೆರೆ—ಬಾವಿಗಳ ಬಗ್ಗೆ ರೂ. ೨,೭೬,೩೪೬ ವೆಚ್ಚಮಾಡಿದೆ. ರೂಪಾಯಿ ೧,೩೪,೩೭೬ಗಳನ್ನು ರಾಯಚೂರು ಜಿಲ್ಲೆಯ ಎರಡು ಮಹಾ ರಸ್ತೆಗಳಿಗಾಗಿ ವೆಚ್ಚಮಾಡಿದೆ. ಕ್ಷಾಮಪೀಡಿತ ಪ್ರದೇಶಗಳ ರೈತರಿಗೆ ಸುಮಾರು ೮ ಲಕ್ಷ ರೂಪಾಯಿಗಳ ಸಾಲಗಳನ್ನು ಕೊಟ್ಟಿದೆ.

ನ್ಯಾಯ:—ಈ ಶಾಖೆಯಲ್ಲಿಯೂ ಒಂದು 'ಪ್ರಗತಿ!' ಅಂದರೆ, ವ್ಯಾಜ್ಯಗಳು ಹೆಚ್ಚಿದುದು!! ತಕ್ರಾರುಗಳು ೩೫,೩೯೬ರಿಂದ ೪೪,೬೭೬ಕ್ಕೆ ಹೆಚ್ಚಿದುವು. ತಕ್ರಾರುಗಾರರು ಒಟ್ಟು ೯೭,೦೩೧ ರಷ್ಟಿದ್ದರು. ಆದರೆ, (ಇವುಗಳಿಗೆ ತಕ್ಕಂತೆ ನ್ಯಾಯತೀರ್ಮಾನಗಳು ಭರದಿಂದ ಸಾಗಿದುದಿಲ್ಲ.)

ಪೋಲೀಸ್ ಖಾತೆ:—ಪೋಲೀಸ್-ಪ್ರಜೆಗಳೊಳಗಣ ಸಂಬಂಧವು ಸಮಾಧಾನಕರವಾಗಿತ್ತು. "ಹಿಂದೂ ಮುಸ್ಲಿಮ್ ವೈಷಮ್ಯ ಫಲವಾದ ಕೆಲವು ದುರ್ಘಟನೆಗಳು ಸಂಭವಿಸಿದರೂ ಸಾಮಾನ್ಯವಾಗಿ ಇವರೊಳಗಣ ಸಂಬಂಧವು ತೃಪ್ತಿಕರವೇ ಎನ್ನಬಹುದು" ಎಂದು ವರದಿಯ ಮಾತು. 'ರಾಜಕೀಯ ಗಲಭೆಗಳಿರಲಿಲ್ಲ. ರಾಜಭಕ್ತಿಯಲ್ಲಿ ಲೋಪವನ್ನು ತೋರಿಸುವಂತಹ ಚಿಹ್ನೆಗಳು ಕಂಡುಬಂದುದಿಲ್ಲ. ಪೋಲೀಸ್ ಥಾಣೆ ೧೩,೪೪೪. ಕೊಲೆಗಳು ೨೨೪ (ಹಿಂದಣ ವರ್ಷಕ್ಕಿಂತ ೧೬ ಕಡಿಮೆ) ಆತ್ಮಹತ್ಯಾಪ್ರಯತ್ನಗಳು ೧೫೯ (೪೭ ಕಡಿಮೆ); ಸ್ತ್ರೀಯರ ಮಾನಭಂಗದ ತಕ್ರಾರುಗಳು ೬೫ (೧೫ ಕಡಿಮೆ); ವರದಿಯ ವರ್ಷಾರಂಭದಲ್ಲಿ ಜೈಲುಗಳಲ್ಲಿದ್ದ ಕೈದಿಗಳು ಒಟ್ಟು ೨೯೯೩; ವರ್ಷಾಂತ್ಯದಲ್ಲಿದ್ದವರು ೨೯೭೫.

ಸೈನ್ಯ:—ಈ ಖಾತೆಯ ಪುನರ್ರಚನಾ ಕಾರ್ಯವು ನಡೆದಿತ್ತು. ರೂ. ೧೧,೩೫,೩೫೫ ಅಧಿಕವೆಚ್ಚವಾಗಿದೆ; ಅಂದರೆ ಈ ಖಾತೆಯಲ್ಲಿ ಒಟ್ಟು ವೆಚ್ಚ ರೂ. ೬೫,೯೬,೦೫೨. ಸೈನಿಕರು ೧೯೬೫೯.

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್.

ಸ್ತ್ರೀಯರಿಗೊಂದು ಮಹಾ ವರ.

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು ಅಶುದ್ಧ ರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ ರೂ 8 ಮತ್ತು 1—10—0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

Sole Agents for West Co st and No tn Kanara —

Wanted Agents in Pr ncipal Towns — ಪೊಪ್ಯುಲರ್ ಸ್ಟೋರ್ಸ್,

For terms Apply to —POPU R STORES — ರಥಬೀದಿ ಮಂಗಳೂರು

Mangalore

ಸ್ತ್ರೀ ಪುರುಷರ ಸಲುವಾಗಿ
ಶಕ್ತಿ ವ ಸ್ಫೂರ್ತಿಕೊಡುವಂತಹ

ಸುಮಧುರ

ಝಂಡು ದ್ರಾಕ್ಷಾಸವ

ಜರೂರು ಉಪಯೋಗಿಸಿರಿ

ಸ್ತ್ರೀಯರ ಸಲುವಾಗಿ
ಆರೋಗ್ಯ ವ ಶಕ್ತಿವರ್ಧಕ

ಪ್ರದರಾದಿ ರೋಗಗಳ ನೇಟಿ
ರಾಮಬಾಣ ಉಪಾಯ

ಝಂಡು ಅಶೋಕಾರಿಷ್ಟ

ಬೇಗನೇ ಉಪಯೋಗಿಸಿರಿ

'ZANDU'

ಝಂಡು ಫಾರ್ಮಾಸ್ಯುಟಿಕಲ್ ವರ್ಕ್ಸ್ ಲಿ: ಮುಂಬ್ಯಾಗಳ

ಮದ್ರಾಸು ಸಂಸ್ಥಾನದ ಏಜಂಟ್ —ದಾಮೋದರ ಮತ್ತು ಕಂಪೆನಿ 78 ಚೈನ ಬಜಾರ ರೋಡ್, ಮದ್ರಾಸು
ಮೈಸೂರು ಪ್ರೊವಿನ್ಸ್ ಏಜಂಟ್ — ದಿ ಪೊಪಟ್ ಲಾಲ ಕಂಪೆನಿ, ಅರ್ಕಾಟ ಶ್ರೀನಿವಾಸಾಚಾರ ಸ್ಟ್ರೀಟ್
ಮಂಗಳೂರು ಏಜಂಟ್ — ಶಾಹಾ ಕಂಪೆನಿ ಡಾಯ್ಮಂಡ್ ಬಿಲ್ಡಿಂಗ್, ಮಂಗಳೂರು
ಧಾರವಾಡ ಏಜಂಟ್— ದಿ ಧಾರವಾಡ ಫಾರ್ಮಸಿ, ಧಾರವಾಡ

ಬೇರೆ ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತದೆ

ಆಯುರ್ವೇದ ಔಷಧಿಗಳ ಸೂಚೀಪತ್ರವನ್ನು ಮುಖ್ಯ ಏಜಂಟರಿಂದ ಪಡಕೊಳ್ಳಿರಿ

ನಮ್ಮ ಸಲಹೆಯೇ ಪ್ರಾಧಾನ್ಯವಾದದ್ದೆಂದು ತಿಳಿಯಬೇಡಿ.

ಕಲ್ಲಿಕೋಟೆ ಆಕೋಟ ಆಸ್ಪತ್ರೆಯ ಚೀಫ್ ಮೆಡಿಕಲ್ ಆಫೀಸರರಾದ ಡಾ॥ ವಿ. ಬಿ ರಾಮನ್ ಎಂ ಆರ್ ಸಿ ಎಸ್ ಇವರು ಬರೆದಿರುವುದನ್ನು ಓದಿ ನೋಡಿ—"ನಾನು ನಿಮ್ಮ ಆಶ್ಚರ್ಯಕರವಾದ ಜೀವಾಮೃತಂ ಟಾನಿಕನ್ನು ನರಗಳಲ್ಲಿ ಉರಿತ ಇರುವ ಹಸಿವು ಕಡಿಮೆಯಾಗಿರುವುದು ಶಂಕಪ್ಪ ಕಡಿಮೆಯಾಗಿರುವುದು ಇವು ವ್ಯಾಪ್ತವಾಗಿರುವ ಅನೇಕ ರೋಗಿಗಳಿಗೆ ಕೊಟ್ಟಿರುತ್ತೇನೆ ಅದರ ಫಲಿತಾಂಶಗಳು ಬಹು ತೃಪ್ತಿಕರವಾಗಿದೆ. ಜೀವಾಮೃತವನ್ನು ದೇಹಶಕ್ತಿ ಕುಗ್ಗಿರುವ ಎಲ್ಲಾ ಸಂದರ್ಭಗಳಲ್ಲೂ ಸರ್ವ ಸಾಧಾರಣವಾಗಿ ಉಪಯೋಗಿಸಬಹುದೆಂದು ನಾನು ಮನಃಪೂರ್ವಕವಾಗಿ ಶಿಫಾರಸು ಮಾಡುತ್ತೇನೆ"

ಜೀವಾಮೃತವು

ನರಗಳಿಗೆ ಶಕ್ತಿ ಕೊಡುತ್ತದೆ ವೀರ್ಯ ವೃದ್ಧಿಮಾಡುತ್ತದೆ ಹಸಿವು ಹೆಚ್ಚಿಸುತ್ತದೆ ರಕ್ತ ವೃದ್ಧಿಮಾಡುತ್ತದೆ

ಪಂಡಿತ ಡಿ. ಗೋಪಾಲಾಚಾರ್ಲುರವರ

ಜೀವಾಮೃತವು

ಎಲ್ಲಾ ಔಷಧ ವ್ಯಾಪಾರಿಗಳಲ್ಲೂ, ಸ್ಟೋರುಗಳಲ್ಲೂ ದೊರೆಯುತ್ತದೆ (ಸಂಪೂರ್ಣ ವಿವರಗಳಿಗೆ ಇವತ್ತೇ ಬರೆಯಿರಿ)

ಆಯುರ್ವೇದಾಶ್ರಮಂ, ಪೋ ಬಾಕ್ಸ್ ನಂ ೨೧೭, ಮದ್ರಾಸು

ಸೋಲ್ ಏಜಂಟರು— ಸಿಟಿ ಮೆಡಿಕಲ್ ಮತ್ತು ಜನರಲ್ ಏಜನ್ಸಿ, ೪೨೧ ಚಿಕ್ಕಪೇಟೆ ಬೆಂಗಳೂರು (ಉಡುಪಿ ಹೋಟೆಲ್ ಹತ್ತಿರ)
ದಕ್ಷಿಣ ಕನ್ನಡದ ಏಜಂಟರು— ಪೊಪ್ಯುಲರ್ ಸ್ಟೋರ್ಸ್, ಮಂಗಳೂರು P No 104

'ವಿನೋದ ಪ್ರಪಂಚ'!!!

ಬೆಂಗಳೂರಿನ ಹಾಸ್ಯರಸಭರಿತ ಪಕ್ಷ ಪತ್ರಿಕೆ!
ಓದಿದರೆ ನಕ್ಕು ನಕ್ಕು ಸಾಕಾಗುತ್ತದೆ.
ಆಬಾಲವೃದ್ಧರುಗಳೂ ಓದಲು ಸುಸಮಯ.
ವಾ. ಚಂದಾ ರೂ. ೧—೮—೦
ಚಂದಾ ಮನಿಯಾರ್ಡರ್ ಮೂಲಕ ವಿ. ಪಿ.ಯಿಂದ ಅಲ್ಲ
ಜಾಹೀರಾತಿಗೆ ಸುಸಮಯ!
ಸಂಪಾದಕ,
ವಿನೋದ ಪ್ರಪಂಚ, ಬೆಂಗಳೂರು ಸಿಟಿ.
ದ ಕನ್ನಡ ಏಜಂಟರು—ಪೊಪ್ಯುಲರ್ ಸ್ಟೋರ್ಸ್, ಮಂಗಳೂರು.

ಆಮಂತ್ರಣ ಪತ್ರಿಕೆಗಳು.

ಇದು ವಿವಾಹ—ಉಪನಯನಗಳ ಕಾಲ ಮುದ್ದಾದ ಮುದ್ರಣದ ಆಮಂತ್ರಣ ಪತ್ರಿಕೆಗಳನ್ನು ನೀವು ಬಯಸುವುದು ಸಹಜ

ನಿಮಗೆ ಬೇಕಾದ ಕಾಗದಗಳಲ್ಲಿ
ಬೇಕಾದ ಬಳಿಗಳಲ್ಲಿ
ಬೇಕಾದ ಬಣ್ಣಗಳಲ್ಲಿ
ಬೇಕಾದಷ್ಟು ಪತ್ರಿಕೆಗಳನ್ನು

ಮುದ್ರಣ ಸೌಂದರ್ಯ—ಮಿತವ್ಯಯ —ಕ್ಲಪ್ತತೆ ಇವುಗಳಿಂದ ತೃಪ್ತಿಕೊಟ್ಟೇ ಮಾಡಿಕೊಡುವೆವು ಊರವರು ನಮ್ಮಲ್ಲಿ ಬಂದು ಮಾದರಿ ಪ್ರತಿಗಳನ್ನು ನೋಡಿ, ತಮಗೆ ಬೇಕಾದುದನ್ನಾರಿಸಬಹುದು ಪರವೂರವರು ಟಪ್ಪಾಲುದ್ವಾರಾ ತಿಳಿಸಿದರೆ ಅವರು ವಿವರಿಸುವಂತೆ ಚ್ಯುತಿಯಿಲ್ಲದೆ ಮಾಡಿ ಕಳುಹುವೆವು

ಹೆಚ್ಚಿನ ವಿಚಾರಗಳಿಗೆ ನಮ್ಮಲ್ಲಿಗೆ ಬನ್ನಿರಿ ಅಥವಾ ಬರೆಯಿರಿ.

ನಿಮಗೆ ಆಮಂತ್ರಣ.

ಮೆನೇಜರ್ —
ಶಾರದಾ ಛಾಪಖಾನೆ, ರಥಬೀದಿ,
ಮಂಗಳೂರು

ಬೇಕಾಗಿದೆ.

ತಿಂಗಳೊಂದರ ರೂ 75 ತಲಬಿನಂತೆ ಇಬ್ಬರು ಡಿಸ್ಟ್ರಿಕ್ಟ್ ಮೆನೇಜರರೂ ತಿಂಗಳಿಗೆ ರೂ. 30 ರಂತೆ (ಮತ್ತು ಕಮಿಷನ್ ಕೂಡಾ) ಕೆಲವು ಏಜಂಟರುಗಳೂ ಬೇಕಾಗಿದೆ

ಎಲ್ಲಾ ಸ್ಥಾನಗಳಿಗೂ ಹೊಣೆ (ಭದ್ರತೆಯು) ಅವಶ್ಯ

ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ ಯಾ ವಿಚಾರಿಸಿ —

ಮೆನೇಜರ (ಸಂಚಾರದಲ್ಲಿರುವವರು)

ದಿ ಕಲ್ಕತ್ತಾ ಫೈನೆನ್ಸ್ ಎಂಡ್ ಏಜನ್ಸಿ ಸಿಂಡಿಕೇಟ್,
ಲಿಮಿಟೆಡ್,

(o ಮೊಡರ್ನ್ ಹಿಂದೂ ಹೊಟೇಲ್,
ಹಂಪನಕಟ್ಟೆ, ಮಂಗಳೂರು

ನೋಟೀಸು.

"ದಿ ಕಲ್ಕತ್ತಾ ಫೈನೆನ್ಸ್ ಎಂಡ್ ಏಜನ್ಸಿ ಸಿಂಡಿಕೇಟ್ ಲಿಮಿಟೆಡ್"ನ ಮೆನೇಜರರು ಈಗ, ರೈಲ್ವೇ ಸ್ಟೇಷನ ಬಳಿ ಮೊಡರ್ನ್ ಹಿಂದೂ ಹೊಟೇಲು, (ಹಂಪನಕಟ್ಟೆ) ಯಲ್ಲಿ, ಮಂಗಳೂರಲ್ಲಿ ಒಂದು ಶಾಖೆಯನ್ನು ತೆರೆವ ಉದ್ದೇಶದಿಂದ ಮೊಕ್ಕಾಂ ಮಾಡಿರುವರು

ಸದರಿ ಶಾಖೆಯಲ್ಲಿ ಸೆಕ್ರಿಟರಿ, ಡಿಸ್ಟ್ರಿಕ್ಟ್ ಮೆನೇಜರರು ಯಾ ಏಜಂಟರಾಗಲಿಚ್ಛಿಸುವ ಅರ್ಜಿದಾರರು ಮೆನೇಜರರನ್ನು ಹೊಟೇಲಿನಲ್ಲಿ ಖುದ್ದಾಗಿ, ಬೆಳಿಗ್ಗೆ ಘಂಟೆ 11ರಿಂದ ಅಪರಾಹ್ನ 4ರ ತನಕ ಕಾಣಬಹುದಾಗಿದೆ

ಸಂಪಾದಕರ ಟಪ್ಪಾಲು ಪೆಟ್ಟಿಗೆ.

ಪತ್ರಿಕಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಎಲ್ಲಾ ಲೇಖಕರು ತಮ್ಮ ಸಂಪೂರ್ಣ ಹೆಸರು ವಿಳಾಸಗಳನ್ನು ಕೊಡತಕ್ಕದ್ದು. ದೀರ್ಘ ಲೇಖನಗಳಿಗೆ ಎಡೆ ಕೊಡಲಾಗುವುದಿಲ್ಲ. ಲೇಖನಗಳು ಸಾರ್ವಜನಿಕ ಹಿತದೃಷ್ಟಿಯಿಂದಿದ್ದು ಯುಕ್ತ ಶೈಲಿಯಲ್ಲಿರತಕ್ಕದ್ದು. (ಸಂ. ಸ್ವ.)

[ಸ್ಥಳೀಯ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ, ಪೂಜಾ ಕೃತ್ಯಗಳಲ್ಲಿ ನಡೆದ ಕೆಲವು ನ್ಯೂನತೆಗಳನ್ನು ನಿವೇದಿಸಿ ತಕ್ಕ ತೀರ್ಮಾನ—ವ್ಯವಸ್ಥೆಗಳಾಗಬೇಕೆಂದು ವಿನಂತಿಸಿ ಕೆಲವು ಭಜಕರು ಆಡಳಿತ ಮೊಕ್ತೇಸರರಿಗೆ ಅರ್ಜಿ ಮಾಡಿರುವರೆಂತಲೂ, ಅದರ ಕುರಿತಾದ ಯಾವ ವ್ಯವಸ್ಥೆಯೂ ಆಗದ ಕಾರಣ ಭಜಕವೃಂದವು ಅಸಮಾಧಾನ ತಾಳಿರುವುದೆಂದೂ ಮುಖಾಂತಾಗಿ ವಿವರಿಸಿ ಒಂದು ಬಾತ್ಮಿಯು ನಮ್ಮ ಕಡೆಗೆ ಬಂದಿದೆ. ಇದು ನಿಜವಾದಲ್ಲಿ, ಮೊಕ್ತೇಸರರು ಈ ವಿಚಾರವಾಗಿ ನಿಷ್ಪಕ್ಷಪಾತ ತನಿಖೆ ನಡೆಸಿ ಭಜಕವೃಂದವನ್ನು ಸಮಾಧಾನಗೊಳಿಸುವುದು ಅಥವಾ ಹಾಗೆ ಮಾಡದಿರುವುದಕ್ಕೆ ತಮ್ಮ ಯೋಗ್ಯ ಕಾರಣಗಳನ್ನು ಪ್ರಕಟಿಸುವುದು ಅವರ ಕರ್ತವ್ಯವಾಗಿದೆಯೆಂದು ಸೂಚಿಸುವೆವು. ಸಂ. ಸ್ವ.]

ಅಯ್ಯಾ ಸ್ವದೇಶಾಭಿಮಾನಿಯೇ,

"School Zone" "Drive Slow" ಎಂದು ಅಲ್ಲಲ್ಲಿ ಶಾಲೆಗಳ ಬಳಿ, ಇರುವ ಬೋರ್ಡುಗಳು ಕೆಲವು ಶಾಲೆಯ ಒಂದೇ ಕಡೆಯುಂದಿವೆ. ಅವುಗಳಲ್ಲಿಯೂ ಕೂಡ ಕೆಲವು ಬೋರ್ಡುಗಳಲ್ಲಿ "School Zone" ಎಂಬುದು ಮಾತ್ರ ಸ್ಪಷ್ಟ ಕಾಣುತ್ತಿದ್ದು "Drive Slow" ಎಂಬುದು ಬಣ್ಣ ಕೆಟ್ಟು ಧೂಳಿಯಿಂದ ಮುಚ್ಚಿ ಹೋಗಿದೆ. ಇಂತಹ ಬೋರ್ಡುಗಳನ್ನು ಬಿಳಿಯ ತಗಡುಗಳ ಮೇಲೆ ಕೆಂಬಣ್ಣದಿಂದ ಬರೆಯಿಸಿ, ಶಾಲೆಯಿರುವಲ್ಲಿ ಎರಡೂ ಕಡೆಗಳಿಂದ ಇಡಿಸಿದರೆ ಒಳ್ಳೆಯದಲ್ಲವೇ? ಸಂಬಂಧಪಟ್ಟ ಅಧಿಕಾರಿಗಳು ವಿಚಾರಿಸಿಕೊಳ್ಳಲಿ.

ನಗರನಿವಾಸಿ

ಸಂಗೀತ ಸೌಭದ್ರ

ಇದೇ ಕಳೆದ ತಾ [illegible]—೧೯೩೪ರಲ್ಲಿ ಗಣಪತಿ ಹೈಸ್ಕೂಲಿನ ಸರಸ್ವತೀ ಸದನದಲ್ಲಿ ಕಾಸರಗೋಡಿನ ಸಾರಸ್ವತ ಎಮೆಚ್ಯೂರ್ಸ್ ಸಂಘದವರು ಸಂಗೀತ ಸೌಭದ್ರವೆಂಬ ನಾಟಕವನ್ನು ಅಭಿನಯಿಸಿದರು. ನಾಟಕದ ಕೊನೆಯಲ್ಲಿ ಉಪಕಾರಸ್ಮರಣೆ ಮಾಡಲಿಕ್ಕೆ ಬಂದಿದವರು "ಈ ನಾಟಕದಲ್ಲಿ ತುಂಬಾ ತಪ್ಪುಗಳಿವೆಯೆಂಬುದನ್ನು ನಾವು ಚೆನ್ನಾಗಿ ಬಲ್ಲೆವು. ಅದನ್ನು ಮನ್ನಿಸಬೇಕು" ಎಂದು ಹೇಳಿದರು. ತಪ್ಪುಗಳನ್ನು ತುಂಬಾ ಮಾಡಿ ಮನ್ನಿಸಿಕೊಳ್ಳುವುದಕ್ಕಿಂತ ಅಲ್ಪಸ್ವಲ್ಪ ತಪ್ಪುಗಳನ್ನೇನೋ (ಅದೂ [illegible] ಪ್ರಸಂಗದಲ್ಲಿ) ಮಾಡಿ ಮನ್ನಿಸಿಕೊಳ್ಳುವುದುಚಿತವೆಂದು ಊಹಿಸಿಯೂ ಮುಂದಕ್ಕೆ ಇವರು ಆಡಲಿರುವ ನಾಟಕದಲ್ಲಿ ತುಂಬಾ ತಪ್ಪುಗಳಿರದಂತೆಯೂ ನಾನೊಬ್ಬ ಹಿತಚಿಂತಕನಂತೆ ಒಂದೆರಡು ಹಿತೋಕ್ತಿಗಳನ್ನಷ್ಟೆ ಬರೆಯುವೆನು.

ಅರ್ಜುನನ ಪಾತ್ರಧಾರಿಗಳು ಪದ್ಯಗಳ ತಾಳತಪ್ಪುಗಳನ್ನರಿಯದೆ ಪ್ರತಿಯೊಂದು ಪದ್ಯವನ್ನು ಒತ್ತಿ ಹೇಳುತ್ತಿದ್ದು ತಾನಾಡುವ ಭಾಷೆಗೇ ಒಂದು ಕುಂದನ್ನುಂಟುಮಾಡಿಕೊಂಡಿದ್ದರು. ವ್ಯಸನಪಡುವಲ್ಲೇ ಆಗಲಿ, ಸಂತೋಷಗೊಳ್ಳುವಲ್ಲಿಯೇ ಆಗಲಿ ಇವರ ಮಾತಿನಲ್ಲಿ ಸಂದರ್ಭಕ್ಕನುಸಾರವಾಗಿ ಏರಿಳಿತಗಳಾಗದೆ ಒಂದೇ ಸವನೆ ದನಿಯ ಮಾತುಗಳೇ ಹೊರಡುತ್ತಿದ್ದುವು. ವಿರಹತಾಪಕ್ಕೊಳಗಾಗಿ ಉಮ್ಮಳ ಪಟ್ಟುಕೊಂಡು ಕೂಗಿಕೊಳ್ಳುವ ಸಮಯದಲ್ಲೂ ಇವರ ಮಾತಿನಲ್ಲಿ ಅಬ್ಬರದ ಆಲಾಪವಿತ್ತು. ಕೆಲವೆಡೆಗಳಲ್ಲಿ ಮಾತನ್ನನುಸರಿಸಿ ತೋರಿಸಬೇಕಿದ್ದ ಅಭಿನಯವನ್ನು ಮಾತು ಹೊರಡುವ ಮುಂಚಿತವಾಗಿಯೇ ಅಭಿನಯಿಸಿ ಬಿಡುತ್ತಿದ್ದುದು ಅನುಚಿತವಾದುದು. ಇನ್ನು, ತಾನು ಮಾತಾಡುವಾಗ ಹಾಡುವಾಗ ಹಿಂಗಾಲುಗಳನ್ನೆತ್ತಿ ಮೈಯನ್ನು ಅನಾವಶ್ಯಕ ಕುಲುಕಿಸಿಕೊಂಡು, ಪ್ರೇಕ್ಷಕರಿಗೆ, ಮೈದಾನದ ಭಾಷಣಗಾರರ ನೆನಪನ್ನುಂಟುಮಾಡಿಕೊಡುತ್ತಿದ್ದರು. ಇತರ ಪಾತ್ರಧಾರಿಗಳು ಹಾಡುತ್ತಿರುವಾಗ ಇವರು ಕೈಯಲ್ಲಿ ತಾಳಹಾಕುತ್ತಿದ್ದುದನ್ನೂ, ರಂಗಭೂಮಿಯಲ್ಲೇ ನಿಂತು (ಪ್ರೇಕ್ಷಕರಿಗೆ ಕಾಣುವಂತೆ) ಒಳಗಿದ್ದವರೊಡನೆ ಮಾತಾಡುತ್ತಿದ್ದುದನ್ನೂ, ವಿನಾಕಾರಣ ಪದೇ ಪದೇ ಪರದೆಯ ಮರೆಗೆ ಹೋಗಿ ಬರುತ್ತಿದ್ದುದನ್ನೂ ಕಾಣುವಾಗ ಅಂದಿನ ನಾಟಕವನ್ನವರು ನಾಟಕವೆಂದು ಭಾವಿಸದೆ "ರಿಹರ್ಸಲ್"ಎಂದೇ ಭಾವಿಸಿರಬೇಕೆಂದು ಪ್ರೇಕ್ಷಕರಿಗನಿಸುವಂತಿತ್ತು. ಅರ್ಜುನನು ಸನ್ಯಾಸವೇಷದಲ್ಲಿರುವಾಗ ಜಡೆಯನ್ನಿಟ್ಟುಕೊಳ್ಳದೆ, 'ಫಸ್ಟ್ ಕ್ಲಾಸ್ ಇಂಗ್ಲಿಷ್ ಕ್ರಾಪ್' ಮಾಡಿಕೊಂಡುದು ಎಷ್ಟು ಸಮಂಜಸವಲ್ಲ. ಒಟ್ಟಿನ ಮೇಲೆ, ಈ ಪಾತ್ರಧಾರಿಗಳು ತನ್ನ ಕೃತಿಗಳಲ್ಲಿ ಒಂದು ಮೇರೆಯನ್ನಿಟ್ಟುಕೊಳ್ಳುತ್ತಿದ್ದರೆ ಉತ್ತಮ ನಟರ ವರ್ಗಕ್ಕೆ ಸೇರಿಕೊಳ್ಳುತ್ತಿದ್ದರು.

ಸುಭದ್ರೆಯ ಹಾಡುಗಾರಿಕೆ, ಮಾತುಗಾರಿಕೆಗಳು ಅಷ್ಟೊಂದು ಕೆಡುಕಾಗಿದ್ದಿಲ್ಲ. ಆದರೆ ಇವರಿಗೆ ಸ್ತ್ರೀಪಾತ್ರವು ಒಪ್ಪುವುದಿಲ್ಲವೆಂದು ಧಾರಾಳವಾಗಿ ಹೇಳಬಹುದು. ಸಾಧಿಸಿದರೆ ಇವರು ನಟರಾಗಬಲ್ಲರು.

ಘಟೋತ್ಕಚನ ಪಾತ್ರವನ್ನು ವಹಿಸಿದವರ ಮಾತಿನಲ್ಲಿ ಘಟೋತ್ಕಚನ ಮಾತಿನಲ್ಲಿರಬೇಕಾದ ಗಾಂಭೀರ್ಯವೆಂಬುದು ಇಲ್ಲ, ಜೀವಕಳೆಯೇ ಇದ್ದಿಲ್ಲವೆಂದೂ ಹೇಳಬಹುದು. ಇವರು ಸ್ವಾಯುಸ್ಥಾನದಲ್ಲಿ ಅಪರಾಧಿಯನ್ನು ಪಡೆಯುವಂತೆ ಮಾತಾಡಿ ಘಟೋತ್ಕಚನಿಗೆ ಸಿಗಬೇಕಾಗಿದ್ದ ಗೌರವವನ್ನೇ ಕೆಡಿಸಿಕೊಂಡರು. ಕೃಷ್ಣ, ರುಕ್ಮಿಣಿ, ನಾರದ ಇವರಲ್ಲಿ ಕೊರತೆಗಳೇನೂ ಇದ್ದಿಲ್ಲ. ಇವರು ತಮ್ಮ ತಮ್ಮ ಪಾತ್ರಕ್ಕನುಸರಿಸಿ ಜಾಣ್ಮೆಯನ್ನು ಪ್ರದರ್ಶಿಸಿದವರು. ಇಷ್ಟೇ ಇದರ ಪಟ್ಟಿಗೆ ಪರವಾ ಇಲ್ಲವೆನ್ನಬಹುದಾದರೂ, ಇವರು ಇನ್ನೊಮ್ಮೆ ರಂಗಭೂಮಿಗೆ ಬರುವುದಕ್ಕಿಂತ ಮೊದಲು ಸ್ವಲ್ಪ ಪ್ರಯತ್ನಶೀಲರಾಗಬೇಕು.

ಮುಂದಕ್ಕೆ ಈ ನಾಟಕವನ್ನು ಆಡುವುದಿದ್ದರೆ, ಸನ್ಯಾಸಿವೇಷದಲ್ಲಿದ್ದ ಅರ್ಜುನನು ತನ್ನ ನಿಜ ಉಡುಪನ್ನು ಧರಿಸಲು ಗುಹೆಯೊಳಗೆ ಹೊಕ್ಕು ಉಡುಪು ಹಾಕಿಕೊಂಡು ಗುಹೆಯಿಂದ ಹೊರಬರುವ ವರೆಗೂ ಸುಭದ್ರೆಯನ್ನು ಕಲ್ಲಿನಂತೆ ಸುಮ್ಮನೆ ನಿಲ್ಲಿಸಿ, ಪ್ರೇಕ್ಷಕರಿಂದ ಗುಲ್ಲನ್ನೆಬ್ಬಿಸಿಕೊಳ್ಳುವುದಕ್ಕಿಂತ, ಸನ್ನಿವೇಶಕ್ಕೊಪ್ಪುವಂತೆ ಆಕೆಯಿಂದ ಆತ್ಮಗತ ಮಾತುಗಳನ್ನೇ ಹೇಳಿಸುವುದು ಒಳ್ಳಿತು.

ಅಂತೂ, ಈ ಸಂಘದವರು ಎಮೆಚೂರ್ಸ್‌ಗಳಾಗಿರುವುದರಿಂದ ಇವರ ತಪ್ಪುಗಳು ಕ್ಷಮ್ಯವಾದುವುಗಳೇ. ಆದುದರಿಂದ ಈ ಸಂಘವನ್ನು ಪ್ರೋತ್ಸಾಹಿಸುವುದು ಕನ್ನಡಿಗರ ಕರ್ತವ್ಯವಿದೆ.

ಬಿ ನರ್ಸಪ್ಪ

ಗೌತಮ ಬುದ್ಧ

'ಸಂಸಾರ ನೌಕೆ'ಯೊಂದು, ಕರ್ನಾಟಕ ರಂಗಭೂಮಿಯನ್ನು ಆಳಬಲ್ಲಂತಹ ಒಂದು ಉದಾತ್ತ ಮತ್ತು ಉದ್ದಾಮ ನಾಟಕ, ಇದರೊಡನೆ ಶ್ರೀ ಪುಟ್ಟಸ್ವಾಮಯ್ಯನವರಿಂದ ವಿರಚಿತವಾದ 'ಗೌತಮ ಬುದ್ಧ'ವೆಂಬ ಐತಿಹಾಸಿಕ ಅಗಾಧತತ್ವಪೂರ್ಣ ನಾಟಕವೂ ಶ್ರೀ ಚಂದ್ರಕಲಾ ಕರ್ನಾಟಕ ನಾಟಕ ಮಂಡಳಿಯವರಿಂದ ಹೊರಗಾಗಿದೆ. ಮಿ| ಹೀರಣ್ಣನವರು ಇಸ್ಮಿತರ ಭೂಮಿಕೆಗಳಲ್ಲಿ ಎಷ್ಟು ಅಪ್ರತಿಮರಾಗಿ ಮತ್ತು ಪ್ರತಿಭಾಸಂಪನ್ನರಾಗಿ ಅಭಿನಯಿಸುವರೋ ಅಷ್ಟು ಯೋಗ್ಯತೆಯಿಂದ ಈ ನಾಟಕದಲ್ಲೂ ಅಭಿನಯಿಸಿ ಮಂಡಳಿಯ ಕೀರ್ತಿಯನ್ನು ಇನ್ನೂ ಹೆಚ್ಚಿಸುತ್ತಿರುವರು. ಅಲ್ಲದೆ ಬುದ್ಧನ ಚರಿತ್ರವು [illegible] ವಿಧಗಳಲ್ಲೂ ಒಪ್ಪುತ್ತಿರುವುದರಿಂದ ಈ ನಾಟಕವು ಕನ್ನಡ ರಂಗಭೂಮಿಯಲ್ಲಿ ಪ್ರಸಿದ್ಧ ನಾಟಕಗಳ ಸಾಲಿನಲ್ಲಿ [illegible] ಗಳಿಸಿದೆ. [illegible] ಬುದ್ಧನ ಚರಿತ್ರೆಯಲ್ಲಿ [illegible] ಈ ನಾಟಕದಲ್ಲಿ ಅಂತಹ ಸನ್ನಿವೇಶಗಳನ್ನು ಕಲ್ಪಿಸುವುದಂತೂ ಬಹು ಪ್ರಯಾಸಕರ ವಿಷಯವೆಂದು ಎಲ್ಲರೂ ಒಪ್ಪುವಂತಹದೇ. ಅಂತಹ ಹೆಚ್ಚಿನ ಹಾಸ್ಯರಸವಿರಹಿತವಾಗಿರುವ ಈ ನಾಟಕದಿಂದ ಪಾಮರಪ್ರೇಕ್ಷಕರು ನಿರಾಶರಾಗಿ [illegible] ಸಂತುಷ್ಟರಾಗಿ ಹಿಂದಿರುಗಲು ಕಷ್ಟವಿದೆ. ಆದರೆ ಬುದ್ಧನ ಜೀವನ ಚರಿತ್ರೆಯ [illegible] ಅಭಿನಯವು ಬೇಕಾಗಿರುವುದಿಲ್ಲ— ಇವರ ಅಭಿನಯದಲ್ಲಿ ಭಾವಪ್ರಕಾಶನವಾಗುವುದು ತೀರ ಸ್ವಲ್ಪ. ಶ್ರೀ ಸುಬ್ಬಯ್ಯನವರು ಗಾಯನಕಲೆಯಲ್ಲಿ ತೋರಿಸುವಷ್ಟು ಅಭಿನಯಕಲೆಯಲ್ಲೂ ಬೆಳಗುತ್ತಿದ್ದರೆ ಶ್ರೇಷ್ಠವರ್ಗದ ನಟರ ಪಾಲಿಗೆ ಸೇರಲ್ಪಡುತ್ತಿದ್ದರು. ಇವರ ಅಭಿನಯದಲ್ಲಿ ಅಲ್ಲಲ್ಲಿ [illegible] ಪ್ರದರ್ಶನವಾದಂತೆ ಕಂಡುಬರುತ್ತದೆ. [illegible] ಇನ್ನಷ್ಟು ಧೈರ್ಯದಿಂದ ಕೂಡಿದ್ದರೆ ಚೆನ್ನಾಗುತ್ತಿತ್ತು. [illegible] ಪಾತ್ರಗಳು ನಾಟಕದ ಭಾವಪ್ರದರ್ಶನಕ್ಕೂ ಪ್ರಶಸ್ತಿಗೂ ವಿಘ್ನಕರರಾಗಿಲ್ಲ. ಅಂತೂ, [illegible] ಪಾಠವಾದ ಮೇಲೆ ಈ ನಾಟಕವು ಕರ್ನಾಟಕ ರಂಗಭೂಮಿಯಲ್ಲಿ ಯಶಸ್ವಿಯಾಗಿ ಬಾಳದಿರದು. ಈ ಸಂಸಾರ ನೌಕೆಯ ಶ್ರೀ ಸಿಂಹರು ಎಷ್ಟು ಅಭಿನಂದನೀಯರೋ ಅಷ್ಟೇ ಅಭಿನಂದನೆಗೆ ಶ್ರೀ ಪುಟ್ಟಸ್ವಾಮಯ್ಯನವರೂ ಯೋಗ್ಯರೆಂದು ಕರ್ನಾಟಕವು ಹೇಳಿಕೊಳ್ಳುವ ದಿನವು ಬರಲಿ! ಕರ್ನಾಟಕ ರಂಗಭೂಮಿಯಲ್ಲಿ ನವಜೀವನವು ಮೂಡಿ ನಗು ಬೆಳಗಲಿ! ಸಿರಿಗನ್ನಡಂಗೆಲ್ಗೆ!

ಮ ಜಾ.

ಸುರತ್ಕಲ್ಲಿನಲ್ಲಿ ಮಾರಿಪೂಜೆಗಳ.

ಸುರತ್ಕಲ್ಲಿನಲ್ಲಿ ಎರಡು ಮಾರಿಗುಡಿಗಳಿವೆ. ಅವುಗಳಲ್ಲಿ ಒಂದು 'ಪೋಲೀಸ್'ಯವರೆನಿಸಿಕೊಳ್ಳುವವರಿಂದಲೂ, ಮತ್ತೊಂದು 'ಶೆಟ್ಟಿಗಾರರು'ಗಳಿಂದಲೂ ನಡೆಸಲ್ಪಡುವವು. ಮೊದಲಿನದು 'ಪೋಲೀಸ್ ಮಾರಿಗುಡಿ' ಎರಡನೆಯದು ಕೆಳಗಿನ ಮಾರಿಗುಡಿ. ಮೇಲಿನ ಮಾರಿಗುಡಿಯಲ್ಲಿ ಇದೇ ತಿಂಗಳ ೨೨ ತಾರೀಖು ಕೆಳಗಿನ ಮಾರಿಗುಡಿಯಲ್ಲಿ ೨೩ ತಾರೀಖು ಮಾರಿಪೂಜೆಯಾಗುವುದು. 'ಪೋಲೀಸ್'ಯವರೆನಿಸುವವರೂ ಕುರಿ, ಕೋಳಿಗಳನ್ನು ಕಡಿಸುವರು. ಇನ್ನು ಕೆಳಗಿನ ಮಾರಿಗುಡಿಯವರು, ಅವರಿಗಿಂತ ತಮ್ಮದು ಹೆಚ್ಚಿಗೆಯೆನಿಸಬೇಕೆಂದು (?) ಕೋಣ, ಕುರಿ, ಕೋಳಿ ಇತ್ಯಾದಿಗಳನ್ನು ಕಡಿಸುವರಂತೆ. ಈ ಪ್ರಾಣಬಲಿಯು ಅನಿವಾರ್ಯವಲ್ಲವೇ! ದೇವಿಗೆ ಹೆಚ್ಚಿನ ಸಂತೋಷವು ಅಹಿಂಸೆಯಿಂದೆಂದು ತಿಳಿದು ಇವರು ಪ್ರಾಣಬಲಿಯನ್ನು ನಿಲ್ಲಿಸುವರೆಂದು ಆಶಿಸಬಹುದೇ?

ಗ್ರಾಮವಾಸಿ

ಸ್ವೀಕಾರ—ವಿಮರ್ಶೆ.

೧ ಮೂಡಬಿದ್ರೆಯ ಸಾರ್ವಜನಿಕ ಧರ್ಮಾರ್ಥ ವಾಚನಾಲಯದ ಪ್ರಥಮ ವಾರ್ಷಿಕ ವರದಿ ನಮ್ಮ ಕೈಸೇರಿದೆ. ಕೆಲವು ಉತ್ಸಾಹೀ ಮಹನೀಯರಿಂದ ೧೯೩೨ನೇ [illegible] ಆರಂಭಿಸಲಾದ ಈ ಚಿಕ್ಕ ವಾಚನಾಲಯವು ಒಂದೇ ವರ್ಷದಲ್ಲಿ ಜನಾದರಕ್ಕೊಳಗಾಗಿ ಪ್ರಗತಿಹೊಂದುತ್ತಿರುವುದು ಸಲ್ಲಕ್ಷಣವು. ವರದಿಯ ವರ್ಷದಲ್ಲಿ ಸಾರ್ವಜನಿಕ ವಂತಿಗೆಯಿಂದಲೂ ಸಹಕಾರಿ ಸಂಘದ ಸಹಾಯದಿಂದಲೂ ಒಟ್ಟು ರೂ ೧೪೯-೫-೬ ಕೂಡಿಕೆಯಾಗಿದ್ದು, ರೂಪಾಯಿ ೧೩೭-೧೪-೧೧ ವೆಚ್ಚವಾಗಿದೆ. ಐದು ಬಗೆಯ ಪತ್ರಿಕೆಗಳನ್ನು ಚಂದಾಹಣ ಕಟ್ಟಿ ತರಿಸುತ್ತಿರುವರು. ಇನ್ನು ಹದಿನೆಂಟು ಬಗೆಯ ಪತ್ರಿಕೆಗಳು ಬೇರೆ ಬೇರೆ ಮಹನೀಯರಿಂದ ವಾಚನಾಲಯಕ್ಕೆ ಧರ್ಮಾರ್ಥವಾಗಿ ಕೊಡಲಾಗುತ್ತಿವೆ. ಸಾರ್ವಜನಿಕ ಸಂಸ್ಥೆ ಇದಕ್ಕೆ ಊರ-ಪರವೂರ ಮಹನೀಯರು ಮತ್ತಷ್ಟು ಸಹಾಯಮಾಡಿ ವಾಚನಾಲಯವನ್ನು ಮತ್ತಷ್ಟು ಊರ್ಜಿತಸ್ಥಿತಿಗೆ ತರುವರೆಂದು ಹಾರೈಕೆ.

೨ 'ಬಿಲ್ಲವರ ಎಸೋಸಿಯೇಶನ್, ಮುಂಬಯಿ' ಇದರ ದ್ವಿತೀಯ ವಾರ್ಷಿಕ ವರದಿ.—ಕಳೆದೆರಡು ವರ್ಷಗಳಿಂದ ಸ್ವಜಾತ್ಯಭ್ಯುದಯಕ್ಕಾಗಿ ಶ್ರಮಿಸುತ್ತಿರುವ ಈ ಸಂಸ್ಥೆಯು ವರದಿಯ ವರ್ಷದಲ್ಲಿ ಇಬ್ಬರು ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದ ಬಗ್ಗೆ ವೇತನವನ್ನೂ ಮತ್ತಿಬ್ಬರು ಅನಾಥರಿಗೆ ಮುಂಬಯಿಯಿಂದ ಊರಿಗೆ ಹೋಗುವ ಬಗ್ಗೆ ಕೊಂಚ ಸಹಾಯದ್ರವ್ಯವನ್ನೂ ಕೊಟ್ಟಿದೆ. ಹೆಚ್ಚು ಮುಂದಿಗೆ ಹೆಚ್ಚು ಸಹಾಯವನ್ನು ಮಾಡಲನುಕೂಲಿಸಲು ಸ್ವಜಾತಿಬಾಂಧವರೂ ಕೂಡಿದಮಟ್ಟಿಗೆ ಇತರ ದಕ್ಷಿಣ ಕನ್ನಡಿಗರೂ ಈ ಸಂಘಕ್ಕೆ ಸಹಾಯಮಾಡುವರೆಂದೂ ಇದರ ಸಂಸ್ಥೆಯು ದಿನ ಜನೋಪಕಾರಿಯಾಗಿ ಬಾಳಲೆಂದೂ ಹಾರೈಕೆ.

೩ 'ಉಡುಪಿ ಬೋರ್ಡ್ ಹೈಸ್ಕೂಲಿನ ೧೯೩೨-೩೩ನೆ ವರ್ಷದ ವರದಿ'.—ವರದಿಯು ಶಾಲೆಯ ಸರ್ವತೋಮುಖ ಪ್ರಗತಿಯನ್ನು ತೋರುತ್ತದೆ. ವರದಿಯ ವರ್ಷದಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ೪೩೪ಕ್ಕೆ ಏರಿದೆ. ಇದು ಶಾಲೆಯ ಇತಿಹಾಸದಲ್ಲಿ ಒಂದು ದಾಖಲೆಯೆಂದು ವರದಿ [illegible] ಗ್ರಂಥಾಲಯವೂ ವಾಚನಾಲಯವೂ ಉತ್ತಮ [illegible] ವಿದ್ಯಾರ್ಥಿಗಳ ಹಸ್ತಲಿಖಿತ ಪತ್ರಿಕೆಯೊಂದು [illegible] ಶ್ರೀ [illegible] ಶ್ರೀನಿವಾಸರಾಯರ [illegible] ಸಂಗೀತ—ಕಲಾತಿಗಳಲ್ಲೂ [illegible] ನಡೆಯುತ್ತಿದೆ. [illegible] ಶಾಲೆಯ ಅಭಿವೃದ್ಧಿಯು [illegible] ಸಂಸ್ಥೆಗೆ ಜನತೆಯ [illegible]

'ದಿ ಕೆನರಾ ಇಂಡಸ್ಟ್ರಿಯಲ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಉಡುಪಿ' ಇದರ ೧೯೩೩ನೇ [illegible] ಕಾತಿಗಳು ಸುಮಾರು ೫ ಲಕ್ಷದಷ್ಟು ಹೆಚ್ಚಿ [illegible] ಯಷ್ಟು ಆಗಿದೆ. ರಿಜರ್ವ್ ಫಂಡುಗಳು ರೂ ೩೦ ಸಾವಿರಕ್ಕೆ ಮುಟ್ಟಿವೆ. ಪಾಲುದಾರರಿಗೆ ಸೇಕಡಾ ೧೫ರ ಡಿವಿಡೆಂಡನ್ನೂ ೧೦ರಂತೆ ಬೋನಸನ್ನೂ ಹಂಚಿರುವರು. ಜನತೆಯ ಭರವಸೆಯು ಇಂಥ ಸಂಸ್ಥೆಗಳಲ್ಲಿ ತಾನಾಗಿ ಹೆಚ್ಚುವುದು ಸಹಜ. ಸಂಸ್ಥೆಯ ಪ್ರಗತಿಗೆ ಕಾರಣವಾದ ಆಡಳಿತದಾರರು ಅಭಿನಂದನೀಯರು.

೪ 'ಕೆನರಾ ಬೇಂಕಿಂಗ್ ಕೋಪರೇಶನ್ ಉಡುಪಿ, ಲಿಮಿಟೆಡ್' ಇದರ ಕಳೆದ ವರ್ಷದ ವರದಿ.—ಜಿಲ್ಲೆಯ ಹಾಗೂ ಹೊರಗಣ ಪ್ರದೇಶಗಳವರ ಪ್ರೀತಿಯನ್ನು ಸಂಪಾದಿಸುತ್ತ ಉಡುಪಿ, ಬೆಂಗಳೂರು, ಮಂಗಳೂರು ಮದರಾಸು, ಕುಂದಾಪುರ ಶಿವಮೊಗ್ಗ ಈ ಕಡೆಗಳಲ್ಲೂ ತನ್ನ ಶಾಖೆಗಳನ್ನು ಹರಡಿ ಉತ್ಸಾಹದಿಂದ ಮುಂಬರಿಯುತ್ತಿದೆ. ಬೇಂಕಿನ ಕ್ಷೇಮನಿಧಿಯು ರೂ. ೧,೪೪ ಲಕ್ಷವಿದ್ದಿದೆ. ಕಳೆದ ವರ್ಷ ಹುಟ್ಟಿಬಂದ ನೆಟ್ ಮುನಾಫೆ ರೂ. ೫೦,೩೦-೯-೧, ಇದು ಗತವರುಷಕ್ಕಿಂತ ರೂ. ೨,೪೦೦-೧-೧೧ರಷ್ಟು ಹೆಚ್ಚು. ಇದರಿಂದ ಕ್ಷೇಮನಿಧಿ ಮುಂತಾದ ಇಸಮುಗಳಿಗೆ ಬಯ್ದು ಉಳಿದ ಮೊಬಲಗನ್ನು ಸೇಕಡಾ ೯ರಂತೆ ಡಿವಿಡೆಂಡು ಮತ್ತು ೩ರಂತೆ ಬೋನಸು ಕೊಟ್ಟು ವಿನಿಯೋಗಿಸುವಂತೆ ನಿಶ್ಚೈಸಲಾಗಿದೆ. ಬೇಂಕಿನಲ್ಲಿರುವ ಠೇವಣಾತಿಗಳ ಸಂಖ್ಯೆಗಳು ಜನತೆಯ ವಿಶ್ವಾಸವು ಹೆಚ್ಚಿದುದನ್ನು ವ್ಯಕ್ತಪಡಿಸುತ್ತವೆ ಅಲ್ಲದೆ, ಮುಂದೆಯೂ ದೇಶೀ ಸಂಸ್ಥೆಗಳ ಕಡೆಗೆ ನಮ್ಮ ಜನರ ದೃಷ್ಟಿ ಹರಿವಂತೆ ಪ್ರೋತ್ಸಾಹಕರವೂ ಆಗಿದೆ. ಈ ಸಂಸ್ಥೆಗೆ ಏಳ್ಗೆಯನ್ನು ಬಯಸುವೆವು.

Canara Bank, Limited.

Established 1906.

Authorised Capital	10,00000-0-0
Subscribed capital	6,00,000-0-0
Paid up Capital	3,30,000-0-0
Reserves	4,31,00[illegible]-0-0

Head Office:—Bunder, Mangalore   Local Offices:—City & Bunder.

BRANCHES:— Bombay, Cochin, Calicut, Ernakulam, Alleppey, Chikmagalur, Ganguli, Coondapoor, Udipi, Karkal, Puttur, Kasaragod, & Buntwal Out-agency.

Interest is allowed on Current, Fixed and Savings Bank Accounts, rates of which may be ascertained on application. Advances made on approved securities at easy rates. All kinds of Banking business transacted. Rules of business on application.

The Bangalore Branch Office of the Bank at No. 1 Albert Victor Road, Bangalore City has been opened on 8-1-34.

A. Madhava Pai,
Secretary.

ಗುಣಬಾರದಿದ್ದರೆ] ಸುಪ್ರಸಿದ್ಧ ವೈದ್ಯರಾದ ಎಮ್. ಕೆ. [illegible] [ಹಣ ವಾಪಾಸು

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

[illegible]

ವಿಳಾಸ:—[illegible] ಔಷಧಾಲಯ ಮು. ಪೋ. ಮಿರಜ, S. M. C.

ನಮ್ಮ ಟೊಯಿಲೆಟ್ ಮತ್ತು ವಾಶಿಂಗ್ ಸಾಬೂನುಗಳ ತಯಾರಿಯಲ್ಲಿ ಚರ್ಬಿ ಉಪಯೋಗಿಸಲ್ಪಡುವುದಾಗಿ ರುಜುಪಡಿಸುವವರಿಗೆ ರೂಪಾಯಿ

1000 ಬಹುಮಾನ.

ಸಾಬೂನು ಪಡೆಯುವಾಗ " " ಅದರಲ್ಲಿ ಚರ್ಬಿ ಇರಕೂಡದೆಂದು ನಿಮ್ಮ ಆಶೆ.

ಪ್ರಾಣಿಗಳ ಚರ್ಬಿ ಮಿಶ್ರವಾದ ಸಾಬೂನುಗಳು ಹಿತಕ್ಕಿಂತಲೂ ಅಹಿತವನ್ನೇ ಹೆಚ್ಚಾಗಿ ಉಂಟುಮಾಡುತ್ತದೆ. ಕಾರಣ ಅವುಗಳಲ್ಲಿನ ಚರ್ಬಿ ಚರ್ಮರಂಧ್ರಗಳೊಳಗೆ ಹೋಗಿ ಬೆವರನ್ನು ತಡೆಯುತ್ತದೆ. ಸೋಪನ್ನು ಪಡೆಯುವಾಗ ನೀವು ಪರಿಮಳಭರಿತ ಚರ್ಬಿನ ಮುದ್ದೆಗೆ ಬೆಲೆ ಕೊಟ್ಟು ಶುದ್ಧತೆಯ ಬದಲು ಅಶುದ್ಧತೆಯನ್ನು ಸ್ವೀಕರಿಸಬೇಕೆಂದಿರುವಿರಾ?

ಮಲಬಾರು ಸಾಬೂನುಗಳು ಜನಕ್ಕೆ ಬಂದ ಆರು ತಿಂಗಳುಗಳ ಅಲ್ಪಾವಧಿಯಲ್ಲೇ ಸಾರ್ವಜನಿಕ ಬೆಂಬಲವನ್ನು ಪಡೆದಿದೆ. ಕೊಚ್ಚಿಯ ಮಹಾರಾಜರ ದಯಾರ್ಪೂರ್ಣ ಪ್ರಶಸ್ತಿ ದ್ವಾರಾ ಪ್ರೋತ್ಸಾಹನದಿಂದಾಗಿಯೂ, ಪ್ರಖ್ಯಾತ ವೈದಿಕೀಯ ಅಧಿಕಾರಿಗಳ ಶಿಫಾರಸಿನಿಂದಾಗಿಯೂ, ಅನೇಕ ವಸ್ತುಪ್ರದರ್ಶನಗಳಲ್ಲಿ ದೊರೆತ ಸುವರ್ಣಪದಕ ಮತ್ತು ಪ್ರಶಸ್ತಿ ಪತ್ರಿಕೆಗಳಿಂದಾಗಿಯೂ, ಮಲಬಾರ್ ಸಾಬೂನುಗಳ ಪ್ರಾಮುಖ್ಯತೆಯು ಎಷ್ಟೆಂದು ತಿಳಿಯುವುದು.

ಮಲಬಾರ್ ಸಾಬೂನು ಎಲ್ಲಾ ವಿಧದಿಂದಲೂ ಶ್ರೇಯಸ್ಕರವೇ ಆಗಿರುತ್ತದೆ. ನಿಮ್ಮ ಚರ್ಮಕ್ಕೆ ಬಾಧಕವನ್ನುಂಟುಮಾಡುವಂತಹ ಪ್ರಾಣಿಗಳ ಚರ್ಬಿ ಅಥವಾ ಹಾನಿಕರವಾದ ಮಿಶ್ರಿತವೇನೂ ಅದರಲ್ಲಿರದು. ಮಲಬಾರ್ ಸಾಬೂನನ್ನು ಶಾಸ್ತ್ರೀಯ ರೀತಿಯಿಂದಲೂ, ಆರೋಗ್ಯ ದೃಷ್ಟಿಯಿಂದಲೂ ತಯಾರಿಸುವುದರಿಂದ ಎಷ್ಟು ಕೆಲುವಾದ ಚರ್ಮವೂ ಬಾಧಕ ಹೊಂದುವುದಿಲ್ಲ. ಈ ಸಾಬೂನು ದೇಶಿಯ ಅನುಕೂಲ್ಯ ಗಂಧಯುಳ್ಳ ಸಾಮಗ್ರಿಗಳಿಂದ ಎಲ್ಲರಿಗೂ ಅನುಕೂಲವಾಗುವಂತೆ ಅಗ್ಗವಾಗಿದೆಯೆಂದು ಅದರ ಉಪಯೋಗದಿಂದ ನಿಮಗೆ ತಿಳಿದುಬರುವುದು.

ನಿಮ್ಮ ವ್ಯಾಪಾರಸ್ಥರು

ಮಲಬಾರ್ ಸಾಬೂನುಗಳನ್ನು

ವಿಕ್ರಯಿಸಲು ಸಂತೋಷಪಡುವರು

ಇದರಲ್ಲಿ ಪ್ರಾಣಿಗಳ ಕೊಬ್ಬು ಇರುವುದಿಲ್ಲ.

ದಿ ವೆಜಿಟೇಬಲ್ ಸೋಪ್ ವರ್ಕ್ಸ್, ಕಲ್ಲಿಕೋಟೆ.

ಪ್ರೊಪ್ರೈಟರ್:—ಸನ್ ಬ್ರಿಂಡ್ ಕೊಡೆಯ ಖ್ಯಾತಿಯ ಸೇಟ್ ನಾಗಜೀ ಪುರುಷೋತ್ತಮ ಮತ್ತು ಕಂಪೆನಿ, ಕಲ್ಲಿಕೋಟೆ.

ಈ ಜಿಲ್ಲೆಗೆ ಪ್ರವರ್ತಕರು:—

ರಾಘವೇಂದ್ರ ರಂಗ ಪೈ ರಥಬೀದಿ, ಮಂಗಳೂರು.

ನೋಟೀಸು

ದಕ್ಷಿಣ ಕನ್ನಡಾ ಉಡುಪಿ ಡಿ. ಮು. ಕೋರ್ಟಿನಲ್ಲಿ.

ಕ್ರಮ ನಂಬ್ರ 472/1933.

ದಿ ಕನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಉಡುಪಿ, ಇದರ ಏಜೆಂಟ್ ಹೋಸ್ಸೆ ರಘುನಾಥ ಅನಂತ ಪೈ—ವಾದಿ.

ಮತ್ತು

ಕೆ. ಎಲ್. ರಾಮಕೃಷ್ಣರಾವ್ ಕೂಡಾ—ಪ್ರತಿವಾದಿರು.

ಇವರೊಳಗೆ

ಸದರಿ ವ್ಯಾಜ್ಯದ 2ನೇ ಪ್ರತಿವಾದಿಯಾದ ಉಡುಪಿ ತಾಲೂಕು [illegible]ಗ್ರಾಮದಲ್ಲಿರುವ ಶೀನಪ್ಪ ನಾವಡರ ಮಗ ಎಚ್. ಶೇಶಗಿರಿ ನಾವಡರಿಗೆ ಈ ಮೂಲಕ ತಿಳಿಯಪಡಿಸುವದೇನಂದರೆ:—

ಪ್ರತಿವಾದಿರು ವಾದಿಗೆ ತಾ. 18-4-'33ಲ್ಲಿ ರೂ. 1500ಕ್ಕೆ ಬರಕೊಟ್ಟ ಡಿಮಾಂಡ ಪ್ರೊಮಿಸರಿ ನೋಟಿನ ಅಸಲು ಮತ್ತು ತಾ. 24-8-'33ರಿಂದ ಸಾ. ಸೆ. 12½ ರ ಸಲೆ ಬಡ್ಡಿ ಕೂಡಾ ರೂಪಾಯಿ 1581-4-0ಕ್ಕೆ ದಾಖಲು ಮಾಡಿದ ಸದರಿ ವ್ಯಾಜ್ಯವು ಅಖೈರು ತನಿಖೆ ಬಗ್ಗೆ ತಾ. 29-3-'34ಕ್ಕೆ ಇಟ್ಟಿರುವುದರಿಂದ ಸದರಿ ದಾವೆಗೆ ಉದಾಹರಣೆ ಕೊಡುವ ಗೋಸ್ಕರ ಸದರಿ 2ನೇ ಪ್ರತಿವಾದಿಯು ಸ್ವತಹಾ ಅಥವಾ ವಕೀಲರ ಮುಖಾಂತರ ಸದರಿ ತಾರೀಕಿನ ದಿವಸ ಸದರಿ ಕೋರ್ಟಿನ ಮುಂದೆ ಹಾಜರಾಗಲಿಕ್ಕೆ ತಪ್ಪಿದರೆ ಸದರಿ ವ್ಯಾಜ್ಯವು 2ನೇ ಪ್ರತಿವಾದಿಯ ಗೈರಹಾಜರಿಯಲ್ಲಿ ತೀರ್ಮಾನಿಸಲಾದೀತೆಂತ ಸದರಿ 2ನೇ ಪ್ರತಿವಾದಿಗೆ ಈ ಮೂಲಕ ಕೂಡಾ ತಿಳಿಯಪಡಿಸಲ್ಪಟ್ಟಿರುತ್ತದೆ.

Udipi, S. K.
8-3-34

H. Keshava Pai,
Vakil for Plaintiff.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

S. C. No. 507/1933 S. E. P. 795/1933.

ಪದ್ಮನಾಭ ನಾಯ್ಕ—ವಾದಿ ಅರ್ಜಿದಾರ.

ಮತ್ತು

ಸುಂದರ—ಪ್ರತಿವಾದಿ ಎದ್ರಿ.

ಇವರೊಳಗೆ

ಮೇಲ್ಕಂಡ ಅಮಲ್‌ಜಾರಿಯಲ್ಲಿ ಕಾರ್ಕಳ ತಾಲ್ಲೂಕು ಕಡ್ತಲ ಗ್ರಾಮದ ಹೊಸಮನೆ ಅನಂತ ನಾಯ್ಕನ ಮಗ ದಾಮು ನಾಯ್ಕನಿಂದ ವ್ಯಕ್ತಿ ಮಂಜುನಾಥ ನಾಯ್ಕರ ಹಕ್ಕಿನ ಆಸ್ತಿಯ ಬಗ್ಗೆ ತಾ. 31-3-'34ಕ್ಕೆ ಸದರಿ ಮಂಜುನಾಥ ನಾಯ್ಕರ ಮಗ [illegible] ಸಲ್ಲತಕ್ಕ [illegible] ವಸೂಲಿ ಹಕ್ಕನ್ನು ಜಪ್ತಿಗೆ ಅಪೇಕ್ಷಿಸಿ ಮಾಡಿದ ಮೇಲ್ಕಂಡ ಅಮಲ್‌ಜಾರಿಯು ತನಿಖೆಗೆ ತಾ. 9-4-'34ಕ್ಕೆ ಇಟ್ಟಿರುವದರಿಂದ ಆ ಕುರಿತು ಆಕ್ಷೇಪ ಇದ್ದರೆ ಸದರಿ ಕೋರ್ಟಿನಲ್ಲಿ ಬೆಳಗ್ಗೆ 11 ಘಂಟೆಗೆ ಹಾಜರಾಗಿ ಆಕ್ಷೇಪ ಹೇಳಬಹುದು. ಸದರಿ ಗೇಣಿಯನ್ನು ಕೋರ್ಟಿನ ಹೊರತು ಏನಹಾ ಬೇರೆ ಯಾರಿಗೂ ಕೊಡಲಿಕ್ಕೆ ಕೂಡದು. ತನಿಖೆ ದಿನ ಆಕ್ಷೇಪ ಹೇಳದೆ ಇದ್ದರೆ ಸದರಿ ಅಮಲ್‌ಜಾರಿಯು ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

ಕಾರ್ಕಳ
ತಾ. 12-3-'34.

P. Ramachandra Rao,
ಅರ್ಜಿದಾರನ ಕಡೆ ವಕೀಲ.

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

O. P. No. 25/1934.

ಅರ್ಜಿದಾರರು.

೧. ಕಾವೇರಮ್ಮ, ಎಮ್. ಪಿ. ಶೆಣೈರ ವಿಧವೆ. ೨. ಪರಮೇಶ್ವರ ಶೆಣೈಪ್ಪ, ಮಹಾಲಿಂಗ ಶೆಣೈರ ಮಗ ಕುಂದಾಪುರ ತಾಲೂಕು ಉಪ್ಪುಂದ ಗ್ರಾಮದಲ್ಲಿರುವವರು—ಅರ್ಜಿದಾರರು.

ಮೃತ M. P. ಶೆಣೈಯು ಮದ್ರಾಸಿನಲ್ಲಿದ್ದಾಗ್ಯೆ ನೆಶನಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್ ಕಲ್ಕತ್ತ ಇದರಲ್ಲಿ ರೂಪಾಯಿ 1500-0-0ಕ್ಕೆ ನಂಬ್ರ 28588ನೇಗೆ ಮಾಡಿದ ಲೈಫ್ ಇನ್ಶೂರೆನ್ಸ ಹಣ ಮತ್ತು ಅದರ ಮೇಲಣ ಬೋನಸ ಸಹಾ ರೂ. 1666-0-0ನ್ನು ವಸೂಲು ಮಾಡುವರೆ ಮೃತರ ಶಾಸ್ತ್ರ ಪ್ರಕಾರ 1ನೇ ಅರ್ಜಿದಾರಳೇ ಹಕ್ಕುದಾರಳೆಂತಲೂ ಆ ಬಗ್ಗೆ 2ನೇ ಅರ್ಜಿದಾರನ ಹೆಸರಿಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರರು ಕೊಟ್ಟ ಅರ್ಜಿಯು ಇದೇ 1934ನೇ ಇಸವಿ ಎಪ್ರಿಲ್ ತಾ. 2ರಲ್ಲು ಬೆಳಗ್ಗೆ 11 ಘಂಟೆಗೆ ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ ತನಿಖೆಗೆ ಇಟ್ಟಿರುತ್ತದೆ. ಆ ಸಮ್ಮಂಧ ಯಾರದ್ದಾದರೂ ಆಕ್ಷೇಪ ಇದ್ದಲ್ಲಿ ಸದರಿ ದಿವಸ 11 ಘಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಮಾಡಿಕೊಳ್ಳತಕ್ಕದ್ದು.

ಮೊಕ್ಕಾಂ ಕುಂದಾಪುರ
ತಾ. 13-3-'34

K. Raghunath Shenoi,
Vakil for Petitioners.

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು **ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು**

ಕಸ್ತೂರಿ ಮಿಶ್ರಿತ ದಶಮೂಲಾರಿಷ್ಟ ೧೬ ಔನ್ಸ್ ಬಾಟ್ಲಿ ೧ಕ್ಕೆ ರೂ. 1-8-0. ದ್ರಾಕ್ಷಾಸವ ೧೬ ಔನ್ಸ್ ಬಾಟ್ಲಿ 1ಕ್ಕೆ ರೂ. 1. ಅಶ್ವಗಂಧಾರಿಷ್ಟ ೧೬ ಔನ್ಸ್ ಬಾಟ್ಲಿ ಒಂದಕ್ಕೆ ರೂ. 1-4-0. ಅಬಲಾಮೃತ ೧೬ ಔನ್ಸ್ ಬಾಟ್ಲಿ ೧ಕ್ಕೆ ರೂ. 2. ಅಶೋಕಾರಿಷ್ಟ ೧೬ ಔನ್ಸ್ ಬಾಟ್ಲಿ ೧ಕ್ಕೆ ರೂ. 1-4-0. ಚ್ಯವನಪ್ರಾಶಲೇಹ ೧ ರಾತ್ತಿಗೆ ರೂ. 2-8-0. ಅಭಯಾಮಲಕಿ ೧ ರಾತ್ತಿಗೆ ರೂ. 3. ಚಂದ್ರಮುಖ (ವಿಶೂಚಿಕೆಗೆ ರಾಮಬಾಣ) ಕಾಲು ಔನ್ಸಿಗೆ ರೂ. 0-5-0. ದಂತಧಾವನ ಚೂರ್ಣ ತೊಲೆ ೧ಕ್ಕೆ 0-1-0. ಕ್ರಿಮಿಘಾತಿನಿ (ದದ್ದು, ಕಜ್ಜಿಗೆ) ಡಬ್ಬಿ ೧ಕ್ಕೆ ರೂ. 0-4-0. ಕೃಷ್ಣಾಂಕ ೧ ಔನ್ಸಿಗೆ ರೂ. 0-6-0. ಚಿತ್ರಕ (ಮಕ್ಕಳ ಗೃಹಣೀ ರೋಗಕ್ಕೆ ದಿವ್ಯೌಷಧ) ತೊಲೆ ೧ಕ್ಕೆ ರೂ. 0-8-0. ಮಹಾ ಚಿತ್ರಕ ತೊಲೆ ೧ಕ್ಕೆ ರೂ. 1-0-0. ಪಿಂಡ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ ರೂ. 0-10-0. ಬಲಾಶ್ವಗಂಧಾದಿ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ 0-12-0. ಹಿಮಸಾಗರ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ ರೂ. 1-8-0. ಮಹಾಚಂದನಾದಿ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ ರೂ. 1-0-0. ಶ್ರೀ ಗೋಪಾಲ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ ರೂ. 3-8-0.

ನಮ್ಮ ಔಷಧಗಳು ದೊರೆಯುವ ಸ್ಥಳ:—ಮಂಗಳೂರು—ರಾಘವೇಂದ್ರ ರಂಗ ಪೈ ರಥಬೀದಿ, ಜೆನರಲ್ ಡಿಸ್ಪೆನ್ಸರಿ ಹೊಡಿಯಾಲ್‌ಬೈಲ್. ಬೈಂದೂರು—ಕೆ. ಪುತ್ತು ಕಾನುಧಾಗ. ಗಂಗೊಳ್ಳಿ—ಬಿ. ಸುರೇಂದ್ರ ನಾಯ್ಕ. ಕುಂದಾಪುರ—ಕೆ. ರಾವ್ ಭಟ್. ಡಾಕ್ಟರ್ ಕೆ. ಆರ್. ಕಾಮತ್. ಉಡುಪಿ—ಪಿ ಜನಾರ್ಧನ ನಾಯಕ್ ಎಂಡ್ ಕೊ., ಪೈ ಫಾರ್ಮೆಸಿ, ಆರ್. ಎಸ್. ಶೆಣೈ, ರಥಬೀದಿ. ಕಾರ್ಕಳ—ವಿ. ಎ. ಶೆಣೈ. ಕಾಪು—ಡಾಕ್ಟರ್ ಬಿ. ಕೆ. ದೇಶಲ ಡಿಸ್ಪೆನ್ಸರಿ. ಭಟ್ಕಲ್—ಶಾಮ್ಮನ ನರಸಿಂಹ ನಾಯಕ್. ಬಾರ್ಕೂರು—ಬಿ. ಭಗವಂತ ಮಲ್ಯ, ಆರ್ ಪಿ. ಔಷಧಾಲಯ ಬ್ರಹ್ಮಾವರ ಕೆ. ವೈಕುಂಠ ಪೈ ಎಂಡ್ ಸನ್ಸ್, ಕೆ. ಶೇಷಗಿರಿ ನಾಗಪ್ಪ ಎಂಡ್ ಸನ್ಸ್. ಎಲ್ಲೆಲ್ಲಿಯೂ ಏಜಂಟರು ಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಬಹುದು.

ನಾಯಕ್ ಬ್ರದರ್ಸ್, ಶ್ರೀಮದ್ಭುವನೇಂದ್ರ ಮಹೌಷಧಾಲಯ, ಪೋಸ್ಟ್ ಕಟಪಾಡಿ, ದ. ಕ.

The Canara Industrial & Banking Syndicate Limited.,

Etsablished in 1925. **Head Office:—Mukunda Nivas, UDIPI.**

Branches: Mangalore, Payyanur, Brahmavar, Kumta, Karwar, Hubli, Honnavar, Bangalore & Cannanore.

Authorised Capital Rs. 5,00,000. Subscribed Capital Rs. 1,20,000. Paid up Capital Rs. 40,000 Issued Capital Rs. 2,00,000

STATEMENT OF AFFAIRS OF THE SYNDICATE AS ON 31st December 1933

LIABILITIES.	Rs.	ASSETS.	Rs.
Paid up Capital	40,000—0—0.	Loans on Land mortgage	2,69,352—12—6
Reserve & other funds	20,250—0—0.	Loans on Valuable Securities	2,52,324—13—6
Deposits	10,69,202—7—11.	Loans on Bills of Exchange, Hundis and Promissory Notes	4,71,242— 1—3
Due to Bankers	1,39,891—3—2.	Investment on Shares of other Companies	43,575— 0—0
		Investments on Government Securities Conversion Loan	78,390—10—0
		On Deposits with other Bankers	1,05,000— 0—0
Bills for Collection	38,138—11—3.	Bills for collection (per contra)	38,138—11—3
Sundries	1,03,557—4—0.	Sundries	1,07,857—15—4
		Cash in hand & with Bankers	24,907—10—6
Total Rs.	13,90,789—10—4	Total Rs.	13,90,789—10—4

Long and Short term Loans on attractive Schemes are granted.
ALL KINDS OF BANKING BUSINESS UNDERTAKEN.

Udipi,
9-2-1934.

P. A. Pai Bros.,
Managing Agents.

ಪ್ರಥಮ ಕನ್ನಡ ಮಾತಾಡುವ ಚಲಚಿತ್ರ!

ಮಿಸ್. ತ್ರಿಪುರಾಂಬ
ಮಿಸ್ ರಾಜಂ
ಮಿಸ್ ಲಕ್ಷ್ಮಿ

ಮಿಸ್ಟರ್ ಸುಬ್ಬಯ್ಯ ನಾಯಿಡು
ಮಿಸ್ಟರ್ ನಾಗೇಂದ್ರ ರಾವ್,
ಮಿಸ್ಟರ್ ವೈ. ವಿ. ರಾವ್
ಮಿಸ್ಟರ್ ಮೂರ್ತಿ

ಇವರುಗಳಿಂದ ನಟಿಸಲ್ಪಟ್ಟು

ಮಿಸ್ಟರ್ ವೈ. ವಿ. ರಾವ್,	ಕರ್ಣಾಟಕ ಕವಿಕೇಸರಿ ಬೆಳ್ಳಾರಿ
ಇವರಿಂದ ಡೈರೆಕ್ಟ್ ಮಾಡಲ್ಪಟ್ಟು	ನರಹರಿ ಶಾಸ್ತ್ರಿಗಳಿಂದ ಕಥೆಯು ರಚಿಸಲ್ಪಟ್ಟು

ಸೌತ್ ಇಂಡಿಯನ್ ಮುವಿಟೋನ್‌ರವರು ಕೊಲ್ಹಾಪುರದ ಛತ್ರಪತಿ ಸ್ಟುಡಿಯೋದಲ್ಲಿ ತಯಾರಿಸಲ್ಪಟ್ಟಿರುವರು.

— ಪ್ರಸಿದ್ಧ ಪುರಾಣ ಕಥೆ —

'ಸತಿ ಸುಲೋಚನ'

ಎಂಬ ಚಿತ್ರವು ಕನ್ನಡ ಮಾತನಾಡುವ ಹಾಡುವ ರೂಪದಲ್ಲಿ ಪ್ರದರ್ಶಿಸಲ್ಪಡುತ್ತದೆ.

ಮಧುರ ಸಂಗೀತ! ಸ್ಪಷ್ಟವಾದ ಧ್ವನಿ! ಇಂಪಾದ ಶ್ರುತಿ!

ಮಂಗಳೂರಿನಲ್ಲಿ ಶೀಘ್ರದಲ್ಲೇ ಪ್ರದರ್ಶನ. ದಿ ಸೌತ್ ಇಂಡಿಯನ್ ಫಿಲ್ಮ್ ಸಪ್ಲೈ ಕಂಪೆನಿ ಬೆಂಗಳೂರು.

WANTED.

Four Organisers to organise the work of the South Indian General Assurance Society, Ltd, in the following places noted below. Capable organisers can expect to have attractive and encouraging terms with sound footing for their future

(1) South Canara, (2) Mysore, Hassan and Coorg, (3) Kadur. Shimoga, Chitaldroog and Tumkur. (4) Mangalore, Kolar.

For terms and other particulars please apply to—

The Divisional Manager,
The South Indian General Assurance Co. Ltd
64, 3rd Cross Road Srirampur Extn
Malleswaram Post, BANGALORE
OR
The Managing Agents,
The S I. G. A Co. Ltd.
55 Poonamallee High Road Kilpauk, MADRAS.

ಡಾಕ್ಟರ ವಾಮನ ಗೋಪಾಳರವರ



ಅತ್ಯುತ್ತಮ ಸಾರ್ಸಪರಿಲಾ
ಕೆಟ್ಟ ರಕ್ತಕ್ಕೆ ಪರಮೌಷಧ. ೫೦ ವರ್ಷದ ಅನುಭವ ಉಪಯೋಗಿಸಿ ದವರೇ ಹೇಳಿದ್ದಾರೆ.

ಡಾಕ್ಟರ್ ಗೌತಮರಾವ್ ಕೇಶವರವರ
ಫೊಸ್ಫರಸ್ ಗುಳಿಗೆಗಳು
ಅತ್ಯುತ್ತಮ ಟಾನಿಕ್.

ಡಾ. ಗೌತಮರಾವ್ ಕೇಶವ ಅಂಡ್ ಸನ್ಸ್,
ಠಾಕುರದ್ವಾರ, ಮುಂಬಯಿ ೨ ಸ್ಟೋಕಿಸ್ಟ ಪಾ ಕಂಪನಿ,
[ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯಲ್ಲಿ] ಮಂಗಳೂರು.

S. U. N. & CO.

Choukhamba, Benares City

ಮೂರು ಇನಾಮುಗಳು

ನಮ್ಮಲ್ಲಿ ಕಾಶ್ಮೀರ್ ಶಾಲುಗಳಿಗಿಂತಲೂ ಅತ್ಯುತ್ತಮವಾದ ಕಸೂತಿಗಳಿಂದೊಪ್ಪುವ ಶುದ್ಧ ಸ್ವದೇಶೀ ಖದ್ದರ್ ಶಿಲ್ಕು ಶಾಲುಗಳು ತಯಾರಾಗುತ್ತವೆ ಬೇಕಾದವರು ತ್ವರೆಮಾಡಿ ಬರೆದರೆ ಈ ಕೆಳಗಿನ ದರದಲ್ಲಿ ಕಳುಹಿಸಲಾಗುತ್ತದೆ 5 ಮೊಳ ಉದ್ದ 2½ ಅಗಲ ದರ ಒಂದಕ್ಕೆ ರೂ. 2—8—0ಯಿಂದ 3-12-0 5½ ಮೊಳ ಉದ್ದ 2¾ ಮೊಳ ಅಗಲ ದರ 1ಕ್ಕೆ 3-8-0, 4-8-0 6 ಮೊಳ ಉದ್ದ 3 ಅಗಲ ದರ 1ಕ್ಕೆ ರೂ 4—8-0, ರೂ 5 ಅಲ್ಲದೆ ಸ್ವದೇಶೀ ಖದ್ದರ್ ಮಡಿಗಳೂ, ಶೀರೆಗಳೂ ಅಂಚುಗಳಿಲ್ಲದೆ ಎಲ್ಲಾ ರಂಗುಗಳಲ್ಲಿರುತ್ತವೆ ಮತ್ತು ಜರೀಕಾರೀ ಶೀರೆಗಳೂ ಪಿತಾಂಬರಗಳೂ ರವಕೆಗಳೂ, ರುದ್ರಾಕ್ಷೀ—ಬಾಣಲಿಂಗ—ಪಂಚಾಯತನ ಸುದರ್ಶನ ಸಿಕ್ಕಾಳಿ ಕ್ವಾಮಿಗೆ ಮಿಶ್ರನ್, ಮಡಿ ಧಾವಳಿ ಶಾಲ ಜಗನ್ನಾಥ ಗಂಟೆಗಳೂ ಕೂಡಾ ಸರಿಯಾದ ದರಕ್ಕೆ ಕಳುಹಿಸಲಾಗುತ್ತದೆ ವಿವರಕ್ಕೆ ಕೆಟಲಾಗಿಗೆ ಬರೆದರೆ ಇನಾಮವಾಗಿ ಕಳುಹಿಸುತ್ತೇವೆ 1 ಅಣೆ ಸ್ಟೇಂಪು ಕಳುಹಿಸಿದರೆ 1 ವಿಶ್ವೇಶ್ವರ ಪಟ, 1 ಕಾಶೀನಕ್ಷೆ, 1 ಕೆಟಲಾಗಿನೊಡನೆ 3 ಇನಾಮುಗಳು

ವಿಳಾಸ—

ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪೆನಿ, ಚೌಖಾಂಬಾ ಬನಾರಸ್ (ಕಾಶೀ)

ಪಂಡಿತ ಜವಾಹಿರಲಾಲ ನೆಹರೂ ಬಂದಾಗ್ಗೆ ಹುಬ್ಬಳ್ಳಿ ಪ್ರದರ್ಶನದಲ್ಲಿ ಸುವರ್ಣ ಪದಕ ದೊರೆತ

ಒಂದೇ ಸಮನಾಗಿ ೩೫ ವರ್ಷದ ಅನುಭವದಿಂದ

ಹಿಂದೂಸ್ಥಾನದ ಸಾವಿರಾರು ಜನರಿಂದ ವರ್ಣಿಸಲ್ಪಟ್ಟ ಆಯುರ್ವೇದೋಕ್ತ,

ತಾಜಾ ಮತ್ತು ಪೌಷ್ಟಿಕ ವನಸ್ಪತಿಗಳಿಂದ ತಯಾರಿಸಿರುವ ಮತ್ತು ಇದರ ಗುಣಕ್ಕಾಗಿ ಅನೇಕ ಸರ್ಟಿಫಿಕೇಟುಗಳು ಮತ್ತು ಭಂಗಾರದ ಪದಕಗಳು ದೊರಕಿರುವ ಪರದೇಶದಲ್ಲಿ ಎರ್ಪಡುವ ಶಕ್ತಿಯ ಮೇಲೆ ಮೊದಲನೆ ತರಗತಿಯ ಟಾನಿಕ

ದ್ರಾಕ್ಷಾಮೃತ

ಈ ದ್ರಾಕ್ಷಾಮೃತವು ನೆಹಸ್ಪತಿ ವರ್ಗದಲ್ಲಿರುವ ಅನೇಕ ವನಸ್ಪತಿಗಳ ರಸಾರ್ಕಗಳೊಂದಿಗೆ ದ್ರಾಕ್ಷಾರಸವನ್ನು ಮಿಶ್ರಮಾಡಿ ಸ್ವದೇಶೀ ಯಂತ್ರದಿಂದ ಶಾಸ್ತ್ರೋಕ್ತ ಪದ್ಧತಿ ಪ್ರಕಾರ ತಯಾರ ಮಾಡುವುದರಿಂದ ಸ್ವಾದಿಷ್ಟವು ಮತ್ತು ಮಧುರವು ಆಗಿದೆ

ಇದರ ಸೇವನೆಯಿಂದ ಶರೀರದೊಳಗಿನ ಹಳೇ ಕಾವು (ಗರಮಿ) ಸಂಪೂರ್ಣ ನಾಶವಾಗುತ್ತದೆ ಮತ್ತು ಧಾತುಸ್ರಾವ, ಸ್ವಪ್ನದೋಷ ಅಥವಾ ಬೇರೆ ಯಾವುದೇ ವಿಕಾರದಿಂದ ಬಂದ ಅಶಕ್ತತೆಯಿಂದ ಕೈಕಾಲು, ಸೊಂಟ ಉರಿ [illegible] ಯಾವಾಗಲೂ ... ಜ್ವರ ... ಪಿತ್ತದಿಂದ ಕಣ್ಣಿಗೆ ... ಬಂದು ... ನಾವು ಆಗದೇ ... ಎಲ್ಲಾ ವಿಕಾರಗಳು ನಷ್ಟವಾಗಿ ಆರೋಗ್ಯವು ಬೆಳೆಯುತ್ತದೆ. ಮತ್ತು ಅನ್ನ ... ಇದರ ಸೇವನೆಯಿಂದ ... ವ್ಯಭಿಚಾರದಿಂದ ಅಥವಾ ಬೇರೆ ಕಾರಣದಿಂದ ಬಂದ ಧಾತು ಕ್ಷೀಣತೆ ನಷ್ಟವಾಗಿ ... ಪುನಃ ಯುವನವಂತರಾಗಿ ಶರೀರ ಬಲವಾಗಿ ಮಕ್ಕಳು ಪುಷ್ಟಿವಂತರಾಗುವರು ಹೆಂಗಸರಿಗೂ ಮತ್ತು ಮಕ್ಕಳಿಗೂ ಈ ಔಷಧವು ಗುಣಕಾರಿ ಇದೆ ಮುಟ್ಟಾಗದಿದ್ದರೆ ಮತ್ತು ಉಷ್ಣದ ಗರ್ಭಸಂಬಂಧವಾದ ರೋಗಗಳಿದ್ದರೂ ಅವುಗಳೆಲ್ಲ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವುದು ಅಶಕ್ತ ಹುಡುಗರು ಬಲವಂತರಾಗುವರು ಈ ಔಷಧದ ೩ ಬಾಟ್ಲಿಗಳನ್ನು ಸೇವನೆ ಮಾಡಿದರೆ ಪೂರ್ಣ ಗುಣ ಬರುತ್ತದೆ ಇದರ ಅನುಭವ ೧ ಬಾಟ್ಲಿ ಸೇವನೆಮಾಡಿದ ನಂತರ ತಿಳಿದೀತು.

ಬಾಟ್ಲಿ ಬೆಲೆ ೧–೮–೦ ೩ ಬಾಟ್ಲಿಗೆ ೪–೬–೦ ಡಜನ್ ಬಾಟ್ಲಿಗೆ ... ಟಪ್ಪಾಲ ಖರ್ಚು ಪ್ಯಾಕಿಂಗ ಬೇರೆ ಬೀಳುತ್ತದೆ

ಪ್ರಸಿದ್ಧ ಕೆಮಿಸ್ಟ ಮತ್ತು ಸ್ಟೋರ್ಸದೊಳಗೆ ಮತ್ತು ಕಿರಾಣಿ ಅಂಗಡಿಯಲ್ಲಿ ಸಿಗುವುದು

ವ್ಯವಸ್ಥಾಪಕ: ದ್ರಾಕ್ಷಾಮೃತ ಕಾರ್ಯಾಲಯ, ಪೋಸ್ಟ್ ನಿಪ್ಪಾಣಿ ಜಿಲ್ಲಾ (ಬೆಳಗಾಂವಿ)

ಸಿಕ್ಕುವ ಸ್ಥಳ — ಮಂಗಳೂರು—ಗಜಾನನ ಮೆಡಿಕಲ್ ಹಾಲ್ ಮತ್ತು ಎಚ್ ಆರ್ ಕಾರ್ ಬ್ರದರ್ಸ್, ಕಾರ್‌ಸ್ಟ್ರೀಟ್ ಕುಂದಾಪುರ—ಕೆ ಆರ್ ಭಟ್ಟ, ಉಡುಪಿ—ಪೈ ಬಾಮ್ಬರ್ಸ, ಮತ್ತು ಕೆ ಶೇಷಗಿರಿ ಪೈ ಕಾರ್ಕಳ— ಎ. ಎ. ಶೆಣೈ. ಪುತ್ತೂರು—ಗೋಪಾಲ ನಾರಾಯಣ ಪೈ ಮತ್ತು ಪೈ ಬ್ರಾದರ್ಸ ಕಾಸರಗೋಡು— ಕೆ ರಾಮ ನಾಯ್ಕ, ಕೋರ್ಟ್ ರಸ್ತೆ ಬಂಟವಾಳ— ಬಿ ಎಚ್ ವಾಸುದೇವ ಪೈ

2-6-38

ಡಿಲ್ಲಿ ಬಿಸ್ಕೂಟಿನ ಕುರಿತು

ಇಂಡಿಯಾದ ಘನ ಕೈಗಾರಿಕಾ ಸಂಸ್ಥೆಯ

<u>ಸರ್ ದೋರಾಬ್ ತಾತಾರವರು</u>

"ಈ ಬಿಸ್ಕೂಟುಗಳನ್ನು ಹಿಂದೀಯ ಜನತೆಯು ಹೆಚ್ಚಿನ ಅವಗಾಹನೆಗೆ ತಂದಲ್ಲಿ ಸಹಜವಾಗಿ ಇವುಗಳು ಹೆಚ್ಚಿನ ವಿಕ್ರಯವಾಗುವುದರಲ್ಲಿ ಸಂದೇಹವಿರುವುದಿಲ್ಲ."

"ಇಂಗ್ಲಾಂಡಿನಲ್ಲಿ ತಯಾರಿಸಲ್ಪಟ್ಟವುಗಳಿಗಿಂತಲೂ ನಾನು ಈ ಬಿಸ್ಕೂಟುಗಳನ್ನೇ ಪ್ರಶಸ್ತವೆನ್ನುತ್ತೇನೆ"—

"ಇಂಗ್ಲಾಂಡಿನಲ್ಲಿ ನಿಮ್ಮ ಬಿಸ್ಕೂಟುಗಳು ಬಹಳ ಬೇಗನೆ ಖ್ಯಾತವಾಗಿವೆ —ಎಂಬುದೇ ಕೆಲವು ಯುರೋಪಿಯನರ ಹೇಳಿಕೆ.

ಮದ್ರಾಸು ಪ್ರಾಂತ್ಯಕ್ಕೆ ಏಜಂಟರು:—

Jaya Bharatham Co, P B No 83, MADRAS

ಜಯ ಭಾರತಮ್ ಕೋ., ಪಿ ಬಿ 83 ಮದ್ರಾಸು

ಸ್ಟೋಕಿಸ್ಟರು —ದಿ ಸರ್ಸ ಕಾಪ ತ್ ಎಂಡ್ ಕೋ., ಮಂಗಳೂರು

ದ. ಕ. ಜಿಲ್ಲಾ ಏಜಂಟರು:—ಎಸ್. ಜಿ ಬಂಗೇರಾ, ಮಿಶ್ಯನ್ ಕಂಪೌಂಡು, ಕಾಸರಗೋಡು

ಅಪ್ರತಿಮ ವರ್ಷಗಳು.

ಅಸಂಖ್ಯಾತರಾದ ನಮ್ಮ ಗಿರಾಕಿಗಳ ಕೇಳಿಕೆ ಮತ್ತು ಅನುಕೂಲತೆಗಳನ್ನು ಇದೇ ಮುಖ್ಯಾಲುಕ್ಷ ಮಾನದಿಂದ ತಿಳಿದ, ಅವರಿಗೆ ಸುಲಭ ದರದ ಯೋಗ್ಯ ಹಾಗೂ ಬಹುಕಾಲ ಬಾಳುವ ಸರ್ವ ತರದ ಉಡುಪುತೊಡುಪುಗಳನ್ನು ಒದಗಿಸುವ ನಮ್ಮ ಎರಡು ತಲಾಂತರದ ಅನುಭವವು ಮುಂದಕ್ಕೂ ಸಂತೃಪ್ತಿಯನ್ನೇ ಕೊಡುವುದಲ್ಲವೇ?

ಸ್ವದೇಶೀ

ಕಾರ್ಖಾನೆಗಳಲ್ಲಾದ ನೂಲು ಮತ್ತು ಕೈಮಗ್ಗದ ವಸ್ತ್ರ, ಹೊದಿಕೆಗಳೂ, ಬೆಡ್ ಶೀಟ್, ಬಾತ್ ಟುವಾಲುಗಳೂ ಧೋತಿ, ಶೀರೆ— ಶೈಲಾಸು ಚೆಕ್ಕು ಚೀಟು ಇತ್ಯಾದಿ ಎಲ್ಲವೂ ಯಾವಾಗಲೂ ಮಾರಾಟಕ್ಕಿವೆ.

ಶ್ರೀನಿವಾಸ ರಂಗಪೈ,
[ಸಾಹುಕಾರ ಮಹಾಲ್]
ರಥಬೀದಿ, ಮಂಗಳೂರು

Srinivasa Ranga Pai,
Representatives for South Canara and Malabar
For— A & F Harvey,
Managers Madura Mills Co, Ltd

EDITED, PRINTED & PUBLISHED BY V S KUDVA AT THE SHARADA PRESS, MANGALORE.

(... ಸ್ಥಾಪಿತವಾದುದು.)

... ಪ್ರಕಟವಾಗುವ ವಾರಪತ್ರಿಕೆ.

(... Kanarese Weekly in South Kanara)

... ಸಂಚಿಕೆ ... (28 - 3 - 34)

... KANARA BANKING CORPORATION, UDIPI, LTD.

(Incorporated in British India)

... ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

... Udipi, S. K. Branches:—Coondapoor, Mangalore, Shimoga & Madras

ಶಾಖೆ—ಕುಂದಾಪುರ, ಮಂಗಳೂರು, ಶಿವಮೊಗ್ಗ ಮತ್ತು ಮದ್ರಾಸು.

Authorised Capital Rs. 3,50,000. Paid up Capital Rs. 2,25,000.

... ರೂ. 3,50,000. ... ರೂ. 2,25,000.

STATEMENT OF ASSETS & LIABILITIES AS ON 28TH FEBRUARY 1934.

Capital and Liabilities			Property and Assets
Paid up Capital	Rs. 2,25,000-0-0	1	Bank Premises Buildings, Furniture etc Rs
Reserve and other funds	„ 2,50,000 0 0	2	Investment on G. P. notes
...	„ 22,70,954 10-2	3	Authorised Investments
Due to Bankers	„ 1,36,830-14 11	4	Bills for collection
...	„ 61,371-3-11	5	Sundries
...	22,160-2-9	6	Cash on hand & with banker
Total	29,66,216-15 9		Total

... Corporation, Udipi, S. K.

N. ANANDA RAO

Manager

ಅಮೃತಾಂಜನ.

ಇದು ... ವಾತ, ಧಾರಿ ನೋವು, ... ಮರಗಟ್ಟುವುದು, ...

ರಿಂಗ್ ವರ್ಮ್ ಮುಲಾಮು — ಇದು ರಿಂಗ್‌ವರ್ಮನ್ನು ...

... ರೂ. 3—8—0 ...

ಅಮೃತಾಂಜನ ಡಿಪೋ.

ಮದರಾಸು ಮತ್ತು ಬೊಂಬಾಯಿ

... ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಬೊಂಬಾಯಿ.

1908ರಲ್ಲಿ ಸ್ಥಾಪಿತವಾದುದು.

... ಉಜ್ವಲವಾದ ದೃಷ್ಟಾಂತ.

... ಹೊಸ ವಿಮೆ ರೂ. 63,45,000.

... ರೂ. 94,14,000.

... ಒಂದೂವರೆ ಪಾಲಿನಷ್ಟು ಅಧಿಕವಾದ ಜೀವವಿಮೆ

... ಸೂಚಿಸುತ್ತದೆ.

... ಸೌಕರ್ಯಗಳುಳ್ಳ ವಿಮಾಕ್ರಮಗಳು!

... ಸೆಕ್ರೆಟರಿಯವರು.

... ಮಂಗಳೂರು, ದಕ್ಷಿಣ ಕನ್ನಡ ...

[illegible]

× × × ×

[illegible] ("Ask G[illegible]") [illegible]

× × × ×

ಗಾಂಧೀಜಿಯವರ ಹರಿಜನ ಸಭೆಗಳಿಗೆ ಸರಕಾರೀ ನೌಕರರು ಹೋಗಬಾರದೆಂದು ಸರಕಾರವು ಪ್ರಕಟಿಸಿದ್ದೆಂದು ವಾರ್ತೆಯುಂಟು! ಮಹಾತ್ಮನ [illegible] ಎಂದು ಇವರಿಗೆ ಗೊತ್ತಿರಬೇಕೇನೋ?

× × × ×

[illegible] ಗಾಂಧೀಜಿಯವರ [illegible] ನಾಲಿಗೆಗೆ [illegible]?

× × ×

[illegible] ಅಲ್ಲದೆ ಅಲ್ಲಿ [illegible] ಈ ನಾಲಿಗೆಗಳ [illegible]!

× × × ×

[illegible]

× × × ×

[illegible]

× × × ×

[illegible]



[illegible]

ಓವಲ್ಟಿನ್ ಎಂಬುದು [illegible] ಆಹಾರ [illegible] ಆರೋಗ್ಯ [illegible]

OVALTINE

ಮೆದುಳು, ನರ ಮತ್ತು ದೇಹವನ್ನು ವೃದ್ಧಿಸುತ್ತದೆ.

[illegible]

ಮಹಾತ್ಮಾಗಾಂಧಿಯವರು [illegible] ಬಂದಾಗ [illegible]

× × × ×

[illegible]

× × × ×

[illegible]

The First & The Foremost Weekly of South Kanara
"Swadeshabhimani"
Makes a delightful reading at home or abroad.
A Powerful Medium for Advertisements
"Swadeshabhimani" Car Street, Mangalore

ಸ್ವದೇಶಾಭಿಮಾನಿ

[illegible]

ಅನುಕ್ರಮಣಿಕೆ

ಅಗ್ರಲೇಖ
ಅಲ್ಲಿ ಮತ್ತು ಇಲ್ಲಿ
ಸ್ಫುಟವಿಚಾರಗಳು ೯
ಟೀಕೆಗಳು ೮
ವರ್ತಮಾನ ಸಂಗ್ರಹ ೧೧
ಭೂಕಂಪ ಭೂಕಂಪ ಭೂಕಂಪ! ೨
ವಿವಿಧ ಸಮಾಚಾರಗಳು ೧೧
ದಕ್ಷಿಣ ಕನ್ನಡ—ಮಂಗಳೂರು, ಸುರತ್ಕಲ್, ಪಡುಬಿದ್ರಿ, ಬ್ರಹ್ಮಾವರ, ಕಾಸರಗೋಡು, ೯
ಪತ್ರವ್ಯವಹಾರ ೧೩
ಮೂಲೆ ಮೂಲೆಗಳಿಂದ ೭
ಕೋಟ್ಯಾಧೀಶ್ವರ ರೋಕ್‌ಫೆಲ್ಲರ್ ೫
ಬಿಹಾರದಲ್ಲಿ ಪುನರ್ಘಟನಾ ಕಾರ್ಯಗಳು ೧೦

ಸ್ವದೇಶಾಭಿಮಾನಿ.

ತಾ. ೨೩ನೇ ಶುಕ್ರವಾರ ಮಾರ್ಚಿ ೧೯೩೪.

ಅಲ್ಲಿ ಮತ್ತು ಇಲ್ಲಿ

ಜಪಾನಿನ ವಸ್ತ್ರಗಳನ್ನು ಹಿಂದೂಸ್ಥಾನದಲ್ಲಿ ಮಾರಾಟ ಮಾಡುವ ಬಗ್ಗೆ ಅವರಿಗೆ ಸೌಕರ್ಯಗಳನ್ನು ಒದಗಿಸುವ ಬಗ್ಗೆಯೂ ಮತ್ತು ಅಂತಹ ಸೌಕರ್ಯಗಳನ್ನು ಒದಗಿಸುವಾಗ ಹಿಂದೂಸ್ಥಾನದ ಹಿತಗಳು ನಷ್ಟಹೊಂದದಂತೆ ನೋಡುವ ಬಗ್ಗೆಯೂ ಕೆಲವು ಸಮಯದ ಹಿಂದೆ ಡಿಲ್ಲಿಯಲ್ಲಿ ಹಿಂದೀ-ಜಪಾನು ಪರಿಷತ್ತೊಂದು ಜರಗಿತ್ತು. ಆ ಪರಿಷತ್ತಿನಲ್ಲಿ ಜಪಾನೀಯರು ಹಿಂದೂಸ್ಥಾನದಲ್ಲಿ ತಮ್ಮ ವಸ್ತ್ರಗಳ ಮೇಲೆ ತೆರಿಗೆ ನಿಂತು ಖರ್ಚು ಕಡಿಮೆಮಾಡುವ ಸರಕಾರದ ಉದ್ದೇಶವನ್ನು ತಡೆಯಬೇಕೆಂದು ಬಂದಿದ್ದರು. ಹಾಗೂ ಹಿಂದೀ ಸರಕಾರವು ಹಿಂದೀ ವಸ್ತ್ರದ ಕೈಗಾರಿಕೆಗೆ ಬಾಧೆ ಬಾರದಂತೆಯೂ, ಹಿಂದೀಯ ಜನತೆಗೆ ಅನ್ಯಾಯವಾಗಿ ಬೆಲೆ ಹೆಚ್ಚದಂತೆಯೂ, ಹಿಂದೀಯ ಹತ್ತಿಗೆ ಜಪಾನಿನಲ್ಲಿ ಗಿರಾಕಿ ಹೊಂದುವಂತೆಯೂ ನಡೆಯುವರೆ ಉದ್ದೇಶಿಸಿತ್ತು. ಆದರೆ ಜಪಾನಿನ ಉದ್ದೇಶಗಳಿಗೂ ಹಿಂದೀ ಸರಕಾರದ ಉದ್ದೇಶಗಳಿಗೂ ಬಹಳ ತಾರತಮ್ಯವಿದೆ. ಜಪಾನು ಸರಕಾರಕ್ಕೆ ಜಪಾನಿನ ವ್ಯಾಪಾರದ ಹಿತವೊಂದೇ ಲಕ್ಷ್ಯದಲ್ಲಿದೆ. ಈ ಬಗ್ಗೆ ಅವರು ಅಲ್ಲಿನ ತಮ್ಮ ವ್ಯಾಪಾರಿಗಳ ಅನುಭವವನ್ನು ಪಡೆದು, ಆ ವ್ಯಾಪಾರಿಗಳು ಹೇಳುವಂತೆ ನಡೆಕೊಳ್ಳುವರು.

ಆದರೆ ಹಿಂದೀಸರಕಾರದ ಪರವಾಗಿ ಹಿಂದೀಯರೇ ಆಗಿರುವ ಸರ್ ಜೋಸೆಫ್ ಭೋರರೇ ಹಿಂದೀಯರ ಪರವಾಗಿ ಈ ಪರಿಷತ್ತಿನ ಧುರೀಣತೆಯನ್ನು ವಹಿಸಿಕೊಂಡಿದ್ದರಾದರೂ ಈ ಹಿಂದೀ ಪ್ರಾತಿನಿಧ್ಯಕ್ಕೆ ರಾಷ್ಟ್ರೀಯ ಬೆಂಬಲ ವಿರಲು ಕಾರಣವಿಲ್ಲ. ಒಂದು ಕಡೆಯಲ್ಲಿ ಅದೇ ಸಮಯದಲ್ಲಿ ಹಿಂದೂಸ್ಥಾನಕ್ಕೆ ಬಂದಿದ್ದ ಲಂಕೇಶಯರಿನ ಪ್ರತಿನಿಧಿಗಳ ಕೇಳುವಿಕೆ, ಇನ್ನೊಂದು ಕಡೆ ಅಂತರಾಷ್ಟ್ರೀಯ ಸಂಬಂಧಗಳ ಕಡೆಗೆ ಯೋಚನೆಯನ್ನಿಟ್ಟಿರುವ ಬ್ರಿಟಿಷ ಸರಕಾರದ ಧೋರಣೆಯ ಆವಶ್ಯಕತೆಗಳು, ಮತ್ತೊಂದೆಡೆ ಬ್ರಿಟಿಷ ಕೈಗಾರಿಕೆಗಳ ಹಿತವನ್ನು ಉದ್ದೇಶಿಸುವ ಬ್ರಿಟಿಷ ಸರಕಾರದ ಒತ್ತಾಯ. ಇವುಗಳ ವಾತಾವರಣದಲ್ಲಿ ಸಹಜವಾಗಿಯೂ ಸರ್ ಜೋಸೆಫ್ ಭೋರರು ಏನೂ ಮಾಡುವಂತಿರಲಿಲ್ಲ, ಮತ್ತು ಹಿಂದೀ ವ್ಯಾಪಾರಿಗಳ ಪರಿಸ್ಥಿತಿಯಾದರೂ ಏನು? ತಾವು ಬಿಗಿಹಿಡಿದರೆ ತಮ್ಮನ್ನು ಕೇಳುವವರೇ ಇಲ್ಲದಂತಾಗಿ ರಾಜಿಯಿಂದ ಸಿಕ್ಕತಕ್ಕ ಲಾಭಗಳೂ ಒತ್ತಾಯಕ್ಕೆ ಹೋದರೆ ತಪ್ಪಿ ಹೋದಾವೆಂಬ ಭೀತಿ. ಹೀಗಾಗಿ ಸ್ವತಂತ್ರ ರಾಜ್ಯಗಳಲ್ಲಿ, ಅರ್ಥಾತ್ ಜಾಪಾನ್ ಮತ್ತು ಇಂಗ್ಲೆಂಡಿನಲ್ಲಿ ಮಂತ್ರಿವರ್ಗವು ಅಥವಾ ವರ್ತಕ ಮಂಡಲಕ್ಕೆ ವ್ಯಾಪಾರದ ಹಿತರಕ್ಷಣೆಯ ವಿಷಯದಲ್ಲಿ ಹೆದರುವುದಾದರೆ, ಹಿಂದೂಸ್ಥಾನದಲ್ಲಿ ವ್ಯಾಪಾರೀವರ್ಗವು ಮಂತ್ರಿಮಂಡಲಕ್ಕೆ-ಅಂದರೆ ಎಕ್ಸಿಕ್ಯುಟಿವ್ ಕೌನ್ಸಿಲಿಗೆ- ಹೆದರಬೇಕಾಗಿರುತ್ತದೆ.

ಫಲವಾಗಿ ಹಿಂದೂಸ್ಥಾನದಲ್ಲಿ ಗಿರಣಿಗಳು ಒಂದರ ಹಿಂದೆ ಒಂದಾಗಿ ಮುಚ್ಚುತ್ತಾ ಬಂದು, ಸಾವಿರಾರು ಜನರು ಉದ್ಯೋಗವಿಲ್ಲದೆ ಒಳಲುವರಾದರೂ, ಜಾಪಾನಿಗೆ ವ್ಯಾಪಾರವು ಭದ್ರಪಡಿಸಲ್ಪಟ್ಟಿತು. ಜಾಪಾನಿಗೆ ಹತ್ತಿ ವಿಕ್ರಯಿಸುವ ಉತ್ಸಾಹದಲ್ಲಿ ಹಿಂದೂಸ್ಥಾನದಲ್ಲಿ ಉಪಯೋಗಿಸುವುದನ್ನು ಕಡಿಮೆಮಾಡಿತು. ಈ ರೀತಿಯಾದರೂ ಜಾಪಾನಿನೊಡನೆ ಸ್ನೇಹ ಬೆಳೆಸಿತೆಂಬ ಸಮಾಧಾನವಿರಲೆಂದರೆ ಜಾಪಾನಿನವರು ಈಗಲೇ ಈ ಹತ್ತಿ ವ್ಯಾಪಾರದಲ್ಲಿಯೂ, ವಸ್ತ್ರದಲ್ಲಿಯೂ ಕುತಂತ್ರಗಳನ್ನು ಹೂಡಿ, ಹಿಂದೀ-ಜಾಪಾನು ಕರಾರಿನ ಉದ್ದೇಶವನ್ನು ನಿರ್ಮೂಲಿಸಲು ಯತ್ನಿಸುತ್ತಿದ್ದಾರೆ. ಫಲವಾಗಿ, ಜಾಪಾನು ಹತ್ತಿಗೆ ಗಿರಾಕಿಯಾದರೂ ಹತ್ತಿಗೆ ಬೆಲೆಬರುವ ಹಾಗಿಲ್ಲ; ಜಾಪಾನು ಹತ್ತಿ ತೆಗೆದುಕೊಂಡು ಹೋದದ್ದಕ್ಕಿಂತಲೂ ಹೆಚ್ಚಾಗಿ ಇಲ್ಲಿನ ಗಿರಣಿಗಳ ಉಪಯೋಗದಿಂದ ಉಳಿತಾಯವಾಯಿತು.

ಈ ಚಿತ್ರವನ್ನು ಈಗಿನ ಇಂಗ್ಲೆಂಡಿನ ಚಿತ್ರದೊಡನೆ ಸಂಧೋಲಿಸಿರಿ. ಇಲ್ಲಿ ಆದ ಲಾಭವನ್ನು ನೋಡಿ ಜಾಪಾನಿನ ಪ್ರತಿನಿಧಿ ಮಂಡಲವು ಇದೇ ರೀತಿಯ ಕರಾರನ್ನು ಮಾಡುವ ಬಗ್ಗೆ ಇಂಗ್ಲೆಂಡಿಗೆ ಹೋಯಿತು. ಅಲ್ಲಿ ನಡೆದುದೇನು? ನಮ್ಮ ದೇಶದಲ್ಲಿ ಸರ್ ಜೋಸೆಫ್ ಭೋರರಿದ್ದಂತೆ ಅಲ್ಲಿ ಸರ್ ವಾಲ್ಟರ್ ರನ್ಸಿಮಾನರು ಇದ್ದಾರೆ. ಆದರೆ ಸರ್ ಜೋಸೆಫ್ ಭೋರರು ಹಿಂದೀ ವ್ಯಾಪಾರೀ ಮಂಡಳವನ್ನು ತೆರೆದುಡು ಅವರ ಹಾಲಹವಾಲಿಗಳನ್ನು ತಿಳಿಯಲಿಲ್ಲ, ಅವರಿಗೆ ಬೇಕಾದ ಬುದ್ಧಿವಾದಕ್ಕೆ ಅವರು ವೈಸರಾಯರ ಎಕ್ಸಿಕ್ಯುಟಿವ್ ಕೌನ್ಸಿಲಿಗೇನೇ ಹೋಗಬೇಕು. ಇಂಗ್ಲೆಂಡಿನಲ್ಲಾದರೆ ಸರ್ ವಾಲ್ಟರು ರನ್ಸಿಮಾನರು ಕೆಬಿನೆಟನ್ನು ಧೋರಣೆ ನಿರ್ಣಯಕ್ಕೆ ಮಾತ್ರ ಕಾಣುವರು, ಬುದ್ಧಿವಾದಕ್ಕೆ ಅವರು ಅಲ್ಲಿ ವರ್ತಕರ ಮಂಡಲವನ್ನೇ ಕಾಣುವರು. ವರ್ತಕ ಮಂಡಲದವರೂ ಸರ್ ವಾಲ್ಟರು ರನ್ಸಿಮಾನರಿಂದ ತಮ್ಮನ್ನು ಕೇಳದೆ ಯಾವುದನ್ನೂ ಮಾಡುವುದಿಲ್ಲವೆಂಬ ಮಾತನ್ನು ಪಡೆದಿರುವರು.

ಫಲವಾಗಿ ಬ್ರಿಟಿಷ ವರ್ತಕ ಮಂಡಲಕ್ಕೂ ಜಾಪಾನಿನ ಪ್ರತಿನಿಧಿ ಮಂಡಲಕ್ಕೂ ಏನೂ ತೀರ್ಮಾನಕ್ಕೆ ಬರಲಾಗಲಿಲ್ಲ. ಹಿಂದೂಸ್ಥಾನದಲ್ಲಿ ಹಿಂದೀ ಕೈಗಾರಿಕೆಯಾದ ಗಿರಣಿಗಳ ಹಿತವನ್ನು ಹಿಂದೂಸ್ಥಾನದ ಒಳಗಿನ ವ್ಯಾಪಾರದಲೂ ಕಾಯುವವರಿಲ್ಲವಾಯಿತು. ಆದರೆ ಇಂಗ್ಲೆಂಡಿನಲ್ಲಿ ಯಾವ ದಾಕ್ಷಿಣ್ಯದ ವಿಷಯವೂ ಇರಲಿಲ್ಲ. ಜಾಪಾನಿನವರು ಇಂಗ್ಲೆಂಡಿನ ವ್ಯಾಪಾರವನ್ನು ಹೆಚ್ಚಿಸಲು ಹೋಗಿದರು. ಬದಲಾಗಿ ಅಲ್ಲಿನ ವರ್ತಕರು ಇಡೀ ಭೂಲೋಕದ ವ್ಯಾಪಾರವನ್ನೇ ಮುಟ್ಟಿದರು. ಭೂಲೋಕದ ಎಲ್ಲಾ ಕಡೆಗಳಲ್ಲಿಯೂ ಜಾಪಾನಿನವರು ೧೯೩೦ನೇ ಇಸವಿಯಲ್ಲಿ ಎಷ್ಟು ವ್ಯಾಪಾರ ಮಾಡುತ್ತಿದ್ದರೋ ಅದಕ್ಕಿಂತ ಹೆಚ್ಚು ಮಾಡಬಾರದಾಗಿ ಬಂಧಿಸುವುದೇ ಬ್ರಿಟಿಷ ವರ್ತಕರ ಉದ್ದೇಶ. ಇದರಿಂದ ಜಾಪಾನಿನವರ ಯಾವ ಸಾಧನೆಯೂ ನಡೆಯಲಿಲ್ಲ.

ಹಿಂದೂಸ್ಥಾನದಲ್ಲಿ ಮೋದಿಯಂತಹವರ ಹಿಂದೀ ಕೈಗಾರಿಕೆಯ ಪರವಾಗಿಯೇ ಲಂಕೇಶಯರಿನ ಸ್ನೇಹಕ್ಕೆ ಕೈಚಾಚಿ ಇದ್ದುದನ್ನು ಕಳೆಕೊಳ್ಳುವ ಉಪಾಯವನ್ನು ಮಾಡುವರು. ಆದರೆ ಅಲ್ಲಿ ನಿರ್ದಾಕ್ಷಿಣ್ಯಲಾಭ ಮತ್ತು ದಾಕ್ಷಿಣ್ಯಪೂರ್ಣವಾದ ಮಾತುಗಳು ಇವೇ ದೊರಕುವವಲ್ಲದೆ ಬೇರೆಯಿಲ್ಲ. ಹಿಂದೂಸ್ಥಾನದ ಗಿರಣಿಗಳಿಗೆ ಹಿಂದೂಸ್ಥಾನದ ಒಳಗಿನ ವ್ಯಾಪಾರಕ್ಕೇನೇ ಜಾಪಾನಿನ ಮೇಲಾಟ. ಅದನ್ನು ತಪ್ಪಿಸಲಿಕ್ಕೇನೇ ಯಾರೂ ಪ್ರಯತ್ನಿಸುವುದಿಲ್ಲ. ಇಂಗ್ಲೆಂಡಿನಲ್ಲಿ ಒಳವ್ಯಾಪಾರದ ವಿಷಯವಂತಿರಲಿ, ಹೊರದೇಶಗಳ ವ್ಯಾಪಾರದ ಮೇಲಾಟವನ್ನು ಕೂಡ ಒಪ್ಪಲು ಅವರು ಸಿದ್ಧರಿಲ್ಲ.

ಕಾರಣ, ಅದು ಇಂಗ್ಲೆಂಡು, ಇದು ಹಿಂದೂಸ್ಥಾನ!

ಸಾಹಿತ್ಯ ಸಂಚಿಕೆಯು ಮುಂದಿನ ವಾರದ ಸಂಚಿಕೆಯೊಡನೆ ಕಳುಹಿಸಲಾಗುವುದು. ಸಂಪಾದಕ

ಸ್ಫುಟವಿಚಾರಗಳು.

ಸಿಡುಬಿನ ಹಾವಳಿ

ದಿನದಿಂದ ದಿನಕ್ಕೆ ಹೆಚ್ಚುದಂತೆಯೇ ತೋರುತ್ತಿರುವುದು. ನಗರ ಶೌಚದ ಕಾರ್ಯಗಳು ಇಂತಹ ಅಂಟುರೋಗವು ಪ್ರಕೋಪಗೊಂಡ ಕಾಲದಲ್ಲಿ ಮತ್ತಷ್ಟು ಚೆನ್ನಾಗಿ ನಡೆಯಬೇಕಾದುದಾವಶ್ಯಕ. ಇಂತಹ ರೋಗಗಳು ತಲೆಯೆತ್ತುತ್ತಲೆ ದಾಳು ಹಾಕುವ ಚಟುವಟಿಕೆಯೊಂದು ಮಾತ್ರ ನಮ್ಮಲ್ಲಿ ಕಾಣುತ್ತಿದೆ. ಇದಾದರೂ ಈ ಸಲ ಎಷ್ಟಾಯಿತೆಂದು ವರದಿಯಿಲ್ಲ. ಅಲ್ಲಲ್ಲಿ ದಾಳು ಹಾಕಿಸಿದುದರಲ್ಲಿ ಹೆಲ್ತಾಫೀಸರರು ತೃಪ್ತಿ ಕಾಣದೆ, ಪತ್ರಿಕೆಗಳ ಮೂಲಕವೂ ಪತ್ರಕಗಳ ಮೂಲಕವೂ ಆರೋಗ್ಯ ಸಾಧನೆಯ ಸುಲಭ ವಿಧಾನಗಳನ್ನೂ ಸಿಡುಬು ಬಾರದಂತೆ ತಡೆದುಕೊಳ್ಳುವ ಉಪಾಯಗಳನ್ನೂ ಪ್ರಕಟಿಸುತ್ತಿರಬೇಕು. ಮಾಯಾಲಾಂದ್ರದ ಪ್ರದರ್ಶನಗಳನ್ನೂ ಶಾಲೆಗಳಲ್ಲಿಯೂ ಸಾರ್ವಜನಿಕರ ಬಗ್ಗೆಯೂ ಏರ್ಪಡಿಸಬೇಕಾಗಿದೆ. ಈ ವಿಚಾರದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಲಕ್ಷ್ಯ ಕೊಡುವರೆಂದು ನಂಬುವೆವು.

ನವವರ್ಷ

ಶ್ರೀಮುಖ ಸಂವತ್ಸರವನ್ನು ಕಳೆದ್ದ 'ಭಾಗ್ಯ' ಕಾಲಿಟ್ಟವು! ಒಂದು ಕಡೆ ಅತಿವೃಷ್ಟಿ, ಮತ್ತೊಂದು ಕಡೆ ಅನಾವೃಷ್ಟಿ, ಭೂಕಂಪ, ಹೊಸ ಸುಂಕಗಳ ಪ್ರಕಟಣೆ, ಆರ್ಥಿಕ ಮುಗ್ಗಟ್ಟು, ಜಪಾನಿನ ಬಹಿಷ್ಕಾರ, ಭಯೋತ್ಪಾದಕರ ಚಳವಳದ ಉಜ್ವಲತೆ, ಆ ಚಳವಳದ ನಿರ್ಮೂಲನದ ಮಸೂದೆ, ಮಹಾತ್ಮಾಜೀಯವರ ಉಪವಾಸ, ಮುಷ್ಕರಗಳು ಇತ್ಯಾದಿ ದುಃಖ ಮತ್ತು ವಿಪತ್ಪರಂಪರೆಗಳೇ ಹೆಚ್ಚಾದ ಈ ಸಂವತ್ಸರವು "ಶ್ರೀಮುಖ" ನಾಮಧಾರಿಯಾಗಿ 'ದಾರಿದ್ರ್ಯಮುಖ'ವನ್ನೆ ತೋರಿ, ಅಪಹಾಸ್ಯ ಮಾಡುತ್ತ ಅಸ್ತಮಾನವಾಯಿತು! ಇನ್ನು 'ಭಾವ'ವು ಯಾವ ಭಾವದಿಂದ ಜನತೆಯನ್ನು ನಡೆಯಿಸುವುದೋ ಬಲ್ಲವರ್ಯಾರು? ವ್ಯಾಪಾರದ ಭವಿಷ್ಯವು ಆಶಾಜನಕವಾಗಿದೆಯೆನ್ನಲೇ, ರೈತರ ದುಃಖಗಳು ಅಳಿಯುವುವೆನ್ನಲೇ, ಸಂಪತ್ತಿನವು ಸಾಮಾನ್ಯವಾಗಿ ವೃದ್ಧಿಹೊಂದುವ ಚಿಹ್ನೆಗಳಿವೆಯೆನ್ನಲೇ,—ಏನೆನ್ನಲಿ? ಸುಖದುಃಖಗಳನ್ನು ಸಮಾನವಾಗಿ ತಿಳಕೊಳ್ಳುವಂತಹ ವಿವೇಕ—ಜ್ಞಾನ-ಸಂಯಮದ ಶಕ್ತಿಗಳು ನಮ್ಮಲ್ಲಿವೆಯಾದರೆ, ಮತ್ಸರ ದ್ವೇಷಾಸೂಯೆ—ಪರವಿತ್ತಾಪಹಾರದ ತೃಷ್ಣೆ—ಇವುಗಳನ್ನು ಜಯಿಸುವೆವಾದರೆ ಶ್ರೀಮುಖವು ನಮ್ಮ ಮೇಲೆ ಬಲಾತ್ಕಾರದಿಂದ ಹೇರಿದ ಕಷ್ಟಕ್ಲೇಶಗಳು ಭಾವೀ ಸುಖದ ಸಿದ್ಧತೆಗಾಗಿ ಎಂದು ತಿಳಕೊಂಡರೆ, ಪರಸ್ಪರ ಸೌಹಾರ್ದಭಾವದಿಂದ ನಡಕೊಳ್ಳುವೆವಾದರೆ, 'ಭಾವ'ವು ಆನಂದಮಯವಾಗಿ ಪರಿಣಮಿಸುವುದೆಂದು ತಿಳಿದು, ದೇಶಕಲ್ಯಾಣವನ್ನು ಚಿಂತಿಸಿ ವರ್ತಿಸುವ,—ನವವರ್ಷವು ಸರ್ವರಿಗೂ ಶುಭವನ್ನು ತರಲಿ!

ಬೆಂಗಳೂರು ದಂಡಿನ ವ್ಯಾಜ್ಯ

ಯಾವಾಗ ಮುಗಿವುದೋ ತಿಳಿದಿಲ್ಲ. 'ದಂಡು' ಎಂದು ನಾಮಕರಣ ಮಾಡಿದ ಸ್ಥಳಗಳ ಮೇಲೆ ಬ್ರಿಟಿಷ್ ಸರಕಾರಕ್ಕಿರುವುದಕ್ಕಿಂತ ಹೆಚ್ಚು ಮಮತೆ ಆಂಗ್ಲೋ ಇಂಡಿಯನರಿಗಿದೆ. ತನ್ನ ಬಿಟ್ಟುಕೊಡುವುದೆಂದರೆ ತಾವೇ ಸಂಪಾದಿಸಿ, ಕಟ್ಟಿಸಿ ಬೆಳೆಸಿದ ಸಾಮ್ರಾಜ್ಯವನ್ನು ತೊರೆವುದೆಂಬ [illegible] ಆಂಗ್ಲೋ ಇಂಡಿಯನರ [illegible] ಮಾಡುತ್ತಿರುವುದ [illegible] ಮೈಸೂರ ಸಂಸ್ಥಾನದ [illegible] ಸಮ್ಮಿಳಿತ ಅಧಿಕಾರದಿಂದ ಈ [illegible] ಇರುವುದು ಸಂಸ್ಥಾನದ ಪ್ರಜಾವರ್ಗಕ್ಕೆ [illegible] ಇದನ್ನು ತಿರಿಗಿ ಮೈಸೂರು ಸರಕಾರದ ಪೂರ್ಣಾಧಿಕಾರಕ್ಕೆ ಬಿಟ್ಟುಕೊಡದೆ ಹಾಗೆಯೇ [illegible] ಬದಲಾಗಿ ಯಾವುದಾದರೊಂದು [illegible] ಸಂದೇಹವಿಲ್ಲ. [illegible] ಹಿತಚಿಂತಕರೆಲ್ಲರು [illegible] ಮೈಸೂರಿನ ಪ್ರಿಟಿಷ [illegible] ಗತಿಯೇನು? [illegible] ಸಹಜವಾದರೂ [illegible] ಪ್ರಜಾಭಿಪ್ರಾಯ [illegible] ಹಕ್ಕುಬಾಧ್ಯತೆಗಳಿಗಾಗಿ [illegible] ಅನ್ಯಾಯವೂ ಅಸಂಬದ್ಧವೂ [illegible] ಮಾತ್ರ ಘನತೆಪಡೆವುದೆಂಬುದನ್ನು ಎಲ್ಲರೂ ತಿಳಿಯಲಿ.

ಮೆಟ್ಟೂರಿನ 'ಸ್ವರ್ಣನದಿ'

ಮೆಟ್ಟೂರು ಯೋಜನೆಯು ವರದಿಯು ಕೌನ್ಸಿಲಿನಲ್ಲಿ [illegible] ಸ್ಪಷ್ಟವಾಯಿತು. ಸೀರಾವರಿ ಕಂಸಗಳೇನೋ ನಡೆದಿವೆ. ಕೆಲವು ರೈತರೂ ಪ್ರಯೋಜನ ಪಡೆಯುತ್ತಾ ಇರುವರು,—ಆದರೆ ತೆರಿಗೆಯ ರೂಪದಲ್ಲಿ ಮಾತ್ರ ಬಂದುದು ಅತ್ಯಲ್ಪವೆಂಬುದು ಪ್ರಕಟವಾಯಿತು. ಕಾರಣವೇನು? ಸಂಕಷ್ಟದ ಕಾಲದಲ್ಲಿಯೂ ನೀರಿನ ತೆರಿಗೆಯ ಮೊತ್ತ ದೊಡ್ಡದು, ಕೊಡಬೇಕಾದ ರೈತನ ಖರ್ಚು ಹೆಚ್ಚು. ಬೆಳೆಯಲ್ಲ ಭತ್ತ, ಅತ್ತ ವಿದೇಶೀ ಭತ್ತ ಮತ್ತು ಅಕ್ಕಿಯ ಆಮದಿನ ಕೋಲಾಹಲ ಮೆಟ್ಟೂರು, ರೈತನ ತಲೆ ಮೆಟ್ಟದೆ ನಿಂತೀತೆ?—ಬೆಟ್ಟು ಜಮೀನಿನಲ್ಲಿ ಹಣ್ಣು, ತರಕಾರಿ ಇತ್ಯಾದಿಗಳನ್ನು ಬೆಳೆವುದರಲ್ಲಿ ಇನ್ನೂ ಜನ ಸಾಕಷ್ಟಿಲ್ಲದುದೂ ಒಂದು ಕಾರಣ. ಹಣ್ಣು—ತರಕಾರಿಗಳ ವ್ಯವಸಾಯದ ಬೆಳವಣಿಗೆ ಯಥೇಷ್ಟ ಇಂಬು ಇದೆ. ಇದನ್ನು ಸರಕಾರವು ಗಮನಕ್ಕೆ ತಂದುಕೊಂಡು, ಉತ್ಪತ್ತಿಯನ್ನು ಪರವೂರುಗಳಿಗೂ ಕಳುಹಬೇಕಾದ ಅನುಕೂಲತೆಗಳನ್ನು ಕಲ್ಪಿಸಿಕೊಟ್ಟು, ಎಕ್ರೆಗೆ ರೂ ೧೫ರ ಬದಲಾಗಿ ನಾಲ್ಕೈದು ರೂಪಾಯಿಗಳನ್ನು ನಿಶ್ಚಯಿಸಿ ಸರ್ವತೋಮುಖವಾದ ಸೌಲಭ್ಯಗಳನ್ನೊದಗಿಸಿದರೆ ಮೆಟ್ಟೂರು ಯೋಜನೆಯು ಸ್ವರ್ಣಪ್ರವಾಹವಾಗಿ ಪರಿಣಮಿಸದೇನು? ಅದಾಗದಿದ್ದರೆ—'ಬೊಂಬಾಯಿಯ ಬೇಕ್ ಬೇ ಯೋಜನೆಯಂತೆ ಇದೂ ಒಂದು ರಾಕ್ಷಸ ಮಗು' ಎಂದು ನಾಮಕರಣವಾಗುವುದೋ ಎಂದು ಸಂದೇಹ.

+ + + +

[illegible] ಪಂಚಾಂಗ.

([illegible] ಮಾಸ—ಸುಗ್ಗಿ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಮಲೆಯಾಳ	ಸೂರ್ಯ. ಉ	ಅಸ್ತ
24	ಶನಿ	೯	೪೬. ೧	ಆರ್ದ್ರಾ	೨೪೦	೧೧	6.35	6.41
25	ರವಿ	೧೦	೫೧.	೨ ಪುನರ್ವಸು	೯. ೦	೧೨	6.34	6.41
26	ಸೋಮ	೧೧	೫೫.೪೦	ಪುಷ್ಯ	೦೫. ೦	೧೩	6.33	6.41
27	ಮಂಗಳ	೧೨	೫೯.೦೪	ಅಶ್ಲೇಷಾ	೨೦.೪೪	೧೪	6.33	6.41
28	ಬುಧ	೧೩	೬೦. ೦	ಮಘಾ	೨೫.೪೩	೧೫	6.32	6.41
29	ಗುರು	೧೩	೨. ೧	ಪುಬ್ಬಾ	೨೯. ೦	೧೬	6.31	6.41
30	ಶುಕ್ರ	೧೪	೪.೧೪	ಉತ್ತರಾ	೪೧.೧೪	೧೭	6.31	6.41

ಮುಂಗಳೂರಿನ ವಾಯುಸ್ಥಿತಿ.

ತಾರೀಖು, Date	Temperature. ಉಷ್ಣ (ಕಾವು) Maximum ಹೆಚ್ಚೆಂದರೆ		Minimum ಕಡಿಮೆ		Rainfall. ಮಳೆ ದಿನದ ಮಳೆ	ಜುಮುಲಾ ಮಳೆ.
15	86—	2	72—	[illegible]	—	—
16	86—	7	76—	2	—	—
17	89—	2	76-	1	—	—
18	88—	7	75—	0	—	—
19	87—	6	75—	6	—	—
20	88—	2	75	9	—	—
21	88—	5	76	9	—	167—64

ಮುಂಗಳೂರಿನ ಪೇಟೆ ಧಾರಣಿ.

ಜೇನಸು		ಇಂದ ರೂ. ಆ.	ವರೆಗೆ ರೂ. ಆ.
ಹೊಸ ರಾಶಿ ಅಕ್ಕಿ	...	3— 4	3—12
ಹೊಸ ಮುಸ್ಕತಿ	...	4— 2	4—10
ಹೊಸ ಗುಡ್ಡು	...	3—10	4— 2
	...	—	—
ಊರ ಅವ್ವಲ್ ಬೆಳ್ತಿಗೆ	...	4— 4	4—12
ರಂಗೂನು ಬೆಳ್ತಿಗೆ ಗೋಣಿ ೧ಕ್ಕೆ	...	4—14	5— 8
ಎಲ್ಲೂರು ಬೆಳ್ತಿಗೆ ಮುಡಿ ೧ಕ್ಕೆ	...	3— 4	3— 6
ಗೋಧಿ ಗೋಣಿ ೧ಕ್ಕೆ	...	1[illegible]— 0	12— 8
ತೊಗರಿ ಗೋಣಿ ೧ಕ್ಕೆ	...	8—12	10— 8
ಹುರುಳಿ ಗೋಣಿ ೧ಕ್ಕೆ	...	5— 4	5— 8
ಕಡಲೆ ಗೋಣಿ ೧ಕ್ಕೆ	...	8—12	12— 8
ತೊಗರಿಬೇಳೆ ಗೋಣಿ ೧ಕ್ಕೆ	...	10— 0	16— 6
ಉದ್ದು ಗೋಣಿ ೧ಕ್ಕೆ	...	7— 0	7—10
ಹೆಸರು ಗೋಣಿ ೧ಕ್ಕೆ	...	8— 0	9— 0
ಊರುಬೆಲ್ಲ ಖಂಡಿ ೧ಕ್ಕೆ	...	32— 0	37— 8
ಉಪ್ಪು ಗೋಣಿ ೧ಕ್ಕೆ	...	5— 0	5— 8
ಕೊಬ್ರಿ ಖಂಡಿ ೧ಕ್ಕೆ	...	40— 0	45— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	...	17— 8	18— 8
ಎಳ್ಳಿಂಡಿ ಖಂಡಿ ೧ಕ್ಕೆ	...	23—12	25— 0
ಕೊಬ್ರಿ ಎಣ್ಣೆ ಮುಡಿ ೧ಕ್ಕೆ	...	2—12	4— 0
ಎಳ್ಳೆಣ್ಣೆ ಮುಡಿ ೧ಕ್ಕೆ	...	5— 0	6— 0
ಚಿಮಿಣಿಎಣ್ಣೆ ಪೆಟ್ಟಿಗೆ ೧ಕ್ಕೆ	...	6— 8	8—
ಮೋರಿಸ ಸಕ್ಕರೆ ಮುಡಿ ೧ಕ್ಕೆ	...	3—11	3—12
ಹೊಸ ಮೆಣಸು	...	5—12	7— 4
ಸಾಸಿವೆ ಮುಡಿ ೧ಕ್ಕೆ	...	4— 4	4—12
ಕಾಳುಮೆಣಸು ಖಂಡಿ ೧ಕ್ಕೆ	...	130— 0	135— 0
ಯೇಲಕ್ಕಿ ಮುಡಿ ೧ಕ್ಕೆ	...	20— 0	24— 0
ಹೊಸ ಗೇರುಬೀಜ ಮುಡಿ ೧ಕ್ಕೆ	...	3—10	3—12
ಕಬ್ಬಿಣ ಖಂಡಿ ೧ಕ್ಕೆ	...	42— 0	44— 0
ತಾಂಬ್ರ ತಗಡು ಮುಡಿ ೧ಕ್ಕೆ	...	10— 0	10— 2
ತಾಂಬ್ರ ಪಾತ್ರಗಳು ಮುಡಿ ೧ಕ್ಕೆ	...	13— 0	14— 8
ಬೇಸಿಬೆಳ್ಳಿ ಸೇರು ೧ಕ್ಕೆ	...	14—12	15— 0
ಹಿತ್ತಾಳೆ ತಗಡು ಮುಡಿ ೧ಕ್ಕೆ	...	9— 0	9— 8
ಪವನು ೧ಕ್ಕೆ	...	20— 2	21— 4
ಹುಣಸೆ ಹುಳಿ ಖಂಡಿ ೧ಕ್ಕೆ	...	25— 8	30— 0
ನೇಟಿವ್ ಕಾಫಿ ಖಂಡಿ ೧ಕ್ಕೆ	...	180— 0	205— 0
ಫ್ಲಾಂಟೇಶನ್ ಕಾಫಿ ಖಂಡಿ ೧ಕ್ಕೆ	...	270— 0	275— 0
ಹಳೆ ಅಡಿಕೆ	...	110— 0	125— 0
ಹೊಸ ಅಡಿಕೆ	...	75— 0	100— 0

THE CANARA PUBLIC CONVEYANCE CO., LTD, MANGALORE
(ESTABLISHED 1914)

ಕೆನರಾ ಪಬ್ಲಿಕ್ ಕನ್ವಯನ್ಸ್ ಕಂಪನಿ, ಲಿಮಿಟೆಡ್,
ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯ ಕ್ಷೇತ್ರಗಳಿಗೆ ಹೋಗುವವು. ಮೈಸೂರು, ಕೊಡಗು ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನ್ ಕೂಡಾ ಇರುವುದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವಂತಹರೆ ಪ್ರತಿದಿನವೂ ನಾಲ್ಕು ಸಾರಿ ಕಲ್ಯಾವಳಿ ಮಾರ್ಗವಾಗಿಯೂ, 4 ಸಾರಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲಪಿರಿ. ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 37, ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ, ಕಾರ್ಕಳ ಗೋಮಟೇಶ್ವರನ ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು 4 ಸಲ ಹೊರಟು ಎರಡೂವರೆ ತಾಸುಗಳ ಸಮಯದಲಿ ಕಾರ್ಕಳಕ್ಕೆ ತಲಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ, ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ತಲ್ಪಬಹುದು.

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಬೆಳಿಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಪ್ರಾಚೀನ ಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಬೇಲೂರಿನ ಸೋಮನಾಥ ದೇವಾಲಯವನ್ನು ನೋಡಲು, ನೋಡಲಿಚ್ಛಿಸುವವರು, ಬೆಳಿಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ, ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದೂಸ್ಥಾನ, ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣ ಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ, ಮಂಗಳೂರಿನಿಂದ ಮಡಿಕೇರಿಗೆ 7 ಘಂಟೆಗಳೊಳಗೂ, ಕಡೂರಿಗೆ 12 ಘಂಟೆಗಳೊಳಗೂ, ಮೈಸೂರಿಗೆ 12 ಗಂಟೆಗಳೊಳಗೂ, ಸಕಲೇಶಪುರಕ್ಕೆ 8 ಗಂಟೆಗಳೊಳಗೂ, ಹಾಸನಕ್ಕೆ 10 ಗಂಟೆಗಳೊಳಗೂ, ಚಿಕ್ಕಮಗಳೂರಿಗೆ 8 ಗಂಟೆಗಳೊಳಗೂ, ಕೊಲ್ಲೂರಿಗೆ ಮತ್ತು ಗೋಕರ್ಣಕ್ಕೆ ೧॥ ದಿನದೊಳಗೂ ಶಿಮೊಗ್ಗಕ್ಕೆ 12 ಗಂಟೆ ತಲಪಬಹುದು. ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,
The Canara Public Conveyance Company Ltd, Mangalore

Chikmagalur Public Conveyance Motor Service.
CHIKMAGALUR.
ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,
ಚಿಕ್ಕಮಗಳೂರು.

ಮುಂಬಾಯಿಯಿಂದ - ಮಂಗಳೂರಿಗೆ
ಮಂಗಳೂರಿನಿಂದ - ಮುಂಬಾಯಿಗೆ.
ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ

ಮಂಗಳೂರು—ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು – ಅನುಕೂಲ ಪ್ರಯಾಣ ಸೌಕರ್ಯಗಳು.

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ
ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ
ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ.

ಚಿಕ್ಕಮಗಳೂರಿನಿಂದ – ಶಿವಮೊಗ್ಗಕ್ಕೆ, ಬೇರೂರಿಗೆ, ಕಡೂರಿಗೆ.
– ಮೂಡಗೆರೆಗೆ, ಸಕಲೇಶಪುರಕ್ಕೆ.
– ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
—ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ನಿರಾಯಾಸದ ಪ್ರಯಾಣ! ಉತ್ಸಾಹಕರ ಸೌಕರ್ಯ!

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

ಕೋಟ್ಯಾಧೀಶ್ವರ ರೊಕ್ಫೆಲ್ಲರ್; ಯೋಗಿ, ಭೋಗಿ, ತ್ಯಾಗಿ!!!

ಲೇಖಾಂಕ ೧ ಯಾರಿವರು?

ಸುಮಾರು ದಶಕೋಟಿ ಜನರೊಳಗೆ ಸರಿಸಾಟಿಯಿಲ್ಲದ ಧನನೃಪತಿಯೆನಿಸುವ ಗೌರವವು ಸಾಮಾನ್ಯವಲ್ಲ, ಅದು ಹಿಮಾಲಯದಂತಹ ಅದ್ಭುತ ಅಂತಹ ಅದ್ಭುತ ಧನಶಾಲಿಯು ಅಮೇರಿಕದ ವಾಣಿಜ್ಯಸಿಂಹ ರೊಕ್‌ಫೆಲ್ಲರ್!

ರೊಕ್‌ಫೆಲ್ಲರರ ಚರಸ್ಥಿರಾಸ್ತಿಗಳಾಗಲಿ ನಗದಿ ಹಣವಾಗಲಿ ಎಷ್ಟಿರಬಹುದೆಂದು ಅವರ ಲೆಕ್ಕಪತ್ರಗಳನ್ನಿಡುವ ಎಲ್ಲ ಗುಮಾಸ್ತರಿಗೂ ತಿಳಿದಿಲ್ಲ ಅವನ್ನು ಮುಂದೆ ತಿಳಿವುದಾದರೆ ಅವರ ಮಗನೊಬ್ಬನು ತಿಳಿಯಬಹುದು ಅವರ ಮಕ್ಕಳಾಗಲಿ ಅವರಾಗಲಿ ಚರಸ್ಥಿರ ಸೊತ್ತುಗಳ, ನಗದಿ ಹಣದ, ನಿಜಕಕೆಯನ್ನು ಪ್ರಪಂಚಕ್ಕೆ ಹೇಳಬೇಕೆಂಬ ಯಾವ ಶಾಸನವೂ ಅವರನ್ನು ಪೀಡಿಸುವಂತಿಲ್ಲ ರೊಕ್‌ಫೆಲ್ಲರರ ಮೀಲುನಾಮೆಯೂ ಆ ರಹಸ್ಯವನ್ನು ಪ್ರಕಟಿಸುವಂತೆ ತೋರದು ಕಾರಣ, ಅವರ ಜೀವಮಾನದಲ್ಲವರು ದಾನವಾಗಿ ಕೊಟ್ಟ, ತನ್ನ ಇಚ್ಛೆಯುಳ್ಳವರಿಗೆ ವಿಗರ್ಾಯಿಸಿದ ಹಣದ ಮೊತ್ತಗಳ ಅಥವಾ ಆಸ್ತಿಗಳ ವಿವರವು ಮೀಲುನಾಮೆಯಲ್ಲಿ ಬರುವಂತಿಲ್ಲ ರೊಕ್‌ಫೆಲ್ಲರರ ಹಣದಲ್ಲಿ ಕೆಲವಂಶವು ರೈಲ್ವೇ ಕಂಪೆನಿಗಳ ಪಾಲುಗಳಲ್ಲಿದೆ ಒಂದಂಶ ಎಣ್ಣೆಯ ಕಂಪೆನಿಗಳಲ್ಲಿ, ಮತ್ತೊಂದು ಕಟ್ಟೋಣಗಳಲ್ಲಿ,—ಹೀಗೆ ನಾನಾ ಮುಖವಾಗಿ ಸಂಚಯದಲ್ಲೀ ಇದೆ ರೊಕ್‌ಫೆಲ್ಲರರ ಒಟ್ಟು ಆಸ್ತಿಗಳೆಷ್ಟೆಂಬ ವಿಷಯದಲ್ಲಿ ಸ್ಪಷ್ಟವಾಗಿ ಹೇಳಬರುವಂತಿಲ್ಲವಾದರೂ ಅವರ ಔದಾರ್ಯದಿಂದ ನಾನಾ ಧರ್ಮಸಂಸ್ಥೆಗಳಿಗೂ ಮುಂದಿಗೂ ಸಂದ ದಾನಧರ್ಮಗಳ ಮೊತ್ತವು ಈ ತನಕ ಸುಮಾರು ೧,೨೦೦,೦೦೦,೦೦೦ ಡೊಲ್ಲರುಗಳಷ್ಟಾಗಿರಬಹುದೆಂದು ಲೆಕ್ಕವಿದೆ (ಒಂದು ಡೊಲ್ಲರು—ರೂ ೩-೮-೦)

ಜೋನ್ ಡೇವಿಡ್ಸನ್ ರೊಕ್‌ಫೆಲ್ಲರವರು, ನ್ಯೂಯಾರ್ಕ ಸಂಸ್ಥಾನದ ಹಾರ್ವರ್ಡ್ ಮಿಲ್ಸ್ ಎಂಬ ಒಂದು ಗ್ರಾಮದಲ್ಲಿ ೧೮೩೯ನೇ ಇಸವಿಯ ಜುಲಾಯಿ ತಾ ೮ರಲ್ಲಿ ಜನಿಸಿದರು. ಇವರ ತಂದೆಯವರು ಚಿಕ್ಕ ಹಳ್ಳಿವೈದ್ಯರೊಬ್ಬರು ತಾಯಿಯು ಚಟುವಟಿಕೆಯುಳ್ಳ ವಿವೇಕಶಾಲಿನಿ ಹೆಂಗುಸು ಡೇವಿಡ್ಸನ್ ರೊಕ್‌ಫೆಲ್ಲರರು ಕೂಡಿ ಒಟ್ಟು ೯ ಮಂದಿ ಮಕ್ಕಳು ರೊಕ್‌ಫೆಲ್ಲರರು ಎರಡನೆಯವರು ಒಬ್ಬ ಸಹೋದರನು ರೊಕ್‌ಫೆಲ್ಲರರ ವ್ಯಾಪಾರದಲ್ಲಿ ಚಿಕ್ಕ ಪಾಲುಗಾರನಾದನು ಇಬ್ಬರು ಅಕ್ಕತಂಗಿಯರು ಸಾಮಾನ್ಯ ಗೃಹಸ್ಥರಿಬ್ಬರನ್ನು ವಿವಾಹವಾದರು ತೀರ ಚಿಕ್ಕ ಸಹೋದರನು ಮಾತ್ರ ಅಣ್ಣನೊಂದಿಗೆ ಹಿತದಿಂದ ಇರಲಾರದೆ ದೂರವಾದನು

ರೊಕ್‌ಫೆಲ್ಲರರ ಬಾಲ್ಯವು ಹಳ್ಳಿಯ ಇತರ ಬಾಲಕರಂತೇ ಕಳೆಯಿತು,—ಒಬ್ಬ ಬೇಸಾಯಗಾರನಲ್ಲಿ ಕೆಲಸಕ್ಕಿದ್ದು, ದನಗಳ ಹಾಲು ಕರೆಯುವುದು, ಪೇಟೆಯಿಂದ ಸಾಮಾನುಗಳನ್ನು ತಂದುಕೊಡುವುದು ಇತ್ಯಾದಿ ಅವರಿಗೆ ಶಿಕ್ಷಣವೇನೋ ಅಲ್ಪಸ್ವಲ್ಪ ೧೬ನೇ ವಯಸ್ಸಿನ ತನಕ ತನ್ನ ಮನೆಯ ಬಳಿಯಲ್ಲಿ ಇದ್ದ ಚಿಕ್ಕದೊಂದು ಶಾಲೆಗೆ ಹೋಗಿ, ಬರೆಯಲಿಕ್ಕೂ ಓದಲಿಕ್ಕೂ ಕಲಿತರು, ಆಷ್ಟೆ ಶಾಲೆಯಲ್ಲೇನೂ ಅವರು ಚುರುಕುತನ ತೋರಿಸಲಿಲ್ಲ, ಆದರೆ ಬಹು ಜಾಗರೂಕತೆಯ, ವಿವೇಕಶಾಲಿ ವಿದ್ಯಾರ್ಥಿಯಾಗಿದ್ದರು ಶಾಲೆಯ ತನ್ನ ವಿದ್ಯಾಭ್ಯಾಸದ ಜೀವನದಲ್ಲಿ ಅವರು ತೋರಿಸಿದ ಅದ್ಭುತವೇನಾದರೂ ಇದ್ದರೆ—ಅದು ಬಾಯಿಲೆಕ್ಕಗಳ ವಿಷಯದಲ್ಲಿ ಇಂತಹ ಗಣಿತದ ಜ್ಞಾನವಿದ್ದುದರಿಂದಲೇ ಒಮ್ಮೆ ಅದೊಂದು ಸಂದರ್ಭದಲ್ಲಿ ತನ್ನ ಸಾವಿರಾರು ಡೊಲ್ಲರು ಉಳಿಯುವಂತಾಯಿತೆಂದು ತನ್ನ ೪೦ನೇ ವಯಸ್ಸಿನಲ್ಲೊಮ್ಮೆ ಅವರು ಹೇಳಿರುವರು ರೊಕ್‌ಫೆಲ್ಲರಿಗೆ ತಮ್ಮ ಬಡತನದ ದುಃಖವು ಚೆನ್ನಾಗಿ ಮನಸ್ಸಿನಲ್ಲಿ ನಾಟಿತ್ತು. ತಾಯಿಯ ಕಷ್ಟಗಳನ್ನರಿತು, ಆಕೆಯನ್ನು ಸಂತೋಷಪಡಿಸುವುದು ತನ್ನ ಕರ್ತವ್ಯವೆಂದರಿತಿದ್ದರು ಆದರೂ ಧೈರ್ಯಗೆಟ್ಟು ಚಿಂತಿಸಿ ಕುಳಿತುಕೊಳ್ಳುವ ಅಂಜುಬುರುಕರಲ್ಲ. ಧರ್ಮದಲ್ಲೂ ಅವರಿಗೆ ನಂಬಿಕೆ ಹೆಚ್ಚು ತನ್ನ ಚಿಕ್ಕ ವಯಸ್ಸಿನಲ್ಲಿ ಧರ್ಮದ ವಿಷಯವಾಗಿ ಏನನ್ನೆಲ್ಲ ಕಲಿತಿದ್ದರೋ ಅದನ್ನವರು ನಂಬಿ, "ಮರೆಯದೆ, ಕೊನೆತನಕವೂ ದೃಢವಾಗುವಂತೆ ಕಾಪಾಡಿಕೊಂಡು ಬಂದವರು ಒಂದು ಚಟವಾಗಲಿ, ಧರ್ಮವಾಗಲಿ, ಸಾಮಾಜಿಕ ಕಟ್ಟಲೆಯಾಗಲಿ, ಅದನ್ನೊಬ್ಬನು ಪ್ರೀತಿಸಿ ಪಾಲಿಸಬೇಕು ಅಥವಾ ದ್ವೇಷಿಸಿ ಖಂಡಿಸುತ್ತ ಬರಬೇಕು ವಿನಹ ಎರಡೂ ಪೂರ್ಣವಾಗಿಲ್ಲದ ತ್ರಿಶಂಕುಸ್ವರ್ಗವಾಗಬಾರದೆಂದು ಅವರ ಮತ.

೧೬ನೇ ವಯಸ್ಸಿನಲ್ಲಿ (೧೮೫೫ನೇ ಸಪ್ಟಂಬರ ತಾ. ೨೬) ಅವರು ಒಹಿಯೋ, ಸಂಸ್ಥಾನದ ಕ್ಲೀವ್ಲೆಂಡ್ ಎಂಬಲ್ಲಿ ಒಂದು ಅಂಗಡಿಯಲ್ಲಿ ಕಾಗದ ಪತ್ರಗಳನ್ನೊಯ್ಯುವ ಹಾಗೂ ಗುಮಾಸ್ತನ ಕೆಲಸ ನೋಡಿಕೊಳ್ಳುವ ಕೆಲಸಕ್ಕೆ ಹಚ್ಚಿಕೊಂಡರು

೧೮೫೮ರಲ್ಲಿ ಒಬ್ಬ ವ್ಯಾಪಾರಸ್ಥನೊಡನೆ ಪಾಲುಗಾರರಾಗಿ ಸೇರಿ, ಧಾನ್ಯದವಸ, ಮೀನು, ಸುಣ್ಣ ಇತ್ಯಾದಿಗಳ ವ್ಯಾಪಾರವನ್ನಾರಂಭಿಸಿದರು

೧೮೬೨ರಲ್ಲಿ (೨೩ನೇ ವಯಸ್ಸಿನಲ್ಲಿ) ಸೀಮೆಯೆಣ್ಣೆಯನ್ನು ಸ್ವಚ್ಛಪಡಿಸಿ ಚಿಲ್ಲರೆಯಾಗಿ ಮಾರಾಟಮಾಡುವ ಕೆಲಸಕ್ಕೆ ಸೇರಿದರು

೧೮೬೫ರಲ್ಲಿ ತಮ್ಮೊಡನೆ ಇದ್ದ ಧನಸಂಗ್ರಹವನ್ನೆಲ್ಲ ಎಣ್ಣೆಯ ವ್ಯಾಪಾರದಲ್ಲಿ ಸಂಚಯಿಕ್ಕರಿಸಿದರು. ಇತರ ವ್ಯಾಪಾರದ ಹಂಬಲವನ್ನು ಬಿಟ್ಟು, ಎಣ್ಣೆಯ ವ್ಯಾಪಾರದಲ್ಲಿ ಚಿತ್ತಕೊಟ್ಟು ದುಡಿಯಲಾರಂಭಿಸಿದರು ೨೬ನೇ ವಯಸ್ಸಿನ ತನಕ ಅವರಿಗೆ ತನ್ನ ಧನವನ್ನು ಇತರ ವ್ಯಾಪಾರಗಳಲ್ಲಿ ಸಂಚಯಿಕ್ಕರಿಸುವ ಆಲೋಚನೆ ಕೂಡ ಬರಲಿಲ್ಲ ಮುಂದೆ ಎಣ್ಣೆಯ ವ್ಯಾಪಾರಕ್ಕೆ ಅಗತ್ಯವಿಲ್ಲದೆ ಉಳಿದಿರುವ ಹಣವನ್ನು ಬೇರೆ ಕಂಪೆನಿಗಳಲ್ಲಿ ಪಾಲಿಗೆ ಕೊಟ್ಟರು

೧೮೭೦ರಲ್ಲಿ (೩೧ನೇ ವಯಸ್ಸಿನಲ್ಲಿ) ಅವರು, ಕ್ಲೀವ್ಲೆಂಡಿನ ಇತರ ಎಣ್ಣೆ ಸಾಹುಕಾರರನ್ನು ಕೂಡಿ "ಸ್ಟೆಂಡಾರ್ಡ ಒಯಿಲ್ ಕಂಪೆನಿ'ಯನ್ನು ಸ್ಥಾಪಿಸಿದರು ಈ ಕಂಪೆನಿಗೆ ಇವರೇ ಅಧ್ಯಕ್ಷರು ಕಂಪನಿಯಾದ ಎರಡೇ ವರ್ಷಗಳಲ್ಲಿ ಇವರೇ ಆ ವ್ಯಾಪಾರದಲ್ಲಿ ನೃಪತಿಯೆನಿಸುವಂತಾಯಿತು ತಾವು, ತಮ್ಮೊಂದಿಗೆ ಪಾಲುಗಾರರಾಗಿರುವ ಇತರರೂ ಮೇಲ್ಮೆ ಹೊಂದುವಂತೆ ಎಲ್ಲವೂ ಸುಸೂತ್ರವಾಗಿ ನಡೆಸಲ್ಪಟ್ಟಿತು

೧೮೮೨ರಲ್ಲಿ (೪೩ನೇ ವಯಸ್ಸಿನಲ್ಲಿ) ಆ ಕಂಪೆನಿಯನ್ನು 'ಸ್ಟೆಂಡಾರ್ಡ ಒಯಿಲ್ ಟ್ರಸ್ಟ' ಎಂಬುದಾಗಿ ಪರಿವರ್ತಿಸಿ ೯ ಮಂದಿ ಆಡಳಿತದಾರರನ್ನಾಗಿ ನೇಮಿಸಿದರು ವ್ಯಾಪಾರದ ನೃಪತಿಯಾಗಿದ್ದವರೀಗ ಚಕ್ರವರ್ತಿಯೆನಿಸಿದರು ಮುಂದೆ ೩೦ ವರ್ಷಗಳ ತನಕ ಇವರ ಕಂಪನಿಯನ್ನೆದುರಿಸಿ ಸ್ಪರ್ಧಿಸುವ ಎದೆಗಾರಿಕೆ ಯಾರಿಗೂ ಇಲ್ಲದಂತಾಯಿತು ಇವರ ವರ್ಚಸ್ಸು ದಶದಿಕ್ಕುಗಳಲ್ಲೂ ಪಸರಿಸಿ ಕಾನೂನಿನ ಯಾವ ತುಂಟತನವೂ ಇವರನ್ನು ಪೀಡಿಸದಷ್ಟಕ್ಕೆ ಇವರು ಸಮರ್ಥರೂ ಪ್ರಬಲರೂ ಆದರು ಒಂದು ತಲಾಂತರದ ವರೆಗೆ ಇವರ ಈ ಕಂಪೆನಿಯು ಎಣ್ಣೆಯ ಜಗತ್ತನ್ನೂ ರೈಲ್ವೇ ಕಂಪೆನಿಗಳನ್ನೂ, ಬೇಂಕುಗಳನ್ನೂ, ರಾಜಕೀಯ ಪ್ರಪಂಚವನ್ನೂ, ಪತ್ರಿಕಾಪ್ರಪಂಚವನ್ನೂ ಆಳುವಷ್ಟಕ್ಕಾಯಿತು

ಕಾನೂನಿನ ಹಿಡಿತಕ್ಕೆ ಸಿಕ್ಕದಷ್ಟು ಉಪಾಯದಿಂದ ಅವರ ಕಂಪೆನಿಯು ನಡೆಯಿತು ಹಣ ನುಂಗಲು, ಈ ಕಂಪೆನಿಯು ಸ್ವೇಚ್ಛೆಯಾಗಿ ನಡೆಯಲಾರದಷ್ಟು ಬಿಗಿಯ ಕಾನೂನಿನ ತುಂಟತನವಿತ್ತು ಅದನ್ನು ಇವರು ಎದುರಿಸಿ, ಉಪಾಯದಿಂದಲೇ ಬಿಡಿಸಿಕೊಳ್ಳುತ್ತ ಮುನ್ನಡೆದರು ದಂಡೋಪಾಯ ನಡೆಯದಲ್ಲಿ ಸಾಮೋಪಾಯವನ್ನು ಪ್ರಯೋಗಿಸಿದರು ಪ್ರತ್ಯಕ್ಷವಾಗಿ ಮಾಡಲಾಗದುದನ್ನು ಅಪ್ರತ್ಯಕ್ಷವಾಗಿ ಮಾಡಿದರು ತಮ್ಮ ದೃಷ್ಟಿ, ಗುರಿ, ಹಣ, ಧೋರಣೆಗಳನ್ನೆಲ್ಲ ಕೇಂದ್ರೀಕರಿಸಿ, ಏಕಮನಸ್ಸಿನಿಂದ, ಕಾನೂನಿಗೆ ತಪ್ಪದೆ—(ಆದರೆ ಕಾನೂನು ಹೇಳದಂತೆಯೂ ನಡೆಯದೆ') ಇವರ ಕಂಪೆನಿಯು, ಅಭಿವೃದ್ಧಿಹೊಂದಿತು

೧೯೦೧ರಲ್ಲಿ ಇವರು, ಜೆ ಪಿ ಮೋರ್ಗನರು ಸ್ಥಾಪಿಸಿದ ಕಬ್ಬಿಣದ ಗನಿಗಳಲ್ಲಿ ತನ್ನ ಪಾಲುಗಳನ್ನು ಸಂಚಯಿಕ್ಕರಿಸಿದರು ಇದರಲ್ಲಿಯೂ ಯಥೇಚ್ಛ ಲಾಭವನ್ನು ಗಳಿಸಿರುವರು

೧೮೯೭ರಲ್ಲಿ (೫೮ನೇ ವಯಸ್ಸಿನಲ್ಲಿ) ಅವರು ವ್ಯಾಪಾರ ಪ್ರಪಂಚದಿಂದ ನಿವೃತ್ತರಾದರು ಆದರೆ, ಆಗಾಗ್ಗೆ ಆ ಕಡೆ ಲಕ್ಷ್ಯ ಕೊಡದೆ ಇರುತ್ತಿರಲಿಲ್ಲ ನಿವೃತ್ತರಾದರೂ ಕಂಪೆನಿಯ ಅವರ ಅಧ್ಯಕ್ಷಸ್ಥಾನವು ಅವರಿಗೇ ಇತ್ತು ೧೯೧೧ರಲ್ಲಿ ಸಂಯುಕ್ತ ಅಮೇರಿಕದ ವರಿಷ್ಠ ನ್ಯಾಯ ಮಂಡಲವು, ಹೀಗೆ ಹಣಗಳಿಸುತ್ತಲೇ ಹೋಗುವುದು ಅನ್ಯಾಯವೆಂದು ತೀರ್ಮಾನ ಮಾಡಿತು ಅನಂತರ ರೊಕ್‌ಫೆಲ್ಲರರು ಪೂರ್ಣವಾಗಿ ವ್ಯಾಪಾರದ ಹಂಬಲವನ್ನು ಬಿಟ್ಟುಕೊಟ್ಟು ನಿವೃತ್ತರಾದರು.

ರೊಕ್‌ಫೆಲ್ಲರರ ಅಭಿವೃದ್ಧಿಯು ಅರೇಬಿಯನ್ ನೈಟ್ಸ್ ಕತೆಯಂತೆ ಒಂದು ಅದ್ಭುತ ಆದರೆ, ಅವರಿಗೆ ವಜ್ರದ ಗನಿಗಳಾಗಲಿ, ಅಲ್ಲಾವುದ್ದೀನನ ಮಾಯಾಲಾಂದ್ರವಾಗಲಿ ದೊರೆತಿಲ್ಲವೆಂಬುದು ಈ ಅದ್ಭುತದಲ್ಲಿನ ಒಂದು ಅದ್ಭುತ ಸತ್ಯವೇ ಆಗಿದೆ ಅವರ ಜೀವನವು ಚಿಕ್ಕಂದಿನಿಂದಲೂ ಸುಖಸಾಗರವಲ್ಲ ಕಷ್ಟದಲ್ಲಿ ಹುಟ್ಟಿ, ಕಷ್ಟದಲ್ಲಿ ಬೆಳೆದವರು ಅವರ ಜೀವಮಾನದಲ್ಲಿ ಅವರು ಎದುರಾಯಿಸಿದ ತುಫಾನುಗಳೆಷ್ಟೋ ಇವೆ ಇವರೊಡನೆ ೧೦೦ ಮಿಲ್ಲಿಯ ಡೊಲ್ಲರಿನ ಆಸ್ತಿಯಿದೆಯೆಂದಾಗಲೇ ಅಮೇರಿಕದ ಹಲವು ಕ್ಷುದ್ರಹೃದಯರಿಗೆ ಇವರ ಮೇಲೆ ಮತ್ಸರ ಹೋದಲ್ಲೆಲ್ಲ ಕೆಲಕಾಲ ತಿರಸ್ಕಾರ, ಇನ್ನವರು ವ್ಯಾಪಾರ ಮಾಡಬಾರದೆಂದೂ, 'ಎಣ್ಣೆಯ ಗನಿಗಳ ಕಡೆಗೆ ಮುಖ ತೋರಿಸಿದರೆ ಜಾಗ್ರತೆ'—ಎಂದೂ ಬೆದರಿಕೆ ಹಾಕಿದವರೂ ಇರುವರು ಆದರೆ, ಎಲ್ಲರೂ ಇವರನ್ನು ಕಂಡಾಕ್ಷಣ ನಯ-ಭಯ-ಭಕ್ತಿಯಿಂದಲೇ ವರ್ತಿಸಿದರು ಕಾನೂನಿನ ಮೂಲಕ ಇವರನ್ನೆಷ್ಟೋ ಸಂದರ್ಭದಲ್ಲಿ ಪ್ರತಿಬಂಧಿಸಲೆತ್ನಿಸಿದಾಗ ಇವರೇನೂ ಸ್ವರಕ್ಷಣೆಗಾಗಿ ಮಹತ್ಪ್ರಯತ್ನಗಳನ್ನು ನಡೆಸಲಿಲ್ಲ ಧೈರ್ಯ ಮತ್ತು ವಿವೇಕ ಇವುಗಳೇ ಇವರನ್ನು ಮುನ್ನಡೆಯಿಸಿದುವು ಜಗತ್ತು ಗರ್ಜಿಸುತ್ತಲೇ ಹೋಯಿತು—ರೊಕ್‌ಫೆಲ್ಲರರು ಶಾಂತವಾಗಿ ಹಣಗಳಿಸುತ್ತಲೇ ಹೋದರು

(ಸಶೇಷ)

ಇದಕ್ಕೆ ಪಕ್ಷಪಾತವೆನ್ನಬೇಕೆ?
ಬಂಗಾಳದಲ್ಲಿ ವ್ಯವಸಾಯ ಶಿಕ್ಷಣ

ಹಿಂದೂದೇಶದ ಪ್ರಾಂತ್ಯಗಳಲ್ಲಿ ಬಂಗಾಳದ ಜನಸಂಖ್ಯೆಯು ಅತಿ ಹೆಚ್ಚಾಗಿದೆ ವ್ಯವಸಾಯ ವಿಚಾರದಲ್ಲೂ ಬಂಗಾಳವು ಇತರ ಪ್ರಾಂತ್ಯಗಳ ದ ಪಕರಿಂದಲೂ ಹಿಂದುಳಿದಿಲ್ಲ ಆದರೆ, ಇತರ ಪ್ರಾಂತ್ಯಗಳಲ್ಲಿರುವಂತೆ ಬಂಗಾಳದಲ್ಲಿ ವ್ಯವಸಾಯ ಶಿಕ್ಷಣದ ಕೊಲೇಜು ಇಲ್ಲ ಇದೇಕೆ? ಬಂಗಾಳವು ಯಾವ ಅನ್ಯಾಯ ಮಾಡಿತು? ಬುದ್ಧಿಯಿಲ್ಲದ ಪ್ರಶ್ನೆಯೇ ಉಳಿದ ಪ್ರಾಂತ್ಯಗಳಿಗೆ ಕೊಲೇಜುಗಳಿರುವಾಗ ಒಂದು ಚಿಕ್ಕದಾದರೂ ಬಂಗಾಳಕ್ಕೂ ಬೇಡವಾಗಿತ್ತೇ? ಈ ಸಂಖ್ಯೆಗಳನ್ನು ನೋಡಿ.—

ಮದರಾಸು	ರೂ	೧,೦೪,೦೫೩
ಬೊಂಬಾಯಿ		೧ ೬೩,೩೦೮
ಸಂಯುಕ್ತಪ್ರಾಂತ್ಯ	,	೧,೬೫,೪೧೮
ಪಂಜಾಬ	,	೧ ೪೧,೬೪೦
ಬರ್ಮ	,	೨ ೩೧,೬೩೫
ಮಧ್ಯಪ್ರಾಂತ್ಯ ಮತ್ತು ಬಿಹಾರ್	,	೬೫,೨೧೨
ಬಂಗಾಳ	,,	೦

ಹೀಗೆಯೇ ಬಂಗಾಳದಲ್ಲಿ ನೀರಾವರಿ ಕೆಲಸಗಳೂ ನ್ಯಾಯವಾಗಿ ಆಗಬೇಕಾದಷ್ಟು ಆಗಲಿಲ್ಲವೆಂದ ದೂರು ಇದೆ ಈ ವಿಚಾರವಾಗಿ ಮುಂದಿನ ಸಂಚಿಕೆಯಲ್ಲಿ ಅಂಕೆ ಸಂಖ್ಯೆಗಳನ್ನು ಕೊಡಲಾಗುವುದು

WE HOLD IN STOCK OF

English into Kanarese Teacher
Hindi into Kanarese Teacher
Marathi into Kanarese Teacher
Marathi into Gujarathi Teacher

Novels and well known Dramas in Hindi and all sorts of books for Schools and Colleges

Wanted Agents and Canvassers throughout Karnatak districts

Apply for full particulars with 1½ Annas Stamp —

THE MANAGER
The National Kanara News Agency,
SIR PHIROZSHA MEHTA ROAD,
Fort Bombay.

FOR
HIGH CLASS PRINTING
ART OR ORDINARY
CONSULT US
The Sharada Press, Mangalore.

FRESH CONSIGNMENT ARRIVED.

UNEQUAL QUALITY——————EXCEPTIONAL PRICE.

A TIRE THAT SAVES YOU REPUTATION AND MONEY

The Canara Public Conveyance Co., Ltd.

MANGALORE.

ಮೂಲೆಮೂಲೆಯಿಂದ.

ಬೆಂಗಳೂರು.

ಕಳೆದ ವರ್ಷ ಸ್ಥಾಪಿತವಾದ 'ಅಷ್ಟಗ್ರಾಮ' ಸಂಘದ ವಾರ್ಷಿಕೋತ್ಸವವು ತಾ. 11–8–34ರಲ್ಲಿ ಶಿವಮೊಗ್ಗದ ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ ಕೆ. ವೆಂಕಟಸ್ವಾಮಿ ಅಯ್ಯರ ಅಧ್ಯಕ್ಷತೆಯಲ್ಲಿ ಬೆಂಗಳೂರು ಗಿಡ್ಡಯ್ಯನ ಛತ್ರದಲ್ಲಿ ನಡೆಯಿತು

ತಾ. ೧೧–೩–೩೪ರಲ್ಲಿ ಒಕ್ಕಲಿಗ ಸಂಘದ ಚುನಾವಣೆಯಾಗಿ ಅಧ್ಯಕ್ಷರಾಗಿ ಶ್ರೀ ಬಿ. ನಾಗಪ್ಪನವರು ಆರಿಸಲ್ಪಟ್ಟರು.

ನ್ಯಾಯವಿಧಾಯಕ ಸಭೆಗೆ ಚುನಾಯಿತರಾದ ಶ್ರೀ ಬಿ ಕೆ ಗರುಡಾಚಾರ್ ಮತ್ತು ಶ್ರೀ ಡಿ ವಿ ಗುಂಡಪ್ಪನವರನ್ನು ತಾಯಿನಾಡು ಪತ್ರಿಕೆಯ ಸಂಪಾದಕರು ತಾ. ೧೧ನೇ ದಿನ ಸತ್ಕರಿಸಿದರು

ಮೈಸೂರು

ಶ್ರೀ ರಾಮಾನುಜ ಜೋಯಿಸರ ಅಧ್ಯಕ್ಷತೆಯಲ್ಲಿ ಪತ್ರಿಕಾಕರ್ತರ ಸಂಘವೊಂದು ರಾಜಧಾನಿಯಲ್ಲಿ ತಾ ೧೦ನೇ ದಿನ ಸ್ಥಾಪಿತವಾಗಿ ವೃತ್ತಾಂತ ಪತ್ರಿಕೆಯ ಶ್ರೀ ಟಿ ಕೃಷ್ಣರಾಯರು ಉಪಾಧ್ಯಕ್ಷರಾಗಿಯೂ, ವೀರಕೇಸರಿಯ ಶ್ರೀ ಕೆ. ಜೀವಣ್ಣರಾಯರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು.

ತಾ. ೧೧ನೇ ದಿನ ಶ್ರೀ ಸಚ್ಚಿದಾನಂದ ಶಿವಾಭಿನವ ಶ್ರೀ ನರಸಿಂಹ ಭಾರತಿ ಸ್ವಾಮಿಗಳ ೭೦ನೆಯ ಜಯಂತ್ಯುತ್ಸವವು ರಾಜಧಾನಿಯ ಅಭಿನವ ಶಂಕರಾಲಯದಲ್ಲಿ ಜರಗಿತು

ದಿವಂಗತ ಬಿಡಾರ ಕೃಷ್ಣಪ್ಪನವರ ಶ್ರೀರಾಮ ಮಂದಿರದ ಪರವಾಗಿ ಸಂಗೀತ ಸಮ್ಮೇಳ ನಡೆಸುವ ಆಲೋಚನೆ ಇದೆಯಾಗಿ ತಿಳಿದುಬಂದಿದೆ.

ತಾ ೧೧ನೇ ದಿನ ದಿವಾನರು ರಾಜಧಾನಿಯ ನಾನಾ ಪ್ರದೇಶಗಳಲ್ಲಿ ನಗರ ಸಭಾಧ್ಯಕ್ಷರೊಡನೆ ಸಂಚರಿಸಿದರು

ಶ್ರೀಮನ್ಮಹಾರಾಜರು ಈ ಸಲ ಮೇಲುಕೋಟೆಯ ವೈರಮುಡಿ ಉತ್ಸವಕ್ಕೆ ದಯಮಾಡಿಸುವರೆಂದು ತಿಳಿಯಲಾಗಿದೆ

ತಾ. ೧೧ರಲ್ಲಿ ಮೈಸೂರು ಜಿಲ್ಲಾ ಬಾಲಚರ್ಮಾ ಸಮಿತಿಯವರು ಗುಂಡ್ಲುಪೇಟೆ, ಹೆಗ್ಗಡದೇವನ ಕೋಟೆ, ಹುಣಸೂರು, ಕೃಷ್ಣರಾಜ ಪೇಟೆ, ಕೈದಾಳ, ಮದ್ದೂರು, ಮೇಲುಕೋಟೆ, ಮಳವಳ್ಳಿ, ತಿರುಮಕೂಡಲು, ನರಸೀಪುರ, ಏಳಂದೂರು ಮುಂತಾದ ಕಡೆ ರ್‍ಯಾಲಿ ನಡಿಸಿದರು

ವಿಶ್ವವಿದ್ಯಾನಿಲಯದ ಸಮಿತಿಯ ಅಧಿವೇಶನವು ತಾ ೨೮ ೨೯ರಲ್ಲಿ ನಡೆಯಲಿದೆ

ಶ್ರೀಗುರುರಾಮಸೇವಾಸಮಿತಿಯವರು ಚುಂಚನ ಕಟ್ಟೆ ಕ್ಷೇತ್ರದಲ್ಲಿ ತಾ ೨೦–೫–'೩೪ರಿಂದ ಮಾಧ್ಯಮಿಕ ಶಾಲೆಯ ಮೊದಲನೆಯ ವರ್ಗವನ್ನು ತೆರೆಯಲಿರುವರು

'ಪ್ರಬುದ್ಧ ಕರ್ನಾಟಕ'ವು ಕೆಲವು ಅನಿವಾರ್ಯ ಕಾರಣಗಳಿಂದ ಕಾಲಕ್ಕೆ ಸರಿಯಾಗಿ ಹೊರಗಾಗಲಿಲ್ಲವೆಂದೂ ಮುಂದಿನ ಸಂಚಿಕೆಯು ವಾಚಕರ ಕೈಸೇರಲು ಒಂದು ತಿಂಗಳು ಬೇಕಾದೀತೆಂದೂ ಪ್ರಕಟಿಸಿರುತ್ತಾರೆ.

ಶಿವಮೊಗ್ಗ

ಪಂಚಾಯತಿ ಮುಖಂಡರಾದ ಶ್ರೀ ಎಚ್, ಶ್ರೀನಿವಾಸರಾಯರು ಅದೊಂದು ಕೆಲಸದ ನಿಮಿತ್ತ ಕೋರ್ಟಿಗೆ ಬರಲಾಗುವುದಿಲ್ಲವೆಂದು ಹೇಳಿದುದಕ್ಕೆ ಅವರಿಗೆ ೭೫ ರೂ. ಗಳ ದಂಡವಾಗಿದ್ದಿತಷ್ಟೆ!—ಅದನ್ನು ಈಗ ನ್ಯಾಯಾಧೀಶರು ರದ್ದುಗೊಳಿಸಿರುವರು.

ಶಿವಮೊಗ್ಗದ ಬಾಲಿಕಾಶ್ರಮದಲ್ಲಿ ೪೭ ಹುಡುಗರೂ ೭ ಮಂದಿ ಕೆಲಸಮಾಡುವವರೂ ಇದ್ದಾರೆಂದೂ ಇವರಲ್ಲದೆ, ೨೦, ೨೫ ತರುಣರು ಬೇರೆ ಬಂದು ವ್ಯಾಯಾಮ ಶಿಕ್ಷಣವನ್ನು ಹೊಂದುತ್ತಿದ್ದಾರೆಂದೂ ತಿಳಿದುಬರುತ್ತದೆ

ಪೊಳಲಿ.

ಇಲ್ಲಿಯ ಶ್ರೀರಾಜರಾಜೇಶ್ವರೀ ಅಮ್ಮನವರ ದೇವಸ್ಥಾನದಲ್ಲಿ ವರ್ಷಂಪ್ರತಿಯಂತೆ ಇದೇ ಮೀನ ಸಂಕ್ರಮಣಕ್ಕೆ (ತಾ. ೧೩–೩–'೩೪) ಧ್ವಜಾರೋಹಣವಾಗಿರುತ್ತದೆ. ಮುಂದೆ ಒಂದು ತಿಂಗಳ ಉತ್ಸವದ ದಿನಗಳಲ್ಲಿ ತಾ ೩–೪–'೩೪ನೆಗೆ ಚೆಂಡು ಆರಂಭವಾಗಿ ತಾ ೭–೪–'೩೪ನೇ ದಿನ ಶನಿವಾರ ಕಡೆ ಚೆಂಡು ಮಹೋತ್ಸವವು ಜರಗಿ, ರವಿವಾರ ರಥೋತ್ಸವವು ನೆರವೇರಿ, ಮರುದಿನ ಅವಭೃತವಾಗುವುದು

ಕಿನ್ನಿಗೋಳಿ.

ಇದೇ ತಿಂಗಳ ತಾ. ೨೫ನೇ ರವಿವಾರ ಸಾಯಂಕಾಲ ಘಂಟೆ ೫ಕ್ಕೆ ಇಲ್ಲಿಯ ನೆಶನಲ್ ಕ್ಲಬ್ಬಿನ ಮಹಾಸಭೆಯು ಕ್ಲಬ್ಬಿನ ಕಟ್ಟಡದಲ್ಲಿ ಜರಗಲಿರುವುದು. ಸ್ಥಳೀಯ ಪರ ಸ್ಥಳೀಯ ಸದಸ್ಯರೆಲ್ಲ ಸಭೆಗೆ ಹಾಜರಾಗಿ ಸಹಾಯ ಮಾಡಬೇಕಾಗಿ ಗೌರವ ಕಾರ್ಯದರ್ಶಿಗಳವರ ವಿನಂತಿ.

ಸಂಪಿಗೆ

ಇಲ್ಲಿಯ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ತಾ. ೨೮–೩–'೩೪ರಿಂದ ತಾ. ೫–೪–'೩೪ರ ವರೆಗೆ ಧ್ವಜಾರೋಹಣ ಅಂಬಡಿ ಉತ್ಸವ, ಮಹೋತ್ಸವ, ದೀಪೋತ್ಸವ, ರಥೋತ್ಸವ ಇವೇ ಮೊದಲಾದ ಕಾರ್ಯಕ್ರಮಗಳಿಂದ ಮಹೋತ್ಸವಗಳು ನಡೆಯಲಿವೆ.

ಕುಕ್ಕುಂದೂರು.

ಇಲ್ಲಿಯ ಶ್ರೀದುರ್ಗಾ ಹಾಯರ್ ಎಲಿಮೆಂಟರಿ ಶಾಲೆಗೆ ಮಂಗಳೂರು ಪೆಂಟ್ಲೆಂಡ್ ಪೇಟೆಯ ಶ್ರೀ ಎಮ್. ವಿಟ್ಟಪ್ಪ ಪ್ರಭುಗಳು ರೂ. ೧೦ನ್ನು ಈ ಶಾಲೆಗಾಗಿ ಈಗ ಕಟ್ಟುತ್ತಿರುವ ಹೊಸ ಕಟ್ಟಡದ ವೆಚ್ಚಕ್ಕಾಗಿ ದಾನವಾಗಿ ಕೊಟ್ಟು ಪ್ರೋತ್ಸಾಹಿಸಿರುತ್ತಾರೆಂದು ಸದ್ರಿ ಶಾಲಾ ಮೆನೇಜರರಾದ ಪಂಡಿತ ಕೆ ನಾರಾಯಣರಾಯರು ತಿಳಿಸುತ್ತಾರೆ.

ಮೂಲ್ಕಿ.

ಸ್ಥಳೀಕ ಶ್ರೀ ವೆಂಕಟ್ರಮಣ ದೇವಳದ ವರ್ಷಾವಧಿ ರಥೋತ್ಸವವು ಇದೇ ಬರುವ ಶ್ರೀರಾಮ ನವಮಿಯ ದಿನ ಅಂದರೆ ತಾ ೨೪–೩–'೩೪ನೇ ರವಿವಾರ ಜರಗಲಿರುವುದು

ಸ್ಥಳೀಕ ಸೆಂಟರಿನ ಉಪಾಧ್ಯಾಯರ ಸಂಘದ ಸಾಮಾನ್ಯ ಮಾಸಿಕ ಸಭೆಯು ತಾ. ೧೭–೩ '೩೪ನೇ ಶನಿವಾರ ಅಪರಾಹ್ನ ಘಂಟೆ ೨–೩೦ಕ್ಕೆ ಸೆಂಟರ್ ಸ್ಕೂಲಲ್ಲಿ ಜರಗಿತು ಕೆನರಾ ಹೈಸ್ಕೂಲಿನ ಅಧ್ಯಾಪಕ ಶ್ರೀ ಜಿ ಆರ್ ಶೆಣೈರವರು ಸಭಾಧ್ಯಕ್ಷರಾಗಿದ್ದರು

ಸ್ಥಳೀಕ ಶ್ರೀ ಬಪ್ಪನಾಡು ದುರ್ಗಾ ಪರಮೇಶ್ವರಿ ಅಮ್ಮನವರ ಸನ್ನಿಧಿಯಲ್ಲಿ ಜರಗತಕ್ಕ ಕಾಲಾವಧಿ ಜಾತ್ರೆಯು ಈ ಕೆಳಗೆ ಕಂಡಂತೆ ಈ ವರ್ಷ ಜರಗಲಿರುವುದು ಭಕ್ತಾದಿಗಳು ಎಂದಿನಂತೆ ಬಂದು ಶ್ರೀ ದೇವಿಯ ಗಂಧ ಪ್ರಸಾದಗಳನ್ನು ಸ್ವೀಕರಿಸಿ, ಕೃಪಾಪಾತ್ರರಾಗುವರಾಗಿ ನಿರೀಕ್ಷಣೆಯಿದೆ ತಾ ೩೦–೩–೩೪ನೇ ಶುಕ್ರವಾರ ಧ್ವಜಾರೋಹಣ, ತಾ ೩೧ನೇ ಶನಿವಾರ ಅಯನೋತ್ಸವ, ತಾ ೧–೪–೩೪ನೇ ಆದಿತ್ಯವಾರ–ಪೇಟೆ ಸವಾರಿ, ತಾ ೨ನೇ ಸೋಮವಾರ ಕೊಪ್ಪಲ ಸವಾರಿ, ತಾ. ೩ನೇ ಮಂಗಳವಾರ ಬಾಕಿಮಾರು ದೀಪ, ತಾ ೪ನೇ ಬುಧವಾರ—ಕೆರೆ ದೀಪೋತ್ಸವ, ತಾ ೫ನೇ ಗುರುವಾರ ರಥಾರೋಹಣ, ತಾ ೬ನೇ ಶುಕ್ರವಾರ ರಥೋತ್ಸವ ಮತ್ತು ಅವಭೃತ

ಮೂಲ್ಕಿ ಪಬ್ಲಿಕ್ ಬೇಡ್‌ಮಿಂಟನ್ ಪಂದ್ಯಾಟವು ಈ ವರ್ಷ ಸ್ಥಳೀಕ ಯೂನಿಯನ್ ಕ್ಲಬ್ಬಿನ ಪ್ರೋತ್ಸಾಹದಿಂದ ಇದೇ ಬರುವ ತಾ ೨೦–೪–೩೪ರಲ್ಲಿ ಪ್ರಾರಂಭವಾಗುವುದು. ಗೆದ್ದವರಿಗೆ ಬೆಳ್ಳಿಯ ಕಪ್, ಮೆಡಲ್‌ಗಳು ಪಾರಿತೋಷಕವಾಗಿ ಕೊಡಲ್ಪಡುವುವು ಸ್ಪರ್ಧೆಗೆ ನಿಲ್ಲುವವರು ತಾ. ೧೫ರೊಳಗೆ ಗೌರವ ಕಾರ್ಯದರ್ಶಿಗಳಿಗೆ ತಿಳಿಸಬೇಕಾಗುವುದು. ಜಿಲ್ಲೆಯ ಸಮಸ್ತ ಬೇಡ್‌ಮಿಂಟನ್ ಪ್ರೇಮಿಗಳು ಸಹಕರಿಸುವರಾಗಿ ಕೋರಿಕೆಯಿದೆ.

ಸ್ಥಳೀಕ ಲೋಕಲ್‌ಫಂಡ್ ಆಸ್ಪತ್ರೆಯ ಪಕಾರದಲ್ಲಿ ದಿವಂಗತ ಬೋಳ ರಘುನಾಥರಾಯರ ಸ್ಮಾರಕವಾಗಿ ಸದ್ರಿಯವರ ಮಕ್ಕಳು ಮೆಸರ್ಸ್ ಬೋಳ ಅನಂತ ಶೆಣೈ ಮತ್ತು ಸಹೋದರರು ಕಟ್ಟಿಸಿಕೊಡಲಿರುವ ಕುಷ್ಠರೋಗಿಗಳ ವಾರ್ಡಿನ ಶಂಕುಸ್ಥಾಪನೆಯು ಇದೇ ಕಳೆದ ತಾ ೧೩ನೇ ಬೆಳಗ್ಗೆ ಘಂಟೆ ೯–೩೦ಕ್ಕೆ ನಡೆಯಿತು.

ಮೊಗವೀರ ವ್ಯವಸ್ಥಾಪಕ ಮಂಡಳಿ, ಮುಂಬಾಯಿ

ಇವರು ತಾ ೯–೩ '೩೪ರಲ್ಲು ಶ್ರೀ ಬಾಬು ರಾಜೇಂದ್ರ ಪ್ರಸಾದರ "ಅರ್ಥ್ ಕ್ವೇಕ್ ರಿಲೀಫ್ ಫಂಡಿ"ಗೆ ಮುಂಬಾಯಿಯ 'ಮೇಯರ್'ರ ಮುಖಾಂತರವಾಗಿ ರೂ ೧೦೩–೧೦–೦ಯನ್ನು ರವಾನಿಸಿರುವರು ಈ ಏವೇಜಿನ ಪೈಕಿ ರೂ ೬೩–೪–೪ಯನ್ನು ಮಂಡಳಿಯ ಮೆಂಬರರೂ, ಉಳಿದ ರೂ ೪೦–೫–೩ನ್ನು ಮಂಡಳಿಯ ಆಡಳಿತೆಯಲ್ಲಿರುವ 'ಮೊಗವೀರ ಫ್ರೀ ನೈಟ್ ಸ್ಕೂಲಿನ' ಅಧ್ಯಾಪಕರು ಮತ್ತು ವಿದ್ಯಾರ್ಥಿಗಳೂ ಸೇರಿ ಒಟ್ಟು ಕೂಡಿಸಿಕೊಟ್ಟದ್ದಾಗಿರುತ್ತದೆ ಈ ಪರವಾಗಿ ಸಹಾನುಭೂತಿಯನ್ನು ತೋರಿಸಿರುವ ಮಹನೀಯರುಗಳೆಲ್ಲರ ಉಪಕಾರಸ್ಮರಣೆಯನ್ನು ಮಂಡಳಿಯು ಈ ಮೂಲಕವಾಗಿ ಮಾಡುವುದಾಗಿದೆ

ಪೆರಡಾಲು (ಕಾಸರಗೋಡು)

ಅಕ್ಷತ ವಿಧವಾ ವಿವಾಹ ವಿಮರ್ಶೆಗಾಗಿ ಶಿರ್ಸಿಯಲ್ಲಿ ಜರಗಿದಂತೆ ಈ ಊರಲ್ಲಿಯೂ ಒಂದು ಮಹಾಸಭೆಯನ್ನು ಜರಗಿಸುವ ಆಲೋಚನೆಯಿಂದ ಸುಶಿಕ್ಷಿತರೂ, ಸುಪ್ರತಿಷ್ಠಿತರೂ ಸೇರಿರುವ ಚಿಕ್ಕ ಕಮಿಟಿಯೊಂದು ತಾ ೧೬–೩–೩೪ರಲ್ಲು ಸಭಗೂಡಿತು ಸದರಿ ಕಮಿಟಿಯಲ್ಲಿ ಮಹಾಸಭೆ ಮತ್ತೆ, ಕಾರ್ಯ ಮೊದಲು ಎಂಬ ನಿರ್ಣಯವು ಸರ್ವಾನುಮತದಿಂದ ಮಂಜೂರಾಯಿತು ವರನು ಈ ಮೊದಲೇ ನಿರ್ಣಯವಾಗಿರುವನಾದ್ದರಿಂದ ವಧು ಶೋಧೆ ಮಾತ್ರ ಬಾಕಿ ಉಳಿದಿದೆ ಈ ಕಮಿಟಿಯ ಮೆಂಬರರೆಲ್ಲರೂ ಈ ಕೆಲಸದಲ್ಲಿ ಬೇರೆ ಬೇರೆಯಾಗಿಯೂ ಒಟ್ಟಾಗಿಯೂ ಕೆಲಸ ಮಾಡಿ ಆದಷ್ಟು ಶೀಘ್ರದಲ್ಲಿ ವಿವಾಹ ಕಾರ್ಯವನ್ನು ನೆರವೇರಿಸಲು ಬದ್ಧಕಂಕಣರಾಗಿ, ಸಭೆಯು ವಿಸರ್ಜಿಸಲ್ಪಟ್ಟಿತು

ಕುಟುಂಬದಲ್ಲಿ ಆರೋಗ್ಯ ಆನಂದವನ್ನು ಬೆಳಿಸಿ,

ನಿಮ್ಮ ವ್ಯಯವನ್ನು ಕಡಿಮೆಮಾಡಿರಿ.

ಪರ್ಲ ಕಾಢಾ ಜೀರ್ಣ ಜ್ವರನಾಶಕ ಆರೋಗ್ಯದಾಯಕ ಶಕ್ತಿ ಮತ್ತು ಉತ್ಸಾಸ ಬೆಳಸುವ ಪರ್ಲಕಾಢೆಯೆಂದರೆ ಪ್ರತಿ ಕುಟುಂಬದ ಮಿತ್ರನೇ ಸರಿ, ಕಾಢೆಯು ಹಸಿವೆ ಪ್ರಚನ ಕ್ರಿಯೆಗಳನ್ನು ಉತ್ತೇಜಿಸುತ್ತದೆ ಅಲ್ಲದೆ ಮಲಬದ್ಧತೆಯನ್ನು ನಿವಾರಿಸ ಮಾಡುವುದು ರಕ್ತಶುದ್ಧಿ ಮತ್ತು ವೃದ್ಧಿ ಮಾಡುವುದಲ್ಲದೆ ಪರ್ಲಕಾಢೆಯು ಶರೀರದಲ್ಲಿ ಹೊಸ ಶಕ್ತಿ ಬಲ ಮತ್ತು ಉತ್ಸಾಹವನ್ನು ಬೆಳಸುವುದು. ಪರ್ಲಕಾಢೆಯು ಬೇನೆಯನ್ನು ಕಳೆದು ಕುಟುಂಬದಲ್ಲಿ ಆನಂದವನ್ನೂ ಆರೋಗ್ಯವನ್ನೂ ಬೆಳಸುವುದು, ಒಮ್ಮೆ ಸ್ವತಃ ಉಪಯೋಗಿಸಿ ಖಾತ್ರಿ ಮಾಡಿಕೊಳ್ಳಿರಿ

ಪರ್ಲ ದ್ರಾಕ್ಷಾಸವ ರುಚಿಕರ ಪಾಚಕಸ್ಫೂರ್ತಿದಾಯಕವಾದ ಪರ್ಲ ದ್ರಾಕ್ಷಾಸವ ಟಾನಿಕ ಪಚನಕ್ರಿಯೆಯನ್ನು ಬೆಳಸುವುದು ಅದು ಶ್ರಮಪರಿಹಾರ ಮಾಡುವುದಲ್ಲದೆ ಮನಸ್ಸಿಗೂ ದೇಹಕ್ಕೂ ಹುರುಪು ಕೊಡುವುದು. ಶಾಂತವಾದ ನಿದ್ರೆ ಬರುವುದು. ಎಲ್ಲರಿಗೂ ಉಪಯೋಗವುಳ್ಳದ್ದು

ಪರ್ಲ ಚ್ಯವನಪ್ರಾಶ ಅತ್ಯಂತ ಧಾತುಪೌಷ್ಟಿಕ ಬಲವರ್ಧಕ ಚೈತನ್ಯದಾಯಕವಾದ ಪರ್ಲ ಚ್ಯವನಪ್ರಾಶದ ಉಪಯೋಗದಿಂದ ಯಾವುದೇ ಕಾರಣದಿಂದ ಬಂದ ಅಶಕ್ತತೆ ಧಾತುಕ್ಷೀಣತೆಯು ಗುಣವಾಗುವುದು.

ನಮ್ಮ ಕಾರ್ಖಾನೆಯಲ್ಲಿ ತಯಾರಾಗುವ ಔಷಧಗಳ ಸೂಚೀಪತ್ರವನ್ನು ತರಿಸಿರಿ.

ಕರ್ನಾಟಕದಲ್ಲಿ ಪ್ರತಿಯೊಂದು ಕಡೆಯಲ್ಲಿಯೂ ನಮ್ಮ ಔಷಧಗಳು ಸಿಕ್ಕುತ್ತವೆ.

ಪರ್ಲ ಕಂಪೆನಿ ಆಯುರ್ವೇಷಧಿ ಕಾರಖಾನಾ ವ ದವಾಖಾನಾ,

ಮುಂಬಾಯಿ, ನಂಬ್ರ ೮.

Pearl Co., Byculla, Bombay, No. 8.

NOTES
ಟೀಕೆಗಳು.

ಶಾಜಾ ಆಭರಣಗಳನ್ನು ಕೆಲವು ಮನೆಗಳಿಂದ ಎರವಲಾಗಿ ಕೊಂಡು ಹೋದ ಕೆಲವು ಹೆಂಗುಸರು 'ಗಿಲೀಟು' ನಗಗಳನ್ನು ಮರಳಿ ಕೊಟ್ಟರೆಂದೊಂದು ಸುದ್ದಿ. ನಗಗಳು 'ಗಿಲೀಟು' ಎಂದು ತಿಳಿಯಬೇಕಾದರೆ ಬಹಳ ದಿನಗಳು ಬೇಕಾಯಿತಂತೆ.

* * * *

'ಗಿಲೀಟು' ನಗಗಳ ವ್ಯಾಪಾರಿಗಳಿಗೆ ಇದೊಂದು ಜಾಹೀರಾತಿಗೆ ಒಳ್ಳೆಯದೇ ಆಯಿತು. 'ಗಿಲೀಟು' ಜನರು ಹೆಚ್ಚಿರುವರೆಂದು ಗಿಲೀಟು ಆಭರಣಗಳು ಹೆಚ್ಚಿರಬಹುದು. 'ತಾಜಾ ಆಭರಣಗಳು ಬೇಕೆಂದು ಪೀಡಿಸುವ ನಮ್ಮ ಸ್ತ್ರೀಯರಿಗೆ ಇವುಗಳನ್ನು ಕೊಟ್ಟು ಆನಂದ ಪಡಿಸಿರಿ' ಎಂಬ ಜಾಹೀರಾತಿನ ಒಂದೇ ವಾಕ್ಯಕ್ಕೆ ಇನ್ನು ಒಂದು ದೊಡ್ಡ 'ದಿಕ್ಷನರಿ'ಯನ್ನೆ ಬರೆಯಬೇಕಾಗಿದೆ.

* * * *

ಇಂಡಿಯದಿಂದ ಎಲ್ಲ ಬಂಗಾರವೂ ವಿದೇಶಗಳಿಗೆ ಹೋಗಿಲ್ಲ. 'ಗಿಲೀಟಿ'ಗೆ ಉಪಯೋಗಿಸುವಷ್ಟು ತೂಕವು ಇನ್ನೂ ಇದೆ. ಈ 'ಗಿಲೀಟುಗೇಂಗಿ'ನ ಬೆನ್ನೆಲುಬಾಗಿ ನಿಂತ ಸರಾಫರಾರೋ ಅವರೊಡನೆ ಲೆಕ್ಕವಿರಬಹುದು.

* * * *

'ಎಚ್ಚೆತ್ತ ಕರ್ಣಾಟಕ' ಎಂಬ ಗ್ರಂಥವನ್ನು ಬರೆವವರಿದ್ದರೆ 'ಮಹಿಳಾ ವಿಭಾಗ'ದಲ್ಲಿ ಇದೊಂದು ಅಧ್ಯಾಯವನ್ನು ಕೂಡಿಸಿದರೆ ಮಹಿಳಾ ಪ್ರಪಂಚಕ್ಕೆಲ್ಲ ಉಪಕಾರವಾದೀತು.

* * * *

ಧಿಲ್ಲಿಯಲ್ಲಿ ಪ್ರತಿಯೊಂದು ಎಮ್ಮೆಯ ಮೇಲೆ ೫ ರೂ ತೆರಿಗೆ! ಕೊಡಬೇಕಾದುದು ಎಮ್ಮೆಯಲ್ಲ,—ಮ್ಹಾಲಿಕನೇ! ಮಂಗಳೂರಲ್ಲಿ ಎಮ್ಮೆಹಾಲು ಕರೆಂದುಕೊಳ್ಳುವವನ ಮೇಲೆ ಅಂಥ ತೆರಿಗೆ ಹೊರಿಸಿದರೆ, ಹಾಲಿನ ಹೆಸರಲ್ಲಿ ಸಿಕ್ಕಬಾವಿಗಳ ನೀರನ್ನು ಕುಡಿಯುವ ಹಾಗೆ ತಡೆದ ಪುಣ್ಯಬಾರದೆ?

* * * *

ಇದೇ ಸಮಯದಲ್ಲಿ ಧಿಲ್ಲಿಯಿಂದಲೇ ಒಂದು ಚಳವಳ ಆರಂಭವಾಗುವುದಂತೆ (ಒಫಿಶಿಯಲ್?)'— Drink more milk ಎಂದು 'ತೆರಿಗೆಯ ಎಮ್ಮೆಗಳ' ಹಾಲನ್ನು ಹೆಚ್ಚು ಹೆಚ್ಚು ಕುಡಿದಂತೆ ತೆರಿಗೆಯ ವಾಂತಿ ಹೆಚ್ಚುವ ಭಯವು ದೂರ ಹೋಗುವಂತೆ 'Vomit more taxes' ಎಂಬ ಚಳವಳವನ್ನೂ ಹೂಡಬಾರದೆ?

* * * *

ಬಿಹಾರಿನ ಭೂಕಂಪ ಸಂಕಷ್ಟನಿವಾರಣೆಗೆಂದ ಯಾವನೋ ಒಬ್ಬ ದಾನಶೂರನು, "ನೆಕ್ ಟೈ' ಗಳನ್ನು ಕಳುಹಿಸಿರುವನಂತೆ. ಸ್ನೋ ಫೇಸ್ ಕ್ರೀಮ್ ಅಥವಾ ಸ್ನೋ'ವನ್ನೂ ಕಳುಹಿಸಿದರೆ, ಆ ಬಡಪಾಯಿಗಳು ಬಿದಿರಿನ ಗೋಡೆಗೆ ಸುಣ್ಣದ ಬದಲಾಗಿ ಇದನ್ನು ಹಚ್ಚಿ, ಮಾಡಿನ ಬಿದಿರುಗಳನ್ನು ನೆಕ್ ಟೈಗಳಿಂದ ಕಟ್ಟಿ ಇವೆರಡರ ಈ ಹೊಸ ಉಪಯೋಗಗಳನ್ನೂ ಜನರಿಗೆ ತೋರಿಸಿ ಸಖವಾಗಿರುತ್ತಿದ್ದರಲ್ಲ.

* * * *

ನಮ್ಮೂರಿನ ಕೆಲವು ಹೊಟೇಲುಗಳೊಳಗೆ ಹೋದರೆ ಪಡಿಗೆ ಬಡಿದ ನಾತವು ತಿಂಡಿಯಿಂದಲೋ ನೌಕರರ ಮೈಯ ಬಟ್ಟೆಗಳ ಮೂಲಕವೋ ಅಲ್ಲಲ್ಲಿ ರಚ್ಚೆಯಾಗಿ ನಿಂತ ನೀರಿನಿಂದಲೋ ಎಂದು ತಿಳಿಯುದನ್ನು ವಿಚಿತ್ರವಾಗಿದೆ. ಕೆಲ ಕಡೆಗಳಲ್ಲಿ ಲೈಸನ್ಸ್ ಬೋರ್ಡುಗಳೇ ಎದುರಲ್ಲಿಲ್ಲದಿರುವಾಗ ಅಥವಾ ಇದ್ದ ಬೋರ್ಡುಗಳೇ ಕೊಳೆಯಿಂದಲೂ ಹೊಗೆಯಿಂದಲೂ ಮುಚ್ಚಿರುವಾಗ, ಅವುಗಳನ್ನು ಶೌಚದ ನೆನಪಿಗಾಗಿ ನೋಡುವ ಬಗೆ ಹೇಗೆ?

* * * *

ಇತ್ತೀಚೆಗೆ "ನಾಟಕ ವಿಮರ್ಶಕ"ರು ಹೆಚ್ಚುತ್ತಿರುವರು. ಇದು, ನಮ್ಮ ನಾಡು ಈ ವಿಭಾಗದಲ್ಲಿಯೂ ಸುಧಾರಿಸುತ್ತಿದೆಯೆಂಬುದನ್ನು ತೋರಿಸುತ್ತದೆ.

* * * *

ಇನ್ನು ಕರ್ಣಾಟಕದ ನಾಟಕ ಕಂಪೆನಿಯವರೇ 'ಅಖಿಲ ಕರ್ಣಾಟಕ ನಾಟಕ ವಿಮರ್ಶಕ ಸಭೆ'ಯೊಂದನ್ನು ರಚಿಸುವಂತೆ ಶ್ರಮಪಟ್ಟರೆ ಒಳ್ಳೆಯದೆಂದು ಸೂಚನೆ.

* * * *

ಮೆಂಚೂರಿಯದ ತೊಟ್ಟಿಲಲ್ಲಿ ಚೀನದ ಮಾಜಿರಾಜರನ್ನಿಟ್ಟು, ಚೀನದ ಹುಲಿ ಮತ್ತು ರಷ್ಯದ ಕರಡಿಗಳ ಬಾಯಿಯಿಂದ ಅದನ್ನು ಕಾಪಾಡುವ ಪುಣ್ಯಕಾರ್ಯವನ್ನು ಜಾಪಾನಿನ ಸೂರ್ಯರಶ್ಮಿಗಳೇ ವಹಿಸಿಕೊಂಡುವು. ಸೂರ್ಯನ ಕಿರಣಗಳಿಗೆ ಮಗು ಬಾಡಿ ಬಣಗದಿದ್ದರೆ ಅದೂ ಒಂದು ಪುಣ್ಯ.

* * * *

ವಿಸಾಪುರ (ವಿಷಪುರ?) ಜೈಲಿನ ಹವೆಯೂ ನೀರೂ ಅತ್ಯುತ್ತಮವಾಗಿದೆ ಎಂದು ಮುಂಬಾಯಿ ಕೌನ್ಸಿಲಿನಲ್ಲಿ ಸರಕಾರೀ ಮೆಂಬರರ ಹೇಳಿಕೆ. ವಿಷಮಜ್ವರದಿಂದ ಅಲ್ಲಿ ಬರೀ ೨೯ ಮಂದಿ ಮಾತ್ರ ಮಡಿದರು, ಹವೆ ನೀರುಗಳು ಸಾಮಾನ್ಯ ಉತ್ತಮವಾಗಿದ್ದರೆ ಎಷ್ಟು ಅನರ್ಥವಾಗುತ್ತಿದ್ದಿತು? ಮಡಿದ ೨೯ ಮಂದಿಯೂ ಈ ಹವಾನೀರುಗಳಿಗಾಗಿ ಕೃತಜ್ಞತಾ ಸ್ತೋತ್ರ ಹಾಡುತ್ತ ಇಂದ್ರಲೋಕವನ್ನು ಸೇರಿದರು.

ಒಳದೇಶ ವರ್ತಮಾನ.

ಹುಬ್ಬಳ್ಳಿಯವರಿಗೆ ಹೊಸದಾಗಿ ಹೆಚ್ಚಿಸಲು ಒಂದು ಸಾವಿರ ರೂಪಾಯಿಗಳನ್ನು ಕೊಟ್ಟು ಮುನಿಸಿಪಲ್ ಕಾರ್ಪೊರೇಶನ್ ನಿರ್ಧರಿಸಿತು.

'ಮೆನಿಂಜೈಟಿಸ್' ರೋಗವು ಪ್ರಬಲಿಸುತ್ತಿರುವ ಕಾರಣ, ಅಹಮ್ಮದಾಬಾದಿನಲ್ಲಿ ಸಾರ್ವಜನಿಕ ಸಭೆ, ಸಿನೆಮಾ—ನಾಟಕಾದಿ ವಿನೋದಗಳು, ಭಜನೆ ಕೀರ್ತನೆಗಳು ಇತ್ಯಾದಿ ಪ್ರತಿಬಂಧಿಸಲ್ಪಟ್ಟುವು! ೫೦ ಜನರಿಗಿಂತ ಹೆಚ್ಚು ಜನರು ಒಂದೇ ಸ್ಥಳದಲ್ಲಿ ಕೂಡಬಾರದಾಗಿ ಆಜ್ಞಾಪಿಸಲಾಗಿದೆ. ಜೈನ ಮಹಾಸಭೆಯನ್ನೂ ಸದ್ಯಕ್ಕೆ ಜರಗಿಸಬಾರದೆಂದು ಸಭಾ ಕಾರ್ಯದರ್ಶಿಗಳಿಗೆ ಪು.೩ ಚೆಯರ್ಮನರು ಬರೆದಿರುವರು.

ನಾಸಿಕಜೈಲಿನಲ್ಲಿರುವ ಶ್ರೀ ವಲ್ಲಭಭಾಯಿ ಪಟೇಲರವರು ಯೋಗಾಭ್ಯಾಸವನ್ನು ಮಾಡುತ್ತಿರುವರೆಂದೂ, ಅದನ್ನಾರಂಭಿಸಿದಂದಿನಿಂದ ಆರೋಗ್ಯಹೊಂದುತ್ತಲಿರುವರೆಂದೂ, ಪ್ರಸನ್ನಚಿತ್ತರಾಗಿರುವರೆಂದೂ ತಿಳಿದುಬಂದಿದೆ.

ಅಮೇರಿಕದ ಮಿಲ್ಲಿಯಾಧಿಪತಿಗಳಲ್ಲೊಬ್ಬರಾದ ಮಿ ಗ್ರೇಂಟರು ತಮ್ಮ ಪತ್ನಿಯೊಂದಿಗೆ ಹಿಂದೂದೇಶದ ಸಂಚಾರಕ್ಕಾಗಿ ಬಂದಿರುವರು. ಹಿಂದೂದೇಶದಲ್ಲಿ 'ಸ್ವದೇಶೀ ಸ್ಟೋರು'ಗಳನ್ನು ತೆರೆಯಬೇಕೆಂದು ಅವರ ಇಚ್ಛೆಯಾಗಿದೆ.

ಪೊನ್ನಾನಿಯ ಮಾಪಿಳ್ಳ ಸಂಘದ ೪೬ನೇ ಅಧಿವೇಶನವು ಬರುವ ಎಪ್ರಿಲ್ ತಾ. ೨೮ ಮತ್ತು ೨೯ರಲ್ಲಿ ನಡೆಯಲಿದೆ. ಮೌಲಾನಾ ಶೌಕತಾಲಿಯವರೇ ಅಧ್ಯಕ್ಷರು.

ನಮ್ಮ ವೈಸರಾಯರು ಧಿಲ್ಲಿಯಲ್ಲಿ ಮಾಜಿ ವೈಸರಾಯ ಇರ್ವಿನರ ಪ್ರತಿಮೆಯ ಅನಾವರಣ ಸಮಾರಂಭವನ್ನು ಕಳೆದ ಬುಧವಾರ ನೆರವೇರಿಸಿದರು.

ಮುಂಬಾಯಿ ಪ್ರಾಂತ್ಯದ ಕೆಲವು ಕಡೆಗಳಲ್ಲೂ 'ಮೆನಿಂಜೈಟಿಸ್' ರೋಗವು ಕಲಿಯುತ್ತಿದ ಕಾರಣ, ಮುಂಬಾಯಿ ನಗರದೊಳಗೂ ಪ್ರಾಂತ್ಯದೊಳಗೂ ಜನರ ಚಲನವಲನಗಳಲ್ಲಿ ಕೆಲವು ನಿಬಂಧನೆಗಳನ್ನು ಸರಕಾರವು ಜಾರಿಗೆ ತರುವ ಅವಶ್ಯಕತೆ ಕಂಡಿದೆ.

'ದೇವದಾಸಿ ಪದ್ಧತಿಯನ್ನು ಸಮೂಲ ಕಿತ್ತುಹಾಕಿ ಅವರಿಗೆ ನ್ಯಾಯವಿಹಿತವಾದ ವಿವಾಹಗಳನ್ನು ಮಾಡಲು ಅನುಕೂಲವಾಗುವ ಒಂದು ಮಸೂದೆಯು ಮುಂಬಾಯಿ ಪ್ರಾಂತ್ಯದ ಬಗ್ಗೆ ಅಲ್ಲಿಯ ಕೌನ್ಸಿಲಿನಲ್ಲಿ ಬಂದಿದ್ದು ಸಿಲೆಕ್ಟ್ ಕಮಿಟಿಯ ಪರಾಂಬರಿಕೆಗೆ ಒಪ್ಪಿಸಲಾಗಿದೆ.

ವೈಲೆಟ್ ಡಿಗ್ಬಿ ಎಂಬ ಅಮೇರಿಕನ್ ಬಾಲೆಯು ಥೋಮಸ್ ಆರ್ಥರ ಡಿಗ್ಬಿ ಎಂಬಾತನನ್ನು ವಿವಾಹವಾಗಿ ಆತನಿಂದ ಒಂದು ಮಗುವನ್ನು ಹಡೆದು—ಮುಂದೆ ಆತನು ಲಂಡನಿಗೆ ತೆರಳಿದಾಗ ಮರಣಿಸಿದ್ದ ಸುಳ್ಳುವಾರ್ತೆಯನ್ನು ನಂಬಿ ಬೆಂಗಳೂರಲ್ಲಿ ಸೆಮ್ಯುಲ್ ಜೋರ್ಜ್ ವುಡ್‌ವರ್ಡನೆಂಬಾತನನ್ನು ವಿವಾಹವಾದಳು! ಕೆಲ ಸಮಯದ ನಂತರ—ಮೊದಲನೆ ಗಂಡನು ಬಂದನು. ಈಗ ಕೋರ್ಟಿಗೆ ಓಡಿಕೊಂಡು ಎರಡನೆ ವಿವಾಹವನ್ನು ರದ್ದುಮಾಡಿಕೊಂಡಿರುವಳು.

ಭಯೋತ್ಪಾದಕರ ಚಳವಳವು ಅಸ್ಸಾಮಿಗೂ ಹರಡುತ್ತಿರುವುದೆಂದು ಆ ಪ್ರಾಂತ್ಯದಲ್ಲಿಯೂ "ಎಂಟಿಟೆರರಿಸ್ಟ್" ಮಸೂದೆಯನ್ನು ಕೌನ್ಸಿಲಿನಲ್ಲಿ ಚರ್ಚೆಗೆ ತರಲಾಗಿದೆ.

ಮುಂಬಾಯಿಯ ವೆಸ್ಟರ್ನ ಇಂಡಿಯಾ ಕಂಪೆನಿಯವರು "ಲಾಯನ್ ಬ್ರೇಂಡ್" ಹೆಸರಲ್ಲಿ ಯಾವ ಎಣ್ಣೆಯನ್ನೂ ಮಾರಾಟ ಮಾಡಕೂಡದಂತೆ ತಡೆಹಾಕಲು ಬರ್ಮಾಶೆಲ್ ಕಂಪೆನಿಯವರು ಹೈಕೋರ್ಟಿಗೊಯ್ದ ಅಪೀಲು ತೆಗೆದುಹಾಕಲ್ಪಟ್ಟಿತು.

ಎಸೆಂಬ್ಲಿಯಲ್ಲಿ ಎಸೋಸಿಯೇಟೆಡ್ ಚೇಂಬರ್ ಒಫ್ ಕೊಮರ್ಸಿನ ಪರವಾಗಿ ಮೆಂಬರರಾಗಿದ್ದ ಮಿ। ಆರ್ ಬಿ. ಎಚ್ ವೆಲೆಂಟಿಯವರು ಅಕಸ್ಮಿಕವಾಗಿ ಹೃದ್ರೋಗದಿಂದ ಕಾಲವಾದರು. ಇವರು ಧಿಲ್ಲಿಯಲ್ಲಿ ಬರ್ಮಾಶೆಲ್ ಕಂಪೆನಿಯ ಮೆನೇಜರರಾಗಿದ್ದರು. ನಿವೃತ್ತಿ ಹೊಂದಲಿದ್ದು ರಜೆಪಡೆಕೊಂಡು ಊರಿಗೆ ಹೊರಟಿದ್ದರು. ಇವರ ವಿದಾಯಸತ್ಕಾರಕ್ಕಾಗಿ ಕೆಳನೌಕರರು ಸಿದ್ಧತೆಗಳನ್ನು ಮಾಡಿದ್ದರು. ವಿದಾಯವು ಚಿರಕಾಲದ್ದಾಯಿತು.

ಸಲ್ಪತ್ತು ಮಂದಿಗಳೊಡನೆ ಸಂಬಂಧವಿದ್ದ ಲುಧಿಯಾನದ ಒಬ್ಬ ಬೇಂಕರನು ಕಾಣೆ! ಆ ಸಲ್ಪತ್ತು ಮಂದಿಗೂ ಮಹಾದುಃಖ!

ಉಪವಾಸಿಗಳ ದಂಡು ಒಂದು ಲಂಡನಿನಲ್ಲಾದಂತೆ ಮುಂಬಾಯಿಯ ಮ್ಯುನಿಸಿಪಲ್ ಕಟ್ಟಡದೊಳಗೆ ನುಗ್ಗಿ "ನಾವು ಹಸಿದಿರುವೆವು; ಅನ್ನಕೊಡಿ!" ಎಂದು ಗರ್ಜಿಸಿ ಗಲಭೆಮಾಡಿದರು. ಅವರನ್ನು ಬಲಾತ್ಕಾರದಿಂದ ಹೊರಗೆಹಾಕಕೂಡದು ಕೋರ್ಪೊರೇಶನಿನ ಗೌರವಕ್ಕೆ ಕುಂದೆಂದು ಹೇಳಿ ಪರಿವ್ಯಾನರು ಅಂದಿನ ಸಭೆಯನ್ನಲ್ಲಿಗೇ ಮುಗಿಸಬಹುದೆಂದರು. ಮೇಯರರು ಅರ್ಧ ತಾಸಿಗೆಂದು ಸಭೆಯನ್ನು ಮುಂದುವರಿಸಲು ಯಾರೋ ಮೆಂಬರರೊಬ್ಬರು ಟೆಲಿಫೋನ್ ಮಾಡಿ ಪೋಲೀಸರನ್ನು ಕರೆಸಿ ಗಲಭೆಮಾಡಿದವರನ್ನು ಹೊರಗೆ ಕಳುಹಿದರು.

— — — — — — —

ಮದರಾಸಿನ ಪೋಸ್ಟ್‌ಮಾಸ್ಟರ್ ಜನರಲ್ ಮಿ. ಸಿ. ಡಿ. ಕೇಲಿಯವರು ಮುಂಬಾಯಿಗೆ ವರ್ಗಾಯಿಸಲ್ಪಟ್ಟಿರುವರು. ಮುಂಬಾಯಿಯ ಟೆಲಿಗ್ರಾಫ್ ಇಂಜಿನಿಯರಿಂಗ್ ಡೈರೆಕ್ಟರಾದ ಮಿ। ಎ. ಬೆಸ್ಟ್ರೀಕನ್ ತೋರಿದವರು ಮದ್ರಾಸಿಗೆ ಬರುವರು.

ಕಾಶ್ಮೀರದಲ್ಲಿ ಮುಸ್ಲಿಮರ ಸತ್ಯಾಗ್ರಹವು ಶಾಂತವಾಯಿತು. ಅನೇಕ ಮುಸ್ಲಿಂ ಸ್ವಯಂಸೇವಕರು ಕ್ಷಮಾಪಣೆ ಬೇಡಿರುವರು.

ಮದರಾಸು ಒಳಸಂಚಿನ ಮೊಕದ್ದಮೆಯು ವಿಚಾರಣೆಯಾಗುತ್ತಲೇ ಇದೆ. ಆಪಾದಿತರ ಪರವಾಗಿ ಶ್ರೀ ಟಿ. ಪ್ರಕಾಶಂರವರು ವಾದಿಸುತ್ತಿರುವರು.

ಹಿಂದೂಸ್ಥಾನ ಮತ್ತು ಸಿಲೋನುಗಳೊಳಗೆ ಟೆಲಿಫೋನ್ ಸಂಬಂಧವೇರ್ಪಡಲಿದೆ.

ಪಂಜಾಬ ಕೌನ್ಸಿಲಿನ ಮೆಂಬರರಿಗೆ ಪ್ರಯಾಣಭತ್ತೆ ಸಾಕಾಗಲಿಲ್ಲವೆಂದು ಅಲ್ಲಿಯ ಕೌನ್ಸಿಲಿನಲ್ಲಿ ಪ್ರಲಾಪ. ವಿನೋದಸೂಚಕವಾಗಿ ಒಂದು ಕಡಿತಾಯದ ಠರಾವೂ ಆಯಿತು. "ಮಧ್ಯದ ದುಷ್ಕಾಲ ಆದರೆ, ಭತ್ತೆ ಹೆಚ್ಚಿಸಬೇಕೆಂದು ನೀವು ಆಗ್ರಹಕೊಟ್ಟರೆ ಏಂಟುವೆವು!" ಎಂದು ಅರ್ಥ ಸಚಿವರ ನೌಮ್ಯ ಉತ್ತರ.

ಮದ್ರಾಸಿನಿಂದ ತಂಜಾವೂರು ತ್ರಿಚಿನಾಪಳ್ಳಿ ಮದುರಾ, ಕೊಯಮುತ್ತೂರು, ಕುನೂರು ಮತ್ತು ಉದಕಮಂಡಲ ಈ ಕಡೆಗಳಿಗೆ ಟೆಲಿಫೋನ್ ಸಂಬಂಧವು ಏರ್ಪಟ್ಟು ಸರ್ವಿಸು ಆರಂಭವಾಗಿದೆ.

ಎಸೆಂಬ್ಲಿಯ ಚುನಾವಣೆಗಳು ಸದ್ಯದಲ್ಲೆ ನಡೆವಂತೆ ಚುನಾವಣೆ ಮತದಾರರ ಪಟ್ಟಿಗಳನ್ನು ಬೇಗನೆ ಸಿದ್ಧಪಡಿಸುವಂತೆ ಪ್ರಾಂತಿಕ ಸರಕಾರಗಳಿಗೆ ಇಂಡಿಯಾ ಸರಕಾರದವರು ತಿಳಿಸಿರುವರು. ಮದರಾಸು ಪ್ರಾಂತದ ಕೊನ್ಸ್‌ಟಿಟ್ಯೂಯನ್ಸಿಗಳು ೧೬ ಇವುಗಳಲ್ಲಿ ೧೦ ಹಿಂದೂ, ೪ ಮಹಮ್ಮದೀಯ ೧ ಯುರೋಪಿಯನ್ ೧ ಜಮೀನ್ದಾರ ಮತ್ತು ೧ ಹಿಂದೀವಾಣಿಜ್ಯ.

ವಿದೇಶ ವರ್ತಮಾನ

ಮಾಜಿಕೈಸರರು ದ್ರವ್ಯಾಭಾವದಿಂದ ದುಃಖಪೀಡಿತರಾಗಿರುವರೆಂದೂ ಜರ್ಮನ್ ಸರಕಾರದಿಂದ ಸಿಗುತ್ತಿದ್ದ ಹಣವು ಹಿಟ್ಲರರ ರಾಜ್ಯಭಾರದಲ್ಲಿ ಕೆಲವೊಂದು ತೊಡಕುಗಳಿಂದ ತಡೆಯಾಗುವುದಾಯಿತೆಂದೂ ವದಂತಿ.

ಲಂಡನಿನ ಬಡವಾಯಿಗಳ ಅನಾರೋಗ್ಯಕರ ಮನೆಗಳನ್ನು (೨೫ ಲಕ್ಷ) ಬೀಳಿಸಿ ಸರಕಾರವು ಇನ್ನು ಐದು ವರ್ಷಗಳೊಳಗೆ ೧೧೫ ಮಿಲ್ಲಿಯ ಪವನುಗಳ ವೆಚ್ಚಗಳನ್ನು ಕಟ್ಟಿಸುವ ನಿರ್ಧಾರಮಾಡಿದೆ. ಮೊದಲನೆ ವರ್ಷ ೪ ಮಿಲ್ಲಿಯದಷ್ಟು ಖರ್ಚು ಮಾಡುವರು. ೧೧೦,೦೦೦ ಜನರಿಗೆ ಈ ಯೋಜನೆಯಿಂದ ಕೆಲಸ ದೊರೆಯುವುದು.

ಬ್ರಿಟನಿನಲ್ಲಿ ಸುಂಟರ ಗಾಳಿಯ ಪ್ರಭಾವದಿಂದ ಸಮುದ್ರದಲ್ಲೊಂದು ಹಡಗೂ ಕೆಲವು ದೋಣಿಗಳೂ ನೀರುಪಾಲಾಗಿದೆ.

ಜಪಾನಿನ ಟೋರ್ಪೆಡೋ "ಟೊಮೊಟ್ಸುರು" ಎಂಬ ನಾವೆ ಸಮುದ್ರದಲ್ಲಿ ಪರೀಕ್ಷಾರ್ಥ ಓಡುತ್ತಿದ್ದಾಗ ತಲೆಕೆಳಗಾಗಿ ಹೋಗಿ ಹಲವು ನೌಕಾ ಅಫೀಸರ್ ಮರಣಕ್ಕೆ ಕಾರಣವಾಯಿತು. ಕೆಲವರು ಬದುಕಿಕೊಂಡರು. ೧೭ ಶವಗಳು ಮಾತ್ರ ದೊರೆತಿವೆ. ಇಂಜಿನ್ ಕೊಠಡಿಯಲ್ಲಿದ್ದ ೧೪ ಮಂದಿ ಇನ್ನೂ ಅಲ್ಲೇ ಉಸಿರುಕಟ್ಟಿಯೇ ಇರುವರೆಂದು ಅವರನ್ನು ಹೊರಗೆ ತೆಗೆಯುವ ಪ್ರಯತ್ನಗಳಾಗಿವೆ.

ಸಾಮ್ರಾಜ್ಯದೊಳಗಿನ ವ್ಯಾಪಾರಪ್ರದೇಶಗಳನ್ನು ಸ್ಪರ್ಧೆಯ ತೊಡಕುಗಳು ಬಾರದಂತೆ ಹಂಚಿಕೊಳ್ಳಬೇಕೆಂದು ಅಂಗ್ಲೇಯರೂ ಜಾಪಾನೀಯರೂ ಕೂಡಿ ಚರ್ಚಿಸಿ ಅವರು ಇವರ ಮಾತನ್ನೊಪ್ಪದೆ ಇವರು ಅವರ ಮಾತನ್ನೊಪ್ಪದೆ ಆರು ತಿಂಗಳ ಚರ್ಚೆಯೂ ವ್ಯರ್ಥವಾಯಿತು. "ಬ್ರಿಟಿಷರ ಆಲೋಚನೆ ವಿಪರೀತದ್ದು! ನಮ್ಮಿಂದ ಸಾಧ್ಯವಿಲ್ಲ!" ಎನ್ನುವರು ಜಾಪಾನ್ ಪ್ರತಿನಿಧಿಗಳು.

ಬೆಲ್ಜಿಯಮಿನವರು ಇತರ ರಾಜ್ಯಗಳು ತಮ್ಮ (ಬೆಲ್ಜಿಯಮ್) ಸರಕುಗಳಿಗೆ ಸುಂಕವನ್ನೇರಿಸಲು ಒಪ್ಪದುದನ್ನು ನೋಡಿ ತಮ್ಮ ವ್ಯಾಪಾರದ ಸಂರಕ್ಷಣೆಗಾಗಿ ಸುಂಕದ ಕಠಿನ ನಿಯಮಗಳನ್ನು, ವಿದೇಶೀ ಆಮದುಗಳನ್ನು ತಡೆವ ಉದ್ದೇಶದಿಂದ ಜಾರಿಗೆ ತರಲಿರುವರು.

ದಕ್ಷಿಣ ಕನ್ನಡ.

ಮಂಗಳೂರು ಇದೇ ತಾ ೧೧ರಂದ ನಮ್ಮ ಮುನಿಸಿಪಾಲಿಟಿಯವರು ಡಿಸ್ಟ್ರಿಕ್ಟ್ ಮುನಿಸಿಪಾಲಿಟಿಗಳ ಆಕ್ಟಿನ ೮೧ನೇ ಪ್ರಕರಣದ ಮೇರೆಗೆ ಈ ಕೆಳಗೆ ಕಾಣಿಸಿದಂತೆ ಸ್ವತ್ತಿನ ತೆರಿಗೆ (Property tax) ಯನ್ನು ಹೊರಿಸುವರೆಂದು ಪ್ರಕಟನೆ ಕೊಟ್ಟಿರುವರು:—[೧] **ಸರ್ವಸಾಧಾರಣ ಉದ್ದೇಶಗಳ ಬಗ್ಗೆ** —ಕೇವಲ ವ್ಯವಸಾಯದ ಉದ್ದೇಶಗಳಿಗಾಗಿಯೇ ಉಪಯೋಗಿಸಲ್ಪಡದ ಮತ್ತು ಕಟ್ಟಡಗಳಿಗೆ ಅಡರಿಸಲ್ಪಡದ ಯಾ ಅದಕ್ಕೆ ನೆರೆಕರೆಯಾಗಿದ್ದು ಸೇರಿರದ ಜಮೀನುಗಳ ಸಂಗತಿಯಲ್ಲಿ ಅರ್ಧ ವರುಷಕ್ಕೆ—೪ ೦೦೦ ಚದರ ಫೀಟಿಗೆ ಕಡಿಮೆಯಾದರೆ ೪ ಆಣೆ ಪ್ರತಿ ೪,೦೦೦ ಚದರ ಫೀಟು ವಿಸ್ತೀರ್ಣ ಯಾ ಅದರ ಅಂಶಕ್ಕೆ ೪ ಆಣೆ, (೨) ಕೇವಲ ವ್ಯವಸಾಯದ ಬಗ್ಗೆ ಉಪಯೋಗಿಸಲ್ಪಡುವ ಜಮೀನುಗಳಿಗೆ ಅರ್ಧ ವರ್ಷಕ್ಕೆ—ಸರಕಾರದವರು ಅಂತಹ ಜಮೀನುಗಳಿಗೆ ಹೊರಿಸಿದ ವಾರ್ಷಿಕ ತೀರ್ವೆಯ ನೇಕಡಾ ೨೫ರ ದರದಲ್ಲಿ; (೩) ಕಟ್ಟಡಗಳು ಅವುಗಳ ಸ್ಥಳ ಮತ್ತು ಅದರ ಉಪಭಾಗವಾಗಿ ಅನುಭೋಗಿಸಲ್ಪಡುವ ನೆರೆಯಲ್ಲಿರುವ ಇತರ ನಿವೇಶಗಳ ಸಹಿತ—ಮತ್ತು ಮೇಲೆ (೧)

ಕುಕ್ಕು"(೪) ಪ್ರಕರಣದಲ್ಲಿ ಕಾಣಿಸಿ ಎಲ್ಲ ಜಮೀನು ವರ್ಗಗಳಿಗೆ ಅರ್ಧ ವರ್ಷಕ್ಕೆ—ಅವುಗಳ ಪಹಣಿವಧಿ ಮೌಲ್ಯದ ಸೇಕಡಾ ೫೦ ದರದಲ್ಲಿ;

[೨] ಕುಡಿಹಡಿಸುವ ಕೆರಿಗೆ; ಅರ್ಧ ವರ್ಷಕ್ಕೆ:—(ಅ) ಷೋಲೆ ೧(೪) ಪ್ರಕರಣದಲ್ಲಿ ಸೂಚಿಸಿದ ಬಾಬತುಗಳಲ್ಲಿ, ಸರ್ವಸಾಧಾರಣ ಉಲ್ಲೇಖದ ಬಗ್ಗೆ ಕ್ಷಿಕ್ತಿಯ ಮಾಡಿದ ಕೆರಿಗೆಯು ಎಂಟನೇ ಒಂದಾಂಶ; (ಆ) ಷೋಲೆ ೧(೪) ಕಲಮಿನಲ್ಲಿ ಜಮೂದಿಸಲ್ಪಟ್ಟ ಬಾಬತುಗಳಲ್ಲಿ – ಸರಕಾರದವರು ಗೊತ್ತುಪಡಿಸಿದ ಪಹಣಿವಧಿ ಕೆರಿಗೆಯು ಸೇಕಡಾ ೫ರಂತೆ, (ಇ) ಬಾಕಿ ಎಲ್ಲ ಸಂಗತಿಗಳಲ್ಲಿ ವಾರ್ಷಿಕ ಮೌಲ್ಯದ ಸೇಕಡಾ ೧ರಂತೆ.

ಸ್ಥಳೀಯ ವಿವೇಕಾನಂದ ಸೊಸೈಟಿಯವರ ಆಶ್ರಯದಲ್ಲಿ, ಕೆನರಾ ಹೈಸ್ಕೂಲಿನಲ್ಲಿ, ನಾಳೆ (ತಾ. ೨೪—೬—೩೪) ಅಪರಾಹ್ನ ಘಂಟೆ ೬-೩೦ಕ್ಕೆ ಶ್ರೀರಾಮಕೃಷ್ಣರ ಉತ್ಸವವು ಆಚರಿಸಲ್ಪಡುವುದು. ಎಲ್ಲರಿಗೂ ಸುಸ್ವಾಗತವಿದೆ.

ರಥಬೀದಿಯಲ್ಲಿರುವ "ಸ್ವದೇಶೀ ಪ್ರಚಾರಕ ಕಾರ್ಯಾಲಯ"ದಲ್ಲಿ ಒಂದು ವಾಚನಾಲಯವು ತೆರೆಯಲಾಗಿದೆಯೆಂದೂ, ಸದ್ಯದಲ್ಲಿಯೇ ಒಂದು ಗ್ರಂಥಾಲಯವೂ ಆರಂಭಿಸಲ್ಪಡುವುದೆಂದೂ ತಿಳಿದುಬರುತ್ತದೆ. ಸದಸ್ಯರಾಗಲಿಚ್ಛಿಸುವವರು ವಾಚನಾಲಯದ ಕಾರ್ಯದರ್ಶಿಗಳನ್ನು ಕಾಣಬಹುದು.

ಡಿಸ್ಟ್ರಿಕ್ಟ್ ಬೋರ್ಡಿನ ಮುಂದಿನ ಸಭೆಯು ಇದೇ ತಿಂಗಳ ತಾರೀಕು ೩೧ನೇ ಶನಿವಾರ ಅಪರಾಹ್ನ ಘಂಟೆ ೧೨ಕ್ಕೆ ಪುತ್ತೂರು ಬೋರ್ಡ್ ಎಲಿಮೆಂಟರಿ ಶಾಲೆಯಲ್ಲಿ ಜರಗುವುದು. ಈ ಸಭೆಯಲ್ಲಿ ೧೯೩೩—೩೪ನೇ ವರ್ಷದ ತಿದ್ದುಪಡಿ ಮಾಡಿದ ಆಯ—ವ್ಯಯದ ಪಟ್ಟಿಯೂ, ೧೯೩೪—೩೫ನೇ ವರ್ಷದ ಆಯ-ವ್ಯಯದ ಅಂದಾಜುಪಟ್ಟಿಯೂ ಇಡಲಾಗುವುವು.

ಜಿಲ್ಲಾ ಎಜ್ಯುಕೇಶನಲ್ ಕೌನ್ಸಿಲಿನ ಸಭೆಯೊಂದು ಈ ದಿನ ಜಿಲ್ಲಾ ಕಲೆಕ್ಟರರ ಆಫೀಸಿನಲ್ಲಿ ಜರಗಲಿದೆ.

ಮಂಗಳೂರು ತಾಲೂಕು ಬೋರ್ಡಿನ ಮುಂದಿನ ಸಭೆಯು ನಾಳೆ (ತಾ. ೨೪—೩—೩೪ನೇ) ಪೂರ್ವಾಹ್ನ ಘಂಟೆ ೧೧ಕ್ಕೆ ತಾಲೂಕು ಬೋರ್ಡ್ ಆಫೀಸಿನಲ್ಲಿ ಜರಗುವುದು.

ಸ್ಥಳೀಯ ಶ್ರೀಕೃಷ್ಣ ಸಿನೆಮದಲ್ಲಿ, ಸುಪ್ರಖ್ಯಾತ ನಟಿಯಾದ ಮಿಸ್. ಸುಲೋಚನೆಯ ಅಭಿನಯವೇ ಪ್ರಾಮುಖ್ಯವಾಗುಳ್ಳ "ಸೌಭಾಗ್ಯ ಸುಂದರಿ" ಎಂಬ ಮಾತಾಡುವ ಚಲಚ್ಚಿತ್ರವು ನಾಳೆಯಿಂದಾರಂಭವಾಗಿ ಪ್ರದರ್ಶಿಸಲ್ಪಡುವುದು. ಮಿ। ಡಿ. ಬಿಲ್ಲಿಮೋರಿಯ, ಮಿಸ್. ಜಿಲ್ಲು, ಮಿ। ಪಟೇಲ, ಮಿ। ಜೆಮ್ ಶೆಡ್ಜಿ, ಹಾಡಿ, ಚಂದಾ ಮೊದಲಾದ ನಟ—ನಟಿಯರೂ ಇದರಲ್ಲಿ ಅಭಿನಯಿಸಿರುವರು.

ನಮ್ಮ ಜಿಲ್ಲಾ ಹರಿಜನ ಸೇವಾ ಸಂಘದ ಜತೆಕಾರ್ಯದರ್ಶಿಯವರಾದ ಶ್ರೀಗಳಾದ ನಾರಾಯಣ ಕಿಲ್ಲೆ ಮತ್ತು ಬಿ. ಅನಂತಯ್ಯನವರು—"ಇದೇ ತಾ. ೩೦ನೇ ಶುಕ್ರವಾರ ಶ್ಯಾಮ ಘಂಟೆ ೫ಕ್ಕೆ ಸರಿಯಾಗಿ ಮಂಗಳೂರು ಡಿಪ್ರೆಸ್ಡ್ ಕ್ಲಾಸಸ್ ಮಿಶನಿನಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಹರಿಜನ ಸೇವಾ ಸಂಘದ ಸಭೆಯು ಕೂಡುವುದು. ಎಲ್ಲಾ ಮೆಂಬರರು ಹಾಜರಾಗಿರಬೇಕಾಗಿ ವಿನಂತಿ. ತಾಲೂಕು ಕಮಿಟಿ ಮೆಂಬರರು ಮತ್ತು ಹರಿಜನ ಕಾರ್ಯದಲ್ಲಿ ಸಹಾನುಭೂತಿಯುಳ್ಳವರೆಲ್ಲರು ಹಾಜರಿರಬೇಕಾಗಿ ಅಪೇಕ್ಷಿಸುತ್ತೇವೆ, ಸಭೆಯ ಮುಂದಿರತಕ್ಕ ವಿಷಯಗಳು:—(೧) ಈ ವರೆಗೆ ಮಾಡಿರುವ ವಸೂಲಿ ವ ವೆಚ್ಚದ ಬೇರೆ ಬೇರೆ ಬಿಲ್ ಗಳನ್ನು ಮಂಜೂರು ಮಾಡುವುದು, (೨) ಕಳೆದ ೨—೩—೩೪ನೇ ಹರಿಜನ ಪತ್ರಿಕೆಯಲ್ಲಿ ಪ್ರಕಟವಾದ ಗಾಂಧಿನಿಧಿ (ಹರಿಜನೋದ್ಧಾರ ಫಂಡು) ಯ ಸದ್ವಿನಿಯೋಗದ ಕುರಿತು ಸೂಚಿತ ನಿಯಮಗಳನ್ನಾಲೋಚಿಸುವುದು. (೩) ಗಾಂಧಿ ನಿಧಿಗೆ ನಮ್ಮ ಜಿಲ್ಲೆಯಿಂದ ಸಂಗ್ರಹವಾದ ಧನದಲ್ಲಿ ನಮ್ಮಂಶವನ್ನು ಉಪಯೋಗಿಸುವ ಯೋಜನೆಯನ್ನು ಆಲೋಚಿಸುವುದು, (೪) ಅಧ್ಯಕ್ಷರ ಅನುಮತಿಯಿಂದ ಮುಂದಿಡಬಹುದಾದ ಇನ್ನಿತರ ಯಾವುದಾದರೂ ವಿಷಯವನ್ನಾಲೋಚಿಸುವುದು" ಎಂದು ಬರೆದು ತಿಳಿಸುತ್ತಾರೆ.

ಒಂಗಾರದ ಆಭರಣಗಳನ್ನು ಎರವಲಾಗಿ ಕೊಂಡುಹೋಗಿ, ಮರೆಮಾಡುವಾಗ ಅಂತಹ ಗಿಲೀಟು ಸಾಮಾನುಗಳನ್ನು ಕೊಟ್ಟು ಕೆಲವು ಹೆಂಗುಸರು ಕೆಲವು ಮನೆಗಳ ಗೃಹಿಣಿಯರನ್ನು ಮೋಸಗೊಳಿಸುವವರೆಂದೂ, ಅಂತಹ ಮೋಸಗಾರರ ಕೂಟವೇ ಒಂದು ಇದ್ದ ಹಾಗೂ, ನಷ್ಟ ಹೊಂದಿದ ಕೆಲವು ಗೃಹಸ್ಥರು ಈ ವಿಷಯದಲ್ಲಿ ಕೂಲಂಕಷಗಳನ್ನು ತಿಳಿದುಕೊಳ್ಳಲು ಪ್ರಯತ್ನಿಸುತ್ತಿರುವರೆಂದೂ ಒಂದು ವರ್ತಮಾನವಿದೆ.

ಈ ವರ್ಷ "ಹಾಯರ್ ಗ್ರೇಡ್" ಪರೀಕ್ಷೆಗೆ, ಲೋವರ್ ಗ್ರೇಡಿನಿಂದ ಖಾಸಗಿಯಾಗಿ ಕಲಿತು, ೧೩೮ ಮಂದಿ ಅಧ್ಯಾಪಕರು ಕೂತಿರುವಂತೆ ತಿಳಿದುಬರುತ್ತದೆ.

ಸಿಂಧಪ್ರಾಂತ್ಯದ ಶಿಕಾರಪುರದಿಂದ ಜಿ. ಎಮ್. ಜಯಸಿಂಘನೆಂಬ ತರುಣ ಸ್ಕೌಟನು ಭೂಸಂಚಾರಕ್ಕಾಗಿ ಬೊಂಬಾಯಿಯಿಂದ ತಾರೀಕು ೧೫—೧೨—೩೩ರಲ್ಲಿ ಹೊರಟಿದ್ದು, ನಾಸಿಕ, ಪೂನಾ, ಕೊಲ್ಹಾಪುರ, ಬೆಳಗಾಂವ್, ಧಾರವಾರ, ಗೋವ, ಕಾರವಾರ ಈ ಕಡೆಗಳ ಸಂಚಾರ ಮುಗಿಸಿ ಕಾರವಾರದಿಂದ ಕಳೆದ ವಾರ (ತಾ. ೧೭—೩—೩೪) ಇಲ್ಲಿಗೆ ಬಂದು ಮೂರು ದಿನ ಉಳಕೊಂಡು, ತಾ ೨೦—೩—೩೪ರಲ್ಲಿ ಮೈಸೂರಿಗೆ ಹೋಗಿರುವನು. ಬೆಟ್ಟಿನ ದಾರಿಯನ್ನೀತನು ಕಾಲ್ನಡಿಗೆಯಿಂದಲೇ ಅಕ್ರಮಣಮಾಡಿರುವನು. ಈ ತನಕ ಒಟ್ಟು ೧೦೦೦ ಮೈಲುಗಳನ್ನು ಸಂಚರಿಸಿದುದಾಯಿತು. ಮೈಸೂರಲ್ಲೂ ಬೆಂಗಳೂರಲ್ಲೂ ಒಂದೊಂದು ದಿನ ಉಳಕೊಂಡು ಮದ್ರಾಸಿಗೆ ಹೋಗಲಿರುವನೆಂದು ತಿಳಿದುಬಂದಿದೆ. ಹಿಂದೂದೇಶದ ಪ್ರಯಾಣ ಮುಗಿಯುತ್ತಲೇ ಯೂರೋಪ್ ಖಂಡಕ್ಕೆ ಹೋಗುವೆನೆಂದು ಅವನ ಹೇಳಿಕೆ.

ಗೌಡ ಸಾರಸ್ವತ ಸಮಾಜದ ಅಖಂಡಮುಖಂಡರೂ, ಸುಧಾರಕರೂ ಕೆನರಾ ಹೈಸ್ಕೂಲ್ ಮತ್ತು ಕೆನರಾ ಬ್ಯಾಂಕು ಈ ಸಂಸ್ಥೆಗಳ ಸಂಸ್ಥಾಪಕರಲ್ಲೊಬ್ಬರೂ ಆಗಿದ್ದ ದಿವಂಗತ ರಾ। ಅಮ್ಮೆಂಬಳ ಸುಬ್ಬರಾಯ ಪೈಗಳವರ ಶಿಲಾ ಪ್ರತಿಮೆಯನ್ನು ಕೆನರಾ ಹೈಸ್ಕೂಲಿನಲ್ಲಿ ಸ್ಥಾಪನೆ ಮಾಡುವ ಸಮಾರಂಭವು ಇದೇ ತಿಂಗಳ ತಾ. ೩೧ನೇ ದಿನ ನಡೆಯಲಿರುವುದು. ಕಾರ್ಯಕ್ರಮವು ಈ ಕೆಳಗಿನಂತಿದೆ:—ಬೆಳಿಗ್ಗೆ ಘಂಟೆ ೮ಕ್ಕೆ, ಕೆನರಾ ಬ್ಯಾಂಕಿನಿಂದ ಮೆರವಣಿಗೆ ಹೊರಟು, ರಥಬೀದಿ—ಗದ್ದೆಕೇರಿಗಳಿಂದಾಗಿ ಕೆನರಾ ಹೈಸ್ಕೂಲಿಗೆ ಬರುವುದು. ೯ ಘಂಟೆಗೆ ಶಿಲಾ ಪ್ರತಿಮೆಯ ಸ್ಥಾಪನೆ; ಶಾಲಾ ಮಕ್ಕಳಿಗೆ ಮಿಠಾಯಿ ಹಂಚುವುದು; ಘಂಟೆ ೧೦ರಿಂದ ೧೨ ರ ತನಕ ಬಡಬಗ್ಗರಿಗೆ ಅಕ್ಕಿ ಹಂಚುವುದು; ಸಾಯಂಕಾಲ ೫ ಘಂಟೆಗೆ ಕೆನರಾ ಬ್ಯಾಂಕಿನ ಪಾಲುದಾರರಿಗೂ ಕೆನರಾ ಹೈಸ್ಕೂಲಿನ ಹಳೆ ವಿದ್ಯಾರ್ಥಿಗಳಿಗೂ ಹಿತಚಿಂತಕರಿಗೂ ಫಲಾಹಾರ, ಅನಂತರ ಸಭೆ. ಈ ಪ್ರತಿಮೆಯನ್ನು (Bust) ಕೆನರಾ ಬ್ಯಾಂಕಿನವರು ಎರಡು ಸಾವಿರ ರೂಪಾಯಿಗಳ ವ್ಯಯದಿಂದ ಬೊಂಬಾಯಿಯ ಪ್ರಸಿದ್ಧ ಶಿಲ್ಪಿಗಳಾಗಿರುವ ಶ್ರೀ ಮಾತ್ರೆಯವರಿಂದ ಮಾಡಿಸಿ ತಂದು, ಕೆನರಾ ಹೈಸ್ಕೂಲಿಗೆ ಬಹುಮಾನ ಕೊಡುವುದಾಗಿದೆ. ಈ ಸಮಾರಂಭದಲ್ಲಿ ಹಳೆ ವಿದ್ಯಾರ್ಥಿಗಳೂ ಹಿತಚಿಂತಕರೂ ಭಾಗವಹಿಸುವರೆಂದು ಭರವಸೆ.

ಮ। ರಾ। ಕಡಂದಲೆಗುತ್ತು ದೇಜು ಸೆಟ್ಟಿಯವರಿಗೂ, ಮೂಡಬಿದ್ರಿ ಅರಮನೆ ಧರ್ಮಸಾಮ್ರಾಜ್ಯಯ್ಯನವರಿಗೂ ನಡೆದ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರಿಕೆಯ ಚುನಾವಣೆಯ ವ್ಯವಹಾರದೆಯು ಇದೇ ಕಳೆದ ತಾರೀಕು ೧೨—೩—೩೪ನೇ ದಿನ ಮಂಗಳೂರು ಸಬ್ ಕೋರ್ಟಿನಲ್ಲಿ ತೀರ್ಮಾನಿಸಲ್ಪಟ್ಟಿತೆಂದೂ, ರಾ। ದೇಜುಸೆಟ್ಟಿ ವ್ಯವಹಾರದೆಯ ಖರ್ಚು ಧರ್ಮಸಾಮ್ರಾಜ್ಯಯ್ಯನವರು ಕೊಡಬೇಕಾಗಿಯೂ, ತಿರಿಗಿ ಚುನಾವಣೆ ನಡೆಯಬೇಕಾಗಿಯೂ ತೀರ್ಪು ಆಗಿದೆ ಎಂದು ಕೇಳುತ್ತೇವೆ. ಈ ವ್ಯವಹಾರದೆಯು ಕಳೆದ ೧೯೩೩ರಲ್ಲಿ ದಾಖಲಾಗಿತ್ತು. ಶ್ರೀ ದೇಜುಸೆಟ್ರ ಕಡೆಯಿಂದ ಮಿ। ಪಿ. ಡಿ. ಸೋಜ ಮತ್ತು ಶ್ರೀ ರಂಗನಾಥ ಪುಂಜರವರೂ, ಶ್ರೀ ಧರ್ಮಸಾಮ್ರಾಜ್ಯಯ್ಯರವರ ಕಡೆಯಿಂದ ರಾ। ಎಡ್ವೊಕೇಟ್ ಕಾಳೀಲ ಸದಾಶಿವರಾವ್ ಮತ್ತು ಶ್ರೀ ಮಾಧವರಾಯರೂ ವ್ಯವಹರಿಸಿದ್ದರು.

ಹವೆಯು ಕೆಲವು ದಿವಸಗಳಿಂದ ಚೆನ್ನಾಗಿಲ್ಲ. ಮೋಡಗಳ ಛಾಯೆಯಿಂದಲೂ ಸೆಖೆ ಹೆಚ್ಚುತ್ತಿದೆ.

ಇದೇ ತಾ. ೧೭ಕ್ಕೆ ಅಂತ್ಯವಾಗುವ ಒಂದು ವಾರದಲ್ಲಿ, ಮಂಗಳೂರು ನಗರದೊಳಗೆ ೯೩ ಜನರಿಗೆ ಸಿಡುಬು ತಗಲಿ ೩ ಮರಣಗಳಾಗಿವೆ. ಈ ವಾರದಲ್ಲಿ ಸಂಭವಿಸಿದ ಒಟ್ಟು ಮರಣಗಳು ೨೪, ಜನನಗಳು ೪೦; ಮರಣಗಳ ಪೈಕಿ ಸನ್ನಿಪಾತ ೧, ಗೋಲೆ ೧, ಸಿಡುಬು ೩, ಶ್ವಾಸ ವಿಷ ೧, ಬಾಣಂತಿ ೧, ಶ್ವಾಸಕೋಶ ಸಂಬಂಧ ೧, ಮತ್ತಿತರ ಕಾರಣಗಳಿಂದ ೧೬; ಈ ಪೈಕಿ ಶಿಶುಮರಣಗಳು ೫. (ಒಂದು ವಯಸ್ಸಿನೊಳಗಿನವು)

ಪುತ್ತೂರು ತಾಲೂಕಿನ ಸುಮಾರು ೧೨ ವಯಸ್ಸಿನ ಪದ್ಮಾವತಿ ಎಂಬ ಬಾಲಿಕೆಯೊಬ್ಬಳ ಹರಿಕೀರ್ತನೆಗಳು ಅಲ್ಲಲ್ಲಿ ಆಗುತ್ತಿವೆ. ಕಳೆದ ವಾರ ಮಹಿಳಾಸಭೆಯಲ್ಲಿ "ಸತೀ ಅನುಸೂಯಾ" ವಿಷಯವಾಗಿಯೂ, ಶ್ರೀವೆಂಕಟ್ರಮಣ ದೇವಸ್ಥಾನದಲ್ಲಿ "ಧ್ರುವ ಚರಿತ್ರೆ"ಯ ವಿಷಯವಾಗಿಯೂ ಕೀರ್ತನೆಗಳು ನಡೆದುವು.

ಸುರತ್ಕಲ್—ಇಲ್ಲಿನ ಎಕ್ಸೈಜ್ ಸಬ್ ಇನ್ಸ್ ಪೆಕ್ಟರ್ ಶ್ರೀ ಕೆ. ಗೋವಿಂದ ಸೆಟ್ಟರು ರಜೆಯಲ್ಲಿ ತೆರಳುವರು, ಅವರ ಬದಲಿಗೆ ಟೌನ್ ಇನ್ಸ್ ಪೆಕ್ಟರ್ ಮಿ। ಕುರುಪರು ತಾ. ೨೦ಕ್ಕೆ ಚಾರ್ಜು ವಹಿಸಿರುವರು.

ಪಡುಬಿದ್ರೆ—ತಾ. ೧೭—೩—೩೪ನೇ ಶನಿವಾರ ಪೂರ್ವಾಹ್ನ ಘಂಟೆ ೯ಕ್ಕೆ ಸ್ಥಳೀಯ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಉಡುಪಿ ತಾ। ಬೋ। ಸಭೆಯು ಅಧ್ಯಕ್ಷರಾದ ಮ। ರಾ। ಎಚ್. ರಾಮಯ್ಯ ಸೆಟ್ರವರ ನೇತೃತ್ವದಲ್ಲಿ ಕೂಡಿಬಂದು ನಿರ್ವಿಘ್ನತೆಯಿಂದ ಕಾರ್ಯಕ್ರಮಗಳ ಪೂರೈಕೆಯಾದ ತರುವಾಯ ನೆರೆದ ಸಭಿಕ ಮಹಾಶಯರ ಛಾಯಾಚಿತ್ರವು ತೆಗೆಯಲ್ಪಟ್ಟಿತಲ್ಲದೆ, ಸ್ಥಳೀಯ ಸರ್ಕಲಿನ ಬೋರ್ಡ್ ಮೆಂಬರರಾದ ಎಲ್ಲೂರು ಪಟೇಲ್ ಶ್ರೀ ಚಂದು ಯಾನೆ ದೂಮಪ್ಪ ಸೆಟ್ರವರ ಊಟೋಪಚಾರಾದಿ ಯಥೋಚಿತ ಸತ್ಕಾರಗಳೂ ಅವರಿಂದ ಸ್ವೀಕರಿಸಲ್ಪಟ್ಟು ಸಭೆಯು ಕೊನೆಗಂಡಿತು.

ಬಜಪೆ:—ಇಲ್ಲಿ ತಾ ೧೯ನೇ ರಾತ್ರಿ ಕಟೀಲ ಮೇಳದವರ "ದ್ರೋಣ ಪರ್ವ" ಬಯಲಾಟವು ವಿಶೇಷ ರೀತಿಯಲ್ಲಿ, ಹಿಂದೆಂದೂ ನಮ್ಮ ಜಿಲ್ಲೆಯಲ್ಲಿ ನಡೆಯದಷ್ಟು ವಿಜೃಂಭಣೆಯಿಂದ ನಡೆಯಿತು. ಸುಮಾರು ೧೦ ಸಾವಿರ ಜನರು ಕೂಡಿದ್ದರೆಂದರೆ ಅತಿಶಯೋಕ್ತಿಯಾಗದು, ೩೦೦೦ ಹೆಂಗುಸರೇ ಕೂಡಿದ್ದರು. ಕಾರ್ಕಳ, ಮೂಡಬಿದ್ರೆ, ಮಂಗಳೂರು ಕಡೆಗಳಿಂದ ಸ್ಪೆಶ್ಯಲ್ ಬಸ್ಸುಗಳಲ್ಲಿ ಜನರು ಬಂದಿದ್ದರು. ಭಗದತ್ತನ ಪಾತ್ರವು ಬೇಂಡು ವಾದ್ಯದೊಂದಿಗೆ ಆನೆಸವಾರಿ ಸಹಿತ ವಿಶೇಷ ರೀತಿಯಲ್ಲಿ ಅಭಿನಯಿಸಲ್ಪಟ್ಟಿದೆ.

ಕಾಸರಗೋಡು—ಇಲ್ಲಿಯ ಬೋರ್ಡ್ ಹೈಸ್ಕೂಲಿನ ಸಾಹಿತ್ಯ ಸಂಘದ ವಾರ್ಷಿಕ ಸಮಾರಂಭವು ತಾ. ೧೧ನೆಯ ದಿನ ಅಪರಾಹ್ನ ಘಂಟೆ ೩-೩೦ಕ್ಕೆ ಸಂಭ್ರಮದಿಂದ ಜರಗಿತು. ಮೊತ್ತಮೊದಲು ಪ್ರಾರ್ಥನೆಯಾಗಲು, ಹೆಡ್ಮಾಸ್ತರರಾದ ಶ್ರೀ ಶ್ರೀನಿವಾಸ ಶೆಣೈಗಳು, ಸಂಘದ ಉಪಾಧ್ಯಕ್ಷರಾದ ಶ್ರೀ ಎಚ್. ದತ್ತಾತ್ರೆಯರಾಯರ ಈ ಭಾಗದ ಪ್ರಯತ್ನವನ್ನು ಶ್ಲಾಘಿಸಿ, ಅಂದಿನ ಸಭೆಯ ಅಧ್ಯಕ್ಷರಾದ ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸೀಫ್ ರಾ. ಎಸ್. ವಿ. ಪೈಗಳ ಮತ್ತು ಭಾಷಣಕಾರರಾದ ಶ್ರೀ ಅಮ್ಮೆಂಬಳ ಶ್ರೀನಿವಾಸ ಪೈಗಳ ಪರಿಚಯವನ್ನು ಸಂಕ್ಷೇಪವಾಗಿ ಸಭಿಕರಿಗೆ ಮಾಡಿಕೊಟ್ಟರು. ತರುವಾಯ ಕಾರ್ಯದರ್ಶಿಯಿಂದ ವರದಿ ವಾಚನ, ವಿದ್ಯಾರ್ಥಿಗಳಿಂದ ಆಂಗ್ಲ ಕವಿತೆಗಳ ಕಂಠಪಾಠ ಮತ್ತು ಶೇಕ್ಸ್ ಪಿಯರ್ ಕವಿಯ "ಜೂಲಿಯಸ್ ಸೀಸರ್"ದ ಒಂದೆರಡು ದೃಶ್ಯಗಳ ಸಾಮಾನ್ಯ ನಟನೆ ಮೊದಲಾದುವುಗಳು ನಡೆದುವು. ಬಳಿಕ ಶ್ರೀ ಶ್ರೀನಿವಾಸ ಪೈಗಳು ಸಂಘದ ಮೇಲ್ಮೆಗೆ ಅವಶ್ಯವಿರುವ ಉಪಯುಕ್ತ ವಿಷಯಗಳ ಕುರಿತು ಚಿಕ್ಕ ಭಾಷಣವಿತ್ತರು. ಕೊನೆಗೆ ಅಧ್ಯಕ್ಷರ ಭಾಷಣವೂ, ವಿದ್ಯಾರ್ಥಿಯಿಂದ ಧನ್ಯವಾದ ಸಮರ್ಪಣವೂ ನಡೆದು ಸಭೆಯು ಕೊನೆಗೊಂಡಿತು.

Karnataka Chemical and Pharmaceutical Works, Ltd., Udipi. (South India)

ಕುಂಭಕೋಣದಲ್ಲಿಯೂ ಮಧುರೆಯಲ್ಲಿಯೂ ಮೈಸೂರಿನಲ್ಲಿಯೂ ಸುವರ್ಣ ಪದಕಗಳನ್ನು ಪಡೆದಿರುವ

ಕರ್ಣಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದಕ್ಷಿಣ ಹಿಂದೂಸ್ಥಾನ).

ನಮ್ಮಲ್ಲಿ ಟಿಂಕ್ಚರ್, ವಗೈರೆ ಎಲ್ಲಾ ಎಲ್ಲೋಪೆತಿಕ್ ಔಷಧ ದ್ರವ್ಯಗಳೂ, ಆಯುರ್ವೇದಿಯ ಔಷಧಿಗಳೂ, ಟೊಯ್ಲೆಟ್ ಸಾಮಗ್ರಿಗಳೂ, ಸಾಬೂನುಗಳೂ, ಫೌಂಟನ್ ಪೆನ್ ಶಾಯಿಗಳೂ ತಯಾರಿಸಲ್ಪಡುತ್ತವೆ.

ದ್ರಾಕ್ಷಾಸವ, ಪ್ರಸೂತಿ ಸಂಜೀವನ, ಸಿಯೊಮಿಗ್ರ್, ಸ್ಕೋ[illegible]

ಕ್ಷೀರಬಲಾ, ಕಾಮ್ಫ್ರೋ ಫೋಸ್ಫೊಜಿಸ್ಟಿನ್, ಯುಟೆರೀನಾ, [illegible]

ಮೆನೆಜಿಂಗ್ ಡೈರೆಕ್ಟರ್—ವೆಂಕಟ್ರಾಯ ಅಣ್ಣಪ್ಪ ಬಾಳಿಗ.

ಹೆಡ್ ಆಫೀಸು, ಉಡುಪಿ. (ದಕ್ಷಿಣ ಹಿಂದೂಸ್ಥಾನ)

ಬ್ರೇಂಚ್ ಆಫೀಸು, ದೇವಕರಣ ಮೆನ್ಶನ್ಸ್, 40 ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ ನಂ. 2.

ಪಶ್ಚಿಮ ಕರಾವಳಿ ಮತ್ತು ಮೈಸೂರು ಪ್ರಾಂತ್ಯಗಳ ಪ್ರಾಮುಖ್ಯ ಏಜಂಟರು:—

ಕರ್ಣಾಟಕ ಪ್ರೊಡಕ್ಟ್ಸ್ ಡಿಸ್ಟ್ರಿಬ್ಯೂಟಿಂಗ್ ಕಂಪೆನಿ, ಮಂಗಳೂರು.

ಬಿಹಾರಿನಲ್ಲಿ ಪುನರ್ಘಟನಾ ಕಾರ್ಯಗಳು.

ಭೂಕಂಪದಿಂದ ಧ್ವಂಸಗೊಳಿಸಲ್ಪಟ್ಟ ಬಿಹಾರಿನ ಪುನರ್ಘಟನಾ ಕಾರ್ಯಗಳಾರಂಭವಾಗಿವೆ.

ಮಹಾತ್ಮಾಜೀಯವರು ಚಂಪಾರಣ್ಯ ಮತ್ತು ಮುಜಫರಪುರಗಳ ಸಂಚಾರವನ್ನು ಮುಗಿಸಿ ಮಹೇಂದ್ರಘಾಟಿನ ಕಡೆಗೆ ಪ್ರಯಾಣ ಬೆಳಸಿದರು. ನೋಡಿದಲ್ಲೆಲ್ಲ ರಾಶಿಯಾಗಿ ಬಿದ್ದ ಮಳಲು; ಕುಸಿದು ರಾಶಿಯಾದ ಮನೆಗಳು. ಬಳಲಿದ ಹಸಿದ ಮುಖಗಳು; ಅನ್ನಬಟ್ಟೆಗಳಿಲ್ಲದೆ ಸಂಚರಿಸುವ ಜೀವನ್ಮೃತ ದೇಹಗಳು–ದಾರಿದ್ರ್ಯ ಪ್ರದೇಶದ ಭಯಂಕರ ದೃಶ್ಯವದು! "ಹಿಂದೂದೇಶದವರೆಲ್ಲವರ ಅಸ್ಪೃಶ್ಯತೆಯ ಪಾಪದ ಫಲವೋ ಇದೆಂಬಂತೆ ಇನ್ನೂ ತೋರುವುದು; ಅಲ್ಲವೆನ್ನಲೂ ಬರುವಂತಿಲ್ಲ!" ಎಂಬ ಉದ್ಗಾರ ತೆಗೆದರು ಮಹಾತ್ಮಾಜೀಯವರು.

ಅಸ್ಪೃಶ್ಯತೆಯ ಲವಲೇಶವೂ ಇನ್ನಲ್ಲಿ ಹೇಗೆ ಉಳಿದೀತು? ಎಲ್ಲರೂ ಅಸ್ಪೃಶ್ಯರೇ ಆಗಿರುವರು. ಕೂಡಿಕೆಯಾದ ನಿಧಿಗಳಿನ್ನು ಅವರನ್ನು ಎಷ್ಟರ ಮಟ್ಟಿಗೆ ಸ್ಪೃಶ್ಯರನ್ನಾಗಿ ಮಾಡುವುವೋ ನೋಡಬೇಕಾಗಿದೆ.

ಬಾಬೂರಾಜೇಂದ್ರ ಪ್ರಸಾದರವರ ನಿಧಿಯು ೧೨ ಲಕ್ಷ ರೂಪಾಯಿಗಳಿಗೂ ಮಿಕ್ಕಿದೆ. ವೈಸರಾಯರ ನಿಧಿಯು ೨೫ ಲಕ್ಷಗಳಿಗೆ ಮಿಕ್ಕಿದೆ ಲಂಡನಿನಲ್ಲಿ ಲೋರ್ಡ್ ಮೇಯರರ ನಿಧಿಯು ೪೩ ಸಾವಿರ ಪವನುಗಳಿಗೂ ಮಿಕ್ಕಿತೆಂದು ವಾರ್ತೆ. ಆದರೆ, ಬಿಹಾರಿನ ಪುನರ್ನಿರ್ಮಾಣಕ್ಕೆ ಅದು ಎಷ್ಟೆನ್ನೂ ಸಾಲದು.

ಈ ಪ್ರಕೃತಕ್ಕೆ, ಬಿಹಾರಿನಲ್ಲಿ ನಡೆವ ಕಾರ್ಯಗಳೇನು?–ಚಿಕ್ಕ ಚಿಕ್ಕ ಮನೆಗಳನ್ನು, ಹಂಗಾಮಿಯಾಗಿ ಕಟ್ಟಿಸುವುದು; ಹೊಲಗಳಲ್ಲಿ ರಾಶಿಯಾಗಿ ಬಿದ್ದ ಮಳಲನ್ನು ತೆಗೆಸುವುದು, ಕುಸಿದು ಬಿದ್ದ ಮನೆಗಳನ್ನು ಸ್ವಚ್ಛಪಡಿಸುವುದು, ಸಾಧ್ಯವಾದಷ್ಟು ಕಚೇರಿಕಟ್ಟಡಗಳನ್ನೂ ಶಾಲೆಆಸ್ಪತ್ರೆಗಳನ್ನೂ ಕಟ್ಟಿಸುವುದು

ಎರಡು ಕೋಣೆಗಳೂ, ಒಂದು ಅಡಿಗೆಕೋಣೆಯೂ ಒಂದು ಜಗಲಿಯೂ ಇರುವ ಮನೆಗಳನ್ನು, ಪ್ರತಿಯೊಂದಕ್ಕೆ ೨೫೦ ರೂಪಾಯಿ ಖರ್ಚಿನಲ್ಲಿ ಕಟ್ಟಿಸುವುದೆಂದು ಬಾಬೂ ರಾಜೇಂದ್ರ ಪ್ರಸಾದರ ನಿಧಿಯ ವಿನಿಯೋಗದ ಕುರಿತಾಗಿ ಆಲೋಚಿಸಿದಾಗ ನಿರ್ಧಾರವಾಗಿದೆ

ರೂ. ೪೫೦, ೩೦೦ ಮತ್ತು ೨೫೦ ಹೀಗೆ ಮೂರು ತರಗತಿಗಳ ಮನೆಗಳನ್ನು (ವೈಸರಾಯರ ನಿಧಿಯಿಂದ) ಕಟ್ಟಿಸುವ ಆಲೋಚನೆಯಾಗುತ್ತಿದೆ. ವೈಸರಾಯರ ನಿಧಿಯಿಂದ ಈಗಾಗಲೇ ಸುಮಾರು ೩ ಲಕ್ಷ ರೂಪಾಯಿಗಳ ತನಕ, ಬಡಬಗ್ಗರಿಗೆ ದಾನ ಮಾಡಿದ್ದಾಯಿತಂತೆ.

ಸರಕಾರದವರು ಮರಳುಬಿದ್ದ ಜಮೀನುಗಳಿಗೆ–ಮರಳು ರಾಶಿಯಾಗಿ ಬಿದ್ದ ಸ್ಥಿತಿಗನುಸಾರವಾಗಿ–ಎಕ್ರೆಗೆ ರೂ. ೩೦, ೨೦, ೧೦ ಹೀಗೆ ಅನುಕ್ರಮವಾಗಿ ದಾನಮಾಡಲಿರುವರು. ಒಂದು ಎಕ್ರೆಗಿಂತ ಹೆಚ್ಚು ಜಮೀನು ಇದ್ದವರಿಗೆ ಮಾತ್ರ ಹಣವು ಸಾಲವಾಗಿ ಕೊಡಲಾಗುವುದು

ದಿನಕ್ಕೆ ಒಂದಾಣೆ ಕೂಲಿಕೊಡುವೆವೆಂದರೂ ಬೇಕಾದಷ್ಟು ಜನರು, ನಾನು ಮುಂದೆ ತಾನು ಮುಂದೆಂದು ನುಗ್ಗಿ ಬರುತ್ತಿರುವರು. ಎಂತಹ ದಾರಿದ್ರ್ಯದ ಚಿತ್ರವಿದು!

ಅಲ್ಲಲ್ಲಿ ಚರಕಗಳಲ್ಲಿ ನೂಲುವುದು ಹೆಚ್ಚುತ್ತಾ ಇದೆ. ಯಾರ ಬೋಧನೆಯೂ ಇಲ್ಲದೆ ಜನರು ತಾವಾಗಿಯೇ ಈ ಕಸಬಿನಲ್ಲಿ ಪ್ರೀತಿಕಂಡು ನೂಲುತ್ತಿರುವರು. ಈ ನೂಲಿನಿಂದಾದ ಅರಿವೆಯು ದೇಶದಲ್ಲೆಲ್ಲ, ಬಿಹಾರಿನ ಸಂಕಷ್ಟ ಪೀಡಿತರ ಹೆಸರಲ್ಲಿ, ವಿಕ್ರಯವಾಗುವಂತೆ ಎಲ್ಲರೂ ಪ್ರೋತ್ಸಾಹಿಸುವರೆಂದು ಭರವಸೆಯಿದೆ

ಕೆಲಕಡೆಗಳಲ್ಲಿ ಕಡಿದಿಟ್ಟ, ಮುಂದುಬಿದ್ದ, ಕಬ್ಬು ಇದೆ. ಇದನ್ನು ಇನ್ನು ಕೆಲವೇ ದಿನಗಳಲ್ಲಿ ಪರವೂರುಗಳಿಗೆ ಸಾಗಿಸದಿದ್ದರೆ ವ್ಯರ್ಥವೇ ಆಗುವುದು. ದಕ್ಷಿಣ ಬಿಹಾರ್, ಮತ್ತು ಆಸುಪಾಸಿನ ಪ್ರಾಂತ್ಯಗಳ ಕೆಲವು ಸಕ್ಕರೆ ಕಾರ್ಖಾನೆಗಳು ಇದನ್ನು ಕೊಂಡುಕೊಳ್ಳಲು ನಿಶ್ಚಯಿಸಿರುವುವು. ಆದರೆ, ರೈಲುಬಂಡಿಯ ಸಹಾಯವು ಸಾಕಾಗುವುದಿಲ್ಲ. ಇನ್ನೂ ಹೆಚ್ಚು 'ಗೂಡ್ಸ್' ಬಂಡಿಗಳು ಬೇಕಾಗಿವೆ. ರೈಲ್ವೆ ಕಂಪೆನಿಗಳಿಗೆ ಈ ಬಗ್ಗೆ ವಿನಂತಿ ಹೋಗಿದೆ.

ರೈಲ್ವೆ ರಸ್ತೆಯು ಪೂರ್ತಿಯಾಗಿ ದುರುಸ್ತಿಯಾಗಿಲ್ಲ. ಕೆಲವು ಕಡೆಗಳಲ್ಲಿ ಮಾತ್ರ ಕಡಿದುಹೋದ ಸಂಬಂಧವನ್ನು ತಾತ್ಕಾಲಿಕವೆಂದು ದುರುಸ್ತಿಪಡಿಸಿರುವರು.

ವೈಸರಾಯರ ಬಿಹಾರ್ ನಿಧಿಗೆ ಬಿಹಾರ್–ಒರಿಸ್ಸಾ ಪೋಲೀಸ್ ಫೌಜುಗಳಿಂದ ಕಾಣಿಕೆಯಾಗಿ ಬಂದ ರೂಪಾಯಿ ೭೫೦೦! ಇದೊಂದು ವಿಶೇಷ ಸುದ್ದಿ

ಭೂಕಂಪದಲ್ಲಿ ತಂದೆ–ತಾಯ್ಗಳನ್ನೂ ಬಂಧುಗಳನ್ನೂ ಕಳೆದುಕೊಂಡು ಕೇವಲ ಅನಾಥರಾದ ಮಕ್ಕಳಲ್ಲಿ, ತಮ್ಮಿಂದ ಸಾಧ್ಯವಿರುವಷ್ಟನ್ನು ತಾವು ಪಡೆದುಕೊಂಡು ಸಾಕುವೆವೆಂದು ಹಿಂದೂದೇಶದ ಬೇರೆ ಬೇರೆ ಭಾಗಗಳಿಂದ ಅನೇಕ ಅನಾಥಾಲಯದವರು ಸರಕಾರಕ್ಕೆ ಬರೆದು ತಿಳಿಸಿರುವರು.

ಧಾನ್ಯ–ದವಸ–ವಸ್ತ್ರ ಇತ್ಯಾದಿ ಸರಕುಗಳು ದಾನರೂಪವಾಗಿ ಯಥೇಷ್ಟ ಕೂಡಿಕೆಯಾಯಿತೆಂದೂ, ಇನ್ನು ಬೇಕಾದುದು ಹೆಚ್ಚಾಗಿ ನಗದು ರೊಕ್ಕವೆಂದೂ ಭೂಕಂಪ ಸಂಕಷ್ಟ ನಿವಾರಣಾ ಕಮಿಟಿಯವರ ಪ್ರಕಟಣೆ

ಮನೆಗಳನ್ನು ಬಿದಿರುಗಳಿಂದಲೇ ಕಟ್ಟುವರು. ಗೋಡೆಗಳೂ ಬಿದಿರುಗಳಿಂದಲೇ!

ಇನ್ನೂ ಅಲ್ಲಲ್ಲಿಂದ ದಾನರೂಪವಾಗಿ ಹಣವು ಬರುತ್ತಲೇ ಇದೆ. ಆದರೆ, ಅದು ಸಾಲದೆಂದೇ ಕಮಿಟಿಯವರ ಅಂಬೋಣ. ಈಗ ಕೂಡಿಕೆಯಾದುದಕ್ಕಿಂತಲೂ ಇನ್ನು ನಾಲ್ಕು ಪಾಲು ಹಣ ಹೆಚ್ಚಿಗೆಯಾಗಿ ಬೇಕೆಂದು ವಿನಂತಿ

ಗಾಂಧಿಜೀಯವರು ಹೋದಲ್ಲೆಲ್ಲ ಜಯಘೋಷಗಳು. ಅತ್ಯಪೂರ್ವ ಸ್ವಾಗತ!

ಹೋದಲ್ಲೆಲ್ಲ ಮನೆಗಳು ಹುಡಿಯಾಗಿ ಬಿದ್ದ ದೃಶ್ಯಗಳು! ಹೃದಯವಿದಾರಕವಿದು! 'ಚಂಪಾರಣ್ಯದಲ್ಲಿ ನಾನು ೧೯೧೭ರಲ್ಲಿ ಕೆಲವು ತಿಂಗಳಿದ್ದೆನು. ನಾನು ಚೆನ್ನಾಗಿ ಬಲ್ಲ ಮನೆಗಳೇ ನನ್ನ ಮುಂದೆ ರಾಶಿಯಾಗಿ ಬಿದ್ದುದನ್ನು ನೋಡುವಾಗ, ಆ ಜನರ ಸ್ಥಿತಿಯನ್ನು ನೆನೆವಾಗ, ಹೃದಯವು ದುಃಖದಿಂದ ಬೇಯುವುದು' ಎಂದರು ಗಾಂಧಿಜೀಯವರು

ಕೆಲವು ಕಡೆಗಳಲ್ಲಿ ಸಿಡುಬು–ಪ್ಲೇಗುಗಳು ತಲೆದೋರಿವೆಯಾದರೂ, ಅವು ಶೀಘ್ರ ಗತಿಯಲ್ಲಿ ಹರಡದಂತೆ ಜಾಗರೂಕತೆ ವಹಿಸಲಾಗಿದೆ

ಗಾಂಧಿಜೀಯವರು ಹರಿಜನ ಕಾರ್ಯಾರ್ಥ ಸಂಚರಿಸುತ್ತ ಅಲ್ಲಲ್ಲಿ ಶೇಖರಿಸಿದ ನಿಧಿಯ ಮೊತ್ತವು, ಇದೇ ಮಾರ್ಚ್ ತಾ ೨ರ ತನಕ ರೂ ೩,೫೨,೧೩೦–೯–೭ ರಷ್ಟಾಗಿದೆ

ಈ ಮೊಬಲಗನ್ನು ಆಗಿಂದಾಗ್ಗೆ ಧಿಲ್ಲಿಯಲ್ಲಿರುವ ಸೆಂಟ್ರಲ್ ಬೋರ್ಡಿಗೆ ಕಳುಹಿಸಿಕೊಡುವರು. ಅಲ್ಲಿ ಅದನ್ನು ಬೇಂಕಿನಲ್ಲಿ ಭದ್ರವಾಗಿ ಇಡೋಣಾಗುತ್ತದೆ. ಗಾಂಧಿಜೀಯವರೊಂದಿಗೆ, ಲೆಕ್ಕಪತ್ರಗಳನ್ನಿಡುವ ಮೂವರು ಕರಣೀಕರು ಇರುವರು. ಇವರು ಪ್ರತಿಯೊಂದು ಕೂಲಂಕಷವನ್ನೂ ಬರೆದಿಡುವರು. ಇವರ ಲೆಕ್ಕಗಳನ್ನು ಸರಿದೂಗಿ ನೋಡಲು ಧಿಲ್ಲಿಯಲ್ಲಿಯೂ ಪ್ರತ್ಯೇಕ ಗುಮಾಸ್ತರನ್ನು ನೇಮಿಸಲಾಗಿದೆ.

ವಂದೇ ಮಾತರಂ

ಮನುಷ್ಯ ಜೀವನದ ಚಮತ್ಕಾರ

೫೦೦ ರೂಪಾಯಿಗಳು

ಉತ್ತಮ ಕುಟುಂಬಾಧಾರ! ಸುಲಭ ಮಾರ್ಗ!

ಸ್ವರಾಜ್ಯ ಕಂಪೆನಿಯು ಇಂಡಿಯಾ ಕಂಪೆನಿಗಳ ಕಾನೂನು ಪ್ರಕಾರ ಬೊಂಬಾಯಿ ಗವರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ.

ಜನಾನುರಾಗಿಗಳೂ, ಸುಪ್ರಸಿದ್ಧರೂ, ಪರಿಪಕ್ವವಾದ ಬುದ್ಧಿಯುಳ್ಳವರೂ, ಮತ್ತು ಸಮರ್ಥರಾದ ಡೈರೆಕ್ಟರುಗಳುಳ್ಳ

ಉತ್ತಮವಾದ ಸಂಸ್ಥೆ,

ಇದರಲ್ಲಿ

ಹೆಂಡತಿ ಮಕ್ಕಳಾದಿಯಾಗಿ ತನ್ನನ್ನೇ ಆಶ್ರಯಿಸಿರುವ ಪ್ರತಿಯೊಬ್ಬರಿಗೂ ಆಪದ್ಧನವನ್ನು ಕೂಡಿಸುವುದು ಮೊದಲನೇ ಕಾರ್ಯವಲ್ಲವೇ?

ಹೌದು!!

ಅಂದ ಮೇಲೆ ದಿ ಸ್ವರಾಜ್ಯ ಬ್ಯಾಂಕಿಂಗ್ ಮತ್ತು ಇನ್ಸೂರೆನ್ಸ್ ಕಂಪೆನಿ ಲಿಮಿಟೆಡ್ ಧಾರವಾಡ ಇವರು ಏರ್ಪಾಡು ಮಾಡಿರುವ ಮದುವೆ, ಜನನ, ಮತ್ತು ಮರಣ ಎನ್ನುವ ಮೂರು ತರದ ವಿಮಾ ಶಾಖೆಗಳಲ್ಲಿ ಜಾತಿ, ಮತ ಭೇದವಿಲ್ಲದೆ ಗಂಡಸರು ಮತ್ತು ಹೆಂಗಸರು ಎಂಬ ವ್ಯತ್ಯಾಸವಿಲ್ಲದೆ 18ರಿಂದ 55 ವಯಸ್ಸಿನೊಳಗಿರುವ ಪ್ರತಿಯೊಬ್ಬರೂ ವಿಮೆಯನ್ನು ಇಳಿಸಿ 500 ರೂಪಾಯಿನ ವರೆಗೂ ಪ್ರತಿಫಲ ಹೊಂದಲು ಮುಂದುವರಿಯಬೇಕಾದುದು ಕರ್ತವ್ಯ

ಪ್ರವೇಶ ಫೀಸು 5–0–0. ವಾರ್ಷಿಕ ಚಂದಾ 1–0–0

ವಿಶಾಪರ್ಣ ರುಸುಂ 1–0–0.

ಮೆನೇಜಿಂಗ್ ಏಜಂಟ್ಸ್.

ದಿ ಸ್ವರಾಜ್ಯ ಬ್ಯಾಂಕಿಂಗ್ ಮತ್ತು ಇನ್ಸೂರೆನ್ಸ್ ಕಂಪೆನಿ, ಲಿಮಿಟೆಡ್, ಧಾರವಾಡ.

An Advertisement In

"Swadeshabhimani"

Means a sure fortune to you

Ask for Contract Rates

The Swadeshabhimani office,

Car Street,

Mangalore

ಈ ಬೋರ್ಡು ಒಂದು ಖಾಸಗಿ ಸಂಸ್ಥೆಯೆಂದೆಣಿಸಿ ಕೆಲಸ ಮಾಡುತ್ತಿಲ್ಲ. ಸಾರ್ವಜನಿಕ ಸಂಸ್ಥೆಯೆಂದೇ ಅರಿತು, ಜನರಿಂದ ಹಣ ಸಂಗ್ರಹಿಸಿದ ತನ್ನ ಜವಾಬುದಾರಿಯನ್ನು ತಿಳಿದುಕೊಂಡೇ ಆರ್ಥಿಕ ಮತ್ತು ಆಡಳಿತದ ವಿಷಯದಲ್ಲಿ ನಡೆದುಕೊಳ್ಳುತ್ತಿದೆ

ಗೊಡ್ರೆಜ್ ಸಾಬೂನುಗಳಿಗೆ

ಅಮೂಲ್ಯವೂ ಹೊಸತೂ ಆದ ಪ್ರಶಸ್ತಿ

ಡಾ! ಎಂ. ಎ. ಅನ್ಸಾರಿ, ಎಂ. ಡಿ.

(ಅಖಿಲ ಭಾರತ ಕೊಂಗ್ರೆಸ್ಸಿನ ಮಾಜಿ ಅಧ್ಯಕ್ಷರು)

ಗೊಡ್ರೆಜ್ ಸಾಬೂನುಗಳ ಉತ್ಕೃಷ್ಟ ಗುಣಗಳನ್ನು ಕಂಡು ನಾನು ಸಂತೋಷದಿಂದ ಮೆಚ್ಚಿದವನಾಗಿರುತ್ತೇನೆ. ಕಳೆದ ಹತ್ತು ವರ್ಷಗಳಿಂದ ನಾನವುಗಳನ್ನು ಉಪಯೋಗಿಸುತ್ತಿರುವೆನು. ಯುರೋಪುದಲ್ಲಾಗಲೀ ಇನ್ನಿತರ ಯಾವ ದೇಶದಲ್ಲಾಗಲೀ ತಯಾರಿಸಲ್ಪಟ್ಟ ಸಾಬೂನುಗಳಿಗಿಂತ ಇವು ಅತ್ಯುತ್ಕೃಷ್ಟವೆಂದೇ ನನ್ನ ಅನುಭವದ ಮಾತು. ಅವುಗಳ ಉತ್ಕೃಷ್ಟತೆಯ ದೃಷ್ಟಿಯಿಂದಲೂ, ಅಲ್ಲದೆ ಅವು ಹಿಂದೂದೇಶದಲ್ಲೇ ಸಿದ್ಧಗೊಳಿಸಲ್ಪಟ್ಟುವೆಂಬ ದೃಷ್ಟಿಯಿಂದಲೂ ನಾನವುಗಳನ್ನು ಹಿಂದೀಯ ಜನತೆಗೆ ಶಿಫಾರಸು ಮಾಡುತ್ತೇನೆ'

ಪ್ರಮುಖ ಡಾಕ್ಟರರೂ ಮತ್ತು ಪ್ರಮುಖ ರಾಷ್ಟ್ರೀಯ ಧುರೀಣರೂ ಆದ ಡಾ! ಅನ್ಸಾರಿಯವರ ಹೇಳಿಕೆಯು ಪ್ರತಿಯೊಬ್ಬ ವ್ಯಕ್ತಿಯ ಮತ್ತು ಪ್ರತಿಯೊಂದು ರಾಷ್ಟ್ರದ ದೈಹಿಕ ದೃಷ್ಟಿ ಮತ್ತು ರಾಷ್ಟ್ರೀಯ ದೃಷ್ಟಿಯಿಂದ ಸಹಾಯಕರವಾಗಬೇಕು

Jaya Bharatham Co., P B No 83 Madras.

ಜಯ ಭಾರತಂ ಕೋ., ಪಿ. ಬಿ. ೮೩, ಮದ್ರಾಸು.

ದ. ಕ. ಜಿಲ್ಲೆಗೆ ಏಜಂಟರು:–ಎಸ್ ಇ ಬಂಗೇರಾ ಮಿಶನ್ ಕಂಪೌಂಡು, ಕಾಸರಗೋಡು

ವಿವಿಧ ವಿಷಯ.

ವಿಚಿತ್ರ ಶಿಶುವಿನ ಅವತಾರ!

ಜೆಕ್ ಎಂಬಲ್ಲಿ ಒಂದು ಗಂಡು ಮಗು ಜನಿಸಿದೆ, ಮೂವತ್ತೆರಡು ಸಂಪೂರ್ಣ ಹಲ್ಲುಗಳಿವೆ—ಗಡ್ಡವಿದೆ - ದೇಹದಲ್ಲೆಲ್ಲಾ ಕೂದಲಿದೆ! ಎಲ್ಲಾ ವ್ಯಕ್ತಿಗಳಿಗೆ ಸಹುಕ್ಕಾರ ಕೊಡುತ್ತಲಿದೆ. ಹಾಲು ಕುಡಿಯುತ್ತಿದೆ! ಅವತಾರವಂತೆ—ಯಾರದೋ!

ಹರ್ಜಗಸ್ವನಿಗೆ ಅಪ್ಪಣೆ!

ಟ್ರಾನ್ಸ್‌ವಾಲ್‌ನಲ್ಲಿ ಕಮಿಶನರ್ ಒಫ್ ನೇಟಿವ್ ಎಫೇರ್ಸ್‌ಎಂಬವರು ನ್ಯೆಕಾಂಟ್ ಎಲಿಫೆಂಟರು, ಆಫ್ರಿಕದ ಅನಾಗರಿಕರು ಸ್ವೇಚ್ಛಾನುಸಾರ ಹುಲಿಯನ್ನು ಬರಪಾಡಿದುದನ್ನು ಖಾಸು ಕಪ್ಪಾರೆ ಕಂಡಿರುವೆನೆನ್ನುತ್ತಿರುವರು.

ಭೋಜನ ಗೃಹಕ್ಕೆ ರೈಲುಬಂಡಿ.

ಗ್ವಾಲಿಯರ್ ಮಹಾರಾಜರು ಬ್ರಿಟನಿನಿಂದ ಬೆಳ್ಳಿಯ ಸಣ್ಣ ರೈಲು ಒಂದನ್ನು ತಯಾರಿಸಿ ಈ ವಾರ ಅದನ್ನು ಅರಮನೆಗೆ ತಂದು ಭೋಜನ ಮಾಡುವ ಮೇಜಿನ ಮೇಲೆ ನಡೆಸಲಿರುವರು. ಈ ರೈಲು ಮೇಜಿನ ಸುತ್ತಲೂ ತಿರುಗಿ ಅತಿಥಿಗಳಿಗೆ ಭೋಜನವನ್ನು ತಲುಪಿಸುವುದು.

ಆಕೆಯ ಫೋಟೋಗಳ ಸಾವಿರ

ಹಿರ್ಷ್ಟ್ರಿ ಎಂಬಲ್ಲಿ ಮಿಸ್ ಮೇಡಲಿನ್ ಫ್ರೆಡರಿಕ್ ಎಂಬವಳ ಭಾವಚಿತ್ರವನ್ನು ಕಡಿಮೆಯೆಂದರೆ ವಾರಕ್ಕೆ ೪೦೦ ಫೊಟೋಗ್ರಾಫರರು ತೆಗೆಯುತ್ತಾರೆ! ಪ್ರಪಂಚದಲ್ಲಿ ಪ್ರಥಮಸ್ಥಾನ ಇವಳಿಗಿರಲಿ!

ಗಂಗಾನದಿಯ ಪಾವಿತ್ರ್ಯದ ಕಾರಣ.

ಗಂಗಾನದಿಯು ಮೃತಶರೀರ, ಜನರ ಮಲಮೂತ್ರ ಮೊದಲಾದ ಕಶ್ಮಲಗಳಿಂದ ತುಂಬಿರುವುದರಿಂದ ನೀರಿನಲ್ಲಿರುವ ದುಷ್ಟ ಕ್ರಿಮಿಗಳು ಈ ಮಲದ ಮೂಲಕ ಸಾಯುವುದರಿಂದಲೇ—ಪರಿಶುದ್ಧ ನೀರಿನ ನದಿಯಾಗಿರುತ್ತದೆಂದು ಡಾ ಸಿ. ಬಿ ನೆಲ್ಸನ್ ಎಂ. ಡಿ ಎಂಬವರು ಪ್ರಕಟಿಸಿರುವರು. ರೋಗಿಗಳ ಮಲದಲ್ಲಿ bacteriophage' ಎಂಬ ಕ್ರಿಮಿ-ನಾಶಕ ವಸ್ತುವಿರುವುದರಿಂದ ಇದರಿಂದ ಎಂತಹ ರೋಗಗಳೂ ನಿವಾರಣೆ ಹೊಂದುವುವೆಂದು ಅವರ ಹೇಳಿಕೆ

೩೫೦ ಗ್ರಂಥಗಳ ರಚನೆ.

ರಷ್ಯದ ಮಿ॥ ಹೋಲ್ಡನ್‌ಬರ್ಗ್ ಎಂಬವರು ಬರೆದ ಗ್ರಂಥಗಳು ಒಟ್ಟು ೩೫೦ ಎಂದು ಲೆಕ್ಕವಾಗಿದೆ. ಈ ಗ್ರಂಥಗಳಲ್ಲಿ ೨೦೦ ಗ್ರಂಥಗಳು ಹಿಂದೂಸ್ಥಾನದ ವಿಷಯಕವಾದುವಂತೆ. ಬರ್ಗರವರು ಹಿಂದೂ ದೇಶದ ವಿಷಯವನ್ನೇ ಚೆನ್ನಾಗಿ ಅಭ್ಯಾಸಿಸಿದವರು. ಕಳೆದವಾರ ಇವರು ಮೊಸ್ಕೋ ನಗರದಲ್ಲಿ ಕಾಲವಾದರೆಂದು ವಾರ್ತೆ

ಅರುವರೆ ಮೈಲು ಉದ್ದದ ಸಂಕ

ಪೋರ್ಚುಗೀಸ್ ದೇಶದಲ್ಲಿರುವ ಟೇಗಸ್ ನದಿಯ ಮೇಲೆ ಮಹಾ ಸೇತುವೆಯೊಂದನ್ನು ಕಟ್ಟುತ್ತಿರುವರು. ಇದರ ಉದ್ದವು ೬॥ ಮೈಲುಗಳಾಗಬಹುದೆಂದು ಅಂದಾಜು ಮಾಡಲಾಗಿದೆ. ೩೦ ಲಕ್ಷ ಪವನುಗಳು ಖರ್ಚಾಗಬಹುದಂತೆ. ಪ್ರಪಂಚದಲ್ಲಿ ಇದು ಅತಿ ದೊಡ್ಡ ಸೇತುವೆಯೆನಿಸುವುದು.

ಗಣೇಶನ ಹೆಟ್ಟು ನಾಝಿರರಿಗೆ

[illegible] ತ್ರಿವೇದಿಯಲ್ಲಿಯ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನೊಳಗೊಂದು ಚಿಕ್ಕಗಲಭೆ. ಆ ಕೋರ್ಟಿನ ವಠಾರದೊಳಗೊಂದು ಮೂಲೆಯಲ್ಲಿ ಗಣೇಶನ ಶಿಲಾವಿಗ್ರಹವಿತ್ತಂತೆ. ಯಾರೋ ನ್ಯಾಯವಾದಿಗಳು ಅದರ ಸುತ್ತಲೂ ಒಂದು ದೇವಾಲಯವನ್ನು ಕಟ್ಟಿಸುವ ಆಲೋಚನೆ ಮಾಡಿ, ಕೆಲಸವನ್ನೂ ಆರಂಭಿಸಿದರು. ಇದಕ್ಕೆ ಯಾರ ಅಪ್ಪಣೆಯೂ ಇಲ್ಲ.— ಆ ಗಣೇಶನ ಪ್ರೇರಣೆ, ಅಷ್ಟೆ. ಸುದ್ದಿ ಡಿಸ್ಟ್ರಿಕ್ಟ್ ಜಡ್ಜರ ಕಿವಿಗೆ ಮುಟ್ಟಿತು. ಅವರೇ ಬಂದು ತನಿಖೆ ನಡೆಸಿದರು. ಫಲ,—ಡಿಸ್ಟ್ರಿಕ್ಟ್ ನಾಝಿರ ಮತ್ತು ಪ್ರೊಸೆಸ್ ಸರ್ವರ ಇವರಿಬ್ಬರಿಗೆ "ಡಿಸ್ಮಿಸ್"!—ಹೆಡ್‌ಕ್ಲಾರ್ಕನಿಗೆ "ಸಸ್ಪೆಂಡ್"! ಇಂತಹ ಸುದ್ದಿಯನ್ನು ಮೊದಲೇ ತನಗೆ ತಿಳಿಸಲಿಲ್ಲವೇಕೆಂದು!

ಒಕ್ಕಲುಗಳನ್ನು ಪೀಡಿಸುವ ಕಾಯಿದೆ!

ಸಂಯುಕ್ತ ಪ್ರಾಂತ್ಯದ ಜಮೀನುದಾರರಿಗೆ ಸುಖ ಹೆಚ್ಚಿಸುವರೆ ಸಹಾಯಕರಾಗಿ ಕೆಲ ಮೆಂಬರರು ಅಲ್ಲಿಯ ಕೌನ್ಸಿಲಿನಲ್ಲಿ ದುಷ್ಟ ಪ್ರಯತ್ನಗಳನ್ನು ನಡೆಸುತ್ತಿರುವರು. ಸುಖವೆಂದರೆ ಇಷ್ಟೆ - ಗೇಣಿ ಕೊಡಲು ತಪ್ಪಿದ ಒಕ್ಕಲುಗಳನ್ನು ಕೂಡಲೇ ಕೈದು ಮಾಡಲು ವರ್ಗದಾರರಿಗೆ ಹಕ್ಕು ಕೊಡುವ ಅಪ್ಪಣೆಬೇಕೆಂದು!—ಇದು ಕೌನ್ಸಿಲಿನಲ್ಲಿ ಚರ್ಚೆಯಾಯಿತು. ಕೊನೆಗೆ ತೀರ್ಮಾನ ಹೊರಟಿತು "ಆಗುವುದಿಲ್ಲ!" ಎಂದು. ಬಹುಮಂದಿ ಆ ಮಸೂದೆಗೆ ವಿರೋಧವಾಡಿ, ಅದನ್ನು ಪ್ಯಾರಿಗೆ ತಾರಸಂತೆ ಮಾಡಿದುದರಿಂದ ಬಡ ಒಕ್ಕಲುಗಳಿಗೆ ಕೊಂಚ ಹಾಯಬಂತು.

+ ++ +

ಪ್ರಚಲಿತಸಮಾಚಾರ.

ಚರಕ ಸ್ಪರ್ಧೆಯ ಅವಧಿ!

ಅತ್ಯುತ್ತಮವಾದ ಮಾದರಿ ಚರಕವೊಂದನ್ನು ತಯಾರಿಸಿದವರಿಗೆ ಒಂದು ಲಕ್ಷ ರೂಪಾಯಿಗಳ ಬಹುಮಾನವನ್ನು ಕೊಡಲಾಗುವುದೆಂದು ಅಖಿಲ ಭಾರತ ಚರಕಾ ಸಂಘದವರು ಸಾರಿದ್ದರಷ್ಟೆ. ಹಲವಾರು ಕೆಲವು ಸಬರಮತಿ ಆಶ್ರಮಕ್ಕೆ (ಈಗ ಇದನ್ನು "ಹರಿಜನ ಆಶ್ರಮ"ವೆನ್ನುವರು) ತಲುಪಿವೆ. ಜಪಾನಿನ ನಗರದ ಮಿಸ್ ಸೋಯಿಯೆಂಬಾಕೆ ಕಳುಹಿದ ಚರಕವು ವಿಶೇಷ ಮನ್ನಣೆಗೆ ಪಾತ್ರವಾಗಿರುವುದಾದರೂ, ದೇಶದ ಬೇರೆ ಭಾಗಗಳಿಂದ ಕೇವಲ ವಿನಂತಿಗಳು ಬಂದ ಕಾರಣ, ಸ್ಪರ್ಧೆಯ ಅವಧಿಯನ್ನು ಇನ್ನು ಮೂರು ತಿಂಗಳುಗಳಿಗೆ ಮುಂದರಿಸಲಾಗಿದೆ

ಮಕ್ಕಳ ರಕ್ಷಣೆಯ ವಿಚಾರ

ಬಂಗಾಳದ ಗವರ್ನರರಿಗೆ ಇಂಡಿಯದ, ಪ್ರತ್ಯೇಕವಾಗಿ ಬಂಗಾಳ ಪ್ರಾಂತ್ಯದ ಮಕ್ಕಳ ವಿಷಯದಲ್ಲಿ ಬಹಳ ಚಿಂತೆ. "ಮಕ್ಕಳ ರಕ್ಷಣೆಯ ಸಂಘ"ವೊಂದು ಕಲ್ಕತ್ತದಲ್ಲಿದೆ. ಅದಕ್ಕಿರುವ ಸದಸ್ಯರು ೧೧೬ ಮಂದಿ ಮಾತ್ರ. ಇವರಿಗೆಷ್ಟು ಮಕ್ಕಳಿರುವರೋ ತಿಳಿದಿಲ್ಲ. ಸಂಘಕ್ಕೆ ದುಡ್ಡು ಇಲ್ಲ. ಗುಪ್ತಶಾಸ್ತ್ರದ ವಿಷಯದಲ್ಲಿ "ಟ್ರೀಟ್‌ಮೆಂಟ್" ಅಂತು ಮಹಾಕಷ್ಟದಲ್ಲಿ ಸಂಘದ ಕಾರ್ಯವು ಸಾಗುತ್ತಾ ಇದೆ. ಇಂತಹ ಸಂಘದಿಂದ ಎಷ್ಟು ಮಕ್ಕಳ ಉದ್ಧಾರವಾಯಿತೋ ಅದೂ ತಿಳಿದಿಲ್ಲ. ಬಹಳ ಶೋಚನೀಯ ಸ್ಥಿತಿ ನಮ್ಮದು. ಇಷ್ಟು ದೊಡ್ಡ ಪಟ್ಟಣಕ್ಕೆ ಸದಸ್ಯರ ಸಂಖ್ಯೆ ಇಷ್ಟು ಸಣ್ಣದೇ? ಮಕ್ಕಳನ್ನು ಚೆನ್ನಾಗಿ ಕಾಪಾಡದಿದ್ದರೆ ಅವರು ಮುಂದೆ ಭೀಭತ್ಸ ಅಭ್ಯಾಸಗಳಿಗೆ ಬಲಿಯಾಗಿ, ದಾರಿದ್ರ್ಯ—ರೋಗ—ದುಃಖಗಳನ್ನು ತಂದುಕೊಳ್ಳದಿರುವರೇ?" ಎಂದೇ ದುಃಖಪೂರಿತ ಶಬ್ದಗಳಿಂದ, ಕಳೆದವಾರ ಈ ಸಂಘದ ವಾರ್ಷಿಕಾಧಿವೇಶನದಲ್ಲಿ ಗವರ್ನರ ಸಾಹೇಬರ ಭಾಷಣ

ಜೈಲುಗಳ ಸುಧಾರಣೆ

ಹಿಂದೂದೇಶದ ಜೈಲುಗಳ ಸ್ಥಿತಿಯು ಇಡೀ ಪ್ರಪಂಚದ ಟೀಕೆಗೆ ಗುರಿಯಾಗಿದೆಯೆನ್ನಬಹುದು. ಇದರ ಸುಧಾರಣೆಗಳ ಬಗ್ಗೆ ಹಲವು ವರ್ಷಗಳಿಂದ ಪ್ರಯತ್ನ ನಡೆಯುತ್ತಾ ಇದೆ. ಆದರೆ ಅಗತ್ಯವಾಗಿ ಆಗಬೇಕಾದುದೇ ಬಾಕಿಯುಳಿದಿತ್ತು. ಯಾವ ಯಾವ ಸುಧಾರಣೆಗಳನ್ನು ಪ್ರಕೃತಕ್ಕೆ ಜಾರಿಗೆ ತರಬಹುದೆಂಬ ವಿಷಯವನ್ನು ಚರ್ಚಿಸಿ ಸರಕಾರಕ್ಕೆ ವರದಿ ಬರೆದುಕೊಳ್ಳಲು ಎಲ್ಲ ಪ್ರಾಂತ್ಯಗಳ ಜೈಲುಗಳ ಇನ್ಸ್‌ಪೆಕ್ಟರುಗಳ ಪರಿಷತ್ತು ಇದೇ ತಾ. ೧೪ರಲ್ಲಿ ಅಲ್ಲಹಾಬಾದಿನಲ್ಲಿ ಕೂಡಿ ಕೆಲವು ನಿರ್ಣಯಗಳನ್ನು ಮಾಡಿರುವರು. (ಈ ಕುರಿತಾದ ವಿವರ ಮುಂದಿನ ಸಂಚಿಕೆಯಲ್ಲಿ.)

ಗತಮಹಿಂದನ ಮೇಲಿನ 'ಪ್ರೇಮ'!

ಬೊಂಬಾಯಿ ಮುನಿಸಿಪಲ್ ಕೊರ್ಪೊರೇಶನಿನೊಳಗಿನ ಪ್ರಾಗತಿಕರ ಸಂಗತಿಯನ್ನು ಕೇಳಿಯ ವೈಚಿತ್ರ್ಯವನ್ನಾರೂ ತಿಳಿದಿಲ್ಲ. ಅಲ್ಲಿಯ ಕೌನ್ಸಿಲ್ ಮಂದಿರದಲ್ಲಿ ಶ್ರೀ ೧ ವಿ ಜೆ ಪಟೇಲರ ಸ್ಥಿರಚಿತ್ರವನ್ನು ಇರಿಸಬೇಕೆಂದು ಕೆಲವು ಮೆಂಬರರ ಸಾಧಿಸುವಾಗ ಈ ಪ್ರಾಗತಿಕರು ಅದಕ್ಕೆ ವಿರೋಧವನ್ನಾಡಿರುವರು. ಪಟೇಲರು ಗೇಟದ ಆಚಿಂದ ಮುಖಂಡರಲ್ಲೊಬ್ಬರಷ್ಟೆ. ಅಲ್ಲ, ಬೊಂಬಾಯಿ ಕೊರ್ಪೊರೇಶನಿನ ಮೇಯರರೂ ಆಗಿದ್ದವರು. ಇಂಥವರ ಚಿತ್ರವೊಂದು ಕೊರ್ಪೊರೇಶನಿನಲ್ಲಿರಬಾರದೆಂದು ಹೇಳುವ ಈ ಪ್ರಾಗತಿಕರ ಸ್ವಾಗತಿಗಳಿಗೆ ಆಕ್ಷೇಪಗಳಿಲ್ಲ. ಅವರ ಚಿತ್ರವೊಂದನ್ನೇ ತೆಗೆದು ಕೌನ್ಸಿಲ್ ಗೃಹವನ್ನಲಂಕರಿಸಿದರೆ ಮುಂದಿನ ಪ್ರಾಗತಿಕರಿಗೆ "ಇನ್ಸ್‌ಪಿರೇಶನ್"ಗ ಗದೇ?

ಭಾರತದ ವ್ಯಾಪಾರ ವೃದ್ಧಿ!

ಬ್ರಿಟಿಷ್ ಟ್ರೇಡ್ ಕಮಿಶನರರು ಹೊರಡಿಸಿದ ವರದಿಯಲ್ಲಿ, ಭಾರತದ ವ್ಯಾಪಾರವು ವೃದ್ಧಿ ಹೊಂದಿದೆಯೆಂದು ಕಾಣಿಸಲಾಗಿದೆ. ಎಂತಹ ವ್ಯಾಪಾರ? ಯಾರ ವ್ಯಾಪಾರ? ಬ್ರಿಟನಿನಿಂದ ಇಂಡಿಯಕ್ಕೆ ಬರುವ ಸರಕುಗಳ ವ್ಯಾಪಾರ! ನೇಕಡಾ ೧೬ರಷ್ಟು ಹೆಚ್ಚಿದೆ.

ಜಪಾನು ಮುಂದಡಿಯಿಟ್ಟಿತು

ಈ ತಿಂಗಳ ಲೆಕ್ಕಗಳನ್ನು ನೋಡುವಾಗ ಜಪಾನಿನ ಅರಿವೆಗಳ ಆಮದು ಇಂಡಿಯಕ್ಕೆ ಹೆಚ್ಚಾಗಿ ಆದರೆ ತಿಳಿದುಬಂದಿದೆ. ಕಳೆದ ತಿಂಗಳಿಗಿಂತ ಸುಮಾರು ೬೦ ಲಕ್ಷ ಗಜ ವಸ್ತ್ರವು ಹೆಚ್ಚಾಗಿ ಬಂದಿದೆ

TAJ MAHAL.

Agar Bathi, delightful Smell & Penetrating odour. Packet of 300 Sticks Rs. 2—8—0. Postage free SREE RAMACHANDRA STORES, Palace Perfumers, Malleswaram, Bangalore.

+ ++ +

ತುಂಡು ವಾರ್ತೆಗಳು.

ಜೆನ್ನಿಫೊರ್ಟರವರ ಸಹೋದರವರು ದಿವಾಳಿಯಂತೆ! ಫೋರ್ಟಿನಿಂದ ಸಹಾಯವಿಲ್ಲ!!

ಕೊಯಮುತ್ತೂರಿನಲ್ಲಿ ಸಿಡುಬು ಪ್ರಬಲವಾಗಿದೆ. ತಾ॥ ೧೦ರಿಂದ ೧೭ರ ವರೆಗೆ ೭೫ ಮರಣಗಳು!

ಇಂಗ್ಲೆಂಡಿನಲ್ಲಿ ಸೆಂಟರಗೋಲ್ ಬೀದಿ ಸುಮಾರು ೩ ಲಕ್ಷ ಪವನು ಬೆಲೆಬಾಳುವ ಸೊತ್ತು ನಾಶವಾಗಿದೆ

ಢಿಲ್ಲಿಯಲ್ಲಿ ಎಸ್ಸೆಂಬ್ಲಿಯೊಂದಕ್ಕೆ ೫ ರೂಪಾಯಿ ತೆರಿಗೆ ಎಂದು ಹಂಚಾಕಾರ

ಸಿಲೋನಿನ ಚಹಾಪೇಟಿನ ರಫ್ತು ಸುಂಕವನ್ನು ಕಡಿಮೆ ಮಾಡುವಂತೆ ಕೌನ್ಸಿಲಿನಲ್ಲಿ ಪ್ರಯತ್ನ ನಡೆದಿದೆ

ಢಿಲ್ಲಿಯ ಪ್ರಾದೇಶಿಕ ಫಣೀಂದ್ರನಾಥ ಬೆನರ್ಜಿಯವರು ಊರುಬಿಡಬೇಕೆಂದು ಸರಕಾರೀ ಆಜ್ಞೆಯಾಗಿದೆ

ಮಂಚಾಕುವೊಡರಿಗೆ ಜೇಸೀರ್ಕ್ಸಿಯು ಮಾರಿಹೋಯಿತಂತೆ

ಸಂಯುಕ್ತ ಸಂಸ್ಥಾನವು ಒಟ್ಟು ೭೬೦ ಮಿಲ್ಲಿಯ ಡೊಲ್ಲರುಗಳ ಬಂಗಾರವನ್ನು ಕೊಂಡುಕೊಂಡಂತೆ ಲೆಕ್ಕ

ಕೈಗಾರಿಕೆ ಸಂಸ್ಥೆಗಳೊಳಗೆ ಸ್ಪರ್ಧೆನಡೆಯುವುದಂತೆ ಜರ್ಮನ್ ಸರಕಾರವು ಮೇಲ್ವಿಚಾರಣೆ ವಹಿಸುವುದು

ಮೊಹರಮ್ ಮತ್ತು ಬಕ್ರೀದ್ ಹಬ್ಬಗಳ ಬಗ್ಗೆ ೧೪೪ನೇ ಸೆಕ್ಷನ್ ಜ್ಯಾರಿಯಾಗಿದೆ ಢಿಲ್ಲಿಯಲ್ಲಿ!

ತ್ರಾಂಕೆಬಾರದಲ್ಲಿ ತಾ ೧೬ರಲ್ಲಿ ಬೆಂಕಿಯೆದ್ದು ೧೨ ಗುಡಿಸಲುಗಳು ಭಸ್ಮ

ಡಾ। ಕಿಚಲೂಯವರು, ಮುಲ್ತಾನ್ ಜೈಲಿನಿಂದ ಶಿಕ್ಷೆಯ ಅವಧಿ ಮುಗಿದು ಬಿಡುಗಡೆಹೊಂದಿದರು

WANTED.

Mutpatta Forests in South Kanara

Apply with full details —

Kotnis & Co,

Mambalam, Tynampet, P O

MADRAS

ನೋಟೀಸು

ಮಂಗಳೂರು ಡಿಸ್ಟ್ರಿಕ್ಟ ಮುನ್ಸಿಫ ಕೋರ್ಟಿನಲ್ಲಿ

ಸ್ಮಾಲ್ ವ್ಯಾಜ್ಯದ ನಂಬ್ರ ೨೨/1934

ಬೆಂಗಳೂರು ಶ್ರೀನಿವಾಸ ವೆಂಕಟೇಶ ಪ್ರಭು ಬಿ ವೆಂಕಟೇಶ ರಂಗಭಟ್ಟ ವ ತ್ತು ಕಂಪೆನಿ— ವಾದಿಗಳು

ರಾಮಕೃಷ್ಣನಾಯ್ಕ ಬಿಟ್ಟಾರ ಅಚ್ಚಣ್ಣ ಶೆಟ್ಟಿ ಮಗ, ಜೆಪ ಮಾಡಿ ಕಸಬಾ [illegible] ಅಂಗಡಿಯಲ್ಲಿರುವವ— ಪ್ರತಿವಾದಿ

ಸದರಿ ವಾದಿಗಳು ಪ್ರತಿವಾದಿಯ ಮೇಲೆ ಅತನು ಪಡೆದ ತಂಬಾಕಿನ ಒಾಕಿ ಅಸಲು ಬಡ್ಡಿ ರೂ 50-7-2ಗೆ ಹಾಕಿದ ಸದರಿ ದಾವೆಯು ತಾ 12-4-34ಕ್ಕೆ ಸದರಿ ಕೋರ್ಟಿನ ಮುಂದೆ ತನಿಖೆಗೆ ಇಟ್ಟಿರುತ್ತದೆ. ಆ ದಿವಸ ಪ್ರತಿವಾದಿಯು ಅಕ್ಷೇಪ ಇದ್ದರೆ ಸದರಿ ತಾರೀಕಿಗೆ ಕೋರ್ಟಿನ ಎದುರು ಹಾಜರಾಗಿ ಆಕ್ಷೇಪ ಮಾಡತಕ್ಕದ್ದು

ಮಂಗಳೂರು
16-3-34 } **P N. Bhandarkar,**
Vakil for Plaintiff

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಒ ಪಿ ನಂಬ್ರ 26/1934

ಅರ್ಜಿದಾರಳು ಸತ್ಯಭಾಮೆ ಹೆಂಗಸು, ಈಶ್ವರ ಪಡುವಟ್ನಾಯರ ವಿಧವೆ ಉಪ್ಪಿನಂಗಡಿ ಹೊಸಮನೆ, ಪುತ್ತೂರು ತಾಲೂಕು—ಅರ್ಜಿದಾರಳು.

In the Matter of the Deceased Ishwara Padvatnaya.

ಈ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವುದೇನೆಂದರೆ —ಅರ್ಜಿದಾರಳ ಗಂಡ ಈಗಾಲಿ ಮೃತಪಟ್ಟ ಈಶ್ವರ ಪಡುವಟ್ನಾಯರು ಮಂಗಳೂರು "ದಿ ಕರ್ನಾಟಕ ಬ್ಯಾಂಕು ಲಿಮಿಟೆಡ್‌"ನಲ್ಲಿ G. L. 274/1931, G L. 19/1932, G. L. 126/1933ನೇ ಠೇವಣಿ ಚಿನ್ನದ ನಗಗಳನ್ನು ಅರ್ಜದಾರಳು ವಾಪಾಸು ಪಡೆಯಲು ಹಕ್ಕುದಾರಳೆಂತ ವಾರಿಸ ಸರ್ಟಿಫಿಕೇಟು ಕೊಡಿಸಬೇಕಾಗಿ ಬರೆಕೊಂಡ ಮೇಲ್ಕಂಡ ಅರ್ಜಿಯು ಸದರಿ ಕೋರ್ಟಿನ ಮುಂದೆ ತಾ. 10-4-1934ಕ್ಕೆ ತನಿಖೆಗೆ ಇಟ್ಟಿರುತ್ತದೆ. ಆಕ್ಷೇಪವುಳ್ಳವರು ಆ ದಿವಸ ಹಗಲು 10 ಘಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ಉದಹರಿಸಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು ಎಂತ ಸಮಸ್ತ ಜನರಿಗೆ ಈ ಮೂಲಕ ತಿಳಿಯಪಡಿಸಲಾಗುತ್ತದೆ.

Puttur, s. k.
17-3-'34 } **B Achyuta Baliga,**
Vakil for Petitioner.

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್.

ಸ್ತ್ರೀಯರಿಗೊಂದು ಮಹಾ ವರ.

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ, ಅಶುದ್ಧ ಮುಟ್ಟು, ಬಂಜೆತನ ಸೂತಿಕಾವಾಯು ಅಶುದ್ಧ ರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ ರೂ 8 ಮತ್ತು 1—10—0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

Sole Agents for West Coast and North Kanara —

Wanted Agents in Principal Towns

For terms Apply to—POPULAR STORES

Mangalore

ಪೊಪ್ಯೂಲರ್ ಸ್ಟೋರ್ಸ್

ರಥಬೀದಿ ಮಂಗಳೂರು

ಸ್ತ್ರೀ ಪುರುಷರ ಸಲುವಾಗಿ
ಶಕ್ತಿ ಮ ಸ್ಫೂರ್ತಿಕೊಡುವಂತಹ

ಸುಪ್ರಸಿದ್ಧ

ಝಂಡು ದ್ರಾಕ್ಷಾಸವ

ಇಂದೇ ಉಪಯೋಗಿಸಿರಿ

ಸ್ತ್ರೀಯರ ಸಲುವಾಗಿ
ಆರೋಗ್ಯ ಮ ಶಕ್ತಿವರ್ಧಕ

ಪ್ರದರಾದಿ ರೋಗಗಳ ಮೇಲೆ
ರಾಮಬಾಣ ಉಪಾಯ

ಝಂಡು ಅಶೋಕಾರಿಷ್ಟ

ಬೇಗನೇ ಉಪಯೋಗಿಸಿ

'ZANDU'

ಝಂಡು ಫಾರ್ಮಾಸ್ಯುಟಿಕಲ್ ವರ್ಕ್ಸ್ ಲಿ: ಮುಂಬಾಯಿ

ಮದ್ರಾಸ್ ಸಂಸ್ಥಾನದ ಏಜಂಟ್ — ದಾಮೋದರ ಮತ್ತು ಕಂಪೆನಿ, 78 ಜೈನ ಬಜಾರ್ ರೋಡ್, ಮದ್ರಾಸು
ಮೈಸೂರು ಪ್ರಾವಿನ್ಸ್ ಏಜಂಟ್ — ಬಿ ಪ್ರೊಪಟ್ ಲಾಲ ಕಂಪೆನಿ, ಅರ್ಕಾಟ ಶ್ರೀನಿವಾಸಾಚಾರ ಸ್ಟ್ರೀಟ್
ಮಂಗಳೂರು ಏಜಂಟ್ — ಶಾಹಾ ಕಂಪೆನಿ ಡಾಯ್ಮಂಡ್ ಬಿಲ್ಡಿಂಗ್, ಮಂಗಳೂರು
ಧಾರವಾಡ ಏಜಂಟ್ — ದಿ ಧಾರವಾಡ ಫಾರ್ಮಸಿ, ಧಾರವಾಡ

ಬೇರೆ ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತದೆ

ಆಯುರ್ವೇದ ಔಷಧಿಗಳ ಸೂಚೀಪತ್ರವನ್ನು ಮುಖ್ಯ ಏಜಂಟರಿಂದ ಪಡಕೊಳ್ಳಿರಿ

ನಮ್ಮ ಸಲಹೆಯೇ ಪ್ರಾಧಾನ್ಯವಾದದ್ದೆಂದು ತಿಳಿಯಬೇಡಿ.

ಕಲ್ಲಿಕೋಟೆ ಆಶೋಕ ಆಸ್ಪತ್ರೆಯ ಚೀಫ್ ಮೆಡಿಕಲ್ ಆಫೀಸರರಾದ ಡಾ ಪಿ ವಿ ರಾಮನ್ ಎಂ. ಆರ್ ಸಿ ಎಸ್ ಇವರು ಬರೆದಿರುವುದನ್ನು ಓದಿ ನೋಡಿ—"ನಾನು ನಿಮ್ಮ ಆಶ್ಚರ್ಯಕರವಾದ ಜೀವಾಮೃತಂ ಟಾನಿಕನ್ನು ನರಗಳಲ್ಲಿ ಉಂಟಾಗುವ ಹಸಿವು ಕಡಿಮೆಯಾಗಿರುವುದು ನಿಶಕ್ತಿ ಕಡಿಮೆಯಾಗಿರುವುದು, ಇವು ಪ್ರಾಪ್ತವಾಗಿರುವ ಅನೇಕ ರೋಗಿಗಳಿಗೆ ಕೊಟ್ಟಿರುತ್ತೇನೆ ಅದರ ಫಲಿತಾಂಶಗಳು ಬಹು ತೃಪ್ತಿಕರವಾಗಿವೆ ಜೀವಾಮೃತವನ್ನು ದೇಹಶಕ್ತಿ ಕುಗ್ಗಿರುವ ಎಲ್ಲಾ ಸಂದರ್ಭಗಳಲ್ಲೂ ಸರ್ವ ಸಾಧಾರಣವಾಗಿ ಉಪಯೋಗಿಸಬಹುದೆಂದು ನಾನು ಮನಃಪೂರ್ವಕವಾಗಿ ಶಿಫಾರಸು ಮಾಡುತ್ತೇನೆ"

ಜೀವಾಮೃತವು

ನರಗಳಿಗೆ ಶಕ್ತಿ ಕೊಡುತ್ತದೆ ವೀರ್ಯ ವೃದ್ಧಿಮಾಡುತ್ತದೆ ಹಸಿವು ಹೆಚ್ಚಿಸುತ್ತದೆ ರಕ್ತ ವೃದ್ಧಿಮಾಡುತ್ತದೆ

ಪಂಡಿತ
ಡಿ. ಗೋಪಾಲಾಚಾರ್ಲುರವರ

ಜೀವಾಮೃತವು

ಎಲ್ಲಾ ಔಷಧ ಮಾರುವವರಲ್ಲೂ, ಸ್ಟೋರುಗಳಲ್ಲೂ ದೊರೆಯುತ್ತದೆ (ಸಂಪೂರ್ಣ ವಿವರಗಳಿಗೆ ಇವತ್ತೇ ಬರೆಯಿರಿ)

ಆಯುರ್ವೇದಾಶ್ರಮಂ, ಪೋ ಬಾಕ್ಸು ನಂ 186, ಮದ್ರಾಸು

ಸೋಲ್ ಏಜಂಟರು— ಸಿಟಿ ಮೆಡಿಕಲ್ ಮತ್ತು ಜನರಲ್ ಏಜನ್ಸಿ, ಕಾಟನ್ ಪೇಟೆ ಬೆಂಗಳೂರು (ಉಚಿತ ಕೋಟೆಲ್ ಹತ್ತಿರ)
ದಕ್ಷಿಣ ಕನ್ನಡದ ಏಜಂಟರು— ಪೊಪ್ಯೂಲರ್ ಸ್ಟೋರ್ಸ್, ಮಂಗಳೂರು P No 104

'ವಿನೋದ ಪ್ರಪಂಚ'!!!

ಬೆಂಗಳೂರಿನ ಹಾಸ್ಯರಸಭರಿತ ಪಕ್ಷಪತ್ರಿಕೆ!

ಓದಿದರೆ ನಕ್ಕು ನಕ್ಕು ಸಾಕಾಗುತ್ತದೆ.

ಬಾಲವೃದ್ಧರಿಗೂ ಓದಲು ಸುಸಮಯ.

ವಾ. ಚಂದಾ ರೂ. 1—8—0

ಚಂದಾ ಮನಿಯಾರ್ಡರ್ ಮೂಲಕ ವಿ. ಪಿ.ಯಿಂದ ಇಲ್ಲ

ಜಾಹೀರಾತಿಗೆ ಸುಸಮಯ!

ಸಂಪಾದಕ,
ವಿನೋದ ಪ್ರಪಂಚ, ಬೆಂಗಳೂರು ಸಿಟಿ

ದ ಕನ್ನಡ ಏಜಂಟರು—ಪೊಪ್ಯೂಲರ್ ಸ್ಟೋರ್ಸ್ ಮಂಗಳೂರು.

ಆಮಂತ್ರಣ ಪತ್ರಿಕೆಗಳು.

ಇದು ವಿವಾಹ—ಉಪನಯನಗಳ ಕಾಲ ಮುದ್ದಾದ ಮುದ್ರಣದ ಆಮಂತ್ರಣ ಪತ್ರಿಕೆಗಳನ್ನು ನೀವು ಬಯಸುವುದು ಸಹಜ

ನಿಮಗೆ ಬೇಕಾದ ಕಾಗದಗಳಲ್ಲಿ
ಬೇಕಾದ ಬಳ್ಳಿಗಳಲ್ಲಿ
ಬೇಕಾದ ಬಣ್ಣಗಳಲ್ಲಿ
ಬೇಕಾದಷ್ಟು ಪತ್ರಿಕೆಗಳನ್ನು

ಮುದ್ರಣ ಸೌಂದರ್ಯ—ಮಿತವ್ಯಯ—ಕ್ಷಿಪ್ರತೆ ಇವುಗಳಲ್ಲಿ ತೃಪ್ತಿಕೊಟ್ಟೇ ಮಾಡಿಕೊಡುವೆವು ಊರವರು ನಮ್ಮಲ್ಲಿ ಬಂದು ಮಾದರಿ ಪ್ರತಿಗಳನ್ನು ನೋಡಿ, ತಮಗೆ ಬೇಕಾದುದನ್ನಾರಿಸಬಹುದು ಪರವೂರವರು ಟಪ್ಪಾಲುದ್ವಾರಾ ತಿಳಿಸಿದರೆ, ಅವರು ವಿವರಿಸುವಂತೆ ಚ್ಯುತಿಯಿಲ್ಲದೆ ಮಾಡಿ ಕಳುಹುವೆವು

ಹೆಚ್ಚಿನ ವಿಚಾರಗಳಿಗೆ ನಮ್ಮಲ್ಲಿಗೆ ಬನ್ನಿರಿ ಅಥವಾ ಬರೆಯಿರಿ.

ನಿಮಗೆ ಆಮಂತ್ರಣ.

ಮೆನೇಜರ್ —
ಶಾರದಾ ಛಾಪಖಾನೆ, ರಥಬೀದಿ,
ಮಂಗಳೂರು

ಬೇಕಾಗಿದೆ.

ತಿಂಗಳೊಂದರ ರೂ 75 - ತಲಬಿನಂತೆ ಇಬ್ಬರು ಡಿಸ್ಟ್ರಿಕ್ಟ್ ಮೆನೇಜರರೂ, ತಿಂಗಳಿಗೆ ರೂ. 30 ರಂತೆ (ಮತ್ತು ಕಮಿಷನ್ ಕೂಡಾ) ಕೆಲವು ಏಜಂಟರುಗಳೂ ಬೇಕಾಗಿದೆ.

ಎಲ್ಲಾ ಸ್ಥಾನಗಳಿಗೂ ಹೊಣೆ (ಭದ್ರತೆಯು) ಅವಶ್ಯ

ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ ಯಾ ವಿಚಾರಿಸಿ —

ಮೆನೇಜರ್, (ಸಂಚಾರದಲ್ಲಿರುವವರು)

ದಿ ಕಲ್ಕತ್ತಾ ಫೈನೆನ್ಸ್ ಎಂಡ್ ಏಜನ್ಸಿ ಸಿಂಡಿಕೇಟ್, ಲಿಮಿಟೆಡ್.

C/o ಮೊಡರ್ನ್ ಹಿಂದೂ ಹೊಟೇಲ್,
ಹಂಪನಕಟ್ಟೆ, ಮಂಗಳೂರು.

ನೋಟೀಸು.

"ದಿ ಕಲ್ಕತ್ತಾ ಫೈನೆನ್ಸ್ ಎಂಡ್ ಏಜನ್ಸಿ ಸಿಂಡಿಕೇಟ್ ಲಿಮಿಟೆಡ್"ನ ಮೆನೇಜರರು ಈಗ, ರೈಲ್ವೇ ಸ್ಟೇಷನು ಬಳಿ ಮೊಡರ್ನ್ ಹಿಂದೂ ಹೊಟೇಲು, (ಹಂಪನಕಟ್ಟೆ) ಯಲ್ಲಿ, ಮಂಗಳೂರಲ್ಲಿ ಒಂದು ಶಾಖೆಯನ್ನು ತೆರೆವ ಉದ್ದೇಶದಿಂದ ಮೊಕ್ಕಾಂ ಮಾಡಿರುವರು

ಸದರಿ ಶಾಖೆಯಲ್ಲಿ ಸೆಕ್ರೆಟರಿ, ಡಿಸ್ಟ್ರಿಕ್ಟ್ ಮೆನೇಜರರು ಯಾ ಏಜಂಟರಾಗಲಿಚ್ಛಿಸುವ ಅರ್ಜಿದಾರರು ಮೆನೇಜರರನ್ನು ಹೊಟೇಲಿನಲ್ಲಿ ಖುದ್ದಾಗಿ, ಬೆಳಿಗ್ಗೆ ಘಂಟೆ 11ರಿಂದ ಅಪರಾಹ್ನ 4ರ ತನಕ ಕಾಣಬಹುದಾಗಿದೆ.

[illegible] ಬಗ್ಗೆ.

[illegible]

ಹಿಂದೂ ಮಠಗಳ ಮಸೂದೆ.

[illegible]

ಸಮಾಜದ ಹಿತಚಿಂತಕ.

ಮಂಗಳೂರು ಮುನಿಸಿಪಾಲಿಟಿಯ: ೧೯೩೪-'೩೫ನೇ ವರ್ಷದ ಆಯ-ವ್ಯಯದ ಪಟ್ಟಿ.

ಆಯದ ವಿವರ.

ಆಯವು (ಜನರಲ್ ಎಕೌಂಟು) ರೂ. ೩,೪೬,೩೦೦ ಎಂದು ಅಂದಾಜಾಗಿದೆ. ಕಳೆದ ವರ್ಷಕ್ಕಿಂತ ರೂ. ೪೫೦೦ ಹೆಚ್ಚು ಉತ್ಪತ್ತಿಯಾಗಬಹುದೆಂದು ನಿರೀಕ್ಷಿಸಲಾಗಿದೆ. ವೃತ್ತಿ ತೆರಿಗೆ ರೂ. ೧೬,೫೦೦; ವಿನೋದಗಳ ಮೇಲಿನ ತೆರಿಗೆಯಿಂದ ರೂ. ೩೦೦೦; ಬಂಡಿ ಸೈಕಲ್ ಇತ್ಯಾದಿಗಳ ತೆರಿಗೆಯಿಂದ ರೂ. ೧೦೫೦೦; ಶಾಯಿಖಾನೆಗಳ ತೆರಿಗೆಯಿಂದ ರೂ. ೨೨೦೦೦; ಮೋಟಾರ್ ಲೈಸೆನ್ಸ್ ರೂ. ೩೦೦೦; ಮಾರ್ಕೆಟುಗಳಿಂದ ರೂ. ೨೫೧೦೦; ಬಾಡಿಗೆ ಮತ್ತು ಇತರ ಲೈಸನ್ಸುಗಳಿಂದ ರೂ. ೫೫೦೦ ಮತ್ತು ರೂ. ೯೦೦೦. ಕಳೆದ ವರ್ಷದ ಸಿಲ್ಕು ರೂಪಾಯಿ ೧೫,೨೭೮ ಕೂಡಿ ಈ ಮೊಬಲಗು ರೂ. ೩,೬೧,೮೭೮ ಆಗುವುದು;

ಅದನ್ನು ಈ ಕೆಳಗೆ ಕಂಡಂತೆ ವಿನಿಯೋಗಿಸಲಾಗುವುದು:—

ನಗರರಚನಾ ಯೋಜನೆಯ ನಿಧಿಗೆ	ರೂ	೧೦೦೦
ಪ್ರಾಥಮಿಕ ಶಿಕ್ಷಣ ನಿಧಿಗೆ	,,	೪೪,೩೦೦
ರಸ್ತೆ ದುರುಸ್ತಿ ಇತ್ಯಾದಿ	,,	೪೪,೬೫೦
ಸಿಬ್ಬಂದಿ (ಸವಾಗು) ಇತ್ಯಾದಿ	,,	೧೬೩,೫೦೦
ಉಳಿದ ಸಿಲ್ಕು	,,	೧೧,೪೨೮
	ಜುಮಲಾ ರೂ	೩೬೧,೮೭೮

ವಿನಿಯೋಗದ ವಿವರ.

ಆಡಳಿತ:— ಆಫೀಸಿನ ಆಡಳಿತದ ವೆಚ್ಚಗಳು ರೂ. ೨೧,೮೦೦ ಎಂದು ಅಂದಾಜಾಗಿದೆ.

ರಸ್ತೆಗಳು:— ಪಬ್ಲಿಕ್ ವರ್ಕ್ಸ್ ಸಿಬ್ಬಂದಿಯ ವೆಚ್ಚಗಳು ರೂ. ೩೮೦೦; ಪ್ರಧಾನ (Trunk) ರಸ್ತೆ ಬಗ್ಗೆ ರೂ. ೪೦೦೦; ಇತರ ರಸ್ತೆಗಳ ಬಗ್ಗೆ ರೂ. ೪೫,೦೦೦; ರಸ್ತೆಗಳಿಗೆ ನೀರು ... ಮತ್ತು ಸ್ಟೀಮ್ ರೋಲರ್ ರಿಪೇರಿಗೆ ರೂ. ೨೫೦೦; ವಿದ್ಯುದ್ದೀಪಗಳ ಬಗ್ಗೆ ರೂ. ೧೮,೦೦೦ ಇತ್ಯಾದಿ; ಒಟ್ಟು ರೂ. ೬೬,೦೦೦.

ಸಾರ್ವಜನಿಕ ಗ್ರಂಥಾಲಯ:— ೧೯೩೩-೩೪ರಲ್ಲಿ ಸರ್ಕಸ್ ಇತ್ಯಾದಿ ಆಟಗಳ ಕಂಪೆನಿಗಳಿಂದ ಗ್ರಂಥಾಲಯದ ಬಗ್ಗೆ ಸಹಾಯ ರೂಪವಾಗಿ ದೊರೆತ ಮೊಬಲಗು ರೂ. ೬೩೩. ಅದಕ್ಕೆ ಕೊಂಚ ಕೂಡಿಸಿ ಒಟ್ಟು ರೂ. ೧೦೦೦ವನ್ನು ಹೊಸ ಪುಸ್ತಕಗಳನ್ನು ಕೊಂಡುಕೊಳ್ಳುವ ಬಗ್ಗೆ ಮೀಸಲಾಗಿರಿಸಿದೆ.

ಸಾರ್ವಜನಿಕ ಆರೋಗ್ಯ:— [illegible]

[illegible]

ಪ್ರಾಥಮಿಕ ಶಿಕ್ಷಣ.

[illegible]

Canara Bank, Limited.

Established 1906

Authorised Capital	10,00,000–0–0
Subscribed capital	6,00,000–0–0
Paid up Capital	3,30,000–0–0
Reserves	4,31,000–0–0

Head Office:—Bunder, Mangalore Local Offices:—City & Bunder.

BRANCHES:— Bombay, Cochin, Calicut, Ernakulam, Alleppey, Chikmagalur, Ganguli, Coondapoor, Udipi, Karkal, Puttur, Kasaragod, & Buntwal Out-agency.

Interest is allowed on Current, Fixed and Savings Bank Accounts, rates of which may be ascertained on application. Advances made on approved securities at easy rates. All kinds of Banking business transacted. Rules of business on application.

The Bangalore Branch Office of the Bank at No. 1 Albert Victor Road, Bangalore City has been opened on 8–1–34.

A. Madhava Pai,
Secretary.

ನಮ್ಮ ಟೊಯಿಲೆಟ್ ಮತ್ತು ವಾಶಿಂಗ್ ಸಾಬೂನುಗಳ ತಯಾರಿಯಲ್ಲಿ ಚರ್ಬಿ ಉಪಯೋಗಿಸಲ್ಪಡುವುದಾಗಿ ರುಜುಪಡಿಸುವವರಿಗೆ ರೂಪಾಯಿ

1000 ಬಹುಮಾನ.

ಸಾಬೂನು ಪಡೆಯುವಾಗ " " ಅದರಲ್ಲಿ ಚರ್ಬಿ ಇರಕೂಡದೆಂದು ನಿಮ್ಮ ಆಶೆ.

ಪ್ರಾಣಿಗಳ ಚರ್ಬಿ ಮಿಶ್ರಿತವಾದ ಸಾಬೂನುಗಳು ಹಿತಕ್ಕಿಂತಲೂ ಅಹಿತವನ್ನೇ ಹೆಚ್ಚಾಗಿ ಉಂಟುಮಾಡುತ್ತವೆ. ಕಾರಣ ಅವುಗಳಲ್ಲಿನ ಚರ್ಬಿ ಚರ್ಮರಂಧ್ರಗಳೊಳಗೆ ಹೋಗಿ ಬೆವರನ್ನು ತಡೆಯುತ್ತದೆ. ಸೋಪನ್ನು ಪಡೆಯುವಾಗ ನೀವು ಪರಿಮಳಭರಿತ ಚರ್ಬಿಗೆ ಮುದ್ದಾಗಿ ಬೆಲೆ ಕೊಟ್ಟು ಶುದ್ಧತೆಯ ಬದಲು ಅಶುದ್ಧತೆಯನ್ನು ಸ್ವೀಕರಿಸಬೇಕೆಂದಿರುವಿರಾ?

ಮಲಬಾರು ಸಾಬೂನುಗಳು ಜನನಕ್ಕೆ ಬಂದ ಅರು ತಿಂಗಳುಗಳ ಅಲ್ಪಾವಧಿಯಲ್ಲೇ ಸಾರ್ವಜನಿಕ ಬೆಂಬಲನ್ನು ಪಡೆದಿವೆ. ಕೊಚ್ಚಿಯ ಮಹಾ ರಾಜರ ದರ್ಬಾರ್ ಫೋಟೋ ಸ್ಪಶಿಪ್ಪಿ ಮತ್ತು ಪ್ರೋತ್ಸಾಹನದಿಂದಾಗಿಯೂ, ಪ್ರಖ್ಯಾತ ವೈದಕೀಯ ಅಧಿಕಾರಿಗಳ ಶಿಫಾರಸಿನಿಂದಾಗಿಯೂ, ಅನೇಕ ವಸ್ತುಪ್ರದರ್ಶನಗಳಲ್ಲಿ ದೊರೆತ ಸುವರ್ಣಪದಕ ಮತ್ತು ಪ್ರಶಸ್ತಿ ಪತ್ರಿಕೆಗಳಿಂದಾಗಿಯೂ, ಮಲಬಾರ್ ಸಾಬೂನುಗಳ ಪ್ರಾಮಾಣ್ಯತೆಯು ಎನ್ನೆಂದು ತಿಳಿಸಿಕೊಳ್ಳುವೆವು.

ಮಲಬಾರ್ ಸಾಬೂನು ಎಲ್ಲಾ ವಿಧದಿಂದಲೂ ಶ್ರೇಯಸ್ಕರವೇ ಆಗಿರುತ್ತದೆ. ನಿಮ್ಮ ಚರ್ಮಕ್ಕೆ ಬಾಧಕವನ್ನುಂಟು ಮಾಡುವಂತಹ ಪ್ರಾಣಿಗಳ ಚರ್ಬಿ ಅಥವಾ ಹಾನಿಕರವಸ್ತು ಮಿಶ್ರಿತವೇನೂ ಅದರಲ್ಲಿರದು. ಮಲಬಾರ್ ಸಾಬೂನನ್ನು ಶಾಸ್ತ್ರೀಯ ರೀತಿಯಿಂದಲೂ, ಆರೋಗ್ಯ ದೃಷ್ಟಿಯಿಂದಲೂ ತಯಾರಿಸುವುದರಿಂದ ಚಿಕ್ಕ ತಿಳುವಾದ ಚರ್ಮವೂ ಬಾಧಕ ಹೊಂದುವುದಿಲ್ಲ. ಈ ಸಾಬೂನು ಶ್ರೀಶಿಯಾ ಅವರೊಲ್ಲ ಗಂಧಯುಕ್ತ ಸಾಮಗ್ರಿಗಳಿಂದ ಎಲ್ಲರಿಗೂ ಅನುಕೂಲವಾಗುವಂತೆ ಅಗ್ಗವಾಗಿದೆಯೆಂದು ಅದರ ಉಪಯೋಗದಿಂದ ನಿಮಗೆ ತಿಳಿಯಬಹುದು.

ನಿಮ್ಮ ವ್ಯಾಪಾರಸ್ಥರು

ಮಲಬಾರ್ ಸಾಬೂನುಗಳನ್ನು

ವಿಕ್ರಯಿಸಲು ಸಂತೋಷಪಡುವರು

ಇದರಲ್ಲಿ ಪ್ರಾಣಿಗಳ ಕೊಬ್ಬು ಇರುವುದಿಲ್ಲ.

ದಿ ವೆಜಿಟೇಬಲ್ ಸೋಪ್ ವರ್ಕ್ಸ್, ಕಲ್ಲಿಕೋಟೆ.

ಪ್ರೊಪ್ರೈಟರ್:— ಸನ್ ಬ್ರೆಂಡ್ ಕೊಪರ ಖ್ಯಾತಿಯ ಸೇಟ್ ನಾಗಜೀ ಪುರುಷೋತ್ತಮ ಮತ್ತು ಕಂಪೆನಿ, ಕಲ್ಲಿಕೋಟೆ.

ಈ ಜಿಲ್ಲೆಗೆ ಪ್ರವರ್ತಕರು:—

ರಾಘವೇಂದ್ರ ರಂಗ ಪೈ ರಥಬೀದಿ, ಮಂಗಳೂರ.

ಇನ್ನೊಂದು ವೈಶಿಷ್ಟ್ಯ

ನೀವು ಕಬ್ಬಿನ ಗಾಣವನ್ನು ಪಡೆಯುವಾಗ ನೀವು ಸ್ವಾಭಾವಿಕವಾಗಿ ಅದರ ಗಟ್ಟಿ ಮುಟ್ಟು, ಬಾಳಿಕೆ ಮತ್ತು ಶಕ್ತಿಯ ಕಡೆ ಗಮನವನ್ನೀಯುತ್ತೀರಿ ನೀವು

ಕಿರ್ಲೋಸ್ಕರ

ವಸಂತ ಪವರ್ ಕ್ರಶರ್ ಗಾಣವನ್ನು ನಿಮ್ಮ ಕೆಲಸಕ್ಕೆ ಯೋಗ್ಯವೆಂದು ತಿಳಿಯುವಿರಿ. ರಸವು ಒಳಗೆ ಸೇರಿ ಹಾಳಾಗದ ಹಾಗೆ ಅದರ ಬೇರಿಂಗುಗಳನ್ನು ಮುಚ್ಚಿರುತ್ತದೆ. ಇದರಿಂದಾಗಿ ಎಣ್ಣೆಯು ನಷ್ಟವಾಗುವುದಿಲ್ಲ—ಗಾಣವು ದೀರ್ಘಕಾಲ ಸಂತೃಪ್ತಿಕರವಾಗಿ ನಡೆಯುತ್ತದೆ. ಅದರ ಎಲ್ಲಾ ಭಾಗಗಳೂ ದೀರ್ಘವಾಗಿ ಬಾಳುವಂತೆ ಮಾಡಲಾಗಿದೆ.

ಎಲ್ಲಾ ವಿವರಗಳಿಗೆ ಇಲ್ಲಿಗೆ ಬರೆಯಿರಿ:—

ಕಿರ್ಲೋಸ್ಕರ ಬ್ರದರ್ಸ್ ಲಿಮಿಟೆಡ್, ಕಿರ್ಲೋಸ್ಕರವಾಡಿ (ಜಿ. ಸತಾರಾ)

ಸ್ಟಾಕಿಸ್ಟ್ಸ್:— ಬಾಸೆಲ್ ಮಿಶನ್ ಬುಕ್ ಡಿಪೊ ಎಂಡ್ ಟ್ರೆಕ್ಟ್ ಡಿಪೊಜಿಟರಿ ಕೊ. ಮಂಗಳೂರು, ದ. ಕ.

'ತೆಂಗಿನ ಕಾಯಿಗಳ ಪಂಚಾಯತು'

ಇಂತಹ ಒಂದು ಪರಿಷತ್ತು ಈ ಕಾಲದಲ್ಲಿ ಸೇರಾಯಿತು,—ಸಿಲೋನಿನಲ್ಲಿ! ಅಲ್ಲಿಯ ತೆಂಗಿನಕಾಯಿಗಳ ಬೆಳೆಯು ತಾಜಾ; ಖರ್ಚು ಹೆಚ್ಚಿಲ್ಲ; ಹೊರಗಣ ದೇಶಗಳಿಗೆ ತೆಂಗಿನ ಕಾಯಿ ಅಥವಾ ಎಣ್ಣೆ ಹೋಗಬೇಕಾದರೆ ಸುಂಕವು ಹೆಚ್ಚು! ಪರಿಹಾರವೇನೆಂದು ನಿರ್ಣಯಿಸಲು ಗವರ್ನರನ್ನೆ ಅಧಿಕಾರಿಯನ್ನಾಗಿ ಮಾಡಿ ಒಂದು ಪರಿಷತ್ತು ನಡೆಸಲಾಯಿತು. ಫಲ ನಿಷ್ಪತ್ತಿ—ಗವರ್ನರರಿಂದ ಒಂದು ಮಹಾಲಾಭಕರವಾದ ಉಪದೇಶ:—'ತೆಂಗಿನ ಕಾಯಿಗಳನ್ನೂ ಎಣ್ಣೆಯನ್ನೂ ಹೆಚ್ಚಾಗಿ ಹೊರಗೆ ಕಳುಹಿಸುವ ಬದಲಾಗಿ ಇಲ್ಲೇ ಉಪಯೋಗ ಹೆಚ್ಚುವಂತೆ ಮಾಡಿರಿ. ಹಿಂದೆ ಜರ್ಮನಿಯಲ್ಲಿ ಇಂತಹ ಸ್ಥಿತಿಯೊದಗಿತ್ತು—ಆದರೆ, ಕೊನೆಗೆ ತೆಂಗಿನಕಾಯಿಗಳನ್ನು ಉಪಯೋಗಿಸಲು ಕಷ್ಟ ಪರಿಹಾರವಾಯಿತು. ಹಾಗೆಯೇ ನೀವೂ ಹೆಚ್ಚೆಚ್ಚು ತಿನ್ನಬೇಕು; ಎಣ್ಣೆಯನ್ನು ತಿನ್ನುವುದಷ್ಟೆಯಲ್ಲದೆ ಸಾಬೂನು ಮೊದಲಾದುವುಗಳಿಗೂ ಉಪಯೋಗಿಸಬೇಕು.' ಸುಮುಹೂರ್ತ ಎಂದರು. ಪರಿಷತ್ತು ಆನಂದದಿಂದ ಮುಗಿಯಿತು.

ಬಿಹಾರಿನ ಸಂಕಷ್ಟಗಳು.

ಇವು ನಿವಾರಣೆಯಾದುವೇ? ಕೆಲವೊಂದು ಹಣಕಾಸುಗಳನ್ನು ಕಳುಹಿಸಿದ ಮಾತ್ರಕ್ಕೆ ನಮ್ಮ ಕರ್ತವ್ಯ ಮುಗಿಯಿತೆಂದೂ, ಬಿಹಾರಿನ ಪುನರುದ್ಧಾರವಾಯಿತೆಂದೂ ಭಾವಿಸುವಂತಾಗಿರುವುದೇ? ಮೇಲಿಂದ ಮೇಲೆ ಬರುತ್ತಿರುವ ವದಂತಿಗಳು ಅಲ್ಲಿ ಭೂಕಂಪದಿಂದಾದ ಸಂಕಷ್ಟಗಳ ಭೀಕರ ಚಿತ್ರಗಳನ್ನು ತರುತ್ತಿವೆ. ಭೂಕಂಪದಲ್ಲಿ ಜಖಂಗೊಂಡು ಬಿದ್ದವರಲ್ಲನೇಕರಿಗೆ ಇನ್ನೂ ಔಷಧೋಪಚಾರಕ್ಕೆ ಗತಿಯಿಲ್ಲ; ಒಪ್ಪೊತ್ತು ಊಟವೂ ಇಲ್ಲದ ಸಾವಿರಾರು ಮಂದಿಗಳು ಇನ್ನೂ ಅಲೆಯುತ್ತಿರುವರು; ಹೊಲಗಳಲ್ಲಿನ ಮರಳರಾಶಿಗಳು ಪುನಃ ವ್ಯವಸಾಯಕ್ಕೆ ಆತಂಕವಾಗಿವೆ; ಕ್ಷಾಮದೇವತೆಯು ಈಗಾಗಲೇ ಪ್ರತ್ಯಕ್ಷಳಾಗಿರುವಳು! ಕ್ಷಾಮವು ಹಬ್ಬಿದರೆ ದಿನಕ್ಕೊಂದು ಲಕ್ಷ ರೂಪಾಯಿಗಳು ಬೇಕಾಗಬಹುದೆಂದು ತಜ್ಞರು ಅಭಿಪ್ರಾಯ ಪಡುತ್ತಿರುವರು. ಮಹಾತ್ಮ ಗಾಂಧಿಯವರಂತಹ ಮಹಿಮರು. ಅತ್ತ ಹೋದರೂ ಇಂತಹ ಭಯಂಕರ ಸ್ಥಿತಿಯು ಉಗ್ರರೂಪ ತಾಳದಂತೆ ತಡೆಗಟ್ಟಲೆಂದೇ ಆಗಿದೆ. ದೇಶ-ವಿದೇಶಗಳ ಸಹಾಯವೇನೋ ಅಷ್ಟಾಗಿ ತಲುಪಿರುವ ಆಸ್ಥಾನವಲ್ಲ. ಆದರೆ, ಇದಿನ್ನೂ ಸಾಲದು. ಇತರರೂ ಅರ್ಥಿಕ ಸಂಕಷ್ಟಗಳಲ್ಲಿರುವವರಾದರೂ ಬಿಹಾರಿನ ಬಂಧುಗಳು ಮರಣದೇವತೆಯ ದವಡೆಯಲ್ಲಿ ಕುಳಿತು ಹೊರಗಿನವರ ಸಹಾಯವನ್ನೆದುರು ನೋಡುತ್ತಿರುವರೆಂಬುದನ್ನು ತಿಳಿದು, ಇನ್ನೂ ಶಕ್ತ್ಯನುಸಾರ ಅವರಿಗೆ ಸಹಾಯ ಸಲ್ಲಿಸುವ ಉದ್ಯೋಗಬುದ್ಧಿಯುಳ್ಳವರಾಗಬೇಕೆಂದು ಪ್ರಾರ್ಥನೆಯಿದೆ.

ವಿಶ್ವಂಭರನಿಂದೆ.

ಅಹಿಂಸಾವತಾರಿಯಾದ ಪೂಜ್ಯ ಮಹಾತ್ಮಾಜೀಯವರನ್ನು 'ಬ್ರಿಟಿಷ್ ವಿರೋಧಿ ಬೊಲ್ಶೆವಿಕನಿವನು!' ಎಂದು ದೂರಿ ಜರ್ಮನಿಯ ಜನರಲ್ ಗೋರಿಂಗರು ತಮ್ಮ ಹೃದಯವನ್ನು ಜಗತ್ತಿಗೆ ತೋರಿಸಿರುವರು. 'ಎರಡನೆಯ ಕ್ರಿಸ್ತನಿವನು' ಎಂದು ಕ್ರೈಸ್ತ ಜನಾಂಗವೂ, 'ಬುದ್ಧನೆಂದು ಹಿಂದೀಯರೂ ಭಾವಿಸಿ ಗೌರವಿಸುತ್ತಿರುವ ಗಾಂಧೀಜೀಯವರಿಗೆ ಜರ್ಮನಿಯ ಹಿಟ್ಲರ್ ಶಿಷ್ಯನಿವನಿಂದ ದೊರೆತ ಬಿರುದೆಂದರೆ 'ಬೊಲ್ಶೆವಿಕ' ನೆಂದು! ಅಹಿಂಸಾ ಪ್ರಭಾವಕ್ಕೆ ಗೋರಿಂಗರಂತಹ ವನ್ಯಜಂತುಗಳೂ ತಮ್ಮ ಕ್ರೂರತನವನ್ನು ಮರೆತು ತಲೆಬಾಗುವುವಂತೆ. ಆದರೆ, ಗೋರಿಂಗರು ಆ ಪ್ರಸಂಗಕ್ಕೇ ಸಂಬಂಧಿಸಿದೊಂದು ಜೀವಿಯಲ್ಲವೆಂದು ಅನಿಸುತ್ತಿರುವುದು ಶೋಚನೀಯ. ಹಿಂದೆ ಹಿಟ್ಲರರು ಗಾಂಧೀಜೀಯವರ ವಿಷಯವಾಗಿ ಕಟುಮಾತುಗಳನ್ನಾಡಿದ್ದರು. ಈಗ ಗೋರಿಂಗರೂ ಅದನ್ನು ಪ್ರತಿಧ್ವನಿಸುತ್ತಿರುವರು. ಗಾಂಧೀಜೀಯವರ ಅನುಯಾಯಿಗಳಲ್ಲಿ ಹಲವರು ಬ್ರಿಟಿಷರನ್ನು ಮನಮುಟ್ಟಿ ಪ್ರೀತಿಸಿಲ್ಲವೆಂದು ಗೋರಿಂಗರಿಗಿಂತ ಹೆಚ್ಚಾಗಿಲ್ಲ ಬ್ರಿಟಿಷರೇ ಬಲವರು. ತಿಳಿದಿರುವಾಗ ಗೋರಿಂಗರು ಉಸಿರು ಮಾತ್ರ ವ್ಯರ್ಥವಾಗುವುದೆಂಬುದನ್ನರಿಯರೇ! ಗೋರಿಂಗರಂತಹವರಿಂದ ತಿರಸ್ಕಾರ ಪತ್ರವನ್ನು ಪಡೆದ ಗಾಂಧೀಜೀಯವರೂ ಇಂತಹ ಬಿರುದುಗಳನ್ನು ವಿಷಕಂಠನಂತೆ ಸ್ವೀಕರಿಸುವರೆನ್ನುವ. ಕಾವ್ಯ 'ಆರ್ಯರು' ಎನ್ನುವ ಜರ್ಮನಿಯ ಇತರ ಬಂಧುಗಳಿಗೆ ಮಾತ್ರ ವಿನಾಕಾರಣ ಇಂತಹ ನಿಂದಾಬುದ್ಧಿ ಯುಕ್ತನ್ನವಾಗದೆಂದು ಭರವಸೆ.

[illegible] ಪಡೆದ ದಿವ್ಯೌಷಧಗಳು

[illegible] ರೂ. 1-4-0. [illegible] ರೂ. 0-5-0. [illegible] ರೂ. 0-4-0. [illegible] ರೂ. 0-6-0. [illegible] ರೂ. 1-0-0. [illegible] ರೂ. 1-8-0. [illegible] ರೂ. 3-8-0.

[illegible] ಬ್ರಹ್ಮಾವರ [illegible] ಎಂಡ್ ಸನ್ಸ್, [illegible] ಎಂಡ್ ಸನ್ಸ್.

[illegible] ಬರೆದು ತಿಳಕೊಳ್ಳಬಹುದು.

ನಾಯಕ್ ಬ್ರದರ್ಸ್, ಶ್ರೀಮದ್ವನೇಂದ್ರ ಮಹೌಷಧಾಲಯ, [illegible] ದ. ಕ.

The Canara Industrial & Banking Syndicate Limited.,

Established in 1926. **Head Office:—Mukunda Nivas, UDIPI.**

Branches: Mangalore, Payyanur, Brahmavar, Kumta, Karwar, Hubli, Honnavar, Bangalore & Cannanore

Authorised Capital Rs. 5,00,000. Subscribed Capital Rs. 1,27,000. Paid up Capital Rs. 57,000 Issued Capital Rs. 2,00,000

STATEMENT OF AFFAIRS OF THE SYNDICATE AS ON 28st February 1934

LIABILITIES.			ASSETS.		
Paid up Capital	Rs.	57,000—0—0.	Loans on Land-mortgage	Rs.	2,78,785—6—3
Reserve & other Funds	,,	30,500—0—0.	Loans on Valuable Securities	,,	2,57,551—9—2
Deposits	,,	10,79,132—4—3	Loans on Bills of Exchange, Hundis and Promissory Notes		4,92,482—0—9
Due to Bankers	,,	1,66,317—7—9.	Investment on Shares of other Companies	,,	43,575—0—0
			Investments on Government Paper	,,	1,26,453—2—0
On Bills & D. P. Notes	,,	50,000—0—0.	On Deposits with other Bankers	,,	1,05,000—0—0
Bills for Collection	,,	31,227—8—8.	Bills for collection (per contra)	,,	31,227—8—8
Sundries	,,	68,922—2—4.	Sundries	,,	1,33,464—3—10
			Cash in hand & with Bankers	,,	34,559—8—4
Total Rs.		15,03,098—7—0	Total Rs.		15,03,098—7—0

Long and Short term Loans on attractive Schemes are granted.

ALL KINDS OF BANKING BUSINESS UNDERTAKEN.

Udipi,
13-3-1934.

P. A. Pai Bros.,
Managing Agents.

ಪ್ರಥಮ ಕನ್ನಡ ಮಾತಾಡುವ ಚಲಚಿತ್ರ!

ಮಿಸ್ಟರ್ ಸುಬ್ಬಯ್ಯ ನಾಯಿಡು
ಮಿಸ್ಟರ್ ನಾಗೇಂದ್ರ ರಾವ್,
ಮಿಸ್ಟರ್ ವೈ. ವಿ. ರಾವ್
ಮಿಸ್ಟರ್ ಮೂರ್ತಿ

ಇವರುಗಳಿಂದ ನಟಿಸಲ್ಪಟ್ಟು

ಮಿಸ್ಟರ್ [illegible] ರಾವ್ [illegible] ಇವರಿಂದ [illegible] ಮಾಡಲ್ಪಟ್ಟು

ಕರ್ನಾಟಕ ಕವಿಕೇಸರಿ ಬೆಳ್ಳಾರೆ
ನರಹರಿ ಶಾಸ್ತ್ರಿಗಳಿಂದ ಕಥೆಯು ರಚಿಸಲ್ಪಟ್ಟು

[illegible] ರವರು ಕೊಲ್ಹಾಪುರದ ಛತ್ರಪತಿ ಸ್ಟುಡಿಯೋದಲ್ಲಿ ತಯಾರಿಸಲ್ಪಟ್ಟಿರುವರು.

ಪ್ರಸಿದ್ಧ ಪುರಾಣ ಕಥೆ

ಸತಿ ಸುಲೋಚನ

[illegible] ಹಾಡುವ ರೂಪದಲ್ಲಿ ಪ್ರದರ್ಶಿಸಲ್ಪಡುತ್ತದೆ

[illegible] ಇಂಪಾದ ಧ್ವನಿ! ಇಂಪಾದ ಶ್ರುತಿ!

[illegible] ಫಿಲ್ಮ್ ಕಂಪೆನಿ ಬೆಂಗಳೂರು.

(1) ... (2) ... (3) ...
lore, Kolar

For terms and other particulars please apply to—

The Divisional Manager,
The South Indian (General) Assurance Co. Ltd.
64, 3rd Cross Road, ...
Malleswaram ..., BANGALORE.

OR

The Managing Agents,
The S. I. G. A. Co. Ltd.
55, Poonamallee High Road, Kilpauk, MADRAS.

ದ್ರಾಕ್ಷಾಮೃತ

S. U. M. & Co.

Seventyseven Years!

Two generations of approved service enables us to pick and choose what is cheap, lasting & good to suit the pockets & the tastes of our ever-growing wide circle of

CUSTOMERS

who know our

Premier House for Swadeshi



[illegible]ಭಿಮಾನಿ.

[illegible] ೧೯೦೭ರಲ್ಲಿ ಸ್ಥಾಪಿತವಾದುದು [illegible] ಪತ್ರಿಕೆ.

[illegible]

(Oldest Kanarese Weekly in South Kanara)

[illegible] (30—3—34) [illegible]

[illegible] CANARA BANKING CORPORATION, UDIPI, LTD.

(Incorporated in British India)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head Office—UDIPI, S. K. [illegible]

Branches:—Coondapoor, Mangalore, Shimoga & Madras. [illegible]

Authorised Capital Rs. 3,50,000. [illegible] ರೂ. 3,50,000.

Paid up Capital Rs. 2,25,000. [illegible] ರೂ. 2,25,000.

STATEMENT OF ASSETS & LIABILITIES AS ON 28TH FEBRUARY, 1934.

Capital and Liabilities		Property and Assets	
1 Paid up Capital	Rs. 2,25,000-0-0	1 Bank Premises, Buildings, Furniture etc.	Rs. [illegible]
2 Reserve and other funds	„ 2,50,000-0-0	2 Investment on G. P. notes	„ [illegible]
3 Deposits	„ 22,79,954-10-2	Authorised Investments	„ [illegible]
4 Due to Bankers	„ 1,36,830-[illegible]	3 Bills for collection	[illegible]
5 Sundries	„ 61,273-[illegible]	5 Sundries	„ [illegible]
6 Bills per contra	22,160-0-0	6 Cash on hand & with bankers.	„ [illegible]
Total	[illegible]	Total	[illegible]

Office of the Corporation, Udipi, S. K.
[illegible]

N. ANANDA RAO
Manager

ಅಮೃತಾಂಜನ.

[illegible]

[illegible]

ಅಮೃತಾಂಜನ ಡಿಪೋ.

[illegible]

ದಿ ಬೊಂಬೆ [illegible] ಕಂಪೆನಿ ಲಿಮಿಟೆಡ್, ಬೊಂಬಾಯಿ.

1908ರಲ್ಲಿ ಸ್ಥಾಪಿತವಾದುದು.

[illegible]

1931ರಲ್ಲಿ ಹೊಸ ವಿಮೆ ರೂ. 63,45,000.

1932ರಲ್ಲಿ „ „ ರೂ. 94,14,000.

[illegible]

[illegible]

for their future

(1) South Canara, (2) Mysore, Hassan and Coorg, (3) Kadur, Shimoga, Chitaldroog and Tumkur, (4) Bangalore, Kolar.

For terms and other particulars please apply to—

The Divisional Manager,
The South Indian General Assurance Co. Ltd.
64, 3rd Cross Road, Srirampur Extn.
Malleswaram Post, BANGALORE.

OR

The Managing Agents,
The S. I. G. A. Co. Ltd.
55-1 Poonamallee High Road, Kilpauk, MADRAS.

ಒಂದೇ ಸವನಾಗಿ ೩೫ ವರ್ಷದ ಅನುಭವದಿಂದ

ದ್ರಾಕ್ಷಾಮೃತ

[illegible]

2-6-38

ಡಿಲ್ಲಿ ಬಿಸ್ಕೂಟಿನ ಕುರಿತು

ಇಂಡಿಯಾದ ಘನ ಕೈಗಾರಿಕಾ ಸಂಸ್ಥೆಯ

ಸರ್ ದೋರಾಬ್ ತಾತಾರವರು

[illegible]

Jaya Bharatham Co., P. B. No. 88, MADRAS.

[illegible]



[illegible]

S. U. N. & CO.

Choukhamba, Benares City

[illegible]

2½ ಅಗಲ ... 2-8-0 ... 3-12-0
5½ ಮೊಳ ಉದ್ದ 2¾ ಮೊಳ ಅಗಲ ದರ 1ಕ್ಕೆ 3-8-0,
4-8-0. 6 ಮೊಳ ಉದ್ದ 3 ಅಗಲ ದರ 1ಕ್ಕೆ ರೂ.
4-8-0, ರೂ. 5.

[illegible]

Seventyseven Years!

Two generations of approved service enables us to pick and choose what is cheap, lasting & good to suit the pockets & the tastes of our longstanding wide circle of



CUSTOMERS

who know our

Premier House for Swadeshi.
Mill Yarns—Handloom Cloths,
Dhoties—Saries—Cintzes etc.

Shrinivas Ranga Pai,
Sawkar Mahal,
Car Street, MANGALORE.

EDITED, PRINTED & PUBLISHED BY V. S. [illegible] THE [illegible] PRESS, MANGALORE.

...ಭಿಮಾನಿ.

(Oldest Kannada Weekly in South Kanara)

(30—?— 34) ಸಂಚಿಕೆ ೧೩

[illegible] CANARA BANKING CORPORATION, UDIPI, LTD.

(Incorporated in British India)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

[illegible]—UDIPI, S. K. Branches:—Coondapoor, Mangalore, Shimoga & Madras.

ಶಾಖೆ:—ಕುಂದಾಪುರ, ಮಂಗಳೂರು, ಶಿವಮೊಗ್ಗ ಮತ್ತು ಮದ್ರಾಸು.

Authorised Capital Rs. 3,50,000. Paid up Capital Rs. 2,25,000.

ರೂ. 3,50,000. ರೂ. 2,25,000.

STATEMENT OF ASSETS & LIABILITIES AS ON 28TH FEBRUARY, 1934.

Capital and Liabilities		Property and Assets	
1. Paid up Capital	Rs. 2,25,000-0-0	1 Bank Premises, Buildings, Furniture etc.	Rs. 65,697- 5- 3
2. Reserve and other funds	„ 2,50,000-0-0	2 Investment on G. P. notes	„ 4,44,168- 5- 0
3. Deposits	„ 22,70,954-10-2	Authorised Investments	„ 23,68,574- 1- 5
4. Due to Bankers	„ 1,36,830-14-11	4 Bills for collection	22,160- 2- 9
5. Sundries	„ 61,271-3-1	5 Sundries	„ 35,056- 6- 5
6. Bills per contra	22,160-2-9	6 Cash on hand & with bankers.	„ 30,560-10- 5
Total	29,66,216-15-9	Total	29,66,216-15-9

Office of the Corporation, Udipi, S. K.

?—3—34.

N. ANANDA RAO.
Manager

ಅಮೃತಾಂಜನ.

ರಿಂಗ್‌ವರ್ಮ್ ಮುಲಾಮು—

ರೂ. 3—8—0.

ಅಮೃತಾಂಜನ ಡಿಪೋ,

ಮದ್ರಾಸು ಮತ್ತು ಬೊಂಬಾಯಿ

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಬೊಂಬೇ.

1908ರಲ್ಲಿ ಸ್ಥಾಪಿತವಾದುದು.

... ಎಂದಿಗಿಂತಲೂ ಉಜ್ವಲವೆಂಬುದಕ್ಕೆ ದೃಷ್ಟಾಂತ.

1932ರಲ್ಲಿ ಹೊಸ ವಿಮೆ ರೂ. 63,45,000.

1933ರಲ್ಲಿ „ ರೂ. 94,14,000.

... ಸಾಲಿನಷ್ಟು ಅಧಿಕವಾದ ಜೀವವಿಮೆ.

OVALTINE

TAJ MAHAL

... Bangalore

For Sale

ಅನುಕ್ರಮಣಿಕೆ.

ಅಗ್ರಲೇಖ:
ಸಮಷ್ಟಿಯ ಶಕ್ತಿ, ೧
ಸ್ಥಳ ವಿಚಾರಗಳು ೩
... ೪
ವರ್ತಮಾನ ಸಂಗ್ರಹ ...
... ೬
... ೧೧
... ೩
... ೪
... ೧೪
... ೬
... ೫
... ೧

ಸ್ವದೇಶಾಭಿಮಾನಿ

...೩೦ನೇ ಶುಕ್ರವಾರ ಜೂಲೈ ೧೯೨೪

ಸಮಷ್ಟಿಯ ಶಕ್ತಿ.

ಲೇಖಾಂಕ ೧.

ಲೋಕದಲ್ಲಿ ಸ್ವತಂತ್ರ ರಾಜ್ಯಾಡಳಿತ ಕ್ರಮವು ರೂಪಿಸಲ್ಪಡುವಾಗ ರಾಜನಿಗೆ ಅಧಿಕಾರವೂ ದಯಪಾಲಿಸಲ್ಪಟ್ಟಿತು. ಮೊದಲು ಮೊದಲು ಮನುಷ್ಯರು ಬೇರೆ ಬೇರೆ ದಳ ಅಥವಾ ಸಂಗಡಗಳಾಗಿ ವಿಭಾಗಿಸಿ ತಮಗೊಬ್ಬ ನಾಯಕರನ್ನು ನೇಮಿಸಿಕೊಂಡರು. ಆದರೆ ಈ ನಾಯಕರಿಗೆ ಅಧಿಕಾರದ ಆಶೆಯು ಹೆಚ್ಚಿದಂತೆ ಅಥವಾ ಮನುಷ್ಯನ ವಿಚಾರಗಳಲ್ಲಿಯೂ, ಕಾರ್ಯಗಳಲ್ಲಿಯೂ, ಆವಶ್ಯಕತೆಗಳಲ್ಲಿಯೂ ಅಭಿವೃದ್ಧಿಯುಂಟಾಗಿ ಸಂಗಡಗಳ ಕಾರ್ಯಕ್ಷೇತ್ರವು ವಿಶಾಲವಾದಂತೆಯೂ ಈ ನಾಯಕರು ವಿಶಾಲರಾಜ್ಯದ ಪ್ರಭುವಿಗೆ ತಲೆತಗ್ಗಿಸಬೇಕಾಗಿ ಬಂತು. ಹಾಗೂ, ರಾಜನೂ, ಆ ಮೇಲೆ ಸಮ್ರಾಟನೂ ಅಸ್ತಿತ್ವಕ್ಕೆ ಬಂದರು.

ಜನತೆಯ ವಿಚಾರವು ಬೆಳೆದಂತೆಯೂ, ಜನಸಂಖ್ಯೆಯು ಹೆಚ್ಚಿದಂತೆಯೂ, "ಸಮಷ್ಟಿ" ಅಥವಾ ಸಂಘ ಅಥವಾ ಸಮಾಜರಚನೆಯು ರೂಪಿಸಲ್ಪಟ್ಟಿತು. ಈ ಸಮಷ್ಟಿರಚನೆಯು ತೋರಿಕೆಗೆ, ಮೊದಲು ಮೊದಲು ಕೇವಲ ವ್ಯವಸ್ಥೆ ಮಾತ್ರವೇ ಆಗಿತ್ತು. ಆದರೆ ಸಮಷ್ಟಿಯಲ್ಲಿ ಜನತೆಗೆ ವಿಶ್ವಾಸ ಹೆಚ್ಚಿದಂತೆ ಅದರಲ್ಲಿ ನೂತನವೂ ಅಗಾಧವೂ ಆದ ಶಕ್ತಿಯು ಉತ್ಪನ್ನವಾಯಿತು. [illegible]

[illegible]

ಈ ಶಕ್ತಿಯೇ [illegible]

[illegible]

ಸ್ಥಳ ವಿಚಾರಗಳು.

[illegible]

OVALTINE

TAJ MAHAL

Agar Bathi, delightful Smell & Penetrating odour. Packet of 800 Sticks Rs. 2—8—0. Postage free.
SREE RAMACHANDRA STORES,
Palace Perfumers, Malleswaram,
Bangalore.

For Sale

An Essex Super Six (1929 Model) touring Car in perfect running order with four Brand New Tyres.
For terms apply:—"Motor Car" C/o Swadeshabhimani, Mangalore.

An Advertisement in
"Swadeshabhimani"
Means sure fortune to you.
The Swadeshabhimani office,
Car Street, Mangalore.

Karnataka Chemical and Pharmaceutical Works, Ltd., Udipi (South India)

ಅನುಕ್ರಮಣಿಕೆ.

ಅಗ್ರಲೇಖ
ಸಮಷ್ಟಿಯ ಶಕ್ತಿ ೪
ಸ್ಫುಟವಿಚಾರಗಳು ೪
ಸೂಚನೆಗಳು ೪
ವರ್ತಮಾನ ಸಂಗ್ರಹ ೧೧
ಬಂದಾಯಿತು! ೩
ವಿವಿಧ ಸಮಾಚಾರಗಳು ೧೧
ಗ್ರಾಮಸ್ಥರಿಂದ ೧
ಊರುಗಳಿಂದ ೯
ಪತ್ರವ್ಯವಹಾರ ೧೪
ದೂರದೇಶಗಳಿಂದ ೭
ಕೋಟ್ಯಾಧೀಶ್ವರ ರಾಕ್‌ಫೆಲ್ಲರ್ ೫
ಹಿಂದೂಸ್ಥಾನದ ಸರಿಹದ್ದುಗಳ ಸುಧಾರಣೆ ೦

ಸ್ವದೇಶಾಭಿಮಾನಿ.

ಶ್ರೀ ೩೦ನೇ ಶುಕ್ರವಾರ ಮಾರ್ಚಿ ೧೯೩೪

ಸಮಷ್ಟಿಯ ಶಕ್ತಿ.

ಲೇಖಾಂಕ ೧

ಲೋಕದಲ್ಲಿ ವ್ಯವಸ್ಥಿತ ರಾಜ್ಯಾಡಳಿತ ಕ್ರಮವು ರೂಪಿಸಲ್ಪಟ್ಟಾಗ ರಾಜನೆಂಬ ಅಧಿಕಾರಪಕ್ಷವೂ ರಚಿಸಲ್ಪಟ್ಟಿತು. ಮೊದಲು ಮೊದಲು ಮನುಷ್ಯರು ಬೇರೆ ಬೇರೆ ದಳ ಅಥವಾ ಪಂಗಡಗಳಾಗಿ ವಿಭಾಗಿಸಿ ತಮತಮಗೆ ನಾಯಕರನ್ನು ನೇಮಿಸಿಕೊಂಡರು. ಆದರೆ ಈ ನಾಯಕರಿಗೆ ಅಧಿಕಾರದ ಆಶೆಯು ಹೆಚ್ಚಿದಂತೆ ಅಥವಾ ಮನುಷ್ಯನ ವಿಚಾರಗಳಲ್ಲಿಯೂ, ಕಾರ್ಯಗಳಲ್ಲಿಯೂ, ಆವಶ್ಯಕತೆಗಳಲ್ಲಿಯೂ ಅಭಿವೃದ್ಧಿಯುಂಟಾಗಿ ಪಂಗಡಗಳ ಕಾರ್ಯಕ್ಷೇತ್ರವು ವಿಶಾಲವಾದಂತೆಯೇ ಈ ನಾಯಕರು ವಿಶಾಲರಾಜ್ಯದ ಪ್ರಭುವಿಗೆ ತಲೆತಗ್ಗಿಸಬೇಕಾಗಿ ಬಂತು. ಹಾಗೂ, ರಾಜನೂ, ಆ ಮೇಲೆ ಸಮ್ರಾಟನೂ ಅಸ್ತಿತ್ವಕ್ಕೆ ಬಂದರು.

ಜನತೆಯ ವಿಚಾರವು ಬೆಳೆದಂತೆಯೂ, ಜನಸಂಖ್ಯೆಯು ಹೆಚ್ಚಿದಂತೆಯೂ, "ಸಮಷ್ಟಿ ಅಥವಾ ಸಂಘ ಅಥವಾ ಸಮಾಜರಚನೆಯು ರೂಪಿಸಲ್ಪಟ್ಟಿತು. ಈ ಸಮಷ್ಟಿರಚನೆಯು ತೋರಿಕೆಗೆ, ಮೊದಲು ಮೊದಲು ಕೇವಲ ಸ್ವಪ್ನಸೃಷ್ಟಿ ಮಾತ್ರವೇ ಆಗಿದ್ದಿತು. ಆದರೆ ಸಮಷ್ಟಿಯಲ್ಲಿ ಜನತೆಗೆ ವಿಶ್ವಾಸ ಹೆಚ್ಚಿದಂತೆ ಅದರಲ್ಲಿ ನೂತನವೂ ಅಗಾಧವೂ ಆದ ಶಕ್ತಿಯು ಉತ್ಪನ್ನವಾಯಿತು. ಸಮಷ್ಟಿಯು ಪ್ರಥಮದಲ್ಲಿ ದೇವಸ್ಥಾನಗಳನ್ನು ರಚಿಸಿ ದೇವರನ್ನು ನಿರ್ಮಿಸಬಲ್ಲದಾಯಿತು; ಜನಸಂಖ್ಯೆಯನ್ನು ಒಟ್ಟುಗೂಡಿಸಿ ಅಧಿಕಾರಗಳನ್ನು ರಚಿಸಬಲ್ಲದಾಯಿತು. ವ್ಯಕ್ತಿಯ ತಿಳುವಳಿಕೆಗೆ ಇಲ್ಲದೇನೇ ವ್ಯಕ್ತಿಯಲ್ಲಿ ಒಂದು ತರದ ಭಯವನ್ನೂ, ಪೂಜ್ಯತೆಯನ್ನೂ ಉಂಟುಮಾಡಲು ಅನೇಕ ವ್ಯಕ್ತಿಗಳೇ ಒಟ್ಟುಗೂಡಿ ಕಾರಣವಾದ ಸಮಷ್ಟಿಯು ಒಂದು ಶಕ್ತಿಯನ್ನು ತೋರಿಸಬಲ್ಲದಾಯಿತು.

ಆ ಶಕ್ತಿಯೇ ಪರಮಾರ್ಥ ರೂಪದಲ್ಲಿ ದೇವರೆಂದೂ, ವ್ಯಕ್ತರೂಪದಲ್ಲಿ ರಾಜನೆಂದೂ ಮೊದಲು ಅಸ್ತಿತ್ವಕ್ಕೆ ಬಂದಿತು (ದೇವರೆಂದರೆ ಮಾನಸಿಕ ದೇವರಲ್ಲ—ವ್ಯಕ್ತಿಗಳ ಸಿಕ್ಕದ ಕೆಲಸಗಳ ಸಹಾಯದ ಬಗ್ಗೆ ವ್ಯಕ್ತಿಯು ಪೂಜಿಸುವ ವೈಯಕ್ತಿಕ Personal ದೇವರು) ಹಲವು ಶತಮಾನಗಳ ವರೆಗೆ ಮಾನವರು ರಾಜರಿಂದ ಅಧಿಕರಿಸಲ್ಪಡುತ್ತಿದ್ದರು. ಸಮಷ್ಟಿಯ ಶಕ್ತಿಯೇ ರಾಜನು, ಸಮಷ್ಟಿಯು ಬೆಂಗೆಯಿದ್ದರೆ ರಾಜನಿಗೆ ಅಸ್ತಿತ್ವವಿಲ್ಲ. ಆದರೆ ರಾಜನು ಸಮಷ್ಟಿಯ ಪ್ರತಿವ್ಯಕ್ತಿಗೂ ಅಸಮಾಧಾನ ಉಂಟುಮಾಡಿದರೂ ಅವನನ್ನು ಒಬ್ಬಿಂದೊಬ್ಬ ಎದುರಿಸಲು ಯಾರಿಗೂ ಧೈರ್ಯವಿಲ್ಲ. ಸಮಷ್ಟಿಶಕ್ತಿಯ ವೈಚಿತ್ರ್ಯವೆಂದರೆ ಅದೇ.

ಯಾವನೊಬ್ಬನಿಗಾದರೂ ಅಧಿಕಾರವೆಂದರೆ ಒಂದು ತರದ ಗರ್ವವುಂಟಾಗುತ್ತದೆ. ಮನುಷ್ಯನ ಮೇಲೆ ಮನುಷ್ಯನಿಗೆ ಅಧಿಕಾರವು ವ್ಯಕ್ತಿಗತವಾಗಿ ಯಾರಿಗೂ ಇರುವುದಿಲ್ಲ, ಅಧೀಕೃತರೇ ಅಧಿಕಾರಿಗೆ ಅಧಿಕಾರ ಕೊಡುವವರೆಂಬ ಭಾವನೆಯು ಎಲ್ಲರಿಗೂ ಮರೆತು ಹೋಗುತ್ತದೆ. ಆ ಕಾರಣದಿಂದ ರಾಜ್ಯದಲ್ಲಿ ದಬ್ಬಾಳಿಕೆಯು ಉಂಟಾಗುತ್ತದೆ ಮತ್ತು ಎಲ್ಲರೂ ಒಟ್ಟುಗೂಡಿದರೆ ಈ ದಬ್ಬಾಳಿಕೆಯನ್ನು ನಿಲ್ಲಿಸಬಹುದಾದರೂ, ಸಮಷ್ಟಿಯು ತಾನಾಗಿ ಸುಲಭವಾಗಿ ಅಧಿಕಾರವನ್ನು ಸೃಷ್ಟಿಸಬಲ್ಲದಾದರೂ, ಅಷ್ಟೇ ಸುಲಭವಾಗಿ ಅದನ್ನು ಅದು ನಿವಾರಿಸಲಾರದು.

ಆದರೆ ಲೋಕದ ನಾಗರಿಕತೆಯು ಹೆಚ್ಚಿದಂತೆ ಜನತೆಯಲ್ಲಿ ವಿಚಾರಕ್ರಾಂತಿಯುಂಟಾಯಿತು. ತಮ್ಮ ಶಕ್ತಿಯಿಂದಲೇ ತಮ್ಮನ್ನು ದಬ್ಬಾಳಿಸುತ್ತಾರೆಂಬ ಸಿದ್ಧತ್ವವು ಪ್ರಜೆಗಳಲ್ಲಿ ರಾಜರ ವಿಷಯವಾಗಿ ಮೂಡಿತು. ಸಮಷ್ಟಿಯು ರಚಿಸಿದ ಶಕ್ತಿಯನ್ನು ಸಮಷ್ಟಿಯೇ ಬದಲಾಯಿಸಬಲ್ಲುದೆಂಬ ಭಾವನೆಯು ಎಲ್ಲರಿಗೂ ತಿಳಿಯಬಂತು. ಆದರೆ, ಅದರಲ್ಲಿಯೂ ಒಂದು ತೊಂದರೆಯಿದ್ದಿತು — ಸಮಾಜದಲ್ಲಿ ಒಂದೇ ಸಮಯದಲ್ಲಿ ಎಲ್ಲರಲ್ಲಿಯೂ ಒಂದೇ ಅಭಿಪ್ರಾಯವಿರುವುದಿಲ್ಲ. ಆದುದರಿಂದ ಸರ್ವೋದ್ದೇಶಕ್ಕಾಗಿ ಇಡೀ ಸಮಷ್ಟಿಯನ್ನು ಒಟ್ಟುಗೂಡಿಸುವುದು ಸಾಧ್ಯವಾಗುವುದಿಲ್ಲ. ಆದುದರಿಂದ ಇಡೀ ಸಮಾಜದ ಶಕ್ತಿಯನ್ನು ಅಧಿಕರಿಸಲು ಸಮಾಜದ ಒಂದು ಅಂಶವು ಶಕ್ತವಾದರೇನೇ ಸಮಾಜದ ಪೂರ್ಣಾಧಿಕಾರಿಯ ದಬ್ಬಾಳಿಕೆಯನ್ನು ಸಮಾಜವು ಎದುರಿಸಬಲ್ಲದು.

ಆದುದರಿಂದಲೇ ರಾಜ್ಯಗಳಲ್ಲಿ ಆಗಾಗ ಕ್ರಾಂತಿಗಳು ಉಂಟಾಗಲಾರಂಭವಾದುವು. ಪಾಶ್ಚಾತ್ಯದಲ್ಲಿ ಪೂರ್ಣ ಕ್ರಾಂತಿಯಾಯಿತು. ಒಬ್ಬರ ಹಿಂದೆ ಒಬ್ಬರಾಗಿ ರಾಜರು ಸಿಂಹಾಸನದಿಂದ ಉರುಳಿ ಹೋದರು. ಹೊಸ ರಾಜ್ಯಗಳ ರಚನೆಯಲ್ಲೂ ರಾಜರ ಪ್ರಾಮುಖ್ಯತೆಯು ಹೋಯಿತು. ಪರಿಣಾಮವಾಗಿ, ಈ ಲೋಕದಲ್ಲಿ ನಿರ್ಬಂಧಿತ ಅಧಿಕಾರವುಳ್ಳ ಕೇವಲ ಕೆಲವರೇ ರಾಜರು ರಾಜತನವನ್ನು ಉಳಿಸಿಕೊಂಡಿರುವರು.

ರಾಜರೇನೋ ಅಧಿಕಾರಚ್ಯುತರಾದರು, ಆದರೆ ಆ ಮೇಲಿನ ಅಧಿಕಾರಗಳಿಂದ ರಾಜ್ಯದ ಸುಖವು ಹೇಗೆ ಹೆಚ್ಚಾಗಿದೆ, ಸಮಷ್ಟಿಯ ಶಕ್ತಿಯು ಯಾವ ರೂಪದಲ್ಲಿ ಕೆಲಸ ಮಾಡುತ್ತಿದೆಯೆಂಬುದನ್ನು ನಾವು ಬೇರೆಯಾಗಿಯೇ ವಿಚಾರಿಸಬೇಕಾಗಿದೆ.

ಸ್ಫುಟವಿಚಾರಗಳು.

ವ್ಯಾಪಾರದ ಕರಾರುಗಳು

ಎಲ್ಲ ದೇಶಗಳಿಗೂ ಇರುವಂತೆ ನಮಗೂ ಇವೆ! ಇಂಡಿಯಾ ಸರಕಾರವು ಸದ್ಯದಲ್ಲಿ ನಾಲ್ಕು ಬೇರೆ ಬೇರೆ ದೇಶಗಳೊಡನೆ ವ್ಯಾಪಾರದ ಕರಾರುಗಳನ್ನು ಮಾಡುವ ಸನ್ನಾಹದಲ್ಲಿದೆಯಂತೆ. ಆ ದೇಶಗಳಲ್ಲಿ ಒಂದು ಐರ್ಲೆಂಡು, ಮತ್ತೊಂದು ನ್ಯೂಝಿಲೆಂಡು. ಆ ಎರಡೂ ದೇಶಗಳು ಕೈಗಾರಿಕೆಗಳಲ್ಲಿ ಬಹಳ ಮುಂದಾದುವೇ ಆಗಿವೆ. ಇಂಡಿಯದೊಡನೆ ಇರುವುದೇನು?—ವ್ಯವಸಾಯ. ನಮ್ಮ ಕಚ್ಚಾ ಮಾಲನ್ನು ಅವರು ಕೊಂಡುಕೊಳ್ಳಿರೆಂದು ಒತ್ತಾಯಿಸಿಮಾಡುವಾಗ ಅವರು ಅದೇ (ಅಥವಾ ಬೇರೆ) ಕಚ್ಚಾಮಾಲಿಂದ ಸಿದ್ಧಪಡಿಸಿತಂದ ಸರಕನ್ನು ನಾವು ಕೊಂಡುಕೊಳ್ಳಬೇಕೆನ್ನಲಾಗುವುದಿಲ್ಲ. ಸರಕಾರವು ಕರಾರುಗಳನ್ನು ಮಾಡುತ್ತಿದ್ದೆ, ಇಂಡಿಯವು ಆ ಕರಾರುಗಳ ಫಲವನ್ನು ಕಹಿ—ಸಿಹಿಗಳನ್ನು ನೋಡದೆ ಉಣ್ಣುತ್ತಿದೆ! ದೇಶದ ಕೈಗಾರಿಕೆಗಳ ಪ್ರಗತಿಯನ್ನು ತಡೆಯಬಹುದಾದ ಈ ಕರಾರುಗಳಿಗೆ ಸರಕಾರವು ಸಹಿಹಾಕಲು ಕೈಯೆತ್ತುವುದು ಅನ್ಯಾಯವಲ್ಲವೆ? ಇಂತಹ ಕರಾರುಗಳಲ್ಲಿ ಭರವಸೆಯನ್ನಿರಿಸುವರಾರು?

ಬ್ರಿಟಿಷ್ ಸೈನ್ಯವಿಲ್ಲವಿದ್ದರೆ

ಹಿಂದೂದೇಶದಲ್ಲಿ ಪ್ರಳಯವುಂಟಾಗುತ್ತಿತ್ತೆಂಬ ಅರ್ಥಹುಟ್ಟುವಂತೆ ನಮ್ಮ ಮುಖ್ಯಸೇನಾನಾಯಕರು, ಅಸೆಂಬ್ಲಿಯಲ್ಲಿ ರಾಮಶರಣರು ತಂದ ಒಂದು ಠರಾವಿಗೆ ಉತ್ತರವಾಗಿ ಮಾತಾಡುತ್ತ,—"ನೋಡಿಲ್ಲವೇ? ಕಳೆದೈದು ವರುಷಗಳಿಂದ ಆಫ್ರಿದಿಗಳ ಹಾವಳಿ, ಕೆಂಪಂಗಿಯವರ ಉದ್ಧಟತನ, ಬರ್ಮದ ದಂಗೆ, ಕಾನ್ಪುರ—ಬೊಂಬಾಯಿಗಳ ಮಾರಾಮಾರಿ, ಮೊಹ್ಮಂಡದ ಅರಾಜಕತ್ವ, ಕಾಶ್ಮೀರದ ಅಶಾಂತಿ—ಇವೆಲ್ಲಾ ಅನಿರೀಕ್ಷಿತವಾಗಿ ನಡೆದುವು, ಈಗ ಬ್ರಿಟಿಷ್ ಸೋಲ್ಜರರನ್ನು ಬಂಗಾಳಕ್ಕೂ ಕಳುಹಿಸಿರುವೆವು'' ಎಂದರು. ಇದರಿಂದ ನಮಗರ್ಥವಾಗುವುದಿಷ್ಟೇ—ಹಿಂದೀ ಸೈನಿಕರಿಂದ ಉಪಯೋಗವಿಲ್ಲವೆಂದು' ಯಾವ ಸೈನದಿಂದ ಎಂತಹ ಉಪಯೋಗವೆಂದು ಅಧಿಕಾರವಾಣಿಯಿಂದಾಡಿದವರು ಮುಖ್ಯಸೇನಾನಾಯಕರೇ ಆದರೂ, ಸೈನದ ವೆಚ್ಚಗಳನ್ನು ಮತ್ತಷ್ಟು ಕಡಿಯಬೇಕೆಂದು ಕೇಳುವವರಿಗೆ ಅವರು ಈ ಉತ್ತರವನ್ನು ಕೊಟ್ಟುದು ಮಾತ್ರ ವ್ಯಸನಕರ. ಹಿಂದೀ ಸೈನಿಕರ ಯೋಗ್ಯತೆಯೆಷ್ಟೆಂದು ಆ ಸೇನಾನಾಯಕರೂ ಬಲ್ಲರು, ಬ್ರಿಟಿಷರೂ ಬಲ್ಲರು. ಹಾಗಿದ್ದು, ಹಿಂದೀ ಸೈನಿಕರಿಗಿಂತ ಮೂರೋ ನಾಲ್ಕೋ ಪಾಲು ಹೆಚ್ಚು ವೆಚ್ಚದಿಂದ ಬಿಳಿಯವರನ್ನಿಲ್ಲಿ ತಂದು ಸಾಕುತ್ತಿರುವ "ರಹಸ್ಯ'ವನ್ನವರು ಹೇಳಲು ಇಚ್ಛೆಪಡಲಾರರಾದರೆ "ಇಂಡಿಯಕ್ಕೆ ಬ್ರಿಟಿಷ ಸೈನ್ಯವಿದೆ, ಇಂಡಿಯವು ಹೊತ್ತುಕೊಳ್ಳಬೇಕು'' ಎಂದಿಷ್ಟನ್ನೇ ಹೇಳದೆ ತಿರುಗುಮುರುಗಾಗಿ ನುಡಿವರೇಕೋ ತಿಳಿಯದು.

ಶೂಸ್ಟರರ ನೆನಪು

'ಸುಂಕ' ಎಂಬ ಶಬ್ದವಿರುವಷ್ಟು ಕಾಲ ಸ್ಮೃತಿಪಟಲದಿಂದಳಿಸಿ ಹೋಗದಷ್ಟು ಚಾತುರ್ಯದಿಂದ ಅವರು ಸುಂಕಗಳ ವಿಷಯವಾಗಿ ವಿವರಿಸಿ, ಸಂಕಟವುಂಟಾಗದಂತೆ ಯತ್ನಿಸಿರುವರು. ಸಕ್ಕರೆ ಮತ್ತು ಬೆಂಕಿಪೆಟ್ಟಿಗೆಗಳ ಮೇಲಿನ ಸುಂಕದಿಂದ ಬಂಗಾಳಕ್ಕೆ ಸಹಾಯಮಾಡಿದ ಪುಣ್ಯವಷ್ಟೇ ಅಲ್ಲ, ಉಳಿದ ಪ್ರಾಂತ್ಯಗಳಿಗೂ ಆದಾಯದ ಮೇಲಿನ ತೆರಿಗೆಯ ರೂಪದಲ್ಲಿ ಲಾಭವಾಗುವ ಯೋಗವೂ ಘಟಿಸುವುದೆಂದು ಇವರು ಸಮಾಧಾನದ ವಾಕ್ಯವನ್ನಾಡಿರುವರು. ಇಂಡಿಯದಿಂದ ಬಂಗಾರವು ಪರದೇಶಗಳಿಗೆ ಕೇಳಿಹೋಗುತ್ತಿದೆಯೆಂದಾಗ 'ಹೆಚ್ಚಿನ ದರದಲ್ಲಿ ಮಾರಾಟಮಾಡುವುದರಿಂದ ಇಂಡಿಯಕ್ಕೆ ತುಂಬ ಲಾಭ'' ಎಂದ ಶೂಸ್ಟರರಿವರು. ಬಂಗಾರವು ಹೋಯಿತು, ಆದರೆ, ದಾರಿದ್ರ್ಯವಿಲ್ಲಿ ಇದೆ, ಆರ್ಥಿಕ ಮುಗ್ಗಟ್ಟು ಸಡಲಿಸದೆ ಉಳಿದಿದೆ. ಅದೇ ಗತಿಯು ಈ ಹೊಸ ಸುಂಕಗಳಿಂದಾಗದೆಂದು ಭಯಪಡದವರಾರು? ತೆರಿಗೆಯ ರೂಪದಲ್ಲಿ ಪ್ರಾಂತ್ಯಗಳಿಗೆ ಲಾಭವಾಗುವ ಮಾತಿಗೂ ಅದೇ ಅರ್ಥ. ಎಷ್ಟಿದ್ದರೂ ಕೇಂದ್ರ ಸರಕಾರದ ಹೊಟ್ಟೆಗೆ ಸಾಕಾಗುವುದೇ? ಇನ್ನು ಶೂಸ್ಟರರ ಕೊನೆಯ ಮಾತು ಕೇಳಿರಿದಾ?— "ಉಪ್ಪಿನ ಮೇಲೂ ಸುಂಕ ಹೆಚ್ಚಿಸಬಹುದಿತ್ತು, ಆದರೆ, ಹಾಗೆಮಾಡಲಿಲ್ಲ'' ಎಂದು! ಇಷ್ಟೋ ಘನ 'ತೋಳ—ಕೊಕ್ಕರೆ'ಗಳ ಕತೆಗೆ ಇದನ್ನು ಹೋಲಿಸಲಾಗುವುದಲ್ಲ ಸರಿ; ಆದರೆ ಶೂಸ್ಟರರ ಸ್ಥಾನದಲ್ಲಿ ಇನ್ನು ಬರುವವರು, ಶೂಸ್ಟರರು ಕರುಣೆಯಿಂದಲೋ ವೈರಾಗ್ಯದಿಂದಲೋ ಬಿಟ್ಟು ಹೋದುದನ್ನು ಪೂರೈಸುವುದಿಲ್ಲವೆಂದು ಧೈರ್ಯವಾಗಿ ಹೇಳಬರುವುದೇ?

ಉಪವಾಸಿಗಳ ದಂಡು

ಬೊಂಬಾಯಿಯಲ್ಲೂ ಇದೆಯೆಂದು, ಕೆಲವರು ಅಲ್ಲಿಯ ಕೊರ್ಪೊರೇಶನ್ ಗೃಹಕ್ಕೆ ಪ್ರವೇಶಿಸಿ "ನಾವು ಹಸಿದಿರುವೆವು'' ಎಂದು ಉದ್ಘೋಷಿಸಿದ ಮೇಲೆಯೇ ತಿಳಿದುಬಂತು. ಆ ತನಕ, ಮೋಟಾರುಗಳಲ್ಲಿರುಳಿ ಸೃಷ್ಟಿಸೌಂದರ್ಯವನ್ನು ನೋಡಿ ಆನಂದಿಸುತಿದ್ದವರಿಗೆ ಬಹುಶಃ ಅದು ತಿಳಿದೇ ಇರಲಿಲ್ಲ. ಆದರೂ, ಹಸಿದಿರುವನೆಂದ ಅವರನ್ನು ಪೋಲೀಸರಿಂದ ಹೊರಗೆ ಕಳುಹಲಾಯಿತು,—ಕೊರ್ಪೊರೇಶನ್ ಗೃಹವು ಭೋಜನಗೃಹವಲ್ಲವೆಂಬುದರಿಂದಾಗಿರಬಹುದು. ಹಸಿದವರು ಹಾಗೆ ವರ್ತಿಸಿದುದು ಸರಿಯೋ ತಪ್ಪೋ,—ಆದರೆ, ಅವರು ಬೇರೇನು ಮಾಡಬೇಕಿತ್ತೋ ಅದನ್ಯಾರೂ ಹೇಳಿಕೊಟ್ಟಿಲ್ಲ. ದಿವಂಗತ ಪಟೇಲರ ಚಿತ್ರವೊಂದನ್ನು ಕೊರ್ಪೊರೇಶನ್ ಗೃಹದಲ್ಲಿಡುವ ಕುರಿತಾಗಿ ಹೊಡೆದಾಡಿಕೊಂಡ ಕೊರ್ಪೊರೇಶನು, ಪೋಲೀಸರನ್ನು ಕರೆಸುವುದಕ್ಕಿಂತ ಬೇರಾವ ಸೌಮ್ಯ ಉಪಾಯವನ್ನೂ ಕಂಡುಕೊಳ್ಳದಿದ್ದುದರಲ್ಲಿ ಆಶ್ಚರ್ಯವಿಲ್ಲ. ಆದರೆ, ಪ್ರಾಂತಿಕ ಸರಕಾರವಾದರೂ ಹಸಿದವರ ಕಡೆಗೆ ಗಮನಕೊಡದೇ? ಶಾಸನಭಂಗಕರನ್ನು, ತನ್ನದೆ ಕೈದುಮಾಡಿ ಜೈಲುಗಳೊಳಗಿರಿಸಿ, ಅಧಿಕನ್ನಿಯದಿಂದ ಅನ್ನಕೊಟ್ಟು ಕಾಪಾಡಿದ ಸರಕಾರಕ್ಕೆ, ಶಾಸನಭಂಗವು ತಣ್ಣಗಾದ ಈ ಕಾಲದಲ್ಲಿ ಸಾಧ್ಯವಿದ್ದಷ್ಟು ಮಂದಿಗೆ ಅನ್ನಕೊಡುವ ಸುಲಭೋಪಾಯವಾವುದಾದರೂ ಹೊಳೆಯದೆ?

ಸಾರ್ವತ್ರಿಕ ಅತೃಪ್ತಿ

ನಮ್ಮ ದೇಶದ ಕೌನ್ಸಿಲುಗಳಲ್ಲೆಲ್ಲ ಒಂದಿಲ್ಲ ಒಂದು ಬಗೆಯ ಅತೃಪ್ತಿ. ಈ ವರ್ಷದ ಬಜೇಟುಗಳ ವಿಚಾರ ಮಾತ್ರವಲ್ಲ, ಅದಕ್ಕಿಂತಲೂ ಮುಂಚಿತವಾಗಿಯೇ ಕಚ್ಚಾಟಗಳ ಹೆಚ್ಚಿದ ವಾರ್ತೆಗಳನ್ನು ಕೇಳುತಿದ್ದೇವೆ. ಬೊಂಬಾಯಿ ಪಂಜಾಬಗಳಲ್ಲಂತೂ ಮಂತ್ರಿ—ಮಂತ್ರಿಗಳೊಳಗೇ ಹಿತವಿಲ್ಲ. ಬೊಂಬಾಯಿಯಲ್ಲಿ ಮಂತ್ರಿಮಂಡಲದ ಹೊಸ ರಚನೆಯಾಗಬೇಕೆಂದೂ ಒಂದು ಠರಾವು. ಮಧ್ಯಪ್ರಾಂತ್ಯದಲ್ಲಿ ಅವಿಶ್ವಾಸದ ಠರಾವು. ಪಂಜಾಬಿನಲ್ಲಿ ಅದೊಂದು ಪ್ರಸಂಗದಲ್ಲಿ ಮಂತ್ರಿಗಳು ತಮ್ಮ ಅಧಿಕಾರವನ್ನು ನಡೆಸುವಲ್ಲಿ ಒಂದಿಷ್ಟು ಹಿಂಜರಿದ ದೆಸೆಯಿಂದ ಅಂತಹ ಮಂತ್ರಿಗಳು ತಮ್ಮ ಸ್ಥಾನಕ್ಕೆ ರಾಜೀನಾಮೆಯನ್ನಿತ್ತು ತೆರಳುವುದೇ ಹಿತವೆಂದು ಅಧ್ಯಕ್ಷರಿಂದಲೇ ಬೋಧನೆ. ಹೀಗಾಗಿ ಕೌನ್ಸಿಲರ ಮಂತ್ರಿಗಳೊಳಗೂ, ಮಂತ್ರಿ—ಮಂತ್ರಿಗಳೊಳಗೂ ಹಿತವಿಲ್ಲ. ಹೀಗಿದ್ದೂ, ಭಾವೀ ಸುಧಾರಣೆಗಳ ದೆಸೆಯಿಂದಲೋ ಮತ್ತೇತರಿಂದಲೋ ಸರಕಾರದವರು ಈಗಿನ ಕೌನ್ಸಿಲುಗಳ ಅವಧಿಯನ್ನು ಬೆಳೆಸಿದುದು ಹಿತಕರವೇ? ಚುನಾವಣೆಗಳನ್ನು ಶೀಘ್ರದಲ್ಲಿ ನಡೆಸಿ, ಕೌನ್ಸಿಲುಗಳಲ್ಲೆಲ್ಲ ನವಸೃಷ್ಟಿಯನ್ನುಂಟುಮಾಡಿದರೆ ಸ್ವಲ್ಪವಾದರೂ ನೆಮ್ಮದಿಯು ನೆಲೆಸಬಹುದೋ ಎಂದಾಸೆಯಿತ್ತು, ಕೌನ್ಸಿಲುಗಳೊಳಗೇ ತಲೆಯೆತ್ತಿ ಕುಣಿಯುತ್ತಿರುವ ಪಂಗಡ ವೈಷಮ್ಯವು ತಣ್ಣಗಾದೀತೆ ಎಂಬ ನಿರೀಕ್ಷೆಯಿತ್ತು. ಆ ಆಸೆಯೆಲ್ಲವೂ ಹೋಯಿತು. ಇದಕ್ಕಾಗಿ ಸರಕಾರಕ್ಕೆ ಎಷ್ಟು ಧನ್ಯವಾದಗಳನ್ನು ಕೊಡಬೇಕೋ ತಿಳಿಯದಾಗಿದೆ.

ನಮಗೊಂದು 'ರಿಯಾಯತಿ'!

'ರಿಯಾಯತಿ'ಗೆ ಹೊಸ ಅರ್ಥವೊಂದನ್ನು ಸರಕಾರವು ನಮಗೆ ಕಲಿಸಿತು. ಬುಕ್ ಪೋಸ್ಟ್ ದರಗಳಲ್ಲಿ ಮೊದಲಿನ ೫ ತೊಲೆಗಳಿಗೊಂಭತ್ತು ಪೈಯಾದರೂ, ಅದಕ್ಕೆ ಮಿಕ್ಕಿದ ಪ್ರತಿ ೫ ತೊಲೆಗಳಿಗೆ ೬ ಪೈ ಮಾತ್ರ, ಇದೊಂದು 'ರಿಯಾಯತಿ' ಅರ್ಧ ತೊಲೆಯೊಳಗಿನ ಕಾಗದಗಳಿಗೆ ಒಂದಾಣೆ, ಇದು ಎರಡನೆಯ 'ರಿಯಾಯತಿ'. ಪೋಸ್ಟ್ ಕಾರ್ಡುಗಳ ದರವನ್ನು ಅರ್ಧಾಣೆಗೆ ತರಬೇಕೆಂದು ಕಂಠಶೋಷಣೆ ಮಾಡಿದುದು ವ್ಯರ್ಥವೇ ಆಯಿತು. ಲಕ್ಷ—ಲಕ್ಷ ನಷ್ಟವೆಂದೇ ನಮಗೆ ಉತ್ತರ! ವಾಸ್ತವವಾಗಿ ಪೋಸ್ಟು ಕಾರ್ಡುಗಳೇ ನಗರದಂತೆ ಹಳ್ಳಿಯಲ್ಲೂ ಹೆಚ್ಚಾಗಿ ಉಪಯೋಗವಾಗುವುವು. ಹಿಂದಣ ಕಾಲಾಣೆಯ ಕಾರ್ಡುಗಳ ಆಕಾರಕ್ಕೆ ತಂದು ಅರ್ಧಾಣೆ ದರವಿರಿಸಬೇಕೆಂಬ ಸೂಚನೆಯೂ ಸರಕಾರಕ್ಕೆ ಹಿತಕರವೆನಿಸಲಿಲ್ಲ. ಅಂತು ಈ 'ರಿಯಾಯತಿ'ಗಳ ಉಪಯೋಗ ನಮಗಿಷ್ಟೇ—(೧) ಅರ್ಧ ತೊಲೆಗೆ ಮಿಕ್ಕಿದ ಪತ್ರಕ್ಕೆ ಒಂದಾಣೆ ಹೆಚ್ಚು ದಂಡ, (೨) ಚಿಕ್ಕ ಕಟ್ಟಲೆಗನ್ನು ಅಥವಾ ಪುಸ್ತಕವನ್ನು ಕಳುಹುವಾಗ ಕಾಲಾಣೆ ಹೆಚ್ಚು!

[illegible]

([illegible])

[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]
31	ಶನಿ	○	[illegible]	[illegible]	[illegible]	[illegible]	6.31	6.41
1	ರವಿ	[illegible]	[illegible]	[illegible]	[illegible]	[illegible]	6.29	6.41
2	ಸೋಮ	[illegible]	[illegible]	[illegible]	[illegible]	[illegible]	6.29	6.41
3	ಮಂಗಳ	[illegible]	[illegible]	[illegible]	[illegible]	[illegible]	6.28	6.41
4	ಬುಧ	[illegible]	[illegible]	ಅನುರಾಧಾ	[illegible]	[illegible]	6.27	6.41
5	ಗುರು	[illegible]	[illegible]	ಜ್ಯೇಷ್ಠಾ	[illegible]	[illegible]	6.27	6.41
6	ಶುಕ್ರ	[illegible]	[illegible]	ಮೂಲಾ	[illegible]	[illegible]	6.26	6.42

ಮಂಗಳೂರಿನ ವಾಯುಸ್ಥಿತಿ.

Date	Temperature. ಉಷ್ಣ (ಕಾವು)		Rainfall. ಮಳೆ	
ತಾರೀಖು	Maximum ಹೆಚ್ಚಾದದ್ದು	Minimum ಕಡಿಮೆ	ದಿನದ ಮಳೆ	ಜಮಾ ಮಳೆ.
22	89— 2	74— 4	—	—
23	87— 9	72— 5	—	—
24	88— 6	75— 4	—	—
25	87— 5	78— 9	—	—
26	88— 2	74— 6	—	—
27	87— 7	76— 2	—	—
28	89— 0	75— 5	—	167·64

ಮಂಗಳೂರಿನ ಪೇಟೆ ಧಾರಣೆ.

ಜಿನಸು		ಇಂದ ರೂ. ಅ.	ವರೆಗೆ ರೂ. ಅ.
ರಾಶಿ ಅಕ್ಕಿ	...	3— 4	3—12
ಮುಸ್ಸಿ	...	4— 2	4—10
ಗುಡ್ಡು	...	3—10	4— 2
ಸುಗ್ಗಿ	...	3— 2	3— 8
ಊರ ಅವ್ವಲ್ ಬೆಳ್ತಿಗೆ	...	4— 4	4—12
ರಂಗೂನು ಬೆಳ್ತಿಗೆ ಗೋಣಿ ಒಕ್ಕೆ	...	4—14	5— 8
ಎಲ್ಲೂರು ಬೆಳ್ತಿಗೆ ಮುಡಿ ಒಕ್ಕೆ	...	3— 4	3— 6
ಗೋಧಿ ಗೋಣಿ ಒಕ್ಕೆ	...	10— 0	12— 8
ತೊಗರಿ ಗೋಣಿ ಒಕ್ಕೆ	...	8—12	10— 8
ಹುರುಳಿ ಗೋಣಿ ಒಕ್ಕೆ	...	5— 4	5— 8
ಕಡಲೆ ಗೋಣಿ ಒಕ್ಕೆ	...	8—12	12— 8
ತೊಗರಿಬೇಳೆ ಗೋಣಿ ಒಕ್ಕೆ	...	10— 0	16— 0
ಉದ್ದು ಗೋಣಿ ಒಕ್ಕೆ	...	7— 0	7—10
ಹೆಸರು ಗೋಣಿ ಒಕ್ಕೆ	...	8— 0	9— 0
ಊರುಬೆಲ್ಲ ಖಂಡಿ ಒಕ್ಕೆ	...	32— 0	37— 8
ಉಪ್ಪು ಗೋಣಿ ಒಕ್ಕೆ	...	5— 0	5— 8
ಕೊಬ್ರಿ ಖಂಡಿ ಒಕ್ಕೆ	...	35— 0	38— 0
ಕೊಬ್ರಿ ಹಿಂಡಿ ಖಂಡಿ ಒಕ್ಕೆ	...	17— 8	18— 8
ಎಳ್ಳೆಣ್ಣೆ ಖಂಡಿ ಒಕ್ಕೆ	...	23—12	25— 0
ಕೊಬ್ರಿ ಎಣ್ಣೆ ಮುಡಿ ಒಕ್ಕೆ	...	2—11	4— 0
ಎಳ್ಳೆಣ್ಣೆ ಮುಡಿ ಒಕ್ಕೆ	...	5— 0	6— 0
ಹಿಪ್ಪೆಎಣ್ಣೆ ಪಟ್ಟಿಗೆ ಒಕ್ಕೆ	...	6— 8	8— [illegible]
ತೆಂಗಿನ ಸಕ್ಕರೆ ಮುಡಿ ಒಕ್ಕೆ	...	3—11	3—12
ಹಸಿ ಮೆಣಸು	...	5— 8	7— 0
ಸಾಸಿವೆ ಮುಡಿ ಒಕ್ಕೆ	...	4— 4	4—12
ಕಾಳುಮೆಣಸು ಖಂಡಿ ಒಕ್ಕೆ	...	130— 0	135— 0
ಮೆಂತ್ಯ ಮುಡಿ ಒಕ್ಕೆ	...	20— 0	24— 0
ಹೊಸ ಗೇರುಬೀಜ ಮುಡಿ ಒಕ್ಕೆ	...	3—10	3—15
ಅರಶಿನ ಖಂಡಿ ಒಕ್ಕೆ	...	42— 0	44— 0
ತಾಂಬ್ರ ತಗಡು ಮಣ ಒಕ್ಕೆ	...	10— 0	10— 2
ತಾಂಬ್ರ ಪಾತ್ರಗಳು ಮಣ ಒಕ್ಕೆ	...	13— 0	14— 8
ಹಿತ್ತಾಳೆ ಸೇರು ಒಕ್ಕೆ	...	14—12	15— 0
ಹಿತ್ತಾಳೆ ತಗಡು ಮಣ ಒಕ್ಕೆ	...	9— 0	9— 8
ಸತು ಒಕ್ಕೆ	...	21— 4	21— 6
ಮುಗಳಿ ಹುಳಿ ಖಂಡಿ ಒಕ್ಕೆ	...	30— 0	35— 0
ಪ್ಲಾಂಟೇಶನ್ ಕಾಫಿ ಖಂಡಿ ಒಕ್ಕೆ	...	180— 0	205— 0
ಶೈವರಿ ಕಾಫಿ ಖಂಡಿ ಒಕ್ಕೆ	...	260— 0	265— 0
ಹಳೆ ಅಡಿಕೆ	...	110— 0	125— 0
ಹೊಸ ಅಡಿಕೆ	...	75— 0	100— 0

THE CANARA PUBLIC CONVEYANCE CO., LTD, MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯ ಕ್ಷೇತ್ರಗಳಿಗೆ ಹೋಗುವವು. ಮೈಸೂರು, ಕೊಡಗು ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನ್ ಕೂಡಾ ಇರುವುದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ ನಾಲ್ಕು ಸಾರಿ ಕರಾವಳಿ ಮಾರ್ಗವಾಗಿಯೂ, 4 ಸಾರಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲಪಿರಿ. ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 37, ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ, ಕಾರ್ಕಳ ಗೋಮಟೇಶ್ವರನ ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು 4 ಸಲ ಹೊರಟು ಎರಡೂವರೆ ತಾಸುಗಳ ಸಮಯದಲಿ ಕಾರ್ಕಳಕ್ಕೆ ತಲಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ, ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ತಲ್ಪಬಹುದು.

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಬೆಳಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಪ್ರಾಚೀನ ಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಬೇಲೂರಿನ ಸೋಮನಾಥ ದೇವಾಲಯವನ್ನು ನೋಡಲು, ನೋಡಲಿಚ್ಛಿಸುವವರು, ಬೆಳಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ, ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದೂಸ್ಥಾನ, ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣ ಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ, ಮಂಗಳೂರಿನಿಂದ ಮಡಿಕೇರಿಗೆ 7 ಘಂಟೆಗಳೊಳಗೂ, ಕಡೂರಿಗೆ 12 ಘಂಟೆಗಳೊಳಗೂ, ಮೈಸೂರಿಗೆ 12 ಗಂಟೆಗಳೊಳಗೂ, ಸಕಲೇಶಪುರಕ್ಕೆ 8 ಗಂಟೆಗಳೊಳಗೂ, ಹಾಸನಕ್ಕೆ 10 ಗಂಟೆಗಳೊಳಗೂ, ಚಿಕ್ಕಮಗಳೂರಿಗೆ 8 ಗಂಟೆಗಳೊಳಗೂ, ಕೊಲ್ಲೂರಿಗೆ ಮತ್ತು ಗೋಕರ್ಣಕ್ಕೆ ೧॥ ದಿನದೊಳಗೂ ಶಿಮೊಗ್ಗಕ್ಕೆ 12 ಗಂಟೆ ತಲಪಬಹುದು. ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,

The Canara Public Conveyance Company Ltd., Mangalore

Chikmagalur Public Conveyance Motor Service

CHIKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,

ಚಿಕ್ಕಮಗಳೂರು

ಮುಂಬಾಯಿಯಿಂದ – ಮಂಗಳೂರಿಗೆ

ಮಂಗಳೂರಿನಿಂದ – ಮುಂಬಾಯಿಗೆ

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ

ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ

ಮಂಗಳೂರು–ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು – ಅನುಕೂಲ ಪ್ರಯಾಣ ಸೌಕರ್ಯಗಳು

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ

ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ

ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ.

ಚಿಕ್ಕಮಗಳೂರಿನಿಂದ— ಶಿವಮೊಗ್ಗಕ್ಕೆ, ಬೀರೂರಿಗೆ, ಕಡೂರಿಗೆ.
– ಮೂಡಗೆರೆಗೆ, ಸಕಲೇಶಪುರಕ್ಕೆ.
—ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
—ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ಮಿತವ್ಯಯದ ಪ್ರಯಾಣ! ಉತ್ಕೃಷ್ಟ ಸೌಕರ್ಯ!

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

ಕೋಟ್ಯಾಧೀಶ್ವರ ರೊಕ್‌ಫೆಲ್ಲರ್

(ಕಳೆದ ಸಂಚಿಕೆಯಿಂದ ಮುಂದುವರಿಸಿದುದು.)

ಲೇಖಾಂಕ ೨. ಅವರ ಜೀವನಕ್ರಮವೇನು?

ರೊಕ್‌ಫೆಲ್ಲರರು ಎಂತಹ ಮನುಷ್ಯರು? ಕಾಣಲು ಹೇಗಿದ್ದಾರೆ? ಅವರ ವ್ಯಕ್ತಿತ್ವವೇನು? ಅವರು ನೋಡಲು ಹೇಗಿರುವರೆಂಬುದಕ್ಕಿಂತ ಅವರ ನಿತ್ಯಜೀವನವೇನು, ಗುಣನಡತೆಗಳೇನು ಎಂಬುದನ್ನು ತಿಳಕೊಳ್ಳುವುದರಿಂದಲೇ ಹೆಚ್ಚು ಪ್ರಯೋಜನವಾಗುವುದು

ಅವರು ಹೇಗಿರುವರೆಂಬುದನ್ನು ನಗರದೊಳಗಿನವರು ಚಲಚ್ಚಿತ್ರಗಳಲ್ಲಿ ನೋಡಿರಬಹುದು ಉದ್ದನ್ನ ಆಳು, ೯೫ ವರ್ಷ ಪ್ರಾಯವಾದರೂ 'ಹಣ್ಣು ಮುದುಕ'ರಲ್ಲವೆಂಬಂತೆ ದೇಹಸೌಷ್ಠವವಿರದು ಆ ಕಣ್ಣುಗಳಲ್ಲಿ ಇನ್ನೂ 'ಜ್ಯೋತಿ'ಯಿದೆ, ಚಟುವಟಿಕೆ ತೋರುತ್ತಿದೆ. **ಇಷ್ಟು ಮುದುಕರಿವರು ಈಗಲೂ ಬದುಕಿಕೊಂಡು, ಗೊಲ್ಫ್ ಆಟವಾಡುತ್ತಿರುವರೆಂದೂ ಉತ್ಸಾಹದಿಂದ ಮಾತು ಕತೆಗಳನ್ನಾಡುತ್ತಿರುವರೆಂದೂ, ಸಂಭಾಷಣೆಯಲ್ಲಿ ವಿನೋದವನ್ನು ಬೆರೆಸಬೇಕಾದಲ್ಲಿ ಲೋಪವಾಡುವುದಿಲ್ಲವೆಂದೂ ತಿಳಿದು ಯಾರಿಗೆ ತಾನೆ ಆಶ್ಚರ್ಯವಾಗದು?** ಓರ್ವ ಪತ್ರಿಕಾ ಸಂಪಾದಕರು ಇತ್ತೀಚೆಗೆ ರೊಕ್‌ಫೆಲ್ಲರರ ವಿಚಾರವಾಗಿ ಬರೆದುದರಲ್ಲಿ ಹೀಗಿದೆ – "ರೊಕ್‌ಫೆಲ್ಲರರು ಬಹಳ 'ಎಳೆ ವಯಸ್ಸಿನಿಂದಲೇ ವೃದ್ಧರಾಗಲು ತೊಡಗಿರು'ವರೆಂದು ತೋರುತ್ತಿದೆ ಎಳೆಪ್ರಾಯದಲ್ಲಿ ಅವರ ಕಣ್ಣುಗಳಲ್ಲಿದ್ದ ದೃಷ್ಟಿಯೆ ಈಗಲೂ ಇದೆ ಇತಿಹಾಸ ಪೂರ್ವದ ಮಾನವರಂತೆ ತೋರುವರು "

ರೊಕ್‌ಫೆಲ್ಲರರ ದಿನನಿತ್ಯದ ಕಾರ್ಯಕ್ರಮವು ಈಗ, ೯೫ನೇ ವಯಸ್ಸಿನಲ್ಲಿಯೂ ಹೀಗಿದೆ —

ಬೆಳಗ್ಗೆ ೬ ೩೦ಕ್ಕೆ ಏಳುವರು ೭ರಿಂದ ೮ರ ವರೆಗೆ ಪತ್ರಿಕಾ ವಾಚನ ೮ಕ್ಕೆ ಬೆಳಗ್ಗಿನ ಊಟ ೮ ೩೫ರಿಂದ ೮ ೪೫ರ ವರೆಗೆ ನ್ಯೂಮರಿಕಾ ಎಂಬ ಆಟವಾಡುವರು ಅಥವಾ ಸ್ನೇಹಿತರೊಡನೆ ಸಂಭಾಷಣೆ ೮ ೪೫ರಿಂದ ೧೦ರ ವರೆಗೆ ಕಾರ್ಯದ ವಿಚಾರ ೧೦ ೧೫ರಿಂದ ೧೨ರ ವರೆಗೆ ಗೊಲ್ಫ್ ಆಟ ಮಧ್ಯಾಹ್ನ ೧೨ರಿಂದ ೧ ೧೫ರ ವರೆಗೆ ಸ್ನಾನ ಮತ್ತು ವಿಶ್ರಾಂತಿ ಅಪರಾಹ್ನ ೧ ೧೫ರಿಂದ ೩ರ ವರೆಗೆ ಊಟವಾಗಿ ನ್ಯೂಮರಿಕಾ ಆಟ ೩ರಿಂದ ೫ರ ವರೆಗೆ ಮೋಟರ್ ಸವಾರಿ ಸಾಯಂಕಾಲ ೫ರಿಂದ ೭ರ ವರೆಗೆ ವಿಶ್ರಾಂತಿ ಅಥವಾ ಬೇರೆಯವರಿಂದ ಓದಿಸಿ ಕೇಳುವರು, ಅಥವಾ ಸಂಭಾಷಣೆ ೭ಕ್ಕೆ ರಾತ್ರಿಯ ಊಟ ರಾತ್ರಿ ೮ರಿಂದ ೧೦ರ ವರೆಗೆ ನ್ಯೂಮಾರಿಕಾ ಆಟ, ಮಿತ್ರರನ್ನು ಕಾಣಲು ಹೋಗುವುದು, ಅಥವಾ ಮನೆಯಲ್ಲಿ ಸಂಗೀತವನ್ನಾನಂದಿಸುವುದು, ಒಮ್ಮೊಮ್ಮೆ ಚಲಚ್ಚಿತ್ರ ಸಂದರ್ಶನ ರಾತ್ರೆ ೧೦ಕ್ಕೆ ನಿದ್ರೆಮಾಡಲು ಹೋಗುವರು

ರೊಕ್‌ಫೆಲ್ಲರರ ಜೀವನ ಚರಿತ್ರವನ್ನು ಬರೆದವರೆಷ್ಟೋ ಮಂದಿ ಇರುವರು ಫೊಟೊಗ್ರಾಫರರು, ವ್ಯಂಗಚಿತ್ರ ಲೇಖಕರು, ಅಪರಿಚಿತರು, ಸ್ನೇಹಿತರು, ಶತ್ರುಗಳು ಎಲ್ಲರೂ ಅವರ ಗುಣನಡತೆಗಳನ್ನು ವರ್ಣಿಸಿದ್ದಾರೆ, ಚಿತ್ರಿಸಿದ್ದಾರೆ, ಬರೆದಿದ್ದಾರೆ

ಜೀವನ –ರೊಕ್‌ಫೆಲ್ಲರರು ನಿರಾಡಂಬರವಾದ ಜೀವನವನ್ನೆ ನಡೆಸುತ್ತಿರುವರು ಸಂಯುಕ್ತ ಅಮೇರಿಕದಲ್ಲೆಲ್ಲ ಅಲ್ಲಲ್ಲಿ ಇವರಿಗೆ ಎಷ್ಟೋ ಮನೆಗಳಿದ್ದರೂ, ಪ್ರಪಂಚದಲ್ಲಿ ತನಗೆ ಬೇಕಾದುದಾವುದನ್ನು ಹೊಂದುವಷ್ಟು ಸೌಭಾಗ್ಯ ರಾಶಿಯಿದ್ದರೂ ಇವರು ಅನುಚಿತವಾದ ಭೋಗಗಳ್ಳೆಳಸದೆ ಸರಳ ಜೀವನವನ್ನೆ ನಡೆಸುತ್ತಿರುವರು

ಹಣಕಾಸುಗಳ ಮಟ್ಟಿಗೆ ಇವರು ಮಿತವ್ಯಯವನ್ನೆ ಮಾಡುವರು, ಆದರೆ ಕೃಪಣರಲ್ಲದು ದುಂವ್ಯಯಕ್ಕೆ ಯಾವನಿಗಾದರೂ ಅಧಿಕಾರವಿಲ್ಲವೆನ್ನುವರು ರೂಪಾಯಿಯ ಸಾಮಾನಿಗೆ 'ದರ್ಭಾರಿ'ನಿಂದ ೨ ರೂಪಾಯಿ ಕೊಡುವ ಮೂರ್ಖರೂ ಅಲ್ಲ ಒಮ್ಮೆ ಅವರ ಸ್ನೇಹಿತರೊಬ್ಬರು ಒಂದು ಚುಟ್ಟಾದನ್ನು ಸೇದುತ್ತ ಅರ್ಧ ಚುಟ್ಟಾ ಸುಡುವಷ್ಟರಲ್ಲಿ ಬಿಸಾಡಲು ರೊಕ್‌ಫೆಲ್ಲರರು ಅದನ್ನು ನೋಡಿ, ನಾನು ಧೂಮ್ರಪಾನ ಮಾಡುವವನಾಗಿದ್ದರೆ ಅರ್ಧದಲ್ಲಿ ಸುಟ್ಟು ಬಿಸಾಡುತ್ತಲೇ ಇರಲಿಲ್ಲ, ನನಗೆ ಪೂರೈಸುತ್ತಲೂ ಇರಲಿಲ್ಲ ಎಂದರಂತೆ

ಧೈರ್ಯಶಾಲಿಗಳು ರೊಕ್‌ಫೆಲ್ಲರರು ಆತ್ಮವಿಶ್ವಾಸವುಳ್ಳವರೂ ಅಹುದು ಇಷ್ಟು ಹಣವಿದ್ದು ಇಂತಹ ಸರಳ ಜೀವನ ನಡೆಸಲು ಖಂಡಿತವಾಗಿಯೂ ಧೈರ್ಯಬೇಕು

ಉದ್ರೇಕಗೊಳ್ಳುವವರಲ್ಲ ಇವರು ಅವರ ಹೃದಯದೊಳಗೆ ಎಂತಹ ತುಫಾನೇ ನಡೆದಿರಲಿ, ಮುಖದ ಮೇಲೆ ಅದನ್ನು ತೋರಿಸುವವರಲ್ಲ

ಸ್ನೇಹಾಚಾರದ ಚರ್ಯೆಯನ್ನು ತೋರುವವರಲ್ಲ ಆದರೂ ಯಾರೂ ಶತ್ರುಗಳಿಲ್ಲ ಅವರಿಗೆ ಸ್ನೇಹವನ್ನು ಅಪೇಕ್ಷಿಸುವರಾದರೂ ಸಲುಗೆ ಕೊಡುವುದಿಲ್ಲ

ಹಟವಾದಿಯೆನ್ನಬಹುದು ಅವರನ್ನು ತಾವು ಹಿಡಿದ ಕೆಲಸವನ್ನು ಪೂರೈಸದೆ ಬಿಡುವವರಲ್ಲ ಗೊಲ್ಫ್ ಆಟವಾಡಬೇಕೆಂದು ಮನಸ್ಸಾಯಿತು ಆರಂಭಿಸಿಯೇ ಬಿಟ್ಟರು, ಈಗಲೂ ಆಡುತ್ತಿರುವರ ಅದರಿಂದ ದೇಹಕ್ಕೆ ಒಳ್ಳೆದಿರಲಿ, ಕೆಟ್ಟದಿರಲಿ ಬಿಟ್ಟುಕೊಡುವವರಲ್ಲ

ಕ್ಲಪ್ತತೆಯನ್ನು ಅವರಿಂದಲೇ ಕಲಿಯಬಹುದು ಮತ್ತೊಬ್ಬರ ಸಮಯವನ್ನು ಹಾಳು ಮಾಡುವವರೂ ಅಲ್ಲ "ಒಬ್ಬನಿಗೆ ಮತ್ತೊಬ್ಬನ ಸಮಯವನ್ನು ಹಾಳು ಮಾಡಲು ಅಧಿಕಾರವೇ ಇಲ್ಲ " ಎನ್ನುವರು

ಸಭ್ಯತೆಯಲ್ಲಿ ಹೆಸರಾದವರು ಸಭ್ಯತೆಯು ಇವರಲ್ಲಿ ಮೂರ್ತಿಮಂತವಾಗಿದೆ ಒರಟು ಮಾತುಗಳಾಗಲಿ ಬಯ್ಗಳ ಬಾಯಿಯಾಗಲಿ ಅವರನ್ನು ಧನಿಕನಾಗಿ ಮಾಡುತ್ತಲೂ ಇರಲಿಲ್ಲ, ಮುಖಂಡನಾಗಿ ಮಾಡುತ್ತಲೂ ಇರಲಿಲ್ಲ ಕರ್ಕಶವಾದ ಉತ್ತರಕೊಡುವಂತೆ ಕೆಣಕಲ್ಪಟ್ಟಾಗಲೂ ಸೌಮ್ಯವಾಗಿಯೇ ಉತ್ತರಕೊಟ್ಟು ತಮ್ಮ ವಿವೇಕವನ್ನೂ ಚಾಣಾಕ್ಷನವನ್ನೂ ಪ್ರದರ್ಶಿಸಿರುವರು

ಶೌಚ ವಿಚಾರಗಳಲ್ಲಿಯೂ ರೊಕ್‌ಫೆಲ್ಲರರಿಗೆ ಅಗ್ರಸ್ಥಾನ ಸಲ್ಲುತ್ತದೆ ಶುಚಿಯಾದ ಮಾತು, ಶುಚಿಯಾದ ಆಹಾರ, ಶುಚಿಯಾದ ಉಡುಪು, ಶುಚಿಯಾದ ಸಂಬಂಧ ಎಲ್ಲವೂ ಶುಚಿಯಾಗಿಯೇ ಬೇಕು ಅವರಿಗೆ. ಭಂಡು ಮಾತುಗಳನ್ನೆಂದೂ ಕೇಳರು

ನಿಷ್ಠೆಯು ಅವರಿಗೆ ಬಾಲ್ಯತನದಿಂದಲೂ ಬೆಳೆದು ಬಂದ ಅಭ್ಯಾಸ. ತಮ್ಮ ಕೆಲಸಗಾರರು ನಿಷ್ಠಾವಂತರಾಗಿರಬೇಕೆಂದು ಮಾತ್ರ ಇಚ್ಛಿಸುವವರಲ್ಲ, ತಾವೂ ಕೆಲಸಗಾರರ ವಿಷಯದಲ್ಲಿ ನಿಷ್ಠೆಯಿಂದಲೂ ಕರುಣೆಯಿಂದಲೂ ನಡಕೊಳ್ಳುವರು

ಕರ್ತವ್ಯ ಪರಾಯಣರು ರೊಕ್‌ಫೆಲ್ಲರರು. ಬಡತನದಲ್ಲಿಯೂ ತಮ್ಮೊಡನೆ ಇದ್ದ ಕೆಲವೇ

ಬಂಗಾಳದ ನೀರಾವರಿ ಕೆಲಸಗಳು.

ವ್ಯವಸಾಯ ಶಿಕ್ಷಣದಲ್ಲಿ ಹಿಂದುಳಿದಿರುವಂತೆ ಬಂಗಾಳವು ನೀರಾವರಿ ಕೆಲಸಗಳಲ್ಲೂ ಬಲು ಹಿಂದೆ! ಸರಕಾರವು ಇಲ್ಲಿ ಕಾಲುವೆಗಳನ್ನೂ ಕೆರೆ ಬಾವಿಗಳನ್ನೂ ಹೆಚ್ಚಾಗಿ ರಚಿಸಿದ್ದಿಲ್ಲವೆಂದು ಬಂಗಾಳಿಗಳ ದೂರು ವ್ಯವಸಾಯವು, ತುಲನಾತ್ಮಕವಾಗಿ ನೋಡಿದರೆ, ಇತರ ಪ್ರಾಂತಗಳಿಗಿಂತ ಬಂಗಾಳದಲ್ಲೇ ಹೆಚ್ಚು ಆದರೆ, ರೈತರಿಗೆ ಸೌಕರ್ಯಗಳು ಕಡಿಮೆ ಹಿಂದೂಸ್ಥಾನದ ಎಲ್ಲ ಪ್ರಾಂತ್ಯಗಳೂ, ನೀರಾವರಿ ಸೌಕರ್ಯಗಳಿಲ್ಲದೆ ಸುಗಮವಾಗಿ ವ್ಯವಸಾಯ ಕಾರ್ಯವನ್ನು ಸಾಗಿಸಲಾರವು, ಬಂಗಾಳವೂ ಹಾಗೆಯೆ ಬಂಗಾಳ ಉತ್ತರ ಪ್ರಾಂತದಲ್ಲಂತೂ ನೀರಾವರಿ ಕೆಲಸಗಳು ಹೆಚ್ಚಾಗಿ ಅವಶ್ಯವಿವೆ ಶ್ರೀ ಜಿ ಎಸ್ ದತ್ತರೆಂಬವರು ಬಂಗಾಳ ಪ್ರಾಂತ್ಯದ ಬಾಕುರ ಜಿಲ್ಲೆಯಲ್ಲಿ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರಾಗಿದ್ದಾಗ, ಹಿಂದೂ ಅರಸರ ಆಳ್ವಿಕೆಯಲ್ಲಿ ಅಲ್ಲಿ ಕಾಲುವೆಯೊಂದಲ್ಲದೆ ೩೦ರಿಂದ ೪೦ ಸಾವಿರದ ವರೆಗೆ ಕೆರೆಗಳಿದ್ದುವಂತೆ ಇವುಗಳಲ್ಲೀಗ ಹೆಚ್ಚಿನವು ಯೋಗ್ಯ ವ್ಯವಸ್ಥೆಯಿಲ್ಲದೆ ಬತ್ತಿ ಹೋಗಿವೆ ಕೆಲವಂತೂ ಮಣ್ಣು ಮುಚ್ಚಿ ಹೋಗಿವೆ ಹಿಂದೂಸ್ಥಾನದ ಬೇರೆ ಬೇರೆ ಪ್ರಾಂತಗಳಲ್ಲಿರುವ ನೀರಾವರಿ ಕೆಲಸಗಳೆಷ್ಟೆಂದೂ, ಅವುಗಳ ಮೇಲೆ ವಿನಿಯೋಗಿಸಲಾದ ಹಣವೆಷ್ಟೆಂದೂ, ಈ ಕೆಳಗಿನ ಪಟ್ಟಿಯಿಂದ ತಿಳಿದುಬರುವುದು —

ಪ್ರಾಂತ್ಯ	ಮೈಲು	ಹಣ
ಮದರಾಸ	೩೭೪೯	೧೨,೬೫,೫೩,೯೪೨
ಬೊಂಬಾಯಿ	೪೯೮೬	೧೯,೪೪,೭೫,೭೬೬
ಬಂಗಾಳ	೦	೬೭,೪೩,೫೪೧
ಸಂಯುಕ್ತಪ್ರಾಂತ್ಯ	೩೩೭೨	೨೨,೦೦,೨೫,೬೩೬
ಪಂಜಾಬ	೩೨೬೬	೩೨,೭೮,೦೨,೦೫೧
ಬರ್ಮಾ	೩೫೪	೨,೧೨,೨೧,೨೮೧
ಗಡಿಪ್ರಾಂತ್ಯ	೮೬	೭೪,೦೭,೪೦೦

ಬಂಗಾಳದಲ್ಲಿ ನೀರಾವರಿ ಕೆಲಸಗಳ ಸಂಖ್ಯೆಯು "೦" ಎಂದು ಕೊಡಲ್ಪಟ್ಟಿದೆಯಾದರೂ ರೂ ೬೭,೪೩,೫೪೧ ಮೊಬಲಗನ್ನೂ ಅದಕ್ಕೆದುರಾಗಿ ಪ್ರಕಟಿಸಿರುವರು ಈ ವೆಚ್ಚಗಳೇ ತಕ್ಕ. ಅವುಗಳಿಂದ ಪ್ರತಿಫಲವಾಗಿ ಏನು ಬರುತ್ತಿದೆಯೆಂಬುದು ತಿಳಿದಿಲ್ಲ ಈ ಮೇಲಿನ ಸಂಖ್ಯೆಗಳು, ಪ್ರತಿಫಲ ಬರುವ ವಿನಿಯೋಗದ ಕುರಿತಾದುವು ಪ್ರತಿಫಲವಿಲ್ಲದ ವೆಚ್ಚಗಳು ಎಲ್ಲೆಲ್ಲಿ ಎಷ್ಟೆಷ್ಟೋ ನೋಡಿ —

ಪ್ರಾಂತ್ಯ	ಮೈಲು	ಧನವಿನಿಯೋಗ
ಮದರಾಸು	೭೧೬	೪,೦೩,೯೪,೫೨೮
ಬೊಂಬಾಯಿ	೨೮೩೨	೧೨,೮೨,೪೭,೦೦೪
ಬಂಗಾಳ	೭೦	೮೪,೯೨ ೦೫೩
ಸಂಯುಕ್ತಪ್ರಾಂತ್ಯ	೪೪೭	೩,೧೧,೮೬,೮೧೨
ಪಂಜಾಬ	೧೦೪೭	೯೯ ೬೭,೯೫೮
ಬರ್ಮಾ	೧೪೦	೧,೭೦,೩೦,೫೮೯
ಬಿಹಾರ್ ಒರಿಸ್ಸ	೭೧೮	೬,೨೭,೬೩,೯೧೫
ಮಧ್ಯಪ್ರಾಂತ್ಯ	೩೫೨	,೬೪,೧೭,೬೭೮
ಗಡಿಪ್ರಾಂತ್ಯ	೧೩೮	೨,೨೦,೧೪,೬೪೭

ಈ ಎರಡನೆ ಸಂಖ್ಯೆಗಳು ಪ್ರತಿಫಲ ಬಾರದವುಗಳಾಗಿದ್ದರೆ ಈ ಕೆಲಸಗಳ—ಮೇಲೆ ೩೮ ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ಹಣವು ಅನಾವಶ್ಯಕವೇ ಆಯಿತಲ್ಲ!

ಭೂಕಂಪದಿಂದಾದ ವೈಚಿತ್ರ್ಯಗಳು.

ಬಿಹಾರಿನಲ್ಲಾದ ಭೂಕಂಪವು ಸಾವಿರಾರು ಜನರನ್ನು ಕೊಂದು ಲಕ್ಷಾಂತರ ಜನರನ್ನು ದಾರಿದ್ರ್ಯ ದುಃಖಕ್ಕೀಡುಮಾಡಿತು ಅಂತೆಯೆ ಕೆಲವು ಕ್ಷೇಮಕರ ವೈಚಿತ್ರ್ಯಗಳನ್ನೂ ತಂದೊಡ್ಡಿದೆ

ಬಿಹಾರ್ ಪ್ರಾಂತದ ಸೆಲೊಂಗ ಎಂಬಲ್ಲಿಂದ ತರಾಷ್ ಎಂಬಲ್ಲಿಗೊಬ್ಬ ಮಹಮ್ಮದಿಯನು ಪ್ರಯಾಣ ಮಾಡುತ್ತಿದ್ದನು ನಡುದಾರಿಯಲ್ಲಿ ಆತನಿಗೆ ಫಕ್ಕನೆ ಹೊಟ್ಟೆನೋವು ಕಾಣಿಸಿಕೊಂಡಿತು ನಿಮಿಷ ನಿಮಿಷಕ್ಕೂ ವೇದನೆಯು ಅಸಹನೀಯವಾಯಿತು ಅಲ್ಲೇ ಒಂದು ಮರದ ಕೆಳಗೆ ಬಿದ್ದುಕೊಂಡನು ಸುತ್ತುಮುತ್ತಲೂ ನಿರ್ಜನ ಪ್ರದೇಶ

ನರಳಿದನು; ಹೊರಳಿದನು ವೇದನೆಯು ನಿಲ್ಲಲಿಲ್ಲ ಮಲಗಿದಲ್ಲಿಂದಲೆ ಮೇಲಕ್ಕೆ ನೋಡುವಾಗ, ಮರದಿಂದೊಂದು ಬಗೆಯ ರಸವು ಹನಿಯುತ್ತಿದೆ ವೇದನೆಯನ್ನು ಸಹಿಸಲಾರದಂತಹ ಸ್ಥಿತಿಯಲ್ಲಿ, ಆಸೆ ಕಂಡು, ಆ ರಸವನ್ನು ಕೈಯಲ್ಲಿ ಹಿಡಿದು ಆತುರದಿಂದ ಪಾನಮಾಡಿಬಿಟ್ಟನು ಆಶ್ಚರ್ಯ ಕೆಲವೇ ನಿಮಿಷಗಳಲ್ಲಿ ವೇದನೆಯು ಸಂಪೂರ್ಣ ನಿಂತಿತು ಆನಂದಾಶ್ಚರ್ಯಗಳಿಂದ ಆ ಮಹಮ್ಮದೀಯನು ತನ್ನ ಊರನ್ನು ಸೇರಿ, ಈ ಅದ್ಭುತರಸದ ಮಹಿಮೆಯನ್ನು ಪ್ರಕಟಿಸಿದನು ದೀರ್ಘಕಾಲದ ನಾನಾ ಬಗೆಯ ಬೇನೆಗಳಿಂದ ನರಳುವವರೆಲ್ಲರೂ ಈಗ ಆ ಮರವನ್ನು ನಂಬಿ ಅತ್ತ ಓಡುವುದಾಯಿತು ಭೂಕಂಪ ಕಷ್ಟದಲ್ಲಿ ದೇವರು ಕೊಟ್ಟ ವರದಾನಸುಖವಿದೆಂದು ಜನರು ಆಡಿಕೊಳ್ಳುವರು

ಕಲ್ಕತ್ತೆಯ 'ಅಮೃತ ಬಜಾರ' ಪತ್ರಿಕೆಯ ಬಾತ್ಮಿದಾರನು ಇದನ್ನು ಕಣ್ಣಾರೆ ಕಂಡು ಆಶ್ಚರ್ಯಗೊಂಡು ಆ ಸುದ್ದಿಯನ್ನು ತನ್ನ ಪತ್ರಿಕೆಗೆ ಬರೆದಿರುತ್ತಾನೆ ಈ ಮರಕ್ಕೆ ಅಲ್ಲಿ 'ಲೈಕುರ' ಎಂದು ಕರೆಯುತ್ತಿದ್ದಾರೆ ತರಾಷ್ ಬಳಿ, ಜುರ್‌ಜುರಿ ಎಂಬ ಹಳ್ಳಿಯ ರಸ್ತೆಯಲ್ಲಿ ಈ ಮರವಿದೆ ಮುರಿದ ಗೆಲ್ಲುಗಳಿಂದ ಈ ಅದ್ಭುತರಸವು, ಬೆಳಗ್ಗೆ ಘಂಟೆ ೭ರಿಂದ ಮಧ್ಯಾಹ್ನದ ತನಕ ತೊಟ್ಟಿಕ್ಕುತ್ತಾ ಇದೆ

(೧೦ನೇ ಪುಟಕ್ಕೆ ಮುಂದುವರಿಸಲ್ಪಟ್ಟಿದೆ.)

(೩ನೇ ಕಾಲಮಿನಿಂದ ಮುಂದುವರಿದುದು)

ಸಾಮ್ಯಗಳನ್ನು 'ಕರ್ತವ್ಯ'ದ ಹೆಸರಲ್ಲಿ ದೇವಾಲಯದ ಭಂಡಾರಕ್ಕೆ ಕೊಟ್ಟವರು

'ಖಾತರಿ' ಪಡಿಸುವಲ್ಲಿ ಅವರಿಗೆ ಸಮಾನರಾದವರು ಮತ್ತೊಬ್ಬರು ಇಲ್ಲ ಸುಳ್ಳನ್ನಾಡದೆ ವ್ಯಾಪಾರ ಮಾಡಬಯಸುವವರು ಗಿರಾಕಿಗಳಿಗೆ, ಸುಳ್ಳನ್ನಾಡದೆಯೇ 'ಖಾತರಿ' ಮಾಡಿ ಕೊಡುವಂತಹ ಮಾತುಗಾರಿಕೆಯ ಜಾಣ್ಮೆಯುಳ್ಳವರು.

ಧರ್ಮಿಷ್ಠರು ಎನ್ನಬೇಕಾದುದೇ ಇಲ್ಲ. ಕಾರಣ, ಅವರು ಕೊಟ್ಟ ದಾನಧರ್ಮಗಳ ಮೊಬಲಗು ದೊಡ್ಡ ಊರುಗಳನ್ನೆ ಕ್ರಯಕ್ಕೆ ಪಡಕೊಳ್ಳುವಷ್ಟು! ೧೯೧೫ನೇ ಇಸವಿಯಿಂದ ಇವರು ಕೊಟ್ಟ ದಾನಧರ್ಮಗಳನ್ನು ಎಣಿಕೆ ಮಾಡಿದರೆ, ವರ್ಷಕ್ಕೆ ಸರಾಸರಿ ೫೦ ಲಕ್ಷಡೊಲ್ಲರು ಎಂದು ಲೆಕ್ಕ ಹಿಡಿಯಬಹುದಂತೆ ಬಹಿರಂಗ ದಾನಗಳಲ್ಲದೆ, ಖಾಸಗಿಯಾಗಿ, ರಹಸ್ಯವಾಗಿ ವರ್ಷಂಪ್ರತಿ ೧ ಲಕ್ಷ ಡೊಲ್ಲರುಗಳಷ್ಟು ದಾನ ಮಾಡುತ್ತಿದ್ದಾರೆ

ಅವರ ಮನೆಯಲ್ಲಿ ಯಾವಾಗಲೂ ಆಡಂಬರಾಧಿಕ್ಯವನ್ನು ಸಾರುವ ಎಂತಹ ವಸ್ತುಗಳೂ ಇಲ್ಲ ಎಂತಹ ಘಟನೆಯೂ ನಡೆಯುವುದಿಲ್ಲ ವಿಲಾಸಿಗಳಿಗೆ ಅವರ ಮನೆಗೆ ಪ್ರವೇಶವಿಲ್ಲ.

ರೊಕ್‌ಫೆಲ್ಲರರು ಧೂಮ್ರಪಾನ ಮಾಡುವುದಿಲ್ಲ ಮದ್ಯಪಾನ ಮಾಡುವುದಿಲ್ಲ.

ಇವರ ಜೀವನದಿಂದ ನಮ್ಮವರು ಕಲಿಯಬಹುದಾದುದೆಷ್ಟೋ ಇದೆ.

[illegible]

(ಗತ [illegible] — ಸುಗ್ಗಿ)

ತಾರೀಖು	ವಾರ	[illegible]	[illegible]	ನಕ್ಷತ್ರ	[illegible]	[illegible]	ಸೂರ್ಯ ಉ.	ಅಸ್ತ
31	ಶನಿ	○	[illegible]	ಹಸ್ತಾ	[illegible]	[illegible]	6 3	6,41
1	ಭಾನು	[illegible]	[illegible]	ಚಿತ್ತಾ	[illegible]	[illegible]	6 29	6 41
2	ಸೋಮ	[illegible]	[illegible]	ಸ್ವಾತಿ	[illegible]	[illegible]	6 29	6 41
3	ಮಂಗಳ	[illegible]	[illegible]	ವಿಶಾಖಾ	[illegible]	[illegible]	6 28	6 41
4	ಬುಧ	[illegible]	[illegible]	ಅನುರಾಧಾ	[illegible]	[illegible]	6 7	6 41
5	ಗುರು	[illegible]	[illegible]	ಜ್ಯೇಷ್ಠಾ	[illegible]	[illegible]	6 27	6 41
6	ಶುಕ್ರ	[illegible]	[illegible]	ಮೂಲಾ	[illegible]	[illegible]	6 26	6 42

ಮಂಗಳೂರಿನ ವಾಯುಸ್ಥಿತಿ.

Date ತಾರೀಖು	Temperature ಉಷ್ಣ (ಕಾವು) Maximum ಹೆಚ್ಚಾದದ್ದು		Minimum ಕಡಿಮೆ		Rainfall ಮಳೆ ದಿನದ ಮಳೆ	ಒಟ್ಟು ಮಳೆ.
22	89—	2	74 -	4	—	—
23	87—	9	72—	5	—	—
24	88—	6	75—	4	—	—
25	87—	5	78—	9	—	—
26	88—	2	74—	6	—	—
27	87—	7	76—	2	—	—
28	89—	0	75—	5	—	167-64

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ.	ಆ.	ವರೆಗೆ ರೂ.	ಆ.
ರಾಶಿ ಅಕ್ಕಿ	3—	4	—	12
ಮುಷ್ಟಿ	4—	[illegible]	4 —	10
ಗುಡ್ಡ	3—	10	4 —	2
ಸುಗ್ಗಿ	3—	2	4 —	8
ಊರ ಅವ್ವಲ್ ಬೆಳ್ತಿಗೆ	4—	4	4	12
ರಂಗೂನು ಬೆಳ್ತಿಗೆ ಗೋಣಿ ೧ಕ್ಕೆ	4—	4	5 —	8
ಎಲ್ಲೂರು ಬೆಳ್ತಿಗೆ ಮುಡಿ ೧ಕ್ಕೆ	9—	4	3—	6
ಗೋಧಿ ಗೋಣಿ ೧ಕ್ಕೆ	1 —	0	12—	8
ತೊಗರಿ ಗೋಣಿ ೧ಕ್ಕೆ	8—	12	10 —	8
ಹುರುಳಿ ಗೋಣಿ ೧ಕ್ಕೆ	5—	4	5—	8
ಕಡಲೆ ಗೋಣಿ ೧ಕ್ಕೆ	8—	12	12—	8
ತೊಗರಿಬೇಳೆ ಗೋಣಿ ೧ಕ್ಕೆ	10—	0	6—	0
ಉದ್ದು ಗೋಣಿ ೧ಕ್ಕೆ	7	0	—	10
ಹೆಸರು ಗೋಣಿ ೧ಕ್ಕೆ	8—	0	9—	0
ಊರುಬೆಲ್ಲ ಖಂಡಿ ೧ಕ್ಕೆ	32—	0	37—	8
ಉಪ್ಪು ಗೋಣಿ ೧ಕ್ಕೆ	5—	0	5—	8
ಕೊಬ್ರಿ ಖಂಡಿ ೧ಕ್ಕೆ	35—	0	38—	0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	17—	8	18—	8
ಎಳ್ಳಿಂಡಿ ಖಂಡಿ ೧ಕ್ಕೆ	23—	12	25—	0
ಕೊಬ್ರಿ ಎಣ್ಣೆ ಮಣ ೧ಕ್ಕೆ	2—	11	4—	0
ಎಳ್ಳೆಣ್ಣೆ ಮಣ ೧ಕ್ಕೆ	5—	0	6—	0
ಚಿಮಣಿಎಣ್ಣೆ ಪೆಟ್ಟಿಗೆ ೧ಕ್ಕೆ	6—	8	8—	
ಮೋರಿಸ ಸಕ್ಕರೆ ಮಣ ೧ಕ್ಕೆ	3—	11	3—	12
ಹೊಸ ಮೆಣಸು	5—	8	7—	0
ಸಾಸಿವೆ ಮುಡಿ ೧ಕ್ಕೆ	4—	4	4—	12
ಕಾಳುಮೆಣಸು ಖಂಡಿ ೧ಕ್ಕೆ	130—	0	135	0
ಮೇಲಕ್ಕಿ ಮಣ ೧ಕ್ಕೆ	20—	0	24—	0
ಹೊಸ ನೀರುಳ್ಳಿ ಮುಡಿ ೧ಕ್ಕೆ	3—	10	3—	15
[illegible] ಖಂಡಿ ೧ಕ್ಕೆ	42—	0	44—	0
ತಾಂಬ್ರ ತಗಡು ಮಣ ೧ಕ್ಕೆ	10—	0	10—	2
ತಾಂಬ್ರ ಪಾತ್ರೆಗಳು ಮಣ ೧ಕ್ಕೆ	13—	0	14—	8
[illegible] ಸೇರು ೧ಕ್ಕೆ	14—	12	15—	0
ಹಿತ್ತಾಳೆ ತಗಡು ಮಣ ೧ಕ್ಕೆ	9—	0	9—	8
ಪವನ ೧ಕ್ಕೆ	21 —	4	21—	6
ಹುಣಸೆ ಹುಳಿ ಖಂಡಿ ೧ಕ್ಕೆ	30—	0	35—	0
ನೇಟಿವ್ ಕಾಫಿ ಖಂಡಿ ೧ಕ್ಕೆ	180—	0	205—	0
ಪ್ಲಾಂಟೇಶನ್ ಕಾಫಿ ಖಂಡಿ ೧ಕ್ಕೆ	260—	0	265—	0
ಹಳೆ ಅಡಿಕೆ	110—	0	125—	0
ಹೊಸ ಅಡಿಕೆ	75—	0	100—	0

THE CANARA PUBLIC CONVEYANCE CO., LTD, MANGALORE

(ESTABLISHED 1914)

ಕನರಾ ಪಬ್ಲಿಕ್ ಕನ್ವೆಯನ್ಸ್ ಕಂಪನಿ, ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯ ಕ್ಷೇತ್ರಗಳಿಗೆ ಹೋಗುವವು ಮೈಸೂರು, ಕೊಡಗು ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನ್ ಕೂಡಾ ಇರುವುದು

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ ನಾಲ್ಕು ಸಾರಿ ಕಂಬಳ ಮಾರ್ಗವಾಗಿಯೂ, 4 ಸಾರಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲಪಿರಿ ಒಂದೇ ಶಿಲೆಯಲ್ಲಿನಿಂದ ರಚಿತವಾಗಿ, 37, ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನಿಲಿಸಿರುವ, ಕಾರ್ಕಳ ಗೋಮಟೇಶ್ವರನ ಪ್ರತಿಮೆಯನ್ನು ನೋಡಲು ಬಹಳ ಸುಲಭ ಮಂಗಳೂರಿನಿಂದ ಬಸ್ಸುಗಳು 4 ಸಲ ಹೊರಟು ಎರಡೂವರೆ ತಾಸುಗಳ ಸಮಯದಲಿ ಕಾರ್ಕಳಕ್ಕೆ ತಲಪುವವು

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ತಲ್ಪಬಹುದು

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಬೆಳಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲುಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನ ಸಂದರ್ಶಿಸಲು ಬಹಳ ಸುಲಭವಿದೆ ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಪ್ರಾಚೀನ ಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ದೇಲಂಪಾಡಿನ ಸೋಮನಾಥ ದೇವಾಲಯವನ್ನು ನೋಡಲು, ನೋಡಲಿಚ್ಛಿಸುವವರು ಬೆಳಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ, ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದೂಸ್ಥಾನ, ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣ ಮಾಡಿ ನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ, ಮಂಗಳೂರಿನಿಂದ ಮಡಿಕೇರಿಗೆ 7 ಘಂಟೆಗಳೊಳಗೂ, ಕಡೂರಿಗೆ 12 ಘಂಟೆಗಳೊಳಗೂ ಮೈಸೂರಿಗೆ 12 ಗಂಟೆಗಳೊಳಗೂ ಸಕಲೇಶಪುರಕ್ಕೆ 8 ಗಂಟೆಗಳೊಳಗೂ ಹಾಸನಕ್ಕೆ 10 ಗಂಟೆಗಳೊಳಗೂ, ಚಿಕ್ಕಮಗಳೂರಿಗೆ 8 ಗಂಟೆಗಳೊಳಗೂ ಕೊಲ್ಲೂರಿಗೆ ಮತ್ತು ಗೋಕರ್ಣಕ್ಕೆ ೧॥ ದಿನದೊಳಗೂ ಶಿಮೊಗ್ಗಕ್ಕೆ 12 ಗಂಟೆ ಕಲಪಬಹುದು ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು

Secretary

The Canara Public Conveyance Company Ltd Mangalore

Chikmagalur Public Conveyance Motor Service

CHIKMAGALUR

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,

ಚಿಕ್ಕಮಗಳೂರು

ಮುಂಬಾಯಿಯಿಂದ ಮಂಗಳೂರಿಗೆ

ಮಂಗಳೂರಿನಿಂದ - ಮುಂಬಾಯಿಗೆ

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ

ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ

ಮಂಗಳೂರು—ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು - ಅನುಕೂಲ ಪ್ರಯಾಣ ಸೌಕರ್ಯಗಳು

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ

ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ

ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ

ಚಿಕ್ಕಮಗಳೂರಿನಿಂದ— ಶಿವಮೊಗ್ಗಕ್ಕೆ, ಬೀರೂರಿಗೆ, ಕಡೂರಿಗೆ. ಮೂಡಗೆರೆಗೆ, ಸಕಲೇಶಪುರಕ್ಕೆ.
—ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
—ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ನಿರಾಯಾಸದ ಪ್ರಯಾಣ! ಉತ್ಸಾಹಕರ ಸೌಕರ್ಯ!

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

ಕೋಟ್ಯಾಧೀಶ್ವರ ರೊಕ್‌ಫೆಲ್ಲರ್

(ಕಳೆದ ಸಂಚಿಕೆಯಿಂದ ಮುಂದುವರಿಸಿದುದು)

ಲೇಖಾಂಕ ೨. ಅವರ ಜೀವನಕ್ರಮವೇನು?

ರೊಕ್‌ಫೆಲ್ಲರರು ಎಂತಹ ಮನುಷ್ಯರು? ಕಾಣಲು ಹೇಗಿದ್ದಾರೆ? ಅವರ ವ್ಯಕ್ತಿತ್ವವೇನು? ಅವರು ನೋಡಲು ಹೇಗಿರುವರೆಂಬುದಕ್ಕಿಂತ ಅವರ ನಿತ್ಯಜೀವನವೇನು, ಗುಣನಡತೆಗಳೇನು ಎಂಬುದನ್ನು ತಿಳಕೊಳ್ಳುವುದರಿಂದಲೇ ಹೆಚ್ಚು ಪ್ರಯೋಜನವಾಗುವುದು

ಅವರು ಹೇಗಿರುವರೆಂಬುದನ್ನು ನಗರದೊಳಗಿನವರು ಚಲಚ್ಚಿತ್ರಗಳಲ್ಲಿ ನೋಡಿರಬಹುದು ಉದ್ದನ್ನ ಆಳು, ೯೫ ವರ್ಷ ಪ್ರಾಯವಾದರೂ 'ಹಣ್ಣು ಮುದುಕ'ರಲ್ಲವೆಂಬಂತೆ ದೇಹಸೌಷ್ಠವವರದು ಆ ಕಣ್ಣುಗಳಲ್ಲಿ ಇನ್ನೂ 'ಜ್ಯೋತಿ'ಯಿದೆ, ಚಟುವಟಿಕೆ ತೋರುತ್ತಿದೆ **ಇಷ್ಟು ಮುದುಕರಿವರು ಈಗಲೂ ಬದುಕಿಕೊಂಡು, ಗೊಲ್ಫ್ ಆಟವಾಡುತ್ತಿರುವರೆಂದೂ ಉತ್ಸಾಹದಿಂದ ಮಾತುಕತೆಗಳನ್ನಾಡುತ್ತಿರುವರೆಂದೂ, ಸಂಭಾಷಣೆಯಲ್ಲಿ ವಿನೋದವನ್ನು ಬೆರಸಬೇಕಾದಲ್ಲಿ ಲೋಪವಮಾಡುವುದಿಲ್ಲವೆಂದೂ ತಿಳಿದು ಯಾರಿಗೆ ತಾನೆ ಆಶ್ಚರ್ಯವಾಗದು?** ಓರ್ವ ಪತ್ರಿಕಾ ಸಂಪಾದಕರು ಇತ್ತೀಚೆಗೆ ರೊಕ್‌ಫೆಲ್ಲರರ ವಿಚಾರವಾಗಿ ಬರೆದುದರಲ್ಲಿ ಹೀಗಿದೆ — "ರೊಕ್‌ಫೆಲ್ಲರರು ಬಹಳ 'ಎಳೆ ವಯಸ್ಸಿನಿಂದಲೇ ವೃದ್ಧರಾಗಲು ತೊಡಗಿರು'ವರೆಂದು ತೋರುತ್ತಿದೆ ಎಳೆಪ್ರಾಯದಲ್ಲಿ ಅವರ ಕಣ್ಣುಗಳಲ್ಲಿದ್ದ ದೃಷ್ಟಿಯೇ ಈಗಲೂ ಇದೆ ಇತಿಹಾಸ ಪೂರ್ವದ ಮಾನವರಂತೆ ತೋರುವರು "

ರೊಕ್‌ಫೆಲ್ಲರರ ದಿನನಿತ್ಯದ ಕಾರ್ಯಕ್ರಮವು ಈಗ, ೯೫ನೇ ವಯಸ್ಸಿನಲ್ಲಿಯೂ, ಹೀಗಿದೆ —

ಬೆಳಗ್ಗೆ ೬ ಘಂಟೆಗೆ ಏಳುವರು ೭ರಿಂದ ೮ರ ವರೆಗೆ ಪತ್ರಿಕಾ ವಾಚನ ೮ಕ್ಕೆ ಬೆಳಗ್ಗಿನ ಊಟ ೮ ೩೫ರಿಂದ ೮೫೫ರ ವರೆಗೆ ನೂಮರಿಕಾ ಎಂಬ ಆಟವಾಡುವರು ಅಥವಾ ಸ್ನೇಹಿತರೊಡನೆ ಸಂಭಾಷಣೆ ೯ ೪೫ರಿಂದ ೧೦ರ ವರೆಗೆ ಕಾರ್ಯದ ವಿಚಾರ ೧೦ ೧೫ರಿಂದ ೧೨ರ ವರೆಗೆ ಗೊಲ್ಫ್ ಆಟ ಮಧ್ಯಾಹ್ನ ೧೨ರಿಂದ ೧.೧೫ರ ವರೆಗೆ ಸ್ನಾನ ಮತ್ತು ವಿಶ್ರಾಂತಿ ಅಪರಾಹ್ನ ೧ ೧೫ರಿಂದ ೩ರ ವರೆಗೆ ಊಟವಾಗಿ ನ್ಯೂಮರಿಕಾ ಆಟ ೩ರಿಂದ ೫ರ ವರೆಗೆ ಮೋಟರ್ ಸವಾರಿ ಸಾಯಂಕಾಲ ೫ರಿಂದ ೭ರ ವರೆಗೆ ವಿಶ್ರಾಂತಿ ಅಥವಾ ಬೇರೆಯವರಿಂದ ಓದಿಸಿ ಕೇಳುವರು, ಅಥವಾ ಸಂಭಾಷಣೆ ೭ಕ್ಕೆ ರಾತ್ರಿಯ ಊಟ ರಾತ್ರೆ ೮ರಿಂದ ೧೦ರ ವರೆಗೆ ನ್ಯೂಮಾರಿಕಾ ಆಟ, ಮಿತ್ರರನ್ನು ಕಾಣಲು ಹೋಗುವುದು, ಅಥವಾ ಮನೆಯಲ್ಲೆ ಸಂಗೀತವನ್ನಾನಂದಿಸುವುದು, ಒಮ್ಮೊಮ್ಮೆ ಚಲಚ್ಚಿತ್ರ ಸಂದರ್ಶನ ರಾತ್ರೆ ೧೦ಕ್ಕೆ ನಿದ್ರೆಮಾಡಲು ಹೋಗುವರು.

ರೊಕ್‌ಫೆಲ್ಲರರ ಜೀವನ ಚರಿತ್ರವನ್ನು ಬರೆದವರೆಷ್ಟೋ ಮಂದಿ ಇರುವರು ಫೊಟೊಗ್ರಾಫರರು, ವ್ಯಂಗಚಿತ್ರ ಲೇಖಕರು, ಅವರಿಚಿತರು, ಸ್ನೇಹಿತರು, ಶತ್ರುಗಳು ಎಲ್ಲರೂ ಅವರ ಗುಣನಡತೆಗಳನ್ನು ವರ್ಣಿಸಿದ್ದಾರೆ, ಚಿತ್ರಿಸಿದ್ದಾರೆ, ಬರೆದಿದ್ದಾರೆ

ಜೀವನ—ರೊಕ್‌ಫೆಲ್ಲರರು ನಿರಾಡಂಬರವಾದ ಜೀವನವನ್ನೆ ನಡೆಸುತ್ತಿರುವರು ಸಂಯುಕ್ತ ಅಮೇರಿಕದಲ್ಲೆಲ್ಲ ಅಲ್ಲಲ್ಲಿ ಇವರಿಗೆ ಎಷ್ಟೋ ಮನೆಗಳಿದ್ದರೂ, ಪ್ರಪಂಚದಲ್ಲಿ ತನಗೆ ಬೇಕಾದುದಾವುದನ್ನು ಹೊಂದುವಷ್ಟು ಸೌಭಾಗ್ಯ ರಾಶಿಯಿದ್ದರೂ ಇವರು ಅನುಚಿತವಾದ ಭೋಗಕ್ಕೆಳಸದೆ ಸರಳ ಜೀವನವನ್ನೆ ನಡೆಸುತ್ತಿರುವರು

ಹಣಕಾಸುಗಳ ಮಟ್ಟಿಗೆ ಇವರು ಮಿತವ್ಯಯವನ್ನೆ ಮಾಡುವರು, ಆದರೆ ಕೃಪಣರಲ್ಲ ದುಂದುವ್ಯಯಕ್ಕೆ ಯಾವನಿಗಾದರೂ ಅಧಿಕಾರವಿಲ್ಲವೆನ್ನುವರು ರೂಪಾಯಿಯ ಸಾಮಾನಿಗೆ 'ದರ್ಬಾರಿ'ನಿಂದ ೨ ರೂಪಾಯಿ ಕೊಡುವ ಮೂರ್ಖರೂ ಅಲ್ಲ ಒಮ್ಮೆ ಅವರ ಸ್ನೇಹಿತರೊಬ್ಬರು ಒಂದು ಚುಟ್ಟಾವನ್ನು ಸೇದುತ್ತ ಅರ್ಧ ಚುಟ್ಟಾ ಸುಡುವಷ್ಟರಲ್ಲಿ ಬಿಸಾಡಲು ರೊಕ್‌ಫೆಲ್ಲರರು ಅದನ್ನು ನೋಡಿ, 'ನಾನು ಧೂಮ್ರಪಾನ ಮಾಡುವವನಾಗಿದ್ದರೆ ಅರ್ಧದಲ್ಲಿ ಸುಟ್ಟು ಬಿಸಾಡುತ್ತಲೇ ಇರಲಿಲ್ಲ, ನನಗೆ ಪೂರೈಸುತ್ತಲೂ ಇರಲಿಲ್ಲ ಎಂದರಂತೆ

ಧೈರ್ಯಶಾಲಿಗಳು ರೊಕ್‌ಫೆಲ್ಲರರು, ಆತ್ಮವಿಶ್ವಾಸವುಳ್ಳವರೂ ಅಹುದು ಇಷ್ಟು ಹಣವಿದ್ದು ಇಂತಹ ಸರಳ ಜೀವನ ನಡೆಸಲು ಖಂಡಿತವಾಗಿಯೂ ಧೈರ್ಯಬೇಕು

ಉದ್ರೇಕಗೊಳ್ಳುವವರಲ್ಲ. ಇವರು ಅವರ ಹೃದಯದೊಳಗೆ ಎಂತಹ ತುಫಾನೇ ನಡೆದಿರಲಿ, ಮುಖದ ಮೇಲೆ ಅದನ್ನು ತೋರಿಸುವವರಲ್ಲ

ಸ್ನೇಹಾಚಾರದ ಚರ್ಯೆಯನ್ನು ತೋರುವವರಲ್ಲ ಆದರೂ ಯಾರೂ ಶತ್ರುಗಳಿಲ್ಲ ಅವರಿಗೆ ಸ್ನೇಹವನ್ನು ಅಪೇಕ್ಷಿಸುವರಾದರೂ ಸಲುಗೆ ಕೊಡುವುದಿಲ್ಲ

ಹಟವಾದಿಯೆನ್ನಬಹುದು ಅವರನ್ನು ತಾವು ಹಿಡಿದ ಕೆಲಸವನ್ನು ಪೂರೈಸದೆ ಬಿಡುವವರಲ್ಲ ಗೊಲ್ಫ್ ಆಟವಾಡಬೇಕೆಂದು ಮನಸ್ಸಾಯಿತು, ಆರಂಭಿಸಿಯೇ ಬಿಟ್ಟರು, ಈಗಲೂ ಆಡುತ್ತಿರುವರು ಅದರಿಂದ ದೇಹಕ್ಕೆ ಒಳ್ಳೆದಿರಲಿ, ಕೆಟ್ಟದಿರಲಿ, ಬಿಟ್ಟುಕೊಡುವವರಲ್ಲ

ಕ್ಲಪ್ತತೆಯನ್ನು ಅವರಿಂದಲೇ ಕಲಿಯಬಹುದು ಮತ್ತೊಬ್ಬರ ಸಮಯವನ್ನು ಹಾಳುಮಾಡುವವರೂ ಅಲ್ಲ. "ಒಬ್ಬನಿಗೆ ಮತ್ತೊಬ್ಬನ ಸಮಯವನ್ನು ಹಾಳು ಮಾಡಲು ಅಧಿಕಾರವೇ ಇಲ್ಲ'" ಎನ್ನುವರು

ಸಭ್ಯತೆಯಲ್ಲಿ ಹೆಸರಾದವರು ಸಭ್ಯತೆಯು ಇವರಲ್ಲಿ ಮೂರ್ತಿಮಂತವಾಗಿದೆ ಒರಟು ಮಾತುಗಳಾಗಲಿ ಬಯ್ಗಳ ಬಾಯಿಯಾಗಲಿ ಅವರನ್ನು ಧನಿಕನಾಗಿ ಮಾಡುತ್ತಲೂ ~~ಇರಲಿಲ್ಲ; ಮುಖಂಡನಾಗಿ ಮಾಡುತ್ತಲೂ ಇರ~~ಲಿಲ್ಲ ಕರ್ಕಶವಾದ ಉತ್ತರಕೊಡುವಂತೆ ಕೆಣಕಲ್ಪಟ್ಟಾಗಲೂ ಸೌಮ್ಯವಾಗಿಯೇ ಉತ್ತರ ಕೊಟ್ಟು ತಮ್ಮ ವಿವೇಕವನ್ನೂ ಜಾಣತನವನ್ನೂ ಪ್ರದರ್ಶಿಸಿರುವರು

ಶೌಚ್ಯ ವಿಚಾರಗಳಲ್ಲಿಯೂ ರೊಕ್‌ಫೆಲ್ಲರರಿಗೆ ಅಗ್ರಸ್ಥಾನ ಸಲ್ಲುತ್ತದೆ ಶುಚಿಯಾದ ಮಾತು, ಶುಚಿಯಾದ ಆಹಾರ, ಶುಚಿಯಾದ ಉಡುಪು, ಶುಚಿಯಾದ ಸಂಬಂಧ ಎಲ್ಲವೂ ಶುಚಿಯಾಗಿಯೇ ಬೇಕು ಅವರಿಗೆ ಭಂಡು ಮಾತುಗಳನ್ನೆಂದೂ ಕೇಳರು

ನಿಷ್ಠೆಯು ಅವರಿಗೆ ಬಾಲ್ಯತನದಿಂದಲೂ ಬೆಳೆದು ಬಂದ ಅಭ್ಯಾಸ. ತಮ್ಮ ಕೆಲಸಗಾರರು ನಿಷ್ಠಾವಂತರಾಗಿರಬೇಕೆಂದು ಮಾತ್ರ ಇಚ್ಛಿಸುವವರಲ್ಲ, ತಾವೂ ಕೆಲಸಗಾರರ ವಿಷಯದಲ್ಲಿ ನಿಷ್ಠೆಯಿಂದಲೂ ಕರುಣೆಯಿಂದಲೂ ನಡಕೊಳ್ಳುವರು.

ಕರ್ತವ್ಯ ಪರಾಯಣರು ರೊಕ್‌ಫೆಲ್ಲರರು. ಬಡತನದಲ್ಲಿಯೂ ತಮ್ಮೊಡನೆ ಇದ್ದ ಕೆಲವೇ

(೨ನೇ ಕಲಮಿನಿಂದ ಮುಂದುವರಿದುದು)

ನಾಣ್ಯಗಳನ್ನು 'ಕರ್ತವ್ಯ'ದ ಹೆಸರಲ್ಲಿ ದೇವಾಲಯದ ಭಂಡಾರಕ್ಕೆ ಕೊಟ್ಟವರು

'ಖಾತರಿ'ಪಡಿಸುವಲ್ಲಿ ಅವರಿಗೆ ಸಮಾನರಾದವರು ಮತ್ತೊಬ್ಬರು ಇಲ್ಲ ಸುಳ್ಳನ್ನಾಡಿ ~~ವ್ಯಾಪಾರ ಮಾಡಬಯಸುವವರು~~ ಗಿರಾಕಿಗಳಿಗೆ, ಸುಳ್ಳನ್ನಾಡದೆಯೇ 'ಖಾತರಿ' ಮಾಡಿಕೊಡುವಂತಹ ಮಾತುಗಾರಿಕೆಯ ಜಾಣ್ಮೆಯುಳ್ಳವರು.

ಧರ್ಮಿಷ್ಠರು ಎನ್ನಬೇಕಾದುದೇ ಇಲ್ಲ. ಕಾರಣ, ಅವರು ಕೊಟ್ಟ ದಾನಧರ್ಮಗಳೆ ಮೊಬಲಗು ದೊಡ್ಡ ಊರುಗಳನ್ನೆ ಕ್ರಯಕ್ಕೆ ಪಡಕೊಳ್ಳುವಷ್ಟು! ೧೯೧೩ನೇ ಇಸವಿಯಿಂದ ಇವರು ಕೊಟ್ಟ ದಾನಧರ್ಮಗಳನ್ನು ಎಣಿಕೆ ಮಾಡಿದರೆ, ವರ್ಷಕ್ಕೆ ಸರಾಸರಿ ೩೦ ಲಕ್ಷ ಡಾಲ್ಲರು ಎಂದು ಲೆಕ್ಕ ಹಿಡಿಯಬಹುದಂತೆ ಬಹಿರಂಗ ದಾನಗಳಲ್ಲದೆ, ಖಾಸಗಿಯಾಗಿ, ರಹಸ್ಯವಾಗಿ ವರ್ಷಂಪ್ರತಿ ೧ ಲಕ್ಷ ಡಾಲ್ಲರುಗಳಷ್ಟು ದಾನ ಮಾಡುತ್ತಿದ್ದಾರೆ

ಅವರ ಮನೆಯಲ್ಲಿ ಯಾಮಚಾಗಲೂ ~~ಆಡಂಬರಾಧಿಕ್ಯವನ್ನು ತೋರುವ ಪದಾರ್ಥ~~ ವಸ್ತುಗಳು ಇಲ್ಲ. ಎಂತಹ ಘಟನೆಯೂ ನಡೆಯುವುದಿಲ್ಲ ವಿಲಾಸಿಗಳಿಗೆ ಅವರ ಮನೆಗೆ ಪ್ರವೇಶವಿಲ್ಲ.

ರೊಕ್‌ಫೆಲ್ಲರರು ಧೂಮ್ರಪಾನ ಮಾಡುವುದಿಲ್ಲ ಮದ್ಯಪಾನ ಮಾಡುವುದಿಲ್ಲ.

ಇವರ ಜೀವನದಿಂದ ನಮ್ಮವರು ಕಲಿಯಬಹುದಾದುದೆಷ್ಟೋ ಇದೆ.

ಬಂಗಾಳದ ನೀರಾವರಿ ಕೆಲಸಗಳು.

ವ್ಯವಸಾಯ ಶಿಕ್ಷಣದಲ್ಲಿ ಹಿಂದುಳಿದಿರುವಂತೆ ಬಂಗಾಳವು ನೀರಾವರಿ ಕೆಲಸಗಳಲ್ಲೂ ಬಲು ಹಿಂದೆ! ಸರಕಾರವು ಇಲ್ಲಿ ಕಾಲುವೆಗಳನ್ನೂ ಕೆರೆ-ಬಾವಿಗಳನ್ನೂ ಹೆಚ್ಚಾಗಿ ರಚಿಸಿಲ್ಲವೆಂದು ಬಂಗಾಳಿಗಳ ದೂರು ವ್ಯವಸಾಯವು, ತುಲನಾತ್ಮಕವಾಗಿ ನೋಡಿದರೆ, ಇತರ ಪ್ರಾಂತಗಳಿಗಿಂತ ಬಂಗಾಳದಲ್ಲೇ ಹೆಚ್ಚು ಆದರೆ, ರೈತರಿಗೆ ಸೌಕರ್ಯಗಳು ಕಡಿಮೆ ಹಿಂದೂಸ್ಥಾನದ ಎಲ್ಲ ಪ್ರಾಂತ್ಯಗಳೂ, ನೀರಾವರಿ ಸೌಕರ್ಯಗಳಿಲ್ಲದೆ ಸುಗಮವಾಗಿ ವ್ಯವಸಾಯ ಕಾರ್ಯವನ್ನು ಸಾಗಿಸಲಾರವು, ಬಂಗಾಳವೂ ಹಾಗೆಯೆ ಬಂಗಾಳ ಉತ್ತರ ಪ್ರಾಂತದಲ್ಲಂತೂ ನೀರಾವರಿ ಕೆಲಸಗಳು ಹೆಚ್ಚಾಗಿ ಅವಶ್ಯವಿವೆ ಶ್ರೀ ಜಿ ಎಸ್ ದತ್ತರೆಂಬವರು ಬಂಗಾಳ ಪ್ರಾಂತ್ಯದ ಬಾಕುರ ಜಿಲ್ಲೆಯಲ್ಲಿ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರಾಗಿದ್ದಾಗ, ಹಿಂದೂ ಅರಸರ ಆಳ್ವಿಕೆಯಲ್ಲಿ ಅಲ್ಲಿ ಕಾಲುವೆಯೊಂದಲ್ಲದೆ ೩೦ರಿಂದ ೪೦ ಸಾವಿರದ ವರೆಗೆ ಕೆರೆಗಳಿದ್ದುವಂತೆ ಇವುಗಳಲ್ಲೀಗ ಹೆಚ್ಚಿನವು, ಯೋಗ್ಯ ವ್ಯವಸ್ಥೆಯಿಲ್ಲದೆ ಬತ್ತಿ ಹೋಗಿವೆ, ಕೆಲವಂತೂ ಮಣ್ಣು ಮುಚ್ಚಿ ಹೋಗಿವೆ ಹಿಂದೂಸ್ಥಾನದ ಬೇರೆ ಬೇರೆ ಪ್ರಾಂತಗಳಲ್ಲಿರುವ ನೀರಾವರಿ ಕೆಲಸಗಳೆಷ್ಟೆಂದೂ, ಅವುಗಳ ಮೇಲೆ ವಿನಿಯೋಗಿಸಲಾದ ಹಣವೆಷ್ಟೆಂದೂ, ಈ ಕೆಳಗಿನ ಪಟ್ಟಿಯಿಂದ ತಿಳಿದುಬರುವುದು —

ಪ್ರಾಂತ್ಯ	ಮೈಲು	ಹಣ.
ಮದರಾಸು.	೩೭೪೯	೧೨,೬೫,೫೩,೯೪೨
ಬೊಂಬಾಯಿ	೪೯೮೬	೧೯,೪೪,೭೫,೭೬೬
ಬಂಗಾಳ	೦	೬೭,೪೩,೫೪೧
ಸಂಯುಕ್ತಪ್ರಾಂತ್ಯ	೨೩೭೨	೨೨,೦೦,೨೫,೬೩೬
ಪಂಜಾಬ	೩೨೬೬	೩೨,೭೮,೦೨,೦೫೧
ಬರ್ಮಾ	೩೫೪	೨,೧೨,೨೧,೨೮೧
ಗಡಿಪ್ರಾಂತ್ಯ	೮೬	೭೪,೦೭,೪೦೦.

ಬಂಗಾಳದಲ್ಲಿ ನೀರಾವರಿ ಕೆಲಸಗಳ ಸಂಖ್ಯೆಯು "೦" ಎಂದು ಕೊಡಲ್ಪಟ್ಟಿದೆಯಾದರೂ ರೂ ೬೭,೪೩,೫೪೧ ಮೊಬಲಗನ್ನೂ ಅದಕ್ಕೆದುರಾಗಿ ಪ್ರಕಟಿಸಿರುವರು. ಈ ವೆಚ್ಚಗಳೇತಕ್ಕೆ, ಅವುಗಳಿಂದ ಪ್ರತಿಫಲವಾಗಿ ಏನು ಬರುತ್ತಿದೆಯೆಂಬುದು ತಿಳಿದಿಲ್ಲ. ಈ ಮೇಲಿನ ಸಂಖ್ಯೆಗಳು, ಪ್ರತಿಫಲ ಬರುವ ವಿನಿಯೋಗದ ಕುರಿತಾದುವು ಪ್ರತಿಫಲವಿಲ್ಲದ ವೆಚ್ಚಗಳು ಎಲ್ಲೆಲ್ಲಿ ಎಷ್ಟೆಷ್ಟೋ ನೋಡಿ —

ಪ್ರಾಂತ್ಯ	ಮೈಲು	ಧನವಿನಿಯೋಗ
ಮದರಾಸು	೭೧೬	೪,೦೩,೯೪,೫೨೮
ಬೊಂಬಾಯಿ	೨೮೩೨	೧೩,೪೨,೪೭,೦೦೪
ಬಂಗಾಳ	೭೦	೮೪,೯೩ ೦೫೩
ಸಂಯುಕ್ತಪ್ರಾಂತ್ಯ	೪೪೭	೩,೧೧,೮೭,೮೧೨
ಪಂಜಾಬ	೧೦೪೭	೫೯,೬೭,೧೯೮
ಬರ್ಮಾ	೧೪೦	[illegible],೭೨,೩೦,೫೦೯
ಬಿಹಾರ್, ಒರಿಸ್ಸ	೭೧೮	೬,೨೭,೬೩,೯೧೫
ಮಧ್ಯಪ್ರಾಂತ್ಯ	೩೫೨	,೬೩,೧೭,೬೭೮
ಗಡಿಪ್ರಾಂತ್ಯ	೧೩೮	೨,೨೦,೧೪,೬೪೭

ಈ ಎರಡನೆ ಸಂಖ್ಯೆಗಳು ಪ್ರತಿಫಲ ಬಾರದವುಗಳಾಗಿದ್ದರೆ ಈ ಕೆಲಸಗಳ ಮೇಲೆ ೩೮ ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ಹಣವು ಅನಾವಶ್ಯಯವೇ ಆಯಿತಲ್ಲ'

ಭೂಕಂಪದಿಂದಾದ ವೈಚಿತ್ರ್ಯಗಳು.

ಬಿಹಾರಿನಲ್ಲಾದ ಭೂಕಂಪವು ಸಾವಿರಾರು ಜನರನ್ನು ಕೊಂದು, ಲಕ್ಷಾಂತರ ಜನರನ್ನು ದಾರಿದ್ರ್ಯ ದುಃಖಕ್ಕೀಡುಮಾಡಿತು ಅಂತೆಯೆ ಕೆಲವು ಕ್ಷೇಮಕರ ವೈಚಿತ್ರ್ಯಗಳನ್ನೂ ತಂದೊಡ್ಡಿದೆ

ಬಿಹಾರ್ ಪ್ರಾಂತದ ಸೆಲೊಂಗ ಎಂಬಲ್ಲಿಂದ ತರಾಪ್ ಎಂಬಲ್ಲಿಗೊಬ್ಬ ಮಹಮ್ಮದೀಯನು ಪ್ರಯಾಣ ಮಾಡುತ್ತಿದ್ದನು ನಡುದಾರಿಯಲ್ಲಿ ಆತನಿಗೆ ಫಕ್ಕನೆ ಹೊಟ್ಟೆನೋವು ಕಾಣಿಸಿಕೊಂಡಿತು ನಿಮಿಷ ನಿಮಿಷಕ್ಕೂ ವೇದನೆಯು ಅಸಹನೀಯವಾಯಿತು ಅಲ್ಲೇ ಒಂದು ಮರದ ಕೆಳಗೆ ಬಿದ್ದುಕೊಂಡನು ಸುತ್ತುಮುತ್ತಲೂ ನಿರ್ಜನ ಪ್ರದೇಶ

ನರಳಿದನು, ಹೊರಳಿದನು. ವೇದನೆಯು ನಿಲ್ಲಲಿಲ್ಲ ಮಲಗಿದಲ್ಲಿಂದಲೆ ಮೇಲಕ್ಕೆ ನೋಡುವಾಗ, ಮರದಿಂದೊಂದು ಬಗೆಯ ರಸವು ಹನಿಯುತ್ತಿದೆ ವೇದನೆಯನ್ನು ಸಹಿಸಲಾರದಂತಹ ಸ್ಥಿತಿಯಲ್ಲಿ, ಆಸೆ ಕಂಡು, ಆ ರಸವನ್ನು ಕೈಯಲ್ಲಿ ಹಿಡಿದು ಆತುರದಿಂದ ಪಾನಮಾಡಿಬಿಟ್ಟನು ಆಶ್ಚರ್ಯ' ಕೆಲವೇ ನಿಮಿಷಗಳಲ್ಲಿ ವೇದನೆಯು ಸಂಪೂರ್ಣ ನಿಂತಿತು! ಆನಂದಾಶ್ಚರ್ಯಗಳಿಂದ ಆ ಮಹಮ್ಮದೀಯನು ತನ್ನ ಊರನ್ನು ಸೇರಿ, ಈ ಅದ್ಭುತರಸದ ಮಹಿಮೆಯನ್ನು ಪ್ರಕಟಿಸಿದನು ದೀರ್ಘಕಾಲದ ನಾನಾ ಬಗೆಯ ಬೇನೆಗಳಿಂದ ನರಳುವವರೆಲ್ಲರೂ ಈಗ ಆ ಮರವನ್ನು ನಂಬಿ ಅತ್ತ ಓಡುವುದಾಯಿತು ಭೂಕಂಪ ಕಷ್ಟದಲ್ಲಿ ದೇವರು ಕೊಟ್ಟ ವರದಾನವಿದೆಂದು ಜನರು ಆಡಿಕೊಳ್ಳುವರು

ಕಲ್ಕತ್ತೆಯ 'ಅಮೃತ ಬಜಾರ' ಪತ್ರಿಕೆಯ ಬಾತ್ಮಿದಾರನು ಇದನ್ನು ಕಣ್ಣಾರೆ ಕಂಡು ಆಶ್ಚರ್ಯಗೊಂಡು ಆ ಸುದ್ದಿಯನ್ನು ತನ್ನ ಪತ್ರಿಕೆಗೆ ಬರೆದಿರುತ್ತಾನೆ ಈ ಮರಕ್ಕೆ ಅಲ್ಲಿ 'ಲೈಕುರ' ~~ಎಂದು ಕರೆಯುತ್ತಿದ್ದಾರೆ~~ ತರಾಪ್ ಬಳಿ, ಜುರ್ಜುರಿ ಎಂಬ ಹಳ್ಳಿಯ ರಸ್ತೆಯಲ್ಲಿ ಈ ಮರವಿದೆ ಮುರಿದಗೆಲ್ಲುಗಳಿಂದ ಈ ಅದ್ಭುತರಸವು, ಬೆಳಗ್ಗೆ ಘಂಟೆ ೭ರಿಂದ ಮಧ್ಯಾಹ್ನದ ತನಕ ತೊಟ್ಟಿಕ್ಕುತ್ತಾ ಇದೆ

(೧೦ನೇ ಪುಟಕ್ಕೆ ಮುಂದುವರಿಸಲ್ಪಟ್ಟಿದೆ)

FRESH CONSIGNMENT ARRIVED.

UNEQUAL QUALITY——————EXCEPTIONAL, PRICE.

A TIRE THAT SAVES YOU REPUTATION AND MONEY.

The Canara Public Conveyance Co., Ltd.

MANGALORE.

ಮೂಲೆಮೂಲೆಯಿಂದ.

ನಂಜನಗೂಡು.

ನಂಜನಗೂಡು ನಗರ ಸಭೆಯವರು, ರೈಲು ದಾರಿಯಿಂದಾಗಲಿ ಇತರ ವಾಹನಗಳಿಂದಾಗಿ ರಸ್ತೆಗಳ ಮೂಲಕವಾಗಿಯಾಗಲಿ ತಮ್ಮ ಸರಹದ್ದಿನೊಳಗೆ ಬರುವ ಯಾತ್ರಿಕರ ಮೇಲೆ ತಲೆಗಂದಾಯ ಹೊರಿಸಲು ನಿರ್ಧರಿಸಿರುತ್ತಾರೆ

ಇಲ್ಲಿಯ ಚಾಮಲಾಪುರದಲ್ಲಿ ವಾಸವಾಗಿರುವ ಪೋಲೀಸ್ ಕೊನ್‌ಸ್ಟೇಬಲ್ ರಂಗಯ್ಯನೆಂಬವನು ತನ್ನ ನೆರೆಯವನಾಗಿದ್ದ ಮುಕುಂದ ರಾವ್ ಎಂಬ ಯುವಕನ ಮೇಲೆ ದ್ವೇಷ ಸಾಧಿಸುತ್ತಿದ್ದು ಕಳೆದ ಶುಕ್ರವಾರ ಒಂದು ದೊಡ್ಡ ಕಠಾರಿಯಿಂದ ಮುಕುಂದ ರಾಯನ ಹೊಟ್ಟೆಯನ್ನು ಬಗೆದು, ಕೊಂದನು. ರಂಗಯ್ಯನನ್ನು ಸೆರೆಹಿಡಿದಿರುತ್ತಾರೆ.

ಬೆಂಗಳೂರು

ವೀರಶೈವ ಸ್ವಾಮಿಗಳಾದ ಶ್ರೀ ರಂಭಾಪುರೀ ಪೀಠಾಧೀಶರರನ್ನು ಬೆಂಗಳೂರಿಗೆ ಕರೆಯುವ ಏರ್ಪಾಡು ಕೆಲವು ಕಡೆ ನಡೆಯುತ್ತಿದೆ

ಇಲ್ಲಿಯ ಧರ್ಮಾಂಬುಧಿ ಕೆರೆಯಲ್ಲಿ ಅಕ್ಕಸಾಲಿಗ ಕೃಷ್ಣಮಾಚಾರಿಯೆಂಬವನ ಶವವು ಸಿಕ್ಕಿರುತ್ತದೆ ತುಂಬಾ ಘಾಯಗಳು ಮೈಮೇಲಿವೆ

ಶಿವಮೊಗ್ಗೆಯ ನನ್ನೆಸಾಬ ಎಂಬವನು ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ತಾ ೨೨ನೇ ದಿನ ಗಲ್ಲಿಗೇರಿಸಲ್ಪಟ್ಟನು ಶಿಕ್ಷೆಯನ್ನನುಭವಿಸುತ್ತಿದ್ದ ವೇಳೆ ಇವನು ಇಬ್ಬರು ಕೈದಿಗಳ ಕೊಲೆ ಮಾಡಿದ್ದನು

ಬಾಲಿಕೆಯರನ್ನು ಇಲ್ಲಿಂದ ಅಪಹಾರ ಮಾಡಿ ಹೈದರಾಬಾದಿನಲ್ಲಿ ವಿಕ್ರಯಿಸುತ್ತಿದ್ದ ೬ ಮಂದಿಯನ್ನು ಇಲ್ಲಿ ಸೆರೆಹಿಡಿದಿರುತ್ತಾರೆ

ಮೈಸೂರು

ಮೈಸೂರು ಪ್ರಾಣಿ ಸಂಗ್ರಹಾಲಯಕ್ಕೆ ೧೨ ಅಡಿ ಉದ್ದದ, ಮೈಮೇಲೆ ಎರಡು ಅಂಗುಲಗಳಷ್ಟು ಕೂದಲು ಇರುವ ಒಂದು ಸರ್ಪವನ್ನು ಶಿವಮೊಗ್ಗಾ ಅರಣ್ಯದಿಂದ ತಂದಿರುವರು ತಂದವನಿಗೆ ಮಹಾರಾಜರು ರೂಪಾಯಿ ೩೦೦ನ್ನು ಬಹುಮಾನವಾಗಿ ಕೊಟ್ಟಿರುವರು

ಮೈಸೂರಿನ ದಸರಾದೊಂಬಿಯ ವಿಚಾರವಾದ ಮೊಕದ್ದಮೆಯು ಈ ತಿಂಗಳ ಅಂತ್ಯದಲ್ಲಿ ತೀರ್ಮಾನಹೊಂದುವುದೆಂದು ವರ್ತಮಾನ

ಮಹಾರಾಜಾ ಕೊಲೇಜಿನ ಪ್ರಿನ್ಸಿಪಾಲರಾದ ಶ್ರೀ ಜ ಸಿ ರೋಲೋರವರು ಬರುವ ತಿಂಗಳಲ್ಲಿ ಇಂಗ್ಲೆಂಡಿಗೆ ಹೊರಡುವರು. ಅವರ ಸ್ಥಾನಕ್ಕೆ ಶ್ರೀ ಎ ಬಿ ಮ್ಯಾಕೆಂಟಾಶರವರು ನೇಮಕಹೊಂದಲಿರುವರು

ಬಿಹಾರ್ ಭೂಕಂಪ ನಿಧಿಯ ಸಹಾಯಾರ್ಥ (ವೈಸರಾಯರ ನಿಧಿಗೆ) ಶ್ರೀ ಮನ್ಮಹಾರಾಜರವರು ೫೦೦೦ ರೂಪಾಯಿಗಳನ್ನೂ ದಿವಾನ್ ಸರ್ ಮಿರ್ಜಾ ಇಸ್ಮಾಯೇಲರು ೨೫೦ ರೂಪಾಯಿಗಳನ್ನೂ ಕಳುಹಿಸಿರುತ್ತಾರೆ

ಪ್ರಥಮ ಸಚಿವರಾದ ರಾಜಮಂತ್ರಪ್ರವೀಣ ದಿವಾನ್ ಬಹದ್ದೂರ್ ಕೆ ಮಥಾಸರು ತುಮಕೂರು ಡಿಸ್ಟ್ರಿಕ್ಟಿನಲ್ಲಿ ಸಂಚಾರ ಹೊರಟು ಕಳೆದ ತಾ. ೨೦ರಲ್ಲಿ ಕುಣಿಗಲನ್ನೂ, ಬೈರಾಪುರದ ಗನಿಗಳನ್ನೂ ಸಂದರ್ಶಿಸಿದರು

ಚಿತ್ರದುರ್ಗ

ತಾ. ೩೦-೩-೧೯೩೪ನೇ ದಿನ ಚಿತ್ರದುರ್ಗದ ಜಯ ಚಾಮರಾಜೇಂದ್ರ ಸಂಘದ ವಾರ್ಷಿಕೋತ್ಸವವು ನಡೆಯುವುದು.

ಲೋವರ್ ಸೆಕೆಂಡರಿ ಪರೀಕ್ಷಾರ್ಥವಾಗಿ ಹೊಸದುರ್ಗದ ಕೇಂದ್ರಕ್ಕೆ ಬರಲಿರುವ ಬ್ರಾಹ್ಮಣ ವಿದ್ಯಾರ್ಥಿಗಳಿಗೆ ಮಾತ್ರ ಊಟ ವಸತಿಗಳ ಏರ್ಪಾಡನ್ನು ಭೂಪಾಳಂ ನಂಜುಂಡಯ್ಯನವರೂ, ಲಿಂಗಾಯತ ವಿದ್ಯಾರ್ಥಿಗಳಿಗೆ ಶ್ರೀ ಬಿ. ಹಂಚಿನಂಜಪ್ಪನವರೂ ಮಾಡಿರುತ್ತಾರೆ.

ಬಳ್ಳಾರಿ.

ಜಿಲ್ಲಾ ಬೋರ್ಡಿನ ಅಧ್ಯಕ್ಷರಾದ ಶ್ರೀ ಮಹಾಬಲೇಶ್ವರಪ್ಪನವರ ಸತ್ಸಹಾಯದಿಂದಾಗಿ ಬಳ್ಳಾರಿಯಲ್ಲಿ ಕನ್ನಡ ವಾಙ್ಮಯವು ಬೆಳೆಯುತ್ತಿದೆಯೆಂದೂ, ಕನ್ನಡ ಪ್ರಾಥಮಿಕ ಶಿಕ್ಷಣವನ್ನು ಇವರು ಜಿಲ್ಲೆಯಲ್ಲಿ ಹೆಚ್ಚಿಸಲಿರುವರೆಂದೂ ತಿಳಿದುಬಂದಿದೆ

ಬಿಜಾಪುರ

ಮಹಾತ್ಮರು ಇಲ್ಲಿಗೆ ಬಂದಿದ್ದಾಗ ಸಾವಿತ್ರಿಬಾಯಿ ಮಿರ್ಜಿ ಎಂಬವರು ಶಾಂತಾ ಎಂಬ ತನ್ನ ಮೃತ ಮಗುವಿನ ಆಭರಣಗಳನ್ನೆಲ್ಲ ಮಹಾತ್ಮರಿಗೆ ಅರ್ಪಿಸಿದರು. ಶ್ರೀಮತಿಯವರು ಕಾರಾಗೃಹದಲ್ಲಿದ್ದಾಗ ಅವರೊಡನೆ ಆ ಮಗುವಿತ್ತು ಅದು ಕಾರಾಗ್ರಹದಲ್ಲಿಯೇ ಮೃತಿಯನ್ನೈದಿತು

ಶಿವಮೊಗ್ಗ.

ಇಲ್ಲಿಯ ಬಾಲಕಾಶ್ರಮದಲ್ಲಿ ದಿನೇ ದಿನೇ ಉತ್ತಮ ಸುಧಾರಣೆಯಾಗುತ್ತಿದೆಯೆಂದೂ, ಮಹಾಜನರ ಆಶ್ರಯವು ಸಿಗುತ್ತಾ ಇದ್ದು ಇದು ಇನ್ನೂ ಪ್ರಗತಿಯನ್ನು ಹೊಂದುವುದೆಂದೂ ತಿಳಿದು ಬಂದಿದೆ

ಕೊಡಗು

ಮಿ। ಮೆಕ್ ಈವನ್ ಎಂಬವರು ಕೊಡಗಿನ ಕಮಿಶನರರಾಗಿ ಬರುತ್ತಾರಾಗಿ ವಾರ್ತೆಯಿದೆ

ಮಡಿಕೇರಿನಾಡು ಬಿಳಿಗೇರಿ ಗ್ರಾಮದ ಮಂಡೊಂಡ ಚಿಣ್ಣಪ್ಪನವರು ಆತ್ಮಹತ್ಯೆ ಮಾಡಿಕೊಂಡಿರುವರು

ಕಳೆದ ಶನಿವಾರ ಸಂತೆಯ ಬಳಿ ಒಬ್ಬ ಸ್ತ್ರೀಯನ್ನು ಕೊಂದುದರ ಸಂಬಂಧವಾಗಿ ಮೂವರ ದಸ್ತಗಿರಿಯಾಗಿದೆ

ಕೊಡಗು ಸೀಮೆಯು ಬ್ರಿಟಿಷ ಸರಕಾರಕ್ಕೆ ಸೇರಿ ೧೯೩೪ನೇ ಇಸವಿಗೆ ೧೦೦ ವರ್ಷಗಳಾದುದರ ಸಂತೋಷಸೂಚಕವಾಗಿ ತಾ ೬ನೇ ಎಪ್ರಿಲ್ ದಿನ ಸೂರ್ಲಬಿ ಶಾಲೆಯಲ್ಲಿ ಒಂದು ಸಭೆಯು ಜರಗಲಿದೆ

ಕೊಡಗಿನ ಪಶ್ಚಿಮ ಘಟ್ಟದಲ್ಲಿ ಮೂರು ಸಲ ವಿಶೇಷ ಮಳೆಗರೆಯಿತು

ತೊರಟ. .

ಈ ತಾಲೂಕಿನಲ್ಲಿ ಚಿತ್ತನೆಯ ಸಮಯದಲ್ಲಿ ಬಹು ವೃಷ್ಟಿಯಾಗಿ, ಭೂಮಿಯಲ್ಲಿ ನೀರು ನಿಂತು, ೧೭,೦೪೦ ಎಕರೆ ಭೂಮಿಯು ನಿಷ್ಪ್ರಯೋಜಕವಾಗಿದೆ ಇದರಿಂದಾಗಿ ನೀರಾವರಿ ತೆರಿಗೆ ರೂ ೨೩,೫೭೮,೧೮೦ನ್ನು ಸರಕಾರವು ಮಾಫ಼ಿ ಮಾಡಿದೆಯಾಗಿ ತಿಳಿದು ಬಂದಿದೆ

ಚಬಿದ್ರೆ (ದ. ಕ)

ಸಿದ್ದರ್ ಪೇಟೆಯಲ್ಲಿ ಕೆಲವು ವರ್ಷಗಳಿಂದ ಅಡಿಕೆ ವ್ಯಾಪಾರಮಾಡಿಕೊಂಡಿರುತ್ತಿದ್ದ ಕುರಿಯ ಮಮ್ಮದ್ ಹಾಜರ್ ಬ್ಯಾರಿಗಳ ಸಂಬಂಧಿಕರಾದ ಸಾಧು ಬ್ಯಾರಿಯೆಂಬವರು ಇದೇ ಮಾರ್ಚಿ ತಾ ೯ನೇ ದಿನ ಚಬಿದ್ರೆ ಗ್ರಾಮದ ಬೆಟ್ಟಿನ ಮನೆಯೊಂದಕ್ಕೆ ಸಂಜೆ ೪॥ ಘಂಟೆಗೆ ಸುಮಾರು ೨೦೦ ರೂಪಾಯಿಗಳ ಸಮೇತ ಹೋದವರು ಕಾಣದಾಗಿರುತ್ತಾರಾಗಿಯೂ ಕೊಲ್ಲಲ್ಪಟ್ಟಿರಬಹುದಾಗಿಯೂ ವರ್ತಮಾನವು ಹರಡಿತು ಮರುದಿನವೇ ಶಾಣೆ ಅರ್ಜಿಯು ಹೋಯಿತು ಮುಂಡಾಜೆ ಹೊಳೆಯ ಇರ್ಕಂದಿ ಯೆಂಬ ದೊಡ್ಡ ಗುಂಡಿಯುವರೆಗೆ ರಕ್ತವು ಅಲ್ಲಲ್ಲಿ ಬಿದ್ದಿರುವುದನ್ನು ಕಂಡು ಜನರು ಮತ್ತಷ್ಟು ಕ್ಷೋಭೆಯನ್ನೆಬ್ಬಿಸಿದರು ಹಲವರ ಮನೆಯಲ್ಲಿ ವಿಚಾರಣೆಯಾಯಿತು ಕೆಲವರ ಮನೆಯಲ್ಲಿದ್ದ ವಸ್ತ್ರಗಳು ಕೊಲಪ್ಪಿಟ್ಟವನದ್ದೆಂದು ಊಹಿಸಲ್ಪಟ್ಟು ಅದರಿಂದಾಗಿಯ ಗಲಭೆಯೆದ್ದಿತು ಹಣವು ಆ ಗಂಡಿಯಲ್ಲೇ ಇದೆಯೆಂದು ಊಹಿಸಿದ ಅದರ ಕಾಟಸ್ಥರು ಉಪ್ಪಿನಂಗಡಿಯ ಕಡೆಯಿಂದ ಮೊಗೇರರನ್ನು ತರಿಸಿ ಬಲೆಬೀಸಿ ಹುಡುಕಿಸಿದರ ಅದರ ಮೀನಗಳಲ್ಲದೆ ಹಣವು ಸಿಗಲೇ ಇಲ್ಲ ಹೀಗೆ ಸರಾಸರಿಗೊಂಡಂದ ಮೇಲೆ ಕೊ ದವರು ಹಣವನ್ನು ಬಿದಿರು ಹಿಂಡುಗಳ ಮಧ್ಯ ಹಾಕಿ ಚಿಪ್ಪಿ ಎಣ್ಣೆ ಕೊಟ್ಟು ಸುಟ್ಟು ಬೂದಿ ಎಲುಬುಗಳನ್ನು ಹೊಳೆಗೆ ಹಾಕಿದ ಕ್ಕೃತ್ಯವಾಗಿ ಮರು ದಿನ ವಾರ್ತೆಯು ಹರಡಿತು ದನ ಮೇಯಿಸುವ ಹುಡುಗರಿಂದ ಅವರನ್ನು ಕೇಳಿಸಿದ್ದಾರೆಂದೂ ಸಿಕ್ಕಿಯವಾಯಿತು ಇಷ್ಟೆಲ್ಲಾ ನಡೆಯುತ್ತಿದ್ದಾಗ ಮಧ್ಯೆ ಬಣ್ಣಲ್ ಮೂಡುಗೆರೆ ಮುತ್ತ ಕಡೆಯಿಂದ ಒಂದೊಂದೇ ಕಾಗದವು ಬರಲಾರಂಭ ಈ ಸಾಧು ಬ್ಯಾರಿಗಳ ಕಾಗದಗಳನ್ನು ನಂಬಲಾರದೆ ವ ತ್ತೂ ಶೋಧನೆಯಲ್ಲಿರುವಾಗ ಸಾಧು ಬ್ಯಾರಿಗಳು ತಾ ೧೯ರ ತನಕ ದೇವರು ಕೊಟ್ಟ ಕೆಲಸ ಗೌಜರ ತೋಟದಲ್ಲಿ ಕೆಲಸ ಮಾಡಿಕೊಂಡಿದ್ದು ಕೆಲವು ದಿನಗಳ ನಂತರ ಮನೆಗೆ ಹಿಂತಿರುಗಿದರು. ಇದನ್ನು ಕಂಡ ಜನರು ಆಶ್ಚರ್ಯಗೊಂಡರಲ್ಲದೆ ಸಾಧು ಬ್ಯಾರಿಗಳೂ ಬಹಳವಾಗಿ ನಕ್ಕುಬಿಟ್ಟರು ಬಾತ್ಮಿ.)

ನೋಟೀಸು.

ಉಡುಪಿ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

O. S No. 158/84.

ಅಲಿಸ್ ದಾಲ್ಮೇದಿ—ವಾದಿಳು

ಮತ್ತು

ಇನಾಸ್ ದಾಲ್ಮೇದಿ—ಪ್ರತಿವಾದಿ

ಇವರೊಳಗೆ

ಸದರಿ ವ್ಯಾಜ್ಯದ ಪ್ರತಿವಾದಿಯಾದ ಉಡುಪಿ ತಾಲೂಕು ಮೂಡ ನಿಡಂಬೂರು ಗ್ರಾಮದಲ್ಲಿರುವ ಕೈತಾನ್ ದಾಲ್ಮೇದರ ಮಗ ಇನಾಸ್ ದಾಲ್ಮೇದರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ವಾದಿಳಿಂದ ಸದರಿ ಪ್ರತಿವಾದಿಯು ತಾ ೧೫—೬—೩೦ರಲ್ಲು ಅಂದಿನಿಂದ ಒಂದು ವರ್ಷದ ಒಳಗೆ ಸಾಲಿಯಾನ್ ಸೇಕಡಾ 10ರ ಸಲೆ ಬಡ್ಡಿ ಕೂಡಿಸಿ ವಾಪಾಸು ಕೊಡುವದಾಗಿ ತಪ್ಪ ಕೈಕಡವಾಗಿ ಪಡೆದ ರೂ 300-0-0ನ್ನು ಈ ವರೆಗೂ ವಸೂಲು ಕೊಡದ್ದರಿಂದ ವಾದಿಳು ಸದರಿ ರೂ 300-0-0ಕ್ಕೂ ಅದರ ಮೇಲಣ ಮೇಲ್ಕಂಡ ದರದ ಬಡ್ಡಿಗೂ ಈ ದಾವಾ ಮಾಡಿರುತ್ತಾಳೆ ಸದರಿ ವ್ಯಾಜ್ಯವು ತಾ 10—4—84ಕ್ಕೆ ತಖ್ಯೆಗೆ ಇಟ್ಟಿರುವುದರಿಂದ ಸದ್ರಿ ದಾವೆಯಲ್ಲಿ ಏನಾದರೂ ಸಾಧನೆ ಮಾಡುವ ತಾದ್ಧ ಇದ್ದ ಪಕ್ಷದಲ್ಲಿ ಪ್ರತಿವಾದಿಯು ಸ್ವತಃ ವ ವಕೀಲರ ಮುಖಾಂತರ ಸದರಿ ತಾರೀಕಿನ ದಿವಸ ಸದರಿ ಕೋರ್ಟಿನ ಮುಂದೆ ಹಾಜರಾಗಬೇಕು ಅದಕ್ಕೆ ತಪ್ಪಿದರೆ ಸದರಿ ವ್ಯಾಜ್ಯವು ಆತನ ಗೈರ ಹಾಜರಿಯಲ್ಲಿ ತೀರ್ಮಾನಿಸಲ್ಪಡುವುದು

ಉಡುಪಿ ತಾ ೨೬—3 34 } P V Achar, *Vkl for Plaintiff*

ಕುಟುಂಬದಲ್ಲಿ ಆರೋಗ್ಯ ಆನಂದವನ್ನು ಬೆಳಸಿ,

ನಿಮ್ಮ ವ್ಯಯವನ್ನು ಕಡಿಮೆಮಾಡಿರಿ.

ಪರ್ಲ ಕಾಢಾ ಜೀರ್ಣ ಜ್ವರನಾಶಕ ಆರೋಗ್ಯದಾಯಕ ಶಕ್ತಿ ಮತ್ತು ಉತ್ಸಾಹ ಬೆಳಸುವ ಪರ್ಲಕಾಢೆಯೆಂದರೆ ಪ್ರತಿ ಕುಟುಂಬದ ಮಿತ್ರನೇ ಸರಿ; ಕಾಢೆಯು ಹಸಿವೆ ಪ್ರಚನ ಕ್ರಿಯೆಗಳನ್ನು ಉತ್ತೇಜಿಸುತ್ತದೆ ಅಲ್ಲದೆ ಮಲಬದ್ಧತೆಯನ್ನು ನಿರ್ಮೂಲ ಮಾಡುವುದು ರಕ್ತಶುದ್ಧಿ ಮತ್ತು ವೃದ್ಧಿ ಮಾಡುವುದಲ್ಲದೆ ಪರ್ಲಕಾಢೆಯು ಶರೀರದಲ್ಲಿ ಹೊಸ ಶಕ್ತಿ ಬಲ ಮತ್ತು ಉತ್ಸಾಹವನ್ನು ಬೆಳಸುವುದು ಪರ್ಲಕಾಢೆಯು ಬೇನೆಯನ್ನು ಕಳೆದು ಕುಟುಂಬದಲ್ಲಿ ಆನಂದವನ್ನೂ ಆರೋಗ್ಯವನ್ನೂ ಬೆಳಸುವುದು, ಒಮ್ಮೆ ಸ್ವತಃ ಉಪಯೋಗಿಸಿ ಖಾತ್ರಿ ಮಾಡಿಕೊಳ್ಳಿರಿ

ಪರ್ಲ ದ್ರಾಕ್ಷಾಸವ ರುಚಿಕರ ಪಾಚಕಸ್ಫೂರ್ತಿದಾಯಕವಾದ ಪರ್ಲ ದ್ರಾಕ್ಷಾಸವ ಟಾನಿಕ ಪಚನಕ್ರಿಯೆಯನ್ನು ಬೆಳಸುವುದು ಅದು ಶ್ರಮಪರಿಹಾರ ಮಾಡುವುದಲ್ಲದೆ ಮನಸ್ಸಿಗೂ ದೇಹಕ್ಕೂ ಹುರುಪು ಕೊಡುವುದು ಶಾಂತವಾದ ನಿದ್ರೆ ಬರುವುದು ಎಲ್ಲರಿಗೂ ಉಪಯೋಗವುಳ್ಳದ್ದು

ಪರ್ಲ ಚ್ಯವನಪ್ರಾಶ ಅತ್ಯಂತ ಧಾತುಪೌಷ್ಟಿಕ ಬಲವರ್ಧಕ ಚೈತನ್ಯದಾಯಕವಾದ ಪರ್ಲ ಚ್ಯವನಪ್ರಾಶದ ಉಪಯೋಗದಿಂದ ಯಾವುದೇ ಕಾರಣದಿಂದ ಬಂದ ಅಶಕ್ತತೆ ಧಾತುಕ್ಷೀಣತೆಯು ಗುಣವಾಗುವುದು

ನಮ್ಮ ಕಾರ್ಖಾನೆಯಲ್ಲಿ ತಯಾರಾಗುವ ಔಷಧಗಳ ಸೂಚೀಪತ್ರವನ್ನು ತರಿಸಿರಿ

ಕರ್ಣಾಟಕದಲ್ಲಿ ಪ್ರತಿಯೊಂದು ಕಡೆಯಲ್ಲಿಯೂ ನಮ್ಮ ಔಷಧಗಳು ಸಿಕ್ಕುತ್ತವೆ.

ಪರ್ಲ ಕಂಪೆನಿ ಆಯುರೌಷಧಿ ಕಾರಖಾನಾ ವ ದವಾಖಾನಾ,

ಮುಂಬಾಯಿ, ನಂಬ್ರ ೮.

Pearl Co., Byculla, Bombay, No. 8.

NOTES
ನೋಟಗಳು.

ಅದ್ಭುತಶಕ್ತಿಯ ಸಾಧುಗಳ ಆಗಮನ ಆಗಾಗ್ಗೆ ನಮ್ಮ ಜಿಲ್ಲೆಗೆ ಆಗುತ್ತಲೇ ಇದೆ. ಕೊಟ್ಟಷ್ಟು ತಿನ್ನುವುದು, ನೆರೆದವರಿಗೆ ಎಲೆಗಳನ್ನು ಕೊಡುವುದು, ಇವು "ಅದ್ಭುತ"ಗಳಲ್ಲಿ ಮುಖ್ಯ. ಜನರು ಹೆಚ್ಚಾಗಿ ನೆರೆದರೆಂದು ಒಂದು ದಿನ ಥಕ್ಕನೆ ಕಾಣೆಯಾಗುವುದು—ಇದು ಮಹದದ್ಭುತ.

* * *

ಅವತಾರ ಪುರುಷರು ಯುಗಯುಗಗಳಲ್ಲಿ ಹುಟ್ಟುವ ಆಲೋಚನೆ ಬಿಟ್ಟು, ವರ್ಷ ವರ್ಷವೂ ಹುಟ್ಟುತ್ತಿರುವುದು ಇದೂ ಒಂದು ವಿಚಿತ್ರ. ಆದರೆ, ಕೊಡಬಾರದಷ್ಟು ತಿನ್ನುವವರೂ ಜನರು ನೆರೆವ ಮುಂಚೆಯೇ ಕಾಣೆಯಾಗುವವರೂ ನಮ್ಮಲ್ಲಿರುವಾಗ ಅವರಿಗಿಂತ ಹೆಚ್ಚಿಗೆ ಗುಣವಿಶೇಷಗಳಿಲ್ಲದ ಸಾಧುಗಳು ಇಲ್ಲಿಗೆ ಬರುವುದೂ ಒಂದು ಅದ್ಭುತ

* * *

ಇತ್ತೀಚೆಗೆ ಸಾಧುಗಳು ಲಾಟರಿ ನಂಬ್ರಗಳನ್ನೂ ಹೇಳುವ ಯೋಗವನ್ನು ಅಭ್ಯಾಸ ಮಾಡಿರುವರು. ಒಂದೊಂದು ಲಾಟರಿ ನಂಬ್ರಕ್ಕೆ ಒಬ್ಬೊಬ್ಬ ಸಾಧುವಿನ ಅವತಾರವಾಗುತ್ತಿದೆ ನಮ್ಮಲ್ಲನೇಕರು, ಅವರು ಹೇಳುವ ನಂಬ್ರಗಳನ್ನು ನಂಬುವ ಗುಣವನ್ನೂ ಹೊಂದಿರುವರು ಒಬ್ಬೊಬ್ಬನು ಒಬ್ಬೊಬ್ಬ ಸಾಧುವನ್ನು ಮನೆಯೊಳಗಿರಿಸಿ ರೊಟ್ಟಿ ಕೊಟ್ಟು ಪೋಷಿಸಿ, ಲಾಟರಿ ಟಿಕೇಟುಗಳನ್ನು ಕೊಂಡುಕೊಂಡರೆ ಆರ್ಥಿಕ ಮುಗ್ಗಟ್ಟೆಲ್ಲಿ!

* * *

ಇಂತಹ ಸಾಧುಗಳಿನ್ನು ಫನ್‌ಫೇರ ಗಳ ಗೇಟಿನ ಬಳಿಯಲ್ಲಿ ಅವತಾರವೆತ್ತಿ [illegible] ನೊಳಗಿನ ಕಾಲಚಕ್ರಗಳ ಸುತ್ತುಗಳ [illegible] ವನ್ನು ನಮ್ಮ ದಕ್ಷಿಣ ನ್ಯಸಿಕಗಳಿಗೆ ಬೋಧಿಸುತ್ತಿದ್ದರೆ, ಎಷ್ಟು ಮಂದಿ [illegible] ಪಾರಾಗುತ್ತಿದ್ದರ

* * *

ಫನ್‌ಫೇರುಗಳ ಆಗಮನದಿಂದ ನಮ್ಮ ಜಿಲ್ಲೆಗೆ ಉಂಟಾದ ಪ್ರಯೋಜನಗಳು ಹಲವು ಅವುಗಳಲ್ಲಿ, ಅಂತಹ ಆಟಗಳನ್ನು ಕಲಿತು ಪರವೂರಿನವರಿಗೂ ಅದರ ಸವಿಯನ್ನುಣ್ಣಿಸ ಹೋದುದೊಂದು ವಿಶೇಷ

* * *

ಸಿನೆಮಕ್ಕೂ ನಾಟಕಕ್ಕೂ ಪ್ರವೇಶಪಡೆದು ಒಳಗೆ ಕುಳ್ಳಿರಿಸಲ್ಪಟ್ಟ ಇಬ್ಬರು ಹರಿಜನ ಗೃಹಸ್ಥರನ್ನು ದೇವಾನೆಯ ಮಧ್ಯದಲ್ಲಿ ಹೊರಗೆ ಕಳುಹಲಾಯಿತೆಂದೊಂದು ದೂರ ಹೊಸ ವಕೀಲರು . ಸೋಮಾರಿಗಳಾಗಿರಬಾರದೆಂದು ಇಂತಹ ಘಟಿಸಬಾರದಂತಹ ಘಟನೆಗಳಾಗುತ್ತಿರುವುವೋ ಎಂದೆನಿಸುತ್ತಿದೆ

* * *

ಹಲವು ಸಂಸ್ಥೆಗಳ ಸಹಾಯಾರ್ಥ ನಾಟಕಗಳನ್ನಾಡಿ ತಮ್ಮ ದಾನಬುದ್ಧಿಯನ್ನು ಪ್ರಕಟಿಸಿದ ಪೀರ್ ಸಾಹೇಬರಿಗೊಂದು ಥೈಲಿಯನ್ನರ್ಪಿಸಬೇಕೆಂದು ಕೆಲವು ಮಹನೀಯರು ಯತ್ನಿಸಿದುದು ಶ್ಲಾಘನೀಯ ಸರ್ವಜ್ಞನು ಹೇಳಿರುವನು—"ಕೊಟ್ಟದ್ದು ತನಗೆ"

* * *

ಅರ್ಧಶತಮಾನಕ್ಕಿಂತಲೂ ಹೆಚ್ಚು ಕಾಲ ಜೀವಿಸಿಕೊಂಡು ಬಂದಿದ್ದ ತಾಲೂಕು ಬೋರ್ಡುಗಳು ನಾಳೆ ಸಾಯಂಕಾಲ ಮೃತವಾಗುವುವು ಕೊನೆಯ ಸಭೆಗೂಡಿ ಚರಮ ಶ್ಲೋಕಗಳ ನ್ನೋದುವ ಆ ಕೊನೆಯ ಕಾರ್ಯಕ್ರಮವೂ ನಡೆಯಿತು

* * *

ಕೊನೆಯ ಅಂಕವೆಂದು, ಪ್ರೀತಿಪುರಸ್ಸರವಾಗಿ, ಪುತ್ತೂರು ಎಲಿಮೆಂಟರಿ ಶಾಲಾ ಉಪಾಧ್ಯಾಯರು ನೆರೆದು ತಮ್ಮ ತಾಲೂಕುಬೋರ್ಡಿನ ಮೆಂಬರರ ಬಗ್ಗೆ ಸತ್ಕಾರಕೂಟ ಏರ್ಪಡಿಸಿದರು. ಉಳಿದ ತಾಲೂಕುಗಳಲ್ಲಿ ಇಲ್ಲ ಇದೇಕೆ?

ತ್ರಿವೇದಿಯಲ್ಲಿ ಗಲಭೆ! ಗೋಳಿಬಾರು! ಮೆಜಿಸ್ಟ್ರೇಟರ ಕೊಲೆ!

ಮೊಹರಮ್ಮಿನ ಉತ್ಸವಗಳ ಉತ್ಸಾಹದಲ್ಲಿದ್ದ ತ್ರಿವೇದಿಯು ಆಕಸ್ಮಿಕವಾಗಿ ರಣಭೂಮಿಯಾಗಿ ಮಾರ್ಪಟ್ಟಿತು!—ತಾ. [illegible]ರಲ್ಲಿ

ತ್ರಿವೇದಿಯ ಮಾರಿಪೂಜೆಯು ಪ್ರಖ್ಯಾತವಾದುದು ಈ ಮಾರಿಪೂಜೆಯಲ್ಲಿ ಹರಕೆಗಾಗಿ, ದೇವಿಯ ಸ್ತ್ರೀಕೃರ್ಥ ಮನುಷ್ಯರ ಬೆನ್ನಿನ ಚರ್ಮಕ್ಕೆ ಕೊನೆಯಾಗಿರುವ ಕೊಕ್ಕೆಗಳನ್ನು ಸಿಕ್ಕಿಸಿ, ಮನುಷ್ಯರನ್ನು ರಥದ ಮೇಲಿಂದೆಳೆವುದು ಇದೆ; ಆ ಕೊಕ್ಕೆಯಿಂದಲೇ ರಥವನ್ನೆಳೆಸುವುದೂ ಇದೆ. ಬೆನ್ನಿನಿಂದ ನೆತ್ತರು ಧಾರಾಕಾರವಾಗಿ ಸುರಿಯುವುದು ಈ ದೃಶ್ಯವು ಜನರಲ್ಲಿ ಭೀತಿಯನ್ನುಂಟುಮಾಡುವುದು ಆದಕ್ಕಾಗಿ ಈ ಬಾರಿಯ ಮಾರಿಪೂಜೆಯಲ್ಲಿ ಈ ಕೊಕ್ಕೆಯ ಭೀಷಣ ನಾಟಕವನ್ನಾಡಬಾರದೆಂದು ೧೪೪ನೇ ಸೆಕ್ಷನ್ ಜ್ಯಾರಿಯಾಯಿತು! ಡಂಗುರ ಹೊಡೆದು ಊರೆಲ್ಲೆಲ್ಲ ಸಾರಲಾಯಿತು

ತಾ [illegible]ರಲ್ಲಿ ಉತ್ಸವಾರಂಭ ಜನರು, ೧೪೪ನೇ ಸೆಕ್ಷನಿನನ್ನಯ ಜ್ಯಾರಿ ಮಾಡಿದ ಹುಕುಮನ್ನುಲ್ಲಂಘಿಸಲಿರುವ ಪೂರ್ವಸೂಚನೆಗಳು ಕಂಡುಬಂದುವು ಸಬ್ ಮೆಜಿಸ್ಟ್ರೇಟರಾದ ಗಿಲ್ಲಿಯಪ್ಪ ಮುದಲಿಯಾರರು ಪೋಲೀಸ್ ಫೌಜಿನೊಂದಿಗೆ ಅಲ್ಲಿಗೆ ಬಂದರು

ಕೆಲವು ಹಟವಾದಿಗಳು ತಮ್ಮ ಪೂರ್ವಾಚಾರವಿದು, ಬಿಟ್ಟುಕೊಡಲಾರೆವೆಂದರು ಮೆಜಿಸ್ಟ್ರೇಟರೂ ಪೋಲೀಸರೂ ತಾವು ಬಿಡಲಾರೆವೆಂದರು ಕೊಕ್ಕೆಗಳನ್ನು ಹಿಡಿದುಕೊಂಡು ಜನರು ಸೀಳಹನ್ನೇರಿದರು ಪೋಲೀಸರು ಅವರಿಗೆ ಅಡರುವಂತೆ ಅಪ್ಪಣಿಯಿತ್ತರು

ಜನರ ಗುಂಪಿನಲ್ಲಿ ಕ್ಷೋಭೆ! ಪೋಲೀಸರ ಕಡೆಗೆ ಕಲ್ಲುಗಳ ಸುರಿಮಳೆ! [illegible] ಕಲ್ಲು ಸಬ್ ಮೆಜಿಸ್ಟ್ರೇಟರಿಗೂ ತಗಲಿ, ಹಣೆಯೊಡೆಯಿತು, ಗೋಳಿಬಾರಿಗೆ ಅಪ್ಪಣೆ! ಪೋಲೀಸರು ಬಂದೂಕು ಹಾರಿಸಿದರು ಹಾಹಾಕಾರವೆದ್ದಿತು, ಒಬ್ಬ ಅದಿದ್ರಾವಿಡನೂ ಮತ್ತೊಬ್ಬ ಕಲ್ಲು ಸಂಗಡಿಗನೂ, (ಪ್ರೇಕ್ಷಕರಾಗಿ ನಿಂತವರು) ಬಂದೂಕಿನ ಪೆಟ್ಟು ತಗಲಿ, ಅಲ್ಲೇ ಉರುಳಿ, ಪ್ರಾಣ ತ್ಯಾಗ ಮಾಡಿದರು.

ಗಲಭೆಯು ಹೆಚ್ಚಿತು. ಎಲ್ಲೆಲ್ಲಿಯೂ, ಹೊಡೆಯಿರಿ—ಕಡಿಯಿರಿ ಎಂಬ ಕೂಗು ಎದ್ದಿತು. ಕಲ್ಲುಗಳ ಮಳೆಯೂ ಹೆಚ್ಚಿತು. ದೊಣ್ಣೆಗಳೂ ಹೊರಬಂದುವು ಸಂತೆಗಳನ್ನಿಟ್ಟು ಕುಳಿತವರು ಸಾಮಾನುಗಳನ್ನಲ್ಲಿ ಬಿಟ್ಟೋಡಿದರು. ಜನರು ಚಲ್ಲಾಪಿಲ್ಲಿಯಾಗಿ ಓಡಲಾರಂಭಿಸಿದರು ಈ ಗೊಂದಲದಲ್ಲಿ ಸಬ್ ಮೆಜಿಸ್ಟ್ರೇಟರೂ ಒಬ್ಬ ಕೊನ್ಸ್ಟೇಬಲನೂ, ಮತ್ತೊಬ್ಬ ಕರಣಿಕನೂ ಜೀವದಾಸೆಗಾಗಿ ಓಡುತ್ತ ಹೋಗಿ ದೇವಾಲಯವನ್ನು ಪ್ರವೇಶಿಸಿದರು

ರೋಷಾಂಧರಾಗಿ ಜನರು ದೇವಾಲಯಕ್ಕೆ ನುಗ್ಗಿ ಮೆಜಿಸ್ಟ್ರೇಟರನ್ನೂ ಕೊನ್ಸ್ಟೇಬಲರನ್ನೂ ಹಿಡಿದರು, ಬಡಿದರು. ಮೆಜಿಸ್ಟ್ರೇಟರ ಮೃತ್ಯು ಅರ್ಧಗಂಟೆಯಾಯಿತು ಅಲ್ಲೇ ಒರಗಿ ಪ್ರಾಣತ್ಯಾಗ ಮಾಡಿದರು ಕೊನ್ಸ್ಟೇಬಲನು ಮೂರ್ಛಿತನಾಗಿ ಬಿದ್ದನು (ಇವನೂ ಆಸ್ಪತ್ರೆಯಲ್ಲಿ ಮೃತನಾದನು)

ಗಲಭೆಯ ಸುದ್ದಿ ಕೇಳಿ ಎಡಿಷನಲ್ ಡಿ. ಮೆಜಿಸ್ಟ್ರೇಟರೂ ತಂಜಾವೂರು ಡಿವಿಜನಲ್ ಮೆಜಿಸ್ಟ್ರೇಟರೂ ಹೆಚ್ಚಿನ ಪೋಲೀಸರೊಂದಿಗೆ ಬಂದರು ಆದರೆ ಅವರು ಬರುವ ಮುಂಚಿತವಾಗಿಯೇ ಜನರು ಕಾಲಿಗೆ ಬುದ್ಧಿ ಹೇಳಿದ್ದರು

ಮಾರಿಗೆ ನರಬಲಿಯಾಯಿತು —೪ ಜನರ ಬಲಿ!

ಒಬೇದುಲ್ಲಾ ಖಾನರ ಉಪವಾಸ.

ಒಬೇದುಲ್ಲಾ ಖಾನರವರು ಮುಲ್ತಾನ್ ಜೈಲಿನಲ್ಲಿ ಉಪವಾಸವನ್ನಾರಂಭಿಸಿ ೫೦ ದಿನಗಳು ದಾಟಿಹೋದುವು ಪಂಡಿತ ಮಾಲವೀಯರು ವೈಸರಾಯರಿಗೆ ಈ ವಿಷಯದಲ್ಲಿ ತಂತಿಬಿಟ್ಟುದಕ್ಕೆ "ಆ ವಿಚಾರವು ಗಡಿ ಪ್ರಾಂತ್ಯದ ಸರಕಾರಕ್ಕೇ ಸಂಬಂಧಿಸಿದೆ ವೈಸರಾಯರು ಇದರಲ್ಲಿ ಪ್ರವೇಶಿಸಲು ಇಚ್ಛಿಸುವುದಿಲ್ಲ" ಎಂದು ವೈಸರಾಯರ ಪ್ರಾಯ್ವೇಟ್ ಸೆಕ್ರಟರಿಯವರು ಉತ್ತರ ಕಳುಹಿಸಿರುವರು

ಬಂಗಾಳಪ್ರಾಂತ್ಯದ ಪೋಲೀಸರ ವೆಚ್ಚ

ಮುಂದಿನ ವರ್ಷಕ್ಕೆ ಬಂಗಾಳ ಪ್ರಾಂತ್ಯದ ಪೋಲೀಸ ಸಿಬ್ಬಂದಿಗಾಗಿ ರೂ ೨,೦೪,೩೦,೦೦೦ ಮಂಜೂರಾದುವು "ನಮ್ಮ ಪೋಲೀಸರ ಕೃತವು ಸಾಮಾನ್ಯವಲ್ಲ; ಭಯೋತ್ಪಾದಕರಿಗೆ ಎದುರಾಗಿ ಕಾದಾಡಿದವರವರು" ಎಂದು ಪೋಲೀಸರಿಗಾಗಿ ಗೃಹಮಂತ್ರಿಗಳ ಎರಡು ಪ್ರಶಂಸಾಪರ ಮಾತುಗಳೂ ಇದ್ದುವು

ಮುಷ್ಟಿಯುದ್ಧವು ಪಾಶವಿಕ

ಸ್ವಿಟ್ಜರ್ಲೆಂಡಿನವರು ಮುಷ್ಟಿಯುದ್ಧಗಳನ್ನು (Boxing) ನಡೆಸಲೇ ಬಾರದೆಂದು ಕಟ್ಟಾಜ್ಞೆ ಮಾಡಿರುವರು ಅದು ಪಾಶವಿಕ ಮತ್ತು ಅಸಮಾನ ತರವಾದ ಆಟವೆಂದು ಅವರ ಅಂಬೋಣ ಪ್ರೇಕ್ಷಕರಲ್ಲೂ ಅದು ಕಿಸ್ಪರಿಣಾಮವುಂಟುಮಾಡುವಂತಿಲ್ಲವೆಂದು ಅವರ ಮತ

ಟೇಕ್ಸಿವಾಲರ ಮುಷ್ಕರ
ನ್ಯೂಯೋರ್ಕ್ ನಗರದಲ್ಲಿ ಗಲಭೆ

ಹೆಚ್ಚು ತೆರಿಗೆ [illegible] ಇವುಗಳಿಂದ ಮನನೊಂದ ನ್ಯೂಯೋರ್ಕ್ ನಗರದ ಟೇಕ್ಸಿ ಡ್ರೈವರರು ಮಹಾಮುಷ್ಕರವ[illegible]ರಂಭಿಸಿರುವರು [illegible] ಕ್ರಿಂಕ[illegible] ಟೇಕ್ಸಿಗಳು ಚಾಲತಿಯಲ್ಲದೆ [illegible] ಮಾಡುತ್ತಿರುವುವು

[illegible] ಮುಷ್ಕರಕ್ಕೆ ಸೇರದ [illegible] ಟೇಕ್ಸಿಗಳವರ [illegible] ಗಲಭೆ — ಟೇಕ್ಸಿಗಳ ಓಡಾಡುತ್ತಿದ್ದಾಗ [illegible] ಅವುಗಳನ್ನು ಬಲಾತ್ಕಾರದಿಂದ ನಿಲ್ಲಿಸಿ [illegible]ಗಳನ್ನು ಒಡೆದು [illegible] ಡ್ರೈವರರನ್ನೂ ಹೊರಗೆ ಎಳೆದು ಗಲಭೆ ಮಾಡಿದರು ಪೋಲೀಸರು ಬರಲು, ಅವರಿಗೂ [illegible]ರಿಗೂ ಹೊಯ್ಕೈಯಾಗಿ ಜಖಂಗಳಾಗಿವೆ

ಮುಂಬಾಯಿಯಲ್ಲಿ ಶಿಕ್ಷಣ

ಕಳೆದ ವರ್ಷ ಮುಂಬಾಯಿಯಲ್ಲಿ ಶಿಕ್ಷಣಪ್ರಗತಿಯು ಸಾಕಷ್ಟು ಆದುದಿಲ್ಲವೆಂದು ವರದಿಯೊಳಗಿನ ಅಂಕೆ ಸಂಖ್ಯೆಗಳಿಂದ ತಿಳಿದುಬರುತ್ತದೆ ೧೩೮ ಪ್ರಾಥಮಿಕ ಶಾಲೆಗಳು ಹಣವಿಲ್ಲದೆ ಮುಚ್ಚಲ್ಪಡಬೇಕಾಯಿತು ಇದರಿಂದ ೬೪೪೯ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಪ್ರತಿಬಂಧವುಂಟಾಯಿತು ವಿಶ್ವವಿದ್ಯಾಲಯದಲ್ಲಿ ಮಾತ್ರ [illegible] ವಿದ್ಯಾರ್ಥಿಗಳು ಹೆಚ್ಚಿರುವರು ಹಿಮ್ಮ ತರಗತಿಯ ವಿದ್ಯಾರ್ಥಿಗಳ ಸಂಖ್ಯೆ ೭೪೧೧ರಷ್ಟು ಕಡಿಮೆಯಾಯಿತು ಶಿಕ್ಷಣದ ಬಗ್ಗೆ ಕಳೆದ ವರ್ಷ ೧೬೬ ಲಕ್ಷ ರೂಪಾಯಿಗಳಷ್ಟು ಕಡಿಮೆಯಾಗಿ ಮಂಜೂರಾದುದೇ ಇದಕ್ಕೆ ಕಾರಣ

ದಿವಂಗತ ಪಟೇಲರ ಸ್ಮಾರಕ.
ಬೊಂಬಾಯಿ ಕೊರ್ಪೊರೇಶನಿನ ಠರಾವು.

ಹೇಗೂ, ಕೊನೆಗೆ ಬೊಂಬಾಯಿ ಮು। ಕೌನ್ಸಿಲಿನವರು ದಿವಂಗತ ವಿ ಜೆ ಪಟೇಲರ ತೈಲ ಚಿತ್ರವನ್ನು ಕೊರ್ಪೊರೇಶನ್ ಗೃಹದೊಳಗೆ ಇರಿಸಬೇಕೆಂದು ನಿಶ್ಚಯಿಸಿದರು ದಿ। ಪಟೇಲರು ಈ ಕೊರ್ಪೊರೇಶನಿಗೆ ಒಂದೊಮ್ಮೆ ಮೇಯರರಾಗಿದ್ದವರು.

ಬೊಂಬಾಯಿಯಲ್ಲಿ ಪಟೇಲರ ಶಿಲಾ ಪ್ರತಿಮೆಯೊಂದನ್ನೂ ಇರಿಸಬೇಕೆಂದು [illegible] ಪ್ರಯತ್ನಗಳಾಗಿವೆ.

ಕೆಮಲ್ ಪಾಶಾರ ಹೊಸ ಮಸೂದೆ.
ತುರ್ಕಿಸ್ಥಾನದ ಮಜೂರರ ಸ್ಥಿತಿಯು ಸುಧಾರಣೆ.

ತುರ್ಕಿಸ್ಥಾನದಲ್ಲಿ ಮಜೂರರ ಬಗ್ಗೆ ಹೊಸ ಕಾಯಿದೆ

[illegible] ಕೆಮಲ್ ಪಾಶರವರು ತುರ್ಕಿಸ್ಥಾನದ ರಾಷ್ಟ್ರೀಯ [illegible]ಸಭೆಯಲ್ಲಿ [illegible] ಹೊಸ ಮಸೂದೆಯನ್ನು ತಂದಿರುವರ

ಮುಷ್ಕರಗಳಾಗಬಾರದೆಂದೂ ಕಾರ್ಖಾನೆಗಳನ್ನು ಮುಚ್ಚಬಾರದೆಂದೂ ಮಸೂದೆಯು ನಿರ್ದೇಶಿಸುತ್ತದೆ

ದಿನವೊಂದರ ೧೪ ಘಂಟೆಗಳಿಂತ ಕೂಡ ಕೆಲಸ ಮಾಡುವವರು ಅಲ್ಲಿರುವರು ಇನ್ನುಮುಂದೆ ೧೨ ವಯಸ್ಸಿನೊಳಗಿನವರನ್ನು ಕಾರ್ಖಾನೆಗಳಲ್ಲಿ ಕೆಲಸಕ್ಕೆ ಹಚ್ಚಬಾರದು ೧೬ ವಯಸ್ಸಿನ ಮೇಲಣವರು ಮಾತ್ರ ರಾತ್ರಿಕಾಲದಲ್ಲಿ ಕೆಲಸಮಾಡಬಹುದು ನೂರಕ್ಕಿಂತ ಹೆಚ್ಚು ಜನರನ್ನು ನೇಮಿಸುವ ಕಾರ್ಖಾನೆಗಳು, ಮಜೂರರ ಬಗ್ಗೆ ಒಬ್ಬ ಡಾಕ್ಟರನನ್ನೂ ನೇಮಿಸಬೇಕು ಪ್ರತಿಯೊಬ್ಬ ಮಜೂರನೂ ವಿಮೆ ತೆಗೆಸಲೇ ಬೇಕು!

ಪ್ರತಿಯೊಂದು ಕಾರ್ಖಾನೆಯೂ ಸಿನೆಮ ಗೃಹಗಳೂ ರಾತ್ರೆ ೧೧ರೊಳಗೆ ಮುಚ್ಚಲ್ಪಡಬೇಕು ಬಂಡಿಗಳ ಚಲಾವಣೆಯು ರಾತ್ರೆ ೧೧-೩೦ರೊಳಗೆ ನಿಲ್ಲಬೇಕು ಕಡವುಗಳಲ್ಲಿ ದೋಣಿಗಳ ಸಂಚಾರವೂ ೧೧ ೩೦ರೊಳಗೆ ನಿಲ್ಲಿಸಲ್ಪಡುವುದು

ಹೆಸರುಗಳಿಗೂ "ತುರ್ಕಿ ಬಣ್ಣ" ಬರಬೇಕೆಂದು ಕೆಮಲ್ ಪಾಶರವರ ಹಟ ಇಬ್ಬರು ಗವರ್ನರರೂ ಬೇರೆ ಹಲವು ಮೇಲಾಧಿಕಾರಿಗಳೂ ತಮ್ಮ ಅರಬೀ ಹೆಸರುಗಳನ್ನು ಬದಲಾಯಿಸಿ ತುರ್ಕಿ ಹೆಸರುಗಳನ್ನಿಟ್ಟುಕೊಂಡಿರುವರು .

ಒಕ್ಸ್‌ಫರ್ಡಿನಲ್ಲಿ ಪ್ರೇತಬಾಧೆ

ಒಕ್ಸ್‌ಫರ್ಡಿನ ಎರಡು ಕೊಲೇಜುಗಳಲ್ಲಿ ಪ್ರೇತಬಾಧೆ ಆರಂಭವಾಗಿದೆಯಾಗಿ ತಿಳಿದುಬಂದಿದೆ

೧೦೦ ವರ್ಷಗಳ ಹಿಂದೆ ಅಲ್ಲಿಯ ಬಲ್ಲಿಯಲ್ ಕೊಲೇಜಿನಲ್ಲಿ ವಾಸವಾಗಿದ್ದ ಒಬ್ಬ ವಿದ್ಯಾರ್ಥಿಯನ್ನು ಬೆದರಿಸುವುದಕ್ಕೆಂದು ತಮಾಷೆಗಾಗಿ ಕೆಲವು ವಿದ್ಯಾರ್ಥಿಗಳು ಪ್ರೇತಗಳ ವೇಷದಿಂದ ಆತನಿಗೆ ಎದುರಾದರು ವಿದ್ಯಾರ್ಥಿಯು ಭಯದಿಂದ ಎದೆಯೊಡೆದು ಪ್ರಾಣಬಿಟ್ಟನು! ಈಗ ೫೦೦ ವರ್ಷಗಳ ನಂತರ ಆ ತಮಾಷೆಗೆ ಬಲಿಯಾದವರ ಪ್ರೇತವು (ತಮಾಷೆಗಾಗಿಯೇ?) ಬರುತ್ತಿದೆಯೆಂದು ಅಂಬೋಣ ಮೆರ್ಟನ್ ಕೊಲೆಜಿನಲ್ಲೂ ಇದೇ ಬಗೆಯಲ್ಲಿ ಪ್ರೇತಬಾಧೆಯಾರಂಭವಾಗಿದೆಯಂತೆ

ಶಯ್ಯಾಗೃಹದಲ್ಲಿ ಭೀಕರ ನಾಟಕ
ಗುಂಟೂರು ಮುನಿಸಿಪಲ್ ಕೌನ್ಸಿಲರ ಕೊಲೆ!

ಗುಂಟೂರಿನ ಸಾಹುಕಾರರು ಮತ್ತು ಮುನ್ಸಿಪಲ್ ಕೌನ್ಸಿಲರ ಬಾಪ್ಪು ವೀರಾಸುಲು ಎಂಬವರು, ತಮ್ಮ ಶಯ್ಯಾಗೃಹದಲ್ಲಿ ಕೊಲೆಮಾಡಲ್ಪಟ್ಟಿರುವರು ಕೊಲೆಗಾರನಾರೆಂದು ತಿಳಿದುಬಂದಿಲ್ಲ.

ಕತ್ತಿಯಿಂದೊಂದು ಪೆಟ್ಟು ಕುತ್ತಿಗೆಯ ಎಡಪಾರ್ಶ್ವಕ್ಕೆ ಬಿದ್ದುದು ತೋರಿಬಂದಿದೆ ರಕ್ತವು ಚಿಮ್ಮನೆ ಹೊರಚಿಮ್ಮುತ್ತಿರಲು, ವೀರಾಸುಲುರವರು ಪ್ರಾಣಭಯದಿಂದ ಶಯ್ಯಾಗೃಹದಿಂದ ಹೊರಟು ರಸ್ತೆಯ ಕಡೆಗೆ ಓಡಿಬಂದರು; ಅವರ ಹಿಂದಿನಿಂದಲೇ ಅವರ ಪತ್ನಿ! ರಸ್ತೆಗೆ ಬಂದು ಹತವೀರ್ಯರಾಗಿ ಬಿದ್ದವರನ್ನು ಆಸ್ಪತ್ರೆಗೆ ಸಾಗಿಸಲು, ಪ್ರಾಣವು ಹಾರಿಹೋಗಿದೆಯೆಂದು ತಿಳಿದುಬಂತು. ಈ ಭೀಕರ ನಾಟಕ ನಡೆದ ಸಮಯ— ರಾತ್ರಿ ೧೧-೩೦

ಜಪಾನ್ ನಗರದಲ್ಲಿ ಬೆಂಕಿ.
ಸಾವಿರಕ್ಕಿಂತಲೂ ಹೆಚ್ಚು ಜನರ ಆಹುತಿ!

ಜಪಾನಿನ ಹಕೋಡಾಟಿ ಎಂಬ ನಗರದಲ್ಲಿ ಆಕಸ್ಮಿಕವಾಗಿ ಬೆಂಕಿಯೆದ್ದು ನಗರದ ಹೆಚ್ಚಿನ ಭಾಗವನ್ನಾಕ್ರಮಿಸಿ ಮನೆಮಠಗಳನ್ನೆಲ್ಲ ಭಸ್ಮಮಾಡಿದೆ. ನಗರದೊಳಗಿನ ಇಪ್ಪತ್ತೇಳು ರಸ್ತೆಗಳಲ್ಲಿ ಇಪ್ಪತ್ತನಾಲ್ಕು ರಸ್ತೆಗಳು ಸಂಪೂರ್ಣ ನಾಶವಾಗಿರುವುವು. ಸರಕಾರೀ ಕಟ್ಟಡಗಳನೇಕ ಅಗ್ನಿಗೆ ತುತ್ತಾಗಿವೆ

ಬೆಂಕಿಯನ್ನು ನಂದಿಸುವ ಪ್ರಯತ್ನಗಳು ಸಫಲವಾಗಲಿಲ್ಲ, ಇನ್ನೂ ಉರಿಯುತ್ತಲೇ ಇದೆ! ಒಂದೂವರೆ ಲಕ್ಷ ಜನರು ನಿರಾಶ್ರಿತರಾಗಿರುವರೆಂದು ಅಂದಾಜು; ಸತ್ತವರ ಸಂಖ್ಯೆ ಸಾವಿರಕ್ಕೆ ಮಿಕ್ಕಿದೆ

ಮಂಗಳೂರು

ಶ್ರೀ ಚಂದ್ರಕಲಾ ನಾಟಕ ಮಂದಿರದಲ್ಲಿ ಕೆಲವು ಕಾಲದ ಹಿಂದೆ ಟಿಕೇಟು ಪಡಕೊಂಡು ಶ್ರೀನಿವಾಸನೆಂಬ ಹರಿಜನ ಗೃಹಸ್ಥನು ನಾಟಕವನ್ನು ನೋಡುತ್ತಿದ್ದಾಗ ಆತನನ್ನು ಹಿಂದೆ ಕರೆದು ಟಿಕೇಟನ್ನು ಪುನಹ ಪಡೆದು ವಾಪಾಸಿಗೆ ಕಳುಹಿಸಿದರೆಂದೂ; ಶ್ರೀ ಕೃಷ್ಣ ಸಿನೆಮಾದಲ್ಲಿಯೂ ಪಾಂಡೇಶ್ವರ ಬೋಳನೆಂಬವನು (ಕೆನರಾ ಹೈಸ್ಕೂಲಿನ ಹರಿಜನ ಪೇದೆ ಮೂಂಡೂಲೆಯ) ಟಿಕ್ಕೇಟು ಪಡೆದು ಕುಳಿತಿರಲು; ಆತನನ್ನು ಹಾಗೆಯೇ ಹೊರಗೆ ಕರೆದು ಕಳುಹಿದರೆಂದೂ ಅಪಾದನೆಗಳಿರದು ವಾಯಿದೆ ಬಂದಿವೆ; ಈ ರೀತಿ ಅವರು ಅನ್ಯಾಯ ಹೊಂದಿದರೆಂದು ಪ್ರವೇಶಿಸಿ ನ್ಯಾಯವನ್ನು ದಯಪಾಲಿಸಬೇಕೆಂದೂ ಬೇಡಿ ಅನೇಕ ಹರಿಜನರು ನಮ್ಮ ಮಾನ್ಯ ಜಿಲ್ಲಾ ದೊರೆಗಳವರಿಗೆ ಅರ್ಜಿ ಬರೆದುಕೊಂಡಿರುವರೆಂದು ತಿಳಿದುಬರುತ್ತದೆ.

ಕೋರ್ಟುಹಿಲ್ ಹಾಯರ್ ಎಲಿಮೆಂಟರಿ ಶಾಲೆಯ ಸ್ವಾಮಿ ಈಶ್ವರಾನಂದ ಲಿಟರರಿ ಎಸೋಸಿಯೇಶನಿನ ವರ್ಷೋತ್ಸವವು ಕಳೆದ ತಾ. ೨೨ನೇ ಶುಕ್ರವಾರ ಶ್ಯಾಮ ಘಂಟೆ ೭ಕ್ಕೆ ಶ್ರೀ ನಾರಾಯಣ ಕಿಲ್ಲರವರ ಅಧ್ಯಕ್ಷತೆಯಲ್ಲಿ ಬಿ. ಸಿ. ಮಿಶ್ಯನಿನ ಶಾಲಾ ಕಟ್ಟೋಣದಲ್ಲಿ ಜರಗಿತು. ಅನೇಕ ಪುರಪ್ರಮುಖರು ಈ ಸಮಾರಂಭಕ್ಕೆ ದಯವಾಗಿಸಿದ್ದರು! ಅಪರಾಹ್ನ ೪ಕ್ಕೆ ವಿದ್ಯಾರ್ಥಿಗಳೊಳಗೆ ತರ್ಕ ಸ್ಪರ್ಧೆ ನಡೆಯಿತು. ಸಾಯಂಕಾಲ ೭ಕ್ಕೆ ಪ್ರಾರ್ಥನೆ ನಡೆದು ಸಭಾರಂಭವಾಗಿ, ಗತವರ್ಷದ ವರದಿಯನ್ನು ಓದಲಾಯಿತು. ಅನಂತರ ಅಧ್ಯಕ್ಷ ಮಹಾಶಯರು ಸಾಹಿತ್ಯವಿಚಾರವನ್ನೆತ್ತಿ ಸುಮಾರು ಅರ್ಧ ತಾಸಿನ ತನಕ ಉಪಯುಕ್ತ ಸಲಹೆಗಳನ್ನೊಳಗೊಂಡ ಭಾಷಣ ಮಾಡಿದರು. ಸಭಾಂತ್ಯದಲ್ಲಿ ವಿದ್ಯಾರ್ಥಿಗಳು "ಚಿಕ್ಕಣ"ನೆಂಬ ಸಾಮಾಜಿಕ ನಾಟಕವನ್ನು ಮನೋರಂಜಕವಾಗಿ ಅಡಿಕೋಲಿಸಿಯಾಗಲು, ಧನ್ಯವಾದದೊಂದಿಗೆ ಸಭೆಯು ಮುಕ್ತಾಯವಾಯಿತು.

ಇದೇ ಬರುವ ಎಪ್ರಿಲ್ ತಿಂಗಳ ತಾ. ೧ನೇ ಆದಿತ್ಯವಾರ ಪ್ರಾತಃಕಾಲ ೭॥ ಘಂಟೆಗೆ ಪಾಂಡೇಶ್ವರದಲ್ಲಿರುವ ಸಿಟಿ ಆರ್ಯಸಮಾಜದ ಮಂದಿರದಲ್ಲಿ ಶ್ರೀ ಎ. ಬಾಲಕೃಷ್ಣ ಸಾಂಖ್ಯರು ದೇವಾರಾಧನೆ ಮತ್ತು ಧರ್ಮವ್ಯಾಖ್ಯಾನ ನಡೆಸುವರು, ಸರ್ವರಿಗೂ ಸುಸ್ವಾಗತವಿದೆ.

ಎಪ್ರಿಲ್ ತಿಂಗಳಲ್ಲಿ ನಮ್ಮ ನಗರದೊಳಗೆ ವಿದ್ಯುದ್ದೀಪಗಳು ಈ ಕೆಳಗಿನಂತೆ ಉರಿಸಲ್ಪಡುವುವು:—ತಾ. ೧ರಿಂದ ೪ರ ತನಕ—ಸಾಯಂಕಾಲ ೭ರಿಂದ ೧೧ರ ವರೆಗೆ; ತಾ. ೫ರಿಂದ ೬ರ ತನಕ—ರಾತ್ರಿ ೭ರಿಂದ ೧೧ರ ವರೆಗೆ; ತಾ ೭ರಿಂದ ೧೦—ರಾತ್ರಿ ೭ರಿಂದ ೧ರ ವರೆಗೆ ಮತ್ತು ಬೆಳಿಗ್ಗೆ ೫ರಿಂದ ೬ರ ವರೆಗೆ; ತಾ ೧೧ರಿಂದ ೧೩—ರಾತ್ರಿ ೭ರಿಂದ ೨ರ ವರೆಗೆ ಮತ್ತು ಬೆಳಿಗ್ಗೆ ೫ರಿಂದ ೬ರ ತನಕ; ತಾ ೧೪—೧೫ರಲ್ಲಿ ರಾತ್ರಿ ೮ರಿಂದ ೨ರ ವರೆಗೆ ಮತ್ತು ಬೆಳಿಗ್ಗೆ ೫ರಿಂದ ೬ರ ವರೆಗೆ; ತಾ. ೧೯ರಿಂದ ೨೪ರ ತನಕ—ರಾತ್ರಿ ೯ರಿಂದ ೨ರ ವರೆಗೆ ಮತ್ತು ಬೆಳಿಗ್ಗೆ ೫ರಿಂದ ೬ರ ವರೆಗೆ; ತಾ ೨೪ರಿಂದ ೨೬ರ ತನಕ—ಬೆಳಿಗ್ಗೆ ೫ರಿಂದ ೬ರ ವರೆಗೆ ಮಾತ್ರ; ತಾ. ೨೭ರಿಂದ ೩೦ರ ತನಕ ಬೆಳದಿಂಗಳು ಇರುವ ಪ್ರಯುಕ್ತ ದೀಪಗಳಿಲ್ಲ. ಜಂಕ್ಷನುಗಳಲ್ಲಿರುವ ದೀಪಗಳು ತಾ. ೧೧ರಿಂದ ೨೪ರ ತನಕ ರಾತ್ರಿ ೧ರ ತನಕ ಉರಿಯುವುವು

ಇದೇ ಎಪ್ರಿಲ್ ತಾ. ೧ರಿಂದ ೧೯೪೮ನೇ ಮಾರ್ಚ್ ತಾ. ೩೧ಕ್ಕೆ ಅಂತ್ಯವಾಗುವ ವರ್ಷಕ್ಕೆ, ತ್ರೈಮಾಸಿಕ ಅವಧಿಗೆ ಬೇಕಾಗುವ ಮೋಟರು ವಾಹನಗಳ ಲೈಸನ್ಸುಗಳನ್ನು ಒಂದೊಂದಾಗಿ ಯಾ ಒಮ್ಮೆಗೇ ಪಡಕೊಳ್ಳಬಹುದೆಂದೂ, ೧೯೪೭ನೇ ಎಪ್ರಿಲ್ ತಾ. ೧ಕ್ಕೆ ಆರಂಭವಾಗುವ ವರ್ಷದ ಲೈಸನ್ಸುಗಳು ಮಾತ್ರ ೧೯೪೭ನೇ ಮಾರ್ಚ್ ತಿಂಗಳ ತನಕ ದೊರೆವಂತಿಲ್ಲವೆಂದೂ ಜಿಲ್ಲಾ ಕಲೆಕ್ಟರ್ ದೊರೆಗಳವರು ಪ್ರಕಟಿಸಿರುವರು.

ಪುತ್ತೂರಿನ ಬಾಲಕಿ ಪದ್ಮಾವತಿಯು ಕಳೆದ ಗುರುವಾರ ರಾತ್ರಿ ೯—೩೦ಕ್ಕೆ ಇಲ್ಲಿಯ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ "ವಾಲ್ಮೀಕಿ ವಿಜಯ"ದ ಹರಿಕಥೆಯನ್ನು ಬಹು ಸೊಗಸಾಗಿ ಜರಗಿಸಿದರು. ವ್ಯವಸ್ಥಾಪಕರ ಕಡೆಯಿಂದ ಒಂದು ಚಿನ್ನದ ಪದಕವೂ ಕೊಡಲ್ಪಟ್ಟಿದಲ್ಲದೆ, ರಾಗಳಾದ ಎಂ. ಎಸ್. ಕಾಮತರೂ, ಪುಣಿಂಚತ್ತಾಯರೂ ಬಾಲಕಿಯ ಶ್ರೇಯೋಭಿವೃದ್ಧಿಯನ್ನು ಕುರಿತು ಹೃದಯಂಗಮವಾಗಿ ಭಾಷಣಮಾಡಿದರು.

"ಸಿಟಿ ಆರ್ಯಸಮಾಜ"ದ ಒಂದು ಸಭೆಯು ಪಾಂಡೇಶ್ವರದಲ್ಲಿರುವ ಸಮಾಜ ಮಂದಿರದಲ್ಲಿ ಇದೇ ತಿಂಗಳ ತಾ. ೨೩ನೇ ಆದಿತ್ಯವಾರ ಪ್ರಾತಃಕಾಲ ಘಂಟೆ ೮ಕ್ಕೆ ಜರಗಿತು. ಹವನ, ಸಂಧ್ಯಾ ಇತ್ಯಾದಿ ಕಾರ್ಯಗಳು ನೆರವೇರಿದ ನಂತರ ಈ ಕೆಳಗೆ ವಿವರಿಸಿದ ಮಹನೀಯರುಗಳನ್ನು ಕಾರ್ಯನಿರ್ವಾಹಕ ಸಮಿತಿಗೆ ಸರ್ವರ ಸಮ್ಮತಿಯಿಂದ ಆರಿಸಲಾಯಿತು. ಶ್ರೀಗಳಾದ ಎ. ಕಾಮರಾಯರು, ಅಧ್ಯಕ್ಷರು; ಬಿ. ಲಕ್ಷ್ಮೀದೇವ ವಿದ್ಯಾರ್ಥಿ, ಕಾರ್ಯದರ್ಶಿ; ಎ. ಬಾಲಕೃಷ್ಣ ನ್ಯಾಕ, ಕೋಶಾಧಿಕಾರಿ; ಕೆ. ರಾಮಚಂದ್ರ ನ್ಯಾಕರು, ಟಿ. ಎಚ್. ಪುತ್ರನ್ನಾಯರು, ಎ. ಎಚ್. ಬಂಗೇರರು, ಕೆ. ಕರಿಯಪ್ಪನವರು, ಬಿ. ಟಿ. ಕಿಲ್ಲಾಡಿಯವರು, ಗೋವಿಂದಾಚಾರ್ಯರು, ಕೊರಗ ಪಂಡಿತರು, ಕರ್ಕಾರ ವೈದ್ಯರು—ಇವರು ಸದಸ್ಯರು. ಪ್ರತಿ ತಿಂಗಳಿಗೊಮ್ಮೆ ಕಾರ್ಯನಿರ್ವಾಹಕ ಸಮಿತಿಯ ಸಭೆ ಜರಗತಕ್ಕದೆಂದೂ, ಪ್ರತಿ ಮೂರು ತಿಂಗಳಿಗೊಮ್ಮೆ ಎಲ್ಲ ಸದಸ್ಯರ ಸಭೆ ಜರಗಿಸಿ, ಸಮಾಜದ ಸರ್ವ ಕಾರ್ಯವಿವರಗಳನ್ನೂ ಲೆಕ್ಕಪತ್ರಗಳನ್ನೂ ಪರಿಶೀಲಿಸಿ ಪತ್ರಿಕೆಗಳ ಮೂಲಕ ಜನತೆಯ ಮುಂದಿಕ್ಕಬೇಕೆಂದೂ ತೀರ್ಮಾನಿಸಿದ ಮೇಲೆ ಶಾಂತಿಪಾಠದೊಂದಿಗೆ ಸಭೆಯು ಮುಕ್ತಾಯವಾಯಿತು.

ಜಿಲ್ಲಾ ಎಡ್ಯುಕೇಶನಲ್ ಕೌನ್ಸಿಲಿನ ಸಭೆಯೊಂದು ಕಳೆದ ಶುಕ್ರವಾರ ಎಡ್ಯುಕೇಶನಲ್ ಆಫೀಸಿನಲ್ಲಿ ಜರಗಿತು. ಮೊದಲಾಗಿ, ದುರುಪಯೋಗವಾದ ರೂಪಾಯಿ ೪೦೦೦ದ ಕುರಿತು ಅಧ್ಯಕ್ಷ ಮಹಾಶಯರು, ಆ ಹಣವೆಲ್ಲವೂ ಭರ್ತಿಮಾಡಲ್ಪಟ್ಟಿದೆಯೆಂದು ಸಭೆಗೆ ತಿಳಿಸಿದರು. ಆನಂತರ ಶಾಲಾ ಗ್ರಾಂಟುಗಳ ಒಟಾದವು ಚರ್ಚೆಗೆ ಬಂದು, ಪರ್ಯಾಲೋಚನೆ ನಡೆದು, ಡೆಪ್ಯುಟಿ ಇನ್ಸ್ ಪೆಕ್ಟರರು ಶಿಫಾರಸು ಮಾಡಿದ ಗ್ರಾಂಟುಗಳಲ್ಲಿ ರೂಪಾಯಿಗೆ ಮೂರಾಣೆಯಂತೆ ಕಡಿತಾಯ ಮಾಡಲ್ಪಟ್ಟಿತು. ಕಾರಣ, ಶಿಫಾರಸು ಮಾಡದ ಹಣಕ್ಕಿಂತ ಸರಕಾರೀ ಗ್ರಾಂಟು ಕಡಿಮೆಯಾದುದೇ ಆಗಿದೆ. ಆದಾಗಿ, ಶಾಲೆಗಳ ಆಡಳಿತದ ಬದಲಾವಣೆಯ ವಿಚಾರಗಳು ಚರ್ಚಿಸಲ್ಪಟ್ಟು, ಸಭೆಯು ಮುಕ್ತಾಯವಾಯಿತು.

ನಾಳೆ ಬೆಳಿಗ್ಗೆ ಕೆನರಾ ಹೈಸ್ಕೂಲಿನಲ್ಲಿ ನಡೆಯಲಿರುವ ದಿ। ಅ. ಸುಬ್ರಾಯ ಪೈಯವರ ಶಿಲಾಪ್ರತಿಮೆಯ ಪ್ರತಿಷ್ಠಾಪನಾ ಸಮಾರಂಭಕ್ಕೂ, ಸಾಯಂಕಾಲ ನಡೆವ ಸಭೆಗೂ ಹಳೆ—ಹೊಸ ವಿದ್ಯಾರ್ಥಿಗಳೂ ಹಿತಚಿಂತಕರೂ ತಪ್ಪದೆ ದಯಮಾಡಿಸಬೇಕೆಂದು ವಿನಂತಿಯಿದೆ. (ಕಾರ್ಯಕ್ರಮಗಳು ಕಳೆದ ವಾರದ ಸಂಚಿಕೆಯಲ್ಲಿ ಪ್ರಕಟವಾಗಿದೆ.

ಇದೇ ಬರುವ ಎಪ್ರಿಲ್ ತಾ. ೬ರಿಂದ ೧೩ರ ತನಕ ಒಂದು ವಾರವು "ರಾಷ್ಟ್ರೀಯ ಸಪ್ತಾಹ"ವಾಗಿ ಆಚರಿಸಲ್ಪಡುವ ಸಂಬಂಧ, ಆ ವಾರದಲ್ಲಿ ಸ್ಥಳೀಯ ಅ। ಭಾ। ಚ। ಸಂಘದ (ಕೊಡಿಯಾಲ್ ಬೈಲ್) ಖಾದಿ ಭಂಡಾರದಲ್ಲಿಯೂ ರಥಬೀದಿಯಲ್ಲಿನ ಮಂಗಳೂರು ಸ್ವದೇಶೀ ಸ್ಟೋರ್ಸ ನಲ್ಲಿಯೂ ಖಾದಿಯನ್ನು ಕೊಂಡುಕೊಳ್ಳುವವರಿಗೆ ರೂಪಾಯಿಗೆ ಒಂದಾಣೆಯಂತೆ ಡಿಸ್ಕೌಂಟ್ ಕೊಡಲಾಗುವುದೆಂದು ತಿಳಿದುಬರುತ್ತದೆ.

ಮಂಗಳೂರು ತಾಲೂಕು ಬೋರ್ಡಿನ ಸಭೆಯು ಕಳೆದ ಶನಿವಾರ, ಕೊನೆಯ ಬಾರಿ, ತಾ। ಬೋ। ಆಫೀಸಿನಲ್ಲಿ, ತಾ। ಬೋ। ಅಧ್ಯಕ್ಷರಾದ ಮಿ। ಎ. ಸಿ. ಗೋನ್ಸಾಲ್ವಿಸರ ಅಧ್ಯಕ್ಷತೆಯಲ್ಲಿ ಕೂಡಿಬಂತು. ಅಧ್ಯಕ್ಷರು ಬೋರ್ಡಿನ ನಿರ್ಯಾಣದ ಕುರಿತಾಗಿ ಭಾಷಣಮಾಡಿದರು. (ತಾಲೂಕು ಬೋರ್ಡುಗಳನ್ನು ತೆಗೆದುಹಾಕಿ ಡಿ। ಬೋರ್ಡುಗಳನ್ನು ವಿಭಜಿಸುವುದರ ಕುರಿತಾದ ಮಸೂದೆಯು ಇದೇ ಎಪ್ರಿಲ್ ತಾ. ೧ರಿಂದ ಜ್ಯಾರಿಗೆ ಬರುವುದು)

ಇದೇ ತಾ. ೨೪ಕ್ಕೆ ಅಂತ್ಯವಾಗುವ ಒಂದು ವಾರದ ನಮ್ಮ ಮಂಗಳೂರು ನಗರದ ಆರೋಗ್ಯದ ವರದಿ ಹೀಗಿದೆ:—ಮರಣಗಳು ೩೭; ಜನನಗಳು ೫೦. ಸಿಡುಬಿನಿಂದ ೪ ಮರಣಗಳಾಗಿವೆ. ಶ್ವಾನವಿಷದಿಂದ ೧ ಒಟ್ಟು ೩೯ ಮಂದಿಗೆ ಸಿಡುಬು ತಗಲಿದಂತೆ ತಿಳಿದುಬರುತ್ತದೆ.

ಮಣ್ಣಗುಡ್ಡೆಯ ಈಶ್ವರ ಭೂತಸ್ಥಾನದಲ್ಲಿ ಇದೇ ಬುಧವಾರ ದಿನ ಜರಗಿದ ಉತ್ಸವ ಸಂಬಂಧ ಸುಟ್ಟ ಮದ್ದು ಸ್ಫೋಟನಗೊಂಡು ಐದು ಮಂದಿ ವಿಷಮ ಪರಿಸ್ಥಿತಿಗೊಳಗಾದರು. ಇಬ್ಬರು ಬಾಲಕರ ಸ್ಥಿತಿಯು ತೀರ ನಿರಾಶಾಜನಕವಾಗಿದ್ದಲ್ಲಿ, ಒಬ್ಬನು ನಿನ್ನೆ ಮರಣಪಟ್ಟನಾಗಿ ಕೇಳುತ್ತೇವೆ.

ಶ್ರೀ ಕೃಷ್ಣ ಸಿನೆಮದಲ್ಲಿ ನಿನ್ನೆಯಿಂದ "ಹಿಯರ್ ಇಝ್ ಜೋರ್ಜ್" ಎಂಬ ಹಾಸ್ಯರಸ ಪ್ರಧಾನ ಚಿತ್ರವು ಪ್ರದರ್ಶಿಸಲ್ಪಡುತ್ತಿದೆ. ಇದರಲ್ಲಿ ಜೋರ್ಜ್ ಫ್ಲಾರ್ಬಿ ನೆಂಬ ಇಂಗ್ಲಾಂಡಿನ ಪ್ರಸಿದ್ಧ ಹಾಸ್ಯಗಾರನು ಅಭಿನಯಿಸಿರುವನು. ನಾಳೆಯಿಂದ "ಶಿಕಾರಿ".

ತಾಲೂಕುಗಳಿಂದ

ಕಾರ್ಕಳ:— ಶ್ರೀ ಪದ್ಮಸಾಲಿ ವೈಶ್ಯ (ಶೆಟ್ಟಿಗಾರ) ಸಮಾಜಸೇವಾ ಯುವಕ ಸಂಘದ ಆಶ್ರಯದಲ್ಲಿ ತಾ. ೨೪ರಲ್ಲಿ ಆದರ್ಶಪುರುಷನಾದ ಭಗವಾನ್ ರಾಮಚಂದ್ರನ ಜಯಂತ್ಯುತ್ಸವವು ಯಥಾಯೋಗ್ಯವಾಗಿ ಆಚರಿಸಲ್ಪಟ್ಟಿತು.

ಸಂಘದ ಹಾಗೂ ಸಮಾಜದ, ರಾಷ್ಟ್ರಭಾಷಾ ಪ್ರೇಮಿಗಳಾದ ವಿದ್ಯಾರ್ಥಿಗಳ ಸಲುವಾಗಿ ರಾ। ಮುತ್ತಯ್ಯ ಶೆಟ್ಟಿಗಾರರ ಅಧ್ಯಾಪಕತ್ವದಲ್ಲಿ ಒಂದು ಹಿಂದೀ ರಾತ್ರಿ ಶಾಲೆಯನ್ನು ತೆರೆಯಲಾಗಿದೆ.

ಪುತ್ತೂರು — ನಾಳೆ (ತಾ. ೩೧-೩-೧೯೪೭) ಇಲ್ಲಿಯ ತಾಲೂಕು ಬೋರ್ಡಿನ ಮೆಂಬರರಿಗೆ ಇಲ್ಲಿಯ ಎಲಿಮೆಂಟರಿ ಶಾಲಾ ಉಪಾಧ್ಯಾಯ ಸಂಘದವರು, ಬೋರ್ಡ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ನೆರೆದು, ಒಂದು ಮಾನಪತ್ರವನ್ನರ್ಪಿಸುವರು.

ಪಡುಬಿದ್ರೆ—ಸ್ಥಳೀಯ ಬೋರ್ಡ್ ಹಾ। ಎ। ಶಾಲೆಯ ಅಧ್ಯಾಪಕರುಗಳಾದ ಪೈ. ಆನಂದರಾಯರವರು ಮತ್ತು ರಾ। ಎಚ್. ಮಂಜುನಾಥ ಪ್ರಭು—ಇವರು ಕ್ರಮವಾಗಿ "ಶ್ರೀ ವಿದ್ಯಾರಣ್ಯ ಸ್ವಾಮಿ ಬೊಯ್ ಸ್ಕೌಟ್ ಟ್ರೂಪ್" ಹಾಗೂ "ಶ್ರೀ ಶಾರದಾ ಪ್ರಸಾದ ಕಬ್ಸ್ ಪೆಕ್" ಎಂಬೆರಡು ದಳಗಳನ್ನು ತೆರೆದು ಸುವ್ಯವಸ್ಥಿತ ಕ್ರಮದಲ್ಲಿ ತರಬೇತಿಗೊಳಿಸುತ್ತಿರುವರಲ್ಲದೆ, ಇದೇ ಕಳೆದ ತಾ. ೨೦ನೇ ಮಂಗಳವಾರ ಜರಗಿದ ಸ್ಥಳೀಯ ಜಾತ್ರೆಯ ದಿವಸ ಬಾಲಚಮೂಗಳ ಸಾಮಾನ್ಯ ಕರ್ತವ್ಯಗಳನ್ನೂ, ಕರ್ತವ್ಯ ಪೂರ್ತಿಯ ವಿಧಾನವನ್ನೂ ಕಾರ್ಯತಃ ತೋರಿಸಿಕೊಟ್ಟಿರುವರು.

ಮೂಡಬಿದ್ರಿ— ಇಲ್ಲಿಯ ಉಪಾಧ್ಯಾಯರ ಸಂಘದ ಸಾಮಾನ್ಯ ಆರನೇಯ ಸಭೆಯು ಇದೇ ತಿಂಗಳ ತಾ. ೧೭ರಲ್ಲು ಬೋರ್ಡ್ ಹುಡುಗರ ಶಾಲಾ ಮುಖ್ಯೋಪಾಧ್ಯಾಯರಾದ ಮ। ರಾ। ಎಂ. ನರಸಿಂಹ ಕಿಣಿಯವರ ಅಧ್ಯಕ್ಷತೆಯಲ್ಲಿ ಜರುಗಿತು

ಈ ಸಂಘದ ಬರುವ ಸಭೆಯು ಎಪ್ರಿಲ್ ತಾ. ೨೧ಕ್ಕೆ ಇಡಲ್ಪಟ್ಟಿದೆ

ಖಾಜೀ ಅಬ್ದುಲ್ ರಹಿಮಾನ್ ಸಾಹೇಬರವರನ್ನು ಪ್ರಾಂತ್ಯ, ಮಾರ್ನಾಡಿ, ಮಾರ್ನಾಡು, ಪುತ್ತಿಗೆ ಗ್ರಾಮಗಳಿಗೆ ಮಾನ್ಯ ಗವರ್ನರ್ ಇನ್ ಕೌನ್ಸಿಲರವರು ಖಾಜೀಯಾಗಿ ನೇಮಕಮಾಡಿದ್ದಾರೆಂಬುದು ಸಂತೋಷಕರ.

ಮೂಲ್ಕಿ:—ಇಲ್ಲಿ ಪ್ರಥಮವಾಗಿ ಸ್ಥಾಪಿತವಾದ "ಬಿಲ್ಲವ ಸಮಾಜ ಸೇವಾ ಸಂಘ"ಕ್ಕೆ—ಕೋಡಿ, ಹೆಜ್ಮಾಡಿ, ಚಿತ್ರಾಪು, ಕೊಳಚಿಕಂಬ್ಳ, ಕಾರ್ನಾಡು, ಪಂಜ, ಬೆಳ್ವಾಯಿ, ಮಾನಂಪಾಡಿ, ಕೊಲಕಾಡಿ, ಬಡಗಹಿತ್ಲು, ಬಾಳೆಹಿತ್ಲು, ಸಸಿಹಿತ್ಲು, ನಡಿಕರೆ, ಪಾದ್ಯಕೇರಿ, ನಡಿಕುದುರು, ಕರ್ನಿರೆ, ಮಟ್ಟು, ಕೊಳ್ಚಾರ್, ತಾಳಿಪಾಡಿ, ಐಳಂದೆ, ಅತ್ತೂರು, ಪುತ್ತೂರು, ಕರೀಲು, ಕೂಡೆತ್ತೂರು, ಮುಂತಾದ ಗ್ರಾಮಸ್ಥರು ಸಂಘದ ಆವಶ್ಯಕತೆಯನ್ನು ಮನಗಂಡು, ಯೋಗ್ಯರೀತಿಯಿಂದಲೂ, ಐಕ್ಯಮತ್ಯದಿಂದಲೂ ಮಾಡಿದ ಧನಸಹಾಯವು ಸ್ತುತ್ಯವೇ ಸರಿ. ಇತರ ಮಹನೀಯರ ಉದಾರತ್ವವನ್ನು ಸಂಘವು ನಿರೀಕ್ಷಿಸುತ್ತದೆಂದು ಸದ್ರಿ ಸಂಘದ ಕಾರ್ಯದರ್ಶಿಗಳು ತಿಳಿಸುತ್ತಾರೆ.

ತಾ. ೨೪ರಲ್ಲಿ ರಥೋತ್ಸವವು ಎಂದಿನಂತೆ ವಿಜೃಂಭಣೆಯಿಂದ ನಡೆಯಿತು. ದೇವಸ್ಥಾನದ ವಠಾರವೆಲ್ಲವೂ ವಿದ್ಯುದ್ದೀಪಗಳಿಂದಲಂಕೃತವಾಗಿತ್ತು. ರಾತ್ರೆಯಲ್ಲಿ ರಥವನ್ನೆಳೆಯುತ್ತಿದ್ದಾಗ, ರಥವು ಕೆರೆಯ ಪಕ್ಕದ ಗುತ್ತಿಗೆ ಬರುವಾಗ, ಆಯತಪ್ಪಿ ಚಕ್ರ ಹೂಳಿ ಗೊಯ್ಯಲ್ಪಟ್ಟಿತು; ಪ್ರಯಾಸದಿಂದ ಗಾಲಿಗಳ ಕೆಳಗಿನ ಮಣ್ಣನ್ನು ತೋಡಿ, ಮೇಲಕ್ಕೆಳೆದು ತಂದರು. ಯಾವ ಅಪಾಯವೂ ಸಂಭವಿಸದೊಂದು ಸಂತೋಷಕರ. ವಿದ್ಯುದ್ದೀಪಗಳ ಹೊರತಾಗಿ ಮಿಕ್ಕ ವಿದೇಶೀ ವಸ್ತು ಯಾ ವಸ್ತ್ರಗಳ ಹೆಚ್ಚಿನ ಆಡಂಬರವಿಲ್ಲದುದೊಂದು ಈ ವರ್ಷದ ವಿಶೇಷ!

ಕಾಸರಗೋಡು — ಇಲ್ಲಿಯ ಬೇಳ್ಪುಂಜ ಜೋಗಿನಂತಹ ರಮ್ಯವಾದ ಒಂದು ಜೋಗು, ಪೇಟೆಯಿಂದ ೨ ಮೈಲುಗಳ ದೂರದಲ್ಲಿ,—ಕುಂಬಳಾಮಾವು ಎಂಬಲ್ಲಿ ಕಾಣಸಿಕ್ಕಿದೆಯಾಗಿಯೂ, ಈ ಜೋಗಿಗೆ ಎರಡು ಹೊಂಡಗಳಿಂದ ಇಳಿದುಬರುವ ನೀರನ್ನು ನೋಡುವಾಗ ಆಶ್ಚರ್ಯವಾಗಿ ಕಂಡುಬರುತ್ತದೆಯಾಗಿಯೂ ಒಂದು ಬಾತ್ಮಿ.

ಇಲ್ಲಿ ತಾ. ೨೬ನೇ ದಿನ 'ದಿ ಕೆನರಾ ಕಾರ್ನಿವಲ್ ಶೋಸ್' ಎಂಬ ವಿನೋದ ಕಂಪೆನಿಯು ಮಂಗಳೂರಿನ ಫೋಟೋಗ್ರಾಫರ್ ಕೆ. ಗೋಪಾಲರಾಯರ ಚಾಲಕತ್ವದಲ್ಲಿ ತೆರೆಯಲ್ಪಟ್ಟಿದೆ.

ಕುಕ್ಕುಂದೂರು— ಕಳೆದ ವರ್ಷ ಕರ್ನಾಟಕ ಹಿಂದೀ ಪರಿಷತ್ತಿನ ಕಾರ್ಯನಿರ್ವಾಹಕ ಮಂಡಳಿಯ ಕಡೆಯಿಂದ ಶ್ರೀಮತಿ ಆನಂದಿಬಾಯಿಯವರೊಡನೆ ದಯಮಾಡಿಸಿದ ಮಿಸ್ಸೆಸ್ ಲಲಿತಾಬಾಯಿ ಸುಬ್ಬರಾವ್ ಇವರ ಸೂಚನೆ ಪ್ರಕಾರ ಇಲ್ಲಿಯ ಶ್ರೀ ದುರ್ಗಾ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಶಾಲಾ ಕೆಲಸದ ಬಿಡುಸಮಯದಲ್ಲಿ ಯೋಗ್ಯ ಉಪಾಧ್ಯಾಯರಿಂದ ಧರ್ಮಾರ್ಥವಾಗಿ ಸುಮಾರು ೨೫ ವಿದ್ಯಾರ್ಥಿಗಳು ಕಳೆದ ೪ ತಿಂಗಳ ಬಾಗ್ಯಾಕು ಹಿಂದೀ ಓದುಬರಹಾಭ್ಯಾಸ ಮಾಡುತ್ತಲಿರುವರು. ಹಿಂದೀ ಕಲಿಯಲಪೇಕ್ಷೆಯುಳ್ಳ ಉಮೇದ್ವಾರಿಗಳು ಈ ಸಂದರ್ಭವನ್ನು ದೇಶಭಾಷಾ ಪ್ರವರ್ಧನದ ದೃಷ್ಟಿಯಿಂದ ವಿನಿಯೋಗಿಸಬಹುದೆಂದು ಈ ಶಾಲಾ ಮೆನೇಜರರು ತಿಳಿಸುತ್ತಾರೆ.

ಉಡುಪಿ:— ಉಡುಪಿ ವ್ಯಾಯಾಮ ಸಂಘದ ತೃತೀಯ ವಾರ್ಷಿಕೋತ್ಸವವು ತಾ. ೨೭—೪—೧೯೪೭ನೇ ರವಿವಾರ ಜರಗಲಿದೆ. ಈ ಸಂದರ್ಭದಲ್ಲಿ ಶರೀರ ಸೌಂದರ್ಯ, ಭಾರ ಎತ್ತುವಿಕೆ ಮತ್ತು ಯೋಗಾಸನಗಳ ಒಂದು ಸ್ಪರ್ಧೆಯನ್ನು ಏರ್ಪಡಿಸಲಾಗಿದೆ. ಸ್ಪರ್ಧೆಯಲ್ಲಿ ಈ ತಾಲೂಕಿನ ತರುಣರಾರೂ ಭಾಗವಹಿಸಬಹುದು. ಪ್ರವೇಶ ಹಾಸಲು ೦—೮—೦, ಸಮಾರಂಭಗಳೂ ಸ್ಪರ್ಧೆಯೂ ಇಲ್ಲಿಯ ವಿಕ್ಟೋರಿಯಾ ಜುಬಿಲಿ ಯೂನಿಯನ್ ಕ್ಲಬ್ಬಿನ ವಠಾರದಲ್ಲಿ ಜರಗುವುವು.

ಕೊಡವೂರು: — ಇಲ್ಲಿಯ ಪಟೇಲರಾದ ಶ್ರೀ ಪುಟ್ಟಣ್ಣ ಯವರ ಗಣಪಯ್ಯ ಉಪಾಧ್ಯರು ರೂ. ೩೦೦೦ ಗಳ ನಗದು ಕಾಣೆಯಾಗಿರುವರೆಂದು ವರ್ತಮಾನವಿದೆ.

ಕುಂದಾಪುರ: ಇಲ್ಲಿಯ ಕೋಟ ಗ್ರಾಮದಲ್ಲಿ ಪುಟ್ಟಮ್ಮ ಎಂಬ ಸ್ತ್ರೀಯೊಬ್ಬಳು ರಾತ್ರಿ ದನವನ್ನು ತನ್ನ ಬಂದ ಒಂದು ಸಣ್ಣ ಹುಲಿಯನ್ನು ಹೊಡೆದು ಕೆಡವಿದಳು. ನೆರೆಹೊರೆಯವರು ಅದನ್ನು ಕೊಂದರು. ಅವಳಿಗೆ ಸರಕಾರವು ಬಹುಮಾನಿಸುವುದಾಗಿ ತಿಳಿದುಬರುತ್ತದೆ.

ಬಂಟವಾಳ:— ಇಲ್ಲಿ ಮೈಲಿಗೆ ರೋಗವು ಬಂಟವಾಳ ಬೋರ್ಡ್ ಹುಡುಗರ ಶಾಲೆಯ ಹತ್ತಿರ ಹಬ್ಬಿದ್ದರಿಂದ ಶಾಲೆಗೆ ೧೫ ದಿವಸಗಳ ರಜೆ ಕೊಟ್ಟಿರುವರು. ಇದರ ದೆಸೆಯಿಂದ ಬಂಟವಾಳ ರೇಂಜಿನ ಉಪಾಧ್ಯಾಯರ ಸಂಘದ ಮಹಾಸಭೆಯನ್ನು ತಾ. ೨೧ಕ್ಕೆ ಇಟ್ಟಿರುವರು.

ಎಸೆಂಬ್ಲಿಯಲ್ಲಿ ರಾತ್ರಿಯ ಅಧಿವೇಶನ
ಆರ್ಥಿಕ ಮಸೂದೆಯು ಪಾಸಾಯಿತು

ತಾ. ೨೮ರಲ್ಲಿ ಎಸೆಂಬ್ಲಿಯ ಅಧಿವೇಶನವು, ಆರ್ಥಿಕ ಮಸೂದೆಯನ್ನು ಚರ್ಚಿಸಲು, ನಡುರಾತ್ರಿ ೧—೫೦ರ ತನಕ ನಡೆಯಿತು.

ಟಪ್ಪಾಲು ದರಗಳು ಮತ್ತು ತೆರಿಗೆಗಳನ್ನು ಕಮ್ಮಿ ಮಾಡುವ ಕುರಿತಾಗಿ ಚರ್ಚೆಯಾಯಿತು.

ಟಪ್ಪಾಲು ದರಗಳಲ್ಲಿ, ರಿಪ್ಲೈ ಪೋಸ್ಟ್ ಕಾರ್ಡಿನ ದರವನ್ನು ೦—೧—೩ ಇರಿಸಬೇಕೆಂದು ಬಂದ ಸೂಚನೆಯನ್ನು ಮುಂದಿನ ವರ್ಷ ಪರ್ಯಾಲೋಚಿಸಲಾಗುವುದಂತೆ. ಬುಕ್ ಪೋಸ್ಟ್ ದರಗಳು—ಮೊದಲಿನ ೫ ತೊಲೆಗಳಿಗೆ ೯ ಪೈ ಮತ್ತು ಹೆಚ್ಚಿನ ಪ್ರತಿ ೫ ತೊಲೆಗಳಿಗೆ ೬ ಪೈ, ಹೀಗೆ ನಿಶ್ಚೈಸಲಾಯಿತು.

ಬೇರೆ ಕೆಲವು ವಿಚಾರಗಳೂ ಬಂದುವು. ಸದಸ್ಯರ ಟೀಕೆಯೂ ನಡೆಯಿತು. ಹೆಚ್ಚಿನ ತಿದ್ದುಪಡಿಗಳಿಲ್ಲದೆ ಮಸೂದೆಯು ಮಂಜೂರಾಯಿತು.

"ಅದ್ಭುತ ಶಕ್ತಿ"ಯ ಸಾಧುವಿನ ಆಗಮನ!
ಪಡುಬಿದರೆಯಲ್ಲಿ ಕೋಲಾಹಲ.

"ಅದ್ಭುತ ಶಕ್ತಿ"ಯ ಸಾಧುವೊಬ್ಬನು ಕೆಲದಿನಗಳ ಹಿಂದೆ ಪಡುಬಿದರೆಗೆ (ದಕ್ಷಿಣ ಕನ್ನಡ ಜಿಲ್ಲೆ) ಬಂದು, ಅಲ್ಲಿ ಕೋಲಾಹಲವನ್ನೆಬ್ಬಿಸಿರುವನು. ಕೊಟ್ಟಿತ್ತು ಘುಂಟಿಸುವುದು, ಕೊಟ್ಟತ್ತು ಕುಡಿಯುವುದು, ಸೋಡ್ತಿ ನಂಬರುಗಳನ್ನು ಹೇಳುವುದು, ಭವಿಷ್ಯ ನುಡಿಯುವುದು, ಇವೇ "ಅದ್ಭುತಶಕ್ತಿ"ಗಳಲ್ಲಿ ಕೆಲವು. ಅವನೊಡನೆ ಒಂದು ಯೋಗದಂಡವಿರುವಂತೆಯೂ, ಅದನ್ನವನು ಇಟ್ಟುದನ್ನು ಯಾರೂ ಕದಲಿಸಲಾರದಷ್ಟು ಆ ದಂಡಕ್ಕೂ "ಅದ್ಭುತಶಕ್ತಿ"ಯಿದೆಯೆಂದೂ ಅಂಬೋಣವಿದೆ.

ಸಮಾಚಾರವು ಊರಲ್ಲೆಲ್ಲ ಹರಡಿ, ಆಸುಪಾಸಿನ ಹಳ್ಳಿಗಳಿಂದಲೂ ಜನರು ಬಂದು ಕೂಡಿ, ಅವನನ್ನು ಪೀಡಿಸಲು, ಸಾಧುವು ಅಲ್ಲಿಂದ ಓಡಿಹೋಗಿ ಕಣ್ಮರೆಯಾದನು. (ಬಾತ್ಮಿ)

ಹಿಂದೂಸ್ಥಾನದ ಸೆರೆಮನೆಗಳ ಸುಧಾರಣೆ: ಇ. ಜನರಲರ ಪರಿಷತ್ತು

ಲಖ್ನೋ ನಗರದಲ್ಲಿ ಜೈಲು ಖಾತೆಗಳ ಇನ್ಸ್ಪೆಕ್ಟರ್ ಜನರಲರ ಪರಿಷತ್ತು ಒಂದು ಸೇರಿ ಈ ರೀತಿಯ ಠರಾವುಗಳನ್ನಿದುವು:—

ಅನೇಕ ವೇಳೆ ಜೈಲುಖಾತೆಯ ಅಧಿಕಾರಿಗಳೂ ಇತರ ವ್ಯಕ್ತಿಗಳೂ ಶ್ಲಾಘನೀಯ ಸಾಹಸಗಳನ್ನು ಪ್ರದರ್ಶಿಸಿದರೂ, ಅವರಿಗೆ ತಕ್ಕುದಾದ ಬಹುಮಾನವನ್ನು ಕೊಡಲಾಗದೆ, ಅಥವಾ ಅವರ ಸಾಹಸಕೃತ್ಯಗಳು ಸರಕಾರದಿಂದ ಗೌರವಿತವಾಗದಿರುವುದರಿಂದ ಈ ಸಭೆಯು (೧) ಎಲ್ಲಾ ತರಗತಿಯ ಜೈಲು ಕೆಲಸಗಾರರಿಗಾಗಿ – ಸಾಹಸಕೃತ್ಯಕ್ಕಾಗಿ ಮಾತ್ರ—ವೈಸರಾಯ ಪದಕವನ್ನು ಇಡಬೇಕಾಗಿಯೂ, (೨) ದೀರ್ಘಕಾಲದ ಸರ್ವಿಸಿಗಾಗಿಯೂ ಸದ್ಯುಕ್ತಾಗಿಯೂ "ಮೆರಿಟೋರಿಯಸ್ ಸರ್ವಿಸ್ ಮೆಡಲ್" ಎಂಬುದನ್ನಿಡಬೇಕಾಗಿಯೂ ನಿರ್ಧರಿಸಿಕೊಂಡಿತು

ಸೆರೆಯಲ್ಲಿನ ನೌಕರರ ಸಿಬ್ಬಂದಿಯಲ್ಲಿ ಮಾಡಬೇಕಾಗಿರುವ ಸುಧಾರಣೆಗಳನ್ನು ಚರ್ಚಿಸುತ್ತಾ ಈ ಮೇಲಿನ ಸಭೆಯು—ಸೆರೆಯೊಳಗಿನ ನೌಕರರಿಗಿರಬೇಕಾದ ಶ್ರದ್ಧೆಯ ದೃಷ್ಟಿಯಿಂದ—ಖಾಯಂ ಆಗಿರುವ ವಾರ್ಡರ್ ಸಿಬ್ಬಂದಿಯನ್ನು ಆಗತ್ಯವಾಗಿ ಹೆಚ್ಚಿಸಿ ಸದ್ಯಕ್ಕೆಂದು ಇರುವ (Temporary) ವಾರ್ಡರರ ಸಂಖ್ಯೆಯನ್ನು ಕೂಡಿದನ್ನು ಕಡಿಮೆಮಾಡಬೇಕೆಂದು ನಿಶ್ಚಯಿಸಿತು ಹೀಗೆ ಮಾಡದ ವಿನಹ ಸಿಬ್ಬಂದಿಯಲ್ಲಿ ಸಾಕಷ್ಟು ಶ್ರದ್ಧೆಯನ್ನುಂಟುಮಾಡುವ ಅನುಕೂಲವಿರುವುದಿಲ್ಲ ಸೆರೆಯ ಖಾತೆಯ ಸುಧಾರಣಾ ದೃಷ್ಟಿಯಿಂದ– ನಿಜವಾದ ರಜೆ ಮತ್ತು ಅಸ್ವಸ್ಥಗಳ ಸಂದರ್ಭಗಳಿಗಾಗಿ ಒಂದು ರಿಜರ್ವ್ ಸಿಬ್ಬಂದಿಯು ಬೇಕೆಂದೂ ವಿಶಿಷ್ಟ ದರ್ಜೆಯ ಕೈದಿಗಳ ಸಂಬಂಧ ಕೆಲಸಗಳಿಗಾಗಿ 'ಸ್ಪೆಶಲ್' ಆಗಿ ಆರಿಸಲ್ಪಟ್ಟ ಸಿಬ್ಬಂದಿಯನ್ನಿಡಬೇಕೆಂದೂ ಪ್ರತಿಯೊಂದು ಪ್ರಾಂತ್ಯದಲ್ಲಿ ಒಂದೊಂದು ಟ್ರೇನಿಂಗ್ ಶಾಲೆಯನ್ನು ತೆರೆಯಬೇಕೆಂದೂ ಮುಖ್ಯ ಪ್ರಾಮುಖ್ಯವಾಗಿ ಮೇಲ್ವಿಚಾರಣೆ ಮತ್ತು ಅಧಿಕಾರಯುಕ್ತ ಕೆಲಸಗಳಿರುವ ಜೈಲಿನ ಎಕ್ಸಿಕ್ಯೂಟಿವ್ ಅಧಿಕಾರಿಗಳನ್ನು ಬರಹದ ಒಹು ಭಾರದ ಕೆಲಸಗಳಿಂದ ತಪ್ಪಿಸಬೇಕೆಂದೂ ಯೋಜನೆಯಾಯಿತು

ಸೆರೆಮನೆಗಳನ್ನು ಸಂದರ್ಶಿಸುವ ಜನರ ಕರ್ತವ್ಯ ಮತ್ತು ಅಧಿಕಾರಗಳ ಕುರಿತು ವಿಮರ್ಶಿಯಾಗಿ—"ಜೈಲ್ ಮೆನ್ಯುವಲ್"ನಲ್ಲಿ ಸೆರೆಮನೆಗಳನ್ನು ಸಂದರ್ಶಿಸುವ ಅಧಿಕಾರಿಗಳಲ್ಲದವರಿಗೆ ಹೆಚ್ಚಿನ ಅಧಿಕಾರವನ್ನು ಕೊಡಲಾಗದೆ"ಯೆಂದೂ, 'ಹಾಗೆ ಸಂದರ್ಶಿಸ ಬರುವವರ ಸಂಖ್ಯೆಯನ್ನೂ ಭೇಟಿಯ ಸಮಯವನ್ನೂ ಬಲವಂತ ಮೇರೆಯಲ್ಲಿಡಬೇಕು' ಎಂದೂ ನಿಶ್ಚಯವಾಯಿತು, ಅಲ್ಲದೆ ಒಂದು ಸೂತ್ರವಾಗಿ "ಪ್ರೇಕ್ಟಿಸು"ನಲ್ಲಿರುವ ವಕೀಲರನ್ನು ಅಧಿಕಾರಿಗಳಲ್ಲದ ಸಂದರ್ಶನಗಾರರನ್ನಾಗಿ ನೇಮಿಸಬಾರದಾಗಿ ನಿರ್ಧಾರವಾಯಿತು

'ಎ' ಮತ್ತು 'ಬಿ' ಕ್ಲಾಸುಗಳ ಕೈದಿಗಳ ಆರೈಕೆಯ ಕುರಿತಾಗಿ ಈ ಸಭೆಯು ವಿಮರ್ಶಿಸಿ 'ಎ' ಕ್ಲಾಸ್ ಕೈದಿಗಳು ಸಕಾರಣವಾಗಿ ಸಾಕಾಗುವಷ್ಟು—ಅವರದೇ ಉಡುಗೆ ತೊಡಿಗೆಗಳನ್ನು ಉಪಯೋಗಿಸಿಕೊಳ್ಳುವಂತಾಗಬೇಕು, 'ಬಿ' ಕ್ಲಾಸ್ ಕೈದಿಗಳಿಗೆ ಜೈಲಿನ ಉಡಿಗೆಗಳನ್ನೇ ಕೊಡಬೇಕು, ಕೈದಿಗಳಿಗೆ ಧೋತಿಗಳನ್ನುಡಲು ಕೊಡುವುದರಿಂದ ಅವರು ತಲೆತಪ್ಪಿಸಿ ಓಡಲು ಅನುಕೂಲತೆಯನ್ನೇರ್ಪಡಿಸಿ ಕೊಟ್ಟಂತಾಗುತ್ತದೆ, ಇವರಿಗೆ ಕೊಡುವ ಆಹಾರವು ಎಲ್ಲಾ ಪ್ರಾಂತ್ಯಗಳಲ್ಲಿ ಸಾಕಷ್ಟು ಸಂಸ್ಕೃತೀಕರವೇ ಆಗಿದೆ ಎಂಬುದಾಗಿ ಈ ಪರಿಷತ್ತು ಅಭಿಪ್ರಾಯಪಟ್ಟಿತು

ಇನ್ನು 'ಎ' ಮತ್ತು 'ಬಿ' ಕ್ಲಾಸ್ ಕೈದಿಗಳನ್ನು ಸಾಮಾನ್ಯ ಜೈಲುಗಳಲ್ಲಿನ ಪ್ರತ್ಯೇಕ ಆವರಣಗಳೊಳಗಿಡಬೇಕೆಂದೂ, ಕೈದಿಗಳನ್ನು ಗುಂಪಾಗಿರಗೊಡದೆ ಪ್ರತ್ಯಪ್ರತ್ಯೇಕವಾಗಿರಿಸಬೇಕೆಂದೂ ನಿರ್ಧರಿಸಲಾಯಿತು. 'ಎ' ಮತ್ತು 'ಬಿ' ಕ್ಲಾಸ್ ಕೈದಿಗಳಿಗೆ ಯೋಗ್ಯ ಉದ್ಯೋಗಗಳನ್ನು ಕಲ್ಪಿಸಿಕೊಡಲು ಬಹಳ ಪ್ರಯಾಸಪಡಬೇಕಾಗಿರುವುದರಿಂದ, ಅವರ ಯೋಗ್ಯತೆಯ ಅನುಸಾರವಾಗಿ—ಅವರಿಗೆ ಮರದ ಕೆಲಸ, ಹೊಲಿಗೆ, ಬುಕ್ ಬ್ಯಾಂಡಿಂಗ್, ಬಾಸ್ಕೆಟ್ ಮಾಡುವಿಕೆ ಮೊದಲಾದ ಕೆಲಸಗಳನ್ನು ಕೊಡಬೇಕಾಗಿ ನಿಶ್ಚಯಿಸಲಾಯಿತು ಚುನಾಯಿತರಾದ ಬಿನ್-ಸರಕಾರೀ ಅಧಿಕಾರಿಗಳನ್ನು ಮುಖ್ಯಗಳನ್ನಾಗಿಯೂ, ವಾರ್ಡ್ ಓರ್ಡರ್ಲಿಗಳನ್ನಾಗಿಯೂ ಅಪರಾಧಿಗಳ ಮೇಲ್ವಿಚಾರಕರನ್ನಾಗಿಯೂ ನೇಮಕಮಾಡಿದರೆ ಅಡ್ಡಿಯಿಲ್ಲವೆಂದು ಈ ಪರಿಷತ್ತಿನ ಅಭಿಪ್ರಾಯ.

'ಎ' 'ಬಿ' ತರಗತಿಗಳ ಕೈದಿಗಳಿಗೆ ಶಿಕ್ಷೆ ವಿಧಿಸುವ ವಿಷಯದಲ್ಲಿ ಈ ಪರಿಷತ್ತು ನಿರ್ಧರಿಸಿದ್ದೇನೆಂದರೆ –ಶಿಕ್ಷೆ ಕೊಡಬೇಕಾಗಿರುವ ವೇಳೆಯಲ್ಲಿ ಈ ಮೇಲಿನ ತರಗತಿಗಳ ಕೈದಿಗಳನ್ನು ಕೆಳತರಗತಿಗಿಳಿಸಿ, ಕಡಿಮೆಯೆಂದರೆ, ಅವರಿಗೆ ಮೂರು ತಿಂಗಳುಗಳ ಶಿಕ್ಷೆ ವಿಧಿಸಬೇಕೆಂದೂ ಚಡಿ ಹೊಡೆಯುವುದರ ಬದಲಿಗೆ ಇಂತಹ ಕೈದಿಗಳಿಗಿರುವ ಎಲ್ಲಾ ರಿಯಾಯಿತಿಗಳನ್ನು ಹಿಂದೆಗೆದು ಅವರನ್ನು ಪ್ರತ್ಯೇಕ ಕೋಣೆಯಲ್ಲಿಡಬೇಕು ಹಾಗೆ ಚಡಿ ಹೊಡೆಯುವುದು ಅಗತ್ಯವೆಂದಾದರೆ ಅದನ್ನು ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರ ಅಥವಾ ಸ್ಥಳೀಯ ಸರಕಾರದವರ ಸಮ್ಮತಿಪಡೆದ ಬಳಿಕ ಮೊದಲೇ ನೆರವೇರಿಸಿ ಬಿಡಬೇಕ ಕೈದಿಗಳಿಗೆ ಶುಶ್ರೂಷೆ ನಡೆಸುವುದಕ್ಕಾಗಿ ಹೊರಗಿನ ವೈದ್ಯರು ಜೈಲಿನೊಳಗೆ ಬರದಂತೆ ವ್ಯವಸ್ಥೆ [illegible]ಬೇಕು, ಒಂದು ವೇಳೆ ಬರುವುದಾದರೆ ಜೈಲ್ ಸ್ಥಳೀಯ ಮೆಡಿಕಲ್ ಆಫೀಸರರ ಮತ್ತು ಸರಕಾರದ ಅನುಜ್ಞೆಯ ಮೇರೆಗೆ ಮಾತ್ರ ಕಳಿಸಬೇಕು

ಕ್ಷಯ ರೋಗಿಗಳನ್ನು ಕುಷ್ಠ ರೋಗಿಗಳನ್ನು ಇತರ ಕೈದಿಗಳಿಂದ ಪ್ರತ್ಯೇಕಿಸಿಡಬೇಕೆಂಬ ಕುರಿತು ಈ ಪರಿಷತ್ತು ಮತಕೊಡುತ್ತಾ ಇಂತಹ ಕೈದಿಗಳ ಪ್ರವೇಶವಾದಲ್ಲಿ, ಆ ವಿಷಯವನ್ನು ಪೋಲೀಸರೂ ಮೆಜಿಸ್ಟ್ರೇಟರೂ ಜೈಲಧಿಕಾರಿಗಳಿಗೆ ತಿಳಿಸಬೇಕು ಇಂತಹ ಅಪರಾಧಿಗಳನ್ನು ಕಠಿಣ ಕಾವಲಿನಲ್ಲಿರಿಸುವುದಲ್ಲದೆ, ಇವರು ಅಸ್ವಸ್ಥರಾದರೆ ಇವರನ್ನು ಆಸ್ಪತ್ರೆಗಳಿಗೆ ಕೊಂಡೊಯ್ಯದೆ ಅವರ ಸೆರೆಯೊಳಗೇ ಚಿಕಿತ್ಸಿಸಬೇಕು ಒಂದೇ ಜೈಲಿನ ಒಂದು ದೊಡ್ಡ ಆವರಣದೊಳಗೆ ಇವರನ್ನು ಇಡುವುದಕ್ಕಿಂತ ಪ್ರತಿಯೊಂದು ಜೈಲಿನಲ್ಲಿ ಇಂತಹ ಕೈದಿಗಳಿಗಾಗಿ ಸಣ್ಣ ಸಣ್ಣ ಕೋಣೆಗಳನ್ನು ಕಟ್ಟುವುದು ಹಿತ ಎಂದು ಅಭಿಪ್ರಾಯಪಟ್ಟಿತು

ನಿರಶನವ್ರತಧಾರಿಗಳ ಕುರಿತಾಗಿ ಪರಿಷತ್ತು ಅಭಿಪ್ರಾಯಪಡುತ್ತಾ—ಅವರಿಗೆ ಕೃತ್ರಿಮವಾಗಿ ಆಹಾರವನ್ನುಣಿಸುವ ಅಥವಾ ಉಣಿಸಬಾರದಿರುವ ಅಧಿಕಾರವನ್ನು ಸಂಬಂಧಪಟ್ಟ ಡಾಕ್ಟರರಿಗೆ ಬಿಟ್ಟುಕೊಡಬೇಕು ಈ ಕುರಿತು ಈ ಸೂಚನೆಗಳಾದುವು –

೧ ನಿರಶನವ್ರತಿಗಳನ್ನು ಪ್ರತ್ಯೇಕವಿರಿಸಬೇಕು ೨ ನಿರಶನವ್ರತಿಗಳಿಗೆ ಚಡಿಯ ಶಿಕ್ಷೆಯನ್ನು ವಿಧಿಸಿದರೆ ಫಲಕಾರಿ ೩ ಅವರು ಉಪವಾಸ ಬಿಡದೆ ಇದ್ದಲ್ಲಿ, ಅವರಿಗೆ ಬೇಯಿಸಿದ ಆಹಾರವನ್ನು ಕೊಡಬಾರದು

ಮದರಾಸು ಕೌನ್ಸಿಲು

ತಾ [illegible]ರಲ್ಲಿ ಜರಗಿದ ಮದರಾಸು ಕೌನ್ಸಿಲಿನ ಅಧಿವೇಶನದಲ್ಲಿ, ಆಯಾ ವಿಭಾಗಗಳಲ್ಲಿ ಕಾರ್ಯನಿರ್ವಹಣಕ್ಕೆ ಬೇಕಾಗುವ ವೆಚ್ಚಗಳು ಈ ಕೆಳಗೆ ಕಾಣಿಸಿದಂತೆ ಮಂಜೂರಾದುವು—

ವ್ಯವಸಾಯ ರೂ ೧೬,೭೭,೮೦೦, ಪಶುವೈದ್ಯಾಲಯಗಳು ರೂ ೮,೫೯,೬೦೦, ಸಹಕಾರ ಸಂಘಗಳು ರೂ ೧೧,೦೩,೬೦೦; ಸಿಂಚೋನಾ ತೋಟಗಳು ರೂ. ೫,೬೪,೧೦೦, ಕೈಗಾರಿಕೆಗಳು ರೂ ೧೧,೫೩,೩೨೦; ಛತರಿಸ್ ರೂ. ೫,೫೯,೯೦೦, ಇತರ ರಿಸರ್ವ್ ಇಲಾಖೆಗಳು ರೂ. ೯,೬೯,೭೦೦; ಟ್ರಾನ್ಸ್‌ಫರ್ಡ್ ಇಲಾಖೆಗಳು ರೂ. ೧೧,೬೪,೦೩೦; ಸಿವಿಲ್ ವರ್ಕ್ಸ್ ರೂ ೪೫,೭೦,೬೦೦; ಸಿಬ್ಬಂದಿ ಇತ್ಯಾದಿ ರೂ. ೩೨,೨೬,೦೦೦; ಸಿವಿಲ್ ವರ್ಕ್ಸ್‌ಗಳಿಗೆ ಗ್ರಾಂಟುಗಳು ರೂ ೬೧,೫೫,೬೦೦, ಕ್ಷಾಮಪೀಡಿತರಿಗೆ ಸಹಾಯದ್ರವ್ಯ ರೂ ೧,೦೦,೦೦೦, ಪೆನ್ಶನುಗಳು ರೂ ೬೪,೮೩,೫೦೦; ಸ್ಟೇಶನರಿ ಮತ್ತು ಮುದ್ರಣ ರೂ. ೧೭,೮೪,೪೦೦, ಇತರ ಸರ್ವಿಸುಗಳು ರೂ. ೪,೩೭,೪೦೦, ಏಜನ್ಸಿ ಟ್ರಾಕ್ಟುಗಳು ರೂ ೨೧,೫೫,೯೦೦, ಇಂಗ್ಲಾಂಡಿನಲ್ಲಿ ವೆಚ್ಚಗಳು (ವ್ಯಾಪಾರ ಸಂಬಂಧ) ರೂಪಾಯಿ ೪,೦೩,೬೦೨, ಕಂದಾಯ ರಿಫಂಡ್ ರೂಪಾಯಿ ೮,೦೭,೧೦೦, ಸಾಲಗಳ ಖಾತೆಯಲ್ಲಿ ರೂಪಾಯಿ ೫೫,೧೩,೭೦೦

ಇದಾದ ನಂತರ, ಕೌನ್ಸಿಲಿನ ಅವಧಿಯನ್ನು ಮತ್ತೊಂದು ವರ್ಷಕ್ಕೆ ಬೆಳೆಸಿದೆಯೆಂಬ ಮಾನ್ಯ ಗವರ್ನರರ ಅಪ್ಪಣೆಯನ್ನು ಅಧ್ಯಕ್ಷರು ಓದಿ ಹೇಳಿದರು

ಸಂತಾನನಿರೋಧ ಚಳವಳಿ ನಡೆಯುತ್ತಿದೆಯಷ್ಟೆ?—ಸರಕಾರದವರು ಈ ಚಳವಳಿಕ್ಕೆ ಉತ್ತೇಜನ ಕೊಡುವ ಸಲುವಾಗಿ ಅಲ್ಲಲ್ಲಿ ಇದರ ಸಂಸ್ಥೆಗಳನ್ನೂ ಸ್ಥಾಪಿಸುವ ವಿಚಾರ ಮಾಡುತ್ತಿರುವರೆಂಬ ಕುರಿತು ಕೌನ್ಸಿಲಿನಲ್ಲಿ ಪ್ರಶ್ನೋತ್ತರಗಳಾದುವು ಕ್ರೈಸ್ತರ ಪರವಾಗಿ ಮಿ ಎ ಟಿ ಪನ್ನೀರ್ಸೆಲ್ವಮರು ಆವೇಶಪೂರ್ಣವಾಗಿ ಮಾತಾಡುತ್ತ, ಸರಕಾರವು ಸರ್ವಥಾ ಸಂತಾನ ನಿರೋಧದ ಪ್ರಶ್ನೆಯನ್ನು ತೆಗೆದುಕೊಂಡು ಈ ಚಳವಳಿಕ್ಕೆ ಉತ್ತೇಜನ ಕೊಡಬಾರದಾಗಿ ತಿಳಿಸಿದರು ಜಸ್ಟಿಸ್ ರಮೇಶಮರವರಂಥಹ ಹೈಕೋರ್ಟು ಜಡ್ಜರು ಸಂತಾನ ನಿರೋಧ ಚಳವಳಿಯನ್ನು ಕುರಿತು ಉತ್ತೇಜಕವಾದ ಭಾಷಣಗಳನ್ನು ಮಾಡಿದ್ದು ನ್ಯಾಯವಲ್ಲವೆಂದೂ, ಸರಕಾರದವರು ಅದಕ್ಕೆ ತಡೆ ಹಾಕಬೇಕೆಂದೂ ಕೇಳಿಕೊಂಡರು

ಉತ್ತರವಾಗಿ ಸರ್ ಪಿ ರಾಜರು, ಸಂತಾನನಿರೋಧ ಚಳವಳಿಯ ಪ್ರಶ್ನೆಯನ್ನು ಸದ್ಯಕ್ಕೆ ಸರಕಾರವು ಕೈಗೆ ತಂದುಕೊಳ್ಳುವುದಿಲ್ಲವೆಂದೂ, ಇಂತಹ ಚಳವಳಿಯನ್ನು ಪ್ರೋತ್ಸಾಹಿಸುವ ಆವಶ್ಯಕತೆಯನ್ನು ಕಾಣುವುದಾದಲ್ಲಿ ದೇಶದ ಪ್ರಮುಖ ವೈದ್ಯರ ಅಭಿಪ್ರಾಯಗಳನ್ನೂ ಅನುಭವಗಳನ್ನೂ ಕೇಳಿಯೇ ಯಾವುದಾದರೊಂದು ನಿರ್ಧಾರಕ್ಕೆ ಬರಬಹುದೆಂದೂ ತಿಳಿಸಿದರು

NOTICE.

Motor vehicles Taxation

Licence-1934 35

It is notified for general information that for the next official year, 1st April 1934 to 31st March 1935, licences may be obtained on demand for one, two, three or four consecutive quarters at the same time But no licences for the quarters beginning 1st April 1935 will be available till March 1935

E M Gawne, Esquire I C S,

Collector and District

Magistrate of South Kanara

ರೂಪಾಯಿಗೆ ೧೬ ಆಣೆ ನಿಜ;

ಆದರೆ, ಅದೇ ರೂಪಾಯಿಯು ಸಾವಿರಾರು ರೂಪಾಯಿಗಳನ್ನು ದುಡಿಯಬಲ್ಲುದು.

ಪರೀಕ್ಷೆಮಾಡಿ ನೋಡಬೇಕಾದರೆ,

ಕೂಡಲೆ ಒಂದು ರೂಪಾಯಿಯ ಒಂದು ಟಿಕೇಟು ಕೊಂಡನ್ನು ಕೊಂಡುಕೊಳ್ಳಿರಿ;

೫ ತುಂಡುಗಳ ಟಿಕೇಟಿಗೆ

೫ ರೂಪಾಯಿ ಬೆಲೆ.

ದೊರೆತರೆ, ರೂ ೧೦ರಿಂದ ರೂ. ೩೫೦೦೦ ತನಕವೂ ಬಹುಮಾನಗಳು ದೊರೆಯಬಹುದು!

ಕೆನರಾ ಹೈಸ್ಕೂಲ್ ಮತ್ತು ಕೆನರಾ ಗರ್ಲ್ಸ್ ಸ್ಕೂಲ್‌ಗಳ ಸಹಾಯಾರ್ಥವಾಗಿ ನಾಗರಿಕರು ಏರ್ಪಡಿಸಿರುವ

ಅತಿ ಮಹತ್ವದ ಸೋಡ್ತಿ

ಎಲ್ಲ ಮಾಹಿತಿಗೆ ಕೂಡಲೆ ಬರೆಯಿರಿ ವಿಳಾಸ —

Hon Secretary, CANARA HIGH SCHOOL Raffle Committee,

Mang lore

(ಹಿನೇ ಪುಟದಿಂದ ಮುಂದುವರಿದುದು)

ಮತ್ತೊಂದದ್ಭುತ! ಭೀಕರ ವನ್ಯಜಂತುಗಳು ಕುರಿಮರಿಗಳಂತೆ ಸಾಧುಸ್ವಭಾವವನ್ನು ತಾಳಿರುವುವು–ಆಕಸ್ಮಿಕವಾಗಿ! ಭೂಕಂಪದಿಂದ ಭಯಗೊಂಡು, ಕಂಗಾಲಾಗಿ ಈ ಗುಣವು ಅವುಗಳಿಗೆ ಬಂದಿರಲೂ ಬಹುದು ಆದರೆ, ಅವು ತಮ್ಮ ಕ್ರೂರಸ್ವಭಾವವನ್ನು ಬಿಟ್ಟಿರುವುದೊಂದು ಖಂಡಿತ

ಭೂಕಂಪವು ನಗರಗಳನ್ನು ಮಾತ್ರವಲ್ಲ —ಘೋರ ಅಡವಿಗಳನ್ನೂ ಬಿಡಲಿಲ್ಲ ಅಡವಿಗಳು ಚೂರಾಗಿವೆ, ಮರಗಳುರುಳಿವೆ; ಭೂಭಾಗವಾಗಿ ಮುರಳಿದ್ದಿದೆ, ನೀರಿನ ಬುಗ್ಗೆಗಳೆದ್ದಿವೆ, ಪರ್ವತಗಳೊಡೆದು ಅಡವಿಗಳನ್ನು ಮುಚ್ಚಿಬಿಟ್ಟಿವೆ ನೇಪಾಳ ಮತ್ತು ಅಸ್ಸಾಮುಗಳಲ್ಲಿದ್ದ ಶಿಕಾರಿ ವನಗಳೀಗ ಬಂಜರುಬಿದ್ದಿವೆ! ನೀರಿನ ಚಿಕ್ಕ ನದಿಗಳೇ ಹೊರಟು, ವನ್ಯಜಂತುಗಳನ್ನು ಸಾವಿರಗಟ್ಟಳೆಯಲ್ಲಿ ತೇಲಿಸಿಕೊಂಡು ಹೋಗಿವೆ ನೂರಾರು ಮೃಗಗಳು ಗುಡ್ಡಗಳು ಜರಿದು ಬೀಳುವಾಗ, ಮರಗಳು ಮುರಿದು ಬೀಳುವಾಗ, ಅವುಗಳಡಿಯಲ್ಲಿ ಜಜ್ಜಿ, ಹೂತು ಹೋಗಿವೆ ಉಳಿದ ಕೆಲವೇ ಮೃಗಗಳಿಗೆ ಭೀತಿಯು ನಾಟಿಕೊಂಡಿದೆ, ಅವುಗಳಿಗಿನ್ನು ಮನುಷ್ಯನ ಅಥವಾ ಇತರ ಸಾಧುಪ್ರಾಣಿಗಳ ಬೇಟೆಯೇ ಬೇಡವಾದಂತಿದೆ. ಅವು "ನಮ್ಮನ್ನು ಜೀವಿಸಗೊಡಿರಿ!" ಎಂದು ದೈನ್ಯದಿಂದ ಬೇಡುತ್ತಿರುವುವೋ ಎಂಬಂತೆ, ತಮ್ಮ ಕ್ರೂರ ಸ್ವಭಾವವನ್ನು ನೀಗಿ, ಸಾಧುವಾಗಿ ಸಂಚರಿಸುತ್ತಿರುವುವು

ಹುಲಿಗಳು ಆಹಾರಕ್ಕಾಗಿ ಹಳ್ಳಿಗಳ ಬಳಿಯಲ್ಲಿ ಸಂಚರಿಸುವುವು, ಆದರೆ ಗರ್ಜನೆಯಿಲ್ಲ. ಹಸಿದಿರುವುವಾದರೂ ಪ್ರಾಣಿಗಳ ಬೇಟೆಯಿಲ್ಲ ಇವುಗಳನ್ನು ನೋಡಿ ಗ್ರಾಮವಾಸಿಗಳು ಈಗ ಹೆದರುವುದಿಲ್ಲ ಭೂಕಂಪವು ತಂದುಕೊಟ್ಟ ಭೀತಿಯು ಮೃಗಗಳನ್ನೂ ಇಷ್ಟು ಆವರಿಸಬೇಕೇ! ಅದ್ಭುತವಿದು!

ಭೂಕಂಪವು ದುಃಖ ದಾರಿದ್ರ್ಯ ಮರಣಗಳನ್ನು ತಂದಿತು ಆದರೆ, ಅದರೊಂದಿಗೆ ಮನುಷ್ಯ ಮತ್ತು ಮೃಗಗಳೊಳಗೆ ಬಾಂಧವ್ಯವನ್ನೂ ಇಷ್ಟು ತಂದಿತು ಎಂದು ಜನರಾಡಿಕೊಳ್ಳುವರು!

ವಿವಿಧ ವಿಷಯ.

ಜೇಬ್ಕಾಸುಗಳ ಯುದ್ಧ ನಾವೆ.

ಜಪಾನಿನ ಕೆಲವು ನೌಕಾ ಅಧಿಕಾರಿಗಳು ಒಂದು ಹೊಸ ತತ್ವ ಹೊರಡಿಸಿರುವರು,—ಪ್ರತಿಯೊಬ್ಬ ನೌಕಾ ಸೈನಿಕನು ದಿನಕ್ಕೊಂದು ಜೇಬ್ಕಾಸಿನಂತೆ ಹಣಗ ತೆರುತ್ತ ಬರಬೇಕು. ಮೂರು ವರ್ಷಗಳಲ್ಲಿ ಈ ಹಣದ ಮೊತ್ತವು ಒಂದು ದೊಡ್ಡ ಯುದ್ಧನಾವೆಯನ್ನು ಕೊಂಡುಕೊಳ್ಳುವಷ್ಟಾಗುವುದು. ಈ ಹಣದಿಂದ ಒಂದು ದೊಡ್ಡ ಯುದ್ಧನಾವೆಯನ್ನು ಕೊಂಡುಕೊಂಡು ಜಪಾನಿನ ನೌಕಾಬಲವನ್ನು ತಮ್ಮ ಸ್ವಪ್ರಯತ್ನದಿಂದಲೇ ಹೆಚ್ಚಿಸಿದಂತಾಗುವುದು.

೧೧೮ರಲ್ಲೂ ಸಬಲನು!

ಹೋಲ್ ಸೌತ್‌ವೇಲ್ಸಿನ ಜೇಮ್ಸ್ ಸ್ಮಿತ್ ಎಂಬಾತನ ವಯಸ್ಸು ೧೧೮! ಈಗಲೂ ಒಂದು ತಾಸಿನ ನಡಿಗೆ ನಡೆಸಬಲ್ಲನು; ಒಂದು ಮೈಲು ನಡಿಗೆ ಆಯಾಸವಿಲ್ಲದೆ ನಡೆಯಬಲ್ಲನು. ಆತನ ಹಿರಿಯ ಮಗಳ ವಯಸ್ಸು ೮೯! ಕಿರಿಯವಳ ವಯಸ್ಸು ೫೩.

ಮಕ್ಕೊಬ್ಬನಿದ್ದಾನೆ!

ಯಾರು?—ಜಾಕ್ ಗುಲ್‌ಖಾನನೆಂಬವನು; ಕೋಹತ್ ಬಳಿಯಲ್ಲಿ ೧೩೦ ವಯಸ್ಸಿನವನು! ಪ್ರಪಂಚದಲ್ಲಿ ಇವನೇ ಈಗ ಅತಿ ವೃದ್ಧನೆನ್ನುವರು. ಇವನಿಗೆ ಇಬ್ಬರು ಗಂಡು ಮಕ್ಕಳು. ಹಿರಿಯವನ ವಯಸ್ಸು ೧೦೦; ಕಿರಿಯವನ ವಯಸ್ಸು ೯೦. ಈ ವೃದ್ಧನು ಅಧಿಕಾನುದಾರ, ಆರೋಗ್ಯವು ಚೆನ್ನಾಗಿದೆ. ಕಣ್ಣು ದೃಷ್ಟಿಯೂ ಚೆನ್ನಾಗಿದೆ.

ಕೃತಕ ಹಲ್ಲುಗಳು.

ಇವು ಎಷ್ಟು ಸಮಯದಿಂದ ಇದ್ದುವು ಬಲ್ಲಿರಾ? ಸುಮಾರು ಮೂರು ಸಾವಿರ ವರುಷಗಳ ಹಿಂದೆಯೂ ಇದ್ದುವಂತೆ. ಆಗಲೂ ಪ್ರಸಿದ್ಧ ದಂತವೈದ್ಯರಿದ್ದರು; ಕೃತಕ ಹಲ್ಲುಗಳನ್ನು ತಯಾರಿಸಿ ಇರಿಸುತ್ತಿದ್ದರು. ಫಿಲಡೆಲ್ಫಿಯಾದಲ್ಲಿ ಇಂತಹ ಹಲ್ಲುಗಳ ಪ್ರದರ್ಶನವೊಂದನ್ನು ಏರ್ಪಡಿಸಿರುವರು. ಕ್ರಿಸ್ತಪೂರ್ವ ೧೦೦೦ ವರ್ಷಗಳ ಹಿಂದಿನ ಕೃತಕ ಹಲ್ಲುಗಳ ಮೊದಲಾಗಿ ಈ ಇಪ್ಪತ್ತನೆಯ ಶತಮಾನದ ಹಲ್ಲುಗಳ ವರೆಗೆ ಹಲವು ಬಗೆಯ ಕೃತಕ ಹಲ್ಲುಗಳು ಅಲ್ಲಿ ಪ್ರದರ್ಶಿತವಾಗಿವೆ.

ಹೆರಿಗೆಯ ವೈಚಿತ್ರ್ಯ!

ಪೋಲೆಂಡಿನ ಕಸ್ತ್ರಿಯುಸ್ ಎಂಬ ಗ್ರಾಮದಲ್ಲಿ ಓರ್ವ ಬೇಸಾಯಗಾರನ ತಾಯಿ, ಹೆಂಡತಿ ಮತ್ತು ಮಗಳು, ಈ ಮೂವರೂ ಒಂದೇ ದಿನ, ಒಂದೇ ಸಮಯದಲ್ಲಿ, ಶಿಶುಗಳನ್ನು ಹೆತ್ತರು. ಮೂವರಿಗೂ ಗಂಡು ಮಗು!

ಹೆಣ್ಣು ಮಕ್ಕಳೇ ಇಲ್ಲದ ಕುಟುಂಬ.

ಲಂಡನ್ ನಗರದೊಳಗಿನ ಓಲ್ಡ್‌ವಿಕ್ ಥಿಯೇಟರಿನಲ್ಲಿ ಬ್ರೂಸ್ ಬೆಲ್‌ಫೇರನೆಂಬ ನಟನಿದ್ದಾನೆ. ಆತನ ಕುಟುಂಬದಲ್ಲಿ ಅನೇಕ ಶತಮಾನಗಳಿಂದ ಹೆಣ್ಣು ಮಕ್ಕಳೇ ಜನಿಸಿಲ್ಲವಂತೆ.

ಮೂಕಸೇವಕರೇ ಬೇಕು

ಟೋಕಿಯೋ (ಜಪಾನ್) ನಗರದ ಓರ್ವ ಗೃಹಸ್ಥನಿಗೊಂದು ಹುಚ್ಚು—ತಾನು ತನ್ನ ಮನೆಯಲ್ಲಿ ನೇಮಿಸುವ ಸೇವಕರು ಮೂಕರೇ ಆಗಬೇಕೆಂದು! ಆತನ ಮನೆಯಲ್ಲಿ ಮಾತಾಡುವ ಸೇವಕರಾರೂ ಇಲ್ಲ. ಸೇವಕರು ತನ್ನ ಮಾತಿಗೆ ಪ್ರತಿಯಾಡಬಾರದೆಂದು ಹೀಗೆ ಮೂಕರನ್ನು ನೇಮಿಸುವ ಹುಚ್ಚಂತೆ.

ರಣಹದ್ದಿನ ಸಾಹಸ!

ಇಂಗ್ಲೆಂಡಿನ ಶ್ರೀಮಾನ್ ಧಾವಣರು ವಿಮಾನವೇರಿ ದಾಕ್ಸಾದಿಂದ ಕಲ್ಕತ್ತೆಗೆ ಬರುವಾಗ ದಾರಿಯಲ್ಲಿ ರಣಹದ್ದು ಎದುರಾಗಿ ಯಂತ್ರಕ್ಕೆ ಬಡಿಯಲು, ವಿಮಾನದ ಅಲಗೆಯಲ್ಲಿ ಕಡಿಯಾಯಿತು. ಧಾವಣರು ಅತಿ ಚತುರತೆಯಿಂದ ಕೆಳಗಿಳಿದು ಜೀವ ಉಳಿಸಿಕೊಂಡರು. ರಣಹದ್ದುಗಳಿಂದ ಇಂಗ್ಲೆಂಡಿನಲ್ಲಿ ವಿಮಾನಕ್ಕೆ ಸಂಭವಿಸಿದ ಅಪಘಾತಗಳಲ್ಲಿ ಇದು ಆರನೆಯದು.

ಬೂದಿಯ ಮಳೆ!

ಹಿಂದೊಮ್ಮೆ ಮೀನಿನ ಮಳೆ ಬಂದಿತ್ತು. ಕಳೆದ ವಾರ ಪೋರ್ತುಗಲಿನ ಕಾಸಿಕಾ ಅಲ್ವಾ ಎಂಬ ಹಳ್ಳಿಯಲ್ಲಿ ಮತ್ತೊಂದು ತರದ ವಿಚಿತ್ರ ಮಳೆ—ಬೂದಿಯ ಮಳೆ! ಮಳೆಯೊಂದಿಗೆ ಎಲ್ಲಿಯೋ ಏನೋ ಸುಟ್ಟ ವಾಸನೆಯು ಇತ್ತಂತೆ. ರಹಸ್ಯ ತಿಳಿದಿಲ್ಲ.

ಪ್ರಚಲಿತಸಮಾಚಾರ.

ಸೌಂದರ್ಯರಾಗಬೇಡಿ!

ಜಗಸ್ತದಲ್ಲಿ ಶಾಲಾ ಅಧ್ಯಾಪಕಿಯರಿಗೆ ಶಿಕ್ಷಣ ಇಲಾಖಾ ಮಂತ್ರಿಗಳಿಂದೊಂದು ಆಜ್ಞೆ—ಸೌಂದರ್ಯದ ಅಲಂಕಾರಗಳನ್ನಿಟ್ಟುಕೊಂಡು ಶಾಲೆಗೆ ಬರಬಾರದೆಂದು! ಶಿಕ್ಷಕಿಗೆ ಒಂದು ಶಿರೋಭೂಷಣ ಬೇಕು; ಉಡುಪು ಸಾಮಾನ್ಯವೇ ಆಗಿರಬೇಕು.

ತೋಟದಲ್ಲಿ ಬಂದೂಕು ತೋಟ!

ಸಹಾಂಘೈಯ ಒಂದು ಖಾಸಗಿ ತೋಟದಲ್ಲಿ ಪೋಲೀಸರಿಗೆ ೭ ಬಂದೂಕಿನ ತೋಟಗಳು ಸಿಕ್ಕಿವೆ. ನಿಸ್ಸಂದೇಹವಾಗಿ ಗಿಡಗಳಿಗೆ ಫಲರೂಪವಾಗಿ ಹುಟ್ಟಿದುವಲ್ಲ. ಅಲ್ಲೇ ಹೂಳಿಟ್ಟಿದ್ದಾಗಿವೆ. ತೋಟಗಾರನಾದ ನಾಥಿಯು ಎಂಬವನನ್ನು ಸೆರೆಹಿಡಿದಿರುವರು. ಬಂದೂಕು ತೋಟಗಳನ್ನು ಬೀಜಗಳಂತೆ ಬಿತ್ತುವುದೂ ಇದೆಯೇ?

ಪಾತಕ ಮಲ್ಲರಲ್ಲ!

ಕಳೆದ ಪಾರ್ಲಿಮೆಂಟಿನ ಅಧಿವೇಶನದಲ್ಲಿ (೨೨-೧೧-೧೯೩೦ರಿಂದ ೧೬-೧೧-೩೧ರ ವರೆಗೆ) ಮಾತಾಡಿದವರಲ್ಲಿ ಮೊದಲನೆಯ ಸ್ಥಾನ ಜೋರ್ಜ್ ಲೇನ್ಸ್‌ಬರಿಯವರಿಗೆ,—೨೬೧ ಕಾಲಂಗಳಷ್ಟು ಮಾತು ಇವರದು! ಎರಡನೆ ಮಲ್ಲರು ಸರ್ ಸ್ಟಾಫರ್ಡ್ ಕ್ರಿಪ್ಸ್ ಎಂಬವರು,—೨೪೧ ಕಾಲಂ! ಮೂರನೆ ವೀರರು ನೆವಿಲ್ ಚೇಂಬರ್ಲೇನರು,—೨೩೮ ಕಾಲಂ! ನಮ್ಮ ಮೆಕ್‌ಡೊನಾಲ್ಡ್ ಸಾಹೇಬರು ಮಾತ್ರ,—೪೮ ಕಾಲಂ! (ಅಧಿಪತ್ಯಕ್ಕಿಂತ ಇವರು ಮಾಡಿದುದೇ ಹೆಚ್ಚಾಗಿದೆ!!)

ಹೊಸ ವಿಮಾನ.

ರಷ್ಯದವರು ಒಂದು ಹೊಸ ವಿಮಾನವನ್ನು ಸಿದ್ಧಗೊಳಿಸುವರು. ವಿಮಾನದ ಇತಿಹಾಸದಲ್ಲಿ ಇಂತಹ ವಿಮಾನವು ಇದೇ ಮೊದಲನೆಯದು. ಒಂದು ನಾಟಕ ಗೃಹವಿದೆ; ತಾಸಿಗೆ ಸಾವಿರ ಪ್ರತಿ ಅಚ್ಚು ಹಾಕಬಹುದಾದ ಒಂದು ಮುದ್ರಾಯಂತ್ರವಿದೆ. ಹೋಟಲು ಇದೆ; ವಿದ್ಯುತ್ ಯಂತ್ರಗಳಿರುವೆ. ವಿಮಾನದ ಉದ್ದ ೯೯ ಅಡಿ; ರೆಕ್ಕೆಗಳ ಉದ್ದ ೨೦೬ ಅಡಿ. ಸುಮಾರು ೬೦ ಜನರು ಕೂತುಕೊಳ್ಳಬಹುದಾದಷ್ಟು ಸ್ಥಳಾನುಕೂಲತೆ ಇದೆ.

ಶಿರೋವೇದನೆಗೊಂದು ಸಿದ್ಧೌಷಧ.

ತಲೆನೋವಿದ್ದವರಾರೂ ಈ ಔಷಧವನ್ನು ಮಾಡಬೇಡಿ!—ಲೊರೆಡೊ ಎಂಬಲ್ಲಿನ ಗಿರಣಿಮಾಲಿಕನೊಬ್ಬನಿಗೆ ಅಸಹನೀಯ ಶಿರೋವೇದನೆ ತಡೆಯಲಾಗುವುದಿಲ್ಲವೆಂದು ನೆನೆದಂತೆ ತಲೆನೋವು ಹೆಚ್ಚಿತು. ಹಲವು ಬಗೆಯ ಔಷಧದ ಚೂರ್ಣಗಳನ್ನು ನುಂಗಿದನು; ಪಾನಕಗಳನ್ನು ಕುಡಿದನು. ಕೊನೆಗೆ ರಿವಾಲ್ವರು ತೆಗೆದು ತಲೆಗೆ ಗುರಿಯಿಟ್ಟು ಹೊಡೆದುಕೊಂಡನು. ತಲೆನೋವು ನಿಂತಿತು. ಕಾರಣ? ತಲೆಯೇ ಇಲ್ಲ; ಚೂರುಚೂರು! ಜೀವವೂ ಇಲ್ಲ!

ರುಸುಮಿನ ತಿರುಗುಮುರುಗು.

ಡೊರ್ಟ್‌ಮುಂಡಿನ ವಕೀಲನೊಬ್ಬನು; ಭಾರೀ ವಕೀಲ. ಅವನಿಗೊಂದು ಭಾರೀ ವ್ಯಾಜ್ಯದೊರೆಯಿತು. ಸಾವಿರ ಪವನುಗಳಷ್ಟು ರುಸುಂ ಆಗಿ ತಿಂದನು. ಕೊನೆಯಲ್ಲಿ ವ್ಯಾಜ್ಯ ಅಪಜಯವಾಯಿತು. ಕಕ್ಷಿಗಾರಳಾಗಿ ಬಂದ ಹೆಂಗುಸು ವಕೀಲನ ಮೇಲೆಯೇ ವ್ಯಾಜ್ಯ ತಂದುಬಿಟ್ಟಳು. ತನ್ನ ವ್ಯಾಜ್ಯವನ್ನು ನ್ಯಾಯವಾಗಿ ನಡೆಸದೆ ತನಗೆ ಉದ್ದೇಶಪೂರ್ವಕವಾಗಿ ನಷ್ಟಮಾಡಿರುವನೆಂದು! ಜಡ್ಜರ ತೀರ್ಮಾನ ಹೇಗೆ ಬಲ್ಲಿರಾ?—ವಕೀಲನು ಆಕೆಗೆ ಪರಿಹಾರದ್ರವ್ಯವಾಗಿ ಮೊದಲು ೫೦೦ ಪವನುಗಳನ್ನು ಕೊಡಬೇಕು. ಆ ಮೇಲೆ ಆಕೆಯ ಜೀವಮಾನದ ವರೆಗೂ ೧೪೦ ಪವನುಗಳಂತೆ "ವರ್ಷಾಶನ" ಕೊಡಬೇಕು!!

ಕುಡಿಯಿರಿ; ಕುಡಿಸಿರಿ.

ದ್ರಾಕ್ಷಾರಸವು ಹೆಚ್ಚುಹೆಚ್ಚಾಗಿ ಖರ್ಚಾದಂತೆ ವ್ಯಾಪಾರವೃದ್ಧಿಯಾಗುವುದು; ದ್ರಾಕ್ಷಾರಸದ ವ್ಯಾಪಾರವು ಬೆಳೆಯಿಸಿಕೊಳ್ಳಬೇಕೆಂದು ಸ್ಪೈನಿನ ಸರಕಾರವು ಮೆಡ್ರಿಡ್‌ನಗರದ ಹೋಟೇಲು ದ್ವಾರದ ಮೇಲೊಂದು ಕಟ್ಟಪ್ಪಣೆಯ ಹೊರಡಿಸಿಬಿಟ್ಟಿದೆ. ಏನೆಂದರೆ,—ಪ್ರತಿಯೊಬ್ಬ ಗಿರಾಕಿಗೂ ಇಂತಿಷ್ಟೇ ದ್ರಾಕ್ಷಾರಸವನ್ನು ಧರ್ಮಾರ್ಥವಾಗಿ ಕೊಡಲೇ ಬೇಕು. ಇಲ್ಲದಿದ್ದರೆ ದಂಡವಿಧಿಸಲಾಗುವುದು. ಜನರ ಆರೋಗ್ಯದ ಬಗ್ಗೆ

ಒಂದು ಪ್ರಕಟನೆಯೂ ಹೊರಟಿದೆ—"ನಿಮ್ಮ ದ್ರಾಕ್ಷಾರಸದ ಧರ್ಮವನ್ನು ಪಡೆದುಕೊಳ್ಳಿ! ಬಿಡಬೇಡಿ!" ಎಂದು. "ಗೂಢಚಾರರು ಅಲ್ಲಲ್ಲಿ ತಿರುಗುತ್ತಿರುವರು; "ಗಿರಾಕಿಗಳನ್ನು ವಂಚಿಸದಿರಿ!" ಎಂದು ಹೋಟೇಲು ಮಾಲೀಕರಿಗೂ ಎಚ್ಚರಿಕೆಕೊಡಲಾಗಿದೆ.

ಬ್ರಿಟನು ತಲೆಯೆತ್ತಿದೆ!

ಒಂದೊಂದು ಕಾಲವು ಒಂದೊಂದು ರಾಜ್ಯಕ್ಕೆ ಶುಭೋದಯದ ಸಂದೇಶ ತರುತ್ತಿದೆ. ಲಕ್ಷ್ಮಿಯು ಒಂದು ಕಡೆಯಿಂದ ಮತ್ತೊಂದಕ್ಕೆ ಚಲಿಸುವುದರಲ್ಲಿ ಆನಂದ ಪಡುವವಳು. ಕುಬೇರರ ರಾಜ್ಯವೆನಿಸಿದ ಅಮೇರಿಕವು ಹಿಂದೆಬೀಳುತ್ತಿದೆ ಚಿಹ್ನೆಗಳು ಕಂಡಿವೆ. ಮಿಲ್ಲಿಯಾಧಿಪತಿಗಳೀಗ ಅಲ್ಲಿ ಒಟ್ಟು ೨೦ ಮಂದಿ ಮಾತ್ರ! ಬ್ರಿಟನಿನಲ್ಲಿ ಹೆಚ್ಚಿರುವರು—೧೮೪! ಅಮೇರಿಕದಲ್ಲಿ ೧೯೧೯ರಲ್ಲಿ ೬೫ ಕೋಟ್ಯಾಧೀಶರಿದ್ದರು; ೧೯೩೯ರಲ್ಲಿ ಈ ಸಂಖ್ಯೆಯು ೫೧೩ರಷ್ಟಾಯಿತು; ೧೯೩೦ರಲ್ಲಿ ೧೫೦ಕ್ಕೆ ಇಳಿಯಿತು; ೧೯೩೧ರಲ್ಲಿ ಕೇವಲ ೨೦!

ಉತ್ತರ ಅಮೇರಿಕದ ಚಳಿಯೆಷ್ಟು?

ಈ ವರ್ಷ ವಿಶೇಷ ಚಳಿ. ಶೀತಮಾರುತಗಳು ಅಲ್ಲಿ ಬೀಸಿ ನಾನಾ ಬಗೆಯಲ್ಲಿ ಹಾವಳಿಮಾಡಿದೆ. ೧೬ ವರ್ಷ ಪ್ರಾಯದ ಹುಡುಗನೊಬ್ಬನು ರೈಲಿನಲ್ಲಿ ಪ್ರಯಾಣಮಾಡುತ್ತಿದ್ದಾಗ ನಾಲಿಗೆಯನ್ನು ಚಾಚಿ, ರೈಲುಬಂಡಿಯ ಕಬ್ಬಿಣದ ಸರಳಿಗೆ ನಾಲಿಗೆಯನ್ನು ಮುಟ್ಟಿಸಿದನು. ಕೂಡಲೇ ನಾಲಿಗೆಯು ತಣ್ಣಗಾಗಿ ಕಟ್ಟಿಗೆಯಂತಾಯಿತು; ಚಾಚಿದಲ್ಲೇ ಸಲ್ಪಳಕ್ಕೆ ಅಂಟಿಕೊಂಡುಬಿಟ್ಟಿತು! ಅದನ್ನು ಪುನಃ ಮೆತ್ತಗಾಗಿಸಿ ಬಾಯೊಳಗೆ ಸೆಳೆಯಬೇಕಾದರೆ, ರೈಲುಬಂಡಿಯಲ್ಲಿದ್ದ ಹೋಟೇಲಿನವನು ಬಿಸಿನೀರು ತರಬೇಕಾಯಿತು! ಶ್ರೀಮುಖ ಸಂವತ್ಸರದ ಕೊನೆಯಲ್ಲಿ ಮುಖಕ್ಕೆ ಇಷ್ಟು ಆಪತ್ತು!

ಭೂಕಂಪದಿಂದ ಗವರ್ನರರಿಗೂ ಕಷ್ಟ.

ಎಂತಹ ಭೂಕಂಪ,—ಬಿಹಾರಿನದು! ಬಂಗಾಳ ಗವರ್ನರ ಸಾಹೇಬರು ಈ ಸೆಖೆಕಾಲದಲ್ಲಿ ಡಾರ್ಜಿಲಿಂಗಿಗೆ ಹೋಗಿ, ತಂಪಾಗಿ ಇರುತ್ತಿದ್ದರು. ಈ ವರ್ಷ ಮಾತ್ರ ಕಷ್ಟ. ಭೂಕಂಪವು ಡಾರ್ಜಿಲಿಂಗಿನ ಸರಕಾರೀ ಕಟ್ಟಡವನ್ನೂ ಬಿಡಲಿಲ್ಲ; ಕುಸಿದು ಬಿದ್ದಿದೆ. ಸದ್ಯಕ್ಕೆ ('ಇನ್ನೊಂದು ವರ್ಷಕ್ಕೆ) ದುರುಸ್ತಿಯಾಗಿ ಮುಗಿವಂತಿಲ್ಲ. ಆದರೂ, ಗವರ್ನರರು ಡಾರ್ಜಿಲಿಂಗಿಗೆ ಹೋಗದೆ ನಿಲ್ಲುವುದಿಲ್ಲ. ಮೊದಲೇ ಬಡವಾದ ಬಂಗಾಳ ಸರಕಾರಕ್ಕೆ ಮತ್ತಷ್ಟು ಹೆಚ್ಚಿನ ಖರ್ಚುಗಳ ಭಾರಬೇಡವೆಂದು ಸಾಮಾನ್ಯ ಮನೆಯೊಂದರಲ್ಲಿ (ಸರಕಾರೀ ಕಟ್ಟಡಗಳಲ್ಲೊಂದು) ಈ ವರ್ಷದ ಸೆಖೆಗಾಲವನ್ನು ಕಳೆವರು. ಮಿತವ್ಯಯದ ಕಡೆ ಲಕ್ಷ್ಯ ಇರಿಸಿರುವರು.

ಮುಂದೆ ಗತಿಯೇನು?

ಸಂಯುಕ್ತ ಪ್ರಾಂತದ ಕೌನ್ಸಿಲಿನಲ್ಲಿ ಡಾ। ಸಯ್ಯದ್ ಜಫರ್ ಹುಸೇನರೆಂಬ ಸದಸ್ಯರೊಬ್ಬರು ಎದ್ದುನಿಂತು ಸರಕಾರಕ್ಕೊಂದು ಎಚ್ಚರದ ಮಾತನ್ನು ಹೇಳಿಬಿಟ್ಟರು—"ಪ್ರತಿವರ್ಷವೂ ವಿಶ್ವವಿದ್ಯಾಲಯಗಳಿಂದ ವಿದ್ಯಾರ್ಥಿಗಳು ಡಿಗ್ರಿಪಡೆದೊಂದಿ ಹೊರಗೆ ಬೀಳುತ್ತಿರುವರಲ್ಲ, ಇವರ ಗತಿಯೇನೆಂದು. "ದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ ಇದು, ಸಂಯುಕ್ತ ಪ್ರಾಂತದಲ್ಲಿ ೫ ವಿಶ್ವವಿದ್ಯಾಲಯಗಳಿವೆ. ಈ ಸಮಸ್ಯೆಯನ್ನು ಚೆನ್ನಾಗಿ ಪರ್ಯಾಲೋಚಿಸಲು ಒಂದು ಕಮಿಟಿಯನ್ನು ನೇಮಿಸಬಾರದೇ?" ಎಂದೊಂದು ಸೂಚನೆಕೊಟ್ಟರು. ಮಂತ್ರಿಗಳ ಉತ್ತರವು ಸಿದ್ಧವಾಗಿತ್ತು:—"ಸರಕಾರಕ್ಕೆ ಗೊತ್ತಿದೆ; ಬಹಳ ಬೇಸರದ ಸಂಗತಿ. ಕೈಗಾರಿಕೆಗಳು ಹೆಚ್ಚಿದರೆ ನಿರುದ್ಯೋಗವು ನಿವಾರಣೆಯಾಗಬಹುದು. ಸದ್ಯಕ್ಕೆ ಯಾವ ಉಪಾಯವೂ ತೋರದು" ಇತ್ಯಾದಿ.

೬೦ ಮೈಲು ಅಂತರದಲ್ಲೊಂದು ಶಿಶು!

ಅವಳಿಜವಳಿ ಮಕ್ಕಳನ್ನು ಹೆತ್ತ ವಿಚಾರವಿದು. ಎರಡನೆಯ ಶಿಶು ಮೊದಲನೆಯದಕ್ಕಿಂತ ೬೦ ಮೈಲು ದೂರದಲ್ಲಿ, ಮೊದಲನೆಯ ಶಿಶು ಜನಿಸಿದ ೪೮ ತಾಸುಗಳ ನಂತರ ಜನನಕ್ಕೆ ಬಂತು. ಏಕರಿಂದ?—ಬಾಣಂತಿಯೊಡನೆ ಯೋಗ್ಯ ಸೂಲಗಿತ್ತಿಯೊಬ್ಬಳಿರಲಿಲ್ಲ. ಇದ್ದವಳೊಬ್ಬಳು ೮೩ ವರ್ಷ ಪ್ರಾಯದ ಮುದುಕಿ. ಒಂದು ಮಗು ಹುಟ್ಟಿದ ಮೇಲೆ ದೂರದ ಡಾಕ್ಟರರಿಗೆ ಕರೆ ಹೋಯಿತು; ಡಾಕ್ಟರರು ೬೦ ಮೈಲು ದೂರದೊಂದು ಊರಿಗೆ ಬಂದಿಳಿದರು. ಅಲ್ಲಿಗೇ ಬಾಣಂತಿಯು

ತುಂಡು ಸುದ್ದಿ.

ಅಫಘಾನ್ ಸಂಸ್ಥಾನದಲ್ಲಿ "ಬಲ್ಚ್" ಎಂಬ ಹೆಸರಿನ ಹೊಸ ನಗರವೊಂದು ನಿರ್ಮಾಣವಾಗಿದೆ.

ಕೈಕಾರಿಗೆ ಕಂದಾಯದಲ್ಲಿ ರಿಯಾಯತಿ ತೋರಿಸಬೇಕೆಂದು ಅಸ್ಸಾಮು ಸರಕಾರವು ನಿಶ್ಚಯಿಸಿದೆ.

ತಾಲೂಕು ಬೋರ್ಡುಗಳ ನಿರ್ಮೂಲನದ ಮಸೂದೆಗೆ ವೈಸರಾಯರ ಸಹಿ ಬಿತ್ತು.

ಸರಕಾರೀ ನೌಕರರ ವೇತನದಲ್ಲಿ ೧೨ ಕಡಿತವನ್ನು ಪೇಶಾವರದ ಬಳಿ ಚಳುವಳಿ ನಡೆಸಿರುವರು.

ಢಿಲ್ಲಿಯ ಹೋಟೇಲುಗಳ 'ಗೈಡ್' ಮಹಾಶಯರು ಮುಷ್ಕರಹಿಡಿದಿರುವರು,—ಸಂಬಳ ಕಡಿದರೆಂದು.

ಬೆಲ್ಜಿಯಮ್ ಅರಸರು ಮರಣಹೊಂದಿದ ಸ್ಥಳದಲ್ಲಿ (೧೨೬) ಒಂದು ಸ್ಮಾರಕವನ್ನು ಕಟ್ಟುವರು.

ರಂಗೂನಿನಿಂದ ಉಪ್ಪುನೀರಿನ ಮೀನುಗಳನ್ನು ಕಲ್ಕತ್ತೆಗೆ ಈಗ ವಿಮಾನದಲ್ಲಿ ಕಳುಹಿಸುತ್ತಾರೆ.

ಮುಂಬಾಯಿ ವಿಶ್ವವಿದ್ಯಾಲಯದವರು ವಿಲ್ಲಿಂಗ್ಡನ್ ದಂಪತಿಗಳಿಗೆ "ಡೊಕ್ಟರ್ ಆಫ್ ಲಾಸ್" ಡಿಗ್ರಿಯನ್ನು ದಯಪಾಲಿಸುವರು.

ಜರ್ಮನರಿಗೆ ಅಹಿತವೆಂದು ಕಾಣುವ ಬ್ರಿಟಿಷ್ ಚಲಚಿತ್ರಗಳನ್ನು ಜರ್ಮನಿಯಲ್ಲಿ ಪ್ರದರ್ಶಿಸಬಾರದಾಗಿ ಹಿಟ್ಲರರ ಆಜ್ಞೆ.

ಸಿಂಗ್‌ಸಿಂಗಿನ ಜೈಲುಗಳಲ್ಲಿರುವ ಕೈದಿಗಳಿಗೆ ಪ್ರೌಢ ವಿದ್ಯಾಭ್ಯಾಸ ಕೊಡಿಸುವರಂತೆ.

ಹೊಲ್ಲೆಂಡಿನ ಮಹಾಮಾತೋಶ್ರೀಯವರು ಕಳೆದ ವಾರ ಕಾಲವಾದರು.

೧೯೩೩-೩೪ರಲ್ಲಿ ಮುಂಬಾಯಿ ಪ್ರಾಂತ್ಯದಲ್ಲಿ ಶಾಸನ ಭಂಗ ಚಳವಳದ ಸಂಬಂಧದಲ್ಲಿ ೧೪,೬೪೧ ಜನರಿಗೆ ಶಿಕ್ಷೆಯಾಗಿದೆ.

ಮದರಾಸಿನ "ಹಿಂದೂ" ಪತ್ರಿಕಾ ಸಂಪಾದಕರಾಗಿದ್ದ ದಿ। ರಂಗಸ್ವಾಮಯ್ಯಂಗಾರ್ಯರ ಸ್ಮಾರಕಕ್ಕಾಗಿ ಮದರಾಸಿನಲ್ಲಿ ಹಣಸಂಗ್ರಹವಾಗುತ್ತಿದೆ.

ಮುಂಬಾಯಿಯ ಡಿ। ಪೋ। ಇನ್‌ಸ್ಪೆಕ್ಟರ್ ಒಬ್ಬರು, ಹೆಂಡತಿಯೊಡನೆ ಜಗಳವಾಡಿ, ಆತ್ಮಹತ್ಯೆ ಮಾಡಿಕೊಂಡರು.

ಹೈದರಾಬಾದ್‌ನ ಸರ್ ಕೂರ್ಮ ವೆಂಕಟರೆಡ್ಡಿ ನಾಯುಡುರವರು ಮದರಾಸಿನ ಲಾ ಮೆಂಬರರಾಗಿ ನೇಮಕಹೊಂದಿರುವರು.

ಸುಭಾಷ್‌ಬೋಸರು ಪ್ರೇಗ್‌ನಗರದ ಒರಿಯಂಟಲ್ ಕೋಲೇಜಿನ ಹಿಂದೀ ವಿಭಾಗದ ಪ್ರಾರಂಭೋತ್ಸವಕ್ಕಾಗಿ ಅತ್ತ ತೆರಳಿರುವರು.

ಜರ್ಮನಿಯಲ್ಲಿರುವ ಎರಡನೆ ಮುನ್ನೊಂದು ಅಲ್ಲಿ ಜನನಕ್ಕೆ ಬಂತು, ಈ ಕತೆಯು ಪಾರ್ಲಿಮೆಂಟಿನಲ್ಲಿ ಬರಲಿದೆ. ಸೂಲಗಿತ್ತಿಯರ ಪರೀಕ್ಷೆ, ಹೆರಿಗೆಯ ಸೌಕರ್ಯ, ಇನ್ನೂ ಈ ನಾಗರಿಕ ದೇಶದಲ್ಲಿ ಚೆನ್ನಾಗಿ ಇಲ್ಲವೇಕೆಂದು ಸರಕಾರಕ್ಕೆ ಪ್ರಶ್ನೆಗಳಾಗುವುವು.

ಬೇಡಬಾರದು!

ಇದು ಗಾಂಧಿಜಯವರ ಹಿತವಾದ—ಬಿಹಾರಿಗಳವರಿಗೆ, ಮೈಯಲ್ಲಿ ಶಕ್ತಿಯುಳ್ಳವರು ಕಾಯಕಷ್ಟವಾದ ದುಡಿದು ತಿನ್ನಬೇಕು; ಅಬಲರು ರಿಲೀಫ್ ಕಮಿಟಿಯವರು ಕೊಟ್ಟ ದಾನವನ್ನು ಸ್ವೀಕರಿಸಬೇಕು. ಹೀಗಾದರೆ ಮಾತ್ರ ಶ್ರಮದ ಗೌರವ, ಸ್ವತಃ ದುಡಿದು ತಿನ್ನುವ ಆನಂದ, ಇವು ಏನೆಂದು ತಿಳಿವುವು. ಬೇಡುವವನ ಆತ್ಮವು ಎಂದೆಂದೂ ಹೀನ. ಅಂತಹ ಅಭ್ಯಾಸವಾದರೆ ಉನ್ನತಿಯು ಅಸಿಹೋಯಿತು. ಬೇಡುವವರು ಸ್ವತಂತ್ರರಲ್ಲ. ಈ ಬುದ್ಧಿವಾದವು ಬಿಹಾರಿನವರಿಗೆ ಮಾತ್ರವಲ್ಲ, ಸಮಸ್ತ ಜನಾಂಗಕ್ಕೆ.

ಸಂಯುಕ್ತಪ್ರಾಂತದಲ್ಲಿ ಶಾ। ಭ। ಕೈದಿಗಳು

ಕಳೆದ ವರ್ಷದಲ್ಲಿ ೨೨೮೮ ಮಂದಿಯನ್ನು ಬಿಡುಗಡೆ ಮಾಡಲಾಯಿತು; ಇವರಲ್ಲಿ ೨೧೩೩ ಮಂದಿಗೆ, ಶಿಕ್ಷೆಯ ಅವಧಿ ಮುಗಿಯುವ ಮೊದಲೇ ಬಿಡುಗಡೆಯಾಗಿದೆ. ಇನ್ನೂ ೨೩೧೮ ಮಂದಿ ಜೈಲುಗಳಲ್ಲಿದ್ದಾರೆ.

ರಷ್ಯವು ಸನ್ನಾಹದಲ್ಲಿದೆ.

ಯುದ್ಧಸಾಮಗ್ರಿಗಳನ್ನು ಕೂಡಹಾಕುವ ಹುಚ್ಚು ಇತರ ಕೆಲವು ರಾಷ್ಟ್ರಗಳಂತೆ ರಷ್ಯಕ್ಕೂ ವಿಶೇಷ. ದಿನಕ್ಕೊಂದೊಂದರಂತೆ, ಬಾಂಬಿನ ವಿಮಾನವು ಅಲ್ಲಿ ಸಿದ್ಧವಾಗುತ್ತಿದೆಯಂತೆ. ೮೦೦ ಮೈಲುಗಳ ತನಕ ಅನಾಯಾಸವಾಗಿ, ಘಂಟೆಗೆ ೧೪೦ರ ವೇಗದಲ್ಲಿ ಓಡುವ ಬಾಂಬು ವಿಮಾನಗಳವು. ಒಟ್ಟು ೪೦೦೦ ರಷ್ಟು ಭಾರದ ಬಾಂಬುಗಳನ್ನೊಯ್ಯುವುವು.

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್.

ಸ್ತ್ರೀಯರಿಗೊಂದು ಮಹಾ ವರ.

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು ಅಶುದ್ಧ ರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ. ರೂ. 3 ಮತ್ತು 1–10–0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

Sole Agents for West Coast and North Kanara:—

ಪೋಪ್ಯುಲರ್ ಸ್ಟೋರ್ಸ್, ರಥಬೀದಿ ಮಂಗಳೂರು.

Wanted Agents in Principal Towns

For terms Apply to:—POPULAR STORES, Mangalore.

ಸ್ತ್ರೀ ಪುರುಷರ ಸಲುವಾಗಿ
ಶಕ್ತಿ ವ ಸ್ಫೂರ್ತಿಕೊಡುವಂತಹ

ಸುಮಧುರ

ಝಂಡು ದ್ರಾಕ್ಷಾಸವ

ಜರೂರು ಉಪಯೋಗಿಸಿರಿ

ಸ್ತ್ರೀಯರ ಸಲುವಾಗಿ
ಆರೋಗ್ಯ ವ ಶಕ್ತಿವರ್ಧಕ.

ಪ್ರದರಾದಿ ರೋಗಗಳ ಮೇಲೆ
ರಾಮಬಾಣ ಉಪಾಯ.

ಝಂಡು ಅಶೋಕಾರಿಷ್ಟ

ಬೇಗನೇ ಉಪಯೋಗಿಸಿರಿ.

'ZANDU'

ಝಂಡು ಫಾರ್ಮಾಸ್ಯುಟಿಕಲ್ ವರ್ಕ್ಸ್ ಲಿ: ಮುಂಬಯಿ.

ಮದ್ರಾಸು ಸಂಸ್ಥಾನದ ಏಜಂಟ್:—ದಾಮೋದರ ಮತ್ತು ಕಂಪೆನಿ, 78 ಜೈನ ಬಜಾರ ರೋಡ್, ಮದ್ರಾಸು.
ಮೈಸೂರು ಪ್ರಾವಿನ್ಸ್ ಏಜಂಟ್:—ಬಿ. ಪೋಪಟ್‌ಲಾಲ ಕಂಪೆನಿ, ೫೧ ಚಕ್ರಟ ಶ್ರೀನಿವಾಸಾಚಾರ ಸ್ಟ್ರೀಟ್.
ಮಂಗಳೂರು ಏಜಂಟ್:—ಶಾಹಾ ಕಂಪೆನಿ ಡ್ರಾಯ್ಮಂಡ್ ಬಿಲ್ಡಿಂಗ್, ಮಂಗಳೂರು.
ಧಾರವಾಡ ಏಜಂಟ್—ದಿ ಧಾರವಾಡ ಫಾರ್ಮಸಿ, ಧಾರವಾಡ.

ಬೇರೆ ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತದೆ.

ಆಯುರ್ವೇದ ಔಷಧಿಗಳ ಸೂಚೀಪತ್ರವನ್ನು ಮುಖ್ಯ ಏಜಂಟರಿಂದ ಪಡೆಕೊಳ್ಳಿರಿ.

ನಮ್ಮ ಸಲಹೆಯೇ ಪ್ರಾಧಾನ್ಯವಾದದ್ದೆಂದು ತಿಳಿಯಬೇಡಿ.

ಕಲ್ಲಿಕೋಟೆ ಅಶೋಕ ಆಸ್ಪತ್ರೆಯ ಚೀಫ್ ಮೆಡಿಕಲ್ ಆಫೀಸರರಾದ ಡಾ। ವಿ. ಬಿ. ರಾಮನ್, ಎಂ. ಆರ್., ಸಿ. ಎಸ್. ಇವರು ಬರೆದಿರುವುದನ್ನು ಓದಿ ನೋಡಿ—"ನಾನು ನಿಮ್ಮ ಆಶ್ಚರ್ಯಕರವಾದ ಜೀವಾಮೃತಂ ಟಾನಿಕನ್ನು ನರಗಳಲ್ಲಿ ಉರಿತ ಇಂತ ಹಸಿವು ಕಡಿಮೆಯಾಗಿರುವುದು, ತೂಕವು ಕಡಿಮೆಯಾಗಿರುವುದು, ಇವು ವ್ಯಾಪ್ತವಾಗಿರುವ ಅನೇಕ ರೋಗಿಗಳಿಗೆ ಕೊಟ್ಟಿರುತ್ತೇನೆ. ಅವರ ಫಲಿತಾಂಶಗಳು ಬಹು ತೃಪ್ತಿಕರವಾಗಿದೆ. ಜೀವಾಮೃತವನ್ನು ದೇಹಶಕ್ತಿ ಕುಗ್ಗಿರುವ ಎಲ್ಲಾ ಸಂದರ್ಭಗಳಲ್ಲೂ ಸರ್ವ ಸಾಮಾನ್ಯವಾಗಿ ಉಪಯೋಗಿಸಬಹುದೆಂದು ನಾನು ಪೂರ್ಣವಾಗಿ ಶಿಫಾರಸು ಮಾಡುತ್ತೇನೆ"

ಜೀವಾಮೃತವು

ನರಗಳಿಗೆ ಶಕ್ತಿ ಕೊಡುತ್ತದೆ. ವೀರ್ಯ ವೃದ್ಧಿಮಾಡುತ್ತದೆ. ಹಸಿವು ಹೆಚ್ಚಿಸುತ್ತದೆ. ರಕ್ತ ವೃದ್ಧಿಮಾಡುತ್ತದೆ.

ಪಂಡಿತ ಡಿ. ಗೋಪಾಲಾಚಾರ್ಲುರವರ **ಜೀವಾಮೃತವು**

ಎಲ್ಲಾ ಔಷಧ ಮಾರುವವರಲ್ಲೂ, ಸ್ಟೋರುಗಳಲ್ಲೂ ದೊರೆಯುತ್ತದೆ. (ಸಂಪೂರ್ಣ ವಿವರಗಳಿಗೆ ಇವತ್ತೇ ಬರೆಯಿರಿ)

ಆಯುರ್ವೇದಾಶ್ರಮಂ, ಪೋ. ಬಾಕ್ಸ್ ನಂ. ೩೮೭, ಮದ್ರಾಸು.

ಹೋಲ್ ಸೇಲ್ ಏಜಂಟರು:– ಸಿಟಿ ಮೆಡಿಕಲ್ ಮತ್ತು ಜನರಲ್ ಏಜನ್ಸಿ, ೮೨ ಚಿಕ್ಕಪೇಟೆ ಬೆಂಗಳೂರು. (ಟಾಟಾ ಹೋಟೆಲ್ ಹತ್ತಿರ)
ದಕ್ಷಿಣ ಕನ್ನಡದ ಏಜಂಟರು– ಪೋಪ್ಯುಲರ್ ಸ್ಟೋರ್ಸ್, ಮಂಗಳೂರು.

P. No. 104

ಆಮಂತ್ರಣ ಪತ್ರಿಕೆಗಳು.

ಇದು ವಿವಾಹ—ಉಪನಯನಗಳ ಕಾಲ. ಮುದ್ದಾದ ಮುದ್ರಣದ ಆಮಂತ್ರಣ ಪತ್ರಿಕೆಗಳನ್ನು ನೀವು ಬಯಸುವುದು ಸಹಜ.

ನಿಮಗೆ ಬೇಕಾದ ಕಾಗದಗಳಲ್ಲಿ,
ಬೇಕಾದ ಬಣ್ಣಗಳಲ್ಲಿ,
ಬೇಕಾದ ಟೈಪುಗಳಲ್ಲಿ,
ಬೇಕಾದಷ್ಟು ಪತ್ರಿಕೆಗಳನ್ನು

ಮುದ್ರಣ ಸೌಂದರ್ಯ—ಮಿತವ್ಯಯ—ಕ್ಷಿಪ್ರತೆ ಇವುಗಳಲ್ಲಿ ತೃಪ್ತಿಕೊಟ್ಟೇ ಮಾಡಿಕೊಡುವೆವು. ಊರವರು ನಮ್ಮಲ್ಲಿ ಬಂದು ಮಾದರಿ ಪ್ರತಿಗಳನ್ನು ನೋಡಿ, ತಮಗೆ ಬೇಕಾದುದನ್ನಾರಿಸಬಹುದು. ಪರವೂರವರು ಟಪ್ಪಾಲುದ್ವಾರಾ ತಿಳಿಸಿದರೆ, ಅವರು ವಿವರಿಸುವಂತೆ ಚ್ಯುತಿಯಿಲ್ಲದೆ ಮಾಡಿ ಕಳುಹುವೆವು.

ಹೆಚ್ಚಿನ ವಿಚಾರಗಳಿಗೆ ನಮ್ಮಲ್ಲಿಗೆ ಬನ್ನಿರಿ ಅಥವಾ ಬರೆಯಿರಿ.

ನಿಮಗೆ ಆಮಂತ್ರಣ.

ಮೆನೇಜರ್:—
ಶಾರದಾ ಛಾಪಖಾನೆ, ರಥಬೀದಿ,
ಮಂಗಳೂರು.

ಕ್ಷಯಕ್ಷೀಣಾದಿಗಳಿಗೆ
ಚ್ಯವನಪ್ರಾಶಾವಲೇಹ.

ಪ್ರಸೂತಿ ರೋಗಾದಿಗಳಿಗೆ
ದಶಮೂಲಾರಿಷ್ಟ.
(ಕಸ್ತೂರಿ ಮಿಶ್ರಣ)

ಸಮಸ್ತ ವಾತರೋಗಗಳಿಗೆ
ಮಹಾನಾರಾಯಣ ತೈಲ.

ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ,
ಡೊಂಗರಕೇರಿ ರಸ್ತೆ, ಮಂಗಳೂರು.

WE HOLD IN STOCK OF

English into Kanarese Teacher
Hindi into Kanarese Teacher
Marathi into Kanarese Teacher
Marathi into Gujarathi Teacher

Novels and well known Dramas in Hindi and all sorts of books for Schools and Colleges.

Wanted Agents and Canvassers throughout Karnatak districts.

Apply for full particulars with 1½ Annas Stamp:—

THE MANAGER
The National Kanara News Agency,
SIR PHIROJSHA METHA ROAD,
Fort Bombay

FOR
HIGH CLASS PRINTING
ART OR ORDINARY
CONSULT US
The Sharada Press, Mangalore.

The
First & The Foremost Weekly
Of South Kanara
"Swadeshabhimani"

Makes a delightful reading at home or abroad

A Powerful Medium for Advertisements

"Swadeshabhimani," Car Street,
Mangalore.

ಸಂಪಾದಕರ ಟಪ್ಪಾಲು ಚೀಟ್ಟಿಗೆ.

ಟಾಚ್ಛೀದರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಎಲ್ಲಾ ಲೇಖಕರು ತಮ್ಮ ಸಂಪೂರ್ಣ ಹೆಸರು ವಿಳಾಸಗಳನ್ನು ಕೊಡಬೇಕು. ದೀರ್ಘ ಲೇಖನಗಳಿಗೆ ಎಡೆ ಕೊಡಲಾಗುವುದಿಲ್ಲ. ಲೇಖನಗಳು ಸಾರ್ವಜನಿಕ ಹಿತದೃಷ್ಟಿಯಿಂದಿದ್ದು ಯುಕ್ತ ಶೈಲಿಯಲ್ಲಿರತಕ್ಕದು.

(ಸಂ. ಸ್ವ)

'ಸಂಗೀತ ಸೌಭದ್ರ.'

ಅಯ್ಯಾ ಸ್ವದೇಶಾಭಿಮಾನಿಯೇ,

ನಿಮ್ಮ ತಾರೀಕು ೧೬ನೇ ಸಂಚಿಕೆಯಲ್ಲಿ ರಾಜಶ್ರೀಗಳಾದ ಬಿ. ನರಸಪ್ಪನವರು ಸಂಗೀತ ಸೌಭದ್ರೆಯಲ್ಲಿ ಪಾತ್ರ ವಹಿಸಿದವರ ವಿಷಯ ಬರೆದ ವಿಮರ್ಶೆಯನ್ನು ಓದಿನೋಡಿದೆನು. ಹಾಡುತ್ತಿರುವಾಗ ಮೈಮರೆತು ಅರ್ಜುನ ಪಾತ್ರಧಾರಿಗಳು ತಾಳ ಹಾಕುತ್ತಿದ್ದರೆಂದಾದರೆ ಮುಂದೆ ಆ ತಪ್ಪು ಬಾರದಂತೆ ಪಾತ್ರಧಾರಿಗಳು ಜಾಗ್ರತೆಯಿಂದಿರುವರು. ಯಾವ ಕಾರಣದಿಂದೇ ಆಗಲಿ ರಂಗಭೂಮಿಯಲ್ಲಿ ಅವರು ನಿಂತಿರುವಾಗ ಇತರರಿಗೆ ಒಂದೆರಡು ಸಲ ಸೂಚನೆ ಕೊಟ್ಟುದು ಅಸಮಂಜಸವೆಂದು ಅವರು ಮನಗಂಡಿರುವರು. ಶಬ್ದದ ಪ್ರತಿ ಒಂದು ಅಕ್ಷರಕ್ಕೂ ತಕ್ಕ ಮರ್ಯಾದೆಯನ್ನು ಪಾತ್ರಧಾರಿಗಳು ನ್ಯಾಯವಾಗಿ ಕೊಡಬೇಕಾಗಿತ್ತಾದುದರಿಂದ ಶಬ್ದವನ್ನು ಅವರು ಒತ್ತಿ ಹೇಳುತ್ತಿದ್ದಂತೆ ವಿಮರ್ಶಕಾರರಿಗೆ ಮಾತ್ರ ಭಾಸವಾಗಿದ್ದರೂ ಆಗಿರಬಹುದು. ನಾಟಕದಲ್ಲಿ ಸಂಗೀತವನ್ನು ಕೋರುವವರು ಕನ್ನಡ ನಾಟಕ ಪ್ರೇಕ್ಷಕರಲ್ಲಿ ಇನ್ನೂ ಇರುವವರಾದುದರಿಂದ ಅರ್ಧ ಶತಮಾನದ ಹಿಂದೆ ಬರೆದ ಈ ಸಂಗೀತ ಸೌಭದ್ರೆಯಲ್ಲಿ ಹಾಡುಗಳನ್ನು ಇನ್ನು ಕಡಿಮೆ ಮಾಡಲು ಎಡೆ ಇಲ್ಲವಾದುದರಿಂದಲೂ ಹಾಡುಗಳನ್ನು ಹಾಡುತ್ತಿರುವಾಗ ಆ ಹಾಡು ತಮ್ಮ ಪಾತ್ರವನ್ನು ಉದ್ದೇಶಿಸಿ ಇದ್ದಿಲ್ಲವಾಗಿದ್ದಲು ಹಾಡುವವರ ಬಳಿಯಲ್ಲಿ ಕಲ್ಲಿನಂತೆ ನಿಲ್ಲುವ ಪ್ರಸಂಗ ಬಂದಲ್ಲಿ ಅದನ್ನು ಗ್ರಹಿಸಿ ಅರ್ಜುನನ ಪಾತ್ರಧಾರಿಗಳು ಸ್ವಲ್ಪ ಮರೆಯಾದುದು ಯುಕ್ತವಾದುದೆಂದು ತಿಳಿದರೂ ತಿಳಿಯಬಹುದು. ಸಂಗೀತ ಸೌಭದ್ರೆಯಲ್ಲಿ ಸಂತಾಪಕ ಕಠಿಣ ಭೈರವ ಈ ಮೊದಲಾದ ನಾಟಕಗಳಲ್ಲಿದ್ದಂತೆ ನೂತನ ವಿಶೇಷ ವಿಶೇಷಗಳ ಸಂದರ್ಭಗಳೇ ಇಲ್ಲ. ಸಂಗೀತ ಸೌಭದ್ರೆಯಲ್ಲಿರುವುದು ವಿಶೇಷ (narration) ಕಥನ. ಇಲ್ಲದ ಸಂದರ್ಭಗಳಲ್ಲಿ ವಿಶೇಷ ನಿರೀಕ್ಷಣೆಯನ್ನು ಕಲ್ಪಿಸಿದ್ದಾದರೆ ಪಾತ್ರ ರೂಪಕ್ಕೆ ವಿರುದ್ಧವಾಗುವುದು. ಯಾವ ಭಾವಗಳನ್ನು ಅರ್ಜುನನು ತೋರಿಸಬೇಕಿದ್ದರೂ ಅರ್ಜುನನ ಪ್ರಾಕೃತಿಕ ಸ್ವಭಾವಕ್ಕೆ ಅನುಗುಣವಾಗಿಯೇ ಆ ಭಾವಗಳು ವ್ಯಕ್ತವಾಗಬೇಕು. ಅರ್ಜುನನು ಧೀರನು. ಪರಮಾತ್ಮನ ಒಡನಾಡಿಯು ಮಾನ್ಯ ಪುರುಷನು. ಆಳುವ ಸಂದರ್ಭವಿದ್ದರೂ ಅವನು ಸಾಮಾನ್ಯ ವ್ಯಕ್ತಿಯಂತೆ ಅಳಲಾರನು. ಅರ್ಜುನನು ಸನ್ಯಾಸಿಯಾದಾಗ ಕ್ರೋಧವಿಲ್ಲದ ಇರುವಾದ ದಿಕ್ಕು ವಿಮರ್ಶಕಾರರು ಸೂಚಿಸಿದಂತೆ ಅವನು ಜಡೆಯಲ್ಲಿ ರುದ್ರಾಕ್ಷಿ ಅಪ್ಪು ಸಮಂಜಸವಲ್ಲ. ಸರಿಯಾದ ಉಡುಪನ್ನು ಸಂಗ್ರಹಿಸಲು ಸಂಸ್ಥೆಯು ಬಾಲ್ಯಾವಸ್ಥೆಯಲ್ಲಿ ಇದೆಯಷ್ಟೆ. ಸಾಧ್ಯವಾದ ಮಟ್ಟಿಗೆ ಇಂತಹ ದೋಷಗಳು ಬಾರದಂತೆ ನಡೆಯಕೊಳ್ಳಬೇಕೆಂದು ನಿಶ್ಚಯಿಸಿದೆ.

ಸರಿಯಾದ ಉಡುಪು (ಅಂದರೆ ಮುಖ್ಯವಾಗಿ wig) ಸಿಕ್ಕಿದೆಯಾದರೆ ಅಲ್ಲದೆ ತಮ್ಮ ಪಾತ್ರವನ್ನು ತಾವೇ ಬರೆದುಕೊಳ್ಳಲೂ, ಉಡುಪನ್ನು ತೊಟ್ಟುಕೊಳ್ಳಲೂ ಸುಭದ್ರೆಯ ಪಾತ್ರಧಾರಿಗಳು ಕಲಿತುಕೊಂಡರೆ, ಅವರ ಪಾತ್ರವು ಚೆನ್ನಾಗುವುದೆಂದು ಅನೇಕರು ಅಭಿಪ್ರಾಯಪಟ್ಟಿರುವರು. ಆದುದರಿಂದ ಸುಭದ್ರೆಯ ಪಾತ್ರಧಾರಿಗಳು ತಕ್ಕ ಸನ್ನಾಹದಿಂದ ಸ್ತ್ರೀ ಪಾತ್ರವನ್ನೇ ಧರಿಸಬೇಕೆಂದಿರುವರು. ಘಟೋತ್ಕಚನ ಪಾತ್ರವನ್ನು ವಹಿಸಿದವರು ಅಸ್ವಸ್ಥತೆಯಿಂದ ಇದ್ದರಾದುದರಿಂದ ಅವರ ಪಾತ್ರವು ಆ ದಿನ ಅಷ್ಟು ಚೆನ್ನಾಗಿ ಆಗಲಿಲ್ಲ.

ಅರ್ಜುನನು ಗುಹೆಯೊಳಗಿಂದ ಹೊರಗೆ ಬರುವವರೆಗೆ ಸುಭದ್ರೆಗೆ ಅಕ್ಕಗಳ ಮಾತುಗಳಲ್ಲದಿರುವುದಕ್ಕೆ ಈ ನಾಟಕದ ಮೂಲಕರ್ತರಾದ ತಿರ್ಲೋಕ್ಕರವರ ನಾಟಕ ರಚನೆಯೇ ಕಾರಣವಿರುವುದು. ಪ್ರತಿಭಾಶಾಲಿಯಾದ ಕವಿಯ ನಾಟಕವನ್ನು ಸುಪ್ರಸಿದ್ಧ ಕನ್ನಡ ವಿದ್ವಾಂಸರು ಮಾಡಿದ ಭಾಷಾಂತರದಲ್ಲಿ ಅಧಿಕ ಪ್ರಸಂಗವನ್ನು ತರಲು ಸ್ವಲ್ಪ ಯೋಚಿಸಬೇಕೆಂದು.

ಉಪಕಾರ ಸ್ಮರಣೆಯಾಚಲಿಕ್ಕೆ ಬಂದವರು ತಪ್ಪುಗಳನ್ನು ತಿದ್ದಬೇಕೆಂದು ಸಭಿಕರಲ್ಲಿ ಕೋರಿದ್ದು ಸಂಸ್ಥೆಯಲ್ಲಿರುವ ಕೊರತೆಯನ್ನು ವ್ಯಕ್ತಗೊಳಿಸುವುದು. ಇದೇ ಒಳ್ಳೆದು ಹೋಗಬೇಕೆಂದು ವಿಮರ್ಶಕಾರರು ನಿರೀಕ್ಷಿಸುವುದು ತುಂಬಾ ಅಸ್ವಾಭಾವಿಕವೆನಿಸಿದರೂ ತಿರ್ಲೋಕ್ಕರರ ತಪ್ಪುಗಳನ್ನು ತಿದ್ದಬೇಕೆಂದು ಸಭಿಕರಲ್ಲಿ ಕೇಳಿದ್ದೇ ಒಂದು ತಪ್ಪಾಗುವುದೇ? ಉಪಕಾರ ಸ್ಮರಣೆ ಮಾಡಲು ಬಂದವರು ತಪ್ಪುಗಳನ್ನು ಮನ್ನಿಸಬೇಕೆಂದು ಹೇಳಲಿಲ್ಲ, ತಪ್ಪುಗಳನ್ನು ತಿದ್ದಬೇಕೆಂದು ಕೇಳಿಕೊಂಡಿದ್ದರು.

ರಾ. ಶ್ರೀಗಳಾದ ನರಸಪ್ಪನವರು ಬರೆದುದನ್ನು ಖಂಡಿಸುವುದು ಈ ಲೇಖನದ ಉದ್ದೇಶವೇ ಅಲ್ಲ. ಅವರ ಅವರು ಬರೆದ ಸಂಗತಿಗಳಲ್ಲಿ ಭಿನ್ನಾಭಿಪ್ರಾಯಗಳು ಇರಬಹುದೆಂಬುದನ್ನು ಸೂಚಿಸುವುದೇ ಈ ಲೇಖನದ ಉದ್ದೇಶವು. ಆದುದರಿಂದ ಈ ಕುರಿತು ಪತ್ರವ್ಯವಹಾರವನ್ನು ಬೆಳೆಯಿಸುವುದಕ್ಕೆ ನಾನು ಇಷ್ಟಪಡುವುದಿಲ್ಲ.

ನಾಟಕಕಲಾಸೇವಕ

ಹರಿಜನ ಬಂಧುಗಳೇ, ಇದೇಕೆ?

ಹರಿಜನೋದ್ಧಾರವಾಗಬೇಕೆಂದು ಪ್ರತಿಪಾದಿಸುವವರಲ್ಲಿ ನಾನೊಬ್ಬನು. ಅದಕ್ಕೆ ಅವರ ಅಂತಹ ಉದ್ಧಾರ ಮಾರ್ಗಕ್ರಮಣದಲ್ಲಿ ಅವರು ತಪ್ಪಿಹೋಗಬಾರದೆಂಬುವವರಲ್ಲೂ ನಾನೊಬ್ಬನು. ಇತ್ತೀಚೆಗೆ ಹರಿಜನರನ್ನು ಸಿನಿಮಾ ಮಂದಿರಗಳಿಗೆ ಪ್ರವೇಶಿಸಬೇಕೆಂದು ಹಲವರ ಯತ್ನಗಳಾಗುತ್ತಿರುವುದನ್ನು ಅಲ್ಲದೆ ಈ ಪ್ರವೇಶಾರ್ಥವಾಗಿ ಹರಿಜನರು ಪ್ರಯತ್ನಿಸುವುದನ್ನು ಕಂಡು [illegible] ಅರ್ಜಿಗಳನ್ನು ಮಾಡಿಕೊಳ್ಳುವುದನ್ನೂ ಕಂಡು ಅತ್ಯಂತ ವಿಷಾದ ಪಡಬೇಕಾಗಿದೆ. ಇವರು ಸಿನೆಮಾಪ್ರವೇಶಕ್ಕಾಗಿ ಯತ್ನಿಸುವುದನ್ನು ಗಾಂಧೀಜಿಯವರು ತಿಳಿದಲ್ಲಿ ಅವರು ನಿಶ್ಚಯವಾಗಿಯೂ ಹೇರಗೊಳ್ಳದಿರರು. ಈ [illegible] ಸಿನೆಮಾದ ಅಭ್ಯಾಸವನ್ನು ದುಷ್ಟಚಿಂತೆ ಗಾಂಧೀಜಿಯವರು ತಿಳಿದಿರುವರು. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಸಿನೆಮಾ ನೋಡುವ ಅಭ್ಯಾಸವು ಜನರ ಪ್ರಗತಿಗೊಂದು ಸಾಧನವಾಗಬಹುದು. ಹಿಂದೂಸ್ಥಾನದಲ್ಲಿ ಅಂತಹ [illegible] ಇನ್ನೂ ಕಂಡು ಬಂದಿರುವುದಿಲ್ಲ. ಹರಿಜನರೆಂದರೆ ಕೀಳ್ ಜಾತಿಯವರೆಂದೇ ಸರ್ವರಿಗೂ ತಿಳಿದ ವಿಷಯ. [illegible] ಅವರು ವಿಲಾಸಪ್ರಿಯರಾಗಿ ಇದ್ದ ಒಂದೆರಡು ದಾಣೆಗಳನ್ನು ವೆಚ್ಚಮಾಡಿ ಸಿನೆಮಾ ಕಂಪೆನಿಗಳಿಗೆ ಪ್ರವೇಶಿಸುವುದೆಂದರೆ ಇದು ಅಗಲಿ ಹೋದ [illegible] ದಂತೆಯೇ ಸರಿ. ಸಿನೆಮಾ ಮುಖ್ಯವಲ್ಲವೇ? ಬಡತನವನ್ನು ಹೋಗಲಾಡಿಸಲು ಯತ್ನಿಸದೆ ಇವರು ಅಂತಹ ಯತ್ನಕ್ಕೆ ಕೈ ಹಾಕುವುದೇ?

ಹರಿಜನ ಬಂಧುಗಳೇ, ಸದ್ಯಕ್ಕೆ ಈ ಹವ್ಯಾಸವು ನಿಮಗೆ ಬೇಡವೆಂದು ನಮ್ಮ ಸೂಚನೆ.

ಮ. ಜಾ.

ಹಿಂದೂ ಮಠಗಳ ಮಸೂದೆ.

ಮೇಲಿನ ಮಸೂದೆಯು ೩ ಅಧ್ಯಾಯಗಳ ಸಾರಾಂಶವು ಪ್ರಕಟವಾದ ಹಾಗಾಯಿತು. ಇವುಗಳನ್ನು ಕೂಲಂಕಷವಾಗಿ ಪರೀಕ್ಷಿಸಿದಲ್ಲಿ ಹೊಸತಾಗಿ ನೇಮಿಸಲ್ಪಡುವ ಕಾರ್ಯಕಾರಿ ಅಧಿಕಾರಿಯು ಅಧಿಕಾರವೇ ಮಠದಲ್ಲಿ ಪ್ರಾಮುಖ್ಯತೆಯನ್ನು ಹೊಂದುವದಾಗಿ ಕಂಡು ಬರುತ್ತದೆ. ಮಠದ ನೌಕರರ ಸ್ಥಾನಗಳಿಗೆ ಅವನು ನೇಮಕ ಮಾಡುವನು. ನೌಕರರೆಲ್ಲ ಅವನಿಗೆ ವಿಧೇಯರಾಗಿರಬೇಕು. ನಡೆಸಲು ಮಠದ ಎಲ್ಲಾ ಖರ್ಚು ಮಾಡುವವನೂ ಅವನೇ. ತಿಂಗಳಿಗೆ ೧೦೦ ರೂಪಾಯಿಗಳಿಗೊಳಗಿನ ಸಂಬಳದ ನೌಕರರನ್ನು ನೇಮಿಸುವುದೂ ತೆಗೆದು ಹಾಕುವುದೂ ಮತ್ತು ದಂಡಿಸುವುದೂ ಅವನೇ. ಅಂದ ಮೇಲೆ ಅವರೆಯ ವಿಷಯದಲ್ಲಿ ಅವನನ್ನು ಮುಖ್ಯವರು ಮಠದಲ್ಲಿಲ್ಲವೆಂದಾಯಿತು. ಹಿಂದೂ ಧರ್ಮಕ್ಕೆ ಸೇರಿದ ಯೋಗ್ಯನನ್ನು ಈ ಕೆಲಸಕ್ಕೆ ನೇಮಿಸಬಹುದೆಂದು ಯುಕ್ತವಾದರೆ ಹೆಚ್ಚು ಮಠಗಳಿಗೂ ಒಬ್ಬನೇ ಅಧಿಕಾರವನ್ನು ನೇಮಿಸಬಹುದೆಂದೂ ಇದೇ ಮಸೂದೆಯಲ್ಲಿ ಸ್ಪಷ್ಟವಾಗಿದೆ. ಯಾವ ರೀತಿಯಿಂದ ನೋಡಿದರೂ ಇದರ ಗುಣಾಂಶವು ನನಗೆ ತಿಳಿದು ಬರುವುದಿಲ್ಲ. ಹೀಗಾಗಿ ಇದು ಅನರ್ಥಕಾರಿಯಾಗಿಯೇ ಕಂಡುಬರುತ್ತದೆ.

ಹಿಂದೂ ಮಠಗಳು ಈ ವರೆಗೆ ಹೆಚ್ಚಾಗಿ ಬ್ರಾಹ್ಮಣ ಸಂಸ್ಥೆಗಳೇ. ಬ್ರಾಹ್ಮಣೇತರರು ಈ ವರೆಗೆ ಅಂತಹ ಸಂಸ್ಥೆಗಳಲ್ಲಿ ಗುರುಗಳಾಗಲಿಲ್ಲ. ಹಾಗಿರುತ್ತ ಅಂತಹ ಸಂಸ್ಥೆಗಳಿಗೆ ಬ್ರಾಹ್ಮಣೇತರರನ್ನು ಮೇಲಾಧಿಕಾರಿಗಳಾಗಿ ನೇಮಿಸಲು ಈ ಮಸೂದೆಯು ಎಡೆಗೊಡುತ್ತದೆ. ಮಠಗಳಲ್ಲಿ ಈಗ ನಡೆಯುತ್ತಿರುವ ಧಾರ್ಮಿಕ ವಿನಿಯೋಗಗಳನ್ನು ನಿಲ್ಲಿಸಲು ಇದೇ ಒಂದು ಸುಸಂದರ್ಭ. ಎಲ್ಲಿ ತಿಳಿಯದೆ ಸೇವನೆ ನಡೆಯಿತ್ತೆಂದು [illegible]

ಕೃತಿ ಎಲ್ಲಿ ನೋಡಿದರೂ ಮುಂದಿನ ಪಟ್ಟಿ ಪಟ್ಟಿಕೆಗಳನ್ನು ನಿರ್ಮೂಲಗೊಳಿಸಲು ಯತ್ನವು ಪ್ರಬಲವಲ್ಲದೆ. ಒಂದೆಡೆ ಹರಿಜನೋದ್ಧಾರದ ಮಹಾಯತ್ನ ಹೀಗಿರಲು ಈ ಮಸೂದೆಯ ನಿಯಮದಂತೆ ಹರಿಜನ ನೊಬ್ಬನು ಮಠಗಳ ಕಾರ್ಯಕಾರಿ ಅಧಿಕಾರಿಯಾಗಲು ಎಡೆಯುರುವುದು. ಅಥವಾ ನಾಸ್ತಿಕನೂ ಧರ್ಮಬಾಹಿರನಾಗಿ ಅಧಿಕಾರದೆಡೆಯನ್ನು ಮಾತ್ರ ಪೂಜಿಸತಕ್ಕವನೂ ಅಂತಹ ಸ್ಥಾನವನ್ನು ಹೊಂದಲು ಆತಂಕವಿರುವುದಿಲ್ಲ. [illegible]

ಕಾರ್ಯಕಾರಿ ಅಧಿಕಾರಿಯು ಯತಿಯಲ್ಲ – ಪ್ರಾಪಂಚಿಕನು. [illegible]

[illegible]

ಸಮಾಜದ ಹಿತಚಿಂತಕ

(ಸಶೇಷ)

ಅತ್ಯದ್ಭುತ ಶಕ್ತಿಸಾಧಕ ಸರ್ಕಸ್.

ಉಡುಪಿ ತಾಲೂಕು ಕುರುಕಾಲು ಗ್ರಾಮದ "ಶ್ರೀ ಕುಂಜಾರು ಗಿರಿಜಾ ಹಾಯರ್ ಎಲಿಮೆಂಟರಿ ಶಾಲೆಯ ಕಟ್ಟೋಣ ವಿಸ್ತರಿಸುವ ಸಹಾಯಾರ್ಥವಾಗಿ ತಮ್ಮ ಶಕ್ತಿಸಾಧನಾ ಕಲೆಯಲ್ಲಿ ಪ್ರಖ್ಯಾತಿಗೊಂಡ, ಮಂಗಳೂರು ನವರಾದ ಶ್ರೀಮಾನ್ ಪ್ರೊಫೆಸರ್ ಎಸ್ ಕೇಶವಪ್ಪನವರು ತಮ್ಮ ಶಿಷ್ಯರಿಂದೊಡಗೂಡಿದ "The South Kanara Physical Culture Institute" ಎಂಬ ಸರ್ಕಸ್ ಕಂಪೆನಿಯಿಂದ ತಾರೀಕು ೭-೪-೩೯ನೇ ಶನಿವಾರ ರಾತ್ರಿ ಘಂಟೆ ೮ರಿಂದ ೧೧ರ ವರೆಗೆ, ಮ. ರಾ. ರಾ. ಡಾಕ್ಟರ್ ಯು. ಪಿ. ನಾರಾಯಣ ರಾವ್ ಅವರ್ಗಳವರ ಅಧ್ಯಕ್ಷತೆಯಲ್ಲಿ ಮುಂಬಾಯಿ ಸರ್ ಕವಾಸ್ಜಿ ಜಹಾಂಗೀರ್ ಹೋಲಿನಲ್ಲಿ ಅತ್ಯದ್ಭುತ ಸರ್ಕಸ್ ಪ್ರದರ್ಶನವನ್ನು ಪ್ರದರ್ಶಿಸಲಿಕ್ಕಿರುವರು. ಧರ್ಮಸಹಾಯ ಮೂರ್ತಿಯಂತಿರುವ ಶ್ರೀಯುತ ಕೇಶವಪ್ಪನವರು ತಮ್ಮ ಶಿಷ್ಯವೃಂದದವರಿಂದ ತಾ. ೩೦-೧-೩೯ರಲ್ಲಿ ಮುಂಬ್ಯಾ ಗೌಡಸಾರಸ್ವತ ಬ್ರಾಹ್ಮಣರ ಶಾಲೆ ಮಠದ ಜೀರ್ಣೋದ್ಧಾರದ ಬಗ್ಗೆಯೂ ತಾ. ೨೫-೨-೩೯ರಲ್ಲಿ ಬಿಹಾರ್ ರಿಲೀಫ್ ಫಂಡಿನ ಸಹಾಯಾರ್ಥದ ಬಗ್ಗೆಯೂ ಇತ್ಯಾದಿ ಹಲವು ಸಾರ್ವಜನಿಕ ಸಂಸ್ಥೆಗಳಿಗೆ ಸಹಾಯರೂಪವಾಗಿ ಅನೇಕ ನಾಟಕಗಳನ್ನು ಆಡಿತೋರಿಸಿ ತಮ್ಮ ದಾನಶೂರತಾ ನೈತಿಕ ಗುಣವನ್ನೂ, ಮತ್ತು ಮುಂಬ್ಯಾಯಲ್ಲಿರುವ ಇತರ ಸರ್ಕಸ್ ಕಂಪೆನಿಗಳಿಗಿಂತ ಮಿಗಿಲಾಗಿ ತಮ್ಮ ಶಿಷ್ಯ ಸಾಮ್ರಾಜ್ಯದಲ್ಲಿರುವ ಅಸಮಾನ್ಯ ಶಕ್ತಿಕಲೆಯನ್ನೂ ಮಹಾಜನರಿಗೆ ವ್ಯಕ್ತಗೊಳಿಸಿ ಕೀರ್ತಿಭಾಜನರಾಗಿರುವರು. ಆದಕಾರಣ ಮುಂಬಾಯಿಯಲ್ಲಿರುವ ಕಲಾಭಿಮಾನಿಗಳು ಮುಖ್ಯವಾಗಿ ನಮ್ಮ ಕರ್ನಾಟಕ ಬಂಧುಗಳು ಇವರ ಅನುಪಮ ಶಕ್ತಿಸಾಧನೆಯನ್ನು ಕಂಡು ಆನಂದಿತರನ್ನು ಹೊಂದುವಂತೆಯೂ, ಶ್ರೀ ಕುಂಜಾರು ಗಿರಿಜಾ ಹಾಯರ್ ಎಲಿಮೆಂಟರಿ ಶಾಲೆಯ ವಿದ್ಯಾಶಾಲೆಗೆ ದಯವಿಟ್ಟು ಪ್ರೋತ್ಸಾಹ ಪಡಿಸುವಂತೆಯೂ ತಾ. ೭-೪-೩೯ರ ಸರ್ಕಸ್ ನಾಟಕಕ್ಕೆ ದಯಮಾಡಿ ಟಿಕೇಟ್ ಕೊಳ್ಳಬೇಕಾಗಿಯೂ ವಿನಂತಿಯಾಗಿದೆ.

ಈ ಕೆಳಗಿನ ಆಯ ವ್ಯಯ ದ ವಿವರವುಳ್ಳ ಪಟ್ಟಿಯು ಪ್ರಕಟಣೆ ಬಗ್ಗೆ ಪರಿಷತ್ತಿನ ಗೌರವ ಕಾರ್ಯದರ್ಶಿಯವರಾದ ಶ್ರೀ ಕೆ. ವೆಂಕಟರಮಣಯ್ಯನವರಿಂದ ನಮ್ಮೆಡೆಗೆ ಬಂದಿದೆ.

ಹನ್ನೊಂಬತ್ತನೆಯ ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನದ–ಆಯ – ವ್ಯಯಗಳ ವಿವರ.

ಆಯ

ಸ್ವಾಗತ ಸಮಿತಿ ಸದಸ್ಯರಿಂದ ರೂ ೧೦೩೬. ಮುಖ್ಯ ಶ್ರೀ ಮ್ಯುನಿಸಿಪಾಲಿಟಿಯವರಿಂದ ರೂ ೩೦೦ ಪ್ರತಿನಿಧಿಗಳ ಪ್ರೇಕ್ಷಕರ ಮತ್ತು ವಿದ್ಯಾರ್ಥಿಗಳ ಪ್ರವೇಶ ಟಿಕೇಟುಗಳ ಮಾರಾಟ ರೂ ೬೭೩. ಸಾಹಿತ್ಯ ಸಮ್ಮೇಳನದಲ್ಲಿ ಉಳಿದ ಸಾಮಾನುಗಳ ವಿಲೇವಾರಿ ಮಾಡಿದುದರಿಂದ ೨೪೯-೧೫-೩. ಬಾಡಿಗೆ ಬಂದದ್ದು ರೂ ೧೬-೧೪-೦. ಕರುಣಾ ಕರ್ನಾಟಕ ದವರಿಂದ ಆದ ೧೫ ಜುಮ್ಲಾ ರೂ ೩೩೩೦–೮–೩

ವ್ಯಯ

ಆತಿಥಿ ಮಂಡಲ ರೂ ೧೧೪೬-೮-೦ ಪ್ರಿಂಟಿಂಗ್ ರೂ ೩೪೦–೧೪–೩. ನಾಟಕ ರೂ ೩೩–೧೦–೦ ಫೋಟೋ ರೂ ೪೯ ಪದಕ (ಬಾವುಟಯವರಿಗೆ) ರೂ ೩೫ ಪ್ರವಾಸ ರೂ ೩೫ ಕವಿ ಸಮ್ಮೇಳನ ಮತ್ತು ಸಾಹಿತ್ಯ ಸಮ್ಮೇಳನದ ಅಧ್ಯಕ್ಷರ ಖರ್ಚು ರೂ ೩೦, ಸ್ವಯಂಸೇವಕರ ಮಂಡಲದ ವೆಚ್ಚ ರೂ ೧೮-೩-೦ ಆರೋಗ್ಯ ಖಾತೆ ರೂ ೩-೪-೦ ಅಲಂಕಾರ ಮಂಡಲ ೧೮೫-೧೩-೩ ಬಾಡಿಗೆ ಖಾತೆ ರೂ ೭೦–೯–೩ ಆಫೀಸು ಖರ್ಚು ರೂ. ೫೧ ನ.ಪ್ರ. ಪ್ರದರ್ಶನ ೪೧. ಟಪ್ಪಾಲು ಖರ್ಚು ರೂ ೩೬-೫-೩. ಬೆಂಗಳೂರು ಸಾಹಿತ್ಯ ಪರಿಷತ್ತಿಗೆ ಪ್ರತಿನಿಧಿಗಳ ಫೀಯಲ್ಲಿ ಅರ್ಧ ರೂ ೧೮೩—೮—೦ ಶಿಲ್ಲು ರೂ ೧೫೮-೫-೩ ಒಟ್ಟು ೩೩೩೦—೮—೩.

ಚಂದ್ರಶೇಖರ ಶಾಸ್ತ್ರೀ ವ್ಯಾಕರಣತೀರ್ಥ, ಹಿರೇಮಠ, ಹೊಸಳು, ಕಾರ್ಯದರ್ಶಿ (ರುಜುಮಾಡಿದೆ) ಸಿದ್ದ ರಾಮಪ್ಪ ಪಾವಟೆ ಬಿ ಎ. ಎಲ್ ಎಲ್. ಬಿ. ವಕೀಲ ಸ್ವಾಗತ ಸಂಘಾಧ್ಯಕ್ಷ (ರುಜು ಮಾಡಿದೆ) ವೀರಪ್ಪ ಶೀಲ ಅಂಗಡಿ ವಕೀಲ. ಬಿ ಎ ಎಲ್ ಎಲ್ ಬಿ ಲೆಕ್ಕ ತಪಾಸು ಮಾಡಿದವರು, (ರುಜುಮಾಡಿದೆ)

Canara Bank, Limited.

Established 1906.

Authorised Capital	10,00,000—0—0
Subscribed capital	8,00,000—0—0
Paid up Capital	3,30,000—0—0
Reserves	4,31,000—0—0

Head Office:—**Bunder, Mangalore** Local Offices:—**City & Bunder**

BRANCHES:— Bombay, Cochin, Calicut, Ernakulam, Alleppey, Chikmagalur, Ganguli, Coondapoor, Udipi, Karkal, Puttur, Kasaragod, & Buntwal Out-agency.

Interest is allowed on Current, Fixed and Savings Bank Accounts, rates of which may be ascertained on application. Advances made on approved securities at easy rates. All kinds of Banking business transacted. Rules of business on application.

The Bangalore Branch Office of the Bank at No. 1 Albert Victor Road, Bangalore City has been opened on 8-1-35.

A. Madhava Pai,
Secretary.

ನಮ್ಮ ಟ್ರೊಯಿಲೆಟ್ ಮತ್ತು ವಾಶಿಂಗ್ ಸಾಬೂನುಗಳ ತಯಾರಿಯಲ್ಲಿ ಚರ್ಬಿ ಉಪಯೋಗಿಸಲ್ಪಡುವುದಾಗಿ ರುಜುಪಡಿಸುವವರಿಗೆ ರೂಪಾಯಿ 1000 ಬಹುಮಾನ.

ಸಾಬೂನು ಪಡೆಯುವಾಗ " " ಅದರಲ್ಲಿ ಚರ್ಬಿ ಇರಕೂಡದೆಂದು ನಿಮ್ಮ ಆಶೆ.

ಪ್ರಾಣಿಗಳ ಚರ್ಬಿ ಮಿಶ್ರಿತವಾದ ಸಾಬೂನುಗಳು ಹಿತಕ್ಕಿಂತಲೂ ಅಹಿತವನ್ನೇ ಹೆಚ್ಚಾಗಿ ಉಂಟುಮಾಡುತ್ತವೆ. ಕಾರಣ ಅವುಗಳಲ್ಲಿನ ಚರ್ಬಿ ಚರ್ಮರಂಧ್ರಗಳೊಳಗೆ ಹೋಗಿ ಬೆವರನ್ನು ತಡೆಯುತ್ತದೆ. ಸೋಪನ್ನು ಪಡೆಯುವಾಗ ನೀವು ಪರಿಮಳಭರಿತ ಚರ್ಬಿನ ಮುದ್ದೆಗೆ ಬೆಲೆ ಕೊಟ್ಟು ಶುದ್ಧತೆಯ ಬದಲು ಅಶುದ್ಧತೆಯನ್ನು ಸ್ವೀಕರಿಸಬೇಕೆಂದಿರುವಿರಾ?

ಮಲಬಾರು ಸಾಬೂನುಗಳು ಜನನಕ್ಕೆ ಬಂದ ಆರು ತಿಂಗಳುಗಳ ಅಲ್ಪಾವಧಿಯಲ್ಲೇ ಸಾರ್ವಜನಿಕ ಬೆಂಬಲವನ್ನು ಪಡೆದವು. ಕೊಚ್ಚಿಯ ಮಹಾರಾಜರ ದಯಾಪೂರ್ಣ ಪ್ರಶಸ್ತಿ ಮತ್ತು ಪ್ರೋತ್ಸಾಹನದಿಂದಾಗಿಯೂ, ಪ್ರಖ್ಯಾತ ವೈದಿಕೀಯ ಅಧಿಕಾರಿಗಳ ಶಿಫಾರಸಿನಿಂದಾಗಿಯೂ, ಅನೇಕ ವಸ್ತುಪ್ರದರ್ಶನಗಳಲ್ಲಿ ದೊರೆತ ಸುವರ್ಣಪದಕ ಮತ್ತು ಪ್ರಶಸ್ತಿ ಪತ್ರಿಕೆಗಳಿಂದಾಗಿಯೂ, ಮಲಬಾರ್ ಸಾಬೂನುಗಳ ಪ್ರಾಮುಖ್ಯತೆಯು ಎಷ್ಟೆಂದು ತಿಳಿಯುವುದು.

ಮಲಬಾರ್ ಸಾಬೂನು ಎಲ್ಲಾ ವಿಧದಿಂದಲೂ ಶ್ರೇಯಸ್ಕರವೆನಿಸಿರುತ್ತದೆ. ನಿಮ್ಮ ಚರ್ಮಕ್ಕೆ ಬಾಧಕವನ್ನುಂಟು ಮಾಡುವಂತಹ ಪ್ರಾಣಿಗಳ ಚರ್ಬಿ ಅಥವಾ ಹಾನಿಕರವಾದ ಮಿಶ್ರಿತವೇನೂ ಅದರಲ್ಲಿರದು. ಮಲಬಾರ್ ಸಾಬೂನನ್ನು ಶಾಸ್ತ್ರೀಯ ರೀತಿಯಿಂದಲೂ, ಆರೋಗ್ಯ ದೃಷ್ಟಿಯಿಂದಲೂ ತಯಾರಿಸುವುದರಿಂದ ಎಷ್ಟು ಕೋಮಲವಾದ ಚರ್ಮವೂ ಬಾಧಕ ಹೊಂದುವುದಿಲ್ಲ. ಈ ಸಾಬೂನು ದೇಶೀಯ ಅನುಕೂಲ್ಯ ಗಂಧಯುಕ್ತ ಸಾಮಾಗ್ರಿಗಳಿಂದ ಎಲ್ಲರಿಗೂ ಅನುಕೂಲವಾಗುವಂತೆ ಅಗ್ಗವಾಗಿದೆಯೆಂದು ಅದರ ಉಪಯೋಗದಿಂದ ನಿಮಗೆ ತಿಳಿಬರುವುದು.

ನಿಮ್ಮ ವ್ಯಾಪಾರಸ್ಥರು

ಮಲಬಾರ್ ಸಾಬೂನುಗಳನ್ನು

ವಿಕ್ರಯಿಸಲು ಸಂತೋಷಪಡುವರು

ಇದರಲ್ಲಿ ಪ್ರಾಣಿಗಳ ಕೊಬ್ಬು ಇರುವುದಿಲ್ಲ.

ದಿ ವೆಜಿಟೇಬಲ್ ಸೋಪ್ ವರ್ಕ್ಸ್, ಕಲ್ಲಿಕೋಟೆ.

ಪ್ರೊಪ್ರೈಟರ್:—ಸನ್ ಬ್ರಿಂಡ್ ಕೊಚಿಯ ಖ್ಯಾತಿಯ ಸೇಟ್ ನಾಗಜೀ ಪುರುಷೋತ್ತಮ ಮತ್ತು ಕಂಪೆನಿ, ಕಲ್ಲಿಕೋಟೆ.

ಈ ಜಿಲ್ಲೆಗೆ ಪ್ರವರ್ತಕರು:—

ರಾಘವೇಂದ್ರ ರಂಗ ಪೈ ರಥಬೀದಿ, ಮಂಗಳೂರು.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

ಕ್ರಮ ನಂಬ್ರ 11/1934.

ಶಾಂಭೂರಂಗೆ ಕಂಪ್ತಿ—ವಾದಿ.

ಲಕ್ಷ್ಮೀಯಾನೆ ರುಕ್ಮಿಣಿ ಅಮ್ಮ ಸಹಾ—ಪ್ರತಿವಾದಿರು.

4ನೇ ಪ್ರತಿವಾದಿ ರಾಮಚಂದ್ರ ಭಟ್ಟ, ಕಾರ್ಕಳ ವೆಂಕಟ್ರಮಣ ಭಟ್ಟರ ಮಗ, ಮಂಗಳೂರು ತಾಲೂಕು ಮೂಡಬಿದ್ರೆ ಮಾಗಣೆ ಸಸಿಹಿತ್ಲು ಗ್ರಾಮದ ಬಲಚಕ್ಕನ ಮನೆಯಲ್ಲಿರುವವ.

ಪ್ಲೈಂಟಿನಲ್ಲಿ ಕಾಣಿಸಿದ ಕೋರಿಕ್ಕೆಯ ಅಸಲು ಬಡ್ಡಿ ಕೂಡಾ ರೂಪಾಯಿ 782—11—7ಕ್ಕೆ ವಾದಿಯು ಪ್ರತಿವಾದಿರ ಮೇಲೆ ದಾವಾದಾಖಲು ಮಾಡಿದ್ದಾನೆ. ಸದ್ರಿ ದಾವೆಯು ತಾ. 10-4-1934ಕ್ಕೆ ತನಿಕೆಗೆ ನಿಶ್ಚೈಸಿದೆ. ಆ ತಾರೀಕಿಗೆ 4ನೇ ಪ್ರತಿವಾದಿಯು ಸದ್ರಿ ಕೋರ್ಟುಮುಂದೆ ಹಗಲು 10 ಗಂಟೆಗೆ ಖುದ್ದು ಯಾ ವಕೀಲರ ಮುಖಾಂತರ ಹಾಜರಾಗಿ ಉದಾಹರಣೆಕೊಡದಿದ್ದರೆ ಅತನನ್ನು ಶಿವಾಯವಾದಿ ಏಕಪಕ್ಷವಾಗಿ ತೀರ್ಮಾನಿಸೋಣಾದೀತೆಂತ ಈ ಮೂಲಕ ತಿಳಿಸೋಣಾಗುತ್ತದೆ.

ಕಾರ್ಕಳ,
ತಾ. 24-3-'34

M. Mukunda Kamath,
ವಾದಿ ಕಡೆ ವಕೀಲ.

ನೋಟೀಸು.

ಪತ್ರಿಕೆಯ ಚಂದಾದಾರರು ಪತ್ರವ್ಯವಹಾರಗಳಲ್ಲಿ ತಮ್ಮ ಚಂದಾ ನಂಬರುಗಳನ್ನು ನಮೂದಿಸಬೇಕು. ಅವುಗಳಿಲ್ಲದ ಪತ್ರಗಳಿಗೆ ಸರಿಯಾದ ನಿಗಾ ಕೊಡೋಣಾಗಲಿಕ್ಕಿಲ್ಲ.

ಮೆನೆಜರ್.

ವಂದೇ ಮಾತರಂ

ಮನುಷ್ಯ ಜೀವನದ ಜವಾಬ್ದಾರಿ

೫೦೦ ರೂಪಾಯಿಗಳು

ಉತ್ತಮ ಕುಟುಂಬಾಧಾರ! ಸುಲಭ ಮಾರ್ಗ!

ಸ್ವರಾಜ್ಯ ಕಂಪೆನಿಯು ಇಂಡಿಯಾ ಕಂಪೆನಿಗಳ ಕಾನೂನು ಪ್ರಕಾರ ಬೊಂಬಾಯಿ ಗವರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ.

ಜನಾನುರಾಗಿಗಳೂ, ಸುಪ್ರಸಿದ್ಧರೂ, ಪರಿಪಕ್ವವಾದ ಬುದ್ಧಿಯುಳ್ಳವರೂ, ಮತ್ತು ಸಮರ್ಥರಾದ ಡೈರೆಕ್ಟರುಗಳುಳ್ಳ

ಉತ್ತಮವಾದ ಸಂಸ್ಥೆ,

ಇದರಲ್ಲಿ

ಹೆಂಡತಿ ಮಕ್ಕಳಾದಿಯಾಗಿ ತನ್ನನ್ನೇ ಆಶ್ರಯಿಸಿರುವ ಪ್ರತಿಯೊಬ್ಬರಿಗೂ ಆಧಾರವನ್ನು ಕೂಡಿಸುವುದು ಮೊದಲನೇ ಕಾರ್ಯವಲ್ಲವೇ?

ಹೌದು!!

ಅಂದ ಮೇಲೆ ದಿ. ಸ್ವರಾಜ್ಯ ಬ್ಯಾಂಕಿಂಗ್ ಮತ್ತು ಇನ್ಸೂರೆನ್ಸ್ ಕಂಪೆನಿ ಲಿಮಿಟೆಡ್ ಧಾರವಾಡ ಇವರು ಏರ್ಪಾಡು ಮಾಡಿರುವ ಮದುವೆ, ಜನನ, ಮತ್ತು ಮರಣ ಎನ್ನುವ ಮೂರು ತರದ ವಿಮಾ ಶಾಖೆಗಳಲ್ಲಿ ಜಾತಿ, ಮತ, ಭೇದವಿಲ್ಲದೆ ಗಂಡಸರು ಮತ್ತು ಹೆಂಗಸರು ಎಂಬ ವ್ಯತ್ಯಾಸವಿಲ್ಲದೆ ೧೮ರಿಂದ ೫೫ ವಯಸ್ಸಿನೊಳಗಿರುವ ಪ್ರತಿಯೊಬ್ಬರೂ ವಿಮೆಯನ್ನು ಇಳಿಸಿ ೫೦೦ ರೂಪಾಯಿನ ವರೆಗೂ ಪ್ರತಿಫಲ ಹೊಂದಲು ಮುಂದುವರಿಯಬೇಕಾದುದು ಕರ್ತವ್ಯ.

ಪ್ರವೇಶ ಫೀಸು 5—0—0. ಮಾಸಿಕ ಚಂದಾ 1—0—0

ವಾರ್ಷಿಕ ರುಸುಂ 1—0—0.

ಮೆನೇಜಿಂಗ್ ಏಜಂಟ್ಸ್,

ದಿ ಸ್ವರಾಜ್ಯ ಬ್ಯಾಂಕಿಂಗ್ ಮತ್ತು ಇನ್ಶ್ಯೂರೆನ್ಸ್ ಕಂಪೆನಿ,
ಲಿಮಿಟೆಡ್, ಧಾರವಾಡ.

---

1. ಶಿಶು ಜನಿಸಿದರೆ ಖರ್ಚು. 2. ನಿಮ್ಮ ಮಕ್ಕಳ ವಿದ್ಯಾಭ್ಯಾಸ.

3. ಮಗಳ ಮದುವೆಗೆ ವರದಕ್ಷಿಣೆ. 4. ನಿಮ್ಮ ಸಾಮಾನಿನ ನಷ್ಟ.

ಈ ವಿಷಯಗಳು ನಿಮ್ಮ ಮುಂದೆ ಇವೆ. ನಮ್ಮ ನಿಯಮಗಳನ್ನು ನೋಡಿರಿ. ಸರಿಯಾದ ದಾರಿ ಸಿಕ್ಕುವುದು.

ನಮ್ಮ ಕ್ಯಾಶ್ ಸರ್ಟಿಫಿಕೇಟುಗಳಲ್ಲಿ ನಿಮ್ಮ ಉಳಿತಾಯದ ಹಣವನ್ನು ವಿಮೆಯ ಸೌಕರ್ಯಗಳೊಡನೆ ಇಡಿರಿ.

ಲೋನುಗಳಿಗೆ, ಇನ್ವೆಸ್ಟ್‌ಮೆಂಟುಗಳಿಗೆ, ಇನ್ನಿತರ ಆಕರ್ಷಕ ವಿಮೆಗಳಿಗೆ ನಮ್ಮ ಹಾದಿಗಳು ಎಲ್ಲರಿಗೂ ಒಪ್ಪುವುವು. ಮೇನೇಜರರೊಡನೆ ತಿಳಿದುಕೊಳ್ಳಿರಿ.

ದಿ ಕಲ್ಕತ್ತ ಫಿನಾನ್ಸ್ ಮತ್ತು ಏಜನ್ಸಿ ಸಿಂಡಿಕೇಟ್, ಲಿಮಿಟೆಡ್ (ಹೆಡ್ ಆಫೀಸು—ಕಲ್ಕತ್ತ).

ಡಿವಿಜನಲ್ ಬ್ರೇಂಚ್ ಆಫೀಸು—ಕೊಡಿಗುಡ್ಡೆ ಮಂಗಳೂರು.

ಈ ಕಂಪೆನಿಯಲ್ಲಿ ಕೆಲಸ ಮಾಡುವುದರಿಂದ ನಿರುದ್ಯೋಗಿಗಳಾದ ಸ್ತ್ರೀಪುರುಷರು ತಿಂಗಳೊಂದಕ್ಕೆ ೩೦ರಿಂದ ೫೦ ರೂಪಾಯಿಗಳ ವರೆಗೆ ಸಂಪಾದನೆ ಮಾಡಬಹುದು.

ಔಷಧಗಳು

...ರೂ. 1-4-0. ...ರೂ. 0-8-0. ...ರೂ. 0-4-0. ...ರೂ. 1-0-0. ...ರೂ. 1-8-0.

ನಾಯಕ್ ಬ್ರದರ್ಸ್, ಶ್ರೀಕೃಷ್ಣ ...ಔಷಧಾಲಯ

The Canara Industrial & Banking Syndicate Limited.

Established in 1925.

Head Office—Mukunda Nivas UDIPI

Branches: Mangalore, Payyanur, Brahmavar, Kumta, Karwar, Hubli, Honnavar, Bangalore & ...

Authorised Capital Rs. 5,00,000. Subscribed Capital Rs. 1,27,000 Paid up Capital Rs ... Issued Capital ...

STATEMENT OF AFFAIRS OF THE SYNDICATE AS ON 28st Fe[illegible]

Liabilities		Assets	
Paid up Capital	Rs. 57,000—0—0.	Loans on Land mortgage	
Reserve & other funds	„ 30,506—0—0.	Loans on Valuable Securities	
Deposits	„ 10,79,131—4—3.	Loans on Bills of Exchange, Hundis a[illegible]	
Due to Bankers	„ 1,56,317—7—9.	Investment on Shares of other Companies	
		Investments on Government Paper	
On Bills & D. P. Notes	„ 50,000—0—0	On Deposits with other Bankers	
Bills for Collection	„ 31,327—8—8.	Bills for collection (per contra)	
Sundries	„ 88,925—2—4.	Sundries	
		Cash in hand & with Bankers	
Total Rs.	15,03,098—7—0	Total Rs.	

Long and Short term Loans on attractive Schemes are granted.

ALL KINDS OF BANKING BUSINESS UNDERTAKEN

Udipi, [illegible]

P. A. [illegible]

ಪ್ರಥಮ ಕನ್ನಡ ಮಾತಾಡುವ ಚಲಚಿತ್ರ!

ಮಿಸ್ಟರ್ ಸುಬ್ಬಯ್ಯ ನಾಯುಡು

ಮಿಸ್ಟರ್ ನಾಗೇಂದ್ರ ರಾವ್

ಮಿಸ್ಟರ್ ವೈ. ವಿ. ರಾವ್

ಮಿಸ್ಟರ್ ಮೂರ್ತಿ

ಇವರುಗಳಿಂದ ನಟಿಸಲ್ಪಟ್ಟ

ಕರ್ಣಾಟಕ ಕವಿಕೇಸರಿ ಬಳ್ಳಾರಿ

ನರಹರಿ ಶಾಸ್ತ್ರಿಗಳಿಂದ ಕಥೆಯು ರಚಿಸಲ್ಪಟ್ಟ

'ಸತಿ ಸುಲೋಚನ'

ಇಂಪಾದ ಶ್ರುತಿ!

...ಫಿಲ್ಮ್ ...ಕಂಪನಿ ಬೆಂಗಳೂರು.

WANTED.

Four Organisers to organise the work of the South Indian General Assurance Society, Ltd., in the following places noted below. Capable organisers can expect to have attractive and encouraging terms with sound footing for their future.

(1) South Canara, (2) Mysore, Hassan and Coorg, (3) Kadur, Shimoga, Chitaldroog and Tumkur, (4) Bangalore, Kolar.

For terms and other particulars please apply to—

The Divisional Manager,
The South Indian General Assurance Co. Ltd.
64, 3rd Cross Road, Srirampur Extn.
Malleswaram Post, BANGALORE.
OR
The Managing Agents,
The S. I. G. A. Co. Ltd.
55 Poonamallee High Road, Kilpauk, MADRAS.

ಒಂದೇ ಸಮನಾಗಿ ೩೫ ವರ್ಷದ ಅನುಭವದಿಂದ

ದ್ರಾಕ್ಷಾಮೃತ

[illegible]

ಕ. ರಾಮ ನಾಯ್ಕ, ಕೋರ್ಟ್ ರಸ್ತೆ. ಬಂಟವಾಳ— ಬಿ. ಎಚ್. ವಾಸುದೇವ ಪೈ.

೨-೬-೩೮

ಬಹು ಕಾಲದ ಆವಶ್ಯಕತೆಗೆ



ಸಣ್ಣ ಕಬ್ಬಿನ ತೋಟದವರು ಸುಲಭ ರೀತಿಯಿಂದ ಸಕ್ಕರೆ ತಯಾರಿಸಲು ಯೋಗ್ಯ ರೀತಿಯ ಯಂತ್ರವು ಬೇಕೆಂದು ಬಹು ಕಾಲದ ಆವಶ್ಯಕತೆಯುಳ್ಳವರು. ನಿಮಗೆ ಬೇಕಾದುದು ಇಲ್ಲೇ ಇದೆ.

ಕಿರ್ಲೋಸ್ಕರ್ ಶುಗರ್ ಸೆಂಟ್ರಿಫ್ಯುಗಲ್

ಎಂಬುದು ಆಧುನಿಕ ಮತ್ತು ಅತ್ಯುತ್ಕೃಷ್ಟ ಸಾಧನಗಳುಳ್ಳ ಸಕ್ಕರೆ ತಯಾರಿಸಲು ಸುಲಭ ಯಂತ್ರವಾಗಿದೆ. [illegible] ವಿವರಗಳಿಗೆ ಕಿರ್ಲೋಸ್ಕರ್ ಬ್ರದರ್ಸ್ ಲಿಮಿಟೆಡ್ ಕಿರ್ಲೋಸ್ಕರ್ ವಾಡಿ (ಸತಾರ ಜಿಲ್ಲಾ) ಇಲ್ಲಿಗೆ ಬರೆಯಿರಿ.

[illegible] ಮಂಗಳೂರು.

S. U. N. & CO.
Choukhamba, Benares City.

[illegible]
2–8–0 8–12–0
1 8–8–0
4–8–0. 6 3 1
4–8–0,
[illegible]

ಬಹಿಷ್ಕಾರ ಉಪದೇಶಗಳು.

ಅಸಂಖ್ಯಾತರಾದ ನಮ್ಮ ಗಿರಾಕಿಗಳ [illegible] ಮತ್ತು ಅನುಕೂಲತೆಗಳನ್ನು [illegible]

ಸ್ವದೇಶೀ

ಕಾರ್ಖಾನೆಗಳಲ್ಲಾದ ನೂಲು ಮತ್ತು ಕೈಮಗ್ಗದ ವಸ್ತ್ರ, ಹೊದಿಕೆಗಳೂ, [illegible] ಧೋತಿ, ಸೀರೆ– [illegible]

ಶ್ರೀನಿವಾಸ ರಂಗಪೈ.

(Srinivasa Ranga Pai,
Representatives for South Canara and Malabar,
For A. & F. Harvey, Ltd.
[illegible] Mills Co. Ltd.

EDITED, PRINTED & PUBLISHED BY V. S. KUDVA AT THE SHARADA PRESS, MANGALORE.